KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

ARS 34 APP 82

NAVAYUGA KANNADA
WEEKLY

Con't From Roll No. 155

From 24.2.1972.

RoLL No. 156.

ARS 34 APP 82

NAVAYUGA KANNADA WEEKLY

Con't From Roll No. 155

From 24.2.1972.

Roll No. 156.

ARS 34 APP 82

NAVAYUGA KANNADA
WEEKLY

Con't From Roll No. 155

From. 24.2.1972.

Roll No. 156.

...ನ್ನಿ ವೇಶ

...ಟದಿಂದ)

...ನು ನನ್ನ ಮಗನ
...ನನ್ನು ಘೀಕರ
...ವು ಅರ್ಜುನನಿ
...ನೊತ್ತಿನವರೆಗೂ
...ಕರ್ಣ ನಾ ಮೋ
...ಟ್ಟು ಹೋಗುತ್ತ
...ಹಗಳು ಪರಿಮ
...ನಂತೆ. ಮನಸ್ಸು
...ದೆ. ಬುದ್ಧಿ ಚಟು
...ಪತೆಗೊಡಗುತ್ತದೆ.
...ಈಗ ಹದವಾಗಿ
...ತನ್ನ ಕ್ರೋಧದ
...ವ್ಯಕ್ತವಾಗುತ್ತಾ
...ನಿಗೆ ಹೇದರಿಲ್ಲಯ
...ಟ್ಟು. ಈ ಚಕ್ರದಿಂ
...ಲ್ಲುತ್ತೇನೆ. ನನ್ನ
...ಹೇಳುತ್ತದೆ. ಜ
...ಂಚವಾಗುತ್ತೇನೆ"
...ತ್ರಿಲೋಕ ವೀ
...ವಿಸ ಬಲ್ಲನೆ! ಅ
...ಯೋಜನೆಯುದ
...ನುತನಿಗೆ ನೀನು
...ತಗಳನ್ನು ಕೇ
...ದಾನಾಸು? ಕೃಷ್ಣ
...ಮಿಯಲ್ಲಿ ಚಕ್ರ
...."ಈಗ ನೀನು
...ಚಕ್ರದಿಂದ ಕ
...ಲಕ್ಷ್ಮಿಗೆ ಅಣ್ಣ
...ಷ್ಣ ಹೇಳುತ್ತಿರು
...ೀರನಿಗೆ ಇವಕ್ಕಿಂ
...ಮಾತುಬೇಕೇ?
...ಸ್ಸು ಪ್ರಜ್ವಲಿಸಿ
...ಗೂ ಕ್ಷತವಿಕ್ಷತ
...ಮತ್ತೆ ವೈರಿವೆ
...ಹಿಡಿತದಿಂದ ಬಿ
...ನಂತೆ ಜವನು
...ಗೆ ಕೃಷ್ಣನ ಉ
...ಇನ್ನು ಅರ್ಜು
...ಯೂಗುವುದರಲ್ಲಿ
...ಯುವುದಿಲ್ಲ.

...ಕ್ಕೂ ಅರ್ಜುನ
...ಅದನ್ನು ವಿ...
...ಹಾವೈಣಿಕನಾಗಿ
...ಭೂಮಿಯಲ್ಲಿ
...ಗಮವಾಗಿ ಚಿ
...ಉ ಪದ್ಯಗಳಲ್ಲಿ
...ಂಟಾದ ಕ್ಲೇಷ
...ಮಾರ್ಗವನ್ನು
...ಪೂರ್ಣವಾಗಿ

ಸರ್ಕಾರಿ ಕೈಗಾರಿಕೆಗಳ ಕಾರ್ಯ ವಿಮರ್ಶೆ

ನಾಲ್ಕನೇ ಯೋಜನೆಯಲ್ಲಿ ಸಾಧಿಸಬೇಕಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಈ ಪಾತ್ರ ವಹಿಸುವಂತಹ ಕೆಲವು ಕೈಗಾರಿಕೆಗಳನ್ನು ಆಯ್ಕೆ ಮಾಡಬೇಕೆಂದು ನಾಲ್ಕನೇ ಯೋಜನೆಯ ಹೊಸ ಕೈಗಾರಿಕಾ ನೀತಿಯಲ್ಲಿ ತಿಳಿಸಲಾಗಿದೆ. ಈ ರೀತಿ ಆಯ್ಕೆ ಮಾಡಿದ ಕೈಗಾರಿಕೆಗಳಲ್ಲಿ ಹೂಡುವ ಮುಕ್ಕಾಲು ಭಾಗ ಬಂಡವಾಳವು ಸರ್ಕಾರಿ ವಲಯಕ್ಕೆ ಮೀಸಲಾಗಿದೆ. ನಾಲ್ಕನೇ ಯೋಜನೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಪೂರೈಕೆ ಹಾಗು ಕೈಗಾರಿಕಾ ಬೆಳವಣಿಗೆಯ ಪ್ರಮಾಣವು ಸರ್ಕಾರಿವಲಯದ ಕೈಗಾರಿಕೆಗಳ ಸಾಧನೆಯನ್ನು ಅವಲಂಬಿಸಿದೆ.

ಭಾರತದಲ್ಲಿ ೧೯೫೧ರಲ್ಲಿ ಯೋಜನಾ ಯುಗ ಆರಂಭವಾದಾಗಿನಿಂದ ಸರ್ಕಾರಿ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆದಿವೆ. ಪ್ರಥಮ ಯೋಜನೆಯ ಆರಂಭದಲ್ಲಿ ೨೯ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ ಐದು ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿದುವು. ಪ್ರಥಮ ಯೋಜನೆಯ ಅಂತ್ಯದಲ್ಲಿ ೮೧ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೨೧ ಘಟಕಗಳಿದ್ದುವು. ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೯೫೩ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೪೮ ಕೈಗಾರಿಕಾ ಘಟಕಗಳಿದ್ದವು. ಮೂರನೇ ಯೋಜನೆಯ ಅಂತ್ಯದಲ್ಲಿ ೨೪೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೭೪ ಕೈಗಾರಿಕಾ ಘಟಕಗಳಿದ್ದವು ನಾಲ್ಕನೇ ಯೋಜನೆಯ ಆರಂಭದಲ್ಲಿ ೧೯೬೯ರಲ್ಲಿ ೩೯೦೨ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೮೫ ಕೈಗಾರಿಕಾ ಘಟಕಗಳಿದ್ದವು ೭೦–೭೧ ನೇ ವಾರ್ಷಿಕ ಸಾಲನ ಕೊನೆಯಲ್ಲಿ ಬಂಡವಾಳ ಹೂಡಿಕೆ ೪೭೦೦ಕೋಟಿ ರೂಪಾಯಿಗೇರಿತ್ತು.

ಕುಂಠಿತ ಸಾಧನೆ

ಯೋಜನಾ ಆಯೋಗವು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ಸರ್ಕಾರಿ ವಲಯದ ಕೈಗಾರಿಕೆಗಳ ಸಾಧನೆ ಕುಂಠಿತಗೊಂಡಿರುವುದು ಗೋಚರವಾಗಿದೆ. ಅನೇಕ ಘಟಕಗಳಲ್ಲಿ ಪೂರ್ಣ ಮಟ್ಟದಲ್ಲಿ ಯಂತ್ರಗಳ ಬಳಕೆಯಾಗುತ್ತಿರಲಿಲ್ಲ; ಹಣಕಾಸಿನ ... ಕೈಗಾರಿಕೆಗಳಲ್ಲಿ ಹೂಡಿದ್ದ ಬಂಡವಾಳಕ್ಕೆ ಲಾಭವೊಂದೇ ಮುಖ್ಯವಾಗಿರಲಿಲ್ಲ. ಕೆಲವು ಘಟಕಗಳು ಪ್ರಾರಂಭಿಕ ಹಂತದಲ್ಲಿ ಅತ್ಯಲ್ಪ ಲಾಭಗಳಿಸಿದುವು. ಅನೇಕ ಸರ್ಕಾರಿ ಕೈಗಾರಿಕಾ ಘಟಕಗಳಲ್ಲಿ ಸುಧಾರಣೆಗೆ ಅವಕಾಶವಿದೆ.

ಯೋಜನೆಯ ಗುರಿಯನ್ನು ಸಾಧಿಸಬೇಕಾದರೆ ಸರ್ಕಾರಿ ಕೈಗಾರಿಕೆಗಳ ಕಾರ್ಯಕ್ಷಮತೆಯಲ್ಲಿ ಸುಧಾರಣೆಯಾಗಬೇಕಾಗುವುದು ಅತ್ಯಗತ್ಯ. ಈ ಘಟಕಗಳಲ್ಲಿರುವ ಸಮಸ್ಯೆಗಳು ತುಂಬಾ ಬೇರು ಬಿಟ್ಟುದಾಗಿವೆ. ಆಡಳಿತ ನಿರ್ವಹಣೆ, ತಾಂತ್ರಿಕ ವಿಭಾಗ ಹಾಗು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದು ಆತ್ಯಗತ್ಯವಾಗಿದೆ.

ಈ ಕಾರಣಕ್ಕಾಗಿ ಆಯ್ಕೆ ಮಾಡಿದ ಸರ್ಕಾರಿ ವಲಯದ ಕೈಗಾರಿಕೆಗಳ ಕಾರ್ಯವಿಧಾನವನ್ನು ವಿಮರ್ಶಿಸಿ ಸೂಕ್ತ ಶಿಫಾರಸುಗಳನ್ನು ಮಾಡಲೆಂದು ಉನ್ನತ ಮಟ್ಟದ ಕ್ರಿಯಾ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಅತ್ಯಂತ ಶ್ರೇಷ್ಠರಾದ ಅನುಭವಿ ಔದ್ಯೋಗಿಕ ತಜ್ಞರನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಯಿತು. ಅದರ ಪ್ರಕಾರ ಕಳೆದ ತಿಂಗಳು ಯೋಜನಾ ಆಯೋಗದ ಸದಸ್ಯರಾದ ಶ್ರೀ ಎಂ. ಎಸ್. ಪಥಕ ಅಧ್ಯಕ್ಷತೆಯಲ್ಲಿ ಕ್ರಿಯಾ ಸಮಿತಿಯೊಂದನ್ನು ಸರ್ಕಾರ ನೇಮಿಸಿತು.

ಕ್ರಿಯಾ ಸಮಿತಿಯ ಕಾರ್ಯ

ಈ ಕ್ರಿಯಾ ಸಮಿತಿಯ ಕಾರ್ಯದಲ್ಲಿ ಅಧ್ಯಯನ ತಂಡಗಳು ವ್ಯಕ್ತಿಗಳು ಮತ್ತು ಸಂಸ್ಥೆಗಳು ಹಾಗು ಸಮಾಲೋಚನ ತಜ್ಞರು ನಿರ್ದಿಷ್ಟ ವಿಷಯದಲ್ಲಿ ಸಹಾಯ ನೀಡುತ್ತಾರೆ.

ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ಉನ್ನತ ಮಟ್ಟದಲ್ಲಿ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತದೆ. ಯೋಜನಾ ಆಯೋಗದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲು ಈ ಸಮಿತಿಯು ರಾಜ್ಯ ಸರ್ಕಾರಗಳು, ಸರ್ಕಾರದ ಶಾಖೆಗಳು ಮತ್ತಿತರ ಸಂಸ್ಥೆಗಳೊಂದಿಗೆ ನಿಕಟ ಸಮಾಲೋಚನೆ ನಡೆಸುತ್ತದೆ ಕೇಂದ್ರ ಹಣಕಾಸು ಶಾಖೆಯ ಸರ್ಕಾರಿ ಕೈಗಾರಿಕೆಗಳ ಸಂಸ್ಥೆಯು ಈ ಸ ಸಮಿತಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುತ್ತದೆ.

ಕ್ರಿಯಾ ಸಮಿತಿಯು ಕಾಲಾನುಕ್ರಮದಲ್ಲಿ ಶಿಫಾರಾಸುಗಳನ್ನು ಮಂಡಿಸುತ್ತದೆ. ಈ ಸಮಿತಿಯ ಕಾರ್ಯವು ಒಂದರಿಂದ ಒಂದೂವರೆ ವರ್ಷದೊಳಗೆ ಮುಕ್ತಾಯವಾಗುವ ನಿರೀಕ್ಷೆಯಿದೆ.

ದು ಮಾತು ಹೆಚ್ಚುಕಡಿಮೆಯಾಗಿದ್ದರೆ, ಕಾವ್ಯನೇ ಹಾಳಾಗಿ ಹೋಗುತ್ತಿತ್ತೋ ಎಂಬ ಭ್ರಮೆ ಬರುವಂತಿದೆ. ಕವಿ ಕುಲ ಗುರು ಪಂಪನಿಗೆ ನಮೋ ನಮಃ!

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ...

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಸಂಪುಟ ೫೧
ಸಂಚಿಕೆ ೨೫

NAVAYUGA

24-2-19

ರಾಜ್ಯದಲ್ಲಿ ಚುನಾವಣೆ—

ವಿಜಯಮಾಲೆ ಯಾರ ಕೊರಳಿಗೆ?

ಕರ್ನಾಟಕದ ವಿಧಾನ ಸಭೆಗೆ ಚುನಾವಣೆಗಳು ಮಾರ್ಚ್ ೬ ಮತ್ತು ೯ರಂದು ನಡೆಯಲಿದ್ದು ಅದಕ್ಕೆ ಪೂರ್ವಭಾವಿ ಕ್ರಮಗಳೆಲ್ಲ ಮುಕ್ತಾಯಗೊಂಡಿವೆ. ಅಭ್ಯರ್ಥಿಗಳು ತಮ್ಮೂರಿಯ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಲವೆಡೆ ನೇರ ಸ್ಪರ್ಧೆ, ಇನ್ನು ಕೆಲವೆಡೆ ತ್ರಿಕೋಣ ಸ್ಪರ್ಧೆಗಳಿದ್ದರೂ ಹೆಚ್ಚಿನೆಡೆ ಬಹುಕೋಣ ಸ್ಪರ್ಧೆಯೇ ಇರುವುದರಿಂದ ಆಯಾ ಕ್ಷೇತ್ರದ ಪ್ರಭಾವಶಾಲಿ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಮಬಲದಿಂದ ಇಂಡಿಕೇಟಿನ ಅಭ್ಯರ್ಥಿ ತುಸು ಪ್ರಭಾವಶಾಲಿಯಿದ್ದರೆ, ಗೆದ್ದು ಬರುವುದು ಅಶಕ್ಯವೇನಲ್ಲ.

ರಾಜ್ಯದ ಚುನಾವಣಾ ರಂಗದಲ್ಲಿ ದುಮುಕಿರುವ ರಾಜ್ಯಕೀಯ ಪಕ್ಷಗಳಲ್ಲಿ ಇಂಡಿಕೇಟ್, ಸಿಂಡಿಕೇಟ್, ಜನಸಂಘ, ಸ್ವತಂತ್ರ ಮತ್ತು ಸಮಾಜವಾದಿಗಳು ಮುಖ್ಯ. ನೂರಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಲ್ಲಿಸಿದ ಪಕ್ಷಗಳು ಮೊದಲ ಮೂರು ಮಾತ್ರ. ಸಿಪಿಐಯು ಇಂಡಿಕೇಟಿನೊಳಗೆ ತೂರಿಕೊಂಡಿದ್ದರೆ, ಸಿಪಿಎಂನ ಸ್ಪರ್ಧೆ ನಗಣ್ಯ. ಕನ್ನಡ ಚಳುವಳಿಗಾರರು, ಜನತಾ ಪಕ್ಷದವರು, ಪ್ರಾಮುಖರು ಉಳಿದ ಕೆಲ ಪಕ್ಷಗಳವರು. ಇವರೆಲ್ಲರನ್ನೂ ಮೆಟ್ಟಿ ನಿಂತವರು ಪಕ್ಷೇತರ ಅಭ್ಯರ್ಥಿಗಳು. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಪ್ರವೃತ್ತಿಯ ಜನರೂ ಇವರಲ್ಲಿದ್ದಾರೆ.

ಈ ಚುನಾವಣೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಗತಿಪರರೆಂದೂ ಪ್ರಗತಿಶೀಲರೆಂದೂ ಹೇಳಿಕೊಳ್ಳುತ್ತಿರುವ ಎರಡೂ ತುಕುಡಿ ಕಾಂಗ್ರೆಸ್‌ಗಳು ಹಳೆಯ ಮುಖಗಳನ್ನು ಸಾಧ್ಯವಾದಷ್ಟು ದೂರಕ್ಕೆ ದೂಡಿವೆ. ಹೊಸ ಮುಖಗಳನ್ನೂ ಯುವರಕ್ತವನ್ನೂ ವಿಧಾನ ಸಭೆಗೆ ತರಲು ಪ್ರಯತ್ನ ನಡೆಸಿವೆ. ಆದರೆ, ಈ ನಿಟ್ಟಿನಲ್ಲಿ ಇಂಡಿಕೇಟಿಗಿಂತ ಸಿಂಡಿಕೇಟೇ ಒಂದು ಹೆಜ್ಜೆ ಮುಂದು. ಇಂಡಿಕೇಟು ತನ್ನ ೨೧೨ ಅಭ್ಯರ್ಥಿಗಳಲ್ಲಿ ಅರುವತ್ತರ ಗಡಿ ದಾಟಿದವರು ಐದಾರು ಮಂ... ಒಂದಾಗಿ ೨೧೬ ರೂ. ಸ್ಥಾನಗಳಿಗೆ ಸ್ಪರ್ಧಿಸಿದರೆ, ಸಿಂಡಿಕೇಟು ಏಕಾಕಿಯಾಗಿ ೧೮೦ ಸ್ಥಾನಗಳಿಗೆ ಹುದ್ದರಿಗಳನ್ನು ನಿಲ್ಲಿಸಿದೆ. ಮತ್ತು ಸುಮಾರು ೩೦ ಕ್ಷೇತ್ರಗಳಲ್ಲಿ ಪಕ್ಷೇತರರಿಗೆ ಬೆಂಬಲ ಸೂಚಿಸಿದೆ.

ರಾಜ್ಯದ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧೆಯಿರುವುದು ಕಾಂಗ್ರೆಸ್ಸಿನ ಎರಡು ತುಕುಡಿಗಳಲ್ಲಿ. ಕೆಲವೆಡೆ ಸಿಂಡಿಕೇಟಿನ ಬದಲು ಇಂಡಿಕೇಟು ಜನಸಂಘವನ್ನು ಎದುರಿಸಬೇಕಾಗಿದೆ. ಮತ್ತೆ ಕೆಲವೆಡೆ ಪಕ್ಷೇತರರೂ ಪ್ರಭಾವಶಾಲಿಗಳಾಗಿ ಇಂಡಿಕೇಟ್ - ಸಿಪಿಐಗೆ ಸವಾಲೊಡ್ಡಿದ್ದಾರೆ. ಇಂಡಿಕೇಟಿನ ಭಾವಿ ಮುಖ್ಯಮಂತ್ರಿಯೆಂದು ಹೇಳಲಾಗುತ್ತಿದ್ದ ದೇವರಾಜ ಅರಸರು ಸ್ಪರ್ಧೆಯಿಂದ ದೂರವುಳಿಯುವ ನಿರ್ಧಾರ ಮಾಡಿದವರು; ಆದರೆ, ಕೈಗೆ ಬಂದ ಮುಖ್ಯಮಂತ್ರಿ ಪದವನ್ನು ಅನುಭವಿಸಲಾಗದ ಸಿದ್ಧವೀರಪ್ಪನವರು ಟಿಕೇಟು ಗಿಟ್ಟಿಸಿಕೊಂಡಿದ್ದಾರೆ. ಮಾಜಿ ಮಂತ್ರಿಗಳಿಗೆ ಟಿಕೇಟು ನೀಡುವುದೆಂದರೆ, ಅವರಿಗೆ ಮಂತ್ರಿಪದ ನೀಡಿದಂತೆಯೆಂದು ಭಾವಿಸಲಾಗದು ಎಂಬ ಎಚ್ಚರಿಕೆ ಇಂಡಿಕೇಟ್ ಧುರೀಣರು ಮೊದಲೇ ನೀಡಿರುವುದರಿಂದ ಸಿದ್ಧವೀರಪ್ಪನವರು ಗೆದ್ದು ಬಂದರೆ, ಪಕ್ಷದ ನಾಯಕರಾಗುವರೆಂದು ನಂಬುವುದು ಆಭಾಸಕರವಾಗುವುದು.

ದೇವರಾಜ ಅರಸರು ಟಿಕೇಟು ನೀಡುವಲ್ಲಿ ತುಂಬ ಎಚ್ಚರಿಕೆ ತೋರಿದ್ದಾರೆ. ಅವರೇ ನೀಡಿದ ಹೇಳಿಕೆಯೊಂದು ಹೇಳುತ್ತದೆ—ಒಕ್ಕಲಿಗರು ಮತ್ತು ಲಿಂಗಾಯತರಿಗೆ ಇದುವರೆಗೆ ಸಿಂಹಪಾಲು ಸಿಗುತ್ತಿತ್ತು. ಈ ಬಾರಿ ಆ ಎರಡೂ ಕೋಮುಗಳನ್ನು ಕೆಳಗೆ ತಳ್ಳಿ ಇತರ ಕೋಮುಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಲಾಗಿದೆ. ಕೆಲವು ತಿಂಗಳುಗಳ ಹಿಂದೆ ಇಂಡಿಕೇಟಿನಲ್ಲಿ ಬಿರುಗಾಳಿಯೊಂದು ಬೀಸಿತ್ತು—ಬಹು ಸಂಖ್ಯಾಕ ಕೋಮಿನವರ ಮೇಲೆ ಅಲ್ಪ ಸಂಖ್ಯಾಕ ಕೋಮಿನವರನ್ನು ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆಯೆಂದು ಇಂದು ದೇವ... ಮುಂದಾದದ್ದು ಎಂದರೆ, ತನ್ನ ಮುಂದೆ ಲಿಂಗಾಯತರದ್ದೂ ಒಕ್ಕಲಿಗರದ್ದೂ ಒಂದೂ ನಡೆಯಲಿಲ್ಲವೆಂದು ಹೆಗ್ಗಳಿಕೆ ಹೇಳಿಕೊಳ್ಳುವುದಕ್ಕೇ ಇರಬೇಕು.

ಸಿಂಡಿಕೇಟಿನ ಪ್ರಗತಿಶೀಲ–ಯಶಸ್ವೀ ಮುಖ್ಯಮಂತ್ರಿಯೆನಿಸಿದ್ದ ಯುವಕ ವೀರೇಂದ್ರ ಪಾಟೀಲರು ಸ್ಪರ್ಧೆಗಿಳಿಯಲಿಲ್ಲ. ಮಾತ್ರವಲ್ಲದೆ ಮತ್ತೊಬ್ಬ ಧುರೀಣ ರಾಮಕೃಷ್ಣ ಹೆಗ್ಗಡೆಯವರೂ ನಾಮಪತ್ರ ಹಿಂದೆಗೆದುಕೊಂಡರು. 'ಅಧಿಕಾರ ಪ್ರಿಯರು' ಎಂಬ ಅಪಖ್ಯಾತಿಯನ್ನು ಹೊರಿಸುತ್ತಿರುವ ಇತರ ಪಕ್ಷಗಳಿಗೆ ಸಿಂಡಿಕೇಟು ಈ ರೀತಿ ಪ್ರಬಲ ಏಟು ನೀಡಿದೆ. ಈ ಇಬ್ಬರು ರಾಜ್ಯಕೀಯ ಭಾಷೆಯ ಎಳೆಯರು ರಾಜ್ಯದ ಚುನಾವಣೆಗಳಲ್ಲಿ ಪಕ್ಷದ ವಿಜಯಕ್ಕೆಂದು ದುಡಿಯಲು ಪೂರ್ಣಾವಧಿಯ ಸಮಯವನ್ನು ಉಪಯೋಗಿಸುವ ದೃಢ ನಿರ್ಧಾರ ಮಾಡಿದ್ದಾರೆ. ಇದು ಕಡಿಮೆ ಮಹತ್ವದ್ದೆಂದು ಹೇಳ ಬರುವುದಿಲ್ಲ.

ಚುನಾವಣೆಗಳ ಪರಿಣಾಮಗಳ ಬಗ್ಗೆಯೂ ಕಾಂಗ್ರೆಸ್ ತುಕ್ಕುಡಿಗಳಲ್ಲಿ ವಿಚಾರ ನಡೆದಿದೆ. ೨೧೬ರಲ್ಲಿ ೧೫೦ ತಮ್ಮದು ಎಂದು ಇಂಡಿಕೇಟು ಹೇಳುತ್ತದೆ. ೧೨೦ ತಮ್ಮದೆನ್ನುತ್ತದೆ ಸಿಂಡಿಕೇಟು. ಈ ಎರಡು ಕೇಟುಗಳ ಅನುಮಾನಿತ ಸಂಖ್ಯೆಯಷ್ಟು ಕುರ್ಚಿಗಳು ವಿಧಾನ ಸಭೆಯಲ್ಲಿಲ್ಲವಾಗಿರುವಾಗ ಉಳಿದ ಹಲವು ಪಕ್ಷೀಯರನ್ನೂ ಪಕ್ಷೇತರರನ್ನೂ ಲಾಬಿಗಳಲ್ಲಿಯೇ ಕೂರಿಸಬೇಕಷ್ಟೆ. ಇಂಡಿಕೇಟು ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ೧೮ರಿಂದ ೨೦ ಸ್ಥಾನ ನಿರೀಕ್ಷಿಸಿ ೨೭ನ್ನೂ ಪಡೆಯಿತು. ಇದರ ಆಧಾರದ ಮೇಲೆ ೧೫೦ರ ನಿರೀಕ್ಷೆಯನ್ನದು ಮಾಡಿದ್ದರೆ, ಮೂಲ ನಿರೀಕ್ಷೆ ೧೦೦ ಮಾತ್ರವೆನ್ನಬೇಕು. ಇದನ್ನೇ ಸಿಂಡಿಕೇಟಿಗೂ ಅನ್ವಯಿಸಿದರೆ?

ಆದರೆ ಒಂದು ಮಾತು ಶ್ರೀಮತಿ ಗಾಂಧಿಯ ನಾಮಬಲ ಅಥವಾ ಇಂದಿರಾಗಾಳಿ ಕಳೆದ ಸಲದಂತೆ ಈ ಬಾರಿ ಬಿರುಸಾಗಿ ಬೀ...

ಯವರನ್ನು ರಾಜ್ಯ ಮಟ್ಟದ
ಯಕ್ಕೆಳೆದು ತರುವುದು ಬೇ
ಹುದು. ಅಥವಾ ಹಿಂದಿನ ಮ
ಅಕೆಯಾದಂತೆ ಇಂದಿನ ವಿ
ದೇ ಆಗಬೇಕೆಂದೂ ಇರಬಹ
ನೋ! ಶ್ರೀಮತಿ ಗಾಂಧಿಯವ
ಯಾಗಿರುವುದರಿಂದಲೇ ಪಾಕಿ
ಭಾರತೀಯ ಸೇನೆಗಳು ಸೋ
ಎಂಬ ಭಾವನೆಯನ್ನೂ ಮ
ಮೂಡಿಸುವ ಪ್ರಯತ್ನ ನಡೆಯ
ರೆ. ಇದಕ್ಕೂ ಎಲ್ಲೆಡೆ ತೀವ್ರ ವಿ
ಕ್ತವಾಯ್ತು.

ಇಂಡಿಕೇಟು ಶ್ರೀಮತಿ ಗಾ
ಧಣೆಗೆ ಎರವಾಗಿದ್ದಾರೆಂದು
ದು. ಆದರೆ, ಮತದಾರರು ಕಳೆ
ಷ್ಟು ಮಾತಿನ ಮೋಡಿಯಿಂದ
ಗಲಾರರು. ಕೇಂದ್ರದ ಕತೆ ಬೇ
ದ್ದು ಬೇರೆ ಎನ್ನುವವರೂ ಕೆಲವ
ಪ್ರದಲ್ಲಿ ಅಧಿಕಾರಾರೂಢವಾದ
ರಾಜ್ಯಗಳಲ್ಲೂ ಇಂಡಿಕೇಟಿನ ಸ
ಇರಬೇಕೆನ್ನುವ ವಾದಕ್ಕೂ ಪುರ
ಮೆಯಾಗಿದೆ. ತನ್ನದಲ್ಲದ ಸರಕಾ
ಉರುಳಿಸುವ ಪ್ರಯತ್ನ ನಡೆ
ಅಸಾಧ್ಯದಿಂದ ಇಂಡಿಕೇಟು ಕ
ಕೊಳ್ಳುವಂತಿಲ್ಲ. ವೀರೇಂದ್ರ ಪಾ
ಗತಿಶೀಲ ಸರಕಾರವನ್ನು ಉರ
ಇಂಡಿಕೇಟು ಹೇಗೆ ಯಶಗಳಿಸಿತ
ರುಳಿಸಲು ನೆರವಾದವರನ್ನು ಅ
ಹಿಗಳೆಂದು ಈಗ ಹೆಸರಿಸಿರುವುದ
ಯುವುದು ಸಾಧ್ಯವಿಲ್ಲ.

ಈ ಬಾರಿಯ ಚುನಾವಣೆಯ
ಶ ಹೇಗೆ ಹೊರಡಬಹುದು? ಸಿ
ಇರುವ ಅವಕಾಶವೆಂದರೆ, ಹಿಂ
ಸರಕಾರ ಮಾಡಿತೋರಿಸಿದ ಸ
ಮಾತ್ರ. ಈಗಾಗಲೇ ಕೆಲವೇ ರ
ಬದುಕುಳಿದಿರುವ ಇವನ್ನು ಮತ್ತೆ
ರಕ್ಕೆ ಜನ ತರಬಲ್ಲರೆ? ಅಥವಾ
ಟ್ ಸರಕಾರವನ್ನೆ ರಚಿಸಿಕೊ
ಚುನಾವಣಾ ಭವಿಷ್ಯವನ್ನು ಯ
ಷ್ಯದರ್ಶಿಯೂ ಹೇಳಲಾರ; ಹೇಳ
ಸದ್ಯ ಹೇಳಬಹುದಾದುದಿಷ್ಟು—
ಲ್ಲಿ ಸಿಂಡಿಕೇಟ್ ಬಹುಮತ ಪಡೆ

...ನ್ನಿ ವೇಶ

...ಟದಿಂದ)

...ನು ನನ್ನ ಮಗನ
...ಣ್ಣನನ್ನು ಭೀಕರ
...ರಿವು ಅರ್ಜುನನಿ
... ಹೊತ್ತಿನವರೆಗೂ
... ಕರ್ಣ ವ್ಯಾಮೋ
...ಟ್ಟು ಹೋಗುತ್ತ
...ಡಗಳು ಹರಿದು
...ವಂತೆ. ಮನಸ್ಸು
...ದೆ. ಬುದ್ಧಿ ಚಟು
...ತತೊಡಗುತ್ತದೆ.
... ಈಗ ಹದವಾಗಿ
... ಅಲ್ಲಿ ಕ್ರೋಧವ
...ದ್ಯುಕ್ತನಾಗುತ್ತಾ
...ನಿಗೆ ವೇದವಿದ್ಯೆಯ
...ಟ್ಟು ಈ ಚಕ್ರದಿಂ
...ಲ್ಲುತ್ತೇನೆ. ನನ್ನ
... ಹಬ್ಬುತ್ತದೆ. ಜ
...ಂಡನಾಗುತ್ತೇನೆ"
...ಳು ತ್ರಿಲೋಕ ವೀ
...ಡಿಸ ಬಲ್ಲನೆ? ಅ
...ೂ ಹಿಂಜರಿಯುದ
... ಸುತನಿಗೆ ನೀನು
...ತುಗಳನ್ನು ಕೇ
...ವಾನು? ಕೃಷ್ಣ
...ಮಿಯಲ್ಲಿ ಚಕ್ರ
.... "ಈಗ ನೀನು
...ೀ ಚಕ್ರದಿಂದ ಕ
...ಲಕ್ಷ್ಮಿಗೆ ಅಣ್ಣ
...ಷ್ಣ ಹೇಳುತ್ತಿರು
...ೀರನಿಗೆ ಇದಕ್ಕಿಂ
... ಮಾತುಬೇಕೇ?
...ಸ್ಸು ಪ್ರಜ್ವಲಿಸಿ
...ೂ ಕ್ಷತವಿಕ್ಷತ
... ಮತ್ತೆ ಮೈನೆ
... ಹಿಡಿತದಿಂದ ಬಿ
...ನಂತೆ ಅವನು
...ಗೆ ಕೃಷ್ಣನ ಉ
... ಇನ್ನು ಅರ್ಜು
...ಯೂಗುವುದರಲ್ಲಿ
...ಯುವುದಿಲ್ಲ.

...ಕ್ಕೂ ಅರ್ಜುನ
... ಅದನ್ನು ಮೀ
...ಾವೈಣಿಕನಾಗಿ
...ಭೂಮಿಯಲ್ಲಿ
...ಂಗವಾಗಿ ಚಿ
...ತು ಪದ್ಯಗಳಲ್ಲಿ
...ಂಟಾದ ಕ್ಲೇಷ
... ಮಾರ್ಗವನ್ನು
... ಪೂರ್ಣವಾಗಿ

ಸರ್ಕಾರಿ ಕೈಗಾರಿಕೆಗಳ ಕಾರ್ಯ ವಿಮರ್ಶೆ

ನಾಲ್ಕನೇ ಯೋಜನೆಯಲ್ಲಿ ಸಾಧಿಸಬೇಕಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಈ ಪಾತ್ರ ವಹಿಸುವಂತಹ ಕೆಲವು ಕೈಗಾರಿಕೆಗಳನ್ನು ಆಯ್ಕೆ ಮಾಡಬೇಕೆಂದು ನಾಲ್ಕನೇ ಯೋಜನೆಯ್ಲ ಹೊಸ ಕೈಗಾರಿಕಾ ನೀತಿಯಲ್ಲಿ ತಿಳಿಸಲಾಗಿದೆ. ಈ ರೀತಿ ಆಯ್ಕೆ ಮಾಡಿದ ಕೈಗಾರಿಕೆಗಳಲ್ಲಿ ಹೂಡುವ ಮುಕ್ಕಾಲು ಭಾಗ ಬಂಡವಾಳವು ಸರ್ಕಾರಿ ವಲಯಕ್ಕೆ ಮೀಸಲಾಗಿದೆ. ನಾಲ್ಕನೇ ಯೋಜನೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಪೂರೈಕೆ ಹಾಗು ಕೈಗಾರಿಕಾ ಬೆಳವಣಿಗೆಯ ಪ್ರಮಾಣವು ಸರ್ಕಾರಿವಲಯದ ಕೈಗಾರಿಕೆಗಳ ಸಾಧನೆಯನ್ನು ಅವಲಂಬಿಸಿದೆ.

ಭಾರತದಲ್ಲಿ ೧೯೫೧ರಲ್ಲಿ ಯೋಜನಾ ಯುಗ ಆರಂಭವಾದಾಗಿನಿಂದ ಸರ್ಕಾರಿ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆದಿವೆ. ಪ್ರಥಮ ಯೋಜನೆಯ ಆರಂಭದಲ್ಲಿ ೨೯ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ ಐದು ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿದುವು. ಪ್ರಥಮ ಯೋಜನೆಯ ಅಂತ್ಯದಲ್ಲಿ ೮೧ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೨೧ ಘಟಕಗಳಿದ್ದುವು. ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೯೫೩. ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೪೮ ಕೈಗಾರಿಕಾ ಘಟಕಗಳಿದ್ದವು. ಮೂರನೇ ಯೋಜನೆಯ ಅಂತ್ಯದಲ್ಲಿ ೨೪೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೭೪ ಕೈಗಾರಿಕಾ ಘಟಕಗಳಿದ್ದವು ನಾಲ್ಕನೇ ಯೋಜನೆಯ ಆರಂಭದಲ್ಲಿ ೧೯೬೯ರಲ್ಲಿ ೩೯೦೨ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೮೫ ಕೈಗಾರಿಕಾ ಘಟಕಗಳಿದ್ದವು ೭೦–೭೧ ನೇ ವಾರ್ಷಿಕ ಸಾಲಿನ ಕೊನೆಯಲ್ಲಿ ಬಂಡವಾಳ ಹೂಡಿಕೆ ೪೩೦೦ಕೋಟಿ ರೂಪಾಯಿಗೇರಿತ್ತು.

ಕುಂಠಿತ ಸಾಧನೆ

ಯೋಜನಾ ಆಯೋಗವು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ಸರ್ಕಾರಿ ವಲಯದ ಕೈಗಾರಿಕೆಗಳ ಸಾಧನೆ ಕುಂಠಿತಗೊಂಡಿರುವುದು ಗೋಚರವಾಗಿದೆ. ಅನೇಕ ಘಟಕಗಳಲ್ಲಿ ಪೂರ್ಣ ಮಟ್ಟದಲ್ಲಿ ಯಂತ್ರಗಳ ಬಳಕೆಯಾಗುತ್ತಿರಲಿಲ್ಲ; ಹಣಕಾಸಿನ ... ಕೈಗಾರಿಕೆಗಳಲ್ಲಿ ಹೂಡಿದ್ದ ಬಂಡವಾಳಕ್ಕೆ ಲಾಭವೊಂದೇ ಮುಖ್ಯವಾಗಿರಲಿಲ್ಲ. ಕೆಲವು ಘಟಕಗಳು ಪ್ರಾರಂಭಿಕ ಹಂತದಲ್ಲಿ ಅತ್ಯಲ್ಪ ಲಾಭಗಳಿಸಿದುವು. ಅನೇಕ ಸರ್ಕಾರಿ ಕೈಗಾರಿಕಾ ಘಟಕಗಳಲ್ಲಿ ಸುಧಾರಣೆಗೆ ಅವಕಾಶವಿದೆ.

ಯೋಜನೆಯ ಗುರಿಯನ್ನು ಸಾಧಿಸಬೇಕಾದರೆ ಸರ್ಕಾರಿ ಕೈಗಾರಿಕೆಗಳ ಕಾರ್ಯಕ್ಷಮತೆಯಲ್ಲಿ ಸುಧಾರಣೆಯಾಗಬೇಕಾಗುವುದು ಅತ್ಯಗತ್ಯ. ಈ ಘಟಕಗಳಲ್ಲಿರುವ ಸಮಸ್ಯೆಗಳು ತುಂಬಾ ಬೇರು ಬಿಟ್ಟದಾಗಿವೆ. ಆಡಳಿತ ನಿರ್ವಹಣೆ,ತಾಂತ್ರಿಕ ವಿಭಾಗ ಹಾಗು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದು ಅತ್ಯಗತ್ಯವಾಗಿದೆ.

ಈ ಕಾರಣಕ್ಕಾಗಿ ಆಯ್ಕೆ ಮಾಡಿದ ಸರ್ಕಾರಿ ವಲಯದ ಕೈಗಾರಿಕೆಗಳ ಕಾರ್ಯವಿಧಾನವನ್ನು ವಿಮರ್ಶಿಸಿ ಸೂಕ್ತ ಶಿಫಾರಸುಗಳನ್ನು ಮಾಡಲೆಂದು ಉನ್ನತ ಮಟ್ಟದ ಕ್ರಿಯಾ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಅತ್ಯಂತ ಶ್ರೇಷ್ಠರಾದ ಅನುಭವಿ ಔದ್ಯೋಗಿಕ ತಜ್ಞರನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಯಿತು. ಅದರ ಪ್ರಕಾರ ಕಳೆದ ತಿಂಗಳು ಯೋಜನಾ ಆಯೋಗದ ಸದಸ್ಯರಾದ ಶ್ರೀ ಎಂ. ಎಸ್. ಪಥಕ ಅಧ್ಯಕ್ಷತೆಯಲ್ಲಿ ಕ್ರಿಯಾ ಸಮಿತಿಯೊಂದನ್ನು ಸರ್ಕಾರ ನೇಮಿಸಿತು.

ಕ್ರಿಯಾ ಸಮಿತಿಯ ಕಾರ್ಯ

ಈ ಕ್ರಿಯಾ ಸಮಿತಿಯ ಕಾರ್ಯದಲ್ಲಿ ಅಧ್ಯಯನ ತಂಡಗಳು ವ್ಯಕ್ತಿಗಳು ಮತ್ತು ಸಂಸ್ಥೆಗಳು ಹಾಗು ಸಮಾಲೋಚನ ತಜ್ಞರು ನಿರ್ದಿಷ್ಟ ವಿಷಯದಲ್ಲಿ ಸಹಾಯ ನೀಡುತ್ತಾರೆ.

ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ಉನ್ನತ ಮಟ್ಟದಲ್ಲಿ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತದೆ. ಯೋಜನಾ ಆಯೋಗದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲು ಈ ಸಮಿತಿಯು ರಾಜ್ಯ ಸರ್ಕಾರಗಳು, ಸರ್ಕಾರದ ಶಾಖೆಗಳು ಮತ್ತಿತರ ಸಂಸ್ಥೆಗಳೊಂದಿಗೆ ನಿಕಟ ಸಮಾಲೋಚನೆ ನಡೆಸುತ್ತದೆ. ಕೇಂದ್ರ ಹಣಕಾಸು ಶಾಖೆಯು ಸರ್ಕಾರಿ ಕೈಗಾರಿಕೆಗಳ ಸಂಸ್ಥೆಯು ಈ ಸಮಿತಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುತ್ತದೆ.

ಕ್ರಿಯಾ ಸಮಿತಿಯು ಕಾಲಾನುಕ್ರಮದಲ್ಲಿ ಶಿಫಾರಸುಗಳನ್ನು ಮಂಡಿಸುತ್ತದೆ. ಈ ಸಮಿತಿಯ ಕಾರ್ಯವು ಒಂದರಿಂದ ಒಂದೂವರೆ ವರ್ಷದೊಳಗೆ ಮುಕ್ತಾಯವಾಗುವ ನಿರೀಕ್ಷೆಯಿದೆ. ●

ದು ಮಾತು ಹೆಚ್ಚುಕಡಿಮೆಯಾಗಿದ್ದರೆ, ಕಾವ್ಯವೇ ಹಾಳಾಗಿ ಹೋಗುತ್ತಿತ್ತೋ ಎಂಬ ಭ್ರಮೆ ಬರುವಂತಿದೆ. ಕವಿ ಕುಲ ಗುರು ಪಂಪನಿಗೆ ನಮೋ ನಮಃ!

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.
ನಂಜನಗೂಡು, (ಮೈಸೂರು ಸ್ಟೇಟ್)

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ

ಸಂಪುಟ ೫೧
ಸಂಚಿಕೆ ೩೫

NAVAYUGA 24-2-19

ರಾಜ್ಯದಲ್ಲಿ ಚುನಾವಣೆ—

ವಿಜಯಮಾಲೆ ಯಾರ ಕೊರಳಿಗೆ?

ಕರ್ನಾಟಕದ ವಿಧಾನ ಸಭೆಗೆ ಚುನಾವಣೆಗಳು ಮಾರ್ಚ್ ೬ ಮತ್ತು ೯ರಂದು ನಡೆಯಲಿದ್ದು ಅದಕ್ಕೆ ಪೂರ್ವಭಾವಿ ಕ್ರಮಗಳೆಲ್ಲ ಮುಕ್ತಾಯಗೊಂಡಿವೆ. ಅಭ್ಯರ್ಥಿಗಳು ಬಿರುಸಿನ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಲವೆಡೆ ನೇರ ಸ್ಪರ್ಧೆ. ಇನ್ನು ಕೆಲವೆಡೆ ತ್ರಿಕೋಣ ಸ್ಪರ್ಧೆಗಳಿದ್ದರೂ ಹೆಚ್ಚಿನೆಡೆ ಬಹುಕೋಣ ಸ್ಪರ್ಧೆಯೇ ಇರುವುದರಿಂದ ಆಯಾ ಕ್ಷೇತ್ರದ ಪ್ರಭಾವಶಾಲಿ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಮಬಲದಿಂದ ಇಂಡಿಕೇಟಿನ ಅಭ್ಯರ್ಥಿ ತುಸು ಪ್ರಭಾವಶಾಲಿಯಿದ್ದರೆ, ಗೆದ್ದು ಬರುವುದು ಅಶಕ್ಯವೇನಲ್ಲ.

ರಾಜ್ಯದ ಚುನಾವಣಾ ರಂಗದಲ್ಲಿ ದುಮುಕಿರುವ ರಾಜ್ಯಕೀಯ ಪಕ್ಷಗಳಲ್ಲಿ ಇಂಡಿಕೇಟ್, ಸಿಂಡಿಕೇಟ್, ಜನಸಂಘ, ಸ್ವತಂತ್ರ ಮತ್ತು ಸಮಾಜವಾದಿಗಳು ಮುಖ್ಯ. ನೂರಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಲ್ಲಿಸಿದ ಪಕ್ಷಗಳು ಮೊದಲ ಮೂರು ಮಾತ್ರ. ಸಿಪಿಐಯು ಇಂಡಿಕೇಟಿನೊಳಗೆ ತೂರಿಕೊಂಡಿದ್ದರೆ, ಸಿಪಿಎಂನ ಸ್ಪರ್ಧೆ ನಗಣ್ಯ. ಕನ್ನಡ ಚಳುವಳಿಗಾರರು, ಜನತಾ ಪಕ್ಷದವರು, ದ್ರಾವಿಡ ಮುಕರು ಉಳಿದ ಕೆಲ ಪಕ್ಷಗಳವರು. ಇವರೆಲ್ಲರನ್ನೂ ಮೆಟ್ಟಿ ನಿಂತವರು ಪಕ್ಷೇತರ ಅಭ್ಯರ್ಥಿಗಳು. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಪ್ರವೃತ್ತಿಯ ಜನರೂ ಇವರಲ್ಲಿದ್ದಾರೆ.

ಈ ಚುನಾವಣೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಗತಿಪರರೆಂದೂ ಪ್ರಗತಿಶೀಲರೆಂದೂ ಹೇಳಿಕೊಳ್ಳುತ್ತಿರುವ ಎರಡೂ ತುಕುಡಿ ಕಾಂಗ್ರೆಸ್‌ಗಳು ಹಳೆಯ ಮುಖಗಳನ್ನು ಸಾಧ್ಯವಾದಷ್ಟು ದೂರಕ್ಕೆ ದೂಡಿವೆ. ಹೊಸ ಮುಖಗಳನ್ನೂ ಯುವರಕ್ತವನ್ನೂ ವಿಧಾನ ಸಭೆಗೆ ತರಲು ಪ್ರಯತ್ನ ನಡೆಸಿವೆ. ಆದರೆ, ಈ ನಿಟ್ಟಿನಲ್ಲಿ ಇಂಡಿಕೇಟಿಗಿಂತ ಸಿಂಡಿಕೇಟೇ ಒಂದು ಹೆಜ್ಜೆ ಮುಂದು. ಇಂಡಿಕೇಟು ತನ್ನ ೨೧೨ ಅಭ್ಯರ್ಥಿಗಳಲ್ಲಿ ಅರುವತ್ತರ ಗಡಿ ದಾಟಿದವರು ಐವತ್ತು ಮಂ…

ಒಂದಾಗಿ ೨೧೬ ರೂ. ಸ್ಥಾನಗಳಿಗೆ ಸ್ಪರ್ಧಿಸಿದರೆ, ಸಿಂಡಿಕೇಟು ಏಕಾಕಿಯಾಗಿ ೧೮೦ ಸ್ಥಾನಗಳಿಗೆ ಹುದ್ದರಿಗಳನ್ನು ನಿಲ್ಲಿಸಿದೆ. ಮತ್ತು ಸುಮಾರು ೨೦ ಕ್ಷೇತ್ರಗಳಲ್ಲಿ ಪಕ್ಷೇತರರಿಗೆ ಬೆಂಬಲ ಸೂಚಿಸಿದೆ.

ರಾಜ್ಯದ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧೆಯಿರುವುದು ಕಾಂಗ್ರೆಸ್ಸಿನ ಎರಡು ತುಕುಡಿಗಳಲ್ಲಿ. ಕೆಲವೆಡೆ ಸಿಂಡಿಕೇಟಿನ ಬದಲು ಇಂಡಿಕೇಟು ಜನಸಂಘವನ್ನು ಎದುರಿಸಬೇಕಾಗಿದೆ. ಮತ್ತೆ ಕೆಲವೆಡೆ ಪಕ್ಷೇತರರೂ ಪ್ರಭಾವಶಾಲಿಗಳಾಗಿ ಇಂಡಿಕೇಟ್-ಸಿಪಿಐಗೆ ಸವಾಲೊಡ್ಡಿದ್ದಾರೆ. ಇಂಡಿಕೇಟಿನ ಭಾವಿ ಮುಖ್ಯಮಂತ್ರಿಯೆಂದು ಹೇಳಲಾಗುತಿದ್ದ ದೇವರಾಜ ಅರಸರು ಸ್ಪರ್ಧೆಯಿಂದ ದೂರವುಳಿಯುವ ನಿರ್ಧಾರ ಮಾಡಿವರು; ಆದರೆ, ಕೈಗೆ ಬಂದ ಮುಖ್ಯಮಂತ್ರಿ ಪದವನ್ನು ಅನುಭವಿಸಲಾಗದ ಸಿದ್ಧವೀರಪ್ಪನವರು ಟಿಕೇಟು ಗಿಟ್ಟಿಸಿಕೊಂಡಿದ್ದಾರೆ. ಮಾಜಿ ಮಂತ್ರಿಗಳಿಗೆ ಟಿಕೇಟು ನೀಡುವುದೆಂದರೆ, ಅವರಿಗೆ ಮಂತ್ರಿಪದ ನೀಡಿದಂತೆಯೆಂದು ಭಾವಿಸಲಾಗದು ಎಂಬ ಎಚ್ಚರಿಕೆ ಇಂಡಿಕೇಟ್ ಧುರೀಣರು ಮೊದಲೇ ನೀಡಿರುವುದರಿಂದ ಸಿದ್ಧವೀರಪ್ಪನವರು ಗೆದ್ದು ಬಂದರೆ, ಪಕ್ಷದ ನಾಯಕರಾಗುವರೆಂದು ನಂಬುವುದು ಆಭಾಸಕರವಾಗುವುದು.

ದೇವರಾಜ ಅರಸರು ಟಿಕೇಟು ನೀಡುವಲ್ಲಿ ತುಂಬ ಎಚ್ಚರಿಕೆ ತೋರಿದ್ದಾರೆ. ಅವರೇ ನೀಡಿದ ಹೇಳಿಕೆಯೊಂದು ಹೇಳುತ್ತದೆ—ಒಕ್ಕಲಿಗರು ಮತ್ತು ಲಿಂಗಾಯತರಿಗೆ ಇದುವರೆಗೆ ಸಿಂಹಪಾಲು ಸಿಗುತಿತ್ತು. ಈ ಬಾರಿ ಆ ಎರಡೂ ಕೋಮುಗಳನ್ನು ಕೆಳಗೆ ತಳ್ಳಿ ಇತರ ಕೋಮುಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಲಾಗಿದೆ. ಕೆಲವು ತಿಂಗಳುಗಳ ಹಿಂದೆ ಇಂಡಿಕೇಟಿನಲ್ಲಿ ಬಿರುಗಾಳಿಯೊಂದು ಬೀಸಿತ್ತು—ಬಹು ಸಂಖ್ಯಾಕ ಕೋಮಿನವರ ಮೇಲೆ ಅಲ್ಪ ಸಂಖ್ಯಾಕ ಕೋಮಿನವರನ್ನು ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆಯೆಂದು ಇಂದು ದೇವ…

ಮುಂದಾದದ್ದು ಎಂದರೆ, ತನ್ನ ಮುಂಡೆ ಲಿಂಗಾಯತರದ್ದೂ ಒಕ್ಕಲಿಗರದ್ದೂ ಒಂದೂ ನಡೆಯಲಿಲ್ಲವೆಂದು ಹೆಗ್ಗಳಿಕೆ ಹೇಳಿಕೊಳ್ಳುವುದಕ್ಕೇ ಇರಬೇಕು.

ಸಿಂಡಿಕೇಟಿನ ಪ್ರಗತಿಶೀಲ–ಯಶಸ್ವೀ ಮುಖ್ಯಮಂತ್ರಿಯೆನಿಸಿದ್ದ ಯುವಕ ವೀರೇಂದ್ರ ಪಾಟೀಲರು ಸ್ಪರ್ಧೆಗಿಳಿಯಲಿಲ್ಲ. ಮಾತ್ರವಲ್ಲದೆ ಮತ್ತೊಬ್ಬ ಧುರೀಣ ರಾಮಕೃಷ್ಣ ಹೆಗ್ಗಡೆಯವರೂ ನಾಮಪತ್ರ ಹಿಂದೆಗೆದುಕೊಂಡರು. 'ಅಧಿಕಾರ ಪ್ರಿಯರು' ಎಂಬ ಅಪಖ್ಯಾತಿಯನ್ನು ಹೊರಿಸುತ್ತಿರುವ ಇತರ ಪಕ್ಷಗಳಿಗೆ ಸಿಂಡಿಕೇಟು ಈ ರೀತಿ ಪ್ರಬಲ ಏಟು ನೀಡಿದೆ. ಈ ಇಬ್ಬರು ರಾಜ್ಯಕೀಯ ಭಾಷೆಯ ಎಳೆಯರು ರಾಜ್ಯದ ಚುನಾವಣೆಗಳಲ್ಲಿ ಪಕ್ಷದ ವಿಜಯಕ್ಕೆಂದು ದುಡಿಯಲು ಪೂರ್ಣಾವಧಿಯ ಸಮಯವನ್ನು ಉಪಯೋಗಿಸುವ ದೃಢ ನಿರ್ಧಾರ ಮಾಡಿದ್ದಾರೆ. ಇದು ಕಡಿಮೆ ಮಹತ್ವದ್ದೆಂದು ಹೇಳ ಬರುವುದಿಲ್ಲ.

ಚುನಾವಣೆಗಳ ಪರಿಣಾಮಗಳ ಬಗ್ಗೆಯೂ ಕಾಂಗ್ರೆಸ್ ತುಕ್ಕುಡಿಗಳಲ್ಲಿ ವಿಚಾರ ನಡೆದಿದೆ. ೨೧೬ರಲ್ಲಿ ೧೫೦ ತಮ್ಮದು ಎಂದು ಇಂಡಿಕೇಟು ಹೇಳುತ್ತದೆ. ೧೨೦ ತಮ್ಮದೆನ್ನುತ್ತದೆ ಸಿಂಡಿಕೇಟು. ಈ ಎರಡು ಕೇಟುಗಳ ಅನುಮಾನಿತ ಸಂಖ್ಯೆಯಷ್ಟು ಕುರ್ಚಿಗಳು ವಿಧಾನ ಸಭೆಯಲ್ಲಿಲ್ಲವಾಗಿರುವಾಗ ಉಳಿದ ಹಲವು ಪಕ್ಷೀಯರನ್ನೂ ಪಕ್ಷೇತರರನ್ನೂ ಲಾಬಿಗಳಲ್ಲಿಯೇ ಕೂರಿಸಬೇಕಷ್ಟೆ. ಇಂಡಿಕೇಟು ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ೧೮ರಿಂದ ೨೦ ಸ್ಥಾನ ನಿರೀಕ್ಷಿಸಿ ೨೭ನ್ನೂ ಪಡೆಯಿತು. ಇದರ ಆಧಾರದ ಮೇಲೆ ೧೫೦ರ ನಿರೀಕ್ಷೆಯನ್ನದು ಮಾಡಿದ್ದರೆ, ಮೂಲ ನಿರೀಕ್ಷೆ ೧೦೦ ಮಾತ್ರವೆನ್ನಬೇಕು. ಇದನ್ನೇ ಸಿಂಡಿಕೇಟಿಗೂ ಅನ್ವಯಿಸಿದರೆ?

ಆದರೆ ಒಂದು ಮಾತು ಶ್ರೀಮತಿ ಗಾಂಧಿಯ ನಾಮಬಲ ಅಥವಾ ಇಂದಿರಾಗಾಳಿ ಕಳೆದ ಸಲದಂತೆ ಈ ಬಾರಿ ಬಿರುಸಾಗಿ ಬೀ…

ಯುವರನ್ನು ರಾಜ್ಯ ಮಟ್ಟದ
ಯಕ್ಕೆಳೆದು ತರುವುದು ಬೇ
ಹುದು. ಅಥವಾ ಹಿಂದಿನ ಮ
ಅಕೆಯಾದಂತೆ ಇಂದಿನ ವಿ
ದೇ ಆಗಬೇಕೆಂದೂ ಇರಬಹ
ನೋ! ಶ್ರೀಮತಿ ಗಾಂಧಿಯವ
ಯಾಗಿರುವುದರಿಂದಲೇ ಪಾಕಿ
ಭಾರತೀಯ ಸೇನೆಗಳು ಸೋ
ಎಂಬ ಭಾವನೆಯನ್ನೂ ಮ
ಮೂಡಿಸುವ ಪ್ರಯತ್ನ ನಡೆ
ರೆ. ಇದಕ್ಕೂ ಎಲ್ಲೆಡೆ ತೀವ್ರ ವಿ
ಕ್ತವಾಯ್ತು.

ಇಂಡಿಕೇಟು ಶ್ರೀಮತಿ ಗಾ
ಘಣೆಗೆ ಎರವಾಗಿದ್ದಾರೆಂದು
ದು. ಆದರೆ. ಮತದಾರರು ಕಳೆ
ಷ್ಟು ಮಾತಿನ ಮೋಡಿಯಿಂದ
ಗಲಾರರು. ಕೇಂದ್ರದ ಕತೆ ಬೇರೆ
ದ್ದು ಬೇಕಿ ಎನ್ನುವವರೂ ಕೆಲವ
ಪ್ರದಲ್ಲಿ ಅಧಿಕಾರಾರೂಢವಾದ
ರಾಜ್ಯಗಳಲ್ಲೂ ಇಂಡಿಕೇಟಿನ ಸ
ಇರಬೇಕೆನ್ನುವ ವಾದಕ್ಕೂ ಪುರ
ಸಿಯಾಗಿದೆ. ತನ್ನದಲ್ಲದ ಸರಕಾ
ಉರುಳಿಸುವ ಪ್ರಯತ್ನ ನಡೆ
ಅಪವಾದದಿಂದ ಇಂಡಿಕೇಟು ಕ
ಕೊಳ್ಳುವಂತಿಲ್ಲ. ವೀರೇಂದ್ರ ಪಾ
ಗತಿಶೀಲ ಸರಕಾರವನ್ನು ಉರ
ಇಂಡಿಕೇಟು ಹೇಗೆ ಯಶಗಳಿಸಿತ
ರುಳಿಸಲು ನೆರವಾದವರನ್ನು ಅ
ಹಿಗಳೆಂದು ಈಗ ಹೆಸರಿಸಿರುವುದ
ಯುವುದು ಸಾಧ್ಯವಿಲ್ಲ.

ಈ ಬಾರಿಯ ಚುನಾವಣೆಯ
ಶ ಹೇಗೆ ಹೊರಡಬಹುದು? ಸಿ
ಇರುವ ಅವಕಾಶವೆಂದರೆ, ಹಿಂ
ಸರಕಾರ ಮಾಡಿತೋರಿಸಿದ ಸ
ಮಾತ್ರ. ಈಗಾಗಲೇ ಕೆಲವೇ ರ
ಬದುಕುಳಿದಿರುವ ಇದನ್ನು ಮತ್ತೆ
ರಕ್ಕೆ ಜನ ತರಬಲ್ಲುದೆ? ಅಥವಾ
ಟ್ ಸರಕಾರವನ್ನೆ ರಚಿಸಿಕೊ
ಚುನಾವಣಾ ಭವಿಷ್ಯವನ್ನು ಯ
ಷ್ಯದರ್ಶಿಯೂ ಹೇಳಲಾರ; ಹೇಳ
ಸದ್ಯ ಹೇಳಬಹುದಾದುದಿಷ್ಟು—
ಲ್ಲಿ ಸಿಂಡಿಕೇಟ್ ಬಹುಮತ ಪಡೆ

ನಿವೇಶ

(ಹಿಂದಿನ ...)

...ನು ನನ್ನ ಮಗನ
...ಣ್ಣನನ್ನು ಭೀಕರ
...ರಿವು ಅರ್ಜುನನಿ
... ಹೊತ್ತಿನವರೆಗೂ
... ಕರ್ಣ ವ್ಯಾಮೋ
...ಟ್ಟು ಹೋಗುತ್ತ
...ಡಗಳು ಹರಿದು
...ವಂತೆ, ಮನಸ್ಸು
...ದೆ. ಬುದ್ಧಿ ಚಟು
...ಡತೊಡಗುತ್ತದೆ.
... ಈಗ ಹದವಾಗಿ
... ಅಲ್ಲಿ ಕ್ರೋಧವ
...ದ್ಯುಕ್ತನಾಗುತ್ತಾ
...ನಿಗೆ ಹೆದರಿದ್ದೀಯ
...ಟ್ಟು ಈ ಚಕ್ರದಿಂ
...ಲ್ಲುತ್ತೇನೆ. ನನ್ನ
... ಹಬ್ಬುತ್ತದೆ. ಜ
...ಂಡನಾಗುತ್ತೇನೆ"
...ಳು ತ್ರಿಲೋಕ ವೀ
...ಡಿಸ ಬಲ್ಲನೆ? ಅ
...ೂ ಹಿಂಜರಿಯದ
... ಸುತನಿಗೆ ನೀನು
...ತುಗಳನ್ನು ಕೇ
...ದಾನು? ಕೃಷ್ಣ
...ಮಿಯಲ್ಲಿ ಚಕ್ರ
.... "ಈಗ ನೀನು
...ೇ ಚಕ್ರದಿಂದ ಕ
...ಲಕ್ಷ್ಮಿಗೆ ಅಣ್ಣ
...ಷ್ಣ ಹೇಳುತ್ತಿರು
...ೀರನಿಗೆ ಇದಕ್ಕಿಂ
... ಮಾತುಬೇಕೇ?
...ಸ್ಸು ಪ್ರಜ್ವಲಿಸಿ
...ಗೂ ಕ್ಷತವಿಕ್ಷತ
... ಮತ್ತೆ ಮೈವೆ
... ಹಿಡಿತದಿಂದ ಬಿ
...ನಂತೆ ಅವನು
...ಗೆ ಕೃಷ್ಣನ ಉ
... ಇನ್ನು ಅರ್ಜು
...ಯೂಗುವುದರಲ್ಲಿ
...ಯುವುದಿಲ್ಲ.

...ಕ್ಕೊ ಅರ್ಜುನ
... ಅದನ್ನು ಮೀ
...ಕಾವ್ಯೆಣಿಕನಾಗಿ
...ಭೂಮಿಯಲ್ಲಿ
...ಂಗವಾಗಿ ಚಿ
...ು ಪದ್ಯಗಳಲ್ಲಿ
...ಂಟಾದ ಕ್ಲೇಷ
... ಮಾರ್ಗವನ್ನು
...ಪೂರ್ಣವಾಗಿ

ಸರ್ಕಾರಿ ಕೈಗಾರಿಕೆಗಳ ಕಾರ್ಯ ವಿಮರ್ಶೆ

ನಾಲ್ಕನೇ ಯೋಜನೆಯಲ್ಲಿ ಸಾಧಿಸಬೇಕಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಈ ಪಾತ್ರ ವಹಿಸುವಂತಹ ಕೆಲವು ಕೈಗಾರಿಕೆಗಳನ್ನು ಆಯ್ಕೆ ಮಾಡಬೇಕೆಂದು ನಾಲ್ಕನೇ ಯೋಜನೆಯ ಹೊಸ ಕೈಗಾರಿಕಾ ನೀತಿಯಲ್ಲಿ ತಿಳಿಸಲಾಗಿದೆ. ಈ ರೀತಿ ಆಯ್ಕೆ ಮಾಡಿದ ಕೈಗಾರಿಕೆಗಳಲ್ಲಿ ಹೂಡುವ ಮುಕ್ಕಾಲು ಭಾಗ ಬಂಡವಾಳವು ಸರ್ಕಾರಿ ವಲಯಕ್ಕೆ ಮೀಸಲಾಗಿದೆ. ನಾಲ್ಕನೇ ಯೋಜನೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಪೂರೈಕೆ ಹಾಗು ಕೈಗಾರಿಕಾ ಬೆಳವಣಿಗೆಯ ಪ್ರಮಾಣವು ಸರ್ಕಾರಿವಲಯದ ಕೈಗಾರಿಕೆಗಳ ಸಾಧನೆಯನ್ನು ಅವಲಂಬಿಸಿದೆ.

ಭಾರತದಲ್ಲಿ ೧೯೫೧ರಲ್ಲಿ ಯೋಜನಾ ಯುಗ ಆರಂಭವಾದಾಗಿನಿಂದ ಸರ್ಕಾರಿ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆದಿವೆ. ಪ್ರಥಮ ಯೋಜನೆಯ ಆರಂಭದಲ್ಲಿ ೨೯ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ ಐದು ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿದುವು. ಪ್ರಥಮ ಯೋಜನೆಯ ಅಂತ್ಯದಲ್ಲಿ ೮೧ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೨೧ ಘಟಕಗಳಿದ್ದುವು. ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೯೫೩ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೪೮ ಕೈಗಾರಿಕಾ ಘಟಕಗಳಿದ್ದವು. ಮೂರನೇ ಯೋಜನೆಯ ಅಂತ್ಯದಲ್ಲಿ ೨೪೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೭೪ ಕೈಗಾರಿಕಾ ಘಟಕಗಳಿದ್ದವು ನಾಲ್ಕನೇ ಯೋಜನೆಯ ಆರಂಭದಲ್ಲಿ ೧೯೬೯ರಲ್ಲಿ ೩೯೦೨ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೮೫ ಕೈಗಾರಿಕಾ ಘಟಕಗಳಿದ್ದವು ೭೦–೭೧ ನೇ ವಾರ್ಷಿಕ ಸಾಲಿನ ಕೊನೆಯಲ್ಲಿ ಬಂಡವಾಳ ಹೂಡಿಕೆ ೪೩೦೦ಕೋಟಿ ರೂಪಾಯಿಗೇರಿತ್ತು.

ಕುಂಠಿತ ಸಾಧನೆ

ಯೋಜನಾ ಆಯೋಗವು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ಸರ್ಕಾರಿ ವಲಯದ ಕೈಗಾರಿಕೆಗಳ ಸಾಧನೆ ಕುಂಠಿತಗೊಂಡಿರುವುದು ಗೋಚರವಾಗಿದೆ. ಅನೇಕ ಘಟಕಗಳಲ್ಲಿ ಪೂರ್ಣ ಮಟ್ಟದಲ್ಲಿ ಯಂತ್ರಗಳ ಬಳಕೆಯಾಗುತ್ತಿರಲಿಲ್ಲ; ಹಣಕಾಸಿನ [illegible] ಕೈಗಾರಿಕೆಗಳಲ್ಲಿ ಹೂಡಿದ್ದ ಬಂಡವಾಳಕ್ಕೆ ಲಾಭವೊಂದೇ ಮುಖ್ಯವಾಗಿರಲಿಲ್ಲ. ಕೆಲವು ಘಟಕಗಳು ಪ್ರಾರಂಭಿಕ ಹಂತದಲ್ಲಿ ಅತ್ಯಲ್ಪ ಲಾಭಗಳಿಸಿದುವು. ಅನೇಕ ಸರ್ಕಾರಿ ಕೈಗಾರಿಕಾ ಘಟಕಗಳಲ್ಲಿ ಸುಧಾರಣೆಗೆ ಅವಕಾಶವಿದೆ.

ಯೋಜನೆಯ ಗುರಿಯನ್ನು ಸಾಧಿಸಬೇಕಾದರೆ ಸರ್ಕಾರಿ ಕೈಗಾರಿಕೆಗಳ ಕಾರ್ಯಕ್ಷಮತೆಯಲ್ಲಿ ಸುಧಾರಣೆಯಾಗಬೇಕಾಗುವುದು ಅತ್ಯಗತ್ಯ. ಈ ಘಟಕಗಳಲ್ಲಿರುವ ಸಮಸ್ಯೆಗಳು ತುಂಬಾ ಬೇರು ಬಿಟ್ಟದಾಗಿವೆ. ಆಡಳಿತ ನಿರ್ವಹಣೆ,ತಾಂತ್ರಿಕ ವಿಭಾಗ ಹಾಗು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದು ಅತ್ಯಗತ್ಯವಾಗಿದೆ.

ಈ ಕಾರಣಕ್ಕಾಗಿ ಆಯ್ಕೆ ಮಾಡಿದ ಸರ್ಕಾರಿ ವಲಯದ ಕೈಗಾರಿಕೆಗಳ ಕಾರ್ಯವಿಧಾನವನ್ನು ವಿಮರ್ಶಿಸಿ ಸೂಕ್ತ ಶಿಫಾರಸುಗಳನ್ನು ಮಾಡಲೆಂದು ಉನ್ನತ ಮಟ್ಟದ ಕ್ರಿಯಾ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಅತ್ಯಂತ ಶ್ರೇಷ್ಠರಾದ ಅನುಭವಿ ಔದ್ಯೋಗಿಕ ತಜ್ಞರನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಯಿತು. ಅದರ ಪ್ರಕಾರ ಕಳೆದ ತಿಂಗಳು ಯೋಜನಾ ಆಯೋಗದ ಸದಸ್ಯರಾದ ಶ್ರೀ ಎಂ. ಎಸ್. ಪಥಕ ಅಧ್ಯಕ್ಷತೆಯಲ್ಲಿ ಕ್ರಿಯಾ ಸಮಿತಿಯೊಂದನ್ನು ಸರ್ಕಾರ ನೇಮಿಸಿತು.

ಕ್ರಿಯಾ ಸಮಿತಿಯ ಕಾರ್ಯ

ಈ ಕ್ರಿಯಾ ಸಮಿತಿಯ ಕಾರ್ಯದಲ್ಲಿ ಅಧ್ಯಯನ ತಂಡಗಳು ವ್ಯಕ್ತಿಗಳು ಮತ್ತು ಸಂಸ್ಥೆಗಳು ಹಾಗು ಸಮಾಲೋಚನ ತಜ್ಞರು ನಿರ್ದಿಷ್ಟ ವಿಷಯದಲ್ಲಿ ಸಹಾಯ ನೀಡುತ್ತಾರೆ.

ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ಉನ್ನತ ಮಟ್ಟದಲ್ಲಿ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತದೆ. ಯೋಜನಾ ಆಯೋಗದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲು ಈ ಸಮಿತಿಯು ರಾಜ್ಯ ಸರ್ಕಾರಗಳು, ಸರ್ಕಾರದ ಶಾಖೆಗಳು ಮತ್ತಿತರ ಸಂಸ್ಥೆಗಳೊಂದಿಗೆ ನಿಕಟ ಸಮಾಲೋಚನೆ ನಡೆಸುತ್ತದೆ. ಕೇಂದ್ರ ಹಣಕಾಸು ಶಾಖೆಯ ಸರ್ಕಾರಿ ಕೈಗಾರಿಕೆಗಳ ಸಂಸ್ಥೆಯು ಈ ಸಮಿತಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುತ್ತದೆ.

ಕ್ರಿಯಾ ಸಮಿತಿಯು ಕಾಲಾನುಕ್ರಮದಲ್ಲಿ ಶಿಫಾರಸುಗಳನ್ನು ಮಂಡಿಸುತ್ತದೆ. ಈ ಸಮಿತಿಯ ಕಾರ್ಯವು ಒಂದರಿಂದ ಒಂದೂವರೆ ವರ್ಷದೊಳಗೆ ಮುಕ್ತಾಯವಾಗುವ ನಿರೀಕ್ಷೆಯಿದೆ.

ಕಾವ್ಯ ... ದು ಮಾತು ಹೆಚ್ಚುಕಡಿಮೆಯಾಗಿದ್ದರೆ, ಕಾವ್ಯನೇ ಹಾಳಾಗಿ ಹೋಗುತ್ತಿತ್ತೋ ಎಂಬ ಭ್ರಮೆ ಬರುವಂತಿದೆ. ಕವಿ ಕುಲ ಗುರು ಪಂಪನಿಗೆ ನಮೋ ನಮಃ!

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟರುಗಳು, ವಿವಿಧ ಫಾರ್ಮುಗಳು ಸುಲಭ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.
ನಂಜನಗೂಡು, (ಮೈಸೂರು ಸ್ಟೇಟ್)



ಸಂಪುಟ ೫೧
ಸಂಚಿಕೆ ೨೫

NAVAYUGA

24-2-19

ರಾಜ್ಯದಲ್ಲಿ ಚುನಾವಣೆ—

ವಿಜಯಮಾಲೆ ಯಾರ ಕೊರಳಿಗೆ?

ಕರ್ನಾಟಕದ ವಿಧಾನ ಸಭೆಗೆ ಚುನಾವಣೆಗಳು ಮಾರ್ಚ್ ೬ ಮತ್ತು ೯ರಂದು ನಡೆಯಲಿದ್ದು ಇದಕ್ಕೆ ಪೂರ್ವಭಾವಿ ಕ್ರಮಗಳೆಲ್ಲ ಮುಕ್ತಾಯಗೊಂಡಿವೆ. ಅಭ್ಯರ್ಥಿಗಳು ಅದ್ದೂರಿಯ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. .ಕೆಲವೆಡೆ ನೇರ ಸ್ಪರ್ಧೆ, ಇನ್ನು ಕೆಲವೆಡೆ ತ್ರಿಕೋಣ ಸ್ಪರ್ಧೆಗಳಿದ್ದರೂ ಹೆಚ್ಚಿನೆಡೆ ಬಹುಕೋಣ ಸ್ಪರ್ಧೆಯೇ ಇರುವುದರಿಂದ ಆಯಾ ಕ್ಷೇತ್ರದ ಪ್ರಭಾವಶಾಲಿ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಮಬಲದಿಂದ ಇಂಡಿಕೇಟಿನ ಅಭ್ಯರ್ಥಿ ತುಸು ಪ್ರಭಾವಶಾಲಿಯಿದ್ದರೆ, ಗೆದ್ದು ಬರುವುದು ಅಶಕ್ಯವೇನಲ್ಲ.

ರಾಜ್ಯದ ಚುನಾವಣಾ ರಂಗದಲ್ಲಿ ದುಮುಕಿರುವ ರಾಜ್ಯಕೀಯ ಪಕ್ಷಗಳಲ್ಲಿ ಇಂಡಿಕೇಟ್, ಸಿಂಡಿಕೇಟ್, ಜನಸಂಘ, ಸ್ವತಂತ್ರ ಮತ್ತು ಸಮಾಜವಾದಿಗಳು ಮುಖ್ಯ. ನೂರಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಲ್ಲಿಸಿದ ಪಕ್ಷಗಳು ಮೊದಲ ಮೂರು ಮಾತ್ರ. ಸಿಪಿಐಯು ಇಂಡಿಕೇಟಿನೊಳಗೆ ತೂರಿಕೊಂಡಿದ್ದರೆ, ಸಿಪಿಎಂನ ಸ್ಪರ್ಧೆ ನಗಣ್ಯ. ಕನ್ನಡ ಚಳುವಳಿಗಾರರು, ಜನತಾ ಪಕ್ಷದವರು, ದ್ರಾಮುಕರು ಉಳಿದ ಕೆಲ ಪಕ್ಷಗಳವರು. ಇವರೆಲ್ಲರನ್ನೂ ಮೆಟ್ಟಿ ನಿಂತವರು ಪಕ್ಷೇತರ ಅಭ್ಯರ್ಥಿಗಳು. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಪ್ರವೃತ್ತಿಯ ಜನರೂ ಇವರಲ್ಲಿದ್ದಾರೆ.

ಈ ಚುನಾವಣೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಗತಿಪರರೆಂದೂ ಪ್ರಗತಿಶೀಲರೆಂದೂ ಹೇಳಿಕೊಳ್ಳುತ್ತಿರುವ ಎರಡೂ ತುಕುಡಿ ಕಾಂಗ್ರೆಸ್‌ಗಳು ಹಳೆಯ ಮುಖಗಳನ್ನು ಸಾಧ್ಯವಾದಷ್ಟು ದೂರಕ್ಕೆ ದೂಡಿವೆ. ಹೊಸ ಮುಖಗಳನ್ನೂ ಯುವರಕ್ತವನ್ನೂ ವಿಧಾನ ಸಭೆಗೆ ತರಲು ಪ್ರಯತ್ನ ನಡೆಸಿವೆ. ಆದರೆ, ಈ ನಿಟ್ಟಿನಲ್ಲಿ ಇಂಡಿಕೇಟಿಗಿಂತ ಸಿಂಡಿಕೇಟೇ ಒಂದು ಹೆಜ್ಜೆ ಮುಂದು. ಇಂಡಿಕೇಟು ತನ್ನ ೨೧೨ ಅಭ್ಯರ್ಥಿಗಳಲ್ಲಿ ಅರುವತ್ತರ ಗಡಿ ದಾಟಿದವರು ಐವರು ಮಂ... ಒಂದಾಗಿ ೨೧೬ ರೂ. ಸ್ಥಾನಗಳಿಗೆ ಸ್ಪರ್ಧಿಸಿದರೆ, ಸಿಂಡಿಕೇಟು ಏಕಾಕಿಯಾಗಿ ೧೮೦ ಸ್ಥಾನಗಳಿಗೆ ಹುದ್ದರಿಗಳನ್ನು ನಿಲ್ಲಿಸಿದೆ. ಮತ್ತು ಸುಮಾರು ೨೦ ಕ್ಷೇತ್ರಗಳಲ್ಲಿ ಪಕ್ಷೇತರರಿಗೆ ಬೆಂಬಲ ಸೂಚಿಸಿದೆ.

ರಾಜ್ಯದ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧೆಯಿರುವುದು ಕಾಂಗ್ರೆಸ್ಸಿನ ಎರಡು ತುಕುಡಿಗಳಲ್ಲಿ. ಕೆಲವೆಡೆ ಸಿಂಡಿಕೇಟಿನ ಬದಲು ಇಂಡಿಕೇಟು ಜನಸಂಘವನ್ನು ಎದುರಿಸ ಬೇಕಾಗಿದೆ. ಮತ್ತೆ ಕೆಲವೆಡೆ ಪಕ್ಷೇತರರೂ ಪ್ರಭಾವಶಾಲಿಗಳಾಗಿ ಇಂಡಿಕೇಟ್—ಸಿಪಿಐಗೆ ಸವಾಲೊಡ್ಡಿದ್ದಾರೆ. ಇಂಡಿಕೇಟಿನ ಭಾವಿ ಮುಖ್ಯಮಂತ್ರಿಯೆಂದು ಹೇಳಲಾಗುತಿದ್ದ ದೇವರಾಜ ಅರಸರು ಸ್ಪರ್ಧೆಯಿಂದ ದೂರವುಳಿಯುವ ನಿರ್ಧಾರ ಮಾಡಿದರು; ಆದರೆ, ಕೈಗೆ ಬಂದ ಮುಖ್ಯಮಂತ್ರಿ ಪದವನ್ನು ಅನುಭವಿಸಲಾಗದ ಸಿದ್ಧವೀರಪ್ಪನವರು ಟಿಕೇಟು ಗಿಟ್ಟಿಸಿಕೊಂಡಿದ್ದಾರೆ. ಮಾಜಿ ಮಂತ್ರಿಗಳಿಗೆ ಟಿಕೇಟು ನೀಡುವುದೆಂದರೆ, ಅವರಿಗೆ ಮಂತ್ರಿಪದ ನೀಡಿದಂತೆಯೆಂದು ಭಾವಿಸಲಾಗದು ಎಂಬ ಎಚ್ಚರಿಕೆ ಇಂಡಿಕೇಟ್ ಧುರೀಣರು ಮೊದಲೇ ನೀಡಿರುವುದರಿಂದ ಸಿದ್ಧವೀರಪ್ಪನವರು ಗೆದ್ದು ಬಂದರೆ, ಪಕ್ಷದ ನಾಯಕರಾಗುವರೆಂದು ನಂಬುವುದು ಆಭಾಸಕರವಾಗುವುದು.

ದೇವರಾಜ ಅರಸರು ಟಿಕೇಟು ನೀಡುವಲ್ಲಿ ತುಂಬ ಎಚ್ಚರಿಕೆ ತೋರಿದ್ದಾರೆ. ಅವರೇ ನೀಡಿದ ಹೇಳಿಕೆಯೊಂದು ಹೇಳುತ್ತದೆ—ಒಕ್ಕಲಿಗರು ಮತ್ತು ಲಿಂಗಾಯತರಿಗೆ ಇದುವರೆಗೆ ಸಿಂಹಪಾಲು ಸಿಗುತಿತ್ತು. ಈ ಬಾರಿ ಆ ಎರಡೂ ಕೋಮುಗಳನ್ನು ಕೆಳಗೆ ತಳ್ಳಿ ಇತರ ಕೋಮುಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಲಾಗಿದೆ. ಕೆಲವು ತಿಂಗಳುಗಳ ಹಿಂದೆ ಇಂಡಿಕೇಟಿನಲ್ಲಿ ಬಿರುಗಾಳಿಯೊಂದು ಬೀಸಿತ್ತು—ಬಹು ಸಂಖ್ಯಾಕ ಕೋಮಿನವರ ಮೇಲೆ ಅಲ್ಪ ಸಂಖ್ಯಾಕ ಕೋಮಿನವರನ್ನು ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆಯೆಂದು ಇಂದು ದೇವ... ಮುಂದಾದದ್ದು ಎಂದರೆ, ತನ್ನ ಮುಂದೆ ಲಿಂಗಾಯತರದ್ದೂ ಒಕ್ಕಲಿಗರದ್ದೂ ಒಂದೂ ನಡೆಯಲಿಲ್ಲವೆಂದು ಹೆಗ್ಗಳಿಕೆ ಹೇಳಿಕೊಳ್ಳುವುದಕ್ಕೇ ಇರಬೇಕು.

ಸಿಂಡಿಕೇಟಿನ ಪ್ರಗತಿಶೀಲ-ಯಶಸ್ವೀ ಮುಖ್ಯಮಂತ್ರಿಯೆನಿಸಿದ್ದ ಯುವಕ ವೀರೇಂದ್ರ ಪಾಟೀಲರು ಸ್ಪರ್ಧೆಗಿಳಿಯಲಿಲ್ಲ. ಮಾತ್ರವಲ್ಲದೆ ಮತ್ತೊಬ್ಬ ಧುರೀಣ ರಾಮಕೃಷ್ಣ ಹೆಗ್ಗಡೆಯವರೂ ನಾಮಪತ್ರ ಹಿಂದೆಗೆದುಕೊಂಡರು. 'ಅಧಿಕಾರ ಪ್ರಿಯರು' ಎಂಬ ಅಪಖ್ಯಾತಿಯನ್ನು ಹೊರಿಸುತ್ತಿರುವ ಇತರ ಪಕ್ಷಗಳಿಗೆ ಸಿಂಡಿಕೇಟು ಈ ರೀತಿ ಪ್ರಬಲ ಏಟು ನೀಡಿದೆ. ಈ ಇಬ್ಬರು ರಾಜ್ಯಕೀಯ ಭಾಷೆಯ ಎಳೆಯರು ರಾಜ್ಯದ ಚುನಾವಣೆಗಳಲ್ಲಿ ಪಕ್ಷದ ವಿಜಯಕ್ಕೆಂದು ದುಡಿಯಲು ಪೂರ್ಣಾವಧಿಯ ಸಮಯವನ್ನು ಉಪಯೋಗಿಸುವ ನಿರ್ಧಾರ ಮಾಡಿದ್ದಾರೆ. ಇದು ಕಡಿಮೆ ಮಹತ್ವದ್ದೆಂದು ಹೇಳ ಬರುವುದಿಲ್ಲ.

ಚುನಾವಣೆಗಳ ಪರಿಣಾಮಗಳ ಬಗ್ಗೆಯೂ ಕಾಂಗ್ರೆಸ್ ತುಕ್ಕುಡಿಗಳಲ್ಲಿ ವಿಚಾರ ನಡೆದಿದೆ. ೨೧೬ರಲ್ಲಿ ೧೫೦ ತಮ್ಮದು ಎಂದು ಇಂಡಿಕೇಟು ಹೇಳುತ್ತದೆ. ೧೩೦ ತಮ್ಮದೆನ್ನುತ್ತದೆ ಸಿಂಡಿಕೇಟು. ಈ ಎರಡು ಕೇಟುಗಳ ಅನುಮಾನಿತ ಸಂಖ್ಯೆಯಷ್ಟು ಕುರ್ಚಿಗಳು ವಿಧಾನ ಸಭೆಯಲ್ಲಿಲ್ಲವಾಗಿರುವಾಗ ಉಳಿದ ಹಲವು ಪಕ್ಷೀಯರನ್ನೂ ಪಕ್ಷೇತರರನ್ನೂ ಲಾಬಿಗಳಲ್ಲಿಯೇ ಕೂರಿಸಬೇಕಷ್ಟೆ. ಇಂಡಿಕೇಟು ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ೧೮ರಿಂದ ೨೦ ಸ್ಥಾನ ನಿರೀಕ್ಷಿಸಿ ೨೭ನ್ನೂ ಪಡೆಯಿತು. ಇದರ ಆಧಾರದ ಮೇಲೆ ೧೫೦ರ ನಿರೀಕ್ಷೆಯನ್ನದು ಮಾಡಿದ್ದರೆ, ಮೂಲ ನಿರೀಕ್ಷೆ ೧೦೦ ಮಾತ್ರವೆನ್ನ ಬೇಕು. ಇದನ್ನೇ ಸಿಂಡಿಕೇಟಿಗೂ ಅನ್ವಯಿಸಿದರೆ?

ಆದರೆ ಒಂದು ಮಾತು ಶ್ರೀಮತಿ ಗಾಂಧಿಯ ನಾಮಬಲ ಅಥವಾ ಇಂದಿರಾಗಾಳಿ ಕಳೆದ ಸಲದಂತೆ ಈ ಬಾರಿ ಬಿರುಸಾಗಿ ಬೀ... ಯವರನ್ನು ರಾಜ್ಯ ಮಟ್ಟದ... ಯಕ್ಕೆಳೆದು ತರುವುದು ಬೇ... ಹುದು. ಅಥವಾ ಹಿಂದಿನ ಮ... ಆಕೆಯದಾದಂತೆ ಇಂದಿನ ವಿ... ದೇ ಆಗಬೇಕೆಂದೂ ಇರಬಹ... ನೋ! ಶ್ರೀಮತಿ ಗಾಂಧಿಯವ... ಯಾಗಿರುವುದರಿಂದಲೇ ಪಾಕಿ... ಭಾರತೀಯ ಸೇನೆಗಳು ಸೋ... ಎಂಬ ಭಾವನೆಯನ್ನೂ ಮ... ಮೂಡಿಸುವ ಪ್ರಯತ್ನ ನಡೆ... ರೆ, ಇದಕ್ಕೂ ಎಲ್ಲೆಡೆ ತೀವ್ರ ವಿ... ಕ್ತವಾಯ್ತು.

ಇಂಡಿಕೇಟು ಶ್ರೀಮತಿ ಗಾ... ಧರಣೆಗೆ ಎರವಾಗಿದ್ದಾರೆಂದು ... ದು. ಆದರೆ, ಮತದಾರರು ಕಳೆ... ಷ್ಟು ಮಾತಿನ ಮೋಡಿಯಿಂದ ... ಗಲಾರರು. ಕೇಂದ್ರದ ಕತೆ ಬೇರೆ... ದ್ದು ಬೇರೆ ಎನ್ನುವವರೂ ಕೆಲವ... ದ್ರದಲ್ಲಿ ಅಧಿಕಾರಾರೂಢವಾದ ... ರಾಜ್ಯಗಳಲ್ಲೂ ಇಂಡಿಕೇಟಿನ ಸ... ಇರಬೇಕೆನ್ನುವ ವಾದಕ್ಕೂ ಪುರ... ಮೆಯಾಗಿದೆ. ತನ್ನದಲ್ಲದ ಸರಕಾ... ಉರುಳಿಸುವ ಪ್ರಯತ್ನ ನಡೆಸಿ... ಅಪವಾದದಿಂದ ಇಂಡಿಕೇಟು ಕ... ಕೊಳ್ಳುವಂತಿಲ್ಲ. ವೀರೇಂದ್ರ ಪಾ... ಗತಿಶೀಲ ಸರಕಾರವನ್ನು ಉರ... ಇಂಡಿಕೇಟು ಹೇಗೆ ಯಶಗಳಿಸಿತ... ರುಳಿಸಲು ನೆರವಾದವರನ್ನು ಅ... ಹಿಗಳೆಂದು ಈಗ ಹೆಸರಿಸಿರುವುದ... ಯುವುದು ಸಾಧ್ಯವಿಲ್ಲ.

ಈ ಬಾರಿಯ ಚುನಾವಣೆಯ... ಶ ಹೇಗೆ ಹೊರಡಬಹುದು? ಸಿ... ಇರುವ ಅವಕಾಶವೆಂದರೆ, ಹಿಂ... ಸರಕಾರ ಮಾಡಿತೋರಿಸಿದ ಸ... ಮಾತ್ರ. ಈಗಾಗಲೇ ಕೆಲವೇ ರ... ಬದುಕುಳಿದಿರುವ ಇವನ್ನು ಮತ್ತೆ... ರಕ್ಕೆ ಜನ ತರಬಲ್ಲುದೆ? ಅಥವಾ... ಟ್ ಸರಕಾರವನ್ನೆ ರಚಿಸಿಕೊ... ಚುನಾವಣಾ ಭವಿಷ್ಯವನ್ನು ಯ... ಷ್ಯದರ್ಶಿಯೂ ಹೇಳಲಾರ; ಹೇಳ... ಸದ್ಯ ಹೇಳಬಹುದಾದುದಿಷ್ಟು—... ಲ್ಲಿ ಸಿಂಡಿಕೇಟ್ ಬಹುಮತ ಪಡೆ...

NAVAYUGA 17-2-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪಂಪ ಭಾರತ – ಒಂದು ಸನ್ನಿವೇಶ

(ಒಂದನೇ ಪುಟದಿಂದ)

ಬಡಿದೆಬ್ಬಿಸುತ್ತವೆ. ಇವನು ನನ್ನ ಮಗನನ್ನು ಕೊಂದ, ನನ್ನ ಅಣ್ಣನನ್ನು ಭೀಕರವಾಗಿ ಹೊಡೆದ ಎಂಬ ಅರಿವು ಅರ್ಜುನನಿಗೆ ಉಂಟಾದಾಗ, ಇಷ್ಟು ಹೊತ್ತಿನವರೆಗೂ ಅವನನ್ನು ಬೆನ್ನಹತ್ತಿದ್ದ ಕರ್ಣ ವ್ಯಾಮೋಹದ ಗ್ರಹ ಅವನನ್ನು ಬಿಟ್ಟು ಹೋಗುತ್ತದೆ. ಆವರಿಸಿದ್ದ ಕಾರ್ಮೋಡಗಳು ಹರಿದು ಆಕಾಶವು ನಿರ್ಮಲವಾಗುವಂತೆ, ಮನಸ್ಸು ಚೇತೋಹಾರಿಯಾಗುತ್ತಿದೆ. ಬುದ್ಧಿ ಚಟುವಟಿಕೆಯಿಂದ ಕೆಲಸ ಮಾಡತೊಡಗುತ್ತದೆ. ಅರ್ಜುನನ ಚಿತ್ತಕ್ಷೇತ್ರ ಈಗ ಹದವಾಗಿದೆ. ಅದನ್ನು ತಿಳಿದ ಕೃಷ್ಣ ಅಲ್ಲಿ ಕ್ರೋಧದ ಬೀಜವನ್ನು ನೆಡಲು ಉದ್ಯುಕ್ತನಾಗುತ್ತಾನೆ. "ನೀನು ಸೂತ ಸುತನಿಗೆ ಹೆದರಿದ್ದೀಯ ರಥ ನಡೆಸುವುದನ್ನು ಬಿಟ್ಟು ಈ ಚಕ್ರದಿಂದ ನಾನೇ ಅವನನ್ನು ಕೊಲ್ಲುತ್ತೇನೆ. ನನ್ನ ಕೀರ್ತಿ ಪ್ರಪಂಚಕ್ಕೆಲ್ಲ ಹಬ್ಬುತ್ತದೆ. ಜಯಾಂಗನೆಗೆ ನಾನೇ ಗಂಡನಾಗುತ್ತೇನೆ" ಎಂಬ ಕೃಷ್ಣನ ಮಾತುಗಳು ತ್ರಿಲೋಕ ವೀರನಾದ ಅರ್ಜುನನಿಗೆ ಹಿಡಿಸ ಬಲ್ಲವೆ? ಅರ್ಜುನ ಕರ್ಣನಿಗೆ ಎಂದೂ ಹಿಂಜರಿಯದವನು. ಹೀಗಿರುತ್ತ ಸೂತ ಸುತನಿಗೆ ನೀನು ಹೆದರಿದ್ದೀಯೆ ಎಂಬ ಮಾತುಗಳನ್ನು ಕೇಳಲು ಅವನು ಹೇಗೆ ಶಕ್ತನಾದಾನು? ಕೃಷ್ಣ ತನ್ನ ಸಾರಥಿ. ಕುರುಭೂಮಿಯಲ್ಲಿ ಚಕ್ರ ಹಿಡಿಯುವುದಿಲ್ಲ ಎಂದಿದ್ದ. "ಈಗ ನೀನು ಕೈಲಾಗದ ಹೇಡಿ. ನಾನೇ ಚಕ್ರದಿಂದ ಕರ್ಣನನ್ನು ಕೊಂದು ಜಯಲಕ್ಷ್ಮಿಗೆ ಅಣ್ಣನಾಗುತ್ತೇನೆ" ಎಂದು ಕೃಷ್ಣ ಹೇಳುತ್ತಿರುವಾಗ ಅರ್ಜುನನಂತಹ ವೀರನಿಗೆ ಇದಕ್ಕಿಂತಲೂ ಅವಮಾನಕರವಾದ ಮಾತುಬೇಕೇ? ಅರ್ಜುನನ ಕ್ಷಾತ್ರ ತೇಜಸ್ಸು ಪ್ರಜ್ವಲಿಸಿತು. ಇಷ್ಟು ಹೊತ್ತಿನವರೆಗೂ ಕ್ಷತವಿಕ್ಷತವಾಗಿದ್ದ ಅವನ ವ್ಯಕ್ತಿತ್ವ ಮತ್ತೆ ಮೈನೆತ್ತು ನಿಂತಿತು. ರಾಹುವಿನ ಹಿಡಿತದಿಂದ ಬಿಡಿಸಿಕೊಂಡು ಬಂದ ಸೂರ್ಯನಂತೆ ಅವನು ಚೇತೋಹಾರಿಯಾದ. ಇಲ್ಲಿಗೆ ಕೃಷ್ಣನ ಉದ್ದೇಶವೂ ಸಫಲವಾಯಿತು. ಇನ್ನು ಅರ್ಜುನನಿಂದ ಕರ್ಣನ ಕೊಲೆಯಾಗುವುದರಲ್ಲಿ ಯಾವ ಸಂಶಯವೂ ಉಳಿಯುವುದಿಲ್ಲ.

ಹೀಗೆ ಭಾರತದ ಉದ್ದಕ್ಕೂ ಅರ್ಜುನನ ವೀಣೆ ಅಪಶ್ರುತಿಗೊಂಡಾಗ ಅದನ್ನು ಮೀಟಿ ಶ್ರುತಿ ಮಾಡಿದ ಮಹಾವೈಣಿಕನಾಗಿ ಕೃಷ್ಣ ಕಾಣುತ್ತಾನೆ. ಕುರುಭೂಮಿಯಲ್ಲಿ ಕರ್ತವ್ಯ ಪ್ರಜ್ಞೆ ಹೃದಯಂಗಮವಾಗಿ ಚಿತ್ರಿತವಾಗಿದೆ. ಎರಡೇ ಎರಡು ಪದ್ಯಗಳಲ್ಲಿ ಅರ್ಜುನನ ಮನಸ್ಸಿನಲ್ಲಿ ಉಂಟಾದ ಕ್ಲೇಶ ಅದನ್ನು ಕೃಷ್ಣ ಪರಿಹರಿಸಿದ ಮಾರ್ಗವನ್ನು ಪಂಪ ಮಹಾಕವಿ ಔಚಿತ್ಯಪೂರ್ಣವಾಗಿ ಮನನಾಟುವಂತೆ ಹೇಳಿದ್ದಾನೆ. ಅವನು ಬಳಸುವ ಒಂದೊಂದು ಮಾತೂ ಅರ್ಥವತ್ತಾಗಿದ್ದೆ, ತೂಕ ಮಾಡಿದಂತಿದೆ. ಅದರಲ್ಲಿ ಒಂದು ಮಾತು ಹೆಚ್ಚುಕಡಿಮೆಯಾಗಿದ್ದರೆ, ಕಾವ್ಯವೇ ಹಾಳಾಗಿ ಹೋಗುತ್ತಿತ್ತೋ ಎಂಬ ಭ್ರಮೆ ಬರುವಂತಿದೆ. ಕವಿ ಕುಲ ಗುರು ಪಂಪನಿಗೆ ನಮೋ ನಮಃ!

●●

ಕ್ರಿಯಾ ಸಮಿತಿಯಿಂದ

ಸರ್ಕಾರಿ ಕೈಗಾರಿಕೆಗಳ ಕಾರ್ಯ ವಿಮರ್ಶೆ

ನಾಲ್ಕನೇ ಯೋಜನೆಯಲ್ಲಿ ಸಾಧಿಸಬೇಕಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಈ ಪಾತ್ರ ವಹಿಸುವಂತಹ ಕೆಲವು ಕೈಗಾರಿಕೆಗಳನ್ನು ಆಯ್ಕೆ ಮಾಡಬೇಕೆಂದು ನಾಲ್ಕನೇ ಯೋಜನೆಯ ಹೊಸ ಕೈಗಾರಿಕಾ ನೀತಿಯಲ್ಲಿ ತಿಳಿಸಲಾಗಿದೆ. ಈ ರೀತಿ ಆಯ್ಕೆ ಮಾಡಿದ ಕೈಗಾರಿಕೆಗಳೆಲ್ಲ ಹೂಡುವ ಮುಕ್ಕಾಲು ಭಾಗ ಬಂಡವಾಳವು ಸರ್ಕಾರಿ ವಲಯಕ್ಕೆ ಮೀಸಲಾಗಿದೆ. ನಾಲ್ಕನೇ ಯೋಜನೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಪೂರೈಕೆ ಹಾಗು ಕೈಗಾರಿಕಾ ಬೆಳವಣಿಗೆಯ ಪ್ರಮಾಣವು ಸರ್ಕಾರಿವಲಯದವ ಕೈಗಾರಿಕೆಗಳ ಸಾಧನೆಯನ್ನು ಅವಲಂಬಿಸಿದೆ.

ಭಾರತದಲ್ಲಿ ೧೯೫೦ರಲ್ಲಿ ಯೋಜನಾ ಯುಗ ಆರಂಭವಾದಾಗಿನಿಂದ ಸರ್ಕಾರಿ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆದಿವೆ. ಪ್ರಥಮ ಯೋಜನೆಯ ಆರಂಭದಲ್ಲಿ ೨೯ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ ಐದು ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿದುವು. ಪ್ರಥಮ ಯೋಜನೆಯ ಅಂತ್ಯದಲ್ಲಿ ೮೧ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೨೧ ಘಟಕಗಳಿದ್ದುವು. ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೯೫೩ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೪೮ ಕೈಗಾರಿಕಾ ಘಟಕಗಳಿದ್ದವು. ಮೂರನೇ ಯೋಜನೆಯ ಅಂತ್ಯದಲ್ಲಿ ೩೪೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೭೪ ಕೈಗಾರಿಕಾ ಘಟಕಗಳಿದ್ದವು ನಾಲ್ಕನೇ ಯೋಜನೆಯ ಆರಂಭದಲ್ಲಿ ೧೯೬೯ರಲ್ಲಿ ೩೯೦೨ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೮೫ ಕೈಗಾರಿಕಾ ಘಟಕಗಳಿದ್ದವು ೭೦–೭೧ನೇ ವಾರ್ಷಿಕ ಸಾಲಿನ ಕೊನೆಯಲ್ಲಿ ಬಂಡವಾಳ ಹೂಡಿಕೆ ೪೭೦೦ಕೋಟಿ ರೂಪಾಯಿಗೇರಿತ್ತು.

ಕುಂಠಿತ ಸಾಧನೆ

ಯೋಜನಾ ಆಯೋಗವು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ಸರ್ಕಾರಿ ವಲಯದ ಕೈಗಾರಿಕೆಗಳ ಸಾಧನೆ ಕುಂಠಿತಗೊಂಡಿರುವುದು ಗೋಚರವಾಗಿದೆ. ಅನೇಕ ಘಟಕಗಳಲ್ಲಿ ಪೂರ್ಣ ಮಟ್ಟದಲ್ಲಿ ಯಂತ್ರಗಳ ಬಳಕೆಯಾಗುತ್ತಿರಲಿಲ್ಲ; ಹಣಕಾಸಿನ ವಹಿವಾಟು ತೃಪ್ತಿಕರವಾಗಿರಲಿಲ್ಲ. ಸರ್ಕಾರಿ ವಲಯದ ಕೈಗಾರಿಕೆಗಳಲ್ಲಿ ಹೂಡಿದ್ದ ಬಂಡವಾಳಕ್ಕೆ ಲಾಭವೊಂದೇ ಮುಖ್ಯವಾಗಿರಲಿಲ್ಲ. ಕೆಲವು ಘಟಕಗಳು ಪ್ರಾರಂಭಿಕ ಹಂತದಲ್ಲಿ ಅತ್ಯಲ್ಪ ಲಾಭಗಳಿಸಿದುವು. ಅನೇಕ ಸರ್ಕಾರಿ ಕೈಗಾರಿಕಾ ಘಟಕಗಳಲ್ಲಿ ಸುಧಾರಣೆಗೆ ಅವಕಾಶವಿದೆ.

ಯೋಜನೆಯ ಗುರಿಯನ್ನು ಸಾಧಿಸಬೇಕಾದರೆ ಸರ್ಕಾರಿ ಕೈಗಾರಿಕೆಗಳ ಕಾರ್ಯಕ್ಷಮತೆಯಲ್ಲಿ ಸುಧಾರಣೆಯಾಗಬೇಕಾಗುವುದು ಅತ್ಯಗತ್ಯ. ಈ ಘಟಕಗಳಲ್ಲಿರುವ ಸಮಸ್ಯೆಗಳು ತುಂಬಾ ಬೇರು ಬಿಟ್ಟುದಾಗಿವೆ. ಆಡಳಿತ ನಿರ್ವಹಣೆ,ತಾಂತ್ರಿಕ ವಿಭಾಗ ಹಾಗು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದು ಅತ್ಯಗತ್ಯವಾಗಿದೆ.

ಈ ಕಾರಣಕ್ಕಾಗಿ ಆಯ್ಕೆ ಮಾಡಿದ ಸರ್ಕಾರಿ ವಲಯದ ಕೈಗಾರಿಕೆಗಳ ಕಾರ್ಯವಿಧಾನವನ್ನು ವಿಮರ್ಶಿಸಿ ಸೂಕ್ತ ಶಿಫಾರಸುಗಳನ್ನು ಮಾಡಲೆಂದು ಉನ್ನತ ಮಟ್ಟದ ಕ್ರಿಯಾ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಅತ್ಯಂತ ಶ್ರೇಷ್ಠರಾದ ಅನುಭವಿ ಔದ್ಯೋಗಿಕ ತಜ್ಞರನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಯಿತು. ಅದರ ಪ್ರಕಾರ ಕಳೆದ ತಿಂಗಳು ಯೋಜನಾ ಆಯೋಗದ ಸದಸ್ಯರಾದ ಶ್ರೀ ಎಂ. ಎಸ್. ಪಥಕ ಅಧ್ಯಕ್ಷತೆಯಲ್ಲಿ ಕ್ರಿಯಾ ಸಮಿತಿಯೊಂದನ್ನು ಸರ್ಕಾರ ನೇಮಿಸಿತು.

ಕ್ರಿಯಾ ಸಮಿತಿಯ ಕಾರ್ಯ

ಈ ಕ್ರಿಯಾ ಸಮಿತಿಯ ಕಾರ್ಯದಲ್ಲಿ ಅಧ್ಯಯನ ತಂಡಗಳು ವ್ಯಕ್ತಿಗಳು ಮತ್ತು ಸಂಸ್ಥೆಗಳು ಹಾಗು ಸಮಾಲೋಚನ ತಜ್ಞರು ನಿರ್ದಿಷ್ಟ ವಿಷಯದಲ್ಲಿ ಸಹಾಯ ನೀಡುತ್ತಾರೆ.

ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ಉನ್ನತ ಮಟ್ಟದಲ್ಲಿ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತದೆ. ಯೋಜನಾ ಆಯೋಗದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲು ಈ ಸಮಿತಿಯು ರಾಜ್ಯ ಸರ್ಕಾರಗಳು, ಸರ್ಕಾರದ ಶಾಖೆಗಳು ಮತ್ತಿತರ ಸಂಸ್ಥೆಗಳೊಂದಿಗೆ ನಿಕಟ ಸಮಾಲೋಚನೆ ನಡೆಸುತ್ತದೆ ಕೇಂದ್ರ ಹಣಕಾಸು ಶಾಖೆಯ ಸರ್ಕಾರಿ ಕೈಗಾರಿಕೆಗಳ ಸಂಸ್ಥೆಯು ಈ ಸಮಿತಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುತ್ತದೆ.

ಕ್ರಿಯಾ ಸಮಿತಿಯು ಕಾಲಾನುಕ್ರಮದಲ್ಲಿ ಶಿಫಾರಸುಗಳನ್ನು ಮಂಡಿಸುತ್ತದೆ. ಈ ಸಮಿತಿಯ ಕಾರ್ಯವು ಒಂದರಿಂದ ಒಂದೂವರೆ ವರ್ಷದೊಳಗೆ ಮುಕ್ತಾಯವಾಗುವ ನಿರೀಕ್ಷೆಯಿದೆ. ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೨೫

NAVAYUGA

24-2-1972

ರಾಜ್ಯದಲ್ಲಿ ಚುನಾವಣೆ—

ವಿಜಯಮಾಲೆ ಯಾರ ಕೊರಳಿಗೆ?

ಕರ್ನಾಟಕದ ವಿಧಾನ ಸಭೆಗೆ ಚುನಾವಣೆಗಳು ಮಾರ್ಚಿ ೬ ಮತ್ತು ೯ರಂದು ನಡೆಯಲಿದ್ದು ಇದಕ್ಕೆ ಪೂರ್ವಭಾವಿ ಕ್ರಮಗಳೆಲ್ಲ ಮುಕ್ತಾಯಗೊಂಡಿವೆ. ಅಭ್ಯರ್ಥಿಗಳು ಅದ್ದೂರಿಯ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಲವೆಡೆ ನೇರ ಸ್ಪರ್ಧೆ, ಇನ್ನು ಕೆಲವೆಡೆ ತ್ರಿಕೋಣ ಸ್ಪರ್ಧೆಗಳಿದ್ದರೂ ಹೆಚ್ಚಿನೆಡೆ ಬಹುಕೋಣ ಸ್ಪರ್ಧೆಯೇ ಇರುವುದರಿಂದ ಆಯಾ ಕ್ಷೇತ್ರದ ಪ್ರಭಾವಶಾಲಿ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಮಬಲದಿಂದ ಇಂಡಿಕೇಟಿನ ಅಭ್ಯರ್ಥಿ ತುಸು ಪ್ರಭಾವಶಾಲಿಯಿದ್ದರೆ, ಗೆದ್ದು ಬರುವುದು ಅಶಕ್ಯವೇನಲ್ಲ.

ರಾಜ್ಯದ ಚುನಾವಣಾ ರಂಗದಲ್ಲಿ ಧುಮುಕಿರುವ ರಾಜಕೀಯ ಪಕ್ಷಗಳಲ್ಲಿ ಇಂಡಿಕೇಟ್, ಸಿಂಡಿಕೇಟ್, ಜನಸಂಘ, ಸ್ವತಂತ್ರ ಮತ್ತು ಸಮಾಜವಾದಿಗಳು ಮುಖ್ಯ. ನೂರಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಲ್ಲಿಸಿದ ಪಕ್ಷಗಳು ಮೊದಲ ಮೂರು ಮಾತ್ರ. ಸಿಪಿಐಯು ಇಂಡಿಕೇಟಿನೊಳಗೆ ತೂರಿಕೊಂಡಿದ್ದರೆ, ಸಿಪಿಎಂನ ಸ್ಪರ್ಧೆ ನಗಣ್ಯ. ಕನ್ನಡ ಚಳುವಳಿಗಾರರು, ಜನತಾ ಪಕ್ಷದವರು, ಪ್ರಮುಖರು ಉಳಿದ ಕೆಲ ಪಕ್ಷಗಳವರು. ಇವರೆಲ್ಲರನ್ನೂ ಮೆಟ್ಟಿ ನಿಂತವರು ಪಕ್ಷೇತರ ಅಭ್ಯರ್ಥಿಗಳು. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಪ್ರವೃತ್ತಿಯ ಜನರೂ ಇವರಲ್ಲಿದ್ದಾರೆ.

ಈ ಚುನಾವಣೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಗತಿಪರರೆಂದೂ ಪ್ರಗತಿಶೀಲರೆಂದೂ ಹೇಳಿಕೊಳ್ಳುತ್ತಿರುವ ಎರಡೂ ತುಕಡಿ ಕಾಂಗ್ರೆಸ್‌ಗಳು ಹಳೆಯ ಮುಖಗಳನ್ನು ಸಾಧ್ಯವಾದಷ್ಟು ದೂರಕ್ಕೆ ದೂಡಿವೆ. ಹೊಸ ಮುಖಗಳನ್ನೂ ಯುವರಕ್ತವನ್ನೂ ವಿಧಾನ ಸಭೆಗೆ ತರಲು ಪ್ರಯತ್ನ ನಡೆಸಿವೆ. ಆದರೆ, ಈ ನಿಟ್ಟಿನಲ್ಲಿ ಇಂಡಿಕೇಟಿಗಿಂತ ಸಿಂಡಿಕೇಟೇ ಒಂದು ಹೆಜ್ಜೆ ಮುಂದು. ಇಂಡಿಕೇಟು ತನ್ನ ೨೧೨ ಅಭ್ಯರ್ಥಿಗಳಲ್ಲಿ ಅರುವತ್ತರ ಗಡಿ ದಾಟಿದವರು ಐದಾರು ಮಂದಿಯೆಂದರೆ ಸಿಂಡಿಕೇಟು ತನ್ನ ೧೭೦ ಅಭ್ಯರ್ಥಿಗಳಲ್ಲಿ ಅಂಥವರು ಯಾರೂ ಇಲ್ಲ ತನ್ನ ಅಭ್ಯರ್ಥಿಗಳ ಸರಾಸರಿ ಪ್ರಾಯ ೪೦ ಚಿಲ್ಲರೆಯೆಂದು ಡಣಾಡಂಗುರ ಸಾರಿದೆ. ಇಂಡಿಕೇಟು ಮತ್ತದರ ಮಿತ್ರಪಕ್ಷ ಸಿಪಿಐಗಳು ಒಂದಾಗಿ ೨೧೬ ರೂ. ಸ್ಥಾನಗಳಿಗೆ ಸ್ಪರ್ಧಿಸಿದರೆ, ಸಿಂಡಿಕೇಟು ಏಕಾಕಿಯಾಗಿ ೧೭೦ ಸ್ಥಾನಗಳಿಗೆ ಹುದ್ದರಿಗಳನ್ನು ನಿಲ್ಲಿಸಿದೆ. ಮತ್ತು ಸುಮಾರು ೨೦ ಕ್ಷೇತ್ರಗಳಲ್ಲಿ ಪಕ್ಷೇತರರಿಗೆ ಬೆಂಬಲ ಸೂಚಿಸಿದೆ.

ರಾಜ್ಯದ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧೆಯಿರುವುದು ಕಾಂಗ್ರೆಸ್ಸಿನ ಎರಡು ತುಕಡಿಗಳಲ್ಲಿ. ಕೆಲವೆಡೆ ಸಿಂಡಿಕೇಟಿನ ಬದಲು ಇಂಡಿಕೇಟು ಜನಸಂಘವನ್ನು ಎದುರಿಸಬೇಕಾಗಿದೆ. ಮತ್ತೆ ಕೆಲವೆಡೆ ಪಕ್ಷೇತರರೂ ಪ್ರಭಾವಶಾಲಿಗಳಾಗಿ ಇಂಡಿಕೇಟ್-ಸಿಪಿಐಗೆ ಸವಾಲೊಡ್ಡಿದ್ದಾರೆ. ಇಂಡಿಕೇಟಿನ ಭಾವಿ ಮುಖ್ಯಮಂತ್ರಿಯೆಂದು ಹೇಳಲಾಗುತ್ತಿದ್ದ ದೇವರಾಜ ಅರಸರು ಸ್ಪರ್ಧೆಯಿಂದ ದೂರವುಳಿಯುವ ನಿರ್ಧಾರ ಮಾಡಿದರು; ಆದರೆ, ಕೈಗೆ ಬಂದ ಮುಖ್ಯಮಂತ್ರಿ ಪದವನ್ನು ಅನುಭವಿಸಲಾಗದ ಸಿದ್ಧವೀರಪ್ಪನವರು ಟಿಕೇಟು ಗಿಟ್ಟಿಸಿಕೊಂಡಿದ್ದಾರೆ. ಮಾಜಿ ಮಂತ್ರಿಗಳಿಗೆ ಟಿಕೇಟು ನೀಡುವುದೆಂದರೆ, ಅವರಿಗೆ ಮಂತ್ರಿಪದ ನೀಡಿದಂತೆಯೆಂದು ಭಾವಿಸಲಾಗದು ಎಂಬ ಎಚ್ಚರಿಕೆ ಇಂಡಿಕೇಟ್ ಧುರೀಣರು ಮೊದಲೇ ನೀಡಿರುವುದರಿಂದ ಸಿದ್ಧವೀರಪ್ಪನವರು ಗೆದ್ದು ಬಂದರೆ, ಪಕ್ಷದ ನಾಯಕರಾಗುವರೆಂದು ನಂಬುವುದು ಆಭಾಸಕರವಾಗುವುದು.

ದೇವರಾಜ ಅರಸರು ಟಿಕೇಟು ನೀಡುವಲ್ಲಿ ತುಂಬ ಎಚ್ಚರಿಕೆ ತೋರಿದ್ದಾರೆ. ಅವರೇ ನೀಡಿದ ಹೇಳಿಕೆಯೊಂದು ಹೇಳುತ್ತದೆ—ಒಕ್ಕಲಿಗರು ಮತ್ತು ಲಿಂಗಾಯತರಿಗೆ ಇದುವರೆಗೆ ಸಿಂಹಪಾಲು ಸಿಗುತ್ತಿತ್ತು. ಈ ಬಾರಿ ಆ ಎರಡೂ ಕೋಮುಗಳನ್ನು ಕೆಳಗೆ ತಳ್ಳಿ, ಇತರ ಕೋಮುಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಲಾಗಿದೆ. ಕೆಲವು ತಿಂಗಳುಗಳ ಹಿಂದೆ ಇಂಡಿಕೇಟಿನಲ್ಲಿ ಬಿರುಗಾಳಿಯೊಂದು ಬೀಸಿತ್ತು—ಬಹುಸಂಖ್ಯಾಕ ಕೋಮಿನವರ ಮೇಲೆ ಅಲ್ಪಸಂಖ್ಯಾಕ ಕೋಮಿನವರನ್ನು ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆಯೆಂದು. ಇಂದು ದೇವರಾಜ ಅರಸರು ಅದನ್ನು ಸತ್ಯವಾಗಿ ಮಾಡಿ ತೋರಿಸಿದರು. ಕೋಮುವಾರು ಭಾವನೆಯು ಪ್ರಜಾಸತ್ತೆಗೆ ಆತಂಕಕಾರಿಯೆಂದು ಹೇಳುವವರೇ ಅಭ್ಯರ್ಥಿಗಳ ಕೋಮುವಾರು ಪಟ್ಟಿಯನ್ನು ಬಹಿರಂಗಪಡಿಸಲು ಮುಂದಾದದ್ದು ಎಂದರೆ, ತನ್ನ ಮುಂದೆ ಲಿಂಗಾಯತರದ್ದೂ ಒಕ್ಕಲಿಗರದ್ದೂ ಒಂದೂ ನಡೆಯಲಿಲ್ಲವೆಂದು ಹೆಗ್ಗಳಿಕೆ ಹೇಳಿಕೊಳ್ಳುವುದಕ್ಕೇ ಇರಬೇಕು.

ಸಿಂಡಿಕೇಟಿನ ಪ್ರಗತಿಶೀಲ-ಯಶಸ್ವೀ ಮುಖ್ಯಮಂತ್ರಿಯೆನಿಸಿದ್ದ ಯುವಕ ವೀರೇಂದ್ರ ಪಾಟೀಲರು ಸ್ಪರ್ಧೆಗಿಳಿಯಲಿಲ್ಲ. ಮಾತ್ರವಲ್ಲದೆ ಮತ್ತೊಬ್ಬ ಧುರೀಣ ರಾಮಕೃಷ್ಣ ಹೆಗ್ಗಡೆಯವರೂ ನಾಮಪತ್ರ ಹಿಂತೆಗೆದುಕೊಂಡರು. 'ಅಧಿಕಾರ ಪ್ರಿಯರು' ಎಂಬ ಅಪಖ್ಯಾತಿಯನ್ನು ಹೊರಿಸುತ್ತಿರುವ ಇತರ ಪಕ್ಷಗಳಿಗೆ ಸಿಂಡಿಕೇಟು ಈ ರೀತಿ ಪ್ರಬಲ ಏಟು ನೀಡಿದೆ. ಈ ಇಬ್ಬರು ರಾಜಕೀಯ ಧಾಟಿಯ ಎಳೆಯರು ರಾಜ್ಯದ ಚುನಾವಣೆಗಳಲ್ಲಿ ಪಕ್ಷದ ವಿಜಯಕ್ಕೆಂದು ದುಡಿಯಲು ಪೂರ್ಣಾವಧಿಯ ಸಮಯವನ್ನು ಉಪಯೋಗಿಸುವ ದೃಢ ನಿರ್ಧಾರ ಮಾಡಿದ್ದಾರೆ. ಇದು ಕಡಿಮೆ ಮಹತ್ವದ್ದೆಂದು ಹೇಳಬರುವುದಿಲ್ಲ.

ಚುನಾವಣೆಗಳ ಪರಿಣಾಮಗಳ ಬಗ್ಗೆ ಯಾ ಕಾಂಗ್ರೆಸ್ ತುಕಡಿಗಳಲ್ಲಿ ವಿಚಾರ ನಡೆದಿದೆ. ೨೧೬ರಲ್ಲಿ ೧೫೦ ತಮ್ಮದು ಎಂದು ಇಂಡಿಕೇಟು ಹೇಳುತ್ತದೆ. ೧೨೦ ತಮ್ಮದೆನ್ನುತ್ತದೆ ಸಿಂಡಿಕೇಟು. ಈ ಎರಡು ಕೇಟುಗಳ ಅನುಮಾನಿತ ಸಂಖ್ಯೆಯಷ್ಟು ಕುರ್ಚಿಗಳು ವಿಧಾನ ಸಭೆಯಲ್ಲಿಲ್ಲವಾಗಿರುವಾಗ ಉಳಿದ ಹಲವು ಪಕ್ಷೀಯರನ್ನೂ ಪಕ್ಷೇತರರನ್ನೂ ಲಾಬಿಗಳಲ್ಲಿಯೇ ಕೂರಿಸಬೇಕಷ್ಟೆ. ಇಂಡಿಕೇಟು ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ೧೮ರಿಂದ ೨೦ ಸ್ಥಾನ ನಿರೀಕ್ಷಿಸಿ ೨೭ನ್ನೂ ಪಡೆಯಿತು. ಇದರ ಆಧಾರದ ಮೇಲೆ ೧೫೦ರ ನಿರೀಕ್ಷೆಯನ್ನದು ಮಾಡಿದ್ದರೆ, ಮೂಲ ನಿರೀಕ್ಷೆ ೧೦೦ ಮಾತ್ರವೆನ್ನಬೇಕು. ಇದನ್ನೇ ಸಿಂಡಿಕೇಟಿಗೂ ಅನ್ವಯಿಸಿದರೆ?

ಆದರೆ ಒಂದು ಮಾತು ಶ್ರೀಮತಿ ಗಾಂಧಿಯ ನಾಮಬಲ ಅಥವಾ ಇಂದಿರಾಗಾಳಿ ಕಳೆದ ಸಲದಂತೆ ಈ ಬಾರಿ ಬಿರುಸಾಗಿ ಬೀರುವ ಲಕ್ಷಣಗಳು ಕಡಿಮೆ. ತಮ್ಮ ಭಿತ್ತಿಪತ್ರಗಳಲ್ಲಿ ಅಥವಾ ಕರಪತ್ರಗಳಲ್ಲಿ ಶ್ರೀಮತಿ ಗಾಂಧಿಯ ಚಿತ್ರ ಹಾಕಿಸಿಗೊಳ್ಳಬಾರದೆಂದು ದೇವರಾಜ ಅರಸರು ಸಂದೇಶ ನೀಡಿದ್ದಾರೆ. ಅಂದರೆ, ಶ್ರೀಮತಿ ಗಾಂಧಿಯವರನ್ನು ರಾಜ್ಯ ಮಟ್ಟದ ರಾಜಕೀಯಕ್ಕೆಳೆದು ತರುವುದು ಬೇಡವೆಂದಿರಬಹುದು. ಅಥವಾ ಹಿಂದಿನ ಮಹಾವಿಜಯ ಆಕೆಯದಾದಂತೆ ಇಂದಿನ ವಿಜಯ ತನ್ನದೇ ಆಗಬೇಕೆಂದೂ ಇರಬಹುದೋ ಏನೋ! ಶ್ರೀಮತಿ ಗಾಂಧಿಯವರು ಪ್ರಧಾನಿಯಾಗಿರುವುದರಿಂದಲೇ ಪಾಕಿಸ್ತಾನವನ್ನು ಭಾರತೀಯ ಸೇನೆಗಳು ಸೋಲಿಸಿದುವು ಎಂಬ ಭಾವನೆಯನ್ನೂ ಮತದಾರರಲ್ಲಿ ಮೂಡಿಸುವ ಪ್ರಯತ್ನ ನಡೆಯಿತು. ಆದರೆ, ಇದಕ್ಕೂ ಎಲ್ಲೆಡೆ ತೀವ್ರ ವಿರೋಧ ವ್ಯಕ್ತವಾಯಿತು.

ಇಂಡಿಕೇಟು ಶ್ರೀಮತಿ ಗಾಂಧಿ ಜನಾಘಣೆಗೆ ಎರವಾಗಿದ್ದಾರೆಂದು ಹೇಳಲಾಗದು. ಆದರೆ, ಮತದಾರರು ಕಳೆದ ವರ್ಷದಷ್ಟು ಮಾತಿನ ಮೋಡಿಯಿಂದ ವಂಚಿತರಾಗಲಾರರು. ಕೇಂದ್ರದ ಕಥೆ ಬೇರೆ—ರಾಜ್ಯದ್ದು ಬೇರೆ ಎನ್ನುವವರೂ ಕೆಲವರು. ಕೇಂದ್ರದಲ್ಲಿ ಅಧಿಕಾರಾರೂಢವಾದ ಮಾತ್ರಕ್ಕೆ ರಾಜ್ಯಗಳಲ್ಲೂ ಇಂಡಿಕೇಟಿನ ಸರಕಾರವೇ ಇರಬೇಕೆನ್ನುವ ವಾದಕ್ಕೂ ಪುರಸ್ಕಾರ ಕಡಮೆಯಾಗಿದೆ. ತನ್ನದಲ್ಲದ ಸರಕಾರಗಳನ್ನು ಉರುಳಿಸುವ ಪ್ರಯತ್ನ ನಡೆಸಿದೆಯೆಂಬ ಅಪವಾದದಿಂದ ಇಂಡಿಕೇಟು ಕೈತೊಳೆದುಕೊಳ್ಳುವಂತಿಲ್ಲ. ವೀರೇಂದ್ರ ಪಾಟೀಲರ ಪ್ರಗತಿಶೀಲ ಸರಕಾರವನ್ನು ಉರುಳಿಸುವಲ್ಲಿ ಇಂಡಿಕೇಟು ಹೇಗೆ ಯಶಗಳಿಸಿತೆಂದು, ಉರುಳಿಸಲು ನೆರವಾದವರನ್ನು ಅಧಿಕಾರದಾಹಿಗಳೆಂದು ಈಗ ಹೆಸರಿಸಿರುವುದನ್ನು ಮರೆಯುವುದು ಸಾಧ್ಯವಿಲ್ಲ.

ಈ ಬಾರಿಯ ಚುನಾವಣೆಯ ಫಲಿತಾಂಶ ಹೇಗೆ ಹೊರಡಬಹುದು? ಸಿಂಡಿಕೇಟಿಗೆ ಇರುವ ಅವಕಾಶವೆಂದರೆ, ಹಿಂದಿನ ತನ್ನ ಸರಕಾರ ಮಾಡಿತೋರಿಸಿದ ಸಾಧನೆಗಳು ಮಾತ್ರ. ಈಗಾಗಲೇ ಕೆಲವೇ ರಾಜ್ಯಗಳಲ್ಲಿ ಬದುಕುಳಿದಿರುವ ಇದನ್ನು ಮತ್ತೆ ಅಧಿಕಾರಕ್ಕೆ ಜನ ತರಬಲ್ಲುದೆ? ಅಥವಾ ಇಂಡಿಕೇಟ್ ಸರಕಾರವನ್ನೆ ರಚಿಸಿಕೊಳ್ಳುವುದೆ? ಚುನಾವಣಾ ಭವಿಷ್ಯವನ್ನು ಯಾವ ಭವಿಷ್ಯದರ್ಶಿಯೂ ಹೇಳಲಾರ; ಹೇಳಬಾರದು. ಸದ್ಯ ಹೇಳಬಹುದಾದುದಿಷ್ಟು— ರಾಜ್ಯದಲ್ಲಿ ಸಿಂಡಿಕೇಟ್ ಬಹುಮತ ಪಡೆದರೆ ಅದು ಆಶ್ಚರ್ಯವಲ್ಲ. ಇಂಡಿಕೇಟ್ ಸರಕಾರ ರಚನೆಯಾಗದೆ ಹೋದರೇನೇ ಅದು ಮತ್ತೊಂದು ಸೋಜಿಗವಾಗುವುದು.

NAVAYUGA 17-2-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪಂಪ ಭಾರತ- ಒಂದು ಸನ್ನಿವೇಶ

(ಒಂದನೇ ಪುಟದಿಂದ)

ಬಡಿದೆಬ್ಬಿಸುತ್ತವೆ. ಇವನು ನನ್ನ ಮಗನನ್ನು ಕೊಂದ, ನನ್ನ ಅಣ್ಣನನ್ನು ಭೀಕರವಾಗಿ ಹೊಡೆದ ಎಂಬ ಅರಿವು ಅರ್ಜುನನಿಗೆ ಉಂಟಾದಾಗ, ಇಷ್ಟು ಹೊತ್ತಿನವರೆಗೂ ಅವನನ್ನು ಬೆನ್ನಹತ್ತಿದ್ದ ಕರ್ಣ ವ್ಯಾಮೋಹದ ಗ್ರಹ ಅವನನ್ನು ಬಿಟ್ಟು ಹೋಗುತ್ತದೆ. ಆವರಿಸಿದ್ದ ಕಾರ್ಮೋಡಗಳು ಹರಿದು ಆಕಾಶವು ನಿರ್ಮಲವಾಗುವಂತೆ, ಮನಸ್ಸು ಚೇತೋಹಾರಿಯಾಗುತ್ತಿದೆ. ಬುದ್ಧಿ ಚಟುವಟಿಕೆಯಿಂದ ಕೆಲಸ ಮಾಡತೊಡಗುತ್ತದೆ. ಅರ್ಜುನನ ಚಿತ್ತಕ್ಷೇತ್ರ ಈಗ ಹದವಾಗಿದೆ. ಅದನ್ನು ತಿಳಿದ ಕೃಷ್ಣ ಅಲ್ಲಿ ಕ್ರೋಧದ ಬೀಜವನ್ನು ನೆಡಲು ಉದ್ಯುಕ್ತನಾಗುತ್ತಾನೆ. "ನೀನು ಸೂತ ಸುತನಿಗೆ ಹೆದರಿದ್ದೀಯ ರಥ ನಡೆಸುವುದನ್ನು ಬಿಟ್ಟು ಈ ಚಕ್ರದಿಂದ ನಾನೇ ಅವನನ್ನು ಕೊಲ್ಲುತ್ತೇನೆ. ನನ್ನ ಕೀರ್ತಿ ಪ್ರಪಂಚಕ್ಕೆಲ್ಲ ಹಬ್ಬುತ್ತದೆ. ಜಯಾಂಗನೆಗೆ ನಾನೇ ಗಂಡನಾಗುತ್ತೇನೆ" ಎಂಬ ಕೃಷ್ಣನ ಮಾತುಗಳು ತ್ರಿಲೋಕ ವೀರನಾದ ಅರ್ಜುನನಿಗೆ ಹಿಡಿಸ ಬಲ್ಲವೆ? ಅರ್ಜುನ ಕರ್ಣನಿಗೆ ಎಂದೂ ಹಿಂಜರಿಯದವನು. ಹೀಗಿರುತ್ತ ಸೂತ ಸುತನಿಗೆ ನೀನು ಹೆದರಿದ್ದೀಯೊ ಎಂಬ ಮಾತುಗಳನ್ನು ಕೇಳಲು ಅವನು ಹೇಗೆ ಶಕ್ತನಾದಾನು? ಕೃಷ್ಣ ತನ್ನ ಸಾರಥಿ. ಕುರುಭೂಮಿಯಲ್ಲಿ ಚಕ್ರ ಹಿಡಿಯುವುದಿಲ್ಲ ಎಂದಿದ್ದ. "ಈಗ ನೀನು ಕೈಲಾಗದ ಹೇಡಿ. ನಾನೇ ಚಕ್ರದಿಂದ ಕರ್ಣನನ್ನು ಕೊಂದು ಜಯಲಕ್ಷ್ಮಿಗೆ ಅಣ್ಣನಾಗುತ್ತೇನೆ" ಎಂದು ಕೃಷ್ಣ ಹೇಳುತ್ತಿರುವಾಗ ಅರ್ಜುನನಂತಹ ವೀರನಿಗೆ ಇದಕ್ಕಿಂತಲೂ ಅವಮಾನಕರವಾದ ಮಾತುಬೇಕೇ? ಅರ್ಜುನನ ಕ್ಷಾತ್ರ ತೇಜಸ್ಸು ಪ್ರಜ್ವಲಿಸಿತು. ಇಷ್ಟು ಹೊತ್ತಿನವರೆಗೂ ಕ್ಷತವಿಕ್ಷತವಾಗಿದ್ದ ಅವನ ವ್ಯಕ್ತಿತ್ವ ಮತ್ತೆ ಮೈವೆತ್ತು ನಿಂತಿತು. ರಾಹುವಿನ ಹಿಡಿತದಿಂದ ಬಿಡಿಸಿಕೊಂಡು ಬಂದ ಸೂರ್ಯನಂತೆ ಅವನು ಚೇತೋಹಾರಿಯಾದ. ಇಲ್ಲಿಗೆ ಕೃಷ್ಣನ ಉದ್ದೇಶವೂ ಸಫಲವಾಯಿತು. ಇನ್ನು ಅರ್ಜುನನಿಂದ ಕರ್ಣನ ಕೊಲೆಯಾಗುವುದರಲ್ಲಿ ಯಾವ ಸಂಶಯವೂ ಉಳಿಯುವುದಿಲ್ಲ.

ಹೀಗೆ ಭಾರತದ ಉದ್ದಕ್ಕೂ ಅರ್ಜುನ ವೀಣೆ ಅಪಶ್ರುತಿಗೊಂಡಾಗ ಅದನ್ನು ಮೀಟಿ ಶ್ರುತಿ ಮಾಡಿದ ಮಹಾವೈಣಿಕನಾಗಿ ಕೃಷ್ಣ ಕಾಣುತ್ತಾನೆ. ಕುರುಭೂಮಿಯಲ್ಲಿ ಕರ್ತವ್ಯ ಪ್ರಜ್ಞೆ ಹೃದಯಂಗಮವಾಗಿ ಚಿತ್ರಿತವಾಗಿದೆ. ಎರಡೇ ಎರಡು ಪದ್ಯಗಳಲ್ಲಿ ಅರ್ಜುನನ ಮನಸ್ಸಿನಲ್ಲಿ ಉಂಟಾದ ಕ್ಲೇಷ ಅದನ್ನು ಕೃಷ್ಣ ಪರಿಹರಿಸಿದ ಮಾರ್ಗವನ್ನು ಪಂಪ ಮಹಾಕವಿ ಔಚಿತ್ಯಪೂರ್ಣವಾಗಿ ಮನನಾಟುವಂತೆ ಹೇಳಿದ್ದಾನೆ.-ಅವನು ಬಳಸುವ ಒಂದೊಂದು ಮಾತೂ ಅರ್ಥವತ್ತಾಗಿದೆ, ತೂಕ ಮಾಡಿದಂತಿದೆ. ಅದರಲ್ಲಿ ಒಂದು ಮಾತು ಹೆಚ್ಚು ಕಡಿಮೆಯಾಗಿದ್ದರೆ, ಕಾವ್ಯನೇ ಹಾಳಾಗಿ ಹೋಗುತ್ತಿತ್ತೋ ಎಂಬ ಭ್ರಮೆ ಬರುವಂತಿದೆ. ಕವಿ ಕುಲ ಗುರು ಪಂಪನಿಗೆ ನಮೋ ನಮಃ!

ಕ್ರಿಯಾ ಸಮಿತಿಯಿಂದ

ಸರ್ಕಾರಿ ಕೈಗಾರಿಕೆಗಳ ಕಾರ್ಯ ವಿಮರ್ಶೆ

ನಾಲ್ಕನೇ ಯೋಜನೆಯಲ್ಲಿ ಸಾಧಿಸಬೇಕಾಗಿರುವ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ಸರ್ಕಾರಿ ವಲಯದ ಕೈಗಾರಿಕೆಗಳಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಈ ಪಾತ್ರ ವಹಿಸುವಂತಹ ಕೆಲವು ಕೈಗಾರಿಕೆಗಳನ್ನು ಆಯ್ಕೆ ಮಾಡಬೇಕೆಂದು ನಾಲ್ಕನೇ ಯೋಜನೆಯ ಹೊಸ ಕೈಗಾರಿಕಾ ನೀತಿಯಲ್ಲಿ ತಿಳಿಸಲಾಗಿದೆ. ಈ ರೀತಿ ಆಯ್ಕೆ ಮಾಡಿದ ಕೈಗಾರಿಕೆಗಳಲ್ಲಿ ಹೂಡುವ ಮುಕ್ಕಾಲು ಭಾಗ ಬಂಡವಾಳವು ಸರ್ಕಾರಿ ವಲಯಕ್ಕೆ ಮೀಸಲಾಗಿದೆ. ನಾಲ್ಕನೇ ಯೋಜನೆಯಲ್ಲಿ ರೂಪಿಸಿರುವ ಕಾರ್ಯಕ್ರಮಗಳ ಪೂರೈಕೆ ಹಾಗು ಕೈಗಾರಿಕಾ ಬೆಳವಣಿಗೆಯ ಪ್ರಮಾಣವು ಸರ್ಕಾರಿವಲಯದ ಕೈಗಾರಿಕೆಗಳ ಸಾಧನೆಯನ್ನು ಅವಲಂಬಿಸಿದೆ.

ಭಾರತದಲ್ಲಿ ೧೯೫೦ರಲ್ಲಿ ಯೋಜನಾ ಯುಗ ಆರಂಭವಾದಾಗಿನಿಂದ ಸರ್ಕಾರಿ ಕೈಗಾರಿಕೆಗಳು ತೀವ್ರಗತಿಯಲ್ಲಿ ಬೆಳೆದಿವೆ. ಪ್ರಥಮ ಯೋಜನೆಯ ಆರಂಭದಲ್ಲಿ ೨೯ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಿಂದ ಐದು ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿದುವು. ಪ್ರಥಮ ಯೋಜನೆಯ ಅಂತ್ಯದಲ್ಲಿ ೮೧ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೨೧ ಘಟಕಗಳಿದ್ದುವು. ಎರಡನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೯೫೩ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೪೮ ಕೈಗಾರಿಕಾ ಘಟಕಗಳಿದ್ದವು. ಮೂರನೇ ಯೋಜನೆಯ ಅಂತ್ಯದಲ್ಲಿ ೨೪೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೭೪ ಕೈಗಾರಿಕಾ ಘಟಕಗಳಿದ್ದವು ನಾಲ್ಕನೇ ಯೋಜನೆಯ ಆರಂಭದಲ್ಲಿ ೧೯೬೯ರಲ್ಲಿ ೩೯೦೨ ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ೮೫ ಕೈಗಾರಿಕಾ ಘಟಕಗಳಿದ್ದವು ೭೦-೭೧ನೇ ವಾರ್ಷಿಕ ಸಾಲಿನ ಕೊನೆಯಲ್ಲಿ ಬಂಡವಾಳ ಹೂಡಿಕೆ ೪೭೦೦ಕೋಟಿ ರೂಪಾಯಿಗೇರಿತ್ತು.

ಕುಂಠಿತ ಸಾಧನೆ

ಯೋಜನಾ ಆಯೋಗವು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ಸರ್ಕಾರಿ ವಲಯದ ಕೈಗಾರಿಕೆಗಳ ಸಾಧನೆ ಕುಂಠಿತಗೊಂಡಿರುವುದು ಗೋಚರವಾಗಿದೆ. ಅನೇಕ ಘಟಕಗಳಲ್ಲಿ ಪೂರ್ಣ ಮಟ್ಟದಲ್ಲಿ ಯಂತ್ರಗಳ ಬಳಕೆಯಾಗುತ್ತಿರಲಿಲ್ಲ; ಹಣಕಾಸಿನ ವಹಿವಾಟು ತೃಪ್ತಿಕರವಾಗಿರಲಿಲ್ಲ. ಸರ್ಕಾರಿ ವಲಯದ ಕೈಗಾರಿಕೆಗಳಲ್ಲಿ ಹೂಡಿದ ಬಂಡವಾಳಕ್ಕೆ ಲಾಭವೊಂದೇ ಮುಖ್ಯವಾಗಿರಲಿಲ್ಲ. ಕೆಲವು ಘಟಕಗಳು ಪ್ರಾರಂಭಿಕ ಹಂತದಲ್ಲಿ ಅತ್ಯಲ್ಪ ಲಾಭಗಳಿಸಿದುವು. ಅನೇಕ ಸರ್ಕಾರಿ ಕೈಗಾರಿಕಾ ಘಟಕಗಳಲ್ಲಿ ಸುಧಾರಣೆಗೆ ಅವಕಾಶವಿದೆ.

ಯೋಜನೆಯ ಗುರಿಯನ್ನು ಸಾಧಿಸಬೇಕಾದರೆ ಸರ್ಕಾರಿ ಕೈಗಾರಿಕೆಗಳ ಕಾರ್ಯಕ್ಷಮತೆಯಲ್ಲಿ ಸುಧಾರಣೆಯಾಗಬೇಕಾಗುವುದು ಅತ್ಯಗತ್ಯ. ಈ ಘಟಕಗಳಲ್ಲಿರುವ ಸಮಸ್ಯೆಗಳು ತುಂಬಾ ಬೇರು ಬಿಟ್ಟು ದಾಗಿವೆ. ಆಡಳಿತ ನಿರ್ವಹಣೆ,ತಾಂತ್ರಿಕ ವಿಭಾಗ ಹಾಗು ಕೈಗಾರಿಕಾ ಬಾಂಧವ್ಯಕ್ಕೆ ಸಂಬಂಧಿಸಿದಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವುದು ಅತ್ಯಗತ್ಯವಾಗಿದೆ.

ಈ ಕಾರಣಕ್ಕಾಗಿ ಆಯ್ಕೆ ಮಾಡಿದ ಸರ್ಕಾರಿ ವಲಯದ ಕೈಗಾರಿಕೆಗಳ ಕಾರ್ಯವಿಧಾನವನ್ನು ವಿಮರ್ಶಿಸಿ ಸೂಕ್ತ ಶಿಫಾರಸುಗಳನ್ನು ಮಾಡಲೆಂದು ಉನ್ನತ ಮಟ್ಟದ ಕ್ರಿಯಾ ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಅತ್ಯಂತ ಶ್ರೇಷ್ಠರಾದ ಅನುಭವಿ ಔದ್ಯೋಗಿಕ ತಜ್ಞರನ್ನು ನೇಮಿಸಲು ನಿರ್ಧಾರ ಕೈಗೊಳ್ಳಲಾಯಿತು. ಅದರ ಪ್ರಕಾರ ಕಳೆದ ತಿಂಗಳು ಯೋಜನಾ ಆಯೋಗದ ಸದಸ್ಯರಾದ ಶ್ರೀ ಎಂ. ಎಸ್. ಪಠಕ ಅಧ್ಯಕ್ಷತೆಯಲ್ಲಿ ಕ್ರಿಯಾ ಸಮಿತಿಯೊಂದನ್ನು ಸರ್ಕಾರ ನೇಮಿಸಿತು.

ಕ್ರಿಯಾ ಸಮಿತಿಯ ಕಾರ್ಯ

ಈ ಕ್ರಿಯಾ ಸಮಿತಿಯ ಕಾರ್ಯದಲ್ಲಿ ಅಧ್ಯಯನ ತಂಡಗಳು ವ್ಯಕ್ತಿಗಳು ಮತ್ತು ಸಂಸ್ಥೆಗಳು ಹಾಗು ಸಮಾಲೋಚನ ತಜ್ಞರು ನಿರ್ದಿಷ್ಟ ವಿಷಯದಲ್ಲಿ ಸಹಾಯ ನೀಡುತ್ತಾರೆ.

ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ಉನ್ನತ ಮಟ್ಟದಲ್ಲಿ ವಿಮರ್ಶಿಸಿ ನಿರ್ಧಾರ ಕೈಗೊಳ್ಳುತ್ತದೆ. ಯೋಜನಾ ಆಯೋಗದ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲು ಈ ಸಮಿತಿಯು ರಾಜ್ಯ ಸರ್ಕಾರಗಳು. ಸರ್ಕಾರದ ಶಾಖೆಗಳು ಮತ್ತಿತರ ಸಂಸ್ಥೆಗಳೊಂದಿಗೆ ನಿಕಟ ಸಮಾಲೋಚನೆ ನಡೆಸುತ್ತದೆ ಕೇಂದ್ರ ಹಣಕಾಸು ಶಾಖೆಯ ಸರ್ಕಾರಿ ಕೈಗಾರಿಕೆಗಳ ಸಂಸ್ಥೆಯು ಈ ಸಮಿತಿಗೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುತ್ತದೆ

ಕ್ರಿಯಾ ಸಮಿತಿಯು ಕಾಲಾನುಕ್ರಮದಲ್ಲಿ ಶಿಫಾರಸುಗಳನ್ನು ಮಂಡಿಸುತ್ತದೆ. ಈ ಸಮಿತಿಯ ಕಾರ್ಯವು ಒಂದರಿಂದ ಒಂದೂವರೆ ವರ್ಷದೊಳಗೆ ಮುಕ್ತಾಯವಾಗುವ ನಿರೀಕ್ಷೆಯಿದೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸಿಗುತ್ತವೆ
ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.
ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೨೫

NAVAYUGA

24-2-1972

ರಾಜ್ಯದಲ್ಲಿ ಚುನಾವಣೆ—

ವಿಜಯಮಾಲೆ ಯಾರ ಕೊರಳಿಗೆ?

ಕರ್ನಾಟಕದ ವಿಧಾನ ಸಭೆಗೆ ಚುನಾವಣೆಗಳು ಮಾರ್ಚಿ ೬ ಮತ್ತು ೯ರಂದು ನಡೆಯಲಿದ್ದು ಇದಕ್ಕೆ ಪೂರ್ವಭಾವಿ ಕ್ರಮಗಳೆಲ್ಲ ಮುಕ್ತಾಯಗೊಂಡಿವೆ. ಅಭ್ಯರ್ಥಿಗಳು ಅದ್ದೂರಿಯ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಲವೆಡೆ ನೇರ ಸ್ಪರ್ಧೆ, ಇನ್ನು ಕೆಲವೆಡೆ ತ್ರಿಕೋಣ ಸ್ಪರ್ಧೆಗಳಿದ್ದರೂ ಹೆಚ್ಚಿನೆಡೆ ಬಹುಕೋಣ ಸ್ಪರ್ಧೆಯೇ ಇರುವುದರಿಂದ ಆಯಾ ಕ್ಷೇತ್ರದ ಪ್ರಭಾವಶಾಲಿ ಅಭ್ಯರ್ಥಿ ಗೆಲ್ಲುವುದು ಸಾಧ್ಯವಾಗುವುದು. ಶ್ರೀಮತಿ ಇಂದಿರಾ ಗಾಂಧಿಯವರ ನಾಮಬಲದಿಂದ ಇಂಡಿಕೇಟಿನ ಅಭ್ಯರ್ಥಿ ತುಸು ಪ್ರಭಾವಶಾಲಿಯಿದ್ದರೆ, ಗೆದ್ದು ಬರುವುದು ಅಶಕ್ಯವೇನಲ್ಲ.

ರಾಜ್ಯದ ಚುನಾವಣಾ ರಂಗದಲ್ಲಿ ದುಮುಕಿರುವ ರಾಜ್ಯಕೀಯ ಪಕ್ಷಗಳಲ್ಲಿ ಇಂಡಿಕೇಟ್, ಸಿಂಡಿಕೇಟ್, ಜನಸಂಘ, ಸ್ವತಂತ್ರ ಮತ್ತು ಸಮಾಜವಾದಿಗಳು ಮುಖ್ಯ. ನೂರಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ನಿಲ್ಲಿಸಿದ ಪಕ್ಷಗಳು ಮೊದಲ ಮೂರು ಮಾತ್ರ. ಸಿಪಿಐಯು ಇಂಡಿಕೇಟಿನೊಳಗೆ ತೂರಿಕೊಂಡಿದ್ದರೆ, ಸಿಪಿಎಂನ ಸ್ಪರ್ಧೆ ನಗಣ್ಯ. ಕನ್ನಡ ಚಳುವಳಿಗಾರರು, ಜನತಾ ಪಕ್ಷದವರು, ಗ್ರಾಮುಕರು ಉಳಿದ ಕೆಲ ಪಕ್ಷಗಳವರು. ಇವರೆಲ್ಲರನ್ನೂ ಮೆಟ್ಟಿ ನಿಂತವರು ಪಕ್ಷೇತರ ಅಭ್ಯರ್ಥಿಗಳು. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಪ್ರವೃತ್ತಿಯ ಜನರೂ ಇವರಲ್ಲಿದ್ದಾರೆ.

ಈ ಚುನಾವಣೆಗಳಲ್ಲಿ ಒಂದು ವೈಶಿಷ್ಟ್ಯವಿದೆ. ಪ್ರಗತಿಪರರೆಂದೂ ಪ್ರಗತಿಶೀಲರೆಂದೂ ಹೇಳಿಕೊಳ್ಳುತ್ತಿರುವ ಎರಡೂ ತುಕುಡಿ ಕಾಂಗ್ರೆಸ್‌ಗಳು ಹಳೆಯ ಮುಖಗಳನ್ನು ಸಾಧ್ಯವಾದಷ್ಟು ದೂರಕ್ಕೆ ದೂಡಿವೆ. ಹೊಸ ಮುಖಗಳನ್ನೂ ಯುವರಕ್ತವನ್ನೂ ವಿಧಾನ ಸಭೆಗೆ ತರಲು ಪ್ರಯತ್ನ ನಡೆಸಿವೆ. ಆದರೆ, ಈ ನಿಟ್ಟಿನಲ್ಲಿ ಇಂಡಿಕೇಟಿಗಿಂತ ಸಿಂಡಿಕೇಟೇ ಒಂದು ಹೆಜ್ಜೆ ಮುಂದು. ಇಂಡಿಕೇಟು ತನ್ನ ೨೧೨ ಅಭ್ಯರ್ಥಿಗಳಲ್ಲಿ ಅರುವತ್ತರ ಗಡಿ ದಾಟಿದವರು ಐದಾರು ಮಂದಿಯೆಂದರೆ ಸಿಂಡಿಕೇಟು ತನ್ನ ೧೭೦ ಅಭ್ಯರ್ಥಿಗಳಲ್ಲಿ ಅಂಥವರು ಯಾರೂ ಇಲ್ಲ ತನ್ನ ಅಭ್ಯರ್ಥಿಗಳ ಸರಾಸರಿ ಪ್ರಾಯ ೪೦ ಚಿಲ್ಲರೆಯೆಂದು ಡಣಾಡಂಗುರ ಸಾರಿದೆ. ಇಂಡಿಕೇಟು ಮತ್ತು ದರ ಮಿತ್ರಪಕ್ಷ ಸಿಪಿಐಗಳು ಒಂದಾಗಿ ೨೧೬ ರೂ. ಸ್ಥಾನಗಳಿಗೆ ಸ್ಪರ್ಧಿಸಿದರೆ, ಸಿಂಡಿಕೇಟು ಏಕಾಕಿಯಾಗಿ ೧೭೦ ಸ್ಥಾನಗಳಿಗೆ ಹುದ್ದರಿಗಳನ್ನು ನಿಲ್ಲಿಸಿದೆ. ಮತ್ತು ಸುಮಾರು ೨೦ ಕ್ಷೇತ್ರಗಳಲ್ಲಿ ಪಕ್ಷೇತರರಿಗೆ ಬೆಂಬಲ ಸೂಚಿಸಿದೆ.

ರಾಜ್ಯದ ಚುನಾವಣೆಗಳಲ್ಲಿ ಪ್ರಮುಖ ಸ್ಪರ್ಧೆಯಿರುವುದು ಕಾಂಗ್ರೆಸ್ಸಿನ ಎರಡು ತುಕುಡಿಗಳಲ್ಲಿ. ಕೆಲವೆಡೆ ಸಿಂಡಿಕೇಟಿನ ಬದಲು ಇಂಡಿಕೇಟು ಜನಸಂಘವನ್ನು ಎದುರಿಸಬೇಕಾಗಿದೆ. ಮತ್ತೆ ಕೆಲವೆಡೆ ಪಕ್ಷೇತರರೂ ಪ್ರಭಾವಶಾಲಿಗಳಾಗಿ ಇಂಡಿಕೇಟ್ - ಸಿಪಿಐಗೆ ಸವಾಲೊಡ್ಡಿದ್ದಾರೆ. ಇಂಡಿಕೇಟಿನ ಭಾವಿ ಮುಖ್ಯಮಂತ್ರಿಯೆಂದು ಹೇಳಲಾಗುತಿಪ್ಪ ದೇವರಾಜ ಅರಸರು ಸ್ಪರ್ಧೆಯಿಂದ ದೂರವುಳಿಯುವ ನಿರ್ಧಾರ ಮಾಡಿದರು; ಆದರೆ, ಕೈಗೆ ಬಂದ ಮುಖ್ಯಮಂತ್ರಿ ಪದವನ್ನು ಅನುಭವಿಸಲಾಗದ ಸಿದ್ಧವೀರಪ್ಪನವರು ಟಿಕೇಟು ಗಿಟ್ಟಿಸಿಕೊಂಡಿದ್ದಾರೆ. ಮಾಜಿ ಮಂತ್ರಿಗಳಿಗೆ ಟಿಕೇಟು ನೀಡುವುದೆಂದರೆ, ಅವರಿಗೆ ಮಂತ್ರಿಪದ ನೀಡಿದಂತೆಯೆಂದು ಭಾವಿಸಲಾಗದು ಎಂಬ ಎಚ್ಚರಿಕೆ ಇಂಡಿಕೇಟ್ ಧುರೀಣರು ಮೊದಲೇ ನೀಡಿರುವುದರಿಂದ ಸಿದ್ಧವೀರಪ್ಪನವರು ಗೆದ್ದು ಬಂದರೆ, ಪಕ್ಷದ ನಾಯಕರಾಗುವರೆಂದು ನಂಬುವುದು ಆಭಾಸಕರವಾಗುವುದು.

ದೇವರಾಜ ಅರಸರು ಟಿಕೇಟು ನೀಡುವಲ್ಲಿ ತುಂಬ ಎಚ್ಚರಿಕೆ ತೋರಿದ್ದಾರೆ. ಅವರೇ ನೀಡಿದ ಹೇಳಿಕೆಯೊಂದು ಹೇಳುತ್ತದೆ—ಒಕ್ಕಲಿಗರು ಮತ್ತು ಲಿಂಗಾಯತರಿಗೆ ಇದುವರೆಗೆ ಸಿಂಹಪಾಲು ಸಿಗುತಿತ್ತು. ಈ ಬಾರಿ ಆ ಎರಡೂ ಕೋಮುಗಳನ್ನು ಕೆಳಗ ತಳ್ಳಿ ಇತರ ಕೋಮುಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಲಾಗಿದೆ. ಕೆಲವು ತಿಂಗಳುಗಳ ಹಿಂದೆ ಇಂಡಿಕೇಟಿನಲ್ಲಿ ಬಿರುಗಾಳಿಯೊಂದು ಬೀಸಿತ್ತು—ಬಹು ಸಂಖ್ಯಾಕ ಕೋಮಿನವರ ಮೇಲೆ ಅಲ್ಪ ಸಂಖ್ಯಾಕ ಕೋಮಿನವರನ್ನು ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆಯೆಂದು ಇಂದು ದೇವರಾಜ ಅರಸರು ಅದನ್ನು ಸತ್ಯವಾಗಿ ಮಾಡಿ ತೋರಿಸಿದರು. ಕೋಮುವಾರು ಭಾವನೆಯು ಪ್ರಜಾಸತ್ತೆಗೆ ಆತಂಕಕಾರಿಯೆಂದು ಹೇಳುವವರೇ ಅಭ್ಯರ್ಥಿಗಳ ಕೋಮುವಾರು ಪಟ್ಟಿಯನ್ನು ಬಹಿರಂಗ ಪಡಿಸಲು ಮುಂದಾದದ್ದು ಎಂದರೆ. ತನ್ನ ಮುಂದೆ ಲಿಂಗಾಯತರದ್ದೂ ಒಕ್ಕಲಿಗರದ್ದೂ ಒಂದೂ ನಡೆಯಲಿಲ್ಲವೆಂದು ಹೆಗ್ಗಳಿಕೆ ಹೇಳಿಕೊಳ್ಳುವುದಕ್ಕೇ ಇರಬೇಕು.

ಸಿಂಡಿಕೇಟಿನ ಪ್ರಗತಿಶೀಲ-ಯಶಸ್ವೀ ಮುಖ್ಯಮಂತ್ರಿಯೆನಿಸಿದ್ದ ಯುವಕ ವೀರೇಂದ್ರ ಪಾಟೀಲರು ಸ್ಪರ್ಧೆಗಿಳಿಯಲಿಲ್ಲ. ಮಾತ್ರವಲ್ಲದೆ ಮತ್ತೊಬ್ಬ ಧುರೀಣ ರಾಮಕೃಷ್ಣ ಹೆಗ್ಗಡೆಯವರೂ ನಾಮಪತ್ರ ಹಿಂದೆಗೆದುಕೊಂಡರು. 'ಅಧಿಕಾರ ಪ್ರಿಯರು' ಎಂಬ ಅಪಖ್ಯಾತಿಯನ್ನು ಹೊರಿಸುತ್ತಿರುವ ಇತರ ಪಕ್ಷಗಳಿಗೆ ಸಿಂಡಿಕೇಟು ಈ ರೀತಿ ಪ್ರಬಲ ಏಟು ನೀಡಿದೆ. ಈ ಇಬ್ಬರು ರಾಜ್ಯಕೀಯ ಭಾಷೆಯ ಎಳೆಯರು ರಾಜ್ಯದ ಚುನಾವಣೆಗಳಲ್ಲಿ ಪಕ್ಷದ ವಿಜಯಕ್ಕೆಂದು ದುಡಿಯಲು ಪೂರ್ಣಾವಧಿಯ ಸಮಯವನ್ನು ಉಪಯೋಗಿಸುವ ದೃಢ ನಿರ್ಧಾರ ಮಾಡಿದ್ದಾರೆ. ಇದು ಕಡಿಮೆ ಮಹತ್ವದ್ದೆಂದು ಹೇಳ ಬರುವುದಿಲ್ಲ.

ಚುನಾವಣೆಗಳ ಪರಿಣಾಮಗಳ ಬಗ್ಗೆ ಯೂ ಕಾಂಗ್ರೆಸ್ ತುಕ್ಕುಡಿಗಳಲ್ಲಿ ವಿಚಾರ ನಡೆದಿದೆ. ೨೧೬ರಲ್ಲಿ ೧೫೦ ತಮ್ಮದು ಎಂದು ಇಂಡಿಕೇಟು ಹೇಳುತ್ತದೆ. ೧೩೦ ತಮ್ಮದೆನ್ನುತ್ತದೆ ಸಿಂಡಿಕೇಟು. ಈ ಎರಡು ಕೇಟುಗಳ ಅನುಮಾನಿತ ಸಂಖ್ಯೆಯಷ್ಟು ಕುರ್ಚಿಗಳು ವಿಧಾನ ಸಭೆಯಲ್ಲಿಲ್ಲವಾಗಿರುವಾಗ ಉಳಿದ ಹಲವು ಪಕ್ಷೀಯರನ್ನೂ ಪಕ್ಷೇತರರನ್ನೂ ಲಾಬಿಗಳಲ್ಲಿಯೇ ಕೂರಿಸಬೇಕಷ್ಟೆ. ಇಂಡಿಕೇಟು ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ೧೮ರಿಂದ ೨೦ ಸ್ಥಾನ ನಿರೀಕ್ಷಿಸಿ ೨೭ನ್ನೂ ಪಡೆಯಿತು. ಇದರ ಆಧಾರದ ಮೇಲೆ ೧೫೦ರ ನಿರೀಕ್ಷೆಯನ್ನದು ಮಾಡಿದ್ದರೆ, ಮೂಲ ನಿರೀಕ್ಷೆ ೧೦೦ ಮಾತ್ರವೆನ್ನಬೇಕು. ಇದನ್ನೇ ಸಿಂಡಿಕೇಟಿಗೂ ಅನ್ವಯಿಸಿದರೆ?

ಆದರೆ ಒಂದು ಮಾತು ಶ್ರೀಮತಿ ಗಾಂಧಿಯ ನಾಮಬಲ ಅಥವಾ ಇಂದಿರಾಗಾಳಿ ಕಳೆದ ಸಲದಂತೆ ಈ ಬಾರಿ ಬಿರುಸಾಗಿ ಬೀರುವ ಲಕ್ಷಣಗಳು ಕಡಿಮೆ. ತಮ್ಮ ಭಿತ್ತಿಪತ್ರಗಳಲ್ಲಿ ಅಥವಾ ಕರ ಪತ್ರಗಳಲ್ಲಿ ಶ್ರೀಮತಿ ಗಾಂಧಿಯ ಚಿತ್ರ ಹಾಕಿಸಿಗೊಳ್ಳಬಾರದೆಂದು ದೇವರಾಜ ಅರಸರು ಸಂದೇಶ ನೀಡಿದ್ದಾರೆ. ಅಂದರೆ, ಶ್ರೀಮತಿ ಗಾಂಧಿಯವರನ್ನು ರಾಜ್ಯ ಮಟ್ಟದ ರಾಜ್ಯಕೀಯಕ್ಕೆಳೆದು ತರುವುದು ಬೇಡವೆಂದಿರಬಹುದು. ಅಥವಾ ಹಿಂದಿನ ಮಹಾವಿಜಯ ಆಕೆಯದಾದಂತೆ ಇಂದಿನ ವಿಜಯ ತನ್ನದೇ ಆಗಬೇಕೆಂದೂ ಇರಬಹುದೋ ಏನೋ! ಶ್ರೀಮತಿ ಗಾಂಧಿಯವರು ಪ್ರಧಾನಿಯಾಗಿರುವುದರಿಂದಲೇ ಪಾಕಿಸ್ತಾನವನ್ನು ಭಾರತೀಯ ಸೇನೆಗಳು ಸೋಲಿಸಿದುವು ಎಂಬ ಭಾವನೆಯನ್ನೂ ಮತದಾರರಲ್ಲಿ ಮೂಡಿಸುವ ಪ್ರಯತ್ನ ನಡೆಯಿತು. ಆದರೆ, ಇದಕ್ಕೂ ಎಲ್ಲೆಡೆ ತೀವ್ರ ವಿರೋಧ ವ್ಯಕ್ತವಾಯಿತು.

ಇಂಡಿಕೇಟು ಶ್ರೀಮತಿ ಗಾಂಧಿ ಜನಾಘಣೆಗೆ ಎರವಾಗಿದ್ದಾರೆಂದು ಹೇಳಲಾಗದು. ಆದರೆ, ಮತದಾರರು ಕಳೆದ ವರ್ಷದಷ್ಟು ಮಾತಿನ ಮೋಡಿಯಿಂದ ವಂಚಿತರಾಗಲಾರರು. ಕೇಂದ್ರದ ಕತೆ ಬೇರೆ—ರಾಜ್ಯದ್ದು ಬೇರೆ ಎನ್ನುವವರೂ ಕೆಲವರು. ಕೇಂದ್ರದಲ್ಲಿ ಅಧಿಕಾರಾರೂಢವಾದ ಮಾತ್ರಕ್ಕೆ ರಾಜ್ಯಗಳಲ್ಲೂ ಇಂಡಿಕೇಟಿನ ಸರಕಾರವೇ ಇರಬೇಕೆನ್ನುವ ವಾದಕ್ಕೂ ಪುರಸ್ಕಾರ ಕಡಮೆಯಾಗಿದೆ. ತನ್ನದಲ್ಲದ ಸರಕಾರಗಳನ್ನು ಉರುಳಿಸುವ ಪ್ರಯತ್ನ ನಡೆಸಿದೆಯೆಂಬ ಅಪವಾದದಿಂದ ಇಂಡಿಕೇಟು ಕೈತೊಳೆದುಕೊಳ್ಳುವಂತಿಲ್ಲ. ವೀರೇಂದ್ರ ಪಾಟೀಲರ ಪ್ರಗತಿಶೀಲ ಸರಕಾರವನ್ನು ಉರುಳಿಸುವಲ್ಲಿ ಇಂಡಿಕೇಟು ಹೇಗೆ ಯಶಗಳಿಸಿತೆಂದು, ಉರುಳಿಸಲು ನೆರವಾದವರನ್ನು ಅಧಿಕಾರದಾಹಿಗಳೆಂದು ಈಗ ಹೆಸರಿಸಿರುವುದನ್ನು ಮರೆಯುವುದು ಸಾಧ್ಯವಿಲ್ಲ.

ಈ ಬಾರಿಯ ಚುನಾವಣೆಯ ಫಲಿತಾಂಶ ಹೇಗೆ ಹೊರಡಬಹುದು? ಸಿಂಡಿಕೇಟಿಗೆ ಇರುವ ಅವಕಾಶವೆಂದರೆ, ಹಿಂದಿನ ತನ್ನ ಸರಕಾರ ಮಾಡಿತೋರಿಸಿದ ಸಾಧನೆಗಳು ಮಾತ್ರ. ಈಗಾಗಲೇ ಕೆಲವೇ ರಾಜ್ಯಗಳಲ್ಲಿ ಬದುಕುಳಿದಿರುವ ಇದನ್ನು ಮತ್ತೆ ಅಧಿಕಾರಕ್ಕೆ ಜನ ತರಬಲ್ಲುದೆ? ಅಥವಾ ಇಂಡಿಕೇಟ್ ಸರಕಾರವನ್ನೆ ರಚಿಸಿಕೊಳ್ಳುವುದೆ? ಚುನಾವಣಾ ಭವಿಷ್ಯವನ್ನು ಯಾವ ಭವಿಷ್ಯದರ್ಶಿಯೂ ಹೇಳಲಾರ; ಹೇಳಬಾರದು. ಸದ್ಯ ಹೇಳಬಹುದಾದುದಿಷ್ಟು— ರಾಜ್ಯದಲ್ಲಿ ಸಿಂಡಿಕೇಟ್ ಬಹುಮತ ಪಡೆದರೆ ಅದು ಆಶ್ಚರ್ಯವಲ್ಲ. ಇಂಡಿಕೇಟ್ ಸರಕಾರ ರಚನೆಯಾಗದೆ ಹೋದರೇನೇ ಅದು ಮತ್ತೊಂದು ಸೋಜಿಗವಾಗುವುದು.

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

ಸ್ವತಂತ್ರ ಐತಿಹಾಸಿಕ ಕಾದಂಬರಿ

(ಕಳೆದ ಸಂಚಿಕೆಯಿಂದ)

ಅವರ ವರ್ತನೆ ಅವನಿಗೆ ವಿಚಿತ್ರವೆನಿಸಿತು. ಜಾನಕಿಯ ಅಸ್ವಸ್ಥತೆಯಿಂದ ಆತ ವಿಹ್ವಲನಾಗಿದ್ದ.

ಆತ ನಖ ಶಿಖಾಂತ ಉರಿದ.

ಕೋಪದಿಂದ ಮೈಸುಗಟ್ಟಿದ. ಹಲ್ಲು ಕಡಿದ.

ಸರ್ಪದಿಂದ 'ಯಾರಲ್ಲಿ' ಎಂದು ಗರ್ಭ ನಿರ್ಭಯವಾಗುವಂತೆ ಅರ್ಭಟಿಸಿದ.

ಅಷ್ಟರಲ್ಲಿ ಜಾನಕಿ ಸುಧಾರಿಸಿಕೊಂಡಿದ್ದಳು.

ಸ್ವಾಮಿಯ ಗದರು ಧ್ವನಿಯಿಂದ ಅವಳೂ ಗಾಬರಿಯಾದಳು.

'ಏನು ಪ್ರಭು? ಯಾಕೀ ಆವೇಶ' ತಡೆತಡೆದು ಆಕೆ ಪತಿಯನ್ನು ಪ್ರಶ್ನಿಸಿದಳು.

ದೂರದಲ್ಲಿ ನಗುತ್ತ ನಿಂತಿದ್ದ ಪ್ರಮೀಳಾ ರಾಜ್ಯದತ್ತ ಆತ ಬೆಟ್ಟು ತೋರಿಸಿದ.

ಅವರ ನಗುವಿನ ಕಾರಣವನ್ನು ಅವಳು ಗ್ರಹಿಸಿದಳು.

'ಅವರು ನನ್ನ ಸ್ಥಿತಿಯನ್ನು ನೋಡಿ ನಗುತಿದ್ದಾರೆ. ಈಗ ಅವರದು ಸರದಿ. ಹೂಂ! ಮಾಡಿಕೊಳ್ಳಲಿ' ಆಕೆ ಮಾತನ್ನು ತೇಲಿಸಿದಳು.

ಅಷ್ಟರಲ್ಲಿ ರಾಜ ವೈದ್ಯರು ಅಲ್ಲಿಗೆ ಬಂದಿದ್ದರು.

ವೈದ್ಯರೊಡನೆ ಮಾತು ಮುಂದುವರಿಸಲು ನರಸಿಂಹ ಮುಂದಾದ.

ನಡುವೆ ಬಾಯಿ ಹಾಕಿ ಜಾನಕಿ 'ನಿಮ್ಮ ಶುಶ್ರೂಷೆಯ ಅಗತ್ಯ ನನಗಿಲ್ಲ. ನಮ್ಮ ಕಾಯಿಲೆಗೆ ಔಷಧಿ ಇಲ್ಲ. ಅನುಭವಿಸಿಯೇ ತೀರಬೇಕು.'

ನರಸಿಂಹ—ವೈದ್ಯರು ಒಬ್ಬರ ಮುಖವನ್ನೊಬ್ಬರು ನೋಡಲಾರಂಭಿಸಿದರು—

ಜಾನಕಿ ವೈದ್ಯರಿಗೆ ಹೊರಟು ಹೋಗುವಂತೆ ಸೂಚಿಸಿದಳು.

ವಿಧಿಯಿಲ್ಲದೆ ವೈದ್ಯರು ಅಲ್ಲಿಂದ ಕಾಲ್ದೆಗೆದರು

'ದೇವೀ! ಏನು ವಿಚಿತ್ರ ವರ್ತನೆ ನಿನ್ನದು'

ದೈನ್ಯದಿಂದ ನರಸಿಂಹ ಅವಳನ್ನು ನುಡಿಸಿದ.

'ನಿಮಗೆ ಇಷ್ಟೂ ತಿಳಿಯುವುದಿಲ್ಲವೇ ನನ್ನ ರಾಜ' ಆಕೆಯ ಮುಖದಲ್ಲಿ ಹುಸಿ ಮುನಿಸು.

'ಹೇಳದೆ ನಿನ್ನಲ್ಲೇ ಇಟ್ಟುಕೊಂಡರೆ ತಿಳಿಯುವುದಾದರೂ ಹೇಗೆ?'

'ಇನ್ನಿಷ್ಟು ದಿನ ಒಟ್ಟಿ ತಲೇ ಬೇಕು'

'ಅಂದರೆ—'

'ಎಲ್ಲ ನಿಮ್ಮ ಅನುಗ್ರಹ: ಪ್ರಸಾದ'.

ಯಾವುದೂ ಅರ್ಥವಾಗದವನಂತೆ ನರಸಿಂಹ ತಲೆಯಲ್ಲಾಡಿಸಿದ.

'ಇಲ್ಲಿ ಬನ್ನಿ! ನಾನೇ ತಿಳಿಸುತ್ತೇನೆ' ಎಂದು ಆತನ ಮುಖವನ್ನು ಹತ್ತಿರಕ್ಕೆ ಎಳೆದುಕೊಂಡು ಕಿವಿಯಲ್ಲಿ 'ನೀವು ನಿಂತು ಎರಡು ತಿಂಗಳಾಯಿತು. ಹೊಟ್ಟೆಯೊಳಗೆ ಪುಟ್ಟ ಕಂದ ರೂಪುಗೊಳ್ಳುತ್ತಿದೆ.'

ಆಶ್ಚರ್ಯಗೊಂಡು 'ಇಷ್ಟು ದಿನವೂ ಈ ರಹಸ್ಯವನ್ನು ಹೇಳಿಯೇ ಇಲ್ಲ ಕಳ್ಳಿ'! ಎಂದು ನರಸಿಂಹ ಅವಳ ಕೆನ್ನೆಗೆ ಮೃದುವಾಗಿ ಹೊಡೆದ.

'ಹೇಳುವುದಕ್ಕೇನಿದೆ ಇದರಲ್ಲಿ. ಮದುವೆ ಮಾಡಿಕೊಂಡ ಎಲ್ಲ ಗೃಹಿಣಿಯರಂತೆ ನಾನೂ ತಾಯ್ತನದ ಮೆಟ್ಟಿಲೇರುತಿದ್ದೇನೆ. ಅಲ್ಲಿ ಸೇರಿದ ಸ್ತ್ರೀಯರಿಗೆ ಅದರ ಸುಳಿವು ಆಗಲೇ ಆಗಿದೆ. ಅದಕ್ಕೇ ಅವರು ನಿಮ್ಮ ಗಾಬರಿ ನೋಡಿ ನಕ್ಕಿರುವುದು—ಅವರ ಮೇಲೆ ಸುಮ್ಮನೆ ಸಿಡಿ ಕಾರಿದಿರಿ.

ನರಸಿಂಹನಿಗೆ ತನ್ನ ತಪ್ಪಿನ ಅರಿವಾಯಿತು.

'ಸಂತೋಷದ ಸುದ್ದಿಯನ್ನು ಕೊಟ್ಟ ನಿನಗೇನು ಬಹುಮಾನ ಕೊಡಲಿ?'

'ಆಸೆ ಪಡಬಾರದು. ಆಸೆಯಿಂದ ಅನರ್ಥ ಪರಂಪರೆಗಳು ಬರುತ್ತವೆಯಂತೆ. ನಿಮ್ಮನ್ನೇ ಉಡುಗೊರೆಯಾಗಿ ಒಪ್ಪಿಸಿದ ಪ್ರೀತಿಯ ಅಣ್ಣ. ನೀವು ಕರುಣಿಸಿದ ಶಿಶು ಉದರದಲ್ಲಿ ಬೆಳೆಯುತ್ತಿದೆ. ಆ ಭಾಗ್ಯದ ಮುಂದು ಇನ್ನಾವುದನ್ನು ಬಯಸಲಿ!?

'ಹಾಗಿದ್ದರೆ ಯಾವುದಾದರೊಂದು ಮಠ ಸೇರುವುದೊಳ್ಳೆಯದು'—ಹೀಗೆ ನುಡಿಯುವಾಗ ಅವರಿಬ್ಬರ ದೃಷ್ಟಿ ಸಂಧಿಸಿದುವು.

ನರಸಿಂಹನಿಗೆ ಅದನ್ನು ಅಲ್ಲಿಂದ ಕೇಳುವುದಾಗಲಿಲ್ಲ.

'ದೃಷ್ಟಿಯಾದೀತು ಜೋಕೆ! ಏನಿದು ನಿಮ್ಮದು ಹುಡುಗಾಟ. ಹೊತ್ತು ಗೊತ್ತಿಲ್ಲವೇ ಆಕೆ ಅವನನ್ನು ಛೇಡಿಸಿದಳು.

'ಅವರನ್ನಿಲ್ಲಿಗೆ ಕರೆಸು. ನನ್ನ ನಡತೆಯಿಂದ ಅವರು ನೊಂದಿದ್ದಾರೋ ಏನೋ? ದೂರದಲ್ಲಿ ಇದೆಲ್ಲವನ್ನೂ ನೋಡುತ್ತ ನಿಂತ ಸ್ತ್ರೀಯರನ್ನು ಜಾನಕಿ ಹತ್ತಿರಕ್ಕೆ ಬರುವಂತೆ ಸೂಚಿಸಿದಳು.

ಹರ್ಷಭರದಲ್ಲಿ ಚಾಳುಕ್ಯ ನರಸಿಂಹ ಅವರೆಲ್ಲರ ಕೈಯಲ್ಲೂ ಒಂದೊಂದು ಚಿನ್ನದ ನಾಣ್ಯವನ್ನಿಟ್ಟು 'ಸಿಹಿ ಸುದ್ದಿ ಸಿಕ್ಕಿತು. ಅದಕ್ಕೇ ಬಹುಮಾನ' ಎಂದ.

ಭಯ ಭಕ್ತಿಯಿಂದ ಅವರು ಬಂದ ಹಾಗೆ ಹಿಂದೆ ಸರಿದು ಮರೆಯಾದರು.

'ಅವರಿಗೇನೋ ಉಡುಗೊರೆ ಕೊಟ್ಟಿರಿ. ನನಗೆ—' ಎಂದು ಜಾನಕಿ ಕೊರಳು ಕೊಂಕಿಸಿದಳು.

ಅರ್ಥ ಗರ್ಭಿತವಾಗಿತ್ತು ಮಾತು.

'ನಿನಗಿದೇ ಬಹುಮಾನ'

ಅಷ್ಟೇ ಅರ್ಥ ತುಂಬಿದ ಉಡುಗೊರೆ ನೀಡಿದ.

ಜಾನಕಿ ಅವನ ಹಿಡಿತದಿಂದ ತಪ್ಪಿಸಿಕೊಂಡು 'ನಿಮಗೆ ನಾಚಿಕೆಯಾಗುವುದಿಲ್ಲವೇ?' ಎಂದಳು.

ತೃಪ್ತಿಯನ್ನು ಸೂಚಿಸಿತು ಅವನ ಮುಖ.

'ಒಂದು ವಿಷಯ ಕೇಳಬಹುದೇ ಪ್ರಭು? ಏನು ತಿಳುಕೊಳ್ಳುತ್ತೀರಾ?'

'ತಿಳುಕೊಳ್ಳುವುದೇನು ಬಂತು? ತಿಳಿಸಿ ಬಿಡು.'

'ನಿಮಗಾವ ಮಕ್ಕಳು ಬೇಕೆಂಬಾಸೆ. ಗಂಡೋ ಹೆಣ್ಣೋ?'

'ಅವನು ಅನುಗ್ರಹಿಸಿದ್ದು. ಹೆಣ್ಣೇನು, ಗಂಡೇನು? ಎಲ್ಲಾ ಒಂದೇ! ಮೊದಲಿನದಂತೂ ಹೆಣ್ಣೇ ಇರಬೇಕು.'

'ಗಂಡಾಗಲಿ ಎಂದು ನಾನು ಹಾರೈಸುತ್ತೇನೆ.'

'ನಾವು ಬಯಸಿದಂತಹ ಮಕ್ಕಳೇ ನಮಗೆ ದಕ್ಕುತ್ತಾರೆಯೇ ದೇವಿ?'

'ನನಗೆ ಖಾತರಿಯಾಗಿದೆ; ನಮ್ಮ ಚೊಚ್ಚಲ ಮಗು ಗಂಡು'

'ಹೆಣ್ಣಾಗಿ ಹುಟ್ಟಿದ ನೀನು, ಗಂಡೇ ಬೇಕೆಂದು ಬಯಸುವುದು ವಿಚಿತ್ರ!'

'ಎರಡು ದೃಷ್ಟಿಯಿಂದ ಲಾಭಕರ. ಅವನು ಬೆಳೆದು ದೊಡ್ಡವನಾದಾಗ ಮನೆಗೊಬ್ಬಳು ಸೊಸೆ ಬರುತ್ತಾಳೆ. ಅವನನ್ನು ಮಗಳೆಂದು ಪ್ರೀತಿಸಿದರಾಯಿತು. ಬೆಳೆದು ನಿಂತ ಮಗಳು ಪರರೊಡವೆ. ಯಾರನ್ನು ಸೇರಬೇಕೋ ಅವನನ್ನು ಕೂಡುತ್ತಾಳೆ. ಆಗ ಮನ-ಮನೆ ಎರಡೂ ಬಿಕೋ ಅನ್ನುತ್ತೆ.'

'ಅದೇನೋ ನಿಜವೆ. ಆದರೆ ಹುಟ್ಟುವುದು ಹೆಣ್ಣಾದರೆ.'—

'ಅವಳಿಗೇನು ಹೆಸರಿಡುವುದು?'

'ಹೆಸರಲ್ಲೇನಿದೆ ಚಿನ್ನಾ?'

'ಆದರೂ ಒಂದು ಒಳ್ಳೆಯ ಹೆಸರು. ಕರೆಯುವುದಕ್ಕೆ ಸುಲಭವಾಗಿರಬೇಕು. ಕೇಳುವುದಕ್ಕೆ ಹಿತವಾಗಿರಬೇಕು. ಅಂತಹ ಒಂದು ಮುದ್ದು ಮುದ್ದಾದ ಹೆಸರನ್ನಿಡಬೇಕು'

'ಆಗಲಿ, ಯಾರ ಅಡ್ಡಿ ಅದಕ್ಕೆ'

'ಯೋಚಿಸಿಟ್ಟುಕೊಳ್ಳಬೇಕು'

'ಹೆಣ್ಣಾದರೆ ಶಕುಂತಲೆಯೆಂದಿಡುವ. ಮುದ್ದಾದ ಹೆಸರು.'

'ಕವಿ ಕಾಳಿದಾಸನಿಗೆ ಅದರಿಂದ ಗೌರವ ಸಂದ ಹಾಗಾಯಿತು. ಆದರೂ ಈ ಹೆಸರು ನನ್ನ ಮನಸ್ಸಿಗೇಕೋ ಸರಿ ಬರಲಿಲ್ಲ.

'ಯಾಕೆ?'

'ಆಕೆ ಹುಟ್ಟಿದೊಡನೆ ತಬ್ಬಲಿಯಾದಳು. ಜನ್ಮ ಕೊಟ್ಟ ಜನನಿಯ ಪ್ರೀತಿಯಿಂದ ವಂಚಿತಳಾದಳು. ಪಡೆದ ತಂದೆಯಿಂದ ದೂರವಾದಳು. ಕಂಡವರ ಪೋಷಣೆಯಲ್ಲಿ ಬೆಳೆದಳು. ನಮ್ಮ ಕಂದಮ್ಮ ಹಾಗಾಗಬಾರದಲ್ಲ. ಅದಕ್ಕಾಗಿ'

'ಗಂಡೇ ಆದರೆ—'

'ಇದೆಯಲ್ಲ ಹಿರಿಯರ ಹೆಸರು. ಅದನ್ನಿಟ್ಟರಾಯಿತು.'

'ನಿಮ್ಮ ಹೆಸರೂ ಅದರಲ್ಲಿ ಸೇರಬೇಕು'

'ಉಗ್ರ ನರಸಿಂಹ ಎಂದಿಟ್ಟರಾಯಿತು. ದೇವರ ಹೆಸರನ್ನಿಟ್ಟಂತೂ ಆಯಿತು.'

'ನನಗೊಂದು ಯೋಚನೆ ಬಂತು. ಹೇಳಿ ಬಿಡಲೇ? ನಿಮಗೊಪ್ಪಿಗೆಯಾದರೆ'

'ನಿನಗಿಷ್ಟವಾದ್ದು, ನನಗೂ ಇಷ್ಟವೇ'

'ನಿಮ್ಮ ಹೆಸರು—ಅದರ ಅರ್ಥ ಮನುಷ್ಯರಲ್ಲಿ ಸಿಂಹಪ್ರಾಯರು ಎಂದು—ಆ ಅರ್ಥ ಹುಟ್ಟುವ ಹೆಸರಾಗಬೇಕು. ನಿಮ್ಮ ಹೆಸರನ್ನಿಟ್ಟರೆ, ನಾನು ಹೆಸರೆತ್ತಿ ಕರೆಯುವಂತಿಲ್ಲ. ನಾನೊಬ್ಬಳು ಬೇರೆ ಹೆಸರಿನಿಂದ ಕೂಗಬೇಕು.'

(ಹನ್ನೊಂದನೇ ಪುಟ ನೋಡಿರಿ)

ಪಕ್ಷ-ವ್ಯಕ್ತಿ ನಿಷ್ಠೆಯಲ್ಲ, ತಾತ್ಕಾಲಿಕ ಪ್ರಯೋಜನ ನಿಷ್ಠೆ

ಭಾರತದಲ್ಲಿ ಪ್ರಜಾಸತ್ತೆ ನೆಲೆ ನಿಂತು ಎರಡು ದಶಕಗಳುರುಳಿದವು. ಹಲವು ಸಾರ್ವತ್ರಿಕ ಚುನಾವಣೆಗಳು ನಡೆದುವು. ಇದೀಗ ಐದನೆಯ ಸಾರ್ವತ್ರಿಕ ಮಹಾ ಚುನಾವಣೆ ನಡೆಯಲಿದೆ—ಹಲವು ರಾಜ್ಯಗಳ ವಿಧಾನ ಸಭೆಗಳಿಗೆ. ಈ ನಡುವೆ ಉಪ ಚುನಾವಣೆಗಳು, ಸ್ಥಳೀಯ ಸಂಸ್ಥೆಗಳ ಚುನಾವಣೆಗಳು, ಹಲವೆಡೆ ಮಧ್ಯಂತರ ಚುನಾವಣೆಗಳು—ಹೀಗೆ ಎಷ್ಟೋ ಚುನಾವಣೆಗಳು ನಡೆದಿವೆ. ನಿಜವಾಗಿ ಈ ಹೊತ್ತಿಗೆ ನಮ್ಮ ರಾಜ್ಯಕೀಯ ಪಕ್ಷಗಳಲ್ಲೂ ಅವುಗಳ ಕಾರ್ಯಕರ್ತರಲ್ಲೂ, ಮತದಾರರಲ್ಲೂ ಚುನಾವಣಾ ಪ್ರಜ್ಞೆ ಮೂಡಿ ಬರಬೇಕಿತ್ತು. ಆದರೆ, ಅದು ಮೂಡಿದೆಯೇ ಎಂಬ ಪ್ರಶ್ನೆ ಇನ್ನೂ ಪ್ರಶ್ನೆಯಾಗಿಯೇ ಮುಂದುವರಿದಿದೆ. ಇದಕ್ಕೆ ನಮ್ಮಲ್ಲಿನ ಲೋಪದೋಷಗಳೇ ಕಾರಣವೆಂದು ಹೇಳಿದರೆ, ಅಪ್ರಿಯವಾಗಬಹುದು. ಆದರೂ ಸತ್ಯವೆಂಬುದು ನಿಷ್ಪಕ್ಷಪಾತಿಗಳಿಗೆ ಮನವರಿಕೆಯಾಗುತ್ತಿದೆ.

೧೯೫೨ರಿಂದಲೂ ಕಾಂಗ್ರೆಸ್ಸು—ಅದು ಇಡಿಯಿರಲಿ, ಕಡಿಯಿರಲಿ—ದೇಶದ ಏಕಮೇವ ಶಕ್ತಿಶಾಲಿಯಾದ ಪಕ್ಷವಾಗಿ ಬೆಳೆದು ನಿಂತಿತು. ದಿ| ಜವಹರಲಾಲರ ವ್ಯಕ್ತಿಗತ ಚರಿತ್ರ ಬಲದಿಂದಲೂ ಸ್ವಾತಂತ್ರ್ಯ ಹೋರಾಟದಲ್ಲಿ ಹೊತ್ತ ನಾಯಕತ್ವದಿಂದಲೂ ಕಾಂಗ್ರೆಸ್ಸು ತುಂಬಿ ತುಳುಕಾಡುವ ಬಹುಮತ ಪಡೆದು ದೇಶದಲ್ಲಿ ಏಕ ಚಕ್ರಾಧಿಪತ್ಯವನ್ನೇ ಸ್ಥಾಪಿಸಿತ್ತು. ಕಾಂಗ್ರೆಸಿನಿಂದ ಸಿಡಿದು ಹೋದವರು ಬೇರೆ ಬೇರೆ ಪಕ್ಷಗಳನ್ನು ಕಟ್ಟಿಕೊಂಡರೂ ಅವುಗಳ ವಿರುದ್ಧ ಬಿರುಸಿನ ಪ್ರಚಾರವು ನಡೆದದ್ದರಿಂದ ಅವು ಜೀವ ಹಿಡಿದಿರುವುದೇ ದುಸ್ತರವಾಯ್ತು. ದೇಶದ ಕೆಲವು ಮೂಲೆಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಬಲವಾದಂತೆ ಕಂಡರೂ ಅದರ ಸತ್ತ್ವವನ್ನು ಕಾಂಗ್ರೆಸ್ಸೇ ಹೀರಿಕೊಂಡು ಅದರ ಬೆಳವಣಿಗೆಯನ್ನು ಕುಂಠಿತಗೊಳಿಸಿತು. ಜವಾಹರಲಾಲರ ಸಮಾಜವಾದದ ಘೋಷಣೆಯಿಂದ ಕಮ್ಯುನಿಸ್ಟರ ಪ್ರಭೆ ಮಂದವಾಯ್ತು. ಅನಂತರ ಕಾಂಗ್ರೆಸಿನ ಆಡಳಿತ ನೀತಿಯಿಂದಾಗಿ ಅದರ ಶಕ್ತಿ ಕುಂಟುತ್ತ ಬಂದು, ೧೯೬೭ರ ಹೊತ್ತಿಗೆ ಅದರ ಏಕ ಸತ್ತೆತೆಗೆ ಭಂಗ ಬಂದದ್ದು ಸರ್ವವೇದ್ಯ. ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಎರವಾಗಬೇಕಾಯ್ತು ಮಾತ್ರವಲ್ಲದೆ ಕೇಂದ್ರದಲ್ಲಿಯೂ ಅದರ ತುಳುಕುವ ಮತ ಬಹುಮತಕ್ಕೆ ಇಳಿಯಿತು. ಇದರಿಂದ ದೇಶದ ರಾಜ್ಯಕೀಯ ಬದಲಾಗಬಹುದೆಂದೂ ವಿರೋಧಿ ಪಕ್ಷಗಳ ಬಲ ಸಂವರ್ಧನೆಯಿಂದ ಪಕ್ಷೀಯ ಪದ್ಧತಿಯ ಆಳಿಕೆ ಸುಖದಾಯಕವಾಗಬಹುದೆಂದೂ ಯೋಚಿಸಿದ್ದರೆ, ಅದಕ್ಕೆ ವಿರೋಧಿ ಪಕ್ಷಗಳೇ ಕೊಡಲಿ ಹಾಕಿದವು. ಸಂಖ್ಯಾಧಿಕ್ಯದ ಪಕ್ಷಗಳು ಸಂಯುಕ್ತ ರಂಗವನ್ನು ಸ್ಥಾಪಿಸಿ ಆಡಳಿತೆ ಕೈಗೆ ತೆಗೆದುಕೊಳ್ಳುವಲ್ಲಿ ತೋರಿಸಿದ ಉತ್ಸಾಹದ ಒಂದಂಶವಾದರೂ ಅದನ್ನು ಉಳಿಸುವಲ್ಲಿ ಪ್ರದರ್ಶಿಸದೆ ಹೋದವು. ಯಾದವೀ ಕಲಹದಿಂದ ಸರಕಾರಗಳು ಉರುಳಿದವು—ಮಧ್ಯಾವಧಿ ಚುನಾವಣೆಗಳಲ್ಲಿ ಕಿಚಡಿ ಸರಕಾರಗಳ ವೈಫಲ್ಯವೇ ಕಾಂಗ್ರೆಸ್ಸಿನ ಮೇಲ್ಮೆಗೆ ಸಹಕಾರಿಯಾಯ್ತು.

ಹೀಗೆ ಕಲಸು ಮೇಲೋಗರವಾದ ದೇಶದ ರಾಜ್ಯಕೀಯಕ್ಕೆ ಹೊಸ ತಿರುವನ್ನು ಕೊಡದೆ ಹೋದರೆ ನೆಮ್ಮದಿಯಿಲ್ಲವೆಂದು ಮನವರಿಕೆ ಮಾಡಿಕೊಂಡವರು ಪ್ರಧಾನಿ ಇಂದಿರಾಗಾಂಧಿ. ಮಿತ ಸಂಖ್ಯೆಯ ವಿರೋಧಿ ಪಕ್ಷಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಪೋಷಕವೆಂಬುದು ಸರ್ವಸಮ್ಮತ. ಆದರೆ, ನಮ್ಮಲ್ಲಿ ಆ ಪ್ರಶ್ನೆಯಿಲ್ಲ. ಬಿಹಾರವೊಂದರಲ್ಲೇ ಮೂರು ಡಜನಿನಷ್ಟು ಪಕ್ಷಗಳಿವೆಯೆಂದರೆ ಯಾರ ಬಲ ಹೇಗಿದ್ದೀತು? ವಿಧಾನ ಸಭೆಯಲ್ಲಿ ಯಾವ ಪಕ್ಷದ ಸರಕಾರ ರಚಿತವಾದೀತು? ಶ್ರೀಮತಿ ಗಾಂಧಿ ಕಾಂಗ್ರೆಸ್ಸಿನ ಅಕರ್ಮಣ್ಯತೆಯನ್ನು ದೂರ ಮಾಡಿ, ಅದನ್ನು ಜನಪ್ರಿಯಗೊಳಿಸುವ ನಿರ್ಧಾರ ಮಾಡಿದರು—ಪರಿಣಾಮ ಪಕ್ಷ ಒಡೆಯಿತು—ತಮ್ಮ ಯೋಜನೆಯನ್ನು ಕಾರ್ಯಗತಗೊಳಿಸಲು ಅವರು ಕೈಕೊಂಡ ದಾರಿ ತಪ್ಪೆಂದು ಕೆಲವರ ಅಭಿಮತ—ತಾನು ಹೊಸ ಪೀಳಿಗೆಯ ಹೊಸ ಧೋರಣೆಯ ಹೊಸ ನಾಯಿಕೆಯೆಂದು ಆಕೆ ಹೇಳಿಕೊಂಡರು. ಅವರ ಯೋಜನೆಯೇನೋ ಫಲಿಸಿತು. ಆದರೆ, ಅಧಿಕಾರ ದಾಹಿಗಳು, ಶ್ರೀಮಂತರು, ಅವರು, ಇವರು ಎಲ್ಲರೂ ಆಕೆಯ ಹಿಂದೆ ನಿಂತರು. ದೇಶದಲ್ಲಿ ಹಳೆಯ ರಾಜ್ಯಕೀಯ ನಾಶವಾಗಿ ಹೊಸತು ಜನ್ಮ ತಳೆಯಲಿದೆಯೆಂಬಾಗ ಮತ್ತೆ ಹಳೆಯ "ಕೊಳಚೆ" ಅದರಲ್ಲೇ ಸೇರಿಕೊಂಡಿತು. ಪರಿಣಾಮ ಸುಸ್ಪಷ್ಟ—ಪ್ರಧಾನಿ ಗಾಂಧಿ ಕಳೆದ ವರ್ಷದ ಲೋಕ ಸಭಾ ಚುನಾವಣೆಗಳಲ್ಲಿ ವಿರೋಧಿ ಪಕ್ಷಗಳನ್ನು ಅಪಮಾನಕಾರಕ ರೀತಿಯಲ್ಲಿ ಸೋಲಿಸಿ, ತನ್ನ ಪಕ್ಷದ ಏಕಚ್ಛತ್ರಾಧಿಕಾರವನ್ನು ಪಡೆಯಲು ಶಕ್ತರಾದರು.

ಈಗ ನಡೆಯಲಿರುವ ವಿಧಾನ ಸಭೆಗಳ ಚುನಾವಣೆಯ ಪ್ರಚಾರವೂ ರಾಜ್ಯಕೀಯಕ್ಕೆ ನೆಮ್ಮದಿ ತರುವುದಿಲ್ಲ. ರಾಜ್ಯ ಕೇಂದ್ರಗಳಲ್ಲಿ ಏಕ ಪಕ್ಷೀಯ ಸರಕಾರವಿರಬೇಕೆಂಬ ಸಂಗತಿಗೆ ಅತ್ಯಂತ ಪ್ರಾಮುಖ್ಯ ನೀಡಲಾಗುತ್ತಿದೆ. ಇದನ್ನು ಸರ್ವಾಧಿಕಾರ ಪ್ರಿಯತೆಯೆಂದು ಪ್ರಧಾನಿಯ ವಿರೋಧಿಗಳು ಖಂಡಿಸುತ್ತಾರೆ. 'ತಮ್ಮ ತುಕುಡಿ ಕೇಂದ್ರದೊಡನೆ ಸಮರ ಹೂಡಿದ್ದುಂಟೆ? ತಮ್ಮ ಸರಕಾರ ಸಮಾಜವಾದಿ ಪ್ರಗತಿಶೀಲವಲ್ಲವೆ?' ಎಂದು ವೀರೇಂದ್ರ ಪಾಟೀಲರು ಸವಾಲೊಡ್ಡುತ್ತಾರೆ. ಶ್ರೀಮತಿ ಗಾಂಧಿಯವರು ಭಾರತೀಯ ಜನಸಂಘವನ್ನು ಜಾತೀಯವಾದಿ—ಮತೀಯವಾದಿಯೆಂದು ಭಂಗಿಸಿದರೆ ಜನಸಂಘವು ಅವರ ಪಕ್ಷ ಕಮ್ಯುನಿಸ್ಟ್ ಎಂದು ಹೇಳುತ್ತಿದೆ. ಶ್ರೀಮತಿ ಪ್ರಧಾನಿಯಿಂದ ತೊಡಗಿ ಎಲ್ಲ ರಾಜ್ಯಕೀಯ ಪಕ್ಷಗಳೂ ಪರಸ್ಪರರನ್ನು ದೂರುವುದರಲ್ಲೇ ನಿರತರಾಗಿದ್ದಾರೆ; ಅವರ ಚುನಾವಣಾ ಪ್ರಣಾಳಿಕೆಗಳು ಕೆಲವು ಭರವಸೆಗಳನ್ನು ನೀಡಿದರೂ ಆ ಭರವಸೆಗಳು ಕೈಗೂಡುವ ಭರವಸೆ ಮತದಾರನಿಗಿದ್ದಂತಿಲ್ಲ. ಯಾವ ದೇಶದಲ್ಲಿ ಒಬ್ಬನ ಸರಾಸರಿ ಗಳಿಕೆ ದಿನಕ್ಕೆ ೬೦ ಪೈಸೆಯಾಗಿದೆಯೋ ಅಂತಹ ದೇಶದ ಕಲ್ಯಾಣ—ಪ್ರಗತಿ — ಬಡತನ ನೀಗುವಿಕೆ ಪ್ರಣಾಳಿಕೆ ಸಾರುವಷ್ಟು ಸುಲಭವಲ್ಲ. ಇಂತಹ ಭರವಸೆಗಳು ಎರಡು ದಶಕಗಳಿಂದಲೂ ನೂರಾರು ಬಂದಿವೆ, ಬಂದಂತೆಯೇ ಮಾಯವಾಗಿವೆ. ಆದುದರಿಂದ ಮತದಾರ ಆಕರ್ಷಕನಾಗುವುದು ಪ್ರಣಾಳಿಕೆಯಿಂದಲ್ಲ, ಘೋಷಣೆಯಿಂದಲ್ಲ, ಪಕ್ಷ ನಿಷ್ಠೆಯಿಂದಂತೂ ಮೊದಲೇ ಅಲ್ಲ. ತಾತ್ಕಾಲಿಕ ಆಕರ್ಷಣೆಯಿಂದ ಎಂಬುದನ್ನು ಅಲ್ಲಗಳೆಯುವುದು ಅಸಾಧ್ಯ.

ಇದು ರಾಜ್ಯಕೀಯ ಪಕ್ಷಗಳಿಗೂ ಅರಿಯದ ಸಂಗತಿಯಲ್ಲ. ಅವು ತಮ್ಮ ಅಭ್ಯರ್ಥಿಗಳನ್ನು ಆರಿಸುವಾಗ ತಾತ್ಕಾಲಿಕ ಪ್ರಯೋಜನವನ್ನೇ ದೃಷ್ಟಿ ಕೋನಗಳಲ್ಲಿ ತೂಗಿ ನೋಡುತ್ತವೆ. ಆದುದರಿಂದಲೇ ವಿಪರೀತ ಸಂಖ್ಯೆಯಲ್ಲಿ ಪಕ್ಷೇತರ ಅಭ್ಯರ್ಥಿಗಳೂ ಚುನಾವಣಾ ಕಣಗಳಲ್ಲಿ ಇಳಿದಿದ್ದಾರೆ. 'ಪಕ್ಷವೇ ಮುಖ್ಯವಲ್ಲ, ಅಭ್ಯರ್ಥಿಯನ್ನೂ ನೋಡಿಕೊಳ್ಳಬೇಕು' ಎಂಬ ವಾದದ ಬುದ್ಧಿ ಜೀವಿಗಳೂ ಕಾಣಿಸಿಕೊಳ್ಳುತ್ತಾರೆ. ಪಕ್ಷದ ಅಭ್ಯರ್ಥಿ ಪಕ್ಷದ ಬಂಧನದಿಂದ ಮುಕ್ತನಾಗಿ ತನ್ನ ಮತದಾರ ಕ್ಷೇತ್ರದ ಹಿತ ಚಿಂತನೆ ಮಾಡಲಾರನೆಂದೂ ಹೇಳುವವರಿದ್ದಾರೆ. ಸರ್ವೇ ಸಾಮಾನ್ಯ ಕಮ್ಯುನಿಸ್ಟರಿಂದ ತೊಡಗಿ ಸ್ವತಂತ್ರ ಪಕ್ಷದವರೆಗಿನ ಎಲ್ಲ ಸಮಾಜವಾದ- ಪ್ರಗತಿಯ ಮಂತ್ರ ಪಠಿಸತೊಡಗಿದ ಮೇಲೆ ಆ ಮಂತ್ರದ ಅರ್ಥ ಕೆಟ್ಟು ಹೋಯಿತೆಂದೇ ಹೇಳಬೇಕು. ಆದುದರಿಂದಲೇ ಪಕ್ಷೇತರರ ದಂಡು—ವಿಶಾಲ ಆಕಾಶದಲ್ಲಿ ಹಾರುವ ಹಕ್ಕಿಗಳ ಕೊತ್ತಳ ವ್ಯಕ್ತಿಗತ ಪ್ರಭಾವದಿಂದ ಚುನಾವಣಾ ರಂಗಕ್ಕಿಳಿದಿವೆ—ಸಮಾಜವಾದಿಯೇ ಪ್ರಗತಿಶೀಲವೇ. ಆದರೆ ಪಕ್ಷೀಯ ಪದ್ಧತಿಯ ಆಡಳಿತೆಯನ್ನು ನೆಮ್ಮಿಕೊಂಡ ನಮ್ಮ ದೇಶಕ್ಕೆ ಇದರಿಂದ ಪ್ರಯೋಜನವಿದೆಯೇ ಎಂಬುದು ಮುಖ್ಯ ಪ್ರಶ್ನೆ. ವಿರೋಧ ಪಕ್ಷಗಳು ಶಾಸನ ಸಭೆಗಳಲ್ಲಿ ನಿರ್ಬಲವಾದರೆ ಪಕ್ಷೀಯ ಪದ್ಧತಿಯ ಸರ್ವಾಧಿಕಾರ ನಡೆಯುತ್ತದೆ; ಇದುವೇ ಒಂದು ರೀತಿಯಲ್ಲಿ ಏಕವ್ಯಕ್ತಿಯ ಸರ್ವಾಧಿಕಾರವೆನ್ನಲೂ ಸಾಧ್ಯ. ಅಂದರೆ ಪ್ರಬಲ ವಿರೋಧ ಪಕ್ಷ ಪ್ರಜಾಸತ್ತೆಯ ಆರೋಗ್ಯಕ್ಕೆ ಅತ್ಯವಶ್ಯವೆಂದಂತಾಯ್ತು. ಇದನ್ನು ಯಾರು ಕಟ್ಟಬೇಕು?

ಆಳುವ ಪಕ್ಷವು ವಿರೋಧಿ ಪಕ್ಷಗಳನ್ನು ಹೀನಾಯಮಾನವಾಗಿ ಕಾಣುತ್ತ ಬಂದಿರುವುದರಿಂದ ಅವು ಬೆಳೆಯುವುದು ಸಾಧ್ಯವಾಗಿಲ್ಲ. ಇದು ಒಂದು ಆರೋಪ. ಹಲವು ಸಂಖ್ಯೆಯ ಪಕ್ಷಗಳು ಇರುವುದರಿಂದ ಪ್ರಬಲ ವಿರೋಧಿ ಪಕ್ಷ ರೂಪುಗೊಳ್ಳುವುದು ಸಾಧ್ಯವಾಗಲಿಲ್ಲ— ಇದು ಇನ್ನೊಂದು ದೂರು. ಒಂದೊಂದರಲ್ಲೂ ನೇಕಡಾ ಐವತ್ತರಷ್ಟು ಸತ್ಯಾಂಶವಡಗಿದೆ. ಚುನಾವಣೆಯಲ್ಲಿ ಆಡಳಿತ ಪಕ್ಷ ಮತಯಾಚಿಸದಿರುವುದು ಸಾಧ್ಯವಿಲ್ಲವಾದ್ದರಿಂದ, ಉಳಿದ ಸಮಯದಲ್ಲಿ ವಿರೋಧಿ ಪಕ್ಷಗಳು ಸಂಘಟನೆಯಲ್ಲಿ ನಿರತರಾಗಬೇಕು. ಅಧಿಕಾರ ಸ್ಥಾನದಲ್ಲಿದ್ದರೆ ಮಾತ್ರ ಜನ ಸೇವೆ ಸಾಧ್ಯವೆಂದು ಅವು ನಂಬಿದ್ದರೆ, ಅದು ತಪ್ಪಾಗುತ್ತದೆ. ಚುನಾವಣಾ ವೇಳೆಯ ಭಾಷಣ—ಘೋಷಣಗಳ ಸುರಿಮಳೆಯಿಂದ ಮತ ಕೊಚ್ಚಿ ಒಯ್ಯಬಹುದೆಂದು ನಂಬಿದ್ದರೆ, ಅದು ಸುಳ್ಳು. ಏಕೆಂದರೆ, ಮತದಾರರ ಮೇಲೆ ಎಲ್ಲ ಅಭ್ಯರ್ಥಿಗಳೂ ಏಕ ಪ್ರಕಾರವಾಗಿ ತಾತ್ಕಾಲಿಕ ಆಕರ್ಷಣೆ ಬೀರಲಾರರು. 'ವ್ಯಕ್ತಿ ಬೇಕು, ಪಕ್ಷವೂ ಬೇಕು' ಎನ್ನುವುದಕ್ಕಿಂತ "ವ್ಯಕ್ತಿಯೇ ಬೇಕು" ಎನ್ನುವ ಧೋರಣೆ ಇಂದಿನ ದಿನಗಳಲ್ಲಿ ಬಲವತ್ತರವಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಮತದಾರರಿಗೆ ಮುಖ ದರ್ಶನ ನೀಡುವ ಯೋಜನೆ ಹಾಕಿಕೊಂಡದ್ದೂ ಒಂದು ರೀತಿಯಿಂದ ಇದೇ ಆಕರ್ಷಣೆ ಬೀರಲು. ಆಕೆಯ ಮುಂದೆ ಎಲ್ಲರ ವ್ಯಕ್ತಿತ್ವವೂ ಭಸ್ಮಾವಶೇಷವೆಂಬುದು ನಿಜ. ಆದುದರಿಂದ ಇದೀಗ ರಾಜ್ಯ–ಕೇಂದ್ರಗಳ ದೃಷ್ಟಿಕೋನದಿಂದ ಏನಾದರೂ ಬದಲಾವಣೆಯಾಗಬೇಕಷ್ಟೆ. ಆದರೆ ಇದು ಸದ್ಯದ ವಾತಾವರಣದಲ್ಲಿ ಅಸಾಧ್ಯವೆನಿಸುತ್ತದೆ.

ನಿಕ್ಸನ್ನರ ಹವಾ ಬದಲಾವಣೆ

ಎರಡೂವರೆ ದಶಕಗಳಿಂದ ಅಸ್ಪೃಶ್ಯವಾಗಿದ್ದ ಚೀನವನ್ನು ಅಮೆರಿಕನ್ ಅಧ್ಯಕ್ಷ ನಿಕ್ಸನ್ ಭೇಟಿ ನೀಡಿದರು. ಇಷ್ಟು ದೀರ್ಘ ಕಾಲದ ದ್ವೇಷ ನಾಲ್ಕು ದಿನಗಳ ಸಂದರ್ಶನದಿಂದ ದೂರವಾಗದೆಂದು ನಿಕ್ಸನ್ನರೇ ಹೇಳುತ್ತಾರೆಂದ ಮೇಲೆ ಅವರ ಭೇಟಿಯ ಫಲಶ್ರುತಿಯ ಬಗ್ಗೆ ಊಹಾಪೋಹ ಮಾಡಬಹುದು. ಚೀನಾದಲ್ಲಿ ನಿಕ್ಸನ್ನರ 'ಇತಿಹಾಸ ಪ್ರಸಿದ್ಧ' ಯಾತ್ರೆಯ ಬಗ್ಗೆ ಯಾವ ಪ್ರಚಾರವೂ ನಡೆಯಲಿಲ್ಲವೆಂಬುದು 'ಹೇಳಿಕೆ ಮಾಡಿಸಿ ಮದುವೆಗೆ ಹೋದ' ಎಂಬುದನ್ನು ನೆನಪಿಗೆ ತರುತ್ತದೆ. ಅಮೆರಿಕೆ ಚೀನಾಗಳ ನಡುವಣ ಯಾವ ಸಮಸ್ಯೆಯೂ ಚರ್ಚೆಯಾಗುವುದಿಲ್ಲವಂತೆ. ಕೊರಿಯಾ, ವಿಯತ್ ನಾಮು–ಇಂಡೋ ಚೀನಾ–ಹೀಗೆ ಯಾವುವೂ ಪ್ರಸ್ತಾಪವಾಗುವುದಿಲ್ಲವಂತೆ. ವ್ಯಾಪಾರಿಕ–ಸಾಂಸ್ಕೃತಿಕ ವಿನಿಮಯವೂ ಇಲ್ಲವಂತೆ. ಯಾವ ಪುರುಷಾರ್ಥವೂ ಇಲ್ಲದೆ ನಿಕ್ಸನ್ನರು ಪೀಕಿಂಗಿಗೇಕೆ ಹೋಗುತ್ತಾರೆ? ಹವಾ ಬದಲಾವಣೆಯೆ? ಏಳೆಂಟು ತಿಂಗಳು ಪೂರ್ವದಲ್ಲಿಯೇ ನಿಶ್ಚಿತವಾದ ಈ ಹವಾ ಬದಲಾವಣೆಗೆ ಪ್ರೇರಕ ರೋಗ ಯಾವುದು?

ಪ್ರಾಯಃ ಅದು ಶಕ್ತಿಯ ಸಮತೋಲನದ ಹಳೆಯ ರೋಗವಿರಬೇಕು. ಚೀನಾ ರಷ್ಯಗಳ ನಡುವಣ ವಿರಸದ ಸದುಪಯೋಗ ಪಡೆದು ಚೀನಾವನ್ನು ಸುಭದ್ರವಾಗುವಂತೆ ಕಟ್ಟುವ ಹವಣಿಕೆಯಿರಬೇಕು. ಭಾರತಕ್ಕೆ ಎದುರು ಪಾಕಿಸ್ತಾನವನ್ನೂ ರಷ್ಯದ ವಿರುದ್ಧ ಚೀನಾವನ್ನೂ ಎತ್ತಿಕಟ್ಟಿ ಏಷ್ಯಾ ಖಂಡದ ಮೇಲೆ ತನ್ನ ಪ್ರಭಾವವನ್ನು ಉಳಿಸುವ ಕೊನೆಯ ಪ್ರಯತ್ನವಿದು ಇರಬಹುದು. ಶಕ್ತಿಯ ಸಮತೋಲನ ಸವಕಲು ನಾಣ್ಯವೆಂಬುವನ್ನು ನಿಕ್ಸನ್ ಅರಿತುಕೊಳ್ಳದೆ ಮುಂದುವರಿದರೆ, ಅವರ ಪೀಕಿಂಗ್ ಭೇಟಿ ಏಷ್ಯಾಖಂಡದ ಅಭದ್ರತೆಗೆ ನಾಂದಿ ಹಾಡುತ್ತದೆ. ಆದುದರಿಂದ ನಿಕ್ಸನ್ನರಿಗೆ ತಿಳಿಹೇಳಿ ಕೊಡಬೇಕು!

ಗೇಹರಾಜ್ಯದಲ್ಲಿ

ತೀರ್ಥ ತೊಟ್ಟಾದರೇನು, ಕೊಳಗವಾದರೇನು?

'ಅಲ್ರಿ, ನೀವ್ಯಾಕೆ ದಿನಾ ನೋಡಿ...'

'ಏನು ಸಾಯ್ತೀಕೊಂತೀಯೊ?'

"ಛೆ ಛೆ.... ಶಾಂತಂ ಪಾಪಂ ಶಾಂತಂ ಪಾಪಂ. ಅಲ್ಲಾ, ನೀವ್ರ ಸತ್ರ ನಾನು ಕಾಣಬಹುದಾದ ಸುಖವಾದ್ರೂ ಏನೂಂತ?"

'ಏನೂ ಇಲ್ವೆ? ಬದುಕಿರುವಾಗ ಸುಖ ಕೊಡೋಕೆ ಆಗ್ಲಿಲ್ಲ. ಅದ್ರಿಂದ...'

'ಬಾಯ್ಮುಚ್ಚೀಂದ್ರೆ....ಎಂಥ ಅಬದ್ಧ ಮಾತಾಡ್ತಿದೀರಾ. ಅದೂ ಈ ಮುಸ್ಸಂಜೆ ವೇಳೆಗೆ...ರಾಮ ರಾಮಾ ಅನ್ನಿ..'

'ಹ್ಞಾಂ...ಆಯ್ತಪ್ಪ. ಏನು ಮತ್ತೆ?"

'ಪೊದ್ದಿಗೆ ರಾಮ ರಾಮಾನ್ನಿ....'

'ರಾಮ ರಾಮಾ....'

'ನೋಡಿ, ನಾನು ಪ್ರಧಾನಿಯನ್ನು ನೋಡಿದೆ....'

'ಏನಂತೀಯೊ?'

'ಅಲ್ರಿ, ಶ್ರೀಮತಿ ಗಾಂಧಿಯನ್ನ ನಾನು ನೋಡಿದೇಂದ್ರೆ....'

'ಓ, ಹಾಗೋ! ಭಾರೀ ಒಳ್ಳೇದಾಯ್ತು. ಏನಂತೆ. ಎಷ್ಟು ತಲೆಮಾರುಗಳು ಸ್ವರ್ಗವ ಪಡೆದ್ಯಂತೆ?'

'ಗಾಂಧಿಗೂ ಸ್ವರ್ಗಕ್ಕೂ ಏನು ಸಂಬಂಧಾಂತ?'

'ನೋಡು, ಮಹಾ ಪುರುಷರ ದರ್ಶನದಿಂದ ಸ್ವರ್ಗ ಸಿಗುತ್ತಂತೆ.'

"ಹ್ಞಾಂ...."

'ನಮ್ಮ ಕಾಲದ ಮಹಾ ವಿಭೂತಿಗಳಲ್ಲಿ ಶ್ರೀಮತಿ ಗಾಂಧಿಯೂ ಒಬ್ಬಳು....'

'ನಿಜಕ್ಕೂ. ಅಲ್ವಾದ್ರೆ ಅಷ್ಟಷ್ಟು ಜನ ಎಲ್ಲೆಲ್ಲಿಂದ ಏಕೆ ಬರ್ತಾರೆ!'

'ಜನ ಬಂದದ್ದರಿಂದ ಆಕೆ ವಿಭೂತಿಯಾಗಲಿಲ್ಲ. ಆಕೆ ವಿಭೂತಿಯಾದ್ದರಿಂದ ಜನ ಸೇರಿತು....'

'ನಾನಂದದ್ದು ಮತ್ತಿನ್ನೇನು?'

"ಶ್ರೀಮತಿ ಗಾಂಧಿಯೆಂದರೆ ರಾಣಿ ಲಕ್ಷ್ಮೀಬಾಯಿಯ ಅವತಾರ ಅಂದರೂ ಸರಿಯೇ...."

'ಹ್ಞಾಂ'

'ರಾಣಿ ಬ್ರಿಟಿಷರೊಡನೆ ಹೋರಾಡಿ ಮಡಿದಳು. ಶ್ರೀಮತಿ ಗಾಂಧಿ ಪಕ್ಷದೊಳಗಣ ಅನೇಕ ಮಹಾರಥರೊಡನೆ ಹೋರಾಡಿ ಗೆದ್ದಳು...'

'ಅಲ್ರಿ, ಪಾಕಿಸ್ತಾನದೊಡನೆ?'

'ಅವರೊಡನೆ ಹೋರಾಡಿದವರು ನಮ್ಮ ವೀರಯೋಧರು!'

'ಆದರೂ ಅವರಿಗೆ ಆಜ್ಞೆ ನೀಡಿದ್ದು....'

"ಅಂತಹ ಆಜ್ಞೆ ಹಿಂದೆ ಸರ್ದಾರ ಪಟೇಲರೂ ನೀಡಿದ್ದರು, ಶಾಸ್ತ್ರಿ ಬಹದ್ದೂರರೂ ನೀಡಿದ್ದರು. ಆಜ್ಞೆ ನೀಡುವ ಸ್ಥಾನದಲ್ಲಿದ್ದರು, ನೀಡಿದರು. ಆದರೂ ಆ ಕೆಚ್ಚೆದೆಯ ಮುಂದೆ ಶರಣಾಗ ಬೇಕಲ್ಲ..."

"ಮತ್ತೆ! ಹಾಗೆ ಬನ್ನಿ. ನಿಮಗೆ ಅವರನ್ನು ನೋಡುವ ಭಾಗ್ಯವಿರಲಿಲ್ಲ."

'ಭಾಗ್ಯವಿತ್ತು ಕಣೇ, ಆದರೆ, ನಾನೇ ಅದನ್ನು ನಿರಾಕರಿಸಿದೆ...."

'ಯಾಕೆ? ಭಾರತ ಭಾಗ್ಯವಿಧಾತೆಯೆಂದು ಹೆಸರಾದ ಮಹಾ ಮಹಿಳೆ....'

"ಆದರೆ ನೋಡು ಆಕೆ ಭಾರತದ ಪ್ರಧಾನಿಯಾಗಿ ಇಲ್ಲಿಗೆ ಬರಲಿಲ್ಲ. ತನ್ನ ಪಕ್ಷದ ಅಭ್ಯರ್ಥಿಗಳಿಗೆ ಓಟು ಕೊಡಿರೆಂದು ವಿನಂತಿಸಲು ಬಂದಿದ್ದಾರೆ. ಅಂದರೆ, ಅವರ ವ್ಯಕ್ತಿತ್ವ ಸಣ್ಣಗಾಯ್ತು...."

"ಅದಕ್ಕಾಗಿಯೇ ಬರಲಿಲ್ಲವೇನು?"

'ನೋಡು, ನಮ್ಮ ಕರ್ತವ್ಯ ಮುಗಿಯುವಾಗಲೇ ಆರೂವರೆ. ಮತ್ತೆ ಬರುವುದಾದರೂ ಹೇಗೆ? ಮತ್ತೆ, ನಾನು ಹಿಂದೆಯೇ ಅವರನ್ನು ನೋಡಿದ್ದೆ....'

'ಯಾವಾಗ?'

'ಆಗ ನೀನಿನ್ನೂ ಈ ಊರಿಗೆ ಬಂದಿರಲಿಲ್ಲ. ಆಕೆ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿದ್ದರು.'

'ಹ್ಞಾಂ....ಆದ್ರೆ ನೋಡಿ, ಆಕೆಯ ಮಾತು ಮಾತ್ರ ಏನೂ ಸಾಲದೆನ್ನುತ್ತೆ....'

'ಅಲ್ವೆ, ಆಕೆ ಬಂದದ್ದು ಚುನಾವಣಾ ಪ್ರಚಾರಕ್ಕೆ. ಸೂತ್ರದ ಹಾಗೆ ನಾಲ್ಕು ವಾಕ್ಯ ಆಡಿದರೆ ಸಾಕು. ಅವನ್ನು ವ್ಯಾಖ್ಯಾನಿಸಲು ಉಳಿದವರಿದ್ದಾರೆ....'

'ಮತ್ತೆ ಅಷ್ಟು ದೂರದಿಂದ ಅಷ್ಟು ಖರ್ಚು ಮಾಡಿಕೊಂಡು ಬಂದದ್ದು ಯಾಕೇ ತ?'

'ಯಾಕೆ ಅಂದರೆ? ತಮ್ಮ ಪಕ್ಷದ ಅಭ್ಯರ್ಥಿಗಳಿಗೆ ಮತ ಬೇಡುವುದಕ್ಕೆ. ಒಂದೂರಿನಲ್ಲೇ ಮೊಕ್ಕಾಂ ಮಾಡುವುದು ಅವರಿಗೆ ಹೇಗೆ ಸಾಧ್ಯ? ಇತರತ್ರವೂ ಮುಖ ತೋರಿಸ ಬೇಕು ತಾನೆ?'

'ಆದರೂ....'

'ಆದರೂ ಇಲ್ಲ, ಹೋದರೂ ಇಲ್ಲ. ಶಂಖದಿಂದ ಇಳಿದದ್ದು ತೀರ್ಥವಾಗುತ್ತದೆ. ಅದು ನಾಲ್ಕು ತೊಟ್ಟಾದರೇನು? ನಾಲ್ಕು ಕೊಳಗವಾದರೇನು?'

'ಹಿಂದೆ ಸನ್ಯಾಸಿಗಳು ಗ್ರಾಮೈಕರಾತ್ರರಾಗಿಯಾದರೂ ಇರುತಿದ್ದರು....'

'ಸರಿ ಕಣೇ, ಆಗ ರೈಲು—ಬಸ್ಸು—ಕಾರುಗಳಿರಲಿಲ್ಲ. ವಿಮಾನವೂ ಇರಲಿಲ್ಲ. ಹೆಲಿಕಾಪ್ಟರು ಇತ್ತೀಚೆಯದ್ದು. ಮತ್ತವರು ಗ್ರಾಮೈಕರಾತ್ರರಾಗದೆ ಗತ್ಯಂತರವೆಲ್ಲಿ?'

'ಅಂದ್ರೆ ಸಂಚಾರ—ಸಂಪರ್ಕ ಸಾಧನಗಳಿದ್ದುದರಿಂದ....'

'ಹ್ಞಾಂ. ಆದ್ದರಿಂದಲೇ ಆದಷ್ಟು ಹೆಚ್ಚು ಜನರನ್ನುದ್ದೇಶಿಸಿ ಮಾತನಾಡುವುದು ಸಾಧ್ಯವಾಗುತ್ತೆ. ಮತ್ತೊಂದು ವಿಷಯ...'

'ಏನು?'

'ಶ್ರೀಮತಿ ಗಾಂಧಿಯ ಸ್ವಂತ ವ್ಯಕ್ತಿತ್ವ—ಪ್ರತಿಭೆಯಿಂದ ಆಕೆಯ ಪಕ್ಷ ಹುಟ್ಟಿ ಬೆಳೆದಿದೆ. 'ಇಂದಿರಾ ಗಾಳಿ'ಯಿಂದಲೇ ತಮಗೆ ಕಳೆದ ವರ್ಷ ಗೆಲುವಾಯಿತೆಂದು ಆಕೆಯ ಪಕ್ಷದವರೆಲ್ಲ ಒಪ್ಪಿಕೊಂಡಿದ್ದಾರೆ. ಆದುದರಿಂದಲೇ ಈ ಬಾರಿಯೂ ಅಂತಹುದೇ ಗಾಳಿ ಬೀಕೆಂಬ ಇರಾದೆಯಿಂದ ಆಕೆಯನ್ನು ಕರೆದು ಕೊಂಡಿದ್ದಾರೆ....'

'ಹ್ಞಾಂ. ನನಗೊಂದು ನೆನಪಿಗೆ ಬರುತ್ತೆ....'

'ಏನು?'

'ಮತ್ತೆ ನೀವು ತಾಳಿ ಬಡೆದು ನಗಬಾರದು, ಗೇಲಿ ಮಾಡಬಾರದು....'

'ಯಾಕೆ? ಅಂತದ್ದೇನು?'

'ನೀವು ಮಾತು ಕೊಟ್ರೆ....'

'ಒಳ್ಳೆ ಸಚೇತಿ...ಹ್ಞಾಂ. ಆಯ್ತಮ್ಮ.'

'ನೋಡಿ, ದೇವರ ಉತ್ಸವ ಮೂರ್ತಿಗೆ ಕಟ್ಟೆಪೂಜೆ ನಡೆಯುತ್ತಲ್ಲಾ'

'ಹಾದೂನ್ನು. ಆದ್ರೆ ಆ ಸಂಗ್ತಿ ಈಗ ಯಾಕೆ? ನಮ್ಮೂರ ಕಟ್ಟೆ ಪೂಜೆಗೆ ಇನ್ನೂ ಒಂದೂವರೆ ತಿಂಗಳು....'

'ಅಲ್ಲಾರಿ, ಹಾಗೇ ಶ್ರೀಮತಿ....'

'ಹ್ಹ ಹ್ಹ....ಹ್ಹ....'

'ನೋಡಿ ಮತ್ತೆ....'

'ಇಲ್ಲ ಇಲ್ಲ ...ಬಾಯ್ಮುಚ್ಚಿದೆ. ಆರಾಧ್ಯ ಮೂರ್ತಿಯನ್ನು ಕಂಡು ಕೃತಾರ್ಥರಾದೆವೆಂದು ನಂಬಿ ಸುಖ ಪಡೆಯಬಹುದು. ಶ್ರೀಮತಿ ಗಾಂಧಿ ಹೇಳಬೇಕಾದ್ದನ್ನೆಲ್ಲಾ ಆಕೆಯ ಪಕ್ಷದ ನಾಯಕರು ಹೇಳುತ್ತಾರೆ; ಆಕೆಯ ವೇದಗಳಿಗೆ ಭಾಷ್ಯ ವ್ಯಾಖ್ಯಾನ ಎಲ್ಲಾ ಬರೆಯುತ್ತಾರೆ. ತಮ್ಮ ಪಕ್ಷವೊಂದೇ ಮೋಕ್ಷ ತಂದೀಯಬಲ್ಲುದೆಂಬುದೇ ಅವುಗಳ ಸಾರ ಸಂಗ್ರಹ....'

"ಹ್ಞಾಂ....ಅದೇನೇ ಹೇಳಿ, ಶ್ರೀಮತಿ ಗಾಂಧಿಯವರ ಸಂದರ್ಶನದಿಂದ ಗಾಳಿ ಬೀಸತೊಡಗಿದ್ದು ಖಂಡಿತ...."

'ಇರಬಹುದೂನ್ನು. ಕಳೆದ ಬಾರಿ ಈ ಗಾಳಿ ಅನಿರೀಕ್ಷಿತವಾಗಿ ಬೀಸಿತ್ತು. ಅದರ ಪ್ರಭಾವ—ಶಕ್ತಿಯೆಷ್ಟು ಎಂಬುದರ ಕಲ್ಪನೆಯೂ ಇರಲಿಲ್ಲ. ಆದರೆ, ಈ ಬಾರಿ ಹಾಗಲ್ಲ ನೋಡು. ಆದ್ದರಿಂದ ಉಳಿದ ಪಕ್ಷಗಳು ಬಾಯಲ್ಲಿ ಕಲ್ಲು ಹಾಕಿಕೊಂಡಿರಲಾರವು....'

'ಆದರೂ ಈ ಬಾರಿಯೂ ಶ್ರೀಮತಿ ಗಾಂಧಿಯವರ ಪಕ್ಷ ನಿಚ್ಚಳ ಬಹುಮತ ಪಡೆಯುತ್ತದೆ....'

'ಹ್ಞಾಂ....ಇರಬಹುದು. ನೋಡು, ಮೊನ್ನೆ ಒಂದು ವ್ಯಂಗ ಚಿತ್ರ ನೋಡಿದೆ....'

'ಏನು?'

"ಒಬ್ಬ ಅಭ್ಯರ್ಥಿ ಹಸ್ತ ಸಾಮುದ್ರಿಕನಲ್ಲಿ ತನ್ನ ಅಮೃತ ಹಸ್ತವನ್ನು ತೋರಿಸಿ ಚುನಾವಣೆಯ ಪರಿಣಾಮದ ಬಗ್ಗೆ ಕೇಳುತ್ತಾನೆ...."

'ಹ್ಞಾಂ....ಯಾವ ಪಕ್ಷದವನು?'

'ಯಾವನೋ ಪಕ್ಷೇತರನೆಂದಿಟ್ಟುಕೋ....'

'ಏನು ಹೇಳ್ತಾನೆ ಭವಿಷ್ಯ?'

'ನಿಮ್ಮ ಜಯಾಪಜಯಗಳು ಬೀಸೋ ಇಂದಿರಾ ಗಾಳಿಯ ವೇಗ—ಬಲವನ್ನು ಹೊಂದಿಕೊಂಡಿದೆ ಅಂತಾನೆ...'

"ಅಂದ್ರೆ ಇಂದಿರಾ ಗಾಳಿ ತೀವ್ರವಾದರೆ ಆತ ಹಾರಿ ಹೋಗ್ತಾನೆ..."

'ಹಾರಿ ಹೋಗ್ತಾನೆ ಮಾತ್ರವಲ್ಲ, ಇಡುಗಂಟನ್ನೂ ಕಳೆದುಕೊಳ್ತಾನೆ....'

"ಅಂದ್ರೆ, ಭವಿಷ್ಯ ಕೈಯ ರೇಖೆಗಳಲ್ಲಿಲ್ಲ;

(ಒಂಭತ್ತನೆಯ ಪುಟ ನೋಡಿರಿ)

THE VIJAYA BANK LTD.,

Uchila (South Kanara)

ಏಲಂ ನೋಟೀಸು

ಈ ಕೆಳಗೆ ಕಾಣಿಸಿದ ಮಹಾಶಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಕ್ಲ್ವಾದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ವ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಿಂಗಳ ತಾ. 29—2—72ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾ. 7—3—72 ಅಪರಾಹ್ನ ಗಂಟೆ 3—00ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ—ಯಾ—ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ:

ಜಂಜಡಾ ನಂಬ್ರ	ಸಾಲದ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ.	ಮೊಬಲಗು ರೂ. ಪೈ.
1.	J.L 35/70	ಅಚ್ಚು ಶೆಟ್ಟಿ, S/o. ರಾಮ ಶೆಟ್ಟಿ, ಕನ್ಯಾನಗುತ್ತು, P.O. ತೆಂಕ ಎರ್ಮಾಳ್, ಉಡುಪಿ ತಾಲೂಕು, ದ.ಕ.	139 . 95
2.	247/70	ಶೇಕ್ ಹುಸೇನ್, S/o. ಸಾಬು ಹುಸೇನ್ ಸ್ಯಾಕಲ್ ಶೋಪು, P.O. ಉಚ್ಚಿಲ, ದ.ಕ.	180 . 00
3.	76/71	ಯು.ಯಸ್. ಕೃಷ್ಣಮೂರ್ತಿ, ಟೀಚರ್, ಶ್ರೀ ಸರಸ್ವತಿ ಮಂದಿರ ಹಾಯರ್ ಎಲಿಮೆಂಟರಿ ಶಾಲೆ, P.O. ಉಚ್ಚಿಲ, ದ.ಕ.	70 . 80
4	334/71	ಯು.ಯಸ್. ಕೃಷ್ಣಮೂರ್ತಿ, ಟೀಚರ್, ಶ್ರೀ ಸರಸ್ವತಿ ಮಂದಿರ ಹಾಯರ್ ಎಲಿಮೆಂಟರಿ ಶಾಲೆ, P.O. ಉಚ್ಚಿಲ, ದ.ಕ.	130 . 00

ಉಚ್ಚಿಲ (ದ.ಕ.)
15—2—72.

Sd/—
Manager,
UCHILA (S.K.)

ಪ್ರಸ್ತುತ ಆರ್ಥಿಕ ಪರಿಸ್ಥಿತಿ

ಲೇಖಕರು: ಶ್ರೀ ಪಾ. ವಾದಿರಾಜ ತಂತ್ರಿ

ಒಂದು ದೇಶದ ಆರ್ಥಿಕ ಪ್ರಗತಿಯ ಮಾನದಂಡ ಅಲ್ಲಿ ಪ್ರತಿ ವರ್ಷ ಬೆಳೆಯುತ್ತಿರುವ ಔದ್ಯೋಗಿಕ ಮತ್ತು ವ್ಯಾವಸಾಯಿಕ ಉತ್ಪಾದನೆ. ಈ ಎರಡು ವಲಯಗಳಲ್ಲಿ ಉತ್ಪಾದನೆ ಪ್ರಗತಿಶೀಲವಾಗಿ ಏರಬೇಕಾದರೂ ಸರಕಾರ ಅನೇಕ ಯುಕ್ತ ಧೋರಣೆಗಳನ್ನು ಮಾಡಬೇಕಾಗುವುದು. ಕಳೆದ ವರ್ಷದ ವ್ಯಾವಸಾಯಿಕ ಉತ್ಪಾದನಾ ಸ್ಥಿತಿಯನ್ನು ಪರಿಶೀಲಿಸಿದಲ್ಲಿ ತೃಪ್ತಿದಾಯಕ ಅಂಶವನ್ನು ಗೊತ್ತು ಮಾಡಬಹುದು. ಆಹಾರ ಧಾನ್ಯಗಳ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಅನೇಕ ಪ್ರದೇಶಗಳು ಅತಿವೃಷ್ಟಿಯ ತೊಂದರೆಗೊಳಪಟ್ಟಿದ್ದಾಗ್ಯೂ ನಾವು ಜೂನ್ 1971ರ ವರೆಗೆ ಸುಮಾರು 8.5 ಮಿಲಿಯನ್ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಿದ್ದೇವೆ ಆದರೂ ಕೂಡಾ ನಾಲ್ಕನೆಯ ಯೋಜನೆಯಲ್ಲಿ ನಿರೂಪಿಸಿದ ಗುರಿಗಿಂತ ಸುಮಾರು 200 ಕೋ. ರೂ. ಗಳಷ್ಟು ಕಡಿಮೆ ಬಂಡವಾಳ ಹೂಡಿಕೆ ಆಗಿದೆ. ಇದರಿಂದಾಗಿ 10ರಿಂದ 15 ಶೇಕಡಾದಷ್ಟು ಗುರಿಗಿಂತ ಕಡಿಮೆ ಉತ್ಪನ್ನವಾಗಬಹುದೆಂದು ಅಂದಾಜು ಮಾಡಿದ್ದಾರೆ.

ಬೆಲೆ ಏರಿಕೆ

ದೇಶದಲ್ಲಿ ಬೆಲೆ ಏರಿಕೆಯು ವಿಷವ್ಯೂಹ ಜನತೆಯ ಹೃದಯವನ್ನು ಹದಗೆಡಿಸುತ್ತಿದೆ. ಈ ಬೆಲೆ ಏರಿಕೆಯು ಕೊರತೆ ಹಣದ ತೊಡಗಿಸುವುದರಿಂದ ಉಂಟಾಗಿದೆ. ಇತ್ತೀಚೆಗೆ ಎಲ್ಲಾ ರಾಜ್ಯ ಸರಕಾರಗಳು ವಿವೇಕ ಶೂನ್ಯರಾಗಿ ರಿಸರ್ವ್ ಬ್ಯಾಂಕಿನಿಂದ ಸಾಲಪಡೆದು ಸಿಕ್ಕಾಬಟ್ಟೆ ಖರ್ಚು ಮಾಡುತ್ತಿದ್ದಾರೆ. ಪಡೆದ ಸಾಲ ಉತ್ಪಾದನಾ ಕಾರ್ಯಕ್ರಮಗಳಿಗೆ ವ್ಯಯವಾದರೆ ವಸ್ತುಗಳ ಬೆಲೆ ಅತೀವವಾಗಿ ಏರಲಿಕ್ಕಿಲ್ಲ. ಆದರೆ ಪಡೆದ ಸಾಲದ ಹೆಚ್ಚಿನಂಶ ಆಡಳಿತ ವೆಚ್ಚವನ್ನೆದುರಿಸಲು ವ್ಯಯವಾಗುವುದರಿಂದ ಅಧಿಕಗೊಂಡ ಚಾಲಿತ ಹಣ ವಸ್ತುಗಳ ಬೆಲೆಯನ್ನೇರಿಸುತ್ತವೆ. 1971 ಜೂನ್ ಅಂತ್ಯದಲ್ಲಿ ಸುಮಾರು 924 ಕೋ. ರೂ ಗಳಷ್ಟು ಮೊಬಲಗನ್ನೂ ರಾಜ್ಯ ಸರಕಾರಗಳು ರಿಸರ್ವ್ ಬ್ಯಾಂಕಿನಿಂದ ಸಾಲವಾಗಿ ಪಡೆದಿದೆ. ಇದು ಅದಕ್ಕಿಂತ ಹಿಂದಿನ ವರ್ಷಕ್ಕಿಂತ 2 ಕೋ. ರೂ. ಗಳಷ್ಟು ಹೆಚ್ಚಾಗಿದೆ.

ಕುಂಠಿತ ಉತ್ಪಾದನೆ

ಗ್ರಾಮೀಣ ಪ್ರದೇಶಗಳಲ್ಲಿ ಏರುತ್ತಿರುವ ಆದಾಯಕ್ಕನುಗುಣವಾಗಿ ಔದ್ಯೋಗಿಕ ಉತ್ಪಾದನೆ ಹೆಚ್ಚುತ್ತಿಲ್ಲವೆಂದು ಅನೇಕ ವೀಕ್ಷಕರ ಅಭಿಮತ. ಅಲ್ಲದೆ 1971ರಲ್ಲಿ ನಾಲ್ಕನೆಯ ಯೋಜನೆಯಲ್ಲಿ ನಿರೂಪಿತವಾದಂತಹ ಗುರಿಗಿಂತ ಕಡಿಮೆ ಔದ್ಯಮಿಕ ಉತ್ಪಾದನೆ ಆಗುತ್ತಿರುವುದು ಖೇದಕರ. ಇದರಿಂದಾಗಿಯೂ ವಸ್ತುಗಳ ಬೆಲೆ ಏರುವುದು ಸಾಧ್ಯ. ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚುತ್ತಿದ್ದರೆ ವಾಣಿಜ್ಯ ಬೆಳೆಗಳ ಉತ್ಪಾದನೆ ಹೆಚ್ಚುತ್ತಿಲ್ಲ. ಕಾರಣ, ಅಧಿಕ ಇಳುವರಿ ಕೊಡುವಂತಹ ತಳಿಗಳ ಪೂರೈಕೆಯಲ್ಲಿ ಕೊರತೆ ಕಂಡು ಬರುತ್ತದೆ. ಇದರಿಂದಾಗಿ ಕೆಲವು ಔದ್ಯಮಿಕ ಸಂಸ್ಥೆಗಳಿಗೆ ಕಚ್ಚಾವಸ್ತುಗಳ ಕೊರತೆ ಕಂಡು ಬರುತ್ತದೆ. ಕಚ್ಚಾವಸ್ತುಗಳ ಪೂರೈಕೆಯಲ್ಲಿ ಕೊರತೆ ಕಂಡು ಬರುವುದರಿಂದ ಔದ್ಯಮಿಕ ಉತ್ಪಾದನೆಯೂ ಕಡಿಮೆಯಾಗಿದೆ.

ಶಿಸ್ತಿನ ಅಭಾವ

ಔದ್ಯಮಿಕ ವಲಯದಲ್ಲಿ ಅನೇಕ ಕುಂದು ಕೊರತೆಗಳು ಕಂಡು ಬರುವುದು. ಅನೇಕ ಔದ್ಯೋಗಿಕ ಕಾರ್ಖಾನೆಗಳು ತಮ್ಮ ಸ್ಥಾಪಿತ ಶಕ್ತಿಯನ್ನು ಸಂಪೂರ್ಣ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಕಚ್ಚಾವಸ್ತುಗಳ ಕೊರತೆ. ಕೆಲವು ಸಂಸ್ಥೆಗಳಿಗೆ ಸರಿಯಾದ ಹಣಕಾಸಿನ ಪೂರೈಕೆ ಆಗುತ್ತಿಲ್ಲ.

ಅನೇಕ ಕಾರ್ಮಿಕರು ವೇತನವನ್ನು ಅಧಿಕಗೊಳಿಸಲು ಚಳುವಳಿ ಮಾಡುತ್ತಿದ್ದಾರೆ. ಕಾರ್ಮಿಕ ವರ್ಗದಲ್ಲಿ ಪ್ರಕ್ಷುಬ್ಧ ವಾತಾವರಣ ಆಗಾಗ್ಗೆ ಕಂಡು ಬರುತ್ತದೆ. ಇದರಿಂದಾಗಿ ನಮ್ಮ ಶ್ರಮ ಶಕ್ತಿಯಲ್ಲಿ ನೈತಿಕ ಶಕ್ತಿಯ ಕೊರತೆ ಮತ್ತು ಯೋಗ್ಯ ಅನುಶಾಸನದ ಸಂವಿದೆಯ ಅಭಾವ ಹರಡಿಕೊಂಡಿದೆ. ಕಾರ್ಮಿಕ ವರ್ಗದಲ್ಲಿ ಶಿಸ್ತಿನ ಅಭಾವದಿಂದಾಗಿ ಉತ್ಪಾದನಾ ಕ್ಷಮತೆ ಕುಂಠಿತವಾಗಿದೆ. ಏಕಸ್ವಾಮ್ಯವನ್ನು ತೊಲಗಿಸುವ ಧೋರಣೆಗಳೂ ಉತ್ಪಾದನಾ ಶಕ್ತಿಯನ್ನು ಹೆಚ್ಚುಗೊಳಿಸುವಲ್ಲಿ ಪ್ರತಿಬಂಧಕಗಳಾಗಿ ಸ್ಪರ್ಧಿಸುತ್ತಲಿವೆ.

ಕಾಳಧನ ಚಲಾವಣೆ

ಇತ್ತೀಚೆಗೆ ಮಾಜಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಕೆ. ಎನ್. ವಾಂಚೂ ಅವರ ಅಧ್ಯಕ್ಷತೆಯಲ್ಲಿ ನಿರ್ಮಿಸಿದ ಸಮಿತಿ ಭಾರತದಲ್ಲಿ ಪ್ರತಿವರ್ಷ 1400 ಕೋ. ರೂ.ಗಳಷ್ಟು ಕಾಳಧನ ಚಲಾವಣೆಯಲ್ಲಿರುವುದಾಗಿ ತಿಳಿಸಿದೆ. ಇದರಿಂದಾಗಿಯೂ ಬೆಲೆ ಏರಿಕೆ ಉಂಟಾಗಿದೆ. ಸುಳ್ಳು ಲೆಕ್ಕ ನೀಡಿಕೆಯ ಮೂಲಕ ತೆರಿಗೆ ತಪ್ಪಿಸುವವರ ವಿಚಾರಣೆ, ತನಿಖೆ ಹಾಗೂ ತಪಾಸಣೆಗಳ ಮೂಲಕ ಕಂಡು ಹಿಡಿಯಲು ಹೆಚ್ಚು ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕು. ಕಠಿಣ ದಂಡನೆ ನೀಡುವ ಮೂಲಕ ಕಾಳಧನ ಚಲಾವಣೆಯನ್ನು ಕೊನೆಗೊಳಿಸಲು ಯತ್ನಿಸಬೇಕು. ಅಲ್ಲದೆ ಪ್ರಾಮಾಣಿಕವಾಗಿ ತೆರಿಗೆ ಪಾವತಿ ಮಾಡುವವರಿಗೆ ಹೆಚ್ಚು ಪ್ರೋತ್ಸಾಹ ದೊರೆಯುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ರಾಷ್ಟ್ರೀಕೃತ ಉದ್ಯಮ ಪರಿಣಾಮಕಾರಿಯಾಗಿ ಕಾರ್ಯ ಎಸಗಬೇಕಾದರೆ ರಾಷ್ಟ್ರೀಯ ಪ್ರಜ್ಞೆ ಇರಬೇಕೆಂಬ ಭಾವನೆಗೆ ಪ್ರತಿರೋಧವ ಮಾತಿಲ್ಲ. ಇಲ್ಲದಿದ್ದರೆ ಅಂತಹ ಉದ್ಯಮಗಳೆಲ್ಲ ಕೇವಲ ದುರಾಡಳಿತ, ನಷ್ಟ, ಭ್ರಷ್ಟಾಚಾರ ಮುಂತಾದ ಅವ್ಯವಹಾರಗಳ ಕೇಂದ್ರಗಳಾಗಿ ಪರಿಣಮಿಸುತ್ತವೆ.

ನಿರುದ್ಯೋಗ ಸಮಸ್ಯೆ

ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಮತ್ತು ಅರೆ ಉದ್ಯೋಗ ಗಣನೀಯ ಪ್ರಮಾಣದಲ್ಲಿ ಆವರಿಸಿಕೊಂಡಿದ್ದು ಜನಜೀವನ ಮಟ್ಟ ನಿಕೃಷ್ಟ ಸ್ಥಿತಿಯಲ್ಲಿರುವುದಕ್ಕೆ ಕಾರಣವಾಗಿದೆ. ನಗರ ಪ್ರದೇಶಗಳಲ್ಲಿ ಅತೀವವಾಗಿ ನಿರುದ್ಯೋಗ ಸಮಸ್ಯೆಯು ಭಯಾನಕವಾಗಿ ಆವರಿಸಿದೆ. ಇಪ್ಪತ್ತು ವರ್ಷಗಳ ಸುದೀರ್ಘವಾದ ಯೋಜಿತ ಪ್ರಯತ್ನಗಳ ನಂತರವೂ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಮೂಲೆ ಪಾಲಾಗಿಸಲು ಸಾಧ್ಯವಾಗಿಲ್ಲ. ಹೆಚ್ಚಾದ ಮೇಲೆ ಈ ಸಮಸ್ಯೆಯು ಭೂತಾಕಾರವನ್ನು ತಾಳಿಕೊಳ್ಳಬಹುದು. ವಿವಿಧ ಪ್ರದೇಶಗಳ ಅವಶ್ಯಕತೆಗಳನ್ನು ಹಾಗೂ ಸಂಪನ್ಮೂಲಗಳನ್ನು ಅಂದಾಜು ಮಾಡಲು ಮತ್ತು ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಸ್ವತಂತ್ರ ಆಯೋಗಗಳನ್ನು ರಚಿಸಿ ತನ್ಮೂಲಕ ಸ್ಥಾನಿಕ ಸಂಪನ್ಮೂಲಗಳನ್ನು ಉಪಯೋಗಿಸುವ ಪ್ರಯತ್ನ ಮಾಡಿದರೆ ಈ ನಿರುದ್ಯೋಗವನ್ನು ನಿವಾರಣೆ ಮಾಡಬಹುದು. ಸಂಪನ್ಮೂಲಗಳ ಯೋಗ್ಯ ವಿತರಣೆ, ಸಮಾನ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗಳಿಗಾಗಿ ದೇಶದಲ್ಲಿ ರಾಷ್ಟ್ರಮಟ್ಟದ ಹಾಗೂ ಜಿಲ್ಲಾ ಮಟ್ಟದ ಯೋಜನೆಗಳಿರುವುದು ಅಗತ್ಯ. ಇದರಿಂದಾಗಿ ಭಯಾನಕವಾಗಿ ವ್ಯಾಪಿಸಿರುವ ನಿರುದ್ಯೋಗ ನಿವಾರಣೆ ಆಗಲು ಸಾಧ್ಯ.

ಕಾರ್ಮಿಕರ ಗೊಂದಲ

ಕಾರ್ಮಿಕ ಸಂಘಗಳ ಕಾರ್ಯಾಚರಣೆಗಳೂ ಔದ್ಯಮಿಕ ಪ್ರಗತಿಗೆ ಪ್ರತಿಬಂಧಕಗಳಾಗಿ ಪರಿಣಮಿಸಿವೆ. ಕಾರ್ಮಿಕರು ಮಾಲೀಕರಿಗೆ ಅಪ್ಪಣೆಗಳನ್ನು ಕೊಡುವಷ್ಟರ ಮಟ್ಟಿಗೆ ಪ್ರಬಲರಾಗಿದ್ದಾರೆ. ಸ್ಟ್ರೈಕು ಮತ್ತು ಲೋಕ್ ಔಟುಗಳಿಂದಾಗಿ ಔದ್ಯಮಿಕ ಉತ್ಪಾದನೆ ಸ್ಥಗಿತಗೊಳ್ಳುತ್ತಿದೆ. ಔದ್ಯೋಗಿಕ ಕೌಶಲ್ಯ ಹೆಚ್ಚುತ್ತಿದ್ದರೂ ಚಳುವಳಿಯ ಮೂಲಕ ಉತ್ಪಾದನಾ ಕ್ಷಮತೆ ಕುಗ್ಗುತ್ತಿದೆ.

ಅನುತ್ಪಾದಕ ವ್ಯಯ

ಸರಕಾರ ಅನುತ್ಪಾದಕ ಕಾರ್ಯಗಳಿಗೆ ವ್ಯಯವನ್ನು ಹೆಚ್ಚುಗೊಳಿಸುತ್ತಿದೆ. ಸರಕಾರಿ ಕಾರ್ಮಿಕರಿಗೆ ಮತ್ತು ಆಡಳಿತಗಾರರಿಗೆ ವೇತನ ಎಷ್ಟು ಹೆಚ್ಚು ಕೊಟ್ಟರೂ ತೃಪ್ತಿ ಇಲ್ಲ. ಸರಕಾರಿ ಸಂಸ್ಥೆಗಳಲ್ಲಿ ಕಾರ್ಮಿಕ ಗೊಂದಲಗಳೂ ಸರ್ವಸಾಮಾನ್ಯ. ಅವರ ಬೇಡಿಕೆಗಳನ್ನು ವಿಧಿಪೂರ್ವಕ ಮಾನ್ಯತೆ ನೀಡಿ ವೇತನಗಳನ್ನು ಪ್ರತಿವರ್ಷವೂ ವಿವೇಚನಾರಹಿತವಾಗಿ ಹೆಚ್ಚುಗೊಳಿಸುತ್ತದೆ. ಇದರಿಂದಾಗಿ ಅನುತ್ಪಾದಕ ವ್ಯಯ ಹೆಚ್ಚಾಗಿ ವಸ್ತುಗಳ ಬೆಲೆ ಏರುವುದು. ಇದರಿಂದ ಬಡವನ ಒಡಲಿಗೆ ಹೊಡೆತ.

ಕೊನೆಯ ಮಾತು

ಅನೇಕ ವೇಳೆ ಯೋಜನಾ ವೈಫಲ್ಯಗಳೆಲ್ಲಾ ಪರಿಸರದ ಪ್ರತ್ಯುತ್ಪನ್ನಗಳಾಗಿವೆ. ನಮ್ಮ ಸಾಮಾಜಿಕ ಮತ್ತು ರಾಜಕೀಯ ವಾತಾವರಣಗಳು ಆರ್ಥಿಕ ಪ್ರಗತಿಯನ್ನು ಹೆಚ್ಚಿಸುವುದಕ್ಕೆ ಅನೇಕ ಪ್ರತಿಬಂಧಕಗಳನ್ನೊಡ್ಡುತ್ತವೆ. ಅಲ್ಲದೆ ಹೊಸ ವಾತಾವರಣಕ್ಕೆ 'ಹೊಂದಿಕೊಳ್ಳಲು ಹಿಂಜರಿಯುತ್ತವೆ. ಆದರೆ ದೇಶದಲ್ಲಿ ಆರ್ಥಿಕ ಪ್ರಗತಿ ಸಂಭವಿಸಬೇಕಾದರೆ ಇನ್ನೂ ಸಾಹಸದ ಧ್ಯೇಯ ಧೋರಣೆಗಳನ್ನು ಇಟ್ಟುಕೊಂಡು ಕಾರ್ಯಗತಗೊಳಿಸಬೇಕಾಗಿದೆ. ಏರುತ್ತಿರುವ ಜನಸಂಖ್ಯೆಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸಬೇಕಲ್ಲದೆ ಹೊಸದಾಗಿ ಶ್ರಮ ಮಾರುಕಟ್ಟೆಗೆ ಬರುವ ಪ್ರವೇಶಿಕರಿಗೆ ಉದ್ಯೋಗಾವಕಾಶಗಳನ್ನೊದಗಿಸುವುದೂ ಅವಶ್ಯವಾಗಿದೆ.

● ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕವಲು ದಾರಿ—ಕೆಂಪು ದೀಪ

ಅಭ್ಯರ್ಥಿಗಳಿಂದ ಪ್ರಮಾಣ ವಚನ ಸಾಧ್ಯವೆ?

ಚುನಾವಣೆ ಬಂದಿತೆಂದರೆ ನಾಯಕರ ಸಂಖ್ಯೆ ಬೆಳೆಯುತ್ತದೆ. ರಾಜ್ಯಕೀಯ ಚಟುವಟಿಕೆಗಳಿಗೆ ಹೊಸತೊಂದು ತಿರುವು ಬರುತ್ತದೆ.

ವಿವಿಧ ರಾಜ್ಯಕೀಯ ಪಕ್ಷಗಳೂ ಪಕ್ಷೇತರ ಅಭ್ಯರ್ಥಿಗಳೂ ನಾನಾತರದ ಭರವಸೆಗಳನ್ನು ಜನತೆಗೆ ನೀಡುತ್ತಾರೆ. ಚುನಾವಣೆ ಮುಗಿದ ಮೇಲೆ ಗೆದ್ದವರಾಗಲೀ ಸೋತವರಾಗಲೀ ಶ್ರೀ ಸಾಮಾನ್ಯನನ್ನು ನೆನಸಿಕೊಳ್ಳಬೇಕಾದರೆ ಮತ್ತೊಂದು ಚುನಾವಣೆ ಬರಬೇಕು.

ಭಾರತದ ಶ್ರೀ ಸಾಮಾನ್ಯರಲ್ಲಿ ಅಧಿಕ ಸಂಖ್ಯಾಕರು ನಿರಕ್ಷರರು. ಮತದ ಮೌಲ್ಯ ಮತ್ತು ಅದರ ಪರಿಣಾಮಗಳ ಬಗ್ಗೆ ಅನಭಿಜ್ಞರು. ವಿವೇಕಿ ವಿರಸರಿಗಳು ನಾನಾ ತೆರದ ಆಸೆ–ಆಮಿಷಗಳನ್ನು ತೋರಿಸಿ ಮತಾಂತರಕ್ಕೆ ಪ್ರಯತ್ನಿಸುತ್ತಿದ್ದಂತೆ ರಾಜ್ಯಕೀಯ ನೇತಾರರು ವಿವಿಧ ಭರವಸೆಗಳನ್ನು ನೀಡಿ ಮತಗಿಟ್ಟಿಸಿ ಅನಂತರ ಮತದಾರರನ್ನು ಅವರ ಗೋಡವೆಗೇ ಬಿಟ್ಟು ಬಿಡುವುದು ಈ ಇಪ್ಪತ್ತು ವರ್ಷಗಳಲ್ಲಿ ಸರ್ವೇಸಾಮಾನ್ಯ. ಇದಕ್ಕೆ ಕೆಲವೊಂದು ಅಪವಾದವಿದ್ದರೂ ಅದು ಅಗಣ್ಯ.

ಆದುದರಿಂದಲೇ ಬೆಂಗಳೂರಿನ ಮತದಾರರೊಬ್ಬರು ಮತ ಬೇಡುವವನಿಂದ ಪ್ರಮಾಣ ಮಾಡಿಸಬೇಕೆಂದು ಬಯಸಿದ್ದಾರೆ. ಈ ಮತದಾರರ ಹೆಸರು ಶ್ರೀ ಡಿ. ಆರ್. ಕೃಷ್ಣಮೂರ್ತಿ. ಚುನಾವಣಾ ಪ್ರಣಾಳಿಕೆಯಂತೆಯೇ ಇದು ಮತದಾರರ ಪ್ರಣಾಳಿಕೆ.

ಒಂದು ಕನಿಷ್ಠ ಕಾರ್ಯಕ್ರಮಕ್ಕೆ ಅಭ್ಯರ್ಥಿಯು ಲಿಖಿತ ಒಪ್ಪಿಗೆ ನೀಡುವಂತೆ ಮಾಡುವುದು ಇದರ ಮುಖ್ಯ ಗುರಿ.

ಅಭ್ಯರ್ಥಿಯೊಂದು ಪ್ರಮಾಣ ಪತ್ರಕ್ಕೆ ಸಹಿ ಹಾಕಬೇಕು. ಈ ಪ್ರಮಾಣ ಪತ್ರದಲ್ಲಿ ಆತನು ತನ್ನ ಆದಾಯ, ಆದಾಯ ತೆರಿಗೆ, ಸ್ಥಿರ–ಚರ ಆಸ್ತಿಗಳ ವಿವರ–ಇದರಲ್ಲಿ ಮಗ, ಮಗಳು, ತಂದೆ, ತಾಯಿ, ಸೊಸೆ, ಅಣ್ಣ, ತಮ್ಮ, ಅಕ್ಕ, ತಂಗಿ ಹೀಗೆ ಎಲ್ಲರೂ ಸೇರುತ್ತಾರೆ,–ಬಾಂಗ್ಲಾ ನಿಧಿಗೆ ನೀಡಿದ ನೆರವಿನ ಮೊತ್ತ ಮೊದಲಾದುವುಗಳ ಉಲ್ಲೇಖವಿರಬೇಕು.

ಅಭ್ಯರ್ಥಿಯು ಓಟು ಪಡೆಯುವುದಕ್ಕೆ ಮೊದಲು ಕೆಲವೊಂದು ಸಂಗತಿಗಳಿಗೆ ತನ್ನ ಒಪ್ಪಿಗೆಯನ್ನು ಅನಿವಾರ್ಯವಾಗಿ ನೀಡಬೇಕು.

'ಬಡತನವನ್ನು ದೂರಮಾಡಿಸಿ' ಎಂಬ ತತ್ತ್ವವನ್ನು ಒಪ್ಪಿದ ಮೇಲೆ ಮಾಸಿಕ ರೂ. ೫೦೦ಕ್ಕಿಂತ ಹೆಚ್ಚು ವೇತನ ಪಡೆಯುವ ಹಕ್ಕನ್ನು ಕಳೆದುಕೊಳ್ಳಬೇಕು. ಹೆಚ್ಚಿನ ಹಣ ಬಂದರೆ ಅದನ್ನು ನಿರಾಕರಿಸಬೇಕು. ಉಚಿತ ಪ್ರಯಾಣದ ಸೌಲಭ್ಯಗಳನ್ನು ಪಡೆಯಬಾರದು.

ಸಂಪುಟದ ಮಂತ್ರಿಗಳ ಸಂಖ್ಯೆ ಯಾವುದೇ ಸಂದರ್ಭದಲ್ಲಿ ಇಪ್ಪತ್ತನ್ನು ಮೀರಬಾರದು. ಮಂತ್ರಿಗಳ ವೇತನ, ಸಾರಿಗೆ, ಭತ್ತೆಯೆಲ್ಲ ಒಟ್ಟು ಸೇರಿ ಮಾಸಿಕ ಒಂದೂವರೆ ಸಾವಿರ ರೂಪಾಯಿಗಳಿಗೆ ಹೆಚ್ಚಬಾರದು.

ಇದಕ್ಕೆ ಅನುಗುಣವಾದ ಶಾಸನವನ್ನು ತರಲು ಬೆಂಬಲ ನೀಡಬೇಕು.

ಪಕ್ಷಾಂತರವನ್ನು ಮಾಡಬಾರದು. ಈ ಅಂಶಗಳನ್ನು ಉಲ್ಲಂಘಿಸಿದರೆ, ಅವನ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು.

ಶ್ರೀ ಕೃಷ್ಣಮೂರ್ತಿಯವರು ಯಾವುದೇ ರಾಜ್ಯಕೀಯ ಪಕ್ಷ ಸೇರಿದವರಲ್ಲ. ಅವರು ಅಭ್ಯರ್ಥಿಗಳು ಮತಯಾಚನೆಗೆ ಬಂದಾಗ, ಅವರು ರಾಜ್ಯಕೀಯ ಪಕ್ಷಕ್ಕೆ ಸೇರಿದವರಾಗಿರಲಿ, ಪಕ್ಷೇತರರೇ ಇರಲಿ, ಈ ರೀತಿಯ ವಾಗ್ದಾನ ಪಡೆದುಕೊಳ್ಳುವಂತೆ ಮತದಾರರಿಗೆ ವಿನಂತಿಸಿದ್ದಾರೆ.

ಇಂತಹ ಪ್ರಮಾಣಕ್ಕೆ ಶ್ರೀ ಕೃಷ್ಣಮೂರ್ತಿಯವರು ಬಲವಾದ ಕಾರಣಗಳನ್ನೂ ಕೊಟ್ಟಿದ್ದಾರೆ.

ದೇಶದಲ್ಲಿ ಹಲವು ರೀತಿಯ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಒಮ್ಮೆ ಚುನಾಯಿಸಿದ ಪ್ರತಿನಿಧಿಯನ್ನು ಹಿಂದೆ ಕರೆದುಕೊಳ್ಳುವ ಅವಕಾಶ ಮತದಾರರಿಗೆ ಇಲ್ಲ. 'ಸಾರ್ವಜನಿಕ ಜೀವನವೆಂದರೆ ಅಪ್ರಾಮಾಣಿಕತೆ' ಎಂಬ ತಪ್ಪು ಕಲ್ಪನೆ ಹರಡಿಬಿಟ್ಟಿದೆ. ರಾಜ್ಯಕೀಯದಲ್ಲಿ ಪ್ರಾಮಾಣಿಕತೆಗೆ ಅಡಕೆಯ ಬೆಲೆಯೂ ಉಳಿದಿಲ್ಲ.

ಶಾಸಕತನ ಮತ್ತು ಮಂತ್ರಿ ಪದಗಳ ಆಕರ್ಷಣೆ ಹದ ಮೀರಿದೆ. ಅವು ಸೇವಾಸ್ಥಾನಗಳೆಂಬ ಭಾವನೆ ಗಾಳಿಯಲ್ಲಿ ಹಾರಿಹೋಗಿ ವೈಭವ—ವಿಲಾಸಗಳ ಸಾಧನವೆಂಬ ಕಲ್ಪನೆ ಮೂಡಿದೆ.

ಸರಕಾರದ ವರಮಾನದ ಸಿಂಹಪಾಲು ಸಿಬ್ಬಂದಿಗೇ ವೆಚ್ಚವಾಗಿ ಶ್ರೀ ಸಾಮಾನ್ಯನ ಪ್ರಗತಿಗೆ ಹಣವೇ ದೊರೆಯುತ್ತಿಲ್ಲ. ಒಬ್ಬೊಬ್ಬ ಮಂತ್ರಿಯ ವೆಚ್ಚ ಪ್ರತಿ ತಿಂಗಳೂ ಇಪ್ಪತ್ತು ಸಾವಿರವನ್ನು ಮೀರುತ್ತಿದೆ. ತೆರಿಗೆಗಳ ವಸೂಲಿ ಸರಿಯಾಗಿ ನಡೆಯುತ್ತಿಲ್ಲ. ಶ್ರೀಮಂತರಿಗಿಂತ ಬಡವರ ಮೇಲೆಯೇ ಅಧಿಕ ತೆರಿಗೆಯ ಭಾರವಿದೆ. ಭಾರತದ ಶ್ರೀ ಸಾಮಾನ್ಯನ ಸರಾಸರಿ ಗಳಿಕೆ ದಿನಕ್ಕೆ ಎಪ್ಪತ್ತು ಪೈಸೆ. ಅಂದರೆ, ಬಡವರ, ದರಿದ್ರರ ಸಂಖ್ಯೆ ಎಷ್ಟು ಎಂಬುದು ಅನುಮಾನಿತ.

ರಾಜ್ಯಕೀಯದಲ್ಲಿ ಅಸ್ಥಿರತೆಯಿದೆ. ಒಂದಾಗಿದ್ದ ಕಾಂಗ್ರೆಸ್ಸು ತುಕುಡಿಗಳಾಯಿತು. ಬಹು ಮಂದಿ ಒಂದೆಡೆಗೆ ಬಂದು ತಮ್ಮ ಪಾಳಯವನ್ನು ಬಲಗೊಳಿಸಿದಾಗ, ಇತರ ರಾಜ್ಯಕೀಯ ಪಕ್ಷಗಳೆಲ್ಲ ಅತ್ಯಂತ ದುರ್ಬಲವಾದಾಗ ಈ ಚುನಾವಣೆಗಳು ನಡೆಯುತ್ತಿವೆ. ಗರೀಬೀ ಹಟಾವೊ "ಇಂದಿರಾ ಗಾಳಿ" ಅಥವಾ 'ಪಾಕ್ ವಿಜಯ'ಗಳ ಘೋಷಣೆ ಮಾಡಿ ನಾನಾ ರೀತಿಯ ಆಶೆ ಆಮಿಷಗಳ ಮದೋದಕವನ್ನು ಮತದಾರರಿಗೆ ಕುಡಿಸಿ ಮತಗಳಿಸುವ ಪ್ರಯತ್ನ ನಡೆಯುತ್ತಿದೆ.

ಆದುದರಿಂದ ಮತದಾರರು ಅಭ್ಯರ್ಥಿಯಿಂದ—ಅವರು ಯಾರೇ ಆಗಿರಲಿ–ಈ ಮೇಲಿನಂತೆ ವಚನ ತೆಗೆದುಕೊಂಡು ತಮ್ಮ ಮತವನ್ನು ಚಲಾಯಿಸಬೇಕು ಇಲ್ಲವಾದರೆ, ಹಿಂದಿನಂತೆಯೇ ಮತದಾರರನ್ನು ಗೆದ್ದ ಮೇಲೆ ಮರೆತು ಬಿಡುವ ಶಾಸಕರು ತಮ್ಮ ಸ್ವಾರ್ಥ ಸಾಧನೆಯಲ್ಲಿ ತೊಡಗುತ್ತಾರೆ.

ಶ್ರೀ ಕೃಷ್ಣಮೂರ್ತಿಯವರ ವಿಚಾರಧಾರೆಯಲ್ಲಿ ತಿರುಳಿದೆ. ಆದರೆ, ಈ ಬಗೆಯ ಪ್ರಮಾಣ ಪತ್ರಕ್ಕೆ ಸಹಿ ಹಾಕಿ ತಮ್ಮ ಕಾಲುಗಳ ಮೇಲೆ ಕೊಡಲಿ ಹಾಕಿಕೊಳ್ಳಲು ಅದೆಷ್ಟು ಅಭ್ಯರ್ಥಿಗಳು (ಗೆಲ್ಲುವ ಆಶಯವಿದ್ದವರು) ಸಿದ್ಧರು?

ಚುನಾವಣಾ ಶಾಸನದಲ್ಲಿಯೇ ಈ ಅಂಶಗಳನ್ನು ಸೇರಿಸುವುದು ಸಾಧ್ಯವಾದರೆ ಸಮಂಜಸವಾದೀತೋ ಏನೋ!

●●

ಮಾವು - ಹಣ್ಣುಗಳ ರಾಜ

ಲೇಖಕರು: ಶ್ರೀ ಬಿ. ವಿ. ನಾಯಕ್

"ಹಣ್ಣುಗಳ ರಾಜ" ಎಂದು ಪ್ರಖ್ಯಾತಗೊಂಡಿರುವ ಮಾವು, ಏಶ್ಯಾದ ದಕ್ಷಿಣ-ಪೂರ್ವ ಭಾಗಗಳಲ್ಲಿ ಕಂಡು ಬರುತ್ತದೆ. ಭಾರತದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಮಾವನ್ನು ಬೆಳೆಸುತ್ತಿದ್ದಾರೆ. ಯಾವಾಗಲೂ ಹಸುರು ಬಣ್ಣದಿಂದ ಕಂಗೊಳಿಸುವ ಮಾವಿನ ಮರಗಳು ಭಾರತದ ಕೃಷಿ ಭೂಮಿಯಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿವೆ.

ನಮ್ಮ ದೇಶದಲ್ಲಿ ನೂರಾರು ಮಾವತ್ತಕ್ಕಿಂತಲೂ ಹೆಚ್ಚು ಜಾತಿಯ ಮಾವಿನ ಮರಗಳನ್ನು ಕಾಣಬಹುದು. ಲಾಂಗ್ರಾ, ಮಲ್ ಗೋವಾ, ಪೈರಿ, ರಸಪೂರಿ, ಆಲ್ಫೊನ್ಸೊ- ಇವು ಹೆಚ್ಚು ಜನಪ್ರಿಯತೆಗಳಿಸಿರುವ ವಿವಿಧ ಜಾತಿಯ ಮಾವುಗಳು. ಮಧುರವಾದ, ಸಿಹಿಯಾದ ರುಚಿಯುಳ್ಳ ರಸಭರಿತ ಹಣ್ಣುಗಳಲ್ಲಿ ಮಾವು ಮೊದಲನೆಯದಾಗಿದೆ. ಭಾರತದಿಂದ ಪ್ರತಿವರ್ಷವೂ ಮಾವನ್ನು ದೊಡ್ಡ ಪ್ರಮಾಣದಲ್ಲಿ ಪರದೇಶಗಳಿಗೆ ಕಳುಹಿಸುತ್ತಾರೆ.

100 ಗ್ರಾಂ ತೂಕದ ಬಲಿತ ಆಲ್‌ಫೊನ್ಸೊ ಮಾವು ಕೆಳಗಿನ ಪೋಷಕಾಂಶಗಳನ್ನು ಒಳಗೊಂಡಿವೆ.

ನೀರು	81.6 ಗ್ರಾಂ
ಪ್ರೋಟಿನ್	0.9 ಗ್ರಾಂ
ಕೊಬ್ಬು	0.4 ಗ್ರಾಂ
ಕಾರ್ಬೊಹೈಡ್ರೇಟ್	16.3 ಗ್ರಾಂ
ಕೆಲ್ಸಿಯಂ	40 0 ಮಿ. ಗ್ರಾಂ.
ರಂಜಕ	16.0 ಮಿ. ಗ್ರಾಂ.
ಕಬ್ಬಿಣ	1.6 ಮಿ. ಗ್ರಾಂ.
ಪೊಟೆಸಿಯಂ	200.0 ಮಿ. ಗ್ರಾಂ.
ಸೋಡಿಯಂ	9.0 ಮಿ. ಗ್ರಾಂ.
ವಿಟಾಮಿನ್ 'A'	20,000 ಐ. ಯು.
ವಿಟಾಮಿನ್ B1	0.08 ಮಿ. ಗ್ರಾಂ.
ವಿಟಾಮಿನ್ B2	0.09 ಮಿ. ಗ್ರಾಂ.
ನಿಯಾಸಿನ್	4.1 ಮಿ. ಗ್ರಾಂ.
ವಿಟಾಮಿನ್ C	125.0 ಮಿ. ಗ್ರಾಂ.
ಕ್ಯಾಲೋರಿಗಳು	50

ಈ ಪೋಷಕಾಂಶಗಳ ಪ್ರಮಾಣ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಬೇರೆಯಾಗಿರುತ್ತದೆ.

'ಎ' ಜೀವಸತ್ವ ಹೆಚ್ಚಾಗಿರುವ ಹಣ್ಣುಗಳಲ್ಲಿ ಮಾವು ಮುಖ್ಯವಾಗಿದೆ. 'ಎ' ಜೀವಸತ್ವದಲ್ಲಿ ವಿಪುಲವಾಗಿರು 'ಕಾರೋಟಿನ್' ಎಂಬ ಪದಾರ್ಥದಿಂದಲೇ ಬಲಿತ ಮಾವಿನ ಹಣ್ಣಿಗೆ ಕಡು ಹಳದಿ ಮಿಶ್ರಿತ ಕಂದು ಬಣ್ಣ ಬಂದಿರುತ್ತದೆ. ಈ ಜೀವಸತ್ವದ ಪೂರೈಕೆಯಿಂದ ಚರ್ಮದ ಆರೋಗ್ಯ ಮತ್ತು ಕಾಂತಿ ಚೆನ್ನಾಗಿರುತ್ತದಲ್ಲದೆ, ಕಣ್ಣಿನ ದೃಷ್ಟಿಗೂ ಇದು ಅಗತ್ಯ. 'ಎ' ಜೀವಸತ್ವದ ಕೊರತೆಯಿಂದ ಕೇವಲ ಚರ್ಮದ ಆರೋಗ್ಯ ಮಾತ್ರವಲ್ಲದೆ, ದೇಹದ ಆರೋಗ್ಯವೂ ಕೆಡುವ ಸಂಭವವಿರುತ್ತದೆ. ಮಕ್ಕಳ ಆಹಾರದಲ್ಲಿ 'ಎ' ಜೀವಸತ್ವದ ಕೊರತೆಯಿದ್ದರೆ ಅದು ಅವರ ಬೆಳವಣಿಗೆಯ ಮೇಲೂ ಕೆಟ್ಟ ಪರಿಣಾಮ ಬೀರಿ, ಬೆಳವಣಿಗೆಯನ್ನು ಮಂದಗತಿಯಲ್ಲಿ ಸಾಗಿಸುತ್ತದೆ.

ಮಾವು ಮಲಬದ್ಧತೆಯನ್ನು ನಿವಾರಿಸು

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
142 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಸ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಕವಲು ದಾರಿ—ಕೆಂಪು ದೀಪ

ಅಭ್ಯರ್ಥಿಗಳಿಂದ ಪ್ರಮಾಣ ವಚನ ಸಾಧ್ಯವೆ?

ಚುನಾವಣೆ ಬಂದಿತೆಂದರೆ ನಾಯಕರ ಸಂಖ್ಯೆ ಬೆಳೆಯುತ್ತದೆ. ರಾಜ್ಯಕೀಯ ಚಟುವಟಿಕೆಗಳಿಗೆ ಹೊಸತೊಂದು ತಿರುವು ಬರುತ್ತದೆ.

ವಿವಿಧ ರಾಜ್ಯಕೀಯ ಪಕ್ಷಗಳೂ ಪಕ್ಷೇತರ ಅಭ್ಯರ್ಥಿಗಳೂ ನಾನಾತರದ ಭರವಸೆಗಳನ್ನು ಜನರಿಗೆ ನೀಡುತ್ತಾರೆ. ಚುನಾವಣೆ ಮುಗಿದ ಮೇಲೆ ಗೆದ್ದವರಾಗಲೀ ಸೋತವರಾಗಲೀ ಶ್ರೀ ಸಾಮಾನ್ಯನನ್ನು ನೆನೆಸಿ ಕೊಳ್ಳಬೇಕಾದರೆ ಮತ್ತೊಂದು ಚುನಾವಣೆ ಬರಬೇಕು.

ಭಾರತದ ಶ್ರೀ ಸಾಮಾನ್ಯರಲ್ಲಿ ಅಧಿಕ ಸಂಖ್ಯಾಕರು ನಿರಕ್ಷರರು. ಮತದ ಮೌಲ್ಯ ಮತ್ತು ಅದರ ಪರಿಣಾಮಗಳ ಬಗ್ಗೆ ಅನಭಿಜ್ಞರು. ವಿದೇಶೀ ಮಿಠಾಯಿಗಳು ನಾನಾ ತೆರದ ಆಸೆ–ಆಮಿಷಗಳನ್ನು ತೋರಿಸಿ ಮತಾಂತರಕ್ಕೆ ಪ್ರಯತ್ನಿಸುತ್ತಿದ್ದಂತೆ ರಾಜ್ಯಕೀಯ ನೇತಾರರು ವಿವಿಧ ಭರವಸೆಗಳನ್ನು ನೀಡಿ ಮತಗಿಟ್ಟಿಸಿ ಅನಂತರ ಮತದಾರರನ್ನು ಅವರ ಗೊಡವೆಗೇ ಬಿಟ್ಟು ಬಿಡುವುದು ಈ ಇಪ್ಪತ್ತು ವರ್ಷಗಳಲ್ಲಿ ಸರ್ವೇಸಾಮಾನ್ಯ. ಇದಕ್ಕೆ ಕೆಲವೊಂದು ಅಪವಾದವಿದ್ದರೂ ಅದು ಅಗಣ್ಯ.

ಆದುದರಿಂದಲೇ ಬೆಂಗಳೂರಿನ ಮತದಾರರೊಬ್ಬರು ಮತ ಬೇಡುವವನಿಂದ ಪ್ರಮಾಣ ಮಾಡಿಸ ಬೇಕೆಂದು ಬಯಸಿದ್ದಾರೆ. ಈ ಮತದಾರರ ಹೆಸರು ಶ್ರೀ ಡಿ. ಆರ್. ಕೃಷ್ಣಮೂರ್ತಿ. ಚುನಾವಣಾ ಪ್ರಣಾಳಿಕೆಯಂತೆಯೇ ಇದು ಮತದಾರರ ಪ್ರಣಾಳಿಕೆ.

ಒಂದು ಕನಿಷ್ಠ ಕಾರ್ಯಕ್ರಮಕ್ಕೆ ಅಭ್ಯರ್ಥಿಯು ಲಿಖಿತ ಒಪ್ಪಿಗೆ ನೀಡುವಂತೆ ಮಾಡುವುದು ಇದರ ಮುಖ್ಯ ಗುರಿ.

ಅಭ್ಯರ್ಥಿಯೊಂದು ಪ್ರಮಾಣ ಪತ್ರಕ್ಕೆ ಸಹಿ ಹಾಕ ಬೇಕು. ಈ ಪ್ರಮಾಣ ಪತ್ರದಲ್ಲಿ ಆತನು ತನ್ನ ಆದಾಯ, ಆದಾಯ ತೆರಿಗೆ, ಸ್ಥಿರ–ಚರ ಆಸ್ತಿಗಳ ವಿವರ–ಇದರಲ್ಲಿ ಮಗ, ಮಗಳು, ತಂದೆ, ತಾಯಿ, ಸೊಸೆ, ಅಣ್ಣ, ತಮ್ಮ, ಅಕ್ಕ, ತಂಗಿ ಹೀಗೆ ಎಲ್ಲರೂ ಸೇರುತ್ತಾರೆ,–ಬಾಂಗ್ಲಾ ನಿಧಿಗೆ ನೀಡಿದ ನೆರವಿನ ಮೊತ್ತ ಮೊದಲಾದುವುಗಳ ಉಲ್ಲೇಖವಿರಬೇಕು.

ಅಭ್ಯರ್ಥಿಯು ಓಟು ಪಡೆಯುವುದಕ್ಕೆ ಮೊದಲು ಕೆಲವೊಂದು ಸಂಗತಿಗಳಿಗೆ ತನ್ನ ಒಪ್ಪಿಗೆಯನ್ನು ಅನಿವಾರ್ಯವಾಗಿ ನೀಡಬೇಕು.

'ಬಡತನವನ್ನು ದೂರವೋಡಿಸಿ' ಎಂಬ ತತ್ತ್ವವನ್ನು "ಒಪ್ಪಿದ ಮೇಲೆ" ಮಾಸಿಕ ರೂ. ೫೦೦ಕ್ಕಿಂತ ಹೆಚ್ಚು ವೇತನ ಪಡೆಯುವ ಹಕ್ಕನ್ನು ಕಳೆದುಕೊಳ್ಳ ಬೇಕು. ಹೆಚ್ಚಿನ ಹಣ ಬಂದರೆ ಅದನ್ನು ನಿರಾಕರಿಸಬೇಕು. ಉಚಿತ ಪ್ರಯಾಣದ ಸೌಲಭ್ಯಗಳನ್ನು ಪಡೆಯಬಾರದು.

ಸಂಪುಟದ ಮಂತ್ರಿಗಳ ಸಂಖ್ಯೆ ಯಾವುದೇ ಸಂದರ್ಭದಲ್ಲಿ ಇಪ್ಪತ್ತನ್ನು ಮೀರಬಾರದು. ಮಂತ್ರಿಗಳ ವೇತನ, ಸಾರಿಗೆ, ಭತ್ತೆಯೆಲ್ಲ ಒಟ್ಟು ಸೇರಿ ಮಾಸಿಕ ಒಂದೂವರೆ ಸಾವಿರ ರೂಪಾಯಿಗಳಿಗೆ ಹೆಚ್ಚಬಾರದು.

ಇದಕ್ಕೆ ಅನುಗುಣವಾದ ಶಾಸನವನ್ನು ತರಲು ಬೆಂಬಲ ನೀಡಬೇಕು.

ಪಕ್ಷಾಂತರವನ್ನು ಮಾಡಬಾರದು. ಈ ಅಂಶಗಳನ್ನು ಉಲ್ಲಂಘಿಸಿದರೆ, ಅವನ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು.

ಶ್ರೀ ಕೃಷ್ಣಮೂರ್ತಿಯವರು ಯಾವುದೇ ರಾಜ್ಯಕೀಯ ಪಕ್ಷ ಸೇರಿದವರಲ್ಲ. ಅವರು ಅಭ್ಯರ್ಥಿಗಳು ಮತಯಾಚನೆಗೆ ಬಂದಾಗ, ಅವರು ರಾಜ್ಯಕೀಯ ಪಕ್ಷಕ್ಕೆ ಸೇರಿದವರಾಗಿರಲಿ, ಪಕ್ಷೇತರರೇ ಇರಲಿ, ಈ ರೀತಿಯ ವಾಗ್ದಾನ ಪಡೆದುಕೊಳ್ಳುವಂತೆ ಮತದಾರರಿಗೆ ವಿನಂತಿಸಿದ್ದಾರೆ.

ಇಂತಹ ಪ್ರಮಾಣಕ್ಕೆ ಶ್ರೀ ಕೃಷ್ಣಮೂರ್ತಿಯವರು ಬಲವಾದ ಕಾರಣಗಳನ್ನೂ ಕೊಟ್ಟಿದ್ದಾರೆ.

ದೇಶದಲ್ಲಿ ಹಲವು ರೀತಿಯ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಒಮ್ಮೆ ಚುನಾಯಿಸಿದ ಪ್ರತಿನಿಧಿಯನ್ನು ಹಿಂದೆ ಕರೆದುಕೊಳ್ಳುವ ಅವಕಾಶ ಮತದಾರರಿಗೆ ಇಲ್ಲ. 'ಸಾರ್ವಜನಿಕ ಜೀವನವೆಂದರೆ ಅಪ್ರಾಮಾಣಿಕತೆ' ಎಂಬ ತಪ್ಪು ಕಲ್ಪನೆ ಹರಡಿಬಿಟ್ಟಿದೆ. ರಾಜ್ಯಕೀಯದಲ್ಲಿ ಪ್ರಾಮಾಣಿಕತೆಗೆ ಅಡಕೆಯ ಬೆಲೆಯೂ ಉಳಿದಿಲ್ಲ.

ಶಾಸಕತನ ಮತ್ತು ಮಂತ್ರಿ ಪದಗಳ ಆಕರ್ಷಣೆ ಹದ ಮೀರಿದೆ. ಅವು ಸೇವಾಸ್ಥಾನಗಳೆಂಬ ಭಾವನೆ ಗಾಳಿಯಲ್ಲಿ ಹಾರಿ ಹೋಗಿ ವೈಭವ—ವಿಲಾಸಗಳ ಸಾಧನವೆಂಬ ಕಲ್ಪನೆ ಮೂಡಿದೆ.

ಸರಕಾರದ ವರಮಾನದ ಸಿಂಹಪಾಲು ಸಿಬ್ಬಂದಿಗೇ ವೆಚ್ಚವಾಗಿ ಶ್ರೀ ಸಾಮಾನ್ಯನ ಪ್ರಗತಿಗೆ ಹಣವೇ ದೊರೆಯುತ್ತಿಲ್ಲ. ಒಬ್ಬೊಬ್ಬ ಮಂತ್ರಿಯ ವೆಚ್ಚ ಪ್ರತಿ ತಿಂಗಳೂ ಇಪ್ಪತ್ತು ಸಾವಿರವನ್ನು ಮೀರುತ್ತಿದೆ. ತೆರಿಗೆಗಳ ವಸೂಲಿ ಸರಿಯಾಗಿ ನಡೆಯುತ್ತಿಲ್ಲ. ಶ್ರೀಮಂತರಿಗಿಂತ ಬಡವರ ಮೇಲೆಯೇ ಅಧಿಕ ತೆರಿಗೆಯ ಭಾರವಿದೆ. ಭಾರತದ ಶ್ರೀ ಸಾಮಾನ್ಯನ ಸರಾಸರಿ ಗಳಿಕೆ ದಿನಕ್ಕೆ ಎಪ್ಪತ್ತು ಪೈಸೆ. ಅಂದರೆ, ಬಡವರ, ದರಿದ್ರರ ಸಂಖ್ಯೆ ಎಷ್ಟು ಎಂಬುದು ಅನುಮಾನಿತ.

ರಾಜ್ಯಕೀಯದಲ್ಲಿ ಅಸ್ಥಿರತೆಯಿದೆ. ಒಂದಾಗಿದ್ದ ಕಾಂಗ್ರೆಸ್ಸು ತುಕುಡಿಗಳಾಯಿತು. ಬಹುಮಂದಿ ಒಂದೆಡೆಗೆ ಬಂದು ತಮ್ಮ ಪಾಳೆಯವನ್ನು ಬಲಗೊಳಿಸಿದಾಗ, ಇತರ ರಾಜ್ಯಕೀಯ ಪಕ್ಷಗಳೆಲ್ಲ ಅತ್ಯಂತ ದುರ್ಬಲವಾದಾಗ ಈ ಚುನಾವಣೆಗಳು ನಡೆಯುತ್ತಿವೆ. ಗರೀಬೀ ಹಟಾವೊ "ಇಂದಿರಾ ಗಾಳಿ" ಅಥವಾ 'ಪಾಕ್ ವಿಜಯ'ಗಳ ಘೋಷಣೆ ಮಾಡಿ ನಾನಾ ರೀತಿಯ ಆಶೆ ಆಮಿಷಗಳ ಮದೋದಕವನ್ನು ಮತದಾರರಿಗೆ ಕುಡಿಸಿ ಮತಗಳಿಸುವ ಪ್ರಯತ್ನ ನಡೆಯುತ್ತಿದೆ.

ಆದುದರಿಂದ ಮತದಾರರು ಅಭ್ಯರ್ಥಿಯಿಂದ—ಅವರು ಯಾರೇ ಆಗಿರಲಿ–ಈ ಮೇಲಿನಂತೆ ವಚನ ತೆಗೆದುಕೊಂಡು ತಮ್ಮ ಮತವನ್ನು ಚಲಾಯಿಸಬೇಕು ಇಲ್ಲವಾದರೆ, ಹಿಂದಿನಂತೆಯೇ ಮತದಾರರನ್ನು ಗೆದ್ದ ಮೇಲೆ ಮರೆತು ಬಿಡುವ ಶಾಸಕರು ತಮ್ಮ ಸ್ವಾರ್ಥ ಸಾಧನೆಯಲ್ಲಿ ತೊಡಗುತ್ತಾರೆ.

ಶ್ರೀ ಕೃಷ್ಣ ಮೂರ್ತಿಯವರ ವಿಚಾರಧಾರೆಯಲ್ಲಿ ತಿರುಳಿದೆ. ಆದರೆ, ಈ ಬಗೆಯ ಪ್ರಮಾಣ ಪತ್ರಕ್ಕೆ ಸಹಿ ಹಾಕಿ ತಮ್ಮ ಕಾಲುಗಳ ಮೇಲೆ ಕೊಡಲಿ ಹಾಕಿಕೊಳ್ಳಲು ಅದೆಷ್ಟು ಅಭ್ಯರ್ಥಿಗಳು (ಗೆಲ್ಲುವ ಆಶಯವಿದ್ದವರು) ಸಿದ್ಧರು?

ಚುನಾವಣಾ ಶಾಸನದಲ್ಲಿಯೇ ಈ ಅಂಶಗಳನ್ನು ಸೇರಿಸುವುದು ಸಾಧ್ಯವಾದರೆ ಸಮಂಜಸವಾದೀತೋ ಏನೋ!

●●

ಮಾವು - ಹಣ್ಣುಗಳ ರಾಜ

ಲೇಖಕರು: ಶ್ರೀ ಬಿ. ವಿ. ನಾಯಕ್

"ಹಣ್ಣುಗಳ ರಾಜ" ಎಂದು ಪ್ರಖ್ಯಾತಗೊಂಡಿರುವ ಮಾವು, ಏಶ್ಯಾದ ದಕ್ಷಿಣ-ಪೂರ್ವ ಭಾಗಗಳಲ್ಲಿ ಕಂಡು ಬರುತ್ತದೆ. ಭಾರತದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಮಾವನ್ನು ಬೆಳೆಸುತ್ತಿದ್ದಾರೆ. ಯಾವಾಗಲೂ ಹಸುರು ಬಣ್ಣದಿಂದ ಕಂಗೊಳಿಸುವ ಮಾವಿನ ಮರಗಳು ಭಾರತದ ಕೃಷಿ ಭೂಮಿಯಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿವೆ.

ನಮ್ಮ ದೇಶದಲ್ಲಿ ನೂರಾರು ಮಾವತ್ತಕ್ಕಿಂತಲೂ ಹೆಚ್ಚು ಜಾತಿಯ ಮಾವಿನ ಮರಗಳನ್ನು ಕಾಣಬಹುದು. ಲಾಂಗ್ರಾ, ಮಲ್ ಗೋವಾ, ಪೈರಿ, ರಸಪೂರಿ, ಅಲ್ಫೋನ್ಸೊ- ಇವು ಹೆಚ್ಚು ಜನಪ್ರಿಯತೆ ಗಳಿಸಿರುವ ವಿವಿಧ ಜಾತಿಯ ಮಾವುಗಳು. ಮಧುರವಾದ, ಸಿಹಿಯಾದ ರುಚಿಯುಳ್ಳ ರಸಭರಿತ ಹಣ್ಣುಗಳಲ್ಲಿ ಮಾವು ಮೊದಲನೆಯದಾಗಿದೆ. ಭಾರತದಿಂದ ಪ್ರತಿವರ್ಷವೂ ಮಾವನ್ನು ದೊಡ್ಡ ಪ್ರಮಾಣದಲ್ಲಿ ಪರದೇಶಗಳಿಗೆ ಕಳುಹಿಸುತ್ತಾರೆ.

100 ಗ್ರಾಂ ತೂಕದ ಬಲಿತ ಅಲ್‌ಫೊನ್ಸೊ ಮಾವು ಕೆಳಗಿನ ಪೋಷಕಾಂಶಗಳನ್ನು ಒಳಗೊಂಡಿದೆ.

ನೀರು	81.6 ಗ್ರಾಂ
ಪ್ರೋಟಿನ್	0.9 ಗ್ರಾಂ
ಕೊಬ್ಬು	0.4 ಗ್ರಾಂ
ಕಾರ್ಬೋಹೈಡ್ರೇಟ್	16.3 ಗ್ರಾಂ
ಕೆಲ್ಸಿಯಂ	40 0 ಮಿ. ಗ್ರಾಂ.
ರಂಜಕ	16.0 ಮಿ. ಗ್ರಾಂ.
ಕಬ್ಬಿಣ	1.6 ಮಿ. ಗ್ರಾಂ.
ಪೊಟೆಸಿಯಂ	200.0 ಮಿ. ಗ್ರಾಂ.
ಸೋಡಿಯಂ	9.0 ಮಿ. ಗ್ರಾಂ.
ವಿಟಾಮಿನ್ 'A'	20,000 ಐ. ಯು.
ವಿಟಾಮಿನ್ B1	0.08 ಮಿ. ಗ್ರಾಂ.
ವಿಟಾಮಿನ್ B2	0.09 ಮಿ. ಗ್ರಾಂ.
ನಿಯಾಸಿನ್	4.1 ಮಿ. ಗ್ರಾಂ.
ವಿಟಾಮಿನ್ C	125.0 ಮಿ. ಗ್ರಾಂ.
ಕ್ಯಾಲೋರಿಗಳು	50

ಈ ಪೋಷಕಾಂಶಗಳ ಪ್ರಮಾಣ ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಬೇರೆಯಾಗಿರುತ್ತದೆ.

'ಎ' ಜೀವಸತ್ವ ಹೆಚ್ಚಾಗಿರುವ ಹಣ್ಣುಗಳಲ್ಲಿ ಮಾವು ಮುಖ್ಯವಾಗಿದೆ. 'ಎ' ಜೀವಸತ್ವದಲ್ಲಿ ವಿಪುಲವಾಗಿರು 'ಕಾವರೋಟಿನ್' ಎಂಬ ಪದಾರ್ಥದಿಂದಲೇ ಬಲಿತ ಮಾವಿನ ಹಣ್ಣಿಗೆ ಕಡು ಹಳದಿ ಮಿಶ್ರಿತ ಕಂದು ಬಣ್ಣ ಬಂದಿರುತ್ತದೆ. ಈ ಜೀವಸತ್ವದ ಪೂರೈಕೆಯಿಂದ ಚರ್ಮದ ಆರೋಗ್ಯ ಮತ್ತು ಕಾಂತಿ ಚೆನ್ನಾಗಿರುತ್ತದಲ್ಲದೆ, ಕಣ್ಣಿನ ದೃಷ್ಟಿಗೂ ಇದು ಅಗತ್ಯ. 'ಎ' ಜೀವಸತ್ವದ ಕೊರತೆಯಿಂದ ಕೇವಲ ಚರ್ಮದ ಆರೋಗ್ಯ ಮಾತ್ರವಲ್ಲದೆ, ದೇಹದ ಆರೋಗ್ಯವೂ ಕೆಡುವ ಸಂಭವವಿರುತ್ತದೆ. ಮಕ್ಕಳ ಆಹಾರದಲ್ಲಿ 'ಎ' ಜೀವಸತ್ವದ ಕೊರತೆಯಿದ್ದರೆ ಅದು ಅವರ ಬೆಳವಣಿಗೆಯ ಮೇಲೂ ಕೆಟ್ಟ ಪರಿಣಾಮ ಬೀರಿ, ಬೆಳವಣಿಗೆಯನ್ನು ಮಂದಗತಿಯಲ್ಲಿ ಸಾಗಿಸುತ್ತದೆ.

ಮಾವು ಮಲಬದ್ಧತೆಯನ್ನು ನಿವಾರಿಸು

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
142 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ **ಬೆಳೆಸಿರಿ.**

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು–1.**

ಎನ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಕರ್ನಾಟಕದಲ್ಲಿ—

ಕಾಂಗ್ರೆಸ್ ತುಕಡಿಗಳ ನಡುವೆ

ವೀರ ಸ್ಪರ್ಧೆ

ಕರ್ನಾಟಕದ ಚುನಾವಣೆಗಳಲ್ಲಿ ತೀವ್ರ ಸ್ಪೈಪೋಟಿ ಇಂಡಿಕೇಟ್ ಮತ್ತು ಸಿಂಡಿಕೇಟ್‌ಗಳ ನಡುವೆ. ಕೆಲವೆಡೆ ಇಂಡಿಕೇಟ್–ಜನಸಂಘ ಅಥವಾ ಪಕ್ಷೇತರರ ನಡುವೆ ತೀವ್ರ ಸ್ಪರ್ಧೆಯಿರಬಹುದು.

ಒಂದು ವರ್ಷದ ಮೊದಲಿನವರೆಗೆ ಬಂಡೆಕಲ್ಲಿನಂತೆ ಸ್ಥಿರವಾಗಿದ್ದ, 'ಇಂದಿರಾಗಾಳಿ'ಯಿಂದಾಗಿ ಆಕಸ್ಮಿಕವಾಗಿ ಉರುಳಿಹೋದ ತಮ್ಮ ಅಧಿಕಾರವನ್ನು ಮರಳಿ ಪಡೆಯಬೇಕೆಂಬುದು ಸಿಂಡಿಕೇಟಿನ ಆಶಯ.

ಕಳೆದ ವರ್ಷ ವಿರೋಧಿ ಪಕ್ಷಗಳನ್ನು ತರಗೆಲೆಯಂತೆ ಹಾರಿಸಿದ ಅಪಾರ ಕೀರ್ತಿಯನ್ನು ಉಳಿಸಿಕೊಳ್ಳಬೇಕೆಂದು ಇಂಡಿಕೇಟಿನ ಪಟ್ಟು.

ಇಬ್ಬರೂ ಸರಿಯೇ. ಆದುದರಿಂದಲೇ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರೂ ಮಾಜಿ ಮಂತ್ರಿ ರಾಮಕೃಷ್ಣ ಹೆಗ್ಗಡೆಯವರೂ ಚುನಾವಣಾ ಪ್ರಚಾರಕ್ಕಾಗಿ ರಾಜ್ಯ ತುಂಬ ತಿರುಗಾಡುತ್ತಿದ್ದಾರೆ; ಇವರು ಅಭ್ಯರ್ಥಿಸೇನೆಯಲ್ಲಿ ಸೇರಿಲ್ಲ.

ದೇವರಾಜ ಅರಸರೂ ಕಡಿಮೆಯಲ್ಲ. ಹಲವು ಮತದಾರರ ಮನಸ್ಸೋಯಿಸಿಯೇ ಅವರು ಪೂರ್ಣಾವಧಿಯ ಪ್ರಚಾರಕ್ಕೆ ಇಳಿದಿದ್ದಾರೆ. ಭಾರತ ಮಟ್ಟದ ಚುನಾವಣಾ ಪ್ರಣಾಳಿಕೆಗೆ ತಮ್ಮ ಪೂರಕ ಆಶ್ವಾಸನೆಗಳನ್ನೂ ಸೇರಿಸಿಕೊಂಡಿದ್ದಾರೆ.

ರಾಜ್ಯದ ನೆಲ—ಜಲ ವಿವಾದದ ಬಗ್ಗೆ ಕಳೆದ ವರ್ಷ ಸಿಂಡಿಕೇಟು ಭಾರೀ ಹೇಳಿಕೊಂಡಿತ್ತು. ಈ ವರ್ಷವೂ ಹೇಳಿಕೊಳ್ಳುತ್ತದೆ. ಈ ಬಾರಿ ರಾಜ್ಯ ಸಮಸ್ಯೆಗಳೇ ಪ್ರಮುಖ ಪಾತ್ರ ವಹಿಸಲಿರುವುದರಿಂದ ಅವುಗಳ ಬಗ್ಗೆ ಪೂರಕ ಭರವಸೆ ನೀಡುವುದು ಇಂಡಿಕೇಟಿಗೆ ಅಗತ್ಯವಾಯ್ತು.

ನೆಲದ ವಿಷಯದಲ್ಲಿ ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆ ಕಾರ್ಯಗತಗೊಳಿಸುವ ಆಶ್ವಾಸನೆಯನ್ನು ಇಂಡಿಕೇಟು ನೀಡಿದೆ. ಸಿಂಡಿಕೇಟು ಎಂದಿನಿಂದಲೂ ಇದನ್ನೇ ಹೇಳಿಕೊಂಡು ಬಂದಿದೆ.

ಮರಾಠರ ನೆಲದಾಹವನ್ನು ಅರಿತೂ ಅರಿತೂ ಇಂಡಿಕೇಟು ಈ ಬಗ್ಗೆ ಸ್ಪಷ್ಟ ಭರವಸೆ ನೀಡಿದ್ದು ವಿಲಕ್ಷಣ. ಮಹಾಜನವರದಿ ತಿಪ್ಪೆಗೆ ಸೇರಿದಂತೆಯೆಂಬುದು ಎಲ್ಲರಿಗೂ ಗೊತ್ತು. ಯಥಾಸ್ಥಿತಿಯಾದರೂ ಉಳಿಯಲಿ ಎಂಬುದು ಕನ್ನಡಿಗರ ಇಚ್ಛೆ.

ಜಲ ವಿವಾದವನ್ನು ಸರ್ವಸಮ್ಮತವಾಗಿ ಬಗೆ ಹರಿಸುವ ಇರಾದೆ ಇಂಡಿಕೇಟಿನದ್ದು. ಇದು ಹೇಗೆ ಸಾಧ್ಯವೆಂಬುದು ದೇವ ರಾಜ ಅರಸರಿಗೇ ಗೊತ್ತು. ರಾಜ್ಯಕ್ಕೆ ಕಾವೇರೀ ನೀರಿನಲ್ಲಿ ನ್ಯಾಯವಾದ ಪಾಲು ಬೇಕೆಂಬುದು ಸಿಂಡಿಕೇಟಿನ ಹಳೆಯ ನೀತಿ.

ಎರಡೂ ತುಕುಡಿಗಳು ತಂತಮ್ಮ ಪಕ್ಷಗಳ ಪ್ರಮುಖರನ್ನು ಪ್ರಚಾರಕಾರ್ಯಕ್ಕೆ ಕರೆದುಕೊಳ್ಳತೊಡಗಿವೆ. ಈ ಪ್ರಮುಖರಲ್ಲಿ ಇಬ್ಬಗೆ. ಇಂಡಿಕೇಟಿಗರು ಹಾಲಿಗಳು, ಸಿಂಡಿಕೇಟಿಗರು ಮಾಜಿಗಳು.

ಮಾಜಿ ಉಪ ಪ್ರಧಾನಿ ಮುರಾರ್ಜಿ ದೇಸಾಯಿಯವರು ಉತ್ತರ ಕರ್ನಾಟಕದ ಸಂಚಾರ ಮಾಡಿ ಹೋದರು. ಶ್ರೀಮತಿ ಗಾಂಧಿಯವರಿಂದ ಅಪಮಾನಿತರಾಗಿದ್ದ ಶ್ರೀ ದೇಸಾಯಿಯವರು ರಾಜ್ಯದ ರಾಜ್ಯಕೀಯವನ್ನು ವಿವರಿಸಿದರು.

ಒಕ್ಕಲಿಗರನ್ನು ಲಿಂಗಾಯತರ ವಿರುದ್ಧ ಮತ್ತು ಅಲ್ಪ ಸಂಖ್ಯಾಕರನ್ನು ಬಹು ಸಂಖ್ಯಾಕರ ವಿರುದ್ಧ ಇಂಡಿಕೇಟು ಎತ್ತಿ ಕಟ್ಟಿದೆಯೆಂದು ಆರೋಪಿಸಿದರು. 'ಇಂಡಿಕೇಟು ಶ್ರೀಮತಿ ಗಾಂಧಿಯವರ ಕೈಗೊಂಬೆಯಂತೆ ವರ್ತಿಸುತ್ತದೆ. ಮಂತ್ರಿ ಮಾಡುವುದೂ ತೆಗೆಯುವುದೂ ಶ್ರೀಮತಿ ಗಾಂಧಿಯವರ ಲೀಲೆ. ಆಕೆಯ ಸರ್ವಾಧಿಕಾರದಿಂದ ಹಿರಿಯ ನಾಯಕರೂ ಸಚಿವರೂ ಮುಖಭಂಗಿತರಾಗಿದ್ದಾರೆ'— ಇದು ಶ್ರೀ ದೇಸಾಯಿಯವರ ಸ್ವಂತ ಅನುಭವ.

ಪ್ರಜಾಪ್ರಭುತ್ವ ಮತ್ತು ಅಹಿಂಸೆಯಲ್ಲಿ ಸ್ವಲ್ಪವೂ ನಂಬಿಕೆಯಿಲ್ಲದ ಕಮ್ಯೂನಿಸ್ಟರೊಡನೆ ಇಂಡಿಕೇಟಿನ ಸ್ನೇಹ ದೇಶಕ್ಕೆ ಅಪಾಯಕಾರಿ ಎಂದು ಸಾರಿ ತನ್ನ ಪಕ್ಷ ಪ್ರಜಾಪ್ರಭುತ್ವವನ್ನು ಉಳಿಸಲು ನಾಗರಿಕರ ಹಿತಾಸಕ್ತಿಗಳನ್ನು ಸಂರಕ್ಷಿಸಲು ಹೋರಾಡುವುದೆಂದು ಆಶ್ವಾಸನೆ ನೀಡಿದರು.

ಗರೀಬೀ ಹಟಾವೊ ಎಂದು ಕೂಗಿದ ಮಾತ್ರಕ್ಕೆ ಬಡತನ ನೀಗದು, ಶಿಸ್ತುಗೇಡಿಗಳಿಂದ ಪರಿಶುದ್ಧ ಆಡಳಿತ ದೊರೆಯದು, ಎಂದು ದೃಢವಾಗಿ ಅವರು ಸಾರಿದರು.

"ಪ್ರಗತಿ ವಿರೋಧಿ ಎಂದು ಶ್ರೀಮತಿ ಗಾಂಧಿಯವರು ಆರೋಪಿಸುವಾಗ, ನಾನು ಮುಂಬಯಿಯ ಮಂತ್ರಿಯಾಗಿದ್ದಾಗ ಭೂ ಸುಧಾರಣಾ ಶಾಸನ, ಹರಿಜನ ಶಾಸನ, ಮೊದಲಾದ ಪ್ರಗತಿಪರ ಶಾಸನಗಳನ್ನು ತಂದಿದ್ದೆನೆಂಬುದನ್ನವರು ಮರೆಯುತ್ತಾರೆ" ಎಂದು ತಾನೂ ಪ್ರಗತಿಪರನೆಂದು ಹೇಳಿಕೊಂಡರು.

ಶ್ರೀ ದೇಸಾಯಿಯವರ ಹಿಂದೆ ಅವರ ಪ್ರಬಲ ವಿರೋಧಿ ಪ್ರಧಾನಿ ಶ್ರೀಮತಿ ಗಾಂಧಿಯವರು ರಾಜ್ಯ ಸಂಚಾರವನ್ನು ಮಿಂಚಿನಂತೆ ಮಾಡಿದರು. ಉತ್ತರ ಕರ್ನಾಟಕದಿಂದ ಆರಂಭವಾದ ಇವರ ಪ್ರಚಾರ ಸಭೆಗಳು ಮಲೆನಾಡು—ಕರಾವಳಿ ಮೂರ್ಗವಾಗಿ ಬಯಲು ಸೀಮೆಯತ್ತ ಸರಿದುವು. (ಉಡುಪಿಯಲ್ಲಿ ಶ್ರೀಮತಿ ಗಾಂಧಿಯವರು ಮಾಡಿದ ಭಾಷಣದ ಸಾರವನ್ನು ಇದೇ ಸಂಚಿಕೆಯ ಬೇರೆ ಪುಟದಲ್ಲಿ ನೀಡಲಾಗಿದೆ.)

ಎಲ್ಲರಿಗೆ ಮೊದಲು ಜನಸಂಘದ ಅಧ್ಯಕ್ಷ ಶ್ರೀ ಅಟಲ ಬಿಹಾರಿ ವಾಜಪೇಯಿಯವರು ಪ್ರಚಾರಕ್ಕಾಗಿಬಂದಿದ್ದರು. ಇದೀಗ ಸಿಂಡಿಕೇಟಿನ ಅಧ್ಯಕ್ಷ ಸಾದಿಕ್ ಅಲಿ, ಅಗ್ರನಾಯಕ ಕಾಮರಾಜ್ ಮತ್ತು ಶ್ರೀಮತಿ ಸುಚೇತಾ ಕೃಪಲಾನಿಯವರೂ ಬರಲಿದ್ದಾರೆ. ಇಂಡಿಕೇಟಿನ ಪತಿಯಿಂದ ಕೇಂದ್ರ ಮಂತ್ರಿ ಮಾಗಧರ ಪಡೆ ನಿಂಧ್ಯೋಲ್ಲಂಘನ ಮಾಡಲಿದೆ.

ಇವೆಲ್ಲರ ನಡುವೆ ದೇವರಾಜ ಅರಸರೂ ವೀರೇಂದ್ರ ಪಾಟೀಲರೂ ತಂತಮ್ಮ ಕರ್ತವ್ಯ ನಿರತರಾಗಿದ್ದಾರೆ. ರಾಜ್ಯದಲ್ಲಿ ಸುಭದ್ರ ಸರಕಾರವಿರಬೇಕೆಂದು ಇವರಿಬ್ಬರೂ ಒಪ್ಪುತ್ತಾರೆ, ಆದು ತಂತಮ್ಮ ಪಕ್ಷದ್ದೇ ಆಗಿರಬೇಕೆಂಬುದು ಅವರವರ ಇರಾದೆ.

ಕೇಂದ್ರದಲ್ಲಿ ಇಂಡಿಕೇಟ್ ಸರಕಾರವಿರುವಾಗ, ಅದರೊಡನೆ ಸಂಪೂರ್ಣ ಹೊಂದಿಕೊಂಡು ಹೋಗಬಲ್ಲ ಪ್ರಗತಿಪರವಾದ ಸರಕಾರ ರಾಜ್ಯದಲ್ಲಿ ಬೇಕು – ಇಂತಹ ಸರಕಾರ ರಚಿಸುವುದು ಇಂಡಿಕೇಟಿಗೆ ಮಾತ್ರ ಸಾಧ್ಯ—ಇದು ದೇವರಾಜರ ಅಭಿಪ್ರಾಯ.

ಕಳೆದ ಮಾರ್ಚ್ ಮಧ್ಯದವರೆಗೆ ರಾಜ್ಯದಲ್ಲಿ ಸಿಂಡಿಕೇಟ್ ಸರಕಾರವಿತ್ತು. ಅದು ರಾಜ್ಯದಲ್ಲಿ ಸುಭದ್ರವೂ ಆಗಿತ್ತು. ಅದನ್ನು ಉರುಳಿಸಿದವರು ಇಂಡಿಕೇಟಿಗರು—ಇದು ವೀರೇಂದ್ರರ ಆರೋಪ.

ಆ ಸರಕಾರ ಕೇಂದ್ರದೊಡನೆ ಪೂರ್ಣ ಮನಸ್ಸಿನಿಂದ ಸಹಕರಿಸಿತ್ತು; ಅದರೊಡನೆ ಜಗಳಕಾದದ್ದುಂಟೆ?–ಎಂದು ಪ್ರಶ್ನಿಸುತ್ತಾರೆ ಪಾಟೀಲರು.

ಆ ಸರಕಾರ ಒಂದಲ್ಲ ನೂರು ಪ್ರಗತಿಪರ ಶಾಸನಗಳನ್ನು ತಂದದ್ದಿಲ್ಲವೆ? ತನ್ನ ವಿರೋಧಿಗಳಿಂದಲೂ 'ಪ್ರಗತಿಪರ'ವೆಂಬ ಪ್ರಶಂಸೆಯನ್ನು ಅದು ಪಡೆದದ್ದಿಲ್ಲವೆ?— ಎನ್ನುವ ಸವಾಲು ಹಾಕುತ್ತಾರೆ ಅವರು.

ಸಮರ್ಥ, ದಕ್ಷ, ಪ್ರಾಮಾಣಿಕ, ಸೇವಾಕಾಂಕ್ಷಿ, ಪ್ರಗತಿಪರ, ಸಮಾಜವಾದಿ—ಹೀಗೆ ಒಂದಲ್ಲ ಹಲವು ವಿಶೇಷಣಗಳಿಗೆ ಅರ್ಹವಾದ ಸಿಂಡಿಕೇಟ್ ಸರಕಾರವನ್ನು ಮತ್ತೆ ಅಧಿಕಾರಕ್ಕೆ ತರಬೇಕು. ಎಂದು ಕಳಕಳಿಯಿಂದವರು ಮತದಾರರನ್ನು ವಿನಂತಿಸುತ್ತಾರೆ.

ಪಕ್ಷದ ಚುನಾವಣಾ ಘೋಷಣೆಯನ್ನು ಕಾರ್ಯರೂಪಕ್ಕೆ ತರುವುದಾಗಿ ಭರವಸೆ ನೀಡುತ್ತಾರೆ.

ಅವರವರ ದಾರಿಯಲ್ಲಿ ಅವರವರು ನಡೆಯುತ್ತಾರೆ. ಮತದಾರರು ಅವರು ನಡೆದ, ನಡೆಯುತ್ತಿರುವ, ನಡೆಯಬಹುದಾದ ದಾರಿಯನ್ನು ಒರೆಗೆ ಹಚ್ಚಿ ಮತದಾನ ಮಾಡಬೇಕಷ್ಟೆ.

ತ್ತದೆ. ಶುದ್ಧ ಮಾವಿನ ಹಣ್ಣಿನ ರಸವನ್ನು ಮೂತ್ರಕೋಶಗಳ ಬಾಧೆಯಿಂದ ನರಳುವವರಿಗೂ, ಎನಾಮಿಯ ಉಳ್ಳವರಿಗೂ ಕೊಡುವುದು ಉತ್ತಮ. ಅಲ್ಲದೆ ಮಾವಿನಲ್ಲಿ ಫ್ರುಕ್ಟೋಸ್, ಗ್ಲೂಕೋಸ್, ಮೆಲಿಟೋಸ್, ಪೆಂಟೋಸ್ ಮುಂತಾದ ಹಣ್ಣು ಸಕ್ಕರೆಗಳಿರುವುದರಿಂದ(Fruit Sugars) ಬೆಳೆಯುವ ಮಕ್ಕಳಿಗೆ ಉತ್ತಮ ಶಕ್ತಿಯನ್ನು ಒದಗಿಸುತ್ತದೆ.

ಮಾವಿನ ಹಣ್ಣಿನ ರಸವನ್ನು ಹಾಲು ಮತ್ತು ಜೇನುತುಪ್ಪಗಳೊಡನೆ ಸೇರಿಸಿ ಕುಡಿಯುವುದು ಉತ್ತಮ. ಈ ಹಣ್ಣಿನಿಂದ ಐಸ್ ಕ್ರೀಮ್, ಸಲಡ್, ರಸಾಯನ ಮೊದಲಾದವುಗಳನ್ನು ತಯಾರಿಸಬಹುದು.

ಮಾವಿನ ಮಿಡಿಯೂ ಅನೇಕ ಜೀವಸತ್ವಗಳನ್ನು, ಲವಣಾಂಶಗಳನ್ನು ಒಳಗೊಂಡಿದೆ. ಅಲ್ಲದೆ ಇದರಲ್ಲಿ ಕೆಲವು ಆಮ್ಲಗಳು ಮತ್ತು ಪೆಕ್ಟಿನ್ ಎಂಬ ಪದಾರ್ಥವೂ ಇದೆ. ಇದರಿಂದ ಉಪ್ಪಿನಕಾಯಿ ಮೊದಲಾದ ಅನೇಕ ಬಗೆಯ ವಸ್ತುಗಳನ್ನು ತಯಾರಿಸಿ ಹಲವು ತಿಂಗಳವರೆಗೆ ಕೆಡದಂತೆ ಇಡಬಹುದು.

ಹೀಗೆ ಮಾವು ಹಲವು ದೇಹ ಪೋಷಕಾಂಶಗಳ ಭಂಡಾರವಾಗಿರುವುದರಿಂದ ಮತ್ತು ಮಧುರವಾದ ರುಚಿಯುಳ್ಳದ್ದರಿಂದ ಹೆಚ್ಚು ಜನಪ್ರಿಯತೆ ಗಳಿಸಿದೆ.

(ಆಧಾರಿತ)

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟರ್‌ಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ಚುನಾವಣಾ ವೇಳೆ ಹೇಗೆ ನಡೆದು ಕೊಳ್ಳಬೇಕು

ಚುನಾವಣೆಯೆಂದೊಡನೆ ಬೇಕಾಗಿಯಾದರೂ ಬೇಡವಾಗಿಯಾದರೂ ಅನಪೇಕ್ಷಿತ ಘಟನೆಗಳು ನಡೆಯುವುದು ಅಸಂಭವವಲ್ಲ. ವಿವಿಧ ಭಾಷೆ-ಜಾತಿಗಳ ತವರೂರಾದ ಭಾರತದಲ್ಲಿ ಈ ಸಂಬಂಧದ ಗಲಭೆಗಳಿಗೆ ಚುನಾವಣೆಗಳು ಅವಕಾಶ ಕೊಡಬಾರದು. ಮುಕ್ತ ಮತ್ತು ನಿರ್ಭೀತಿಕ ಮತದಾನ ನಡೆದರೆ ಮಾತ್ರ ಅದು ನಿಜವಾದ ಚುನಾವಣೆಯೆನಿಸುವುದು. ಆದುದರಿಂದ ಚುನಾವಣೆಯ ವೇಳೆ ಹೇಗೆ ನಡೆದು ಕೊಳ್ಳಬೇಕೆಂದು ಸಂಹಿತೆಯೊಂದಿದ್ದು, ಇದನ್ನು ಅಭ್ಯರ್ಥಿಗಳೂ ರಾಜಕೀಯ ಪಕ್ಷಗಳೂ ಪ್ರಚಾರಕರೂ ನಾಗರಿಕರೂ ಕಟ್ಟುನಿಟ್ಟಿನಿಂದ ಅನುಸರಿಸಬೇಕು. ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯೆನಿಸಿದ ನಮ್ಮ ಭಾರತದಲ್ಲಿ ನಿಷ್ಪಕ್ಷಪಾತ ಚುನಾವಣೆಗಳು ನಡೆಯುವಂತೆ ಎಚ್ಚರಿಕೆ ವಹಿಸಬೇಕು.

ಬೇರೆ ಬೇರೆ ಮತ-ಭಾಷೆ, ಸಮಾಜ-ಜಾತಿಗಳ ನಡುವೆ ವಿವಾದ ಹುಟ್ಟಿಸುವ ಅಥವಾ ಅವುಗಳಲ್ಲಿ ವಿರಸ-ದ್ವೇಷವುಂಟು ಮಾಡುವ ಯಾವುದೇ ರೀತಿಯ ಚಟುವಟಿಕೆಗಳಿಗೆ ಅಸ್ಪದ ನೀಡಬಾರದು

ರಾಜ್ಯಕೀಯ ಪಕ್ಷಗಳ ಮೇಲಿನ ಟೀಕೆಗಳು ಪಕ್ಷಗಳ ಕಾರ್ಯನೀತಿ, ಕಾರ್ಯಕ್ರಮ, ಪೂರ್ವದಾಖಲೆ, ಚುನಾವಣಾ ಘೋಷಣೆಗಳಿಗೆ ಮಾತ್ರ ಪರಿಮಿತವಾಗಿರಬೇಕು. ಪಕ್ಷಗಳ ನಾಯಕರ ಅಥವಾ ಕಾರ್ಯಕರ್ತರ ವ್ಯಕ್ತಿಗತ ಟೀಕೆ ಸಲ್ಲದು. ನಿರಾಧಾರವಾದ ಆಪಾದನೆಗಳನ್ನು ಮತ್ತು ವಿಪರ್ಯಸ್ತ ಸಂಗತಿಗಳನ್ನು ಪಕ್ಷ-ನಾಯಕ-ಕಾರ್ಯಕರ್ತ- ಅಭ್ಯರ್ಥಿಗಳನ್ನು ಟೀಕಿಸುವಾಗ ಬಳಸಿಕೊಳ್ಳಬಾರದು.

ರಾಜ್ಯಕೀಯ ಪಕ್ಷಗಳೂ ಅಭ್ಯರ್ಥಿಗಳೂ ತಮ್ಮದಲ್ಲದ ಚುನಾವಣಾ ಸಭೆ—ಪ್ರಚಾರ—ಮೆರವಣಿಗೆ ಮೊದಲಾದುವುಗಳು ನಡೆಯದಂತೆ ಭಂಗ ತಂದೊಡ್ಡಬಾರದು. ಅಂತಹ ಸಭೆಗಳಲ್ಲಿ ಗೊಂದಲಗಳನ್ನುಂಟುಮಾಡಬಾರದು. ಒಂದು ಸಭೆ ನಡೆದಿರುವಲ್ಲಿಯೇ ತಮ್ಮ ಸಭೆಯನ್ನು ನಡೆಸಬಾರದು, ಮೆರವಣಿಗೆ ತರಬಾರದು.

ಪೋಲೀಸ್ ವಿಭಾಗದ ಯಾವುದೇ ವ್ಯಕ್ತಿಯ ವಿರುದ್ಧ ಯಾವುದೇ ದೂರು ಇದ್ದರೂ ಅದನ್ನು ಸಂಬಂಧಿತ ಐ ಜಿ ಪಿಯವರಿಗೆ ತಿಳಿಸಬೇಕು ಅಲ್ಲಿಂದ ತೆಗೆದುಕೊಂಡ ಕ್ರಮಗಳಿಂದ ತೃಪ್ತಿಯಾಗದೆ ಹೋದರೆ ಅಂತಹ ಪ್ರಸಂಗಗಳನ್ನು ಸಾರ್ವಜನಿಕರ ಎದುರಿಗೆ ತರಬಹುದು.

ಸರಕಾರಿ ಅಧಿಕಾರಿಗಳು ಕಾನೂನು—ವ್ಯವಸ್ಥೆಯನ್ನು ಪಾಲಿಸಲು ಕ್ರಮಗಳನ್ನು ಕೈಕೊಳ್ಳುವರು. ಆದರೆ, ಆಗ ನಾಗರಿಕರ ಸ್ವಾತಂತ್ರ್ಯದ ಮೇಲೆ ಅನಾವಶ್ಯಕ ನಿರ್ಬಂಧ ಹೇರುವುದು ಉಚಿತವಲ್ಲ. ಚುನಾವಣಾ ಪ್ರಚಾರ ಸಭೆಗಳು ತೃಪ್ತಿಕರವಾಗಿ ನಡೆಯುತ್ತಿರುವಾಗ ಅವುಗಳ ನಡುವೆ ಹಸ್ತಕ್ಷೇಪ ನಡೆಸುವುದು ಸರಿಯಲ್ಲ.

ಚುನಾವಣಾ ಪ್ರಚಾರಕ್ಕೆ ಸರಕಾರಿ ವಾಹನಗಳ ಬಳಕೆಯಾಗದಂತೆ ಆಡಳಿತವು ಎಚ್ಚರದಿಂದಿರಬೇಕು.

ಮತ ಗಳಿಸುವುದಕ್ಕಾಗಿ ಮತೀಯ ಅಥವಾ ಜಾತೀಯ ಭಾವನೆಗಳನ್ನು ಪ್ರಚೋದಿಸಬಾರದು. ದೇವಾಲಯ, ಮಸೀದಿ, ಇಗರ್ಜಿ ಅಥವಾ ಇನ್ನಾವುದೇ ಪವಿತ್ರ ಸ್ಥಾನಗಳನ್ನು ಚುನಾವಣಾ ಪ್ರಚಾರದ ವೇದಿಕೆಯನ್ನಾಗಿ ಬಳಸಬಾರದು.

ಮತದಾರನು ನಿರಾತಂಕವಾಗಿ ಮತ ಚಲಾಯಿಸುವಂತೆ ಆತನಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಮತದಾನವು ಶಾಂತವಾಗಿಯೂ ಸುವ್ಯವಸ್ಥಿತವಾಗಿಯೂ ನಡೆಯಬೇಕು. ಈ ದಿಸೆಯಲ್ಲಿ ರಾಜ್ಯಕೀಯ ಪಕ್ಷಗಳು, ಕಾರ್ಯಕರ್ತರು, ಅಭ್ಯರ್ಥಿಗಳು ಮತ್ತು ಅಧಿಕಾರಿಗಳ ಹೊಣೆಗಾರಿಕೆ ಸಮಾನವಾಗಿದೆ ಮತದಾನದ ಅಧಿಕಾರಿಗಳೊಡನೆ ಸಂಬಂಧಿತರು ಸಂಪೂರ್ಣ ಸಹಕರಿಸಬೇಕು. ಮತದಾರರಿಗೆ ಹಿಂಸೆ ಕೊಡಬಾರದು. ಮತಕಟ್ಟೆಗಳಲ್ಲಿ ಕಾನೂನು ಸಮ್ಮತವಾದ ಕಾರ್ಯ ಕಲಾಪಗಳಿಗೆ ಅಡಚಣೆಯಾಗಬಾರದು. ಮತ ಕಟ್ಟೆಯೊಳಗಿರುವ ಅಭ್ಯರ್ಥಿಗಳ ಪ್ರತಿನಿಧಿಗಳು ಪರಿಚಯ ಪತ್ರ ಪಡೆದಿರಬೇಕು.

ಎಲ್ಲ ರಾಜ್ಯಕೀಯ ಪಕ್ಷಗಳು ಅಭ್ಯರ್ಥಿಗಳು ಚುನಾವಣಾ ಶಾಸನದ ಮೇರೆಗೆ ಶಿಕ್ಷಾರ್ಹವಾದ ಭ್ರಷ್ಟಾಚಾರ ಕ್ರಮಗಳಿಂದ ದೂರವಿರಬೇಕು. ಲಂಚ ನೀಡುವುದು, ಬೆದರಿಕೆ ಹಾಕುವುದು, ಇನ್ನೊಬ್ಬರ ಹೆಸರಿನಲ್ಲಿ ಮತ ಹಾಕುವುದು, ಮತಕಟ್ಟೆಯ ೧೦೦ ಮೀಟರು ಸುತ್ತ ಚುನಾವಣಾ ಪ್ರಚಾರ ಮಾಡುವುದು, ಮತದಾನ ಮುಕ್ತಾಯಕ್ಕೆ ೪೮ ತಾಸುಗಳಿಗಿಂತ ಕಡಿಮೆ ಅವಧಿಯಿರುವಾಗ ಸಾರ್ವಜನಿಕ ಸಭೆ ನಡೆಸುವುದು, ಮತಕಟ್ಟೆಗೆ ಬಂದು ಹೋಗಲು ಮತದಾರರಿಗೆ ವಾಹನ ಸೌಕರ್ಯ ಒದಗಿಸುವುದು – ಮೊದಲಾದುವು ಶಿಕ್ಷಾರ್ಹ ಅಪರಾಧಗಳೆನಿಸುವುವು.

ಮತದಾರರಿಗೆ ರಾಜ್ಯಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ನೀಡುವ ಗುರುತಿನ ಚೀಟಿಗಳಲ್ಲಿ ಚಿಹ್ನೆಗಳು, ಅಭ್ಯರ್ಥಿಯ ಹೆಸರು, ಪಕ್ಷದ ಹೆಸರುಗಳು ಇರಬಾರದು.

ಮತದಾನದ ದಿನ ಹಾಗೂ ಅದರ ಹಿಂದಿನ ೪೮ ಘಂಟೆಗಳ ಅವಧಿಯಲ್ಲಿ ಮಾದಕ ಪೇಯಗಳನ್ನು ಮಾರುವುದು ಅಥವಾ ಹಂಚುವುದು ಇತ್ಯಾದಿಗಳನ್ನು ಮಾಡಬಾರದು.

ಈ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸಲು ಒಂದು ಸ್ಥಾಯೀ ಸಮಿತಿಯಿರುವುದು.

ಎಲ್ಲರೂ ಈ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ; ನಿಷ್ಪಕ್ಷಪಾತತನದಿಂದ ಚುನಾವಣೆಗಳು ನಡೆಯುವುದು ಸಾಧ್ಯವಾಗುವುದು.

ಸೋವಿಯತ್-ಭಾರತ ಸಹಕಾರಕ್ಕೆ ದೀರ್ಘ ಕಾಲದ ಹಿತಗಳ ಆಧಾರ

"1971ರ ಆಗಸ್ಟ್ 9ರಂದು ಸೋವಿಯೆತ್ ಒಕ್ಕೂಟ ಮತ್ತು ಭಾರತಗಳ ನಡುವೆ ಅಂಕಿತ ಹಾಕಲ್ಪಟ್ಟ ಶಾಂತಿ, ಸ್ನೇಹ ಹಾಗೂ ಸಹಕಾರಗಳ ಒಪ್ಪಂದವು ಇತಿಹಾಸ ನಿರ್ಮಾಪಕ ದಸ್ತಾವೇಜು ಆಗಿದೆಯೆಂದೂ ಸೋವಿಯೆತ್ ಒಕ್ಕೂಟ ಮತ್ತು ಭಾರತಗಳ ನಡುವೆ ಆರ್ಥಿಕ ಹಾಗೂ ತಾಂತ್ರಿಕ ಸಹಕಾರಗಳ ಬೆಳವಣಿಗೆಗೆ ಅದು ತುಂಬಾ ಮಹತ್ವದ್ದಾಗಿದೆಯೆಂದೂ ,ಸೋವಿಯೆತ್ ಜನರು ಭಾವಿಸುತ್ತಾರೆ" ಎಂಬುದಾಗಿ ಸೋವಿಯೆತ್ ಸಚಿವ ಸಂಪುಟಕ್ಕೆ ಸೇರಿರುವ ರಾಜ್ಯ ವಿದೇಶಾಂಗ ಆರ್ಥಿಕ ಸಂಬಂಧಗಳ ಸಮಿತಿಯ ಉಪಾಧ್ಯಕ್ಷರಾದ ವಸೀಲಿ ಸೆರ್ಗೆಯೆವ್ ಅವರು **ಮಾಸ್ಕೊ ನ್ಯೂಸ್** ಎಂಬ ಒಂದು ಇಂಗ್ಲಿಷ್ ವಾರಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಬರೆದಿರುವ ಒಂದು ಲೇಖನದಲ್ಲಿ ನುಡಿದಿದ್ದಾರೆ.

'ಈ ಎರಡು ದೇಶಗಳ ನಡುವೆ ಈಗಾಗಲೇ ಇರುವ ಆತ್ಮೀಯವಾದ ಮೈತ್ರಿ, ಗೌರವ ಹಾಗೂ ಪರಸ್ಪರ ವಿಶ್ವಾಸ, ಒಳ್ಳೇ ನೆರೆಹೊರೆ ಹಾಗೂ ಫಲಪ್ರದ ಸಹಕಾರದ ಸಂಬಂಧಗಳನ್ನು ಈ ಒಪ್ಪಂದವು ಮತ್ತಷ್ಟು ಬಲಪಡಿಸುತ್ತದೆ' ಎಂದೂ ಅವರು ನುಡಿದಿದ್ದಾರೆ.

ಸೋವಿಯತ್—ಭಾರತ ಸ್ನೇಹವು ತಾತ್ಕಾಲಿಕ ಸಂಗತಿಗಳನ್ನು ಅವಲಂಬಿಸಿಲ್ಲ. ಆದರೆ, ಸೋವಿಯತ್ ಮತ್ತು ಭಾರತ ರಾಷ್ಟ್ರಗಳ ದೀರ್ಘಾವಧಿಯ ಹಿತಗಳನ್ನೇ ಆಧರಿಸಿದೆ. ಹಾಗೂ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ, ಏಶಿಯದಲ್ಲೂ ಜಗತ್ತಿನಲ್ಲೂ ಶಾಂತಿಯನ್ನು ಕಾಪಾಡುವುದಕ್ಕಾಗಿ ಸರ್ವತೋಮುಖವಾದ ಸಹಕಾರವನ್ನು ಬೆಳೆಸಿಕೊಳ್ಳಬೇಕೆಂಬ ಅಪೇಕ್ಷೆಯನ್ನೇ ಆಧರಿಸಿದೆಯೆಂಬುದನ್ನು ಈ ಒಪ್ಪಂದದ ಹಸ್ತಾಕ್ಷರವೆ ದೃಢಪಡಿಸುತ್ತದೆ.

"ತೈಲ ಉದ್ದಿಮೆಯಲ್ಲಿ ಸಾಧಿಸಲಾದ ಮುನ್ನಡೆಯೆ ಸೋವಿಯತ್—ಭಾರತ ಸಹಕಾರದ ಹಿರಿಯ ಯಶಸ್ಸಿಗೆ ದ್ಯೋತಕವಾಗಿದೆ".

"ಸೋವಿಯತ್ ತಜ್ಞರ ನೆರವಿನಿಂದ ಕಂಡು ಹಿಡಿಯಲಾದ ತೈಲ ನಿಕ್ಷೇಪಗಳ ಸ್ಥಳಗಳಲ್ಲಿ ಎಣ್ಣೆ ಭಾವಿಗಳನ್ನು ತೋಡಲಾಗಿದೆ. ೧೮ಮಿಲಿಯಗಿಂತಲೂ ಹೆಚ್ಚು ಎಣ್ಣೆಯನ್ನು ಈಗಾಗಲೇ ಉತ್ಪಾದಿಸಲಾಗಿದೆ. ಇಂದು ಭಾರತದಲ್ಲಿ ಉತ್ಪಾದಿಸಲಾಗುತ್ತಿರುವ ಅರ್ಧಕ್ಕರ್ಧದಷ್ಟು ಎಣ್ಣೆಯನ್ನು ಪ್ರಭುತ್ವಕ್ಷೇತ್ರದಲ್ಲೇ ತೆಗೆಯಲಾಗುತ್ತಿದೆ".

ರಾಂಚಿಯಲ್ಲಿರುವ ಘನ ಎಂಜಿನೀಯರಿಂಗ್ ಮತ್ತು ಹರದ್ವಾರದಲ್ಲಿಯ ಘನ ವಿದ್ಯುಚ್ಛಕ್ತಿ ಎಂಜಿನಿಯರಿಂಗ್‌ನಂಥ ಬೃಹತ್ ಉದ್ದಿಮೆ ಸಂಸ್ಥೆಗಳು ಭಾರತದ ಆರ್ಥ ವ್ಯವಸ್ಥೆಗೆ ತುಂಬಾ ಮಹತ್ವದವಾಗಿವೆ ಸೋವಿಯತ್—ಭಾರತ ಸ್ನೇಹದ ದ್ಯೋತಕವಾಗಿರುವ ಭಿಲಾಯಿ ಉಕ್ಕು ಯಂತ್ರಾಗಾರವಂತೂ ಭಾರತದ ಗಡಿಗಳಾಚೆಯೂ ಪ್ರಖ್ಯಾತವಾಗಿದೆ. ಭಾರತದಲ್ಲೇ ಇಂಥ ದೊಡ್ಡ ಉದ್ದಿಮೆ ಸಂಸ್ಥೆ ಇದೊಂದೇ ಆಗಿದ್ದು ಭಾರತದಲ್ಲಿ ತಯಾರಾಗುತ್ತಿರುವ ಉಕ್ಕಿನ ಮೂರನೆ ಒಂದು ಭಾಗವನ್ನು ಇದುವೇ ತಯಾರಿಸಿ ಕೊಡುತ್ತದೆ. ಇದು ಉತ್ಪಾದನಾ ಕಾರ್ಯವನ್ನು ಆರಂಭಿಸಿದಂದಿನಿಂದ ಈವರೆಗೂ೧೩,000,000ಮಿಲಿಯಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸಿದೆ.

"ವಿದ್ಯುಚ್ಛಕ್ತಿ, ಕಲ್ಲಿದ್ದಲು, ಗಣಿಗಳು, ಔಷಧ ಕಾರ್ಖಾನೆಗಳು ಕೃಷಿಕ್ಷೇತ್ರಗಳು ಮತ್ತು ಇನ್ನೂ ಬೇರೆ ಕೆಲವು ಔದ್ಯೋಗಿಕ ಪ್ರಾಯೋಜನಗಳನ್ನು ಕಟ್ಟಲೂ ಸೋವಿಯೆತ್ ಒಕ್ಕೂಟವು ಭಾರತಕ್ಕೆ ನೆರವು ನೀಡಿದೆ.

'ಭಾರತದಲ್ಲಿ ಕಾರ್ಯ ಮಾಡುತ್ತಿರುವ ಸೋವಿಯೆತ್ ತಜ್ಞರು ಪ್ರಾಂಜಲ ಮನಸ್ಸಿನಿಂದ ತಮ್ಮ ಜ್ಞಾನಾನುಭವಗಳನ್ನು ಭಾರತೀಯ ಒಡನಾಡಿಗಳಿಗೆ ಕೊಡಮಾಡಿದ್ದು ಈ ವರೆಗೂ ೪೦,೦೦೦ ಭಾರತೀಯ ತಜ್ಞರನ್ನೂ, ಕಾರ್ಮಿಕರನ್ನೂ ತರಬೇತುಗೊಳಿಸಿದ್ದಾರೆ. ಅದೇ ರೀತಿ, ಸೋವಿಯೆತ್ ಸ

ಅಮೃತಾಂಜನ

● ತಲೆ ನೋವು ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Are Nearby.

Large airy Rooms; Roof garden

Quiet, Calm Atmosphere

Personalised Service.

ತೀರ್ಥ ತೊಟ್ಟಾದರೇನು, ಕೊಳಗವಾದರೇನು?

(ನಾಲ್ಕನೇ ಪುಟದಿಂದ)

ಇಂದಿರಾ ಗಾಳಿಯಲ್ಲಿದ್ದೇದ ಹಾಗಾಯ್ತು.'

"ಹ್ಞಾಂ...."

"ಅದೂ ಹೌದೂನ್ನಿ...."

"ಯಾಕೆ?"

'ಯಾಕೇಂದ್ರೆ, ನಾವೆಲ್ಲ ನಮ್ಮ ನಿಶ್ಚಯ ಬದಲಾಯ್ಸಿ ಬಿಟ್ಟಿದ್ದೇವೆ....'

"ಏನು? ನಿಷ್ಠಾಂತರ?"

'ನಮ್ಮ ಪ್ರಧಾನಿಯೇ ಬಂದು ನಮ್ಮ ಮತವನ್ನು ಕೊಡಬೇಕೆಂದು ಕೇಳಿದಾಗ ಇಲ್ಲಾಂತನ್ನೋದು ಸಾಧ್ಯವೆ? ಅದ್ದರಿಂದ....'

"ಅಲ್ವೆ, ಆಕೆ ಪ್ರಧಾನಿಯಾಗಿ ಬಂದಿಲ್ಲ"

"ಅದೆಲ್ಲಾ ನಮಗೆ ಗೊತ್ತಿಲ್ಲ. ಆಕೆ ಪ್ರಧಾನಿ ಹೌದೋ ಅಲ್ಲವೋ...."

'ಹೇಗೆ ಅಲ್ಲವೆನ್ನಬಹುದು?'

'ಮತ್ತೆ ನಮ್ಮ ಓಟು ಅವಳಿಗೇ....'

'ಅವಳು ಚುನಾವಣಾ ರಂಗದಲ್ಲೇ ಇಲ್ವಲ್ಲಾ?'

"ಅವಳಿಲ್ಲವಾದರೇನು? ಅವಳ ಪಕ್ಷದವರಿದ್ದಾರೆ. ಅವರಿಗೇ...."

"ಹ್ಞಾಂ...ಮತ ಸ್ವಾತಂತ್ರ್ಯವಿದೇನ್ನ. ಮತ್ತೆ ಮಹಿಳಾ ಮತದಾರರ ಸಂಖ್ಯೆಯೇ ಜಾಸ್ತಿಯಿರುವಾಗ, ನಿಮ್ಮ ನಿರ್ಧಾರ ಗೆಲ್ಲುವುದೂ ಸಾಧ್ಯಾನ್ನ...."

'ಅದ್ಯಾಕೆ? ನೀವೂ ಹಾಕಬೇಕು....'

'ನನಗೂ ಮತ ಸ್ವಾತಂತ್ರ್ಯವಿದೆಯೆಂದು ಒಪ್ಪಿಕೋ ಬೇಕು....'

'ಅದೆಲ್ಲಾ ಆಗೋದಿಲ್ಲ. ಹಾಕ್ತೀನೆ ಅಂತ ಅಂದ್ರೆ ಮಾತ್ರ ಊಟ ಈವತ್ತು?"

'ಇದೊಳ್ಳೆ ತೊಂದ್ರೆಗಿಟ್ಟಲ್ಲಾ....ಅಲ್ವೆ, ಆವರವರಿಗೆ ಇಷ್ಟ ಬಂದ ಅಭ್ಯರ್ಥಿಗೆ ಓಟು ಹಾಕೋ ಸ್ವಾತಂತ್ರ್ಯ....?'

'ಅದೆಲ್ಲಾ ನನ್ಗೆ ಬೇಡ. ನೀವು ಹಾಕ್ತೀರೋ ಇಲ್ವೋ ಹೇಳಿ....'

'ಅಯ್ಯೋ ಮಹಾರಾಯ್ತಿ, ನೀನೆಂದ ಮೇಲೆ ಹಾಕದೆ ಇರೋದಕ್ಕಾಗುತ್ಯೆ?'

'ಅದೆಲ್ಲಾ ಮಾತು ತಿರುಗಿಸೋದು ಬೇಡ. ಖಂಡಿತ ಹೇಳಿ....'

'ಓಟು ಇದ್ರೆ ಹಾಕೋದು ಖಂಡಿತ.'

'ಯಾರಿಗೇಂತ ಹೇಳಿ....'

'ನೀನು ಯಾರಿಗೇಂತ ಹೇಳ್ತೀಯೊ ಅವರಿಗೆ....'

'ಹ್ಞಾಂ. ಹಾಗೆ ಬನ್ನಿ ಮತ್ತೆ ...'

'ಆದ್ರೆ ನೋಡು....'

'ಆದ್ರೂ ಇಲ್ಲ, ಹೋದ್ರೂ ಇಲ್ಲ....'

'ಅಲ್ವೆ, ನಾನನ್ನೋ ಮಾತನ್ನಾದ್ರೂ ಕೇಳು....'

'ಏನಪ್ಪಾ ಅಂತ ಮುತ್ತು ಉದುರೋ ಮಾತು?'

'ಅಲ್ವೆ, ನನ್ನ ಹೆಸ್ರೇ ಮತದಾರಯಾದಿಯಲ್ಲಿಲ್ಲವಂತೆ?'

ಹ್ಞಾಂ....ಏನಂದ್ರಿ? ಯಾಕೆ ಹಾಗಾಯ್ತು!'

'ಯಾಕೋ ದೇವ್ರಿಗೇ ಗೊತ್ತು...'

'....ಓ....ತಿಳೀತೋನ್ನಿ. ಅಯ್ಯೋ, ನಾನೇ ಅಂದು ನಿಮ್ಮ ಹೆಸ್ರು ಹೇಳದೆ ಒಂದು ಓಟು ಕಳೆದು ಕೊಂಡೆ....'

'ಅದೇ ನಾನನ್ನೋದು. ಹೀಗೆ ಹೆಸ್ರು ಹೇಳದೇ ಇದ್ದದ್ದರಿಂದ್ಲೇ ಮಹಿಳಾ ರಾಜ್ಯ ರಾಜ ಆಗಿರೋದು ಇಲ್ಲಿ....'

'ಅಲ್ರೀ, ನಿಮ್ಗಾದ್ರೂ ಹೆಸ್ರು ಸೇರ್ಸ ಬಹುದಿತ್ತಲ್ಲ?'

'ಅದಕ್ಕೆ ಪುರ್ಸೊತ್ತು ಯಾರಿಗುಂಟು?'

'ಅದೇ ನೋಡಿ, ಹೇಳೋದು ಶಾಸ್ತ್ರ, ಇಕ್ಕೋದು ಗಾಳ....ಮತ ಅಮೂಲ್ಯ, ಮತ ಸ್ವಾತಂತ್ರ್ಯವಿದೆಯೆಂದು ಮುಂತಾಗಿ ಲೆಕ್ಚರ್ ಬಿಡೋವ್ರು ಆ ಮತವನ್ನು ಹಾಳು ಮಾಡಿದ್ರಲ್ಲಾ....'

"ಏನು ಮಾಡೋದೆ?ಮುಂದಿನ್ಸಾರಿ....'

'ನೀವೇನೂ ಹೇಳ್ಬೇಡಿ. ಮನೆಗೆ ಬಂದಾಗ ನಾನೇ ಹೇಳಿ ಬರೆಸ್ತೇನೆ. ಆಯ್ತಲ್ಲಾ....'

'ಆಯ್ತಪ್ಪಾ ಆಯ್ತು. ಈ ಇಂದಿರಾ ಗಾಳಿ ಅಷ್ಟಾದ್ರೂ ಮಾಡಿದ್ರೆ ದೊಡ್ಡ ಉಪಕಾರ....'

'ಯಾಕೆ?'

'ಅಲ್ವೆ, ಹೆಸ್ರು ಹೇಳೋದಕ್ಕೂ ನಾಚೋ ಹೆಂಗಸ್ರಿಂದ ಮತ್ತೆ ಆಗೋದೇನೂಂತ....'

'ಎಲ್ಲಾ ಆಗುತ್ತೆ....ನೋಡಿ—'

'ಖಂಡಿತಕ್ಕೂ?'

'ಹ್ಞೂ....'

'ಅಷ್ಟಾದ್ರೆ ಸಾಕು....'

'ಎಷ್ಟು....?'

'ಇಷ್ಟು....'

—ಗೋರಾ.

●●

ಹಾಯದಿಂದಲೇ ಮುಂಬೈಯಲ್ಲಿ ಕಟ್ಟಲ್ಪಟ್ಟಿರುವ ಭಾರತ ಯಂತ್ರ ವಿದ್ಯಾಪೀಠದಲ್ಲಿ (ಐ ಐ ಟಿ) ಮತ್ತು ಭಾರತದ ಪ್ರೌಢ ಪಾಠಶಾಲೆಗಳಲ್ಲಿ ಸ್ಥಾಪಿಸಲಾಗಿರುವ ಸ್ವಾಯತ್ತ ವಿಭಾಗಗಳಲ್ಲಿಕೂಡ ಭಾರತದ ತಜ್ಞರನ್ನು ತರಬೇತುಗೊಳಿಸಲಾಗುತ್ತಿದೆ. ಟೆಕ್ನಿಷಿಯನ್‌ರನ್ನೂ ಯೋಗ್ಯತಾ ವಿಶೇಷ ಸಂಪನ್ನ ಕಾರ್ಮಿಕರನ್ನೂ ತರಬೇತುಗೊಳಿಸಲು ಸೆಕೆಂಡರಿ ವಿಶೇಷೀಕೃತ ತಾಂತ್ರಿಕ ಶಾಲೆಗಳನ್ನೂ ಮತ್ತು ತರಬೇತು ಕೇಂದ್ರಗಳನ್ನೂ ಸ್ಥಾಪಿಸಲಾಗುತ್ತಿದೆ".

"ಸೋವಿಯೆತ್ ಒಕ್ಕೂಟದ ಉದ್ದಿಮೆ ಸಂಸ್ಥೆಗಳಲ್ಲೂ, ಪ್ರೌಢ ವಿದ್ಯಾಭ್ಯಾಸ ಪೀಠಗಳಲ್ಲೂ ಬಹಳಷ್ಟು ಜನ ಭಾರತೀಯರು ತರಬೇತುಗೊಂಡಿದ್ದಾರೆ. ಇಂದು ಸರಿಸುಮಾರು ೪೦೦ ಜನ ಭಾರತೀಯರು ನಮ್ಮ ದೇಶದಲ್ಲಿ ಅಭ್ಯಸಿಸುತ್ತಿದ್ದಾರೆ.

"ಈ ಸಹಕಾರವು ಎಲ್ಲ ದೃಷ್ಟಿಯಿಂದಲೂ ಸಮಾನ ರೀತಿಯದಾಗಿದ್ದು ಉಭಯ ಪ್ರಯೋಜನಕಾರಿಯೂ ಆಗಿದೆ. ಸೋವಿಯೆತ್ ಅರ್ಥ ವ್ಯವಸ್ಥೆಗೆ ಅಗತ್ಯವಾದಂಥ ಭಾರತದ ಕೆಲವು ಮುಖ್ಯ ವ್ಯಾಪಾರೀ ಸರಕುಗಳನ್ನೂ ಮತ್ತು ಅವರ ಆರ್ಥಿಕ ಅಭಿವೃದ್ಧಿಯಾದಂತೆ ಆದರ ಸಿದ್ಧ ಕೈಗಾರಿಕಾ ಸರಕುಗಳನ್ನೂ ಸೋವಿಯೆತ್ ಒಕ್ಕೂಟವು ಭಾರತದಿಂದ ಪಡೆಯುತ್ತಿದೆಯೆಂಬುದು ತಿಳಿದ ಸಂಗತಿಯಾಗಿದೆ ಪರಸ್ಪರ ಸ್ನೇಹ ವಿಶ್ವಾಸಗಳ ಬೆಳಕಿನಲ್ಲಿ ಮಾತ್ರವೆ ಸೋವಿಯೆತ್ ಭಾರತ ಆರ್ಥಿಕ ಸಹಕಾರಗಳನ್ನು ನೋಡುವುದು ಸಾಧ್ಯ."

●●

ಪ್ರಧಾನಿ ಗಾಂಧಿಯವರಿಂದ

ಅದ್ದೂರಿಯ ಚುನಾವಣಾ ಪ್ರಚಾರ

ಕಳೆದ ಸಾರ್ವತ್ರಿಕ (ಮಧ್ಯಾವಧಿ) ಚುನಾವಣೆಗಳಲ್ಲಿ (ಲೋಕ ಸಭೆ) ಪ್ರಧಾನಿ ಇಂದಿರಾ ಗಾಂಧಿಯವರ ಕೈಗಳನ್ನು ಏಕೈಕ ಮನಸ್ಸಿನಿಂದ ಬೆಂಬಲಿಸಿದ ರಾಜ್ಯ ಕರ್ನಾಟಕ. ಕರ್ನಾಟಕಕ್ಕೆ ಆಕೆ ಎಷ್ಟು ಕೃತಜ್ಞರಾದರೂ ಸಾಲದು; ಆಕೆಯ ಪ್ರಬಲ ವಿರೋಧಿ ರಾಜ್ಯದಲ್ಲಿ ಸಂಪೂರ್ಣ ಬೆಂಬಲ ಪಡೆದದ್ದು ಅದ್ಭುತ.

ರಾಜ್ಯ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಗಳಲ್ಲಿ ತಮ್ಮ ಪಕ್ಷದ ಪರವಾಗಿ ಆಕೆ ಕರ್ನಾಟಕದ ಹಲವು ನಗರಗಳನ್ನು ಮಿಂಚಿನ ವೇಗದಲ್ಲಿ ಸಂಚರಿಸಿದರು. ಚುನಾವಣೆ ಮುಗಿಯುವುದಕ್ಕೆ ಮೊದಲು ಉಳಿದ ಕೆಲವೆಡೆ ಬರುವುದಾಗಿ ನಾಯಕರಿಗೆ ಭರವಸೆಯಿತ್ತರು.

ಬಿಜಾಪುರ, ಹುಬ್ಬಳ್ಳಿ, ಶಿವಮೊಗ್ಗ, ದಾವಣಗೆರೆ, ಬಾಗಲಕೋಟೆ, ಮಂಗಳೂರು, ಚಿಕ್ಕಮಗಳೂರು, ಮಡಿಕೇರಿ, ಉಡುಪಿ—ಮೊದಲಾದುವು ಪ್ರಧಾನಿ ಭೆಟ್ಟಿ ನೀಡಿದ ಕೆಲವು ನಗರಗಳು.

ಚುನಾವಣಾ ಪ್ರಚಾರ ಸಭೆಗಳಲ್ಲಿ ಪ್ರಚಾರ ಭಾಷಣವನ್ನು ಮಾಡಿ, ತನ್ನ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಕೇಳಿಕೊಳ್ಳುವುದಷ್ಟೇ ಅವರ ಸಂಚಾರದ ಪರಿಮಿತ ಉದ್ದೇಶ. ಆದುದರಿಂದ ಎಲ್ಲೆಡೆಯಲ್ಲೂ ಅವರು ಮಾಡಿದ ಭಾಷಣದ ಸಾರ ಒಂದೇ. ಆದರೂ ಅಲ್ಲಲ್ಲಿನ ವಿರೋಧವನ್ನು ಗಮನಿಸಿ ವಿರೋಧಿ ಪಕ್ಷವನ್ನು ಟೀಕಿಸಲು ಒಂದೊಂದು ವಾಕ್ಯವಾಡಿದ್ದೂ ಉಂಟು. ಅತ್ಯಲ್ಪಾವಧಿಯ ಭಾಷಣವಾದ್ದರಿಂದ ದೀರ್ಘವಿವರಣೆ — ಖಂಡನೆ—ಮಂಡನೆಗೆ ಅವಕಾಶವಿಲ್ಲ.

ಆಕೆ ಸ್ಪರ್ಶಿಸಿದ ಮುಖ್ಯಾಂಶಗಳನ್ನು ಈ ರೀತಿಯಾಗಿ ಕ್ರೋಢೀಕರಿಸ ಬಹುದು:—

● ಸಮಾಜದಲ್ಲಿನ ದುರ್ಬಲ ವರ್ಗದ ಉದ್ಧಾರ. ಈ ನಿಟ್ಟಿನಲ್ಲಿ ತನ್ನ ಪಕ್ಷವೂ ಸರಕಾರವೂ ತೆಗೆದುಕೊಂಡ ಕಾರ್ಯಕ್ರಮಗಳ ಸಮರ್ಥನೆ.

● ರಾಜ್ಯಕೀಯ ಸ್ವಾತಂತ್ರ್ಯವೇ ಪರಮ ಗುರಿಯಾಗಲಾರದು. ಆರ್ಥಿಕ ಸ್ವಾತಂತ್ರ್ಯವಿಲ್ಲದ ರಾಜ್ಯಕೀಯ ಸ್ವಾತಂತ್ರ್ಯ ಅರ್ಥಹೀನ. ಗರೀಬೀ ಹಟಾವೋ—ಬಡತನ ನೀಗಿಸಿರಿ—ತನ್ನ ಪಕ್ಷವು ಇದಕ್ಕಾಗಿ ಪಣವೊಡ್ಡಿ ನಿಂತಿದೆ. ರಾತ್ರಿ ಬೆಳಗಾಗುವುದರಲ್ಲಿ ಬಡತನ ನಿರ್ಮೂಲವಾಗಲಾರದು. ಅದಕ್ಕೆ ನಿರಂತರ ಪ್ರಾಮಾಣಿಕ ಪ್ರಯತ್ನ—ಹೋರಾಟ ಅಗತ್ಯ.

● ಬಾಂಗ್ಲಾ ದೇಶದ ನಿರಾಶ್ರಿತರ ಸಮಸ್ಯೆಯನ್ನು ಎಂಟೆದೆಯಿಂದ ಎದುರಿಸಿ ಜಯಶೀಲರಾಗಿದ್ದೇವೆ. ವಿದೇಶೀಯರ ಮುಂದೆ ನಾವೊಂದು ಅಪೂರ್ವ ಶಕ್ತಿಯಾಗಿ ನಿಂತಿದ್ದೇವೆ. ದೇಶದ ಒಳಗಿನ ಸಮಸ್ಯೆಗಳನ್ನೂ ಇದೇ ಎದೆಗಾರಿಕೆಯಿಂದ ಎದುರಿಸಲು ತನ್ನ ಪಕ್ಷ ನಿರ್ಧಾರಾತ್ಮಕವಾಗಿ ಹೋರಾಡುತ್ತಿದೆ. ನಮಗೆ ಇದರಲ್ಲಿ ಜಯ ಸುನಿಶ್ಚಿತ.

● ಕರ್ನಾಟಕದ ರಾಜ್ಯಕೀಯದಲ್ಲಿ ಜಾತಿ—ಮತಗಳು ಕೊಂಡಸವಾಡುತ್ತಿವೆಯೆಂದು ಕೇಳಿದ್ದೇನೆ. ನವ ಸಮಾಜ ನಿರ್ಮಾಣದಲ್ಲಿ ಜಾತೀಯತೆ—ಮತೀಯತೆಗಳ ಕ್ಷುದ್ರ ಭಾವನೆಗೆ ಬೆಲೆಯಿಲ್ಲ. ಜಾತ್ಯಾತೀತ ವರ್ಗ ರಹಿತ ಸಮಾಜವೊಂದು ನಮ್ಮಲ್ಲಿ ನಿರ್ಮಾಣವಾದರೆ ಮಾತ್ರ ನಮ್ಮ ಕಲ್ಯಾಣ ಶತಃ ಸಿದ್ಧ.

● ನೀವು ನನ್ನನ್ನು ಹೃದಯ ಪೂರ್ವಕವಾಗಿ ಬೆಂಬಲಿಸಿದ್ದೀರಿ. ಅದಕ್ಕಾಗಿ ಕೃತಜ್ಞತೆಗಳು

● ಕೇಂದ್ರದಲ್ಲಿ ಸುದೃಢ ಸರಕಾರವಿದ್ದುದರಿಂದಲೇ ಸಮರದಲ್ಲಿ ವಿಜಯಸಾಧ್ಯವಾಯ್ತು. ರಾಜ್ಯದಲ್ಲಿಯೂ ಅದೇ ರೀತಿಯ ಸುಭದ್ರ ಸರಕಾರವನ್ನು ರಚಿಸಬೇಕು. ರಾಜ್ಯ ಮತ್ತು ಕೇಂದ್ರಗಳಲ್ಲಿ ಒಂದೇ ಪಕ್ಷದ ಆಡಳಿತೆಯಿರುವುದರಿಂದ ಪಕ್ಷದ ಧ್ಯೇಯ—ಧೋರಣೆಗಳನ್ನು ಅನುಷ್ಠಾನಕ್ಕೆ ತರಲು ಸುಗಮವಾಗುವುದು.

● ಆದುದರಿಂದ ಯಾವುದೇ ರೀತಿಯ ಹಂಗು ದಾಕ್ಷಿಣ್ಯಗಳಿಗೆ ಬಲಿಬೀಳಬೇಡಿ. ಪ್ರಗತಿಶೀಲವಾದ ಸಮಾಜವಾದದ ನಿಷ್ಠಾವಂತ ಅನುಷ್ಠಾನ ಪ್ರತಿಜ್ಞನಾದ ತನ್ನ ಪಕ್ಷದ ಅಭ್ಯರ್ಥಿಯನ್ನು ಪ್ರಚಂಡ ಬಹುಮತದಿಂದ ಆರಿಸುತ್ತೀರೆಂದು ವಿಶ್ವಾಸ. ●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

READ & ADVERTISE IN NAVAYUGA Weekly

ಉಡುಪಿ ಕ್ಷೇತ್ರದ ಅಭ್ಯರ್ಥಿ

ಶ್ರೀಮತಿ ಮನೋರಮಾ ಮಧ್ವರಾಜ್

ಮಾರ್ಚಿ ೯ರಂದು ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ಉಡುಪಿ ಕ್ಷೇತ್ರದಿಂದ ಸ್ಪರ್ಧಿಸಲಿರುವ ಅಭ್ಯರ್ಥಿಗಳಲ್ಲಿ ಶ್ರೀಮತಿ ಮನೋರಮಾ ಮಧ್ವರಾಜ್ ಒಬ್ಬರು.

ಈಕೆ ಆಡಳಿತ ಕಾಂಗ್ರೆಸ್ಸಿನ ಅಭ್ಯರ್ಥಿ. ಚುನಾವಣಾ ಚಿಹ್ನೆ—ದನ-ಕರು.

ಶ್ರೀಮತಿ ಮಧ್ವರಾಜರು ಎಳೆ ಹರೆಯದವರು, ಹಿಂದುಳಿದ ಸಮಾಜಕ್ಕೆ ಸೇರಿದವರು (ಮಹಿಳೆಯರು.)

ಶ್ರೀ ಮಧ್ವರಾಜರೂ ಎಳೆ ವಯಸ್ಸಿನಲ್ಲೇ ರಾಜ್ಯಕೀಯಕ್ಕಿಳಿದು ೧೯೬—೬೭ರ ಅವಧಿಯಲ್ಲಿ ಶಾಸಕರಾಗಿದ್ದರು. ಇದರಿಂದ ಶ್ರೀಮತಿ ಮಧ್ವರಾಜರೂ ರಾಜ್ಯಕೀಯದಲ್ಲಿ ಹೆಚ್ಚಿನ ಅನುಭವ ಪಡೆದರು; ಜನಸಂಪರ್ಕ ಹೊಂದಿದರು.

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯಲ್ಲಿ ಕಾಪು ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಶ್ರೀಮತಿ ಮಧ್ವರಾಜರು ತಾಲೂಕಿನ ಅಭಿವೃದ್ಧಿಯಲ್ಲಿ ಅತ್ಯಂತ ಆಸಕ್ತಿಯುಳ್ಳವರು.

ವಿವಿಧ ಸಂಘ—ಸಂಸ್ಥೆಗಳಲ್ಲಿ ಸಂಪರ್ಕವಿರಿಸಿಕೊಂಡಿರುವ ಇವರು ತಮ್ಮ ಪತಿಯಂತೆಯೇ ಉದ್ಯಮಿಗಳೂ ಹೌದು. ಕರ್ನಾಟಕ ಫಿಶರೀಸ್ ಸಂಸ್ಥೆಯ ಒಡತಿಯಾಗಿ ಉದ್ಯಮ ರಂಗದಲ್ಲಿ ನೂರಾರು ಕುಟುಂಬಗಳಿಗೆ ಉದ್ಯೋಗಾವಕಾಶ ನೀಡಿದ್ದಾರೆ.

ತಮ್ಮ ಪತಿಯೊಡನೆ ಮತ್ಸ್ಯೋದ್ಯಮದಲ್ಲಿ ಹೆಚ್ಚಿನ ಅನುಭವ ಗಳಿಸಲು ವಿದೇಶ ಸಂಚಾರವನ್ನು ಮಾಡಿ ಬಂದಿದ್ದಾರೆ.

ಶ್ರೀಮಂತ ಕುಟುಂಬಕ್ಕೆ ಸೇರಿದ ಶ್ರೀಮತಿ ಮನೋರಮಾ ಮಧ್ವರಾಜ್ ಪತಿಯಂತೆಯೇ ದಾನವೀರರು. ದೀನದಲಿತರನ್ನು ಕಂಡರೆ ಹೃದಯ ಕರಗುವ ಹೆಣ್ಣುತನ— ಅವರ ಹುಟ್ಟಿ ಬಂದಿರುವ ಉದಾರತನ.

ಶ್ರೀಮತಿ ಮಧ್ವರಾಜರದ್ದು ಸ್ವಯಂ ಪ್ರತಿಭೆಯುಳ್ಳ ವ್ಯಕ್ತಿತ್ವ. ಇದು ಮನದಿನಿಯನ, ರಾಜ್ಯಕೀಯ ಪಕ್ಷದ ಸಹಕಾರದಿಂದ ಬೆಳೆದು ಅರಳಿನಿಂತಿದೆ. ತನ್ನ ಕಂಪನ್ನು ಸುತ್ತ ಹರಡಲು ಸಮರ್ಥವಿದೆ.

ಸಮಾಜವಾದಿ ಕಾರ್ಯಕ್ರಮಗಳು ಕಾರ್ಯಗತವಾಗಬೇಕು, ಬಡತನ, ನಿರುದ್ಯೋಗಗಳು ನಿವಾರಣೆಯಾಗಬೇಕು—ಇದಕ್ಕೆ ರಾಜ್ಯ—ಕೇಂದ್ರ ಸರಕಾರಗಳಲ್ಲಿ ಸಾಮರಸ್ಯವಿರಬೇಕು; ಸುಭದ್ರ ಸರಕಾರಗಳಿರಬೇಕು—ಇದು ಆಕೆಯ ಆಶಯ.

ತಾನು ವಿಧಾನ ಸಭಾ ಸದಸ್ಯೆಯಾದರೆ, ಕ್ಷೇತ್ರದ ಬಡ ಜನತೆಯ ಸಂಕಷ್ಟಗಳನ್ನು ನಿವಾರಿಸಲು ಅವಶ್ಯಕ ಕ್ರಮ ತೆಗೆದುಕೊಳ್ಳಲು ಶಕ್ತಿಮೀರಿ ದುಡಿಯುತ್ತೇನೆಂದು ಆಕೆ ಭರವಸೆ ನೀಡುತ್ತಾರೆ

ಆಕೆಯ ಪ್ರಬಲ ಪ್ರತಿಸ್ಪರ್ಧಿ ಜನಸಂಘದ ಡಾ| ವಿ. ಎಸ್. ಆಚಾರ್ಯರು (ಉಡುಪಿ ನಗರ ಸಭಾಪತಿ).

●●

ಉಡುಪಿಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಉದ್ಘಾಟನೆ

ಉಡುಪಿಯಲ್ಲಿ ಕಾಂಗ್ರೆಸ್ ಚುನಾವಣಾ ಪ್ರಚಾರ ಉದ್ಘಾಟನೆಯನ್ನು ಶ್ರೀ ಎಸ್. ಡಿ. ಸಾಮ್ರಾಜ್ಯರ ಅಧ್ಯಕ್ಷತೆಯಲ್ಲಿ ತಾ 12ರಂದು ಲೋಕ ಸಭಾ ಸದಸ್ಯ ಶ್ರೀ ಪಿ. ರಂಗನಾಥ ಶೆಣೈಯವರು ನೆರವೇರಿಸಿ ಉಡುಪಿ ಕ್ಷೇತ್ರದ ಅಭ್ಯರ್ಥಿ ಶ್ರೀಮತಿ ಮನೋರಮಾ ಮಧ್ವರಾಜರನ್ನು ಪ್ರಚಂಡ ಬಹುಮತದಿಂದ ಆರಿಸುವಂತೆ ಮತದಾರರನ್ನು ಕೇಳಿಕೊಂಡರು ಪ್ರಾರಂಭದಲ್ಲಿ ಉಡುಪಿ ಬ್ಲಾಕ್ ಕಾಂಗ್ರೆಸಿನ ಕನ್ವೀನರ್ ಶ್ರೀ ಬಿ. ಯೋಗೀಶ್ವರ ಹೊಳ್ಳರು ಸ್ವಾಗತಿಸಿದರು

ಶ್ರೀ ಶೆಣೈಯವರು ಮಾತಾಡಿ ಪ್ರತಿಪಕ್ಷೀಯರ ಕುರಿತು ಟೀಕಿಸಿ ಶ್ರೀಮತಿ ಗಾಂಧಿಯವರ ಧುರೀಣತ್ವದಿಂದ ಭಾರತವಿಂದು ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲೊಂದಾಗಿರುತ್ತದೆ. ಅವರ ಕೈಯನ್ನು ಬಲಗೊಳಿಸುವುದು ನಮ್ಮ ಕರ್ತವ್ಯ ಎಂದರು. ತರುವಾಯ ಸ್ಥಳೀಯ ಸಮಸ್ಯೆಗಳ ಕುರಿತು ಅವರು ಪ್ರಸ್ತಾಪಿಸಿ ಶ್ರೀಮತಿ ಮನೋರಮಾ ಮಧ್ವರಾಜರು ಈ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿ ಎಂದೂ ಎಲ್ಲರೂ ಅವರನ್ನು ಆರಿಸಬೇಕೆಂದು ವಿನಂತಿಸಿದರು.

ಶ್ರೀ ಪಿ. ಆನಂದಕುಂದ ಹೆಗ್ಡೆ ಮತ್ತು ಶ್ರೀ ಎ. ಜಿ. ಅತ್ರೆಯವರು ಶ್ರೀಮತಿ ಮನೋರಮಾ ಮಧ್ವರಾಜರ ದಕ್ಷತೆ—ಯೋಗ್ಯತೆಯನ್ನು ವಿವರಿಸಿ ಅವರನ್ನು ಬೆಂಬಲಿಸುವಂತೆ ಕೇಳಿಕೊಂಡರು. ಶ್ರೀ ಮಟ್ಟಿ ರಾಮಚಂದ್ರ ರಾಯರು ಮಾತಾಡಿ ಉಡುಪಿ ಯುವಕ ಕಾಂಗ್ರೆಸಿನವರ ಸಂಪೂರ್ಣ ಬೆಂಬಲ ಶ್ರೀಮತಿ ಮಧ್ವರಾಜರಿಗಿದೆ ಎಂದು ಹೇಳಿದರು.

ಶ್ರೀಮತಿ ಮನೋರಮಾ ಮಧ್ವರಾಜರು ಮಾತಾಡಿ ಮತದಾರರ ಸಹಕಾರವನ್ನು ಅಪೇಕ್ಷಿಸಿ ತನ್ನನ್ನು ಆರಿಸುವಂತೆ ಜನರನ್ನು ಕಳಕಳಿಯಿಂದ ವಿನಂತಿಸಿ ಜನತೆಯ ಮತ್ತು ಈ ಕ್ಷೇತ್ರದ ಸೇವೆಸಲ್ಲಿಸುವ ಅವಕಾಶವನ್ನು ದೊರಕಿಸಬೇಕೆಂದರು.

ಶ್ರೀ ಎಸ್. ಡಿ. ಸಾಮ್ರಾಜ್ಯರು ತನ್ನ ಅಧ್ಯಕ್ಷ ಭಾಷಣದಲ್ಲಿ ವಿರೋಧಿ ಪಕ್ಷಕ್ಕೆ ಬೆಂಬಲವಿತ್ತಲ್ಲಿ ಸುಖವಿಲ್ಲವೆಂದು ತಿಳಿಸಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಗಾಡಿಯ ಎರಡು ಚಕ್ರಗಳಂತೆ ಎಂದೂ ಕೇಂದ್ರದಲ್ಲಿ ಪ್ರಬಲ ಆಡಳಿತ ಕಾಂಗ್ರೆಸ್ ಆಡಳಿತವಿರುವಾಗ ರಾಜ್ಯದಲ್ಲಿ ಸಹ ಅದೇ ಆಡಳಿತವೇರ್ಪಡುವುದು ಅವಶ್ಯವೆಂದೂ ಆದ್ದರಿಂದ ಆಡಳಿತ ಕಾಂಗ್ರೆಸಿಗೆ ಬೆಂಬಲ ನೀಡಬೇಕು ಎಂದೂ ಕೇಳಿಕೊಂಡರು.

ಅಂತ್ಯದಲ್ಲಿ ಶ್ರೀ ಆರ್. ನರಸಿಂಹ ಪಾಂಗಣ್ಣಾಯರು ಧನ್ಯವಾದ ಸಮರ್ಪಿಸಿದರು.

ಕರ್ಣಾಟಕ ಬ್ಯಾಂಕಿನ ಕೊಡಿಯಾಲ್‌ಬೈಲ್ ಶಾಖೆಯ ಉದ್ಘಾಟನೆ.

ಕರ್ಣಾಟಕ ಬೇಂಕಿನ 113ನೇ ಶಾಖೆಯಾದ ಕೊಡಿಯಾಲ್‌ಬೈಲ್ ಶಾಖೆಯ ಉದ್ಘಾಟನೆಯನ್ನು ತಾ. 18ರಂದು ಮಂಗಳೂರಿನ ಬಿಷಪ್ ರೈಟ್ ರೆವರೆಂಡ್ ಡಾ| ಬಿ. ಎಸ್. ಡಿ'ಸೋಜಾರವರು ಉದ್ಘಾಟಿಸಿದರು. ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷತೆವಹಿಸಿದ್ದರು. ನಗರದ ಕೆನರಾ ಸೇಲ್ಸ್ ಕಾರ್ಪರೇಶನ್‌ನ ಚೆಯರ್‌ಮೇನ್ ಹಾಗೂ ನವಭಾರತದ ಸಂಪಾದಕ ಶ್ರೀಸಂಜೀವ ವಿ. ಕುಡ್ವಾರವರು ಸೇಫ್ ಡಿಪಾಸಿಟ್ ಲೋಕರ್ಸ್‌ನ ಉದ್ಘಾಟನೆಯನ್ನು ನೆರವೇರಿಸಿದರು

ಆರಂಭದಲ್ಲಿ ಬೇಂಕಿನ ಚೆಯರ್‌ಮೇನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತಿಸಿ ಬೇಂಕಿನ ಸಾಧನೆಯನ್ನು ವಿವರಿಸಿದರು. ಈ ಹೊಸ ಶಾಖೆಯಲ್ಲಿ ಸೇಫ್ ಡಿಪಾಸಿಟ್ ಲಾಕರ್ಸ್ ತೆರೆಯುವುದರ ಮೂಲಕ ಜನರಲ್ಲಿರುವ ವಸ್ತು ಒಡವೆಗಳನ್ನು ಸುಭದ್ರವಾಗಿ ಇರಿಸುವ ಅನುಕೂಲತೆ ಕಲ್ಪಿಸಲಾಗಿದೆ ಎಂದರು.

ಪೂಜ್ಯ ಬಿಷಪ್‌ರು ಉದ್ಘಾಟಿಸುತ್ತಾ ಈ ಹೊಸ ಶಾಖೆಯು ಜನರಿಗೆ ಉಪಯೋಗಕರವಾಗಿ ಬಾಳಿ ಕೀರ್ತಿಗಳಿಸಲೆಂದು ಹರಸಿದರು. ಬ್ಯಾಂಕ್‌ಗಳು ಆರ್ಥಿಕ ಜೀವನದಲ್ಲಿ ಸೇವೆಸಲ್ಲಿಸುವುದು ಮಾತ್ರವಲ್ಲದೆ ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಪ್ರಯೋಜನ ಹೊಂದಬಹುದಾದ ದಾರಿಯನ್ನು ತೋರಿಸಲು ಆಸಕ್ತಿವಹಿಸಬೇಕೆಂದು ತಿಳಿಸಿ ತಾವು ಸ್ವತಃ ಬೇಂಕ್‌ನಲ್ಲಿ ಒಂದು ಎಕೌಂಟನ್ನು ತೆರೆದರು.

ಶ್ರೀ ಸಂಜೀವ ವಿ. ಕುಡ್ವರವರು ಸೇಫ್ ಡಿಪಾಸಿಟ್ ಲಾಕರ್‌ಗಳನ್ನು ಉದ್ಘಾಟಿಸಿ ಬೇಂಕ್ ಉದ್ದಿಮೆ ರಂಗದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ ಎಂದರು ಬೇಂಕ್‌ಗಳು ಏಳಿಗೆ ಕೇವಲ ಧನ ಬಲದಿಂದ ಆಗಿರದೆ ಜನ ಬೆಂಬಲದಿಂದಲೂ ನಡೆದಿದೆ ಎಂದರು. ಈ ಬೇಂಕ್ ದ ಕ. ಜಿಲ್ಲೆಯ ವ್ಯಾಪಾರ, ಕೈಗಾರಿಕೆಗಳಿಗೆ ನೆರವಾಗಿ ಜನಜೀವನದಲ್ಲಿ ಹಾಗೂ ಜಿಲ್ಲಾಭಿವೃದ್ಧಿಗೆ ಸಹಕರಿಸುವುದರ ಮೂಲಕ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ಕೆನರಾ ಚೇಂಬರ್ ಓಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಶ್ರೀ ಯು. ರಾಜಾರಾಮ ಮಲ್ಯರು ಅಭಿನಂದನಾ ಭಾಷಣ ಮಾಡಿದರು.

ಪ್ರೊ| ಎಸ್.ವಿ. ಪರಮೇಶ್ವರ ಭಟ್ಟರಿಗೆ ಸನ್ಮಾನ

ತಾ. 8ರಂದು ಮಂಗಳೂರಿನ ಪುರಭವನದಲ್ಲಿ ಪ್ರೊ| ಎಸ್.ವಿ. ಪರಮೇಶ್ವರ ಭಟ್ಟರನ್ನು ಸನ್ಮಾನಿಸುವ ಹಾಗೂ ಸಂಭಾವನಾ ಗ್ರಂಥ ಸಮರ್ಪಣ ಸಮಾರಂಭವು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ವಿ.ವಿ. ನಿಲಯದ ಕುಲಪತಿ ಪ್ರೊ| ದೇ. ಜವರೇ ಗೌಡರು ಪ್ರೊ| ಭಟ್ಟರ ಶಿಷ್ಯರೇ ಬರೆದು ಪ್ರಕಟಿಸಿದ "ಪೂರ್ಣ ಕುಂಭ"ವನ್ನು ಪ್ರೊ| ಭಟ್ಟರಿಗೆ ಸಮರ್ಪಿಸಿದರು. ಅಲ್ಲದೆ ಅವರು, ಪ್ರೊ| ಭಟ್ಟರು ಬರೆದ "ಕಣ್ಣುಮುಚ್ಚಾಲೆ, "ನೆನಪಿಗೆ ಬಂದ ಗಾದೆಗಳು" ಮತ್ತು ''ಮುನ್ನುಡಿಗಳು'' ಎಂಬ ಮೂರು ಪುಸ್ತಕಗಳನ್ನು ಪ್ರಕಟಿಸಿದರು.

ಪೂರ್ಣಕುಂಭದ ಸಂಪಾದಕ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಸಿದರು. ಶ್ರೀ ಬಿ.ವಿ. ವಿವೇಕ ರೈಯವರು ಸಂದೇಶಗಳನ್ನೋದಿದರು. ಶ್ರೀ ಕೆ. ಸುಬ್ರಹ್ಮಣ್ಯ ಕೆದ್ಲಾಯರು ವರದಿ ಓದಿದರು. ದೇ ಜ.ಗೌ. ಅವರು ಎಸ್.ವಿ.ಪಿ ಯವರ ಬಾಳಿನ ಸಿಹಿಕಹಿಗಳನ್ನು ಸ್ಮರಿಸಿದರು.

ಎಸ್.ವಿ.ಪಿ. ಯವರ ಗುರುಗಳಾದ ಪ್ರೊ| ಕೆ. ವೆಂಕಟರಾಮಪ್ಪನವರು ಶ್ರೇಯಃ ಪ್ರಾರ್ಥನೆ ಮಾಡಿದರು. ಡಾ| ಹಾ.ಮಾ. ನಾಯಕ್, ಪ್ರೊ| ಕು.ಶಿ. ಹರಿದಾಸ ಭಟ್, ಶ್ರೀ ಐರ್ಯ ಲಕ್ಷ್ಮೀನಾರಾಯಣ ಆಳ್ವ ಮೊದಲಾದವರು ಪ್ರೊ| ಭಟ್ಟರ ಬಗ್ಗೆ ಮಾತಾಡಿದರು.

ಪ್ರೊ| ಭಟ್ಟರು ತನ್ನ ಕುರಿತು ತೋರಿದ ಆತ್ಮೀಯತೆಗೆ ಕೃತಜ್ಞತೆಸಲ್ಲಿಸುತ್ತಾ, "ಗುರುಗಳು, ಸ್ನೇಹಿತರು ಪ್ರಕಾಶಕರು ನನ್ನನ್ನು ಪ್ರಕಾಶಕ್ಕೆ ತಂದರು. ಮಿತ್ರರ ಪ್ರೋತ್ಸಾಹ ಪ್ರಭಾವ ನನ್ನ ಸ್ವಭಾವವನ್ನು ಬದಲಿಸಿ ಇಷ್ಟು ಕಾರ್ಯ ಮಾಡಿಸಿದುದು'' ಎಂದು ಹೇಳಿದರು.

ಅಧ್ಯಕ್ಷ ಶ್ರೀ ಹೆಗ್ಗಡೆಯವರು ಪ್ರೊ| ಭಟ್ಟರಿಗೆ ಮಂಜುನಾಥ ಸ್ವಾಮಿಯ ಹಾಗೂ ಧರ್ಮದೇವತೆಗಳ ಶ್ರೀ ರಕ್ಷೆ ದೊರೆಯಲೆಂದು ಹಾರೈಸಿದರು.

●

ಬಳಸಿ ಬಾಯಿ ಬಿಡುವದಕ್ಕಿಂತ ಉಳಿಸಿ ಗಳಿಸುವುದೇ ಲೇಸು.

○ ○ ○

In the Court of the Munsif of Bantwal, S. K.

Ex. Case No. 88/71 in O. S. No. 39/69

Between:

K. Venugopal Naik — Decree-Holder

and

Shanthiraja Ajila and others —Judgement-Debtors

NOTICE

To

1) Devaraja Ajila-(J.D.No.4) S/o Laxmimathi Jain.
2) Rajarathna, (J. D. No. 5) D/o Padmavathi.

Both are permanently residing in Kadeshwalya village of Bantwal Taluk. P. O. Kadeshwalya. S. K.

Please take notice that in the above suit the execution petitioner (Decree-Holder) has applied for the sale of the immoveable properties belonging to you and fully described in the sale proclamation and 14th March 1972 has been fixed for settling terms of the proclamation of sale granting permission to the Petitioner to bid and set off.

(By order of Court)

Sd|—P. Narayana Bhat
Advocate for Decree.Holder.

19—2—72.

(ಎರಡನೇ ಪುಟದಿಂದ)

'ಯಾವುದದು ನೀನು ಯೋಚಿಸಿದ ಹೆಸರು?'

'ನೀವು ಮನುಷ್ಯರೊಳಗೆ ಸಿಂಹಪ್ರಾಯರು, ನಮ್ಮ ಕುಮಾರ ಶತ್ರುಗಳಿಗೆ ಮಾತ್ರ ಸಿಂಹದಂತಿದ್ದು, ಉಳಿಕೆಯವರಿಗೆ ಪ್ರಿಯನಾಗಿರಬೇಕು. ಅದ್ದರಿಂದ 'ಅರಿಕೇಸರಿ' ಎಂದಿಟ್ಟರಾಗದೇ?'

೦೦ ೦೦ ೦೦

ಈ ನೂರಾರು ನೆನಪುಗಳು ನರಸಿಂಹನ ಚಿತ್ತಭಿತ್ತಿಯಲ್ಲಿ ಮೂಡಿ ಮಾಯವಾದುವು.

ಅವುದನ್ನೂ ಅರಿಯದ ಅರಮನೆಯ ಪುರೋಹಿತರು ಅವನಿಂದ ಉತ್ತರ ನಿರೀಕ್ಷಿಸುತ್ತ ನಿಂತಿದ್ದರು.

'ಪುರೋಹಿತರೇ, ಶಿಶುವಿಗೆ ಅರಿಕೇಸರಿ ಎಂದು ಹೆಸರಿಡುವ. ಇದು ಅವಳು ಬದುಕಿದ್ದಾಗ ಸೂಚಿಸಿದ ಹೆಸರು. ಆ ಹೆಸರಿಟ್ಟರೆ ಅವಳ ಆತ್ಮಕ್ಕೂ ತೃಪ್ತಿ.'

ಹೀಗೆ ನುಡಿದು ನರಸಿಂಹ ಪುರೋಹಿತರನ್ನು ಬೀಳ್ಕೊಟ್ಟು ಸ್ನಾನದ ಮನೆಗೆ ನಡೆದ.

೪

ಮೆಲ್ಲಗೆ, ಬಹುಮೆಲ್ಲಗೆ ತಿಂಗಳೆರಡು ಕಳೆಯಿತು.

ಕಾಲಗತಿಯಲ್ಲಿ ನಿಜಕ್ಕೂ ಯಾವ ಬದಲಾವಣೆಯೂ ಆಗಿರಲಿಲ್ಲ. ಎಂದಿನಂತೆಯೇ ಅದು ಉರುಳುತಿತ್ತು.

ಮನಸ್ಸಿನಲ್ಲಿ ಹುದುಗಿದ್ದ ಭಾರ, ಕಾಲ ಮಂದಗತಿಯಿಂದ ಕ್ರಮಿಸುತ್ತದೆ ಎಂಬ ಅನುಭವವನ್ನು ಮಾತ್ರ ತಂದುಕೊಡುತ್ತದೆ. ರಾಜ ಪರಿವಾರಕ್ಕೂ ಆಗಿದ್ದುದು ತದನುರೂಪದ ಅನುಭವ.

ದುಃಖದಿಂದಾಗಿ ಅವರಿಗೆ ಹೊತ್ತು ಹೋಗಿದ್ದು ತಿಳಿಯಲಿಲ್ಲ.

ಹೊತ್ತೇನೋ ಚಲಿಸುತಿತ್ತು. ಚಲಿಸಿದ್ದು ತಿಳಿಯುತ್ತಿರಲಿಲ್ಲ.

ರಾಜ ಪರಿವಾರದವರು ಕ್ರಮ ಕ್ರಮವಾಗಿ ಜಾನಕಿಯ ಸಾವನ್ನು ಮರೆಯಲಾರಂಭಿಸಿದರು. ಹೊಸ ಉತ್ಸಾಹದಿಂದ ತಮ್ಮ-ತಮ್ಮ ಕೆಲಸಗಳಲ್ಲಿ ನಿರತರಾದರು. ಅಂತಹ ಒಂದು ಅನಾಹುತ ನಡೆಯಲಿಲ್ಲವೇನೋ ಎನ್ನುವಂತೆ ವರ್ತಿಸಲಾರಂಭಿಸಿದರು.

ನಿಧಾನವಾಗಿ ಹೊಸ ಜೀವಕಳೆ ತುಂಬಿ ಕೊಂಡಿತು.

ನರಸಿಂಹನೂ ಬಹುವಾಗಿ ಪ್ರಯತ್ನಿಸಿದ. ಮರೆಯಲೆಂದು ನೂರು ಹವ್ಯಾಸಗಳಲ್ಲಿ ಮನಸ್ಸನ್ನು ತೊಡಗಿಸಿದ. ದಿನದ ಬಹುಭಾಗವನ್ನು ಒಂದಲ್ಲ ಒಂದು ಕೆಲಸದಲ್ಲಿ ಆತ ಕಳೆಯಲು ಮನಸ್ಸು ಮಾಡಿದ. ಆದರೆ ಮನಸ್ಸು ಮಾತ್ರ ಹಿಡಿದ ಕೆಲಸದಲ್ಲಿ ಗಟ್ಟಿಯಾಗಿ ನಿಲ್ಲುತ್ತಿರಲಿಲ್ಲ.

ಚಿತ್ತ ಸ್ವಾಸ್ಥ್ಯವಿಲ್ಲದಾಗ ಚಿತ್ತೈಕಾಗ್ರತೆ ಬರುವುದಾದರೂ ಹೇಗೆ?

ಅನ್ನ ನಿದ್ರೆಯನ್ನು ಕಾಣದೆ ಅವನ ದೇಹ ಕಡ್ಡಿಯಾಯಿತು. ಕಣ್ಣಿನ ಸುತ್ತ ಕರಿಯ ನೆರಳು ಕಾಣಿಸಿ ಕೊಂಡಿತು. ತುಂಬಿಕೊಂಡ ಕೆನ್ನೆಗಳು ಗುಳಿ ಬಿದ್ದುವು. ಯಾವ ಸಮಾಧಾನೋಕ್ತಿಗೂ ನೋವಿನ ಉಪಶಮನ ಮಾಡುವುದು ಆಗದೆ ಹೋಯಿತು.

ಜಾನಕಿಯನ್ನು ಆತ ಹೀಗೆ ಹಚ್ಚಿಕೊಂಡಿದ್ದ ಎಂಬುದರ ಅರಿವು ಉಳಿಕೆಯವರಿಗೆ ಆದುದು ಆಗಲೇ!

ಸಂಜೆ ಎಂಟರ ಸಮಯ ಇರಬಹುದು. ನರಸಿಂಹ ಒಬ್ಬನೇ ತನ್ನ ಅರಮನೆಯ ವಿಶಾಲವಾದ ಹಜಾರದಲ್ಲಿ ಶತಪಥ ತಿರುಗುತಿದ್ದ. ಕಂಡ ವಸ್ತುವಿನಲ್ಲಿ ಕೈಯಿಟ್ಟು, ಅದನ್ನೊಮ್ಮೆ ಎತ್ತಿಕೊಂಡು ಕೆಳಗಿಡುತ್ತಿದ್ದ.

ಅವನ ಎಲ್ಲ ವ್ಯವಹಾರ ಯಾಂತ್ರಿಕವಾಗಿತ್ತು.

ಮುಟ್ಟಿದ ಯಾವ ವಸ್ತುವೂ ಅವನ ಮನಸ್ಸನ್ನಾಕರ್ಷಿಸಲಿಲ್ಲ. ಸ್ಪರ್ಶಿಸಿದ ಪ್ರತಿ ವಸ್ತುವೂ ಜಾನಕಿಯ ಜ್ಞಾಪಕ ತಂದು ಕೊಟ್ಟು ಅವನಲ್ಲಿ ಅನಾಸಕ್ತಿಯನ್ನು ಹುಟ್ಟಿಸುತಿತ್ತು.

ಬೀರುವಿನ ಬಾಗಿಲು ತೆರೆದರೆ ಅಲ್ಲಿ ಕಂಡುವು-ಅವಳ ವಸ್ತ್ರಾಲಂಕಾರಗಳು. ತಿಜೋರಿಯನ್ನು ತಿರುಗಿಸಿದರೆ, ಅಲ್ಲಿ ಕಣ್ಣಿಗೆ ಬಿದ್ದವು—ಅವಳ ಆಭರಣಗಳು. ದೀಪದ ಮುಂದೆ ಪ್ರಕಾಶದಲ್ಲಿ ಹೊಳೆಯುತ್ತಿದ್ದ ಅವುಗಳು ಅವನನ್ನು ಅಣಕಿಸುತಿದ್ದುವು. ಆತ ಅಸಹ್ಯವಾದ ವೇದನೆಯನ್ನನನುಭವಿಸಿದ.

ದೊಪ್ಪನೆ ಕುರ್ಚಿಯೊಂದರಲ್ಲಿ ಕುಳಿತು, ತಲೆಯನ್ನು ಗಟ್ಟಿಯಾಗಿ ತನ್ನೆರಡು ಕೈಗಳಿಂದಲೂ ಒತ್ತಿ ಹಿಡಿದುಕೊಂಡ. ತಲೆ ಒಡೆದು ಹೋಗುವಂತೆ ಸಿಡಿಯುತ್ತಿತ್ತು.

ಮನಸ್ಸು—ನಿಗ್ರಹಿಸಲು ಯತ್ನಿಸಿದಷ್ಟು ವ್ಯಗ್ರವಾಗುತ್ತಿತ್ತು.

ಸ್ಥಿಮಿತಕ್ಕೆ ತಂದುಕೊಳ್ಳಲೇ ಬೇಕೆಂಬ ದೃಢನಿರ್ಧಾರದಿಂದ, ಕಣ್ಣುಗಳನ್ನು ಮೇಜಿನ ಮೇಲೆ ಅರ್ಧ ಬಿಚ್ಚಿಟ್ಟ ಗ್ರಂಥದ ಮೇಲೆ ಹಾಯಿಸಿದ.

ಸ

ವರ್

ಪರ್

ಣ

ದುಃಖ ಬಂದಾಗ ಉದ್ವಿಗ್ನಗೊಳ್ಳದೆ, ಸುಖ ಬಂತೆಂದು ಹರ್ಷಿಸದೆ, ಸದಾ ಸಮ ಸ್ಥಿತಿಯಲ್ಲಿರು.

ಈ ಸಾಲುಗಳನ್ನು ಮತ್ತೊಮ್ಮೆ, ಮಗುದೊಮ್ಮೆ ಹತ್ತಾರು ಬಾರಿ ಆತ ಓದಿದ.

ಅದರಿಂದ ಭಾರವಾಗಿದ್ದ ಹೃದಯ ಹಗುರಾಯಿತು.

ಎಷ್ಟು ಹೊತ್ತು ಈ ಮಾತುಗಳನ್ನು ಮೆಲುಕು ಹಾಕುತ್ತ ಕುಳಿತನೋ ಅವನಿಗೆ ತಿಳಿಯದು.

'ಆರೋಗಣೆ ಸಿದ್ಧವಾಗಿದೆ. ಆರಿ ಹೋದೀತು. ಬಡಿಸಲೇ?'

ಹಜಾರದ ಬಾಗಿಲ ಸಂದಿಯಲ್ಲಿ ನಿಂತುಕೊಂಡು ಯಾರೋ ಅವನನ್ನು ಊಟಕ್ಕೆ ಕರೆದರು.

ಜಾನಕಿ ಬದುಕಿದ್ದಷ್ಟು ದಿನವೂ ರಾಜಕಾರಣದ ಗುಂಗಿನಲ್ಲಿ ಮೈಮರೆತಿದ್ದ ಅವನನ್ನು ಹೀಗೆ ಊಟಕ್ಕೆಬ್ಬಿಸುತ್ತಿದ್ದಳು

ಹೀಗೆ ಕರೆದಾಗ ಅವಳ ನೆನಪು ಅವನಿಗೆ ಬಾರದಿರಲಿಲ್ಲ.

ಅವಳು ಜೀವಂತವಿದ್ದರೆ ಇಂದೂ ಅವನನ್ನು ಆರೋಗಣೆಗೆ ಬರಮಾಡಿಕೊಳ್ಳುತ್ತಿದ್ದಳು. ಕೈಹಿಡಿದು ಕರೆದೊಯ್ಯುತಿದ್ದಳು.

ಆದರೆ ಇಂದು—?

ಅವಳಿರಲಿಲ್ಲ.

ಅವಳಿರಲಿಲ್ಲ ನಿಜ!

ಆದರೂ ಅದೇ ಅಕ್ಕರೆ, ಮಾರ್ದವತೆ ತುಂಬಿದ ಧ್ವನಿ.

ಅದು ತೀರ ಅಪರಿಚಿತವಾದ ಧ್ವನಿ. ಹಿಂದೆಂದೂ ಕೇಳದ ಧ್ವನಿ. ಅವನಿಗೆ ತಿಳಿದ ಹಾಗೆ ಅವನ ಪರಿವಾರದಲ್ಲಾರಿಗೂ ಇಲ್ಲದ ಧ್ವನಿ. ಹೊಸ ಬಳಿರುವಂತೆ ಕಂಡಿತು.

ಅವಳನ್ನಾರು ಕೆಲಸಕ್ಕೆ ನಿಯೋಜಿಸಿದರು.

ಈ ಅನುಮಾನ ಅವನನ್ನು ಬಾಧಿಸದಿರಲಿಲ್ಲ.

ಆತ ಇನ್ನೂ ಕುಳಿತ ಕುರ್ಚಿಗೆ ಅಂಟಿಕೊಂಡಿದ್ದ.

'ಪ್ರಭುಗಳು ದಯ ಮಾಡಿಸುತ್ತೀರಾ' ಬಾಗಿಲ ಬಳಿ ನಿಂತಿದ್ದ ಕೋಮಲ ಧ್ವನಿಯಾಕೆ ವಿನಯದಿಂದ ಪ್ರಾರ್ಥಿಸಿದಳು. ಎರಡನೆಯ ಬಾರಿಗೆ ಕರೆದಾಗ ಆ ಮಧುರ ಸ್ವರದೊಡನೆ ತೇಲಿ ಬಂತು ತೊಟ್ಟ ಬಳೆಗಳ ಕಿಂಕಿಣಿ ರವ.

ನರಸಿಂಹ ಕುಳಿತಲ್ಲಿಂದೆದ್ದ.

ಭೋಜನ ಗೃಹಕ್ಕೆ ತೆರಳಲನುವಾದ.

ಹಜಾರವನ್ನು ದಾಟಿ ಭೋಜನ ಗೃಹಕ್ಕೆ ಹಾದು ಹೋಗುವಾಗ, ತನಗೆ ಬೆನ್ನು ಹಾಕಿ ತನ್ನಿಂದ ಅನತಿ ದೂರದಲ್ಲಿ ನಡೆದು ಹೋಗುತ್ತಿದ್ದ ಅಪರಿಚಿತ ಸ್ತ್ರೀಯನ್ನು ನೋಡಿದ. ಗಾಳಿಯಲ್ಲಿ ಆಕೆ ತೇಲಿ ಹೋಗುತ್ತಿರುವಂತೆ ಕಂಡಿತು.

ಆ ನಡೆಯಲ್ಲೊಂದು ಸೊಗಸು, ನವೀನತೆ ಅವನಿಗೆ ಕಂಡಿತು.

ನರಸಿಂಹ ಭೋಜನ ಶಾಲೆಯನ್ನು ಪ್ರವೇಶಿಸಿ ತನಗಾಗಿ ಹಾಸಿದ್ದ ಮೆಲ್ಲಾಸನದ ಮೇಲೆ ಕುಳಿತ. ಆಕೆ ಅತನ ಮುಂದು ಬೆಳ್ಳಿಯ ಚಂಬು ತುಂಬ ನೀರು ತಂದಿಟ್ಟಳು. ಭಂಗಾರದ ತಾಟೊಂದನ್ನು ಹಾಕಿದಳು. ಆ ತಟ್ಟೆಯ ಸುತ್ತ ಬೆಳ್ಳಿಯ ನಾಲ್ಕು ಪುಟ್ಟ ಬಟ್ಟಲುಗಳನ್ನಿರಿಸಿದಳು. ತಯಾರಿಸಿದ ವಿಧ ವಿಧದ ಪದಾರ್ಥಗಳನ್ನು ಅವುಗಳಲ್ಲಿ ಬಡಿಸಿದಳು. ಮಲ್ಲಿಗೆಯ ಹೂವಿನಂತಿದ್ದ—ಸುವಾಸನೆಯ ಅಕ್ಕಿಯಿಂದ ತಯಾರಿಸಿದ ಅನ್ನವನ್ನು ನೀಡಿದಳು.

ಮಾಡಿದ್ದ ಅಡುಗೆ ರುಚಿಯಾಗಿತ್ತು.

ಹಸಿವಿಲ್ಲದವರನ್ನೂ ಉಣ್ಣುವಂತೆ ಮಾಡುವ ರುಚಿಯಾದ ಅಡುಗೆ.

ಆ ಪದಾರ್ಥಗಳಿಂದೇಳುವ ವಾಸನೆಯಿಂದ—ಉಣದೆಯೇ ಅಡುಗೆ ರುಚಿಯಾಗಿತ್ತೆಂದು—ಹೇಳಬಹುದು.

ನರಸಿಂಹ ಮುಖವೆತ್ತದೆ, ಅತ್ತಿತ್ತ ತಿರುಗದೆ ಉಣಲಾರಂಭಿಸಿದ.

'ಹುಳಿಯನ್ನಿಷ್ಟು ಬಡಿಸಲಾ'

——

'ಮುಳುಗಾಯಿಯ ಮೊಸರು ಬಜ್ಜಿ ಇಷ್ಟು'

——

'ಆಲೂ ಪಲ್ಯ'

——

'ಗಸಗಸೆಯ ಪಾಯಸ'

——

'ಕುಡಿಯುವುದಕ್ಕಿಷ್ಟು ಸಾರು ತುಂಬಿ ತರಲಾ'

——

ಒಂದಕ್ಕೂ ನರಸಿಂಹ ಉತ್ತರಿಸಲಿಲ್ಲ. ಸಾಕು—ಬೇಕು ಹೇಳಲಿಲ್ಲ. ಬಡಿಸಿದ್ದನ್ನು ಪ್ರಯಾಸದಿಂದ ಉಣ್ಣುತಿದ್ದ.

(ಮುಂದುವರಿಯುವುದು)

NAVAYUGA 24-2-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಮಕ್ಕಳಿಗೆ ಕಥೆ—

ಕೋಶಾಧಿಕಾರ

ಲೇಖಕರು:- ಶ್ರೀ "ನವಗಿರಿನಂದ"

ಮಗಧ ದೇಶದಲ್ಲಿ ಸೋಮನೆಂಬ ರಾಜನಿಗೆ ಬುದ್ಧಿವಂತನಾದ ಖಜಾನೆಯ ಅಧಿಕಾರಿಯೊಬ್ಬನಿದ್ದ. ಅವನು ಬುದ್ಧಿವಂತ ಮಾತ್ರವಲ್ಲದೆ ಪ್ರಾಮಾಣಿಕನೂ, ಮಿತವ್ಯಯಿಯೂ ಆಗಿದ್ದ. ಅವನು ತುಂಬ ಮುದುಕನಾದುದರಿಂದ ಆ ಪದವಿಗೆ ಇನ್ನೊಬ್ಬನನ್ನು ನಿಯಮಿಸಬೇಕಾಯಿತು. ಅದಕ್ಕೆ ತಕ್ಕವನನ್ನು ಹೇಗೆ ಆರಿಸಿಕೊಳ್ಳುವುದೆಂದು ರಾಜನು ಮುಖ್ಯ ಮಂತ್ರಿಯೊಂದಿಗೆ ಆಲೋಚನೆ ಮಾಡಿದನು. ಅದಕ್ಕೊಂದು ಉಪಾಯವನ್ನು ಕಂಡುಹಿಡಿದು, ನಗರದಲ್ಲಿ ಈ ರೀತಿಯಾಗಿ ಒಂದು ಡಂಗುರ ಹಾಕಿಸಿದರು.

"ಆಸ್ಥಾನದಲ್ಲಿ ಒಂದು ಮುಖ್ಯ ಪದವಿಗೆ ತಕ್ಕವರೊಬ್ಬರು ಬೇಕು. ವಿದ್ಯಾವಂತರಾದ ಯುವಕರು ರಾಜರ ಸಭೆಗೆ ಬರತಕ್ಕದ್ದು. ರಾಜರು ಕೆಲವು ಪ್ರಶ್ನೆಗಳನ್ನು ಕೇಳುವರು. ಅದಕ್ಕೆ ಸರಿಯಾದ ಉತ್ತರ ಕೊಟ್ಟವರಿಗೆ ಬಹುಮಾನ ಕೊಡುವರು. ಪರೀಕ್ಷೆಯಲ್ಲಿ ಗೆದ್ದವರಿಗೆ ಪದವಿ ಕೊಡುತ್ತಾರೆ."

ಎಲ್ಲರೂ ಇಂತಹ ದಿನ ಬರತಕ್ಕದ್ದೆಂದೂ ಡಂಗುರ ಸಾರಲಾಯಿತು. ಆ ಪ್ರಕಾರ ನೂರು ಐವತ್ತು ಮಂದಿ ಯುವಕರು ರಾಜಸಭೆಗೆ ಬಂದರು ಎಲ್ಲರೂ ವಿದ್ಯಾವಂತರೇ. ಮಂತ್ರಿ ಅವರನ್ನೆಲ್ಲ ಪ್ರತ್ಯೇಕಪ್ರತ್ಯೇಕವಾಗಿ ಕರೆಯಿಸಿ, ಕೆಲವು ಪ್ರಶ್ನೆಗಳನ್ನು ಕೇಳಿದನು. ಅವರೊಳಗೆ ಹತ್ತು ಮಂದಿಯನ್ನು ಮಾತ್ರ ಆರಿಸಿ ಇಟ್ಟುಕೊಂಡು ಉಳಿದವರನ್ನು ಚಿಕ್ಕ ಪುಟ್ಟ ದಕ್ಷಿಣೆ ಕೊಡಿಸಿ, ಮನೆಗೆ ಕಳುಹಿಸಿದನು.

ಅನಂತರ ಮಂತ್ರಿ ಆ ಹತ್ತು ಮಂದಿಯನ್ನು ಕರೆದುಕೊಂಡು ದೇವಸ್ಥಾನದ ಬಳಿಗೆ ಹೋದನು. ಅಲ್ಲಿ ಕೆಸರು ತುಂಬಿದ ಒಂದು ಚಿಕ್ಕ ಗದ್ದೆ ಇತ್ತು. ಆ ಗದ್ದೆ ದಾಟಿ ಬಿಟ್ಟರೆ ದೇವಾಲಯ.

ಮಂತ್ರಿ ಹತ್ತು ಮಂದಿ ಯುವಕರನ್ನು ನೋಡಿ, 'ನೀವು ಭೂಮಾತೆಗೆ ಸೇವೆ ಮಾಡುವಿರೆಂಬ ಶ್ರದ್ಧೆಯಿಂದ ಕೆಸರಿನಲ್ಲಿ ಇಳಿದು ಗದ್ದೆಯನ್ನು ದಾಟಿರಿ.' ಎಂದನು.

ಹಾಗೆಯೆ ಹತ್ತು ಮಂದಿಯೂ ಆಚೆಗೆ ದಾಟಿದರು. ಅವರ ಪಾದಗಳ ಮೇಲೆ ಮೊಣಗಂಟಿನವರೆಗೂ ಗಟ್ಟಿ ಕೆಸರು ಅಂಟಿಕೊಂಡಿತು.

ಅಲ್ಲಿ ಹತ್ತು ತಂಬಿಗೆಗಳಲ್ಲಿ ನೀರು ತುಂಬಿ ಸಾಲಾಗಿ ಇಡಲ್ಪಟ್ಟಿದ್ದವು. ಒಂದೊಂದು ತಂಬಿಗೆಯ ಮೇಲೆಯೂ ತೆಳ್ಳಗಿನ ಹಲಗೆ ತುಂಡೊಂದು ಮುಚ್ಚಲ್ಪಟ್ಟಿತ್ತು.

ಮಂತ್ರಿ ಅವರನ್ನು ನೋಡಿ 'ನೀವು ಒಬ್ಬೊಬ್ಬರೂ ಈ ತಂಬಿಗೆಯನ್ನು ತೆಗೆದುಕೊಂಡು, ಅಲ್ಲಿ ಬೇರೆ ಬೇರೆಯಾಗಿರುವ ಒಂದೊಂದು ತಡಿಕೆ ಕೋಣೆಗೆ ಹೋಗಿ ಕಾಲು ತೊಳೆದುಕೊಂಡು ಬನ್ನಿ' ಎಂದನು.

ಮಂತ್ರಿ ತೋರಿಸಿದಲ್ಲಿ ತಡಿಕೆಗಳಿಂದ ಬೇರೆ ಬೇರೆ ಹತ್ತು ಕೋಣೆಗಳಿದ್ದುವು. ಒಂದರೊಳಗೆ ಇದ್ದವರಿಗೆ ಇನ್ನೊಂದು ಕೋಣೆ ಕಾಣುವುದಿಲ್ಲ.

ಹತ್ತು ಮಂದಿ ಯುವಕರೂ ತಂಬಿಗೆ ತೆಗೆದುಕೊಂಡು ಆ ಕೋಣೆಯೊಳಗೆ ಹೋಗಿ ಕಾಲು ತೊಳೆದುಕೊಂಡು ಬಂದರು. ಅವರಲ್ಲಿ ಇಬ್ಬರು ಮಾತ್ರವೇ ಒಂದು ಚೂರೂ ಕೆಸರಿನ ಪಸೆ ಇಲ್ಲದ ಹಾಗೆ ಶುಭ್ರವಾಗಿ ಕಾಲು ತೊಳೆದುಕೊಂಡಿದ್ದರು.

ಉಳಿದವರು 'ಈ ನೀರು ಸಾಲದು;— ಇಷ್ಟೊಂದು ನೀರು ಹೇಗೆ ಸಾಕು?–ಇನ್ನೊಂದು ತಂಬಿಗೆ ನೀರು ಕೊಡಿಸಿ–ಕೆರೆಗೆ ಹೋಗಿ ತೊಳೆದುಕೊಂಡು ಬರುತ್ತೇನೆ' ಹೀಗೆ ಒಬ್ಬೊಬ್ಬರು ಒಂದೊಂದು ಅಡಚಣೆ ಹೇಳಿದರು.

ಅಂಥವರೆಲ್ಲರಿಗೂ ಒಂದೊಂದು ಬೆಳ್ಳಿ ದಕ್ಷಿಣೆ ಕೊಟ್ಟು ಮನೆಗೆ ಕಳುಹಿಸಿ ಬಿಟ್ಟನು ಮಂತ್ರಿ.

ಉಳಿದ ಇಬ್ಬರನ್ನು ಕುರಿತು ಮಂತ್ರಿ "ತಂಬಿಗೆ ನೀರಿನಲ್ಲಿ ಹೇಗೆ ಕಾಲು ತೊಳೆದುಕೊಂಡಿರಿ?" ಎಂದು ಕೇಳಿದ.

"ತಂಬಿಗೆಯ ಮೇಲೆ ಮುಚ್ಚಿದ ಹಲಗೆಯ ಅಂಚಿನಿಂದ ಕೆಸರನ್ನೆಲ್ಲ ಗೀರಿ ತೆಗೆದು ಇದ್ದ ನೀರಿನಲ್ಲೇ ತೊಳೆದುಕೊಂಡೆವು" ಎಂದು ಉತ್ತರವಿತ್ತರು.

"ಸರಿ. ನೀವಿಬ್ಬರೂ ಈಗ ದೇವಾಲಯದೊಳಗೇ ದೇವರನ್ನು ಧ್ಯಾನಿಸಿ ಕೊಂಡಿರಿ. ರಾತ್ರಿಯಲ್ಲಿ ನಮ್ಮ ಸೇವಕನು ತೋರಿಸುವ ಕೋಣೆಯೊಳಗೇ ಮಲಗಿರಿ. ಬೆಳಿಗ್ಗೆ ನಿಮ್ಮ ಮನೆಗೆ ಹೋಗಿ, ಮಧ್ಯಾಹ್ನದ ಮೇಲೆ ರಾಜಾಸ್ಥಾನಕ್ಕೆ ಬನ್ನಿರಿ" ಎಂದು ಹೇಳಿ ಮಂತ್ರಿ ಹೊರಟು ಹೋದನು.

ಇಬ್ಬರು ಯುವಕರೂ ಆ ದೇವಾಲಯದೊಳಗೇ ಕುಳಿತರು ರಾತ್ರಿಯಲ್ಲಿ ಸೇವಕನು ಇಬ್ಬರಿಗೂ ಬೇರೆ ಬೇರೆ ಕತ್ತಲೆ ಕೋಣೆಯನ್ನು ತೋರಿಸಿದನು. ತಮ್ಮ ಧೈರ್ಯವನ್ನು ಶೋಧಿಸಲಿಕ್ಕೇ ಹೀಗೆ ಮಾಡುತ್ತಿದ್ದಾರೆನಿಸಿತು ಅವರಿಗೆ ಅವರು ಆ ಕೋಣೆಯೊಳಗೆ ಹೊಕ್ಕ ಕೂಡಲೇ ಸೇವಕನು ಬಾಗಿಲು ಹಾಕಿ ಹೊರಗಿನಿಂದ ಚಿಲಕ ಹಾಕಿದನು.

ಇಬ್ಬರೂ ಕತ್ತಲೆಯಲ್ಲಿ ತಡವಿನೋಡಿಕೊಂಡು ಬಟ್ಟೆ ಹಾಸಿಕೊಂಡು ಮಲಗಿದರು. ಬೆಳಗಾದ ಕೂಡಲೇ ಸೇವಕ ಬಾಗಿಲು ತೆಗೆದ. ಕೋಣೆಯೊಳಗೆ ಬೆಳಕು ಹರಿಯಿತು.

ಇಬ್ಬರೂ ತಮ್ಮ ತಮ್ಮ ಮನೆಗೆ ಹೋಗಲು ಸಿದ್ಧರಾದರು. ಅಷ್ಟರೊಳಗೆ ಒಬ್ಬ ಸೇವಕ ಓಡೋಡಿ ಬಂದು, "ನೀವಿಬ್ಬರೂ ಇಲ್ಲೇ ಇರಬೇಕಂತೆ. ಮಹಾಮಂತ್ರಿಗಳ ಆಜ್ಞೆ. ಅವರೇ ಬರುತ್ತಿದ್ದಾರೆ" ಎಂದ.

ನೋಡುತ್ತಿದ್ದ ಹಾಗೆ ಸೇವಕ ಪರಿವಾರಗಳೊಂದಿಗೆ ಮಂತ್ರಿಯೂ ಬಂದನು. ಸೇವಕರು ಯುವಕರಿಬ್ಬರಿಗೂ ಹೊಸ ಪಂಚೆಗಳನ್ನು ಕೊಟ್ಟರು "ನಮ್ಮ ಇದಿರಿನಲ್ಲಿಯೇ ನಿಮ್ಮ ಹಳೆಯ ದುಸ್ತುಗಳನ್ನು ತೆಗೆದು ಈ ಹೊಸ ಪಂಚೆ ಉಟ್ಟುಕೊಳ್ಳಿರಿ" ಎಂದ ಮಂತ್ರಿ.

ಒಬ್ಬನು ಮಾತ್ರವೇ ಹೊಸ ಪಂಚೆಯನ್ನು ಉಟ್ಟುಕೊಂಡು ಹಳೇ ಪಂಚೆಯನ್ನು ಜಾರಿಸಿಕೊಂಡನು.

ಇನ್ನೊಬ್ಬನು—"ಹಾಗೆ ನನಗೆ ಅಭ್ಯಾಸವಿಲ್ಲ. ಮರೆಗೆ ಹೋಗಿ ಉಟ್ಟುಕೊಂಡು ಬರುತ್ತೇನೆ" ಎಂದ.

ಕೂಡಲೇ ಮಂತ್ರಿ ಸೇವಕರಿಗೆ ಸನ್ನೆ ಮಾಡಿದನು. ಸೇವಕರು ಆ ಎರಡನೇಯವನ ಪಂಚೆಯನ್ನು ಶೋಧಿಸಿದಾಗ, ಅವನು ಟೊಂಕದೆಡೆಯಲ್ಲಿ ಮರೆಸಿಟ್ಟುಕೊಂಡ ನಾಲ್ಕಾರು ಚಿನ್ನದ ನಾಣ್ಯಗಳು ಹೊರಬಿದ್ದುವು.

ಅವರಿಬ್ಬರೂ ಮಲಗಿದ್ದ ಕತ್ತಲೆ ಕೋಟಡಿಯಲ್ಲಿ ಕೇಳುವವರಿಲ್ಲದ ಹಾಗೆ ಚಿನ್ನದ ನಾಣ್ಯಗಳನ್ನು ಚೆಲ್ಲಿಸಿದ್ದನು ಮಂತ್ರಿ.

ಎರಡನೆಯವನನ್ನು ಮನೆಗೆ ಕಳಿಸಿ ಬುದ್ಧಿಶಾಲಿಯೂ, ಮಿತವ್ಯಯಿಯೂ, ಪ್ರಾಮಾಣಿಕನೂ ಆದ ಮೊದಲನೆಯವನಿಗೇ ಖಜಾನೆಯ ಅಧಿಕಾರದ ಪದವಿ, ಅಂದರೆ ಕೋಶಾಧಿಕಾರವು ಕೊಡಲ್ಪಟ್ಟಿತು.

● ●

ಅಂತೋನ್ ಚೇಕವ್‌ರ ಟಿಪ್ಪಣಿ ಪುಸ್ತಕಗಳಿಂದ

ಸತ್ಯ ಹೊರಬರುತ್ತದೆಯೆಂದು ಹೇಳುತ್ತಾರೆ. ಆದರೆ ಇದು ನಿಜವಲ್ಲ.

o o o

ದೇವರೆ, ನನಗೆ ಗೊತ್ತಿಲ್ಲದ ಅಥವಾ ಅರಿಯದ ದರ ಕುರಿತು ನಾನು ಮಾತನಾಡುವುದೂ ಇಲ್ಲ, ಖಂಡಿಸುವುದೂ ಇಲ್ಲ.

o o o

ನಟನ ಹತ್ತಿರ ಹಣವಿದ್ದಾಗ ಆತ ತಂತಿಗಳನ್ನೇ ಬಿಡುತ್ತಾನೆ, ಪತ್ರಗಳನಲ್ಲ.

o o o

ಮನೆಯಲ್ಲಿ ಬೆನ್ನು ಚಪ್ಪರಿಸಿ ಪೋಷಿಸುತ್ತಿರುವ ಯಜಮಾನರನ್ನು ನಾಯಿಗಳು ಅಷ್ಟು ಹಚ್ಚಿಕೊಳ್ಳುವುದಿಲ್ಲ, ಆದರೆ ಅವುಗಳನ್ನು ಹೊಡೆಯುವ ಅಡುಗೆಯವನನ್ನು ಹೆಚ್ಚು ಹಚ್ಚಿಕೊಳ್ಳುತ್ತವೆ.

o o o

ಮೂರ್ಖರ ಪ್ರಶಂಸೆಗೆ ಪಾತ್ರರಾಗುವುದಕ್ಕಿಂತ ಅವರಿಂದ ನಾಶಗೊಳ್ಳುವುದೇ ಮೇಲು.

o o o

ಏಕಾಂಗಿತನದ ಬಗ್ಗೆ ಹೆದರಿಕೆಯಾಗುತ್ತಿದ್ದರೆ, ಮದುವೆಯಾಗಬೇಡಿ.

o o o

ತನ್ನ ಜೀವನದ ಉದ್ದಕ್ಕೂ ಶ್ರೀಮಾನ್ ಕ್ಷ ಪ್ರಖ್ಯಾತ ಹಾಡುಗಾರರಿಗೆ, ನಟರಿಗೆ, ಲೇಖಕರಿಗೆ ಛಂಡ ಪತ್ರಗಳನ್ನು ಬರೆದ: "ನೀವೇನೋ ಕಲ್ಪಿಸುತ್ತೀರಿ, ದಗಾಕೋರರೆ, ವಂಚಕರೆ ಹೀಗೆ" ಏನೇನೋ–ಅನಾಮಿಕನಾಗಿ.

o o o

ನಿಮಗೆ ಬಾಯಾರಿಕೆಯಾದಾಗ ಇಡೀ ಸಮುದ್ರವನ್ನೇ ಕುಡಿದು ಬಿಡುತ್ತೇನೆನ್ನುತ್ತೀರಿ. ಅದು ನಂಬಿಕೆ. ಕುಡಿಯಲಾರಂಭಿಸಿದಾಗ ಒಂದೆರಡು ಲೋಟ ಮುಗಿಸಲು ಸಾಕಾಗುತ್ತದೆ. ಅದು ವಿಜ್ಞಾನ.

o o o

ಪ್ರಸಿದ್ಧ ತಂದೆಯ ಮಗ ಕ. ಅವನು ಸಮರ್ಥ ವ್ಯಕ್ತಿಯೆ. ಅವನು ಏನೇ ಮಾಡಲಿ, ಜನ ಹೇಳುತ್ತಿದ್ದರು: ಆದರೂ ಆತ ತಂದೆಯ ಸಮನಾಗಲಾರ. ಒಮ್ಮೆ ಒಂದು ಕಾರ್ಯಕ್ರಮದಲ್ಲಿ ಆತ ಭಾಗವಹಿಸಿದ. ಪ್ರತಿಯೊಬ್ಬರೂ ಅವನ ಕಲಾಪವನ್ನು ಕಂಠೋಕ್ತವಾಗಿ ಪ್ರಶಂಸಿಸಿದರು. ಆದರೆ ಅವನ ಬಗ್ಗೆ ಹೇಳಿದರು. ಇನ್ನೂ ಆತ ತನ್ನ ತಂದೆಯಲ್ಲ. ಆತ ಮನೆಗೆ ಬಂದು ಮಲಗಲು ತಯಾರಾದಾಗ ತಂದೆಯ ಭಾವ ಚಿತ್ರದ ಕಡೆಗೆ ನೋಡಿದ. ಮತ್ತು ಆತನ ಕಡೆಗೆ ತನ್ನ ಬಿಗಿಮುಷ್ಟಿಯನ್ನು ಎತ್ತಿದ.

o o o

ನಮ್ಮ ಸಂತಾನದವರು ಸುಖವಾಗಿರಲೆಂದು ಜೀವನವನ್ನು ಮಾರ್ಪಡಿಸುವುದಕ್ಕೆ ಸಾಧ್ಯವಿರುವುದೆಲ್ಲವನ್ನೂ ನಾವು ಮಾಡುತ್ತೇವೆ. ಆದರೂ ಅವರು ಮಾಮೂಲಾದ ಮಾತನ್ನೇ ಹೇಳುತ್ತಾರೆ; ಈ ಮೊದಲೇ ಚೆನ್ನಾಗಿತ್ತು, ಜೀವನವು ಇಂದು ನಿನ್ನೆಗಿಂತ ಕೆಟ್ಟಿದೆ.

o o o

ಇತಿಹಾಸವೆಂದರೆ ಅರಸರ ಮತ್ತು ಕಾಳಗಗಳ ಕಥೆಯಾಗಬಾರದು, ವಿಚಾರ ಕಲ್ಪನೆಗಳ ಚರಿತ್ರೆಯಾಗಬೇಕು. ●

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

Edited, Printed & Published by K. B. Shetty at the Navayuga Press, Udipi, S. India.

ನವಯುಗ

ಸಂಪುಟ ೫೦
ಸಂಚಿಕೆ ೨೬

NAVAYUGA

2-3-1972

ಮತದಾನದಲ್ಲಿ

ವಿವೇಚನೆ-ವಿವೇಕ ಅತ್ಯವಶ್ಯ

ಶ್ರೀ ದೇವರಾಜ ಅರಸರು ಕೇಂದ್ರದ ಚುನಾವಣಾ ಪ್ರಣಾಳಿಕೆಗೆ ಮತ್ತೆರಡು ಅಂಶಗಳನ್ನು ಸೇರಿಸಿದರು. ಇದನ್ನು ಪೂರಕ ಪ್ರಣಾಳಿಕೆಯೆಂದು ಕರೆದರು. ಮೊದಲನೆಯದು ಮಹಾಜನ ವರದಿಯನ್ನು ಇದ್ದಕ್ಕಿದ್ದಂತೆ ಕಾರ್ಯಗತಗೊಳಿಸುವುದು; ಮತ್ತೊಂದು ಕಾವೇರೀ ನೀರಿನ ಸಮಸ್ಯೆಯನ್ನು ಗೌರವಯುತವಾಗಿ ಪರಿಹರಿಸುವುದು.

ಇದೀಗ ಶ್ರೀಮತಿ ಗಾಂಧಿಯವರು ರಾಜ್ಯದ ಹಲವಾರು ಕ್ಷೇತ್ರಗಳಲ್ಲಿ ಮಿಂಚಿನ ದರ್ಶನ ನೀಡಿ ಬಿರುಗಾಳಿಯಂತೆಯೇ ಬೀಸಿ ಹೋದರು. ಇವರ ಸಂಪೂರ್ಣ ಲಾಭ ಗಳಿಸುವುದು, ಪಕ್ಷವನ್ನು ವಿಜಯ ಪಥದತ್ತ ಒಯ್ಯುವುದು ಇನ್ನು ದೇವರಾಜರ ಜವಾಬ್ದಾರಿ.

ಚುನಾವಣೆಗೆ ಮೊದಲು ಇನ್ನೂ ಕೆಲವು ಕ್ಷೇತ್ರಗಳಿಗೆ ಭೆಟ್ಟಿ ನೀಡುವ ಸಾಧ್ಯತೆಯ ಬಗ್ಗೆ ಭರವಸೆಯಿತ್ತಾದರೂ ಶ್ರೀಮತಿ ಗಾಂಧಿಯವರದನ್ನು ನಿರಾಕರಿಸಿದ್ದಾರೆ. ಆದುದರಿಂದ ಶ್ರೀ ದೇವರಾಜರ ಹೊಣೆಗಾರಿಕೆ ಮತ್ತಷ್ಟು ಹೆಚ್ಚಿತು.

ಮೊದಲ ತುತ್ತಿಗಿರುವ ತೃಪ್ತಿ ಸೂಚ್ಯಂಕ ಮುಂದಿನ ತುತ್ತುಗಳಿಗಿರುವುದಿಲ್ಲ. ಶ್ರೀಮತಿ ಗಾಂಧಿಯವರಿಗಿದ್ದ ಭೆಟ್ಟಿಗಿದ್ದ ಶಕ್ತಿ ಎರಡನೆಯ ಭೆಟ್ಟಿಗಿರುವುದು ಸಾಧ್ಯವಿಲ್ಲ. ಹಾಗಾಗಿ, ಶ್ರೀ ಅರಸರು ತನ್ನ ಪಕ್ಷದ ಗೌರವವನ್ನು ಉಳಿಸಿಕೊಳ್ಳಲು ತುಂಬ ಶ್ರಮ ವಹಿಸಬೇಕಾಗಿದೆ; ಅವರು ಚುನಾವಣಾ ರಂಗದಿಂದ ದೂರವುಳಿದವರಾದರೂ ಅದೇ ಉದ್ದೇಶ್ಯದಿಂದ.

ಶ್ರೀಮತಿ ಗಾಂಧಿ ಮತ್ತವರ ಪಕ್ಷದ ಸುಭದ್ರ ರಾಜ್ಯ ಸರಕಾರದ ಬಯಕೆ ಸರ್ವಾಧಿಕಾರ ಪ್ರಿಯತೆಯ ನಿದರ್ಶನವೆನ್ನುತ್ತಾರೆ ಅವರ ವಿರೋಧಿಗಳು. ಸುಭದ್ರ ಸರಕಾರಗಳನ್ನು ಉರುಳಿಸಲು ಅವರು ಪ್ರಯತ್ನಿಸಿದರು ಎಂದು ಆರೋಪಿಸುತ್ತಾರೆ ಅವರು.

ಪ್ರಧಾನಿ ಬಯಸುವುದು ಸುಭದ್ರ ಸರಕಾರವನ್ನಲ್ಲ, ತನ್ನ ಕೈಗೊಂಬೆಯ ಸರಕಾರವನ್ನು ಎಂದು ಬಹಿರಂಗಗೊಳಿಸುತ್ತಾರೆ, ರಾಜ್ಯದ ಸಿಂಡಿಕೇಟಿಗರು. ಅಸ್ಸಾಮು, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿದ್ದ ಸುಭದ್ರ ಮುಖ್ಯಮಂತ್ರಿಗಳನ್ನು ಗದ್ದುಗೆ ಇಳಿಸಿದರು. ಕರ್ನಾಟಕ– ಗುಜರಾತ– ಉತ್ತರ ಪ್ರದೇಶಗಳ ತನ್ನದಲ್ಲದ ಸರಕಾರಗಳನ್ನು ಉರುಳಿಸಿದರು—ವಿಧಾನ ಸಭಾ ನಾಯಕತ್ವಕ್ಕೆ ದೆಹಲಿಯಿಂದೇಕೆ ಸೇಥಿಯವರನ್ನು ಭೋಪಾಳಕ್ಕೆ ಕಳಿಸಿದರು? ಸಿದ್ಧಾರ್ಥ ಶಂಕರ ರಾಯ್ ಅವರು ಡಿಲ್ಲಿ ಬಿಟ್ಟು ಕಲಕತ್ತೆಗೆ ಮರಳುವಂತೇಕೆ ಆದೇಶ ನೀಡಿದರು?

ತನ್ನ ಕೈಗೊಂಬೆ ಸರಕಾರದ ರಚನೆಯಷ್ಟೇ ಪ್ರಧಾನಿಯ ಇಂಗಿತ. ಆದುದರಿಂದ ಕರ್ನಾಟಕದಲ್ಲಿ ತಮಗೇ ಮತ ನೀಡಿ, ತಮ್ಮ ಸಮಾಜವಾದಿ, ಪ್ರಗತಿಶೀಲ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಬೆಂಬಲ ನೀಡಿ—ಇದು ಸಿಂಡಿಕೇಟಿನ ಬೇಡಿಕೆ.

ರಾಜ್ಯಗಳಿಗೆ ಹೆಚ್ಚಿನ ಅಧಿಕಾರವಿದ್ದರೆ ಸುಧಾರಣೆಗಳನ್ನು ಕ್ಷಿಪ್ರವಾಗಿ ಸಾಧಿಸುವುದು ಸಾಧ್ಯವೆಂದು ಶ್ರೀ ವೀರೇಂದ್ರ ಪಾಟೀಲರು ಹೇಳುತ್ತಾರೆ. ಗಡಿ ವಿವಾದ - ನೀರಿನ ವಿವಾದಗಳಲ್ಲಿ ಕೇಂದ್ರ ರಾಜ್ಯಕ್ಕೆ ಅನ್ಯಾಯವಾಗುವಂತಹ ನೀತಿ ತಳೆದಿದೆಯೆಂದು ದೂರುತ್ತಾರೆ.

ಆದರೆ ಇವೆಲ್ಲವುಗಳಿಗೂ ದೇವರಾಜರು ಪಾಟೀಲರನ್ನೇ ಬೊಟ್ಟು ಮಾಡುತ್ತಾರೆ. ರಾಜ್ಯ ಸರಕಾರದ ಕರ್ತವ್ಯ ನಿರ್ವಹಿಸಲು ಮತ್ತು ಸಮರ್ಥ ಆಡಳಿತ ನೀಡುವುದಕ್ಕೆ ಈಗಿನ ಸಂವಿಧಾನ ನೀಡಿರುವ ಅಧಿಕಾರಗಳು ಪರ್ಯಾಪ್ತವಿದೆಯೆಂದು ಶ್ರೀ ಅರಸರು ಅಭಿಪ್ರಾಯ ಪಡುತ್ತಾರೆ. ಶಿಕ್ಷಣ, ಭೂಸುಧಾರಣೆ ಮೊದಲಾದ ಕೆಲವು ಅಂಶಗಳಲ್ಲಿ ಕೇಂದ್ರ—ರಾಜ್ಯಗಳೆರಡಕ್ಕೂ ಅಧಿಕಾರವಿರಬೇಕಾದದ್ದು ಅಗತ್ಯವೆಂಬುದು ಅವರ ಅಚಲ ನಿಲುವು.

ಕೇಂದ್ರವು ನೀಡುತ್ತಿರುವ ಹಲವಾರು ನೆರವುಗಳನ್ನು ರಾಜ್ಯ ಸರಕಾರವು ಸಂಪೂರ್ಣ ಪಡೆದು ಕೊಳ್ಳದೆ 'ಕೇಂದ್ರವು ರಾಜ್ಯವನ್ನು ಮಲತಾಯಿಯಂತೆ ನೋಡುತ್ತಿದೆ' ಎಂದು ದೂರುವುದು ಸೋಜಿಗವೆನ್ನುತ್ತಾರೆ ಶ್ರೀ ಅರಸರು.

ನೀರಿನ ವಿವಾದದ ಬಗ್ಗೆ ಶ್ರೀ ಅರಸರ ವ್ಯಾಖ್ಯೆ ಸರಳ. ಅತ್ಯುತ್ತಮವಾದ ಒಂದು ಮೊಕದ್ದಮೆಯನ್ನು ಅತ್ಯಂತ ಅಸಮರ್ಪಕವಾಗಿ ನಿರ್ವಹಿಸಿದರು—ಇದು ವೀರೇಂದ್ರ ಪಾಟೀಲರ ಮೇಲಿನ ಗಂಭೀರವಾದ ಆರೋಪ. ಸಮಸ್ಯೆಯ ಪ್ರಾಥಮಿಕ ಜ್ಞಾನವೂ ಇಲ್ಲದವರು ಅದನ್ನು ಬಿಡಿಸಲು ಮುಂದಾಗುವುದೆಂತು? ಎಂದವರು ಪ್ರಶ್ನಿಸುತ್ತಾರೆ.

'ಹೇಮಾವತಿ ಜಲಾಶಯಕ್ಕೆ ಒಪ್ಪಿಗೆ ಪಡೆಯುವ ಗಡಿಬಿಡಿಯಲ್ಲಿ ಏನೇನೋ ಮಾಡಿ ಸಮಸ್ಯೆಯನ್ನು ನಿರ್ಮಿಸಿಕೊಂಡವರು ಅವರೇ. ಮುಂದೆ ನಮ್ಮೆಲ್ಲರ ಆಕ್ಷೇಪಣೆಗೆ ಕಿವಿಗೊಟ್ಟು, ಒಂದು ಸಮಿತಿ ನೇಮಿಸಿದರು ಹೇಮಾವತಿ ಯೋಜನೆಗೆ ಅಡಿಗಲ್ಲು ಹಾಕಿದ ಮೇಲೆ ಕಾರ್ಯಾರಂಭ ಮಾಡಲು ತಡಮಾಡಿದ್ದೇಕೆ? ಮಂಜೂರಾತಿ ಇನ್ನೂ ದೊರಕಿಲ್ಲ—ಹಾಗಾದರೆ ವಿಳಂಬ ನೀತಿಯೇಕೆ?' ಇದು ಶ್ರೀ ಪಾಟೀಲರ ಪ್ರಾಮಾಣಿಕತೆಗೊಂದು ಸವಾಲು.

ಇದಕ್ಕೆ ಪಾಟೀಲರು ವಿವರಣೆ ನೀಡಬಹುದು—ಕೇಂದ್ರದ ಅನುಮತಿಗಾಗಿ ಕಾದು ಕಾದು ನಿರಾಶೆಯಾಯ್ತು. ರಾಜ್ಯದ ಅಭಿವೃದ್ಧಿಗೆ ಯೋಜನೆಯನ್ನು ಕಾರ್ಯಗತಗೊಳಿಸುವುದು ಅನಿವಾರ್ಯವಾದದ್ದರಿಂದ ತಡವಾಗಿಯಾದರೂ ಆರಂಭ ಮಾಡಲಾಯ್ತು–ಇದು ಅರಸರಿಗೆ ತೃಪ್ತಿಕರವಾಗದು, ಆಗಲೂ ಬಾರದು.

ಗಡಿ ಪ್ರದೇಶದ ಜನರೊಡನೆ ಹೇಗೆ ವ್ಯವಹರಿಸ ಬೇಕೆಂದು ತಿಳಿಯದ ಶ್ರೀ ನಿಜಲಿಂಗಪ್ಪನವರು ಗಡಿಪ್ರಶ್ನೆಯನ್ನೇ ಕೆಡಿಸಿಬಿಟ್ಟರು ಆರೋಪ ಎಸ್ಸೆನ್ನರ ಮೇಲೆ.

ತಮ್ಮ ಚುನಾವಣಾ ಪ್ರಣಾಳಿಕೆಯಿಂದ ಸಿಂಡಿಕೇಟಿಗರನ್ನು ತಾವು ಒಪ್ಪಿಸಬೇಕಾಗಿಲ್ಲವೆಂದ ಶ್ರೀ ದೇವರಾಜರು ತಾವು ಮತದಾರರಿಗೆ ಜವಾಬುದಾರರು ಎಂದು ಹೇಳುತ್ತಾರೆ. ಸಿಂಡಿಕೇಟಿಗರು ಹಳೆಯ ಹಾಡನ್ನೇ ಮತ್ತೆ ಹಾಡುತ್ತಿದ್ದಾರೆ; ನಾವೂ ನಮ್ಮ ಕಂತೆಯಿಂದ ಅಂಥವೇ ಸರಕನ್ನು ಹೊರ ತೆಗೆಯಬೇಕಾಗುತ್ತದೆ–ಎಂಬ ಲಘು ಬೆದರಿಕೆಯನ್ನೂ ಅವರು ಹಾಕಿದರು.

ಚುನಾವಣೆಯ ವೇಳೆ ಮತದಾರರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದಷ್ಟೇ ಮುಖ್ಯ ಕೆಲಸ. ಆದುದರಿಂದಲೇ ಯಾರು ಯಾರಿಗೆ ಯಾವ ಯಾವುದರಲ್ಲಿ ಆಸಕ್ತಿಯಿದೆಯೋ ಅವನ್ನೆಲ್ಲಾ ಪ್ರಣಾಳಿಕೆಯಲ್ಲಿ ಸೇರಿಸುವುದು, ಪ್ರಚಾರ ಭಾಷಣಗಳಲ್ಲಿ ಎತ್ತುವುದು ಅಗತ್ಯ.

ಮತದಾರರ ಹೊಣೆಗಾರಿಕೆ ಎಲ್ಲರಿಗಿಂತ ಹೆಚ್ಚು. ಯಾವುದೇ ಪ್ರಭಾವಕ್ಕೆ ಗುರಿಯಾಗಿ ದಾಕ್ಷಿಣ್ಯ ಮತಿಯಾಗಿ ಮತ ಚಲಾಯಿಸಿದರೆ, ಅದರಿಂದ ಹಾನಿಯಾದೀತು. ಆದುದರಿಂದ ಕೇಂದ್ರವನ್ನು ದುರ್ಬಲಗೊಳಿಸದ, ರಾಜ್ಯದ ಹಿತವನ್ನು ಕಡೆಗಣಿಸದ ಪ್ರಗತಿಶೀಲ—ಸಮಾಜವಾದಿ ಸಮಾಜ ರಚನೆಗೆ ಬದ್ಧವಾದ ಸರಕಾರದ ರಚನೆಗೆ ಅವಕಾಶ ನೀಡಬೇಕು.

ಇಲ್ಲಿ ದಾಕ್ಷಿಣ್ಯ ಸಲ್ಲದು, ವಿವೇಚನೆ ಮತ್ತು ವಿವೇಕ ಅತ್ಯವಶ್ಯ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
148 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಮದುವೆಯೂಟದ ಹೊಸತರಲ್ಲಿ ಜಾನಕಿ ಅವನ ಮುಂದು ಕುಳಿತು, ಅವನನ್ನು ರಮಿಸಿ, ಅವನು ಬೇಡವೆಂದರೂ, ಅಡಿಗೆಯವನಿಗೆ ಬಡಿಸಲು ಹೇಳಿ—ಅವನನ್ನುಣ್ಣಿಸುತ್ತಿದ್ದಳು. ಅದು ಅವನ ಸ್ಮರಣೆಗೆ ಬಂತು—ತನ್ನ ಎಳವೆಯಲ್ಲಿ ತನ್ನ ತಾಯಿ ಈ ರೀತಿ ತನ್ನನ್ನು ವಿಚಾರಿಸಿ ತನಗೆ ಪ್ರಿಯವಾದ್ದನ್ನು ಬಡಿಸುತ್ತಿದ್ದುದೂ ಸ್ಮರಣೆಗೆ ಬಂತು.

ನೆನಪು

ಹಾಳು ನೆನಪು

ನೆನಪಿನ ಸರಮಾಲೆ ಕರುಳನ್ನು ಹಿಂಡಿ ಹಿಪ್ಪೆ ಮಾಡುತ್ತದೆ.

ನೆನಪೇ ಉಳಿಯದಿದ್ದರೆ—? ಎಷ್ಟು ಒಳ್ಳೆಯದು.

ನರಸಿಂಹನಿಗೂ ಹಾಗನಿಸಿತು.

ಹೀಗೆ ಯೋಚಿಸುತ್ತ ಉಣ್ಣುತ್ತಿದ್ದ ನರಸಿಂಹನಿಗೆ, ತುಸು ದೂರದಲ್ಲಿ ನಿಂತುಕೊಂಡೇ ಆಕೆ ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದಳು.

ತಾಟಿನಲ್ಲಿದ್ದ ಅನ್ನ ಬರಿದಾಗುತ್ತಿದ್ದುದನ್ನು ಗಮನಿಸಿ

'ಕೆನೆ ಮೊಸರಿಗಿಷ್ಟು ಅನ್ನ' ಎಂದು ಬೀಸಣಿಗೆಯನ್ನು ಕೆಳಗಿಟ್ಟು ಅಡುಗೆಯ ಮನೆಗೆ ಧಾವಿಸಿದಳು. ಅವಳು ಓಡುವ ರಭಸಕ್ಕೆ, ಅವಳ ಸೀರೆಯ ಸೆರಗು ಅವನ ಮೈ ಸೋಕಿತು.

ಆ ಸ್ಪರ್ಶದಿಂದ ಅವನ ಮೈ ನಡುಗಿತು.

ಆಕೆ ಅನ್ನ ತಂದು ಬಡಿಸಿದಳು. ಬೆಳ್ಳಿಯ ಬಟ್ಟಲಲ್ಲಿದ್ದ ಕೆನೆ ಮೊಸರನ್ನು ಅನ್ನದಮೇಲೆ ಸುರುವಿದಳು.

ನರಸಿಂಹ ಅದನ್ನು ಇನ್ನೂ ಕಲಸುತ್ತಿದ್ದ.

'ಮೊಸರು ಹುಳಿ ಇದೆಯೇ? ರವಷ್ಟು ಹಾಲು ಬಡಿಸಲಾ?'

೦೦ ೦೦ ೦೦

ಆತ ತುಟಿಯೆರಡು ಮಾಡಲಿಲ್ಲ.

ಇಂಪಾದ ಧ್ವನಿಯಲ್ಲಿ ಆಕೆ ಮತ್ತೊಮ್ಮೆ ಅದೇ ಪ್ರಶ್ನೆ ಹಾಕಿದಳು.

ನರಸಿಂಹ ತನ್ನ ಮೌನವನ್ನು ಮುರಿಯಲಿಲ್ಲ.

ಬಡಿಸಿದ್ದನ್ನು ಉಂಡ.

ಆತ ತಟ್ಟೆಯಿಂದ ಕೈ ತೆಗೆಯುತ್ತಿದ್ದಂತೆಯೇ ಆಕೆ ಚಂಬನ್ನು ಕೈಗೆತ್ತಿ ಕೊಂಡಳು. ಅವನ ಕೈಗೆ ಚಂಬಿನಿಂದ ನೀರು ಬಗ್ಗಿಸಿದಳು. ಚಂಬಿನಿಂದ ಧಾರೆ ಧಾರೆಯಾಗಿ ಬಿದ್ದ ನೀರಿನಲ್ಲಿ ನರಸಿಂಹ ತನ್ನ ಕೈ ತೊಳೆದುಕೊಂಡ.

ಏಳುತ್ತಿದ್ದಂತೆಯೇ ಆಕೆ ಅಂಗವಸ್ತ್ರವನ್ನು ಅವನ ಕೈಗೆ ನೀಡಿದಳು.

ಅದನ್ನು ಕೈಗೆ ತೆಗೆದುಕೊಳ್ಳುವಾಗ ಅವನ ಕೈ ಅವಳ ಮುಂಗೈಗೆ ತಗುಲಿತು.

ನರಸಿಂಹನ ಮೈಮೇಲೆ ಹಾವು ಹರಿದಂತಾಯಿತು.

ಕೈ—ಬಾಯಿಗಳನ್ನೊರಸಿ ಕೊಂಡು ಆತ ಹಜಾರಕ್ಕೆ ಬಂದು ತನ್ನ ಓದಿನಲ್ಲಿ ನಿಮಗ್ನನಾದ.

'ಹಳೆ ಬಟ್ಟೆಯನ್ನು ಹೊರಗೆಸೆಯುವಂತೆ, ಆತ್ಮ ಹಳೆ ದೇಹವನ್ನು ಕಳೆದುಳಿಯುತ್ತಾನೆ. ಆತ್ಮ ಅಮರ'

ಆತ್ಮ ಅಮರ.

ದೇಹ ಅಶಾಶ್ವತ—ನಿಜ.

ಆದರೆ ಜಾನಕಿಯ ದೇಹ ಮುಪ್ಪನ್ನು ಕಂಡಿರಲಿಲ್ಲ. ಹಳತಾಗಿರಲಿಲ್ಲ. ಹೊಚ್ಚ ಹೊಸತಾಗಿಯೇ ಉಳಿದಿತ್ತು.

ಅಂತಹ ಸುಂದರ, ಬಂಧುರ ದೇಹವನ್ನು ತೊರೆಯುವ ಬಯಕೆ ಆತ್ಮನಿಗೇಕಾಯಿತು.

ತರ್ಕ ಸರಣಿಯಲ್ಲಿದ್ದ ತೊಡಕನ್ನು ನರಸಿಂಹನಿಂದ ಬಿಡಿಸುವುದಾಗಲಿಲ್ಲ.

ಏನೋ ನ್ಯೂನತೆ ವಾದ ಸರಣಿಯಲ್ಲಿ. ಅದನ್ನು ನರಸಿಂಹ ಗುರುತಿಸಿದ.

ಜಾನಕಿಯ ದೇಹದಲ್ಲಿ ಕೆಲಕಾಲವಿದ್ದು, ಅನಂತ ಅದನ್ನುಳಿದು ಹೋದ ಆತ್ಮ ಎಲ್ಲಿಗೆ ಹೋದ?

ಬೇರೊಂದರಲ್ಲಿ ಸೇರಿ ಕೊಂಡನೇ?

ಸೇರಿ ಕೊಂಡಿದ್ದರೆ ಯಾರಲ್ಲಿ?

ನಿನ್ನೆ ಇದ್ದವರು ಇಂದು ಇರುವುದಿಲ್ಲ. ಅವರು ನಶಿಸಿ ಹೋಗುತ್ತಾರೆ. ಹಾಗೆ ಸತ್ತವರು ತಿರುಗಿ ಹುಟ್ಟಿ ಬರುತ್ತಾರೆಂದು ಒಪ್ಪಿಕೊಂಡರೂ, ಆ ಹೊಸತಾಗಿ ಹುಟ್ಟಿಕೊಂಡವರನ್ನು ಆ ಆತ್ಮಗಳು ಸೇರಿ ಕೊಳ್ಳುತ್ತವೆ ಎಂದು ತೀರ್ಮಾನಿಸಿದರೂ, ವಿಚಾರ ಸರಣಿಯಲ್ಲಿ ದೋಷವಿರುವಂತೆ ಕಂಡಿತು

ಒಟ್ಟು ಆತ್ಮಗಳ ಸಂಖ್ಯೆಯೆಷ್ಟು?

ಹುಟ್ಟುತ್ತಾರೆ– ಸಾಯುತ್ತಾರೆ.

ಸಾಯುತ್ತಾರೆ– ಪುನಃ ಹುಟ್ಟುತ್ತಾರೆ.

ನಿಜ ಸ್ಥಿತಿ ಹಾಗಿದೆಯೇ?

ಸತ್ತವರ ಸಂಖ್ಯೆಗಿಂತಲೂ ಹುಟ್ಟುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಹೆಚ್ಚುತ್ತಿರುವ ಜನ ಸಂಖ್ಯೆಗನುಗುಣವಾಗಿ ಆತ್ಮಗಳೂ ಹೆಚ್ಚುತ್ತ ಹೋಗುತ್ತವೆಯೇ?

ತಾನು ನಡೆಸುತ್ತಿರುವ ಅನುಸಂಧಾನದಿಂದ, ನರಸಿಂಹ ಅವಾಕ್ಕಾದ.

ಬುದ್ಧಿಯ ಕಸರತ್ತು ನಡೆಸುತ್ತಿದ್ದ ನರಸಿಂಹನಿಗೆ ಆಕೆ ಹಜಾರದೊಳಗೆ ಬಂದುದು ತಿಳಿಯಲಿಲ್ಲ. ಆಕೆ ಬಟ್ಟಲಲ್ಲಿ ಹಾಲನ್ನೂ, ತಟ್ಟೆಯಲ್ಲಿ ತಾಂಬೂಲವನ್ನೂ ಹಿಡಿದು ಅವನನ್ನೇ ನೋಡುತ್ತ ದೂರದಲ್ಲಿ ನಿಂತಿದ್ದಳು. ನರಸಿಂಹ ತನ್ನೊಳಗೇ ನಗುವುದನ್ನು ಮುಖಭಾವದಿಂದ ಗ್ರಹಿಸಿ, ಮೆಲ್ಲಗೆ, ಬಹು ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಅವನು ಕುಳಿತ ಕುರ್ಚಿಯ ಬಳಿ ಸಾರಿದಳು.

ಹಾಗೆ ಅವಳು ಬಂದು ನಿಂತುದು ನರಸಿಂಹನಿಗೆ ತಿಳಿಯಲಿಲ್ಲ.

ಆಕೆ "ಪ್ರಭೂ! ಹಾಲು—ತಾಂಬೂಲ" ಎಂದು ಕೈಯಲ್ಲಿದ್ದ ತಟ್ಟೆ ಬಟ್ಟಲನ್ನು ಅವನ ಮುಂದಿರಿಸಿದಳು.

ಮೇಜಿನ ಮೇಲೆ ತಟ್ಟೆಗಳನ್ನಿರಿಸಿ, ಕೈಗಳನ್ನು ಹಿಂದಕ್ಕೆಳೆದುಕೊಳ್ಳುವಾಗ ಅವಳ ಕೈಗೆ ಅವನ ಮೈ ತಾಗಿತು—ಉನ್ನತವಾದ ವಕ್ಷಸ್ಥಳ ತವನ ಭುಜ ಪ್ರದೇಶಕ್ಕೆ ತಗಲಿತು.

ಕುಳಿರ್ಗಾಳಿಯ ಹೊಡೆತಕ್ಕೆ ನಡುಗುವಂತೆ ಅವನ ಸರ್ವಾಂಗ ಕಂಪಿಸಿತು.

ಅಂದಿನ ಒಂದೊಂದು ಘಟನೆಯೂ ಮರೆಯಲೆತ್ನಿಸಿದ್ದ ಜಾನಕಿಯ ನೆನಪನ್ನು ತಂದು ಕೊಟ್ಟು ಅವನನ್ನು ತಿನ್ನುತ್ತಿದ್ದುವು.

ಪೂರ್ವ ಸ್ಥಿತಿಗೆ ಬರಲು ಅವನಿಗೆ ಕೊಂಚಕಾಲ ಹಿಡಿಯಿತು.

'ಕಾಯಿಸಿದ ಹಾಲು ಆರೀತು. ಕಲ್ಲು ಸಕ್ಕರೆ ಬೆರೆಸಿದ್ದೇನೆ. ಸಿಹಿ ಸಾಕೇ?'

ಹೀಗೆ ನುಡಿದು ದೈನ್ಯತೆಯೇ ಮೂರ್ತಿವೆತ್ತು ನಿಂದಂತೆ ಆಕೆ ಅವನ ಮುಂದೆ ಅಣತಿಯನ್ನು ನಿರೀಕ್ಷಿಸುತ್ತ ನಿಂತಳು.

ಅಲ್ಲಿಯ ತನಕವೂ ಆಕೆಯನ್ನು ಸರಿಯಾಗಿ ನೋಡದ ನರಸಿಂಹ ಅವಳನ್ನೊಮ್ಮೆ ಕಣ್ಣೆತ್ತಿ ನೋಡಿದ.

ಅಡಿಯಿಂದ ಮುಡಿಯವರೆಗೂ ಅವಳನ್ನು ನೋಡಿದ.

ಅಲ್ಲಿ ನಟ್ಟ ದೃಷ್ಟಿಯನ್ನು ಅವನಿಂದ ಕೀಳುವುದಾಗಲಿಲ್ಲ.

ಆಕೆ ತನ್ನ ತುಂಬುಗಣ್ಣುಗಳಿಂದ ಅವನನ್ನೇ ನೋಡುತ್ತ ನಿಂತಿದ್ದಳು. ಆ ನೋಟದಲ್ಲಿ ಅವನನ್ನೇ ಸೆರೆ ಹಿಡಿಯುವ ಸಾಮರ್ಥ್ಯವಿತ್ತು.

ತನ್ನ ಅಸ್ಥಿರ ಮನಸ್ಸನ್ನು ಕಂಡು ಅವನಿಗೆ ಕೆಡುಕೆನಿಸಿತು.

ಆಕೆ ಪುನಃ ಹಳೆಯ ರಾಗವನ್ನೇ ಎಳೆದಳು.

ಲೋಟವನ್ನು ಕೈಗೆತ್ತಿಕೊಂಡು ನರಸಿಂಹ ಅದನ್ನು ಬರಿದು ಮಾಡಿದ.

ಆಕೆ ಅವನಿದ್ದೆಡೆಗೆ ತೇಲಿ ಬಂದು, ಅವನು ಬರಿದು ಮಾಡಿದ್ದ ಬಟ್ಟಲನ್ನು ಕೈಗೆ ತೆಗೆದುಕೊಂಡಳು. ಬಲಗೈಯಲ್ಲಿ ಪುನಃ ತಾಂಬೂಲದ ತಟ್ಟೆಯನ್ನು ಅವನ ಮುಂದು ಹಿಡಿದಳು.

ಅವಳ ನಡೆಯಲ್ಲೊಂದು ಮೋಡಿ ಇತ್ತು.

ನಿಂತ ನಿಲುವಿನಲ್ಲೊಂದು ನೃತ್ಯಭಂಗಿ.

ನರಸಿಂಹ ಸುಗಂಧ ಮಿಶ್ರಿತ ತಾಂಬೂಲವನ್ನು ಬಾಯೊಳಗೆ ಹಾಕಿಕೊಂಡ.

ಅವನ ಕಣ್ಣ ಮುಂದು ಅಪೂರ್ವ ರೂಪ ರಾಶಿಯೇ ನಿಂತಂತೆ ಭಾಸವಾಯಿತು.

ಆಕೆ ಅಲೌಕಿಕ ಸುಂದರಿ. ಅನುಪಮ ಲಾವಣ್ಯಮಯಿ.

'ಪ್ರಭುಗಳಿಗೆ ಇನ್ನೇನಾದರೂ ಬೇಕಾಗಿತ್ತೆ' ಆಕೆ ಸಂಕೋಚದಿಂದ ಒಂದೊಂದು ನುಡಿಯನ್ನು ಎಳೆದು ಎಳೆದು ವೈಯ್ಯಾರದಿಂದ ಅವನನ್ನು ನುಡಿಸಿದಳು.

'ಕುಡಿಯುವುದಕ್ಕಿಷ್ಟು ನೀರು ಹಾಸುಗೆಯ ಪಕ್ಕದಲ್ಲಿಡಲು ಭರಮಣ್ಣನಿಗೆ ಹೇಳು.'

'ಭರಮಣ್ಣ ಆಗಲೇ ಹೊರಟು ಹೋದ'

'ಅವನಿಲ್ಲದಿದ್ದರೆ, ಅಡುಗೆಯವನಿಗೆ ತಂದಿಡಲು ಹೇಳು'

'ಅಡುಗೆಯವರು ಆಗಲೇ ಹೊರಟು ಹೋದರು'

'ಯಾರಾದರೂ ತಂದಿಡಲಿ' ಹಾಗೆ ನುಡಿಯುವಾಗ ನರಸಿಂಹನ

(ಹನ್ನೊಂದನೇ ಪುಟ ನೋಡಿರಿ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ನಿಕ್ಸನ್ನರ ಪೀಕಿಂಗ್ ಭೆಟ್ಟಿ ಸಾಧಿಸಿದ್ದೇನು?

ಅಧ್ಯಕ್ಷ ನಿಕ್ಸನ್ನರು ಪೀಕಿಂಗನ್ನು ತಬ್ಬಿಕೊಂಡರು. ಹತ್ತು ಹಲವು ಸಂಗತಿಗಳ ಬಗೆಗೆ ಮಾತಾಡಿದರು; ವಿಚಾರ ವಿನಿಮಯಿಸಿಕೊಂಡರು. ಅವರ ಮಾತುಕತೆ ಯಾವ ದಾರಿ ಹಿಡಿದಿತ್ತು ಎನ್ನುವುದಕ್ಕೆ ಜಂಟಿ ಹೇಳಿಕೆಯ ಸಂಬಂಧ ಭಿನ್ನಾಭಿಪ್ರಾಯ ಹೊರಟ ವರದಿಯೇ ಸಾಕ್ಷಿ ನುಡಿಯುತ್ತದೆ. ಪ್ರಧಾನಿ ಚೌ—ಎನ್—ಲಾಯರೊಡನೆ ತನ್ನ ಮಾತುಕತೆ ತೃಪ್ತಿಕರವಾಗಿತ್ತೆಂದು ಅಧ್ಯಕ್ಷ ನಿಕ್ಸನ್ ತೃಪ್ತಿ ಪಟ್ಟರೇನೋ ನಿಜ; ಆದರೆ ಲಾಯರಿಗೆ ಅಂತಹುದೇ ತೃಪ್ತಿಯಾಗಿದೆಯೇ ಎಂಬುದನ್ನವರು ಬಹಿರಂಗಪಡಿಸಿಲ್ಲ. ನಿಕ್ಸನ್ನರು ಭಾರಿ ಆಸೆ ಹಿಡಿದುಕೊಂಡು ಪೀಕಿಂಗಿಗೆ ಹಾರಿದ್ದು ಎಲ್ಲರಿಗೂ ಗೊತ್ತು. ಅವುಗಳಲ್ಲಿ ಕೆಲವು ಸಿದ್ಧಿಸಿದವೆಂದೂ ಹೇಳಬಹುದು. ಅಮೆರಿಕೆ—ಚೀನಾಗಳು ಇದುವರೆಗೆ ಉತ್ತರ – ದಕ್ಷಿಣ ಧ್ರುವಗಳಂತಿದ್ದವು. ಇವೆರಡರ ನಡುವೆ ವಿನಿಮಯ – ಸಂಪರ್ಕವನ್ನು ಸ್ಥಾಪಿಸಲು, ಅದನ್ನು ಅಭಿವೃದ್ಧಿ ಪಡಿಸಲು ಉಭಯ ಪಕ್ಷಗಳೂ ಸಮ್ಮತಿಸಿರುವುದು ಅಮೆರಿಕೆಗೆ ದೊಡ್ಡ ಸಿದ್ಧಿಯೆನಿಸಿತು. ಇದೇ ರೀತಿಯಲ್ಲಿ ಅಮೆರಿಕ—ಚೀನಾಗಳ ನಡುವೆ ನೇರ ಸಂಬಂಧ ಕಲ್ಪಿಸಲೂ ಲಾಯರು ಒಪ್ಪಿಕೊಂಡಿದ್ದಾರಂತೆ. ಸಾಂಸ್ಕೃತಿಕ—ನಾಗರಿಕ ಮತ್ತು ವಾಣಿಜ್ಯ ವಿನಿಮಯಗಳಿಗಿಂತ ರಾಜ್ಯಕೀಯ ವಿನಿಮಯವೇ ನಿಕ್ಸನ್ನರ ಪ್ರಮುಖ ಉದ್ದೇಶವಾಗಿದ್ದು ಇದೂ ಅಲ್ಪ ಮಟ್ಟಿಗೆ ಸಾಧಿತವಾಗಿದೆಯೆನಿಸುತ್ತದೆ.

ಏಶ್ಯಾ ಖಂಡಕ್ಕೆ ಸಂಬಂಧಿಸಿದ ರಾಜ್ಯಕೀಯ ವಿಚಾರಗಳಲ್ಲಿ ಚೀನಾ—ಮತ್ತು ಅಮೆರಿಕೆಗಳು ಹತ್ತಿರಕ್ಕೆ ಬರುತ್ತವೆ. ಅಥವಾ ಏಕ ವಿಚಾರ ತಳೆಯುತ್ತವೆಯೆಂದರೆ, ಈ ಒಡಂಬಡಿಕೆಯು ಭಾರತ ಮತ್ತು ರಷ್ಯಗಳ ಮಟ್ಟಿಗೆ ಮಾತ್ರ ಪರಿಸೀಮಿತವಿರುತ್ತವೆಯೆಂದೇ ಅರ್ಥ. ವಿಯತನಾಮುದಲ್ಲಿ ಪರಸ್ಪರ ಹೋರಾಡುತ್ತಿರುವವರು, ಪರಸ್ಪರ ನಿಂದಾತ್ಮಕ ಟೀಕೆ ಟಿಪ್ಪಣಿಗಳಲ್ಲಿ ನಿರತರಾಗಿರುವವರು ಒಡಂಬಡಿಕೆ ಸಾಧಿಸಲು ಇಚ್ಛೆ ಪಟ್ಟದ್ದಿಲ್ಲ. ಈಗ ವಿಚಾರ ಸಾಮಂಜಸ್ಯದ ನೆಪದಲ್ಲಿ ವಿಯತನಾಮುದ ದೀರ್ಘಕಾಲದ ಹೋರಾಟದಿಂದ ನಿಕ್ಸನ್ ಹಿಂದೆ ಬರುತ್ತಾರೆಯೇ ಎಂಬುದು ವಿಚಾರಣೀಯ. ಅದೇ ರೀತಿಯಲ್ಲಿ ಎರಡು ಕೋರಿಯಾ ಮತ್ತು ಅದಕ್ಕಿಂತ ಮುಖ್ಯವಾಗಿ ಎರಡು ಚೀನಾ ನೀತಿಯನ್ನು ತ್ಯಜಿಸಲು ಇವರು ಸಿದ್ಧರಾಗಿದ್ದಾರೆಯೆ? ಕೆಂಪು ಚೀನಾದೊಡನೆ ತನ್ನ ಸಂಬಂಧವಾದರೂ ತೈವಾನಕ್ಕೆ ಹಿಂದಿನಂತೆಯೇ ನೆರವು ಮುಂದುವರಿಯುವುದೆಂದು ಅವರು ಘೋಷಿಸಿದ್ದರಿಂದ ಈ ದ್ವಿಮುಖಿ ನೀತಿಯನ್ನು ಬಿಟ್ಟುಕೊಡಲವರು ಸಿದ್ಧರಿಲ್ಲವೆಂದೇ ಹೇಳಬೇಕು. ಅವರ ರಾಜ್ಯಕೀಯ ಸಾಮಂಜಸ್ಯ 'ಎರಡು ಪಾಕಿಸ್ತಾನಗಳ ಹೊಸ ನೀತಿ ನಿರ್ಮಿಸಲು ಉದ್ದೇಶಿಸಿದೆಯೆ? ಅದನ್ನೂ ಹೇಳಲು ಸಾಧ್ಯವಿಲ್ಲ. 'ಬಾಂಗ್ಲಾ ದೇಶ'ದ ಉದಯವನ್ನು ವಾಸ್ತವಿಕ ಸಂಗತಿಯೆಂದು ಒಪ್ಪಿ ಅದಕ್ಕೆ ಮನ್ನಣೆ ನೀಡಲು ಅಮೆರಿಕೆ ನಿರ್ಧರಿಸಿದೆಯೆಂದೂ ಈ ನಿರ್ಧಾರವನ್ನು ಪಾಕ್ ರಾಷ್ಟ್ರಪತಿ ಭುಟ್ಟೋ ಮಹಾಶಯರಿಗೆ ತಿಳಿಸಿದೆಯೆಂದೂ ವರದಿ. ಚೀನಾವೂ ಇದೇ ದಾರಿಯನ್ನು ಮೆಟ್ಟ ಬಹುದು; ಪೀಕಿಂಗಿಗೆ ಭುಟ್ಟೋ ಭೆಟ್ಟಿ ನೀಡಿದಾಗ ಲಾಯರು ವಾಸ್ತವಿಕಾಂಶವನ್ನು ಅಲ್ಲಗಳೆಯಲೆತ್ನಿಸಲಿಲ್ಲ. ನಷ್ಟವಾದ ಸೈನಿಕ ಶಕ್ತಿಯನ್ನು ತುಂಬಿ ಕೊಡುವ ಬಗ್ಗೆ ಮಾತ್ರ ಮಾತಾಡಿದ್ದರು. ಆದುದರಿಂದ ಸದ್ಯ ನಡೆದ ಘಟನೆಯ ಹಿನ್ನೆಲೆಯಲ್ಲಿ ಇನ್ನು ಮುಂದೆ ದುರ್ಘಟನೆಗಳು ನಡೆಯದಂತೆ ಈ 'ಎರಡು ಮಹಾರಾಷ್ಟ್ರ'ಗಳು ಒಂದಾಗಿ ಪ್ರಯತ್ನ ನಡೆಸುತ್ತವೆಯೆ! ಅಥವಾ ಅವುಗಳ ಸಾಮಂಜಸ್ಯ ಒಂದು ಬಿಂದುವಿಗೆ ಮಾತ್ರ ಕೇಂದ್ರೀಕೃತವಾಗುತ್ತದೆಯೆ?

ತನ್ನ ಕುಬೇರ ಭಂಡಾರದಿಂದ ಆರ್ಥಿಕ ನೆರವು ನೀಡುವುದರ ಮೂಲಕ ಅನಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳನ್ನು ತನ್ನ ಮುಷ್ಟಿಯಲ್ಲಿಟ್ಟುಕೊಳ್ಳಬಹುದೆಂದು ಅಮೆರಿಕೆ ಹಿಂದೆ ಭಾವಿಸಿತ್ತು. ಆದರೆ ಅದಕ್ಕೆ ಹಿಂದಿನಿಂದಲೂ ಒಪ್ಪದ ದೇಶವೆಂದರೆ ಭಾರತ, ಸುಯೇಜ ಕಾಲುವೆಯ ರಾಷ್ಟ್ರೀಕರಣದ ವೇಳೆ ಫ್ರಾನ್ಸ್—ಬ್ರಿಟನ್ನುಗಳ ವಿರುದ್ಧ ಅದು ಧ್ವನಿಯೆತ್ತಿದ್ದು, ವಿಯತನಾಮುದ ಸಮರವನ್ನು ಸ್ಪಷ್ಟ ಮಾತುಗಳಿಂದ ಖಂಡಿಸಿದ್ದು ಇದಕ್ಕೆ ನಿದರ್ಶನ. ಆದುದರಿಂದಲೇ ಅಮೆರಿಕೆಯ ಪ್ರಭಾವ ಭಾರತದಿಂದ ದೂರವಾಗಿದೆ. 'ಶರ್ತ ಪೂರ್ಣ ನೆರವನ್ನು ತಿರಸ್ಕರಿಸುವ' ಭಾರತದ ಅಚಲ ನಿರ್ಧಾರದಿಂದ, ಪಾಕಿಗೆ ಶಸ್ತ್ರಾಸ್ತ್ರ ನೀಡುವುದನ್ನು ಅದು ಖಂಡಿಸುತ್ತಲೇ ಬರುತ್ತಿರುವುದರಿಂದ ಹಣದಿಂದ ತನ್ನನ್ನು ಒತ್ತೆಗಿಟ್ಟುಕೊಳ್ಳುವುದು ಅಸಾಧ್ಯವೆಂದು ಅದು ಡಣಾಡಂಗುರ ಸಾರಿದೆ. ಆದುದರಿಂದ ಏಷ್ಯಾದ ಮೇಲೆ ತನ್ನ ಪ್ರಭಾವವನ್ನು ಮತ್ತೆ ಸ್ಥಾಪಿಸಲು ಅಧ್ಯಕ್ಷ ನಿಕ್ಸನ್ನರು ಕೆಂಪು ಚೀನಾದೊಡನೆ ಕೈಕುಲುಕಲು ಮುಂದಾದುದು ಸಹಜವೇ. ಅತ್ತ ಅಮೆರಿಕನ್ನರ ಇತ್ತ ಚೀನೀಯರ ತಾಳ ರಾಗಗಳಿಗೆ ಸರಿಯಾಗಿ ಕುಣಿಯುವ ಪಾಕಿಸ್ತಾನ ಅವರಿಬ್ಬರನ್ನೂ ಕೂಡಿಸುವ ತಂತುವಾದುದೂ ಸಹಜವೇ. ಆದರೆ, ಇದೀಗ ಪಾಕಿಸ್ತಾನ ದಿಕ್ಕು ತಪ್ಪಿದೆ. ಅದು ಆಂತರಿಕ ಕಲಹದಿಂದ ನುಚ್ಚು ನೂರಾಗಿದೆ. ಬಾಂಗ್ಲಾ ಸಿಡಿದು ಹೋಗಿದೆ. ಪಶ್ಚಿಮ ವಲಯದಲ್ಲೂ ಅಂತಃಕಲಹ ದಿನೇ ದಿನೇ ಮಿತಿಮೀರುತ್ತಿದೆ. 'ಶಕ್ತಿಯ ಸಮತೋಲನ'ದ ನೆಪದಲ್ಲಿ, 'ರಾಜ್ಯಕೀಯ ಸಾಮಂಜಸ್ಯ'ದ ಹೆಸರಿನಲ್ಲಿ ಅಮೆರಿಕೆ—ಚೀನಗಳು ಪಾಕಿಸ್ತಾನಕ್ಕೆ ಹೇರಳ ಶಸ್ತ್ರ ಕಳಿಸಿಕೊಡಬಹುದು. ಇದರಿಂದ ಮತ್ತೆ ಅದು ಉನ್ಮತ್ತನಂತೆ ವರ್ತಿಸಬಹುದು.

ಅಧ್ಯಕ್ಷ ನಿಕ್ಸನ್ ತನ್ನ ಪೀಕಿಂಗ್ ಭೇಟಿಯಿಂದೇನು ಸಾಧಿಸಿದರು? ಮುಂದಿನ ಅಧ್ಯಕ್ಷ ಚುನಾವಣೆಯ ಮೇಲೆ ಪ್ರಭಾವ ಬೀರಿ ತನ್ನ ವಿಜಯ ಪಥವನ್ನು ಪರಿಶುದ್ಧಗೊಳಿಸಬೇಕೆಂಬ ಇರಾದೆ ಅವರದ್ದಿತ್ತು. ತನ್ನ—ಚೀನಾಗಳ ನಡುವಣ ಬಹುಕಾಲದ ಪರದೆಯನ್ನು ಹರಿದು ಹಾಕಿದ ಶ್ರೇಯಸ್ಸು ಅವರಿಗೇ ಸೇರಬೇಕು. ಕೆಂಪು ಚೀನಾಕ್ಕೆ ವಿಶ್ವ ಸಂಸ್ಥೆಯಲ್ಲಿ ಸ್ಥಾನಗಳಿಸಲು ಅವರು ನೀಡಿದ ಪ್ರೋತ್ಸಾಹ, ಚೀನಾವನ್ನು 'ಬೃಹತ್ ರಾಷ್ಟ್ರ'ಗಳ ಸಾಲಿನಲ್ಲಿ ಕೂರಿಸಲು ನೆರವಾಯ್ತು. ಏಶ್ಯದ ಬೇರೆ ಬೇರೆ ದೇಶಗಳ ಬಗ್ಗೆ ಚೀನಾ—ಅಮೆರಿಕೆಗಳು ತಳೆದಿರುವ ಭಿನ್ನ ನೀತಿಯಲ್ಲಿ ಸಾಮಂಜಸ್ಯವನ್ನು ಅಮೆರಿಕೆ-ಚೀನಾಗಳು ತಂದುಕೊಳ್ಳಲು ಈ ಭೆಟ್ಟಿ ಸಮರ್ಥವಾದರೆ, ಅದು ಭಾರಿ ಸಾಧನೆ. ಶಕ್ತಿಯ ಸಮತೋಲನ—ಶಸ್ತ್ರಾಸ್ತ್ರಗಳ ನೆರವು-ಇವುಗಳೆಲ್ಲ ಹಳೆಯ ಮಾತುಗಳು; ಸವಕಲು ನಾಣ್ಯಗಳು. ಪರಸ್ಪರ ತಿಳುವಳಿಕೆ, ಗೌರವ ಮತ್ತು ಸಹನಾಶೀಲತೆಯ ಗುಣಗಳು ವಿಶ್ವಶಾಂತಿಗೆ ಪ್ರೇರಕ ಶಕ್ತಿಯಾಗುತ್ತವೆ. ಅವಿಲ್ಲವಾದರೆ ಭೆಟ್ಟಿ ತಾತ್ಕಾಲಿಕ ಪ್ರಯೋಜನ ಸಾಧ್ಯ ಮಾಡುತ್ತದೆ. ವಿಯತನಾಮುದ ನರಹತ್ಯೆ ನಿಲ್ಲುವಲ್ಲಿ ನಿಕ್ಸನ್—ಚೌ ಮಾತುಕತೆ ನೆರವಾದರೆ, ಅದು ಮಹಾಸಾಧನೆ-ಶಾಶ್ವತ ಪ್ರಯೋಜನ.

ವಿಮಾನ ಚೋರರು

ಯೆಹೂದಿ ಆಕ್ರಮಣಕ್ಕೆ ಒಳಗಾದವರ ಸಂಸ್ಥೆಯೊಂದಕ್ಕೆ ಸೇರಿದ ಪೆಲಿಸ್ತೀನದ ವಿಮೋಚನಾ ಹೋರಾಟಗಾರರು ಪಶ್ಚಿಮ ಜರ್ಮನಿಯ ವಿಮಾನ ಸಾರಿಗೆಯ ಸಂಸ್ಥೆಯೊಂದರ ವಿಮಾನವನ್ನು ಅಪಹರಿಸಿದರು; ದೊಡ್ಡ ಮೊತ್ತದ ಹಣವನ್ನು ಪಡೆದು, ಯಾತ್ರಿಕರನ್ನೂ ಸಿಬಂದಿಯನ್ನೂ ವಿಮಾನವನ್ನೂ ಒಂದೆರಡು ದಿನವುಳಿಸಿ, ಮತ್ತೆ ಬಿಟ್ಟುಕೊಟ್ಟರು. ಈ ವಿಮಾನಾಪಹರಣಕ್ಕೆ ಏನು ಕಾರಣವೆಂಬುದು ನಿಚ್ಚಳವಾಗಿ ತಿಳಿದಿಲ್ಲ. ದಿ| ಸೆನೆಟರ್ ರಾಬರ್ಟ್ ಕೆನೆಡಿಯವರ ಮಗನೂ ಈ ವಿಮಾನದಲ್ಲಿದ್ದನು. ರಾಬರ್ಟ್ ಕೆನಡಿಯನ್ನು ಇಸ್ರೇಲ್ ಪರರೆಂದು ಜೋರ್ಡಾನಿನ ಅನುವಂಶೀಯನೊಬ್ಬ ಕೊಲೆ ಮಾಡಿದ್ದನ್ನು ಮರೆಯಬಾರದು. ಹಾಗೆಯೇ ಪಶ್ಚಿಮ ಜರ್ಮನಿಯು ಸಮಿಪ ಪ್ರಾಚ್ಯ ದೇಶಗಳೊಡನೆ ನಿಕಟ ಸಂಬಂಧವನ್ನೂ ಹೊಂದಕೊಡಗಿದೆ. ಪಶ್ಚಿಮ ಜರ್ಮನಿಯ ಸೆರೆಮನೆಗಳಲ್ಲಿ ಇಂದಿಗೂ ಕೆಲ ಅರಬ ಕೈದಿಗಳಿದ್ದಾರೆ–ಇವೆಲ್ಲ ಒಂದೊಂದಾಗಿಯೋ ಒಟ್ಟಾಗಿಯೋ ಅಥವಾ ಹಣದ ಆಸೆಯೋ ವಿಮಾನಾಪಹರಣಕ್ಕೆ ಕಾರಣವಾಗಿರಬಹುದು.

ಮುಖ್ಯ ಸಂಗತಿಯೆಂದರೆ, ವಿಮಾನ ಚೋರರು ಭಾರತದ ನಿಲ್ದಾಣದಲ್ಲಿ ಹತ್ತಿರಬಹುದೆಂಬ ಸಂದೇಹ. ಇದಕ್ಕಾಗಿ ಸಿಬಿಐ ತನಿಖೆ ಮಾಡುತ್ತದೆ; ಆದರೆ, ತನಿಖೆಯಿಂದ ತಿಳಿಯಬಹುದಾದ ಸಂಗತಿಗಳು ತೆಳ್ಳತೆಳ್ಳಗೆ ಮಾತ್ರ. ವಿಮಾನ ನಿಲ್ದಾಣಗಳ ಉಸ್ತುವಾರಿಯಲ್ಲಿ ಎಷ್ಟು ಜಾಗ್ರತೆಯಿದ್ದರೂ ಅದು ಅಲ್ಪವೇ. ಭಾರತದ ವಿಮಾನವೊಂದನ್ನು ಪಾಕ್ ವಿಮಾನ ಚೋರರು ಕದ್ದೊಯ್ದು ಅದನ್ನು ಸಿಡಿಸಿ ಹಾಕಿದ ನಂತರ ಈಗ್ಗೆ ಒಂದೂವರೆ ವರ್ಷಗಳಲ್ಲಿ ನಮ್ಮಲ್ಲಿ ಇಂತಹ ಅಪಹರಣವಾಗುತ್ತಿರುವುದು ಇದೇ ಮೊದಲ ಸಲ. ಇದೀಗ, ಪಾಕಿಸ್ತಾನ–ಭಾರತಗಳ ನಡುವಣ ವಿರಸ ಪರಮಾವಧಿಯನ್ನು ಮುಟ್ಟಿದೆ. ಪಾಕಿಸ್ತಾನ ಪ್ರತೀಕಾರ ಭಾವನೆಯಿಂದ ಕೆರಳಿನಿಂತಿದೆ. ಇದಕ್ಕೆ ಒತ್ತಾಸೆ ನೀಡುತ್ತಿರುವವರೂ ಇದ್ದಾರೆ. ಹಿಂದೆ ದಾರಿ ದರೋಡೆಕೋರರೂ ಸಮುದ್ರಗಳ್ಳರೂ ಎಲ್ಲೆಡೆ ತಮ್ಮ ಕಾರುಬಾರು ನಡೆಸುತಿದ್ದಂತೆ ಇಂದು ವಿಮಾನಚೋರರೂ ಅದೇ ಮಟ್ಟಕ್ಕೆ ಇಳಿಯುವ ಭೀತಿ ಹೆಚ್ಚಿದೆ. ವಿಮಾನ ನಿಲ್ದಾಣಗಳಲ್ಲಿ ಹೆಚ್ಚಿನ ಉಸ್ತುವಾರಿ ವಹಿಸಿದರೆ, ವಿಮಾನಾಪಹರಣಗಳನ್ನು ತಡೆಯುವುದು ಸಾಧ್ಯವಾಗುತ್ತದೆ. ●

ಮಣಿಪಾಲದಲ್ಲಿ ಜಾನುವಾರು ಆಸ್ಪತ್ರೆಯ ಉದ್ಘಾಟನೆ

ತಾ. 22ರಂದು ಮಣಿಪಾಲದಲ್ಲಿ ಗ್ರಾಮೀಣ ಜಾನುವಾರು ಆಸ್ಪತ್ರೆಯನ್ನು ಉಡುಪಿ ತಾಲೂಕು ಅಭಿವೃದ್ಧಿ ಮಂಡಲದ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಜಿಲ್ಲಾ ಪಶುವೈದ್ಯಾಧಿಕಾರಿ ಡಾ| ಜಯಪಾಲರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಆರಂಭದಲ್ಲಿ ಶಿವಳ್ಳಿ ಪಂಚಾಯತ್ ಅಧ್ಯಕ್ಷ ಶ್ರೀ ಟಿ ರಮೇಶ ಪೈಗಳು ಸ್ವಾಗತಿಸಿದರು.

ಶ್ರೀ ಮಧ್ವರಾಜರು ಉದ್ಘಾಟಿಸುತ್ತಾ ಪ್ರತಿ ಗ್ರಾಮಕ್ಕೂ ಶಾಲೆ, ಭಾವಿ, ಆಸ್ಪತ್ರೆ, ಜಾನುವಾರು ಆಸ್ಪತ್ರೆಗಳ ಅವಶ್ಯಕತೆಗಳನ್ನು ವಿವರಿಸಿದರು. ಡಾ| ಜಯಪಾಲರು ಮಾತಾಡಿ ಪಶು ಸಂಗೋಪನಾ ಇಲಾಖೆಯವರ ಸೇವೆಗಳ ಕುರಿತು ವಿವರಣೆ ನೀಡಿದರು.

ಅಂತ್ಯದಲ್ಲಿ ಸಿಂಡಿಕೇಟ್ ಎಗ್ರಿಕಲ್ಚರ್ ಫಾರಂ ಸೇವಾದ ಕಾರ್ಯದರ್ಶಿ ಶ್ರೀ ಕೆ. ಎಂ. ಉಡುಪರು ಧನ್ಯವಾದ ವಿತ್ತರು.

Statement about ownership and other particulars about newspaper: NAVAYUGA

FORM IV (See Rule 8)

1.	Place of publication	...	UDIPI
2.	Periodicity of its publication	...	WEEKLY
3.	Printer's Name	...	K. H. SHETTY
	(whether citizen of India?)	...	Yes
	(Address)	...	Palukote, Udipi.
4.	Publisher's Name	..	K. H. Shetty
	(whether citizen of India?)	...	Yes
	Address	...	Palukote, Udipi.
5.	Editor's Name	...	K. H. SHETTY
	(whether citizen of India?)	...	Yes
	Address	...	Palukote, Udipi.
6.	Names and addresses of individuals who own the newspaper and partners or shareholders holding more than one per cent of the total capital	...	K. H. SHETTY (Prop.)

I, K. H. Shetty, hereby declare that the particulars given above are true to the best of my knowledge and belief.

Dated 1—3—1972.

(Sd) **K H Shetty**
Signature of Publisher.

ಗೇಹರಾಜ್ಯದಲ್ಲಿ

ಬೀದಿ ಬಾಗಿಲಲಿ ಮನೆಯ ಮಾಡಿ....

'ಇನ್ನೇನು?, ಚುನಾವಣೆ ಬಂತೂಂತಾಯ್ತು....'

'ಹ್ಞೂಂ. ಕೆಲವೆಡೆ ಪ್ರಚಾರ ಮುಕ್ತಾಯಗೊಂಡರೆ ಇನ್ನು ಕೆಲವೆಡೆ ಮುಕ್ತಾಯದ ಹಂತದಲ್ಲಿವೆ.'

'ಹೌದೂನ್ನಿ. ಇನ್ನಾದರೂ ಆರಾಮದಿಂದ ನಿದ್ದೆ ಮಾಡಬಹುದೋ ನೋಡಬೇಕು..'

'ಯಾಕೆ ಹಾಗೆಂತೀಯಾ?'

'ಅಲ್ರಿ. ಮತ್ತಿದೇನು? ಕಾರುಗಳಲ್ಲಿ ಮೈಕು ಕಟ್ಟಿಸಿಕೊಂಡು ದಿನಾ ರಾತ್ರಿ ಬೊಬ್ಬೆ ಹಾಕುತ್ತ ಬೀದಿ ಬೀದಿ ಹೋದರೆ ಹೇಗೆ?'

'ಮೈಕಾಸುರನ ಹಾವಳಿ....ಅದಕ್ಕೇನು ಮಾಡೋಂತೀಯಾ? ಪ್ರಜಾತಂತ್ರವನ್ನು ನೆಚ್ಚಿಕೊಂಡ ಮೇಲೆ ಇದನ್ನೆಲ್ಲಾ ಸಹಿಸಿಕೊಳ್ಳಬೇಕು. ಇದೂ ಪ್ರಚಾರ ಮಾಡುವ ಸಾಧನವೊಂದು...'

'ಆಯ್ತು. ಇನ್ನು ನೋಡಿ. ಬೀದಿ ಬಾಗಿಲಲ್ಲಿರುವ ಗೋಡೆಗಳ ಮೇಲೆಲ್ಲ ಭಿತ್ತಿಪತ್ರ—ಮನೆಯೊಡೆಯರ ಅನುಮತಿಯಿಲ್ಲದೆ—ಹಚ್ಚುವುದೂ ಪ್ರಚಾರ ಸಾಧನವಲ್ಲವೆ? ಇವರ ಪ್ರಚಾರಕ್ಕೆ ಆವರ ಗೋಡೆ ತನ್ನ ಸೌಂದರ್ಯವನ್ನು ದಾನಮಾಡಬೇಕು....'

'ಅಲ್ವೆ. ಅದಕ್ಕೆ ಮಾಡೋದೇನು? ಮತ್ತೆ ಭಿತ್ತಿಪತ್ರ ಹಚ್ಚಲು ಪಸಂದಾದ ಸ್ಥಳ ಯಾವುದು? ಗುಡ್ಡದ ಮೇಲೊಂದು ಮನೆಯ ಮಾಡಿ ಹುಲಿಗಂಜಿದಡೆಂತು? ಬೀದಿ ಬಾಗಿಲಲಿ ಮನೆಯ ಮಾಡಿ ಇದಕ್ಕೆಲ್ಲ ಅಂಜುವುದುಂಟೆ?'

'ಅದು ಬಿಡಿ. ನೋಡಿ, ನಾಲ್ಕು ರಸ್ತೆ ಕೂಡುವಲ್ಲಿ ಕೈಕಂಬ ಇದೆಯಲ್ಲಾ? ಅದರಲ್ಲಿ....ಗೆ ಆರು ಕಿ. ಮಿ. ಎಂದು ಬರೆದಿತ್ತು ನೋಡಿ....'

'ಹೌದು, ಹೌದು.... ಅದೇನಿಗ ಬಿದ್ದು ಹೋಯ್ತು? ಅಥವಾ ಅಕ್ಷರ ಸವೆದು ಹೋಯ್ತು?,

'ಕಂಬ ಬಿದ್ದೂ ಇಲ್ಲ. ಅಕ್ಷರ ಸವೆಯಲೂ ಇಲ್ಲ.... ಆದರೆ....'

'ಏನು?'

'ಮತ್ತೇನನ್ನೋದು? ನಮ್ಮ ಚುನಾವಣಾ ಧಾಳಿಗೆ ತುತ್ತಾಗಿದೆ....'

'ಹಾಗಂದರೆ?'

'ಮತ್ತಿನ್ನೇನು? ಕೆಂಪು—ಕಪ್ಪು ಅಕ್ಷರಗಳ ವಿಶಾಲ ಭಿತ್ತಿಪತ್ರವೊಂದನ್ನು ಅದರ ಮೇಲೆ ಅಂಟಿಸಿದ್ದಾರೆ!'

"ಛೆ....ಛೆ....ಇದೇನೂಂತ?"

"ಹೇಳಿ. ಪ್ರಜಾಸತ್ತೆಯಲ್ಲಿ ಇದೂ ಶೀಲಾಂತ. ಅಲ್ಲ. ಸಹಿಸಿಕೊಳ್ಳಬೇಕೂಂತ..'

'ಅಲ್ವೆ. ಇದು....'

'ಅಲ್ಲಿಗೇ ಮುಗೀಲಿಲ್ಲ. ನೋಡಿ.... ತಂತಿಕಂಬದಲ್ಲಿ....ಅವರು ತಮ್ಮ ಜಾಹೀರಾತು ಬೋರ್ಡನ್ನು ತೂಗಹಾಕಿದ್ದಾರಲ್ಲಾ....'

'ಹ್ಞೂಂ. ಬ್ಯಾಂಕುಗಳಲ್ಲು ಇದೆ. ಸಾಮಾನಿನವರಲ್ಲು ಇದೆ....'

'ಅವುಗಳ ಮೇಲೂ ಕೆಲವೆಡೆ ಭಿತ್ತಿಪತ್ರಾಸುರನ ದಾಳಿ ನಡೆದಿವೆ....ಅಲ್ರಿ, ತಮ್ಮ ಪಕ್ಷದ ಭಿತ್ತಿ ಪತ್ರಗಳನ್ನು ಹರಿಯಬಾರದು, ಅಂದಗೆಡಿಸಬಾರದು, ಅವುಗಳ ಮೇಲೆ ಕೊಳಚೆಮೆರೆಯಬಾರದು ಅನ್ನೋರು ಹೀಗೆಲ್ಲಾ ಮಾಡುವುದು ನ್ಯಾಯವೇನು? ಕೊಳಚಾಸುರ....'

'ನ್ಯಾಯಾಂತ ಹೇಗನ್ನೋದು? ಇವೆಲ್ಲಾ ಹುಡಿಯಾಳುಗಳ ಕೆಲಸವಲ್ಲ. ನೋಡು, ಹಚ್ಚುವವರ ಕೈವಾಡ....'

"ಹೌದ್ರಿ, ಹಚ್ಚುವ ಸುರರಿಗೆ ನಿರ್ದೇಶನ ನೀಡಬೇಕಿತ್ತು...."

"ನೀಡಿರ ಬಹುದು..."

'ಅಂತಹ ಬೇಜವಾಬ್ದಾರಿಯವರಿಗೆ ಆ ಕೆಲಸ ಕೊಟ್ಟದ್ದು ಯಾಕೇಂತ?'

'ಅಲ್ವೆ. ನೀನು ಭಾರೀ ದೊಡ್ಡ ಲಾಯರಾಸುರಿಯಂತೆ.ಕ್ರಾಸು ಕೊಶ್ಚನ್ಸು ಹಾಕುತ್ತ ಹೋದರೆ, ಈ ನಿರಪರಾಧಾಸುರ ಏನು ಉತ್ತರ ಕೊಡಬೇಕು? ಅದೇನೋ ಕೆಲವ ಸುರರು ತಿಳಿಯದೆಯೂ ತಪ್ಪು ಮಾಡಬಹುದು....'

"ಅಂದ್ರೆ ಹೇಳಿ, ಪ್ರಜಾಸತ್ತೇಸುರನ ಕೈಯೊಳಗಿದ್ದದ್ದರಿಂದ ಇದೆಲ್ಲಾ ಸಹಿಸಿಕೊಳ್ಳಬೇಕೂಂತ...."

'ಹಾಗಲ್ವೆ. ಮಗು ಬೇಕೊಂತಾದ ಮೇಲೆ, ಅದು ಕೊಡೋ ತ್ರಾಸ ಬೇಡಾಂತ ನ್ನೋಕಾಗುತ್ಯೆ? ಆದ್ದರಿಂದ....'

'ಆಯ್ತಪ್ಪ, ನಮ್ಮ ಪಾರ್ಟಿ ಯಾವಾಗ್ಲೂ ಸೋಲೋದೇ. ಏನು ಮಾಡೋದು ನಾವು ಪಡೆದು ಬಂದದ್ದು. ಇನ್ನೂ ಏನೇನು ಕಾಣಬೇಕಾಗಿದೆಯೋ ಈ ಇಲೆಕ್ಷನ್ ಕಾಲದಲ್ಲಿ?'

'ಮತ್ತೇನು ಕಾಣೋದೆ? ಮನೆ ಗೋಡೆಯಲ್ಲಿ, ಕಂಪೌಂಡು ವಾಲಿನಲ್ಲಿ ಡಾಮರ್ ರೋಡಿನಲ್ಲಿ ಅಲ್ಲಿ ಇಲ್ಲಿ ಎಲ್ಲೆಲ್ಲೂ 'ನಿಮ್ಮ ಓಟು....ನಮ್ಮ ಚಿಹ್ನೆ....' ಇಷ್ಟೆ ಬಿಡು ಇನ್ನೊಂದು ನಾಲ್ಕು ದಿನ ಸಹಿಸಿಕೊಂಡರೆ ಸದ್ಯಕ್ಕೆ ನೆಮ್ಮದಿ ತಾನೆ?'

'ಅಲ್ರಿ, ಸಹಿಸದೆ ಮತ್ತೆ ಮಾಡೋದಾದ್ರೂ ಏನು? ನೋಡಿ ಮುಂದಿನ ಎಪ್ರಿಲ್‌ಗೆ ಒಂಬತ್ತು ಮಂದಿ ರಾಜ್ಯ ಸಭಾ ಸದಸ್ಯರು ನಿವೃತ್ತರಾಗುತ್ತಾರಂತೆ....'

'ನಿವೃತ್ತರಾದರೇನಾಯ್ತು? ಮತ್ತೆ ಚುನಾವಣೆ ನಡೆಯುತ್ತೆ....?

'ಅಲ್ರಿ, ಇವರನ್ನು ಆರಿಸುವುದು ವಿಧಾನ ಸಭಾ ಸದಸ್ಯರಂತೆ....'

'ಹ್ಞೂಂ....ಹೌದು....ಆಗ ಶ್ರೀಮತಿ ಗಾಂಧಿ ರಾಜ್ಯ ಸಭೆಯಲ್ಲೂ ತುಳುಕಾಡುವ ಬಲ ಪಡೆಯ ಬಹುದು....'

'ಮತ್ತೆ ಈಗ?'

'ನೋಡಮ್ಮ ರಾಜ್ಯ ಸಭೆಯ ಸದಸ್ಯ ಬಲ ೨೪೦ ಇತ್ತು. ನೇಫಾಲಯ, ಅರುಣಾಚಲ ಪ್ರದೇಶ ಮತ್ತು ಮಿಜೋ ರಂಗಗಳಿಗೆ ತಲಾ ಒಂದೊಂದು ಸ್ಥಾನವನ್ನು ನೀಡಲು ಇದನ್ನು ೨೪೩ಕ್ಕೆ ಏರಿಸಲಾಯ್ತು..'

'ಸರೀನ್ರಿ. ನ್ಯಾಯವೇ ಇಲ್ಲವಾದರೆ ಆ ಮೂರು ರಾಜ್ಯಗಳನ್ನು ಯಾರು ಕೇಳ್ತಾರೆ?'

'ಇವುಗಳಲ್ಲಿ ಶ್ರೀಮತಿ ಗಾಂಧಿ ಪಕ್ಷ ಪಡೆದಿರುವುದು ಸದ್ಯ ಬರೀ ೧೧೬. ಈಗಲಾದರೂ ೭೮ರಲ್ಲಿ ಒಂದರುವತ್ತು ಗಳಿಸಿದರೆ ಪಸಂದವಾಗಿರುತ್ತೆ ಎಂದು ಆಕೆಯ ಲೆಕ್ಕಾಚಾರ....'

'ಓ, ಈಗ ತಿಳಿಯಿತು ಬಿಡಿ....'

'ಏನು?'

'ಅಲ್ಲ, ಆಕೆ ರಾಜ್ಯಗಳಲ್ಲಿ ಸುಭದ್ರ ಸರಕಾರ ರಚನೆಯ ನೆಪವೊಡ್ಡಿ ತನ್ನ ಪಕ್ಷವನ್ನೇ ಬೆಂಬಲಿಸಿ ಲೋಕಕ್ಕೆ ನಮ್ಮ ಐಕ್ಯವನ್ನು ತೋರಿಸಿ ಕೊಡಬೇಕೆನ್ನುವುದು ಯಾಕೇಂತ....'

'ಹ್ಞೂಂ....ಅದ್ರೆ ಆಕೆಯ ಈ ಅಭಿಪ್ರಾಯ ಭಾರೀ ಚರ್ಚೆಗೆ ಗುರಿಯಾಗಿದೆಯಲ್ಲಾ...'

'ಅಲ್ರಿ ನಮ್ದೇಶದಲ್ಲಿ ಯಾವುದು ಚರ್ಚೆಗೆ ಗುರಿಯಾಗಿಲ್ಲ. ಒಳ್ಳೆಯದನ್ನೂ ಕೆಟ್ಟದ್ದನ್ನೂ ಏಕ ಸಮವಾಗಿ ಟೀಕಿಸುವುದು ನಮ್ಮ ಜನ್ಮಸಿದ್ಧ ಹಕ್ಕು. ಅದನ್ನೇ ನಾವು ಸ್ವಾತಂತ್ರ್ಯವೆಂದು ಬಗೆದಿರೋದು....'

'ಹ್ಞೂಂ....'

'ಹೋಗ್ಲಿ ಬಿಡಿ, ಶ್ರೀಮತಿ ಗಾಂಧಿಯವು ರಾಜ್ಯಗಳ ಸಂಚಾರ ಮಾಡಿ ಓಟು ಯಾಚಿಸಿದ ಮೇಲೆ ಆಕೆ ಗೆಲ್ಲಲೇ ಬೇಕು. ನೋಡಿ ದೇಶದಲ್ಲಿ ಅಂತಹ ವಾತಾವರಣವಿರುವಾಗ. ಆದ್ದರಿಂದ ರಾಜ್ಯ ಸಭೆಯಲ್ಲೂ ಆಕೆ ಬಹುಮತ ಪಡೆಯುತ್ತಾರೆ... ಅದು ಬಿಡಿ, ನೋಡಿ, ಮೊನ್ನೆ ಡಂಬೋಜೆಟ್ ವಿಮಾನವೊಂದು ಅಪಹರಣವಾಯ್ತಂತಲ್ಲಾ?'

'ಹೌದೂನ್ನು. ಅದು ನಮ್ಮ ಪಾಲಂ ನಿಲ್ದಾಣದಿಂದ ಹೊರಟ ೧೫ ಮಿನಿಟುಗಳಲ್ಲಿ ಅಪಹೃತವಾಯಿತೆಂದು ಸುದ್ದಿ'

'ಅದನ್ನು ಏಡನ್ನದಲ್ಲಿ ಬಲಾತ್ಕಾರವಾಗಿ ಇಳಿಸಲಾಯ್ತಂತೆ. ಅಂದ್ರೆ, ವಿಮಾನ ಚೋರರು ಭಾರತದಲ್ಲೇ ವಿಮಾನವೇರಿರಬಹುದೂಂತ....'

'ಇರಬಹುದೂನ್ನು. ಅದಕ್ಕೇ ಸಿ ಬಿ ಐ ತನಿಕೆಗೆ ಆರಂಭ ಮಾಡಿದೆಯಂತೆ....'

'ಅಲ್ರಿ, ವಿಮಾನಾಪಹರಣ ಯಾಕೇಂತ?'

'ಇಸ್ರೇಲದಲ್ಲಿರುವ ಅರಬ ಕೈದಿಗಳನ್ನು ಬಿಟ್ಟು ಬಿಡಬೇಕೆಂಬ ಬೇಡಿಕೆಯಂತೆ.ಆದೇನಿದ್ದರೂ ಚೋರರು ಶರಣು ಬಂದರಂತೆ. ಅಧ್ಯಾಯ ಮುಗಿಯಿತು....'

'ಅಲ್ರಿ, ಇದೇ ರೀತಿಯ ಕಳ್ಳತನ ಮುಂದುವರಿದರೆ....'

'ನಾವ್ಯಾಕೆ ತಲೆ ಕೆಡಿಸಿಕೊಳ್ಳಬೇಕು?'

'ನೋಡಿ, ಕೇಂದ್ರ ಸಚಿವವಂತರು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಪಕ್ಷಾಂತರ ನಿಷೇಧ ಮಸೂದೆ ಮಂಡಿಸಲಿದ್ದಾರಂತೆ...'

'ಇದರಲ್ಲಿ ಹೊಸತೇನೂ ಇಲ್ಲ.'

'ಯಾಕೆ?'

'ಅವರ ಹೊಟ್ಟೆ ತುಂಬಿತು. ಇನ್ನು ಅ

(ಒಂಭತ್ತನೇ ಪುಟ ನೋಡಿರಿ)

In the Court of the Munsiff at Bantwal. South Kanara.

P. &. S. C. No. 2/1972.

Between:-

Duggamma. —*Petitioner.*

It is hereby concerned to all that the above petitioner has filed an application before the *Munsiff* at Bantwal under Section 372 of the Indian Succession Act. She prayed that she is alone entitled to collect the rental of the School building, Higher Elementary Board School of Sujir. in *Pudu* village. If anybody is interested in the said amount and wants to challenge the right of the petitioner, shall appear before the court in person, or through their Advocate on 1-4-1972 at 11 A. M. or else the adove matter will be decided exparte.

(By order of the Court)

P. Shankernarayana

Advocate for *Petitioner.*

Bantwal. 24—2—72

ಪೀಕಿಂಗಿನಲ್ಲಿ

ಶಕ್ತಿ ಸಮತೋಲನದ

ಸವಕಲು ನಾಣ್ಯ ಚಲಿಸೀತೆ?

ಅಧ್ಯಕ್ಷ ನಿಕ್ಸನ್ನರು ಪೀಕಿಂಗಿಗೆ ಹೋದದ್ದು ಯಾಕೆ? ಅಧ್ಯಕ್ಷ ಮಾವೊ—ಪ್ರಧಾನಿ ಚೌ ಅವರನ್ನು ನೀರಸವಾಗಿಯಾದರೂ ಬರಮಾಡಿಕೊಂಡದ್ದು ಯಾಕೆ? ಅವರೊಳಗೆ ಏನು ಮಾತುಕತೆ ನಡೆಯಿತು? ಯಾವ ನಿರ್ಧಾರಕ್ಕೆ ಅವರು ಬಂದರು?

ಈ ಮೊದಲಾದುವು ಯಕ್ಷ ಪ್ರಶ್ನೆಗಳು. ಅವನ್ನು ಉತ್ತರಿಸಲು ನಿಕ್ಸನ್ನರಾಗಲೀ ಮಾವೋ ಪ್ರಭೃತಿಗಳಾಗಲೀ ಅಸಮರ್ಥರು. ಆದರೆ, ಈ ಸಂಬಂಧದಲ್ಲಿ ಊಹಾಪೋಹ ಮಾಡುವುದು ಅಸಾಧ್ಯವಲ್ಲ.

ನಿಕ್ಸನ್ನರ ಯಾತ್ರೆ ಶಾಂತಿಯಾತ್ರೆಯೆಂದೂ ಜಾಗತಿಕ ಶಾಂತಿಗಾಗಿ ಚೀನಾ—ಅಮೆರಿಕೆಗಳು ಒಂದಾಗಿ ಪ್ರಯತ್ನಿಸುತ್ತವೆಯೆಂದೂ ಹೇಳಲಾಗುತ್ತದೆ. ಆದರೆ, ಈ ಯೆರಡು ದೇಶಗಳ ವರ್ತನೆಯನ್ನು ಗಮನಿಸಿದರೆ ಶಾಂತಿ ಶಬ್ದಕ್ಕೆ ಬೇರೆಯೇ ಅರ್ಥ ಬರೆಯ ಬೇಕಾಗುತ್ತದೆ. ಬೇರೆ ಬೇರೆ ದೇಶಗಳಲ್ಲಿ ಪರಸ್ಪರ ಹೋರಾಡುತ್ತಿರುವ ಎರಡು ದೇಶಗಳು ಮೂರನೆಯವರಿಗೆ ಒಂದಾಗಿ ಶಸ್ತ್ರಾಸ್ತ್ರ ಸಹಾಯ ಮಾಡಿ ಇನ್ನೊಬ್ಬರ ಎದುರು ಎತ್ತಿ ಕಟ್ಟುವ ತಮ್ಮೊಳಗೆ ಶಾಂತಿ–ಸಂಧಾನಗಳನ್ನು ಸಾಧಿಸಲಾರದ ದೇಶಗಳು ಜಾಗತಿಕ ಶಾಂತಿಯ ಮಾತಾಡುತ್ತಿರುವುದು ಸೋಜಿಗವಲ್ಲದೆ ಮತ್ತೇನು?

ವಿಯತ್‌ನಾಮದಲ್ಲಿ ಅಮೆರಿಕೆ ನಡೆಸುತ್ತಿರುವ ನರಮೇಧ ನಿಂತು ಹೋಗುವವರೆಗೆ, ಇಂಡೋಚೀನಾ—ಕೊರಿಯಾ ಚೀನಾಗಳ ಬಗೆಗಿನ ಇಬ್ಬಗೆಯ ನೀತಿಯಿರುವವರೆಗೆ ಪೀಕಿಂಗ್—ವಾಷಿಂಗ್ಟನ್ನುಗಳು ಹತ್ತಿರ ಬರುತ್ತವೆಯೆಂದರೆ, ಶಾಂತಿಗಾಗಿ ಜಂಟಿ ಯತ್ನ ನಡೆಸುತ್ತವೆಯೆಂದರೆ ಅದು ಜಾಗತಿಕ ವಂಚನೆಯಾದೀತು.

ಭಾರತದಮೇಲೆ ಅಮೆರಿಕೆಯ ಪ್ರಭಾವ ಹ್ರಾಸವಾಗುತ್ತಿದೆ; ಅದಕ್ಕೆ ಪಾಕಿಸ್ತಾನವನ್ನು ಭಾರತದ ವಿರುದ್ಧ ಎತ್ತಿಕಟ್ಟುವ ಅದರ ನೀತಿಯೇ ಕಾರಣ. ಆದುದರಿಂದ ಭಾರತದೊಲವು ಸಹಜವಾಗಿ ಸೋವಿಯತ್ತಿನತ್ತ ವಾಲಿತು. ಅಮೆರಿಕೆಯು ಶಕ್ತಿಯ ಸಮತೋಲನದ ಹೆಸರಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನು ಪೂರೈಸ್ಸು ಮಾಡುತ್ತ ಬಂದು ಭಾರತದ ಉಪಖಂಡದಲ್ಲಿ ಅಶಾಂತಿಯನ್ನು ಹರಡಿದ್ದು ಮರೆಯಲಾಗದ ಸಂಗತಿ.

ರಶ್ಯ—ಚೀನಾಗಳ ನಡುವಣ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ, ಅವುಗಳ ನಡುವೆ ಉಂಟಾದ ವಿರಸದಿಂದ, ಏಶ್ಯದ ಗಣನೀಯ ದೇಶವಾಗಿ ಬೆಳೆಯಬೇಕೆಂಬ ಚೀನೀಯ ಹೆಬ್ಬಯಕೆಯನ್ನು ಅರಿತುಕೊಳ್ಳಲು ನಿಕ್ಸನ್ ತಡಮಾಡಲಿಲ್ಲ. ಆದುದರಿಂದಲೇ ಅವರು ಚೀನಾವನ್ನು ಏಶ್ಯಾದ 'ಅತ್ಯಂತ ಪ್ರಬಲ ದೇಶ'ವಾಗಿ ರೂಪಿಸಲು ಉತ್ಸಾಹ ತೋರಿದರು.

ಸೋವಿಯತ್ತು— ಭಾರತಗಳಿಗೆ ಎದುರಾಗಿ ಚೀನಾ—ಪಾಕಿಸ್ತಾನಗಳನ್ನು ನಿಲ್ಲಿಸುವ, ತನ್ಮೂಲಕ ಏಶ್ಯದಲ್ಲಿ ತನ್ನ ಅಳಿಯುತ್ತಿರುವ ಪ್ರಭಾವವನ್ನು ಉಳಿಸುವ ಹೇರಾಸೆ ಹೊತ್ತುಕೊಂಡೇ ನಿಕ್ಸನ್ ಪೀಕಿಂಗಿಗೆ ಹೋಗಿದ್ದಾರೆ. ಆದರೆ, ಅವರ ಸಂದರ್ಶನದ ಬಗ್ಗೆ ಪೀಕಿಂಗ್ ತೋರಿದ ಅನಾಸ್ಥೆಯಿಂದ ಅವರು ನೊಂದುಕೊಂಡಿರಲಾರರಾದರೆ, ಮಾವೋ ತನ್ನ ಮುಂದೆ ನಿಕ್ಸನ್ನರನ್ನು ಕಿರಿದು ಮಾಡಿಯೇ ಬಿಟ್ಟರೆಂದು ಹೇಳಬಹುದು.

ನಿಕ್ಸನ್ನರ ಪೀಕಿಂಗ್ ಭೇಟಿಯ ಫಲಶ್ರುತಿಯನ್ನು ಪಾಕ್ ರಾಷ್ಟ್ರಪತಿ ಭುಟ್ಟೋ ಉತ್ಸಾಹದಿಂದ ನಿರೀಕ್ಷಿಸುತ್ತಾರೆ. ಅಂದರೆ ಅವರ ಸಿಂಹಸ್ವಪ್ನವನ್ನು ನನಸು ಮಾಡುವ ಬಗ್ಗೆ ಅಲ್ಲಿ ಪ್ರಸ್ತಾಪ ಬಂದಿರುವುದು ಅಸಂಭವವಲ್ಲ. ಆದುದರಿಂದಲೇ ಅವರು ಹಲವಾರು ಪ್ರಶ್ನೆಗಳನ್ನು ಉತ್ತರಿಸಲು ಪೀಕಿಂಗ್ ದರ್ಶನ ಫಲಶ್ರುತಿಯನ್ನು ಕಾದಿದ್ದಾರೆ.

ಏಶ್ಯಾದಲ್ಲಿ ಶಕ್ತಿಯ "ಸಮತೋಲನ" ಕೆಟ್ಟಿದೆಯೆಂಬುದು ಅಮೆರಿಕೆಗೆ ಎಂದೋ ಮನವರಿಕೆಯಾಗಿತ್ತು. ಅದನ್ನು ಸರಿಪಡಿಸಬಹುದೆಂಬ ನಂಬಿಕೆಯಿಂದಲೇ ಅದು ಪಾಕಿಸ್ತಾನವನ್ನು ಶಸ್ತ್ರಪೂರಣಿಸಿ ಕೊಬ್ಬುವಂತೆ ಮಾಡಿತು. ಆದರೆ, ಬಾಂಗ್ಲಾ ವಿಮೋಚನೆ ಪಾಕ್ ಪರಾಜಯಗಳಿಂದ ಮತ್ತೆ ಶಕ್ತಿಯು ಅಸಮವಾಗಿದೆಯೆಂದು ಅದಕ್ಕೆ ಖಚಿತವಾಗಿದೆ. ಆದುದರಿಂದ ಅವರು ಪಾಕಿನೊಡನೆ ಚೀನವು ಬಯಸುವುದಾದರೆ ಅದಕ್ಕೂ ಸಂಪೂರ್ಣ ಮಿಲಿಟರಿ ನೆರವು ಕೊಡಲು ಸಿದ್ಧರಿದ್ದಾರೆ. ಬರಬಹುದಾದ ಶಸ್ತ್ರಾಸ್ತ್ರಗಳನ್ನು ಚೀನಾ ಸ್ವೀಕರಿಸುವುದೆ? ಎಂಬುದೊಂದು ಪ್ರಶ್ನೆ. ತನ್ನನ್ನು ವಿಶ್ವದ ಪ್ರಬಲ ರಾಷ್ಟ್ರವೆಂದು ಹೇಳಿಕೊಳ್ಳುತ್ತಿರುವ ಚೀನಾ ಅಮೆರಿಕೆಯಿಂದ ನೆರವು ಪಡೆದರೆ ಅದರ ಹೆಗ್ಗಳಿಕೆಗೆ ಕುಂದುಂಟಾಗದೆ?

ಅದೇನಿದ್ದರೂ ಒಂದು ಮಾತು ಸತ್ಯ. ಅಮೆರಿಕೆ—ಚೀನಾಗಳು ಪಾಕಿಸ್ತಾನವನ್ನು ಮತ್ತೆ ಉಬ್ಬಿಸ ಬಲ್ಲವು. ಬಾಂಗ್ಲಾ ದೇಶವನ್ನು ವಾಸ್ತವಿಕವೆಂದು ಒಪ್ಪಿಕೊಂಡರೂ ಪಾಕಿಸ್ತಾನವನ್ನು ಶಕ್ತಿಯುತಗೊಳಿಸುವ ಅವುಗಳ ಇರಾದೆ ದೂರವಾಗದು. ಅಂದರೆ, ಪಾಕಿಸ್ತಾನಕ್ಕೆ ನೀಡಲಿರುವ ಶಸ್ತ್ರಾಸ್ತ್ರಗಳ ನೆರವು ಇಕ್ಕಡೆಯಿಂದಲೂ ಬಂದು ಬೀಳಬಹುದು. ಇದರಿಂದ ಏಶ್ಯದ ಶಾಂತಿಗೆ ಭಂಗ ಬರುವುದು ಖಂಡಿತವೇ.

ಆದುದರಿಂದಲೇ ಪ್ರಧಾನಿ ಇಂದಿರಾ ಗಾಂಧಿಯವರು ಮೊದಲಿಗೇ ಎಚ್ಚರಿಕೆ ನೀಡಿದ್ದಾರೆ. ಅಮೆರಿಕೆ ಚೀನಾಗಳು ಪೀಕಿಂಗಿನಲ್ಲಿ ಯಾವುದೇ ನಿರ್ಧಾರ ಕೈಕೊಂಡರೆ ಅದು ಏಶ್ಯಾಕ್ಕೆ ಬಂಧನಕಾರಿಯಾಗದೆಂದು ಘೋಷಿಸಿದ್ದಾರೆ.

ಪೀಕಿಂಗಿನಲ್ಲಿ ಶಕ್ತಿಕೂಟವೊಂದನ್ನು ರಚಿಸುವ ಕುತಂತ್ರ ನಡೆಯ ಬಹುದು. ಈ ಕೂಟವು ಏಶ್ಯಾ ಭೂಖಂಡದ ಭವಿಷ್ಯ ನಿರ್ಧರಿಸುವಲ್ಲಿ ಮಹತ್ವಪೂರ್ಣ ಪಾತ್ರವಹಿಸ ಬಲ್ಲುದು. ಆದುದರಿಂದ ಶಾಂತಿಯ ಮಾತಾಡುವವರು, ಶಕ್ತಿಯ ಸಮತೋಲನದ ಹಳೆಯ ಸವಕಲು ನಾಣ್ಯವನ್ನು ಚಲಾವಣೆಗೆ ತರಲು ಪ್ರಯತ್ನಿಸಿ ಅಶಾಂತಿಯನ್ನೂ ಅಭದ್ರತೆಯನ್ನೂ ಸೃಷ್ಟಿಸುತ್ತಾರೆ. ಆದರೆ ಅವರ ಕುತಂತ್ರಗಳು ಸಿದ್ಧಿಸಲಾರವು. ಅವರ ನಿರ್ಧಾರವನ್ನು ಇಡಿಯ ಏಶ್ಯ ಹೊರುವುದು ಸಾಧ್ಯವಿಲ್ಲ.

ದೊಡ್ಡ ದೊಡ್ಡ ಸಂಪನ್ನ ದೇಶಗಳು ಸಣ್ಣ ದೇಶಗಳ ಭವಿಷ್ಯವನ್ನು ನಿರ್ಧರಿಸುವುದು ಅತ್ಯಂತ ಹಳೆಯ ಕತೆ. ಅಮೆರಿಕೆ ಪಾಕಿಗೆ ನೀಡಿದ ಶಸ್ತ್ರಾಸ್ತ್ರಗಳ ವಿರುದ್ಧ ಬಾಂಗ್ಲಾ ದೇಶ ತಲೆಯೆತ್ತಿ ಹೋರಾಡಿತು, ಸ್ವತಂತ್ರವಾಯ್ತು. ವಿಯತ್‌ನಾಮಿಯರು ಇಷ್ಟು ದೀರ್ಘಕಾಲ ಹೋರಾಡಿ ತಮ್ಮ ಭವಿ

(ಎಂಟನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 536/1968.

ವಾದಿ. —ಕೊರಗಯ್ಯ ಸೆಟ್ಟಿ

ಪ್ರತಿವಾದಿರು: 1. ಕೊರಗಯ್ಯ ಸೆಟ್ಟಿ

2. ಸಂಜೀವ ಸೆಟ್ಟಿ.

ಕುಂದಾಪುರ ತಾಲ್ಲೂಕು ಕೋಗಿ ಗ್ರಾಮದ ಕಾಡಿನ ಬೆಟ್ಟನಲ್ಲಿರುವ ರುಕ್ಮಮ್ಮ ಶೆಡ್ತಿರ ಮಕ್ಕಳು ಕೊರಗಯ್ಯ ಸೆಟ್ಟಿ। ಸಂಜೀವ ಸೆಟ್ಟಿ। ಕೂಡಾ 2 ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿರು ವಾದಿಗೆ ತಾರೀಕು 22–8–65 ರಲ್ಲು ರೂ 401–00ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿ ಬರಮಾಡಿ ಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 4-3-1972ಕ್ಕೆ ತನ್ಕಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಪಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯ ಪಡ್ಸಿಯದೆ.

Sd/- N. S. Parameshwariah

Advocate for Plff.

Coondapoor, Date 5—2—72.

ಹಂತ ಹಂತವಾಗಿ ಏರುದಾರಿಗೆ.....

ಸಿಂಡಿಕೇಟ್ ಬ್ಯಾಂಕು 1971ನೇ ವರ್ಷದಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಗಣನೀಯ. ಬ್ಯಾಂಕಿಂಗ್ ಸೌಲಭ್ಯವಿರದ ಸಮುದ್ರಾಂತರದ ಲಕ್ಷದ್ವೀಪ ಸಮುದಾಯದಲ್ಲಿ ಬ್ಯಾಂಕಿಂಗ್ ಸಂದೇಶವನ್ನು ಪಸರಿಸಿ ಆಯಾ ಪ್ರದೇಶಗಳ ಜನರ ಆರ್ಥಿಕ ಬದುಕಿಗೆ ಹೊಸ ರೂಪವನ್ನು ತೊಡಿಸಿದೆ. ತನ್ನ ಶಾಖೆಗಳ ಸಂಖ್ಯೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ 192ಕ್ಕೂ ಪಟ್ಟಣ, ಉಪನಗರಗಳಲ್ಲಿ 239 ಕ್ಕೂ ನಗರಗಳಲ್ಲಿ 76ಕ್ಕೂ ಏರಿಸಿ, 9 ರಾಜ್ಯಗಳು ಮತ್ತು 5 ಕೇಂದ್ರಾಡಳಿತ ಪ್ರದೇಶಗಳಲ್ಲಿ ಚಾಚಿರುವ ತನ್ನ 507 ಶಾಖೆಗಳಿಂದ ರಾಷ್ಟ್ರವ್ಯಾಪೀ ಸಂಸ್ಥೆಯೆನಿಸಿದೆ.

ಕಳೆದ ವರ್ಷದಲ್ಲಿ ತನ್ನ ಠೇವಣಿಗಳನ್ನು ರೂಪಾಯ್ 218 ಕೋಟಿಗೆ ಏರಿಸಿದೆ. ಉತ್ಪನ್ನಮೂಲ ಕ್ಷೇತ್ರಗಳಿಗೆ ತನ್ನ ಆರ್ಥಿಕ ನೆರವನ್ನು ರೂಪಾಯ್ 64.64 ಕೋಟಿಯಷ್ಟು ನೀಡಿ ನಾಡಿನ ಸಂಪನ್ಮೂಲಗಳನ್ನು ಬೆಳೆಸಲು ಯತ್ನಿಸಿದೆ. ರಾಷ್ಟ್ರಜೀವನದ ಬೇರೆ ಬೇರೆ ರಂಗಗಳಿಗೆ ನೀಡಿದ ಆರ್ಥಿಕ ನೆರವು ವರ್ಷಾಂತ್ಯದಲ್ಲಿ ರೂಪಾಯ್ 152 ಕೋಟಿಗೆ ಏರಿದೆ.

ತನ್ನ ವ್ಯಾಪಕ ಪ್ರಮಾಣದ ಸೇವೆಯಿಂದ ನಾಡಿನ ಬದುಕನ್ನು ಅರಳಿಸಲು ಯತ್ನಿಸುತ್ತಿರುವ ಸಿಂಡಿಕೇಟ್ ಬ್ಯಾಂಕು ಹಂತ ಹಂತವಾಗಿ ಪ್ರಗತಿಯ ಏರುದಾರಿಗೆ ಸಾಗುತ್ತಿದೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ:
ಮಣಿಪಾಲ (ಮೈಸೂರು ರಾಜ್ಯ)

ಕೆ. ಕೆ. ಪೈ
ಕಸ್ಟೋಡಿಯನ್

ಜಿಲ್ಲೆಯಲ್ಲಿ–

ಮನೆ ಮನೆಗೂ ಇಂದಿರಾ ಗಾಳಿ

ವಿಧಾನ ಸಭಾ ಚುನಾವಣೆಗಳು ಕೆಲ ದಿನಗಳಲ್ಲಿ ಮುಕ್ತಾಯಗೊಳ್ಳಲಿವೆ. ಅನ್ಯೋನ್ಯರಿಯ ಪ್ರಚಾರವೂ ಕೊನೆಯ ಹಂತಕ್ಕೆ ಬರುತ್ತಿದೆ. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಬಂದು ಹೋದರು. ಈ ಹಂತದಲ್ಲಿ ಚುನಾವಣಾ ಸಮೀಕ್ಷೆ ಸಾಧುವಾದರೂ ನಿಶ್ಚಳ ಭವಿಷ್ಯ ಹೇಳುವುದು ಸಾಧ್ಯವಿಲ್ಲ.

ರಾಜ್ಯದಲ್ಲಿ ಯಾರು ಸರಕಾರ ರಚಿಸಲು ಶಕ್ತರಾಗುತ್ತಾರೆಂಬುದು ಬೃಹತ್ ಪ್ರಶ್ನೆ–ಇಂಡಿಕೇಟು ಬಹುಮತ ಹೊಂದುವ ಲಕ್ಷಣಗಳು ಬಹಳಷ್ಟಿದ್ದರೂ ಸಿಂಡಿಕೇಟು ಅಧಿಕಾರ ಪಡೆಯುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಪಕ್ಷೇತರರಲ್ಲೂ ಹಲವರು ವಿಜಯಿಗಳಾದರೆ, ಅವರು ಸಿಂಡಿಕೇಟಿನೊಡನೆ ಸೇರಿಕೊಳ್ಳುವ ಸಾಧ್ಯತೆಯನ್ನೂ ತಿರಸ್ಕರಿಸಲಾಗದು.

ದಕ್ಷಿಣ ಕನ್ನಡ ಜಿಲ್ಲೆಯು ಮಟ್ಟಿಗೆ ಈ ಚುನಾವಣೆಗಳ ಫಲಿತಾಂಶ ಶಿಲಶಲಾಕ್ಷರವೆಂದು ಮೊದಲು ತಿಳಿಯಲಾಗಿತ್ತು. ಕಳೆದ ವರ್ಷದ ಲೋಕ ಸಭಾ ಚುನಾವಣೆಗಳ ವೇಳೆ ಇಲ್ಲಿನ ಎರಡೂ ಕ್ಷೇತ್ರಗಳಲ್ಲಿ ಇಂಡಿಕೇಟು ಅದ್ವಿತೀಯ ವಿಜಯ ಗಳಿಸಿತ್ತು. ಆ ವೇಳೆಗೆ ಹಲವಾರು ಎಮ್ಮೆಲ್ಲೆಗಳು ಸಿಂಡಿಕೇಟಿನಲ್ಲಿಯೇ ಉಳಿದಿದ್ದರು; ಆ ನಂತರ ಇಂಡಿಕೇಟಿಗೆ ನಿಷ್ಠಾಂತರ ಮಾಡಿದರು. ಮಾಜಿ ಆಹಾರ ಸಚಿವ ಶ್ರೀ ವಿಟ್ಠಲದಾಸ ಶೆಟ್ಟಿ ಮತ್ತು ಶಾಸಿಕೆ ಶ್ರೀಮತಿ ಲೀಲಾವತಿ ರೈಯವರು ಇವರಲ್ಲಿ ಮುಖ್ಯರು.

ಮಂಗಳೂರು ಜಿಲ್ಲೆಯ ಕೇಂದ್ರ ಸ್ಥಳ. ಇಲ್ಲಿ ಬಹು ಬಗೆಯ ರಾಜ್ಯಕೀಯ. ಆದುದರಿಂದ ಯಾರು ಗೆಲ್ಲುತ್ತಾರೆಂದು ಹೇಳುವುದು ಕಷ್ಟ. ಆರಂಭದಿಂದಲೂ ಕಾಂಗ್ರೆಸ್ಸು ಇಲ್ಲಿನ ಎರಡೂ ಸ್ಥಾನಗಳನ್ನು ಗೆಲ್ಲುವುದಿಲ್ಲ ಗೆಲ್ಲುವುದಿಲ್ಲ ಎಂಬ ಶಂಕಾತುರಗಳ ನಡುವೆಯೇ ಗೆದ್ದುಕೊಂಡದ್ದುಂಟು. ಮಂಗಳೂರು ೨ನೇ ಕ್ಷೇತ್ರ ಮುಸ್ಲಿಂ ಪ್ರಾಧಾನ್ಯವಾದದ್ದು. ಅಲ್ಲಿ ಕ್ರಿಶ್ಚಿಯನ್ನರು ನಿರ್ಣಾಯಕ ಪಾತ್ರವಹಿಸಬಲ್ಲರು. ೧–ಕ್ಷೇತ್ರದಲ್ಲಿ ಶ್ರೀಮತಿ ಅಡ್ಡಿ ಸಾಲ್ದಾನಾ ಇಂಡಿಕೇಟಿನ ಅಭ್ಯರ್ಥಿ. ನಗರ ಪ್ರದೇಶದಲ್ಲಿ ಚಿರಪರಿಚಿತೆ; ಸಾರ್ವಜನಿಕ ಸೇವಾ ಪ್ರವೀಣೆ. ಆಕೆಯ ಪ್ರಬಲ ಪ್ರತಿಸ್ಪರ್ಧಿ ಸಿಂಡಿಕೇಟಿನ ಶ್ರೀ ಎಸ್. ಕೆ. ಅಮೀನ್. ಉಡುಪಿಯ ಶಾಸಕರಾಗಿದ್ದ ಶ್ರೀ ಅಮೀನರ ಸರಳ. ಸಾದಾ ವ್ಯಕ್ತಿತ್ವ ಎಲ್ಲರಿಗೂ ಆಕರ್ಷಕ; ಪ್ರಚಾರ–ಡಂಗುರವಿಲ್ಲದೆ ಸೇವೆ ಸಲ್ಲಿಸಿದ ದಾಖಲೆಯುಳ್ಳ ವ್ಯಕ್ತಿ. ಉಳಿದವರ ಸ್ಪರ್ಧೆ ಅಗಣ್ಯ. ಶ್ರೀ ಜೋಸೆಫ್ ಅರನ್ಹಾರ ಪಕ್ಷೇತರ ಸ್ಪರ್ಧೆ ಕ್ರಿಶ್ಚಿಯನ್ ಮತಗಳನ್ನು ಒಡೆಯಲು ಸಾಧ್ಯವಾಗಬಹುದು. ಇದೆಷ್ಟು ಸಾಧ್ಯವೆಂಬುದರ ಮೇಲೆ ಇಲ್ಲಿನ ಫಲಿತಾಂಶ ನಿಂತಿದೆಯೆಂದೆನಿಸುತ್ತದೆ.

ಮಂಗಳೂರು - ೨ರ ಇಂಡಿ – ಸಿಂಡಿಕೇಟ್ ಅಭ್ಯರ್ಥಿಗಳಿಬ್ಬರೂ ಮುಸ್ಲಿಮರು. ಇಲ್ಲಿ ಕಣಕ್ಕಿಳಿದಿರುವರ ಇತರರು ಜನಸಂಘ, ಸಿಪಿಎಂ, ಸ್ವತಂತ್ರ ಪಕ್ಷೀಯರು ಶ್ರೀ ಎ. ರಾಮಚಂದ್ರರು ಪಕ್ಷೇತರರಾಗಿದ್ದಾರೆ. ಶ್ರೀಮತಿ ಲೋಯೆಲ್ಲಾ ಲೋಬೋ ಪ್ರಭುಗಳು ಸ್ವತಂತ್ರ ಪಕ್ಷದ ಅಭ್ಯರ್ಥಿ. ಇವರಿಗೆ ಹಣದ ಬಲವಿದೆ, ಪ್ರಚಾರದ ವೈಭವವಿದೆ. ಆದರೆ. ಮುಸ್ಲಿಂ ಮತದಾರರಲ್ಲಿ ಹೆಚ್ಚಿನವರು ಯಾರಿಗೆ ಬೆಂಬಲ ನೀಡುತ್ತಾರೋ ಅವರು ಗೆಲ್ಲುವುದು ಖಂಡಿತ. ಇಲ್ಲಿನ ಮುಸ್ಲಿಮರು ಕಾಂಗ್ರೆಸ್ಸನ್ನಲ್ಲದೆ ಇತರರಿಗೆ ಮತ ಹಾಕುವುದಿಲ್ಲ; ಆದರೆ ಯಾವ ತುಕುಡಿ ಅವರನ್ನು ಆಕರ್ಷಿಸುತ್ತದೆಂಬುದನ್ನು ಅಭ್ಯರ್ಥಿಗಳ ವ್ಯಕ್ತಿತ್ವವೇ ನಿರ್ಧರಿಸಬೇಕು. ಇಂದಿರಾಗಾಳಿಯ ಸೋಂಕಿನ ಬಲದಿಂದ ಇಂಡಿಕೇಟ್ ಗೆದ್ದು ಬಂದರೆ ಆಶ್ಚರ್ಯವಿಲ್ಲ.

ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ತುಸು ಬೇರು ಬಿಟ್ಟಿರುವ ಕ್ಷೇತ್ರಗಳಲ್ಲಿ ಪುತ್ತೂರು ಒಂದು. ಇಂಡಿಕೇಟಿನ ಜಿಲ್ಲಾ ಸಮಿತಿಯ ಕನ್ವೀನರ್ ಶ್ರೀ ಎ. ಶಂಕರ ಆಳ್ವರು ಇಲ್ಲಿಯೇ ಆಯ್ಕೆ ಬಯಸಿದ್ದಾರೆ. ಶ್ರೀ ಆಳ್ವರ ಬಗ್ಗೆ ಜನತೆಗೆ ಅನುಕಂಪವೂ ಇದೆ. ಕಳೆದ ಬಾರಿ ಅವರು ಎಂ. ಪಿ. ಗೆ ನಿಲ್ಲುವುದು ನಿರ್ಧಾರವಾಗಿದ್ದರೂ ನಿಕಟ ಸಂಬಂಧಿಯೊಬ್ಬರ ಅಸ್ವಾಸ್ಥ್ಯದಿಂದಾಗಿ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದುಕೊಂಡವರು. ಇವರ ಬದಲು ಸ್ಪರ್ಧಿಸಿದ ಶ್ರೀ ಕೆ ಕೆ. ಶೆಟ್ಟರು ಸಿಂಡಿಕೇಟಿನ ಶ್ರೀ ಪೂಣಚ್ಚರನ್ನು ಅಪಮಾನಕರವೆನಿಸುವಂತೆ ಸೋಲಿಸಿದ್ದರು. ಹಾಗಿರುವಾಗ ಶ್ರೀ ಆಳ್ವರು ಆಯ್ಕೆಗೊಳ್ಳದೆ ಹೋದರೆ ಅದು ಆಶ್ಚರ್ಯವೇ. ಅವರ ಪ್ರತಿಸ್ಪರ್ಧಿ ಶ್ರೀ ಪರಮೇಶ್ವರ ಗೌಡರು ಸಿಂಡಿಕೇಟಿಗರು. ಊರವುನೆಯವರು. ಪ್ರಭಾವಿ ವ್ಯಕ್ತಿತ್ವವುಳ್ಳವರು. ಜನಸಂಘ–ಸ್ವತಂತ್ರ ಪಕ್ಷಗಳು ತಮ್ಮ ಪೂರ್ವಾರ್ಜಿತ ಓಟು ಪಡೆಯುತ್ತವೆ. ಪಕ್ಷೇತರರೊಬ್ಬರ ಸ್ಪರ್ಧೆ ಯಾವ ಪರಿಣಾಮವನ್ನೂ ಬೀರದು.

ಸುಳ್ಯ ಜಿಲ್ಲೆಯ ಮೀಸಲು ಕ್ಷೇತ್ರ. ಇಲ್ಲಿನ ಮಾಜಿ ಶಾಸಕ ಸುಬ್ಬಯ್ಯ ನಾಯ್ಕರು ಆರಂಭದಲ್ಲಿ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರೂ ಅವರನ್ನು ಸ್ವತಂತ್ರ ಪಕ್ಷದ ಅಭ್ಯರ್ಥಿಯೆಂದು ಕರೆಯಲಾಯ್ತು. ಕೆಲವು ಜಮೀನುದಾರರ ಮತ್ತು ಕೆಲವು ಪರಿಶಿಷ್ಟ ವರ್ಗದ ಮತಗಳನ್ನು ಇವರು ಗಳಿಸುವುದು ನಿಜ. ಹಿಂದಿನ ಶಾಸಕತನದ ಪ್ರಭಾವವನ್ನು ಅವರು ಬಹು ಪಾಲು ಕಳೆದುಕೊಂಡಿದ್ದಾರೆ. ಇಂಡಿಕೇಟಿನ ಶ್ರೀ ಪಿ. ಡಿ. ಬಂಗೇರರು ಅಷ್ಟೊಂದು ಪರಿಚಿತರೆಂದು ಹೇಳಲಾಗದು. ಆದರೆ, ಇಂದಿರಾಗಾಳಿಯ ಪ್ರಭಾವದಿಂದ ಅವರ ಆಯ್ಕೆಯಾಗಬಹುದು. ಜನಸಂಘದ ಶ್ರೀ ಮುದರರ ಸ್ಪರ್ಧೆ ದೀಪದ ಚಿಹ್ನೆಯನ್ನು ಪರಿಚಯ ಮಾಡಿಸಲು ಬಳಸಿದಂತಿದೆ.

ಇಂಡಿಕೇಟು ಒಡಂಬಡಿಕೆಯಂತೆ ಸಿಪಿಐಗೆ ಬಿಟ್ಟುಕೊಟ್ಟ ಕ್ಷೇತ್ರ ಬಂಟ್ವಾಳ. ಇಲ್ಲಿಂದ ಕಮ್ಯುನಿಸ್ಟರು ಆರಂಭದಿಂದಲೂ ಸ್ಪರ್ಧಿಸುತ್ತ ಬಂದಿದ್ದಾರೆ. ಪಕ್ಷದ ಮಹಾರಥರಾದ ಶ್ರೀ ಕಕ್ಕಿಲಾಯರೇ ರಂಗಕ್ಕಿಳಿದಿದ್ದಾರೆ. ಅವರ ಮುಂದೆ ಉಳಿದವರ ಸ್ಪರ್ಧೆ ಅನವಶ್ಯಕ. ಸಮಾಜವಾದಿ ಪಕ್ಷದ ಶ್ರೀ ಈಶ್ವರ ಭಟ್ಟರು ಜೀಪು ಅಪಘಾತವೊಂದರಿಂದ ಇನ್ನೂ ಚೇತರಿಸುತ್ತಿದ್ದಾರೆ. ಪಕ್ಷೇತರರಿಬ್ಬರನ್ನು ಬಿಟ್ಟರೆ, ಜನಸಂಘದ ಸ್ಪರ್ಧೆ ಇಲ್ಲಿ ಯಾವ ಪರಿಣಾಮವನ್ನೂ ಬೀರದು. ಇಂದಿರಾ ಗಾಳಿಯನ್ನೇ ಸಿಪಿಐ ಕೂಡಾ ಉಸಿರಾಡುತ್ತಿರುವಾಗ ಶ್ರೀ ಕಕ್ಕಿಲ್ಲಾಯರು ಸೋಲುವುದು ಕಷ್ಟ ಸಾಧ್ಯ. ಜಿಲ್ಲೆಯ ಸಿಪಿಐಗೆ ಮೊತ್ತ ಮೊದಲು ವಿಧಾನ ಸಭೆಯಲ್ಲಿ ಖುರ್ಚಿ ತೆರವು ಮಾಡಿಕೊಡುವ ಇಂಡಿಕೇಟಿನ ದೀಕ್ಷೆ ಮೆಚ್ಚದವರೂ ಇಲ್ಲಿದ್ದಾರೆ.

ವಿಸರ್ಜಿತ ವಿಧಾನ ಸಭಾ ಸದಸ್ಯ' ಶ್ರೀ ಚಿದಾನಂದರು ಬೆಳ್ತಂಗಡಿಯಲ್ಲಿ ಉಪಚುನಾವಣೆಯಲ್ಲಿ ಗೆದ್ದವರು, ಇದೇ ಕ್ಷೇತ್ರದವರು. ಯುವಕರು, ವಕೀಲರು. ಅತ್ಯಂತ ಸರಳ ಸ್ವಭಾವದವರು. ಇವರನ್ನು ಗೆಲ್ಲಿಸುವಾಗ ಕಾಂಗ್ರೆಸ್ಸು ತುಕುಡಿಯಾಗಿರಲಿಲ್ಲ. ಸಿಂಡಿಕೇಟಿನಲ್ಲೇ ಉಳಿದುಕೊಂಡು ಆ ಪಕ್ಷದ ಟಿಕೇಟಿನಿಂದಲೇ ಅವರು ಸ್ಪರ್ಧಿಸಬಯಸಿದ್ದಾರೆ. ಇವರ ಇಂಡಿಕೇಟ್ ಪ್ರತಿಸ್ಪರ್ಧಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಜನಪ್ರಿಯರೂ ಸರಳರೂ ಎಂದು ಹೆಸರು ಪಡೆದವರು. ಆದರೆ, ಇವರಿಗೆ ಇರುವ ಒಂದೇ ಕೊರತೆಯೆಂದರೆ, ಸ್ವಕ್ಷೇತ್ರೀಯರಲ್ಲವೆಂಬುದು. ವ್ಯಕ್ತಿತ್ವದ ದೃಷ್ಟಿಯಲ್ಲಿ ಇವರೀರ್ವರೂ ಸಮಬಲರು, ಅಥವಾ ಶ್ರೀ ಗೌಡರೇ ಒಂದು ತೂಕ ಹೆಚ್ಚು ಎಂದು ಹೇಳಬಹುದು. ಹಲವೆಡೆ ಶಾಸಕತನದ ರುಚಿ ನೋಡಿದ ಅನುಭವವೂ ಇದೆ. ಉಳಿದ ಮೂವರು ಜನಸಂಘ, ಸಿ ಪಿ ಎಂ ಮತ್ತು ಸ್ವತಂತ್ರ ಪಕ್ಷಕ್ಕೆ ಸೇರಿದವರು. ಇಲ್ಲಿ ಪಕ್ಷೇತರರು ಯಾರೂ ನಿಂತಿಲ್ಲ.

ಮೂಡಬಿದ್ರೆಯೂ ಮಂಗಳೂರು-ಪುತ್ತೂರು–ಬೆಳ್ತಂಗಡಿಗಳಂತೆ ಎರಡು ಕಾಂಗ್ರೆಸ್ ತುಕುಡಿಗಳ ಹಣಾಹಣಿ ಹೋರಾಟದ ಕಣ. ಕಳೆದ ಬಾರಿ ಶ್ರೀ ರತನ್‌ಕುಮಾರ ಕಟ್ಟೇಮಾರ್ ಇದೇ ಕ್ಷೇತ್ರದಿಂದ ಸ್ವತಂತ್ರ ಪಕ್ಷದ ವತಿಯಿಂದ ಸ್ಪರ್ಧಿಸಿ ಗೆದ್ದಿದ್ದರು. ಆದರೆ, ಈ ಬಾರಿ ಎರಡು ಕಾಂಗ್ರೆಸ್‌ಗಳನ್ನು ಬಿಟ್ಟರೆ ಮತ್ತಾವ ಪಕ್ಷವೂ ಅಭ್ಯರ್ಥಿಯನ್ನು ನಿಲ್ಲಿಸಿಲ್ಲ. ಶ್ರೀ ಪಿ. ವಿಠ್ಠಲ ಶೆಟ್ಟರು ಪಕ್ಷೇತರರಾಗಿ ನಿಂತಿದ್ದಾರೆ. ಇದರಿಂದ ಇಂಡಿಕೇಟಿನ ಶ್ರೀ ದಾಮೋದರ ಮೂಲ್ಕಿಯವರಿಗೇನೇ ಹೆಚ್ಚು ಅನುಕೂಲವೆಂದು ಹೇಳಬಹುದು.

ಇದು ಜಿಲ್ಲೆಯ ದಕ್ಷಿಣ ಭಾಗದ ಏಳು ಕ್ಷೇತ್ರಗಳ ಲಘು ಸಮೀಕ್ಷೆ. ಇಲ್ಲಿ ಚುನಾವಣೆಗಳು ನಡೆಯುವುದು ಮಾರ್ಚ್ ೫ ರಂದು.

ಶ್ರೀಮತಿ ಇಂದಿರಾಗಾಂಧಿಯವರ ಆಗಮನದಿಂದಾಗಿ ಬೀಸಿದ ಬಿರುಗಾಳಿಯೇ ತಮ್ಮ ಕಳೆದ ವರ್ಷದ ವಿಜಯಕ್ಕೆ ಸಾಧನವಾಯ್ತೆಂಬುದನ್ನು ಅಲ್ಲಿನ ಇಂಡಿಕೇಟಿಗರು ಒಪ್ಪುತ್ತಾರೆ ಆದುದರಿಂದಲೇ ಅವರು ಮೊನ್ನೆಯವರೆಗೂ ನಿಧಾನವಾಗಿಯೇ ಇದ್ದರು. ಶ್ರೀಮತಿ ಗಾಂಧಿ–ಮಹಿಷಿ ಮತ್ತು ಶ್ರೀ ಅರಸರು ಬಂದು ಹೋದ ಮೇಲೆ ಅಂತಹ ಸುಂಟರಗಾಳಿ ಬೀಸಲಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡವರು ಹೆಚ್ಚು ಎಚ್ಚರಾಗಿದ್ದಾರೆ.

ರಾಜ್ಯ ಸಿಂಡಿಕೇಟಿಗೆ ಸ್ಫೂರ್ತಿನೀಡುವವರೆಂದರೆ ಮಾಜಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಇವರೂ ಈ ಪ್ರದೇಶದಲ್ಲಿ ಸಂಚರಿಸಿ ಮಿಂಚಿನ ಹಾಗಿಲ್ಲದಿದ್ದರೂ ತುರುಸಿನ ಪ್ರಚಾರ ಸಭೆಗಳಲ್ಲಿ ಭಾಗವಹಿಸಿದರು.

ಈ ಏಳು ಕ್ಷೇತ್ರಗಳಲ್ಲಿ ಒಟ್ಟು ಸ್ಪರ್ಧಿಸಿದವರು ೩೩ ಜನರು. ಇವರಲ್ಲಿ

- ಇಂಡಿಕೇಟ್ — ೭
- ಸಿಂಡಿಕೇಟ್ — ೫
- ಜನಸಂಘ — ೬
- ಸ್ವತಂತ್ರ — ೩
- ಸಿ ಪಿ ಎಂ — ೩
- ಸಮಾಜವಾದಿ — ೧
- ಸಿ ಪಿ ಐ — ೧
- ಪಕ್ಷೇತರರು — ೮

ಸಿ ಪಿ ಐ ನ ವಿಜಯ ಕೊನೆಯ ಗಳಿಗೆಯ ಅದ್ಭುತ ನಡೆಯದೆ ಹೋದರೆ ನಿಶ್ಚಿತವೆನಿಸುತ್ತದೆ. ಉಳಿದ ಆರು ಸ್ಥಾನಗಳನ್ನು ಕಾಂಗ್ರೆಸ್ಸಿನ ಎರಡು ತುಕುಡಿಗಳು ಹಂಚಿಕೊಳ್ಳಬಹುದು; ಇಂಡಿಕೇಟು ಹೆಚ್ಚಿನ ಸ್ಥಾನವನ್ನು ಪಡೆಯುವುದಾದರೆ ಉಳಿದ ಯಾರಾದರು ಸ್ಥಾನಗಳಿಸುವುದಿದ್ದರೆ, ಅದನ್ನು ಸಿಂಡಿಕೇಟೇ ಬಿಟ್ಟು ಕೊಡಬೇಕಾಗುತ್ತದೆ. ಪ್ರಧಾನಿ ಗಾಂಧಿಯವರ ಹೆಸರಲ್ಲಿ ಮತ ಬೇಡುವಾಗ ಇಲ್ಲವೆನ್ನುವಷ್ಟು ಕೃತಘ್ನತೆಯನ್ನು ಜನ ಇಷ್ಟು ಬೇಗನೆ ತೋರಲಾರದು.

●●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 / 2 72304 — Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಚುನಾವಣೆಯೆಂದರೆ ಕೇವಲ ಓಟಿನ ಪ್ರಶ್ನೆಯಲ್ಲ

ಉಜ್ವಲ ಭವಿಷ್ಯ ರೂಪಿಸಬಲ್ಲ,
ರಾಷ್ಟ್ರ ಗೌರವ — ರಾಷ್ಟ್ರ ಭದ್ರತೆ ರಕ್ಷಿಸಬಲ್ಲ,
ಸಮಾಜವಾದವನ್ನು ಕಾರ್ಯಗತಗೊಳಿಸಬಲ್ಲ
ಸಾಮರ್ಥ್ಯ ಯಾವ ಪಕ್ಷಕ್ಕಿದೆ?

—ಆಳುವ ಕಾಂಗ್ರೆಸ್‌ಗೆ ಮಾತ್ರ

ಆ ಪಕ್ಷಕ್ಕೆ ಓಟು ಮಾಡಿದರೆ
ಅದು ನೂರಕ್ಕೆ ನೂರರಷ್ಟು ಸಾರ್ಥಕ

—ಶ್ರೀಮತಿ ಇಂದಿರಾ ಗಾಂಧಿ

ಚುನಾವಣಾ ಚಿನ್ಹೆ



ಈ ಚಿನ್ಹೆಯನ್ನು ಗುರುತಿಸಿರಿ

ಕಾಂಗ್ರೆಸ್ ಅಭ್ಯರ್ಥಿ

ಶ್ರೀಮತಿ ಮನೋರಮಾ ಮಧ್ವರಾಜ್

ಉಡುಪಿ ಕ್ಷೇತ್ರದ ಮತದಾರರಲ್ಲಿ

ಕಾಂಗ್ರೆಸ್ ಅಭ್ಯರ್ಥಿ

ಶ್ರೀಮತಿ ಮನೋರಮಾ ಮಧ್ವರಾಜರನ್ನು

ಪ್ರಚಂಡ ಬಹುಮತದಿಂದ ಆಯ್ಕೆ ಮಾಡಬೇಕಾಗಿ ವಿನಂತಿ

ಸಮಾಜವಾದದ ಅನುಷ್ಠಾನದಿಂದ ಮಾತ್ರ ಭಾರತದ ಉನ್ನತಿ ಸಾಧ್ಯ.
ಕಾಂಗ್ರೆಸ್ ಪಕ್ಷದಿಂದ ಮಾತ್ರ ಈ ಕಾರ್ಯ ಸಾಧ್ಯ.

—ಬ್ಲಾಕ್ ಕಾಂಗ್ರೆಸ್ ಕಮಿಟಿ—

ಒಂದು ಲಕ್ಷ ಗ್ರಾಮಗಳಲ್ಲಿ ವಿದ್ಯುತ್ ದೀಪ

ಇಪ್ಪತ್ತೈದು ವರ್ಷಗಳ ಹಿಂದೆ ಭಾರತದ ಗ್ರಾಮಗಳಲ್ಲಿ ಸೂರ್ಯಾಸ್ತದೊಂದಿಗೆ ದೈನಂದಿನ ಕಾರ್ಯಕ್ರಮ ಕೊನೆಗೊಂಡು ಎಲ್ಲರೂ ನಿದ್ರಾ ದೇವಿಯ ತೆಕ್ಕೆಗೆ ಹೋಗುತ್ತಿದ್ದರು. ಇಂದು ಈ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿದೆ.

ಇಂದು ದೇಶದ ಬಹುತೇಕ ಗ್ರಾಮಗಳಲ್ಲಿ ರಾತ್ರಿಯಾದಂತೆ ಜೀವನ ಸ್ತಬ್ಧವಾಗುವುದಿಲ್ಲ. ಗ್ರಾಮದ ಮನೆಗಳು, ಬೀದಿಗಳು ಹಾಗೂ ಬೇಸಾಯ ಭೂಮಿಗಳಲ್ಲಿ ವಿದ್ಯುತ್ ಪ್ರಭೆ ಜಗಜಗಿಸುತ್ತದೆ. ಗ್ರಾಮಸ್ಥರು ರೇಡಿಯೊ ಕಾರ್ಯಕ್ರಮಗಳನ್ನು ಆಲಿಸುತ್ತಾರೆ. ಈಗೀಗ ಗ್ರಾಮಸ್ಥರು ರಾತ್ರಿಯ ಹೊತ್ತು ಸಾಮೂಹಿಕ ಕೇಂದ್ರಗಳಲ್ಲಿ ತಮ್ಮ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಾರೆ. ಈ ಗ್ರಾಮಗಳಲ್ಲಿರುವ ಕೊಳವೆ ಬಾವಿಗಳು ಕಾರ್ಯಶೀಲವಾಗಿರುವುದರ ಶಬ್ದವನ್ನು ಕೇಳಬಹುದು. ಗ್ರಾಮಗಳಲ್ಲಿರುವ ಯಂತ್ರ ರಿಪೇರಿ ಮಾಡುವಾತನು ರಾತ್ರಿಯಾದರೂ ಲೆಕ್ಕಿಸದೆ ಲೇಥ್ ಯಂತ್ರದಲ್ಲಿ ತೀವ್ರವಾಗಿ ಕಾರ್ಯ ಮಗ್ನನಾಗಿರುತ್ತಾನೆ.

ಇಂದು ದೇಶದ ಒಂದು ಲಕ್ಷಕ್ಕಿಂತಲೂ ಹೆಚ್ಚು ಗ್ರಾಮಗಳೂ ೨೭೦೦ ಪಟ್ಟಣಗಳೂ ವಿದ್ಯುತ್ ಸೌಲಭ್ಯ ಪಡೆದಿವೆ. ಇದರಿಂದ ದೇಶದ ಅರ್ಧಪಾಲು ಜನತೆಗೆ ವಿದ್ಯುತ್ ಸೌಕರ್ಯ ದೊರಕಿದಂತಾಗಿದೆ. ಹರಿಯಾನ ರಾಜ್ಯದಲ್ಲಿರುವ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಸೌಲಭ್ಯ ದೊರಕಿದೆ.

ವಿದ್ಯುತ್ತಿನ ಅಭಾವ

೧೯೪೭ನೇ ಇಸವಿಯಲ್ಲಿ ದೇಶದ ಶೇಕಡ ಒಂದರಷ್ಟು ಗ್ರಾಮಗಳೂ, ಶೇಕಡ ೪೦ರಷ್ಟು ಪಟ್ಟಣಗಳೂ ವಿದ್ಯುತ್ ಸೌಲಭ್ಯ ಪಡೆದಿದ್ದುವು. ಎಂದರೆ ದೇಶದ ಜನ ಸಂಖ್ಯೆಯಲ್ಲಿ ಶೇಕಡ ೨.೫ರಷ್ಟು ಮಂದಿಗೆ ಮಾತ್ರ ಈ ಸೌಕರ್ಯ ದೊರಕಿತ್ತು.

ಗ್ರಾಮ ವಿದ್ಯುದ್ದೀಕರಣ ಕಾರ್ಯಕ್ರಮದಿಂದ ಬೇಸಾಯ ಕಾರ್ಯದ ಮೇಲೆ ಪ್ರಭಾವವಾಗಿದೆ. ಈಗ ವಿದ್ಯುತ್ ಪಂಪುಗಳು, ಒಕ್ಕಣೆ ಯಂತ್ರಗಳು, ಟ್ರಾಕ್ಟರುಗಳು ಮತ್ತು ಉಗ್ರಾಣ ಸೌಲಭ್ಯಗಳಿಗಾಗಿ ಅಧಿಕ ಬೇಡಿಕೆಯಿದೆ.

ಇಂದು ಕೆಲವು ಬೇಸಾಯಗಾರರು ವರ್ಷಕ್ಕೆ ಮೂರು ಬೆಳೆ ತೆಗೆಯುತ್ತಾರೆ; ವಾರ್ಷಿಕ ಪ್ರತಿ ಹೆಕ್ಟೇರಿಗೆ ೧೨ ಟನ್ ಆಹಾರ ಧಾನ್ಯ ಉತ್ಪಾದಿಸುತ್ತಾರೆ. ಹಿಂದೆ ಹೆಕ್ಟೇರಿಗೆ ೩.೫ ಟನ್ ಆಹಾರ ಧಾನ್ಯ ಉತ್ಪಾದಿಸಲಾಗುತ್ತಿತ್ತು.

ವರಪ್ರಸಾದ

ಗ್ರಾಮೀಣ ವಿದ್ಯುದ್ದೀಕರಣ ಗ್ರಾಮಾಂತರ ಕೈಗಾರಿಕೆಗಳ ಅಭಿವೃದ್ಧಿಗೆ ನವಚೇತನ ನೀಡಿದೆ: ಕಾರ್ಮಿಕ ಶಕ್ತಿಯ ಬಳಕೆ ಉತ್ತಮವಾಗಿದೆ. ಗ್ರಾಮಸ್ಥರಿಗೆ ಹೆಚ್ಚು ದುಡಿಮೆಯಾಗಿದೆ. ಅವರಲ್ಲಿ ಭದ್ರತಾ ಪ್ರಜ್ಞೆ ಬೆಳೆದಿದೆ. ವಾಚನಾಭಿವೃದ್ಧಿ ಹೆಚ್ಚಿದೆ. ಸಮಾಜ ಜೀವನದಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ.

ಈ ದಶಕದಲ್ಲಿ ದೇಶದಲ್ಲಿ ವಿದ್ಯುತ್ ಉತ್ಪಾದನೆಯ ಪ್ರಮಾಣವು ೧೬.೪ ದಶಲಕ್ಷ ಕಿಲೋವಾಟ್‌ಗಳಿಂದ ೩೦ ದಶಲಕ್ಷ ಕಿಲೋವಾಟ್‌ಗೆ ಏರುವ ನಿರೀಕ್ಷೆಯಿದೆ. ವಿದ್ಯುತ್ ಪಂಪುಗಳ ಸಂಖ್ಯೆ ೩೦ ಲಕ್ಷಕ್ಕೇರುತ್ತದೆ. ವಿದ್ಯುತ್ ಸೌಲಭ್ಯ ಪಡೆದ ಗ್ರಾಮಗಳ ಸಂಖ್ಯೆ ೩.೪ ಲಕ್ಷಕ್ಕೇರುತ್ತದೆ. ಇದರಿಂದ ದೇಶದ ಶೇಕಡ ೮೦ರಷ್ಟು ಜನಸಂಖ್ಯೆಗೆ ವಿದ್ಯುತ್ತಿನ ವರಪ್ರಸಾದ ಲಭಿಸುತ್ತದೆ.

●●

ಸವಕಲು ನಾಣ್ಯ ಚಲಿಸೀತೆ?

(ಐದನೇ ಪುಟದಿಂದ)

ಷ್ಯ ತಾವೇ ನಿರ್ಧರಿಸಿಕೊಳ್ಳುತ್ತೇವೆ. ನೀವು ದೂರ ಹೋಗಿರೆಂದು ಅಮೆರಿಕೆಗೆ ಆಹ್ವಾನ ನೀಡುತ್ತಲೇ ಇದ್ದಾರೆ. ಪ್ರತಿ ದೇಶ- ಅದು ಚಿಕ್ಕದಿರಲಿ, ದೊಡ್ಡದಿರಲಿ- ಇಂದು ಜಾಗ್ರತವಾಗಿದೆ. ತನ್ನ ಹಿತವೆಲ್ಲಿಯೆಂದದು ತಿಳಿದುಕೊಳ್ಳಲು ಶಕ್ತವಾಗಿದೆ.

ಭಾರತವೂ ಅಷ್ಟೆ. ನಮ್ಮ ವ್ಯವಹಾರಗಳು ನಮಗೆ ಬೇಕಾದಂತೆ ನಡೆಯುತ್ತವೆ. ನಾವು ಯಾರೊಬ್ಬರ ಶತ್ರುಗಳೂ ಅಲ್ಲ. ಎಲ್ಲರೊಡನೆ ಸಹಬಾಳ್ವೆಯನ್ನು ಬಯಸುವವರು ನಾವು. ನಾವು ಯಾರೊಡನೆ ಮಿತ್ರತ್ವದಿಂದಿರಬೇಕು, ಎಂದು ಹೊರಗಿನವರು ನಮಗೆ ಹೇಳುವ ಅಗತ್ಯವಿಲ್ಲ; ಹಾಗೆ ಹೇಳುವುದು ಅವರ ಕೆಲಸವೂ ಅಲ್ಲ. ನಮ್ಮ ವ್ಯವಹಾರಗಳು ಸ್ವತಂತ್ರವಾಗಿ ನಡೆಯುತ್ತವೆ. ನಮ್ಮದೂ ಸ್ವತಂತ್ರ ಸಾರ್ವಭೌಮ ರಾಷ್ಟ್ರ. ನಮ್ಮ ವ್ಯವಹಾರಗಳಲ್ಲಿ ಮೂರನೆಯವರ ಹಸ್ತಕ್ಷೇಪ ಅನಗತ್ಯ.

ವಾಷಿಂಗ್ಟನ್-ಪೀಕಿಂಗ್‌ಗಳು ತೀರ ಹತ್ತಿರ ಬರುತ್ತವೆ, ಇಸ್ಲಾಮಾಬಾದವು ಅವುಗಳ ವಿನಿಮಯ ಕೇಂದ್ರವಾಗುತ್ತದೆ ಎಂದು ಕೆಲವರು ಊಹಿಸ ಬಹುದು. ಆದರೆ, ಇಪ್ಪತ್ತು ವರ್ಷಗಳ ಕಾಲ ಪಶ್ಚಿಮ- ಪೂರ್ವವಾಗಿ ಉಳಿದಿದ್ದ ಇವು ಹತ್ತಿರ ಬಂದರೂ ತೀರ ಹತ್ತಿರಕ್ಕೆ ಬರುವುದು ಸುತರಾಂ ಸಾಧ್ಯವಿಲ್ಲ. ತನ್ನ ದೇಶದಲ್ಲಿಯೇ ತನ್ನ ನಿಲುವೆಯು ಅತ್ಯಂತ ಖಂಡನೆಗೆ ಗುರಿಯಾಗಿರುವುದರಿಂದ ಬೇಸತ್ತ ನಿಕ್ಸನ್ ವಿಯತನಾಮದ ಪ್ರಶ್ನೆಯನ್ನು ಬಗೆಹರಿಸುವ ಇರಾದೆಯಿಂದಲೇ ಪೀಕಿಂಗಿಗೆ ಹೋಗಿದ್ದಾರೆಯೆ? ಮುಂದಿನ ಚುನಾವಣೆಗಳಲ್ಲಿ ಮತ ಗಳಿಸಲು ಅವರಿಗಿದೊಂದೇ ಉಪಾಯವೆಂದುಹೇಳಲಾಗುತ್ತಿದೆ.

ಮಣಿಪಾಲದಲ್ಲಿ ಅ. ಭಾ. ಫಾರ್ಮಾಸ್ಯುಟಿಕಲ್ ಕಾಂ. ಅಧಿವೇಶನದ ಉದ್ಘಾಟನೆ

ತಾ. 17ರಂದು ಮೂರು ದಿನಗಳ ಅಖಿಲ ಭಾರತ ಫಾರ್ಮಾಸ್ಯುಟಿಕಲ್ ಕಾಂಗ್ರೆಸ್ಸಿನ 23ನೇ ಅಧಿವೇಶನವನ್ನು ಜೀವವಿಮಾ ಕಾರ್ಪೋರೇಶನಿನ ಅಧ್ಯಕ್ಷ ಪದ್ಮಭೂಷಣ ಶ್ರೀ ಟಿ. ಎ. ಪೈಯವರು ಇಂಡಿಯನ್ ಫಾರ್ಮಾಸ್ಯುಟಿಕಲ್ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದ ಶ್ರೀ ಕೆ. ಎನ್. ಗೈಂಡ್‌ರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಆರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಡಾ| ಟಿ. ಎಂ. ಎ. ಪೈಯವರು ಸ್ವಾಗತಿಸಿದರು. ಶಿವಳ್ಳಿ ಪಂಚಾಯತ್ ಅಧ್ಯಕ್ಷ ಶ್ರೀ ಟಿ. ರಮೇಶ ಪೈಯವರು ಉಡುಪಿ ಮಣಿಪಾಲಗಳ ವೈಶಿಷ್ಟ್ಯವನ್ನು ಐತಿಹಾಸಿಕ ಸಾಮಾಜಿಕ ಹಿನ್ನೆಲೆಯಲ್ಲಿ ಸ್ವಾರಸ್ಯವಾಗಿ ವಿವರಿಸಿದರು. ಅ. ಭಾ. ಫಾರ್ಮಾಸ್ಯುಟಿಕಲ್ ಮೈಸೂರು ರಾಜ್ಯ ಶಾಖೆಯ ಅಧ್ಯಕ್ಷ ಶ್ರೀ ಎಸ್. ಎಸ್. ಆಟ್ಟಿಶೆಟ್ಟರ್ ಅವರು ತಮ್ಮ ಶಾಖೆಯ ಮೂಲಕ ನಡೆಸಲಾದ ಚಟುವಟಿಕೆಗಳನ್ನೂ ಅದು ಸಾಧಿಸಿರುವ ಪ್ರಗತಿಯನ್ನೂ ವಿವರಿಸಿದರು.

ಶ್ರೀ ಪೈಗಳವರು ಉದ್ಘಾಟಿಸುತ್ತಾ, ನಮ್ಮ ಸಂಪನ್ಮೂಲಗಳ ಸದುಪಯೋಗವಾಗಬೇಕಿದ್ದರೆ ಮತ್ತು ನಮ್ಮ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದ್ದರೆ ನಮ್ಮ ದೇಶದ ತಜ್ಞರ ವಿದ್ಯಾವಂತರ ಬುದ್ಧಿಮತ್ತೆಯನ್ನು ನಾವು ಉಪಯೋಗಿಸಿಕೊಳ್ಳಬೇಕು. ನಮ್ಮ ಸಮಸ್ಯೆಗಳಿಗೆ ಇತರರು ಪರಿಹಾರ ನೀಡುವಂತಿಲ್ಲ. ಪಾಕ್ ಯುದ್ಧ ಕಾಲದಲ್ಲಿ ಜನತೆ ತೋರಿದ ಪ್ರಜ್ಞೆ, ದೃಢ ಸಂಕಲ್ಪಗಳು ಇತರ ಕ್ಷೇತ್ರಗಳಲ್ಲಿಯೂ ಮೂಡಿ ಬಂದರೆ ಸಮಸ್ಯೆಗಳೆಲ್ಲ ಪರಿಹಾರವಾಗದಿರದು, ಎಂದರು. ಜೀವವಿಮಾ ಸಂಸ್ಥೆಯ ಕುರಿತು ಪ್ರಸ್ತಾಪಿಸುತ್ತಾ ಪಾಲಿಸಿದಾರರ ಕ್ಷೇಮ ಚಿಂತನೆಯೊಂದಿಗೆ ದೇಶಾಭಿವೃದ್ಧಿಗೆ ನೆರವಾಗುವುದು ಸಹ ಅದರ ಮೂಲೋದ್ದೇಶವಾಗಿದೆ ಎಂದರು. ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಯವರೂ ಸಹ ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದಕ್ಕವರು ತನ್ನ ಮೆಚ್ಚುಗೆ ವ್ಯಕ್ತಪಡಿಸಿದರು.

ಸಭಾಧ್ಯಕ್ಷ ಪ್ರೊ| ಕೆ. ಎನ್. ಗೈಂಡ್ ತಮ್ಮ ಭಾಷಣದಲ್ಲಿ ಫಾರ್ಮಾಸ್ಯುಟಿಕಲ್ ಉದ್ಯಮಾಭಿವೃದ್ಧಿಗೆ ಫಾರ್ಮಾಸ್ಯುಟಿಕಲ್ ಶಿಕ್ಷಣದ ಅಭಿವೃದ್ಧಿ, ವಿಸ್ತರಣೆ-ಮಟ್ಟ ಸುಧಾರಣೆ ಮತ್ತು ಶಕ್ತಿ ಸಂಚಯ ಅಗತ್ಯ ಎಂದರು. ವಿ. ವಿ. ನಿಲಯಗಳಲ್ಲಿ ಇದಕ್ಕೆ ಬೇರೆಯೆ ವಿಭಾಗಗಳನ್ನು ತೆರೆಯ ಬೇಕೆಂದರು. ಇದರ ಡಿಪ್ಲೋಮಾ ಮತ್ತು ಪದವೀಧರರಿಗೆ ತಕ್ಕ ಉದ್ಯೋಗ ಕಲ್ಪಿಸಿಕೊಡಬೇಕೆಂದವರು ಪ್ರತಿಪಾದಿಸಿದರು. ಈ ಕ್ಷೇತ್ರದಲ್ಲಿ ಸಂಶೋಧನೆಗೆ ಪ್ರಾಮುಖ್ಯತೆ ನೀಡಬೇಕೆಂದೂ ಶಿಕ್ಷಣ ಮಟ್ಟ ಸುಧಾರಣೆಗೆ ಎರಡು ವರ್ಷಗಳ ಡಿಪ್ಲೋಮಾ ಕೋರ್ಸನ್ನು ಮೂರು ವರ್ಷಕ್ಕೆ ಏರಿಸಬೇಕೆಂದು ಸಲಹೆ ನೀಡಿದರು.

ಡಾ| ಟಿ. ಚಕ್ರವರ್ತಿಯವರು ವಿದೇಶೀ ಪ್ರತಿನಿಧಿಗಳ ಪರಿಚಯ ಮಾಡಿಸಿದರು. ಡಾ| ಪಿ ಗುಂಡುರಾಯರು ಧನ್ಯವಾದ ಸಮರ್ಪಿಸಿದರು.

ಶಿವರಾಯ ಶೇಟ್ ನಿಧನ

ಉಡುಪಿಯ ದೈವಜ್ಞ ಬ್ರಾಹ್ಮಣ ಸಮಾಜದ ಹಿರಿಯರೂ ಪ್ರಮುಖರೂ ಆಗಿದ್ದ ಶ್ರೀ ಯು. ಶಿವರಾಯ ಶೇಟ್‌ರವರು ತಮ್ಮ 78ನೇ ವಯಸ್ಸಿನಲ್ಲಿ ತಾ. 19ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ದಿವಂಗತರು ತಮ್ಮ ಹಿಂದೆ ಎಂಟು ಮಂದಿ ಪುತ್ರಿಯರನ್ನೂ, ಐದು ಮಂದಿ ಪುತ್ರರನ್ನೂ ಅಗಲಿರುವರು. ಶ್ರೀ ಶೇಟ್‌ರವರ ಪುತ್ರರುಗಳಾದ ಡಾ| ಸುಂದರರಾಯ ಶೇಟ್ ಅವರು ಮಂಡ್ಯದಲ್ಲಿ ಸಿವಿಲ್ ಸರ್ಜನ್ ಆಗಿ, ಶ್ರೀ ಲಕ್ಷ್ಮಣ ಶೇಟರು ಕುಮಟಾದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ, ಶ್ರೀ ದಿನಕರ ಶೇಟ್ ಮಂಗಳೂರಿನಲ್ಲಿ ಅಸಿಸ್ಟಂಟ್ ಸರ್ಜನ್ ಆಗಿ, ಶ್ರೀ ನಾಗೇಶ್ ಶೇಟರು ಮಂಗಳೂರಿನಲ್ಲಿ ಡಿಪೋ ಮೆನೇಜರ್ ಆಗಿ, ಶ್ರೀ ಗೋಪಾಲಕೃಷ್ಣ ಶೇಟರು ಶೋಲಾಪುರದಲ್ಲಿ ಸೆಂಟ್ರಲ್ ರೈಲ್ವೆಯಲ್ಲಿಯೂ ಸೇವೆ ಸಲ್ಲಿಸುತ್ತಿರುವರು.

ದಿವಂಗತರು ಸದಾ ಕಾರ್ಯತತ್ಪರರೂ, ಸಿಗರ್ವಿಗಳೂ ಧರ್ಮಪರಾಯಣರೂ, ನಿರಾಡಂಬರ ವ್ಯಕ್ತಿಗಳೂ ಆಗಿದ್ದು ಜನಪ್ರಿಯರಾಗಿದ್ದರು.

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕೊಲಿಟಿಯಲ್ಲಿ, ಸ್ಟಾಜಿನಲ್ಲಿ, ಕ್ರಯದಲ್ಲಿ ಪರಿಶೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

Gram: VISHWA Tel: 28111 & 28112
When at Bangalore
Stay at
HOTEL NATARAJA
Restaurant, Boarding & Lodging.
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

READ & ADVERTISE IN NAVAYUGA Weekly

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-೪

ಹಿಂದಿ ಬಾಗಿಲಲಿ ಮನೆಯ ಮಾಡಿ....

(ನಾಲ್ಕನೇ ಪುಟದಿಂದ)

ವರಿಗೆ ಬೇಡ....ಅವರೇ ಕಾರುವುದಕ್ಕೆ ಹೊರಟಿದ್ದಾರೆ....'

'ಹಾಗಂದರೆ?'

'ಬಲ ಅಲ್ಪವಿರುವಾಗ ಅವರಿಗೇ ಪಕ್ಷಾಂತರ ಅನಿವಾರ್ಯವಾಯ್ತು. ಈಗ ಅವರಿಗೆ ದೈತ್ಯ ಬಲ ಬಂದಿದೆ. ಇದುವರೆಗೆ ಪಕ್ಷಾಂತರಕ್ಕೆ ಉತ್ತೇಜನ ನೀಡಿ ತಮ್ಮ ವಿರೋಧಿಗಳ ಬಲ ಕುಗ್ಗಿಸಿದರು. ಇನ್ನು ಮುಂದೆ ಪಕ್ಷಾಂತರವನ್ನು ವಿರೋಧಿಸಿ ಅವರ ಬಲ ಹೆಚ್ಚದಂತೆ ನೋಡಿಕೊಳ್ಳುತ್ತಾರೆ....'

'ಅಂತೂ ತಾವು ಬದುಕಬೇಕು; ಉಳಿದವರು ಸಾಯಬೇಕು....'

'ಸಾಯಬೇಕು ಅಲ್ಲ, ನರಳಿ ನರಳಿ ಸಾಯಬೇಕು....'

'ಒಂದು ರೀತಿಯಿಂದ ಅದೂ ಸರಿಯೆನ್ನಿ...'

'ಒಂದ್ರೀತಿಯಿಂದಲ್ಲ, ಎಲ್ಲಾ ರೀತಿಗಳಿಂದಲೂ ಅದು ಸರಿಯೇ....'

'ಮತ್ತೆ ನೋಡಿ, ಸಿಂಹಳದಲ್ಲಿ ಏನೋ'

'ಹ್ಞಾಂ ಹೌದು. ಅಲ್ಲೊಂದು ತಮಿಳು ರಾಜ್ಯ ಬೇಕಂತೆ—ಫೆಡರಲ್ ಮಾದರಿಯ ಸ್ವಾಯತ್ತಾಧಿಕಾರವುಳ್ಳ ತಮಿಳುರಾಜ್ಯವೊಂದು ಬೇಕಂತೆ....'

'ಯಾರಿಗೆ?'

'ಮತ್ತ್ಯಾರಿಗೆ ತಮಿಳರಿಗೆ. ಅದಕ್ಕಾಗಿ ಶೀಘ್ರದಲ್ಲೇ ಹೋರಾಟವಾರಂಭವಾಗಲಿದೆಯಂತೆ....'

ಹ್ಞಾಂ, ಇಲ್ಲಿ ಕರುಣಾನಿಧಿಯವರು ಇಂದಿರಾ ಸಂಬಂಧಕ್ಕೆ ಸೋಡಾ ಚೀಟಿ ಹಾಕಿದರು, ಅಲ್ಲಿ ಮತ್ತೊಂದು ಉಪಾದ್ವ್ಯಕ್ಕೆ ಬೀಜ ಹಾಕಿದರು.....'

'ಇದರಲ್ಲಿ ಅವ್ರದ್ದೇನೂ ಇಲ್ಲ ಹೋರಾಡುವವರು ಸಿಲೋನಿನಲ್ಲಿರುವ ತಮಿಳರು.'

'ಅಲ್ಲ, ಅವರಿಗೆ ರಾಜ್ಯವೇಕಂತೆ?'

'ಏಕೆ ಅಂದರೇನೆ? ತಮಿಳರು ಹಕ್ಕುಗಳನ್ನು ಸಂರಕ್ಷಿಸಿ ಕೊಳ್ಳುವುದಾಗಿ ಸಂವಿಧಾನಾತ್ಮಕ ಭರವಸೆ ದೊರೆಯದ್ದರಿಂದ ಈ ಹೊಸ ಬೇಡಿಕೆಯಂತೆ.'

'ಹ್ಞಾಂ....'

'ನಮ್ಮ ಪ್ರದೇಶದಲ್ಲಿಯೇ ಸಿಂಹಳೀಯರಿಗೆ ಜಮೀನು ನೀಡಿ ನಮ್ಮನ್ನು ಅಲ್ಪ ಸಂಖ್ಯಾಕರನ್ನಾಗಿ ಮಾಡಲು ಸರಕಾರ ಪ್ರಯತ್ನಿಸುತ್ತಿದೆ ಎಂದು ಶಿಲ್ಪ ನಾಯಕರು ಆರೋಪಿಸುತ್ತಾರೆ.'

'ಆ ನಾಯಕರು ಯಾರು? ರಾಮಸ್ವಾಮಿ ನಾಯಕರ ಸಂಬಂಧಿಯೆ?'

'ಅವರ ರಕ್ತ ಸಂಬಂಧ ಯಾರಿಗೆ ಗೊತ್ತು? ಅವರು ಸಿಲೋನ್ ಪಾರ್ಲಿಮೆಂಟಿನಲ್ಲಿ ೧೩ ಕುರ್ಚಿ ಹಿಡಿದಿರುವ ಫೆಡರಲ್ ಪಕ್ಷದ ನಾಯಕರು...'

'ಆಯ್ತು. ಅಂತೂ ತಮಿಳರು ತಮ್ಮ ಪ್ರತ್ಯೇಕತೆಯನ್ನು ಎಲ್ಲಿ ಹೋದರು ಬಿಡುವುದಿಲ್ಲ....ಅದೂ ತಪ್ಪಲ್ಲ ನೋಡಿ. ಸಂಸ್ಕೃತಿಯಲ್ಲಿ ಬೇರೆ ಬೇರೆ ಯಾವ ಪಾಕಿಸ್ತಾನ-ಬಾಂಗ್ಲಾಗಳು ಬೇರೆ ಬೇರೆಯಾದದ್ದು ವಾಸ್ತವಿಕ....'

'ಹ್ಞಾಂ....ಸಾಕು ಮಾಡು. ತುಂಬ ಹೊತ್ತಾಯ್ತು....'

'ಹೌದೂಂದ್ರೆ....ಇವತ್ತು ನೀವು ಬಂದದ್ದೇ ಭಾರೀ ತಡ....'

"ಹೌದೆ? ಈಗಲಾದ್ರೂ ಬಂದೆ ನೋಡು...."

"ಅಲ್ಲಾ ನನ್ನೇಕ್ಕಾಗುತ್ತೆ?"

—ಗೋರಾ.

●●

ಮಣಿಪಾಲದಲ್ಲಿ ಆಡಳಿತ ಕಾಂಗ್ರೆಸಿನ ಪ್ರಚಾರ ಸಭೆ

ಮಣಿಪಾಲದಲ್ಲಿ ಜರಗಿದ ಆಡಳಿತ ಕಾಂಗ್ರೆಸಿನ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಡಾ| ಟಿ. ಎಂ. ಎ ಪೈಯವರು "ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದಿಂದ ಅವರು ಕೈಗೊಂಡ ಪ್ರಗತಿಪರ ಧೋರಣೆಯಿಂದ ಈ ದೇಶದ ಮಹತ್ವದ ಸಮಸ್ಯೆಗಳನ್ನು ಬಗೆಹರಿಸಿದ್ದು ಮಾತ್ರವಲ್ಲದೇ ಜಗತ್ತಿನ ಮನ್ನಣೆಯನ್ನು ಗಳಿಸಿದೆ. ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಏಕ ರೀತಿಯ ಆಡಳಿತ ಮತ್ತು ಸರಕಾರ ವಿರುವುದರಿಂದ ಹೆಚ್ಚಿನ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ಉಡುಪಿ ಆಸುಪಾಸಿನ ಸಮಸ್ಯೆಗಳೇನೆಂಬುದನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡ, ಶ್ರೀಮತಿ ಇಂದಿರಾ ಗಾಂಧಿಯವರ ಧೋರಣೆಯನ್ನು ಬೆಂಬಲಿಸಿ ಅವರ ಕೈಬಲಗೊಳಿಸುವ ಶ್ರೀಮತಿ ಮನೋರಮಾ ಮಧ್ವರಾಜರನ್ನು ಪ್ರಚಂಡ ಬಹುಮತದಿಂದ ಆರಿಸುವಿರೆಂದು ತಿಳಿಯುತ್ತೇನೆ" ಎಂದು ನುಡಿದರು.

ಪ್ರಾರಂಭದಲ್ಲಿ ಶ್ರೀ ಪಿ. ರಂಗನಾಥ ಶೆಣೈ ಎಂ. ಪಿ. ಯವರು ಸ್ವಾಗತಿಸಿ ಇಂದಿರಾಗಾಂಧಿಯವರ ಸಮಾಜವಾದೀ ಕಾರ್ಯಧೋರಣೆಗಳನ್ನು ವಿವರಿಸಿ, ಆಡಳಿತ ಕಾಂಗ್ರೆಸಿನ ಪ್ರತಿನಿಧಿ ಆರಿಸಿಬಂದಲ್ಲಿ ನನ್ನ ಕೆಲಸ ಕೂಡಾ ಸರಳವಾಗುತ್ತದೆ. ಆದಕ್ಕಾಗಿ ಶ್ರೀಮತಿ ಮನೋರಮಾ ಮಧ್ವರಾಜರಿಗೆ ಬೆಂಬಲ ನೀಡಬೇಕೆಂದು ಕೋರಿದರು.

ಶ್ರೀ ಕೆ. ಕೆ. ಶೆಟ್ಟಿ ಎಂ. ಪಿ ಯವರು ಮಾತನಾಡುತ್ತಾ, ನಾವು ಪ್ರಗತಿ ಹೊಂದಲು ಜತೆತೆ ಹೋಗಬೇಕು, ಚೈತನ್ಯ ಉಂಟಾಗಬೇಕು. ಈ ರೀತಿಯ ಮಾರ್ಗವನ್ನು ಇಂದಿರಾಗಾಂಧಿಯವರು ಮಾಡಿದ್ದರಿಂದ ಅವರಿಗೆ ಪ್ರಚಂಡ ಬೆಂಬಲ ದೊರೆತಿದೆ. ಶ್ರೀಮತಿ ಮನೋರಮಾ ಮಧ್ವರಾಜರನ್ನು ಪ್ರಚಂಡ ಬಹುಮತದಿಂದ ಆರಿಸಿ ಬೆಂಬಲಿಸಬೇಕೆಂದು ಕೇಳಿಕೊಂಡರು.

ಶ್ರೀಮತಿ ಮನೋರಮಾ ಮಧ್ವರಾಜರು ಮಾತನಾಡುತ್ತಾ ತಾನು ಈ ಊರವಳು, ಈ ಕ್ಷೇತ್ರದ ಅವಶ್ಯಕತೆ-ಸಮಸ್ಯೆಗಳನ್ನು ಬಲ್ಲವಳು, ಉಡುಪಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರಾಮಾಣಿಕವಾದ ಸೇವೆ ಸಲ್ಲಿಸುವುದಾಗಿ ಭರವಸೆ ನೀಡಿದರು.

ಜನಸಾಮಾನ್ಯರ ಕಲ್ಯಾಣಕ್ಕಾಗಿ ಕಾಂಗ್ರೆಸಿಗೆ ಮತ ನೀಡಿರಿ

—ಶ್ರೀ ಕೆ. ಕೆ. ಶೆಟ್ಟಿ

ತಾ. 24ರಂದು ಉಡುಪಿಯಲ್ಲಿ ಶ್ರೀ ಮಟ್ಟಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿದ ಆ. ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಸಂಸತ್ ಸದಸ್ಯ ಶ್ರೀ ಕೆ. ಕೆ ಶೆಟ್ಟರು ಮಾತಾಡಿ ಈ ಕ್ಷೇತ್ರದ ಜನಸಾಮಾನ್ಯರ ಕಲ್ಯಾಣ ಯಾವ ಪಕ್ಷದಿಂದ ಸಾಧ್ಯ ಎಂದು ವಿವೇಚಿಸಿ ವಿಧಾನ ಸಭೆಗೆ ಆ. ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಮನೋರಮಾ ಮಧ್ವರಾಜರನ್ನೇ ಆರಿಸಿ ಕಳುಹಿಸಬೇಕೆಂದರು.

ಆರಂಭದಲ್ಲಿ ಶ್ರೀ ಯೋಗೀಶ ಹೊಳ್ಳರು ಸ್ವಾಗತಿಸಿದರು. ಅಭ್ಯರ್ಥಿ ಶ್ರೀಮತಿ ಮಧ್ವರಾಜರು ತನಗೇ ಮತನೀಡಿ ಸಹಕರಿಸುವಂತೆ ಮತದಾರರನ್ನು ವಿನಂತಿಸಿಕೊಂಡರು. ನಂತರ ಮೈಸೂರು ರಾಜ್ಯ ಕಿಸಾನ್ ಸಭೆಯ ಅಧ್ಯಕ್ಷ ಶ್ರೀ ಮಹಾಬಲ ಶೆಟ್ಟರು ಮಾತಾಡಿ ಜನಸಾಮಾನ್ಯರ ಹಿತಕ್ಕಾಗಿ ಆ. ಕಾಂಗ್ರೆಸನ್ನು ಆರಿಸಬೇಕೆಂದೂ, ಅಲ್ಲದೆ ಅವರು ಇತರ ಪಕ್ಷೀಯರ ವಾದದಲ್ಲಿನ ವಿರೋಧಾಭಾಸಗಳನ್ನು ವಿವರಿಸಿದರು.

ಭದ್ರಾವತಿಯಲ್ಲಿ ವಿಜಯಾ ಬೇಂಕಿನ ಹೊಸ ಶಾಖೆ

ಕಳೆದ ತಾ. 17ರಂದು ಭದ್ರಾವತಿಯಲ್ಲಿ ವಿಜಯಾ ಬೇಂಕಿನ ಶಾಖೆಯು ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಚೆಯರ್‌ಮೇನ್ ಹಾಗೂ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಚಂದಪ್ಪ ಪಟೇಲರಿಂದ ಉದ್ಘಾಟಿಸಲ್ಪಟ್ಟಿತು.

ಪ್ರಾರಂಭದಲ್ಲಿ ವಿಜಯಾ ಬೇಂಕಿನ ಚೆಯರ್‌ಮೇನ್ ಶ್ರೀ ಸುಂದರರಾಮ ಶೆಟ್ಟರು ಸ್ವಾಗತಿಸುತ್ತಾ ಬೇಂಕು ಕಳೆದ ದಶಕದಲ್ಲಿ ಸಾಧಿಸಿದ ಪ್ರಗತಿಯನ್ನು ವಿವರಿಸಿ, ಬ್ಯಾಂಕ್ ಸ್ಥಾಪಿತವಾದಂದಿನಿಂದ ಸಣ್ಣ ರೈತರು ಚಿಕ್ಕ ಕಸುಬುದಾರರು, ಸ್ವತಂತ್ರ ವೃತ್ತಿಯನ್ನವಲಂಬಿಸಿರುವವರು ಮತ್ತು ಸಣ್ಣ ವ್ಯಾಪಾರಿಗಳಿಗೆ ನೆರವೀಯುವ ನೀತಿಯನ್ನು ಅನುಸರಿಸುತ್ತಿದ್ದು ಇನ್ನೂ ಅದನ್ನೇ ಮುಂದುವರಿಸುವುದಾಗಿ ಭರವಸೆ ನೀಡಿದರು. ಬ್ಯಾಂಕಿನ ಪ್ರಗತಿಗಾಗಿ ಸರ್ವರ ಸಹಕಾರವನ್ನೂ ಕೋರಿದರು.

ಸುಭದ್ರ ಸರಕಾರಕ್ಕಾಗಿ ತಮ್ಮ ಪಕ್ಷಕ್ಕೆ ಮತ ನೀಡಿರೆಂದು ವೀರೇಂದ್ರ ಪಾಟೀಲ್

ತಾ 21ರಂದು ಸುರತ್ಕಲ್ ಮತದಾರ ಕ್ಷೇತ್ರದ ಬಜ್ಪೆಯಲ್ಲಿ ಶ್ರೀ ವೀರೇಂದ್ರ ಪಾಟೀಲರು ಸಾರ್ವಜನಿಕರನ್ನುದ್ದೇಶಿಸಿ ಮಾತಾಡುತ್ತಾ, ಮೈಸೂರು ಸರಕಾರದಲ್ಲಿ ತಮ್ಮ ಆಡಳಿತವನ್ನು ಉರುಳಿಸಲು ಆಡಳಿತ ಕಾಂಗ್ರೆಸು ಜವಾಬ್ದಾರಿಯೆಂದೂ ರಾಜ್ಯದಲ್ಲಿ ಸುಭದ್ರ ಸರಕಾರವಿರಬೇಕೆಂದಾದರೆ ಭದ್ರವಾಗಿದ್ದ ನಮ್ಮ ಸರಕಾರವನ್ನು ಅವರೇಕೆ ಉರುಳಿಸಲು ಪ್ರಯತ್ನಿಸಿದರೆಂದು ಅವರು ಪ್ರಶ್ನಿಸಿದರು. ಮುಂದಿನ ತಿಂಗಳ 5 ಮತ್ತು 9ರಂದು ನಿಮ್ಮ ಜಿಲ್ಲೆಯಲ್ಲಿ ವಿಧಾನ ಸಭೆಗೆ ಚುನಾವಣೆ ನಡೆಯಲಿದೆ. ಇವತ್ತು ಮೈಸೂರು ರಾಜ್ಯದಲ್ಲಿ ಯಾವ ಪಕ್ಷದ ಸರಕಾರ ನಡೆಯಬೇಕೆಂಬ ನಿರ್ಧಾರವಾಗುವ ಪ್ರಶ್ನೆಯಿದೆಂದು ತಿಳಿಸಿದ ಶ್ರೀ ಪಾಟೀಲರು ಚುನಾವಣೆಯಲ್ಲಿ ಸ್ಪರ್ಧಿಸಿದ ಉಮೇದ್ವಾರರ ಸಂಖ್ಯಾನುಸಾರ ಆ. ಕಾಂಗ್ರೆಸ್ ಅಥವ ಸ. ಕಾಂಗ್ರೆಸ್ ಈ ಎರಡು ಪಕ್ಷಗಳಿಗೆ ಮಾತ್ರ ಸರಕಾರ ರಚಿಸಲು ಸಾಧ್ಯವೆಂದರು ಸಮರ್ಥ ಸರಕಾರ ಬೇಕಾಗಿದ್ದಲ್ಲಿ ಚೆನ್ನಾಗಿ ಯೋಚಿಸಿ ಸ. ಕಾಂಗ್ರೆಸ್ ಉಮೇದ್ವಾರರನ್ನು ಬೆಂಬಲಿಸಿರಿ ಎಂದು ಅವರು ಮತದಾರರನ್ನು ವಿನಂತಿಸಿದರು ಈ ಕ್ಷೇತ್ರದಲ್ಲಿ ತಮ್ಮ ಪಕ್ಷದ ಉಮೇದ್ವಾರರಾಗಿ ಶ್ರೀ ಪ್ರಭಾಕರ ರೈಯವರು ಸ್ಪರ್ಧಿಸುತ್ತಿದ್ದು ಮತದಾರರು ಅವರು ಆರಿಸಿ ಬರುವಂತೆ ಸಹಕರಿಸಬೇಕಾಗಿ ವಿನಂತಿಸಿಕೊಂಡರು.

ಅಂತ್ಯದಲ್ಲಿ ಪಂಚಾಯತ್ ಅಧ್ಯಕ್ಷ ಶ್ರೀ ಸುಂದರ ಶೆಟ್ಟರು ಧನ್ಯವಾದ ಅರ್ಪಿಸಿದರು.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

In the Court of the Munsiff of Bantwal· S· K·

P. & S. C. No. 1/1972

Between:-

Gangamma — *Petitioner*.

It is hereby concerned to all the above petitioner has filed an application under Section 372 of Indian Succession Act. She prayed that she alone entitled for the amount of her late husband in C. P. F. account and gratuity amount. If anybody is interested in the said amount, opposing the claim of the Petitioner, shall appear before the court on 1-4-1972 at 11 A. M. in person, or by *Pleader*, or else the above matter will be decided exparte.

(By order of the Court)

P. Shankernarayana
Advocate for *Petitioner*.

Bantwal. 24—2—72

ಉಡುಪಿ ಕ್ಷೇತ್ರದಲ್ಲಿ

ಪರಿಶ್ರಮದಿಂದ ಆಳುವ ಕಾಂಗ್ರೆಸ್ ಗೆಲ್ಲುತ್ತದೆ

ಆಳುವ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಮನೋರಮಾ ಮಧ್ವರಾಜ್

ಉಡುಪಿ ಕ್ಷೇತ್ರದಲ್ಲಿ ವಿಧಾನ ಸಭೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಆರು– ಶ್ರೀಮತಿ ಮನೋರಮಾ ಮಧ್ವರಾಜ (ಆಳುವ ಕಾಂಗ್ರೆಸ್ಸು), ಡಾ| ವಿ.ಎಸ್. ಆಚಾರ್ (ಜನಸಂಘ), ಶ್ರೀ ಮರ್ಣೆ ಗೋವಿಂದ ಶೆಟ್ಟಿ (ಸಮಾಜವಾದಿ), ಮತ್ತು ಶ್ರೀಗಳಾದ ಶ್ರೀಧರ ಕಲ್ಮಾಡಿ, ಸುರೇಂದ್ರನಾಥ, ಪೆರೋಡಿ ವಿಠಲ ಶೆಟ್ಟಿ, (ಪಕ್ಷೇತರರು)

ಸಮಾಜವಾದಿ ಅಭ್ಯರ್ಥಿ ಶೆಟ್ಟರು ಈ ಕ್ಷೇತ್ರದಲ್ಲಿ ಪಕ್ಷವನ್ನು ಆರಂಭದಲ್ಲಿಯೇ ಕಟ್ಟಿದವರು, ನಿವೃತ್ತ ಶಿಕ್ಷಕರು, ಗಾಂಧಿ ತತ್ವಾನುಯಾಯಿಗಳು. ಇಲ್ಲಿ ಸಮಾಜವಾದಿ ಪಕ್ಷವು ಜೀವಂತವಿರುವುದಕ್ಕೆ ಇವರೇ ಕಾರಣೀಭೂತರು. ಆದರೆ, ಅವರ ಪ್ರತಿಸ್ಪರ್ಧಿಗಳೆಲ್ಲರೂ ಇನ್ನೂ ನವಯುವಕರು. ಸಮಾಜವಾದಿ ಪಕ್ಷದ ಕ್ಷೇತ್ರವೂ ಪರಿಮಿತ. ಇದೀಗ ಈ ಪಕ್ಷದ ಒಂದಂಶ ಆಳುವ ಕಾಂಗ್ರೆಸ್ಸಿನಲ್ಲಿಯೂ ಇನ್ನೊಂದು ಸಮಾಜವಾದಿಯಲ್ಲೂ ವಿಲೀನ ಹೊಂದಿದೆ. ಅಂತೂ ಇವರ ಸ್ಪರ್ಧೆ ತಾತ್ವಿಕವೆಂದೇ ಹೇಳಬೇಕು.

ಉಡುಪಿ ನಗರ ಸಭಾಪತಿ ಡಾ| ವಿ. ಎಸ್. ಆಚಾರ್ಯರು (ಚಿಹ್ನೆ—ದೀಪ) ಪ್ರಭಾವಿ ಅಭ್ಯರ್ಥಿ. ಈ ಕ್ಷೇತ್ರದಿಂದ ಜನಸಂಘವು ಮೊತ್ತ ಮೊದಲ ಬಾರಿಗೆ ರಂಗಕ್ಕಿಳಿದಿದೆ. ಜನಸಂಘದ ಸಂಘಟನೆ ನಗರ ಪ್ರದೇಶದಲ್ಲಿ ಇದ್ದಂತೆನಿಸುತ್ತದೆ. ಉಡುಪಿ ನಗರ ಸಭೆ ತನ್ನ ಕೈಯ್ಯಲಿದೆಯೆಂಬ ವಿಶ್ವಾಸವೊಂದರಿಂದಲೇ ಅದು ಗೆಲ್ಲುವುದು ಸಾಧ್ಯವಿಲ್ಲ. ಏಕೆಂದರೆ ನಗರಸಭೆ ಜನಸಂಘದ ಕೈಗೆ ಬಂದದ್ದು ಯಾವ ಸನ್ನಿವೇಶದಲ್ಲೆಂದು ನಾಗರಿಕರಿಗೆ ಗೊತ್ತು.

ಉಳಿದ ನಾಲ್ವರು ಅಭ್ಯರ್ಥಿಗಳಲ್ಲಿ ಶ್ರೀಮತಿ ಮನೋರಮಾ ಮಧ್ವರಾಜರ ಚಿಹ್ನೆ (ದನ—ಕರು) ಹೆಸರು ಸೇವೆ ಜನ ಜನಿತ. ಅವರೂ ಅವರ ಪತಿಯವರೂ ಸಮಾಜಕ್ಕೆ ನೀಡಿದ ಕೊಡುಗೆಯೂ ಅಗಣಿತ. ಇವರಲ್ಲಿ ಹಣವೂ ಉಂಟು. ಜತೆಗೆ ಗುಣವೂ ಉಂಟು. ಉಳಿದ ಹಣವಂತರಿಗೂ ಇವರಿಗೂ ಇರುವ ಅಂತರವೇನೆಂಬುದನ್ನು ಉಡುಪಿಯ ಮತದಾರರೂ ಎಂದೋ ಗುರುತಿಸಿದ್ದಾರೆ. ಜನಪ್ರಿಯತೆ ಮತ್ತು ಪಕ್ಷವೇತರರ ಬೆಂಬಲವೂ ಇವರಿಗಿದೆ. ನಾಲದೆಂಬುದಕ್ಕೆ ಪ್ರಧಾನಿ ಗಾಂಧಿಯವರೂ ಇಲ್ಲಿನ ಮತದಾರ ಕ್ಷೇತ್ರಕ್ಕೆ ಬಂದು ಹೋಗಿದ್ದಾರೆ. ಸಾಧ್ಯವಾದಷ್ಟು ಮತದಾರರನ್ನು ಭೇಟಿ ಮಾಡುವ ದೀಕ್ಷೆ ಉತ್ತಮ ಸಂಘಟನೆ ಜತೆಗೆ ಸಾಕಷ್ಟು ಹಣ ಮತ್ತು ಮಹಿಳೆಯೆಂಬ ವಿಶೇಷ ಗುಣವಿರುವುದರಿಂದ ಶ್ರೀಮತಿ ಮಧ್ವರಾಜರು ಗೆಲ್ಲಲೇ ಬೇಕು.

ಆದರೆ ಅವರ ಗೆಲುವು ನಿಶ್ಚಿತವಾದರೂ ನಿಶ್ಚಿಂತೆಯದ್ದಲ್ಲವೆನಿಸುತ್ತದೆ. ಈ ಪ್ರದೇಶದ ಮತದಾರರಲ್ಲಿ ಹಿಂದುಳಿದ ಜಾತಿಯವರು ಗಣ್ಯರು ಇವರ ಮತಗಳೇ ನಿರ್ಣಾಯಕವೆಂದರೂ ಸರಿಯೇ. ಈ ಮತಗಳ ಸಹಾಯದಿಂದಲೇ ಇಲ್ಲಿನ ಅಭ್ಯರ್ಥಿ ಗೆಲ್ಲುತ್ತ ಬಂದಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲೂ ಅಷ್ಟೆ. ಶ್ರೀಮತಿ ಮಧ್ವರಾಜ, ಶ್ರೀಧರ ಕಲ್ಮಾಡಿ ಮತ್ತು ಸುರೇಂದ್ರನಾಥರು ಹಿಂದುಳಿದ ಜಾತಿಗಳಿಗೆ ಸೇರಿದವರು. 'ನಿರ್ಣಾಯಕ ಮತ'ಗಳನ್ನು ಹಂಚಿಕೊಳ್ಳುವಲ್ಲಿ ಕೊನೆಯ ಇಬ್ಬರು ಸಮರ್ಥರಾದರೂ ಆಶ್ಚರ್ಯವಿಲ್ಲ. ಶ್ರೀ ಕಲ್ಮಾಡಿಯವರು (ಚಿಹ್ನೆ ಸೈಕಲ್) ಸಂಸ್ಥಾ ಕಾಂಗ್ರೆಸ್ ಮತ್ತು ಮಾರ್ಕ್ಸಿಸ್ಟರ ಬೆಂಬಲ ಪಡೆದಿದ್ದಾರೆಂದ ಮಾತ್ರಕ್ಕೆ ಅವರು ಗೆಲ್ಲುತ್ತಾರೆಂದು ಅರ್ಥ ಮಾಡುವುದೂ ತಪ್ಪಾಗುತ್ತದೆ. ಶ್ರೀ ಸುರೇಂದ್ರನಾಥರ ಉದಯ ಸೂರ್ಯನೂ ತನ್ನ ಕಿರಣಗಳನ್ನು ತೀಕ್ಷ್ಣವಾಗಿಸಹತ್ತಿದಾನೆ. ಮೊನ್ನೆ ಮೊನ್ನೆಯವರೆಗೂ ಆಳುವ ಕಾಂಗ್ರೆಸ್‌ನಲ್ಲಿಯೇ ಇದ್ದ ಅವರು ಪಕ್ಷದ ನೀತಿಯನ್ನು ವಿರೋಧಿಸುವುದಿಲ್ಲ, ಅಭ್ಯರ್ಥಿಯ ವಿರುದ್ಧ ಬಂಡೆದ್ದಿದ್ದಾರೆ. ಈ ಇಬ್ಬರು ಮತದಾರರನ್ನು ಎಷ್ಟರ ಮಟ್ಟಿಗೆ ಒಲಿಸಿಕೊಳ್ಳುತ್ತಾರೆಂಬುದರ ಮೇಲೆ ಚುನಾವಣಾ ಫಲಿತಾಂಶ ನಿಂತಿದೆ. ಆರನೆಯವರಾದ ಶ್ರೀ ಪೆರೋಡಿ ವಿಟ್ಠಲ ಶೆಟ್ಟರ (ಚಿಹ್ನೆ ಸಿಂಹ) ಸ್ಪರ್ಧೆ ನಾಮಮಾತ್ರ.

ಆದುದರಿಂದಲೇ ಪ್ರಯತ್ನಪೂರ್ವಕವಾಗಿ ಶ್ರೀಮತಿ ಮಧ್ವರಾಜರು ಗೆಲ್ಲುವ ಸಾಧ್ಯತೆಯಿದೆ. ಇದಕ್ಕೆ ಅವರು ಈ ಮೊದಲಿನೆರಡು ಬಾರಿಗಿಂತಲೂ ಹೆಚ್ಚಿನ ಶ್ರಮ ಪಡುವುದೂ ಅಗತ್ಯವಾಗಿದೆ. ಯಾರು ಗೆದ್ದರೂ ಅತ್ಯಲ್ಪ ಬಹುಮತದಿಂದ ಎಂದು ಈಗಿನ ನಿರೀಕ್ಷೆ.

ಈ ಕ್ಷೇತ್ರದ ಚುನಾವಣಾ ಪ್ರಚಾರ ತುಳು ಭಾಷೆಯನ್ನೇ ಮಾಧ್ಯಮವಾಗಿ ಸ್ವೀಕರಿಸಿದಂತಿದೆ. ●

ಮಂಗಳೂರಲ್ಲಿ ಶ್ರೀ ವೀರೇಂದ್ರ ಪಾಟೀಲ್

ತಾ. 22ರಂದು ಶ್ರೀ ವೀರೇಂದ್ರ ಪಾಟೀಲರು ಮಂಗಳೂರಲ್ಲಿ ಸುದ್ದಿಗಾರರೊಂದಿಗೆ ಮಾತಾಡುತ್ತಾ ರಾಜ್ಯಗಳಿಗೆ ಹೆಚ್ಚು ಅಧಿಕಾರದ ಬೇಡಿಕೆ ಕುರಿತು ಜನರು ಗೊಂದಲ ಪಡಬೇಕಾಗಿಲ್ಲವೆಂದು ಸ್ಪಷ್ಟನೆ ನೀಡಿದರು. ಸಮರ್ಥ ಆಡಳಿತ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗೊಳಿಸುವುದಕ್ಕೆ ಇದು ಅವಶ್ಯವೆಂದೂ ಅಧಿಕಾರ ವಿಕೇಂದ್ರೀಕರಣವಾಗದೆ ರಾಜ್ಯದ ಆಡಳಿತ ಕ್ರಮ ಭದ್ರವಾಗಿರುವುದಿಲ್ಲ ಎಂದರು. "ಸಮಾನ ಕೆಲಸ, ಸಮಾನ ವೇತನ" ತತ್ವದಂತೆ ಕೇಂದ್ರ ಮತ್ತು ರಾಜ್ಯ ಸರಕಾರೀ ನೌಕರರ ನಡುವಣ ವೇತನದ ಅಂತರ ಅಂತ್ಯವಾಗಬೇಕೆಂದವರು ಪ್ರತಿಪಾದಿಸಿದರು. ರಾಜ್ಯದ 19 ಜಿಲ್ಲೆಗಳ ಪೈಕಿ ತಾನು ಈ ತನಕ 8 ಜಿಲ್ಲೆಗಳಲ್ಲಿ ಸಂಚರಿಸಿದ್ದು ಅಲ್ಲಿ ಜನರು ತೋರಿದ ಉತ್ಸಾಹ ನೋಡಿದರೆ ಮುಂಬರುವ ಚುನಾವಣೆಗಳಲ್ಲಿ ರಾಜ್ಯದಲ್ಲಿ ಸ. ಕಾಂಗ್ರೆಸು ಅಧಿಕಾರಕ್ಕೆ ಬರಬಹುದು ಎಂದು ಅವರು ಹಾರೈಸಿದರು.

ನವಯುಗ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿ

ಪ್ರೋತ್ಸಾಹಿಸಿರಿ.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಾಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ನಿಮ್ಮ ಮತ ಯಾರಿಗೆ?

ಯಾರೂ ಗುರುತಿಸಲಾರರು

ಏಕೆಂದರೆ:

ಈ ಬಾರಿ ನಿಮ್ಮ ಮತಗಳ ಎಣಿಕೆಯ ವಿಧಾನ ಬೇರೆ ತೆರನಾಗಿರುತ್ತದೆ.
ಒಂದು ಚುನಾವಣಾ ಕ್ಷೇತ್ರದ ಎಲ್ಲ ಮತಗಟ್ಟೆಗಳ ಮತಚೀಟಿಗಳನ್ನೂ ಸಹ ಒಂದು ದೊಡ್ಡ ಪೆಟ್ಟಿಗೆಯೊಳಗೆ ಹಾಕಲಾಗುತ್ತದೆ.
ಅವುಗಳನ್ನು ಎಣಿಸುವ ಮುನ್ನ ಚೆನ್ನಾಗಿ ಬೆರಸಲಾಗುತ್ತದೆ. ಯಾವುದೇ ಉಮೇದುವಾರರ ಬಗ್ಗೆ ಒಂದು ನಿರ್ದಿಷ್ಟ ಮತಗಟ್ಟೆಯಲ್ಲಾಗಲಿ ಅಥವಾ ಒಂದು ಹಳ್ಳಿಯಲ್ಲಾಗಲಿ ಮತದಾನದ ಪ್ರವೃತ್ತಿಯು ಹೇಗಿತ್ತು ಎಂಬುದು ಯಾರಿಗೂ ತಿಳಿಯ ಬರುವುದಿಲ್ಲ

ಉಮೇದುವಾರರು, ಅವರ ಮತ ಎಣಿಕೆಯ ಪ್ರತಿನಿಧಿಗಳು, ರಿಟರ್ನಿಂಗ್ ಆಫೀಸರುಗಳು ಮತ್ತು ಎಣಿಕೆಯ ಮೇಲುಸ್ತುವಾರಿ ನಡೆಸುವವರ ಸಮ್ಮುಖದಲ್ಲಿ ಈ ಕಾರ್ಯಗಳನ್ನೆಲ್ಲ ನಿರ್ವಹಿಸಲಾಗುತ್ತದೆ.

ಎಸ್. ಪಿ. ಸೇನ್‌ವರ್ಮ
ಭಾರತದ ಪ್ರಧಾನ ಚುನಾವಣಾಧಿಕಾರಿ

DAVP 71/557

ಸಮರ್ಪಣ

(ಎರಡನೇ ಪುಟದಿಂದ)

ಮಾತಿಗೆ ಎಲ್ಲಿಲ್ಲದ ಕಾಠಿಣ್ಯತೆ ಬಂದಿತ್ತು. ಅವನ ಮನಸ್ಸು ಅಷ್ಟೇ ವಿಚಲಿತವಾಗಿತ್ತು.

ಅವನಿಂದ ಅಲ್ಲಿ ನಿಲ್ಲುವುದಾಗಲಿಲ್ಲ. ಆತ ಸಜ್ಜೆಮನೆಯತ್ತ ಹೆಜ್ಜೆ ಹಾಕಿದ. ಹಾಸುಗೆಯ ಮೇಲೆ ಹಾಯಾಗಿ ಬಿದ್ದುಕೊಂಡ.

ಯೋಜನೆಯೊಡನೆ ಮನಸ್ಸನ್ನು ತೇಲ ಬಿಟ್ಟ.

ಆಕೆ ಬಾಗಿಲನ್ನು ಓರೆ ಮಾಡಿ ಸಜ್ಜೆಮನೆಯನ್ನು ಪ್ರವೇಶಿಸಿದಳು. ಮಂಚದ ಪಕ್ಕದಲ್ಲಿದ್ದ ಕಾಲುಮಣೆಯ ಮೇಲೆ ತಂದಿದ್ದ ನೀರಿನ ಚಂಬನ್ನೂ—ಲೋಟವನ್ನೂ ಇರಿಸಿದಳು.

ಕಣ್ಣು ಮುಚ್ಚಿ ಮಲಗಿದ್ದ ನರಸಿಂಹನಿಗೆ ಇದಾವುದರ ಪರಿವೆಯೂ ಇರಲಿಲ್ಲ.

ಆಕೆ ಮಂಚದ ಹತ್ತಿರಕ್ಕೆ ಬಂದು, ಕಾಲ ಬುಡದಲ್ಲಿದ್ದ ಹೊದಿಕೆಯನ್ನು ಅವನ ಮೈತುಂಬ ಹೊದೆಸಿದಳು. ಅನಂತರ ಮಂಚದ ಮೇಲೆ ಅನುಮಾನಿಸುತ್ತಲೇ ಕುಳಿತು ಅವನ ಕಾಲುಗಳನ್ನೊತ್ತಲಾರಂಭಿದಳು.

ಈ ಸ್ಪರ್ಶದಿಂದ ನರಸಿಂಹ ನಖಶಿಖಾಂತ ಉರಿದು ಹೋದ.

ಎದ್ದು ಕುಳಿತು ಆವಳ ಕೆನ್ನೆಗೆ ಫಳೀರೆಂದು ಬಾರಿಸಿದ.

ನುಂಗಲಾರದ ನೋವನ್ನು ನುಂಗಿಕೊಂಡು ಆಕೆ ನಿಧಾನವಾಗಿ ಅಲ್ಲಿಂದ ಹೊರಟು ಹೋದಳು.

ನರಸಿಂಹ ಎದ್ದು ಹೋಗಿ ಬಾಗಿಲು ಹಾಕಿಕೊಂಡ.

ಅಗಣಿಯನ್ನು ಒಳಗಿಂದ ಭದ್ರ ಪಡಿಸಿಕೊಂಡು, ಮಂಚದ ಮೇಲೆ ಮೈತುಂಬ ಹೊದ್ದುಕೊಂಡು ಮಲಗಿದ.

೫

ಅರಮನೆಯೊಳಗಿನ ಯಾರಿಗೂ ತಿಳಿಯದಂತೆ ಈ ಘಟನೆ ನಡೆದು ಹೋಯಿತು. ಅದು ತನ್ನನ್ನು ಪುನಃ ಸಂಸಾರದ ಸುಳಿಯೊಳಗೆ ಸಿಲುಕಿಸಲು ನಡೆಸಿದ ಏರ್ಪಾಡೆಂಬುದನ್ನು ನರಸಿಂಹ ತರ್ಕಿಸಿದ.

ಅವನನ್ನು ಪೂರ್ವ ಸ್ಥಿತಿಗೆ ತರಲು ಹಾಕಿದ ಗಾಳ.

ಅದರಲ್ಲಿ ಅನುಮಾನವಿರಲಿಲ್ಲ.

ಪರದೆಯ ಹಿಂದು ನಿಂತು ಈ ಗೊಂಬೆಯಾಟ ಆಡಿಸಿದವರು ಯಾರು?

ಆ ಲಾವಣ್ಯಮಯಿ ಯಾರು? ಎಲ್ಲಿಯವಳು?

ಅವಳಿಗೆಂತು ಪ್ರವೇಶ ದೊರೆಯಿತು?

ಈ ರೀತಿ ಮಾಟವಾದ ಮೈಯುಳ್ಳ ಚಲುವೆಯನ್ನು ಆತ ಹಿಂದೆ ರಾಜಧಾನಿಯಲ್ಲೇ ಕಂಡಿರಲಿಲ್ಲ. ಅವಳಲ್ಲಿಯವಳೇ|ಆಗಿದ್ದರೆ ಅವನ ದೃಷ್ಟಿಗೆ, ಇವಳಿದುವರೆಗೆ ಬೀಳದಿರುವಂತಿರಲಿಲ್ಲ.

ಈ ನಿಗೂಢವನ್ನು ಭೇದಿಸುವುದು ಹೇಗೆ?

ಅದು ಬಗೆಹರಿಯಲಿಲ್ಲ. ಆತ ಸುಮ್ಮನಾದ.

'ಪ್ರಭುಗಳು ಉಪಹಾರ ಸ್ವೀಕರಿಸುತ್ತೀರಾ?'

ಈಗ ಬಂದು ಎಚ್ಚರಿಸಿದವನು ಅಡುಗೆಯವನು.

ಅವಳೇ ಬಂದಳೇನೊ ಎನ್ನುವ ಭ್ರಮೆಯುಂಟಾಯಿತು ನರಸಿಂಹನಲ್ಲಿ.

ಅದನ್ನಾತ ತೋರಗೊಡಲಿಲ್ಲ.

ಅಡಿಗೆಯವನು ಉಪಹಾರದ ತಟ್ಟೆಯನ್ನು ತಂದಿಟ್ಟ.

ಒಂದಿಷ್ಟು ಸ್ವೀಕರಿಸಿ, ತಟ್ಟೆಯನ್ನು ಹಾಗೆಯೇ ತಳ್ಳಿದ.

ರುಚಿಸಲಿಲ್ಲವೇನೋ ಎಂಬ ಶಂಕೆಯುಂಟಾಯಿತು ಅಡಿಗೆಯವನಿಗೆ.

'ತುಂಬಾ ರುಚಿಯಾಗಿದೆ. ನನಗೆ ಹಸಿವಿಲ್ಲ. ಆದ್ದರಿಂದ ಹೆಚ್ಚು ತಿನ್ನಲಾರೆ'

ಅಡಿಗೆಯವನ ಮನದಲ್ಲುಂಟಾದ ಶಂಕೆಯನ್ನು ನರಸಿಂಹನೇ ಅರಿತು ಪರಿಹರಿಸಿದ. ಆದರೂ ಅಲ್ಲಿಂದವನು ಕದಲಲಿಲ್ಲ.

'ಏನು ನಿಂತಿರಿ'

'ಬೇರೇನಾದರೂ ಬೇಕಾಗಿತ್ತೇನೊ'

'ಒಂದಿಷ್ಟು ಹಾಲು ತನ್ನಿ'

ಅಡಿಗೆಯವ ಬೆಳ್ಳಿಯ ಬಟ್ಟಲು ತುಂಬ ಹಾಲು ತಂದಿಟ್ಟ.

'ಹಾಲು ತುಂಬ ಬಿಸಿ ಇರುವಂತಿದೆ'

'ಬಿಸಿಯಾಗಿರುವುದು ಹಾಲಲ್ಲ. ಅದನ್ನು ಹಿಡಿದಿರುವ ಲೋಟ ಪ್ರಭು'

ಈ ಸತ್ಯ ನರಸಿಂಹನಿಗೆ ತಿಳಿದುದು ಬಟ್ಟಲನ್ನು ಕೈಗೆತ್ತಿಕೊಂಡು ಹಾಲನ್ನು ಕುಡಿಯಲಾರಂಭಿಸಿದಾಗಲೇ. ಬಟ್ಟಲನ್ನು ಬರಿದು ಮಾಡಿ ಕೆಳಗಿಡುತ್ತ ನರಸಿಂಹ ಅಡುಗೆಯವನನ್ನು ಆಮೂಲಾಗ್ರ ಪರಿಶೀಲಿಸಿದ.

ಸ್ವಾಮಿಯ ಪರೀಕ್ಷಕ ದೃಷ್ಟಿಯಿಂದ ಭೃತ್ಯ ಚಕಿತನಾದ ಅವನನ್ನು ಭಯ ಆವರಿಸಿತು.

ಅವನಲ್ಲಾಗುವ ಬದಲಾವಣೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಿ ನರಸಿಂಹ ಏರು ಧ್ವನಿಯಲ್ಲಿ

'ನಿನ್ನೆ ನೀವೆಲ್ಲ ಎಲ್ಲಿಗೆ ಹೋಗಿದ್ದಿರಿ'

ಪ್ರಶ್ನೆ ಅಲಗಿನಂತೆ ಹರಿತವಾಗಿತ್ತು.

ಅದರ ತೀಕ್ಷ್ಣತೆಗೆ ಭೃತ್ಯ ಮರ್ಮಾಹತನಾದ.

'ಎಂಟರ ಸುಮಾರಿಗೆ ಎಲ್ಲವನ್ನೂ ಅಣಿಗೊಳಿಸಿ ಎಂದಿನಂತೆ ಹೊರಟು ಹೋದೆ'

'ಉಳಿಕೆ ಆಳು ಕಾಳುಗಳು'

'ಅವರು ಆಗಲೇ ಹೊರಟು ಹೋಗಿದ್ದರು'

'ಯಾರ ಅಪ್ಪಣೆ ಪಡೆದು' ಅಧಿಕಾರದ ವಾಣಿ

'ಅದು ಈ ಬಡವನಿಗೆ ತಿಳಿಯದು'

'ನೀನು ಹೊರಟು ಹೋದಾಗ ಬೇರೆ ಯಾರಾದರೂ ಇಲ್ಲಿ ಇದ್ದರೇ'

'ನನಗೆ ತಿಳಿದಂತೆ ಯಾರೂ ಇರಲಿಲ್ಲ.'

'ಇರಲಿಲ್ಲ.ಇರಲಿಲ್ಲೆಂಬುದು ನಿಜವೇ' ನರಸಿಂಹನ ಧ್ವನಿ ತಾರಕಕ್ಕೆ ಏರಿತು.

'ಉಪ್ಪುಂಡು ಬೆಳೆದ ದೇಹ. ಪ್ರಭುಗಳ ಚಿತ್ತ. ಬೇಕಾದಂತೆ ದಂಡಿಸಬಹುದು.ಆದರೆ ನಾನು ಹೊರ ಹೋದಾಗ ಇಲ್ಲಿ ಯಾರೂ ಇರಲಿಲ್ಲ ಇದು ನಿಜ'.

ಅಡಿಗೆಯವ ತನ್ನ ಪ್ರಾಂಜಲತನವನ್ನು ಪ್ರದರ್ಶಿಸಿದ.

'ಹಾಗಿದ್ದರೆ ಆ ಹೆಣ್ಣು ಮಗಳು ಎಲ್ಲಿಂದ ಬಂದಳು. ಹೇಗೆ ಪ್ರವೇಶ ದೊರಕಿಸಿ ಕೊಂಡಳು'

ನರಸಿಂಹನ ಮಾತಿನಿಂದ ಅಡಿಗೆಯವ ಅಡಿಯಿಂದ ಮುಡಿಯವರೆಗೂ ನಡುಗಿದ. ಬೆರಗುಗಣ್ಣಿನಿಂದ ಆತ ನರಸಿಂಹನನ್ನೇ ನೋಡಲಾರಂಭಿಸಿದ. ಮುಂದುವರಿಸಿದಲ್ಲಿ ಪ್ರಯೋಜನವಿಲ್ಲವೆಂದು ನರಸಿಂಹ'ನೀನೀಗ ಹೋಗು. ಕರೆಸಿಕೊಂಡಾಗ ಬರುವೆಯಂತೆ' ಎಂದು ಅವನನ್ನು ಕಳಿಸಿದ.

ಅವಳು ಯಾರಿರಬಹುದು?

ಬಿಡಿಸ ಹೋದಂತೆ ಕಗ್ಗಂಟು ಬಿಗಿಯಾಗುತಿತ್ತು.

'ಕುಡಿಯುವುದಕ್ಕಿಷ್ಟು ನೀರು ತರಲಾ'

'ಗಸ-ಗಸೆ ಪಾಯಸ'

'ಹಾಲಿಗೆ ಕಲ್ಲು ಸಕ್ಕರೆ ಬೆರೆಸಿದ್ದೇನೆ. ಸಿಹಿ ಸಾಕೇ'

ಆಕೆಯ ಒಂದೊಂದು ಮಾತು ನೆನಪಿಗೆ ಬಂದು ಅವನನ್ನು ತಿವಿದವು. ಮುಹೂರ್ತ ಮಾತ್ರದಲ್ಲಿ ಅವನ ಮೇಲೆ ತನ್ನ ಮುದ್ರೆಯನ್ನೊತ್ತಿ ಮಾಯವಾದ ಅವಳ ಮೋಹಕ ರೂಪವನ್ನು ನಿಲುವನ್ನು ನೆನಪಿಂದಳಿಸುವುದು ಅವನಿಗೆ ಸಾಧ್ಯವಾಗದೆ ಹೋಯಿತು.

ಜಾನಕಿಯ ಮದುವೆಗೂ ಮೊದಲು ಅವಳು ತನ್ನ ಕಣ್ಣಿಗೆ ಬಿದ್ದಿದ್ದರೆ – ?

ಯೋಚನೆಗೆ ತುದಿ ಬುಡವಿಲ್ಲ. ಅದರ ಬೆನ್ನು ಹತ್ತಿದರೆ ಆ ಹುಚ್ಚು ಕುದುರೆ ನಮ್ಮನ್ನೆಲ್ಲಿ ಎಳೆದೊಯ್ದು ನಿಲ್ಲಿಸೀತು? ಅದನ್ನು ಹೇಳಲು ಬರುವುದಿಲ್ಲ. ಮನಸ್ಸು ಒಮ್ಮೊಮ್ಮೆ ಕ್ಷೀಣವಾಗುತ್ತದೆ; ದುರ್ಬಲವಾಗುತ್ತದೆ. ಒಮ್ಮೊಮ್ಮೆ ಕಳೆಯೇರಿ ತೋಳಿಗೆ ಬೆಳಗುತ್ತದೆ. ಚಿಂತಾಗ್ರಸ್ತನಾದ ನರಸಿಂಹನ ಮನಸ್ಸು ಅತ್ತಿಂದಿತ್ತ — ಇತ್ತಿಂದತ್ತ ತೊನೆಯಿತು. ತೂಗುಯ್ಯಾಲೆಯಂತೆ ತೊನೆಯುವ ಮನಸ್ಸನ್ನು ಹದ್ದಿನಲ್ಲಿಡುವುದು ಬುದ್ಧಿ. ಆದರೆ ಅದೇ ಶುದ್ಧವಿಲ್ಲದಾಗ?

ಚಿರ ಯೌವನೆಯಾದ ಊರ್ವಶಿ ಪ್ರೇಮ ಭಿಕ್ಷೆಯನ್ನು ಯಾಚಿಸುತ್ತ ಅರ್ಜುನನ ಬಳಿ ಬಂದಿದ್ದಳು.

ರಂಭೆಯ ಮುಂದು ಇವಳು?

ಸಾಮಾನ್ಯ, ಯಃಕಶ್ಚಿತ್ ಸ್ತ್ರೀ.

ಅವಳದು ದೇವ ದುರ್ಲಭವಾದ ರೂಪು.

ಆಕೆ ದೈವ ದುರ್ಲಭವಾದ ಪುಷ್ಪ.

ಆದರೂ ಅರ್ಜುನ ವಿಚಲಿತನಾಗಲಿಲ್ಲ. ಅವಳಿಗೆ ಸೋಲಲಿಲ್ಲ; ಜಾರಿ ಬೀಳಲಿಲ್ಲ.

ಎಂತಹ ಅರ್ಜುನ.

ಬಹು ಪತ್ನೀತ್ವವನ್ನು ಅಂಗೀಕರಿಸಿದವ. ಹಲವು ಹೆಂಗಳೆಯರೊಡನೆ ಅಪ್ಸರಲ್ಲೇ ರಮಿಸಿದವ ಅಂತಹ ಅರ್ಜುನ ಅವಳ ಕೋಪಕ್ಕೆ, ಶಾಪಕ್ಕೆ ಅಳುಕದೆ ತನ್ನ ವ್ರತವನ್ನು ಮೆರೆದ.

ತಾನು?

ನಿನ್ನನ್ನಾಳಿನ ಅನ್ಯರೊಡನೆ ಈ ಮನೆಯನ್ನಾಳಲಾರೆ ಎಂದು ಬುದ್ಧಿಪೂರ್ವಕ ನುಡಿದವ. ಅರ್ಜುನನೊಡನೆ ಆತ ತನ್ನನ್ನು ತೂಗಿ ನೋಡಿದ.

ಅವನ ಮುಂದೆ ತಾನು ಕಳಪೆ ಎನಿಸಿತು.

(ಮುಂದುವರಿಯುವುದು)

NAVAYUGA 2-3-1972

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಅಳಬೇಕೋ ನಗಬೇಕೋ?

ದುರವಸ್ಥೆಯ ಗರ್ತದಲ್ಲಿ ಭುಟ್ಟೋ

ಪಾಕಿಸ್ತಾನದ ಅಧ್ಯಕ್ಷ ಯಾನೇ ಸರ್ವಾಧಿಕಾರಿ ಜುಲ್‌ಫಿಕರ್ ಆಲಿ ಭುಟ್ಟೋ ಮಹಾಶಯರ ದುರವಸ್ಥೆಯನ್ನು ಕಂಡು ಅವರ ಶತ್ರುಗಳಿಗೂ ಕರುಣೆ ಬರಬೇಕು. ಅವರು ಅಧಿಕಾರವನ್ನು ವಹಿಸಿಕೊಂಡ ಸನ್ನಿವೇಶವೇ ಅಂಥದು. ಅಪಮಾನದ ಬೇಗೆಯಲ್ಲಿ ಜ್ವಲಿಸುತ್ತಿರುವಾಗಲೇ ಅವರು ಪಾಕ್ ಸೂತ್ರಧಾರತನ ಪಡೆದರು. ಹಸಿದ ಹುಲಿ ಗಾಯಗೊಂಡಂತಾಯ್ತು. ಅವರು ಏನೇನೋ ಲೆಕ್ಕಾಚಾರ ಹಾಕಿದ್ದರು; ಆದರೆ ಅದೆಲ್ಲವೂ ತಲೆಕೆಳಗು ವ್ಯವಹಾರವಾಯ್ತು.

ಭುಟ್ಟೋ ಜನತೆಗೆ ಬಹಳಷ್ಟು ಭರವಸೆಗಳನ್ನು ನೀಡಿದ್ದರು. ಆದರೆ, ಅವನ್ನು ಈಡೇರಿಸುವ ಧೈರ್ಯವನ್ನವರು ಸಂಪೂರ್ಣ ಕಳೆದುಕೊಂಡರು. ಮಾರ್ಷಲ್ ಲಾವನ್ನು ಕೊನೆಗೊಳಿಸುವೆನೆಂದೂ ನಾಗರಿಕ ಅಧಿಕಾರ ನೆಲೆಗೊಳಿಸುವೆನೆಂದೂ ಅವರು ನೀಡಿದ ವಾಗ್ದಾನ— ಈ ವರ್ಷಾಂತ್ಯದವರೆಗೆ ಈಡೇರಲಾರದೆಂದು ಅವರೇ ಹೇಳುತ್ತಾರೆ. ರಾಜ್ಯ ವಿಧಾನ ಮಂಡಳಗಳ ಅಧಿವೇಶನವನ್ನೂ ಅವರು ಕರೆಯುವುದಿಲ್ಲ. ಆದುದರಿಂದಲೇ ವಿವಿಧ ರಾಜ್ಯಕೀಯ ಪಕ್ಷಗಳು ಅವರ ಮೇಲೆ ಒತ್ತಡ ಹೇರುತ್ತಿವೆ. ಹೀಗಾಗಿ ಬಾಂಗ್ಲಾ ದೇಶದ ದುರ್ಘಟನೆಗಳು ಬಲೂಚಿಸ್ತಾನ ಮತ್ತು ಫಕ್ತೂನಿಸ್ತಾನಗಳಲ್ಲಿ ಮರುಕಳಿಸಲಾರವೆಂದು ರಾಜ್ಯಕೀಯ ಭವಿಷ್ಯವಾದಿಗಳು ಹೇಳಲಾರರು. ಅವಾಮಿ ಲೀಗಿನ ನಾಲೀಡಾಸರು ಪಶ್ಚಿಮ ಪಾಕಿಸ್ತಾನದ ಮುಜಿಬ್‌ರೆನಿಸಿದರೂ ಆಶ್ಚರ್ಯವಿಲ್ಲ.

ಶೇಕ ಮುಜಿಬುರ್ ರೆಹಮಾನರೊಡನೆ ಮಾತನಾಡುವ ಭುಟ್ಟೋ ಅಭಿಲಾಷೆಗೆ ಮುಜಿಬ್ ಉತ್ತರ ನೀಡಿದ್ದಾರೆ— ಮೊದಲು ಬಾಂಗ್ಲಾ ದೇಶಕ್ಕೆ ಮಾನ್ಯತೆ ನೀಡಿ, ಮುಂದೆ ಮಾತುಕತೆಗೆ ಬನ್ನಿ. ಭಾರತದೊಡನೆಯೂ ಮಾತಿಗೆ ಬರುವೆನೆಂಬ ಭುಟ್ಟೋರಿಗೂ ಪ್ರತ್ಯುತ್ತರ ಲಭಿಸಿದೆ–ಶಾಶ್ವತ ಶಾಂತಿಯನ್ನು ನೀವು ಬಯಸುವುದಾದರೆ ಮಾತ್ರ ಬನ್ನಿ; ತಾತ್ಕಾಲಿಕ ಶಾಂತಿ ನಮಗೆ ಬೇಡ. ಹೀಗಾಗಿ ಭಾರತ ಉಪಖಂಡದಲ್ಲಿ ತನ್ನ ಮಾನವುಳಿಸಿಕೊಳ್ಳುವುದೇ ಭುಟ್ಟೋರಿಗೆ ಅಸಾಧ್ಯವೆನಿಸಿದೆ. ಅವರು ತಮ್ಮ ಹಳೆಯ ತಂತ್ರಗಳಿಂದ ಇತರರೆಲ್ಲರನ್ನೂ ಮರುಳುಗೊಳಿಸಬಲ್ಲೆನೆಂದು ನಂಬಿದ್ದರು. ಅವರದು ಭ್ರಮೆ ನಿರಸನವಾಯಿತು.

ಅಂತಾರಾಷ್ಟ್ರೀಯ ವಲಯದಲ್ಲೂ ಭುಟ್ಟೋ ನವಕಲು ನಾಣ್ಯವಾಗುತಿದ್ದಾರೆ. ಬಾಂಗ್ಲಾ ದೇಶವನ್ನು ಮನ್ನಿಸುವ ದೇಶಗಳೊಡನೆ ರಾಜತಾಂತ್ರಿಕ ಸಂಬಂಧ ಕಡಿದುಕೊಳ್ಳುವುದಾಗಿ ಬೆದರಿಕೆ ಹಾಕಿದರು. ಟರ್ಕಿ, ಇರಾಣ, ಚೀನಾಗಳ ಧ್ವನಿಯನ್ನೂ ಎಳೆದು ತಂದರು. ಆರಂಭದಲ್ಲಿ ಅದನ್ನು ಕಾರ್ಯರೂಪಕ್ಕೂ ತಂದರು. ಕಾಮನ್‌ವೆಲ್ತಿನಿಂದ ಹೊರನಡೆವ ದಿಟ್ಟತನವನ್ನೂ ತೋರಿಸಿದರು. ಆದರೆ ವಸ್ತುಸ್ಥಿತಿಯ ಮುಂದೆ ಅವರದ್ದೊಂದೂ ನಡೆಯಲಿಲ್ಲ. ಅವರು ನಂಬಿದ್ದ ಅಮೆರಿಕೆಯೇ ಬಾಂಗ್ಲಾವನ್ನು ಮನ್ನಿಸಲು ಯೋಚಿಸುತ್ತಿದೆಯೆಂದರೆ, ಭುಟ್ಟೋರ ಮೇಲೆ ಯಾರಿಗೆ ತಾನೆ ದಯೆ ಮೂಡದು?

ಭಾರತ ಸೋವಿಯತ್ತಿನೊಡನೆ ರಕ್ಷಣಾ ಒಡಂಬಡಿಕೆ ಮಾಡಿಕೊಂಡಿತ್ತಷ್ಟೇ. ತಾನು ಕೆಂಪು ಚೀನಾದೊಡನೆ ಅಂತಹುದೇ ಒಡಂಬಡಿಕೆ ಮಾಡಿಕೊಳ್ಳುವುದಾಗಿ ಭುಟ್ಟೋ ಮಂಡಿಗೆ ತಿಂದರು. ಭಾರತ–ಚೀನಾಗಳ ನಡುವಣ ಶತ್ರುತನದಿಂದ ಲಾಭ ಪಡೆಯಬಹುದೆಂಬ ವಿಶ್ವಾಸ ಅವರದ್ದಿತ್ತು. ಆದರೆ, ಪೀಕಿಂಗಿನಲ್ಲಿ ಅವರ ವಿಶ್ವಾಸದ ಮನೆ ಮುರಿದು ಬಿತ್ತು. ಅದು ಮರಳಿನ ಮೇಲೆ ಕಟ್ಟಿದ್ದೆಂದು ಭುಟ್ಟೋರಿಗೆ ಮನವರಿಕೆಯಾಯ್ತು. ವಸ್ತುಸ್ಥಿತಿಯತ್ತ ಅಧಿಕ ಲಕ್ಷ್ಯ ಹರಿಯಿಸುವ ಚೀನೀನಾಯಕರು ಭುಟ್ಟೋರಿಗೆ ನಷ್ಟವಾದ ಶಸ್ತ್ರಾಸ್ತ್ರ ತುಂಬಿಸುವ ಭರವಸೆ ನೀಡಿ ಕಳಿಸಿಕೊಟ್ಟರು.

ಪೀಕಿಂಗ್ ಇಲ್ಲವಾದರೇನಂತೆ? ವಾಶಿಂಗ್ಟನ್ನಿದೆಯೆಂದರು ಭುಟ್ಟೋ. ಶ್ವೇತ ಭವನದ ವಕ್ತಾರರು ಸ್ಪಷ್ಟ ಪಡಿಸಿದರು–ನಮ್ಮ–ಪಾಕಿಸ್ತಾನಗಳ ನಡುವಣ ಸ್ನೇಹ ಚಿರಂತನ. ಆದರೂ ಅಂತಹ ಒಡಂಬಡಿಕೆಯಲ್ಲಿ ಅಮೆರಿಕೆಗೆ ಆಸಕ್ತಿಯಿಲ್ಲ!

ತಾವು ನಂಬಿದವರೆಲ್ಲರೂ ತಮಗೆ ದ್ರೋಹ ಮಾಡಿದರೆಂದು ಭುಟ್ಟೋ ಹಲುಬುತ್ತಾರೆ. ಅವರ ನಿಲುವು ದೇಶದಲ್ಲೂ ಹೊರಗಡೆಯಲ್ಲೂ ಅಸಂತುಷ್ಟಿಗೆ ಕಾರಣವಾಗಿದೆ. ಈ ಇಕ್ಕಟ್ಟಿನ ಪರಿಸ್ಥಿತಿಯಿಂದ ತನ್ನನ್ನೂ ತನ್ನ ದೇಶವನ್ನೂ ಉಳಿಸುವುದು ಅವರ ಉದ್ದೇಶ್ಯವಿದ್ದರೆ, ನೆರೆಯರಾಷ್ಟ್ರಗಳೊಡನೆ ಸ್ನೇಹದಿಂದ ನಡೆದುಕೊಳ್ಳಬೇಕು–ಮಿತ್ರದ್ರೋಹಕ್ಕೆಂದಿಗೂ ಎಳಸಬಾರದು. ಈ ಕಠಿಣ ಸ್ಥಿತಿಯಲ್ಲಿ ಭುಟ್ಟೋ ತನ್ನ ವರ್ತನೆಯನ್ನು ತಿದ್ದಿಕೊಳ್ಳದೆ ಹೋದರೆ ಅವರಿಗೂ ಅವರ ಪಾಕಿಸ್ತಾನಕ್ಕೂ ಭವಿಷ್ಯವಿಲ್ಲ.

●●

ವಿದ್ಯಾರ್ಥಿ ಸಂಘದ ದಿನಾಚರಣೆ

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ವಿದ್ಯಾರ್ಥಿ ಸಂಘದ ದಿನಾಚರಣೆಯ ದಿನ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ। ನಾರಾಯಣ ರಾಯರು ಮಾತನಾಡುತ್ತಾ "ಕೇವಲ ಪಠ್ಯಪುಸ್ತಕ ಓದುವುದರಿಂದಲೇ ವಿದ್ಯಾರ್ಥಿಗಳ ಬೌದ್ಧಿಕ ಕ್ಷೇತ್ರ ವಿಸ್ತಾರವಾಗಲಾರದು. ವಿದ್ಯಾರ್ಥಿಗಳು ಪಾಠಗಳೊಂದಿಗೆ ಪಾಠೇತರ ಚಟುವಟಿಕೆಗಳ ಕಡೆಗೂ ಹೆಚ್ಚಿನ ಗಮನವನ್ನು ಹರಿಯಿಸಬೇಕು. ವಿದ್ಯಾರ್ಥಿಗಳಲ್ಲಿರುವ ವಿವಿಧ ರೀತಿಯ ಸುಪ್ತ ಚೈತನ್ಯಕ್ಕೆ ಯೋಗ್ಯ ಪ್ರೇರಣೆ, ಪ್ರೋತ್ಸಾಹ ಅಗತ್ಯವಾಗಿ ದೊರೆಯಬೇಕು. ವಿದ್ಯಾರ್ಥಿ ಸಂಘದ ಮೂಲಕ ವಿದ್ಯಾರ್ಥಿಗಳು ವಿವಿಧ ರೀತಿಯ ಕಲೆಯನ್ನು ಅಭ್ಯಸಿಸಬೇಕು. ಪ್ರಜಾಪ್ರಭುತ್ವ ಸರಕಾರದಲ್ಲಿ ಬಾಳಲು ಅತ್ಯಗತ್ಯವಾದ ಭಾಷಣ ಕಲೆಯನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು."

"ವರ್ತಮಾನ ಪತ್ರಿಕೆಯ ಏಕಸ್ವಾಮ್ಯತೆಯನ್ನು ವಿಭಜಿಸಬೇಕೆಂದು ಇಂದು ರಾಜಕಾರಣಿಗಳು ಹೇಳುವುದರ ಉದ್ದೇಶ ಪತ್ರಿಕೆಗಳ ಟೀಕಿಸುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದೇ ಆಗಿದೆ" ಎಂದು ತಿಳಿಸಿದರು "ವಿದ್ಯಾರ್ಥಿಗಳು ಪತ್ರಿಕೆಗಳನ್ನು ಅಗತ್ಯವಾಗಿ ಓದಬೇಕು. ಆದರೆ ಅವುಗಳಲ್ಲಿ ಪ್ರಕಟವಾದ ವಿಷಯಗಳಿಂದ ತೇಲಿ ಹೋಗಬಾರದು. ಬದಲಾಗಿ ಎಲ್ಲವುಗಳನ್ನು ಓದಿ ತನ್ನದೇ ಆದ ನಿರ್ಣಯಕ್ಕೆ ಬರಬೇಕು" ಎಂದು ಕರೆ ಇತ್ತರು.

ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಿನ್ಸಿಪಾಲರಾದ ಡಾ। ಪಿ. ಗುರುರಾಜ ಭಟ್ಟರು ಮಾತನಾಡುತ್ತಾ ವಿದ್ಯಾರ್ಥಿಗಳಿಗೆ ಕಾಲೇಜಿನ ಮೇಲೆ ಅಪಾರವಾದ ಗೌರವ ಇರಬೇಕು ಮಾತ್ರವಲ್ಲದೆ ಅಧ್ಯಾಪಕರು ತಮಗಿಂತ ಪ್ರಾಯದಲ್ಲೂ ಜ್ಞಾನದಲ್ಲೂ ಹಿರಿಯರಾದವೆಂಬ ವಿಚಾರವನ್ನು ಮನಃಪೂರ್ವಕವಾಗಿ ಸ್ವೀಕರಿಸಬೇಕು. ಆಗಷ್ಟೇ ಕಾಲೇಜಿನ ವಿದ್ಯಾರ್ಥಿಗಳ ಹಾಗೂ ದೇಶದ ಕಲ್ಯಾಣವಾಗುತ್ತದೆ ಇಂತಹ ಸಂಘಕ್ಕೆ ಜನನದ ಸಾಫಲ್ಯ ದೊರೆಯುತ್ತದೆ" ಎಂದು ನುಡಿದರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. 2. O. S. 345/70.

K. ರಮಾ ಬ್ಯಾ —ವಾದಿ.
ಸೀತು ಬ್ಯಾ ಸಹಾ —ಪ್ರತಿವಾದಿರು.

ಸದ್ರಿ ವಾದಿಳ ಕಡೆಯಿಂದ ಈ ಮೂಲ್ಕ ಜಾಹೀರ ಮಾಡಿಕೊಳ್ಳುವದೇನೆಂದರೆ.

1. ಸೀತ ಬ್ಯಾ–ಕೃಷ್ಣ ಬ್ಯಾ ಮಗಳು ವಸೋಮು ನಾಯ್ಕನ ಸೊಸೆ
2. ನಾರಾಯಣ–ಕೃಷ್ಣ ಬ್ಯಾ ಮಗ ವಸೋಮು ನಾಯ್ಕನ ಅಳಿಯ.

ಬೆಳಗಾಂ ಬಸವನಗಲ್ಲಿಯಲ್ಲಿ ಮನೆ ನಂಬ್ರ 1365ನೇ ಮನೆಯಲ್ಲಿರುವವರು.

ಸದ್ರಿ ಡಿಕ್ರಿಯ ಮೇಲಣ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಳು ಕೊಟ್ಟ ಅರ್ಜಿಯು ತಾ. 4–4–72ಕ್ಕೆ ಅಕ್ಕೈರ ತನ್ನಿಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿನ್ಸ ಹಗ್ಲು 11 ಗಂಟೆಗೆ ಸ್ವತಹ ವ ವಕೀಲರ ದ್ವಾರಾ ಹಾಜಾಗ್ರಿ ಜ್ಯಾಹೀರ ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಳ ಕಡೆಯಿಂದ ಈ ಮೂಲ್ಕ ಜಾಹೀರ ಮಾಡಿಕೊಳ್ಳತಕ್ಕದ್ದು.

M. M. Hebbar
Advocate for Plff.

Kundapur, Date 19—2—72.

ಉಡುಪಿ ಪ್ರಿನ್ಸಿಪಾಲ್ ಸಿವಿಲ್ ಜಡ್ಜರ ಕೋರ್ಟಿನಲ್ಲಿ

R. A. ನಂಬ್ರ 36/1970.

ಶೇಷ ಶೆಟ್ಟಿ ಕೂಡಾ —ಅಪ್ಪೆಲಾಂಟರು
ಮತ್ತು
ವೀರಮ್ಮ ಶೆಡ್ತಿ ಕೂಡಾ —ಎದ್ರಿರು.

—ಇವರೊಳಗೆ

ಮೇಲ್ಕಾಣಿಸಿದ ನಂಬ್ರದಲ್ಲಿ:—

17ನೇ ಎದ್ರಿ—ನಾಗಯ್ಯ ಶೆಟ್ಟಿ, ಅಕ್ಕಣಿ ಶೆಡ್ತಿರ ಮಗ, ಕುಂದಾಪುರ ತಾಲೂಕು ಕಂಬದಕೋಣೆ ಗ್ರಾಮದ ಹಳಗೇರಿಯೆಂಬಲ್ಲಿರುವವರು, 61ನೇ ಎದ್ರಿ—ಗಣಪಯ್ಯ ಶೆಟ್ಟಿ, ಕಾವೇರಿ ಶೆಡ್ತಿರ ಮಗ, ಕುಂದಾಪುರ ತಾಲೂಕು ಹಟ್ಟಿಯಂಗಡಿ ಗ್ರಾಮದಲ್ಲಿ ಪದ್ದಮ್ಮ ಶೆಡ್ತಿರ ಮನೆಯಲ್ಲಿರುವವರು, 110ನೇ ಎದ್ರಿ–ಸಂದ್ಯಪ್ಪ ಶೆಟ್ಟಿ, ಕುಪ್ಪಯ್ಯ ಶೆಟ್ರ ಮಗ, ಕುಂದಾಪುರ ತಾಲೂಕು ಬೈಂದೂರು ಗ್ರಾಮದ ಮಯ್ಯಾಡಿಯಲ್ಲಿರುವವರು—

ಈ ಮೂವರಿಗೆ ತಿಳಿಸುವುದೇನೆಂದ್ರೆ:—

ಕುಂದಾಪುರ ಮುನ್ಸೀಫ್ ಕೋರ್ಟಿನ O.S. ನಂಬ್ರ 450/1962ರಲ್ಲಾದ ಡಿಕ್ರಿ ಮತ್ತು ತೀರ್ಪಿನ ಮೇಲೆ, ಮೇಲ್ಕಾಣಿಸಿದ ಅಪ್ಪೆಲಾಂಟರು ದಾಖಲು ಮಾಡಿರುವ ಅಪ್ಪೀಲು ನಂಬ್ರವು, ನಿಮ್ಮ ಹಾಜರಾತಿ ಬಗ್ಗೆ ಮೇಲಣ ಕೋರ್ಟಿನಲ್ಲಿ ತಾ. 20–3–1972ರಂದು ಪೂರ್ವಾಹ್ನ ಘಂಟೆ 10ಕ್ಕೆ ಇರುತ್ತದೆ. ಸದ್ರಿ ದಿನ್ಸ ನೀವು ಸ್ವತಃ ಯಾ ವಕೀಲರ ಮೂಲಕ ಹಾಜರಾಗದಿದ್ದಲ್ಲಿ ಅಪ್ಪೀಲು ನಂಬ್ರವನ್ನೂ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನ ಮಾಡಲಾದೀತು.

(ಕೋರ್ಟು ಹುಕುಂ ಮೇರೆಗೆ)

K. Vishwanatha Hegde
ಅಪ್ಪೆಲಾಂಟರ ಕಡೆ ನ್ಯಾಯವಾದಿ

ಉಡ್ಪಿ, ದ. ಕ.,
ತಾ. 21–2–1972.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೇಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರಸ್ಥಾನ ಪಡೆದ ಏಕಮಾತ್ರ ಹೊಟೇಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

Edited, Printed & Published by K. M. Shetty at the Navayuga Press, Udipi. S. India.

ನವಯುಗ

ಸಂಪುಟ ೫೧
ಸಂಚಿಕೆ ೨೭

NAVAYUGA

9-3-1972

ಚುನಾವಣೆಯ ವೇಳೆ—

ಮತದಾರರ ಹಕ್ಕುಗಳು ಮತ್ತು ಕರ್ತವ್ಯಗಳು

ಭಾರತ ಒಂದು ಪ್ರಜಾಸತ್ತಾತ್ಮಕ ದೇಶ. ಇದು ಇಡೀ ಜಗತ್ತಿನಲ್ಲಿಯೇ ಅತಿ ದೊಡ್ಡ ಪ್ರಜಾಪ್ರಭುತ್ವ. ಹಿಂದಿನ ಕಾಲದಲ್ಲಿ ಸಹ ಪ್ರಜಾಪ್ರಭುತ್ವಗಳಿದ್ದವು. ಆದರೆ ಆ ಪ್ರಜಾಪ್ರಭುತ್ವಗಳಿಗಿದ್ದ ಸಮಸ್ಯೆಗಳು ಅತ್ಯಲ್ಪ. ಆ ಕಾಲದಲ್ಲಿ ಪ್ರಜಾಪ್ರಭುತ್ವಗಳು ಕೇವಲ ನಗರ ರಾಜ್ಯಗಳಾಗಿದ್ದವು. ಅವುಗಳ ಗಾತ್ರವೂ ಚಿಕ್ಕದು. ಜನಸಂಖ್ಯೆಯೂ ಅಲ್ಪ. ಜನರು ಅಗತ್ಯವಿದ್ದಾಗಲೆಲ್ಲಾ ಸಭೆ ಸೇರುತ್ತಿದ್ದರು. ಅವರೇ ಆಡಳಿತವನ್ನು ನಡೆಸುತ್ತಿದ್ದರು. ಸರ್ಕಾರದ ಸಮಸ್ಯೆಗಳು ಕೂಡ ಕಡಿಮೆ. ಅವು ಸುಲಭವಾಗಿ ಬಗೆಹರಿಸಲ್ಪಡುವಂತಹವು. ಈ ರೀತಿಯಾಗಿ ಜನರು ಸ್ವತಃ ರಾಜ್ಯಾಡಳಿತವನ್ನು ನಡೆಸುತ್ತಿದ್ದರು.

ಆದರೆ ಈ ದಿನಗಳಲ್ಲಿ ಇದು ಸಾಧ್ಯವಿಲ್ಲದ ಮಾತು. ಇಂದು ಪ್ರಪಂಚದಲ್ಲಿ ಕೋಟ್ಯಂತರ ಜನಸಂಖ್ಯೆಯುಳ್ಳ ಭಾರಿ ರಾಷ್ಟ್ರಗಳಿವೆ. ಉದಾಹರಣೆಗೆ ನಮ್ಮ ದೇಶವನ್ನೇ ತೆಗೆದುಕೊಳ್ಳಿ. ನಮ್ಮದು ಜಗತ್ತಿನಲ್ಲಿಯೇ ಅತಿ ಜನಬಾಹುಳ್ಯವಿರುವ ದೇಶ. ನಮ್ಮ ದೇಶದ ಜನಸಂಖ್ಯೆಯು ಸುಮಾರು 54.7 ಕೋಟಿ. ಆದ್ದರಿಂದಲೇ ಈ ಎಲ್ಲ ಜನರು ಹಿಂದಿನ ಕಾಲದಂತೆ ಒಂದೆಡೆ ಸೇರಿ ಆಡಳಿತವನ್ನು ನಡೆಸಲು ಸಾಧ್ಯವಿಲ್ಲ. ಅಲ್ಲದೆ ಪ್ರತಿಯೊಬ್ಬನೂ ತನ್ನ ಅಭಿಪ್ರಾಯವನ್ನು ತಿಳಿಸುವವರೆಗೂ ಕಾಯುವುದಕ್ಕೂ ಸಾಧ್ಯವಾಗುವುದಿಲ್ಲ.

: ಚುನಾವಣೆಗಳ ಮಹತ್ವ :

ಈ ಸಮಸ್ಯೆಗಳಿಗೆ ಒಂದೇ ಉತ್ತರ ಎಂದರೆ ಅಧಿಕಾರದ ಪ್ರತಿಯೋಜನೆ. ಅಂದರೆ ಜನರು ತಮ್ಮ ಅಧಿಕಾರವನ್ನು ತಾವು ಆರಿಸಿದ ಪ್ರತಿನಿಧಿಗಳಿಗೇ ವಹಿಸಿಕೊಡುತ್ತಾರೆ. ಈ ಜನತಾ ಪ್ರತಿನಿಧಿಗಳು ಜನರ ಪರವಾಗಿ ಆಡಳಿತ ನಡೆಸುತ್ತಾರೆ. ಈ ಪ್ರತಿನಿಧಿಗಳನ್ನು ಆರಿಸುವ ಪ್ರಜಾಸತ್ತಾತ್ಮಕ ವಿಧಾನವನ್ನು ಚುನಾವಣೆ ಎನ್ನುತ್ತಾರೆ.

ನಮ್ಮ ದೇಶದಲ್ಲಿ ಚುನಾವಣೆಗಳು ಸಾಮಾನ್ಯವಾಗಿ ಐದು ವರ್ಷಗಳಿಗೊಮ್ಮೆ ನಡೆಯುತ್ತವೆ. ಈ ಚುನಾವಣೆಗಳ ಮೂಲಕ ಜನರು ಲೋಕಸಭೆಗೂ ರಾಜ್ಯಗಳಲ್ಲಿನ ವಿಧಾನ ಸಭೆಗಳಿಗೂ ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಾರೆ. ಕೆಲವು ಸಲ ಈ ಚುನಾವಣೆಗಳು 5 ವರ್ಷಗಳಿಗೂ ಮುಂಚಿತವಾಗಿಯೂ ನಡೆಯುತ್ತವೆ. ನಾವು ಇಲ್ಲಿಯ ವರೆಗೆ 4 ಚುನಾವಣೆಗಳನ್ನು ನಡೆಸಿದ್ದೇವೆ. ಈ ಚುನಾವಣೆಗಳು 1952, 1957, 1962 ಮತ್ತು 1967ರಲ್ಲಿ ನಡೆದಿವೆ.

ನಾನಾ ರಾಜಕೀಯ ಪಕ್ಷಗಳು, ಲೋಕಸಭೆಗೂ ರಾಜ್ಯ ವಿಧಾನಸಭೆಗಳಿಗೂ ನಡೆಯುವ ಚುನಾವಣೆಗಳಿಗಾಗಿ ತಮ್ಮ ತಮ್ಮ ಉಮೇದುವಾರರನ್ನು ನಿಲ್ಲಿಸುತ್ತವೆ. ಕೆಲವು ವ್ಯಕ್ತಿಗಳು ಯಾವ ಪಕ್ಷಕ್ಕೂ ಸೇರದೆ ಪಕ್ಷೇತರರಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಒಂದು ಚುನಾವಣಾ ಕ್ಷೇತ್ರದಲ್ಲಿ ಅತ್ಯಧಿಕ ಮತಗಳನ್ನು ಪಡೆಯುವವರು ಆರಿಸಲ್ಪಡುತ್ತಾರೆ. ಈ ಜನತಾ ಪ್ರತಿನಿಧಿಗಳು ತಮ್ಮ ನಾಯಕರನ್ನು ಆರಿಸುತ್ತಾರೆ. ಈ ನಾಯಕರು ಮಂತ್ರಿ ಮಂಡಲಗಳನ್ನೂ ಸರ್ಕಾರವನ್ನೂ ರಚಿಸುತ್ತಾರೆ.

ಚುನಾವಣೆಯಲ್ಲಿ ಆಯ್ಕೆಯಾದವರ ಪೈಕಿ ಅತ್ಯಧಿಕ ಸಂಖ್ಯೆಯ ಉಮೇದುವಾರರನ್ನು ಪಡೆದಿರುವಂತಹ ರಾಜಕೀಯ ಪಕ್ಷವೊಂದು ಸಾಮಾನ್ಯವಾಗಿ ಸರ್ಕಾರವನ್ನು ರಚಿಸುತ್ತದೆ. ಕೆಲವು ಸಲ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ರಾಜಕೀಯ ಪಕ್ಷಗಳು ಅಥವಾ ಕೆಲವು ಪಕ್ಷೇತರರು ಸಹ ಸರ್ಕಾರವನ್ನು ರಚಿಸಬಹುದು.

ಈ ರೀತಿಯಾಗಿ ಚುನಾವಣೆಗಳ ಮೂಲಕ ಜನರು ಸರ್ಕಾರಗಳ ರಚನೆ ಮತ್ತು ಕಾರ್ಯಾಚರಣೆಗಳಲ್ಲಿ ಭಾಗವಹಿಸಬಹುದು. ಆದ್ದರಿಂದಲೇ ಆಧುನಿಕ ಪ್ರಜಾಪ್ರಭುತ್ವದ ವ್ಯವಸ್ಥೆ ಮತ್ತು ಕಾರ್ಯಾಚರಣೆಯಲ್ಲಿ ಚುನಾವಣೆಗಳು ಮಹತ್ವಪೂರಿತವಾದ್ದಾಗಿವೆ. ಆದ್ದರಿಂದ ಈ ಚುನಾವಣೆಗಳು ನ್ಯಾಯಸಮ್ಮತವಾಗಿ ಸ್ವತಂತ್ರವಾಗಿ ನಡೆಯುವ ಬಗ್ಗೆ ಸರ್ವಪ್ರಯತ್ನಗಳನ್ನು ಮಾಡಬೇಕು.

ಮತದಾನದ ಹಕ್ಕು

ಈ ವಿಚಾರದಲ್ಲಿ ಮತದಾರರ ಹೊಣೆ ಗುರುತರವಾಗಿದೆ. ಅವರು ಮತದಾನದ ಹಕ್ಕು ಪಡೆದಿದ್ದಾರೆ. ಅಂದರೆ ಕೆಲವು ವರ್ಷಗಳ ಕಾಲ ದೇಶದ ಆಡಳಿತವನ್ನು ನಡೆಸುವಂತಹ ವ್ಯಕ್ತಿಗಳನ್ನು ಆರಿಸುವ ಹಕ್ಕನ್ನು ಪಡೆದಿದ್ದಾರೆ ಎಂದು ಅರ್ಥ. ನಮ್ಮ ಪ್ರಜಾಪ್ರಭುತ್ವದಲ್ಲಿ 21 ವರ್ಷಗಳು ಮತ್ತು ಅದಕ್ಕೆ ಮೇಲ್ಪಟ್ಟ ಎಲ್ಲ ಪ್ರಜೆಗಳೂ—ಅವರು ಗಂಡಸರಾಗಲಿ, ಹೆಂಗಸರಾಗಲಿ, ಯಾವುದೆ ಜಾತಿ, ಮತ, ಧರ್ಮಕ್ಕೆ ಸೇರಿರಲಿ—ಮತ ನೀಡುವ ಹಕ್ಕನ್ನು ಪಡೆದಿರುತ್ತಾರೆ. ಭ್ರಷ್ಟಾಚಾರದ ಕಾರಣ ಅಥವಾ ಕಾನೂನು ಬಾಹಿರ ವ್ಯವಹಾರಗಳ ಕಾರಣ ಮತ್ತು ನೀಡಲು ಅನರ್ಹರೆಂದು ಪರಿಗಣಿಸಲ್ಪಟ್ಟಿರುವವರು ಮತ್ತು ಬುದ್ಧಿ ಭ್ರಮಣೆಯಾಗಿರುವವರು ಮಾತ್ರ ಮತ ನೀಡಲು ಅರ್ಹರಾಗಿರುವುದಿಲ್ಲ. ಮತದಾನದ ಹಕ್ಕಿನ ಸಂಗಡವೇ ಅನೇಕ ಕರ್ತವ್ಯಗಳ ಪಾಲನೆಯೂ ಇರುತ್ತದೆ.

ಮತದಾನದ ಕರ್ತವ್ಯ

ಈ ಕರ್ತವ್ಯಗಳಲ್ಲಿ ಮೊದಲನೆಯದು ಹಾಗೂ ಅತಿಮುಖ್ಯವಾದದ್ದು ಎಂದರೆ ನಮ್ಮ ಮತದಾನದ ಹಕ್ಕಿನ ಚಲಾವಣೆ. ಇದು ನಮ್ಮ ಪವಿತ್ರ ಕರ್ತವ್ಯವಾಗಿರಬೇಕು. ಈ ಅಂಶವನ್ನು ನಾವೆಲ್ಲರೂ ಪೂರ್ಣವಾಗಿ ಗ್ರಹಿಸಿಲ್ಲ. ಇಲ್ಲಿಯವರೆಗೂ ನಡೆದಿರುವ ಎಲ್ಲ ಚುನಾವಣೆಗಳಲ್ಲಿಯೂ ಅಸಂಖ್ಯಾತ ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿಲ್ಲ ಎಂಬ ಅಂಶವು ವಿಶದಪಟ್ಟಿದೆ. ಮೊದಲನೆಯ ಮಹಾ ಚುನಾವಣೆಗಳಲ್ಲಿ ಪ್ರತಿ ನೂರು ಮತದಾರರ ಪೈಕಿ ಸುಮಾರು 50ರಷ್ಟು ಜನರು ಮತ ನೀಡಲೇ ಇಲ್ಲ. ಎಂಬುದು ನಿಮಗೆ ಆಶ್ಚರ್ಯವನ್ನುಂಟು ಮಾಡಬಹುದು. ಅದೇ ಎರಡನೆಯ ಮಹಾಚುನಾವಣೆಗಳಲ್ಲಿ ಒಟ್ಟು ಮತದಾರರ ಪೈಕಿ ಶೇಖಡ 45ರಷ್ಟು ಜನ ಮತದಾನದ ಹಕ್ಕನ್ನು ಚಲಾಯಿಸಲೇ ಇಲ್ಲ.

ನಾಲ್ಕನೆಯ ಮಹಾಚುನಾವಣೆಗಳಲ್ಲಿ ನಮ್ಮ ಮತದಾರರ ಸಂಖ್ಯೆ 25 ಕೋಟಿಗಿಂತಲೂ ಹೆಚ್ಚು ಇತ್ತು. ಅಂದರೆ ಜಗತ್ತಿನ ಎರಡನೆಯ ಅತಿದೊಡ್ಡ ಪ್ರಜಾಪ್ರಭುತ್ವವಾದ ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಒಟ್ಟು ಜನಸಂಖ್ಯೆಗಿಂತಲೂ ಹೆಚ್ಚು ಅಥವಾ ಆಫ್ರಿಕಾ ಖಂಡದ ಇಡೀ ಜನಸಂಖ್ಯೆಯಷ್ಟು ಇತ್ತು. ಆದರೆ ಈ ಪೈಕಿ ಸುಮಾರು 15.2 ಕೋಟಿ ಮತದಾರರು ಮಾತ್ರ ಮತ ನೀಡುವ ಶ್ರಮವಹಿಸಿದರು. ಅಂದರೆ ಪ್ರತಿ ನೂರು ಮತದಾರರ ಪೈಕಿ ಕೇವಲ 61 ಜನರು ಮಾತ್ರ ಮತವಿತ್ತರು.

ಮತನೀಡದಿರುವುದರ ಪರಿಣಾಮಗಳು

ಭಾರಿ ಸಂಖ್ಯೆಯಲ್ಲಿ ಮತ ನೀಡದಿರುವುದು ನಮ್ಮ ಪ್ರಜಾಪ್ರಭುತ್ವಕ್ಕೇ ವಿಪತ್ತು. ಒಂದು ಚುನಾವಣೆಯಲ್ಲಿ ನೂರಕ್ಕೆ 70ರಷ್ಟು ಮತದಾರರು ಮತ ನೀಡಿದ್ದಾರೆ ಎಂದಿಟ್ಟುಕೊಳ್ಳೋಣ. ಅವರಲ್ಲಿ ಅರ್ಧದಷ್ಟು ಜನರು ಅಧಿಕಾರಕ್ಕೆ ಬರುವ ಒಂದು ಪಕ್ಷಕ್ಕೇ ಮತನಿತ್ತಿದ್ದಾರೆ ಅನ್ನಿ. ಅಂದರೆ ಒಟ್ಟು ಮತದಾರರ ಪೈಕಿ ಶೇಕಡ 35ರಷ್ಟು ಮಾತ್ರ ಸರ್ಕಾರವನ್ನು ಚುನಾಯಿಸಿದ್ದಾರೆ ಎಂದು ಅರ್ಥವಾಗುತ್ತದೆ. ಅಂತಹ ಸರ್ಕಾರವು ಪ್ರಜಾ ಸತ್ತಾತ್ಮಕವಾಗಿ ಆರಿಸಿದ ಸರ್ಕಾರ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅಸಂಖ್ಯಾತ ಜನರು ತಾವು ಬಯಸುವಂತಹ ಜನರನ್ನು ಆರಿಸುವವಕಾಶವನ್ನು ಕಳೆದುಕೊಂಡಂತಾಗುತ್ತದೆ. ಅತ್ಯಧಿಕ ಸಂಖ್ಯೆಯ ಮತದಾರರಿಂದ ಆರಿಸಲ್ಪಟ್ಟ ಸರ್ಕಾರವೊಂದು ಜನತೆಯ ಅಭ್ಯುದಯಕ್ಕಾಗಿ ಹೆಚ್ಚು ಪರಿಣಾಮಕಾರಿಯಾಗಿ, ವಿಶ್ವಾಸಾರ್ಹವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಮತ ನೀಡದೇ ಇರುವುದು ಇನ್ನೊಂದು ಮುಖ್ಯ ಸಮಸ್ಯೆಗೆ ಆಸ್ಪದವೀಯುತ್ತದೆ. ಮತ ನೀಡದೇ ಇರುವವರು ಯಾರು ಎಂಬುದನ್ನು ನಾವು ಪರಿಶೀಲಿಸಿದ್ದೇ ಆದರೆ, ಅವರಲ್ಲಿ ಅತ್ಯಧಿಕ ಸಂಖ್ಯೆಯವರು ಅಲ್ಪವರಮಾನದ ವರ್ಗಗಳಿಗೆ ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಸೇರಿದವರಾಗಿರುತ್ತಾರೆ ಎಂಬ ಅಂಶವು ವಿಶದ ಪಡುತ್ತದೆ. ಅವರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಜನರೂ ಸೇರಿರುತ್ತಾರೆ. ಈ ವರ್ಗಗಳಿಗೆ ವಿಧಾನ ಮಂಡಲಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿರುವುದಿಲ್ಲ. ಆದ್ದರಿಂದ ಅವರ ಹಿತಾಸಕ್ತಿಗಳ ಬಗ್ಗೆ ಹೆಚ್ಚಿನ ಗಮನಹರಿಸುವ ಅಗತ್ಯವಿದ್ದಾಗ್ಯೂ ಅವು ಉಪೇಕ್ಷಿಸಲ್ಪಡಬಹುದು.

ಪ್ರಚಂಡ ಕಾರ್ಯ

ಮತ ನೀಡದೇ ಇರುವವರ ಪೈಕಿ ಅನೇಕರು ಮತದಾನದ ಹಕ್ಕನ್ನು ಚಲಾಯಿಸಲು ಅಪೇಕ್ಷಿಸುತ್ತಾರೆ. ಆದರೆ ಒಂದೆರಡು ಕಿಲೋಮೀಟರುಗಳಷ್ಟು ದೂರವಿರುವ ಮತಗಟ್ಟೆ (ಮತದಾನ ಕೇಂದ್ರ)ಯವರೆಗೆ ನಡೆದು ಹೋಗಬೇಕಲ್ಲ ಎಂಬ ಸೋಮಾರಿತನದಿಂದಲೋ ಅಥವಾ ಮತಗಟ್ಟೆಯ ಬಳಿ 'ಕ್ಯೂ'ನಲ್ಲಿ ನಿಲ್ಲಬೇಕಾಗುತ್ತದೆಯಲ್ಲ ಎಂ

(ಹನ್ನೆರಡನೇ ಪುಟ ನೋಡಿರಿ)

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ಕೃತಿಯಲ್ಲಿಲ್ಲ!

ಮನಸಾ ಜಾನಕಿಗೆ ಅಪಚಾರ ಎಸಗುವುದಿಲ್ಲ ಎಂದು ನಿರ್ಧರಿಸಿದ.

ಅವಳು!

ಅವಳು ಹೇಗೆ ಮನಸ್ಸಿನಲ್ಲಿ ಮೂಡಿ ನಿಂತಳೋ ಹಾಗೆ ಮಾಯವಾದಳು.

'ಪ್ರಭುಗಳು ಇತ್ತ ದಯಮಾಡಿಸುವಂತಿದೆ'

ಕೈಜೋಡಿಸಿ ಬಿನ್ನೈಸಿದ ಹೊರ ಬಾಗಿಲಲ್ಲಿ ನಿಂತಿದ್ದ ರಾಜ ಭಟ, ಹಜಾರವನ್ನು ಪ್ರವೇಶಿಸಿ.

'ಪ್ರಭುಗಳೇ'

ಅಚ್ಚರಿಗೊಂಡ ನರಸಿಂಹನ ಮುಖದಿಂದ ಈ ಮಾತುಗಳು ಹೊಮ್ಮಿದುವು.

ಆತ ಅಲ್ಲಿ ನಿಮಿಷವೂ ನಿಲ್ಲದೆ ಹೊರದ್ವಾರದ ಬಳಿಗೆ ಧಾವಿಸಿದ. ಆತ ಹೊರ ಬಾಗಿಲನ್ನು ತಲುಪುವುದಕ್ಕೂ, ಪ್ರಭುಗಳು ಬರುವುದಕ್ಕೂ ತಾಳೆಯಾಯಿತು. ನರಸಿಂಹ ಪ್ರಭುಗಳಿಗೆ ಕೈಜೋಡಿಸಿ ನಮಿಸಿ "ದಯಮಾಡಿಸಬೇಕು" ಎಂದು ಆದರದಿಂದ ಬರಮಾಡಿಕೊಂಡ.

ಆವ ಮುನ್ಸೂಚನೆಯೂ ಇಲ್ಲದೆ ಆಗಮಿಸಿದ ದೊರೆಗಳ ಬರವು ನರಸಿಂಹನನ್ನು ಗೊಂದಲದಲ್ಲಿ ಕೆಡವಿತು. ಅದನ್ನು ಹೊರಗೆಡವದೆ,

'ಕರೆ ಕಳಿಸಿದ್ದರೆ ನಾನೇ ಬರುತ್ತಿದ್ದೆ. ಸನ್ನಿಧಿಯವರು ಇಲ್ಲಿಯವರೆಗೂ ಪಾದ ಬೆಳೆಸುವ ಅಗತ್ಯ ಇರಲಿಲ್ಲ. ತೊಂದರೆ ತೆಗೆದು ಕೊಂಡಿರಿ'.

'ಬಂಧುಗಳ ಆರೋಗ್ಯ ವಿಚಾರಿಸಿಕೊಳ್ಳುವುದು ಕರ್ತವ್ಯ ಅಮಾತ್ಯರೇ. ಆ ಕರ್ತವ್ಯದ ಅರಿವು ನಮ್ಮನ್ನಿಲ್ಲಿಗೆ ತಂದಿದೆ.'

'ರಾಜಕಾರಣ ಇರಬಹುದೆಂದು ಶಂಕಿಸಿದೆ'

'ಹಗಲಿರುಳೂ ರಾಜಕಾರಣವನ್ನು ಹಚ್ಚಿಕೊಂಡರೆ ಬದುಕು ಬರಡಾಗುತ್ತದೆ. ರಾಜಕಾರಣ ಸಾಧನ. ಬದುಕು ಗುರಿ. ಉದಾತ್ತ ಬದುಕಿಗೆ ಎಡೆ ಮಾಡಿಕೊಡಲಿ ಎಂದೇ ರಾಜಕಾರಣ. ರಾಜಕೀಯ ಚಟುವಟಿಕೆ. ಆದರೆ ಈ ಚಟುವಟಿಕೆಯಿಂದಾಗಿ ದೊಡ್ಡ ಬದುಕಿನ ನಿಜವಾದ ತಳಹದಿಯೇ ತಲೆಕೆಳಗಾದರೆ–? ಮಾನವೀಯ ಮೌಲ್ಯಗಳು ನುಚ್ಚುನೂರಾದರೆ? ಬಾಳಿಗೆ ಬೆಲೆಯನ್ನೂ ಪುಷ್ಟಿಯನ್ನೂ ಕೊಡುವುದು ದಯೆ, ಧರ್ಮ, ಧ್ಯಾನ, ಪ್ರೇಮ, ಸತ್ಯಸಂಧತೆ, ನೀತಿಯುತ ನಡತೆ. ಸ್ವಂತ ಬಾಳಿನಲ್ಲಿ ಅವುಗಳನ್ನು ಮೂಡಿಸಿಕೊಳ್ಳಲಾರದ ರಾಜಕಾರಣಿ ನಮ್ಮ ದೃಷ್ಟಿಯಿಂದ ಪಶು ಸಮಾನ. ಅವನು ಏನನ್ನೂ ಸಾಧಿಸಲಾರ. ರಾಜಕಾರಣ ಆಗ ಬರಿಯ ಡೊಂಬರಾಟ. ಅದಿರಲಿ. ಹೇಗಿದೆ ನಿಮ್ಮ ಆರೋಗ್ಯ'

'ನನಗೇನಾಗಿದೆ ಪ್ರಭು'

'ನಿಮಗೇನಾಗಿದೆ? ಅದನ್ನು ನೀವೇ ಹೇಳಬೇಕು. ನಿಮ್ಮ ಮುಖವನ್ನೊಮ್ಮೆ ಕನ್ನಡಿಯಲ್ಲಿ ನೋಡಿಕೊಳ್ಳಿ. ಆಗ ತಿಳಿಯುತ್ತೆ ನಿಮಗೇನಾಗಿದೆ ಎಂದು. ನೀವೆಂದು ಮೊದಲಿನಂತಾಗುತ್ತೀರಿ. ಅದು ನನ್ನನ್ನೂ ಪ್ರಜೆಗಳನ್ನೂ ಗೊಂದಲದಲ್ಲಿ ಕೆಡವಿದೆ. ಮೊದಲಿನಂತೆಯೇ ಹರ್ಷಚಿತ್ತರಾಗಿ ಲವಲವಿಕೆಯಿಂದ ನಿಮ್ಮ ಕಾರ್ಯಗಳಲ್ಲಿ ಪ್ರವೃತ್ತರಾದರೆ ನಮಗೆಷ್ಟೋ ಸಂತೋಷ. ಜನ ಬಯಸುವುದು ಅದನ್ನೇ.'

'ಪ್ರಭುಗಳ ಕೈಂಕರ್ಯಕ್ಕೆ ನಾನು ಕಂಕಣ ಕಟ್ಟಿ ನಿಂತಿದ್ದೇನೆ. ಈಗ ನನ್ನಿಂದೇನಾಗಬೇಕು. ಅಷ್ಟು ತಿಳಿಸಿದರೆ ನಾನು ಕೃತಾರ್ಥ'

'ನಿಮ್ಮಿಂದ ಒಂದು ಉಪಕಾರವಾಗಬೇಕಾಗಿದೆ'

'ಬಹು ದೊಡ್ಡ ಮಾತಾಯಿತು'

'ಅಮಾತ್ಯರೇ, ನೀವು ಇನ್ನೂ ಚಿಂತೆಯಲ್ಲಿ ಮುಳುಗಿರುವಂತಿದೆ. ಈ ಚಿಂತೆ ಸಹಜವಾದರೂ ಬಿಡುವುದು ವಿಹಿತ. ದೇಹ ಧರಿಸಿ ಬಂದ ಎಲ್ಲರನ್ನೂ ಅದು ಒಂದಲ್ಲ ಒಂದು ರೀತಿಯಿಂದ ಹಿಂಡಿ ಕಾಡಿದೆ; ಕೆಡಿಸಿದೆ. ಜಾನಕಿಯ ಅಕಾಲಿಕ ಅಗಲುವಿಕೆಯನ್ನು ಮರೆತು ಬಿಡಿ. ಆಕೆ ನಿಮ್ಮ ಪ್ರಿಯ ಪತ್ನಿ ನಿಶ್ಚಯ. ನಿಮಗೆ ಧಾರೆ ಎರೆದು ಕೊಡುವ ಮೊದಲು ಅವಳು ನಮಗೆ, ಚಿನ್ನಲ್ಲಿ ಬಂದ ತಂಗಿ. ಈ ತೋಳುಗಳಲ್ಲಿ ತಾಯಿ ಇಲ್ಲದ ತಬ್ಬಲಿಯನ್ನು ಎತ್ತಿ ಆಡಿಸಿದ್ದೇವೆ. ನಿಮ್ಮೊಡನಿದ್ದು ಬಾಳಿದ್ದಕ್ಕಿಂತಲೂ ಹೆಚ್ಚುಕಾಲ ಆಕೆ ನಮ್ಮೊಡನೆ ಆಡಿದವಳು, ಬೆಳೆದವಳು. ನನ್ನಿಂದಲೂ ಅವಳನ್ನು ಮರೆಯುವುದು ಶಕ್ಯವಾಗಲಾರದು. ಆದರೂ ಮರೆಯಬೇಕಾಗಿದೆ. ಕೆಲಸ ಕಾರ್ಯಗಳಲ್ಲಿ ಮನಸ್ಸನ್ನು ಹರಿಯ ಬಿಟ್ಟು ಅವಳನ್ನು ಮರೆತು ಬಿಡಲಾರಂಭಿಸಿದ್ದೇವೆ. ವಿಷಯದ ನೆನಪುಗಳೇ ಹಾಗೆ. ಕೊನೆಯಿಲ್ಲದು ವಿಷವಾಗಿ ಪರಿಣಮಿಸುತ್ತದೆ. ಅವಳು ಬದುಕಿದ್ದರೆ ನಿಮ್ಮಿಂದೇನು ಬಯಸುತಿದ್ದಳು. ಅದನ್ನು ಮನಸ್ಸಿಟ್ಟು ಮಾಡಿ, ಅದರಿಂದ ಅವಳ ಆತ್ಮಕ್ಕೆ ತೃಪ್ತಿಯಾದೀತು'

ಅವಳ ಆತ್ಮಕ್ಕೆ ತೃಪ್ತಿಯಾದೀತು.

ನರಸಿಂಹ ಮನಸ್ಸಿನೊಳಗೇ ಈ ಮಾತುಗಳನ್ನು ಉಚ್ಚರಿಸಿದ!

ಅವಳ ಆತ್ಮ ತೃಪ್ತಿ ಕಂಡಿತು ಎಂಬುದನ್ನು ಹೇಳುವವರಾರು? ಅವಳಂತೂ ಮರಳಿ ಬರುವವಳಲ್ಲ. ತೃಪ್ತಿಯಾಗುವುದು—ಸತ್ತವರ ಆತ್ಮಕ್ಕಲ್ಲ. ನಮ್ಮ ನಿಷ್ಠೆಯ ನಡೆ ನಮಗೆ ತೃಪ್ತಿಯನ್ನು ತಂದು ಕೊಡುತ್ತದೆ. ಶಾಂತಿ ಸಿಗುತ್ತದೆ. ನಮಗೆ ದೊರಕಿದ್ದನ್ನು ಸತ್ತವರಿಗೂ ಸಿಕ್ಕಿದೆ ಎಂದು ಭ್ರಮಿಸುವುದು.

ಹೀಗೆ ಹೊಳೆದುದನ್ನು ಹೇಳಿ ಬಿಡುವ ಆಸೆಯಾಯಿತು ನರಸಿಂಹನಿಗೆ.

ಆದರೆ ನಾಲಗೆಯ ತುದಿಯ ವರೆಗೂ ಬಂದ ಮಾತನ್ನು ಆತ ತಡೆದು ಹಿಡಿದ.

ಆಗವನಿಗೆ ಅರಸನೊಡನೆ ವಾದಕ್ಕೆ ನಿಲ್ಲುವ ಮನಸ್ಸಾಗಲಿಲ್ಲ.

ಅವನ ಮೌನವನ್ನು ಕಂಡು ಪ್ರಭುಗಳೇ 'ಅಮಾತ್ಯರು ಯೋಚನೆಯಲ್ಲಿ ಮೈಮರೆತಂತಿದೆ'

'ತಮ್ಮ ಬಾಯಿಂದ ಬಂದ ಮಾತುಗಳನ್ನೇ ಮೆಲುಕು ಹಾಕುತಿದ್ದೆ'

'ಮಾತಿಗಿಂತಲೂ ಅದರ ಹಿಂದಿರುವ ತಥ್ಯ ದೊಡ್ಡದು.ಅದಕ್ಕಾಗಿಯೇ ಹಿರಿಯರು ಹೇಳಿದ್ದು, ಅನುಭವಕ್ಕಿಂತಲೂ ಅದರ ನೆನಪೇ ಸವಿಯೆಂದು'

'ಆ ಕುರಿತು ಅಷ್ಟಾಗಿ ನಾನು ಯೋಚಿಸಿಲ್ಲ. ನಿಂತೇ ಇದ್ದೀರಲ್ಲ ಪ್ರಭು'

'ನಿಂತು ಮಾತನಾಡುವುದರಲ್ಲೇ ನಮಗೆ ಆನಂದ'

ಶುಭ್ರ ವಸ್ತ್ರಾಲಂಕೃತೆಯಾದ ಹೆಣ್ಣು ಮಗಳೊಬ್ಬಳು ಹಜಾರವನ್ನು ಪ್ರವೇಶಿಸಿದಳು. ತಂದಿದ್ದ ಹಾಲಿನ ಬಟ್ಟಲುಗಳನ್ನೂ ಹಣ್ಣಿನ ತಟ್ಟೆಯನ್ನೂ ಅವರಿಬ್ಬರ ಮಧ್ಯೆ ಇದ್ದ ಮೇಜಿನ ಮೇಲಿಟ್ಟಳು.

'ಇವುಗಳನ್ನೇಕೆ ತರಿಸಿದಿರಿ. ನಮಗಿದು ಬೇಡವಾಗಿತ್ತು.'

'ಅಪರೂಪಕ್ಕೆ ಪಾದ ಬೆಳೆಸಿದಿರಿ. ಸ್ವೀಕರಿಸಿದರೆ ಕೃತಾರ್ಥ'

ಉಪಚಾರದ ಮಾತನಾಡಿದ ನರಸಿಂಹ.

ತಟ್ಟೆಯಲ್ಲಿದ್ದ ದ್ರಾಕ್ಷಿಯ ಹಣ್ಣಲ್ಲಿ ಎರಡೇ ಎರಡನ್ನು ಇಂದ್ರ ಆಯ್ದು ಬಾಯಿಗೆ ಹಾಕಿ ಕೊಂಡ. 'ಈ ಅಪರೂಪದ ಹಣ್ಣನ್ನೆಲ್ಲಿ ಸಂಗ್ರಹಿಸಿದಿರಿ ಅಮಾತ್ಯರೇ. ತುಂಬ ರುಚಿಯಾಗಿವೆ.'

'ಅವಳೇ ನೀರೂಡಿ ಬೆಳೆಸಿದ ದ್ರಾಕ್ಷಿಯ ತೋಟವಿದೆ. ಆ ತೋಟದಲ್ಲಿ ಬೆಳೆದ ಹಣ್ಣುಗಳಿವು'

'ತೋಟಗಾರಿಕೆಯಲ್ಲಿಯೂ ನೀವು ಪಳಗಿರುವಂತಿದೆ'

'ನನಗೇನು ಗೊತ್ತಿದೆ. ಸರಿಯಾಗಿ ಎರಡು ಹೊತ್ತು ಇಲ್ಲಿದ್ದರೆ ತಾನೇ? ಇದು ಹೊತ್ತು ಕಳೆಯುವುದಕ್ಕೆ ಅವಳು ಕಲ್ಪಿಸಿಕೊಂಡ ಕೆಲಸ. ಒಂದಿಷ್ಟು ಅರಮನೆಗೆ ಕಳಿಸಲಾ?'

'ಕಳಿಸಿ' ಇಂದ್ರನ ನೇರ ಉತ್ತರ.

ಆ ಉತ್ತರ ಬಂದ ಮೇಲೆ ತಾನು ಹಾಗೆ ಪ್ರಭುಗಳನ್ನು ಕೇಳಿದ್ದು ಅನುಚಿತ ಎಂದನಿಸಿತು. ಅಷ್ಟರಲ್ಲಿ ಇಂದ್ರ ಆಸನದಿಂದೆದ್ದು "ನಾನಿನ್ನು ಬರುತ್ತೇನೆ" ಎಂದು ಹೊರಡಲನುವಾದ. ನರಸಿಂಹನೂ ಎದ್ದು ನಿಂತು, 'ಪ್ರಭು ಚಿತ್ತ' ಎಂದಷ್ಟೇ ಹೇಳಿದ.

ಹೊರಡುತ್ತಾ 'ನಮ್ಮ ಮಾತನ್ನು ನಡೆಸಿ ಕೊಡಿ. ಅದರಿಂದ ನಮಗೂ ಸಂತೋಷ. ನಿಮಗೂ ಚಿತ್ತ ಶಾಂತಿ ಸಿಗುತ್ತೆ. ಆಲೋಚಿಸಿ ಆದಷ್ಟು ಬೇಗನೆ ಒಂದು ನಿರ್ಧಾರಕ್ಕೆ ಬನ್ನಿ'

ಸುತ್ತಿ ಬಳಸಿ ನೂರು ವಿಚಾರ ಅವರು ಅವನೊಡನೆ ಮಾತನಾಡಿದ್ದರು. ಆದರೆ ಆತ ನಡೆಸಿಕೊಡಬೇಕಾದ ಕೆಲಸದ ಗಂಧವೂ ಸುಳಿದಿರಲಿಲ್ಲ. ಆತ ಯೋಚನೆಯಲ್ಲಿ ಬಿದ್ದ.

ಇಂದ್ರನ ಮುಖವನ್ನೇ ನೋಡುತ್ತ ನಿಂತ – ಅವರು ತನಗೆ ವಹಿಸಿದ ಗುರುತರವಾದ ಕಾರ್ಯವನ್ನು ತಿಳಿಯುವ ಕುತೂಹಲದಿಂದ.

ಇಂದ್ರನಿಗೂ ಅದು ಅರ್ಥವಾಯಿತು.

'ಹೇಳಬೇಕಾದ್ದನ್ನೇ ಹೇಳದೆ ಹೊರಡುತ್ತಿದ್ದೇನೆ ಅಮಾತ್ಯರೇ! ನಿಮ್ಮ ಮದುವೆಯ ವಿಚಾರವನ್ನೇ ನಾವು ಪ್ರಸ್ತಾಪಿಸಿ ಬಂದುದು. ಹೆಣ್ಣಿನ ಕಡೆಯವರು ಹತ್ತಾರು ಜನ ಬಂದು ದಿನವೂ ನಮ್ಮನ್ನು ಒಲೈಸುತ್ತಿದ್ದಾರೆ. ನಿಮ್ಮನ್ನು ಕೇಳುವ ಧೈರ್ಯ ಅವರಿಗಿಲ್ಲ. ಅದಕ್ಕಾಗಿ ನಾವೇ ಇದನ್ನು ನಿಮ್ಮಲ್ಲಿ ಪ್ರಸ್ತಾಪಿಸುತಿದ್ದೇವೆ'

ಎನ್ನ ಮದುವೆ?

ನರಸಿಂಹ ಅವಾಕ್ಕಾದ.

ತನ್ನ ಮದುವೆ ಜಾನಕಿಯೊಡನೆ ಮೂರು ವರ್ಷದ ಕೆಳಗೆ ಆಗಿತ್ತು.

ಇದೇ ಕೈಗಳಿಂದ ಮಂತ್ರಪೂತ ಮಂಗಲ ಸೂತ್ರವನ್ನು ಅವಳ ಕತ್ತಿಗೆ ಕಟ್ಟಿದ್ದ. ಸೇರಿದ್ದ ಬಂಧುವರ್ಗದ ಮುಂದು, ಜಾನಕಿ ಅವನು

(ಹನ್ನೊಂದನೇ ಪುಟ ನೋಡಿರಿ)

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ಕೃತಿಯಲ್ಲಿಲ್ಲ!

ಮನಸಾ ಜಾನಕಿಗೆ ಅಪಚಾರ ಎಸಗುವುದಿಲ್ಲ ಎಂದು ನಿರ್ಧರಿಸಿದ.

ಅವಳು!

ಅವಳು ಹೇಗೆ ಮನಸ್ಸಿನಲ್ಲಿ ಮೂಡಿ ನಿಂತಳೋ ಹಾಗೆ ಮಾಯವಾದಳು.

'ಪ್ರಭುಗಳು ಇತ್ತ ದಯಮಾಡಿಸುವಂತಿದೆ'

ಕೈಜೋಡಿಸಿ ಬಿನ್ನೈಸಿದ ಹೊರ ಬಾಗಿಲಲ್ಲಿ ನಿಂತಿದ್ದ ರಾಜ ಭಟ, ಹಜಾರವನ್ನು ಪ್ರವೇಶಿಸಿ.

'ಪ್ರಭುಗಳೇ'

ಉಚ್ಚರಿಗೊಂಡ ನರಸಿಂಹನ ಮುಖದಿಂದ ಈ ಮಾತುಗಳು ಹೊಮ್ಮಿದುವು.

ಆತ ಅಲ್ಲಿ ನಿಮಿಷವೂ ನಿಲ್ಲದೆ ಹೊರದ್ವಾರದ ಬಳಿಗೆ ಧಾವಿಸಿದ. ಆತ ಹೊರ ಬಾಗಿಲನ್ನು ತಲುಪುವುದಕ್ಕೂ, ಪ್ರಭುಗಳು ಬರುವುದಕ್ಕೂ ತಾಳೆಯಾಯಿತು. ನರಸಿಂಹ ಪ್ರಭುಗಳಿಗೆ ಕೈಜೋಡಿಸಿ ನಮಿಸಿ "ದಯ ಮಾಡಿಸಬೇಕು" ಎಂದು ಆದರದಿಂದ ಬರಮಾಡಿಕೊಂಡ.

ಆವ ಮುನ್ಸೂಚನೆಯೂ ಇಲ್ಲದೆ ಆಗಮಿಸಿದ ದೊರೆಗಳ ಬರವು ನರಸಿಂಹನನ್ನು ಗೊಂದಲದಲ್ಲಿ ಕೆಡವಿತು. ಅದನ್ನು ಹೊರಗೆಡವದೆ,

'ಕರೆ ಕಳಿಸಿದ್ದರೆ ನಾನೇ ಬರುತ್ತಿದ್ದೆ. ಸನ್ನಿಧಿಯವರು ಇಲ್ಲಿಯವರಿಗೂ ಪಾದ ಬೆಳಸುವ ಅಗತ್ಯ ಇರಲಿಲ್ಲ. ತೊಂದರೆ ತೆಗೆದು ಕೊಂಡಿರಿ'.

'ಬಂಧುಗಳ ಆರೋಗ್ಯ ವಿಚಾರಿಸಿಕೊಳ್ಳುವುದು ಕರ್ತವ್ಯ ಅಮಾತ್ಯರೇ. ಆ ಕರ್ತವ್ಯದ ಅರಿವು ನಮ್ಮನ್ನಿಲ್ಲಿಗೆ ತಂದಿದೆ.'

'ರಾಜಕಾರಣ ಇರಬಹುದೆಂದು ಶಂಕಿಸಿದೆ'

'ಹಗಲಿರುಳೂ ರಾಜಕಾರಣವನ್ನು ಹಚ್ಚಿಕೊಂಡರೆ ಬದುಕು ಬರಡಾಗುತ್ತದೆ. ರಾಜಕಾರಣ ಸಾಧನ. ಬದುಕು ಗುರಿ. ಉದಾತ್ತ ಬದುಕಿಗೆ ಎಡೆ ಮಾಡಿಕೊಡಲಿ ಎಂದೇ ರಾಜಕಾರಣ. ರಾಜಕೀಯ ಚಟುವಟಿಕೆ. ಆದರೆ ಈ ಚಟುವಟಿಕೆಯಿಂದಾಗಿ ದೊಡ್ಡ ಬದುಕಿನ ನಿಜವಾದ ತಳಹದಿಯೇ ತಲೆಕೆಳಗಾದರೆ–? ಮಾನವೀಯ ಮೌಲ್ಯಗಳು ನುಚ್ಚುನೂರಾದರೆ? ಬಾಳಿಗೆ ಬೆಲೆಯನ್ನೂ ಪುಷ್ಟಿಯನ್ನೂ ಕೊಡುವುದು ದಯೆ, ಧರ್ಮ ಧ್ಯಾನ, ಪ್ರೇಮ, ಸತ್ಯಸಂಧತೆ, ನೀತಿಯುತ ನಡತೆ. ಸ್ವಂತ ಬಾಳಿನಲ್ಲಿ ಅವುಗಳನ್ನು ಮೂಡಿಸಿಕೊಳ್ಳಲಾರದ ರಾಜಕಾರಣಿ ನಮ್ಮ ದೃಷ್ಟಿಯಿಂದ ಪಶು ಸಮಾನ. ಅವನು ಏನನ್ನೂ ಸಾಧಿಸಲಾರ. ರಾಜಕಾರಣ ಆಗ ಬರಿಯ ಡೊಂಬರಾಟ. ಅದಿರಲಿ. ಹೇಗಿದೆ ನಿಮ್ಮ ಆರೋಗ್ಯ'

'ನನಗೇನಾಗಿದೆ ಪ್ರಭು'

'ನಿಮಗೇನಾಗಿದೆ? ಅದನ್ನು ನೀವೇ ಹೇಳಬೇಕು. ನಿಮ್ಮ ಮುಖವನ್ನೊಮ್ಮೆ ಕನ್ನಡಿಯಲ್ಲಿ ನೋಡಿಕೊಳ್ಳಿ. ಆಗ ತಿಳಿಯುತ್ತೆ ನಿಮಗೇನಾಗಿದೆ ಎಂದು. ನೀವೆಂದು ಮೊದಲಿನಂತಾಗುತ್ತೀರಿ. ಅದು ನನ್ನನ್ನೂ ಪ್ರಜೆಗಳನ್ನೂ ಗೊಂದಲದಲ್ಲಿ ಕೆಡವಿದೆ. ಮೊದಲಿನಂತೆಯೇ ಹರ್ಷಚಿತ್ತರಾಗಿ ಲವಲವಿಕೆಯಿಂದ ನಿಮ್ಮ ಕಾರ್ಯಗಳಲ್ಲಿ ಪ್ರವೃತ್ತರಾದರೆ ನಮಗೆಷ್ಟೋ ಸಂತೋಷ. ಜನ ಬಯಸುವುದು ಅದನ್ನೇ.'

'ಪ್ರಭುಗಳ ಕೈಂಕರ್ಯಕ್ಕೆ ನಾನು ಕಂಕಣ ಕಟ್ಟಿ ನಿಂತಿದ್ದೇನೆ. ಈಗ ನನ್ನಿಂದೇನಾಗಬೇಕು. ಅಷ್ಟು ತಿಳಿಸಿದರೆ ನಾನು ಕೃತಾರ್ಥ'

'ನಿಮ್ಮಿಂದ ಒಂದು ಉಪಕಾರವಾಗಬೇಕಾಗಿದೆ'

'ಬಹು ದೊಡ್ಡ ಮಾತಾಯಿತು'

'ಅಮಾತ್ಯರೇ, ನೀವು ಇನ್ನೂ ಚಿಂತೆಯಲ್ಲಿ ಮುಳುಗಿರುವಂತಿದೆ. ಈ ಚಿಂತೆ ಸಹಜವಾದರೂ ಬಿಡುವುದು ವಿಹಿತ. ದೇಹ ಧರಿಸಿ ಬಂದ ಎಲ್ಲರನ್ನೂ ಅದು ಒಂದಲ್ಲ ಒಂದು ರೀತಿಯಿಂದ ಹಿಂಡಿ ಕಾಡಿವೆ; ಕೆಡಿಸಿದೆ. ಜಾನಕಿಯ ಅಕಾಲಿಕ ಅಗಲುವಿಕೆಯನ್ನು ಮರೆತು ಬಿಡಿ. ಆಕೆ ನಿಮ್ಮ ಪ್ರಿಯ ಪತ್ನಿ ನಿಶ್ಚಯ. ನಿಮಗೆ ಧಾರೆ ಎರೆದು ಕೊಡುವ ಮೊದಲು ಅವಳು ನಮಗೆ, ಬೆನ್ನಲ್ಲಿ ಬಂದ ತಂಗಿ. ಈ ತೋಳುಗಳಲ್ಲಿ ತಾಯಿ ಇಲ್ಲದ ತಬ್ಬಲಿಯನ್ನು ಎತ್ತಿ ಆಡಿಸಿದ್ದೇವೆ. ನಿಮ್ಮೊಡನಿದ್ದು ಬಾಳಿದ್ದಕ್ಕಿಂತಲೂ ಹೆಚ್ಚುಕಾಲ ಆಕೆ ನಮ್ಮೊಡನೆ ಆಡಿದವಳು, ಬೆಳೆದವಳು. ನನ್ನಿಂದಲೂ ಅವಳನ್ನು ಮರೆಯುವುದು ಶಕ್ಯವಾಗಲಾರದು. ಆದರೂ ಮರೆಯಬೇಕಾಗಿದೆ. ಕೆಲಸ ಕಾರ್ಯಗಳಲ್ಲಿ ಮನಸ್ಸನ್ನು ಹರಿಯ ಬಿಟ್ಟು ಅವಳನ್ನು ಮರೆತು ಬಿಡಲಾರಂಭಿಸಿದ್ದೇವೆ. ವಿಷಯದ ನೆನಪುಗಳೇ ಹಾಗೆ. ಕೊನೆಯಿಲ್ಲದು ವಿಷವಾಗಿ ಪರಿಣಮಿಸುತ್ತದೆ. ಅವಳು ಬದುಕಿದ್ದರೆ ನಿಮ್ಮಿಂದೇನು ಬಯಸುತಿದ್ದಳು. ಅದನ್ನು ಮನಸ್ಸಿಟ್ಟು ಮಾಡಿ, ಅದರಿಂದ ಅವಳ ಆತ್ಮಕ್ಕೆ ತೃಪ್ತಿಯಾದೀತು'

ಅವಳ ಆತ್ಮಕ್ಕೆ ತೃಪ್ತಿಯಾದೀತು.

ನರಸಿಂಹ ಮನಸ್ಸಿನೊಳಗೇ ಈ ಮಾತುಗಳನ್ನು ಉಚ್ಚರಿಸಿದ!

ಅವಳ ಆತ್ಮ ತೃಪ್ತಿ ಕಂಡಿತು ಎಂಬುದನ್ನು ಹೇಳುವವರಾರು? ಅವಳಂತೂ ಮರಳಿ ಬರುವವಳಲ್ಲ. ತೃಪ್ತಿಯಾಗುವುದು—ಸತ್ತವರ ಆತ್ಮಕ್ಕಲ್ಲ. ನಮ್ಮ ನಿಷ್ಠೆಯ ನಡೆ ನಮಗೆ ತೃಪ್ತಿಯನ್ನು ತಂದು ಕೊಡುತ್ತದೆ. ಶಾಂತಿ ಸಿಗುತ್ತದೆ. ನಮಗೆ ದೊರಕಿದ್ದನ್ನು ಸತ್ತವರಿಗೂ ಸಿಕ್ಕಿದೆ ಎಂದು ಭ್ರಮಿಸುವುದು.

ಹೀಗೆ ಹೊಳೆದುದನ್ನು ಹೇಳಿ ಬಿಡುವ ಆಸೆಯಾಯಿತು ನರಸಿಂಹನಿಗೆ.

ಆದರೆ ನಾಲಗೆಯ ತುದಿಯ ವರೆಗೂ ಬಂದ ಮಾತನ್ನು ಆತ ತಡೆದು ಹಿಡಿದ.

ಆಗವನಿಗೆ ಅರಸನೊಡನೆ ವಾದಕ್ಕೆ ನಿಲ್ಲುವ ಮನಸ್ಸಾಗಲಿಲ್ಲ.

ಅವನ ಮೌನವನ್ನು ಕಂಡು ಪ್ರಭುಗಳೇ 'ಅಮಾತ್ಯರು ಯೋಚನೆಯಲ್ಲಿ ಮೈಮರೆತಂತಿದೆ'

'ತಮ್ಮ ಬಾಯಿಂದ ಬಂದ ಮಾತುಗಳನ್ನೇ ಮೆಲುಕು ಹಾಕುತಿದ್ದೆ'

'ಮಾತಿಗಿಂತಲೂ ಅದರ ಹಿಂದಿರುವ ತಥ್ಯ ದೊಡ್ಡದು. ಅದಕ್ಕಾಗಿಯೇ ಹಿರಿಯರು ಹೇಳಿದ್ದು, ಅನುಭವಕ್ಕಿಂತಲೂ ಅದರ ನೆನಪೇ ಸವಿಯೆಂದು'

'ಆ ಕುರಿತು ಅಷ್ಟಾಗಿ ನಾನು ಯೋಚಿಸಿಲ್ಲ. ನಿಂತೇ ಇದ್ದೀರಲ್ಲ ಪ್ರಭು'

'ನಿಂತು ಮಾತನಾಡುವುದರಲ್ಲೇ ನಮಗೆ ಆನಂದ'

ಶುಭ್ರ ವಸ್ತ್ರಾಲಂಕೃತೆಯಾದ ಹೆಣ್ಣು ಮಗಳೊಬ್ಬಳು ಹಜಾರವನ್ನು ಪ್ರವೇಶಿಸಿದಳು. ತಂದಿದ್ದ ಹಾಲಿನ ಬಟ್ಟಲುಗಳನ್ನೂ ಹಣ್ಣಿನ ತಟ್ಟೆಯನ್ನೂ ಅವರಿಬ್ಬರ ಮಧ್ಯೆ ಇದ್ದ ಮೇಜಿನ ಮೇಲಿಟ್ಟಳು.

'ಇವುಗಳನ್ನೇಕೆ ತರಿಸಿದಿರಿ. ನಮಗಿದು ಬೇಡವಾಗಿತ್ತು.'

'ಅಪರೂಪಕ್ಕೆ ಪಾದ ಬೆಳೆಸಿದಿರಿ. ಸ್ವೀಕರಿಸಿದರೆ ಕೃತಾರ್ಥ'

ಉಪಚಾರದ ಮಾತನಾಡಿದ ನರಸಿಂಹ.

ತಟ್ಟೆಯಲ್ಲಿದ್ದ ದ್ರಾಕ್ಷಿಯ ಹಣ್ಣಲ್ಲಿ ಎರಡೇ ಎರಡನ್ನು ಇಂದ್ರ ಆಯ್ದು ಬಾಯಿಗೆ ಹಾಕಿ ಕೊಂಡ. 'ಈ ಅಪರೂಪದ ಹಣ್ಣನ್ನೆಲ್ಲಿ ಸಂಗ್ರಹಿಸಿದಿರಿ ಅಮಾತ್ಯರೇ. ತುಂಬ ರುಚಿಯಾಗಿವೆ.'

'ಅವಳೇ ನೀರೂಡಿ ಬೆಳೆಸಿದ ದ್ರಾಕ್ಷಿಯ ತೋಟವಿದೆ. ಆ ತೋಟದಲ್ಲಿ ಬೆಳೆದ ಹಣ್ಣುಗಳಿವು'

'ತೋಟಗಾರಿಕೆಯಲ್ಲಿಯೂ ನೀವು ಪಳಗಿರುವಂತಿದೆ'

'ನನಗೇನು ಗೊತ್ತಿದೆ. ಸರಿಯಾಗಿ ಎರಡು ಹೊತ್ತು ಇಲ್ಲಿದ್ದರೆ ತಾನೇ? ಇದು ಹೊತ್ತು ಕಳೆಯುವುದಕ್ಕೆ ಅವಳು ಕಲ್ಪಿಸಿಕೊಂಡ ಕೆಲಸ. ಒಂದಿಷ್ಟು ಅರಮನೆಗೆ ಕಳಿಸಲಾ?'

'ಕಳಿಸಿ' ಇಂದ್ರನ ನೇರ ಉತ್ತರ.

ಆ ಉತ್ತರ ಬಂದ ಮೇಲೆ ತಾನು ಹಾಗೆ ಪ್ರಭುಗಳನ್ನು ಕೇಳಿದ್ದು ಅನುಚಿತ ಎಂದನಿಸಿತು. ಅಷ್ಟರಲ್ಲಿ ಇಂದ್ರ ಆಸನದಿಂದೆದ್ದು "ನಾನಿನ್ನು ಬರುತ್ತೇನೆ" ಎಂದು ಹೊರಡಲನುವಾದ. ನರಸಿಂಹನೂ ಎದ್ದು ನಿಂತು, 'ಪ್ರಭು ಚಿತ್ತ' ಎಂದಷ್ಟೇ ಹೇಳಿದ.

ಹೊರಡುತ್ತಾ 'ನಮ್ಮ ಮಾತನ್ನು ನಡೆಸಿ ಕೊಡಿ. ಅದರಿಂದ ನಮಗೂ ಸಂತೋಷ. ನಿಮಗೂ ಚಿತ್ತ ಶಾಂತಿ ಸಿಗುತ್ತೆ. ಆಲೋಚಿಸಿ ಆದಷ್ಟು ಬೇಗನೆ ಒಂದು ನಿರ್ಧಾರಕ್ಕೆ ಬನ್ನಿ'

ಸುತ್ತಿ ಬಳಸಿ ನೂರು ವಿಚಾರ ಅವರು ಅವನೊಡನೆ ಮಾತನಾಡಿದ್ದರು. ಆದರೆ ಆತ ನಡೆಸಿಕೊಡಬೇಕಾದ ಕೆಲಸದ ಗಂಧವೂ ಸುಳಿದಿರಲಿಲ್ಲ. ಆತ ಯೋಚನೆಯಲ್ಲಿ ಬಿದ್ದ.

ಇಂದ್ರನ ಮುಖವನ್ನೇ ನೋಡುತ್ತ ನಿಂತ – ಅವರು ತನಗೆ ವಹಿಸಿದ ಗುರುತರವಾದ ಕಾರ್ಯವನ್ನು ತಿಳಿಯುವ ಕುತೂಹಲದಿಂದ.

ಇಂದ್ರನಿಗೂ ಅದು ಅರ್ಥವಾಯಿತು.

'ಹೇಳಬೇಕಾದ್ದನ್ನೇ ಹೇಳದೆ ಹೊರಡುತ್ತಿದ್ದೇನೆ ಅಮಾತ್ಯರೇ! ನಿಮ್ಮ ಮದುವೆಯ ವಿಚಾರವನ್ನೇ ನಾವು ಪ್ರಸ್ತಾಪಿಸಿ ಬಂದುದು. ಹೆಣ್ಣಿನ ಕಡೆಯವರು ಹತ್ತಾರು ಜನ ಬಂದು ದಿನವೂ ನಮ್ಮನ್ನು ಒಲೈಸುತ್ತಿದ್ದಾರೆ. ನಿಮ್ಮನ್ನು ಕೇಳುವ ಧೈರ್ಯ ಅವರಿಗಿಲ್ಲ. ಅದಕ್ಕಾಗಿ ನಾವೇ ಇದನ್ನು ನಿಮ್ಮಲ್ಲಿ ಪ್ರಸ್ತಾಪಿಸುತಿದ್ದೇವೆ'

ತನ್ನ ಮದುವೆ?

ನರಸಿಂಹ ಅವಾಕ್ಕಾದ.

ತನ್ನ ಮದುವೆ ಜಾನಕಿಯೊಡನೆ ಮೂರು ವರ್ಷದ ಕೆಳಗೆ ಆಗಿತ್ತು.

ಇದೇ ಕೈಗಳಿಂದ ಮಂತ್ರಪೂತ ಮಂಗಲ ಸೂತ್ರವನ್ನು ಅವಳ ಕತ್ತಿಗೆ ಕಟ್ಟಿದ್ದ. ಸೇರಿದ್ದ ಬಂಧುವರ್ಗದ ಮುಂದು, ಜಾನಕಿ ಅವನು

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 27

ಸಂಸ್ಥಾಪಕರು :
ಡಾ। ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೩೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ನಿಕ್ಸನ್-ಲಾಂಪ್ ಗಾಢಾಲಿಂಗನ ಭುಟ್ಟೋರಿಗೆ ಹೃದಯ ಕಂಪನ

ಕೆಂಪು ಚೀನಾ ಹುಟ್ಟಿಕೊಂಡಂದಿನಿಂದಲೂ ಅದು ತನ್ನ ಪ್ರಥಮ ಶತ್ರುವೆಂದು ಹೇಳಿಕೊಳ್ಳುತ್ತ ಬಂದ ಅಮೇರಿಕದ ನಿಲುವೆಯೀಗ ತಲೆ ಕೆಳಗಾಯ್ತು. ಅದು ತೈವಾನವನ್ನೇ ಚೀನಾವೆಂದು ಹೇಳಿಕೊಂಡು ಬಂದಿದ್ದು, ಕೆಂಪು ಚೀನಾಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯ ನೀಡುವ ಸಂಬಂಧದಲ್ಲಿ ಬಹುಕಾಲದಿಂದಲೂ ವಿರೋಧ ವ್ಯಕ್ತಪಡಿಸುತ್ತಲೇ ಬಂದಿತ್ತು. ಈ ರೀತಿ ಜಗತ್ತಿನ ಕಾಲಂಶ ಜನತೆಯನ್ನು ವಿಶ್ವಸಂಸ್ಥೆಯಿಂದಲೇ ದೂರವಿರಿಸಿತ್ತು. ಆದರೆ, ಅಧ್ಯಕ್ಷ ನಿಕ್ಸನ್ನರು ತನ್ನ ಸ್ವಾರ್ಥಸಾಧನೆ ಮತ್ತು ಶಕ್ತಿಯ ಸಮತೋಲನದ ಹಳೆಯ ನಾಣ್ಯವನ್ನು ಮತ್ತೆ ಚಲಾವಣೆಗೆ ತರುವ ಉದ್ದೇಶ್ಯದಿಂದ ರಕ್ತ ಚೀನಾಂಗನೆಯನ್ನು ಆಲಿಂಗಿಸಿಕೊಂಡರು. ಈ ಅಂಗನೆಯಾದರೋ ತನ್ನ ಸ್ವಭಾವಕ್ಕನುಸಾರವಾಗಿ ನಿಕ್ಸನ್ನರ ರಕ್ತವನ್ನೇ ಹೀರಿ ಬಿಟ್ಟಳು. ತಾನು ಇದುವರೆಗೂ ರಕ್ಷಿಸಿಕೊಂಡು ಬಂದ ತೈವಾನವು ಈ ಅಂಗನೆಗೆ ಸೇರಿದ್ದು ಎಂದು ಒಪ್ಪದೆ ಅವರು ಪೀಕಿಂಗ್ ಶಯ್ಯೆಯಿಂದೇಳುವುದಾಗಲಿಲ್ಲ. ನಿಕ್ಸನ್ನರು ಅಧಿಕಾರಕ್ಕೆ ಬಂದ ಮರುಕ್ಷಣದಲ್ಲಿ ಇವೆಲ್ಲ ಘಟಿಸುತಿದ್ದರೆ, ಅದು ನಿಕ್ಸನ್ನರ ಹೊಸ ನೀತಿಯೆಂದು ಭಾವಿಸಬಹುದಾಗಿತ್ತು. ಆದರೆ, ತನ್ನ ಅವಧಿಯ ಕೊನೆಯಗಳಿಗೆಯಲ್ಲಿ ಅವರ ಈ ರಕ್ತಾಂಗನಾ ಶರಣಾಗತಿಯಿಂದ ಅವರೇನು ಸಾಧಿಸ ಬಯಸಿದ್ದಾರೆ? ಮುಂದಿನ ಚುನಾವಣೆಯಲ್ಲಿ ಮತಗಳನ್ನೇ? ಅಥವಾ ಭಾರತ—ರಶ್ಯಗಳನ್ನು ಬೆದರಿಸಬೇಕೆಂದೆ? ಪ್ರಾಯಃ ಎರಡನೆಯದೇ ಸರಿಯೆನಿಸುತ್ತದೆ.

ಅಮೇರಿಕೆಯ ಈ ಕೃತಿಯಿಂದ ಎಚ್ಚರಾಗಬೇಕಾದವರು ಭಾರತ ಉಪಖಂಡದ ರಾಷ್ಟ್ರಗಳು. ಭಾರತವು ಕಮ್ಯುನಿಜಂ ದೇಶಗಳೊಂದಿಗೆ ಸ್ನೇಹ ಬೆಳೆಸುವುದು ಅಮೇರಿಕೆಗೆ ಪಥ್ಯವಾಗಲಿಲ್ಲ. ಕಮ್ಯುನಿಸ್ಟ್ ದೇಶಗಳ ಆಕ್ರಮಣದಿಂದ ಉಳಿದುಕೊಳ್ಳುವುದಕ್ಕೆಂದೇ ಅದು ಪಾಕಿಸ್ತಾನಕ್ಕೆ ಯಥೇಷ್ಟ ಮಿಲಿಟರಿ ಸಹಾಯ ನೀಡತೊಡಗಿತ್ತು; ಇನ್ನು ಮುಂದೆಯೂ ನೀಡಬಹುದು. ಆದರೆ, ತಾನೇ ಕಮ್ಯುನಿಸ್ಟರೊಂದಿಗೆ ಸರಸವಾಡುವುದಕ್ಕೆ ಮುಂದಾದ ನಿಕ್ಸನ್ ತನ್ನ ಹಳೆಯ ತರ್ಕ ಜಾಲದಿಂದ ಹೊರಬರಲು ಸಿದ್ಧರಿಲ್ಲ. ಅಂದರೆ, ತಾನು ಮಾಡಿದ್ದೆಲ್ಲವನ್ನೂ ಲೋಕ ಕುರುಡು ಗಣ್ಣುಗಳಿಂದ ನೋಡಬೇಕು; ತನ್ನ ಕುಬೇರ ಭಂಡಾರದ ಜೊಂಪಿನಲ್ಲಿ ತಲೆದೂಗಬೇಕು. ಶ್ರೇಷ್ಠ ಮನುಷ್ಯರನ್ನು ಇತರರು ಅನುಸರಿಸುವಂತೆ ಶ್ರೇಷ್ಠರೆಂಬ ಹೆಸರು ಪಡೆದ ತನ್ನ ನಿಲುವೆಯನ್ನು ದುರ್ಬಲ ದೇಶಗಳು ಮೆಚ್ಚಬೇಕು—ಆದರೆ, ಆತ್ಮಗೌರವವುಳ್ಳ ಯಾವ ಸ್ವತಂತ್ರ ದೇಶವೂ ಇದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಭಾರತದ ನಿಲುವು ಇದು. ಬೇಷರತ್ ಸಹಾಯವು ಯಾವುದೇ ದೇಶದಿಂದ ಬಂದರೂ ಅದನ್ನು ಸ್ವೀಕರಿಸುವುದು ಭಾರತದ ಹಿಂದಿನಿಂದಲೂ ಬಂದಿರುವ ರೀತಿ. ಅದು ಅಮೇರಿಕೆಯಿಂದಲೂ ಬರಬಹುದು; ಕೆಂಪು ಚೀನಾದಿಂದಲೂ ಬರಬಹುದು. ಪೀಕಿಂಗಿನಿಂದ ಹೊರಟ ಜಂಟಿ ಹೇಳಿಕೆಯಲ್ಲಿ ಮತ್ತಾವ ವಿದೇಶಗಳ ಪ್ರಸ್ತಾಪವನ್ನೂ ಮಾಡದೆ 'ಕಾಶ್ಮೀರ ಸಮಸ್ಯೆ'ಯನ್ನು ಉಲ್ಲೇಖಿಸಿದ್ದು ಜೀಲಾ ಪಾಕಿಸ್ತಾನವನ್ನು ತೃಪ್ತಿ ಪಡಿಸಲೆಂದಿರಬಹುದು. ಇದು ಭಾರತದ ಅಂತರಿಕ ವಿಷಯದ ಮೇಲೆ ನಡೆದ ನಗ್ನ ಆಕ್ರಮಣವೆಂದೂ ಕಾಶ್ಮೀರದಲ್ಲಿ ಸಮರ ವಿರಾಮ ರೇಖೆಯೆಂಬುದು ಇಲ್ಲವೇ ಇಲ್ಲನೆಂದೂ ಪ್ರಧಾನಿ ಗಾಂಧಿ ಘೋಷಿಸಿದ್ದಾರೆ. ಅಂದರೆ ಕಾಶ್ಮೀರದ ಅಂಗುಲಂಗುಲವೂ ಭಾರತದ್ದು; ಪಾಕಿಸ್ತಾನ ಅದರ ಒಂದು ಭಾಗವನ್ನು ಆಕ್ರಮಿಸಿಕೊಂಡಿದೆ. ಅದನ್ನು ಇಷ್ಟ ಬಂದಾಗ ವಶಪಡಿಸಿಕೊಳ್ಳಲು ಭಾರತಕ್ಕೆ ಅಧಿಕಾರವಿದೆಯೆಂದಿದರ ಅರ್ಥ. ಈ ನಿಲುವೆ ಸ್ವಾಗತಾರ್ಹವೇ. ತೈವಾನವನ್ನು ಚೀನಾದ ಅವಿಭಾಜ್ಯ ಅಂಗವೆಂದು ಒಪ್ಪಿದವರು ಕಾಶ್ಮೀರವು ಭಾರತದ ಅಂಗವೆಂದು ಒಪ್ಪಲು ಸಿದ್ಧರಾಗದೆ 'ಆತ್ಮ ನಿರ್ಧಾರ'ದ ಹಳೆಯ ಧ್ವನಿಯೆತ್ತಲು ತೊಡಗಿದ್ದು ಇತಿಹಾಸದ ಅವಹೇಳನ.

ಈ ಎರಡು ರಾಷ್ಟ್ರಗಳ ನಡವಳಿಕೆಯಿಂದ ಪಾಠಕಲಿಯಬೇಕಾದವರು ಶ್ರೀಮಾನ್ ಜುಲ್‌ಫಿಕರ್ ಅಲಿ ಭುಟ್ಟೋ ಅವರು. ಅವರು ಪಾಕ್ ಕಾವಲಿ ಕಾದಿರುವಾಗಲೇ ಅಧಿಕಾರ ಸ್ವೀಕರಿಸಿದರು; ಅದರ ಮೇಲೆ ಹೊಯ್ಯಲು ದೋಸೆಯ ಬಂಧ ದೂರವಿರಲಿ, ಅದನ್ನು ತಣಿಸಲಾದರೂ ನೀರು ಅವರ ಬಳಿಯಲ್ಲಿಲ್ಲ. ಈ ನೀರೂ ಅವರಿಗೆ ಅಮೇರಿಕೆ—ಚೀನಾಗಳಿಂದ ಬರಬೇಕಾದವಷ್ಟು, ಬಡಪತ್ತು ಅವರಿಗೆ ಬಂದಿದೆಯೆಂದರೆ ಶತ್ರುಗಳಿಗೂ ಕಣ್ಣಂಚಿನಲ್ಲಿ ನೀರೊಸರುತ್ತದೆ. ಪಾಕಿಸ್ತಾನದ ರಾಜ್ಯಕೀಯವು ಪಾಕಿಸ್ತಾನದ ನೆಲದಲ್ಲಿ ಇದುವರೆಗೂ ಬೆಳೆದಿರಲಿಲ್ಲ. ಆರಂಭದಲ್ಲಿ ಬ್ರಿಟಿಷರ, ಅನಂತರ ಅಮೇರಿಕ—ಚೀನಾಗಳಲ್ಲಿ ಬಲಿತು ಬಂತು. ಈಗೆಲ್ಲಿದೆಯೆಂಬುದು ಯಾರಿಗೂ ಗೊತ್ತಿಲ್ಲ. ಗಿಳಿಯು ಪಂಜರದಲ್ಲಿಲ್ಲವೆಂಬುದು ಇನ್ನೂ ಭುಟ್ಟೋರಿಗೆ ಮನವರಿಕೆಯಾಗಲಿಲ್ಲ. ನಿಕ್ಸನ್—ಲಾಯ್ ಮಾತುಕತೆಗಳ ವಿವರಗಳನ್ನು ತಿಳಿಯಲು ತುದಿಗಾಲಲ್ಲಿ ನಿಂತ ಅವರಿಗೀಗ ತೀರ ನಿರಾಶೆಯಾಗಿದೆ. ಅವನ್ನು ಯಾರಿಗೂ ತಿಳಿಸಬಾರದಂತೆ! ಈ ಪೂರ್ವ ಪಶ್ಚಿಮಗಳನ್ನು ಒಂದುಗೂಡಿಸುವ ಕೊಂಡಿ ದೇಶ ತಾನೆಂದು ಹೇಳಿಕೊಳ್ಳುವ ಪಾಕಿಸ್ತಾನಕ್ಕೂ ವಿವರ ತಿಳಿಯುವ ಅವಕಾಶವಿಲ್ಲವೆಂದರೆ? ಗಂಡ—ಹೆಂಡಿರ ನಡುವೆ ದಲಾಲಿಯದ್ದೇನು? ಇದು ಭುಟ್ಟೋರಿಗೆ ತಿಳಿಯದೆ ಹೋಯ್ತು. ಅಮೇರಿಕೆ ಬಾಂಗ್ಲಾ ದೇಶಕ್ಕೆ ಮನ್ನಣೆ ನೀಡುವುದಾಗಿ ತಿಳಿಸಿದೆ. ಚೀನಾ ವಾಸ್ತವಿಕತೆಯನ್ನು ಕಡೆಗಣಿಸುವುದಿಲ್ಲ—ಅಂದರೆ ಭುಟ್ಟೋ ರಾಜ್ಯಕೀಯಕ್ಕೆ ಭವಿಷ್ಯವೆಲ್ಲಿ? ಅತ್ತ ಬಲೂಚಿಸ್ತಾನಿಗಳೂ ಫಕ್ತೂನಿಸ್ತಾನಿಗಳೂ ಕತ್ತಿ ಮಸೆಯುತ್ತಲೇ ಇದ್ದಾರೆ. ಬಾಂಗ್ಲಾದಂತೆಯೇ ಇವೂ ಸ್ವತಂತ್ರ ಸಾರ್ವಭೌಮ ದೇಶಗಳೆಂದು ಡಂಗುರ ಸಾರಿದರೆ, ಭುಟ್ಟೋ ಸಂಸಾರಕ್ಕೆ ಆಶ್ರಯ ಕೊಡುವವರಾರು?

ಇದರಿಂದ ಭುಟ್ಟೋ ಇನ್ನಾದರೂ ಪಾಠ ಕಲಿಯಬೇಕು. ಅಮೇರಿಕೆಯು ತನ್ನನ್ನು ನಂಬಿದ್ದ ತೈವಾನವನ್ನು ಕೆಂಪು ಚೀನಾಕ್ಕೆ ಎತ್ತಿ ಕೊಡಲು ಹಿಂದು ಮುಂದು ನೋಡಲಿಲ್ಲ. ಅದೇ ರೀತಿ ತನಗೆ ಈಗ ನೀಡುತ್ತಿರುವ ಸಹಾಯವನ್ನದು ಎಂದಾದರೂ ನಿಲ್ಲಿಸುವುದು ನಿಶ್ಚಿತವೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಭಾರತ-ಪಾಕ್ ನಡುವಣ ಎಲ್ಲ ವಿವಾದಗಳನ್ನೂ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಪರಿಹರಿಸಿಕೊಂಡು ಉತ್ತಮ ನೆರೆಹೊರೆಯಾಗಿ ಬಾಳೋಣವೆಂಬ ಭಾರತದ ಹೃದಯಪೂರ್ವಕ ಕರೆಗೆ ಅಪಾರ್ಥ ಕಟ್ಟುತ್ತ ಹೋಗ ಬಾರದು. ಭಾರತ—ಪಾಕ್—ಬಾಂಗ್ಲಾ ದೇಶಗಳು ಒಳ್ಳೆಯ ಮಿತ್ರರಾದರೆ, ಉಪಖಂಡದ ಎಲ್ಲ ಸಮಸ್ಯೆಗಳೂ ಹೇಳ ಹೆಸರಿಲ್ಲವಾಗುವುವು. ಜಗತ್ತಿನ ಬಲಾಢ್ಯ ಶಕ್ತಿಯೆನಿಸುವುವು. ಆದರೆ, 'ಇಸ್ಲಾಮಿನ ಹೆಸರಲ್ಲಿ ಭಾರತದ ದ್ವೇಷವೇ ನಮ್ಮ ರಾಷ್ಟ್ರಧರ್ಮ'ವೆಂಬುದನ್ನು ಹಾಲೂಡುತ್ತಿರುವಾಗಲೇ ಕಿವಿಗೆ ಸುರಿದು ಬೆಳೆಸಿದ ಪಾಕ್ ಪ್ರಜೆಗಳ ಮುಂದೆ ಈ ನಿಲುವನ್ನು ಪ್ರತಿಪಾದಿಸುವ ಎದೆಗಾರಿಕೆಯಿದೆಯೆ..? ಆದುದರಿಂದ ಭುಟ್ಟೋಗೆ ಪಾಕಿಸ್ತಾನದ ಉಳಿವು ಬೇಕಾಗಿದ್ದರೆ, ತಾನು ಅಧಿಕಾರ ತ್ಯಾಗ ಮಾಡಲು ಹಿಂಜರಿಯಬಾರದು, ಭಾರತದೊಂದಿಗೆ ನೇರ ಮಾತುಕತೆಯಾಡಬೇಕೆನ್ನುವವರಲ್ಲಿ ಸಮರ್ಥ ಸ್ನೇಹಶೀಲನೊಬ್ಬನನ್ನು ಗದ್ದುಗೇರಿಸಲಿ, ಅಮೇರಿಕೆ—ಚೀನಗಳ ಗಾಢಾಲಿಂಗನದಲ್ಲಿ ಭುಟ್ಟೋರ ರಾಜ್ಯಕೀಯ ಪುಡಿಗುಟ್ಟಿ ಹೋಯ್ತೆಂದೇ ಅರ್ಥ.

ವ್ಯಾಪಾರದಲ್ಲಿ ಮಾನವತೆ

ಬೆಂಗಳೂರಿನ ವಿಧಾನ ಸೌಧಕ್ಕೆ ಅನತಿ ದೂರದಲ್ಲೇ ಒಂದು ಹೋಟೇಲು. ಇದು ಸಣ್ಣದಲ್ಲ, ಭಾರಿ ದೊಡ್ಡದೇ. ಇದು ಒಂದು ದಿನ ಸತ್ತ ಹಲ್ಲಿ ಸೇರಿದ ಚಟ್ನಿ ಪೂರೈಸಿತು; ಮರುದಿನ ಗಾಜುಬೆರಸಿದ ಜಾಮೂನು ಸಪ್ಲೈ ಮಾಡಿತು. ಇದರಿಂದ ನಗರದ ಮೇಯರ್ ಮುನಿದು ಮೂರು ತಿಂಗಳ ಕಾಲ ಲೈಸೆನ್ಸು ರದ್ದು ಮಾಡುವಂತೆ ಆರೋಗ್ಯಾಧಿಕಾರಿಗಳಿಗೆ ಆದೇಶ ನೀಡಿದರಂತೆ. ಮುಂದೆ ಹೀಗೆ ಸಾಗಬಹುದು—ಯಜಮಾನರು ಇದಕ್ಕೆ ತಕ್ಕ ಸಮಜಾಯಿಷಿ ಹೇಳಬೇಕು. ಚಟ್ನಿಗೆ ಹಾಕಿದ ಮೆಣಸಲ್ಲಿ ಸತ್ತ ಹಲ್ಲಿ ಬಂದಿರಬಹುದು, ಇಡ್ಲಿಗೆ ತರಿಸಿದ ಅಕ್ಕಿಯಲ್ಲಿ ಕಲ್ಲು—ಹೊಯ್ಗೆಗಳೊಂದಿಗೆ ಗಾಜಿನ ಚೂರೂ ಬಂದಿರಬಹುದು. ಆದ್ದರಿಂದ ಕಾಳು ಕಡಿ ಅಂಗಡಿಗಾರನೇ ಇದಕ್ಕೆ ಬಾಧ್ಯ. ಆಗ ಆರೋಗ್ಯ ಇಲಾಖೆ ಅಜ್ಞಾಪಿಸಬಹುದು–ತಿಂಡಿ ತೀರ್ಥಗಳನ್ನು ತಯಾರಿಸುವಾಗ ಸೂಕ್ತ ಎಚ್ಚರಿಕೆ ವಹಿಸಬೇಕಾದ್ದು ನೀವು–ಆದ್ದರಿಂದ ನಿಮ್ಮ ಸಮಜಾಯಿಷಿ ಕೇಳಲಾಗದು. ಯಜಮಾನರು ಬರೆಯ ಬಹುದು: ನೀವು ಹೇಳುವುದರಲ್ಲಿ ತುಸು ಅರ್ಥವಿದೆ. ಆದರೆ ಅಂಗಡಿಯಿಂದ ತಂದ ಸಾಮಾನು ವಗೈರೆಗಳನ್ನು ಆರಿಸಲು ಜನವಿಟ್ಟರೆ, ಅವರಿಗೆ ಸಂಬಳ–ಸಾರಿಗೆ ಕೊಡಬೇಕಾಗುತ್ತದೆ. ದುಬಾರಿ ಬೆಲೆಯ ಈ ಕಾಲದಲ್ಲಿ ಸಾರ್ವಜನಿಕರ ತಿಂಡಿ ತೀರ್ಥಗಳ ಬೆಲೆಯೇರಿಕೆ ಅನಿವಾರ್ಯವಾಗು

(ಹತ್ತನೇ ಪುಟ ನೋಡಿರಿ)

ನೂರಕ್ಕೆ

ರಾಜ್ಯ—ಕೇಂದ್ರಗಳ ನಡುವೆ

ಅತಿ ವಿಧೇಯತೆ, ಅತಿ ಉದ್ಧಟತೆ ಅಪಾಯಕಾರಿ

ಪ್ರಧಾನಿ ಗಾಂಧಿಯವರು ತನ್ನ ಮಿಂಚಿನಸಂಚಾರದ ವೇಳೆ ಸಂತೋಷ ಪಟ್ಟರು– ಕರ್ನಾಟಕದಲ್ಲಿ ಆಳುವ ಕಾಂಗ್ರೆಸ್ಸಿಗೆ ಉಜ್ವಲ ಭವಿಷ್ಯವಿದೆ; ಜನತೆಯು ಆಕರ್ಷಕ ಪಕ್ಷವಿದಾಗಿದೆ.

ಅವರ ಜೊತೆಯಲ್ಲೇ ಪ್ರಾದೇಶಿಕ ಆ. ಕಾಂ. ನಾಯಕ ದೇವರಾಜ ಅರಸರೂ ಅನುಮೋದಿಸಿದರು. ರಾಜ್ಯದಲ್ಲಿ ಆಳುವ ಕಾಂಗ್ರೆಸ್ಸು ೧೮೦ ಸ್ಥಾನಗಳನ್ನಾದರೂ ಪಡೆಯುತ್ತದೆ.

ಅವರ ಹಿಂದೆ ರಾಜ್ಯದ ಸಂಚಾರದಲ್ಲಿ ತೊಡಗಿದ ಆಕಾಂ ನಾಯಕರೆಲ್ಲರೂ ಇದೇ ಅಭಿಪ್ರಾಯವನ್ನು ತಳೆದು ಹೋಗಿದ್ದಾರೆ.

ಕೊನೆಯ ಗಳಿಗೆಯಲ್ಲಿ ರಾಜ್ಯ ಸಂಚಾರ ಮುಗಿಸಿ ಹೋದ ಶ್ರೀ ಸಿ. ಸುಬ್ರಹ್ಮಣ್ಯಂ ಕೂಡ ಆಳುವ ಕಾಂಗ್ರೆಸ್ಸಿನ ಭವ್ಯ ಕನಸು ನನಸಾಗಲಿದೆಯೆಂಬ ಆಶಾಭಾವನೆ ತಳೆದಿದ್ದಾರೆ.

ಸಂಕಾಂ ನಾಯಕರು ಶ್ರೀಗಳಾದ ಮುರಾರ್ಜಿ ದೇಸಾಯಿ, ಸಾದಿಕ್ ಅಲಿಗಳು ಹೊರಗಣಿಂದ ಬಂದು ತಮ್ಮದೇ ಸರಕಾರ ರಚನೆಯಾಗುತ್ತದೆಂದು ನಂಬಿಕೆ ತಳೆದು ಮರಳಿದರು.

ರಾಜ್ಯ ನಾಯಕರಾದ ಶ್ರೀಗಳಾದ ಪಾಟೀಲ—ಹೆಗ್ಗಡೆಯವರದ್ದೂ ಗೆದ್ದೇ ತೀರುತ್ತೇವೆಯೆಂಬ ಅಚಲ ವಿಶ್ವಾಸ.

ಪ್ರಧಾನಿ ಗಾಂಧಿಯವರು ರಾಜ್ಯದ ಸಂದರ್ಶನ ಮುಗಿಸಿ ಹೋದದ್ದೂ ಸ್ವರಾಜ್ಯತಂತ್ರಿ ಶ್ರೀ ಮೋಹನಲಾಲ ಸುಖಾಡಿಯಾ ರಾಜ್ಯಪಾಲರಾಗಿ ಬಂದದ್ದೂ ಕರ್ನಾಟಕದ ಯೋಗಾಯೋಗ.

ರಾಜ್ಯಪಾಲ ಧರ್ಮವೀರರು ಕೊನೆಯ ಗಳಿಗೆಯಲ್ಲಿ ಕೇಂದ್ರದಿಂದಲೂ ರಾಜ್ಯ ಎಂಪಿಗಳಿಂದಲೂ ಛೀಮಾರಿ ಹಾಕಿಸಿಕೊಂಡು ಹೋದರು. ಇದೂ ಒಂದು ರಾಜ್ಯಕೀಯ.

ಶ್ರೀ ಸುಖಾಡಿಯಾ ರಾಜ್ಯಪಾಲರಾಗಿ ಬಂದದ್ದೇ ತಡ, ಕೇಂದ್ರದ ರಾಜ್ಯಪರ ನಿಲುವು ತುಸು ಸಡಿಲಾಯ್ತು. ಕಾವೇರಿಕೊಳ್ಳದ ಯೋಜನೆಗಳಿಗೆ ಕೇಂದ್ರ ಅನುಮತಿಯಿಲ್ಲದೇನೇ ಆರ್ಥಿಕ ನೆರವು ನೀಡುವುದಾಗಿ ಘೋಷಿಸಿತು; ಕಾಳಿಯೋಜನೆಗೆ ಹಣಕಾಸಿನ ಸಹಾಯ ನೀಡುವ ಭರವಸೆ ದೊರೆಯಿತು....

ಇದೆಲ್ಲ ಚುನಾವಣಾ ರಾಜ್ಯಕೀಯವಲ್ಲವೆನ್ನುವುದು ಸಾಧ್ಯವೆ?

ಸಂಕಾಂ ದೂರುತ್ತಿರುವ ಜಲ ವಿವಾದದ ದೊಡ್ಡ ಅಂಶವೊಂದನ್ನು ಕೇಂದ್ರ ಸುಖಾಡಿಯಾ ಸರಳಗೊಳಿಸಿದರು. ಇದರಿಂದ ಜಲದ ಪ್ರಶ್ನೆ ಆಕಾಂಗೆ ಆಶಾದಾಯಕ ಉತ್ತರನೀಡಬಲ್ಲುದು.

ಇನ್ನು ಮಹಾಜನ ವರದಿಯ ಪ್ರಶ್ನೆ. ರಾಜ್ಯ ಆಕಾಂ ಅದನ್ನು ಇದ್ದಕ್ಕಿದ್ದಂತೆ ಜ್ಯಾರಿಗೊಳಿಸುವ ಭರವಸೆಯನ್ನು ಚುನಾವಣಾ ಪ್ರಣಾಳಿಕೆಗೆ ಸೇರಿಸಿದೆ. ಪ್ರಧಾನಿಯನ್ನು ಪ್ರಶ್ನಿಸಿದಾಗ ಇಕ್ಕಡೆಯವರಿಗೂ ಆದಷ್ಟು ಕಡಿಮೆ ಮನಸ್ತಾಪವುಂಟಾಗುವಂತೆ ಪ್ರಶ್ನೆಯನ್ನು ಬಗೆಹರಿಸುವ ಮಾತಾಡಿದರು.

ಇದು ಅವರ ಹಳೆಯ ಮಾತಿನ ಪುನರುಚ್ಚಾರ ಮಾತ್ರ.

ರಾಜ್ಯದ ಹೆಸರು ಕರ್ನಾಟಕವೆಂದಾಗುವ ಬಗ್ಗೆ ಶ್ರೀ ಅರಸರೀಗ ಮುಕ್ತ ಮನಸ್ಸಿನಿಂದ ಇದ್ದಾರೆಂದು ಹೇಳಲಾಗುತ್ತಿದೆ. ಇದು ಸಂತೋಷದ ಸುದ್ದಿ.

ಸಂ ಕಾಂ. ಗೆದ್ದು ಬಂದರೆ ಮುಂದಿನ ನಾಯಕರಾರು ಎಂಬ ಪ್ರಶ್ನೆಗೆ ಉತ್ತರ ಪ್ರಶ್ನಾರ್ಥಕವಾಗೇ ಉಳಿದಿದೆ. ರಾಜ್ಯದ ನಾಯಕದ್ವಯರಾದ ಪಾಟೀಲ — ಹೆಗ್ಗಡೆ ಜೋಡಿ ಚುನಾವಣಾರಂಗದಿಂದ ದೂರವುಳಿದಿದ್ದಾರೆ.

ಇದಕ್ಕೆ ಆ. ಕಾಂ.ನ ವ್ಯಾಖ್ಯೆ ಹೀರ ಸರಳ. ಗೆಲ್ಲುವ ಸಂದೇಹವಿದ್ದುದರಿಂದಲೇ ಒಬ್ಬರು ಮೊದಲೇ ಅಂಜಿದರು; ಮತ್ತೊಬ್ಬರು ಕೊನೆಯ ಗಳಿಗೆಯಲ್ಲಿ ನಾಮಪತ್ರ ಹಿಂತೆಗೆದುಕೊಂಡರು.

ಪಾಟೀಲ-ಹೆಗ್ಗಡೆಯವರ ಹೇಳಿಕೆ ಬೇರೆ— ಚುನಾವಣಾ ಪ್ರಚಾರ ಕಾರ್ಯದಲ್ಲಿ ಪೂರ್ಣ ಸಮಯ ವಿನಿಯೋಗಿಸಲೆಂದೇ ಈ ನಿರ್ಧಾರ. ತಮಗೆ ಅಧಿಕಾರದ ಆಸೆಯಿಲ್ಲ- ತಮ್ಮ ಪಕ್ಷ ಗೆದ್ದು ಸರಕಾರ ರಚಿಸುವಂತಾದರೆ, ಗೆದ್ದವರಲ್ಲೇ ಒಬ್ಬನನ್ನು ನಾಯಕನನ್ನಾಗಿ ಆರಿಸಲು ಕಷ್ಟವಾಗದು.

ಇದು ನ್ಯಾಯವೂ ಹೌದು.ಒಂದೊಮ್ಮೆ ಸಂ. ಕಾಂ. ಸರಕಾರ ರಚಿಸುವಂತಾದರೆ, ಈ ಲವ—ಕುಶರು ವಿಧಾನ ಸಭೆಗೆ ಪ್ರವೇಶಿಸಬಾರದು. 'ಭಾರತ ಸರಕಾರ' ರಚಿಸಿ ರಾಮನ ಬರವನ್ನು ಎದುರು ನೋಡುವಂತಾಗಲೂ ಬಾರದು.

ಜನತೆಯ ಸದಭಿಪ್ರಾಯವುಳಿಸಲು, ಗಳಿಸಲು ಇದು ಸಹಾಯಕವಾಗಬಹುದು.

ಆ ಕಾ ಗೆಲ್ಲುವ ಸಂಭವವೇ ಬಹಳವಿರುವುದರಿಂದ ಸರಕಾರದ ಬಗ್ಗೆ ತಲೆ ಕೆಡಿಸಿಕೊಳ್ಳ ಬೇಕಾದವರು ಅವರು.

ತಾನು ಚುನಾವಣಾ ರಂಗದಿಂದ ದೂರವಿರ ಬಯಸಿದ್ದು ಸೋಲುವ ಅಂಜಿಕೆಯಿಂದಲ್ಲ, ಚುನಾವಣಾ ಪ್ರಚಾರದಲ್ಲಿ ಪೂರ್ಣಾವಧಿಯನ್ನು ಬಳಸಲೆಂದು ದೇವರಾಜರ ಹೇಳಿಕೆ.

ತಾನು ಸಂಭಾವಿತ, ಇತರರು ಪಡಪೋಶಿ.

ಸರಕಾರ ರಚಿಸುವುದು ೨೧೬ರಲ್ಲಿ ೧೮೦ರಷ್ಟು ನಿಜವೆನ್ನುವ ಆ ಕಾಂ ತನ್ನ ಭಾವೀ ನಾಯಕನ ಬಗ್ಗೆ ಉನ್ನತ ಮಟ್ಟದಲ್ಲಿ ತಲೆಕೆಡಿಸಿದೆ.

ಈಗಾಗಲೇ ಹಲವರು ತಮ್ಮನ್ನು ತಾವೇ ನಾಯಕರನ್ನಾಗಿ ಆರಿಸಿಕೊಂಡಿದ್ದಾರೆ. ಸಚಿವರನ್ನೂ ನೇಮಿಸಿಕೊಂಡಿದ್ದಾರೆ. ಪ್ರಧಾನಿ ಗಾಂಧಿಯಿಂದ ಫರ್ಮಾನಾ ಬರುವುದೊಂದೇ ಬಾಕಿ- ಚುನಾವಣೆಯನ್ನು ಹಿಂದಿನಿಂದ ಗೆಲ್ಲಬಹುದು; ಫರ್ಮಾನಾ ಮಾತ್ರ ಈಗಲೇ ಬೇಕು.

ಈ ಸಂಬಂಧದಲ್ಲಿ ಪತ್ರಕರ್ತರು ಪ್ರಧಾನ ಮಂತ್ರಿಯನ್ನು ಪ್ರಶ್ನಿಸಿದಾಗ ಅವರು ದೇವರಾಜರ ಮುಖವನ್ನು ನೋಡಿ ಮುಸಿಮುಸಿ ನಕ್ಕರು.

ಆ ಕಾಂ ನ ಕೇಂದ್ರ ನಾಯಕರೊಬ್ಬರನ್ನು ಪ್ರಶ್ನಿಸಿದಾಗ, ಆ ಸಮಯದಲ್ಲಿ ಪಕ್ಷಕ್ಕಾಗಿ ಅಹರ್ನಿಶಿ ದುಡಿದವರನ್ನು ಕಡೆಗಣಿಸುವುದು ಸಾಧ್ಯವಿಲ್ಲವೆಂದು ಭರವಸೆ ನೀಡಿದರು.

ಅಂದರೆ, ಭಾವಿ ಆಕಾಂ ಸರಕಾರದಲ್ಲಿ ದೇವರಾಜ ಅರಸರು ಕಿರೀಟಹೀನ ಅರಸರು.

ಈ ಕನಸನ್ನವರು ಒಂದು ವರ್ಷ ಹಿಂದೆಯೇ ಕಂಡಿದ್ದರು. ಅದಕ್ಕೆಂದೇ ಸಿದ್ಧವೀರಪ್ಪನವರ ಕೈಗಳನ್ನವರು ಹಿಂದೆಳೆದರು.

ನೆಲ—ಜಲ ವಿವಾದದಲ್ಲಿ ಸಿಕ್ಕ ಹಾಕಿಕೊಂಡು ರಾಜ್ಯಕ್ಕೆ ಅನ್ಯಾಯ ಮಾಡಿದವರು ಶ್ರೀ ಎಸ್ಸೆನ್ ಮತ್ತು ಶ್ರೀ ಪಾಟೀಲರೆಂದು ದೂರುವ ಅರಸರು ತಾನೂ ಆ ವೇಳೆ ಮಂತ್ರಿಯಾಗಿದ್ದೆನೆಂದೂ ಅದರಲ್ಲಿ ಸಾಮೂಹಿಕ ಹೊಣೆಗಾರಿಕೆಯಿದೆಯೆಂದೂ ಮರೆತಿದ್ದಾರೆ.

ಅಂತಹ ಅರಸರು ಮುಖ್ಯಮಂತ್ರಿಯಾಗುವಾಗ, ಆರಿಸುವ ಮಂತ್ರಿಗಳು ಯಾರು ಯಾರು?

ಗೆಲ್ಲುವ ಕೋರ್ಟಿನಲ್ಲಿ ಅವರೊಬ್ಬರದ್ದೇ ಆಟ, ಸೋಲುವುದರಲ್ಲಿ ಉಳಿದವರದ್ದು ಆಗಬಹುದೆ?

ದೇವರಾಜ ಅರಸರು ರಾಜ್ಯಕ್ಕೆ ಸುಭದ್ರ ಸರಕಾರ ನೀಡಲು ಸಮರ್ಥರಾಗುವುದು ಖಂಡಿತ; ಏಕೆಂದರೆ,ಈಗಲೇ ಆಕಾಂ ಜನಪ್ರಿಯತೆಗೆ ಎರವಾದರೆ, ಮುಂದಿನೆರಡು ಚುನಾವಣೆಗಳ ವೇಳೆಗೆ ನಾಮಾವಶೇಷವಾಗದುಳಿಯದು.

ಆದರೆ, 'ಕೇಂದ್ರದೊಡನೆ ಸಂಪೂರ್ಣ ಸಹಕರಿಸುವ' ರಾಜ್ಯ ಸರಕಾರದಿಂದ ರಾಜ್ಯದ ಹಿತರಕ್ಷಣೆ ಯಾವ ಪ್ರಮಾಣದಲ್ಲಾದೀತು?

ರಾಜ್ಯಕ್ಕೆ ನೀಡುವ ವಿಶೇಷ ನೆರವನ್ನು ಕಡಿತ ಮಾಡುವುದಾಗಿ ಘೋಷಿಸಿದ್ದ ಕೇಂದ್ರ ಸರಕಾರ ನೀಡಿದ ವಚನವನ್ನು ಪಾಲಿಸುವುದಿಲ್ಲವೆಂಬುದು ವೇದ್ಯ.

ಹಾಗೆಯೇ ಕಾವೇರಿ ಕೊಳ್ಳದ, ಕಾಳಿನದಿಯ ಯೋಜನೆಗಳ ಸಂಬಂಧದಲ್ಲೂ ನೀಡಿದ ವಚನವನ್ನು ಹಿಂದೆಗೆದುಕೊಳ್ಳುವುದಿಲ್ಲವೆಂನೇನು ಗ್ಯಾರಂಟಿ?

ರಾಜ್ಯದ ಜನತೆಗೆ ಇಕ್ಕಡೆಯಿಂದಲೂ ತೊಂದರೆಯೇ. ಅತಿ ವಿಧೇಯತನದಿಂದ ರಾಜ್ಯದ ಪ್ರಗತಿಗೆ ನೆರವಾಗದು; ಅತಿ ಉದ್ಧಟತನದಿಂದ ಪ್ರಗತಿಯೇ ಸಾಧ್ಯವಾಗದು.

ಕರ್ನಾಟಕದ ಜನತೆ ತಮ್ಮ ಹಿತದೊಡನೆ ದೇಶದ ಹಿತವನ್ನೂ ತೂಗಿ ನೋಡಿ ತಮಗೆ ಬೇಕಾದ ಸರಕಾರವನ್ನೇ ರಚಿಸಿಕೊಳ್ಳಬೇಕು.

●●

ಮಂಗಳೂರಲ್ಲಿ ಡಾ| ನಾಗಪ್ಪ ಆಳ್ವ

ಮಂಗಳೂರಿನಲ್ಲಿ ಸಂಸ್ಥಾ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಡಾ| ನಾಗಪ್ಪ ಆಳ್ವರವರು, ರಾಜ್ಯದಲ್ಲಿ ಒಟ್ಟು 176 ಕ್ಷೇತ್ರಗಳಲ್ಲಿ ಸಂಸ್ಥಾ ಕಾಂಗ್ರೆಸ್ ಸ್ಪರ್ಧಿಸಿದ್ದು ಸುಭದ್ರ ಸರಕಾರವನ್ನು ಸ್ಥಾಪಿಸಲು ಪಣ ತೊಟ್ಟಿದೆ. ರಾಜ್ಯದಲ್ಲಿ ಸುಭದ್ರ ಸರಕಾರ ಸ್ಥಾಪಿತವಾಗಿ ಅದರ ಸರ್ವಾಂಗೀಣ ಪ್ರಗತಿಯನ್ನು ಬಯಸುವ ಜನರು ಸಂಸ್ಥಾ ಕಾಂಗ್ರೆಸಿಗೆ ಬೆಂಬಲ ನೀಡಬೇಕು ಎಂದು ಜನತೆಗೆ ಕರೆನೀಡಿದರು.

ಈ ಸಂದರ್ಭದಲ್ಲಿ ಮಂಗಳೂರು ಒಂದನೇ ಮತದಾರ ಕ್ಷೇತ್ರದ ಅಭ್ಯರ್ಥಿ ಶ್ರೀ ಎಸ್. ಕೆ. ಅಮೀನ್, ಎರಡನೇ ಕ್ಷೇತ್ರದ ಅಭ್ಯರ್ಥಿ ಶ್ರೀ ಎ. ಖಾದರ್‌ರವರು ಮಾತನಾಡಿ ಜನತೆಯ ಬೆಂಬಲ ಕೋರಿದರು. ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಬಿ. ಗಂಗಾಧರ್ ದಾಸ್ ಅವರೂ ಮಾತನಾಡಿ ಜನತೆ ಸಂಸ್ಥಾ ಕಾಂಗ್ರೆಸ್ ಗೆದ್ದು ಬರುವಂತೆ ಬೆಂಬಲಿಸ ಬೇಕಾಗಿ ಕೋರಿದರು.

ಪುತ್ತೂರು IIIrd Adle. ಮುನ್ಸಿಫ್ ಕೋರ್ಟಿನಲ್ಲಿ

R. R. C. 97/71.

T. ಸುಶೀಲಮ್ಮ —ಅರ್ಜಿದಾರ

ಅಪ್ಪು ಯಾನೆ ಜಲಜಾಕ್ಷಿ ಸಹಾ—ಎದ್ರಿರು

2ನೇ ಎದ್ರಿ: ಕಮಲಾ—ಕಾಂತಪ್ಪ ಸಪಲ್ಯರ ಹೆಂಡತಿ, ಕಾವಳಕಟ್ಟೆ.

ಸದ್ರಿ 2ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ:

69—70ನೇ ವರ್ಷದ ಗೇಣಿ ಬಾಕಿಗೆ ನಿಮ್ಮ ಮೇಲೆ ಕೂಡಾ ಅರ್ಜಿದಾರಳು ಮಾಡಿದ ಮೇಲಿನ ಗೇಣಿ ಬಾಕಿ ಅರ್ಜಿ ತಾ 15—3—72ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಸದ್ರಿ ದಿವಸ ಬೆಳಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao

Adv. for Petitioner.

Puttur, 3—3—72.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗಿವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1947 Phone: 3242 Res: 3272

READ & ADVERTISE IN NAVAYUGA Weekly

ಎಪ್ಪತ್ತೊಂದರ ಮಹಾನ್ ಪ್ರವಾಹ

ಲೇಖಕರು: ಶ್ರೀ ಪಿ. ಎನ್. ಲೂಥ್ರ
ಮರುವಸತಿ ಇಲಾಖೆಯ ವಿಶೇಷ ಕಾರ್ಯದರ್ಶಿಗಳು, ಕಲ್ಕತ್ತ

ಬಾಂಗ್ಲಾ ದೇಶದ್ದು ಕಣ್ಣೀರಿನ ಕಥೆ. ಪಾಕ್ ಸೈನಿಕರು ಅಲ್ಲಿ ರಾಕ್ಷಸೀ ಕೃತ್ಯದಿಂದ ನರಕವನ್ನೇ ನಿರ್ಮಿಸಿದರು. ಅವರ ದಬ್ಬಾಳಿಕೆಯಿಂದ ಮನೆ ಮಾರುಗಳನ್ನು ಕಳೆದುಕೊಂಡ ಲಕ್ಷಾನವಧಿ ಜನ ಭಾರತಕ್ಕೆ ವಲಸೆ ಬಂದರು. ನಿರಾಶ್ರಿತರ ವಲಸೆ ಅದೇ ಆಗ ಪ್ರಾರಂಭವಾದ ಕಾಲ. ನಿರಾಶ್ರಿತರ ಮೊದಲ ತಂಡ ಭಾರತದ ಗಡಿಯನ್ನು ತಲುಪಿದಾಗ ಒಬ್ಬ ತರುಣ ಸಬ್‌ಡಿವಿಜನಲ್ ಅಧಿಕಾರಿ ತನ್ನ ಜಿಲ್ಲೆಯ ಪ್ರಧಾನ ಕಚೇರಿಗೆ ಈ ರೀತಿ ಸುದ್ದಿ ಕಳುಹಿಸಿದರು.

"ಈಗ ಅವರು ನೂರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅವರ ಸಂಖ್ಯೆ ಲಕ್ಷಕ್ಕೂ ಏರಬಹುದು" ಈ ತರುಣ ಅಧಿಕಾರಿಯ ಊಹೆ ನಿಜವಾಯಿತು.

ಕಳೆದ ವರ್ಷದ ಮಾರ್ಚಿ ತಿಂಗಳ ಕೊನೆಗೆ ಅಲ್ಪ ಪ್ರಮಾಣದಲ್ಲಿ ಆರಂಭವಾದ ಈ ನಿರಾಶ್ರಿತರ ಪ್ರವಾಹ, ದಿನಗಳೆದಂತೆ ಮಹಾನದಿಯಾಗಿ, ಸಾಗರವಾಗಿ ವಿರಾಟರೂಪ ತಳೆಯಿತು. ನಿರಾಶ್ರಿತರ ಈ ಪ್ರವಾಹ ಗಡಿ ಜಿಲ್ಲೆಗಳನ್ನು ಮುಳುಗಿಸುವಷ್ಟು ಭೀಕರವಾಗಿತ್ತು.

ಇತಿಹಾಸದ ಯಾವುದೇ ಹಂತದಲ್ಲೇ ಆಗಲಿ ಒಂದು ರಾಷ್ಟ್ರ ಇಷ್ಟೊಂದು ಅಗಾಧ ಪ್ರಮಾಣದಲ್ಲಿ ನಿರಾಶ್ರಿತರ ಹೊರೆಯನ್ನು ಹೊತ್ತಿರಲಿಲ್ಲ. ಹಠಾತ್ತನೆ ಉದ್ಭವಿಸಿದ ಈ ಸಮಸ್ಯೆಯಿಂದ ಭಾರತ ಎದೆಗೆಡಲಿಲ್ಲ. ಸವಾಲನ್ನು ಎದುರಿಸಿತು. ದುರಾಕ್ರಮಣಕಾರಿಗಳ ಅಮಾನುಷಕೃತ್ಯಗಳಿಂದ ಬಳಲಿ ಬೆಂಡಾದ ನಿರಾಶ್ರಿತರನ್ನು ಸಹಾನುಭೂತಿಯಿಂದ ಸಂತೈಸಿತು. ಕೇಂದ್ರ ಸರ್ಕಾರದ ಕಾರ್ಮಿಕ ಹಾಗು ಮರುವಸತಿ ಶಾಖೆಯ ನಿರಾಶ್ರಿತ ಮರುವಸತಿ ವಿಭಾಗದವರು, ನಿರಾಶ್ರಿತರ ಮರುವಸತಿಗಾಗಿ ಯೋಜನೆಗಳನ್ನು ಸಿದ್ಧ ಪಡಿಸಲು ಹಾಗು ಅವರಿಗೆ ಅಗತ್ಯವಾದ ಅನ್ನಾಹಾರ, ವಸ್ತ್ರಗಳನ್ನು ಒದಗಿಸಲು ಕಲ್ಕತ್ತದಲ್ಲಿ ಒಂದು ಶಾಖಾ ಕಚೇರಿಯನ್ನು ತೆರೆದರು. ನಾನಾ ರಾಜ್ಯಗಳಲ್ಲಿ ಬಿಡಾರ ಹೂಡಿದ್ದ ನಿರಾಶ್ರಿತರ ಅಗತ್ಯಗಳ ಪೂರೈಕೆಗೆ ಬೇಕಾದ ಸಂಪನ್ಮೂಲಗಳನ್ನು ಸಾಧನ ಸಾಮಗ್ರಿಗಳನ್ನು ಸಂಗ್ರಹಿಸುವ ಹೊಣೆ ಇಲಾಖೆಯ ಪಾಲಿಗೆ ಬಂದಿತು. ಸುಮಾರು ೩೦,೦೦೦ ಜನ ಅಧಿಕಾರಿಗಳು ನಿರಾಶ್ರಿತರಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ನಿರತರಾದರು. ಹೀಗೆ ಕೈಕೊಂಡ ಕಾರ್ಯಕ್ರಮ ನಿರಾಶ್ರಿತರು ವಾಸವಾಗಿದ್ದ ಏಳು ರಾಜ್ಯಗಳವರೆಗೂ ವಿಸ್ತರಿಸಿತು. ಈ ಕಾರ್ಯಕ್ರಮದ ಅಗಾಧತೆ ಹಾಗು ಸಾರ್ವಜನಿಕ ಜೀವನದ ಮೇಲೆ ಅದು ಬೀರುವ ಪರಿಣಾಮ ಇವೆಲ್ಲವನ್ನು ಗಮನಿಸಿ ಸರ್ಕಾರದವರು ಪರಿಹಾರ ಕಾರ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಾಯವನ್ನೂ ಕೋರಿದರು. ನಿರಾಶ್ರಿತರಿಗೆ ಪರಿಹಾರವೊದಗಿಸುವ ಈ ಮಹಾನ್ ಕಾರ್ಯದಲ್ಲಿ ಸಹಕರಿಸಲು ನಲ್ವತ್ತಕ್ಕೂ ಹೆಚ್ಚು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದವು.

ರಾಜ್ಯಸರ್ಕಾರಗಳು, ನಿರಾಶ್ರಿತರಿಗಾಗಿ ೮೭೭ ಶಿಬಿರಗಳನ್ನು ತೆರೆದವು. ರಾಜ್ಯ ಸರ್ಕಾರಗಳ ಮೇಲೆ ಅಧಿಕ ಹೊರೆಬೀಳುವುದನ್ನು ತಪ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ೧೯ ನಿರಾಶ್ರಿತರ ತಾತ್ಕಾಲಿಕ ಕೇಂದ್ರಗಳನ್ನು ತೆರೆಯಿತು. ಈ ಶಿಬಿರಗಳಲ್ಲಿ ಸುಮಾರು ಆರುಲಕ್ಷ ಜನರಿದ್ದರು. ಇಂತಹ ಶಿಬಿರಗಳು, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ ರಾಜ್ಯಗಳಲ್ಲಿದ್ದವು. ಈ ಶಿಬಿರಗಳಲ್ಲಿದ್ದ ನಿರಾಶ್ರಿತರು ಬಹುತೇಕ ಪಶ್ಚಿಮ ಬಂಗಾಳದ ಶಿಬಿರಗಳಿಂದ ಬಂದವರು. ತ್ರಿಪುರಾದಲ್ಲಿದ್ದ ಬಹು ಸಂಖ್ಯಾತ ಬಂಗ್ಲಾ ನಿರಾಶ್ರಿತರು ಅಸ್ಸಾಂ ಕೇಂದ್ರ ನಿರಾಶ್ರಿತರ ಶಿಬಿರಕ್ಕೆ ಬಂದರು. ಇದಲ್ಲದೇ ಕೇಂದ್ರ ಸರ್ಕಾರದ ಪಶ್ಚಿಮ ಬಂಗಾಳ ರಾಜ್ಯದ ಉತ್ತರ ಹಾಗು ದಕ್ಷಿಣ ವಲಯಗಳಲ್ಲಿದ್ದ ನಿರಾಶ್ರಿತರ ಶಿಬಿರಗಳ ಪೈಕಿ ಬಹುತೇಕ ಶಿಬಿರಗಳ ಉಸ್ತುವಾರಿಯನ್ನೂ ಜವಾಬ್ದಾರಿಯನ್ನೂ ತಾನೇ ವಹಿಸಿಕೊಂಡಿತು.

ಬಂಗ್ಲಾದೇಶದಿಂದ ಭಾರತಕ್ಕೆ ಬಂದ ನಿರಾಶ್ರಿತರಲ್ಲಿ ಶೇ. ೭೫ರಷ್ಟು ಜನ ಪಶ್ಚಿಮ ಬಂಗಾಳದಲ್ಲಿ ನೆಲೆಸಿದ್ದರಿಂದ ಆ ರಾಜ್ಯದ ಮೇಲೆ ಹೆಚ್ಚಿನ ಹೊರೆ ಬೀಳದಂತೆಮಾಡಲು ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿತು.

ನಿರಾಶ್ರಿತರಿಗೆ ಅನ್ನ, ನೀರು, ವಸತಿ ಹಾಗು ವೈದ್ಯಕೀಯ ರಕ್ಷೆಯನ್ನು ಒದಗಿಸುವುದು ಮೂಲಭೂತ ಅಗತ್ಯವಾಗಿತ್ತು. ನಿರಾಶ್ರಿತರು ಜೀವದಿಂದಿರಲು ಇಷ್ಟು ಕೆಲಸವನ್ನು ಮಾಡುವುದು ಅನಿವಾರ್ಯವಾಗಿದ್ದಿತು, ಒಂದು ಕೋಟಿ ಜನರಿಗೆ ಆಶ್ರಯ ನೀಡುವುದು ಸಾಮಾನ್ಯವಾದ ಕೆಲಸವೇನೂ ಆಗಿರಲಿಲ್ಲ. ಮೇ ತಿಂಗಳ ಕೊನೆಯ ಹೊತ್ತಿಗೆ ನಿರಾಶ್ರಿತರ ಸಂಖ್ಯೆ ೪೫ಲಕ್ಷಕ್ಕೂ ಹೆಚ್ಚಿತ್ತು. ಭಾರತದಲ್ಲಿ ಆಶ್ರಯ ಪಡೆಯಲು ದಿನವೂ ಒಂದು ಲಕ್ಷಕ್ಕೂ ಹೆಚ್ಚು ಜನ ಬಂಗ್ಲಾದೇಶದಿಂದ ಬರುತ್ತಿದ್ದರು. ಪರಿಸ್ಥಿತಿಯ ಗಂಭೀರತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಪರಿಹಾರ ಕಾರ್ಯ ಬಿರುಸಿನಿಂದ ನಡೆಯಿತು.

ಬೇಸಿಗೆ ಬಿಸಿಲು ಚುರುಕಾಗಿತ್ತು. ಮಾನ್ಸೂನಿನ ಮೋಡಗಳ ಗರ್ಜನೆ ಬೇರೆ. ತಗ್ಗು ಪ್ರದೇಶಗಳಲ್ಲಿದ್ದ ಶಿಬಿರಗಳನ್ನು ಮಳೆಯ ನೀರು ಎಲ್ಲಿ ಮುಳುಗಿಸುವುದೋ ಎಂಬ ಭಯ ನಮ್ಮನ್ನು ಪೀಡಿಸುತ್ತಿತ್ತು. ಮಳೆಗಾಲವನ್ನು ಎದುರಿಸಲು ಲಭ್ಯವಾದ ಎಲ್ಲಾ ಸಾಮಾಗ್ರಿಗಳನ್ನು ಶಿಬಿರಗಳ ಮೇಲು ಹೊದಿಕೆಗೆ ಬಳಸಲಾಯಿತು. ವಿದೇಶಗಳಿಂದ ಶಿಬಿರಗಳ ಛಾವಣಿಗಾಗಿ ೪.೭ ಕೋಟಿ ರೂ. ಗಳಿಗಿಂತ ಹೆಚ್ಚುಬೆಲೆಯ ಸಾಮಾಗ್ರಿಗಳು ಬಂದವು.

ನಿರಾಶ್ರಿತರು ಭಾರತಕ್ಕೆ ಬಂದ ಹೊಸದರಲ್ಲಿ, ಸಾರ್ವಜನಿಕ ಕಟ್ಟಡಗಳು, ಶಾಲೆ ಕಾಲೇಜುಗಳು, ಸರ್ಕಾರಿ ಕಚೇರಿಗಳು, ವಾಚನಾಲಯಗಳು, ಖಾಸಗಿ ಕಟ್ಟಡಗಳ ಆವರಣಗಳು, ಉಪವನಗಳು ಇತ್ಯಾದಿ ಸ್ಥಳಗಳಲ್ಲಿ ಆಶ್ರಯ ಪಡೆದರು. ಸರ್ಕಾರದವರು ನಿರಾಶ್ರಿತರಿಗಾಗಿಯೇ ಪ್ರತ್ಯೇಕ ವಾಸಸ್ಥಾನಗಳನ್ನು ಕಲ್ಪಿಸಿದರು ೬.೮ ಲಕ್ಷ ಜನರಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಿರ್ಮಿಸಿದ ೮೯೬ ಶಿಬಿರಗಳಲ್ಲಿ ೨೮ಲಕ್ಷ ಜನ ನಿರಾಶ್ರಿತರು ಆಶ್ರಯ ಪಡೆದರು. ಇನ್ನುಳಿದವರು ತಮ್ಮ ಬಂಧುಗಳೊಂದಿಗೆ ಇದ್ದರು.

ಬಂಗ್ಲಾದೇಶದಿಂದ ಬಹಳ ದಿನಗಳವರೆಗೆ ನಡೆದು ಅನೇಕರು ಭಾರತವನ್ನು ತಲುಪಿದರು. ಅವರಲ್ಲಿ ಎಷ್ಟೋ ಜನ ಊಟ ಮಾಡಿರಲೇ ಇಲ್ಲ. ಭಾರತದ ಗಡಿಯನ್ನು ಮುಟ್ಟಿದ ಕೂಡಲೇ ಅವರಿಗೆ ಆಹಾರವನ್ನು ಒದಗಿಸುವುದು ಅಗತ್ಯವಾಯಿತು ಇದರಿಂದಾಗಿ ನಿರಾಶ್ರಿತರ ಹಸಿವು ಹಿಂಗಿತು. ಭಾರತ ಸರ್ಕಾರ ನಿರಾಶ್ರಿತರಿಗೆ ಆಹಾರವನ್ನು ಒದಗಿಸಲು ಏಕರೂಪವಾದ ಪಡಿತರವನ್ನು ಜಾರಿಗೆ ತಂದಿತು. ಅವರ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಿತು. ಎಳೆಯರ ಶೈಕ್ಷಣಿಕ ಅಗತ್ಯಗಳ ಕಡೆಗೆ ಗಮನವನ್ನು ನೀಡಿತು. ಈ ಎಲ್ಲಾ ಪರಿಹಾರ ಕಾರ್ಯಕ್ರಮಗಳಿಗಾಗಿ ಈ ವರೆಗೆ ೨೦೦ಕೋಟಿ ರೂ. ಗಳಷ್ಟು ವೆಚ್ಚಮಾಡಿತು. ಇದರಲ್ಲಿ ವಿದೇಶಗಳ ಸಹಾಯ ೮೭.೨೧ಕೋಟಿ ರೂ.ಗಳಷ್ಟು. ವಿದೇಶಗಳು ನಿರಾಶ್ರಿತರ ಸಹಾಯಾರ್ಥವಾಗಿ ೧೯೮.೩೦ ಕೋಟಿ ರೂ. ನೀಡುವುದಾಗಿ ವಾಗ್ದಾನ ಮಾಡಿದ್ದವು. ಮಾನವೀಯ ಕಾರ್ಯಗಳಲ್ಲಿ ದೇಶದ ಹಾಗೂ ವಿದೇಶದ ನಾಗರಿಕರು ಹಾಗು ಸ್ವಯಂ ಸೇವಾ ಸಂಸ್ಥೆಗಳು ಪ್ರಶಂಸನೀಯ ಕಾರ್ಯವನ್ನು ನಿರ್ವಹಿಸಿದವು. ಬಂಗ್ಲಾ ದೇಶದ ನಿರಾಶ್ರಿತರು ಕಷ್ಟ ಹಿಂದಾಯಿತೆಂದು ಭಾವಿಸುತ್ತಿದ್ದಾಗಲೇ ರೋಗ – ರುಜಿನಗಳು ಅವರನ್ನು ಪೀಡಿಸತೊಡಗಿದವು. ಕಾಲರಾ ಹಾಗು ಕರುಳು ರೋಗಗಳಿಂದ ಅನೇಕರು ಬಾಧೆ ಪಟ್ಟರು. ಸುಮಾರು ೫೦ಸಾವಿರ ಮಂದಿಗೆ ಕಾಲರಾ ರೋಗ ತಗುಲಿತು. ಆರು ಸಾವಿರ ಜನ ಈ ರೋಗಗಳಿಗೆ ಬಲಿಯಾದರು. ನಮ್ಮ ಡಾಕ್ಟರುಗಳು, ಅವರ ಸಹಾಯಕ ಸಿಬ್ಬಂದಿ ನಿರಾಶ್ರಿತರ ಅಮೂಲ್ಯವಾದ ಪ್ರಾಣವನ್ನು ಉಳಿಸಲು ಅಹೋರಾತ್ರಿ ಶ್ರಮಿಸಿದರು. ರೋಗಗಳನ್ನು ಹತೋಟಿಗೆ ತಂದರು. ೬೦ ಲಕ್ಷಮಂದಿಗೆ ಚುಚ್ಚು ಮದ್ದು ನೀಡಿದರು. ಈ ಮಹಾನ್ ಕಾರ್ಯದಲ್ಲಿ ೮೦೦ ಮಂದಿ ಡಾಕ್ಟರುಗಳು ೨೧೦೦ ಸಹಾಯಕ ಸಿಬ್ಬಂದಿ ಹಾಗು ೬೨ ಮಂದಿ ಮೆಡಿಕಲ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ದೇಶದ ನಾನಾ ಸ್ವಯಂ ಸೇವಾ ಸಂಸ್ಥೆಗಳು ಈ ಕಾರ್ಯದಲ್ಲಿ ನೆರವಾದವು. ಹೀಗೆ ನಿರಾಶ್ರಿತರ ಭಾರೀ ಹೊರೆಯನ್ನು ಭಾರತ ದಿಟ್ಟತನದಿಂದ ಎದುರಿಸಿತು. ಬಂಗ್ಲಾ ದೇಶದ ವಿಮೋಚನೆಯಿಂದಾಗಿ ನಿರಾಶ್ರಿತರು ಈಗ ತಮ್ಮ ತಾಯ್ನಾಡಿಗೆ ಮರಳುತ್ತಿದ್ದಾರೆ. ಭಾರತದಲ್ಲಿ ಪವಾಡವೊಂದು ನಡೆದುಹೋಯಿತು. ತಮ್ಮ ಆಪತ್ ಕಾಲದಲ್ಲಿ ನೆರವಿಗೆ ಬಂದು ತಮಗಾಗಿ ರಕ್ತ ಸುರಿಸಿದ ಭಾರತೀಯರನ್ನು ಬಂಗ್ಲಾದೇಶ್ ಪ್ರಜೆಗಳು ಮರೆಯಲು ಎಂತು ಸಾಧ್ಯ? ಈ ಮಧುರ ನೆನಪುಗಳು ಸದಾ ಉಳಿಯ ಬಲ್ಲವು.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಉಡುಪಿ ವಿಭಾಗದಲ್ಲಿ

ಕಾಂಗ್ರೆಸ್‌ನ ಸತ್ವ ಪರೀಕ್ಷೆ

ಉಡುಪಿ ಪಾರ್ಲಿಮೆಂಟರಿ ಕ್ಷೇತ್ರದಲ್ಲಿ ಏಳು ವಿಧಾನ ಸಭಾ ಕ್ಷೇತ್ರಗಳಿಗೆ ಇದೇ ತಾರೀಕು ೯ರಂದು ಚುನಾವಣೆ ನಡೆಯುವುದು. ಈ ಪ್ರದೇಶದಲ್ಲಿ ಆಳುವ ಕಾಂಗ್ರೆಸ್ಸು ಎಲ್ಲ ಸ್ಥಾನಗಳಿಗೂ ಸ್ಪರ್ಧಿಸಿದ ಏಕೈಕ ಪಕ್ಷ. ಅದು ಒಂದು ಕಡೆ ಜನಸಂಘದ ಮೂರು ಕಡೆ. ಸಂಸ್ಥಾ ಕಾಂಗ್ರೆಸ್ಸಿನ ಮತ್ತೊಂದು ಕಡೆ ಪಕ್ಷೇತರರ ಪ್ರಬಲ ಸ್ಪರ್ಧೆಯನ್ನು ಎದುರಿಸ ಬೇಕಾಗಿದೆ.

ಉಡುಪಿ ಕ್ಷೇತ್ರದ ಬಗ್ಗೆ ಕಳೆದ ವಾರವೇ ನಾವು ಆಳುವ ಕಾಂಗ್ರೆಸ್ಸು ಜಯಗಳಿಸುವ ಸಾಧ್ಯತೆಯನ್ನು ಎತ್ತಿ ಹೇಳಿದ್ದೇವೆ. ಈ ಅಭಿಪ್ರಾಯವನ್ನು ಬದಲಾಯಿಸ ಬೇಕಾದ ಅಗತ್ಯ ಇದುವರೆಗೆ ಬಂದಿಲ್ಲವೆಂದೇ ಹೇಳಬೇಕು. ಜನಸಂಘದ ಡಾ| ವಿ. ಎಸ್. ಆಚಾರ್ಯರು ವ್ಯಕ್ತಿಗತವಾಗಿ ಒಳ್ಳೆಯವರೇ ಆದರೂ ಅವರ ಪಕ್ಷವನ್ನು ಮೆಚ್ಚದವರೂ ಹಲವರಿದ್ದಾರೆಂಬುದನ್ನು ಅಲ್ಲಗಳೆಯಲಾಗದು. ಆಳುವ ಕಾಂಗ್ರೆಸ್ಸಿನ ಶ್ರೀಮತಿ ಮನೋರಮಾ ಮಧ್ವರಾಜರನ್ನು ಎದುರಿಸುವ ಮತ್ತೊಬ್ಬ ಅಭ್ಯರ್ಥಿಯೆಂದರೆ ಶ್ರೀ ಸುರೇಂದ್ರ ನಾಥ. ಹಿಂದುಳಿದ ಮತ್ತು ದೀನದಲಿತರನ್ನು ಒಲಿಸುವ ಕಾರ್ಯವನ್ನು ಯಾರು ಮಾಡಬಲ್ಲರೋ ಅವರು ಜಯಗಳಿಸುವುದು ಖಂಡಿತ. ಆದುದರಿಂದಲೇ ಈಗ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲರ ಪ್ರಯತ್ನ ಕೇಂದ್ರೀಕೃತವಾದಂತನಿಸುತ್ತದೆ. ಶ್ರೀಮತಿ ಮನೋರಮಾ ಗೆಲ್ಲುವುದಕ್ಕೆ ಪ್ರತಿಕೂಲ ವಾತಾವರಣ ತಿಳಿಯಾಗುತ್ತ ಬರುತ್ತಿದೆಯೆನಿಸುತ್ತದೆ. ಮತದಾರರ ಮನಸ್ಸು ಓದಬಲ್ಲವರು ಯಾರೂ ಇಲ್ಲ.

ಉಡುಪಿಯನ್ನು ಬಿಟ್ಟರೆ ಆಳುವ ಕಾಂಗ್ರೆಸ್ಸು ಬಲವಾದ ಪ್ರತಿಸ್ಪರ್ಧೆಯನ್ನು ಎದುರಿಸ ಬೇಕಾಗಿ ಬಂದದ್ದು ಕಾಪುವಿನಲ್ಲಿ. ಇಲ್ಲಿ ಐವರು ಚುನಾವಣಾ ಕಣದಲ್ಲಿಳಿದಿದ್ದಾರೆ. ಆಳುವ ಕಾಂಗ್ರೆಸ್ಸಿನ ಶ್ರೀ ಬಿ. ಭಾಸ್ಕರ ಶೆಟ್ಟರು. ಕಳೆದೆರಡು ಚುನಾವಣೆಗಳಲ್ಲಿಯೂ ಅದ್ಭುತ ವಿಜಯ ಗಳಿಸಿದವರು. ಬಲಿಷ್ಠ—ಶ್ರೀಮಂತ ಘಟಾನುಘಟಿಗಳ ವಿರುದ್ಧ ಪ್ರಜಾಸಮಾಜವಾದಿ ಪಕ್ಷದಿಂದ ನಿಂತು ಕಾಂಗ್ರೆಸ್ಸನ್ನು ನೆಲಸಮ ಮಾಡಿದವರು ಆದರೆ, ಇದೀಗ ಶ್ರೀಮತಿ ಗಾಂಧಿಯ ಸಮಾಜವಾದವೇ ಸಾಚಾವೆಂದು ನಂಬಿ ಆಳುವ ಕಾಂಗ್ರೆಸ್‌ಗೆ ಸೇರಿದ್ದಾರೆ. ಕಳೆದ ವರ್ಷ ಲೋಕ ಸಭಾ ಚುನಾವಣೆಯ ವೇಳೆಯೇ ಅವರು ಇತರ ಕೆಲವರು ಪ್ರಸವಾ ಶಾಸಕರೊಡನೆ ಪಕ್ಷಾಂತರಗೊಂಡವರು. ಈ ಪಕ್ಷಾಂತರದ ಕಾರಣವೇನು? - ವಿಧಾನ ಸಭೆಗೆ ಟಿಕೇಟು ರಿಜರ್ವ್ ಮಾಡುವುದೇ ಎಂದು ಗೊಣಗಾಟವೂ ಕೇಳಿ ಬರುತಿತ್ತು. ಪ್ರಸವಾದ ಮಾಜಿ ಶಾಸಕರಿಗೆ ಆಳುವ ಕಾಂಗ್ರೆಸ್ಸು ನೀಡಿದ ಟಿಕೇಟು ಸಂಖ್ಯೆಯಿಂದ ಅವರು ನೊಂದಿದ್ದಾರೆಂದು ನಂಬುವುದಾದರೆ, ಅವರ ಪಕ್ಷಾಂತರದ ಹೂರಣ ಹೊರಗೆ ಬಿದ್ದಂತೆಯೇ. ಶ್ರೀ ಭಾಸ್ಕರ ಶೆಟ್ಟರು ಜನತೆಯಲ್ಲಿ ಜನವಾಗಿ ಸಮಾವೇಶಗೊಂಡವರು ನಿಜ. ಅವರ ಪಕ್ಷಾಂತರವನ್ನು ಒಪ್ಪದವರೂ ಹಲವರಿದ್ದಾರೆಂಬುದೂ ಅಷ್ಟೇ ನಿಜ. ಹಿಂದಿನೆರಡು ಚುನಾವಣೆಗಳಲ್ಲಿ ಪವಾಡ ನಿರ್ಮಿಸಿದ ಈ ಕ್ಷೇತ್ರದ ಜನಾಭಿಪ್ರಾಯ ಹೇಗೆಂದು ಹೇಳ ಬರುವುದಿಲ್ಲ. ಈ ಕ್ಷೇತ್ರದಲ್ಲಿ ಹಿಂದಿನ ಮೂರು ಬಾರಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಹೊರಗಿನಿಂದ ಆಮದು ಮಾಡಲಾಗಿತ್ತು. ಆದುದರಿಂದ ಅವರು ಅದೆಷ್ಟು ಪ್ರಭಾವಶಾಲಿಗಳಿದ್ದರೂ ಜನತೆ ತಿರಸ್ಕರಿತೆನ್ನುವುದಾದರೆ, ಈ ಸಲ ಶ್ರೀ ಮುದ್ದು ಸುವರ್ಣರು ಅದೇ ಕ್ಷೇತ್ರದವರಾಗಿ ಪಕ್ಷೇತರರಾಗಿ ಪ್ರಬಲ ಸ್ಪರ್ಧೆ ನೀಡಿದ್ದಾರೆ. ಶ್ರೀ ಸುವರ್ಣರು ಆಳುವ ಕಾಂಗ್ರೆಸ್ಸಿನಲ್ಲಿ ಟಿಕೇಟು ನಿರಾಕರಿಸಲ್ಪಟ್ಟವರೆಂಬ ಒಂದು ಆರೋಪ ಬಿಟ್ಟರೆ ಉಳಿದೆಲ್ಲ ವಿಷಯಗಳಲ್ಲಿ ಯೋಗ್ಯರೇ. ಶಾಸನ ಸಭಾ ಸದಸ್ಯತನವು ಗುತ್ತೇದಾರಿಕೆಯಾಗಬಾರದೆಂಬುದು ಇವರ ಅಭಿಪ್ರಾಯ. ಆದುದರಿಂದಲೇ ಶ್ರೀಗಳಾದ ಶೆಟ್ಟಿ—ಸುವರ್ಣರ ಹೋರಾಟ ಕುತೂಹಲಪೂರ್ಣವಾದದ್ದು. ಸಮಾಜವಾದಿ ಶ್ರೀ ದಯಾಕರ ಮತ್ತು ಇನ್ನಿಬ್ಬರು ಪಕ್ಷೇತರರು ಶ್ರೀ ಸಿ. ವಿಟ್ಠಲ ಶೆಟ್ಟಿ ಮತ್ತು ಸಂಜೀವ ನಾಥ ಐಕಳರ ಸ್ಪರ್ಧೆಯನ್ನು ಯಾರೂ ಗಮನಿಸುವುದಿಲ್ಲ.

ಕಳೆದ ಬಾರಿ ರಾಜ್ಯದ ಮಂತ್ರಿ ಡಾ| ನಾಗಪ್ಪ ಆಳ್ವರ ವಿರುದ್ಧ ಸ್ಪರ್ಧಿಸಿಗೆದ್ದ ಪ್ರಸವಾದಶ್ರೀ ಸಿ. ವಿ. ಐತಾಳರುಈಸಲ ವಿಶ್ರಾಂತರಾಗಿದ್ದಾರೆ. ಅವರ ಬದಲು ಶ್ರೀ ಬಿ. ಸುಬ್ಬಯ್ಯ ಶೆಟ್ಟರನ್ನು ಆಳುವ ಕಾಂಗ್ರೆಸ್ಸು ನಿಲ್ಲಿಸಿದೆ. ಜನಸಂಘದ ಶ್ರೀ ರಘುನಾಥ ಕೋಟ್ಯಂಕರ್, ಸ್ವತಂತ್ರದ ಶ್ರೀ ರತ್ನನ್ ಕುಮಾರ್ ಕಟ್ಟಿಮೂರ್ ಮತ್ತು ಪಕ್ಷೇತರ ಅಭ್ಯರ್ಥಿ ಶ್ರೀ ಕೆ. ವೆಂಕಟರಾಯರು ರಂಗದಲ್ಲಿರುವರಾದರೂ ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ಪ್ರಭಾಕರ ರೈಯವರೇ ಇನ್ನೊಂದು ಕಾಂಗ್ರೆಸ್ಸಿನ ಎದುರಾಳಿ. ಶ್ರೀ ಕಟ್ಟಿಮೂರ್ ಮಾಜಿ ಶಾಸಕರು ಹೌದಾದರೂ ಅವರ ಪ್ರಭಾವ ಈ ಕ್ಷೇತ್ರದಲ್ಲಿರುವಂತೆ ಕಂಡು ಬರುವುದಿಲ್ಲ. ಶ್ರೀ ರೈಯವರು ಮಂಗಳೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದು ಜನಸಂಪರ್ಕವನ್ನೂ ಜನೋಪಯೋಗಿ ಕಾರ್ಯಕರ್ತರೆಂಬ ಹೆಸರನ್ನೂ ಪಡೆದವರು. ನಡುಹರೆಯದ ಉತ್ಸಾಹಶಾಲಿ ವ್ಯಕ್ತಿತ್ವವುಳ್ಳವರು. ಶ್ರೀ ಶೆಟ್ಟರೂ ಜನಪ್ರಿಯರು; ತಮ್ಮ ಪಕ್ಷದ ಮೊದಲ ಸ್ವಯಂ ಸೇವಕರು. ಈ ಇರ್ವರಲ್ಲಿ ಜನರು ಯಾರನ್ನು ಸ್ವೀಕರಿಸುತ್ತಾರೆಂದು ಹೇಳ ಬರುವುದಿಲ್ಲ. ಮಂತ್ರಿಗಳನ್ನೇ ತಿರಸ್ಕರಿಸಿದವರು ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರನ್ನು ತಿರಸ್ಕರಿಸುವುದು ಅಸಂಭವವಲ್ಲ. ಆದರೆ, ಐದು ವರ್ಷಗಳ ಹಿಂದೆ ಈ ಕ್ಷೇತ್ರ ಎದುರಿಸುತಿದ್ದ ಸಮಸ್ಯೆಗಳು ಈಗ ಇಲ್ಲವೆಂಬುದನ್ನು ನಂಬುವುದಾದರೆ, ಶ್ರೀ ರೈಯವರ ಆಯ್ಕೆಗೊಂದು ಅವಕಾಶವಿದೆ.

ಇದೇ ರೀತಿಯ ಇನ್ನೊಂದು ಕ್ಷೇತ್ರ ಕುಂದಾಪುರ. ಕಳೆದ ಚುನಾವಣೆಯ ವೇಳೆ ಪ್ರಸವಾ ಪಕ್ಷದಿಂದ ಗೆದ್ದು ಮುಂದೆ ಆಳುವ ಕಾಂಗ್ರೆಸ್ ಸೇರಿದ ಶ್ರೀಮತಿ ವಿನ್ನಿ ಫ್ರೆಡ್ ಈ ಬಾರಿ ಮರು ಚುನಾವಣೆ ಬಯಸಿದ್ದಾರೆ. ಪಕ್ಷಾಂತರದ ಒಂದು ದೋಷವನ್ನುಳಿದರೆ, ಈಕೆ ಸಮರ್ಥ ಶಾಸಿಕೆಯೆಂದು ಹೆಸರುಗಳಿಸಿದ್ದಾರೆ. ಮಹಿಳೆಯೆಂಬ ವೈಶಿಷ್ಟ್ಯ ಬೇರೆಯಿದೆ. ತಾಲೂಕು ಅಭಿವೃದ್ಧಿ ಮಂಡಳಿಯಲ್ಲಿದ್ದು ಜನಸೇವೆಯಲ್ಲಿ ನಿರತರಾದ ಇವರು ಸಂಸ್ಥಾ ಕಾಂಗ್ರೆಸ್ಸಿನ ಕೆ ಸಂಜೀವ ಶೆಟ್ಟರನ್ನು ಎದುರಿಸಬೇಕಾಗಿದೆ. ಇಲ್ಲಿ ಮಾರ್ಕ್ಸಿಸ್ಟ್ ಪಕ್ಷವೂ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿರುವುದರಿಂದ ಕಾರ್ಮಿಕ ಮತ್ತು ರೈತ ವರ್ಗದ ಮತಗಳು ಆಳುವ ಕಾಂಗ್ರೆಸಿಗೇ ಏಕ ಗಂಟಿನಲ್ಲಿ ದೊರೆಯುವ ನಿರೀಕ್ಷೆಯಿಲ್ಲ. ಇದು ಶ್ರೀಮತಿ ಫೆರ್ನಾಂಡಿಸರಿಗಿರುವ ದೊಡ್ಡ ಪೆಟ್ಟು. ಇಂದಿರಾಗಾಳಿಯ ವಾಸನೆ ಹಳ್ಳಿ ಹಳ್ಳಿಗಳಲ್ಲಿ ಹರಡುವಪ್ರಯತ್ನ ನಡೆಯುತ್ತಿದೆಯಾದರೂ ಅದನ್ನು ಉಸಿರಾಡಲು ಹಳ್ಳಿಗರು ಸಿದ್ಧರಾಗುವ ಸಂಭವಗಳು ಕಡಿಮೆ. ಸಂಸ್ಥಾಕಾಂಗ್ರೆಸ್ಸಿನ ಶ್ರೀ ಸಂಜೀವ ಶೆಟ್ಟರು ಯುವಕರು, ಸಮರ್ಥರು. ಪಕ್ಷಾಂತರದ ಬಗ್ಗೆ ಶ್ರೀಮತಿ ಫೆರ್ನಾಂಡಿಸರನ್ನು ಮೆಚ್ಚದವರೂ ಶ್ರೀ ಶೆಟ್ಟರನ್ನು ಬೆಂಬಲಿಸುವವರೂ ಇದ್ದಾರೆ. ಆದುದರಿಂದ ಸಂಸ್ಥಾ ಕಾಂಗ್ರೆಸ್ಸು ಗೆಲ್ಲಬಹುದಾದ ಒಂದು ಕ್ಷೇತ್ರ ಕುಂದಾಪುರ.

ಜಿಲ್ಲೆಯ ಉತ್ತರದ ಬೈಂದೂರು ಕ್ಷೇತ್ರದಲ್ಲಿ ಪ್ರಾಯಃ ೧೯೫೭ರಿಂದಲೂ ಚುನಾವಣೆಯ ಕಾವು ಕಡಿಮೆ. ಶ್ರೀ ಯಡ್ತರೆ ಮಂಜಯ್ಯ ಶೆಟ್ಟರು (ಕಾಂಗ್ರೆಸ್) ಮೂರು ಬಾರಿಯೂ ಶಾಸಕರಾಗಿ ನಾಲ್ಕನೆಯ ಬಾರಿ ಚುನಾವಣೆಯಿಂದ ದೂರವುಳಿದರು. ಕಳೆದ ಬಾರಿ ಶ್ರೀ ಹಲ್ಸನಾಡು ಸುಬ್ಬರಾಯರು ಪ್ರಸವಾದಿಂದ ಗೆದ್ದು ಬಂದರು; ಜಿಲ್ಲೆಯ ಉಳಿದ ಪ್ರಸವಾ ಶಾಸಕರಂತೆ ಪಕ್ಷಾಂತರ ಗೆಯ್ದರು; ಈಗ ನಿವೃತ್ತರಾಗಿದ್ದಾರೆ ಶ್ರೀ ಎ. ಗೋಪಾಲಕೃಷ್ಣ ಕೊಡ್ಗಿಯವರು ಆಳುವ ಕಾಂಗ್ರೆಸ್‌ನ ಹುರಿಯಾಳು. ಸಾಮಾಜಿಕ ರಂಗದಲ್ಲಿ ಬಹಳ ದೀರ್ಘ ಕಾಲದ ಅನುಭವವಿರುವ ಶ್ರೀ ಕೊಡ್ಗಿಯವರನ್ನು ಜನಸಂಘದ ಶ್ರೀ ಎಸ್. ವಿಟ್ಠಲ ಪೈಯವರೂ ಪಕ್ಷೇತರ ಶ್ರೀ ಡಿ. ಗಣಪಯ್ಯನವರೂ ಎದುರಿಸುತ್ತಾರೆ. ಶ್ರೀ ಗಣಪಯ್ಯನವರು ತಾಲೂಕು ಬೋರ್ಡಿನಲ್ಲಿನ ತನ್ನ ನೌಕರಿಗೆ ರಾಜಿನಾಮೆಯಿತ್ತು ಸ್ಪರ್ಧೆಗಿಳಿದಿದ್ದಾರೆ. ಮತದಾರರ ಒಂದು ಅಂಶದ ಬೆಂಬಲವೂ ಅವರಿಗಿದೆಯೆನ್ನ ಬಹುದು. ಅದೇನಿದ್ದರೂ ಶ್ರೀ ಕೊಡ್ಗಿಯವರ ಮುಂದೆ ಉಳಿದವರದ್ದೇನೂ ನಡೆಯಲಾರದು.

ಬ್ರಹ್ಮಾವರ ಮತದಾರ ಕ್ಷೇತ್ರವು ಮೊದಲ ಚುನಾವಣೆಯ ವೇಳೆಗಾಗಲೇ ಕ್ರಾಂತಿಯ ಕಹಳೆಯನ್ನೂದಿದ ಕ್ಷೇತ್ರ. ಅಲ್ಲಿ ಕಾಂಗ್ರೆಸ್ಸು ಗೆದ್ದದ್ದೇ ಇಲ್ಲವೆನ್ನ ಬಹುದು. ಆದರೆ ಈ ಬಾರಿ ಅದು ತಪ್ಪಾಗುತ್ತದೆ. ಇಲ್ಲಿನ ಕಣದಲ್ಲಿ ಲೆಕ್ಕಕ್ಕೆ ನಾಲ್ವರು ಅಭ್ಯರ್ಥಿಗಳು ಇದ್ದಾರೆ. ಪಕ್ಷೇತರರಾದ ಶ್ರೀ ಸೆರೋಡಿ ವಿಠ್ಠಲ ಶೆಟ್ಟರ ಪಂಚ ಕ್ಷೇತ್ರಗಳಲ್ಲಿ ಇದೂ ಒಂದು. ಜನಸಂಘದ ಶ್ರೀ ಮಹಾಬಲೇಶ್ವರ ಅಡಿಗರು ಕಳೆದ ಬಾರಿಯೂ ಸ್ಪರ್ಧೆಗೆ ಇಳಿದವರು. ಗಣನೀಯ ಮತಗಳನ್ನು ಪಡೆದವರು. ಈ ಸಲ ಇನ್ನೂ ನಾಲ್ಕಾರು ನೂರಾದರೂ ಹೆಚ್ಚು ಮತಗಳಿಸ ಬಲ್ಲವರು ಆದರೆ, ಉಳಿದಿಬ್ಬರ ಸಾಲಿಗೆ ನಿಲ್ಲಲಾರದವರು.ಆದುದರಿಂದ ಎರಡು ತುಕುಡಿ ಕಾಂಗ್ರೆಸ್‌ಗಳ ಹೋರಾಟದ ಕಣವಿದು ಎನ್ನಬಹುದು. ಈ ಇಬ್ಬರೂ ಪ್ರತಿಷ್ಠಿತ ಬಂಟಮನೆತನಕ್ಕೆ ಸೇರಿದವರು. ಆಳುವ ಕಾಂಗ್ರೆಸ್ಸಿನ ಶ್ರೀ ಜಯ ಪ್ರಕಾಶ ಶೆಟ್ಟಿ ಕೊಳ್ಕೆ ಬೈಲ್, ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ಎಂ. ಎಂ. ಹೆಗ್ಡೆಯವರಿಗಿಂತ ನೋಡುವುದಕ್ಕೆ ಕಿರಿಯರು. ಇಬ್ಬರೂ ವಕೀಲರು, ಜನಪ್ರಿಯರು. ಶ್ರೀ ಹೆಗ್ಡೆಯವರು ಬಯಲಾಟವಾಡಿಯೂ ಚುನಾವಣೆಗೆ ನಿಂತೂ ಜನರಿಗೆ ಹೆಚ್ಚು ಗೊತ್ತು. ಆದುದರಿಂದಲೇ ಇದು ಪರಾಮಣ—ವೈರಾವಣ ಕಾಳಗದ ರಂಗಸ್ಥಳವೆನಿಸಿದೆ. ಇವರಿಬ್ಬರಲ್ಲಿ ಯಾರು ಗೆದ್ದರೂ ಕಾಂಗ್ರೆಸ್ಸನ್ನೇ ಬೆಂಬಲಿಸಿದಂತಾಗುವುದೆಂಬುದರಿಂದ ಇಲ್ಲಿನ ಪರಿಣಾಮ ಸ್ವಾರಸ್ಯಕರವಾದದ್ದು. ಯಾವುದು ನಿಜವಾದ ಕಾಂಗ್ರೆಸ್ಸು ಎಂಬುದನ್ನು ಬ್ರಹ್ಮಾವರ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
151 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಕ್ಷೇತ್ರದ ಮತದಾರರು ತಿರಸ್ಕರಿಸಿ ತೋರಿಸುತ್ತಾರೆಯೆ? ಬ್ರಹ್ಮಾವರದ ಹವಾಗುಣದಲ್ಲಿ ಕಾಂಗ್ರೆಸ್ ಬೆಳೆ ಪರಿಪುಷ್ಟವಾಗುವುದಿಲ್ಲವೆಂಬುದು ಸಾಮಾನ್ಯಾಭಿಪ್ರಾಯ.

ಕೊನೆಯದು ಕಾರ್ಕಳ. ಇಲ್ಲಿಂದ ಮಾಜಿ ಶಾಸಕ ಶ್ರೀ ಬೋಳ ರಘುರಾಮ ಶೆಟ್ಟರು ಮತ್ತೆ ಚುನಾವಣೆಗಿಳಿದಿದ್ದಾರೆ. ಬರಿಯ ಸಾಧುಸ್ವಭಾವದ ಇವರ ಬದಲಿಗೆ ಜನಸಂಘವು ಮತ್ತೊಬ್ಬ ಪ್ರಭಾವಿ ವ್ಯಕ್ತಿಯನ್ನು ನಿಲ್ಲಿಸುತಿದ್ದರೆ ಯುಕ್ತವಿತ್ತು ಎಂದು ಹಲವರ ಪಿಸುಮಾತು. ಇಲ್ಲಿ ಆಳುವ ಕಾಂಗ್ರೆಸ್ಸಿನ ಶ್ರೀ ಎಂ.ವೀರಪ್ಪ ಮೊಯಿಲಿಯವರು ಸಂಸ್ಥಾಕಾಂಗ್ರೆಸ್ಸಿನ ಶ್ರೀ ಸುಂದರ ಹೆಗ್ಡೆಯವರನ್ನೂ ಎದುರಿಸಬೇಕಾಗಿದೆ. ಶ್ರೀ ಪೆರೋಡಿ ವಿಟ್ಠಲ ಶೆಟ್ಟಿ ಮತ್ತು ಶ್ರೀ ವೈ. ತನಿಯಪ್ಪನವರು ಪಕ್ಷೇತರರಾಗಿಯೂ ಸ್ಪರ್ಧೆಗಿಳಿದಿದ್ದಾರೆ. ಶ್ರೀ ಹೆಗ್ಡೆಯವರಿಗಿಂತ ಶ್ರೀ ಶೆಟ್ಟರೂ ಶ್ರೀ ಶೆಟ್ಟರಿಗಿಂತ ಶ್ರೀ ಮೊಯಿಲಿಯವರೂ ಗೆಲ್ಲುವ ಲಕ್ಷಣಗಳು ಹೆಚ್ಚು. ಅವರು ಗೆಲ್ಲದೆ ಹೋದರೆ ಏನೋ ಪವಾಡ ನಡೆದಿದೆಯೆಂದೇ ಹೇಳಬೇಕು.

ಉಡುಪಿ ವಿಭಾಗದ ಏಳುಸ್ಥಾನಗಳಿಗೆ ಸ್ಪರ್ಧಿಸಿದ ಒಟ್ಟು ಅಭ್ಯರ್ಥಿಗಳು ೩೧. ಇವರಲ್ಲಿ

ಆಳುವ ಕಾಂಗ್ರೆಸ್ಸು	೭
ಸಂಸ್ಥಾ ಕಾಂಗ್ರೆಸ್	೪
ಜನಸಂಘ	೫
ಸಮಾಜವಾದಿ	೨
ಸ್ವತಂತ್ರ	೧
ಸಿಪಿಎಂ	೧
ಪಕ್ಷೇತರರು	೧೧

ಈ ಏಳು ಸ್ಥಾನದಲ್ಲಿ ಆಳುವ ಕಾಂಗ್ರೆಸ್ ಮೂರು ಸ್ಥಾನಗಳನ್ನು ನಿರಾಯಾಸವಾಗಿ ಪಡೆಯ ಬಲ್ಲುದು. ತುಸು ಪರಿಶ್ರಮದಿಂದ ಮತ್ತೂ ಎರಡು ಸ್ಥಾನಗಳನ್ನದು ಸಂಪಾದಿಸಬಹುದು. ಜನಸಂಘಕ್ಕೆ ಗೆಲ್ಲ ಬಹುದೆಂಬ ಆಸೆಯಿರುವುದೂ ಇದೇ ಪ್ರದೇಶದಲ್ಲಿ. ಸಂಸ್ಥಾಕಾಂಗ್ರೆಸ್ಸು ಮೂರಾದರೂ ಸ್ಥಾನಗಳಿಸಬಲ್ಲೆನೆಂಬ ವಿಶ್ವಾಸವಿಟ್ಟಿರುವುದೂ ಇಲ್ಲೇ. ಆದರೆ, ಮತದಾರರ ಮಹದಾಶಯವನ್ನು ಒಳಹೊಕ್ಕು ನೋಡುವುದು ಸಾಧ್ಯವಿಲ್ಲ. ೧೯೬೭ರಲ್ಲಿ ಕಾಂಗ್ರೆಸ್ಸನ್ನು ಪೂರ್ತಿ ಮುಳುಗಿಸಿದ ಈ ಪ್ರದೇಶ ೧೯೭೧ರಲ್ಲಿ ಆಳುವ ಕಾಂಗ್ರೆಸ್ಸನ್ನು ಎತ್ತಿ ಹಿಡಿಯಿತು. ೧೯೭೨ರ ಚುನಾವಣೆಗಳ ಭವಿಷ್ಯವನ್ನು ಇದು ಹೇಗೆ ಬರೆಯುತ್ತದೆ, ವಾರವೊಂದರಲ್ಲಿ ಗೊತ್ತಾಗುತ್ತದೆ.

೧೯೬೭ರ ಚುನಾವಣೆಯ ವೇಳೆ ಉಡುಪಿಯೊಂದನ್ನು ಬಿಟ್ಟರೆ ಉಳಿದೆಡೆಯ ಮತದಾರರು ಕಾಂಗ್ರೆಸನು ತಿರಸ್ಕರಿಸಿದ್ದಾರೆ. ಸುರತ್ಕಲ್ಲು, ಕಾಪು, ಕುಂದಾಪುರ, ಬೈಂದೂರುಗಳಲ್ಲಿ ಪ್ರಸಪಾಪನ್ನು ಮೆಚ್ಚಿದ್ದಾರೆ. ಕಾರ್ಕಳದಲ್ಲಿ ಜನಸಂಘ ಗೆದ್ದಿದ್ದರೆ ಬ್ರಹ್ಮಾವರದಲ್ಲಿ ಸ್ವತಂತ್ರರು ಆರಿಸಿ ಬಂದಿದ್ದಾರೆ. ಪ್ರಸಪಾದಿಂದ ಆರಿಸಿ ಬಂದ ನಾಲ್ವರೂ ಈಗ ಆಳುವ ಕಾಂಗ್ರೆಸ್ ಸೇರಿದ್ದಾರೆ; ಇಬ್ಬರು ಮರುಚುನಾವಣೆಗೆ ಇಳಿದಿದ್ದಾರೆ.

ಉಡುಪಿ ಪ್ರದೇಶವು ಪಕ್ಷಾಂತರದ ಬಗ್ಗೆ ಮತ್ತು ನಿಜ ಕಾಂಗ್ರೆಸ್ಸಿನ ಬಗ್ಗೆ ತೀರ್ಪು ನೀಡುವುದೆಂದರೆ ಅತಿಶಯವಾಗದು.

● ●

ಚಾರುಚಯನ—

ಅವರು ಶಾಂತಿಯ ತುರುಬು ಹಿಡಿದೆಳೆದರು

ನಿಕ್ಸನ್—ಚೌ ಭೆಟ್ಟಿಯೊದರು, ಭೆಟ್ಟಿಯಾಗುವ ಸ್ವಾತಂತ್ರ್ಯ ಅವರಿಗಿದೆ. ಹಲವು ವಿಷಯಗಳ ಬಗ್ಗೆ ಮಾತುಕತೆ ನಡೆಸಿದರು; ಆ ಸ್ವಾತಂತ್ರ್ಯವೂ ಅವರಿಗಿದೆ. ಮನೆಗೆ ಬಂದ ಅಮೆರಿಕನ್ ರಾಷ್ಟ್ರಪತಿಯನ್ನು ಚೀನೀ ಪ್ರಧಾನಿ ತಮ್ಮ ಕಾಲಿಗೆ ಶರಣುಬರುವಂತೆ ಮಾಡಿದರು. ಇದಕ್ಕೂ ಯಾರ ಆತಂಕವೂ ಇಲ್ಲ. ಬಹುದಿನಗಳಿಂದಲೂ ಅಮೆರಿಕೆ ಹಾಡುತ್ತ ಬಂದ ಎರಡು ಚೀನಾದ ಪಲ್ಲವಿಗೆ ಇನ್ನಾದರೂ ಕೊನೆಬಂದೀತು. ಅದು ಅವರವರ ವ್ಯಕ್ತಿಗತ ವಿಚಾರ.

ಆದರೆ, ಹಿರಿಯ ದೇಶಗಳವರು ತಂತಮ್ಮ ಬಗೆಗೇ ಮಾತಾಡಿಕೊಳ್ಳದೆ. ಮೂರನೆಯವರ ಬಗ್ಗೇ ಹೆಚ್ಚು ಸಮಯ ಖರ್ಚು ಮಾಡಿದರೆ ಹೇಗೆ?

'ವಿಶ್ವಶಾಂತಿ'ಯ ಮಂತ್ರ ಪಠಿಸುತ್ತ ಶಾಂತಿಯ ತುರುಬು ಹಿಡಿದು ಎಳೆಯುವ ಹವ್ಯಾಸಕ್ಕೆ ಅಂಟಿಕೊಂಡರೆ ಹೇಗೆ!

'ಕಾಶ್ಮೀರ'ದ ಪ್ರಶ್ನೆ ಎಂದೋ ಮುಕ್ತಾಯವಾಗಿದೆ, ಅದು ವಾಸ್ತವಿಕ ಸಂಗತಿ. ೧೯೫೨ರಿಂದಲೂ ಪ್ರತಿ ಐದುವರ್ಷಗಳಿಗೊಮ್ಮೆ ಅಲ್ಲಿ ಚುನಾವಣೆ ನಡೆಯುತ್ತಿದ್ದೆ; ಈ ವರ್ಷವೂ ಇದೇ ವೇಳೆಗೆ ನಡೆಯುತ್ತಿದೆ.

ಭಾರತ ಒಕ್ಕೂಟದ ಒಂದು ರಾಜ್ಯವಾಗಿ ಕಾಶ್ಮೀರ ಬೆಳೆದು ದೃಢವಾಗುತ್ತಿದೆ; ಅಲ್ಲಿನ ಪ್ರಜೆಗಳು ತಮ್ಮ ನಿರ್ಧಾರವನ್ನು ಎಂದೊ ಘೋಷಿಸಿ, ಚುನಾವಣೆಗಳ ಮೂಲಕ ತಮಗೆ ಬೇಕಾದ ರಾಜ್ಯ ಸರಕಾರವನ್ನು ರಚಿಸಿಕೊಳ್ಳುತ್ತ ಬಂದಿದ್ದಾರೆ.

ಕಾಶ್ಮೀರಿಗಳ ಆತ್ಮನಿರ್ಧಾರವಾಗಿ ಎರಡು ದಶಕಗಳಿಗೂ ಮಿಕ್ಕಿದ ಸಮಯ ಕಳೆಯಿತು.

ಇದನ್ನು ಅಮೆರಿಕೆ—ಚೀನಾಗಳು ಕಂಡುಕೊಂಡಿಲ್ಲ. ಅವು ಕಾಶ್ಮೀರದ ಜನತೆಗೆ ಆತ್ಮನಿರ್ಧಾರದ ಹಕ್ಕು ಬೇಕೆಂದು ಹೇಳುತ್ತವೆ; ತಮ್ಮ ಬಾಲಂಗೋಚಿ ಪಾಕಿಸ್ತಾನದ ತೃಪ್ತಿಗಾಗಿಯೆ?

ತಮ್ಮ ಕುರುಡು ಕಣ್ಣಿನಿಂದ ಕುರುಡು ಕಾಂಚಾಣವನ್ನು ಚಲಾವಣೆಗೆ ತರುವ ಈ ಕುರುಡು ರಾಜ್ಯಕೀಯ "ಕಾಶ್ಮೀರ"ಕ್ಕೆ ಮಾತ್ರ ಸೀಮಿತವಾದದ್ದು ಮತ್ತೊಂದು ವೈಶಿಷ್ಟ್ಯ.

ಕಾಶ್ಮೀರದಲ್ಲಿ ಇಂದು ಅಶಾಂತಿಯಿಲ್ಲ. ಅಲ್ಲಿ ನೆಲಸಿರುವುದು ಸ್ಮಶಾನ ಶಾಂತಿಯೂ ಅಲ್ಲ; ತೃಪ್ತಿ ಪೂರ್ವಕ ಶಾಂತಿ.

ಇಸ್ರೇಲದ ಸ್ಫೋಟಕ ಪರಿಸ್ಥಿತಿ ಜಾಗತಿಕ ಶಾಂತಿಗೆ ಮಾರಕ; ಅದು ಎಂದು ಸಿಡಿದೀತೆಂದು ಯಾರೂ ಹೇಳಲಾರರು.

ಆದರೂ ಶ್ರೀಮಂತ ಬಲಾಢ್ಯ ದೇಶ ಪ್ರಮುಖರಿಗೆ ಇಸ್ರೇಲದ ಬೂದಿ ಮುಚ್ಚಿದ ಕೆಂಡ ಹೊಗೆ ಕಾರುತ್ತಿರುವುದು ಗೋಚರವೇ ಆಗಲಿಲ್ಲ!

ಅದೇಕೆ? ಆ ಹೊಗೆಯಲ್ಲಿ ಅಮೆರಿಕೆಯ ಫಿರಂಗಿಗಳ ಪಾಲೂ ಇದೆ.

ಉಭಯತರರಿಗೆ ಸಂಬಂಧಪಟ್ಟ ವಿವಾದಗಳನ್ನು ಅಡಗಿಸಿ ಮೂರನೆಯವರನ್ನು ಬೊಟ್ಟು ಮಾಡುವ ಈ ಶ್ರೀಮಂತರಿಗೆ ಭಾರತದಲ್ಲೆಂದೂ ಗೌರವವಿಲ್ಲ.

'ಕಾಶ್ಮೀರದಕ್ಷಿನ ಭಾರತೀಯ ಜನತೆ'ಯ ಬಗ್ಗೆ ಲಾಯರ್ ತೀವ್ರ ಕಳಕಳಿ ತೋರಿಸಿದ್ದಾರೆ. ಅವರಿಗೆ ಆತ್ಮ ನಿರ್ಧಾರದ ಹಕ್ಕು ಬೇಕಂತೆ.

ಯಾವ ಕಾಶ್ಮೀರಿಗೆ ಕನಸಿನಲ್ಲೂ ಬಂದಿರದ ಬೇಡಿಕೆ ಲಾಯರ ಬಾಯಿಂದ ಬರುತ್ತದೆ! ಭುಟ್ಟೋ ಹೇಳುತ್ತಾರೆ, ಲಾಯರ್ ಪುನರುಚ್ಚರಿಸುತ್ತಾರೆ.

ಇದರರ್ಥ? ಭಾರತ—ಪಾಕ್ ಗಡಿಯಲ್ಲಿ ನೆಲಸಿರುವ ಶಾಂತಿಯನ್ನು ಶಾಶ್ವತ ಅಶಾಂತಿಯಾಗಿ ಪರಿವರ್ತಿಸುವುದು. ಕಾಶ್ಮೀರದ ಜಪ ಪಠಿಸಿ ಹೋರಾಟಕ್ಕೆ ಮುಂದಾಗುವುದು.

ಬಾಂಗ್ಲಾ ದೇಶದ ಏಳೂವರೆ ಕೋಟಿ ನಾಗರಿಕರು ಪಶ್ಚಿಮ ಪಾಕಿಸ್ತಾನದ ಆರು ಕೋಟಿ ರಕ್ತಪಿಪಾಸುಗಳ... ರಕ್ತಹೀನ ಖಾನರ ದಬ್ಬಾಳಿಕೆಯಿಂದ ಮುಕ್ತಿ ಬೇಕೆಂದು ಗಗನ ಬಿರಿಯುವಂತೆ ಬೊಬ್ಬಿಟ್ಟಾಗ ನಿಕ್ಸನ್—ಲಾಯ್‌ಯವರ ಕಿವಿ ಕಿವುಡಾಯಿತು.

ಸ್ವಾತಂತ್ರ್ಯಪ್ರಿಯ ನಿರೀಹ ಜನತೆ ಪಾಕ್ ನರಮೇಧ ದೀಕ್ಷಿತರ ಗುಂಡುಗಳಿಗೆ ಬಲಿಯಾಗಿ ಸ್ವರ್ಗವೂ ನಡುಗುವಂತೆ ಚೀತ್ಕರಿಸಿದಾಗ ನಿಕ್ಸನ್—ಲಾಯ್‌ರಿಗೆ ಸುಮಧುರ ಸಂಗೀತದ ಆಲಾಪನೆಯೆನಿಸಿಸಿತು.

ನರಮೇಧಪ್ರಿಯರ ಅಟ್ಟಹಾಸ ಅವರಿಗೆ ಕರ್ಣ ರಸಾಯನವಾಯ್ತು.

ಬಾಂಗ್ಲಾ ಜನತೆ ತಮ್ಮ ಆತ್ಮನಿರ್ಧಾರವನ್ನು ಮಾಡಿದರು, ಸ್ವತಂತ್ರ ಸಾರ್ವಭೌಮ ಬಾಂಗ್ಲಾ ದೇಶವನ್ನು ರಕ್ತ ತರ್ಪಣ ನೀಡಿ ಪಡೆದರು.

ಆಗ ಶಾಂತಿ—ಆತ್ಮ ನಿರ್ಧಾರದ ದೊಡ್ಡ ಮಾತುಗಳನ್ನು ಸರೆಮನೆಯಲ್ಲಿಟ್ಟ ದೊಡ್ಡ ದೇಶಗಳ ದಡ್ಡ ಜನರು ಈಗವನ್ನು ಬಿಡುಗಡೆ ಮಾಡಿದ್ದಾರೆ. ತಮ್ಮ ಚೇಲ ದೇಶ ಪಾಕಿಸ್ತಾನದಲ್ಲಿ ಬಲೂಚಿಸ್ತಾನಿಗಳೂ ಫಕ್ತೂನಿ ಸ್ತಾನಿಗಳೂ ಸ್ವಾಯತ್ತತೆಯ ಕಾವಲಿಗೆ ಉರುಳುತಿದ್ದಾರೆ. ಅವರು ಆತ್ಮನಿರ್ಧಾರದ ಮಾತೆತ್ತಿದರೆ ಈ ದೊಡ್ಡವರೇನೆನ್ನುತ್ತಾರೆ.?

ತೈವಾನವನ್ನು ಚೀನಾದ ಅವಿಭಾಜ್ಯ ಅಂಗವೆಂದು ಹೇಳುತ್ತ ಬಂದ ಲಾಯರ್ ಮತ್ತೀಗ ಎರಡು ದಶಕಗಳ ನಂತರ ಅದಕ್ಕೆ ತಲೆ ದೂಗಿದ ನಿಕ್ಸನ್—ತೈವಾನಕ್ಕೆ ಆತ್ಮ ನಿರ್ಧಾರದ ಹಕ್ಕು ನೀಡಲು ಮುಂದಾಗುತ್ತಾರೆಯೆ?

ಕಾಶ್ಮೀರದ ಕತೆಯ ಧಾಟಿಯೇ ಬೇರೆ. ಸಾರ್ವತ್ರಿಕ-ಮುಕ್ತ-ರಹಸ್ಯ ಚುನಾವಣೆಗಳು ಪ್ರಜಾ ಸತ್ತಾತ್ಮಕವಾಗಿ ಇಲ್ಲಿ ನಡೆಯುತ್ತಲೇ ಬಂದಿವೆ. ಕಾಶ್ಮೀರಿಗಳು ಭಾರತದ ಒಕ್ಕೂಟದಲ್ಲಿ ಸುಖಿಗಳಾಗಿ ಬಾಳುತ್ತ ಬಂದಿದ್ದಾರೆ—ದೇಶದ ಇತರ ರ್‍ಯಾಜಗಳ ನಾಗರಿಕರಂತೆ.

ದೇಶದ ಸುಖದಲ್ಲೂ ದುಃಖದಲ್ಲೂ ಸಮ ಪಾಲು ಅನುಭವಿಸಿದ್ದಾರೆ.

ಅಂಥವರ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪವೆತ್ತುವುದೆಂದರೆ ಹುಗಿದ ಹೆಣವನ್ನು ಮೇಲೆತ್ತಿ ಹಾಕಿ ಆಸುಪಾಸಿಗೆ ದುರ್ನಾತ ಹರಡಿಸುವುದೆಂದೇ ಅರ್ಥ. ಆ ಹೆಣವೆಂದೋ ಮಣ್ಣು ಗೂಡಿದೆ; ಅವರ ಮಾತಿನಿಂದ ಕಾಶ್ಮೀರಿಗೇನೂ ಬಾಧಕವಿಲ್ಲ.

ಬಾಂಗ್ಲಾವನ್ನು ಕಳೆದು ಕೊಂಡ ಪಾಕಿಸ್ತಾನಕ್ಕೆ ಕಾಶ್ಮೀರವನ್ನು ದೊರಕಿಸಿಕೊಡುವ ಇರಾದೆ ಈ ದುಷ್ಟದ್ವಯರಿಗಿದೆಯೆ? ಇಲ್ಲವಾದರೆ ಅವರು ಕಾಶ್ಮೀರದ ಬಗ್ಗೆ ಏಕೆ ಮಾತಾಡಬೇಕು?

ಭಾರತ—ಪಾಕಿಸ್ತಾನಗಳ ನಡುವೆ ಹಲವು ವಿವಾದಗಳಿವೆ ನಿಜ. ಭಾರತವು ೧೯೭೧ರಲ್ಲಿ ಗಳಿಸಿದ ವಿಜಯದ ನಂತರ ಈ ವಿವಾದಗ್ರಸ್ತ ಸಂಗತಿಗಳು ಹೆಚ್ಚಿವೆಯೆಂಬುದೂ ನಿಜ.

ಆದರೆ, ಈ ಬಗ್ಗೆ ಮೂರನೆಯವರ ಮಧ್ಯ ಪ್ರವೇಶ ಅನಗತ್ಯ. ಅದನ್ನು ಭಾರತವೆಂದೂ ಒಪ್ಪುವುದಿಲ್ಲ.

ಪಾಕಿಸ್ತಾನದೊಡನೆ ಬೇಷರತ್ತಾಗಿ ಮಾತುಕತೆಗೆ ಭಾರತ ಸಿದ್ಧವಿದೆ. ಈ ಕರೆಯನ್ನು ಪ್ರಧಾನಿ ಇಂದಿರಾಗಾಂಧಿಯವರು ಎಂದೋ ನೀಡಿದ್ದಾರೆ.

ಬ್ರಿಟನ್, ಫ್ರಾನ್ಸ್, ರಶ್ಯಗಳ ಬೆಂಬಲವೂ ದ್ವಿಪಕ್ಷೀಯ ಮಾತುಕತೆಗಳಿಗಿದೆ.

ಅಮೆರಿಕೆ—ಚೀನಾಗಳು ಒಪ್ಪಿಕೊಳ್ಳದ ಮಾತ್ರಕ್ಕೆ ಹಗಲು ರಾತ್ರೆಯಾಗುವುದಿಲ್ಲ, ರಾತ್ರೆ ಹಗಲಾಗುವುದಿಲ್ಲ.

(ಒಂಭತ್ತನೇ ಪುಟ ನೋಡಿರಿ)

Gram : VISHWA
Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಕ್ಷೇತ್ರದ ಮತದಾರರು ತಿರಸ್ಕರಿಸಿ ತೋರಿಸುತ್ತಾರೆಯೆ? ಬ್ರಹ್ಮಾವರದ ಹವಾಗುಣದಲ್ಲಿ ಕಾಂಗ್ರೆಸ್ ಬೆಳೆ ಪರಿಪುಷ್ಟವಾಗುವುದಿಲ್ಲವೆಂಬುದು ಸಾಮಾನ್ಯಾಭಿಪ್ರಾಯ.

ಕೊನೆಯದು ಕಾರ್ಕಳ. ಇಲ್ಲಿಂದ ಮಾಜಿ ಶಾಸಕ ಶ್ರೀ ಬೋಳ ರಘುರಾಮ ಶೆಟ್ಟರು ಮತ್ತೆ ಚುನಾವಣೆಗಿಳಿದಿದ್ದಾರೆ. ಬರಿಯ ಸಾಧುಸ್ವಭಾವದ ಇವರ ಬದಲಿಗೆ ಜನಸಂಘವು ಮತ್ತೊಬ್ಬ ಪ್ರಭಾವಿ ವ್ಯಕ್ತಿಯನ್ನು ನಿಲ್ಲಿಸುತಿದ್ದರೆ ಯುಕ್ತವಿತ್ತು ಎಂದು ಹಲವರ ಪಿಸುಮಾತು. ಇಲ್ಲಿ ಆಳುವ ಕಾಂಗ್ರೆಸ್ಸಿನ ಶ್ರೀ ಎಂ.ವೀರಪ್ಪ ಮೊಯಿಲಿಯವರು ಸಂಸ್ಥಾಕಾಂಗ್ರೆಸ್ಸಿನ ಶ್ರೀ ಸುಂದರ ಹೆಗ್ಡೆಯವರನ್ನೂ ಎದುರಿಸಬೇಕಾಗಿದೆ. ಶ್ರೀ ಪೆರೋಡಿ ವಿಟ್ಠಲ ಶೆಟ್ಟಿ ಮತ್ತು ಶ್ರೀ ವೈ. ತನಿಯಪ್ಪನವರು ಪಕ್ಷೇತರರಾಗಿಯೂ ಸ್ಪರ್ಧೆಗಿಳಿದಿದ್ದಾರೆ. ಶ್ರೀ ಹೆಗ್ಡೆಯವರಿಗಿಂತ ಶ್ರೀ ಶೆಟ್ಟರೂ ಶ್ರೀ ಶೆಟ್ಟರಿಗಿಂತ ಶ್ರೀ ಮೊಯಿಲಿಯವರೂ ಗೆಲ್ಲುವ ಲಕ್ಷಣಗಳು ಹೆಚ್ಚು. ಅವರು ಗೆಲ್ಲದೆ ಹೋದರೆ ಏನೋ ಪವಾಡ ನಡೆದಿದೆಯೆಂದೇ ಹೇಳಬೇಕು.

ಉಡುಪಿ ವಿಭಾಗದ ಏಳುಸ್ಥಾನಗಳಿಗೆ ಸ್ಪರ್ಧಿಸಿದ ಒಟ್ಟು ಅಭ್ಯರ್ಥಿಗಳು ೩೧. ಇವರಲ್ಲಿ

ಆಳುವ ಕಾಂಗ್ರೆಸ್ಸು	೭
ಸಂಸ್ಥಾ ಕಾಂಗ್ರೆಸ್	೪
ಜನಸಂಘ	೫
ಸಮಾಜವಾದಿ	೩
ಸ್ವತಂತ್ರ	೧
ಸಿಪಿಎಂ	೧
ಪಕ್ಷೇತರರು	೧೧

ಈ ಏಳು ಸ್ಥಾನದಲ್ಲಿ ಆಳುವ ಕಾಂಗ್ರೆಸ್ ಮೂರು ಸ್ಥಾನಗಳನ್ನು ನಿರಾಯಾಸವಾಗಿ ಪಡೆಯಬಲ್ಲುದು. ತುಸು ಪರಿಶ್ರಮದಿಂದ ಮತ್ತೂ ಎರಡು ಸ್ಥಾನಗಳನ್ನದು ಸಂಪಾದಿಸಬಹುದು. ಜನಸಂಘಕ್ಕೆ ಗೆಲ್ಲಬಹುದೆಂಬ ಆಸೆಯಿರುವುದೂ ಇದೇ ಪ್ರದೇಶದಲ್ಲಿ. ಸಂಸ್ಥಾಕಾಂಗ್ರೆಸ್ಸು ಮೂರಾದರೂ ಸ್ಥಾನಗಳಿಸಬಲ್ಲೆನೆಂಬ ವಿಶ್ವಾಸವಿಟ್ಟಿರುವುದೂ ಇಲ್ಲೇ. ಆದರೆ, ಮತದಾರರ ಮಹದಾಶಯವನ್ನು ಒಳಹೊಕ್ಕು ನೋಡುವುದು ಸಾಧ್ಯವಿಲ್ಲ. ೧೯೬೭ರಲ್ಲಿ ಕಾಂಗ್ರೆಸ್ಸನ್ನು ಪೂರ್ತಿ ಮುಳುಗಿಸಿದ ಈ ಪ್ರದೇಶ ೧೯೭೧ರಲ್ಲಿ ಆಳುವ ಕಾಂಗ್ರೆಸ್ಸನ್ನು ಎತ್ತಿ ಹಿಡಿಯಿತು. ೧೯೭೨ರ ಚುನಾವಣೆಗಳ ಭವಿಷ್ಯವನ್ನು ಇದು ಹೇಗೆ ಬರೆಯುತ್ತದೆ, ವಾರವೊಂದರಲ್ಲಿ ಗೊತ್ತಾಗುತ್ತದೆ.

೧೯೬೭ರ ಚುನಾವಣೆಯ ವೇಳೆ ಉಡುಪಿಯೊಂದನ್ನು ಬಿಟ್ಟರೆ ಉಳಿದೆಡೆಯ ಮತದಾರರು ಕಾಂಗ್ರೆಸನು ತಿರಸ್ಕರಿಸಿದ್ದಾರೆ. ಸುರತ್ಕಲ್ಲು, ಕಾಪು, ಕುಂದಾಪುರ, ಬೈಂದೂರುಗಳಲ್ಲಿ ಪ್ರಸಪಾವನ್ನು ಮೆಚ್ಚಿದ್ದಾರೆ. ಕಾರ್ಕಳದಲ್ಲಿ ಜನಸಂಘ ಗೆದ್ದಿದ್ದರೆ ಬ್ರಹ್ಮಾವರದಲ್ಲಿ ಸ್ವತಂತ್ರರು ಆರಿಸಿ ಬಂದಿದ್ದಾರೆ. ಪ್ರಸಪಾದಿಂದ ಆರಿಸಿ ಬಂದ ನಾಲ್ವರೂ ಈಗ ಆಳುವ ಕಾಂಗ್ರೆಸ್ ಸೇರಿದ್ದಾರೆ; ಇಬ್ಬರು ಮರುಚುನಾವಣೆಗೆ ಇಳಿದಿದ್ದಾರೆ.

ಉಡುಪಿ ಪ್ರದೇಶವು ಪಕ್ಷಾಂತರದ ಬಗ್ಗೆ ಮತ್ತು ನಿಜ ಕಾಂಗ್ರೆಸ್ಸಿನ ಬಗ್ಗೆ ತೀರ್ಪು ನೀಡುವುದೆಂದರೆ ಅತಿಶಯವಾಗದು.

●●

ಚಾರುಚಯನ—

ಅವರು ಶಾಂತಿಯ ತುರುಬು ಹಿಡಿದೆಳೆದರು

ನಿಕ್ಸನ್—ಚೌ ಭೆಟ್ಟಿಯಾದರು, ಭೆಟ್ಟಿಯಾಗುವ ಸ್ವಾತಂತ್ರ್ಯ ಅವರಿಗಿದೆ. ಹಲವು ವಿಷಯಗಳ ಬಗ್ಗೆ ಮಾತುಕತೆ ನಡೆಸಿದರು; ಆ ಸ್ವಾತಂತ್ರ್ಯವೂ ಅವರಿಗಿದೆ. ಮನೆಗೆ ಬಂದ ಅಮೆರಿಕನ್ ರಾಷ್ಟ್ರಪತಿಯನ್ನು ಚೀನೀ ಪ್ರಧಾನಿ ತಮ್ಮ ಕಾಲಿಗೆ ಶರಣುಬರುವಂತೆ ಮಾಡಿದರು. ಇದಕ್ಕೂ ಯಾರ ಆತಂಕವೂ ಇಲ್ಲ. ಬಹುದಿನಗಳಿಂದಲೂ ಅಮೆರಿಕೆ ಹಾಡುತ್ತ ಬಂದ ಎರಡು ಚೀನಾದ ಪಲ್ಲವಿಗೆ ಇನ್ನಾದರೂ ಕೊನೆಬಂದೀತು. ಅದು ಅವರವರ ವ್ಯಕ್ತಿಗತ ವಿಚಾರ.

ಆದರೆ, ಹಿರಿಯ ದೇಶಗಳವರು ತಂತಮ್ಮ ಬಗೆಗೇ ಮಾತಾಡಿಕೊಳ್ಳದೆ. ಮೂರನೆಯವರ ಬಗ್ಗೇ ಹೆಚ್ಚು ಸಮಯ ಖರ್ಚು ಮಾಡಿದರೆ ಹೇಗೆ?

'ವಿಶ್ವಶಾಂತಿ'ಯ ಮಂತ್ರ ಪಠಿಸುತ್ತ ಶಾಂತಿಯ ತುರುಬು ಹಿಡಿದು ಎಳೆಯುವ ಹವ್ಯಾಸಕ್ಕೆ ಅಂಟಿಕೊಂಡರೆ ಹೇಗೆ!

'ಕಾಶ್ಮೀರ'ದ ಪ್ರಶ್ನೆ ಎಂದೋ ಮುಕ್ತಾಯವಾಗಿದೆ, ಅದು ವಾಸ್ತವಿಕ ಸಂಗತಿ. ೧೯೫೭ರಿಂದಲೂ ಪ್ರತಿ ಐದುವರ್ಷಗಳಿಗೊಮ್ಮೆ ಅಲ್ಲಿ ಚುನಾವಣೆ ನಡೆಯುತ್ತಿದೆ; ಈ ವರ್ಷವೂ ಇದೇ ವೇಳೆಗೆ ನಡೆಯುತ್ತಿದೆ.

ಭಾರತ ಒಕ್ಕೂಟದ ಒಂದು ರಾಜ್ಯವಾಗಿ ಕಾಶ್ಮೀರ ಬೆಳೆದು ದೃಢವಾಗುತ್ತಿದೆ; ಅಲ್ಲಿನ ಪ್ರಜೆಗಳು ತಮ್ಮ ನಿರ್ಧಾರವನ್ನು ಎಂದೊ ಘೋಷಿಸಿ, ಚುನಾವಣೆಗಳ ಮೂಲಕ ತಮಗೆ ಬೇಕಾದ ರಾಜ್ಯ ಸರಕಾರವನ್ನು ರಚಿಸಿಕೊಳ್ಳುತ್ತ ಬಂದಿದ್ದಾರೆ.

ಕಾಶ್ಮೀರಿಗಳ ಆತ್ಮನಿರ್ಧಾರವಾಗಿ ಎರಡು ದಶಕಗಳಿಗೂ ಮಿಕ್ಕಿದ ಸಮಯ ಕಳೆಯಿತು.

ಇವನ್ನು ಅಮೆರಿಕೆ—ಚೀನಾಗಳು ಕಂಡುಕೊಂಡಿಲ್ಲ. ಅವು ಕಾಶ್ಮೀರದ ಜನತೆಗೆ ಆತ್ಮನಿರ್ಧಾರದ ಹಕ್ಕು ಬೇಕೆಂದು ಹೇಳುತ್ತವೆ; ತಮ್ಮ ಬಾಲಂಗೋಚಿ ಪಾಕಿಸ್ತಾನದ ತೃಪ್ತಿಗಾಗಿಯೆ?

ತಮ್ಮ ಕುರುಡು ಕಣ್ಣಿನಿಂದ ಕುರುಡು ಕಾಂಚಾಣವನ್ನು ಚಲಾವಣೆಗೆ ತರುವ ಈ ಕುರುಡು ರಾಜ್ಯಕೀಯ "ಕಾಶ್ಮೀರ"ಕ್ಕೆ ಮಾತ್ರ ಸೀಮಿತವಾದದ್ದು ಮತ್ತೊಂದು ವೈಶಿಷ್ಟ್ಯ.

ಕಾಶ್ಮೀರದಲ್ಲಿ ಇಂದು ಅಶಾಂತಿಯಿಲ್ಲ. ಅಲ್ಲಿ ನೆಲಸಿರುವುದು ಸ್ಮಶಾನ ಶಾಂತಿಯೂ ಅಲ್ಲ; ತೃಪ್ತಿ ಪೂರ್ವಕ ಶಾಂತಿ.

ಇಸ್ರೇಲದ ಸ್ಫೋಟಕ ಪರಿಸ್ಥಿತಿ ಜಾಗತಿಕ ಶಾಂತಿಗೆ ಮಾರಕ; ಅದು ಎಂದು ಸಿಡಿದೀತೆಂದು ಯಾರೂ ಹೇಳಲಾರರು.

ಆದರೂ ಶ್ರೀಮಂತ ಬಲಾಢ್ಯ ದೇಶ ಪ್ರಮುಖರಿಗೆ ಇಸ್ರೇಲದ ಬೂದಿ ಮುಚ್ಚಿದ ಕೆಂಡ ಹೊಗೆ ಕಾರುತ್ತಿರುವುದು ಗೋಚರವೇ ಆಗಲಿಲ್ಲ!

ಅದೇಕೆ? ಆ ಹೊಗೆಯಲ್ಲಿ ಅಮೆರಿಕೆಯ ಫಿರಂಗಿಗಳ ಪಾಲೂ ಇದೆ.

ಉಭಯತರರಿಗೆ ಸಂಬಂಧಪಟ್ಟ ವಿವಾದಗಳನ್ನು ಅಡಗಿಸಿ ಮೂರನೆಯವರನ್ನು ಬೊಟ್ಟು ಮಾಡುವ ಈ ಶ್ರೀಮಂತರಿಗೆ ಭಾರತದಲ್ಲೆಂದೂ ಗೌರವವಿಲ್ಲ.

'ಕಾಶ್ಮೀರದಲ್ಲಿನ ಭಾರತೀಯ ಜನತೆ'ಯ ಬಗ್ಗೆ ಲಾಯ್ ತೀವ್ರ ಕಳಕಳಿ ತೋರಿಸಿದ್ದಾರೆ. ಅವರಿಗೆ ಆತ್ಮ ನಿರ್ಧಾರದ ಹಕ್ಕು ಬೇಕಂತೆ.

ಯಾವ ಕಾಶ್ಮೀರಿಗೆ ಕನಸಿನಲ್ಲೂ ಬಂದಿರದ ಬೇಡಿಕೆ ಲಾಯರ ಬಾಯಿಂದ ಬರುತ್ತದೆ! ಭುಟ್ಟೋ ಹೇಳುತ್ತಾರೆ, ಲಾಯ್ ಪುನರುಚ್ಚರಿಸುತ್ತಾರೆ.

ಇದರರ್ಥ? ಭಾರತ—ಪಾಕ್ ಗಡಿಯಲ್ಲಿ ನೆಲಸಿರುವ ಶಾಂತಿಯನ್ನು ಶಾಶ್ವತ ಅಶಾಂತಿಯಾಗಿ ಪರಿವರ್ತಿಸುವುದು. ಕಾಶ್ಮೀರದ ಜಪ ಪಠಿಸಿ ಹೋರಾಟಕ್ಕೆ ಮುಂದಾಗುವುದು.

ಬಾಂಗ್ಲಾ ದೇಶದ ಏಳೂವರೆ ಕೋಟಿ ನಾಗರಿಕರು ಪಶ್ಚಿಮ ಪಾಕಿಸ್ತಾನದ ಆರು ಕೋಟಿ ರಕ್ತಹೀನ ಖಾನರ ದಬ್ಬಾಳಿಕೆಯಿಂದ ಮುಕ್ತಿ ಬೇಕೆಂದು ಗಗನ ಬಿರಿಯುವಂತೆ ಬೊಬ್ಬಿಟ್ಟಾಗ ನಿಕ್ಸನ್—ಲಾಯ್‌ಯವರ ಕಿವಿ ಕಿವುಡಾಯಿತು.

ಸ್ವಾತಂತ್ರ್ಯಪ್ರಿಯ ನಿರೀಹ ಜನತೆ ಪಾಕ್ ನರಮೇಧ ದೀಕ್ಷಿತರ ಗುಂಡುಗಳಿಗೆ ಬಲಿಯಾಗಿ ಸ್ವರ್ಗವೂ ನಡುಗುವಂತೆ ಚೀತ್ಕರಿಸಿದಾಗ ನಿಕ್ಸನ್—ಲಾಯ್‌ರಿಗೆ ಸುಮಧುರ ಸಂಗೀತದ ಆಲಾಪನೆಯೆನಿಸಿತು.

ನರಮೇಧಪ್ರಿಯರ ಅಟ್ಟಹಾಸ ಅವರಿಗೆ ಕರ್ಣ ರಸಾಯನವಾಯ್ತು.

ಬಾಂಗ್ಲಾ ಜನತೆ ತಮ್ಮ ಆತ್ಮ ನಿರ್ಧಾರವನ್ನು ಮಾಡಿದರು, ಸ್ವತಂತ್ರ ಸಾರ್ವಭೌಮ ಬಾಂಗ್ಲಾ ದೇಶವನ್ನು ರಕ್ತ ತರ್ಪಣ ನೀಡಿ ಪಡೆದರು.

ಆಗ ಶಾಂತಿ—ಆತ್ಮ ನಿರ್ಧಾರದ ದೊಡ್ಡ ಮಾತುಗಳನ್ನು ಸೆರೆಮನೆಯಲ್ಲಿಟ್ಟ ದೊಡ್ಡ ದೇಶಗಳ ದಡ್ಡ ಜನರು ಈಗವನ್ನು ಬಿಡುಗಡೆ ಮಾಡಿದ್ದಾರೆ. ತಮ್ಮ ಚೇಲ ದೇಶ ಪಾಕಿಸ್ತಾನದಲ್ಲಿ ಬಲೂಚಿಸ್ತಾನಿಗಳೂ ಫಕ್ತೂನಿಸ್ತಾನಿಗಳೂ ಸ್ವಾಯತ್ತತೆಯ ಕಾವಲಿಗೆ ಉರುಳುತಿದ್ದಾರೆ. ಅವರು ಆತ್ಮ ನಿರ್ಧಾರದ ಮಾತೆತ್ತಿದರೆ ಈ ದೊಡ್ಡವರೇ ನೆನ್ನುತ್ತಾರೆ.?

ತೈವಾನವನ್ನು ಚೀನಾದ ಅವಿಭಾಜ್ಯ ಅಂಗವೆಂದು ಹೇಳುತ್ತ ಬಂದ ಲಾಯ್ ಮತ್ತೀಗ ಎರಡು ದಶಕಗಳ ನಂತರ ಅದಕ್ಕೆ ತಲೆ ದೂಗಿದ ನಿಕ್ಸನ್—ತೈವಾನಕ್ಕೆ ಆತ್ಮ ನಿರ್ಧಾರದ ಹಕ್ಕು ನೀಡಲು ಮುಂದಾಗುತ್ತಾರೆಯೆ?

ಕಾಶ್ಮೀರದ ಕತೆಯ ಧಾಟಿಯೇ ಬೇರೆ. ಸಾರ್ವತ್ರಿಕ–ಮುಕ್ತ–ರಹಸ್ಯ ಚುನಾವಣೆಗಳು ಪ್ರಜಾ ಸತ್ತಾತ್ಮಕವಾಗಿ ಇಲ್ಲಿ ನಡೆಯುತ್ತಲೇ ಬಂದಿವೆ. ಕಾಶ್ಮೀರಿಗಳು ಭಾರತದ ಒಕ್ಕೂಟದಲ್ಲಿ ಸುಖಿಗಳಾಗಿ ಬಾಳುತ್ತ ಬಂದಿದ್ದಾರೆ—ದೇಶದ ಇತರ ರ್‍ಯಾಜಗಳ ನಾಗರಿಕರಂತೆ.

ದೇಶದ ಸುಖದಲ್ಲೂ ದುಃಖದಲ್ಲೂ ಸಮ ಪಾಲು ಅನುಭವಿಸಿದ್ದಾರೆ.

ಅಂಥವರ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪವೆತ್ತುವುದೆಂದರೆ ಹೂಗಿದ ಹೆಣವನ್ನು ಮೇಲೆತ್ತಿ ಹಾಕಿ ಆಸುಪಾಸಿಗೆ ದುರ್ನಾತ ಹರಡಿಸುವುದೆಂದೇ ಅರ್ಥ. ಆ ಹೆಣವೆಂದೋ ಮಣ್ಣು ಗೂಡಿದೆ; ಅವರ ಮಾತಿನಿಂದ ಕಾಶ್ಮೀರಿಗೇನೂ ಬಾಧಕವಿಲ್ಲ.

ಬಾಂಗ್ಲಾವನ್ನು ಕಳೆದು ಕೊಂಡ ಪಾಕಿಸ್ತಾನಕ್ಕೆ ಕಾಶ್ಮೀರವನ್ನು ದೊರಕಿಸಿಕೊಡುವ ಇರಾದೆ ಈ ದುಷ್ಟದ್ವಯರಿಗಿದೆಯೆ? ಇಲ್ಲವಾದರೆ ಅವರು ಕಾಶ್ಮೀರದ ಬಗ್ಗೆ ಏಕೆ ಮಾತಾಡಬೇಕು?

ಭಾರತ—ಪಾಕಿಸ್ತಾನಗಳ ನಡುವೆ ಹಲವು ವಿವಾದಗಳಿವೆ ನಿಜ. ಭಾರತವು ೧೯೭೧ರಲ್ಲಿ ಗಳಿಸಿದ ವಿಜಯದ ನಂತರ ಈ ವಿವಾದಗ್ರಸ್ತ ಸಂಗತಿಗಳು ಹೆಚ್ಚಿವೆಯೆಂಬುದೂ ನಿಜ.

ಆದರೆ, ಈ ಬಗ್ಗೆ ಮೂರನೆಯವರ ಮಧ್ಯ ಪ್ರವೇಶ ಅನಗತ್ಯ. ಅದನ್ನು ಭಾರತವೆಂದೂ ಒಪ್ಪುವುದಿಲ್ಲ.

ಪಾಕಿಸ್ತಾನದೊಡನೆ ಬೇಷರತ್ತಾಗಿಯೂ ತುಕತೆಗೆ ಭಾರತ ಸಿದ್ಧವಿದೆ. ಈ ಕರೆಯನ್ನು ಪ್ರಧಾನಿ ಇಂದಿರಾಗಾಂಧಿಯವರು ಎಂದೋ ನೀಡಿದ್ದಾರೆ.

ಬ್ರಿಟನ್, ಫ್ರಾನ್ಸ್, ರಶ್ಯಗಳ ಬೆಂಬಲವೂ ದ್ವಿಪಕ್ಷೀಯ ಮಾತುಕತೆಗಳಿಗಿದೆ.

ಅಮೆರಿಕೆ–ಚೀನಾಗಳು ಒಪ್ಪಿಕೊಳ್ಳದ ಮಾತ್ರಕ್ಕೆ ಹಗಲು ರಾತ್ರಿಯಾಗುವುದಿಲ್ಲ, ರಾತ್ರಿ ಹಗಲಾಗುವುದಿಲ್ಲ.

(ಒಂಭತ್ತನೇ ಪುಟ ನೋಡಿರಿ)

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging.
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಚಿಂತನೆಗೆ ಗ್ರಾಸ

ಬಂಗ್ಲಾದೇಶ ಈಗಲೂ ಪಾಕಿಸ್ತಾನದ ಭಾಗವೆಂದು ಭಾವಿಸುವವರಿಗೆ ಹುಚ್ಚಾಸ್ಪತ್ರೆಯೇ ಸರಿಯಾದ ಸ್ಥಳ.

ಕಲ್ಕತ್ತದಲ್ಲಿ ಶೇಖ ಮುಜೀಬುರ್ ಭಾಷಣ

○ ○ ○

ಕಳೆದ ಇಪ್ಪತ್ತು ವರ್ಷಗಳಲ್ಲಿ ಪಾಕಿಸ್ತಾನ ನಮಗೆ ಮೂರು ಪಾಠಗಳನ್ನು ಕಲಿಸಿತು. 'ಇಸ್ಲಾಂ ಧರ್ಮಕ್ಕೆ ಅಪಾಯ ಒದಗಿದೆ' ಎಂಬುದು ಮೊದಲ ಪಾಠ, ಕಾಶ್ಮೀರ ನಮ್ಮದು ಎರಡನೆಯ ಪಾಠ, ಮತ್ತು 'ಹಿಂದುಸ್ತಾನ ನಮ್ಮ ವೈರಿ' ಎಂಬುದು ಮೂರನೆಯ ಪಾಠ. ಭಾರತ ನಮಗೆ ವೈರಿ ಹೇಗಾದೀತು? ಭಾರತೀಯರು ನಮ್ಮ ಸಹೋದರರು.

ಶೇಖ ಮುಜೀಬುರ್ (6–2–1972)

○ ○ ○

ಪಾಕಿಸ್ತಾನದ ಇಂದಿನ ದುರ್ಗತಿಗೆ ಭಾರತವಾಗಲಿ–ಬಂಗ್ಲಾ ದೇಶವಾಗಲಿ ಕಾರಣವಲ್ಲ. ಪಾಕಿಸ್ತಾನವೇ ಕಾರಣ. ಅದು ತಾನೇ ಹೊತ್ತಿಸಿದ ದ್ವೇಷದ ಅಗ್ನಿಗೆ ಈಗ ಬಲಿಯಾಗಿದೆ.

ಕಲ್ಕತ್ತದಲ್ಲಿ ಶ್ರೀಮತಿ ಇಂದಿರಾಗಾಂಧಿ ಭಾಷಣ

○ ○ ○

ಭಾರತ ಮತ್ತು ಬಂಗ್ಲಾ ದೇಶದಲ್ಲಿ ಸಾಮ್ರಾಜ್ಯಶಾಹಿ ಸಂಚು ನಡೆಸುವ ಕಾಲ ಈಗ ಮುಗಿದು ಹೋಗಿದೆ ಎಂದು ನಾನು ಅಮೇರಿಕ ಸರ್ಕಾರಕ್ಕೆ ಹೇಳ ಬಯಸುತ್ತೇನೆ.

ಶೇಖ ಮುಜೀಬುರ್ (6–2–1972)

○ ○ ○

ನೆರೆಹೊರೆಯವರ ನಡುವೆ ಘರ್ಷಣೆ ಉಂಟುಮಾಡುವ ಶಸ್ತ್ರರಹಿತ ಕಾರ್ಯನೀತಿ ಇಂದೇ ಕೊನೆಗೊಳ್ಳಲಿ. ನಮ್ಮ ಅಮೂಲ್ಯವಾದ ರಾಷ್ಟ್ರೀಯ ಸಂಪನ್ಮೂಲಗಳು ಈ ರೀತಿ ಅಪವ್ಯಯವಾಗಬಾರದು. ಜನಜೀವನ ಸುಧಾರಣೆಗಾಗಿ ಉಪಯೋಗವಾಗಬೇಕು.

ಶೇಖ ಮುಜೀಬುರ್ (5–2–1972)

○ ○ ○

ಗೌಹರ್ ಅವರ ಬಂಧನ ಭುಟ್ಟೋ ಅವರು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪದೇ–ಪದೇ ನೀಡಿದ ಆಶ್ವಾಸನೆಗಳ ಉಲ್ಲಂಘನೆ.

ಪಾಕಿಸ್ತಾನ ಪತ್ರಿಕಾ ಸಂಪಾದಕರ ಮಂಡಳಿ (5–2–1972)

ಪಾಕಿಸ್ತಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಬಹಳ ಭಾಗಿಯಾಗಿದೆ. ಯಾಹ್ಯಾಖಾನರಿಂದ ಮೊದಲುಗೊಂಡು ಟೆಲಿಗ್ರಾಫ್ ಆಫೀಸಿನ ಆಪರೇಟರ ವರೆಗೆ ಎಲ್ಲರೂ ಪತ್ರಿಕಾ ವರದಿಗಳ ನಿಯಂತ್ರಣ ಮಾಡಿದ್ದಾರೆ.

ಫ್ರೆಡ್ರಿಕ್ ಎಚ್. ಪೋಸ್ಟ್,
ಟೋಕ್ಯೋ ಪ್ರೆಸ್ ಕ್ಲಬ್.

ಅಧ್ಯಕ್ಷ ಭುಟ್ಟೋ, ಪಾಕಿಸ್ತಾನದ ಜನಗಳನ್ನು ಹೊಸಯುಗವೊಂದು ಆರಂಭವಾಗಿದೆ ಎಂಬ ಭಾವನೆ ಬರುವಂತೆ ಮಾಡಿದ್ದಾರೆ. ಈ ಹೊಸ ದಿನದ ಬರುವಿಕೆಗಾಗಿ ಹಾಗೂ ಹೊಸ ಬೆಳಕಿನ ಪ್ರತೀಕ್ಷೆಗಾಗಿ ನಾಗರಿಕರು ಅನಿರ್ದಿಷ್ಟ ಕಾಲ ಕಾಯುವಂತೆ ಮಾಡುವುದೇ ಭುಟ್ಟೋ ಅವರ ಗತ್ತುಗಾರಿಕೆ.

ಅಲ್ತಾಫ್ ಗೌಹರ್, ಕರಾಚಿಯ ಡಾನ್ ಪತ್ರಿಕೆಯ ಪ್ರಧಾನ ಸಂಪಾದಕರು.

○ ○ ○

ಇಸ್ಲಾಮಾಬಾದ್ ಕೊನೆಗೊಮ್ಮೆ ಬಂಗ್ಲಾ ದೇಶದ ವಾಸ್ತವಿಕತೆಯನ್ನು ಮಾನ್ಯ ಮಾಡಲೇಬೇಕು. ಒಮ್ಮೆ ಈ ಕೆಲಸ ಪೂರೈಸಿತೆಂದರೆ, ಭುಟ್ಟೋ ಅವರಿಗೆ ವಿದೇಶ ಬೆಂಬಲ ಖಚಿತವಾಗುತ್ತದೆ.

ನ್ಯೂಯಾರ್ಕ್ ಟೈಮ್ಸ್ 5–2–1972

○ ○ ○

ಪರಾವಲಂಬನೆಯಿಂದ ನಮ್ಮ ಸ್ವಾತಂತ್ರ್ಯಕ್ಕೆ ಸಂಚಕಾರ.–

ಎಂ. ಬಿ. ನಾಕ್ವಿ, ಪತ್ರ ಕರ್ತ

(ಡಾನ್ ಪತ್ರಿಕೆ)

ಬೆಳ್ತಂಗಡಿಯಲ್ಲಿ ವೀರೇಂದ್ರ ಪಾಟೀಲರ ಭಾಷಣ

ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಮ್ಮ ಪಕ್ಷದ ಅಭ್ಯರ್ಥಿ ಎಡ್ವಕೇಟ್ ಕೆ. ಚಿದಾನಂದ ಇವರ ಪರ ಚುನಾವಣಾ ಪ್ರಚಾರ ಭಾಷಣ ಮಾಡಲು ಬೆಳ್ತಂಗಡಿಗೆ ಆಗಮಿಸಿದ್ದರು. ಆರಂಭದಲ್ಲಿ ಬೆಳ್ತಂಗಡಿ ಬ್ಲಾಕ್ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ. ಎನ್. ಭಿಡೆಯವರು ಸ್ವಾಗತಿಸಿದರು.

ಶ್ರೀ ಪಾಟೀಲರು ತಮ್ಮ ಭಾಷಣದಲ್ಲಿ ತಮ್ಮ ಪಕ್ಷ ಮತ್ತು ಅದರ ಪ್ರತಿಸ್ಪರ್ಧಿಯಾದ ಆಡಳಿತ ಕಾಂಗ್ರೆಸ್ಸು ಪಕ್ಷಗಳ ಸಮಾಜವಾದಿ ಧೋರಣೆಗಳನ್ನು ವಿವರಿಸಿದರು. ಸಮಾಜವಾದಿ ಧೋರಣೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ತಮ್ಮ ನಾಯಕತ್ವದ ಮೈಸೂರು ಸರಕಾರವು ದೇಶದಲ್ಲೇ ಕ್ರಾಂತಿಕಾರಕ ಹೆಜ್ಜೆಯಿಟ್ಟಿದ್ದರೂ ಕೇಂದ್ರ ಸರಕಾರದ ಅಸಹಕಾರದಿಂದ ಪೂರ್ಣಗೊಳಿಸಲು ಅಸಾಧ್ಯವಾದುದು ಮೈಸೂರು ಜನತೆಯ ದುರಾದೃಷ್ಟವೆಂದರು. ಶ್ರೀ ಚಿದಾನಂದರು ಈ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿ ಎಂದವರು ತಿಳಿಸಿದರು.

ಅಂತ್ಯದಲ್ಲಿ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಕೆ. ಚಿದಾನಂದರು ವಂದನೆಗಳನ್ನರ್ಪಿಸಿದರು.

ಪದ್ಮಭೂಷಣ ಶ್ರೀ ಟಿ. ಎ. ಪೈಯವರಿಗೆ ಉಜಿರೆಯಲ್ಲಿ ಸನ್ಮಾನ

ಉಜಿರೆಯ ಕಾಲೇಜಿನಲ್ಲಿ ಜೀವವಿಮಾ ಸಂಸ್ಥೆಯ ಅಧ್ಯಕ್ಷ ಪದ್ಮಭೂಷಣ ಡಾ। ಟಿ ಎ. ಪೈಯವರನ್ನು ಮಂಗಳೂರಿನ ಕೆನರಾ ಚೇಂಬರಿನ ಅಧ್ಯಕ್ಷ ಶ್ರೀ ಯು. ರಾಜಾರಾಮ ಮಲ್ಯರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಆರಂಭದಲ್ಲಿ ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿದರು.

ಶ್ರೀ ಪೈಯವರು ಮಾತನಾಡುತ್ತಾ ಯುವಕರನ್ನು ಮುಂದೆ ತರುವಂತೆ ಹಿರಿಯರಾದವರು ಪ್ರಯತ್ನಿಸಬೇಕೆಂದೂ ಯುವ ಸಮೂಹಕ್ಕೆ ನೇತೃತ್ವ ದೊರೆಯಲಿ ಎಂದೂ ತಿಳಿಸಿದರು. ಜೀವವಿಮಾ ಸಂಸ್ಥೆಯು ತನ್ನಲ್ಲಿರುವ ಎರಡು ಸಾವಿರ ಕೋಟಿ ಸಂಪನ್ಮೂಲಗಳನ್ನು ಜನರ ಅವಶ್ಯಕತೆಗಳಿಗೆ ಉಪಯೋಗಿಸಿ ಜನಸೇವೆಯ ಮೂಲಕ ಜನತೆಯ ಪ್ರೀತಿ ವಿಶ್ವಾಸ ಗಳಿಸಲು ಶಕ್ತವಾಗಿದೆ ಎಂದರು. ತಮ್ಮನ್ನು ಗೌರವಿಸಿದುದಕ್ಕೆ ಅವರು ಕೃತಜ್ಞತೆಗಳನ್ನು ಸಲ್ಲಿಸಿದರು.

ಶ್ರೀ ರಾಜಾರಾಮ ಮಲ್ಯರು ಮಾತಾಡಿ ಧರ್ಮಸ್ಥಳಕ್ಕೆ ಬರುವ ಸಂಪತ್ತನ್ನು ಕೈಗಾರಿಕಾಭಿವೃದ್ಧಿಗೆ ಸಾಲವಾಗಿ ಒದಗಿಸುವಂತೆ ಶ್ರೀ ಹೆಗ್ಗಡೆಯವರನ್ನು ವಿನಂತಿಸಿದರು. ಶ್ರೀ ಪೈಯವರಿಗಿತ್ತ ಗೌರವ ಸ್ವಾಗತಾರ್ಹವೆಂದರು. ಅಂತ್ಯದಲ್ಲಿ ಶ್ರೀ ಬಿ. ನರಸಿಂಹ ಭಟ್ಟರು ಧನ್ಯವಾದವಿತ್ತರು.

ನಾವು ರಬ್ಬರ್‌ವಸ್ತುಗಳಲ್ಲಿ ಪೂರ್ಣ ಸ್ವಾವಲಂಬಿಗಳು

ಈಗ ಭಾರತದಲ್ಲಿ ಸುಮಾರು 3310ಕೋಟಿ ರೂ. ಬೆಲೆಬಾಳುವಷ್ಟು ರಬ್ಬರ್ ಉತ್ಪನ್ನವಿದ್ದು, ಸ್ವಯಂಚಾಲಿತ ವಾಹನಗಳು ಹಾಗೂ ಬೈಸಿಕಲ್‌ಗಳ ಟ್ಯೂಬ್ ಮತ್ತು ಟೈರುಗಳು, ಪಾದರಕ್ಷೆಗಳು, ಬೆಲ್ಟ್‌ಗಳ ತಯಾರಿಕೆ, ವೈದ್ಯಕೀಯ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಬಳಸುವ ರಬ್ಬರ್‌ವಸ್ತುಗಳು, ಲ್ಯಾಟೆಕ್ಸ್ ರಬ್ಬರ್ ವಸ್ತುಗಳು ಇತ್ಯಾದಿಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ.

○ ○ ○

1971ರ ಮೊದಲ ಹತ್ತು ತಿಂಗಳಲ್ಲಿ ಅಂದರೆ ಆಕ್ಟೋಬರ್ ತಿಂಗಳ ವೇಳೆಗೆ ದೇಶದಲ್ಲಿನ ರಬ್ಬರ್ ಉತ್ಪನ್ನ 1.15 ಲಕ್ಷ ಟನ್‌ಗಳಷ್ಟಿದ್ದು, 1970ರ ಇದೇ ಅವಧಿಯಲ್ಲಿನ ಉತ್ಪನ್ನಕ್ಕಿಂತ ಶೇಕಡ 10.3ರಷ್ಟು ಏರಿದೆ.

○ ○ ○

1971ರಲ್ಲಿ ದೇಶದಲ್ಲಿ ತಯಾರಾದ ರಬ್ಬರ್ ಉತ್ಪನ್ನಗಳಿಂದಾಗಿ 9.3 ಕೋಟಿ ರೂ.ಗಳ ವಿದೇಶಿ ವಿನಿಮಯವನ್ನು ಗಳಿಸಲಾಗಿದೆ. 1969–70ರಲ್ಲಿನ ಈ ವಸ್ತುಗಳಿಂದ ಗಳಿಸಿದ ವಿದೇಶಿ ವಿನಿಮಯ 7.88 ಕೋಟಿ ರೂ.ಗಳು

○ ○ ○

ಕಳೆದ ವರ್ಷ ನಾವು ಗಳಿಸಿರುವ ವಿದೇಶಿ ವಿನಿಮಯದಲ್ಲಿ ಸ್ವಯಂಚಾಲಿತ ವಾಹನಗಳ ಟೈರುಗಳು ಮತ್ತು ಟ್ಯೂಬ್‌ಗಳ ರಫ್ತಿನಿಂದಾಗಿ ಗಳಿಸಿರುವ ವಿದೇಶಿ ವಿನಿಮಯ ಶೇಕಡ 58ರಷ್ಟು ಇವೆ. ಬರ್ಮಾ, ಮಾರಿಷಸ್, ಈಜಿಪ್ಟ್, ಸೂಡಾನ್, ಆಸ್ಟ್ರೇಲಿಯ, ಅಮೇರಿಕ ಮತ್ತು ಇಂಗ್ಲೆಂಡ್ ಇವು ನಮ್ಮ ರಬ್ಬರ್ ವಸ್ತುಗಳ ಮುಖ್ಯ ಗಿರಾಕಿಗಳು

○ ○ ○

ದೇಶದಲ್ಲಿ ಈಗ 1400ಕ್ಕೂ ಹೆಚ್ಚು ರಬ್ಬರ್ ಉತ್ಪನ್ನಗಳ ಕಾರ್ಖಾನೆಗಳಿದ್ದು, ಒಂದು ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿದೆ.

○ ○ ○

ಕೋಟಿ ಚೆನ್ನಯ ಜೋಡುಕೆರೆ ಕಂಬಳ

ಉಡುಪಿ ಸ್ಪೋರ್ಟ್ಸ್ ಎಂಡ್ ಕಲ್ಚರಲ್ ಎಸೋಸಿಯೇಶನ್‌ರವರು ಇಲ್ಲಿಯ ಆದಿಉಡುಪಿಯಲ್ಲಿ ತಾ. 27–2–72ರಂದು ಏರ್ಪಡಿಸಿದ ಕೋಟಿ ಚೆನ್ನಯ ಜೋಡುಕೆರೆ ಕಂಬಳದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು, ಉಡುಪಿಯಲ್ಲಿ ಪ್ರಥಮವಾಗಿ ಓಟದ ಕೋಣಗಳ ಕಂಬಳವನ್ನು ಏರ್ಪಡಿಸಿ ಸಹಸ್ರಾರು ಜನರು ರೋಮಾಂಚಕ ಸನ್ನಿವೇಶಗಳನ್ನು ನೋಡಿ ಸಂತೋಷ ಪಡುವ ಅವಕಾಶವನ್ನು ಕಲ್ಪಿಸಿ ಕೊಟ್ಟುದಕ್ಕಾಗಿ ಮೇಲಿನ ಸಂಸ್ಥೆಯನ್ನೂ ಅದರ ಪ್ರಧಾನಶಾಲಿ ಶಕ್ತಿಯಾದ ಅಧ್ಯಕ್ಷ ಡಾ। ಬಿ. ಬಿ. ಶೆಟ್ಟರನ್ನೂ, ಹಾಗೂ ಕೋಣಗಳನ್ನು ಕಳುಹಿಸಿಕೊಟ್ಟ ಮಾಲಕರನ್ನೂ ಅಭಿನಂದಿಸಿ ಇದು ಪ್ರತಿವರ್ಷಂಪ್ರತಿ ನಡೆಯಬೇಕೆಂದು ಕೋರಿದರು.

ಪ್ರಾರಂಭದಲ್ಲಿ ಎಸೋಸಿಯೇಶನಿನ ಅಧ್ಯಕ್ಷ ಡಾ। ಬಿ. ಬಿ. ಶೆಟ್ಟರು ಸ್ವಾಗತಿಸಿ ಮಾನ್ಯ ಅತಿಥಿಗಳ ಪರಿಚಯ ಮಾಡಿಸಿ, ಎಸೋಸಿಯೇಶನಿನ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು.

ಮಂಗಳೂರಿನ ಸುಪ್ರಸಿದ್ಧ ಸರ್ಜನರಾದ ಡಾ। ಎಂ. ವಿ. ಶೆಟ್ಟರು ಬಹುಮಾನ ವಿತರಣೆ ಮಾಡುತ್ತಾ, ದಕ್ಷಿಣ ಕನ್ನಡದಲ್ಲಿ ಮಾತ್ರ ನಡೆಯುವಂಥಾ ಕಂಬಳವನ್ನು ತಾನು ಜಿಲ್ಲೆಯ ಬೇರೆ ಕಡೆಗಳಲ್ಲಿ ನೋಡಿರುವೆನಾದರೂ, ಇಷ್ಟು ವ್ಯವಸ್ಥಿತವಾಗಿ ನಡೆದಿರುವುದನ್ನು ನೋಡಿಲ್ಲವೆಂದು ನುಡಿದು ಇದನ್ನು ಏರ್ಪಡಿಸಿದ ಸಂಸ್ಥೆಯ ಉತ್ಸಾಹ ಸಾಹಸವನ್ನು ಕೊಂಡಾಡಿದರು.

ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಸಂಸ್ಥೆಯ ಸಮುದ್ದೇಶಗಳನ್ನು ಶ್ಲಾಘಿಸಿ ಕೋಣಗಳನ್ನು ಓಡಿಸುವಂಥವರು ವೀರಾವೇಶದಿಂದ ತಮ್ಮ ಗಂಡಸುತನ ಪ್ರದರ್ಶಿಸಿರುವಂಥದು ಅತ್ಯಂತ ಮನೋಹರವಾಗಿರುತ್ತದೆಯೆಂದು ನುಡಿದರು.

ಕಂಬಳಕ್ಕೆ ಜಿಲ್ಲೆಯ ವಿವಿಧೆಡೆಗಳಿಂದ 32 ಜತೆ ಕೋಣಗಳು ಬಂದಿದ್ದವು, 6 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ನೆರೆದಿದ್ದರು. ಭಾರತ ಸರಕಾರದ ಸಾಕ್ಷಿ ಚಿತ್ರದ ಇಲಾಖೆಯವರು ಇಡೀ ಕಂಬಳದ ಬೇರೆ ಬೇರೆ ವಿಭಾಗಗಳ ಚಿತ್ರೀಕರಣ ಮಾಡಿಕೊಂಡಿರುವರು. ಕಂಬಳದ ಸಾಕ್ಷಿ ಚಿತ್ರ ತೆಗೆದದ್ದು ಇದೇ ಮೊದಲಾಗಿದೆ.

ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ವಿಲ್ಲಿಯಂ ಪೋರ್ಟೆಸರು ಧನ್ಯವಾದ ಸಮರ್ಪಿಸಿದರು.

ರಾತ್ರಿ ಕರ್ನಾಟಕ ಯಕ್ಷಗಾನ ಸಭಾದವರಿಂದ ನಳದಮಯಂತಿ ಯಕ್ಷಗಾನ ಬಯಲಾಟ ನೆರವೇರಿತು

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ಅಮೃತಾಂಜನ

ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ **ಲಿಮಿಟೆಡ್,**
ಮದ್ರಾಸು-4

In the Court of the Munsiff of Bantwal. South Kanara

S.C.No. 42/1971.

Between: —

Govinda Bhat. — Plaintiff.

and

Chennappa Poojary, S/O. Chandu Poojary, residing at Kariyangala, via Kurnad, Bantwal Tq. — Defendant.

Please take notice that the above case filed by the Plaintiff, is posted for your (Defendant) appearance. If you failed to appear in person or through your counsel, the matter will be decided exparte. You are hereby informed that if you want to contest the matter should appear on 22-3-1972 at 11 A.M. before the court.

(By Order of the Court)

P. Shankernarayana
Advocate for Plaintiff.

Bantwal, Dt. 29-2-1972.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕಾರ್ಪೊರೇಶನ್ ಬ್ಯಾಂಕಿನ ಪ್ರಶಂಸನೀಯ ಪ್ರಗತಿ

ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಖಾಸಗಿ ರಂಗದ ಶೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಒಂದು. ೧೯೦೬ ರಷ್ಟು ಹಿಂದೆಯೇ ಇದು ಸ್ಥಾಪನೆಯಾದದ್ದಾದರೂ ಈಗ ಒಂದೆರಡು ವರ್ಷಗಳಿಂದದು ಅತ್ಯಂತ ಪ್ರಗತಿ ಸಾಧಿಸಲು ಸಾಧ್ಯವಾಯಿತು. ಅದುವರೆಗೆ 'ತಟಸ್ಥ' ಮಾದರಿಯಲ್ಲೇ ಸೇವಾನಿರತವಾಗಿದ್ದ ಕಾರ್ಪೊರೇಶನ್ ತನ್ನ ಹೊಸ ಚೇಯರ್‌ಮನ್ ಶ್ರೀ ಎಂ. ಆರ್. ಕಾಮತರ ನೇತೃತ್ವದಲ್ಲಿ ಪ್ರಗತಿಶೀಲ ಪಥಭ್ರಮಣಕ್ಕೆ ಆರಂಭ ಮಾಡಿದೆ.

೧೯೭೧ನೆಯ ವರ್ಷದ ಆರಂಭ ಮತ್ತು ಕೊನೆಯಲ್ಲಿದ್ದ ಕಾರ್ಪೊರೇಶನ್ನಿನ ಕೆಲವು ಅಂಕೆ ಸಂಖ್ಯೆಗಳು ಆಕರ್ಷಕವಿವೆ. (ಲಕ್ಷ ರೂಪಾಯಿಗಳಲ್ಲಿ)

	ಆರಂಭ	ಕೊನೆ
ಬಂಡವಾಳ	೪೭.೫೦	೪೭.೫೦
ಕಾಯ್ದಿಟ್ಟ ನಿಧಿ	೪೮.೭೫	೪೦.೦೦
ಠೇವಣಿ	೨೭೪೧.೩೧	೪೧೨೭.೩೨
ಮುಂಗಡ	೧೫೪೧.೬೩	೨೦೬೭.೦೨

೧೯೭೧ರಲ್ಲಿ ಬ್ಯಾಂಕು ೨೪ ಹೊಸ ಶಾಖೆಗಳನ್ನು ತೆರದು ವರ್ಷಾಂತ್ಯದಲ್ಲಿ ಒಟ್ಟು ೧೧೪ ಶಾಖೆಗಳನ್ನು ಹೊಂದಿತು. ಇವುಗಳಲ್ಲಿ ೨೩ ಸ್ಥಳಗಳಲ್ಲಿ ಕಾರ್ಪೊರೇಶನ್ ಒಂದೇ ಬ್ಯಾಂಕಿಂಗ್ ಸೌಲಭ್ಯ ನೀಡುವ ಶೆಡ್ಯೂಲ್ಡ್ ಬ್ಯಾಂಕು ೧೧೪ ಶಾಖೆಗಳಲ್ಲಿ ೬೩ ಶಾಖೆಗಳು ಗ್ರಾಮೀಣ—ಅರೆಗ್ರಾಮೀಣ ಪ್ರದೇಶಗಳಲ್ಲಿಯೇ ಹೊಂದಿರುವುದು ಬ್ಯಾಂಕಿನ ಒಂದು ವೈಶಿಷ್ಟ್ಯ.

ಬ್ಯಾಂಕು ಇತ್ತೀಚೆಗಿನ ದಿನಗಳಲ್ಲಿ ಆದ್ಯತೆ ಪಡೆದ ಮತ್ತು ಕಡೆಗಾಣಿಸಲ್ಪಟ್ಟ ವಿಭಾಗಗಳಿಗೆ ಉದಾರವಾಗಿ ಸಾಲ ನೀಡ ತೊಡಗಿದೆ. ಈ ಸಾಲದ ಮೊತ್ತವು ಕೆಲವೊಮ್ಮೆ ರೂ. ೧೦೦|= ಮಾತ್ರ ಆಗಿರುವುದೂ ಉಂಟು ಅಂದರೆ ಪ್ರತಿಯೊಬ್ಬನಿಗೂ ತನ್ನ ಆವಶ್ಯಕತೆಗಳನ್ನು ಪೂರಯ್ಸಲು ಬ್ಯಾಂಕು ನೆರವಾಗುತ್ತಿದೆಯೆಂಬುದು ಗಣನೀಯ. ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಪ್ರಾಥಮಿಕ ಕೃಷಿಕ ಸಹಕಾರಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಹೊಣೆಗಾರಿಕೆಯನ್ನೂ ಬ್ಯಾಂಕು ವಹಿಸಿ ಕೊಂಡಿರುವುದು ಸ್ತುತ್ಯಾರ್ಹ.

೧೯೭೨ರಲ್ಲಿ ಬ್ಯಾಂಕು ತನ್ನ ಶಾಖಾ ಜಾಲವನ್ನು ಮತ್ತಷ್ಟು ವಿಸ್ತರಿಸುವ ವಿಶಾಲ ಯೋಜನೆಯನ್ನು ಹಾಕಿಕೊಂಡಿದೆ.

ತನ್ನ ವ್ಯವಹಾರದಲ್ಲಿ ಬ್ಯಾಂಕು ೧೯೭೧ರಲ್ಲಿ ರೂ. ೬.೨೦ ಲಕ್ಷ ಲಾಭ ಗಳಿಸಿದ ಈಕ್ವಿಟಿ ಶೇರುಗಳಿಗೆ ಸೇ. ೧೧ರ ಡಿವಿಡೆಂಡ್ ಘೋಷಿಸಲು ಸಮರ್ಥವಾಗಿದೆ. ಪ್ರಿಫರೆನ್ಸ್ ಶೇರುಗಳಿಗೂ ಉತ್ತಮ ಡಿವಿಡೆಂಡ್ ನೀಡಿದೆ, ನೌಕರರಿಗೆ ಬೋನಸ್ ಮೊದಲಾದುವುಗಳನ್ನು ಕೊಟ್ಟು ಕಾಯ್ದಿಟ್ಟ ನಿಧಿಯನ್ನು ಬೆಳೆಸಿಕೊಂಡಿದೆ.

ಶ್ರೀಸಾಮಾನ್ಯನಿಗೆ ಬ್ಯಾಂಕಿಂಗ್ ಸೌಲಭ್ಯ ನೀಡುವ ಕೇಂದ್ರ ಸರಕಾರದ ಯೋಜನೆಯನ್ನು ರೂಢಿಸಿ ಕೊಳ್ಳುವಲ್ಲಿ ಅತ್ಯಂತಾಸಕ್ತಿಯನ್ನು ತೋರಿಸುತ್ತಿರುವ ಕಾರ್ಪೊರೇಶನ್ ಬ್ಯಾಂಕು ದಿನೇ ದಿನೇ ಬೆಳೆದು ಬರುವುದು ನಿಸ್ಸಂದೇಹ. ಇದಕ್ಕೆ ಕಾರಣಪುರುಷರಾದ ಚೆಯರ್‌ಮನ್ ಶ್ರೀ ಕಾಮತರೂ, ಡೈರೆಕ್ಟರ—ಸಿಬ್ಬಂದಿಯವರೂ ಅಭಿನಂದನಾರ್ಹರು.

●●

(ಏಳನೇ ಪುಟದಿಂದ)

ಶ್ರೀಮಂತ ದೇಶಗಳು ಮುದ್ರೆಯೊತ್ತಿದರೆ ಮಾತ್ರ ಬಡ ದೇಶಗಳು ಉಸಿರಾಡುತ್ತವೆಯೆಂಬ ಕಲ್ಪನೆ ಇಂದು ಸವಕಲಾಗಿದೆ; ಶಕ್ತಿಯ ಸಮತೋಲನೆ ನಡೆಯದ ಮಾತಾಗಿದೆ.

ತಮ್ಮ ಆ. ವಿಧೇಯ ಶಿಷ್ಯ ಭುಟ್ಟೋವಿಗಾದ ಬಾಂಗ್ಲಾ ನಷ್ಟವನ್ನು ಕಾಶ್ಮೀರಲಾಭದಿಂದ ತುಂಬಿ ಕೊಡುವ ಹೊಸ ಸಂಚನ್ನು ಅಮೇರಿಕೆ—ಚೀನಾ ಹೂಡಿದ್ದರೆ, ಅದೆಂದಿಗೂ ಈಡೇರದು. ಭಾರತೀಯರಿನ್ನೂ ಬೆರಳು ಚೀಪುವವರಾಗಿಯೇ ಉಳಿದಿಲ್ಲ.

ಅವರಿಗೆ ಪಾಕಿಸ್ತಾನದ ಹಿತ ಅಪೇಕ್ಷಣೀಯವಾಗಿರುವುದಾದರೆ, ಇನ್ನೂ ಹರಿದು ಹೋಗಲು ತಯಾರಾಗಿರುವ ದೇಶವನ್ನು ಉಳಿಸಿಕೊಳ್ಳುವಂತೆ, ನೆರೆ ಹೊರೆಯಲ್ಲಿ ಉತ್ತಮ ಸಂಬಂಧ ನೆಲೆಗೊಳಿಸುವಂತೆ ಭುಟ್ಟೋಗೆ ಸಲಹೆ ನೀಡಲಿ.

ಹರಿದು ಹೋದ ನೀರನ್ನು ಮರಳಿ ತರುವ ಸಾಹಸವನ್ನು ಮರುಳೆಂದು ತಿಳಿ ಹೇಳಲಿ.

●●

ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ ಭವಿಷ್ಯ ಆಶಾದಾಯಕ

—ರಾಮಕೃಷ್ಣ ಹೆಗ್ಡೆ

ದ. ಕ. ಜಿಲ್ಲೆಯಲ್ಲಿ ಎರಡು ದಿನಗಳ ಚುನಾವಣಾ ಪ್ರಚಾರಕ್ಕಾಗಿ ಮಂಗಳೂರಿಗೆ ಆಗಮಿಸಿದ ಮಾಜಿ ಸಚಿವ ಶ್ರೀ ರಾಮಕೃಷ್ಣ ಹೆಗ್ಡೆಯವರು ಪತ್ರಕರ್ತರೊಂದಿಗೆ ಮಾತನಾಡುತ್ತಾ, ಬಾಂಗ್ಲಾ ಸಮಸ್ಯೆಯ ಕುರಿತು ಪ್ರಧಾನಿಯವರ ನಿಲುವನ್ನು ಜನತೆ ಮೆಚ್ಚಿದೆಯೆಂಬುದನ್ನು ಪ್ರಚಂಡ ಬಹುಮತದಿಂದ ಪ್ರದರ್ಶಿಸಬೇಕೆಂದು ಹೇಳುವುದರ ಮೂಲಕ ಚುನಾವಣಾ ಪ್ರಚಾರ ಮಾಡುವುದು ವಿಚಿತ್ರವಾಗಿದೆ. ಆದರು ಈ ರಾಷ್ಟ್ರೀಯ ಸಮಸ್ಯೆಗೆ ಸ್ಥಳೀಯ ವಿಧಾನ ಸಭಾ ಚುನಾವಣೆಯನ್ನು ವೇದಿಕೆಯನ್ನಾಗಿ ಮಾಡಿಕೊಳ್ಳುವುದು ಸರಿಯಾದ ದಾರಿಯಲ್ಲ, ಈ ಸಲದ ಚುನಾವಣೆಯು ರಾಜ್ಯದ ಜನತೆಯ ಹಿತರಕ್ಷಣೆ; ಅಭಿವೃದ್ಧಿ ಸಾಧನೆಗಳಿಗೆ ಸಂಬಂಧಿಸಿದೆ. ಇದರಲ್ಲಿ ಯಾವುದೇ ರಾಷ್ಟ್ರೀಯ ಸಮಸ್ಯೆ ಒಳಗೊಂಡಿಲ್ಲವೆಂದು ಸ್ಪಷ್ಟಪಡಿಸಿದರು. ಅಲ್ಲದೆ ರಾಜ್ಯ ಮತ್ತು ಕೇಂದ್ರ ಸರಕಾರಗಳೊಳಗಿನ ಜಗಳವೆಂಬುದನ್ನೂ ತಾನು ನಂಬುವುದಿಲ್ಲವೆಂದೂ, ಬಡತನದ ನಿವಾರಣೆ ಹಾಗೂ ಸಮಾಜವಾದದ ಅನುಷ್ಠಾನದ ಕಾರ್ಯಕ್ರಮಗಳಲ್ಲಿ ಶ್ರೀ ವೀರೇಂದ್ರ ಪಾಟೀಲರ ನಾಯಕತ್ವದ ಸಂಸ್ಥಾ ಕಾಂಗ್ರೆಸ್ ಈ ವರೆಗೆ ಪ್ರಧಾನಿಯವರಿಗೆ ಸರ್ವ ರೀತಿಯ ಸಹಕಾರ ನೀಡಿದೆ. ಇನ್ನು ಅದಕ್ಕಿಂತಲೂ ಹೆಚ್ಚು ಸಹಕಾರ ನೀಡಲು ಸಿದ್ಧವಿದೆ ಎಂದು ಸ್ಪಷ್ಟಪಡಿಸಿದರು ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸಿನ ಭವಿಷ್ಯ ಉತ್ತಮವಿರುವಂತೆ ಕಂಡು ಬರುತ್ತದೆ. ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಪ್ರೋತ್ಸಾಹ, ಬೆಂಬಲ ದೊರಕುತ್ತಿದೆ. ಯಾವುದೇ ಅನಿರೀಕ್ಷಿತ ಬದಲಾವಣೆಗಳಾಗದಿದ್ದಲ್ಲಿ ರಾಜ್ಯದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರುವ ನಿರೀಕ್ಷೆಯಿದೆಯೆಂದೂ ನುಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಭಾ ಸದಸ್ಯ ಡಾ। ಕೆ. ನಾಗಪ್ಪ ಆಳ್ವ, ಮಂಗಳೂರು 1ನೇ ಕ್ಷೇತ್ರದ ಅಭ್ಯರ್ಥಿ ಶ್ರೀ ಎಸ್. ಕೆ. ಅಮೀನ್ ಮೊದಲಾದವರು ಉಪಸ್ಥಿತರಿದ್ದರು.

ಮತದಾರರು ವಿವೇಚಿಸಿ ಮತ ನೀಡುವಂತೆ ಶ್ರೀ ರಾಮಕೃಷ್ಣ ಹೆಗ್ಡೆಯವರ ಕರೆ

ಬ್ರಹ್ಮಾವರ ಮತ್ತು ಸಾಲಿಗ್ರಾಮಗಳಲ್ಲಿ ಸೇರಿದ ಜನಸ್ತೋಮಗಳನ್ನು ಉದ್ದೇಶಿಸಿ ಸಂಸ್ಥಾ ಕಾಂಗ್ರೆಸ್ ಉಪಾಧ್ಯಕ್ಷ ಶ್ರೀ ರಾಮಕೃಷ್ಣ ಹೆಗ್ಡೆಯವರು ಮಾತನಾಡುತ್ತಾ, ಆಳಿತ ಕಾಂಗ್ರೆಸಿನ "ಗರೀಬಿ ಹಟಾವೋ" ಎಂದು ಮುಂತಾದ ಆಕರ್ಷಕ ಘೋಷಣೆಗಳೆಲ್ಲವೂ ಇನ್ನೂ ಬರಿಯ ಕನಸಾಗಿಯೆ ಉಳಿದಿವೆ. ಬಡವರ ಪಕ್ಷವೆಂದು ಹೇಳಿಕೊಂಡಿರುವ ಈ ಪಕ್ಷವು ಬಡ ಜನತೆಗಾಗಿ ಯಾವ ಕೆಲಸ ಮಾಡಿದೆ? ದೇಶದಲ್ಲೆ ಪ್ರಗತಿಪರ ಸರಕಾರವೆಂದು ಹೆಸರು ಗಳಿಸಿದ ಶ್ರಿ ವೀರೇಂದ್ರ ಪಾಟೀಲರ ಸಂಪುಟವನ್ನು ಉರುಳಿಸುವುದರಲ್ಲಾದರೆ ಅದು ಯಶಸ್ವಿಯಾಗಿದೆ. ಮತದಾರರು ಚೆನ್ನಾಗಿ ವಿವೇಚನೆ ನಡೆಸಿ ರಾಜ್ಯದ ನಿಜವಾದ ಹಿತಚಿಂತಕರು ಯಾರೆಂದು ಮನಗಂಡು ಅವರಿಗೆ ಮತನೀಡಬೇಕೇ ವಿನಾ ಅಧಿಕಾರದ ಬೆನ್ನು ಹತ್ತಿದವರಿಗಲ್ಲ ಎಂದು ನುಡಿದರು. "ನಮ್ಮ ಪಕ್ಷ ಬಹುಮತಗಳಿಸಿ ಸರಕಾರ ರಚಿಸಿದರೆ ಕೇಂದ್ರ ಸರಕಾರಕ್ಕೆ ಎಂದೂ ಅಸಹಕಾರ ತೋರಲಾರೆವು ಅದರೆ ಸತ್ಯಕ್ಕಾಗಿ ಹೋರಾಡದೆಯೂ ಬಿಡಲಾರೆವು. ಎಂದರಲ್ಲದೆ ರಾಜ್ಯದ ಸರ್ವಾಂಗೀಣ ಪ್ರಗತಿಗೆ ಸಂಸ್ಥಾ ಕಾಂಗ್ರೆಸ್ ಸರಕಾರವೆ ಅಸ್ತಿತ್ವಕ್ಕೆ ಬರುವಂತೆ ಮಾಡಿರೆಂದು ಅವರು ಜನರನ್ನು ಕೇಳಿಕೊಂಡರು.

ಬ್ರಹ್ಮಾವರ ಕ್ಷೇತ್ರದ ಸಂ. ಕಾ. ಅಭ್ಯರ್ಥಿ ಶ್ರೀ ಎಂ. ಎಂ. ಹೆಗ್ಡೆಯವರ ಪರವಾಗಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಪ್ರಚಾರ ಭಾಷಣ ನೀಡಿದರು. ಬ್ರಹ್ಮಾವರದಲ್ಲಿ ಶ್ರೀ ಬಿ. ಜಗಜೀವನದಾಸ ಶೆಟ್ಟಿಯವರೂ, ಸಾಲಿಗ್ರಾಮದಲ್ಲಿ ಶ್ರೀ ಅ. ಗ. ಅಡ್ಗೆಯವರೂ ಸ್ವಾಗತಿಸಿದರು. ಎರಡೂ ಕಡೆಗಳಲ್ಲಿ ಶ್ರೀ ಎಂ. ಎಂ. ಹೆಗ್ಡೆಯವರು ವಂದಿಸಿದರು.

ಪುತ್ತೂರಿನಲ್ಲಿ ಶ್ರೀ ಸಿ. ಸುಬ್ರಹ್ಮಣ್ಯಂ

ಕಳೆದ ಸೋಮವಾರ ಪುತ್ತೂರು ಕ್ಷೇತ್ರದ ಆ. ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಕೇಂದ್ರದ ಯೋಜನಾ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂರವರು ಮಾತನಾಡುತ್ತಾ, ಪ್ರಜಾಪ್ರಭುತ್ವದಲ್ಲಾಗಲೀ ಸ್ಥಾನಿಕ ಸರಕಾರದಲ್ಲಾಗಲೀ ಆಡಳಿತ ನಿರ್ವಹಣೆ ಯೋಗ್ಯ ನೇತಾರರಿಂದ ಮಾತ್ರ ಸಾಧ್ಯ. ನೇತೃತ್ವದ ಕೊರತೆ ಇದ್ದಲ್ಲಿ ಆಡಳಿತ ಕುಸಿದು ಬಿದ್ದ ಉದಾಹರಣೆಗಳಿವೆ. ನೇತಾರರನ್ನು ಆಯ್ಕೆ ಮಾಡುವ ಯಾ ಉರುಳಿಸುವ ಕೆಲಸ ಪ್ರಜೆಗಳದ್ದು. ಇಂದಿರಾ ಗಾಂಧಿಯವರದ್ದು ಸಮರ್ಥ ಅಂಕಿತ ನೇತೃತ್ವ. ಯಾವ ಪಕ್ಷದ ಧ್ಯೇಯ ಧೋರಣೆಗಳು ಅನುಷ್ಠಾನಕ್ಕೆ ಯೋಗ್ಯವೋ ಆ ಪಕ್ಷವನ್ನು ಆಯ್ಕೆ ಮಾಡುವುದರಲ್ಲಿ ಪ್ರಜಾಪ್ರಭುತ್ವದ ಏಳಿಗೆಯಿದೆ. ಕಳೆದ ಚುನಾವಣಾ ಫಲಿತಾಂಶದಂತೆ ಈ ಬಾರಿಯೂ ನಮಗೆ ಪ್ರಚಂಡ ಬಹುಮತ ದೊರೆಯುವುದೆಂಬುದರಲ್ಲಿ ಸಂಶಯವಿಲ್ಲ. ಎಂದು ನುಡಿದರು.

ಈ ಸಂದರ್ಭದಲ್ಲಿ ಶ್ರೀ ಪಿ. ರಂಗನಾಥ್ ಶೆಣೈಯವರು ಮಾತನಾಡುತ್ತಾ, ಜನಸಂಘ ಮತ್ತು ಸಂಸ್ಥಾ ಕಾಂಗ್ರೆಸಿನ ನಕಲಿ ಸಮಾಜವಾದವನ್ನು ತಿರಸ್ಕರಿಸಿ, ಇಂದಿರಾ ಗಾಂಧಿಯವರ ತತ್ವಗಳಲ್ಲಿ ನಂಬಿಕೆ ಉಳ್ಳವರು ಆ. ಕಾ. ಅಭ್ಯರ್ಥಿ ಶ್ರೀ ಶಂಕರ ಆಳ್ವರನ್ನು ಆರಿಸಿ ತರುತ್ತಾರೆಂದು ನನಗೆ ವಿಶ್ವಾಸವಿದೆಯೆಂದು ನುಡಿದರು.

ಪ್ರಾರಂಭದಲ್ಲಿ ಶ್ರೀ ಕೆ. ರಾಮಕೃಷ್ಣರವರು ಸ್ವಾಗತಿಸಿ ಕೊನೆಯಲ್ಲಿ ಶ್ರೀ ಸಾಮೆತಡ್ಕ ಗೋಪಾಲಕೃಷ್ಣ ಭಟ್ಟರು ಧನ್ಯವಾದ ಸಮರ್ಪಿಸಿದರು.

ಎಡನೀರು ವಿಷ್ಣುಮಂಗಲ ದೇವರ ಉತ್ಸವ

ಎಡನೀರು ವಿಷ್ಣುಮಂಗಲ ದೇವಾಲಯದ ವರ್ಷಾವಧಿ ಉತ್ಸವವು ಯಥಾವಿಧಿಯಂತೆ ವಿವಿಧ ಕಾರ್ಯಕ್ರಮಗಳನ್ನೊಳಗೊಂಡು ಯಶಸ್ವಿಯಾಗಿ ಜರಗಿತು, ಪ್ರತಿ ವರ್ಷದಂತೆ ಕುಂಭ ಸಂಕ್ರಮಣದಂದು ಧ್ವಜಾರೋಹಣವಾಗಿ ಉತ್ಸವವು ೫ ದಿನಗಳ ವರೆಗೆ ಜರಗಿತು.

ಇದೇ ಸಂದರ್ಭದಲ್ಲಿ ಪೂಜ್ಯ ಶ್ರೀ ಕೇಶವಾನಂದ ಭಾರತೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ಜರಗಿತು. ಆರಂಭದಲ್ಲಿ ಮಧೂರು ಮಹೇಶ್ವರ ಸರಳಾಯರಿಂದ ಪ್ರಾರ್ಥನೆಯಾದ ಬಳಿಕ ವೆಂಕಟರಾಜ ಪುಣಿಂಚತ್ತಾಯರು ಸ್ವಾಗತಿಸಿದರು ಶ್ರೀ ಬಂದಿಗೆ ಕಾನು ಭಟ್ಟರು ವೈದಿಕ ಧರ್ಮದ ಶ್ರೇಷ್ಠತೆಯ ಕುರಿತು ಮಾತಾಡಿದರು.

ಪೂಜ್ಯ ಶ್ರೀ ಕೇಶವಾನಂದ ಶ್ರೀ ಪಾದಂಗಳವರು ಮಾತಾಡುತ್ತಾ 'ಸತ್ಯಂ ವದ ಧರ್ಮಂಚರ' ಎಂಬುದು ಸನಾತನ ಧರ್ಮದ ಮೂಲ ಘೋಷಣೆ ಎಂದರು. ಧರ್ಮವು ಮಾನವ ಜೀವನದ ಲಕ್ಷಣ ಎಂದವರು ಹೇಳಿದರು. ಶ್ರೀ ಕೆ. ವಾಸುದೇವ ನಾಯಕರು ವಂದಿಸಿದರು.

ಎರಡನೆಯ ದಿನ ಶ್ರೀ ಬಾಲಗೋಪಾಲ ಕೃಪಾಪೋಷಿತ ನಾಟಕ ಸಂಘದವರಿಂದ 'ನಿಕುಲು ಬೊಡ್ಚಿ ಮದಿಮೆ' ಎಂಬ ತುಳು ನಾಟಕವನ್ನೂ, ಕಾಸರಗೋಡಿನ ಕಲಾಸಂಘದವರಿಂದ 'ರಕ್ತಪಾಶ' ಎಂಬ ಕನ್ನಡ ಸಾಮಾಜಿಕ ಸಂಗೀತ ನಾಟಕವೂ ಜರಗಿತು.

ಮೂರನೆಯ ದಿನ ಎಡನೀರು ಕಲಾವೃಂದದವರಿಂದ "ದೇವಿ ಮಹಾತ್ಮೆ" ಎಂಬ ಪ್ರಸಂಗದ ಯಕ್ಷಗಾನವೂ, ಕಾಸರಗೋಡು ವಿನಾಯಕ ಶೆಣೈಯವರಿಂದ ಹರಿಕಥೆಯೂ ಜರಗಿತು.

ಶ್ರೀಮತಿ ನರ್ಮದಾ ಎಂ. ಪುರುಷೋತ್ತಮರವರ ಹಾಡುಗಾರಿಕೆಯಲ್ಲಿ ಮರುದಿನ "ಶರಸೇತು ಬಂಧನ" ಎಂಬ ಪ್ರಸಂಗದ ಯಕ್ಷಗಾನ ಜರಗಿತು. ಹಿಮ್ಮೇಳ ವಾದಕರಾಗಿ ದಿವಾಣ ಭೀಮ ಭಟ್ ಮತ್ತು ನಿಡ್ಲೆ ವಿಷ್ಣುಮೂರ್ತಿ ಪೆಜತ್ತಾಯರೂ, ಅರ್ಥದಾರಿಗಳಾಗಿ ಶ್ರೀಗಳಾದ ಎಸ್. ಕೃಷ್ಣ ಭಟ್, ಎ ನಾರಾಯಣ ಕದಿಲಾಯ ಮತ್ತು ಟಿ ಎಚ್. ವಾಸುದೇವ ರಾಯರು ಭಾಗವಹಿಸಿದ್ದರು.

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 | ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

ಗೇಹರಾಜ್ಯದಲ್ಲಿ

ನಡು ರಾತ್ರಿ ಬಾಯಿಯಾಕಳಿಸಿದರೆ?

'ತುಸು ಇಲ್ಲಿ ನೋಡೀಂದ್ರೆ....'

'ನೋಡ್ವೇನ್ನು...'

'ಏನನ್ನು?'

'ಮತ್ತಿನ್ನೇನನು? ನಿನ್ನ ಶ್ರೀಮುಖವನ್ನು....'

"ಶ್ರೀಮತಿ ಗಾಂಧಿಯವರ ಮಿಂಚಿನ ಚುನಾವಣಾ ಪ್ರಚಾರ ಮುಗಿದ ಮೇಲೆ ಶ್ರೀ ಸುಬ್ರಹ್ಮಣ್ಯಂರವರ ಗುಡುಗಿನ ಪ್ರಚಾರ ಆರಂಭವಾಯ್ತು."

'ಸರೀನ್ನು. ಇನ್ನು ಮತಗಳ ಮಳೆಕರೆದರೆ ಮುಗೀತು....'

'ಸುಬ್ರಹ್ಮಣ್ಯಂ ಹೇಳುವಂತೆ ಕರ್ನಾಟಕದಲ್ಲಿ ಆಳುವ ಕಾಂಗ್ರೆಸ್ಸಿನ ಪ್ರಭಾವ ಅಚ್ಚಳಿಯದೆ ಉಳಿದಿದೆ.'

'ಅಲ್ವೆ, ಇಲ್ಲ ಅಂನವರ್‍ಯಾರ?'

'ಸಂಸ್ಥಾಕಾಂಗ್ರೆಸ್ಸಿನ ವೀರೇಂದ್ರ ಪಾಟೀಲರ ಹಿಂದೆ ರಾಮಕೃಷ್ಣ ಹೆಗ್ಗಡೆಯವರೂ ಪ್ರಚಾರ ರಂಗದಲ್ಲಿ ಕಾಣಿಸಿಕೊಂಡರು...'

'ಕಾಣಿಸಲಿ ಬಿಡು....'

'ಅವರೂ ಅದನ್ನೇ ಹೇಳ್ತಿದ್ದಾರೆ....'

'ಏನನ್ನ?'

'ಜನತೆಯೊಲವು ತಮ್ಮ ಕಡೆಗೇನೇ ಇದೆಯೆಂದು....'

'ಸರಿಯೊಯ್ತು ಬಿಡು. ಮತದಾರರ ಮನಸ್ಸನ್ನು ಅರಿತುಕೊಂಡ ಈ ಮುತ್ಸದ್ದಿಗಳಿಗೆ ಬಹು ಪರಾಕೆನ್ನಬೇಕು....'

'ಅಲ್ರಿ, 'ಸಂಸ್ಥಾ ಕಾಂ' ಕಳೆದ ವರ್ಷವೂ ಹಾಗೇ ಹೇಳಿತ್ತು....'

'ಆದರೆ ಆದರದ್ದು ಏನೇನೂ ನಡೆಯಲಿಲ್ಲವಲ್ಲ?'

'ಈ ಬಾರಿ ಹೇಗೇಂತ?'

'ಚುನಾವಣೆಯ ಭವಿಷ್ಯ ಹೇಳೋ ತಾಕತ್ತು ಯಾವ ಭವಿಷ್ಯವಾದಿಗೂ ಇಲ್ಲ. ಮತದಾರರ ಇಚ್ಛೆಯನ್ನು ಕ್ರೋಢೀಕರಿಸುವುದು ಸಾಧ್ಯವಿಲ್ಲ....'

'ಹೋಗಲಿ ಬಿಡಿ. ಇನ್ನೇನು, ಗೊತ್ತಾಗುತ್ತೇನ್ರಿ....ನೋಡಿ, ಅದೇ ಸುಬ್ರಹ್ಮಣ್ಯಂ ಇನ್ನೊಂದು ಮಾತೂ ಹೇಳಿದ್ದಾರೆ....'

'ಏನದು?'

'ಜನ ಸಾಮಾನ್ಯರ ಅಭಿಪ್ರಾಯವೊಂದು ದಾಸ್ತಾನುಕೋಠಿ. ಅದು ತಿಳಿಯುವುದು ಮತಕಟ್ಟೆಗೆ ಹೋದಾಗ ಮಾತ್ರ...'

'ಬರೋಬರಿಯಂದ್ರೆ ಮತ ಗಣನೆಯಾದಾಗ ಮಾತ್ರ. ನಮ್ಮ ಜನವೀಗ ಅಷ್ಟು ಬುದ್ಧಿವಂತರಾಗಿದ್ದಾರೆ....'

'ಆಗಲಿ ಬಿಡಿ. ಕುರಿತೋದದೆಯುಂ ಪರಿಣತಮತಿಗಳ್ ಅಂತ ಆಂಡಯ್ಯನೋ ಮತ್ತಾವನೋ ಸಾರಿದ್ದಾನಲ್ಲಾ....'

'ಅಯ್ಯೋ ಪೆದ್ದೇ ಆಂಡಯ್ಯನಲ್ಲ ಕಣೇ—ನೃಪತುಂಗ ಅಮೋಘವರ್ಷ ತನ್ನ ಕವಿರಾಜಮಾರ್ಗದಲ್ಲಿ....'

'ಆಯ್ತಪ್ಪ ಅವನೇ ಹೇಳ್ಲಿ, ಅಲ್ರಿ, ಗುಲ್ಬರ್ಗದಲ್ಲಿ ಭಾರೀ ಗಲಭೆಯಾಯ್ತಂತಲ್ಲಾ....'

'ಹೌದಂತೆ. ಹೋಳಿ ಮೆರವಣಿಗೆ ಸಾಗಲು ಅವಕಾಶ ದೊರೆಯದ್ದರಿಂದ ಇದು ಆರಂಭವಾಯ್ತಂತೆ....'

'ಅಲ್ಲ, ಪರಿಸ್ಥಿತಿಯನ್ನು ವಶಕ್ಕೆ ತರಲು ಸೇನೆಯನ್ನೇ ಕರೆಸಲಾಯ್ತಂತೆ....'

'ಹ್ಞಾಂ....'

'ಅಲ್ರಿ, ಚುನಾವಣೆಗೂ ಇದಕ್ಕೂ ಏನಾದ್ರೂ ಸಂಬಂಧವಿರಬಹುದೇ ಅಂತ....'

'ಇಲ್ಲಾಂತನ್ನೋದು ಹ್ಯಾಗೆ? ಇದ್ದರೂ ಇರಬಹುದೂನ್ನು. ಆಕಾಂನ ಮಹಮ್ಮದಾಲಿ ಸ್ಪರ್ಧಿಸುವುದು ಇದೇ ಕ್ಷೇತ್ರದಿಂದ....'

'ಅದು ಯಾರೇ ಸ್ಪರ್ಧಿಸಲಿ, ಇದುವರೆಗೆ ಶಾಂತವಾಗಿದ್ದ ವಾತಾವರಣವನ್ನು ಕೆಣಕಿ ಘೂಳಬ್ಬಿಸುವುದು ಯಾವ ನ್ಯಾಯಾಂತ..'

'ನ್ಯಾಯ—ಅನ್ಯಾಯದ ಪ್ರಶ್ನೆಯಾರು ನೋಡ್ತಾರೆ? ದೊಣ್ಣೆಯುಂಟೋ ಎಮ್ಮೆಯುಂಟು....'

'ಹ್ಞಾಂ....ಅಯ್ತನ್ನಿ....'

○ ○ ○

ಹ್ಞಾಂ....ಅದು ಹಾಗೆ....ಅಲ್ರಿ, ಮತ್ತೊಂದು ಭಾರಿ ಪ್ರಶ್ನೆ....'

'ಏನು?'

'ಅಲ್ರಿ. ಆಕಾಂನಿಂದ ಪ್ರಚಾರಕ್ಕೆ ಅದರ ಅಧ್ಯಕ್ಷ ಸಂಜೀವಯ್ಯನವರು ಎಲ್ಲಿಗೂ ಹೋಗಲೇ ಇಲ್ಲ ನೋಡಿ....'

'ಅದೇನು ಹೇಳ್ತೀಯು? ಪಾಪ, ಸಂಜೀವಯ್ಯನವರಿಗೆ ಖಾಯಿಲೆಯಂತೆ, .ಇನ್ನೂ ಚೇತರಿಸುತಿದ್ದಾರಂತೆ.. ಹಾಗಾಗಿ ಪ್ರಧಾನಿ ಗಾಂಧಿಯೇ ಆ ಹೊಣೆಯನ್ನೂ ಹೊತ್ತುಕೊಂಡಿದ್ದಾರಂತೆ....'

'ಇರಬಹುದೂನ್ನಿ. ಆದರೆ ಅಂತಹ ಜಡ್ಡೇನೂಂತ? ಒಂದೇ ಒಂದು ಸಭೆಯಲ್ಲೂ ಅವರ ಮಾತೇ ಇಲ್ಲ....ಎಲ್ಲಾ ಪ್ರಧಾನಿಯದ್ದೇ ಕಾರು ಬಾರು....'

'ಅದು ಹಾಗೇನೆ. ಸವ್ಯಸಾಚಿಯಿರುವಾಗ ಸಂಜೀವಯ್ಯನವರಿಗೆ ಶ್ರಮವೇಕಂತ....'

'ಅಲ್ರಿ ತನ್ನ ನಾಯಕತ್ವ, ವ್ಯಕ್ತಿತ್ವಗಳ ಬಲದಿಂದ ಚುನಾವಣೆ ಗೆಲ್ಲಲು ನಿರ್ಧರಿಸಿದ ಆಕೆ ಸಂಜೀವಯ್ಯನವರನ್ನು ಹಕ್ಕಿ ಮಾಡಿ ಪಂಜರದಲ್ಲಿಟ್ಟಿದ್ದಾರೆ....'

'ಸರಿ...ಏನಾದರೇನಂತೆ, ಚುನಾವಣೆ ಗೆದ್ದರೆ ಸರಿ....'

'ಮತ್ತೂ ಬಂದದ್ದು ಅಲ್ಲಿಗೇ....'

'ಹ್ಞಾಂ'....

'ಏನು ಬಾಯಿಯಾಕಳಿಸುತ್ತಿದೆ?'

'ಯಾರೋ ನೆನಪಿಸಿಕೊಳ್ಳುತ್ತಿರಬಹುದು...'

'ಅಲ್ವೆ ಈ ರಾತ್ರಿ ಹೊತ್ತು...'

'ಅಯ್ಯೋ, ಅದ್ಯಾಕೆ ಹಾಗಂತೀರಿ? ಯಾರೋ ಇಲೆಕ್ಟೋರಲ್ ಹಿಡಿದು ನನ್ನ ಜಂಜ್ರಾ ನಂಬ್ರ ಹೆಸರು ನೋಡುತ್ತಿರಬಹುದು....'

'ಭಲೆ ಭಲೆ....'

'ಏನು?'

'ನಿಜಕ್ಕೂ ಸರಿಯಾದದ್ದನ್ನೇ ಊಹಿಸಿದೆ...ಕೊಡಬೇಕು ನಿನಗೆ....'

'ಏನನ್ನು?'

'ಮತ್ತಿನ್ನೇನನ್ನು....'

'....ಶೂ....'

—ಗೋರಾ

(ಮೂರನೇ ಪುಟದಿಂದ)

ತ್ತದೆ. ಬೆಲೆಯೇರುವುದನ್ನು ತಡೆಯಲೆಂದೇ ನಮ್ಮ ಪ್ರಯತ್ನ.ಇಲಾಖೆ ಹೇಳುತ್ತದೆ ಕಡಿಮೆ ಬೆಲೆಯಲ್ಲಿ ಒಳ್ಳೆಯ ತಿಂಡಿ ತೀರ್ಥ— ಇದು ನಿಮ್ಮ ಧ್ಯೇಯವಾಗ ಬೇಕು. ಅದ್ದರಿಂದ ನಿಮ್ಮ ಸಮಜಾಯಿಷಿ ಒಪ್ಪಲಾಗದು. ತಪ್ಪನ್ನು ತಿದ್ದಿಕೊಳ್ಳುವ ಮುಚ್ಚಳಿಕೆ ನೀಡದೆ ಹೋದರೆ ನಿಮ್ಮ ಲೈಸನ್ಸನ್ನು ಅಂತಿಮವಾಗಿ ಕಿತ್ತು ಹಾಕುವುದು.... ಇಷ್ಟಾಗುವಾಗ ಮೂರು ತಿಂಗಳು ಕಳೆಯುತ್ತದೆ. ಆರೋಗ್ಯ ಇಲಾಖೆ—ಪೋಲೀಸು ವಿಭಾಗದ ಕೈಯೂ ಬೆಚ್ಚಗಾಗರುತ್ತದೆ. ಮತ್ತೆ ಹಲ್ಲಿ—ಗಾಜಿನ ಚೂರು ಇತ್ಯಾದಿ ಇತ್ಯಾದಿ ಸೇರಿಸಿಯೇ ತಿಂಡಿ ತೀರ್ಥ ಮಾರಲು ಹೊಸ ಲೈಸನ್ಸು ದೊರೆಯುತ್ತದೆ. ಹೋಟೇಲು ಮಾಲಿಕರಲ್ಲಿ, ನೌಕರರಲ್ಲಿ ಮಾನವತೆಯು ಮೂಡದೆ ಹೋದರೆ ಯಾವ ಕಾನೂನು ಯಾರನ್ನೂ ಏನೂ ಮಾಡಲಾರದು.

●●

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ಇದರ 69ನೇ ವಾರ್ಷಿಕೋತ್ಸವ ಹಾಗೂ ಮೊಗವೀರ ರಾತ್ರಿ ಶಾಲೆಯ ಪಾರಿತೋಷಕ ವಿತರಣಾ ಸಮಾರಂಭವು ತಾ 26–2–1972 ರಂದು ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾಸದನದಲ್ಲಿ ಶ್ರೀಮಾನ್ ಡಿ. ಪಿ. ಮಲ್‌ವಿಲ್‌ರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಮಂಡಳಿಯ ಅಧ್ಯಕ್ಷರಾದ ಶ್ರೀ ಯಸ್. ಸಿ. ಪಡುಬಿದ್ರಿಯವರು ಸ್ವಾಗತಿಸಿ ಮಂಡಳಿಯ ಕಾರ್ಯಕಲಾಪಗಳ ಸೂಕ್ಷ್ಮ ಪರಿಚಯವನ್ನು ಕೊಡುತ್ತಾ, ಹಗಲು ಶಾಲೆಯ ನಿರ್ಮಾಣದ ಬಗ್ಗೆ ಸರ್ವರೂ ತಮ್ಮ ತನು—ಮನ—ಧನದ ಸಹಾಯ ಸಹಕಾರವನ್ನೀಯ ಬೇಕೆಂದು ಕರೆಯಿತ್ತರು.

ಜೊತೆ ಕಾರ್ಯದರ್ಶಿ ಶ್ರೀ ಡಿ. ಎಚ್. ಕುಂದರರು ಸಂದೇಶಗಳನ್ನೂ, ಜೊತೆ ಕೋಶಾಧಿಕಾರಿ ಶ್ರೀ ಎನ್. ಪಿ. ಸುವರ್ಣರು ಧನ ಸಹಾಯವಿತ್ತವರ ಹಾಗೂ ಹೊಸ ಸದಸ್ಯರ ಪಟ್ಟಿಯನ್ನೂ ಓದಿ ಹೇಳಿದರು. ಬಹುಮಾನ ವಿತರಣೆಯ ಬಳಿಕ ಶ್ರೀಗಳಾದ ಜೆ. ಕೆ. ಜೋಶಿ, ಟಿ. ಎಸ್. ಹೆಗ್ಡೆ ಮತ್ತು ಎ ಎಸ್ ಕೆ. ರಾವ್ ಮಾತನಾಡುತ್ತಾ, ವಿವಿಧ ಕಾರ್ಯ ಪ್ರಗತಿಯನ್ನು ಪ್ರಶಂಸಿಸಿದರು.

ಅಧ್ಯಕ್ಷರು ಮಂಡಳಿಯು ಈ ತನಕ ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ನೀಡಿರುವ ಸೇವೆಯು ಅಮೋಘವಾಗಿದೆ ಎಂದೂ, ಇಂತಹ ಸಂಸ್ಥೆಗಳು ರಾಷ್ಟ್ರ ಮನ್ನಣೆಯನ್ನು ಪಡೆದು ರಾಷ್ಟ್ರದ ಯೋಜನೆಗಳಿಗೆ ನೆರವಾಗುವುದು ಅಗತ್ಯವೆಂದರು.

ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಶಾಂತಾರಾಮರಿಂದ ವಂದನಾರ್ಪಣೆಯಾದ ಬಳಿಕ ಮನರಂಜನಾ ಕಾರ್ಯಕ್ರಮಗಳಾದುವು.

ಬ್ರಹ್ಮಾವರದಲ್ಲಿ ಕೆನರಾ ಬ್ಯಾಂಕ್ ಕಾರ್ಯಕ್ರಮ

ಕೆನರಾಬ್ಯಾಂಕ್ ತನ್ನ ಬ್ರಹ್ಮಾವರ(ಹಂದಾಡಿ) ಶಾಖೆಯ ಆಶ್ರಯದಲ್ಲಿ ತಾ. 26–2–72ರಂದು 'ಸಾರ್ವಜನಿಕ ಸಂಪರ್ಕ ಕಾರ್ಯಕ್ರಮ'ವೊಂದನ್ನು ಏರ್ಪಡಿಸಿತ್ತು. ಸಮಾರಂಭವು ಬ್ರಹ್ಮಾವರದ ಗಾಂಧಿ ಮೈದಾನಿನಲ್ಲಿ ಕುಂದಾಪುರದ ಎಡ್ವೋಕೇಟ್ ಶ್ರೀ ಎ. ಎಸ್. ಎನ್ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಕೆನರಾ ಬ್ಯಾಂಕ್ ಶಾಖೆಯ ಮೆನೇಜರ್ ಶ್ರೀ ಬಿ. ಜಿ. ಶೆಣೈಯವರು ಸ್ವಾಗತಿಸಿದರು. ಕೆನರಾ ಬ್ಯಾಂಕಿನ ಡೆಪ್ಯುಟಿ ಜನರಲ್ ಮೆನೇಜರ್ ಶ್ರೀ ಎಸ್. ಆರ್. ಪ್ರಭುರವರು ಉದ್ಘಾಟಿಸಿದರು. ಸ್ಥಳೀಯರ ಪರವಾಗಿ ಶ್ರೀಗಳಾದ ಟಿ. ಗೋಪಾಲಕೃಷ್ಣ ಪೈ ಮತ್ತು ಟಿ ಲಕ್ಷ್ಮಣ ಪೈ ಶುಭ ಕೋರಿದರು.

ಕೆನರಾ ಬ್ಯಾಂಕಿನ ಬ್ರಹ್ಮಾವರ ಶಾಖೆಯ ಅಧಿಕಾರಿ ಶ್ರೀ ಯು. ಭಾಸ್ಕರ ಆಚಾರ್ಯರು ಕೃತಜ್ಞತೆ ಅರ್ಪಿಸಿದರು.

ಸಾರ್ವಜನಿಕ ಸಂಪರ್ಕ ಕಾರ್ಯಕ್ರಮದ ಅಂಗವಾಗಿ ಯಕ್ಷಗಾನದ ಮೂಲಕವೂ ನಾಟಕದ ದೃಶ್ಯಾವಳಿಗಳಿಂದಲೂ ಆಕರ್ಷಕ ಕಥಾರೂಪದಲ್ಲಿ ಬ್ಯಾಂಕಿಂಗಿನ ವಿವಿಧ ಸೇವಾ ಸೌಲಭ್ಯ ಹಾಗೂ ಮಹತ್ವಗಳನ್ನೂ ಶ್ರೀ ಭದ್ರಗಿರಿ ನೀಲಪ್ಪ ಬಂಗೇರ ವಿರಚಿತ 'ಧನದೇವಿ ಮಹಾತ್ಮೆ' ರೂಪಕದ ಮೂಲಕ ರಂಜನೀಯವಾಗಿ ಪ್ರದರ್ಶಿಸಲಾಯಿತು.

ಕುಂದಾಪುರದಲ್ಲಿ ಆ. ಕಾಂಗ್ರೆಸ್ ಪ್ರಚಾರ ಸಭೆ

ಕಳೆದ ತಾ. 29ರಂದು ಕುಂದಾಪುರದಲ್ಲಿ ಆ. ಕಾಂಗ್ರೆಸ್ ಪ್ರಚಾರ ಸಭೆಯು ತಾಲೂಕು ಆ. ಕಾಂಗ್ರೆಸಿನ ಕನ್ವೀನರ್ ಶ್ರೀ ಬಿ. ಎಸ್. ಜಗನ್ನಾಥ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಬಿ. ಯಾಕೂಬ್ ಸಾಹೇಬರು ಆರಂಭದಲ್ಲಿ ಸ್ವಾಗತಿಸಿದರು.

ಶ್ರೀಗಳಾದ ಎಸ್. ಡಿ. ಹೆಗ್ಡೆ, ವಿ. ಶ್ರೀನಿವಾಸ ಶೆಟ್ಟಿ, ಜೆ. ರಾಮ ದೇವಾಡಿಗ, ಸಂಜೀವ ಕುಂದರ್ ಮತ್ತು ಸ್ಥಳೀಯ ಅಭ್ಯರ್ಥಿ ಶ್ರೀಮತಿ ವಿನ್ನಿಫ್ರೆಡ್ ಫೆರ್ನಾಂಡಿಸ್ ಮೊದಲಾದವರು ಚುನಾವಣಾ ಪ್ರಚಾರ ಭಾಷಣದಲ್ಲಿ ಭಾಗವಹಿಸಿದ್ದರು.

ಅಂತ್ಯದಲ್ಲಿ ಸ್ಥಳೀಯ ಯುವಕ ಕಾಂಗ್ರೆಸಿನ ಸಂಚಾಲಕ ಶ್ರೀ ಬಿ ಅರುಣಕುಮಾರ ಶೆಟ್ಟರು ವಂದಿಸಿದರು.

ಹೈನಾಭಿವೃದ್ಧಿ ಯೋಜನೆ

ಶಿವಳ್ಳಿ ಪಂಚಾಯತ್ತಿನ ಆಶ್ರಯದಲ್ಲಿ ಮಣಿಪಾಲದಲ್ಲಿ ಇತ್ತೀಚೆಗೆ ಡಿವಿಜನಲ್ ಕಮಿಶನರ್ ಶ್ರೀ ಜಿ. ಎಸ್. ಶ್ರೀನಿವಾಸನ್ನರು ಬಂದಾಗ ಸಭೆಯೊಂದು ಸೇರಿತು ಎಂ.ಎಫ್.ಎ ಎಲ್.ನಡಿಯಲ್ಲಿ ಶಿವಳ್ಳಿ ಗ್ರಾಮದಲ್ಲಿ ಕೈಕೊಂಡ ಹೈನಾಭಿವೃದ್ಧಿ ಯೋಜನೆಯ ಬಗ್ಗೆ ಇದರಲ್ಲಿ ವಿಚಾರ ವಿನಿಮಯ ಮಾಡಲಾಯ್ತು. ಒಂದು ಹೈನ ಪ್ರಾಣಿಯು ಬತ್ತಿದೊಡನೆಯೇ ಇನ್ನೊಂದನ್ನು ಪೂರಯ್ಸಿ, ತನ್ಮೂಲಕ ಹಾಲಿನ ಪೂರಯ್ಕೆ ಮತ್ತು ಆದಾಯಗಳು ಮುಂದುವರಿಯಲು ಅವಕಾಶ ನೀಡಬೇಕೆಂದು ಸಲಹೆ ಮುಂದೆ ಬಂತು. ಕ್ಷೀರ ಶೀತಲೀಕರಣ ವ್ಯವಸ್ಥೆಯು ಮಣಿಪಾಲದಲ್ಲಾಗಬೇಕೆಂದೂ ಉಡುಪಿಯ ಪಶುವೈದ್ಯ ಶಾಲೆಗೆ ದೂರವಾಣಿ ಸಂಪರ್ಕ ಬೇಕೆಂದೂ ಸೂಚನೆ ಬಂತು. ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿನ ಸಹಜ ಅನಿವಾರ್ಯ ಅಡೆತಡೆಗಳನ್ನು ದೂರೀಕರಿಸುವ ಭರವಸೆಯನ್ನು ಡಿವಿಜನಲ್ ಕಮಿಶನರ್ ನೀಡಿದರು ಸ್ಥಳೀಯ ನಾಯಕರು ಈ ಯೋಜನೆಯನ್ನು ತ್ವರಿತವಾಗಿ ಕಾರ್ಯಗತ ಗೊಳಿಸಲು ಪ್ರಯತ್ನಿಸಬೇಕೆಂದವರು ಕಳಕಳಿಯಿಂದ ಕೇಳಿಕೊಂಡರು. ಆರಂಭದಲ್ಲಿ—ಶಿವಳ್ಳಿ ಪಂಚಾಯತ್ ಸಭಾಪತಿ ಶ್ರೀ ಟಿ. ರಮೇಶ ಯು. ಪೈಯವರು ಸ್ವಾಗತಿಸಿ ಯೋಜನೆಯ ಸ್ಥೂಲ ರೂಪರೇಷೆಗಳನ್ನು ನೀಡಿದರು. ಎಂ ಎ ಎಫ್.ಎಲ್.ನ ಯೋಜನಾಧಿಕಾರಿ ಶ್ರೀ ಕೆ. ಪಿ. ಜಗನ್ನಾಥರಾಯರು ಧನ್ಯವಾದವನರ್ಪಿಸಿದರು.

○ ○ ○

ತನ್ನ ಸ್ವಭಾವದಲ್ಲಿಯ ವಿಕಾರವನ್ನು ತಡೆಹಿಡಿಯುವುದೇ ಮಾನವನಲ್ಲಿಯ ಸದ್ಗುಣ.

○ ○ ○

ಸಂತೃಪ್ತಿಯು ನೈಸರ್ಗಿಕ ಸಂಪತ್ತಾಗಿರುವುದರಿಂದ ಆ ಸಂತೃಪ್ತಿಯನ್ನು ಹೊಂದಿದವನೇ ಕುಭೇರನು.

○ ○ ○

ಸಾವಿರ ನಾಲಿಗೆಗಳ ಮುಂದೆ ಒಸ್ನಾಲಿಗೆಯಿಂದೇನು?

○ ○ ○

ಸಮರ್ಪಣ

(ಎರಡನೇ ಪುಟದಿಂದ)

ನೀಡಿದ ಕೈಯನ್ನು ಹಿಡಿದು, ಅದರ ಆಸರೆಯಲ್ಲಿ ಏಳು ಹೆಜ್ಜೆ ತುಳಿದು, ತನ್ನ ವಾಮ ಭಾಗದಲ್ಲಿ ಬಂದು ಕುಳಿತಿದ್ದಳು—

ಏರು ಧ್ವನಿಯಲ್ಲಿ ಪುರೋಹಿತರು, ಧರ್ಮ ಅರ್ಥ ಕಾಮ ಮೋಕ್ಷ ಗಳಲ್ಲಿ ನಿನ್ನನ್ನು ಅತಿಕ್ರಮಿಸುವುದಿಲ್ಲ ಎಂಬ ಮಂತ್ರ ಹೇಳಿದಾಗ, ಬುದ್ಧಿ ಯರಿತು 'ನಾತಿಚರಾಮಿ' ಎಂದು ಉಚ್ಚರಿಸಿದ್ದ.

ಆ ಪ್ರತಿಜ್ಞೆ.

ನಿನ್ನನ್ನುಳಿದು ಅನ್ಯರೊಡನೆ ಬೆರೆಯೆನೆಂದು ಕೊಟ್ಟ ಮಾತು?

ಉಳಿಕೆಯವರೆಲ್ಲ ತಾಯಿ ಸಮಾನರು ಎಂದು ಕೊಟ್ಟ ಆಶ್ವಾಸನೆ?

ಈ ಬಂಧನ ಶಾಶ್ವತ. ಸಾವಿನೊಡನೆ ನಶಿಸಿಹೋಗದ್ದು. ಸಾವಿನ ನಂತರವೂ ಉಳಿಯುವ ಬಂಧ ಎಂದು ಮಾಡಿಕೊಂಡ ಸಂಕಲ್ಪ?

ಇನ್ನೊಂದು ಮದುವೆ.

ಅವಕ್ಕೆಲ್ಲ ಎಳ್ಳು ನೀರು ಬಿಟ್ಟಂತೆ!

ತಾನೇ ಸತ್ತು ಅವಳೇ ಉಳಿಯುತ್ತಿದ್ದರೆ?

ಮರು ಮದುವೆಯ ಯೋಚನೆ ಮಾಡುತ್ತಿದ್ದಳೇ?

ಆಜನ್ಮ ವ್ರತಸ್ಥಳಾಗಿ ಉಳಿಯುತ್ತಿದ್ದಳೇ?

ತಾನಿಲ್ಲವೆಂದು ತನ್ನನ್ನು ಮರೆತು ಬಿಡುತಿದ್ದಳೇ?

ಇಲ್ಲ! ಇಲ್ಲ! ಇಲ್ಲ! ಎಂದು ಅವನ ಆತ್ಮ ಕೂಗಿ ಹೇಳಿತು.

ಅಂತರಂಗದ ಆಳದಲ್ಲಿ ತುಮುಲ ತಿಕ್ಕಾಟ ನಡೆಯಿತು.

'ಅಮಾತ್ಯರೇ! ಸುಮ್ಮನೆ ನಿಂತು ಬಿಟ್ಟಿರಲ್ಲ'

ಪ್ರತ್ಯುತ್ತರ ಬಾರದಿರುವುದನ್ನು ಕಂಡು ಇಂದ್ರ ಇನ್ನೊಮ್ಮೆ ಆ ಮಾತೆತ್ತಿದ. ತನ್ನ ಪ್ರಶ್ನೆಯಿಂದ ಅವನ ಹೃದಯದಲ್ಲಾಗುತ್ತಿದ್ದ ವಿಪ್ಲವ ವನ್ನು ಆವರು ಗುರುತಿಸಲಾರದೆ ಹೋದರು.

ಯೋಚನೆಯ ಗುಂಗಿನಲ್ಲಿದ್ದ ನರಸಿಂಹನಿಗೆ ಅದು ಕೇಳಲಿಲ್ಲ.

ಪುನಃ ಅದೇ ಪ್ರಶ್ನೆ.

ಉತ್ತರ ಬರದಾಯಿತು.

ನರಸಿಂಹ ಕೈಕಟ್ಟಿ ನಿಂತಿದ್ದವನು ಕದಲಲಿಲ್ಲ. ಬಾಯಿ ತೆರೆಯಲಿಲ್ಲ.

ಇಂದ್ರನಿಗೆ ಗಾಬರಿಯಾಯಿತು. ಹತ್ತಿರಕ್ಕೆ ಬಂದು ಅವನ ಭುಜದ ಮೇಲೆ ಕೈಯಿಟ್ಟು 'ನೊಂದು ಕೊಳ್ಳ ಬೇಡಿ. ಒಂದು ಶಿಕ್ಷೆಯಕ್ಕೆ ಬನ್ನಿ. ಪದ್ಮಿನಿ—ನನ್ನ ಸೋದರ ಸಂಬಂಧಿ—ನಿಮಗೆ ಅನುರೂಪಳಾದ ಕನ್ಯೆ. ಅವ ಳಾಗಲೇ ಸಮ್ಮತಿಸಿದ್ದಾಳೆ. ನೀವವಳನ್ನು ನಿನ್ನೆ ನೋಡಿರಬೇಕು. ನಿಮ್ಮ ಒಪ್ಪಿಗೆಗಾಗಿ ನಾವು ಕಾಯುತ್ತಿದ್ದೇವೆ. ಅದನ್ನು ಯಾಚಿಸುವುದಕ್ಕೇ ನಾವು ಬಂದುದು. ಅದನ್ನು ನಡೆಸಿಕೊಡಿ' ಎಂದು, ಅವನ ಉತ್ತರಕ್ಕೂ ಕಾಯದೆ ಅಲ್ಲಿಂದ ಹೊರಟು ಹೋದರು.

೬

'ಪದ್ಮಿನಿ—ನನ್ನ ಸೋದರ ಸಂಬಂಧಿ. ನಿಮಗನುರೂಪಳಾದ ಕನ್ಯೆ. ಅವಳನ್ನು ನೀವು ನಿನ್ನೆ ನೋಡಿರ ಬೇಕು. ಅವಳು ನಿಮ್ಮನ್ನು ಒಪ್ಪಿ ಕೊಂಡಿದ್ದಾಳೆ.'

ಹೊರಟು ಹೋಗುತ್ತ ಇಂದ್ರ ಅಂದ ಮಾತು ನರಸಿಂಹನನ್ನು ಬಡಿದೆಬ್ಬಿಸಿತು—

ಜಾನಕಿ ತೀರಿಕೊಂಡ ದಿನದಿಂದಲೂ ಅನ್ಯ ಮನಸ್ಕನಾಗಿದ್ದ ನರಸಿಂಹ ಯಾವ ಸ್ತ್ರೀಯನ್ನೂ ನೋಡಿರಲಿಲ್ಲ. ನೋಡಿದ ನೆನಪೂ ಇರಲಿಲ್ಲ.

ನಿನ್ನೆ ನೋಡಿದಿರಲ್ಲ, ಎಂದರು ಪ್ರಭುಗಳು.

ನಿನ್ನೆ ಕಂಡಿದ್ದು—

ಆವಳೊಬ್ಬಳನ್ನೇ!

ಆ ಮೋಹಿನಿಯೇ ಪ್ರಭುಗಳ ಸಂಬಂಧಿ ಪದ್ಮಿನಿಯೇ.

ಅವಿವಾಹಿತ ಕನ್ಯೆಯೊಬ್ಬಳನ್ನು ಪ್ರಭುಗಳೇ ತನ್ನರಮನೆಗೆ ಕಳುಹಿಸಿದರೇ?

ಆಕೆ ಹಾಗೆ ನಿಯೋಜಿತಳಾದುದು ತನ್ನ ಶೀಲ ಭಂಗಕ್ಕೇ?

ಅಥವಾ—ಶೀಲ ಪರೀಕ್ಷೆಗೇ?

ನಿನ್ನೆ ಇಲ್ಲಿದ್ದಷ್ಟು ಸಮಯವೂ ಆಕೆ ತನ್ನ ಮೇಲೆ ಒಂದಲ್ಲ ಒಂದು ರೀತಿಯ ಬಲೆ ಬೀಸಿದ್ದಳು.

ಕೈ ನೋಕಿಸಿದಳು. ಮೈತಾಗಿಸಿದಳು. ಎದೆಯನ್ನೊತ್ತಿದಳು. ಸೆರಗು ಜಾರಿಸಿದಳು. ತನ್ನನ್ನು ಆವಳೆಡೆಗೆ ಎಳೆದುಕೊಳ್ಳಲು ಯತ್ನಿಸಿದಳು. ನಿನ್ನೆ ಇವನ್ನೆಲ್ಲ ನರಸಿಂಹ ಆಕಸ್ಮಿಕ ಎಂದು ಗ್ರಹಿಸಿದ್ದ. ದೊರೆಗಳ ಮಾತಿನಿಂದ ನಿಜಸ್ಥಿತಿ ಬಯಲಾಯಿತು- ಇವೆಲ್ಲ ಆಕೆ ಬುದ್ಧಿ ಪೂರ್ವಕವಾಗಿ ನಡೆಸಿದ ಚಟುವಟಿಕೆಗಳು. ಈ ತೀರ್ಮಾನಕ್ಕೆ ಆತ ಬಂದ.

ಅವಿವಾಹಿತ ಹೆಣ್ಣು ಮಗಳೊಬ್ಬಳು, ಒಂಟಿಯಾಗಿದ್ದ ನನ್ನೊಡನೆ ಸರಸಕ್ಕೆ ಬರಲು ಹೇಗೆ ಒಪ್ಪಿಕೊಂಡಳು?

ನಾಚಿಕೆಯೂ ಬರಲಿಲ್ಲವೇ?

ಅವಳು ಬೀಸಿದ್ದ ಜಾಲಕ್ಕೆ ತಾನು ಬಲಿಯಾಗಿದ್ದರೆ?

ತಮ್ಮಿಬ್ಬರ ಗತಿ ಏನು?

ಅದನ್ನು ಪ್ರಭುಗಳು ಯೋಚಿಸಿದಂತೆ ಕಂಡು ಬರಲಿಲ್ಲ.

ತಾವಿಬ್ಬರೂ ಬೆರೆಯಬೇಕೆಂಬುದೇ ಪ್ರಭುಗಳ ಬಯಕೆಯೇ?

ಪ್ರಭುಗಳೊಪ್ಪಿದರೂ, ತನ್ನ ಸ್ತ್ರೀತ್ವದ ನಾಶಕ್ಕೆ ಆಕೆ ಹೇಗೆ, ಏನೆಂದು ಸಮ್ಮತಿಸಿದಳು?

ಪದ್ಮಿನಿ ಗಣಿಕೆಯಲ್ಲ.

ಅನ್ಯರ ಸಂಪರ್ಕ ಬೆಳೆಸದವಳು. ಜೊತೆಗೆ ರಾಜ ಸಂಬಂಧಿ.

ಕುಲಸ್ತ್ರೀಯೊಬ್ಬಳನ್ನು ಹೀಗೆ ತನ್ನೆಡೆಗೆ ಕಳಿಸಲು ಪ್ರಭುಗಳೆಂತು ಮನಸ್ಸು ಮಾಡಿದರು?

ತನ್ನ ಮೇಲಿನ ವಿಶ್ವಾಸವೇ? ಅಥವಾ ತೀರಿಕೊಂಡ ತಂಗಿಯಲ್ಲಿ ನಾನಿಟ್ಟ ನಿಷ್ಠೆಯನ್ನು ಅಳೆಯಲೇ?

ಯೋಚಿಸಿದಷ್ಟು ವಿಷಯ ಗಹನವಾಯಿತು. ಗಂಭೀರವಾಯಿತು.

ಆದರೆ ಪರಿಹಾರ ದೊರೆಯಲಿಲ್ಲ.

ಇದರಲ್ಲಿ ಪ್ರಭುಗಳ ಸ್ವಾರ್ಥ ಇದೆಯೇ?

ಇದ್ದರೆ—ಯಾವ ಸ್ವರೂಪದ್ದು?

ಬಂಧು ಒಬ್ಬರ ಬೆಳೆದುನಿಂತ ಮಗಳನ್ನು ಒಳ್ಳೆಯ ಮನೆ ಸೇರಿಸುವ ಮನುಜ ಸಹಜವಾದ ಆಸೆಯೇ?

ಆದಿದ್ದರೆ ನೇರವಾಗಿ ಅದನ್ನು ತನ್ನಲ್ಲಿ ಪ್ರಸ್ತಾಪಿಸಬಹುದಿತ್ತು.

ಅದಕ್ಕೆ ಈ ವಾಮಮಾರ್ಗ ಬೇಕಿರಲಿಲ್ಲ. ಮಗಳೊಬ್ಬಳನ್ನು ಗಣಿ ಕೆಯ ಸ್ಥಾನಕ್ಕೆ ಇಳಿಸುವ ಸಾಹಸ ಅನಗತ್ಯವಿತ್ತು.

ಧರ್ಮದ ಅವತಾರಿಗಳಾದ ರಾಜರು ಹೀಗೆ ಮಾಡಬಾರದಿತ್ತು.

ರಾಜರಾದವರು ಹೀಗೆ ನಡೆದರೆ—?

ಪ್ರಭುಗಳ ನಡತೆ ನರಸಿಂಹನಿಗೆ ಸರಿ ಬರಲಿಲ್ಲ.

ಇಂದ್ರನ ಈ ನಡತೆಯಿಂದ ಆತ ಜಿಗುಪ್ಸೆಗೊಂಡ. ಅವನ ಪ್ರಭುಗಳು ಆಗ ತಾನೇ ಆಡಿದ 'ರಾಜಕಾರಣ ಗುರಿಯಲ್ಲ, ಅದು ಸಾಧನ' ಎಂಬ ಮಾತು ನೆನಪಿಗೆ ಬಂತು. ರಾಜಕೀಯ ಚಟುವಟಿಕೆ ಶುಚಿಯಾಗಿರ ಬೇಕೆಂದು ಬಯಸುವ ಪ್ರಭುಗಳೇ ನೀತಿಬಾಹಿರವಾದ ನಡವಳಿಕೆಗೆ ದಾರಿ ಮಾಡಿಕೊಟ್ಟರೆ—? ಜಾನಕಿಯ ಸಾವಿನಿಂದ ರಾಷ್ಟ್ರಕೂಟ-ಚಾಳುಕ್ಯ ಮನೆತನಗಳೊಳಗೆ ಬೆಳೆದುಬಂದ ಸಂಬಂಧ ಕಡಿಯಬಹುದು. ಬೇರೆಲ್ಲಾ ದರೂ ನಾನು ಬಾಂಧವ್ಯ ಬೆಳೆಸಿದರೆ, ನನ್ನ ನಿಷ್ಠೆಯ ಸೇವೆ ಸಾಮ್ರಾಜ್ಯಕ್ಕೆ ತಪ್ಪಿ ಹೋಗಬಹುದು. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಕಬಳಿಸಲು ಶತ್ರುಗಳು ಹೊಣಗಬಹು ದು. ಸಂಧಿ ಸಾಧಿಸಿ ಚಾಳುಕ್ಯರು ಸಾಮ್ರಾಜ್ಯದ ಮೇಲೆ ಕತ್ತಿ ಹಿಡಿಯಬಹುದು.

ಅದಕ್ಕಿರುವ ಒಂದೇ ಉಪಾಯ.

ಕಡಿದು ಹೋದ ನೆಂಟಸ್ತಿಕೆಯನ್ನು ಉಳಿಸಿ ಕೊಳ್ಳುವುದು. ಅದ ಕ್ಕಾಗಿ ಬಳಸಿದ ದಾಳ ಪದ್ಮಿನಿ.

ತನ್ನ ಶ್ರೇಯಸ್ಸಿಗಿಂತಲೂ ಸಾಮ್ರಾಜ್ಯದ ಆತ್ಮರಕ್ಷಣೆಯ ದೃಷ್ಟಿ ಪ್ರಭುಗಳ ಸಲಹೆಯ ಹಿಂದೆ ಇತ್ತೆಂಬುದು ಖಚಿತ.

ಅವನ ಅನುಮಾನಗಳು ಹುಟ್ಟಿಕೊಂಡಂತೆ ಅಳಿದು ಹೋದುವು.

ಎಂತಹ ಸ್ವಾರ್ಥ.

ಪರಹಿತ ಸಾಧನೆಯ ಸೋಗಿನಲ್ಲಿ ಸ್ವಹಿತ ಸಾಧನೆ.

ರಾಜಕೀಯವನ್ನು ಡೊಂಬರಾಟ ಎಂದು ಬಣ್ಣಿಸಿದ ಪ್ರಭುಗಳೇ ಇಂದು ತಮ್ಮ ಸಾಮ್ರಾಜ್ಯದ ಭದ್ರತೆಗಾಗಿ ಏನೆಲ್ಲ ನಾಟಕವಾಡಿದರು. ಪ್ರಭುಗಳ ನಿಲುವು ತಪ್ಪೆಂದೆನಿಸಿದರೂ ಆತ ಅವರ ದೂರಾಲೋಚನೆಗೆ ತಲೆದೂಗಿದ.

ರಾಜಕೀಯವೇ ಹೊಲಸೆಂದೆನಿಸಿತು.

ಈ ಹೊಲಸು ನಿನ್ನೆ ಇತ್ತು. ಇಂದು ಇದೆ. ಇನ್ನೊಂದು ರೂಪದಲ್ಲಿ ಈ ಹೊಲಸು ನಾಳೆ ಕಾಣಿಸಿಕೊಳ್ಳಬಹುದು.

ಈ ನೈಲಿಗೆಯಿಂದ ದೂರವಿರುವುದು ಸರಿಯೆಂದು ಆತ ನಿರ್ಧರಿಸಿದ.

ಆತ ಈ ನಿರ್ಧಾರಕ್ಕೆ ಬರುವುದಕ್ಕೂ, ಒಳಗೆ ತೊಟ್ಟಿಲಲ್ಲಿ ಮಲ ಗಿದ್ದ ಮಗು ಅಳುವುದಕ್ಕೂ ಸರಿ ಹೋಯಿತು.

ಅದನ್ನಾರಿಸಲೆಂದು ಆತ ಒಳ ಮನೆಯನ್ನು ಸೇರಿದ.

ಅಷ್ಟರಲ್ಲೇ ದಾದಿಯೊಬ್ಬಳು ಬಂದು ಮಗುವನ್ನು ರಮಿಸಲಾರಂ ಭಿಸಿದ್ದಳು.

'ಮಗು ಏಕೆ ಅಳುತ್ತಿದೆ ಚಂಪಾ'

'ಹಾಲು ಕುಡಿಯುವ ಸಮಯ. ತರಲು ತಡವಾಯಿತು. ಅದ ಕೆಷ್ಟು ರಂಪ'

ತಾಯಿ ಇದ್ದಿದ್ದರೆ, ಅವಳೇ ಹಾಲೂಡಿಸುತಿದ್ದಳು.

ಹೆತ್ತೊಡಲಿನ ಕಕ್ಕುಲತೆ ತೊತ್ತುಗಳಿಗೆ ಬರುವುದಾದರೂ ಹೇಗೆ?

ಪ್ರೀತಿ ಎಂಬುದು ಸಂತೆಯಲ್ಲಿ ಸಿಗುವ ವಸ್ತುವೇ?

(ಮುಂದುವರಿಯುವುದು)

NAVAYUGA 9-3-1972

Registered with the Registrar
of News Papers for India
under No. R. N. 3545/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಮೂರು ರಾಷ್ಟ್ರಗಳ ಬಾಂಧವ್ಯ ಬೆಸುಗೆ

ಭಾರತದ ಉನ್ನತಿಯನ್ನೆಂದಿಗೂ ಸಹಿಸದೆ ಅದರ ಪತನಕ್ಕಾಗಿ ಹವಣಿಸುತ್ತಿರುವ ದೇಶಗಳಲ್ಲಿ ಅಮೇರಿಕ ಇಂದು ಹಿರೇಮಣಿಯಾಗಿದೆ. ಅಲ್ಲಿನ ಬಿಳಿಯರು ಭೇದ ನೀತಿಯಿಂದ ಭಾರತವನ್ನು ಮುರಿಯಲೆಳಸುತ್ತಿದ್ದಾರೆ. ಅದಕ್ಕಾಗಿ ಪಾಕಿಸ್ತಾನದ ನೇಪಥ್ಯದಲ್ಲಿ ನಿಂತು, ಚೀನಕ್ಕೆ ಮೈತ್ರೀ ಹಸ್ತವನ್ನು ಚಾಚಿ ಶಸ್ತ್ರಾಸ್ತ್ರಗಳನ್ನಿದು ಪೂರೈಸಿದರೂ ಶಾಂತಿ ಜನಾಂಗದ ಧರ್ಮದ ತೋಟಿಗರಾದ ನಮಗೆ ವೈಯಕ್ತಿಕವಾಗಿ ಕೂಡ ಜಯ ಲಭಿಸಿತು.

ಆಸಿಯಾ ಖಂಡದ ಬೃಹದ್ ರಾಷ್ಟ್ರಗಳಲ್ಲಿ ಒಂದಾದ ಭಾರತ ಅನಾದಿ ಪರಂಪರೆಯಿಂದಲೂ ಶಾಂತಿಯ ಬಾವುಟವನ್ನು ಎತ್ತಿಹಿಡಿದಿದೆ. ಎರಡನೆಯದಾಗಿ ಕೈಗಾರಿಕೋದ್ಯಮಿ ಮತ್ತು ಬಂಡವಾಳಶಾಹಿ ರಾಷ್ಟ್ರವಾಗಿರುವ ಜಪಾನ್ ಭಗವಾನ್ ಬುದ್ಧದೇವನು ಹುಟ್ಟಿದ ನೆಲ. ಈ ಖಂಡದಲ್ಲಿ ಮೂರನೆಯದಾಗಿ ಚೀಣ ದೊಡ್ಡ ರಾಷ್ಟ್ರವಾಗಿದ್ದು, ಕಮ್ಯೂನಿಸ್ಟ್ ತಂತ್ರವನ್ನು ಬಳಸಿಕೊಂಡು ನಿಂತಿದೆ. ಈ ಖಂಡದಲ್ಲಿ ಈ ಮೂರು ರಾಷ್ಟ್ರಗಳು ಒಂದಲ್ಲ ಒಂದು ದೃಷ್ಟಿಯಿಂದ ಸರಿಸಮಾನವಾಗಿದೆ.

ಈ ಪವಿತ್ರ ಬೃಹತ್ ಆಸಿಯಾ ಖಂಡದ ಪಾವನತೆಯನ್ನು ಕಾಯಬೇಕಿದ್ದರೆ ಈ ಮೂರೂ ರಾಷ್ಟ್ರಗಳೂ ಸ್ನೇಹದ ಬೆಸುಗೆಯನ್ನು ಬೆಳೆಸಿಕೊಳ್ಳಬೇಕಾದುದು ಅಗತ್ಯ. ಅದಕ್ಕಾಗಿ ಅಂತಾರಾಷ್ಟ್ರೀಯ ಶಾಂತಿ, ಸ್ವಾತಂತ್ರ್ಯಗಳ ಪ್ರತಿಪಾದಕರು ಯತ್ನಿಸುತ್ತಿದ್ದಾರೆ. ಆದರೆ ಚೌ ಅಥವಾ ಮಾವೋ ಇರುವ ತನಕ ಚೀನದ ಕೌಟಿಲ್ಯದ ಕಣ್ಣಿನಿಂದ ನಿರ್ದಯತೆಯ ಕಾಡಿಗೆಯನ್ನು ಒರೆಸುವುದಂತೂ ಕಷ್ಟ. ಬಿಳಿಯರ ಕುಟಿಲ ತಂತ್ರದಿಂದ ಈ ರಾಷ್ಟ್ರಗಳೊಳಗೆ ಒಡಕುಂಟಾಗಿರುವುದು ನಿರ್ವಿವಾದ. ಆದರಿಂದ ನಮ್ಮ ಬಲ, ಸ್ಥೈರ್ಯಗಳು, ಪ್ರಭಾವಗಳು ದಿನೇ ದಿನೇ ಕರಗುತ್ತಿವೆ. ಆಸಿಯಾ ಖಂಡದ ಹೆಸರು ನಾಮಾವಶೇಷವಾಗುತ್ತಿದೆ.

ಪಾಶ್ಚಾತ್ಯ ಖಂಡಗಳ ಕಾರ್ಮುಗಿಲು ಎಂದಿಗೆ ಈ ರಾಷ್ಟ್ರಗಳಿಂದ ಮುಕ್ತವಾದೀತೋ ಅಂದು ಅವು ಉದ್ಧಾರವಾಗುತ್ತವೆ. ಅದಕ್ಕಾಗಿ ಇವುಗಳು ಪ್ರಾಮಾಣಿಕವಾಗಿ ಒಂದಾಗಿ, ಶಾಂತಿಯುತವಾದ ನೀತಿಯೊಂದನ್ನು ರೂಪಿಸಿ ಅದರಂತೆ ವರ್ತಿಸಿದರೆ ಸುಭದ್ರತೆ ನೆಲಸುತ್ತದೆ. ಬೇರೆ ರಾಷ್ಟ್ರಗಳ ಕೌಟಿಲ್ಯದಿಂದ ಈ ರಾಷ್ಟ್ರಗಳ ಶಾಂತಿ ಸಮಾಧಾನಗಳು ನಾಶ ಹೊಂದಿ, ಆರ್ಥಿಕ ಪರಾಧೀನತೆಯೂ ಬಂದೊದಗಿದೆ.

ಈ ವರೆಗೂ ನಮ್ಮ ಎದುರಾಗಿ ಬೊಗಳುತ್ತಿದ್ದ ಪಾಕಿಸ್ತಾನದ ಮುಂದಿದ್ದ ತೆರೆ ಕ್ರಮಶಃ ಸರಿಯುತ್ತಿದೆ. ಯಾವ ರಾಷ್ಟ್ರಗಳೂ ಸ್ವಪ್ರೇಮದಿಂದ ತನ್ನ ಬೆಂಬಲಕ್ಕಿಲ್ಲ, ಎಲ್ಲವೂ ಕಪಟ, ಸ್ವಾರ್ಥವೆಂಬುದು ಅದರ ಅರಿವಿಗೆ ಬಂದು, ಭಾರತದೊಂದಿಗೆ ಸ್ನೇಹ ಬಾಂಧವ್ಯಕ್ಕೆ ಸನ್ನದ್ಧವಾಗಿದೆ. ಆದರೂ ಅದು ಪರಿಸ್ಥಿತಿಯನ್ನು ಪ್ರಾಮಾಣಿಕವಾಗಿ ಆದರಿಸಬೇಕು, ಬಾಂಗ್ಲಾ ದೇಶಕ್ಕೆ ಮಾನ್ಯತೆ ಕೊಡಬೇಕು—ಅಂದರೆ ಭಾರತವೂ ಸ್ನೇಹ ಹಸ್ತ ಸ್ವೀಕರಿಸುತ್ತದೆ. ಆದರೆ ಪಾಕಿಸ್ತಾನವಿನ್ನೂ ಶಾಂತಿ ಸಂಧಾನಕ್ಕೆ ಬರುವ ಬದಲು ಮಿತ್ರ (?) ರಾಷ್ಟ್ರಗಳೊಂದಿಗೆ ಸಂಚಕಾರದ ಮಾತುಕತೆಯನ್ನೇ ಮುಂದುವರಿಸಿ ನಮ್ಮನ್ನು ಕದನದ ಕಣಕ್ಕೆಳೆಯುವಂತಿದೆಯೆನ್ನಲಾಗಿದೆ

ಚೀನದಲ್ಲಿ ಪಾಕಿಸ್ತಾನವೂ ಮಾತುಕತೆ ನಡೆಸಿ, ಅಶಾಂತಿ ಮತ್ತು ಗೊಂದಲವನ್ನು ಹಬ್ಬಿಸುತ್ತಿದೆ. ಭಾರತವು ಮುಸ್ಲಿಮರ ವಿರುದ್ಧವಾಗಿ ವರ್ತಿಸುತ್ತಿದೆಯೆಂದು ಹೇಳುತ್ತಿರುವ ಚೀನ ಭಾರತವನ್ನು ಖಂಡಿಸಲು ಎಲ್ಲಾ ಮುಸ್ಲಿಮ್ ರಾಷ್ಟ್ರಗಳೂ ಒಂದಾಗಿವೆಯೆಂದು ಸುಳ್ಳು ಸುದ್ದಿಯನ್ನು ಹಬ್ಬಿಸಿದೆಯೆನ್ನುದರಿಂದ ಭುಟ್ಟೊ ಆ ಮಾತಿಗೆ ಕಿವಿಚಾಚಿ, ಗಾಳಿ ತುಂಬಿಸಿಕೊಳ್ಳುತ್ತಿದ್ದಾರೆ. ಅನೇಕ ಮುಸ್ಲಿಂ ರಾಷ್ಟ್ರಗಳನ್ನು ಭಾರತದ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ. ಆ ಮುಸ್ಲಿಂ ರಾಷ್ಟ್ರಗಳಿಗೆ ಪ್ರಚೋದನೆ ಕೊಡುತ್ತಿರುವ ಚೀನ ಆಸಿಯಾ ಖಂಡದಲ್ಲಿ ತನ್ನ ಬೃಹತ್ ಸ್ಥಾನವನ್ನು ಭದ್ರಪಡಿಸಲೆತ್ನಿಸುತ್ತಿದೆ.

ಇದರಿಂದ ಆಸಿಯಾ ಖಂಡದಲ್ಲಿ ಏಳಲಿರುವ ಭಾರೀ ಸುಂಟರ ಗಾಳಿಯ ಕಲ್ಪನೆ ನಿಜಕ್ಕೂ ಪಾಕಿಸ್ತಾನದ ಹೃದಯದಲ್ಲಿ ಬರಬೇಕು. ಅದು ಹತ್ತು ಹಲವು ಚಾಣಕ್ಯ ರಾಷ್ಟ್ರಗಳ ಹಿಂಬಲ ಬಿಟ್ಟು, ಎದುರು ಬಂದು ಸಮ್ಮೊಡನೆ ಬಿಚ್ಚು ಮನಸ್ಸಿನ ಮಾತುಕತೆ ನಡೆಸುವುದರೊಂದಿಗೆ ಭಾರತವನ್ನು ತೆಗಳುವುದನ್ನು ಬಿಟ್ಟು, ಭಾರತವು ತನ್ನಿಂದ ಬಂಗ್ಲಾದೇಶವನ್ನು ಸೆಳೆದುಕೊಂಡು ಸ್ವತಂತ್ರವಾಗಿ ನಿರ್ವಾಣ ಮಾಡಿದೆಯೆಂದು ಹೇಳುವುದನ್ನು ಬಿಡಬೇಕು

ನ್ಯಾಯಕ್ಕೆ ಬೆಲೆ ಕೊಟ್ಟು ಚೀನ ಜಪಾನುಗಳು ಸ್ನೇಹದ ಬಾಂಧವ್ಯವನ್ನು ರೂಪಿಸಿಕೊಳ್ಳುವುದು ಒಳ್ಳಿತು. ಈ ಆಸಿಯಾ ಖಂಡ ಒಡೆಯಬಾರದು. ಪಾಕಿಸ್ತಾನಕ್ಕೆ ಬರಿದೇ ಬೊಗಳುತ್ತಿದ್ದರೆ ಲಾಭವಿಲ್ಲ. ಭಾರತವನ್ನು ಗೆಲ್ಲುತ್ತೇನೆಂದು ಅದು ಕನಸು ಮನಸಿನಲ್ಲಿಯೂ ನೆನೆಸಬಾರದೆಂಬುದು ಶತಃಸಿದ್ಧ. ಆದರಿಂದ 'ಇದ್ದುದೂ ಹೋಯಿತು ಮದ್ದಿನ ಬಲದಿಂದ' ಎಂಬಂತಾದೀತಲ್ಲದೆ ಭಾರತದ ಹೆಸರು ಭೂಪಟದಿಂದ ಅಳಿಸಿ, ಅಲ್ಲಿ ಇಸ್ಲಾಮಾಬಾದಿನ ಹೆಸರೆಂದಿಗೂ ವಿರಾಜಿಸಲಾರದು.

ಪಾಕಿಗೆ ಚೀಣ ಬೆಂಬಲ ಕೊಟ್ಟೀತೇ ಎಂಬುದು ನೀರಿನಲ್ಲಿ ಗೀಚಿದ ಮಾತು. ಅದು ಈಚೆಗೆ ಪ್ರಚಾರ ಮಾಡಿದಂತೆ ಮಿಲಿಟರಿ ಸಾಮಗ್ರಿಗಳನ್ನು ಉಚಿತವಾಗಿ ಪಾಕಿಗೆ ನೀಡುವಷ್ಟು ಆರ್ಥಿಕದಲ್ಲಿ ಮುಂದುವರಿದುದಿರಲಿ, ಸಾಲವಾಗಿ ಕೊಡುವಷ್ಟು ಕೂಡ ಹಣ ಅವರ ಬಳಿಯಲ್ಲಿಲ್ಲ. ಕೇವಲ ಸಾಂಕೇತಿಕ ಸಹಾಯ ಕೊಡಬಹುದು. ಆದುದರಿಂದ ಚೀಣ ಪಾಕಿಸ್ತಾನದ ಬಲೂನಿಗೆ ಗಾಳಿ ತುಂಬಿಸುವುದನ್ನು ಬಿಟ್ಟು ಚೀಣ—ಭಾರತ—ಜಪಾನುಗಳು ಒಂದಾಗಿ ಪವಿತ್ರ ಸ್ನೇಹದ, ಬಾಂಧವ್ಯದ ಬೆಸುಗೆ ಹಾಕಲಿ. ರಕ್ತಪಾತ ಬೇಡ, ಯುದ್ಧ ಬೇಡ, ಶಾಂತಿ ಸಮೃದ್ಧಿ ಬೇಕು. ನೂತನ ನಂದನದ ಹಸಿರು ನಳನಳಿಸಬೇಕು. ಅಂದರೆ ಈ ಖಂಡದ ಸುಭದ್ರತೆಯನ್ನು ಯಾವ ರಾಷ್ಟ್ರವೂ ಮುರಿಯಲಾರದು. ಈ ವಿಚಾರವನ್ನು ಮನಗಾಣಬೇಕು. ಕಂಡು ಅರಿಯಬೇಕು. ಈ ಶಾಂತಿಮಯವಾದ ಬೆಸುಗೆಗೆ ನಿರ್ಮಲವಾದ ತಳಪಾಯವನ್ನು ತ್ವರಿತವಾಗಿ ಹಾಕಬೇಕು.

—ಶ್ರೀ ಪ ರಾಮಕೃಷ್ಣ ಶಾಸ್ತ್ರಿ

●●

ಮತದಾರರ ಹಕ್ಕುಗಳು ಮತ್ತು ಕರ್ತವ್ಯಗಳು

(ಒಂದನೇ ಪುಟದಿಂದ)

ಬ ಬೇಜಾರಿನಿಂದಲೋ ಮತ ನೀಡಿಕೆಯ ಹಕ್ಕನ್ನು ಚಲಾಯಿಸುವುದಿಲ್ಲ. ಕೆಲವರು ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಗಳಲ್ಲಿ ಕಾಣದೇ ಇರಬಹುದು. ತಮಗೆ ಮತ ನೀಡಲು ಸಾಕಷ್ಟು ಸೌಕರ್ಯವನ್ನು ಒದಗಿಸಿಲ್ಲ ಎಂಬ ಕಾರಣದ ಮೇಲೆ ಕೆಲವರು ಮತ ನೀಡದೇ ಇರಬಹುದು.

ಆದರೆ ಇದು ನಿಜವಲ್ಲ. ಭಾರತದಂತಹ ಬೃಹತ್ ದೇಶದಲ್ಲಿ ಚುನಾವಣೆಯನ್ನು ನಡೆಸುವುದು ಸುಲಭವೇನಲ್ಲ. ಆ ಕೆಲಸ ಸಹ ಬೃಹದಾಕಾರವಾಗಿಯೇ ಇರುತ್ತದೆ. ನಮ್ಮ ದೇಶದಲ್ಲಿ ಮತದಾರರ ಸಂಖ್ಯೆ 27 ಕೋಟಿಗೂ ಮೀರಿದೆ. ಈ ಎಲ್ಲ ಮತದಾರರು ಕೇವಲ ಕೆಲವು ನೂರು ಊರು ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿಲ್ಲ. ಇವರಲ್ಲಿ ಅತ್ಯಧಿಕ ಸಂಖ್ಯೆಯ ಮತದಾರರು ದೇಶದ ಎಲ್ಲ ಭಾಗಗಳಲ್ಲಿಯೂ ಹರಡಿರುವ ಸಹಸ್ರಾರು ಹಳ್ಳಿಗಳಲ್ಲಿ ವಾಸಿಸುತ್ತಾರೆ.

ಮತದಾರರಿಗೆ ಆದಷ್ಟು ಸೌಕರ್ಯಗಳನ್ನು ಒದಗಿಸುವುದು ಚುನಾವಣೆಗಳು ನಡೆಸುವವರ ಮುಖ್ಯ ಅಪೇಕ್ಷೆಯಾಗಿರುತ್ತದೆ. ಪ್ರತಿ ಚುನಾವಣೆಯ ಸಮಯದಲ್ಲಿಯೂ ಮತದಾರರ ಪಟ್ಟಿಗಳನ್ನು ಆದಷ್ಟು ಪರಿಷ್ಕರಣೆ ಮಾಡುವ ಬಗ್ಗೆ ಪ್ರಯತ್ನ ನಡೆಸಲಾಗುವುದು. ಜೊತೆಗೆ ಸಾಧ್ಯವಾದಷ್ಟು ಮತಗಟ್ಟೆಗಳನ್ನು ಒದಗಿಸಲೂ ಪ್ರಯತ್ನಿಸಲಾಗುವುದು. ಪ್ರತಿ ಚುನಾವಣೆಯೊಂದಿಗೆ ಮತದಾರರ ಸಂಖ್ಯೆಯೂ ಹೆಚ್ಚಿದೆ. ಅಂತೆಯೇ ಮತಗಟ್ಟೆಗಳ ಸಂಖ್ಯೆಯೂ ಹೆಚ್ಚಿದೆ. ಮೊದಲನೆಯ ಮಹಾಚುನಾವಣೆಗಳ ಸಮಯದಲ್ಲಿ ದೇಶದಲ್ಲಿ 1,32,560 ಮತಗಟ್ಟೆಗಳಿದ್ದವು. ಅವುಗಳ ಸಂಖ್ಯೆ ನಾಲ್ಕನೆಯ ಮಹಾಚುನಾವಣೆಗಳ ಸಮಯದಲ್ಲಿ 2,67,555ಕ್ಕೆ ಹೆಚ್ಚಿತು. ಮುಂದಿನ ಮಹಾ ಚುನಾವಣೆಗಳ ಸಮಯದಲ್ಲಿ ಮತಗಟ್ಟೆಗಳ ಸಂಖ್ಯೆ ಮೂರುಲಕ್ಷಕ್ಕೂ ಹೆಚ್ಚು ಇರುವ ನಿರೀಕ್ಷೆಯಿದೆ.

●●

ಸ್ಕಾಟು ಮತ್ತು ಗೈಡ್ ಸ್ಥಾಪಕರ ದಿನಾಚರಣೆ

ಉಡುಪಿ ಮೋಡರ್ನ್ ಹಾಯರ್ ಪ್ರೈಮರಿ ಶಾಲೆಯಲ್ಲಿ 'ಶ್ರೀ ಕೃಷ್ಣ ಕಬ್ಸ್ ದಳ'ದವರು ಕಳೆದ ದಿನಾಂಕ 22ರಂದು ಸ್ಕಾಟು ಸ್ಥಾಪಕರ ದಿನವನ್ನು ಆಚರಿಸಿದರು. ದಳದ ನಾಯಕ ಶ್ರೀ ಎ ದಿನೇಶನು ಸ್ಕಾಟು ಧ್ವಜವನ್ನು ಅರಳಿಸಿದನು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಲಕ್ಷ್ಮೀನಾರಾಯಣ ಭಟ್ಟರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀ ಕೆ. ರಘುನಾಥರಾಯರು ಮಾತನಾಡಿದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸ್ಕಾಟು ಮತ್ತು ಗೈಡ್ ಸ್ಥಾಪಕರಾದ ಲೋರ್ಡ್ ಬೇಡನ್ ಪೊವೆಲ್ ಮತ್ತು ಶ್ರೀಮತಿ ಓವೆಲ್ ಬೇಡನ್ ಪೊವೆಲರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಸಿ ಹಿತವಚನಗಳನ್ನಾಡಿದರು

ಕೊನೆಯಲ್ಲಿ ಸ್ಕಾಟು ಮಾಸ್ಟರ್ ಶ್ರೀ ಕೆ. ಜನಾರ್ಧನರಾಯರು ಧನ್ಯವಾದಗಳನ್ನರ್ಪಿಸಿದರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

Edited, Printed & Published by K. H. Shetty at the Navayuga Press, Udipi. S. India.

ಸಂಪುಟ ೫೧
ಸಂಚಿಕೆ ೨೮

NAVAYUGA

16-3-1972

ಭುಟ್ಟೋ ಶಾಂತಿಯಾತ್ರೆ—

ಪಿಂಡಿ-ದೆಹಲಿ-ಡಾಕ್ಕಾ ವಯಾ ಮಾಸ್ಕೋ

ಅಮೆರಿಕೆಯ ರಾಷ್ಟ್ರಪತಿ ರಿಚರ್ಡ್ ನಿಕ್ಸನ್ನರು ಕೆಂಪು ಚೀನಾಕ್ಕೆ ಭೆಟ್ಟಿ ನೀಡಿ ಮರಳಿದ ಹಿಂದೆಯೇ ಬಾಂಗ್ಲಾ ದೇಶದ ಪ್ರಧಾನಿ ಶೇಕ ಮುಜಿಬುರ್ ರೆಹಮಾನರು ರಶ್ಯಾ ದರ್ಶನ ಮಾಡಿದರು. ನಿಕ್ಸನ್ನರು ಪೀಕಿಂಗಿನಲ್ಲಿ ಲಾಯರಿಗೆ ಅನನ್ಯ ಶರಣಾಗಿ ಮರಳಿ ಬಂದರೆ, ಮಾಸ್ಕೋವಿನಲ್ಲಿ ಶೇಕ ಮುಜಿಬುರ್ ಗೌರವಯುತ ಮಾತುಕತೆ ಮಾಡಿ ಗೌರವಾನ್ವಿತ ವ್ಯಕ್ತಿಯಾಗಿಯೇ ಸ್ವದೇಶಗಮನ ಮಾಡಿದರು. ಬಾಂಗ್ಲಾ ದೇಶದ ಉದಯ ಏಳೂವರೆ ಕೋಟಿ ಬಾಂಗ್ಲಾಗಳ ರಕ್ತತರ್ಪಣದಿಂದ ಆಯ್ತು; ತೊಟ್ಟು ತೊಟ್ಟು ರಕ್ತದ ಬೆಲೆಯೇನೆಂಬುದು ಮುಜಿಬುರ್ ರೆಹಮಾನರಿಗೆ ಚೆನ್ನಾಗಿ ಗೊತ್ತು.

ಮುಜಿಬುರ್ ಸೋವಿಯತ್ ಪ್ರಧಾನಿ ಅಲೆಕ್ಸಿ ಕೊಸಿಗಿನ್ನರನ್ನು, ಅಧ್ಯಕ್ಷ ಪುದ್ಗೋರ್ನಿಯವರನ್ನು ಮತ್ತು ಕಮ್ಯುನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿ ಬ್ರೆಜ್ನೇವರನ್ನು ಹಾಗೂ ಮತ್ತಿತರ ಹಿರಿಯ ನಾಯಕರನ್ನು ಕಂಡು ಮಾತನಾಡಿದರು. ಬಾಂಗ್ಲಾ ಸ್ವಾತಂತ್ರ್ಯ ಹೋರಾಟದ ವೇಳೆ ಬಾಂಗ್ಲಾಗಳ ಹಿಂದೆ ನಿಂತ ಅಮೋಘ ಶಕ್ತಿ ಸೋವಿಯತ್ ದೇಶವೆಂಬುದನ್ನು ಮರೆಯಬಾರದು. ಪಾಕಿಸ್ತಾನದ ನರಮೇಧವನ್ನದು ಖಂಡತುಂಡವಾಗಿ ನಿಂದಿಸಿರುವುದನ್ನು ನೆನಪಿಸಬೇಕು. ಆದುದರಿಂದಲೇ ಸೋವಿಯತ್ತು ಬಾಂಗ್ಲಾದೇಶಕ್ಕೆ ನಾನಾ ಪ್ರಕಾರದ ಬೆಂಬಲ-ಸಹಾಯಗಳನ್ನು ನೀಡಲು ಮುಂದೆ ಬಂದಿದೆ. ಈ ನೆರವು ಆರ್ಥಿಕವಾಗಿರುತ್ತದೆ. ಜತೆಗೆ ರಾಜ್ಯಕೀಯವಾಗಿಯೂ ಇರುತ್ತದೆ.

ಇದು ಬಾಂಗ್ಲಾ—ಸೋವಿಯತ್‌ಗಳಿಗೆ ಸಂಬಂಧಪಟ್ಟ ವಿಷಯವಾಯ್ತು. ಭಾರತ ಉಪಖಂಡಕ್ಕೆ ಸಂಬಂಧಿಸಿದಂತೆ ಒಂದು ಒಕ್ಕಣೆಯೂ ಇವರೀರ್ವರ ಜಂಟಿ ಹೇಳಿಕೆಯಲ್ಲಿ ಉಲ್ಲಿಖಿತವಾಗಿದೆ. ಪೀಕಿಂಗಿನಲ್ಲಿ ಭಾರತ ಉಪಖಂಡಕ್ಕೆ ಏನೇನೂ ಸಂಬಂಧವಿಲ್ಲದ ಅಮೆರಿಕೆ—ಚೀನಾಗಳು ತಮಗೆ ಅನಗತ್ಯವಾದ ಅಪ್ರಸ್ತುತವಾದ ಕಾಶ್ಮೀರ ಪ್ರಶ್ನೆಯನ್ನು ಉಲ್ಲೇಖಿಸಿ ಗೊಂದಲವನ್ನುಂಟು ಮಾಡಿದುವು. ಆದರೆ, ಉಪಖಂಡದ ಒಂದು ಸ್ವತಂತ್ರ, ಸಾರ್ವಭೌಮ ದೇಶವಾದ ಬಾಂಗ್ಲಾ ಮತ್ತು ಸೋವಿಯತ್ತುಗಳು ಉಪಖಂಡದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ಹಂಬಲಿಸಿದುವು. ಈ ಸಂಬಂಧದಲ್ಲಿ ಅನ್ಯ ರಾಷ್ಟ್ರಗಳ ಹಸ್ತಕ್ಷೇಪ ಸಲ್ಲದೆಂದು ಎಚ್ಚರಿಕೆ ನೀಡಿದುವು. ಉಪಖಂಡದ ದೇಶಗಳು ತಮ್ಮೆಲ್ಲ ಸಮಸ್ಯೆಗಳನ್ನೂ ಪರಸ್ಪರ ಸಂಧಾನ ಮೂಲಕವಾಗಿಯೇ ಪರಿಹರಿಸಿಕೊಳ್ಳಬೇಕೆಂದು ಕೇಳಿಕೊಂಡುವು.

ಭಾರತದ ದೃಷ್ಟಿಯಿಂದ ಇದು ಕಡಿಮೆ ಮಹತ್ವದ ಅಂಶವಲ್ಲ. ನಿಕ್ಸನ್—ಲಾಯ್ ಸಂಚು ನಡೆಯುತ್ತಿರುವಾಗ, ಹೊರಟಿದೆ ಈ ಎಚ್ಚರಿಕೆ. ಭಾರತ ಉಪಖಂಡದ ಬಗ್ಗೆ ರಶ್ಯನ್ ನಿಲುಮೆಯು ಪುನರಾವರ್ತಿತವಾದದ್ದು ಸ್ವಾಗತಾರ್ಹ. ಆದರೆ, ಇದುವರೆಗೂ ನೇರ ಮಾತುಕತೆಯ ವಿಷಯವನ್ನು ಅಡಿಗೆ ಹಾಕುತ್ತ ಬಂದ ಪಾಕಿಸ್ತಾನವು ತನ್ನ ಚಟವನ್ನು ಬದಲಾಯಿಸುವುದೆ? —ತನ್ನ ದೇಶೀಯ ನಾಯಕರಿಗೆ ಶರಣಾಗತರಾಗಿ ಅಸೆಂಬ್ಲಿ ಸಭೆಯನ್ನು ಕರೆಯುವುದಕ್ಕೂ ಮಿಲಿಟರಿ ಶಾಸನವನ್ನು ಹಿಂದೆಗೆಯುವುದಕ್ಕೂ ಸಮ್ಮತಿಸಿದ ರಾಷ್ಟ್ರಪತಿ ಭುಟ್ಟೋ ಈ ಆವಶ್ಯಕ ಕರೆಗೆ ಇನ್ನಾದರೂ ಕಿವಿಗೊಡುವರೆ?

° ° °

ಪಾಕ್ ರಾಷ್ಟ್ರಪತಿ ಜುಲ್‌ಫಿಕರ್ ಅಲಿ ಭುಟ್ಟೋ ಮಹಾಶಯರ ಸಿಂಹಾಸನ ಅದೆಷ್ಟು ಅಭದ್ರವಾಗಿದೆಯೆಂಬುವಕ್ಕೂ ಅವರ ಬಗ್ಗೆ ಜನತೆಯೆಷ್ಟು ರೊಚ್ಚಿಗೆದ್ದಿದೆಯೆಂಬುವಕ್ಕೂ ನಿದರ್ಶನವೊಂದು ಕಳೆದ ವಾರ ದೊರೆಯಿತು. ರಾಷ್ಟ್ರಪತಿ ಭುಟ್ಟೋರವರನ್ನು ಪದಚ್ಯುತಿಗೊಳಿಸುವ ಸರಳ ತಂತ್ರವೊಂದು ನಡೆಯಿತು. ಅದೆಂತೋ ಇದರ ಸುಳಿವು ಸಿಕ್ಕಿದ್ದರಿಂದ ಅವರು ತಮ್ಮ ಗದ್ದುಗೆಯನ್ನುಳಿಸಿಕೊಳ್ಳುವುದು ಸಾಧ್ಯವಾಯ್ತು. ಜಾಲ ನೇಯ್ದವರು ಸೆರೆಮನೆ ಕಾಣಬೇಕಾಯ್ತು.

ಪರಿಣಾಮ, ಪಾಕ್ ಮಿಲಿಟರಿಯ ನಾಯಕತ್ವದಲ್ಲಿ ಭಾರೀ ಬದಲಾವಣೆ. ರಾಷ್ಟ್ರಪತಿ ಭುಟ್ಟೋ ನೆಲ—ಜಲ ಮತ್ತು ವಾಯು ಪಡೆಯ ಮಹಾ ದಂಡ ನಾಯಕ ತಾನೇ ಎಂದು ಘೋಷಿಸಿಕೊಂಡರು. ರಾಷ್ಟ್ರಪತಿ ಭುಟ್ಟೋ ರಾಷ್ಟ್ರೀಯ ಅವಾಮಿ ಪಕ್ಷ ಮತ್ತು ಜಮೈತ್ ಉಲ್ ಉಲೆಮಾ ಇ ಇಸ್ಲಾಮದ ನಾಯಕರೊಂದಿಗೆ ರಾಜ್ಯಕೀಯ ಶಾಂತಿಯ ಸಂಬಂಧ ರಾವಲ್ಪಿಂಡಿಯಲ್ಲಿ ಮಾತುಕತೆ ನಡೆಸುತ್ತಿರುವಾಗಲೇ ಮಿಲಿಟರಿ ಅಧಿಕಾರಿಗಳು ಭುಟ್ಟೋ ಪದಚ್ಯುತಿಯ ಪ್ರಯತ್ನ ನಡೆಸಿದರು. ಅವರು ಸಫಲರಾಗಲಿಲ್ಲವಾದುದರಿಂದ ಅವರದ್ದು ವಿಫಲ ಪ್ರಯತ್ನವಾಯ್ತು. ಯಾಹ್ಯಾಖಾನರ ಪದಚ್ಯುತಿಗೆ ಕೇಂದ್ರಬಿಂದುವೆನಿಸಿದ್ದ ಏರ್ ಮಾರ್ಶಲ್ ರಹೀಂ ಖಾನರೇ ಈ ಜಾಲ ನೇಯ್ದವರಲ್ಲಿ ಪ್ರಮುಖರೆಂದೂ ಭೂದಳದ ದಂಡನಾಯಕ ಲೆ|ಜ| ಗುಲ್ ಹಸನ್ ಅವರ ಬೆಂಬಲವಿತ್ತೆಂದೂ ತಿಳಿದುಬಂದಿದೆ.

ಯಾಹ್ಯಾಖಾನರಿಂದ ಅಧಿಕಾರ ಪಡೆದೊಡನೆಯೇ ಮಹಾಶಯ ಭುಟ್ಟೋ ಪ್ರಮುಖ ಮಿಲಿಟರಿ ಸ್ಥಾನಗಳಲ್ಲಿ ಹಲವಾರು ಮಹತ್ವದ ಬದಲಾವಣೆ ಮಾಡಿದ್ದರು. ದಂಡನಾಯಕ ಹುದ್ದೆಗಳಿಗೆ ತನ್ನವರನ್ನೇ ನೇಮಿಸಿಕೊಂಡಿದ್ದರು. ತಾನು ನಂಬಿದವರೇ ತನಗೆ ಕೈಕೊಡುವರೆಂಬುದನ್ನು ಆಗ ಭುಟ್ಟೋ ಕನಸಿನಲ್ಲೂ ಎಣಿಸಿರಲಾರರು. ಅವರ ವಿಶ್ವಾಸ ನೀರಲ್ಲಿ ಹರಿದು ಹೋಯ್ತು. ಇದೀಗ ಭುಟ್ಟೋ ಟಿಕ್ಕಾಖಾನರನ್ನು ಜನರಲ್ ಹುದ್ದೆಗೇರಿಸಿ ಭೂ ಸೇನೆಯ ದಂಡನಾಯಕರನ್ನಾಗಿ ಮಾಡಿದ್ದಾರೆ. ಈ ಟಿಕ್ಕಾಖಾನ್ ಬಾಂಗ್ಲಾ ದೇಶದಲ್ಲಿ ಸತ್ತು ಬದುಕಿ ಬಂದವರು. ಯಾಹ್ಯಾ ನರಮೇಧದ ದೀಕ್ಷಿತರಾಗಿದ್ದರೆ, ಟಿಕ್ಕಾಖಾನ್ ಅದರ ಪುರೋಹಿತರು. ವಾಯು ಮತ್ತು ನೌಕಾ ದಳದ ದಂಡನಾಯಕರನ್ನೂ ಭುಟ್ಟೋ ಅವರು ಬದಲಿಸಿದ್ದಾರೆ,

ರಾಷ್ಟ್ರಪತಿ ಭುಟ್ಟೋ ವಾಲೀಖಾನ್ ಮತ್ತಿತರ ನಾಯಕರೊಡನೆ ಮಾತುಕತೆ ನಡೆಸಿ ಅವರ ಮುಂದೆ ತಲೆಬಾಗಿದರು. ಮುಂದಿನ ತಿಂಗಳ ೧೪ರಂದು ರಾಷ್ಟ್ರೀಯ ಅಸೆಂಬ್ಲಿಯ ಸಭೆ ಕರೆಯುವುದಕ್ಕೂ ಆಗಸ್ತ ೧೪ರಿಂದ ಮಿಲಿಟರಿ ಶಾಸನವನ್ನು ಹಿಂದೆಗೆದುಕೊಳ್ಳುವುದಕ್ಕೂ ಅವರು ಸಮ್ಮತಿಸಿದ್ದರು ೧೯೭೦ರ ದಶಂಬರದಲ್ಲಿ ಆಯ್ಕೆಗೊಂಡ ಜನ ಪ್ರತಿನಿಧಿಗಳು ಸುಮಾರು ಹದಿನಾರು ತಿಂಗಳುಗಳ ನಂತರ ಸಭೆ ಸೇರಿ, ಭುಟ್ಟೋ ಅಧಿಕಾರವನ್ನು ಮನ್ನಿಸುವುದಕ್ಕೂ, ಹೊಸ ಸಂವಿಧಾನ ಸಮಿತಿಯೊಂದನ್ನು ರಚಿಸುವುದಕ್ಕೂ ಒಪ್ಪಿಗೆ ನೀಡುವುದು ಸದ್ಯ ಒಪ್ಪಿಗೆಯಾಗಿದೆ. ಸಭೆಗೆ ದಿನಗೊತ್ತು ಮಾಡುವುದು, ಮುಂದೆ ಹುಲ್ಲಿನಂತಹ ಕಾ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
151 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಸ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ನರಸಿಂಹನಲ್ಲಿ ಹುಲಿಯ ಹಾಲನ್ನಾದರೂ ತಂದುಣ್ಣಿಸುವ ಶಕ್ತಿ ಇತ್ತು. ಆದರೆ ಮಗು ಬೇಡುತ್ತಿದ್ದುದು ತಾಯ ಹಾಲು. ಹುಟ್ಟುತ್ತ ತಾಯಿಯನ್ನು ಕಳೆದು ಕೊಂಡ ಆ ಮಗುವಿಗೆ ತಾಯ ಹಾಲಿನ್ನೆಂತು ತರುವುದು?

ತನ್ನ ಮಗು.

ಅದು ತಬ್ಬಲಿ.

ತಂದೆಯಾದ ನಾನು ಬದುಕಿದ್ದರೂ ಆ ಕಂದಮ್ಮ ದಾದಿಯರ ಮಧ್ಯೆ ಬೆಳೆಯಬೇಕು.

ಮಗುವನ್ನು ಆತ ದಾದಿಯ ಕೈಯಿಂದ ತನ್ನ ಕೈಗೆ ತೆಗೆದುಕೊಂಡ.

ಮುದ್ದಾಡಿದ.

ಮಗು ಕಿಲಕಿಲನೆ ನಕ್ಕಿತು.

ಕೈಕಾಲುಗಳನ್ನೊಮ್ಮೆ ಕುಣಿಸಿತು.

ಅದೆಷ್ಟು ಮೋಹಕ—ಆಕರ್ಷಕ.

ಮಕ್ಕಳ ಬೆಳವಣಿಗೆಯ ಒಂದೊಂದು ಹಂತವೂ ನೋಡುವುದಕ್ಕೆ ಮನೋಜ್ಞ.

ನೋಡಿ ಆನಂದ ಪಡಲು ಎರಡು ಕಣ್ಣುಗಳು ಸಾಲವು.

ಆತ ಮಗುವನ್ನು ಮತ್ತೊಮ್ಮೆ ಮುದ್ದಿಸಿದ.

ಮಗುವನ್ನು ಹೀಗೆಯೇ ನೋಡುತ್ತ ಹೊತ್ತು ಕಳೆಯುವ ಆಸೆಯಾಯಿತು ನರಸಿಂಹನಿಗೆ.

ತಾನು—ಆ ಮಗುವಿನ ತಂದೆ

ಹಾಗೆ ಅನ್ನಿಸಿಕೊಳ್ಳಲು ನನಗೆ ಎಲ್ಲಿಲ್ಲದ ಹೆಮ್ಮೆ.

ಹೊತ್ತು—ಹೆತ್ತವಳು ಅವಳು. ಜಾನಕಿ. ಎದೆ ಹಾಲುಣ್ಣಿಸಿ ಬೆಳೆಸಬೇಕಾದ ಆ ಮಗುವನ್ನು ಅವಳೇ ಬಿಟ್ಟು ಹೋದಾಗ ತಂದೆಯಾದ ನಾನು ಮಾಡಿದ್ದೇನು?

ಅವಳೋ—?

ಪ್ರಾಣವನ್ನೇ ಪಣವಾಗಿಟ್ಟಳು.

ಮಗು ಅವನ ತೋಳಲ್ಲೇ ನಿದ್ರಿಸಿತು. ಬಹಳ ಜಾಗರೂಕತೆಯಿಂದ ಅವನದನ್ನು ತೊಟ್ಟಿಲಲ್ಲಿ ಮಲಗಿಸಿದ. ಇಹದ ವ್ಯಾಪಾರಗಳನ್ನೇ ಅರಿಯದ ಮಗು ತೊಟ್ಟಿಲಲ್ಲಿ ಹಾಯಾಗಿ ಮಲಗಿತು.

ನರಸಿಂಹನಿಗೆ ತನ್ನ ಮಾತೇ ತನ್ನನ್ನು ನುಂಗುವಂತೆ ಕಂಡಿತು.

ಹೆಣ್ಣು ಮಗುವಾದಲ್ಲಿ ಅವಳನ್ನು ಶಕುಂತಲೆ ಎಂದು ಕರೆಯಲು ಆತ ಬಯಸಿದ್ದ.

ಶಕುಂತಲೆ ತಬ್ಬಲಿ.

ತನ್ನ ಮಗ—

ಹಡೆದ ತಾಯಿ ಜನ್ಮ ಕೊಟ್ಟ ಸ್ವಲ್ಪದರಲ್ಲೇ ಕಾಲವಾದಳು.

ಮೇನಕೆಯಾದರೋ ಬೇಕೆಂತಲೇ ಬಿಟ್ಟು ಹೋದಳು.

ಶಕುಂತಲೆಯ ತಂದೆ ವಿಶ್ವಾಮಿತ್ರ, ತಪಸ್ಸಿಗೆಂದು ತಪ್ಪಲು ಸೇರಿದ.

ತಾನು—?

ಅದೇ ನಿರ್ಧಾರಕ್ಕೆ ಬಂದವ.

ಇಂದೋ—ನಾಳೆಯೋ ಈ ಹೊಲಸಿನಿಂದ ದೂರವಾಗಲು ತೀರ್ಮಾನಿಸಿದ.

ಶಕುಂತಲೆಯ ಪೋಷಣೆಗೆ ಕಣ್ವನಂತಹ ಋಷಿಗಳು ದಕ್ಕಿದರು.

ಆದರೆ ತನ್ನ ಈ ಶಿಶುವನ್ನು ಯಾರ ಉಡಿಯಲ್ಲಿ ಹಾಕುವುದು; ತನ್ನ ಲಾಭಕ್ಕಾಗಿ ಇಂದ್ರ ಅವನನ್ನೇ ಬಳಸಿಕೊಳ್ಳಲೆತ್ನಿಸಿದ್ದ.

ಹೀಗಿರಲು ಈ ಮಗುವನ್ನು ಬೆಳೆಸುವವರು ಅವನನ್ನು ತಮ್ಮ ಲಾಭಕ್ಕಾಗಿ ಬಳಸಬಾರದೇಕೆ?

ಬಳಸಿಯೇ ಬಳಸುತ್ತಾರೆ.

ಕಣ್ವರಂತಹ ಮೂರು ಬಿಟ್ಟ ನಿಸ್ಪೃಹರೆಲ್ಲಿ ಸಿಗುತ್ತಾರೆ.

ನರಸಿಂಹನಿಗೆ ಮಗನನ್ನು ಬೆಳೆಸಿ ದೊಡ್ಡದು ಮಾಡುವ ಹೊಣೆಯ ಅರಿವಾಯಿತು. ಅದು ತನ್ನ ಪಾಲಿಗೆ ಬಂದ ಕರ್ತವ್ಯ ಎಂಬುದು ಹೊಳೆಯಿತು.

ಈ ಕರ್ತವ್ಯವನ್ನು ಅನ್ಯರು ನೆರವೇರಿಸಿಯಾರು ಎಂಬ ಭರವಸೆ ತಪ್ಪಿ ಹೋಯಿತು. ಮಗುವಿಗಾಗಿಯಾದರೂ ತಾನಿಲ್ಲಿರಬೇಕಾಗಿದೆ.

ಅರಿಕೇಸರಿ ಬೆಳೆದು ದೊಡ್ಡವನಾಗುವ ತನಕವೂ ತಾನು ರಾಷ್ಟ್ರಕೂಟ ರಾಜಧಾನಿಯಲ್ಲಿರಬೇಕೆಂದು ಆತ ತೀರ್ಮಾನಿಸಿದ.

೭

ಲಗುಬಗೆಯಿಂದ ಹನ್ನೆರಡು ವರ್ಷದ ಬಾಲಿಕೆಯೊಬ್ಬಳು ಅಂತಃಪುರವನ್ನು ಪ್ರವೇಶಿಸಿ 'ಅಮ್ಮಾ' ಎಂದು ಕೂಗಿದಳು.

ಆಕೆಯ ಕೂದಲು ಕೆದರಿತ್ತು.

ಬಟ್ಟೆ—ಬರೆ ಅಸ್ತವ್ಯಸ್ತವಾಗಿತ್ತು.

ಮುಖದಲ್ಲಿ ಬೆವರ ಹನಿಗಳು ಮೂಡಿದ್ದವು. ಕೋಪೋದ್ರಿಕ್ತಳಾದ ಅವಳ ಮುಖ ಚೆಂಗುಲಾಬಿಯನ್ನು ನಾಚಿಸುವಂತಿತ್ತು.

ಮಗಳ ಕರೆಯನ್ನು ಕೇಳಿ ತಾಯಿ ಹೊರ ಬಂದಳು.

'ಏನೇ ಲೋಕಾ' ಎಂದು ಕೇಳಿದಳು.

ತಾಯಿಯ ಪ್ರಶ್ನೆಯಿಂದ ಮಗಳು ತಬ್ಬಿಬ್ಬಾದಳು.

ಯಾವುದರ ವರದಿಯನ್ನು ತಾಯಿಗೊಪ್ಪಿಸ ಬಂದಿದ್ದಳೋ ಅದೇ ಅವಳಿಗೆ ಮರೆತು ಹೋಯಿತು.

ಆಕೆ ತಾಯಿಯತ್ತ ಮುಖವೆತ್ತಿ 'ಅಮ್ಮಾ' ಎಂದಳು.

ತಾಯಿ ಮಗಳನ್ನೊಮ್ಮೆ ಸೂಕ್ಷ್ಮವಾಗಿ ನೋಡಿದಳು. ಅವಳ ಮುಂಗುರುಳ ಮೇಲೆ ಬೆರಳಾಡಿಸಿ ನೆಟಿಕೆ ಮುರಿದಳು. ಮೆಲ್ಲಗೆ ಗಲ್ಲವನ್ನು ಹಿಡಿದಲುಗಿಸಿ 'ಹೇಳಬಾರದೇ? ಬಾಯಿ ಬಿಡುವುದಕ್ಕೆ ಎಷ್ಟು ಸಂಕೋಚವೇ. ಬಾಯಿ ತೆರೆದರೆ ಮುತ್ತು ಸುರಿಯುತ್ತದೆಯೇ?'

ಆದರೂ ಮಗಳು ಮೌನವಾಗಿದ್ದಳು.

ಹೇಗೆ ಮಾತಿಗೆ ಪ್ರಾರಂಭಿಸಬೇಕೆಂಬುದು ಅವಳಿಗೆ ಹೊಳೆಯಲಿಲ್ಲ.

'ಅಮ್ಮಾ!' ಮತ್ತೆ ಮಾತು ಅರ್ಧಕ್ಕೇ ನಿಂತಿತು.

ತೊಟ್ಟ ಕಿರಿಗಿಯ ಅಂಚಿನೊಡನೆ ಬಾಲಿಕೆಯ ಬೆರಳು ಆಟವಾಡುತ್ತಿತ್ತು.

'ಅದೇನೇ ಬಟ್ಟೆಯಲ್ಲಿ ರಕ್ತ ಕಲೆಗಳು?'

ಏರಿಸಿದ ಧ್ವನಿಯನ್ನು ತಗ್ಗಿಸಿ—ತನ್ನ ಅನುಮಾನವನ್ನು ಬಗೆಹರಿಸಿಕೊಳ್ಳಲು—'ಅದಕ್ಕಾಗಿಯೇ ಹೇಳಿದೆನಮ್ಮ! ನೀನು ಗಂಡುಬೀರಿಯಂತೆ ಕತ್ತಿವರಸೆ, ಹುಲಿ ಬೇಟೆ, ಕುದುರೆ ಸವಾರಿ ಎಂದು ಹೊರಗೇ ಹೊತ್ತು ಕಳೆಯಬಾರದೆಂದು. ನಿನ್ನ ಅಜ್ಜಿ ನನ್ನನ್ನು ಹತ್ತು ತುಂಬಿದ ಮೇಲೆ ಹೊಸ್ತಿಲ ಹೊರ ಹೋಗುವುದಕ್ಕೂ ಆಕ್ಷೇಪಿಸುತ್ತಿದ್ದಳು. ನೀನೋ, ನಿಮ್ಮಪ್ಪನ ಮುದ್ದಿನ ಬೊಂಬೆ. ಹೇಳಿದರೂ ಕೇಳುವುದಿಲ್ಲ'

'ಇವು ಗಾಯದಿಂದ ಚಿಮ್ಮಿದ ರಕ್ತದಿಂದಾಯಿತು'

'ಎಲ್ಲಿ ಬಿದ್ದು ಗಾಯ ಮಾಡಿಕೊಂಡು ಬಂದೆಯೋ'

ಮಗಳ ಉತ್ತರದಿಂದ ತಾಯಿಗೆ ಗಾಬರಿಯಾಯಿತು.

'ನೀನು ಸುಮ್ಮಸುಮ್ಮನೆ ಗಾಬರಿಯಾಗುತ್ತೀಯಾ? ನಾನು ಬೀಳಲೂ ಇಲ್ಲ. ನನಗೆ ಗಾಯವಾಗಲೂ ಇಲ್ಲ.'

ಮಗಳು ನಿಧಾನವಾಗಿ ಹೋದ ಧೈರ್ಯವನ್ನು ತಂದುಕೊಂಡು ಮಾತಾಡಿದಳು.

ತಾಯಿಯ ದೃಷ್ಟಿ ಮಗಳು ತೊಟ್ಟ ಬಟ್ಟೆಯತ್ತ ಹೋಯಿತು.

'ಇದೇನೇ ಸೆರಗು ಹರಿದು ಹೋಗಿದೆ'

'ನಾನೇ ಕಚ್ಚಿ ಹರಿದೆನಮ್ಮ, ಗಾಯಕ್ಕೆ ಕಟ್ಟಲೆಂದು'

ಮಗಳ ಮಾರುತ್ತರದಿಂದ ತಾಯಿಗೆ ದಿಗ್ಭ್ರಮೆಯಾಯಿತು.

'ಆಗ ಕೇಳಿದರೆ ಗಾಯವಾಗಿಲ್ಲ, ರಕ್ತ ಸೋರಿಲ್ಲ ಅಂದೆ. ಈಗ ಗಾಯಕ್ಕೆ ಸುತ್ತಲೆಂದು ತಾನೇ ಕಚ್ಚಿ ಹರಿದೆ ಎನ್ನುತ್ತೀಯಾ. ಯಾವುದು ನಿಜವೋ'

"ಇಷ್ಟು ಅವಸರ ಪಟ್ಟರೆ ಹೇಗಮ್ಮ. ಅವಕಾಶ ಕೊಟ್ಟರೆ ನಾನೇ ಎಲ್ಲ ಬಿಡಿಸಿ ಹೇಳುತ್ತೇನೆ."

ತಾಯಿ ಕೌತುಕದಿಂದ ಮಗಳ ಮುಖವನ್ನೊಮ್ಮೆ ನೋಡಿದಳು.

'ಇಂದು ರಾಜೋದ್ಯಾನದಲ್ಲಿ ಭಾರೀ ಪಂದ್ಯ ನಡೆಯಿತು'

'ಏನು ಪಂದ್ಯವೇ'

'ತಾವು ಕಲಿತ ವಿದ್ಯೆಯ ಪ್ರದರ್ಶನವನ್ನು ಹಿರಿಯರ ಮುಂದೆ ಶಿಷ್ಯರು ತೋರಿಸಿದರು. ಗೊಜ್ಜಿಗಣ್ಣನೂ ಅದರಲ್ಲಿ ಭಾಗವಹಿಸಿದ್ದ. ಅವನಂತೆ ನೂರಾರು ಮಂದಿ ಭಾಗವಹಿಸಿದ್ದರು. ನಾನು ಅದನ್ನು ನೋಡಲು ಹೋಗಿದ್ದೆ. ಮೊದಲಲ್ಲಿ ಕತ್ತಿವರಸೆ ನಡೆಯಿತು. ಅದರಲ್ಲಿ ಅವರು ಎಲ್ಲರಿಗಿಂತಲೂ ಮುಂದು. ಗೊಜ್ಜಿಗಣ್ಣ ಅವರ ಮುಂದು ತೀರ ಕಳಪೆ. ಅವನ ಜಂಭ ನಿನ್ನ ಮುಂದೆಯೇ. ಅವರು ಕೊಟ್ಟ ಹೊಡೆತಕ್ಕೆ ಅವನ ಕೈಯಲ್ಲಿನ ಖಡ್ಗ ತುಂಡಾಗಿ ಅಷ್ಟು ದೂರ ಸಿಡಿಯಿತು— ಸಂತೋಷದಿಂದ ನಾನು ಚಪ್ಪಾಳೆ ತಟ್ಟಿದೆ'

'ನಿನ್ನ ಗೋವಿಂದಣ್ಣನನ್ನು ಸೋಲಿಸಿದವರು ಯಾರೇ—'

ಮಾತು ಮುಗಿಸಲು ತಾಯಿಗೆ ಮಗಳು ಬಿಡಲಿಲ್ಲ. ಅರ್ಧದಲ್ಲೇ ತಡೆದು

(ಹನ್ನೊಂದನೇ ಪುಟ ನೋಡಿರಿ).

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 28

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ ಆರೋಗ್ಯ
ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೩೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು
ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ
ಬೇಕಾದ ಯಾವದೇ ಪ್ರಕಟಣೆಗಳು
ಕನಿಷ್ಟ ನಾಲ್ಕು ದಿನ ಮುಂಚಿತ
ವಾಗಿಯೇ ನಮ್ಮ ಕೈಸೇರಬೇಕು.

ಬಡವನ ಭಾಗ್ಯದ ಬಾಗಿಲಿನ ಕೀಲಿ ತೆರೆಯಿರಿ

ರಾಜ್ಯ ವಿಧಾನಸಭಾ ಚುನಾವಣೆಗಳು ಮುಗಿದುವು. ಈ ಮೊದಲೇ ನಿರೀಕ್ಷಿಸಿದ್ದಂತೆ ಆಳುವ ಕಾಂಗ್ರೆಸ್ಸು ಬಹುಮತವನ್ನು ಗಳಿಸಿತು. ಪರಿಶುದ್ಧ ಆಡಳಿತೆ, ರಾಜ್ಯದ ಸಮಸ್ಯೆಗಳಿಗೆ ಸರಳ ಪರಿಹಾರ, ಸಮೃದ್ಧಿ, ಭಾಗ್ಯ, ಭೂಸುಧಾರಣೆ, ಬಡತನದ ನಿರ್ಮೂಲನೆ, ಕಟ್ಟು ನಿಟ್ಟಿನ ಸಮಾಜವಾದ, ಜಲ-ನೆಲ ವಿವಾದಗಳ ಪರಿಹಾರ–ಹೀಗೆ ಹತ್ತು ಹಲವು ವಾಂಛಿತ ಇಚ್ಛೆಗಳನ್ನು ತಾವು ಪೂರಯ್ಸುತ್ತೇವೆ ಎಂದು ಆಳುವ ಕಾಂಗ್ರೆಸ್ಸು ಭರವಸೆ ನೀಡಿತ್ತು; ಜನತೆ ಅದಕ್ಕೊಂದು ಅವಕಾಶವನ್ನು ಮಾಡಿಕೊಟ್ಟಿತು. ಅಂದರೆ, ಜನತೆ ಕಾಂಗ್ರೆಸ್ಸಿನ ಆಡಳಿತೆಯ ರುಚಿಯನ್ನು ಸವಿದು ನೋಡಿತ್ತು; ಅದು ಬದಲಾವಣೆಯನ್ನೂ ಬಯಸಿತ್ತು; ಆದುದರಿಂದ ಇತರ ಸಬಲ ವಿರೋಧ ಪಕ್ಷದ ಅಭಾವದ ನಡುವೆ ಇನ್ನೊಂದು ತುಕುಡಿ ಕಾಂಗ್ರೆಸ್ಸಿನ ಕೈಗಳಿಗೆ ಅಧಿಕಾರವನ್ನು ಒಪ್ಪಿಸಿತು. ಜನತೆಯ ಈ ತೀರ್ಮಾನದ ಮುಂದೆ ಎಲ್ಲರೂ ತಲೆಬಾಗಲೇ ಬೇಕು.

ಕೊಟ್ಟ ಭರವಸೆಗಳನ್ನು ಪೂರಯ್ಸಿದ ಕೀರ್ತಿಯನ್ನು ಆಳುವ ಕಾಂಗ್ರೆಸ್ಸು ಪ್ರಧಾನಿ ಇಂದಿರಾ ಗಾಂಧಿಯ ಕೊರಳಿಗೆ ಕಟ್ಟಿದೆ. ಬ್ಯಾಂಕುಗಳ ರಾಷ್ಟ್ರೀಕರಣ, ಶ್ರೀಮಂತರ ಬಡವರ ನಡುವಣ ಅಂತರವನ್ನು ಕಡಮೆ ಮಾಡಿ ರಾಷ್ಟ್ರದ ಸಂಪತ್ತನ್ನು ಸಮಸ್ತರ ಸೊತ್ತಾಗಿ ಪರಿವರ್ತಿಸುವ ಸಲುವಾಗಿ ಸಂವಿಧಾನ ತಿದ್ದುಪಡಿ, ಮಾಜಿ ರಾಜ–ಮಹಾರಾಜರ ರಾಜಧನ–ವಿಶೇಷ ಸವಲತ್ತುಗಳ ರದ್ಧತಿ ಇವು ಸಮಾಜವಾದ ಸ್ಥಾಪನೆಯ ಮಾರ್ಗ ಮಾತ್ರ; ಗುರಿಯಲ್ಲ. ಬಾಂಗ್ಲಾ ವಿಮೋಚನೆ, ಮುಜಿಬುರ್ ಬಿಡುಗಡೆ ಮತ್ತು ನಿರಾಶ್ರಿತರ ಸಮಸ್ಯಾ ಪರಿಹಾರಗಳಿಂದ ರಾಷ್ಟ್ರದ ಕಿರೀಟಕ್ಕೆ ನವಿಲುಗರಿಯೇರಿದ್ದೇನೋ ನಿಜ; ಭಾರತಕ್ಕೆ ಆತ್ಮವಿಶ್ವಾಸ ಮೂಡಿದ್ದೂ ವಿಶ್ವ ಗೌರವ ಲಭಿಸಿದ್ದೂ ಸತ್ಯ. ಆದರೆ, ಇದರಿಂದ ಶ್ರೀಸಾಮಾನ್ಯನ ಜೀವನ ಉನ್ನತವಾಗಲಿಲ್ಲ. 'ನುಡಿದಂತೆ ನಡೆಯುವ' ಭರವಸೆ ಮತದಾರರಿಗೆ ನೀಡಿದ ಆಳುವ ಕಾಂಗ್ರೆಸ್ಸು ಏನು ವಾಗ್ದಾನ ಮಾಡಿದೆ? ರೈತನಿಗೆ ನೆಲ, ಆಸ್ತಿಗೆ ಮಿತಿ, ಉದ್ಯೋಗ ನಿರ್ಮಾಣ, ಬಡವ ಬಲ್ಲಿದರೆಂಬ ಭೇದ ದೂರ, ಸಮಾಜವಾದ ಜಲ–ನೆಲ ಸಮಸ್ಯೆಯ ಪರಿಹಾರ, ರಾಜ್ಯ–ರಾಜ್ಯ ಮತ್ತು ರಾಜ್ಯ–ಕೇಂದ್ರಗಳ ನಡುವೆ ಹೆಚ್ಚಿನ ಸಹಕಾರ–ಇದಕ್ಕಾಗಿ ಕ್ರಾಂತಿಕಾರಿ ಕ್ರಮಗಳನ್ನು ಮನಪೂರ್ವಕವಾಗಿ ಕಾರ್ಯಗತಗೊಳಿಸಬಲ್ಲ ನಿಷ್ಠಾವಂತರ ಸರಕಾರ—ಪ್ರಗತಿಪರ ಸರಕಾರ ರಚಿಸುವ ಆಶ್ವಾಸನೆ. ಈ ಆಶ್ವಾಸನೆಯನ್ನು ಕಾರ್ಯರೂಪಕ್ಕೆ ತರುವ ಅವಕಾಶವೀಗ ಆಳುವ ಕಾಂಗ್ರೆಸ್ಸಿನ ಕೈಗಳಲ್ಲಿದೆ.

ಚುನಾವಣೆ ಗೆಲ್ಲುವವರೆಗೆ ಪಕ್ಷದ ಒಳಭೇದಗಳೆಲ್ಲವನ್ನೂ ಮರೆತು ಗೆಲ್ಲುವುದೊಂದನ್ನೇ ಮುಖ್ಯ ಗುರಿಯಾಗಿಟ್ಟು ಕೊಂಡ ಕಾರ್ಯಕರ್ತರು ಗೆದ್ದ ಬಳಿಕವೇನು ಮಾಡುತ್ತಾರೆಂಬುದು ಗಮನೀಯಾಂಶ. ಆದರೆ, ಶ್ರೀಮತಿ ಇಂದಿರಾ ಗಾಂಧಿಯವರ ವ್ಯಕ್ತಿತ್ವವನ್ನು ಮಸುಳಿಸ ಬಲ್ಲ ಮತ್ತೋರ್ವ ವ್ಯಕ್ತಿ ಸದ್ಯಕ್ಕೆ ದೇಶದಲ್ಲೇ ಇಲ್ಲವಾದ್ದರಿಂದ ಆಕೆಯದ್ದೊಂದಲ್ಲದೆ ಉಳಿದವರದ್ದೊಂದೂ ನಡೆಯುವುದಿಲ್ಲ. ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಯಾರು ಯಾರು ಆಗಬೇಕು ಎಂದು ನಿರ್ಧಾರ ಮಾಡುವಲ್ಲಿ ಆರಿಸಿದ ಶಾಸಕರಿಗೆ ಸೂಕ್ತ ಮಾರ್ಗದರ್ಶನ ನೀಡುವ ಹೆಸರಿನಲ್ಲಿ ಹೈಕಮಾಂಡು ಪ್ರಧಾನಿಯ ಇಚ್ಛೆಯನ್ನು ಕಾರ್ಯಗತಗೊಳಿಸುವುದು ನಿಸ್ಸಂಶಯವೇ. ಆಂಧ್ರ ಪ್ರದೇಶದ ನಾಯಕತ್ವದಲ್ಲಿ ಬದಲಾವಣೆಮಾಡಲು ಹಲವು ಶಾಸಕರು ಬಯಸಿದರೂ ಹೈಕಮಾಂಡಿನ ಸಮ್ಮತಿಯಿಲ್ಲವೆಂಬ ವರದಿಯೇ ಇದಕ್ಕೆ ಸಾಕ್ಷಿ ಹೇಳುತ್ತದೆ. ತನ್ನ ಸಮಾಜವಾದದ ಕಾರ್ಯಕ್ರಮಗಳನ್ನು ತಪ್ಪದೆ ಅನುಷ್ಠಾನಕ್ಕೆ ತರುವಲ್ಲಿ ತನ್ನ ಅತಿ ನಿಕಟದ ವ್ಯಕ್ತಿಯೇ ರಾಜ್ಯಗಳಲ್ಲಿ ಮುಖ್ಯಮಂತ್ರಿಯಾಗಿರಬೇಕೆಂದು ಆಕೆ ಬಯಸಿದರೆ, ಅದು ತಪ್ಪಲ್ಲ; ಇದು ಒಂದು ರೀತಿಯಿಂದ ಸರ್ವಾಧಿಕಾರಕ್ಕೆ ಮತ್ತೊಂದು ಹೆಸರೆನಿಸಬಹುದಾದರೂ ಇದು ಅಧಿಕಾರದಾಹದಿಂದ, ಛಿದ್ರ ವಿಚ್ಛಿದ್ರಗಳಿಂದ ತುಂಬಿದ ದೇಶಕ್ಕೆ ಅನಿವಾರ್ಯವೆಂದರೂ ಸಲ್ಲುತ್ತದೆ.

ಕರ್ನಾಟಕದ ನಾಯಕ ಸ್ಥಾನವನ್ನು ತುಂಬಲು ವಿಧಾನ ಸಭೆಯ ಹೊರಗಣಿಂದ ಆಯಾತಮಾಡುವ ಸಾಧ್ಯತೆಗಳು ಇದನ್ನು ಬರೆಯುವಾಗ ತುಂಬ ಇವೆ. ಶ್ರೀ ದೇವರಾಜ ಅರಸರೇ ಮುಖ್ಯಮಂತ್ರಿಯೆಂದು ಶ್ರೀಮತಿ ಗಾಂಧಿ ಫರ್ಮಾನಾ ಹೊರಡಿಸಬಹುದು. ಅಥವಾ ಮಧ್ಯಪ್ರದೇಶ–ಪಶ್ಚಿಮ ಬಂಗಾಳಗಳಿಗೆ ತನ್ನವರನ್ನು ಅಟ್ಟದಂತೆ ಶ್ರೀಮತಿ ಸರೋಜಿನಿ ಮಹಿಷಿಯವರನ್ನು ಕಳಿಸುವ ಸಾಧ್ಯತೆಗಳಿವೆ. ಅದಾರೇ ನಾಯಕತ್ವ ವಹಿಸಲಿ, ರಾಜ್ಯ ಸಚಿವ ಸಂಪುಟದ ರಚನೆ ಕಷ್ಟಸಾಧ್ಯವಾಗುವುದೂ ಇಲ್ಲಿಯೂ ಶ್ರೀಮತಿ ಗಾಂಧಿಯದೇ ಅಂತಿಮ ನಿರ್ಧಾರವಾಗುವುದೂ ಸಂಭವನೀಯ. ಶ್ರೀ ಕೆಂಗಲ್ ಹನುಮಂತಯ್ಯನವರು ಈ ಮೊದಲೇ ಹೇಳಿದ್ದಾರೆ– ಸಚಿವ ಸಂಪುಟದ ಗಾತ್ರ ಅತ್ಯಂತ ಚಿಕ್ಕದಿರಬೇಕು; ವಿವಿಧ ಭಾವನೆಗಳಿಗೆ ಪ್ರಾತಿನಿಧ್ಯ ನೀಡುವ ಜಾಡ್ಯದಿಂದ ದೂರವಿರಬೇಕು; ಸಮರ್ಥ-ವಿವೇಚನಾಯುಕ್ತರಿಂದ ಕೂಡಿರಬೇಕು....ಇತ್ಯಾದಿ ಇತ್ಯಾದಿ. ನಾಯಕರು ಈ ಮಾತುಗಳನ್ನು ಮರೆತು ಹಿಂದಿನಂತೆಯೇ ವಿಶಾಲ ತಳಹದಿಯ ಜಾಡು ಹಿಡಿದರೆ ಅದರಿಂದ ರಾಜ್ಯಕ್ಕೆ ನೆಮ್ಮದಿ ಬರುವುದಿಲ್ಲ. ಮಿತ ಸಂತಾನದಿಂದ ಸಂಸಾರಸುಖ ವರ್ಧಮಾನವಾಗುವಂತೆ ಮಿತ ಪ್ರಮಾಣದ ಸಂಪುಟದಿಂದ ಆಡಳಿತ ಸುಗಮವಾಗುತ್ತದೆ. ಸಮಾಜವಾದದ ಕಾರ್ಯಾಚರಣೆ ಮೊತ್ತಮೊದಲು ಮಂತ್ರಿ ಮಂಡಲದ ಸದಸ್ಯರಿಂದ ಆಗಬೇಕು. ರಾಜ–ಮಹಾರಾಜರ ವಿಶೇಷ ಸವಲತ್ತುಗಳನ್ನು ಕಿತ್ತುಕೊಂಡಂತೆಯೇ ತಮ್ಮ ವಿಶೇಷ ಸೌಲಭ್ಯಗಳನ್ನು ಅವರು ಮೊತ್ತಮೊದಲು ತ್ಯಾಗ ಮಾಡಬೇಕು; ಮುಂದಿನ ಸರದಿ ಶಾಸಕರದ್ದು. ಅದು ಬಿಟ್ಟು ಮಂತ್ರಿ ಮಾಗಧರು ಸೇವೆಯ ಹೆಸರಿನಲ್ಲಿ ದೌಲಿನ ಜೀವನ ನಡೆಸಿ ಬೆರಳೆಣಿಕೆಯ ಶ್ರೀಮಂತರನ್ನು ಸುಲಿದು, ಶ್ರೀಸಾಮಾನ್ಯನನ್ನು ಹಿಂಡಿ ಹಿಪ್ಪೆ ಮಾಡುವ ಹಳೆಯ ಚಟಕ್ಕೇನೇ ಅಂಟಿಕೊಂಡರೆ ಅದರಿಂದ ಸಮಾಜವಾದ ಸ್ಥಾಪನೆಯಾಗುವುದಿಲ್ಲ. ಹೊಸ ಸರಕಾರವು ಮಂಡಿಸಲಿರುವ ಹೊಸ ವರ್ಷದ ಮುಂಗಡ ಪತ್ರ ಆಳುವ ಕಾಂಗ್ರೆಸ್ಸು ನುಡಿದಂತೆ ನಡೆಯುತ್ತದೆಯೇ ಇಲ್ಲವೇ ಎಂಬತ್ತ ಸಂಕೇತ ಮಾಡುತ್ತದೆ. ವಿವಿಧ ರಾಜ್ಯಗಳಲ್ಲಿನ ವಿರೋಧ ಪಕ್ಷೀಯರ ಬಲವೂ ಗಣನೀಯವಾಗಿ ಹ್ರಾಸಗೊಂಡಿರುವುದರಿಂದ ಆಳುವ ಪಕ್ಷದ ಹೊಣೆಗಾರಿಕೆ ಮಿತಿಮೀರಿ ಹೆಚ್ಚಿದೆ. ಸುಭದ್ರ ಆಡಳಿತೆಯೊಡನೆ ಶ್ರೀಸಾಮಾನ್ಯನ ಭಾಗ್ಯದ ಬಾಗಿಲಿಗೆ ಜಡಿದಿರುವ ಕೀಲಿಯನ್ನು ಇದೇ ತೆರೆಯಬೇಕಾದುದು ಅನಿವಾರ್ಯವಾಗಿದೆ.

ದಿಗ್ವಿಜಯಿ ಇಂದಿರಾ

ಶ್ರೀಮತಿ ಇಂದಿರಾ ಗಾಂಧಿಯವರು ತಮ್ಮ ಪಕ್ಷದೊಳಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡರು. ಅದಕ್ಕಾಗಿ ಪಕ್ಷವು ಒಡೆದು ಹೋದರೂ ಚಿಂತಿಸದೆ ಎಂಟೆದೆಯಿಂದಲೇ ಸೆಟೆದು ನಿಂತರು. ತನ್ನನ್ನು ರಾಣಿ ನೊಣವೆಂದೂ ತನ್ನ ಅನುಯಾಯಿಗಳನ್ನು ಜೇನು ನೊಣಗಳೆಂದೂ ತನ್ನ ವಿರೋಧಿಗಳು ಕರೆದರೂ ಅದರಿಂದ ಆಕೆ ವಿಚಲಿತರಾಗಲಿಲ್ಲ. ಕಳೆದ ವರ್ಷ ಲೋಕ ಸಭಾ ಚುನಾವಣೆಗಳಲ್ಲಿ ಅತ್ಯಪೂರ್ವ ವಿಜಯ ಗಳಿಸಿ ತಾನು ಜನತೆಯ ಆದೇಶ ಪಡೆದುಕೊಂಡರು. ಈ ಬಾರಿ ರಾಜ್ಯ ವಿಧಾನ ಸಭೆಗಳಿಗೆ ನಡೆದ ಚುನಾವಣೆಗಳಲ್ಲಿಯೂ ವಿಜಯ ದುಂದುಭಿ ಮೊಳಗಿಸಿ ಅದೇ ಆದೇಶವನ್ನು ಮತ್ತೆ ಉಳಿಸಿ ಕೊಂಡರು. ಆಕೆಯ ಪ್ರಬಲ ವಿರೋಧಿ ಪಕ್ಷಗಳಲ್ಲಿ ಕರ್ನಾಟಕ ಮತ್ತು ಗುಜರಾಥಗಳಲ್ಲಿ ಮೊನ್ನೆ ಮೊನ್ನೆಯವರೆಗೂ ಸಂಸ್ಥಾ ಕಾಂಗ್ರೆಸ್ಸಿನ ಸರಕಾರವಿತ್ತು. ಮಧ್ಯಪ್ರದೇಶ, ಡಿಲ್ಲಿ, ರಾಜಸ್ಥಾನಗಳಲ್ಲಿ ಜನಸಂಘದ ಪ್ರಾಬಲ್ಯವಿತ್ತು. ಪಂಜಾಬದಲ್ಲಿ ಅಕಾಲಿ ದಳ, ಪಶ್ಚಿಮ ಬಂಗಾಳದಲ್ಲಿ ಮಾರ್ಕ್ಸಿಸ್ಟರ ಹಾವಳಿಯೂ ಇತ್ತು. ಆದರೆ, ಈ ಚುನಾವಣೆಗಳಲ್ಲಿ ಶ್ರೀಮತಿ ಗಾಂಧಿಯವರು ತನ್ನೆಲ್ಲ ವಿರೋಧಿಗಳೂ ಥಕ್ಕನೆ ಚೇತರಿಸಿಕೊಳ್ಳಲಾಗದಂತೆ ಬಲವಾದ ಏಟು ನೀಡಿದ್ದಾರೆ. ಇದು ಆಕೆಯ ಸವ್ಯಸಾಚಿತನಕ್ಕೊಂದು ಉದಾಹರಣೆ.

ಇದೀಗ ವಿರೋಧಿ ಸಂಹಾರವಾದಂತಾಯ್ತು. ಇನ್ನು ಆಕೆ ತನ್ನ ಸಮಾಜವಾದದ ಕಾರ್ಯಕ್ರಮಗಳನ್ನು ನಿರ್ವಂಚನೆಯಿಂದ ಅನುಷ್ಠಾನಕ್ಕೆ ತರಲು ಸ್ವಯಂ ಸೇವಕರ ದಳ ಕಟ್ಟಿಕೊಳ್ಳಬೇಕು. ಅದಕ್ಕೆಂದೇ ಆಕೆ ರಾಜ್ಯ–ಕೇಂದ್ರಗಳಲ್ಲಿ ಒಂದೇ ಪಕ್ಷದ ಸರಕಾರ ಬೇಕೆಂದು ಬಯಸಿದ್ದರು. ಅದು ಈಡೇರಿತು. ಇನ್ನು ತನ್ನ ಸಮಾಜವಾದದ ದಾಳವನ್ನು ಆಕೆ ಉರುಳಿಸ ತೊಡಗಬೇಕು; ಬಡ ಜನತೆಯ ಭಾಗ್ಯವಿಧಾತೆಯೆಂಬ ಮಾತನ್ನು ಅನ್ವರ್ಥಕಗೊಳಿಸಬೇಕು. ಸರ್ವಾಧಿಕಾರವಾದರೂ ಇದು ಪ್ರಜಾಸತ್ತಾತ್ಮಕ ಸರ್ವಾಧಿಕಾರ—ಆದುದರಿಂದ ಸಹನೀಯ ಸರ್ವಾಧಿಕಾರವಾಗುತ್ತದೆ. ಸುಭಿಕ್ಷೆಯನ್ನು ತಂದೀಯಲಾಗದ ಸರಕಾರ ಜನತೆಗೆ ಬೇಕಾಗಿಲ್ಲ. ಜನಾಭಿಲಾಷೆಯರಿತು ಕೊಂಡು ಜನಾದೇಶ ಗಳಿಸಿಕೊಂಡವರು ಜನಹಿತ ಸಾಧಿಸಿ ನುಡಿದಂತೆ ನಡೆಯಬೇಕು.

●●

ರಾಜ್ಯದ ಜನತೆಯಿಂದ

ಹೊಸ ಪಕ್ಷಕ್ಕೆ ಸರಕಾರ ರಚಿಸಲು

ಪರಿಣಾಮಕಾರಿ ಆದೇಶ

ರಾಜ್ಯ ವಿಧಾನ ಸಭೆಗೆ ಐದನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ನಡೆದು ಪರಿಣಾಮಗಳು ಬಹಿರಂಗವಾಗಿದೆ. ಆಳುವ ಕಾಂಗ್ರೆಸ್ಸು ನಿಚ್ಚಳ ಬಹುಮತವನ್ನು ಪಡೆದು ಸರಕಾರ ರಚಿಸುವ ಅಧಿಕಾರವನ್ನು ಜನತೆಯಿಂದ ಪಡೆದಿದೆ.

ಒಂದು ವರ್ಷ ಮೊದಲು ಸಂಸ್ಥಾ ಕಾಂಗ್ರೆಸಿನ ಸರಕಾರ ಉರುಳಿ ಹೋದಾಗ, ಸರಕಾರ ರಚಿಸುವ ಸಾಮರ್ಥ್ಯವಿದ್ದರೂ ರಚಿಸದೆ ಹೋದ ಆಳುವ ಕಾಂಗ್ರೆಸ್ಸು ಅದಕ್ಕೆ ನಿಜವಾದ ಕಾರಣವನ್ನು ಬಚ್ಚಿಟ್ಟು ಜನತೆಯ ಆದೇಶ ಬಯಸಿತೆಂದು ಹೇಳಿತು; ಈಗ ಅದು ಬಯಸಿದಂತೆ ಜನತೆ ಅಧಿಕಾರ ಆದೇಶ ನೀಡಿದೆ.

ಕೇಂದ್ರದ ಪ್ರಗತಿಶೀಲ–ಬಡತನ ನೀಗಿಸುವ ಪಣತೊಟ್ಟ ಸರಕಾರದೊಡನೆ ಸಂಪೂರ್ಣ ಸಹಕರಿಸುವ ಅದೇ ಪಕ್ಷದ ಸರಕಾರ ರಚಿಸಿರಿ ಎಂದು ಪ್ರಧಾನಿ ಗಾಂಧಿಯವರೂ ಆಳುವ ಕಾಂಗ್ರೆಸ್ಸಿನ ಇತರ ನಾಯಕರೂ ಕರೆ ನೀಡಿದ್ದರು–ಆ ಕರೆ ಕರ್ನಾಟಕದ ಜನತೆಯ ಮನ ಮುಟ್ಟಿತು. ಅವರ ಬಯಕೆಯಂತೆ ಅವರ ಕೈಗಳಿಗೇನೇ ಆಡಳಿತ ನಡೆಸುವ ಅಧಿಕಾರವನ್ನು ಒಪ್ಪಿಸಿತು.

ಮತದಾರರಲ್ಲಿ ಹೆಚ್ಚಿನವರು ಅಜ್ಞರು–ಅನಭಿಜ್ಞರು–ಬುದ್ಧಿ ಜೀವಿಗಳ ಮತಗಳು ಆಳುವ ಕಾಂಗ್ರೆಸ್ಸಿಗೆ ಬೀಳಲಿಲ್ಲ ಎಂಬ ವಾದದಲ್ಲಿ ಅಲ್ಪ ಮಟ್ಟಿನ ಹುರುಳಿದ್ದರೂ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ಮೇಲೆ, ವಯಸ್ಕ ಮತದಾನದ ಪದ್ಧತಿಯನ್ನು ಒಪ್ಪಿಕೊಂಡಮೇಲೆ ಇದು ಅಸಮಂಜಸ ವಾದವೆನಿಸುವುದು.

ಶ್ರೀಮತಿ ಇಂದಿರಾಗಾಂಧಿಯವರು ಕೊಟ್ಟ ಮಾತನ್ನು ನಡೆಸುತ್ತಾರೆ, ಬಡವರ ಭಾಗ್ಯವಿಧಾತೆಯೆಂದು ಮುಂತಾಗಿ ಮರುಳು ಮಾಡಿ ಮತಯಾಚಿಸಿದ ಆಳುವ ಕಾಂಗ್ರೆಸ್ಸಿಗೆ ತನ್ನ ಭರವಸೆಗಳನ್ನು ಕಾರ್ಯಗತಗೊಳಿಸಲು ಜನತೆಯೀಗ ಉತ್ತಮ ಅವಕಾಶವೊಂದನ್ನು ಒದಗಿಸಿ ಕೊಟ್ಟಿದೆ.

ಮುಂದಿನ ಐದು ವರ್ಷಗಳ ಕಾಲ ಬಡತನವನ್ನು ಓಡಿಸುವ ಬಡವರಿಗೆ ಬಾಗ್ಯತಂದುಕೊಡುವ ಪ್ರಗತಿಶೀಲ ಕಾರ್ಯಕ್ರಮಗಳನ್ನು ಅಭಾದಿತವಾಗಿ ಕಾರ್ಯ ರೂಪಕ್ಕೆ ತರುವಲ್ಲಿ ಆಳುವ ಕಾಂಗ್ರೆಸ್ಸಿಗೆ ಇನ್ನಾವ ಅಡೆ ತಡೆಗಳೂ ಇಲ್ಲ.

ರಾಜ್ಯದ ಪ್ರಬಲ ಪ್ರತಿಪಕ್ಷವೆನಿಸಿದ ಸಂಸ್ಥಾ ಕಾಂಗ್ರೆಸ್ಸು, 'ಉದಯೋನ್ಮುಖ ಪಕ್ಷ'ವೆನಿಸಿದ ಜನಸಂಘ—ಇವೆರಡೂ ಅಪಮಾನಕರವೆನಿಸಿದ ಸೋಲನ್ನು ಒಪ್ಪಿಕೊಳ್ಳುವುದು ಅನಿವಾರ್ಯವೇ ಆಯ್ತು.

ಹಾಲು ಹರಿಸುತ್ತೇವೆ ಜೇನು ಸುರಿಸುತ್ತೇವೆ; ನಮಗೆ ಅವಕಾಶಕೊಡಿ—ಎಂದು ಕೇಳಿದಾಗ, ಯಾರು ತಾನೆ ಇಲ್ಲವೆಂದಾರು? ಶ್ರೀಮತಿ ಗಾಂಧಿಯವರ ಸರಕಾರ ಬಂದ ಮಾತ್ರಕ್ಕೆ ಬಡತನ ಓಡುವುದಾದರೆ, ಯಾರು ತಾನೇ ಬರಬಾರದೆಂದಾರು?

ರಾಜ್ಯಗಳ ಚುನಾವಣಾ ಫಲಿತಾಂಶಗಳು ದೇಶದ ಸ್ಥಿತಿಯ ಬಗ್ಗೆ ವಿದೇಶಗಳಲ್ಲಿ ಜನಾಭಿಪ್ರಾಯವನ್ನು ವ್ಯಕ್ತಪಡಿಸುವುದೆಂದು ಪ್ರಧಾನಿ ಗಾಂಧಿಯೇ ಸಾರುತ್ತ ಬಂದಾಗ ಭಾರತ ಸರಕಾರದ ನೀತಿಯನ್ನು ವಿರೋಧಿ ಪಕ್ಷಗಳು ಸಮೇತ ಎಲ್ಲರೂ ಒಪ್ಪುವಾಗ, ಆಳುವ ಕಾಂಗ್ರೆಸ್ಸು ಗೆಲ್ಲದೇ ಹೋದರೇನೇ ಆಶ್ಚರ್ಯವಿತ್ತು!

"ಇಂದಿರಾ ಗಾಳಿಯಿಲ್ಲ"ವೆಂದು ತಪ್ಪು ತಿಳಿದವರು ಈ ಗಾಳಿ ಪಕ್ಕನೆ ಬೀಸಿ ಹೋಗಲಿಲ್ಲವೆಂದು, ಅದು ಇನ್ನೂ ಕೆಲಕಾಲ ಉಳಿಯುವುದೆಂದು ಅನುಭವಿಸಿಕೊಂಡರು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಸಂಸ್ಥಾ ಕಾಂಗ್ರೆಸ್ಸು ಅನುಭವಿಸಿದ ಸೋಲು ಅತ್ಯಂತ ಅಸಹನೀಯವಾದದ್ದು. ಸರಕಾರ ರಚಿಸಲು ಅವಶ್ಯ ಬಹುಮತ ದೊರೆಯ ಬಹುದು ಎಂದು ಅದರ ನಾಯಕರೆಲ್ಲರೂ ಅತ್ಯಂತ ಉತ್ಸಾಹದಿಂದ ಇದ್ದರು. ಆದರೆ ಅವರ ಆಶಯ ಇಂದಿರಾ ಗಾಳಿಯಿಂದ ಧೂಳಿದೂಸರಿತವಾಯ್ತು.

ಸಂಸ್ಥಾ ಕಾಂಗ್ರೆಸ್ಸಿನ ಅಭ್ಯರ್ಥಿಗಳು ಖಂಡಿತಕ್ಕೂ ಗೆಲ್ಲುತ್ತಾರೆಂದು ನಂಬಿದ ಕೆಲವೆಡೆ ಅವರು ಠೇವಣಿಯನ್ನೂ ಕಳೆದುಕೊಳ್ಳ ಬೇಕಾಯಿತೆಂದರೆ ಅವರ ಸಂಘಟನೆಯ ದ ರ್ಬಲತೆ ಮತ್ತು ಇಂದಿರಾ ಗಾಳಿಯ ತೀವ್ರತೆಗಳು ಅನುಭವಕ್ಕೆ ಬರುತ್ತವೆ.

ಸಂಸ್ಥಾ ಕಾಂಗ್ರೆಸ್ಸು ತನ್ನ ಭವಿಷ್ಯದ ಬಗ್ಗೆ ವಿವೇಚಿಸುವ ಕಾಲವೀಗ ಮತ್ತೊಮ್ಮೆ ಬಂದಿದೆಯೆನ್ನುವುದು ತುಸುಮಟ್ಟಿಗೆ ಸರಿಯೆನಿಸಬಹುದು. ಆದರೆ, ಅದು ಈ ಪರಿಣಾಮಗಳಿಂದ ನಿರಾಶವಾಗ ಬೇಕಾಗಿಲ್ಲವೇನೋ....!

ಶ್ರೀಮತಿ ಇಂದಿರಾಗಾಂಧಿ ಮತ್ತವರ ಪಕ್ಷಕ್ಕೆ ತನ್ನ ಜನಹಿತಕಾರಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅವಕಾಶವನ್ನು ಜನತೆ ಕೊಟ್ಟದ್ದು ತಪ್ಪಲ್ಲ. ಇಡಿ ಕಾಂಗ್ರೆಸ್ ಮತ್ತು ಸಂಸ್ಥಾ ಕಾಂಗ್ರೆಸ್ಸಿನ ಸರಕಾರಗಳ ಆಡಳಿತೆಯ ರುಚಿಯನ್ನು ಕಂಡಿರುವ ಜನತೆಯೀಗ ಆಳುವ ಕಾಂಗ್ರೆಸ್ಸನ್ನು ಗದ್ದುಗೆಗೇರಿಸಿ ಸವಿನೋಡಲು ಮನವಂದದ್ದು ಸಹಜವೇ.

ಈ ಮುಂದಿನ ಐದು ವರ್ಷಗಳಲ್ಲಿ ಬಡತನ ನಿರ್ಮೂಲನ, ಭಾಗ್ಯದ ಸಂಪಾದನ ಇತ್ಯಾದಿ ಪ್ರಗತಿಶೀಲ ಕಾರ್ಯಕ್ರಮಗಳು ಜ್ಯಾರಿಗೆ ಬಾರದೆ ಹೋದರೆ. ಜನತೆ ಎಂದಿಗೂ ಕ್ಷಮಿಸುವುದಿಲ್ಲ. ತನ್ನ ಅಶಕ್ತತೆಗೆ ಯಾರು ಯಾರನ್ನೋ ಬೊಟ್ಟು ಮಾಡಿ ತಾನು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಆಳುವ ಕಾಂಗ್ರೆಸ್ಸಿಗೆ ಇನ್ನು ಸಾಧ್ಯವಿಲ್ಲ.

ಆಳುವ ಕಾಂಗ್ರೆಸ್ಸು ತಾನು ಬಯಸಿ ಈ ಹೊಣೆಗಾರಿಕೆಯನ್ನು ಜನತೆಯಿಂದ ಪಡೆದಿದೆ. ಇದರಿಂದ ಜಾರಿದರೆ, ಜನ ನಿಜಕ್ಕೂ ಕ್ರಾಂತಿಯೆದ್ದೀತು. ಜನ ಜೀವನವು ದಿನದಿಂದ ದಿನಕ್ಕೆ ದುರ್ಭರವಾಗುತ್ತ ಬರುತ್ತಿದೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತಿದ್ದಾರೆ; ಬಡವರು ಬಡವರಾಗಿಯೇ ಹೋಗುತಿದ್ದಾರೆ. ಜಾತೀಯತೆ, ಪ್ರಾಂತೀಯತೆ, ಭಾಷೀಯತೆ, ಅಲ್ಪಸಂಖ್ಯಾಕತೆ ಮೊದಲಾದ ವಿಷ ಜ್ವಾಲೆಗಳು ಜ್ವಲಿಸುತ್ತಿವೆ.

ಆಳುವ ಕಾಂಗ್ರೆಸ್ಸು ರಾಜ್ಯದ ಸುಭಿಕ್ಷಾಕಾರ್ಯದಲ್ಲಿ ಮಾಡುವ ಸಾಧನೆ ಅದರ ಭವಿಷ್ಯವನ್ನು ಬರೆಯುತ್ತದೆ. ರಣಾಂಗಣಕ್ಕೆ ಧುಮುಕುವ ಅವಕಾಶ ದೊರೆತಾಗ ಹಿಂಜರಿದು ಓಡಿ ಹೋದ ಉತ್ತರಕುಮಾರನಂತೆ ಆಳುವ ಕಾಂಗ್ರೆಸ್ಸು ವರ್ತಿಸಿದರೆ, ಅದು ತನ್ನ ಕಾಲ ಮೇಲೆ ತಾನೇ ಕೊಡಲಿ ಹಾಕಿಕೊಳ್ಳುತ್ತದೆ.

ಚುನಾವಣೆ ಗೆಲ್ಲುವಲ್ಲಿ ತೋರಿದ ಉತ್ಸಾಹ, ಮಾಡಿದ ಪ್ರಯತ್ನಗಳು ಚುನಾವಣಾನಂತರವೂ ಉಳಿಯಬೇಕು; ಜನಹಿತ ಸಾಧನೆಯಲ್ಲಿ ಅವು ಮುಖರಿತವಾಗಬೇಕು.

●●

ಹಾರ್ದಿಕ ಕೃತಜ್ಞತೆಗಳು

ಉಡುಪಿ ಮತದಾರ ಕ್ಷೇತ್ರದಿಂದ ಆಡಳಿತ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ ನನ್ನನ್ನು ಪ್ರಚಂಡ ಬಹುಮತದಿಂದ ಆಯ್ದು ಕ್ಷೇತ್ರದ ಸೇವೆ ಮಾಡುವ ಅವಕಾಶ ಕೊಟ್ಟ ಮತದಾರ ಬಂಧುಗಳಿಗೆ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಉಡುಪಿಯ ಶ್ರೀಕೃಷ್ಣನ ದಯೆಯಿಂದ, ಮತದಾರ ಬಂಧು ಭಗಿನಿಯರ ಪ್ರೀತಿಪೂರ್ವಕ ಆಶೀರ್ವಾದದಿಂದ ಈ ಸೇವಾವಕಾಶ ಲಭಿಸಿದೆಯೆಂದು ಭಾವಿಸಿದ್ದೇನೆ ಮತ್ತು ಈ ಐದು ವರುಷಗಳ ಅವಧಿಯಲ್ಲಿ ಶಕ್ತಿಮೀರಿ ಜನತೆಯ ಸೇವೆ ಮಾಡುವ ಆಶ್ವಾಸನೆ ನೀಡುತ್ತೇನೆ.

ಮನೋರಮಾ ಮಧ್ವರಾಜ್

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಡಾಗರಾ ಪಾತ್ರೆಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ನವಯುಗ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿ

ಪ್ರೋತ್ಸಾಹಿಸಿರಿ.

ಭಾಷೆಯ ಸ್ವರೂಪಗಳು

ಭಾಷೆ ಎನ್ನುವುದು ಅಂತರಂಗಕ್ಕೆ ಹಿಡಿದ ಬಹಿರಂಗ. ಬಹಿರಂಗ ಅಂತರಂಗದ ಎಲ್ಲ ಸಾಧ್ಯತೆಗಳಿಗೂ ವಾಹಕವಾಗಬೇಕು. ಕನ್ನಡಿಯಾಗಬೇಕು. ಈ ನಿಟ್ಟಿನಲ್ಲಿ ಭಾಷೆಯ ಆವಶ್ಯಕತೆ ಮಾನವನಿಗೆ ಎಷ್ಟು ಅನಿವಾರ್ಯ ಎಂಬುದನ್ನು ಬಿಡಿಸಿ ಹೇಳಬೇಕಾದ ಪ್ರಮೇಯವೇ ಇಲ್ಲ. ಭಾಷೆ ಮಾನವನ ಅಭಿವ್ಯಕ್ತಿಯ ಸಾಧನವಾಗಿದ್ದರೂ ಅದು ಅವನಲ್ಲಿ ಉಂಟಾಗುವ ಎಲ್ಲ ರೀತಿಯ ಸಂವೇದನೆಗಳನ್ನು ಸಮರ್ಥವಾಗಿ ಹೊರ ಹಾಕಬಲ್ಲುದು, ಕನ್ನಡಿಸ ಬಲ್ಲುದು ಎಂಬುದರ ಬಗ್ಗೆ ನಮಗೆ ನಂಬಿಕೆ ಇಲ್ಲ. ಅದು ಸಾಧ್ಯವಿಲ್ಲ ಎಂದೇ ತೋರುತ್ತದೆ. ಉದಾಹರಣೆಗೆ ರಸ್ತೆಯಲ್ಲಿ ನಾವು ಹೋಗುತ್ತಿದ್ದೇವೆ ಎಂದು ಇಟ್ಟುಕೊಳ್ಳೋಣ. ಕಾಲಿಗೆ ಗಾಜು ನೆಟ್ಟು ಕೊಳ್ಳುತ್ತದೆ. ಗಾಜು ನಮ್ಮ ಮೃದುವಾದ ಅಂಗಾಲಿನಲ್ಲಿ ಆಳಕ್ಕೆ ಹೋಗಿರ ಬಹುದು, ಅಥವಾ ಅಷ್ಟು ಕೊಯ್ದಿರ ಬಹುದು. ರಕ್ತ ತೊಟ್ಟಿಕ್ಕುತ್ತಿದೆ. ಮುಂದಕ್ಕೆ ಕಾಲಿಡಲು ಆಗುತ್ತಿಲ್ಲ. ರಕ್ತಸ್ರಾವದಿಂದ ಬವಳಿ ಬಂದಂತಾಗುತ್ತಿದೆ. ದಾರಿ ಹೋಕರೊಬ್ಬರು ಮರುಕದಿಂದ ಏನಾಗಿದೆ ಎಂದು ಪ್ರಶ್ನಿಸುತ್ತಾರೆ. ಆಗ ನಾವು ಕೊಡುವ ಉತ್ತರವಾದರೂ ಏನು? ಅಥವಾ ಎಂತಹುದು? "ಅಯ್ಯೋ ನೋವು?" ಎಂದಲ್ಲವೇ? ಇದಕ್ಕೂ ಹೆಚ್ಚೆಂದರೆ, ಗಾಯವಾದ ಕಾಲನ್ನು ಹಿಡಿದು ಕೊಂಡು "ಉ ಹು ಹೂ" ಗಾಜು ರಕ್ತ ಅಯ್ಯೋ" ಎಂದು ಉದ್ಗಾರ ತೆಗೆಯ ಬಲ್ಲೆವು! ಇದಕ್ಕಿಂತ ಹೆಚ್ಚಾಗಿ ನಾವು ಏನು ತಾನೇ ಹೇಳ ಬಲ್ಲೆವು? ಅಲ್ಲದೆ ನಮ್ಮ ಹೃದಯದಲ್ಲಿ ಆಗುವ ನೋವಿನ ಪ್ರಮಾಣವೆಷ್ಟು, ಅದರ ತೀವ್ರತೆ ಎಷ್ಟು, ಎಂಬುದನ್ನು ಈ "ಅಯ್ಯೋ! ಉ ಹು ಹೂ!" ಎಂಬ ಉದ್ಗಾರವಾಗಲೀ; ನೋವು ಎಂಬ ಶಬ್ದವಾಗಲೀ ಅಭಿವ್ಯಕ್ತಿಗೊಳಿಸಬಲ್ಲುದೇನು? ಅಥವಾ ಅತಿಯಾದ ದುಃಖವಾದಾಗ ಇಲ್ಲವೆ ಸಂತೋಷವಾದಾಗ ನಮಗೆ ಮಾತೇ ಹೊರಡುವುದಿಲ್ಲ ಎನ್ನುತ್ತೇವೆ. ಇದರ ಅರ್ಥವಾದರೂ ಏನು? ಹೀಗಿರುವುದರಿಂದಲೇ ಭಾಷೆ ಮಾನವನ ಹೃದಯದಲ್ಲಿ ಏಳುವ ಎಲ್ಲ ತುಮುಲಗಳ, ಎಲ್ಲ ಹೊಯ್ದಾಟಗಳ ಸಮರ್ಥವಾದ ವಾಹಕವಾಗಲಾರದು. ಆದರೂ ಭಾಷೆ ಎಷ್ಟೇ ದುರ್ಬಲವಾದುದಾಗ್ಯೂ ಅದು ಅವನಿಗೆ ಬೇಕೇ ಬೇಕು. ಅದಿಲ್ಲದೆ ಹೋದರೆ ಅವನ ಬದುಕು ಕತ್ತಲೆಯಲ್ಲಿದ್ದೀತು! ಪ್ರಾಚೀನ ಕಾಲದಿಂದಲೂ ಮಾನವನ ಸಂಸ್ಕೃತಿ ಹಾಗೂ ನಾಗರಿಕತೆಗಳು ಉಳಿದು ಬಂದಿರುವುದು ಅದರಿಂದಲೇ ಅಲ್ಲವೇ?

ವಿದ್ವತ್ ಜಗತ್ತಿನಲ್ಲಿ ಭಾಷೆ ಎರಡು ನಿಟ್ಟಿನಲ್ಲಿ ವ್ಯವಹರಿಸುತ್ತದೆ. ಒಂದು ಕಾವ್ಯಭಾಷೆಯಾಗಿ, ಮತ್ತೊಂದು ಶಾಸ್ತ್ರಭಾಷೆಯಾಗಿ. ಭಾಷೆ ಏಕಾಂಗವಾಗಿ ಒಂದೇ ಆಗಿದ್ದರೂ ಶಾಸ್ತ್ರ ಕೃತಿಯಲ್ಲಿ ಬಳಕೆಯಾಗುವಾಗ ಮತ್ತು ಕಾವ್ಯ ಕೃತಿಯಲ್ಲಿ ಬಳಕೆಯಾಗುವಾಗ ಭಿನ್ನ ಸ್ವರೂಪವನ್ನು ತಾಳುತ್ತದೆ. ತಾಳಬೇಕು. ಅದನ್ನು ಒಂದು ದೃಷ್ಟಿಯಲ್ಲಿ 'ಊಸರವಳ್ಳಿ'ಗೆ ಹೋಲಿಸಬಹುದು. ಊಸರವಳ್ಳಿಯನ್ನು ನಾವೆಲ್ಲ ನೋಡಿದ್ದೇವೆ. ಅದು ಕಲ್ಲು ಜರುಗಿನ ಭೂಮಿಯಲ್ಲಿ ಹೋದಾಗ ಅಂತಹುದೇ ಆದ ಬಣ್ಣವನ್ನು ತಾಳುವುದಲ್ಲದೆ ಕಪ್ಪು ನೆಲದಲ್ಲಿ ಇದ್ದಾಗ ಕಪ್ಪಾಗಿಯೇ ಕಾಣುತ್ತದೆ. ಊಸರವಳ್ಳಿ ಒಂದೇ. ಆದರೆ ಅದು ಆಯಾ ನೆಲದ ಗುಣ, ಸೊಗಡು, ಸ್ವಭಾವಕ್ಕೆ ಅನುಗುಣವಾಗಿ ಮಾರ್ಪಡುತ್ತದೆ. ಅಥವಾ ರೂಪಾಂತರ ಹೊಂದುತ್ತದೆ. ಮಾರ್ಪಟ್ಟಾಗ ಅದರ ಮೂಲ ಸ್ವರೂಪ ಕಣ್ಣಿಗೆ ಕಾಣದಷ್ಟು ಆ ನೆಲದ ಗುಣಕ್ಕೆ ಹೊಂದಿಕೊಂಡಿರುತ್ತದೆ. ಕಪ್ಪು ನೆಲದಲ್ಲಿದ್ದಾಗ ಅದು ಕಪ್ಪೇ ಎಂತಲೂ, ಮಸಾರಿ ಭೂಮಿಯಲ್ಲಿರುವಾಗ ಅದು ಮಸಾರಿಯೇ ಎಂತಲೂ ನಮಗೆ ಭ್ರಮೆ ಉಂಟಾಗುತ್ತದೆ. ಅದರ ವರ್ತನೆ ಅಷ್ಟು ನಿಚ್ಚಳವಾಗಿರುತ್ತದೆ ಹಾಗೆಯೇ ಭಾಷೆಯೂ ಕಾವ್ಯ ಹಾಗೂ ಶಾಸ್ತ್ರಗಳಲ್ಲಿ ಬಳಕೆಯಾಗುವಾಗ ಅಂತಹುದೇ ಆದ ಸ್ವಭಾವವನ್ನು ಹೊಂದಬೇಕು.

ಈಗ ನಮಗೆ ಶಾಸ್ತ್ರ ಭಾಷೆಯ ಸ್ವರೂಪವೇನು? ಹಾಗೂ ಕಾವ್ಯ ಭಾಷೆಯ ಸ್ವರೂಪವೇನು? ಎಂಬುದರ ವಿವರಣೆ ಅಗತ್ಯ.

ಶಾಸ್ತ್ರ ಎಂದರೆ ಯಾವುದಾದರೂ ಒಂದು ವಸ್ತುವಿನ ಸ್ವಭಾವ ಇಲ್ಲವೆ ರಚನೆಯನ್ನು ಕುರಿತು ವಿವರವಾಗಿ ವಿಶ್ಲೇಷಿಸಿ, ವಿಂಗಡಿಸಿ ನಿಷ್ಕೃಷ್ಟವಾಗಿ ನಿಖರವಾಗಿ, ಯಾವ ಅನುಮಾನಗಳಿಗೂ ಆಸ್ಪದವಿಲ್ಲದಂತೆ ಅಧ್ಯಯನ ಮಾಡುವುದು, ಅಥವಾ ತಿಳಿಯುವುದು ಎಂದು. ಅದರ ಗುರಿ ವಿಷಯ ವಿವೇಚನೆ, ವಿಶ್ಲೇಷಣೆ ನಿರೂಪಣೆ ಶಾಸ್ತ್ರ ಎನ್ನುವುದು ಹೀಗೆ ಎಂದ ಮೇಲೆ ಅದನ್ನು ತಿಳಿಸುವ ಭಾಷೆಯೂ ಹಾಗೆಯೇ ಇರಬೇಕು. ಅಂಗದಂತೆ ಅಂಗಿ, ವಸ್ತುವಿನಂತೆ ಭಾಷೆ. ಇದರಿಂದ ನಮಗೆ ಶಾಸ್ತ್ರ ಭಾಷೆ ಎನ್ನುವುದು ಒಂದು ವಸ್ತುವಿನ ರಚನೆ ಇಲ್ಲದೆ ಸ್ವಭಾವಗಳನ್ನು ಕುರಿತು ವಿವರವಾಗಿ ವಿಶ್ಲೇಷಿಸಿ, ವಿಂಗಡಿಸಿ, ನಿಷ್ಕೃಷ್ಟವಾಗಿ, ನಿಖರವಾಗಿ, ಯಾವ ಸಂಶಯಕ್ಕೂ ಆಸ್ಪದವಿಲ್ಲದಂತೆ ತಿಳಿಯ ಹೇಳುವುದು ಎಂದಾಗುತ್ತದೆ. ಹಾಗಿದ್ದಾಗಲೇ ಅದು ಶುದ್ಧ ಶಾಸ್ತ್ರ ಭಾಷೆ ಎಂದು ಕರೆಸಿಕೊಳ್ಳಲು ಅರ್ಹವಾಗುತ್ತದೆ. ಇಲ್ಲದೆ, ಯಾವುದಾದರೂ ಒಂದು ವಿಷಯವನ್ನು ಹೇಳುವಲ್ಲಿ ಸಂಶಯಕ್ಕೆ ಆಸ್ಪದವಿರುವಂತೆ, ಅಥವಾ ಅನುಮಾನಕ್ಕೆ ಗುರಿಯಾಗುವಂತೆ ಹೇಳುವುದಾದರೆ ಅದು ಶಾಸ್ತ್ರೀಯ ಭಾಷೆಯಾಗದೆ ಮತ್ತೇನಾದರೂ ಆಗುತ್ತದೆ. ಪ್ರತಿಯೊಂದು ಶಾಸ್ತ್ರಕ್ಕೂ ತನ್ನದೇ ಆದ ಪಾರಿಭಾಷಿಕ ಶಬ್ದಕೋಶವಿರುತ್ತದೆ. ಇಂಥ ಪಾರಿಭಾಷಿಕ ಶಬ್ದಗಳ ಬಳಕೆಯಿಂದ ಶಾಸ್ತ್ರದ ಸ್ವಭಾವ ಏನು ಎಂಬುದನ್ನು ತಿಳಿಯುವುದು ಕಷ್ಟವಲ್ಲ.

ಇನ್ನು ಕಾವ್ಯದ ಭಾಷೆ. ಇದರಲ್ಲಿ ಸ್ಪಷ್ಟತೆ ಕಡಿಮೆ. ಸ್ಪಷ್ಟತೆ ಇಲ್ಲದಿರುವುದೇ ಕಾವ್ಯಭಾಷೆಯ ಒಂದು ಗುಣ. ಆನಂದವರ್ಧನನು ತನ್ನ 'ಧ್ವನ್ಯಾಲೋಕದಲ್ಲಿ' ಕಾವ್ಯದಲ್ಲಿ ಒಂದು ಶಬ್ದಕ್ಕೆ ಮೂರು ಅರ್ಥಗಳಿವೆ ಎಂದು ಹೇಳುತ್ತಾನೆ. ವಾಚ್ಯಾರ್ಥ, ಸೂಚ್ಯಾರ್ಥ, ವ್ಯಂಗ್ಯಾರ್ಥ (ಧ್ವನ್ಯರ್ಥ) ಒಂದು ಶಬ್ದ ವಾಚ್ಯಾರ್ಥದಲ್ಲಿ ಆರಂಭವಾಗಿ ಸೂಚ್ಯಾರ್ಥದಲ್ಲಿ ಪ್ರವಹಿಸಿ ಧ್ವನ್ಯರ್ಥದಲ್ಲಿ ಪರ್ಯವಸಾನವಾಗಬೇಕು. ಅಂದರೆ ಬಳಸುವ ಶಬ್ದಗಳು ನಿರ್ದಿಷ್ಟವಾಗಿ ಒಂದೇ

(ಎಂಟನೇ ಪುಟ ನೋಡಿರಿ)

ಎತ್ತರಕ್ಕೆ-

ಅತಿ ಎತ್ತರಕ್ಕೆ



ಠೇವಣಿ ಹೆಚ್ಚಳದ ಅದ್ವಿತೀಯ ದಾಖಲೆ

1971ರಲ್ಲಿ ಸೇಕಡಾ 30ರಷ್ಟು ಠೇವಣಿ ಹೆಚ್ಚಳ

ಸಿಂಡಿಕೇಟ್ ಬ್ಯಾಂಕ್

ದೇಶದ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಪೈಕಿ ಅತಿ ಹೆಚ್ಚು ಪ್ರಮಾಣದಲ್ಲಿ ಠೇವಣಿಗಳ ಬೆಳವಣಿಗೆಯನ್ನು ಸಾಧಿಸಿದೆ.

1971ರಲ್ಲಿ ಸಿಂಡಿಕೇಟ್ ಬ್ಯಾಂಕು ಸಾಧಿಸಿದ ಸರ್ವಾಂಗೀಣ ಪ್ರಗತಿಯ ಸೂಚಕಗಳು:

	ಠೇವಣಿಗಳು [ಕೋಟಿ ರೂಪಾಯಿಗಳಲ್ಲಿ]	ಮುಂಗಡಗಳು [ಕೋಟಿ ರೂಪಾಯಿಗಳಲ್ಲಿ]	ಠೇವಣಿ ಖಾತೆಗಳ ಸಂಖ್ಯೆ	ಮುಂಗಡ ಖಾತೆಗಳ ಸಂಖ್ಯೆ
1970	167	122	18,44,134	3,71,555
1971	218	152	22,19,800	4,59,579
1971ರಲ್ಲಿ ಸಾಧಿಸಿದ ಹೆಚ್ಚಳ	30.5%	23.8%	20.3%	23.6%

ಪ್ರತಿ ವರ್ಷವೂ ನಮಗೆ ಪ್ರಗತಿಯ ಹರ್ಷ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ: ಮಣಿಪಾಲ   ಶಾಖೆಗಳು: 500ಕ್ಕೂ ಮಿಕ್ಕಿ   ಕೆ. ಕೆ. ಪೈ, ಕಸ್ಟೋಡಿಯನ್

ಗೇಹರಾಜ್ಯದಲ್ಲಿ

ಒಳ್ಳೇದಾಗೋ ಕಾಲ ಬಂದಿದೆ

'ಹೇಗೂ ಮುಗಿಯಿತಲ್ಲಾ....'

'ಎಂಥದು?'

'ಮತ್ತಿನ್ನೆಂಥದು? ಇಲೆಕ್ಷನ್ನು....'

'ಹ್ಞಾಂ, ಮುಗಿದೂ ಆಯ್ತು. ಪರಿಣಾಮ ಪ್ರಕಟವಾಗಿಯೂ ಆಯ್ತೂನ್ನು....'

'ಎಲ್ರಿ?'

'ಏನು?'

'ಪರಿಣಾಮ ಪ್ರಕಟವಾಗಿರೋದು?'

'ಅಲ್ವೆ, ಮತದಾರರು ಓಟನ್ನು ಪೆಟ್ಟಿಗೆಗೆ ಹಾಕಿದರು ಅಂದ್ರೆ ಪರಿಣಾಮ ಪ್ರಕಟವಾದ ಹಾಗೆಯೇ ಅನ್ನು....'

'ಅಲ್ರಿ, ಇದು ಭಾರಿ ತಮಾಷೆ. ಮತ್ತೆ ಅದನ್ನು ಎಣಿಸುವುದು ಯಾಕೇಂತ?'

'ಜನಾಭಿಪ್ರಾಯವನ್ನು ಅಭ್ಯರ್ಥಿಗಳಿಗೆ ತಿಳಿಸುವುದಕ್ಕಾಗಿ....'

'ಹ್ಞಾಂ....'

'ಅದೂ ಮುಗಿದಂತೆಯೇ ಅನ್ನು....'

'ಅದು ಸರೀನ್ನಿ. ನೋಡಿ ಕಳೆದ ವರ್ಷದ ಸನ್ನಿವೇಶಕ್ಕೂ ಈ ವರ್ಷದ ಸನ್ನಿವೇಶಕ್ಕೂ ಎಷ್ಟೊಂದು ಬದಲಾವಣೆ ನೋಡಿ..'

'ಬದಲಾವಣೆಯೇನು ಬಂತೆ? ಒಂದೇ ರೀತಿ ಸನ್ನಿವೇಶ ಅಪರಿವರ್ತಿತವಾಗಿದ್ರೆ ಅದು ನಾರ ತೊಡಗುತ್ತದೆ....'

'ಅದು ಖರೆನ್ನಿ. ಈ ಬಾರಿ ಇಂದಿರಾ ಗಾಳಿಯ ಪ್ರಭಾವ ಅದೆಷ್ಟೋ ಕಡಿಮೆಯಾಗಿದೆ....'

'ಏನು ಪ್ರಭಾವವೋ ಏನು ಕಡಿಮೆಯೋ....'

'ಯಾಕೆ?'

'ಅಲ್ವೆ, ೧೯೫೨, ೫೭ ಮತ್ತು ೬೨ರಲ್ಲಿ ಭಾರತ ರತ್ನ ಜವಾಹರಲಾಲರ ಫೋಟೋ ಹಿಡಿದು ಓಟು ಬೇಡಿದರು. ೬೭ರಲ್ಲಿ ನೆಹರು ಇರಲಿಲ್ಲ. ಆದ್ದರಿಂದಲೇ ಕಾಂಗ್ರೆಸ್ಸು ಹಲವೆಡೆ ಅಧಿಕಾರ ಕಳೆದು ಕೊಂಡಿತು. ೭೧ ಮತ್ತು ೭೨ರಲ್ಲಿ ಮತ್ತೆ ಭಾರತ ರತ್ನ ಇಂದಿರಾಗಾಂಧಿಯ ಫೋಟೋ ತೋರಿಸಿ ಓಟು ಪಡೆದರು....'

'ಹ್ಞಾಂ....ಏನಾಯ್ತು?'

'ಆಗೋದೇನು ಬಂತೆ? ನಾವು ಮೂರ್ತಿ ಪೂಜಾರಿಗಳೆಂಬುದನ್ನು ಮತ್ತೊಮ್ಮೆ ಸಿದ್ಧ ಮಾಡಿ ತೋರಿಸಿದೆವು.'

'ಮೂರ್ತಿ ಪೂಜಾರಿಗಳೋ ವ್ಯಕ್ತಿ ಪೂಜಾರಿಗಳೋ....'

'ಯಾವುದಾದರೇನಂತೆ? ಪರಿಣಾಮವೆರಡರದ್ದೂ ಒಂದೇಯಾದ ಮೇಲೆ....'

'ಅಲ್ರಿ, ನನಗೊಂದೆನಿಸುತ್ತದೆ....'

'ಏನು?'

'ಮತ್ತೇನಿಲ್ಲ; ನಮ್ಮ ಅಭ್ಯರ್ಥಿಗಳಲ್ಲಿ ಹೆಚ್ಚಿನವರಿಗೆ ವ್ಯಕ್ತಿಗತ ಶಕ್ತಿಯ ಪರಿಚಯವೇ ಇದ್ದಂತಿರಲಿಲ್ಲ....'

'ಸರೀನ್ನು, ಕಳೆದ ಮತ್ತು ಈ ವರ್ಷದ ಚುನಾವಣೆಗಳು ಅದನ್ನೇ ತೋರಿಸಿ ಕೊಟ್ಟಿವೆ. ಒಂದು ಪಕ್ಷವು "ಓಟ್ ಇಂದಿರಾ ಸೇವ್ ಇಂಡಿಯಾ"ಎಂದು ಕರೆ ನೀಡಿದರೆ ಉಳಿದವು 'ಇಂದಿರಾ ಹಟಾವೊ ಇಂಡಿಯಾ ಬಚಾವೊ' ಅಂದವು. ಅಂದರೆ,ಎರಡರ ಕೇಂದ್ರವೂ ಇಂದಿರಾ ಮತ್ತು ಇಂಡಿಯಾ....'

'ಮತ್ತೆ ನೋಡಿ, ಈ ಬಾರಿಯೂ ಇಂದಿರಾ ಗಾಳಿಯನ್ನು ಬೀಸುವಂತೆ ಮಾಡುವ ಹಲವಾರು ಪ್ರಯತ್ನಗಳು ನಡೆದವು. ಕಾಂಗ್ರೆಸಿಗೆ ಮತ ನೀಡುವುದನ್ನು 'ಬಡತನ ನಿರ್ಮೂಲನದ ಪಥವೆಂದು ಇಂದಿರಾಗೆ ನೀಡುವ ಮತವೆಂದು ಭಾರತ ಮಾತೆಗೆ ಹಿತ ತರುವ ಮತವೆಂದು....'

'ಸಾಕು ಬಿಡೇ...ಅದೆಲ್ಲ ಯಾರಿಗೆ ಅರ್ಥವಾಗುತ್ತೆ? ಯಾವ ಪ್ರದೇಶದಲ್ಲಿ ನೂರಕ್ಕೆ ಎಪ್ಪತ್ತರಷ್ಟು ನಿರಕ್ಷರರೂ ಬೋಳೇ ಸ್ವಭಾವದವರೂ ಇದ್ದಾರೆಯೋ ಅಲ್ಲಿ ಈ ಘೋಷಣೆಯೆಲ್ಲ ವ್ಯರ್ಥ. ಸನ್ನಿವೇಶವನ್ನು ವಿಕೃತಗೊಳಿಸಿಯೇ ಮತದಾರರ ಅಜ್ಞತೆಯ ದುರ್ಲಾಭ ಪಡೆದ್ರೇ...'

'ಅಂದರೆ, ನಮ್ಮ ಪ್ರಜಾಸತ್ತೆಗೊಂದು ಅರ್ಥವಿಲ್ಲ ಅನ್ನೋದೆ?'

'ಛೆ ಛೆ.... ಹಾಗಂದರೆ ಘೋರ ಅನ್ಯಾಯವಾಗುತ್ತೆ....'

'ಮತ್ತೆ....'

'ನೋಡು, ಯಾವ ದೇಶದಲ್ಲಿ ಶ್ರೀಸಾಮಾನ್ಯನೂ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲ್ಲುವ ಸಾಧ್ಯತೆಯಿಲ್ಲವೋ ಆ ದೇಶದಲ್ಲಿ ಪ್ರಜಾಸತ್ತೆ ಯಶ ಹೊಂದಲಾರದು.'

ಹ್ಞಾಂ....ಅದು ಸರೀನ್ನಿ. ಆ ಭಿತ್ತಿ ಪತ್ರಗಳು,ಪತಾಕೆಗಳು, ಬಿಲ್ಲೆಗಳು, ಕರಪತ್ರಗಳು, ಜಾಹೀರಾತುಗಳು ..ಕಾರುಗಳು.... ಧ್ವನಿವರ್ಧಕಗಳು.... ಲೋರಿಗಳು.... ಟೊಪ್ಪಿಗಳು....'

'ಅದರೊಡನೆ ಜನಗಳು, ಬೊಬ್ಬೆಗಳು, ಗಲಭೆಗಳು....'

'ಅಯ್ಯೋ, ಒಮ್ಮೆಗೆ ನಿಂತಿತಲ್ಲ, ಇನ್ನಾದರೂ ಆರಾಮವಾಗಿ ರಾತ್ರೆ ನಿದ್ದೆ ಮಾಡಬಹುದಲ್ಲಾ....'

'ನೋಡು, ನಮ್ಮಲ್ಲಿ ಚುನಾವಣೆಗಳಿನ್ನೂ ತತ್ವಗಳ ಪೈಪೋಟಿಯಲ್ಲಿ ನಡೆಯುತ್ತಿಲ್ಲ. ಎಲ್ಲ ಬಾಹ್ಯ ಆಡಂಬರಗಳ ನೆಲೆಯಲ್ಲಿ ಆಂತರಿಕ ದಯೆ–ದಾಕ್ಷಿಣ್ಯಗಳ ಹೆಸರಲ್ಲಿ ಭಯ ಭಕ್ತಿಗಳ ನೆಲೆಯಲ್ಲಿ ನಡೆಯುತ್ತಿವೆ. ಕೆಲವೆಡೆ ಜಾತೀಯ ತಳಹದಿಯ ಮೇಲೆಯೇ....'

'ಅದು ಸರೀನ್ನಿ. ನೋಡಿ, ಚುನಾವಣಾ ಸಮೀಕ್ಷೆ ನಡೆಸುತ್ತ ಪತ್ರಿಕೆಗಳು ಬರೆಯುತ್ತಿದ್ದುವು. ....ಲ್ಲಿ ಸಾದರ ಲಿಂಗಾಯತರದ್ದೇ ಬಹುಮತ....ಲ್ಲಿ ಮುಸ್ಲಿಮರದ್ದು ನಿರ್ಣಾಯಕ ಮತ....ಲ್ಲಿ ಕ್ರಿಶ್ಚಿಯನ್ನರ ಮತಗಳಿಸಿದವರು ಗೆಲ್ಲುವ ಸಂಭವ....ಲ್ಲಿ ಹರಿಜನರ ಮನವೊಲಿಸುವ ತಂತ್ರ ನಡೆಯುತ್ತಿದೆ...'

'ಸಾಕು ಬಿಡೇ....ಜಾತ್ಯತೀತ ದೇಶದಲ್ಲಿ ಹೀಗೆಲ್ಲ ಅನ್ನಬಾರದು.'

'ಅನ್ನಬಾರದು ನಿಜ. ಆದರೆ, ಪರಂಪರಾಪ್ರಾಪ್ತವಾಗಿ ಬಂದಿರುವ ಈ ಕೋಮು ಭಾವನೆಯನ್ನು ತೆಗೆದು ಹಾಕುವುದು ಹೇಗೆ?'

'ಹೇಗೆ ಅಂದರೇನೆ? ಪ್ರಗತಿಶೀಲ ಮನೋಭಾವನೆಯನ್ನು ರೂಢಿಸಿಕೊಳ್ಳುವುದರಿಂದ....'

'ಅಲ್ರಿ, ಒಂದೊಂದು ಕೋಮಿನವರ ಆಚಾರ–ಆಹಾರಗಳು ಬೇರೆ ಬೇರೆಯಿರುವಾಗ ಅವರೆಲ್ಲರನ್ನೂ ಒಂದೇ ರೀತಿಯಾಗಿ ರೂಪಿಸುವುದು ಹೇಗೆ ಸಾಧ್ಯ?'

'ನೋಡಮ್ಮ ಇದು ನಿಜಕ್ಕೂ ಕಷ್ಟಸಾಧ್ಯವಾದ ಮಾತು. ಅವರವರ ಮತಾಚಾರಗಳನ್ನು ಅವರವರು ಪಾಲಿಸುತ್ತಿರಬಹುದು; ಆದರೆ, ಅದರಿಂದ ರಾಷ್ಟ್ರಪುರುಷನ ಆರೋಗ್ಯಕ್ಕೆ ಭಂಗ ಬರುವಂತಾಗಬಾರದು....'

'ಅದೇ ನೋಡಿ ನಮ್ಮ ದ್ವಂದ್ವ ಪ್ರವೃತ್ತಿ....ಮನೆಯೊಳಗೊಂದು ಮನೆಯ ಹೊರಗೊಂದು.. ವ್ಯಕ್ತಿಗತ ಮತಾಚಾರಗಳು ಬಹಿರಂಗದಲ್ಲಿ ಪ್ರತಿಫಲಿಸದೆ ಇರುವುದು ಹೇಗೆ ಸಾಧ್ಯ?'

'ಅದಕ್ಕೇ ಕೋಮುವಾರು ಸೌಹಾರ್ದ ಬೇಕು ಅನ್ನೋದು....'

'ಅಲ್ಲಿಗೇ ಬಂತಲ್ಲ ಮತ್ತೆ ಕೋಮು ಭಾವನೆ! ಅದ್ರ ಮೇಲೆ ಕೋಮಿನ ಆಧಾರದಲ್ಲಿ ಹಿಂದುಳಿದವರು, ಬಹಳ ಹಿಂದುಳಿದವರು, ಗಿರಿಜನರು ಹರಿಜನರು ಇತ್ಯಾದಿ ವಿಭಜನೆ....'

'ಏನು ಮಾಡೋದೇ? ಇದಕ್ಕೆಲ್ಲ ಒಂದೇ ಪರಿಹಾರವೆಂದರೆ. ಎಲ್ಲರನ್ನೂ ಒಂದೇ ಕೋಮಿನವರೆಂದು ಮಾಡುವುದು–'

'ಅಲ್ರಿ, ಅದಕ್ಕೂ ಮುಸಲ್ಮಾನ ರಾಜರು, ಕ್ರಿಶ್ಚಿಯನ್ ಪಾದ್ರಿಗಳು ಪ್ರಯತ್ನಿಸಿ ಸೋತರಲ್ಲ?'

'ಮತ್ತೇನು ಮಾಡೋದು ಹೇಳು?'

'ನೋಡಿ, ಆ ಮತೀಯ ಭಾವನೆಯನ್ನು ಕಿತ್ತು ಹಾಕ ಬೇಕಾದರೆ, ರಾಷ್ಟ್ರ ಧರ್ಮವೊಂದು ಸೃಷ್ಟಿಯಾಗ ಬೇಕು. ಭಾವೈಕ್ಯದ ಸಮ್ಮೇಳನಗಳಿಂದ ಇದು ಸಾಧ್ಯವಾಗದು.'

"ಮತ್ತೆ?"

'ನೋಡಿ, ತುಳಸಿ ಗಿಡವೆಲ್ಲಿ ಬೆಳೆದರೂ ಅದಕ್ಕೆ ಗೌರವ ಸಂದೇ ಸಲ್ಲುತ್ತದೆ....'

'ಸರಿ...'

'ಹಾಗೆ ಪ್ರತಿಭೆಗೆ ಅವಕಾಶ ಮುಕ್ತವಾಗಿದ್ದರೆ ಎಲ್ಲವೂ ಸರಿಹೊಂದುವುದು....'

'ಅದೇ ತೊಂದರೆ ನೋಡು, ಪ್ರತಿಭಾವಂತರಿಗೆ ಅವಕಾಶ ನೀಡಿದ್ದರಿಂದಲೇ ಹಿಂದುಳಿದವರ ಬೃಹತ್ ಸಮುದಾಯ ಕಡೆಗಣಿಸಲ್ಪಟ್ಟಿದೆ. ಅವರು ಹಿಂದುಳಿಯುತ್ತಲೇ ಹೋಗಿದ್ದಾರೆ....'

'ಅದಕ್ಕೇನು ಮಾಡೋದು? ಅವರಲ್ಲೂ ಪ್ರತಿಭಾವಂತರಿದ್ದರೆ...'

"ಅಲ್ವೆ ಹಲವು ಶತಕಗಳಿಂದ ಸಮಾಜದ ಪದದಲಿತವಾಗಿ ಬಂದಿರುವ ಜನಾಂಗಗಳು....'

'ನೀವು ಏನೇ ಹೇಳಿ, ನಮ್ಮ ಸರಕಾರ ಹಾಗೆಯೇ ಪ್ರತಿಭೆಯನ್ನು ಅವಜ್ಞೆ ಮಾಡಿದ್ದರಿಂದಲೇ ದೇಶದಿಂದ ಪ್ರತಿಭಾ ಪಲಾಯನವಾಗುತ್ತಿದೆ....'

'ಹ್ಞೂ....ಇರಬಹುದು....'

'ಮತ್ತೆ ಅದಕ್ಕೆಂದು ಕರುಬುವುದೇಕೆ?'

'ಅಲ್ವೆ, ನೀನನ್ನೋದಾದ್ರೂ ಏನು?'

'ನೋಡಿ, ಕಡ್ಡಿ ಮುರಿದು ಹೇಳ್ತೇನೆ– ನೀವು ಎರಡು ದೋಣಿಗಳಲ್ಲಿ ಏಕ ಕಾಲದಲ್ಲಿ ಪ್ರಯಾಣಮಾಡಲಾರಿರಿ...'

"ಅಂದ್ರೆ...ನೋಡು, ಹಿಂದೆ ಸರದಾರ ಪಟೇಲರೂ ಈ ಮಾತನ್ನೇ ಹೇಳಿದ್ದರು– ಭಾರತೀಯ ಮುಸ್ಲಿಮರಿಗೆ–ಪಾಕಿಸ್ಥಾನದ ಮೇಲೆ ನಿಷ್ಠೆಯಿಟ್ಟುಕೊಂಡವರಿಗೆ...."

'ಹ್ಞಾಂ...'

"ಅದನ್ನೇ ನೋಡು ನಾವೂ ಮಾಡ್ತಿರೋದು....ನೂರಕ್ಕೊಬ್ಬನೂ ಶ್ರೀಮಂತನಿಲ್ಲದ ದೇಶದಲ್ಲಿ ಅವನ ಶ್ರೀಮಂತಿಕೆಗೆ ಮಿತಿಹೇರಿ

. ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ದರೆ ತಪ್ಪೇನು?'

'ಏನೂ ಇಲ್ಲಾನ್ನಿ. ಆದರೂ ತೊಂಬತ್ತೊಂಬತ್ತು ಜನರನ್ನು ಶ್ರೀಮಂತರಾಗಿಸುವುದಕ್ಕೆ ಏನು ಮಾಡಿದ್ದೀರಿ?'

'ಗರೀಬೀ ಹಟಾವೋ....'

'ಯಾರಿಗೆ ಹೇಳುವುದು? ಹೇಳಿದ ಮಾತ್ರಕ್ಕೆ ಅದು ದೂರವೋಡುವುದೆ?'

'ಅದಕ್ಕೇ ಅಂದದ್ದು ನೋಡು, ಈ ಚುನಾವಣೆಯಲ್ಲಿ ಇಂದಿರಮ್ಮನ ಕೈ ಬಲಪಡಿಸಿ. ಕೇಂದ್ರ ರಾಜ್ಯಗಳಲ್ಲಿ ಒಂದೇ ಪಕ್ಷದ ಸರಕಾರ ರಚಿಸಿಕೊಳ್ಳಿ, ಆಗ ಬಡತನ ದೂರವೋಡುತ್ತದೆ....'

"ಅಲ್ರಿ, ಕಾಂಗ್ರೆಸ್ಸು ತುಕುಡಿಯಾಗುವವರೆಗೂ ಕರ್ನಾಟಕ ರಾಜ್ಯದಲ್ಲೂ ಕೇಂದ್ರದಲ್ಲೂ ಒಂದೇ ಪಕ್ಷದ ಸರಕಾರವಿತ್ತಲ್ಲಾ ಆಗ ಏನಾಯ್ತು?"

'ಅಲ್ವೆ, ಆಗ ಇಂದಿರಾಗಾಂಧಿ ಢಿಲ್ಲೀಶ್ವರಿಯಾಗಿ ಎಲ್ಲಿದ್ದರು?'

'ಅದು ಬಿಡ್ರಿ, ಶಾಸ್ತ್ರಿಯವರು ತಾಷ್ಕೆಂಟಿನಲ್ಲಿ ಮೃತ್ಯುವನ್ನಪ್ಪಿದ ಬಳಿಕವಾದ್ರೂ ಇದ್ರಲ್ಲಾ....'

'ಹ್ಞೂಂ ಇದ್ರು....'

'ಆಗ ಬೆಂಗ್ಳೂರಲ್ಲಿ ಅವರ ಪಕ್ಷದ ಸರಕಾರವೇ ಇತ್ತಲ್ಲಾ....'

"ಹ್ಞೂಂ ಇತ್ತು...."

'ಅದೇನು ಹಾಗಂತೀರಾ?'

"ಅಲ್ವೆ, ಇಂದಿರಾಗಾಂಧಿಗೆ ಗರೀಬೀ ಹಟಾನೇಕಾ ಇರಾದಾ ಇದ್ರೂನೂ ನಿಜಲಿಂಗಪ್ಪಾ— ಮುರಾರ್ಜಿ ಆದಿ ಪ್ರತಿಗಾಮಿಗಳು ಆಕೆಯ ನಾಲಗೆ ಹಿಡಿಯುತಿದ್ರು, ಕೈಯೆಳೆಯುತಿದ್ರು....ಕಾಂಗ್ರೆಸ್ಸಿನಿಂದ ಅವರೆಲ್ಲರನ್ನೂ ಬರ್ತರ್ಫೆಮಾಡಿದ ಮೇಲೆನೇ 'ಗರೀಬೀ ಹಟಾವೋ' ಘೋಷಣೆ ಹೊರಟಿತು."

'ಹ್ಞೂಂ...'

'ಅದು ದಿಗ್ದಿಗಂತಗಳಲ್ಲಿ ಪ್ರತಿಧ್ವನಿಸತೊಡಗಿದಾಗ ಬೆಂಗ್ಳೂರ ಸರ್ಕಾರ ಅವರದ್ದಾಗಲಿಲ್ಲ....'

'ಓಹೋ, ಅದಕ್ಕೇ ಅದನ್ನ ಉರುಳಿಸಿದ್ದು....'

'ಹಾಗೆಲ್ಲ ಅನ್ನಬಾರದು, ಅಧಿಕಾರ ದಾಹಿಗಳಿಂದಾಗಿ ಅದು ತನಗೆ ತಾನೇ ಇಸ್ಪೀಟಿನ ಮನೆಯಾಗಿ ಉರುಳಿ ಹೋಯ್ತು. ಈಗ ಕನ್ನಡಿಗರಿಗೆ ಒಳ್ಳೆದಾಗೋ ಕಾಲ ಬಂದಿದೆ ನೋಡುತ್ತಿರು ಮುಂದಿನ ಐದು ವರ್ಷಗಳೊಳಗೆ ಗರೀಬೀ ಗರೀಬನ ಗುಡಿಸಲಿಂದ ತಲೆ ಹೊರಗೆ ಹಾಕದಂತೆ ದರ್ವಾಜಾ ಬಂದ್‌ಮಾಡಿ ಅದನ್ನು ಕೈದ್ ಮಾಡಿ ಬಿಡ್ತಾರೆ...."

ಓಹೋಹೋ....ಭಾರೀ ಚಲೋದಿದೆ.. ಅಲ್ರಿ, ಇದೇ ಭಾಷಣವನ್ನ ಚುನಾವಣೆಗೆ ಮೊದಲಾದ್ರೂ ಮಾಡ್ತಿದ್ರೆ ನಾಲ್ಕು ಮತಗಳಾದ್ರೂ ಹೆಚ್ಚು ಬೀಳ್ತಿತ್ತು...'

'ಓ, ಈಗ ಚುನಾವಣೆ ಮುಗಿದೇ ಹೋಯ್ತು. ಫಲಿತಾಂಶವೂ ಬಂದು ಹೋಯ್ತು....'

'ಹೌದು, ಹೌದು....'

'ಹ್ಞೂಂ....'

'ಏನು?'

'ಏನೂ ಇಲ್ಲ ಬಿಡು....ಬಲ್ವೆ ಇದೆ....' ಇದೇ...."

—ಗೋರಾ.

●●

ಕವಲು ದಾರಿ ಕೆಂಪು ದೀಪ

ಕಾವೇರಿ ಯೋಜನೆಗೆ ಅನುಮತಿಯಿಲ್ಲ!

ಒಂದು ಆಫೀಸು. ಗುಮಾಸ್ತರು ಊರು ಬಿಟ್ಟು ಹೊರ ಹೋಗಬೇಕಾದರೆ ಮೇಲಧಿಕಾರಿಯ ಅನುಮತಿ ಬೇಕು–ಇದು ಅಲ್ಲಿಯ ಸಾಮಾನ್ಯ ನಿಯಮ.

ಒಬ್ಬ ಕಾರಕೂನ ತನ್ನ ಮಾವನ ಮನೆಯಿರುವ....ಗೆ ಹೋಗುವ ಕಾರಣ ಉಲ್ಲೇಖಿಸಿ ನಾಲ್ಕು ದಿನಗಳ ರಜೆಗೆ ಬರೆದು ಹಾಕಿದ. ಅಧಿಕಾರಿಯು ರಜೆಯನ್ನು ಮಂಜೂರು ಮಾಡಿದ. ರಜಾದಿನಗಳನ್ನು ಅನುಭವಿಸಿದ ಬಳಿಕ ಆಫೀಸಿಗೆ ಮರಳುವಾಗ ಆತನಿಗೊಂದು ಮೆಮೊ ಕಾದಿತ್ತು.

'ನೀವು ಅನುಮತಿಯಿಲ್ಲದೆ....ಗೆ ಹೋಗಿ ಊರು ಬಿಟ್ಟಿದ್ದೀರಿ. ಹಾಗೆ ಕಂಪೆನಿಯ ....ನೇಮ ನಿಯಮ ಉಲ್ಲಂಘನೆ ಮಾಡಿದ್ದೀರಿ. ನಿಮ್ಮ ಮೇಲೆ ಶಿಸ್ತಿನ ಕ್ರಮವೇಕೆ ತೆಗೆದುಕೊಳ್ಳಬಾರದೆಂದು ಇಪ್ಪತ್ತನಾಲ್ಕು ತಾಸುಗಳಲ್ಲಿ ವಿವರಣೆ ನೀಡಬೇಕು....'

ಗುಮಾಸ್ತ ದಂಗಾದ ... ನಲ್ಲಿರುವ ಮಾವನ ಮನೆಗೆ ಹೋಗುವುದಕ್ಕಾಗಿಯೇ ರಜೆ ಬೇಡಿದ್ದು, ಅದು ಮಂಜೂರಾಗಿರುವಾಗ ಮತ್ತೆ ಪ್ರತ್ಯೇಕ ಅನುಮತಿ ಯಾಕೆ? ಇದು ಅವನಿಗೆ ಅರ್ಥವಾಗಲಿಲ್ಲ.

ರಜೆಯೆಂದರೆ ರಜೆ ಮಾತ್ರ; ಅದು ಅನುಮತಿಯಲ್ಲ– ಆದ್ದರಿಂದ ನಿಮ್ಮ ಮೇಲೆ ಕ್ರಮ ಕೈಗೊಳ್ಳಲಾಗಿದೆ–ಎಂಬ ಮತ್ತೊಂದು ಮೆಮೊ ಬಂತು.

ಕಾವೇರಿ ಕೊಳ್ಳದ ಯೋಜನೆಗಳ ದುರ್ದೆಸೆ ಕಾಣುವಾಗ ಮೇಲಿನ ಘಟನೆ ನೆನಪಾಗುತ್ತದೆ.

ಚುನಾವಣೆಗೆ ನಾಲ್ಕು ದಿನಗಳು ಉಳಿದಿವೆಯೆಂಬಾಗ, ಕಾವೇರಿಕೊಳ್ಳದ ಯೋಜನೆಗಳನ್ನು ಮುಂದುವರಿಸಲು ಕೇಂದ್ರವು ವಿಶೇಷ ಸಹಾಯ ನೀಡುವ ಭರವಸೆ ನೀಡಲಾಯ್ತು.

ಈ ಭರವಸೆ ನೀಡಿದವರು ಪತ್ರಾರೂ ಅಲ್ಲ. ಕೇಂದ್ರದ ಯೋಜನಾ ಸಚಿವ ಸಿ. ಸುಬ್ರಹ್ಮಣ್ಯಂ—ಪ್ರಧಾನಿ ಗಾಂಧಿಯ ನೆಚ್ಚಿನ ಅನುಯಾಯಿ.

ಕನ್ನಡಿಗರು ಹಿರಿ ಹಿರಿ ಹಿಗ್ಗಿದರು. ತಮ್ಮ ಯೋಜನೆಗಳಿಗೆ ಇದುವರೆಗೆ ಮಂಜೂರಾತಿಯಿಲ್ಲವಾದರೂ ಈಗ ಆರ್ಥಿಕ ನೆರವು ನೀಡಿದ್ದರಿಂದ ಮಂಜೂರಾತಿ ನೀಡಿದ ಹಾಗೇನೇ ಎಂದು ನಂಬಿದರು.

ಪ್ರಾಯಃ ದನ—ಕರು ಚಿಹ್ನೆಗೆ ಓಟೂ ಹಾಕಿದರು.

ಚುನಾವಣೆಯ ಒಂದಂಕ ಮುಗಿದೊಡನೆಯೇ ತಮಿಳು ನಾಡಿನ ಕರುಣಾನಿಧಿ ಗುಡುಗಿದರು–

ಕಾವೇರಿ ಯೋಜನೆಗೆ ಕೇಂದ್ರದ ಅನುಮತಿ ದೊರೆತಿಲ್ಲ. ಅಂತಹ ವರದಿ ಸುಳ್ಳು.

–ಈ ವಿಷಯವನ್ನು ತಿಳಿಸಿದವರೂ ಸುಬ್ರಹ್ಮಣ್ಯಂ ಅವರೇ ಅಂತೆ! ಕರುಣಾನಿಧಿಯವರು ಫೋನ್ ಮೂಲಕ ವಿಚಾರಿಸಿದಾಗ ಅವರು ಅದು 'ತಪ್ಪು ವರದಿ' ಅಂದರಂತೆ!

ನಿಜಕ್ಕೂ ತಪ್ಪುವರದಿ.

ಕಾವೇರಿ ಕೊಳ್ಳದ ಯೋಜನೆಗಳಿಗೆ ಕೇಂದ್ರದ ಅನುಮತಿ ದೊರೆಯಲಿಲ್ಲ. ಆದರೂ ರಾಜ್ಯ ಸರಕಾರ ತನ್ನ ಸ್ವಸಂಪತ್ತಿನ ಬಲದಿಂದ ಅದನ್ನು ಮುಂದುವರಿಸಿಕೊಂಡು ಬರುತ್ತಿದೆ.

ಜನಹಿತ ಸಾಧನೆಗೆ ಆ ಯೋಜನೆ ಆದಷ್ಟು ತ್ವರಿತವಾಗಿ ಪೂರ್ಣಗೊಳ್ಳುವುದು ಅತ್ಯವಶ್ಯ.

ತಮಿಳುನಾಡು ಸರಕಾರವು ನ್ಯಾಯಾಂಗದ ಮರೆಹೊಕ್ಕು ಈ ಯೋಜನೆಗಳನ್ನು ಮುಂದುವರಿಸದಂತೆ ತಡೆಯಾಜ್ಞೆ ಪಡೆಯುವುದಕ್ಕೂ ಪ್ರಯತ್ನಿಸಿ ವಿಫಲವಾಯ್ತು.

ರಾಜ್ಯ ಸರಕಾರವು ಅನನ್ಯಾಸಕ್ತಿಯಿಂದ ಈ ಯೋಜನೆಗಳನ್ನು ಮುಂದುವರಿಸುತ್ತಿದೆ.

ಕೇಂದ್ರವು ರಾಜ್ಯಕ್ಕೆ ನೀಡುವುದಾಗಿ ವಾಗ್ದಾನ ಮಾಡಿದಷ್ಟು ಸಹಾಯ ಮಾಡಲು ಸಾಧ್ಯವಿಲ್ಲವೆಂದು ಹಿಂದೆಯೇ ಘೋಷಿಸಿತ್ತು. ಆದ್ದರಿಂದ ರಾಜ್ಯದ ಹಲವು ಜನೋಪಯೋಗಿ ಕಾಮಗಾರಿಗಳು ಕುಂಟುವಂತಾಯ್ತು.

ರಾಜ್ಯದ ಓವರ್ ಡ್ರಾಫ್ಟ್ ಲೆಕ್ಕ ಕೂಡ ಹನುಮಂತನ ಬಾಲದಂತೆ ಬೆಳೆಯುತ್ತಲೇ ಬಂತು.

ರಾಜ್ಯಪಾಲ ಮೋಹನಲಾಲ ಸುಖಾಡಿಯಾರ ದಿಲ್ಲಿ ಮಾತುಕತೆಗಳು ಚುನಾವಣೆಯ ಹಿನ್ನಲೆಯಲ್ಲಿ ನಡೆದುವು.

ಕಾವೇರಿಕೊಳ್ಳದ ಯೋಜನೆಗಳಿಗೆ ಮಂಜೂರಾತಿಯಿಲ್ಲದಿದ್ದರೂ ಆರ್ಥಿಕ ನೆರವು ನೀಡಲು ಯೋಜನಾ ಸಚಿವ ಖಾತೆ ಒಪ್ಪಿತು.

ಮಂಜೂರು ಪಡೆದ ಯೋಜನೆಗಳಿಗೆ ಮಾತ್ರ ಕೇಂದ್ರದ ಆರ್ಥಿಕ ನೆರವು ಸಿಗುವುದು ಸಂಪ್ರದಾಯ. ಈ ನೆರವಿಗಾಗಿಯೇ ಈ ಯೋಜನೆಗಳಿಗೆ ಮಂಜೂರಾತಿ ಪಡೆಯುವ ಪ್ರಯತ್ನವನ್ನು ರಾಜ್ಯ ಸರಕಾರ ಮಾಡಿತ್ತು; ಆದರೆ ಕೃತಕೃತ್ಯವಾಗಲಿಲ್ಲ.

ಈಗ ಆಕಸ್ಮಾತ್ತಾಗಿ ಅನುಮತಿ ನೆರವಿನ ಸುದ್ದಿ ದಪ್ಪಕ್ಷರಗಳಲ್ಲಿ ಪ್ರಕಟವಾಯ್ತು.

ಇನ್ನು ಬೇರೆ ಅನುಮತಿ ಬೇಡವೆಂದು ಜನತೆ ತಿಳಿಯಿತು.

ಆದರೆ, ಪರಿಸ್ಥಿತಿ ಪೇಚಿಗಿಟ್ಟುಕೊಂಡಿತು. 'ನೆರವು' ಇಲೆಕ್ಷನ್ ಸ್ಟಂಟ್ ಎಂದು ಅಂದುಕೊಂಡ ಆಳುವ ಕಾಂಗ್ರೆಸ್ ವಿರೋಧಿಗಳ ಅಂಬೋಣ ಸತ್ಯವಾಯ್ತು.

ನೆರವು ಅಂದರೆ ಅನುಮತಿಯಲ್ಲ—ಇದು ಇಂದಿನ ವ್ಯಾಖ್ಯಾನ. ಅನುಮತಿಯಿಲ್ಲದೆ ನೆರವಿಲ್ಲ—ಇದು ಮುಂದಿನ ನಿರ್ಧಾರವಾಗಲೂ ಬಹುದು.

ಕರ್ನಾಟಕದೊಡನೆ ಕೇಂದ್ರ ನ್ಯಾಯಬದ್ಧವಾಗಿ ನಡೆದು ಕೊಂಡ ಉದಾಹರಣೆಗಳು ಅಪರೂಪ.

ಕಾಳಿ ನದಿ ಯೋಜನೆಯ ಬಗೆಗೂ ನೆರವಿನ ವಾಗ್ದಾನ ದೊರೆತದ್ದೂ ಮುಂದೆ ತಪ್ಪುವರದಿಯೆನಿಸಬಹುದು; ಚುನಾವಣಾ ಗತ್ತು ಆಗ ಬಹುದು.

ರಾಜ್ಯಪಾಲ ಮೋಹನಲಾಲ ಸುಖಾಡಿಯಾರು ಅಧಿಕಾರ ಸ್ವೀಕರಿಸಿದೊಡನೆಯೇ ರಾಜ್ಯವನ್ನು ಕೇಂದ್ರ ನೋಡುವ ದೃಷ್ಟಿ ಬದಲಾಯಿತೆಂದು ನಂಬಿನವರ ನಂಬಿಕೆಯಾಗ ಸುಳ್ಳಾಯಿತು.

ಕೇಂದ್ರ ಸರಕಾರವು ಕರ್ನಾಟಕವನ್ನು ಮಂಗನಂತೆ ಕುಣಿಸುತ್ತಿದೆಯೆ?

ಇದನ್ನು ಮುಂದೆ ಸ್ಥಾಪಿತವಾಗಲಿರುವ ಜನಪ್ರಿಯ ಸರಕಾರವೇ ಉತ್ತರಿಸಬೇಕು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ಭಾಷೆಯ ಸ್ವರೂಪಗಳು

(ಐದನೇ ಪುಟದಿಂದ)

ಅರ್ಥವನ್ನು ಕೊಡುವುದಿಲ್ಲ. ಒಂದು ಗಂಟೆಯನ್ನು ಬಾರಿಸಿದರೆ, ಅದರಿಂದ ಹಲವಾರು ಅನುಕರಣಗಳು ಕೇಳಿಬರುವಂತೆ, ಒಂದು ಶಬ್ದದ ಬಳಕೆಯಿಂದ ಹಲವಾರು ಅರ್ಥಪರಂಪರೆಗಳು ಧ್ವನಿತವಾಗಬೇಕು. ಸೂಚಿತವಾಗಬೇಕು. ಹಾಗಿದ್ದಾಗಲೇ ಅದಕ್ಕೆ ಶ್ರೇಷ್ಠ ಕಾವ್ಯದ ಪಟ್ಟ ದೊರಕೀತು. ಧ್ವನಿಯೇ ಕಾವ್ಯದ ಆತ್ಮ ಮತ್ತು ಜೀವಾಳ.

ಶಾಸ್ತ್ರದ ಭಾಷೆ ಎಷ್ಟು ಸ್ಪಷ್ಟವೋ, ನಿರ್ದಿಷ್ಟವೋ, ಕಾವ್ಯದ ಭಾಷೆ ಅಷ್ಟೇ ಅಸ್ಪಷ್ಟ ಹಾಗೂ ಧ್ವನಿಪೂರ್ಣ. ಸ್ಪಷ್ಟತೆ, ನಿಖರತೆ ಶಾಸ್ತ್ರ ಭಾಷೆಗೆ ಗುಣಗಳಾದರೆ, ಅವೇ ಗುಣಗಳು ಕಾವ್ಯದ ಭಾಷೆಗೆ ನ್ಯೂನತೆಗಳಾಗುತ್ತವೆ. ಇದೇ ರೀತಿ ಅಸ್ಪಷ್ಟತೆ, ಧ್ವನಿ ಶಕ್ತಿ, ಕಾವ್ಯಭಾಷೆಗೆ ಗುಣಗಳಾದರೆ, ಶಾಸ್ತ್ರಕ್ಕೆ ಅವು ದೋಷಗಳಾಗುತ್ತವೆ. ಒಂದೊಂದರ ಸ್ವಭಾವ ಸ್ವರೂಪಗಳು ಭಿನ್ನ. ಆದ್ದರಿಂದ ಶಾಸ್ತ್ರಕಾರನಾದವನು ಕಾವ್ಯದ ಭಾಷೆಯನ್ನು ಬಳಸುವುದೇ ಆಗಲೀ, ಕಾವ್ಯವನ್ನು ಬರೆಯುವ ಕವಿ, ಶಾಸ್ತ್ರದ ಭಾಷೆಯನ್ನು ಬಳಸುವುದೇ ಆಗಲೀ, ಆಯಾ ಕ್ಷೇತ್ರಕ್ಕೆ ಹೊಂದ ತಕ್ಕುದಲ್ಲ. ಶಾಸ್ತ್ರ, ಶುದ್ಧ ಶಾಸ್ತ್ರವಾಗಿ ಉಳಿಯಬೇಕಾದರೆ– ಕಾವ್ಯ, ಶುದ್ಧ ಕಾವ್ಯವಾಗಿ ಉಳಿಯಬೇಕಾದರೆ ಈ ರೀತಿಯ ವರ್ಣಸಂಕರ ಸರ್ವತ್ರ ವರ್ಜ್ಯ ಹಾಗೂ ಹೊಲ್ಲ.

ಕನ್ನಡ ಸಾಹಿತ್ಯಕ್ಕೆ ಸಾವಿರದ ಐನೂರು ವರ್ಷಗಳ ಇತಿಹಾಸವಿದೆ. ಇಂತಹ ದೀರ್ಘ ಅವಧಿಯಲ್ಲಿ ಎಷ್ಟೋ ಜನ ಕವಿಗಳು ಹಾಗೂ ಶಾಸ್ತ್ರಜ್ಞರು ಬರುತ್ತಾರೆ. ಕನ್ನಡ ಸಾರಸ್ವತ ಲೋಕದಲ್ಲಿ, ಶಾಸ್ತ್ರಜ್ಞರ ಸಂಖ್ಯೆಗಿಂತ ಕವಿಗಳ ಸಂಖ್ಯೆಯೇ ಹೆಚ್ಚು. ಬಹುಶಃ ಕಾವ್ಯದ ಒಲವು ಅಥವಾ ಕವಿಗಳ ಸಂಖ್ಯೆ ಅತಿಯಾಗಿದ್ದುದರಿಂದಲೋ—ಏನೋ, ಕನ್ನಡ ಭಾಷೆಯನ್ನು ಕಾವ್ಯಭಾಷೆಯನ್ನಾಗಿ ಮಾಡಲು ಸಾಕಷ್ಟು ಪ್ರಯತ್ನ ನಡೆದಿದೆ. ವಚನಕಾರರು, ದಾಸರು, ಕುಮಾರವ್ಯಾಸ ಮುಂತಾದವರು ಕನ್ನಡದ ಆಡುನುಡಿಯನ್ನು ಸಂವೇದನಾಸ್ತರಕ್ಕೆ ಏರಿಸಿ ಕಾವ್ಯವಾಹಕವನ್ನಾಗಿ ಮಾಡಿದರು. ಅದನ್ನು ಉಜ್ಜಿ ಉಜ್ಜಿ ಹೊಳಪುಗೊಳಿಸಿದರು, ಮೆದ್ದು ಮೆದ್ದು ಹದಗೊಳಿಸಿದರು. ಮೀಟಿ ಮೀಟಿ ಶ್ರುತಿಗೊಳಿಸಿದರು. ಆ ಕೀರ್ತಿ ಆ ಮೂವರಿಗೆ ಸಲ್ಲುತ್ತದೆ. ಹೊಸಗನ್ನಡದಲ್ಲಿ ಬೇಂದ್ರೆಯುವರು ಆ ಕೆಲಸವನ್ನು ಮಾಡಿದರು. ಆದರೆ ದುರದೃಷ್ಟಕರ ವಿಷಯವೆಂದರೆ ಕನ್ನಡದ ಯಾವ ಶಾಸ್ತ್ರಜ್ಞನೂ ಕನ್ನಡವನ್ನು ಶಾಸ್ತ್ರಭಾಷೆಯನ್ನಾಗಿ ಮಾಡುವ ಪ್ರಯತ್ನ ಮಾಡಲಿಲ್ಲ. ಕನ್ನಡವನ್ನು ಶಾಸ್ತ್ರ ಭಾಷೆಯನ್ನಾಗಿ ಮಾಡುವ ಪ್ರಯತ್ನ ಇತ್ತೀಚೆಗೆ ಅಂದರೆ ಕಳೆದ ಎರಡು ದಶಕಗಳಿಂದ ಪ್ರಾರಂಭವಾಗಿದೆ ಎಂದು ಹೇಳಿದರೆ—ಕನ್ನಡವು ಶಾಸ್ತ್ರೀಯವಾಗಿ ಎಷ್ಟೊಂದು ಹಿಂದುಳಿದಿದೆ ಎಂಬ ಕಲ್ಪನೆಗಳು ನಮಗೆ ಬಂದಾವು. ಈ ಎರಡು ದಶಕಗಳ ಕನ್ನಡ ಶಾಸ್ತ್ರಭಾಷೆಯು ವಿಪುಲವಾಗಿ ಬೆಳೆಯುತ್ತಿದ್ದರೂ, ಸಾಕಷ್ಟು ಪಾರಿಭಾಷಿಕ ಶಬ್ದಗಳ ಸೃಷ್ಟಿ ಇಲ್ಲದ, ಅಥವಾ ಅವುಗಳ ಬಳಕೆಯಲ್ಲಿ ಒಮ್ಮತವಿಲ್ಲದೆ ಅದು ಕುಂಟುತ್ತಿರುವಂತೆ ಭಾಸವಾಗುತ್ತದೆ.

ಪ್ರಾಚೀನ ಹಾಗೂ ಮಧ್ಯ ಕಾಲೀನ ಕನ್ನಡದಲ್ಲಿ ಹಲವಾರು ಶಾಸ್ತ್ರ ಗ್ರಂಥಗಳಿವೆ. ಕಾವ್ಯಕೃತಿಗಳಿಗೆ ಹೋಲಿಸಿದರೆ ಅವುಗಳ ಸಂಖ್ಯೆ ಸರಾಸರಿ ಹತ್ತು ಭಾಗವು ಸಿಕ್ಕುವುದಿಲ್ಲ. ಕವಿರಾಜಮಾರ್ಗ, ರಸರತ್ನಾಕರ, ಅಲಂಕಾರ ಶಾಸ್ತ್ರಗಳು, ಛಂದೋಂಬುಧಿ ಛಂದ ಶಾಸ್ತ್ರ; ಮದನ ತಿಲಕ, ರಾಮ ಶಾಸ್ತ್ರ; ಜಾತಕ ತಿಲಕ, ಜ್ಯೋತಿಷ್ಯ ಶಾಸ್ತ್ರ, ಖಗೇಂದ್ರಮಣಿ ದರ್ಪಣ, ವಿಷವೈದ್ಯಶಾಸ್ತ್ರ, ಸೂಪಶಾಸ್ತ್ರ, ಅಡುಗೆ ಶಾಸ್ತ್ರ, ಭಾಷಾ ಭೂಷಣ, ಶಬ್ದಮಣಿದರ್ಪಣ, ವ್ಯಾಕರಣ ಶಾಸ್ತ್ರಗಳು, ಲೀಲಾವತಿ ಗಣಿತ ಶಾಸ್ತ್ರ ಇತ್ಯಾದಿಗಳು. ಆದರೆ ಈ ಗ್ರಂಥದ ಕರ್ತೃಗಳು ಯಾರೂ ತಮ್ಮ ಕೃತಿಯನ್ನು ಶುದ್ಧ ಶಾಸ್ತ್ರೀಯ ಭಾಷೆಯಲ್ಲಿ ಬರೆಯಲಿಲ್ಲ. ಹೋಗಲಿ, ಶುದ್ಧ ಗದ್ಯದಲ್ಲಾದರೂ ಬರೆದರೆ? ಕೆಲವರು ಪಂಪಾದಿಗಳ ಚಂಪೂ ಶೈಲಿಯನ್ನು ಬಳಸಿದರು. ಮತ್ತೆ ಕೆಲವರು ಕಂದವೃತ್ತಗಳನ್ನು ಬಳಸಿದರು.. ಉಳಿದವರು ಷಟ್ಪದಿಯನ್ನೋ, ಸಾಂಗತ್ಯವನ್ನೋ ಬಳಸಿದರು. ಈ ಛಂದೋಬದ್ಧವಾದ ಶೈಲಿ ಕಾವ್ಯಕ್ಕೆ ಅವಶ್ಯಕವೇ ಹೊರತು ಶಾಸ್ತ್ರಕ್ಕಲ್ಲ. ಶಾಸ್ತ್ರವನ್ನು ಬರೆಯುವಲ್ಲಿ ಅವರು ಶುದ್ಧ ಶಾಸ್ತ್ರೀಯವಾಗುವುದಕ್ಕೆ ಬದಲಾಗಿ, ತಾನು ಶಾಸ್ತ್ರವನ್ನು ಕುರಿತು ಬರೆಯುತ್ತಿದ್ದರೂ ತನ್ನನ್ನು ಜನರು 'ಕವಿ' ಎಂದು ಕರೆಯಲಿ ಎಂಬ ವ್ಯಾಮೋಹ ಅವರನ್ನು ಆವರಿಸಿರುವಂತೆ ತೋರುತ್ತದೆ. ಕಾವ್ಯವು ಹೇಗೆ ಮೋಕ್ಷಕ್ಕೆ ಸಾಧನವೋ, ಶಾಸ್ತ್ರವೂ ಮೋಕ್ಷಕ್ಕೆ ಸಾಧನ ಎಂದು ಕಳಕಳಿಯಿಂದ ಅವರು ವಾಚಕರಲ್ಲಿ ಭಿನ್ನವಿಸಿಕೊಂಡಿದ್ದಾರೆ. ಕೇಶಿರಾಜನು ವ್ಯಾಕರಣದಿಂದ "ಬುಧರ್ ಆಕಾಂಕ್ಷಿಪ ಮುಕ್ತಿಯುಕ್ಕುಂ" ಎನ್ನುತ್ತಾನೆ. ಅವರಿಗೆ ಹಾಗೆ ಅನ್ನಿಸಲು ಸಮಾಜದಲ್ಲಿ ಕವಿಗಳಿಗೆ ಸಿಕ್ಕುತ್ತಿದ್ದ ಗೌರವವೂ ಮತ್ತು ಅವರ ವಿಪುಲ ಸಂಖ್ಯೆಯೂ ಕಾರಣವಿದ್ದಿರಬಹುದು. ಏನೇ ಆಗಲಿ ಕನ್ನಡವನ್ನು ಶಾಸ್ತ್ರ ಭಾಷೆಯನ್ನಾಗಿ ಮಾಡಲು ಅವರಿಗಿದ್ದ ಅವಕಾಶವನ್ನು ಅವರು ಉಪಯೋಗಿಸಿಕೊಳ್ಳದೇಹೋದದ್ದು ತೀರ ದುರದೃಷ್ಟಕರ. ಹಾಗೆ ಮಾಡಿ ಅವರು ಅದರಿಂದ ಬರುವ ಕೀರ್ತಿಗೂ ಎರವಾದರು.

ಉಳಿದ ಶಾಸ್ತ್ರದ ವಿಚಾರ ಹೋಗಲಿ. ವ್ಯಾಕರಣ ಭಾಷೆಯ ಶಾಸ್ತ್ರ ತಾನೇ. ಕನ್ನಡದ ಪ್ರಸಿದ್ಧ ವೈಯ್ಯಾಕರಣಿ ಕೇಶಿರಾಜನಂಥವನೇ, ತನ್ನ ವ್ಯಾಕರಣ ಕೃತಿಯಲ್ಲಿ ಶುದ್ಧ ಶಾಸ್ತ್ರ ಭಾಷೆಯನ್ನು ಬಳಸಲಿಲ್ಲ ಎಂದ ಮೇಲೆ ಉಳಿದವರ ಪಾಡೇನು? ಕೇಶಿರಾಜನು ಶಬ್ದಮಣಿ ದರ್ಪಣದ ಪೀಠಿಕಾ ಭಾಗದಲ್ಲಿ ತಾನೊಬ್ಬ ವೈಯ್ಯಾಕರಣಿ ಎಂದು ಹೆಮ್ಮೆ ಪಟ್ಟುಕೊಳ್ಳುವುದಕ್ಕಿಂತ ಹೆಚ್ಚಾಗಿ "ಕವಿ ಕೇಶವನೆಂ" ಎಂದು ಹೇಳಿಕೊಳ್ಳುವುದರಲ್ಲಿ ಹೆಚ್ಚು ತೃಪ್ತಿ ಹೊಂದಿದಂತೆ ತೋರುತ್ತದೆ. ಅಂತೆಯೇ ಶಾಸ್ತ್ರವನ್ನು ಬರೆಯುವಲ್ಲಿ ಅವನು ಛಂದೋಬದ್ಧವಾದ ಭಾಷೆಯನ್ನು ಬಳಸಿದ್ದಾನೆ. ವ್ಯಾಕರಣ ನಿಯಮವನ್ನು ಹೇಳುವಲ್ಲಿ ಎಷ್ಟೋ ಕಡೆಗೆ ಅವನು ಬಳಸುವ ಕಂದಪದ್ಯ ಸ್ವಪೂರ್ಣ ವಿಚಾರವೊಂದನ್ನು ಬಳಕೊಳ್ಳಲು ಅಸಮರ್ಥವಾಗಿ ಒಂದೇ ವಿಚಾರ ಎರಡು ಮೂರು ಸೂತ್ರಗಳಲ್ಲಿ ಮುಂದುವರಿಯುತ್ತದೆ. ಈ ಕಂದ ಪದ್ಯಗಳ ಅನ್ವಯ ಎಷ್ಟೋ ಸಾರಿ ಕ್ಲಿಷ್ಟವಾಗಿ ಪರಿಣಮಿಸುವುದು. ಅಂತಹ ವ್ಯಾಕುಲತೆಯನ್ನು ಕಳೆಯಲು ಆತ ಅರ್ಥ ವೃತ್ತಿಯನ್ನು ಬರೆದಿದ್ದರೂ ಎಷ್ಟೋ ಕಡೆಗಳಲ್ಲಿ ಅರ್ಥವೃತ್ತಿಯೂ ಅಸ್ಪಷ್ಟವಾಗುವುದುಂಟು. ಕೇಶಿ ರಾಜನ ಶುಷ್ಕವಾದ ವ್ಯಾಕರಣ ಶಾಸ್ತ್ರವನ್ನು ಹೇಳುವಲ್ಲಿ ಶುಷ್ಕವಾಗಿ ಹೇಳದೆ ಕಾವ್ಯಮಯವಾಗಿ ಹೇಳಿರುವುದರಿಂದ ಅವನು ಕವಿ ಹೃದಯನೆಂತಲೂ, ವ್ಯಾಕರಣವನ್ನು ಓದುವಾಗಿನ ಬೇಸರ ಈ ಕಾವ್ಯಾಂಶಗಳಿಂದ ಕಳೆಯುತ್ತದೆ ಎಂದು ಹಲವಾರು ಜನ ವಿದ್ವಾಂಸರು ಅಭಿಪ್ರಾಯವನ್ನೇನೋ ಪಟ್ಟಿದ್ದಾರೆ. ಈ ಮಾತುಗಳು ಕೇಶಿರಾಜನು 'ಶುದ್ಧ ಶಾಸ್ತ್ರಿ'ಯಲ್ಲ ಎಂಬುದನ್ನು ವ್ಯಂಗ್ಯವಾಗಿ ಹೇಳುವಂತೆ ತೋರುತ್ತವೆ. ಕಾವ್ಯ ಭಾವ ಜೀವಿಗಳಿಗೆ! ಶಾಸ್ತ್ರ ಬುದ್ಧಿಜೀವಿಗಳಿಗೆ! ಕಾವ್ಯದ ಆನಂದ ಬೇಕಾದವರು ಕಾವ್ಯವನ್ನು ಓದಿ ಆನಂದ ಪಡಲಿ. ಶಾಸ್ತ್ರದಲ್ಲಿ ಅದನ್ನು ಏಕೆ ಅರಸಬೇಕು? ಶಾಸ್ತ್ರದಲ್ಲಿ ಇದನ್ನು ಅರಸುತ್ತಾರೆ ಎಂದು ಶಾಸ್ತ್ರದಲ್ಲಿ ಕಾವ್ಯಭಾಗಗಳನ್ನು ಹೇಳಹೊರಡುವುದು–ಎಂತಹ ಹಾಸ್ಯಾಸ್ಪದ! ಶಾಸ್ತ್ರವನ್ನು ಬರೆಯುವುದಾದರೆ ಶುದ್ಧ ಶಾಸ್ತ್ರ ಭಾಷೆಯಲ್ಲಿ ಬರೆಯಲಿ. ಬುದ್ಧಿಜೀವಿ ಅದರಲ್ಲೇ ಆನಂದಪಟ್ಟಾನು. ಯಾವುದು ಶುದ್ಧ ಶಾಸ್ತ್ರೀಯವಾಗಿರಬೇಕೋ, ನಿಷ್ಕೃಷ್ಟವಾಗಿರಬೇಕೋ ಅಂತಹುದರಲ್ಲಿ ಕಾವ್ಯದ ಅಲಂಕಾರ ಧ್ವನಿಯನ್ನು ತರುವುದು ಯಾರಿಗೂ ಒಪ್ಪದ ವಿಚಾರ. ಈ ದೃಷ್ಟಿಯಿಂದ —ಕೇಶಿರಾಜನು ಶಾಸ್ತ್ರವನ್ನು ಕಾವ್ಯಭಾಷೆಯಲ್ಲಿ ಹೇಳಹೊರಟಿರುವುದು, ಸ್ವಾಭಾವಿಕವು ಸಾಧಾರವು ಅಲ್ಲ ಎನ್ನಿಸುತ್ತದೆ. ಹಾಗೆ ಕಾವ್ಯದ ಭಾಷೆಯಲ್ಲಿ ಹೇಳಲು ಹೋಗಿ ಎಷ್ಟೊ ಅಸ್ಪಷ್ಟತೆಗಳು, ಅನುಮಾನಗಳು ಶಾಸ್ತ್ರವನ್ನು ತಿಳಿಯುವಲ್ಲಿ ತಲೆಹಾಕಿವೆ. ಓದುಗರಿಗೆ ಅಸ್ಪಷ್ಟವಾಗಿ ಉಳಿದು ತಲೆಕೆಡಿಸುವಂತಿದೆ. ಇವೆಲ್ಲ ಶಾಸ್ತ್ರವನ್ನು ಕಾವ್ಯ ಭಾಷೆಯಲ್ಲಿ ಹೇಳ ಹೊರಟ್ಟಿದ್ದರ ಫಲ. ಹೊಸಗನ್ನಡದಲ್ಲಿಯೂ, ಈ ಜಾಡ್ಯದಿಂದ ನರಳುತ್ತಿರುವ ಕೃತಿಗಳುಂಟು. ಉದಾಹರಣೆಗೆ, ಪ್ರೊ ರಾ.ಯ. ಧಾರವಾಡಕರ. ಅವರ "ಕನ್ನಡ ಭಾಷಾಶಾಸ್ತ್ರ."

—ಶ್ರೀ ಬಿ. ಕೃಷ್ಣಪ್ಪ, ಭದ್ರಾವತಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. 1. O. S. 553/67.

ಜಗನ್ನಾಥ ಶೆಟ್ಟಿ —ವಾದಿ.

1. ರಾಮಣ್ಣ ಶೆಟ್ಟಿ }
2. ಮಂಜಮ್ಮ ಶೆಡ್ತಿ } ಕಾವೇರಿ ಶೆಡ್ತಿ ಮಕ್ಕಳು.
3. ಗುಲಾಬಿ ಶೆಡ್ತಿ
4. ಸುಬ್ಬಣ್ಣ ಶೆಟ್ಟಿ
5. ಮೈನರ್ ಜಯ
6. ಮೈನರ್ ವಿಜಯ
7. ಮೈನರ್ ಮಂಜುನಾಥ

(3–7:) 2ನೇ ಮಂಜಮ್ಮ ಶೆಡ್ತಿ ಮಕ್ಕಳು. 5,6,7 ನೇಯವರ ಗಾರ್ಡಿಯನ್ 2ನೇ ಪ್ರ.ಳು ಮಂಜಮ್ಮ ಶೆಡ್ತಿ.

8. ಸುಬ್ಬಕ್ಕ ಶೆಡ್ತಿ—ಕಾವೇರಿ ಶೆಡ್ತಿ ಮಗಳು ವ ವೆಂಕಪ್ಪ ಶೆಟ್ಟಿ ಹೆಂಡ್ತಿ.

—ಎದ್ರಿರು.

2ರಿಂದ 7ನೇ ವರೆಗಿನವರು ಹೊಸನಗರ ತಾಲ್ಲೂ ಕೊಡೂರು ಗ್ರಾಮ, 8ನೇ ಎದ್ರಿ ಹೊಸನಗರ ತಾಲ್ಲೂ ಅಮೃತ ಗ್ರಾಮದ ಗರ್ತಿಕೆರೆ. 1ನೇ ಎದ್ರಿ ಶಂಕರನಾರಾಯಣ ಗ್ರಾಮ.

ಸದ್ರಿ ಪ್ರಿಲಿಮಿನರಿಯ ಡಿಕ್ರಿಯ ಮೇಲೆ ಫೈನಲ್ ಡಿಕ್ರಿಕೊಡಿಸಬೇಕೆಂತ ವಾದಿ ಕೊಟ್ಟ ಅರ್ಜಿಯು ತಾ. 4–4–72ಕ್ಕೆ ಆಖೈರಿ ತನ್ಖಿಗೆ ಇಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವಸ ಹಗಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಯಪಡಿಸಿದೆ.

K. V. Shenai

Advocate for Plff.

Kundapur, Date 29–2–72.

HOTEL SATKAR

Boarding, Lodging & Restaurant

Behind Corporation Office.

9 Mission Road — Bangalore—27.

Phone No.— 1 72303
2 72.04

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು–4

ಜಿಲ್ಲೆಯಲ್ಲಿ

ಆಳುವ ಕಾಂಗ್ರೆಸ್ಸಿನ ಅಭೂತ ವಿಜಯ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಹದಿನಾಲ್ಕು ವಿಧಾನ ಸಭಾ ಕ್ಷೇತ್ರಗಳಲ್ಲಿ ಆಳುವ ಕಾಂಗ್ರೆಸ್ಸು ಮತ್ತದರ ಮಿತ್ರ ಪಕ್ಷ ಸಿಪಿಐ ಗೆದ್ದು ಅಪೂರ್ವ ದಾಖಲೆ ಸ್ಥಾಪಿತವಾಗಿದೆ.

ಸಂಸ್ಥಾ ಕಾಂಗ್ರೆಸ್ಸು ಗೆಲ್ಲುವ ಆಶಯದಿಂದಿದ್ದ ಮಂಗಳೂರು-೧, ಬೆಳ್ತಂಗಡಿ, ಸುರತ್ಕಲ್ಲು, ಮೂಡಬಿದಿರೆ, ಕುಂದಾಪುರ ಮತ್ತು ಬ್ರಹ್ಮಾವರಗಳಲ್ಲಿ ಒಂದೆರಡೆಡೆಗಳನ್ನು ಬಿಟ್ಟು ಉಳಿದೆಡೆಗಳಲ್ಲಿ ಅದರ ಸೋಲು ಚೇತರಿಸಿಕೊಳ್ಳಲಾಗದಂಥದ್ದು. ಅದೇ ರೀತಿಯಲ್ಲಿ ಜನಸಂಘಕ್ಕೂ ಬಲವಾದ ಪೆಟ್ಟು ಬಿದ್ದಿತು. ಗೆದ್ದೇ ತೀರುವ ಹೆಬ್ಬಯಕೆಯಿಂದ ಸ್ಪರ್ಧಿಸಿದ್ದ ಒಬ್ಬಿಬ್ಬರು ಪಕ್ಷೇತರರೂ ಘನತರವೆನಿಸಿದ ಸೋಲನ್ನನುಭವಿಸಿದರು. ಜಿಲ್ಲೆಯ ಇತಿಹಾಸದಲ್ಲೇ ಇದು ಅಪೂರ್ವವಾದದ್ದು.

ಜಿಲ್ಲೆಯ ಚತುರ್ದಶ ಕ್ಷೇತ್ರಗಳಿಂದ ಗೆದ್ದು ಶಾಸನಸಭಾ ಸದಸ್ಯರಾಗಿ ಆಯ್ಕೆ ಹೊಂದಿದವರಲ್ಲಿ ಮೂವರು ಮಹಿಳೆಯರು ಈ ಮೂವರಲ್ಲಿ ಒಬ್ಬರು ಹಿಂದುಳಿದ ಕೋಮಿಗೆ ಸೇರಿದವರು; ಉಳಿದಿಬ್ಬರು ಅಲ್ಪಸಂಖ್ಯಾಕ ಕೋಮಿನವರು.

ಜಿಲ್ಲೆಯ ಮುಂದಿನ ಐದು ವರ್ಷದ ಶಾಸಕರು ಇವರು-

ಮಂಗಳೂರು—೧
ಶ್ರೀಮತಿ ಎಡ್ಡಿ ಸಾಲ್ಡಾನ.
ಮಂಗಳೂರು—೨
ಶ್ರೀ ಟಿ. ಫರೀದ್
ಬಂಟ್ವಾಳ
ಶ್ರೀ ಬಿ. ವಿ. ಕಕ್ಕಿಲ್ಲಾಯ (ಸಿ. ಪಿ. ಐ)
ಪುತ್ತೂರು
ಶ್ರೀ ಎ. ಶಂಕರ ಆಳ್ವ
ಬೆಳ್ತಂಗಡಿ
ಶ್ರೀ ಕೆ. ಸುಬ್ರಹ್ಮಣ್ಯ ಗೌಡ
ಸುಳ್ಯ (ಮೀಸಲು)
ಶ್ರೀ ಪಿ. ಡಿ. ಬಂಗೇರ
ಮೂಡಬಿದಿರೆ
ಶ್ರೀ (ಡಾ|) ದಾಮೋದರ
ಸುರತ್ಕಲ್ಲು
ಶ್ರೀ ಬಿ. ಸುಬ್ಬಯ್ಯ ಶೆಟ್ಟಿ
ಕಾರ್ಕಳ
ಶ್ರೀ ಕೆ. ವೀರಪ್ಪ ಮೊಯಿಲಿ
ಕಾಪು
ಶ್ರೀ ಬಿ. ಭಾಸ್ಕರ ಶೆಟ್ಟಿ
ಉಡುಪಿ
ಶ್ರೀಮತಿ ಮನೋರಮಾ ಮಧ್ವರಾಜ್
ಬ್ರಹ್ಮಾವರ
ಶ್ರೀ ಜಯಪ್ರಕಾಶ ಶೆಟ್ಟಿ, ಕೊಳ್ಕೆಬೈಲ್
ಕುಂದಾಪುರ
ಶ್ರೀಮತಿ ವಿನ್ನಿಫ್ರೆಡ್ ಫೆರ್ನಾಂಡಿಸ್
ಬೈಂದೂರು
ಶ್ರೀ ಎ. ಗೋಪಾಲಕೃಷ್ಣ ಕೊಡ್ಗಿ

ಇವರಲ್ಲಿ ಶ್ರೀ ಬಿ. ಭಾಸ್ಕರ ಶೆಟ್ಟಿಯವರು ೧೯೬೭ರಿಂದಲೂ ಶಾಸಕರಾಗಿದ್ದಾರೆ. ಈ ಬಾರಿ ಅವರು ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಶ್ರೀಮತಿ ಫೆರ್ನಾಂಡಿಸರು ೧೯೬೭ರಲ್ಲಿ ಶಾಸಿಕೆಯಾಗಿ ಆಯ್ಕೆಗೊಂಡಿದ್ದರು. ಈ ಇರ್ವರೂ ಹಿಂದೆ ಪ್ರಸಪಾಪಕ್ಷದಲ್ಲಿದ್ದು ಕಳೆದ ವರ್ಷ ಆಳುವ ಕಾಂಗ್ರೆಸ್ಸಿಗೆ ನಿಷ್ಠಾಂತರ ಮಾಡಿದವರು; ಮತ್ತೀಗ ತಮ್ಮ ನಿಲುವೆಗೆ ಮತದಾರರ ಅದೇಶವನ್ನು ಪಡೆದುಕೊಂಡವರು—ಎಂದು ಹೇಳುವುದಾದರೆ ಹೇಳಬಹುದು.

ಶ್ರೀ ಎ. ಶಂಕರ ಆಳ್ವರು ೧೯೬೭ರಿಂದ ೬೭ರ ವರೆಗೆ ಸಂಸತ್ ಸದಸ್ಯರಾಗಿದ್ದವರು. ಹೊಸ ಸಂಪುಟದಲ್ಲಿ ಮಂತ್ರಿ ಸ್ಥಾನ ದೊರೆತರೂ ದೊರೆಯ ಬಹುದು. ೭೧ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವವರಿದ್ದು ಅನಿರೀಕ್ಷಿತ ಕಾರಣಗಳಿಂದ ಕೊನೆಯ ಗಳಿಗೆಯಲ್ಲಿ ಹಿಂದುಳಿದವರು. ಉಳಿದ ಹದಿಮೂರು ಶಾಸಕರು ಈ ರಂಗಕ್ಕೆ ಹೊಸಬರು. ಪ್ರಾಯಃ ಇಷ್ಟು ಹೆಚ್ಚು ಸಂಖ್ಯೆಯಲ್ಲಿ ಹೊಸ ಮುಖಗಳನ್ನು ವಿಧಾನ ಸಭೆಗೆ ಕಳಿಸಿದ ಜಿಲ್ಲೆ ದಕ್ಷಿಣ ಕನ್ನಡವೊಂದೇ ಎನ್ನಬಹುದೋ ಏನೋ!

ಆಯ್ಕೆಯಾದ ಶಾಸಕರಿಗೆಲ್ಲ 'ನವಯುಗ'ದ ಶುಭಾಶಯಗಳು. ಇವರ ಮೇಲೆ ಜನತೆ 'ಮಿತಿಮೀರಿದ ಭರವಸೆ'ಯಿಟ್ಟಿದೆಯೆಂಬುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿ, ಇದನ್ನು ಈಡೇರಿಸುವ ಶಕ್ತಿ—ಸಾಮರ್ಥ್ಯಗಳು ಇವರಿಗೆ ಬರಲೆಂದು ಹಾರಯ್ಸುತ್ತದೆ.

●●

ಚಿಂತನೆಗೆ ಗ್ರಾಸ

ಭಾರತ ಪಾಕಿಸ್ತಾನ ಯುದ್ಧ ಕಾಲದಲ್ಲಿ ನಾವು ಖಂಡಿತವಾಗಿ ತಪ್ಪು ಮಾಡಿದ್ದೇವೆ.

ಅಧ್ಯಕ್ಷ ನಿಕ್ಸನ್ (10-2-1972)

o o o

ಕಳೆದ ಕಾಲು ಶತಮಾನದಲ್ಲಿ ಪಾಕಿಸ್ತಾನ ಪಟ್ಟದಷ್ಟು ತೊಂದರೆಗಳನ್ನು ಎದುರಿಸಿದೆ. ಈಗ "ಪ್ರತ್ಯೇಕತೆ" ಹಾಗು "ವಿಭಜನೆ" ಎಂಬ ಪದಗಳು ಕಹಿಯಾದರೂ ಸತ್ಯವಾಗಿ ಪರಿಣಮಿಸಿವೆ.

ಅಧ್ಯಕ್ಷ ಭುಟ್ಟೊ

o o o

ಪ್ರಜಾಪ್ರಭುತ್ವ ಸ್ಥಾಪನೆಯಾಗದಿದ್ದರೆ, ಪಾಕಿಸ್ತಾನ ಇನ್ನು ಒಂದು ಅಥವಾ ಎರಡು ವರ್ಷಗಳಲ್ಲಿ ಅವಸಾನ ಹೊಂದುತ್ತದೆ. ಭುಟ್ಟೋ ಅವರು "ಪೂರ್ವ ಪಾಕಿಸ್ತಾನ" ಪ್ರಕರಣದಿಂದ ಪಾಠ ಕಲಿಯಬೇಕು. ದಂಡನಾಳಿಕೆ ಮುಂದುವರಿದರೆ ಪಶ್ಚಿಮ ಪಾಕಿಸ್ತಾನದ ಇತರ ಪ್ರಾಂತ್ಯಗಳಲ್ಲೂ ಅಂತರ್ಯುದ್ಧ ಪರಿಸ್ಥಿತಿ ಉಂಟಾಗಬಹುದು. ಭಾರತದಲ್ಲಿ ಅನೇಕ ಪ್ರಾಂತ್ಯಗಳಿವೆಯಾದರೂ ಅಲ್ಲಿ ಎಂದೂ ದಂಡನಾಳಿಕೆ ಎಂಬುದಿಲ್ಲ. ಪ್ರಜಾಪ್ರಭುತ್ವ ಅತ್ಯಂತ ಯಶಸ್ವಿಯಾಗಿದೆ. ಪಾಕಿಸ್ತಾನ ಮಾತ್ರ ದಂಡನಾಳಿಕೆ ಹಾಗು ಸರ್ವಾಧಿಕಾರಿಗಳನ್ನು ಕಂಡಿದೆ.

ಜಮಾತ-ಇ-ಇಸ್ಲಾಮಿ ಪಕ್ಷದ ಮುಖಂಡ ಮೌಲಾನಾ ಮೌದೂದಿ ಅವರ ಭಾಷಣ, 12-7-1972

o o o

ಆಡಳಿತ ಪಾಕಿಸ್ತಾನದಲ್ಲಿ ಗಲಭೆ—ಗೊಂದಲ ಬೈಸಂಗಿನ ಮಾತಾಗಿದೆ. ಪಾಕಿಸ್ತಾನದ ಆವಸಾನದ ದಿನ ದೂರವಿಲ್ಲ. ಆ ದಿನ ಬಂದಾಗ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಸುಭದ್ರ ಸಮಾಜ ವ್ಯವಸ್ಥೆಗಾಗಿ ಕಾದಾಟ ಯಾವ್ವದೂ ಇರುವುದಿಲ್ಲ. ನಾವೆಲ್ಲರೂ ಗುಲಾಮರಾಗಿ ಬಾಳುತ್ತೇವೆ

: ಡೇಲಿ ನ್ಯೂಸ್ ಪತ್ರಿಕೆ : ಕರಾಚಿ 12-2-72

o o o

ವಾಸ್ತವಿಕತೆ ಎದುರಿಗೆ ಮುಖ ತಿರುಗಿಸುವ ಹವ್ಯಾಸ ಪಾಕಿಸ್ತಾನದ ದೌರ್ಬಲ್ಯ. ಪಾಕಿಸ್ತಾನ ಶತಮಾನಗಳಷ್ಟು ಹಳೆಯದಾದ ಕಂದಾಚಾರದ ನೀತಿಯನ್ನು ಕೈಬಿಟ್ಟು, ಸತ್ಯವನ್ನು ಒಪ್ಪಿಕೊಳ್ಳದಿದ್ದಲ್ಲಿ, ಪಾಕಿಸ್ತಾನದ ನವನಿರ್ಮಾಣ ಬರಿಯ ಕನಸೇ ಸರಿ.

ಸಂಡೆ ರಿವ್ಯೂ, ನ್ಯೂಯಾರ್ಕ್, ೦-2-1972

o o o

ಯಾಹ್ಯಾಖಾನ ಕುಡುಕ, ಬೇಜವಾಬ್ದಾರಿಯುತ, ಮಹಾ ನಿರ್ದಯಿ.

ಅಧ್ಯಕ್ಷ ಭುಟ್ಟೊ

o o o

ಚುನಾವಣಾ ವರ್ಷದಲ್ಲಿ ನಿಮ್ಮ ಆಡಳಿತವನ್ನು ಪೇಚಿಗೆ ಸಿಗಿಸುವ ಇಚ್ಛೆ ನನಗಿಲ್ಲ. ನಮ್ಮ ರಕ್ಷಣೆಗಾಗಿ ನಮಗೆ ಆಯುಧಗಳು ಬೇಕು.

ನ್ಯೂಯಾರ್ಕ್ ಟೈಮ್ಸ್ ವರದಿಗಾರ, ಸುಲ್ಜಬರ್ಗರರೊಂದಿಗೆ ಭುಟ್ಟೋ ಅವರ ಸಂದರ್ಶನ.

o o o

ಆಡಳಿತ ನಿರ್ವಹಣೆಯಲ್ಲಿ ಮಹಿಳೆಯರು ಪುರುಷರನ್ನು ಮೀರಿಸಬಲ್ಲರು ಎಂಬುದಕ್ಕೆ ನೆರೆಯ ದೇಶಗಳೇ ಉದಾಹರಣೆ.

ಪಾಕಿಸ್ತಾನ ಕೇಂದ್ರ ಶಾಸನ ಸಭೆಯ ಮಾಜಿ ಸದಸ್ಯ ಬೇಗಂ ಮುಜೀಬುನ್ನೀಸಾ

o o o

ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ತಾ. ೬ರಂದು ಉಡುಪಿಯ ಮೋಡರ್ನ್ ಹಾಯರ್ ಪ್ರೈಮರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಬಿ. ವಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಡಾ| ಮೋಹನದಾಸ ಪೈಯವರು ಸ್ವಾಗತಿಸಿದರು. ಶಾಲಾ ಅಧ್ಯಾಪಕ ಶ್ರೀ ಯು. ರತ್ನಾಕರ ಅಡಿಗರು ಹಳೆ ವಿದ್ಯಾರ್ಥಿ ಸಂಘದ ಪರಿಚಯ ಮಾಡಿಕೊಟ್ಟರು. ಶ್ರೀ ಕೆ. ರಮಾನಾಥರು ಸಂದೇಶ ವಾಚನ ಮಾಡಿದರು. ಹಳೆ ವಿದ್ಯಾರ್ಥಿ, ಸಿಂಡಿಕೇಟ್ ಬ್ಯಾಂಕಿನ ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀ ಎಚ್. ಡಿ. ಎಸ್. ಪೈಯವರನ್ನು ಶಾಲು ಹೊದಿಸಿ ಉಡುಗೊರೆಗಳನ್ನಿತ್ತು, ಸನ್ಮಾನಿಸಲಾಯಿತು. ಶ್ರೀ ಪೈಗಳು ಶಾಲೆಯು 1977ರಲ್ಲಿ ಆಚರಿಸಲಿರುವ ಸುವರ್ಣೋತ್ಸವಕ್ಕಾಗಿ ಸರ್ವರಂಪ್ರತಿ ೬ ವರ್ಷಗಳ ವರೆಗೆ ರೂ.100|-ರಂತೆ ನೀಡುವ ವಾಗ್ದಾನ ಮಾಡಿದರು.

ಪ್ರೊ| ಬಿ. ವಿ. ಕೆ.ಯವರು ಮಾತಾಡುತ್ತಾ, ವಿದ್ಯಾಕ್ಷೇತ್ರದಲ್ಲಿ ಅವಸರದ ಪ್ರಯೋಗಗಳು ನಿಲ್ಲದು ಶಿಕ್ಷಣ ಕ್ಷೇತ್ರವು ತಜ್ಞರ ವ್ಯಾಪ್ತಿಯೊಳಗೆ ಸೀಮಿತವಾಗಿರ ಬೇಕಲ್ಲದೆ ರಾಜಕಾರಣಿಗಳ ಕ್ರೀಡಾಕ್ಷೇತ್ರವಾಗಿರಬಾರದು. ಕಾಲೋಚಿತವಾದ ಶಿಕ್ಷಣ ಕ್ಷೇತ್ರದ ಕ್ರಾಂತಿಯನ್ನವರು ಸ್ವಾಗತಿಸಿದರು.

ನಂತರ ಶಾಲೆಯ ಹಳೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ಜರಗಿದವು. ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಭಂಡಾರಿಯವರು ವಂದಿಸಿದರು.

ಮುಂಜಾನೆ ಜರಗಿದ ಧ್ವಜಾರೋಹಣದ ನೇತೃತ್ವವನ್ನು ಶ್ರೀ ಕೆ. ವಿ. ರಾವ್ ವಹಿಸಿ, ಅದ ಮೊದಲು ಮಡದ ಶ್ರೀ ಸಿಬುಥೇಶ ತೀರ್ಥ ಶ್ರೀಪಾದಂಗಳವರಿತ್ತ ಸಿಹಿ ತಿಂಡಿ ಹಂಚಿದರು.

ವಿಜಯಾ ಬ್ಯಾಂಕ್ ಠೇವಣಿಯಲ್ಲಿ ಗಮನಾರ್ಹ ಹೆಚ್ಚಳ

ತಾ. 11ರಂದು ವಿಜಯಾ ಬ್ಯಾಂಕಿನ ಅಧಿಕಾರಿಗಳು ಭಾಗವಹಿಸಿರುವ ಎರಡು ದಿನದ ವಾರ್ಷಿಕ ಸಮ್ಮೇಳನವನ್ನು ಬೆಂಗಳೂರು ವೆಸ್ಟ್ ಎಂಡ್ ಹೊಟೆಲಿನಲ್ಲಿ ಬ್ಯಾಂಕಿನ ಛೇಯರ್‌ಮೇನ್ ಶ್ರೀ ಎಂ. ಸುಂದರರಾಮ ಶೆಟ್ಟರು ಉದ್ಘಾಟಿಸಿದರು. ಅವರು ಮಾತಾಡುತ್ತಾ ಕಳೆದ ವರುಷಕ್ಕೆ ಹೋಲಿಸಿದಂತೆ ಬ್ಯಾಂಕಿನ ಠೇವಣಿಯಲ್ಲಿ ಶೇ. 68 ಏರಿಕೆ ಆಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ ಬ್ಯಾಂಕಿನ ಅಧಿಕಾರಿಗಳು ಹಾಗೂ ನೌಕರ ವರ್ಗದವರನ್ನು ಅಭಿನಂದಿಸಿದರು. 1968ರಲ್ಲಿ ಕೇವಲ 13.83 ಕೋಟಿ ರೂ ಇದ್ದ ಠೇವಣಿ ಮೊತ್ತ 1971ರ ಕೊನೆಯ ವೇಳೆಗೆ 44ಕೋಟಿ ರೂ.ಗಳಿಗೆ ಏರಿತ್ತು ಎಂದು ತಿಳಿಸಿ ಶೇ. 216 ರಷ್ಟು ಏರಿಕೆ ಅಪೂರ್ವ ಸಾಧನೆ ಎಂದರು. ಇದೀಗ 1968ರಿಂದ ಬ್ಯಾಂಕು ಸಾಧಿಸಿರುವ ಅಪೂರ್ವ ಸಾಧನೆ ಎಂದರು. ಬ್ಯಾಂಕ್ ಎದುರಿಸ ಬೇಕಾದ ಸಮಸ್ಯೆಗಳ ಬಗ್ಗೆ ಅವರು ಮಾತಾಡಿ ಕಾಲಕ್ಕನುಗುಣವಾಗಿ ನಾವು ನಿರ್ವಹಿಸ ಬೇಕಾಗಿದೆ ಎಂದೂ ಕೃಷಿ ಹಾಗೂ ಕೈಗಾರಿಕಾ ವರ್ಗಗಳ ಬೇಡಿಕೆ ಪೂರೈಸುವುದಕ್ಕಾಗಿ ಬ್ಯಾಂಕ್ ವ್ಯಾಪಕ ಯೋಜನೆಗಳನ್ನು ಹೊಂದಿದೆ ಎಂದರಲ್ಲದೆ ಬ್ಯಾಂಕು ವಿದೇಶಿ ವಿನಿಮಯ ಕೇಂದ್ರಗಳನ್ನು ಆರಂಭಿಸಿದ್ದು, ಅಲ್ಲದೆ ಬ್ಯಾಂಕ್ ಸಾಧಿಸಿರುವ ಇನ್ನು ಕೆಲವು ಸಾಧನೆಗಳನ್ನವರು ವಿವರಿಸಿದರು.

ಕಾರ್ಯದರ್ಶಿ ಶ್ರೀ ಸಿ. ಜಯರಾಮ ಶೆಟ್ಟರು ಬ್ಯಾಂಕಿನ ಪ್ರಗತಿಯನ್ನು ವಿವರಿಸಿ ಕೆಲವು ಸಲಹೆಗಳನ್ನಿತ್ತರು. ವಿಜಯಾ ಬ್ಯಾಂಕಿನ ಒಟ್ಟು 151 ಶಾಖೆಗಳ 200 ಮಂದಿ ಅಧಿಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಶಿರ್ವ ರೋಟರಿ ಕ್ಲಬ್ಬಿನ ನೂತನ ಪದಾಧಿಕಾರಿಗಳು

ಶಿರ್ವ ರೋಟರಿ ಕ್ಲಬ್ಬಿನ ನೂತನ ಪದಾಧಿಕಾರಿಗಳಾಗಿ ಈ ಕೆಳಗಿನವರು ಆರಿಸಲ್ಪಟ್ಟಿರುವರು. ರೊ| ಸಿ. ವಿಠಲ ಶೆಣೈ (ಅಧ್ಯಕ್ಷ), ರೊ| ಡಾ| ಕೆ. ಆರ್. ವೆಂಕಟಕೃಷ್ಣ ಮತ್ತು ರೊ| ಸಿ. ಸೀತಾರಾಮ ಎಮ್. ಶೆಟ್ಟಿ (ಉಪಾಧ್ಯಕ್ಷರು) ರೊ| ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ) ರೊ| ಡಾ| ಎಚ್. ಮೋಹನದಾಸ್ ಹೆಗ್ಡೆ (ಜತೆ ಕಾರ್ಯದರ್ಶಿ), ರೊ| ಜಿ. ಎಮ್. ವಲ್ಕೇನ (ಕೋಶಾಧಿಕಾರಿ), ರೊ| ಬಿ. ಶಂಭು ಶೆಟ್ಟಿ (ಸಾರ್ಜಂಟ್ ಎಟ್. ಆರ್ಮ್ಸ್), ರೊ| ರೆ| ಫಾ| ವಿಕ್ಟರ್ ಸಲ್ಡಾನ್ಹ, ರೊ| ಡಾ| ಐ. ಡಿ. ಕೋಸ್ತಾ, ರೊ| ವಿ. ಸುಬ್ಬಯ್ಯ ಹೆಗ್ಡೆ ಮತ್ತು ರೊ| ಡಾ| ಎಡ್ವರ್ಡ್ ಲೋಬೋ (ಡೈರೆಕ್ಟರರು.

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

__ಅಭಿಪ್ರಾಯ__ ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಅರಿತು ನಡೆದರೆ ಅಮೃತ

ಚುನಾವಣೆಯ ಸುಂಟರ ಗಾಳಿಯು ಬಿಲೆ ನಿಂತ ಬಳಿಕ ಯಾವುದಾದರೊಂದು ಪಕ್ಷ ಸಂಸ್ಥಾನದ ದಂಡೆ ಸೇರುವುದಂತೂ ನಿಶ್ಚಿತ. ಆದರೆ ವಿಧವೆಗೆ ಬಸಿರು ಬಂದರೆ ಕುಂಟನಿಗೆ ಕ್ರೀಸ್ ಬಂದರೆ ಮುಚ್ಚಿಡುವುದಕ್ಕೆ ಅಸಾಧ್ಯ. ಅಂತೆಯೇ ನಮ್ಮ ಆಯ್ಕೆಯಾದ ರಾಜಕಾರಣಿಗಳು ಶ್ರೀ ಸಾಮಾನ್ಯನ ಮನಸ್ಸಿನಲ್ಲಿ ಬಡಾಯಿ ನಗಾರಿ ಬಾರಿಸುತ್ತಾರಲ್ಲದೆ ಸಿಂಹಾಸನವೇರಿದ ಬಳಿಕ ದೀಪದ ಕೆಳಗೆ ಕತ್ತಲಿರುವುದೆಂಬುವನ್ನು ನೆನೆಯುವುದಿಲ್ಲ. ತನ್ನ ಅಧಿಕಾರ ಸೂತ್ರದಲ್ಲಿ ಸಾವಿರಾರು ನಿಷ್ಪಾಪಿ ಮತದಾತೃಗಳು ನೇತಾಡುತ್ತಿರುವುದನ್ನು ಮರೆತು, ಯಾವ ಕಾಲು ಮುರಿದರೂ ಅಂಡಿಗೇ ಮೃತ್ಯು ಎಂದಂತೆ ಗುಂಪಿನ ಜತೆ ಗೋವಿಂದನಾಗಿ. ಹತ್ತರೊಳಗೆ ಹನ್ನೊಂದಾಗಿ ಲೋಕಸಭೆಯೊಳಗೇ ಬರಿದೇ ಲೋಕಶಾಯಿಯಾಗಿರುತ್ತಾರೆ.

ಯೋಗ್ಯರಿಗೆ ಮತ ನೀಡುವಲ್ಲಿಯೇ ಗಣರಾಜ್ಯದ ರಕ್ಷಣೆ ಅಡಗಿದೆಯೆಂದಿದ್ದಾನೆ ಹಿಟ್ಲರ್. ಪ್ರಜಾಪ್ರಭುತ್ವದಲ್ಲಿ ಅದಕ್ಕಿಂತ ಪವಿತ್ರವಾದ ಇನ್ನೊಂದು ದಾನವಿಲ್ಲ. ಪಾತ್ರಾಪಾತ್ರ ದೃಷ್ಟಿಯಿಲ್ಲದೆ ಜನತೆ ಅಮೂಲ್ಯ ಮತ ನೀಡಿ ಓರ್ವ ಅಭ್ಯರ್ಥಿಯನ್ನು ಆರಿಸುತ್ತದೆ. ಅಧಿಕಾರಶಾಹಿಯಾದ ಪುಢಾರಿಗಳು ಅಧಿಕಾರ ದಾಹದಿಂದ ಜನತೆಗೆ ಆಸೆ ಆಮಿಷಗಳನ್ನು ಮುಕ್ಕಿಸಿ, ಭರವಸೆಯ ಬೆಣ್ಣೆ ನೆಕ್ಕಿಸಿ, ಮಹಾ ಕಾರ್ಯಗಳನ್ನು ನೆರವೇರಿಸುವ ವಾಗ್ದಾನ ತಿನ್ನಿಸಿ ಗೆದ್ದು ಬರುತ್ತಾರೆ. ಪವಿತ್ರವಾದ ಮತವನ್ನು ಪಡೆಯಲು ಹೇಯ ರೀತಿಯಲ್ಲಿ ಹಣವನ್ನು ಕೊಡುತ್ತಾರೆ.

ಪ್ರತಿಯೊಬ್ಬರಿಗೂ ಸುಖ ಬೇಕು—ಎಂಬ ದೃಷ್ಟಿಯಲ್ಲಿ ಭಾರತದ ಶ್ರೀಸಾಮಾನ್ಯ ಮತ ಕೊಟ್ಟಿರುತ್ತಾನೆ. ಏರಿರುವ ಕಂದಾಯ ಹದಕ್ಕೆ ಬರಬೇಕು; ಜಿನಸಿಗಳ ಬೆಲೆ ಇಳಿಯಬೇಕು; ನೀರಾವರಿ ಯೋಜನೆಗಳಾಗಬೇಕು—ಎಂಬ ಆಕಾಂಕ್ಷೆ ಅವನಿಗಿರುತ್ತದೆ. ಆದರೆ ಇಂಥ ಭರವಸೆಗಳನ್ನು ಪೂರೈಸಿಕೊಡುವ ಪಕ್ಷಗಳು ಬೆರಳೆಣಿಕೆಯಷ್ಟೇ ಇವೆ. ಇಂದೀಗ ಇಂದಿರಾ ಗಾಂಧಿಯವರ ಬಗೆಗೆ ಅನೇಕರಿಗೆ ಭಿನ್ನಾಭಿಪ್ರಾಯವಿದ್ದೀತು. ಆದರೂ ಜನತೆ ಪ್ರತಿ ಬಾರಿಯೂ ಕಾಂಗ್ರೆಸಿಗೇ ಗೌರವ ಕೊಟ್ಟು ಅದನ್ನೇ ಏಕೆ ಆರಿಸುತ್ತದೆ? ಅಂದು ಕಾಂಗ್ರೆಸ್ ಹುಟ್ಟಿದಾಗ ಅದರ ಧ್ಯೇಯ ಧೋರಣೆಗಳು ಸುಸ್ಪಷ್ಟವಾಗಿದ್ದವು; ಅದು ಜನತಾ ಪಕ್ಷವಾಗಿತ್ತು. ಇಂದಿಗೂ ಹಿಂದುಳಿದ ವರ್ಗಗಳಿಗಿರುವ ಹಲವು ಸೌಲಭ್ಯಗಳನ್ನು, ಸವಲತ್ತುಗಳನ್ನು ಕಾಂಗ್ರೆಸ್ ಉಳಿಸಿಕೊಂಡು ಬಂದಿದೆ. ತ್ಯಾಗ ಜೀವನದ ಕುರಿತು ಪ್ರಿಯದರ್ಶಿನಿ ಇಂದಿರಾರವರನ್ನು ಬಲ್ಲಂಥವನು ಕೊಂಚವಾದರೂ ಅವರ ಬಗ್ಗೆ ಹೇಳದಿರಲಾರ. ಅವರು ತಮ್ಮ ಆಸ್ತಿ ಸರ್ವಾಧಿಯನ್ನು ಕಾಂಗ್ರೆಸಿಗೇ ಅರ್ಪಿಸಿದ್ದಾರೆ. ಲಾಭಕೋರರಿಗೆ ಪೆಟ್ಟು ಹಾಕಿದ್ದಾರೆ—ಎಂಬುದನ್ನು ಇಲ್ಲಿ ಗಮನಿಸಬಹುದು.

ಈ ಪುಢಾರಿಗಳು ರಾಮಾಯಣ ಕಾಲದಲ್ಲಿ ಕೋತಿಗಳಾಗಿದ್ದರೆಂದು ಖ್ಯಾತ ಸಾಹಿತಿ ಶ್ರೀ ಪಾವೆಂರವರು ಒಂದು ವ್ಯಂಗ್ಯ ಲೇಖನದಲ್ಲಿ ಹೇಳಿದ್ದಾರೆ. ಅದು ದಿಟವಿರಲೇಬೇಕು ಕಚ್ಚಾಡುವುದೊಂದೇ ಅವರ ರಕ್ತ ಗುಣ. ತನ್ನಿಚ್ಚೆಗೂ ಸಾಣೆ ತಲೆಗೂ ಮದ್ದಿಲ್ಲವೆಂದು ಅವರು ತಿಳಿದಿಲ್ಲವೇನೋ! ಜನತೆಯ ಹಿತಕ್ಕಾಗಿ ದುಡಿಯುವ ಬದಲು ಸ್ವಾರ್ಥಕ್ಕಾಗಿ ಕಾದಾಡಿದರು. ಒಗ್ಗಟ್ಟಿನ ಕಾಂಗ್ರೆಸಿನ ಕೊಬ್ಬರಿ ಇಂಡಿಕೇಟ್ — ಸಿಂಡಿಕೇಟೆಂಬ ಎರಡು ಹೋಳಾಗಿ ಒಡೆಯಿತು. ಒಂದು ರಾತ್ರಿ ಬೆಳಗಾಗುವುದರೊಳಗೆ ಅನೇಕ ನಿಷ್ಠ (?) ಅಧಿಕಾರಿಗಳು ಪಕ್ಷಾಂತರ ಮಾಡಿದರು. ಈ ಸಂದರ್ಭದಲ್ಲಿ ಹೆಗಡೆ, ವೀರೇಂದ್ರ ಪಾಟೀಲ್ ಮೊದಲಾದ ಹಿಡಿದ ಪಟ್ಟು ಬಿಡದ ರಾಜಕಾರಣಿಗಳನ್ನು ಉದಾಹರಿಸ ಬಹುದು. ಈ ಪುಢಾರಿಗಳು ಆರಿಸಿ ಬಂದ ಅಲ್ಪಾವಧಿಯಲ್ಲೇ ಕಾದಾಡಿ ಹೋರಾಡಿಯು ಸಂತೆಯ ನಾಯಿಗಳಂತೆ ಕಾಂಗ್ರೆಸಿನ ನೊಗ ಇಳಿಸಿದರು ಮೈಸೂರಿಗೆ ರಾಷ್ಟ್ರಪತಿ ಆಡಳಿತ ಕೂಡ ಬಂತು.

ಆದರೆ ಈ ಸಾರಿ ವಿಧಾನ ಸಭೆಗೆ ಆರಿಸಿ ಬಂದಿರುವ ಮಹಾತ್ಮರಲ್ಲಿ ದೇಶದ ಎಲ್ಲಾ ಬಾಂಧವರ ಕುರಿತು ಈ ಶ್ರೀಸಾಮಾನ್ಯ ಹೇಳುವುದೇನೆಂದರೆ—'ನಿಮ್ಮ ಮಾತುಗಳೆಂದಿಗೂ ಸುಳ್ಳಾಗದಿರಲಿ' ಎಂದೇ ಅವರು ಕೊಟ್ಟಿರುವ ಆಶ್ವಾಸನೆ ಮದ್ದಾನೆಯಾಗದೆ ಪಳಗಿದ ಆನೆಯಾಗಿ ಜನತಾ ಜನಾರ್ದನನ ಸೇವೆಗಾಗಬೇಕು. ಆದಷ್ಟು ಬೇಗನೆ ನಮ್ಮ ರಾಜ್ಯದಲ್ಲಿ ಭೂ ಸುಧಾರಣೆ ಜಾರಿಗೆ ಬರಬೇಕಾದ್ದು ಅವಶ್ಯವೇ ಹೊರತು, ಬೆವರು ಸುರಿಸಿ ದುಡಿಯುವ ಈ ಬಡ ರೈತನಿಗೆ ಉಳುವಾತನೇ ಹೊಲದೊಡೆಯನಾಗಬೇಕೆಂಬ ದುರಾಕಾಂಕ್ಷೆಯಲ್ಲ.

ಕಳೆದ ಸಾರಿಯಂತೆಯೇ ಈ ಸಾರೆಯೂ ನಮ್ಮ ಪುಢಾರಿಗಳು ಕೌರವ–ಪಾಂಡವರಾಗಿ ಕಾದಾಡಿದರೆ ಕ್ರಾಂತಿಯಾಗುವ ದಿನ ದೂರವಿಲ್ಲ ಬಂಗ್ಲಾದೇಶ ಹಾಕಿರುವ ಬರೆಯಿಂದ ನಾವಿನ್ನೂ ಚೇತರಿಸಿಲ್ಲ. ಪಾಕಿಸ್ತಾನ ಯುದ್ಧದ ಮಂಜು ತಿಳಿಯಾಗಿಲ್ಲ. ಈ ಸಾರಿಯ ಚುನಾವಣೆಯ ಫಲಿತಾಂಶವನ್ನು ಆಸೆಯ ಏಕ್ಸ್‌ರೇ ಕಣ್ಣಿನಿಂದ ನೋಡುತ್ತಿದ್ದೇವೆ. ಫಲಿತಾಂಶ ತಿಳಿಯಿತು, ನಮ್ಮ ಸಮಸ್ಯೆಗಳ ಹೊರೆಯನ್ನು ಆರಿಸಿ ಬಂದ ಅಭ್ಯರ್ಥಿಯ ಹೆಗಲಿಗಿಡುತ್ತಿದ್ದೇವೆ.

ಬಂದಿರುವ ಅಭ್ಯರ್ಥಿ ಈ ಹೊರೆ ಹೊರುವ ಧೀರ ಹಿಮಾಲಯವಾಗಬೇಕು. ಸಹನೆಯ ಹೆಜ್ಜೆಯಿಡುವ ಮಂದಾರವಾಗಬೇಕು. ನೂರು ಸಮಸ್ಯೆಗಳನ್ನು ಸಾವಿರ ಸೊಂಡಿಲಿನಿಂದ ಸ್ವೀಕರಿಸುವ ಐರಾವತವಾಗಬೇಕಲ್ಲದೆ ಬರಿಯ ಭರವಸೆ ಒಡ್ಡಿದ ಟೊಳ್ಳು ಬಿದಿರ ಹಿಂಡಿಲಾಗಿ, ಇನ್ನು ಐದು ವರುಷಗಳ ಮೇಲೆ ಬಂದು ಓಟಿಗಾಗಿ ಹಲ್ಲು ಗಿಂಜುವ ನಿರ್ಲಜ್ಜನಾಗ ಕೂಡದು. ಬಂದಿರುವ ಹೊಸ ನೀರು, ಹಳೆಯ ಅಭ್ಯರ್ಥಿಗಳು ಕೊಟ್ಟ ಕೊಳಕು ಆಮಿಷದ ನೀರನ್ನೂ ಕೊಚ್ಚಿ ಶಾಂತಿಯನ್ನು ನೆಲಗೊಳಿಸಬೇಕು. ಅರಿತು ನಡೆಯುವ ರಾಜಕಾರಣಿಗಳಿಂದ ಅಮೃತದ ನದಿ ಹರಿಯಬೇಕು.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

● ●

ಶಾಲೆ ಆದರ್ಶಗಳ ತರಬೇತಿ ಕೇಂದ್ರವಾಗಲಿ

— ಶಿರ್ವಗಲ್ಲಿ ಸುಂದರರಾಮ ಶೆಟ್ಟಿ.

ಶಿರ್ವ ಹಿಂದೂ ಹಾಯರ್ ಸೆಕೆಂಡರಿ ಶಾಲೆಯ ವರ್ಧಂತ್ಯುತ್ಸವ ಹಾಗೂ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ವಿಜಯ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ 5ರಂದು ನೆರವೇರಿತು. ಇನ್ನಂಜೆ ಹಾ ಸೆ. ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಪಿ ವಿಟ್ಠಲ ಶೆಣೈಯವರು ಧ್ವಜ ವಂದನದ ನೇತೃತ್ವ ವಹಿಸಿದರು. ಶಾಲೆಯ ಕರೆಸ್ಪಾಂಡೆಂಟ್ ಶ್ರೀ ಶಿವಾಜಿ ಶೆಟ್ಟರು ಆರಂಭದಲ್ಲಿ ಸ್ವಾಗತಿಸಿದರು. ಡಾ! ಯು ಶಶಿಕಾಂತ ರಾಯರು ಸ್ವಸ್ತಿ ನುಡಿದರು ಶ್ರೀ ಕೆ ವಾಸುದೇವ ಶೆಟ್ಟರು ಸಂದೇಶಗಳನ್ನೋದಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ಟರು ಶಾಲಾ ವರದಿಯೊಪ್ಪಿಸಿದರು. ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ವಿ, ಸುಬ್ಬಯ್ಯ ಹೆಗ್ಡೆಯವರು ಸಂಘದ ವರದಿ ಒಪ್ಪಿಸಿದರು. ಶ್ರೀ ಐರ್ಯ ಲಕ್ಷ್ಮೀನಾರಾಯಣ ಆಳ್ವರು ಪಠ್ಯ ಮತ್ತು ಇತರ ಚಟುವಟಿಕೆಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದರು. ಶ್ರೀ ಕಯ್ಯಾರ ಕಿಂಞ್ಞಣ್ಣ ರೈಯವರು 'ವಿದ್ಯೋದಯ' ಎಂಬ ಹಸ್ತ ಪತ್ರಿಕೆಯನ್ನು ಉದ್ಘಾಟಿಸಿದರು.

ಶ್ರೀ ಸುಂದರರಾಮ ಶೆಟ್ಟರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಅಜ್ಞಾನ ನಿರಕ್ಷರತೆಯನ್ನು ಹೋಗಲಾಡಿಸಿ ಸಮಾಜಕ್ಕೆ ಯೋಗ್ಯ ಮುಂದಾಳುತನ ಒದಗಿಸುವುದರೊಂದಿಗೆ ಉನ್ನತ ಆದರ್ಶಗಳ ತರಬೇತಿಯನ್ನು ಮಕ್ಕಳಿಗೆ ಮಾಧ್ಯಮಿಕ ಶಾಲೆಗಳು ಒದಗಿಸಬೇಕಾಗಿದೆ ಎಂದರು. ವಿದ್ಯೆಯಿಂದ ವಿಪುಲ ಜ್ಞಾನ ಸಂಪಾದನೆಯಾಗಬೇಕು. ವಿದ್ಯಾರ್ಥಿಗಳಲ್ಲಿ ಆದರ್ಶ ನಡತೆಗಳು ಬೆಳೆಯುವಂತೆ ಅಧ್ಯಾಪಕರು ತೀವ್ರ ಗಮನವೀಯಬೇಕು, ಈ ವಿಷಯದಲ್ಲಿ ಹೆತ್ತವರೂ ಅಧ್ಯಾಪಕರಿಗೆ ಬೆಂಬಲವಾಗಬೇಕೆಂದು ಅವರು ಕರೆ ನೀಡಿದರು.

ಅಂತ್ಯದಲ್ಲಿ ಶ್ರೀ ಜಯರಾಮ ಶೆಟ್ಟರು ವಂದಿಸಿದರು. ಅನಂತರ ಮನರಂಜನಾ ಕಾರ್ಯಕ್ರಮಗಳು ಜರಗಿದುವು.

ಬೈಂದೂರು ವಿಜಯಾ ಬ್ಯಾಂಕ್ ಕಛೇರಿ ಸ್ಥಳಾಂತರ

ಇದೇ ತಾ. 6ರಂದು ಕುಂದಾಪುರದ ಬೈಂದೂರಿನಲ್ಲಿರುವ ವಿಜಯಾ ಬ್ಯಾಂಕಿನ ಶಾಖೆಗಾಗಿ ಹೊಸದಾಗಿ ನಿರ್ಮಿಸಿದ 'ಮಹಾಲಕ್ಷ್ಮಿ ನಿವಾಸ'ಕ್ಕೆ ಕಛೇರಿಯನ್ನು ಸ್ಥಳಾಂತರಿಸುವ ಸಮಾರಂಭವು ಬ್ಯಾಂಕಿನ ಡೈರೆಕ್ಟರ್ ಹಾಗೂ ಮಾಜಿ ಶಾಸಕ ಶ್ರೀ ವೈ. ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರದ ಅಸಿಸ್ಟಾಂಟ್ ಕಮಿಷನರ್ ಶ್ರೀ ಟಿ. ಜೆ. ಬಂಗೇರರು ನೂತನ ಕಟ್ಟಡವನ್ನು ಉದ್ಘಾಟಿಸಿದರು.

ಆರಂಭದಲ್ಲಿ ಬ್ಯಾಂಕಿನ ಗ್ರೂಪ್ ಮೆನೇಜರ್ ಶ್ರೀ ಬಿ ಎಲ್ ಎನ್ ಹೆಗ್ಡೆ ಸ್ವಾಗತಿಸಿ ಕಳೆದ ದಶಕದಲ್ಲಿ ಶ್ರೀ ಸುಂದರರಾಮ ಶೆಟ್ಟರ ನೇತೃತ್ವದಲ್ಲಿ ಬ್ಯಾಂಕ್ ಸಾಧಿಸಿರುವ ಪ್ರಗತಿಯನ್ನು ವಿವರಿಸಿ ಬ್ಯಾಂಕ್ ಬೇರೆ ಬೇರೆ ವೃತ್ತಿಯವರಿಗೆ ನೆರವು ನೀಡುವ ಸಾಲ ಯೋಜನೆಗಳನ್ನು ವಿವರಿಸಿದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ಮಂಜಯ್ಯ ಶೆಟ್ಟರು ಮಾತಾಡಿ ಜನಜೀವನದಲ್ಲಿ ಉಳಿತಾಯದ ಪ್ರಾಮುಖ್ಯತೆಯನ್ನು ವಿವರಿಸಿದರು.

ಅಂತ್ಯದಲ್ಲಿ ಬ್ಯಾಂಕಿನ ಶಾಖಾ ಮೆನೇಜರ್ ಶ್ರೀ ವಿಠಲ ಶೆಟ್ಟರು ಧನ್ಯವಾದ ಅರ್ಪಿಸಿದರು.

ಅತ್ತಾವರ ಆನಂದ ಶೆಟ್ಟರ ನಿಧನ

ಮಂಗಳೂರು ನಗರ ಸಭೆಯ ಸದಸ್ಯರೂ, ಜಿಲ್ಲಾ ಸಂ. ಕಾಂ. ಸಮಿತಿಯ ಕಾರ್ಯದರ್ಶಿಗಳೂ, ನಗರದ ಪ್ರಸಿದ್ಧ ವಕೀಲರೂ ಜನಪ್ರಿಯ ಸಮಾಜ ಸೇವಾಕರ್ತರೂ ಆದ ಶ್ರೀ ಅತ್ತಾವರ ಆನಂದ ಶೆಟ್ಟರು ತಾ. 13ರಂದು ತನ್ನ 49ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ನಿಧನರಾದುದು ವಿಷಾದಕರವಿದೆ.

ದಿವಂಗತರು ಮಂಗಳೂರು ನಗರಸಭಾ ಸದಸ್ಯರಾಗಿ ಹಲವು ಸಮಯಗಳಿಂದ ಸೇವೆ ಸಲ್ಲಿಸುತ್ತಿದ್ದು, ಈ ಸಲದ ಕೌನ್ಸಿಲ್‌ನಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಅವರು ನಗರದ ಸರ್ವತೋಮುಖ ಪ್ರಗತಿಗಾಗಿ ಸೇವೆ ಸಲ್ಲಿಸುತ್ತಿದ್ದರು. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಶ್ರೀ ಶೆಟ್ಟರು ಕಾಂಗ್ರೆಸ್ ಇಬ್ಭಾಗವಾದ ಬಳಿಕ ಸಂ. ಕಾಂಗ್ರೆಸಿನ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ದುಡಿಯುತ್ತಿದ್ದು ಮೈಸೂರು ಪ್ರದೇಶ ಸಂ. ಕಾಂ. ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟಿದ್ದರು.

ಅವರು ನಗರದ ಜನರ ಪ್ರೀತಿ ವಿಶ್ವಾಸ ಆದರಗಳಿಗೆ ಪಾತ್ರರಾಗಿದ್ದರು. ದಿವಂಗತರು ತಮ್ಮ ಹಿಂದೆ ಪತ್ನಿ, ಮೂವರು ಗಂಡು ಮತ್ತು ಒಬ್ಬರು ಹೆಣ್ಣು ಮಕ್ಕಳನ್ನು ಅಗಲಿರುವರು.

ಮಹಾಸಭೆ

ಉಡುಪಿ ಮೋಡರ್ನ್ ಹಾಯರ್ ಪ್ರೈಮರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ಶಾಲಾ ಮೆನೇಜರ್ ಶ್ರೀ. ಕೆ. ಜಗನ್ನಾಥ ನಾಯಕ್‌ರವರ ಅಧ್ಯಕ್ಷತೆಯಲ್ಲಿ ತಾ. 5ರಂದು ನೆರವೇರಿತು. ಶ್ರೀ ಯು. ಕೃಷ್ಣಪ್ಪನವರು ಸ್ವಾಗತಿಸಿದರು. ಶ್ರೀ ಕೆ. ನಾರಾಯಣ ಭಂಡಾರಿಯವರಿಂದ ಮಂಡಿಸಲ್ಪಟ್ಟ ವಾರ್ಷಿಕ ವರದಿ ಲೆಕ್ಕ ಪತ್ರಗಳು, ಸರ್ವಾನುಮತದಿಂದ ಮಂಜೂರಾದವು. ಶ್ರೀ ಯು. ರತ್ನಾಕರ ಅಡಿಗರು ಮಾತನಾಡಿ ಸದಸ್ಯರ ಸಹಕಾರ ಕೋರಿದರು.

ಹೊಸ ವರುಷದ ಪದಾಧಿಕಾರಿಗಳ ಆಯ್ಕೆಯಾದ ನಂತರ ಅಧ್ಯಕ್ಷರ ಭಾಷಣವಾಯಿತು.

ಉಡುಪಿ ರೋಟರಿ ಕ್ಲಬ್ಬಿಗೆ ಅಂತರ ರಾಷ್ಟ್ರೀಯ ಪ್ರಶಸ್ತಿ

ರೋಟರಿ ಇಂಟರ್ ನ್ಯಾಶನಲ್ ಸಂಸ್ಥೆಯ ವಿಶಿಷ್ಟ ಸಾಧನೆ ಪುರಸ್ಕಾರ ಯೋಜನೆಯನ್ವಯ ಪ್ರಶಸ್ತಿಗೆ ವಿಶ್ವದಾದ್ಯಂತ ಆರಿಸಲ್ಪಟ್ಟ 136 ಕ್ಲಬ್ಬುಗಳಲ್ಲಿ ಉಡುಪಿಯ ರೋಟರಿ ಕ್ಲಬ್ ಸಹ ಒಂದಾಗಿದೆ.

ಎಂಟು ವಿವಿಧ ಗ್ರಾಮಗಳಿಗೆ ಹೆರಿಗೆ ಸೇವಾ ಸೌಲಭ್ಯ ಒದಗಿಸಿದುದು, ಅಮೇರಿಕದ ರೋಟರಿ ಕ್ಲಬ್ಬಿನ ಸಹಕಾರದಿಂದ ಅಂಬ್ಯುಲೆನ್ಸ್ ಬಳಸಿ ವೈದ್ಯಕೀಯ ಸೇವೆ ಸಲ್ಲಿಸಿದುದು ಮೊದಲಾದ ಹಲವು ಜನೋಪಯೋಗಿ ಸೇವೆಗಳಿಗಾಗಿ ಈ ಪ್ರಶಸ್ತಿ ನೀಡಲಾಗಿದೆ.

ಲೋಕ ಸೇವಾ ವೃಂದದಲ್ಲಿ ಪೇಜಾವರ ಶ್ರೀಗಳು

ಪೇಜಾವರ ಮಠಾಧೀಶರು ತಾ. 9ರಂದು ಆಳಿಕೆಯ ಲೋಕ ಸೇವಾ ವೃಂದಕ್ಕೆ ಸಂದರ್ಶನ ನೀಡಿದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲು ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಸೇವಾವೃಂದದ ಅಧ್ಯಕ್ಷ ಶ್ರೀ ಎಂ ನಾರಾಯಣ ಭಟ್ಟರು ಸ್ವಾಮೀಜಿಯವರಿಗೆ ಮಾನಪತ್ರ ಅರ್ಪಿಸಿ ಶ್ರೀಯವರನ್ನು ಲೋಕಾ ಸೇವಾ ವೃಂದಕ್ಕೆ ಬರುವಂತೆ ಮಾಡುವ ತಮ್ಮ ಬಹು ದಿನಗಳ ಕನಸು ನನಸಾಯಿತೆಂದರು.

ಶ್ರೀಗಳವರು ತಮ್ಮ ಪ್ರವಚನದಲ್ಲಿ ಶಿಕ್ಷಣ ರಂಗದಲ್ಲಿನ ಹಲವು ಸಮಸ್ಯೆಗಳು ನೀಗಿ ನಮ್ಮ ದೇಶದ ಭವಿಷ್ಯ ಉಜ್ವಲವಾಗಬೇಕಾದರೆ ವಿದ್ಯಾರ್ಥಿಗಳಿಗೆ ಸದ್ವಿದ್ಯೆ ಲಭಿಸುವಂತಾಗ ಬೇಕು ಎಂದರು ಅವರು ಮುಂದುವರಿದು ಹಿಂದುಗಳು ಔದಾಸೀನ್ಯ ಭಾವನೆ ತೋರಿಸಿ ಮಿಶನರಿಗಳನ್ನು ನಿಂದಿಸುವುದನ್ನು ಬಿಟ್ಟು ಅವರ ತ್ಯಾಗದಿಂದ ಸ್ಫೂರ್ತಿಗೊಂಡು ನಾವು ಅವರಂತೆ ಸೇವೆಗೆ ಸಿದ್ಧರಾಗಬೇಕೆಂದು ಕರೆಯಿತ್ತರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ. ಮಂಜುನಾಥ ಶೆಣೈಯವರು ಮಾತಾಡಿ ಲೋಕ ಸೇವಾ ವೃಂದದ ಪದವೀಧರರು ರಾಷ್ಟ್ರ ಸೇವೆಗಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟು ದುಡಿಯುತ್ತಿರುವುದು ಹರ್ಷದಾಯಕ ಎಂದರು.

READ &
ADVERTISE IN
NAVAYUGA Weekly

ಸಮರ್ಪಣ

(ಎರಡನೇ ಪುಟದಿಂದ)

'ಸ್ವಲ್ಪ ಬಿಡಿಸಿ ಹೇಳಲು ಬಿಡಮ್ಮಾ. ಆ ಮೇಲೆ ಹಾರುತ್ತಿರುವ ಹಕ್ಕಿಗೆ ಗುರಿಯಿಟ್ಟು ಹೊಡೆಯುವ ಸ್ಪರ್ಧೆ ನಡೆಯಿತು. ಗೋವಿಂದಣ್ಣ ಹಕ್ಕಿಗೆಂದು ಬಿಟ್ಟ ಬಾಣ, ಅದಕ್ಕೆ ತಗಲದೆ ಎಲ್ಲೋ ಬಿದ್ದಿತು. ಜನ ಗೊಳ್ಳೆಂದು ನಕ್ಕರು. ನನಗೂ ಹೊಟ್ಟೆ ಹುಣ್ಣಾಗುವಷ್ಟು ನಗು ಬಂತು. ಅನಂತರ ಅವರೂ ಕಣಕ್ಕಿಳಿದರು. ಬತ್ತಳಿಕೆಯಿಂದೊಂದು ಹುರಿಗಣೆಯ ನ್ನೆಳೆದು ಬಿಲ್ಲಿಗೆ ಹೂಡಿ ಹಾರುವ ಹಕ್ಕಿಗೆ ಗುರಿಯಿಟ್ಟು ಹೊಡೆದರು. ಹಕ್ಕಿ ಕೆಳಗುರುಳಿತು. ಬಿಟ್ಟಿದ್ದ ಅಂಬು ಅದರ ಅಕ್ಷುವಿಗೆ ತಗುಲಿತ್ತು. ನೆರೆದಿದ್ದ ಜನ ಭಲೇ ಎಂದು ಅವರನ್ನು ಕೊಂಡಾಡಿದರು.'

'ಲೋಕಾ ಆಗಿನಿಂದಲೂ ಅವರು ಅವರು ಎಂದು ಹೇಳುತ್ತಿರು ವಿಯೇ ಹೊರತು ಆ ಹುಡುಗನ ಹೆಸರೇ ಹೇಳಿಲ್ಲವಲ್ಲೇ. ಯಾರೇ ಆ ಸಿಂಹದ ಮರಿ'

ನಿನಗೆ ತಿಳಿಯದೇನಮ್ಮಾ? ಅವರು—ನರಸಿಂಹ ನಾಯಕರ ಚಿರಂಜೀವರು'

'ಹೆಸರು ಹೇಳುವುದಕ್ಕೆ ನಾಚಿಕೆಯೇನೋ ಕಳ್ಳಿ' ಏನು ಆಗಲೇ ಅವನನ್ನು ನಿನ್ನವರನ್ನಾಗಿ ಮಾಡಿಕೊಂಡೆಯೇನು'

ಆಕೆ ನಾಚಿದಳು. ಅವಳ ಮುಖ ಕೆಂಪೇರಿತು.

'ಹೋಗಮ್ಮ, ನೀನೂ ಹಾಸ್ಯ ಮಾಡಲಾರಂಭಿಸಿದೆಯಾ? ನಿನಗೆ ಹಾಸ್ಯ ಮಾಡಲು ಬರುತ್ತದೆ ಎಂಬುದೇ ನನಗೆ ತಿಳಿದಿರಲಿಲ್ಲ.

"ಈಗಲ್ಲದೆ ಇನ್ನಾವಗಲೇ ಹಾಸ್ಯ ಮಾಡುವುದು? ಅದಿರಲಿ ಆಮೇಲೆ ಏನು ನಡೆಯಿತು?'

'ಆ ಮೇಲೆ ಕುದುರೆ ಸವಾರಿ, ಇದರಲ್ಲಿ ಅವರನ್ನು ಮೀರಿಸುವವರೇ ಇರುವಂತೆ ಕಾಣುವುದಿಲ್ಲ. ಕುದುರೆಯ ಮೇಲೆ ಕುಳಿತು ಕೊಳ್ಳುವ ರೀತಿ ಯೇನು? ಅನ್ಯರಿಗೆ ತಿಳಿಯದಷ್ಟು ಸೂಕ್ಷ್ಮ ರೀತಿಯಲ್ಲಿ, ಕುದುರೆಯ ಪಕ್ಕೆಗಳನ್ನೊತ್ತಿ ಓಡಿಸುವ ಕ್ರಮವೇನು? ಅವರು ಇಂದು ತೋರಿಸಿದ ಪ್ರದರ್ಶನದಿಂದ ಅವರಲ್ಲಿ ಆ ವಿದ್ಯೆಯನ್ನು ಕಲಿಯುವ ಆಸೆಯಾಗಿದೆ. ಆದರೆ ನೀನೇನು ಹೇಳುತ್ತೀಯೋ—'

'ವಿದ್ಯೆಯಲ್ಲದೆ ಅವರಲ್ಲಿ ಇನ್ನೇನನ್ನು ನೀನು ಕಲಿಯಲಿದೆಯೋ. ಅವರೇ ನಿನಗೆ ಕಲಿಸುತ್ತಾರೋ ಅಥವಾ ನೀನೇ ಅವರಿಗೆ ಕಲಿಸುತ್ತೀಯೋ? ಸುಮ್ಮನಿರು. ನೀನೀಗ ಕಲಿತಿರುವುದೇ ಸಾಕು'

'ಅದೂ ಒಂದು ವಿದ್ಯೆ. ಕಲಿತರೆ ಆಗುವ ಹಾನಿಯೇನಮ್ಮಾ?'

'ಯಾವ ಹಾನಿಯೇ? ಮಾನಹಾನಿ'

"ಪ್ರದರ್ಶನದಲ್ಲಿ ತನಗಾದ ಸೋಲಿನಿಂದ ಗೋವಿಂದಣ್ಣನ ಮುಖ ಬಾಡಿದ ಮೋರೆಯಾಗಿತ್ತು. ಹೊರ ಬರುತ್ತಾ ಗೋವಿಂದಣ್ಣ ನನ್ನನ್ನು ನೋಡಿದ. ನನ್ನನ್ನು ಕಂಡುದೇ ತಡ, ಅವನ ಕಣ್ಣುಗಳು ಕೆಂಪಾದುವು. ಆತ ನನ್ನನ್ನು ನುಂಗುವಂತೆ ನೋಡಿ, 'ನಿನಗಿಲ್ಲೇನು ಕೆಲಸ' ಎಂದು ಗದರಿಸಿದ"

'ಎಲ್ಲರಂತೆ ನಾನೂ ಪಂದ್ಯ ನೋಡಲು ಬಂದೆ'

'ಹುಡುಗರಾಟದಲ್ಲಿ ಹುಡುಗಿಯರಿಗೇನು ಕೆಲಸ. ಒಳಗೆ ಕುಳಿತು ಪಗಡೆಯಾಡುವುದನ್ನು ಬಿಟ್ಟು ಹೀಗೆ ಬೀದಿಗೆ ಬರುವುದೇ'

ಈ ಮಾತಿನಿಂದ ನನಗೆ ಕೋಪ ಬಂತು. ಗಂಡಾಗಿ ಹುಟ್ಟಿದ ನಿನ್ನ ಗಂಡಸುತನ ಇಂದು ನೋಡಿದೆ. ಬಳೆ ತೊಟ್ಟುಕೋ ಎಂದೆ.

ಆತ ಬಂದು ನನ್ನ ಕೆನ್ನೆ ಹಿಂಡಿದ.

ನಾನು ಅಯ್ಯೋ ಅಂದೆ.

ಆ ಅಳು ಅವರಿಗೆ ಕೇಳಿಸಿತು ಎಂತ ಕಾಣುತ್ತದೆ.

ಎಲ್ಲಿದ್ದರೋ ತಿಳಿಯದು. ಸಿಂಹ ಎರಗುವಂತೆ ಗೋಜ್ಜಗಣ್ಣನ ಮೇಲೆ ಎರಗಿದರು.

'ಹುಡುಗಿಯರನ್ನು ಪೀಡಿಸಲು ನಾಚಿಕೆಯಾಗುವುದಿಲ್ಲವೇ?' ಎಂದು ಅಣ್ಣನಿಂದ ನನ್ನನ್ನು ಬಿಡಿಸಿಕೊಂಡರು. ಮನೆಯವರೆಗೂ ಬಿಟ್ಟು ಬರಲಾ ಎಂದು ವಿಚಾರಿಸಿದರು.

'ಬಿಟ್ಟು ಬರುವುದಕ್ಕೆ ಅವಳೇನು ಮಾಡಿ ಕೊಂಡ ಹೆಂಡತಿಯೇ? ಅಣ್ಣ ಅವರನ್ನು ರೇಗಿಸಿದ. ಆಗ ಅವರೇನೋ ಅಂದು ಬಿಟ್ಟರು- ಅದು ಮರೆತು ಹೋಯಿತು. ಆದರೆ ತಮ್ಮ ಹೊಟ್ಟೆಯಲ್ಲಿದ್ದ ಸಿಟ್ಟನ್ನೆಲ್ಲ ತಮ್ಮ ರಟ್ಟೆಗಳಿಗೆ ತಂದುಕೊಂಡರು. ಅಣ್ಣನನ್ನು ಅವುಕಿ ಹಿಡಿದು ಹೀಗೂ ನುಡಿ ಯುವುದೇ ಎಂದು ಆರ್ಭಟಿಸಿದರು.

ಅಣ್ಣನ ಕೈಯಲ್ಲೊಂದು ಚೂರಿ ಇತ್ತು. ಆತ ಅದರಿಂದ ಅವರ ತೋಳನ್ನು ತಿವಿದ. ರಕ್ತ ಚಿಮ್ಮಿತು. ಅವರ ಹಿಡಿತದಿಂದ ಅಣ್ಣ ಕಳ್ಳನಂತೆ ತಪ್ಪಿಸಿಕೊಂಡು ಓಡಿ ಹೋದ. ಅವರ ತೋಳಿನಿಂದ ಬಸಿಯುತಿದ್ದ ನೆತ್ತ ರನ್ನು ಸೆರಗಿನಿಂದ ಒರಸಿದೆ. ಕಿರಿಗಿಯನ್ನು ಕಚ್ಚಿ ಹರಿದು, ಗಾಯಕ್ಕೆ ಸುತ್ತಿದೆ. ಅವರನ್ನು ನೋಡಿ ನನಗೆ ಅಯ್ಯೋ ಅನಿಸಿತು. ಯಾರೋ ಹೇಳಿ ದರು. ಅವರಿಗೆ ತಾಯಿ ಇಲ್ಲವಂತೆ'

'ಎಲ್ಲರಂತೆ ಅವರಿಗೂ ತಾಯಿ ಇದ್ದಳು. ಆದರೆ ಆ ತಾಯಿ ಜೀವಂತವಿಲ್ಲ'

'ಅವರಿಗೇನಾಯಿತು'

'ಅವರು ಹೆತ್ತು ಸತ್ತರು'

ಈ ಮಾತು ಕೇಳಿ ಆ ಪುಟ್ಟ ಹೃದಯದಲ್ಲಿ ಕರುಣೆಯುಕ್ಕಿತು—ಕಣ್ಣುಗಳಿಂದ ನೀರು ತೊಟ್ಟಿಕ್ಕಿತು—ಅದನ್ನು ಕಂಡು 'ಅಳುವುದಕ್ಕೆ ನಿನ ಗೇನಾಯಿತೇ ಲೋಕಾ'

'ನನ್ನಂತೆ ಅವರಿಗೂ ತಾಯಿ ಇದ್ದಿದ್ದರೆ—? ಅವರಿಗಿಲ್ಲವಲ್ಲ ಎಂದು ತಿಳಿದು ದುಃಖವಾಯಿತು'

ಮಗಳ ಮುಗ್ಧತೆಯನ್ನು ಕಂಡು ತಾಯಿ ಒಳಗೊಳಗೇ ಹಿಗ್ಗಿದಳು.

'ನೀನು ಅವರನ್ನು ನೋಡಿದ್ದೀಯಾ' ಅನುಮಾನಿಸುತ್ತಲೇ ಮಗಳು ಕೇಳಿದಳು'

'ಬಾಲ್ಯದಲ್ಲಿ ನೋಡಿದ ನೆನಪು'

'ಆಗ ಹೇಗಿದ್ದರು'

ಬಹಳ ಜಾಣ್ಮೆಯಿಂದ—ತಾಯಿಗೂ ತೋರಗೊಡದೆ—ಮಗಳು ವಿಷಯ ಸಂಗ್ರಹ ಮಾಡುತ್ತಿದ್ದಳು—

'ಮುದ್ದು ಮುದ್ದಾಗಿದ್ದರು. ಬೆಣ್ಣೆ ಕಳ್ಳ ಕೃಷ್ಣನಂತೆ'

ತಾಯಿಯ ವರ್ಣನೆಯಿಂದ ಉಬ್ಬಿ ಹೋದ ಮಗಳು 'ಈಗಲೂ ಹಾಗೆಯೇ ಇದ್ದಾರಮ್ಮಾ'

'ಅಣ್ಣನೊಡನೆ ರೇಗಿದರು ಎಂದೆಯಲ್ಲ. ರೇಗಿ ಏನೆಂದರು? ಅದನ್ನೇ ನೀನು ಹೇಳಿಲ್ಲ'

— —

'ಆಡಿದ ಮಾತನ್ನು ಹೇಳುವುದಕ್ಕೂ ಸಂಕೋಚವೇ ಲೋಕಾ'

ಆಕೆ ಮೌನ.

ಪುನಃ ಅದೇ ಪ್ರಶ್ನೆ.

ಅವಳಿಂದ ಉತ್ತರ ಬರಲಿಲ್ಲ.

ತಾಯಿ ಮತ್ತೊಮ್ಮೆ ಪ್ರಯತ್ನಿಸಿದಳು. ಆದರೆ ಕೃತಕೃತ್ಯಳಾಗಲಿಲ್ಲ.

'ನನಗೂ ಹೇಳಬಾರದ ಮಾತೇನೋ'

ತಾಯಿ ಮಗಳನ್ನು ಛೇಡಿಸಿದಳು.

'ಹೇಳಲು ನಾಚಿಕೆಯಾಗುತ್ತದಮ್ಮಾ ಹೇಳಿದರೆ ನೀನೇನು ತಿಳಿಯು ತ್ತೀಯೋ'?

'ಏನೂ ತಿಳಿದು ಕೊಳ್ಳುವುದಿಲ್ಲ'

'ಮತ್ತೆ—'

'ಏನಂದರು'

'ಅವಳೊಪ್ಪಿದರೆ ಅವಳನ್ನೇ ಮಾಡಿಕೊಳ್ಳುತ್ತೇನೆ'

ಹೀಗೆ ನುಡಿದು ಲೋಕಾ ಅಲ್ಲಿಂದ ಓಡಿದಳು.

೮

ರಾಷ್ಟ್ರಕೂಟ ಇಂದ್ರ ಇದ್ದಕ್ಕಿದ್ದಂತೆ ಹಾಸುಗೆ ಹಿಡಿದು ಮಲಗಿದ. ಪ್ರಭುಗಳ ದೇಹಾಲಸ್ಯ ಮೊದಲಾದಂದಿನಿಂದ ನರಸಿಂಹನ ಜವಾಬ್ದಾರಿ ಹೆಚ್ಚಿತು. ಎಲ್ಲ ಮಹತ್ವದ ತೀರ್ಮಾನಗಳನ್ನೂ ಆತನೇ ತೆಗೆದುಕೊಳ್ಳ ಬೇಕಾಗುತಿತ್ತು. ಪ್ರಭುಗಳ ಹೆಸರಿನಲ್ಲಿ ಆತನೇ ಎಲ್ಲವನ್ನು ನಡೆಸುತಿದ್ದ. ಅವನೇ ರಾಷ್ಟ್ರ ರಥದ ಚಾಲಕ.

ಇಂದ್ರನ ದೇಹಾಲಸ್ಯವನ್ನೇ ಕಾಯುತಿದ್ದ ಚಾಳುಕ್ಯರು ಒಳಗೊಳಗೇ ಧಂಗೆ ಏಳಲು ಸಜ್ಜಾಗುತಿದ್ದುದನ್ನು ಆತ ತಿಳಿದಿದ್ದ ತಮ್ಮ ಕುಲದವನಾದ ನರಸಿಂಹನಿಗೆ ಹತ್ತು—ಹಲವು ವಿಧದ ಪ್ರಲೋಭನೆಯನ್ನೊಡ್ಡಿದರು. ಈ ಕುರಿತು ಸಂಧಾನ, ಅನುಸಂಧಾನಗಳೂ ನಡೆದುವು

ನರಸಿಂಹ ಅವುಗಳಿಗೆ ಸೊಪ್ಪು ಹಾಕಲಿಲ್ಲ. ತನ್ನ ಅಚಲವಾದ ನಿಷ್ಠೆ ಯನ್ನು ವ್ಯಕ್ತ ಪಡಿಸಿ. ಪಂಚೀಯರ ಬೇಳೆ ಕಾಳು ಬೇಯದಂತೆ ಮಾಡಿದ ರಾಷ್ಟ್ರಕೂಟ ಸಾಮ್ರಾಜ್ಯ ಬಲಿಷ್ಠವಾದ ಅವನ ಬಾಹುಗಳ ರಕ್ಷಣೆಯ ಲ್ಲಿತ್ತು. ಈ ಬಾಹುಗಳನ್ನೇ ತಮಗೆ ಅನುಕೂಲವಾಗುವಂತೆ ಮಾಡಿದರೆ ಕೆಲಸ ಸುಲಭವಾಗ ಬಹುದೆಂಬುದು ವೈರಿಗಳ ಹಂಚಿಕೆ. ಇಂದ್ರನಿಗೂ —ನರಸಿಂಹನಿಗೂ ಇದ್ದ ರಕ್ತ ಸಂಬಂಧ ಜಾನಕಿಯ ಸಾವಿನೊಡನೆ ಕಡಿ ಯಿತು. ಅವಳು ಬದುಕಿದ್ದಷ್ಟು ದಿನ ಇಂದ್ರನಿಂದ ಅವನನ್ನು ಬೇರ್ಪಡಿಸು ವುದು ಯಾರಿಗೂ ಸಾಧ್ಯ ಇರಲಿಲ್ಲ. ಆ ತಂತುವೇ ಕಳಚಿಕೊಂಡ ಸಮ ಯದಲ್ಲಿ ಅವನನ್ನು ತಮ್ಮ ಬಳಗಕ್ಕೆ ಎಳೆದುಕೊಳ್ಳಬಹುದು ಎಂದು ತೀರ್ಮಾನಿಸಿದರು ರಾಷ್ಟ್ರಕೂಟ ರಾಜ್ಯಲಕ್ಷ್ಮಿಯನ್ನೇ ಇದಕ್ಕೆ ಪಣವಾಗಿ ಡಲು ಅವರೇನೋ ಸಿದ್ಧರಿದ್ದರು.

(ಮುಂದುವರಿಯುವುದು)

NAVAYUGA 16-3-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪಿಂಡಿ - ದೆಹಲಿ - ಢಾಕ್ಕಾ ಮತ್ತು ಮೋಸ್ಕೋ

(ಒಂದನೆಯ ಪುಟದಿಂದ)

ರಣಗಳಿಂದ ಮುಂದೂಡುವುದು ಯಾಹ್ಯಾ ಖಾನರ ಗುಣವಾಗಿತ್ತು. ಭುಟ್ಟೋ ಅವರನ್ನು ಅನುಕರಿಸಲಾರರೆಂದು ನಂಬೋಣ.

ಇದೇ ವೇಳೆ ಭುಟ್ಟೋರಿಗೆ ಪಾಕಿಸ್ತಾನವನ್ನು ಉಳಿಸುವ ಹೆಬ್ಬಯಕೆ ಮೂಡಿದೆ. ತಾನು ನಂಬಿದ ಅಮೆರಿಕೆ—ಚೀನಾಗಳೂ ಬಾಂಗ್ಲಾ ದೇಶಕ್ಕೆ ಮನ್ನಣೆ ಕೊಡಲು ಮುಂದಾದಾಗ ಅವರೇನು ಮಾಡಬೇಕು. ಹೇಗಾದರೂ ಬಾಂಗ್ಲಾದೊಡನೆ ಮಾತುಕತೆಯೊಂದೀಗನವರಿಗೆ ಬೇಕು. ಅದಕ್ಕಾಗಿ ತನ್ನ ಪ್ರಾಣ ಮಿತ್ರ ಇರಾಣದ ಮಧ್ಯಸ್ಥಿಕೆಯನ್ನವರು ಬಯಸಿದ್ದಾರೆ. ಆದರೆ 'ಬಾಂಗ್ಲಾ ದೇಶಕ್ಕೆ ಮನ್ನಣೆ ನೀಡದ ಹೊರತು ನಿಮ್ಮೊಡನೆ ಮಾತಿಲ್ಲ'ವೆಂಬ ಮುಜಿಬರ ಶರ್ತವು ಸಡಿಲವಾಗುವ ಸಂಭವ ಕಡಿಮೆ. ಅದಕ್ಕೆಂದೇ ಭಾರತ—ಬಾಂಗ್ಲಾ ದೇಶಗಳ ಮಿತ್ರ ರಷ್ಯದ ಸಹಾಯವನ್ನು ಪಾಕಿಸ್ತಾನ ಬಯಸಿದಂತಿದೆ. ಇಂದಿರಾ ಗಾಂಧಿ ಮತ್ತು ಶೇಕ ಮುಜಿಬುರರೊಡನೆ ತನ್ನ ಭೆಟ್ಟಿಯೊಂದನ್ನು ಏರ್ಪಡಿಸಲು ಅವರು ಮೋಸ್ಕೋವನ್ನು ವಿನಂತಿಸಿದ್ದಾರೆ.

ಶ್ರೀಮತಿ ಗಾಂಧಿ ನೀಡಿದ ಕರೆಯನ್ನು ತಿರಸ್ಕರಿಸುತ್ತಲೇ ಬಂದ ಭುಟ್ಟೋರಿಗೆ ಈಗ ತುಸು ಜ್ಞಾನೋದಯವಾದರೂ ಆಗಿರಬಹುದು. ಆದರೆ ತಾಷ್ಕೆಂಟ್ ಒಡಂಬಡಿಕೆಗಳನ್ನು ಮೂಲೆಗೆ ತಳ್ಳುವಲ್ಲಿ ಸೂತ್ರಧಾರತೆನ ನಿರ್ವಹಿಸಿದ ಭುಟ್ಟೋ ವಿನಂತಿಯನ್ನು ಮೋಸ್ಕೋ ಮನ್ನಿಸಿತೆ? ನವದೆಹಲಿಯೇ ನೀಡಿದ ಕರೆಗೆ ರಾವಲ್ಪಿಂಡಿಗ ಮೋಸ್ಕೋ ಮೂಲಕ ಉತ್ತರ ನೀಡುವ ಅಗತ್ಯವಾದರೂ ಏನು? ಪಿಂಡಿ—ದೆಹಲಿಗಳ ನಡುವೆ ಸಂಬಂಧ ಕಡಿದು ಹೋಗಿದೆಯೆ?

ರಕ್ತಿಯ ಸಮತೋಲನದ ಶವಕಲು ನಾಣ್ಯವನ್ನು ಚಲಾವಣೆಗೆ ತರುವ ಪ್ರಯತ್ನದಲ್ಲಿ ರಾಷ್ಟ್ರಪತಿ ನಿಕ್ಸನ್ ಇನ್ನೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಪೀಕಿಂಗಿಗೆ ಭೆಟ್ಟಿ ನೀಡಿ ಮರಳಿದ ಮರುಗಳಿಗೆಯಲ್ಲೇ ತನ್ನ ನೌಕಾದಳದ ಕಮಾಂಡರೊಬ್ಬನನ್ನು ಅವರು ಕೊಲಂಬೋವಿಗೆ ಕಳಿಸಿದ್ದಾರೆ. ಈ ಕಮಾಂಡರನ ಹೆಸರು ಅಡ್ಮಿರಲ್ ಜಾನ್ ಮೆಕೈನ್ ಇವನ ಕಾರ್ಯವ್ಯಾಪ್ತಿ ಶಾಂತ ಸಾಗರ. ಉದ್ದೇಶ ನಾಲ್ಕು ದಿನಗಳ ಭೆಟ್ಟಿ. ಮಿಲಿಟರಿ ಅಧಿಕಾರಿಗಳ ಭೆಟ್ಟಿಯೆಂದರೆ ಅದರ ಹಿಂದಿನ ಉದ್ದೇಶ ತಾನಾಗಿಯೇ ಮುಖರಿತವಾಗುತ್ತದೆ. ಅದರಲ್ಲೂ ಅಮೆರಿಕೆಯ ನೌಕಾದಳದ ಕಮಾಂಡರನ ಭೆಟ್ಟಿಯ ಉದ್ದೇಶ್ಯ ಎಲ್ಲರೂ ಊಹಿಸಿ ಕೊಳ್ಳಬಹುದಾದ ರಹಸ್ಯ.

ಶಾಂತ ಸಾಗರದಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸಲು ಅನುಕೂಲವಾಗುವಂತೆ ರಶ್ಯ ಚೀನಾ ಮತ್ತು ಅಮೆರಿಕೆಗಳು ಬಹುಕಾಲದಿಂದ ಪ್ರಯತ್ನ ನಡೆಸುತ್ತಲೇ ಬಂದಿವೆ. ಸಿಂಹಳದ ಪೂರ್ವ ತೀರದಲ್ಲಿನ ಟ್ರಿಂಕಾಮಲಿಯಲ್ಲಿ ನೌಕಾ ನೆಲೆ ಸ್ಥಾಪಿಸುವುದು ಈ ಬೃಹತ್ ದೇಶಗಳ ಆಶಯ. ದ್ವಿತೀಯ ಲೋಕ ಸಮರಾವಧಿಯಲ್ಲಿ ಈ ಟ್ರಿಂಕಾಮಲಿಯು ಮಿತ್ರ ಪಕ್ಷಗಳ ಪ್ರಬಲ ನೌಕಾನೆಲೆಯಾಗಿತ್ತು. ಆದರೆ, ಆ ವೇಳೆಗೆ ಅದು ಬ್ರಿಟಿಷ್ ಪ್ರಭುತ್ವದಲ್ಲಿತ್ತು. ಇಂದು ಪರಿಸ್ಥಿತಿ ಬದಲಾಗಿದೆ. ಸಿಂಹಳ ಸ್ವತಂತ್ರ ದೇಶವಾಗಿದೆ; ತಟಸ್ಥ ನೀತಿಯನ್ನು ಅನುಸರಿಸಿದೆ.

ಶಾಂತ ಸಾಗರದಲ್ಲಿ ತಂತಮ್ಮ ಆಧಿಪತ್ಯವನ್ನು ಸ್ಥಾಪಿಸುವ ಹಿರಿಯ ರಾಷ್ಟ್ರಗಳ ಆಶಯ ಹಳೆಯದ್ದೇ. ಆದರೆ, ಈ ನೌಕಾಪಡೆಯ ಸ್ಪರ್ಧೆಯಿಂದ ಏಶ್ಯಾದ ದಕ್ಷಿಣ ಭಾಗಕ್ಕೆ ಅಪಾಯವೆಂಬುದೂ ಹಳೆಯ ಅಭಿಪ್ರಾಯವೇ. ಸಿಂಹಳದ ಪ್ರಧಾನಿ ಶ್ರೀಮತಿ ಸಿರಿಮಾವೋ ಭಂಡಾರ ನಾಯಿಕೆಯವರು ಈ ಪೈಪೋಟಿಗೆ ಅವಕಾಶ ನೀಡಲು ಒಪ್ಪುವುದಿಲ್ಲ. ಶಾಂತ ಸಾಗರದ ವಲಯವನ್ನು ಶಾಂತವಲಯವನ್ನಾಗಿಟ್ಟುಕೊಳ್ಳಲು ಅವರು ಪ್ರಯತ್ನಿಸುತ್ತ ಬಂದಿದ್ದಾರೆ. ಹಾಗಿರುವಾಗ ಅಡ್ಮಿರಲ್ ಜಾನ್ ಮೆಕೈನ್ ಅವರ ಕೊಲಂಬೋ ಭೆಟ್ಟಿ ವಿರೋಧಾಭಾಸವಾಗಿ ಕಾಣುತ್ತದೆ.

ಶ್ರೀ ಮೆಕೈನ್ ಭೆಟ್ಟಿಯ ಸಂಗತಿಯ ಬಗ್ಗೆ ವಾಶಿಂಗ್ಟನ್-ಕೊಲಂಬೋ ಎರಡೂ ಗಂಭೀರ ಮೌನ ತಾಳಿರುವುದು ವಿಚಿತ್ರ. ವಿಮಾನ ನಿಲ್ದಾಣದಲ್ಲಿ ಬಂದಿಳಿದ ಕಮಾಂಡರ್ ಆರಕ್ಷಣದಲ್ಲೇ ನಿಲ್ದಾಣ ಬಿಟ್ಟನು. ಪತ್ರಿಕಾ ವರದಿಗಾರರಿಗೂ ಅವನೊಡನೆ ಮಾತಾಡಲಾಗಲಿಲ್ಲ; ಕಮಾಂಡರನ ಕಾರ್ಯಕ್ರಮವೇನೆಂಬುದನ್ನೂ ಬಹಿರಂಗಪಡಿಸಲಿಲ್ಲ. ಆದರೂ ಪ್ರಧಾನಿ ಭಂಡಾರ ನಾಯಿಕೆಯವರನ್ನೂ ಸಿಂಹಳದ ಸೇನಾ ದಂಡನಾಯಕರನ್ನೂ ಅವನು ಭೆಟ್ಟಿಯಾಗುತ್ತಾನೆಂದು ಗೊತ್ತಾಗಿದೆ.

ಯಾವನೇ ವಿದೇಶಿ ಪ್ರತಿಷ್ಠಿತನ ಭೆಟ್ಟಿ ಇಷ್ಟೊಂದು ರಹಸ್ಯಮಯವಾಗಿರುವುದು ಅತ್ಯಂತ ವಿಸ್ಮಯಕಾರಕವೆನಿಸುತ್ತದೆ; ಜತೆಗೆ ಕುತೂಹಲವನ್ನೂ ನಿರ್ಮಿಸುತ್ತದೆ. ಒಂದು ವೇಳೆ ಶ್ರೀಮತಿ ಭಂಡಾರ ನಾಯಿಕೆ ಸರಕಾರವು ತನ್ನ ನೀತಿಯಿಂದ ಚಲಿಸಿತೆಂದರೆ, ಅದರ ತಾಟಸ್ಥ್ಯ ನಾಮ ಮಾತ್ರಕ್ಕೇ ನಿಲ್ಲುವುದು; ಏಶ್ಯದ ಬಾಗಿಲಲ್ಲಿ ಆಪತ್ತಿಗೆ ಆಶ್ರಯ ಕೊಟ್ಟಂತಾಗುವುದು. ಇದು ಸಿಂಹಳಕ್ಕೂ ಅದರ ನೆರೆ ಹೊರೆಗೂ ಶ್ರೇಯಸ್ಸು ತಂದು ಕೊಡದು. ಗಂಡಸರ ಬುದ್ಧಿಗಿಂತ ಹೆಂಗಸರ ಬುದ್ಧಿ ಕೆಲವೊಮ್ಮೆ ಬಾರೀ ದೂರವೋಡುತ್ತದೆ; ಅದು ನಿಶಿತವಾಗುತ್ತದೆ.

ಕಾಸರಗೋಡಿನಲ್ಲಿ ವಿದಾಯ ಸಮಾರಂಭ

ಕಳೆದ ತಾ 3ರಂದು, ಬೆಂಗಳೂರಿನ ಆಡಳಿತ ಕಚೇರಿಗೆ ಸುಪರಿಂಟೆಂಡೆಂಟ್ ಆಗಿ ಹೋಗುತ್ತಿರುವ ಕಾಸರಗೋಡು ಶಾಖೆಯ ವಿಜಯಾ ಬ್ಯಾಂಕ್ ಮೆನೇಜರ್ ಶ್ರೀ ಎಂ. ಎಸ್. ಪಡಕೆ ಅವರಿಗೆ ಬ್ಯಾಂಕ್ ನೌಕರರು ವಿದಾಯ ಕೂಟವೊಂದನ್ನು ಏರ್ಪಡಿಸಿದ್ದರು. ಇದು ಕಲ್ಲಡ್ಕದಿಂದ ಇಲ್ಲಿಗೆ ವರ್ಗವಾಗಿ ಬಂದಿರುವ ನೂತನ ಮೆನೆಜರ್ ಶ್ರೀ ಬಿ. ವಿ. ಪ್ರಭಾಕರ ರೈ ಅವರಿಗೆ ಸ್ವಾಗತ ಸತ್ಕಾರವೂ ಆಗಿತ್ತು. ಗ್ರೂಪ್ ಮೆನೆಜರ್ ಶ್ರೀ. ಕೆ. ಎ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಗಳಾದ ಎಂ ಭಾಸ್ಕರ ಭಂಡಾರಿ, ಜಗನ್ನಾಥ ಆಳ್ವ, ತ್ರಿವಿಕ್ರಮ ರಾವ್ ಮೊದಲಾದವರು ಶ್ರೀ ಪಡಕೆ ಅವರ ಗುಣಗಾನ ಮಾಡಿದರು ಶ್ರೀ ಪ್ರಭಾಕರ ರೈಯವರು ಮೊತನಾಡಿ ನೌಕರವೃಂದದ ಸಹಕಾರ ಕೋರಿದರು. ಕೊನೆಯಲ್ಲಿ ಶ್ರೀ ಗೋಪಾಲಕೃಷ್ಣನ್ ಧನ್ಯವಾದವಿತ್ತರು

ನ್ಯಾಷನಲ್ ಹಾ. ಸೆ. ಶಾಲೆಯ ರಜತೋತ್ಸವ

ಬಾರಕೂರಿನ ನ್ಯಾಷನಲ್ ಹಾಯರ್ ಸೆಕಂಡರಿ ಶಾಲೆಯ ರಜತೋತ್ಸವವು ಫೆ. 18ರಂದು ಪದ್ಮಶ್ರೀ ಡಾ| ಟಿ. ಎಂ ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಸ್ಥಳೀಯ ಪಂಚಾಯತಿನ ಹಾಗೂ ವಿದ್ಯಾವರ್ಧಿನಿ ಸಂಘದ ಅಧ್ಯಕ್ಷ ಶ್ರೀ ಕೆ ಯಜ್ಞನಾರಾಯಣ ರಾಯರು ಸ್ವಾಗತಿಸಿದರು ಶ್ರೀ ಶ್ರೀಪತಿ ನೆಂ.ಅಡಿಗರಿಂದ ವರದಿವಾಚನವಾದ ಬಳಿಕ ಶ್ರೀ ಬಿ. ಎಸ್. ಪೈಯವರು ಸಂದೇಶಗಳನ್ನೋದಿದರು. ಕೋಟೇಶ್ವರದ ಬೋ. ಹಾ. ಸೆ. ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಕೆ. ರಾಜೀವ ಶೆಟ್ಟರು ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಅನಂತರ ಮಣಿಪಾಲ ಬಿ. ಎಡ್. ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಕೆ. ಹಂದೆಯವರು ಪಿ. ಎಸ್. ಭೋಜರಾವ್, ಎ. ರಾಮಣ್ಣ ಶೆಟ್ಟಿ ಮತ್ತು ದಿ| ಜೆ. ಪಿ. ಸಿಕ್ವೇರಾರ ಭಾವ ಚಿತ್ರಗಳನ್ನು ಅನಾವರಣ ಗೊಳಿಸಿದರು

ಡಾ| ಟಿ. ಎಂ. ಎ. ಪೈಯವರು ಮಕ್ಕಳೆ ನಿಜವಾದ ಆಸ್ತಿ ಎಂದೂ ಅವರನ್ನು ಚೆನ್ನಾಗಿ ಬೆಳೆಸಿಕೊಳ್ಳಬೇಕೆಂದೂ ಹೇಳಿದರು ಶ್ರೀ ಬಿ. ಅನಂತ ನಾಯಕರು ಧನ್ಯವಾದವಿತ್ತರು.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. C. 879/71. O. S. 437/70.

ಶಂಕರನಾರಾಯಣ ಜ್ಯೋಸ — ಅರ್ಜಿದಾರ.

ಮತ್ತು

ಸುಬ್ರಾಯ ಆಚಾರಿ ಸಹಾ — ಎದ್ರಿರು.

2ನೇ ಎದ್ರಿ ಲಕ್ಷ್ಮಣ ಆಚಾರಿ, ಸುಬ್ರಾಯ ಆಚಾರಿ ಮಗ, ಸುಳ್ಯ ತಾಲ್ಲೂಕು ನೆಲ್ಲೂರು ಕೆಮ್ರಾಜೆ ಗ್ರಾಮದಲ್ಲಿರುವವರು. ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ,

ಮೇಲಿನ ಅಮಲ್ದಾರಿಯ ಡಿಕ್ರಿ ಹೋಲ್ಡರ್ ಅರ್ಜಿದಾರರು ನಿಮ್ಮ ವಶ್ಯದ ಕೆಲವು ಸ್ಥಿರಾಸ್ತಿಗಳ ಸಿಲಂ ಬಗ್ಗೆ ಅರ್ಜಿ ಕೊಟ್ಟಿರುವುದರಿಂದ ಸ್ಥಿರಾಸ್ತಿ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ತಾ 25-3-72ಕ್ಕೆ ಇಟ್ಟಿರುವುದರಿಂದ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ನಿಮ್ಮ ಉದಾಹರಣೆ ದಾಖಲ್ಲು ಮಾಡದಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

ಪುಂಡರೀಕ ಯಂ. ಕೆ.

ಅರ್ಜಿದಾರನ ಕಡೆ ಎಡ್ವಕೇಟ್.

ಪುತ್ತೂರು, 6—3—72

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

O. S. 526/71.

ಬೊಮ್ಮಣ್ಣ ಗೌಡ ಸಹಾ — ವಾದಿರು.

Vs.

ಅಬ್ದುಲ್ ರಹಿಮಾನ್ ಸಹಾ — ಎದ್ರಿರು.

2 D. ಅಬ್ದುಲ್ ರಹಿಮಾನ್, ಅಬ್ದುಲ್ ಮುಕ್ರಿ ಮಗ, ಮುಪ್ಪೆರಿಯ ಗ್ರಾಮ, ಸುಳ್ಯ ತಾಲೂಕು, ಬಾಳಿಲ ಪೋಸ್ಟು—ಇವರಿಗೆ

ಮೇಲ್ಕಂಡ ದಾವೆಯ ವಾದಿಯರು ನಿಮ್ಮ ಮೇಲೆ ಮಾಡಿದ ಇಂಜಂಕ್ಷನ್ ದಾವೆಯು ನಿಮ್ಮ ಹಾಜರಿ ಬಗ್ಗೆ ತಾರೀಕು 27-3-1972ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಬೆಳಗ್ಗೆ ಗಂಟೆ 11ಕ್ಕೆ ನೀವು ಸ್ವತಹ ಯ ವಕೀಲರ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾಗುವುದು

(ಕೋರ್ಟು ಹುಕುಂ ಪ್ರಕಾರ)

Sd/ K. Rama Bhat

P. I. Sharma

Advocates for Plaintiffs

ಪುತ್ತೂರು, 4-3-1972.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit **ಫೋನ್: 77**

HOTEL SHIVAPRASAD

High Class Boarding, Lodging & Restaurant

COONDAPUR, S. K.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೩೧
ಸಂಚಿಕೆ ೨೯

NAVAYUGA

23-3-1972

ಜನತೆಗೆ

ಶ್ರೀಮತಿ ಗಾಂಧಿಯಲ್ಲಿ ಅಚಲ ವಿಶ್ವಾಸ

ಆಳುವ ಕಾಂಗ್ರೆಸ್ಸು ರಾಜ್ಯದಲ್ಲಿ ಸರ್ವೇಸಾಮಾನ್ಯ ನಾಲ್ಕರಲ್ಲಿ ಮೂರಂಶದಷ್ಟು ಬಹುಮತ ಪಡೆದು ಅಧಿಕಾರಕ್ಕೆ ಬಂತು. ಜನತೆ ಅದರ ಕೈಗಳಿಗೆ ತಮ್ಮ ಹಿತರಕ್ಷಣೆಯ ಹೊಣೆಗಾರಿಕೆಯಿತ್ತಿತು.

ಶ್ರೀ ದೇವರಾಜ ಅರಸರೂ ಅವರ ಪಕ್ಷದ ಇನ್ನಿತರ ಮುಖಂಡರೂ ೧೯೭೨ರಲ್ಲಿ ೧೫೦ ಸ್ಥಾನಗಳನ್ನಾದರೂ ಪಡೆಯುವ ಬಗ್ಗೆ ಮಾತಾಡಿಕೊಂಡಿದ್ದರು. ಮುಂದೆ ಈ ಸಂಖ್ಯೆ ೧೦೦ರ ಸುಮಾರಿಗೆ ಇಳಿಯಿತು. ಈಗ ಅವರೂ ಅವರ ಮಿತ್ರ ಸಿಪಿಐಯೂ ಕೂಡಿ ಪಡೆದದ್ದು ೧೬. ಇವುಗಳಲ್ಲಿ ಮೂರು ಸಿಪಿಐಯದ್ದು.

ತಮ್ಮ ಪಕ್ಷದ ಮೇಲೆ ಜನತೆಗೆ ವಿಶ್ವಾಸವಿದೆ; ಅದು ತಮಗೇ ಸರಕಾರ ರಚಿಸಲು ಆದೇಶ ನೀಡುತ್ತದೆ—ಎಂದು ಬಲವಾಗಿ ನಂಬಿಕೊಂಡಿದ್ದ ಸಂಸ್ಥಾ ಕಾಂಗ್ರೆಸ್ಸಿಗೆ ಬಿದ್ದ ಪೆಟ್ಟು ಗಣನೀಯವಾದದ್ದು.

ನೂರು ಚಿಲ್ಲರೆ ಸ್ಥಾನಗಳನ್ನಾದರೂ ಪಡೆಯುತ್ತೇವೆಯೆಂದು ನಂಬಿದ್ದ ಅದರ ನಾಯಕರಿಗೆ ಸಿಕ್ಕಿದ್ದು ೨೪ ಮಾತ್ರ. ಮುಖ್ಯವಾಗಿ ಅದರ ಅಧ್ಯಕ್ಷ, ದಕ್ಷ ಮುಖ್ಯ ಮಂತ್ರಿಯಾಗಿದ್ದ, ಶ್ರೀ ವೀರೇಂದ್ರ ಪಾಟೀಲರ ಸ್ವಕ್ಷೇತ್ರ ಚಿಂಚೋಳಿಯಲ್ಲಿ, ಉಪಾಧ್ಯಕ್ಷ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಶಿರಸಿಯಲ್ಲಿಯೂ ಅದು ಸೋಲುಂಡುದು ಕಡಿಮೆ ಮಹತ್ವದ್ದಲ್ಲ.

ತನ್ನ ವಿರೋಧಿ ಪಕ್ಷದ ಘಟಾನುಘಟಿಗಳೆಲ್ಲರೂ ಚುನಾವಣೆಯಲ್ಲಿ ಸೋತದ್ದರಿಂದ ಶ್ರೀ ಅರಸರಿಗೂ ಅವರ ಪಕ್ಷೀಯರಿಗೂ ತುಂಬಿದ ಉತ್ಸಾಹ. ಈ ವಿಜಯೋತ್ಸವ ಅಪೂರ್ವ—ಅತ್ಯಪೂರ್ವ.

ಆಳುವ ಕಾಂಗ್ರೆಸ್ ಗೆಲ್ಲುವಂತಾಗಲು ಹಲವು ಕಾರಣಗಳು ಇವೆ. ಕಳೆದ ವರ್ಷ ಬೀಸಿದ್ದ ಇಂದಿರಾಗಾಳಿಯ ತೀವ್ರತೆ ಕಡಿಮೆಯಾದರೂ ಈ ಬಾರಿಯೂ ಅದಕ್ಕೆ ಮರು ಚಾಲನೆ ನೀಡಲು ಆಕೆ ಹಲವಾರು ಕ್ಷೇತ್ರಗಳಿಗೆ ಭೆಟ್ಟಿ ನೀಡಿದರು.

ರಾಜ್ಯದ ಪ್ರಗತಿಗೆ ಕೇಂದ್ರದೊಡನೆ ಸಂಪೂರ್ಣ ಸಹಕರಿಸ ಬಲ್ಲ ಒಂದೇ ಪಕ್ಷದ ಸರಕಾರವನ್ನು ರಚಿಸಿಕೊಳ್ಳಿರೆಂದು ವಿನಂತಿಸಿದರು.

ಕೋಟಿ ಸಂಖ್ಯೆಯ ನಿರಾಶ್ರಿತರ ಪಾಲನೆ, ಪಾಕ್ ಸಮರಗಳಲ್ಲಿ ನಾವು ಜಯಶೀಲರಾದುದು ಕೇಂದ್ರದಲ್ಲಿ ಸುಭದ್ರ ಸರಕಾರವಿದ್ದುದರಿಂದಲೇ ಎಂದು ಮನಂಬುಗಿಸಿದರು.

ಸಂಸ್ಥಾ ಕಾಂಗ್ರೆಸ್ಸನ್ನು ಪ್ರತಿಗಾಮಿಯೆಂದೂ ಜನಸಂಘವನ್ನು ಜಾತೀಯವಾದಿಯೆಂದೂ ಮಾರ್ಕ್ಸಿಸ್ಟರನ್ನು ದೇಶದ್ರೋಹಿಗಳೆಂದೂ ಪಕ್ಷೇತರರು ಪ್ರಜಾಸತ್ತೆಯಲ್ಲಿ ಸಲ್ಲದವರೆಂದೂ ಅವರು ಟೀಕಿಸಿದರು.

ಇವೆಲ್ಲವೂ ಸ್ವಲ್ಪ ಸ್ವಲ್ಪ ಕೂಡಿತು; ದನ-ಕರು ಚಿಹ್ನೆ ಆಕರ್ಷಿಸಿತು; ಮಹಿಳಾ ಮತದಾರರ ಆಧಿಕ್ಯ ಬಲ ನೀಡಿತು. ಬದಲಾವಣೆ ಬೇಕೆಂಬ ಜನತೆಯ ಉತ್ಕಟೇಚ್ಛೆ ಬಲಿಯಿತು.

ಸಹಜವಾಗೇ ಆಳುವ ಕಾಂಗ್ರೆಸ್ಸು ಗೆದ್ದು ಬಂದಿತು. ಇಷ್ಟೆಲ್ಲ ಅನುಕೂಲ ವಾತಾವರಣವಿರುವಾಗ ಅದು ಇನ್ನೂ ಹಲವು ಸ್ಥಾನಗಳನ್ನು ಗೆದ್ದುಕೊಳ್ಳಬೇಕಿತ್ತು.

೧೯೫೭ರಲ್ಲೂ ಇಂತಹುದೇ ದಿಗ್ವಿಜಯವನ್ನು ಅವಿಭಜಿತ ಕಾಂಗ್ರೆಸ್ಸು ಸಾಧಿಸಿತ್ತು. ಆಗಿನ ೨೦೮ ಸ್ಥಾನಗಳನ್ನು ಗೆದ್ದಿತ್ತು.

ಆದರೆ, ಅಂದು ಪಕ್ಷದೊಳಗಿನ ಗುಂಪುಗಾರಿಕೆಯ ಕಾರಣದಿಂದ ಸಚಿವ ಸಂಪುಟ ನಡುವೆಯೇ ಬದಲಾಯ್ತು. ಭಿನ್ನಾಭಿಪ್ರಾಯ ಬಲಿಯಿತು.

ಇಂದೂ ಪಕ್ಷವು ತೋರಿಕೆಗೆ ಒಂದೆಂಬಂತೆ ಅನಿಸಿದರೂ ಹಲವು ಗುಂಪುಗಳು ಆಳುವ ಕಾಂಗ್ರೆಸ್ಸಿನಲ್ಲಿರುವುದು ರಹಸ್ಯವಾಗಿ ಉಳಿದಿಲ್ಲ.

೧೯೫೭ರಲ್ಲಿ ಅವಿಭಜಿತ ಕಾಂಗ್ರೆಸ್ ಪಂ. ನೆಹರುರವರ ನೆರಳಾಗಿತ್ತು; ಆದರೆ, ಪಕ್ಷದೊಳಗಿನ ಗುಂಪುಗಾರಿಕೆಯನ್ನೂ ಪ್ರಜಾಪ್ರಭುತ್ವಕ್ಕೆ ಸಹಜವೆಂದೋ ಮರಿಯಲಾಗದ್ದೆಂದೋ ಅವರು ಅಕರ್ಮಣ್ಯರಾದರು.

ಇಂದಿನ ಆಳುವ ಕಾಂಗ್ರೆಸ್ಸು ಶ್ರೀಮತಿ ಗಾಂಧಿಯ ಏಕಚಕ್ರಾಧಿಪತ್ಯ ನಿಜ. ಜತೆಗೆ

(ಹನ್ನೆರಡನೇ ಪುಟ ನೋಡಿರಿ)

ಸೇವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ನರಸಿಂಹ ಅವರ ಸಲಹೆಗಳನ್ನು ಕಡಿದು ಹಾಕಿದ. ಚಾಳುಕ್ಯರ ಆಡಳಿತಕ್ಕೆ ಒಳಪಟ್ಟ ಸ್ಥಳಗಳಲ್ಲಿ ಬಲವಾದ ಸೈನ್ಯವನ್ನಿಟ್ಟ. ಪ್ರಸಂಗ ಬಂದರೆ ಅವರೊಡನೆ ಯುದ್ಧಕ್ಕೂ ಸಿದ್ಧ ಎಂದು ತಿಳಿಯಪಡಿಸಿದ.

ಈ ಹಿಂದೆ ನರಸಿಂಹ ಚಾಳುಕ್ಯರ ಹುಟ್ಟಡಗಿಸಲು ಎರಡು ಬಾರಿ ನಿಯೋಜಿತನಾಗಿದ್ದ. ಈ ಎರಡು ಸಂದರ್ಭಗಳಲ್ಲಿ ಆತ ತನ್ನ ಯೋಗ್ಯತೆಯನ್ನು ಮೆರೆದಿದ್ದ. ಕತ್ತಿವರಸೆ, ಮಲ್ಲ ಯುದ್ಧಗಳಲ್ಲಿ ಅವನಿಗೆ ಸಾಟಿಯಾಗಿ ನಿಲ್ಲುವವರೇ ಇರಲಿಲ್ಲ. ಅದರ ಸವಿಯನ್ನು ಹಿಂದೆರಡು ಬಾರಿ ಕಂಡ ಚಾಳುಕ್ಯರು ತಮ್ಮ ಪ್ರಯತ್ನಕ್ಕೆ ತಿಲಾಂಜಲಿ ಕೊಟ್ಟರು.

ಅವರ ಬಸಿರೊಳಗಣ ಸಿಟ್ಟು ಬಾಹುಗಳಿಗೆ ಬರಲಿಲ್ಲ.

ಮಂತ್ರಾಲೋಚನೆಗೆಂದು ಈ ಸಂಧಿಯಲ್ಲಿ ಸಾಮ್ರಾಜ್ಯದ ಮೂಲೆ ಮೂಲೆಗಳಿಂದಲೂ ಪ್ರತಿಷ್ಠಿತರಾದ ಜನರನ್ನೂ, ನಂಬುಗೆಗೆ ಅರ್ಹರಾದ ಸೈನ್ಯಾಧಿಕಾರಿಗಳನ್ನೂ ಆಗಾಗ್ಯೆ ಆತ ಕರೆಸಿಕೊಳ್ಳುತಿದ್ದ. ಬಂದಿದ್ದ ಪ್ರತಿಷ್ಠಿತರನ್ನು ಯೋಗ್ಯತಾನುಸಾರ ಸನ್ಮಾನಿಸುವುದಲ್ಲದೆ ವಾರಗಟ್ಟಲೆ ಅವರನ್ನು ರಾಜಧಾನಿಯಲ್ಲಿ ಕೂರಿಸಿಕೊಂಡು ಸಾಮ್ರಾಜ್ಯದ ಒಂದೊಂದು ಭಾಗದಲ್ಲೂ ನಡೆಯುತಿದ್ದ ವಿದ್ಯಮಾನಗಳ ವಿವರವನ್ನೂ ಅವರಿಂದ ಪಡೆಯುತಿದ್ದ. ಅವರು ಕೊಟ್ಟ ಮಾಹಿತಿಗಳನ್ನು ಒಂದೆಡೆ ಗುರುತು ಹಾಕಿಕೊಳ್ಳುತಿದ್ದ. ಅಹಿತಕಾರಿಯಾದ ಬೆಳವಣಿಗೆಯ ಸುಳಿವು ಸಿಕ್ಕಿದರೆ ಅದನ್ನು ಮಟ್ಟ ಹಾಕುವುದಕ್ಕೆ ಸೂಕ್ತ ಆದೇಶವನ್ನೂ, ಆಗತ್ಯ ಕಂಡು ಬಂದಲ್ಲಿ ಸೈನ್ಯದ ಸರಬರಾಜನ್ನೂ ಬೊಕ್ಕಸದಿಂದ ದ್ರವ್ಯ ಸಹಾಯವನ್ನೂ ಮಾಡುತಿದ್ದ.

ಒಂದೊಂದು ಸಲ ಸ್ವತಃ ತೆರಳಿ ಜನರ ಕುಂದುಕೊರತೆಗಳನ್ನು ಕೇಳಿ ತಿಳಿದುಕೊಳ್ಳುತಿದ್ದ. ನ್ಯಾಯವಾದವುಗಳ ನಿವಾರಣೆಗೂ ಮನ ಮುಟ್ಟಿ ಪ್ರಯತ್ನಿಸುತಿದ್ದ. ಅದರಿಂದ ಒಳ ಜಗಳಗಳು ಅಳಿದುವು. ಹೊರಗಿನಿಂದ ಬರುವ ಧಾಳಿಯ ಭೀತಿಯೂ ಕಡಿಮೆಯಾಯಿತು.

ನೆಮ್ಮದಿ—ಶಾಂತಿ ಮೋರೆ ಹಾಕಿತು.

ನಾಡು ಸುಭಿಕ್ಷವಾಯಿತು.

ಜನ ಉಂಡುಟ್ಟು ಸುಖಿಗಳಾದರು.

ರಾಜ ರುಗ್ಣರು ಶಯ್ಯೆಯಲ್ಲಿ ಮಲಗಿದ್ದರೂ ಆಡಳಿತದ ಕೀಲ ಎಲ್ಲಿಯೂ ಕಳಚಲಿಲ್ಲ. ಎಲ್ಲ ಸುಸೂತ್ರವಾಗಿ, ಸುಗಮವಾಗಿ ನಡೆಯಿತು.

ಪರರಾಷ್ಟ್ರದ ರಾಜರು ನರಸಿಂಹನ ಚಾಕಚಕ್ಯತೆಯನ್ನು ಮುಕ್ತ ಕಂಠದಿಂದ ಕೊಂಡಾಡಿದರು. ತಮ್ಮ ಬೇಳೆ ಬೇಯಿಸಿಕೊಳ್ಳಲು ಬಿಡಲಿಲ್ಲವೆಂದು ಕೆಲವರು ಕ್ರುದ್ಧರಾದರು.

oo oo oo

'ದೊರೆಗಳು ಬುದ್ಧಿಯವರನ್ನು ಬರಹೇಳಿದರು'

ದೂತನ ಮೂಲಕ ನರಸಿಂಹನಿಗೆ ಕರೆ ಬಂತು.

ಆತ ಲಗುಬಗೆಯಿಂದ ಅರಮನೆಯತ್ತ ಧಾವಿಸಿದ. ನೇರವಾಗಿ ಪ್ರಭುಗಳ ಶಯ್ಯಾಗಾರವನ್ನು ಪ್ರವೇಶಿಸಿದ.

ಅದೊಂದು ವಿಶಾಲವಾದ ಕೋಣೆ. ಕೊಟಡಿಯ ಮಧ್ಯದಲ್ಲೊಂದು ಶ್ರೀಗಂಧದ ಮಂಚ. ಮಂಚದ ಮೇಲೆ ಬೂರುಗದ ಹತ್ತಿಯಿಂದ ತಯಾರಿಸಿದ ಹಾಸಿಗೆ, ದಿಂಬುಗಳು. ರಾಷ್ಟ್ರಕೂಟ ಇಂದ್ರ ಅದರ ಮೇಲೆ ಮಲಗಿದ್ದ. ಅವನ ಕೈಕಾಲುಗಳು ಕಡ್ಡಿಯಂತೆ ಕೃಶವಾಗಿದ್ದುವು. ಮುಖ ಬಿಳಿಚಿಕೊಂಡಿತ್ತು. ಎಲುಬಿನ ಹಂದರಕ್ಕೆ ತೊಗಲು ಸುತ್ತಿದಂತೆ ಕಾಣುತ್ತಿತ್ತು—ದೇಹ.

ಮಂಚದ ಅಚೀಚೆ ಬದಿಗಳಲ್ಲಿ ಸಮವಸ್ತ್ರ ಧರಿಸಿದ ರಾಜಭಟರು, ಲಾಮಂಚದ ಬೀಸಣಿಗೆ ಹಿಡಿದು ಗಾಳಿ ಬೀಸುತ್ತಿದ್ದರು. ಮಂಚದ ಪಾರ್ಶ್ವದಲ್ಲಿ—ರೋಗಿಯನ್ನು ಅತುಕೊಂಡು, ಅಧೋವದನೆಯಾಗಿ ಅಳುತ್ತ ಕುಳಿತ್ತಿದ್ದರು ರಾಜ ಮಹಿಷಿ ಸುಮತೀ ದೇವಿ. ಪರಿವಾರದ ಒಬ್ಬಿಬ್ಬರು ಸ್ತ್ರೀಯರನ್ನುಳಿದರೆ ಅಲ್ಲಿ ಬೇರಾರೂ ಇರಲಿಲ್ಲ.

ಕೋಣೆ ಸ್ತಬ್ಧವಾಗಿತ್ತು—ಸಾಸುವೆ ಬಿದ್ದರೂ ಕೇಳುವಷ್ಟು.

ಪ್ರಯಾಸದಿಂದ ಪ್ರಭುಗಳು ಉಸಿರೆಳೆಯುತ್ತಿದ್ದರು. ಅವರು ಬಿಡುತ್ತಿದ್ದ ನಿಡುಸುಯ್ಲು ಹೊರಗಿದ್ದವರಿಗೂ ಕೇಳುತ್ತಿತ್ತು. ಅಳ್ಳೆಗಳೂ, ಮೂಗಿನ ಹೊಳ್ಳೆಗಳೂ ಶ್ವಾಸೋಚ್ಛ್ವಾಸದ ಕಾಲದಲ್ಲಿ—ಕುಲುಮೆಗೆ ಜೋಡಿಸಿದ ತಿದಿಯಂತೆ—ಹಿಗ್ಗುತಿದ್ದವು; ಕುಗ್ಗುತ್ತಿದ್ದುವು.

ನರಸಿಂಹ ನೇರವಾಗಿ ಪ್ರಭುಗಳ ಪಕ್ಕದಲ್ಲಿ ಹೋಗಿ ಕುಳಿತ.

ಸುಮತೀದೇವಿ ತಲೆಯ ಮೇಲೆ ಸೆರಗೆಳೆದುಕೊಂಡು; ಕುಳಿತಲ್ಲಿಂದೆದ್ದು ದೂರ ಸರಿದು ನಿಂತಳು.

'ಪ್ರಭುಗಳ ದೇಹಸ್ಥಿತಿ ಹೇಗಿದೆ'

ಜಾನಕಿ ಸತ್ತ ಹೊಸತರಲ್ಲಿ ಪ್ರಭುಗಳು ಅವನ ಯೋಗಕ್ಷೇಮವನ್ನು ಹೀಗೆ ವಿಚಾರಿಸಿದ್ದರು. ಆದರೆ ವ್ಯತ್ಯಾಸವಿಷ್ಟೆ—ಒಬ್ಬರದ್ದು ಖಾಯಿಲೆ ದೈಹಿಕ. ಇನ್ನೊಬ್ಬರದು ಮಾನಸಿಕ. ಅವುಗಳ ಹಿನ್ನೆಲೆಯೂ ಬೇರೆ ಬೇರೆ.

ನಾನು ಇಂದು ಕೇಳಿದ್ದು?

ವಾಡಿಕೆಯಲ್ಲಿರುವ ಸಹಜವಾದ ಕುಶಲ ಪ್ರಶ್ನೆ.

ಅವರದು?

ಪರಾರ್ಥದ ಸೋಗು ಹೊತ್ತ ಸ್ವಾರ್ಥ.

ಪ್ರಭುಗಳನ್ನು ಹೀಗೆ ನುಡಿಸುವಾಗ ವರ್ಷಗಳ ಕೆಳಗೆ ನಡೆದು ಹೋದ ಅವಿಸ್ಮರಣೀಯ ಅನುಭವದ ನೆನಪು ಮರುಕೊಳಿಸಿತು.

'ಏನೋ ಇದ್ದೀನಿ. ನೋಡಿದರೆ ತಿಳಿಯುವುದಿಲ್ಲವೇ ನನ್ನ ಸ್ಥಿತಿ. ಅತ್ತ ಸಾಯಲಾರೆ. ಇತ್ತ ಬದುಕಲಾರೆ. ತ್ರಿಶಂಕು ಸ್ವರ್ಗ'

'ಇಂದೇನು ಆಹಾರ ತೆಗೆದುಕೊಂಡಿರಿ'

'ಒಂದಿಷ್ಟು ಹಾಲು-ಹಣ್ಣು. ಜೀರ್ಣವಾಗುವಂತಿದ್ದರೆ ಹಾಲು ಹಣ್ಣು ತೆಗೆದುಕೊಳ್ಳಿ ಎಂದು ವೈದ್ಯರು ತಿಳಿಸಿದ್ದರು. ಈ ಖಾಯಿಲೆಗೆ ಅದರ ಸೇವನೆ ಒಳ್ಳೆಯದೆಂಬುದು ವೈದ್ಯರ ಮತ. ನನಗೋ ಹಾಲಿನ ವಾಸನೆ ಬಂದರೆ ವಾಕರಿಕೆ ಬರುತ್ತೆ ಅಮಾತ್ಯರೇ! ಮನಸ್ಸಿಗೆ ಬೇಕಾಗಿದೆ, ಮೈಗೆ ಬೇಡವಾಗಿದೆ.'

'ತಮಗೆ ಆಗತ್ಯವಾಗಿ ಬೇಕಾಗಿರುವುದು ವಿಶ್ರಾಂತಿ. ಹಾಯಾಗಿ ಮಲಗಿಕೊಳ್ಳಿ. ಅದರಿಂದ ಪ್ರಕೃತಿ ಸುಧಾರಿಸುತ್ತೆ. ರೋಗಿ ವೈದ್ಯರ ವಶವಾದರೆ, ರೋಗ ವೈದ್ಯರ ವಶವಾಗುತ್ತೆ. ಒಮ್ಮೊಮ್ಮೆ—ಈ ಶ್ರದ್ಧೆ ಮೂಡಿದರೆ—ಬರಿಯ ನೀರು ಕುರುಕಿಸಿ ಕೊಟ್ಟರೂ ರೋಗ ವಾಸಿಯಾಗುತ್ತೆ.'

"ಮಹತ್ವದ ವಿಷಯಗಳನ್ನು ತಮ್ಮಲ್ಲಿ ಮಾತನಾಡುವುದಿತ್ತು"

'ಅದಕ್ಕೇನು ಆವಸರ? ನೀವು ಗುಣಮುಖರಾದ ಮೇಲೆ ತಿಳಿಸುವಿರಂತೆ'

"ಇದು ಗುಣವಾಗುವ ರೋಗವಲ್ಲ ಅಮಾತ್ಯರೇ. ಈ ರೋಗದ ಹೆಸರೇ ಕ್ಷಯ. ಇನ್ನು ಬದುಕುವ ಮಾತೆಲ್ಲಿ ಬಂತು? ದಿನವೆಣಿಸುವುದಷ್ಟೆ ಉಳಿದಿದೆ. ನನಗೋ ಮಗ್ಗುಲಿಂದ ಮಗ್ಗುಲಿಗೆ ಹೊರಳಿ ಸಾಕಾಗಿದೆ. ಆರು ತಿಂಗಳಾಗಲಿಲ್ಲವೇ ನಾನು ಹೀಗೆ ಹಾಸುಗೆ ಹಿಡಿದು? ಸ್ವಾಮಿಯ ಕರೆಯನ್ನೇ ಇದಿರು ನೋಡುತಿದ್ದೇನೆ. ಆದರೆ ಸಾವು ಕರೆದರೆ ಬರುತ್ತದೆಯೇ?

ಅದು 'ಬಾ' ಎಂದರೆ ಬರುವುದಿಲ್ಲ. ಹೋಗು ಎಂದರೆ ಹೋಗುವುದಿಲ್ಲ'

ಆತ ಇನ್ನೇನೋ ಹೇಳುವುದರಲ್ಲಿದ್ದ. ನುಗ್ಗಿ ಬಂದ ಕೆಮ್ಮು ಮಾತನ್ನರ್ಧಕ್ಕೆ ನಿಲ್ಲಿಸಿತು. ಅವರು ಮೂರು ಬಾರಿ ಕೆಮ್ಮಿದರು. ನರ-ನರವನ್ನೂ ಜಡಿದು ಜಗ್ಗಿಸುವ ಕೆಮ್ಮು. ಸರ್ವಾಂಗವನ್ನು ಹಣ್ಣು ಮಾಡುವಂತಿತ್ತು. ಅವರು ಅನುಭವಿಸುತಿದ್ದ ವೇದನೆ ಮುಖದಲ್ಲಿ ಬಿಂಬಿತವಾಗಿತ್ತು. ನರಸಿಂಹ ಅವರ ಪಕ್ಕೆಗಳನ್ನು ಒತ್ತಿ ಹಿಡಿದ. ಮೃದುವಾಗಿ ಎದೆಯನ್ನು ನೀವಿದ. ಪ್ರಭುಗಳ ಗಂಟಲಲ್ಲಿ ಏನೋ ಸಿಲುಕಿಕೊಂಡಿರುವಂತನಿಸಿತು. ಅವರು ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಬಲವಾಗಿ ಒಮ್ಮೆ ಕೇಕರಿಸಿದರು. ಗಂಟಲಲ್ಲಿ ಸಿಕ್ಕಿ ಕೊಂಡಿದ್ದ ಕಫ ಹೊರ ಬಂತು.

ಅದನ್ನವರು ಬಾಯಿಯ ಹತ್ತಿರಕ್ಕೆ ಹಿಡಿದ ಬಟ್ಟಲಿಗೆ ಉಗುಳಿದರು.

ಕಫಕ್ಕಿಂತಲೂ ರಕ್ತ ಹೆಚ್ಚಾಗಿತ್ತು.

ರಕ್ತ ಕಾರಿದ್ದನ್ನು ಕಂಡು ನರಸಿಂಹ ಒಳಗೊಳಗೇ ಅಂಜಿದ.

ಬಾಯಿಗೊಡ್ಡಿದ ಹೂಬಿಸಿ ನೀರಿನಲ್ಲಿ ಬಾಯಿ ಮುಕ್ಕಳಿಸಿ ಕೊಂಡು ಇಂದ್ರ 'ರಕ್ತದ ಕಣಗಳನ್ನು ಕಂಡು ಭಯ ಬೀಳ ಬೇಡಿ ಅಮಾತ್ಯರೇ! ಅದು ಈ ರೋಗದ ಲಕ್ಷಣ. ನೋಡಿ, ನೋಡಿ ನಮಗೀಗ ರೂಢಿಯಾಗಿದೆ. ಮೊದಲ ದಿನ ನಾವೂ ಗಾಬರಿಗೊಂಡೆವು.'

ಪುನಃ ಕೆಮ್ಮು.

ಕರುಳು ಕಿತ್ತು ಹೊರ ಬರುವಂತಿತ್ತು.

ಪ್ರಭುಗಳು ಪುನಃ ರಕ್ತ ಸಿಕ್ತ ಕಫವನ್ನುಗುಳಿದರು.

ಈ ಬಾರಿ ಕಫಕ್ಕಿಂತಲೂ ರಕ್ತವೇ ಜಾಸ್ತಿ.

ನರಸಿಂಹ ಚಮಚೆಯಲ್ಲಿ ಹಾಲು ಕುಡಿಸಿದ.

ಅದು ಗಂಟಲಲ್ಲಿ ಪ್ರಯಾಸದಿಂದಿಳಿಯಿತು.

'ನೆಲದ ಋಣ ಮುಗಿಯುತ್ತ ಬಂದಿದೆ. ಹೇಳ ಬೇಕಾದ್ದನ್ನು ತಿಳಿಸಿ ಬಿಡುವ ಎಂದು ಹೇಳಿ ಕಳುಹಿಸಿದೆ. ಅದನ್ನು ನಡೆಸಿ ಕೊಡುವ ಭರವಸೆ ಕೊಟ್ಟರೆ ಹಾಯಾಗಿ ಉಸಿರೆಳೆಯುವೆ. ಸಾಯ ಬಿದ್ದ ನನ್ನ ಮಾತನ್ನು ಖಂಡಿತ ನಡೆಸಿ ಕೊಡಿ'

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ.ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 29

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಭುಟ್ಟೋ ಮಹಾಶಯರ ಮೋಸ್ಕೋ ಭೆಟ್ಟಿ

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಬಾಂಗ್ಲಾದೇಶದ ಅಧಿಕೃತ ಸಂದರ್ಶನಕ್ಕೆ ತೊಡಗಿದಾಗ ಪಾಕ್ ರಾಷ್ಟ್ರಪತಿ ಶ್ರೀ ಭುಟ್ಟೋ ಅವರು ಸೋವಿಯತ್ತಿನ ಭೆಟ್ಟಿಯನ್ನು ಮುಗಿಸಿದರು. ಕಳೆದ ವರ್ಷ ನಡೆದ ಭಾರತ ಪಾಕ್ ಸಮರಾನಂತರ ರಶ್ಯ—ಪಾಕ್ ಸಂಬಂಧವು ಕೆಟ್ಟುಹೋಗಿತ್ತು. ಭಾರತೀಯ ಉಪಖಂಡದಲ್ಲಿ ಬಾಂಗ್ಲಾ ದೇಶದ ಉದಯವಾದುದನ್ನು ಭುಟ್ಟೋ ಮಹಾಶಯರು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿರಲಿಲ್ಲ. ಆದರೆ ವಸ್ತುಸ್ಥಿತಿಯನ್ನು ಬಹುಕಾಲದವರೆಗೆ ಕಡೆಗಣಿಸುವುದು ಯಾರಿಗೂ ಸಾಧ್ಯವಿಲ್ಲ. ಬಾಂಗ್ಲಾ ದೇಶದ ಪ್ರಧಾನಿ ಶೇಖ್ ಮುಜಿಬುರ ರೆಹಮಾನರು ಮೋಸ್ಕೋವಿಗೆ ಭೆಟ್ಟಿ ನೀಡಿ ಮರಳಿದ ಬಳಿಕ ಭುಟ್ಟೋ ಮಹಾಶಯರು ಮೋಸ್ಕೋವಿಗೆ ಹೋದರು. ಭಾರತೀಯ ಉಪಖಂಡದಲ್ಲಿ ಶಾಶ್ವತವಾಗಿ ಶಾಂತಿಯು ನೆಲೆಸಬೇಕೆಂಬುದು ಬಾಂಗ್ಲಾದೇಶ ಮತ್ತು ಭಾರತದ ಸದಿಚ್ಛೆ. ಪಾಕಿಸ್ತಾನವು ಈ ವಿಷಯದಲ್ಲಿ ಆಸಕ್ತಿ ತೋರಿಸುವಂತೆ ನಟಿಸಿಕೊಂಡು ಬಂದರೂ ಈ ಆಶಯವು ಹೃದಯಾಂತರಾಳದಿಂದ ಇನ್ನೂ ಬಂದಿಲ್ಲವೆನ್ನಬೇಕು. ಭಾರತ ಪಾಕಿಸ್ತಾನಗಳ ನಡುವಣ ವಿವಾದಗಳನ್ನು ಹಂತ ಹಂತವಾಗಿ ಪೂರೈಸಬೇಕೆಂದು ಅಯೂಬಖಾನ ಮತ್ತು ಲಾಲ್ ಬಹದೂರ ಶಾಸ್ತ್ರಿಗಳು ಅವನ್ನೂ ಒಂದು ಕ್ಷಣದಲ್ಲಿಯೇ ಪರಿಹರಿಸಲು ಮುಂದುವರಿದರೆಂದೂ ಮತ್ತು ಇದರಿಂದ ವಿವಾದ ಪರಿಹಾರಗೊಳ್ಳುವುದು ಅಸಾಧ್ಯವಾಯಿತೆಂದೂ ಶ್ರೀ ಭುಟ್ಟೋ ಮಹಾಶಯರು ಹೇಳುತ್ತಾರೆ. ಭಾರತ–ಪಾಕ್ ಸಮರಗಳ ನಡುವೆ ಕಾಶ್ಮೀರದ ಪ್ರಶ್ನೆಯು ತಲೆಹಾಕುತ್ತಿದೆಯೆಂದ ಸ್ವಯಂ ನಿರ್ಣಯಾಧಿಕಾರ ಬಯಸುವ ಕಾಶ್ಮೀರಿಗಳ ಬೇಡಿಕೆಯನ್ನು ತಿರಸ್ಕರಿಸುವುದು ವಾಸ್ತವಿಕ ದೃಷ್ಟಿಕೋನವಲ್ಲವೆಂದೂ ಅವರು ಹೇಳಿದ್ದಾರೆ.

ಸೋವಿಯತ್ ರಶ್ಯಾವು ಭಾರತದೊಡನೆ ಸೌರಕ್ಷಣಾ ಒಡಂಬಡಿಕೆಯನ್ನು ಮಾಡಿಕೊಂಡಿದೆ. ಇದೀಗ ಭಾರತ ಮತ್ತು ಬಾಂಗ್ಲಾದೇಶಗಳ ನಡುವೆಯೂ ಇಂತಹುದೇ ಒಪ್ಪಂದವಾಗಿದೆ. ಸೋವಿಯತ್ ಬಾಂಗ್ಲಾದೇಶಕ್ಕೆ ಹಲವು ರೀತಿಯ ನೆರವನ್ನು ನೀಡುವುದಾಗಿ ಒಪ್ಪಿಕೊಂಡಿದೆ. ಹಾಗೆಯೇ ಭಾರತವೂ ಬಾಂಗ್ಲಾದೇಶಕ್ಕೆ ಆರ್ಥಿಕ ಮತ್ತಿತರ ಸಹಾಯ ನೀಡಲು ಮುಂದೆ ಬಂದಿದೆ. ಭಾರತದೊಡನೆ ನೇರ ಸಂಬಂಧವನ್ನು ಪ್ರತಿಷ್ಠಾಪಿಸಲು ಸೋವಿಯತ್ತಿನ ಬೆಂಬಲವನ್ನು ಭುಟ್ಟೋ ಬಯಸಿದಂತಿದೆ. ಆದರೆ ಭುಟ್ಟೋರವರ ಈ ಆಶಯದಲ್ಲಿ ಯಥಾರ್ಥತೆ ಎಷ್ಟಿದೆಯೆಂಬುದು ಇನ್ನೂ ಅಗೋಚರವಿದೆ. ಭಾರತೀಯ ಉಪಖಂಡದಲ್ಲಿ ಶಾಶ್ವತ ಶಾಂತಿಯು ನೆಲೆಸುವುದರಿಂದಲೇ ಭಾರತ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳ ಪ್ರಗತಿಯು ಸಾಧ್ಯವಾಗುತ್ತದೆ. ಪರಸ್ಪರ ವೈಮನಸ್ಸಿನಿಂದ ಸುಖ ಸಮೃದ್ಧಿಗಳು ಎಂದಿಗೂ ಬರುವುದಿಲ್ಲ. ಭುಟ್ಟೋ ಮಹಾಶಯರು ತನ್ನ ದೇಶದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಆಡಳಿತವನ್ನು ಸ್ಥಾಪಿಸಲು ನಿರ್ಧರಿಸಿದಾರೆ. ಜನತೆಯ ಆಶೋತ್ತರಗಳನ್ನು ಸದಾ ಕಾಲ ಧಮನಿಸುವುದು ಸಾಧ್ಯವಿಲ್ಲವೆಂದು ಅವರು ಒಪ್ಪಿಕೊಂಡಿದ್ದಾರೆ. ಇದೇ ರೀತಿಯಲ್ಲಿ ಧರ್ಮದ ಕುರುಡು ಕಾಂಚಣದಿಂದ ಜನತೆಯ ಮೇಲೆ ಪ್ರಭುತ್ವ ಜಮಾಯಿಸ ಬಹುದೆಂಬ ಆಶಯವನ್ನು ಸಮರೋನ್ಮತ್ತತೆಯಿಂದ ದೇಶವನ್ನೂ ಕಟ್ಟಬಹುದೆಂಬುದನ್ನು ಅವರು ಎಷ್ಟು ಬೇಗನೆ ಮರೆತು ಬಿಡುತ್ತಾರೆಯೋ ಅಷ್ಟು ಬೇಗನೆ ಶಾಂತಿ ಸಾಧಿತವಾಗುತ್ತದೆ. ಭಾರತವು ಸಮರ ನಿಷೇಧ ಒಡಂಬಡಿಕೆಯನ್ನು ಆದಷ್ಟೋ ಭಾರಿ ಪಾಕ್ ಆಳರಸರ ಮುಂದಿಟ್ಟಿತ್ತು. ಆದರೆ ಈ ಕೊಡುಗೆಯನ್ನು ಪಾಕಿಸ್ಥಾನ ತಿರಸ್ಕರಿಸುತ್ತಲೇ ಬಂದಿದೆ. ಇದೀಗ ಬಾಂಗ್ಲಾ ಮತ್ತು ಭಾರತಗಳು ಸಮರವಿಲ್ಲ ಒಡಂಬಡಿಕೆಯನ್ನು ಮಾಡಿಕೊಂಡಿದ್ದು ಇದು ಭುಟ್ಟೋರವರ ಕಣ್ಣು ತೆರೆಯುತ್ತದೋ ನೋಡಬೇಕು. ಪಾಕಿಸ್ತಾನವು ವಾಸ್ತವಿಕತೆಯನ್ನು ಮನ್ನಿಸುವ ವರೆಗೆ ಉಪಖಂಡದಲ್ಲಿ ಶಾಂತಿನೆಲೆಸುವುದು ಸಾಧ್ಯವಿಲ್ಲ.

ಕಾಶ್ಮೀರಿಗಳಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೇಳುವ ಪಾಕ್ ನೀತಿಯು ಬಹಳ ಹಳೆಯದ್ದು. ೧೯೫೩ರಿಂದ ಇಂದಿನವರೆಗೂ ಕಾಶ್ಮೀರಿಗಳು ೫ ಭಾರಿ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸಿ ತಮ್ಮ ನಿರ್ಧಾರವನ್ನು ಎಂದೋ ಜಗಜ್ಜಾಹೀರು ಮಾಡಿದ್ದಾರೆ. ಅದನ್ನು ತಳ್ಳಿಗೆಳೆಯುವ ಪಾಕ್ ಕುತಂತ್ರವು ಎಂದಿಗೂ ಯಶಸ್ವಿಯಾಗುವುದಿಲ್ಲ. ಬಾಂಗ್ಲಾ ದೇಶವು ಉದಯವಾದದ್ದು ಅದನ್ನು ಹೆಚ್ಚಿನ ದೇಶಗಳು ಮನ್ನಿಸಿದ್ದು ಸತ್ಯಕ್ಕೆ ದೂರವಾದುದಲ್ಲ. ಭುಟ್ಟೋ ಮಹಾಶಯರು ತಮ್ಮ ದೇಶದಲ್ಲಿಯೂ, ಭಾರತೀಯ ಉಪಖಂಡದಲ್ಲಿಯೂ ಶಾಶ್ವತ ಶಾಂತಿಯನ್ನು ಬಯಸುವುದಾದರೆ ಈ ವಾಸ್ತವಿಕಾಂಶಗಳನ್ನು ಮನ್ನಿಸಲೇಬೇಕು. ಸಮಸ್ಯೆಗಳನ್ನು ಬಿಡಿಸುವುದಕ್ಕಾಗಿ ಒಡಂಬಡಿಕೆಗಳು ಸಾಧಿತವಾದರೆ ಅದರಿಂದ ಏನೂ ಪ್ರಯೋಜನವಿಲ್ಲ. ಈ ಒಡಂಬಡಿಕೆಯು ಹೃತ್ಪೂರ್ವಕವಾದುದಾಗಿರಬೇಕು. ಸೋವಿಯತ್ತಿನ ಮಧುರ ಬಾಂಧವ್ಯವನ್ನು ಉಪಯೋಗಿಸಿ ಭುಟ್ಟೋ ಮಹಾಶಯರು ಶಾಂತಿಯ ಸಿದ್ಧಿಗಾಗಿ ಮುಂದುವರಿಯುವುದಾದರೆ ತನ್ನ ಕುರುಡು ರಾಜಕಾರಣವನ್ನು ತ್ಯಜಿಸಿ ವಾಸ್ತವಿಕತೆಯನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕಾದದ್ದು ಅವಶ್ಯಕ. ಬಾಯಿಯಲ್ಲಿ ಶಾಂತಿ ಮಂತ್ರವನ್ನು ಪಠಿಸುತ್ತಾ ಕೃತಿಯಲ್ಲಿ ಅಶಾಂತಿಯನ್ನು ಪ್ರಚೋದಿಸುತ್ತಿರುವ ಪಾಕ್ ನೀತಿಯಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕಾದದ್ದು ಅನಿವಾರ್ಯ. ಭಾರತೀಯ ಉಪಖಂಡದಲ್ಲಿ ಶಾಂತಿಯು ಸ್ಥಿರವಾಗಿ ನೆಲಸಿದರೆ ಮೂರು ಇಲ್ಲಿನ ದೇಶಗಳು ಸಹೋದರರಾಗಿ ನೆಮ್ಮದಿಯ ಉಸಿರು ಬಿಡುವುದು ಸಾಧ್ಯವಾಗುತ್ತದೆ. ಸೋವಿಯತ್ ಪ್ರಧಾನಿ ಕೊಸಿಗಿನ್ನರು ಭುಟ್ಟೋರವರ ಮನಸ್ಸನ್ನೂ ಪರಿವರ್ತಿಸುವಲ್ಲಿ ಸಾಧ್ಯರಾದಾರೇ?

ಸುಲಕ್ಷಣ ಆಡಳಿತೆಗೆ ನಾಂದಿಯಾಗಲಿ

ಕರ್ನಾಟಕದ ವಿಧಾನ ಸಭೆಯಲ್ಲಿ ೧೬೫ ಸ್ಥಾನಗಳನ್ನೂ ಪಡೆದುಕೊಂಡ ಆ. ಕಾಂಗ್ರೆಸ್ ಶ್ರೀ ದೇವರಾಜ ಅರಸರನ್ನು ತನ್ನ ನಾಯಕನನ್ನಾಗಿ ಆರಿಸಿಕೊಂಡಿತು. ಶ್ರೀ ಅರಸರು ಸದ್ಯ ವಿಧಾನ ಸಭಾ ಸದಸ್ಯರಲ್ಲಿ ಗೆದ್ದು ಬಂದವರಲ್ಲಿ ಮುಖ್ಯಮಂತ್ರಿಯಾಗುವ ಅರ್ಹತೆಯನ್ನು ಯಾರೊಬ್ಬರು ಪಡೆಯಲಿಲ್ಲವೆಂದು ರಾಜ್ಯದ ಆಳುವ ಕಾಂಗ್ರೆಸ್ ಈ ಮೂಲಕ ಒಪ್ಪಿಕೊಂಡಂತಾಯಿತು. ನಾಯಕತ್ವದ ಬಗ್ಗೆ ಪಕ್ಷದೊಳಗಡೆ ತೀವ್ರ ಹೋರಾಟ ನಡೆದಿತ್ತೆಂಬುದನ್ನು ನಾವು ಮರೆಯುವಂತಿಲ್ಲ. ಮಾಜಿ ನಾಯಕ ಸಿದ್ಧವೀರಪ್ಪನವರು ಮುಖ್ಯಮಂತ್ರಿ ಪದವಿಗಾಗಿ ತುಂಬಾ ಹಂಬಲಿಸಿಕೊಂಡಿದ್ದರು. ೫೭ ವರ್ಷದ ದೇವರಾಜ ಅರಸರು ರಾಜ್ಯದಲ್ಲಿ ಆ. ಕಾಂಗ್ರೆಸ್ ಪಕ್ಷವನ್ನು ಕಟ್ಟುವಲ್ಲಿ ಮತ್ತು ಹೋದ ವರ್ಷದ ಹಾಗೂ ಈ ವರ್ಷದ ಚುನಾವಣೆಗಳಲ್ಲಿ ಅದ್ಭುತ ವಿಜಯ ಗಳಿಸುವಂತೆ ದುಡಿದದ್ದನ್ನು ಮರೆಯಬಾರದು. ಶ್ರೀ ಅರಸರು ವಿಧಾನ ಸಭೆಗೆ ಸ್ಪರ್ಧಿಸುವ ಸರಿಭಾವನೆ ಇದ್ದರೂ ಪಕ್ಷದ ಜಯಕ್ಕಾಗಿ ಅಹರ್ನಿಶಿ ದುಡಿಯುವ ಸದಿಚ್ಛೆಯಿಂದ ದೂರ ಉಳಿದರು. ಹೆಚ್ಚಿನ ಶಾಸಕರ ಬೆಂಬಲವೂ ಪ್ರಧಾನಿ ಇಂದಿರಾ ಗಾಂಧಿಯವರ ಆಶೀರ್ವಾದವೂ ಶ್ರೀ ಅರಸರ ಮೇಲೆ ಇದ್ದುದರಿಂದ ಅವರ ನಾಯಕತ್ವವು ರಾಜ್ಯಕ್ಕೆ ನೆಮ್ಮದಿ ತರುವುದೆಂದು ನಂಬಬಹುದು. ಚಿಕ್ಕ ಚೊಕ್ಕ ಮಂತ್ರಿ ಮಂಡಲ ಅನುಭವಿಗಳಾದ ಹಿರಿಯರ ಮತ್ತು ಯುವಕರ ಸ್ಫೂರ್ತಿಯಿಂದ ಕೂಡಿದ ಸಂಪುಟವನ್ನು ತಾವು ರಚಿಸುವುದಾಗಿ ಶ್ರೀ ಅರಸ್ ಹೇಳಿದ್ದಾರೆ. ಜನತೆಯು ಆ. ಕಾಂಗ್ರೆಸ್‌ನಲ್ಲಿ ದೊಡ್ಡ ದೊಡ್ಡ ಹೆಬ್ಬಯಕೆಗಳನ್ನೂ ಇಟ್ಟುಕೊಂಡಿದೆ. ರಾಜ್ಯದ ಸರ್ವತೋಮುಖ ಪ್ರಗತಿ ಮತ್ತು ಪರಿಶುದ್ಧ ಆಡಳಿತೆಯ ಗುರುತರವಾದ ಹೊಣೆಗಾರಿಕೆ ಈಗ ಶ್ರೀ ಅರಸರ ಮೇಲೆ ಇದೆ. ಪಕ್ಷದ ಶಾಸಕರ ಬೆಂಬಲದಿಂದಲೂ ವಿರೋಧಿ ಪಕ್ಷಗಳ ಸಹಕಾರದಿಂದಲೂ ಶ್ರೀ ಅರಸರು ರಾಜ್ಯಕ್ಕೆ ಸುಭದ್ರವಾದ ಸುಲಕ್ಷಣವಾದ ಆಡಳಿತೆಯನ್ನು ನೀಡುವಲ್ಲಿ ಕೃತಕೃತ್ಯರಾಗುವರೆಂದು ಆಶಿಸುತ್ತೇವೆ.

In the Court of Munsif
Kundapur

O. S. 1/69 Ex. C. 335/1971

Krishna Pai – Decree-holder-Plff.

Vs.

Padmanabha Pai and others

— Defendants, Respondents.

To

2nd Respondent-Chand Bibi,
widow of Adam Saheb,
Koteshwar village,
Coondapur Taluk.

Please take notice that the Sale notice in respect of the above execution has been posted to 31 5 72 for your appearance before the court. The matter will be decided exparte in case you do not appear and defend.

By order of court
K. Narayana Kamath
Advocate for Plff. D. H.

Coondapur, 19—3—72

ಗೇಹ ರಾಜ್ಯದಲ್ಲಿ

ಗಾಯಗೊಂಡ ಹುಲಿಯ

ಹುಸಿ ಗರ್ಜನೆ

'ಕೇಳಿದ್ಯೇನೆ'

'ಏನು?'

'ಮತ್ತಿನ್ನೇನು? ಕಳೆದ ವರ್ಷ ಕೇರಳ ದಿಂದ ಕಮ್ಯುನಿಜಂನ್ನು ಓಡಿಸಿದ ಶ್ರೀಮತಿ ಇಂದಿರಾಗಾಂಧಿ ಈ ವರ್ಷ ಬಂಗಾಳದಿಂದ ಕುತ್ತಿಗೆ ಹಿಡಿದು ದಬ್ಬಿದರು....'

"ಅಲ್ರಿ, ಕೇರಳದಲ್ಲಿ ಕಮ್ಯೂನಿಸ್ಟರು ಇನ್ನೂ ಅಧಿಕಾರದಲ್ಲಿದ್ದಾರೆ...."

'ಅಲ್ವೆ ಕಮ್ಯುನಿಸ್ಟರಲ್ಲಿ ಎರಡು ಗುಂಪು ಇದೆಯಲ್ಲಾ,....'

'ಹ್ಞೂಂ....ಸಿಪಿಐ ಮತ್ತು ಸಿಪಿಎಂ.'

'ಹೌದು. 'ಸಿ ಪಿ.ಐ' ಎಂಬುದು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂದಿರಾ ಆಗಿದೆ ತಾನೆ?'

'ಹಾಗೆಂದರೆ?'

'ಇಂದಿರಾ ಪರ ಕಮ್ಯೂನಿಸ್ಟ್ ಪಾರ್ಟಿ ಅಂತ....ಆದ್ದರಿಂದ ಅವಲ್ಲ ನಾನೆಂದದ್ದು..'

'ಮತ್ತೆ?'

'ಸಿಪಿಎಂ....'

'ಹ್ಞೂಂ. ಅದು ಹೌದೂನ್ನಿ. ಕೇರಳದಲ್ಲಿ ಹಲವುಬಾರಿ ಅಧಿಕಾರದ ಸವಿನೋಡಿದೆ ಅದು....'

'ಅದರ ಕಾಲ ಮುಗಿದು ಹೋಯ್ತು. ಮುಂದಿನ ಸಾಲಿಗೆ ಸಿಪಿಐಯೂ ಉಚ್ಚಾಟನೆಯೊಗಬಹುದು....'

'ಅಲ್ರಿ, ಉಚ್ಚಾಟನೆಯೇಕಾಗಬೇಕು? ಈಗಾಗಲೇ ಹಲವರು ಕಮ್ಯುನಿಸ್ಟರು ಆಳುವ ಕಾಂಗ್ರೆಸ್ಸಿಗೇ ಸೇರಿಕೊಂಡಂತಾದರೆ ಸಾಲದೇನು?'

'ಮತ್ತಿನ್ನೇನು? ಅದು ನಿರ್ಬಲವಾಗುತ್ತದೆ; ಸಮೂಜವಾದಿ ಪಕ್ಷದಂತೆ ಉಸಿರು ಮಾತ್ರ ಹಿಡಿದಿರುವುದೂ ತ್ರಾಸವಾಗುತ್ತದೆ....'

'ಸರೀನ್ನಿ. ಅಲ್ಲ, ಬಂಗಾಳದ ವಿಜಯ ನಿಜಕ್ಕೂ ಅದ್ಭುತವಲ್ಲವೇನು?'

'ಅದ್ಭುತ ಮಾತ್ರವಲ್ಲ, ಅತ್ಯದ್ಭುತ,ಅತ್ಯಂತಾದ್ಭುತ....ಅಲ್ಲಿನ ೨೮೦ ಸ್ಥಾನಗಳಲ್ಲಿ ಆಳುವ ಕಾಂಗ್ರೆಸ್ಸು ೨೧೫ ರಷ್ಟು ಸ್ಥಾನಗಳನ್ನು ಗಳಿಸಿತು....'

'ನಿಜಕ್ಕೂ....'

'ಅಂದರೆ ಮೂರರಲ್ಲಿ ಎರಡರಷ್ಟು!'

'ಅಷ್ಟೇನೇ?'

"ಅದ್ಯಾಕೆ. ಭಾರೀ ತಿರಸ್ಕಾರ ಮಾಡ್ತೀಯೊ?"

'ಅಲ್ರಿ, ನಂ ರಾಜ್ಯದಲ್ಲಿ ಮುಕ್ಕಾಲಂಶ ಬಹುಮತ ಬಂದಿರುವಾಗ?'

'ನೋಡು, ನಮ್ರಾಜ್ಯದ ಕತೆ ಬೇರೆ. ಇಲ್ಲಿ ಕಳೆದ ಕಾಲು ಶತಮಾನದಿಂದ್ಲೂ ಇಡಿಯೋ ಕಡಿಯೋ ಕಾಂಗ್ರೆಸ್ಸು ಸರಕಾರವಿತ್ತು.'

'ಬಂಗಾಳದಲ್ಲಿರಲಿಲ್ಲವೇನು?'

'ಆರಂಭದಲ್ಲಿ ಇತ್ತೂನ್ನು. ಆದರೂ ಇಷ್ಟೊಂದು ಬಹುಮತ ಕಾಂಗ್ರೆಸಿಗೆ ಇದ್ದದ್ದೆಂಬುದೇ ಇಲ್ಲ. ಆದರ ಮೇಲೆ, ೧೯೬೭ರಲ್ಲಿ ಮತ್ತೆ ೬೯ರಲ್ಲಿ ಆಮೇಲೆ ೭೧ರಲ್ಲಿಯು ಚುನಾವಣೆಗಳಲ್ಲಿ ಕಿಚಡಿ ಸರಕಾರಗಳೇ ಆಡಳಿತೆಯನ್ನು ಕೆಡಿಸಿಬಿಟ್ಟುವು....'

'ಹ್ಞೂಂ....ಅದು ಸರೀನ್ನಿ. ಆದ್ದರಿಂದ ಐದು ವರ್ಷಗಳ ಅನಿಶ್ಚಿತತೆ ಅಭದ್ರತೆಗಳಿಂದ ಜನತೆಗೆ ಮುಕ್ತಿ ದೊರೆಯಿತೂಂತಾಯ್ತು...'

'ಅಷ್ಟು ಮಾತ್ರವಲ್ಲ. ಹಿಂಸಾಚಾರಕ್ಕೂ ಒಂದು ತಡೆಹಾಕಿದಂತಾಯ್ತು....'

'ಆದರೆ ನೋಡಿ, ಮಾರ್ಕ್ಸಿಸ್ಟರು ಈ ಚುನಾವಣೆಯನ್ನು ಮೋಸ— ವಂಚನೆಯೆಂದೂ ಪ್ರಜಾಸತ್ತೆಗಾದ ಅಪಚಾರವೆಂದೂ ದೂರುತ್ತಿದ್ದಾರಲ್ಲಾ?'

'ಪಾಪ, ಗಾಯಗೊಂಡ ಹುಲಿ ಹುಸಿ ಗರ್ಜನೆ ಮಾಡದೆ ಮತ್ತೇನು ಮಾಡೀತು?'

'ಅಲ್ರಿ, ಆ ಹುಲಿ ಪೈ ಮೇಲೆ ಹಾರತೊಡಗುವುದಿಲ್ಲವೆಂದೇನು ಗ್ಯಾರಂಟಿ?'

'ಅಂತದ್ದೇನೂ ಇಲ್ಲ. ಆದರೆ ಅದು ಹಾರಿದರೂ ನೋವಾಗದಂತೆ ಅವರ ಹಲ್ಲು- ಉಗುರುಗಳನ್ನು ಕಿತ್ತುಹಾಕಿಯೂಯಿತಲ್ಲಾ....'

'ಹ್ಞೂ, ಇನ್ನು ಅದು ಕಾಗದದ ಹುಲಿಯಂತೆ ನೋಡುತ್ತ ನಿಂತರೆ ಸರೀನ್ನಿ. ಅಲ್ರಿ, ಪಂಜಾಬದಿಂದ ಅಕಾಲಿಗಳನ್ನೂ ಆಳುವ ಕಾಂಗ್ರೆಸ್ಸು ಭೂಮಿಗೆರಗಿಸಿತು ನೋಡಿ....'

'ಹ್ಞೂಂ....ಆದರೆ, ಅಕಾಲಿಗಳು ಮಾರ್ಕ್ಸಿಸ್ಟರಿಗಿಂತ ಭೇಸು....'

'ಯಾಕಂತೀರಿ?'

'ಅಲ್ವೆ, ಅಕಾಲಿಗಳದ್ದು ಪ್ರಾಂತೀಯ ನಿಷ್ಠೆ, ಮಾರ್ಕ್ಸಿಸ್ಟರದ್ದು ವಿದೇಶೀ ನಿಷ್ಠೆ...'

'ಹ್ಞೂಂ. ಅದ್ರಿಂದ ಪಂಜಾಬಿ ವಿಜಯಕ್ಕೆ ಮಹತ್ವವಿಲ್ಲಾಂತನ್ತೀರಾ'

'ಇಲ್ಲಾಂತ ಯಾರಂದ್ರು? ಹಾಗೆ ನೋಡುವುದಾದ್ರೆ, 'ಇಂದಿರಾ ವಿಜಯ' ಲೋಕದಲ್ಲೇ ಮುಖ ಪುಟದ ಸುದ್ದಿ'

'ಯಾಕೆ ಹಾಗಂತೀರಿ?'

'ಯಾಕಂದ್ರೆ, ಇಡಿಯ ದೇಶದಿಂದಲೇ ನಶಿಸಿ ಹೋಗುತಿದ್ದ ಕಾಂಗ್ರೆಸ್ ಆಡಳಿತವನ್ನು ಎಲ್ಲೆಡೆಯೂ ಮತ್ತೆ ಜ್ಯಾರಿಗೆ ತಂದ ವಿಜಯವಲ್ಲವೆ?'

'ಎಲ್ಲೆಡೆಯೂ ಹೇಗೆ? ಗೋವದಲ್ಲಿಲ್ಲ, ಮೇಘಾಲಯ....'

'ಅಲ್ಲಿ ಮೊದಲೂ ಇರಲಿಲ್ಲ....'

'ಅಂದ್ರೆ ಒಂದಾನೊಂದು ಕಾಲದಲ್ಲಿದ್ದ ಸಾಮ್ರಾಜ್ಯವನ್ನು ಮತ್ತೆ ಸ್ಥಾಪಿಸಿತೂನ್ನಿ....'

'ಹಾಗಾದ್ರೆ ಹಾಗೆ ಇನ್ನುಳಿದಿರುವುದು ಎಂದ್ರೆ ತಮಿಳು ನಾಡೊಂದು ಮಾತ್ರ....'

'ಅದ್ಯಾಕೆ? ಒರಿಸ್ಸಾ ಇದೆಯಲ್ಲಾ?'

'ಇದೆ. ಆದ್ರೆ ಅಲ್ಲಿನ ಸರಕಾರ ಉರುಳಲು ಬಹಳ ದಿನ ದೂರವಿಲ್ಲ....'

'ಅಲ್ರಿ, ಮೊನ್ನಿನ ಲೋಕಸಭೆಗೆ ನಡೆದ ಉಪ ಚುನಾವಣೆಯಲ್ಲಿ ಆಳುವ ಕಾಂಗ್ರೆಸ್ಸು ಸೋತಿತಂತಿಲ್ಲ?'

'ಹೌದು. ಉತ್ಕಲ ಕಾಂಗ್ರೆಸ್ಸು ವಿಜಯಿಯಾಯ್ತು. ಆದರೆ ದೇಶಕ್ಕೆ ದೇಶವೇ ಪ್ರಾದೇಶಿಕತೆಯನ್ನು ಕಿತ್ತು ಬಿಸುಟಾಗ ಉತ್ಕಲವೇನದಕ್ಕೆ ಹೊರತಾಗಲಾರದು...'

'ಯಾಕೆ ಹಾಗಂತೀರಿ?

'ಯಾಕೆ ಅಂದರೆ ಇಲ್ಲಿ ನೋಡು, ಯಾವ ಪಕ್ಷ ದೇಶವ್ಯಾಪಿಯಾಗಿದೆಯೋ ಅದನ್ನೇ ಈ ಬಾರಿ ಜನ ಬೆಂಬಲಿಸಿದೆ.....

'ಆದರೆ ಗೋವಾ....'

'ಗೋವಾದ ಕತೆ ಬೇರೆ....ಅಲ್ಲಿ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ ತನ್ನ ಸ್ಥಾನವನ್ನು ಮತ್ತೂ ಬಲಗೊಳಿಸಿದೆ ನಿಜ....'

'ಅಷ್ಟೇ ಅಲ್ಲ. ಆಳುವ ಕಾಂಗ್ರೆಸಿಗೆ ಬಲವಾದ ಲತ್ತೆ ಕೊಟ್ಟಿದೆ...'

'ಆಯ್ತಮ್ಮಾ, ಅದೊಂದು ಅಪವಾದ..'

'ನೋಡಿ, ಈ ಚುನಾವಣೆಗಳು ಶ್ರೀಮತಿ ಗಾಂಧಿಯವರ ನೀತಿ — ನಿಲುಮೆಗಳನ್ನು ಬೆಂಬಲಿಸಿವೆಯೆನ್ನುವುದಾದರೆ, ಗೋಮನ್ನರು ಮಹಾರಾಷ್ಟ್ರದಲ್ಲಿ ಸೇರುವ ಇಚ್ಛೆಯನ್ನು ಮತ್ತೊಮ್ಮೆ ಪ್ರಕಟಿಸಿದ್ದಾರೆಂದೇಕೆ ಹೇಳಬಾರದು? ಅಷ್ಟೇ ಯಾಕೆ, ಬೆಳಗಾವಿಯವರೂ ಮಹಾರಾಷ್ಟ್ರಪರರೆಂದು ಸಾರಬಹುದಲ್ಲಾ?'

'ನೋಡು, ಇದೆಲ್ಲ ಅಗಣ್ಯ. ಆಳುವ ಕಾಂಗ್ರೆಸ್ಸು ಈ ಸಲಿಯಲ್ಲಿ ಸ್ಪರ್ಧಿಸಿದ್ದಿಲ್ಲ. ಭಾರತದ ಜನತೆ ಶ್ರೀಮತಿ ಗಾಂಧಿಯವರಿಗೆ ಮತ್ತು ಅವರ ಕಾಲ್ಪನಿಕ ಸಮಾಜವಾದಕ್ಕೆ ಬಲವತ್ತರವಾದ ಬೆಂಬಲ ನೀಡಿದೆ..'

"ಹ್ಞೂ...."

"ಈ ಆಳುವ ಕಾಂಗ್ರೆಸ್ಸಿಗೆ ದೊರೆತ ವಿಜಯವು ದಿ| ಜವಾಹರಲಾಲರು ಕಾಂಗ್ರೆಸ್ಸಿಗೆ ತಂದು ಕೊಟ್ಟಿದ್ದ ವಿಜಯವನ್ನು ನೆನಪಿಗೆ ತರುತ್ತದೆ...."

'ಹ್ಞೂ....'

'ಈ ವಿಜಯದಿಂದಾಗಿ ಶ್ರೀಮತಿ ಗಾಂಧಿಯವರಿಗೆ ಹೆಚ್ಚಿನ ದೃಢತೆಯನ್ನೂ ತಂದುಕೊಟ್ಟಿದೆ....'

'ನಿಜಕ್ಕೂ....'

'ಆದ್ದರಿಂದ ಮುಂದಿನ ಐದು(ನಾಲ್ಕು?) ವರ್ಷಗಳಲ್ಲಿ ಶ್ರೀಸಾಮಾನ್ಯನಿಗೆ ಸ್ವರ್ಗಸುಖ ತಂದು ನೀಡುವ ಸಮಾಜವಾದವನ್ನು ಅನುಷ್ಠಾನಕ್ಕೆ ತರಲು ಆಕೆ ಸಂಪೂರ್ಣ ಸ್ವಾತಂತ್ರ್ಯವುಳ್ಳವರಾದರು.'

'ಹ್ಞೂಂ....'

'ಅತ್ಯಂತ ವಿವಾದಗ್ರಸ್ಥವಾದ ಭೂಸುಧಾರಣೆ, ಕೃಷಿ ವ್ಯವಸಾಯದ ಮೇಲೆ ತೆರಿಗೆ ಮೊದಲಾದುವುಗಳನ್ನು ಜ್ಯಾರಿಗೆ ತರಲು ಇನ್ನು ಆಕೆಯ ಕೈಗಳನ್ನು ತಡೆಯುವವರು ಯಾರೂ ಇಲ್ಲ....'

'ಆಯ್ತಪ್ಪ, ಆಯ್ತು....ಅದನ್ನೆಲ್ಲಾ ಇನ್ನು ಕಾದು ನೋಡೋಣ. ನೋಡಿ....'

'ಏನು?'

'ಇದು ಮುಂಗಡಪತ್ರದ ವಾರ....'

'ಹ್ಞೂಂ....'

'ರೇಲ್ವೆ ಮುಂಗಡ ಪತ್ರವೀಬಾರಿ ಉಳಿತಾಯದ್ದಂತೆ....'

'ಆಗಲಿ, ಶ್ರೀ ಕೆಂಗೆಲ್ಲರಿಗೆ ಅಭಿನಂದನೆಗಳು....'

'ಯಾಕೆ?'

'ಉಳಿತಾಯದ ಮುಂಗಡ ಪತ್ರಕ್ಕಲ್ಲ.'

'ಮತ್ತೆ....?'

'ದೇಶದಲ್ಲೆಲ್ಲ ಏಕರೂಪದ ರೇಲುದಾರಿ ರೂಪಿಸುವ ಯೋಜನೆಗಾಗಿ, ಕನ್ಯಾಕುಮಾರಿಯನ್ನು ನವದೆಹಲಿಗೆ ನೇರಾಗಿ ಜೋಡಿಸುವ ಉದ್ದೇಶಕ್ಕಾಗಿ ..'

'ಅಲ್ರಿ, ಈ ಬಾರಿಯೂ ದರಗಳಲ್ಲಿ ಏರಿಕೆಯನ್ನು ತೋರಿಸಿದ್ದಾರೆ....'

'ಆದರೂ, ಶ್ರೀಸಾಮಾನ್ಯನ ಮೂರನೆಯ ದರ್ಜೆಗೆ ಕೈ ಹಾಕಲಿಲ್ಲ....'

'ಮೊನ್ನೆ ನವಂಬರದಲ್ಲಿ ತಾನೇ ಏರಿಸಿದ್ದು?'

'ಹ್ಞೂಂ....ಇನ್ನು ಮುಂದಿನ ವರ್ಷಕ್ಕೆ

(ಒಂಭತ್ತನೇ ಪುಟ ನೋಡಿರಿ)

ಕೃತಜ್ಞತಾ ಸಮರ್ಪಣೆ

ಬೆಳ್ತಂಗಡಿ ಮತದಾರ ಕ್ಷೇತ್ರದ ಮತದಾರ ಬಂಧುಗಳಲ್ಲಿ ಆತ್ಮೀಯ ವಿನಂತಿ

ಈ ಬಾರಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ, ನನ್ನ ಹಾಗೂ ನನ್ನ ಪಕ್ಷದ ಮೇಲೆ ಅಭಿಮಾನವಿಟ್ಟು ಸರ್ವ ರೀತಿಯ ಸಹಕಾರ ನೀಡಿದ ಸ್ವಯಂಸೇವಕರೂ, ಅತ್ಯಧಿಕ ಬಹುಮತದಿಂದ ನನ್ನನ್ನು ತಮ್ಮ ಪ್ರತಿನಿಧಿಯನ್ನಾಗಿ ಚುನಾಯಿಸಿದ ಎಲ್ಲಾ ಮತದಾರ ಬಂಧುಗಳಿಗೆ ನನ್ನ ವೈಯಕ್ತಿಕ ಹಾಗೂ ಪಕ್ಷದ ಪತಿಯಿಂದ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಾಗೂ ಈ ನನ್ನ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುವರೇ ತಮ್ಮೆಲ್ಲರ ಸಹಕಾರ ನೀಡ ಬೇಕಾಗಿ ವಿನಂತಿ.

ಈ ಕ್ಷೇತ್ರದ ಎಲ್ಲಾ ಮತದಾರರನ್ನು ಮುಖತಃ ಕಂಡು ಕೃತಜ್ಞತೆಯನ್ನು ಅರ್ಪಿಸಬೇಕಾದುದು ನನ್ನ ಕರ್ತವ್ಯವಾಗಿದ್ದರೂ, ಸಮಯಾಭಾವದಿಂದ ಅಸಾಧ್ಯವಾದುದಕ್ಕೆ ನನ್ನನ್ನು ಕ್ಷಮಿಸಬೇಕಾಗಿ ವಿನಂತಿ.

ಇತೀ ನಿಮ್ಮವನೇ ಆದ,

ಕೆ. ಸುಬ್ರಹ್ಮಣ್ಯ ಗೌಡ

ಶ್ರೀರಾಮನವಮಿಯ

ಆದರ್ಶ ವ್ಯಕ್ತಿ ಶ್ರೀರಾಮ

ರಾವಣನ ಸಂಹಾರವಾದ ಬಳಿಕ ಪ್ರಭು ಶ್ರೀ ರಾಮಚಂದ್ರ ಲಂಕೆಯಲ್ಲೇ ಕೆಲದಿನ ತಂಗಿದ್ದ. ಲಂಕೆಯ ಚೆಲುವಿಗೆ ತಮ್ಮ ಲಕ್ಷ್ಮಣ ಮನಸೋತು, ಲಂಕೆಯಲ್ಲಿಯೇ ಉಳಿಯುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದ. ಆಗ ರಾಮ, "ಅಪಿಸ್ವರ್ಣಮಯೀ ಲಂಕಾ| ನಮೇ ರೋಚತೆ ಲಕ್ಷ್ಮಣಾ| ಜನನೀ ಜನ್ಮಭೂಮಿಶ್ಚ| ಸ್ವರ್ಗಾದಪಿ ಗರೀಯಸೀ" (ಲಂಕೆ ಸ್ವರ್ಣಮಯವಾಗಿದ್ದರೂ ಜನನಿ, ಜನ್ಮಭೂಮಿಗಳು ಸ್ವರ್ಗ ಸಮಾನವಾಗಿವೆ, ಲಕ್ಷ್ಮಣ) ಎಂದು ಜನ್ಮಭೂಮಿಯ ಮೇಲೆ ಅಪಾರ ಒಲವಿನಿಂದ ಹೇಳಿದ. ಆದರಿಂದಲೇ ಈ ಪಾವನ ಭಾರತದಲ್ಲಿ ಶ್ರೀ ರಾಮನಿಗೆ ಆದರ್ಶವಾದ ರಾಮರಾಜ್ಯ ಸ್ಥಾಪಿಸಲು ಸಾಧ್ಯವಾಯಿತು. ಆರ್ಯ ಧರ್ಮವನ್ನು ಶ್ರೀರಾಮ 'ಏಷಧರ್ಮಃ ಸನಾತನಃ' ಎಂದೇ ನಡೆಸಿದ.

ಐತರೇಯ ಉಪನಿಷತ್ತಿನಲ್ಲಿ ಪ್ರಾಚೀನ ಋಷಿಗಳು 'ಸಾಮ್ರಾಜ್ಯಂ, ಭೌಜ್ಯಂ ಸ್ವೈರಾಜ್ಯಂ, ಪಾರಮೇಷ್ಠ್ಯಂ ರಾಜ್ಯಂ ಮಹಾರಾಜ್ಯಂ, ಆಧಿಪತ್ಯಮಯಂ-' ಇತ್ಯಾದಿಯಾಗಿ ಸಾಮಂತ ಪರ್ಯಾಯಿ ರಾಜ್ಯಗಳ ತನಕ ಎಂಟು ರಾಜ್ಯಾಡಳಿತದ ಕುರಿತು ವರ್ಣಿಸಿದ್ದಾರೆ. ಅವುಗಳಲ್ಲಿ ರಾಮನದು ಸ್ವೈರಾಜ್ಯವಾಗಿತ್ತು. ಅದರರ್ಥ ರಾಜನಿಲ್ಲದೆ ಪ್ರಜೆಗಳೇ ನಡೆಸುವ ರಾಜ್ಯವೆಂದಾದರೂ ಪ್ರಜೆಗಳ ಪ್ರಜೆಯಾದ ಶ್ರೀರಾಮ ಅವರ ಬೇಕು ಬೇಡಗಳನ್ನು ಸರಿಯಾಗಿ ಗುರುತಿಸಿ, 'ವಸುಧೈವ ಕುಟುಂಬಕಂ' ಎಂಬಂತೆ ಪ್ರಜಾಪ್ರಭುತ್ವ ಸರಕಾರವನ್ನೇ ನಿರ್ಮಿಸಿ, ಪ್ರಜಾನುವರ್ತಿಯಾಗಿ ಪರಿಪಾಲನೆ ಮಾಡಿದ್ದಾನೆ.

ಹಿಂದೆ, 'ಪೃಥಿವ್ಯೈ ಸಮುದ್ರ ಪರ್ಯಂತಾಯಾ ಏಕರಾಡ್' (ಸಮುದ್ರ ಪರ್ಯಂತ ಪೃಥ್ವಿಯ ಎಲ್ಲಾ ಭಾಗಕ್ಕೂ ಒಬ್ಬನೇ ಆರ್ಯ ರಾಜನಾಗಿರಲಿ) ಎಂದರು ಋಷಿಗಳು. ಅದರಂತೆ ಆರ್ಯ ಪುರುಷ ಶ್ರೀರಾಮನ ಕಾಲದಲ್ಲಿ ಪೂರ್ಣ ಹಿಮಾಚಲ ಪರ್ವತ, ಸಿಂಧೂನದಿ, ಗಾಂಧಾರ ದೇಶಗಳು ಭಾರತದಾಗಿದ್ದುವು. ಇಂದು ಅವಾವುವೂ ನಮಗಿಲ್ಲ. ಸಮುದ್ರ ವಲಯಾಂಕಿತ ಪೃಥ್ವಿಗೆ ಶ್ರೀರಾಮ ಏಕೈಕ ಸಾಮ್ರಾಟನಾಗಿದ್ದ.

ಭಾರತ ವರ್ಷದಲ್ಲಿ ರಾಮನಿಗಿಂತಲೂ ಹಿಂದೆ ಅನೇಕ ರಾಜರಿದ್ದು, ರಾಜ್ಯಾಡಳಿತ ನಡೆಸಿದ್ದರು. ನಹುಷ, ಶಿಬಿ, ಹರಿಶ್ಚಂದ್ರ, ದಶರಥ ಇವರೆಲ್ಲ ಪ್ರಜೆಗಳನ್ನಾಳಿದ್ದರು. ನಾವು ಇಂದು ಅವರ ಆದರ್ಶದ ಹೆಸರು ಹೇಳದೆ ಶ್ರೀರಾಮ ರಾಜ್ಯವೊಂದನ್ನೇ ಯಾಕೆ ಹೇಳುತ್ತಿದ್ದೇವೆಂದರೆ ಮರ್ಯಾದಾ ಪುರುಷೋತ್ತಮ ಶ್ರೀರಾಮನದು ಆದರ್ಶ ಜೀವನ. ಆತ ಪ್ರಜಾನುರಾಗಿ. ನ್ಯಾಯ ನಿಷ್ಠುರಿ. ಅವನ ಪ್ರೇಮ, ದಯೆ, ಪ್ರಜಾಭಿಮಾನ, ಧರ್ಮ ಪಾಲನೆ ಇವುಗಳು ಇತರರಿಗಿಂತ ಅತ್ಯಂತ ಕಟ್ಟುನಿಟ್ಟಿನದಾಗಿದ್ದುವು. ತನ್ನ ಸ್ವಾರ್ಥ ಅವನಿಗೆಂದೂ ಇರಲಿಲ್ಲ. ಅಂಥ ಹಿತಚಿಂತಕರನ್ನು ಬಳಿ ಸುಳಿಯಗೊಡುತ್ತಿರಲಿಲ್ಲ. ರಾಮನ ನಿರ್ಮಲತನವೇ ಅವನನ್ನು ಮರ್ಯಾದಾ ಪುರುಷೋತ್ತಮನೆನಿಸಿತು. ಸಮಾಜ, ಪರಿವಾರಗಳೊಳಗೆ ನಡೆಸಬೇಕಾದ ವ್ಯವಹಾರ ಶ್ರೀರಾಮನಿಗೆ ಚೆನ್ನಾಗಿ ತಿಳಿದಿತ್ತು. ಪರಬ್ರಹ್ಮ ಸ್ವರೂಪದ ಸಿದ್ಧಿಗೆ ಎಂಥ ತ್ಯಾಗ, ಆದರ್ಶ ಬೇಕೆಂದು ತೋರಿಸಿ ಕೊಟ್ಟವ ಆತ. ಅಂತೆಯೇ ರಾಮರಾಜ್ಯ ಆದರ್ಶ ಪರಿಪಾಲನೆಗೊಂದು ಹೆಗ್ಗುರುತಾಯಿತು.

ರಾಮರಾಜ್ಯ ಹೇಗಿತ್ತೆಂದರೆ ಎಲ್ಲಾ ವರ್ಗದ ಸ್ತ್ರೀ ಪುರುಷರೂ ಸಚ್ಚಾರಿತ್ರರೂ, ಸ್ವಧರ್ಮ ಪರಿಪಾಲಕರೂ, ಕರ್ತವ್ಯ ನಿಷ್ಠರೂ ಆಗಿದ್ದರು. ಧರ್ಮ ಪರಾಯಣರಾಗಿ ಕಾಮ ಕ್ರೋಧಾದಿಗಳನ್ನು ಜಯಿಸಿದ ರಾಮ ರಾಜ್ಯದಲ್ಲಿ ಶೋಕ, ರೋಗಗಳು ಇರಲಿಲ್ಲ. ಎಲ್ಲರಲ್ಲೂ ವೈರದ ಬದಲು ದಿವ್ಯ ಪ್ರೇಮವಿತ್ತು. ಗುಣ ಸಂಪನ್ನತೆ, ಜ್ಞಾನ, ಸತ್ಯ—ಅಂದಿನ ಬಳುವಳಿಯಾಗಿತ್ತು.

ದೈಹಿಕ, ದೈವಿಕ ಮತ್ತು ಭೌತಿಕಗಳೆಂಬ ಮೂರು ತಾಪಗಳು ರಾಮರಾಜ್ಯದಲ್ಲಿ ಇರಲೇ ಇಲ್ಲ. ಬಾಹ್ಯ, ಆಂತರಿಕ ಹಾಗೂ ಆರ್ಥಿಕ ವಿಷಮತೆಗಳಿಗೆ ಹೊರತಾಗಿದ್ದರವರು. ಎಲ್ಲರೂ ನಿರ್ಮಲಾಂತಃಕರಣರಾಗಿದ್ದರು. ಸದ್ಭಾವನೆ, ಸದಾಚಾರ ಎಲ್ಲರಲ್ಲೂ ಇತ್ತು. ಪ್ರಜೆಗಳಿಗೆ ಶ್ರೀರಾಮ ಏನು ಹೇಳುವುದಿದ್ದರೂ 'ನಾನು ಒಳ್ಳೆಯದನ್ನು ಹೇಳಿದರೆ ಮಾತ್ರ ಗ್ರಹಿಸಿಕೊಳ್ಳಿರಿ. ಕೆಟ್ಟದ್ದೇನಾದರೂ ಅಂದರೆ ತಕ್ಷಣ ನನ್ನನ್ನು ಖಂಡಿಸಿರಿ' ಎನ್ನುತಿದ್ದ.

ರಾಮನ ರಾಜ್ಯ ಶಾಸನ, ರೀತಿ ನೀತಿಗಳೂ ಉನ್ನತ ಮಟ್ಟದವಾಗಿದ್ದವು. ಸತ್ಯ, ಅಹಿಂಸೆ, ನ್ಯಾಯ, ಪ್ರೇಮಗಳಿಗೆ ಅಲ್ಲಿ ಆದರವಿತ್ತು. ತುಲಸೀದಾಸರು ಹೇಳಿರುವಂತೆ ಸತ್ಸಂಗಿ ಮತ್ತು ವಿವೇಕಿಗಳು ಕರೆದಾಗ ರಾಮ ಓಡೋಡಿ ಬರುತ್ತಿದ್ದ. ದುಃಖ ದಾರಿದ್ರ್ಯಗಳನ್ನು ರಾಮ ತೊಡೆದು ಹಾಕಿದ್ದ. ಜಂಭ, ಧೂರ್ತತೆ, ಸ್ವಾರ್ಥಗಳ ಬದಲು ಪಾಂಡಿತ್ಯ, ಸಹೃದಯತೆ, ಸಾತ್ವಿಕ ನೀತಿ, ಪುಣ್ಯ ಸಂಪಾದನೆಗಳು ಅವನಿಗೆ ಪ್ರೀತಿಯವಾಗಿದ್ದವು ಸಕಲ ಪ್ರಾಣಿಗಳೂ ಏಕಾಗ್ರ ಚಿತ್ತರಾಗಬೇಕು. ಏಕ ಪತ್ನೀ ವ್ರತಸ್ಥರಾಗಬೇಕು. ಉದಾರಿಗಳು ಆಗಬೇಕು. ಅನಂತ ಕೋಟಿ ಬ್ರಹ್ಮಾಂಡಕ್ಕೂ ಏಕರೀತಿಯ ಶಿಕ್ಷಣ ದೊರಕ ಬೇಕೆನ್ನುತಿದ್ದ ಆತ. ರಾಮನ ಕಾಲದಲ್ಲಿ ಗಿರಿಗಳು ನವ ಮಣಿಗಳ ಖಣಿಗಳಾಗಿದ್ದವು; ಧರಿತ್ರಿ ಹಸುರುಡುಗೆಯುಟ್ಟು ಸಸ್ಯ ಶ್ಯಾಮಲೆಯಾಗಿದ್ದಳು, ಸಮುದ್ರದ ತೆರೆಗಳು ಮೌಕ್ತಿಕ ಭರಿತವಾಗಿದ್ದವು; ಮರಗಳು ಮಧು ಸುರಿಸುತ್ತಿದ್ದುವು; ಗೋವುಗಳು ಕ್ಷೀರವಾರಿಧಿಗಳಾಗಿದ್ದವು. ಬಯಸಿದಂತೆ ಮೇಘ ಜಲವೃಷ್ಟಿ ಹರಿಸುತ್ತಿತ್ತು; ಚಂದಿರನು ತಂಪಾದ ಕಿರಣಗಳಿಂದ ಸಮಗ್ರ ಪೃಥ್ವಿಗೆ ಬೆಳಕು ಚೆಲ್ಲುತ್ತಿದ್ದನು, ಗಿಡ ಬಳ್ಳಿಗಳು ಕುಣಿಯುತ್ತಿದ್ದವು. ಸದಾ ಕಾಲವೂ ವಸಂತ ಮಾಸ ನಲಿಯುತ್ತಿದ್ದು ಪ್ರಭು ನಾಮ ಸ್ಮರಣೆಯಲ್ಲಿ ಪ್ರಾಣಿಗಳೂ ಮಗ್ನವಾಗಿರುತ್ತಿದ್ದುವು. ಬ್ರಾಹ್ಮಣರು ಪಾಂಡಿತ್ಯವಂತರಾಗಿದ್ದರೆಂದು ಕವಿಗಳು ವರ್ಣಿಸಿದ್ದಾರೆ.

ರಾಮ ರಾಜ್ಯದ ಅಧಿಕಾರಿಗಳು ಲಂಚಕೋರರಾಗಿರದೆ ಸದಾ ನ್ಯಾಯವನ್ನೇ ಸ್ಮರಿಸಿ ಕೊಳ್ಳುತ್ತಿದ್ದರು. ವಾಲ್ಮೀಕಿ ಹೇಳಿದಂತೆ, 'ಲೋಕೇ ನ ಹಿ ಸವಿದ್ಯೇತಯೋ ನ ರಾಮಮನುವ್ರತಃ' (ರಾಮನ ಅನುಯಾಯಿಯಲ್ಲದವನು ಲೋಕದಲ್ಲೇ ಹುಟ್ಟಿರಲಿಲ್ಲ.) ಶ್ರೀ ರಾಮರಾಜ್ಯದಲ್ಲಿ ಸುಖ ಶಾಂತಿ ಕಾಲು ಮುರಿದು ಬಿದ್ದಿತ್ತು. ಆತ ವನವಾಸದಲ್ಲಿದ್ದಾಗ ಅಯೋಧ್ಯೆಗೆ ಅರಾಜಕ ಪರಿಸ್ಥಿತಿ ಬಂದಿತ್ತು. ರಸ್ತೆಗಳೆಲ್ಲ ಕೆಟ್ಟಿದ್ದುವು. ಈ ರೀತಿ ರಾಮಾಯಣದ ಒಂದು ದೊಡ್ಡ ಅಧ್ಯಾಯದಲ್ಲಿ ಆ ದುಸ್ಥಿತಿ ವರ್ಣಿಸಲ್ಪಟ್ಟಿದ್ದರೆ ಶ್ರೀರಾಮನ ಆದರ್ಶಪರಿಪಾಲನೆಯ ಬಗೆಗೆ ಕೇವಲ ಆರು ಶ್ಲೋಕಗಳಷ್ಟೇ ಇವೆ.

ರಘು ವಂಶದಲ್ಲೂ ಪೂರ್ವಿಕರ ಆಡಳಿತ ವಿವರವಿದೆಯಲ್ಲದೆ ರಾಮರಾಜ್ಯದ ವಿವರವಿಲ್ಲ.

ನ ಪರ್ಯದೇವನ್ ವಿಧವಾ ನಚ.... ಎಂಬ ಶ್ಲೋಕದಲ್ಲಿ ರಾಮ ಹನ್ನೊಂದು ಸಾವಿರ ವರುಷ ರಾಜ್ಯವಾಳಿದನೆಂದೂ ಆಗ ಎಲ್ಲರೂ ಧರ್ಮ ಪರಾಯಣರೂ ಆಗಿದ್ದರೆಂದೂ ಇದೆ. ರಾಮನ ನಿರ್ಣಯವನ್ನು ಯಾರಿಗೂ ತಿದ್ದುವ ಹಕ್ಕಿರಲಿಲ್ಲ. ಶ್ರೀರಾಮ ಶಾಸ್ತ್ರಕೋವಿದ. ವಾದ ಪರಿಪೂರ್ಣನಾಗಿದ್ದನೆಂಬುದಕ್ಕೆ ಉದಾಹರಣೆ ಅನೇಕ. ಕರ್ತವ್ಯ ನಿಷ್ಠೆಗೆ ಆತನೆಂದೂ ಹಿಂಜರಿದಿಲ್ಲ. ಹಿಂಬಾಗದಿಂದ ಬಾಣ ಹೊಡೆದು ವಾಲಿಯನ್ನು ಕೆಡವಿ ಆತನ ಉದ್ಧಟ ಪ್ರಶ್ನೆಗಳಿಗೆ ಶಾಂತವಾಗಿ, 'ನೀನು ಶಾಖಾಮೃಗ. ನಾನು ಕ್ಷತ್ರಿಯ. ನಿನ್ನನ್ನು ಕೊಲ್ಲುವ ಹಕ್ಕು ನನಗಿದೆ. ಬೇಟೆಯಲ್ಲಿ ಇಂಥ ಬದಿಯಲ್ಲೇ ಬಾಣ ಬಿಡಬೇಕೆಂಬ ನಿಯಮವಿಲ್ಲ' ಎಂಬ ವಾದದ ದರ್ಪವನ್ನು ಮಂಡಿಸಿದ ಧೋರಣೆ, ಪ್ರವೃತ್ತಿ ಅವನದು.

ರಾಮನಿಗೆ ಕರ್ಮವೆಲ್ಲ ಅಕ್ಲಿಷ್ಟ. ಅವನಲ್ಲಿ ಜನಾಭಿಪ್ರಾಯ ಪ್ರಧಾನವಾಗಿದ್ದರೂ ಅದಕ್ಕಾತನೇ ಹೊಣೆಯಾಗಿದ್ದ. 'ಯೋ ಹರೇತ್ ಬಲಿ ಷಡ್ಭಾಗಂ' ಅಂದರೆ ಯತಿಗಳ ತಪೋ ಪುಣ್ಯದಲ್ಲಿ ಚತುರ್ಭಾಗದ ಹಕ್ಕಿರುವ ರಾಜನೇ ಆಯಾ ಬಗೆಯ ಪ್ರಜೆಗಳನ್ನು ಮಕ್ಕಳಂತೆ ಕಾಯುವುದು ಅವನಿಗೆ ಕೀರ್ತಿ, ಸದ್ಗತಿಗಳಾಗಿದ್ದುವು. ವರ್ಣಾಶ್ರಮ ಧರ್ಮ ರಾಮ ರಾಜ್ಯದಲ್ಲಿ ಹಿರಿದಾಗಿತ್ತು. ಧೃತಿಯಿಂದ, ನಿಯಮದಿಂದ ಆತ ಪ್ರಜೆಗಳನ್ನು ರಕ್ಷಿಸುತ್ತಿದ್ದ. ಅಸದನುಶಾಸನ, ದೀನ ರಕ್ಷಣೆ, ಶರಣಾಗತ ರಕ್ಷಣೆ, ಲೋಕಹಿತಗಳೆಂಬ ಶಿಷ್ಟಾಚಾರಕ್ಕೆ ಶ್ರೀರಾಮ ಹೊರತಾಗಿರಲಿಲ್ಲ ಕ್ಷತ್ರಿಯ ಧರ್ಮ, ಚಾರಿತ್ರ್ಯ ಆತನಲ್ಲಿತ್ತು.

ರಾಜನ ಹಿರಿಯ ಮಗನೇ ರಾಜನಾಗಬೇಕೆಂಬ ಸಂಪ್ರದಾಯವಿದ್ದರೂ ರಾಮ ಕೈಕೇಯಿಯ ಮಾತಿಗಾಗಿ ವನವಾಸಕ್ಕೆ ಯಾಕೆ ಹೋದ ಎಂದರೆ ಒಂದನೆಯದಾಗಿ

(ಎಂಟನೇ ಪುಟ ನೋಡಿರಿ)

NOTICE

In the Court of the Munsif of Udipi

O. S. No. 427/71

Between: –

B. Gururaja Tantry —Plaintiff

and

B. Srinivasa Bhatta —Defendant

To B. Srinivasa Bhatta
Son of Anantha Bhatta
Balakatta Mutt-Hirebettu-Vill ge, Udipi.

Please take notice that the above suit filed against you for plaint claim - stands Posted to 6–4–72 and if you fail to appear at 11–00 A. M. on the said date either personally or through your counsel, before the Court and plead your case, you will be set Expartee and the case will be decided on merits

By order

N. Ramachandra Bhat
Advocate for Plaintiff

Udipi, 15—4—72

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 151 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, **ರೇಸ್ ಕೋರ್ಸ್ ರೋಡ್, ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಚಾರು ಚಯನ

ಮತದಾರ ಯಾದಿಗಳಲ್ಲಿ ಲೋಪ ದೋಷಗಳು

ಚುನಾವಣೆಗಳು ಮುಗಿದುವು. ಈ ಬಾರಿ ಉಪಯೋಗಿಸಲಾದ ಮತದಾರ ಯಾದಿಗಳ ಬಗೆಗೆ ಎಲ್ಲೆಡೆಗಳಿಂದಲೂ ಭಾರೀ ಭಾರೀ ದೂರುಗಳು.

ವಾಸ್ತವ್ಯವಿಲ್ಲವೆಂದೋ ಸತ್ತಿದ್ದಾರೆಂದೋ ಷರಾ ಬರೆದು ಕೆಂಪು—ಕಪ್ಪು ಗೆರೆ ಹೊಡೆದು ವಾಸ್ತವ್ಯವಿರುವ, ಜೀವಂತವಿರುವ ಮತಾಧಿಕಾರಿಗೆ ಮತದಾನದ ಅಧಿಕಾರವನ್ನು ಕಿತ್ತುಕೊಂಡ ಉದಾಹರಣೆಗಳು ಅನೇಕ.

೧೯೭೧ರ ಲೋಕ ಸಭಾ ಚುನಾವಣೆಯಲ್ಲಿ ಮತ ಹಾಕಿದ ಅನೇಕರಿಗೆ ಈ ವರ್ಷ ಮತಾಧಿಕಾರವಿಲ್ಲ.

ಕಳೆದ ವರ್ಷದ ಮತದಾರ ಯಾದಿಯನ್ನು ಪರಿಷ್ಕರಿಸುವ ಮಹಾನ್ ಕಾರ್ಯವನ್ನು ಚುನಾವಣಾ ಆಯೋಗ ಮಾಡಿತ್ತು. ಇದಕ್ಕೆ ಊರಲ್ಲಿ ಬಳಸಿದ ಯಾದಿಯು ದೋಷ ಪೂರ್ಣವೆಂಬ ದೂರುಗಳೇ ಪ್ರೇರಕವಾಗಿದ್ದುವು.

ಈ ಪರಿಷ್ಕರಣ ಪಾಡಿಕೆಯ ರೀತಿಯಿದ್ದಾಗಿಯೂ ಇರಲಿಲ್ಲ. ಯಾದಿ ಪರಿಷ್ಕಾರ ಕರ್ತರೂ ಮನೆ ಮನೆಗೂ ಬಂದರು. ಆಯಾ ಮನೆಯಲ್ಲಿನ ಮತಾಧಿಕಾರಿಗಳ ಹೆಸರು—ಪ್ರಾಯ ಇತ್ಯಾದಿ ವಿವರಗಳನ್ನು ಬರೆಸಿ ತಮ್ಮ ಸಹಿ ಹಾಕಿ ಮನೆಯ ಯಜಮಾನನ ಅಥವಾ ಮನೆಯಲ್ಲಿರುವವನೊಬ್ಬನ ಸಹಿ ತೆಗೆದುಕೊಂಡು ಒಂದು ಪ್ರತಿಯನ್ನು ಮನೆಗೆಂದೇ ಕೊಟ್ಟರು.

ಇನ್ನೊಂದು ಪ್ರತಿಯನ್ನು ಚುನಾವಣಾಧಿಕಾರಿಗಳಿಗೆ ಕಳಿಸಿದರೆಂದು ವರದಿ

ಇವುಗಳ ಆಧಾರದಿಂದ ಮತದಾರರ ಯಾದಿ ಹೊಸತಾಗಿ ಅಚ್ಚಾಗಬೇಕಾಗಿತ್ತು. ಆದರೆ ಆಗಲಿಲ್ಲವೆಂದು ದೊಡ್ಡ ಸುದ್ದಿ. ಸಾಲಾ ಸಾಲಿಗೆ ಐವತ್ತು—ಅರುವತ್ತು ಮನೆಗಳೂ ಕೈ ತಪ್ಪಿ ಹೋಗಬೇಕಾದರೆ, ಹಾಳೆಗೆ ಹಾಳೆಯೇ ಮರೆಯಾಗಿರಬೇಕಾಗುತ್ತದೆ.

ಒಬ್ಬ ಶಿಕ್ಷಕನೋ ಒಬ್ಬ ಗುಮಾಸ್ತೆಯೋ ಪ್ರಜೆಗಳ ಪರಮಾಧಿಕಾರವನ್ನು ಕಿತ್ತು ಕೊಳ್ಳುವುದು ಅಕ್ಷಮ್ಯ ಅಪರಾಧ.

ಶಿಕ್ಷಕನು ಮನೆ ಗಣತಿಗೆ ಬಂದಿದ್ದಾನೆಯೇ ಇಲ್ಲವೇ ಎಂಬುದಕ್ಕೆ ದ್ವಿಪ್ರತಿ ಮನೆಯ ಯಾದಿ ಸಾಕ್ಷಿ ಹೇಳುತ್ತದೆ. ಹೆಚ್ಚಿನ ಕಡೆಗಳಲ್ಲಿ ಮತದಾರ ಯಾದಿಯನ್ನು ಅಚ್ಚು ಮಾಡಿಸುವಲ್ಲಿಯೇ ತಪ್ಪು ಎದ್ದು ಕಂಡಿದೆ.

ಇಲ್ಲಿ ತಪ್ಪು ಯಾರದು?

ಮನೆಗೆ ಗಣತಿಗಾರನು ಬಾರದುಳಿದರೆ, ಸಂಬಂಧಿತರಿಗೆ ದೂರಿಡಬೇಕೆಂದು ಚುನಾವಣಾ ಆಯೋಗ ದೊಡ್ಡ ದೊಡ್ಡ ಜಾಹಿರಾತು ನೀಡಿ ಪ್ರಜಾ ಪ್ರಭುಗಳಿಗೆ ಸೂಚನೆ ನೀಡಿತ್ತು.

ಆದರೆ, ಈ ಮತಾಧಿಕಾರ ವಂಚಿತರು ಹಾಗೆ ಮಾಡಲಿಲ್ಲ.

ಅಂದ ಮೇಲೆ, ಗಣತಿಗಾರರು ಮನೆಗೆ ಬಂದಿದ್ದಾರೆ, ಮನೆಯ ಮತದಾರ ಯಾದಿಯ ದ್ವಿಪ್ರತಿ ಕೊಟ್ಟಿದ್ದಾರೆಂದೇ ಅರ್ಥ.

ಮತದಾರ ಯಾದಿಯನ್ನು ಚುನಾವಣೆಗೆ ತಿಂಗಳು ಮೊದಲಿಗೇ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಲಾಗುತ್ತದೆ. ಅದರಲ್ಲಿ ಲೋಪ ದೋಷಗಳಿದ್ದರೆ, ತಿದ್ದುವ ಅವಕಾಶವೂ ಒಂದು ಕಾಲ ಮಿತಿಯವರೆಗಿದೆ.

ಮತದಾರರ ಹೆಸರು ತಪ್ಪಿ ಹೋಗಿದ್ದರೆ, ಸೇರಿಸುವಂತೆ ಆ ಕಾಲಮಿತಿಯೊಳಗೆ ಅರ್ಜಿ ನೀಡ ಬಹುದು.

ಹಾಗೆ ಅರ್ಜಿ ನೀಡಿದವರು ಎಷ್ಟು ಮಂದಿಯಿದ್ದಾರೆ?

ಮತದಾರರ ಯಾದಿಯನ್ನು ಚುನಾವಣಾ ದಿನಕ್ಕೆ ಮುನ್ನಾ ದಿನವಾದರೂ ಕಂಡವರು ತಮಗೆ ಮತವಿಲ್ಲವೆಂದು ನಿರಾಶರಾಗಿ ಮರಳ ಬೇಕಾಗಿಲ್ಲ, ಬಿಸಿಲಲ್ಲಿ ನಾಲ್ಕಾರು ಬೂತುಗಳಿಗೆ ನಡೆದು ಬಸವಳಿಯ ಬೇಕಾಗಿರಲಿಲ್ಲ.

ಮತವಿದೆಯೇ ಇಲ್ಲವೇ ಎಂಬುದು ಮೊದಲೇ ಗೊತ್ತಾಗಿ ಹೋಗುತ್ತಿತ್ತು.

ಅಂದ ಮಾತ್ರಕ್ಕೆ ಅಧಿಕಾರಿ ವರ್ಗವು ತಮ್ಮ ಹೊಣೆಗಾರಿಕೆಯಿಂದ ಜಾರಿಕೊಳ್ಳುವುದು ಸರಿಯಲ್ಲ. ಕಾನೂನಿನ ಬಲ ಅವರಿಗಿದ್ದರೂ ಅದು ಮಾನವೀಯ ಬಲವೆನಿಸುವುದಿಲ್ಲ.

ಮತದಾನದ ಅಧಿಕಾರದಿಂದ ಯಾವುದೇ ರೀತಿಯಿಂದ ವಂಚಿಸುವುದು ಅಕ್ಷಮ್ಯ. ಆದುದರಿಂದ ಸರಿಯಾದ ಸಮರ್ಪಕವಾದ ಮತದಾರ ಯಾದಿಯನ್ನು ಪ್ರತಿ ವರ್ಷವೂ ಸಿದ್ಧಪಡಿಸುವುದು ಅಗತ್ಯ.

ಪಂಚಾಯತಿಯಿಂದ ತೊಡಗಿ ಲೋಕಸಭೆಯವರೆಗೆ ಒಂದಲ್ಲೊಂದು ಚುನಾವಣೆ ಪ್ರತಿ ವರ್ಷವೂ ನಡೆಯುತ್ತಲೇ ಇರುತ್ತದೆ.

ಹಿಂದೆ ಮತದಾರ ಯಾದಿಯ ಬಗೆಗೆ ದೂರುಗಳು ಬರುತ್ತಿದ್ದುದು ಕಡಮೆ. ಆದರೆ, ಈಗೀಗ ಅದು ಹೆಚ್ಚಿದೆ.

ಇದಕ್ಕೆ ಕಾರಣವೇನು?

ಹಿಂದೆಯೂ ಲೋಪದೋಷಗಳು ಇರಲಿಲ್ಲವೆಂದಲ್ಲ, ಇದ್ದುವು.

ಅಂದರೆ, ಆಗ ಮತದಾರ ತನ್ನ ಅಧಿಕಾರದ ಬಗೆಗೆ ಜಾಗ್ರತನಾಗಿರಲಿಲ್ಲ; ಇಂದು ಪರಿಸ್ಥಿತಿ ಬದಲಾಗಿದೆಯೆಂದು ಮಾತ್ರ ಅರ್ಥವಲ್ಲ.

ಹಿಂದೆ ಚುನಾವಣಾ ರಂಗಕ್ಕಿಳಿದ ಪಕ್ಷಗಳು ಮತದಾರ ಪಟ್ಟಿಯನ್ನು ಮೊದಲೇ ಪರಿಶೀಲಿಸುತ್ತಿದ್ದುವು. ಆಗ (ತಮಗೇ ಖಾತ್ರಿ ಮತ ನೀಡುವವರೆಂಬ ಧೈರ್ಯದಿಂದ) ಬಿಟ್ಟು ಹೋದವರ ಹೆಸರನ್ನು ಹೊಸತಾಗಿ ಸೇರಿಸುವ ಪ್ರಯತ್ನ ಮಾಡುತ್ತಿದ್ದವು.

ಆದರೆ, ಇಂದು ಇಂತಹ ಪರಿಶೀಲನೆ ಮಾಡುವ ಪರಿಪಾಟವಿಲ್ಲದ್ದರಿಂದಲೇ ಒಂದು ಕ್ಷೇತ್ರದಲ್ಲಿ ಸಾಲಾಗಿ ೩೫೦ ಮತಾಧಿಕಾರಿಗಳ ಹೆಸರು ಕಿತ್ತು ಹೋಗುವಂತಾಯ್ತು. ಇದೇ ಉಳಿದೆಡೆಗೂ ಅನ್ವಯವಾಗುತ್ತದೆ.

ಒಂದೊಮ್ಮೆ ಈ ಲೋಪ ದೋಷಗಳು ಗಮನಕ್ಕೆ ಬಂದರೂ ತಮಗೇ ಮತ ಬೀಳದೆ ಹೋದರೆ, ಎಂಬ ಸ್ವಾರ್ಥವೂ ಇಲ್ಲಿ ತಲೆ ಹಾಕ ಬಹುದು.

ಅಥವಾ ಮತದಾರ ಯಾದಿಯಲ್ಲಿ ಹೆಸರು ಸೇರಿಸುವುದು ತಮ್ಮ ಕೆಲಸವಲ್ಲವೆಂದೂ ಅವು ಸುಮ್ಮನುಳಿಯ ಬಹುದು.

ಮತದಾರರಲ್ಲಿ ಮತದಾನದ ಪ್ರಜ್ಞೆಯನ್ನು ಮೂಡಿಸುವಲ್ಲಿ ಈಗೀಗ ರಾಜ್ಯಕೀಯ ಪಕ್ಷಗಳು ಆಸಕ್ತಿ ತಾಳಿವೆ. ಇದಕ್ಕೆ ಸೇ. ೭೦—೮೦ರಷ್ಟು ಮತದಾನವಾಗುತ್ತಿರುವುದೇ ಸಾಕ್ಷಿ.

ಹಾಗೆಯೇ ಮತಾಧಿಕಾರದ ಬಗೆಗೂ ಅವು ಆಸಕ್ತಿ ವಹಿಸುವುದು ಅಪೇಕ್ಷಣೀಯ. ಯಶಸ್ವಿ ಪ್ರಜಾಪ್ರಭುತ್ವದಲ್ಲಿ ಮತಾಧಿಕಾರಿಗೆ ಮತಾಧಿಕಾರವಿರಬೇಕು. ಅವನು ಮತ ಚಲಾಯಿಸಲೂ ಬೇಕು.

ತಂತಮಗೆ ಬರಬಹುದಾದ ಮತಗಳನ್ನು ಯಾದಿ ಹಿಡಿದುಕೊಂಡೇ ಗುಣಾಕಾರ ಮಾಡುವ ಕಾಲವೀಗ ಹೊರಟು ಹೋಯಿತು.

ಯಾರು ಯಾರಿಗೆ ಮತ ನೀಡುವರೆಂಬುದು ಚಿದಂಬರ ರಹಸ್ಯವೇ. ಆದರೂ ಪ್ರಜಾಪ್ರಭುಗಳಿಗೆ ಇರುವ ಪರಮಾಧಿಕಾರವನ್ನು ಒದಗಿಸುವಲ್ಲಿ ಎಲ್ಲೆಡೆಯಿಂದಲೂ ಉತ್ಸಾಹ ಮೂಡಬೇಕು.

ಜಗತ್ತಿನ ಅತಿದೊಡ್ಡ ಪ್ರಜಾ ಪ್ರಭುತ್ವವಾದಿ ದೇಶ ಭಾರತದಲ್ಲಿ ಪ್ರಜಾಪ್ರಭುತ್ವ ಯಶ ಗಳಿಸಲು ಪ್ರೇರಕವಾಗುವ ಹಲವು ಹೇತುಗಳಲ್ಲಿ ಇದೂ ಒಂದು.

ಪ್ರಜೆಗಳು ಚುನಾವಣಾ ವಿಭಾಗ ರಾಜ್ಯಕೀಯ ಪಕ್ಷಗಳ ಸಮ್ಮಿಲಿತ ಪ್ರಯತ್ನಗಳಿಂದ ಮತಾಧಿಕಾರ ವಂಚನೆಯ ದೋಷ ಸರಿ ಹೊಂದಬೇಕು.

ಇನ್ನು ಮುಂದಾದರೂ ಮತದಾರ ಯಾದಿ ದೋಷ ಮುಕ್ತವಾಗಿರಲಿ.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ನಾಯಿಗಳು

ಖನಿಜ ದ್ರವ್ಯಗಳನ್ನು ಮೂಸಬಲ್ಲವು!

ಬಂಗಾರ, ಬೆಳ್ಳಿ, ಪ್ಲಾಟಿನಮ್ ಮೊದಲಾದವುಗಳಿಗೆ ವಾಸನೆ ಇದೆ....ಜಿ. ವಾಸೀಲಿಯೆವ್ ಡಿ. ಎಸ್‌ಸಿ (ಜೀವವಿಜ್ಞಾನ), ಅವರು ಒಪ್ಪಿಸಿದ ಇಂಥ ವರದಿಗೆ ಸಮ್ಮತಿಯನ್ನು ಸೂಚಿಸುವುದು ಭೂಗರ್ಭ ವಿಜ್ಞಾನಿಗಳಿಗೆ ಮೊದ ಮೊದಲು ಕಷ್ಟವೆಂದು ಕಂಡಿತು. ವೇದಿಕೆಯನ್ನು ಬಿಡದೆಯೆ ಸ್ಥಳದಲ್ಲಿಯೆ ಎಲ್ಲರ ಅನುಮಾನಗಳನ್ನೂ ತೊಡೆದು ಹಾಕುತ್ತೇನೆ ಎಂದು ಅವರು ಹೇಳಿದರು. ಚಿನ್ನದ ಉಂಗುರ ಮತ್ತು ಚಿನ್ನದ ಕಣಗಳು ಇರುವ ಅದಿರನ್ನು ಖುರ್ಚಿಗಳಲ್ಲಿ ಮುಚ್ಚಿಡಲಾಯಿತು. ಧ್ಜಿಲ್ಡಾ ಎಂಬ ಅಲ್ಸೇಷಿಯನ್ ನಾಯಿಯನ್ನು ಒಳಗೆ ತರಲಾಯಿತು. ದಿವ್ಯ ಲೋಹದ ವಾಸನೆಯನ್ನು ಹಿಡಿದು ಅದು ಒಂದು ನಿಮಿಷದಲ್ಲಿಯೆ 'ನಿಕ್ಷೇಪ'ವನ್ನು ಕಂಡುಹಿಡಿಯಿತು.

"ಕರೇಲಿಯೊದಲ್ಲಿ ನಮ್ಮ ಕಾರ್ಯವನ್ನು ನಾವು ಆರಂಭಿಸಿದೆವು' ಎಂದು ವಿಜ್ಞಾನಿಗಳು ಹೇಳಿದರು. "ಭಿನ್ನ ಭಿನ್ನ ವಯಸ್ಸಿನ ಮತ್ತು ಜಾತಿಯ ನಾಯಿಗಳನ್ನು ನಾವು ತೆಗೆದುಕೊಂಡೆವು" (ಎರಡು ಅಲ್ಸೇಷಿಯನ್, ಒಂದು ಎಸ್ಕಿಮೊ ಮತ್ತು ಇನ್ನೊಂದು ಫಾಕ್ಸ್ ಟೆರಿಯರ್ ನಾಯಿ).

ಆರಂಭದಲ್ಲಿ ನಾವು ನಾಯಿಗಳಿಗೆ, ಗಣಿ—ಪರಿಶೋಧನಾ ಸರ್ವಿಸ್ ರೀತಿಯಲ್ಲೇ ಶಿಕ್ಷಣ ನೀಡುತ್ತಿದ್ದೆವು. ಈ ರೀತಿಯ ತರಬೇತು ದೀರ್ಘಾವಧಿಯದಾಗಿದ್ದುದರಿಂದ ಈಗಾಗಲೆ "ಪ್ರೌಢ ಶಿಕ್ಷಣ ಪಡೆದಂತ ಪ್ರಾಣಿಗಳನ್ನು ಉಪಯೋಗಿಸಿಕೊಳ್ಳಲು ಪ್ರಯತ್ನಿಸ ತೊಡಗಿದವು. ಅಂದರೆ ಶ್ವಾನ ತರಬೇತುಗಾರರಿಂದಲೇ ನಾಯಿಗಳನ್ನು ಕೊಳ್ಳ ತೊಡಗಿದೆವು. ಸರಹದ್ದು ಕಾವಲುಗಾರರಿಂದ ೮ ವರ್ಷ ವಯಸ್ಸಿನ ಅಲ್ಸೇಷಿಯನ್ ನಾಯಿಗಳನ್ನು ಪಡೆಯಲಾರಂಭಿಸಿದೆವು. ಈ "ನಿವೃತ್ತ" ನಾಯಿಗಳು ತಮ್ಮ ತೀಕ್ಷ್ಣವಾದ ಗಂಧಜ್ಞಾನವನ್ನು ಕಳೆದು ಕೊಳ್ಳದೇ ಹೋಗಿದ್ದರೆ, "ಪೂರ್ಣ" ತರಬೇತು ಇಲ್ಲದೆ ಕಾರ್ಯ ಮಾಡುವಷ್ಟು ಜಾಣನಾಗಿದ್ದರೆ, ಮೂರು—ನಾಲ್ಕು ವಾರಗಳ ತರಬೇತು ಸಾಕಾಗುತ್ತಿತ್ತು ಮತ್ತು ಅದಿರು ಹುಡುಕಾಟದ ಕಾರ್ಯಕ್ಕೆ ಸಮರ್ಥವಾಗಿರುತ್ತಿದ್ದವು.

ಕರೇಲಿಯದಲ್ಲಿ ನಮ್ಮ ನಾಯಿಯು ಸ್ಥಾಪಿಸಿದ ದಾಖಲೆ ೧೨ ಮೀಟರುಗಳಷ್ಟು ಆಳದ್ದಾಗಿದೆ. ಔತ್ತರೇಯ ಪ್ರದೇಶದ ವಿಶೇಷತೆಯಾಗಿರುವ ಎರಡು ಮೀಟರು ಆಳದಲ್ಲಿ ನಾಯಿಗಳು ಕೇವಲ ಒಣ ಸ್ಥಳಗಳಲ್ಲಿ ಮಾತ್ರವೇ ಅಲ್ಲ ಜೌಗು ಪ್ರದೇಶದಲ್ಲಿ ಕೂಡ ಕಾರ್ಯ ಮಾಡಲು ಶಕ್ತವಾದುವು. ೪೦ರಿಂದ ೫೦ ಸೆಂಟಿಮೀಟರು ದಪ್ಪ ಹಿಮದ ಪದರಿನಡಿಯಲ್ಲಿ ಚಳಿಗಾಲದ ಪರಿಶೋಧನೆಯಲ್ಲಿ ಕೂಡ ಉತ್ತಮ ಫಲಿತಾಂಶಗಳನ್ನು ಪಡೆಯಲಾಯಿತು.

ಅನಂತರ ಬಂಡೆಗಳಲ್ಲಿ ಅಲ್ಪವಾಗಿರುವ ಅದಿರು ಶೋಧನೆ ಕಾರ್ಯಕ್ಕೆ ನಾವು ತೊಡಗಿದೆವು. ಇದರಲ್ಲಿ ನಮ್ಮ ಮೊದಲನೆ ಗುರಿ ಸಾಕ್ಷೇಪವಾಗಿ ಸಮೃದ್ಧವಾಗಿರುವ ಸಿನ್ನಾಬಾರ್ ನಿಕ್ಷೇಪವಾಗಿದ್ದಿತು.

ಭೂ ಗರ್ಭ ವಿಜ್ಞಾನಿಗಳು ಈಗಾಗಲೆ ಪ್ರತೀಕ್ಷಿಸಿದ ನಿಕ್ಷೇಪಗಳನ್ನು ಮಾತ್ರವೆ ನಾಯಿಗಳು ಕಂಡು ಹಿಡಿಯಲಿಲ್ಲ. ಅದರಲ್ಲಿ ಹಲವಾರು ತಿದ್ದುಪಾಟುಗಳನ್ನು ಮಾಡಿದವು. ಎಲ್ಲಾ ನಾಯಿಗಳೂ ಶಾಮೀಲುಗೊಂಡಿರುವಂತೆ ಕೆಂಪು ಕ್ಯಾಲ್ಸಿಟನ್ನೇ ಸಿನ್ನಾಬಾರ್ ಎಂಬಂತೆ ಕಂಡು ಹಿಡಿದಿದ್ದವು. ಭೂಗರ್ಭ ವಿಜ್ಞಾನಿಗಳು ಮೊದ ಮೊದಲು ಈ ಬಗ್ಗೆ ಅನುಮಾನದಿಂದಲೇ ಇದ್ದರು. ಆದರೆ ನಾಯಿಗಳೇ ಸರಿಯಾಗಿದ್ದವು. ಕೆಂಪು ಕ್ಯಾಲ್ಸಿಟ್‌ನ ಒಳಗಡೆ ಸಿನ್ನಾಬಾರ್ ಕಣ್ಣಿಗೆ ಕಾಣಿಸುವಂತೆ ಹುದುಗಿರುತ್ತಿತ್ತು. ನಾಯಿಗಳೇ ಸರಿಯಾಗಿದ್ದುವೆನ್ನುವುದಕ್ಕೆ ಇಲ್ಲಿ ಇನ್ನೊಂದು ಸಾಕ್ಷಿಯಿದೆ. 'ಕೋರ್ಸ್' ತುಂಬಿದ್ದ ೨೦ ಪೆಟ್ಟಿಗೆಗಳ ಪರೀಕ್ಷೆಯನ್ನು ಅಲ್ಸೇಷಿಯನ್ ಧ್ಜಿಲ್ಡಾ ಹತ್ತು ನಿಮಿಷದಲ್ಲಿ ಮುಗಿಸಿತಾದರೆ, ಭೂಗರ್ಭ ವಿಜ್ಞಾನಿಗಳಿಗೆ ೨೪ ಗಂಟೆಗಳು ಹಿಡಿದವು.

"ನಾಯಿಗಳು ಸಾಮಾನ್ಯವಾಗಿ ಮೂಸಬಲ್ಲ ಖನಿಜ ದ್ರವ್ಯಗಳು ಯಾವುವು?" ಈ ಪ್ರಶ್ನೆಗೆ ಸೋವಿಯತ್ ಒಕ್ಕೂಟದ ಎ. ಪರ್ಸ್‌ಮನ್ ಖನಿಜ ದ್ರವ್ಯ ವೈಜ್ಞಾನಿಕ ವಸ್ತು ಸಂಗ್ರಹಾಲಯದ ಸಂಗ್ರಹದಿಂದ ಭಾಗಶಃ ಉತ್ತರವು ದೊರೆತಿದೆ. ನಾಯಿಗಳು ಸಲ್ಫ್ಯೂರಿಕ್ ಮತ್ತು ಆರ್ಸೆನಿಕ್ ಅದಿರುಗಳನ್ನು ಮಾತ್ರವೆ ಅಲ್ಲ, ಹ್ಯಾಲೈಡ್ ಸಂಯುಕ್ತ ದ್ರವ್ಯಗಳನ್ನು, ಜಿರೂನಿಯಂ ಮತ್ತು ಟೆಲ್ಲೂರಿಯಂ ಖನಿಜ ದ್ರವ್ಯಗಳನ್ನು ಮಾತ್ರವೆ ಅಲ್ಲ, ಆದರೆ ಈ ಹಿಂದೆ ಕೆಲವು ಲೋಹಗಳಿಗೆ ವಾಸನೆಯೇ ಇಲ್ಲವೆಂದು ಭಾವಿಸಲಾಗುತ್ತಿದ್ದ ಖನಿಜ ದ್ರವ್ಯಗಳ ಅದಿರನ್ನೂ ಕಂಡು ಹಿಡಿದಿವೆ.

ಲೋಹಮಯ ಟೆರ್ರಿಲಿಯಂನೊಡನೆ ನಡೆಸಿದ ಒಂದು ಪ್ರಯೋಗವಂತೂ ತುಂಬಾ ಪರಿಣಾಮಕಾರಿಯಾಗಿದ್ದಿತು. ಅದನ್ನು ಮೂಸಿದ ಬಳಿಕ ಧ್ಜಿಲ್ಡಾ ಅವುಗಳಲ್ಲಿ ಕೇವಲ ಬೆರ್ರಿಲಿಯಂ ಮಾತ್ರ ಅಡಕವಾಗಿರುವಂಥ ಖನಿಜ ಪಚ್ಚೆ, ಅಕ್ವಾಮೆರೀನ್, ಪ್ರೊರೂಬ್ರೈಟ್, ಫೆನಾಸೈಟ್ ಬೆಟ್ರಾಂಡೈಟ್ ಮೊದಲಾದವುಗಳನ್ನು ಆರಿಸಿ ತೆಗೆಯಿತು.

ಸಾಮಾನ್ಯವಾಗಿ ಬೇರೆ ಖನಿಜ ದ್ರವ್ಯಗಳೊಡನೆ ಇರುವ ಆದರೆ ಬರಿಗಣ್ಣಿಗೆ ಗುರುತಿಸಲಿಕ್ಕಾಗದ ಬೇರೆ ಖನಿಜ ದ್ರವ್ಯವೊಂದನ್ನು ಅರಸಲು ನಾವು ಪ್ರಯತ್ನಿಸಿದೆವು. ಅಂತೆಯೆ ಭೂಗರ್ಭ ವಿಜ್ಞಾನಿಗಳು ಪದೇ ಪದೇ ತಪ್ಪು ಮಾಡಿದರು—ನಾಯಿಗಳು ಕಂಡುಹಿಡಿದ ಮಾದರಿ ವಸ್ತು ತಾವು ಹುಡುಕುತ್ತಿರುವ ವಸ್ತುವಾಗಿಲ್ಲವೆಂದು ಹೇಳುತ್ತ. ರಾಸಾಯನಿಕ ವಿಶ್ಲೇಷಣೆಯೊಂದೇ ನಾಯಿಗಳ ಗಂಧಜ್ಞಾನವು ಎಷ್ಟೊಂದು ಕರಾರುವಾಕ್ಕಾಗಿದೆಯೆಂಬುದನ್ನು ತೋರಿಸಬಲ್ಲುದು.

ಹೀಗೆ. ಪ್ರತೀಕ್ಷಾ ಕಾರ್ಯದಲ್ಲಿ ಇನ್ನೊಂದು ಹೊಸ ಅಂಶವು ಸೇರಿದೆ; ಅದೆಂದರೆ ಖನಿಜ ದ್ರವ್ಯಗಳ ವಾಸನೆ, ಹೊಸ ವಿಧಾನದ ಭವಿಷ್ಯತ್ತು ಮಾತ್ರ ಭೂಗರ್ಭ ವಿಜ್ಞಾನಿಗಳ ಕೈಯಲ್ಲೇ ಇವೆ.

●●

ಅಂಕೆ ಸಂಖ್ಯೆಗಳ ಇನ್ನೊಂದು ರೂಪ

ಕರ್ನಾಟಕದಲ್ಲಿ ವಿಧಾನ ಸಭಾ ಚುನಾವಣೆಗಳಲ್ಲಿ ಮತಾಧಿಕಾರವಿದ್ದವರು ೧,೫೦,೮೩,೯೨೩.

ಇವರಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಿದವರು ಸೇ. ೬೨.೮೫. ಅಂದರೆ, ೯೪,೮೦,೬೪೭ ಮಾತ್ರ.

ಇಷ್ಟು ಮತದಾನಿಗಳಲ್ಲಿ ೨,೭೯,೦೨೬ ಮಂದಿ ತಮ್ಮ ಮತ ಪತ್ರವನ್ನು ಕುಲಗೆಡಿಸಿದರು. (ಸೇ. ೨.೯೧ರಷ್ಟು.)

ಉಳಿದ ೯೨ ೦೧.೬೨೧ ಮತಗಳು ವಿವಿಧ ಪಕ್ಷಗಳಲ್ಲಿ ಹೀಗೆ ಹಂಚಿ ಹೋದುವು.

ಆಳುವ ಕಾಂಗ್ರೆಸ್ಸು ೪೯,೨೮,೮೩೫
ಸಂಸ್ಥಾ ಕಾಂಗ್ರೆಸ್ಸು ೨೩,೬೦,೩೪೪
ಜನಸಂಘ ೩,೬೬,೪೭೦
ಸಮಾಜವಾದಿ ೧, ೫೨,೨೫೬
ಸಿ. ಪಿ. ಎಂ. ೯೨, ೫೧೮
ಸಿ. ಪಿ. ಐ ೮೮,೯೭೮.
ಸ್ವತಂತ್ರ ೫೧,೬೧
ಜನತಾ ೧೪,೩೯೦

ಪಕ್ಷೇತರರು ೧೧,೪೬,೩೬೯

೧೯೭೨ರ ಚುನಾವಣೆಯ ವೇಳೆ ಅವಿಭಜಿತ ಕಾಂಗ್ರೆಸ್ಸು ಒಟ್ಟು ಸೇ. ೪೮. ೨೬ ಮತಗಳನ್ನು ಪಡೆದು ೧೨೬ ಸ್ಥಾನಗಳನ್ನು ಗೆದ್ದು ಕೊಂಡಿತ್ತು. ಈ ಬಾರಿ ಆಳುವ ಕಾಂಗ್ರೆಸ್ಸು ಸೇ. ೫೩. ೫೬ ಮತಗಳನ್ನು ಪಡೆದು ೧೬೫ ಸ್ಥಾನಗಳನ್ನು ಪಡೆಯಿತು.

ಬಹುಮತ ಪಡೆದ ಪಕ್ಷವು ಗೆದ್ದ ಸ್ಥಾನವೊಂದಕ್ಕೆ ಪಡೆದ ಸರಾಸರಿ ಮತಗಳು ೧೯೬೭ರಲ್ಲಿ ಸೇ. ೦.೩೮. ೧೯೭೨ರಲ್ಲಿ ಅದು ಸೇ. ೦. ೩೨ ಮಾತ್ರ. ೧೯೬೭ರಲ್ಲಿ ಸ್ವತಂತ್ರವಾಗಿ ಅವಿಭಜಿತ ಕಾಂಗ್ರೆಸ್ಸು ಸ್ಪರ್ಧಿಸಿದ್ದರೆ ಈ ಬಾರಿ ಆಳುವ ಕಾಂಗ್ರೆಸು ಸಿ. ಪಿ. ಐ. ಯೊಂದಿಗೆ ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಂಡಿದೆ. ಆದುದರಿಂದ ಅದೂ ಸಿ. ಪಿ. ಐ ಯೂ ಒಟ್ಟು ಪಡೆದ ೧೬೮ ಸ್ಥಾನಗಳನ್ನೂ ಸಿ. ಪಿ. ಐ ಯ ಸೇ. ೦ ೯೭ ಮತಗಳನ್ನೂ ಕೂಡಿಸಿ ಲೆಕ್ಕಾಚಾರ ಮಾಡಿದರೆ ಈ ಸರಾಸರಿ. ಸೇ. ೦.೩೮ಕ್ಕಿಂತ ತುಸು ಕಡಿಮೆಯೇ ಆಗುವುದು.

ಸಂಸ್ಥಾ ಕಾಂಗ್ರೆಸ್ಸು ಈ ಬಾರಿ ಸೇ. ೨೩.೬೫ ಮತಗಳನ್ನೂ ೨೪ ಸ್ಥಾನಗಳನ್ನೂ ಗಳಿಸಿದ್ದು ಇದು ಪ್ರತಿ ಸ್ಥಾನಕ್ಕೆ ಸರಾಸರಿ ಸೇ. ೧ರ ಅಂಚು ತಲಪಿದಂತಾಗುವುದು.

ಸಂಸ್ಥಾ ಮತ್ತು ಆಳುವ ಕಾಂಗ್ರೆಸ್ಸುಗಳ ನಡುವೆ ಯಾವುದೇ ಸೈದ್ಧಾಂತಿಕ ಭೇದವಿಲ್ಲವೆನ್ನುವುದಾದರೆ, ಸಿಪಿಐ-ಆಳುವ ಕಾಂಗ್ರೆಸ್ಸುಗಳು ಹೊಂದಾಣಿಕೆಯನ್ನೇ ಮುಂದುವರಿಸುವುದಾದರೆ, ರಾಜ್ಯದ ೨೧೬ ಶಾಸಕರಲ್ಲಿ ೧೯೨ ಮಂದಿ 'ಕಾಂಗ್ರೆಸಿಗ'ರೆಂದೇ ಹೇಳಬೇಕು. ಇದು 'ಕಾಂಗ್ರೆಸಿ'ನ ಅಭೂತಪೂರ್ವ ವಿಜಯವಲ್ಲದೆ ಮತ್ತೇನು?

೧೯೫೭ರಲ್ಲಿ ಮೈಸೂರು ವಿಧಾನ ಸಭೆಯ ೯೮ ಶಾಸಕರಲ್ಲಿ ಕಾಂಗ್ರೆಸಿಗರು ಕೇವಲ ೬೩ ಇದ್ದರು. ೧೯೫೭ರಲ್ಲಿ ೨೦೮ರಲ್ಲಿ ೧೫೦. ೬೨ರಲ್ಲಿ ೨೦೮ರಲ್ಲಿ ೧೩೮. ೬೭ರಲ್ಲಿ ೨೧೬ ರಲ್ಲಿ ೧೨೬ ಮಾತ್ರ.

ಅಂದರೆ, ಕನ್ನಡಿಗರು 'ಕಾಂಗ್ರೆಸ್ಸಿಗ'ರಾಗಿದ್ದಾರೆಂಬುದು ಸುಸ್ಪಷ್ಟ.

೧೯೬೭ರ ಚುನಾವಣೆಯಲ್ಲಿ ಅವಿಭಜಿತ ಕಾಂಗ್ರೆಸ್ಸು ಪ್ರತಿಸ್ಥಾನಕ್ಕೆ ಪಡೆದ ಸರಾಸರಿ ಮತಗಳನ್ನು ಈ ಬಾರಿ ಆಳುವ ಕಾಂಗ್ರೆಸ್ಸು ಪಡೆಯಲಿಲ್ಲ. ಸಿಪಿಐಯನ್ನು ಕೂಡಿಸಿದರೆ ಮಾತ್ರ ಆ ಪ್ರಮಾಣವನ್ನು ಮುಟ್ಟುತ್ತದೆ.

ಆಳುವ ಕಾಂಗ್ರೆಸ್ಸು ತಾನು ಸ್ಪರ್ಧಿಸಿದ ೨೨೨ ಸ್ಥಾನಗಳಿಗೆ ಸರಾಸರಿ ೦.೨೫ ಮತಗಳನ್ನು ಪಡೆದರೆ, ಸಂಸ್ಥಾ ಕಾಂಗ್ರೆಸ್ಸು ಸೇ. ೦.೧೩ ಮತಗಳನ್ನು ಗಿಟ್ಟಿಸಿತು.

ಪಕ್ಷೇತರರಾಗಿ ಗೆದ್ದು ಬಂದ ೧೯ ಶಾಸಕರಲ್ಲಿ ಬಂಡುಗಾರ ಆಳುವ ಕಾಂಗ್ರೆಸ್ಸಿಗರು ಐವರಿದ್ದಾರೆಂಬುದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.

ವಿಧಾನ ಸಭೆಯಲ್ಲಿ ಸೇ. ೭೬ರಷ್ಟು ಸ್ಥಾನ ಪಡೆದ ಆಳುವ ಕಾಂಗ್ರೆಸ್ಸು ಗಳಿಸಿದ ಮತಗಳು ಕೇವಲ ಸೇ. ೫೩.೫೬!

●●

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಧಾಳಿಯ ವಿರುದ್ಧ—
ಮರಗಳಿಂದ ಆತ್ಮರಕ್ಷಣೆ

ಯುರೋಪಿನಲ್ಲಿ ಡಚ್ ಎಲ್ಮ್ ಕಾಯಿಲೆಯು ಗಾಬರಿ ಹುಟ್ಟಿಸುವಂತೆ ಹರಡಿಕೊಂಡ ಕಾರಣ, ಅನತೋಲಿ ರೋಜ್‌ಕೋವ್ ಅವರ ನೇತೃತ್ವದಲ್ಲಿರುವ ತಂಡವು ಮಾಡಿದ ಕೆಲಸದ ಕಡೆಗೆ ವಿಶೇಷ ಆಸಕ್ತಿಯು ಈಗ ಕಂಡು ಬರುತ್ತಿದೆ. ವಿಜ್ಞಾನಗಳ ಅಕಾಡಮಿಯ ಸೈಬೀರಿಯನ್ ಶಾಖೆಗೆ ಸೇರಿರುವ ಇರ್ಕೂತ್‌ಸ್ಕ್‌ನಲ್ಲಿರುವ ಸಂಶೋಧನಾಲಯದ ಮುಖ್ಯಾಧಿಕಾರಿಯಾಗಿರುವ ಅನತೋಲಿ ರೋಜ್‌ಕೋವ್ ಅವರು ಜೀವವಿಜ್ಞಾನಿಯಾಗಿದ್ದಾರೆ. ಇವರ ಸಂಶೋಧನಾ ಕಾರ್ಯವು ಮುಖ್ಯವಾಗಿ ಕೋನಿಫರಸ್ ಮರಗಳ ಮೇಲೆಯೇ ಕೇಂದ್ರೀಕರಿಸಲ್ಪಟ್ಟಿದ್ದರೂ ಸಂಶೋಧನೆಯಲ್ಲಿ ಕಂಡು ಬಂದ ಕೆಲವು ಸಂಗತಿಗಳು ಎಲ್ಮ್ ಮರದ ಮೇಲೂ ಬೆಳಕು ಚೆಲ್ಲ ಬಹುದು

ಕೀಟಗಳ ಹಾಗೂ ರೋಗಗಳ ದಾಳಿಗೆ ಒಳಗಾದ ಮರಗಳು ತಮ್ಮಷ್ಟಕ್ಕೆ ತಾವೇ ಸುಧಾರಿಸಿಕೊಳ್ಳುತ್ತವೆ ಮತ್ತು ಮುಂದೆ ಇಂಥ ದಾಳಿಯ ವಿರುದ್ಧ ತಮ್ಮಷ್ಟಕ್ಕೆ ತಾವೇ ಸಂರಕ್ಷಣಾ ಗುಣವನ್ನು ಬೆಳೆಸಿ ಕೊಳ್ಳುತ್ತವೆ ಎಂಬುದೇ ಈ ಸಂಶೋಧನೆ. ಅನಿರೀಕ್ಷಿತ ಸಮೀಕ್ಷೆಯೊಂದರಿಂದ ಈ ಸಂಶೋಧನೆಯು 'ಮಿಂಚಿತು '

ಸೈಬೀರಿಯದ ಮಹತ್ವದ ಬೆಳೆಗಳಲ್ಲಿ ಒಂದು ಎಂದರೆ ಸೈಬೀರಿಯನ್ ಸೆಡಾರ್ ಎಂದು ಕರೆಯಲಾಗುವ ಮರದ ಕಾಯಿಗಳು. ಮರ ಬಡಿಯುವ ಮೂಲಕ ಈ ಕಾಯಿಗಳನ್ನು— ಪಾರಂಪರಿಕವಾಗಿ—ಕೂಡಿ ಹಾಕಲಾಗುತ್ತದೆ. ಇದೊಂದು ಭಯಂಕರ ವಿಧಾನವಾಗಿದೆ ಯಾಕೆಂದರೆ ಇದರಿಂದ ತೊಗಟೆಗೆ ಪೆಟ್ಟುಬಿದ್ದು ಅವುಗಳಿಂದ ರಾಳವು ಸ್ರವಿಸುತ್ತದೆಯೆಂದು ವಿಚಕ್ಷಣರು ಭಾವಿಸಿದರು. ಆದರೆ ಮುಂದೆ ಗಾಯಗೊಂಡ ಮರಗಳು ಕ್ರಿಮಿ ಕೀಟಗಳ ದಾಳಿಗೆ ಒಳಗಾಗಲಿಲ್ಲ, ಒಳಗಾದವರೂ ಅಪರೂಪವಾಗಿ ಎಂಬುದನ್ನು ಗಮನಿಸಲಾಯಿತು. ಮರಗಳು ಕೂಡ ಮನುಷ್ಯ ದೇಹದಂತೆಯೆ, ತಮ್ಮೆಲ್ಲ ಬಲವನ್ನೂ ಒಟ್ಟುಗೂಡಿಸಿಕೊಂಡು ಗಾಯಗಳನ್ನು ಗುಣಪಡಿಸಿಕೊಳ್ಳುತ್ತವೆಯೆಂಬುದನ್ನೂ, ಹಾಗೆ ಮಾಡುವಾಗ ಕೀಟಗಳು ತಡೆದುಕೊಳ್ಳಲಾರದಂಥ ದ್ರವ್ಯಗಳನ್ನು ಹೊರಹಾಕುತ್ತವೆ ಯೆಂಬುದನ್ನೂ ಗಮನಿಸಲಾಯಿತು.

ಮರಗಳಲ್ಲಿರುವ ಈ ಸಂರಕ್ಷಣಾ ವ್ಯಾಪಾರವನ್ನು ಕೃತ್ರಿಮವಾಗಿ ಸುಧಾರಿಸುವುದೆಂತು ಮತ್ತು ಉಪಯೋಗಿಸುವುದೆಂತು ಎಂಬ ಸಮಸ್ಯೆಯ ಬಗ್ಗೆ ರೋಜ್ಕೋವ್ ಹಾಗೂ ಅವರ ಸಂಗಡಿಗರು ಕಾರ್ಯಮಾಡುತ್ತಿದ್ದಾರೆ. ಮರದಲ್ಲೇ ಪೋಷಣೆಗೊಳ್ಳುವ ಹಾನಿಕಾರಕ ಕೀಟಗಳನ್ನು ನಾಶಪಡಿಸಲು ಮಾನವನಿರ್ಮಿತ ವಿಧಾನಗಳನ್ನು ಬಳಸುವುದಕ್ಕಿಂತ ಮರಗಳೇ ನಮಗಾಗಿ ಇದನ್ನು ಮಾಡುವಂತೆ ಮಾಡುವುದು ನಿಜವಾಗಿಯೂ ಒಂದು ದೊಡ್ಡ ಮುನ್ನಡೆಯೇ ಸರಿ.

ದಾಳಿಯ ನಂತರ ಬಹುಕಾಲ ಉಳಿದುಕೊಳ್ಳುವ ಪ್ರತಿರೋಧ ಶಕ್ತಿಯು ರಾಳನಾಳಗಳಲ್ಲಿ ಅನಿಲ ಒತ್ತಡವು ಅಧಿಕಗೊಳ್ಳುವುದಕ್ಕೆ ಸಂಬಂಧಗೊಂಡಿರುವಂತೆ ಕಾಣಿಸುತ್ತದೆ. ಅವುಗಳ ಸುತ್ತಲಿನ ಕೋಶಮಯ ಅಂಗಕಟ್ಟುಗಳಲ್ಲಿಯ, ಸಸ್ಯ ರಸದಲ್ಲಿಯ ಬದಲಾವಣೆಗಳಿಂದ ಇದು ಉಂಟಾಗುತ್ತದೆ. ಮರದ ಕೋಶಗಳಲ್ಲೇ ಬಹಳಷ್ಟು ಬದಲಾವಣೆಗಳಾಗಿ ಸಂರಕ್ಷಣಾತ್ಮಕ ರಾಳಗಳನ್ನೂ, ಟಾರುಗಳನ್ನೂ ಸಂಚಯಿಸಿಟ್ಟುಕೊಳ್ಳಲು ಅವು ಶಕ್ತವಾಗುತ್ತವೆ.

ಸಂರಕ್ಷಣಾತ್ಮಕ ಪ್ರತಿಕ್ರಿಯೆಯು ಅ—ವಿಶಿಷ್ಟವಾಗಿದೆಯೆಂದು ಕಂಡುಹಿಡಿದಿರುವುದೂ ಈ ಸಂಶೋಧನೆಯಲ್ಲಿಯ ಇನ್ನೊಂದು ಮಹತ್ವದ ಸಂಗತಿಯಾಗಿದೆ. ಇದು ನಾನಾ ಬಗೆಯ ಧಕ್ಕೆಗಳಿಂದಲೂ ಆಗಬಹುದು. ಅಂತೆಯೆ, ರಾಸಾಯನಿಕಗಳನ್ನು ಚುಚ್ಚುವ ಮೂಲಕ, ಮಣ್ಣು ಅಥವಾ ಭೂಮ್ಯಂತರ್ಗತ ಜಲದ ಮೂಲಕ ಅವುಗಳನ್ನು ಸೇರಿಸುವ ಮೂಲಕ ಮರಗಳು ತಮ್ಮ ಸಂರಕ್ಷಣಾತ್ಮಕ ಶಕ್ತಿಯನ್ನು ನಿರ್ಮಿಸಿಕೊಳ್ಳುವಂತೆ ಮಾಡಲು "ಕೆರಳಿಸಲು" ಸಾಧ್ಯವೇ ಎಂದು ಈಗ ಪ್ರಯೋಗಗಳನ್ನು ಕೈಕೊಳ್ಳಲಾಗುತ್ತಿದೆ.

●●

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 23/1972 in O. S. 100/1968.

ನಾರಾಯಣ ಗೋಪಿತೆ —ಅರ್ಜಿದಾರ.

ಮತ್ತು

ಭಿಸೆ ಪರಮೇಶ್ವರ ಭಟ್ಟ, ಭಿಸೆ ನಾರಾಯಣ ಭಟ್ಟರ ಮಗ, ಬೆಳ್ತಂಗಡಿ ತಾಲ್ಲೂಕು ಕಳೆಂಜ ಗ್ರಾಮದ ಕೊರ್ಬ ಎಂಬಲ್ಲಿ —ಎದ್ರಿ.

ಯಿನರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ —

ಅರ್ಜಿದಾರನು ಮೇಲ್ಕಂಡ ಡಿಕ್ರಿ ಮೇಲೆ ಮಾಡಿದ ಮೇಲಿನ ಅಮಲ್ದಾರಿಯಲ್ಲಿ, ನೀವು ಮತ್ತು ನಿಮ್ಮ ಸಹೋದರರೊಳಗೆ ತಾರೀಕು 9-8-66ರಲ್ಲು ಆದ ವಿಭಾಗ ಪತ್ರ ಪ್ರಕಾರ ನಿಮಗೆ ಹಿಸೆ ಭರ್ತಿ ಬಗ್ಗೆ ಬರ ಅಡಿಕೆ ಸ್ವಲಿ ಪಕ್ಷನ್ನು ಜಪ್ತಿ ಪಡಿಸಿರುವುದರಿಂದ, ನೀವು ಕೋರ್ಟಿನಿಂದ ಇನ್ನೊಂದು ಹುಕುಂ ಕೊಡುವ ತನಕ ಸದ್ರಿ ಪಕ್ಷನ್ನು ಪರಭಾರೆ ವಗೈರೆ ಮಾಡದಂತೆ ನಿರ್ಬಂಧಿಸಲ್ಪಟ್ಟಿರುವುದಾಗಿಯೂ ಸದ್ರಿ ಅಮಲ್ದಾರಿಯು ತಾ. 5-4-1972ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಪುತ್ತೂರು ಕೋರ್ಟು ಮುಂದೆ ನೀವು ಸ್ವತಃವಾಗಲೀ ವಕೀಲರ ಮೂಲಕವಾಗಿಯಾಗಲೀ ಹಾಜರಾಗಿ ಉದಪರಿಸಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

(Sd) B. Ishwara Bhat.

Advocate for Petitioner.

ಪುತ್ತೂರು, ತಾ. 15—9—72.

ಆದರ್ಶ ವ್ಯಕ್ತಿ
ಶ್ರೀರಾಮ

(ಐದನೇ ಪುಟದಿಂದ)

ಸತ್ಯದ ಕಟ್ಟು—ತಂದೆಯ ಋಣ ತೀರಿಸಬೇಕು. ಎರಡನೆಯದಾಗಿ ತಾನು ರಾಜ್ಯವನ್ನಾಳುವುದು ತಮ್ಮಂದಿರಿಗಾಗಿ, ;ಪ್ರಜೆಗಳಿಗಾಗಿ. ತಮ್ಮಂದಿರಿಲ್ಲದ, ಅವರಿಗಿಲ್ಲದ ಸುಖ ವೈಭವ ನನಗೇಕೆ? ಎಂದು ಆ ತ್ಯಾಗಿ ಚಿತ್ರಕೂಟದಲ್ಲಿ ಭರತನಲ್ಲಿ ಕೇಳಿದ್ದಾನೆ.

ಪತಿತೆ ಅಹಲ್ಯೆ ಎಷ್ಟೋ ಕಾಲದಿಂದ ಕಲ್ಲಾಗಿ ಬಿದ್ದಿದ್ದಾಳೆ; ಅವಳಿಗೆ ಪುನಃ ಮಾನವ ರೂಪ ಕೊಟ್ಟದ್ದು, ಋಷಿಗಳ ಯಜ್ಞಕ್ಕೆ ಕಾಟ ಕೊಡುತ್ತಿದ್ದ ರಕ್ಕಸರನ್ನು ಸಂಹರಿಸಿದುದು 'ಕ್ಷತ್ರಿಯೈರ್ಧಾರ್ಯತೇ ಚಾಪಂ ನಾರ್ತಶಬ್ದೋ ಭವೇದಿತಿ' ಅಂದರೆ ಕ್ಷತ್ರಿಯನ ರಾಜನ ಧರ್ಮ, ಅದು ಉದಾರ ಚರಿತೆಯ ಒಂದು ಮುಖ.

ವಜ್ರಾದಪಿ ಕಠೋರಾಣಿ| ಮೃದೂನಿ ಕುಸುಮಾದಪಿಯಾಗಿದ್ದ ರಾಮ ಪಾವನೆ ಸೀತಾದೇವಿಯನ್ನು ಹತ್ತು ಸಮಸ್ತರೆದುರು ಅಗ್ನಿ ಪರೀಕ್ಷೆಗೀಡು ಮಾಡಿದುದು ಆವನ ಕಠೋರತೆಯ ಒಂದು ಮುಖ. ನೋವಿಗಿಂತ ತಿಳಿವಳಿಕೆ ಆತನಿಗೆ ಪ್ರಧಾನವಾಗಿತ್ತು. ಹೆಂಡತಿಯ ಪಾತಿವ್ರತ್ಯ ಸಿದ್ಧವಾಗಲೇಬೇಕಿತ್ತು.

ರಾಮನದು ತಕ್ಷಣ ತೀರ್ಮಾನವೇ ಹೊರತು ತೀಕ್ಷ್ಣವಲ್ಲ. ಅದಕ್ಕಾಗಿ ನಾನಾದರೇನು, ಭರತನಾದರೇನು ಎಂದು ತಮ್ಮನಿಗೆ ರಾಜ್ಯವೊಪ್ಪಿಸಿದ್ದಾನೆ. ಹೆರವರ ಅಂತರಂಗ ವರಿಯುವ ಶಕ್ತಿ ರಾಮನಿಗಿತ್ತೆಂದೇ ಲಕ್ಷ್ಮಣ ಮತ್ತು ಭರತನ ಮನೋಸ್ಥಿತಿ ಹೇಗೆಂದು ಅರಿತಿದ್ದ. ಮಾತ್ರವಲ್ಲ ಸೂಕ್ಷ್ಮಜೀವಿಯಾಗಿದ್ದ. ವನವಾಸ ಮುಗಿಸಿ, ತನ್ನ ಪಕ್ಷದಲ್ಲಿ ಭರತನ ಮನಸ್ಸು ಹೇಗಿದೆಯೆಂದರಿಯಲು ಹನುಮಂತನನ್ನು ಮುಂದಾಗಿ ಕಳುಹಿಸಿದುದು ಅದಕ್ಕೆ ಉದಾಹರಣೆ. ಅಲ್ಲಿ ಭರತ ಮಾತ್ರ ದೀಕ್ಷಾ ಬದ್ಧ, ವ್ರತ ಬದ್ಧ, ದೀನ, ಕೃಶ, ಅಶ್ರುಮಾಪಿಯಂತಾಗಿದ್ದ.

ಶರಣಾಗತ ವತ್ಸಲ ರಾಮನೆಂಬುದಕ್ಕೆ ಆತ ವಿಭೀಷಣನನ್ನು ಆದರಿಸಿದ್ದೇ ಕುರುಹು. ಎಲ್ಲ ರಾಜರೂ ಶತ್ರುಗಳ ಹೆಣಗಳನ್ನು ನಾನಾ ರೀತಿ ಅಪಮಾನಕ್ಕೀಡು ಮಾಡುವುದಿದೆ. ರಾಮ ಹಾಗಲ್ಲ, ರಾವಣನ ಅಂತ್ಯ ಸಂಸ್ಕಾರಕ್ಕೆ ವಿಭೀಷಣನಿಗೆ ಆಜ್ಞೆಯಿತ್ತಿದ್ದಾನೆ

ಚಾರಿತ್ರ್ಯವಂತನು ರಾಜನಾದರೆ ಧರ್ಮಸ್ವರೂಪನಾಗುತ್ತಾನೆ. ಅವನ ರಾಜ್ಯ ಆದರ್ಶ ರಾಜ್ಯವಾಗುತ್ತದೆ. ಆಡಳಿತಾಧಿಕಾರಿ ಸನ್ನಿವೇಶವನ್ನರಿತು ಧರ್ಮದಿಂದ ನಡೆದರೆ ಲೋಕ ಹಿತನಾಗಿ ತುಷ್ಟಿ, ಪುಷ್ಟಿ, ಶಕ್ತಿ ಬರುವುದೆಂದು ಧರ್ಮಜ್ಞ; ಜಿತಕ್ರೋಧ, ಕೃತಜ್ಞ, ಅಮತ್ಸರ, ಮಧುರಭಾಷಿ, ಸ್ಮಿತಭಾಷಿ ಶ್ರೀರಾಮ ನುಡಿದಿದ್ದಾನೆ.

ಯಾವ ಧರ್ಮದ ಸರಕಾರವಾದರೂ ರಾಜನೀತಿ ಅವಶ್ಯ. ರಾಜನಿಗೆ ಅಥವಾ ರಾಷ್ಟ್ರನಾಯಕನಿಗೆ ಪರಾಕ್ರಮ, ಕ್ಷಮೆ, ಸತ್ಯ, ಕಾರುಣ್ಯ, ನಿಃಸ್ವಾರ್ಥತೆ, ರೀತಿ, ಪ್ರವೃತ್ತಿ, ಎಲ್ಲಾ ಪ್ರವೃತ್ತಿಗಳಲ್ಲೂ ಕ್ಷೇಮ ಸಾಧನೆಯ ಗುರಿ, ಚಾರಿತ್ರ್ಯ, ಒಳ್ಳೆಯ ಮನಸ್ಸು ಇದ್ದರೆ ಶ್ರೀರಾಮರಾಜ್ಯ ಆಗಲು ಸಾಧ್ಯವಿದೆ. ಶ್ರೀರಾಮನ ಸಂದರ್ಭೋಚಿತ ಧರ್ಮ ಪಾಲನೆಗಾಗಿ ಕೌಸಲ್ಯಾ ದೇವಿ ಆವನನ್ನು ಹರಸಿದ್ದಾಳೆ. "ಯಂ ಪಾಲಯಸಿ ಧರ್ಮತ್ವಂ ಧೃತ್ಯಾಚ ನಿಯಮೇನಚ| ಸವೈ ರಾಘವ ಶಾರ್ದೂಲ ಧರ್ಮಸ್ತ್ವ ಮಭಿರಕ್ಷತು"

ಪರ ದುಃಖ ಅಸಹಿಷ್ಣುತೆ ರಾಮನ ಕಲ್ಯಾಣ ಗುಣಗಳಲ್ಲೊಂದಾಗಿತ್ತು.ಆತ ಜಗತ್ತಿಗೇ ಬೆಳಕಾಗಿದ್ದ 'ಗುಣೈರ್ದಾಸ ಮುಪಾಗತಃ' ಎಲ್ಲರೂ ಆತನ ಗುಣಗಳಿಗೆ ದಾಸರಾಗಲೇ ಬೇಕು. ಕ್ಷಮಧಾತ್ಯವಾದ 'ರಾಮ, 'ಯದಿವಾ ರಾವಣ ಸ್ವೇಯಂ' (ರಾವಣ ನನ್ನ ಬಳಿಗೆ ಬಂದರೆ ಕ್ಷಮಿಸುತ್ತೇನೆ) ಅಂದಿದ್ದಾನೆ. ಆದರ್ಶ ಬಾಳಿಗೆ ಸ್ಫೂರ್ತಿ ಚೇತನನಾದ ಆ ಪ್ರಭು ರಾಷ್ಟ್ರಕ್ಕೆ, ಜನರಿಗೆ ಸಮಸ್ತ ಸನ್ಮಂಗಳವನ್ನುಂಟು ಮಾಡಲಿ.

ಲಕ್ಷ್ಮೀಶೋ ಭುವನತ್ರಯೇ ನಿವಸತೋ
ದೇವಾನ್ಮನುಷ್ಯೋರಗಾನ್|
ಸಂಸ್ಥಾತುಂ ಕರುಣಾನಿಧೇಃ ಕರುಣಯಾ
ಮಾರ್ತಾಂಡ ವಂಶೇ ಯಯೌ|
ಕೌಸಲ್ಯಾ ನಿಜಗರ್ಭ ಸಂಭವ ಭೃತೇ
ಜನ್ಮಸ್ಯ ಸಾಧಾರಣೇ|
ಜಾತ ಶ್ರೀ ರಘುನಾಯಕಸ್ಯ ಚರಿತಂ
ಕುರ್ವಂತು ವಾಂ ಮಂಗಳಂ||

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 ?2404

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

READ & ADVERTISE IN NAVAYUGA Weekly

ಗಾಯಗೊಂಡ ಹುಲಿಯ ಹುಸಿ ಗರ್ಜನೆ

(ನಾಲ್ಕನೇ ಪುಟದಿಂದ)

ಬೇಕಲ್ಲಾ ಆದಕ್ಕೇ....'

"ಕೇಂದ್ರ ಸರಕಾರವೂ ೧೮೩ ಕೋಟಿ ರೂಪಾಯಿಗಳ ಹೊಸ ತೆರಿಗೆ ಹಾಕಿತು...."

'ಸೀಮೆಯೆಣ್ಣೆಗೂ ಹಾಕಿತಂತೆ ನೋಡು, ಇನ್ನು ಮುಂದೆ ಲೀಟರಿಗೆ ಆರು ಪೈಸೆ ಏರುವುದಂತೆ!'

'ಇದು ಶ್ರೀಸಾಮಾನ್ಯನಿಗೆ ಬಲವಾದ ಒದೆತ ಅಲ್ಲವೆ?'

"ಅಲ್ವೆ, ದೇಶಕಟ್ಟಲು ಶ್ರೀಸಾಮಾನ್ಯನೂ ಅಲ್ಪ ಮಟ್ಟಿನ ತ್ಯಾಗ ಮಾಡದೆ ಹೋದರೆ ಹೇಗೆ?'

'ಅಯ್ಯಪ್ಪ, ಅಂತೂ ನೀವು ಮಾಡಿದ್ದೆಲ್ಲ ಸಮರ್ಥನೀಯವೇ. ನೀವು ಇದೇ ಪಾಠಗಳನ್ನು ಜನತೆಗೆ ನೀಡುತ್ತಲೇ ಬಂದಿದ್ದೀರಿ..'

'ಏನು?'

'ದೇಶ ಕಟ್ಟುವುದಕ್ಕಾಗಿ ತೆರಿಗೆ ಹೆಚ್ಚಳ....ತ್ಯಾಗ....ಸುಂದರ ಭವಿಷ್ಯ....'

'ಅಂದರೆ, ಕಾಲ್ಪನಿಕ ಸ್ವರ್ಗ!'

'ಮತ್ತಿನ್ನೆಂಥದು? ಆ ಸ್ವರ್ಗ ನಮ್ಮ ಕೈಗೆಟಕುವಾಗ....'

'ನಾವಿಲ್ಲವಾದರೇನು? ನಮ್ಮ ಮಕ್ಕಳು ಮರಿಗಳು....'

'ಇರುತ್ತಾರೆನ್ನಿ....'

'ಅಲ್ಲವೆ?'

—ಗೋರಾ.

●●

'ಶ್ರೀ ಸಾಯಿರಾಮ್ ಕೃಪಾ'ದ ಗೃಹಪ್ರವೇಶ ಸಮಾರಂಭ

ಪಜೀರಿನ ಶ್ರೀ ವೆಂಕಪ್ಪ ಅತಿಕಾರಿಗಳು ಮಂಗಳೂರಲ್ಲಿ ಕದ್ರಿ ಕಂಬ್ಳಾಕ್ರೋಸ್ ಹೊಸ ರಸ್ತೆಯಲ್ಲಿ ನೂತನವಾಗಿ ಕಟ್ಟಿಸಿರುವ ಮಾಳಿಗೆಯ ಭವ್ಯ ಕಟ್ಟಡ—'ಶ್ರೀ ಸಾಯಿರಾಮ್ ಕೃಪಾ'ದ ಗೃಹ ಪ್ರವೇಶ ಸಮಾರಂಭವು ತಾ. 17—3—72 ರಂದು ವಿಜೃಂಭಣೆಯಿಂದ ನೆರವೇರಿತು. ಮಧ್ಯಾಹ್ನ ಭೋಜನ ಸಮಾರಂಭ ಜರಗಿತು. ಈ ಸಮಾರಂಭಕ್ಕೆ ಶ್ರೀಮತಿ ಮತ್ತು ಶ್ರೀ ವೆಂಕಪ್ಪ ಅತಿಕಾರಿಗಳ ಬಂಧು ಬಳಗದವರೂ, ನೆಂಟರಿಷ್ಟರೂ, ನಗರದ ಅನೇಕ ಗಣ್ಯ ಮಹನೀಯರೂ ಆಗಮಿಸಿದ್ದರು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 209/1961. Ex.C. 155/1971.

ವಾದಿ—ಮಹಾಬಲ ಸೆಟ್ಟಿ.

ಪ್ರತಿವಾದಿ—ರಾಜೀವ ಸೆಟ್ಟಿ, ಲಚ್ಚಮ್ಮ ಸೆಡ್ತಿರ ಮಗ, ಕುಂದಾಪುರ ತಾಲ್ಲು ಹೊಗವಳ್ಳಿ ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ಡಿಕ್ರಿ ಹಣ ವಸೂಲಿ ಕುರಿತು ವಾದಿಯು ಮಾಡಿದ ಮೇಲಿನ ಅಮಲ್ದಾರಿಯು ತಾ. 27—3—1972ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

ಕೋರ್ಟು ಹುಕುಂ ಪ್ರಕಾರ.

Y. Tejappa Shetty

Advocate for Plff.

Coondapur, 15—3—1972.

---

75 ದಿನಗಳಲ್ಲಿ ಕ್ಯೊಲಿಗೆ ಬರುವ ಭತ್ತದ ಹೊಸತಳಿ

ನಾನು ಬೀಜದಿಂದ ಬೀಜಕ್ಕೆ 75 ದಿನಗಳಲ್ಲಿ ಕ್ಯೊಲಿಗೆ ಬರುವ ಹೊಸ ಭತ್ತದ ತಳಿಯೊಂದನ್ನು ಕಂಡು ಹಿಡಿದಿರುತ್ತೇನೆ ಎಂಬುದನ್ನು ತಿಳಿಸಲು ಹೆಮ್ಮೆ ಪಡುತ್ತೇನೆ. ಈ ತಳಿಯು ಬಿತ್ತಿದ 75 ದಿನಗಳಲ್ಲಿ ಕ್ಯೊಲಿಗೆ ಬರುತ್ತದೆ. ಬರೇ 60 ದಿನಗಳ ನೀರು ಸಾಕು. ಹಸಿರು ಕ್ರಾಂತಿಯ ಈ ದಿನದಲ್ಲಿ ಇದೊಂದು ಹೆಮ್ಮೆಯ ಶೋಧನೆ. ಇದು ಏಣೇಲು, ಸುಗ್ಗಿ, ಕೊಳಕೆ, ಈ ಮೂರು ಬೆಳೆಗೂ ಹುಲುಸಾಗಿ ಬೆಳೆದು ಒಳ್ಳೆಯ ಫಸಲನ್ನು ಕೊಡುತ್ತದೆ. ಅಲ್ಲದೆ ಇದು ಸಾಧಾರಣ 60 ಇಂಚು ಎತ್ತರ ಬೆಳೆದು ಹುಲುಸಾದ ಹುಲ್ಲೂ ಸಿಗುತ್ತದೆ. I. R. 8. ಜಯ, ಪದ್ಮಾದಂತೆ ಈ ಬೆಳೆಗೆ ಆಕರ್ಷಣೆ ಕಡಿಮೆಯಾದುದರಿಂದ (ಆಕರ್ಷಣೆ ಎಂದರೆ I. R. ಜಯಾ, ಇತ್ಯಾದಿ ನೆಟ್ಟ ನಂತರ ಕಡು ಹಸುರಾಗಿ ಕಾಣುವದು) ಇದಕ್ಕೆ ಹುಳ, ಹಾತೆ, ಬಂಬುಚ್ಚು ಹಳಬಾಧೆ ಕಡಿಮೆ. ಒಳ್ಳೆಯ ಬಿಳಿಯ ಭತ್ತ. ನನ್ನ ಕೊಳಕೆ ಬೆಳೆಯು ಕ್ಯೊಲಿಗೆ ಸಿದ್ಧವಾಗಿ ಗದ್ದೆಯಲ್ಲಿ ಇದೆ. ಸಾಧಾರಣ ಇದೇ ತಿಂಗಳ 25—28 ತಾರೀಕುಗಳಲ್ಲಿ ಕೊಯ್ಯುವ ತಯಾರಿಯಲ್ಲಿ ಇದ್ದೇನೆ. ಸಮಯಾಭಾವವಲ್ಲದಿದ್ದರೆ ಖಂಡಿತ 4 ಬೆಳೆ ಒಂದು ವರ್ಷದಲ್ಲೆ ತೆಗೆಯುತ್ತಿದ್ದೆ. ಇಂದಿನ ತನಕ, ಕೃಷಿಯ ಚರಿತ್ರೆಯಲ್ಲೆ 75 ದಿನಗಳಷ್ಟು ಅಲ್ಪಾವಧಿಯಲ್ಲಿ ಬೆಳೆಯುವ ಭತ್ತದ ತಳಿಯನ್ನು ಯಾವ ಸಂಶೋಧಕರೂ ಶೋಧಿಸಿಲ್ಲ. ಈ ಪೈರನ್ನು ಕಾಣಲು ಬರುವ ರೈತ ಬಾಂಧವರನ್ನು ಸಂತೋಷ ಪೂರ್ವಕ ಸ್ವಾಗತಿಸುತ್ತೇನೆ.

ಕೆ. ಜತ್ತಪ್ಪ ರೈ,
ಕೆದಂಬಾಡಿ,
ಪೋಸ್ಟ್: ಪಾಣಾಜೆ, ದ. ಕ.

●

ಆನಂದ ಶೆಟ್ಟರ ನಿಧನಕ್ಕೆ ದುಃಖ ಸೂಚಕ ಸಭೆ

ಮಂಗಳೂರಿನ ಜನಪ್ರಿಯ, ಸಮಾಜ ಸೇವಾಸಕ್ತ ಸುಪ್ರಸಿದ್ಧ ಎಡ್ವಕೇಟರಾಗಿದ್ದ ಶ್ರೀ ಅತ್ತಾವರ ಆನಂದ ಶೆಟ್ಟರ ನಿಧನಕ್ಕಾಗಿ ಸಂತಾಪ ಸೂಚಿಸುವ ಸಭೆಯು ತಾ. 14ರಂದು ನಗರ ಸಭೆಯ ವಿಶೇಷಾಧಿವೇಶನದಲ್ಲಿ ಮತ್ತು ಪುರಭವನದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ನಗರ ಸಭಾಪತಿ ವಾಮನ ಕೊಡಿಯಾಲ್‌ಬೈಲ್‌ರವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ನಗರ ಸಭೆಯ ವಿಶೇಷಾಧಿವೇಶನ ಜರಗಿ ದಿವಂಗರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು. ಶ್ರೀ ಕೊಡಿಯಾಲ್‌ಬೈಲ್‌ರವರು ಮಾತಾಡಿ ಶ್ರೀ ಶೆಟ್ಟರು ನಗರದ ಜನತೆಗೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಅವರ ನಿಧನದಿಂದ ನಗರ ಸಭೆಗೆ, ನಗರಕ್ಕೆ ತುಂಬಲಾರದ ಹಾನಿಯಾಗಿದೆ ಎಂದರು.

ಶ್ರೀಗಳಾದ ಬ್ಲೇಸಿಯಸ್ ಡಿ'ಸೋಜಾ, ರಮೇಶ ಕಾಮತ್, ಪಿ. ರಾಮಚಂದ್ರ ರಾವ್, ಟಿ. ಕೃಷ್ಣ, ಎ. ಶ್ರೀಧರ, ಸಿ. ಎ. ಹಮೀದ್, ಶ್ರೀಮತಿಯರಾದ ಎಡ್ವಿ ಸಲ್ದಾನಾ, ಸಿಸಿಲಿ ಲೋಬೋ ಮೊದಲಾದವರು ದಿವಂಗತರ ಸಾರ್ವಜನಿಕ ಸೇವೆಗಳನ್ನು ಕೊಂಡಾಡಿದರು. ಅಲ್ಲದೆ ಮೊಸರು ಕುಡಿಕೆ ಉತ್ಸವ ನಡೆಯುವ ಸರ್ಕಲಿಗೆ ಅತ್ತಾವರ ಆನಂದ. ಶೆಟ್ಟಿ ಸರ್ಕಲ್ ಎಂದು ಹೆಸರಿಸುವ ನಿರ್ಣಯವನ್ನು ಸಭೆ ಅಂಗೀಕರಿಸಿತು. ಅಲ್ಲದೆ ಮುನಿಸಿಪಲ್ ಸೆಂಟರಿನ ಸ್ಟೋರ್ಟಿನಲ್ಲಿ ಅವರ ಸ್ಮಾರಕವಾಗಿ ಒಂದು ರೋಲಿಂಗ್ ಶೀಲ್ಡ್ ಒದಗಿಸುವಂತೆ ಮಾಡಬೇಕೆಂಬ ಶ್ರೀ ಜಿ. ರಮೇಶ ಕಾಮತರ ಸೂಚನೆಯನ್ನು ಸ್ವೀಕರಿಸಲಾಯಿತು.

ಅನಂತರ ಪುರಭವನದಲ್ಲಿ ಜರಗಿದ ಸಾರ್ವಜನಿಕ ಸಂತಾಪಸೂಚಕ ಸಭೆಯಲ್ಲಿ ಶ್ರೀಗಳಾದ ಗಂಗಾಧರದಾಸ್, ರಘುನಾಥ ಕೋಟ್ಯಂಕರ್, ಕೃಷ್ಣ ಶೆಟ್ಟಿ, ಎಸ್. ಎಲ್. ಲೋಬೋ, ಭುಜಂಗ ಶೆಟ್ಟಿ, ಪ್ರೆಸ್ ಕ್ಲಬ್ಬಿನ ಅಧ್ಯಕ್ಷ ಶ್ರೀ ಯು. ನರಸಿಂಹ ರಾವ್ ಮತ್ತು ಶ್ರೀಮತಿ ಒಕ್ಲೇವಿಯಾ ಅಲ್ಬುಕರ್ಕ್‌ರವರು ದಿವಂಗತರ ಬಗ್ಗೆ ಮಾತಾಡಿದರು. ಅನಂತರ ಸಂತಾಪ ಸೂಚಕ ನಿರ್ಣಯ ಸ್ವೀಕರಿಸಲಾಯಿತು.

ಕೋಟಿ—ಚೆನ್ನಯ ಉತ್ಸವ

ಎಣ್ಮೂರಿನ ಆದಿ ಸ್ಥಳದಲ್ಲಿ ಕೋಟಿ ಚೆನ್ನಯರೆಂಬ ಬೈದೇರುಗಳಿಗೆ ತಾ 26—3—72 ರಿಂದ 28ರ ತನಕ ಉತ್ಸವವು ನಡೆಸಲ್ಪಡುವುದೆಂದೂ ಅದಕ್ಕೆ ತಾವೆಲ್ಲರೂ ಬಂದು ಸಹಕರಿಸಿ ಗಂಧಪ್ರಸಾದಗಳನ್ನು ಸ್ವೀಕರಿಸಬೇಕೆಂದು ಕಟ್ಟಬೀಡಿನ ಪಟೇಲ್ ಶ್ರೀ ಕೆ. ಬಿ. ವಿಠ್ಠಲ್ ರೈಯವರು ಅಪೇಕ್ಷಿಸುತ್ತಾರೆ.

ವಿ. ವಿ. ಶ್ಯಾನುಭಾಗರ ನಿಧನ

ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರ್ ಮತ್ತು ಹಿಂದಿನ ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್‌ಗಳ ಡೈರೆಕ್ಟರಾಗಿ ಸೇವೆ ಸಲ್ಲಿಸಿದ್ದ ಕೆಲ ಸಮಯ ಅನಾರೋಗ್ಯದಿಂದಿದ್ದ ಶ್ರೀ ವಿ. ವಿ. ಶ್ಯಾನುಭಾಗರು ತಾ. 19ರಂದು ತಮ್ಮ 78ನೇ ವಯಸ್ಸಿನಲ್ಲಿ ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು.

ಶ್ರೀಯುತರು ಕಲೆ, ಸಾಂಸ್ಕೃತಿಕ ಕಾರ್ಯಗಳಲ್ಲಿ ಬಹು ಅಭಿರುಚಿಯುಳ್ಳವರೂ ಪ್ರೋತ್ಸಾಹಕರೂ ಆಗಿದ್ದು ಅತ್ಯಂತ ನಿಗರ್ವಿ ಹಾಗೂ ಸರಳ ಸ್ವಭಾವದವರಾಗಿದ್ದರು. ಶ್ರೀ ಶ್ಯಾನುಭಾಗರು ತಮ್ಮ ಹಿಂದೆ ಪತ್ನಿ, ನಾಲ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು.

ಡಾ| ಯು. ಎಲ್. ನಾರಾಯಣ ರಾಯರ ನಿಧನಕ್ಕಾಗಿ ಸಂತಾಪ ಸೂಚಕ ಸಭೆ

ಉಡುಪಿ ಕಡಿಯಾಳಿಯ ಯು. ಕಮಲಾಬಾಯಿ ಹೈಸ್ಕೂಲಿನ ಕಾರಣ ಪುರುಷರೂ ಮದ್ರಾಸಿನ ಪ್ರಸಿದ್ಧ ಡಾಕ್ಟರರೂ, ದಾನ ವೀರರೂ ಆದ ಡಾ| ಯು. ಎಲ್. ನಾರಾಯಣ ರಾಯರ ನಿಧನಕ್ಕಾಗಿ ಶಾಲೆಯ ಆಡಳಿತ ಮಂಡಳಿ, ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿ ವೃಂದದವರು ಸಂತಾಪ ಸೂಚಿಸುವ ಸಭೆಯೊಂದು ತಾ. 8ರಂದು ಶಾಲಾ ವ್ಯವಸ್ಥಾಪಕ ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಮುಖ್ಯೋಪಾಧ್ಯಾಯ ಶ್ರೀ ಎಚ್. ಅನಂತಯ್ಯ ಹಂದೆ, ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ ಮತ್ತು ಶ್ರೀ ವಿ. ನಾರ್ಣಪ್ಪಯ್ಯನವರು ದಿವಂಗತರ ಗುಣಗಾನ ಮಾಡಿದರು.

ಶ್ರೀ ಪೈಯವರು ಮಾತಾಡಿ ದಿವಂಗತರ ಶಿಕ್ಷಣ ಪ್ರೇಮ, ಸಮಾಜ ಕಲ್ಯಾಣಾಸಕ್ತಿ. ಉದಾರ ಹೃದಯ, ಸೇವಾದೀಕ್ಷೆಯನ್ನು ಕೊಂಡಾಡಿದರು.

ಡಾ| ರಾಯರು ಹೈಸ್ಕೂಲಿನ ಸ್ಥಾಪನೆಗಾಗಿ ತಮ್ಮ ಪತ್ನಿ ಯು ಕಮಲಾಬಾಯಿಯವರ ನೆನಪಿಗೆಂದು ದೊಡ್ಡ ಮೊತ್ತದ ದೇಣಿಗೆ ನೀಡಿ ಹೈಸ್ಕೂಲಿನ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿದ್ದರೆಂಬುದು ಸ್ಮರಣೀಯವಾಗಿದೆ.

ನೀರೆಬೈಲೂರಲ್ಲಿ ಸಂತಾಪ ಸೂಚಕ ಸಭೆ

ನೀರೆಬೈಲೂರು ಎಜ್ಯುಕೇಷನ್ ಸೊಸೈಟಿಯ ಅಧ್ಯಕ್ಷರಾಗಿದ್ದು ಅಲ್ಲಿಯ ಹೈಸ್ಕೂಲಿನ ಸ್ಥಾಪನೆಗೆ ಕಾರಣಪುರುಷರಾಗಿದ್ದ ಮದರಾಸಿನ ಖ್ಯಾತ ವೈದ್ಯರಾಗಿದ್ದ ಡಾ| ಯು ಎಲ್. ನಾರಾಯಣರಾಯರ ನಿಧನಕ್ಕಾಗಿ ಸಂತಾಪ ಸೂಚಿಸುವ ಸಭೆಯೊಂದು ಇತ್ತೀಚೆಗೆ ನೀರೆಬೈಲೂರು ಹೈಸ್ಕೂಲಿನಲ್ಲಿ ಜರಗಿತು. ಇದರಲ್ಲಿ ಊರವರು, ಅಧ್ಯಾಪಕ ಮತ್ತು ವಿದ್ಯಾರ್ಥಿ ವರ್ಗದವರು ಭಾಗವಹಿಸಿದ್ದರು. ಡಾ| ರಾಯರು ಸಾಮಾಜಿಕ ಮತ್ತು ವಿದ್ಯಾಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಹೊಂದಿದ್ದು ಉಡುಪಿಯ ಹಲವಾರು ಪ್ರಗತಿ ಕಾರ್ಯಗಳಿಗೂ ಗಣನೀಯ ನೆರವು ನೀಡಿದ್ದರು.

ಮುಲ್ಕಿಯಲ್ಲಿ ಶ್ರೀ ಟಿ. ಎ. ಪೈಯವರಿಗೆ ನಾಗರಿಕರ ಸನ್ಮಾನ

ತಾ. 17ರಂದು ಎಲ್. ಐ. ಸಿ.ಯ ಅಧ್ಯಕ್ಷ ಪದ್ಮಭೂಷಣ ಶ್ರೀ ಟಿ. ಎ. ಪೈಯವರನ್ನು ಮುಲ್ಕಿಯಲ್ಲಿ ಸನ್ಮಾನಿಸಲಾಯಿತು. ಅದೇ ದಿನ ಅವರು ಅಲ್ಲಿಯ ವಿಜಯಾ ಕಾಲೇಜಿನ ಗ್ರಂಥಾಲಯದ ಶಿಲಾನ್ಯಾಸ ಗೈದರು.

ಶ್ರೀ ಪೈಯವರನ್ನು ವಾದ್ಯಘೋಷಗಳೊಂದಿಗೆ ಸ್ವಾಗತಿಸಿ ಡಾ| ರಾಯಪ್ಪ ನಾಯಕ್, ಪ್ರಿನ್ಸಿಪಾಲ್ ಶ್ರೀ ಕೆ. ಜಿ. ಶೆಣೈ, ಮುಲ್ಕಿ ಪಂಚಾಯತ್ ಅಧ್ಯಕ್ಷ ಶ್ರೀ ಎಂ. ದಯಾನಂದ ಶೆಟ್ಟಿ ಮೊದಲಾದವರು ಶ್ರೀ ಪೈಗಳನ್ನು ಇದಿರ್ಗೊಂಡರು. ಪೈಗಳು ಮೊದಲು ಗ್ರಂಥಾಲಯದ ಶಿಲಾನ್ಯಾಸ ಗೈದು ಸಮಾರಂಭಕ್ಕೆ ಆಗಮಿಸಿದರು.

ಸಭೆಯ ಆರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಕೆ. ಜಿ. ಶೆಣೈಯವರು ಸ್ವಾಗತಿಸಿದರು. ಮುಲ್ಕಿ ಟೌನ್ ಪಂಚಾಯತ್ ಪರವಾಗಿ ಪಂಚಾಯತ್ ಅಧ್ಯಕ್ಷ ಶ್ರೀ ದಯಾನಂದ ಶೆಟ್ಟಿ, ಕಾಲೇಜ್ ಟ್ರಸ್ಟಿನ ಪರವಾಗಿ ಶ್ರೀ ಡಿ. ಎಸ್. ಮುಂಡ್ಕೂರರೂ ಶ್ರೀ ಪೈಗಳಿಗೆ ಮಾನಪತ್ರ ಅರ್ಪಿಸಿದರು. ನಂತರ ವಿವಿಧ ಸಂಘ ಸಂಸ್ಥೆಗಳ ಪತಿಯಿಂದ ಅವರಿಗೆ ಹೂ ಹಾರ ಅರ್ಪಿಸಲಾಯಿತು.

ಶ್ರೀ ಪೈಗಳು ತನಗೆ ನೀಡಿದ ಸನ್ಮಾನಕ್ಕೆ ಉತ್ತರಿಸುತ್ತಾ, ಮುಲ್ಕಿ ನೀರು ಸರಬರಾಜು ಯೋಜನೆಗೆ ಎಲ್. ಐ. ಸಿ. ನೆರವು ನೀಡುವುದಾಗಿ ಭರವಸೆಯಿತ್ತರು. ವಿಜಯಾ ಕಾಲೇಜು ಇಲ್ಲಿ ಶಿಕ್ಷಣ ಪಡೆವ ಯುವಕ ಯುವತಿಯರನ್ನು ಸ್ವತಂತ್ರವಾಗಿ ತಲೆಯೆತ್ತಿ ನಿಲ್ಲುವಂತಹ ನಾಗರಿಕರನ್ನಾಗಿ ರೂಪಿಸಬೇಕೆಂದು ಹೇಳಿದರು. ಗ್ರಂಥಾಲಯಗಳು ಜ್ಞಾನಭಂಡಾರವೆಂದ ಅವರು ವಿದ್ಯಾರ್ಥಿಗಳು ಈ ಗ್ರಂಥಾಲಯದ ಪ್ರಯೋಜನ ಪಡೆದು ತಮ್ಮ ಜ್ಞಾನಸೀಮೆಯನ್ನೂ ವಿಸ್ತರಿಸಿಕೊಳ್ಳಬೇಕೆಂದರು ಮುಲ್ಕಿಯ ಮುಂದಾಳುಗಳ ಪ್ರೋತ್ಸಾಹ ಹಾಗೂ ಡಾ| ಮಾಧವ ಪೈಗಳ ಸಹಕಾರದಿಂದ ಇಲ್ಲೊಂದು ಭವ್ಯ ಕಾಲೇಜು ತಲೆಯೆತ್ತುವಂತಾದುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಅಲ್ಲದೆ ಶ್ರೀ ಪೈಯವರು ಮುಲ್ಕಿಯಲ್ಲಿ ತನ್ನನ್ನು ಸನ್ಮಾನಿಸಿದ್ದರ ಕುರಿತು ವಿಶೇಷ ಸಂತೋಷ ವ್ಯಕ್ತಪಡಿಸಿದರು.

ಅಂತ್ಯದಲ್ಲಿ ಪ್ರೊ| ಡಿ. ಎನ್. ರಾಯ್‌ಕರ್ ಧನ್ಯವಾದ ಅರ್ಪಿಸಿದರು.

ಭದ್ರಾವತಿ ಲಯನ್ಸ್ ಕ್ಲಬ್ ಮಕ್ಕಳಿಗೆ ಪೋಲಿಯೊ ಡ್ರಾಪ್ಸ್ ನೀಡಿಕೆ

ಭದ್ರಾವತಿಯ ಲಯನ್ಸ್ ಕ್ಲಬ್ ಎರಡು ಕೇಂದ್ರಗಳಲ್ಲಿ ಉಚಿತವಾಗಿ ಮಕ್ಕಳಿಗೆ ಪೋಲಿಯೊ ಡ್ರಾಪ್ಸ್ ನೀಡುವ ವ್ಯವಸ್ಥೆಯನ್ನು ಇತ್ತೀಚಿಗೆ ಡಾ| ಜಿ. ವಾಸುದೇವರಾಯರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕ್ಲಬ್‌ನ ಅಧ್ಯಕ್ಷ ಡಾ| ಎಸ್. ಎಸ್. ಭಟ್ ಹಾಗೂ ಇತರ ಸದಸ್ಯರು ಉಪಸ್ಥಿತರಿದ್ದರು. ಸುಮಾರು 650 ಮಕ್ಕಳು ಈ ಕಾರ್ಯಕ್ರಮದ ಪ್ರಯೋಜನ ಪಡೆದರು

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 264 of 71.

ಜೆರೋಮ್ ಫೆರ್ನಾಂಡಿಸ್ —ವಾದಿ.

ಮತ್ತು

ಜೋಸೆಫ್ ಡಿ'ಸೋಜ ಕೂಡಾ

—ಪ್ರತಿವಾದಿರು.

ಪ್ರತಿವಾದಿರು:— 1ನೇ ಜೋಸೆಫ್ ಡಿ'ಸೋಜ, 3ನೇ ಶ್ರೀಮತಿ ಕೊರ್ಪುರಿ ಡಿ'ಸೋಜ ಪ್ಲೋರಿನ್ ಮೆಂಡೋನ್ಸರ ಮಕ್ಕಳು, ಮರ್ಣೆ ಗ್ರಾಮ, ಉಡ್ಪಿ ತಾಲೂಕು

1 ಮತ್ತು 3ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಗೆ ಪ್ರತಿವಾದಿರು ತಾರೀಕು 13—3—66 ರಲ್ಲು ರೂಪಾಯಿ 300/-ಕ್ಕೆ ಬರಕೊಟ್ಟ ೧. ನಿಶಿ ಈಡು ದಸ್ತಾವೇಜಿನ ಅಸಲು ಬಡ್ಡಿ ಐವಜು ವಗೈರೆ ಕೇಳಿ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾ. 29—3—72ಕ್ಕೆ ನಿಮ್ಮ ಅಪ್ಪೆರು ನೋಟಿಸಿನ ಬಗ್ಗೆ ಇಟ್ಟಿದೆ. ಆ ಕುರಿತು ನಿಮಗೆ ಏನಾದರೂ ಉಜಾಹರಿಸುವಂತಾದ್ದಿದ್ರೆ ಸದ್ರಿ ದಿವಸ ಹಗಲು ಗಂಟೆ 11ಕ್ಕೆ ಸರಿಯಾಗಿ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

By Order of the Court.

ಶಿರ್ತಾಡಿ ವಿಲಿಯಂ ಪಿಂಟೊ

M.A.,L.L.B.

ವಾದಿ ಕಡೆ ಎಡ್ವೋಕೇಟರು.

ಉಡ್ಪಿ, ತಾರೀಕು. 17—3—1972.

ಮಂಗಳೂರಿನ ಕೆನರಾ ಚೇಂಬರ್ ಆಫ್ ಕಾಮರ್ಸಿನವರಿಂದ ಶ್ರೀ ಟಿ. ಎ. ಪೈಯವರಿಗೆ ಸನ್ಮಾನ

ತಾ. 18ರಂದು ಭಾರತದ ಜೀವವಿಮಾ ಕಾರ್ಪೊರೇಶನಿನ ಅಧ್ಯಕ್ಷ ಪದ್ಮಭೂಷಣ ಶ್ರೀ ಟಿ. ಎ. ಪೈಯವರನ್ನು ಮಂಗಳೂರಿನ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್‌ನವರು ಸನ್ಮಾನಿಸಿದರು. ಚೇಂಬರ್‌ನ ಅಧ್ಯಕ್ಷ ಶ್ರೀ ಯು. ರಾಜಾರಾಮ ಮಲ್ಯರು ಆರಂಭದಲ್ಲಿ ಸ್ವಾಗತಿಸಿ ಸನ್ಮಾನ ಪತ್ರವನ್ನು ಓದಿ ಶ್ರೀ ಪೈಯವರಿಗೆ ಒಪ್ಪಿಸಿದರು.

ಶ್ರೀ ಟಿ. ಎ. ಪೈಯವರು ಸನ್ಮಾನಕ್ಕೆ ಉತ್ತರ ನೀಡುತ್ತಾ, ದೇಶದ ಆರ್ಥಿಕ ಶಕ್ತಿ ಹೆಚ್ಚಿಸುವಲ್ಲಿ ವಾಣಿಜ್ಯ ಸಂಸ್ಥೆಗಳು ಪ್ರಧಾನವಾದ ಪಾತ್ರ ವಹಿಸುತ್ತಿದ್ದು ಆ ಕಡೆಗೆ ಚೇಂಬರ್ ಆಫ್ ಕಾಮರ್ಸ್ ಆಸಕ್ತಿ ವಹಿಸಿ ಕಾರ್ಯಪ್ರವೃತ್ತವಾಗುವುದೆಂದು ನಾನು ಹಾರೈಸಿದ್ದೇನೆ, ಎಂದರು. ಶ್ರದ್ಧಾವಂತ ಸಾಹಸೋದ್ಯಮಿಗಳಿಗೆ ಸಾಲದ ನೆರವು ಸಿಗದಿದ್ದಲ್ಲಿ ಅವರು ತಮ್ಮ ಉದ್ಯಮದಲ್ಲಿ ಯಶಸ್ವಿಯಾಗಿ ಮುನ್ನಡೆಯುವುದು ಅಸಾಧ್ಯವೆಂದೂ ಇತರ ಜನರನ್ನು ಸಂಶಯದಿಂದ ನೋಡುವ ನಮ್ಮ ದೃಷ್ಟಿಕೋನ ಬದಲಾಗಬೇಕೆಂದೂ ಅವರು ನುಡಿದರು. ಜನರ ಅತ್ಯಾವಶ್ಯಕ ಮೂಲ ಅವಶ್ಯಕತೆಗಳನ್ನು ಪೂರೈಸಲು ಪ್ರಯತ್ನ ಅಗತ್ಯವೆಂದರು. ವಸತಿ ಸಮಸ್ಯೆಯ ಬಗ್ಗೆ ಅವರು ಪ್ರಸ್ತಾಪಿಸಿ ಸರಕಾರವು ವಸತಿ ಸೌಕರ್ಯವನ್ನು ಕಲ್ಪಿಸುವಲ್ಲಿ ಒಂದು ಯೋಜಿತ ಧೋರಣೆಯನ್ನು ಅನುಸರಿಸುವುದು ಉಚಿತವೆಂದರು. ಬ್ಯಾಂಕಿಂಗ್ ಮತ್ತೆ ಜೀವವಿಮಾ ವ್ಯವಹಾರದಲ್ಲೂ ಈ ಜಿಲ್ಲೆ ಮುಂದಿದೆ ಎಂದವರು ತಿಳಿಸಿದರು.

ಅಂತ್ಯದಲ್ಲಿ ಚೇಂಬರ್‌ನ ಕಾರ್ಯದರ್ಶಿ ಶ್ರೀ ಬಿ. ಆರ್. ಕಾಮತರು ಧನ್ಯವಾದವಿತ್ತರು.

ನಾಗಮಂಡಲ

ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅರ್ಚಕರಾದ ಶ್ರೀ ಗೋಪಾಲಕೃಷ್ಣ ಆಸ್ರಣ್ಣರು ಮತ್ತು ಸಹೋದರರ ವತಿಯಿಂದ ಸಂಭ್ರಮದ ನಾಗಮಂಡಲ ಸೇವೆಯೊಂದು ತಾ. 16—3—1972 ರಂದು ಆಸ್ರಣ್ಣರ ಸ್ವಗೃಹದಲ್ಲಿ ವೈಭವದಿಂದ ನೆರವೇರಿತು.

ಮಗರ ಶ್ರೀ ಅನಂತ ಸಾಮಗರು ಮತ್ತು ಬಳಗದವರ ನಾಗದರ್ಶನವಂತೂ ನೆರೆದ ಸಾವಿರ ಸಾವಿರ ಭಕ್ತರ ಕಣ್ಮನಗಳನ್ನು ಸೆಳೆಯುವಂತಿತ್ತಲ್ಲದೆ ನಮ್ಮ ನಾಡಿನ ಜನತೆಯಲ್ಲಿ ಶ್ರೀ ವಾಸುಕೀ ನಾಗರಾಜನ ಕುರಿತಾದ ಅಮಿತ ಭಕ್ತಿಗೆ ದ್ಯೋತಕವೆನ್ನುವಂತಿತ್ತು.

ಉಡುಪಿ ಶ್ರೀ ಫಲಿಮಾರು ಮಠಾಧೀಶರು ಮತ್ತು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರೇ ಮೊದಲಾದ ಪ್ರಮುಖರೂ ಉಪಸ್ಥಿತರಿದ್ದರು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 224/71.

ಬ್ರಹ್ಮಾವರ ಸೀವರ್ಡ್ಸ್ ಕೋ. ಓಪರೇಟಿವ್ ಸೊಸೈಟಿ—ವಾದಿ.

ಮತ್ತು

ಶಾಬಾಂಬಿ ಹಸನ್ ಬಾಬು ಸಾಹೇಬ ಕೂಡಾ—ಪ್ರತಿವಾದಿಯರು

ಇವರೊಳಗೆ

ನೋಟೀಸು

2ನೇ ಪ್ರತಿವಾದಿಗೆ,

ಎಸ್. ಎಂ ಹಬಿಬುಲ್ಲಾ, ಶಾಬಾಂಬಿ ಹಸನ್ ಬಾಬು ಸಾಹೇಬರ ಮಗ, ವ್ಯಾಪಾರಿ, ಭಟ್ಕಳ.

ಮೇಲಿನ ವ್ಯಾಜ್ಯದಲ್ಲಿ ತೀರಿಹೋದ ಒಂದನೆ ಪ್ರತಿವಾದಿಯ ವಾರೀಸುದಾರರನ್ನು ಕಕ್ಷಿಯಲ್ಲಿ ಸೇರಿಸುವರೆ ವಾದಿಯರು ಅರ್ಜಿಕೊಟ್ಟಿರುವುದರಿಂದ ಆ ಬಗ್ಗೆ ಮತ್ತು ವ್ಯಾಜ್ಯದಲ್ಲಿ ನಿಮ್ಮ ಹಾಜರಾತಿಯ ಬಗ್ಗೆ ತಾ. 8-4-1972ಕ್ಕೆ ಇಟ್ಟಿರುತ್ತಾರೆ. ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

H. S. Kedlaya

ವಾದಿ—ಅರ್ಜಿದಾರರ ಕಡೆ ಎಡ್ವೋಕೇಟ್.

ಸ್ಥಳ:— ಉಡುಪಿ, ತಾ:—17—3 1972.

ಶ್ರೀ ಕೃಷ್ಣ ಮಠದಲ್ಲಿ ರಾಮೋತ್ಸವ

ತಾ. 17ರಂದು ಶ್ರೀ ಕೃಷ್ಣಮಠದ ವಸಂತ ಮಹಲಿನಲ್ಲಿ ಜರಗಿದ ಶ್ರೀ ರಾಮೋತ್ಸವ ಸಮಾರಂಭದಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿ ಶ್ರೀ ದ. ರಾ. ಬೇಂದ್ರೆಯವರಿಗೆ ಪರ್ಯಾಯ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು 'ಕರ್ನಾಟಕ ಕವಿ ಕುಲ ತಿಲಕ' ಎಂಬ ಪ್ರಶಸ್ತಿಯನ್ನು ಇತ್ತು ಸನ್ಮಾನಿಸಿದರು ಶ್ರೀಗಳವರು ಪ್ರಶಸ್ತಿ ಹಾಗೂ ಶಾಲನ್ನು ಶ್ರೀ ಬೇಂದ್ರೆಯವರಿಗೆ ಒಪ್ಪಿಸಿದರು. ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಪ್ರಶಸ್ತಿಯನ್ನು ಓದಿ ಹೇಳಿದರು ಕವಿ ಬೇಂದ್ರೆಯವರು ತಮಗಿತ್ತ ಸನ್ಮಾನಕ್ಕೆ ಕೃತಜ್ಞತೆ ಅರ್ಪಿಸಿದ ಬಳಿಕ ಶ್ರೀ ಎನ್. ಶ್ರೀಶ ಬಲ್ಲಾಳರು ಧನ್ಯವಾದ ಅರ್ಪಿಸಿದರು.

ಈ ಸಮಾರಂಭದ ಪೂರ್ವಭಾವಿಯಾಗಿ ಶ್ರೀ ರಾಮೋತ್ಸವದ ಉದ್ಘಾಟನಾ ಸಮಾರಂಭವು ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಶ್ರೀ ಎಂ. ರಾಜಗೋಪಾಲಾಚಾರ್ಯರ ರಾಮಾಯಣ ವಾಚನ ಹಾಗೂ ಶ್ರೀ ದ. ರಾ ಬೇಂದ್ರೆಯವರ ರಾಮಾಯಣ ದರ್ಶನ ಭಾಷಣದೊಂದಿಗೆ ಜರಗಿತು. ಆರಂಭದಲ್ಲಿ ಶ್ರೀ ಕು. ಶಿ ಹರಿದಾಸ ಭಟ್ಟರು ಸ್ವಾಗತಿಸಿದರು. ಶ್ರೀ ಬೇಂದ್ರೆಯವರು 'ರಾಮಾಯಣ ದರ್ಶನ'ದ ಕುರಿತು ಮಾತಾಡಿದರು.

ಶ್ರೀ ಅಳಿಕೆ ರಾಮಯ್ಯ ರೈಯವರಿಗೆ ಸತ್ಕಾರ

ತಾ. 18ರಂದು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಸಭಾಮಂದಿರದಲ್ಲಿ ಪ್ರಿನ್ಸಿಪಾಲ್ ಪ್ರೊ। ಬಿ. ವಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ರಾಜ್ಯಪ್ರಶಸ್ತಿ ವಿಜೇತ ಶ್ರೀ ರಾಮಯ್ಯ ರೈಯವರನ್ನು ಸತ್ಕರಿಸುವ ಸಮಾರಂಭವೊಂದು ಜರಗಿತು. ಆರಂಭದಲ್ಲಿ ಶ್ರೀ ಲಕ್ಷ್ಮೀಶ ಮೋಲಂಟ ಸ್ವಾಗತಿಸಿದರು. ಶ್ರೀ ಐ. ನಾರಾಯಣರು ಶ್ರೀ ರೈ ಅವರ ಪರಿಚಯ ಮಾಡಿಸಿದರು. ರೈಯವರು ತಮ್ಮ ಸಹ ಕಲಾವಿದರ ಪರಿಚಯ ನೀಡಿದರು.

ಶ್ರೀ ರೈಯವರು ಮಾತಾಡುತ್ತಾ ಯಕ್ಷಗಾನ ಕಲೆಯ ಅಭಿವೃದ್ಧಿಯು ಕೇವಲ ಉದರಭರಣೆಗಾಗಿ ಕಲಾವಿದ ವೃತ್ತಿಯನ್ನು ಆಯ್ದುಕೊಂಡವರಿಂದ ಅಸಾಧ್ಯವೆಂದೂ ಯಕ್ಷಗಾನದ ಏಳಿಗೆ ವಿದ್ಯಾವಂತರಿಂದ ಆಗಬೇಕಾಗಿದೆ ಎಂದರು. ಯಕ್ಷಗಾನ ಕ್ಷೇತ್ರದಲ್ಲಿ ತೆಂಕು, ಬಡಗು ತಿಟ್ಟುಗಳ ಸಂಪ್ರದಾಯ ಮುಖದಲ್ಲಿ ಎರಡು ಕಣ್ಣುಗಳಂತಿರಬೇಕು. ಮರದ ಕೊಂಬೆಗಳೆರಡರಲ್ಲಿ ಒಂದು ಕೊಂಬೆ ಕೊಡುವುದು ಮಾತ್ರ ನೆರಳು ಇನ್ನೊಂದು ಕೊಡುವುದು ನೆರಳಲ್ಲ ಎನ್ನುವ ಭಾವನೆ ಹೋಗಬೇಕೆಂದು ಅಭಿಪ್ರಾಯ ಪಟ್ಟರಲ್ಲದೆ ಈ ಕಲೆಯತ್ತ ಸಮುಪೃಷ್ಟಿ ಹರಿಸುವಂತೆ ವಿದ್ಯಾವಂತ ಸಮುದಾಯವನ್ನವರು ವಿನಂತಿಸಿದರು.

ಪ್ರೊ। ಬಿ. ವಿ. ಕೆ. ಯವರು ಮಾತಾಡಿ ಶ್ರೀ ರೈಯವರನ್ನು ಅಭಿನಂದಿಸಿದರು. ಅಂತ್ಯದಲ್ಲಿ ಶ್ರೀ ಎಚ್. ಸದಾಶಿವ ನಾಯಕರು ವಂದಿಸಿದರು

ಮಂಗಳೂರಲ್ಲಿ ತೆರಿಗೆ ಸಲಹೆಗಾರ ಸಂಸ್ಥೆ ಆರಂಭ

ಮುಂಬಯಿಯ ಮೆ। ಎಸ್. ವಿ. ಪಿಕಳೇ ಎಂಡ್ ಕೋ, ಎಡ್ವಕೇಟ್ಸ್, ಸುಪ್ರೀಂಕೋರ್ಟ್ ಇವರ ಆರನೇ ಶಾಖೆಯನ್ನು ತಾ 18ರಂದು ಮಂಗಳೂರಿನ ಬಂದರದಲ್ಲಿರುವ ಸುಗಂಧಿ ಬಿಲ್ಡಿಂಗ್‌ನಲ್ಲಿ ಶ್ರೀ ಟಿ ಎ ಪೈಯವರು ಧರ್ಮಸ್ಥಳದ ಶ್ರೀ ಡಿ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು ಶ್ರೀ ಪೈಯವರು ತೆರಿಗೆಗಳಿಗೆ ಸಂಬಂಧಿಸಿದ ಸಲಹೆಗಾರರ ಮಹತ್ವವನ್ನು ವಿವರಿಸಿ ಶ್ರೀ ಪಿಕಳೇಯವರ ಶಾಖೆಯು ಅಭಿವೃದ್ಧಿ ಹೊಂದಿ ಇಲ್ಲಿನ ಜನತೆಗೆ ಹೆಚ್ಚಿನ ಪ್ರಯೋಜನ ದೊರೆಯುವಂತಾಗಲೆಂದು ಹಾರೈಸಿದರು.

ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಎಂ ಸಿ ಪೈಯವರು ಮಾತನಾಡಿ ಈ ನೂತನ ಶಾಖೆಗೆ ಶುಭಕೋರಿದರು. ಶ್ರೀ ಹೆಗ್ಗಡೆಯವರು ತಮ್ಮ ಭಾಷಣದಲ್ಲಿ ಶಾಖೆಯು ಯಶಸ್ವಿಯಾಗಿ ಮುನ್ನಡೆದು ಇಲ್ಲಿಯ ಜನರು ಅದರ ಪ್ರಯೋಜನ ಪಡೆಯುವಂತಾಗಲೆಂದು ಹಾರೈಸಿದರು.

ಕೊನೆಯಲ್ಲಿ ಹೊಸ ಶಾಖೆಯ ಕಾರ್ಯಭಾರ ನಿರ್ವಹಿಸಲಿರುವ ಶ್ರೀ ಜಿ. ಎನ್. ಕಾಮತರು ಧನ್ಯವಾದವಿತ್ತರು.

ಬೆಳ್ತಂಗಡಿಯಲ್ಲಿ ಮ। ಗಾಂಧಿ ಸ್ಮಾರಕ ರಂಗಮಂಟಪ ಉದ್ಘಾಟನೆ

ಬೆಳ್ತಂಗಡಿ ಸಮಾಜ ಮಂದಿರ ಸಮಿತಿಯು ಸ್ಥಳೀಯ ಬೋರ್ಡು ಹೈಸ್ಕೂಲಿಗಾಗಿ ಕಟ್ಟಿಸಿದ ಮಹಾತ್ಮಾ ಗಾಂಧಿ ಸ್ಮಾರಕ ರಂಗಮಂಟಪವನ್ನು ಶಾಲೆಗೆ ಒಪ್ಪಿಸುವ ಸಮಾರಂಭವು ಶ್ರೀ ಮಧುಸೂದನ ಡಿ. ಕುಶೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಿಂಡಿಕೇಟ್ ಬೇಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ ಪೈಯವರು ನೂತನ ರಂಗಮಂಟಪವನ್ನು ಉದ್ಘಾಟಿಸಿದರು. ಆರಂಭದಲ್ಲಿ ಸಮಾಜ ಮಂದಿರ ಕಮಿಟಿಯ ಕಾರ್ಯದರ್ಶಿ ಶ್ರೀ ಬಿ. ನರಸಿಂಹ ಭಟ್‌ರವರು ವರದಿಯೋದಿದರು.

ಸಮಾಜ ಮಂದಿರಕ್ಕೆ ಅಧಿಕ ಧನಸಹಾಯವಿತ್ತು ಸಂಸ್ಥಾಪಕ ಸದಸ್ಯರಾದ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆ, ಪುತ್ತೂರಿನ ಶ್ರೀ ಪಿ. ಎಸ್. ನಾಯಕ್, ಶ್ರೀ ಪಾಂಡಿರಾಜ್ ಬಲ್ಲಾಳ್ ಮತ್ತು ನೆರಿಯ ವೆಂಕಟಕೃಷ್ಣ ಹೆಬ್ಬಾರರ ಭಾವಚಿತ್ರಗಳನ್ನೂ ಕ್ರಮವಾಗಿ ನೆರಿಯದ ಶ್ರೀ ವಸಂತ ಮಾಧವ ಹೆಬ್ಬಾರ್, ಪುತ್ತೂರಿನ ಶ್ರೀ ಮಾಧವ ನಾಯಕ್, ಬೆಳ್ತಂಗಡಿ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀ ಎಸ್. ಜೆ. ಕಡಂಬ ಮತ್ತು ಕುಂದಾಪುರ ರೋಟರಿ ಕ್ಲಬ್‌ನ ಉಪಾಧ್ಯಕ್ಷ ಶ್ರೀ ಜಿ ಎಸ್. ಬುಲ್ಲಣ್ಣವರ್‌ರವರು ಅನಾವರಣಗೊಳಿಸಿದರು.

ಅಂತ್ಯದಲ್ಲಿ ಶ್ರೀ ಜಿ. ಎನ್. ಭಿಡೆಯವರು ಧನ್ಯವಾದವಿತ್ತರು.

ಕಾಂಗ್ರೆಸ್ ಹೊಸ ದಾಖಲೆ —ಪತ್ರಿಕಾ ಗೋಷ್ಠಿಯಲ್ಲಿ ಶಂಕರ ಆಳ್ವ

ಮಂಗಳೂರಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ತಾ. 12ರಂದು ಏರ್ಪಡಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ದ. ಕ. ಜಿಲ್ಲಾ ಆಡಳಿತ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ. ಶಂಕರ ಆಳ್ವರು ಮಾತನಾಡುತ್ತಾ ಈ ಸಲದ ವಿಧಾನಸಭಾ ಚುನಾವಣೆಯಲ್ಲಿ 13 ಕಾಂಗ್ರೆಸ್ ಮತ್ತು 1 ಆಡಳಿತ ಕಾಂಗ್ರೆಸ್ ಬೆಂಬಲಿತ ಕಮ್ಯೂನಿಸ್ಟ್ ಅಭ್ಯರ್ಥಿಗಳು ವಿಜಯ ಹೊಂದುವುದರ ಮೂಲಕ ದ. ಕ. ಜಿಲ್ಲೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಹೊಸ ದಾಖಲೆಯೊಂದನ್ನು ಸ್ಥಾಪಿಸಿದೆ ಎಂದರು. ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಪಕ್ಷದ ಅಭ್ಯರ್ಥಿಗಳ ವಿರುದ್ಧ ಕಾರ್ಯನಿರ್ವಹಿಸಿದ ಕಾರ್ಯಕರ್ತರ ವರ್ತನೆಯನ್ನವರು ಖಂಡಿಸಿದರು. ಪ್ರಧಾನಿ ನಾಯಕತ್ವದ ಬಗ್ಗೆ ಅವರು ಮಾತನಾಡಿ ಶ್ರೀಮತಿ ಗಾಂಧಿಯವರು ಓರ್ವ ಸಮರ್ಥ ರಾಜಕಾರಣಿಯೆಂಬುದನ್ನು ಜನತೆ ಒಪ್ಪಿರುವುದನ್ನು ಈ ಸಲದ ಚುನಾವಣೆ ಸ್ಪಷ್ಟಪಡಿಸುತ್ತದೆ ಎಂದರು. ತನ್ನ ಕ್ಷೇತ್ರವಾದ ಪುತ್ತೂರಿನ ಸ್ಥಿತಿಗತಿಗಳನ್ನವರು ವಿವರಿಸಿ ಕಾಂಗ್ರೆಸಿನ ಅಭ್ಯರ್ಥಿಗಳು ಜಯಗಳಿಸುವಂತೆ ತಮ್ಮ ಮತಗಳನ್ನು ನೀಡಿ ಬೆಂಬಲಿಸಿದ ಜಿಲ್ಲೆಯ ಮತದಾರರೆಲ್ಲರಿಗೆ ತಮ್ಮ ಕೃತಜ್ಞತೆ ಸಲ್ಲಿಸಿದರು. ಈ ಸಲ ಪತ್ರಿಕೆಗಳೂ ನಿಷ್ಪಕ್ಷಪಾತವಾಗಿ ವರದಿ ಹಾಗೂ ವಾರ್ತೆಗಳನ್ನು ಪ್ರಕಟಿಸುವುದರ ಮೂಲಕ ಚುನಾವಣೆ ಯಶಸ್ವಿಯಾಗುವಂತೆ ಸಹಕರಿಸಿದುದಕ್ಕೆ ಸಂತೋಷ ವ್ಯಕ್ತಪಡಿಸಿ ಪತ್ರಿಕೋದ್ಯಮಿಗಳನ್ನವರು ಅಭಿನಂದಿಸಿದರು.

ಜಿಲ್ಲೆಯ ಪ್ರಾಮುಖ್ಯ ಸಮಸ್ಯೆಗಳ ಕುರಿತು ಅವರು ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾ ಭೂ ಸುಧಾರಣೆಗೆ ಮೊದಲ ಗಮನ ನೀಡುವುದಾಗಿ ತಿಳಿಸಿದರು. ಜಿಲ್ಲೆಯಲ್ಲಿ ಮತದಾರರು ಶಾಂತವಾಗಿ ಚುನಾವಣೆ ನಡೆಯುವಂತೆ ಸಹಕರಿಸಿದುದಕ್ಕೆ ಶ್ರೀ ಆಳ್ವರು ಕೃತಜ್ಞತೆ ಸಲ್ಲಿಸಿದರು.

ಈ ಸಭೆಯಲ್ಲಿ ವಿಧಾನ ಸಭೆಗೆ ಆರಿಸಲ್ಪಟ್ಟ ಶ್ರೀಗಳಾದ ಬಿ ಸುಬ್ಬಯ್ಯ ಶೆಟ್ಟಿ, ಯು. ಟಿ. ಫರೀದ್, ವೀರಪ್ಪ ಮೊಯ್ಲಿ, ಸುಬ್ರಹ್ಮಣ್ಯ ಗೌಡ, ಡಾ। ದಾಮೋದರ ಮುಲ್ಕಿ, ಶ್ರೀಮತಿಯರಾದ ಆಡ್ಡಿ ಸಲ್ಡಾನ, ಮನೋರಮಾ ಮಧ್ವರಾಜ್ ಮತ್ತು ವಿನ್ನಿಫ್ರೆಡ್ ಫೆರ್ನಾಂಡಿಸ್ ಮೊದಲಾದವರು ಭಾಗವಹಿಸಿದ್ದರು.

ಪುತ್ತೂರಿನಲ್ಲಿ ಪೈಯವರಿಗೆ ಸನ್ಮಾನ

ಎಲ್. ಐ. ಸಿ. ಯ ಚೆಯರ್‌ಮೇನ್ ಪದ್ಮಭೂಷಣ ಶ್ರೀ ಟಿ ಎ. ಪೈಯವರನ್ನು ತಾ. 19 ರಂದು ಪುತ್ತೂರಿನ ಶಿವ ಸದನದಲ್ಲಿ ಪದ್ಮಭೂಷಣ ಡಾ। ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು. ಆರಂಭದಲ್ಲಿ ಆತಿಥೇಯ ಸಮಿತಿಯ ಪರವಾಗಿ ಶ್ರೀ ಪಿ. ಸರ್ವೋತ್ತಮ ನಾಯಕರು ಶ್ರೀ ಪೈಯವರಿಗೆ ಸನ್ಮಾನ ಪತ್ರವಿತ್ತರು. ಶ್ರೀಗಳಾದ ಎಂ. ಜತ್ತಪ್ಪ ರೈ, ಎಲ್. ಸಿ., ಫಿಲೋಮಿನಾ ಕಾಲೇಜಿನ ಪ್ರೊ। ಡಬ್ಲ್ಯು ಎಸ್. ಮಾರ್ಟಿನ್, ಎಡ್ವಕೇಟ್ ಕೆ. ರಾಮಕೃಷ್ಣ, ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲ್ ಫಾದರ್ ಕ್ಯಾಸ್ಟಲಿನೋ, ವಿವೇಕಾನಂದ ಕಾಲೇಜಿನ ಪ್ರಿನ್ಸಿಪಾಲ್ ಜಿ. ಕೆ. ಶೆಣೈ ಮೊದಲಾದವರು ಶ್ರೀ ಪೈಯವರ ಬಗ್ಗೆ ಮಾತಾಡಿ ಅವರ ದಕ್ಷತೆಯನ್ನು ಕೊಂಡಾಡಿದರು.

ಶ್ರೀ ಪೈಯವರು ಮಾತಾಡುತ್ತಾ, ಪುತ್ತೂರಿನ ನೀರು ಸರಬರಾಜು ಯೋಜನೆಗೆ ಎಲ್. ಐ. ಸಿ. ಸಿದ್ಧವಿದೆ. ಆದರೆ ಇದಕ್ಕೆ ಮೈಸೂರು ಸರಕಾರದ ಸಹಕಾರ ಬೇಕಾಗಿದೆ ಎಂದೂ ಮೈಸೂರು ಸರಕಾರವು ಈ ಯೋಜನೆಗಾಗಿ ಒಂದು ಜಲಮಂಡಳಿಯನ್ನು ರೂಪಿಸುವುದು ಉಚಿತವೆಂದು ಸಲಹೆ ಇತ್ತರು. ನಿರುದ್ಯೋಗ, ವಸತಿ ಸಮಸ್ಯೆಗಳಂತಹ ಇನ್ನೂ ಹಲವಾರು ಸಮಸ್ಯೆಗಳನ್ನು ಎಲ್. ಐ. ಸಿ. ಮೂಲಕ ಪರಿಹರಿಸಲು ಸಾಕಷ್ಟು ಅವಕಾಶವಿದೆ ಎಂದವರು ತಿಳಿಸಿದರು.

ಅಧ್ಯಕ್ಷ ಸ್ಥಾನದಿಂದ ಡಾ। ಕಾರಂತರು ಮಾತಾಡಿ ರಾಷ್ಟ್ರದ ನಿರ್ವಾಹಕ ಸ್ಥಾನಕ್ಕೆ ಶ್ರೀ ಪೈಯವರಂತಹ ತಜ್ಞ ಅನುಭವಿಗಳ ಸೇವೆಯ ಪ್ರಯೋಜನ ದೊರೆಯುವಂತಾಗಲೆಂದು ಹಾರೈಸಿದರು.

ಅಂತ್ಯದಲ್ಲಿ ಶ್ರೀ ಡಿ'ಸೋಜರು ವಂದಿಸಿದರು.

ಅ. ಭಾ. ಕೈಗಾರಿಕಾ ಕೃಷಿ ವಸ್ತು ಪ್ರದರ್ಶನ ಉದ್ಘಾಟನೆ

ದೇಶ ಭಕ್ತ ಕಾರ್ನಾಡು ಸದಾಶಿವ ರಾಯರ ಸ್ಮಾರಕ ಭವನದ ಸಲುವಾಗಿ ಸದಾಶಿವ ಮೆಮೋರಿಯಲ್ ಟ್ರಸ್ಟಿನವರು ಮಂಗಳೂರಿನ ನೆಹರೂ ಮೈದಾನಿನಲ್ಲಿ ಏರ್ಪಡಿಸಿದ ಆರನೆ ಅ. ಭಾ. ಕೈಗಾರಿಕೆ ಮತ್ತು ಕೃಷಿ ವಸ್ತು ಪ್ರದರ್ಶನವನ್ನು ತಾ 20ರಂದು ಬಿಹಾರದ ಮಾಜಿ ರಾಜ್ಯಪಾಲ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ। ಆರ್. ಆರ್. ದಿವಾಕರರು ಉದ್ಘಾಟಿಸಿದರು. ಪ್ರದರ್ಶನ ಸಮಿತಿಯ ಕಾರ್ಯದರ್ಶಿ ಶ್ರೀ ಎಚ್. ಕೆ. ತಿಂಗಳಾಯರು ಆರಂಭದಲ್ಲಿ ಸ್ವಾಗತಿಸಿದರು. ಲೋಕ ಸಭಾ ಸದಸ್ಯ ಶ್ರೀ ಕೆ ಕೆ ಶೆಟ್ಟರು ಟ್ರಸ್ಟಿನ ಉದ್ದೇಶ, ಸಾಧನೆ, ಪ್ರಗತಿಗಳನ್ನು ವಿವರಿಸಿದರು.

ಶ್ರೀ ದಿವಾಕರರು ಮಾತಾಡಿ ಶ್ರೀ ಕಾರ್ನಾಡ್ ಸದಾಶಿವ ರಾಯರ ತ್ಯಾಗಪೂರ್ಣ ಹೋರಾಟದ ಚಿತ್ರವನ್ನು ವಿವರಿಸಿದರು. ಅಲ್ಲದೆ ಈ ಪ್ರದರ್ಶನದಲ್ಲಿ ದಿ। ಸದಾಶಿವರಾಯರ ಜೀವನ, ಸಾಧನೆ, ಆದರ್ಶಗಳ ಬಗ್ಗೆ ಮಾಹಿತಿ ಕೊಡುವಂತಹ ಒಂದೆರಡು ಸ್ಟಾಲುಗಳನ್ನಾದರೂ ಏರ್ಪಡಿಸುವುದು ಹಿತಕರವಾಗಿದೆ ಎಂಬ ಸಲಹೆ ಇತ್ತರು. ಭಾರತವು ಸ್ವಾತಂತ್ರ್ಯ ಗಳಿಸಿ 25 ವರುಷವಾಗಿದ್ದು ಇದನ್ನು ಬೋಧಕವಾಗಿ ಆಚರಿಸಬೇಕೆಂದೂ ಅವರು ಸೂಚಿಸಿದರು.

ಅಂತ್ಯದಲ್ಲಿ ಪ್ರದರ್ಶನ ಸಮಿತಿಯ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಧನ್ಯವಾದ ಅರ್ಪಿಸಿದರು.

ಕಾಸರಗೋಡಿನಲ್ಲಿ ಕನ್ನಡಿಗರ ಸಮ್ಮೇಳನಕ್ಕೆ ಸಿದ್ಧತೆ

ಕಾಸರಗೋಡಿನ ಜನತೆಯ ಭಾಷೆ, ಸಾಹಿತ್ಯ, ಶಿಕ್ಷಣ, ಹಾಗೂ ಸಂಸ್ಕೃತಿಗಳ ಪ್ರಗತಿಗೋಸ್ಕರವಾಗಿ ಒಂದು ಯೋಜನೆಯನ್ನು ರೂಪಿಸುವ ಬಗ್ಗೆ ಕಾಸರಗೋಡಿನಲ್ಲಿ ಎಪ್ರಿಲ್‌ನಲ್ಲಿ ಕನ್ನಡಿಗರ ಸಮ್ಮೇಳನವನ್ನೇರ್ಪಡಿಸಲು ಪೆರಡಾಲದಲ್ಲಿ ಶ್ರೀ ಖಂಡಿಗೆ ಶಾಮಭಟ್ಟರ ಅಧ್ಯಕ್ಷತೆಯಲ್ಲಿ ಸೇರಿದ್ದ ಕಾರ್ಯಕರ್ತರ ಹಾಗೂ ಮುಂದಾಳುಗಳ ಸಭೆಯಲ್ಲಿ ನಿರ್ಧರಿಸಲಾಯಿತು.

ಶ್ರೀ ಕಯ್ಯಾರ ಕಿಂಞ್ಞಣ್ಣ ರೈಯವರು ಸಭೆಯ ಉದ್ದೇಶಗಳನ್ನು ವಿವರಿಸಿದ ಬಳಿಕ ದೀರ್ಘ ಚರ್ಚೆ ನಡೆದು ಈ ನಿರ್ಧಾರ ಕೈಗೊಳ್ಳಲಾಯಿತು.

ಸಮ್ಮೇಳನದ ಸಿದ್ಧತೆಗಾಗಿ ರಚಿಸಲಾದ ಸ್ವಾಗತ ಸಮಿತಿಗೆ ಶ್ರೀ ಕೆ. ಶಾಮಭಟ್ ಅಧ್ಯಕ್ಷರಾಗಿಯೂ, ಕ್ಯಾಪ್ಟನ್ ಕೆ. ಎ. ಶೆಟ್ಟಿ ಮತ್ತು ಶ್ರೀ ಎಸ್. ಕೃಷ್ಣ ಭಟ್ ಉಪಾಧ್ಯಕ್ಷರುಗಳಾಗಿಯೂ, ಶ್ರೀ ಕಯ್ಯಾರ ಕಿಞ್ಞಣ್ಣ ರೈ ಕಾರ್ಯದರ್ಶಿಗಳಾಗಿಯೂ ಶ್ರೀಗಳಾದ ಎಂ. ಕೇಶವ ಭಟ್ ಮತ್ತು ಎಂ. ಗಂಗಾಧರ ಭಟ್ ಜತೆ ಕಾರ್ಯದರ್ಶಿಗಳಾಗಿಯೂ, ಶ್ರೀ ಎ. ವಿ. ಶಾನುಭಾಗ್ ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ. 80 ಮಂದಿ ಸದಸ್ಯರ ಆಯ್ಕೆಯಾಗಿದೆ.

(ಎರಡನೇ ಪುಟದಿಂದ)

'ಪ್ರಭುಗಳ ಸೇವೆಯಲ್ಲಿ ಆಯುಷ್ಯದ ಬಹು ಭಾಗವನ್ನು ಕಳೆದೆ. ಶೇಷಾಯುಷ್ಯವನ್ನು ಚಿಂತನೆಯನ್ನು ಕಳೆಯಲು ಸಂಕಲ್ಪಿಸಿದ್ದೆ. ಪ್ರಭುಗಳ ಚಿಂತೆ ನನ್ನಿಂದ ದೂರವಾಗುವಂತಿದ್ದರೆ ಉಳಿಕೆಯ ಆಯುಷ್ಯವನ್ನು ತಮ್ಮ ಕೆಲಸಕ್ಕೆಂದೇ ಮೀಸಲಿಡುತ್ತೇನೆ. ದೈವ ಸಂಕಲ್ಪ ಹಾಗಿದ್ದರೆ ಅದನ್ನು ತಪ್ಪಿಸುವುದಕ್ಕೆ ನಾನೆಷ್ಟರವನು.'

ಪ್ರಭುಗಳು ಕೋಣೆಯ ಸುತ್ತ ಕಣ್ಣು ಹೊರಳಿಸಿ 'ಯಾರಲ್ಲಿ?'

ಅಲ್ಲಿದ್ದ ಭೃತ್ಯರು ಪ್ರಭುಗಳ ಇಂಗಿತವನ್ನರಿತರು—

ಪ್ರಭುಗಳಿಗೆ ಅವರ ಹತ್ತಿರ ಯಾರೂ ಇರುವುದು ಬೇಕಾಗಿರಲಿಲ್ಲ.

ರಹಸ್ಯದ ಮಾತಿರುವುದರಿಂದ ಉಳಿಕೆಯವರಿಗೆ ಅಲ್ಲಿಂದ ಹೊರಟು ಹೋಗಲು ಅವರು ಕೊಟ್ಟ ಆಣತಿ—ಆ ಪ್ರಶ್ನೆ.

ರಾಣಿ ಸುಮತೀ ದೇವಿಯವರನ್ನುಳಿದು ಎಲ್ಲರೂ ಕೋಣೆಯಿಂದ ಹೊರ ಬಿದ್ದರು. ಪ್ರಭುಗಳು ಮತ್ತಷ್ಟು ಹತ್ತಿರ ಬರುವಂತೆ ನರಸಿಂಹನಿಗೆ ಸೂಚಿಸಿದರು—ಪಕ್ಕದಲ್ಲಿ ನಿಂತಿದ್ದ ಪತ್ನಿಗೆ ಕದವನ್ನು ಭದ್ರ ಪಡಿಸಿಕೊಳ್ಳಲು ಸಂಜ್ಞೆ ಮಾಡಿದರು—'ಇಂದಾಡುವ ಸಂಗತಿಯನ್ನು ನಿಮ್ಮಲ್ಲೇ ಇಟ್ಟುಕೊಳ್ಳಿ. ಯಾರಿಗೂ ತಿಳಿಯ ಕೂಡದು. ಗೋಡೆಗಳಿಗೂ ಕಿವಿ ಇರುವ ಕಾಲವಿದು–ರಹಸ್ಯ ಸ್ಫೋಟವಾದರೆ ಸಾಮ್ರಾಜ್ಯಕ್ಕೇ ಅಪಾಯ.'

ನಡೆದರೂ ನೋಡಿ ಸೊಗ ಪಡುವಂತಿಲ್ಲ.

ನಡೆಯಲಿಲ್ಲ.

ನೋಡಿ ಅಳುವಂತಿದೆಯೇ?

ನಾಳೆಯದನ್ನು ನಾಳೆಗೇ ಬಿಟ್ಟುಕೊಟ್ಟು ತೆಪ್ಪಗಿರುವುದಿಲ್ಲವಲ್ಲ.

ನಾಳೆಯೆಂಬುದೇ ಇಲ್ಲವೆಂಬ ಭಾವನೆ ಬರುವವರೆಗೂ ನಾಳಿನ ಗೋಳು ತಪ್ಪಿದ್ದಲ್ಲ ಎಂದನಿಸಿತು ಜೀವ ಕೋಟಿಗೆ.

ಪ್ರಭುಗಳು ಮುಂದುವರಿಸಿದರು

'ವಂಶದ ಕುಡಿಗಳಲ್ಲಿ ಒಂದನ್ನು ಪರಿಪೋಷಿಸಿ ನೀವು ಪಟ್ಟದಲ್ಲಿ ಕೂರಿಸಬೇಕು ದಂಡನಾಯಕರೇ! ನಮ್ಮ ಚಿಕ್ಕಪ್ಪಂದಿರ ಮಕ್ಕಳು ಬದ್ದೆಗನನ್ನು ನಾವು ಸೂಕ್ಷ್ಮವಾಗಿ ಅಭ್ಯಸಿಸಿ ಅವನೇ ಸಮರ್ಥನೆಂದು ಗುರುತಿಸಿದ್ದೇವೆ. ಅವನು ವಯಸ್ಸಿನಲ್ಲಿ ಕಿರಿಯನಾದರೂ ತಿಳುವಳಿಕೆಯ ಹಿರಿಮೆ ಅವನಲ್ಲಿದೆ. ಶೀಲ-ಚಾರಿತ್ರ್ಯಗಳೂ ಶುದ್ಧವೇ! ಜೊತೆಗೆ ಶಕ್ತನೂ, ಬಲಶಾಲಿಯೂ ಹೌದು—ಅವನ ಹಿರಿಯತನದಲ್ಲಿ ನೀವು ರಾಷ್ಟ್ರಕೂಟ ರಾಜ್ಯಲಕ್ಷ್ಮಿಯನ್ನುಳಿಸಬೇಕು—ಇದು ನಮ್ಮ ಅಂತಿಮ ಅಪೇಕ್ಷೆ'

ಅವರು ಬಹು ಕಷ್ಟದಿಂದ ಈ ಮಾತನ್ನಾಡಿದರು.

ಅವರ ಒದ್ದಾಟ, ನರಳುವಿಕೆ ಇಮ್ಮಡಿಸಿತು.

ಸಾವು ಸನ್ನಿಹಿತವಾಯಿತು ಎಂದು ನರಸಿಂಹ ತರ್ಕಿಸಿದ.

ಆತ ಅಗಣಿ ತೆಗೆದು ಹೊರಗಿದ್ದ ಪರಿವಾರದವರನ್ನು ಒಳಕ್ಕೆ ಬರ ಮಾಡಿಕೊಂಡ.

ರಾಣಿ ಸುಮತೀದೇವಿಯವರು ಪತಿಯ ಪಕ್ಕದಲ್ಲಿ ಬಂದು ಕುಳಿತರು.

ಪ್ರಭುಗಳು ಅವರನ್ನು ಮತ್ತಷ್ಟು ಹತ್ತಿರಕ್ಕೆ ಬರುವಂತೆ ಹೇಳಿದರು.

ಆಕೆ ಅವರ ತೀರ ಸಮೀಪಕ್ಕೆ ಬಂದಳು.

ಪ್ರಭುಗಳು ಆಕೆಯ ಕೈಯನ್ನು ಭದ್ರವಾಗಿ ಹಿಡಿದುಕೊಂಡರು.

ಅಷ್ಟರಲ್ಲಿ ಪುನಃ ಕೆಮ್ಮು ಕಾಣಿಸಿ ಕೊಂಡಿತು.

ಪ್ರಭುಗಳು ಈ ಬಾರಿ ಬರಿಯ ರಕ್ತ ಕಾರಿದರು.

ಆದರೆ ಕೇಕರಿಸಿ ಉಗುಳಿದುಗುಳು ಈ ಸಲ ಬಟ್ಟಲಿಗೆ ಬೀಳುವ ಬದಲು, ಹಾಸುಗೆ ಬಟ್ಟೆಗಳ ಮೇಲೂ, ಪಕ್ಕದಲ್ಲಿದ್ದವರ ಮೇಲೂ ಸಿಡಿಯಿತು.

ಸ್ವತಃ ನರಸಿಂಹ ಅವರ ಬಾಯಿಯ ಹತ್ತಿರಕ್ಕೆ ನೀರ ಬಟ್ಟಲನ್ನೊಡ್ಡಿದ.

'ಈ ಗೋಪ್ಯವನ್ನು ನಾನು ಯಾರಿಗೂ ತಿಳಿಸುವುದಿಲ್ಲ. ಅದು ನನ್ನೊಡನೆಯೇ ಮಣ್ಣು ಕಾಣುತ್ತದೆ. ಅನ್ಯರಿಗೆ ಅದರ ಸುಳುಹು ಕೊಡಲಾರೆ'

'ಅನುಮಾನವಿದ್ದಿದ್ದರೆ ತಿಳಿಸುವ ಸಾಹಸ ಮಾಡುತ್ತೇನೆಯೇ ಅಮಾತ್ಯರೇ? ಈ ಸಾಮ್ರಾಜ್ಯ ಕಟ್ಟುವುದರಲ್ಲಿ ಕರಗ ಹೊತ್ತು ನಿಂತವರು ನೀವು. ನಿಮ್ಮಲ್ಲಿಯೂ ಅಪನಂಬಿಕೆಯೇ. ಅದನ್ನು ದೇವರು ಮೆಚ್ಚಲಾರ. ನಮ್ಮ ಅವಸಾನ ಸಮೀಪಿಸಿದೆ. ಅದರಂತೆ ಸಾಮ್ರಾಜ್ಯದ ದುಃಸ್ಥಿತಿಯೂ ಆಗಬಾರದು. ನಾಳೆ ಇದರ ಗತಿ—? ಅದೇ ನಮಗಂಟಿ ಕೊಂಡ ಚಿಂತೆ. ಉತ್ತರಾಧಿಕಾರಿಯಾಗಿ ಸಿಂಹಾಸನವನ್ನು ಏರಬಲ್ಲ ಸಂತತಿಯನ್ನು ದೇವರು ನಮಗೆ ಕರುಣಿಸಲಿಲ್ಲ. ಮಕ್ಕಳಿಲ್ಲದ ನಾವು ಗತಿಗೇಡಿಗಳು. ಆದರೆ ಸ್ಥಾಪಿಸಿದ ಸಾಮ್ರಾಜ್ಯಕ್ಕೂ, ಅದರ ಪ್ರಜೆಗಳಿಗೂ ದುರ್ಗತಿ ಪ್ರಾಪ್ತವಾಗಬಾರದೆಂಬುದು ನಮ್ಮ ಹೆಬ್ಬಯಕೆ'

'ಅದಕ್ಕೆ ಪ್ರಭುಗಳು ಕಂಡುಕೊಂಡ ಪರಿಹಾರ?'

"ನಮ್ಮ ವಂಶದ ನಾಲ್ಕಾರು ಮಂದಿಗೆ ಸಿಂಹಾಸನದ ಮೇಲೆ ಕಣ್ಣು. ನಾವು ಕಣ್ಣು ಮುಚ್ಚುವುದನ್ನೇ ಕಾಯುತ್ತಿದ್ದಾರೆ. ಸಿಂಹಾಸನವನ್ನು ಆಕ್ರಮಿಸಿ ಕೊಳ್ಳಲು ಸಿದ್ಧತೆ ನಡೆಸುತಿದ್ದಾರೆ. ಅವರ ಕಾಕದೃಷ್ಟಿಯಿಂದ ರಾಜ್ಯವನ್ನುಳಿಸಬೇಕು. ಅದರಲ್ಲಿ ಪ್ರಬಲನಾದವನು ತಮ್ಮ ದಾಯಾದಿ ಗೋವಿಂದ. ಅವನ ಕೈಯಲ್ಲಿ ನಾವೂ ನರಳಿದವರು. ನೀವಿಲ್ಲದಿದ್ದರೆ ಅವನ ಉಪಹತಿಗೆ ನಾವೂ ಉಳಿಯುತ್ತಿರಲಿಲ್ಲ. ಅವನಿಗ ಬೆಂಬಲವಾಗಿ ನಮ್ಮವರಲ್ಲಿ ಒಬ್ಬಿಬ್ಬರು ಮುಂದೆ ಬರಬಹುದು. ಆದರೆ ಗೋವಿಂದನಿಗೆ ಜನ ಬೆಂಬಲ ದೊರಕಲಾರದು. ಆತ ಸ್ವಭಾವದಿಂದ ಪ್ರಜಾಪೀಡಕ. ಪ್ರಜೆಗಳ ಸಹಾನುಭೂತಿಯಂತೂ ಅವನಿಗೆ ಇಲ್ಲೇ ಇಲ್ಲ. ಅವನೆಲ್ಲಿ ಅಧಿಕಾರಕ್ಕೆ ಬರುತ್ತಾನೋ—? ಬಂದರೆ, ಸಾಮ್ರಾಜ್ಯ ನುಚ್ಚುನೂರಾಗುವುದರಲ್ಲಿ ಅನುಮಾನವಿಲ್ಲ—"

ಉಕ್ಕಿ ಬರುವ ಕೆಮ್ಮು ಪುನಃ ಮಾತಿಗೆ ತಡೆಯಾಗಿ ನಿಂತಿತು.

ಅದರ ಬಾಧೆಯಿಂದ ಸಾವರಿಸಿಕೊಳ್ಳಲು ಕೊಂಚ ಕಾಲ ಹಿಡಿಯಿತು.

ಪ್ರಭುಗಳ ವಿಚಿತ್ರವಾದ ಆಸೆಯನ್ನು ಕಂಡು ನರಸಿಂಹನಿಗೆ ಆಶ್ಚರ್ಯವಾಯಿತು.

ಅವರು ಬದುಕುವ ಸಂಭವವೇ ಇರಲಿಲ್ಲ. ಸ್ವಲ್ಪದರಲ್ಲಿ ಅವರ ದೇಹ ಮಣ್ಣಿನೊಡನೆ ಮಣ್ಣಾಗಿ ಹೋಗುವುದರಲ್ಲಿತ್ತು.

ಅವರಿಗೂ ನಾಳೆಯ ಯೋಚನೆ.

ಸಾಮ್ರಾಜ್ಯದ ಯೋಗಕ್ಷೇಮದ ಚಿಂತೆ.

ತಾನು ನಿರೀಕ್ಷಿಸಿದಂತೆಯೇ ತನ್ನ ನಂತರ ನಡೆಯುತ್ತೆ ಎಂಬ ಭರವಸೆಯಿಲ್ಲ.

ಅವರ ಕೃಶವಾದ ಕರಗಳು ಬಟ್ಟಲನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಪ್ರಯತ್ನಿಸಿದುವು. ಆದರೆ ಅದು ಅವರಿಂದಾಗದೆ ಹೋಯಿತು. ಕೈಗಳು ಕಂಪಿಸಲಾರಂಭಿಸಿದುವು—

ಬಟ್ಟಲಲ್ಲಿದ್ದ ನೀರು ಹಾಸುಗೆಯ ಮೇಲೆ ಬಿದ್ದು ಹೋಯಿತು.

ಪ್ರಭುಗಳು ಹಾಸುಗೆಯ ಮೇಲೆ ದೊಪ್ಪನೆ ಬಿದ್ದರು.—

ಘೈಲಿಯೊಂದರಿಂದ ಸುಮತೀದೇವಿ ತೀರ್ಥವನ್ನು ಅವರ ಬಾಯಿಗೆರೆದಳು.

ಆ ನೀರು ಗಂಟಲೊಳಗೆ ಇಳಿಯದೆ ಹೊರಬಂತು.—

ಪ್ರಭುಗಳು ಆಗಲೇ ಹೊರಟು ಹೋಗಿದ್ದರು; ಅನಂತದಲ್ಲಿ ಐಕ್ಯವಾಗಿದ್ದರು.

೬

ರಾಷ್ಟ್ರಕೂಟ ಇಂದ್ರನ ಸಾವಿನಿಂದ ಸಿಂಹಾಸನ ತೆರವಾಯಿತು.

ಸತ್ತ ಸೂತಕದ ದಿನಗಳೂ ಕಳೆಯುವ ಮೊದಲು ಗದ್ದುಗೆಗೆ ಗುದ್ದಾಟ ಪ್ರಾರಂಭವಾಯಿತು–

ನರಸಿಂಹನನ್ನು ಎಲ್ಲರೂ ಪೀಡಿಸುವವರೇ. ಬೆಂಬಲಕ್ಕೆ ಕಾಡುವವರೇ.

ಅವನು ಯಾವ ಪಕ್ಷ ವಹಿಸುವನೋ ಅವರಿಗೆ ರಾಜ್ಯಲಕ್ಷ್ಮಿ ಒಲಿಯುವಂತಿದ್ದಳು. ಆತ ರಾಜ್ಯದ ದಂಡನಾಯಕ. ಸೈನ್ಯ ಅವನ ಹತೋಟಿಯಲ್ಲಿತ್ತು ರಾಷ್ಟ್ರಕೂಟ ಸೈನ್ಯವನ್ನು ಆತ ಒಳ್ಳೆಯ ರೀತಿಯಲ್ಲಿ ರೂಪಿಸಿದ್ದ. ಸೈನ್ಯ ಸುಸಜ್ಜಿತವಿತ್ತು. ಶಿಸ್ತಿನ ಪಾಲನೆಯಲ್ಲಿ ಅದು ಹೆಸರು ಗಳಿಸಿತ್ತು. ಸೈನ್ಯಕ್ಕೆ ಶಸ್ತ್ರಾಸ್ತ್ರಗಳ ಕೊರತೆ ಇರಲಿಲ್ಲ.

ಜೊತೆಯಲ್ಲಿ ಗಜ-ತುರಗಗಳೂ ದೊಡ್ಡ ಪ್ರಮಾಣದಲ್ಲಿದ್ದುವು ಪ್ರಮುಖರ ಮನೆಗಳಲ್ಲಿ ಅಪರಾತ್ರಿಯಲ್ಲಿ ಗುಂಪು ಗುಂಪಾಗಿ ಜನ ಸೇರಿ ಮಂತ್ರಾಲೋಚನೆ ನಡೆಸುತಿದ್ದರು ಅವರನ್ನು ಸಿಂಹಾಸನದಲ್ಲಿ ಕೂರಿಸಿದರೆ ಹೇಗೆ? ಇವರ ಪರ ವಹಿಸಿದರೆ ಎಂತು? ಎಂದು ಮುಂತಾಗಿ ಚರ್ಚಿಸುತಿದ್ದರು. ಆದರೆ ನರಸಿಂಹ ತಟಸ್ಥನಿದ್ದ. ಈ ಗುಪ್ತ ಸಭೆಗಳು ಆತನಿಗೆ ತಿಳಿದಿದ್ದರೂ ತಿಳಿಯದವನಂತೆ ಸುಮ್ಮನಿದ್ದ.

ಬಾಯಿ ಬಿಟ್ಟರೆ ಎಲ್ಲಿ ತಾನು ಕೊಟ್ಟ ವಚನ ಪಾಲನೆಗೆ ಬಾಧಕ ಬರುವುದೋ ಎಂಬ ಶಂಕೆ ಅವನಿಗೆ. ಆಪ್ತನೆನಿಸಿದವರನ್ನು ಕರೆಸಿ ಕೊಂಡು ಅವರ ಅಂತರಂಗವನ್ನು ಇಣುಕಿ ನೋಡುವ ಪ್ರಯತ್ನ ನಡೆಸುತಿದ್ದ. ಅಭಿಪ್ರಾಯ ಸಂಗ್ರಹಣೆಯೇ ಅವನ ಉದ್ದಿಶ್ಯ.

ಆದರೆ ಈ ಮೌನದಿಂದ ಗುಂಪುಗಾರಿಕೆ ಬಲಿಯಿತು.

ಗೋವಿಂದ ಬದ್ದೆಗಳು ತಮ್ಮ–ತಮ್ಮ ಬಲ ಸಂವರ್ಧನೆಗೆ ಮೊದಲಾದವರು–ಸಾಮಂತರನ್ನು ಕರೆಸಿಕೊಳ್ಳಲಾರಂಭಿಸಿದರು– ಅವರ ಸಹಕಾರವನ್ನು ಕೋರಲಾರಂಭಿಸಿದರು–ಸೈನ್ಯವನ್ನೂ ಕಟ್ಟಿಕೊಳ್ಳಲಾರಂಭಿಸಿದರು.

ಅಧಿಕಾರದ ದಾಹ ದಿನೇ ದಿನೇ ಹೆಚ್ಚಿತು. ಅದಕ್ಕಾಗಿ ಸೈನ್ಯ ಸಂಗ್ರಹಣೆಯ ಕೆಲಸವೂ ಮೊದಲಾಯಿತು.

(ಮುಂದುವರಿಯುವುದು)

NAVAYUGA 23-3-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಚುನಾವಣೆಗಳಲ್ಲಿ

ಮಹಾಮಲ್ಲರ ಮುಖಭಂಗ

೨೧೬ ಸ್ಥಾನಗಳಿರುವ ಕರ್ನಾಟಕದ ವಿಧಾನ ಸಭೆಗೆ ನಡೆದ ಚುನಾವಣೆಗಳು ಆಳುವ ಕಾಂಗ್ರೆಸ್ಸಿಗೆ ಅನುಕೂಲವಾಗಿ ಪರ್ಯವಸಾನಗೊಂಡುವು. ಈ ಪರಿಣಾಮಗಳು ರಾಜ್ಯದ ವಿಧಾನ ಪರಿಷತ್ತು ಮತ್ತು ಕೇಂದ್ರದ ರಾಜ್ಯ ಸಭೆಯ ಸ್ವರೂಪವನ್ನೂ ಬದಲಾಯಿಸುತ್ತದೆ; ಇನ್ನು ಕೆಲವೇ ದಿನಗಳಲ್ಲಿ ಎಲ್ಲೆಲ್ಲಿಯೂ ಆಳುವ ಕಾಂಗ್ರೆಸ್ಸು ಸ್ಪಷ್ಟ ನಿಚ್ಚಳ ಬಹುಮತ ಗಳಿಸುತ್ತದೆ.

ರಾಜ್ಯದ ೨೧೬ ಸ್ಥಾನಗಳಿಗೆ ಸ್ಪರ್ಧಿಸಿದ ಅಭ್ಯರ್ಥಿಗಳ ಪಕ್ಷವಾರು ಸಂಖ್ಯೆ ಈ ರೀತಿಯಿದೆ:—

ಆಳುವ ಕಾಂಗ್ರೆಸು—೨೧೨
ಸಂಸ್ಥಾ ಕಾಂಗ್ರೆಸ್ಸು ೧೭೬
ಜನಸಂಘ—೧೦೨
ಸ್ವತಂತ್ರ—೫೧
ಸಮಾಜವಾದಿ—೩೦
ಸಿಪಿಎಂ—೧೯
ದ್ರಾಮುಕ—೧೧
ಮುಸ್ಲಿಂಲೀಗ್—೫
ರಿಪಬ್ಲಿಕನ್—೫
ಸಿಪಿಐ—೪
ಪಕ್ಷೇತರರು—೩೫೧
ಒಟ್ಟು—೯೬೬

ಗೆದ್ದು ಬಂದ ೨೧೬ ಅಭ್ಯರ್ಥಿಗಳಲ್ಲಿ

ಆಳುವ ಕಾಂಗ್ರೆಸ್ಸು—೧೬೫
ಸಂಸ್ಥಾ ಕಾಂಗ್ರೆಸ್ಸು—೨೪
ಸಿಪಿಐ—೩
ಸಮಾಜವಾದಿ—೩
ರಿಪಬ್ಲಿಕನ್ — ೧
ದ್ರಾಮುಕ — ೧
ಪಕ್ಷೇತರರು — ೧೯

ಆಡಳಿತೆಯನ್ನು ನಿರ್ವಹಿಸಲು ಬೇಕಾದಷ್ಟು ಬಲ ಪಡೆಯುವ ವಿಶ್ವಾಸ ತಳೆದಿದ್ದ ಸಂಸ್ಥಾ ಕಾಂಗ್ರೆಸ್ಸು ಪ್ರಮುಖ ವಿರೋಧಿ ಪಕ್ಷವಾಗಲು ಬೇಕಾದಷ್ಟು ಸ್ಥಾನ ಗಳಿಸಿತು.

ಪ್ರಮುಖ ವಿರೋಧಿ ಪಕ್ಷವಾಗುತ್ತೇನೆಂದು ಕೊಂಡ ಜನಸಂಘಕ್ಕೆ ವಿಧಾನ ಸಭೆಗೆ ಪ್ರವೇಶವನ್ನೇ ಜನತೆ ಧಿಕ್ಕರಿಸಿತು.

ಇದೇ ಪಾಡು ಸ್ವತಂತ್ರ ಪಕ್ಷಕ್ಕೂ ಬಂದೊದಗಿತು. ಸಿ. ಪಿ. ಎಂ.ಮತ್ತು ಮುಸ್ಲಿಂ ಲೀಗ್‌ಗಳಿಗೂ ಒಂದೇ ಒಂದು ಸ್ಥಾನ ದೊರೆಯಲಿಲ್ಲ.

೩೫೧ ಪಕ್ಷೇತರ ಅಭ್ಯರ್ಥಿಗಳಲ್ಲಿ ೧೯ ಅಭ್ಯರ್ಥಿಗಳು ಗೆದ್ದಿದ್ದಾರೆ. ಇವರೆಲ್ಲರೂ ತಮ್ಮ ವ್ಯಕ್ತಿಗತ ಬಲದಿಂದಲೇ ಗೆದ್ದು ಬಂದವರು. ಇವರ ಸಂಖ್ಯೆಯೇನೋ ಗಣನೀಯವೆಂದು ಹೇಳ ಬಹುದಾದರೂ ಅವರ ವಿರೋಧಕ್ಕೆ ಬೆಲೆಯೆಂಬುದಿಲ್ಲ.

ದ್ರಾಮುಕವು ಮೊದಲ ಬಾರಿಗೆ ವಿಧಾನ ಸಭೆಯನ್ನು ಪ್ರವೇಶಿಸಿದೆಯೆಂಬುದು ಗಮನೀಯ.

ಅದೇನಿದ್ದರೂ ಕರ್ನಾಟಕದ ವಿಧಾನ ಸಭೆಯಲ್ಲಿ ವಿರೋಧಿ ಬಲವು ಅತ್ಯಂತ ಕ್ಷೀಣವಾಗಿದೆಯೆಂಬುದು ನಿಸ್ಸಂದೇಹ. ಭಾರತದ ಲೋಕ ಸಭೆಯಲ್ಲಿನಂತೆಯೇ ರಾಜ್ಯ ವಿಧಾನ ಸಭೆಗಳಲ್ಲೂ ಆಳುವ ಪಕ್ಷದ ಬಲಾಧಿಕ್ಯವು ದೇಶದ ಆಡಳಿತೆಯಲ್ಲಿ ಸರ್ವಾಧಿಕಾರ ಪ್ರವೃತ್ತಿಯನ್ನು ತರುವ ಸಂಭವ ಇದೆ.

ಇದು ಪ್ರಜಾತಂತ್ರಾತ್ಮಕ ಚುನಾವಣೆಗಳಲ್ಲಿ ಪಡೆದುಕೊಂಡ ಅಧಿಕಾರ. ಪ್ರಜಾ ತೀರ್ಮಾನದ ಮುಂದೆ ತಲೆವಾಗಬೇಕು. ಪ್ರತಿಪಕ್ಷಗಳ ದರ್ಬಲತೆಯ ದುರ್ಲಾಭ ಪಡೆಯದೆ ರಾಜ್ಯವನ್ನು ಸುಖ-ಸಮೃದ್ಧಿಯತ್ತ ಒಯ್ಯುವ ಸೂತ್ರಧಾರತನವನ್ನು ಆಳುವ ಕಾಂಗ್ರೆಸ್ಸು ಯಶಸ್ವಿಯಾಗಿ ನಿರ್ವಹಿಸುವುದೆಂಬ ವಿಶ್ವಾಸದ ಜನತೆಯದ್ದು.

●●

ಶ್ರೀಮತಿ ಗಾಂಧಿಯಲ್ಲಿ ಅಚಲ ವಿಶ್ವಾಸ

(ಒಂದನೇ ಪುಟದಿಂದ)

ಆಕೆ ತನ್ನ ಪಕ್ಷಕ್ಕೆ ಆದೇಶ ನೀಡುವ ವ್ಯಕ್ತಿಗತ ಶಕ್ತಿ ಹೊಂದಿದ್ದಾರೆ. ಇನ್ನೂ ನಡುಹರೆಯದ ಆಕೆ ತನ್ನ ಮಾತು ನಡೆಯುವಂತೆ ಮಾಡ ಬಲ್ಲವರಾಗಿದ್ದಾರೆ.

ರಾಜ್ಯದಲ್ಲಿನ ಆಳುವ ಕಾಂಗ್ರೆಸ್ ದಿಗ್ವಿಜಯದ ಮಹಾಸೂತ್ರಧಾರತನ ಶ್ರೀಮತಿ ಗಾಂಧಿಯವರದ್ದೇ. ಆದರೂ ಶ್ರೀ ದೇವರಾಜ ಅರಸರದ್ದೂ ಪ್ರಯತ್ನ ಕಡಿಮೆಯಿಲ್ಲ. ಅವರ ಅಹರ್ನಿಶಿ ದುಡಿಮೆಯನ್ನು ಪಕ್ಷವು ಮರೆಯಬಾರದು.

ದುಡಿಮೆಗೆ ತಕ್ಕ ಪ್ರತಿಫಲವನ್ನು ಅವರು ಬಯಸುತ್ತಾರೆಯೆ? ಅವರೇ ಮುಖ್ಯ ಮಂತ್ರಿಯಾಗುವ ಸಂಭವವಿದೆ; ಆದರೆ ಅ ಪರದನ್ನು ಸೌಜನ್ಯದಿಂದಲೇ ನಿರಾಕರಿಸುವ ಸಾಧ್ಯತೆಯೂ ಇದೆ.

ಮುಖ್ಯಮಂತ್ರಿ ಯಾರೆಂಬ ಬಗ್ಗೆ ಇಷ್ಟರಲ್ಲೇ ನಿರ್ಧಾರವಾಗುತ್ತದೆ. ಆಯ್ಕೆಗೊಂಡ ೧೬೫ ಶಾಸಕರಲ್ಲಿ ಮುಖ್ಯಮಂತ್ರಿಯಾಗುವ ಅರ್ಹತೆ ಇರುವವರೂ ಅನುಭವವಿರುವವರೂ ಹಲವರಿದ್ದಾರೆ.

ಈ ೧೬೫ ಮಂದಿಯಲ್ಲಿ ಮಾಜಿ ಮಂತ್ರಿಗಳೂ ಮಾಜಿ ಶಾಸಕರೂ ಹಲವರಿದ್ದಾರೆ. ಹಿಂದೆ ಅವಿಭಜಿತ ಕಾಂಗ್ರೆಸ್, ಸಂಸ್ಥಾ ಕಾಂಗ್ರೆಸ್, ಪ್ರಸಪಾ ಮೊದಲಾದ ಬೇರೆ ಬೇರೆ ಪಕ್ಷಗಳಿಗೆ ಸೇರಿದ್ದವರು ಇದೀಗ ಒಂದೇ ಆಗಿದ್ದಾರೆ.

ಬಣ್ಣ ಬೇರೆಯಾದ ಮಾತ್ರಕ್ಕೆ ಗುಣ ಬೇರಾಗುವುದೆ? ಎಂಬೊಂದು ಪ್ರಶ್ನೆ ಏಳುವುದು ಸಹಜ. "ಶ್ರೀಮತಿ ಗಾಂಧಿ"ಯೆಂಬ ಹೆಸರಿನ ಮೇಲಿನ ವಿಶ್ವಾಸವೊಂದೇ ಜನತೆಗಿರುವ ವಜ್ರಕವಚವೆನಿಸುತ್ತದೆ. ಇವರು ಓಟು ಬೇಡಿದ್ದೂ ಗೆದ್ದದ್ದೂ ಶ್ರೀಮತಿ ಗಾಂಧಿ ಮತ್ತು ಭಾರತದ ಹೆಸರಿನಲ್ಲಿ ತಾನೆ?

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೊಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res: 3272

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—
ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್
Please Visit ಫೋನ್: 77
HOTEL SHIVAPRASAD
High Class Boarding, Lodging & Restaurant
COONDAPUR, S. K.

ಕುಂದಾಪುರ ಮು. ಕೋರ್ಟಿನಲ್ಲಿ

Ex. C. 477/71. O. S. 535/46.

ಅರ್ಜಿದಾರಳು.—ಕಮಲ ಅಮ್ಮ.
ಯದ್ರಿರು—ಲಕ್ಷ್ಮಿ ಅಮ್ಮ ಕೂಡಾ.
1—2ನೆ ಯದ್ರಿರಿಗೆ ತಿಳಿಸುವದೇನೆಂದರೆ,

1ನೇ ಎದ್ರಿ ಲಕ್ಷ್ಮಿ ಅಮ್ಮ, ಕಾಳಿಂಗ ಹೆಬ್ಬಾರ್ರ ವಿಧವೆ.

2ನೇ ಎದ್ರಿ ಸುಬ್ರಾಯ ಹೆಬ್ಬಾರ, ಯಿಂಬಾಳಿ ರಾಮಯ್ಯ ಹೆಬ್ಬಾರ್ರ ಮಗ- ಕುಂದಾಪುರ ತಾಲ್ಲೂಕ ಆನಗಳ್ಳಿ ಗ್ರಾಮಸ್ಥರು.

ಅರ್ಜಿದಾರಳು ತನಗೆ ಬರತಕ್ಕ ಅಶನಾರ್ಥದ ಬಗ್ಗೆ ನಿಂಮ ವಗೈರೆರ ಮೇಲೆ ಮೇಲ್ಕಂಡ ಅಮಲಜಾರಿಯಂನು ದಾಕಲು ಮಾಡಿರುತ್ತಾಳೆ. ಸದ್ರಿ ಅರ್ಜಿಯು ತಾರೀಕು 26—5—1972ಕ್ಕೆ ತನ್ಖಿಗೆ ಯಿಡೋಣಾಗಿಯದೆ. ಸದ್ರಿ ಅಮಲಜಾರಿಯಲ್ಲಿ ನಿಂಮ ಆಕ್ಷೇಪಣೆ ಯೇನಾದರೂ ಯಿದ್ದರೆ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಂಮ ಗ್ಯೆರು ಹಾಜರಿಯಲ್ಲಿ ಸದ್ರಿ ಅಮಲಜಾರಿಯಂನು ತೀರ್ಮಾನಿಸೋಣಾದೀತೆಂತ ಯಿ ಮೂಲಕ ತಿಳಿಸೋಣಾಗುತ್ತದೆ.

M. Madhava Rao
Advocate for Petitioner.

ಕುಂದಾಪುರ, 13—3—72.

ಸಿಗುತ್ತವೆ
ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.
ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.
ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-1

Edited, Printed & Published by K. H. Shetty at the Navayuga Press. Udipi. S. India.

ನವಯುಗ

ಸಂಪುಟ ೫೧
ಸಂಚಿಕೆ ೩೦

NAVAYUGA

30-3-1972

ಚುನಾವಣೆ ಮುಗಿಯಿತು—

ಹೊಸ ಹಗರಣದ ತೆರೆಸರಿಯಿತು

ಒಂದು ವರ್ಷದಷ್ಟು ಹಳೆಯದಾದ ರಾಷ್ಟ್ರಪತಿ ಆಳಿಕೆಯು ಇದೇ ೨೦ರಂದು ಕರ್ನಾಟಕದಲ್ಲಿ ಕೊನೆಗೊಂಡಿತು.

ರಾಷ್ಟ್ರಪತಿ ಆಳಿಕೆಯನ್ನು ಹಿಂದೆಗೆದುಕೊಳ್ಳಲು ರಾಜ್ಯದಲ್ಲಿ ಮುಖ್ಯಮಂತ್ರಿಯೊಬ್ಬನಿದ್ದರೆ ಸಾಲದು, ರಾಜ್ಯ ಸಚಿವ ಸಂಪುಟವಿರಬೇಕೆಂಬ ತಾಂತ್ರಿಕ ತೊಂದರೆಯಿಂದ ಶ್ರೀ ದೇವರಾಜ ಅರಸರ ನೇತೃತ್ವದಲ್ಲಿ ಅವರೂ ಸೇರಿದಂತೆ ಮೂವರು ಸದಸ್ಯರುಳ್ಳ ಚಿಕ್ಕ ಸಂಪುಟವು ಪ್ರತಿಜ್ಞಾವಿಧಿ ಸ್ವೀಕರಿಸಿತು. ಈ ಸಂಖ್ಯೆ ಮುಂದೆ ಮೂವತ್ತಾಗದಿರಲಿ.

ಮಾಜಿ ರಾಜ್ಯಪಾಲ ಶ್ರೀ ಧರ್ಮವೀರರಿಗೂ ಪ್ರಜಾಸರ್ಕಾರಗಳಿಗೂ ಗ್ರಹ ಮಿತ್ರತ್ವವಿಲ್ಲವೆಂಬುದಕ್ಕೆ ಕರ್ನಾಟಕವು ಮತ್ತೊಂದು ಉದಾಹರಣೆಯಾಯ್ತು. ಇಲ್ಲವಾದರೆ ಅವರು ಬೆಂಗಳೂರಿಗೆ ಬಂದ ನಸುಕಿನಲ್ಲಿಯೇ ಬಂಡೆಕಲ್ಲುಗಳು ಇಸ್ಪೀಟಿನ ಎಲೆಗಳಾಗುವುದೆಂದರೇನು?

ಅವರು ಮೊದಲಿದ್ದ ಬಂಗಾಳ—ಪಂಜಾಬಗಳ ರೋಗವೂ ಅದೇ. ಕೆಲವರ ನಕ್ಷತ್ರ—ರಾಶಿಗಳಿಗೆ ಪ್ರಜಾಪ್ರಭುತ್ವ ಒಂದಾಗಿ ಬಾಳಗೊಡುವುದಿಲ್ಲ.

ಇಂದಿನ ರಾಜ್ಯಪಾಲ ಮೋಹನಲಾಲ ಸುಖಾಡಿಯಾ ರಾಜಸ್ಥಾನದ ಮುಖ್ಯಮಂತ್ರಿಯಾಗಿ ಬಹು ದೀರ್ಘಕಾಲದ ಅನುಭವವುಳ್ಳವರು. ನೆಹರು ಕಾಲದ ಛೋಟಾ ಮುಖ್ಯಮಂತ್ರಿಯೆಂದು ಹೆಸರು ಪಡೆದವರು.

ಅವರು ಬಂದದ್ದೇ ಬಂದದ್ದು—ಇಲ್ಲಿ ಆಳುವ ಕಾಂಗ್ರೆಸ್ಸಿನ ರೆಕ್ಕೆಗಳು ಬಹು ಮೇಲಕ್ಕೆ ಹಾರಿದುವು. ನಾಲ್ಕರಲ್ಲಿ ಮೂರಂಶ ಅವಿಚ್ಛಿನ್ನ ಬಹುಮತ ಗಳಿಸಿ ಅದು ಗೆದ್ದೇಬಿಟ್ಟಿತು.

ಇವರಲ್ಲಿ ಹೆಚ್ಚಿನವರು ಶಾಸನ ಸಭೆಗೇನೇ ಹೊಸಬರಾದುದರಿಂದ ಮಂತ್ರಿತನದ ಮೇಲೇ ದೃಷ್ಟಿಯಿಟ್ಟವರಲ್ಲ. ಮಂತ್ರಿತನದ ಪಟ್ಟು ಹಿಡಿದ ಕೆಲವರು 'ಹಿರಿಯರು' ಇದ್ದಾರೆ. ಹಿಂದೆ ಮಂತ್ರಿತನದ ಸೂನವ ರಕ್ತದ ಸವಿ ನೋಡಿದವರೂ ಇದ್ದಾರೆ.

ಇವರಲ್ಲಿ ಕೆಲವರನ್ನು ಮತ್ತೆ ಮಂತ್ರಿ ಮಾಡಬಹುದು. ಇನ್ನೂ ಕೆಲವರನ್ನು ಬೇರೆ ಬೇರೆ ಸವಿ ತೋರಿಸಿ ಸದ್ಯ ಸುಮ್ಮನಿರಿಸ ಬಹುದು. ಮತ್ತೂ ಬಾಯ್ದೆರೆದವರನ್ನು 'ಇಂದಿರಾ ದಂಡ'ದ ಬಲದಿಂದ ಬಾಯ್ಮುಚ್ಚಿಸ ಬಹುದು.

ಇಂದಿರಾ ಮಾಯಾದಂಡದ ಮುಂದೆ ಬಾಗದವರಿಂದು ಆಳುವ ಕಾಂಗ್ರೆಸ್ಸಿನಲ್ಲಿಲ್ಲ.

ಶ್ರೀ ದೇವರಾಜ ಅರಸರು ಒಂದು ವಾರದೊಳಗಾಗಿ ಎರಡು ಬಾರಿ ಗೆದ್ದರು.

ಸಾರ್ವತ್ರಿಕ ಚುನಾವಣೆಗಳಲ್ಲಿ ತನ್ನ ಪಕ್ಷದೊಡನೆ ಒಮ್ಮೆ ಮುಖ್ಯಮಂತ್ರಿಯಾಗಿ ಇನ್ನೊಮ್ಮೆ.

ಶಾಸನ ಸಭೆಯ ಸದಸ್ಯನಲ್ಲದವರು ಮುಖ್ಯಮಂತ್ರಿಯಾಗಬಾರದೆಂದೇನಿಲ್ಲ; ಆದರೆ, ಇದು ರಾಮ ನೀತಿಯೂ ಅಲ್ಲ; ಭರತನ ನೀತಿಯೂ ಅಲ್ಲ.

ಶ್ರೀ ಅರಸರು ಹುಣಸೂರಿನಿಂದಲೋ ಮತ್ತಿನ್ನೆಲ್ಲಿಂದಲೋ ಸ್ಪರ್ಧಿಸಿ ವಿಧಾನಸಭೆಗೆ ಗೆದ್ದು ಬರ ಬಹುದು. ಆ ಮಾತು ಬೇರೆ. ಶ್ರೀ ಅರಸರೇ ನಾಯಕರಾಗಬೇಕೆಂದಿದ್ದರೆ, ಅವರು ಆದಾಗಲೇ ಚುನಾವಣೆಗೆ ಇಳಿಯಬಹುದಿತ್ತು.

ಹಿಂದೊಮ್ಮೆ ಶ್ರೀ ನಿಜಲಿಂಗಪ್ಪನವರು ಈ 'ತಂತ್ರ'ವನ್ನು ಬಳಸಿದಾಗ 'ಹಿಂಬದಿಯಿಂದ ವಿಧಾನ ಸಭೆ ಹೊಕ್ಕವರು' ಎಂದು ವಿರೋಧಿ ಪಕ್ಷದಿಂದ ಅನ್ನಿಸಿಕೊಂಡದ್ದುಂಟು.

ಆ 'ವಿರೋಧಿ' ಪಕ್ಷೀಯರಲ್ಲಿ ಹೆಚ್ಚಿನವರಿಂದು ಆಳುವ ಕಾಂಗ್ರೆಸ್ಸಿನಲ್ಲೇ ಸೇರಿಕೊಂಡಿದ್ದಾರೆ.

ಶ್ರೀ ಅರಸರ ಮುಖ್ಯಮಂತ್ರಿಯಾಗುವ ಆಶಯಕ್ಕೆ ಒಂದು ವರ್ಷ ತುಂಬಿತು. ಕಳೆದ ವರ್ಷ ಶ್ರೀ ಸಿದ್ಧವೀರಪ್ಪನವರಿಗೆ ಸರಕಾರ ರಚಿಸಲು ಅನುಮತಿ ನೀಡಬಾರದೆಂದು ಬಹಳಷ್ಟು ರಕ್ತ ಬೆವರು ಒಂದು ಮಾಡಿದವರು ಇವರು.

ಈ ಬಾರಿಯೂ ಶ್ರೀ ಅರಸರಿಗೆ ಹಲವರು ಪ್ರತಿಸ್ಪರ್ಧಿಗಳಿದ್ದರು. ಪ್ರಬಲರಾದವರು ಅವರೇ—ಶ್ರೀ ಸಿದ್ಧವೀರಪ್ಪ.

ತನಗೆ ದೊರೆತ ಹರಿಹರಿದ ಬಂಡೆಕಲ್ಲುಗಳ ನಡುವೆಯೂ ತಾನು ಎದ್ದು ಬಂದಾಗ, ಮುಖ್ಯಮಂತ್ರಿ ಪದವಿಗಾಗಿಯೇ ದೈವವು ತನ್ನನ್ನು ಗೆಲ್ಲಿಸಿತೆಂದು ಅವರು ನಂಬಿದ್ದರು ಶ್ರೀ ಅರಸರು ತನ್ನ ಪುಕ್ಕಗಳೆಲ್ಲವನ್ನೂ ಕಳಚಿ ಹಾಕಿರುವುದು ಅವರಿಗೆ ಮನವರಿಕೆಯಾಗಿದ್ದರೂ ಅರಸರು ಚುನಾವಣಾರಂಗದಿಂದ ದೂರವುಳಿದದ್ದು ತನ್ನ ಉತ್ತಮದಾಯವೆಂದು ನಂಬಿದರು. ಉದ್ಧರಿಸುವ ದೇವರಿಗೆ ಹಿಡಿಯಲು ಚೆಂಡಿಕೆ ಇಷ್ಟಿದ್ದರೂ ಸಾಲದೆ?

ಆದರೆ, ಕುಸ್ತಿಯ ಕಣಕ್ಕೆ ಮತ್ತೂ ಕೆಲವರು ಇಳಿದರು. ಧಾರವಾಡದ ಶ್ರೀ ಪಾಟೀಲ್, ಮೈಸೂರಿನ ಚೆನ್ನಬಸಪ್ಪ....

ಈ ಗೊಂದಲ ನಿವಾರಣೆಗೆ ಕೇಂದ್ರದಿಂದ ಶ್ರೀಮತಿ ಮಹಿಷಿ ಬಂದರೂ ಬರಬಹುದೆಂದು ಹೇಳಲಾಯ್ತು.

ಶ್ರೀಮತಿ ಸರೋಜಿನಿ ಮಹಿಷಿಯವರ ಬದಲು ಮತ್ತಾರ ಹೆಸರಾದರೂ ಬರುತ್ತಿದ್ದರೆ, ರಾಜ್ಯದ ಆಳುವ ಕಾಂಗ್ರೆಸ್ಸಿಗರು ಸೈಯೆನ್ನುತ್ತಿದ್ದರೋ ಏನೊ!

ಆದುದರಿಂದಲೇ 'ಮಹಿಷಿ'ಯ ಹೆಸರಿನೊಂದಿಗೇ ಶ್ರೀ ದೇವರಾಜರಿಗೆ ಬೆಂಬಲ ವ್ಯಕ್ತವಾಯ್ತು. ಕಳೆದ ವರ್ಷ 'ದೇವರಾಜರು ಬೇಡ'ವೆಂದವರೇ ಇಂದು 'ಅವರೇ ಬೇಕು' ಎಂದರು.

'ನಾಯಕರು' ದೆಹಲಿ ಯಾತ್ರೆ ಮಾಡಿ ದೇವಿದರ್ಶನ ಮಾಡಿ ಮರಳಿದರು. ಕೇಂದ್ರ ಪುಜಾರಿಗಳಾಗಿ ದೀಕ್ಷಿತ್ — ಮೊಘುಲ್ ಬಂದರು. ಭಕ್ತಾಶಯವನ್ನು ದೇವಿಗೆ ಫೋನ್ ಮೂಲಕ ತಿಳಿಸಿದರು—ಬಾಂಗ್ಲಾದೇಶಕ್ಕೆ—ಆಶೀರ್ವಾದವಿದೆಯೆಂದು ಅಭಯ ವಚನ ನೀಡಿದರು.

ದೇವರಾಜ ಅರಸರಿಗೆ ಮುಖ್ಯಮಂತ್ರಿ ದೀಕ್ಷೆ ಕೊಡಿಸಿದರು.

ತಾನು ಬಯಸಿದ್ದ ಮುಳ್ಳಿನ ಕಿರೀಟ-ಹಾಲುತುಪ್ಪಗಳನ್ನು ಅರಸರು ಕೊನೆಗೂ ಗಿಟ್ಟಿಸಿದರು.

ಶ್ರೀಗಳಾದ ಪಟೇಲ್— ಚೆನ್ನಬಸವಪ್ಪನವರು ಶ್ರೀ ಅರಸರಿಗೆ ಹತ್ತಿರದ ಮಂತ್ರಿಗಳಾದರು. ಆದರೆ ಶ್ರೀ ಸಿದ್ಧವೀರಪ್ಪನವರು?

ತನ್ನ ಸೋಲಿಗೆ ಶ್ರೀ ದೇವರಾಜ ಅರಸು—ಅವರ ಬೆಂಬಲಿಗರೇ ಕಾರಣವೆಂಬ ಶ್ರೀ ದಯಾನಂದ ಸಾಗರರು ನಂಬಿದ್ದಾರೆ. 'ಶ್ರೀ ಅರಸರು ಬೇಡಿ' ಅಂದವರು ಪಾಪ, ಅವರೊಬ್ಬರೇ, ಶ್ರೀ ಸಿದ್ಧವೀರಪ್ಪನವರಿಗೆ ಇವರೊಬ್ಬರಾದರೂ ಇದ್ದಾರಲ್ಲಾ' ಎಂದು ಸಮಾಧಾನ!

ಶ್ರೀ ಸಿದ್ಧವೀರಪ್ಪ—ಶ್ರೀ ದಯಾನಂದ ಸಾಗರ್—ಮುಂದೇನು?

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
151 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

ಸ್ವತಂತ್ರ ಐತಿಹಾಸಿಕ ಕಾದಂಬರಿ

(ಕಳೆದ ಸಂಚಿಕೆಯಿಂದ)

ಸಿಂಹಾಸನಕ್ಕೆ ಉತ್ತರಾಧಿಕಾರಿ ಯಾರು?

ಇದು ಪ್ರಜೆಗಳನ್ನು ಕಾಡುತಿದ್ದ ಪ್ರಶ್ನೆ. ಈ ವಿಚಾರದಲ್ಲಿ ಅವರಿಗೆ ಹೊಳೆದ ವಿಷಯವನ್ನು ಹೇಳುವ ಸ್ವಾತಂತ್ರ್ಯವಿದ್ದರೂ ಆ ಮಾತಿಗೆ ಬೆಲೆ ಇರಲಿಲ್ಲ. ಅವರನ್ನು ಕೇಳುವ ಆವಶ್ಯಕತೆಯೂ ಇರಲಿಲ್ಲ.

ಒಳ್ಳೆಯವನೊಬ್ಬ ಪ್ರಭುವಾಗಿ ಬರಲಿ ಎಂಬುದು ಅವರ ಹಾರೈಕೆ—

'ಅಮಾತ್ಯರು ಏನು ತೀರ್ಮಾನಕ್ಕೆ ಬಂದಿರಿ? ಪ್ರಭುಗಳು ಸಿಂಹಾಸನವನ್ನು ನಿಮಗೆಂದು ಬಿಟ್ಟು ಹೋಗಿಲ್ಲವಷ್ಟೆ! ನಿಮ್ಮದಲ್ಲದ್ದನ್ನು ದಕ್ಕಿಸಿಕೊಳ್ಳುವುದಕ್ಕೆ ಈ ರೀತಿ ನಾಟಕ ಆಡುತ್ತೀರೋ' ಗೋವಿಂದನ ಧ್ವನಿಯಲ್ಲಿ ಗಡುಸಿತ್ತು.

ಆತ ಒಳ ಬಂದಾಗ ಹಜಾರದಲ್ಲಿ ಯಾರೂ ಇರಲಿಲ್ಲ.

ಬರುವ ಮುನ್ಸೂಚನೆಯನ್ನು ಕೊಡದೆ, ಆತ ನರಸಿಂಹ ಕುಳಿತಿದ್ದ ಹಜಾರವನ್ನು ಸುಂಟರಗಾಳಿಯಂತೆ ಪ್ರವೇಶಿಸಿ, ಭದ್ರಾಸನವೊಂದರಲ್ಲಿ ಕುಳಿತು ಮೀಸೆಯನ್ನು ಹುರಿಗೊಳಿಸಿ ಮೇಲಿನಂತೆ ಪ್ರಶ್ನಿಸಿದ.

ಗೋವಿಂದನ ಅಸಭ್ಯ ವರ್ತನೆಯಿಂದ ನರಸಿಂಹ ಸಹನೆಯನ್ನು ಕಳೆದುಕೊಳ್ಳಲಿಲ್ಲ.

"ಯುವರಾಜರು ಕೋಪಗೊಂಡಂತಿದೆ. ಮಹತ್ವದ ವಿಷಯ ಪ್ರಸ್ತಾಪಿಸಿದ್ದೀರಿ. ಅದನ್ನು ಚರ್ಚಿಸುವುದಕ್ಕೆ ವ್ಯವಧಾನಬೇಕು"

"ನಮಗೆ ಈಗ ಸಮಯವಿಲ್ಲ. ನಮ್ಮ ಸೈರಣೆಗೂ ಒಂದು ಮಿತಿ ಇದೆ. ನಾವು ಬಯಸುತ್ತಿರುವುದು ಒಂದು ಉತ್ತರ. ಅಷ್ಟೊಂದು ಸಿಕ್ಕಿದರೆ ಅದನ್ನು ಮಹಾಭಾಗ್ಯವೆಂದು ತಿಳಿಯುತ್ತೇನೆ."

ಹೀಗೆ ನುಡಿದು ಗೋವಿಂದ ನರಸಿಂಹನನ್ನು ನುಂಗುವಂತೆ ನೋಡಿದ.

'ಕೆಕ್ಕರಿಸಿ ನೋಡಿದರೆ ಯಾವ ಲಾಭವೂ ಆಗುವಂತಿಲ್ಲ ಯುವರಾಜರೇ.'

ನರಸಿಂಹ ಉದಾಸೀನ ಭಾವದಿಂದಲೇ ಉತ್ತರಿಸಿದ. ಇದು ಗೋವಿಂದನನ್ನು ಕೆರಳಿಸಿತು.

'ನೀವು ಹೇಳುತ್ತೀರೋ ಅಥವಾ ನಿಮ್ಮ ಬಾಯಿಂದಲೇ ಅದನ್ನು ಬಿಡಿಸಲೋ? ನಿಮ್ಮ ಕುತಂತ್ರ ನಮಗೆ ತಿಳಿದಿಲ್ಲ ಎಂದು ಭಾವಿಸಿದ್ದೀರಾ? ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ, ಅನ್ಯರಿಗೆ ಅದು ಕಾಣುವುದಿಲ್ಲ ಎಂಬ ಭ್ರಮೆ ನಿಮ್ಮದು. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಆಳುವ ಸಂಚು ನಡೆಸುತಿದ್ದೀರಿ. ಇದು ನಾವು ನಿಮ್ಮ ಮೇಲೆ ಹೊರಿಸುವ ಆಪಾದನೆ. ಏನು ಹೇಳುವಿರಿ? ಇದಕ್ಕೇನು ಶಿಕ್ಷೆ ಬಲ್ಲಿರಾ ಅಮಾತ್ಯರೇ'

ಈ ಅನ್ಯಾಯಾರೋಪದಿಂದ ನರಸಿಂಹನ ನೆತ್ತಿಯು ಕಾವೇರಿತು—

'ಯುವರಾಜರೇ! ನಾಲಿಗೆಯನ್ನು ಬಹಳ ಬೆಳೆಯ ಬಿಟ್ಟಿರಿ. ಯುವರಾಜರೆಂದು ಮರ್ಯಾದೆಯಿಂದ ಮಾತನಾಡಿಸಿದೆ. ನನ್ನ ಸೈರಣೆಗೂ ಒಂದು ಪರಿಧಿ ಇದೆ–ನೀವು ಅದನ್ನು ಪರೀಕ್ಷಿಸುವಂತಿದೆ. ರಾಷ್ಟ್ರಕೂಟ ಸಿಂಹಾಸನ ಯಾರಿಗೆ ದಕ್ಕಬೇಕೋ ಅವರಿಗೆ ಸಿಕ್ಕುತ್ತೆ. ಈ ಜನ್ಮದಲ್ಲೇ ಏಕೆ, ಜನ್ಮಜನ್ಮಾಂತರಗಳಲ್ಲೂ ಈ ಅಧಿಕಾರ ನನಗೆ ಬರುವುದು ಬೇಡ, ಎಂದು ದೇವರಲ್ಲಿ ಮೊರೆಯಿಡುತಿದ್ದೇನೆ. ಅದನ್ನು ನೀವು ತಿಳಿಯಲಾರಿರಿ. ಪ್ರಭುಗಳಿಗೆ ಕೊಟ್ಟ ವಚನವನ್ನು ಹೇಗೆ ನಡೆಸಿಕೊಡುವುದು ಎಂಬುದೇ ನನಗೆ ತೋಚದಾಗಿದೆ. ಆ ಮಾತಿನಿಂದ ಬಂಧಿತನಾದ ನಾನು ಇಂದು ಎಲ್ಲವನ್ನೂ ನುಂಗಿ ಕೊಂಡಿರ ಬೇಕಾಗಿದೆ'

'ಈ ನಾಟಕ ಸಾಕು ಅಮಾತ್ಯರೇ! ಪ್ರಭುಗಳಿಗೆ ಕೊಟ್ಟ ವಚನ–? ನಿಮ್ಮ ಒಳಸಂಚಿಗೆ ಸತ್ತು ಸ್ವರ್ಗದಲ್ಲಿರುವ ಅವರ ಹೆಸರನ್ನೂ ಬಳಸಲಾರಂಭಿಸಿದಿರಾ? ಈ ಕುಟಿಲ ರಾಜಕೀಯ ನಿನ್ನೆ ಇತ್ತು; ನಾಳೆಯೂ ಖಂಡಿತ ಇರುತ್ತೆ. ಸತ್ತವರ ಹೆಸರನ್ನೇಕೆ ಎಳೆಯುತ್ತೀರಿ. ಹೇಳುವ ಸಂಗತಿ ಇದ್ದಿದ್ದರೆ ಅದನ್ನು ನಮಗಾರಿಗೂ ಪ್ರಭುಗಳು ತಿಳಿಸದಿರುತ್ತಿದ್ದರೇ? ಎಲ್ಲ ಬಿಟ್ಟು ನಿಮ್ಮಲ್ಲಿ ಹೇಳುವ ಅಗತ್ಯವೇನಿತ್ತು?'

'ಅದನ್ನು ಪ್ರಭುಗಳಲ್ಲಿ ಕೇಳಿಕೊಳ್ಳಿ'

'ಅವರಿಲ್ಲವೆಂದು ಈ ಸುಳ್ಳಾಡುತ್ತೀರೋ'

'ಹಾಗೆ ಹೇಳುವವರ ನಾಲಗೆಯಲ್ಲಿ ಹುಳ ಬಿದ್ದೀತು–ಸುಳ್ಳಾಡುವುದರಿಂದ ನಮಗಾವ ಲಾಭವೂ ಇಲ್ಲ ಯುವರಾಜರೇ'

'ಸುಳ್ಳಲ್ಲ–ಹುಟ್ಟಿಸಿಕೊಂಡು ಹೇಳುವ ಮಾತು'

'ತಾವು ಕಾಲು ಕೆದರಿ ಜಗಳವಾಡುವುದಕ್ಕೆ ಬಂದಂತಿದೆ'

'ಬರಿಯ ಜಗಳವೇ? ಹರಿದು ತಿನ್ನುವ ಕೋಪವೂ ಬಂದಿದೆ. ಸಿಂಹಾಸನವನ್ನು ಗುಳುಂಕರಿಸಲು ಬಿಡುವುದಿಲ್ಲ, ಅಮಾತ್ಯರೇ! ನೆನಪಿನಲ್ಲಿಟ್ಟುಕೊಳ್ಳಿ'

'ಯಾರಿಗೆ ಬೇಕಾಗಿದೆ ನಿಮ್ಮ ಹಾಳು ಸಿಂಹಾಸನ. ಅದರ ರಕ್ಷಣೆಗಾಗಿ ಬಾಳು ವ್ಯಯಿಸಿದೆ. ಯಾರ ಉಡಿಯಲ್ಲಿ ಅದು ಬೀಳ ಬೇಕೋ ಅವರಿಗೆ ವಹಿಸಿ ಕೊಡುವುದಷ್ಟು ಉಳಿದಿದೆ'

'ಹೋಗ ಬಯಸುವವರು ಹೋಗ ಬೇಕಿತ್ತು. ಅದನ್ನಾರಿಗೆ ಒಪ್ಪಿಸಬೇಕೋ ಅವರಿಗೆ ವಹಿಸಿಬಿಡಿ'

'ಇನ್ನೂ ಸೂತಕದ ದಿನಗಳು ಮುಗಿದಿಲ್ಲ. ಅರಮನೆಯ ಹೆಣ್ಣುಮಕ್ಕಳು ಇನ್ನೂ ಶೋಕತಪ್ತರಾಗಿದ್ದಾರೆ. ನೊಂದು ಕೊಂಡಿರುವ ಅವರಿಗೆ ಇದೊಂದು ತಲೆಶೂಲೆ ಕೊಡುವ ಇಚ್ಛೆ ಇರಲಿಲ್ಲ'

'ಇದು ರಾಜಕಾರ್ಯ. ಇದಕ್ಕೂ ಅಂತಃಪುರದವರನ್ನು ವಿಚಾರಿಸಬೇಕೇನು? ಕುಂಟು ನೆಪ ಹೇಳ ಬೇಡಿ'

'ಅವರ ಸಲಹೆಯಂತೆ ನಡೆಯುವ ಅಗತ್ಯ ಇಲ್ಲದಿದ್ದರೂ ಅಭಿಪ್ರಾಯ ಸಂಗ್ರಹದಿಂದ ಪಾಪ ಬರಲಾರದಷ್ಟೆ.'

'ನಿಮ್ಮ ಉದ್ಧಟತನ ಹೆಚ್ಚಿತು ನಾಯಕರೇ. ತೀರಿಕೊಂಡ ಮಹಾರಾಜರು ತಂಗಿಯ ಗಂಡಂದಿರು ಎಂದು ಎಲ್ಲಿಲ್ಲದ ಸಲುಗೆ ಕೊಟ್ಟರು. ಎಲ್ಲ ಜವಾಬ್ದಾರಿಯನ್ನು ನಿಮಗೆ ವಹಿಸಿ ಬಿಟ್ಟರು. ಅದರಿಂದ ನೀವು ಸೊಕ್ಕಿಬಿಟ್ಟಿರಿ. ನೀವೇ ಪ್ರಭುಗಳೋ ಎನ್ನುವಂತೆ ನಡೆದಿರಿ'

'ಯುವರಾಜರು ಮೊದಲು ಮರ್ಯಾದೆಯಿಂದ ಮಾತನಾಡುವುದನ್ನು ಕಲಿಯಬೇಕು'

'ಮರ್ಯಾದೆಯ ರೀತಿ–ನೀತಿಗಳನ್ನು ನಿಮ್ಮಿಂದ ಹೇಳಿಸಿಕೊಳ್ಳಬೇಕಾಗಿಲ್ಲ'

'ನಿಮಗೆ ಕಲಿಸುವ ಸಾಹಸ ನಾನೇಕೆ ಮಾಡಲಿ? ನನ್ನ ವಿಷಯದಲ್ಲಿ ಎಚ್ಚರದಿಂದ ನಡೆದುಕೊಳ್ಳಿ'

'ಏನು ಹೆದರಿಸುತ್ತೀರಿ?'

'ಹೆದರಿಸುವುದೇನು ಬಂತು ಇದರಲ್ಲಿ? ಇದ್ದ ವಿಷಯ ಅರುಹಿದೆ'

'ನಿಮ್ಮ ಕೂಡೆ ಮಾತು ಬೆಳೆಸಲು ಇಷ್ಟವಿಲ್ಲ'

'ನಾನೇನು ನಿಮ್ಮನ್ನು ಕರೆಸಿ ಕೊಂಡೆನೇ? ನೀವೇ ಬಂದಿರಿ ಮಾತಿಗೆ ಪ್ರಾರಂಭಿಸಿದಿರಿ'

'ಬರುವುದೂ ಬಿಡುವುದೂ ನಮಗೆ ಬಿಟ್ಟದ್ದು. ಮಹಾರಾಜರು ಬಿಟ್ಟು ಹೋದ ಸಾಮ್ರಾಜ್ಯಕ್ಕೆ ನೀವು ಉತ್ತರಾಧಿಕಾರಿಗಳು. ಅಗತ್ಯಬಿದ್ದರೆ ಬಂದೇ ಬರುತ್ತೇವೆ. ಮನೆ ನಾಯಿಯನ್ನು ಕೇಳಿ ಯಜಮಾನ ಒಳಕ್ಕೆ ಬರ ಬೇಕಾಗಿದೆಯೇನು?'

ನರಸಿಂಹ ನಖಶಿಖಾಂತ ಉರಿದ.

'ಏನೆಂದಿರಿ? ಆ ಮಾತನ್ನು ಇನ್ನೊಮ್ಮೆ ಉಚ್ಚರಿಸುವ ಧೈರ್ಯ ಇದೆಯೇ'

ಗೋವಿಂದ ಕುರುಡು ಧೈರ್ಯ ತಂದು ಕೊಂಡು 'ಹೇಳುತ್ತೇವೆ. ಏನು ಮಾಡ ಬಲ್ಲಿರಿ?' ಆದರೂ ಒಳಗೊಳಗೇ ಅಳುಕಿದ. ಕೋಪದ ಭರದಲ್ಲಿ ಸಣ್ಣ ಮಾತಾಡಿದೆ. ಎಂಬುದು ಅವನಿಗೆ ತಿಳಿಯಿತು. ಆದರೆ ಆಡಿದ ಮಾತನ್ನು ಆತ ಹಿಂತೆಗೆದುಕೊಳ್ಳುವಂತಿರಲಿಲ್ಲ. 'ಇನ್ನೊಮ್ಮೆ ಹೇಳಿ ನೋಡಿ, ಆಗ ಹಾಗೆ ನುಡಿದ ನಾಲಿಗೆಯನ್ನು ತುಂಡರಿಸಿ ಆಡಿದವರ ಕೈಯಲ್ಲಿಡುತ್ತೇನೆ.'

ನರಸಿಂಹನ ಕೈ ನಿಡು ಕೂರಸಿಯತ್ತ ಹೋಯಿತು.

ನರಸಿಂಹನ ರುದ್ರ ಭೀಕರ ಮೂರ್ತಿಯ ದರ್ಶನದಿಂದ ಗೋವಿಂದ ಭೂಮಿಗಿಳಿದು ಹೋದ.'

'ಯಾಕೆ ಯುವರಾಜರೇ ಸುಮ್ಮನಾದಿರಿ? ವಾರಾಂಗನೆಯರ ಮುಂದೆ ಆಡಿದಂತೆ ಎಂದು ತಿಳಿದಿರಬೇಕು'

ಗೋವಿಂದನ ನಾಲಿಗೆಯೊಣಗಿತು. ಮೈ ಬೆವರಿತು. ಪ್ರೇತಕಳೆ ಮುಖದಲ್ಲಿ ಕಾಣಿಸಿತು.

'ರಾಷ್ಟ್ರಕೂಟ ರಾಜ್ಯಲಕ್ಷ್ಮಿಯ ವಾರಸುದಾರರು ಯಾಕೆ ಮೌನ ತಳೆದಿರಿ?'

ನರಸಿಂಹನ ಮಾತಿನಲ್ಲಿ ಕೊಂಕು ಅಣಕ ಎರಡೂ ಮೂಡಿದ್ದುವು.

ಗೋವಿಂದ ನಿರುತ್ತರ.

'ಇಂತಹ ಅಳ್ಳೆದೆಯವರ ಕೈಗೆ ಪ್ರಭುತ್ವವನ್ನೊಪ್ಪಿಸ ಬೇಡಿ ಎಂದು ಮಹಾರಾಜರು ಅಣತಿ ಮಾಡಿದ್ದಾರೆ. ನಿಮ್ಮಂತಹ ಜೀವಗಳ್ಳರಿಗೆ ಅರಸೊತ್ತಿಗೆಯೇ? ಅದು ಸ್ವಪ್ನದಲ್ಲಿಯೂ ಅಲಭ್ಯ.'

ಆತುರದಿಂದ ಭೃತ್ಯನೊಬ್ಬ ಕೋಣೆಯನ್ನು ಪ್ರವೇಶಿಸಿದ.

ಒಳಗಿನ ದೃಶ್ಯವನ್ನು ಕಂಡು ಗಾಬರಿಯಾದ.

ಅವರಿಬ್ಬರನ್ನೂ ನೋಡುತ್ತ ಕೆತ್ತಿದ ವಿಗ್ರಹದಂತೆ ನಿಂತ.

ನರಸಿಂಹ ಅವನತ್ತ ತಿರುಗಿ 'ಏನು ಬಂದೆ'

(ಹನ್ನೊಂದನೇ ಪುಟ ನೋಡಿರಿ)

ರಾಜ್ಯದ ಮುಖ್ಯ ಮಂತ್ರಿಯೆಂದು ಆಯ್ಕೆಗೊಂಡ ಶ್ರೀ ದೇವರಾಜ ಅರಸರು ತನ್ನ ಸಚಿವ ಸಂಪುಟವ ಎರಡು ಕಂತುಗಳನ್ನು ಈಗ ನೀಡಿ, ಅಗತ್ಯವಾದರೆ ಇನ್ನೂ ಇಬ್ಬರು - ಮೂವರ ಮೂರನೆಯ್ಯ ಕಂತನ್ನು ಮುಂದೆ ನೀಡುವುದಾಗಿ ಹೇಳಿದ್ದಾರೆ. ಇದೀಗ ಸಚಿವ ಸಂಪುಟ ರಚನೆಯ, ಕಾರ್ಯಗಳೆಲ್ಲವೂ ಮುಗಿದು, ಸಂಪುಟವು ಕಾರ್ಯಮಗ್ನವಾಗ ತೊಡಗಿದೆ. ಈ ಸಂಪುಟದಲ್ಲಿ ಮುಖ್ಯ ಮಂತ್ರಿಗಳೂ ಸೇರಿದಂತೆ ೧೩ ಜನರು ಕ್ಯಾಬಿನೆಟ್ ರ್‍ಯಾಂಕಿನಲ್ಲೂ ೯ ಜನರು ಸ್ಟೇಟ್ ರ್‍ಯಾಂಕಿನಲ್ಲೂ ಇದ್ದಾರೆ. ಉಪಮಂತ್ರಿಗಳು ಇರುವರೇ ಎಂಬ ಪ್ರಶ್ನೆಗೆ ಅವರು ಏತಕ್ಕೆ ಎಂದು ಮುಖ್ಯಮಂತ್ರಿಗಳು ಉತ್ತರಿಸಿ "ಇಲ್ಲ"ವೆಂದು ದೃಢಪಡಿಸಿದ್ದರು. ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಅರಸ, ಶ್ರೀಗಳಾದ ಎಚ್. ಎಂ. ಚೆನ್ನಬಸವಪ್ಪ, ಎಚ್. ಸಿದ್ಧವೀರಪ್ಪ, ಎಂ. ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಕೌಜಲಗಿಯವರು ಮಾಜಿ ಮಂತ್ರಿಗಳು. ಉಳಿದ ಹದಿನೇಳು ಸಚಿವರಲ್ಲಿ ಎಂಟು ಸದಸ್ಯರು ಇದೀಗ ಮೊತ್ತ ಮೊದಲ ಬಾರಿಗೆ ವಿಧಾನ ಸಭೆಗೆ ಆಯ್ಕೆಯಾದವರು. ಸಂಪುಟದ ಸದಸ್ಯರಲ್ಲಿ ೧೯ ಜನರು ಪದವೀಧರರು, ಕೆಲವರು ಎರಡು ಮೂರು ಪದವಿಗಳನ್ನೂ ಗಳಿಸಿದವರು. ಅರುವತ್ತರ ಗಡಿದಾಟಿದವರು ಮೂವರು ಮಾತ್ರ. ಹೆಚ್ಚಿನವರು ೩೦—೪೦ರ ನಡು ಹರೆಯದವರು. 'ಯುವಕರಲ್ಲಿ ನನಗೆ ತುಂಬ ಭರವಸೆ'ಯೆಂಬ ದೃಢ ವಿಶ್ವಾಸವನ್ನು ವ್ಯಕ್ತಪಡಿಸಿದ ಮುಖ್ಯ ಮಂತ್ರಿಯವರು "ಹಳೆಯರ ಅನುಭವ ಮತ್ತು ಹೊಸಬರ ಉತ್ಸಾಹ"ಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಿದ್ದಾರೆ; ಅದರಲ್ಲಿ ಯಶಸ್ಸನ್ನೂ ಪಡೆದಿದ್ದಾರೆ.

ವಿಧಾನ ಮಂಡಳದಿಂದ ಒಂದೆರಡು ಮಂತ್ರಿಗಳನ್ನು ಆರಿಸಬೇಕೆಂದು ಶ್ರೀ ಅರಸರ ಮೇಲೆ ಒತ್ತಡ ಹೇರಲಾಯ್ತು. ಹಾಗೆಯೇ ಸಚಿವರ ಆಯ್ಕೆಯ ವಿಷಯದಲ್ಲೂ ಇಂತಹುದೇ ಒತ್ತಾಯ ತರಲಾಯ್ತು. ಶ್ರೀ ಎಚ್. ಸಿದ್ಧವೀರಪ್ಪನವರಿಗೆ ಗೃಹ ಶಾಖೆಯನ್ನೇ ಕೊಡಬೇಕೆಂದು ಅವರೂ ತನ್ನ ಬೆಂಬಲಿಗರೊಡನೆ ಪಟ್ಟು ಹಿಡಿದರು. ಆದರೆ, ಆದಾರ ವರಸೆಯ ಮುಂದೆಯೂ ಶ್ರೀ ಅರಸು ಜಪ್ಪೆನ್ನಲಿಲ್ಲ. ತನ್ನ ನಿರ್ಧಾರಿತ ಸಚಿವ ಪಟ್ಟಿಯನ್ನು ಅವರು ಧೈರ್ಯದಿಂದಲೇ ಬಿಡುಗಡೆ ಮಾಡಿದರು. ಕೇಂದ್ರದಲ್ಲಿ ಶ್ರೀಮತಿ ಗಾಂಧಿ ಪ್ರಶ್ನಾತೀತ ನಾಯಿಕೆಯಾಗಿರುವಂತೆಯೇ ರಾಜ್ಯದಲ್ಲಿ ಶ್ರೀ ಅರಸು ಅಂತಹುದೇ ಸ್ಥಾನವನ್ನು ಪಡೆದಿದ್ದಾರೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಅನಗತ್ಯ. ಶ್ರೀ ಅರಸು ವಿರೋಧ ಸದಾಕಾಲಕ್ಕೆ ತಣ್ಣಗಾಯ್ತೆಂದು ಇದರ ಅರ್ಥವಲ್ಲವಾದರೂ ನಿಕಟ ಭವಿಷ್ಯದಲ್ಲಿ ಅದಿನ್ನು ತಲೆಯೆತ್ತಲಾಗದಷ್ಟು ಆಳಕ್ಕೆ ಅಡಗಿ ಹೋಯ್ತೆಂದು ಅರ್ಥ. ಶ್ರೀ ದೇವರಾಜ ಅರಸರು ಪ್ರಧಾನಿ ಗಾಂಧಿಯನ್ನೇ ಅನುಕರಿಸುವ ಪ್ರಯತ್ನ ಮಾಡಿದ್ದಾರೆನಿಸುತ್ತದೆ. ಲೋಕ ಸಭಾ ಸದಸ್ಯ ಶ್ರೀ ಎಸ್. ಎಂ. ಕೃಷ್ಣರಿಗೆ ಕೇಂದ್ರದಲ್ಲಿ ಸಚಿವ ಸ್ಥಾನ ಕೊಡಿಸುವಲ್ಲಿ ಅವರು ಅಸಫಲರಾದರು. ೧೯೭೧ ಮತ್ತು ಈ ವರ್ಷ, ಎರಡೂ ಚುನಾವಣೆಗಳಲ್ಲಿ ದಕ್ಷಿಣ

ನವಯುಗ

ಸಂಪಾದಕೀಯ

ದೊಡ್ಡ ನಿರೀಕ್ಷೆ ಹೊತ್ತು ಬಂದ ಸಚಿವರ ದೊಡ್ಡ ದಂಡು

ಮೈಸೂರಿನಲ್ಲಿ ಆಳುವ ಕಾಂಗ್ರೆಸ್ಸು ಜಯಭೇರಿ ಬಾರಿಸುವಂತೆ ಮಾಡುವಲ್ಲಿ ಶ್ರೀ ಕೃಷ್ಣನ್ನರ ಪರಿಶ್ರಮ ಪ್ರಶಂಸನೀಯವಾಗಿತ್ತು. ಅವರ ಸೇವೆಯ ಫಲವನ್ನು ಕೇಂದ್ರ ಸರಕಾರ ಪಡೆಯಲು ನಿರಾಕರಿಸಿದ್ದರಿಂದ ಈಗ ರಾಜ್ಯಕ್ಕೆ ಅಪುದು ಮಾಡಿಕೊಳ್ಳಲಾಯ್ತು. ಶ್ರೀ ಅರಸರು ಸಾಮಾನ್ಯ ಆಡಳಿತ, ಗೃಹ, ದೊಡ್ಡ ನೀರಾವರಿ, ಯೋಜನೆ, ರೇಶ್ಮೆ, ವ್ಯವಸಾಯ, ಸುದ್ದಿ ಹೀಗೆ ಪ್ರಮುಖವಾದ ಹೆಚ್ಚಿನ ಖಾತೆಗಳನ್ನು ತನ್ನ ಕೈಗಳಲ್ಲೇ ಇಟ್ಟು ಕೊಂಡಿದ್ದಾರೆ. ನಾಲ್ವರು ಸ್ಟೇಟ್ ಸಚಿವರು ಮುಖ್ಯಮಂತ್ರಿಯವರ ಕೈಕೆಳಗೆ ಬೇರೆ ಬೇರೆ ಶಾಖೆಗಳಲ್ಲಿ ದುಡಿಯುತ್ತಾರೆ. ಸ್ಟೇಟ್ ಸಚಿವರೆಲ್ಲರೂ ಅನನುಭವಿಗಳು ಮತ್ತು ಹೆಚ್ಚಿನವರು ವಿಧಾನ ಸಭೆಗೇ ಹೊಸಬರಾದುದರಿಂದ ಇದು ಅನಿವಾರ್ಯವಾಯ್ತೆಂದು ಹೇಳ ಬಹುದು. ಯುವಜನರಲ್ಲಿ ತುಂಬಿದ ವಿಶ್ವಾಸವಿಟ್ಟಿರುವ ಮುಖ್ಯಮಂತ್ರಿಗಳು ಕಾಲ ಕ್ರಮೇಣ ತನ್ನ ವಶದಲ್ಲಿರುವ ಹೆಚ್ಚಿನ ಶಾಖೆಗಳನ್ನು ಆಯಾ ಮಂತ್ರಿಗಳಿಗೆ ಸಂಪೂರ್ಣ ಬಿಟ್ಟುಕೊಡುವರೆಂದು ನಂಬ ಬಹುದು. ಆಡಳಿತೆಯ ಸರಳತೆ—ಕ್ಷಿಪ್ರತೆಗಳ ದೃಷ್ಟಿಯಿಂದ ಇದು ಅನಿವಾರ್ಯವೂ ಎನ್ನ ಬಹುದು. ಆರೋಗ್ಯ, ಸಹಕಾರ ಮೊದಲಾದ ಒಂದೆಂಡು ಶಾಖೆಗಳಿಗೆ ಒಬ್ಬೊಬ್ಬ ಕ್ಯಾಬಿನೆಟ್ ಸಚಿವರನ್ನೇ ನೇಮಿಸಿಕೊಂಡ ಮುಖ್ಯಮಂತ್ರಿಯವರು ತಮ್ಮ ಕರ್ತೃತ್ವ ಶಕ್ತಿಯಲ್ಲಿ ಮಿತಿಮೀರಿದ ವಿಶ್ವಾಸ ತಳೆದಿರುವುದು ಎಷ್ಟರ ಮಟ್ಟಿಗೆ ಸಮಂಜಸವೆಂದು ಅವರೇ ಹೇಳಬೇಕು. ತನ್ನ ಪ್ರಬಲ ಸಮರ್ಥಕರಾದ ಶ್ರೀ ಎಸ್. ಎಂ. ಕೃಷ್ಣರಿಗೆ ಮುಖ್ಯಮಂತ್ರಿಯವರು ಕೈಗಾರಿಕೆ ಮತ್ತು ವಾಣಿಜ್ಯ ಖಾತೆಯನ್ನು ಬಿಟ್ಟು ಕೊಟ್ಟಿದ್ದಾರೆ. ಶ್ರೀ ಕೃಷ್ಣರು ಪ್ರಗತಿಶೀಲ ಮನೋಧರ್ಮದವರು. ಅದೇ ರೀತಿ ಶ್ರೀ ಘೋರ್ಪಡೆಯವರೂ ಪ್ರಗತಿಶೀಲ ರೈತರು, ಅರ್ಥ ತಜ್ಞರು. ಅವರಿಗೆ ಹಣಕಾಸಿನ ಮಹತ್ವದ ಶಾಖೆ ದೊರಕಿದೆ. ತನ್ನ ಪ್ರಬಲ ಪ್ರತಿ ಸ್ಪರ್ಧಿಯಾಗಿದ್ದ ಶ್ರೀ ಸಿದ್ಧವೀರಪ್ಪನವರಿಗೆ ಶ್ರೀ ಅರಸು ನೀಡಿದ್ದು ಆರೋಗ್ಯ ಶಾಖೆಯನ್ನು. ಆದ್ದರಿಂದ ಶ್ರೀ ಸಿದ್ಧವೀರಪ್ಪರು ತನಗಾದ ಅಪಮಾನವನ್ನು ನುಂಗಿಕೊಂಡು ತನ್ನ ಭಾಗ್ಯೋದಯದ ಕಾಲಕ್ಕಾಗಿ ಕಾದು ಕುಳಿತು ಕೊಳ್ಳಲೇ ಬೇಕಾಗಿದೆ.

ಸರಕಾರ ರಚನೆಯಲ್ಲಿ ಶ್ರೀ ಅರಸು ತನ್ನ ನಿರ್ಧಾರಕ್ಕೆ ಅಚಲವಾಗಿ ಅಂಟಿಕೊಂಡಿರುವುದು ಸಚಿವ ಸಂಪುಟದ ಸದಸ್ಯರ ಹೆಸರು ಪ್ರಕಟಣೆಯಿಂದ ವೇದ್ಯವಾಗುತ್ತದೆ. ಪ್ರಾಯಃ ಇಷ್ಟೊಂದು ನಿರ್ಭಿಡೆಯಿಂದ ಈ ಮೊದಲಿನ ಯಾವ ಮುಖ್ಯಮಂತ್ರಿಯೂ ವರ್ತಿಸಿದ ದಾಖಲೆಗಳಿಲ್ಲವೆನ್ನಬೇಕು. ಸಚಿವಾನುಭವ, ಶಾಸಕಾನುಭವಗಳುಳ್ಳ ಹಿರಿಯರು, ಜತೆಗೆ ಹೊಸ ಮುಖಗಳ ಕಿರಿಯರೂ ಸಮಾನವಾಗೇ ಇದ್ದು ಆಡಳಿತೆಗೆ ಒಂದು ನವಚೇತನ ತಂದು ತುಂಬುವ ಪ್ರಯತ್ನವನ್ನು ಶ್ರೀ ಅರಸರು ಮಾಡಿದ್ದಾರೆ. ಪ್ರಾದೇಶಿಕತೆ — ಪ್ರಾತಿನಿಧ್ಯತೆಗಳಿಗೂ ಅವರು ಗಮನ ನೀಡಿದ್ದಾರೆ. ರಾಜ್ಯದ ಜನತೆಗೆ ಉತ್ತಮ, ನಿಷ್ಪಕ್ಷಪಾತದ ಆಡಳಿತೆ ನೀಡುವ ಆರಂಭ ಶುಭವಾಗಿಯೇ ಸುರುವಾಗಿದೆ. ಆದರೆ, ಬರಿಯ ಸದಸ್ಯರ ಆಯ್ಕೆಯಿಂದಲೇ ಆಡಳಿತೆ ಸುಧಾರಿಸಲಾರದು. ಮಂತ್ರಿ ಮಂಡಳದ ಕಾರ್ಯವಿಧಾನವೇನು, ಅದರ ಪ್ರಭಾವ ಕಾರ್ಯಾಂಗದ ಮೇಲೆ ಹೇಗೆ ಎಂಬುದನ್ನು ಗಮನಿಸಿಯೇ ಅದರ ಕಾರ್ಯಕ್ಷಮತೆಯನ್ನು ಅನುಮಾನಿಸಬೇಕು. ಭ್ರಷ್ಟಾಚಾರ ಅನೈತಿಕ ವ್ಯವಹಾರಗಳಿಗೆ ತವರಾದ ಕರ್ನಾಟಕದ ಕಾರ್ಯಾಂಗ ಶುದ್ಧೀಕರಣದ ಪವಿತ್ರ ಕಾರ್ಯವನ್ನು ಶ್ರೀ ಅರಸರ ತಂಡ ಯಶಸ್ವಿಯಾಗಿ ನಿರ್ವಹಿಸಿದರೆ, ಅದೇ ದೊಡ್ಡ ಉಪಕಾರವಾಗುತ್ತದೆ. ಜನತೆ ಆ ನಿರೀಕ್ಷೆಯಲ್ಲಿ ಶ್ರೀ ಅರಸರನ್ನೂ ಅವರ ದೊಡ್ಡ ದಂಡನ್ನೂ ಸ್ವಾಗತಿಸುತ್ತದೆ.

"ರಾಜ್ಯಕಾರಣಿ" ಯಾರು?

ರಾಜ್ಯಕೀಯ ಅಧಿಕಾರಕ್ಕಾಗಿ ಮೇಲಾಟ ಮಿತಿಮೀರಿರುವಾಗ ಯಾರಿಗಾದರೂ ಅಧಿಕಾರ ಬೇಡವಾಗುತ್ತದೆಯೆ? ಅದರಲ್ಲೂ ನಾಮಪತ್ರ ಸಲ್ಲಿಸಿದ ಮಾತ್ರಕ್ಕೆ ಗೆದ್ದು ಬರುವ ಭರವಸೆಯಿರುವ ಆಳುವ ಕಾಂಗ್ರೆಸ್ಸು ತಾನಾಗಿಯೇ ಟಿಕೇಟು ನೀಡಲು ಮುಂದೆ ಬಂದಾಗ ಅದನ್ನು ಒಲ್ಲೆ ಎನ್ನುವವರು ಇದ್ದಾರೆಯೆ? ಇದ್ದಾರೆಂದರೆ ಇಂದಿನ ದಿನಗಳಲ್ಲಿ ಆತ ಮಹಾತ್ಯಾಗಿಯೇ ಸರಿ. ನಾಗಪುರ್ ಟೈಮ್ಸ್ ಪತ್ರಿಕೆಯ ಸಂಪಾದಕ ಶ್ರೀ ಎ. ಜಿ. ಶೋರೆ. ಅವರಿಗೆ ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ವಿ.ಪಿ. ನಾಯಕರೊಂದು ಪತ್ರ ಬರೆದು ಈ ಮೊನ್ನೆಯ ಹೊತ್ತು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಸ್ಪರ್ಧಿಸಲು ಆಳುವ ಕಾಂಗ್ರೆಸ್ಸಿನ ಟಿಕೇಟಿನ ಕೊಡುಗೆಯನ್ನು ಉದಾರವಾಗಿ ನೀಡಿದರು. ಆದರೆ ಈ ಕೊಡುಗೆಯನ್ನು ಶ್ರೀ ಶೋರೆ ಸ್ಪಷ್ಟ ಶಬ್ದಗಳಿಂದ ನಿರಾಕರಿಸಿದರು. ತಾನು ಕ್ರಿಯಾಶೀಲ ಬರಹಗಾರ ಮತ್ತು ಪತ್ರಕರ್ತ. ತಾನು ರಾಜ್ಯಕೀಯ ರಂಗದಲ್ಲಿ ಯಶಸ್ವಿಯಾಗಿ ಕೆಲಸ ಮಾಡಲಾರೆನೆಂದು ಅವರು ತಮ್ಮ ಅಶಕ್ತತೆಯನ್ನು ತೋಡಿಕೊಂಡರು. 'ರಾಜ್ಯಕಾರಣಿ'ಯಾಗುವುದಕ್ಕೆ ಪ್ರಾಮಾಣಿಕವಾಗಿ ನಿರಾಕರಿಸಿದ ಶ್ರೀ ಶೋರೆಯವರು 'ರಾಜ್ಯಕಾರಣಿ'ಯಾಗುವುದಕ್ಕೆ ಪ್ರತ್ಯೇಕ ಯೋಗ್ಯತೆ' ಯೊಂದಿದೆಯೆಂದು ಪರೋಕ್ಷವಾಗಿ ಹೇಳಿದ್ದಾರೆ. ಅಥವಾ 'ಯಾವುದೇ ಒಂದು ಬಗೆಯ ಯೋಗ್ಯತೆಯಿಲ್ಲದಿರುವುದೇ ಸಮರ್ಥ ರಾಜ್ಯಕಾರಣಿ'ಯಾಗಲಿರುವ ಅನಿವಾರ್ಯ ಯೋಗ್ಯತೆಯೆಂದು ಡಂಗುರ ಸಾರಿದರೆ? ●

ಆಹಾರ ಕೊರತೆಯನ್ನು ನೀಗಿಸಲು
ಹೆಚ್ಚು ಆಹಾರ ಬೆಳೆಯಲು

ಸರಕಾರೀ ವಿದ್ಯುತ್ ಕಾರಖಾನೆಯ ಪಂಪುಸೆಟ್ಟುಗಳನ್ನೇ ಉಪಯೋಗಿಸಿರಿ.

ಜಿ. ಇ. ಎಫ್. ಪಂಪುಸೆಟ್ಟುಗಳು ಅತ್ಯಂತ ಆಧುನಿಕ ಶಾಸ್ತ್ರೀಯ ಪದ್ಧತಿಯಂತೆ ತಯಾರಿಸಲ್ಪಟ್ಟಿವೆ.

ಜಿ. ಇ. ಎಫ್. ಪಂಪುಸೆಟ್ಟುಗಳು ರೈತನಿಗೆ ಅತ್ಯಂತ ಅಮೂಲ್ಯವಾದ ಕೊಡುಗೆ.

‡‡

ತಯಾರಕರು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಬೆಂಗಳೂರು

‡‡

ಬೇಡಿಕೆಗಾಗಿ:—

ಮೆ. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್,
ನಂ. 36 'ಹರಿನಿವಾಸ್'
ಕನ್ನಿಂಗ್‌ಹ್ಯಾಮ್ ರೋಡ್,
ಬೆಂಗಳೂರು—1, ಇವರೊಂದಿಗೆ ವ್ಯವಹರಿಸಿ.

ಗೇಹರಾಜ್ಯದಲ್ಲಿ—

ವಿಶಾಲ ಸಾಮ್ರಾಜ್ಞಿ - ಚಿಂತಾಲಕ್ಷ್ಮಿ

'ಅಂತೂ ಒಮ್ಮೆಗೆ ಮುಗಿಯಿತಲ್ಲ?'

'ಮುಗಿಯಿತು ಹೇಗೆ? ಮುಗಿದಂತಾಯ್ತೂಂತಾಯ್ತು.'

'ಸರಿ. ಹಾಗಾದರೆ ಹಾಗೆ.'

'ಅಲ್ವೆ, ಒಂದು ಮಾತಿದೆ....'

'ಏನು?'

'ಸಾವು ಎನ್ನುವುದು ಹಳೆಯ ಪ್ರಕೃತಿಯನ್ನು ಬಿಟ್ಟು ಹೊಸ ಪ್ರಕೃತಿಯನ್ನು ಹೊಂದುವ ಕ್ರಿಯೆ ಅಂತ....'

'ಅಂದರೆ?'

'ಅಂದರೆ ಮತ್ತಿನ್ನೆಂಥದು? ಸತ್ತವರು ಮತ್ತೆ ಹುಟ್ಟುತ್ತಾರೆ ಅಂತ ತಾನೆ?'

'ಆಯ್ತು. ಆದರೆ ಅದಕ್ಕೂ ಇದಕ್ಕೂ ಎಮ್ಮ್ಯಾವ ಬಾದರಾಯಣ?'

'ಬಾದರಾಯಣವಲ್ವೆ, ಈಗ ನಡೆಯುತ್ತಿರೋದು ಉತ್ತರಾಯಣ....'

'ಹ್ಞೂನ್ನಿ. ಅದ್ರ ಮೇಲೆ ವಸಂತ ಋತೋ ಮೀನೇಕರ್ ಚೈತ್ರಮಾಸೇ....'

'ಏಷ್ಟಪ, ಏನಿದೂಂತ? ಗಂಡುಗಳೆಲ್ಲ ಸಂಕಲ್ಪ ಮಾಡೋದನ್ನು ಬಿಟ್ಟುಕೊಡ್ತಾರೇಂತ ಈಗ ನೀವೇ ಎಲ್ಲಾ....'

'ಛೆ ಛೆ....ಅನಧಿಕಾರ ಪ್ರವೇಶ ಸಲ್ಲದು....'

'ಅಲ್ವೆ, ಅಧಿಕಾರ ಸಿಗದೆ ಹೋದಾಗ ಪ್ರವೇಶಿಸೋ ಕುತೂಹಲ ಮೀರಿದಾಗ, ಅದು ತಡೆಯಲಸದಳವಾದಾಗ ಮತ್ತೆ ಮಾಡೋದಾದ್ರೂ ಏನು?'

'ಕನ್ನಡಿ ಕಪಾಟಿನಲ್ಲಿಟ್ಟಿರೋ ಮಿಠಾಯಿಗಳ ಮೋಹದಿಂದ ಇಲಿ ಕನ್ನಡಿಯನ್ನು ಪರಚುವಂತೆ....ಅದು ·ಬಿಡಿ. ಅಲ್ಲ, ನೀವೇನೋ ಹೇಳೋಕೆ ಸುರುಮಾಡಿದ್ರಿ....'

'ಅಲ್ವೆ, ಸಾವು ಹುಟ್ಟಿಗೆ ಮೂಲವಾದಂತೆಯೇ ಒಂದು ಸಮಸ್ಯೆಯ ಪರಿಹಾರ ಮತ್ತೊಂದು ಸಮಸ್ಯೆಗೆ ಮೂಲವಾಗುತ್ತದೇಂತ....'

'ಅಲ್ರಿ, ಮತ್ತೇನು ಸಮಸ್ಯೆಗಳೇ ಇಲ್ಲದೆ ಹೋದರೆ ಸ್ವಾರಸ್ಯವೇನು ಬಂತೂಂತ?'

'ಇಲ್ಲಾನ್ನಿ ನಾಟಕ–ಕಾದಂಬರಿಗಳಲ್ಲಿ ಸಂಘರ್ಷವಿಲ್ಲವಾದರೆ, ಅವೆಂತು ರುಚಿಸುವುದಿಲ್ಲವೋ ಹಾಗೆಯೇ ಜೀವನವೂ ಸಂಘರ್ಷಮಯವಾಗಿರಬೇಕು.'

'ಹ್ಞೂಂ....ಅದಕ್ಕೇ ನೋಡಿ, ಜೀವನವನ್ನೂ ಒಂದು ನಾಟಕ ಅನ್ನೋದು....'

'ಅಲ್ವೆ, ನಾಟಕ ಅನ್ನುತ್ಲೂ ನೆನಪಾಯ್ತು....'

'ಏನು?'

'ಜೀವನವು ಸ್ವಾರಸ್ಯಮಯವಾಗಬೇಕಾದರೆ ಅದರಲ್ಲಿ ನಾಟಕೀಯತೆ ಹೆಚ್ಚಾಗಬೇಕು. ಆದ್ದರಿಂದ್ಲೇ ಮಾನವನ ಪ್ರತಿಯೊಂದು ವರ್ತನೆಯೂ ನಾಟಕೀಯತೆಯತ್ತ ಹೆಚ್ಚು ·ಹೆಚ್ಚಾಗಿ ವಾಲುತ್ತಿದೆ. ಇದಕ್ಕೆ ಶಿಷ್ಟಾಚಾರವೆಂಬ·ಮುದ್ರೆ ಬೇರೆ....'

'ಹ್ಞೂಂ.... ಅದೆಲ್ಲ ಹೋಗ್ಲಿ, ನೋಡೀಂದ್ರೆ....'

'ಏನು?'

'ನಮ್ಮ ದೇವರಾಜ ಅರಸರೂ ಸೇರಿದಂತೆ ಇಪ್ಪತ್ತೆರಡು ಮಂತ್ರಿಗಳು ಬಂದರೂಂತಾಯ್ತು. ಅಗತ್ಯ ಕಂಡರೆ ಇನ್ನೂ ಒಂದೆರಡು ಮಂತ್ರಿಗಳನ್ನು ಮತ್ತೆ ತೆಗೆದುಕೊಳ್ಳುತ್ತಾರಂತೆ...'

'ಭಲೇ ಚಲೋದಾಯ್ತು....'

'ಯಾಕೆ?'

'ಅಲ್ವೆ, ಚಿಕ್ಕ ಪ್ರಮಾಣದ ಚೊಕ್ಕ ಮಂತ್ರಿ ಮಂಡಳದ ಮಾತಾಡುತಿದ್ದವರು ಈಗ ಮಾಡಿದ್ದೇನು?'

'ಅಲ್ರಿ, ಕರ್ನಾಟಕದಂತಹ ದೊಡ್ಡ ರಾಜ್ಯಕ್ಕೆ ಈ ಸಂಪುಟವೇನೂ ದೊಡ್ಡದಲ್ಲ. ಅದರ ಮೇಲೆ....'

'ನೋಡಮ್ಮ, ಇದಕ್ಕೆ ಮೊದಲು ನಿಜಲಿಂಗಪ್ಪನವರು, ವೀರೇಂದ್ರ ಪಾಟೀಲರು, ನಡುವೆ ಜತ್ತಿಯವರು ಮುಖ್ಯಮಂತ್ರಿಯಾಗಿದ್ದಾಗ, ಅವರ 'ವಿಶಾಲ ತಳಹದಿ'ಯ ಸಂಪುಟವನ್ನು ಟೀಕಿಸಿದವರು....'

'ಅದು ಆಗಿನ ಮಾತು. ಆಗ ಅವರು ಟೀಕಿಸುವ ಅಧಿಕಾರದಲ್ಲಿದ್ದರು; ಈಗ ಟೀಕಿಸಿಕೊಳ್ಳುವ ಅಧಿಕಾರ ಪಡೆದಿದ್ದಾರೆ....'

'ಅಧಿಕಾರದ ಮಾತು ದೂರವಿಡು. ನುಡಿದಂತೆ ನಡೆಯಲಾಗದವರು; ನಡೆದಂತಾದರೂ ನುಡಿಯ ಬೇಡವೆ?'

'ಅದಲ್ರಿ, ನೋಡಿ, ಆಡಳಿತ ಸುಧಾರಣಾ ಆಯೋಗ ಸಲಹೆ ಮಾಡಿದೆಯಲ್ಲಾ—ವಿಧಾನ ಸಭಾ ಸದಸ್ಯ ಸಂಖ್ಯೆಯ ಸೇ. ೧೦ರಷ್ಟು ಮಂತ್ರಿಗಳಿರ ಬಹುದೆಂದು. ಇದು ಆ ಮಿತಿಗೇನೂ ಮೀರಿದ್ದಲ್ಲ....'

'ಅಲ್ವೆ, ಅದು ಸಲಹೆ ಮಾತ್ರ ಅದೇ ಕನಿಷ್ಠಮಿತಿಯಾಗ ಬೇಕೆಂದೇನೂ ಇಲ್ಲ ನೋಡು.'

'ರಾಜ್ಯದ ಆಡಳಿತ ಸುಗಮವಾಗ ಬೇಕಾದರೆ, ದೊಡ್ಡ ಸಂಪುಟ....'

'ಇದು ಶುದ್ಧಾಂಗ ಸುಳ್ಳು. ನಿಬಂಧ ದೊಡ್ಡದಾಗುತ್ತ ಹೋದಂತೆ ಅದರ ಮಹೌಲ್ಯ ಇಳಿಯುತ್ತ ಬರುತ್ತದೆ ಅಂತ ಮಾತೊಂದಿದೆ. ಹಾಗೇನೇ ಸಚಿವ ಸಂಪುಟದ ಗಾತ್ರ ದೊಡ್ಡದಾಗುತ್ತ ಬಂದಂತೆ ಆಡಳಿತೆಯ ಕಸುವು ಕಡಿಮೆಯಾಗುತ್ತದೆ....'

'ನೋಡಿ ನಮ್ಮದೇನೂ ಸಣ್ಣಾರಾಜ್ಯವಲ್ಲ....ಅದಕ್ಕೆ....'

'ಏನು ಹೇಳ್ತೀಯಮ್ಮಾ ನೀನು? ತಮಿಳುನಾಡು ಮೊದಲಿನಿಂದಲೂ ಹತ್ತು ಹನ್ನೆರಡು ಮಂತ್ರಿಗಳಿಂದ ದಕ್ಷ ಆಡಳಿತೆಗೆ ಹೆಸರಾಗಿಲ್ಲವೇನು? ಮತ್ತೆ ನಮ್ಮದೇನು ಮಹಾ?'

'ಅದು ಹೌದು....'

'ನಮಗೆ ಈಗಿನ ಇಪ್ಪತ್ತೆರಡೂ ಸಾಲದು, ಇನ್ನೂ ಒಂದೆರಡು ಬೇಕಾಗಬಹುದೆಂಬ ಭಾವನೆ ದಕ್ಷ ಆಡಳಿತೆಯ ದೃಷ್ಟಿಯಿಂದಲ್ಲ; ಅದು ತೇಪೇ ಹಾಕುವ ದೃಷ್ಟಿಯಿಂದ..'

'ಅಲ್ರಿ ನನಗೊಂದು ಹೊಳೆಯುತ್ತದೆ....'

'ಏನು?'

'ನೋಡಿ, ಒಂದು ವರ್ಷ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವಿತ್ತಲ್ಲಾ....'

'ಸುಮಾರು ಒಂದು ವರ್ಷ....'

'ಆಗ ರಾಜ್ಯ ಬೊಕ್ಕಸಕ್ಕೆ ಎಷ್ಟು ಸಂಪತ್ತು ಉಳಿಯಿತೂಂತ?'

'ಅದು ಭಾರೀ ಸುಲಭ. ಸರಾಸರಿ ಒಬ್ಬ ಮಂತ್ರಿ ಒಂದು ಲಕ್ಷವನ್ನಾದರೂ ಪುಡಿ ಮಾಡುತ್ತಿದ್ದ....'

'ಹ್ಯಾಗ್ರಿ? ಅವನಿಗೆ ಸಂಬಳವಿರೋದು....'

'ಸಂಬಳ ಹಾಗಿಡು. ಭತ್ತೆ-ಮನೆ–ನೀರು–ಟೆಲಿಫೋನು– ದೀಪ,ಕಾರು–ಪೆಟ್ರೋಲು ಅದು ಇದು ಮತ್ತೊಂದೂಂತ....'

'ಅಂದರೆ ಸುಮಾರು ಇಪ್ಪತ್ತೈದು ಲಕ್ಷ....'

'ಮತ್ತೆ ಇನ್ನೂರ ಹದಿನಾರು ಎಮ್ಮೆಲ್ಯೆಗಳಲ್ಲಿ ಪ್ರತಿಯೊಬ್ಬನಿಗೆ ಆರು ಸಾವಿರ ಸಂಬಳ ಮತ್ತೊಂದು ಹದಿನಾಲ್ಕು ಸಾವಿರವಾದರೂ ಭತ್ತೇತ್ಯಾದಿ ಹೀಗೆ ಅದೊಂದು ಸುಮಾರು ಐವತ್ತು ಲಕ್ಷ ಮತ್ತೆ....'

'ಏನು?'

'ಕೂತದ್ದಕ್ಕೆ ನಿಂತದ್ದಕ್ಕೆ ಎಮ್ಮೆಲ್ಯೆಗಳ ಹತ್ತಾರು ಕಮಿಟಿ ಇದಕ್ಕೊಂದು ಇಪ್ಪತ್ತೈದು....'

'ಈಗ ಇಷ್ಟು ರಾಜ್ಯ ಸರಕಾರದ ಬೊಕ್ಕಸಕ್ಕೆ ಉಳಿತಾಯವಾಯ್ತು ಅಲ್ಲ....'

'ಕಡಿಮೆಯೇಂದರೆ....'

'ಹ್ಞೂಂ....'

'ಅದಕ್ಕೇ ನೋಡು, ಚಿಕ್ಕ ಸಂಪುಟವಿರಬೇಕು, ಶಿಸ್ತಿನ ವಿಧಾನ ಮಂಡಳವಿರಬೇಕು....'

'ಅಲ್ರಿ. ಮೊನ್ನೆ ಲೋಕಸಭೆಯಲ್ಲಿ ಏಳು ಬಾರಿ ಗಂಟೆ ಬಾರಿಸಿದರೂ ಕೋರಂ ಆಗಲಿಲ್ಲವಂತೆ....'

'ಅಲ್ವೆ, ಕೋರಂ ಆಗ ಬೇಕಾದ್ರೂ ಯಾಕೆ? ಮೂರೂಮುಕ್ಕಾಲು ವೀಸ ಆಳುವ ಪಕ್ಷದವರೇ ಎಂದ ಮೇಲೆ ಅವರು ತಂದದ್ದೆಲ್ಲಾ ಮಂಜೂರಾಗಲೇ ಬೇಕು ತಾನೆ? ಅಂತ ವಿರೋಧ ಪಕ್ಷೀಯರು ಬಾರದಿರಬಹುದು....'

'ಆಯ್ತು....'

'ನಾವು ನಾನೂರು ಜನ ಇದ್ದೇವೆ. ನಾನೊಬ್ಬ ಹೋಗದೆ ಇದ್ದದ್ರಿಂದ ಬಿಲ್ಲೇನೂ ಬಿದ್ದು ಹೋಗೋದಿಲ್ಲಾಂತ ಆಳುವವರು ತಂತಮ್ಮ ವ್ಯಕ್ತಿಗತ ಬಿಜಿನೆಸ್ಸಿಗೆ ತೆರಳಿರಬಹುದು....'

'ಅಲ್ರಿ, ಇದು ಯಾವ ನ್ಯಾಯಾಂತ?'

'ನ್ಯಾಯವೇನು ಬಂತೆ? ಮತ್ತೆ ಎಂಪಿಯೋ ಎಮ್ಮೆಲ್ಯೆಯೋ ಆಗೋದಾದ್ರೂ ಏಕೇಂತ? ಸಭೆಯಲ್ಲಿ ಕುಳಿತುಕೊಂಡೇ ಇದ್ರೆ, ಆ ತರಲೆ ಭಾಷಣಗಳನ್ನು ವಾಗ್ವಾದಗಳನ್ನು ಕೇಳಿ ನೋಡಿ ತಲೆ ಒಡೆದು ಹೋದೀತು. ಕೆಲವೊಮ್ಮೆ ಮಂತ್ರಿಗಳ ಸೀಟೇ ಕಾಲಿಯಾಗಿರುತ್ತದೆ:ಬಾಗ ಬರಿ ಎಂಪಿ-ಎಮ್ಮೆಲ್ಯೆಯದ್ದೇನು ಮಹಾ?'

"ಅದಲ್ರಿ, ಅವ್ರು ಭತ್ತೆ—ವೇತನ ಪಡೆಯುವಾಗ ಕರ್ತವ್ಯಲೋಪ..."

'ಅಲ್ವೆ, ಕರ್ತವ್ಯ ಪ್ರಜ್ಞೆಯನ್ನು ಕಳೆದುಕೊಂಡವರಷ್ಟೇ ರಾಜ್ಯಕೀಯ ವ್ಯಕ್ತಿಯಾಗುತ್ತಾರೆ. ಒಂದೊಮ್ಮೆ ಮೊದಲು ಅದನ್ನು ಕಳೆದುಗೊಂಡು ಹೋಗಗೆ ಇದ್ರೆ ಅನಂತರವಾದರೂ ತಿಲಾಂಜಲಿ ನೀಡುತ್ತಾರೆ....'

'ಆಯ್ತು...'

"ತ್ರಿಶಂಕುವನ್ನು ಸ್ವರ್ಗಕ್ಕೆ ಕಳಿಸುವ ಹುಮ್ಮಸ್ಸಿನಿಂದಾಗಿ ವಿಶ್ವಾಮಿತ್ರ ಆತನನ್ನು ಇತೋಭ್ರಷ್ಟ ತತೋ ಭ್ರಷ್ಟನಾಗಿ ಗಬ್ಬಿಲ ಮಾಡಿದನಂತೆ ನೋಡು ಹಾಗೆ...'

"ಅಂದ್ರೆ ಎಲ್ಲೂ ಓದೋದು ಶಾಸ್ತ್ರ ಇಕ್ಕೋದು ಗಾಳ...."

''ಅಲ್ವೆ, ಅವ್ರು ಶಾಸ್ತ್ರವನ್ನೂ ಗಾಳದ

(ಒಂಭತ್ತನೇ ಪುಟ ನೋಡಿರಿ)

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಮನೆಯೊಂದಾದಲ್ಲಿ ಇರಲೇಬೇಕಾದ

ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ.ಕ.

೧೯೭೧—೭೨ರ ಆರ್ಥಿಕ ಸಮೀಕ್ಷೆ

ತ್ವರಿತ ಸ್ವಾವಲಂಬನೆಗೆ ಹೆಚ್ಚಿನ ಗಮನ

೧೯೭೧—೭೨ನೆಯ ವರ್ಷ, ಸ್ವಾತಂತ್ರ್ಯಾನಂತರದ ಅವಧಿಯಲ್ಲಿಯೇ ಅತ್ಯಂತ ಕಠಿಣವಾದ ವರ್ಷವಾಗಿದ್ದಿತೆಂದು ಇದೇ ದಿನಾಂಕ ೧೩ರಂದು ಪಾರ್ಲಿಮೆಂಟಿನಲ್ಲಿ ಮಂಡಿಸಲಾದ ೭೧—೭೨ನೇ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿ ತಿಳಿಸಲಾಗಿದೆ. ಅನೇಕ ಕಾರಣಗಳಿಂದಾಗಿ ಈ ಅವಧಿಯಲ್ಲಿ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಅಸಹನೀಯವಾದ ಹೊರೆಬಿದ್ದಿತು. ಬಂಗ್ಲಾದೇಶದಿಂದ ಸುಮಾರು ಒಂದು ಕೋಟಿ ಜನ ನಿರಾಶ್ರಿತರ ಆಗಮನ, ದೇಶದ ನಾನಾ ಕಡೆಗಳಲ್ಲಿ ಸಂಭವಿಸಿದ ನೈಸರ್ಗಿಕ ಅನಾಹುತಗಳು, ಪಾಕಿಸ್ತಾನದೊಂದಿಗೆ ನಡೆದ ಯುದ್ಧ ಹಾಗು ಅಸ್ಥೈರಾಗಿ ಸ್ವಾವಲಂಬನೆ ಅನಿವಾರ್ಯವೆಂದು ಮನಗಾಣಿಸಿ ಕೊಟ್ಟ ಅಂತಾರಾಷ್ಟ್ರೀಯ ಹಣಕಾಸಿನ ಹಾಗು ರಾಜಕೀಯ ವಿದ್ಯಮಾನಗಳು ನಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ವಿಶೇಷ ಒತ್ತಡ ತರಲು ಕಾರಣವಾದವು. ಈ ಸವಾಲನ್ನು ದಿಟ್ಟತನದಿಂದ ಎದುರಿಸಿದುದು ನಮ್ಮ ಆರ್ಥಿಕವ್ಯವಸ್ಥೆಯ ಒಂದು ವೈಶಿಷ್ಟ್ಯವಾಗಿದ್ದಿತು. ನಿರಾಶ್ರಿತರ ಸಮಸ್ಯೆ ಬಿಡಿಸಲು ಬೇಕಾದ ಹೆಚ್ಚಿನ ಸಂಪನ್ಮೂಲಗಳನ್ನು ಸಕಾಲದಲ್ಲಿ ದೇಶದಲ್ಲೇ ರೂಢಿಸಿಕೊಳ್ಳಲಾಯಿತಲ್ಲದೇ, ಬೆಲೆಗಳನ್ನು ಮತ್ತು ಆಮದು–ರಫ್ತು ವ್ಯಾಪಾರದ ಹಣಕಾಸಿನ ಅಂತರವನ್ನು ತಕ್ಕ ಮಟ್ಟಿಗೆ ಹತೋಟಿಯಲ್ಲಿಟ್ಟುಕೊಳ್ಳಲಾಯಿತು. ಈಗ ಮುಕ್ತಾಯಗೊಳ್ಳಲಿರುವ ಹಣಕಾಸಿನ ವರ್ಷದಲ್ಲಿ ರಾಷ್ಟ್ರೀಯ ವರಮಾನ ಶೇಖಡ ನಾಲ್ಕರಷ್ಟು ಹೆಚ್ಚಲಿದೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ಅಂದಾಜು ಮಾಡಲಾಗಿದೆ. ಇದರ ಹಿಂದಿನ ವರ್ಷ ರಾಷ್ಟ್ರೀಯ ವರಮಾನದ ಏರಿಕೆ ಶೇ. ೫ಕ್ಕಿಂತ ಕೊಂಚ ಕಡಿಮೆಯಿದ್ದಿತು. ದೇಶದ ನಾನಾ ಕ್ಷೇತ್ರಗಳು, ರಾಷ್ಟ್ರದ ವರಮಾನ ಏರಿಕೆಗೆ, ನಿರೀಕ್ಷಿತ ಗಡಿಯಲ್ಲಿ ನೆರವಾಗುತ್ತಿಲ್ಲವೆಂಬುದು ವಿವಂಚನೆಗೆ ಕಾರಣವಾಯಿತು.

ಈಗ ಲಭ್ಯವಿರುವ ಅಂಕಿ—ಅಂಶಗಳ ಅಂದಾಜಿನ ಪ್ರಕಾರ, ೧೯೭೧—೭೨ರಲ್ಲಿ ಕೈಗಾರಿಕಾ ಉತ್ಪಾದನೆ ಶೇ. ೩.೫ರಿಂದ ಶೇ. ೪ರಷ್ಟಾಗಬಹುದೆಂದು ಲೆಕ್ಕ ಹಾಕಲಾಗಿದೆ. ೧೯೭೦ರಲ್ಲಿ ಈ ಉತ್ಪಾದನೆ ಏರಿಕೆ ಶೇ. ೭.೧ರಷ್ಟಿದ್ದಿತೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಬೆಲೆಗಳ ಹತೋಟಿ

೧೯೭೧ರ ಇಡೀ ವರ್ಷದಲ್ಲಿ ಬೆಲೆಗಳಲ್ಲಾದ ಸರಾಸರಿ ಹೆಚ್ಚಳ ಶೇ. ೩.೯ರಷ್ಟಿದ್ದಿತು. ವಿಮರ್ಶೆಯ ವರ್ಷದಲ್ಲಿ ಬೆಲೆಗಳ ಏರಿಕೆ ತಕ್ಕಮಟ್ಟಿಗೆ ಹತೋಟಿಯಲ್ಲಿದ್ದಿತೆಂದು ಆರ್ಥಿಕ ಸಮೀಕ್ಷೆಯಲ್ಲಿ ಹೇಳಲಾಗಿದೆ. ಸರ್ಕಾರ ಇದರಿಂದ ಮೈಮರೆಯಬಾರದೆಂದೂ ಬೆಲೆ ನಿಯಂತ್ರಣ ಯತ್ನಗಳನ್ನು ಮುಂದುವರಿಸ ಬೇಕೆಂದೂ ಸೂಚಿಸಲಾಗಿದೆ.

ಹಣಕಾಸಿನ ಹಾಗು ಆಯವ್ಯಯ ಅಂದಾಜಿನ ಮಟ್ಟಿಗೆ ಹೇಳುವುದಾದರೆ, ಸರ್ಕಾರದ ಸಾಲ ನೀಡಿಕೆ ನೀತಿಯಲ್ಲಿ ೧೯೭೨ರ ಜನವರಿ ಅಂತ್ಯದ ವರೆಗಿನ ಅವಧಿಯಲ್ಲಿ ಹೆಚ್ಚಿನ ಬಿಗುವು ಕಂಡು ಬಂದಿತು. ಆದರೂ ಸಾರ್ವಜನಿಕರಿಗೆ ಸಂಬಂಧಿಸಿದಂತೆ ಹಣದ ಪೂರೈಕೆಯಲ್ಲಿ ಹಿಂದಿನ ವರ್ಷಕ್ಕಿಂತ ಶೇಖಡ ೧೨.೫ರಷ್ಟು ಏರಿಕೆಯಾಗಿದ್ದು ಕಂಡು ಬಂದಿತು. ಬ್ಯಾಂಕುಗಳು ಸರ್ಕಾರಿ ಕ್ಷೇತ್ರಕ್ಕೆ ನೀಡಿದ ನಿವ್ವಳ ಸಾಲದ ಮೊತ್ತವೇ ಈ ಹಣ ಪೂರೈಕೆ ಹೆಚ್ಚಾಗಲು ಮುಖ್ಯವಾಗಿ ಕಾರಣವಾಯಿತು.

ಆಯವ್ಯಯ ಮುಂಗಡ ಅಂದಾಜಿನ ಕ್ಷೇತ್ರದಲ್ಲಿ ವಿಶೇಷ ಒತ್ತಡ ಕಂಡು ಬಂದಿತು. ನಿರಾಶ್ರಿತರ ಪರಿಹಾರ ವೆಚ್ಚವೊಂದೇ ೧೯೭೨ ಜನವರಿ ಹೊತ್ತಿಗೆ ೨೬೦ ಕೋಟಿ ರೂ ಗಳಷ್ಟಾಯಿತು. ವಾಸ್ತವವಾಗಿ ವಿದೇಶಗಳಿಂದ ಬಂದ ಸಹಾಯ ೧೧೭ ಕೋಟಿ ರೂ ಗಳಷ್ಟಿತ್ತು. ೧೯೭೧ರ ಮೇ ತಿಂಗಳ ಮುಂಗಡ ಪತ್ರದಲ್ಲಿ ಸೂಚಿಸಿದ ತೆರಿಗೆಗಳಲ್ಲದೆ ಪುನಃ ಅಕ್ಟೋಬರ್ ಹಾಗು ಡಿಸೆಂಬರ್ ತಿಂಗಳಲ್ಲಿ ಹೆಚ್ಚಿನ ಸಂಪನ್ಮೂಲಗಳ ಸಂಗ್ರಹಣೆಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು. ಪ್ರಸ್ತುತ ವರ್ಷ ಕೇಂದ್ರ ಸರ್ಕಾರ ಇಡೀ ವರ್ಷದ ಅವಧಿಯಲ್ಲಿ ೫೦೦ ಕೋಟಿ ರೂ.ಗಳಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಿತು. ಯಾವುದೇ ಒಂದು ವರ್ಷದ ಅವಧಿಯಲ್ಲಿ ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಸಂಪನ್ಮೂಲಗಳ ಸಂಗ್ರಹಿಸಿದ ಉದಾಹರಣೆಗಳಿಲ್ಲ. ಕೇಂದ್ರ ಸರ್ಕಾರ ಈ ಅವಧಿಯಲ್ಲಿ ಹಣಕಾಸಿನ ಪೇಟೆಯಿಂದ ೨೯೩ ಕೋಟಿ ರೂ.ಗಳ ನಿವ್ವಳ ಸಾಲ ಪಡೆದು, ದಾಖಲೆಯನ್ನು ಸ್ಥಾಪಿಸಿತು. ಸರ್ಕಾರಿ ಕ್ಷೇತ್ರದ ಸಂಸ್ಥೆಗಳ ಹಾಗು ಕೆಲವು ರಾಜ್ಯ ಸರ್ಕಾರಗಳ ಅತೃಪ್ತಿಕರವಾದ ಹಣಕಾಸಿನ ನಿರ್ವಹಣೆ ೧೯೭೨ರ ಜನವರಿ ತಿಂಗಳ ಅಂತ್ಯಕ್ಕೆ ರಿಸರ್ವ ಬ್ಯಾಂಕ್‌ನಿಂದ ೪೦೩ ಕೋಟಿ ರೂ.ಗಳ ಓವರ್‌ಡ್ರಾಫ್ಟ್‌ಗೆ ಕಾರಣವಾಯಿತೆಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

ದೇಶದ, ವಿದೇಶ ವ್ಯಾಪಾರದ ಹಣಕಾಸು ವ್ಯವಸ್ಥೆಯ ಮೇಲೆ ಹೆಚ್ಚಿನ ಒತ್ತಡ ಬಿದ್ದಿತು. ಆಮದಿನಲ್ಲಿ ಗಣನೀಯ ಹೆಚ್ಚಳ ಅಂತಾರಾಷ್ಟ್ರೀಯ ಹಣಕಾಸು ನಿಧಿಗೆ ಮರುಪಾವತಿ ಮಾಡಲಾದ ಸಾಲದ ಮೊತ್ತ ಸಾಲದ ಮೇಲೆ ವಿಧಿಸಲಾದ ಇತರ ಖರ್ಚಿನ ಬಾಬ್ತುಗಳು ವಿದೇಶಿ ನೆರವಿನ ಪ್ರಮಾಣದಲ್ಲಿ ಕೊಂಚ ಕೊರತೆ ಆದುದು ಇತ್ಯಾದಿಯಿಂದಾಗಿ ಈ ಅಗಾಧ ಪ್ರಮಾಣದ ಹೊರೆ ಬಿದ್ದಿತು. ಪ್ರಸ್ತುತ ವರ್ಷದಲ್ಲಿ ವಿದೇಶಿ ವಿನಿಮಯ ಸ್ಥಿತಿ ತಕ್ಕಮಟ್ಟಿಗೆ ತೃಪ್ತಿಕರವಾಗಿತ್ತು.

ಆರ್ಥಿಕ ವ್ಯವಸ್ಥೆಯ ನಾನಾ ಕ್ಷೇತ್ರಗಳಲ್ಲಿ ತಲೆದೋರಿದ ವಿಶಿಷ್ಟ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ಕೇಂದ್ರೀಕರಿಸಿದ್ದು ಹಾಗೂ ಆರ್ಥಿಕ ಪ್ರಗತಿಗೆ ಇರುವ ಅಡಚಣೆಗಳ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳಬಗ್ಗೆ ಸಲಹೆ ಮಾಡಿರುವುದು ೧೯೭೧—೭೨ರ ಆರ್ಥಿಕ ಸಮೀಕ್ಷೆಯ ವೈಶಿಷ್ಟ್ಯ.

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಅಸಾಧಾರಣ ಹೆಚ್ಚಳವಾಗಿರುವುದು ಹಾಗು ರಿಯಾಯಿತಿ ದರದ ಆಹಾರಧಾನ್ಯಗಳ ಆಮದು ನಿಂತಿರುವುದು ಕೆಲವೊಂದು ಸಮಸ್ಯೆಗಳನ್ನು ಉಂಟು ಮಾಡಿದೆ. ಆಹಾರಧಾನ್ಯಗಳ ದಾಸ್ತಾನು ಹಾಗು ಬ್ಯಾಂಕ್ ಸೌಲಭ್ಯಗಳ ಬಗ್ಗೆ ಬೇಡಿಕೆ, ಆಹಾರ ಧಾನ್ಯಗಳ ಸಬ್ಸಿಡಿ ದರದ ವೆಚ್ಚದಲ್ಲಿ ಗಮನಾರ್ಹ ಹೆಚ್ಚಳವಾಗಲಿದೆ. ೧೯೭೨—೭೩ರಲ್ಲಿ ಸಬ್ಸಿಡಿ ಬಾಬ್ತಿನಾಗಿಯೆ ಕೇಂದ್ರದ ಖಜಾನೆಗೆ ೧೩೦ ಕೋಟಿ ರೂ.ವೆಚ್ಚ ತಗಲುವುದೆಂದು ಅಂದಾಜಿದೆ. ಕಾರಣ ಪ್ರಸ್ತುತ ಬೆಲೆಗಳ ಮಟ್ಟದ ವಿಮರ್ಶೆ ಮಾಡುವುದು ಅತ್ಯಗತ್ಯವೆಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಖಾಸಗಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಹೆಚ್ಚಿದ್ದರೂ ಕೈಗಾರಿಕಾ ಉತ್ಪಾದನೆಯಲ್ಲಿ ಇತ್ತೀಚೆಗೆ ಇಳಿಕೆ ಕಂಡು ಬಂದಿದೆ. ಸಾರ್ವಜನಿಕ ಉಳಿತಾಯದ ಕೊರತೆಯೇ ಮುಖ್ಯವಾಗಿ ಕೈಗಾರಿಕೆಯ ಹಿಂಜರಿತಕ್ಕೆ ಕಾರಣವಾಗಿದೆಯೆಂದು ಹೇಳಲಾಗಿದೆ. ಸಾರ್ವಜನಿಕ ಉಳಿತಾಯ ಹೆಚ್ಚಿಸುವ ದಿಸೆಯಲ್ಲಿ ಇರುವ ಇತಿಮಿತಿಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡು, ಹೆಚ್ಚಿನ ಸಂಪನ್ಮೂಲಗಳ ಶೋಧ ನಡೆಯಬೇಕಾಗಿದೆ. ಯೋಜನೇತರ ವೆಚ್ಚದಲ್ಲಿ ಹೆಚ್ಚಿನ ಸಂಯಮ ತೋರಿಸುವುದು ಅತ್ಯಗತ್ಯವಾಗಿದೆ.

ಸರ್ಕಾರಿ ಕ್ಷೇತ್ರದ ಬ್ಯಾಂಕುಗಳು

ಸರ್ಕಾರಿ ಕ್ಷೇತ್ರದ ಬ್ಯಾಂಕುಗಳು ದಲಿತ ಹಾಗು ಹಿಂದುಳಿದ ವರ್ಗಗಳಿಗೆ ನೆರವು ನೀಡುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿವೆ. ೧೯೭೧ರಲ್ಲಿ ಸರ್ಕಾರಿ ಕ್ಷೇತ್ರದ ಬ್ಯಾಂಕ್‌ಗಳಲ್ಲಿ ಠೇವಣಿಗಳು ಶೇ.೨೦ರಷ್ಟು ಹೆಚ್ಚಿದೆ. ೧೯೭೦ರಲ್ಲಿ ಶೇ. ೧೬.೯ ಹಾಗು ೧೯೬೯ರಲ್ಲಿ ಶೇ. ೧೫.೪ರಷ್ಟು ಏರಿಕೆಯಾಗಿತ್ತು. ೧೯೭೧ರ ಡಿಸೆಂಬರ್ ೩೧ರ ಅಂತ್ಯಕ್ಕೆ ಸರ್ಕಾರಿ ಕ್ಷೇತ್ರದ ಬ್ಯಾಂಕುಗಳು, ರಾಷ್ಟ್ರೀಕರಣದ ನಂತರ ತೆರೆದ ಶಾಖೆಗಳ ಸಂಖ್ಯೆ ೪೦.೪೭ರಷ್ಟಿತ್ತು. ಇದುವರೆಗೆ ಅಷ್ಟಾಗಿ ಗಮನಿಸಿದ್ದ ಕ್ಷೇತ್ರಗಳಿಗೆ ನೀಡಿದ ನೆರವಿನ ಮೊತ್ತ ೭೬೦ಕೋಟಿ ರೂ.ಯಿಂದ ೯೬೦ಕೋಟಿ ರೂ.ಗಳಿಗೆ ಏರಿತು. ವಿದೇಶ ನೆರವಿನ ಮೇಲೆ ಅವಲಂಬಿಸದೇ ಅಭಿವೃದ್ಧಿ ನಿರತವಾಗುವ ಪ್ರವೃತ್ತಿಗೆ ಹೆಚ್ಚಿನ ಚಾಲನೆ ದೊರೆಯಿತು.

ಗುರಿ ಸಾಧನೆಗಾಗಿ ಯೋಜನಾ ಬದ್ಧ ಆರ್ಥಿಕ ಅಭಿವೃದ್ಧಿ ಕ್ರಮದ ಗತಿ ತ್ವರಿತಗೊಳ್ಳಬೇಕೆಂದು ಸಮೀಕ್ಷೆಯಲ್ಲಿ ಅಭಿಪ್ರಾಯ ಪಡಲಾಗಿದೆ. ಉತ್ಪಾದನಾ ವೆಚ್ಚ ತಗ್ಗಿಸುವುದು ಹಾಗು ಹೆಚ್ಚಿನ ಉಳಿತಾಯ ಮಾಡುವುದರ ಜೊತೆಗೆ, ರಫ್ತು ವ್ಯಾಪಾರ ಹೆಚ್ಚಿಸುವುದು ಹಾಗು ಆಮದಾಗುವ ವಸ್ತುಗಳಿಗೆ ಪ್ರತಿಯಾಗಿ ದೇಶದಲ್ಲಿಯೇ ದೊರೆಯುವ ವಸ್ತುಗಳನ್ನು ಬಳಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಮಹತ್ವದ್ದಾಗಿದೆ. ದೇಶದ ಸ್ವಾವಲಂಬನೆಯ ನಿರ್ಧಾರಕ್ಕೆ ಅನುಗುಣವಾಗಿ ವಿದೇಶ ವ್ಯಾಪಾರವನ್ನು ಕೈಗೊಳ್ಳಲು ಹೊಸ ಬಗೆಯ ವ್ಯಾಪಾರ ವ್ಯವಸ್ಥೆ ರೂಪಿಸಬೇಕೆಂದು ಸೂಚಿಸಲಾಗಿದೆ. ತೆರಿಗೆ ಕ್ಷೇತ್ರದಲ್ಲಿ ಕೇಂದ್ರ ಹಾಗು ರಾಜ್ಯಗಳ ನಡುವೆ, ಸುಮಧುರ ಬಾಂಧವ್ಯವಿರಬೇಕೆಂದು ಸಮೀಕ್ಷೆಯಲ್ಲಿ ಸಲಹೆ ನೀಡಲಾಗಿದೆ. ಗ್ರಾಮಾಂತರ ಕ್ಷೇತ್ರದಲ್ಲಿ ಸಂಪನ್ಮೂಲ ಸಂಗ್ರಹಣೆ ಹಾಗು ಪ್ರಾದೇಶಿಕ ಅಸಮಾನತೆ ನಿವಾರಣೆಯಲ್ಲಿ ಈ ಸಂಬಂಧ ಹೆಚ್ಚು ಸಮುಖವಾಗಿರಬೇಕೆಂದು ಹೇಳಲಾಗಿದೆ.

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

HOTEL SATKAR

Boarding, Lodging & Restaurant
Behind Corporation Office,
9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ನವಯುಗ
ಚಿನ್ನದ ಹಬ್ಬದ ನಿಧಿಗೆ
ಉದಾರ ಸಹಾಯ ಮಾಡಿ
ಪ್ರೋತ್ಸಾಹಿಸಿರಿ.

ನೈತಿಕ ಅಧಃಪತನದ ಪರಿಣಾಮ—

ದೇಶವ್ಯಾಪಿ ವಂಚಕರ ಬ್ರಹಜ್ಜಾಲ

ವಿತ್ತ ಸಚಿವ ಯಶವಂತರಾವ್ ಬಲವಂತರಾವ್ ಚವನರು ಸಮಾಜವಾದಿ ಮುಂಗಡ ಪತ್ರವನ್ನು ಲೋಕಸಭೆಯಲ್ಲಿ ಮಂಡಿಸಿದರೂ ಅದು ಸಮಾಜವಾದಿಯಲ್ಲವೆಂಬ ಟೀಕೆ ನಾಲ್ಕೂ ನಿಟ್ಟಿನಿಂದ ಬಂತು. ದೇಶದ ಬಡತನವನ್ನು ಹೊಡೆದೋಡಿಸುವಲ್ಲಿ, ಅತಿ ಪ್ರಸರಣವನ್ನೂ ಬೆಲೆಯೇರಿಕೆಯನ್ನೂ ತಡೆಗಟ್ಟುವಲ್ಲಿ ಈ ಮುಂಗಡ ಪತ್ರ ಮಹತ್ವದ ಪಾತ್ರ ವಹಿಸದಿರುವುದರಿಂದ ಇದು ಸಪ್ಪೆ ಬಜೆಟ್ ಎಂದು ಹೆಚ್ಚಿನವರ ಅಭಿಮತ. ಈ ಕಾಲದಲ್ಲಿ ಈಗಿನ ಅರ್ಥವ್ಯವಸ್ಥೆಯಲ್ಲಿ ಇದಕ್ಕಿಂತ ಹೆಚ್ಚು ಪರಿಣಾಮಕಾರಿ ಬಜೆಟ್ಟು ಮುಂದಿಡುವುದು ಯಾರೊಬ್ಬರಿಗೂ ಅಸಾಧ್ಯವೆಂದು ಆಳುವ ಪಕ್ಷದವರು ತಲೆದೂಗಿದರೆ, ಅವರು ಶಿಸ್ತಿನ ಸಿಪಾಹಿಗಿರಿಯನ್ನಷ್ಟೇ ತೋರಿಸಿದಂತಾಗುತ್ತದೆ.

ಬಡವರ ಮನೆಯ ದೀಪವುರಿಸುವುದಕ್ಕೆ ದುಬಾರಿ ವೆಚ್ಚ ಮಾಡಬೇಕಾಗಿ ಬಂದುದು ಬಡವರಿಗೆ ದ್ರೋಹವೆಂಬ ಟೀಕೆ ಸರ್ವತೋಮುಖವಾದದ್ದು. ಸೀಮೆಯೆಣ್ಣೆಯ ದುರುಪಯೋಗ ತಡೆಯುವುದಕ್ಕಾಗಿಯೇ ತಾನು ಪ್ರತಿ ಲೀಟರಿಗೆ ಆರು ಪೈಸೆ ತೆರಿಗೆ ಏರಿಸಿರುವುದಾಗಿ ಚವನರು ಸ್ಪಷ್ಟೀಕರಿಸಿದ್ದರು. ಆದರೂ ಸೀಮೆಯೆಣ್ಣೆಯ ಮೇಲಿನ ಕರವನ್ನು ಹಿಂದೆಗೆದುಕೊಳ್ಳುವಂತೆ ಬಡವರ ಬಂಧುಗಳೆಲ್ಲರೂ ಒಕ್ಕೊರಲಿನಿಂದ ವಿನಂತಿಸಿದ್ದಾರೆ. ಹಿಂದೆಗೆದುಕೊಳ್ಳುವುದಕ್ಕೆಂದೇ ಕೆಲವು ಕರ ಹೇರುವುದಿದೆ; ಪ್ರಾಯಃ ಬಡವರ ದೀಪದ ಮೇಲಿನ ತೆರಿಗೆ ಅದಕ್ಕಾಗಿಯೇ ವಿಧಿಸಿದ್ದಿರ ಬಹುದು. ಹೇರಿಸಿ ಹಿಂದೆಗೆಯದೆ ಹೋದರೆ 'ಬಡವರ ಭಾಗ್ಯದಾತ'ನೆಂಬುದಕ್ಕೆ ಪುಕ್ಕಟೆ ಪ್ರಚಾರವೆಂತು ದೊರೆಯುತ್ತದೆ?

ವಿಧಾನ ಸಭಾ ಚುನಾವಣೆಗಳಲ್ಲಿ ಜಯಭೇರಿ ಹೊಡೆದ ಬಳಿಕ ಕೇಂದ್ರ ಸರಕಾರವು ಭಾರಿ ಮೊತ್ತದ ಹೊಸ ತೆರಿಗೆಗಳನ್ನು ಹೊತ್ತ ಮುಂಗಡ ಪತ್ರ ದರ್ಶನ ಮಾಡಿಸುವುದೆಂದು ಕೆಲವು ಬುದ್ಧಿ ಜೀವಿಗಳು ಹೆದರಿದ್ದರು. ಭಾರತ-ಪಾಕ್ ಸಮರ-ಬಾಂಗ್ಲಾ ನಿರಾಶ್ರಿತ-ಬಾಂಗ್ಲಾ ನೆರವು-ಇವುಗಳ ಹಿನ್ನೆಲೆಯಲ್ಲಿ ಇದು ಸಹಜವೂ ಇದ್ದಿತು. ಆದರೆ, ಬಾಂಗ್ಲಾ ನಿರಾಶ್ರಿತರ ನೆರವಿಗೆಂದು ಕಳೆದ ನವೆಂಬರದಲ್ಲಿ ಹೇರಿದ ಅಧಿ ತೆರಿಗೆಗಳನ್ನು ಮುಂದುವರಿಸುವುದರ ಮೂಲಕ ಮುಂಗಡ ಪತ್ರದ ಹೊಸ ತೆರಿಗೆಗಳು ರೂ. ೧೫೩ ಕೋಟಿಗಳಷ್ಟೇ ಸೀಮಿತವಾಯ್ತು. ಆದುದರಿಂದಲೇ ಮಿತಿಮೀರಿದ ತೆರಿಗೆ ಹೇರಿಸಿದರು—ಎಂಬ ಟೀಕೆಗೆ ಅವಕಾಶವಿಲ್ಲವಾಯ್ತು. ಮುಂಗಡ ಪತ್ರದ ಸುಮಾರು ೨೫೦ ಕೋಟಿ ರೂಪಾಯಿಗಳ ಕೊರತೆ ಹಾಗೆಯೇ ಉಳಿಸಿಕೊಂಡಿದ್ದು ಇದು ಮತ್ತೆ ಅತಿ ಪ್ರಸರಣಕ್ಕೆ ಸಹಕಾರಿಯಾಗಲಾರದೆಂದು ನಂಬಿಕೆಯಿಲ್ಲ. ಇದು ಚವನರ ಕೊನೆಯ ಮುಂಗಡ ಪತ್ರವೆಂದು ಕರೆಯಲಾಗುತ್ತಿದೆ; ಅಂದರೆ, ಮುಂದಿನ ಕೆಲವು ವಾರಗಳಲ್ಲೇ ಅವರು ಮಂತ್ರಿಯಾಗಿ ಉಳಿಯಲಾರರು; ಉಳಿದರೂ ವಿತ್ತ ಸಚಿವರಾಗಿ ಉಳಿಯಲಾರರು —ಇದು ವದಂತಿ. ಇಂತಹ ಕಿಂವದಂತಿಗಳಿಗೆ ಕಾರಣವೇನೂ ಇಲ್ಲ. ವಿಧಾನ ಸಭೆಗಳಲ್ಲೂ ಜಯ ಬಾರಿಸಿ, ತನ್ನ ಸ್ಥಾನವನ್ನು ಅತ್ಯಂತ ಸುಭದ್ರಗೊಳಿಸಿಕೊಂಡ ಶ್ರೀಮತಿ ಗಾಂಧಿ ಮುಂದಿನ ನಾಲ್ಕು ವರ್ಷಗಳ ಕಾಲ ಲೀಲಾಜಾಲವಾಗಿ ತನ್ನ ಚದುರಂಗವನ್ನು ಆಡುತ್ತಾರೆ ಎಂಬ ಭ್ರಮೆ ಮಾತ್ರ. ಈ ವದಂತಿಗಳಿಗೆಲ್ಲ ಮೂಲ. ಕೆಲವೊಮ್ಮೆ ವದಂತಿ ಸತ್ಯವಾಗುವುದೂ ಉಂಟು.

○ ○ ○

ಪಾಂಡಿಚೇರಿಯ ಉಪ ಚುನಾವಣೆಯೊಂದರಲ್ಲಿ ದ್ರಾಮುಕದ ಅಭ್ಯರ್ಥಿ ಗೆದ್ದರೂ ರಾಗಿ ಆಳುವ ಕಾಂಗ್ರೆಸ್ಸು ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದ್ದರಿಂದ ದ್ರಾಮುಕ-ಆಳುವ ಕಾಂಗ್ರೆಸ್ ಮೈತ್ರಿಗೊಂದು ಕೊನೆಯಾಯ್ತು. ದ್ರಾಮುಕವನ್ನು ಅಧಿಕಾರಕ್ಕೆ ತರಬೇಕು ಎಂಬ ಘನೋದ್ದೇಶದಿಂದ ಆಳುವ ಕಾಂಗ್ರೆಸ್ಸು ಅದರೊಡನೆ ಮೈತ್ರಿ ಮಾಡಿಕೊಂಡದ್ದಲ್ಲ. ತಮಿಳು ನಾಡಿನಲ್ಲಿ ತನ್ನ ಬೀಜ ಮೊಳಕೆ ಬರಬೇಕಾದರೆ ದ್ರಾಮುಕದ ಆಸರೆ ಬೇಕೆಂಬುದರಿಂದ ಮಾತ್ರ. ಈ ಆಸರೆಗಾಗಿ ಕಳೆದ ವರ್ಷ ಅದು ವಿಧಾನ ಸಭೆಯನ್ನೇ ದ್ರಾಮುಕಕ್ಕೆ ಕೊಡಮಾಡಿತ್ತು. ಇಂದು ಪರಿಸ್ಥಿತಿ ಬದಲಾಗಿದೆ. ಆಳುವ ಕಾಂಗ್ರೆಸ್ಸು ದೇಶ ವ್ಯಾಪಿಯಾಗಿದೆ. ಅದರ ಪ್ರಭಾವದಿಂದ ತಮಿಳು ನಾಡೊಂದು ದೂರ ಉಳಿಯುವುದು ಅಸಾಧ್ಯ. ಆದ್ದರಿಂದಲೇ ಅದು ಮೈತ್ರಿ ಕಳೆದ ವರ್ಷದ ಮಟ್ಟಿಗೆಂದು ಹೇಳಿ ತಲೆ ಹೊರಗೆ ಹಾಕಿತು. ಸಂಸ್ಥಾ ಕಾಂಗ್ರೆಸಿನ ಬೆಂಬಲದಿಂದ ಗೆದ್ದೂ ಬಂದಿತು.

ದ್ರಾಮುಕ ಯಾವುದೇ ಗಂಡನೊಡನೆ ಸಹಬಾಳ್ವೆ ಮಾಡಿದ ಉಪರಣೆಯಿಲ್ಲ. ಅದು ಹಿಂದೊಮ್ಮೆ ಸ್ವತಂತ್ರ ಪಾರ್ಟಿಯೊಡನೆ ಕೈಹಿಡಿಯಲಾಯಿಸಿತು; ಅವಿಭಜಿತ ಕಾಂಗ್ರೆಸ್ಸಿನ ಮೇಲೆ ತನ್ನ ಪಾದವಿಟ್ಟು ಅದನ್ನು ಪಾತಾಳಕ್ಕೆ ದಬ್ಬಿತು. ಆ ಕಾರ್ಯವಾದ ಮೇಲೆ ಸ್ವತಂತ್ರ ಪಾರ್ಟಿಗೆ ಸೋಡಾ ಚೀಟಿ ಕೊಟ್ಟಿತು; ಆಳುವ ಕಾಂಗ್ರೆಸನ್ನು ಅಪ್ಪಿಕೊಂಡಿತು. ತನ್ನ ಯಜಮಾನಿಕೆಗೇ ಅದು ಕೈ ಹಾಕ ಬರುತ್ತಿದೆಯೆಂಬುದರ ಪರಿವೆಯಾದದ್ದೇ ತಡ, ಅದನ್ನೂ ಒದ್ದೋಡಿಸಿತು. ಒಡೆಯನೊಡನೆ ಲೆಂಕನಂತೆ ಸಿ. ಪಿ. ಐ. ಯೂ ಹೊರ ಹೋಯ್ತು. ಮುಂದಿನ ನಾಲ್ಕು ವರ್ಷಗಳ ಕಾಲ ಮತ್ತೆ ಚುನಾವಣೆಗಳು ನಡೆಯುವ ಸಂಭವವಿಲ್ಲವಾದ ಕಾರಣ ಮೂರನೆಯ ಗಂಡನನ್ನು ಹುಡುಕಲು ಅದಕ್ಕೆ ಇನ್ನೂ ಬಹಳಷ್ಟು ಕಾಲಾವಕಾಶವಿದೆ.

ದ್ರಾಮುಕವನ್ನು ದೇಶವಿಭಜಕ—ದೇಶ ದ್ರೋಹಿ-ಪಕ್ಷವೆಂದು ದೂರುವ ಪ್ರಯತ್ನ ಬಹಳ ನಡೆಯುತ್ತಿದೆ. ಜನಸಂಘವನ್ನು ಜಾತೀಯ ವಾದಿಯೆಂದು, ಮಾರ್ಕ್ಸಿಸ್ಟರನ್ನು ಹಿಂಸಾವಾದಿಯೆಂದು ದ್ರಾಮುಕವನ್ನು ಪ್ರತ್ಯೇಕತಾವಾದಿಯೆಂದು ಉಳಿದವನ್ನು ಪ್ರತಿಗಾಮಿಗಳೆಂದು ಲೇಬಲ್ ಅಚ್ಚು ಹಾಕುವ ಪ್ರಯತ್ನಗಳು ವಿಪುಲ ಪ್ರಮಾಣದಲ್ಲಿವೆ. ಆದುದರಿಂದಲೇ ತನ್ನ 'ರಾಜ್ಯ ಸ್ವಾಯತ್ತತೆ'ಯ ನೀತಿಗೆ ದ್ರಾಮುಕ ಅದಾವ ರೀತಿಯಾಗಿ ವಿವರಣೆ ನೀಡಿದರೂ ಸಂದೇಹಗಳು ದೂರವಾಗುತ್ತಿಲ್ಲ.

ಲೋಕ ಸಭೆಯಲ್ಲಿ ದ್ರಾಮುಕದ ನಾಯಕ ಕೆ. ಮನೋಹರನ್ನರು ರಾಜ್ಯ ಸ್ವಾಯತ್ತತೆಯ ಬೇಡಿಕೆಯು ಪ್ರತ್ಯೇಕ ದ್ರವಿಡಸ್ಥಾನದ ಬೇಡಿಕೆಯಲ್ಲವೆಂದೂ ದ್ರಾಮುಕವು ಪ್ರತ್ಯೇಕತೆಯ ಬೇಡಿಕೆಯನ್ನು ಮತ್ತೆಂದೂ ಎತ್ತುವುದಿಲ್ಲವೆಂದೂ ಮೊನ್ನೆ ಮೊನ್ನೆ ಮತ್ತೊಮ್ಮೆ ಸ್ಪಷ್ಟ ಪಡಿಸಿದರು. ಕೇಂದ್ರದ ಮಂತ್ರಿಗಳಾದ ಡಾ| ಮೋಹನ ಕುಮಾರ ಮಂಗಳಂ ಮತ್ತು ಸಿ. ಸುಬ್ರಹ್ಮಣ್ಯಂರವರನ್ನು ದ್ರಾಮುಕದ ವಿರುದ್ಧ ಪ್ರಧಾನಿ ಗಾಂಧಿಯವರು ಛೂಬಿಟ್ಟಿದ್ದಾರೆ. ಮುಂದಿನ ನಾಲ್ಕು ವರ್ಷಗಳೊಳಗೆ ದ್ರಾಮುಕ ಸಮಾಧಿಯನ್ನು ಬಂಗಾಳ ಸಮುದ್ರದಲ್ಲಿ ಕಟ್ಟಿಬಿಡುವುದೇ ಆಕೆಯ ಚರಮ ಉದ್ದೇಶ. ಇದು ಫಲಿಸುವ ಸಲ್ಲಕ್ಷಣಗಳೇ ಗೋಚರವಾಗುತ್ತಿವೆ.

○ ○ ○

೧೯೭೦—೭೧ರಲ್ಲಿ ದೇಶದಲ್ಲಿ ಸುಮಾರು ೧೪೦೦ ಕೋಟಿ ರೂಪಾಯಿಗಳ 'ಕಾಳಧನ'ವಿತ್ತು ಎಂದೂ ಇದರ ಮೇಲಿನ ತೆರಿಗೆಯು ಸುಮಾರು ೭೦೦ ಕೋಟಿ ರೂಪಾಯಿಯಾಗುತ್ತದೆಂದೂ ವಾಂಛೂ ಸಮಿತಿಯ ಅಭಿಪ್ರಾಯ. ಇದಕ್ಕೆ ಯಾವ ಅಂಕೆ—ಸಂಖ್ಯೆಗಳೂ ಸ್ಥಿರಾಧಾರವಿಲ್ಲ—ಬರಿಯ ಅಂದಾಜು ಮಾತ್ರ. ಅಂದರೆ, ವಾಸ್ತವಿಕವಾಗಿ ಈ ಮೊತ್ತವು ಇನ್ನೂ ಹೆಚ್ಚಿರುವ ಸಂಭವವೇ ಹೆಚ್ಚು. ೧೪೦೦ ಕೋಟಿ ರೂಪಾಯಿಗಳ ಕಾಳ ಬಂಡವಳ ೭೦೦೦ ಕೋಟಿ ರೂಪಾಯಿಗಳ ವ್ಯವಹಾರ ನಡೆಸಿರಬಹುದು. ಈ ಬಂಡವಳ ವರ್ಷೇ ವರ್ಷೇಯೇರುತ್ತಲೇ ಹೋಗುವುದು ಕಂಡಿತವೇ. ಈ ಹಣವು ಹೇಗೆ ಬಳಕೆಯಾಗುತ್ತದೆಯೆಂಬುದು ಎಲ್ಲರಿಗೂ ಗೊತ್ತು. ಇತ್ತೀಚೆಗೆ ರಾಜ್ಯದ ಕರಾವಳಿಯಲ್ಲೇ ಸುಮಾರು ಒಂದು ಕೋಟಿ ರೂಪಾಯಿ ಮೊತ್ತ ಬೆಲೆಬಾಳುವ 'ಕಾಳ ವಸ್ತು'ಗಳು ದೊರೆತವು ಇವುಗಳ ಒಡೆಯರು ಈ ದೊಡ್ಡ ನಷ್ಟವನ್ನು ಸಹಿಸಿಕೊಂಡೂ ತಲೆಯೆತ್ತುತ್ತಿರಬೇಕಾದರೆ, ಈ ವ್ಯವಹಾರದಲ್ಲಿ ಅವರೆಷ್ಟು ಸಂಪತ್ತು ಕೂಡಿಸಿದ್ದರೆಂಬುದು ವೇದ್ಯವಾಗುತ್ತದೆ.

ತೆರಿಗೆ ವಸೂಲಿಯು ಪರಿಣಾಮಕಾರಿಯಾಗಿ ನಡೆಯುತ್ತಿಲ್ಲವೆಂಬುದು ಒಪ್ಪತಕ್ಕದ್ದೇ. ಆದರೆ, 'ಹೇಗಾದರೂ ಹಣ ಮಾಡುವ' ಪ್ರವೃತ್ತಿ ಜನತೆಯಲ್ಲಿ ಹೆಚ್ಚುತ್ತಿರುವುದು ಅಪಾಯದ ತೀವ್ರ ಸಂಕೇತವೆನ್ನಲೇಬೇಕು. 'ಹಣಕ್ಕೆ' ದೊರೆಯುವ ಸನ್ಮಾನವೇ ಹಣ ಕೂಡಿಸಲು ಪ್ರೇರಕಶಕ್ತಿಯಾಗುತ್ತದೆ. ಅನ್ಯಾಯವಾಗಿ ಗಳಿಸುವುದೂ ಗಳಿಸಿದ್ದನ್ನು ಬಚ್ಚಿಡುವುದೂ ತಪ್ಪೆಂಬ ಭಾವನೆ ದೇಶದ ಆರೋಗ್ಯಕ್ಕೆ ಮಾರಕವೇ. ದೇಶದ ರಾಜ್ಯಕೀಯ-ಸಾರ್ವಜನಿಕ ನಾಕರ ಅನೈತಿಕತೆಯ ಪ್ರಭಾವ ಇಡಿಯ ದೇಶದ ಮೇಲಾಗುವುದು ಅಸಂಭವವಲ್ಲ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಕರ್ತವ್ಯಲೋಪ ಮೊದಲಾದುವು ಸರ್ವತ್ರ ತಾಂಡವವಾಡುತ್ತಿರುವಾಗ, 'ಕಾಳಮಾರುಕಟ್ಟೆ'ಯ ಬಂಡವಾಳವೇ 'ಬಿಳಿಯ ಮಾರುಕಟ್ಟೆ'ಗಿಂತ ಹೆಚ್ಚಾಗಬಹುದು.

ಆದುದರಿಂದಲೇ ವಾಂಛೂ ಸಮಿತಿ ಹಲವಾರು ಸಲಹೆಗಳನ್ನು ಮಾಡಿದೆ. ತೆರಿಗೆ ಪ್ರಮಾಣವನ್ನು ಇಳಿಸುವುದೂ ಇವುಗಳಲ್ಲಿ ಒಂದು. ಈಯೆಲ್ಲ ಸಲಹೆಗಳು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬಂದರೆ, ಕಾಳ ಬಂಡವಳದ ಮೊತ್ತ ಇಳಿಯ ಬಹುದಷ್ಟೆ. ಜನತೆಯ ನೈತಿಕ ಮಟ್ಟವನ್ನು ಎತ್ತರಿಸುವ, ಆದಾಯವನ್ನು ಬಚ್ಚಿಡುವುದು ದೇಶದ್ರೋಹವೆಂಬ ಭಾವನೆ ಹುಟ್ಟಿಸುವ ಪ್ರಯತ್ನಗಳು ಈಗ ತಡವಾಗಿದೆಯಾದರೂ, ಆರಂಭವಾಗಬೇಕು. ಇಲ್ಲವಾದರೆ, ನಾವು ಸಭ್ಯದೇಶದ ವಂಚಕ ಜನರಾಗುತ್ತೇವೆ. ಉಳ್ಳವರನ್ನು ಇಲ್ಲದವರೂ ಅನುಕರಿಸುತ್ತಾರೆ. ದೇಶ ತುಂಬ ವಂಚಕರ ಬ್ರಹಜ್ಜಾಲ ಹರಡಿಕೊಳ್ಳುತ್ತದೆ. ಆಗ ಇದರಿಂದ ಮುಕ್ತಿ ಕಠಿನ ಸಾಧ್ಯ. ●

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಸಾಚ, ಸರಳ, ಸತ್ಯವಾದುದೆಲ್ಲವನ್ನೂ ಅವರು ಪ್ರೀತಿಸಿದರು

ಸಣ್ಣ ಕತೆ ಮತ್ತು ನಾಟಕ ಕ್ಷೇತ್ರಗಳಲ್ಲಿ ಆಂತೋನ್ ಚೇಖವ್ ಅವರ (1860—1904) ಹೆಸರು ಬಹುದೊಡ್ಡದು. ಅವರ ಅನೇಕ ಕಥೆಗಳೂ, ಅದರಲ್ಲೂ ವಿಶೇಷವಾಗಿ "ದ ಚೆರ್ರಿ ಆರ್ಚರ್ಡ್", "ದ ಸೀಗಲ್", "ತ್ರೀ ಸಿಸ್ಟರ್ಸ್" ಮತ್ತು "ಅಂಕಲ್ ವಾನ್ಯಾ" ನಾಟಕಗಳು ಬಹುತೇಕ ಎಲ್ಲೆಡೆಯೂ ಭಾಷಾಂತರಗೊಂಡಿವೆ. ಗೋರ್ಕಿಯವರ 'ಸಾಹಿತ್ಯ ಚಿತ್ರಗಳು' ಎಂಬ ಕೃತಿಯಿಂದ ಆರಿಸಿಕೊಳ್ಳಲಾದ ಕೆಳಗಿನ ಪರಿಚ್ಛೇದಗಳು ಈ ಮಹಾನ್ ರಶಿಯನ್ ಸಾಹಿತಿಯ ಚಿನ್ನದಂತಹ ಚೊಕ್ಕ ಗುಣಗಳನ್ನು ಬಣ್ಣಿಸುತ್ತವೆ.

ಕುಚುಕ್—ಕೋಯಿ ಹಳ್ಳಿಯಲ್ಲಿ ತಮ್ಮನ್ನು ಕಾಣುವಂತೆ ಚೇಖವ್‌ರು ಒಮ್ಮೆ ನನ್ನನ್ನು ಆಮಂತ್ರಿಸಿದ್ದರು. ಅಲ್ಲಿ ಅವರಿಗೆ ಒಂದು ಚೂರು ಜಮೀನು ಮತ್ತು ಎರಡು ಮಹಡಿಯ ಒಂದು ಬಿಳೀ ಬಣ್ಣದ ಮನೆ ಇದ್ದಿತು. ತುಂಬಾ ಲವಲವಿಕೆಯಿಂದ ಮಾತನಾಡುತ್ತ ಅವರು ನನಗೆ 'ಎಸ್ಟೇಟನ್ನು' ತೋರಿಸಿದರು.

"ನನ್ನ ಬಳಿಯಲ್ಲಿ ಸಾಕಷ್ಟು ಹಣವಿದ್ದಿದ್ದರೆ, ಹಳ್ಳಿಯ ಕಾಹಿಲೆ ಅಧ್ಯಾಪಕರಿಗಾಗಿ ಇಲ್ಲೊಂದು ಸಾನಿಟೋರಿಯಮ್ಮನ್ನು ಕಟ್ಟಿಬಿಡುತ್ತಿದ್ದೆ. ದೊಡ್ಡ ದೊಡ್ಡ ಕಿಟಕಿಗಳ, ಎತ್ತರವಾದ ಛಾವಣಿಯ, ಗಾಳಿ ಬೆಳಕು ಆಡುವ ಕಟ್ಟಡ. ಅದರಲ್ಲೊಂದು ಅದ್ಭುತವಾದ ಗ್ರಂಥಾಲಯ, ಎಲ್ಲಾ ಬಗೆಯ ಸಂಗೀತವಾದ್ಯಗಳು, ಒಂದು ಜೇನುಮನೆ, ತರಕಾರಿ ತೋಟ, ಒಂದು ಹಣ್ಣಿನ ತೋಟ ಕೃಷಿಶಾಸ್ತ್ರ, ಹವಾಶಾಸ್ತ್ರ ಮೊದಲಾದ ವಿಷಯಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಿರುತ್ತಿದ್ದೆ. ಅಧ್ಯಾಪಕರಿಗೆ ಎಲ್ಲವೂ—ಪ್ರತಿಯೊಂದೂ ಗೊತ್ತಿರಬೇಕು."

○ ○ ○

ಆಂತೋನ್ ಚೇಖವ್‌ರ ಎದುರು ತಮಗರಿಯದಂತೆಯೆ ಎಲ್ಲರೂ ಸರಳ—ಸಾಚಾ ಆಗಿರಬೇಕೆಂದು, ಹೆಚ್ಚು ಸತ್ಯವಂತರಾಗಿರಬೇಕೆಂದು ಬಯಸುತ್ತಿದ್ದರೆಂದು ನನಗೆ ಕಾಣಿಸುತ್ತಿತ್ತು. ಜನರು ತಮ್ಮ ಭವ್ಯವಾದ ಪುಸ್ತಕೀಯ ನುಡಿಗಟ್ಟುಗಳ, ಶೈಲಿನ ಅಭಿವ್ಯಕ್ತಿಗಳ ಹಾಗೂ ಇಂಥವೇ ಅಗ್ಗದ ಚಿಲ್ಲರೆ ವೇಷವನ್ನು ಕಳಚಿ ಬಿಸಾಡುತ್ತಿದ್ದರೆಂಬುದನ್ನು ನೋಡುವ ಅವಕಾಶ ನನಗೆ ಅನೇಕ ಬಾರಿ ದೊರೆತ್ತಿದ್ದಿತು.

○ ○ ○

ಸ್ವತಃ ಸರಳ ಸುಂದರರಾಗಿದ್ದ ಅವರು ಸರಳ, ಸಾಚಾ, ನೈಜವಾದುದೆಲ್ಲವನ್ನೂ ಮೆಚ್ಚಿದರು, ಬೇರೆಯವರೂ ಸರಳರಾಗಿರುವಂತೆ ಮಾಡುವ ಅವರದೇ ಆದ ಒಂದು ರೀತಿ ಅವರಲ್ಲಿದ್ದಿತು.

○ ○ ○

ಅಸಭ್ಯವೆನಿಸುವಂಥದೆಲ್ಲವನ್ನೂ ಬಯಲಿಗಿಡುವ ಕಲೆ ಅವರಲ್ಲಿದ್ದಿತು. ಸ್ವತಃ ಜೀವನ ಪನದಲ್ಲಿ ಉನ್ನತರಾಗಿರುವಂಥವರು ಮತ್ತು ಮನುಷ್ಯನಲ್ಲಿ ಸರಳತೆಯನ್ನೂ, ಸೌಂದರ್ಯವನ್ನೂ, ಸಾಮರಸ್ಯವನ್ನೂ ಕಾಣಬೇಕೆಂಬ ಕಳಕಳಿಯುಳ್ಳಂಥವರು ಮಾತ್ರವೇ ಪ್ರಭುತ್ವ ಸಂಪಾದಿಸಿಕೊಳ್ಳಬಹುದಾಗಿದ್ದ ಕಲೆ ಇದಾಗಿದ್ದಿತು. ಅಸಭ್ಯತೆಯ ಬಗ್ಗೆ ಅವರು ಅತ್ಯಂತ ನಿಷ್ಠುರ ಹಾಗೂ ನಿರ್ದಯ ತೀರ್ಪುಗಾರರಾಗಿದ್ದರು.

○ ○ ○

ಬೇರೆಯವರ ಬಗ್ಗೆ ಸದಾ ಕಾಲ ಪ್ರೀತಿ, ಅನುಕಂಪಗಳಿರಬೇಕೆಂದು ಮಾತನಾಡುತ್ತಿದ್ದ ಜನಪ್ರಿಯ ಪತ್ರಿಕೆಯೊಂದರ ಸಂಪಾದಕರೊಬ್ಬರು ವಿನಾಕಾರಣವಾಗಿ ರೇಲುವೆ ಗಾರ್ಡನೊಬ್ಬನನ್ನು ಅವಮಾನಿಸಿದರೆಂದೂ ತನ್ನ ಕೆಳಗಿನವರನ್ನು ಹೀನವಾಗಿ ಕಾಣುವ ಅಭ್ಯಾಸದವರಾಗಿದ್ದಾರೆಂದೂ ಚೇಖವ್ ಮುಂದೆ ಒಬ್ಬರು ಒಮ್ಮೆ ಹೇಳಿದರು.

ವ್ಯಂಗ್ಯ ನಗೆಯನ್ನು ಅದುಮಿಟ್ಟುಕೊಳ್ಳುತ್ತಲೇ ಚೇಖವ್ ಎಂದರು; 'ಸಹಜವೆ. ಆತ ಶ್ರೀಮಂತ, ಸಂಸ್ಕಾರಗೊಂಡ ಮನುಷ್ಯ, ಪಾಠಶಾಲೆಗೆ ಹೋದವನು. ಅವನ ತಂದೆ ಮರದ ಮೆಟ್ಟು ಹಾಕಿಕೊಳ್ಳುತ್ತಿದ್ದ, ಆದರೆ ಈಗ ಪೇಟೆಂಟ್ ಚರ್ಮದ ಬೂಟುಗಳನ್ನೇ ತೊಡುತ್ತಾನೆ.'

ಆದರೆ ಅವರು ಆಡಿದ ಈ ನುಡಿಗಳ ಧ್ವನಿಯು ಈ 'ಶ್ರೀಮಂತ ಕುಲೀನ'ನನ್ನು ಒಮ್ಮೆಲೆ ಮಧ್ಯಮ ದರ್ಜೆಗಿಳಿಸಿ ವಿಚಿತ್ರ ವ್ಯಕ್ತಿಯನ್ನಾಗಿಸಿ ಬಿಟ್ಟದ್ದಿತು.

ಮತ್ತೊಬ್ಬ ಪತ್ರಕರ್ತನ ಬಗ್ಗೆ 'ತುಂಬಾ ಬುದ್ಧಿವಂತ ಮನುಷ್ಯ'ಎಂದು ಹೇಳುತ್ತ ನುಡಿದರು. "ಅವನದು ಯಾವಾಗಲೂ ಉನ್ನತವಾದ ಬರೆವಣಿಗೆ. ಅತ್ಯಂತ ಮಾನವೀಯವಾದುದು.ಸಕ್ಕರೆಯಂಥ ಮನುಷ್ಯ. ಜನರ ಎದುರಿನಲ್ಲೇ ತನ್ನ ಹೆಂಡತಿಯನ್ನು ಮೂರ್ಖಳು ಎಂದು ಕರೆಯುತ್ತಾನೆ. ಅವನ ಸೇವಕರು ತೇವದ ಗೂಡುಗಳಲ್ಲಿ ಮಲಗುತ್ತಾರೆ. ಮತ್ತೆ ಅವರೆಲ್ಲರಿಗೂ ಸಂಧಿವಾತ ಹಿಡಿಯುತ್ತದೆ."

○ ○ ○

ಅವರು ನಗುತ್ತಿದ್ದಾಗ ಅವರ ಕಣ್ಣುಗಳು ತುಂಬಾ ಸುಂದರವಾಗಿ ಕಾಣಿಸುತ್ತಿದ್ದವು. ಅವುಗಳಲ್ಲಿ ಯಾವುದೋ ಒಂದು ಸ್ತ್ರೀ ಸಹಜ ಕೋಮಲತೆ, ಏನೋ ನಾಜೂಕು. ಅವರ ನಗೆ—ಸದ್ದಿಲ್ಲದ ನಗೆಗೆ ಎಂಥದೋ ಒಂದು ಆಕರ್ಷಣೆ. "ಆತ್ಮಿಕ" ಎಂಬ ಪದವನ್ನು ಬಳಸಬಹುದಾದರೆ ಅಂಥ ಒಂದು ನಗೆಯನ್ನು ಬೇರೊಬ್ಬರಲ್ಲಿ ನಾನೆಂದೂ ಕಾಣಲಿಲ್ಲ.

○ ○ ○

ಅವರು ತಮ್ಮ ಸಾಹಿತ್ಯ ಕಾರ್ಯದ ಬಗ್ಗೆ ಅಳುಕುತ್ತ ತೀರಾ ಸ್ವಲ್ಪ ಮಾತನಾಡುತ್ತಿದ್ದರು. ಲೆವ್ ತೊಲ್‌ಸ್ತೋಯ್ ಬಗ್ಗೆ ಮಾತನಾಡುವಾಗಲೂ ಅಷ್ಟೆ. ಅತ್ಯಂತ ಗೆಲುವಾಗಿದ್ದಾಗ, ಆಗಾಗ ಅವರು ಒಂದು ಕತೆಯ ವಸ್ತುವನ್ನು ಹೇಳುತ್ತಿದ್ದರು—ಒಂದು ಹಾಸ್ಯ ಕಥೆ ಎಂದು.

"ಶಾಲಾಧ್ಯಾಪಿಕೆಯೊಬ್ಬಳ ಬಗ್ಗೆ ಕಥೆ ಬರೆಯಬೇಕೆಂದಿದ್ದೇನೆ. ಆಕೆ ನಾಸ್ತಿಕಳು. ಡಾರ್ವಿನ್‌ನನ್ನು ಪೂಜಿಸುತ್ತಾಳೆ. ಜನರ ಪೂರ್ವ ಗ್ರಹಗಳ ವಿರುದ್ಧ, ಮೂಢನಂಬಿಕೆಗಳ ವಿರುದ್ಧ ಹೋರಾಡಬೇಕಾದ ಅವಶ್ಯಕತೆಯನ್ನೂ ಮನಗಂಡಿದ್ದಾಳೆ. ಮತ್ತೆ ಪುರುಷನೊಬ್ಬನನ್ನು ಆಕರ್ಷಿಸಿ ಅವನಲ್ಲಿ ಪ್ರೇಮವನ್ನು ಕೆರಳಿಸುವುದಕ್ಕೆ ಒಂದು ಇಷ್ಟ ಪೂರೈಕೆ ಮೂಳೆಯನ್ನು ಪಡೆಯಲು ಮಧ್ಯರಾತ್ರಿಯಲ್ಲೇ ಕರಿ ಬೆಕ್ಕೊಂದನ್ನು ಬೇಯಿಸಲು ಬಚ್ಚಲು ಮನೆಗೆ ಹೋಗುತ್ತಾಳೆ. ಇಂಥ ಮೂಳೆಯೊಂದಿರುವುದು ನಿನಗೆ ಗೊತ್ತೆ?"

○ ○ ○

ಆಂತೋನ್ ಪಾವ್‌ಲೋವಿಚ್ಚರು ಅಸಭ್ಯತೆಯನ್ನೂ, ಅದರಲ್ಲಿಯ ದುರಂತಕಾರೀ ಅಂಶಗಳನ್ನೂ ಪ್ರಕಟಗೊಳಿಸಲು ಆರಂಭದಲ್ಲಿಯೇ ಶಕ್ತರಾದರು. ಅವರ "ಹಾಸ್ಯ" ಕಥೆಗಳನ್ನು ಎಚ್ಚರಿಕೆಯಿಂದ ಓದಿದರೆ ಸಾಕು. ಕರ್ತೃವು ತಾನು ಕಂಡುದು ಎಷ್ಟೊಂದು ಕ್ರೂರವಾಗಿದ್ದಿತು, ವಿಚಿತ್ರ ವಿನೋದದ ಸನ್ನಿವೇಶಗಳಲ್ಲಿ ಅವರು ಅಡಗಿಸಿಟ್ಟುದುದು, ಎಷ್ಟೊಂದು ಲಜ್ಜಾಸ್ಪದವಾಗಿದ್ದಿತು ಎಂಬುದು ಸ್ಪಷ್ಟವಾಗುತ್ತದೆ.

○ ○ ○

ಅಸಭ್ಯವೂ ಮತ್ತು ಮಲಿನವೂ ಆದುದೆಲ್ಲವನ್ನೂ ಅವರು ತಿರಸ್ಕರಿಸುತ್ತ ಜೀವನದ ಕೀಳು ಬದಿಯನ್ನು ಕಾವ್ಯದ ಉನ್ನತ ಭಾಷೆಯಲ್ಲಿ, ಹಾಸ್ಯಕಾರನ ಮುದುರವಂದ ನಗೆಯಲ್ಲಿ ಬಣ್ಣಿಸುತ್ತಾರೆ. ಅವರ ಕಥೆಗಳ ನಯವಾದ ಮೇಲ್ಭಾಗದ ಕೆಳಗಡೆ ಆಳದಲ್ಲಿರುವ ಕಟುವಾದ ಆಕ್ಷೇಪಣೆ ಕಣ್ಣಿಗೆ ಕಾಣಿಸುವುದು ಕಷ್ಟ.

○ ○ ○

ಜೀವನದ ಕ್ಷುದ್ರತೆಗಳ ದುರಂತ ಸ್ವಭಾವವನ್ನು ಚೇಖವ್‌ರಂತೆ ಗಾಢವಾಗಿ ಅರಿತು ಕೊಂಡವರು ಬೇರೊಬ್ಬರಿಲ್ಲ. ಅಷ್ಟೊಂದು ತಿಳಿಯಾಗಿ ತೋರಿಸಿದವರು ಮತ್ತೊಬ್ಬರಿಲ್ಲ. ಮಧ್ಯಮ ವರ್ಗದವರ ಜೀವನದಲ್ಲಿಯ ಅಸ್ತವ್ಯಸ್ತತೆಯಲ್ಲಿ ಲಜ್ಜಾಸ್ಪದವೂ, ಶೋಚನೀಯವೂ ಆಗಿರುವಂಥದನ್ನು ಇಷ್ಟೊಂದು ನಿಷ್ಠುರವಾಗಿ, ನೈಜವಾಗಿ ಇವರಂತೆ ಚಿತ್ರಿಸಿದ ಲೇಖಕರು ಇನ್ನೊಬ್ಬರಿಲ್ಲ.

○ ○ ○

ಚೇಖವ್ ಅವರ ಕೃತಿಗಳನ್ನು ಓದುತ್ತಿರುವಾಗ—ನಿರ್ಮಲ ಹವೆಯ, ಆದರೆ ಬೋಳುಮರಗಳು ಆಕಾಶದ ಕೆಳಗಡೆ ನಿಂತಿರುವ, ಮನೆಗಳು ತೆಕ್ಕೆಮುಕ್ಕಿ ಬಿದ್ದಿರುವ, ಮಂಕುಕವಿದು ಜನರೂ ಉತ್ಸಾಹ ಹೀನರಾಗಿರುವ ಶರತ್ಕಾಲದ ಕೊನೆಯಲ್ಲಿಯ ಒಂದು ದಿನವು ಇಂದಾಗಿದೆಯೇನೋ ಎಂದೆನಿಸುತ್ತದೆ ನಮಗೆ. ಪ್ರತಿಯೊಂದೂ ಅಷ್ಟೊಂದು ವಿಚಿತ್ರವಾಗಿದೆ, ಏಕಾಂಗಿಯಾಗಿದೆ, ನಿಶ್ಚಲವಾಗಿದೆ; ಚೈತನ್ಯಹೀನವಾಗಿದೆ. ದೂರದ ಶೂನ್ಯ ನೀಲಿ ಅಂತರಗಳು ಪೇಲವವಾದ ಆಕಾಶದಲ್ಲಿ ವಿಲೀನಗೊಳ್ಳುತ್ತಿವೆ. ಅರೆ ಹಿಮುಗಟ್ಟಿದ ಮಣ್ಣಿನ ಮೇಲಿಂದ ತಣ್ಣಗಿನ ಗಾಳಿಯನ್ನು ಉಸಿರುತ್ತಿವೆ. ಆದರೆ ಕರ್ತೃವಿನ ಮನಸ್ಸು, ಶರತ್ಕಾಲದ ಬಿಸಿಲಿನಂತೆ, ತುಳಿದ ದಾರಿಗಳನ್ನೂ, ಅಂಕುಡೊಂಕಾದ ಬೀದಿಗಳನ್ನೂ ಬೇಸರಿಕೆ, ಬಳಲಿಕೆಗಳಿಂದ ಒಳಗೇ ಒದ್ದಾಡುತ್ತಿರುವ "ಸಣ್ಣ ಪುಟ್ಟ" ಜನರ ಮನೆಗಳನ್ನೂ ಬೆಳಗಿಸುತ್ತದೆ.

○ ○ ○

ಚೇಖವ್‌ರ ಪಾತ್ರಗಳಲ್ಲಿ ಅನೇಕವು ಇನ್ನೆರಡು ನೂರು ವರ್ಷಗಳಲ್ಲಿ ಭವ್ಯವಾದ ಜೀವನವು ಪ್ರಾಪ್ತವಾಗುತ್ತದೆಯೆಂದು ಕನಸು ಕಾಣುತ್ತವೆ. ಆದರೆ "ನಾವೇನನ್ನೂ ಮಾಡದೆ, ಬರೀ ಕನಸು ಕಾಣುತ್ತ ಕೂತರೆ ಇದನ್ನು ಭವ್ಯವನ್ನಾಗಿಸುವವರು ಯಾರು?" ಎಂಬ ಪ್ರಶ್ನೆಯನ್ನು ಕೇಳಬೇಕೆಂದು ಕೂಡ ಅವುಗಳಿಗೆ ತೋಚುವುದಿಲ್ಲ.

ಈಗ, ಈ ಜಡವಾದ, ನಿರುತ್ಸಾಹಿಗಳಾದ ನಪುಂಸಕ ಪ್ರಾಣಿಗಳ ಬದಿಯಲ್ಲಿಂದ ಹಿರಿಯ ಜಾಣ ಮನುಷ್ಯನೊಬ್ಬ, ಅವರನ್ನು ಎಚ್ಚರಿಕೆಯ ನೋಟದಿಂದ ನೋಡುತ್ತ ದಾಟಿ ಹೋಗುತ್ತಾನೆ ಮತ್ತು ಮೆತ್ತಗೆ ಆದರೆ ಕಟುವಾದ ಧ್ವನಿಯಲ್ಲಿ, ಮುಖ ಮತ್ತು ಹೃದಯಗಳಲ್ಲಿ ನೋವು ನಿರಾಶೆಗಳನ್ನು ತುಂಬಿಕೊಂಡು ನೀರಸ ನಗೆಯನ್ನು ಬೀರುತ್ತ ತೀರ ಪ್ರಾಮಾಣಿಕವಾದ ಸ್ವರದಲ್ಲಿ ನುಡಿಯುತ್ತಾನೆ:

'ಸಭ್ಯ ಗ್ರಹಸ್ಥರೆ, ಎಂಥ ಜಡವಾದ ಜೀವನವನ್ನು ಬದುಕುತ್ತಿದ್ದೀರಿ!'

○ ○ ○

ಚೇಖವ್ ಡಾಕ್ಟರರಾಗಿದ್ದರು. ಮತ್ತೆ ಡಾಕ್ಟರನೊಬ್ಬನ ಕಾಯಿಲೆ ಎಂದರೆ ರೋಗಿಯ ಕಾಹಿಲೆಗಿಂತ ಕೆಟ್ಟದ್ದು. ರೋಗಿಗಳಿಗೆ ಕೇವಲ ಅನುಭವವಾಗುತ್ತದೆ. ಡಾಕ್ಟರರಿಗೆ ಅನುಭವವಾಗುವುದರೊಡನೆ ತನ್ನ ದೇಹದ ಮೇಲೆ ಆ ಕಾಹಿಲೆಯ ವಿನಾಶಕ ಪರಿಣಾಮಗಳು ಏನೆಂಬುದೂ ತಿಳಿದಿರುತ್ತದೆ. ಜ್ಞಾನವು ಸಾವನ್ನು ಹತ್ತಿರಗೊಳಿಸುತ್ತದೆಯೆನ್ನುವುದಕ್ಕೆ ಇದೂ ಒಂದು ಪ್ರಸಂಗ.

○ ○ ○

ಚೇಖವ್ ಬಗ್ಗೆ ಬಹಳಷ್ಟನ್ನು ಬರೆಯಬಹುದು. ಆದರೆ ನಿಕಟವಾಗಿಯೂ, ನಿಷ್ಕರ್ಷವಾಗಿಯೂ ಬರೆಯಬೇಕಾಗುತ್ತದೆ.

○ ○ ○

ಇಂಥ ಮನುಷ್ಯನನ್ನು ನೆನಪಿಸಿಕೊಳ್ಳುವುದರಿಂದ ಒಳ್ಳೆಯದಾಗುತ್ತದೆ. ಆ ನೆನಪು—ಉತ್ಸಾಹವನ್ನೂ, ಗೆಲುವನ್ನೂ ತುಂಬುತ್ತದೆ. ಜೀವನಕ್ಕೆ ಮತ್ತೊಮ್ಮೆ ಸ್ಪಷ್ಟವಾದ ಅರ್ಥವನ್ನು ನೀಡುತ್ತದೆ. ●

ಭಗವಂತನ ಅಸ್ತಿತ್ವ ತಿಳಿಯಲು ನವೀನ ವಿಧಾನಗಳ ಅನುಸರಣೆ ಅವಶ್ಯ—ವೀರೇಂದ್ರ ಹೆಗ್ಗಡೆ

ಮಂಗಳೂರಿನ ರೂಪರಾಗ್ ಸಂಸ್ಥೆಯವರು ತಾ. 19ರಂದು ನಗರದ ಡಾನ್‌ಬಾಸ್ಕೋದಲ್ಲಿ ಏರ್ಪಡಿಸಿದ್ದ ಶ್ರೀಮತಿ ಮಲ್ಲಿನ್ ಸಿಕೇರಾರವರ ಕ್ರಿಸ್ತಕೀರ್ತನ (ಹರಿಕಥೆರೂಪ) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ವೀರೇಂದ್ರ ಹೆಗ್ಗಡೆಯವರು ಮಾತಾಡಿ ಮನಶ್ಶಕ್ತಿಯಿಲ್ಲದವರಿಗೆ ಭಗವಂತನ ಅಸ್ತಿತ್ವನನ್ನು ಮನಗಾಣಿಸಲು ಬೇರೆ ಮಾರ್ಗಗಳನ್ನು ಅನುಸರಿಸುವುದು ಅವಶ್ಯ ಎಂದರು.

ಆರಂಭದಲ್ಲಿ ಜೆಪ್ಪು ಸೆಮಿನರಿಯ ಡೈರೆಕ್ಟರ್ ರೆ। ಫಾ। ಸ್ವೀನ್ನಿ ಮಿರಾಂಡ ಎಸ್. ಜೆ. ಸ್ವಾಗತಿಸಿದರು. ಮೈಸೂರು ಸದರ್ನ್ ಡಯಸಿಸ್ ಬಿಷಪ್ ರೈಟ್ ರೆ। ಎಸ್. ಆರ್. ಪುರ್ಟಾಡೋರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಂತ್ಯದಲ್ಲಿ ರೂಪರಾಗ್ ಸಂಸ್ಥೆಯ ಅಧ್ಯಕ್ಷ ಶ್ರೀ ಗಾಬ್ರಿಯಲ್ ಡಿ'ಸೋಜಾರು ಧನ್ಯವಾದ ಅರ್ಪಿಸಿದರು.

ನಾಲ್ಕನೆಯ ಯೋಜನೆಯಲ್ಲಿ

ನಿರುದ್ಯೋಗ ನಿವಾರಣೆಯ ಪ್ರಯತ್ನ

ಜನಜೀವನ ಸುಧಾರಣೆಯೇ ಯೋಜನೆಯ ಗುರಿ. ಈ ದಿಶೆಯಲ್ಲಿ ಸರ್ವರ ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಸಂವರ್ಧನೆ ಮಾಡುವ ಕ್ರಮಗಳನ್ನು ಕೈಗೊಂಡು ಗುರಿಸಾಧನೆಯತ್ತ ದೇಶ ಹೆಜ್ಜೆ ಹಾಕುತ್ತಿದೆ. ನಾಲ್ಕನೆಯ ಯೋಜನೆಯಲ್ಲಿ ಈ ಆದರ್ಶ ಸಾಧನೆಗಾಗಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಭೂಸುಧಾರಣೆ ಹಾಗೂ ಭೂಹಿಡುವಳಿಯ ಪರಿಮಿತಿ, ಸರ್ಕಾರಿ ಕ್ಷೇತ್ರದ ವಿಸ್ತರಣೆ, ಹಾಗೂ ಕೆಲವೇ ಜನರ ಕೈಯಲ್ಲಿ ಆರ್ಥಿಕ ಅಧಿಕಾರ ಕೇಂದ್ರೀಕೃತವಾಗದಂತೆ ತಡೆಯಲು ಕೈಗಾರಿಕೆಗಳಿಗೆ ಲೈಸನ್ಸ್ ನೀಡುವ ಪದ್ಧತಿ ಇವೇ ಮೊದಲಾದವು ನಾಲ್ಕನೆಯ ಯೋಜನೆಯ ಮುಖ್ಯಾಂಶಗಳು. ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯೂ ಯೋಜನೆಯ ಇನ್ನೊಂದು ಮುಖ್ಯ ಗುರಿ. ಈ ಎಲ್ಲಾ ಕ್ರಮಗಳು ಅಲ್ಪ ಬಂಡವಾಳದಿಂದ ಅಧಿಕ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತವೆ.

ನಾಲ್ಕನೆಯ ಯೋಜನೆಯ ಅಭಿವೃದ್ಧಿ ವಿಧಾನ ಹಾಗೂ ಯೋಜನಾ ಕಾರ್ಯಕ್ರಮಗಳ ಉದ್ದೇಶ ಇದನ್ನೇ ಸ್ಪಷ್ಟಪಡಿಸಿದೆ. ಈ ಯೋಜನೆಯಲ್ಲಿ ಬೇಸಾಯ ಅಭಿವೃದ್ಧಿ, ಗ್ರಾಮಾಂತರದಲ್ಲಿ ಅಭಿವೃದ್ಧಿಗೆ ಅನುಕೂಲಕರವಾದ ವಾತಾವರಣ ನಿರ್ಮಾಣ ಹಾಗೂ ಗ್ರಾಮಾಂತರ ಅಭಿವೃದ್ಧಿ ಇವೇ ಮೊದಲಾದ ಕಾರ್ಯಕ್ರಮಗಳಿಗೆ ಗಣನೀಯ ಪ್ರಾಶಸ್ತ್ಯ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತವೆ. ಇದು ಬೇಸಾಯ ಹಾಗೂ ತತ್ಸಂಬಂಧವಾದ ಕ್ಷೇತ್ರಗಳಲ್ಲಿನ ಉದ್ಯೋಗ ಸೃಷ್ಟಿಯ ಚಿತ್ರವನ್ನು ನೀಡುತ್ತದೆ.

ಇನ್ನು ಕಟ್ಟಡ ನಿರ್ಮಾಣದಂತಹ ಕಾರ್ಯ ಚಟುವಟಿಕೆಗಳೂ ಅಧಿಕ ಜನರಿಗೆ ಉದ್ಯೋಗಾವಕಾಶವನ್ನು ನೀಡುವುದಲ್ಲದೇ ಸ್ವಯಂ ಉದ್ಯೋಗ ಕಲ್ಪಿಸಲು ಉತ್ತೇಜನವನ್ನು ನೀಡುತ್ತವೆ. ಈಗಿರುವ ಬಂದರುಗಳ ಅಭಿವೃದ್ಧಿ, ಒಳನಾಡಿನ ಜಲಸಾರಿಗೆ ಅಭಿವೃದ್ಧಿ ಕಾರ್ಯಕ್ರಮದ ಮೇರೆಗೆ ಕೈಗೊಳ್ಳಲಾಗುತ್ತಿರುವ ನಾನಾ ಕ್ರಮಗಳು, ಮತ್ತು ಅಂತಾರಾಷ್ಟ್ರೀಯ ವಿಮಾನಸಾರಿಗೆ ನಡೆಯುವ ಮುಂಬಯಿ, ಕಲ್ಕತ್ತಾ, ದೆಹಲಿ, ಹಾಗೂ ಮದ್ರಾಸ್ ವಿಮಾನ ನಿಲ್ದಾಣಗಳ ಸುಧಾರಣೆಯಿಂದ ವಿವಿಧ ವರ್ಗಗಳ ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ.

ಸಾಮಾನ್ಯ ಹಾಗೂ ತಾಂತ್ರಿಕ ಶಿಕ್ಷಣದ ವಿಸ್ತರಣೆಯಿಂದಾಗಿ ತರಬೇತಾದ ಶಿಕ್ಷಕರು, ಹಾಗೂ ಮೇಲುಸ್ತುವಾರಿ ಸಿಬ್ಬಂದಿ ಇವರೇ ಮೊದಲಾದವರಲ್ಲಿ ಬಹುತೇಕ ಮಂದಿಗೆ ಉದ್ಯೋಗ ದೊರೆಯುವುದು. ಹೊಸ ತಾಂತ್ರಿಕ ಸಂಸ್ಥೆಗಳ ಸ್ಥಾಪನೆ ಹಾಗೂ ಈಗಿರುವ ಸಂಸ್ಥೆಗಳ ವಿಸ್ತರಣೆಯಿಂದಾಗಿ ಶಾಲೆ, ಕಾಲೇಜುಗಳು, ವಾಚನಾಲಯಗಳು ಹಾಗೂ ವಸತಿ ಗೃಹಗಳ ಕಟ್ಟಡ ನಿರ್ಮಾಣಕ್ಕೂ ಚಾಲನೆ ಸಿಕ್ಕಿ ಅಧಿಕ ಮಂದಿಗೆ ಉದ್ಯೋಗಾವಕಾಶಗಳು ಲಭಿಸುತ್ತವೆ. ಇದೇ ರೀತಿ, ಆರೋಗ್ಯ ಮತ್ತು ಕುಟುಂಬ ಯೋಜನಾ ಕ್ರಮಗಳು, ವೈದ್ಯಕೀಯ ಹಾಗೂ ಅವರಿಗೆ ಸಹಾಯಕವಾಗಿರುವ ಸಿಬ್ಬಂದಿಗೂ ಉದ್ಯೋಗ ಸಿಗುತ್ತದೆ. ವಸತಿ ನಿರ್ಮಾಣ ಕ್ಷೇತ್ರದಲ್ಲಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಕ್ಷೇತ್ರದಲ್ಲೇ ಪದೇ ಪದೇ ಮಾಡಬೇಕಾಗಿ ಬರುವ ವೆಚ್ಚವನ್ನು ನೀಗಿಸಲು ೨೦೦ಕೋಟಿ ರೂ.ಗಳ ನಿಧಿಯನ್ನು ಪ್ರಾರಂಭಿಸುವುದೂ ಇಂತಹ ಕಾರ್ಯಕ್ರಮಗಳಲ್ಲೊಂದು. ಈ ನಿಧಿಯಿಂದ ಕಟ್ಟಡ ನಿರ್ಮಾಣ ಚಟುವಟಿಕೆಗೆ ಹೆಚ್ಚು ಪ್ರೋತ್ಸಾಹ ದೊರೆಯಲಿದೆ.

ವಿಶೇಷ ಕಾರ್ಯಕ್ರಮಗಳು

ನಿರುದ್ಯೋಗಿಗಳಾದ ಅಥವಾ ಅರೆ-ಬರೆ ಉದ್ಯೋಗವುಳ್ಳ ಸಮಾಜದ ದುರ್ಬಲ ವರ್ಗಗಳಿಗೆ ಉದ್ಯೋಗಾವಕಾಶ ನೀಡಲು ನಾಲ್ಕನೆಯ ಯೋಜನೆಯಲ್ಲಿ ಕೆಲವೊಂದು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಕಾರ್ಯದ ತೀವ್ರತೆಯನ್ನು ಅರಿತು ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗುವ ಉದ್ದೇಶದಿಂದ ೧೯೭೦—೭೧ ಹಾಗೂ ೭೧-೭೨ರ ಮುಂಗಡ ಪತ್ರಗಳಲ್ಲಿ ಅಗತ್ಯವಾದ ಹಣಕಾಸಿನ ಏರ್ಪಾಟು ಮಾಡಲಾಗಿದೆ.

ಇದಲ್ಲದೆ ಸಣ್ಣ ರೈತರು, ಬೇಸಾಯೋಪಜೀವಿಗಳಾದ ಶ್ರಮಿಕರು, ಹಾಗೂ ಗ್ರಾಮದ ಕೈ-ಕಸುಬುಗಾರರು ಇವರೇ ಮೊದಲಾದವರ ಹಿತರಕ್ಷಣೆಗಾಗಿ ನಾಲ್ಕನೆಯ ಯೋಜನೆಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮಗಳಿಂದಾಗಿ ಮೇಲೆ ವಿವರಿಸಿದ ವರ್ಗಗಳ ಜನರು ಅಗತ್ಯವಾದ ಸಾಲ-ಸೋಲಗಳನ್ನು ಬೇಸಾಯಕ್ಕೆ ಬೇಕಾದ ಆಧುನಿಕ ರಾಸಾಯನಿಕ ಗೊಬ್ಬರ, ಸುಧಾರಿಸಿದ ಬೇಸಾಯ ಉಪಕರಣಗಳು, ಬಿತ್ತನೆಯ ಬೀಜಗಳನ್ನೂ ಸುಲಭದಲ್ಲಿ ಪಡೆಯಲು ಸಾಧ್ಯವಾಗಿದೆ. ಇದರಿಂದ ಉತ್ಪಾದನೆ ಅಧಿಕಗೊಂಡು ವರಮಾನವೂ ಹೆಚ್ಚುತ್ತದೆ.

ಪದೇ ಪದೇ ಅಭಾವ ತಲೆದೋರುವ ಪ್ರದೇಶಗಳಲ್ಲಿನ ಜನರಿಗೆ ನಿರಂತರ ಉದ್ಯೋಗ ಕಲ್ಪಿಸುವುದಕ್ಕಾಗಿಯೇ ಗ್ರಾಮಾಂತರ ಉದ್ಯೋಗ ಯೋಜನೆಯೊಂದನ್ನು ಹಾಕಿಕೊಳ್ಳಲಾಗಿದೆ. ಇದಲ್ಲದೇ, ಖುಷ್ಕಿ ಬೇಸಾಯ ಪ್ರದೇಶದ ಸುಧಾರಣೆಗಾಗಿಯೂ ವಿಶೇಷ ಕಾರ್ಯಕ್ರಮಗಳು ಅಧಿಕ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಯೋಜನಾವಧಿಯಲ್ಲಿ ಈ ಕಾರ್ಯಕ್ರಮಗಳಿಗಾಗಿ ಕೇಂದ್ರ ಬಜೆಟ್‌ನಲ್ಲಿ ೨೫ ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ ಖುಷ್ಕಿ ಬೇಸಾಯ ಅಭಿವೃದ್ಧಿಗೆ ೧೫೦ ಕೋಟಿ ರೂ. ಗಳಷ್ಟು ನೆರವು ದೊರೆಯುವ ನಿರೀಕ್ಷೆಯಿದೆ.

ಇದಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವುದಕ್ಕಾಗಿಯೇ ತೀವ್ರ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಲಾಗಿದ್ದು ಈಗ ಅದು ಅನುಷ್ಠಾನದಲ್ಲಿದೆ. ದೇಶದ ಎಲ್ಲಾ ಜಿಲ್ಲೆಗಳಲ್ಲೂ ಶ್ರಮಪ್ರಧಾನವಾದ ಕಾರ್ಯಯೋಜನೆಗಳನ್ನು ಕೈಗೊಂಡು, ಉದ್ಯೋಗಗಳನ್ನು ಸೃಷ್ಟಿಸುವುದೇ ಈ ಕ್ರಮದ ಗುರಿ. ಪ್ರತಿಯೊಂದು ಜಿಲ್ಲೆಯಲ್ಲೂ ಸರಾಸರಿ ಹತ್ತು ತಿಂಗಳ ಅವಧಿಯಲ್ಲಿ ಸುಮಾರು ೧೦೦೦ ಮಂದಿ ಶ್ರಮಿಕರಿಗೆ ಇದರಿಂದ ಉದ್ಯೋಗ ದೊರೆಯುವ ಅಂದಾಜಿದೆ. ೧೯೭೧-೭೨ರಲ್ಲಿ ಈ ಬಾಬ್ತಿಗಾಗಿ ೫೦ ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ದೇಶದ ೩೨೭ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಕೈಗೊಳ್ಳಲು ಈವರೆಗೆ ೨೬ ಕೋಟಿ ರೂ. ಮಂಜೂರಾಗಿದೆ.

ಸುಶಿಕ್ಷಿತರ ನಿರುದ್ಯೋಗ ಸಮಸ್ಯೆ

ಸುಶಿಕ್ಷಿತರು ಹಾಗೂ ತಾಂತ್ರಿಕ ತರಬೇತಿ ಪಡೆದವರ ಸಂಖ್ಯೆ ಒಂದೇ ಸಮನೆ ಹೆಚ್ಚುತ್ತಿದೆ. ಇವರೆಲ್ಲರಿಗೂ ಉದ್ಯೋಗ ಒದಗಿಸುವುದು ಒಂದು ಅಗಾಧವಾದ ಸಮಸ್ಯೆಯಾಗಿದೆ. ನಾಲ್ಕನೆಯ ಯೋಜನೆಯಲ್ಲಿ ಈ ಸಮಸ್ಯಾ ಪರಿಹಾರದತ್ತ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರಿ ಕ್ಷೇತ್ರದಲ್ಲಿ ಅಧಿಕ ಬಂಡವಾಳ ಹೂಡಿ, ಅದರ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. ಇದರಿಂದ ಅಧಿಕ ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತವೆ. ಬದಲಾಗುತ್ತಿರುವ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗೆ ಸುಶಿಕ್ಷಿತರು ಹೊಂದಿಕೊಳ್ಳುವಂತೆ ಶಿಕ್ಷಣವನ್ನು ವೃತ್ತಿಪ್ರಧಾನವಾದ ರೀತಿಯಲ್ಲಿ ಬದಲಾಯಿಸಲು ಪ್ರಾಧಾನ್ಯ ನೀಡಲಾಗಿದೆ. ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವೃತ್ತಿ ವೈವಿಧ್ಯತೆಯನ್ನು ಸಾಧಿಸಿ, ಅಧಿಕ ಜನರಿಗೆ ತರಬೇತಿ ದೊರೆಯುವಂತೆ ನೋಡಿಕೊಳ್ಳಲಾಗುವುದು. ದೇಶದಲ್ಲಿರುವ ೩೫೭ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಒಟ್ಟು ೩೨ ಎಂಜಿನೀಯರಿಂಗ್ ಹಾಗೂ ೨೨ ಎಂಜನೀಯರಿಂಗ್ ಅಲ್ಲದ ಇತರ ವೃತ್ತಿಗಳಲ್ಲಿ ತರಬೇತಿ ನೀಡಲು ಅವಕಾಶವಿದ್ದು ಈ ತರಬೇತಿ ಸಂಸ್ಥೆಗಳಲ್ಲಿ ೧೫೪,೪೪೨ ಮಂದಿಗೆ ಪ್ರವೇಶಾವಕಾಶವಿದೆ. ಅಪ್ರೆಂಟಿಸ್‌ಷಿಪ್ ಕಾರ್ಯಕ್ರಮಕ್ಕೆ ಆದ್ಯತೆ ದೊರೆತಿದೆ. ಈಗ ಸುಮಾರು ೪೨,೧೦೦ ಮಂದಿ ಅಪ್ರೆಂಟಿಸ್‌ಗಳಿದ್ದು ನಾಲ್ಕನೆಯ ಯೋಜನೆಯ ಕೊನೆಯ ಹೊತ್ತಿಗೆ ಅವರ ಸಂಖ್ಯೆ ೭೫,೦೦೦ವಾಗಲಿದೆ. ಎಂಜನಿಯರಿಂಗ್ ಹಾಗೂ ತಾಂತ್ರಿಕ ಅರ್ಹತೆಯ ಸಿಬ್ಬಂದಿ; ಉತ್ಪಾದನಾ ಕಾರ್ಯಗಳಲ್ಲಿ ನಿರತರಾಗಲು ಹಾಗೂ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಸ್ಟೇಟ್ ಬ್ಯಾಂಕ್ ಮತ್ತು ಇತರ ರಾಷ್ಟ್ರೀಕೃತ ಬ್ಯಾಂಕ್‌ಗಳು ಸಹಾಯ ಮಾಡುತ್ತಿವೆ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನ
ಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ
ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

ವಿಜ್ಞಾನ ಸಂಶೋಧನೆ—

ಕೋಮಲ ಗಿಡಗಳಿಗೆ ತಂಗಾಳಿ ವಿರುದ್ಧ ನೊರೆಯ ರಕ್ಷಣೆ

ನಿಮ್ಮ ತೋಟದಲ್ಲಿ ಕೆಲವು ಕೋಮಲ ತರಕಾರಿ ಗಿಡಗಳಿವೆ. ನಿಮಗೆ ಸುಗ್ಗಿಯ ಕಾಲದಲ್ಲಿ ಅನಿರೀಕ್ಷಿತವಾಗಿ ಅಥವಾ ಕೊನೆಯಲ್ಲಿ ಬೀಸುವ ಶೀತ ಮಾರುತದ ಭಯವಿದೆ ಎಂದು ಭಾವಿಸೋಣ. ಹಾನಿಕರವಾದ ಶೀತಗಾಳಿಯ ವಿರುದ್ಧ ನೀವು ಈ ಬೆಳೆಗಳಿಗೆ ಹೇಗೆ ರಕ್ಷಣೆ ನೀಡುವಿರಿ?

ಟೆಕ್ಸಾಸ್‌ನಲ್ಲಿ ಮತ್ತು ಅಮೆರಿಕ ಇತರ ಭಾಗಗಳಲ್ಲಿರುವ ತರಕಾರಿ ತೋಟಗಾರರು ಕೈಗೊಳ್ಳಬಹುದಾದ ಕ್ರಮಗಳಿವು: ಏನೂ ಮಾಡದಿರುವುದು ಅಥವಾ ಗಿಡಗಳಿಗೆ ಬಟ್ಟೆ, ಕಾಗದ ಅಥವಾ ಪ್ಲಾಸ್ಟಿಕ್ ಹೊದಿಕೆಯೊದಗಿಸಿ, ಹೆಪ್ಪುಗಟ್ಟಿಸುವ ಚಳಿಯ ವಿರುದ್ಧ ಇಂಥ ರಕ್ಷಣೆ ಸಾಕು ಎಂದು ನಿರೀಕ್ಷಿಸುವುದು.

ತರಕಾರಿ ತೋಟಗಾರರು ಈಗ ಇನ್ನೊಂದು ವಿಧಾನವನ್ನು ಕಲಿತಿದ್ದಾರೆ. ಇದು ಯಶಸ್ವಿಯೂ ಆಗಿದೆ. ಈ ವಿಧಾನದಲ್ಲಿ ಟೆಕ್ಸಾಸ್‌ನ ವೆಸ್ಲಾಕೋದಲ್ಲಿರುವ ಯು. ಯಸ್. ಅಗ್ರಿಕಲ್ಚರಲ್ ಸರ್ವಿಸ್ (ಎಆರ್ ಎಸ್)ನವರು ಕಂಡುಹಿಡಿದಿರುವ ಒಂದು ನೊರೆ ಹೊದಿಕೆಯನ್ನುಪಯೋಗಿಸಲಾಗುವುದು.

ಈ ವಿಚಾರ ಸಂಪೂರ್ಣ ಹೊಸತೇನೂ ಅಲ್ಲ. ಎಳೆಯ ಗಿಡಗಳ ಸಮೀಪದ ಮಣ್ಣಿನಲ್ಲಿ ಶೇಖರವಾಗುವ ಶಾಖವನ್ನು ದಕ್ಷ ರೀತಿಯಿಂದ ರಕ್ಷಿಸಬಲ್ಲ ನೊರೆಯ ಹೊದಿಕೆಯ ಸಾಧ್ಯತೆಯ ಬಗೆಗೆ ಸಂಶೋಧಕರು ಕೆಲಗಾಲದಿಂದ ಪರಿಶೀಲನೆ ನಡೆಸುತ್ತಿದ್ದಾರೆ. ಈ ಸಂಶೋಧಕರು ಅನೇಕ ಸಮಸ್ಯೆಗಳನ್ನೆದುರಿಸಬೇಕಾಯಿತು:

ಮೊದಲನೆಯದಾಗಿ, ಅವರು ಕಡಿಮೆ ವೆಚ್ಚದ ಶೀತಗಾಳಿಯಿರುವ ರಾತ್ರಿಯಿಡೀ ಸ್ಥಿರವಾಗುಳಿಯಬಲ್ಲ ಮತ್ತು ಮುಂಜಾನೆಯ ಶಾಖದಲ್ಲಿ ಕರಗಿ ಹೋಗುವ ನೊರೆಯನ್ನು ಕಂಡುಹಿಡಿಯಬೇಕಾಯಿತು. ಎರಡನೆಯದಾಗಿ ನೊರೆಯನ್ನು ಉಂಟುಮಾಡಿ ಅದನ್ನು ಗಿಡಗಳಿಗೆ ಸಿಂಪಡಿಸಬಲ್ಲ, ಸರಳವಾದ, ಅಲ್ಪ ವೆಚ್ಚದ ಸಂಚಾರಿ ಜನರೇಟರನ್ನು ಸಿದ್ಧಗೊಳಿಸಬೇಕಾಯಿತು.

ಎ ಆರ್ ಎಸ್ ನ ಮಾರ್ವಿನ್ ಡಿ. ಹೈಲ್ಮನ್ ಮತ್ತು ಜಾನ್ ಎಫ್. ಬಾರ್ಥೊಲಿಕ್ ಎಂಬ ವಿಜ್ಞಾನಿಗಳು, ವಿಷ ಪರಿಣಾಮವಿಲ್ಲದ, ಮಣ್ಣಿಗೆ ಬಾಧೆಯುಂಟುಮಾಡದ ಒಂದು ನೊರೆಯನ್ನು ಸಿದ್ಧಗೊಳಿಸಿದ್ದಾರೆ. ಈ ನೊರೆ ೮ ರಿಂದ ೧೬ ಗಂಟೆಗಳವರೆಗೆ ಸ್ಥಿರವಾಗಿರುತ್ತದೆ. ಈ ಹೊದಿಕೆಯೊಳಗಿನ ಗಿಡಗಳು, ಹೊರಗಿನ ಗಿಡಗಳಿಗಿಂತ ೨೨ ಡಿಗ್ರಿ ಫ್ಯಾರೆನ್‌ಹೀಟ್ (೧೨ ಡಿಗ್ರಿ ಸೆಂಟಿಗ್ರೇಡ್)ಗಳಷ್ಟು ಹೆಚ್ಚು ಬೆಚ್ಚಗಿರುತ್ತವೆ.

ರೆಟ್ರೋಲೇಟ್ ಆರ್ ೩೦೮, ಫ್ಲುರೋಸಿಕ್ ಎಫ್—೬೮ ಮತ್ತು ಜಿಲಟಿನ್—ಈ ಮೂರನ್ನು ನೀರಿಗೆ ಸೇರಿಸಿ ನೊರೆಯನ್ನುಂಟುಮಾಡುವ ದ್ರಾವಣವನ್ನು ಸಿದ್ಧಗೊಳಿಸಲಾಗುವುದು. ಬೇಗನೆ ಈ ವಸ್ತುಗಳು ಘನರೂಪಗಳಲ್ಲಿ, ಮೊದಲೇ ಮಿಶ್ರಮಾಡಿದ ವಸ್ತುಗಳಾಗಿ ದೊರೆಯುವ ಸಾಧ್ಯತೆಯಿದೆ. ಇವನ್ನು ನಿಶ್ಚಿತ ಪ್ರಮಾಣದಲ್ಲಿ ಬಿಸಿನೀರಿನಲ್ಲಿ ಬೆರೆಸಿದರೆ ಸಾಕು, ನೊರೆ, ಸಿದ್ಧವಾಗುವುದು. ಪ್ರತ್ಯೇಕ ಪ್ರತ್ಯೇಕವಾಗಿ ವಸ್ತುಗಳನ್ನು ಬೆರಸುವ ತೊಂದರೆಯಿಲ್ಲ.

ಏ. ಆರ್. ಎಸ್.ನ ವಿಜ್ಞಾನಿಗಳು ಸಿದ್ಧಗೊಳಿಸಿರುವ ಜನರೇಟರ್‌ನಲ್ಲಿ ನೊರೆ ನಿರ್ಮಿತವಾಗುವುದು. ನೊರೆ ರೂಪುಗೊಂಡಂತೆ ಅದು ಕಂಟೈನರ್‌ನಿಂದ, ಜನರೇಟರ್‌ನ ಹಿಂಬದಿಯಲ್ಲಿರುವ ಸೇಚಕ ಟ್ಯೂಬ್‌ಗಳಿಗೆ ಹೋಗುವುದು, ಅನಂತರ ಗಿಡಗಳ ಮೇಲೆ ಸಿಂಪಡಿಸಲಾಗುವುದು.

ಆಳ ಕಡಿಮೆಯಿರುವ ಗುಳಿಗಳಲ್ಲಿ ಸಸಿ ನೆಡುವ ಮೂಲಕ, ತೋಟಗಾರರು ನೊರೆಯನ್ನು ಪರಿಮಿತ ಸ್ಥಳಕ್ಕೆ ನಿರ್ಬಂಧಿಸಿ, ನೊರೆಯ ಅವಶ್ಯಕತೆಗಳಲ್ಲಿ ಶೇಕಡ ೭೫ರಷ್ಟು ಕಡಿತ ಮಾಡಬಲ್ಲರು. ಇಷ್ಟೇ ಅಲ್ಲದೆ ಗುಳಿಗಳಿಂದಾಗಿ, ಅಲ್ಲಿರುವ ಗಿಡಗಳು ಮೇಲಿರುವ ಗಿಡಗಳಿಗಿಂತ ಎರಡು ಅಥವಾ ಮೂರು ಡಿಗ್ರಿ ಫ್ಯಾರೆನ್ ಹೀಟ್ ಅಧಿಕ ಬೆಚ್ಚಗಿರುತ್ತವೆ

ನೊರೆಯ ಹೊದಿಕೆಯ ರಕ್ಷಣಾ ವಿಧಾನಕ್ಕೆ ಎಕರೆಗೆ ಸುಮಾರು ೩೦ ಡಾಲರ್ ವೆಚ್ಚವಾಗುವುದು.

● ●

ವಿಶಾಲ ಸಾಮ್ರಾಜ್ಞಿ ಚಿಂತಾಲಕ್ಷ್ಮಿ

(ನಾಲ್ಕನೇ ಪುಟದಿಂದ)

ನ್ನೂ ಏಕಕಾಲದಲ್ಲಿ ಹಿಡಿಯೋದು ಹೇಗೆ ಸಾಧ್ಯವಾಗುತ್ತೆ?"

'ಹಿಡಿಯಬೇನು, ಆದರೆ, ಅದರಿಂದ....'

'ಅಲ್ಲ, ಈಗಿನ ಕಾಲ ಹಾಗಲ್ಲ. ಗಾಳ ಹಾಕೋನೇ ವೇದವೋದಬೇಕು.'

'ವೇದವೋದುವುದರಿಂದ ಹೊಟ್ಟೆ ಹೊರೆಯಲಾರದೆಂದ ಮೇಲೆ ಮತ್ತೆ ಮಾಡೋದಾದ್ರೂ ಏನು?'

'ಏನೂ ಮಾಡಬೇಡ. ಆ ವೇದಗಳನ್ನು ಮೂಟೆ ಕಟ್ಟಿ ಅಟ್ಟಕ್ಕೇರಿಸೋದು. ಕೈಯಲ್ಲಿ ಗಾಳ ಹಿಡಿದು ಯಾವ ಮೀನು ಬೀಳುತ್ತೇಂತ ಎದುರು ನೋಡೋದು...'

'ಅಲ್ರಿ ಇಂದು ಎಲ್ರ ಹಣೆಬರಾನೂ ಅಷ್ಟೆ. ವಂಚಕರಿಗೆ ವಂಚಿಸೋ ಚಿಂತೆ, ವಂಚಿತರಿಗೆ ವಂಚನೆಯಿಂದ ಪಾರಾಗೋ ಚಿಂತೆ....'

'ಹ್ಞೂಂ....'

'ಆದ್ರೆ ನೋಡಿ ಚಿಂತೆಯೆಲ್ಲ ದುಃಖಕ್ಕೂ ಕಾರಣವಾಗುತ್ತೆ....'

'ಆದರೆ ನಿಶ್ಚಿಂತೆ ಪತನದ ದಾರಿಯನ್ನು ತೋಳಿದಿಡುತ್ತೆ....'

'ಅಂದ್ರೆ ಚಿಂತೆಯೇ ಬೇಕು ಅಂತೀರಾ?'

'ಬೇಕು ಯಾಕೆ? ಚಿಂತಾ ಲಕ್ಷ್ಮಿಯದ್ದೇ ವಿಶಾಲ ಸಾಮ್ರಾಜ್ಯ....'

'ನಮ್ಮ ಮೇಲೂ....'

'ನಾವೇನು ಲೋಕಕ್ಕೆ ಹೊರಗೆ?'

'ಛೆ ಛೆ...ಒಳಗೇ ಒಳಗು....'

'ಹಾಗಿರುವಾಗ ಮತ್ತೆ....?'

'ಮತ್ತೆ ಅಲ್ಲ, ಈಗ್ಲೇ....'

—ಗೋರಾ

● ●

ಕಾಸರಗೋಡು ಕನ್ನಡಿಗರ ಸಮ್ಮೇಳನ ಸಿದ್ಧತೆ

ಕಾಸರಗೋಡಿನ ಕನ್ನಡಿಗರು ತಮ್ಮ ಆತ್ಮಬಲವರ್ಧಿಸುವ ಉದ್ದೇಶದಿಂದ ಸಮ್ಮೇಳನವೊಂದನ್ನು ಜರಗಿಸಲಿರುವರು. ಈ ಸಮ್ಮೇಳನಕ್ಕಾಗಿ ಬೇರೆ ಬೇರೆ ಸಮಿತಿಗಳನ್ನು ರಚಿಸುವ ಸ್ವಾಗತ ಸಮಿತಿಯು ತಾ. 19ರಂದು ಕಾಸರಗೋಡು ಕಾಲೇಜಿನಲ್ಲಿ ಸಭೆ ಸೇರಿತು.

ಎರಡು ದಿನ ಜರಗಲಿರುವ ಈ ಸಮ್ಮೇಳನದಲ್ಲಿ ಸಾಹಿತ್ಯ, ಶಿಕ್ಷಣ, ಕಲೆ, ಯಕ್ಷಗಾನ ಕ್ಷೇತ್ರಗಳಲ್ಲಿ ಕಾಸರಗೋಡಿನ ಕೊಡುಗೆಗಳ ಬಗ್ಗೆ ವಿಚಾರ ಗೋಷ್ಠಿ, ಹಾಗೂ ಕಾಸರಗೋಡಿನ ಕನ್ನಡಿಗರ ಬಹುದಿನಗಳ ಕನಸಾಗಿರುವ ಮೈಸೂರಿನೊಂದಿಗೆ ವಿಲೀನೀಕರಣದ ಬಗ್ಗೆ ಹಲವು ಮುಖಂಡರ ವಿವೇಚನೆ ನಡೆಯಲಿದೆ ಅಲ್ಲದೆ ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದ ಹಿರಿಯರನ್ನು ಸನ್ಮಾನಿಸಲಾಗುವುದು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣರು ಸಮ್ಮೇಳನಕ್ಕೆ ತಮ್ಮ ಪೂರ್ಣ ಸಹಕಾರ ನೀಡುವ ಭರವಸೆ ಇತ್ತಿರುವರು.

ಸ್ವಾಗತಸಮಿತಿಯು, ಹೊರನಾಡುಗಳಲ್ಲಿರುವ ಕಾಸರಗೋಡಿನ ಕನ್ನಡಿಗರು ಈ ವರದಿಯನ್ನು ಮನ್ನಿಸಿ ಈಗಿನ ತಮ್ಮ ವಿಳಾಸಗಳನ್ನು 'ಕಾಸರಗೋಡು' ಕನ್ನಡಿಗರ ಸಮ್ಮೇಳನ, ಕಾರ್ಯಾಲಯ, ಬ್ಯಾಂಕ್ ರಸ್ತೆ, ಕಾಸರಗೋಡು' ಎಂಬ ವಿಳಾಸಕ್ಕೆ ಕಳುಹಿಸಿಕೊಟ್ಟು ಸಹಕರಿಸ ಬೇಕೆಂದು ಕರೆ ನೀಡಿದೆ.

ಭಾರತೀಯ ವಿದ್ಯಾಭವನದಲ್ಲಿ ಶ್ರೀ ರಂಗನಾಥ ದಿವಾಕರ

ಭಾರತೀಯ ವಿದ್ಯಾಭವನದ ಮಂಗಳೂರು ಕೇಂದ್ರದವರು ಮಂಗಳೂರಿನ ಕೆ. ಎಂ. ಸಿ. ಸಭಾಭವನದಲ್ಲಿ ಏರ್ಪಡಿಸಿದ್ದ ಸ್ವಾಮಿ ಅರವಿಂದರ ಜನ್ಮ ಶತಮಾನೋತ್ಸವ ಭಾಷಣ ಮಾಲೆಯ ಎರಡನೇ ಕಾರ್ಯಕ್ರಮದಲ್ಲಿ ಡಾ। ಆರ್. ಆರ್. ದಿವಾಕರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ವಾಮಿ ಅರವಿಂದರ ಜೀವನ, ತತ್ವಗಳ ಕುರಿತು ವಿವರಿಸಿದರು.

ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಸಿದರು.

ಡಾ। ದಿವಾಕರರು ಮಾತಾಡಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳು ಬೇರೆ ಬೇರೆ ಅಲ್ಲವೆಂದೂ, ಪ್ರಪಂಚವೆಲ್ಲ ಒಂದೇ ಎಂಬ ಮಹರ್ಷಿ ಅರವಿಂದರ ಸಂದೇಶವನ್ನು ತಿಳಿಸಿದರು. ಸ್ವಾಮಿ ಅರವಿಂದರ ರಾಷ್ಟ್ರಪ್ರೇಮದ ಬಗ್ಗೆ ಮಾತಾಡಿ ಅನಂತರ ಅವರ ಚಿಂತನೆ ರಾಜಕೀಯದಿಂದ ಯೋಗ–ಸಾಧನೆ ಮತ್ತು ಸಿದ್ಧಿಯ ಕಡೆಗೆ ಹೇಗೆ ಪರಿವರ್ತನೆಯಾಯಿತೆಂಬುದನ್ನು ವಿವರಿಸಿ ಪಾಂಡಿಚೇರಿಯಲ್ಲಿ ನಡೆಯುತ್ತಿರುವ ಆಶ್ರಮದ ಉದ್ದೇಶ ಚಟುವಟಿಕೆಗಳನ್ನು ವಿವರಿಸಿದರು. ಸ್ವಾಮಿ ಅರವಿಂದರ ಪೂರ್ಣ ಯೋಗದ ಸಾರವನ್ನು ವಿವರಿಸಿದ ಡಾ। ದಿವಾಕರರು ಭಾವನಾಶೀಲರಾದ ಜನ ಅರವಿಂದರ ದರ್ಶನವನ್ನು ಅಭ್ಯಸಿಸುವುದು ಅಗತ್ಯವೆಂದರು.

ಕೇಂದ್ರದ ಅಧ್ಯಕ್ಷ ಡಾ। ಎಂ. ಸಿ. ಪೈಯವರು ಡಾ। ದಿವಾಕರ್‌ರವರ ಭಾಷಣದ ಸಾರವನ್ನು ತಿಳಿಸಿ ಅವರನ್ನು ಅಭಿನಂದಿಸಿದರು.

ಶ್ರೀಮತಿ ಕಲ್ಯಾಣಿ ಡಿ. ಶೆಟ್ಟರು ವಂದನೆಗಳನ್ನರ್ಪಿಸಿದರು.

ದ. ಕ. ಜಿಲ್ಲಾಭಿವೃದ್ಧಿ ಮಂಡಳಿ ಸಭೆ

ದ. ಕ. ಜಿಲ್ಲಾಭಿವೃದ್ಧಿ ಮಂಡಳಿ ಸಭೆಯು ತಾ. 22ರಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ಜಿಲ್ಲಾಧಿಕಾರಿಶ್ರೀ ಎನ್.ಎ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಜರಗಿತು.

ಜಿಲ್ಲೆಯಲ್ಲಿ ಕೋಳಿಮರಿಗಳ ಅಭಾವದ ಬಗ್ಗೆ ಮಾತಾಡಿ ಈ ಕುರಿತು ಆಸಕ್ತಿ ವಹಿಸಿ ತಕ್ಕ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಯವರು ಪಶು ವೈದ್ಯಾಧಿಕಾರಿಗಳನ್ನು ವಿನಂತಿಸಿದರು.

ಶ್ರೀ ಎಂ. ರಂಗಾರವರು ಉಡುಪಿಯ ಮಣಿಪುರದಲ್ಲೊಂದು ಕಿರುವೈದ್ಯ ಶಾಲೆಯನ್ನು ತೆರೆಯುವ ಅವಶ್ಯಕತೆಯನ್ನು ವಿವರಿಸಿದರು.

ತೋಟಗಾರಿ ಇಲಾಖೆಯ ವರದಿಯ ಕುರಿತು ಚರ್ಚೆ, ಹಾಗೂ ವಿದ್ಯುಚ್ಛಕ್ತಿ ವಿಭಾಗದಲ್ಲಾದ ಪ್ರಗತಿಯ ವರದಿಯ ಕುರಿತು ವಿಮರ್ಶೆ ನಡೆಯಿತು.

ಭೂ ವಿತರಣೆಯ ಬಗ್ಗೆ ಚರ್ಚೆನಡೆದು, ಭೂ ವಿತರಣೆಯನ್ನು ಅರ್ಜಿಗಳ ಆದ್ಯತೆಗನುಗುಣವಾಗಿ ಕಾರ್ಯರೂಪಕ್ಕೆ ತರುವ ಒಂದು ನಿಶ್ಚಿತ ಕಾರ್ಯಕ್ರಮವಿರಿಸಿಕೊಳ್ಳುವಂತೆ ಶ್ರೀ ಎ. ಜಿ. ಕೊಡ್ಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅನಂತರ ಸಭೆಯು ಜಿಲ್ಲೆಯ ತಾಲೂಕು ಅಭಿವೃದ್ಧಿ ಮಂಡಳಿಗಳ 1970–71ರ ಆಡಳಿತ ವರದಿಗಳನ್ನು ವಿಮರ್ಶಿಸಿತು.

ಎಡನೀರು ಶಾರದಾಂಬಾ ಭಜನಾ ಸಮಿತಿಯ ಭಜನಾ ಮಹೋತ್ಸವ

ಎಡನೀರು ಮಠದ ಪರಮ ಪೂಜ್ಯ ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿಯವರು ಎಡನೀರಿನಲ್ಲಿ ಶಾರದಾಂಬಾ ಭಜನಾ ಸಮಿತಿಯ ಭಜನಾ ಮಹೋತ್ಸವದ ಅಂಗವಾಗಿ ಜರಗಿದ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರಂಭದಲ್ಲಿ ಸಂಘದ ಪರವಾಗಿ ವೆಂಕಟರಾಜ ಪುಣಿಂಚಿತ್ತಾಯರು ಸ್ವಾಗತಿಸಿದರು.

ಸ್ವಾಮೀಜಿಯವರು ಜನತೆಗೆ ಸತ್ಸಂಗಶೀಲರಾಗಲು ಕರೆನೀಡಿ ಪರಮಾರ್ಥದ ದಾರಿಯಲ್ಲಿ ಮುನ್ನಡೆಯಲು ಅದು ಸಹಾಯಕವಾಗುತ್ತದೆ ಎಂದರು.

ನಿಯೋಜಿತ ಭಾಷಣಕಾರ ವಿದ್ವಾನ್ ಶ್ರೀ ಕೆ. ಎಸ್. ಶರ್ಮರು ಮಾತಾಡಿ ಭಗವಂತನ ಭಜನೆಯಿಂದ ಉತ್ತಮ ಸಂಸ್ಕಾರ ಮೂಡುವಂತಾಗಬೇಕೆಂದರು.

ಅಂತ್ಯದಲ್ಲಿ ಶ್ರೀ ಯು. ಜಿ. ಭಟ್ಟರು ವಂದಿಸಿದರು. ಭಜನಾ ಮಂಗಳಾರತಿಯ ನಂತರ ಪಾತ್ರಿಗಳಿಂದ ದರ್ಶನ, ಕೆಂಡಸೇವೆ, ಪ್ರಸಾದ ವಿತರಣೆ ಮುಂತಾದ ಕಾರ್ಯಕ್ರಮಗಳಿದ್ದವು.

ಧರ್ಮಸ್ಥಳದಲ್ಲಿ ಸಾಮೂಹಿಕ ವಿವಾಹ ಸಮಾರಂಭ ಸನ್ನಾಹ

ಧರ್ಮಸ್ಥಳದಲ್ಲಿ ಕ್ಷೇತ್ರದ ವತಿಯಿಂದ 'ಸಾಮೂಹಿಕ ವಿವಾಹ ಸಮಾರಂಭ'ದ ವ್ಯವಸ್ಥೆಯನ್ನು ತಾ. 29ರಂದು ಮಾಡಲಾಗಿದ್ದು ಈ ವ್ಯವಸ್ಥೆಯ ಸದುಪಯೋಗ ಪಡೆಯಲು ಮೂವತ್ತಕ್ಕೂ ಹೆಚ್ಚಿಗೆ ವಧೂ-ವರರ ಜೋಡಿಗಳು ಮುಂದೆ ಬಂದಿವೆ. ಇವರಲ್ಲಿ ಸರ್ವಧರ್ಮದವರಿಗೂ ಭಾಗವಹಿಸುವ ಅವಕಾಶವಿದ್ದು ಅವರವರ ಸಂಪ್ರದಾಯ, ವಿಧಾನಗಳಿಗನುಸಾರವಾಗಿ ಲಗ್ನದ ವ್ಯವಸ್ಥೆ ಮಾಡಲಾಗಿದೆ. ಸೀರೆ, ಕಣ, ಧೋತಿ, ಕರಿಮಣಿ, ತಾಳಿ ಇತ್ಯಾದಿಗಳನ್ನು ಶ್ರೀ ಕ್ಷೇತ್ರದ ವತಿಯಿಂದ ಉಚಿತವಾಗಿ ಒದಗಿಸಲಾಗುವುದು.

ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಈ ವ್ಯವಸ್ಥೆಯ ಬಗ್ಗೆ ಮಾತಾಡುತ್ತಾ, ಇಂದಿನ ದಿನಗಳಲ್ಲಿ ನಮ್ಮ ಸಮಾಜದಲ್ಲಿ ವಿವಾಹ ಸಂಬಂಧ ಅನಾವಶ್ಯಕ ವೆಚ್ಚ ಮಿತಿಮೀರಿ ಬೆಳೆದಿದ್ದು, ಜನಸಾಮಾನ್ಯರು ವಿವಾಹದಿಂದಾಗಿ ಜೀವನವಿಡೀ ಋಣ ಮುಕ್ತರಾಗಲು ಹೋರಾಡ ಬೇಕಾಗುವುದರಿಂದ ಇವೆಲ್ಲವನ್ನು ತಡೆಗಟ್ಟುವುದಕ್ಕೋಸ್ಕರ ವಿವಾಹದ ಪಾವಿತ್ರ್ಯ ಉಳಿಸುವುದಕ್ಕೋಸ್ಕರ ಇಂತಹ ಯೋಜನೆಯನ್ನು ಶ್ರೀ ಕ್ಷೇತ್ರದಲ್ಲಿ ಪ್ರಾರಂಭಿಸಲಾಗಿದೆ ಎಂದರು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ರಾಜ್ಯಸಭೆಗೆ

ಪದ್ಮಭೂಷಣ ಟಿ. ಎ. ಪೈ

ಎರಡು ವರ್ಷಗಳಿಗೆ ಮೊದಲು ಸಿಂಡಿಕೇಟ್ ಬ್ಯಾಂಕ್ (ರಾಷ್ಟ್ರೀಕೃತ)ನ ಕಸ್ಟೋಡಿಯನ್ ಪದವಿಗೆ ರಾಜಿನಾಮೆ ನೀಡಿ ಜೀವವಿಮಾ ನಿಗಮದ ಚೇಯರ್‌ಮ್ಯಾನ್ ಆಗಿ ಅಧಿಕಾರ ಸ್ವೀಕರಿಸಿದ್ದ ಶ್ರೀ ಟಿ.ಎ. ಪೈಯವರೀಗ ಕೇಂದ್ರದಲ್ಲಿ ಸಚಿವರಾಗುವರೆಂಬ ವರದಿಗಳು ಬಂದಿವೆ. ಇದಕ್ಕೆ ಪೂರ್ವಭಾವಿಯಾಗಿ ಅವರು ರಾಜ್ಯ ಸಭೆಗೆ ಮೈಸೂರು ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅನುಕೂಲವಾಗುವಂತೆ ತಮ್ಮ ಹುದ್ದೆಗೆ ರಾಜಿನಾಮೆ ಸಲ್ಲಿಸಿದ್ದಾರೆ. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಶ್ರೀ ಪೈಯವರನ್ನು ರಾಜ್ಯ ಸಭೆಗೆ ತನ್ನ ಅಭ್ಯರ್ಥಿಯೆಂದು ಆರಿಸಿದೆ.

ಶ್ರೀ ಟಿ. ಅನಂತ ಪೈಯವರಿಗೆ ರಾಜ್ಯಕೀಯವಾಗಲೀ ಕಾಂಗ್ರೆಸ್ ಪಕ್ಷವಾಗಲೀ ಹೊಸತಲ್ಲ. ೧೯೫೭ರಲ್ಲೇ ಇವರು ಮದ್ರಾಸ್ ವಿಧಾನ ಸಭೆಗೆ ಕಾಂಗ್ರೆಸ್ಸಿನಿಂದ ಆರಿಸಿ ಬಂದಿದ್ದರು. ಮುಂದೆ ಚುನಾವಣೆಯಿಂದ ದೂರವಿದ್ದರೂ ಶ್ರೀ ಪೈಯವರು ೧೯೬೭ರ ವರೆಗೂ ಜಿಲ್ಲಾ—ಪ್ರಾದೇಶಿಕ ಕಾಂಗ್ರೆಸ್ಸಿನೊಡನೆ ನಿಕಟ ಸಂಬಂಧವಿರಿಸಿಕೊಂಡಿದ್ದರು. ತನ್ನ ಜನತೆಯನ್ನೆಂದೂ ಮರೆಯದ ಶ್ರೀ ಪೈಯವರು ಸಮರ್ಥ ಅರ್ಥಶಾಸ್ತ್ರಜ್ಞರು. ಅವರು ಸಿಂಡಿಕೇಟ್ ಬ್ಯಾಂಕಿನ ವಿಶಾಲ ದೃಷ್ಟಿಕೋನದ ನಿರ್ಮಾಪಕರು. ಕೃಷಿ ಮೊದಲಾದ ಆದ್ಯತೆಯ ರಂಗಗಳೆಂದು ಇಂದು ಕರೆಯಲಾಗುತ್ತಿರುವ ಕ್ಷೇತ್ರಗಳಿಗೆ ಕೆಲವು ದಶಕಗಳಿಗೆ ಮೊದಲೇ ಆದ್ಯತೆ ನೀಡಿದ ದೂರದೃಷ್ಟಿಯುಳ್ಳ ಶ್ರೀ ಪೈಯವರು ಆಹಾರ ಧಾನ್ಯಗಳ ಕಾರ್ಪರೇಶನ್ನಿನ ಮೊತ್ತ ಮೊದಲ ಅಧ್ಯಕ್ಷರೂ ಆಗಿ ಒಂದು ವರ್ಷ ದುಡಿದಿದ್ದರು.

ಶ್ರೀ ಪೈಯವರು ಎರಡು ವರ್ಷ ಜೀವವಿಮಾ ನಿಗಮದ ಅಧ್ಯಕ್ಷರಾಗಿ ಅದರ ಸರ್ವಾಂಗೀಣ ಪ್ರಗತಿಗೆ ಕಾರಣಪುರುಷರಾದರು. ಜೀವವಿಮಾ ಸಂದೇಶವನ್ನು ಮನೆ ಮನೆಗೂ ಮುಟ್ಟಿಸುವಲ್ಲಿ ಬಹಳಷ್ಟು ಸಿದ್ಧಿಗಳಿಸಿದರು. ೧೯೭೦ರ ಮಾರ್ಚಿ ಕೊನೆಯಲ್ಲಿ ಒಂದು ಸಾವಿರ ಕೋಟಿಯಿದ್ದ ನಿಗಮದ ವಿಮಾ ವ್ಯವಹಾರವು ಎರಡೇ ವರ್ಷಗಳಲ್ಲಿ ೧೭೦೦ ಕೋಟಿಯನ್ನು ಮುಟ್ಟಿ ದಾಖಲೆ ನಿರ್ಮಿಸುವಂತಾಯ್ತು. ಐ. ಎ. ಎಸ್. ಅಧಿಕಾರೀತರರು ಮೊತ್ತಮೊದಲ ಬಾರಿಗೆ ಜೀವವಿಮಾ ನಿಗಮದ ಅಧ್ಯಕ್ಷರಾದುದು ೧೯೭೦ರಲ್ಲಿ ಆಗ ಆಯ್ಕೆಗೊಂಡವರೇ ಶ್ರೀ ಪೈ.

ಶ್ರೀ ಪೈಯವರ ಸಮಾಜ ಸೇವೆಯನ್ನು ಗಮನಿಸಿ ರಾಷ್ಟ್ರಪತಿಯವರು ಈ ವರ್ಷ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದ್ದರು. ಪ್ರಾಯಃ ಆಗಲೇ ಶ್ರೀ ಪೈಯವರು ಕೇಂದ್ರ ಸರಕಾರದಲ್ಲಿ ಸೇರುವರೆಂಬ ಬಗ್ಗೆ ಕಿಂವದಂತಿಗಳು ಹಬ್ಬಿದ್ದುವು. ಶ್ರೀ ಪೈಯವರು ಕೇಂದ್ರ ಸಚಿವರಾಗುವರೆಂಬುದು ಈಗ ಬಹಳಷ್ಟು ಸುನಿಶ್ಚಿತವಿದೆ. ಶ್ರೀಮತಿ ಗಾಂಧಿಯವರು ಆಮೂಲಾಗ್ರವಾಗಿ ತನ್ನ ಸಂಪುಟವನ್ನು ಪುನರ್ಘಟಿಸಲಿರುವರು. ಆಗ ಶ್ರೀ ಪೈಯವರು ಕರ್ನಾಟಕವನ್ನು ಪ್ರತಿನಿಧಿಸುವ ಪ್ರಾಯಃ ವಿತ್ತಶಾಖೆಯನ್ನೇ ಪಡೆಯುವ ಸಂಭವವಿದೆ.

ಶ್ರೀ ಮುರಾರ್ಜಿ ದೇಸಾಯಿಯವರ ನಂತರ ಕೆಲಕಾಲ ತಾನೇ ವಿತ್ತಶಾಖೆಯನ್ನು ಹಿಡಿದುಕೊಂಡಿದ್ದ ಶ್ರೀಮತಿ ಗಾಂಧಿಯವರು ಅನಂತರ ಶ್ರೀ ಚವಣರಿಂದ ಗೃಹಖಾತೆಯನ್ನು ತಾನು ಪಡೆದು ವಿತ್ತಶಾಖೆಯನ್ನು ಅವರ ಹೆಗಲಿಗೇರಿಸಿದರು. ಶ್ರೀ ಚವಣರಿಗೆ ಈ ಶಾಖೆ ಸುತರಾಂ ಇಷ್ಟವಿಲ್ಲವೆಂದೂ ತನ್ನನ್ನು ಈ ಖಾತೆಯಿಂದ ಆದಷ್ಟು ಶೀಘ್ರವಾಗಿ ಬಿಡುಗಡೆ ಮಾಡಬೇಕೆಂದೂ ಅವರು ವಿನಂತಿಸುತ್ತಿದ್ದರು. ಶ್ರೀಮತಿ ಗಾಂಧಿಯವರು ಸಮರ್ಥ ವ್ಯಕ್ತಿಯೊಬ್ಬನ ಶೋಧದಲ್ಲಿದ್ದು, ಈಗ ಈ ಅನಂತ ರತ್ನವನ್ನು ಮೆಚ್ಚಿಕೊಂಡಿದ್ದಾರೆನ್ನಲಾಗುತ್ತದೆ.

ತನಗೆ ವಹಿಸಲಾಗುವ ಯಾವುದೇ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅಪೂರ್ವ ದಾಖಲೆಯುಳ್ಳ ಶ್ರೀ ಟಿ. ಅನಂತ ಪೈಯವರು ಸಮರ್ಥ ವಿತ್ತಸಚಿವರೂ ಆಗಬಲ್ಲರೆಂಬ ವಿಶ್ವಾಸವಿದೆ. ●

In the Court of the Munsiff of Bantwal, S. K.

O. S. No. 201/71.

Between:

1. Lingappa Hengsu and others —Plaintiffs

and

Jarappa and others —Defendants.

To:

1st deft. Jarappa, son of Hukru Hengsu, residing at Indottu village, Belthangady Taluk, Post Ujre.

2nd deft. Bogra Poojary, son of Daru Hengsu, residing at Indottu village, Belthangady Taluk, Post Manjotti

3rd defendant: Neelamma, d/o Ramakku Hengsu, residing at Indottu village, Belthangady Taluk, Post Kalmanja, as also guardian of minor defts 5 to 11.

4th deft. Padma, d/o Neelamma, residing at Indottu village, Belthangady Taluk, Post Manjotti.

12th deft. Oakayya, s/o Korapalu, residing at Kelaginapairu house, Thenka Kajrkar village, Belthangady Taluk, Post Thenkakajekar

Please take notice that the above suit stands posted to 11-4-1972 for your appearance at 11 A. M before the Munsiff court, Bantwal. You are directed to appear on that day before the said court in person or through Advocate. If you fail to appear on that day the suit will proceed with in your absence.

(By order of Court)

P. SHANKERNARAYAN

Advocate for Plaintiffs.

ರಾಜ್ಯ ಸಚಿವ ಸಂಪುಟ

ದೇವರಾಜ ಅರಸು (ಮುಖ್ಯ ಮಂತ್ರಿ) ಸಾಮಾನ್ಯ ಆಡಳಿತ, ಗೃಹ, ದೊಡ್ಡ ನೀರಾವರಿ, ಯೋಜನೆ.

ಎಚ್. ಎಂ. ಚೆನ್ನಬಸಪ್ಪ—ಲೋಕೋಪಯೋಗಿ.

ಎಚ್. ಸಿದ್ಧವೀರಪ್ಪ—ಆರೋಗ್ಯ.

ಎಸ್. ಹುಚ್ಚಮಾಸ್ತಿ ಗೌಡ—ಕಂದಾಯ.

ಕೆ. ಶಂಕರ ಆಳ್ವ—ಸಹಕಾರ.

ಎಸ್. ಎಂ. ಕೃಷ್ಣ—ಕೈಗಾರಿಕೆ, ವಾಣಿಜ್ಯ

ಬಿ. ಬಸವಲಿಂಗಪ್ಪ—ಪೌರಾಡಳಿತ, ವಸತಿ.

ಎ. ಆರ್. ಬದರೀನಾರಾಯಣ—ಶಿಕ್ಷಣ.

ಕೆ. ಎಚ್. ಪಾಟೀಲ್—ಕೃಷಿ, ಅರಣ್ಯ.

ಎಂ. ವೈ. ಘೋರ್ಪಡೆ—ಹಣಕಾಸು.

ಅಜೀಜ್ ಸೇಠ್—ಕಾರ್ಮಿಕ, ಸಾರಿಗೆ, ಪ್ರವಾಸೋದ್ಯಮ.

ಮಲ್ಲಿಕಾರ್ಜುನ ಸ್ವಾಮಿ—ಪಂಚಾಯತಿ ರಾಜ್ಯ

ಡಿ. ಕೆ. ನಾಯಕರ್—ಕಾಯದೆ.

ರಾಜ್ಯಮಂತ್ರಿಗಳು

ವಿ. ಎಸ್. ಕೌಜಲಗಿ—ಯುವಜನ ಕಲ್ಯಾಣ.

ಎಚ್. ಎನ್. ನಂಜೇಗೌಡ—ಮುಖ್ಯ ನೀರಾವರಿ (ಮುಖ್ಯ ಮಂತ್ರಿಯವರಿಗೆ ಸೇರಿಕೊಂಡು)

ಆರ್. ಡಿ. ಕಿತ್ತೂರ್—ಗೃಹ (ಮುಖ್ಯ ಮಂತ್ರಿಯವರಿಗೆ ಸೇರಿಕೊಂಡು)

ಬಿ. ಶಿವಣ್ಣ—ಅರ್ಥ (ಹಣಕಾಸು ಸಚಿವರಿಗೆ ಸೇರಿಕೊಂಡು)

ಶ್ರೀಮತಿ ಇವಾವಾಜ್—ಆಹಾರ ಮತ್ತು ನಾಗರಿಕ ಪೂರೈಕೆ

ಕೆ. ಟಿ. ರಾಠೋಡ್—ಮೀನುಗಾರಿಕೆ.

ದೇವೇಂದ್ರಪ್ಪ ಘೂಳಪ್ಪ—ಯೋಜನೆ. ಸುದ್ದಿ (ಮುಖ್ಯಮಂತ್ರಿಯವರಿಗೆ ಸೇರಿಕೊಂಡು)

ಎನ್. ಚಿಕ್ಕೇಗೌಡ—ಪಶು ಸಂಗೋಪನೆ.

ಎಸ್. ಬಿ. ನಾಗರಾಳ—ರೇಶ್ಮೆ ವ್ಯವಸಾಯ (ಮುಖ್ಯಮಂತ್ರಿಯವರಿಗೆ ಸೇರಿಕೊಂಡು)

●

ಅಂತಾರಾಷ್ಟ್ರೀಯ ರೋಟರಿ ಪರಿಷತ್‌ಗೆ ಡಾ| ಅಡಪ

ಅಮೇರಿಕದ ಹೂಸ್ಟನ್ ಟೆಕ್ಸಾಸ್‌ನಲ್ಲಿ ಇದೇ ಜೂನ್ ತಿಂಗಳಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ರೋಟರಿ ಪರಿಷತ್ತಿನಲ್ಲಿ ಭಾಗವಹಿಸಲು ಡಿಸ್ಟ್ರಿಕ್ಟ್ ಗವರ್ನರ್ ಸೋಮಿನಿಯಾಗಿ ತೆರಳಲಿರುವ ರೊಟೇರಿಯನ್ ಡಾ| ಎಂ. ಡಿ. ಅಡಪ ಅವರಿಗೆ ಹಾಗೂ ಅವರೊಂದಿಗೆ ವಿದೇಶ ಪ್ರವಾಸ ಕೈಗೊಳ್ಳುವ ಅವರ ಪತ್ನಿ ಶ್ರೀಮತಿ ಭವಾನಿ ಅಡಪರಿಗೂ ತಾ. 23ರಂದು ಮಂಗಳೂರಿನ ಮೋತಿಮಹಲಿನಲ್ಲಿ ಜರಗಿದ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯಲ್ಲಿ ಶುಭವಿದಾಯ ಕೋರಲಾಯಿತು.

ಕ್ಲಬ್ಬಿನ ಅಧ್ಯಕ್ಷ ರೊಟೇರಿಯನ್ ಡಾ| ಎಂ. ಶ್ರೀನಿವಾಸನ್‌ರ ಅಧ್ಯಕ್ಷತೆಯಲ್ಲಿ ಈ ಸಮಾರಂಭ ಜರಗಿತು. ಕಾರ್ಯದರ್ಶಿ ಶ್ರೀ ಎಂ. ಡಿ ಕುಶಿಯವರು ಕೆಲವು ಪ್ರಕಟಣೆಗಳನ್ನು ಓದಿದರು. ರೊಟೇರಿಯನ್‌ರಾದ ಸರ್ವಶ್ರೀ ಎಂ. ಜನಾರ್ದನ ಕಾಮತ್, ಯು. ರಾಜಾರಾಮ ಮಲ್ಯ, ಡಾ| ಕೆ. ಎನ್. ಪ್ರಭಾಕರ ರಾವ್, ಡಾ| ಕೆ. ಸಿ. ಗಣೇಶನ್, ಡಾ| ಎಚ್. ಡಿ. ಅಧ್ಯಂತಾಯರವರು ಭಾಷಣ ಮಾಡಿ ಶ್ರೀಮತಿ ಮತ್ತು ಡಾ| ಅಡಪರ ವಿದೇಶ ಪ್ರವಾಸವು ಸುಖಕರವಾಗಲೆಂದು ಹಾರೈಸಿದರು.

ಡಾ| ಅಡಪರು ತಮ್ಮನ್ನು ಗೌರವಿಸಿದುದಕ್ಕೆ ಕೃತಜ್ಞತೆ ಸಲ್ಲಿಸಿ ಭಾಷಣ ಮಾಡಿದರು. 1973ನೇ ಫೆಬ್ರವರಿ ತಿಂಗಳಲ್ಲಿ ಮಂಗಳೂರಲ್ಲಿ ಜಿಲ್ಲಾ ರೋಟರಿ ಸಮ್ಮೇಳನ ನಡೆಯಲಿದ್ದು ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾಗಲು ಡಾ| ಎಂ. ಪಿ ಪೈಯವರು ಒಪ್ಪಿದ್ದಾರೆಂದು ತಿಳಿಸಿದರು.

ಅಂತರ್ ರಾಷ್ಟ್ರೀಯ ರೋಟರಿ ಸಮ್ಮೇಳನದಲ್ಲಿ ಭಾಗವಹಿಸಲು ತೆರಳುವ ಶ್ರೀ ಬಿ. ದಾಮೋದರ ಪ್ರಭುಗಳಿಗೂ ಇದೇ ಸಂದರ್ಭದಲ್ಲಿ ಶುಭವಿದಾಯ ಕೋರಲಾಯಿತು. ಅಂತ್ಯದಲ್ಲಿ ಡಾ| ಶ್ರೀನಿವಾಸನ್ ಧನ್ಯವಾದವಿತ್ತರು.

ಧರ್ಮಸ್ಥಳದಲ್ಲಿ ಉಚಿತ ದಂತ ಚಿಕಿತ್ಸಾ ಶಿಬಿರ

ಕಳೆದ ತಾ. 12ರಿಂದ 22ರ ವರೆಗೆ ಧರ್ಮಸ್ಥಳದ ವಸಂತ ಮಹಲಿನಲ್ಲಿ ದಂತ ವೈದ್ಯ ಡಾ| ಮಾರ್ಥ್ಯೂ ಪಿಂಟೋರ ಉಚಿತ ದಂತ ಚಿಕಿತ್ಸಾ ಶಿಬಿರವು ಯಶಸ್ವಿಯಾಗಿ ನಡೆಯಿತು. ಆರಂಭದಲ್ಲಿ ಈ ಶಿಬಿರವನ್ನು ಶ್ರೀ ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದ್ದರು.

'ಸೈಂಟ್ ಮೇರಿಸ್ ಡೆಂಟಲ್ ಹಾಸ್ಪಿಟಲ್' ಹೆಸರಿನಲ್ಲಿ ಈ ಸೇವೆ ಮುಂದುವರಿಸಲು ಸಂಕಲ್ಪ ಮಾಡಿರುವ ಡಾ| ಪಿಂಟೋ ಕುಟುಂಬದವರು ಈ ಮೂಲಕ ಗ್ರಾಮಾಂತರ ಪ್ರದೇಶಗಳ ಜನತೆಗೆ ಉಪಕಾರವಾದೀತೆಂದು ಅಭಿಪ್ರಾಯ ಪಡುತ್ತಾರೆ.

ಉಡುಪಿ ಕಾಂಗ್ರೆಸ್ ಕಾರ್ಯಕರ್ತರಿಗೆ ಕೃತಜ್ಞತಾರ್ಪಣ ಸಭೆ

ಉಡುಪಿ ಕಾಂಗ್ರೆಸಿನ ವಿಜಯಕ್ಕೆ ಕಾರಣರಾದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುವ ಮತ್ತು ವಿಜಯಿ ಅಭ್ಯರ್ಥಿ ಶ್ರೀಮತಿ ಮಧ್ವರಾಜರನ್ನು ಅಭಿನಂದಿಸುವ ಸಲುವಾಗಿ ಉಡುಪಿ ಬ್ಲಾಕ್ ಕಾಂಗ್ರೆಸ್ ಕನ್ವೀನರ್ ಶ್ರೀ ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಸ್ಥಳೀಯ ಗೀತಾಂಜಲಿಯಲ್ಲಿ ತಾ. 21ರಂದು ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ಜರಗಿತು.

ಶ್ರೀಗಳಾದ ಅಲೆವೂರು ಸರ್ವೋತ್ತಮ ಕಿಣಿ, ಶ್ರೀ ಮಟ್ಟಿ ರಾಮಚಂದ್ರ ರಾವ್, ಮನ್ನಾಸಾಬ್, ಡಾ| ವಿ. ಎಸ್. ಶೆಟ್ಟಿ, ಮುದ್ದು ಮಾಸ್ತರ್ ಮತ್ತು ಭಾಸ್ಕರ ಪ್ರಭು ಮೊದಲಾದವರು ಈ ಸಂದರ್ಭದಲ್ಲಿ ಮಾತಾಡಿದರು

ಶ್ರೀಮತಿ ಮನೋರಮಾ ಮಧ್ವರಾಜರು ಮಾತನಾಡಿ ತನ್ನ ವಿಜಯವು ಜನತೆಯ ವಿಜಯವೆಂದೂ, ಐದು ವರುಷಗಳವಧಿಯಲ್ಲಿ ಸಾಧ್ಯವಾದಷ್ಟು ಜನಸೇವೆ ಮಾಡಿ ಉಡುಪಿ ಕ್ಷೇತ್ರಾಭಿವೃದ್ಧಿಗೆ ಪರಿಶ್ರಮಿಸುವೆನೆಂದೂ ನುಡಿದು ತನ್ನ ವಿಜಯಕ್ಕಾಗಿ ದುಡಿದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಕೃಷಿಯಲ್ಲಿ ಕಡಿಮೆ ವೆಚ್ಚ, ಲಾಭ ಹೆಚ್ಚಿಸುವ ಕುರಿತು ಸಿಂಡಿಕೇಟ್ ಕೃಷಿ ಪ್ರತಿಷ್ಠಾನದ ವಿಚಾರ ಗೋಷ್ಠಿ

ಮಣಿಪಾಲದ ಸಿಂಡಿಕೇಟ್ ಕೃಷಿ ಪ್ರತಿಷ್ಠಾನವು ಬೇಸಾಯದ ವೆಚ್ಚ ಕಡಿಮೆ ಮಾಡುವುದು ಹಾಗೂ ಲಾಭ ಹೆಚ್ಚಿಸುವ ಬಗ್ಗೆ ವಿಚಾರಗೋಷ್ಠಿಯೊಂದನ್ನು ಎಪ್ರಿಲ್ ಎರಡರಂದು ಮಣಿಪಾಲದಲ್ಲಿ ಏರ್ಪಡಿಸಿದೆ. ಗೋಷ್ಠಿಯನ್ನು ರಾಷ್ಟ್ರೀಯ ಕೃಷಿ ಆಯೋಗದ ಸದಸ್ಯ ಡಾ| ಎಚ್. ಆರ್. ಅರಕೇರಿಯವರು ಉದ್ಘಾಟಿಸುವರು ಬೆಂಗಳೂರು ಕೃಷಿ ವಿದ್ಯಾನಿಲಯದ ಉಪಕುಲಪತಿ ಡಾ| ಕೆ. ಸಿ. ನಾಯಕ್, ಮೈಸೂರಿನ ಕೃಷಿ ಡೈರೆಕ್ಟರ್ ಡಾ| ಎಚ್. ಕುಲಕರ್ಣಿ ಮತ್ತು ಮುಂಬಯಿಯ ಎಗ್ರಿಕಲ್ಚರಲ್ ಫಿನಾನ್ಸ್ ಕಾರ್ಪರೇಶನಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಬಿ. ರುದ್ರಮೂರ್ತಿ ಮೊದಲಾದವರು ಗೋಷ್ಠಿಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

ರಾಜ್ಯದ ನಾಲ್ಕು ವಿವಿಧ ಪ್ರದೇಶಗಳ ಶ್ರೇಷ್ಠ ರೈತರಿಗೆ ಸಿಂಡಿಕೇಟ್ ಕೃಷಿ ಪ್ರತಿಷ್ಠಾನದ ಪ್ರಶಸ್ತಿಗಳನ್ನು ಈ ಸಂದರ್ಭದಲ್ಲಿ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು ವಿತರಣೆ ಮಾಡಲಿರುವರು.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

(ಎರಡನೇ ಪುಟದಿಂದ)

'ಬುದ್ಧೀ ಬದ್ದೆಗ ಮಹಾರಾಜರು'

'ಕರೆದು ತರಬಾರದಿತ್ತೇ? ಅವರಿಗೂ ನಮ್ಮ ಅನುಮತಿಯಗತ್ಯವೇ?' ಎಂದು ತಾನೇ ಭೃತ್ಯನನ್ನು ಹಿಂಬಾಲಿಸಿದ. ಅವನು ಹಜಾರವನ್ನು ದಾಟುವುದಕ್ಕೂ, ಅವರು ಒಳ ಪ್ರವೇಶಿಸುವುದಕ್ಕೂ ತಾಳಿಯಾಯಿತು.

ಅವರನ್ನು ಅತ್ಯಂತ ಆದರದಿಂದ ಬರಮಾಡಿಕೊಂಡು ಭದ್ರಾಸನದಲ್ಲಿ ಕುಳ್ಳಿರಿಸಿ 'ಈ ಸೇವಕನಿಂದ ಏನಾಗಬೇಕು. ಸೂಕ್ಷ್ಮ ತಿಳಿಸಿದ್ದರೆ ನಾನೇ ಬರುತ್ತಿದ್ದೆ'

'ತಮ್ಮನ್ನೊಮ್ಮೆ ನೋಡಿ ಹೋಗುವ ಎಂದು ಅನಿಸಿತು ಬಂದೆ. ಏನು ಮಹತ್ವದ ವಿಷಯ ಎಂದು ಕರೆ ಕಳಿಸಲಿ. ನಮ್ಮ ಬರುವಿಕೆಯಿಂದ ನಿಮಗೆ ತೊಂದರೆಯಾಯಿತೇನೋ?

'ಬೆಳಕು ಹರಿದರೆ ಈ ಸಾಮ್ರಾಜ್ಯದ ದೊರೆಯಾಗುವವರು ನೀವು. ನೀವೇ ಹೀಗೆ ನನ್ನ ಭೆಟ್ಟಿಗೆ ಬರುವುದೇ'

ಈ ಮಾತಿನಿಂದ ಬದ್ದೆಗ ಪೆಕ್ಕಸ ಬೆರಗಾದ.

ಅದನ್ನು ಆತ ನಿರೀಕ್ಷಿಸಿರಲಿಲ್ಲ.

'ಇದು ನಾಳೆ ಇತ್ಯರ್ಥವಾಗ ಬೇಕಾದ ಸಂಗತಿ. ನೀವು ಹೇಳಿದ ಮಾತ್ರದಿಂದ ಆಗುತ್ತದೆಯೇ'

'ಇದು ಎಂದೋ ತೀರ್ಮಾನವಾದ ವಿಷಯ. ಇದು ಆಳಿದ ಪ್ರಭುಗಳ ಕೊನೆಯ ಮಾತು. ಇದು ರಾಜಾಜ್ಞೆ. ಅದಕ್ಕೆ ತಲೆಬಾಗಿ ನಾವು ನಡೆಯಬೇಕು.'

ಬದ್ದೆಗ ಅವಾಕ್ಕಾದ. ಪಕ್ಕದಲ್ಲಿ ಕುಳಿತಿದ್ದ ಗೋವಿಂದ ಇದನ್ನು ಕೇಳಿ ಸಿಡಿಮಿಡಿಗೊಂಡ. ಅವರಿಬ್ಬರಿಗೂ ಈ ಮಾತುಗಳನ್ನು ಸ್ವಪ್ನದಲ್ಲಿ ಕೇಳಿದಂತನಿಸಿತು.

ಗೋವಿಂದನ ಕಡೆ ಮುಖ ತಿರುಗಿಸಿ ನರಸಿಂಹ ಗಂಭೀರ ಧ್ವನಿಯಲ್ಲಿ "ಈಗ ತಿಳಿಯಿತೇ ಯುವರಾಜರೆ: ನಾವಾರ ಬೆಂಬಲಕ್ಕಿರುವೆವೆಂದು? ಇವರು ನಮ್ಮ ಮುಂದಿನ ದೊರೆಗಳು. ಅವರಿಗೆ ನಿಷ್ಠೆಯಿಂದ ನಾವು ನಡೆದು ಕೊಳ್ಳಬೇಕು."

ನರಸಿಂಹ ಹೀಗೆ ನುಡಿದು, ನೂತನ ದೊರೆಗಳಿಗೆ ತನ್ನ ಭಕ್ತಿ ಗೌರವಗಳನ್ನು ಸಲ್ಲಿಸಿ "ನೀವೂ ನಿರ್ವಂಚನೆಯಿಂದ ನಡೆದುಕೊಳ್ಳುವುದಾಗಿ ಪ್ರತಿಜ್ಞೆ ಮಾಡಿ ಯುವರಾಜರೇ"

ಆದರೆ, ಗೋವಿಂದ ಅಲ್ಲಿರಲಿಲ್ಲ.

ಹೇಗೆ ಬಂದಿದ್ದನೋ ಹಾಗೆ ಹೊರಟು ಹೋಗಿದ್ದ— ದುರ್ವಾನ ತೆಗೆದುಕೊಂಡವನಂತೆ.

೧೦

ಬದ್ದೆಗನ ಪಟ್ಟಾಭಿಷೇಕದೊಡನೆ ಕವಿದಿದ್ದ ಕಾರ್ಮೋಡ ಚದುರಿತು. ಆಳಿಸಿಕೊಳ್ಳುವ ಜನ ದೇವರಂತಹ ದೊರೆ ಸಿಕ್ಕಿದ ಎಂದು ಸಂತಸಪಟ್ಟರು. ಸಾಮ್ರಾಜ್ಯದ ವಿವಿಧ ಭಾಗದ ಸಾಮಂತರಿಗೂ ಇದು ಸಮಾಧಾನ ತಂದಿತು.

ಆದರೆ ಗೋವಿಂದನ ಸೇಡಿನ ಹೊಗೆಯಾರಲಿಲ್ಲ. ಅವನಿಗೆ ಭುಜಕ್ಕೆ ಭುಜಕೊಟ್ಟು ಕೆಲಸ ಮಾಡಿದರು, ಚಾಳುಕ್ಯ ಕಕ್ಕರಸ, ಬಪ್ಪುವರು—ಈ ಇಬ್ಬರು ಬೆಂಬಲಿಗರು ಆಗಿಂದಾಗ್ಗೆ ಅಶಾಂತಿಯ ಅಗ್ನಿ ಜ್ವಾಲೆಯನ್ನೆಬ್ಬಿಸುತ್ತಿದ್ದರು. ಹೆಚ್ಚು— ಕಡಿಮೆ ಗೋವಿಂದನ ಸರಿ ವಯಸ್ಸಿನ ಈ ಇಬ್ಬರು ಚಾಳುಕ್ಯ ವಂಶೀಯರು, ದಕ್ಷರು, ಸಮರ್ಥರು, ಒಳ್ಳೆಯ ಯೋಧರು. ಅವರೇನೋ ತಮ್ಮ ಸ್ವಾರ್ಥವನ್ನು ಮುಂದಿಟ್ಟುಕೊಂಡೇ ಈ ಸಹಾಯಕ್ಕೆ ಬಂದವರು. ಆಗಾಗ್ಗೆ ನಡೆಯುವ ಈ ಸ್ವಯುದ್ಧ ಕಲಹದಿಂದ ರಾಷ್ಟ್ರಕೂಟ ರಾಜ್ಯ ಶಕ್ತಿಯ ಹ್ರಾಸವಾಗಿ, ತಮಗೆ ಸ್ವತಂತ್ರರಾಗುವ ಸುವರ್ಣ ಸಂಧಿ ಬರಬಹುದೆಂಬುದು ಅವರ ತರ್ಕ. ತನ್ನ ಅಧಿಕಾರವನ್ನು ಭದ್ರಗೊಳಿಸುವ ಆತುರದಲ್ಲಿ ಗೋವಿಂದ ಅವರ ಈ ಕೇಳಿಕೆಗೂ ಮಾನ್ಯತೆ ಕೊಟ್ಟಿದ್ದ.

ಈ ಇಬ್ಬರು ಚಾಳುಕ್ಯ ರಾಜರುಗಳು ಬದ್ದೆಗನ ವಿರುದ್ಧ ದಂಗೆ ಏಳುವಂತೆ ಜನರನ್ನು ಉತ್ತೇಜಿಸಿದರು-ಬಂಡೆದ್ದ ಜನಕ್ಕೆ ಸೂಕ್ತ ಮಾರ್ಗ ದರ್ಶನ ಮಾಡಲೂ ಮುಂದೆ ಬಂದರು-ಜೊತೆಗೆ ತಮ್ಮ ಸೈನ್ಯವನ್ನೂ ಕಳಿಸಿದರು—ಹಣದ ಪೂರೈಕೆ ಮಾಡಿದರು-ಬಂಡೆದ್ದವರನ್ನು ಬಗ್ಗು ಬಡಿಯುವ ಕೆಲಸಕ್ಕೆ ನರಸಿಂಹ ತನ್ನ ಮಗನನ್ನೇ ನೇಮಿಸಿದ.

ಅರಿಕೇಸರಿ ಶ್ರಮವಹಿಸಿ ದಂಗೆಯನ್ನಡಗಿಸಿದ. ತಂದೆಯ ಆಣತಿ ಪಡೆದು ನುಗ್ಗಿ ಬರುತ್ತಿದ್ದ ಬಪ್ಪುವ, ಕಕ್ಕರಸರ ಸೈನ್ಯವನ್ನು ಧೈರ್ಯದಿಂದ ಇದಿರಿಸಿದ. ಎರಡು ರಣಾಂಗಣದಲ್ಲೂ ಅರಿಕೇಸರಿ ವೈರಿ ಸೇನೆಯನ್ನು ಹಣ್ಣು ಮಾಡಿದ. ಅರಿಕೇಸರಿಯ ಕೈ ಮೇಲಾಯಿತು-ಗೋವಿಂದನ ಬೆಂಬಲಕ್ಕೆ ಬಂದ ಚಾಳುಕ್ಯರ ಸೈನ್ಯದ ತುಕಡಿಗಳು ಕಂಬಿ ಕಿತ್ತವು. ಆದರೆ ಗೋವಿಂದ ಅಧೀರನಾಗಲಿಲ್ಲ. ರಾಜಧಾನಿಗೇ ಲಗ್ಗೆ ಇಟ್ಟ. ಅವನನ್ನು ಇದಿರಿಸುವುದಕ್ಕೆ ನರಸಿಂಹ ಸನ್ನದ್ಧನಾದ.

ಬೇಹುಗಾರರ ಮುಖೇನ ಎಲ್ಲವನ್ನೂ ತಿಳಿದಿದ್ದ ನರಸಿಂಹ ಶತ್ರು ಸೈನ್ಯದ ಮೇಲೆ ಮುಗಿಬಿದ್ದ. ಭೀಕರ ಕದನವೇ ನಡೆಯಿತು. ಈ ಯುದ್ಧದಲ್ಲಿ ಗೋವಿಂದನ ಸೈನ್ಯ ನುಚ್ಚು ನೂರಾಯಿತು— ಹೆಣದ ಬಣಬೆಯೇ ಎಲ್ಲಿ ದೃಷ್ಟಿ ಹಾಯಿಸಿದರೂ ಕಾಣ ಬಂತು—

ಎರಡು ಬಾರಿ ಗೋವಿಂದನ ಮುಖಾ-ಮುಖಿ ಯುದ್ಧ ಮಾಡಬೇಕಾದ ಪ್ರಸಂಗ ಬಂತು. ಎರಡು ಸಲವೂ ನುಗ್ಗಿ ಬಂದ ಗೋವಿಂದನ ಕೈಯಲ್ಲಿದ್ದ ಕತ್ತಿಗುರಾಣಿಗಳು ನರಸಿಂಹನ ಹೊಡೆತ ತಡೆಯಲಾರದೆ ಕೈಯಿಂದ ಬಹುದೂರ ಹೋಗಿ ಬಿದ್ದುವು. ಆತ ನಿರಾಯುಧನಾದ. ಕುದುರೆಯಿಂದ ಕೆಳಕ್ಕುರುಳಿದ. ಬಿದ್ದ ಗೋವಿಂದನ ಮೇಲೆ ಹಾರಿ, ಅವನ ಗೋಣನ್ನೇ ತರಿಯುವ ಬಯಕೆ ನರಸಿಂಹನಿಗಾಯಿತು.

ಆಯುಧ ರಹಿತನಾಗಿ ನರಳುತ್ತ ಬಿದ್ದ ಈತನನ್ನು ಕೊಲ್ಲುವುದು ಸರಿಯೇ?

ಅವನಿಗೋ ಇನ್ನೂ ವಯಸ್ಸು! ವಯಸ್ಸಿಗನುಗುಣವಾದ ಚಾಪಲ್ಯಗಳು. ಅವುಗಳನ್ನು ತೀರಿಸಿಕೊಳ್ಳುವ ತವಕ.

ಆತ ವಯೋಧರ್ಮಕ್ಕನುಗುಣವಾದ ರೀತಿಯಲ್ಲಿ ವರ್ತಿಸಿದ.

ತಾನೂ ಆ ಮಟ್ಟಕ್ಕೆ ಇಳಿಯುವುದೇ?

ಅವನ ಹೃದಯಾಂತರಾಳದಲ್ಲಿ ಈ ಪೃಥಕ್ಕರಣೆ ನಡೆಯಿತು.

ಎತ್ತಿದ ಖಡ್ಗವನ್ನು ಆತ ಒರೆಯೊಳಕ್ಕೆ ತುರುಕಿದ.

"ಎಲ್ಲಾದರೂ ಮರ್ಯಾದೆಯಿಂದ ಬಾಳಿ. ಸಾಮ್ರಾಜ್ಯದ ಬಯಕೆಯನ್ನು ಸಮೂಲ ತಳ್ಳಿ. ಇನ್ನೊಮ್ಮೆ ಸೆಣಸಲೆಳಸಿದರೆ ಉಳಿಯುವುದಿಲ್ಲ" ಎಂದು ನರಸಿಂಹ ಅಲ್ಲಿ ನಿಮಿಷವೂ ನಿಲ್ಲದೆ ಕುದುರೆಯನ್ನು ಶಿಬಿರದತ್ತ ಓಡಿಸಿದ.

ಕಷ್ಟಪಟ್ಟು ಗೋವಿಂದ ಬಿದ್ದಲ್ಲಿಂದ ಎದ್ದ. ತೊಟ್ಟಿದ್ದ ಬಟ್ಟೆ ಬರೆಗಳಿಗೆ ಅಂಟಿಕೊಂಡ ಕೇಧೂಳನ್ನು ಕೊಡವಿಕೊಂಡ. ಆಗಿದ್ದ ಗಾಯಗಳಿಂದ ಸೋರುತ್ತಿದ್ದ ರುಧಿರ ಧಾರೆಯನ್ನು ಉತ್ತರೀಯದಿಂದ ಒರಸಿಕೊಂಡ. ಮೈಯೆಲ್ಲ ನೋಯುತ್ತಿತ್ತು. ಆ ನೋವಿಗಿಂತಲೂ ಅಸಹ್ಯವೆತ್ತು ಅನುಭವಿಸಿದ ಪರಾಭವದ ನೋವು. ಗಾಯಗೊಂಡ ಹುಲಿಯಂತೆ ಆತ ಕೋಪದಿಂದ ಹಲ್ಲು ಕಡಿದ.

'ಈ ಅಪಮಾನದ ಸೇಡನ್ನು ತೀರಿಸಿಯೇ ಬಿಡುತ್ತೇನೆ' ಎಂದು ಸಂಕಲ್ಪಿಸಿ ಕುದುರೆಯನ್ನೇರಿದ. ಅವನ ಮನಸ್ಸು ಭಾರವಾಗಿತ್ತು. ಏನೇನೋ ನೆನೆಸಿಕೊಂಡು ಅದು ಎಲ್ಲೆಲ್ಲೋ ಚಲಿಸುತಿತ್ತು. ಅವನನ್ನು ಹೊತ್ತ ಅಶ್ವಕ್ಕೆ ಒಡೆಯನ ಮಾನಸಿಕ ಪರಿಭ್ರಮಣೆಯ ಅರಿವಾಗಿತ್ತು. ಅದೂ ಮನಸ್ಸಿಲ್ಲದ ಮನಸ್ಸಿನಿಂದ ಹೆಜ್ಜೆ ಹಾಕುತಿತ್ತು. ಗೋವಿಂದನಿಗೆ ಅದು ಚಲಿಸುವ ದಿಕ್ಕಿನ ಕಡೆಗೂ ಗಮನವಿರುವಂತೆ ಕಾಣಲಿಲ್ಲ.

ಕುದುರೆ ಹಠಾತ್ತನೆ ನಿಂತಿತು.

ಹಿಂಗಾಲುಗಳನ್ನು ಎತ್ತಿ ಧೂಳು ಹಾರಿಸಿತು.

ಕಿವಿಗಳನ್ನೊಮ್ಮೆ ನಿಮಿರಿಸಿ, ವಿಚಿತ್ರವಾಗಿ ಕೂಗಿ ನೆಗೆಯಿತು.

ಅನ್ಯಮನಸ್ಕನಾಗಿ ಕುದುರೆಯಲ್ಲಿ ಕುಳಿತಿದ್ದ ಗೋವಿಂದ, ಅದರ ನೆಗೆತಕ್ಕೆ ಕುದುರೆಯಿಂದುರುಳಿದ. ಕುದುರೆಯ ಹೇಷಾರವ ಅವನ ಕಿವಿಗೂ ತಟ್ಟಿತು. ಏನೆಂದು ಕಣ್ತೆರೆದು ನೋಡುವುದರಲ್ಲಿ ಆತ ಬಿದ್ದಿದ್ದ ಸ್ಥಳಕ್ಕೆ, ತುಸು ಎತ್ತರದಲ್ಲಿ, ದಿಣ್ಣೆಯೊಂದರ ಮೇಲೆ ಹೆಬ್ಬುಲಿಯೊಂದು ಕಾಣಿಸಿತು.

ಅದು ಅವನನ್ನೇ ಕಕ್ಕರಿಸಿ ನೋಡುತಿತ್ತು. ಕತ್ತಲಲ್ಲಿ ಅದರ ಕಣ್ಣುಗಳೆರಡು ಹೊಳೆಯುತಿದ್ದುವು. ಹುಲಿಯೊಮ್ಮೆ ಅರ್ಭಟಿಸಿ ಅವನು ಬಿದ್ದಿದ್ದ ತಗ್ಗು ಪ್ರದೇಶಕ್ಕೆ ಧುಮುಕಿತು— ಎಲ್ಲ ಮುಗಿಯಿತು ಎಂದು ತಿಳಿದುಕೊಂಡು ಆತ ಕಣ್ಣು ಮುಚ್ಚಿಕೊಂಡು 'ಅಯ್ಯೋ' ಎಂದು ಕಿರಿಚಿಕೊಂಡ.

ಅಷ್ಟೇ ಅವನಿಗೆ ತಿಳಿದುದು—

ಆತ ಮೆಲ್ಲನೆ ಕಣ್ಣುಗಳನ್ನೊಮ್ಮೆ ಉಜ್ಜಿಕೊಂಡ.

ಎಚ್ಚರವಾಯಿತು—ಅದರೊಡನೆ ಹುಲಿಯ ನೆನಪೂ ಬಂತು—

ಅದು ಪರಚಿರಬಹುದೆಂಬ ಭ್ರಮೆಯಿಂದ ಮೈ—ಕೈಗಳನ್ನೊಮ್ಮೆ ಸಾವರಿಸಿಕೊಂಡ. ಹುಲಿ ಪರಚಿದ ಗಾಯಗಳಿರಲಿಲ್ಲ.

ಆತನಿಗೆ ಏನೂ ಆಗಿರಲಿಲ್ಲ.

ಅವನಿಗೆ ಎಲ್ಲಿಲ್ಲದ ಅಶ್ಚರ್ಯ.

ಕಣ್ಣು ಹೊರಳಿಸಿದ. ಪಕ್ಕದಲ್ಲಿ, ಅವನಿಂದ ಹತ್ತಡಿ ದೂರದಲ್ಲಿ ಆ ಹುಲಿ ಸತ್ತು ಬಿದ್ದಿತ್ತು. ಎಷ್ಟು ಪ್ರಾಣಿಗಳ ರಕ್ತ ಹೀರಿತ್ತೋ ಈ ದುಷ್ಟ ಜಂತು? ಅದರ ದೇಹದಿಂದ ರಕ್ತ ಗುಳು ಗುಳು ಎಂದು ಇನ್ನೂ ಇಳಿಯುತಿತ್ತು.

ಅವನ ಸುತ್ತು ನೆತ್ತರಿನ ಮಡುವಿನ ಸೃಷ್ಟಿಯಾಗಿತ್ತು.

ಹಾಕಿಕೊಂಡ ಬಟ್ಟೆ ಬರೆ ತೊಯ್ದಿದ್ದವು-

ಅವನಿಗಾವುದೂ ಅರ್ಥವಾಗಲಿಲ್ಲ.

(ಮುಂದುವರಿಯುವುದು)

NAVAYUGA 30-3-1972
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ—

ಹೊಸ ಪಕ್ಷಕ್ಕೆ ಒಂದು ಆದೇಶ

ಈ ಬಾರಿ ಚುನಾವಣೆಯಲ್ಲಿ ಗೆದ್ದು ಬಂದಿರುವ ಅಭ್ಯರ್ಥಿಗಳಿಗೆ ಬಡ ಶ್ರೀಸಾಮಾನ್ಯನ ಹೃದಯಾಂತರಾಳದಿಂದ ಒಸರಿ ಬಂದ ವಿನಯದ ಒಸರಿನ ಕಿವಿಮಾತು.

ನಾವು ಈ ಸಾರೆ ನಮ್ಮ ಸಹನೆಯ ಗಾಳಿಪಟಕ್ಕೆ ಆಸೆ ಆಕಾಂಕ್ಷೆಗಳ ಬಾಲಂಗೋಚಿಯನ್ನು ಸಿಕ್ಕಿಸಿ ನಿಮ್ಮನ್ನು ಆರಿಸಿದ್ದೇವೆ. ನಮ್ಮ ಮತ ಎಷ್ಟು ಅಮೂಲ್ಯವೋ ಅಷ್ಟೇ ಗೌರವದ ಹಂಬಲವೂ ಅದಕ್ಕಿದೆ. ಈ ಮತ ಗಾಳಿಗೆ ತೂರಿದ ಜಳ್ಳಾಗಬಾರದು. ಸಾಗರದಿಂದ ಆರಿಸಿದ ಆಣಿಮುತ್ತಾಗಬೇಕು. ಸ್ವಾತಿ ಮಳೆಯ ಹನಿಗಾಗಿ ಬಾಯ್ದೆರೆದು ಬೀಳುವ ಗುಳ್ಳೆ ಚಿಪ್ಪಿನಂತೆ, ಈ ಮತಕ್ಕಾಗಿ ಬಾಯ್ದೆರೆಕೊಂಡಿದ್ದ ರಾಜಕಾರಣಿಗಳು ಮತ ದೊರೆತೊಡನೆಯೇ ಬಾಯ್ಮುಚ್ಚಿ, ಕಡಲಾಳ ಸೇರಬಾರದು.

ಶ್ರೀ ಸಾಮಾನ್ಯನ ಮತವನ್ನು ಒರೆಗೆ ಹಚ್ಚುವ ಈ ಸುಸಂಧಿಯ ಚುನಾವಣೆಯಲ್ಲಿ ಕೆಟ್ಟಿರುವ ಕಾಂಗ್ರೆಸಿಗೆ ಕೊನೆಯದೋ ಎನ್ನುವಂಥ ಅಗಾಧ ಬೆಂಬಲ ದೊರಕಿದೆ. ಈ ಬೆಂಬಲ ಹುಸಿಯಾಗಬಾರದು. ಪ್ರಾಮಾಣಿಕನಾದ ಅಭ್ಯರ್ಥಿ ಮತ್ತೆ ಮತ್ತೆ ಜನನಾಯಕನಾಗುವ ಯೋಗ್ಯತೆಯಿದೆ. ಇಂದು ಈ ಹಿಂದೂಸ್ತಾನ ದುರ್ಭಿಕ್ಷದ ಮಸಣವಾಗಿದೆ. ಅದನ್ನು ನಂದನವನವಾಗಿಸುವ ಭವಿಷ್ಯದ ನೊಗವನ್ನು ಆಳುವ ಕಾಂಗ್ರೆಸಿನ ಹೆಗಲಲ್ಲಿಟ್ಟು ಪಥ ಮುಂದುವರೆಸಿದ್ದೇವೆ.

ಈ ಸಾರಿಯ ಕಾಂಗ್ರೆಸಿನ ವಿಜಯ ಅದಕ್ಕೆ ನಾವು ಕೊಟ್ಟಿರುವ ಸತ್ವ ಪರೀಕ್ಷೆಯೂ ಹೌದು. ಅಂದು ಬ್ರಿಟಿಷರ ದಬ್ಬಾಳಿಕೆಯಿಂದ, ಆಳರಸರ ತುತ್ತಿನಿಂದ ನಮ್ಮನ್ನು ಕಾಪಾಡಿದ ಇದೇ ಧನ್ಯ ಕಾಂಗ್ರೆಸು ಇಂದು ಕ್ರಮಶಃ ಪ್ರಜೆಗಳನ್ನು ದೊರಗು ನಾಲಿಗೆಯಿಂದ ನೆಕ್ಕಿ ನೆಕ್ಕಿ ಸಾಯಿಸುವ ಕರಡಿಯಾಗುತ್ತಿರುವುದನ್ನು ಬುದ್ಧಿ ಜೀವಿಗಳು ಗುರುತಿಸುತ್ತಿದ್ದಾರೆ. ಈ ಚುನಾವಣೆಯ ಬಿಸಿ ಆರುವುದರೊಳಗೆ ಪ್ರಧಾನಿಯವರು ನಮ್ಮ ಮೇಲೆ ಕೆಲವು ನೂರು ಕೋಟಿ ರೂಪಾಯಿಗಳ ತೆರಿಗೆಯ ಹೊರೆಯನ್ನು ಹೊರಿಸಲಿದ್ದಾರೆಂದು ಅನಿಶ್ಚಿತ ಕಿಂವದಂತಿಯೊಂದು ತಿಳಿಸಿದೆ. ಇಂಥ ಭಾರವನ್ನು ಅವರು ನಿಜವಾಗಿಯೂ ಹೊರಿಸುವದಿದ್ದರೆ–ಬೆನ್ನಮೂಳೆಯನ್ನು ದೇವತೆಗಳ ವಜ್ರಾಯುಧಕ್ಕಾಗಿ ಎಂದೋ ಕಿತ್ತುಕೊಟ್ಟ ದಧೀಚಿ ಮುನಿಯಾಗಿರುವ–ಭಾರತೀಯ ಪ್ರಜೆ ಆ ಭಾರವನ್ನು ಹೊರಬಲ್ಲನೇ?

ಗರೀಬೀ ಹಟಾವೋ ಎನ್ನುವ ನಮ್ಮ ನಾಯಕರು ಗರೀಬರನ್ನೇ ಹಟಾವೋ ಮಾಡ ಬಾರದು. ನವೀನ ಕೃಷಿ ಸೌಲಭ್ಯಗಳಿಂದ, ಯೋಜನೆಗಳಿಂದ ದೇಶದ ಧನಾಭಾವ ನಿವಾರಿಸುವಲ್ಲಿ ಇವರು ವಿಕ್ರಮ ಸ್ಥಾಪಿಸಬೇಕಲ್ಲದೆ ತೆರಿಗೆಗಳ ಕೆಂಡದಲ್ಲಿ ಬಡವನ ತಾಳ್ಮೆಯ ಕಡಲೆಯನ್ನು ಹುರಿಯ ಬಾರದು. ಈ ಬಾರಿ, ಕಾಂಗ್ರೆಸ್ ಪುಢಾರಿಗಳು ಕೊಟ್ಟ ಭರವಸೆಗಳು ಎಷ್ಟರ ತನಕ ಬಲೆಗೆ ಬೀಳುತ್ತವೆಯೋ ಎಂಬುದನ್ನು ನೋಡಲು ಆಡಳಿತೆಯ ಹಗ್ಗವನ್ನು ಅದರ ಕೈಯ್ಯಲ್ಲಿಟ್ಟಿದ್ದೇವೆ. ಈ ಬಾರಿ ಕಾಂಗ್ರೆಸನ್ನು ಆರಿಸಿದವರು ಬುದ್ಧಿ ಜೀವಿಗಳಲ್ಲ ಎಂಬ ಹಂಬಲವನ್ನು ಒತ್ತಟ್ಟಿಗಿರಿಸಿ, ಬುದ್ಧಿವಂತರೂ ತನ್ನಲ್ಲಿ ಆಸಕ್ತಿ ವಹಿಸುವಂಥ ಹೊನ್ನ ಹೊಂಗನಸಿನ ಆಡಳಿತವನ್ನು ಕಾಂಗ್ರೆಸ್ ಈಡೇರಿಸಲಿ. ಅವರೆ ಈ ಸಾರೆಯೂ ಅದರದು ಬಡಾಯಿಯ ಬಂಡಾಯವಾದರೆ ಕಾಂಗ್ರೆಸಿನ ಕಾಂಡ ಅರ್ಧದಲ್ಲೇ ಹರಿದೀತು.

ಈ ಮುಂದಿನ ಐದು ವರ್ಷಗಳ ಕನಸಿನ ಬಸಿರನ್ನು ಕಾಂಗ್ರೆಸಿನ ಗರ್ಭದಲ್ಲಿರಿಸುತ್ತಿದ್ದೇವೆ. ಅದಕ್ಕಾಗಿ ಯಾವ ಪಕ್ಷಗಳ ಅಡ್ಡಗಾಲೂ ಇಲ್ಲದ ಏಕೈಕ ಕಾಂಗ್ರೆಸನ್ನು ಉತ್ತುಂಗ ಗಿರಿಯಲ್ಲಿರಿಸಿದ್ದೇವೆ. ಅವರೆಂದಂತೆ ಈ ಸಾರೆ ಗರೀಬೀ ಹಟಾವೋ ಆಗಲೇ ಬೇಕು. ಕೈಗೊಂದು ಕೆಲಸ ಸಿಗಬೇಕು, ಹಿಂದಿನಂತೆಯೇ ಬಡವರನ್ನು ಬಗ್ಗು ಬಡಿದು, ನುಂಗಿ ರಕ್ತ ಕುಡಿಯುವ ಧನಿಕರೇ ಮೇಲೆ ಬರುವ ಕುಬೇರ ನಗರಿಯಾಗ ಬಾರದು.

ಸಂಸ್ಥಾ ಕಾಂಗ್ರೆಸ್ ಮತ್ತು ಜನಸಂಘವನ್ನು ಕಮರಿಸಿ ಮೇಲೆದ್ದಿರುವ ಇಂದಿರಾ ಗಾಂಧಿಯವರು ಬಡವರಿಗೆ ಅವಶ್ಯವಿರುವ ಪ್ರಗತಿಶೀಲ ಕಾರ್ಯಗಳನ್ನು ಕೈಗೊಳ್ಳುವುದರಲ್ಲೇ ಕಾಂಗ್ರೆಸಿನ ಭವಿಷ್ಯ ಅಡಗಿದೆ. ಬಡವರಿಗೆ ಮನೆ ಬೇಕಲ್ಲದೆ ದುಡಿದುಣ್ಣಲು ಯೋಗ್ಯ ಜಮೀನು, ನೀರಾವರಿ ಯೋಜನೆ ಕೃಷಿ ಸೌಲಭ್ಯಗಳು ಅವಶ್ಯವಿರುವಂತೆ ಸಹಸ್ರಾರು ಮಂದಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿ ಕೊಡುವುದರೊಂದಿಗೆ ಜಾತೀಯತೆಯೆಂಬ ಪಿಡುಗು ನಿರ್ನಾಮವಾಗಲೇ ಬೇಕು.

ಜನ ಜೀವನವು ದಿನೇ ದಿನೇ ಕಾಠಿಣ್ಯದ ಬಿಸಿಯಲ್ಲಿ ಕಮರುತ್ತಿರುವುದು ನಿಜ. ತೆರಿಗೆಗಳ ಹೊರೆ, ಕೈ ಕೆಸರಾದರೆ ಬಾಯಿಗೆ ಮೊಸರಿಲ್ಲ, ಶ್ರೀಮಂತರಿಗೇ ಆದ್ಯತೆ, ಬಡ್ಡಿಗಳ ಭಾರ — ಎಂಬ ಒಂದೊಂದೇ ಭರ ಸಿಡಿಲುಗಳೂ ದುರ್ಭರವಾದ ಆಲಿಕಲ್ಲುಗಳನ್ನೇ ಉರುಳಿಸುತ್ತವೆ. ಯಾವ ಉತ್ಸಾಹದಿಂದ ನಾವು ಕಾಂಗ್ರೆಸಿಗೆ ಪ್ರೋತ್ಸಾಹ ಕೊಟ್ಟೆವೋ ಅದೇ ಜಾಗದಲ್ಲಿ ನಿರುತ್ಸಾಹದ ದಾವಾನಲ ಜನಿಸುತ್ತದೆ.

ಆರಿಸಲ್ಪಟ್ಟಿರುವ ಅಭ್ಯರ್ಥಿಗಳು ಜನತೆಯ ಸೇವಕರೇ ಹೊರತು ತಾವು ಜಹಗೀರದಾರರಾಗಿ ಸಿಂಹಾಸನವೇರುತ್ತಿದ್ದೇವೆಂಬು ಎಂದೂ ತಿಳಿಯಬಾರದು. ನಮ್ಮ ಬೇಕು ಬೇಡಗಳನ್ನು ತಿಳಿಯುವ ಪ್ರತಿನಿಧಿಗಳಾಗಿ ನಾವು ಅವರನ್ನು ಆರಿಸಿರುವುದಲ್ಲದೆ ದಬ್ಬಾಳಿಕೆಗಾಗಲೀ ಅಪ್ರಮಾಣಿಕತನಕ್ಕಾಗಲೀ ಅಲ್ಲ. ಆಸನವೇರಿದ ಅನಂತರ ಹೇಳಿದ ಮಾತನ್ನೆಲ್ಲ ಅವರು ಮರೆಯ ಬಾರದು. ಹೇಳಿದ ಭರವಸೆಗಳನ್ನು ಕಾರ್ಯಾಚರಣೆಗೆ ತರಬೇಕು. ಈ ಸುಳ್ಳು ರಾಜಕಾರಣಿಗಳಿಗೆ ಈ ಸ್ವತಂತ್ರ ಭಾರತ ಮೂಲಗೇಣಿಗೆ ಬಂದ ಜಮೀನಲ್ಲ. ಈ ಸ್ವತಂತ್ರ ಭಾರತದ ಪೂರ್ಣ ಒಡೆತನ ಈ ಭಾರತೀಯ ಜನತೆಯದು. ಆದರ ಆಗ ಭೋಗಗಳನ್ನು ನೋಡಿಕೊಳ್ಳುವ ರೈತರೇ ಈ ರಾಜಕಾರಣಿಗಳಲ್ಲದೆ ಅವರು ಆಡಳಿತಾಧಿಕಾರಿಗಳಲ್ಲ. ಚೆನ್ನಾಗಿ ಆಳಿದರೆ ಅಧಿಕಾರ ಉಳಿಯುತ್ತದೆ. ಪಕ್ಷವೂ ಬಾಳುತ್ತದೆ. ಶ್ರೀಸಾಮಾನ್ಯನನ್ನು ಮುನಿಸಿಗೆಬ್ಬಿಸದೆ, ಕಾಂಗ್ರೆಸಿನ ಕಾರ್ಯಾಚರಣೆ ಕನಸಿನ ಗಂಟಾಗದೆ, ಈ ಇಂದಿರಾ ಗಾಳಿ ಸುಂಟರ ಗಾಳಿಯಾಗದೆ ಶಾಂತ, ತಂಬೆಲರಾಗಲಿ!

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

●●

ಹೊಸ ಹಗರಣದ ತೆರೆಸರಿಯಿತು

(ಒಂದನೇ ಪುಟದಿಂದ)

ತನ್ನ ಬಳಿಗೆ ಬಂದ ಸ್ಪೀಕರ್ ಪದವಿಯನ್ನು ಮೊದಲಿನವರು ಧಿಕ್ಕರಿಸಿದ್ದಾರೆ. ಕೊಡುವುದಾದರೆ, ಗೃಹಮಂತ್ರಿತನ — ಎನ್ನುತ್ತಾರೆ ಅವರ ಬೆಂಬಲಿಗರು.

ತಾನು ಮತ್ತೊಬ್ಬ ಜತ್ತಿಯಾಗಿದ್ದೇನೆ, ಅಥವಾ ಮತ್ತೊಬ್ಬ ಮುರಾರ್ಜಿ ಭಾಯಿಯಾಗಲಿದ್ದೇನೆಂಬುದು ಶ್ರೀ ಸಿದ್ಧವೀರಪ್ಪನವರು ಅರಿತುಕೊಳ್ಳಬೇಕು.

ಇನ್ನೊಬ್ಬರೇನು ಮಾಡುತ್ತಾರೆ? ಆಳುವ ಕಾಂಗ್ರೆಸ್ಸು ಮುರಿಯಲು ನಾಂದಿ ಹಾಡುತ್ತಾರೆಯೆ? ದೇವರಾಜರ ವಿರುದ್ಧ ಮಸಲತ್ತು ಹೂಡುತ್ತಾರೆಯೆ?

ಆರಂಭದಲ್ಲೇ ಬಿರುಕು ಎದ್ದು ತೋರಿದ ರಾಜ್ಯ ಕರ್ನಾಟಕವೊಂದೇ. ಇಲ್ಲಿ ಹೆಜ್ಜೆ ಹೆಜ್ಜೆಯಲ್ಲೂ ಹಗರಣವಿದ್ದೇ ತೀರಬೇಕು. ಶ್ರೀ ಕೆಂಗಲ್ ಹನುಮಂತಯ್ಯನವರ ಕಾಲದಿಂದಲೂ ನಡೆದು ಬಂದದ್ದು ಇದೇ.

'ಹಗರಣ ಪ್ರಿಯರು' ಎಂಬುದು ನಮಗೆ ಅರ್ಥವಾಗತಕ್ಕದ್ದೇ. ಹಗರಣದಲ್ಲೇ ಪ್ರಗತಿ ಕಾಣುವುದು ನಮ್ಮ ಜಾಯಮಾನವಾಗಬೇಕೆ? ●

ಬಂಟ್ವಾಳದಲ್ಲಿ ಶ್ರೀ ಟಿ. ಎ. ಪೈಯವರಿಗೆ ಸನ್ಮಾನ

ತಾ. 19ರಂದು ಬಂಟ್ವಾಳದ ಬಿ. ಸಿ. ರೋಡಿನಲ್ಲಿರುವ ಮಹಾತ್ಮಾ ಗಾಂಧಿ ಸ್ಮಾರಕ ಮಂಟಪದಲ್ಲಿ ವಿಧಾನಸಭಾ ಸದಸ್ಯ ಶ್ರೀ ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಲೀನವಿಮಾ ಸಂಸ್ಥೆಯ ಅಧ್ಯಕ್ಷ ಪದ್ಮಭೂಷಣ ಶ್ರೀ ಟಿ. ಎ. ಪೈಯವರನ್ನು ಸನ್ಮಾನಿಸಲಾಯಿತು. ಆತಿಥೇಯ ಸಮಿತಿಯ ಅಧ್ಯಕ್ಷ ಶ್ರೀ ಪಿ. ಲಕ್ಷ್ಮಣ ಪ್ರಭು ಸ್ವಾಗತಿಸಿದರು. ಶ್ರೀ ಬಿ. ವೆಂಕಟೇಶ ಬಾಳಿಗರು ಅತಿಥಿಗಳ ಪರಿಚಯ ಮಾಡಿಸಿದರು. ವಿವಿಧ ಸಂಘ ಸಂಸ್ಥೆಗಳ ಪರವಾಗಿ ಶ್ರೀ ಪೈಯವರಿಗೆ ಹಾರಾರ್ಪಣೆ ಗೈದ ಬಳಿಕ, ಬಂಟ್ವಾಳದ ಶ್ರೀ ವೆಂಕಟ್ರಮಣ ಸ್ವಾಮಿ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಯು. ಡಿ. ನಾಯಕ್, ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಸದಾಶಿವ ಭಂಡಾರಿ, ಪಾಣೆಮಂಗಳೂರಿನ ಶ್ರೀ ಎನ್. ಕೇಶವ ಕುಡ್ವಾ, ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಮೊದಲಾದವರು ಮಾತಾಡಿ ಶ್ರೀ ಪೈಯವರನ್ನು ಅಭಿನಂದಿಸಿದರು.

ಶ್ರೀ ಪೈಗಳು ತಮ್ಮ ಭಾಷಣದಲ್ಲಿ ಪಾರ್ಲಿಮೆಂಟಿನ ಸ್ಥಾನಕ್ಕಿಂತ ಜನರ ಹೃದಯದಲ್ಲಿ ದೊರೆಯುವ ಸ್ಥಾನ ದೊಡ್ಡದು ಎಂದು ಹೇಳಿದರು. ತಾನು ರಾಜಕೀಯ ಕ್ಷೇತ್ರದಲ್ಲಿದ್ದಾಗ ತನಗೆ ಜನರ ಸಂಕಷ್ಟ ಅರಿಯುವಂತಾಯಿತೆಂದೂ, ರಾಜಕೀಯ ಕ್ಷೇತ್ರ ಅಲ್ಲದೆ ಬೇರೆ ಕ್ಷೇತ್ರಗಳೂ ತನಗೆ ಜನರ ಸೇವೆ ಗೈದು ಅವರ ಆದರ, ವಿಶ್ವಾಸ ಗಳಿಸುವ ಅವಕಾಶ ಕಲ್ಪಿಸಿಕೊಟ್ಟಿತೆಂದೂ ಅವರು ತಿಳಿಸಿದರು. ಅಧಿಕಾರ ಶಾಶ್ವತವಲ್ಲವೆಂದ ಶ್ರೀ ಪೈಯವರು ತಮ್ಮನ್ನು ಸನ್ಮಾನಿಸಿದ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಬಿ. ವಿ. ಕಕ್ಕಿಲ್ಲಾಯರು ಮಾತಾಡಿ ತನ್ನಿಂದಾದ ಎಲ್ಲ ರೀತಿಯ ಸೇವೆ ಸಲ್ಲಿಸುವ ಭರವಸೆ ನೀಡಿದರು. ಅಂತ್ಯದಲ್ಲಿ ಶ್ರೀ ಟಿ. ವೆಂಕಟೇಶ ಪೈಯವರು ಧನ್ಯವಾದ ಅರ್ಪಿಸಿದರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

READ & ADVERTISE IN NAVAYUGA Weekly

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೩೧

NAVAYUGA

6-4-1972

ರಾಜ್ಯದ ರಾಜ್ಯಕೀಯ—

ಹದಗೆಟ್ಟ ಹಣಕಾಸು

ರಾಜ್ಯಪಾಲ ಶ್ರೀ ಮೋಹನಲಾಲ ಸುಖಾಡಿಯಾರವರು ವಿಧಾನ ಮಂಡಳಗಳ ಜಂಟಿ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ವಿರೋಧಿ ಪಕ್ಷಗಳು ಅತ್ಯಂತ ದಯನೀಯ ದುರ್ದೆಸೆಯಲ್ಲಿರುವ ವಿಧಾನ ಮಂಡಳಗಳು ಅವರಿಗೆ ಕೀಟಲೆ ಕೊಡುವುದನ್ನು ಬಿಡಲಿಲ್ಲ. ಹಿಂದೆ ಶ್ರೀ ವಾಟಾಳ ನಾಗರಾಜರೊಬ್ಬರೇ ಕನ್ನಡದ ಪರವಾಗಿ ಕೂಗುತ್ತಿದ್ದರೆ ಇದೀಗ ಸಮಾಜವಾದಿ ಪಕ್ಷದ ಶ್ರೀ ಲಿಂಗಪ್ಪನವರೂ ಅವರ ರಕ್ಷಣೆಗೆ ಕಟಿಬದ್ಧರಾಗಿದ್ದಾರೆ. ಕನ್ನಡದಲ್ಲಿ ಆರಂಭ ಮಾಡಿ ಕನ್ನಡದಲ್ಲಿ ಮುಕ್ತಾಯ ಮಾಡುವ ಪ್ರಯಾಸವನ್ನಾದರೂ ಶ್ರೀ ಸುಖಾಡಿಯಾ ಕೈಕೊಂಡರೆಂಬ ತೃಪ್ತಿಯಾದರೂ ಈ ಈರ್ವರು ಕನ್ನಡಿಗರಿಗೆ ಬರಲಿಲ್ಲ.

ಸಚಿವ ಸಂಪುಟವು ಪ್ರತಿಜ್ಞೆ ಸ್ವೀಕರಿಸಿದ ಎರಡು ದಿನಗಳಲ್ಲೇ ವಿಧಾನ ಮಂಡಳವನ್ನು ಉದ್ಘಾಟನೆ ಮಾಡಬೇಕಾಗಿ ಬಂದದ್ದರಿಂದ ಅವರ ಭಾಷಣದಲ್ಲಿ ಮಹತ್ವಪೂರ್ಣ ಅಂಶಗಳಿರುವುದು ಸಾಧ್ಯವಿಲ್ಲ. ಸರಕಾರದ ಧ್ಯೇಯ ಧೋರಣೆಗಳ ಬಗ್ಗೆ ನಿಖರ ವಿವರಣೆಗಳಿರುವುದಂತೂ ಅಸಾಧ್ಯವೇ. ಆದುದರಿಂದ ಸರಕಾರ ಗುರಿಯತ್ತ ದಿಗ್ದರ್ಶನವನ್ನು ಮಾತ್ರ ಶ್ರೀ ಸುಖಾಡಿಯಾ ಮಾಡಿದ್ದಾರೆ. ಒಂದು ವರ್ಷ ಕಾಲ ರಾಜ್ಯದಲ್ಲಿದ್ದ ರಾಷ್ಟ್ರಪತಿ ಆಡಳಿತೆಯ ಕಾಲದ ರಾಜ್ಯದ ಪ್ರಗತಿಯೇ ಅವರ ಭಾಷಣಕ್ಕೆ ಮೂಲಾಧಾರ.

ಅಧಿಕೃತ ಭಾಷೆಯನ್ನಾಗಿ ಕನ್ನಡವನ್ನು ಸ್ವೀಕರಿಸುವಲ್ಲಿ ಸರಕಾರಕ್ಕಿರುವ ಕಾಳಜಿಯನ್ನವರು ವ್ಯಕ್ತಪಡಿಸಿದರು. ಶಾಸನ ಸುವ್ಯವಸ್ಥೆಗಾಗಿ ಸಕಲ ಪ್ರಯತ್ನಗಳನ್ನೂ ಮಾಡುವ ಭರವಸೆ ನೀಡಿದರು. ರಾಜ್ಯದ ಹಲವೆಡೆ ಬಡಿದ ಬರಗಾಲದ ದಾರುಣ ಪರಿಸ್ಥಿತಿಯನ್ನು ವಿವರಿಸಿ ಸರಕಾರವು ಕೈಕೊಂಡ ಪರಿಹಾರ ಕಾರ್ಯಗಳನ್ನು ವಿವರಿಸಿದರು. ಸುಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸುವ ಆಶಯವನ್ನು ಹೊರಗೆಡಹಿದರು. ಬೇರೆ ಬೇರೆ ವಲಯಗಳಲ್ಲಿನ ಅಸಮತೆ ನಿವಾರಿಸುವಲ್ಲಿ ಯೋಜನೆಯ ಮುಂದಿನ ವರ್ಷಗಳಲ್ಲಿ ಆದ್ಯ ಗಮನ ಹರಿಸುವ ಆಶ್ವಾಸನೆ ನೀಡಿದರು. ವ್ಯವಸಾಯ ರಂಗದಲ್ಲಿ ನೀರಿನ ಸೌಕರ್ಯ, ಬೇಸಾಯಗಾರರಿಗೆ ಸಾಲ ಇತ್ಯಾದಿ ಸೌಕರ್ಯಗಳನ್ನು ಇನ್ನಷ್ಟು ಒದಗಿಸುವುದಾಗಿ ಹೇಳಿದರು. ಮಾರುಕಟ್ಟೆ, ಸಹಕಾರ ರಂಗಗಳಿಗೆ ಹೊಸ ಪ್ರಾಣ ನೀಡಲಾಗುವುದೆಂದು ನುಡಿದರು. ಆರಣ್ಯ, ಮೀನುಗಾರಿಕೆ, ವಸತಿ, ಕೊಳಚೆ ನಿರ್ಮೂಲನ, ಗ್ರಾಮಾಂತರ ನೀರು ಸರಬರಾಯಿ, ವಿದ್ಯುತ್, ಸಂಪರ್ಕ, ಸಮಾಜ ಕಲ್ಯಾಣ, ವಿದ್ಯಾಭ್ಯಾಸ-ಯುವಜನ ಸೇವೆ, ಉದ್ಯಮ-ಹೀಗೆ ಎಲ್ಲ ಬಾಬುಗಳಲ್ಲೂ ಪ್ರಗತಿ ಸಾಧಿಸಲು ತನ್ನ ಸರಕಾರ ತವಕದಿಂದಿದೆಯೆಂದು ತಿಳಿಸಿದರು.

"ಐದನೆಯ ಆರ್ಥಿಕ ಆಯೋಗದ ಐತೀರ್ಪು ರಾಜ್ಯಕ್ಕೆ ಅನುಕೂಲವಾಗಿರಲಿಲ್ಲ. ಆದರೂ ರಾಜ್ಯಸರಕಾರದ ಮನವಿಯ ಮೇಲೆ ಭಾರತ ಸರಕಾರವು ೪ನೆಯ ಪಂಚವಾರ್ಷಿಕ ಯೋಜನೆಯಲ್ಲಿ ತುಸು ವಿಶೇಷ ಧನ ಸಹಾಯ ನೀಡಲು ಒಪ್ಪಿತು. ಹೀಗೆ ನೀಡುತ್ತಿರುವ ಹಣ ನಮಗೆ ಸಾಲದಾಗಿದೆ. ಹೆಚ್ಚಿನ ಸಂಪನ್ಮೂಲಗಳನ್ನು ಕೂಡಿಸುವ ಗುರಿಯನ್ನು ನಾವು ತಲುಪಿದ್ದೇವೆ; ವಾಡಿಕೆಯ ವರಮಾನದಲ್ಲೂ ಏರಿಕೆ ಸಾಧಿಸಿದ್ದೇವೆ; ಆದರೂ ಏರಿದ ವೆಚ್ಚದಿಂದ ಹಣ ಸಾಲದಾಗಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಅತ್ಯಂತ ಬಿಗಡಾಯಿಸಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಎಲ್ಲಕ್ಕಿಂತ ಹೆಚ್ಚಾಗಿ ರಾಜ್ಯಪಾಲರು ಜನತೆಯ ಮುಂದಿಟ್ಟ ಭರವಸೆಗಳು ಎರಡೇ ಎರಡು—ನಗರದ ಆಸ್ತಿಯ ಮೇಲೆ ಗರಿಷ್ಠ ಮಿತಿಯನ್ನು ಸರಕಾರ ಹೇರಲಿದೆಯೆಂಬುದೊಂದು; ಕೇಂದ್ರ ಭೂ ಸುಧಾರಣಾ ಮಂಡಳಿಯ ಶಿಫಾರಸುಗಳನ್ನು ಆಧಾರವಾಗಿಟ್ಟುಕೊಂಡು ಭೂಹಿಡುವಳಿಯ ಗರಿಷ್ಠಮಿತಿಯನ್ನು ತಗ್ಗಿಸುವುದು—ತ್ವರಿತ ಭೂಸುಧಾರಣೆಯನ್ನು ತಿದ್ದುವುದು ಮತ್ತೊಂದು. ವಿವಾದಾತ್ಮಕವಾದ ಯಾವುದೇ ಸಂಗತಿಯನ್ನು ರಾಜ್ಯಪಾಲರು ತನ್ನ ಭಾಷಣದಲ್ಲಿ ಪ್ರಸ್ತಾಪಿಸುವ ಗೋಜಿಗೇ ಹೋಗಲಿಲ್ಲ. ಆದ್ದರಿಂದ ಅವರ ಭಾಷಣ ರಾಷ್ಟ್ರಪತಿ ಆಳಿಕೆಯ ವರದಿ ಮಾತ್ರವೆಂದವರೂ ಇದ್ದಾರೆ.

○ ○ ○

ಕರ್ನಾಟಕ ವಿಧಾನ ಸಭೆಯು ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ತನ್ನ ಸಭಾಪತಿಯನ್ನಾಗಿ ಆರಿಸಿ ದೇಶದಲ್ಲೇ ಮೊತ್ತ ಮೊದಲ ಸ್ತ್ರೀ ಸಭಾಪತಿಯನ್ನು ಪಡೆಯಿತು. ಶ್ರೀಮತಿ ಸರೋಜಿನಿ ನಾಯ್ಡು, ರಾಜಕುಮಾರಿ ಅಮೃತ್ ಕೌರ್ ಸುಚೇತಾ ಕೃಪಲಾನಿ, ವಿಜಯ ಲಕ್ಷ್ಮಿ ಪಂಡಿತ್ ಮತ್ತೀಗ ಇಂದಿರಾ ಗಾಂಧಿ ಮೊದಲಾದವರು ಜವಬ್ದಾರಿಯುತ ಸ್ಥಾನವೇರಿದ್ದ ಮೊದಲ ಭಾರತೀಯ ಆಧುನಿಕ ಮಹಿಳೆಯರು. ಈಗ ಶ್ರೀಮತಿ ನಾಗರತ್ನಮ್ಮನವರೂ ಅವರ ಸಾಲಿನಲ್ಲಿ ನಿಲ್ಲುವಂತಾದುದೂ ಯೋಗಾಯೋಗವೇ ಎನ್ನಬೇಕು. ತನ್ನ ಪ್ರಬಲ ಪ್ರತಿಸ್ಪರ್ಧಿ ಶ್ರೀ ಎಚ್. ಸಿದ್ಧವೀರಪ್ಪನವರನ್ನು ಸಕ್ರಿಯ ರಾಜ್ಯಕೀಯದಿಂದ ನಿವೃತ್ತಿಗೊಳಿಸಲು ಶ್ರೀ ಅರಸು ಬಯಸಿ ಅವರಿಗೆ ಸಭಾಪತಿತ್ವದ ಕೊಡುಗೆ ಮುಂದೂಡಿದ್ದರು. ಆದರೆ ಅವರು ಇದನ್ನು ನಿರಾಕರಿಸಿದ್ದರಿಂದ ಸಚಿವ ಸಂಪುಟದಲ್ಲೇ ಅವರನ್ನು ನಿಷ್ಕ್ರಿಯವಾಗಿ ಸೇರಿಸಿಕೊಂಡರು. ಆಗ ಶ್ರೀಮತಿ ನಾಗರತ್ನಮ್ಮನವರ ಅದೃಷ್ಟ ಖುಲಾಯಿಸಿತು.

ಶ್ರೀಮತಿ ನಾಗರತ್ನಮ್ಮನವರು ಬ. ರಿಯ ೪೭ ವಯಸ್ಸಿನವರು ಇದರಲ್ಲಿ ೧೫ ವರ್ಷವನ್ನವರು ಶಾಸಿಕೆಯಾಗಿಯೇ ಕಳೆದಿದ್ದಾರೆ. ಇದೀಗ ತನ್ನ ಸ್ವಕ್ಷೇತ್ರ ಗುಂಡ್ಲುಪೇಟೆಯಿಂದ ನಾಲ್ಕನೆಯ ಬಾರಿಗೆ ಆಯ್ಕೆಯಾಗಿದ್ದಾರೆ. ಇದು ಅಧಿಕಾರಕ್ಕೆ ಅಂಟಿಕೊಳ್ಳುವ ಪ್ರವೃತ್ತಿಯಲ್ಲ; ಜನ ಸೇವೆಗೆ ದೊರೆತ ಸದವಕಾಶ ಮಾತ್ರ. ಶ್ರೀಮತಿಯವರು ಹುಟ್ಟಿದ್ದೊಂದು ಸುಸಂಸ್ಕೃತ ಮನೆತನದಲ್ಲಿ ಅವರ ಪತಿ ಶ್ರೀ ಸಿ. ಆರ್. ಗೌಡರು ವಿಧಾನ ಪರಿಷತ್ತಿನ ಸದಸ್ಯರು. ಶ್ರೀಮತಿ ನಾಗರತ್ನಮ್ಮರ ಶಿಕ್ಷಣ ನಡೆದದ್ದು ಬೆಂಗಳೂರಲ್ಲಿ, ಯುರೋಪಿಯನ್ ಶಾಲೆಗಳಲ್ಲಿ ಅವರಿಂದು ಮೈಸೂರಿನ ಮಾತೃಮಂದಿರ, ಅಖಿಳ ಭಾರತ ಮಹಿಳೆಯರ ಸಮ್ಮೇಳನದ ಮೈಸೂರು ವಿಭಾಗ, ಭಾರತ ಸ್ಕೌಟು ಮತ್ತು ಗೈಡ್ಸ್, ಮೈಸೂರು ವಿಶ್ವವಿದ್ಯಾಲಯ, ರಾಷ್ಟ್ರೀಯ ರೇಲ್ವೆ ಬಳಕೆದಾರ ಸಲಹಾ ಸಮಿತಿ, ಸಮಾಜ ಕಲ್ಯಾಣ ಮಂಡಳಿ, ಮೈಸೂರಿನ ಡಿವೈನ್ ಲೈಫ್ ಸೊಸಾಯಿಟಿ—ಮುಂತಾದ ಸಂಘ-ಸಂಸ್ಥೆಗಳೊಡನೆ ನಿಕಟ ಸಂಬಂಧವನ್ನು ಹೊಂದಿದ್ದಾರೆ. ವಿಧಾನ ಮಂಡಳದ ಅಂದಾಜು ಸಮಿತಿಯಲ್ಲೂ ಅವರು ಸದಸ್ಯೆಯಾಗಿ ದುಡಿದಿದ್ದರು.

ಶ್ರೀಮತಿ ನಾಗರತ್ನಮ್ಮ ವಿದೇಶ ಸಂಚಾರವನ್ನೂ ಮಾಡಿ ಬಂದವರು. ೧೯೬೭ರಲ್ಲಿ ಅಂತಾರಾಷ್ಟ್ರೀಯ ಸಮಾಜ ಕಲ್ಯಾಣ ಸಮ್ಮೇಳನದಲ್ಲಿ ಭಾಗವಹಿಸಲು ಜಪಾನಿಗೆ ಹೋಗಿದ್ದರು. ಅದೇ ವೇಳೆ ಫಿಲಿಪ್ಪೈನ್ಸ್, ವಿಯತನಾಮ್, ಹಾಂಗ್‌ಕಂಗ್ ಮತ್ತು ಬ್ರಹ್ಮಗಳನ್ನೂ ಸಂದರ್ಶಿಸಿದ್ದರು. ೧೯೬೦ರಲ್ಲಿ ರಶ್ಯ, ಜರ್ಮನಿ, ಸ್ವೀಡನ್, ನಾರ್ವೆ, ಡೆನ್ಮಾರ್ಕ್, ಹಾಲೆಂಡ್, ಬೆಲ್ಜಿಯಂ, ಫ್ರಾನ್ಸ್, ಸ್ವಿಜರ್‌ಲೇಂಡ್, ಇಟಲಿ ಮೊದಲಾದ ಯುರೋಪಿನ ದೇಶಗಳಲ್ಲಿಯೂ ಈಜಿಪ್ತದಲ್ಲಿಯೂ ವ್ಯಾಪಕ ಸಂಚಾರ ಮಾಡಿದರು. ೧೯೬೫ರಲ್ಲಿ ಅಮೇರಿಕೆಯನ್ನೂ ಸಂದರ್ಶಿಸಿದರು. ಆಗ ನವೀನ ವ್ಯವಸಾಯ ಪದ್ಧತಿಯ ಬಗ್ಗೆ ಆಳವಾದ ಅಧ್ಯಯನ ಮಾಡಿದರು. ಕರ್ನಾಟಕ ಸಂಗೀತದಲ್ಲೂ ಪರಿಣತರಾದ ಶ್ರೀಮತಿಯವರು ಟೆನ್ನಿಸ್ ಪ್ರಿಯರೂ ಹೌದು.

ಸರ್ವಸಾಮಾನ್ಯವಾಗಿ ಶಾಸನ ಸಭೆಯ ಸಭಾಪತಿತ್ವವು ಕಾಯಿದೆ ಪದವೀಧರರಿಗೇ ಮೀಸಲು. ಕರ್ನಾಟಕವು ಇದುವರೆಗೆ ಇದೇ ಸಂಪ್ರದಾಯವನ್ನು ಅನುಸರಿಸಿ ಬಂದಿದ್ದರೂ ಈ ಬಾರಿ ಮುರಿದಿದೆ. ಕಾನೂನು ಪದವಿಗಳಿಸದ ಮಹಿಳೆಯೋರ್ವಳನ್ನು ಆ ಸ್ಥಾನಕ್ಕೆ ಏರಿಸಿದೆ. ಶಾಸನ ಸಭೆಯಲ್ಲಿಯೂ ಅಪಾರ ಅನುಭವವಿರುವ ಶ್ರೀಮತಿ ನಾಗರತ್ನಮ್ಮ ತಮಗೆ ದೊರೆತ ಈ ಹೊಸ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸುವರೆಂದು ನಂಬಬಹುದು. ಸದಸ್ಯರ ಸಹಕಾರದಿಂದ ಎಲ್ಲವೂ ಸಾಧ್ಯವೇ.

○ ○ ○

ಶ್ರೀ ವೀರೇಂದ್ರ ಪಾಟೀಲ ಮತ್ತು ಶ್ರೀ ರಾಮಕೃಷ್ಣ ಹೆಗ್ಗಡೆಗಳು ಚುನಾವಣಾ ಕಣಕ್ಕೆ ಇಳಿಯದಿದ್ದಾಗ ಸಂಸ್ಥಾ ಕಾಂಗ್ರೆಸ್ ಬಹಳಷ್ಟು ಅಳಿಯಿಟ್ಟುಕೊಂಡಿತ್ತು. ಸರಕಾರವನ್ನೂ ರಚಿಸುವ ಉತ್ಸಾಹದಿಂದಿತ್ತು. ಆಗ ಸಹಜವಾಗೇ ಮಾಜಿ ಶಿಕ್ಷಣ ಸಚಿವ ಶ್ರೀ ಕೆ. ವಿ. ಶಂಕರೇ ಗೌಡರತ್ತ ಪಕ್ಷವು ಆಸೆಗಣ್ಣುಗಳಿಂದ ನೋಡುತಿತ್ತು. ಆದರೆ, ಚುನಾವಣೆಗಳಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಒಂದೊಂದೇ ಕಂಬಗಳು ಉರುಳುತ್ತ ಹೋದ ರಭಸದಲ್ಲಿ ಶ್ರೀ ಶಂಕರೇ ಗೌಡರೂ ಕೆಲವೇ ಮತಗಳ ಅಭಾವದಿಂದ ಸೋತು ಹೋದರು. ಅವರ ಪಕ್ಷ ಬರಿಯ ಅಧಿಕೃತ ವಿರೋಧಿ ಪಕ್ಷವಾಗಿ ಉಳಿಯುವಂತಾಯ್ತು.

ವಿರೋಧೀಪಕ್ಷದ ನಾಯಕನನ್ನಾಗಿ ಯಾರನ್ನು ಆರಿಸಬೇಕು ಎಂಬುದೂ ಆರಂಭದಲ್ಲಿ ತಲೆಗೆ ಹೋಗಲಿಲ್ಲ. ಆದುದರಿಂದಲೇ ಮುಖ್ಯಮಂತ್ರಿ ಅರಸು ಸ

(ಹನ್ನೆರಡನೇ ಪುಟ ನೋಡಿರಿ)

ಸರ್ಪಾರ್ಪಣ

ಲೇಖಕರು: ಶ್ರೀ ಬಡಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ಅವನು ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದ.

ಆದರೆ ಅವನ ದೇಹದಲ್ಲಿ ಆ ತ್ರಾಣ ಉಳಿದಿರಲಿಲ್ಲ.

'ಆತುರ ಬೇಡ. ಹುಶಾರಾಗಿ ನೋಡಿ ಇಳಿ! ಹೆಬ್ಬುಲಿ ಸತ್ತಿದೆಯೋ ಇಲ್ಲವೋ? ಗಾಯಗೊಂಡ ಹುಲಿ ಮೈಮೇಲೆ ಹಾರಿದರೂ ಹಾರೀತು'.

ದಿಣ್ಣೆಯ ಒಂದು ಭಾಗದಿಂದ ಈ ಮಾತುಗಳು ಕೇಳ ಬಂದುವು.

ಸ್ವರ ತೀರ ಪರಿಚಿತವಾದ್ದು—ಆದರೆ ಯಾರ ಸ್ವರವೆಂಬುದು ಅವನ ಸ್ಮರಣೆಗೆ ಬರಲಿಲ್ಲ.

'ಅಷ್ಟೂ ತಿಳಿಯುವುದಿಲ್ಲವೇ ನನಗೆ? ನಾನೇನು ಪುಟ್ಟ ಮಗುವೇ'

'ಬೆಳೆದು ಬಿಟ್ಟಿದ್ದೀಯೆ, ಯಾರು ಇಲ್ಲವೆಂದರು? ಅದಕ್ಕಾಗಿಯೇ ಹಿರಿಯರು ಹೇಳಿದ್ದು ಈ ಪ್ರಾಯದಲ್ಲಿ ನೆಲ ಕಾಣುವುದಿಲ್ಲವೆಂದು'

'ನನ್ನ ವಿಷಯದಲ್ಲಿ ನಿಮಗೆ ಎಲ್ಲಿಲ್ಲದ ಅಪನಂಬುಗೆ.'

'ನಿನ್ನ ಮೇಲೆ ನನಗಿರುವ ಆತ್ಮೀಯತೆ ಈ ಮಾತನ್ನು ಆಡಸುತ್ತಿದೆ. ಅದನ್ನು ಅವಿಶ್ವಾಸ ಎಂದು ಭಾವಿಸ ಬೇಡ. ನಾನು ಎಸೆದ ಈಟಿಯ ಏಟು ಹುಲಿಯ ಮರ್ಮಸ್ಥಾನಕ್ಕೆ ತಗುಲಿರ ಬೇಕು. ಹಾಗೆ ಬಿದ್ದಿದ್ದರೆ ಅದು ಬದುಕಿರುವುದು ಸಾಧ್ಯವಿಲ್ಲ. ಆದರೆ ಮಾಸಲು ಕತ್ತಲಲ್ಲಿ ಎಸೆದ ಎಸೆತ ಗುರಿಮುಟ್ಟಿತೋ ಇಲ್ಲವೋ ಅದೇ ಅನುಮಾನ. ಎರಡನೆಯದು .ಹುಲಿ ರಭಸದಿಂದ ತನ್ನ ಕೊಳ್ಳೆಯ ಮೇಲೆ ಎರಗಿತು— ಎಲ್ಲ ಸರಿ ಹೋದರೆ ನಿರೀಕ್ಷಿಸಿದ ಸ್ಥಳಕ್ಕೇ ಈಟಿ ತಾಗಬೇಕು.'

'ನಿಮಗೆ ಹುಲಿ ಹೊಡೆದೆ ಎಂಬ ಜಂಬ. ನನ್ನ ಪ್ರಸಂಗಾವಧಾನತೆಯಲ್ಲಿ ಅನುಮಾನ. ನಾನೂ ಒಂದು ಈಟಿಯನ್ನು ಎಸೆದೆನಲ್ಲ. ಅದು ತಗಲಿ ಹುಲಿ ಸತ್ತು ಬಿದ್ದಿರಬೇಕು. ನಿಮಗೋ ಎಲ್ಲಿಲ್ಲದ ಸಂಶಯ—ಅದು ಇನ್ನೂ ಸತ್ತಿಲ್ಲವಾಗಿದ್ದರೆ ಅದರ ಆರ್ಭಟ, ನರಳಾಟ ಕೇಳದಿರುತಿತ್ತೇ.?'

ಹೀಗೆ ನುಡಿಯುತ್ತ ಇಬ್ಬರೂ ಗೋವಿಂದ ಮುಗ್ಗುರಿಸಿದ ಹೊಂಡದ ಅಂಚಿಗೆ ಬಂದರು. ಕೈಯಲ್ಲಿದ್ದ ಖಡ್ಗದಿಂದ ಹುಲುಸಾಗಿ ಬೆಳೆದ ಪೊದರುಗಳನ್ನು ಸವರಿ ದಾರಿ ಮಾಡಿಕೊಂಡರು—ಒಬ್ಬರಿಗೆ ಒಬ್ಬರು ಆಸರೆಯಾಗಿ ಮೆಲ್ಲನೆ ಕೆಳಗಿಳಿದರು—

"ಹುಲಿಯೊಂದೇ ಸತ್ತು ಬಿದ್ದಿಲ್ಲ. ಮನುಷ್ಯ ದೇಹವೂ ಇರುವಂತಿದೆ"

'ಜಾಗ್ರತೆ! ಬೇಹುಗಾರರಿರಬಹುದು'

'ದೇಹದಲ್ಲಿ ಜೀವ ಸಂಚಾರವಿರುವಂತೆ ಕಾಣುವುದಿಲ್ಲ'

'ಇದು ತಣ್ಣೀರನ್ನೂ ತಣಿಸಿ ಕುಡಿಯುವ ಕಾಲ. ಬೇಹುಗಾರರು ಶತ್ರುಗಳನ್ನು ಮೋಸ ಪಡಿಸಲು ನಿಶ್ಚೇಷ್ಟಿತರಂತೆ ಬಿದ್ದಿರ ಬಲ್ಲರು—ಅದನ್ನು ನೀನು ತಿಳಿಯೆ ಲೋಕಾ! ಕೊಂಚ ನಿಧಾನಿಸು' ಎಂದು ಖಡ್ಗ ಹಿರಿದು ನಿಂತ ಅರಿಕೇಸರಿ.

'ಆ ಸತ್ತು ಬಿದ್ದ ಹುಲಿಯನ್ನೊಮ್ಮೆ ನೋಡಿ. ಹೊಟ್ಟೆಯನ್ನೇ ಬಗಿದು ಬಿಟ್ಟಿದೆ ಬಿಟ್ಟ ಈಟಿ. ನೋಡಿದಿರಾ ಈ ನೆತ್ತರ ಕಡಲನ್ನು, ಬದುಕಿದ್ದಾಗ ಹೀರಿದ ರಕ್ತವಷ್ಟೂ ಹೊರ ಹರಿದಿದೆ'

ಆತ ಖಡ್ಗದ ಮೊನೆಯಿಂದ ಗೋವಿಂದನ ದೇಹವನ್ನು ತಿವಿದ.

ಆ ತಿವಿತದ ನೋವಿಗೆ ಗೋವಿಂದ ಹೊರಳಾಡಿದ. ಮಾತನಾಡಲು ಪ್ರಯತ್ನಿಸಿದ. ಆದರೆ ಆಗಲಿಲ್ಲ.

"ಈತ ಯಾರೆಂಬುದನ್ನು ಗುರುತಿಸುವಂತಿಲ್ಲ. ಆದರೆ ಬದುಕಿರುವನೆಂಬುದು ಖಂಡಿತ. ಶತ್ರುವೇ ಇರಬಹುದು. ಆಪತ್ಕಾಲದಲ್ಲಿ ನೆರವಾಗುವುದು ಧರ್ಮ"

'ಆಪತ್ತಿನಲ್ಲಿದ್ದಾಗಲೇ ಶತ್ರುಗಳನ್ನು ಹಿಡಿದು ಸಂಹರಿಸುವುದು ವಸುಮತೀಶರ ನೀತಿ ಎಂದು ನಿನ್ನೆ ಕರ್ಣಪರ್ವವನ್ನೋದಿ ವ್ಯಾಖ್ಯಾನ ಮಾಡಿದಿರಿ. ಇದು ಯಾವ ಧರ್ಮ ಇಂದು ನೀವು ಹೇಳ ಹೊರಟಿರುವುದು'

'ಅದು ಕೃಷ್ಣ, ಅರ್ಜುನನಿಗೆ ಹೇಳಿದ ಬುದ್ಧಿವಾದ. ನನ್ನ ಮಾತು ಅಲ್ಲ ದೇವಿ. ಕರ್ಣನ ರಥ ಕೆಸರಲ್ಲಿ ಹೂತಿತ್ತು. ಅವನ ಸಾರಥಿ ಶಲ್ಯ ಅವನನ್ನು ತೃಣೀಕರಿಸಿ, ಅವನಿಂದ ದೂರವಾಗಿದ್ದ. ರಕ್ಷೆಯಾಗಿದ್ದ ಕರ್ಣಕುಂಡಲ, ಕವಚಗಳನ್ನು ಆಗಲೇ ಧಾರೆ ಎರೆದಿದ್ದ. ತಾಯಿ ಕುಂತಿಯ ಮಾತಿಗೆ ಸೋತು, ಸರ್ಪಾಸ್ತ್ರವನ್ನು ಉಪೇಕ್ಷಿಸಿಯಾಗಿತ್ತು. ಅರ್ಜುನನಲ್ಲಿ ಮೂಡಿದ ಕ್ಷಣಕಾಲದ ಮಮಕಾರವನ್ನು ಹೋಗಲಾಡಿಸಿ ಕಾರ್ಯ ಸಾಧಿಸಿ ಕೊಳ್ಳಲು ಹೇಳಿ ಕೊಟ್ಟ ಧರ್ಮ—ಆಪದ್ಧರ್ಮ! ಅದು ಆಗಿ ಸಹಸ್ರ–ಸಹಸ್ರ ವರ್ಷಗಳು ಆದುವು. ಹೊಸ ಕಾಲ,ಹೊಸ ಅನುಭವಗಳು, ಅವುಗಳ ನೆರವಿನಲ್ಲಿ ಹೊಸ ಆದರ್ಶಗಳ ಹೊಂಗನಸು ಮೂಡಿದೆ ಇಂದಿನ ದಿನಗಳಲ್ಲಿ. ಈಗ ನಾನು ಮಾಡ ಹೊರಟಿರುವುದು ಮಾನವ ಧರ್ಮ. ಮನುಷ್ಯ, ಮನುಷ್ಯನನ್ನು ಕಾಣಲೇ ಬೇಕಾದ ನೋಡಲೇ ಬೇಕಾದ ದೃಷ್ಟಿ'

'ಅದೆಲ್ಲ ನನಗೇಕೆ? ನನಗೆ ತಿಳಿದಿರುವ ಒಂದು ಅಚಲವಾದ ಧರ್ಮ ಇದೆ. ಅದಕ್ಕೆ ನಾನು ಬದ್ಧಳು'

'ಕೇಳ ಬಹುದೇ'

ಅದೇ ಪತಿ ಸೇವೆ. ಗುರು–ಹಿರಿಯರ ಸೇವೆ. ದೀನಾರ್ತರ ಸೇವೆ. ಈ ಸೇವಾ ಧರ್ಮ ಅಸಹಾಯಕ ಸ್ಥಿತಿಯಲ್ಲಿರುವ ಯೋಧನ ಸೇವೆ ಮಾಡು ಎಂದು ಆದೇಶ ಕೊಡುತ್ತಿದೆ.'

'ಮೊದಲು ಈತನನ್ನು ಇಲ್ಲಿಂದೆತ್ತಿ ಎತ್ತರಕ್ಕೊಯ್ಯಬೇಕು. ಆ ಮೇಲೆ ತಂದಿರುವ ಥೈಲಿಯಿಂದಿಷ್ಟು ನೀರು ಕುಡಿಸ ಬೇಕು. ಅನಂತರ ಉಪಚಾರಕ್ಕೊಂದು ಯೋಗ್ಯ ತಾಣ ದೊರಕಿಸಿಕೊಳ್ಳಬೇಕು'

ಇಬ್ಬರೂ ಬಗ್ಗಿ ಗೋವಿಂದನ ದೇಹವನ್ನು ಎತ್ತಿ ಕೊಂಡರು. ಆಕೆ ಕಾಲತ್ತ, ಆತ ತಲೆಯತ್ತ ಹಿಡಿದುಕೊಂಡ. ಅವರು ಅದನ್ನು ಶ್ರಮದಿಂದ ಎತ್ತಿ ತಂದು ದಿಣ್ಣೆಯ ಮೇಲಿಟ್ಟರು.

ಆಕೆ ಸುತ್ತಿದ್ದ ರುಮಾಲನ್ನು ಕಳಚಿ, ಅದರ ಸಹಾಯದಿಂದ ಗಾಳಿ ಹಾಕಿದಳು. ಆತ ತುಸು ಅಂತರದಲ್ಲಿ ಗೂಟಕ್ಕೆ ಕಟ್ಟಿದ್ದ ಕುದುರೆಗಳಿದ್ದಲ್ಲಿಗೆ ನಡೆದು ಹೋದ. ಚರ್ಮದ ಚೀಲದಲ್ಲಿ ತಂದಿದ್ದ ನೀರನ್ನು ಆತನ ಬಾಯಿಗೆ ಹಾಕಿದ. ಅನಂತರ ಅವನ ಮುಖಕ್ಕಿಷ್ಟು ನೀರು ಚಿಮುಕಿಸಿದ.

ಗೋವಿಂದ ಅವರಿಬ್ಬರನ್ನೂ ಗುರುತಿಸಿದ.

ಒಂದು ಆತನ ತಂಗಿ ಲೋಕಾ. ಆಕೆ ಗಂಡುಡಗೆಯಲ್ಲಿದ್ದಳು

ಆಕೆಯ ಜೊತೆಗಾರ ತನ್ನ ಪರಮ ಶತ್ರು—ಅರಿಕೇಸರಿ.

ಆ ಮುಚ್ಚಂಜೆಯ ಹೊತ್ತಿನಲ್ಲಿ, ವಯಸ್ಸಿಗೆ ಬಂದ ತನ್ನ ಅವಿವಾಹಿತ ತಂಗಿ, ಅನ್ಯ ಪುರುಷನೊಡನೆ ಕಾಡು—ಗುಡ್ಡಗಳಲ್ಲಿ ಅಲೆಯುತ್ತಿರುವುದನ್ನು ಕಂಡು ಅವನ ಹೃದಯ ಹಳಹಳಿಸಿತು.

ಆತ ಒಳ ಒಳಗೇ ಕುದಿದ.

ಆತನ ಬಾಹುಗಳಲ್ಲಿ ಬಲವಿರಲಿಲ್ಲ.

ಬೈಯುವ ಎಂದರೆ ನಾಲಗೆ ಏಳಲಿಲ್ಲ.

ಆತ ಯಾರೇ ಇರಲಿ, ಅವನನ್ನು ಮೊದಲು ರಾಜವಾಡೆಗೊಯ್ಯುವುದು ಒಳ್ಳೆಯದೆಂದು ತೀರ್ಮಾನಿಸಿದರು.

ಗೋವಿಂದನ ದೇಹವನ್ನು ಹೊತ್ತು ತಂದು ಕುದುರೆಯ ಬೆನ್ನಿಗೆ ಕಟ್ಟಲಾಯಿತು. ಅರಿಕೇಸರಿ ಆ ಕುದುರೆಯನ್ನೇರಿದ.

'ಸ್ವಾಮೀ'

'ಏನೇ ಲೋಕಾ'

'ಸತ್ತು ಬಿದ್ದ ಹೆಬ್ಬುಲಿ'

'ನಾಳೆ ಆಳು ಮುಖೇನ ತರಿಸಿಕೊಂಡರಾಯಿತು. ಆಗಲೇ ತಡವಾಗಿದೆ. ಮೊದಲು ಆಗ ಬೇಕಾದುದು ಇವನ ಉಪಚಾರ. ಹ್ಞೂ! ಹೊರಡು' ಹೀಗೆ ನುಡಿದು ಅರಿಕೇಸರಿ ವಾಜಿಯನ್ನೇರಿದ. ವಾಘೆಯನ್ನು ಜಗ್ಗಿದ, ಕುದುರೆ ಚಂಗನೆ ನೆಗೆಯಿತು.

ಅವನನ್ನು ಬೆಂಬತ್ತಿದಳು ಲೋಕಾಂಬಿಕೆ.

ಕತ್ತಲಲ್ಲಿ ಇಬ್ಬರೂ ಮಾಯವಾದರು

೧೧

ಗೋವಿಂದನನ್ನು ಹೊತ್ತು ತಂದ ಕುದುರೆ ಮೊದಲು ರಾಜವಾಡೆಯನ್ನು ತಲುಪಿತು.

ಬಿಚ್ಚುಗತ್ತಿಯ ಪಹರೆಯವರು ದ್ವಾರವನ್ನು ಕಾಯುತಿದ್ದರು.

ಕುದುರೆಯ ಖುರಪುಟದ ಸದ್ದಿನಿಂದ ಪಹರೆಯಾಳುಗಳು ಜಾಗ್ರತರಾದರು. ಕತ್ತಿ ಹಿರಿದು ನಿಂತರು. ಅವರು ಅರಿಕೇಸರಿಯ ಕುದುರೆಯನ್ನು ತಡೆದರು.

ಮನೆ ಮನೆಯೂ ಕಾರಸ್ಥಾನದ ತೌರು ಮನೆಯಾಗಿತ್ತು. ಕತ್ತಲಾದ ಮೇಲೆ ಅತ್ತಿತ್ತ ಸುಳಿಯುವುದೂ ಆಗ ಅಸಾಧ್ಯವಿತ್ತು. ಆಗ ರಾಜವಾಡೆಯಂತೂ ಅಭೇದ್ಯ ಕೋಟೆ. ರಾಷ್ಟ್ರಕೂಟ ಸಾಮ್ರಾಜ್ಯ ಶಕ್ತಿಗೆ ಮುನಿದು ನಿಂತ ಗೋವಿಂದನ ಅರಮನೆ ಎಂದರೆ ಕೇಳಬೇಕೇ?

ಪಹರೆಯವರಿಗೆ ಅರಿಕೇಸರಿಯ ಗುರುತು ಸಿಗಲಿಲ್ಲ.

ಸಿಕ್ಕಿದ್ದರೂ ಅವನಿಗೆ ಪ್ರವೇಶ ದೊರೆಯುತ್ತಿರಲಿಲ್ಲ.

(ಹನ್ನೊಂದನೇ ಪುಟ ನೋಡಿರಿ)

೬–೪–೧೯೭೬

ನವಯುಗ

ಸಂಪಾದಕೀಯ

ಸಣ್ಣಕಾರು ಯೋಜನೆಗೆ ಪರ್ವತ ಪ್ರಸವ ವೇದನೆ

ಸುಮಾರು ಹದಿನೆಂಟು ವರ್ಷ ವಯಸ್ಸಿನ ಭಾರತದ ಸಣ್ಣಕಾರು ಯೋಜನೆಯು ಹಲವಾರು ಅಡೆತಡೆಗಳನ್ನು ಹಾಯ್ದು ಇದೀಗ ನಿರ್ಣಾಯಕ ಹಂತವೊಂದನ್ನು ತಲಪಿದೆಯೆಂದು ವರದಿಯಾಗಿದೆ. ೫-೬ ವಿದೇಶಿ ಕಂಪೆನಿಗಳು ಈ ಯೋಜನೆಯಲ್ಲಿ ಸಹಭಾಗಿಯಾಗಲು ಮುಂದೆ ಬಂದುವು. ಆದರೆ ಇಲ್ಲಿ ತಯಾರಾದ ಸಣ್ಣ ಕಾರುಗಳ ನಿರ್ಯಾತಕ್ಕೆ ಒಪ್ಪಿಗೆ ನೀಡಿದ್ದು ಒಂದೇ ಒಂದು ಕಂಪೆನಿ. ಇದು ಫ್ರಾನ್ಸದ ರೆನಾಲ್ಡ್ ಕಂಪೆನಿ. ಈ ಕಂಪೆನಿಯ ಸಹಭಾಗಿತ್ವದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕಾರುಗಳ ಉತ್ಪಾದನೆಗೆ ಕೇಂದ್ರ ಸಂಪುಟದ ಆರ್ಥಿಕ ಸಮನ್ವಯ ಸಮಿತಿಯೂ ಸಂಪುಟವೂ ತಾತ್ತ್ವಿಕವಾಗಿ ಒಪ್ಪಿಕೊಂಡಿವೆ. ಕಾರು ಉತ್ಪಾದನೆಯ ವಿವರವಾದ ಯೋಜನೆಯನ್ನು ಸಿದ್ಧಪಡಿಸಲು ಈಗ ರೆನಾಲ್ಡ್ ಕಂಪೆನಿಯನ್ನು ಕೇಳಿಕೊಳ್ಳಲಾಗಿದೆ. ಈ ನಿಯೋಜಿತ ಸಣ್ಣಕಾರು ೩.೮೫ ಮೀಟರ್ ಉದ್ದವಿದ್ದು ೧.೬೪ ಮೀಟರ್ ಅಗಲವಿರುವುದು. ನಾಲ್ಕು ಸಿಲಿಂಡರ್ ಮೆಶಿನ್ ಹೊಂದಿರುವ ಈ ಕಾರಿನ ವೇಗಮಿತಿ ತಾಸಿಗೆ ೧೩೪ ಕಿಲೋಮೀಟರುಗಳು. ಈ ಯೋಜನೆಯು ಕಾರ್ಯ ರೂಪಕ್ಕೆ ಬರಬೇಕಾದರೆ ಈಗಿನ ಅಂದಾಜಿನಂತೆ ಮುಂದಿನ ಐದು ವರ್ಷಗಳಲ್ಲಿ ೫೫ ಕೋಟಿ ರೂಪಾಯಿಗಳ ಬಂಡವಳ ಹೂಡಬೇಕಾಗುವುದು. ಆ ಬಳಿಕ ಪ್ರತಿವರ್ಷ ಸುಮಾರು ೫೦ಸಾವಿರ ಕಾರುಗಳ ನಿರ್ಮಾಣವಾಗುವುದೆಂಬ ನಿರೀಕ್ಷೆ.

ಸಣ್ಣಕಾರಿನ ಯೋಜನೆ ಹದಿನೆಂಟು ವರ್ಷಗಳಿಗೆ ಹಿಂದೆ ಬಂದಾಗ ಇದ್ದ ಪರಿಸ್ಥಿತಿ ದೇಶದಲ್ಲೀಗ ಇಲ್ಲವೆಂಬುದು ನಿರ್ವಿವಾದ. ಅಗ್ಗ ಬೆಲೆಯಲ್ಲಿ ದೇಶೀಯ ಕಾರುಗಳನ್ನು ಪೂರಯ್ಸುವ ಗುರಿಯೇನೋ ಉತ್ತಮವೇ. ಆದರೆ, ಈಗ ಅಥವಾ ಇನ್ನು ಮುಂದೆ 'ತಯಾರಾಗುವ ಕಾರುಗಳ' ಬೆಲೆಯು ಕಡಿಮೆಯಿರುವುದೆಂದು ಹೇಳಲಾಗದು. ಗುಣ ಮಟ್ಟದಲ್ಲಿಯೂ ಉಪಯೋಗದಲ್ಲಿಯೂ ತಾಳಿಕೆ—ಬಾಳಿಕೆಗಳಲ್ಲಿಯೂ ವಿದೇಶಿ ಕಾರುಗಳೊಡನೆ ಸ್ಪರ್ಧಿಸ ಬಲ್ಲ ಸಾಮರ್ಥ್ಯ ದೇಶೀಯ ಕಾರುಗಳಿಗಿಲ್ಲದೆ ಹೋದರೆ ಅವು ಜನಪ್ರಿಯವಾಗುವುದು ಎಂದಿಗೂ ಸಾಧ್ಯವಿಲ್ಲ. ಈಗಾಗಲೇ ಕೆಲವು ಖಾಸಗಿ ಸಂಸ್ಥೆಗಳಿಗೂ ಸಣ್ಣ ಕಾರುಗಳನ್ನು ತಯಾರಿಸಲು ಪರವಾನಿಗೆ ನೀಡಲಾಗಿದೆ. ಆದರೆ, ಅವಾವುವೂ ಉತ್ಪಾದನೆಯ ಹಂತವನ್ನು ಇನ್ನೂ ತಲುಪಲಿಲ್ಲ. ಆದುದರಿಂದ ಇವುಗಳ ದೇಶೀಯ ಕಾರುಗಳು ಮಾರುಕಟ್ಟೆಗೆ ಬರುವಾಗ, ಈಗಿನ ಅಂದಾಜು ಬೆಲೆಗಳ ಲೆಕ್ಕಾಚಾರ ತಲೆಕೆಳಗಾಗುವುದು. ಕಂಡಿತವೇ. ಮೂಲತಃ ಮಧ್ಯಮ ವರ್ಗದ ಜನತೆಯ ಕೈಗೆಟಕುವಂತಹ ಸಣ್ಣ ಕಾರುಗಳ ತಯಾರಿಯೇ ಯೋಜನೆಯ ಉದ್ದೇಶ್ಯವಾಗಿದ್ದರೂ ಇಂದಿನ ದುಬಾರಿ ಕಾಲದಲ್ಲಿ ಆ ಉದ್ದೇಶ ಈಡೇರುವುದರಲ್ಲಿ ಸಂದೇಹವಿದೆ. ಉತ್ಪಾದನೆಗೆ ತೊಡಗಲು ಇನ್ನೂ ಕೆಲವು ವರ್ಷಗಳು ಬೇಕೆಂಬಾಗ, ಇದು ಪರ್ವತ ಪ್ರಸವವಾಗ ಬಹುದೇ ಎಂಬ ಭೀತಿಯೂ ತಲೆದೋರುತ್ತದೆ. ವಿದೇಶಿ ಹಾಗು ದೊಡ್ಡ ಕಾರುಗಳ ಮೇಲೆ ವಿಪರೀತ ತೆರಿಗೆ ಹೊರಿಸಿ ಈ ಸಣ್ಣ ಕಾರುಗಳ ಬೆಲೆ 'ಕಡಿಮೆ'ಯೆಂದು ಸರಕಾರ ತೋರಿಸುವುದಕ್ಕಿಂತ ಸಣ್ಣ ಕಾರು ತಯಾರಿಕೆಗೆ ಬೇಕಾಗುವ ಬಿಡಿ ಭಾಗಗಳ ಮೇಲೆ ತೆರಿಗೆ ವಿನಾಯಿತಿಯನ್ನು ತೋರಿಸಿ ಅವುಗಳು ಮಧ್ಯಮ ವರ್ಗದ ಕೊಳ್ಳುವ ಶಕ್ತಿಗೆ ಎಟಕುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.

ಆದರೆ, ಈ ನಡುವೆ ಮತ್ತೊಂದು ವರದಿಯೂ ಬಂದಿದೆ. ೫೫ಕೋಟಿ ರೂಪಾಯಿಯಷ್ಟು ದೊಡ್ಡ ಮೊತ್ತದ ಬಂಡವಳ ಹೂಡಿಕೆಯ ಈ ಯೋಜನೆಯ ಉಪಯೋಗದ ಬಗ್ಗೆ ಸಚಿವ ಸಂಪುಟದಲ್ಲಿ ಭಿನ್ನಮತವಿರುವುದು ಸಹಜವೇ. ಸಣ್ಣ ಕಾರುಗಳು ಶ್ರೀಸಾಮಾನ್ಯನ ಬೇಡಿಕೆಯಲ್ಲ. ಕೇವಲ ಅಲ್ಪ ಪ್ರಮಾಣದ ವರ್ಗದವರಿಗೆ ಮಾತ್ರ ಪ್ರಯೋಜನಕಾರಿಯಾಗುವ ಈ ಯೋಜನೆಯನ್ನು ಸದ್ಯಕ್ಕೆ ಕೈಬಿಡ ಬೇಕೆಂಬುದು ಒಂದು ಅಭಿಪ್ರಾಯ. ಶ್ರೀ ಸಾಮಾನ್ಯನಿಗೆ ಉತ್ತಮ ಸಾರಿಗೆಯ ಅನುಕೂಲವೊದಗಿಸಲು ಸರಕಾರಿ ಸಾರಿಗೆಯನ್ನು ವಿಸ್ತರಿಸುವುದು ಮತ್ತು ಮಧ್ಯಮ ವರ್ಗದ ಉಪಯೋಗಕ್ಕೆ ಅಧಿಕ ಸಂಖ್ಯೆಯಲ್ಲಿ ಸ್ಕೂಟರ್‌ಗಳನ್ನು ಉತ್ಪಾದಿಸುವುದು ಕಾರು ಯೋಜನೆಗಿಂತ ಹೆಚ್ಚು ಉಪಯುಕ್ತಕರವೆಂಬುದು ಸಾಮಾನ್ಯಾಭಿಪ್ರಾಯ. ಅಗತ್ಯ ವಸ್ತುಗಳ ಉತ್ಪಾದನೆಗೆ ಈ ೫೫ ಕೋಟಿ ರೂಪಾಯಿಗಳನ್ನು ಒದಗಿಸುವುದರಿಂದ ಶ್ರೀಸಾಮಾನ್ಯನ ಜೀವನ ಮಟ್ಟವನ್ನು ಎತ್ತರಿಸುವುದು ಸುಲಭವಾಗುತ್ತದೆ. ಈ ಅಭಿಪ್ರಾಯವೇ ಬಲೀಯಸವಾಗಿ 'ಸಣ್ಣ ಕಾರು ಯೋಜನೆ'ಯನ್ನು ಸರಕಾರ ಕೈಬಿಡುವುದೇ ಉತ್ತಮವೆನಿಸುತ್ತದೆ. ಸಣ್ಣಕಾರುಗಳನ್ನು ಉತ್ಪಾದಿಸಲು ಅನುಮತಿ ಪಡೆದುಕೊಂಡಿರುವ ಸಂಸ್ಥೆಗಳಿಗೇ ಹೆಚ್ಚಿನ ಉತ್ತೇಜನವನ್ನು ಸದ್ಯ ನೀಡಿ, ಅವುಗಳು ಶೀಘ್ರಾತಿ ಶೀಘ್ರವಾಗಿ ಕಾರ್ಯ ತತ್ಪರವಾಗುವಂತೆ ನೋಡಿಕೊಳ್ಳುವುದು ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ಪಕ್ಷವೆಂದೇ ಹೇಳಬೇಕು. 'ಕಾರುಗಳು' ಇನ್ನೂ 'ಅವಶ್ಯಕ ಸಾಧನ'ಗಳಾಗಿಲ್ಲವೆಂಬುದು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ. ಆದ್ದರಿಂದ, ಕೇಂದ್ರ ಸರಕಾರವೀಗ ನಿರ್ಧಾರಾತ್ಮಕ ನಿಲುವೊಯನ್ನು ವಹಿಸಬೇಕಾಗಿದೆ- ಈ ಯೋಜನೆಯನ್ನು ನನೆಗುದಿಗೆ ಸಿಲುಕಿಸಿ ವಿಳಂಬ ಮಾಡುತ್ತ ಹೋಗುವುದು ಅನಪೇಕ್ಷಣೀಯ ತನ್ನ ಯೋಜನೆಯನ್ನು ಸಂಪೂರ್ಣ ಕೈಬಿಟ್ಟು ಅದನ್ನು ಮುಗಿದ ಅಧ್ಯಾಯವೆಂದು ಬಗೆಯುವುದೇ ಈಗ ಒಳ್ಳೆಯದೆನಿಸುತ್ತದೆ. ಏಕೆಂದರೆ, ಸಣ್ಣಕಾರುಗಳಿಲ್ಲವೆಂದು ಕಂರುಬುವವರ ಸಂಖ್ಯೆ ಅಗಣ್ಯವೆಂದೇ ಹೇಳಬೇಕು. ಈ ನಡುವೆಖಾಸಗಿ ಸಂಸ್ಥೆಗಳು ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತಂದರೆ ಉಪಯುಕ್ತವೇ ಆದೀತು

ಹೆಗ್ಗಡೆಯವರ ಹೆಜ್ಜೆ ನಿಜಕ್ಕೂ ಅನುಕರಣೀಯ

ದಕ್ಷಿಣ ಕನ್ನಡದ ಕ್ಷೇತ್ರಗಳಲ್ಲಿ ಧರ್ಮಸ್ಥಳವೊಂದು. ಇದು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದು ತನ್ನದೇ ಆದ ಪರಂಪರೆಗೆ ಹೆಸರಾಗಿದೆ. ಅಲ್ಲಿನ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ನವೋನ್ಮುಖಶಾಲಿಗಳು. ಅವರು ಮಾರ್ಚಿ ೨೯ರಂದು ರಾತ್ರೆ ಹನ್ನೆರಡು ಗಂಟೆಯ ಶುಭ ಮುಹೂರ್ತದಲ್ಲಿ ಸಾಮೂಹಿಕ ವಿವಾಹ ಮಹೋತ್ಸವವನ್ನು ಏರ್ಪಡಿಸಿದರು. ಇದರಲ್ಲಿ ೮೮ ಜೋಡಿ ವಧು-ವರರು ಭಾಗವಹಿಸಿದ್ದು ಶ್ರೀ ಮಂಜುನಾಥನ ಸನ್ನಿಧಿಯಲ್ಲಿ ದಂಪತಿಗಳಾಗಿ ಸಹಬಾಳ್ವೆಯ ದೀಕ್ಷೆ ಪಡೆದರು. ವಧೂವರರ ಸಂಪ್ರದಾಯಗಳಂತೆ ನಡೆದ ಈ ಸಾಮೂಹಿಕ ವಿವಾಹವು ನಮ್ಮ ಜಿಲ್ಲೆಗೇ ಹೊಸರೀತಿಯದ್ದೆಂಬುದು ನಿರ್ವಿವಾದ. ಅಲ್ಲಲ್ಲಿ ಸಾಮೂಹಿಕ ಉಪನಯನದ ವರದಿಗಳನ್ನು ನಾವು ಕೇಳಿದ್ದೇವೆ. ಉಪನಯನವು ಒಂದು ವರ್ಗಕ್ಕೆ ಮಾತ್ರ ನಡೆವ ಸಂಸ್ಕಾರ. ಆದರೆ, ವಿವಾಹವು ಸಾರ್ವದೇಶಿಕವಾದ, ಭವಿಷ್ಯ ರೂಪಿಸಬಲ್ಲ ಸಂಸ್ಕಾರವಾದುದರಿಂದ ಇದಕ್ಕೆ ಮಹತ್ವ ಹೆಚ್ಚು.

'ನಮ್ಮ ನೌಕರರು ಕೆಲವರು ಮದುವೆಗಾಗಿ ಸಾಲಮಾಡಿ ಅನಂತರ ನಿರಂತರ ಒದ್ದಾಡುತ್ತಿರುವುದನ್ನು ಕಂಡಾಗ ಇಂತಹ ಉಪಕ್ರಮವೊಂದು ನಮ್ಮ ಕಲ್ಪನೆಗೆ ಬಂತು. ಮದುವೆಯ ಅನವಶ್ಯಕ ಖರ್ಚುವೆಚ್ಚದ ಹವ್ಯಾಸ ನಿಲ್ಲಬೇಕು ಆದರೆ ವಿವಾಹ ವಿಧಿಯ ಪಾವಿತ್ರ್ಯ ಉಳಿಯಬೇಕು ಎಂಬುದರಿಂದ ಈ ಏರ್ಪಾಟು ಮಾಡಿದ್ದೇವೆ' ಎಂಬ ಶ್ರೀ ಹೆಗ್ಗಡೆಯವರ ವಿವರಣೆ ನಿಜಕ್ಕೂ ಸ್ವಾಗತಾರ್ಹವಾದದ್ದು. ಇಲ್ಲಿ ವಿವಾಹದೀಕ್ಷೆ ಪಡೆದವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಮಾತ್ರವಲ್ಲ, ಕರ್ನಾಟಕದ ಇತರೆಡೆಯವರೂ ಇದ್ದರು- ಒಂದೆರಡು ಅಂತರ್ಜಾತೀಯ ಜೋಡಿಗಳೂ ಇದ್ದವು. ಉಚ್ಚವರ್ಗದವರೆಂದು ಹೇಳಲಾಗುವ ಬ್ರಾಹ್ಮಣರಿಂದ ತೊಡಗಿ ನಿಮ್ನ ವರ್ಗದ ಹರಿಜನ—ಗಿರಿಜನರ ಜೋಡಿಗಳೂ ಇದ್ದುವು. ಹೀಗೆ ಜಾತಿ—ಮತ ಭೇದವಿಲ್ಲದ ಶ್ರೀಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಆತನ ಪ್ರೇರೇಪಣೆಯಂತೆ ನಡೆದ ಈ ಸಮಾರಂಭವು ವಿವಾಹದ ಹೆಸರಲ್ಲಿ ಅನಾವ್ರಯ-ಅಪವ್ಯಯ ನಿರತರಾದವರ, ಅದನ್ನು ಪ್ರತಿಷ್ಠೆ-ಗೌರವದ ಪ್ರಶ್ನೆಯೆಂದು ನಂಬಿ ಬಂದವರ ಕಣ್ಣು ತೆರೆಯಿಸಬೇಕು.

ಶ್ರೀ ಹೆಗ್ಗಡೆಯವರು 'ಈ ವಿಧದ ಸಮಾರಂಭವನ್ನು ಪ್ರತಿವರ್ಷವೂ ಜರಗಿಸುತ್ತೇವೆ ಎನ್ನಲಾಗದು....' ಎಂದು ನುಡಿದಿದ್ದವರಾದರೂ 'ಇದರ ಪರಿಣಾಮ-ಪ್ರಯೋಜನ ನೋಡಿಕೊಂಡು ಶ್ರೀ ಸ್ವಾಮಿ ಚಿತ್ತವನ್ನು ಅನುಸರಿಸುವ' ಭರವಸೆ ನೀಡಿರುವುದು ಆಶಾದಾಯಕ ವಿವಾಹವು ಪವಿತ್ರ ಬಂಧನ ಮಾತ್ರವಾದುದರಿಂದ ಅದು ಆಡಂಬರಿಯಪ್ಪಾಗುವ ಅಗತ್ಯವೇ ಇಲ್ಲ. 'ಮದುವೆ ಮಾಡಿ ನೋಡು' ಎಂಬ ಲೋಕೋಕ್ತಿಯು ಹುಟ್ಟಿ ಬರಬೇಕಾದರೆ ಅದರ ಹಿನ್ನಡೆ ಅಗಾಧವಿರಲೇಬೇಕು. ಶ್ರೀ ಹೆಗ್ಗಡೆಯವರ ಈ ಉಪಕ್ರಮದಿಂದ ಶ್ರೀ ಸ್ವಾಮಿ ಸುಪ್ರೀತನಾಗಿದ್ದಾನೆ; ಸಮಾಜ ಅವರಿಗೆ ಕೃತಜ್ಞವಾಗಿದೆ. ಆದುದರಿಂದ ಪ್ರತಿವರ್ಷವೂ ಕಡಿಮೆ ಪಕ್ಷ, ಎರಡು ಬಾರಿ- ನವರಾತ್ರಿ ಮತ್ತು ಯುಗಾದಿಯ ಆಸುಪಾಸಿನಲ್ಲಿ – ಯಾದರೂ ಈ ಬಗೆಯ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿದರೆ, ಸಮಾಜಕ್ಕೆ ಮಹದುಪಕಾರವಾಗುತ್ತದೆ. ವಿಶ್ವ ಕುಟುಂಬಿ ಭಕ್ತವತ್ಸಲ ಶ್ರೀ ಮಂಜುನಾಥನ ಅನುಗ್ರಹದಿಂದ ಶ್ರೀ ಹೆಗ್ಗಡೆಯವರ ಉಪಕ್ರಮ ಇತೋಪ್ಯತಿಶಯವಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಶ್ರೀ ಹೆಗ್ಗಡೆಯವರು ಇಟ್ಟ ಹೆಜ್ಜೆ ಉಳಿದ ಧರ್ಮಪೀಠಗಳಿಗೆ ಅನುಕರಣೀಯ.

●●

ಉಡುಪಿಯಲ್ಲಿ ಕಾಂಗ್ರೆಸ್ ಅಭಿನಂದನಾ ಸಭೆ

ಉಡುಪಿ ಮತದಾರ ಕ್ಷೇತ್ರದ ಆ. ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಮನೋರಮಾ ಮಧ್ವರಾಜರ ಅಭಿನಂದನಾ ಸಭೆಯು ತಾ. 1ರಂದು ರಥಬೀದಿಯಲ್ಲಿ ಶ್ರೀ ಟಿ. ರಮೇಶ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಉಡುಪಿ ಬ್ಲಾಕ್ ಕಾಂ. ಸಮಿತಿಯ ಕನ್ವೀನರ್ ಶ್ರೀ ಬಿ. ಯೋಗೀಶ ಹೊಳ್ಳರು ಸ್ವಾಗತಿಸಿದರು. ಸಭೆಗೆ ಮೊದಲು ಕಾಂ. ಕಾರ್ಯಕರ್ತರು ವಿಜಯೋತ್ಸವದ ಸಂಬಂಧ ಮಲ್ಪೆಯಿಂದ ಮೆರವಣಿಗೆಯಲ್ಲಿ ಉಡುಪಿಯ ಮುಖ್ಯ ಬೀದಿಗಳನ್ನು ಸುತ್ತಿ ಸಭಾಸ್ಥಳಕ್ಕೆ ಆಗಮಿಸಿದ್ದರು.

ಶ್ರೀ ಪೈಯವರು ಮಾತಾಡಿ ಜನತೆ ಮತದಾರರು ಮತ್ತು ಜನತಾ ಪ್ರತಿನಿಧಿಗಳು ಆಗಿಂದಾಗ್ಗೆ ಸಭೆ ಸೇರಿ ವಿಚಾರ ವಿನಿಮಯ ನಡೆಸಿ ನಮ್ಮ ಪ್ರತಿನಿಧಿಗಳಿಗೆ ಸ್ಥಳೀಯ ಸಮಸ್ಯೆಗಳ ಕುರಿತು ಮನವರಿಕೆ ಮಾಡಿಕೊಡಬೇಕು. ಇಂತಹ ಪರಸ್ಪರ ವಿಚಾರ ವಿನಿಮಯಗಳಿಂದ ಸಹಕಾರದಿಂದ ಪ್ರಗತಿ ಸಾಧಿಸಬೇಕೆಂದರು. ಶ್ರೀಮತಿ ಮಧ್ವರಾಜರು ನಮ್ಮ ಪ್ರತಿನಿಧಿಯಾಗಿ ಹೋಗುವಂಥದ್ದು ನಮ್ಮ ಸೌಭಾಗ್ಯ ಎಂದವರು ಹೇಳಿದರು. ಅಲ್ಲದೆ ಸ್ವಾತಂತ್ರ್ಯ ದೊರಕಿದ 25 ವರ್ಷದ ನಂತರ ನಮ್ಮ ದೇಶವಲ್ಲಾಗಿರುವ ರಾಜಕೀಯ ಬದಲಾವಣೆಯನ್ನವರು ವಿವರಿಸಿದರು. ಶ್ರೀಮತಿ ಮಧ್ವರಾಜರನ್ನು ಆರಿಸಿ ಅವರಿಗೆ ನಿಸ್ವಾರ್ಥ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಟ್ಟ ಜನತೆಯನ್ನು ಅವರು ಅಭಿನಂದಿಸಿದರು.

ಶ್ರೀಮತಿ ಮಧ್ವರಾಜರು ಮಾತಾಡಿ ಮುಂದಿನ ೫ವರುಷಗಳಲ್ಲಿ ತಾನು ನಿಷ್ಠೆಯಿಂದ ಸೇವೆಗೈಯುವಂತೆ ಜನತೆ ಮಾರ್ಗದರ್ಶನ ನೀಡಬೇಕೆಂದು ಕೇಳಿಕೊಂಡರು. ತನ್ನನ್ನು ಪ್ರಚಂಡ ಬಹುಮತದಿಂದ ಆರಿಸಿದುದಕ್ಕೆ ಜನತೆಗೆ ಕೃತಜ್ಞತೆ ಸಲ್ಲಿಸಿದರು.

ಶ್ರೀ ಎ. ಜೆ ಆಲ್ವೆಯವರು ಅಭಿನಂದನ ಭಾಷಣ ಮಾಡಿದ ಬಳಿಕ ಶ್ರೀ ಮಟ್ಟಿ ರಾಮಚಂದ್ರರಾಯರು ಧನ್ಯವಾದ ಅರ್ಪಿಸಿದರು.

ಕುಂದಾಪುರ ರೋಟರಿಗೆ ನೂತನ ಅಧಿಕಾರ ವರ್ಗ

ಕುಂದಾಪುರ ರೋಟರಿ ಕ್ಲಬ್ ಸಭೆಯು ಕಳೆದ ತಾ. 24ರಂದು ಸೇರಿದಾಗ ಹೊಸ ವರುಷಕ್ಕೆ ಶ್ರೀಗಳಾದ ವಿ. ಕೃಷ್ಣಪ್ಪ ಶೆಟ್ಟಿ ಅಧ್ಯಕ್ಷರಾಗಿಯೂ, ಜಿ. ಎನ್. ಬುಲ್ಲಣ್ಣವರ್, ಅಹ್ಮದ್ ಕುಟ್ಟಿ ಮತ್ತು ಕೆ. ಗೋವಿಂದರಾಯ ಕಾಮತ್ ಉಪಾಧ್ಯಕ್ಷರುಗಳಾಗಿಯೂ, ಶ್ರೀ ಎ. ಎಸ್. ಎನ್. ಹೆಬ್ಬಾರ್. ಕಾರ್ಯದರ್ಶಿಯಾಗಿಯೂ, ಎಸ್. ಪಿ ತೋಳಾರ್, ಕೆ. ಆರ್. ಕಾರಂತ್, ಡಿ ಎಸ್. ಹೆಮ್ಮಾಡಿ, ಎಚ್. ಎನ್. ನಕ್ಷತ್ರಾಯ ಡೈರೆಕ್ಟರುಗಳಾಗಿಯೂ, ಶ್ರೀಗಳಾದ ಎಂ. ಎಂ. ಹೆಗ್ಡೆ, ಜಿ ಕುಶಲ ಹೆಗ್ಡೆ, ಬುಲೆಟಿನ್ ಸಂಪಾದಕರುಗಳಾಗಿಯೂ ಆರಿಸಲ್ಪಟ್ಟಿರುವರು.

ರೋಟರಿ ಅಧ್ಯಕ್ಷ ಡಾ। ಬಿ ಭುಜಂಗ ಹೆಗ್ಡೆಯವರನ್ನು 1972–73ರ ಸಾಲಿನ ರೋಟರಿ ಗವರ್ನರರ ಗ್ರೂಪ್ ಪ್ರತಿನಿಧಿಯಾಗಿ ನೇಮಿಸಲಾಗಿದ್ದು, ಕುಂದಾಪುರ, ತೀರ್ಥಹಳ್ಳಿ, ಉಡುಪಿ ಮತ್ತು ಶಿರ್ವ ಕ್ಲಬ್‌ಗಳು ಅವರ ನಿರ್ವಹಣೆಗೆ ಒಳಪಡುತ್ತವೆ.

ಗೇಹರಾಜ್ಯದಲ್ಲಿ—

ಜನಸೇವೆಯ ಏಕೈಕ ಕಂಟ್ರಾಕ್ಟುದಾರ

'ಕೇಳಿದ್ಯೇನೆ?'

'ಏನು?'

'ಕೇರಳದಲ್ಲಿನ ಖಾಸಗಿ ಬಸ್ಸು—ಲಾರಿಗಳನ್ನು ಸರಕಾರವೇ ತನ್ನ ವಶಕ್ಕೆ ತೆಗೆದುಕೊಂಡಿತಂತೆ....'

'ಅಲ್ರಿ, ಸರಕಾರಕ್ಕೆ ಆ ಹಳೆಯ ಬಸ್ಸು ಲಾರಿಗಳು ಯಾತಕ್ಕೆ? ಮಾರುಕಟ್ಟೆಯಲ್ಲಿ ಹೊಸ್ತು ಸಿಗೋದಿಲ್ವೆ? ಅದ್ರ ಮೇಲೆ ಅಷ್ಟು ಸಂಖ್ಯೆಯ ವಾಹನಗಳಾದರೂ ಒಮ್ಮೆಗೇ ಯಾಕೆ ಬೇಕಾಯ್ತೊ!'

'ಪ್ರಯಾಣಿಕರ ಮತ್ತು ಸರಕುಗಳ ಮೇಲೆ ಸರಕಾರ ಸರ್–ಚಾರ್ಜು ಹೇರಿತ್ತು. ಇದನ್ನು ಪ್ರತಿಭಟಿಸಲು ವಾಹನ ಸಂಚಾರ ನಿಲ್ಲಿಸುವುದಾಗಿ ಖಾಸಗಿ ಬಸ್ಸು ಮತ್ತು ಲಾರಿ ಮಾಲಕರು ನಿರ್ಧರಿಸಿದರು. ಜನತೆಯ ಸೇವೆಗೆ ವ್ಯತ್ಯಯ ಬರಬಾರದೆಂದು ಜನಸೇವಾ ತತ್ಪರ ಸರಕಾರ ಈ ಕ್ರಮ ಕೈಕೊಂಡಿತು.'

'ಅದು ಸರೀನ್ನಿ. ಅಂದರೆ ಸಾರಿಗೆ ವೆಚ್ಚವನ್ನು ಸರಕಾರ ಏರಿಸಿತ್ತು....'

'ಆ ಸರ್‌ಚಾರ್ಜಿನ ವಿರುದ್ಧ ವಾಹನಗಳೊಡೆಯರು ಶ್ರೇಷ್ಠ ನ್ಯಾಯಾಲಯದಲ್ಲಿ ದೂರಿತ್ತರು....'

'ಏನಾಯ್ತು?'

"ಆಗೋದೇನೆ? ಸೋತರೂನ್ನು."

'ಮತ್ತೆ ಪ್ರತಿಭಟಿಸುವ ಯಾವ ಅಧಿಕಾರ ಅವರಿಗಿವೆ? ತೆಪ್ಪಗೆ ಒಪ್ಪಿಕೊಳ್ಳಬೇಕಾಗಿತ್ತು. ಈಗ ನೋಡಿ, ಮಾಲಕರಿಗೆ ವಾಹನವೂ ಇಲ್ಲ, ಹಣವೂ ಇಲ್ಲ....'

'ಪರಿಹಾರ ದೊರೆಯುತ್ತಲ್ಲಾ?'

"ಅದೇನು ಪರಿಹಾರಾರಿ? ಸರ್ವೆ ಸಾಮಾನ್ಯ ರೈಟ್ ಆಫ್ ಆಗಿರೋ ಮೋಟಾರುಗಳಿಗೆ ಹೊಸ ಬಾಡಿ ಕಟ್ಟಿ ಓಡಿಸೋರಿಗೆ ಪರಿಹಾರವೇನು ಬಂತೂಂತ? ಅವ್ರು ಹಾಗೆ ಮಾಡಬಾರದಿತ್ತು...."

"ಮತ್ತೆ?"

'ಅಲ್ಲ, ಮಾತಿಗೆ ಹೇಳ್ತೀನೆ ನೋಡಿ, ಸರಕಾರ ಹೇರಿರೋ ಸರ್—ಚಾರ್ಜಿನ ಹೊರೆಯನ್ನು ಆ ಮಾಲಿಕರು ಹೊರುವುದುಂಟೆ? ಅವ್ರು ಪ್ರಯಾಣಿಕರ, ಸರಕುಗಳೊಡೆಯರ ತಲೆ ಮೇಲೆ ಹಾಕ್ತಾರೆ....'

'ಹ್ಞಾಂ....'

'ಮತ್ಯಾಕೆ ಬೇಕಿತ್ತು ಅವರಿಗೆ ಪ್ರತಿಭಟನೆ?'

'ಜನತೆಗೆ ಸಾರಿಗೆ ವ್ಯವಸ್ಥೆ ಭಾರವಾಗಬಾರದೂಂತ....'

'ನೋಡಿ, ಈಗ ಸರಕಾರವೇ ಜನ ಸೇವೆಯ ಏಕೈಕ ಕಂಟ್ರಾಕ್ಟುದಾರ. ಜನಸೇವೆ—ಸಾರ್ವಜನಿಕ ಹಿತಗಳ ಹೆಸರಲ್ಲಿ ಖಾಸಗಿ ಸೊತ್ತುಗಳನ್ನು ವಶಪಡಿಸಿಕೊಳ್ಳುವ ಪ್ರಶ್ನಾತೀತ ಅಧಿಕಾರ ಸರಕಾರಕ್ಕೆ ಇರುವಾಗ ಈ ಮಾಲಿಕರಿಗೆ ಜನಸೇವೆಯ ಹುಚ್ಚು ಹಿಡಿಯಬಾರದಿತ್ತು....'

'ಮತ್ತೇನು ಮಾಡ ಬೇಕಂತೀಯ?'

'ನೋಡಿ, ಸರಕಾರವೇ ಅವರಿಗೆ ಜನತೆಯನ್ನು ಸುಲಿದು ತಮ್ಮ ಡೊಳ್ಳು ಬೆಳೆಸುವ ಹೆಚ್ಚಿಸುವ ಮಾರ್ಗ ತೋರಿಸಿಕೊಟ್ಟಿರುವಾಗಲೂ ಅವನ್ನು ಅರಿಯದಷ್ಟು ಪೆದ್ದಣ್ಣಗಳಿಗೆ ವ್ಯಾಪಾರದಲ್ಲಿ ಲಾಭದ ಗುಟ್ಟೇ ತಿಳಿದಂತಿಲ್ಲ....'

'ಏನೇ ಇದು, ನಾಲಗೆ ಭಾರೀ ಸಫಾಯಿ ಆಗುತ್ತಿವೆ?'

'ನಾನು ಹೇಳೋದನ್ನು ತುಸು ಕೇಳಿ. ನಡುವೆ ಬಾಯಿ ಹಾಕಿದ್ರೆ ಮಾತಿನ ಸರಣಿ-ಕೊಂಡಿ ತಪ್ಪಿ ಹೋಗುತ್ತೆ....ಮತ್ತೆ ನೀವು ಮೂರ್ಖರಾಗುತ್ತೀರಿ....'

'ಏ, ಏನೇ ಇದು? ನಾನೂ ಮೂರ್ಖನೆ?'

'ನೋಡಿ, ಅಕ್ಬರ ಒಮ್ಮೆ ತನ್ನ ಕಿರಿ ಹೆಂಡತಿ ಕೋಣೆಗೆ ಹೋದನಂತೆ....'

'ಹೋಗಲಿ ಬಿಡು....'

'ಆಗ ಆಕೆ ಯಾರೋ ತನ್ನ ಸ್ನೇಹಿತೆಯೊಡನೆ ಮಾತಾಡ್ತಾ ಇದ್ದಳಂತೆ....'

'ಇರ್ಲಿ ಬಿಡು....'

'ಮಹಾರಾಜ ಹೇಳದ ಕೇಳದೆ ತನ್ನ ಏಕಾಂತ ವಾಸಕ್ಕೆ ಬಂದದ್ದನ್ನು ಕಂಡ ರಾಣಿ ಎದ್ದು ನಿಂತು, ಮೂರ್ಖ ರಾಜರಿಗೆ ಸ್ವಾಗತ ಅಂದಳಂತೆ....'

'ಭಾರೀ ಧಿಮಾಕಿನವಳಿರಬೇಕು.'

'ರಾಜನಿಗೆ ಭಾರೀ ಚಿಂತೆಯಾಯ್ತಂತೆ. ತನ್ನನ್ನೇಕೆ ರಾಣಿ ಹಾಗಂದಳೂಂತ ಬಹಳ ಹೊತ್ತಿನವರೆಗೆ ತಲೆಕೆರೆದು ಕೊಂಡನಂತೆ.'

'ಸರೀನ್ನು....'

'ಆತ ನೆಟ್ಟಗೆ ತನ್ನ ಕೋಣೆಗೆ ಬಂದನಂತೆ. ಅಷ್ಟರಲ್ಲಿ ಅಲ್ಲಿಗೆ ಬೀರಬಲ್ಲ ಆಗಮಿಸಿದನಂತೆ....'

"ಆಯ್ತು...."

'ಅಕ್ಬರ ಮೂರ್ಖರಾಜರಿಗೆ ಸ್ವಾಗತಾಂತ ಬೀರಬಲ್ಲನನ್ನು ಬರಮಾಡಿಕೊಂಡನಂತೆ....'

'ಇದು ಭಾರೀ ತಮಾಷೆ....'

'ಆಗ ಬೀರಬಲ್ಲನಂದನಂತೆ, ನಮಸ್ಕಾರ ಮೂರ್ಖರಾಜರೇ, ನಮಸ್ಕಾರ....'

'ಓ, ಇನ್ನೂ ಸ್ವಾರಸ್ಯ....ಅಕ್ಬರ ಸುಮ್ಮನುಳಿದನೇನು?'

'ಅವನೇಕೆ ಸುಮ್ಮನುಳಿದಾನು? ಮೊದಲೇ ಮೋಹದ ಮಡದಿಯಿಂದ ಅಪಮಾನ, ಇದೀಗ ಮಂತ್ರಿಯೊಬ್ಬನಿಂದ...'

'ಪಾಪ, ಕುರುವಿನ ಮೇಲೆ ಬೊಕ್ಕೆ!'

'ಅವನು ಕೇಳಿಯೇ ಬಿಟ್ಟನಂತೆ ಬೀರಬಲ್ಲ, ನೀನ್ಯಾಕೆ ನನ್ನ ಮೂರ್ಖರಾಜನಂದೀಂತ....'

'ಹ್ಞಾಂ....'

'ಆಗ ಬೀರಬಲ್ಲನಂದನಂತೆ ಮಹಾರಾಜರೆ, ಇಬ್ಬರು ಏಕಾಂತದಲ್ಲಿ ಮಾತಾಡುತ್ತಿರುವಾಗ ಹೇಳದೆ ಕೇಳದೆ ಅಲ್ಲಿ ಹೋಗೋರು ಮೂರ್ಖರು ...'

'ಓ, ಹಾಗಾದರೆ ರಾಣಿ ಸರಿಯಾದದ್ದನ್ನೇ ನುಡಿದಳು....'

'ಮತ್ತೆ ಮಹಾರಾಜರೆ, ಇಬ್ಬರು ಮಾತಾಡುತ್ತಿರುವಾಗ ಮೂರನೆಯವರು ನಡುವೆ ಮಾತಾಡ ತೊಡಗಿದರೆ ಅವರೂ ಮೂರ್ಖರೂಂತಂದನಂತೆ....'

"ಹ್ಞಾಂ...."

'ಒಬ್ಬರು ತನ್ನೊಡನೆ ಮಾತಾಡ್ತಿರುವಾಗ ಅವರ ಮಾತು ಪೂರ್ತಿ ಮುಗಿಯೋಕೆ ಮೊದಲೇ ನಡುವೆ ಬಾಯಿ ಹಾಕೋರು ಮೂರ್ಖರೂಂದನಂತೆ....'

'ಹ್ಞಾಂ....ಅರ್ಥವಾಯ್ತು....ಆದ್ರೆ ಇದು ನನಗ–ನಿನಗೆ ಅಗಾವಾಗೋದಿಲ್ಲ....'

'ಯಾಕೆ?'

'ನಾವು ಮಾತಾಡೋದೇ ಹಾಗೆ ತಾನೆ?'

'ಅದು ಬಿಡೀನ್ನಿ. ನಾವು ಹೇಗೆ ಮಾತಾಡಿಕೊಂಡ್ರೆ ಯಾರಿಗೇನಂತೆ? ಅಲ್ವೆ ಬೀರಬಲ್ಲ ಮಹಾರಾಜನನ್ನೇಕೆ ಮೂರ್ಖ ಅಂದ?'

'ಅನ್ಯಾಯ ತಪ್ಪಿಲ್ಲದೆ, ದೋಷವಿಲ್ಲದೆ ಬೇರೆಯವರನ್ನು ಬೈದು ಭಂಗಿಸುವವನು ಮೂರ್ಖನಾದ್ದರಿಂದಂತೆ ...'

"ಹ್ಞಾಂ....ಸರಿಯಾಯ್ತು. ಇನ್ನು ಆತ ತನ್ನನ್ನು ಮೂರ್ಖನೆಂದೇಕೆ ಒಪ್ಪಿಕೊಂಡ?"

'ಅಲ್ರಿ, ಮೂರ್ಖನ ಸಹವಾಸ ಮಾಡುವವನು ಮೂರ್ಖನಲ್ಲದೆ ಮತ್ತೇನಾದಾನು?'

'ಓ ಭಾರಿ ಗಡದ್ದಾಯ್ತು ಬಿಡು ಅಲ್ಲ, ಏನೋ ದೊಡ್ಡ ಕುಮಾಯಿ ಸಲಹೆಗಾರರಂತೆ ಮಾತಾಡ್ತ ಇದ್ದೆಯಲ್ಲಾ?'

'ಅದೆ? ನೋಡಿ, ಸರಕಾರ ಸಿಗರೇಟುಗಳ ಮೇಲಿನ ತೆರಿಗೆ ಏರಿಸಿತು....'

'ಹೌದು....'

'ಅದು ಹತ್ತು ಸಿಗರೇಟುಗಳ ಪೇಕ್ಗೆ ಎರಡು—ಮೂರು ಪೈಸೆಯಷ್ಟು ಅನ್ನಿ....'

'ಆಯ್ತು....'

'ಕಂಪೆನಿಯವ್ರು ಏನು ಮಾಡಿದ್ರು?'

'ಪ್ರತಿಭಟಿಸಲಿಲ್ಲ....'

'ಅಷ್ಟು ಮಾತ್ರವಲ್ಲ, ರೌಂಡು ಫಿಗರ್ ಮಾಡಿ ಐದು ಪೈಸೆ ಏರಿಸಿದ್ರು....'

'ಹ್ಞಾಂ....'

'ಚಿಲ್ಲರೆ ವ್ಯಾಪಾರಿಗಳೇನು ಮಾಡಿದ್ರು? ಅವರೂ ರೌಂಡ್ ಫಿಗರ್ ಮಾಡಿ ಇಂತಿಷ್ಟು ಪೈಸೆ ಅಂದ್ರು....'

'ಹೌದೂನ್ನು...'

'ಸರಕಾರ ಏನು ಮಾಡಿತು?' ತೆರಿಗೆಯ ಏರಿಕೆ ಅಗಣ್ಯ ಅದರ ಪರಿಣಾಮ ಬೆಲೆಗಳ ಮೇಲೆ ಆಗುವುದೇ ಇಲ್ಲವೆಂದು ಪ್ರಕಟಣೆ ಹೊರಡಿಸಿ ತೃಪ್ತಿಪಟ್ಟು ಕೊಂಡಿತು....'

'ಅಂದ್ರೆ ಸರಕಾರಕ್ಕೂ ಆದಾಯ, ಕಂಪೆನಿಗೂ ಲಾಭ, ವ್ಯಾಪಾರಿಗಳಿಗೂ ಕಮಾಯಿ....ಆದರೆ ನೋಡು ಸಾರಿಗೆ ದರ ಏರಿಸಬೇಕಾದ್ರೆ ಸರಕಾರದ ಅನುಮತಿ ಬೇಕಾಗುತ್ತೆ....'

'ಯಾಕ್ರಿ ಚಿಂತೆ? ರಾಷ್ಟ್ರೀಕೃತ ಸಾರಿಗೆ ದರವನ್ನೇ ಖಾಸಗಿಯವರೂ ಅನುಸರಿಸಬಹುದಿತ್ತಲ್ಲ?'

'ಅದು ಹೌದು. ಅವರೇನೋ ಅಂದು ಕೊಂಡಿದ್ದರು; ಅದೇನೋ ಆಗಿ ಹೋಯ್ತು....'

'ಅಲ್ರಿ, ಕೇರಳದಿಂದ ಮತ್ತೆ ತರುಣಿಯರ ಮಾರಾಟವಾಗ ತೊಡಗಿದೆಯಂತಲ್ಲಾ.'

'ಹ್ಞಾಂ....ಬಿಬಿಸಿ ವರದಿ ಮಾಡಿದ ಮೇಲೆಯೇ ನಮಗೆಲ್ಲ ಗೊತ್ತು....'

'ಅಲ್ರಿ, ಈ ಪ್ರಸಂಗ ಆಗಾಗ ಬರುತ್ತ ಇರುತ್ತೆ. ಸರಕಾರ ಇದಕ್ಕೇಕೆ ಕೊನೆ ಹಾಕ ಬಾರದು?'

'ತಾವು ಸ್ವೇಚ್ಛೆಯಿಂದಲೇ ಹೋಗುತ್ತೇವೆಯೆಂದು ಒಪ್ಪಿ ಕೊಳ್ಳುವವರಿಗೆ ಅನುಮತಿ ನಿರಾಕರಿಸುವುದು ಕಷ್ಟ ಸಾಧ್ಯವಾಗುತ್ತದೆ....'

'ಅಲ್ರಿ, ನಮ್ಮ ದೇಶದ ಪ್ರಜೆಗಳು ಇತರೇ ದೇಶಗಳಿಗೆ ಯಾಕೆ ಹೋಗಬೇಕು?'

(ಒಂಭತ್ತನೇ ಪುಟ ನೋಡಿರಿ)

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 / 2 72304   Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

P. & Sc. 3/72.

1. P. ರಮೇಶ ರಾವು
2. P. ಉಮೇಶ ರಾವು

} ಅರ್ಜಿದಾರರು.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದ್ರೆ:—

ಮೃತ ಮುಕ್ತ ಬಾಯಿಯವರು ವಿಜಯ ಬೇಂಕಿನಲ್ಲಿ ಇಟ್ಟಿದ್ದ ಹಣ ಪಡೆಯುವ ಕುರಿತು ಅರ್ಜಿದಾರರು Succession Certificate ಕುರಿತು ಮಾಡಿಕೊಂಡ ಮೇಲಿನ ಅರ್ಜಿಯ ಕುರಿತು ಯಾರಿಗಾದರೂ ಆಕ್ಷೇಪಗಳಿದ್ದಲ್ಲಿ ತಾ. 15–4–1972ಕ್ಕೆ ಸರಿಯಾಗಿ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ಯಾರದೂ ಆಕ್ಷೇಪವಿಲ್ಲಂತ ತೀರ್ಮಾನ ಮಾಡಿ ಅರ್ಜಿಯನ್ನು ತೀರ್ಮಾನ ಗೊಳಿಸಲಾಗುವುದೆಂತ ಈ ಮೂಲಕ ಕೋರ್ಟು ಹುಕ್ಕುಂನ್ನು ಪ್ರಚಾರಕ್ಕೆ ತರಲಾಗಿದೆ.

Sd/-K. T. Bhat

Advocate for Petitioners

Puttur, S. K. 24—3—1972.

ಕವಲು ದಾರಿ—ಕೆಂಪು ದೀಪ

ಹಳೆಯ ಹಾಡೇ ಒಳ್ಳೇದಿತ್ತು

ಇದೀಗ ವಸಂತಕಾಲವಾರಂಭವಾಗಿದೆ; ಪರೀಕ್ಷೆಗಳ ಕಾಲ ಬಂದಿದೆ.

ಪ್ರಾಥಮಿಕ ವಿದ್ಯಾರ್ಥಿಯಿಂದ ತೊಡಗಿ, ಸ್ನಾತಕೋತ್ತರ ವಿದ್ಯಾರ್ಥಿಯೂ ಇದೇ ಸಮಯದಲ್ಲಿ ತನ್ನ ಪರೀಕ್ಷೆಗೆ ಕೂಡುತ್ತಾನೆ.

ಪರೀಕ್ಷೆ ಎಂದರೆ ತಟ್ಟನೆ ನೆನಪಿಗೆ ಬರುವುದು—ಉತ್ತರ ಬರೆಯುವ ಬಿಳಿಯ ಹಾಳೆ ಮುದ್ರಿತ ಅಥವಾ ಅಮುದ್ರಿತ ಪ್ರಶ್ನೆ ಪತ್ರ- ಲೇಖನಿ.

ಪ್ರಶ್ನೆ ಪತ್ರಿಕೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿ ಬಿಳಿಯ ಹಾಳೆಯಲ್ಲಿ ಉತ್ತರ ಬರೆದುಕೊಟ್ಟು ಹೋಗಬೇಕು-ನಿರ್ದಿಷ್ಟ ಸಮಯದಲ್ಲಿ. ಆ ಬಿಳಿಯ ಹಾಳೆ ಅವನ ಭವಿಷ್ಯವನ್ನು ಬರೆಯುತ್ತದೆ.

ಈ ನಡುವೆ ಅವ್ಯವಹಾರಗಳಿಗೆ ಅವಕಾಶ ನೀಡದಂತೆ ಉಸ್ತುವಾರಿ ನೋಡಿಕೊಳ್ಳುವವರು—ನಿರೀಕ್ಷಕರಿರುತ್ತಾರೆ — ಸರ್ವೇಸಾಮಾನ್ಯವಾಗಿ ಇವರು ಉಪಾಧ್ಯಾಯರ ವರ್ಗದವರೇ.

ಪರೀಕ್ಷೆಗಳಲ್ಲಿ ಅವ್ಯವಹಾರದಲ್ಲಿ ವಿದ್ಯಾರ್ಥಿಗಳು ತೊಡಗದಂತೆ ಅವರಿಗೆ ಮೊದಲೇ ಎಚ್ಚರಿಕೆ-ಸೂಚನೆಗಳ ರೂಪದಲ್ಲಿ ನೀಡಲಾಗುತ್ತದೆ. ಇದಕ್ಕೆ ತಪ್ಪಿದರೆ ನಿರೀಕ್ಷಕರು ಅಂತಹರನ್ನು ಪತ್ತೆ ಹಚ್ಚಬೇಕು.-ಮೇಲಧಿಕಾರಿಗಳಿಗೆ ವರದಿ ಮಾಡಬೇಕು.

'ಅಪರಾಧದ ತೀವ್ರತೆ'ಗನುಸಾರ ಆ ವಿದ್ಯಾರ್ಥಿಗೆ ದಂಡನೆ-ದಂಡನೆಯೆಂದರೆ ಮತ್ತೇನಿಲ್ಲ, ಆ ವೇಳೆಗೋ ಆ ಸತ್ರಕ್ಕೋ ಎರಡು ಮೂರು ಸತ್ರಕ್ಕೋ ಅವನಿಗೆ ಪ್ರವೇಶವಿಲ್ಲ, ಅಷ್ಟೆ.

ಅವ್ಯವಹಾರದಲ್ಲಿ ತೊಡಗಿದ ವಿದ್ಯಾರ್ಥಿಗಳನ್ನು ಪತ್ತೆ ಹಚ್ಚುವುದು ನಿರೀಕ್ಷಕರ ಕರ್ತವ್ಯ-ಇದು ನಡೆದು ಬಂದ ದಾರಿ.

ಈ ಬಾರಿಯೂ ಪರೀಕ್ಷೆಗಳು ನಡೆಯತೊಡಗಿದುವು. ತುಮಕೂರಿನಲ್ಲಿ ನಿರೀಕ್ಷಕ ಅಧ್ಯಾಪಕರ ಮೇಲೆ ವಿದ್ಯಾರ್ಥಿಗಳು ಹಲ್ಲೆ ಮಾಡಿದರೆಂದು ವದಂತಿ.

ಆ ತಿಪ್ಪೆಯಲ್ಲಿ ಪತ್ತೆ ಮಾಡಿದ ನಿರೀಕ್ಷಕರನ್ನು ಚಾಕುವಿನಿಂದ ಇರಿಯಲಾಯಿತೆಂದು ಸುದ್ದಿ.

ಇಂತಹ ಸಮಾಚಾರಗಳು ಈ ಸಲ ಹಲವು ಬಂದಿವೆ. ಹಿಂದೆಯೂ ಈ ರೀತಿಯ ಘಟನೆಗಳು ನಡೆದದ್ದುಂಟು; ಆದರೆ ಅಷ್ಟು ವ್ಯಾಪಕವಾಗಿರಲಿಲ್ಲವೋ ಅಥವಾ ಅಷ್ಟು ಪ್ರಚಾರಕ್ಕೆ ಬಂದಿರಲಿಲ್ಲವೋ!

ವಿದ್ಯಾರ್ಥಿಗಳು ನಿರೀಕ್ಷಕರನ್ನು ಉದ್ದೇಶ ಪೂರ್ವಕವಾಗಿ ನೋಯಿಸಿರಲಾರರು. ಅಥವಾ ಅವ್ಯವಹಾರದಲ್ಲಿ ತೊಡಗಿದ ತಮ್ಮನ್ನು ಪತ್ತೆ ಮಾಡಿದುದು ತಪ್ಪೆಂದೂ ಅವರು ಹೇಳಲಾರರು.

ಪರೀಕ್ಷೆಯನ್ನು ಹೇಗಾದರೂ ಪಾಸು ಮಾಡಿಕೊಳ್ಳ ಬೇಕೆಂಬ ತನ್ನ ಇರಾದೆಗೆ ಭಂಗವಾದುದನ್ನು ಕಂಡು ಅವರು ಉದ್ರಿಕ್ತರಾದರೆಂಬುದೂ ಒಂದು ಅವ್ಯವಹಾರ ಪ್ರೇರಿತರಾಗಿ ಮತ್ತೊಂದು ಅವ್ಯವಹಾರಕ್ಕೆ ತೊಡಗಿದರೆಂಬುದೂ ನಿಜ.

ಪರೀಕ್ಷೆಯ ಭೂತವನ್ನು ಎದುರಿಸಲು ಅವರು ಸಿದ್ಧತೆ ಮಾಡಿಕೊಂಡಿಲ್ಲ; ಮಾಡಿದ್ದರೂ ಅದು ತಲೆಗೆ ಹಿಡಿಯಲಿಲ್ಲ.—ಅಂತೂ ವಿದ್ಯಾಭ್ಯಾಸ ಹಿಡಿಸಲಿಲ್ಲ; ಅಂತಿಮ ಫಲ ಪದವಿ ಮಾತ್ರ ಬೇಕು.

ಇಂದಿನ ಶಿಕ್ಷಣ ಪ್ರಣಾಳಿಯು ತೀರ ಕಳಪೆಯದ್ದು, ಅದರಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕೆಂದು ಎಲ್ಲರೂ ಕರೆ ನೀಡುತ್ತಾರೆ. ಆದರೆ ಅವರು 'ಪದವಿ'ಗಳಿಗೆ ಇನ್ನಿಲ್ಲದ ಮಹತ್ವ ಕೊಡುವ ಚಟದಿಂದ ಮುಕ್ತರಾಗಿಲ್ಲ.

ಆದುದರಿಂದಲೇ ಪದವಿ ಮೇಲಿನ ಮೋಹ. ಅದನ್ನು ಎಂತಾದರೂ ಪಡೆದೇ ತೀರಬೇಕೆನ್ನುವ ಛಲ. ಮಾರ್ಗ ಯಾವುದಾದರೇನು?

ಕಾಲೇಜಿಗೆ ಮಣ್ಣು ಹೊತ್ತಿದ್ದೇವೆ; ಟರ್ಮ್ ತುಂಬಿದ್ದೇವೆ-ನಮಗೂ ಪದವಿಗೂ ನಡುವೆ ಈ ನಕ್ಷತ್ರಿಕನೊಬ್ಬನೇಕೆ?

ಪರೀಕ್ಷಕರ, ಗಣಕರ ಮರವು, ನಿದ್ರೆ, ಆಲಸ್ಯಗಳಿಂದ ಪರೀಕ್ಷೆಗೆ ಕೂಡದವನು ಪಾಸ್ ಆಗ ಬಹುದಾಗಿರುವಾಗ ನಾವಾದರೂ ಡಿಗ್ರಿಯೇಕೆ ಪಡೆಯಬಾರದು?

ವಿಶ್ವ ವಿದ್ಯಾಲಯಗಳ ಪದವಿಗಳು ಕೆಲವರಲ್ಲಿ ಕೆಲವು ನೂರು—ಸಾವಿರ ರುಪಾಯಿಗಳಿಗೆ ದೊರೆಯುತ್ತಿರುವುದುಂಟು. ಇದೀಗ ಹಲ್ಲೆ ಮಾಡಿ ಚಾಕು ತೋರಿಸಿಯೂ ಅವನ್ನು ಪಡೆಯುವುದು ಸಾಧ್ಯವೇ ಎಂಬುದರ ಬಗ್ಗೆ ಕೆಲವೆಡೆ ಸರ್ವೆಕಾರ್ಯ ನಡೆಯತೊಡಗಿದೆ.

ನಮ್ಮ ಶಿಕ್ಷಣ ಮಟ್ಟ ಇಲ್ಲಿಯ ವರೆಗೆ ಮುಟ್ಟಿದೆಯೆಂದರೆ ಶಿಕ್ಷಣಕ್ಕೂ ಜೀವನಕ್ಕೂ ಬಾದರಾಯಣ ಸಂಬಂಧವೂ ಉಳಿದಿಲ್ಲವೆಂದೇ ಅರ್ಥ. ಎಷ್ಟು ಬೇಗ ಆಮೂಲಾಗ್ರ ಪರಿವರ್ತನೆಯನ್ನು ಸಾಧಿಸಿ ಶಿಕ್ಷಣ-ಜೀವನಗಳ ನಡುವೆ ಸಂಬಂಧವನ್ನು ಕಲ್ಪಿಸುತ್ತೇವೆಯೊ ಅಷ್ಟು ಬೇಗ ದೇಶಕ್ಕೆ ನೆಮ್ಮದಿ ಬರುತ್ತದೆ.

° ° °

ಅದೊಂದು ಹಳ್ಳಿಯ ಪ್ರಾಥಮಿಕ ಶಾಲೆ. ಮಕ್ಕಳು ಸುಮಾರು ೧೫೦. ಶಿಕ್ಷಕರ ಸಂಖ್ಯೆ ೪. ತರಗತಿಗಳು ೫.

ಸುಮಾರು ಐವತ್ತು ವರ್ಷಗಳ ಹಿಂದೆ ಹೆಂಚು ಹಾಕಿಸಿ ಕಟ್ಟಿದ ಕಟ್ಟಡ-ಐವತ್ತು ಮಳೆಗಾಲಗಳನ್ನು, ಬೇಸಗೆ ಕಾಲಗಳನ್ನು ಅದು ಎದುರಿಸಿ ನಿಂತಿರುವುದಾದರೆ, ಅದು ಹೆಂಚಿನ ಮಾಡಿನದ್ದೆಂಬುದರಿಂದ-ಕಟ್ಟಡದ ಅಸ್ಥಿಪಂಜರ ಎದ್ದು ತೋರುತ್ತದೆ.

ಸುತ್ತ ಮುತ್ತ ಗುಡ್ಡೆಗಳು .ಗುಡ್ಡೆ ಇಳಿದರೆ ಬಯಲು-ಬಯಲಲ್ಲೊಂದು ಹೊಳೆ. ಶಾಲೆಗೆ ತನ್ನದೇ ಬಾವಿಯಿಲ್ಲವಾದ್ದರಿಂದ, ನೆರೆ ಕರೆ-ಸುಮಾರು ಒಂದೆರಡು ಫರ್ಲಾಂಗು—ಯ ಬಾವಿಗಳೂ ಒಂಬತ್ತು ತಿಂಗಳು ನೀರು ಕೊಡುವವು. ಆದುದರಿಂದ ಅರ್ಧ ಮೈಲಿ ದೂರದ ಹೊಳೆಯ ಕೊಳಚೆ ನೀರೇ ಮಾರ್ಚ—ಏಪ್ರಿಲ್--ಮೇ ತಿಂಗಳುಗಳಿಗೆ.

ಆ ನೀರಾದರೂ ಶಾಲೆಗೆ ಹೇಗೆ ಬರಬೇಕು? ಹತ್ತು ವರ್ಷದ ಮಕ್ಕಳು ಅರ್ಧ ಮೈಲಿ ಎಷ್ಟು ನೀರು ಹೊತ್ತಾರು? ಶಾಲೆಯಲ್ಲಿ ಜವಾನನಿರುವುದಿಲ್ಲ.

ಪ್ರತಿಯೊಬ್ಬ ಅಧ್ಯಾಪಕರೂ ಒಂದೊಂದು ಕೊಡ ನೀರು ತಂದು ಹಾಕಬೇಕು (ಕೊಡ ಎರವಲು ಪಡೆದಾದರೂ) •ಪುಣ್ಯ ಕಾರ್ಯ. ಆದರೆ ನೂರೈವತ್ತು ಮಕ್ಕಳಿಗೆ ನಾಲ್ಕು ಕೊಡ ನೀರು ಬರಿದೋ? ಬರಿದು ಮಾಡಲು ಎಷ್ಟು ಸಮಯ ಬೇಕು?

ಶಿಕ್ಷಕರು ಪಾಠ ಹೇಳುವುದನ್ನು ಬಿಟ್ಟು ನೀರು ತರಲು ಹೋಗಬೇಕು.

ಅಥವಾ ಮಕ್ಕಳ ದಂಡನ್ನೇ ಹೊಳೆಗಟ್ಟಿಕೊಂಡು ಹೋದರೆ ಹೇಗೆ?

ಅದೂ ಸರಿಯೇ .ಜಳ ಜಳ ಹರಿಯುವ ನೀರನ್ನು ತಮ್ಮ ಕಾಲಿನಿಂದಲೇ ಕೊಳಚೆ ಮಾಡಿ ಹೊಟ್ಟೆತುಂಬಾ ಕುಡಿದು ಇನ್ನು ಸಾಕು ಸಾರ್ ಎಂದು ಶಾಲೆಯ ದಾರಿ ಅರ್ಧನಡೆಯುವಷ್ಟರಲ್ಲಿ ಬೆವರು ಒರೆಸಿ ಒರೆಸಿ 'ಸಾರ್, ನಾನೀಗ ನೀರು ಕುಡಿದು ಬರ್ತೇನೆ ಜೋರು ಬಾಯಾರಿಕೆ!' ಎಂಬ ಜೋಲು ಮೋರೆಯ ಮಾತು.

ಇಲ್ಲಿ ಪಾಠವೇನು ನಡೆದೀತು? ಮಕ್ಕಳೇನು ಕಲಿತಾರು?

ಬ್ರಿಟಿಷ್ ದೊರೆಗಳ ಕಾಲದಲ್ಲೂ ಇಲ್ಲಿನ ಕತೆ ಇದೇ-ಈಗ ಸ್ವಾತಂತ್ರ್ಯ ಬಂದ ಇಪ್ಪತ್ತೈದು ವರ್ಷಗಳ ನಂತರವೂ ಹಾಡು ಅದೇ.

ಆದರೆ, ಆಗಿನ ಕಾಲವೇ ಒಳ್ಳೆಯದು ಎಂದು ಹೇಳುತ್ತಾರೆ ಗಡ್ಡ—ತಲೆ—ಮೀಸೆ ಮೈ ನರೆತ ಶಿಕ್ಷಕರು.

ಆಗ ಬೆಳಿಗ್ಗೆ ಬೇಗನೆ ಶಾಲೆ ಆರಂಭಿಸಿ ಮೂರು ತಾಸೋ ನಾಲ್ಕು ತಾಸೋ ಶಾಲೆ ನಡೆಸಿ ಬಿಟ್ಟರೆ ದಿನವಿಡೀ ಶಾಲೆ ನಡೆದಂತೆ-ಈ ಬೇಸಗೆಯ ದಿನಗಳಲ್ಲಿ ಎಂಬ ರೂಲು ಇತ್ತು. ಈಗ 'ಸಮಾನತೆ'ಯ ಹೆಸರಿನಲ್ಲಿ ಅದೂ ಇಲ್ಲ; ಇದೂ ಇಲ್ಲ. 'ಅಲ್ಲ ಸಾರ್ ಹನ್ನೆರಡೂವರೆಯ ನಡು ಬಿಸಿಲಿಗೆ ಒಂದು ಒಂದೂವರೆ ಮೈಲಿ ದೂರದ ಮನೆಗೆ ಹೋಗಿ ಎರಡೂ ಕಾಲಕ್ಕೆ ಆರು ವರ್ಷದ ಮಗು ಬರುವುದೆಂದರೆ ಅವರ ಜೀವ ಹೇಗಾಗ ಬೇಕು ಸಾರ್?'-ಇದು ಪ್ರಶ್ನೆ.

ನಡುಹರೆಯದವರಾದ ನಮಗೇ ನಡು ಬಿಸಿಲಲ್ಲಿ ಹತ್ತು ಹೆಜ್ಜೆಯಿಟ್ಟಾಗ ತಲೆಪುರಿಯ ತೊಡಗುವಾಗ ಮೌನವೇ ಅವರ ಪ್ರಶ್ನೆಗೆ ಉತ್ತರ.

ಇನ್ನು ಬಾವಿ ತೋಡಿಸುವ ವಿಚಾರ-ಅದು ಅನ್ ಇಕನಾಮಿಕಲ್. ಮೂರು ತಿಂಗಳ ನೀರಿಗೆಂದು ಆರು ಸಾವಿರವಾದರೂ ವೆಚ್ಚ ಮಾಡಬೇಕಾದೀತು. ಆದರೂ ನೀರು ನೆಲದಡಿಯಲ್ಲಿ ಸಿಗುತ್ತೇಂತ ಏನು ಗ್ಯಾರಂಟಿ?

ಅದರ ಮೇಲೆ ಅದಕ್ಕೆ ಹಣ ಸುರಿಯುವವರು ಯಾರು? ಊರವರಿಗೆ ಪಂಚಾಯತಿನ ತೆರಿಗೆ ಕೊಡುವುದೇ ತ್ರಾಸವಾಗಿದೆ. ಮಳೆಗಾಲದ ಎರಡು ತಿಂಗಳು ಉಪವಾಸವಿರುವವರು ಶಾಲೆಗೆ ಏನು ಕೊಟ್ಟಾರು?

ಸರಕಾರದಲ್ಲಿ ಮತ್ತೆಲ್ಲ ಬಾಬುಗಳಿಗೂ ಹಣವಿದೆ. ಇಲ್ಲದಿದ್ದರೂ ಎಲ್ಲಿಂದಾದರೂ ತರುವುದು ಸಾಧ್ಯವಾಗುತ್ತದೆ. ಆದರೆ ಶಿಕ್ಷಣ ಸಂಸ್ಥೆಗಳ, ಶಿಕ್ಷಣದ ಶಿಕ್ಷಕರ ಗೋಳಿನ ಕತೆಯನ್ನು ಬದಲಾಯಿಸಲು ಹಣವೇ ಇಲ್ಲ.

೧೯೮೧ರೊಳಗೆ ೧೧ವರ್ಷದೊಳಗಿನ ಮತ್ತೈದು ವರ್ಷಗಳಲ್ಲಿ ೧೪ ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡುವ ಗುರಿ ಹೊಂದಿದ ಸರಕಾರ ಈ ಗರ್ತವನ್ನೆಂತು ಸುಧಾರಿಸುತ್ತದೆ?

ತಂದ ನೀರನ್ನು ಶೇಖರಿಸಿಡುವುದಕ್ಕೂ (ಕುಡಿಯುವುದು ಗೆರಟೆಯಲ್ಲಾದರೂ ನಡೆಯುತ್ತದೆ) ಅವಕಾಶವಿಲ್ಲದ ಶಾಲೆಗಳು ಎಷ್ಟಿಲ್ಲ! ಮಣ್ಣಿನ ಪಾತ್ರೆಯನ್ನು ಮಕ್ಕಳು ಒಡೆದು ಹಾಕುತ್ತವೆ. ಹಿತ್ತಾಳೆ-ತಾಮ್ರ-ದುಬಾರಿ!

●●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
154 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156.
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಚಾರುಚಯನ—

ನ್ಯಾಯಾಂಗದ ರೆಕ್ಕೆ ಪುಕ್ಕಗಳಿಗೆ ಕತ್ತರಿ ಪ್ರಯೋಗ

ಬಾಂಗ್ಲಾ ದೇಶಕ್ಕೆ ಒಂದು ವರ್ಷ ತುಂಬಿತು. ಪಾಕಿಸ್ತಾನದ ದಬ್ಬಾಳಿಕೆಯ ವಿರುದ್ಧ ಪ್ರಜಾಸತ್ತೆಯ ಕನಸುಕಂಡ ಬಾಂಗ್ಲಾದೇಶದ ನಾಯಕ ಶೇಕ್ ಮುಜಿಬುರ್ ರೆಹಮಾನರಿಗೆ ಇದೀಗ ಸಂತಸವೋ ಸಂತಸ. ಬಾಂಗ್ಲಾದೇಶೀಯರು ಏಕ ಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿದರು. ಪಾಕ್ ವಂಚಕ ಸರ್ವಾಧಿಕಾರಿಗಳ ಗುಂಡುಗಳಿಗೆ ತಮ್ಮೆದೆಯನ್ನು ದಿಟ್ಟತನದಿಂದಲೇ ತೋರಿಸಿದರು. ಸಶಸ್ತ್ರ ಬಂಡಾಯವೆದ್ದರು. ಅವರಿಗೆ ನೆರೆಯ ಭಾರತದ ಸಹಾನುಭೂತಿಯೂ ದೊರೆಯಿತು; ಕೊನೆಗೆ ಸಹಾಯವೂ ಬಂದಿತು; ಪಾಕ್ ಮಿಲಿಟರಿ ಸತ್ತ್ವ ಸೋತು ಶರಣಾಯಿತು. ಮಾಜಿ ರಾಷ್ಟ್ರಪತಿ ಯಾಹ್ಯಾಖಾನರು ಮಾಡಿದ ಜನಾಂಗಹತ್ಯೆ, ಬಾಂಗ್ಲಾದೇಶೀಯರ ತ್ಯಾಗ-ಬಲಿದಾನ-ರಕ್ತತರ್ಪಣಗಳು ಜಾಗತಿಕ ಇತಿಹಾಸದಲ್ಲೇ ಅತ್ಯಪೂರ್ವ.

ಬಾಂಗ್ಲಾದ ಪ್ರಜೆಗಳಿಗೆ ಶೇಕ್ ಮುಜಿಬುರ್ ರೆಹಮಾನರಂತಹ ಪ್ರಖ್ಯಾತ ನಾಯಕರು ದೊರೆತಿದ್ದಾರೆ. ಅವರು ತಮ್ಮ ಸರಕಾರಕ್ಕೆ ನಾಗರಿಕ ಜಗತ್ತಿನ ಮನ್ನಣೆ ಪಡೆಯಬಯಸಿದ್ದಾರೆ. ವಿಶ್ವಸಂಸ್ಥೆಯಲ್ಲಿ ಪ್ರವೇಶಿಸುವುದೂ ಅವರ ಆಶಯ. ದೇಶವೇನೋ ರಾಜ್ಯಕೀಯವಾಗಿ ಸ್ವಾತಂತ್ರ್ಯ ಪಡೆಯಿತು; ಸ್ವತಂತ್ರ ಸಾರ್ವಭೌಮ ದೇಶವೊಂದು ಉದಯವಾಯ್ತು; ಇದಕ್ಕೆ ಅವರು ತೆತ್ತ ಬೆಲೆ ಮಹತ್ತರವಾದದ್ದು. ಆದರೆ, ಇಷ್ಟರಿಂದಲೇ ದೇಶ ಸ್ವರ್ಗವಾಗುವುದಿಲ್ಲ. ಪಾಕ್ ಸೇನೆಯು ಸಮಸ್ತ ದೇಶವನ್ನು ಧ್ವಂಸ ಮಾಡಿಯೇ ಶರಣಾಗಿತ್ತು. ಆದುದರಿಂದ ಆರ್ಥಿಕ ಪುನರುತ್ಥಾನದತ್ತ ಶೇಕ್ ಮುಜಿಬುರ್ ಮುಂದಡಿಯಿಡಬೇಕಾಗಿದೆ. ಈ ದಿಸೆಯಲ್ಲಿ ಭಾರತ ಸರಕಾರವು ತನ್ನ ಕಷ್ಟ ಕಾರ್ಪಣ್ಯಗಳನ್ನು ನುಂಗಿಕೊಂಡಾದರೂ ನೆರವು ನೀಡಲು ಮುಂದೆ ಬಂದಿದೆ. ಸೋವಿಯೆತ್ ಕೂಡ ಸಹಾಯ ಹಸ್ತ ಚಾಚಿದೆ. ಆದರೆ, ಸಂಪನ್ನ ರಾಷ್ಟ್ರಗಳು ತಮ್ಮ ತುತ್ತಿನ ಚೀಲ ಹಿಡಿದು ಮಂಗವಾಡಿಸುವ ಹವ್ಯಾಸವನ್ನು ಬಿಟ್ಟುಕೊಟ್ಟಿಲ್ಲದಿರುವುದು ವಿಷಾದನೀಯ. ರಾಜ್ಯಕೀಯವಾಗಿ, ವ್ಯಾಪಾರಿಕವಾಗಿ ತಮ್ಮ ಲಾಭ—ಹಾನಿಗಳ ಲೆಕ್ಕಾಚಾರದಲ್ಲೇ ನಿರತವಾಗಿರುವ ಬೃಹತ್ ರಾಷ್ಟ್ರಗಳ 'ಸಹಾಯನೀತಿ'ಯಿಂದ ಜಾಗತಿಕ ಗುಂಪುಗಾರಿಕೆಗೆ ತನ್ಮೂಲಕ ಅಶಾಂತಿಗೆ ಕಾರಣವಾಗುತ್ತದೆ. ಆದರೆ, ಶೇಕ್ ಮುಜಿಬುರ್ ಶರ್ತಸಹಿತ ನೆರವನ್ನು ಖಂಡತುಂಡವಾಗಿ ನಿರಾಕರಿಸಿದ್ದಾರೆ; ಗುಂಪುಗಾರಿಕೆಯನ್ನು ತಿರಸ್ಕರಿಸಿದ್ದಾರೆ. ಯಾವುದೇ 'ಬಣ'ದತ್ತ ಒಲಿಯದೆ ಮಧ್ಯಮ ಮಾರ್ಗದಲ್ಲೇ ದೇಶವನ್ನು ಮುನ್ನಡೆಸುವ ಹೆಬ್ಬಯಕೆಯನ್ನು ಹೊಂದಿದ್ದಾರೆ.

ವಿಶಾಲ ಜಗತ್ತು, ಸುಸಂಸ್ಕೃತ ಸುನಾಗರಿಕ ಲೋಕ ವಾಸ್ತವಿಕತೆಗೆ ಬಾಧಿಯರಚುವ ಕಣ್ಣುಮುಚ್ಚಾಲೆಯಾಟವನ್ನು ನಿಲ್ಲಿಸಬೇಕು: ಸ್ವಾತಂತ್ರ್ಯತೆ, ಸಹೋದರತೆಗಳ ಪಾಠ ಹೇಳುವುದನ್ನು ಬಿಟ್ಟು ಪ್ರಾತ್ಯಕ್ಷಿಕವಾಗಿ ಮಾಡಿ ತೋರಿಸಬೇಕು. ಬಾಂಗ್ಲಾದೇಶದ ಏಳೂವರೆ ಕೋಟಿ ಸ್ವತಂತ್ರ ಸಾರ್ವಭೌಮ ನಾಗರಿಕರ ಸುಖ ದುಃಖಗಳಲ್ಲಿ ಸಮಭಾಗಿಯಾಗಬೇಕು.

○ ○ ○

ಪಾಕ್ ರಾಷ್ಟ್ರಪತಿ ಜುಲ್‌ಫಿಕರ್ ಅಲಿ ಭುಟ್ಟೋರವರ ದುರವಸ್ಥೆ ಅತ್ಯಂತ ದಯನೀಯ. ಅವರಿಗೆ ಏನು ಮಾಡಬೇಕು, ಏನು ಆಡಬೇಕು ಒಂದೂ ಹೊಳೆಯುತ್ತಲೇ ಇಲ್ಲ. ಬಾಂಗ್ಲಾದೇಶ ಪಾಕಿಸ್ತಾನದ ಕೈತಪ್ಪಿ ಹೋಯ್ತು ಎಂದವರು ತಿಳಿದರೂ ತನ್ನ ಜನತೆಯನ್ನವರು ಹಿಡಿದಿಟ್ಟುಕೊಳ್ಳುವುದೇ ಅಸಾಧ್ಯವಾಗಿದೆ. ಇದೇ ತಾ. ೧೪ರಂದು ಅಸೆಂಬ್ಲಿ ಸಭೆ ಕರೆಯುವುದಾಗಿ ಅವರು ಪ್ರಾಂತೀಯ ನಾಯಕರಿಗೆ ಭರವಸೆ ನೀಡಿದ್ದಾರೆ ನಿಜ; ಆದರೆ, ಈ ಭರವಸೆಯು ಕಾರ್ಯರೂಪಕ್ಕೆ ಬಂದ ಮೇಲೆಯೇ ಬಂತು ಎನ್ನಬೇಕು.

ಶ್ರೀ ಭುಟ್ಟೋ ಶೇಕ ಮುಜಿಬುರ್‌ರೊಡನೆ ಕೊನೆಯ ಮಾತೊಂದಾಡಲು ಬಯಸಿದ್ದರು: ಆದರೆ, 'ಮೊದಲು ಮನ್ನಣೆ; ಬಳಿಕ ಮಾತು' ಎಂಬ ತನ್ನ ನೀತಿಯನ್ನು ಮುಜಿಬುರ್ ಬಿಟ್ಟುಕೊಡಲಿಲ್ಲ. ಈಗ ಭಾರತದ ಸೇನೆಯು ಢಾಕ್ಕಾದಿಂದ ಮರಳಿ ಒಂದು ತಿಂಗಳಾಗುತ್ತ ಬಂತು. ಈ ವಾಪಸಾತಿಯನಂತರ ಮನ್ನಣೆ ನೀಡುವವರು ಇಷ್ಟರಲ್ಲೇ ನೀಡಬಹುದಾಗಿತ್ತು. ಬಾಂಗ್ಲಾ ಸರಕಾರವು ಯುದ್ಧ ಕೈದಿಗಳನ್ನು ವಿಚಾರಿಸಲು ನ್ಯಾಯ ಮಂಡಳಿಗಳನ್ನೇ ನೇಮಿಸಿರುವುದಾಗಿ ಘೋಷಿಸಿದೆ. ಇದರಿಂದ ಭುಟ್ಟೊ ಕಂಗೆಡುವುದು ಸಹಜ. ಅವರೀಗ ತನ್ನ ಮಾತಿನ ದಾಟಿಯನ್ನು ಬದಲಿಸಿದ್ದಾರೆ- ಯುದ್ಧ ಕೈದಿಗಳನ್ನು ಬಿಟ್ಟುಬಿಡಿ, ಮನ್ನಣೆ ನೀಡುತ್ತೇನೆ.'

ಶ್ರೀ ಭುಟ್ಟೋರವರು ಭಾರತದ ಮೇಲೆಯೂ ಆರೋಪ ಹೊರಿಸುವುದನ್ನು ಬಿಟ್ಟಿಲ್ಲ. ಪಾಕ್ ಪಡೆಗಳು ಭಾರತ-ಬಾಂಗ್ಲಾದೇಶದ ಪಡೆಗಳಿಗೆ ಏಕಕಾಲದಲ್ಲಿ ಶರಣು ಬಂದದ್ದನ್ನವರು ಒಪ್ಪುವುದಿಲ್ಲ. ಯುದ್ಧ ಕೈದಿಗಳನ್ನು ಮರಳಿಸುವಲ್ಲಿ ಭಾರತದ ಹೊಣೆಗಾರಿಕೆಯಿದೆಯೆಂದೇ ಅವರ ವಾದ. ಬಾಂಗ್ಲಾ ಸರಕಾರವು ನೇಮಿಸಿದ ೭೩ ನ್ಯಾಯ ಮಂಡಳಿಗಳು ಪಾಕ್ ಸೈನಿಕ ಅಧಿಕಾರಿಗಳನ್ನೂ ವಿಚಾರಣೆ ಮಾಡುತ್ತವೆ. ಪಾಕಿಸ್ತಾನವೆಂದರೆ ಮುಗಿ ಬೀಳುವ ಬಾಂಗ್ಲಾದೇಶೀಯರು ಪಾಕ್ ಅತ್ಯಾಚಾರ-ಅನಾಚಾರಗಳ ಬೆಲೆಯನ್ನು ಬಡ್ಡಿ ಸಹಿತ ವಸೂಲು ಮಾಡಿದರೆ?—ಈ ಭೀತಿ ರಾವಲ್ಪಿಂಡಿಯಿಂದ ಭುಟ್ಟೊ ಉಚ್ಚಾಟನೆಗೂ ಹೇತುವಾದೀತು. ಸುಮಾರು ಒಂದು ಲಕ್ಷದಷ್ಟು ಇರುವ ತನ್ನ ಸೈನಿಕರು ಸ್ವದೇಶಕ್ಕೆ ಮರಳಿಬಂದರೆ, ತನ್ನ ಸೈನಿಕ ಬಲವೂ ಹೆಚ್ಚುವುದು, ಮುಂದಿನ ಫಿತೂರಿಗೆ ನೆರವಾಗುವುದು—ಸ್ವದೇಶೀಯರ ಅಭಿಮಾನವೂ ತನ್ನಲ್ಲಿ ಹೆಚ್ಚುವುದು— ಈ ಲೆಕ್ಕಾಚಾರದಲ್ಲಿದ್ದ ಭುಟ್ಟೋ ಈಗ ಗಡಗಡನೆ ನಡುಗತೊಡಗಿದ್ದಾರೆ.

ಆದ್ದರಿಂದ ಅವರು ಅಲ್ಲಸಲ್ಲದ ಉದ್ಗಾರಗಳಿಗೆ ತೊಡಗಿದ್ದಾರೆ. ಪಾಕ್ ಸೈನಿಕ ಕೈದಿಗಳಿಗೆ ಹಿಂದೂಮತದ ದೀಕ್ಷೆ ಕೊಡುವ ಪ್ರಯತ್ನ ನಡೆಯುತ್ತಿದೆ. ಅವರಲ್ಲಿ ಜಾತಿಭೇದದ ಬೀಜವನ್ನು ಬಿತ್ತಲಾಗುತ್ತಿದೆ.... ಇತ್ಯಾದಿ ಇತ್ಯಾದಿ. ಆದರೆ, ಇದು ಹುರುಳಿಲ್ಲದ್ದೆಂಬುದು ಹಗಲಿನಷ್ಟು ಸ್ಪಷ್ಟ. ಭಾರತವನ್ನು ಮುಸ್ಲಿಂ ವಿರೋಧಿ ದೇಶವೆಂದು ವರ್ಣಿಸುವುದು ಪಾಕ್ ಮತಾಂಧರನ್ನು ತನ್ನ ಮುಷ್ಟಿಯೊಳಗಡೆ ಬಂಧಿಸಿಡಲು ಅವರಿಗೆ ನೆರವಾದೀತು ಅಷ್ಟೆ. ಜುಲ್‌ಫಿಕರ್ ಅಲಿ ಭುಟ್ಟೋ ಪಾಕಿಸ್ತಾನದ ಬಾಕಿಸ್ತಾನವನ್ನಾದರೂ ಉಳಿಸುವ ಸದಾಶಯ ಹೊಂದಿದ್ದಾರೆ ನಿಜ. ಆದರೆ, ಅವರು ತನ್ನಾಶಯ ಪೂರ್ತಿಗೆ ತಪ್ಪು ದಾರಿ ಹಿಡಿದಿರುವುದೂ ಅಷ್ಟೇ ನಿಜ. ಅವರು ತನ್ನ ದೀರ್ಘಕಾಲದ ರಾಜ್ಯಕೀಯ ಜೀವನದಲ್ಲಿ ಮಾಡಿದ ಒಂದೇ ಒಂದು ಒಳ್ಳೆಯ ಕೆಲಸವೆಂದರೆ, ಯಾಹ್ಯಾಖಾನರು ಬಂಧಿಸಿಟ್ಟಿದ್ದ ಶೇಕ ಮುಜಿಬುರರನ್ನು ಲಂಡನ್ನಿಗೆ ಒಯ್ದು ಬಿಡುಗಡೆಗೊಳಿಸಿದ್ದು. ಒಡೆದ ಮಡಕೆ ಬೆಸೆಯುವುದಕ್ಕೆ ಭಾರೀ ಸಾಹಸ ಪಡಬೇಕಾಗುತ್ತದೆ. ಭಾರತ—ಬಾಂಗ್ಲಾ ದೇಶಗಳ ಸ್ನೇಹದಲ್ಲಿ ಹುಳಿ ಹಿಂಡುವುದನ್ನು ಬಿಟ್ಟು ತಾನೂ ಯಥಾರ್ಥವಾಗಿ ಪಾಲುಗೊಂಡರೆ. ಭುಟ್ಟೋ ಆಶಯ ಮೂರ್ತಸ್ವರೂಪಕ್ಕೆ ಬರಬಲ್ಲುದು.

○ ○ ○

ಆಸ್ತಿಯ ಮೇಲಿನ ಅಧಿಕಾರ ಮೂಲಭೂತವಲ್ಲವೆಂಬ ಅಭಿಪ್ರಾಯವನ್ನು ಶ್ರೀಮತಿ ಗಾಂಧಿಯವರು ತಾಳಿ, ಅದನ್ನು ಕಾರ್ಯಗತಗೊಳಿಸಲು ಉತ್ಸುಕರಾಗಿದ್ದಾರೆ. ಇದಕ್ಕಾಗಿ ಸಂಸತ್ತಿನಲ್ಲಿ ತನಗೆ ಲಭಿಸಿದ ತುಂಬಿ ತುಳುಕಾಡುವ ಬಹುಮತದ ಸಂಪೂರ್ಣ ಪ್ರಯೋಜನ ಪಡೆಯಲು ಅವರು ಮುಂದುವರಿದಿದ್ದಾರೆ. ಆದರೆ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಕೆ. ಸದಾನಂದ ಹೆಗ್ಗಡೆಯವರು ಆಸ್ತಿಯ ಮೇಲಿನ ಅಧಿಕಾರವನ್ನು ಕಿತ್ತು ಕೊಳ್ಳುವುದು ಅತ್ಯಂತ ಅಪಾಯಕಾರಿಯೆಂದು ಎಚ್ಚರಿಸಿದ್ದಾರೆ.

ಆಸ್ತಿ ಹೊಂದುವ ಹಕ್ಕನ್ನು ರದ್ದು ಪಡಿಸಿದ್ದೇ ಆದರೆ, ಯಾವುದೇ ಬಗೆಯ ಆಸ್ತಿಯನ್ನು ಯಾರಿಂದ ಬೇಕಾದರೂ ವಶಪಡಿಸಿಕೊಳ್ಳುವ ಅವಕಾಶ ಸರಕಾರಕ್ಕೆ ದೊರೆಯುವುದು. ಒಂದು ರಾಷ್ಟ್ರದ ಆಯುಷ್ಯ ಅತ್ಯಂತ ದೀರ್ಘವಾದದ್ದು. ಇದರ ಒಂದು ಹಂತದಲ್ಲಿ ಚುನಾಯಿತಶಾಸಕರು ನಾಗರಿಕರ ಹಕ್ಕುಗಳನ್ನು ಧ್ವಂಸ ಮಾಡಲು ಹಿಂಜರಿದಿಲ್ಲವೆಂಬುದು ಇತಿಹಾಸದಿಂದ ವೇದ್ಯವಾಗುತ್ತದೆ. ರಾಷ್ಟ್ರದ ಕಾಲಮಾನದಲ್ಲಿ ವಿವೇಚನೆಯ ಸ್ಥಾನವನ್ನು ಉದ್ವೇಗವು ಆಕ್ರಮಿಸಿ ವಿವೇಕಿಗಳ ಒಂದು ಕೂಗು ಕೇಳಿಸದಂತಾದ ಸಂದರ್ಭಗಳೂ ಇವೆ. ಅಗತ್ಯವಾದ ಸಾಮಾಜಿಕ ಬದಲಾವಣೆಗಳು ಪ್ರಜಾತಂತ್ರದ ಕಾರ್ಯಕ್ರಮಗಳಿಂದ ಮಾತ್ರ ನಡೆಯಬೇಕು. ಮೂಲಭೂತ ಹಕ್ಕುಗಳು ಮತ್ತು ನಿರ್ದೇಶನ ಸೂತ್ರಗಳು ಹೊ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರ ನೋಟಕ್ಕೆ ವಿರೋಧಾಭಾಸವಾಗಿ ಕಂಡರೂ ವಾಸ್ತವವಾಗಿ ಅವು ಪರಸ್ಪರ ಹೊಂದಿಕೊಳ್ಳುತ್ತವೆ. ಕಾನೂನು ಎಲ್ಲರಿಗೂ ಏಕರೂಪವಾಗಿರದೆ ಅದರ ರಕ್ಷಣೆಯು ಎಲ್ಲರಿಗೂ ಸಮನಾಗಿ ದೊರಕದಿದ್ದರೆ ಪ್ರಜಾರಾಜ್ಯ ಅರ್ಥಹೀನವಾಗುವುದು.

ಪೌರನೊಬ್ಬನು ತುಂಬು ಜೀವನ ನಡೆಸಲು ಶಕ್ತನಾಗಬೇಕಿದ್ದರೆ ಕನಿಷ್ಠ ಹಕ್ಕುಗಳು ಅಗತ್ಯ. ಸಂವಿಧಾನದಲ್ಲಿ ಅಳವಡಿಸಲಾಗಿರುವ ಮೂಲಭೂತ ಹಕ್ಕುಗಳು ಈ ಮಾದರಿಯ ಕನಿಷ್ಠ ಹಕ್ಕುಗಳು. ಸಂವಿಧಾನದ ನಿರ್ದೇಶನ ಸೂತ್ರಗಳು ಕಾರ್ಯರೂಪಕ್ಕೆ ಬರಲು ರಾಜ್ಯಾಂಗದ ಕೆಲವು ನಿಬಂಧನೆಗಳು ಮತ್ತು ನ್ಯಾಯಾಲಯಗಳ ದೃಷ್ಟಿಕೋನಗಳು ಅಡ್ಡಿಯಾಗುವುವೆಂದು ಈಗ ಪ್ರಚಾರ ನಡೆಸಲಾಗುತ್ತಿದೆ. ಆದರೆ, ಸಂವಿಧಾನದ ಆದೇಶಗಳನ್ನು ಸರಕಾರವೇಕೆ ಕಾರ್ಯಗತ ಮಾಡಿಲ್ಲವೆಂದು ಯಾರೂ ಹೇಳಲಿಲ್ಲ. ಸ್ತ್ರೀ ಮತ್ತು ಪುರುಷರಿಗೆ ಸಮಾನವಾದ ಕೆಲಸಕ್ಕೆ ಸಮಾನ ವೇತನ ದೊರೆಯಬೇಕೆಂಬ, ೧೪ ವರ್ಷ ತಲುಪುವವರೆಗೆ ಎಲ್ಲ ಮಕ್ಕಳಿಗೂ ಒಂದೇ ರೀತಿ ಶಿಕ್ಷಣವಿರಬೇಕೆನ್ನುವ, ನೌಕರಿ ದೊರಕಿಸಿ ಕೊಳ್ಳುವ ಹಕ್ಕನ್ನು ಪಡೆಯುವ, ನಿರುದ್ಯೋಗಿಯಾದಾಗ, ಅಸ್ವಸ್ಥನಾದಾಗ, ಅಸಹಾಯಕನೆನಿಸಿದಾಗ, ಸಾರ್ವಜನಿಕ ನೆರವು ಪಡೆಯುವ ಹಕ್ಕುಗಳನ್ನು ಕಾರ್ಯಗತ ಮಾಡುವ ಕಾರ್ಯವೇಕೆ ನಡೆದಿಲ್ಲವೆಂದು ಯಾರೊಬ್ಬರೂ ಹೇಳುವುದಿಲ್ಲ.

ರಾಜ್ಯಾಂಗದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಹಕ್ಕುಗಳ ಬಗೆಗೆ ತೀರ್ಪು ನೀಡಲು ನ್ಯಾಯಾಲಯಗಳಿಗೆ ಹಕ್ಕಿಲ್ಲವಾದರೆ, ಆ ರಾಜ್ಯಾಂಗ ಅರ್ಥಶೂನ್ಯವಾಗುವುದು. ಆದುದರಿಂದ ನ್ಯಾಯಾಲಯಗಳನ್ನು ಟೀಕಿಸುವವರು ಸಂವಿಧಾನ ದತ್ತವಾದ ಮೂಲಭೂತ ಹಕ್ಕುಗಳಲ್ಲಿ ನಂಬಿಕೆಯಿಲ್ಲದವರೆಂಬುದು ವೇದ್ಯವಾಗುವುದು. ಈಗ ನ್ಯಾಯಾಲಯಗಳ ರೆಕ್ಕೆ—ಪುಕ್ಕಗಳನ್ನು ಕತ್ತರಿಸುವ ಸನ್ನಾಹ ನಡೆದಿದೆ. ಈ ಕಾರ್ಯನೀತಿ ಮುಂದರಿದರೆ ಮುಂದೆ ಶಾಸನಸಭೆಗಳಿಗೂ ಇದೇ ಗತಿ ಬರಬಹುದು. ರಾಜ್ಯಾಂಗದ ಒಂದು ಅಂಗವಾದ ನ್ಯಾಯಾಂಗದ ವಿರುದ್ಧ ಈ ಸಾಮೂಹಿಕ ಉದ್ವೇಗ ಹರಡಿಸಬಹುದಾದರೆ, ಇದು ಇತರ ಕಾರ್ಯಾಂಗಗಳಿಗೂ ತಪ್ಪಿದ್ದಲ್ಲ.

ಅಗತ್ಯ ಹೊಂದಾಣಿಕೆ ಮತ್ತು ನೂತನ ಕ್ರಮಗಳಿಗೆ ಸಾಧ್ಯವಾಗುವಂತೆ ಸಂವಿಧಾನವನ್ನು ಸೂಕ್ತ ರೀತಿಯಲ್ಲಿ ಸಿದ್ಧಪಡಿಸಲಾಗಿದೆ; ಆದುದರಿಂದ ಆಡಳಿತ ಮತ್ತು ನ್ಯಾಯ ನಿರ್ವಹಣೆಗೆ ಸಂವಿಧಾನದ ಪ್ರಕಾರ ಕಾರ್ಯಸಾಧನೆ ಮಾಡಲು ಸೂಕ್ತ ಅವಕಾಶ ನೀಡುವುದು ಸಮಂಜಸ. ಆದರೆ ನಮ್ಮ ಕಾರ್ಯ ವಿಫಲತೆಗೆ ಅದನ್ನು ಬಲಿಗೊಡುವುದು ಸಲ್ಲದು. ನ್ಯಾಯಮೂರ್ತಿ ಹೆಗ್ಡೆಯವರ ಈ ಅಭಿಪ್ರಾಯಗಳನ್ನು ಸಮರ್ಥಿಸುವವರು ಹಲವರಿದ್ದಾರೆ. ಆದರೆ, ಅವರ ಸಮರ್ಥನೆ ಇಂದಿರಾ ಸಮುದ್ರದಲ್ಲಿ ಮುಳುಗಿ ತಲೆಯೆತ್ತದಂತಾಗಿದೆ.

●●

ಇದು ಸಾರ್ವದೇಶಿಕ—

ಮಕ್ಕಳು ಮತ್ತು 'ಕಾಲದ ಹೊರೆಗಳು'

ದೇಶದ ಪ್ರಮುಖ ವಿಜ್ಞಾನಿಗಳು "ಶಾಲೆ ಮತ್ತು ಮಕ್ಕಳ ಆರೋಗ್ಯ" ಎಂಬ ವಿಷಯವನ್ನು ಚರ್ಚಿಸಲು ಮಾಸ್ಕೋದಲ್ಲಿ ಇತ್ತೀಚೆಗೆ ಒಂದು ಸಭೆಯಲ್ಲಿ ಸೇರಿದ್ದರು. ಸೋವಿಯೆತ್ ವೈದ್ಯಕೀಯ ವಿಜ್ಞಾನಗಳ ಅಕಾಡೆಮಿ ಮತ್ತು ಸೋವಿಯೆತ್ ವಿದ್ಯಾಬೋಧನ ವಿಜ್ಞಾನಗಳ ಅಕಾಡೆಮಿಯ ಈ ಸಂಯುಕ್ತ ಅಧಿವೇಶನದಲ್ಲಿ ೬೦೦ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು, ಅಧಿವೇಶನದ ಕಲಾಪ ಪಟ್ಟಿಯಲ್ಲಿ ಅನೇಕ ವಿಷಯಗಳು ಇದ್ದುವು. ಆದರೆ ಇಂದಿನ ಜೀವನವು ಶಾಲೆಯಿಂದ ಅಪೇಕ್ಷಿಸುತ್ತಿರುವುದಕ್ಕೆ ಮಗುವಿನ ಸಾಮರ್ಥ್ಯವನ್ನು ಸರಿಹೊಂದಿಸುವುದೆಂತು ಎಂಬುದೇ ಮುಖ್ಯ ಸಮಸ್ಯೆಯಾಗಿದ್ದಿತು.

ಇಂದಿನ ಮಕ್ಕಳಲ್ಲಿಯ ಬದಲಾವಣೆಗಳನ್ನು ಎಲ್ಲರೂ ಗಮನಿಸಿದ್ದಾರೆ. ಯುದ್ಧಾನಂತರದ ವರ್ಷಗಳಲ್ಲಿ ಶಾಲಾಬಾಲಕರ ಎತ್ತರವು ಸರಾಸರಿಯಾಗಿ 4.6—11.6 ಸೆಂಟಿಮೀಟರುಗಳಷ್ಟು ಹೆಚ್ಚಿದೆಯೆಂದೂ, ಅವರ ತೂಕವು ಸರಾಸರಿ 3.4–10.8 ಕಿಲೋಗ್ರಾಮುಗಳಷ್ಟು ಹೆಚ್ಚಿದೆಯೆಂದೂ, ಎದೆಗೂಡಿನ ಪರಿಧಿಯು 2.5–8.1 ಸೆಂಟಿಮೀಟರುಗಳಷ್ಟು ವಿಸ್ತರಿಸಿದೆಯೆಂದೂ ಶರೀರ ವಿಜ್ಞಾನಿಗಳು ದೃಢಪಡಿಸಿದ್ದಾರೆ.

ಆದರೆ ಇಂದಿನ ಮಕ್ಕಳು ಶಾರೀರಿಕವಾಗಿ ಚೆನ್ನಾಗಿ ಬೆಳೆದಿದ್ದಾರೆಂದರೆ ಅಷ್ಟೇ ಚೆನ್ನಾಗಿ ಆರೋಗ್ಯವಂತರೂ ಆಗಿದ್ದಾರೆಂದು ಅರ್ಥವಲ್ಲ. ಈ ಬಗ್ಗೆ ಅಧಿವೇಶನದಲ್ಲಿ ನೀಡಲಾದ ಅಂಕಿ ಅಂಶಗಳು ಹೀಗಿವೆ: 1959–1969ರ ಅವಧಿಯಲ್ಲಿ ದೇಶದಲ್ಲಿ ಪೋಲಿಯೋ ವ್ಯಾಧಿ ಪ್ರಸಂಗಗಳು 93 ಪಾಲು, ಗಣ ಚರ್ಮರೋಗದ ಪ್ರಸಂಗಗಳು 58 ಪಾಲು, ನಾಯಿಕೆಮ್ಮಿನ ಪ್ರಸಂಗಗಳು 16 ಪಾಲು ಕಡಮೆಯಾಗಿವೆ. ಕ್ಷಯ ಮತ್ತು ಚಳಿಜ್ವರಗಳಂತೂ ನಮ್ಮ ಮಕ್ಕಳಿಗೆ ಅಪರಿಚಿತ ಸಂಗತಿಗಳೇ ಸರಿ.

ಹೀಗಿದ್ದಾಗಲೂ "ಕಾಲದ ಹೊರೆಗಳಿಂದ" ಮಾತ್ರ ಬಾಲ್ಯತನವು ಯಾವತ್ತೂ ಸಂರಕ್ಷಿಸಲ್ಪಟ್ಟಿರುವಂತೆ ಕಾಣಿಸುವುದಿಲ್ಲ. ಏರುತ್ತಿರುವ ಸಮಾಚಾರ ಪ್ರವಾಹ, ವ್ಯಕ್ತಿತ್ವದ ಆವಶ್ಯಕತೆಗಳ ಹೆಚ್ಚಳ, ಪ್ರಭಾವಗಳ ಸಂಕೀರ್ಣತೆ (ಶಾಲೆ, ಹೆತ್ತವರು, ಸಾಮಾಜಿಕ ಸಂಸ್ಥೆಗಳು, ಪತ್ರಿಕೆ, ರೇಡಿಯೊ, ಟೆಲಿವಿಷನ್ ಮುಂ.) ಲವಲವಿಕೆಯ ಅಭಾವ ಈ ಮೊದಲಾದುವೆಲ್ಲವೂ ಮಕ್ಕಳ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮವನ್ನುಂಟುಮಾಡುತ್ತವೆ. "ಅಧಿಕ ಹೊರೆ"ಯ ಪರಿಣಾಮವಾಗಿ ಆರೋಗ್ಯದಲ್ಲಾಗುವ ಅಹಿತಕರ ಬದಲಾವಣೆಗಳು ಒಮ್ಮೆಲೇ ಗಮನಕ್ಕೆ ಬರುವುದಿಲ್ಲ. ಆದರೆ ಅವು ಕ್ರಮಶಃ ಸಂಗ್ರಹಗೊಳ್ಳುತ್ತಾ ಹೋಗುತ್ತವೆ. ಎಂಟು ಮತ್ತು ಹತ್ತನೇ ತರಗತಿಗಳಂಥ 'ಪದವಿ' ತರಗತಿಗಳ ಕಾಲದಲ್ಲೇ ಕಾಹಿಲೆಗಳ 'ಪರಾಕಾಷ್ಠೆಗಳು' ಕಾಣಿಸಿಕೊಳ್ಳುತ್ತವೆಯೆಂಬುದನ್ನು ತೋರಿಸುವ ದತ್ತಾಂಶಗಳು ಈಗ ಲಭ್ಯವಿವೆ.

ಹೊಸ ಪಾಠಕ್ರಮ ಮತ್ತು ಇತ್ತೀಚಿನ ವರ್ಷಗಳಲ್ಲಿಯ ನವೀಕರಣಗಳು ಮಕ್ಕಳ ಮೇಲೆ ಹೊರೆಗಳನ್ನು ಇನ್ನಷ್ಟು ಹೆಚ್ಚಿಸುತ್ತವೆ. ಆದರಿಂದ ಅವರ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ ಎನ್ನುವುದಾದರೆ ಮತ್ತು ವಿದ್ಯಾರ್ಥಿಗಳ ಶಾರೀರಿಕ ಹಾಗೂ ಮಾನಸಿಕ ಹೊರೆಗಳನ್ನು ಹೆಚ್ಚಿಸಲು ಸಾಧ್ಯ ಎಂಬ ತೀರ್ಮಾನಕ್ಕೆ ಬರಲು ಗಡಿವೃದ್ಧಿಯು ನಮಗೆ ಅನುಮತಿ ನೀಡದೆ ಹೋದರೆ. ನವೀಕರಣಗಳನ್ನೆಲ್ಲ ಬಿಟ್ಟುಕೊಡುವುದೇ ಮೇಲು ಎಂದೆನ್ನಬೇಕಾಗುತ್ತಲ್ಲವೆ?

ಇಂದು ಶಾಲೆಯು ಕೆಲವು ವರ್ಷಗಳ ಹಿಂದೆ ಎದುರಿಸುತ್ತಿದ್ದುದಕ್ಕಿಂತ ಭಿನ್ನವಾದ ಕಾರ್ಯಭಾರಗಳನ್ನು ಎದುರಿಸುತ್ತಿದೆ. ಅದು ವಿದ್ಯಾರ್ಥಿಗಳಿಗೆ ಆಧುನಿಕ ಜ್ಞಾನವನ್ನು ಮಾತ್ರವೇ ಒದಗಿಸಬೇಕಾಗಿಲ್ಲ, ಅದನ್ನು ಸದಾಕಾಲವೂ ಸುಧಾರಿಸಿಕೊಳ್ಳುತ್ತಿರುವಂತೆ ಸಿದ್ಧತೆಯನ್ನೂ, ಶಕ್ತತೆಯನ್ನೂ ಒದಗಿಸಬೇಕಾಗಿದೆ. ತನ್ನ ಜೀವನದ ಆದ್ಯಂತ ಮನುಷ್ಯನು ಅಭ್ಯಸಿಸುವಂತೆ ಅವನಿಗೆ ಕಲಿಸಿ ಕೊಡಬೇಕಾಗಿದೆ. ವಿದ್ಯಾರ್ಥಿಯ ಮೇಲೆ ಅಧಿಕ ಹೊರೆಯ ಮಾತನ್ನು ನಾವು ಆಡುತ್ತಿದ್ದೇವೆ. ಆದರೆ ಇಂದು ಇನ್ನೂ ಒಂದು ಅಪಾಯವಿದೆ. ಅದೆಂದರೆ "ಕಡಿಮೆ ಹೊರೆ".

ಮಿದುಳಿಗೆ ಅಲ್ಪ ಹೊರೆಯು, ಆ ವಿದ್ಯಾರ್ಥಿಯ ಮಾನಸಿಕ ಬೆಳವಣಿಗೆಯನ್ನು ಮಾತ್ರವೇ ನಿಧಾನಗೊಳಿಸುವುದಿಲ್ಲ. ಅವರನ್ನು ಸೀಮಿತ ಆಲೋಚನೆಗೆ—ರೂಢಿಯ ರೀತಿಯಲ್ಲೇ ಆಲೋಚಿಸುವಂತೆ ರೂಢಿಗೊಳಿಸುತ್ತವೆ ಮತ್ತು ಸೃಜನಾತ್ಮಕ ನಾಮದೆಲ್ಲವನ್ನೂ ಬಿಟ್ಟು ಕೊಡುವಂತೆ ಮಾಡುತ್ತದೆ. ಎಂಬ ಮಾತನ್ನೂ ಒಪ್ಪಿಕೊಳ್ಳಬೇಕಾಗುತ್ತದೆ.

ಅಧಿಕ ಹೊರೆಯ ಮಾತು ಕೇಳಿ ಬಂದಾಗಲೆಲ್ಲ ಪಾಠಕ್ರಮ ಸುಲಭಗೊಳಿಸುವ ಆವಶ್ಯಕತೆಯ ವಿಚಾರ ಮೊದಲು ಯಾರಿಗಾದರೂ ಹೊಳೆಯುತ್ತದೆ. ಆದರೆ ಮನೋವಿಜ್ಞಾನಿಗಳು ಭಿನ್ನವಾದ ವಿಚಾರವನ್ನೇ ನಮ್ಮ ಮುಂದಿಡುತ್ತಾರೆ. ಅದೆಂದರೆ—ಅಧಿಕ ಹೊರೆಯನ್ನು ತೊಡೆದು ಹಾಕುವ ದಾರಿ. ಪಾಠ ಕ್ರಮವನ್ನು ಸುಲಭಗೊಳಿಸುವುದಲ್ಲ. ಆದರೆ ಅದರ ಸಂಕೀರ್ಣತೆಯನ್ನು ಹೆಚ್ಚಿಸುವುದು.

ಖ್ಯಾತ ಮನೋವಿಜ್ಞಾನಿ ಮತ್ತು ಸೋವಿಯತ್ ಒಕ್ಕೂಟದ ವಿದ್ಯಾಬೋಧನ ವಿಜ್ಞಾನಗಳ ಅಕಾಡೆಮಿಯ ಪತ್ರ ವ್ಯವಹಾರ ಸದಸ್ಯರಾದ ಡಿ. ಬಿ. ಎಲ್ಕೋನಿನ್ ಅವರ ಅಭಿಪ್ರಾಯದ ಪ್ರಕಾರ—ಒಂದಕ್ಕೊಂದು ಸಂಬಂಧವಿರುವಂಥ ಮೂರು ಸಮಸ್ಯೆಗಳು ಇದ್ದು, ಇವುಗಳ ಪರಿಹಾರವು ಬಳಲಿಕೆ, ಭಾವನಾತ್ಮಕ ಕಾತರತೆ, ಅತಿಶಯ ಹೊರೆ ಇವನ್ನು ಕಡಿಮೆಗೊಳಿಸುತ್ತದೆ.

ಮೊದಲನೆಯ ದಾರಿ: ಸೈದ್ಧಾಂತಿಕ ಸಾಮಗ್ರಿಯನ್ನು ಹೆಚ್ಚಿಸುವುದು ಮತ್ತು ಬೋಧನೆಯ ಪ್ರತಿಯೊಂದು ವಿಷಯದಲ್ಲಿ ಪ್ರತ್ಯಕ್ಷ ವಸ್ತುವು ಕೇಂದ್ರೀಕೃತಗೊಳ್ಳಬಹುದಾದಂಥ ಮೂಲಭೂತ ಚಿಂತನಾ ರೂಪಗಳನ್ನು ಅರಿಸಿಕೊಳ್ಳುವುದು.

ಎರಡನೆಯ ದಾರಿ: ಅನುದ್ದಿಷ್ಟ ಜ್ಞಾಪಕ ಶಕ್ತಿಯನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಉಪಯೋಗಿಸಿಕೊಳ್ಳುವುದು, 'ಸ್ವಯಂ ಸ್ಮರಣ ಶಕ್ತಿ'ಯನ್ನು ಅತಿಶಯವಾಗಿ ಉಪಯೋಗಿಸಿಕೊಳ್ಳುವುದು—ವಿಪರೀತ ಹೊರೆಯ ಕಾರಣಗಳಲ್ಲೊಂದಾಗಿದೆ.

ಮೂರನೆಯ ದಾರಿ: 'ಅರಿವಿನ ಆಳವಾದ ಪ್ರೇರಣೆ'ಗಳು ಎನ್ನಲಾಗುವಂಥವು ರೂಪುಗೊಳ್ಳುವುದು. ಹಾಗೆಂದರೆ ಏನು?

ಬಳಲಿಕೆಯ ಪ್ರಮಾಣವು ಚಟುವಟಿಕೆಯ ಸಾಮಾನ್ಯ ಭಾವನಾತ್ಮಕ ನಾದವನ್ನೇ ಅವಲಂಬಿಸಿರುತ್ತದೆಯೆಂಬುದು ಅನೇಕ ಅನ್ವೇಷಣೆಗಳಿಂದ ಕಂಡು ಬಂದಿದೆ. ಯಾವುದೊಂದು ಹೊಸತನವೂ ಇಲ್ಲದ, ಬೇಸರ ಬರಿಸುವ ಒಂದೇ ಬಗೆಯ ಸಪ್ಪೆ ಕೆಲಸದಿಂದ ಬಹು ಶೀಘ್ರವೇ ಭಾವನಾತ್ಮಕ ತೃಪ್ತಿ ಮೂಡುವುದೇ ಅಲ್ಲದೆ ಮಾನಸಿಕ ಮತ್ತು ಶಾರೀರಿಕ ದಣಿವಿಕೆಯೂ ಉಂಟಾಗುತ್ತದೆ.

ನಮ್ಮ ಮಕ್ಕಳ ಮೇಧಾಶಕ್ತಿಯು 'ಕಾಲ-ಕಾರ್ಯಕ್ರಮ ಬದ್ಧವಾಗಿಲ್ಲ' ಆದರೆ ಅದು ಕಾಲಕ್ಕೆ ಸಮತಲವಾಗುತ್ತದೆಯೋ ಇಲ್ಲವೇ ಎಂಬುದು ಶಾಲೆ ಮತ್ತು ಶಿಕ್ಷಕ ಅದನ್ನು ವಿಕಾಸಗೊಳಿಸುವುದರಲ್ಲಿ ಹೇಗೆ ಯಶಸ್ವಿಯಾಗುತ್ತಾರೆಂಬುದನ್ನೇ ಅವಲಂಬಿಸಿದೆ. ಶಾಲಾ ಬಾಲಕರ ಮೇಲಿನ 'ಅತಿಶಯ ಹೊರೆ'ಯನ್ನು ತೊಡೆದು ಹಾಕಲು—ಅಂತಃಶಕ್ತಿಯ ಬಳಕೆ, ಪಾಠಕ್ರಮ ಸುಧಾರಣೆ (ಶ್ರೀಮಂತಗೊಳಿಸುವುದು, ಸರಳಗೊಳಿಸುವುದಲ್ಲ). ಬೋಧನ ವಿಧಾನ ಮತ್ತು ಉಪಾಧ್ಯಾಯರ ಕೌಶಲದ ಸುಧಾರಣೆ ಇವೇ ಮೊದಲಾದವಾಗಿವೆಯೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

(ಒಂಭತ್ತನೇ ಪುಟ ನೋಡಿರಿ)

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕೊಲಿಟಿಯಲ್ಲಿ, ಸ್ಯಾಚಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

'ಬಿಹಾರೀ ಬಚಾವೋ'

ಇತ್ತೀಚಿನ ವಿಧಾನ ಸಭಾ ಚುನಾವಣೆಯಲ್ಲಿ ಕೆಲವು ಪಕ್ಷದವರಿಗೆ ಓಟು ಬೇಡಲು ಬಿಹಾರಿ ಮುಸ್ಲೀಮರ ಹೆಸರು ತಾರಕ ಜಪವಾಗಿತ್ತಾದರೂ ಆ ಮುಸ್ಲಿಮರಿಗೆ ಭಾರತದಲ್ಲಿ ಆಶ್ರಯ ನೀಡುವ ದೃಷ್ಟಿಯಿಂದ ಯಾವ ಪಕ್ಷವೂ ಗೆದ್ದು ಬರಲಿಲ್ಲ. ಆದರೆ ತಾಂಬೂರಿ ದಾಸಯ್ಯರಂತೆ ಸೋತ ಅಭ್ಯರ್ಥಿಗಳು ಅದೇ ಪಲ್ಲವಿಯನ್ನು ಈಗ ಹಾಡುತ್ತಿರುವುದನ್ನು ನೋಡಿದರೆ ದೇಶದ ಹಿತದೃಷ್ಟಿಯಿಂದ ಅದು ಖಂಡಿತ ಅಸಾಧುವೆನಿಸುತ್ತದೆ.

ಬಾಂಗ್ಲಾ ದೇಶದ ಮುಸಲ್ಮಾನರಾದ ಬಿಹಾರಿಗಳು ಪಾಕಿಸ್ತಾನ ಆಚರಿಸಿದ ಸಾಮೂಹಿಕ ಕಗ್ಗೊಲೆಯಲ್ಲಿ ಭಾಗವಹಿಸಿ, ಬಂಗಾಲದ ನಿರಪರಾಧಿಗಳನೇಕರನ್ನು ಬಲಿಗೊಂಡವರು. 'ಆದರೆ ಬಂಗ್ಲಾ ಸ್ವತಂತ್ರವಾದ ಬಳಿಕ ಬಿಹಾರಿಗಳಿಗೆ ತೊಂದರೆ, ಹಿಂಸೆಗೆ ಆರಂಭವಾಯಿತು. ಇದನ್ನು ಗಮನಿಸಿದ ಸಂಸ್ಥಾ ಕಾಂಗ್ರೆಸಿನ ಎಸ್ಸೆನ್‌ರೇ ಅಲ್ಲದೆ ಜನಸಂಘ, ಸೋಶಲಿಸ್ಟ್ ಪಕ್ಷದವರೆಲ್ಲರೂ ಸೇರಿ ಬಿಹಾರಿಗಳಿಗೆ ನಾವು ಆಶ್ರಯ ಕೊಡಬೇಕೆಂದು ಒಕ್ಕೊರಲಿನಿಂದ ಪ್ರಾರ್ಥಿಸಿದರು. ಶ್ರೀ ನಿಜಲಿಂಗಪ್ಪನವರು ಹೇಳಿದ್ದಾರೆ: 'ಬಾಂಗ್ಲಾ ದೇಶಿಜರು ತಮ್ಮನ್ನು ಕೊಲ್ಲುತ್ತಾರೆಂಬ ಭಯಕ್ಕೊಳಗಾದ ಬಿಹಾರಿಗಳನ್ನು ಮುಜೀಬ್‌ರು ರಕ್ಷಿಸಲೆಳಸಿದರೂ ಜನತೆಯ ರೋಷ ದ್ವೇಷದಿಂದ ಉಳಿಸಲಾರರು. ಅವರಿಗೆ ಭಾರತ ಆಶ್ರಯ, ರಕ್ಷಣೆಗಳನ್ನಿತ್ತು– ಪುನಃ ಅವರು ಬಾಂಗ್ಲಾದಲ್ಲಿ ಸುಭದ್ರತೆ, ಶಾಂತಿ ದೊರಕುವಂತೆ, ಬಾಳುವಂತೆ ಸಹಕರಿಸಬೇಕು'

ಈ ಮಾತು ಶ್ರೀಸಾಮಾನ್ಯನ ಮತ ಗಿಟ್ಟುವುದಕ್ಕಾಗಿಯೂ ಇರಬಹುದು. ಅಥವಾ ಮಾನವೀಯ ಪ್ರೇಮ ಇಲ್ಲವೇ ಹೃದಯದ ಔದಾರ್ಯವಿರಬಹುದು. ಆದರೆ ಇಂಥ ಕ್ಲಿಷ್ಟ ಸಮಸ್ಯೆಯನ್ನು ಅತ್ಯಂತ ಸರಳವಾಗಿ ನಮ್ಮೆದುರಿಗಿರಿಸಿದ ಈ ಅಭ್ಯರ್ಥಿಗಳನ್ನು ಮೆಚ್ಚಲೇ ಬೇಕು. ಬಿಹಾರಿಗಳು ಅಂದಿನಿಂದ ಇಂದಿನವರೆಗೂ ಬಂಗ್ಲಾಕ್ಕಷ್ಟೇ ಅಲ್ಲ, ಭಾರತದ ಬದ್ಧ ವೈರಿಗಳಾಗಿದ್ದರೆಂಬುದನ್ನು ಮರೆಯಬಾರದು. ಪಾಕಿಸ್ತಾನ ವಿಭಜನೆಯ ಮೊದಲು ಬಿಹಾರಿಗಳೂ ಭಾರತೀಯರೇ. ವಿಭಜನೆಯ ಕಾಲಕ್ಕೆ ನಮ್ಮ ವಿರುದ್ಧ ಹೆಣಗಾಡಿದ ಬಿಹಾರದ ಈ ಮಹಮ್ಮದೀಯರು ಅನಂತರ ಪಾಕಿಸ್ತಾನಕ್ಕೆ ಹೋದರು. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳೊಳಗೆ ಸಂಗ್ರಾಮವೇರ್ಪಟ್ಟಾಗ ಬಂಗ್ಲಾದ ನಿರಪರಾಧಿಗಳ ರಕ್ತಪಾತದಲ್ಲಿ ಬಿಹಾರಿಗಳ ಕೈವಾಡ ಪ್ರಾಮುಖ್ಯವಾಗಿತ್ತು. ಸಂಗ್ರಾಮದಲ್ಲಿ ಪಾಕಿಸ್ತಾನದಿಂದ ಬಂಗ್ಲಾ ಬೇರ್ಪಟ್ಟಾಗ ಬಿಹಾರಿಗಳನ್ನು ಯಾವ ಯಾಹ್ಯಾಖಾನನೂ ತನ್ನ ರಾಜ್ಯಕ್ಕೆ ಆಹ್ವಾನಿಸಿ, ಸಿರಿ ವೈಭವಗಳ ಅರಮನೆಯಲ್ಲಿ ಕೂಡಿಸಲಿಲ್ಲ. ಬದಲಾಗಿ ತಿರಸ್ಕರಿಸಿದರು. ಇತ್ತ ಬಂಗ್ಲಾದಲ್ಲುಳಿದ ಬಿಹಾರಿಗಳನ್ನು ಹಿಂಸಿಸಿ, ಪೀಡಿಸಿ, ಬಂಗಾಲಿಗಳು ತೀಟೆ ತೀರಿಸಿಕೊಳ್ಳ ತೊಡಗಿದರು. ಬಿಹಾರಿಗಳ ಕನಸು ನುಚ್ಚಾಯಿತು. ಅವರು ಅಸ್ಪೃಶ್ಯ ತ್ರಿಶಂಕುವಿನಂತೆ ನೇತಾಡತೊಡಗಿದ್ದಾರೆ.

ಇಂಥ ಸಂದರ್ಭದಲ್ಲಿ ಅವರಿಗೆ ಆಶ್ರಯ ಕೊಡಬೇಕೆಂಬ ಘೋರಣೆ ನಮ್ಮವರಿಗಿದ್ದರೂ ಈ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಶ್ರೀಸಾಮಾನ್ಯ ಅದನ್ನು ಅಂಗೀಕರಿಸಲಾರ. ನಿರಾಶ್ರಿತ ಬಂಗಾಳಿಗಳಿಗಾಗಿ ಕೋಟಿಗಟ್ಟಲೆ ಹಣವನ್ನು ಆತ ತನ್ನ ಬೆವರಿನಲ್ಲಿ ನೆನೆಯಿಸಿ ಕೊಟ್ಟಿದ್ದಾನೆ. ಇನ್ನೂ ಚೇತರಿಸಿಕೊಂಡಿಲ್ಲದ ನಮಗೆ ಇನ್ನೊಂದು ಆಘಾತವೇ?

ಬಾಂಗ್ಲಾದ ವೈರಿಗಳಿಗೆ ನಾವು ರಕ್ಷಣೆ ನೀಡುವುದು ಎಂದಿಗೂ ಕ್ಷೇಮವಲ್ಲ. ಸಾಮಾಜಿಕ ದೃಷ್ಟಿಯಿಂದಲೂ ಇದನ್ನು ಹೊರಲಾರೆವು. ಪಾಕಿಸ್ತಾನದ ಮಂಗಮುಷ್ಟಿಯಿಂದ ಬಂಗ್ಲಾವನ್ನು ಬಿಡಿಸಿದ್ದೇವೆ ಆ ಬಂಗ್ಲಾದ ಹಾವುಗಳಿಗೂ ಹಾಲೆರೆಯುವುದು ಲೇಸೇ?

ಇಂದು ಭಾರತ ರಕ್ಷಣೆಯೇ ನಮ್ಮ ಕರ್ತವ್ಯವಲ್ಲದೆ ಸಲ್ಲದ ಹುಳಿ ರಗಳೆಗಳ ಹಾರವೆಂದಿಗೂ ಬೇಡ. ಈಗ ಟಪಾಲಿನಲ್ಲಿ ಒಂದು ಪತ್ರಕ್ಕೆ ಕೂಡ ನಿರಾಶ್ರಿತರ ನಿಧಿಗೆಂದು ಐದು ಪೈಸೆ ಕೊಡುತ್ತಿದ್ದೇವೆ. ಇನ್ನು ಬಿಹಾರಿಗಳೂ ಈ ಧರ್ಮಛತ್ರಕ್ಕೆ ಬಿಡಾರ ಹೂಡಲು ಬಂದರೆ ವೈ. ಬಿ. ಚವ್ಹಾಣರು ಇನ್ನೆಷ್ಟು ಸುಂಕ ವಿಧಿಸುತ್ತಾರೆಯೋ?

ಸಾರ್ವಭೌಮ ರಾಷ್ಟ್ರವಾದ ಬಾಂಗ್ಲಾದಿಂದ ಬಿಹಾರಿ ಮುಸ್ಲೀಮರನ್ನು ಭಾರತಕ್ಕೆ ಆವಾಹಿಸುವುದು ನಿಜಕ್ಕೂ ಈ ರಾಜಕಾರಣಿಗಳ ದುರಹಂಕಾರವಲ್ಲದೆ ಅಕ್ಷಮ್ಯ ಅಪರಾಧವೂ ನಿಜ ಈ ಸಮಸ್ಯೆಗಳ ಸುಳಿ ಪಸರಿಸುವ ಮೊದಲೇ ಈ ಕುರಿತು ಜನಸಂಘದ ನಾನಾ ದೇಶ ಮುಖರು, "ಮಾನವೀಯತೆ ದೃಷ್ಟಿಯಿಂದ ಹಿಂದೂಸ್ಥಾನ ನಾಲ್ಕೈದು ಬಿಹಾರಿಗಳಿಗೆ ಆಶ್ರಯ ಕೊಟ್ಟೀತು! ಆದರೆ ಪಾಕ್ ಸೇನೆಯೊಂದಿಗೆ ಸಹಕರಿಸಿ ಬಂಗಾಳಿಗಳ ಕೊಲೆಗೈದ ಈ ಜನರನ್ನು ನಾವೇಕೆ ಸ್ವಾಗತಿಸುತ್ತಿದ್ದೇವೆಂದರೆ 'ಚುನಾವಣೆಯ ಅಗತ್ಯ ವಿಚಿತ್ರ ಮಂದಿಯನ್ನೆಲ್ಲ ಒಂದೇ ರಂಗಸ್ಥಳದಲ್ಲಿ ತಾಲೀಮು ನಡೆಸುವಂತೆ' ಮಾಡುತ್ತದೆ" ಎಂದು ಹೇಳಿರುವುದು ಬಹಳ ದಿಟ.

ಈ ಹಂಚಿಕೆಯಿಂದ ಬಾಂಗ್ಲಾ ಭಾರತ ಬಾಂಧವ್ಯವೂ ಕೆಡುವ ಸಂಭವ ಇದೆ. ಪ್ರಧಾನಿಯವರು ಬಿಹಾರಿ ಮುಸ್ಲೀಮರಿಗೆ ಸ್ವಾಗತ ಹೇಳದಿರುವುದು ಶ್ಲಾಘನೀಯ. ಎಸ್ಸೆನ್ ಹೇಳಿರುವಂತೆ ಬಿಹಾರಿಗಳನ್ನು ಭಾರತಕ್ಕೆ ಕರೆಸಿ, ಬಂಗ್ಲಾದ ಭಕ್ತರಾಗುವಂತೆ ಬುದ್ಧಿ ನೀತಿ ಹೇಳಿ, ಅವರ ಮನಪರಿವರ್ತನೆ ಮಾಡುವುದಂತೂ ಊಹಾತೀತ ಸಂಗತಿ. ಭಾರತದ ಪ್ರಜೆಗಳ ಯಾವ ವರ್ಗಕ್ಕೂ ಸೇರಿರದ ಅವರಿಗೆ ನೀಡುವ ಅನುಚಿತವಾದ ಆದರದ ಶಂಖಧ್ವನಿಯನ್ನು ಎಲ್ಲಾ ಪಕ್ಷಗಳವರೂ ತ್ಯಜಿಸಬೇಕು. ಬೇಕಾದರೆ ಪ್ರಧಾನಿಗಳವರ ಮುಖಾಂತರ ಈ ಪ್ರಾಮಾಣಿಕ ಮತ್ತು ಮಾನವೀಯ ದೃಷ್ಟಿಯ ಅಭ್ಯರ್ಥಿಗಳು, ಬಿಹಾರಿ ಮುಸ್ಲಿಮರಲ್ಲಿ ದಯೆ ತೋರಿಸಿ, ಅವರನ್ನೂ ರಕ್ಷಿಸುವಂತೆ ನಿಯೋಗವೊಂದನ್ನು ರಚಿಸಿ, ಬಂಗ್ಲಾದ ಮುಜಿಬುರ್ ರಹಮಾನರಿಗೆ ರವಾನಿಸಬಹುದಲ್ಲದೆ ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ತಂದು ಗಂಗಾಜಲಕ್ಕೂ ಗತಿಯಿಲ್ಲದಂತೆ ಮಾಡಿಕೊಳ್ಳುವ ಪರಿಸ್ಥಿತಿಯನ್ನು ಸ್ವಾಗತಿಸುವಂಥ ಚೈತನ್ಯ ಇಂದು ಶ್ರೀಸಾಮಾನ್ಯನಲ್ಲಿಲ್ಲ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

●●

ಉತ್ತಮ ಗದ್ಯ ಪ್ರಬಂಧಕಾರ—

ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು

ಇದೇ ಎಪ್ರಿಲ್ 2ರಂದು ಮಂಗಳಗಂಗೋತ್ರಿಯಲ್ಲಿ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಭಾವಚಿತ್ರದ ಅನಾವರಣ ಮಹೋತ್ಸವ ನಡೆಯಿತು. ಶ್ರೀ ಕಡೆಂಗೋಡ್ಲು ಕನ್ನಡ ಹಿರಿಯ ಕವಿಗಳೂ ಕಾದಂಬರಿಕಾರರೂ ಪತ್ರಿಕಾ ಕರ್ತರೂ ನಾಟಕಕಾರರೂ ಆಗಿದ್ದಂತೆ ಶ್ರೇಷ್ಠ ಪ್ರಬಂಧಕಾರರೂ ಆಗಿದ್ದರೆಂಬಲ್ಲಿ ಸಂಶಯವಿಲ್ಲ. ಅವರ ಬರೆಹಗಳಲ್ಲಿ ಅದೊಂದು ಪ್ರಕೃಷ್ಟವಾದ ಬಂಧವಿದೆ. ಅವರು ಕೇವಲ ಪ್ರಬಂಧಕಾರರು ಮಾತ್ರವಲ್ಲ, ಪ್ರಬಂಧದ ಲಕ್ಷಣವೇನೆಂದೂ ಬರೆದಿದ್ದಾರೆ. ಶ್ರೀಯುತರಂತೆ ಬೇರೆ ವಿದ್ವಾಂಸರು ಒಬ್ಬಿಬ್ಬರು ನಿರೂಪಿಸಿದ ಕ್ರಮಗಳನ್ನು ಪ್ರಬಂಧ ಹೇಗಿರ ಬೇಕೆಂಬುದನ್ನು—ಉಲ್ಲೇಖಿಸುವುದೇ ಪ್ರಕೃತೋದ್ದೇಶ.

ಜಿಲ್ಲೆಯ ವೈಶಿಷ್ಟ್ಯ: ಈ ಜಿಲ್ಲೆ ಬೇರೆ ಜಿಲ್ಲೆಗಳಷ್ಟು ಹೆಚ್ಚು ಉದ್ದ, ಅಗಲಗಳಿಂದ ಕೂಡಿಲ್ಲ. ಕಾಸರಗೋಡಿನ ಪಯಸ್ವಿನಿಯಿಂದ ಬಚಗುನಾಯಿಗೂ ಕಲ್ಯಾಣಪುರವನಕ ತುಳುನಾಡೆಂಬುದು ಸೇರಿದ ಈ ಜಿಲ್ಲೆಯು ಗಂಗಾವಳಿವರೆಗೆ ಮುಂದೆ ಹರಡಿದೆ. ಪಡು ಕಡಲ ತಡಿಯಿಂದ ಪಡುಗಟ್ಟದ ತಪ್ಪಲವರೆಗೆ ಚಾಚಿದ ಈ ಜಿಲ್ಲೆಯ ಪ್ರಾಚೀನತೆ, ಇತರತ್ರ ಇಲ್ಲದಿರುವ ಇಲ್ಲಿನ ವೈಶಿಷ್ಟ್ಯಗಳು ಮನನೀಯಗಳಾಗಿವೆ. ವ್ಯಾಸಕೃತ ಮಹಾಭಾರತದಲ್ಲಿ ಮತ್ತು ಅಶೋಕ ಮಹಾರಾಜನ ಶಾಸನಗಳಲ್ಲಿ ಹೇಳಿದ 'ಸತೀನರಾಃ ಸತಿಯೊಃ' ಎಂಬುದು ಇಲ್ಲಿಗೆ ಅನ್ವಯಿಸುತ್ತದೆ. (ಸಾಹಿತ್ಯದ ಹಿನ್ನೆಲೆಯೆಂಬ ನನ್ನ ಸಂಕಲನದಲ್ಲಿರುವ, ಸತಿಯಪುತ್ರವೆಂಬ ಬರೆಹದಲ್ಲಿ ಈ ಬಗೆಗೆ ವಿವರಣ ಅರ್ಥಾದಿಗಳು ಹೇಳಲಾಗಿವೆ) ಹಲವಾರು ದೇವಾಲಯಗಳೂ ಅನೇಕ ಭೂತಾಲಯಗಳೂ ಇಲ್ಲಿವೆ, ಇಲ್ಲಿರುವಷ್ಟು ದೇವಾಲಯ—ಭೂತಾಲಯಗಳು ಬೇರೆ ಜಿಲ್ಲೆಯಲ್ಲಿಲ್ಲವೆಂದರೆ ಸುಳ್ಳಾಗದು. ಆಲುಪರ ಶಿಲಾಶಾಸನಗಳು ಕನ್ನಡ ಸಾಹಿತ್ಯದ ರೂಪರೇಷೆಗಳಿಂದ ಕೂಡಿ ರಾರಾಜಿಸುತ್ತಿವೆ. ಮತತ್ರಯದಲ್ಲೊಂದಾದ ದ್ವೈತ ತತ್ತ್ವದ ಪ್ರಸಾರಕರಾದ ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಜನಿಸಿದವರು. ಆಸೇತು ಹಿಮಾಚಲದವರೆಗ ಸಂಚರಿಸಿ ಹರಿಭಕ್ತಿಯನ್ನು, ತನ್ಮೂಲಕ ಮೋಕ್ಷ ಸಾಧನೆಯನ್ನು ಸಾರಿದವರೂ ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠೆ ಮಾಡಿ, ಅಷ್ಟಮಠಗಳನ್ನು ಅಲ್ಲಿ ನಿರ್ಮಿಸಿದವರು. (ಇಸ್ವಿ 1200—78ರಲ್ಲಿ ಶ್ರೀ ಮಧ್ವಾಚಾರ್ಯರು ಜೀವಿಸಿದ್ದರು.) ಉಡುಪಿಯ ಅಷ್ಟ ಮಠಗಳ ಅನೇಕ ಸ್ವಾಮಿಗಳೂ ಸಂಸ್ಕೃತ ಹಾಗೂ ಕನ್ನಡದಲ್ಲಿ ಹಲವಾರು ಗ್ರಂಥ ರತ್ನಗಳನ್ನು ಬೆಳಗಿಸಿದರು. ಹದಿಮೂರನೆ ಶತಕದಿಂದ ಮೊದಲ್ಗೊಂಡು, ಇಲ್ಲಿಯ ಹಲವು ಕನ್ನಡ ಕವಿಗಳು ಕೃತಿಗಳನ್ನು ಬರೆದರು. ಸೋಮದೇವ, ಕಲ್ಯಾಣ ಕೀರ್ತಿ, ಶ್ರೀಕೃಷ್ಣದೇವರಾಯ, ಸಾಳ್ವ, ರತ್ನಾಕರವರ್ಣಿ, ನೇಮಣ್ಣ, ಬಾಹುಬಲಿ, ವಾದಿರಾಜ, ಚಂದ್ರಮ, ಪದ್ಮನಾಭ, ಪಟ್ಟಾಭಿರಾಮ, ಪರಮದೇವರು ಇಲ್ಲಿ ಸುಪ್ರಸಿದ್ಧ ಗ್ರಂಥಕಾರರಿದ್ದರು.

ಇಪ್ಪತ್ತನೆಯ ಶತಕದಲ್ಲಿ 'ಹಳೆಗನ್ನಡ-ಸಕ್ಕದಗಳ' ಬೆರಕೆಯ 'ತಿರುಳ್ ಕನ್ನಡ'ದಲ್ಲಿ ಗದ್ಯರೂಪವಾಗಿ 'ಶ್ರೀ ರಾಮಾಶ್ವಮೇಧ'ವನ್ನು ಬರೆದ 'ಮುದ್ದಣ (ನಂದಳಿಕೆ ಲಕ್ಷ್ಮೀನಾರಣಪ್ಪ)ನು ಈ ಜಿಲ್ಲೆಯ ಸಾಹಿತ್ಯಾರಾಧಕರಲ್ಲಿ ಮೊದಲಿಗನಾಗಿದ್ದಾನೆ.



ಸಾಮಾಜಿಕ ಕಾದಂಬರಿಗಳಲ್ಲಿ ಮೊತ್ತ ಮೊದಲನೆಯ 'ಇಂದಿರಾಬಾಯಿ' ಇಲ್ಲಿ ಮೂರ್ತವಾದುದು. ಕನ್ನಡದಲ್ಲಿ ಸಣ್ಣಕತೆಗಳ ಬರೆಹಕ್ಕೆ ಇಲ್ಲಿ 'ಓಂ'ಕಾರವಾದುದು. ಕನ್ನಡದಲ್ಲಿ ಶಿಶು ಸಾಹಿತ್ಯ ರಚನೆಗೆ ಇಲ್ಲಿ 'ಶ್ರೀ'ಕಾರವಾದುದು. ಕನ್ನಡದಲ್ಲಿ ಭಾವಗೀತೆಗಳನ್ನು ಪ್ರಾಸವಿಲ್ಲದೆ ಬರೆಯಲು, ಅದರ ಇದಿರು ಕೂಗನ್ನು ಪ್ರತಿಭಟಿಸಲು, ಇಲ್ಲಿ 'ಮೊದಲ ಮಣಿ'ಯೊದಗಿದುದು ಹೀಗೆ ಹಲವಾರು ಬಗೆಯಲ್ಲಿ 'ತನ್ನತನ'ದಿಂದ ಮೆರೆವ ಈ ಜಿಲ್ಲೆಯಲ್ಲಿ ಇತರ ಅನೇಕ ಮಂದಿ ಇಲ್ಲಿ ಹುಟ್ಟಿ ಸಾರ್ಥಕರಾಗಿ ಮೆರೆದರು. ಕನ್ನಡ ಸಾಹಿತ್ಯ ಪರಿಷತ್ತಿನ ಐವತ್ತು ವರ್ಷಗಳ ಅವಧಿಯಲ್ಲಿ, ಅಲ್ಲಲ್ಲಿ ನೆರೆದ ಸಮ್ಮೇಳನಗಳ ಅಧ್ಯಕ್ಷರಾಗಿ ಈ ಜಿಲ್ಲೆಯ ಆರು ಮಂದಿ ಆರಿಸಲ್ಪಟ್ಟಿದ್ದಾರೆ.

ಶ್ರೀ ಬೆನಗಲ್ ರಾಮ ರಾವ್ (1925ರಲ್ಲಿ ಬೆಳಗಾವಿಯಲ್ಲಿ,) ಶ್ರೀ ಮುಳಿಯ ತಿಮ್ಮಪ್ಪಯ್ಯ (1931ಕ್ಕೆ ಕಾರವಾರದಲ್ಲಿ), ಶ್ರೀ ಪಂಜೆ ಮಂಗೇಶರಾಯರು (1934ಕ್ಕೆ ರಾಯಚೂರಲ್ಲಿ), ಶ್ರೀ ಗೋವಿಂದ ಪೈ (1951ರಲ್ಲಿ ಮುಂಬೈಯಲ್ಲಿ), ಶ್ರೀ ಕೋಟ ಶಿವರಾಮ ಕಾರಂತ (1955ರಲ್ಲಿ ಮೈಸೂರಲ್ಲಿ), ಮತ್ತು ಶ್ರೀ ಕಡೆಂಗೋಡ್ಲು ಶಂಕರ ಭಟ್ಟ (1965ರಲ್ಲಿ ಕಾರವಾರದಲ್ಲಿ) ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಇವರೆಲ್ಲರ ಸಾಹಿತ್ಯಕ ಜನಾದರಣೆಗೆ ಇದೊಂದೇ ಸಾಕ್ಷಿ ಸಾಕಾಗಿದೆ.

'ಅನೇಕ ಜನ್ಮಾರ್ಜಿತ ಪೂರ್ವ ಪುಣ್ಯಾತ್ ಕವಿತ್ವ ಚಿಂತಾಮಣಿ ರೇವ ಲಬ್ಧಃ; 'ಆರಾರೇರರ್ ಶಾಸ್ತ್ರ ಶ್ರೀರೋಹಣಗಿರಿಯನಲ್ಲಿ ನವ ಕವಿತಾ ಚಿಂತಾರತ್ನಂ ದೊರೆಗುವೆ ಮುರಾರಿಯ ಕೃಪೆಯಿಲ್ಲದಂಗೆ ಧರಣೀತಲದೊಳ್' ಎಂಬ ಷಡಕ್ಷರಿಯ ಮಾತು ಇಲ್ಲಿ ನೆನಪಾಗುತ್ತದೆ. ಶ್ರೀ ಕಡೆಂಗೋಡ್ಲು ಪೂರ್ವ ಪುಣ್ಯವಶದಿಂದ, ದೈವಾನುಗ್ರಹದಿಂದ ಪಡೆದ ಪಾಂಡಿತ್ಯ ಕವಿತ್ವಗಳಿಂದ ಸುಪ್ರಸಿದ್ಧರಾದರು. ಇವರು ಬರೆದ ಗದ್ಯ ಪ್ರಬಂಧಗಳೂ ಆದರ್ಶಗಳಾಗಿವೆ. ಅದನ್ನು 'ಸ್ಥಾಲೀ ಪುಲಾಕ' ನ್ಯಾಯದಿಂದ ಪರಿಚಯಿಸಲಿದ್ದೇನೆ. ಗದ್ಯಗಳ ಬಗೆಗೆ ಅನೇಕರು ನಿರೂಪಿಸಿದ್ದಾರೆ 'ಪದ್ಯ ಕಾವ್ಯದ ಶ್ರೇಯಸ್ಸಿಗೆ ಸಾಧಕವಾದ ಗುಣವಿಶೇಷಗಳೆಲ್ಲ ಗದ್ಯ ಕಾವ್ಯದಲ್ಲಿಯೂ ಇರಬೇಕೆಂಬ ಅಭಿಪ್ರಾಯ ಇದ್ದುದರಿಂದಲೇ 'ಗದ್ಯಂ ಕವೀನಾಂ ನಿಕಷಂವದಂತಿ' ಎಂಬ ಹೇಳಿಕೆಗೆ ಪ್ರಾಶಸ್ತ್ಯ ದೊರೆತಿರಬಹುದೆಂದು ಊಹಿಸಲವಕಾಶವಿದೆ (ಶ್ರೀ ದೇ. ಜ. ಗೌ: ಅಭಿನಂದನೆ) 'ಆಡುವ ಮಾತು ಬರೆಹಕ್ಕೆ ಬಂದರೆ ಆಗ ಅದು ಗದ್ಯ ಎನಿಸಿಕೊಳ್ಳುತ್ತದೆ.' (ಶ್ರೀ ಸೇಡಿಯಾಪು: ಶ್ರದ್ಧಾಂಜಲಿ) 'ಪ್ರಬಂಧ ಎಂದರೆ ಕಟ್ಟು, ವಿಷಯಗಳ ಬಂಧ, 'ಅನುಜ್ಝಿತಾರ್ಥ ಸಂಬಂಧಃ ಪ್ರಬಂಧಃ ಈ ಲಕ್ಷಣದಂತೆ ಪರಿನಿಡಿಯೂ ಹೊಂದಿಕೆಯೂ ಕೆಡದಂತೆ ಅಭಿಪ್ರಾಯಗಳನ್ನು ಮಂಡಿಸುವುದು ಪ್ರಬಂಧವೆನ್ನಿಸುತ್ತದೆ' (ಶ್ರೀಕಡೆಂಗೋಡ್ಲು: ಸಮರ್ಪಣೆ).

ಈ ಪ್ರಬಂಧಗಳ ಲಕ್ಷಣದಂತೆ, ಉದಾಹರಣೆಗಳಿಗೆ ನಾವು ಬೇರೆ ಬೇರೆಡೆ ಸುತ್ತುವರಿಯಬೇಕಾಗಿಲ್ಲ. ಶ್ರೀ ಕಡೆಂಗೋಡ್ಲು ಅವರ ನಾಲ್ಕಾರು ಪ್ರಬಂಧಗಳನ್ನೆ ನೋಡಿದರೆ ಉದಾಹರಣೆಯುಗಳೇ ಆಗಿವೆ; ಉದಯಭಾರತ ಪತ್ರಿಕೆಯಲ್ಲಿ 'ಕೆಲವು ವಿಚಾರಗಳು' ಎಂಬುದು "ಪಂಚಕಜ್ಜಾಯ"ದಲ್ಲಿ 'ಕನ್ನಡ ನುಡಿಯ ಹಿಂದು ಮುಂದು', 'ಸಂಭಾವನೆ'ಯಲ್ಲಿ ಶ್ರೀಕಂಠಯ್ಯನವರ ಹೆದ್ದಾರಿ' 'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ'ಯಲ್ಲಿ 'ಕನ್ನಡದ ತತ್ಸಮ ತದ್ಭವಗಳು', 'ಶ್ರದ್ಧಾಂಜಲಿ'ಯ 'ವಸ್ತುಕ ವರ್ಣಕಗಳು' ಇತ್ಯಾದಿ.

ಶ್ರೀಯುತರೆಂದ ಗದ್ಯ ಪ್ರಬಂಧದ ವಿಶಿಷ್ಟತೆ–ಉದ್ದೇಶಗಳ ಸಂಗ್ರಹವಿಲ್ಲಿ ಕಾಣುತ್ತದೆ: "ಪ್ರಬಂಧದ ಗುರಿ ವಿಮರ್ಶೆಯಾಗಿದೆ. ಅದು ವಿಧಿ ನಿಷೇಧಾತ್ಮಕ ರೂಪವಾಗಿ ಇರುವುದಿಲ್ಲ", "ಪ್ರಬಂಧವೆಂದರೆ ಅನೊಂದು ಕಲಾಕೃತಿ, ಪ್ರಬಂಧ ಲೇಖಕರೂ ಕವಿಗಳಂತೆ ಒಂದು ತರದ ಪ್ರತಿಭೆಯುಳ್ಳವರು".

ಇಂತಹ 'ಗಂಡು ನುಡಿ'ಗಳಿರುವ ಶ್ರೀಯುತರ ಗದ್ಯ–ಕಾವ್ಯ (ಪದ್ಯ) ಪ್ರಬಂಧಗಳು ಕನ್ನಡದಲ್ಲಿ ಉನ್ನತ ಪ್ರಕಾರದ ಸಾಹಿತ್ಯ ಸೃಷ್ಟಿಗಳು [ಸಾಹಿತ್ಯ ಯೋಗಿಯೆಂಬ ಸಂಕಲನದಲ್ಲಿ ಶ್ರೀಯುತರ ಹಲವು ಕೃತಿಗಳ ಬಗೆಗೆ ಹಲವರು ಬರೆದವು ಕಾಣುತ್ತವೆ.]

–ಶ್ರೀ ಕೆ. ವೆಂಕಟರಾಯಾಚಾರ್ಯ,
ಸುರತ್ಕಲ್ಲು.

ಮಕ್ಕಳು ಮತ್ತು "ಕಾಲದ ಹೊರೆಗಳು"

(ಏಳನೇ ಪುಟದಿಂದ)

ಶರೀರ ಚಿಕಿತ್ಸಕರ ಅಭಿಪ್ರಾಯ ಪ್ರಕಾರ, ಮೊದಲನೇ ವರ್ಷದ ವಿದ್ಯಾರ್ಥಿಗಳಲ್ಲಿ ಹಲವರಿಗೆ ಯಾವುದೇ ಗಂಭೀರ ಜಾಡ್ಯಗಳು ಇಲ್ಲದೇ ಇದ್ದರೂ ಸಹ ವ್ಯಾಸಂಗವು ಅವರಿಗೆ ಕಷ್ಟವಾಗುತ್ತಿರುತ್ತದೆ. ಪಾಠಕ್ಕೆ ಕೂರಲು ಅವರಿಗೆ ಕಷ್ಟವೆನಿಸುತ್ತದೆ. ಶಾಲಾ ಶಿಕ್ಷಣಕ್ಕೆ ಅಗತ್ಯವಾದುದೆಲ್ಲವನ್ನೂ ಪೂರೈಸಲು ಅವರು ಪ್ರಾಯಶಃ ಸಿದ್ಧರಾಗಿರುವುದಿಲ್ಲ. ಅವರು ಮಾನಸಿಕವಾಗಿ ಹಿಂದುಳಿದ ವಿದ್ಯಾರ್ಥಿಗಳೇನಲ್ಲ. ಅವರು 'ಕೆಲವೊಂದು ಕ್ರಿಯೆಗಳ ವಿಕಾಸದಲ್ಲಿ ತಾತ್ಕಾಲಿಕ ವಿಲಂಬ'ದ ಮಕ್ಕಳಾಗಿದ್ದಾರೆಂದು ತಜ್ಞರು ಹೇಳುತ್ತಾರೆ. ಇವರು ಒಮ್ಮೊಮ್ಮೆ ಅನುತ್ತೀರ್ಣರಾಗುತ್ತಾರೆ, ಒಮ್ಮೊಮ್ಮೆ ಒಳ್ಳೇ ಪ್ರಗತಿ ತೋರಿಸುತ್ತಾರೆ. ಆದರೆ ಅವರು ಆರೋಗ್ಯವನ್ನು ಕಳೆದುಕೊಂಡೇ ಉನ್ನತ ಗುಣಾಂಕಗಳನ್ನು ಪಡೆಯುವುದು. ಇಂಥ ಮಕ್ಕಳನ್ನು ಶಾಲೆಗೆ ಸಿದ್ಧಪಡಿಸುವ ವ್ಯವಸ್ಥೆಯೊಂದನ್ನು ರೂಪಿಸಲೇಬೇಕು ಎಂದು ಅಲ್ಲಿ ಓದಿದ ಪ್ರಬಂಧಗಳಲ್ಲೊಂದರಲ್ಲಿ ಹೇಳಿದುದು ನ್ಯಾಯವೇ ಆಗಿದೆ.

ಎಲ್ಲಾ ಬಗೆಯ ಮಕ್ಕಳೂ ಇದ್ದಾರೆ. ಇದನ್ನು ನೆನಪಿನಲ್ಲಿಟ್ಟುಕೊಂಡೇ ಒಂದೊಂದು ಮಗುವನ್ನೂ ಸರಿಯಾದ ರೀತಿಯಲ್ಲಿ ನೋಡಬೇಕು. ಅಧಿವೇಶನದಲ್ಲಿ ಮಾಡಲಾದ ಅನೇಕ ಭಾಷಣಗಳಲ್ಲಿ ಇದೇ ವಿಚಾರವನ್ನು ವ್ಯಕ್ತಪಡಿಸಲಾಯಿತು. ಸಾರಾಂಶವಾಗಿ ಇದೇನೋ ಸರಳ. ಆದರೆ ಕಾರ್ಯಗತಗೊಳಿಸುವುದು ಮಾತ್ರ ತೀರಾ ಕಷ್ಟ. ಕಾರ್ಯಗೊಳಿಸುವುದಂತೂ ಅತ್ಯಂತ ಅಗತ್ಯವೇ.

"ಮಕ್ಕಳ ಒಳಿತಿಗಾಗಿ ಅಧ್ಯಾಪಕ ಮತ್ತು ಶರೀರ ಚಿಕಿತ್ಸಕ ಇಬ್ಬರೂ ಒಟ್ಟಾಗಿ ಒಂದು ಭಾವನೆಯಿಂದ ತಾವು ಒಬ್ಬರಿಗೊಬ್ಬರು ಕಲಿಸಿಕೊಡಲು ಪ್ರಯತ್ನಿಸದೆ, ಮನಃಪೂರ್ವಕವಾಗಿಯೆ ಒಬ್ಬರಿಂದ ಇನ್ನೊಬ್ಬರು ಕಲಿತುಕೊಳ್ಳಲು ಪ್ರಯತ್ನಿಸುತ್ತ ಹಾಗೂ ತಾವು ಸಂಗ್ರಹಿಸಿದ ನಿರೀಕ್ಷಣೆಗಳನ್ನು ಪರೀಕ್ಷಿಸುತ್ತ ಕಾರ್ಯಮಾಡಬೇಕು"—ಇದು ಈಗ ಹೇಳಿದ ಮಾತಲ್ಲ, ಆದರೆ ನೂರು ವರ್ಷಗಳ ಹಿಂದೆ ಈ ಶತಮಾನದ ಹೊಸಲಲ್ಲಿ ಹೇಳಿದಂಥ ಮಾತು. ಆ ಕಾಲದಲ್ಲಿ ಈ ಮಾತುಗಳು ಬಹುತೇಕ ಕ್ರಾಂತಿಕಾರಿಯಾಗಿ ಕೇಳಿಸಿದುವು. ಮತ್ತು ಒಂದು ವಾದ ವಿವಾದವನ್ನೇ ಎಬ್ಬಿಸಿದುವು. ಶಾಲಾ ವ್ಯವಹಾರಗಳಲ್ಲಿ ವೈದ್ಯನೇಕೆ ತನ್ನ ಕೈ ಹಾಕಬೇಕು? ಔಷಧ ಸಹಾಯವಿಲ್ಲದೆ ಬೋಧನೆ ಮತ್ತು ಶಿಕ್ಷಣಗಳು ಸಾಧ್ಯವೆಂದು ಇಂದು ನಾವು ಕಲ್ಪಿಸುವುದಿಲ್ಲ ಕೂಡ.

●●

ಗೇಹ ರಾಜ್ಯದಲ್ಲಿ

(ನಾಲ್ಕನೇ ಪುಟದಿಂದ)

'ಅವರ ಇಷ್ಟದಂತೆ....'

'ಅವರವರ ಇಷ್ಟಾನಿಷ್ಟವೇನಿದ್ರೂ ದೇಶದ ಇಷ್ಟಾನಿಷ್ಟಗಳಿಗೆ ಆದ್ಯತೆ ಬೇಡವೆ?'

'ಇಲ್ಲಿ ಹೊಟ್ಟೆಗೆ ಬಟ್ಟೆಗೆ ಚಿಂತಿಸುತಿದ್ದವರು ಅಲ್ಲಿ ಸುಖವಾಗಿ ಬದುಕುವುದು ಸಾಧ್ಯವಾಗುವಾಗ....'

'ಅದೇನಿದ್ರೂ ಇದು ಸರಿಯಲ್ಲ. ಯುರೋಪಿನ ಕಾನ್ವೆಂಟುಗಳಿಗೆ ನಮ್ಮ ತರುಣಿಯರೇ ಏಕೆ ಬೇಕು? ಸರಕಾರ ಈ ದಿಸೆಯಲ್ಲಿ ಏನಾದರೂ ಕ್ರಮ ಅವಶ್ಯ ತೆಗೆದುಕೊಳ್ಳಬೇಕು. ನಮ್ಮ ಪ್ರಜೆಗಳನ್ನೇ ಸಾಕಲಾರದ ಸರಕಾರ ಸರಕಾರವೆ?'

'ಆಂಧ್ರ ಸರಕಾರ ತುಂಗಭದ್ರಾ ಜಲಾಶಯದಿಂದ ಮೂರುವರೆ ಸಾವಿರ ಕ್ಯೂಸೆಕ್ಸ್ ನೀರು ಕೊಟ್ಟು ಕೃಷ್ಣಾ ನದಿ ಮುಖದಲ್ಲಿ ಬಡೆನ ಜಲಾಭಾವದಿಂದ ಆಂಧ್ರೀಯರನ್ನು ಬದುಕಿಸ ಬೇಕೆಂದು ಮೊರೆಯಿಟ್ಟಿದೆಯಂತೆ....'

'ಯಾರನ್ನು, ಕರ್ನಾಟಕ ಸರಕಾರವನ್ನೆ?'

'ಮತ್ಯಾರನ್ನು?'

'ಏನಾಯ್ತು?'

'ಆಗೋದಿಲ್ಲಾಂತ ಖಂಡ ತುಂಡ ಉತ್ತರ ಬಂತಂತೆ....'

'ಅಯ್ಯೋ ಪಾಪವೆ!'

'ಅಲ್ವೆ, ತುಂಗಭದ್ರೆಯ ನೀರು ದಾನ ಮಾಡಿದರೆ ನಾವು ಕುಡಿಯೋದೇನನ್ನು?'

'ಇದ್ದದ್ದನ್ನಾದರೂ ಹಂಚಿ ಕುಡಿಯಬೇಕು...'

'ಅದೆಲ್ಲ ಬೇರೆಯವರಿಗೆ ಹೇಳೋಕೆ ಮಾತ್ರ....ಆಚರಣೆಗೆ ಆಗುವಾಗ ಸ್ವಾರ್ಥವೇ ಮೊದಲು....'

'ಹೇಗಿದ್ರೂ ನಾವೆಲ್ಲ ಒಂದೇ ದೇಶದ ಜನ....'

'ಅದೇ ಆಶ್ಚರ್ಯ....'

'ಯಾವುದು?'

'ಇ...ದು....'

—ಗೋರಾ

●●

ಎ. ಕೃಷ್ಣ ಶೆಟ್ಟರ ನಿಧನ

ಮೈಸೂರು ರಾಜ್ಯ ಕಿಸಾನ್ ಸಭೆಯ ಅಧ್ಯಕ್ಷರೂ, ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಾರ್ಟಿಯ ಮುಂದಾಳುಗಳೂ, ಮಾಜಿ ಶಾಸಕರೂ ಆದ ಕಾಮ್ರೇಡ್ ಶ್ರೀ ಎ. ಕೃಷ್ಣ ಶೆಟ್ಟರು ತಾ. 27 ರಂದು ಹೃದಯಾಘಾತದಿಂದ ನಿಧನರಾದರು. ಶ್ರೀ ಶೆಟ್ಟರು ಒಂದು ವಾರದಿಂದ ಸ್ವಲ್ಪ ಅನಾರೋಗ್ಯದಿಂದ ಇದ್ದು ಸರಕಾರೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಶ್ರೀ ಅಡಗುತ್ತು ಕೃಷ್ಣ ಶೆಟ್ಟರು ಓರ್ವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದವಲ್ಲದೆ ಮುಂದೆ ಕಾಂಗ್ರೆಸ್ ಪಕ್ಷವನ್ನೂ ಬಿಟ್ಟು ಕಮ್ಯೂನಿಸ್ಟ್ ಪಾರ್ಟಿಯನ್ನು ಸೇರಿ ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯ ಅಧ್ವರ್ಯುವಾಗಿದ್ದರು. 1962ರಿಂದ 67ರ ವರೆಗೆ ರಾಜ್ಯ ಅಸೆಂಬ್ಲಿಯ ಸದಸ್ಯರಾಗಿಯೂ ಉಲ್ಲಾಳ ಮೇಜರ್ ಪಂಚಾಯತ್ ಅಧ್ಯಕ್ಷರಾಗಿಯೂ ಜಿಲ್ಲಾ ಬೋರ್ಡ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ವಿಚಾರ—ಸರಣಿಗಳಿಗೆ ಹೆಸರಾದ ಹಾಗೂ ಸ್ನೇಹಶೀಲರಾದ ಶ್ರೀ ಶೆಟ್ಟರು ಎಲ್ಲ ಪಕ್ಷಗಳವರ ಪ್ರೀತ್ಯಾದರಗಳಿಸಿದ್ದರು. ಶ್ರೀ ಶೆಟ್ಟರು ಪತ್ನಿ ಓರ್ವ ಪುತ್ರ, ಮೂವರು ಪುತ್ರಿಯರನ್ನೂ ಅನೇಕ ಅಭಿಮಾನಿಗಳನ್ನು ಬಿಟ್ಟು ಅಗಲಿರುವರು.

ನವಯುಗ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿ

ಪ್ರೋತ್ಸಾಹಿಸಿರಿ.

Gram: VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಏಪ್ರಿಲ್ ೮ಕ್ಕೆ
ರಾಜ್ಯಸಭಾ ಚುನಾವಣೆ

ಎಪ್ರಿಲ್ ೮ರಂದು ಕರ್ನಾಟಕದ ವಿಧಾನಸಭಾ ಕ್ಷೇತ್ರದಿಂದ ರಾಜ್ಯಸಭೆಯ ೪ ಸ್ಥಾನಗಳಿಗೆ ದ್ವಿವಾರ್ಷಿಕ ಚುನಾವಣೆಗಳು ನಡೆಯಲಿರುವುವು. ಈ ನಾಲ್ಕು ಸ್ಥಾನಗಳಿಗೆ ಒಟ್ಟು ಐದು ಜನರು ಸ್ಪರ್ಧಿಸಿದ್ದಾರೆ. ಆರನೆಯವರಾಗಿ ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ರಾಮಕೃಷ್ಣ ಹೆಗ್ಗಡೆಯವರು ನಾಮಪತ್ರ ಸಲ್ಲಿಸಿದ್ದರೂ ಕೊನೆಯ ಗಳಿಗೆಯಲ್ಲಿ ಹಿಂತೆಗೆದು ಕೊಳ್ಳುವರು ಎನ್ನಲಾಗಿದೆ. ಈ ಅಭ್ಯರ್ಥಿಗಳಲ್ಲಿ ಕೇಂದ್ರದಲ್ಲಿ ಸಚಿವರಾಗುವರೆಂದು ಊಹಿಸಲಾದ ಶ್ರೀ ಟಿ. ಎ. ಪೈಯವರೂ ಒಬ್ಬರು. ಅವರು ಆಳುವ ಕಾಂಗ್ರೆಸ್‌ನ ಟಿಕೇಟು ಪಡೆದಿದ್ದಾರೆ. ಶ್ರೀಗಳಾದ ಹೆಚ್. ಎಸ್. ನರಸಯ್ಯ, ಮಕ್ಸೂದ್ ಅಲಿಖಾನ್ ಮತ್ತು ಎಂ. ಡಿ. ನಾರಾಯಣ ಇವರು ಆಳುವ ಕಾಂಗ್ರೆಸ್ಸಿನ ಇನ್ನಿತರ ಸ್ಪರ್ಧಿಗಳು.

ಸಂಸ್ಥಾ ಕಾಂಗ್ರೆಸ್ಸಿನಿಂದ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ ಸ್ಪರ್ಧಿಸಿದ್ದಾರೆ.

ರಾಜ್ಯದ ೨೧೬ ಶಾಸಕರಲ್ಲಿ ೧೬೫ ಆಳುವ ಕಾಂಗ್ರೆಸ್ಸಿಗರು ಮತ್ತು ಮೂವರು ಅವರ ಮಿತ್ರ ಪಕ್ಷೀಯರು(ಸಿ. ಪಿ. ಐ.) ಸಂಸ್ಥಾ ಕಾಂಗ್ರೆಸ್ಸಿಗರು ೨೪. ಸಮಾಜವಾದಿ ಮತ್ತು ಪಕ್ಷೇತರರಲ್ಲಿ ಕೆಲವರ ಬೆಂಬಲ ಸಂಸ್ಥಾ ಕಾಂಗ್ರೆಸ್ಸು ಪಡೆದರೆ, ಮಹಾರಾಷ್ಟ್ರ ಏಕೀಕರಣವಾದಿಗಳೂ ಮತ್ತು ಕೆಲವು ಪಕ್ಷೇತರರೂ ಆಳುವ ಕಾಂಗ್ರೆಸಿಗೆ ಬೆಂಬಲ ನೀಡುವ ನಿರೀಕ್ಷೆಯಿದೆ. ಹಾಗಿರುವಾಗ ಶ್ರೀ ವೀರೇಂದ್ರ ಪಾಟೀಲರು ಗೆಲ್ಲುವುದು ಕಷ್ಟವೇ. ಆದರೂ ೧೬೫ ಮಂದಿ ಆಳುವ ಕಾಂಗ್ರೆಸ್ ಶಾಸಕರಲ್ಲೇ ಕೆಲವು ಮತಗಳು ಶ್ರೀ ಪಾಟೀಲರಿಗೆ ಬಿದ್ದರೂ ಬೀಳಬಹುದು —ಇದು ನೀರಿನ ಮೇಲಿನ ಬರಹ!

ಶ್ರೀ ದೇವರಾಜ ಅರಸರ ಸಂಘಟನಾಶೀಲತೆಯನ್ನು ಇನ್ನೂ ಸಂದೇಹಿಸುವವರಿಗೆ ಈ ರಾಜ್ಯಸಭಾ ಚುನಾವಣೆಗಳೊಂದು ನಿಖರವಾದ ಉತ್ತರ ನೀಡುತ್ತವೆ.

ವಿರೋಧ ಪಕ್ಷಗಳ ಎಲ್ಲ ಮತಗಳನ್ನೂ ಶ್ರೀ ಪಾಟೀಲರು ಗಳಿಸಲು ಶಕ್ತರಾದರೆ, ಅವರು ಗೆಲ್ಲುವುದು ಸಾಧ್ಯವಾಗ ಬಹುದು- ಗೆಲ್ಲುವುದಕ್ಕೆ ಬೇಕಾಗುವ ಮತಗಳು ಸುಮಾರು ೪೪—೪೫.

●●

ಉಡುಪಿಯಲ್ಲಿ ರಾಮೋತ್ಸವ

ಉಡುಪಿಯಲ್ಲಿ ರಾಮನವಮಿ ಉತ್ಸವವು ಪರ್ಯಾಯ ಶ್ರೀ ಅದಮಾರು ಶ್ರೀಗಳವರ ನೇತೃತ್ವದಲ್ಲಿ ವಿವಿಧ ಸಾಂಸ್ಕೃತಿಕ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ತಾ. 17ರಿಂದ 24ರ ತನಕ ನಡೆಯಿತು.

ಈ ಸಂದರ್ಭದಲ್ಲಿ ಕವಿವರ್ಯ ದ. ರಾ. ಬೇಂದ್ರೆ, ಬನ್ನಂಜೆ ಗೋವಿಂದಾಚಾರ್ಯ, ಜಯತೀರ್ಥಾಚಾರ್, ಎಂ. ರಾಜಗೋಪಾಲಾಚಾರ್ಯ, ಎನ್. ಶ್ರೀಶ ಬಲ್ಲಾಳ ಮೊದಲಾದವರು ಭಾಗವಹಿಸಿ ಉಪನ್ಯಾಸಗಳನ್ನು ನೀಡಿದರು.

ರಾಮಾಯಣದ ಬಗ್ಗೆ ಪ್ರವಚನ ನಡೆದುದಲ್ಲದೆ ಪರ್ಯಾಯ ಶ್ರೀ ಪಾದರು ಶ್ರೀರಾಮಚರಿತೆ ವ್ಯಾಖ್ಯಾನವಿತ್ತರು. ಭೀಮನಕಟ್ಟೆ ಮಠದ ಶ್ರೀ ಪಾದರೂ ಆಗಮಿಸಿದ್ದು ಅನುಗ್ರಹ ಭಾಷಣ ಮಾಡಿದರು. ಕೊನೆಯ ಎರಡು ದಿನಗಳಲ್ಲಿ 'ವಾಲಿವಧೆ' ಮತ್ತು "ಶ್ರೀರಾಮ ಪಟ್ಟಾಭಿಷೇಕ" ಎಂಬ ಯಕ್ಷಗಾನಕೂಟವನ್ನೂ ಜರಗಿಸಲಾಗಿತ್ತು.

ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಉಮೇಶರಾಯರ ಉದ್ಯಮ ದ್ವಯಗಳ ಉದ್ಘಾಟನಾ ಸಮಾರಂಭ

ಶ್ರೀ ಮಂಜುನಾಥ ಟಯರ್ ರಿಟ್ರೇಡಿಂಗ್ ವರ್ಕ್ಸ್‌ನವರು ಮಂಗಳೂರಿನ ಕುಲಶೇಖರ ಚೆಕ್ ಪೋಸ್ಟಿನ ಬಳಿ ನಿರ್ಮಿಸಿದ ನೂತನ ಟಯರ್ ರಿಟ್ರೇಡಿಂಗ್ ಫೆಕ್ಟರಿಯನ್ನು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರೂ, ಮೊಸಾಯಿಕ್ ಇಂಡಸ್ಟ್ರೀಸ್ ಪ್ರೈ. ಲಿ. ಮಂಗಳೂರು ಇವರು ಅಲ್ಲೇ ಸಮೀಪದಲ್ಲಿ ರಚಿಸಿದ ಹೊಸ ಮೊಸಾಯಿಕ್ ಟೈಲ್ಸ್ ಫೆಕ್ಟರಿಯನ್ನು ಮೆ। ಪಿ. ವಿ. ಎಸ್. ಬೀಡಿಸ್, ಪ್ರೈ. ಲಿ. ಇವರ ಮೆನೇಜಿಂಗ್ ಡೈರೆಕ್ಟರ್ ಶ್ರೀ ಮಧುಸೂದನ ಡಿ. ಕುಶೆಯವರೂ ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಡಿ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಆರಂಭದಲ್ಲಿ ಮೆ। ಮೊಸಾಯಿಕ್ ಇಂಡಸ್ಟ್ರೀಸ್‌ನ ಸೇಲ್ಸ್ ಡೈರೆಕ್ಟರ್ ಶ್ರೀ ಟಿ. ಉಮೇಶ ರಾವ್‌ರು ಸ್ವಾಗತಿಸಿ, ಎರಡು ಉದ್ಯಮಗಳೂ ಬೆಳೆದು ಬಂದ ರೀತಿಯನ್ನು ವಿವರಿಸಿದರು.

ಶ್ರೀ ಕೆ ಕೆ. ಪೈಯವರು ಉದ್ಘಾಟಿಸಿ ಶ್ರೀ ಎಂ ಉಮೇಶರಾಯರ ಕಾರ್ಯಕ್ಕೆ ಸಂತೋಷ ವ್ಯಕ್ತಪಡಿಸಿ ಸಂಸ್ಥೆಗೆ ಶುಭಕೋರಿದರು. ಶ್ರೀ ಎಂ ಡಿ ಕುಶೆಯವರೂ ತಮ್ಮ ಸಂತೋಷ ವ್ಯಕ್ತಪಡಿಸಿ ಶ್ರೀ ಉಮೇಶರಾಯರಿಗೆ ಶುಭ ಹಾರೈಸಿದರು

ಈ ಎರಡೂ ಕಾರ್ಖಾನೆ ಕಟ್ಟಡಗಳನ್ನು ರಚಿಸಿದ ಶ್ರೀ ಕೋಟ ಪದ್ಮನಾಭಾಚಾರ್ಯರಿಗೆ ಸುವರ್ಣ ಪದಕ ನೀಡಿ ಗೌರವಿಸಲಾಯಿತು. ಸಭಿಕರಲ್ಲಿ ಶ್ರೀ ಬಿ ದಾಮೋದರ ಪ್ರಭು, ಬಿ. ವಿ. ಬಾಳಿಗಾ ಮತ್ತು ಎಂ. ಜಿ. ಕುಡ್ವಾರು ಮಾತಾಡಿ ಶ್ರೀ ರಾಯರಿಗೆ ಉಜ್ವಲ ಭವಿಷ್ಯ ಕೋರಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ನಮ್ಮ ಕ್ಷೇತ್ರದ ಸ್ವಾಮಿಯ ಹೆಸರಿನಲ್ಲಿ ಶ್ರೀ ರಾಯರು ಸ್ವಂತ ದುಡಿಮೆಯಿಂದ ಹಾಗೂ ಮಾಡಿದ ಶ್ರದ್ಧಾ ಪೂರ್ವಕ ಕೆಲಸದಿಂದ ಈ ಎರಡು ದೊಡ್ಡ ಉದ್ದಿಮೆಗಳು ಬೆಳೆದು ಬಂದಿರುವುದು ಸಂತೋಷದ ವಿಷಯವೆಂದು ಹೇಳಿ ಶ್ರೀಯವರಿಗೆ ಶ್ರೇಯಸ್ಸು ದೊರೆಯಲೆಂದು ಹಾರೈಸಿದರು.

ಕೊನೆಯಲ್ಲಿ ಮೊಸಾಯಿಕ್ ಇಂಡಸ್ಟ್ರೀಸ್‌ನ ಡೈರೆಕ್ಟರ್ ಶ್ರೀ ಯಶವಂತ ನಾಯಕರು ಧನ್ಯವಾದ ಅರ್ಪಿಸಿದರು.

ಉಪೇಂದ್ರ ಶ್ರೀನಿವಾಸ ನಾಯಕರ ನಿಧನ

ಉಡುಪಿಯ ಹಿರಿಯ ವರ್ಚಸ್ವೀ ವ್ಯಕ್ತಿ ಶ್ರೀ ಯು. ಎಸ್. ನಾಯಕರು ತಾ. 2ರಂದು ತನ್ನ 75ನೇ ವಯಸ್ಸಿನಲ್ಲಿ ನಿಧನರಾದರು.

ಪ್ರಸಿದ್ಧ ಕಟಪಾಡಿ ಶಾಂಗಾಳ ನಾಯಕ ಮನೆತನದವರಾದ ಶ್ರೀ ಉಪೇಂದ್ರ ಶ್ರೀನಿವಾಸ ನಾಯಕರು ಜನಪ್ರಿಯ ವ್ಯಕ್ತಿಯಾಗಿದ್ದರಲ್ಲದೆ ಉಡುಪಿಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರೂ ಸಾರ್ವಜನಿಕ ರಂಗದಲ್ಲಿ ನಾನಾ ಮುಖ ಸೇವೆ ಸಲ್ಲಿಸಿದವರೂ ಆಗಿದ್ದರು ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆವಾಸ ಅನುಭವಿಸಿದ್ದರು.

ಉತ್ತಮ ಸಾಮಾಜಿಕ ಕಾರ್ಯಕರ್ತರಾಗಿದ್ದ ಶ್ರೀ ನಾಯಕರು ಹಲವಾರು ವರ್ಷ ಉಡುಪಿ ನಗರಸಭಾಧ್ಯಕ್ಷರಾಗಿಯೂ ದ. ಕ. ಜಿಲ್ಲಾ ಬೋರ್ಡು ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಕಟಪಾಡಿಯ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿಯೂ ಹಲವು ಗಣನೀಯ ಕಾಲ ಸೇವೆ ಸಲ್ಲಿಸಿದ್ದರು. ಉಡುಪಿಯ ಆಯುರ್ವೇದ ಕಾಲೇಜು ಸ್ಥಾಪನೆ ಮತ್ತದರ ಪ್ರಗತಿಗೆ ಕಾರಣಪುರುಷರಾಗಿದ್ದರು. ಐದು ವರ್ಷ ಕಾಲ ಮೈಸೂರು ಸರಕಾರದ ಶಾಸಕರಾಗಿದ್ದರು. 'ರಾಯಭಾರಿ' ಪತ್ರಿಕೆಯ ಸ್ಥಾಪಕರು ಶ್ರೀ ನಾಯಕರೇ. ದ. ಕ. ದ ಪ್ರಮುಖ ಸಾರಿಗೆ ಸಂಸ್ಥೆಗಳಲ್ಲೊಂದಾದ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಗೆ ಮೆನೇಜಿಂಗ್ ಡೈರೆಕ್ಟರ್ ಆಗಿ ಅದರ ಪ್ರಗತಿಗೆ ದುಡಿದಿದ್ದರಲ್ಲದೆ ಹನುಮಾನ್ ಟೊಬಾಕೋ, ಗಜಾನನ ಮೆಟಲ್ಸ್, ಸಾಮಿಲ್ ಮೊದಲಾದ ಹಲವು ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿದ್ದರು. ದಿವಂಗತರು ಛಲದಂಕಮಲ್ಲರಾಗಿಯೂ ಹಿಡಿದ ಕಾರ್ಯವನ್ನು ಬಿಡದೆ ನೆರವೇರಿಸಿಯೇ ತೀರುವ ಕಾರ್ಯಪಟುವಾಗಿಯೂ ಇದ್ದರು. ಶ್ರೀಯುತರು ಪತ್ನಿ ಮತ್ತು ಮೂವರು ಪುತ್ರರು ಹಾಗೂ ಅಸಂಖ್ಯ ಅಭಿಮಾನಿಗಳನ್ನು ಬಿಟ್ಟು ಅಗಲಿರುವರು.

ಕಾಸರಗೋಡು ಕನ್ನಡ ಸಮ್ಮೇಳನಕ್ಕೆ ಪೂರ್ವ ಸಿದ್ಧತೆ

ಕಾಸರಗೋಡಿನಲ್ಲಿ ಮೇ ತಿಂಗಳ 6 ಮತ್ತು 7ರಂದು ಜರಗಲಿರುವ ಕಾಸರಗೋಡು ಕನ್ನಡಿಗರ ಸಮ್ಮೇಳನದ ಪೂರ್ವ ಸಿದ್ಧತೆಗಳಿಗಾಗಿ ಸ್ವಾಗತ ಸಮಿತಿಯವರು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದಾರೆ.

ಸಮ್ಮೇಳನವನ್ನು ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಲಿರುವರು. ಸಮ್ಮೇಳನದ ಅಧ್ಯಕ್ಷತೆ ವಹಿಸುವಂತೆ ಮೈಸೂರು ವಿ. ವಿ. ನಿಲಯದ ಉಪಕುಲಪತಿ ಶ್ರೀ ಜವರೇ ಗೌಡರನ್ನು ಕೇಳಿಕೊಳ್ಳುವುದೆಂದು ನಿರ್ಣಯಿಸಿದಲ್ಲದೆ ಬೇರೆ ಬೇರೆ ಸಮ್ಮೇಳನಗಳಿಗೆ ಅಧ್ಯಕ್ಷರುಗಳಾಗಿ ಡಾ| ಟಿ. ಎಂ. ಎ ಪೈ, ಡಾ। ಶಿವರಾಮ ಕಾರಂತ, ಅನುಪಮಾ ನಿರಂಜನ, ಆನಂದಿ ಸದಾಶಿವ ರಾವ್, ಡಾ| ಅನಂತಮೂರ್ತಿ, ಹಾ. ಮಾ. ನಾಯಕ್, ಕೆ. ಎಸ್. ನರಸಿಂಹಸ್ವಾಮಿ, ಪರಮೇಶ್ವರ ಭಟ್ ಮೊದಲಾದವರನ್ನು ಆಮಂತ್ರಿಸಲು ನಿಶ್ಚಯಿಸಲಾಯಿತು ಇದೇ ಸಂದರ್ಭದಲ್ಲಿ 'ಪಯಸ್ವಿನಿ' ಎಂಬ ಹೆಸರಿನ ಸ್ಮರಣ ಸಂಚಿಕೆಯೊಂದನ್ನು ಬಿಡುಗಡೆ ಮಾಡಲಿದೆ. ಸಮ್ಮೇಳನ ಮಂಟಪಕ್ಕೆ ಪಾರ್ತಿ ಸುಬ್ಬ ಮಂಟಪ ಎಂದು ಹೆಸರಿಸಲು ನಿರ್ಣಯಿಸಲಾಯಿತು.

ಈ ಸಮ್ಮೇಳನದ ಅಂಗವಾಗಿ ಜರಗಲಿರುವ ಮಹಿಳಾ ಸಮ್ಮೇಳನದ ಸಂಚಾಲಕರಾಗಿ ಡಾ। ಲಲಿತಾ ಎಸ್. ಎಸ್ ಎನ್. ಭಟ್ಟರನ್ನು ಆರಿಸಲಾಗಿದೆ.

ಉಡುಪಿ ರೋಟರಿ ಸಭೆ

ಉಡುಪಿ ರೋಟರಿ ಕ್ಲಬ್‌ನ ಸಭೆಯು ತಾ. 28–3–72ರಂದು ಅಧ್ಯಕ್ಷ ಡಾ। ಕೆ. ಮೋಹನದಾಸ ಪೈಯವರ ಅಧ್ಯಕ್ಷತೆಯಲ್ಲಿ ಜರಗಿ ಕ್ಲಬ್ಬಿನ ನೂತನ ಅಧಿಕಾರಿಗಳಾಗಿ ಈ ಕೆಳಗಿನವರು ಆರಿಸಲ್ಪಟ್ಟಿರುವರು. ಡಾ। ಎಚ್. ಶಾಂತಾರಾಮ್ (ಅಧ್ಯಕ್ಷ) ಶ್ರೀ ಪಿ. ವೆಂಕಟರಮಣ ಭಟ್, ಕು. ಶಿ. ಹರಿದಾಸ ಭಟ್ (ಉಪಾಧ್ಯಕ್ಷರುಗಳು), ಕೆ. ಎಂ. ಕಾರಂತ (ಕಾರ್ಯದರ್ಶಿ), ಕೆ. ಸಿ. ಆಚಾರ್ಯ (ಜತೆಕಾರ್ಯದರ್ಶಿ), ಬಿ ಆರ್. ಭಟ್ (ಕೋಶಾಧಿಕಾರಿ), ಡಾ। ಕೆ. ಮೋಹನದಾಸ್ ಪೈ, ಎಚ್. ಡಿ. ಎಸ್. ಪೈ, ಜಿ. ಆರ್. ಪೈ, ಪಿ ಎಸ್. ಆಚಾರ್ಯ, ಬೆನ್ ಸೋನ್ಸ್, ವಿ. ಚಂದ್ರಶೇಖರ್, ವಿ ಕೆ. ಶ್ರೀನಿವಾಸ್ ಮತ್ತು ಡಾ। ಟಿ. ರಾಮದಾಸ ಪೈ (ಡೈರೆಕ್ಟರುಗಳು), ಕೆ. ಸತೀಶ ಶೆಟ್ಟಿ (ಸಾರ್ಜಂಟ್ ಎಟ್ ಆರ್ಮ್ಸ್)

ಸಫಲ ಕೃಷಿ ವಿಚಾರ ಗೋಷ್ಠಿ

ಸಿಂಡಿಕೇಟ್ ಎಗ್ರಿಕಲ್ಚರಲ್ ಫೌಂಡೇಷನಿನವರು ತಾ. 2ರಂದು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ| ಕೆ. ಸಿ. ನಾಯಕರ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ಏರ್ಪಡಿಸಿದ 'ಕೃಷಿ ಉತ್ಪಾದನಾ ವೆಚ್ಚದಲ್ಲಿ ಮಿತವ್ಯಯ' ಎಂಬ ವಿಚಾರ ಗೋಷ್ಠಿಯನ್ನು ದೆಹಲಿಯ ರಾಷ್ಟ್ರೀಯ ಕೃಷಿ ಆಯೋಗದ ಸದಸ್ಯ ಡಾ| ಎಚ್. ಆರ್. ಅರಕೇರಿಯವರು ಉದ್ಘಾಟಿಸುತ್ತಾ ಕೃಷಿ ಉತ್ಪಾದನೆ ಹೆಚ್ಚಿಸುವ, ವೆಚ್ಚ ಕಡಿಮೆಗೊಳಿಸುವ ಕುರಿತು ಕೆಲವೊಂದು ಸೂಚನೆಗಳನ್ನಿತ್ತರು.

ಆರಂಭದಲ್ಲಿ ಫೌಂಡೇಷನಿನ ಅಧ್ಯಕ್ಷರೂ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನರೂ ಆದ ಶ್ರೀ ಕೆ ಕೆ ಪೈಗಳು ಸ್ವಾಗತಿಸಿದರು. ಶ್ರೀ ಕೆ. ವಿ ಬೆಳಿರಾಯರು ಗೋಷ್ಠಿಯ ವಿವರಣೆಯನ್ನಿತ್ತರು.

ಡಾ। ಎಚ್ ಎಲ್. ಕುಲಕರ್ಣಿ (ರಾಜ್ಯ ಕೃಷಿ ಇಲಾಖೆಯ ನಿರ್ದೇಶಕ) ಶ್ರೀ ಬಿ. ಎಸ್ ವರದರಾಜನ್ (ವ್ಯವಸಾಯ ಇಲಾಖಾ ಜತೆ ಡೈರೆಕ್ಟರ್) ಡಾ. ಕೆ ಕೃಷ್ಣಮೂರ್ತಿ(ಧಾರವಾಡ ಕೃಷಿ ಕಾಲೇಜ್ ಪ್ರಾಧ್ಯಾಪಕ) ಡಾ। ವಿ. ಎಸ್. ಪಾಟೀಲ್ (ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ) ಡಾ। ಎಲ್. ಸಿ. ಸೋನ್ಸ್ ಇವರು ವಿಚಾರ ಗೋಷ್ಠಿಯಲ್ಲಿ ಪ್ರಬಂಧಗಳನ್ನು ಓದಿದರು.

ಅಧ್ಯಕ್ಷ ಡಾ| ಕೆ. ಸಿ. ನಾಯಕರು ತಮ್ಮ ಭಾಷಣದಲ್ಲಿ ಆಹಾರ ಸಮಸ್ಯೆ ನೀಗಬೇಕಾದರೆ ಎಲ್ಲರೂ ಕೂಡಿ ಸಹಕರಿಸಿ ನಡೆಯ ಬೇಕೆಂದೂ ರೈತರು ಶ್ರದ್ಧಾ ಪೂರ್ವಕ ಅಹರ್ನಿಶಿ ದುಡಿಯಬೇಕೆಂದೂ, ಸದಾ ಕೃಷಿಯ ಕುರಿತು ಚಿಂತಿಸಬೇಕೆಂದೂ ಮನಂಬಾಗಿ ಹೇಳಿದರು.

ಫೌಂಡೇಷನ್ ಕಾರ್ಯದರ್ಶಿ ಶ್ರೀ ಕೆ. ಎಂ. ಉಡುಪರು ಕೃತಜ್ಞತೆಗಳನ್ನರ್ಪಿಸಿದರು.

ಮುಗಿದಾಗ

ಮುಗಿಯಿತೆನ್ನಯ ಮಸಿಯ ಕುಡಿಕೆ
ಯೊಂದು
ಮಲೆಯ ಮಸ್ಲಿಗೆ ಕಂಪನಿಳಿಸಲೆಂದು.
ಕಳೆದು ಹೋದುವು ಬಾಳ ದಿನಗಳಲ್ಲಿ
ಬಡವಾಯಿತೀ ತನುವು ದುಡಿಮೆಯಲ್ಲಿ!

ಎಲ್ಲ ಮುಗಿಯಿತು ಇಂದು ಬರೆದು
ಬರೆದು
ಏನ ಬರೆಯಲಿ ನಾಳೆ ತಲೆಯಕೆರೆದು?
ಬರೆದು ಮುಗಿಸಿದರಷ್ಟು ಇನ್ನಷ್ಟು
ಇಹುದಿಲ್ಲಿ
ಕವನ ಕೊರೆಯುವ ಕರ್ಮ ಇನ್ನೇತಕೆ?
ಕವಿಯೊಂದ ಬಗೆದೊಡನೆ ಲೋಕ
ವೆರಡೆಣಿಸುವುದು
ತಿರುಳೊಂದು ಎರಡರಲಿ ಬರದೇತಕೆ?

ಅಕ್ಷರಕ್ಷರಗಳಲಿ ಹೊಸ ಜತನ
ಮೂಡುತ್ತ
ಕವಿಕುಂಚದಾ ನೆಳಲು ಪಸರಿ ನಿಂಲಿ.
ಬೆಸೆದಿರುವ ಹೃದಯವಿದು ಉತ್ತರದ
ಮಲೆಗಳಲಿ
ಹೊಸೆದು ಕಂಡಿಹ ಬದುಕು ಕಲೆಯ
ಗೆಲಲಿ!

ಕವನದಿಂದಲಿ ಕವನ ಶರಧಿಯೇ ಚಿಮ್ಮುತ್ತ
ಜ್ಞಾನ ದೇಗುಲಗಳಲಿ ಬೆಳಕ ಕಂಡು.
ಹೃದಯ ನಿರ್ಮಲವಾಗಿ ನವರಸ
ಗಳೊಂದೊಂದೆ
ಹರಿಯುರೆಲ್ಲರ ಮನಸಿನಾಳದಲ್ಲಿ!
ಕವನ ಸುಮಗಳ ಕಂಪು ಹರಡುತಿರಲಿ!
ಕಾವ್ಯ ಕಾವೇರಿ ತಾ ಹರಿದು ಬರಲಿ!

—ಅನಂತ; ಶಾಂತಿಸದನ.

ನೋಟೀಸು

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

P. & Sc. 3/72.

1. ರತ್ನಾಕರ ಶೆಣೈ-K. V. ಶೆಣೈಯವರ ಮಗ
2. ಶೈಲಾ 3. ವಿಶ್ವಾಸ–ರತ್ನಾಕರ ಶೆಣೈಯವರ ಮ್ಯೂನರ್ ಮಕ್ಕಳು ಗಾರ್ಡಿಯನ್ ತಂದೆ 1ನೇ ಅರ್ಜಿದಾರ, ಪುತ್ತೂರು ಕಸಬೆಯಲ್ಲಿರುವವರು.
—ಅರ್ಜಿದಾರರು.

ಸಮಸ್ತ ಜನರಿಗೆ ಕೋರ್ಟು ಮುಖಾಂತರ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ತಾ. 16–6–71ರಲ್ಲು ಮೃತ ಪಟ್ಟ 1ನೇ ಅರ್ಜಿದಾರನ ಹೆಂಡತಿ, 2, 3ನೇ ಅರ್ಜಿದಾರರ ತಾಯಿ ಕೆ. ಶಾಂತಿ ಆರ್. ಶೆಣೈಯವರಿಗೆ ಪಿಯರ್ಲೆಸ್ಸ್ ಇಂಡಿಯಾ ಲಿಮಿಟೆಡ್, ಮಂಗಳೂರು ನಲ್ಲಿ ಇರುವ Sixty Equity Shares of Rs. 10/- each, Shares certificate No. 1764ನ್ನು 1ನೇ ಅರ್ಜಿದಾರನ ಹೆಸರಲ್ಲಿ ಅರ್ಜಿದಾರರಿಗೆ ವಾರೀಸು ಹಕ್ಕಿನಲ್ಲಿ ಪರಾಬಾರೆ ಪಡೆಯಲು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಮಾಡಿದ ಮೇಲಿನ ಅರ್ಜಿಯನ್ನು ತಾ 15–4–72ಕ್ಕೆ ಇಟ್ಟಿರುತ್ತದೆಂತ ಸಮಸ್ತ ಜನರಿಗೆ ಈ ಮೂಲಕ ತಿಳಿಸಿಯದೆ. ಆಕ್ಷೇಪ ಉಳ್ಳವರು ಸದ್ರಿ ದಿನಸ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಉಪಪಡಿಸತಕ್ಕದ್ದು.

Sd/- M. Rammohan Rao
Advocate for Petitioners.

Puttur. 2-4-72.

(ಹಿಂದಿನ ಪುಟದಿಂದ)

ಮನುಷ್ಯ ದೇಹವೊಂದು ಆತ ಕುಳಿತ ಕುದುರೆಯ ಹಿಂದು ತೋರಿ ಯುತ್ತಿತ್ತು. ಅದನ್ನು ಪಹರೆಯವರು ಕಂಡರು. ಧರಿಸಿದ್ದ ವೇಷಭೂಷಣ ಗಳಿಂದ ಅದು ಯೋಧನೊಬ್ಬನ ಶರೀರವೆಂಬುದನ್ನು ತರ್ಕಿಸಿದರು. ಅದ ರಾಚೆಗೆ ಅವರ ಕುತೂಹಲ ಕೆರಳಲಿಲ್ಲ. ಆದ್ದರಿಂದ ಅದು ಯಾರದೆಂಬುದು ತಿಳಿಯಲಿಲ್ಲ.

ರಕ್ತ ಸಿಕ್ತವಾದ ಮುಖ. ಹರಿದ ರಕ್ತ ಅಲ್ಲಲ್ಲ ಹೆಪ್ಪುಗಟ್ಟಿತ್ತು. ಮುಖ ವಿಕಾರವಾಗಿತ್ತು. ಗುರುತು ಹತ್ತುವಂತೆಯೂ ಇರಲಿಲ್ಲ. ರುದ್ರ ಭೀಕರ ದೃಶ್ಯ. ನೋಡಿದರೆ ಮೈ ಥರ, ಥರ ನಡುಗುವಂತಿತ್ತು.

ಸಂಶಯಿತರಾದ ಬಿಚ್ಚುಗತ್ತಿಯ ಕಾಪಿನ ಭಟರು ಪ್ರವೇಶಕ್ಕೆ ಆಸ್ಪದ ಕೊಡಲಿಲ್ಲ. ಅರಿಕೇಸರಿ ವಿಮಂಚಿತನಾದ. ತಾನು ಹೊತ್ತು ತಂದುದು ತನ್ನ ಹಗೆ ಗೋವಿಂದನ ದೇಹ ಎಂಬುದನ್ನು ಆತ ತಿಳಿಯ.

ಆಪತ್ತಿಗೊಳಗಾದವನ ಪ್ರಾಣ ಸಂರಕ್ಷಣೆ ಮಾಡುವುದು ಅವನ ಉದ್ದಿಶ್ಯ.

ರಾಜಕುಮಾರಿ ಅಂದು ತನ್ನೊಡನಿರದಿದ್ದರೆ ಒಳ್ಳೆಯದಿತ್ತು ಎಂದ ನಿಸಿತು. ಆಕೆ ಇಲ್ಲದಿದ್ದರೆ ಆತ ನೇರವಾಗಿ ಗಾಯಾಳುವನ್ನು ತನ್ನ ನಿವಾಸ ಕ್ಕೊಯ್ಯುತ್ತಿದ್ದ. ಇಷ್ಟರೊಳಗಾಗಿ ಮನೆ ಸೇರಿ, ಆ ಅನಾಥನನ್ನು ಮೆತ್ತೆಯ ಮೇಲೆ ಮಲಗಿಸಿ, ಶೈತ್ಯೋಪಚಾರದ ಸಿದ್ಧತೆ ನಡೆಸುತಿದ್ದ. ಆದರೆ ಈಗ–?

ಆತ ಅಂಗರಂಗದಲ್ಲೆ ತಳಮಳಿಸಿದ.

ರಾಜಕುಮಾರಿಯನ್ನು ಆ ಮಾಸಲು ಕತ್ತಲಲ್ಲಿ—ಮನೆ ಮನೆಯೂ ರಣಾಂಗಣವಾಗಿದ್ದ ಹೊತ್ತಿನಲ್ಲಿ—ಒಂಟಿಯಾಗಿ ಕಳುಹಿಸುವುದು ತನ್ನ ಸಂಪನ್ನತೆಗೆ ಸರಿಬಾರದ ವಿಚಾರವಿತ್ತು. ಈ ಇಕ್ಕಟ್ಟಿನಲ್ಲಿ ಸಿಲುಕಿದ ಆತ ಕುದುರೆಯನ್ನು ನೇರವಾಗಿ ರಾಜವಾಡೆಗೆ ಓಡಿಸಿದ.

ಕಾದಿದ್ದ ಅಪಾಯ ಅಲ್ಲಿಯ ತನಕವೂ ಅವನ ಸ್ಮರಣೆಗೆ ಬರಲಿಲ್ಲ. ಆತ ಕುದುರೆಯನ್ನು ತನ್ನ ಮನೆಯತ್ತ ತಿರುಗಿಸಿದ. ಅಷ್ಟರಲ್ಲಿ ಲೋಕಾ ಹಾಜರಾದಳು. ಅರಿಕೇಸರಿ ಮನಸ್ಸು ಬದಲಾಯಿಸಿದ್ದನ್ನು ಕಂಡು ಚಕಿತೆ ಯಾದ ಆಕೆ 'ಅಷ್ಟರಲ್ಲೇ ಹೊರಡುವ ಅವಸರವೇನೋ? ನಿಮ್ಮಷ್ಟು ವೇಗ ವಾಗಿ ನಾನು ಸವಾರಿ ಮಾಡಲಾರೆ. ನನ್ನನ್ನು ಹಿಂದುಳುಹಿ ಬಂದಿರಲ್ಲ, ನನ್ನ ಗತಿ? ಆದನ್ನು ಮರೆತಿರೇನೋ?'

'ದೇವೀ ಇದು ನಿಮ್ಮ ಅಗ್ರಜನ ಅರಮನೆ. ನಮಗೆ ಪವೇಶ ಸಿಗು ವುದು ಪ್ರಯಾಸ. ಸಮಯ ಕಳೆದರೆ ಈತನ ಸ್ಥಿತಿ ಏನಾದೀತೋ? ಆ ಅನುಮಾನ ಬಂದು ಕುದುರೆಯನ್ನು ತಿರುಗಿಸಿದೆ. ನಿನ್ನ ಬಗ್ಗೆ ಅವಜ್ಞೆ ಎಂದು ತಿಳಿಯಲಾಗದು'

'ಅವನ ಸೇವೆಗೆ ಸಿದ್ಧಳಾದವಳು ನಾನು. ಅವನು ಯಾರೇ ಇರಲಿ. ಇಂದು ನಮ್ಮ ಅತಿಥಿ ಮೊದಲು ಅವನನ್ನು ಒಳಕ್ಕೊಯ್ಯುವ. ಆ ಮೇಲೆ ಎಲ್ಲದರ ಪರಾಮರ್ಶೆ. ಹೀಗೆ ನುಡಿದು ಆಕೆ ಕುದುರೆಯನ್ನು ಮುನ್ನೂ ಕಿದಳು.

ಪಹರೆಯವರು ಅವಳನ್ನೂ ತಡೆದರು.

ಪುರುಷ ವೇಷದಲ್ಲಿದ್ದ ಅವಳನ್ನು ಪಹರೆಯವರು ಗುರುತಿಸದಾ ದರು. ಆಕೆ ಸಿಡಿಮಿಡಿಗೊಂಡಳು. ಕಿಡಿಕಿಡಿಯಾದಳು.

"ನಾನು ಲೋಕಾಂಬಿಕೆ ಆಜ್ಞೆ ಮಾಡುತಿದ್ದೇನೆ. ದೂರ ಸರಿಯಿರಿ" ಆಕೆ ದಟ್ಟಿಸಿ ನುಡಿದಳು.

ಎತ್ತಿದ ಕತ್ತಿಗಳು ಹಿಂದಕ್ಕೆ ಸರಿದವು. ಪಹರೆಯವರು ಬಗ್ಗಿ ನಮು ಸ್ಕರಿಸಿ ಅವರಿಬ್ಬರಿಗೆ ದಾರಿಮಾಡಿ ಕೊಟ್ಟರು.

ಕುದುರೆಗಳೆರಡೂ ಒಳಾಂಗಣ ಪ್ರವೇಶಿಸಿದುವು.

ಆಕೆಯೇ ಮೊದಲು ಕುದುರೆಯಿಂದಿಳಿದಳು. ಅರಿಕೇಸರಿ ಅವಳನ್ನು ಅನುಸರಿಸಿದ ನಿಶ್ಚೇಷ್ಟಿತನಾಗಿ ಬಿದ್ದಿದ್ದ ಗೋವಿಂದನನ್ನು ಅರಿಕೇಸರಿ ಹೆಗಲ ಮೇಲಿರಿಸಿಕೊಂಡು ಅವಳನ್ನು ಹಿಂಬಾಲಿಸಿದ.

ಆಕೆ ಪಶ್ಚಿಮ ಭಾಗದಲ್ಲಿದ್ದ ಒಂದು ಸುಂದರ ಸೌಧದತ್ತ ನಡೆದಳು. ಸೌಧದ ಮುಂಭಾಗದ ಜಗಲಿಯ ಪಾರ್ಶ್ವದಲ್ಲಿದ್ದ ಮೆಟ್ಟಲುಗಳನ್ನೇರಿ ಆಕೆ ಮೊದಲನೆಯ ಅಂತಸ್ತಿಗೆ ಬಂದಳು. ಅಲ್ಲಿಂದ ದಕ್ಷಿಣಕ್ಕೆ ತಿರುಗಿದಳು. ಹತ್ತು ಹೆಜ್ಜೆ ಹಾಗೇ ಮುಂದುವರಿದು ಕೊಟಡಿಯೊಂದರ ಮುಂದು ನಿಂತು ಮೃದುವಾಗಿ ಕದ ತಟ್ಟಿದಳು.

ಅರಿಕೇಸರಿ ಹೊತ್ತಿದ್ದ ಹೊರೆಯನ್ನು ಕೆಳಗಿಳಿಸಿರಲಿಲ್ಲ.

ಆತ ಅವಳ ಹಿಂಬದಿಯಲ್ಲಿ ನಿಂತಿದ್ದ.

'ಯಾರು'

'ನಾನು'

'ನಾನು ಅಂದರೆ'

ಇದು ಒಳಗಿನಿಂದ ಬಂದ ಪ್ರಶ್ನೆ.

'ನಾನು! ಲೋಕಾ ಅಮ್ಮ'

ಇದು ಆಕೆ ಕೊಟ್ಟ ವಿವರದ ಉತ್ತರ.

ಮೆಲ್ಲನೆ ಕದ ತೆರೆಯಿತು.

ದೀಪದ ಮಂದ ಪ್ರಕಾಶ ಲೋಕಾಂಬಿಕೆಯ ಮುಖದ ಮೇಲೆ ಬಿದ್ದಿತು.

ಆದರ ಬೆಳಕಿನಲ್ಲಿ ಪುರುಷ ವೇಶ ಧರಿಸಿ ನಿಂತಿದ್ದ ಲೋಕಾಂಬಿಕೆ ಯನ್ನು ನೋಡಿ ರಾಣಿ ಮೇನಕಾ ದೇವಿ ಆಶ್ಚರ್ಯದಿಂದ 'ಏನೇ ಲೋಕಾ; ನಿನ್ನ ಅವತಾರ' ಎಂದಿಷ್ಟೇ ನುಡಿದಳು.

ಬಾಗಿಲಿನ್ನೂ ಅರ್ಧ ಮುಚ್ಚಿತ್ತು.

ತೆರೆದರ್ಧದಷ್ಟಕ್ಕೂ ಅಡ್ಡವಾಗಿ ಲೋಕಾಂಬಿಕೆ ನಿಂತಿದ್ದಳು.

ಮೇನಕಾ ದೇವಿಗೆ ಅವಳ ಹಿಂಬದಿಯಲ್ಲಿ ನಿಂತಿದ್ದ ವ್ಯಕ್ತಿ ಆದು ಕಾರಣ ಕಾಣಲಿಲ್ಲ. ಆಕೆ ಮಾತು ಮುಂದುವರಿಸಿದಳು 'ನೀನೀಗ ಬಿಟ್ಟು ಕಚ್ಚಲಾರದ ಪುಟ್ಟ ಮಗುವಲ್ಲ, ಆಗಲೇ ಬೆಳೆದು ದೊಡ್ಡವಳಾದೆ. ಹೀಗೆ ಒಂಟಿಯಾಗಿ ತಿಲೆಯ ಬಾರದು. ಅದೂ ಕತ್ತಲಲ್ಲಿ ಜನರೇನು ಅಂದಾರು? ಅದನ್ನೂ ಯೋಚಿಸ ಬೇಡವೇ? ಅವನೋ —ಕೈಗೇ ಸಿಗುವುದಿಲ್ಲ. ಅವನಿಗೆ ಸಿಂಹಾಸನದ ಗೀಳು. ಅಹೋ ರಾತ್ರಿ ಅದರ ಕನಸು. ಸಾಧನೆಗಾಗಿ ಅಹ ರ್ನಿಶಿ ಪ್ರಯತ್ನ. ಏನು ಪುಣ್ಯ ಮಾಡಿ ಪಡೆದೆನೋ'

ಮಾತೃ ಹೃದಯ ಮಿಡಿಯಿತು.

'ಅಣ್ಣ ಬಂದಿಲ್ಲವೇ?

'ಇನ್ನೂ ಬಂದಂತಿಲ್ಲ. ಬಂದಿದ್ದರೆ ಹೀಗಿರುತ್ತಿತ್ತೇ ಈ ಅರಮನೆ'

'ಒಳ್ಳೆಯದೇ ಆಯಿತು. ಅವನಿಗೆ ತಿಳಿಸ ಬೇಡಮ್ಮ, ರಹಸ್ಯದ ಮಾತು'

'ಏನೇ ಅದು ರಹಸ್ಯದ ಮಾತು? ನೀನೂ ರಾಜಕಾರಣ ಕಲಿತಿಯಾ? ಅವನೊಬ್ಬನೇ ಇಳಿದುದು ಸಾಲದೆಂದು ನಿನಗೂ ಹಚ್ಚಿದನೋ ಚಾಳಿ ಯನ್ನು'

ವಿಹ್ವಲೆಯಾದ ಮೇನಕೆಯ ಹೃದಯ ಚುರುಗುಟ್ಟಿತು.

'ಯಾವ ರಾಜಕಾರಣವೂ ಇಲ್ಲ. ಬರುತ್ತಾ ದಾರಿಯಲ್ಲಿ ಪ್ರಜ್ಞೆಯಿ ಲ್ಲದೆ ಬಿದ್ದಿದ್ದ ಯೋಧನನ್ನು ಹೊತ್ತು ತಂದೆ. ಅವನ ಉಪಚಾರದ ವ್ಯವಸ್ಥೆ ಆಗಬೇಕು. ಅಣ್ಣನಿಗೆ ತಿಳಿದರೆ ಎಲ್ಲಿಲ್ಲದ ರಂಪ ಆದೀತು. ಒಂದಿಷ್ಟು ಉಪಚರಿಸಿ, ಹೇಗೆ ಕರೆತಂದೆವೋ ಹಾಗೆ ಸಾಗಿಸಬೇಕು'

'ನೀನೇ ಹೊತ್ತು ತಂದಿಯಾ'

'ನಾನೇಕೆ ತರುತ್ತೇನೆ? ತರಲು ಸಾಧ್ಯವೆ? ಕುದುರೆಯಲ್ಲಿ ಹೇರಿ ಕೊಂಡು ಬಂದೆ'

'ಲೋಕಾ ಯಾರೋ ಏನೋ? ನಾಳೆ ಇದು ಅಣ್ಣನಿಗೆ ತಿಳಿದರೆ? ಅಪಾಯ ಒದಗಿದರೆ' ಆಕೆ ಅನುಮಾನಿಸಿದಳು.

'ಯಾರಾದರೂ ಆಗಿರಲಿ. ಒಂದಿಷ್ಟು ಉಪಚರಿಸಿ ನಾಳೆಯ ನಸು ಕಿಲ್ಲಿ ಕಳುಹಿಸಿ ಬಿಡುವ. ನಮ್ಮ ಧರ್ಮ ನಮಗಿರಲಿ ಅವನ ಕರ್ಮ ಅವ ನಿಗೆ. ಒಂದಿಷ್ಟು ಸ್ಥಳಕೊಡು. ಹೊತ್ತು ತಂದವರ ಕಾಲು—ಕೈ ಎರಡೂ ಸೋತಿರ ಬಹುದು.'

ಬಾಗಿಲು ಪೂರ್ತಿ ತೆರೆಯಿತು.

ಅರಿಕೇಸರಿ, ತನ್ನ ಹೊರೆ ಸಮೇತ ಒಳ ನುಸುಳಿದ. ಮೆತ್ತೆಯ ಮೇಲೆ ದೇಹವನ್ನಿಳುಹಿ ಉಸ್ಸೆಂದು ಕೈಗಳನ್ನೊಮ್ಮೆ ಕೊಡವಿ ಕೊಂಡ.

ಲೋಕಾಂಬಿಕೆ ಒದ್ದೆ ಬಟ್ಟೆಯಲ್ಲಿ ಯೋಧನ ರಕ್ತ ಸಿಕ್ತ ಮುಖವನ್ನೊ ರಸಿದಳು.

ಮೇನಕಾ ದೇವಿ ಅವನ ಬಾಯಿಗಿಷ್ಟು ನೀರು ಬಿಟ್ಟಳು

ಯೋಧ ಮತ್ತೊಂದು ಬದಿಗೆ ಹೊರಳಿ 'ಅಮ್ಮಾ' ಎಂದ.

'ಬದುಕಿದ್ದಾನೆ. ಅವನ ಪುಣ್ಯ' ತಾಯಿಯ ಉದ್ಗಾರ.

ಲೋಕಾಂಬಿಕೆ ಬೀಸಣಿಕೆಯೊಂದರಲ್ಲಿ ಗಾಳಿ ಬೀಸಿದಳು.

'ಅಮ್ಮಾ! ನೋವು' ಆತ ಚೀರಿದ.

ಮೇನಕಾ ದೇವಿ ದೀಪದ ಉರಿಯನ್ನು ದೊಡ್ಡದು ಮಾಡಿ, ಯೋಧ ನನ್ನೇ ದಿಟ್ಟಿಸಿ ನೋಡಿದಳು.

ದೀಪದ ಮಂದ ಪ್ರಕಾಶದಲ್ಲಿ ಆಕೆ ಯೋಧನನ್ನು ಗುರುತಿಸಿದಳು.

'ಕಂದಾ' ಎಂದು ಚೀರಿ, ಅವನ ಪಕ್ಕದಲ್ಲಿ ದೊಪ್ಪನೆ ಬಿದ್ದಳು.

(ಮುಂದುವರಿಯುವುದು)

ಸರ್ವಾರ್ಪಣ

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಬೆಲೆ ಸ್ಥಿರತೆ ಸಾಧನೆಯೆಡೆಗೆ

ದೇಶದಾದ್ಯಂತ 1968—69ರಲ್ಲಿ ಬೆಲೆಗಳು ಸಾಧಾರಣ ಸ್ಥಿರತೆಯನ್ನು ಕಾಯ್ದುಕೊಂಡಿದ್ದವು. ಅದರಿಂದಾಚೆಗೆ ಬೆಲೆಗಳ ಮೇಲಿನ ನಿರಂತರ ಒತ್ತಡ ಇದ್ದೇ ಇದೆ. ಸರ್ಕಾರ ಕೈಗೊಂಡ ದಾಸ್ತಾನು ಸಂಗ್ರಹಣೆ ಮತ್ತು ಕಾಪುದಾಸ್ತಾನು ಇತ್ಯಾದಿ ಕ್ರಮಗಳಿಂದಾಗಿ ಚತುರ್ಥ ಯೋಜನೆಯ ಮೊದಲ ಎರಡು ವರ್ಷಗಳಲ್ಲಿ ಬೇಸಾಯ ವಸ್ತುಗಳ ಬೆಲೆಗಳಲ್ಲಿ ಮೇಲಿನ ಒತ್ತಡ ಏರಲಿಲ್ಲ. 1969—70ರಲ್ಲಿ ಬೇಸಾಯವಸ್ತುಗಳ ಸಗಟು ಬೆಲೆ ಸೂಚ್ಯಾಂಕದಲ್ಲಿ ಶೇಕಡ 3.6 ರಷ್ಟು ಹೆಚ್ಚಿತ್ತಾದರೂ ಅದು 1970—71ರಲ್ಲಿ ಇಳಿಯಿತು. 1971-72ರಲ್ಲಿ ಉತ್ಪಾದನೆ ಕಡಿಮೆ ಇರುವ ತಿಂಗಳುಗಳಲ್ಲಿ ಕೃಷಿವಸ್ತುಗಳ ಬೆಲೆಯಲ್ಲಿ ಏರಿಕೆ ಕಂಡು ಬಂತು. ಲಕ್ಷಾಂತರ ಮಂದಿ ಬಂಗ್ಲಾದೇಶದ ನಿರಾಶ್ರಿತರ ಆಗಮನ ಹಾಗು ದೇಶದ ಕೆಲವು ಭಾಗಗಳಲ್ಲಿ ಸಂಭವಿಸಿದ ಪ್ರವಾಹಗಳು, ಅಭಾವ ಪರಿಸ್ಥಿತಿ ಹಾಗು ಭಾರತ—ಪಾಕಿಸ್ತಾನ ಕದನ ಇವುಗಳು ಆಹಾರಧಾನ್ಯಗಳ ಬೆಲೆ ಏರಿಕೆಗೆ ಇನ್ನಿತರ ಮುಖ್ಯಕಾರಣಗಳಾಗಿವೆ. ಆಹಾರ ಧಾನ್ಯಗಳು ಮುಖ್ಯವಾಗಿ ದ್ವಿದಳ ಧಾನ್ಯಗಳ ಉತ್ಪಾದನೆ ಕಳೆದ ವರ್ಷದ ಬೇಡಿಕೆಗೆ ಸಮವಾಗಿ ಏರಲಿಲ್ಲ. ಇದೂ ಸಹಾ ಆಹಾರ ಧಾನ್ಯಗಳ ಬೆಲೆ ಏರಿಕೆಗೆ ಕಾರಣವಾಗಿದೆ.

ಬೆಲೆಗಳ ಒತ್ತಡಕ್ಕೆ ಸಿಕ್ಕಿದ ಇನ್ನೊಂದು ವಸ್ತುವೆಂದರೆ ಸಕ್ಕರೆ. 1971—72ರಲ್ಲಿ ಕಬ್ಬಿನ ಉತ್ಪಾದನೆ ಕುಸಿಯಿತು. 1969—70ರಲ್ಲಿ ಕಬ್ಬಿನ ಉತ್ಪಾದನೆ 13.78 ದಶಲಕ್ಷ ಟನ್‌ಗಳಿಷ್ಟಿದ್ದು 1970—71ರಲ್ಲಿ 13.2 ದಶಲಕ್ಷ ಟನ್‌ಗಳಿಗೆ ಇಳಿಯಿತು. 1971—72ರಲ್ಲೂ ಕಬ್ಬಿನ ಉತ್ಪಾದನೆಯಲ್ಲಿ ಯಾವ ಹೆಚ್ಚಿನ ಏರಿಕೆಯೂ ಕಂಡು ಬಂದಿಲ್ಲವೆಂದು ಅಂದಾಜು ಮಾಡಲಾಗಿದೆ. ಕಡಿಮೆ ಕಬ್ಬಿನ ಉತ್ಪಾದನೆಯಿಂದಾಗಿ ಸಕ್ಕರೆ ಉತ್ಪಾದನೆಯಲ್ಲಿ ಕಡಿಮೆಯಾಯಿತು. 1969—70ರಲ್ಲಿ ದೇಶದಲ್ಲಿ ಸಕ್ಕರೆ ಉತ್ಪಾದನೆ 42.6 ಲಕ್ಷ ಟನ್‌ಗಳಷ್ಟಿದ್ದು 1970—71ರಲ್ಲಿ 37.4 ಲಕ್ಷ ಟನ್‌ಗಳಿಗೆ ಇಳಿಯಿತು. ಪ್ರಸ್ತುತ ವರ್ಷದಲ್ಲಿ ಮೊಟ್ಟೆ, ಮೀನು ಮತ್ತು ಮಾಂಸದ ಬೆಲೆಯಲ್ಲಿ ಏರಿಕೆ ಇತ್ತು.

ಕೈಗಾರಿಕಾ ಕಚ್ಚಾವಸ್ತುಗಳಲ್ಲಿ ಅತಿಹೆಚ್ಚಿನ ಏರಿಕೆಯೇನೂ ಆಗಲಿಲ್ಲ. ಎಣ್ಣೆಬೀಜಗಳು ಮತ್ತು ಸೆಣಬು ಇವುಗಳ ಬೆಲೆಗಳು ಬಹಳವಾಗಿ ಇಳಿದಿದ್ದೇ ಕೈಗಾರಿಕಾ ಕಚ್ಚಾವಸ್ತುಗಳ ಸ್ಥಿರತೆಗೆ ಮುಖ್ಯಕಾರಣ. ಉತ್ಪಾದನೆ ಕಡಿಮೆ ಇದ್ದ ತಿಂಗಳುಗಳಲ್ಲಿ ಹತ್ತಿಯಬೆಲೆಯಲ್ಲಿ ಒತ್ತಡವಿತ್ತು. ಆದರೆ 1971-72ರ ಕೊಯ್ಲು ಕಾಲದ ನಂತರ ಹತ್ತಿಯ ಬೆಲೆಯಲ್ಲಿ ಹೆಚ್ಚಿನ ಏರಿಕೆ ಕಂಡು ಬರಲಿಲ್ಲ.

ಉತ್ಪಾದನಾವಸ್ತುಗಳ ಸಗಟುಬೆಲೆಗಳ ಮೇಲೆ ಒತ್ತಡವಿತ್ತು. 1971ರ ಎಪ್ರಿಲ್‌ನಿಂದ 1972ರ ಜನವರಿಯಲ್ಲಿ ಈ ವಸ್ತುಗಳ ಸಗಟುಬೆಲೆಯಲ್ಲಿ ಶೇಕಡ 8ರಷ್ಟು ಏರಿಕೆಯಾಗಿತ್ತು.

ಬೆಲೆ ಏರಿಕೆ ತಡೆಯಲು ಕ್ರಮ

ಬೆಲೆಗಳಲ್ಲಿ ಸ್ಥಿರತೆಯನ್ನು ಸಾಧಿಸುವ ಬಗ್ಗೆ ಸಲಹೆ ಮಾಡಲು ಯೋಜನಾ ಆಯೋಗದವರು ಸರ್ಕಾರ ಹಾಗು ಸರ್ಕಾರೇತರ ಅಧಿಕಾರಿಗಳ ಸಮಿತಿಯನ್ನು ರಚಿಸಿದ್ದಾರೆ. ಅಗತ್ಯವಾದ ವಸ್ತುಗಳು ಸಾಧಾರಣ ಬೆಲೆಗಳಿಗೆ ದೊರೆಯುವಂತೆ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆಯೂ ಈ ಸಮಿತಿ ಅಧ್ಯಯನ ನಡೆಸುತ್ತಿದೆ.

ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ತಡೆಯಲು ಸರ್ಕಾರಿ ವಿತರಣಾ ವ್ಯವಸ್ಥೆಯನ್ನು ಉತ್ತಮ ಪಡಿಸಲಾಗಿದೆ. ಹೆಚ್ಚು ಸಂಖ್ಯೆಯಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ರಾಜ್ಯ ಸರ್ಕಾರಗಳಿಗೆ ಸಲಹೆಯನ್ನು ಮಾಡಲಾಗಿದೆ. ಗೋಧಿ ಮತ್ತು ಒರಟು ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಕೊಳ್ಳಲು ಭಾರತದ ಆಹಾರ ಧಾನ್ಯಗಳ ಕಾರ್ಪೊರೇಶನ್‌ಗೆ ಅಧಿಕಾರವನ್ನು ನೀಡಲಾಗಿದೆ. ಸಕ್ಕರೆ ಉತ್ಪಾದನೆಯನ್ನು ಹೆಚ್ಚಿಸಲು ಉತ್ಪಾದಕರಿಗೆ ವಿವಿಧ ಬಗೆಯ ನೆರವು ನೀಡಲಾಗುತ್ತಿದೆ. ನ್ಯಾಯ ಬೆಲೆ ಅಂಗಡಿಗಳಿಗೆ ಶೇಕಡ 60ರಷ್ಟು ಸಕ್ಕರೆಯನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ●

ಹದಗೆಟ್ಟ ಹಣಕಾಸು

(ಒಂದನೇ ಪುಟದಿಂದ)

ಭಾಷಾಪತಿ ಆಯ್ಕೆಯ ಸಂಬಂಧದಲ್ಲಿ ಇವರೊಡನೆ ವಿಚಾರ ವಿನಿಮಯ ಮಾಡುವುದೂ ಸಾಧ್ಯವಾಗಲಿಲ್ಲ. ಅಂತೂ ನಾಯಕನೊಬ್ಬ ಬೇಕೆಂಬುದರಿಂದ ಹೊಳೆ ನರಸೀಪುರದ ಶ್ರೀ ಎಚ್. ಡಿ. ದೇವೇಗೌಡರನ್ನು ಆರಿಸಿಕೊಳ್ಳಲಾಯ್ತು.

ಶ್ರೀ ದೇವೇ ಗೌಡರು ವಿಧಾನ ಸಭೆಗೇನೂ ಹೊಸಬರಲ್ಲ. 1962ರಿಂದಲೂ ಅವರು ಶಾಸಕರು. ಆದರೆ ಅವರು ಕಾಂಗ್ರೆಸ್ ಸೇರಿದ್ದು 1968ರಲ್ಲಿ, ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾದ ಬಳಿಕ. ಅದುವರೆಗೆ ಎರಡು ಬಾರಿಯೂ ಅವರು ಪಕ್ಷೇತರರಾಗಿಯೇ ಆಯ್ಕೆಗೊಂಡಿದ್ದರು. ಕಾಂಗ್ರೆಸ್ ವಿಘಟನಾ ನಂತರ ಶ್ರೀ ಗೌಡರು ಸಂಸ್ಥಾ ಕಾಂಗ್ರೆಸ್ಸಿನಲ್ಲಿ ಉಳಿದರು. ಈ ಬಾರಿ ಅದೇ ಪಕ್ಷದಿಂದ ಗೆದ್ದು ಬಂದರು. ಸಂಸ್ಥಾ ಕಾಂಗ್ರೆಸ್ಸು ಗೆದ್ದು ಸರಕಾರ ರಚಿಸುತ್ತಿದ್ದರೆ ಶ್ರೀ ಗೌಡರು ಮಂತ್ರಿಯಾಗಬಹುದಿತ್ತು. ಆದರೆ, ಈಗ ದೊರೆತ ಗೌರವ ಅದಕ್ಕಿಂತ ದೊಡ್ಡದೆಂದು ಅವರು ತಿಳಿದಿದ್ದಾರೆ.

ಆಳುವ ಪಕ್ಷದ ತುಂಬಿದ ಸಭೆಯ ನಡುವೆ ವಿರೋಧಿಪಕ್ಷವನ್ನು ಉಳಿಸಿ, ಸಂರಕ್ಷಿಸುವ ಹೊಣೆ ಶ್ರೀ ಗೌಡರ ಪಾಲಿಗೆ ಬಂದಿದೆ. ಮುಂದಿನ ಮಹಾ ಚುನಾವಣೆಯಲ್ಲಿನ ಪಕ್ಷದ ಭವಿಷ್ಯ ಬರೆಯುವ ಜವಾಬ್ದಾರಿಯೂ ಅವರ ಮೇಲಿದೆ. ●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು—4

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1947 Phone: 3242 Res: 3272

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

❖ ❖ ❖

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

❖ ❖ ❖

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು
ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ.ಕ.

READ &
ADVERTISE IN
NAVAYUGA Weekly

Edited, Printed & Published by K. M. Shetty at the Navayuga Press, Udipi. S. India.

ನವಯುಗ

ಸಂಪುಟ ೫೧
ಸಂಚಿಕೆ ೩೨

NAVAYUGA

13-4-1972

ಚಾ ರು ಚ ಯ ನ

ತತ್ವ ಆಚರಣೆಗೆ, ಹೇಳುವುದಕ್ಕಲ್ಲ

ಮುಖ್ಯಮಂತ್ರಿ ದೇವರಾಜ ಅರಸು ಅವರ ನಕ್ಷತ್ರ ಒಳ್ಳೆಯದಿದೆಯೆಂದೇ ಅವರನ್ನು ಶ್ರೀ ವೀರೇಂದ್ರ ಪಾಟೀಲರು ತನ್ನ ಸಂಪುಟದಿಂದ ದೂರವಿಟ್ಟರು; ಕಾಂಗ್ರೆಸ್ಸು ವಿಭಜಿತವಾಯ್ತು; ಆಗ ಅರಸರು ಆಳುವ ಕಾಂಗ್ರೆಸ್ಸು ಅಧ್ಯಕ್ಷರಾದದ್ದು, ಮುಂದೆ ರಾಜ್ಯದ ಆಳುವ ಕಾಂಗ್ರೆಸ್ಸಿನಲ್ಲಿ ತನ್ನ ಡಾಳವನ್ನು ನಿರಾತಂಕವಾಗಿ ಉರುಳಿಸಿದ್ದು ಸತ್ಯಕ್ಕೆ ಹತ್ತಿರವಾದದ್ದು. ಶ್ರೀ ನಿಜಲಿಂಗಪ್ಪನವರು ಕರ್ನಾಟಕದ ರಾಜ್ಯಕೀಯಕ್ಕೊಂದು ಸ್ಥಿರತೆಯನ್ನು ತಂದು ಕೊಟ್ಟದ್ದು ನಿಜವಾದರೂ ಇದಕ್ಕವರು 'ಗಂಪುಗಾರಿಕೆ'ಯನ್ನು ಬಳಸಿಕೊಂಡರೆಂಬ ಅಪವಾದವನ್ನೂ ಅಂಟಿಸಿಕೊಂಡರು. ಶ್ರೀಮತಿ ಇಂದಿರಾಗಾಂಧಿಯವರ ವ್ಯಕ್ತಿತ್ವದ ಬಲದಿಂದ ರಾಜ್ಯದಲ್ಲಿಯೂ ಆಳುವ ಕಾಂಗ್ರೆಸ್ಸು ತುಳುಕುವ ಬಹುಮತ ಪಡೆದಾಗ ಶ್ರೀ ದೇವರಾಜರ ನಾಯಕತ್ವ ಪ್ರಶ್ನಾತೀತವಾಗಿಯೇ ಇತ್ತು. ಆದುದರಿಂದಲೇ ವಿಧಾನಸಭೆಯ ಸದಸ್ಯರಲ್ಲವಾದರೂ ಶ್ರೀ ಅರಸು ಮುಖ್ಯಮಂತ್ರಿಯಾದರು.

ಚುನಾವಣೆಗೆ ತನ್ನ ಪಕ್ಷದ ಹುದ್ದರಿಗಳ ಪಟ್ಟಿಯನ್ನು ಜಾತೀವಾರಾಗಿ ವಿಶ್ಲೇಷಿಸಿದ್ದ ಅರಸರಿಗೆ ಈಗ ತನ್ನ ತಪ್ಪಿನ ಅರಿವಾಗಿರಬೇಕು. ರಾಜ್ಯಕೀಯದಲ್ಲಿ ಜಾತೀಯತೆಯನ್ನು ದೂರವೋಡಿಸಿ ಸರ್ವಸಮಾನತೆಯ ಆಡಳಿತ ನಡೆಸುವ ಆಶ್ವಾಸನೆಯನ್ನು ಅವರು ರಾಜ್ಯದ ಜನರಿಗೆ ಕೊಟ್ಟಿದ್ದಾರೆ. 'ರಾಜ್ಯಕೀಯದಲ್ಲಿ ಜಾತಿ ಮತಗಳ ಸೋಂಕಿನಿಂದಾಗಿ ಕಷ್ಟಕಾರ್ಪಣ್ಯಕ್ಕೆ ನಾವು ಸಿಕ್ಕಿಬಿದ್ದಿದ್ದೇವೆ. ಸ್ವಾತಂತ್ರ್ಯ ಲಭಿಸಿ ೨೫ ವರ್ಷಗಳು ಸಂದರೂ ಬಹು ಜನರ ಸಂಕಷ್ಟ ನಿವಾರಣೆಯಾಗಿಲ್ಲ. ಬಹು ಸಂಖ್ಯೆಯಲ್ಲಿರುವ ಬಡವರಿಗೆ ನಿಲ್ಲಲು ನೆಲೆಯಿಲ್ಲ, ಉಡಲು ಬಟ್ಟೆಯಿಲ್ಲ, ಹೊಟ್ಟೆಗೆ ಅನ್ನವಿಲ್ಲ. ಜಾತಿಮತಗಳ ಗೊಂದಲ ಮುಂದೆ ಬೆಳೆಯದಂತೆ ಅವರನ್ನು ತಡೆದಿದೆ. ಈ ಪರಿಸ್ಥಿತಿ ಹೋಗಿ ಜಾತೀಯತೆಯನ್ನು ಬಿಡಲೇ ಬೇಕು?' ಇದು ಅರಸರ ದೃಢ ನಿರ್ಧಾರ. "ಜಾತಿ ಜಾತಿಯೆಂದು ಹೊರಟ ಹಿಂದಿನ ಸರಕಾರಕ್ಕೆ ಆದ ತೊಂದರೆ ಗೊತ್ತಿದೆ. ಆ ಸರಕಾರ ಮಾಡಿದ ತಪ್ಪನ್ನೇ ನಾವು ಮಾಡಲು ಹೊರಟರೆ, ಅದಕ್ಕೊದಗಿದ ದುರ್ಗತಿಯೇ ನಮಗೂ ಬಂದೊದಗ ಬಹುದು"— ಇದರಲ್ಲಿ ಶ್ರೀ ವೀರೇಂದ್ರ ಪಾಟೀಲರ ಸರಕಾರದ ಮೇಲಿನ ಆರೋಪ ಧ್ವನಿತವಾಗುವುದಾದರೂ ಪಾಠ ಕಲಿತುಕೊಳ್ಳಬೇಕೆಂಬ ಆಶಯ ಅಡಗಿದೆ. ತಮ್ಮ ಪಕ್ಷವನ್ನು ಜನತೆ 'ಜಾತೀಯ ಆಧಾರದಿಂದ ಬೆಂಬಲಿಸಲಿಲ್ಲ; ತತ್ವದ ಮೇಲಿನ ವಿಶ್ವಾಸದಿಂದ ಬೆಂಬಲಿಸಿದೆ'ಯೆನ್ನುತ್ತಾರೆ ಶ್ರೀ ಅರಸರು. ತತ್ವ ಹೇಳುವುದಕ್ಕಲ್ಲ ಆಚರಿಸುವುದಕ್ಕೆ ಎಂಬುದು ಅವರಿಗೂ ಗೊತ್ತಿರಬೇಕು.

ಶ್ರೀ ಅರಸರು ಇತ್ತೀಚೆಗೆ ದೊಡ್ಡ ದೊಡ್ಡ ಮಾತಾಡುತ್ತಲಿದ್ದಾರೆ. ಅದರಲ್ಲೂ ಮುಖ್ಯಮಂತ್ರಿಯೆನಿಸಿದ ನಂತರ ಅವರು ಏಕ್‌ದಂ ಜಾತೀಯತೆಯ ಖಟ್ಟಾ ವಿರೋಧಿಯಾಗಿದ್ದಾರೆ. ಭೂ ಸುಧಾರಣೆ, ಬಡವರ ಉದ್ಧಾರ,ಜಾತೀಯತೆಯ ನಿರ್ಮೂಲನ, ಸಂವೃದ್ಧಿ ಮೊದಲಾದುವುಗಳ ಜಪ್ತೋಚ್ಚಾರದಿಂದಲೇ ಈ ಇಪ್ಪತ್ತೈದು ವರ್ಷಗಳಲ್ಲಿ ಕಾಂಗ್ರೆಸ್ಸು ಓಟು ಪಡೆದಿದೆ. ಈ ಬಾರಿಯೂ ಅಷ್ಟೇ. ಇವರು 'ಹೊಸಬರು' ಎಂಬುದರಿಂದ ಜನತೆ ಇವರಿಗೊಂದು ಅವಕಾಶ ನೀಡಿದೆ. ಇವರೂ ಹಿಂದಿನ ಸರಕಾರಗಳಂತೆಯೇ ಉದ್ಘೋಷಣೆಯ ಮಾತಗಳನ್ನಾಡುವುದರಲ್ಲೇ ನಿರತರಾಗಿ ಕರ್ತವ್ಯ ಶೂನ್ಯರಾದರೆ, ನಿಜಕ್ಕೂ ಜನತೆ ಕ್ರಾಂತಿಯೆದ್ದೀತು. ಶುಭಾರಂಭವು ಶುಭಾಂತ್ಯಕ್ಕೆ ನಾಂದಿಯಾಗಬೇಕು; ಬಡವರ ಉದ್ಧಾರವಾಗಲೀ ಜಾತೀಯತೆಯ ನಿರ್ಮೂಲನವಾಗಲೀ ಸಮರ್ಥ ಆಡಳಿತೆಯಾಗಲೀ ಭಾಷಣ ಬಿಗಿಯುವುದರಿಂದೆಂದೂ ಬರುವುದಿಲ್ಲ. ಶ್ರೀ ಅರಸುರವರು ಪ್ರಾಮಾಣಿಕವಾಗಿ ಮಾಡಿದಂತೆ ಆಡಿತೋರಿಸಿದರೆ, ಅವರ ಕಿರೀಟಕ್ಕೆ ನವಿಲುಗರಿ ಸೇರುತ್ತದೆ; 'ಆಡದೇ ಮಾಡುವವನು ರೂಢಿಯೊಳಗುತ್ತಮನು' ಎಂಬುದು ತ್ರಿಕಾಲಕ್ಕೂ ಒಪ್ಪುವ ಮಾತು.

○ ○ ○

ಕಂದಾಯ ಸಚಿವ ಶ್ರೀ ಹುಚ್ಚ ಮಾಸ್ತಿ ಗೌಡರ ತಲೆಯ ಮೇಲೆ ಬಹಳಷ್ಟು ಜವಾಬುದಾರಿ ಬಿದ್ದಿದೆ. ಭೂಸುಧಾರಣೆಯನ್ನು ಕಟ್ಟುನಿಟ್ಟಾಗಿ ಜ್ಯಾರಿಗೊಳಿಸಿ ಉಳುವವನನ್ನೇ ಹೊಲದೊಡೆಯನೆಂಬುದನ್ನು ಕಾರ್ಯರೂಪಕ್ಕೆ ತರುವುದು ಅವರ ಮೊದಲ ಕರ್ತವ್ಯ. ಭೂಸುಧಾರಣಾ ಶಾಸನದಿಂದ ಇತ್ತೀಚಿನ ವರ್ಷಗಳಲ್ಲಿ ಬೇಕಷ್ಟು ಗೊಂದಲವಾಗಿ ಧನಿ-ಒಕ್ಕಲುಗಳ ನಡುವಣ ಸಂಬಂಧ ಸಂಪೂರ್ಣ ಕೆಟ್ಟು ಹೋಗಿದೆ. ಭೂ ಹಿಡುವಳಿಯ ಗರಿಷ್ಠಮಿತಿಯನ್ನು ಇಳಿಸುವುದು, ಭೂ ಹೀನರಿಗೆ ಭೂಮಿಯನ್ನು ಹಂಚುವುದು-ಸಾಮಾನ್ಯ ಕೆಲಸವೇನಲ್ಲ. ರಾಜ್ಯ ಸರಕಾರವು ಭೂಸುಧಾರಣಾ ಶಾಸನವನ್ನು ತಿದ್ದುವುದು ಅತಿ ತುರ್ತಿನ ಕೆಲಸವೆಂದು ಒಪ್ಪಿಕೊಂಡಿದೆ.

ಶ್ರೀ ವೀರೇಂದ್ರ ಪಾಟೀಲರ ಸರಕಾರ ಉರುಳಿ ಹೋದ ಬಳಿಕ ರಾಷ್ಟ್ರಪತಿ ಆಳಿಕೆಯ ವೇಳೆ ಅಂದಿನ ರಾಜ್ಯಪಾಲ ಶ್ರೀ ಧರ್ಮವೀರರು ಭೂ ಸುಧಾರಣಾ ಶಾಸನದ ಕೆಲವೊಂದು ತಿದ್ದುಪಡಿಗಳನ್ನು ರೂಪಿಸಿ ಕೇಂದ್ರದ ಒಪ್ಪಿಗೆಗಾಗಿ ಕಳಿಸಿ ಕೊಟ್ಟಿದ್ದರು. ಆದರೆ ಪ್ರಗತಿಶೀಲ ಕೇಂದ್ರ ಸರಕಾರಕ್ಕೆ ಈ ಕರಡು ಮಸೂದೆಯ ಬಗ್ಗೆ ನಿರ್ಣಯ ತೆಗೆದು ಕೊಳ್ಳುವುದು ಸಾಧ್ಯವಾಗಲೇ ಇಲ್ಲ. ಇದೀಗ ರಾಜ್ಯದಲ್ಲಿ ಜನಪ್ರಿಯ ಸರಕಾರ ಸ್ಥಾಪಿತವಾಗಿರುವುದರಿಂದ ಸಂವಿಧಾನದಲ್ಲಿಯೂ ಮೂಲಭೂತ ಹಕ್ಕುಗಳಿಗೆ ತಿದ್ದುಪಡಿಯಾದುದರಿಂದ ಅತಿ ಸುಲಭವಾಗಿ ಭೂಸುಧಾರಣೆ ಶಾಸನವನ್ನು ತಿದ್ದುವುದು ಸಾಧ್ಯವಾಗುವುದು.

ಭೂಮಿಯಲ್ಲಿ ಗೇಯುದವನು ಅದರ ಒಡೆಯನೆನಿಸ ಬಾರದು; ಗರಿಷ್ಠ ಹಿಡುವಳಿಯ ಮಿತಿ ಇಳಿಯಬೇಕು; ಗೇಣಿದಾರನಿಗೆ ಕೂಡಲೇ ಭೂಮಿಯೊಡೆತನ ದೊರೆಯಬೇಕು—ಇವೆಲ್ಲ ಆಳುವ ಕಾಂಗ್ರೆಸ್ಸಿನ ಸ್ವೀಕೃತ ನೀತಿಯೇ. ಇದಕ್ಕನುಸಾರವಾಗಿ ಕಾಯದೆ-ನಿಯಮಗಳನ್ನು ರೂಪಿಸಬೇಕು. ಇದು ಹೇಳುವಷ್ಟು ಸುಲಭವಲ್ಲ. ಈ ಸಂಬಂಧದ ಮಸೂದೆ ಎಂದು ಬರುತ್ತದೆ? ಈಗಂತೂ ಸಾಧ್ಯವಿಲ್ಲ; ಜೂನ್ ತಿಂಗಳ ಅಧಿವೇಶನದಲ್ಲಿ ಬಜೆಟ್ಟಿನ ಗೊಂದಲವಿದೆ. ಆಗ ಇದಕ್ಕೆ ಬಿಡುವು ದೊರೆಯುವುದು ಕಷ್ಟಸಾಧ್ಯ. ಅಂತೂ ಮಸೂದೆಯು ಶಾಸನವಾಗಿ ಬರುವಾಗ ಇನ್ನೊಂದು ಯುಗಾದಿ ದಾಟಬಾರದೆಂಬುದು ಸರಕಾರದ ಇರಾದೆ. ಇಷ್ಟೆಲ್ಲ ಆದ ಮೇಲೆ ಮತ್ತಾವ ತೊಂದರೆಗಳು ತಲೆ ಹಾಕುತ್ತವೆಯೋ ಮುಂದೆ ನೋಡಬೇಕು.

○ ○ ○

ರಾಜ್ಯದಲ್ಲಿ ವೃದ್ಧಾಪ್ಯ ವೇತನದ ಸೌಲಭ್ಯವೊಂದಿದೆ. ಆದರೆ ಇದನ್ನು ಪಡೆದವರು ವಿರಳ. ಇದುವರೆಗಿನ ಕ್ರಮಾವಳಿಯಂತೆ ಅನಾಥ ವೃದ್ಧರು ಇದಕ್ಕಾಗಿ ಆವೇದನಾ ಪತ್ರವನ್ನು ಕಳಿಸಬೇಕು. ಅದರ ಯೋಗ್ಯತೆಯನ್ನು ಗಮನಿಸಿ ಜಿಲ್ಲಾಧಿಕಾರಿಗಳು ವೃ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
154 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

೧೨

ರಾಜವಾಡೆಯಲ್ಲಿ ಗಡಿಬಿಡಿಗೆ ಮೊದಲಾಯಿತು.

ಪಂಡಿತರಿಗೆ ಕರೆ ಹೋಯಿತು.

ಅಲ್ಲಿದ್ದ ಎಲ್ಲರ ದೃಷ್ಟಿ ಗೋವಿಂದನಲ್ಲಿ ಕೇಂದ್ರೀಕೃತವಾಯಿತು.

ಈ ಗಜಿಬಿಜಿಯಲ್ಲಿ ಯಾರೂ ಅರಿಕೇಸರಿಯನ್ನು ಗಮನಿಸಲಿಲ್ಲ. ಲೋಕಾಂಬಿಕೆಗೂ ಅನು ಮರೆತು ಹೋಯಿತು.

ಆತ ಯಾರಿಗೂ ತಿಳಿಸದೆ ಅಲ್ಲಿಂದ ಹೊರಟು ಹೋದ.

ಗುಲ್ಲು—ಗದ್ದಲ, ಭಯ—ಆತಂಕಗಳು ಇಳಿದ ತಕ್ಷಣ ಅವಳಿಗೆ ಅವನ ಜ್ಞಾಪಕ ಆಯಿತು. ಆಕೆ ಅವನನ್ನು ಸುತ್ತೆಲ್ಲ ಅರಸಿದಳು. ಆದರೆ ಆತ ಎಲ್ಲಿಯೂ ಕಾಣದಿರಲು ಅವಳ ಮನಸ್ಸು ಅಳುಕಿತು.

ಬಂದಿದ್ದವರನ್ನು ಮರ್ಯಾದೆಯಿಂದ ನಡೆಸಿಕೊಳ್ಳಲಿಲ್ಲ. ಅಪಚಾರವಾಯಿತು ಎಂದು ಒಳಗೊಳಗೇ ಕುದಿದಳು; ಕೊರಗಿದಳು.

ಆ ಕುರಿತು ತಾಯಿಗೇನಾದರೂ ತಿಳಿದಿದೆಯೋ ಎಂಬ ತವಕದಿಂದ ನನ್ನ ಜೊತೆ ಬಂದಿದ್ದರಲ್ಲ? ಅವರೆಲ್ಲಿ'.

ಆಗಲೇ ಮೇನಕಾದೇವಿಗೆ ಗೋವಿಂದನನ್ನು ಹೊತ್ತು ತಂದು ನೆತ್ತಿಯಲ್ಲಿ ಮಲಗಿಸಿದ ಭವ್ಯಾಕೃತಿಯು ನೆನಪಾದುದು.

“ನಾನು ನೋಡಲೇ ಇಲ್ಲ. ಆತ ಏನು ತಿಳಿದು ಕೊಂಡನೋ! ನಮ್ಮ ಗಡಿಬಿಡಿಯಲ್ಲಿ ಆತನನ್ನು ನಾವು ಸರಿಯಾಗಿ ನೋಡಿಕೊಳ್ಳಲಿಲ್ಲ. ಒಂದು ಉಪಚಾರದ ಮಾತು ಕೂಡ ಆಡದೆ ಕಳಿಸಿದೆವು ಅವನಿಂದ ನಾವು ಉಪಕೃತರಾದೆವು. ಅವನಿಲ್ಲದಿರುತ್ತಿದ್ದರೆ ಅಣ್ಣನ ಗತಿ ಏನಾಗುತಿತ್ತೋ? ತಿಂಡಿ-ತೀರ್ಥಕೊಟ್ಟು ಉಪಚರಿಸುವುದಕ್ಕೂ ಮರೆತುಹೋಯಿತು. ಇಲ್ಲೇ ಎಲ್ಲಾದರೂ ಇದ್ದರೆ ಬಹುಮಾನಕೊಟ್ಟು ಕಳಿಸಬಹುದಿತ್ತು. ಅವನ ಗುರುತಿನವರು ಸಿಗಬೇಕಲ್ಲ. ನಿನಗೇನಾದರೂ ತಿಳಿದಿದೆಯೋ.'

‘ಅವರು ಕೇಳುವ ಬಹುಮಾನ ನಮ್ಮಿಂದ ಕೊಡಲಾಗುತ್ತದೆಯೋ?'

‘ಅಂದರೆ? ಯಾರೇ ಅದು.'

‘ನಿನಗವರ ಗುರುತು ಇದೆ ಎಂದು ತಿಳಿದಿದ್ದೆ. ಅವಸರದಲ್ಲಿ ಪರಿಚಯ ಮಾಡಿಕೊಡಲೂ ಮರೆತೆ'

‘ಬಂದವನನ್ನು ನೀನು ಬಲ್ಲೆಯಾ ಲೋಕಾ? ಹಾಗಿದ್ದರೆ ನಾಳೆ ಬರುವಂತೆ ಹೇಳಿ ಕಳುಹಿಸು. ಮನ್ನಣೆ ಮಾಡಿ ಕಳುಹಿಸಬೇಕು'

‘ಹಾಗೆ ಹೇಳಿ ಕಳುಹಿಸಿದರೆ ಬರುತ್ತಾರೋ ಇಲ್ಲವೋ.'

ಲೋಕಾಂಬಿಕೆ ಅನುಮಾನದ ಉದ್ಗಾರವೆತ್ತಿದಳು.

ತಾಯಿಗೆ ಆಶ್ಚರ್ಯವಾಯಿತು.

ಅದನ್ನು ತೋರಗೊಡದೆ ದರ್ಪದಿಂದ ‘ನಾನೇ ಬರ ಹೇಳಿದೆನೆಂದು ಹೇಳು.'

‘ಅತ್ತೆ—ಕರೆದು ಔತಣಕ್ಕೆ ಕರೆಸಿಕೊಳ್ಳಲು ಅವರಿಗೇನು ಗ್ರಹಚಾರ. ನನಗಂತೂ ಅವರು ಬರುವುದರಲ್ಲಿ ಭರವಸೆಯಿಲ್ಲ. ಆಗಿನಿಂದಲೂ ಅವರನ್ನು ಅವನು—ಇವನು ಎಂದು ಏಕವಚನದಲ್ಲಿ ಕರೆಯುತ್ತಿರುವಿಯಲ್ಲ; ಅಣ್ಣನನ್ನು ಹೊತ್ತು ತಂದವರು ಯಾರೆಂಬುದು ತಿಳಿಯದೇ ಅಮ್ಮ'

‘ತಿಳಿದಿದ್ದರೆ ನಿನ್ನನ್ನು ಕೇಳುತಿದ್ದೆನೇ? ನಾನೇ ಬರಮಾಡಿಕೊಳ್ಳುತಿದ್ದೆ. ನಿಜಕ್ಕೂ 'ಯಾರೇ ಲೋಕಾ ಬಂದವರು?'

ಯಾರೂ ಅಲ್ಲ. ನಿನ್ನ ಅಳಿಯ. ಹಾಗೆ ಉತ್ತರಿಸುವ ಆಸೆಯಾಯಿತು ಲೋಕಾಂಬಿಕೆಗೆ. ಆದರೆ ಹಾಳು ಲಜ್ಜೆ ಅಡ್ಡ ಬಂದು ಮಾತು ಅರ್ಧಕ್ಕೆ ನಿಂತಿತು.

ಆಕೆ ತಡೆದು, ತಡೆದು ಎಳೆದು ಎಳೆದು ‘ಹಿಂದೆ ನೋಡಿದ್ದೆ ಎಂದೆ. ಇಷ್ಟು ಬೇಗ ಮರೆತೆಯೇನು? ನನ್ನ ಜೊತೆಯಲ್ಲಿ ಬಂದವರು— ಅವರೇ ಅಮ್ಮ-ಚಾಕತ್ತೆಯ ಮಗ'

ಮೇನಕಾದೇವಿ ತನ್ನ ಕಿವಿಗಳನ್ನು ನಂಬದಾದಳು.

ಮಗಳ ಮಾತಿನಿಂದ ಮುಹೂರ್ತಕಾಲ ಆಕೆ ಮೂಕಳಾದಳು.

೦೦ ೦೦ ೦೦

ಅವಳ ಮನಸ್ಸು ಗತಕಾಲದತ್ತ ಹರಿಯಿತು. ಮಧುರ ಸ್ಮೃತಿಗಳು ಬಂದು ಅವಳನ್ನು ಮುತ್ತಿದುವು. ಆ ನೆನಪುಗಳು ಎಳೆ ಎಳೆಯಾಗಿ ಅವಳ ಮನೋಮಂದಿರದಲ್ಲಿ ಮೂಡಿದುವು.

ಆಕೆಯ ಪತಿ ರಾಜೇಂದ್ರರ ಆರೋಗ್ಯ ಸರಿ ಇರಲಿಲ್ಲ. ರುಗ್ಣ ಶಯ್ಯೆಯಲ್ಲಿ ಮಲಗಿದ್ದ ಅವರನ್ನು ಕಾಣಲೆಂದು ಚಾಳುಕ್ಯ ನರಸಿಂಹ ರಾಜವಾಡೆಗೆ ಬಂದಿದ್ದ. ಅವರ ಜೊತೆಯಲ್ಲಿ ತಾಯಿ ಇಲ್ಲದ ತಬ್ಬಲಿ, ಆರೆಂಟು ವರ್ಷದ ಅರಿಕೇಸರಿಯೂ ಬಂದಿದ್ದ. ಅರಿಕೇಸರಿ ಆಗ ಆಕೆಗೆ ತುಂಬ ಲಕ್ಷಣವಾಗಿ ಕಂಡಿದ್ದ. ನಿರ್ಭೀತಿಯಿಂದ ಓಡಾಡುತ್ತಿದ್ದ ಬಾಲಕನನ್ನು ಅವಳು ಹತ್ತಿರಕ್ಕೆ ಕರೆದಿದ್ದಳು. ಹಾಗೆ ಹತ್ತಿರಕ್ಕೆ ಬಂದ ಬಾಲಕನನ್ನು ಮುದ್ದಿಸಿ ರಮಿಸಿದ್ದಳು.

ಇದ್ದ ಸ್ವಲ್ಪ ಹೊತ್ತಿನಲ್ಲಿ ಅವರೊಳಗೆ ಗಾಢವಾದ ಪ್ರೀತಿಯಂಕುರಿಸಿತ್ತು. ನರಸಿಂಹ ಅಲ್ಲಿ ಇದ್ದಷ್ಟು ಹೊತ್ತು, ಆತ ಅವಳಿಗೇ ಅಂಟಿಕೊಂಡಿದ್ದ.

ಹೋಗುತ್ತಾ ಆ ಬಾಲಕ ಅವಳ ಪಾದ ಮುಟ್ಟಿ ನಮಸ್ಕರಿಸಿದ. ನಮಸ್ಕರಿಸಿದ್ದ ಆತನನ್ನು ಅವಳು ಹಾಗೇ ಬಾಚಿ ತಬ್ಬಿಕೊಂಡು ಗಲ್ಲಕ್ಕೆ ಮುತ್ತಿಟ್ಟಿದ್ದಳು.

‘ಅತ್ತೆಯ ಕಾಲಿಗೆ ಬಿದ್ದೆಯಲ್ಲ. ಮಗಳನ್ನೂ ಕೊಡಿ ಎಂದು ಕೇಳಿಕೋ ಕುಮಾರ' ನಗುತ್ತ ಈ ಹಾಸ್ಯದ ಚಟಿಕೆ ಹಾರಿಸಿದ್ದರು ನರಸಿಂಹ ನಾಯಕರು.

ಆಗ ಅವಳು ನಾಲ್ಕು ತಿಂಗಳ ಬಸುರಿ ಲೋಕಾಂಬಿಕೆಯನ್ನು ಹೊಟ್ಟೆಯಲ್ಲಿಟ್ಟುಕೊಂಡಿದ್ದಳು.

ಆಗ ಅಲ್ಲಿಯೇ ಇದ್ದ ಅವಳ ಪತಿ ‘ಯಾಕಾಗ ಬಾರದು ಅಮಾತ್ಯರೇ? ಸೋದರ ಸಂಬಂಧ. ಮತ್ತೆ ದೈವ ಯತ್ನ' ಎಂದು ನುಡಿದು ಬಾಂಧವ್ಯಕ್ಕೆ ತಮ್ಮ ಸಮ್ಮತಿಯ ಮುದ್ರೆಯನ್ನೊತ್ತಿದ್ದರು.

ಅಂದು ಅದು ಚೇಷ್ಟೆಯ ಮಾತಾಗಿ ಕಂಡರೂ—ಮಾಸಿ ಹೋದ ಆ ದೃಶ್ಯ ಮನೋಮಂದಿರದಲ್ಲಿ ಪುನಃ ಮೂಡಿ ನಿಂತಿತು.

ಆದರೆ ಇಂದು?

ಈ ಸಂಬಂಧವನ್ನು ಕುದುರಿಸ ಬೇಕಾದ ಅವಳ ಪತಿಯೇ ಇರಲಿಲ್ಲ. ಅವರು ಜೀವಿಸಿದ್ದಲ್ಲಿ, ಲೋಕಾಂಬಿಕೆಯ ಲಗ್ನ, ಅವಳ ಹೆಗಲ ಮೇಲೊಂದು ಹೊರೆಯಾಗಿ ನಿಲ್ಲುತ್ತಿರಲಿಲ್ಲ.

ಯೋಚನಾ ನಿಮಗ್ನೆಯಾಗಿದ್ದ ತಾಯಿಯ ಮೌನ ಉಗಾಡಿಸಿ ಮಗಳೇ ಕೇಳಿದಳು ‘ಅವರನ್ನು ನೀನು ಸರಿಯಾಗಿ ನೋಡಿದೆಯಾ? ಹೇಗಿದ್ದಾರೆ'

ತಾನು ಮಾಡಿಕೊಂಡ ಆಯ್ಕೆಯ ಬಗ್ಗೆ ತಾಯಿಯ ಪ್ರತಿಕ್ರಿಯೆಯನ್ನರಿತುಕೊಳ್ಳುವ ಕುತೂಹಲ ಇತ್ತು ಪ್ರಶ್ನೆಯ ಹಿಂದು.

ಮಾತಿನ ಧ್ವನಿಯನ್ನು ತಾಯಿ ಗ್ರಹಿಸಿದಳು.

‘ಹೇಗಿದ್ದಾರೆ ಎಂದರೆ ಏನು ಹೇಳಲಿ ಲೋಕಾ? ನೋಡಿದ್ದೀಯಾ ಅಂದರೆ ನೋಡಿದ್ದೇನೆ. ಆದರೆ ಪರೀಕ್ಷೆ ಮಾಡಿ ನೋಡಲಿಲ್ಲ. ಕೊಡ—ಕೊಳ್ಳುವ ವ್ಯವಹಾರ ಇದ್ದರೆ ತಾನೇ ವಿವರದ ಸಂಗ್ರಹಣೆ ಹಾಗೆ ನೋಡಲು ವರ ಪರೀಕ್ಷೆಯೋ'

ತಾಯಿಯ ಉದಾಸೀನದ ಉತ್ತರದಿಂದ ಮಗಳು ಖಿನ್ನಳಾದಳು.

ಅರಿಕೇಸರಿಯಲ್ಲಿ ನಟ್ಟ ಮಗಳ ಅನುರಾಗದ ಆಳವನ್ನು ಅಳೆಯುವುದು ಉತ್ತರದ ಮುಖ್ಯ ಉದ್ದಿಶ್ಯವಿತ್ತು.

ಆದರೆ ತನ್ನ ಮಗ ಈ ಬಾಂಧವ್ಯಕ್ಕೆ ಒಪ್ಪಿಯಾನೇ? ಆತ ಅರಿಕೇಸರಿಯಲ್ಲಿ ಹಗೆ ಸಾಧಿಸುತಿದ್ದ.

ತಂಗಿಯನ್ನು ತನ್ನ ಹಗೆಗೆ ಕೊಡಲು ಆತ ನಿರಾಕರಿಸಿದರೆ?

ಈ ಹಗರಣವನ್ನು ಗಮನಿಸಿ ನರಸಿಂಹ ನಾಯಕರೇ ಆಕ್ಷೇಪವೆತ್ತಿದರೆ?

ವಿಷಯ ಗಂಭೀರವಾಗಿತ್ತು.

ಅವರೀರ್ವರ ಮನಸ್ಸು ಬೆರೆತಿತ್ತು. ಅಪರೂಪದ ಜೋಡಿಯೂ ಹೌದು. ಹೃದಯಗಳೇನೋ ಕೂಡಿದ್ದುವು. ಲೋಕ ರೂಢಿಯಂತೆ.ಕೈಗಳೆರಡರನ್ನು ಕೂಡಿಸುವುದಷ್ಟೆ ಉಳಿದಿತ್ತು.

ಸಿಡಿದು ಹೋದ ಎರಡು ಕುಲಗಳನ್ನು ಕೂಡಿಸುವುದೆಂತು?

ಅವಳ ವಿಚಾರ ಲಹರಿ ನೆಲೆಯಿಲ್ಲದಲೆಯಿತು.

ಆದರೂ ಅವರೀರ್ವರೊಳಗೆ ಬೆಳೆದಿದ್ದ ಪ್ರೇಮಾಂಕುರವನ್ನು ಚಿವುಟುವ ಮನಸ್ಸು ಆಗಲಿಲ್ಲ. ಕೊನೆಗೊಮ್ಮೆ ಮೇಲೆ ನೋಡಿ ‘ಎಲ್ಲ ಅವನ ಕೈಯಲ್ಲಿದೆ' ಎಂದಳು.

‘ಉಳಿಕೆಯವರ ಮಾತು ಹಾಗಿರಲಿ. ನಿನಗೊಪ್ಪಿಗೆಯಾಯಿತೇ'

‘ಲೋಕವೇ ಒಪ್ಪೀತು ಲೋಕಾ. ಮಲ್ಲಿಗೆ ಬಳ್ಳಿ ಮಾವನ್ನೇ ಆಶ್ರಯಿಸಿತು. ಕನಸಿನ ಲೋಕದಲ್ಲೂ ಸಿಗುತ್ತಾರೋ ಇಲ್ಲವೋ? ನೀನು ಭಾಗ್ಯಶಾಲಿಯಮ್ಮಾ'

ಪ್ರೇಮಾತಿಶಯದಿಂದ ಆಕೆ ಮಗಳನ್ನು ತಬ್ಬಿಕೊಂಡು, ಅವಳ ಮುಂಗುರಳುನ್ನು ನೇವರಿಸಿದಳು.

ಲೋಕಾಂಬಿಕೆ ತಾಯಿಯ ಅಪ್ಪುಗೆಯಲ್ಲಿ ಮೈಮರೆತಳು.

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 32

ಸಂಸ್ಥಾಪಕರು :
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಮಾತುಕತೆಗಳಿಗೆ ವೇದಿಕೆ— ವಾಸ್ತವಿಕ ಅಂಶ ಪರಿಗ್ರಹ

ಪಾಕಿಸ್ತಾನದ ರಾಷ್ಟ್ರಪತಿ ಭುಟ್ಟೋ ಕೆಲವು ವಾರ ಮೊದಲು ಮೋಸ್ಕೋವಿಗೆ ಭೆಟ್ಟಿ ನೀಡಿದ್ದರು. ಅಲ್ಲಿ ಅವರು ಬಾಂಗ್ಲಾ ದೇಶದ ಉದಯವನ್ನು ಒಪ್ಪಿಕೊಂಡರು. ಭಾರತದೊಡನೆ ಸಂಧಾನದ ವೇದಿಕೆ ನಿರ್ಮಿಸುವಂತೆ ವಿನಂತಿಸಿಕೊಂಡರು. ೧೯೬೫ರ ಯುದ್ಧದ ಬಳಿಕ ರಶ್ಯದ ಸಮ್ಮುಖದಲ್ಲೇ ತಾಷ್ಕೆಂಟ್ ಒಡಂಬಡಿಕೆಯಾದದ್ದು, ಆದು ಭಾರತೀಯ ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರ ಅನಿರೀಕ್ಷಿತ ಮೃತ್ಯುವಿನೊಡನೆ ತಿಪ್ಪೆಗೆ ಬಿದ್ದದ್ದು ಎಲ್ಲರಿಗೂ ಗೊತ್ತು. ತೋರಿಕೆಗೆ, ಆಗ ವಿದೇಶ ಸಚಿವರಾಗಿದ್ದ ಭುಟ್ಟೋ ಭಾರತದ ವಿದೇಶ ಸಚಿವ ಸರ್ದಾರ ಸ್ವರ್ಣಸಿಂಗರೊಡನೆ ನಾಲ್ಕಾರು ಸುತ್ತಿನ ಮಾತುಕತೆ ನಡೆದರೂ ಅದರಿಂದೇನೂ ಲಾಭವಾಗಲಿಲ್ಲ. ತಾಷ್ಕೆಂಟ್ ಒಡಂಬಡಿಕೆಯನ್ನು ಸಮಾಧಿ ಮಾಡಿ ಗೋರಿಕಟ್ಟಲು ಭುಟ್ಟೋ ಮಹಾಶಯರೇ ಅಧ್ಯಕ್ಷ ಅಯ್ಯೂಬಖಾನರ ಮೇಲೆ ಒತ್ತಾಯ ತಂದಿದ್ದರು. ಅನಂತರ ಭುಟ್ಟೋ ಅಧಿಕಾರದಲ್ಲಿದ್ದಷ್ಟು ಸಮಯವೂ ಭಾರತ ವಿರೋಧಿ ನೀತಿಯನ್ನೇ ಪಾಕ್ ನಾಗರಿಕರಿಗೆ ಊಡಿಸಿ ಜೀರ್ಣಿಸಿಕೊಳ್ಳುವ ಕಲೆಯನ್ನು ಕಲಿಸಿಕೊಟ್ಟರು. ಅದೇ ಭುಟ್ಟೋ ಈಗ ರಾಷ್ಟ್ರಪತಿಯಾಗಿದ್ದಾರೆಂದ ಮಾತ್ರಕ್ಕೆ ಹಾವಿನ ನಂಜು ಆರಿಹೋಗುವುದೆಂದರೆ ಬರಿಯ ಕಲ್ಪನೆಯಾಗುತ್ತದೆ. ಆದುದರಿಂದಲೇ ಅವರು ಇಬ್ಬಗೆಯ ಮಾತುಗಳನ್ನು ಆಡುತ್ತಾರೆ. ಭಾರತದೊಡನೆ ಶಾಂತಿ ಬೇಕೆಂದು ಮೊರೆ ಹೋಗುತ್ತಾರೆ; ಅದರ ಬೆನ್ನಲ್ಲೇ ಭಾರತವನ್ನು ಹೀನಾಯಮಾನವಾಗಿ ಖಂಡಿಸುತ್ತಾರೆ....ತನ್ನ ವಿರೋಧಿಗಳಿಗೆ ಅವರು ನೀಡಿದ ಉಪಮೆಯೊಂದೇ ನಿದರ್ಶನವಿದಕ್ಕೆ ಸಾಕು–ಬಾಂಗ್ಲಾದಲ್ಲಿ ಭಾರತದ ಸೇನೆಗಳು ಮಾಡಿದ ಆಕ್ರಮಣವನ್ನು ನೆನೆದುಕೊಳ್ಳಿ—ಎಂದರು ಅವರು.

ಈ ಇಬ್ಬಗೆಯ ಹೇಳಿಕೆಗಳು ಶಾಂತಿ ಸಾಧಕರಿಗೆಂದೂ ಶೋಭನೀಯವಲ್ಲ. ಆದುದರಿಂದಲೇ ಪ್ರಧಾನಿ ಗಾಂಧಿ ಅಂದದ್ದು– 'ಮಹಾಶಯರೇ, ಶಾಂತಿಯ ಬಗ್ಗಿನ ನಿಮ್ಮ ಕಳಕಳಿಯು ಯಥಾರ್ಥವಾಗಿರುವಂತೆ ತೋರುವುದಿಲ್ಲ; ತುಸು ಸಾಚಾತನವನ್ನು ಪ್ರದರ್ಶಿಸಿರಿ.' ಇದಕ್ಕೆ ಭುಟ್ಟೋ ಏನು ಹೇಳಿದರು? 'ಯಥಾರ್ಥತೆ ಅಂದರೇನು? ನಾನು ಆಕೆಗೆ ಸಾಷ್ಟಾಂಗ ಪ್ರಣಾಮ ಮಾಡಬೇಕೆ? ಅಥವಾ ಆಕೆಯ ಮುಂದೆ ಎರಡೂ ಕೈಗಳೆತ್ತಿ ನಿಲ್ಲಬೇಕೆ?' ಇವಾವುದನ್ನೂ ಅವರು ಮಾಡಬೇಕಿಲ್ಲ. ಭಾರತದೊಡನೆ ಶಾಶ್ವತ ಶಾಂತಿ ಬಯಸುವವರು ಭಾರತವನ್ನು ವ್ಯರ್ಥವಾಗಿ ಟೀಕಿಸುವುದಕ್ಕೆ ಕೊನೆ ಹಾಕಬೇಕು. ಪಾಪ, ತನ್ನ ಪ್ರಜೆಗಳನ್ನು ಸಮಾಧಾನ ಪಡಿಸಲು ಈ ಬಗೆಯ ಟೀಕೆ ಅನಿವಾರ್ಯವಂತೆ ಭುಟ್ಟೋರಿಗೆ. ಅಂದರೆ, ತನ್ನ ಪ್ರಜಾ ಜನರಿಗೆ ವಾಸ್ತವಿಕ ಪರಿಸ್ಥಿತಿಯನ್ನು ತಿಳಿಸಲು ಅವರು ಹೆದರುತ್ತಾರೆ ಎಂದು ಅರ್ಥ. ಮುಖ್ಯವಾಗಿ ಬಂಧನದಲ್ಲಿರುವ ಪಾಕ್ ಸಮರ ಕೈದಿಗಳು ಸ್ವದೇಶಕ್ಕೆ ಮರಳುವವರೆಗೆ ಪಾಕ್ ಜನತೆ ತೆಪ್ಪಗಾಗುವುದು ಸಾಧ್ಯವಿಲ್ಲ. ಅದರ ಮೇಲೆ ಬಾಂಗ್ಲಾ ದೇಶ ಸರಕಾರ ಅವರ ವಿಚಾರಣೆ ನಡೆಸಲೂ ನಿರ್ಧರಿಸಿದೆ. ಹಾಗಿರುವಾಗ, ಭುಟ್ಟೋರ ಪರಿಸ್ಥಿತಿ ಶೋಚನೀಯವೆಂಬುದು ಯಾರಿಗಾದರೂ ವೇದ್ಯವಾಗುತ್ತದೆ. ಇಂಡೋ ನೇಶ್ಯದ ಮಧ್ಯಸ್ಥಿಕೆಯಲ್ಲಿ ಬಾಂಗ್ಲಾದ ಮನವೊಲಿಸಲು ಭುಟ್ಟೋ ಪ್ರಯತ್ನಿಸಿದರು; ಆದರೆ ಅದನ್ನು ಶೇಕ್ ಮುಜಿಬುರ್ ತಿರಸ್ಕರಿಸಿ ಬಿಟ್ಟರು. 'ಕೈದಿಗಳನ್ನು ಬಿಟ್ಟುಕೊಡಿ, ಮನ್ನಣೆ ನೀಡುತ್ತೇವೆ' ಎಂದು ಅಂಗಲಾಚಿದರು. ಪಾಕಿಸ್ತಾನದ ಮನ್ನಣೆ ಸಿಕ್ಕದೇನು? ಸಿಗದಿದ್ದರೇನು? ಅಮೆರಿಕೆಯೇ ಬಾಂಗ್ಲಾ ದೇಶವನ್ನು ತಡವಾಗಿಯಾದರೂ ಮನ್ನಿಸಿದ ಮೇಲೆ ವಸ್ತುಸ್ಥಿತಿಯನ್ನು ಬಹುಕಾಲ ಮುಚ್ಚಿಡುವುದು ಸಾಧ್ಯವಿಲ್ಲವೆಂಬುದಕ್ಕೆ ಬೇರೆ ಪ್ರಮಾಣ ಅನಗತ್ಯ ತಾನೆ? ಭುಟ್ಟೋ ಮಹಾಶಯರು ಎಲ್ಲರನ್ನೂ ಎಲ್ಲ ಕಾಲದಲ್ಲೂ ವಂಚಿಸಬಹುದೆಂದು ತಿಳಿದಿದ್ದರೆ, ಅದು ಈ ಬಾರಿ ಸುಳ್ಳಾಗಿದೆ. ಯಾರ ಮಧ್ಯಸ್ಥಿಕೆಯೂ ಇಲ್ಲದೆ ಯಾವ ಪೂರ್ವ ಶರತ್ತೂ ಇಲ್ಲದೆ ಶಾಶ್ವತ ಶಾಂತಿಯ ಕಾಳಜಿಯಿಂದ ಮಾತುಕತೆ ನಡೆಸಲು ಭಾರತ ಉತ್ಸುಕವಿದೆ.

ಭಾರತದ ವಿದೇಶ ಸಚಿವ ಸರ್ದಾರ ಸ್ವರ್ಣಸಿಂಗರು ಅನಿರೀಕ್ಷಿತವಾಗಿಯೇ ಎಂಬಂತೆ ಸೋವಿಯತ್ ನಾಯಕರನ್ನು ಭೇಟಿಮಾಡಿ ಬಂದರು. ಈ ಭೆಟ್ಟಿ ಪರಸ್ಪರ ಆಸಕ್ತಿಯ ವಿಷಯಗಳ ಬಗ್ಗೆ ಮಾತುಕತೆ ನಡೆಸುವುದಕ್ಕೆಂದು ಹೇಳಲಾಗಿದ್ದರೂ ಭಾರತ—ಪಾಕ್ ಶಾಂತಿ ಸಾಧಕ ಮಾತುಕತೆಯ ಪ್ರಸ್ತಾಪವೂ ಆನುಷಂಗಿಕವಾಗಿ ಬಂದಿರಲೇ ಬೇಕು. ಯದ್ಯಪಿ ಹಾರಾಡುತ್ತಿದ್ದ, ಭಾರತದ ಪ್ರಪ್ರಥಮ ಶತ್ರು ಭುಟ್ಟೋರನ್ನು ಗೋಳು ಹೊಯ್ದುಕೊಂಡುದು ಸಾಕೆಂದು ಅನ್ನಿಸಿರ ಬಹುದು. ಕಬ್ಬಿಣವನ್ನು ಬಗ್ಗಿಸಬೇಕಾದರೆ ಅದನ್ನು ಸರಿಯಾಗಿ ಬಿಸಿ ಮಾಡಬೇಕು. ಆ ಬಿಸಿ ಮಿತಿಮೀರಿದರೆ, ಕಬ್ಬಿಣವೂ ಕರಗಿ ನೀರಾಗುತ್ತದೆ. ಬೇಕಾದಂತೆ ಬಾಗಿಸಲು ಈಗಲೇ ಸುತ್ತಿಗೆ ಹಿಡಿದು ಬಡಿಯ ಬೇಕಾಗುತ್ತದೆ. ಭಾರತವು ಪಾಕಿನೊಡನೆ ಶೃಂಗಸಭೆಗೆ ಸಿದ್ಧವಿರುವುದಾದರೂ ಅದಕ್ಕೆ ಮೊದಲು ಪ್ರತಿನಿಧಿ ಮಟ್ಟದಲ್ಲಿ ಮಾತುಕತೆಗೆ ಆರಂಭ ಮಾಡುವ ಸಲಹೆಯನ್ನು ನೀಡಿದೆ ಇದು ಎಲ್ಲ ಸೂರ್ವಭಾವಿ ಮಾತುಕತೆ ನಡೆಸಿದ ಬಳಿಕ ಶ್ರೀಮತಿ ಗಾಂಧಿ–ಮಹಾಶಯ ಭುಟ್ಟೋ ಭೇಟಿಯಾಗ ಬಹುದೆಂಬ ಭಾರತದ ನಿಲುಮೆಗೆ ಸೋವಿಯತ್ ನಾಯಕರೂ ಅನುಮೋದನೆ ನೀಡಿದ್ದಾರೆ. ಈ ವಿಚಾರಕ್ಕೆ ರಶ್ಯದ ಬೆಂಬಲ ಪಡೆಯುವುದೇ ಸರ್ದಾರ ಸಿಂಗರ ಆಕಸ್ಮಿಕ ಮೋಸ್ಕೋ ದರ್ಶನದ ಮುಖ್ಯೋದ್ದೇಶವಿದ್ದಿರ ಬಹುದು. ಭಾರತ—ಪಾಕಿಸ್ತಾನಗಳ ನಡುವೆ ಈ ಹಿಂದೆಯೂ ಹಲವಾರು ಸುತ್ತಿನ ಮಾತುಕತೆಗಳು ನಡೆದು ವ್ಯರ್ಥವಾಗಿರುವುದರಿಂದ ಈ ಬಾರಿಯೂ ಒಮ್ಮೆಲೇ ಶೃಂಗಸಭೆ ನಡೆಯುವುದಕ್ಕಿಂತ ಪ್ರತಿನಿಧಿ ಮಟ್ಟದ ಸಭೆ ಏರ್ಪಡುವುದೇ ಸೂಕ್ತವೆನಿಸುತ್ತದೆ. ಆದರೆ ಹಿಂದಿನಂತೆ ಭಾರತವನ್ನು ಮಂಗ ಮಾಡಲು ಭುಟ್ಟೋ ಬಯಸಿದ್ದರೆ, ಅವರೇ ಮಂಗವಾಗುತ್ತಾರೆಂಬುದನ್ನು ಮರೆಯಬಾರದು. ಭಾರತದೊಡನೆ "ಕೊನೆಯ ಯುದ್ಧ"ವೆಂದು ಅವರು ಗುಡುಗಿದಂತೆ ಭಾರತವೂ ನಡೆದುದು ಪಾಕಿನೊಡನೆ ಕೊನೆಯ ಯುದ್ಧವಾಗಬೇಕೆಂದು ಹೃದಯದಿಂದ ಬಯಸುತ್ತದೆ. ಭಾರತದ ಉಪಖಂಡದಲ್ಲಿ ಶಾಶ್ವತ ಶಾಂತಿಯನ್ನು ನೆರೆಹೊರೆಯೊಡನೆ ಉತ್ತಮ ಸಂಬಂಧವನ್ನು ಭುಟ್ಟೋ ಬಯಸುವುದಾದರೆ, ಈಗ ನಿಯೋಜಿತವಾಗಿರುವ ಮಾತುಕತೆಗಳಲ್ಲಿ ಪೂರ್ವಗ್ರಹ ಬಿಟ್ಟು ಭಾಗವಹಿಸಬೇಕು –ಮಾತುಕತೆಗಳಿಗೆ ವಾಸ್ತವಿಕ ಅಂಶಗಳನ್ನೇ ವೇದಿಕೆಯಾಗಬೇಕು.

ಹೊಸ ರಾಜ್ಯಸಭಾಸದರು

ಕರ್ನಾಟಕದ ವಿಧಾನ ಸಭೆಯಿಂದ ರಾಜ್ಯ ಸಭೆಗೆ ಆರಿಸ ಬೇಕಾದ ನಾಲ್ವರು ಸದಸ್ಯರಾಗಿ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ, ಟಿ. ಎ. ಪೈ. ಮಕ್ಸೂದ್ ಅಲಿ ಖಾನ್ ಮತ್ತು ನರಸಯ್ಯನವರು ಆಯ್ಕೆಯಾದರು ; ಆಳುವ ಕಾಂಗ್ರೆಸಿನ ಎಂ. ಡಿ. ನಾರಾಯಣರು ಸೋತು ಹೋದರು. ಗೆದ್ದವರಲ್ಲಿ ಮೊದಲನೆಯವರು ಸಂಸ್ಥಾ ಕಾಂಗ್ರೆಸ್ಸಿಗರು. ಉಳಿದವರು ಆಳುವ ಕಾಂಗ್ರೆಸ್ಸಿಗರು. ಆಳುವ ಕಾಂಗ್ರೆಸ್ಸು ಸುಲಭದಲ್ಲಿ ಮೂರು ಸ್ಥಾನಗಳನ್ನು ಮುಂದಿನ ಸುತ್ತಿನಲ್ಲಿ ಉಳಿದೊಂದು ಸ್ಥಾನವನ್ನೂ ಪಡೆಯುವ ನಿರೀಕ್ಷೆಯಿಟ್ಟುಕೊಂಡಿತ್ತು. ನೂರ ಎಪ್ಪತ್ತಮೂರು ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಅದು ಹಿಂದಿನ ರಾತ್ರಿ ಹೊಂದಿತ್ತೆಂದು ಹೇಳಲಾಗಿತ್ತು. ಮತ್ತೆ ಮೊದಲ ಸುತ್ತಿನಲ್ಲೇ ಗೆಲ್ಲಲು ಅದಕ್ಕೆ ಬೇಕಾಗಿದ್ದ ಮತಗಳು ಮೂರು ಮಾತ್ರ. ಆದರೆ. ಅದರ ಲೆಕ್ಕಾಚಾರ ತಲೆಕೆಳಗಾಗಿ, ವೀ



ರೇಂದ್ರ ಪಾಟೀಲರು ಎಲ್ಲರಿಗಿಂತ ಹೆಚ್ಚು ಮತ ಪಡೆದು ಮೊದಲ ಸುತ್ತಿನಲ್ಲೇ ಗೆದ್ದು ಬಂದರು; ನರಸಯ್ಯನವರು ಎರಡನೆಯ ಸುತ್ತಿನಲ್ಲಿ ಗೆದ್ದರು ಅಂದರೆ. ಸಂಸ್ಥಾ ಕಾಂಗ್ರೆಸ್ಸಿಗೆ ಬಂದರೂ ಬರಬಹುದಾಗಿದ್ದ ಪಾಡು ಆಳುವ ಕಾಂಗ್ರೆಸ್ಸಿಗೆ ಬಂತು. ಮುಖ್ಯಮಂತ್ರಿ ದೇವರಾಜ ಅರಸರು ನಾಲ್ಕನೆಯ ಸ್ಥಾನದ ಬಗ್ಗೆ ನಿರೀಕ್ಷೆಯಿಟ್ಟು ಕೊಂಡಿರಲಿಲ್ಲವೆಂದು ಹೇಳಿದರೂ ಮೊದಲ ಸುತ್ತಿನಲ್ಲೇ ವೀರೇಂದ್ರ ಪಾಟೀಲರು ಗೆಲ್ಲಬಹುದು

(ಹತ್ತನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ದೇಶ ಭಾರತ, ಕುಟುಂಬ ಭಾರತ

'ನೋಡಿದ್ರಾ?'

'ಏನನ್ನ....?'

'ಅಲ್ರೀ, ಆಂಧ್ರ ಪ್ರದೇಶದ ಮುಖ್ಯಮಂತ್ರಿ....'

'ಹೌದು, ಪಿ. ವಿ. ನರಸಿಂಹರಾಯರು.'

'ತಮ್ಮ ರಾಜ್ಯದ ಒಣಗುತ್ತಿರುವ ಭೂಮಿಗೆಂದು ತುಂಗ ಭದ್ರಾ ಕಟ್ಟೆಯಿಂದ ನೀರು ಕೇಳಿದರೆ....'

'ದಿನಂಪ್ರತಿ ಮೂರು ಸಾವಿರದ ಐನೂರು ಕ್ಯೂಸೆಕ್ಸ್ ನೀರು—ಹದಿನೈದು ದಿನಗಳವರೆಗೆ....'

'ಕರ್ನಾಟಕದ ಅರಸು ಸರಕಾರ ಆಗೋದಿಲ್ಲಾಂತ ನಿರ್ಧರಿಸಿತು.'

'ಅದೂ ಸಂಬಂಧಪಟ್ಟ ಎಲ್ಲ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಮೇಲೆ....'

'ಹೌದೂನ್ನಿ, ಆದರೆ ಈಗ ನೋಡಿ....'

'ಏನು?'

'ಪ್ರಧಾನಿ ಇಂದಿರಾಗಾಂಧಿಯವರ ವಿಶೇಷ ಮನವಿ, ನೀರಾವರಿ ಸಚಿವ ಕೆ. ಎಲ್. ರಾಯರ ಮಧ್ಯಸ್ಥಿಕೆಯಿಂದ ಅರಸು ಸಂಪುಟದ ನಿರ್ಧಾರ ಬದಲಾಗಿ ಹೋಯ್ತು ನೋಡಿ....'

'ಅದೂ ಹೌದು...'

'ಅಲ್ರೀ, ಹೇಗೂ ಕೊಡುವವರಾಗಿದ್ರೆ ಮೊದಲೇ ಕೊಡಬಹುದಿತ್ತಲ್ಲಾ....'

'ಕೊಡ ಬಹುದಿತ್ತೂನ್ನು, ಆದರೂ ಅದರಲ್ಲೊಂದು ಗತ್ತುಗಾರಿಕೆ.'

'ಏನು?'

'ಕೇಂದ್ರ ಸರಕಾರದ ವತ್ತಾಯದ ಮೇಲೆ ಕೊಟ್ಟಿದ್ದು; ಕೊಟ್ಟದ್ದರಿಂದ ನಮಗೆ ತುಂಬ ತ್ರಾಸವಾಗಿದೆ. ಆದರೂ ನಿಮಗೆ ಉಪಕಾರ ಮಾಡಿದ್ದೇವೆ....'

'ಸಾಕು ಬಿಡೀಂದ್ರೆ... ಅಲ್ಲ, ಕೇಂದ್ರದ ವಿನಂತಿ ಬಂದೊಡನೆಯೇ ತುಂಗಭದ್ರಾದಲ್ಲಿ ನೀರು ಜಾಸ್ತಿಯಾಯಿತೇನು?'

'ಹಾಗಲ್ಲ ಕಣೇ....'

'ಮತ್ತೆ ಹೇಗೇಂದ್ರಾ....'

'ನೋಡು, ಕರ್ನಾಟಕ ಕೊಡಲೊಪ್ಪಿದ್ದು ಈಗ ಹತ್ತು ದಿನಗಳವರೆಗೆ ಮಾತ್ರ....'

'ಅಲ್ರಿ ಇದ್ರಲ್ಲಿ ವಿಶೇಷವೇನು ಬಂತೂಂತ? ನೋಡಿ, ರೇಶನ್ ಕಾಲದಲ್ಲಿ ಹತ್ತು ಕಿಲೋ ಸಕ್ಕರೆ ಬೇಕಿದ್ರೆ ಐವತ್ತು ಕಿಲೋ ಬೇಕೆಂದು ಬರೀತಿದ್ರು. ಆಗ ಹತ್ತೋ ಹದಿನೈದೋ ಮಂಜೂರಾಗುತ್ತಿತ್ತು. ಹಾಗೆ.... ಮತ್ತೆ ನೋಡಿ....'

'ಏನು?'

'ಅಲ್ಲ, ನಾನನ್ನೋದು, ಹೇಗೂ ಕೊಡೋಕೆ ಒಪ್ಪಿದ್ದಾರೆ. ನಿಜವಾಗ್ಲೂ ಆಂಧ್ರಕ್ಕೆ ಹದಿನೈದು ದಿನಗಳ ನೀರು ಬೇಕಾಗಿದ್ರೆ ಇವ್ರು ಹತ್ತು ದಿನ ಕೊಟ್ರೇನು ಪ್ರಯೋಜನಾಂತ? ಬೆಳೆ ಕರಟುವ ದಿನ ಮುಂದೂಡುವುದರಿಂದ ಸಮೃದ್ಧಿ ಹೇಗಾಗುತ್ತೆ?'

"ಅಲ್ವೆ ಆಮೇಲೆ ಏನಾದರೂ ಆಗುತ್ತೆ."

'ಏನಾದರೂ ಅಂದ್ರೆ....'

'ಕೃಷ್ಣಾನದಿಯಲ್ಲಿ ತಾನಾಗಿಯೇ ನೀರು ಹರಿಯ ಬಹುದು; ಅಥವಾ....'

'ಏನು, ಹೇಳಿ ಬಿಡಿ ...'

'ಮತ್ತೇನೇನು? ಡಾ| ರಾಯರು ಮತ್ತೊಮ್ಮೆ ಮಧ್ಯಸ್ಥಿಕೆಗೆ ಬಂದರೂ ಬರಬಹುದು....'

"ಅದೀಗ ಸರೀನ್ನಿ....ಇಂಥವರ ಕೈಯಲ್ಲಿ ರಾಜ್ಯ ಭಾರೀ ಸಮೃದ್ಧಿಯಾಗುತ್ತೆ...."

'ಅಲ್ವೇ, ನಿನ್ನ ಬುದ್ಧಿ ಅದೆಷ್ಟು ಸಂಕುಚಿತವಾಗುತ್ತ ಬಂತೂಂತ?'

'ಅಲ್ರಿ, ನನ್ನದೂಂತೇನು? ದೇಶದ ಪ್ರತಿಯೊಬ್ಬನೂ ಅದೇ ಧಾಟಿಯಲ್ಲಿ ತನ್ನನ್ನು ತಾನು ರೂಪಿಸಿ ಕೊಳ್ಳುತ್ತಿರುವಾಗ....'

'ಅದೇ ನೋಡು ತಪ್ಪು. ಕೆಲವು ವರ್ಷಗಳಿಗೆ ಹಿಂದೆ ಇಂತಹ ಪ್ರಾದೇಶಿಕ ಅಭಿಮಾನ ಬೆಳೆಯ ತೊಡಗಿದ್ದು ನಿಜ. ಆದರೆ, ಇದೀಗ ಅದು ಮಾಯವಾಗುತ್ತ ಬರುತ್ತಿದೆ....'

'ಅದು ಹೇಗೆ?'

'ನೋಡು, ಕಳೆದ ವರ್ಷ ನಡೆದ ಲೋಕ ಸಭಾ ಚುನಾವಣೆ—ಮತ್ತು ಈ ವರ್ಷದ ವಿಧಾನ ಸಭಾ ಚುನಾವಣೆಗಳ ವೇಳೆ ಪ್ರಾದೇಶಿಕತೆಗೊಂದು ಕೊನೆ ಬಂದಿದೆಯೆನಿಸುತ್ತದೆ....'

'ನೀವನ್ನೋದು ಚುನಾವಣಾ ಫಲಿತಾಂಶವನ್ನು ನೋಡಿ...'

'ಹ್ಞೂಂ....'

'ಅದು ಬಿಡೀರಿ ಚುನಾವಣೆ ಗೆದ್ದದ್ದು ಭಾರತೀಯತೆಯಲ್ಲ ಇಂದಿರಾಗಾಂಧಿ. ಆಕೆಯ ವ್ಯಕ್ತಿಗತ ಯೋಗ್ಯತೆ....'

'ಶ್ರೀಮತಿ ಗಾಂಧಿಯವರು ಪ್ರಾದೇಶಿಕತೆಯನ್ನು ಸಹಿಸುವುದಿಲ್ಲ....'

'ಬೇಡಾರಿ. ರಾಜ್ಯಗಳಲ್ಲೂ ಒಂದೊಂದು ಸರಕಾರಗಳಿವೆ ಅನ್ನೋದು ಮರೆತು ಬಿಡ ಬಾರದು ನೋಡಿ....'

'ಅದಕ್ಕೇ ನೋಡು ಅವರಂದದ್ದು ಕೇಂದ್ರ–ರಾಜ್ಯಗಳಲ್ಲಿ ಒಂದೇ ಪಕ್ಷದ ಸರಕಾರ ಇರಬೇಕೂಂತ....'

'ಆಯ್ತಲ್ಲ, ನಮ್ಮ ವಿತ್ತ ಸಚಿವ ಘೋರ್ಪಡೆ ಅಂದಿದ್ದರು–ಕೇಂದ್ರದೊಡನೆ–ನೆರೆ ರಾಜ್ಯಗಳೊಡನೆ ನಾವು ಜಗಳ ಕಾಯುವುದಿಲ್ಲ, ಹೊಂದಿಕೊಂಡು ಹೋಗುತ್ತೇವೆ ಎಂದು. ಮೊದಲನೆಯ ಹೊಂದಾಣಿಕೆ ಆಂಧ್ರ ಪ್ರದೇಶದೊಡನೆ – ತುಂಗ ಭದ್ರಾ ನೀರನ್ನು ಬಿಡುವುದರ ಮೂಲಕ....'

'ಹ್ಞೂಂ, ಇನ್ನು ಎರಡನೆಯದು ಮಹಾರಾಷ್ಟ್ರದೊಡನೆ. ಬೆಳಗಾಂವಿಯನ್ನು ಅವರಿಗೆ ಕೊಟ್ಟು ಬಿಡುವುದರ ಮೂಲಕ....'

'ಅಲ್ರಿ, ಗಡಿ ವಿವಾದದ ಪರಿಹಾರದ ಸಂಪೂರ್ಣ ಹೊಣೆಗಾರಿಕೆ ಪ್ರಧಾನ ಮಂತ್ರಿಗೇ ಸೇರಿದ್ದೆಂದು ಈಗಲೇ ಆಳುವ ಕಾಂಗ್ರೆಸ್ ನಾಯಕರು ಹೇಳತೊಡಗಿದ್ದಾರಲ್ಲಾ...'

'ಅದು ಹೌದೂನ್ನು. ಆದರೂ ಒಂದು ಆಶಯ ಸಂಕೇತ. ಎರಡೂ ರಾಜ್ಯಗಳಿಗೆ ಆದಷ್ಟು ಕಡಿಮೆ ಹಾನಿಯಾಗುವಂತೆ ಗಡಿ ಸಮಸ್ಯೆಗೆ ಪರಿಹಾರವರಸುವುದು ಕೇಂದ್ರದ ನೀತಿಯಂತೆ....'

'ಅದೇನಿದ್ದರೂ ಬೆಳಗಾಂವಿಯನ್ನು ಎತ್ತಿ ಕೊಡಬಹುದೂನ್ನಿ. ಮೂರು ಬಾರಿಯೂ ಮಹಾರಾಷ್ಟ್ರ ವಿಲಿಯನವಾದಿಗಳೇ ಗೆದ್ದು ಬಂದಿದ್ದಾರೆ....'

'ಮತ್ತೆ ನೋಡು, ಬೆಳೆ ಕರ್ನಾಟಕದಲ್ಲಾದರೆ ಏನು? ಆಂಧ್ರದಲ್ಲಾದರೆ ಏನು? ಬೆಳಗಾಂವಿ ಕರ್ನಾಟಕದಲ್ಲಿದ್ದರೇನು? ಮಹಾರಾಷ್ಟ್ರದಲ್ಲಿದ್ದರೇನು? ಕಾಸರಗೋಡು...'

'ಅಷ್ಟು ವಿಶಾಲ ಭಾವನೆಯಿರುವವರು ರಾಜ್ಯ ರಾಜ್ಯಗಳ ನಡುವೇಕೆ ನಿರ್ಬಂಧ ಹೇರಬೇಕು?'

'ಅದೇನೋ ನಡೆದು ಬಂದ ದಾರಿ ಒಂದು ಕಾಲದಲ್ಲಿ ಪ್ರಾದೇಶಿಕತೆಯು ರಾಜ್ಯರೂಪ ತಾಳಿ ಬಿತ್ತಿದ ಬೀಜಗಳು ಕ್ರಮೇಣ ರಾಜ್ಯ–ರಾಜ್ಯಗಳ ನಡುವೆ, ರಾಜ್ಯ ಕೇಂದ್ರಗಳ ನಡುವೆ ಸಾಮರಸ್ಯ ಬೆಳೆಯುತ್ತ ಹೋದಂತೆ ಏಕರಾಷ್ಟ್ರೀಯತೆ ಮೂಡುತ್ತದೆ.'

'ಅಲ್ರಿ, ಈ ಹೊಂದಾಣಿಕೆಯ ಫಲವಾಗಿ ಹಿಂದೀ ಮಾಧ್ಯಮದ ವಿಶ್ವ ವಿದ್ಯಾಲಯವೂ ಸ್ಥಾಪಿತವಾಗ ಬಹುದು....'

'ಅಲ್ವೇ, ರಾಜ್ಯ ಸರಕಾರ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡ ಮೇಲೆ, ಕೇಂದ್ರ ಸರಕಾರ ಹಣ ಸುರಿಯುತ್ತದೆಂದ ಮೇಲೆ ಅದೂ ಆದರೂ ಆಗಬಹುದು.

'ತೆಲುಗು—ಕನ್ನಡಗಳಿಗೆ ಏಕಲಿಪಿಯೂ ಆಗ ಬಹುದು.....'

'ಹ್ಞೂಂ. ಅಷ್ಟೆ ಏಕೆ ಕನ್ನಡವನ್ನು ನಾಗರೀ ಲಿಪಿಯಲ್ಲೂ ಬರೆಯ ಬಹುದು ...'

'ಅಲ್ರಿ, ಇದೇ ರೀತಿ ಹೊಂದಾಣಿಕೆ ಬೆಳೆಯುತ್ತ ಹೋದರೆ....'

'ಅನ್ಯೋನ್ಯ ಸಂಸಾರವಾಗುತ್ತದೆ....'

'ಹ್ಞೂಂ ಆದ್ರೂ ಹೌದೂನ್ನಿ. ಆದರೆ, ತನ್ನ ತನಕ್ಕೆ ತಿಲಾಂಜಲಿ....'

'ನೋಡಮ್ಮ, ಆದರ್ಶ ಸಂಸಾರವಾಗಬೇಕಾದರೆ, ಎಲ್ಲರೂ ತಮ್ಮ ತನವನ್ನು ತ್ಯಾಗ ಮಾಡಲೇ ಬೇಕಾಗುತ್ತದೆ 'ನಾನು ಹೋದರೆ ಹೋಗ ಬಹುದು'ಎಂದು ಕನಕದಾಸರು ಅಂದದ್ದರಲ್ಲಿ ಅಷ್ಟೊಂದು ಧ್ವನಿಯಿದೆ. ಆ ನಾನು ಹೋದರೆ ಮಾತ್ರ ಸ್ವರ್ಗಪ್ರಾಪ್ತಿಯಾಗುತ್ತದೆ. ಇದು ರಾಜ್ಯಕ್ಕೂ ದೇಶಕ್ಕೂ ಸಮನೇ....'

'ಅಲ್ರಿ, ಇಂದಿರಾ ಗಾಂಧಿ ಹೇಳುತ್ತಾರೆ. ಭಾರತ ತನ್ನ ಹಿತ ಯಾವುದರಲ್ಲಿದೆಯೆಂದು ಯೋಚಿಸಿ ಅದನ್ನು ಮಾಡುತ್ತದೆಯೆಂದು. ಹಾಗೆಯೇ ರಾಜ್ಯಗಳೂ ತಮ್ಮ ಹಿತವೆಲ್ಲಿದೆಯೆಂದು ಅರಸುವುದು ತಪ್ಪೇನು?'

'ನೋಡಮ್ಮ ರಾಜ್ಯಕ್ಕೆ ಸ್ವತಂತ್ರವಾದ ಅಸ್ತಿತ್ವದಲ್ಲದೆ? ಅದು ರಾಷ್ಟ್ರ ಪುರುಷನ ಒಂದು ಅಂಗ ಅದು ತನ್ನ ಶಕ್ತಿಗನುಸಾರವಾಗಿ ತನ್ನಷ್ಟಕ್ಕೇ ಕಾರ್ಯಮಗ್ನವಾಗ ಬಹುದು ಆದರೆ ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯವಿಲ್ಲ. ಹಾಗೆಯೇ ಒಂದು ಕುಟುಂಬದ ಸದಸ್ಯರು; ಒಂದು ದೇಶದ ರಾಜ್ಯಗಳು....'

'ಅಂದರೆ, ನಮ್ಮದೊಂದೇ ದೇಶ ಭಾರತ....'

'ಅಲ್ವೆ ಮತ್ತೆ? ನಮ್ಮದೊಂದೇ ದೇಶ ಭಾರತ. ನಮ್ಮದೊಂದೇ ಕುಟುಂಬ ಭಾರತ....'

'ಅಲ್ರಿ ಅಷ್ಟು ವಿಶಾಲವಾಗಿ ಮನಸ್ಸನ್ನು ವಿಸ್ತರಿಸುವುದು ಭಾರೀ ಕಷ್ಟವಾಗುತ್ತದೆ ...'

'ಸುಲಿದ ಬಾಳೆಯ ಹಣ್ಣು ನುಂಗುವುದೂ ತ್ರಾಸವಾಗುತ್ತದೆ....'

'ಗಂಟಲು ನೋವಿನಿಂದ ನರಳುವವರಿಗೆ....'

(ಒಂಭತ್ತನೇ ಪುಟ ನೋಡಿರಿ)

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 548/1971. O. S. 99/1950.

ಗೌರಂಮ —ಅರ್ಜಿದಾರಳು.

ಕಾವೇರಂಮ ಕೂಡಾ —ಎದ್ರಿರು

ಸದ್ರಿ ಅಮ್ಲುಜ್ಯಾರಿಯ 5 ಮತ್ತು 8ನೇ ಎದ್ರಿರು 5. ಶ್ರೀನಿವಾಸ ಜೋಗಿತ್ತಾಯ, ನರಸಿಂಹ ಜೋಗಿತ್ತಾಯರ ಮಗ, ಬೆಳ್ತಂಗಡಿ ತಾಲ್ಲೂ ಪುಚ್ಚಿನ ಗ್ರಾಮ.

8. ಪದ್ಮಾವತಿ ಅಮ್ಮ, ಕೇಶವ ಪೂಜಿತ್ತಾಯರ ಪತ್ನಿ, ಕಾಸರಗೋಡು ತಾಲ್ಲೂ ಅರಿಕ್ಕಾಡು ಗ್ರಾಮದಲ್ಲಿ.

ಇವರೀಗೆ ಕೋರ್ಟು ಹುಕ್ಕುಂ ಪ್ರಕಾರ ತಿಳಿಸುವುದೇನೆಂದರೆ—

ಅರ್ಜಿದಾರಳು ಮೇಲಿನ ಅಮ್ಲುಜ್ಯಾರಿಯಲ್ಲಿ ದಾಖಲು ಮಾಡಿದ ಏಲಂ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ಬಗ್ಗೆ ಸದ್ರಿ ಅಮ್ಲುಜಾರಿಯು ತಾ. 24—5—72ಕ್ಕೆ ಯಿಟ್ಟಿರುವುದರಿಂದ ಅದ್ಕೆ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ 11 ಗಂಟೆ (ಬೆಳಿಗ್ಗೆ)ಗೆ ಸರಿಯಾಗಿ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉದಹರಿಸಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

[Sd] C. V. Shastry
Advocate for Petitioner.

ಪುತ್ತೂರು, ತಾ. 5—4—72.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ಡಾ| ಗುರುರಾಜ ಭಟ್ಟರ ನೇತೃತ್ವದಲ್ಲಿಯ

ಜಿಲ್ಲೆಗೇ ಕೀರ್ತಿಸ್ತಂಭವೆನಿಸಿದ—

ಕಲ್ಯಾಣಪುರದ ಚಾರಿತ್ರಿಕ ಅನ್ವೇಷಣಾ ಸಂಸ್ಥೆ

ಮಿಲಾಗ್ರಿಸ್ ಕಾಲೇಜು ಕಲ್ಯಾಣಪುರ—ಇದೊಂದು ಹೊಸ ವಿದ್ಯಾಸಂಸ್ಥೆಯಾಗಿದೆ. ಇದು ಅಸ್ತಿತ್ವಕ್ಕೆ ಬಂದು ಐದು ವರ್ಷಗಳು ಸಂದು ಹೋದುವು. ಇದು ತನ್ನ ಶೈಶವಾವಸ್ಥೆಯಲ್ಲಿಯೇ ಪಾಠ ಮತ್ತು ಪಾಠೇತರ ಚಟುವಟಿಕೆಗಳಲ್ಲಿ ಅಸಾಮಾನ್ಯ ಅಭಿವೃದ್ಧಿಯನ್ನು ಸಾಧಿಸಿದೆ.

ಚಾರಿತ್ರಿಕ ಅನ್ವೇಷಣೆಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಇಲ್ಲಿ ಸ್ಥಾಪಿತಗೊಂಡ ಸಂಶೋಧನಾ ಇಲಾಖೆಯು ಇಲ್ಲಿಯ ಗಮನೀಯ ಲಕ್ಷಣವಾಗಿದೆ. 'ದಿ ಅಸೋಸಿಯೇಶನ್ ಆಫ್ ಇಂಡಲಾಜಿಕಲ್ ಸ್ಟಡೀಸ್' ಎಂಬ ಈ ಸಂಘವು 1970ರಲ್ಲಿ ಸ್ಥಾಪಿತಗೊಂಡಿತು. ಮುಖ್ಯವಾಗಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮತ್ತು ಸಾಮಾನ್ಯವಾಗಿ ಮೈಸೂರು ರಾಜ್ಯದ ಸ್ಮಾರಕ ಚಿಹ್ನೆ (ಕೀರ್ತಿ ಸ್ತಂಭ)ಗಳ ಕ್ರಮ ಬದ್ಧ ನಿರೀಕ್ಷಣೆ ಮಾಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ನಾಣ್ಯಗಳ, ಪ್ರಾಚೀನ ಹಸ್ತ ಲೇಖಗಳ ಮತ್ತು ಇತರ ಮಹತ್ತರ ಅವಲೋಕನಗಳ ಅಭ್ಯಾಸವನ್ನು ಹೆಚ್ಚಿಸಲು ಇದು ಪ್ರಯತ್ನಿಸುತ್ತದೆ. ತಜ್ಞರಾದ ಖ್ಯಾತಿವೆತ್ತ ಪ್ರಾಕ್ತನ ವಿಮರ್ಶಕರಾದ ಮತ್ತು ಆ ಸಂಘದ ಅಧ್ಯಕ್ಷರಾದ ಡಾ| ಪಿ. ಗುರುರಾಜ ಭಟ್ಟರು ಅದರ ಆಡಳಿತಗಾರರು ಮತ್ತು ವ್ಯವಸ್ಥಾಪಕರಾಗಿದ್ದಾರೆ. ಸಂಘದ ಕಾರ್ಯದರ್ಶಿಗಳಾದ ಡಾ| ಟಿ. ಎಸ್. ರಾಜಗೋಪಾಲರು ಶಿಲಾಶಾಸನ (ಎಪಿಗ್ರಾಫಿ)ದಲ್ಲಿ ಡಿಪ್ಲೋಮಾವನ್ನು ಹೊಂದಿದವರಲ್ಲದೆ ಸುಶಿಕ್ಷಿತ ಪಂಡಿತರಾಗಿದ್ದಾರೆ. ಅಂತೆಯೇ ಉಪಕಾರ್ಯದರ್ಶಿ ಶ್ರೀ ಕೆ. ಎನ್. ಕೆದ್ಲಾಯರು ಕೂಡ ವಿಶೇಷ ತಜ್ಞರಾಗಿದ್ದಾರೆ. ಈ ಸಂಘಕ್ಕೆ ತಮ್ಮ ಪಾಲಿನ ಸಹಾಯವನ್ನು ನೀಡಲು ಒಂದಾದ ಕಾಲೇಜಿನ ಅಧ್ಯಾಪಕ ವೃಂದದ ಎಲ್ಲಾ ಸದಸ್ಯರಲ್ಲೂ ಭಾರತೀಯ ಸಂಸ್ಕೃತಿಯ ಅಧ್ಯಯನದ ಬಗ್ಗೆ ಸ್ವಾಭಾವಿಕ (ಸ್ವಂತ) ಅಭಿರುಚಿಯಿದೆ. ದಾಖಲೆಯ ಕಾನೂನುಗಳಿಗೆ ಅನುಸಾರವಾಗಿ ದಾಖಲೆಗೊಂಡ ಸಂಘ ಇದಾಗಿದೆ. ನಮ್ಮ ದೇಶದ ಪ್ರಾಚೀನ ಸಂಪತ್ತನ್ನು ಪ್ರಕಟಪಡಿಸುವುದಕ್ಕಾಗಿ (ಬೆಳಕಿಗೆ ತರುವುದಕ್ಕಾಗಿ) ಈ ಸಂಘವು ಹಾರ್ದಿಕವಾಗಿ ತನ್ನನ್ನು ತಾನು ಅರ್ಪಿಸಿದೆ.

ಈ ಸಂಘವು ಈಗಾಗಲೇ ಅದರ ಕೀರ್ತಿಗಾಗಿ, ಪ್ರಶಂಸನೀಯ ಸಾಧನೆಯನ್ನು ಕೈಕೊಂಡಿದೆ. ಕೋಟ ವಲಯದ ಹಲವಾರು ಸ್ಮಾರಕಗಳ ಅವಲೋಕನ, 9ನೇ ಶತಮಾನದ ಕಡಂದಲೆಯ ಶಾಸನದ ಅನ್ವೇಷಣೆ, ಉಡುಪಿ, ಉದ್ಯಾವರಗಳಲ್ಲಿನ 9ನೇ ಶತಮಾನದ ಮೂರು ಶಿಲಾಶಾಸನಗಳ ಉತ್ಖನನ ನಲುವತ್ತಕ್ಕಿಂತಲೂ ಮಿಕ್ಕಿ ಹೊಸ ಶಾಸನಗಳ ಅನ್ವೇಷಣೆ, ಪ್ರತಿಮಾಲಕ್ಷಣ ವಿಜ್ಞಾನ (ಪ್ರಾಚೀನ ಪ್ರತಿಮಾ ಶಾಸ್ತ್ರ) ಮತ್ತು ವಾಸ್ತು ಶಾಸ್ತ್ರ (ಶಿಲ್ಪ ಶಾಸ್ತ್ರ)ಗಳ ಬಗ್ಗೆ ಹಲವಾರು ಲೇಖನಗಳ ಮುದ್ರಣ, ಉತ್ತರ ಕನ್ನಡ ಜಿಲ್ಲೆಯ ಬಟ್ಕಳ ಮತ್ತು ಕಟ್ಗಲ ವಲಯಗಳಲ್ಲಿನ ಅನ್ವೇಷಣೆ, ಪ್ರಾಯಶಃ ಶಾತವಾಹನರದಾಗಿರಬಹುದಾದ ಎಲ್ಲಂಪಳ್ಳಿ ಮತ್ತು ಉಡುಪಿ ತಾಲೂಕುಗಳಲ್ಲಿನ ಇಟ್ಟಿಗೆಗಳ ಶೋಧನೆಯೇ ಈ ಮೊದಲಾದುವುಗಳು ಈ ಸಂಘದ ಕೆಲವು ಮುಖ್ಯ ಶೋಧನೆಗಳಾಗಿವೆ. ಹೊಯ್ಸಳರ ಕಾಲದ ದೇವಾಲಯಗಳ ಶಿಲ್ಪಪದ್ಧತಿಯ ಅಂತರ್ನಿರೀಕ್ಷಣೆಯೇ ಈ ಸಂಘದ ಪ್ರಥಮ ಪ್ರಕಟಣೆಯಾಗಿದೆ. ಇದುವೇ ಡಾ| ಪಿ. ಗುರುರಾಜ ಭಟ್ಟರು ಕೈಕೊಂಡ ಪರಿಶ್ರಮ ಪೂರ್ವಕ ಯೋಜನೆಯ ಸಾರಾಂಶವಾಗಿದೆ.

ಸರಕಾರದ ಅಥವಾ ಇನ್ನು ಯಾವುದೇ ಇತರ ಪಾರುಪತ್ಯದ ಸಹಾಯವಿಲ್ಲದೆ ಈ ಸಂಘವು ಕಾರ್ಯನಿರ್ವಹಣೆ ಮಾಡುತ್ತಿರುವುದು ಒಂದು ಗಮನೀಯ ಅಂಶವಾಗಿದೆ. 1971ನೇ ಇಸವಿ ದಶಂಬರ ತಿಂಗಳಿನ ದಿನಾಂಕ 19ರಂದು ಏರ್ಪಡಿಸಿದ ಪ್ರಾಚೀನ ವಸ್ತುಗಳ ಪ್ರದರ್ಶನವು ವಿದ್ವಾಂಸರಿಂದಲೂ ಸಾರ್ವಜನಿಕರಿಂದಲೂ ಮೆಚ್ಚುಗೆಯನ್ನು ಪಡೆದಿತ್ತು. ಈ ಸಂಘವು ಪ್ರಾಚೀನ ಕಾಲದ ನಾಣ್ಯ, ಶಾಸನ ಸಂಪತ್ತು ಮತ್ತು ಹಸ್ತಲೇಖಗಳ ವಿವಿಧ ವಸ್ತು ಪ್ರದರ್ಶನಾಲಯವೊಂದನ್ನು ರಚಿಸುತ್ತಿದೆ. ಅದಾಗಲೇ ಗಮನೀಯ (ಪ್ರಶಂಸನೀಯ) ಅಭಿವೃದ್ಧಿಯನ್ನು ಈ ಕ್ಷೇತ್ರದಲ್ಲಿ ಇದು ಸಾಧಿಸಿದೆ.

ಈ ಸಂಸ್ಥೆಯು ಇದಿಷ್ಟು ಕೆಲಸವನ್ನು ನಿರ್ವಹಿಸಿದರೂ ಯಾವುದೇ ತೆರನಾದ ದ್ರವ್ಯ ಸಹಾಯವಿಲ್ಲದಿರುವುದರಿಂದ ತುಂಬಾ ತೊಂದರೆಗೀಡಾಗಿದೆ. ಅದರ ಉದ್ದೇಶಿತ ದಾರಿಯಲ್ಲಿ ಅಭಿವೃದ್ಧಿಯನ್ನು ಸಾಧಿಸುವುದು ಸರಕಾರದ ಸಹಾಯವಿಲ್ಲದೆ ಅಸಾಧ್ಯ. ಭಾರತೀಯ ಸಂಸ್ಕೃತಿಯ ಅಭ್ಯಾಸದ ಕಡೆಗೆ ಹೆಚ್ಚು ಮಹತ್ವವನ್ನು ಕೊಡುವ ಈ ಕಾಲದಲ್ಲಿ ಇಂತಹ ಸಂಘಗಳಿಗೆ ಸರಕಾರ ಮತ್ತು ಸಾರ್ವಜನಿಕರ ಸಹಾಯವಿಲ್ಲದಿರುವುದು ಯೋಗ್ಯವಲ್ಲ. ಡಾ| ಪಿ. ಗುರುರಾಜ ಭಟ್ಟರಂತಹ ಪರಿಶ್ರಮಶೀಲ ಮತ್ತು ಘನ ವಿದ್ವಾಂಸರ ನೇತೃತ್ವದಲ್ಲಿ ಈ ಸಂಘವು ಮೇಲ್ಮೆಯ ಅರ್ಹತೆಯನ್ನು ಹೊಂದುವುದರಲ್ಲಿ, ಮತ್ತು ಚಾರಿತ್ರಿಕ ಸಂಶೋಧನೆಗಳ ಕೇಂದ್ರ ಬಿಂದುವಾಗುವುದರಲ್ಲಿ ಸಂದೇಹವಿಲ್ಲ.

●●

ಸ್ವಂತ ಉದ್ಯೋಗಕ್ಕಾಗಿ ಕೆನರಾ ಬ್ಯಾಂಕು ನಿಮಗೆ ಸಹಾಯ ಮಾಡುವುದು

ಸ್ವಂತ ಉದ್ಯೋಗ ಮಾಡುವ ಆಕಾಂಕ್ಷೆ ಇರುವ ಅನುಭವಸ್ಥ ಮತ್ತು ಸಾಹಸಿಕ
ಜನರಿಗೆ ಅಥವಾ ಚಾಲ್ತಿಯಲ್ಲಿರುವ ತಮ್ಮ ವ್ಯವಹಾರವನ್ನು ಅಭಿವೃದ್ಧಿ
ಗೊಳಿಸ ಬೇಕೆಂಬ ಇಚ್ಛೆ ಇರುವವರಿಗೆ ಸಹಾಯ ಮಾಡುವ ಉತ್ತಮ
ಪರಂಪರೆಯನ್ನು ಕೆನರಾ ಬ್ಯಾಂಕು ಹಲವಾರು ವರ್ಷ
ಗಳಿಂದ ರೂಪಿಸಿಕೊಂಡು ಬಂದಿದೆ.

ವಿವರಗಳಿಗೆ ನಿಮಗೆ ಸಮೀಪದ ನಮ್ಮ ಶಾಖೆಯ ಸಂಪರ್ಕ ಬೆಳೆಸಿರಿ

ಕೆನರಾ ಬ್ಯಾಂಕ್

ಪ್ರಧಾನ ಕಚೇರಿ: **ಬೆಂಗಳೂರು – 2**

ದೇವಸ್ಥಾನಗಳ ನಗರ ಢಾಕ್ಕಾ

ಪೂರ್ವ ಭಾರತದಲ್ಲಿ ಡಾಕೇಶ್ವರಿಯ ದೇವಸ್ಥಾನ ಪ್ರಖ್ಯಾತವಿದೆ. ಆ ದೇವಾಲಯದಿಂದಾಗಿ ಊರಿಗೆ ಡಾಕ್ಕಾವೆಂಬ ಹೆಸರು ಬಂದಿರುತ್ತದೆ. ಮೊಗಲರು ಅದಕ್ಕೆ ಜಹಾಂಗೀರ್ ನಗರವೆಂದು ಹೆಸರನ್ನು ಬದಲಾಯಿಸಿದರು. ಜನತೆಯ ನಾಲಗೆಯಲ್ಲಿ ಅದು ಡಾಕ್ಕಾವಾಗಿಯೇ ಉಳಿಯಿತು. ಅನಂತರ ಆಗಮಿಸಿದ ಆಂಗ್ಲೇಯರ ಪ್ರಭಾವದಿಂದಾಗಿ ಅದು ಡೆಕ್ಕಾವೆಂದು ಇಂಗ್ಲೀಷೀಕರಣವಾಯಿತು.

ಈಗಿನ ಡಾಕ್ಕಾ ನಗರದ ಕಾಲುವೆ ಪ್ರದೇಶದ ಪೂರ್ವದಿಕ್ಕಿನಲ್ಲಿ ಬೂರಿ ಗಂಗಾ ನದಿಯ ಬಳಿ ಬಂಗ್ಲಾ ಬಝೂರ್ ಇದೆ. ಬಂಗ್ಲಾವೆಂಬ ಪಟ್ಟಣ ಅಥವಾ ನಗರ ಒಂದು ಅಲ್ಲಿದ್ದಿರಬೇಕು. ಅದರಿಂದಾಗಿ ಇಡೀ ಪ್ರಾಂತ್ಯಕ್ಕೆ ಬಂಗ್ಲಾವೆಂಬ ಹೆಸರು ಬಂದಿರಬೇಕೆಂದು ಕೆಲವು ಚರಿತ್ರಕಾರರು ಅಭಿಪ್ರಾಯ ವ್ಯಕ್ತಪಡಿಸಿರುವರು. ಆ ಬಂಗ್ಲಾವು ಇಲ್ಲೇ ಇದ್ದಿರಬಹುದು, ಅಥವಾ ಸೋನಾರ್‌ಗಾಂ ಪ್ರದೇಶದಲ್ಲಿದ್ದಿರಲೂ ಬಹುದು. ಈ ವಿಷಯ ಮೊಗಲರ ದಾಳಿಯ ಪೂರ್ವಕ್ಕೆ ಸಂಬಂಧಪಟ್ಟದ್ದಿದೆ.

ಹಿಂದೆ, ಹತ್ತೊಂಭತ್ತನೆಯ ಶತಮಾನದ ಪೂರ್ವದಲ್ಲಿ ವಂಗವೆಂದರೆ ಈಗಿನ ಪೂರ್ವ ಬಂಗಾಲ ಮಾತ್ರ ಆಗಿತ್ತು. ೧೫೦೬ರಲ್ಲಿ ಬಂಗಾಲವು ಗೌರದ ಹುಸೇನಶಾನ ಆಳ್ವಿಕೆಗೊಳಗಾಗಿದ್ದಾಗ ರೋಮಿನ ನಾವಿಕ ವಾರ್ಥೋಮನ್ನಸ್ ಇಲ್ಲಿಗೆ ಬಂದಿರುವ ಕುರಿತು ಕೆಲವು ದಾಖಲೆಗಳನ್ನು ಬಿಟ್ಟು ಹೋಗಿರುವನು. ಆಗ ಅದು ದೊಡ್ಡ ನಗರವಾಗಿತ್ತೆಂದು ಅದರಿಂದ ಇಂದು ನಾವು ಅರಿತುಕೊಳ್ಳಬಹುದು

ಹದಿಮೂರನೆಯ ಶತಮಾನದಲ್ಲಿ ವಿಕ್ರಮಪುರ—ಢಾಕ್ಕಾ ಪ್ರದೇಶವನ್ನು ರಾಜಾ ಲಕ್ಷ್ಮಣಸೇನನು ಆಳಿಕೊಂಡಿದ್ದನು. ೧೪೦೬ರಲ್ಲಿ ಚೀನಿ ಪ್ರಯಾಣಿಕ ಹೂ— ಅವನು ಸೋನಾರಗಾಂವಿಗೆ ಬಂದಿದ್ದನು.

ಡಾಕ್ಕಾಕ್ಕೆ ರಾಜಾಮಾನಸಿಂಹನು ಬಂದಿದ್ದನು. ಅವನು ಡಾಕೇಶ್ವರಿಯ ಪೂಜೆ ಮಾಡಿರುವನು. ಆಗ ಈ ದೇವಸ್ಥಾನವು ಬಲವಾದ ರಕ್ಷಣೆಯಲ್ಲಿತ್ತು. ಹಲವಾರು ಗುಡಿಗಳು ಈ ದೇವಸ್ಥಾನಕ್ಕೆ ಸೇರಿವೆ. ಇದನ್ನು ವಿಕ್ರಮಪುರದ ರಾಜಾ ವಿಜಯಸೇನನ ಮಗ ರಾಜಾ ಬಲ್ಲಾಳಸೇನನು ಕಟ್ಟಿರುವುದಾಗಿ ಹೇಳಲಾಗುತ್ತದೆ.

ಕಾಲ ಕ್ರಮೇಣ ಈ ದೇಗುಲಗಳು ಹಾಳು ಬಿದ್ದುವು. 'ಡಾಕ್' ಗಿಡಗಳಿಂದ ಅವು ಮುಚ್ಚಿ ಹೋದುವು. ಹೀಗಾಗಿ ಅವುಗಳನ್ನು ಡಾಕೇಶ್ವರೀ ದೇವಸ್ಥಾನಗಳೆಂದು ಕರೆಯಲಾರಂಭಿಸಿದರು.

ಡಾಕಾ ಹೆಸರು ಸಂಸ್ಕೃತ ಶಬ್ದ ಡಾಕ್ಕಾ ಅಂದರೆ ನಕ್ಷತ್ರ ಶಾಲಾ ಗೋಪುರದಿಂದ ಬಂದಿರುವದಾಗಿ ಕೆಲವರು ಹೇಳುವದುಂಟು. ಈ ದೇವಾಲಯಗಳ ಬಳಿ ಅಂತಹ ಗೋಪುರಗಳಿದ್ದಿರಬೇಕು.

ನಾಲ್ಕನೆಯ ಶತಮಾನದಲ್ಲಿ ಈ ಸ್ಥಳವನ್ನು ಗುಪ್ತರು ಆಳಿಕೊಂಡಿದ್ದರು. ಆಗ ಅದನ್ನು ದೇವಕವೆಂದು ಕರೆಯಲಾಗುತ್ತಿತ್ತು. ಅಕ್ಬರನ ರಜಪೂತ ಸರದಾರ ಮಾನಸಿಂಹನು ಈ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಮಾಡಿರುವನು. ಇವನು ಜೆಸೂರಿನಲ್ಲಿದ್ದ ಜೆಸೂರೇಶ್ವರಿಯ ವಿಗ್ರಹವನ್ನು ಕೊಂಡೊಯ್ದು ಜಯಪುರದಲ್ಲಿ ಪ್ರತಿಷ್ಠಾಪಿಸಿದ್ದು, ಇಂದೂ ಅದಕ್ಕೆ ಅಲ್ಲಿ ಪೂಜೆ ಸಲ್ಲುತ್ತಿದೆ.

ಇಲ್ಲಿ ಐದು ಉನ್ನತ ಗೋಪುರಗಳನ್ನು ಕಾಣಬಹುದು. ಇದರ ಎದುರಿನಲ್ಲಿ ನಾಟ್ಯ ಮಂದಿರವಿದೆ. ಅಂಗಣಕ್ಕೆ ಆನೆಗಳು ಬರುತ್ತಿದ್ದವು. ಅದಕ್ಕಾಗಿ ದೊಡ್ಡ ಬಾಗಿಲುಗಳವೆ. ಹಳೆಯ ಮಠಗಳೂ ಇಲ್ಲಿವೆ. ಕೆಲವು ದೇವಸ್ಥಾನಗಳಲ್ಲಿ ಶಿವಲಿಂಗಗಳಿವೆ. ಇಲ್ಲಿಯ ಪ್ರಾಣದೇವತೆಯ ಮೂರ್ತಿಯನ್ನು ಶುದ್ಧ ಬಂಗಾರದಿಂದ ಮಾಡಿದ್ದರು. ಒಳಗಿನ ಗರ್ಭ ಗೃಹ ಪೂರ್ಣಕತ್ತಲಾಗಿದೆ. ದುರ್ಗಾ ಪೂಜೆಯ ದಿನಗಳಲ್ಲಿ ಇಲ್ಲಿಗೆ ಬರುವವರ ಸಂಖ್ಯೆ ಅತ್ಯಧಿಕವಾಗಿರುತ್ತದೆ.

ಹಿಂದೊಮ್ಮೆ ಬ್ರಹ್ಮಾನಂದ ಗಿರಿಯೆಂಬವರು ಕಾಳಿಯ ದರ್ಶನಾಪೇಕ್ಷೆಯಿಂದ ಹಿಮಾಲಯದಲ್ಲಿ ತಪಸ್ಸು ಮಾಡಿದರು. ಒಂದು ರಾತ್ರಿ ಅವರಿಗೊಂದು ಕನಸು ಬಿತ್ತು. ಅದರಂತೆ ಅವರು ತಮ್ಮ ತಲೆಯ ಮೇಲೆ ಒಂದು ಭಾರವಾದ ಕಲ್ಲನ್ನಿಟ್ಟುಕೊಂಡು ಹನ್ನೆರಡು ವರ್ಷ ಕಾಲ ಸಂಚರಿಸಿದರು. ಧೃಢವ್ರತದಿಂದ ಅವರು ತಪ್ಪಲಿಲ್ಲ. ಹನ್ನೆರಡು ವರ್ಷಗಳಾದ ಮೇಲೆ ಆ ಕಲ್ಲನ್ನು ಅಲ್ಲಿ ಬಿಸಾಡುವಂತೆ ಅಂತರ್‌ಶಕ್ತಿ ಆಜ್ಞಾಪಿಸಿತು. ಅನರದನ್ನು ಹಾಗೆ ಬಿಸಾಡಿದಾಗ ಆ ಸ್ಥಳದಲ್ಲಿ ಕಾಳಿಯ ದರ್ಶನ ಅವರಿಗಾಯಿತು. ಅಲ್ಲಿ ದೇವಸ್ಥಾನವನ್ನು ನಿರ್ಮಿಸಬೇಕೆಂಬ ಆಜ್ಞೆ ಆವರಿಗಾಯಿತು. ಇಂದೂ ಆ ಕಲ್ಲು ಅದೇ ಸ್ಥಳದಲ್ಲಿದೆ. ಬ್ರಹ್ಮಾನಂದ ಗಿರಿಯವರು ಕೂಚ್-ಬಿಹಾರಿನ ಮಹಾರಾಜರನ್ನು ಕಂಡು ದೇವಸ್ಥಾನ ಕಟ್ಟುವ ಕುರಿತು ತಿಳಿಸಿದರು. ಅದರ ಸಂಪೂರ್ಣ ಖರ್ಚಿನ ಜವಾಬ್ದಾರಿಯನ್ನು ಮಹಾರಾಜರು ವಹಿಸಿಕೊಂಡರು. ದೇಗುಲದ ಕೆರೆಯನ್ನು ನಂತರ ಭವಾಲದ ರಾಣಿ ವಿಲಾಸಮಣಿಯವರು ದುರಸ್ತಿಗೊಳಿಸಿದರು. ಆ ದೇವಸ್ಥಾನವು ಈಗಿನ ರೇಸ್‌ಕೋರ್ಸಿನ ಮಧ್ಯದಲ್ಲಿದೆ. ಇದು ರಮಣದಲ್ಲಿದೆ.

ಹದಿನಾರನೆಯ ಶತಮಾನದ ಅಂತ್ಯದಲ್ಲಿ ಕೃಷ್ಣದಾಸರೆಂಬವರು ಲಕ್ಷ್ಮೀನಾರಾಯಣ ಬಲರಾಮ-ಮದನ ಮೋಹನ್ನರ ಮೂರ್ತಿಗಳನ್ನು ನವಾಬಪುರದಲ್ಲಿ ಪ್ರತಿಷ್ಠಾಪಿಸಿದರು ಅವರು ಡಾಕಾದಲ್ಲಿ ಜನ್ಮಾಷ್ಟಮಿಯಂದು ಮೆರವಣಿಗೆ- ಉತ್ಸವನ್ನು ಆರಂಭಿಸಿದರು.

ಮೈಮನ್ ಸಿಂಘ್—ಗಾರೆ ಪರ್ವತಗಳ ಎಲ್ಲೆಯಲ್ಲಿರುವ ಸುಸಾಂಗಿನ ರಾಜರು ಡಾಕಾದ ಡಾತಾರಿ ಬಝೂರಿನಲ್ಲಿ ಜಯಕಾಳಿ ಗುಡಿಯನ್ನು ಕಟ್ಟಿಸಿದರು.

ಗುರು ತೇಜ್ ಬಹದೂರ್‌ರವರು ಡಾಕ್ಕಾಕ್ಕೆ ಬಂದಿದ್ದರು. ಇಲ್ಲಿ ಎರಡು ಗುರುದ್ವಾರಗಳಿವೆ.

ಐರೋಪ್ಯರಲ್ಲಿ ಮೊತ್ತ ಮೊದಲು ಇಲ್ಲಿಗೆ ಬಂದವರೆಂದರೆ ಪೋರ್ಚುಗೀಸರು. ಅವರು ೧೬೧೬ರಲ್ಲಿ ಈ ನಗರದಲ್ಲಿ ಬಂದಿದ್ದರು. ೧೬೭೭ರಲ್ಲಿ ತೇಜಗಾಂವಿನಲ್ಲಿ ಅವರು ಒಂದು ಇಗರ್ಜಿಯನ್ನು ಕಟ್ಟಿದರು. ೧೭೮೧ರಲ್ಲಿ ಅರ್ಮೇನಿಯನರು ಒಂದು ಇಗರ್ಜಿಯನ್ನು ಕಟ್ಟಿದರು.

ಆಂಗ್ಲೇಯ ವಾಣಿಜ್ಯ ಸಂಸ್ಥೆಯೂ ನಗರದ ತೇಜಗಾಂವಿನಲ್ಲೇ ಮೊತ್ತ ಮೊದಲು ಕಾಲೂರಿದ್ದು. ಅವರು ೧೬೬೮ರಲ್ಲಿ ಹುಲ್ಲು ಹೊದೆಸಿರುವ ಮನೆಗಳಲ್ಲಿ ತಮ್ಮ ಸಂಸ್ಥೆಯನ್ನು ಆರಂಭಿಸಿದರು. ೧೮೯೭ರ ಭೂಕಂಪದಲ್ಲಿ ಅವರ ಹೆಚ್ಚಿನ ಕಟ್ಟಡಗಳು ಬಿದ್ದುಹೋದುವು. ೧೮೩೦ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ಹೊಸ ಕಟ್ಟಡವನ್ನು ಕಟ್ಟಿದರು. ಫ್ರೆಂಚರು ನಂತರ ಬಂದವರು. ೧೯೫೦ರ ಆರಂಭದವರೆಗೂ ಇಲ್ಲಿ ಪಾಕಿಸ್ಥಾನದ ಸ್ಟೇಟ್ ಬೇಂಕ್ ಇತ್ತು.

ಆಕ್ರಮಣಗಾರ ಮಹಮ್ಮದೀಯರಿಗಂತೂ ಬಂಗಾಲವೂ 'ನರಕಮಯ ಸ್ವರ್ಗ'ವಾಗಿತ್ತು. ೧೬೬೬ರಲ್ಲಿ ಬಂಗಾಲಕ್ಕೆ ಬಂದಿದ್ದ ಫ್ರಾನ್ಸಿಸ್ ಬರ್ನಿಯರನು, 'ಬಂಗಾಲದೊಳಗೆ ಪ್ರವೇಶಿಸಲು ನೂರು ಬಾಗಿಲು ತೆರೆದಿವೆಯಾದರೂ ಹೊರಹೋಗಲು ಒಂದು ಬಾಗಿಲು ಕೂಡಾ ಇಲ್ಲ'ವೆಂದು ಬರೆದಿರುವನು.

ಸೋನಾರಗಾಂವಿನ ವಿಷಯ ತಿಳಿಸದಿದ್ದಲ್ಲಿ ಡಾಕಾದ ಚಾರಿತ್ರಿಕ ಪರಿಚಯ ಅಪೂರ್ಣವೇ ಆಹುದು. ವಿಕ್ರಮಪುರದ ಬೌದ್ಧ ರಾಜರ ಆಳ್ವಿಕೆಗೊಳಗಾಗಿತ್ತು ಈ ಪ್ರದೇಶ. ಇಲ್ಲಿ ಪಾಲ, ಚಂದ್ರ, ದೇವ ಮನೆತನಗಳು ರಾಜ್ಯಭಾರ ನಡೆಸಿವೆ ಡಿಲ್ಲಿಯಲ್ಲಿ ಬಲ್ಬನನು ಸುಲ್ತಾನನಾಗಿದ್ದಾಗ ಅವನ ಬಂಗಾಲದ ಪ್ರತಿನಿಧಿಯು ಬಂಡೆದ್ದನು ಅವನನ್ನು ಅಟ್ಟಿಕೊಂಡು ಬಂದ ಬಲ್ಬನನು ಆಗ ಇಲ್ಲಿ ಆಳಿಕೊಂಡಿದ್ದ ದೇವವಂಶದ ರಾಜಾ ಧನುಜರಾಯರೊಂದಿಗೆ ಒಂದು ಒಪ್ಪಂದ ಮಾಡಿಕೊಂಡನು. ಇದು ೧೨೮೦ರಲ್ಲಿ.

'ತರಿಖ್ —ಎ—ಫಿರೋಝ್‌ಶಾಹಿ'ಯಲ್ಲಿ ಈ ಸಂಬಂಧವನ್ನು ವಿವರಿಸುತ್ತ ಝಿಯಾವುದ್ದೀನ್ ಬರ್ಥಿಯು ಪರ್ಶಿಯಾದ ಚರಿತ್ರೆಯಲ್ಲಿ ಸೋನಾರಗಾಂವಿನ ಹೆಸರನ್ನು ಮೊತ್ತಮೊದಲಿಗೆ ಬರೆದಿರುವನು. ಹದಿನಾಲ್ಕನೆಯ ಶತಮಾನದಾರಂಭದಲ್ಲಿ ಸೋನಾರಗಾಂವನ್ನು ಘಿಯಾಸುದ್ದೀನ್ ಫಿರೋಝ್‌ಷಹನನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಸೋನಾರಗಾಂವಿನ ವಿವರಣೆನ್ನು ೧೪೦೬-೦೯ರಲ್ಲಿ ಬಂಗಾಲಕ್ಕೆ ಬಂದಿರುವ ಚೀನಿ ರಾಯಭಾರಿಯ ದಾಖಲೆಗಳಲ್ಲಿ ಕಾಣಬಹುದು. ಆಗ್ರಾದಲ್ಲಿ ಜಹಾಂ

In the Court of the Munsiff at Bantwal South Kanara

P. &. S. C. No: 1/1972.

Between:—

Gangamma — Petitioner

It is hereby concerned to all—the above petitioner has filed an application under Section 372 of Indian Succession Act. She prayed that shed alone entitled for the amount of her late husband in C. P. F. account and gratuity amount. If anybody is interested in the said amount opposing the claim of the petitioner, shall appear before the court on 13—4—1972 at 11A.M. in person or by Pleader, or else the above matter will be decided exparte.

(By Order of the Court)

P. Shankernarayana
Advocate for Petitioner

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಂಗೈ ತೋರಿಸಿದರೆ ಅವಲಕ್ಷಣ ಹೇಳಿದರು

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಪಾಕಿಸ್ತಾನ–ಭಾರತಗಳ ನಡುವೆ ದ್ವಿಪಕ್ಷೀಯ ಮಾತುಕತೆಗೆ ಹಲವು ಬಾರಿ ಕರೆ ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಯಾರೊಬ್ಬರ ಒತ್ತಡವನ್ನೂ ಅವರು ತಿರಸ್ಕರಿಸಿದ್ದಾರೆ. ಭುಟ್ಟೊ ತನ್ನ ಪ್ರಾಮಾಣಿಕತೆಯನ್ನು ಪ್ರದರ್ಶಿಸಿ ಮಾತುಕತೆಗೆ ಬರಲಿ ಇದು ಅವರ ಅಭಿಪ್ರಾಯ. 'ಪಾಕಿಸ್ತಾನದೊಡನೆ ನಮ್ಮ ಸಂಬಂಧ ಉತ್ತಮಗೊಳ್ಳಬೇಕೆಂದು ನಾವು ಬಯಸುತ್ತಲೇ ಬಂದಿದ್ದೇವೆ. ಇಂದಿಗಾದರೂ ನಮ್ಮ ಉದ್ದೇಶ್ಯ ಅದೇ' ಎನ್ನುತ್ತಾರೆ ಶ್ರೀಮತಿ ಗಾಂಧಿ. 'ಮಾತುಕತೆಗಳು ದುರಭಿಮಾನ ಪ್ರೇರಿತವಾಗಬಾರದು; ಯಾರನ್ನೂ ಅಪಮಾನಕ್ಕೆ ಗುರಿಮಾಡುವಂತಹುದೂ ಆಗಬಾರದು. ವಿಷಯಗಳ ಬಗೆಗಿನ ಚರ್ಚೆ ಸಹಕಾರ—ಸೌಹಾರ್ದಗಳ ಭಾವನೆಯ ತಳಹದಿಯಲ್ಲಿ ನಡೆಯಬೇಕು. ಬಹಿರಂಗ ಭಾಷಣಗಳಿಂದ ಸಂಧಾನವೆಂದಿಗೂ ಸಾಧ್ಯವಿಲ್ಲ; ಸಂಧಾನ ಸಾಧನೆಗೆ ಕ್ರಮಬದ್ಧವಾದ ಮಾರ್ಗಗಳಿವೆ. ಹಗೆ ಸಾಧಿಸುವುದನ್ನು ಬಿಟ್ಟು, ಶಾಂತಿ ಮತ್ತು ಸೌಹಾರ್ದಮಯವಾಗಿ ಬದುಕುವುದು ಭಾರತ—ಪಾಕಿಸ್ತಾನಗಳಿಗೆ ಅಸಾಧ್ಯವಾದುದೇನೂ ಅಲ್ಲ'–ಇದು ಶ್ರೀಮತಿ ಗಾಂಧಿಯವರ ಖಚಿತ ನಿಲುವು.

ಭಾರತ—ಪಾಕಿಸ್ತಾನಗಳ ಸಂಬಂಧದಲ್ಲಿ ಮೂರನೆಯ ದೇಶದ ಕೈವಾಡವನ್ನು ನಾವೆಂದೂ ಸಹಿಸುವುದಿಲ್ಲ. ರಶ್ಯ ಭಾರತದ ಮಿತ್ರ ರಾಷ್ಟ್ರವೆಂಬುದು ನಿಜ. ಆದರೆ, ಭಾರತವು ತನ್ನ ಒಳಿತನ್ನು ಯೋಚಿಸಿ ತನ್ನದೇ ನಿರ್ಧಾರವನ್ನು ಮಾಡುತ್ತಲೇ ಬಂದಿದೆ. ಶ್ರೀಮತಿ ಗಾಂಧಿಯವರು ಏಕಪಕ್ಷೀಯವಾಗಿ ಸಮರ ವಿರಾಮ ಘೋಷಿಸಿದ್ದು ಸ್ವತಂತ್ರವಾದ ವಿಚಾರಧಾರೆಯಿಂದ ಅಮೆರಿಕೆಯ ಏಳನೆ ನೌಕಾಪಡೆಗೆ ಬೆದರಿಯಲ್ಲ; ರಶ್ಯಾದ ಸಲಹೆಯಂತೆಯೂ ಅಲ್ಲ. ಭಾರತದ ನಿರ್ಧಾರ ಬಾಂಗ್ಲಾ ವಿಮೋಚನೆ–ಅದು ಸಾಧಿತವಾದೊಡನೆಯೇ ಸಮರಕ್ಕೆ ಕೊನೆ. ಶ್ರೀಮತಿ ಗಾಂಧಿಯವರು ದೇಶವನ್ನು ಈ ನಿಟ್ಟಿನಲ್ಲಿ ಸರಿಯಾಗೇ ಮುಂದುವರಿಸಿಕೊಂಡು ಹೋಗಿದ್ದಾರೆ. ತಾಷ್ಕೆಂಟ್ ಮಾದರಿಯ ಮತ್ತೊಂದು ಒಡಂಬಡಿಕೆಯಾಗುತ್ತದೆಂದು ಸಂದೇಹ ಪಡುವವರಿಗೆ ಅವರು ಖಂಡ ತುಂಡ ಉತ್ತರ ನೀಡಿದ್ದಾರೆ. ನಮಗೆ ತಾತ್ಕಾಲಿಕ ಶಾಂತಿ ಅನಪೇಕ್ಷಣೀಯ. ಶಾಶ್ವತವಾದ ಶಾಂತಿ ಬೇಕು. ಹಗೆತನವನ್ನು ಕಿತ್ತೊಗೆದು ಭಾರತದ ಉಪಖಂಡದಲ್ಲಿ ಶಾಶ್ವತವಾದ ಸ್ನೇಹಮಯ ಶಾಂತ ವಾತಾವರಣವನ್ನು ನಿರ್ಮಿಸುವುದು ಸಾಧ್ಯ. ಈ ನಿಟ್ಟಿನಲ್ಲಿ ಮಾಡಬೇಕಾದ್ದನ್ನು ಮಾಡಲು ಭಾರತ ಹಿಂಜರಿಯುವುದಿಲ್ಲ. ಇದರಲ್ಲಿ ಪಾಕಿಸ್ತಾನದ ಸಹಕಾರವೂ ಬೇಕು.

o o o

ಭಾರತವು ಶಾಂತಿಯನ್ನು ಬಯಸುತ್ತದೆ. ಅದು ಪಾಕಿಸ್ತಾನದೊಡನೆ ಸ್ನೇಹ ಹಸ್ತ ಚಾಚಲು ಮುಂದೆ ಬಂದಿದೆ. ಅದಕ್ಕಿಂತ ಹೆಚ್ಚಾಗಿ ಪಾಕ್ ರಾಷ್ಟ್ರಪತಿ ಜುಲ್ಫಿಕರ್ ಅಲಿ ಭುಟ್ಟೋರಿಗೆ ಶಾಂತಿ ಬೇಕಾಗಿದೆ. ಅವರು ಒಂದಕ್ಕಿಂತ ಹೆಚ್ಚು ಬಾರಿ ದ್ವಿಪಕ್ಷೀಯ ಮಾತುಕತೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದಾರೆ; ಆದರೆ, ಆ ಒಪ್ಪಿಗೆ ಹೃದಯದ ಅಪ್ಪುಗೆಯಾಗಲಿಲ್ಲ; ಬಹಿರಂಗ ಭಾಷಣಗಳಲ್ಲೇ ಉಳಿದಿದೆ. ಭಾರತದೊಡನೆ ಸ್ನೇಹವನ್ನು ಬಯಸುವ ಅವರು ಜತೆಯಲ್ಲೇ ಭಾರತ ವಿರೋಧಿ ಮಾತಾಡುತ್ತಿದ್ದಾರೆ. ಭಾರತದ ಬಗ್ಗೆ ವೃಥಾ ಟೀಕೆಯೇಕೆ ಮಾಡುತ್ತೀರಿ? ಎಂದು ಕೇಳಲಾದ ಪ್ರಶ್ನೆಯೊಂದಕ್ಕೆ ಭುಟ್ಟೋ ಉತ್ತರಿಸಿದರು– ಜನತೆಯ ಬೆಂಬಲ ಪಡೆಯಲು ಇಂತಹ ಟೀಕೆಗಳು ಅಗತ್ಯ. ಇದು ರಾಜಕೀಯ ಗತ್ತುಗಾರಿಕೆಯಿರಬಹುದು. ಆದರೆ ಬಾಯಲ್ಲಿ ರಾಮನಾಮ ಪಠಿಸಿ ಬಗಲಲ್ಲಿ ಚಾಕು ಇಟ್ಟುಕೊಳ್ಳುವುದು ಆತ್ಮರಕ್ಷಣೆಗೆಂದರೆ ವಿಶ್ವಾಸ ಮೂಡುವುದೆಂತು? ಅದಕ್ಕೇ ಪ್ರಧಾನಿ ಗಾಂಧಿ ಅಂದದ್ದು—ಭುಟ್ಟೊ ಮೊದಲಿಗೆ ತಮ್ಮ ಸಾಚಾತನವನ್ನು ಪ್ರದರ್ಶಿಸಲಿ ಎಂದು.

ದ್ವಿಪಕ್ಷೀಯ ಮಾತುಕತೆಗೆ ಅವಕಾಶ ನೀಡದಿದ್ದರೆ ಪಾಕ್–ಭಾರತಗಳ ಪರಿಸ್ಥಿತಿ ಸುಧಾರಿಸುವುದಿಲ್ಲ. ಆಗ ಭುಟ್ಟೋ ಪದಚ್ಯುತಿಯು ಹೆಚ್ಚು ಸಂಭವನೀಯ. ಭಾರತವು ತನ್ನ ಪದಚ್ಯುತಿಯನ್ನೇ ಬಯಸುತ್ತಿರುವುದರಿಂದ ಅಂತಹ ಮಾತುಕತೆಗೆ ಅವಕಾಶ ನೀಡುತ್ತಿಲ್ಲವೆಂದು ದೂರುತ್ತಾರೆ. ಭುಟ್ಟೋ ಪಾಕಿಸ್ತಾನದಲ್ಲಿ ಯಾರು ಅಧಿಕಾರದಲ್ಲಿರಬೇಕೆಂದು ಹೇಳಲು ಭಾರತ ನಿಂತಿಲ್ಲ. ಪಾಕ್ ಜನತೆ ತಮಗೆ ಬೇಕಾದವರನ್ನು ಅಧಿಕಾರಕ್ಕೆ ಏರಿಸ ಬಹುದು; ಉರುಳಿಸಲೂ ಬಹುದು. ಪರದೇಶಗಳ ವ್ಯವಹಾರದಲ್ಲಿ ಕೈ ಹಾಕುವ ನೀತಿ ಭಾರತ ಸರಕಾರದ್ದಲ್ಲ. ವಿರೋಧಿ ಪಕ್ಷೀಯರಾದ ವಾಲಿಖಾನರು ಇದೇ ತಾ. ೧೪ರಂದು ಸೇರಲಿರುವ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಭುಟ್ಟೋ ಮಹಾಶಯರಿಗೆ ವಿಶ್ವಾಸ ಮತ ನೀಡಲು ತಾವು ಬದ್ಧರಲ್ಲವೆಂದು ಘೋಷಿಸಿದ್ದಾರೆ. ತಮ್ಮದು ವಿರೋಧಿ ಪಕ್ಷವಾದುದರಿಂದ ವಿರೋಧಿ ಪಕ್ಷದಂತೆಯೇ ನಡೆಯುವ ತಮ್ಮ ಹಕ್ಕನ್ನವರು ಕಾಯ್ದಿರಿಸಿದ್ದಾರೆ. ಈ ಮೊದಲು ರಾಷ್ಟ್ರೀಯ ಅಸೆಂಬ್ಲಿ ಸಮಾವೇಶಗೊಳಿಸಲು ಭುಟ್ಟೋ ಘೋಷಿಸುವ ವೇಳೆ ವಿಶ್ವಾಸಮತ ನೀಡಬೇಕೆಂದು ಅವರು ಹೇಳಿದ್ದರು. ಈಗ ಪರಿಸ್ಥಿತಿ ಬದಲಾಗಿರುವುದರಿಂದ ಭುಟ್ಟೋ ಅಸೆಂಬ್ಲಿ ಸಭೆ ಕರೆಯುವುದನ್ನೇ ನಿಲ್ಲಿಸಿ ಮತ್ತೊಂದು ತಪ್ಪು ಹೆಜ್ಜೆ ಇಡುತ್ತಾರೆಯೋ ಕಾದು ನೋಡಬೇಕು. ಅಥವಾ ಪೇಚಿನ ಅಧಿಕಾರವೇ ತನಗೆ ಬೇಡವೆಂಬ ನಿಲುವಿಗೆ ಅವರು ಬಂದಿದ್ದಾರೆಯೇ?

o o o

ಕಳೆದ ವರ್ಷ ಗೊಂದಲಕ್ಕೀಡಾದ ಬೆಂಗಳೂರು ವಿಶ್ವ ವಿದ್ಯಾಲಯದ ಮೇಲೆ ಹಲವರಿಂದ ಹಲವು ಬಗೆಯ ದೂರುಗಳು ರಾಜ್ಯಪಾಲರಿಗೆ ಸಲ್ಲಿಸಲ್ಪಟ್ಟವು. ವಿಶ್ವ ವಿದ್ಯಾಲಯದಲ್ಲಿ ನಡೆದ ಅನಪೇಕ್ಷಿತ ಗೊಂದಲವನ್ನು ನಿಲ್ಲಿಸಲೆಂದೇ ಅಂದಿನ ರಾಜ್ಯಪಾಲ ಶ್ರೀ ಧರ್ಮವೀರರು ನೇಮಿಸಿದ ಕೇರಳ ವಿಶ್ವ ವಿದ್ಯಾಲಯದ ಹಿಂದಿನ ಉಪಕುಲಪತಿ ಡಾ. ಸಾಮುವೆಲ್ ಮಥಾಯ್ ಅವರು ವಿಶ್ವ ವಿದ್ಯಾಲಯದ ಆಗುಹೋಗುಗಳ ಬಗೆಗೆ ಕೂಲಂಕಷವಾಗಿ ವಿಚಾರಣೆ ನಡೆಸಿ ವಿವರವಾದ ವರದಿಯನ್ನು ಆಧಾರಸಹಿತ ಸಲ್ಲಿಸಿದ್ದಾರೆ. ಈ ವರದಿಯು ವಿಶ್ವವಿದ್ಯಾಲಯದ ಎಲ್ಲ ಅಂಗಗಳ ಮೇಲೂ ಕ್ಷ–ಕಿರಣ ಬೀರಿ, ಒಳಗಿನ ನಗ್ನ ಚಿತ್ರವನ್ನು ಬಹಿರಂಗಗೊಳಿಸಿದೆ. ಇದು ದೂರಿತ್ತವರಿಗೆ ಅಪ್ರಿಯವೆಂಬುದು ನಿಜವಾದುದರಿಂದ ಅವರು ಮತ್ತೊಂದು ಬಗೆಯ ಗೊಂದಲಕ್ಕೆ ನಾಂದಿಯಿಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಪ್ರಾಯಃ ವಿಶ್ವ ವಿದ್ಯಾಲಯ ಆರಂಭವಾದ ಬಳಿಕ ಪ್ರತಿ ವರ್ಷವೂ ಒಂದಲ್ಲ ಒಂದು ನೆಪವೆತ್ತಿ ಗೊಂದಲ ನಡೆಯುವುದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಪ್ರದಾಯವೆನಿಸಿರಬಹುದು. ಮುಖ್ಯವಾಗಿ ಇದರ ಮೇಲೆ ಹೊರಿಸುತಿದ್ದದ್ದು ಜಾತೀಯತೆಯ ಆರೋಪ. ಪ್ರೊ. ವಿ. ಕೃ. ಗೋಕಾಕರಂತಹ ಅಂತಾರಾಷ್ಟ್ರೀಯ ಖ್ಯಾತಿವೆತ್ತವರನ್ನೂ ಮುಖಭಂಗಿತರನ್ನಾಗಿ ಮಾಡಿ ಅವರು ಮನನೊಂದು ತನ್ನ ಪದವಿಯಿಂದ ನಿವೃತ್ತಗೊಳ್ಳುವಂತೆ ಮಾಡಿದ ಇತಿಹಾಸವುಳ್ಳ ಈ ಪುಟ್ಟ ವಿಶ್ವ ವಿದ್ಯಾಲಯದ ಕೀರ್ತಿ ನಿಜಕ್ಕೂ ಹಿರಿದೇ. ಅವರ ನಂತರ ಉಪಕುಲಪತಿಯಾಗಿ ಬಂದ ಟಿ. ಕೆ. ತುಕೋಳರನ್ನೂ ಇದೇ ಸಂಪ್ರದಾಯ ಗೋಳು ಹೊಯ್ದುಕೊಳ್ಳದೆ ಬಿಡಲಿಲ್ಲ. ಡಾ| ಮಥಾಯ್‌ಯವರು ವಿಶ್ವವಿದ್ಯಾಲಯದಲ್ಲಿ ಜಾತೀಯತೆಯ ಪ್ರಭಾವವಿದೆಯೆಂಬುದನ್ನು ನಿರಾಕರಿಸಿರುವರಲ್ಲದೆ ವೃತ್ತಿ ರಾಜಕಾರಣಿಗಳು ಮತ್ತು ವಿದ್ಯಾರ್ಥಿ ರಾಜಕಾರಣಿಗಳೇ ಎಲ್ಲ ಗೊಂದಲಗಳಿಗೂ ಪ್ರೇರಕ ಶಕ್ತಿಯೆಂದು ಅರಿಕೆ ಮಾಡಿದ್ದಾರೆ. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದವರ ವ್ಯಕ್ತಿಗತ ಪ್ರತಿಷ್ಠೆ. ದ್ವೇಷ. ಅಧ್ಯಾಪಕ ವರ್ಗದ ಅಶಿಸ್ತು. ಗುಂಪುಗಾರಿಕೆ. ಆಡಳಿತ ವರ್ಗದಲ್ಲಿನ ಗುಂಪು ಪ್ರಿಯತೆ, ಸೆನೆಟ್ ಸಿಂಡಿಕೇಟ್ ಸದಸ್ಯರ ಪಕ್ಷಪಾತತನ ಈ ಮೊದಲಾದ ಪ್ರವೃತ್ತಿಗಳನ್ನು ಡಾ| ಮಥಾಯ್ ಹೊರ ಹಾಕಿದ್ದಾರೆ. ಅಧ್ಯಾಪಕ ವರ್ಗದ ಅಶಿಸ್ತಿನ ವರ್ತನೆಯು ಸುಸ್ಪಷ್ಟವಾ

(ಐಂಭತ್ತನೇ ಪುಟ ನೋಡಿರಿ)

ಗೀರನು ಆಳಿಕೊಂಡಿದ್ದಾಗ ಅವನು ನವಾಬ ಇಸ್ಲಾಂಖಾನ್ ಸ್ಟಿಚಿಯನ್ನು ಬಂಗಾಲದ ಸುಬೇದಾರನಾಗಿ ಕಳುಹಿಸಿದನು. ಅವನು ಅದು ವರೆಗೆ ಸಂತಾಲ ಪರಗಣದ ರಾಜ ಮಹಾಲದಲ್ಲಿದ್ದ ರಾಜಧಾನಿಯನ್ನು ೧೬೦೮ರಲ್ಲಿ ಡಾಕ್ಕಾಕ್ಕೆ ಬದಲಾಯಿಸಿದನು.

೧೭೦೪ರಲ್ಲಿ ಬಂಗಾಲ—ಬಿಹಾರ್—ಒರಿಸ್ಸಾಗಳಿಗೆ ಮುರ್ಷಿದಾಬಾದ್ ರಾಜಧಾನಿಯಾಗಿತ್ತು.

೧೯೦೫ರಲ್ಲಿ ಬಂಗಾಲವನ್ನು ಕರ್ಜನನು ವಿಭಜಿಸಿದನು. ಅವನು ಬಂಗಾಲದ ಡಾಕಾ, ಚಿತ್ತಗಾಂಗ್ ಮತ್ತು ರಾಜಶಾಹಿ ವಿಭಾಗಗಳನ್ನು ಪೂರ್ಣ ಅಸ್ಸಾಮನ್ನು ಸೇರಿಸಿ ಹೊಸ ಪ್ರಾಂತ್ಯವನ್ನು ಮಾಡಿ ಅದಕ್ಕೆ ಡಾಕಾವನ್ನು ರಾಜಧಾನಿಯನ್ನಾಗಿಸಿದನು. ಜನತೆ ಇದನ್ನು ತೀವ್ರವಾಗಿ ಪ್ರತಿಭಟಿಸಿದ ಕಾರಣ ಬಂಗಾಲ ಒಂದಾಯಿತು. ಆದರೆ ಅಸ್ಸಾಂ, ಬಿಹಾರ್, ಒರಿಸ್ಸಾಗಳು ಪ್ರತ್ಯೇಕವಾದುವು.

೧೯೧೨ರಲ್ಲಿ ಕಲ್ಕತ್ತದಲ್ಲಿದ್ದ ವೈಸರಾಯ್ ಭವನ ಡಿಲ್ಲಿಗೆ ವರ್ಗಾಯಿಸಲ್ಪಟ್ಟಿತು.

ಮುಸ್ಲಿಂ ಲೀಗಿನ ಆರಂಭವಾದದ್ದು ಡಾಕ್ಕಾದಲ್ಲಿ.

ಭಾರತ ವಿಭಜನೆಯಾಗಿ ಪೂರ್ವ ಪಾಕಿಸ್ತಾನ ಉಂಟಾದಾಗ ಡಾಕಾ ಅದರ ರಾಜಧಾನಿ ಆಯಿತು.

(ಈಗ ಅದು ಸ್ವತಂತ್ರ ಬಂಗ್ಲಾ ದೇಶದ ಸ್ವತಂತ್ರ ರಾಜಧಾನಿ ಇದೆ—ಶಿ)

ಕೃಪೆ: ಶ್ರೀ ದೀಪ ಚೌಧುರಿ, "ಆರ್ಗನೈಸರ್"

ಅನು: —ಶ್ರೀ ಶಿವಶಂಕರ.

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

In the Court of the Munsiff at Bantwal South Kanara

P. & S. C. No: 2/1972.

Between:—

Duggamma —Petitioner

It is hereby concenred to all that the above petitioner has filed an application before the Munsiff at Bantwal under Section 372 of the Indian Succession Act. She prayed that she is alone entitled to collect the rental of the School building, Higher Elementary Board School of Sujir, in Pudu village. If anybody is interested in the said amount and wants to challenge the right of the petitioner shall appear before the court in person or through their Advocate on 13-4-1972 at 11 A. M. or else the above matter will be decided exparte.

(By Order of the Court)

P. Shankernarayana
Advocate for Petitioner.

ಪುಸ್ತಕಗಳು

ಮನುಷ್ಯ ಚೈತನ್ಯದ ಒಸಗೆಗಳು

—ಪುಸ್ತಕಗಳ ಬಗ್ಗೆ ಗೋರ್ಕಿ

ಗೋರ್ಕಿಯವರ ಜನ್ಮದಿನದ ಪ್ರಯುಕ್ತ (28—3—72) ಮತ್ತು ಈಗ ನಡೆಯುತ್ತಿರುವ ಅಂತಾರಾಷ್ಟ್ರೀಯ ಗ್ರಂಥ ವರ್ಷದ ಪ್ರಯುಕ್ತ ಜಾಗತಿಕ ಸಾಹಿತ್ಯಾಕಾಶದ ಉಜ್ವಲ ನಕ್ಷತ್ರ ಮಂಡಲದಲ್ಲಿರುವ ಮಾಕ್ಸಿಂ ಗೋರ್ಕಿಯವರ ಪುಸ್ತಕಗಳ ಬಗೆಗೆ, ಅವುಗಳು ಅವರ ಮೇಲೆ ಬೀರಿದ ಪ್ರಭಾವದ ಬಗ್ಗೆ, ಅದೇ ಕಾಲಕ್ಕೆ ಅವರ ಜಾಗತಿಕ ನೋಟವನ್ನೂ ಪ್ರಕಟಗೊಳಿಸಿದ ಅವರ ಆಯ್ದ ನುಡಿಗಳನ್ನು ಕೆಳಗಡೆ ಕೊಡುತ್ತಿದ್ದೇವೆ.

ಪುಸ್ತಕಗಳೆಂದರೆ. ಅವು ಜನರಿಗಿಂತ ನನಗೆ ಹೆಚ್ಚು ನಿಕಟವಾಗಿವೆ ಮತ್ತು ಆಸಕ್ತಿಕರವಾಗಿವೆ ಎಂದು ಮೊದಮೊದಲು ತಿಳಿದುಕೊಂಡಿದ್ದೆ. ಪುಸ್ತಕದ ಲೋಲಕದೊಳಗಿಂದ ಜೀವನದ ವಾಸ್ತವಿಕತೆಗಳನ್ನು ನೋಡುವಲ್ಲಿ ನಾನೊಂದಿಷ್ಟು ಕುರುಡನಾಗಿದ್ದೇನೆಂದೇ ಅನಿಸಿತು. ಏನಿದ್ದರೂ, ಗುರುಗಳಲ್ಲಿ ಅತ್ಯಂತ ನಿಷ್ಠುರ ಹಾಗೂ ಬುದ್ಧಿವಂತನೆನಿಸಿದ ಜೀವನವೇ ಈ ಹರ್ಷಭರಿತ ಅಂಧತ್ವವನ್ನು ಸರಿಪಡಿಸಿತು.

○ ○ ○

ಒಂದೊಂದು ಪುಸ್ತಕವೂ ನನ್ನ ಮುಂದೆ— ಈ ವರೆಗೂ ನನಗೆ ಅಪರಿಚಿತವಾಗಿದ್ದ ಮತ್ತು ಹೊಸತಾದ ಜಗತ್ತನ್ನು ತೋರಿಸಲು ತೆರೆಯುತ್ತಿರುವ ಕಿಟಿಕಿಗಳಂತೆ ಕಾಣಿಸ ತೊಡಗಿದವು....ಜನರ ಬಗ್ಗೆ, ಅವರ ವಿಚಾರ ಭಾವಗಳ ಬಗ್ಗೆ, ಸಂಬಂಧಗಳ ಬಗ್ಗೆ ಈ ಮೊದಲು ನನಗೆ ತಿಳಿಯದಿದ್ದ ಅಥವಾ ನೋಡದಿದ್ದ ಸಂಗತಿಗಳ ಬಗ್ಗೆ, ನಿರ್ಮಲರೂ, ಸತ್ಯನಿಷ್ಠರೂ, ಬಲಿಷ್ಠ ಚೇತನದವರೂ ಸತ್ಯದ ವಿಜಯಕ್ಕಾಗಿ ಅಥವಾ ಶೋಭಾಯಮಾನ ಸಾಹಸಕ್ಕಾಗಿ, ತಮ್ಮ ಜೀವಗಳನ್ನು ಬಲಿಕೊಡಲು ಸಿದ್ಧರಾದವರ ಬಗ್ಗೆ ಹೇಳಿದುವು

○ ○ ○

ಪುಸ್ತಕಗಳು ಮನುಷ್ಯ ಚೈತನ್ಯದ ಒಸಗೆಗಳಾಗಿವೆ. ಮನುಷ್ಯನ ಬೆಳೆಯುತ್ತಿರುವ ಆತ್ಮದ ಯಾತನೆ ಮತ್ತು ಕ್ಷೋಭೆಗಳನ್ನು ಪ್ರತಿಬಿಂಬಿಸುತ್ತವೆ.

○ ○ ○

ಬಹುತೇಕ ಪ್ರತಿಯೊಂದು ಪುಸ್ತಕದ ಪುಟದಿಂದಲೂ ಮಂದವಾದರೂ ಬಲವತ್ತರವಾದೊಂದು ಸಂದೇಶವು ಸದಾ ನನ್ನ ಕಿವಿಯಲ್ಲಿ ಮೊರೆಯುತ್ತಿತ್ತು. ಅದು ನನ್ನಲ್ಲಿ ಮನಃಕ್ಷೋಭೆಯನ್ನುಂಟು ಮಾಡಿತು. ಅಗೋಚರ, ಅಪರಿಚಿತವೆನ್ನುವುದರ ಕಡೆಗೆ ಕರೆಯಿತು. ಹೃದಯಕ್ಕೆ ಕೈ ಹಾಕಿತು.

○ ○ ○

ರಮ್ಯ ಕಥೆಗಳಲ್ಲಿಯ ಕೆಲವೊಂದು ಅದ್ಭುತಾಶ್ಚರ್ಯದ ಪಕ್ಷಿಗಳಂತೆ ಪುಸ್ತಕಗಳು ತಮ್ಮ ಹಾಡನ್ನು ನನ್ನ ಬಳಿಯಲ್ಲಿ ಹಾಡಿದುವು. ನೆರೆಯಲ್ಲಿ ನರಳುತ್ತಿರುವುದರೊಡನೆ ಸೇರಿಕೊಳ್ಳುವಂತೆ ಸಲ್ಲಾಪಗೈದವು. ಜೀವನದ ವೈವಿಧ್ಯತೆ, ಸಂಪನ್ನತೆಗಳ ಬಗ್ಗೆ, ಒಳ್ಳಿತು ಮತ್ತು ಚೆಲುವುಗಳ ಕಡೆಗೆ ಮಾನವನ ಹಂಬಲದ ಕೆಚ್ಚಿನ ಬಗ್ಗೆ ಜೋಗುಳ ಹಾಡಿದುವು. ಪಾಶವಿಕತೆಯಿಂದ ಮಾನವತ್ವದ ಕಡೆಗೆ ಆರೋಹಣದಲ್ಲಿ, ಉತ್ತಮ ಜೀವನದ ಅರಿವೆಯನ್ನು ಪಡೆಯುವಲ್ಲಿ ಮತ್ತು ಅಂಥ ಜೀವನದ ತೃಷೆಯನ್ನು ಬೆಳೆಸುವಲ್ಲಿ ಒಂದೊಂದು ಪುಸ್ತಕವೂ ಒಂದು ಸೋಪಾನವಾಯಿತು. ಪುಸ್ತಕಗಳಲ್ಲಿ ಸಜೀವ ಸಚೇತನದ ಶಕ್ತಿಯೊಂದು ಅಡಗಿಕೊಂಡಿದ್ದಿತು.

○ ○ ○

ಗ್ರಂಥವಾಚನ— ಎಲ್ಲ ಕಾಲದ, ಎಲ್ಲ ಜನತೆಗಳ ಹಿರಿಯ ತಲೆಗಳೊಡನೆ ಏಕೀಭವಿಸುವ, ಮನುಷ್ಯನಿಗೆ ಜೀವನದ ಅರ್ಥವನ್ನೂ, ಅದರಲ್ಲಿ ಅವನ ಸ್ಥಾನವನ್ನೂ ತೋರಿಸಿಕೊಡುವ ಒಂದು ನಿಗೂಢ ಪ್ರಕ್ರಿಯೆಯಾಗಿದೆ!

○ ○ ○

ಪುಸ್ತಕಗಳು ನನ್ನ ಕಿವಿಯಲ್ಲಿ ಇನ್ನೊಂದು ಜೀವನದ ಅಸ್ತಿತ್ವದ ಬಗ್ಗೆ, ನಾನು ಬಾಳುತ್ತಿದ್ದುದಕ್ಕಿಂತಲೂ ಹೆಚ್ಚು ಮನುಷ್ಯಯೋಗ್ಯವಾದ ಜೀವನದ ಬಗ್ಗೆ ನನ್ನ ಕಿವಿಯಲ್ಲಿ ಪಿಸುಗುಟ್ಟಿದವು .... ತನ್ನ ಮೂಢತೆ ಮತ್ತು ಗಗ್ಗತನಗಳಿಂದ ನನ್ನನ್ನು ಕಬಳಿಸುತ್ತಿದ್ದ, ಗಬ್ಬು ಹೊಡೆಯುವ ಹೂಳಿನಿಂದ ನಾನು ಕಿತ್ತುಕೊಂಡು ಮೇಲೆ ಬರಲೂ ಅವೇ ಸಹಾಯಕವಾದುವು.

○ ○ ○

ಜ್ಞಾನವೊಂದೇ ಆರೋಗ್ಯದಾಯಕವಾಗಿದೆ, ಜ್ಞಾನವು ಮಾತ್ರವೇ ನಮ್ಮನ್ನು ಆತ್ಮಬಲ ಸಂಪನ್ನರನ್ನಾಗಿಸಬಲ್ಲುದು. ಪ್ರಾಮಾಣಿಕರನ್ನಾಗಿಸಬಲ್ಲುದು. ಜಾಣರನ್ನಾಗಿಸಬಲ್ಲುದು.

○ ○ ○

ಜೀವನದಲ್ಲಿಯ ಎಲ್ಲಾ ಅನಿಷ್ಟಗಳ ಬಗ್ಗೆ ನನ್ನ ಹೊಣೆಗಾರಿಕೆಯೂ ಇದೆಯೆಂಬ ಭಾವನೆಯನ್ನು ಪುಸ್ತಕಗಳೇ ನನ್ನಲ್ಲಿ ತುಂಬಿದುವು ಮತ್ತು ಮನುಷ್ಯ ಮಿದುಳಿನ ಸೃಜನಾತ್ಮಕತೆಯ ಬಗ್ಗೆ ಗೌರವಭಾವವನ್ನು ಮೂಡಿಸಿದುವು.

○ ○ ○

ನನ್ನಲ್ಲಿರುವ ಲೇಸೆನಿಸುವಂಥದೆಲ್ಲವೂ ಪುಸ್ತಕಗಳಿಂದಲೇ ಬಂದುದು.

○ ○ ○

ಮನುಷ್ಯನನ್ನು ಬಿಟ್ಟರೆ ಬೇರಾರ ಕುರಿತೂ, ಗ್ರಂಥಗಳೇ ಗೆಳೆಯರಾಗಿರುವ ಧಾರಾಳ ಮಾರ್ಗದರ್ಶಿಗಳಾಗಿರುವ ಮನುಷ್ಯನನ್ನು ಬಿಟ್ಟರೆ ಬೇರಾರ ಕುರಿತೂ ತಿಳಿದುಕೊಳ್ಳುವ ಆಶಯ ನನಗಿಲ್ಲ.

○ ○ ○

ನಕ್ಷತ್ರಗಳ ಮಿನುಗುವಿಕೆಯಲ್ಲಿಯಗಿಂತ, ಮಹಾ ಸಾಗರದ ಯಾಂತ್ರಿಕ ಲಯಬದ್ಧತೆಗಿಂತ, ಅರಣ್ಯಗಳ ಮರ್ಮರಗುಟ್ಟುವಿಕೆಗಿಂತ, ಅಥವಾ ಕಾಡಿನ ನೀರವತೆಗಿಂತ ಪುಷ್ಕಿನ್ ಕವಿತೆಗಳ ಸಣ್ಣ ಸಂಕಲನದಲ್ಲಿ, ಸ್ಲಭೆಯವರ ಕಾದಂಬರಿಯಲ್ಲಿ ಹೆಚ್ಚು ಬುದ್ಧಿಮತ್ತೆಯನ್ನೂ, ಜೀವಂತ ಸೌಂದರ್ಯವನ್ನೂ ಕಂಡುಕೊಂಡಿದ್ದೇನೆ.

○ ○ ○

ಒಂದು ಪುಸ್ತಕವೂ—ಮನುಷ್ಯನಷ್ಟೇ ಜೀವದಲ್ಲಿಯ ಒಂದು ಪ್ರಕೃತಿ ಘಟನೆಯಾಗಿದೆ. ಅದು ಕೂಡ ಜೀವಿಸುತ್ತಿದೆ ಮತ್ತು ನೈಜತೆಯ ಬಗ್ಗೆ ಮಾತನಾಡುತ್ತಿದೆ ಹಾಗೂ ಮನುಷ್ಯನು ನಿರ್ಮಿಸಿದ ಅಥವಾ ನಿರ್ಮಿಸುವ ಯಾವೊಂದು "ಸಂಗತಿ"ಗಿಂತಲೂ ದೊಡ್ಡದಾಗಿದೆ.

○ ○ ○

ವಿಜ್ಞಾನ ಪುರುಷರೂ, ಸಾಹಿತ್ಯ ಪುರುಷರೂ ಮನುಷ್ಯನ ಬಗ್ಗೆ . ಬರೆದ ಪುಸ್ತಕಗಳನ್ನು ಓದದೆ, ಮನುಷ್ಯನನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲದಿರುವಂಥ ಜಗತ್ತಿನಲ್ಲಿ ನಾವಿಂದು ವಾಸಿಸುತ್ತಿದ್ದೇವೆ.

●●

ಭದ್ರಾವತಿ ಲಯನ್ಸ್ ಕ್ಲಬ್‌ಗೆ ನೂತನ ಅಧಿಕಾರಿಗಳ ಆಯ್ಕೆ

ಭದ್ರಾವತಿಯ ಲಯನ್ಸ್ ಕ್ಲಬ್‌ನ ನೂತನ ಪದಾಧಿಕಾರಿಗಳನ್ನು ಆರಿಸುವ ಸಭೆಯು ಇತ್ತೀಚೆಗೆ ಕ್ಲಬ್ಬಿನ ಅಧ್ಯಕ್ಷ ಡಾ| ಎಸ್. ಎಸ್. ಭಟ್‌ರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀಗಳಾದ ಬಸವರಾಜಪ್ಪ ಅಧ್ಯಕ್ಷರಾಗಿಯೂ, ಡಾ| ಟಿ. ಮಹಮುದಾಲಿ, ಎಚ್. ಬಿ. ಕೃಷ್ಣಮೂರ್ತಿ, ಡಾ| ಎ. ಎ. ಶೆಟ್ಟಿ ಉಪಾಧ್ಯಕ್ಷರುಗಳಾಗಿಯೂ, ಡಾ| ಎಚ್. ಎಂ. ಎನ್. ಆರಾಧ್ಯ ಕಾರ್ಯದರ್ಶಿಯಾಗಿಯೂ, ಎ. ಎಂ. ಗುರುಸ್ವಾಮಿ ಜಂಟಿ ಕಾರ್ಯದರ್ಶಿಯಾಗಿಯೂ, ವಿ. ಎಸ್. ಸೋಮಯ್ಯ ಖಜಾಂಚಿಯಾಗಿಯೂ, ಎಂ. ವಿಶ್ವನಾಥ ಟೈಲ್ ಟ್ವಿಸ್ಟರ್ ಆಗಿಯೂ, ಪಿ. ಬಿ. ಶ್ರೀನಿವಾಸ್, ಲಯನ್ ಟೇಮರ್ ಆಗಿಯೂ. ಡಾ| ಯು. ಕರುಣಾಕರ ಶೆಟ್ಟಿ, ಬಿ. ಜಿ. ಮರಿಯಪ್ಪ, ಡಾ ಎಂ. ಶಂಕರ ಭಟ್, ಹೆಚ್. ವಿ. ಶಿವರುದ್ರಪ್ಪ, ಎಂ. ಮಜುರುದ್ದೀನ್, ಡಿ ಎಲ್. ರಾಮಣ್ಣ, ಹೆಚ್ ಬಿ. ವೀರಬಸಪ್ಪ, ಮತ್ತು ಕೆ ಆರ್. ಕೃಷ್ಣಮೂರ್ತಿ ಡೈರೆಕ್ಟರುಗಳಾಗಿಯೂ ಆರಿಸಲ್ಪಟ್ಟಿರುವರು.

ಹರೇ ಕೃಷ್ಣ ಸಮಾಜ

ಹರೇ ಕೃಷ್ಣ ಸಮಾಜ (ಮೈಸೂರು ರಾಜ್ಯ ಶಾಖೆ) ದ 1972_73ನೇ ಸಾಲಿಗೆ ಈ ಕೆಳಗಿನವರು ಪದಾಧಿಕಾರಿಗಳಾಗಿದ್ದಾರೆ.

ಶ್ರೀ ಕೆ. ಮೋಹನದೇವ ಆಳ್ವ(ಅಧ್ಯಕ್ಷ) ಶ್ರೀಮತಿ ಐರನೆ ಪಿಂಟೊ(ಉಪಾಧ್ಯಕ್ಷೆ) ಶ್ರೀ ದಿನೇಶ ಶರ್ಮ(ಕಾರ್ಯದರ್ಶಿ) ಶ್ರೀ ಎಸ್. ಶ್ರೀರಾಮ, ಕೋಶಾಧಿಕಾರಿ)

ಕಾರ್ಯಕಾರಿ ಸಮಿತಿ ಸದಸ್ಯರು—ಶ್ರೀಮತಿ ಬಿಲ್‌ಕ್ವೀಸ್ ಆಯೂಬ್, ಶ್ರೀ ಅಮರನಾಥ ಗೋಯಲ್, ಶ್ರೀ. ನಿತಿನ್ ಭಂಡಾರಿ, ಶ್ರೀಮತಿ ಜ್ಯೋತಿ ಪೈ, ಶ್ರೀ. ಪ್ರಭಾಕರ ಜೋಯಿಸ್.

ಸಹಕಾರ ಸಚಿವ ಶ್ರೀ ಎ ಶಂಕರ ಆಳ್ವರಿಗೆ ಮಂಗಳೂರಲ್ಲಿ ಪೌರ ಸನ್ಮಾನ

ಮಂಗಳೂರು ನಗರ ಸಭೆ ತಾ. 3ರಂದು ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರಿಗೆ ಪೌರ ಸನ್ಮಾನವಿತ್ತು ಸತ್ಕರಿಸಿತು. ಆರಂಭದಲ್ಲಿ ನಗರ ಸಭಾಪತಿ ಶ್ರೀ ವಾಮನ ಕೊಡಿಯಾಲ್‌ಬೈಲ್‌ರವರು ಸ್ವಾಗತಿಸಿ ನಗರಸಭಾ ಸದಸ್ಯರ ಪರಿಚಯ ಮಾಡಿಸಿ, ಸಚಿವರಿಗೆ ಸನ್ಮಾನ ಪತ್ರ ಅರ್ಪಿಸಿದರು.

ಶ್ರೀ ಆಳ್ವರು ಉತ್ತರಿಸುತ್ತಾ ದ. ಕ. ಜಿಲ್ಲೆಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೆರವಾಗುವುದಾಗಿ ಆಶ್ವಾಸನೆ ಇತ್ತರಲ್ಲದೆ ಮೈಸೂರು ಮುನಿಸಿಪಲ್ ಆಡಳಿತ ನಿಯಮಾವಳಿ ಜಾರಿಗೆ ಪ್ರಯತ್ನಿಸುವುದಾಗಿಯೂ ಆದರೆ ಇದರಿಂದ ಸಾರ್ವಜನಿಕ ಸೇವೆಗೆ ವ್ಯತ್ಯಯ ಉಂಟಾಗಬಾರದೆಂದೂ, ಅಧಿಕಾರಿ ಮತ್ತು ಜನತಾ ಪ್ರತಿನಿಧಿಗಳ ನಡುವೆ ಹೊಂದಾಣಿಕೆ ಇರಬೇಕೆಂದೂ ನುಡಿದರು.

ಅಂತ್ಯದಲ್ಲಿ ನಗರ ಸಭೆಯ ಉಪಾಧ್ಯಕ್ಷೆಯೂ ಶಾಸಕಿಯೂ ಆದ ಶ್ರೀಮತಿ ಎಡ್ಡಿ ಸಾಲ್ಡಾನ ಧನ್ಯವಾದಗಳನ್ನು ಅರ್ಪಿಸಿದರು.

ತುಳುಕೂಟದಲ್ಲಿ ಶಂಕರ ಆಳ್ವರಿಗೆ ಸನ್ಮಾನ

ತಾ. 5ರಂದು ತುಳುಕೂಟವು ಸಹಕಾರ ಸಚಿವ ಶ್ರೀ ಎ ಶಂಕರ ಆಳ್ವರನ್ನು ಹಾಗೂ ದ. ಕ ಜಿಲ್ಲೆಯಿಂದ ಆರಿಸಿ ಬಂದ ಶಾಸಕರನ್ನು ಸತ್ಕರಿಸಲು ವುಡ್‌ಲ್ಯಾಂಡ್ಸ್‌ನಲ್ಲಿ ಒಂದು ಸನ್ಮಾನ ಕೂಟ ಜರಗಿಸಿತು. ತುಳುಕೂಟದ ಉಪಾಧ್ಯಕ್ಷ ಶ್ರೀ ಎಸ್. ಕೆ. ಅಮೀನರು ಸ್ವಾಗತಿಸಿದರು. ಅಧ್ಯಕ್ಷ ಶ್ರೀ ಎಸ್. ಆರ್. ಹೆಗ್ಡೆ ಸಚಿವರಿಗೆ ಒಂದು ಮನವಿ ಒಪ್ಪಿಸಿದರು.

ಈ ಸಮಾರಂಭದಲ್ಲಿ ಶಾಸಕರುಗಳಾದ ಷರೀಫ್, ಎ. ಜಿ ಕೊಡ್ಗಿ, ಸುಬ್ಬಯ್ಯ ಶೆಟ್ಟಿ, ಪಿ. ಡಿ. ಬಂಗೇರ, ಜಯಪ್ರಕಾಶ ಶೆಟ್ಟಿ, ಶ್ರೀಮತಿ ಮನೋರಮಾ ಮಧ್ವರಾಜ್, ಎಡ್ಡಿ ಸಲ್ಡಾನಾ ಭಾಗವಹಿಸಿದ್ದರು.

ಸಚಿವ ಶ್ರೀ ಆಳ್ವರು ಮನವಿಗೆ ಉತ್ತರಿಸುತ್ತಾ ತುಳು ಭಾಷೆಯ ಸಮಸ್ಯೆಯ ಕುರಿತು ಅದರ ಅಭಿವೃದ್ಧಿಗಾಗಿ ಪರಿಶೀಲಿಸುವುದಾಗಿ ಭರವಸೆಯಿತ್ತರು.

ಗೌರವ ಕಾರ್ಯದರ್ಶಿ ಶ್ರೀ ಪಿ. ಸಿ. ಭಂಡಾರಿಯವರು ಧನ್ಯವಾದ ಅರ್ಪಿಸಿದರು.

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಅಂಗ್ರೈ ತೋರಿಸಿದರೆ ಅವಲಕ್ಷಣ ಹೇಳಿದರು

(ಏಳನೇ ಪುಟದಿಂದ)

ದ್ದರೂ ಅವರ ಮೇಲೆ ಶಿಸ್ತಿನ ಕ್ರಮ ಕೈ ಗೊಂಡ ಉದಾಹರಣೆಗಳೇ ಇಲ್ಲ! ಕರ್ತವ್ಯ ಚ್ಯುತರಿಂದಲೇ ತುಂಬಿ ತುಳುಕಾಡುತ್ತಿರು ವ ವಿಶ್ವ ವಿದ್ಯಾಲಯದಲ್ಲಿ ಕರ್ತವ್ಯ ಚ್ಯುತರೇ ಕರ್ತವ್ಯಗಳ ಬಗೆಗೆ ಉಗ್ರ ಕ್ರಮ ಕೈಕೊಳ್ಳಲು ಮುಂಪಾದುದು ಸರಸ್ವತೀ ಮಂದಿರಕ್ಕೆ ಮಸಿ ಬಳಿದಂತೆಯೇ ಸರಿ. ಇಂ ತಹ ಕರಿಕಲ್ಲನ್ನು ದೂರ ಮಾಡಲು ಎಲ್ಲ ಮಾರ್ಗದಿಂದ ಎಲ್ಲ ಬಗೆಯ ಪ್ರಯತ್ನ ಅನಿ ವಾರ್ಯವಾಗುತ್ತದೆ. ಅಂತೂ ದೂರಿದವರು ಅಂಗ್ರೈ ತೋರಿಸಿ ಅವಲಕ್ಷಣ ಹೇಳಿಸಿಕೊಂ ಡರು.

o o o

ರಾಜ್ಯಪಾಲ ಮೋಹನಲಾಲ ಸುಖಾಡಿ ಯೂರವರು ಪಳಗಿದ ರಾಜ್ಯಕಾರಣಿ. ಸು ಮಾರು ಇಪ್ಪತ್ತು ವರ್ಷಗಳಷ್ಟು ಕಾಲ ರಾ ಜಸ್ಥಾನದ ಮುಖ್ಯಮಂತ್ರಿಯಾಗಿದ್ದು ಕ ರ್ನಾಟಕಕ್ಕೆ ವಿಶ್ರಾಂತಿ ಪಡೆಯಬಂದ ರಾ ಜ್ಯಪಾಲರು. ಆದರೆ, ಸದಾ ಸಕ್ರಿಯರಾ ಗಿ ಇದ್ದವರು ಒಮ್ಮೆಗೇ ನಿಷ್ಕ್ರಿಯರಾ ಗುವುದು ಸಾಧ್ಯವಿಲ್ಲ. ಆದರಲ್ಲೂ ಸುಖಾಡಿ ಯೂ ಪ್ರಗತಿಶೀಲರು, ನಡುಹರೆಯದವರು. ಅವರು ಮಂಗಳೂರಿನ ಕಸ್ತೂರ್ಬಾ ವೈದ್ಯ ಕೀಯ ಕಾಲೇಜಿನ ವಾರ್ಷಿಕೋತ್ಸವದಂ ದು ಸಂಯೋಜಿತ ವೈದ್ಯ ಪದ್ಧತಿಯನ್ನು ರೂಪಿಸಲು ವೈದರಿಗೆ ಕರೆ ನೀಡಿದರು. ಮಾ ನವನ ರೋಗರುಜಿನಗಳನ್ನು ನಿವಾರಿಸುವು ದು ವೈದರ ಕರ್ತವ್ಯ. ಈ ನಿಟ್ಟಿನಲ್ಲಿ ಅ ಲೋಪತಿಯೇ ಆಗ ಬೇಕು—ಆಯುರ್ವೇದ ವೇ ಆಗ ಬೇಕೆಂಬ ದುರಭಿಮಾನ ಸಲ್ಲದು. ಎಲ್ಲ ಬಗೆಯ ವೈದ್ಯಕ ಪದ್ಧತಿಗಳಲ್ಲಿನ ಉ ತ್ತಮ ಗುಣಗಳನ್ನು ಸ್ವೀಕರಿಸಿ ರೋಗ ನಿ ದಾನವನ್ನು ಸಾಧಿಸಬೇಕೆಂದು ಅವರ ಅಭಿ ಪ್ರಾಯ.

ಆಯುರ್ವೇದದ ಬಗ್ಗೆ ರಾಜ್ಯಪಾಲರು ಪ್ರಶಂಸೆಯ ಮಾತಾಡಿದರು. 'ಶತಶತಮಾ ನಗಳಿಂದಲೂ ಆಯುರ್ವೇದವು ಯಶಸ್ವೀ ವೈದ್ಯಕ ಪದ್ಧತಿಯಾಗಿ ಬಂದಿದೆ. ದೇಶದ ಮೂಲೆ ಮೂಲೆಯಲ್ಲಿಯೂ ಜನಪ್ರಿಯ ವಾಗಿದೆ; ವಿಶ್ವಾಸ ಪಾತ್ರವಾಗಿದೆ. ಈ ಪದ್ಧ ತಿಯ ಬಗ್ಗೆ ಅಲೋಪತಿ ವೈದ್ಯರೂ ಆಳ ವಾಗಿ ಅಭ್ಯಸಿಸಬೇಕು; ಅದರಲ್ಲಿ ಸಂಶೋ ಧನೆಗಳನ್ನು ಮಾಡಬೇಕು' ಎಂದರು. ವೈ ದ್ಯರೆಂದು ಕರೆದುಕೊಳ್ಳಲು ಹೇಸಿ ಡಾಕ್ಟ ರರೆಂದು ಹೆಸರಿಟ್ಟುಕೊಳ್ಳುವಷ್ಟು ಆಯು ರ್ವೇದ ವೈದ್ಯರೇ ಅಂಗ್ರೇಜೀಕರಣಗೊಂಡಿ ರುವಾಗ ಅಲೋಪತಿಯೇ ಸರ್ವೋತ್ಕೃಷ್ಟ ವೈದ್ಯಕ ವಿಧಾನವೆಂದು ಡಾಕ್ಟರರು ಅಚಲ ವಿಶ್ವಾಸ ತಳೆದಿರುವಾಗ, ಜನಪ್ರಿಯತೆಯ ನ್ನು ಯಾರು ಕೇಳುತ್ತಾರೆ? ಆಯುರ್ವೇ ದ— ಯೂನಾನಿ— ಹೋಮಿಯೋಪತಿ ಮೊದಲಾದುವು ಕೊನೆಯುಸಿರೆಳೆಯುತ್ತಿ ವೆ. ಸಂಸ್ಕೃತ-ಪ್ರಾದೇಶಿಕ ಭಾಷೆಗಳ ಬ ಗ್ಗೆ ತಾಸುಗಟ್ಟಲೆ ಮಾತಾಡುವವರು ಅವು ಗಳನ್ನು ಅಧ್ಯಯನ ಮಾಡಿದವರನ್ನು ಪದ ದಲಿತಗೊಳಿಸುವ ಎಲ್ಲ ಕ್ರಮಗಳನ್ನೂ ಸರ ಕಾರ ಕೈಕೊಳ್ಳುತ್ತಿರುವಂತೆ ವೈದ್ಯರ ಬ ಗ್ಗೆಯೂ ಮಲತಾಯಿ ಧೋರಣೆ ಇಂಗ್ಲಿ ಷ್‌ರ. ಬಿಟ್ಟುಹೋದ ಹಳೆಯ ಈ ನೀತಿ ದೂರವಾಗದೆ ಸುಲಭ ವೈದ್ಯ ಸಾಧ್ಯವಲ್ಲನೆ ನಿಸುತ್ತದೆ.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಗೇಹರಾಜ್ಯದಲ್ಲಿ

(ನಾಲ್ಕನೇ ಪುಟದಿಂದ)

'ಹ್ಞೂಂ....ಹಾಗೆಯೇ ಸಂಕುಚಿತ ಪ್ರ ವೃತ್ತಿಯಲ್ಲೇ ಬೆಳೆದು ಬಂದವರಿಗೆ ವಿಶಾಲ ಮನೋಭಾವನೆಯನ್ನು ರೂಢಿಸಿ ಕೊಳ್ಳು ವುದು ಕಷ್ಟವಾಗುತ್ತದೆ—'

'ಅದೇ ನಾನನ್ನೋದು....'

'ಆದರೂ ರೂಢಿಸಿಕೊಳ್ಳಬೇಕಷ್ಟೆ....'

'ಯಾರು?'

'ನಾನು--ನೀನು--ಎಲ್ಲರೂ....'

'ಹ್ಞೂಂ....ಪ್ರಯತ್ನಿಸೋಣ....'

'ನೋಡು, ತರೀಕೆರೆಯ ವಿಜ್ಞಾನ ಇಂಡ ಸ್ಟ್ರೀಸ್ ಸಂಸ್ಥೆಯಲ್ಲಿ ಸಮರ ನೌಕೆಗಳ ಪ್ರ ಮುಖ ಭಾಗಗಳು ಉತ್ಪಾದನೆಯಾಗ ತೊ ಡಗಿವೆ....'

'ಹೌದಂತೆ...ಅದೆಂತ ಮೋಟರ್ಬೈನ್ ಗಳ ಬಿಡಿಭಾಗಗಳು....'

'ಹ್ಞೂಂ....ದೇಶದ ಕೈಗಾರಿಕೆಗಳು ರಕ್ಷ ಣೋತ್ಪಾದನೆಯ ಕ್ಷೇತ್ರಕ್ಕೂ ವಿಸ್ತರಿಸ ಬೇಕು. ರಕ್ಷಣೋತ್ಪಾದನೆಯಲ್ಲಿ ಸ್ವಾವ ಲಂಬನೆ ಸಾಧಿಸಬೇಕು.. ಇಂದು ಕೇಂದ್ರ ಸರಕಾರದ ನೀತಿ. ತರೀಕೆರೆಯಲ್ಲಿ ಇದರ ದ್ದೇ ಅನುಷ್ಠಾನ ನಡೆದಿದೆ....'

'ಅದು ಹೌದೂನ್ನಿ. ಇದುವರೆಗೆ ಇವೆಲ್ಲಾ ದ ಬರುತಿದ್ದುವು?'

'ಬ್ರಿಟನ್ನಿಂದ. ಸದ್ಯ ತಯಾರಾಗುವ ಟರ್ಬೈನ್‌ಗಳಿಗೆ ಸೇ. ೬೦ರಷ್ಟು ದೇಶೀಯ ವಸ್ತುಗಳನ್ನೇ ಉಪಯೋಗಿಸಲಾಗುತ್ತದೆ ಯಂತೆ....'

'ಅಲ್ರಿ ವಿಯತನಾಮದಲ್ಲಿ ಅಮೆರಿಕೆ ಭಾರಿ ಉಗ್ರ ಕದನಕೊಟ್ಟಿದೆಯಂತೆ....'

'ಅದೆಂತದು? ಕಳೆದ ಸಮಾರು ಹತ್ತು ವರ್ಷಗಳೂ ಅದೇ ನಡೆದಿದೆ. ಅಮೆರಿಕೆಯ ನೂರಕಾಸ್ತ್ರಗಳನ್ನು ಸುಟ್ಟು ಹಾಕಲು ವಿ ಯತನಾಮವೊಂದು ರುದ್ರಭೂಮಿ.'

'ಅಲ್ರಿ, ಅಮೆರಿಕೆ..ಚೀನಾಗಳು ಹತ್ತಿರ ಬಂದುವೆಂದು ಹೇಳಲಾಯ್ತು. ಆದರೆ ವಿ ಯತನಾಮ ಯುದ್ಧಕ್ಕೆ ಕೊನೆ ಬರಲಿಲ್ಲ.'

'ಅವು ಒಂದಾದದ್ದು ಯಾವುದರಲ್ಲಿ?'

'ಯಾವುದರಲ್ಲಿ?'

'ಭಾರತವನ್ನು ಬಗ್ಗು ಬಡಿಯುವ ಸಂ ಚಿನಲ್ಲಿ ಮಾತ್ರ....'

'ಅಲ್ರಿ, ಬಾಂಗ್ಲಾದೇಶವನ್ನು ನಿಕ್ಸನ್ನ ರು ಮನ್ನಿಸಿದರಲ್ಲಾ....'

'ಅದು ಬೇರೆ ಕತೆ. ಭಾರತವನ್ನು ಬಡಿ ಯ ಬೇಕು; ಅದಕ್ಕಾಗಿ ಪಾಕಿಸ್ತಾನವನ್ನು ಎತ್ತಿ ಕಟ್ಟಬೇಕು.. ಇದು ನಿಕ್ಸನ್ನರ ಗುರಿ ಯಿದ್ದಂತೆ ತೋರುತ್ತದೆ. ಇಲ್ಲವಾದರೆ, ಕಾ ಶ್ಮೀರ ಸಮಸ್ಯೆಯ ಹೂತ ಹೆಣವನ್ನು ಮ ತ್ತೆ ಸಮಾಧಿಯಿಂದ ಎತ್ತಿಹಾಕುವ ಅಗತ್ಯ ವೇನಿತ್ತು ಅವರಿಗೆ?'

"ಅದೇನೇ ಹೇಳಿ, ಇದರಲ್ಲಿ ಅಮೆರಿಕೆ ಗೆಲ್ಲುವುದಿಲ್ಲ."

'ಅದು ಗೆಲ್ಲುವುದಿದ್ದರೆ ನೆಹರು ಕಾಲದ ದಲ್ಲೇ ಗೆಲ್ಲುತಿತ್ತು....'

'ಹ್ಞೂಂ....'

"ಏನು?"

'ನಾವು ಗೆದ್ದಿದ್ದೇವೆ; ಗೆಲ್ಲುವ ದಾರಿಯ ಲ್ಲೇ ಮುಂದುವರಿಯುತಿದ್ದೇವೆ; ಗೆಲ್ಲು ತ್ತೇವೆ...'

"ಏನನ್ನು?"

"ಮತ್ತೇನನ್ನು? ನಮಗೆ ಬೇಕಾ ದ್ದನ್ನು...."

'ಶುಭವಾಗಲಿ, ಶುಭವಾಗಲಿ....'

—ಗೋರಾ

●●

ಮಣಿಪಾಲದಲ್ಲಿ ರಾಜ್ಯಪಾಲ ಸುಖಾಡಿಯಾ

ತಾ. ೩ರಂದು ಮಣಿಪಾಲ ಕಸ್ತುರ್ಬಾ ಆಸ್ಪ ತ್ರಿಯ ಮೆಡಿಕೇರ್ ವಿಮಾ ಯೋಜನೆಯನ್ನು ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಮಾನ್ಯ ರಾಜ್ಯಪಾಲ ಶ್ರೀ ಮೋಹನಲಾಲ್ ಸು ಖಾಡಿಯಾರವರು ಉದ್ಘಾಟಿಸಿದರು. ಆರಂಭದ ಲ್ಲಿ ಶ್ರೀ ಟಿ. ರಮೇಶ ಪೈಯವರು ಸ್ವಾಗತಿಸಿದ ರು. ಅವರು ವೈದ್ಯಕೀಯ ಸೌಲಭ್ಯ ನೀಡುವ 'ಮೆಡಿಕೇರ್', ವಿಮೆಯ ಕುರಿತು ವಿವರಣೆಯನ್ನಿ ತ್ತರು.

ಶ್ರೀ ಸುಖಾಡಿಯಾರು ಉದ್ಘಾಟಿಸುತ್ತಾ, ಇ ಲ್ಲಿನ ಎಲ್ಲ ಶೈಕ್ಷಣಿಕ ಸಂಸ್ಥೆಗಳು ಒಂದಾಗಿ ಮ ಣಿಪಾಲದಲ್ಲೊಂದು ರಾಷ್ಟ್ರೀಯ ಮಟ್ಟದ ವಿ. ವಿ. ನಿಲಯ ಶೀಘ್ರವೇ ಸ್ಥಾಪನೆಯಾಗುವಂತಾ ಗಲೆಂದು ಹಾರೈಸಿದರು ಆಸ್ಪತ್ರೆಯ 'ಮೆಡಿಕೇ ರ್' ಯೋಜನೆಗೆ ಯಶಸ್ಸನ್ನು ಕೋರಿ ಅವರು ಯೋಜನೆಯ ಉದ್ಘಾಟನೆಗೈದು ಪಾಲಿಸಿಗಳನ್ನು ಹಂಚಿದರು.

ಡಾ| ಟಿ ಎಂ. ಎ ಪೈಯವರು ಮಾತಾಡು ತ್ತಾ ಮಣಿಪಾಲದಲ್ಲಿ ದೊರಕುತ್ತಿರುವ ವೈದ್ಯಕೀ ಯ ಸೌಲಭ್ಯಗಳನ್ನು ವಿವರಿಸಿದರು

ಮೆಡಿಕಲ್ ರಿಲೀಫ್ ಸೊಸಾಯಿಟಿಯ ಕಾ ರ್ಯದರ್ಶಿ ಶ್ರೀ ಕೆ. ಶ್ರೀಪತಿ ಆಚಾರ್ಯರು ಧನ್ಯವಾದ ಅರ್ಪಿಸಿದರು.

ರಾಜ್ಯಪಾಲರು ಉಡುಪಿಗೆ ಆಗಮಿಸುತ್ತಲೂ ಅವರಿಗೆ ಸರ್ಕಿಟ್ ಹೌಸ್‌ನಲ್ಲಿ ನಗರ ಸಭಾಪತಿ ಡಾ| ವಿ. ಎಸ್. ಆಚಾರ್ಯರು ಹಾರಾರ್ಪಣೆ ಗೈದು ನಗರಕ್ಕೆ ಶುಭಾಗಮನ ಹಾರೈಸಿದರು. ನಂತರ ರಾಜ್ಯಪಾಲರು ಶ್ರೀ ಕೃಷ್ಣ ಮಠಕ್ಕೆ ತೆ ರಳಿ ಪೂಜಾದಿಗಳನ್ನು ವೀಕ್ಷಿಸಿ, ಪರ್ಯಾಯ ಶ್ರೀ ಅದಮಾರು ಮಠದ ಶ್ರೀಪಾದರಿಂದ ಪ್ರ ಸಾದ ಸ್ವೀಕರಿಸಿದರು.

ಸಹಕಾರಿ ಚಳವಳಿಯ ಯಶಸ್ಸಿಗೆ ಸಹಕರಿಸಿರಿ —ಶಂಕರ ಆಳ್ವರ ಕರೆ

ತಾ. ೮ರಂದು ಮಂಗಳೂರಿನ ಜಿಲ್ಲಾ ಕೇಂದ್ರ ಸಹಕಾರಿ ಬೇಂಕ್‌ನ ಮೊಳಹಳ್ಳಿ ಶಿವರಾವ್ ಸ್ಮಾ ರಕ ಸಭಾ ಭವನದಲ್ಲಿ ಜಿಲ್ಲಾ ಕೇಂದ್ರ ಸಹಕಾ ರಿ ಬೇಂಕ್ ಮತ್ತು ಜಿಲ್ಲಾ ಸಹಕಾರೀ ಯೂನಿ ಯನ್‌ನ ಆಶ್ರಯದಲ್ಲಿ ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರನ್ನು ಸನ್ಮಾನಿಸಲಾಯಿತು.

ಆರಂಭದಲ್ಲಿ ಕೇಂದ್ರ ಜಿಲ್ಲಾ ಸಹಕಾರಿ ಬೇಂ ಕ್‌ನ ಅಧ್ಯಕ್ಷ ಶ್ರೀ ಬಿ ನಾರಾಯಣ ನಾಯ ಕರು ಸ್ವಾಗತಿಸಿದರು. ಜಿಲ್ಲೆಯ ವಿವಿಧ ಸಹಕಾ ರೀ ಸಂಸ್ಥೆಗಳ ಕಡೆಯಿಂದ ಸಚಿವರಿಗೆ ಹಾರಾರ್ಪ ಣೆ ನಡೆಯಿತು. ಮಂಗಳೂರು ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ಮನವಿಯೊಂದನ್ನು ಶ್ರೀ ಜಮ್ನಾದಾಸ್ ಚಂದ್ರಕಾಂತ್ ಶೇಟ್‌ರವ ರೂ, ಸಹಕಾರಿ ನೌಕರರಿಗೆ ಕೈಗಾರಿಕಾ ವಿವಾದ ಕಾನೂನು ಅನ್ವಯಕವಾಗುವಂತೆ ಸಹಕಾರಿ ಕಾ ನೂನನ್ನು ತಿದ್ದುಪಡಿ ಮಾಡಬೇಕೆಂದು ವಿನಂತಿ ಸುವ ಮನವಿಯೊಂದನ್ನು ದ ಕ. ಜಿಲ್ಲೆಯ ಸ ಹಕಾರಿ ಸಂಸ್ಥೆಗಳಲ್ಲಿ ದುಡಿಯುವ ಕೆಲಸಗಾರರ ಸಂಘಟನೆಯಾದ ಸಹಕಾರಿ ನೌಕರರ ಸಂಘದ ನಿಯೋಗವೂ ಸಚಿವರಿಗೆ ಒಪ್ಪಿಸಿರುವ್ರದು

ಶ್ರೀ ಆಳ್ವರು ಮಾತಾಡಿ, ಸಹಕಾರಿ ಚಳವಳಿ ಯಶಸ್ವಿಯಾಗಿ ಮುನ್ನಡೆಯ ಬೇಕಾದರೆ ಅದರ ಯಶಸ್ಸಿಗಾಗಿ ಎಲ್ಲಾ ವರ್ಗದ ಜನರು ಸಹಕರಿ ಸಬೇಕೆಂದು ಕರೆ ನೀಡಿದರು. ಈ ಸಹಕಾರಿ ಸಂ ಘಗಳ ಆಡಳಿತದಲ್ಲಿ ಸರಕಾರ ಯಾವ ರೀತಿಯ ಹಸ್ತಕ್ಷೇಪ ಮಾಡಲೂ ಇಚ್ಛಿಸುವುದಿಲ್ಲವೆಂದು ಹೇಳಿದ ಶ್ರೀ ಆಳ್ವರು ಸಹಕಾರೀ ಸಂಘಗಳ ವಿ ಚಾರದಲ್ಲಿ ಸರಕಾರದ ಕರ್ತವ್ಯಗಳನ್ನು ವಿವರಿಸಿ ದರು. ಸೊಸೈಟಿಗಳು ಒಳ್ಳೆ ರೀತಿ ಬೆಳೆದು ಅದ ರಿಂದ ಎಲ್ಲಾ ಜನರೂ ಪ್ರಯೋಜನ ಪಡೆಯು ವಂತಾಗ ಬೇಕೆಂದು ಸಚಿವರು ಆಶಿಸಿದರು.

ಕೊನೆಯಲ್ಲಿ ಜಿಲ್ಲಾ ಸಹಕಾರಿ ಯೂನಿಯ ನ್‌ನ ಅಧ್ಯಕ್ಷ ಶ್ರೀ ಬೈಂದೂರು ಪ್ರಭಾಕರರಾ ಯರು ಧನ್ಯವಾದವಿತ್ತರು.

ವಾರ್ಷಿಕೋತ್ಸವ

ಶ್ರೀ ವ್ಯಾಸಾಶ್ರಮ, ಸುರತ್ಕಲ್ ಪಿ.ಯು.ಕಾ. ಇವರ ವಾರ್ಷಿಕೋತ್ಸವವು ಇದೇ ಬರುವ ಮೇ ತಿಂಗಳ ತಾ. ೬, ೭ ಮತ್ತು ೮ರಂದು ಜರಗಲಿರು ವುದೆಂದೂ ಆ ಪ್ರಯುಕ್ತ, ಪರಿಕಥೆ, ಯಕ್ಷ ಗಾನ, ಭಾಷಣ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ. ಇದೇ ಸಂದರ್ಭದಲ್ಲಿ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಹಲ ವಾರು ಸ್ಪರ್ಧೆಗಳನ್ನು ಕೂಡ ಏರ್ಪಡಿಸಲಾಗಿದೆ. ವಿವರಗಳನ್ನು ಆಶ್ರಮಕ್ಕೆ ಬರೆದು ತಿಳಿಯ ಬಹುದು.

●●

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಗ್ರಾಮಗಳಿಗೆ ಬೆಳಕು ಒಂದು ದಶಕದ ಯೋಜನೆ

1971—81ನೇ ದಶಕದ ಅಂತ್ಯದಲ್ಲಿ ಕರ್ನಾಟಕ ರಾಜ್ಯದ 18 ಸಾವಿರ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ದೊರಕುತ್ತದೆ. 4.5 ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುತ್ ಚಾಲನೆಯೂಗಿರುತ್ತದೆ.

ಈ ದಶಕದ ಅವಧಿಯಲ್ಲಿ ದೇಶದ 3.4 ಲಕ್ಷ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ವಿಸ್ತರಿಸಿ, 65 ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುದೀಕರಣವಾಗುತ್ತದೆ.

ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ವಿದ್ಯುಚ್ಛಕ್ತಿ ಅತ್ಯಗತ್ಯವಾದ ಪ್ರಬಲ ಸಾಧನವಾಗಿದೆ. ಭಾರತ ಗ್ರಾಮಗಳ ದೇಶ. ಇಲ್ಲಿನ 5.57ಲಕ್ಷಕ್ಕಿಂತಲೂ ಹೆಚ್ಚಿನ ಗ್ರಾಮಗಳಲ್ಲಿ ದೇಶದ ಶೇಕಡ 80ರಷ್ಟು ಜನತೆ ಜೀವಿಸುತ್ತಿದೆ. ಆದ್ದರಿಂದ ಗ್ರಾಮ ವಿದ್ಯುದೀಕರಣಕ್ಕೆ ಬೃಹತ್ ಯೋಜನೆ ರೂಪಿಸುವುದು ಅತ್ಯಗತ್ಯವಾಗಿದೆ.

ಈಗ 21 ವರ್ಷಗಳ ಹಿಂದೆ ದೇಶದಲ್ಲಿ ಯೋಜನಾ ಶಕೆ ಆರಂಭವಾದಾಗ ಕೇವಲ 3600 ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ವಿದ್ದಿತು. 19 ಸಾವಿರ ನೀರಾವರಿ ಪಂಪುಗಳಿಗೆ ವಿದ್ಯುತ್ ಚಾಲನೆ ಮಾಡಲಾಗಿತ್ತು. 1951ನೇ ಇಸವಿ ಎಪ್ರಿಲ್‌ನಿಂದ 1971ನೇ ಇಸವಿ ಮಾರ್ಚಿ ಮಾಸದ ವರೆಗಿನ ಎರಡು ದಶಕಗಳ ಅವಧಿಯಲ್ಲಿ 1.97ಲಕ್ಷ ಗ್ರಾಮಗಳಿಗೆ (ಒಟ್ಟು ಗ್ರಾಮಗಳ ಶೇಕಡ 18.9ರಷ್ಟು) ವಿದ್ಯುತ್ ಸೌಲಭ್ಯ ವಿಸ್ತರಿಸಿ, 16.30 ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುತ್ ಚಾಲನೆ ನೀಡಲಾಯಿತು.

ಗುರುತರ ಹೊಣೆ

ಗ್ರಾಮ ವಿದ್ಯುದೀಕರಣ ರಂಗದಲ್ಲಿ ಇಷ್ಟೊಂದು ಗಣನೀಯ ಸಾಧನೆಯಾಗಿದ್ದರೂ, ಇನ್ನೂ ಗುರುತರ ಹೊಣೆ ಉಳಿದುಕೊಂಡಿದೆ. ಆದ್ದರಿಂದ 1971 - 81ರ ದಶಕದಲ್ಲಿ ದೇಶದ 2.33 ಲಕ್ಷ ಗ್ರಾಮಗಳಿಗೂ, (ಒಟ್ಟು ಗ್ರಾಮಗಳ ಶೇಕಡ 60ಭಾಗ) 48.70 ಲಕ್ಷ ನೀರಾವರಿ ಪಂಪುಗಳಿಗೂ ವಿದ್ಯುತ್ ಸೌಲಭ್ಯ ವಿಸ್ತರಿಸಲು ಯೋಜನೆ ರೂಪಿಸಲಾಗಿದೆ. ಇದರಿಂದ 3.40ಲಕ್ಷ ಗ್ರಾಮಗಳಿಗೆ ಹಾಗು 65ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುತ್ ಸೌಲಭ್ಯ ವಿಸ್ತರಿಸುತ್ತದೆ.

ಈ ದಶಕದ ಯೋಜನೆಯ ಅಂತ್ಯದಲ್ಲಿ ಶೇಕಡ 80ರಷ್ಟು ಗ್ರಾಮೀಣದ ಜನತೆಗೆ ವ್ಯಾಪಕವಾಗುವಂತೆ 500ಕ್ಕಿಂತಲೂ ಕಡಿಮೆ ಜನಸಂಖ್ಯೆಯಿರುವ ಎಲ್ಲಾ ಗ್ರಾಮಗಳೂ ಎಲ್ಲಾ ರಾಜ್ಯಗಳ ಅರ್ಧಪಾಲು ಗ್ರಾಮಗಳೂ ವಿದ್ಯುತ್ ಸೌಲಭ್ಯ ಪಡೆದಿರುತ್ತವೆ. ಹರಿಯಾನ ರಾಜ್ಯದಲ್ಲಿ ಈಗಾಗಲೇ ಎಲ್ಲಾ ಗ್ರಾಮಗಳಲ್ಲೂ ವಿದ್ಯುದೀಕರಣವಾಗಿದೆ.

ನಾಲ್ಕನೇ ಯೋಜನೆ ಅಂತ್ಯದಲ್ಲಿ 1.48 ಲಕ್ಷ ಗ್ರಾಮಗಳು ಮತ್ತು 25.90 ಲಕ್ಷ ನೀರಾವರಿ ಪಂಪುಗಳಿಗೂ, ಐದನೇ ಯೋಜನೆ ಕೊನೆಯಲ್ಲಿ 2.79ಲಕ್ಷ ಗ್ರಾಮಗಳು ಮತ್ತು 53.40 ಲಕ್ಷ ನೀರಾವರಿ ಪಂಪುಗಳಿಗೂ, ವಿದ್ಯುತ್ ಸೌಲಭ್ಯ ದೊರಕಿರುತ್ತದೆ.

2270 ಕೋಟಿ ರೂಪಾಯಿ ಯೋಜನೆ

ಈ ಬೃಹತ್ ದಶಕದ ಗ್ರಾಮಾಂತರ ವಿದ್ಯುದೀಕರಣ ಯೋಜನೆಗೆ 2270ಕೋಟಿ ರೂಪಾಯಿ ಬೇಕಾಗುತ್ತದೆ. 1971–74ರ ಅವಧಿಯಲ್ಲಿ 41 ಸಾವಿರ ಗ್ರಾಮಗಳು ಮತ್ತು 9.60ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುತ್ ಸೌಲಭ್ಯ ವಿಸ್ತರಿಸಲು 432 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ (1974–79)1.31 ಲಕ್ಷ ಗ್ರಾಮಗಳು ಮತ್ತು 27.50ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುದೀಕರಣ ಮಾಡಲು 1284 ಕೋಟಿ ರೂಪಾಯಿ ಬೇಕಾಗುತ್ತದೆ. 1979—81ರಲ್ಲಿ 61 ಸಾವಿರ ಗ್ರಾಮಗಳು 11.60ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುತ್ ಸೌಲಭ್ಯ ನೀಡಲು ಸುಮಾರು 562 ಕೋಟಿ ರೂಪಾಯಿ ವೆಚ್ಚವಾಗುತ್ತದೆ.

ಈಗ ಒಂದು ಗ್ರಾಮಕ್ಕೆ ವಿದ್ಯುತ್ ಸೌಲಭ್ಯ ವಿಸ್ತರಿಸಲು 35 ಸಹಸ್ರ ರೂಪಾಯಿ ನೀರಾವರಿ ಪಂಪಿಗೆ ವಿದ್ಯುತ್‌ಚಾಲನೆ ಮಾಡಲು 3ಸಾವಿರ ರೂಪಾಯಿ ವೆಚ್ಚವಾಗುತ್ತದೆ.

ರಾಜ್ಯದ ಯೋಜನೆ

1971–81ರ ಅಂತ್ಯದಲ್ಲಿ ಕರ್ನಾಟಕ ರಾಜ್ಯದಲ್ಲಿರುವ 26,377 ಗ್ರಾಮಗಳಲ್ಲಿ 18ಸಾವಿರ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ದೊರಕಿರುತ್ತದೆ. 1970–71ರ ಕೊನೆಯಲ್ಲಿ 8328 ಗ್ರಾಮಗಳಿಗೆ ವಿದ್ಯುತ್ ವಿಸ್ತರಣೆಯಾಗಿತ್ತು. ಇನ್ನುಳಿದಿರುವ ನಾಲ್ಕನೇ ಯೋಜನೆ ಅವಧಿಯಲ್ಲಿ 1497 ಗ್ರಾಮಗಳಿಗೂ ಐದನೇ ಯೋಜನೆಯಲ್ಲಿ 5545 ಗ್ರಾಮಗಳಿಗೂ ವಿದ್ಯುತ್ ವಿಸ್ತರಣೆಯಾಗುತ್ತದೆ.

1971ನೇ ಇಸವಿ ಮಾರ್ಚಿ ಅಂತ್ಯದಲ್ಲಿ ಸುಮಾರು 1.31ಲಕ್ಷಕ್ಕಿಂತಲೂ ಹೆಚ್ಚು ಪಂಪುಗಳಿಗೆ ವಿದ್ಯುತ್ ಚಾಲನೆಯಾಗಿತ್ತು. ಇನ್ನುಳಿದಿರುವ ನಾಲ್ಕನೇ ಯೋಜನೆ ಅವಧಿಯಲ್ಲಿ 70.642 ಪಂಪುಗಳಿಗೂ ಐದನೇ ಯೋಜನೆಯಲ್ಲಿ 1.84 ಲಕ್ಷಕ್ಕಿಂತಲೂ ಹೆಚ್ಚು ಪಂಪುಗಳಿಗೂ ವಿದ್ಯುತ್ ಚಾಲನೆ ಮಾಡಲಾಗುತ್ತದೆ. 1971–81ರ ದಶಕದ ಕೊನೆಯಲ್ಲಿ ಮೈಸೂರು ರಾಜ್ಯದಲ್ಲಿ 4.5 ಲಕ್ಷ ನೀರಾವರಿ ಪಂಪುಗಳಿಗೆ ವಿದ್ಯುತ್ ಚಾಲನೆಯಾಗುವ ನಿರೀಕ್ಷೆಯಿದೆ.

●●

(ಮೂರನೇ ಪುಟದಿಂದ)

ದೆಂಬ ನಿರೀಕ್ಷೆಯಲ್ಲೂ ಇರಲಿಲ್ಲವೆಂಬುದು ನಿಸ್ಸಂಶಯ ಆದುದರಿಂದ ಆಳುವ ಕಾಂಗ್ರೆಸ್ಸಿನ ಎಂ. ಎಲ್. ಎ.ಗಳಲ್ಲಿ ಕೆಲವರು ಪಾಟೀಲರಿಗೆ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಹಾಕಿದ್ದಾರೆಂಬುದು ಸಿದ್ಧ. ಇದು ಆಳುವ ಕಾಂಗ್ರೆಸಿಗೆ ಬಡೆದ ಕುತ್ತವೆನ್ನಬೇಕು. ಪಾಟೀಲರ ವ್ಯಕ್ತಿತ್ವದ ಬಗ್ಗೆ ಯಾರದ್ದೂ ಯಾವ ಬಗೆಯದ್ದೂ ಆಕ್ಷೇಪವಿಲ್ಲವೆಂಬುದು ನಿಜವಾದರೂ ನಮ್ಮದು ಪಕ್ಷೀಯ ಪದ್ಧತಿಯ ಪ್ರಜಾಸತ್ತೆಯಾಗಿದ್ದರಿಂದ ಶ್ರೀ ಅರಸರಿಗಿದು ತಲೆಭಾರ.

ಈ ವರ್ಷದ ದ್ವಿವಾರ್ಷಿಕ ಚುನಾವಣಾ ನಂತರವೂ ಆಳುವ ಕಾಂಗ್ರೆಸ್ಸಿಗೆ ರಾಜ್ಯಸಭೆಯಲ್ಲಿ ಬಹುಮತ ಬರಲಿಲ್ಲ, ಬರಿಯ ನಾಲ್ಕರಷ್ಟು ಕಡಿಮೆ. ಇದು ಮುಂದೆ ನಡೆಯ ಬಹುದಾದ ಉಪ ಚುನಾವಣೆಗಳಲ್ಲಿ ಸರಿಹೊಂದ ಬಹುದು; ಅಥವಾ ಮುಂದಿನ ಚುನಾವಣೆಯ ವೇಳೆ ಹೆಚ್ಚಿನ ಬಹುಮತ ಲಭಿಸಬಹುದು. ರಾಜ್ಯದಿಂದ ಆಯ್ಕೆಯಾದ ನಾಲ್ವರೂ ಯೋಗ್ಯತಾ ಸಂಪ

ನ್ನರು. ಟಿ. ಎ. ಪೈಯವರು ಕೇಂದ್ರದಲ್ಲಿ ವಿತ್ತ ಸಚಿವರಾಗುತ್ತಾರೆಂದೂ ಅದಕ್ಕೆಂದೇ ಮತ್ತೆ ರಾಜ್ಯಕೀಯ ಪ್ರವೇಶಿಸಿದ್ದಾರೆಂದೂ ದಟ್ಟ ವದಂತಿ. ಇವರಿಗೂ ಉಳಿದ ಮೂವರಿಗೂ "ನವಯುಗದ" ಹಾರ್ದಿಕ ಅಭಿನಂದನೆಗಳು.

●●

ಶಂಕರ ಆಳ್ವರಿಗೆ ಬಂಟರ ಯಾನೆ ನಾಡವರ ಸಂಘದಲ್ಲಿ ಸನ್ಮಾನ

ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರನ್ನು, ಮಂಗಳೂರಿನ ಬಂಟರ ಯಾನೆ ನಾಡವರ ಸಂಘದವರು ತಾ. 6ರಂದು ಎಡ್ವಕೇಟ್ ಶ್ರೀ ಕೆ. ಸುಂದರರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸನ್ಮಾನಿಸಿದರು.

ಸಂಘದ ಉಪಾಧ್ಯಕ್ಷ ಶ್ರೀ ತಿಮ್ಮಪ್ಪ ಶೆಟ್ಟರು ಹಾರಾರ್ಪಣೆಗೈದ ಬಳಿಕ ಅಧ್ಯಕ್ಷ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ಸಮಾಜದ ಧುರೀಣರೊಬ್ಬರನ್ನು ಸನ್ಮಾನಿಸುವುದು ನಮ್ಮ ಕರ್ತವ್ಯವೆಂದರು.

ಡಾ| ಕೆ. ಬಾಲಪ್ಪ ಶೆಟ್ಟಿ ಮತ್ತು ಆನಂದ ಕಂಪ ಹೆಗ್ಡೆಯವರು ಅಭಿನಂದನಾ ಭಾಷಣ ಮಾಡಿದ ಬಳಿಕ ಶ್ರೀ ಆಳ್ವರು ಮಾತಾಡಿ ಇಂದಿರಾ ಗಾಂಧಿಯವರ ಸಮಾಜವಾದ ಯಶಸ್ವಿಯಾಗುವಂತೆ ನಡೆಯುವುದು ನಮ್ಮ ಕರ್ತವ್ಯ ಎಂದರು.

ಕಾರ್ಯದರ್ಶಿ ಶ್ರೀ ಬಿ ಮಿತ್ರದಾಸ ಹೆಗ್ಡೆಯವರು ಧನ್ಯವಾದ ಅರ್ಪಿಸಿದರು

ಭೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಾಗತಿಕ ಬ್ಯಾಂಕ್‌ನಿಂದ ನೆರವು ಯೋಜನೆ

ತಾ. 6ರಂದು ಮಂಗಳೂರಿನ ಪತ್ರಕರ್ತರೊಂದಿಗೆ ಮಾತಾಡುತ್ತಿದ್ದ ಶಂಕರ ಆಳ್ವರು ರಾಜ್ಯದ ಭೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಾಗತಿಕ ಬ್ಯಾಂಕ್‌ನಿಂದ ಸುಮಾರು ರೂ 26 ಕೋಟಿಯಷ್ಟು ನೆರವು ಯೋಜನೆಯೊಂದು ಪರಿಶೀಲನೆಯಲ್ಲಿದೆ ಎಂದು ತಿಳಿಸಿದರು. ಜಾಗತಿಕ ಬ್ಯಾಂಕಿನ ಎರಡು ಅಧ್ಯಯನ ತಂಡಗಳು ಈಗಾಗಲೇ ರಾಜ್ಯದಲ್ಲಿ ವ್ಯಾಪಕ ಸರ್ವೆ ನಡೆಸಿದ್ದು ಅದರ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಮೈಸೂರು ಸರಿಯಾದ ಸ್ಥಾನ ಎಂದು ಶಿಫಾರಸು ಮಾಡಿದೆ ಎಂದೂ ರಿಸರ್ವ್ ಬ್ಯಾಂಕ್ ಅಧಿಕಾರಿಗಳೊಂದಿಗೆ ಶೀಘ್ರವೇ ಒಂದು ಸಮ್ಮೇಳನ ಕರೆಯಲಿರುವರೆಂದೂ ಅಲ್ಲಿ ಜಾಗತಿಕ ಬ್ಯಾಂಕ್ ಸಲಹೆಗಳನ್ನು ಅಂತಿಮಗೊಳಿಸಲಾಗುವುದು ಎಂದು ನುಡಿದರು.

ಆರಂಭದಲ್ಲಿ ಶ್ರೀ ಆಳ್ವರನ್ನು ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ಸ್ವಾಗತಿಸಿದ್ದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದ ಉತ್ಸವ

ಮಹತೋಬಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ಸಂಪ್ರದಾಯ ಮೂಲು ಪ್ರಕಾರ ಆಗುವ ಉತ್ಸವಗಳು ತಾ. 9ರಂದು ಧ್ವಜಾರೋಹಣದೊಂದಿಗೆ ಪ್ರಾರಂಭವಾಗಿ 17ರ ತನಕ ನಡೆಯುವುದೆಂದೂ ಇದಕ್ಕೆ ತಾವೆಲ್ಲರೂ ಬಂದು ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಬೇಕೆಂದೂ ಮೆನೇಜಿಂಗ್ ಟ್ರಸ್ಟಿ ಶ್ರೀ ಡಿ. ಕೆ. ಹೆಬ್ಬಾರರು ಅಪೇಕ್ಷಿಸುತ್ತಾರೆ.

ಸನ್ಮಾನ ಸಭೆ

ಕುಂದಾಪುರ ತಾಲೂಕಿನ ಎರಡು ಶಾಸಕರನ್ನೂ ಸನ್ಮಾನಿಸಬೇಕೆಂದು ಮೊದಲೇ ನಿಶ್ಚಯಿಸಿದಂತೆ, ಕುಂದಾಪುರ ತಾಲೂಕು ಆಡಳಿತ ಕಾಂಗ್ರೆಸಿನ ಸಮಿತಿಯ ಸಭೆಯು ತಾರೀಕು 5–4–1972 ರಲ್ಲು ಕುಂದಾಪುರ ಬಂಗ್ಲೆಯಲ್ಲಿ ಸಂಚಾಲಕರಾದ ಶ್ರೀ ಬಿ ಎಸ್. ಜಗನ್ನಾಥ ಸೆಟ್ರ ಅಧ್ಯಕ್ಷತೆಯಲ್ಲಿ ನಡೆಯಿತು. ಸನ್ಮಾನಕ್ಕೆ ಬೈಂದೂರು ಶಾಸಕರಾದ ಶ್ರೀ ಎ. ಜಿ. ಕೊಡ್ಗಿಯವರು ಮಾತ್ರ ಬಂದು, ಕುಂದಾಪುರ ಶಾಸಕಿಯಾದ ಶ್ರೀಮತಿ ವಿನ್ನಿಫ್ರೆಡ್ ಫೆರ್ನಾಂಡಿಸರು ಆಗಮಿಸಲಿಲ್ಲ. ಶ್ರೀ ಎ ಜಿ. ಕೊಡ್ಗಿಯವರನ್ನು ಸಭೆಗೆ ಆದರದಿಂದ ಬರಮಾಡಿಕೊಂಡು ಕಾರ್ಯದರ್ಶಿ ಶ್ರೀ ಬಿ. ಯಾಕೂಬ್ ಸಾಹೇಬ್ ಮತ್ತು ಶ್ರೀ ಕೆ ಶಂಕರ ಸೆಟ್ಟಿ ಹಾರ್ದಳ್ಳಿಯವರು ಕಮಿಟಿಯ ಪರವಾಗಿ ಹೂಮಾಲೆಗಳನ್ನು ಅರ್ಪಿಸಿದರು. ಉಪಸಂಚಾಲಕರಾದ ಶ್ರೀ ವಿ. ಕೆ. ಸೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಕೇರಳದ ಅರ್ಥಿಕ ಮಂತ್ರಿ ಶ್ರೀ ಕೆ. ಟಿ. ಜಾರ್ಜರ ನಿಧನದ ಬಗ್ಗೆ ಸಭೆಯು ಎರಡು ನಿಮಿಷ ಮೌನ ಪ್ರಾರ್ಥನೆ ಮಾಡಿತು. ಸಭಿಕರಲ್ಲಿ ಕುಂದಾಪುರ ತಾಲೂಕು ಸಮಾಜವಾದೀ ವೇದಿಕೆಯ ಅಧ್ಯಕ್ಷ ಶ್ರೀ ವಿ ಶ್ರೀನಿವಾಸ ಸೆಟ್ಟರು ಶಾಸಕರ ಕರ್ತವ್ಯದ ವಿಷಯ ಮಾತಾಡಿದರು ಮುಖ್ಯ ಅತಿಥಿಗಳು ಮಾತನಾಡುತ್ತ ಕುಂದಾಪುರ ತಾಲೂಕಿನ ವಿಷಯದಲ್ಲಿ ಆಗಬೇಕಾದ ಎಲ್ಲಾ ಅಭಿವೃದ್ಧಿಗಳ ಬಗ್ಗೆ ತನ್ನಲ್ಲಿ ಸಾಧ್ಯವಿದ್ದಷ್ಟು ಮಾಡಿಯುವುದಾಗಿ ಸಭೆಗೆ ಭರವಸೆಯನ್ನಿತ್ತರು. ಅಧ್ಯಕ್ಷರ ಭಾಷಣದ ನಂತರ, ಚಹ ಸತ್ಕಾರವಾಗಿ ಕೊನೆಯಲ್ಲಿ ಕಾರ್ಯದರ್ಶಿ ಬಿ ಯಾಕೂಬ್ ಸಾಹೇಬರು ಧನ್ಯವಾದ ಸಮರ್ಪಿಸಿದ ನಂತರ, ಫೋಟೋ ತೆಗೆಯಲಾಯ್ತು. ಸಭೆಯಲ್ಲಿ ಸರ್ವಶ್ರೀ ಕುಂದಾಪುರ ತಾಲೂಕಿನ ಕಿಸಾನ್ ಸಭೆ ಅಧ್ಯಕ್ಷ ಶ್ರೀ ಜಿ. ರಾಮಕೃಷ್ಣ ರಾವ್, ಸಮಾಜ ವೇದಿಕೆಯ ಉಪಾಧ್ಯಕ್ಷ ಶ್ರೀ ಜಿ. ಸದಾನಂದ ಹೆಗ್ಡೆ, ಕುಂದಾಪುರ ತಾಲೂಕು ಬೋರ್ಡು ಸದಸ್ಯ ಶ್ರೀ ಜಿ. ಎಸ್. ಆಚಾರ್, ಯುವಕ ಕಾಂಗ್ರೆಸ್ ಸಂಚಾಲಕ ಶ್ರೀ ಅರುಣಕುಮಾರ್ ಸೆಟ್ಟಿ, ಕಾಂಗ್ರೆಸ್ ಮುಖಂಡರುಗಳಾದ ವಕೀಲ್ ಶ್ರೀ ವೈ. ತೇಜಪ್ಪ ಸೆಟ್ಟಿ, ಶ್ರೀ ಕೆ. ವಾಸುದೇವರಾವ್, ಶ್ರೀ ಎಚ್ ನಾರಾಯಣ ಹೆಗ್ಡೆ. ಶ್ರೀ ಎಡ್ವಿನ್ ಕ್ರಾಸ್ತ, ಶ್ರೀ ಎಸ್. ಸೂರ ಪೂಜಾರಿ, ಶ್ರೀ ವಕೀಲ್ ಜಿ ವಿ. ಐತಾಳ್ ಮುಂತಾದವರಲ್ಲದೆ, ಇತರ ಅನೇಕ ಮಹನೀಯರು ಉಪಸ್ಥಿತರಿದ್ದರು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಸರ್ವಾರ್ಪಣ

(ಎರಡನೇ ಪುಟದಿಂದ)

'ನೀನು ತುಂಬ ಜಾಣೆ. ಏನೋ ಅಂತ ತಿಳಿದಿದ್ದೆ. ಜಾಣ್ಮೆಯಿಂದ ಜಾಲ ಬೀಸಿದ್ದೀಯಾ'

೧೩

'ಅಮಾತ್ಯರು ಹೊರಗೆ ತಮ್ಮ ಭೆಟ್ಟಿಗಾಗಿ ಬಂದಿದ್ದಾರೆ. ಬಿಡಲಾ ಪ್ರಭು'

'ಅವರೂ ನಮ್ಮ ಅವಕಾಶಕ್ಕಾಗಿ ಕಾಯುವುದೇ. ಒಳಗೆ ಬರ ಹೇಳು'.

'ರಾಷ್ಟ್ರಕೂಟ ಬದ್ದೆಗ ಭದ್ರಾಸನದಿಂದ ಎದ್ದು ಬಾಗಿಲ ವರೆಗೂ ನಡೆದೇ ಹೋಗಿ ರಾಜ್ಯದ ದಂಡ ನಾಯಕರೂ ಪ್ರಧಾನರೂ ಆದ ಚಾಳುಕ್ಯ ನರಸಿಂಹನನ್ನು ವಿಶ್ವಾಸದಿಂದ ಬರ ಮಾಡಿಕೊಂಡ.

'ನೀವೂ ನಮ್ಮ ದರ್ಶನಕ್ಕಾಗಿ ಹೊರ ಬಾಗಿಲಲ್ಲಿ ಕಾದು ನಿಲ್ಲುವುದೇ? ಅಗತ್ಯ ಕಂಡಾಗಲೆಲ್ಲ ನೇರವಾಗಿ ಸ್ನಾನ ಗೃಹದಲ್ಲಿದ್ದರೂ ಬಂದು ನೋಡಿ ಎಂದು ಹಿಂದೆಯೇ ಹೇಳಿದ್ದೆ'

'ನಾನು ಎದುರಾಡಿದೆ ಎಂದು ಪ್ರಭುಗಳು ಭಾವಿಸಬಾರದು. ನಿಮ್ಮ ಔದಾರ್ಯ ಬಹು ದೊಡ್ಡದು. ಆದರ ದುರ್ಲಾಭವನ್ನು ನಾನು ಬಳಸಿಕೊಳ್ಳಲಿಚ್ಛಿಸುವುದಿಲ್ಲ. ತಾವು ಅಲಂಕರಿಸಿರುವುದು ಧರ್ಮ ಸಿಂಹಾಸನ. ಆ ಸಿಂಹಾಸನಕ್ಕೆ ಪ್ರಜೆಯಾದವನ ಮುಡಿ ಮಣಿಯ ಬೇಕಾದ್ದು ಧರ್ಮ. ನಾವು ಗೌರವ ಸಲ್ಲಿಸುತ್ತಿರುವುದು ದೈವದ ಸಂಕೇತವಾದ ಆ ಸ್ಥಾನಕ್ಕೆ'

'ನಾವು ನೀವು ಕಡೆದು ರೂಪಿಸಿದ ಮೂರ್ತಿ. ನಿಮ್ಮ ನಡತೆಯಿಂದ ನಮಗೇ ಒಮ್ಮೊಮ್ಮೆ ಸಂಕೋಚ ಉಂಟಾಗುತ್ತಿದೆ.'

'ನಾವು ಸಿಂಹಾಸನದ ಪೂಜಾರಿಗಳು ಪ್ರಭು. ಜನರ ಭಕ್ತಿ—ಶ್ರದ್ಧೆಗಳ ಹೆಚ್ಚಳಕ್ಕೆ ಮೂರ್ತಿಯನ್ನು ಪೂಜಿಸುವ ಪೂಜಾರಿಯೇ ಕಾರಣನಿರುವಂತೆ, ನಮ್ಮ ನಡತೆಯಿಂದ ಸಿಂಹಾಸನದ ತೂಕ—ಪ್ರತಿಷ್ಠೆ ಹೆಚ್ಚಬೇಕು. ಅದು ವರ್ಧಿಸಲೆಂದೇ ನಾವು ಈ ರೀತಿ ವರ್ತಿಸುತ್ತಿದ್ದೇನೆ. ತಾವು ಅನ್ಯಥಾ ಭಾವಿಸಬಾರದು'

'ಬಂದ ವಿಷಯ—?'

'ತುಂಬ ಮಹತ್ವದ್ದು. ಅದನ್ನು ನಿವೇದಿಸಲೆಂದೇ ಇಲ್ಲಿಗೆ ಬಂದೆ'

'ಮಹತ್ವದ್ದೇ. ಅಂಥದ್ದೇನು ಹುಟ್ಟಿಕೊಂಡಿತು'

'ಗಾಬರಿಗೊಳ್ಳ ಬೇಡಿ. ಯಾವ ಆಪತ್ತೂ ಹುಟ್ಟಿಕೊಂಡಿಲ್ಲ. ಈ ಆಪತ್ತು ಅವತರಿಸಿದ್ದು ನನ್ನಲ್ಲೇ. ಅದನ್ನಿಷ್ಟು ಅರಿಕೆ ಮಾಡಿಕೊಳ್ಳಲೆಂದೇ ಬಂದುದು. ಏನು ತಿಳಿಯುತ್ತೀರೋ' ನರಸಿಂಹ ಅನುಮಾನಿಸುತ್ತಲೇ ನುಡಿದ.

'ತಿಳಿಯುವುದೇನು ಬಂತು? ನೀವು ತಿಳಿಸಿದಂತೆ ಇದುವರೆಗೆ ನಡೆದಿದ್ದೇನೆ. ಇದನ್ನೂ ನಡೆಸಿ ಕೊಡುತ್ತೇನೆ.'

'ಆ ಮೇಲೆ ಆಗದೆಂದರೆ—'

'ಈ ಜನ್ಮದಲ್ಲಿ ಇದುವರೆಗೂ ನುಡಿದಂತೆ ನಡೆದಿದ್ದೇನೆ. ಮುಂದೆಯೂ ಅದೇ ರೀತಿ ನಡೆಯುವ ನಿರ್ಧಾರ ಮಾಡಿದ್ದೇನೆ'

'ಸಿಂಹಾಸನದ ಸೇವೆಯನ್ನು ಇದುವರೆಗೂ ಮಾಡಿಕೊಂಡು ಬಂದಿದ್ದೇನೆ. ಅದಕ್ಕೆ ಒದಗಿದ ನೂರು ಕುತ್ತುಗಳನ್ನು ಕಿತ್ತೊಗೆಯಲು ಹೆಣಗಿದ್ದೇನೆ. ಹೆಣಗಿ ಹಣ್ಣಾಗಿದೆ ಈ ಶರೀರ'

'ನಮಗೆ ತಿಳಿದ ವಿಷಯ. ನಾವು ಉತ್ಸವ ಮೂರ್ತಿಗಳು. ನೀವು ಮೂಲ ವಿಗ್ರಹ. ಈ ಸಾಮ್ರಾಜ್ಯದ ಸಂಸ್ಥಾಪನಾಚಾರ್ಯರೆಂದು ಕರೆದರೆ ಸರಿ ಹೋದೀತು'

'ಇದು ಪ್ರಭುಗಳು ನನ್ನ ಮೇಲೆ ಇಟ್ಟಿರುವ ಅಪಾರವಾದ ಅಭಿಮಾನದ ಹೆಗ್ಗುರುತು. ಆದರೆ ನಾನು ಅದಕ್ಕೆ ಬಾಧ್ಯನಲ್ಲ.'

'ನೀವಾಡುವ ಈ ಮಾತುಗಳು ನಿಮ್ಮ ನಮ್ರತೆಗೆ ದ್ಯೋತಕ'

"ಹಾಗೆ ಸ್ವಾಮಿಯವರು ಗ್ರಹಿಸಿದರೆ ಅನುಗ್ರಹಿತನಾದೆ ಎಂದಷ್ಟೇ ಹೇಳಬಲ್ಲೆ"

'ಅದಿರಲಿ! ಬಂದ ವಿಚಾರ'

'ನನಗೆ ವಯಸ್ಸಾಯಿತು. ಚಿರಂಜೀವಿ ಪ್ರವರ್ಧಮಾನಕ್ಕೆ ಬರುತ್ತಿದ್ದಾನೆ. ನಾನೋ ಏಕಾಂಗಿ.'

'ಮನೆಗೊಬ್ಬಳು ಸೊಸೆಯನ್ನು ತಂದುಕೊಳ್ಳಿ. ನಿಮ್ಮ ಕುಮಾರನಿಗೆ ಯಾರೂ ಹೆಣ್ಣು ಕೊಡುತ್ತಾರೆ'

'ಅವನ ವಿವಾಹದ ವಿಷಯ ಅವನಿಗೆ ಸೇರಿದ್ದು. ಜಾನಕಿ ತೀರಿಕೊಂಡಾಗ ರಾಜ್ಯದ ಈ ಹೊರೆಯನ್ನಿಳಿಸುವ ಮನಸ್ಸಾಗಿತ್ತು. ನಾನು ನಿವೃತ್ತಿಯನ್ನು ಬಯಸಿದ್ದೆ. ತಮ್ಮ ಚಿಕ್ಕಂದಿರು ನನಗೆ ಅನುಮತಿ ಕೊಡಲಿಲ್ಲ. ಅನಂತರ ಅವರು ಕೈಲಾಸವಾಸಿಗಳಾದರು. ಮರಣಾಸನ್ನರಾದ ಅವರಿಗೆ ಕೊಟ್ಟ ವಚನ ಪಾಲನೆಗಾಗಿ, ಬೇಡವಾಗಿದ್ದರೂ ಈ ತೊಡಕಿನಲ್ಲಿ ಸಿಲುಕಿಕೊಂಡೆ ಈಗ ಪ್ರಾಪ್ತ ಕಾಲ ಬಂದಿದೆ. ಜಾನಕಿಗೆ ಕೊಟ್ಟ ಮಾತನ್ನು ನಡೆಸಿದ್ದಾಯಿತು. ಮಗನನ್ನು ನಾನು ನಡೆದು ಬಂದ ದಾರಿಯಲ್ಲಿ ನಡೆಸಿಕೊಂಡುದಾಯಿತು. ತಮ್ಮ ಚಿಕ್ಕಂದಿರಿಗೆ ಕೊಟ್ಟ ವಚನದ ಪಾಲನೆಯನ್ನು ಮನಮುಟ್ಟಿ ಮಾಡಿದ್ದಾಯಿತು. ಈಗ ಮನಸ್ಸು ಆ ಮುಷ್ಮಿಕದತ್ತ ಹರಿದಿದೆ.'

'ಬಹಳ ಸಂತೋಷ'

'ನನ್ನನ್ನು ಈ ಜವಾಬ್ದಾರಿಯಿಂದ ನಿವೃತ್ತಿಗೊಳಿಸಿ ಯೋಗ್ಯರಿಗೆ ಅದನ್ನು ವಹಿಸಿ ಬಿಡಿ. ನನಗೆ ಬನವಾಸಿಗೆ ಹೋಗುವ ಇಚ್ಛೆಯಾಗಿದೆ. ತಮಗೆ ತಿಳಿಯದು. . ಬಹಳ ದಿನಗಳಿಂದಲೂ ನಾನಲ್ಲಿಗೆ ಹೋಗಿ-ಬರುವ ಪರಿಪಾಠ ಇಟ್ಟುಕೊಂಡಿದ್ದೇನೆ. ಅಲ್ಲೊಬ್ಬರು ಜಿನಾಗಮ ಕೋವಿದರಿದ್ದಾರೆ. ಅವರ ಉಪದೇಶಾಮೃತದಿಂದ ಪುನೀತನಾಗಿದ್ದೇನೆ. ಉಳಿದ ಆಯುಸ್ಸನ್ನು ಅಲ್ಲಿಯ ಪ್ರಶಾಂತ ವಾತಾವರಣದಲ್ಲಿ ಕಳೆಯುವ ಆಲೋಚನೆ.'

'ಇದೆಂತಹ ತೀರ್ಮಾನ ತಮ್ಮದು ಅಮಾತ್ಯರೇ? ನಮ್ಮಿಂದ ಏನಾದರೂ ಅಪಚಾರವಾಗಿದ್ದರೆ ಕ್ಷಮಿಸಿ. ನೀವು ಇಲ್ಲೇ ಇದ್ದು ನಮಗೆ ಮಾರ್ಗ ದರ್ಶನ ಮಾಡಬೇಕು. ನೀವು ಬದ-ಕಿನಲ್ಲಿ ಕಂಡಿದ್ದು ಕಹಿಯನ್ನೇ. ಕಹಿಯುಂಡವರು ಪ್ರಾಪಂಚಿಕ ಧರ್ಮದಲ್ಲಿ ಅನಾಸಕ್ತರಾಗುವುದು ಸಹಜವೇ ಆದರೂ, ನಿಮ್ಮನ್ನು ನಾವು ಹೋಗಬಿಡೆವು. ಕುಮಾರನ ಮದುವೆಯಾಗಿ, ಅವನಿಗೆರಡು ಮಕ್ಕಳಾಗಲಿ. ಆ ಮೊಮ್ಮಕ್ಕಳನ್ನು ನೋಡಿ, ಸಂತೋಷದಿಂದಿರುವುದನ್ನು ಬಿಟ್ಟು, ಪುನಃ ಕಾಯಕಷ್ಟಕ್ಕಿಳಿಯುವ ಪ್ರಯತ್ನವೇಕೆ'

'ಬನವಾಸಿ ತುಂಬ ಸೊಗಸಾದ ಕ್ಷೇತ್ರ. ಪ್ರಭುಗಳು ಕಂಡಿಲ್ಲವೇನೋ? ಅಲ್ಲೊಂದು ಭವ್ಯ ದೇವಾಲಯವಿದೆ-ಮಧುಕೇಶ್ವರ ದೇವಸ್ಥಾನ. ದೇಗುಲದ ಮುಂಭಾಗದಲ್ಲಿ ತುಂಬಿ ಹರಿಯುತ್ತಾಳೆ ಅಭಯಪ್ರದೆ ವರದೆ. ಸುತ್ತೆಲ್ಲ ಮುಗಿಲೆತ್ತರಕ್ಕೆ ಬೆಳೆದು ನಿಂತ ವೃಕ್ಷರಾಜಿ. ಇನ್ನೂ ಮನುಷ್ಯರ ಹಾವಳಿ ಅಲ್ಲಿ ಅಷ್ಟಾಗಿ ನಡೆದಿಲ್ಲ. ಬೇಸಿಗೆಯ ನಡು ಹಗಲಲ್ಲೂ ಅಲ್ಲಿ ಬಿಸಿಲಿನ ಝಳವಿಲ್ಲ. ಚೀತ ಮಾವು, ಪೂತ ಸಂಪಿಗೆ, ಜಾಜಿ, ಮೊಲ್ಲೆ, ಮಲ್ಲಿಗೆಯ ಬನಗಳು. ಸದಾಕಾಲ ಈ ವಿಧವಿಧದ ಪುಷ್ಪರಾಜಿಯ ಮೇಲೆರಗುವ ತುಂಬಿಗಳ ತುಂಬುಗಾನ, ನಮ್ಮನ್ನು ಕಂಡು ಕರುಬಿದ ತಮ್ಮ ಪಾಡಿಗೆ ತಾವಿರುವ ಮೃಗ—ಪಕ್ಷಿಗಳು. ಕುಡಿಯಲುಂಟು ವರದೆಯ ನೀರು; ತಿನ್ನಲುಂಟು ಪ್ರಕೃತಿ ದೇವಿಯ ಕಾಣಿಕೆ— ಹಣ್ಣು-ಹಂಪಲು. ಮನಸ್ಸಿನ ಕಳೆಯನ್ನು ಕಳೆಯಲುಂಟು ಜಿನೇಂದ್ರ ಚಂದ್ರರ ಅಮೃತವಾಣಿ. ನಾನು ಅಲ್ಲಿರಲು ಸಂಕಲ್ಪಿಸಿದ್ದೇನೆ.'

'ನೀವು ಕವಿಗಳೆಂಬುದು ನಮಗೆ ತಿಳಿದಿರಲಿಲ್ಲ. ಅಮಾತ್ಯರು ಸಾಹಿತ್ಯಾಭ್ಯಾಸ ಮಾಡಿರುವಂತಿದೆ.'

'ಅಭ್ಯಾಸ ಮಾಡಿಲ್ಲ. ಸಂಪರ್ಕ ದೋಷದಿಂದ ಬಂದಿದ್ದು.'

'ಅಂದರೆ—'

'ನಾನು ತಿಳಿಸಿದ ಜಿತೇಂದ್ರಾಚಾರ್ಯರಿಗೊಬ್ಬರು. ಶಿಷ್ಯ. ನಮ್ಮ ಕುಮಾರನ ವಯಸ್ಸು ಇರಬಹುದು. ಹುಡುಗನಲ್ಲಿ ತೇಜಸ್ಸೂ—ಓಜಸ್ಸೂ. ಸಮವಾಗಿ ಮಿಳಿತವಾಗಿದೆ. ಆತನಿಗೆ ಕಾವ್ಯಗಳ ಅಧ್ಯಯನದ ಗೀಳು. ಜೊತೆಗೆ ಬರೆಯುವ ಚಾಳಿ. ಅವನು ನಮಗೆ ಸಾಹಿತ್ಯದ ರುಚಿಯುಣಿಸಿದ. ಪ್ರತಿಯಾಗಿ ನನ್ನನ್ನೂ ಸ್ವೀಕರಿಸಲೊಪ್ಪದ ಅವನಿಗೆ ನಾವು ನಮಗೆ ತಿಳಿದ ವಿದ್ಯೆಯನ್ನು ಧಾರೆ ಎರೆದೆವು. ಅವನಲ್ಲಿ ಕೃತಿ ರಚನಾ ಶಕ್ತಿ ಈಗಲೇ ರೂಪುಗೊಂಡಿದೆ. ಪ್ರತಿಭಾಸಂಪನ್ನನಾದ ಆತ ಮುಂದೆ ಕಾವ್ಯದ ಬೆಳಸನ್ನೇ ಬೆಳೆದರೂ ಆಶ್ಚರ್ಯವಿಲ್ಲ. ಅವನ ಸಹವಾಸದಿಂದ ನಾನೂ ಒಮ್ಮೊಮ್ಮೆ ಭಾವುಕನಾಗುತ್ತಿದ್ದೇನೆ.'

'ನಮ್ಮಿಂದ ಇದನ್ನು ಈ ವರೆವಿಗೂ ಬಚ್ಚಿಟ್ಟುಕೊಂಡ ನೀವು ಜಿಪುಣರು ಅಮಾತ್ಯರೇ! ಆತನನ್ನು ನಮ್ಮ ಆಸ್ಥಾನಕ್ಕೆ ಕರೆಸಿಕೊಳ್ಳಬಹುದಿತ್ತು. ಆ ಸಾಹಿತ್ಯದ ಸವಿಯೂಟ ನಮಗೂ ಸಿಗುತ್ತಿತ್ತು.'

'ನಾನು ಆಮಂತ್ರಿಸಿದೆ. ಆದರೆ ಆತ ಬರಲೊಪ್ಪಲಿಲ್ಲ. ಗುಣೈಕ ಪಕ್ಷಪಾತಿಗಳಲ್ಲದ ಅಸೂಯಾಪರರಾದ ಆಸ್ಥಾನ ಪಂಡಿತರ ಸಹವಾಸವೇ ಬೇಡ ಎಂದು ಹೇಳಿದ. ಅನ್ಯರ ಅಪಕರ್ಷವನ್ನೇ ತಮ್ಮ ಉತ್ಕರ್ಷವೆಂದು ಭ್ರಮಿಸುವ ಆಸ್ಥಾನ ವಿದ್ವಾಂಸರಿಂದ ಕಾಡ ಕೋಗಿಲೆಯಾಗಿರುವುದೇ ಮೇಲೆಂದು ಆತ ತಿಳಿದಿದ್ದಾನೆ. ಸ್ವಚ್ಛಂದವಾಗಿ ಹಾಡುವುದಕ್ಕೆ ಕಾಡೇ ನಾಡಿಗಿಂತ ಮೇಲೆಂಬುದು ಅವನ ತೀರ್ಮಾನ'

'ವಿಚಿತ್ರ ಮನೋಧರ್ಮ'

ಪ್ರಭುಗಳು ತಮ್ಮ ಆಶ್ಚರ್ಯವನ್ನು ಬಹಿರಂಗ ಪಡಿಸಿದರು.

'ಈ ಮನೋಧರ್ಮದವರೇ ಧರ್ಮದ ಬೆಳೆ ಬೆಳೆದವರು'

'ಆತನನ್ನು ಒಮ್ಮೆಯಾದರೂ ಕಾಣುವ ಭಾಗ್ಯ ದೊರೆಯದೇ ನಮ್ಮ ಭಾಗಕ್ಕೆ'

"ಪಡೆದು ಬಂದಿದ್ದರೆ ಖಂಡಿತ ದೊರೆಯುತ್ತೆ. ನನ್ನ ತೀರ್ಮಾನ? ಆ ಕುರಿತು ಏನೂ ಅಪ್ಪಣೆಯಾಗಲಿಲ್ಲ'

(ಮುಂದುವರಿಯುವುದು)

ಹನ್ನೊಂದು. .

NAVAYUGA 13—4—1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಭಾರತ—ಪಾಕ್ ಸಮರದ

ಪೂರ್ವ ಸಂಧ್ಯೆಯ ಗೊಂದಲ

ನಾವು ನ್ಯೂಯಾರ್ಕಿನಲ್ಲಿರುವ ಸಂಯುಕ್ತರಾಷ್ಟ್ರ ಸಂಘದ ಭವನವನ್ನು ಹೊಕ್ಕೆವು. ೩೯ ಮಾಳಿಗೆಗಳಿರುವ ಈ ಕಟ್ಟಡವು ಸರ್ವೇಸಾಮಾನ್ಯ ಆಯತಾಕಾರವಿದೆ. ಮುಖ್ಯಕಾರ್ಯಾಂಗದ ಕಛೇರಿಗಳೆಲ್ಲ ಮೇಲಿನ ಮಾಳಿಗೆಯಲ್ಲಿ. ದಕ್ಷಿಣ ಕೊನೆಯಲ್ಲಿ ಸಂ. ರಾ. ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷ ಶ್ರೀ ಆದಮ್ ಮಲ್ಲಿಕರನ್ನು ಕಂಡೆವು. ಅವರು ಮುಗುಳ್ನಗುತ್ತ ನಮ್ಮನ್ನು ಸ್ವಾಗತಿಸಲು ಅತಿಥಿ ಗೃಹದತ್ತ ಬರುತಿದ್ದರು. ನಾವು ಅವರೊಡನೆ ಅವರ ಖಾಸಗಿ ಕಛೇರಿಗೆ ಹೋದೆವು

ಜಗತ್ತಿನ ಐದನೆಯ ದೊಡ್ಡ ದೇಶ ಇಂಡೋನೇಶ್ಯಾದ ವಿದೇಶ ಸಚಿವರು ಶ್ರೀ ಮಲ್ಲಿಕ. ಶ್ರೀ ಮಲ್ಲಿಕರಿಗೆ ಪಾಕ್ ಗೊಂದಲದ ಬಗ್ಗೆ ನಂಬುಗೆಯಿರಲಿಲ್ಲ. ದಶಂಬರ ೩೧ರ ಸುಮಾರಿಗೆ ಇಂಡೋನೇಶ್ಯಕ್ಕೆ ಅವರು ಮರಳಲಿದ್ದು, ಅಲ್ಲಿ ಕೆಲಕಾಲ ಉಳಿಯಲಿದ್ದರು. ಸಾಮಾನ್ಯ ಸಭೆಯು ಪಾಕ್ ಗೊಂದಲದ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಸೇರುವುದು ಅಗತ್ಯವಾದೀತು ಎಂಬುದು ಅವರ ವಿಚಾರವಿತ್ತು.

ಎರಡೇ ದಿನಗಳಲ್ಲಿ ಗೊಂದಲವು ಸಮರದಲ್ಲಿ ಪರ್ಯವಸಾನಗೊಂಡಿತು.

ಶ್ರೀ ಮಲ್ಲಿಕರೊಡನೆ ಸಂದರ್ಶನ ಮುಗಿಸಿ ನಾವು ಮಾಳಿಗೆಯ ಉತ್ತರ ಮೂಲೆಗೆ ನಡೆದೆವು. ಸಂಯುಕ್ತರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಉಥಾಂ ಅನಾರೋಗ್ಯದಿಂದಿದ್ದರು. ಅವರ ದ್ವಿತೀಯ ಸಚಿವ ಶ್ರೀ ಸಿ. ವಿ. ನರಸಿಂಹನ್ ನಮ್ಮ ನಿರೀಕ್ಷೆಯಲ್ಲಿದ್ದರು. ಅವರು ಭಾರತದವರು. ನಾವು ರಾಷ್ಟ್ರಪತಿ ವಿ.ವಿ. ಗಿರಿ, ಪ್ರಧಾನಿ ಇಂದಿರಾಗಾಂಧಿ, ಮೊದಲಾದವರೊಡನೆ ಈಗಾಗಲೇ ಸುಪರಿಚಿತರಾದುದರಿಂದ ನಮ್ಮಲ್ಲಿ ಸಾಮಾನ್ಯಾಭಿರುಚಿಯ ವಿಚಾರಗಳಿದ್ದುವು.

ವಿಶ್ವಸಂಸ್ಥೆಯ ಇತಿಹಾಸದಲ್ಲಿ ಶ್ರೀ ನರಸಿಂಹನ್ ಏಕಮಾತ್ರ ದ್ವಿತೀಯ ಅವರ ಪ್ರಧಾನ ಕಾರ್ಯದರ್ಶಿ. ಕಳೆದ ಹತ್ತು ವರ್ಷಗಳಿಂದ ಅವರು ಈ ಹುದ್ದೆಯಲ್ಲಿದ್ದು ದುಡಿಯುತಿದ್ದಾರೆ ದಶಂಬರ ೩೧(೧೯೭೧)ಕ್ಕೆ ಪ್ರಧಾನ ಕಾರ್ಯದರ್ಶಿ ಉಥಾಂರ ಸೇವಾವಧಿಯು ಮುಕ್ತಾಯಗೊಳ್ಳಲಿರುವುದರಿಂದ ನಾನು ಅವರ ಉತ್ತರಾಧಿಕಾರಿಯ ಬಗ್ಗೆ ವಿಚಾರಿಸಿದೆ. ಅತ್ಯಂತ ಅಸಾಧ್ಯ ಮತ್ತು ಅಕಾರಣವೆನಿಸಿದ ಹಗರಣ ವಿಶ್ವಸಂಸ್ಥೆಯಲ್ಲಿ ಪ್ರಧಾನ ಕಾರ್ಯದರ್ಶಿ ಪದವಿಯ ಸಂಬಂಧದಲ್ಲಿ ಎದ್ದಿರುವುದು ಕಂಡುಬಂತು. ಈ ಸ್ಥಾನವನ್ನು ತುಂಬುವುದು ಜಗತ್ತಿನಲ್ಲೇ ಬಹಳ ಕಠಿನ ಕಾರ್ಯವೆಂದು ಅನಿಸಿತು. ಜಗತ್ತಿನ ಪ್ರಮುಖ ಹುದ್ದೆಗಳಲ್ಲಿ ಇದೂ ಒಂದು. ಅಭ್ಯರ್ಥಿಯ ಧರ್ಮ, ತಾಯ್ನುಡಿಗಳು, ಕುಲ, ಜನ್ಮಸ್ಥಾನ, ಪೌರತನ ಮೊದಲಾದುವುಗಳ ಬಗೆಗೆ ಬಹಳಷ್ಟು ಮಹತ್ವವನ್ನು ಕೊಡಲಾಗುತ್ತಿದೆ. ಆದರೆ, ಅವನ ಕಾರ್ಯಕ್ಷಮತೆ ಮತ್ತು ವಾಸ್ತವಿಕ ಅರ್ಹತೆಗಳ ಬಗ್ಗೆ ಯಾವುದೇ ವಿಚಾರ ನಡೆಯುತ್ತಲಿಲ್ಲ.

ಪ್ರಮುಖ ದೇಶ (ಅಮೇರಿಕೆ, ರಶ್ಯ, ಫ್ರಾನ್ಸ್, ಇಂಗ್ಲೆಂಡ್)ಗಳ ಯಾವನೇ ಅಭ್ಯರ್ಥಿಯು ಸ್ವೀಕಾರಾರ್ಹನಾಗುವುದಿಲ್ಲ. ಅಮೇರಿಕೆಯ ನಾಗರಿಕನು ಪ್ರಧಾನ ಕಾರ್ಯದರ್ಶಿಯಾಗಿರುವುದು ರಶ್ಯಕ್ಕೆ ಒಪ್ಪಿತವಿಲ್ಲ. ಅಭ್ಯರ್ಥಿಯು ಜ್ಯೂವಿಶ್ ಆದರೆ ಅರಬ ರಾಷ್ಟ್ರಗಳು ಅವನನ್ನು ವಿರೋಧಿಸುತ್ತವೆ ಅವನು ಕೆಥೋಲಿಕನಿದ್ದರೆ, ಪ್ರೊಟೆಸ್ಟೆಂಟರು ಒಪ್ಪುವುದಿಲ್ಲ; ಪ್ರೊಟೆಸ್ಟೆಂಟನಿದ್ದರೆ ಉಳಿದವರು ಆಕ್ಷೇಪವೆತ್ತುತ್ತಾರೆ. ದೇಶವಿಲ್ಲದ, ತಾಯ್ನುಡಿಗಳಿಲ್ಲದ, ಧರ್ಮವಿಲ್ಲದ, ಕುಲವಿಲ್ಲದ ಈ ಜಗತ್ತಿನ ಯಾವುದೇ ದೇಶದಲ್ಲಿ ಹುಟ್ಟಲಿಲ್ಲದ ಅಭ್ಯರ್ಥಿಯೊಬ್ಬ ದೊರಕಿದರೆ ಅವನ ಆಯ್ಕೆ ಸುಗಮವಾಗಬಹುದು. (ಈಗ ಕರ್ಟ್ ವಲ್ಡ್‌ಮ್ ಆಯ್ಕೆಯಾಗಿದ್ದಾರೆ)

ಈಯೆಲ್ಲ ಗುಣಗಳ ಬಗ್ಗೆ ಯಾಕೆ ಜೋತು ಬೀಳುತ್ತಾರೆ? ಶ್ರೀ ನರಸಿಂಹನ್ ಅವರ ವಿವರಣೆ ಬಹಳ ಸರಳ. ತಮ್ಮ ಸ್ವಾರ್ಥ ಪ್ರೇರಿತ ಅಭಿರುಚಿಗೆ ವಿರುದ್ಧವಾಗಿ ಆಯ್ಕೆಯಾದವನು ಕೆಲಸ ಮಾಡತೊಡಗಿದರೆ ಎಂಬ ಭೀತಿ. ಇವೆಲ್ಲವೂ ಪೂರ್ವಗ್ರಹ ಪ್ರೇರಿತವಾದುವು. ಶ್ರೀ ನರಸಿಂಹನ್ ಪ್ರಧಾನ ಕಾರ್ಯದರ್ಶಿಯಾಗುವುದು ಎಂದಿಗೂ ಅಸಾಧ್ಯ. ಏಕೆಂದರೆ, ಅವರು ಭಾರತೀಯರು ಭಾರತ ಬಹಳ ದೊಡ್ಡ ದೇಶ! ನಾನು 'ನೀವು ಈ ಹುದ್ದೆಯಲ್ಲೇ ಮುಂದುವರಿಯುತ್ತೀರಾ' ಎಂದವರನ್ನು ಕೇಳಿದೆ ಆದಕ್ಕವರು ಉತ್ತರಿಸಿದರು – 'ಅದು ಉಥಾಂರ ಉತ್ತರಾಧಿಕಾರಿಯ ಇಚ್ಛೆಯನ್ನವಲಂಬಿಸಿದೆ.' ಶ್ರೀ ನರಸಿಂಹನ್ ಥಾಯ್‌ಲ್ಯಾಂಡಿನ ಮಿಕೊಂಗ್ ನದಿ ಯೋಜನೆಯಲ್ಲಿ ವಿಶ್ವಸಂಸ್ಥೆಯೊಡನೆ ಸಂಪರ್ಕ ಪಡೆದರು. ಗುಡ್ಡಗಾಡು ಜನತೆಯನ್ನು ಸುಶಿಕ್ಷಿತಗೊಳಿಸುವಲ್ಲಿ ಅವರು ದುಡಿದರು.

ನಾನು ಭಾರತ—ಪಾಕ್ 'ವಿವಾದ'ದ ಬಗ್ಗೆ ಶ್ರೀ ನರಸಿಂಹನ್‌ರನ್ನು ಕೇಳಿದೆ. ಪರಿಸ್ಥಿತಿಯು ತಿಳಿಗೊಳ್ಳುವ ಲಕ್ಷಣಗಳಿಲ್ಲವೆಂದು ಅವರು ತಿಳಿಸಿದರು. 'ಅದು ತಿಳಿಗೊಳ್ಳುವುದಕ್ಕೆ ಮೊದಲೇ ಕಲುಷಿತಗೊಳ್ಳಬಹುದು' ಎಂಬ ಸಂದೇಹ ವ್ಯಕ್ತ ಪಡಿಸಿದರು. ಅದು ಆದುದೂ ಹಾಗೆಯೇ. ಎರಡೇ ದಿನಗಳಲ್ಲಿ ಸಮರ ಘೋಷಣೆಯಾಯ್ತು!

ವಿವಾದದ ವಿಷಯಗಳೆಲ್ಲ ಸಂಕೀರ್ಣ ಮತ್ತು ಅವು ಮತ್ತೂ ಸಂಕೀರ್ಣಗೊಳ್ಳುತ್ತ ಹೋಗುತ್ತಿವೆ. ಎರಡೂ ದೇಶಗಳೂ ಪ್ರಸಂಗವನ್ನು ತಪ್ಪಾಗಿ ತಿಳಿದುಕೊಂಡಿವೆ. ಜಗತ್ತಿನಲ್ಲಿ ಶಾಂತಿಯೇಕಿಲ್ಲವೆಂಬುದಕ್ಕೆ ಇದೂ ಒಂದು ನಿದರ್ಶನ. ವ್ಯಕ್ತಿಗಳೂ ಸರಕಾರಗಳೂ ಸ್ವಾರ್ಥ ಪ್ರೇರಿತರಾಗಿ ಪಡೆಯಲು, ತೆಗೆದುಕೊಳ್ಳಲು ಮತ್ತು ಹೊಂದಲು ಮಾತ್ರ ಬಯಸುತ್ತಿರುವವರೆಗೆ ಇತರರ ಸಮುನ್ನತಿಯನ್ನು ಹಾರೈಸದವರೆಗೆ ಶಾಂತಿ ಯೆಲ್ಲಿಂದ ನೆಲಸಬೇಕು?

(ಕೃಪೆ: ಪ್ಲೈನ್ ಟ್ರೂತ್)

●●

ತತ್ವ ಆಚರಣೆಗೆ, ಹೇಳುವುದಕ್ಕಲ್ಲ

(ಒಂದನೇ ಪುಟದಿಂದ)

ದ್ಧಾಪ್ಯ ವೇತನ ಮಂಜೂರು ಮಾಡುತ್ತಿದ್ದರು. ಸರಕಾರವು ಹಲವಾರು ಜನೋಪಯೋಗಿ ಯೋಜನೆಗಳನ್ನು ರೂಪಿಸಿ ಕೊಂಡಿದ್ದರೂ ಅವುಗಳಿಗೆ ತಕ್ಕಷ್ಟು ಪ್ರಚಾರ ಸಿಗುತ್ತಿಲ್ಲವಾದ್ದರಿಂದ ಅವುಗಳಿಂದ ಪ್ರಯೋಜನ ಪಡೆಯುವುದು ಜನತೆಗೆ ಅಸಾಧ್ಯವೆಂಬಂತಾಗಿದೆ. ಅದರಲ್ಲೂ ಭ್ರಷ್ಟಾಚಾರಕ್ಕೆ ಹೆಸರಾದ ಸರಕಾರಿ ಕಛೇರಿಗಳಲ್ಲಿ 'ವೃದ್ಧರು' ತಮ್ಮ ಅರ್ಜಿಗಳನ್ನು ದಾಖಲು ಮಾಡುವುದೇ ಅತ್ಯಂತ ತ್ರಾಸದಾಯಕವಾದದ್ದು; ವೇತನ ಪಡೆಯುವ ಮಾತು ಬೇರೆ.

ಸದ್ಯ ಸರಕಾರವು ವೃದ್ಧಾಪ್ಯವೇತನದ ಅಗತ್ಯವುಳ್ಳವರನ್ನು ಕಂಡು ಹಿಡಿದು ಅವರಿಗೆ ಅದು ದೊರೆಯುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ತಹಸೀಲ್‌ದಾರರಿಗೆ ಒಪ್ಪಿಸಿತು. ಇದರಿಂದ ತಹಸೀಲ್‌ದಾರರಿಗೆ ತುಸು ಕಷ್ಟವೆನಿಸಬಹುದಾದರೂ ವೃದ್ಧರಿಗೆ ತುಂಬ ಅನುಕೂಲವಾಗುವುದು. ಅಶಕ್ತರು ಎಲ್ಲಿದ್ದಾರೆಂಬುದನ್ನು ಹುಡುಕಿ ಅಂತವರ ಹೆಸರನ್ನು ಡಿಸಿಯವರಿಗೆ ಸಿಫಾರಸು ಮಾಡುವ ಹೊಣೆಗಾರಿಕೆಯಿಂದ ತಹಸೀಲ್‌ದಾರರು ವಿಮುಖರಾಗುವಂತೆ ಸೂಕ್ತ ಎಚ್ಚರಿಕೆಯೂ ಅಗತ್ಯವೆನಿಸುತ್ತದೆ. ಸರಕಾರದ ನಿರ್ಧಾರದ ಹಿಂದಿರುವ ಉತ್ತಮ ಉದ್ದೇಶವನ್ನು ತಹಸೀಲ್‌ದಾರರು ಮನಗಾಣಬೇಕು. ಅನಾಥ ವೃದ್ಧರಿಗೆ ದೊರೆಯುವುದು ಕಿಂಚಿತ್ ಪರಿಹಾರ ಧನವಾದರೂ ಅದೇ ಅವರಿಗೆ ಪರ್ವತ ಸಮಾನವಾದುದರಿಂದ ನಿರ್ವಂಚನೆಯಿಂದ ತಮ್ಮ ಕರ್ತವ್ಯವನ್ನು ಅವರು ಮಾಡುತ್ತಾರೆಂದು ಆಶಿಸಬೇಕು. ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವವರಿಗೆ ಉಗ್ರದಂಡನೆಯೂ ಬೇಕಾಗಬಹುದು. ಮಂತ್ರಿಗಳ ಬಾಯಿಂದ ಬಂದದ್ದು ಬೇಗನೆ ಅಧಿಕೃತ ಆಜ್ಞೆಯಾಗಿ ರೂಪಾಂತರ ಹೊಂದಬೇಕು.

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

READ &
ADVERTISE IN
NAVAYUGA Weekly

Edited, Printed & Published by K. M. Shetty at the Navayuga Press, Udipi. S. India.

ಸಂಪುಟ ೫೧
ಸಂಚಿಕೆ ೪೩

NAVAYUGA

20-4-1972

ರಾಜ್ಯದ ರಾಜಕೀಯ

ನೂರು ಕೈ ದಾಟಿ ಬರುವ ನೂರು ಭರವಸೆಗಳು

ರಾಜ್ಯಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ಮೊದಲ ಸುತ್ತಿನಲ್ಲೇ ಗೆದ್ದದ್ದು ಮತ್ತು ಆಳುವ ಕಾಂಗ್ರೆಸಿನ ನರಸಯ್ಯನವರಿಗೆ ಮೊದಲ ಸುತ್ತಿನಲ್ಲಿ ಆವಶ್ಯಕ ಮತ ದೊರೆಯದೆ ಹೋದದ್ದರಿಂದ ಮುಖ್ಯ ಮಂತ್ರಿ ದೇವರಾಜ ಅರಸರು ಒಳಗೊಳಗೇ ನೊಂದುಕೊಂಡಿದ್ದಾರೆ. ಇದು ಅವರ ಪ್ರತಿಷ್ಠೆಗೊಂದು ಸವಾಲು. ತೋರಿಕೆಗೆ ನಾಲ್ವನೆಯದನ್ನು ಗೆಲ್ಲುವ ನಿರೀಕ್ಷೆಯಿರಲಿಲ್ಲವೆಂದು ಅವರು ಹೇಳಿದರೂ ಆವಶ್ಯವೆನಿಸಿದರೆ ತನಿಖೆ ನಡೆಸುವೆನೆಂದರೂ ಇದೆಲ್ಲ ಸತ್ಯ ಸ್ಥಿತಿಯನ್ನು ಮರೆಸುವುದಕ್ಕೆ ಮಾತ್ರವೇ. ಇದಕ್ಕೆ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನಕ್ಕೆ ಸಂಸ್ಥಾ ಕಾಂಗ್ರೆಸ್ಸಿನ ಗಾಂವಕರರು ಗೆದ್ದು ಬಂದದ್ದು ಕುರುದ ಮೇಲಿದ್ದ ಬೊಕ್ಕೆಯಂತಾಗಿದೆ.

ಸುಮಾರು ಹತ್ತು ತಿಂಗಳುಗಳಿಗೆ ಮೊದಲು ಜಿ. ವಿ. ಹಳ್ಳಿಕೇರಿಯವರು ನಿಧನರಾದ ಬಳಿಕ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನ ಖಾಲಿಯಾಗೇ ಉಳಿದಿತ್ತು. ಆ ವೇಳೆ ವಿಧಾನ ಸಭೆ ಬರಖಾಸ್ತುಗೊಂಡಿದ್ದುದರಿಂದ ವಿಧಾನ ಮಂಡಳಗಳ ಅಧಿವೇಶನ ಸೇರುವ ಸಾಧ್ಯತೆಯಿಲ್ಲದ್ದರಿಂದ ಆ ಸ್ಥಾನಕ್ಕೆ ಚುನಾವಣೆ ನಡೆಯಲಿಲ್ಲ. ಕಳೆದ ತಿಂಗಳು ವಿಧಾನ ಸಭೆ ಮತ್ತೆ ಅಸ್ತಿತ್ವಕ್ಕೆ ಬಂದಾಗ, ವಿಧಾನ ಸಭಾಪತಿಯ ಚುನಾವಣೆಯೊಯ್ತೇ ಹೊರತು ವಿಧಾನ ಪರಿಷತ್ತಿನ ಸಭಾಪತಿಯ ಆಯ್ಕೆಯನ್ನು ಸರಕಾರ ಮುಂದೂಡುವ ಯೋಚನೆಯಲ್ಲಿತ್ತು. ಹೇಗೂ ಮುಂದಿನ ಜೂನ್ ತಿಂಗಳಲ್ಲಿ ಪರಿಷತ್ತಿಗೆ ದ್ವಿವಾರ್ಷಿಕ ಚುನಾವಣೆಗಳು ನಡೆಯಲಿವೆ. ಈಗ ಬಹುಮತ ಪಡೆದಿಲ್ಲದ ಆಳುವ ಕಾಂಗ್ರೆಸ್ಸು ಆಗ ಬಹುಮತ ಪಡೆದರೂ ಪಡೆಯ ಬಹುದು. ಅದುವರೆಗೆ ಸಭಾಪತಿ ಚುನಾವಣೆಯನ್ನು ಮುಂದೂಡಿದರೆ ತನ್ನ ಇಷ್ಟಾರ್ಥ ಈಡೇರುವುದು ಸಾಧ್ಯವಾಗಬಹುದು–ಇದು ಮುಖ್ಯಮಂತ್ರಿ ನಿಲುವಿತ್ತು. ಇದಕ್ಕವರು ಹಲವಾರು ಕುಂಟು ನೆಪಗಳನ್ನೂ ಮುಂದೊಡ್ಡಿದರು. ಆದರೆ, ಪರಿಷತ್ ಸದಸ್ಯರ ಒತ್ತಾಯ, ಧರಣಿಗಳ ಮುಂದೆ ಅವರು ತಲೆವಾಗಲೇ ಬೇಕಾಯ್ತು.

ತನ್ನ ಪಕ್ಷದ ಅಭ್ಯರ್ಥಿಯನ್ನು ಮುಂದೆ ಮಾಡಿ ಗೆಲ್ಲಿಸಲು ಅರಸು ಯೋಚಿಸಿದರು. ಅದು ಅಸಾಧ್ಯವೆಂದಾದಾಗ ಪಕ್ಷೇತರರಾದ ಎಂ. ವಿ. ರಾಮರಾಯರನ್ನು ಬೆಂಬಲಿಸಿದರು. ರಾಮರಾಯರು ಕಾಂಗ್ರೆಸ್ಸಿನಿಂದಲೇ ಆಯ್ಕೆಯಾಗಿ ಹೋದವರು; ಆದರೆ, ಅವರು ಪಕ್ಷದ ಸದಸ್ಯತ್ವವನ್ನು ಊರ್ಜಿತಗೊಳಿಸದ್ದರಿಂದ ಪಕ್ಷೇತರರಾದ ವಿಲಕ್ಷಣ ವ್ಯಥೆ. ಇವರನ್ನು ಬೆಂಬಲಿಸಿ ಸಂಸ್ಥಾ ಕಾಂಗ್ರೆಸ್ಸನ್ನು ಒಡೆದು ಗೆಲ್ಲುವ ಹವಣಿಕೆಯಲ್ಲಿದ್ದ ಅರಸರು ದೂರಾಲೋಚನೆಯನ್ನೂ ಮಾಡಿದ್ದಾರೆ. ರಾಯರು ಮುಂದಿನ ಜೂನ್ ತಿಂಗಳಲ್ಲಿ ನಿವೃತ್ತರಾಗಲಿರುವವರು; ಆ ಬಳಿಕ ತನ್ನವರನ್ನೇ ಪೀಠವೇರಿಸ ಬಹುದೆಂಬ ಹೆಬ್ಬಯಕೆ ಅವರದ್ದು.

ಆದರೆ, ಅರಸರ ಆಸೆ ನೀರಲ್ಲಿ ತೊಳೆದ ಹುಣಸೆ ಹಣ್ಣಾಯ್ತು. ಸಂಸ್ಥಾ ಕಾಂಗ್ರೆಸ್ಸಿನ ಗಾಂವ್‌ಕರರು ಅದ್ಭುತ ಬಹುಮತದಿಂದ ವಿಧಾನ ಪರಿಷತ್ತಿನ ಸಭಾಪತಿಯಾದರು. ಸಾಕಷ್ಟು ಅನುಭವವುಳ್ಳವರು; ಐವತ್ತರ ಗಡಿ ದಾಟಿದವರು. ೭೪ ರ ಜೂನಿನಲ್ಲಿ ನಿವೃತ್ತರಾಗುವವರು. ಅದುವರೆಗೆ ಅರಸು ಸುಮ್ಮನಿರುತ್ತಾರೆಯೋ, ಬಹುಮತ ಬಂದೊಡನೆಯೇ ಛಿತೂರಿಗೆ ತೊಡಗುತ್ತಾರೆಯೋ ಕಾದು ನೋಡಬೇಕು. ಬೊಂಬಾಯಿ ನಗರ ಪಾಲಿಕೆಯ ಮೇಯರ್ ಪದವಿ, ವೀರೇಂದ್ರರ ವಿಜಯ, ಗಾಂವಕರರ ಗೆಲು....ಇವು ಮೂರು ಆಳುವ ಕಾಂಗ್ರೆಸಿಗೆ ಬಿದ್ದ ಏಟುಗಳು. ಈ ಏಟುಗಳಿಂದ ಆಗುವುದೇನೂ ಇಲ್ಲ. ಆದರೂ ಆಲೋಚಿಸ ಬೇಕಾದದ್ದಿದೆ.

೦ ೦ ೦

ರಾಜ್ಯದ ಶಿಕ್ಷಣ ಸಚಿವರಾದ ಎ. ಆರ್. ಬದರೀನಾರಾಯಣರು ಅರಸು ಸಂಪುಟದಲ್ಲಿ ನರೆಗೂದಲ ಮಂತ್ರಿಗಳಲ್ಲಿ ಒಬ್ಬರು. ಶಿಕ್ಷಣ ಇಲಾಖೆಗೆ ಕೂದಲು ನರೆತವರೇ ಬೇಕು. ರಾಜ್ಯದಲ್ಲಿ ಅತ್ಯಂತ ಕಳಪೆಯಾಗಿರುವ ಇಲಾಖೆಯೊಂದಿದ್ದರೆ ಅದು ವಿದ್ಯಾಭ್ಯಾಸ ಇಲಾಖೆ. ಸಾರ್ವಜನಿಕ ಕಾಮಗಾರಿ, ಸಾರಿಗೆ ಇಲಾಖೆಗಳಿಗಿಂತಲೂ ಇದರ ಸ್ಥಿತಿಗತಿ ಶೋಚನೀಯ, ದಯನೀಯ. ಶಿಕ್ಷಣದ ಮಟ್ಟ, ಪಾಠಪಟ್ಟಿಗಳಲ್ಲಿನ ಲೋಪದೋಷಗಳಿಗಿಂತಲೂ ಶಿಕ್ಷಕರ ಗೋಳು ಹೇಳತೀರದ್ದು. ಶಿಕ್ಷಣ ವರ್ಷಾಂತ್ಯದಲ್ಲಿ ಕೆಲವಾರು ಶಿಕ್ಷಕರನ್ನು ನೌಕರಿಯಿಂದ ತೆಗೆದುಹಾಕುವುದು ಖಾಸಗಿ ಶಾಲೆಗಳು ನಡೆದು ಬಂದ ಸತ್ ಸಂಪ್ರದಾಯ. ಹುಬ್ಬಳ್ಳಿಯಲ್ಲಿ ಇಂತಹ ಕೆಲಸ ಕಳೆದುಕೊಂಡ ನೌಕರರು ಉಪವಾಸ ಸತ್ಯಾಗ್ರಹವನ್ನು ಮಾಡಬೇಕಾಯ್ತು. ಸರಕಾರ ಉದ್ಯೋಗದ ರಕ್ಷಣೆಯ ಭರವಸೆಯನ್ನಿತ್ತರೂ ಆ ರಕ್ಷಣೆ ನೂರು ಕೈ ದಾಟಿ ಬರುವುದರೊಳಗೆ ದೇಹ ಅಸ್ಥಿಪಂಜರವಾಗುತ್ತದೆ.

ಖಾಸಗಿ ಶಾಲೆಗಳ ಆಡಳಿತದಿಂದ ತೊಡಗಿ ಶಿಕ್ಷಣ ಇಲಾಖೆಯ ಎಲ್ಲ ಕಚೇರಿಗಳೂ ಲಂಚಾಸುರನ ದೈತ್ಯ ನೃತ್ಯದಂಗಣಗಳಾಗಿವೆ ನೇರವಾಗಿ ಬಿಲ್ಲುಗಳ ಮೂಲಕವೇ ವೇತನ ಬಟವಾಡೆಗೆ ತೊಡಗಿದಂದಿನಿಂದ ಶಿಕ್ಷಣ ಇಲಾಖೆಯ ಸಂಬಂಧಿತ ಗುಮಾಸ್ತರಿಗೆ ನಡಕೊಳ್ಳುವ ಶಾಲೆಗಳ ಬಿಲ್ಲುಗಳು ಮಾತ್ರವೇ ಸರಿಯಾಗಿ ಬರುತ್ತಿವೆ; ಉಳಿದವರದ್ದು ಒಂದೊಂದು ಸಲ ಒಂದೊಂದು ಕ್ಷುಲ್ಲಕ ನೆಪವೊಡ್ಡಿ ಹಿಂದೆ ಬರುತ್ತಿವೆ ಯೆಂದು ಸುದ್ದಿಗಳು. ಅಧ್ಯಾಪಕರ ಉದ್ಯೋಗ ಭದ್ರತೆ, ಭಡ್ತಿ, ಸರಿಯಾದ ವೇತನ ಬಟವಾಡೆ, ಕುಂದುಕೊರತೆಗಳ ಪರಿಶೀಲನೆ.. ಹೀಗೆ ಎಲ್ಲವುಗಳಲ್ಲೂ ಭ್ರಷ್ಟಾಚಾರಿಗೆ ಮಾತ್ರ ವಿಜಯ ದೊರೆಯುತ್ತದೆ ಯೆಂಬುದು ರಹಸ್ಯವಾಗಿ ಉಳಿದಿಲ್ಲ. ಶಿಕ್ಷಣದ ಯಶಸ್ಸು ಶಿಕ್ಷಕರನ್ನೇ ಅವಲಂಬಿಸಿದೆಯೆಂಬುದು ಬದರೀನಾರಾಯಣರಿಗೂ ಅರಿಯದ ಸಂಗತಿಯಲ್ಲ. ತನ್ನ ಅನುಭವವನ್ನೂ, ಯೋಗ್ಯತೆಯನ್ನೂ, ಮಾನವತೆಯನ್ನೂ ಅವರು ಶಿಕ್ಷಕರ ಗೋಳಿನ ಬದುಕನ್ನೂ ಶಿಕ್ಷಣದ ಅಸಮರ್ಪಕತೆಯನ್ನೂ ಸುಧಾರಿಸಲು ಎಷ್ಟರ ಮಟ್ಟಿಗೆ ಬಳಸುತ್ತಾರೆಯೋ ಅಷ್ಟು ಅವರು ಯಶಸ್ಸು ಪಡೆಯುತ್ತಾರೆ.

೦ ೦ ೦

ಟ್ರಾನ್ಸ್‌ಫಾರ್ಮರೊಂದಕ್ಕೆ ಬಣ್ಣ ಬಳಿಯುತ್ತಿದ್ದ ನೌಕರನೊಬ್ಬ ಹಠಾತ್ ಮೃತ್ಯುವಿಗೀಡಾದ ಸಂಬಂಧದಲ್ಲಿ ಬೆಂಗಳೂರಿನ ಎನ್. ಜಿ. ಇ. ಎಫ್.ನಲ್ಲಿ ಮಿಂಚಿನ ಮುಷ್ಕರ ನಡೆಯಿತು. ಮುಷ್ಕರ ದಿಢೀರಾದುದರಿಂದ ಅದರ ದುಷ್ಪರಿಣಾಮಗಳೂ ಡಿಢೀರಾದುವು. ವಾಹನಗಳಿಗೆ ಜಖಂ, ಆಸ್ತಿಪಾಸ್ತಿಗಳಿಗೆ ನಷ್ಟ. ಕಾರ್ಮಿಕ ನಾಯಕರ ಮೇಲೆ ಕೈ ಮಾಡಲಾಯಿತೆಂಬೂ ಇದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಪೋಲೀಸರು ನಡುವೆ ಪ್ರವೇಶಿಸಬೇಕಾಗಿ ಬಂ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
154 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ **ಬೆಳೆಸಿರಿ.**

ಠೇವಣಾತಿಗಳ ಮೇಲೆ 7⅜% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸರ್ವಾರ್ಪಣ

ಸ್ವತಂತ್ರ ಐತಿಹಾಸಿಕ ಕಾದಂಬರಿ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

'ಮೂರು ಅವಸ್ಥೆಗಳಲ್ಲೂ ಅನುಮತಿಯ ಮಾತು ಈ ನಾಲಿಗೆಯಿಂದೇಳಲಾರದು'

'ಆಗಲೇ ಒಪ್ಪಿ ಕೊಂಡಿರಲ್ಲ'

'ನಾನೆಲ್ಲಿ ಸಮ್ಮತಿಸಿದೆ.'

'ನನ್ನ ಮಾತನ್ನು ನಡೆಸಿಕೊಡುವುದಾಗಿ ಆಗಲೇ ಮಾತು ಕೊಟ್ಟಿರಲ್ಲ?'

'ನನಗೆ ತಿಳಿಯದಂತೆ ನನ್ನನ್ನು ಸುಳಿಗೆ ಸಿಲುಕಿಸಿದಿರಿ, ದಂಡನಾಯಕರೇ'

'ವಚನ ಪಾಲನೆ ಪ್ರಭುಧರ್ಮ'

ಪ್ರಭುಗಳು ಮಣಿಯಲಿಲ್ಲ. ನರಸಿಂಹ ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ಇದು ನಡೆದ ಮೂರು ದಿನಗಳ ಮೇಲೆ ಒಂದು ನಸುಕಿನಲ್ಲಿ ನರಸಿಂಹ ಬನವಾಸಿಗೆ ಹೊರಟುಹೋದ.

ಅವನ ನಿರ್ಗಮನದಿಂದ ತೆರವಾದ ಸ್ಥಾನಕ್ಕೆ ಬದ್ದೆಗ ಮಹಾರಾಜರು ತನ್ನ ಮಗನ ಸಲಹೆಯಂತೆ—ಅರಿಕೇಸರಿಯನ್ನು ನೇಮಿಸಿದರು.

೧೪

ಹಗಲಿರುಳೆನ್ನದೆ ಮೇನಕಾ ದೇವಿ ಯೋಚಿಸಲಾರಂಭಿಸಿದಳು. ಬೆಳೆದು ನಿಂತ ಮಗಳು: ಅವಳ ಮುಂದು ಹಾದು ಹೋದಾಗಲೆಲ್ಲ ಅವಳನ್ನು ಬಿಡದೆ ಪೀಡಿಸುತಿದ್ದುದು, ಅವಳ ಮದುವೆಯ ಪ್ರಶ್ನೆ.

ಆ ಮಗಳೋ? ಅರಿಕೇಸರಿಯನ್ನು ಮನಸಾ ವರಿಸಿದ್ದಳು. ಅವನಲ್ಲಿ ನಟ್ಟ ಮಗಳ ಮನಸ್ಸನ್ನು, ಅಲ್ಲಿಂದ ತಿರುಗಿಸುವುದು ಸಾಧ್ಯವಿಲ್ಲದ ಮಾತೆಂಬುದನ್ನು ಅವಳು ಮನಗಂಡಿದ್ದಳು.

ಈ ಬಾಂಧವ್ಯವನ್ನು ಅವಳೂ ಒಪ್ಪಿದ್ದಳು.

ಅರಿಕೇಸರಿ ಮಗಳನ್ನು ಸ್ವೀಕರಿಸಲು ಸಿದ್ಧವಿರುವುದು ಅವಳಿಗೆ ತಿಳಿದಿತ್ತು. ಪರಸ್ಪರ ಒಪ್ಪಿ, ಒಂದುಗೂಡಿದ ಹೃದಯಗಳನ್ನು ಶಾಸ್ತ್ರೋಕ್ತ ರೀತಿಯಲ್ಲಿ ಬಂಧಿಸಿ, ತನ್ನ ಜವಾಬ್ದಾರಿಯನ್ನು ಇಳಿಸಿ ಕೊಳ್ಳುವ ಆತುರ ಅವಳಿಗೆ. ಗೋವಿಂದ ಎನನ್ನುತ್ತಾನೋ.

ಅವನೊಪ್ಪದಿದ್ದರೆ—?

ಅರಿಕೇಸರಿಗೆ ತಂಗಿಯನ್ನು ಕೊಡಲು ನಿರಾಕರಿಸಿ, ಬೇರೊಬ್ಬನೊಡನೆ ಅವಳ ವಿವಾಹಕ್ಕೆ ಹಟ ಕಟ್ಟಿದರೆ?

ಒಲ್ಲದ ಗಂಡನ್ನು ಮದುವೆಯಾಗಲು ಅವಳು ನಿರಾಕರಿಸಿದರೆ?

ಒಂದು ಕಡೆ ಮಗನ ಹಟ.

ಇನ್ನೊಂದೆಡೆ ಮಗಳ ನಿರ್ಧಾರ.

ಯಾರ ಪರ ವಹಿಸುವುದೂ ಕಷ್ಟ.

ಎರಡನ್ನೂ ಎಳೆದು ಹಾಕಿಕೊಳ್ಳಲು ಅವಳು ಸಿದ್ಧಳಿರಲಿಲ್ಲ. ಅವಳಿಗೆ ದಿಕ್ಕೇ ತೋರಲಿಲ್ಲ. ಆದರೂ ಈ ವಿಚಾರದಲ್ಲಿ ಮಗನ ಮನವೊಲಿಸಿಕೊಳ್ಳುವ ಬಯಕೆಯಿಂದ 'ಮಗೂ, ಅಹೋರಾತ್ರಿ ನೀನು ಯುದ್ಧ, ಯುದ್ಧ ಎಂದು ಅದರಲ್ಲೇ ನಿನ್ನ ತಲೆ ಕೆಡಿಸಿ ಕೊಂಡೆ. ಇದುವರೆಗೆ ನಾನೂ ಸುಮ್ಮನಿದ್ದೆ. ಎಷ್ಟು ದಿನ ನಾನೂ ಸುಮ್ಮನಿರುವುದು ಸಾಧ್ಯ. ನಿನ್ನ ತಂಗಿಯ ಮದುವೆಯನ್ನು ನೀನಲ್ಲದೆ ಇನ್ನಾರು ಮಾಡಬೇಕು. ಬೆಳೆದ ಹೆಣ್ಣನ್ನು ಮನೆಯಲ್ಲಿಟ್ಟು ಕೊಳ್ಳುವುದು ಕೆಂಡವನ್ನು ಮಡಿಲಲ್ಲಿಟ್ಟು ಕೊಂಡಂತೆ. ಹೂವರಳಿದೆ. ಪರಿಮಳ ಹರಡಿದೆ. ತುಂಬಿಗೆ ಅದು ತಿಳಿಯದಿರುತ್ತದೆಯೇ? ನಮ್ಮದಲ್ಲದ ಒಡವೆಯನ್ನು ಎಷ್ಟು ದಿನ ಇಟ್ಟು ಕೊಂಡಿರಲಾಗುತ್ತೆ? ಯಾರ ಪದರಿಗೆ ಹಾಕಬೇಕೋ ಅವರಿಗೊಪ್ಪಿಸುವುದು ವಿಹಿತ. ಅದನ್ನೇ ಜ್ಞಾಪಿಸಲೆಂದು ಬಂದೆ'

'ಈ ಕರ್ತವ್ಯವನ್ನು ನಾನು ಮರೆತಿಲ್ಲವಮ್ಮಾ! ಆಗಲೇ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ನಿನ್ನಲ್ಲಿ ತಿಳಿಸುವುದಷ್ಟೇ ಉಳಿದಿರುವುದು'

ಅರಿಕೇಸರಿ — ಲೋಕಾಂಬಿಕೆಯರ ಅನ್ಯೋನ್ಯಾನುರಾಗವನ್ನು ಅವನೂ ತಿಳಿದಿರಬೇಕು. ಅದನ್ನರಿತು ಅವರೀರ್ವರನ್ನೂ ವಿವಾಹ ಬಂಧನದಲ್ಲಿ ಬೆಸೆಯುವ ನಿರ್ಧಾರಕ್ಕೆ ಬಂದಿರಬೇಕು ಎಂದು ಭಾವಿಸಿ ಅದನ್ನು ಅವನ ಬಾಯಿಂದಲೇ ಹೊರಡಿಸ ಬೇಕೆಂದು,

'ನೀನು ನಿಶ್ಚೈಸಿದ ವರ—'

'ಚಾಳುಕ್ಯ ರಾಜಕುಮಾರ ಕಕ್ಕರಸ, ನನ್ನ ಸ್ನೇಹಿತ. ನಮ್ಮ ಮಾಂಡಳಿಕರಲ್ಲಿ ಅವನೇ ಬಲಿಷ್ಠ ಕುಳ. ವಯಸ್ಸು, ರೂಪ, ಅಧಿಕಾರ ಎಲ್ಲ ಇದೆ. ಅವನೊಡನೆ ಪ್ರಸ್ತಾಪಿಸಿದ್ದೇನೆ. ಅವನು ಸಮ್ಮತಿಸಿದ್ದಾನೆ. ಈ ಸಂಬಂಧದಿಂದ ನನಗೋ ಎರಡು ಭುಜ ಬಂದಂತಾಗುತ್ತದೆ. ಅವನ ಬಾಹು ಬಲದ ಬೆಂಬಲದಲ್ಲಿ ರಾಷ್ಟ್ರಕೂಟ ಸಿಂಹಾಸನವನ್ನು ಕೈಗತ ಮಾಡಿಕೊಳ್ಳುವ ನನ್ನ ಬಯಕೆಯೂ ಪೂರೈಸುತ್ತೆ. ಮುಹೂರ್ತ ನಿಶ್ಚೈಸುವುದೊಂದೇ ಉಳಿದಿರುವುದು'

ಮಗನ ಮಾತಿನಿಂದ ಮೇನಕೆ ಭೂಮಿಗಿಳಿದು ಹೋದಳು. ಚೇಳು ಕುಟುಕಿದವಳಂತೆ ಅವಳು ಒಳಗೇ ನರಳಿದಳು. ಮಗಳ ಶ್ರೇಯಸ್ಸನ್ನೇ ಹಾತೊರೆಯುತಿದ್ದ ಅವಳ ಮಾತೃ ಹೃದಯ 'ನಿನ್ನ ತೀರ್ಮಾನ ಏಕಪಕ್ಷೀಯ ಕುಮಾರ. ಅವನೊಪ್ಪಿದರೆ ಕೆಲಸ ಮುಗಿಯಿತೇ? ನಿನ್ನ ತಂಗಿ ಒಪ್ಪ ಬೇಡವೇ'

'ಅವಳನ್ನೇನು ಕೇಳುವುದು'

'ಹಾಗೆಂದರೆ? ಅವಳೇನು ಆಟದ ಬೊಂಬೆಯೇ? ಅವಳಿಗೂ ಮನಸ್ಸೆಂಬುದಿದೆಯಲ್ಲ'

'ಅವಳ ಮನಸ್ಸು—' ಅವನ ಸ್ವರದಲ್ಲಿ ತಿರಸ್ಕಾರ ಭಾವ ತುಂಬಿತ್ತು.

'ಕಕ್ಕರಸರು ಯಾವುದರಲ್ಲಿ ಯಾರಿಗೆ ಕಡಿಮೆ. ಈ ಮದುವೆಯಿಂದ ಕುಲಗಳೆರಡು ಕೂಡುತ್ತವೆ. ನನಗೆ ಬೇಕಾಗಿರುವುದು ಅದು. ಇದು ರಾಜಕೀಯ ವಿವಾಹವಮ್ಮಾ'

'ಇದು ಒಲವಿನ ಪ್ರಶ್ನೆ. ಜೋಡಿಸಬೇಕಾದ್ದು ಕೈಗಳನ್ನಲ್ಲ. ಹೃದಯಗಳನ್ನು. ಅವಳಿದನ್ನು ಪ್ರತಿಭಟಿಸಿ ಸಟೆದು ನಿಂತರೆ—? ಅನರ್ಥ ಪರಂಪರೆಗೆ ಔತಣ ಕೊಟ್ಟಂತೆ.'

'ಪ್ರತಿಭಟನೆ! ಒಲವು! ಮನಸ್ಸು. ಅವುಗಳನ್ನು ಕಟ್ಟಿಕೊಂಡು ನಾನೇಕೆ ಗೋಗರೆಯಲಿ? ಒಟ್ಟಿನಲ್ಲಿ ನನಗೆ ಹಿತವಾಗಬೇಕು. ನಾನು ಮಾತು ಕೊಟ್ಟಾಗಿದೆ. ವಚನ ಭ್ರಷ್ಟನಾಗಲಾರೆ. ಎರಡು ದಿನ ಇಲ್ಲದ ರಂಪ ಎಬ್ಬಿಸಿಯಾಳು. ಆ ಮೇಲೆ ಅವಳೇ ಹೊಸ ಬಾಳಿಗೆ ಒಗ್ಗಿಕೊಳ್ಳುತ್ತಾಳೆ.'

'ಅವಳ ಬಾಳು ಅದರಿಂದ ಬರಡಾಗುತ್ತದೆಯಲ್ಲೋ. ಅವಳ ಹೃದಯವನ್ನೇ ಹಿಂಡುವ ಕಟುಕನಾದಿಯಲ್ಲೋ'

'ಅವಳಿಗೆ ಬೇಕಾದ್ದು ಒಂದು ಗಂಡು. ಅದು ದೊರಕಿದ ಮೇಲೆ ನೆಮ್ಮದಿಯಿಂದಿರುತ್ತಾಳೆ.'

'ಲೋಕಾ ಹಾಗಲ್ಲವಲ್ಲೋ. ಅವಳದು ಸೂಕ್ಷ್ಮ ಮನಸ್ಸು. ನಿನ್ನ ತೀರ್ಮಾನ ತಿಳಿದು ಬರುವುದೇ ತಡ ಅದು ಹಾಗೇ ಮುರುಟಿ ಬಿಡುತ್ತೆ. ನಾವೇ ಬೆಳೆಸಿ ಪೋಷಿಸಿದ ಬಳ್ಳಿ ಕೈಯಾರೆ ಬಾಡಿಸಬೇಡವೋ'

'ನೀನೇನು ಹೇಳಿದರೂ ನಾನು ಜಗ್ಗೆನಮ್ಮ. ಅವಳ ಮದುವೆ ಆಗುವುದಿದ್ದರೆ, ಅದು ಕಕ್ಕರಸರೊಡನೆಯೇ! ನಾನು ಬದುಕಿರುವಷ್ಟು ದಿನ ಅದು ಅನ್ಯರೊಡನೆ ಆಗಬಾರದು.'

'ಏನು ಅನಿಷ್ಟದ ಮಾತೋ ಕುಮಾರ'

'ಅನಿಷ್ಟ! ಅದೆಲ್ಲಿಂದ ಬಂತು? ನೀನು ನಡುವೆ ಬರಬೇಡ. ಈ ಮದುವೆಯನ್ನು ಖಂಡಿತ ಮಾಡಿಯೇ ತೀರುತ್ತೇನೆ. ನನಗಾವುದೂ ತಿಳಿದಿಲ್ಲ ಎಂದು ಭಾವಿಸಬೇಡ. ನನ್ನ ಬದ್ಧ ವೈರಿಯನ್ನು ಅವಳು ಮರೆತು ಬಿಡಲಿ. ಇಂದಿನಿಂದ ಕಕ್ಕರಸರು ಅವಳ ಗಂಡ. ಅನ್ಯರೊಡನೆ ಅವಳು ನಡೆಸುವ ಚಿನ್ನಾಟ, ಲೋಕದ ದೃಷ್ಟಿಯಿಂದ ಹಾದರ'

ಹೀಗೆ ನುಡಿದಾಗ ಗೋವಿಂದನ ಹುಬ್ಬುಗಳು ಗಂಟಿಕ್ಕಿದುವು-ಕಣ್ಣುಗಳು ಉರಿ ಕಾರಿದುವು. ಕಿರು ಮೀಸೆ ಹುರಿಗೊಂಡಿತು. ವೈನವಿರು ನಿಮಿರಿ ನಿಂತುವು. ಅವನ ಸರ್ವಾಂಗ ದಹಿಸಿತು.

ಅಲ್ಲಿರುವುದು ಅವನಿಂದಾಗಲಿಲ್ಲ.

ಆತ ಎದ್ದು ಹೋದ.

ಈ ಕರ್ಕಶದ ನುಡಿಯಿಂದ ಮೇನಕಾ ದೇವಿ ಕುಸಿದೇ ಹೋದಳು. ಗೊನೆಯಿಂದ ಬೇರಾದ ಮೋಟೆಯಂತೆ—ಅವಳ ಮುಖ ಬಾಡಿತು.

ಬವಳಿ ಬಂದಂತಾಗಿ ಆಕೆ ನೆಲಕ್ಕುರುಳಿದಳು.

೧೫

ರಾಜವಾಡೆಯಲ್ಲಿ ಗೋವಿಂದನ ಅಣತಿಯಂತೆ ಮದುವೆಯ ಸಿದ್ಧತೆ ಭರದಿಂದ ನಡೆಯಿತು.

ಜೋಯಿಸರನ್ನು ಕರೆಸಿ ಆತ ಮದುವೆಯ ಮುಹೂರ್ತ ನಿಶ್ಚೈಸಿದ. ಕಕ್ಕರಸರನ್ನೂ, ಅವರ ಬಾಂಧವರನ್ನೂ ಬರಮಾಡಿಕೊಂಡು ವಾಗ್ದಾನ ಸಮಾರಂಭವನ್ನು ಮುಗಿಸಿದ. ವಿವಿಧ ದಿಕ್ಕುಗಳಲ್ಲಿದ್ದ ಪ್ರತಿಷ್ಠಿತರಿಗೆ ಕರೆಯೋಲೆ ಕಳುಹಿಸುವ ವ್ಯವಸ್ಥೆ ಮಾಡಿದ. ಸರಿದೊರೆ ಎನಿಸುವ ಸಾಮಂತ ರಾಜರಿಗೆ ತನ್ನ ಪ್ರತಿನಿಧಿಗಳ ಮೂಲಕ ಆಹ್ವಾನ ಕಳಿಸಿದ.

ರಾಜವಾಡೆಯಲ್ಲಿದ್ದ ಸುಂದರ ಅರಮನೆಯೊಂದನ್ನು ಬೀಗರ ವಸತಿ

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 33

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಹಸುರು ಕ್ರಾಂತಿಯ ಲಾಭದಲ್ಲಿ ಶ್ರೀಸಾಮಾನ್ಯನಿಗೂ ಪಾಲುಬೇಕು

ಕಾಂಗ್ರೆಸ್ಸು ವಿಭಜನೆಗೊಂಡು ಶ್ರೀಮತಿ ಇಂದಿರಾಗಾಂಧಿಯವರು ಆಳುವ ಕಾಂಗ್ರೆಸ್ಸನ್ನು ಪ್ರತಿನಿಧಿಸಿ ಪ್ರಧಾನಿಯಾಗಿ ಮುಂದುವರಿಯ ತೊಡಗಿದ ಮೇಲೆ ಬೆಲೆಯೇರಿಕೆಯೂ ಏಕ ಪ್ರಕಾರವಾಗಿ ಮುಂದುವರಿದಿರುವುದು ಸರ್ವವೇದ್ಯ. ಆದಾಗಿನಿಂದಲೂ ಬೆಲೆಯಿಳಿಸಲು, ಅದನ್ನು ಸ್ತಿಮಿತದಲ್ಲಿಡಲು ಸರಕಾರ ಸರ್ವಪ್ರಕಾರದ ಪ್ರಯತ್ನಗಳನ್ನೂ ಮಾಡುವುದೆಂದು ಉನ್ನತ ನಾಯಕರು ಭರವಸೆಯೇನೋ ನೀಡುತ್ತಲೇ ಬಂದರು. ಆದರೆ, ಅವರ ಪ್ರಯತ್ನಗಳು ನಡೆದಂತೆ ಭಾಸವಾಗಲಿಲ್ಲ; ಒಂದೊಮ್ಮೆ ಪ್ರಯತ್ನಗಳು ನಡೆದಿರಬಹುದಾದರೂ ಅವು ಸಫಲವಾಗಲಿಲ್ಲ. ಈ ನಡುವೆ ಎರಡು ಮುಂಗಡ ಪತ್ರಗಳು ಮಂಡಿತವಾಗಿ ಬೆಲೆ ತಗ್ಗುವ ಮಾತು ದೂರವಿರಲಿ, ಅದು ಇದ್ದಲ್ಲಿಯೇ ಇರುವುದೂ ಸಾಧ್ಯವಾಗಲಿಲ್ಲ. ಮುಖ್ಯವಾಗಿ ಕೊರತೆ ಧನ ವಿನಿಯೋಗವು ಮುಂದುವರಿದಿದ್ದು, ಹಣದುಬ್ಬರವು ಮಿತಿ ಮೀರಿದ್ದರಿಂದ ವಸ್ತು-ಒಡವೆಗಳ ಬೆಲೆಯು ಏರುತ್ತಲೇ ಹೋಗುತ್ತಿದೆ. ಇತ್ತೀಚೆಗಿನ ದಿನಗಳ ವರೆಗೆ ಇನ್ನೂರು ರೂಪಾಯಿಗಳಿಗೆ ಕ್ವಿಂಟಲ್ಲಿಗೂ ಹೆಚ್ಚಿನ ಸಕ್ಕರೆ ದೊರೆಯುತ್ತಿದ್ದರೆ, ಚುನಾವಣಾನಂತರ ಅದು ಮುನ್ನೂರರ ಗಡಿಯನ್ನೂ ದಾಟಿ ಹೋಯ್ತು. ಸರಕಾರವೇ ವಿತರಣೆ ಮಾಡುವ ಸಕ್ಕರೆಗೇನೇ ಕಿಲೋವೊಂದರ ಒರಡು ರೂಪಾಯಿಗಳಿಂದ ಮೇಲೆ ಕೇಳಬೇಕಾಗಿಲ್ಲ. ಸಕ್ಕರೆಯ ಮಾತು ಈ ರೀತಿಯಾದರೆ, ಜೀವನಾವಶ್ಯಕ ಪದಾರ್ಥಗಳ ಮೇಲಿನ ಏರಿಕೆ ಮಿತಿಮೀರುತ್ತಿದೆ. ಅಕ್ಕಿ ಗೋಧಿಗಳ ಬೆಲೆಯೂ ಇದಕ್ಕೆ ಹೊರತಲ್ಲ.

ಇತ್ತೀಚೆಗಿನ ವರ್ಷಗಳಲ್ಲಿ ಹಸುರು ಕ್ರಾಂತಿ ಅತ್ಯಂತ ಯಶಸ್ವಿಯಾಗಿದೆ. ದೇಶದಲ್ಲಿನ ಆಹಾರೋತ್ಪಾದನೆಯ ಪ್ರಮಾಣ ದೇಶದ ಸ್ವಾವಲಂಬನೆಗೆ ತಕ್ಕಷ್ಟಿದೆ. ವಿದೇಶಗಳಿಂದ ಆಹಾರ ಧಾನ್ಯಗಳ ಆಯಾತವನ್ನೂ ನಾವು ನಿಲ್ಲಿಸಲು ಸಮರ್ಥರಾಗಿದ್ದೇವೆ— ಎಂದೆಲ್ಲ ಹೇಳಲಾಗುತ್ತಿದೆ. ಯಥೇಚ್ಛ ಆಹಾರಧಾನ್ಯಗಳ ಉತ್ಪಾದನೆಯಾಗಿದ್ದರೂ ಅವುಗಳ ಬೆಲೆಯೇಕೆ ಏರುತ್ತಿದೆಯೆಂಬುದೊಂದು ಯಕ್ಷಪ್ರಶ್ನೆ. ರೈತರಿಗೆ....ಕೃಷಿರಂಗಕ್ಕೆ-ಆರ್ಥಿಕವಾದ ನೆರವು ಸರಳ ರೂಪದಲ್ಲಿ ನೀಡಲು ಬ್ಯಾಂಕುಗಳು ಪ್ರತಿಜ್ಞೆ ಮಾಡಿವೆ. ನೀರಾವರಿಯ ಸೌಕರ್ಯವಿದೆ; ವಿದ್ಯುತ್ತಿನ ಲಾಭ ರೈತರಿಗಾಗಿದೆ. ಇವೆಲ್ಲವುಗಳೊಡನೆ, ರೈತನು ಬಳಸುವ ಸಾಧನೋಪಕರಣಗಳ ಬೆಲೆಯೂ ಹೆಚ್ಚಿದೆಯೆಂಬ ಕಾರಣವನ್ನು ಮುಂದೊಡ್ಡಿ ಬೆಳೆಗಾರರು ಧಾನ್ಯಗಳ ಬೆಲೆಯಿಳಿಸಲು ನಿರಾಕರಿಸುತ್ತಿರುವುದು ಖೇದಜನಕ ವಿಚಾರವೆಂದೇ ಹೇಳಬೇಕು. ಹಸುರು ಕ್ರಾಂತಿಯ ಸತ್ಫಲವನ್ನು ಹಣಕಾಸಿನ ಅನುಕೂಲವುಳ್ಳ ಕೆಲವೇ ಮಂದಿ ಹಿಡುವಳಿದಾರರು ಮಾತ್ರವೇ ಉಣ್ಣುವುದರಲ್ಲಿ ಯಾವ ನ್ಯಾಯವೂ ಇಲ್ಲ. ನೀರಾವರಿಯೇ ಮೊದಲಾದ ರೈತೋಪಯೋಗಿ ಯೋಜನೆಗಳಿಗೆ ಪ್ರತಿ ನಾಗರಿಕನೂ ತೆತ್ತ ತೆರಿಗೆಯ ಹಣ ವಿನಿಯೋಗವಾಗಿದೆಯೆಂಬುದರಿಂದ, ತೆರಿಗೆದಾರರೆಲ್ಲರಿಗೂ ಹಸುರು ಕ್ರಾಂತಿಯಿಂದಾದ ಲಾಭದಲ್ಲಿ ನ್ಯಾಯೋಚಿತ ಪಾಲು ದೊರೆಯಬೇಕೆಂದು ಕೇಳುವುದು ತಪ್ಪಾಗದು. ಕೃಷಿಯ ಆದಾಯದ ಮೇಲೆ ಸದ್ಯ ಯಾವುದೇ ರೀತಿಯ ತೆರಿಗೆಯಿರುವುದಿಲ್ಲವೆಂಬುದನ್ನೂ ನಾವು ಪರ್ಯಾಲೋಚಿಸಬೇಕು. ಕೃಷಿ ಬೆಲೆಗಳ ಆಯೋಗವು ಈಯೆಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬೆಳೆಗಾರರಿಂದ ಸರಕಾರ ಕೊಳ್ಳುವ ಬೆಲೆಯು ಇಳಿಯಬೇಕೆಂದು ಶಿಫಾರಸು ಮಾಡಿದೆ. ಆದರೆ, ಬೆಳೆಗಾರರು ಮಾತ್ರ ಇದನ್ನು ಉಗ್ರವಾಗಿ ವಿರೋಧಿಸುತ್ತಾರೆ. ಬೆಳೆಗಾರರು ಕೃಷಿಯಲ್ಲಿ ತೊಡಗಿಸಿದ ಭಂಡವಳ ಹೆಚ್ಚಿದೆಯೆಂಬುದು ನಿಜವಾದರೂ ಅವರಿಂದು ಪಡೆಯುತ್ತಿರುವ ಬೆಳೆಯ ಪ್ರಮಾಣವೂ ಇಮ್ಮಡಿಯಾಗಿದೆಯೆಂಬುದು ಅಷ್ಟೇ ಸತ್ಯ. ಸದ್ಯ ಗೋಧಿ ಸಂಗ್ರಹದ ಬೆಲೆಯನ್ನು ಸರಕಾರ ಇಳಿಸಲು ನಿರ್ಧರಿಸಿದೆ. ಆದರೂ ಬೆಳೆಗಾರರ ಉಗ್ರ ಪ್ರತಿಭಟನೆಯನ್ನು ಅದು ಎದುರಿಸಬೇಕಾಗುತ್ತದೆ.

ಆಹಾರ ಧಾನ್ಯಗಳು ವಿಪುಲವಾಗಿರುವಾಗ ಅವು ತಾನಾಗಿಯೇ ಅಗ್ಗವಾಗಬೇಕಾಗಿತ್ತು. ಆದರೆ, ಶ್ರೀಮಂತ ರೈತರು ಅವುಗಳನ್ನು ಸಂಗ್ರಹಿಸಿಟ್ಟು ಕೃತಕ ಅಭಾವವನ್ನು ಸೃಷ್ಟಿಸುತ್ತಿರುವಂತೆ ತೋರುತ್ತಿದೆ. ವಾಣಿಜ್ಯ ಬ್ಯಾಂಕುಗಳ ಸಹಾಯದಿಂದ ಹಿಂದೆ ವರ್ತಕರು ಕೂಡಿಡುತ್ತಿದ್ದರೆ, ಇಂದು 'ಶ್ರೀಮಂತ ರೈತರೇ' ಆ ಕೆಲಸವನ್ನು ಮಾಡುತ್ತಿದ್ದಾರೆನಿಸುತ್ತದೆ. ಈ ಪರಿಸ್ಥಿತಿಯನ್ನು ಸರಕಾರ ಉಗ್ರಕ್ರಮಗಳಿಂದ ತಡೆದರೆ ಆಹಾರ ಧಾನ್ಯಗಳು ಮುಕ್ತ ಮಾರುಕಟ್ಟೆಗೆ ಬಂದು ಬೆಲೆ ತಾನಾಗಿಯೇ ಇಳಿಯುವುದು. ಅದರೊಡನೆಯೇ ಉಳಿದ ವಸ್ತು-ಒಡವೆಗಳ ಬೆಲೆಯೂ ಇಳಿಯುವುದು. ನಮ್ಮ ರಾಜ್ಯದ ಪ್ರಮುಖ ವ್ಯಾಪಾರಿ ಬೆಳೆಗಳಲ್ಲಿ ಅಡಕೆಯೂ ಒಂದು. ಈ ವರ್ಷ ಅಡಕೆಯ ಬೆಲೆ ಬಹಳಷ್ಟು ಇಳಿದು ಹೋಗಿದೆಯೆಂಬುದು ನಿಜ. ಇದರ ಬೆಲೆಯ ರಕ್ಷಣೆ ಮಾಡಬೇಕೆಂಬ ಬೇಡಿಕೆ ಶಾಸನ ಸಭೆಯಲ್ಲೂ ಪ್ರತಿಧ್ವನಿತವಾಯ್ತು. ಆದರೆ, ಅಡಕೆಯ ಬೆಲೆಯಿಳಿದಿದೆಯೆನ್ನುವುದೂ ಒಂದು ತಿರುಚೆಪ್ಪೆಯೆನಿಸುತ್ತದೆ. ಇತ್ತೀಚೆಗಿನ ಕೆಲ ವರ್ಷಗಳಲ್ಲಿ ಅದರ ಬೆಲೆ ಪರಾಕಾಷ್ಠೆ ತಲಪಿದ್ದೆಂಬುದನ್ನು ಒಪ್ಪಿಕೊಂಡರೆ ಅದೀಗ ಸ್ತಿಮಿತಕ್ಕೆ ಬಂದಿದೆಯೆನ್ನಬೇಕು. ಯೋಜನೆಗಳು ಮುಂದುವರಿದಂತೆ ದೇಶವು ಪ್ರಗತಿಪಥದತ್ತ ಸಾಗುತ್ತಿರುವಂತೆ ಬೆಲೆಯೂ ಏರಲೇ ಬೇಕೆಂಬುದು ಪೊಳ್ಳುವಾದ. ಉತ್ಪಾದನೆ ಹೆಚ್ಚಾದಂತೆ ಬೆಲೆಗಳಲ್ಲಿ ಇಳುವರಿ ಕಂಡು ಬರಬೇಕು. ಅಧಿಕೋತ್ಪಾದನೆಯ ಲಾಭ ಬೆಳೆಗಾರರಿಗೆ ದೊರೆಯುವಂತೆಯೇ ಬಳಕೆದಾರನಿಗೂ ದೊರೆಯಬೇಕು. ಇಲ್ಲವಾದರೆ, ಪ್ರಗತಿಯ ಫಲವೇನು ಬಂತು? ಈ ದೃಷ್ಟಿಯಿಂದ ಸರಕಾರ ದಿಟ್ಟ ಹೆಜ್ಜೆಯಿಟ್ಟು ಬೆಲೆಗಳು ಹದ್ದು ತಪ್ಪದಂತೆ ನೋಡಿಕೊಳ್ಳುವ ಜಗತ್ಯವೀಗ ಹೆಚ್ಚಿದೆ.

ನಿರುದ್ಯೋಗಿ ವೈದ್ಯರು

ಕರ್ನಾಟಕ ರಾಜ್ಯದಲ್ಲಿ ಈಗ ಸುಮಾರು ೧೧೦೦ ಮಂದಿ ಅರ್ಹ ಯೋಗ್ಯತಾವಂತ ವೈದ್ಯರು ನಿರುದ್ಯೋಗಿಗಳಾಗಿದ್ದಾರೆಂದು ಆರೋಗ್ಯ ಸಚಿವ ಸಿದ್ಧವೀರಪ್ಪನವರು ಹೇಳಿದ್ದಾರೆ. ಇವರಲ್ಲಿ ನಿರುದ್ಯೋಗವನ್ನು ಹೋಗಲಾಡಿಸುವ ಸದುದ್ದೇಶದಿಂದ ತಿಂಗಳೊಂದರ ರೂ. ೨೫೦ ವೇತನದ ಮೇಲೆ ೨೫೦ ಮಂದಿ ವೈದ್ಯರನ್ನು ಸರಕಾರವು ನೇಮಿಸಿಕೊಳ್ಳಲು ನಿರ್ಧರಿಸಿದೆಯೆಂದೂ ಇವರನ್ನು ಗ್ರಾಮೀಣ ಪ್ರದೇಶದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವಂತೆ ನೋಡಿಕೊಳ್ಳಲಾಗುವುದೆಂದೂ ಅವರು ಹೇಳಿದ್ದಾರೆ. ರಾಜ್ಯದಲ್ಲಿ ಇದೀಗ ೩೦೦೦ ಮಂದಿ ವೈದ್ಯರು ಉದ್ಯೋಗದಲ್ಲಿದ್ದಾರೆ. ಇವರಲ್ಲಿ ೧೫೦೦ ಮಂದಿ, ಅಂದ

(ಪತ್ತನೇ ಪುಟ ನೋಡಿರಿ)

ಸೇಫ್ ಡಿಪಾಜಿಟ್ ಲಾಕರ್
ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ
ESTD. 1906
ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್
ರಥಬೀದಿ, ಮಂಗಳೂರು ಫೋನ್ ನಂ. 5057
ಕಂಕನಾಡಿ, ಮಂಗಳೂರು ಫೋನ್ ನಂ. 7312
ಪುತ್ತೂರು, ಫೋನ್ ನಂ. 164
maa/CBC/151 Kan.

ಗೇಹರಾಜ್ಯದಲ್ಲಿ

ನಿನ್ನನ್ನ ನೋಡೋಕೆ ನಾನ್ಯಾಕೆ ಬರ್ಬೇಕು?

'ಏನು ಇಷ್ಟು ತಡವಾಯ್ತೂಂತ....'

'ಮತ್ತೇನೂ ಇಲ್ಲಾನ್ನ....ನ್ನ ನೋಡೋಕೇಂತ ಆಸ್ಪತ್ರೆಗೆ ಹೋಗಿದ್ದೆ....'

"ಹ್ಞೂಂ, ಹೇಗಿದ್ದಾರೆ?"

'ಇರೋಹೇನು? ಎಲ್ಲಾ ಚೆನ್ನಾಗಿಯೇ ಇದ್ದಾರೇನ್ನ....'

'ಯಾರು?'

'ಡಾಕ್ಟರು, ನರ್ಸುಗಳು...'

'ಅವ್ರು ಹೇಗಿದ್ರೇನು? ನೀವು ನೋಡ ಹೋದವ್ರು....'

'ಒಳ್ಳೇ ಮಾತಾಡ್ತೀಯೆ ನೀನು....'

'ಏನು?'

'ಅಲ್ವೆ, ಡಾಕ್ಟರು, ನರ್ಸುಗಳು ಚೆನ್ನಾಗಿಲ್ಲಾಂತಂದ್ರೆ ರೋಗಿಯ ಪಾಡೇನು ಆಗ್ಬೇಕೂಂತ....'

'ಅದು ಹೌದೂನ್ನಿ. ನಾನು ಅವ್ರು ಚೆನ್ನಾಗಿರ್ಬಾರ್ದೂಂತೆಲ್ಲಂದೆ? ನೀವು ಹೋದದ್ದು ಅವ್ರನ್ನ ನೋಡೋಕೋ? ಅಥವಾ'

'ಅದೇ ತಮಾಶೆ ನೋಡು....'

'ಏನು?'

'ಪಾಪ, ನಾಲ್ಕು ಗಂಟೆ ಹೊತ್ತಿಗೆ ನಾಲ್ಕಾರು ಜನರು ಬಂದ್ರು. ಯಾರೋ ಒಂದು ನರ್ಸು ಇಷ್ಟೆಲ್ಲಾ ಜನ ಬರೋಕೆ ಆಗೋಲ್ಲ. ಯಾರಾದ್ರೂ ಒಬ್ರು—ಇಬ್ರು ಹೋಗಿ ಅಂದ್ಳು ...'

'ಹ್ಞೂಂ....'

'ಬಂದವ್ರು ಯಾರೂಂತೀಯ?....ರ ತಾಯಿ—ತಂದೆ, ನಾಲ್ಕು ಜನ ಮಕ್ಕಳು....'

'ಹ್ಞೂಂ....'

'ಅದಕ್ಕೆ ತಂದೆ ಅಂದ್ರು—ಇದು ವಿಜಿಟಿಂಗ್ ಸಮಯವಲ್ವೇಂತೆ? ಆಕೆ ಅಂದ್ಲು—ಹೌದು, ಆದರೂ ಒಬ್ಬೊಬ್ಬ ಪೇಷಂಟನ್ನ ನೋಡೋಕೆ ಆರಾರು ಜನ ಬಂದ್ರೆ ಹೇಗಾದೀತು?'

'ಬರೋಬರಿ ಅನ್ನಿ....'

'ಅಂತೂ ಒಂದು ನಿಶ್ಚಯಕ್ಕೆ ಬಂದ್ರು-ಮೊದಲು ತಾಯಿ ಎರಡು ಮಕ್ಳು ಒಳ ಹೋಗೋದು ತಂದೆ ಉಳಿದೆರಡು ಮಕ್ಳು ಅಲ್ಲೇ ವಾರ್ಡಿನ ಹೊರಗೆ ಕೂತಿದ್ದು ಮತ್ತೆ ಹೋಗೋದು....'

'ಸರೀನ್ನಿ....'

'ತಾಯಿ ಹೋದ ಮೇಲಲ್ವೆ? ಅರ್ಧ ತಾಸಿಗೂ ಹೆಚ್ಚು ಸಮಯ ಕಳೆಯಿತು. ಈ ತಂದೆಗೆ ಇಬ್ಬರು ಪೋರರ ಸಂಗಡ ಹೊರಗೆ ನಿಂತು ನಿಂತು ಸಾಕಾಯ್ತು. ಆಗಾಗ ಒಳ ಹೋದವ್ರು ವಾಪಾಸು ಬರ್ತಾರೇನೂಂತ ಇಣಿಕ ತೊಡಗಿದ್ರು....'

'ಹ್ಞೂಂ....'

'ಹೀಗೆ ನಾಲ್ಕಾರು ಬಾರಿ ಇಣುಕುತ್ತಿ ಒಬ್ಬಾಕೆ ನರ್ಸಮ್ಮನಿಗೆ ರೇಗಿತೂಂತ ತೋರುತ್ತೆ....'

'ಹ್ಞಾಂ....'

'ಏನ್ರೀ ತಲೆಗೂದಲು ನರೆತ್ರೂ ಹೆಣ್ಮಕ್ಕಳನ್ನ ಇಣಿಕಿ ನೋಡೋದನ್ನ ಬಿಡ್ಲಿಲ್ಲಾ? ಹೋಗಿ ಹೊರಗೆ....ಅಂದ್ಳು'

'ಕ್ಷ....'

'ಅದಕ್ಕವ್ರು ಮಾತೇ ಆಡಲಿಲ್ಲ....'

'ಸರೀನ್ನಿ. ಆ ನರ್ಸಮ್ಮನೊಡನೆ ಆವರಿಗೇನು ಕೆಲ್ಸ?'

'ಆದ್ರೂ ಅವ್ರು ಬಿಡ್ಬೇಕಲ್ಲಾ? ಈ ಗಂಡು ಜಾತೀನ್ನೇ ಹೀಗೆ..ತಮಗೆ ಕೂದ್ಲು—ಹಲ್ಲು ಉದುರಿದ್ರೂ ಪ್ರಾಯದ ಹೆಣ್ಮಕ್ಕಳನ್ನ ನೋಡೋದೂಂದ್ರೆ....'

'ಭಾರೀ ಧಿಮಾಕಿನವಳಿರಬೇಕು....'

'ಇರಬಹುದೂನ್ನ. ಇದನ್ನ ಅವ್ರಿಂದ ತಡೀಲಾಗಲಿಲ್ಲ. ಬಾಯ್ಬಿಟ್ರು—ಏನಮ್ಮಾ ನಿನ್ನನ್ನ ನೋಡೋಕೆ ಬರುವವರೆಲ್ಲಾ ಅಂಥವ್ರೇನೇಯೆ?'

'ಮತ್ತೆ?'

"ಅವ್ರಿಗೆ ಮುಖ ಕಣ್ಣು ಕೆಂಪಾಯ್ತು. ಸಿಟ್ಟಿಗೆ ಮಾಡ್ಕೊಂಡು ಅಂದ್ಳು—ನನ್ನ ಕತೆ ನಿಮಗೇಕೆ? ಅಂತ ಇವ್ರು ಅಂದ್ರು—ನಮ್ಮ ಕಡೇ ರೋಗೀನ ನೋಡೋಕೇಂತ ಕಾದು ಕೊಂಡಿದ್ದೇನೆ ಒಳಗೆ ನಮ್ಮಾಕೆ ಹೋಗಿದ್ದಾಳೆ. ಆಕೆ ಹೋಗಿ ಭಾರೀ ಹೊತ್ತಾತೂಂತ ಬಂದ್ನೇಂತ ನೋಡ್ತಾ ಇದ್ದೆ ಅಮ್ಮ, ನಿನ್ನನ್ನ ನೋಡೋಕೆ ನಾನ್ಯಾಕೆ ಬರ್ಬೇಕು? ನಂಗೆ ಅದೊಂದೇ ಕೆಲ್ಸ ಅಲ್ಲಮ್ಮ ನೂರಾರು ಅವೇನ್ನ....'

'ಆಗ?'

'ಆಗ ಮತ್ತೇಂಥದು! ಆಕೆ ಗೊಣಗುತ್ತ ಕಂಬಿ ಕಿತ್ತಳು, ತನ್ನ ಕೈಕೆಳಗಿನವ್ರಿಗೆ ಕೂಗಿ ಹೇಳ ತೊಡಗಿದಳು ...ನಂಬರ್ ೩೩ಕ್ಕೆ ಬೆಡ್ ಪ್ಯಾನ್ ಇಟ್ಟೆಯೇನು? ೪೪ ವಾಮಿಟ್ ಮಾಡಿತ? ೩೮ಗೆ ಯೂರಿನ್ ಪಾಸಾಯ್ತು? ೪೨ರ ಮೋಶನ್ ತೆಗೆದಿಟ್ಟೆಯ....'

'ಅಲ್ರಿ, ಇದು ಖಾಸಗಿ ಆಸ್ಪತ್ರೆ ಗತಿಯೂ ಯ್ತು....ಇನ್ನು ಸರ್ಕಾರಿ ಆಸ್ಪತ್ರೆಗಳ ಕಥೆಯೇನೋ....'

'ಏನೂಂತೀನು? ಹೆಸರಿಗೆ ಸರ್ಕಾರಿ ಆಸ್ಪತ್ರೆ....ಆದ್ರೆ ಕಾಲಿನಿಂದ ತೊಡಗಿ ತಲೆವರೆಗೂ ಕೈ ನೀಡೋರೇ ಅನ್ನು. ಔಷಧಿ ಸ್ಟಾಕು ಇಲ್ಲ....'

'ಅದೇ ಅನ್ನೋದು. ಬಂದ ಔಷಧಿಗಳಿಗೆ ತಕ್ಕಂತೆ ನಕಲಿ ರೋಗಿಗಳನ್ನು ನಿರ್ಮಿಸುತ್ತಾರೆ ಮತ್ತೆ ಔಷಧಿಗಳನ್ನು ಮೆಡಿಕಲ್ ಸ್ಟೋರ್ಸುಗಳಿಗೆ ಮಾರಿ ಬಿಡ್ತಾರೆ...'

'ಎಲ್ಲ ಕಡೇನೂ ಒಂದೇ. ಖಾಸಗಿಯವರು ರಕ್ತ ಹೀರ್ತಾರೇಂತ ಮಾತು. ಸರ್ಕಾರಿಯವರು ರಕ್ತವನ್ನೂ ಹೀರ್ತಾರೆ, ಮಾಂಸವನ್ನೂ ತಿಂತಾರೆ....'

'ಮತ್ತೇಂಥದು? ನೋಡು, ಖಾಸಗಿ ಶಾಲೆಗಳಲ್ಲಿ ಶಿಕ್ಷಕರಿಂದ, ಮಕ್ಕಳ ಹೆತ್ತವರಿಂದ ಅಕ್ರಮ ಸಂಭಾವನೆ ತೆಗೆದು ಕೊಳ್ತಾರೆಂತ ದೂರಿದ್ರೂ, ಒಳ್ಳೆ "ಶಿಕ್ಷಣ"ವಾದ್ರೂ ದೊರೆಯುತ್ತೆ.... ಸರ್ಕಾರಿ ಶಾಲೆಗಳಲ್ಲಿ? ಅದೊಂದು ಬಿಟ್ಟು ಉಳಿದೆಲ್ಲ ದೊರೆಯುತ್ತೆ....ಶಿಕ್ಷಕರು ಮೇಲಧಿಕಾರಿಗಳಿಗೆ ನಡೆದುಕೊಂಡ್ರೆ ಅವ್ರಿಗೆ 'ನಾರದ ಪಾಸು.'

'ಹಾಗಂದ್ರೆ?'

'ಅಲ್ವೆ, ನಾರದ್ರು ತ್ರಿಲೋಕ ಸಂಚಾರಿಗಳು, ಮಹಾ ರಾಜ್ಯಕೀಯ ಪರಿಣತರು. ಹಾಗೆ ಆಗಲು ಅನುಮತಿ ಕೊಡುವುದಕ್ಕೆ ನಾರದ ಪಾಸೂಂತಂದೆ ...'

'ಅದು ಖಾಸಗಿಯಲ್ಲೂ ಅಷ್ಟೇ ಅನ್ನಿ, ಆಡಳಿತೆಯವರಿಗೆ ಹೊಂದಿ ಕೊಂಡಿದ್ರೆ ಆವರ ಕೈಗೆ ಕಾಮಧೇನು'

'ಮತ್ತೆ ಒಂದೇ ವಿಭಾಗವನ್ನ ದೂರುವುದೇಕೇಂತ?'

'ಏನಿದ್ರೂ ಈಯೊಸ್ಲವನ್ನೂ ಸರಿಪಡಿಸುವ ಭರವಸೆಯನ್ನ ಮಂತ್ರಿಗಳು ನೀಡಿದ್ದಾರಲ್ಲಾ?'

'ಅಲ್ವೆ ಮಂತ್ರಿಗಳಿಗೇನು? ಭರವಸೆ ಕೊಡುತ್ತಲೇ ಹೋಗುತ್ತಾರೆ. ಕೊಟ್ಟವನ್ನೆಲ್ಲಾ ಈಡೇರಿಸಲೇ ಬೇಕೆಂತ ನಿಯಮವೆಲ್ಲಿದೆ?'

'ಅದು ಹೋಗ್ಲಿ ಬಿಡಿ, ಇರಾಣದಲ್ಲಿ ಭಾರೀ ಭೂಕಂಪವಾಯ್ತಂತಲ್ಲಾ....'

'ಹ್ಞೂಂ ಸುಮಾರು ನಾಲ್ಕಾರು ಸಾವಿರ ನಾಗರಿಕರು ಅನಾಹುತದಲ್ಲಿ ಮಡಿದಿರ ಬಹುದೆಂಬ ಅಂದಾಜು....'

'ಅಲ್ರಿ, ಭೂಕಂಪ—ಬಿರುಗಾಳಿ ಇವೆಲ್ಲ ಪ್ರಾಕೃತಿಕ ವಿಕೋಪಗಳು ಏಕಾಗುತ್ತವೇಂತ?'

'ಅದಕ್ಕೆ ಏನನ್ನೋದು? ಪ್ರಕೃತಿಯೂ ಸಚೇತನ, ಅದು ಮಾರ್ಗಕ್ಕೆ ಭಂಗ ಬಂದಾಗ ಒಮ್ಮೊಮ್ಮೆ ತನ್ನ ಕೋಪವನ್ನು ವ್ಯಕ್ತಪಡಿಸುತ್ತದೆ....'

'ಹ್ಞೂಂ.... ಅದೂ ಹೌದೂನ್ನಿ. ಅಲ್ರಿ, ಭಾರತ—ಪಾಕ್ ಶೃಂಗ ಸಭೆಗೆ ಮೊದಲು ಅಧಿಕಾರಿ ಮಟ್ಟದ ಮಾತುಕತೆಗೆ ಭುಟ್ಟೋ ಸಮ್ಮತಿಸಿದರಂತಲ್ಲಾ?'

'ಹ್ಞೂಂ ...ಮತ್ತವರು ಮಾಡೋದಾದ್ರೂ ಏನು? ಅಡಿಗೆ ಬಿದ್ದವನಿಗೆ ಗುದ್ದೇ...'

'ಹಾಗೆಲ್ಲ ಅನ್ಬೇಡಿ ಅಡಿಗೆ ಬಿದ್ರೂ ಮೂಗು ಮೇಲೆ ಅನ್ನೋರಿಗೆ, ಹಾಗಲ್ಲ. ಅವು ಅಡಿಯಲ್ಲೇ ಇದ್ದೇಂತ ತೋರಿಸಿ ಕೊಡಬೇಕು ತಾನೇ?'

'ಅದು ಏನಾದ್ರೂ ಇರ್ಲಿ. ಈ ವರ್ಷದ ವಿಶ್ವಶಾಂತಿ ಪಾರಿತೋಷಕ ನಿಕ್ಸನ್ನರಿಗೇ ಸಲ್ಲಬೇಕೂಂತ ಅಂತಾರೆ.'

'ಯಾಕೆ?'

'ನೋಡಿ, ಬಾಂಗ್ಲಾದಲ್ಲಿ ಯಾಹ್ಯಾಖಾನರ ನರಮೇಧಕ್ಕೆ ತುಪ್ಪ ಸರಬರಾಜು ಮಾಡಿ ಅದನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಶಾಂತಿ ಸಾಧಿಸಿದರು. ಮತ್ತೀಗ ವಿಯತನಾಮದಲ್ಲಿ ತಾನೇ ಸ್ವತಃ ಶಾಂತಿ ಖೋರರನ್ನು ನಿರ್ನಾಮಮಾಡಲು ದೀಕ್ಷಾಬದ್ಧರಾಗಿದ್ದಾರೆ....'

'ಹ್ಞಾಂ....'

'ಪೀಕಿಂಗಿನ ಶಾಂತಿಯಾತ್ರೆ ಮುಗಿಸಿ ಮೋಸ್ಕೋ ಶಾಂತಿಯಾತ್ರೆಗೆ ಸಿದ್ಧರಾಗಿ ನಿಂತಿದ್ದಾರೆ....'

'ಹ್ಞಾಂ....ಸರೀನ್ನೇ. ನಾಡದ್ದು ಅಧ್ಯಕ್ಷ ಪಟ್ಟ ಮತ್ತೊಮ್ಮೆ ಅವರಿಗೇ.'

'ಕೇಳಿದ್ಯೇನೆ....?'

'ಏನು?'

'ನಮ್ಮ ಸಿಸು ಆರನೇ ಯೋಜನಾವಧಿಯೊಳಗೆ ಜನತೆಯ ಕನಿಷ್ಟ ಅವಶ್ಯಕತೆಗಳನ್ನು ಪೂರಯ್ಸುವುದು ಯೋಜನೆಯ ಗುರಿ ಅಂದಿದ್ದಾರೆ ಅಂದಿಗೆ ಗರೀಬೀ ದೂರ ಪೋಡುತ್ತದೆ ಅಂತ ಭರವಸೆ ನೀಡಿದ್ದಾರೆ..'

'ಅಲ್ರಿ, ಕನಿಷ್ಟ ಅವಶ್ಯಕತೆಗಳು ಅಂದ್ರೆ?'

'ಪ್ರಾಥಮಿಕ ಶಿಕ್ಷಣ, ಕುಡಿಯಲು ನೀರು, ಆರೋಗ್ಯ ಸೌಲಭ್ಯ, ಗರ್ಭಿಣಿಯರಿಗೂ. ಎಳೆ ವಯಸ್ಸಿನವರಿಗೂ ಪೋಷಕಾಹಾರ, ಕೊಳಚೆ ಪ್ರದೇಶ—ಮಾರ್ಗವಾಸಿಗಳಿಗೆ ಕನಿಷ್ಟ ಗೃಹ—ಇವು ಅತ್ಯಂತ ಕನಿಷ್ಟ ಅವಶ್ಯಕತೆಗಳು....'

'ನೋಡಿ, ಅದುವರೆಗೆ ಕುಡಿಯುವುದೇನನ್ನು?'

(ಒಂಭತ್ತನೇ ಪುಟ ನೋಡಿರಿ)

ಕುಂದಾಪುರ ಮು. ಕೋರ್ಟಿನಲ್ಲಿ

O. S. 292/71 I. A. I.

ವಾದಿ —ನಾರಾಯಣ ಭಂಡಾರಕಾರ್

ಪ್ರತಿವಾದಿರು —ಮೂಕಂಮ ಸೆಡ್ತಿ ಕೂಡಾ.

2.4.5.6ನೇ ಪ್ರತಿವಾದಿರಿಗೆ ತಿಳಿಸುವದೇನೆಂದರೆ-

2ನೆ ಪ್ರ. ಆನಂದ ಸೆಟ್ಟಿ, 4ನೆ ಪ್ರ. ಶಿವರಾಮ ಸೆಟ್ಟಿ, ಮೂಕಂಮ ಸೆಡ್ತಿ ಮಕ್ಕಳು. 5ನೆ ಪ್ರ. ಮಹಾಬಲ ಸೆಟ್ಟಿ. 6ನೆ ಪ್ರ. ರುಕ್ಮಿಣಿ ಸೆಡ್ತಿ, ವಾರಿಂಮ ಸೆಡ್ತಿಯ ಮಕ್ಕಳು. ಕುಂದಾಪುರ ತಾಲ್ಕು ಕೊಡ್ಲಾಡಿ ಗ್ರಾಮದ ಕನ್ನಾಲೆ ಹಕ್ಲು.

ವಾದಿಯು ಸದ್ರಿ ದಾವೆಯಲ್ಲಿ ಆದ ಪ್ರಿಲಿಮಿನೆರಿ ಡಿಕ್ರಿಯ ಮೇಲೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 5-6-72ಕ್ಕೆ ತನ್ನಿಗೆ ಯಿಟ್ಟಿರುವದ್ರಿಂದ ಆ ಕುರಿತು ನಿಂಮ ಆಕ್ಷೇಪಣೆಯೇನಾದರೂಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವ್ಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಂಮ ಗೈರುಹಾಜರಿಯಲ್ಲಿ ಕೇಳಿ ಫೈಸಲು ಮಾಡೋಣಾದೀತೆಂತ ಯಿಮೂಲ್ಕ ತಿಳಿಸೋಣಾಗುತ್ತದೆ.

M. Madhava Rao
Advocate for plff

ತಾರೀಕು 13-4-1972
ಮೊಕ್ಕಾಂ: ಕುಂದಾಪುರ

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road. City Market.
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಚಾರುಚಯನ—

ಹತ್ತಾಗುವುದು ನಿನ್ನಿಂದ- ಮತ್ತಾಗುವುದು ನನ್ನಿಂದ

ಕೇಂದ್ರ ಗೃಹ ಶಾಖೆಯ ಸಚಿವ ಕೆ.ಸಿ. ಪಂತರು ಲೋಕಸಭೆಯಲ್ಲೊಂದು ಹೊಸ ಶಾಸನವನ್ನು ಮಂಡಿಸಿದರು. ಇದು ಸರಕಾರಕ್ಕೆ ವೈದ್ಯಕೀಯ ಮತ್ತು ತಾಂತ್ರಿಕ ಪದವೀಧರರ ಸೇವೆಯನ್ನು ಪಡೆಯುವ ಅಧಿಕಾರವನ್ನು ನೀಡುತ್ತದೆ. ಇದುವರೆಗೆ ರಕ್ಷಣಾ ಪಡೆಗಳ ಸೇವೆಗೆ ಮಾತ್ರ ಇವರನ್ನು ಸರಕಾರ ಕರೆಯಬಹುದಿತ್ತು. ಇನ್ನು ಮುಂದೆ ಯಾವುದೇ ಕ್ಷೇತ್ರದಲ್ಲಿ ಇವರನ್ನು ಬಳಸಿಕೊಳ್ಳುವ ಅಧಿಕಾರ ಸರಕಾರಕ್ಕೆ ಬರುವುದು. ಈ ಸೇವೆಯ ಅವಧಿ ನಾಲ್ಕು ವರ್ಷಗಳು ಅಥವಾ ಆಯ್ಕೆಯಾದವನಿಗೆ ಮೂವತ್ತು ವರ್ಷಗಳು ತುಂಬುವ ವರೆಗೆ ಯಾವುದು ಕಡಮೆಯೋ ಅಷ್ಟು.

ಭಾರತವು ಹಳ್ಳಿಗಳ ದೇಶ. ಅದು ಮುಂದೆಯೂ ಹಳ್ಳಿಗಳ ದೇಶವಾಗಿಯೇ ಉಳಿಯಬೇಕು. ಆದುದರಿಂದ ಹಳ್ಳಿಗಳನ್ನು ಇನ್ನೂ ಕಡೆಗಣಿಸುವುದೆಂದರೆ, ದೇಶವನ್ನೇ ಕಡೆಗಣಿಸುತ್ತ ಹೋದಂತೆ. ಮುಖ್ಯವಾಗಿ ಗ್ರಾಮೀಣ ಜನತೆಗೆ ಆರೋಗ್ಯ ಸೌಕರ್ಯ ಒದಗಿಸುವುದು ಸರಕಾರಕ್ಕೆ ಸಾಧ್ಯವಾಗದ ಕೆಲಸವಾಗಿದೆ. ವರ್ಷವರ್ಷವೂ ಸಾವಿರಾರು ವೈದ್ಯರು ಪದವಿ ಪಡೆದು ಕಾಲೇಜುಗಳಿಂದ ಹೊರಬರುತ್ತಿದ್ದಾರೆ. ಆದರೆ ಇವರಲ್ಲಿ ಅಧಿಕ ಸಂಖ್ಯಾಕರು ನಗರ ಪ್ರದೇಶಗಳಲ್ಲೇ ಉಳಿಯ ಬಯಸುತ್ತಾರೆ. ದೇಶದ ಶ್ರೀ ಸಾಮಾನ್ಯನು ತೆರುವ ತೆರಿಗೆಯ ಬಹು ದೊಡ್ಡ ಒಂದು ಪಾಲು ವೈದ್ಯಕೀಯ ಪದವೀ ಶಿಕ್ಷಣಕ್ಕೆ ವ್ಯಯವಾಗುತ್ತದೆ. ಆದರೆ, ಶ್ರೀಸಾಮಾನ್ಯನಿಗೆ ಈ ಪದವೀಧರರಿಂದ ಲಾಭವೇನೂ ಇಲ್ಲ. ಅವನು ಇಂದಿಗೂ ನಾಟಿ ಮದ್ದುಗಳಿಗೇ ಮರೆಹೋಗಬೇಕಾಗುತ್ತದೆ.

ವೈದ್ಯರು ಸ್ವೇಚ್ಛೆಯಿಂದ ಹಳ್ಳಿಗಳಿಗೆ ಹೋಗಿ ನೆಲೆಸಬೇಕೆಂಬ ಕರೆಗೆ ಗಣನೀಯ ಪ್ರೋತ್ಸಾಹ ದೊರೆಯಲಿಲ್ಲ. ಪೇಟೆ-ಪಟ್ಟಣಗಳ ಥಳುಕಿನ ಬದುಕಿಗೆ ಮಾರು ಹೋದ ಪದವೀಧರರಿಗೆ ಹಳ್ಳಿಯ ಕಾಡು ವಾತಾವರಣ ಮೆಚ್ಚಿಗೆಯಾಗಲಾರದು. ಆದರೆ, ಜನತೆಯನ್ನು ನಿರ್ಲಕ್ಷಿಸುವುದರಿಂದ ರಾಷ್ಟ್ರ ಕಲ್ಯಾಣವೂ ಆಗದು. ಹಾಗಾಗಿ ಹೊಸ ವೈದ್ಯಕೀಯ ಪದವೀಧರರೆಲ್ಲರೂ ನಾಲ್ಕು ವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ಸಂಭಾವನೆ ಸಹಿತ ಸೇವೆ ಸಲ್ಲಿಸುವಂತಾದರೆ, ಇದರಿಂದ ಎಲ್ಲರಿಗೂ ಕ್ಷೇಮವೇ. ಜನತೆಗೆ ಪರಿಮಾರ್ಜಿತ ವೈದ್ಯಕದ ಪ್ರಯೋಜನ ದೊರೆಯುವುದು; ವೈದ್ಯರಿಗೂ ಅನುಭವ ಹೆಚ್ಚುವುದು.

ಇಲ್ಲಿ ಗಮನಿಸ ಬೇಕಾದ ಒಂದು ಅಂಶವೂ ಇದೆ. ಒಲ್ಲದ ಮನಸ್ಸಿನಿಂದ ಹಳ್ಳಿಗೆ ತೆರಳಿದ ವೈದ್ಯನ ಕೈಯಲ್ಲಿ ಜನತೆಯ ಆರೋಗ್ಯ ನೆಮ್ಮದಿಯಾಗಿರುವುದು ಸಾಧ್ಯವೆ? ಆದರೆ, ಪದವೀಧರರು ತಾವು ಶಿಕ್ಷಣಕ್ಕಾಗಿ ಮಾಡಿದ ವೆಚ್ಚದ ನೂರು ಪಾಲು ಜನತೆ ತೆರಿಗೆಯ ರೂಪದಲ್ಲಿ ಕೊಡ ಮಾಡಿದೆಯೆಂಬುದನ್ನೂ ಆ ಜನತೆಯ ಋಣ ಸಲ್ಲಿಸುವುದು ತಮ್ಮ ಆದ್ಯ ಕರ್ತವ್ಯವೆಂಬುದನ್ನೂ ಅರಿತು ವರ್ತಿಸಿದರೆ ಅದರಿಂದ ಒಳ್ಳೆಯದಾಗುವುದು. ಗ್ರಾಮೀಣ ಜನತೆಯನ್ನು ಸುಸಂಸ್ಕೃತಗೊಳಿಸುವಲ್ಲಿ ಒತ್ತಾಯಕ್ಕೆ ಕೃಷ್ಣಭಟ್ಟನ ರುಜು ಉಚಿತವಲ್ಲ. ಕರ್ತವ್ಯ ಭಾವನೆಯಿಂದ ಇದು ಕಾರ್ಯಗತವಾದರೇನೇ ಅಂದ, ಬಲು ಚಂದ.

० ० ०

ಕರ್ನಾಟಕದ ವಿಧಾನ ಪರಿಷತ್ತಿನಲ್ಲಿ ರಾಜ್ಯಪಾಲರ ಭಾಷಣಕ್ಕೆ ಅಭಿನಂದನಾ ನಿರ್ಣಯದ ಮೇಲೆ ನಡೆದ ಚರ್ಚೆ ಅತ್ಯಂತ ಸ್ವಾರಸ್ಯಕರವಿತ್ತು. ಭವ್ಯ ರಾಷ್ಟ್ರ ನಿರ್ಮಾಪಕರು ರೂಪುಗೊಳ್ಳುತ್ತಿರುವ ಶಿಕ್ಷಣ ಸಂಸ್ಥೆಗಳ ಅವ್ಯವಸ್ಥೆಗಳ ಬಗೆಗೆ ಶಿಕ್ಷಕರ ಪ್ರತಿನಿಧಿ ಮಳ್ಳೂರು ಆನಂದರಾಯರು ಅಂಕೆ-ಸಂಖ್ಯೆ-ನಾಮಾವಳಿ ಎಲ್ಲ ಬಗೆಯ ವಿವರಗಳನ್ನೂ ಕೊಟ್ಟು ಪಾಠದಂಗಡಿಗಳನ್ನು ದಯವಿಟ್ಟು ನೋಡಿಕೊಳ್ಳಿರೆಂದು ಹೊಸ ಶಿಕ್ಷಣ ಸಚಿವರನ್ನು ಕಳಕಳಿಯಿಂದ ಕೈ ಮುಗಿದು ಬೇಡಿಕೊಂಡರು. ಪಾಪ, ಮಂತ್ರಿ ಬದರೀ ನಾರಾಯಣರಿಗೆ ಇದೊಂದು ಹೊಸ ಅನುಭವ. ಹೀಗೂ ಉಂಟೆ?- ಎಂದವರಿಗೆ ಸಂದೇಹವೇ ಸಂದೇಹ.

ಆದರೆ, ಪಾಠದಂಗಡಿಗಳ ಪಟ್ಟಿ, ಆ ಅಂಗಡಿಗಳ ಮಾಲಿಕರಿಗೆ ಅಧಿಕಾರಿ ವರ್ಗದ ಸಂಪೂರ್ಣ ಶ್ರೀರಕ್ಷೆ, ಜತೆಗೆ ಆಡಳಿತೆಯೊಡನೆ ಕೇಂದ್ರ ರೇಲ್ವೆ ಸಚಿವ ಕೆಂಗಲ್ ಹನುಮಂತಯ್ಯ ವಿಧಾನ ಪರಿಷತ್ ಸದಸ್ಯ ವೈ. ರಾಮಚಂದ್ರ ಮೊದಲಾದ ಸುಪ್ರತಿಷ್ಠಿತರ ಹೆಸರಿನ ಬಳಕೆ (ತಿಳಿದೋ ತಿಳಿಯದೆಯೋ ಬಳಕೆಯಂತೂ ಹೌದು)-ಇವುಗಳನ್ನು ಬಾಯ್ಬಿಟ್ಟು ಸಾಧಾರವಾಗಿ ಒಪ್ಪಿಸುವಾಗ ಅಲ್ಲವೆನ್ನುವ ಎದೆಗಾರಿಕೆ ಯಾರೊಬ್ಬರಿಗೂ ಇಲ್ಲ. ವಿಧಾನ ಪರಿಷತ್ತು ತದೇಕಚಿತ್ತದಿಂದ ಮಳ್ಳೂರರ ಗಂಡು ಭಾಷಣವನ್ನು ಗುಂಡುಗಲ್ಲಿನಂತೆ ಆಲಿಸಿತು. ಮತ್ತದು ಮಾಡುವುದಾದರೂ ಏನು? ಶಿಕ್ಷಣ ಸಚಿವರು ಎದೆ ಕರಗಿ ಕೇಳಿದರು—ಇದರ ಪಾಪವೆಲ್ಲವೂ ನನ್ನದೆಯೆ?

ಮಳ್ಳೂರರು ಹೌದೆಂದು ಹೇಳಲಿಲ್ಲ. "ನಿಮ್ಮ ಹಿಂದಿನವರು ಈ ರೀತಿ ಬಿಟ್ಟು ಹೋಗಿದ್ದಾರೆ. ನೀವಾದರೂ ಅವಕ್ಕೆ ಕೊನೆತನ್ನಿ" ಎಂದು ವಿನಂತಿಸಿ 'ಪಂಚ ಮಹಾ ಪಾತಕಿ'ಗಳ ಪಾಠದಂಗಡಿಗಳಿಗೆ ಸರಕಾರಿ ಬೀಗ ಮುದ್ರೆ ಹಾಕಿ ವಿಚಾರಣೆ ನಡೆಸಲು ಸಲಹೆ ಮಾಡಿದರು. ಈ ಅವ್ಯವಹಾರಕ್ಕೆ ಎರಡು ದಶಕಗಳ ಭವ್ಯೇತಿಹಾಸವಿದೆ. ಇದರಲ್ಲಿ ಶಿಕ್ಷಣ ಇಲಾಖೆಯ ವರಿಷ್ಠ ಅಧಿಕಾರಿಗಳಿಂದ ತೊಡಗಿ ಚಪರಾಸಿಯ ವರೆಗಣವರ ಇವರ ಕೈವಾಡವೂ ಇದೆ. ಇಲ್ಲವಾದರೆ ಬೆಂಗಳೂರು ನಗರವೊಂದರಲ್ಲೇ ಇಪ್ಪತ್ತಕ್ಕೂ ಮೇಲ್ಪಟ್ಟ ಇಂಥ ಪಾಠದಂಗಡಿಗಳಿವೆಯೆಂದರೆ ನಂಬುವುದೆಂತು? ಪಕ್ಷದಲ್ಲಿ ಶಿಸ್ತು ಅವಶ್ಯವಿರುವಂತೆಯೇ ಇಲಾಖೆಯಲ್ಲೂ ಶಿಸ್ತು ಅನಿವಾರ್ಯವಿರುತ್ತದೆ. ಅಧಿಕಾರಿ-ರಾಜ್ಯಕೀಯ ಪುಢಾರಿಗಳ ಕೃಪಾಪೋಷಣೆಯಿಂದಲೇ ಎಷ್ಟೋ ಮಂದಿ ದಿಕ್ಕಿಲ್ಲದವರು ಇಂದು ಧ್ರುವನಕ್ಷತ್ರವೆನಿಸಿದ್ದಾರೆ. ಮಳ್ಳೂರರು ಅಂಥವರಲ್ಲಿ ಕೆಲವರನ್ನು ತೋರಿಸಿಕೊಟ್ಟಿದ್ದಾರೆ. ಮುಂದಿನ ಕ್ರಮ ಸಚಿವರದ್ದು, ಸರಕಾರದ್ದು.

० ० ०

ರಾಜ್ಯ ಪುನರ್ಘಟನೆಯು ೧೯೫೬ರಲ್ಲಿ ನಡೆದಾಗ ನಡೆದ ಮಹಾ ಅನ್ಯಾಯಗಳಲ್ಲಿ ಕಾಸರಗೋಡು ಕೇರಳ ರಾಜ್ಯಕ್ಕೆ ಸೇರಿಸಲ್ಪಟ್ಟದ್ದು ಒಂದು. ಈ ಪ್ರದೇಶವೂ ಭಾಷೀಯವಾಗಿ, ಸಾಂಸ್ಕೃತಿಕವಾಗಿ ಕನ್ನಡವೇ. ಇದರ ರಾಜ್ಯಕೀಯ, ಆಡಳಿತ ಸಂಬಂಧವೂ ಕನ್ನಡದೊಡನೆಯೇ. ಆದರೂ ಅದೆಂತೋ ಕನ್ನಡಿಗರ ದೌರ್ಭಾಗ್ಯದಿಂದ ಅದಿನ್ನೂ ಕನ್ನಡಕ್ಕೆ ಹೊರತಾಗಿದೆ. ಹದಿನೈದು ವರ್ಷಗಳಿಂದಲೂ ಕಾಸರಗೋಡಿನ ಕನ್ನಡಿಗರು ತಮಗೆ ನ್ಯಾಯ ಒದಗಿಸಬೇಕೆಂದು ಕೇಳುತ್ತಲೇ ಬಂದಿದ್ದಾರೆ. ಹಲವಾರು ರಾಜ್ಯಕೀಯ ನಾಯಕರು ಅವರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸುವ ಭರವಸೆ ನೀಡುತ್ತಲೇ ಹೋಗಿದ್ದಾರೆ. ಮಹಾಜನ ಆಯೋಗದ ವರದಿಯು ಕಾಸರಗೋಡಿನ ಕನ್ನಡಿಗರಿಗೆ ಅನುಕೂಲವಿತ್ತು; ಆದರೆ ಅದೆಂದೋ ಸಮಾಧಿ ಹೊಂದಿದೆ.

ಇದೀಗ ಕಾಸರಗೋಡಿನಲ್ಲಿ ಕನ್ನಡಿಗರ ಸಮ್ಮೇಳನವೊಂದರ ಸಿದ್ಧತೆ ಅದ್ದೂರಿಯಿಂದ ನಡೆಯ ತೊಡಗಿದೆ. ಮೇ ತಿಂಗಳ ೧ ಮತ್ತು ೭ರಂದು ನಡೆಯಲಿರುವ ಈ ಸಮ್ಮೇಳನದ ಪ್ರಾಣ ಕವಿ ಕಯ್ಯಾರರು. ಕನ್ನಡಕ್ಕಾಗಿಯೇ ತನ್ನ ಜೀವ—ಜೀವನವನ್ನು ಮುಡಿಪಿಟ್ಟ ಕವಿ ಕಯ್ಯಾರರು ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು. ಪ್ರಿನ್ಸಿಪಲ್ ಖಂಡಿಗೆ ಶಾಮ ಭಟ್ಟರು ಅಧ್ಯಕ್ಷರು. ಡಾ| ಕೆ. ಎ. ಶೆಟ್ಟಿ ಮತ್ತು ಎಸ್. ಕೃಷ್ಣ ಭಟ್ಟರು ಉಪಾಧ್ಯಕ್ಷರು. ಕೇರಳದ ಕರಾಳ ಶಾಸನದಡಿಯಲ್ಲಿ ಹದಿನೈದು ವರ್ಷಗಳ ಕಾಲ ಈ ಕನ್ನಡಿಗರು ನವೆದಿದ್ದಾರೆ. ಅಲ್ಲಿನ ರಸ್ತೆಗಳಲ್ಲಿ ಹಗಲಿರುಳು ಧೂಳು ಹಾರುತ್ತಿರುವಂತೆ ಕನ್ನಡವನ್ನೂ ಹಾರಿಸಿ ಅಳಿಸುವ ಪ್ರಯತ್ನ ಕೇರಳ ಸರಕಾರ ಮಾಡುತ್ತಿದೆ. ಆದುದರಿಂದ ಕಾಸರಗೋಡು ಕನ್ನಡಿಗರ ಮುಂದಿರುವ ಸಾಹಿತ್ಯಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಮತ್ತಿತರ ಹತ್ತಾರು ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡು ಹಿಡಿದು ಯೋಜನೆಯೊಂದನ್ನು ರೂಪಿಸುವುದು ಮತ್ತು ಅದನ್ನು ಕಾರ್ಯಗತಗೊಳಿಸುವ ಪ್ರಯತ್ನ ಮಾಡುವುದು—ಈ ಸಮ್ಮೇಳನದ ಗುರಿ.

ಈ ಸಮ್ಮೇಳನದ ಅಂಗವಾಗಿ ಸಾಹಿತ್ಯ ಸಮ್ಮೇಳನ, ಕವಿ ಸಮ್ಮೇಳನ, ಮಹಿಳಾ ಸಮ್ಮೇಳನ, ಅಧ್ಯಾಪಕರ ಸಮ್ಮೇಳನ, ವಿದ್ಯಾರ್ಥಿ ಸಮ್ಮೇಳನ ಮತ್ತು ಕರ್ನಾಟಕ ಸಮ್ಮೇಳನಗಳು ನಡೆಯುತ್ತವೆ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಯಕ್ಷಗಾನ ಇತ್ಯಾದಿಗಳಲ್ಲಿ ಕಾಸರಗೋಡಿನ ಕೊಡುಗೆಯ ಬಗ್ಗೆ ತಜ್ಞರಿಂದ ಪ್ರಬಂಧ ಬರೆಸುವ ವ್ಯವಸ್ಥೆಯೂ ನಡೆದಿದೆ. ಕಾಸರಗೋಡು ಕನ್ನಡಿಗರ ಸಮ್ಮೇಳನವು ಹಲವು ರೀತಿಗಳಿಂದ ವೈಶಿಷ್ಟ್ಯ ಪೂರ್ಣವಾಗುವ ನಿರೀಕ್ಷೆಯಿದೆ.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ &
ADVERTISE IN
NAVAYUGA Weekly

ಕೌರವರೇಕೆ ಸೋತರು?

ಕುರು ಬಲದ ಅನೈಕ್ಯ

ಲೇಖಕರು:— ಶ್ರೀ ಬಿ. ಕೃಷ್ಣಪ್ಪ, ಎಂ. ಎ.

ಐಕ್ಯ ಎಂಬ ಶಬ್ದಕ್ಕೆ, ಒಂದು ಗುರಿಸಾಧನೆಗೆ ಪರಸ್ಪರರಲ್ಲಿ ಇರಬೇಕಾದ ಒಮ್ಮತ, ಒಗ್ಗಟ್ಟು, ಒಕ್ಕೂಟ, ಸಂಘಟನೆ, ಭಿನ್ನ ಭಾವವಿಲ್ಲದ ಏಕತೆ, ಎಂದು ವಿಧವಿಧವಾಗಿ ಅರ್ಥವನ್ನು ಹೇಳಬಹುದು. ಈ ಐಕ್ಯ ಎಂಬ ಶಬ್ದದ ಮುಂದೆ, ನಿಷೇದಾರ್ಥಕ 'ಅ' ಎಂಬ ಉಪಸರ್ಗ ಸೇರಿ, ಅನೈಕ್ಯವಾಗಿದೆ. ಅನೈಕ್ಯವೆಂದರೆ, ಗುರಿಸಾಧಕರಲ್ಲಿ ಪರಸ್ಪರ ಸಂಘಟನೆ, ಒಗ್ಗಟ್ಟು, ಇಲ್ಲದಿರುವಿಕೆ, ಭಿನ್ನ ಭಾವ ಒಡಕು ಎಂದಾಗುತ್ತದೆ. ಐಕ್ಯತೆಯಲ್ಲಿ ಶಕ್ತಿ ಸಂಚಯನವಾಗಿ ಗುರಿಸಾಧಕರಿಗೆ ಬಲಬರುತ್ತದೆ. ಅನೈಕ್ಯತೆಯಲ್ಲಿ ಶಕ್ತಿ ಹರಿದು ಹಂಚಿಹೋಗಿ, ದಿಕ್ಕುದೆಸೆಯಿಲ್ಲದೆ ವ್ಯಕ್ತಿ ಬಲಗುಂದುತ್ತಾನೆ ಅಥವಾ ಪಕ್ಷ ಬಲಗುಂದುತ್ತದೆ. ಐಕ್ಯತೆ ಬಾಹುಬಲ ಮತ್ತು ಮನೋಬಲಗಳೆರಡರಲ್ಲೂ ಸಾಧಿತವಾದಾಗಲೇ ನಿಶ್ಚಿತ ಫಲ ಸಾಧ್ಯ. ಐಕ್ಯಕ್ಕೆ ಸಂಪೂರ್ಣ ವಿರೋಧಾರ್ಥಕ ಶಬ್ದವೇ ಅನೈಕ್ಯ.

ಈ ಅನೈಕ್ಯ ಎರಡು ರೀತಿಯಲ್ಲಿ ವಿಚಾರ ಯೋಗ್ಯವಾಗಿದೆ. ಒಂದು ಅದು ಸ್ವಬಲವನ್ನು ಕುಗ್ಗಿಸುತ್ತದೆ; ಮತ್ತೊಂದು ಅದು ಶತ್ರುವಿನ ಬಲವನ್ನು ವರ್ಧಿಸುತ್ತದೆ. ಶತ್ರುವಿನ ಬಲ ಸಂವರ್ಧನೆ ಮತ್ತು ಸ್ವಬಲ ಕುಗ್ಗುವಿಕೆ—ಈ ಎರಡೂ ಒಂದೇ ಕಾರ್ಯಕ್ಷೇತ್ರದ ಎರಡು ಮುಖಗಳಾಗಿರುವುದರಿಂದ ಒಂದರ ವಿವೇಚನೆ ಮತ್ತೊಂದರ ವಿವೇಚನೆಯೂ ಆಗುತ್ತದೆ. ಆದರ ಕ್ರಿಯೆ ಕೈ ಚಪ್ಪಾಳೆಯಂತೆ, ಎರಡನ್ನೂ ಒಳಗೊಂಡಿರುತ್ತದೆ. ಕುರುಕ್ಷೇತ್ರ ಭೂಮಿಯಲ್ಲಿ ಈ ಎರಡೂ ಏಕಕಾಲದಲ್ಲಿ ಘಟಿಸಿ ಕುರುಬಲ ಹೇಗೆ ಸರ್ವನಾಶವನ್ನು ಹೊಂದಿತು ಎಂಬುದನ್ನು ಬಿಡಿಸಿ ತೋರಿಸುವುದೇ ಈ ಲೇಖನದ ಉದ್ದೇಶ.

ಧೃತರಾಷ್ಟ್ರ ಹಿರಿಯವನಾಗಿದ್ದರೂ ಹುಟ್ಟು ಕುರುಡನಾಗಿದ್ದುದರಿಂದ, ಸಿಂಹಾಸನವನ್ನು ಹತ್ತುವ ಭಾಗ್ಯ ರಾಜ್ಯಾಡಳಿತದ ಸೂತ್ರಗಳು ಪಾಂಡುವಿನ ಪಾಲಿಗೆ ಬಂದವು. ಪಾಂಡು ರಾಜನಾಗಿ ಸಮರ್ಥವಾಗಿ ರಾಜ್ಯ ಭಾರವನ್ನು ನಿರ್ವಹಿಸಿದ. ಶಾಪಗ್ರಸ್ತನಾಗಿ ಆತನು ಮಡಿದ ನಂತರ, ಧೃತರಾಷ್ಟ್ರ ಸಿಂಹಾಸನವನ್ನು ಏರಿದ. ಕುರು ಸಿಂಹಾಸನಕ್ಕೆ ಬಾಧ್ಯರಾದ ಹಿರಿಯ ಮಕ್ಕಳನ್ನು ಕುಂತಿ ಹೆತ್ತಾಗ, ಕುರುಕುಲ ಸಿಂಹಾಸನಕ್ಕೆ ಹಕ್ಕುದಾರರಾಗದ ಈ ಪಿಂಡಗಳನ್ನು ಹೆತ್ತು ಫಲವೇನು? ಎಂಬುದಾಗಿ ಗಾಂಧಾರಿ ತನ್ನ ಗರ್ಭವನ್ನು ಹೊಸೆದು ಹಾಕಿ, ವ್ಯಾಸನ ಆಗ್ರಹಕ್ಕೆ ಗುರಿಯಾದಳು!

ಕೌರವರು-ಪಾಂಡವರು ಪ್ರಾಪ್ತವಯಸ್ಕರಾದ ಮೇಲೆ, ಧೃತರಾಷ್ಟ್ರ, ವಿದುರ, ದ್ರೋಣ ಮತ್ತು ಉಳಿದ ರಾಜರ ಸಮಕ್ಷಮದಲ್ಲಿ ಭೀಷ್ಮ ಪಿತ್ರಾರ್ಜಿತವಾದ ಕುರುಮಂಡಲವನ್ನು ಇಬ್ಬರಿಗೂ ಹಂಚಿಕೊಟ್ಟು ಧರ್ಮವಂತರಾಗಿ ಬಾಳಿ ಎಂದು ಹರಸಿ ಕಳುಹಿಸಿದ. ಪಾಂಡವರು ಇಂದ್ರಪ್ರಸ್ಥವನ್ನೂ ಕೌರವರು ಹಸ್ತಿನಾವತಿಯನ್ನೂ ರಾಜಧಾನಿಯನ್ನಾಗಿ ಮಾಡಿಕೊಂಡು, ಭೂಮಿಯನ್ನು ಆಳತೊಡಗಿದರು. ಪಾಂಡವರು ತಮ್ಮ ಭೂಮಿಯನ್ನು ಧರ್ಮದಿಂದ ಪಾಲಿಸಿ, ರಾಜಸೂಯ ಯಾಗವನ್ನು ಮಾಡಿ ಕೀರ್ತಿಗಳಿಸಿದರು. ಅವರ ವಿಖ್ಯಾತಿ ದಶದಿಕ್ಕುಗಳಲ್ಲಿಯೂ ಹಬ್ಬಿತು. ಸಹಜ ದ್ವೇಷಿಗಳೂ ಅಸೂಯಾಪರರೂ ಆದ ಕೌರವರಿಗೆ ಇದು ನುಂಗಲಾರದ ತುತ್ತಾಯಿತು! ಹೇಗಾದರೂ ಮಾಡಿ ಪಾಂಡವರನ್ನು ಬಗ್ಗುಬಡಿಯುವ ಹಂಚಿಕೆಯನ್ನು ಹೂಡಿದರು. ಸ್ನೇಹದ ಸೋಗಿನಲ್ಲಿ ಜೂಜಾಡಿ ವಂಚನೆಯಿಂದ ಪಾಂಡವರ ಅರ್ಧ ರಾಜ್ಯವನ್ನು ಕಬಳಿಸಿದರು. ದ್ರೌಪದಿಗೆ ಅವಮಾನ ಮಾಡಿದರು. ಪಾಂಡವರು ಹನ್ನೆರಡು ವರ್ಷ ವನವಾಸವನ್ನೂ, ಒಂದು ವರ್ಷ ಯಾರಿಗೂ ತಿಳಿಯದಂತೆ ಅಜ್ಞಾತವಾಸವನ್ನೂ ಮಾಡಿದರೆ ಮತ್ತೆ ಅರ್ಧ ರಾಜ್ಯವನ್ನು ಕೊಡುವುದಾಗಿ ಕರಾರಾಯಿತು. ಕೌರವರ ಕಿರುಕುಳವನ್ನು ಸಹಿಸಿ ಪಾಂಡವರು ಪಡಬಾರದ ಪಾಡಪಟ್ಟು, ಅರಣ್ಯ ಹಾಗೂ ಅಜ್ಞಾತ ವಾಸಗಳನ್ನು ಮಾಡಿ ಮುಗಿಸಿದರು. ಕೌರವ ಪಾಂಡವರಿಗೆ ಕೊಡಬೇಕಾದ ಅರ್ಧ ರಾಜ್ಯವನ್ನು ಕರಾರುವಾಕ್ಕಾಗಿ ಕೊಡಬೇಕಾಗಿತ್ತು. ಆದರೆ ಆವನು ತನಗೆ ಏನೂ ಗೊತ್ತಿಲ್ಲವೆಂಬಂತೆ ಮೌನ ಧರಿಸಿದ. ದುರ್ಯೋಧನನ ಮೌನ, ಪಾಂಡವರಿಗೆ ಮತ್ತೆ ಅವನ ಹಳೆಯ ಪ್ರವೃತ್ತಿಯನ್ನೇ ನೆನಪಿಗೆ ತಂದಿತು. ಕೃಷ್ಣನ ಮಧ್ಯಸ್ಥಿಕೆ ಈಗ ಅನಿವಾರ್ಯವಾಯಿತು.

ಪಾಂಡವರು ಸಂಧಿಗಾಗಿ ಇಷ್ಟಪಟ್ಟರೂ ಸ್ನೇಹಿತ ಕೃಷ್ಣಕಾರಕ ದುರ್ಯೋಧನನ ಸ್ವಭಾವ ಅವರಿಗೆ ಚೆನ್ನಾಗಿಯೇ ಗೊತ್ತಿತ್ತು. 'ದುರ್ಯೋಧನ, ಪಾಂಡವರ ಸೌಖ್ಯವು, ನಿನ್ನ ಕೀರ್ತಿಯನ್ನು ಹೆಚ್ಚಿಸುತ್ತದೆ ಹೊರತು ಕೆಡಕು ಬಗೆಯುವುದಿಲ್ಲ. ಅವರಿಗೆ ಕರಾರಿನ ಪ್ರಕಾರ ಅರ್ಧರಾಜ್ಯವನ್ನು ಕೊಡು, ಅರ್ಧ ರಾಜ್ಯವನ್ನು ಕೊಡಲು ನಿನಗೆ ಇಚ್ಛೆ ಇಲ್ಲದೇ ಹೋದರೆ, ಐದು ಹಳ್ಳಿಗಳನ್ನಾದರೂ ಕೊಡು. ಅವರು ಅದರಲ್ಲಿಯೇ ತೃಪ್ತಿ ಹೊಂದಿ ನಿನಗೆ ವಿನೀತರಾಗಿ ನಡೆದುಕೊಳ್ಳುತ್ತಾರೆ. ಪಡಬಾರದ ಪಾಡನ್ನು ಪಟ್ಟು ತುಂಬ ನೊಂದಿರುವ ಅವರ ಮೇಲೆ ದಯೆ ತೋರು' ಎಂದು ಕೃಷ್ಣ ಬೇಡಿಕೊಂಡ. "ಐದು ಹಳ್ಳಿಯನ್ನಲ್ಲ, ಒಂದು ಸೂಜಿಯ ಮೊನೆ ಊರುವಷ್ಟು ಭೂಮಿಯನ್ನೂ ನಾನೂ ಅವರಿಗೆ ಕೊಡುವುದಿಲ್ಲ. ಪೌರುಷವಿದ್ದರೆ ಯುದ್ಧ ಭೂಮಿಯಲ್ಲಿ ಹೋರಾಡಿ ರಾಜ್ಯವನ್ನು ಪಡೆಯಲಿ' ಎಂದು ಉದ್ಧಟತನದಿಂದ ವರ್ತಿಸಿದ, ದುರ್ಯೋಧನನ ಅವಿವೇಕ ಕೃಷ್ಣನ ಮೇಲೂ ದೌರ್ಜನ್ಯವನ್ನು ನಡೆಸುವಷ್ಟು ಮುಂದುವರಿಯಿತು. ಅವನು ರಾಜ್ಯ ಮದದಿಂದ ಮತ್ತನಾಗಿದ್ದ. ಏರಿದ ಮತ್ತು ಒಂದು ದಿನ ಇಳಿಯಲೇ ಬೇಕಲ್ಲ? ಕುರುಕ್ಷೇತ್ರ ಯುದ್ಧ ಸೂರ್ಯಬಿಂಬದಷ್ಟು ನಿಚ್ಚಳವಾಯಿತು.

ಕೌರವರು ಪಾಂಡವರು ತಮ್ಮ ತಮ್ಮ ಬಲಗಳನ್ನು ಕೂಡಿ ಹಾಕಿ ಕೊಂಡರು. ಬಲಾಬಲಗಳ ಪರೀಕ್ಷೆಗೆ ಎರಡು ಪಂಗಡಗಳೂ ಸಿದ್ಧವಾದವು. ಇದು ಅವರವರ ಅಳಿವು ಉಳಿವಿನ ಪ್ರಶ್ನೆ. ಕೇವಲ ಸಂಖ್ಯಾ ಬಲದಿಂದ ಜನ ಬಲದಿಂದ ಯುದ್ಧದ ಗತಿ ಯಾವ ಕಡೆ ತಿರುಗುತ್ತದೆ ಎಂಬುದನ್ನು ಹೀಗೇ ಎಂದು ಹೇಳಲು ಬರುವುದಿಲ್ಲ. ಅಖಾಡಕ್ಕೆ ಇಳಿದ 'ಉಸ್ತಾದಿ' ನಾನೇ ಗೆಲ್ಲುತ್ತೇನೆ ಎಂದು ತಿಳಿದಿರುತ್ತಾನೆ. ಆದರೆ ಗೆಲುವು ಸೋಲುಗಳು ಅವನು ಬಳಸುವ ಪಟ್ಟು, ಕೈಚಳಕಗಳನ್ನು ಅವಲಂಬಿಸಿರುತ್ತದೆಯಲ್ಲವೆ?

ಕುರು ಭೂಮಿಯಲ್ಲಿ ನೆರೆದ ಒಟ್ಟು ಹದಿನೆಂಟು ಅಕ್ಷೋಹಿಣಿ ಸೈನ್ಯದಲ್ಲಿ ಹನ್ನೊಂದು ಅಕ್ಷೋಹಿಣಿ ಸಂಖ್ಯೆ ಕುರುರಾಯನದು. ಪಾಂಡವ ಪಕ್ಷದ ಸಂಖ್ಯೆಗಿಂತ ಒಂದೂವರೆ ಪಟ್ಟು ಜಾಸ್ತಿಯಿದೆ. ಹೆಚ್ಚು ಕಡಿಮೆ ಪಾಂಡವ ಸೈನ್ಯದ ಒಬ್ಬ ಯೋಧನಿಗೆ ಕೌರವನ ಸೈನ್ಯದಲ್ಲಿ ಇಬ್ಬರಿದ್ದಾರೆ. ಈ ಮಾತು ಹಸ್ತಿ, ಅಶ್ವ, ರಥ, ಪದಾತಿ, ಚತುರಂಗ ಬಲಕ್ಕೂ ಅನ್ವಯಿಸುತ್ತದೆ. ಸೈನ್ಯ ಸಂಖ್ಯೆಯಲ್ಲಿ ಪಾಂಡವರು ಕೌರವರನ್ನು ಸರಿಗಟ್ಟಲಾರರು.

ಇನ್ನು ಕೌರವನ ಕಡೆ ನಿಂತು ಹೋರಾಡುವ ವೀರರ ಮೊತ್ತ ಅದೂ ಕೂಡ ಪಾಂಡವ ಪಕ್ಷಕ್ಕಿಂತ ಸಂಖ್ಯೆಯಲ್ಲಿ ಶಕ್ತಿಯಲ್ಲಿ ದ್ವಿಗುಣವಾಗಿದೆ. ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ, ಶಲ್ಯ, ಕೃಪ, ಅವರ ಹೆಸರನ್ನು ಕೇಳಿದರೆ ರೋಮಾಂಚನವಾಗುತ್ತದೆ. ಅವರು ಅಸಮ ಸಾಹಸರು, ಅದ್ವಿತೀಯ ವೀರರು. ಆದ್ದರಿಂದಲೇ ವ್ಯಾಸ ಯುದ್ಧದ ಯಾವ ಪರ್ವಕ್ಕೂ ಪಾಂಡವ ಪಕ್ಷದ ವೀರರ ಹೆಸರನ್ನು ಕೊಡುವುದಕ್ಕೆ ಬದಲಾಗಿ, ಭೀಷ್ಮ ಪರ್ವ, ದ್ರೋಣ ಪರ್ವ, ಕರ್ಣ ಪರ್ವ, ಶಲ್ಯ ಪರ್ವ ಎಂದು ಮುಂತಾಗಿ ಕುರುವೀರರ ಹೆಸರನ್ನು ಕೊಟ್ಟಿದ್ದಾನೆ. ವೀರರಿಗೆ ಉಚಿತ ಸ್ಥಾನ ಕೊಟ್ಟು ಗೌರವಿಸಿದ್ದಾನೆ ಕುರು ಪಾಂಡವರನ್ನು ತೋಳುಗಳಲ್ಲಿ ಎತ್ತಿ ಆಡಿಸಿ ಮುದ್ದಿಟ್ಟು ಬೆಳೆಸಿದ ಆಜಾನುಬಾಹು ಭೀಷ್ಮ ಎಲ್ಲರಿಗಿಂತಲೂ ಉನ್ನತ ಶ್ರೇಣಿಯಲ್ಲಿದ್ದಾನೆ. ಅವನಿಗೆ ಬಂದಿರುವ ಮುಪ್ಪು ಸಿಂಹಕ್ಕೇ ಬರುವ ಮುಪ್ಪೂ ಒಂದೇ! ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ಕುಲವನ್ನೇ ನಾಶ ಮಾಡಿದ, ತನ್ನ ಗುರು ಪರಶುರಾಮನನ್ನೇ ಸೋಲಿಸಿದವನು! ಅವನು ಇಚ್ಛಾ ಮರಣಿ, ಚಿರಂಜೀವಿ ಭಾರತದ ಹದಿನೆಂಟು ದಿವಸಗಳ ಯುದ್ಧದಲ್ಲಿ ಹತ್ತು ದಿನಗಳ ಯುದ್ಧವನ್ನು ಒಬ್ಬನೇ ಮಾಡಿ ಅಜೇಯನಾದ ಅವನ ಶಕ್ತಿಗೆ ಎದುರುಂಟೆ? ಅಸಮಾನವಾದ ಅವನ ದೈತ್ಯ ಶಕ್ತಿಯ ಮುಂದೆ ಪಾಂಡವರು ಕೇವಲ ಹುಲ್ಲೆ ಮರಿಗಳು. ದ್ರೋಣ, ಪಾಂಡವ ಕೌರವರ ಬಿಲ್ಲೋಜ. ಅರ್ಜುನನಂತಹ ತ್ರಿಲೋಕ ವೀರನ ಗುರು. ತ್ರಿಲೋಕ ವೀರನ ಪಟ್ಟ ಅರ್ಜುನನಿಗೆ ಸಿದ್ಧಿಸಿದ್ದು ದ್ರೋಣನಿಂದಲೇ! ಅವನು ಲೋಕ ವಿಖ್ಯಾತ ಬಿಲ್ಗಾರ ಪಿನಾಕಿಯೂ ಅವನ ಎದುರಿಗೆ ನಿಂತು ಹೋರಾಡಲಾರ. ಹೀಗಿರುತ್ತ ಉಳಿದವರ ಪಾಡೇನು? ಕರ್ಣ ಸೂರ್ಯನ ಮಗ; ಪರಶುರಾಮನ ಶಿಷ್ಯ. ಇಂದ್ರನಿಂದ ವರ ಪಡೆದವನು. ಪ್ರಚಂಡ ಪರಾಕ್ರಮಿ. ಅತುಲ ಭುಜಬಲಿ. ಅರ್ಜುನನ ಹೊಯ್‌ಕಯ್ಯಾದವನು. ಅರ್ಜುನನ ನಾಶವೇ ತನ್ನ ಗುರಿ ಎಂದು ತಿಳಿದವನು. ಅರ್ಜುನನನ್ನು ಉಳಿದು ಪಾಂಡವ ಪಕ್ಷದಲ್ಲಿ ಅವನಿಗೆ ಎದುರಾಳಿಗಳೇ ಇಲ್ಲ. ಶಲ್ಯ ಪಾಂಡವರ ಮಾವ, ಅಸಮ ಸಾಹಸಿ. ಅಶ್ವತ್ಥಾಮ ಬಿಲ್ಲೋಜನ ಮಗ, ರುದ್ರನ ಅವತಾರ, ಪ್ರಚಂಡ ಶಕ್ತಿವಂತ, ಇಚ್ಛಾ ಮರಣಿ. ಶೀಘ್ರ ಕೋಪಿಯಾದ ಅವನು ಕೆಣಿಗೊಂಡರೆ ಪ್ರಪಂಚವನ್ನೇ ಸುಟ್ಟು ಉರಿಸಬಲ್ಲ ಶಕ್ತಿಯುಳ್ಳವನು. ಇದರ ಜೊತೆಗೆ ಕೃಪ, ಕೃತವರ್ಮ, ಶಕುನಿ, ಭಗದತ್ತ, ದುಶ್ಶಾಸನ ಮುಂತಾದವರಿಂದ ಕೂಡಿದ ದುರ್ಯೋಧನನ ಸೈನ್ಯಶಕ್ತಿಯ ಮುಂದೆ ಪಾಂಡವ ಶಕ್ತಿಯನ್ನು ತೂಗಿ ನೋಡಿದರೆ ಸಮಪ್ರಮಾಣವೇ ಕಾಣದು ಭೀಮಾರ್ಜುನರು ಒಬ್ಬ ಧೃಷ್ಟದ್ಯುಮ್ನ ಇನ್ನುಳಿದ ಘಟೋತ್ಕಚ, ಅಭಿಮನ್ಯು ಚಿಕ್ಕ ಹುಡುಗರು. ಇವರನ್ನು ಬಿಟ್ಟರೆ ಪಾಂಡವ ಪಕ್ಷದಲ್ಲಿ ಹೇಳಿಕೊಳ್ಳುವಂತಹ ವೀರರು ಯಾರಿದ್ದಾರೆ? ಪಂಪನಲ್ಲಿ ಒಂದು ಕಥೆ ಹೀಗೆ ಬರುತ್ತದೆ: ಯುದ್ಧದ ಹಿಂದಿನ ದಿನ ದುರ್ಯೋಧನ ತನ್ನ ಆಯುಧಗಳನ್ನೂ ಆನೆಕುದುರೆಗಳನ್ನೂ ಪೂಜಿಸಿ, ಧರ್ಮರಾಯನಿಗೆ. "ನಿನ್ನ ಪಕ್ಷದ ಆಯುಧಗಳನ್ನೂ ಆನೆಗಳನ್ನೂ ಪೂಜೆಮಾಡಿ ಸಿದ್ಧಮಾಡಿಕೊ" ಎಂದು ಚಾರರ ಮೂಲಕ ಹೇಳಿ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕೌರವರೇಕೆ ಸೋತರು?

ಕುರು ಬಲದ ಅನೈಕ್ಯ

ಲೇಖಕರು:— ಶ್ರೀ ಬಿ. ಕೃಷ್ಣಪ್ಪ, ಎಂ. ಎ.

ಐಕ್ಯ ಎಂಬ ಶಬ್ಧಕ್ಕೆ ಒಂದು ಗುರಿ ಸಾಧನೆಗೆ ಪರಸ್ಪರರಲ್ಲಿ ಇರಬೇಕಾದ ಒಮ್ಮತ, ಒಗ್ಗಟ್ಟು, ಒಕ್ಕೂಟ, ಸಂಘಟನೆ, ಭಿನ್ನ ಭಾವವಿಲ್ಲದ ಏಕತೆ, ಎಂದು ವಿಧವಿಧವಾಗಿ ಅರ್ಥವನ್ನು ಹೇಳಬಹುದು. ಈ ಐಕ್ಯ ಎಂಬ ಶಬ್ದದ ಮುಂದೆ, ನಿಷೇದಾರ್ಥಕ 'ಅ' ಎಂಬ ಉಪಸರ್ಗ ಸೇರಿ, ಅನೈಕ್ಯವಾಗಿದೆ. ಅನೈಕ್ಯವೆಂದರೆ, ಗುರಿಸಾಧಕರಲ್ಲಿ ಪರಸ್ಪರ ಸಂಘಟನೆ, ಒಗ್ಗಟ್ಟು, ಇಲ್ಲದಿರುವಿಕೆ, ಭಿನ್ನ ಭಾವ ಒಡಕು ಎಂದಾಗುತ್ತದೆ. ಐಕ್ಯತೆಯಲ್ಲಿ ಶಕ್ತಿ ಸಂಚನವಾಗಿ ಗುರಿಸಾಧಕರಿಗೆ ಬಲಬರುತ್ತದೆ. ಅನೈಕ್ಯತೆಯಲ್ಲಿ ಶಕ್ತಿ ಹರಿದು ಹಂಚಿಹೋಗಿ, ದಿಕ್ಕುದೆಶೆಯಿಲ್ಲದೆ ವ್ಯಕ್ತಿ ಬಲಗುಂದುತ್ತಾನೆ ಅಥವಾ ಪಕ್ಷ ಬಲಗುಂದುತ್ತದೆ. ಐಕ್ಯತೆ ಬಾಹುಬಲ ಮತ್ತು ಮನೋಬಲಗಳೆರಡರಲ್ಲೂ ಸಾಧಿತವಾದಾಗಲೇ ನಿಶ್ಚಿತ ಫಲ ಸಾಧ್ಯ. ಐಕ್ಯಕ್ಕೆ ಸಂಪೂರ್ಣ ವಿರೋಧಾರ್ಥಕ ಶಬ್ದವೇ ಅನೈಕ್ಯ.

ಈ ಅನೈಕ್ಯ ಎರಡು ರೀತಿಯಲ್ಲಿ ವಿಚಾರ ಯೋಗ್ಯವಾಗಿದೆ. ಒಂದು ಅದು ಸ್ವಬಲವನ್ನು ಕುಗ್ಗಿಸುತ್ತದೆ; ಮತ್ತೊಂದು ಅದು ಶತ್ರುವಿನ ಬಲವನ್ನು ವರ್ಧಿಸುತ್ತದೆ. ಶತ್ರುವಿನ ಬಲ ಸಂವರ್ಧನೆ ಮತ್ತು ಸ್ವಬಲ ಕುಗ್ಗುವಿಕೆ—ಈ ಎರಡೂ ಒಂದೇ ಕಾರ್ಯಕ್ಷೇತ್ರದ ಎರಡು ಮುಖಗಳಾಗಿರುವುದರಿಂದ ಒಂದರ ವಿವೇಚನೆ ಮತ್ತೊಂದರ ವಿವೇಚನೆಯೂ ಆಗುತ್ತದೆ. ಅದರ ಕ್ರಿಯೆ ಕೈ ಚಪ್ಪಾಳೆಯಂತೆ, ಎರಡನ್ನೂ ಒಳಗೊಂಡಿರುತ್ತದೆ. ಕುರುಕ್ಷೇತ್ರ ಭೂಮಿಯಲ್ಲಿ ಈ ಎರಡೂ ಏಕಕಾಲದಲ್ಲಿ ಘಟಿಸಿ ಕುರು ಬಲ ಹೇಗೆ ಸರ್ವನಾಶವನ್ನು ಹೊಂದಿತು ಎಂಬುದನ್ನು ಬಿಡಿಸಿ ತೋರಿಸುವುದೇ ಈ ಲೇಖನದ ಉದ್ದೇಶ.

ದೃತರಾಷ್ಟ್ರ ಹಿರಿಯವನಾಗಿದ್ದರೂ ಹುಟ್ಟು ಕುರುಡನಾಗಿದ್ದುದರಿಂದ, ಸಿಂಹಾಸನವನ್ನು ಹತ್ತುವ ಭಾಗ್ಯ ರಾಜ್ಯಾಡಳಿತದ ಸೂತ್ರಗಳು ಪಾಂಡುವಿನ ಪಾಲಿಗೆ ಬಂದವು. ಪಾಂಡು ರಾಜನಾಗಿ ಸಮರ್ಥವಾಗಿ ರಾಜ್ಯಭಾರವನ್ನು ನಿರ್ವಹಿಸಿದ. ಶಾಪಗ್ರಸ್ತನಾಗಿ ಅವನು ಮಡಿದ ನಂತರ, ದೃತರಾಷ್ಟ್ರ ಸಿಂಹಾಸನವನ್ನು ಏರಿದ. ಕುರು ಸಿಂಹಾಸನಕ್ಕೆ ಬಾಧ್ಯರಾದ ಹಿರಿಯ ಮಕ್ಕಳನ್ನು ಕುಂತಿ ಹೆತ್ತಾಗ, ಕುರುಕುಲ ಸಿಂಹಾಸನಕ್ಕೆ ಹಕ್ಕುದಾರರಾಗದ ಈ ಪಿಂಡಗಳನ್ನು ಹೆತ್ತು ಫಲವೇನು? ಎಂಬುದಾಗಿ ಗಾಂಧಾರಿ ತನ್ನ ಗರ್ಭವನ್ನು ಹೊಸೆದು ಹಾಕಿ, ವ್ಯಾಸನ ಆಗ್ರಹಕ್ಕೆ ಗುರಿಯಾದಳು!

ಕೌರವರು-ಪಾಂಡವರು ಪ್ರಾಪ್ತವಯಸ್ಕರಾದ ಮೇಲೆ, ದೃತರಾಷ್ಟ್ರ, ವಿದುರ, ದ್ರೋಣ ಮತ್ತು ಉಳಿದ ರಾಜರ ಸಮಕ್ಷಮದಲ್ಲಿ ಭೀಷ್ಮ ಪಿತ್ರಾರ್ಜಿತವಾದ ಕುರುಮಂಡಲವನ್ನು ಇಬ್ಬರಿಗೂ ಹಂಚಿಕೊಟ್ಟು ಧರ್ಮವಂತರಾಗಿ ಬಾಳಿ ಎಂದು ಹರಸಿ ಕಳುಹಿಸಿದ. ಪಾಂಡವರು ಇಂದ್ರಪ್ರಸ್ಥವನ್ನೂ ಕೌರವರು ಹಸ್ತಿನಾವತಿಯನ್ನೂ ರಾಜಧಾನಿಯನ್ನಾಗಿ ಮಾಡಿಕೊಂಡು, ಭೂಮಿಯನ್ನು ಆಳತೊಡಗಿದರು. ಪಾಂಡವರು ತಮ್ಮ ಭೂಮಿಯನ್ನು ಧರ್ಮದಿಂದ ಪಾಲಿಸಿ, ರಾಜಸೂಯ ಯಾಗವನ್ನು ಮಾಡಿ ಕೀರ್ತಿಗಳಿಸಿದರು. ಅವರ ವಿಖ್ಯಾತಿ ದಶದಿಕ್ಕುಗಳಲ್ಲಿಯೂ ಹಬ್ಬಿತು. ಸಹಜ ದ್ವೇಷಿಗಳೂ ಅಸೂಯಾಪರರೂ ಆದ ಕೌರವರಿಗೆ ಇದು ನುಂಗಲಾರದ ತುತ್ತಾಯಿತು! ಹೇಗಾದರೂ ಮಾಡಿ ಪಾಂಡವರನ್ನು ಬಗ್ಗುಬಡಿಯುವ ಹಂಚಿಕೆಯನ್ನು ಹೂಡಿದರು. ಸ್ನೇಹದ ಸೋಗಿನಲ್ಲಿ ಜೂಜಾಡಿ ವಂಚನೆಯಿಂದ ಪಾಂಡವರ ಅರ್ಧ ರಾಜ್ಯವನ್ನು ಕಬಳಿಸಿದರು. ದ್ರೌಪದಿಗೆ ಅವಮಾನ ಮಾಡಿದರು. ಪಾಂಡವರು ಹನ್ನೆರಡು ವರ್ಷ ವನವಾಸವನ್ನೂ, ಒಂದು ವರ್ಷ ಯಾರಿಗೂ ತಿಳಿಯದಂತೆ ಅಜ್ಞಾತವಾಸವನ್ನೂ ಮಾಡಿದರೆ ಮತ್ತೆ ಅರ್ಧ ರಾಜ್ಯವನ್ನು ಕೊಡುವುದಾಗಿ ಕರಾರಾಯಿತು. ಕೌರವರ ಕಿರುಕುಳವನ್ನು ಸಹಿಸಿ ಪಾಂಡವರು ಪಡಬಾರದ ಪಾಡಪಟ್ಟು, ಅರಣ್ಯ ಹಾಗೂ ಅಜ್ಞಾತ ವಾಸಗಳನ್ನು ಮಾಡಿ ಮುಗಿಸಿದರು. ಕೌರವ ಪಾಂಡವರಿಗೆ ಕೊಡಬೇಕಾದ ಅರ್ಧ ರಾಜ್ಯವನ್ನು ಕರಾರುವಾಕ್ಕಾಗಿ ಕೊಡಬೇಕಾಗಿತ್ತು. ಆದರೆ ಅವನು ತನಗೆ ಏನೂ ಗೊತ್ತಿಲ್ಲವೆಂಬಂತೆ ಮೌನ ಧರಿಸಿದ. ದುರ್ಯೋಧನನ ಮೌನ, ಪಾಂಡವರಿಗೆ ಮತ್ತೆ ಅವನ ಹಳೆಯ ಪ್ರವೃತ್ತಿಯನ್ನೇ ನೆನಪಿಗೆ ತಂದಿತು. ಕೃಷ್ಣನ ಮಧ್ಯಸ್ಥಿಕೆ ಈಗ ಅನಿವಾರ್ಯವಾಯಿತು.

ಪಾಂಡವರು ಸಂಧಿಗಾಗಿ ಇಷ್ಟಪಟ್ಟರೂ ಸ್ವೇತ ಕೃಷ್ಣಕಾರಕ ದುರ್ಯೋಧನನ ಸ್ವಭಾವ ಅವರಿಗೆ ಚೆನ್ನಾಗಿಯೇ ಗೊತ್ತಿತ್ತು. 'ದುರ್ಯೋಧನ, ಪಾಂಡವರ ಸೌಖ್ಯವು, ನಿನ್ನ ಕೀರ್ತಿಯನ್ನು ಹೆಚ್ಚಿಸುತ್ತದೆ ಹೊರತು ಕೆಡಕು ಬಗೆಯುವುದಿಲ್ಲ. ಅವರಿಗೆ ಕರಾರಿನ ಪ್ರಕಾರ ಅರ್ಧರಾಜ್ಯವನ್ನು ಕೊಡು, ಅರ್ಧ ರಾಜ್ಯವನ್ನು ಕೊಡಲು ನಿನಗೆ ಇಚ್ಛೆ ಇಲ್ಲದೇ ಹೋದರೆ, ಐದು ಹಳ್ಳಿಗಳನ್ನಾದರೂ ಕೊಡು. ಅವರು ಅದರಲ್ಲಿಯೇ ತೃಪ್ತಿ ಹೊಂದಿ ನಿನಗೆ ವಿನೀತರಾಗಿ ನಡೆದುಕೊಳ್ಳುತ್ತಾರೆ. ಪಡಬಾರದ ಪಾಡನ್ನು ಪಟ್ಟು ತುಂಬ ನೊಂದಿರುವ ಅವರ ಮೇಲೆ ದಯೆ ತೋರು' ಎಂದು ಕೃಷ್ಣ ಬೇಡಿಕೊಂಡ. "ಐದು ಹಳ್ಳಿಯನ್ನಲ್ಲ, ಒಂದು ಸೂಜಿಯ ಮೊನೆ ಊರುವಷ್ಟು ಭೂಮಿಯನ್ನೂ ನಾನೂ ಅವರಿಗೆ ಕೊಡುವುದಿಲ್ಲ. ಪೌರುಷವಿದ್ದರೆ ಯುದ್ಧ ಭೂಮಿಯಲ್ಲಿ ಹೋರಾಡಿ ರಾಜ್ಯವನ್ನು ಪಡೆಯಲಿ' ಎಂದು ಉದ್ಧಟತನದಿಂದ ವರ್ತಿಸಿದ, ದುರ್ಯೋಧನನ ಅವಿವೇಕ ಕೃಷ್ಣನ ಮೇಲೂ ದೌರ್ಜನ್ಯವನ್ನು ನಡೆಸುವಷ್ಟು ಮುಂದುವರಿಯಿತು. ಅವನು ರಾಜ್ಯಮದದಿಂದ ಮತ್ತನಾಗಿದ್ದ. ಏರಿದ ಮತ್ತು ಒಂದು ದಿನ ಇಳಿಯಲೇ ಬೇಕಲ್ಲ? ಕುರುಕ್ಷೇತ್ರ ಯುದ್ಧ ಸೂರ್ಯಬಿಂಬದಷ್ಟು ನಿಚ್ಚಳವಾಯಿತು.

ಕೌರವರು ಪಾಂಡವರು ತಮ್ಮ ತಮ್ಮ ಬಲಗಳನ್ನು ಕೂಡಿ ಹಾಕಿ ಕೊಂಡರು. ಬಲಾಬಲಗಳ ಪರೀಕ್ಷೆಗೆ ಎರಡು ಪಂಗಡಗಳೂ ಸಿದ್ಧವಾದವು. ಇದು ಅವರವರ ಅಳಿವು ಉಳಿವಿನ ಪ್ರಶ್ನೆ. ಕೇವಲ ಸಂಖ್ಯಾ ಬಲದಿಂದ ಜನ ಬಲದಿಂದ ಯುದ್ಧದ ಗತಿ ಯಾವ ಕಡೆ ತಿರುಗುತ್ತದೆ ಎಂಬುದನ್ನು ಹೀಗೇ ಎಂದು ಹೇಳಲು ಬರುವುದಿಲ್ಲ. ಅಖಾಡಕ್ಕೆ ಇಳಿದ 'ಉಸ್ತಾದಿ' ನಾನೇ ಗೆಲ್ಲುತ್ತೇನೆ ಎಂದು ತಿಳಿದಿರುತ್ತಾನೆ. ಆದರೆ ಗೆಲುವು ಸೋಲುಗಳು ಅವನು ಬಳಸುವ ಪಟ್ಟು, ಕೈಚಳಕುಗಳನ್ನು ಅವಲಂಬಿಸಿರುತ್ತದೆಯಲ್ಲವೆ?

ಕುರು ಭೂಮಿಯಲ್ಲಿ ನೆರೆದ ಒಟ್ಟು ಹದಿನೆಂಟು ಅಕ್ಷೋಹಿಣಿ ಸೈನ್ಯದಲ್ಲಿ ಹನ್ನೊಂದು ಅಕ್ಷೋಹಿಣಿ ಸಂಖ್ಯೆ ಕುರುರಾಯನದು. ಪಾಂಡವ ಪಕ್ಷದ ಸಂಖ್ಯೆಗಿಂತ ಒಂದೂವರೆ ಪಟ್ಟು ಜಾಸ್ತಿಯಿದೆ. ಹೆಚ್ಚು ಕಡಿಮೆ ಪಾಂಡವ ಸೈನ್ಯದ ಒಬ್ಬ ಯೋಧನಿಗೆ ಕೌರವನ ಸೈನ್ಯದಲ್ಲಿ ಇಬ್ಬರಿದ್ದಾರೆ. ಈ ಮಾತು ಹಸ್ತಿ, ಅಶ್ವ, ರಥ, ಪದಾತಿ, ಚತುರಂಗ ಬಲಕ್ಕೂ ಅನ್ವಯಿಸುತ್ತದೆ. ಸೈನ್ಯ ಸಂಖ್ಯೆಯಲ್ಲಿ ಪಾಂಡವರು ಕೌರವರನ್ನು ಸರಿಗಟ್ಟಲಾರರು.

ಇನ್ನು ಕೌರವನ ಕಡೆ ನಿಂತು ಹೋರಾಡುವ ವೀರರ ಮೊತ್ತ ಅದೂ ಕೂಡ ಪಾಂಡವ ಪಕ್ಷಕ್ಕಿಂತ ಸಂಖ್ಯೆಯಲ್ಲಿ ಶಕ್ತಿಯಲ್ಲಿ ದ್ವಿಗುಣವಾಗಿದೆ. ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ, ಶಲ್ಯ, ಕೃಪ, ಅವರ ಹೆಸರನ್ನು ಕೇಳಿದರೆ ರೋಮಾಂಚನವಾಗುತ್ತದೆ. ಅವರು ಅಸಮ ಸಾಹಸರು, ಅದ್ವಿತೀಯ ವೀರರು. ಆದ್ದರಿಂದಲೇ ವ್ಯಾಸ ಯುದ್ಧದ ಯಾವ ಪರ್ವಕ್ಕೂ ಪಾಂಡವ ಪಕ್ಷದ ವೀರರ ಹೆಸರನ್ನು ಕೊಡುವುದಕ್ಕೆ ಬದಲಾಗಿ, ಭೀಷ್ಮ ಪರ್ವ, ದ್ರೋಣ ಪರ್ವ, ಕರ್ಣ ಪರ್ವ, ಶಲ್ಯ ಪರ್ವ ಎಂದು ಮುಂತಾಗಿ ಕುರುವೀರರ ಹೆಸರನ್ನು ಕೊಟ್ಟಿದ್ದಾನೆ. ವೀರರಿಗೆ ಉಚಿತ ಸ್ಥಾನ ಕೊಟ್ಟು ಗೌರವಿಸಿದ್ದಾನೆ ಕುರು ಪಾಂಡವರನ್ನು ತೋಳುಗಳಲ್ಲಿ ಎತ್ತಿ ಆಡಿಸಿ ಮುದ್ದಿಟ್ಟು ಬೆಳೆಸಿದ ಆಜಾನುಬಾಹು ಭೀಷ್ಮ ಎಲ್ಲರಿಗಿಂತಲೂ ಉನ್ನತ ಶ್ರೇಣಿಯಲ್ಲಿದ್ದಾನೆ. ಅವನಿಗೆ ಬಂದಿರುವ ಮುಪ್ಪೂ ಸಿಂಹಕ್ಕೇ ಬರುವ ಮುಪ್ಪೂ ಒಂದೇ! ಇಪ್ಪತ್ತೊಂದು ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ಕುಲವನ್ನೇ ನಾಶ ಮಾಡಿದ, ತನ್ನ ಗುರು ಪರಶುರಾಮನನ್ನೇ ಸೋಲಿಸಿದವನು! ಅವನು ಇಚ್ಛಾ ಮರಣಿ, ಚಿರಂಜೀವಿ ಭಾರತದ ಹದಿನೆಂಟು ದಿವಸಗಳ ಯುದ್ಧದಲ್ಲಿ ಹತ್ತು ದಿನಗಳ ಯುದ್ಧವನ್ನು ಒಬ್ಬನೇ ಮಾಡಿ ಅಜೇಯನಾದ ಅವನ ಶಕ್ತಿಗೆ ಎದುರುಂಟೆ? ಅಸಮಾನವಾದ ಅವನ ದೈತ್ಯ ಶಕ್ತಿಯ ಮುಂದೆ ಪಾಂಡವರು ಕೇವಲಹುಲ್ಲೆ ಮರಿಗಳು. ದ್ರೋಣ, ಪಾಂಡವ ಕೌರವರ ಬಿಲ್ಲೋಜ. ಅರ್ಜುನನಂತಹ ತ್ರಿಲೋಕ ವೀರನ ಗುರು. ತ್ರಿಲೋಕ ವೀರನ ಪಟ್ಟ ಅರ್ಜುನನಿಗೆ ಸಿದ್ಧಿಸಿದ್ದು ದ್ರೋಣನಿಂದಲೇ! ಅವನು ಲೋಕ ವಿಖ್ಯಾತ ಬಿಲ್ಗಾರ. ಪಿನಾಕಿಯೂ ಅವನ ಎದುರಿಗೆ ನಿಂತು ಹೋರಾಡಲಾರ. ಹೀಗಿರುತ್ತ ಉಳಿದವರ ಪಾಡೇನು? ಕರ್ಣ ಸೂರ್ಯನ ಮಗ; ಪರಶುರಾಮನ ಶಿಷ್ಯ. ಇಂದ್ರನಿಂದ ವರ ಪಡೆದವನು. ಪ್ರಚಂಡ ಪರಾಕ್ರಮಿ. ಅತುಲ ಭುಜಬಲಿ. ಅರ್ಜುನನ ಹೊಯ್‌ಕಯ್ಯಾದವನು. ಅರ್ಜುನನ ನಾಶವೇ ತನ್ನ ಗುರಿ ಎಂದು ತಿಳಿದವನು. ಅರ್ಜುನನನ್ನು ಉಳಿದು ಪಾಂಡವ ಪಕ್ಷದಲ್ಲಿ ಅವನಿಗೆ ಎದುರಾಳಿಗಳೇ ಇಲ್ಲ. ಶಲ್ಯ ಪಾಂಡವರ ಮಾವ, ಅಸಮ ಸಾಹಸಿ. ಅಶ್ವತ್ಥಾಮ ಬಿಲ್ಲೋಜನ ಮಗ, ರುದ್ರನ ಅವತಾರ, ಪ್ರಚಂಡ ಶಕ್ತಿವಂತ, ಇಚ್ಛಾ ಮರಣಿ. ಶೀಘ್ರ ಕೋಪಿಯಾದ ಅವನು ಕೆಣಿಗೊಂಡರೆ ಪ್ರಪಂಚವನ್ನೇ ಸುಟ್ಟು ಉರಿಸಬಲ್ಲ ಶಕ್ತಿಯುಳ್ಳವನು. ಇದರ ಜೊತೆಗೆ ಕೃಪ, ಕೃತವರ್ಮ, ಶಕುನಿ, ಭಗದತ್ತ, ದುಶ್ಶಾಸನ ಮುಂತಾದವರಿಂದ ಕೂಡಿದ ದರ್ಯೋದನನಸೈನ್ಯಶಕ್ತಿಯ ಮುಂದೆ ಪಾಂಡವ ಶಕ್ತಿಯನ್ನು ತೂಗಿ ನೋಡಿದರೆ ಸಮಪ್ರಮಾಣವೇ ಕಾಣದು ಭೀಮಾರ್ಜುನರು ಒಬ್ಬ ದೃಷ್ಟದ್ಯುಮ್ನ ಇನ್ನುಳಿದ ಘಟೋತ್ಕಚ, ಅಭಿಮನ್ಯು ಚಿಕ್ಕ ಹುಡುಗರು. ಇವರನ್ನು ಬಿಟ್ಟರೆ ಪಾಂಡವ ಪಕ್ಷದಲ್ಲಿ ಹೇಳಿಕೊಳ್ಳುವಂತಹ ವೀರರು ಯಾರಿದ್ದಾರೆ? ಪಂಪನಲ್ಲಿ ಒಂದು ಕಡೆ ಹೀಗೆ ಬರುತ್ತದೆ: ಯುದ್ಧದ ಹಿಂದಿನ ದಿನ ದುರ್ಯೋಧನ ತನ್ನ ಆಯುಧಗಳನ್ನೂ ಆನೆಕುದುರೆಗಳನ್ನೂ ಪೂಜಿಸಿ, ಧರ್ಮರಾಯನಿಗೆ. "ನಿನ್ನ ಪಕ್ಷದ ಆಯುಧಗಳನ್ನೂ ಆನೆಗಳನ್ನೂ ಪೂಜೆಮಾಡಿ ಸಿದ್ಧಮಾಡಿಕೊ" ಎಂದು ಚಾರರ ಮೂಲಕ ಹೇಳಿ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 / 2 72304 — Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕಳುಹಿಸುತ್ತಾನೆ. ದುರ್ಯೋಧನನ ಈ ವ್ಯಂಗ್ಯೋಕ್ತಿಗಳ ಹಿನ್ನೆಲೆಯನ್ನು ಅರಿತು ಧರ್ಮರಾಯನು ನಸುನಕ್ಕು "ನನಗೆ ಪೂಜೆ ಮಾಡಲು ಬೇರೆ ಯಾವ ಆನೆಗಳೂ ಇಲ್ಲ; ನನ್ನ ತಮ್ಮಂದಿರೇ ನಾಲ್ಕು ಆನೆಗಳು. ಅವುಗಳನ್ನೇ ಪೂಜೆ ಮಾಡಿಬಿಡುತ್ತೇನೆ" ಎಂದು ಹೇಳಿಕಳುಹಿಸಿದನಂತೆ. ಧರ್ಮರಾಯನ ಈ ಮಾತುಗಳು ಅವನ ಬಲದಲ್ಲಿ ವಸ್ತುತಃ ಎಷ್ಟು ಜನ ವೀರರಿದ್ದರು ಎಂಬುದನ್ನು ತಿಳಿಸುವುದು. ಕೃಷ್ಣನಾದರೋ ಅಸ್ತ್ರವನ್ನು ಹಿಡಿಯದವನು. ಪಾಂಡವ ಪಕ್ಷದ ಈ ಎಲ್ಲ ವೀರರೂ ಕೌರವನ ಎಲ್ಲ ಬಲಕ್ಕಲ್ಲ, ಕೇವಲ ಭೀಷ್ಮನೊಬ್ಬನಿಗೆ ಈಡಾಗಬಲ್ಲರೆ? ಒಬ್ಬ ಭೀಷ್ಮನ ಮುಂದೆ ನಿಲ್ಲುವ ತ್ರಾಣವಿಲ್ಲದ ಪಾಂಡವರಿಗೆ ಕೌರವನ ಅತುಲ ಬಲವನ್ನು ಕಂಡಾಗ ಜಯಸಿರಿ ತಮಗೆ ದಕ್ಕುವಳಲ್ಲ ಎಂದು ಅನ್ನಿಸಿದ್ದರೆ ಯಾರೂ ಸಂಶಯಪಡಬೇಕಾಗಿಲ್ಲ. ತನ್ನ ಹಾಗೂ ಪಾಂಡವರ ಬಲಾಬಲಗಳನ್ನು ಕಂಡು ಕೌರವನಿಗೆ ಹೆಮ್ಮೆ ಎನ್ನಿಸುತ್ತಿದೆ. ತನ್ನ ಸೈನ್ಯದ ಮುಂದೆ ಪಾಂಡವರೆ? ಛೆ! ಎಂದು ಅವನು ಅಭಿಮಾನದಿಂದ ಬೀಗಿ ಹೋಗುತ್ತಾನೆ. ತನ್ನ ಕಡೆಯಲ್ಲಿ ಎಂತೆಂತಹ ವೀರರಿದ್ದಾರೆ; ಅವರನ್ನು ಎದುರಿಸಿ ಹೋರಾಡುವುದು ಹೋಗಲಿ; ತಮ್ಮ ತಲೆಗಳನ್ನು ಉಳಿಸಿಕೊಳ್ಳುವುದಾದರೂ ಪಾಂಡವರಿಗೆ ಸಾಧ್ಯವೆ; ಜಯ ತನ್ನದೆ; ಹೀಗೆಂದು ದುರ್ಯೋಧನ ತನ್ನ ಭುಜವನ್ನು ತಾನೇ ತಟ್ಟಿಕೊಂಡಿರಬೇಕು.

ಹೀಗೆ ಶಕ್ತಿ ಪ್ರಮಾಣಗಳೆರಡರಲ್ಲೂ ಪಾಂಡವ ಸಂಖ್ಯೆಗಿಂತ ದ್ವಿಗುಣವಾಗಿದ್ದ ಕೌರವನ ಸೈನ್ಯಕ್ಕೆ ಕೊನೆಯಲ್ಲಿ ಏನಾಯಿತು? ಅಸಹಾಯಶೂರರು ಲೋಕ ವಿಖ್ಯಾತವೀರರು ಏನಾದರು? ಕತ್ತಿಗಳು ತಾಕಲಾಡಿದವು. ದಿನದಿಂದ ದಿನಕ್ಕೆ ಬೆಟ್ಟದಾಕಾರವಾಗಿ ಹೆಣಗಳ ರಾಶಿ ಬಿದ್ದವು. ರಕ್ತದ ಕಾಲುವೆ ಹರಿಯಿತು. ಕೌರವನ ಸೈನ್ಯ ಧೂಳೀಪಟವಾಯಿತು. ಕೌರವ ತೊಡೆಯೊಡೆದು ಸತ್ತ. ಅವನ ವಂಶ ಹೇಳ ಹೆಸರಿಲ್ಲದಂತಾಯಿತು. ಹೀಗೆಲ್ಲ ಏಕಾಯಿತು? ಪ್ರಬಲ ಶಕ್ತಿಯನ್ನು ವಿರೋಧಿಸಿ ಅಲ್ಪ ಶಕ್ತಿ ಉಳಿಯ ಬಲ್ಲದೆ? ಆದರೆ ಅಲ್ಪ ಶಕ್ತಿ ಪ್ರಬಲ ಶಕ್ತಿಯನ್ನೂ ಮೆಟ್ಟಿ ನಾಶ ಮಾಡಿತು ಏಕೆ? ಭಾರತವನ್ನು ಓದಿದ ಎಂತಹ ವಿಚಾರವಂತನಿಗೇ ಆಗಲಿ ಈ ಪ್ರಶ್ನೆಗೆ ಕಾರಣವನ್ನು ಹುಡುಕುವುದು ಕಷ್ಟವಾಗಲಾರದು. ಕೌರವನ ಪಕ್ಷ ಸೋಲಲು ಆ ಪಕ್ಷ ದುರ್ಬಲವಾಗಿತ್ತು ಎಂಬುದೇ ಆಗಲಿ, ಸಂಖ್ಯೆಯಲ್ಲಿ ಕಡಿಮೆಯಾಗಿತ್ತು ಎಂಬುದೇ ಆಗಲಿ ಕಾರಣವಲ್ಲ. ಹಾಗಾದರೆ ಮತ್ತೇನು? ಹನ್ನೊಂದು ಅಕ್ಷೋಹಿಣಿ ಸೈನ್ಯ ಅಷ್ಟು ದೊಡ್ಡ ವೀರಾಧಿವೀರರು ಅಸಹಾಯ ಶೂರರು ಸಾವನ್ನು ಅಪ್ಪಿದರು. ಅದು ಅವರಲ್ಲಿದ್ದ ಒಳಜಗಳಗಳಿಂದ ಪಕ್ಷಪಾತಗಳಿಂದ, ಅನೈಕ್ಯತೆಯಿಂದ ಎಂಬ ಮಾತು ಅರ್ಥಪೂರ್ಣವಾಗಿ ಕಾಣುತ್ತದೆ. ಪಾಂಡವ ಪಕ್ಷದ ವಿವಿಧ ಶಕ್ತಿಗಳನ್ನು ಸಂಘಟಿಸಿ ಒಕ್ಕೂಟದಿಂದ ಜಯದ ಕೇಂದ್ರ ಬಿಂದುವಿನ ಕಡೆಗೆ ನಡೆಸಿಕೊಂಡು ಹೋದ ಕೃಷ್ಣನಂತಹ ಒಂದು ಚಾಲಕ ಶಕ್ತಿ ನಾಯಕ ಕೌರವ ಪಕ್ಷದಲ್ಲಿ ಇರಲಿಲ್ಲ. ಪಾಂಡವರು ಸಮಷ್ಟಿಗಾಗಿ ವ್ಯಷ್ಟಿಯನ್ನು ಮರೆತರು. ಆದರೆ ಕೌರವ ಪಕ್ಷದ ವೀರರು ಸಮಷ್ಟಿಗಿಂತ ವ್ಯಷ್ಟಿಯೇ ಪ್ರಧಾನವೆಂದು ಬಗೆದರು. ತಮ್ಮ ತಮ್ಮಲ್ಲಿ ಕಿತ್ತಾಡಿದರು. ಪಕ್ಷಪಾತ ತೋರಿದರು. ಇದರಿಂದ ಪಾಂಡವ ಪಕ್ಷ ವರ್ಧಿಸಿತು. ಕೌರವ ಹೇಳ ಹೆಸರಿಲ್ಲದಂತಾದ. ಪಕ್ಷದಲ್ಲಿ ಒಳಜಗಳಗಳು ಘರ್ಷಣೆಗಳು ಉಂಟಾದಾಗ, ಅವುಗಳನ್ನು ನಾಯಕನಾದವನು ಸರಿಪಡಿಸಿ ಪಕ್ಷದ ಸಂಘಟನೆ ಒಗ್ಗಟ್ಟನ್ನು ಕಾಪಾಡಬೇಕು. ಸರಿಯಾಗಿ ಮಾರ್ಗದರ್ಶನ ಮಾಡಬೇಕು. ಇದು ಸುಲಭವಾದ ಕೆಲಸವೇನಲ್ಲ. ಇಂತಹ ಕೆಲಸವನ್ನು ನಿರ್ವಹಿಸುವ ನಾಯಕ ತನ್ನ ಪಕ್ಷದ ಉಳಿದ ಎಲ್ಲ ವೀರರಿಗಿಂತ ವಯಸ್ಸಿನಲ್ಲಿ ಶಕ್ತಿಯಲ್ಲಿ ಹಿರಿಯವನಾಗಿರಬೇಕು. ಕುರುಬಲದ ನಾಯಕನೆನಿಸಿಕೊಂಡಿದ್ದ ದುರ್ಯೋಧನ ಈ ಎಲ್ಲ ದೃಷ್ಟಿಗಳಿಂದಲೂ ಅಸಮರ್ಥನಾಗಿದ್ದ. ಭೀಷ್ಮ, ದ್ರೋಣ, ಕರ್ಣ, ಶಲ್ಯ, ಕೃಪಾದಿಗಳು ಅವನಿಗಿಂತಲೂ ಹಿರಿಯರು ಮತ್ತು ಶೂರರು. ಸಹಾಯ ಶಕ್ತಿಗಳಿಗಾಗಿ ಕೊನೆಯ ವರೆಗೂ ಅವನು ಅವರನ್ನು ಯಾಚಿಸಿದ. ಪಾಂಡವರನ್ನು ಗೆದ್ದು ಕೊಡಬೇಕೆಂದು ಪಿತಾಮಹರನ್ನು ಬೇಡಿಕೊಂಡ. ದ್ರೋಣರಿಗೆ ಧರ್ಮರಾಯನನ್ನು ಹಿಡಿದುಕೊಡಿ ಎಂದ. ಅರ್ಜುನ ಜಯದ್ರಥನನ್ನು ಕೊಲ್ಲುತ್ತೇನೆ ಎಂದು ಶಪಥಮಾಡಿದಾಗ ಅವನನ್ನು ರಕ್ಷಿಸಿ ಎಂದು ಅಂಗಲಾಚಿದ. ಕರ್ಣನಿಗೆ ಸಾರಥಿಯಾಗು ಎಂದು ಶಲ್ಯನನ್ನು ಕೈ ಜೋಡಿಸಿ ಕೇಳಿಕೊಂಡ. ಘಟ್ಟಘಟ್ಟಗಳಲ್ಲಿ ಒದಗಿ ಬಂದ ವಿಪತ್ತುಗಳ ಪರಿಹಾರಕ್ಕಾಗಿ, ಅವನು ಅವರನ್ನು ಅಂಗಲಾಚುವುದು ಅವನ ವ್ಯಕ್ತಿತ್ವಕ್ಕೆ ಕಳಂಕಪ್ರಾಯವಾಗಿದೆ. ಅವರ ಮೇಲೆ ತಾನು ಅಧಿಕಾರವನ್ನೂ ನಡೆಸಲಾರ, ತಿರಸ್ಕಾರವನ್ನೂ ಮಾಡಲಾರ. ಅಧಿಕಾರ ಮಾಡಹೊರಟರೆ ತಿರುಗಿ ಬೀಳುತ್ತಾರೆ, ತಿರಸ್ಕಾರ ಮಾಡಿದರೆ ಅದರಿಂದ ತನಗೇ ತೊಂದರೆ, ಶಕುನಿಯ ಕುತಂತ್ರ–ಕುಮಂತ್ರಗಳು ಯುದ್ಧಭೂಮಿಯಲ್ಲಿ ಯಾವ ಉಪಯೋಗಕ್ಕೂ ಬಾರವು. ದುರ್ಯೋಧನ ತಾನು ಒಬ್ಬ ದುರ್ಬಲ ನಾಯಕ ಎನ್ನುವುದನ್ನು ಎತ್ತಿ ತೋರುತ್ತಾನೆ. ಇಷ್ಟು ವರ್ಷಗಳು ತನ್ನ ಪಕ್ಷದವರು ತನ್ನ ಋಣದಲ್ಲಿ ಬದುಕಿದ್ದಾರೆ, ತನ್ನ ಉಪ್ಪನ್ನ ಉಂಡಿದ್ದಾರೆ ಎಂಬ ಒಂದು ವಿಚಾರವನ್ನು ಬಿಟ್ಟರೆ, ಅವರ ಮೇಲೆ ಹಕ್ಕನ್ನು ಚಲಾಯಿಸಲು ಅವನಿಗೆ ಯಾವ ಶಕ್ತಿಯೂ ಇಲ್ಲ. ಅನ್ನವನ್ನು ಹಾಕಿ ತಾನು ಅವರ ಧನಿ ಅನಿಸಿಕೊಂಡನೇ ಹೊರತು, ಒಳ್ಳೆಯ ನಡತೆಯಿಂದ ಅವರ ಮನಸ್ಸನ್ನು ಗೆಲ್ಲಲಿಲ್ಲ. ದುರ್ಯೋಧನ ಒಳ್ಳೆಯವನಾಗಿ ನಡೆದುಕೊಂಡಿದ್ದರೆ ಯುದ್ಧವಾದರೂ ಏಕೆ ಸಂಭವಿಸುತ್ತಿತ್ತು?

(ಮುಂದುವರಿಯುವುದು)

ಕವಲು ದಾರಿ ಕೆಂಪು ದೀಪ

ಮತದಾನದ ರಹಸ್ಯ ಸ್ಫೋಟನ?

ರಾಜ್ಯಸಭಾ ಚುನಾವಣೆಯಲ್ಲಿ ಕರ್ನಾಟಕ ವಿಧಾನ ಸಭೆಯ ದ್ರಾಮುಕದ ಏಕೈಕ ಸದಸ್ಯರು ವೀರೇಂದ್ರ ಪಾಟೀಲರಿಗೆ ಮತ ಹಾಕಿದ್ದಾರೆಂದು ಕಾಂಚೀಪುರಂನಲ್ಲಿ ದ್ರಾಮುಕ ನಾಯಕ–ತಮಿಳುನಾಡು ಮುಖ್ಯ ಮಂತ್ರಿ–ಕರುಣಾನಿಧಿ ಬಹಿರಂಗಗೊಳಿಸಿದರು.

ಶ್ರೀ ನಿಧಿಯವರು ವೀರೇಂದ್ರರ ಮೇಲೇಕೆ ಸಹಾನುತಾಪ ತೋರಿಸಿದರು?

ಕಳೆದ ವರ್ಷ ಆಳುವ ಕಾಂಗ್ರೆಸ್ಸಿನೊಂದಿಗೆ ಅವರು ಮಾಡಿಕೊಂಡ ದಾಂಪತ್ಯ ಪಾಂಡಿಚೇರಿ ಉಪ ಚುನಾವಣೆಯ ವೇಳೆ ಮುರಿದು ಹೋಗಿತ್ತು. ಆದುದರಿಂದ ಸಂಸ್ಥಾ ಕಾಂಗ್ರೆಸ್ಸಿನೊಡನೆ ಸರಸಾಟಕ್ಕೆ ಅವರು ಎಳಸಿ ಬಂದರೆ?

ಅದೂ ಅಶಕ್ಯವಾಗಬೇಕು. ಪಾಂಡಿಚೇರಿಯಲ್ಲಿ ದ್ರಾಮುಕ ಅಭ್ಯರ್ಥಿಯ ವಿರುದ್ಧ ಆಳುವ ಕಾಂಗ್ರೆಸ್‌ನ ಪರ ಕಾಮರಾಜರೂ ಪ್ರಚಾರ ನಡೆಸಿದ್ದರೆಂಬುದರಿಂದ ಈ ಕಾಂಗ್ರೆಸ್ಸೂ ದ್ರಾಮುಕದ ಹೊಸ (ಗಂಡ) ಹೆಂಡತಿಯಾಗುವುದು ಅಸಾಧ್ಯವೆನಿಸುತ್ತದೆ.

ಹಾಗಿದ್ದರೂ ಅವರು ಪಾಟೀಲರಿಗೇ ಮತ ಹಾಕಿದ್ದರೆ. ಅದು ಸಂಸ್ಥಾ ಕಾಂಗ್ರೆಸ್ಸಿಗಲ್ಲ, ಪಾಟೀಲರಿಗೇ ಎಂಬುದು ನಿಸ್ಸಂದೇಹ.

ಪಾಟೀಲರಿಗೂ ದ್ರಾಮುಕಕ್ಕೂ ಯಾವ ಬಾದರಾಯಣ ಸಂಬಂಧ? (ಶಿಕ್ಷಣ ಮಂತ್ರಿ ಬಾದರಾಯಣರಲ್ಲ)

ಪಾಟೀಲರು ರಾಜ್ಯ ಸ್ವಯಮಾಧಿಕಾರಕ್ಕೆ ವಾದ ಮಾಡುವವರು ಎಂದು ಅವರಿಗೆ ಮನವರಿಕೆಯಾಗಿದೆಯಂತೆ.

ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡದೆ ಹೋದರೆ ದೆಹಲಿಯಲ್ಲಿರುವ ಮೈಸೂರು ಭವನ, ತಮಿಳು ನಾಡು ಭವನ ಮತ್ತು ಆಂಧ್ರ ಭವನಗಳು ರಾಯಭಾರಿ ಕಚೇರಿಗಳಾಗಿ ಪರಿವರ್ತನೆಗೊಳ್ಳುವ ಸಂದೇಹವನ್ನು ಪಾಟೀಲರು ೧೯೭೦ರಲ್ಲೇ ವ್ಯಕ್ತಪಡಿಸಿದ್ದರಂತೆ.

ಪಾಟೀಲರು ತಮ್ಮ ಸನ್ಮಾನ ಸಮಾರಂಭದಲ್ಲಿ ಕರ್ನಾಟಕ ಸರಕಾರವನ್ನು ಕೇಂದ್ರದ ಉಪಗ್ರಹವೆಂದು ಕರೆದದ್ದು ಕರುಣಾನಿಧಿಯವರಿಗೆ ಸಂತಸ ತಂದೀತು.

ಕರುಣಾನಿಧಿಯವರು ಇಷ್ಟೇ ಅಂದು ಸುಮ್ಮನಿರ ಬಹುದಿತ್ತು. ಆದರೆ, ಅವರ ನಾಲಗೆಯ ಚಪಲತೆ ಬಿಡಬೇಕಲ್ಲ?

ಆಳುವ ಕಾಂಗ್ರೆಸ್ಸಿನ ಹನ್ನೊಂದು ಶಾಸಕರು ಪಕ್ಷದ ಆದೇಶವನ್ನು ಮೀರಿ ಪಾಟೀಲರಿಗೆ ಮತ ಹಾಕಿದ್ದಾರೆ ಎಂದರವರು.

ಇದನ್ನು ವೀರೇಂದ್ರರು ಒಪ್ಪುವುದಿಲ್ಲ. ಆಳುವ ಕಾಂಗ್ರೆಸಿನ ಅಭ್ಯರ್ಥಿಗಳಿಗೆ ೧೬೭ (ಅವರ ಸಂಖ್ಯಾಬಲ ೧೬೫) ಮತ ಬಿದ್ದಿದೆ. ತನಗೆ ದೊರೆತದ್ದು ವಿರೋಧಿ ಪಕ್ಷಗಳ ಮತ ಮಾತ್ರ ಎಂದರು ಅವರು.

ಎಲ್ಲರಿಗಿಂತ ಹೆಚ್ಚು ಕಸಿವಿಸಿ ದೇವರಾಜರಿಗೆ. ತನಗೆ ಎದುರಿಲ್ಲವೆಂದು ನಂಬಿದರೆ ಇದೆಂತಹ ಶನಿಪೀಡೆ?

ಶಿಸ್ತು ಉಲ್ಲಂಘಿಸಿದವರ ಸಂಖ್ಯೆ ನಾಲ್ಕು ಅವರು ಯಾರು ಯಾರು ಎಂದು ಸಮಿತಿ ಮೂಲಕ ಗೊತ್ತು ಹಚ್ಚಿ, ಅವರನ್ನು ಅಮಾನತ್ತು ಮಾಡಲು ಸಲಹೆ.

ತನಗಾಗದವರ ಮೇಲೆ ಹಗೆ ತೀರಿಸಿಕೊಳ್ಳಲು ಅರಸರಿಗೊಂದು ಸದವಕಾಶ.

ರಹಸ್ಯ ಮತದಾನದಲ್ಲಿ ಯಾರು ಯಾರಿಗೆ ಮತ ನೀಡಿದರೆಂದು ತಿಳಿಯುವುದಾದರೆ, ರಹಸ್ಯವೇನುಳಿಯಿತು?

ಪ್ರಾಯಃ ಆದದ್ದು ಹೀಗೆ ಇರಬಹುದು. ಸಿಪಿಐ, ಕೋಲಾರದ ನಾಲ್ವರು ಪಕ್ಷೇತರರು, ಮಹಾರಾಷ್ಟ್ರ ಏಕೀಕರಣ ಸಮಿತಿಯ ಮೂವರು ಆಳುವ ಕಾಂಗ್ರೆಸಿಗೇ ಬೆಂಬಲವೆಂದು ಹೇಳಿರಬಹುದು.

ಆಡಿದಂತೆ ನಡೆವ ಹೆಗ್ಗಳಿಕೆ ಆಳುವ ಕಾಂಗ್ರೆಸಿಗೆ ಮಾತ್ರ ತಾನೆ?

ಏನೇನೋ ಊಹಾಪೋಹದಿಂದ ತಾನೊಲ್ಲದವರ ಮೇಲೆ ಶಿಸ್ತಿನ ಕ್ರಮ ಕೈಕೊಂಡರೆ ಪಕ್ಷ ಶಿಥಿಲವಾಗುತ್ತದೆ; ಗುಂಪುಗಾರಿಕೆ ಬೆಳೆಯುತ್ತದೆ.

ಈಗಲೇ ಆಳುವ ಕಾಂಗ್ರೆಸ್ಸಿನಲ್ಲಿ ಬಿರುಕು ತೋರ ತೊಡಗಿದೆಯೆಂದರೆ ಮುಂದಿನ್ನೈದು ಮಳೆಗಾಲಗಳನ್ನೂ ಅದೆಂತು ಸಹಿಸಿಕೊಳ್ಳುವುದೋ!

●●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಇದೂ ವಿನೋದವೆ?

ಪರ್ಭಣಿಯಲ್ಲಿ ಗಾರ್ದಭ ವೃತ್ತಿ

ಹಿಂದಿನ ಕಾಲದ ದಾರಿಗಳ್ಳರ ಕತೆಗಳನ್ನು ನಾವು ಕೇಳಿದ್ದೇವೆ. ಇಂದಿಗೂ ರೈಲು ದರೋಡೆಯ ಘಟನೆಗಳು ನಡೆಯುತ್ತಿವೆ. ರಾಜರಸ್ತೆಯಲ್ಲಿ ಬಸ್ಸು - ಕಾರುಗಳನ್ನು ಅಡ್ಡಗಟ್ಟಿದ ಉದಾಹರಣೆಗಳೂ ಇವೆ; ಹೆಚ್ಚೇನು, ಸಮುದ್ರಗಳ್ಳರಂತೆಯೇ ವಿಮಾನಗಳ್ಳರೂ ಇಂದಿನ ನಾಗರಿಕ ಜಗತ್ತಿನಲ್ಲಿದ್ದಾರೆ.

ಜನತಾ ಪ್ರತಿನಿಧಿಗಳೇ ತುಂಬಿದ ವಿಧಾನ ಮಂಡಳಗಳಲ್ಲಿ ಸಭಾಪತಿ—ಸಹ ಸದಸ್ಯರ ಮೇಲಿನ ಕೋಪಾಟೋಪದಿಂದ ಮೇಜು ಗುದ್ದುವುದು, ಮೈಕು ಮುರಿಯುವುದು, ಪುಸ್ತಕ ಹರಿಯುವುದು, ಸಭಾತ್ಯಾಗ ಮಾಡುವುದು ಇಷ್ಟರಿಂದಲೇ ತೃಪ್ತರಾಗದವರು ಪರಸ್ಪರ ಕೈಯೆತ್ತುವುದು, ಮೇಜು ಕುರ್ಚಿ ತೂರಿ ಕೊಳ್ಳುವುದು, ಚಪ್ಪಲಿ ಎಸೆದು ಕೊಳ್ಳುವುದು—ಮೊದಲಾದ ಶಿಷ್ಟ (ಶಾಸಕರನ್ನು ಅಶಿಷ್ಟರೆನ್ನುವುದು ಹೇಗೆ ಸಾಧ್ಯ?) ಸಂಪ್ರದಾಯಗಳು ಹಲವೆಡೆ ನಡೆಯುತ್ತವೆ.

ಶ್ರೇಷ್ಠರನ್ನು ಅನುಕರಿಸುವುದು ಶ್ರೀಸಾಮಾನ್ಯರ ಚಟ. ಆದುದರಿಂದಲೇ ಸಭೆ ಸಮ್ಮೇಳನಗಳು ನಡೆವಾಗ ವೇದಿಕೆಯತ್ತ ಚಪ್ಪಲಿಯೆಸೆಯುವುದು—ಕಲ್ಲು ತೂರುವುದು—ಗೊಂದಲವೆಬ್ಬಿಸುವುದು —ಇತ್ಯಾದಿ ಇತ್ಯಾದಿ ನಡೆದು ಬಂದಿದೆ.

ಇದಕ್ಕೆಲ್ಲ ಕಳಸವಿಡುವಂತಹ ಘಟನೆಯೊಂದು ಮರಾಠವಾಡದ ವಿದ್ಯಾರ್ಥಿಗಳಿಂದ ನಡೆದುದು ನಮ್ಮ ಶಿಷ್ಟಾಚಾರ ಯಾವ ದಾರಿ ಹಿಡಿದಿದೆಯೆಂಬುದನ್ನು ತೋರಿಸುತ್ತದೆ.

ಪರ್ಭಣಿ ಕೃಷಿ ಕಾಲೇಜಿನ ವಿದ್ಯಾರ್ಥಿಗಳ ಬೇಡಿಕೆ ಮರಾಠವಾಡಕ್ಕೆ ಪ್ರತ್ಯೇಕ ಕೃಷಿ ವಿದ್ಯಾಲಯ ಬೇಕು ಎಂಬುದು ತಮ್ಮ ಬೇಡಿಕೆಯನ್ನು ತಮ್ಮ ಕ್ಷೇತ್ರದ ಶಾಸಕರಿಗೆ ಹೇಗೆ ಮುಂದಟ್ಟು ಮಾಡಬೇಕೆಂದು ಅವರು ತುಂಬ ಯೋಚಿಸಿ ಅತ್ಯಂತ ಪರಿಣಾಮಕಾರಿಯಾದ ಉಪಾಯವನ್ನು ಹುಡುಕಿದರು.

ಆಳುವ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನರು ಮುಂಬಯಿಗೆ ರೇಲಿನಲ್ಲಿ ಪ್ರಯಾಣ ಮಾಡುತಿದ್ದರು. ರೇಲು ಪರ್ಭಣಿ ನಿಲ್ದಾಣಕ್ಕೆ ಬರುತ್ತಲೇ ವಿದ್ಯಾರ್ಥಿಗಳ ಗುಂಪು ಇಕ್ಬಾಲ್ ಕುಳಿತಿದ್ದ ಡಬ್ಬಿಗೆ ಮುತ್ತಿಗೆ ಹಾಕಿತು; ಅವರನ್ನು ಕೆಳಗೆ ಕರೆದು ತಂದಿತು. ಅವರ ಮುಖಕ್ಕೆ ಕರಿ ಬಳಿಯಿತು; ಚಪ್ಪಲಿಗಳ ಹಾರವೊಂದನ್ನು ಹಾಕಿತು. ಕತ್ತೆಯ ಮೇಲೆ ಕೂಡಿಸಿತು, ರಸ್ತೆಗಳಲ್ಲಿ ಮೆರವಣಿಗೆ ತೆಗೆಯಿತು.

ಪೋಲೀಸರಿಗೆ ಸಂಗತಿ ತಿಳಿಯಿತು. ಅವರು ತಡೆಯಲು ಬಂದರೆ ಇಕ್ಬಾಲ್ ಹುಸೇನ್ ಹೇಳಿದರು ಈ ಮೆರವಣಿಗೆ ನನಗೆ ಇಷ್ಟ. ಆತ್ಮ ಸಂತೋಷದಿಂದಲೇ ಇದರಲ್ಲಿ ಪಾಲ್ಗೊಂಡಿದ್ದೇನೆ. ನೀವು ಮರಳಬಹುದು.

ಮೆರವಣಿಗೆ ಶಿವಾಜಿ ಚೌಕಕ್ಕೆ ಬಂತು. ಅಲ್ಲಿ ವಿದ್ಯಾರ್ಥಿ ಮತ್ತವರ ಬೆಂಬಲಿಗರ ಸಭೆ ನಡೆಯಿತು. ಕಾಂಗ್ರೆಸ್ ಶಾಸಕರು ವಿದ್ಯಾರ್ಥಿಗಳ ಬೇಡಿಕೆಯನ್ನು ಸಮರ್ಥಿಸಿ ಭಾಷಣ ಮಾಡಿದರು.

ಬಳಿಕ ವಿದ್ಯಾರ್ಥಿಗಳು ಹುಸೇನರಿಗೆ ತಾವು ಮಾಡಿದ್ದ ಅಲಂಕಾರಗಳನ್ನು ವಿಸರ್ಜನೆ ಮಾಡಿದರು. ಹೂಮಾಲೆ ಹಾಕಿದರು 'ಇಕ್ಬಾಲ್ ಹುಸೇನ್ ಜಿಂದಾಬಾದ್' ಎಂದು ಗಗನ ಭೇದಿ ಘೋಷಣೆ ಮಾಡಿದರು.

ಬೇಡಿಕೆಯನ್ನು ಈಡೇರಿಸಿಕೊಳ್ಳಲು ಯಾವ ಯಾವ ರೀತಿಯ ಕ್ರಮಗಳು ನಡೆಯುತ್ತಿವೆಯೆಂಬುದಕ್ಕೆ ಪರ್ಭಾನದ ಈ ಘಟನೆಯೊಂದು ಉದಾಹರಣೆ. ಅಸಹನೀಯ ಅಪಮಾನಿತರಾಗಿದ್ದರೂ ಪೋಲೀಸರಿಗೆ ದೂರಿಸದ ಇಕ್ಬಾಲರು ವಿವಶರಾಗಿದ್ದರೆಂದೇ ಹೇಳಬೇಕು ಒಂದೊಮ್ಮೆ ಅವರು ದೂರುತಿದ್ದರೆ ಮುಂದವರಿಗೆ ಇದಕ್ಕಿಂತ ದೊಡ್ಡ ಗಂಡಾಂತರ ಕಾದಿರುತ್ತಿತ್ತು. ಮೂರ್ಖತನಕ್ಕೆ ಅವಜ್ಞೆಯೇ ದಿವ್ಯೌಷಧವೆಂಬುದು ನಿಜವಾದರೂ ಈ ಬಗೆಯ ಮೂರ್ಖತನ ಅಪಮಾನಪ್ರದವಾದದ್ದು. ವಿದ್ಯಾರ್ಥಿಗಳಲ್ಲಿ ಅನೈತಿಕತೆ, ಅಮಾನುಷತೆ ಮತ್ತು ಕುಟಿಲ ವಿನೋದಪ್ರಿಯತೆಗಳು ಯಾವ ಪ್ರಮಾಣದಲ್ಲಿ ಬೆಳೆಯುತ್ತಿವೆಯೆಂಬುದು ವಿಚಾರಣೀಯ. ಈ ಘಟನೆ ಪುಂಡತನದ್ದೆಂದೂ ಕಿಡಿಗೇಡಿತನದ್ದೆಂದೂ ಈ ಪುಂಡರಿಗೆ ಕಿಡಿಗೇಡಿಗಳಿಗೆ ಬೆಂಬಲವಾಗಿರುವವರು ಇದ್ದೇ ಇರಬೇಕೆಂದೂ ಹೇಳಬೇಕಾಗುತ್ತದೆ.

ಇಕ್ಬಾಲ್ ಹುಸೇನರು ದೂರಿತ್ತಿಲ್ಲವೆಂದ ಮಾತ್ರಕ್ಕೆ ಈ ಘಟನೆ ನಡೆದಿಲ್ಲವೆಂದಾಗುವುದಿಲ್ಲ. ಆದುದರಿಂದ ನಾಯಕರೆನಿಸಿಕೊಳ್ಳುವ ಶಾಸಕರು. ಇತರರಿಗೆ ಮಾರ್ಗದರ್ಶಕ ಸ್ಥಾನಗಳಲ್ಲಿರುವವರು, ಶ್ರೇಷ್ಠ ವ್ಯಕ್ತಿಗಳೆಂದು ಕರೆದು ಕೊಳ್ಳುವವರು ಸಮಾಜಕ್ಕೆ ಅಂಟಿದ ಈ ಕಲುಷಿತ ಸೋಂಕು ರೋಗವನ್ನು ನಿರ್ಮೂಲ ಗೊಳಿಸಲು ಮೊದಲಿಗೆ ಬದ್ಧಕಟಿಯಾಗಬೇಕಾಗಿದೆ. ಹಾವು ಸಣ್ಣದಾದರೂ ಅದರ ನಂಜು ನಿರ್ಬಲವಿರುವುದಿಲ್ಲ.

●●

ಚಿಂತನ—ಮಂಥನ

ಅಮೇರಿಕದಲ್ಲಿ ಐವತ್ತು ರಾಜ್ಯಗಳು. ಅಷ್ಟೇ ನವ-ೂನೆಯ ಭಾಷೆಗಳು ಆದರೂ ಅವರೆಲ್ಲ ಒಂದು ರಾಷ್ಟ್ರವಾಗಿ ಬಾಳುತ್ತಿದ್ದಾರೆ. ನಾಲ್ಕು ಪ್ರಾಂತಗಳಿರುವ ಪಾಕಿಸ್ತಾನದಲ್ಲಿ ಜನ ಒಂದಾಗಿ ಸಹಕಾರದಿಂದ ಬಾಳುವಂತಿಲ್ಲ ಇದು ಅತ್ಯಂತ ವಿಷಾದಕರ.

ಸಿಂಧೀ ರೈತರ ಸಭೆಯಲ್ಲಿ

ಅಧ್ಯಕ್ಷ ಭುಟ್ಟೋ ಅವರ ಭಾಷಣ

31—3—72

o o o

ಭುಟ್ಟೋ ಮೂಲತಃ ಸರ್ವಾಧಿಕಾರಪ್ರಿಯ. ಪ್ರಜಾಪ್ರಭುತ್ವದಲ್ಲಿ ಅವರಿಗೆ ಎಳ್ಳಷ್ಟೂ ನಂಬುಗೆ ಇಲ್ಲ.

ಏರ್ ಮಾರ್ಶಲ್ ಅಸ್ಗರಖಾನ್

30—3—72

o o o

'ಬಂಗ್ಲಾದೇಶ ಸಮಸ್ಯೆ'ಯನ್ನು ನನಗೆ ಬಿಟ್ಟಿದ್ದರೆ, ನಾನು ಖಂಡಿತವಾಗಿ ಈ ರೀತಿ ಹೇಳುತ್ತಿದ್ದೆ, 'ನಿಮಗೆ ನಮ್ಮೊಂದಿಗೆ ಇರಲು ಇಷ್ಟವಿಲ್ಲದಿದ್ದರೆ, ಬೇರೆಯಾಗಿ'

ಮಾಜಿ ಅಧ್ಯಕ್ಷ ಅಯೂಬಖಾನ್

o o o

ಅಡ್ಡಾ - ದಿಡ್ಡಿಯಾಗಿ ಬೆಳೆದ ಭುಟ್ಟೋ ಅವರ ಪಕ್ಷ ಅಲ್ಪ ಕಾಲದಲ್ಲಿಯೇ ಅಧಿಕಾರದ ಗದ್ದುಗೆಯನ್ನು ಏರಿದೆ.

ಏರ್ ಮಾರ್ಶಲ್ ನೂರಖಾನ್ ಭಾಷಣ

ಟೈಮ್ಸ್ ಆಫ್ ಇಂಡಿಯ 30-3-72

o o o

ಪಾಕಿಸ್ತಾನದ ತನ್ನದೇ ಆದ ಸ್ವತಂತ್ರ ವಿದೇಶ ನೀತಿಯನ್ನು ಅನುಸರಿಸಬೇಕು. ಚಿಕ್ಕ ರಾಷ್ಟ್ರವಾದ ಪಾಕಿಸ್ತಾನ ಯಾವುದೇ ಒಂದು ಬಣಕ್ಕೆ ಅಂಟಿಕೊಳ್ಳಬಾರದು.

ಖಾನ್ ಅಬ್ದುಲ್ ಮುಖಾನ್

30—3—72

●●

ಕುಂದಾಪುರ ಅಸಿಸ್ಟಾಂಟ್ ಕಮಿಶನರಿಗೆ ವಿದಾಯ.

ಕುಂದಾಪುರದಲ್ಲಿ ಆಸಿಸ್ಟಾಂಟ್ ಕಮಿಶನರಾಗಿದ್ದ ಶ್ರೀ ಟಿ ಜಿ. ಬಂಗೇರ ಅವರು ಜಿಲ್ಲಾಧಿಕಾರಿಗಳಾಗಿ ಭಡ್ತಿಯೊಂದಿ ಶಿವಮೊಗ್ಗಕ್ಕೆ ವರ್ಗವಾಗಿರುವ ಪ್ರಯುಕ್ತ ಕುಂದಾಪುರ ತಾಲೂಕು ಅಭಿವೃದ್ಧಿ ಮಂಡಳಿಯ ಶ್ರೀ ಯಡ್ತರೆ ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಅವರಿಗೆ ವಿದಾಯ ನೀಡಿತು.

ಮಂಡಳಿಯ ಅಧ್ಯಕ್ಷ ಶ್ರೀ ಬಿ. ವೀರರಾಜೇಂದ್ರ ಹೆಗ್ಡೆಯವರು ಆರಂಭದಲ್ಲಿ ಸ್ವಾಗತಿಸಿದರು. ತಾಲೂಕು ಬೋರ್ಡು ಸದಸ್ಯ ಎಡ್ವೊಕೇಟ್‌ಶ್ರೀ ಟಿ. ರಾಮಕೃಷ್ಣರಾಯರೂ, ಎಡ್ವೊಕೇಟ್ ಶ್ರೀ ಜಿ. ಕುಶಲ ಹೆಗ್ಡೆಯವರೂ, ಅಸಿಸ್ಟಾಂಟ್ ಕಮಿಶನರ ಬಗ್ಗೆ ಮಾತಾಡಿದರು. ಶ್ರೀ ಬಂಗೇರಾ ಅವರು ಕೃತಜ್ಞತೆ ಸೂಚಿಸಿದರು.

ಅಂತ್ಯದಲ್ಲಿ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಯು.ಪಿ. ಕಿಣಿಯವರು ಧನ್ಯವಾದ ಅರ್ಪಿಸಿದರು.

In the Court of the Munsiff Belthangady

Ex. C. 270/71 in O. S. 86/68

Between:

Krishnayya and another — Petitioners/D. Hs.

and

Narasappayya and others — Respondants/J. Ds.

To

2nd Respondant: Sri Venkatraya

5th Respondant: Smt Laxmi

—Children of Sri Patel Rama Bhatta, both are residing in Thumbe in Gundori village, P. O. Venur, Belthangady Taluk, S. K.

Whereas in the above suit the execution petitioners (Decree-holders) have applied for sale of the immoveable propertys belonging to you and fully described in the sale proclamation you are hereby informed that the 27th day of May 1972 has been fixed for settling the terms of the Proclamation of sale and for granting permission to the petitioner to bid and set off.

(By order)

B. K. Suryanarayana Rao

Advocate for Petitioners D. Hs.

Belthangady, 4—4—1972.

ಬಂಟ್ವಾಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 215/1971

ಮುಗುಳಿ ರಾಮಕೃಷ್ಣ ಭಟ್ಟ —ವಾದಿ.

ಕೆ. ಪಿ. ಮಹಾಬಲ ಭಟ್ಟ ಕೂಡಾ —ಪ್ರತಿವಾದಿರು.

2ನೇ ಪ್ರತಿವಾದಿ, ದೇವಮ್ಮ, ಕೆ. ಪಿ. ಮಹಾಬಲ ಭಟ್ಟರ ಹೆಂಡ್ತಿ, ಬಂಟ್ವಾಳ ತಾಲ್ಲೂಕು ಕರೋಪಾಡಿ ಗ್ರಾಮದಲ್ಲಿ.

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲ್ಕಂಡ ವಾದಿಯು ನೀವು ವಗೈರೆಯರ ಮೇಲೆ ಡಿ. ಪ್ರೋ ನೋಟು ಪ್ರಕಾರ ಬರತಕ್ಕ ಐವೆಜುಗಳ ವಸೂಲಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 14-6-1972ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಂಮದೇನಾದರೂ ಆಕ್ಷೇಪ ಹೆಸಲಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ನೀವು ಯಾ ವಕೀಲರ ಮೂಲ್ಕ ಹಾಜರಾಗಿ ಉದಪಡಿಸಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

(Sd) C. V. Shastry

Advocate for plff

ತಾರೀಕು 11-4-72.

ಅಗ್ನಿಶಾಮಕ ಸೇವಾ ದಿನಾಚರಣೆ—

ಬೆಂಕಿಯೊಡನೆ ಚಿನ್ನಾಟ ಬೇಡ

ಅಗ್ನಿ ಸಮಸ್ತ ಜೀವನದ ಆಧಾರ. ಎಲ್ಲರ ಮಿತ್ರ ನಿಜ. ಅವನ ವಿಷಯದಲ್ಲಿ ಕೊಂಚ ಅಜಾಗರೂಕತೆ ತೋರಿದರೆ ಸಾಕು. ಸರ್ವನಾಶ. ಕಾಂಕ್ರೀಟಿನ ಮನೆಯೇ ಇರಲಿ, ಬಡವನ ಗುಡಿಸಲೇ ಇರಲಿ, ಹೊಲ— ಗದ್ದೆಗಳಲ್ಲಿನ ಬೆಳೆಯೇ ಇರಲಿ, ಮಾನವ ಅಥವಾ ಪ್ರಾಣಿಗಳೇ ಇರಲಿ, ಅಗ್ನಿ ಪ್ರಕೋಪದಿಂದ ಸುಟ್ಟು ಭಸ್ಮ. ಕಾರಣ ಬೆಂಕಿಯೊಡನೆ ಚಿನ್ನಾಟ ತರವಲ್ಲ. ಅದರಿಂದ ಬಹಳ ಅನಾಹುತ.

೧೯೪೪ರ ಮುಂಬಯಿ ಬಂದರಿನಲ್ಲಿ ಭೀಕರವಾದ ಬೆಂಕಿಯ ಅನಾಹುತ ಸಂಭವಿಸಿತು. ಬೆಂಕಿಯನ್ನು ಆರಿಸಲು ಸತತ ಹೋರಾಟವೇ ನಡೆಯಿತು. ಈ ಹೋರಾಟದಲ್ಲಿ ಅಗ್ನಿ ಶಾಮಕ ದಳದ ಅನೇಕರು ಮಡಿದರು. ಅವರ ಸ್ಮರಣಾರ್ಥವಾಗಿ ದೇಶ ಏಪ್ರಿಲ್ ೧೪ರಂದು ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ. ಇಡೀ ದೇಶದಲ್ಲಿ ಈ ದಿನವನ್ನು ಅಗ್ನಿಶಾಮಕ ಸೇವಾ ದಿನವಾಗಿ ಆಚರಿಸುತ್ತಾರೆ.

ಮನೆಗಳಲ್ಲಿ ಬೆಂಕಿ ಅನಾಹುತವನ್ನು ಪ್ರತಿಬಂಧಿಸುವುದು, ಈ ವರ್ಷದ ಅಗ್ನಿ ಶಾಮಕ ಸೇವಾ ದಿನಾಚರಣೆಯ ಮುಖ್ಯ ಉದ್ದೇಶ. ಕಾರಣ ಈ ವರ್ಷದ ಅಗ್ನಿಶಾಮಕ ಸೇವಾ ದಿನದಂದು ಬೆಂಕಿಯೊಡನೆ ಆಡದಿರಲು ನಾವೆಲ್ಲ ಪ್ರತಿಜ್ಞೆ ಮಾಡಿದ್ದೇವೆ. ಮನೆಗಳಲ್ಲಿ ಬೆಂಕಿ ಅನಾಹುತ ತಪ್ಪಿಸಲು ಮುಂಜಾಗರೂಕತೆ ಅಗತ್ಯ. ಈ ಮುಂಜಾಗರುಕತಾ ಕ್ರಮಗಳು ತುಂಬ ಸರಳ.

ಉರಿ ಹೊತ್ತಿಕೊಳ್ಳಬಹುದಾದ ಯಾವುದೇ ವಸ್ತುವನ್ನೇ ಆಗಲಿ ಬೆಂಕಿಯಿಂದ ದೂರ ಇಡಿ. ಬಹುಬೇಗ ಬೆಂಕಿ ಹೊತ್ತಿಕೊಳ್ಳುವ ಪೆಟ್ರೋಲ್, ವಾರ್ನಿಷ್ ಇತ್ಯಾದಿಗಳ ವಿಷಯದಲ್ಲಿ ತುಂಬ ಎಚ್ಚರವಿರಲಿ. ಏಕೆಂ ಕೆಂದರೆ ಕೊಠಡಿಯ ಉಷ್ಣತಾಮಾನದಲ್ಲೂ ಸಹ ಇವುಗಳಿಗೆ ಬೆಂಕಿ ಹೊತ್ತಿಕೊಳ್ಳುವ ಸಂಭವವಿರುತ್ತದೆ. ಅಡುಗೆ ಮಾಡಲು ಉಪಯೋಗಿಸುವ ಗ್ಯಾಸ್, ಕಿಡಿಗಳಿಂದ ಒಮ್ಮೆಲೆ ಬೆಂಕಿಹೊತ್ತಿಕೊಳ್ಳಲು ಕಾರಣವಾಗಬಹುದು. ಆದ್ದರಿಂದ ಗ್ಯಾಸ್ ವಿಷಯದಲ್ಲಿ ಎಚ್ಚರವಹಿಸ ಬೇಕು.

ಹಾಸಿಗೆಯ ಪಕ್ಕದಲ್ಲಿ ಬೆಂಕಿ ಇಟ್ಟುಕೊಳ್ಳಬೇಡಿ. ಬೆಂಕಿ ಇರುವ ಸ್ಥಳದ ಮೇಲೆ ಬಟ್ಟೆಗಳನ್ನು ತೂಗು ಹಾಕಬೇಡಿ. ಚಳಿಗಾಲದಲ್ಲಿ ಉಷ್ಣತೆಯನ್ನು ನೀಡಲು ಉಪಯೋಗಿಸುವ (ಹೀಟರುಗಳು) ಸಲಕರಣೆಗಳು, ಅಗ್ನಿಶಾಮಕ ಯಂತ್ರಗಳಿಂದ ಸುಸಜ್ಜಿತವಾಗಿರಲಿ. ಬೇಗನೆ ಬೆಂಕಿ ಹೊತ್ತಿಕೊಳ್ಳಬಹುದಾದ ವಸ್ತುಗಳಿಂದ ಅವು ಆದಷ್ಟು ದೂರವಿರಲಿ.

ಅಡುಗೆ ಮನೆಗಳಲ್ಲಿ ಅಗ್ನಿ

ಬೆಂಕಿಯಿಂದ ಆಗಬಹುದಾದ ಅನಾಹುತದ ಬಗ್ಗೆ ಕುಟುಂಬಗಳಲ್ಲಿ ಎಲ್ಲರಿಗೂ ತಿಳುವಳಿಕೆ ಮಾಡಿಕೊಡಿ. ಅಡುಗೆಯ ಮನೆಯಲ್ಲಿ ಬೆಂಕಿಗೆ ಸಮೀಪವಾಗಿ ಸೀಮೆ ಎಣ್ಣೆಯನ್ನು ಅಥವಾ ಪೆಟ್ರೋಲ್ ಡಬ್ಬಿಗಳನ್ನು ಇಡುವುದು ಅಪಾಯಕರ. ಪ್ರೆಶರ್ ಸ್ಟವ್‌ಗಳ ಬರ್ನರ್‌ಗಳನ್ನು ಆಗಾಗ್ಗೆ ಪರೀಕ್ಷಿಸದಿರುವುದು, ಅಡುಗೆಗೆ ಉಪಯೋಗಿಸುವ ಗ್ಯಾಸ್ ರಬ್ಬರಿನ ಕೊಳವೆಯಿಂದ ಹೊರ ಬರುತ್ತಿದೆ ಎಂದು ಸಂದೇಹ ಬಂದಾಗ ಬೆಂಕಿಯಿಂದ ಕಡ್ಡಿ ಗೀಚುವುದು ಹಾಗು ನೈಲಾನ್ — ಟೆರಿಲಿನ್‌ಗಳಂತಹ ಸಿಂಥೆಟಿಕ್ ನೂಲಿನ ಉಡುಪುಗಳನ್ನು ಧರಿಸುವುದು ಅಪಾಯಕರ.

ಧೂಮಪಾನದ ಅವಾಂತರ

ನೀವು ಧೂಮಪಾನ ಪ್ರಿಯರೇ? ಹಾಗಾದರೆ ಸಿಗರೇಟ್ ಹೊತ್ತಿಸಿಕೊಂಡೇ ನಿದ್ರಿಸಲು ಹೋಗಬೇಡಿ. ಬೆಂಕಿ ಹೊತ್ತಿಸಿದ ಕಡ್ಡಿಗಳನ್ನು ಅಥವಾ ಸುಡುತ್ತಿರುವ ಸಿಗರೇಟಿನ ತುಂಡುಗಳನ್ನು ನಿರ್ಲಕ್ಷ್ಯದಿಂದ ಎಸೆಯಬೇಡಿ. ಅದಕ್ಕಾಗಿ ನೀರು ತುಂಬಿದ 'ಆಶ್‌ಟ್ರೇ' ಅಂದರೆ ಸಿಗರೇಟು ಬೂದಿ ಹಾಕುವ ಪಾತ್ರೆಯನ್ನು ಉಪಯೋಗಿಸಿರಿ. ಅದು ಇಲ್ಲದಿದ್ದರೆ ಸಿಗರೇಟು ಎಸೆಯುವಾಗ, ಅದರ ತುದಿಯನ್ನು ನೆಲಕ್ಕೆ ತಿಕ್ಕಿ ಬೆಂಕಿ ಆರಿದೆಯೋ ಎಂಬುದನ್ನು ಖಚಿತಪಡಿಸಿಕೊಂಡು ಎಸೆಯಿರಿ. ಪೆಟ್ರೋಲ್ ಅಥವಾ ಗ್ಯಾಸ್ ಇತ್ಯಾದಿಗಳ ಸಮೀಪದಲ್ಲಿ ಧೂಮಪಾನ ಮಾಡಬೇಡಿ

ವಿದ್ಯುಚ್ಛಕ್ತಿಯ ಬಗ್ಗೆ ಎಚ್ಚರ

ಮನೆಗಳಲ್ಲಿ ವಿದ್ಯುಚ್ಛಕ್ತಿ ಬಳಸುವಾಗ ತುಂಬ ಎಚ್ಚರದಿಂದಿರಿ. ಎಲ್ಲಾ ವಿದ್ಯುಚ್ಛಕ್ತಿ ಸಾಧನಗಳು ಸರಿಯಾಗಿವೆಯೋ ಎಂಬುದನ್ನು ನೋಡಿಕೊಳ್ಳಿ. ವಿದ್ಯುಚ್ಛಕ್ತಿ ಉಪಕರಣಗಳಲ್ಲಿ ದೋಷ ಕಂಡುಬಂದರೆ ಅದನ್ನು ನೀವೇ ಸರಿಪಡಿಸಲು ಹೋಗಬೇಡಿ. ಅದಕ್ಕಾಗಿ ಮನ್ನಣೆ ಪಡೆದಿರುವ ಇಲೆಕ್ಟ್ರಿಶಿಯನ್‌ಗಳ ನೆರವು ಪಡೆಯಿರಿ.

ಮನೆಗಳಲ್ಲಿ ಕಸಗುಡಿಸಿದ ನಂತರ, ರಸ್ತೆಯ ಬದಿಗಳಲ್ಲಿ ಅದಕ್ಕಾಗಿಯೇ ಇಡಲಾಗಿರುವ ಕಸದ ಡಬ್ಬಿಗಳಲ್ಲಿ ಎಸೆಯಿರಿ. ಕಸ, ಬಟ್ಟೆಯ ತುಣುಕುಗಳು ಪಾಲಿಷ್ ಹಾಗು ಎಣ್ಣೆಗಳಲ್ಲಿ ಹಸಿಯಾದ ಬಟ್ಟೆಗಳನ್ನು ಮನೆಯಿಂದ ದೂರದ ಸುರಕ್ಷಿತ ಸ್ಥಳಗಳಲ್ಲಿ ಸುಡಬೇಕು

ಬಟ್ಟೆಗಳನ್ನು ತೊಳೆಯಲು ಬೇಗ ಉರಿ ಹತ್ತಿಕೊಳ್ಳಬಹುದಾದ ದ್ರವಗಳನ್ನು ಉಪಯೋಗಿಸಬೇಡಿ. ಒಂದು ವೇಳೆ ಅದು ಅಗತ್ಯವೆಂದಾದರೆ, ಈ ದ್ರವವು ಒಂದು ಪಿಂಟಿಗಿಂತ ಹೆಚ್ಚು ಇರಬಾರದು. ಅದನ್ನು ಸುರಕ್ಷಿತವಾದ ಸ್ಥಳದಲ್ಲಿ ಭದ್ರವಾಗಿ ಮುಚ್ಚಿಡಬೇಕು.

ರೇಡಿಯೋ–ಟೆಲಿವಿಷನ್

ರೇಡಿಯೋ ಸೆಟ್‌ಗಳ ತಂತಿ ಪ್ರಧಾನ "ಪ್ಲಗ್"ನಲ್ಲಿ ಸರಿಯಾಗಿ ಸೇರಿಕೊಂಡಿದೆಯೋ ಎಂಬುದನ್ನು ಪರೀಕ್ಷಿಸಬೇಕು. ರೇಡಿಯೋ ಸೆಟ್‌ಗಳಿಗೆ ಯಾವುದೇ ವಸ್ತ್ರಗಳ ಹೊದಿಕೆ ಇರಬಾರದು. ರೇಡಿಯೊ ಸೆಟ್ ಇರುವ ಸ್ಟ್ಯಾಂಡ್ ಗೋಡೆಯಿಂದ ಕೊನೆಯ ಪಕ್ಷ 30 ಸೆಂಟಿಮೀಟರ್ ದೂರ ಇರಲಿ.

ಮಕ್ಕಳೇ ನಾಳಿನ ಬಾಳಿನ ಬೆಳಕು. ಮಾನವ ಜನಾಂಗದ ಭವಿಷ್ಯ ಅವರನ್ನೇ ಅವಲಂಬಿಸಿದೆ. ಬೆಂಕಿಪೊಟ್ಟಣಗಳು, ಸಿಗರೇಟು ಲೈಟರುಗಳು, ಮಕ್ಕಳ ಕೈಗೆ ಸಿಗದಂತೆ ದೂರ ಇಡಿ. ಮಕ್ಕಳು ಮನೆಯಲ್ಲಿ ಒಬ್ಬಂಟಿಗರನ್ನಾಗಿ ಇರಲು ಬಿಡಬೇಡಿ. ಬೆಂಕಿ ಉರಿಯುತ್ತಿದ್ದರೆ ಅದನ್ನು ಹಾಗೇ ಬಿಡಬಾರದು. ಮಕ್ಕಳು ಹತ್ತಿರವಿದ್ದಾಗಲಂತೂ ಹಾಗೆ ಬಿಡುವುದು ಅಪಾಯಕಾರಿ. ಮಕ್ಕಳು ಸಿಡಿಮದ್ದುಗಳನ್ನು ಹಾರಿಸುತ್ತಿದ್ದಾಗ ಆನಂದಪಡುವುದರ ಜೊತೆಗೆ ಅವರತ್ತ ನಿಮ್ಮ ದೃಷ್ಟಿ ಸಂಪೂರ್ಣವಾಗಿರಲಿ.

● ●

ಗೇಹರಾಜ್ಯದಲ್ಲಿ

(ನಾಲ್ಕನೇ ಪುಟದಿಂದ)

'ಕುಡಿಬಾರದ ನೀರನ್ನೇ....'

'ಅದುವರೆಗೆ ಬದುಕುವುದು?'

'ಬದುಕುವ ಚಿಂತೆ ಯಾಕೆ? ಕುಡಿಯಬಾರದ ನೀರನ್ನು ಕುಡಿದರೆ, ಆರೋಗ್ಯ ಸೌಲಭ್ಯ ಇಲ್ಲದೆ ಹೋದರೆ ಅಂತಹ ಚಿಂತೆಯೂ ಇಲ್ಲ ತಾನೆ?"

'ಅಂದರೆ, ಅಧಿಕಾರ ಕೈಗೆ ಬಂದ ಎರಡು ವರ್ಷಗಳಲ್ಲಿ ಆರನೆಯ ಯೋಜನೆ ಹೊತ್ತಿಗೆ ಇದೆಲ್ಲ ಸಾಧ್ಯವಾಗಬಹುದೂಂತ ಸರ್ವೇ ಆಯ್ತೂಂತ ತೋರುತ್ತೆ....'

'ಇರಬಹುದು....'

'ಇನ್ನು ಮರು ಸರ್ವೆ, ಪುನರ್ವಿಮರ್ಶಿತ ಸರ್ವೆ, ಆ ಸರ್ವೆ, ಈ ಸರ್ವೇಂತ ಅದನ್ನೇ ಮಾಡ್ತಾ ಕೂತ್ರೆ ಸರೀನ್ನಿ. ಆಗ ಯಾವ ಕೆಲಸವನ್ನೂ ಮಾಡಲೇಬೇಕಾಗಿಲ್ಲ...."

'ಹಾಗೆಲ್ಲ ನಿರಾಶೆ ಹೊಂದಿದರೆ ಹೇಗೆ? ಇಂದಿರಮ್ಮನಲ್ಲಿ ಭರವಸೆಯಿಡಬೇಕು. ಸರಕಾರದಲ್ಲಿ ವಿಶ್ವಾಸವಿಡಬೇಕು. ಆರನೆಯ ಯೋಜನೆ ಮುಗಿಯುವವರೆಗೂ ಪೆತ್ತ—ಕಂಜಿಗೇ ಓಟು ಮಾಡಬೇಕು. ಆ ಮೇಲೆ ಹೇಳಬೇಕು....'

"ಹ್ಞೂಂ ಸರಿಯಾಯ್ತು ಬಿಡಿ. ಇದೀಗ ಅದುವರೆಗೆ ಮತಗಳಿಸುವ ಪ್ರಚಾರ ಕಾರ್ಯ...."

"ಛೆ ಛೆ....ಯೋಜನೆಗೂ ಚುನಾವಣೆಗೂ ಏನೇನೂ ಸಂಬಂಧವಿಲ್ಲ...."

'ಆಯ್ತಪ್ಪ ಆಯ್ತು...ಅಲ್ಲ, ನೀವು ನೋಡ ಹೋದ ರೋಗಿ ಹೇಗಿದ್ದಾರೇಂತ ಹೇಳ್ಲೇ ಇಲ್ಲ...'

'ಓ, ಅವರೆ? ಸುಧಾರಿಸ್ತಾ ಇದ್ದಾರೆ. ಇನ್ನೇನು, ವಾರ—ಎರಡು ವಾರಗಳಲ್ಲಿ ಡಿಸ್‌ಛಾರ್ಜು....'

'ಅಲ್ರಿ, ಅವ್ರು ಯಾರೂಂತ?'

'ಮತ್ತ್ಯಾರೆ...ಓ ಆಚೆ ಮೂಲೆ ಅಂಗ್ಡಿ ಸಾವ್ಕಾರ್ರ ಮಗ....'

'ಓ....'

'ಏನು?'

'ಏನೂ ಇಲ್ಲಾನ್ನಿ...'

'ಹ್ಞೂಂ....'

—ಗೋಪಾ.

ಶ್ರೀ ವೆಂಕಟೇಶ ಸುಪ್ರಭಾತ ಸ್ಪರ್ಧೆ

ದಾವಣಗೆರೆ ಕೇಂದ್ರದಲ್ಲಿ ಇದೇ ಮೊದಲನೆಯದಾಗಿ ಪವಿತ್ರವಾದ ಶ್ರೀ ವೆಂಕಟೇಶ್ವರ ಸುಪ್ರಭಾತ ಸ್ಪರ್ಧೆಯು 31–3–1972 ಮತ್ತು 1–4–72 ರಂದು ಕೇಂದ್ರದ ಆವರಣದಲ್ಲಿ ನೆರವೇರಿಸಲಾಯಿತು

ತಾ. 13–3–72 ರಂದು ಮೈಸೂರುಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀ ಸೋಮನಾಥಾನಂದಜಿಯವರು ಸುಪ್ರಭಾತ ಸ್ಪರ್ಧೆಯ ಪ್ರಕಟನೆಯನ್ನು ನೆರವೇರಿಸಿ ಕಾರ್ಯಕರ್ತರಿಗೆ ಆಶೀರ್ವದಿಸುವುದರ ಮೂಲಕ ಸ್ಪರ್ಧೆಯ ಉದ್ಘಾಟನೆ ನಡೆಸುವ ಕೃಪೆ ಮಾಡಿದ್ದರು.

ತಾ. 31–3–72ರಂದು ಕಿಕ್ಕಿರಿದು ತುಂಬಿದ್ದ ಸಭಾ ಭವನದಲ್ಲಿ ಭಕ್ತ ಮಹಾಶಯರನ್ನೂ ದಕ್ಕೂ ಹೆಚ್ಚಾಗಿ ಭಾಗವಹಿಸಲಿದ್ದ ಉತ್ಸಾಹಿ ಅಭ್ಯರ್ಥಿಗಳನ್ನೂ ಇತರ ಆಸ್ತಿಕ ಮಹಾಶಯರನ್ನೂ ಕೇಂದ್ರದ ಕಾರ್ಯದರ್ಶಿಗಳಾದ ಶ್ರೀ ಜಿ. ಎಲ್. ಪರಮೇಶ್ವರ ಗುಪ್ತರು ಸ್ವಾಗತಿಸಿ, ಸರ್ವರ ಸಹಕಾರವನ್ನು ಕೋರಿದರು. ನಂತರ ಶ್ರೀ ಆ. ರಾ. ಶಂಕರಯ್ಯನವರು ಸ್ಥೂಲವಾಗಿ ಸ್ಪರ್ಧೆಯ ನಿಯಮಗಳು, ಮಾಡಿರುವ ವಿಭಾಗಗಳು, ಬಹುಮಾನಗಳು, ಅಭ್ಯರ್ಥಿಗಳು ನಡೆದು ಕೊಳ್ಳಬೇಕಾದ ರೀತಿ ನೀತಿ ಇತ್ಯಾದಿಗಳನ್ನು ವಿವರಿಸಿದರು. ನಿರ್ಣಾಯಕರಾಗಲು ಒಪ್ಪಿಕೊಂಡು ದಯಮಾಡಿಸಿದ್ದ ಸನ್ಮಾನ್ಯರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು.

ಶುಕ್ರವಾರ ಬಾಲಕ ಮತ್ತು ಬಾಲಕಿಯರ ಸ್ಪರ್ಧೆ ನಡೆದವು. ಶನಿವಾರ ಮಹಿಳೆಯರ ಮತ್ತು ಪುರುಷರ ಸ್ಪರ್ಧೆಗಳು ನೆರವೇರಿದ ನಂತರ ಇನ್ನೊಂದು ಪ್ರಕಟಣೆ ಮೂಲಕ ತಕ್ಷಣವೇ ಸ್ತೋತ್ರ ಪ್ರಪತ್ತಿ ಮತ್ತು ಮಂಗಳಾಶಾಸನ ಸಹಿತ ಸಂಪೂರ್ಣ ಶ್ರೀ ವೆಂಕಟೇಶ್ವರ ಸುಪ್ರಭಾತ ಕಂಠಪಾಠದ ಸ್ಪರ್ಧೆ ಸಹ ಏರ್ಪಡಿಸಲಾಯಿತು.

ಶ್ರೀಗಳಾದ ಆ. ರಾ. ಶಂಕರಯ್ಯ, ಟಿ. ಟಿ. ಅಚ್ಯುತ ದೀಕ್ಷಿತ್ ಮತ್ತು ಶ್ರೀಮತಿ ಪ್ರಭಾ ಗೋಪಿನಾಥಚಾರ್ ಇವರುಗಳು ನಿರ್ಣಯಕರಾಗಿದ್ದು ಸಾವಧಾನದಿಂದ ಪರಿಶೀಲನೆ ನಡೆಸಿ ತೀರ್ಪು ನೀಡಿದರು.

ಈ ಬಹುಮಾನ ವಿಜೇತರಿಗೆ ಸಮೀಪ ಭವಿಷ್ಯದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಬಹುಮಾನ ವಿತರಣೆ ನೆರವೇರಿಸಲಾಗುವುದು. ಈಗ ತಾತ್ಕಾಲಿಕಕ್ಕೆ ಸವರಿಯವರಿಗೆ ಮಹಾ ಪ್ರಸಾದದೊಂದಿಗೆ ಶ್ರೀ ವೆಂಕಟೇಶ್ವರ ಅರ್ಥ ವಿವರಣೆ ಪುಸ್ತಕವನ್ನು ಶ್ರೀ ಸ್ವಾಮಿಯ ಆಶೀರ್ವಾದ ಸೂಚಕವಾಗಿ ನೀಡಲಾಯಿತು.

ಇಲ್ಲಿಯ ಎಂ. ಎಲ್. ಎ. ಆಗಿ ಚುನಾಯಿತರಾಗಿರುವ ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರು ಕೊನೆಯ ದಿನ ಸಮಾರಂಭದಲ್ಲಿ ಭಾಗವಹಿಸಿದ್ದರು.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಡಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ತುಂಡು ಭೂಮಿಯಲ್ಲಿ ಅಖಂಡ ಬೆಳೆ

ಸಣ್ಣ ರೈತರಾರೂ ನಿರಾಶೆಪಡಬೇಕಾಗಿಲ್ಲ. ತುಂಡುಭೂಮಿಯಲ್ಲಿ ಅಖಂಡ ಬೆಳೆ ತೆಗೆದ ನಿದರ್ಶನಗಳು ಬಹಳಷ್ಟು ಇವೆ. ಮಧ್ಯಪ್ರದೇಶ ಬಿಲಾಸ್‌ಪುರ್ ಜಿಲ್ಲೆಯ ಸರ್‌ಗಾಂವ್ ಗ್ರಾಮದ ಮಹಿಳೆ ದೇವಲಾಬಾಯಿಯದು ಈದಿಶೆಯಲ್ಲಿ ಒಂದು ಉತ್ತಮ ಉದಾಹರಣೆ. ಆಕೆ ಈಗ ತನ್ನ ಜೀವನಕ್ಕಾಗಿ ಮುಂಗಾರು ಮಳೆಯನ್ನೇ ನಂಬಿ ಕುಳಿತಿಲ್ಲ. ಚಿಕ್ಕ ಜಮೀನಿನಲ್ಲಿ ಬತ್ತದ ಬೆಳೆಯ ಉತ್ಪಾದನೆಯನ್ನು ದ್ವಿಗುಣಗೊಳಿಸಿದವಳು ಶ್ರೀಮತಿ ದೇವಲಾಬಾಯಿ. ಅಷ್ಟೇ ಅಲ್ಲ; ಬತ್ತದ ಬೆಳೆಯೊಂದಿಗೆ ತರಕಾರಿ ಮತ್ತು ಗೋಧಿಯನ್ನು ಬೆಳೆಯುತ್ತಿದ್ದಾಳೆ.

ಶ್ರೀಮತಿ ದೇವಲಾಬಾಯಿಯೂ ಸಣ್ಣ ಬೇಸಾಯಗಾರ್ತಿ. ಇರುವ ಸಣ್ಣ ಜಮೀನಿನಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಸಣ್ಣ ರೈತರ ಅಭಿವೃದ್ಧಿ ಯೋಜನೆಯಿಂದ 6000 ರೂ.ಗಳ ಸಾಲದ ನೆರವನ್ನು ಪಡೆದಳು. ಕೊಳವೆ ಬಾವಿಯನ್ನು ನಿರ್ಮಿಸಿದಳು. ಸರ್‌ಗಾಂವ್‌ನಲ್ಲಿ ಕೊಳವೆ ಬಾವಿಯನ್ನು ನಿರ್ಮಿಸಿದವರಲ್ಲಿ ದೇವಲಾಬಾಯಿಯೇ ಮೊದಲು. ಕೊಳವೆ ಬಾವಿಯ ನಿರ್ಮಾಣದ ನಂತರ ಅವಳಿಗಿದ್ದ ನೀರಾವರಿ ಸಮಸ್ಯೆ ನಿವಾರಣೆಯಾಯಿತು. ಬತ್ತವನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸಾಧ್ಯವಾಯಿತು. ಬತ್ತದೊಂದಿಗೆ ತರಕಾರಿಯನ್ನು ಬೆಳೆದಳು. ತನ್ನ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಿತು. ತನ್ನ ಆರ್ಥಿಕ ಸುಧಾರಣೆ ಸಣ್ಣ ರೈತರ ಅಭಿವೃದ್ಧಿ ಯೋಜನೆಯೇ ಮುಖ್ಯ ಕಾರಣ ಎನ್ನುತ್ತಾಳೆ ಶ್ರೀಮತಿ ಬಾಯಿ.

ಬಿಲಾಸಪುರದಲ್ಲಿ ಸಣ್ಣ ರೈತರ ಅಭಿವೃದ್ಧಿ ಯೋಜನೆ 1970ರ ಸೆಪ್ಟೆಂಬರ್ 2ರಂದು ಆರಂಭವಾಯಿತು. ಅಲ್ಲಿಂದ ಈವರೆಗೆ ಅಂದರೆ ಕಳೆದ 18 ತಿಂಗಳಲ್ಲಿ ನೆರವು ಪಡೆಯಲು ಅರ್ಹರೆಂದು ಸುಮಾರು 32,000 ಮಂದಿ ರೈತರನ್ನು ಗುರಿತಿಸಲಾಗಿದೆ. ಈವರೆಗೆ ಈ ಜಿಲ್ಲೆಯಲ್ಲಿ 117 5 ಲಕ್ಷ ರೂಗಳ ಸಾಲದ ನೆರವನ್ನು ರೈತರಿಗೆ ಒದಗಿಸಲಾಗಿದೆ. ಇದರಲ್ಲಿ 111 ಲಕ್ಷ ರೂಗಳನ್ನು ಸಹಕಾರಿ ಬ್ಯಾಂಕುಗಳ ಮೂಲಕ ನೀಡಲಾಗಿದೆ ಶ್ರೀಮತಿ ದೇವಲಾಬಾಯಿಗೆ ನೀಡಿರುವಂತೆ ಸಾಲಗಳು ಉತ್ತಮ ಫಲಿತಾಂಶವನ್ನು ನೀಡಿವೆ. ಜಿಲ್ಲೆಯಲ್ಲಿ 390 ಬಾವಿಗಳನ್ನು ತೋಡಲಾಗಿದೆ. ಇವುಗಳೆಲ್ಲಾ ಶೇಕಡಾ 25ರಷ್ಟು ಬಾವಿಗಳು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಗಳಿಗೆ ಸೇರಿವೆ. 113 ಪಂಪ್‌ಸೆಟ್‌ಗಳನ್ನು ಈ ಯೋಜನೆಯಿಂದ ಒದಗಿಸಲಾಗಿದೆ ಸಣ್ಣ ರೈತರ ಅಭಿವೃದ್ಧಿ ಯೋಜನೆಯಿಂದ ಗಳಿಸಿದ ಸಾಲವನ್ನು ಪೂರ್ಣವಾಗಿ ಬೇಸಾಯ ಅಭಿವೃದ್ಧಿಗೆ ಬಳಸುತ್ತಿದ್ದಾರೆ ಬಾವಿ ನಿರ್ಮಾಣಕ್ಕಾಗಿ ಆಗಲಿ, ಪಂಪ್ ಸೆಟ್ಟನ್ನು ಅಳವಡಿಸುವ ಸಲುವಾಗಿ ಆಗಲಿ, ನೇಗಿಲು ಅಥವಾ ಎತ್ತುಗಳನ್ನು ಕೊಳ್ಳುವ ಉದ್ದೇಶಕ್ಕಾಗಿ ಆಗಲಿ, ಅಥವಾ ಬೇಸಾಯ ಉಪಕರಣಗಳು, ರಾಸಾಯನಿಕ ಗೊಬ್ಬರವನ್ನು ಕೊಳ್ಳುವ ಉದ್ದೇಶಗಳಿಗೆ ಸಾಲದ ನೆರವು ದೊರೆಯುತ್ತಿದೆ.

● ●

(ನೂರನೇ ಪುಟದಿಂದ)

ರೆ ಸುಮಾರು ೩೦೦೦ವರಲ್ಲಿ ಒಬ್ಬರಿಗೂ ಹೆಚ್ಚು ನಗರ ಪ್ರದೇಶಗಳಲ್ಲಿದ್ದಾರೆ. ನಗರ ಪ್ರದೇಶದಲ್ಲಿ ಸರಾಸರಿ ೩೮೦೦ ಜನರಿಗೆ ಒಬ್ಬ ವೈದ್ಯನ ಸೇವೆಯೂ ದೊರೆಯುತ್ತದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ೧೫೦೦೦ ಜನರಿಗೊಬ್ಬ ವೈದ್ಯನ ಸೇವೆಯು ದೊರೆಯುತ್ತದೆ. ಸ್ವಾತಂತ್ರ್ಯವು ದೊರೆತು ಕಾಲುಶತಮಾನ ಸಂದರೂ ವರ್ಷವರ್ಷವೂ ಸಾವಿರಾರು ಮಂದಿ ವೈದ್ಯರು ಸೂಕ್ತ ತರಬೇತಿ ಹೊಂದಿ ಕಾಲೇಜಿನಿಂದ ಹೊರಬಿದ್ದರೂ ಅವರಲ್ಲಿ ನಿರುದ್ಯೋಗ ಸಮಸ್ಯೆಯು ಕಾಣಿಸಿಕೊಂಡರೂ ನಮ್ಮ ಗ್ರಾಮೀಣ ಪ್ರದೇಶದ ಜನರಿಗೆ ವೈದ್ಯಕೀಯ ಸೌಲಭ್ಯಗಳು ದೊರೆಯುವ ಲಕ್ಷಣಗಳು ಕಾಣುತ್ತಿಲ್ಲ. ತಿಂಗಳೊಂದರ ೮೦೦ ರೂಪಾಯಿ ಸಂಬಳ ದೊರೆಯಬಹುದಾದ ಅರುಣಾಚಲ ಪ್ರದೇಶಗಳಂತಹ ರಾಜ್ಯಗಳಿಗೆ ನಮ್ಮ ರಾಜ್ಯದ ವೈದ್ಯರು ಹೋಗಬಹುದೆಂದು ಆರೋಗ್ಯ ಸಚಿವರು ಸಲಹೆ ನೀಡುವಾಗ ನಮ್ಮ ರಾಜ್ಯದ ಗ್ರಾಮೀಣ ಪ್ರದೇಶದ ಜನತೆಯ ದುರವಸ್ಥೆಯನ್ನು ಮರೆತುಬಿಟ್ಟರೆನಿಸುತ್ತದೆ. ಪ್ರತಿಯೊಬ್ಬ ವೈದ್ಯನ ತರಬೇತಿಗಾಗಿ ಸರಕಾರವು ಸುಮಾರು ೧ ಲಕ್ಷ ರೂಪಾಯಿಗಳನ್ನು ವೆಚ್ಚಮಾಡುತ್ತದೆ. ಇದರ ಸದುಪಯೋಗವನ್ನು ರಾಜ್ಯವು ಪಡೆಯದೇ ಹೋಗುವುದು ಎಂದಿಗೂ ಶೋಭನೀಯವಲ್ಲ. ಸರಕಾರಿ ನೌಕರರಿಗಿಂತ ಸ್ವತಂತ್ರವಾಗಿ ವೈದ್ಯಕೀಯ ವೃತ್ತಿಯನ್ನು ಅವಲಂಬಿಸುವಂತೆ ನಿರುದ್ಯೋಗಿ ವೈದ್ಯರಿಗೆ ಉತ್ತೇಜನ ನೀಡಬೇಕು. ಆತ್ಮವಿಶ್ವಾಸ, ಸ್ವಾವಲಂಬನೆಗಳ ಭಾವನೆಯನ್ನು ಜಾಗೃತಗೊಳಿಸಿ ಅವರಿಂದ ರಾಜ್ಯಕ್ಕೆ ಸಮರ್ಥ ಸೇವೆಯನ್ನು ಪಡೆದುಕೊಳ್ಳುವುದೂ, ಅದಕ್ಕೆ ಅನುಕೂಲಕರವಾದ ಪರಿಸ್ಥಿತಿಯನ್ನು ನಿರ್ಮಿಸುವುದೂ ಸರಕಾರದ ಧ್ಯೇಯವಾಗಿರಬೇಕು. ● ●

ಸೆನೆಟಿಗೆ ಆಯ್ಕೆ

ಮೈಸೂರು ವಿಶ್ವ ವಿದ್ಯಾಲಯದ ಸೆನೆಟಿಗೆ ಉಡುಪಿಯ ಎಂ. ಎಲ್. ಎ. ಗಳಾದ ಶ್ರೀ ಮನೋರಮಾ ಮಧ್ವರಾಜರು ಓರ್ವ ಸದಸ್ಯೆಯಾಗಿ ಆಯ್ಕೆ ಹೊಂದಿರುವರೆಂದು ತಿಳಿದು ಬರುತ್ತದೆ.

Kindly

Contribute generously

to the

NAVAYUGA

GOLDEN JUBILEE FUND 1971

ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ವಾರ್ಷಿಕೋತ್ಸವ

ದೇಲಂಪಾಡಿಯ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ 28ನೇಯ 'ವಾರ್ಷಿಕೋತ್ಸವ'ವು ದಿನಾಂಕ 1ರಂದು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ಯಶಸ್ವಿಯಾಗಿ ನಡೆಸಲ್ಪಟ್ಟಿತು.

ತಾಳಮದ್ದಳೆ, ಬಯಲಾಟಗಳ ಕಾರ್ಯಕ್ರಮವಿತ್ತು. ಆರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಅತಿಥಿ ಕಲಾವಿದರನ್ನು ಆದರಿಸಿ ಬರಮಾಡಿಕೊಂಡರು.

ಸರ್ವರಿಗೂ ಸ್ವಾಗತ ಬಯಸಿ ಮಾತನಾಡುತ್ತಾ ಡಾ| ರಮಾನಾಥ ಬನಾರಿಯವರು ಸಂಘದ ಕಾರ್ಯ ಚಟುವಟಿಕೆಗಳ ಕುರಿತು ತಿಳಿಯ ಪಡಿಸಿದರು.

ಮಂಗಳೂರಲ್ಲಿ ಸಾರಿಗೆ ಸಚಿವರು

ಇದೇ ತಾ. 15ರಂದು ಮೈಸೂರು ಸರಕಾರದ ಸಾರಿಗೆ, ಪ್ರವಾಸ ಮತ್ತು ಮುಜರಾಯಿ ಮಂತ್ರಿಗಳಾದ ಶ್ರೀ ಅಜೀಜ್ ಶೇಟ್‌ರವರು ವಿಮಾನ ಮೂಲಕ ಮಂಗಳೂರಿಗೆ ಆಗಮಿಸಿದರು ಮಂಗಳೂರು ನಗರ ಸಭೆಯವರು ಮಂತ್ರಿಗಳಿಗೆ ಪೌರಸನ್ಮಾನ ನೀಡಿ ಮಾನಪತ್ರವನ್ನು ಅರ್ಪಿಸಿದರು ಇದರಲ್ಲಿ ಕೇಳಿ ಕೊಂಡಿದ್ದ ಬೇಡಿಕೆಗಳಿಗೆ ಸಚಿವರು ಉತ್ತರ ಕೊಡುತ್ತ ಆ ಕುರಿತು ಸಂಬಂಧಪಟ್ಟ ಸಚಿವರಲ್ಲಿ ನಿವೇದಿಸುವುದಾಗಿಯೂ ಮೋಟಾರ್ ವಾಹನ ತೆರಿಗೆಯಲ್ಲಿ ಕೆಲವು ಅಂಶವನ್ನು ನಗರ ಸಭೆಗೆ ಕೊಡಲು ಪ್ರಯತ್ನಿಸುವುದಾಗಿಯೂ ಹೇಳಿದರು. ಹೆಚ್ಚಿನ ಸೌಕರ್ಯಕ್ಕಾಗಿ ಮಂಗಳೂರಿನ ಸಿಟಿಬಸ್ಸನ್ನು ರಾಷ್ಟ್ರೀಕರಿಸುವುದಾಗಿಯೂ ಸಾರಿದರು.

ಸಂಜೆ ಮಂಗಳೂರು ಟೌನ್ ಹಾಲಿನಲ್ಲಿ ಜರಗಿದ ಜಿಲ್ಲಾ ಮುಸ್ಲಿಮ್ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಸಭೆಯ ಅಧ್ಯಕ್ಷತೆಯನ್ನು ವಹಿಸಿದರು.

ಮರುದಿನ ಬೆಳಿಗ್ಗೆ ಕೇಂದ್ರ ಸಹಕಾರಿ ಬ್ಯಾಂಕಿನ ಸಭಾ ಮಂದಿರದಲ್ಲಿ ನೆರವೇರಿದ ಆಡಳಿತ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಪೂರೈಸಿಕೊಡುವ ಪ್ರಯತ್ನದ ಅವಶ್ಯಕತೆಯ ಕುರಿತು ಮಾತನಾಡಿದರು.

ಶಿರ್ವ ವಿದ್ಯಾವರ್ಧಕ ಸಂಘದ ನೂತನ ಕಾರ್ಯ ನಿರ್ವಾಹಕ ಮಂಡಳಿ

ನಾಲ್ಕು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಶಿರ್ವದ ವಿದ್ಯಾವರ್ಧಕ ಸಂಘದ ಮಹಾಸಭೆಯು ಇತ್ತೀಚೆಗೆ ಜರಗಿದ್ದು ಈ ಕೆಳಗಿನ ಮಹನೀಯರನ್ನೊಳಗೊಂಡ ನೂತನ ಕಾರ್ಯ ನಿರ್ವಾಹಕ ಮಂಡಳಿಯು ಸರ್ವಾನುಮತದಿಂದ ರಚಿಸಲ್ಪಟ್ಟಿತು.

ಶ್ರೀಗಳಾದ ಮೋಹನ್‌ದಾಸ್ ಎಸ್ ಹೆಗ್ಡೆ (ಅಧ್ಯಕ್ಷ) ಎಸ್. ದುಗ್ಗಪ್ಪ ಹೆಗ್ಡೆ (ಉಪಾಧ್ಯಕ್ಷ) ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ) ವಿ. ಸುಬ್ಬಯ್ಯ ಹೆಗ್ಡೆ (ಕೋಶಾಧಿಕಾರಿ), ಕೆ. ಬಿ. ಶೆಟ್ಟಿ (ಶಾಲೆಗಳ ಕರೆಸ್ಪೊಂಡೆಂಟ್) ಎಮ್. ಗೋಪಾಲಕೃಷ್ಣ ಶೆಟ್ಟಿ, ಡಾ| ಕೆ. ರಾಧಾಕೃಷ್ಣ ಶೆಟ್ಟಿ, ಕೆ. ಸಿ. ನ್ಯಾಕ್, ಪಿ. ಶಿವಾಜಿ ಶೆಟ್ಟಿ, ಬಿ. ಜಯರಾಮ ಶೆಟ್ಟಿ, ಪಿ ಸೀತಾರಾಮ ಎಮ್. ಶೆಟ್ಟಿ, ಎಸ್. ಪರಿಣಾಕ್ಷ ಹೆಗ್ಡೆ, ಬಿ. ಭಾಸ್ಕರ ಶೆಟ್ಟಿ, ಎನ್. ಭಾಸ್ಕರ ಹೆಗ್ಡೆ. ವಾಸು ಶೆಟ್ಟಿ ಮತ್ತು ಕೆ. ರಘುರಾಮ ಹೆಗ್ಡೆ (ಸದಸ್ಯರು)

ಇದರ ನೂತನ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಇತ್ತೀಚೆಗೆ ಜರಗಿದ್ದು, ಶಿರ್ವ ಹಿಂದೂ ಹಾಯರ್ ಸೆಕೆಂಡರಿ ಶಾಲೆಯ ಪ್ರಧಾನ ಕಟ್ಟಡವನ್ನು ಪೂರ್ತಿ ಗೊಳಿಸುವುದಾಗಿಯೂ ರಜತ ಮಹೋತ್ಸವವನ್ನು ಜರಗಿಸ ಬೇಕಾಗಿಯೂ, ಆಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸುವುದಾಗಿಯೂ ನಿಶ್ಚೈಸಲಾಯ್ತು.

ಸಭೆಯಲ್ಲಿ ಈ ಕೆಳಗಿನ ಧನ ಸಹಾಯದ ವಾಗ್ದಾನಗಳು ಬಂದುವು.

ಶ್ರೀಯುತರುಗಳಾದ ಚಾವರ್ಕಿ ನಾರಾಯಣ ಶೆಟ್ಟಿ ರೂ. 5000, ಶ್ರೀ ಕೆ. ಬಿ. ಶೆಟ್ಟಿ, ಬೆಂಗಳೂರು ರೂ. 5000, ಶ್ರೀ ಕೆ. ಸಿ. ನ್ಯಾಕ್, ಮಂಗಳೂರು ರೂ. 3000, ಹಿಂದೂ ಹಾಯರ್ ಸೆಕೆಂಡರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘ ರೂ. 2001, ಸೂಡ ಕಲ್ಲಬೆಟ್ಟು ಗುತ್ತು ವಾಸು ಶೆಟ್ಟಿ ರೂ. 1001, ಶಿರ್ವ ಪಂಚಾಯ್ತ್ ಚೇರ್ಮನರಾದ ಪಿ. ಸೀತಾರಾಮ ಎಮ್. ಶೆಟ್ಟಿ ರೂ. 501, ಸೂಡ ಪಂಚಾಯ್ತ್ ಚೇರ್ಮನರಾದ ಎಸ್. ಪರಿಣಾಕ್ಷ ಹೆಗ್ಡೆ ರೂ 501, ಶಿರ್ವ ಬಗ್ಗ ಶಾಕ್ಯಾರ್ ನಾರಾಯಣ ಶೆಟ್ಟಿ ರೂ. 101.

ವಿದಾಯ ಕೂಟ

ದೇಲಂಪಾಡಿಯ ಮಯ್ಯಾಳ ಶ್ರೀ ಗೋಪಾಲಕೃಷ್ಣ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದುವ ಶ್ರೀ ಎನ್. ನಾರಾಯಣ ನಾಯಕರಿಗೆ ವಿದಾಯ ಕೂಟವೊಂದನ್ನು ಇತ್ತೀಚೆಗೆ ಶ್ರೀ ಕೆ. ಎಸ್. ಗೋಪಾಲಕೃಷ್ಣ ಭಟ್ರ ಅಧ್ಯಕ್ಷತೆಯಲ್ಲಿ ನಡೆಸಲಾಯ್ತು. ಅಧ್ಯಾಪಕ ಶ್ರೀ ಕೆ ಸುಬ್ರಾಯ ಭಟ್ರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯರೂ ಮೆನೇಜರರೂ ಆದ ಶ್ರೀ ಕೆ. ಜಿ. ಕೃಷ್ಣ ಭಟ್ರು ಶ್ರೀಯುತರ ಸೇವೆಯನ್ನು ಪ್ರಶಂಶಿಸಿದರು ತಾತ್ಕಾಲಿಕ ಬಿಡುಗಡೆ ಹೊಂದುವ ಶ್ರೀ ದೇವಪ್ಪ ಶೆಟ್ಟರಿಗೂ ವಿದಾಯ ಕೋರಲ್ಪಾತು. ಶ್ರೀಗಳಾದ ಕೆ. ವಿ. ಕೇಶವ ಭಟ್, ಯಂ. ನಾರಾಯಣ ಕಾಮತರು ಸಭಿಕರ ಪರವಾಗಿ ಮಾತನಾಡಿದರು ಶ್ರೀ ದೇವಪ್ಪ ಶೆಟ್ಟರು ಅಧ್ಯಾಪಕನ ಹೊಣೆಗಾರಿಕೆಯ ಕುರಿತು ತಿಳಿಯ ಪಡಿಸಿದರು ಶ್ರೀ ಎನ್. ನಾರಾಯಣ ನ್ಯಾಕರು ತನ್ನನ್ನು ಸನ್ಮಾನಿಸಿದ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸಿದರು. ಜನ ಗಣ ಮನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಿದ್ಧಾಪುರಕ್ಕೆ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್

ಸಿದ್ಧಾಪುರದಲ್ಲಿ ಒಂದು ಹೊಸ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶ ಶ್ರೀ ಪಿ ವಿ. ಕುಲಕರ್ಣಿಯವರು ತಾ 10ರಂದು ಉದ್ಘಾಟಿಸಿದರು.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ (ನವಯುಗ ಪ್ರೆಸ್) ಉಡುಪಿ, ದ.ಕ.

ಸಮರ್ಪಣ ೩

(ಎರಡನೇ ಪುಟದಿಂದ)

ಗನುಕೂಲಿಸುವಂತೆ ಪರಿವರ್ತಿಸಲು ಆಜ್ಞೆ ಕೊಟ್ಟು, ಅದನ್ನು ಶೃಂಗರಿಸಲು ರೂವಾರಿಗಳನ್ನು ನೇಮಿಸಿದ. ಬಂದ ಅತಿಥಿ–ಅಭ್ಯಾಗತರ ವಾಸಕ್ಕೆ, ಅವರ ಸ್ಥಾನ—ಮಾನಗಳಿಗೆ ಸರಿದೂಗುವ ಗೃಹಗಳ ನಿರ್ಮಾಣದ ಕೆಲಸ ಪ್ರಾರಂಭವಾಯಿತು.

ಜೊತೆಗೆ ವಿಶಾಲವಾದ ಚಪ್ಪರದ ನಿರ್ಮಾಣ. ಅದನ್ನು ಅಲಂಕರಿಸುವುದಕ್ಕೆ ಕುಸುರಿ ಕೆಲಸ ಬಲ್ಲ ಕೆಲಸಗಾರರು. ಪಾಕಶಾಲೆ, ಭೋಜನ ಶಾಲೆಗಳ ನಿರ್ಮಿತಿ. ಅವುಗಳ ಮೇಲ್ವಿಚಾರಣೆಗೆ ಸೂಕ್ತ ಸಿಬ್ಬಂದಿ.

ವಿವಾಹ ಸಮಾರಂಭದ ಸಮಸ್ತ ಅಂಗಗಳೂ ಅತಿಥಿಗಳಿಗೆ ಕಾಣಲೆಂದು, ಮಂಟಪವನ್ನು ಚಪ್ಪರದ ಮಧ್ಯ ಭಾಗದಲ್ಲಿ ಎತ್ತರವಾದ ವೇದಿಕೆಯ ಮೇಲೆ ಅಳವಡಿಸ ಬೇಕೆಂದು ತೀರ್ಮಾನಿಸಿದರು. ಮಂಟಪದ ಸೊಗಸು–ಸೌಂದರ್ಯವನ್ನು ಹೆಚ್ಚಿಸಲು, ಸಿರಸಿ—ಸಾಗರಗಳಿಂದ ಗುಡಿಕಾರರನ್ನು ಕರೆಸಿಕೊಳ್ಳಲಾಯಿತು.

ರಾಜಕುಮಾರಿಯ ಮದುವೆ.

ದೇಶದ ವಿವಿಧ ಭಾಗದಿಂದ, ವಿವಿಧ ಆಹಾರ ಕ್ರಮದ ಜನ ಬರುವ ನಿರೀಕ್ಷೆ. ಅವರವರಿಗೆ ಒಗ್ಗುವ ಆರೋಗಣೆಯನ್ನು ಬಡಿಸುವ ಉದ್ದೇಶ್ಯದಿಂದ, ಆಯಾ ಪ್ರದೇಶದ ಅಡುಗೆ ಮಾಡ ಬಲ್ಲ ಅಡುಗೆಯವರನ್ನು ಕರೆಸಿಕೊಳ್ಳಲಾಯಿತು.

ಅನಾದರಣೆಗೆ ಗುರಿಯಾಗಿದ್ದ–ರಾಜವಾಡೆಯನ್ನು ಬಂದು ಸೇರುವ ಮೈಲುದ್ದದ ರಸ್ತೆಗಳು—ವಾಹನ ಸಂಚಾರಕ್ಕೂ, ಮನುಷ್ಯ ಪ್ರಯಾಣಕ್ಕೂ ಯೋಗ್ಯವಾಗುವ ರೀತಿಯಲ್ಲಿ ರಿಪೇರಿಯಾದುವು.

ಸಂಭ್ರಮವೋ ಸಂಭ್ರಮ! ಗದ್ದಲವೋ ಗದ್ದಲ.

ಮದುವೆಯ ಸಿದ್ಧತೆಗೆಂದು ಗೋವಿಂದ ಹೊನ್ನಿನ ಹೊಳೆ ಹರಿಸಿದ.

ಈ ಜಂಜಾಟದಲ್ಲಿ ಲೋಕಾಂಬಿಕೆಯತ್ತ ಯಾರೂ ಹೊರಳಿ ನೋಡಲಿಲ್ಲ. ರಾಜವಾಡೆಯಲ್ಲಿನ ಬಹುಮಂದಿಗೆ ಅವಳ ಯೋಗಕ್ಷೇಮ ಬೇಕಾಗಿಯೂ ಇರಲಿಲ್ಲ. ಅದರಲ್ಲಿ ಅವರದಾದರೂ ಏನು ತಪ್ಪು?

ಮಗಳದೊಂದು ಮದುವೆಯಾಗಬೇಕು. ಮದುವೆಯೆಂದ ಮೇಲೆ ಹಸೆಮಣೆಯ ಮೇಲೆ ಕೂಡಲು ಒಂದು ಗಂಡು ಬೇಕು. ಕುರುಡನೋ—ಕುಂಟನೋ, ಅಂಧನೋ—ಬಧಿರನೋ, ಅಜ್ಞನೋ—ಪ್ರಾಜ್ಞನೋ, ಯುವಕನೋ—ವೃದ್ಧನೋ—ಅಂತೂ ಒಂದು ಗಂಡಾದರೆ ತೀರಿತು.

ಮದುವೆ ದೈಹಿಕ ವ್ಯಾಪಾರವೇ?

ಅಥವಾ ಮನಸ್ಸನ್ನು ಅರಳಿಸಿ, ಬಾಳು ಒಪ್ಪವಾಗುವಂತೆ ಮಾಡುವ ಒಂದು ಸಂಸ್ಕಾರವೇ?

ಸ್ತ್ರೀಯರೂ ಈ ವಿಚಾರದಲ್ಲಿ ಹೆಚ್ಚಾಗಿ ಆಲೋಚಿಸಿದಂತೆ ಕಾಣಲಿಲ್ಲ. ನೋಡುವುದಕ್ಕೆ ಹೇಗಿದ್ದರೇನು? ಶೀಲ ಮುಖ್ಯ. ಜೊತೆಗೆ ಉಂಡುಟ್ಟು ಮೆರೆಯುವುದಕ್ಕೆ ಬೇಕಾಗುವಷ್ಟು ಗಂಟು, ಅನ್ನ ಬಟ್ಟೆ, ಒಡವೆಗಳೇ ಮುಖ್ಯವೆಂದು, ಹುಟ್ಟಿದ್ದೇ ಅದಕ್ಕೆಂದು ಭ್ರಮಿಸುವ ಸ್ತ್ರೀಯರು, ಲೋಕಾಂಬಿಕೆಯ ಮನದಳಲನ್ನು ಅಳೆಯದಾದರು.

ಅವರ ಅಳತೆಗೋಲಿನಿಂದ ಅವಳಿಗೆ ಯಾವುದರಲ್ಲಿಯೂ ಕೊರತೆ ಇರಲಿಲ್ಲ.

ಗಂಡು ಮಾಂಡಳಿಕ ಶ್ರೇಷ್ಠ. ಸಾಲದ್ದಕ್ಕೆ ರೂಪವಂತ.

ಬೇಕು ಬೇಕಾದ ಸೀರೆ ಕುಪ್ಪಸಗಳು.

ಹೇರಿಕೊಳ್ಳುವಷ್ಟು ಬಂಗಾರದ ಒಡವೆಗಳು.

ಇನ್ನೇನು ಬೇಕು?

ಇಷ್ಟಕ್ಕೇ ಬದುಕನ್ನು ಸೀಮಿತಗೊಳಿಸಿದ ಲಲನೆಯರು ಲೋಕಾ ಅದೃಷ್ಟಶಾಲಿ ಎಂದು ಮೌನ ತಾಳಿದರು.

ಹೊಟ್ಟೆ ತುಂಬಿಸುವುದು, ಮಕ್ಕಳನ್ನು ಪಡೆಯುವುದು.

ಬೇರೆ ಮೌಲ್ಯಗಳೇ ಬದುಕಿನಲ್ಲಿ ಗುರಿಗೊಳ್ಳದಾಗ ಮದುವೆ ಒಂದು ವ್ಯವಹಾರ.

ಲೋಕಾ ಆರಿಗೂ ತನ್ನ ಕೊರಗನ್ನು ಹೇಳಿಕೊಳ್ಳುವಂತಿರಲಿಲ್ಲ.

ಅವಳ ನವುರಾದ ಭಾವನೆಗಳಿಗೆ ಉಳಿದವರ ಮುಂದು ಬೆಲೆ ಬರುವುದಾದರೂ ಎಂತು?

ಅವಳು ಕೊರಗಿ ಕೊರಗಿ ಕಡ್ಡಿಯಾದಳು. ಮುಖದಲ್ಲಿ ಚಿಮ್ಮುತಿದ್ದ ಲವಲವಿಕೆ ಪೂರ್ಣವಾಗಿ ಅಳಿಯಿತು.

ಅವಳಿಗೆ ಊಟ ರುಚಿಸದು. ನಿದ್ದೆ ಬರದು. ಯಾವುದರಲ್ಲೂ ಮನಸ್ಸು ಓಡದು.

ತಾಯಿಗೆ ಅವಳ ಮನದುಮ್ಮಳ ತಿಳಿದಿತ್ತು.

ಆದರೆ ಏನೂ ಮಾಡುವಂತಿರಲಿಲ್ಲ.

ತನ್ನ ಸಂಕಟ ತಡೆಯಲಾರದೆ 'ನೀನು ಹೀಗೆ ಅನ್ನಾಹಾರ ಬಿಟ್ಟು ಅಳುತ್ತ ಕುಳಿತರೆ ನಿನ್ನ ಗತಿ'

ಕಣ್ಣೀರನ್ನೊರಸಿ ಕೊಳ್ಳುತ್ತ 'ಗತಿ! ಅದಕ್ಕೊಂದು ಗತಿ ಕಾಣಿಸಿಯಾಗಿದೆಯಲ್ಲ. ಮಣ್ಣೊಳಗೆ ಮಣ್ಣಾಗುವುದೊಂದೇ ಉಳಿದಿದೆ. ಅದನ್ನೇ ಕಾಯುತಿದ್ದೇನೆ.'

'ಎಲ್ಲರೂ ಹೋಗುತ್ತಾರೆ. ಅಲ್ಲಿಯ ತನಕ ಇರುವಂತಿರ ಬೇಕು'

'ನಾನು ಎಲ್ಲರಂತಲ್ಲವಮ್ಮ'

'ಅದು ನನಗೆ ತಿಳಿದಿದೆ'

'ತಿಳಿದೂ—ತಿಳಿದೂ ಈ ಮಾತನ್ನೇಕೆ ಆಡುತ್ತೀಯಾ'

'ಕಂಡವರು ಏನು ಹೇಳುತ್ತಾರೆ. ಅದನ್ನಾದರೂ ಯೋಚಿಸ ಬೇಡವೇ'

'ಅವರ ದೊಂಡೆ ಕಟ್ಟುವುದು ಯಾರಿಂದಾದೀತು. ನನ್ನ ಬದುಕಿನ ಕಲ್ಪನೆಯೇ ಬೇರೆ ಇರುವಾಗ ನನಗೆ ಸರಿಕಾಣುವಂತೆ ಇರುವುದಕ್ಕೆ ಬಿಡು. ನಿನ್ನ ದಮ್ಮಯ್ಯ'

'ಕನ್ನಡಿಯನ್ನೆತ್ತಿ ಮುಖ ನೋಡಿಕೊ. ತಿಂಗಳ ಕೆಳಗೆ ನಿನ್ನನ್ನು ನೋಡಲು ಕಣ್ಣೆರಡು ಸಾಲದಿತ್ತು. ಈಗಲೋ? ಕರುಳೇ ಕಿತ್ತು ಬರುತ್ತೆ'

'ಅದಕ್ಕೇ ಹೇಳು ನನ್ನ ಮನಸ್ಸು. ಆ ಮನಸ್ಸನ್ನು ಕವಿದಿರುವ ಕತ್ತಲು. ಅದು ಕಳೆದರೆ ನಾನು ಸುಖಿ. ಕವಿದ ಮೋಡ ಚದುರಲಿಲ್ಲ–ಚಿರಃ ದುಃಖಿನಿ. ನನ್ನ ಗೊಡವೆಗೆ ಬರಬೇಡವಮ್ಮ. ಅದರಿಂದ ನನ್ನ ನೋವು ಕನಲುತ್ತದೆ. ನಿನಗೋ, ನಾನು ಅನುಭವಿಸುವುದನ್ನು ನೋಡಲಾಗುವುದಿಲ್ಲ'

'ನಾನು ಹೇಳಿದ್ದನ್ನು ಕೇಳು. ಮೊದಲನ್ನು ಸ್ನಾನ ಮಾಡು. ಮೈಯ ಮಾಲಿನ್ಯ ಹೋಗಲಿ. ಮನಸ್ಸೂ ಹಗುರಾಗುತ್ತೆ. ಈ ಮಲಿನಾಂಬರ ಕಳಚಿ ಒಳ್ಳೆಯ ಬಟ್ಟೆ ಉಟ್ಟುಕೋ. ಗುಡಿಗೆ ಹೋಗಿ ಹಣ್ಣು–ಕಾಯಿ ಮಾಡಿಸಿಕೊಂಡು ಬರುವ. ಎಲ್ಲ ಸರಿಹೋಗುತ್ತೆ'

'ಏನು ಸರಿಹೋಗುತ್ತೋ'

ತಾಯಿಯ ಸಲಹೆ ಮಗಳಿಗೆ ಬೇಡವಾಗಿತ್ತು. ಆಕೆ ಉದಾಸೀನಳಾಗಿದ್ದಳು.

ವಿಧಿಯಿಲ್ಲದೆ, ತಾಯಿಯ ಬಲವಂತಕ್ಕೆ ಆಕೆ ಸ್ನಾನ ಗೃಹಕ್ಕೆ ನಡೆದಳು.

ದಾಸಿಯರ ಸಮೂಹವೇ. ಅಲ್ಲಿ ಅವಳ ಕೈಂಕರ್ಯಕ್ಕೆ—ಕಾಲಿಗೊಬ್ಬರಂತೆ, ಕೈಗೊಬ್ಬರಂತೆ–ಕಾದು ನಿಂತಿತ್ತು.

ಬಹಳ ದಿನಗಳಿಂದ ಎಣ್ಣೆ–ನೀರು ಕಾಣದ ಅವಳ ಕೂದಲು ಸಿಕ್ಕುಗಟ್ಟಿತ್ತು. ಅದನ್ನು ಬಿಡಿಸಿ. ಹೆರಳಿಗೆ ನೀರು ಕಾಣಿಸಿದರು.

ಸುಗಂಧ ಮಿಶ್ರಿತ ನೀರಿನಲ್ಲಿ ಮೈ ತೊಳೆದರು.

ರಾಜೋಚಿತ ಅಭ್ಯಂಜನ ನಡೆಯಿತು.

ಈ ಮಜ್ಜನದಿಂದ ಲೋಕಾ–ತಾಯಿ ತಿಳಿಸಿದಂತೆ–ಪುಳಕಿತಳಾದಳು. ಅವಳು ಸ್ನಾನ ಮುಗಿಸಿ, ಅಲಂಕಾರ ಗೃಹಕ್ಕೆ ಬರುವ ಮೊದಲು ಅವಳ ಮೈಗೊಪ್ಪುವ ದಿವ್ಯಾಂಬರ ಹಿಡಿದು ಸೇವಕಿಯೊಬ್ಬಳು ಕಾದು ನಿಂತಿದ್ದಳು.

'ಈ ಹೊಸ ಸೀರೆ ನನಗಿಂದು ಬೇಡ. ಒಂದು ಸಾದಾ ಸೀರೆಯುಡಿಸಿ, ಅದಕ್ಕೆ ಹೊಂದಿಕೊಳ್ಳುವ ಕಂಚುಕ ಬಿಗಿ'

ಇದು ಪರಿಚಾರಿಕೆಗೆ ಲೋಕಾ ಮಾಡಿದ ಆಜ್ಞೆ.

'ಇದು ನಿಶ್ಚಿತಾರ್ಥದಂದು ಒಪ್ಪಿಸಿದ ಸೀರೆ—ಆಭರಣಗಳು ಮಂತ್ರಪೂತ ನೀರಿನಲ್ಲಿ ಮೈತೊಳೆದು, ಅವುಗಳನ್ನು ಧರಿಸಿ ದೇವರ ದರ್ಶನ ಮಾಡಿ ಬರುವುದು ಸಂಪ್ರದಾಯ'

ಅಲ್ಲೇ ನಿಂತಿದ್ದ ವೃದ್ಧೆಯೊಬ್ಬಳು ಆ ಮನೆಯಲ್ಲಿ ನಡೆದು ಬಂದ ಸಂಪ್ರದಾಯವನ್ನು ವಿವರಿಸಿದಳು. ಆ ವಿವರದಿಂದ ಲೋಕಾಂಬಿಕೆಯ ಉದ್ವಿಗ್ನತೆ ಹೆಚ್ಚಿತು.

'ಯಾರ ನಿಶ್ಚಿತಾರ್ಥ! ಯಾರು ಒಪ್ಪಿಸಿದ್ದು? ಯಾವ ಸಂಪ್ರದಾಯ'

ಲೋಕಾಂಬಿಕೆಯ ಈ ಪ್ರಶ್ನೆಯಿಂದ ಅಲ್ಲಿ ನೆರೆದವರು ಅಚ್ಚರಿಗೊಂಡರು.

ಒಳಗೊಳಗೇ—ಅವಳ ಅಜ್ಞತೆಗಾಗಿ—ನಕ್ಕರು.

'ಯಾರ ನಿಶ್ಚಿತಾರ್ಥ ಅಂದರೆ—? ತಮ್ಮ ಲಗ್ನದ ಮುಹೂರ್ತ ನಿಶ್ಚೈಸಿದಂದು, ನಾಳೆ ನಿಮ್ಮ ಕೈ ಹಿಡಿಯಲಿರುವ ಭಾಗ್ಯವಂತರು ನಿಮಗೊಪ್ಪಿಸಿದ ಕಾಣಿಕೆಗಳು. ಮಂತ್ರಪೂತ ನೀರಿನಲ್ಲಿ ಸ್ನಾನ ಮುಗಿಸಿ ಬಂದ ನೀವು ಅವುಗಳನ್ನು ಧರಿಸಿಯೇ ಶಿವ ಗುಡಿಗೆ ಹೋಗಬೇಕು. ಇದು ತಲೆಮಾರಿನಿಂದ ನಡೆದು ಬಂದ ಸಂಪ್ರದಾಯ.'

ತನ್ನ ಮಾನ ದಂಡದಿಂದ ಲೋಕಾಂಬಿಕೆಯನ್ನು ಅಳೆಯ ಹೊರಟ ಆ ವೃದ್ಧೆ ಎಲ್ಲವನ್ನೂ ವಿವರಿಸಿದಳು.

'ನನ್ನ ಮದುವೆ? ಆಗಲೇ ಆಗಿ ಹೋಗಿದೆಯಲ್ಲ. ನನಗಿನ್ನೆಂತಹ ಮದುವೆಯೋ. ಈ ಕಾಣಿಕೆಗಳನ್ನು ಅವರ ಕೈ ಹಿಡಿಯಲಿರುವ ಹೆಣ್ಣಿಗೊಪ್ಪಿಸ ಹೇಳು. ನನಗಿದರ ಅಗತ್ಯವಿಲ್ಲ.'

ಅವುಗಳನ್ನು ಆಕೆ ಕಣ್ಣೆತ್ತಿಯೂ ನೋಡಲಿಲ್ಲ.

ಲೋಕಾಂಬಿಕೆ ತಿಳಿ ನೀಲಿ ಸೀರೆಯುಟ್ಟು, ಅದಕ್ಕೆ ಹೊಂದಿಕೊಳ್ಳುವ ಬಣ್ಣದ ಕುಪ್ಪಸ ತೊಟ್ಟು, ಮೈಮೇಲೆ ಯಾವ ಆಭರಣಗಳನ್ನೂ ಹಾಕಿಕೊಳ್ಳದೆ ದೇವ ದರ್ಶನಕ್ಕೆ ಹೊರಟು ನಿಂತಳು.

(ಮುಂದುವರಿಯುವುದು)

NAVAYUGA 20-4-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಪತ್ತಿನಲ್ಲಿ—

ಕಳ್ಳರ ಕಣ್ಣು ಕೋರಿಗಳಲ್ಲಿ

ಇತ್ತೀಚೆಗೆ ಅರ್ಥ ಮಂತ್ರಿ ವೈ. ಬಿ. ಚವ್ಹಾಣರು 1969ನೆಯ ಸಪ್ಟೆಂಬರ 19ರಿಂದ 1971ಮೇ 31ನೇ ದಿನಾಂಕದ ವರೆಗೆ ಹದಿನಾಲ್ಕು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಆದ ಒಂದು ಕೋಟಿ, ಇಪ್ಪತ್ತೊರು ಲಕ್ಷ ರೂಪಾಯಿಗಳ ವಂಚನೆ ಮತ್ತು ದರೋಡೆಗಳ ಸಂಖ್ಯೆಯನ್ನು ಮುಂಡಿಸಿದರು. ಒಟ್ಟು ಹತ್ತು ದರೋಡೆ, ಮುನ್ನೂರ ಇಪ್ಪತ್ತು ವಂಚನೆ ಪ್ರಕರಣಗಳಲ್ಲಿ ಅಷ್ಟೇ ಅಲ್ಲದೆ ಮತ್ತೂ 3 ಸಾವಿರದ 214 ರೂಪಾಯಿಗಳೂ ಕಳವಾಗಿದ್ದುವು ಈ ತಲೆತಿರುಗಿಸುವಂಥ ಭಾರೀ ಮೊತ್ತದಲ್ಲಿ 8 ಲಕ್ಷ 4ಸಾವಿರದ 214 ರೂಪಾಯಿ ವಸೂಲಾಗಿದ್ದು, ಇನ್ನು ಪೋಲೀಸರ ಪತ್ತೆಗೆ ಬಾಕಿಯಾಗಿ ಉಳಿದಿರುವ ಮೊತ್ತ ಒಂದುಕೋಟಿ, 14ಲಕ್ಷ, 98 ಸಾವಿರದ 970 ರೂಪಾಯಿ.

ಈ ಮೊತ್ತದಲ್ಲಿ ಹೆಚ್ಚಿನ ಹಣ ಸೆಂಟ್ರಲ್ ಬ್ಯಾಂಕ್ ಒಂದರಿಂದಲೇ ಕಾಣೆಯಾಗಿದ್ದು ಇಪ್ಪತ್ತು ಸಾರಿಯ ವಂಚನೆ ಪ್ರಕರಣಗಳಲ್ಲಿ ಅದು ಕಳೆದುಕೊಂಡ 58ಲಕ್ಷ, 33ಸಾವಿರದ 480 ರೂಪಾಯಿಗಳಲ್ಲಿ ಕೇವಲ 8900 ರೂಪಾಯಿ ವಸೂಲಾಗಿದೆ. ಸೆಂಟ್ರಲ್ ಬ್ಯಾಂಕ್ ಎರಡು ಸರ್ತಿ ದರೋಡೆಗೆ ಬಲಿಯಾಗಿ ಕಳ್ಳರ ಕೈ ಸೇರಿದ 1ಲಕ್ಷ 48 ಸಾವಿರದ 422 ರೂಪಾಯಿಗಳಲ್ಲಿ ಕೇವಲ 65 ಸಾವಿರ ರೂಪಾಯಿ ಮಾತ್ರವೇ ವಾಪಾಸು ಬಂದಿದ್ದು, ಉಳಿದ 83,422 ರೂಪಾಯಿ 'ಗೋವಿಂದಾ' ಆಗಿದೆ.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹೆಮ್ಮೆಯ ಹೆಸರು ಕೆನರಾ ಬ್ಯಾಂಕಿನದು. ಯಾವ ದರೋಡೆ, ವಂಚನೆಗೂ ಇದರ ಯಾವುದೇ ಶಾಖೆಯೂ ಬಲಿಯಾಗಿಲ್ಲ. 1 ವರುಷ 8 ತಿಂಗಳು 21 ದಿನದಲ್ಲಿ ಏಕೈಕ ಕಾಸನ್ನೂ ಕಳೆದುಕೊಂಡಿಲ್ಲ.

ಸಿಂಡಿಕೇಟ್ ಬ್ಯಾಂಕಿನಿಂದ ವಂಚನೆಯಾದ 99557 ರೂಪಾಯಿಗಳಲ್ಲಿ, 48558 ರೂಪಾಯಿಗಳು ಮರಳಿ ದೊರಕಿವೆ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಕಳಕೊಂಡ 47916 ರೂಪಾಯಿಗಳಲ್ಲಿ ಚಿಕ್ಕಾಸೂ ಮರಳಿ ದೊರಕಿಲ್ಲ.

ದೇನಾ ಬ್ಯಾಂಕಿನಿಂದ ವಂಚನೆಯಾಗಿರುವ (ಮಂಗಳೂರಿನಲ್ಲಿ) 10 ಸಾವಿರದ 356 ರೂಪಾಯಿ ಮತ್ತು ಯುನೈಟೆಡ್ ಬ್ಯಾಂಕಿನ 42 ಸಾವಿರ ರೂಪಾಯಿಗಳೊಂದಿಗೆ ಯೂನಿಯನ್ ಬ್ಯಾಂಕ್ ಕಳೆದುಕೊಂಡಿರುವ 33,43,777 ರೂಪಾಯಿ ಹಾಗೂ ಅಲಹಾಬಾದ್ ಬ್ಯಾಂಕಿನಿಂದ ತಪಾವತಿಯಾಗಿರುವ 12 ಸಾವಿರದ ಐದುನೂರ ಐವತ್ತಾರು ರೂಪಾಯಿಗಳಲ್ಲಿ ಒಂದು ಪೈಸೆ ಕೂಡ ಹಿಂದೆ ಬಂದಿಲ್ಲ.

ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್‌ನಿಂದ ವಂಚಿಸಲ್ಪಟ್ಟ 192728 ರೂಪಾಯಿಗಳಲ್ಲಿ 12ಲಕ್ಷ, 47 ಸಾವಿರದ 95 ರೂಪಾಯಿ ವಾಪಾಸಾಗಿದೆ.

ಬ್ಯಾಂಕ್ ಆಫ್ ಬರೋಡಾದಿಂದ ಮೋಸಗೊಳಿಸಲ್ಪಟ್ಟ ಎರಡು ಲಕ್ಷದ 536 ರೂಪಾಯಿಗಳಲ್ಲಿ ವಸೂಲಾಗಲು ಬಾಕಿ ಇರುವ ರೂಪಾಯಿ 1,66,946.

ಪಂಜಾಬ್ ನ್ಯಾಶನಲ್ ಬ್ಯಾಂಕಿನಿಂದ 691572 ರೂಪಾಯಿ ವಂಚಕರ ಕೈ ಸೇರಿದ್ದು ಬ್ಯಾಂಕಿಗೆ ವಾಪಾಸಾಗಲು ಬಾಕಿ ಇರುವ ರೂಪಾಯಿ 617107.

ಬ್ಯಾಂಕ್ ಆಫ್ ಇಂಡಿಯಾದಿಂದ 10,40,505 ರೂಪಾಯಿಗಳು ವಂಚಿಸಲ್ಪಟ್ಟಿದ್ದು, ಇದರಲ್ಲಿ, 66,786 ರೂಪಾಯಿಗಳಷ್ಟೇ ಹಿಂದಕ್ಕೆ ಬಂದಿವೆ.

ಇಂಡಿಯನ್ ಬ್ಯಾಂಕು ವಂಚನೆಗೊಳಗಾಗಿ ಕಳೆದುಕೊಂಡ 168000 ರೂಪಾಯಿಗಳು. ಅದರಲ್ಲಿ ಇನ್ನು ವಾಪಾಸಾಗಲು 74ಸಾವಿರ ರೂಪಾಯಿ ಮಾತ್ರ ಬಾಕಿ. ಬ್ಯಾಂಕ್ ಆಫ್ ಮಹಾರಾಷ್ಟ್ರದಿಂದ ವಂಚಿಸಲ್ಪಟ್ಟ 16,359 ರೂಪಾಯಿಗಳಲ್ಲಿ ಹಿಂದಕ್ಕೆ ಬಂದುದು ಎಷ್ಟೆನ್ನುತ್ತೀರಾ? ಬರೇ ಎಂಟುನೂರ ಐವತ್ತು ರೂಪಾಯಿಗಳು!

ಇನ್ನು ದರೋಡೆಗಳು

ಬ್ಯಾಂಕ್ ಆಫ್ ಇಂಡಿಯಾ ದರೋಡೆ ಪ್ರಕರಣಗಳಲ್ಲಿ 2ಲಕ್ಷದ 85ಸಾವಿರ ರೂಪಾಯಿಗಳನ್ನು ಕಳೆದು ಕೊಂಡಿದ್ದು, ಅದರಲ್ಲಿ 5ಸಾವಿರ ರೂಪಾಯಿ ವಾಪಾಸಾಗಿದೆ.

ಅಲಹಾಬಾದ್ ಬ್ಯಾಂಕು ಕಳೆದುಕೊಂಡ ಇಪ್ಪತ್ತೊಂದು ಸಾವಿರದ ನಾನ್ನೂರು ರೂಪಾಯಿಗಳ ಪೈಕಿ ಏಳು ಸಾವಿರದ ಮುನ್ನೂರು ರೂಪಾಯಿಗಳಷ್ಟೇ ವಸೂಲಾಗಿವೆ. ಪಂಜಾಬ್ ನ್ಯಾಶನಲ್ ಬ್ಯಾಂಕಿನಿಂದ ಕಳವಾದ 29120 ರೂಪಾಯಿಗಳಲ್ಲಿ ಚಿಕ್ಕಾಸೂ ವಸೂಲಾಗಿಲ್ಲ. ದೇನಾ ಬ್ಯಾಂಕಿನಿಂದ ದರೋಡೆಯಾದ 12,900 ರೂಪಾಯಿಗಳಲ್ಲಿ ಒಂದು ಪೈಸೆಯೂ ದೊರಕಿಲ್ಲ.

ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಹಲವು ದರೋಡೆ ಪ್ರಕರಣಗಳಲ್ಲಿ 1 ಲಕ್ಷ, 17 ಸಾವಿರ ರೂಪಾಯಿಗಳನ್ನು ಕಳೆದುಕೊಂಡಿದ್ದು, ಚಿಕ್ಕಾಸೂ ವಾಪಾಸಾಗಿಲ್ಲ. ಇವುಗಳಲ್ಲಿ ಕೆಲವು ಬ್ಯಾಂಕುಗಳು ನಷ್ಟದ ಹಣಕ್ಕಾಗಿ ವಿಮಾ ಕಂಪೆನಿಯ ಮೊರೆಹೊಕ್ಕಿವೆ.

ಇಷ್ಟು ಅಲ್ಪಾವಧಿಯಲ್ಲಿ ಇಷ್ಟೊಂದು ಬಹುಸಂಖ್ಯೆಯಲ್ಲಿ ಭಾರತೀಯ ಬ್ಯಾಂಕುಗಳು ದರೋಡೆ ವಂಚನೆಗೆ ಬಲಿಯಾಗಿರುವುದನ್ನು ನೋಡುವಾಗ ನಿಜಕ್ಕೂ ಭಾರತದ ಆರ್ಥಿಕ ಪ್ರಗತಿಗೆ ಬಂದಿರುವ ಗಂಡಾಂತರವೊಂದರ ಮುನ್ಸೂಚನೆ ಇದೇನೋ ಅನಿಸುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳ ಹೊರತಾಗಿರುವ ಇತರ ಕೆಲವು ಖಾಸಗೀ ಬ್ಯಾಂಕುಗಳೂ ದರೋಡೆ, ವಂಚನೆಗೆ ಬಲಿಯಾಗಿರಬಹುದೆಂಬುದಂತೂ ನಿಸ್ಸಂಶಯ. ಇಂಡಿಯದ ಬ್ಯಾಂಕುಗಳಲ್ಲಿ ಹೆಸರಾದ ಸ್ಟೇಟ್ ಬ್ಯಾಂಕಿನ ದರೋಡೆ, ವಂಚನೆ ಪ್ರಕರಣಗಳು ಸ್ಫೋಟವಾಗಿಲ್ಲ. ಇತ್ತೀಚೆಗೆ ಹೃದಯಾಘಾತದಿಂದ ಮೃತನಾದ ನಗರವಾಲಾ ದೆಹಲಿಯ ಸ್ಟೇಟ್ ಬ್ಯಾಂಕಿನಿಂದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಹೆಸರಿನಲ್ಲಿ ವಂಚಿಸಲೆಳಸಿದ್ದೂ ಉಲ್ಲೇಖನೀಯ.

ಕಳ್ಳರ ಕಣ್ಣು ಕೋರಿಗಳ ಮೇಲೇ ಬಿದ್ದಿದೆ. ಪೆನ್ನು, ವಾಚು....ಮುಂತಾದ ಬಿಡಿ ಚೋರಿಗಳ ಯುಗ ಹೋಗಿ, ಖಜಾನೆಗಳಿಗೇ ಚೋರ ದರ್ಶನವಾಗತೊಡಗಿದೆ. ಈ ಬಗ್ಗೆ ಪೋಲೀಸ್ ಇಲಾಖೆ ಇನ್ನಷ್ಟು ದಕ್ಷವಾಗಿ ದುಡಿದು ಚತುರ ತುಬ್ಬುಗಾರರಿಂದ ಪತ್ತೆ ಮಾಡಿಸಿ ಈ ವಂಚನೆಯ ಗಿಡವನ್ನು ಎಳತಿನಲ್ಲೇ ಕಿತ್ತುಹಾಕದಿದ್ದರೆ ಈ ಹರಾಮಖೋರಿ ಹವ್ಯಾಸ ಮುಂದುವರಿಯುವುದಂತೂ ನಿಶ್ಚಿತವೆನಿಸುತ್ತದೆ.

— ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

●●

ನೂರು ಕೈ ದಾಟಿ ಬರುವ ನೂರು ಭರವಸೆಗಳು

(ಒಂದನೇ ಪುಟದಿಂದ)

ತೆಂದೂ ವರದಿಗಳು. ಇವೆಲ್ಲ ಅತಿರೇಕ, ಅನಗತ್ಯ. ಮತ್ತು ಅನಪೇಕ್ಷಣೀಯ ಕೂಡಾ.

ಕಾರ್ಯನಿರತರಾಗಿರುವಾಗ ಮೃತ್ಯು ಹೊಂದುವ ನೌಕರರಿಗೆ ಒಂದೂವರೆ ಸಾವಿರ ರೂಪಾಯಿಗಳ ಪರಿಹಾರ ನೀಡುವುದು ಎನ್. ಜಿ. ಇ. ಎಫ್.ನ ನೀತಿಯೆಂದೂ ಕಾರ್ಮಿಕರ ಒತ್ತಾಯದಿಂದ ಈ ಮೊತ್ತವನ್ನು ಎರಡೂವರೆ ಸಾವಿರಕ್ಕೆ ಏರಿಸಲಾಯಿತೆಂದೂ ಕಾರ್ಮಿಕರು ಹತ್ತುಸಾವಿರದ ಬೇಡಿಕೆಯನ್ನು ಮುಂದಿಟ್ಟು ಸಂಪಿಗೆ ತೊಡಗಿದರೆಂದೂ ಹೇಳಲಾಗುತ್ತದೆ. ಬಣ್ಣ ಬಳೆಯುತ್ತಿದ್ದ ನೌಕರನು ಯಂತ್ರೋಪಕರಣಗಳ ಲೋಪದೋಷಗಳಿಂದಾಗಿ ಸಾವನ್ನಪ್ಪಲಿಲ್ಲ; ಆತನ ಸಾವಿಗೆ 'ಹೃದಯಾಘಾತವೇ ಕಾರಣ'ವೆಂದು ಮರಣೋತ್ತರ ವೈದ್ಯಕೀಯ ವರದಿಯು ಹೇಳಿದೆ. ಈ ಸಾವಿನ ದುರಂತ ನಡೆಯಬಾರದ್ದೆಂಬುದು ನಿಜವಾದರೂ ಅನಂತರ ನಡೆದ ಗೊಂದಲವು ಒಡೆಯರಿಗೂ ಕಾರ್ಮಿಕರಿಗೂ ಶೋಭೆ ತರುವುದಿಲ್ಲ. ಪರಸ್ಪರ ಸಮಾಲೋಚನೆಯಿಂದ ಪರಿಹರಿಸಿಕೊಳ್ಳ ಬಹುದಾಗಿದ್ದ ಸಣ್ಣ ವಿಷಯವು ದಳ್ಳುರಿಯಾಗ ಬಾರದಿತ್ತು. ಹಿಂಸೆಯು ಅದೆಷ್ಟು ಅಗಣ್ಯವಾಗಿದ್ದರೂ ಹಿಂಸೆಯೇ. ಆದುದರಿಂದಲೇ ಅಹಿಂಸೆಗೆ ಅತ್ಯಂತ ಮಹತ್ವ ಬಂದಿದೆ. ಎನ್‌ಜಿಇಎಫ್‌ನ ಈ ಅನಗತ್ಯ ಗಲಭೆಯು ಉಳಿದೆಡೆಗೆ ಅಮೂಲ್ಯ ಪಾಠವಾಗಬೇಕು; ದೇಶದ ಉತ್ಪಾದನೆಗೆ, ಕಾರಖಾನೆಯ ಶಾಂತಿಗೆ ಒಡೆಯ—ನೌಕರರ ಸೌಹಾರ್ದಕ್ಕೆ ಭಂಗ ಬರುವಂತಹ ದುರ್ಘಟನೆಗಳು ನಡೆಯದಂತಾಗಬೇಕು.

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು—4

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೩೪

NAVAYUGA

27-4-1972

ಜೂನ್ ಅಧಿವೇಶನದಲ್ಲಿ

ರಾಜ್ಯ ಭೂಶಾಸನಕ್ಕೆ ತಿದ್ದುಪಡಿ

ನವದೆಹಲಿಯಲ್ಲಿ ರಾಜ್ಯ ಮುಖ್ಯಮಂತ್ರಿಗಳ ಸಮ್ಮೇಳನವೊಂದು ಇತ್ತೀಚೆಗೆ ನಡೆಯಿತು. ವಿಧಾನ ಸಭೆಗಳಿಗೆ ಚುನಾವಣೆಗಳು ನಡೆದು ಅಧಿಕ ಸಂಖ್ಯಾಕ ರಾಜ್ಯಗಳಲ್ಲಿ ಆಳುವ ಕಾಂಗ್ರೆಸ್ ಸರಕಾರಗಳು ಏರ್ಪಟ್ಟ ನಂತರದ ಈ ಮುಖ್ಯಮಂತ್ರಿಗಳ ಸಭೆ ಅತ್ಯಂತ ಮಹತ್ವಪೂರ್ಣವಾದದ್ದು. ಕೇಂದ್ರ—ರಾಜ್ಯಗಳಲ್ಲಿ ಒಂದೇ ಪಕ್ಷದ ಸರಕಾರವಿರಬೇಕು; ಇದರಿಂದ ಪಕ್ಷದ ಪ್ರಗತಿಶೀಲ ನೀತಿಯನ್ನು ಅನುಷ್ಠಾನಕ್ಕೆ ತರಲು ಅನುಕೂಲವಾಗುತ್ತದೆ ಎಂದು ಆಳುವ ಕಾಂಗ್ರೆಸಿಗರು ಹೇಳಿದ್ದು, ಕರ್ನಾಟಕದಲ್ಲಿನ ಅರಸು ಸರಕಾರಕ್ಕೆ ಜನತೆ ಅಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ದೆಹಲಿಯ ಸಭೆಯಲ್ಲಿ ಭೂಸುಧಾರಣೆಯನ್ನು ಪರಿಣಾಮಕಾರಿಯಾಗಿ ಜ್ಯಾರಿಗೊಳಿಸದ ರಾಜ್ಯ ಸರಕಾರಗಳನ್ನು ತರಾಟೆಗೆ ತೆಗೆದುಕೊಳ್ಳಲಾಯ್ತೆಂದು ವರದಿ. ಹೀಗೆ ಟೀಕೆಗೊಳಗಾದ ರಾಜ್ಯಗಳಲ್ಲಿ ಹೆಚ್ಚಿನೆಡೆ ಈ ಮೊದಲು ಆಳುವ ಕಾಂಗ್ರೆಸ್ಸಿನ ಸರಕಾರವೇ ಇತ್ತೆಂಬುದು ಗಮನಾರ್ಹ.

ಕೇಂದ್ರ ಸರಕಾರವು ಭೂಸುಧಾರಣೆಗೊಂದು ಕರಡು ಶಾಸನವನ್ನು ತಯಾರಿಸಿದೆ. ಇದರಲ್ಲಿ ಹಿಡುವಳಿಯ ಪರಮಾವಧಿ ಮಿತಿಯು ೧೦ರಿಂದ ೧೮ ಸ್ಟಾಂಡರ್ಡ್ ಎಕ್ರೆಗಳಷ್ಟಿರಬಹುದೆಂದು ಹೇಳಲಾಗಿದೆ. ಈ ಮಿತಿಯು ಈಗಿರುವ ಮಿತಿಯಿಂದ ಕಡಿಮೆಯೆಂಬುದೊಂದಂಶ ಗಮನೀಯವಲ್ಲದೆ ಸ್ಟಾಂಡರ್ಡ್ ಎಕ್ರೆಯ ಪರಿಭಾಷೆಯಲ್ಲಿ ಸರ್ವೇ ಸಾಮಾನ್ಯವಾಗಿ ಐವತ್ತು ಎಕರೆಯಷ್ಟು ಭೂಮಿಯನ್ನು ಒಂದು ಕುಟುಂಬ ಹೊಂದುವುದು ಸಾಧ್ಯವಾಗುತ್ತದೆ. ಕರ್ನಾಟಕದ ಸರಕಾರವು ತಾನು ಅತ್ಯಂತ ಪ್ರಗತಿಶೀಲವೆಂದು ತೋರಿಸಿಕೊಳ್ಳುವುದಕ್ಕಾಗಿ ಗರಿಷ್ಠ ಮಿತಿಯನ್ನು ೧೦-೧೨ ಸ್ಟಾಂಡರ್ಡ್ ಎಕ್ರೆಗಳಿಗೇ ಪರಿಮಿತಗೊಳಿಸಬಹುದು.

ಮುಖ್ಯ ಸಚಿವ ದೇವರಾಜ ಅರಸು ಈ ಸಂಬಂಧದಲ್ಲಿ ಅತ್ಯಂತ ಮುಂದುವರಿದಿದ್ದಾರೆ. ಪರಮಾವಧಿ ಮಿತಿಯು ಒಂದು 'ಕುಟುಂಬ'ಕ್ಕೆ ಅನ್ವಯಿಸಬೇಕು, ವ್ಯಕ್ತಿಗಳಿಗಲ್ಲವೆಂಬುದು ಅವರ ಇರಾದೆ. ಅದೇ ರೀತಿ ಇತರ ಉದ್ಯಮ ಅಥವಾ ಹುದ್ದೆಗಳಲ್ಲಿದ್ದು ನಿಶ್ಚಿತ ಆದಾಯ ಪಡೆಯುವವರಿಗೆ ಭೂಮಿ ಹೊಂದುವ ಅವಕಾಶವಿರಬಾರದು —ಇದು ಅವರ ಇನ್ನೊಂದು ವಿಚಾರಧಾರೆ. ಆದರೆ ಇದು ತಾತ್ಕಾಲಿಕ ಪರಿಸ್ಥಿತಿಯ ಆಧಾರದ ಮೇಲೆ ನಿರ್ಧಾರಿತವಾಗುವುದರಿಂದ ಭವಿಷ್ಯತ್ತಿಗೆ ತೊಂದರೆಯಾಗುವ ಸಂಭವ ಬಾರದುಳಿದೀತೇ? ಕುಟುಂಬವು ವಿಭಜನೆ ಹೊಂದುವುದು ಪ್ರಕೃತಿ ಸಹಜ. ಆಗ ತೊಂದರೆ ಸಂಭವಿಸಲಾರದೆ? ಭೂಸುಧಾರಣೆಗೆ ತಿದ್ದುಪಡಿ ಶಾಸನವು ಮುಂದಿನ ಜೂನ್ ತಿಂಗಳ ಅಧಿವೇಶನದಲ್ಲಿ ವಿಧಾನ ಮಂಡಳದ ಮುಂದೆ ಬರುವ ನಿರೀಕ್ಷೆ ಇದೆ. ಈಗಿನ ಸೂಚನೆಯಂತೆ ಯಾವುದೇ ಧಾರ್ಮಿಕ ಸಂಸ್ಥೆಗಳ ಭೂಮಿಗೂ ಗರಿಷ್ಠ ಮಿತಿಯಿಂದ ವಿನಾಯತಿ ದೊರೆಯುವುದಿಲ್ಲ. ಇದು ಸ್ವಾಗತಾರ್ಹ. ಅಧಿಕೋತ್ಪಾದನೆ, ಉಳುವವನಿಗೆ ಭೂಮಿ — ಈ ನೀತಿಗೆ ಅನುಗುಣವಾಗಿ ತಿದ್ದುಪಡಿ ಮಸೂದೆಯನ್ನು ರೂಪಿಸುವಾಗ, ಯಾರೊಬ್ಬರಿಗೂ ಅನ್ಯಾಯವಾಗದಂತೆ, ಆದರೂ ಕಡಿಮೆ ಅನ್ಯಾಯವಾಗುವಂತೆ ಎಚ್ಚರ ಅಗತ್ಯ.

° ° °

ರಾಜ್ಯದ ಸಾರಿಗೆ-ಕಾರ್ಮಿಕ ಸಚಿವ ಆ ಜೀಜ್ ಸೇಠ್ ಮಂಗಳೂರಿನ ನಾಗರಿಕರಿಗೊಂದು, ರಾಜ್ಯದ ಪರಿವಾರಗಳಿಗೊಂದು ಭರವಸೆ ನೀಡಿದ್ದಾರೆ. ಮಂಗಳೂರು ನಗರದ ಸಿಟಿ ಬಸ್ ವ್ಯವಸ್ಥೆಯನ್ನು ರಾಷ್ಟ್ರೀಕರಿಸುವ ವಿಚಾರವನ್ನು ಅವರು ಅಪ್ರಚೋದಿತವಾಗಿಯೇ ಹೊರಗೆಡಹಿದ್ದಾರೆ. ಹಿಂದೆ ಜಿಲ್ಲೆಯ ಸಾರಿಗೆ ದಾರಿಗಳೆಲ್ಲ ಖಾಸಗಿ ರಂಗದಲ್ಲಿದ್ದಾಗ, ಸಾರಿಗೆ ಹೆಸರಾದ ವ್ಯವಸ್ಥೆಗೆ ನಮ್ಮ ಜಿಲ್ಲೆಯಲ್ಲಿ ಈಗ ದಕ್ಷಿಣ ಭಾಗದ ದಾರಿಗಳೆಲ್ಲ ರಾಷ್ಟ್ರೀಕೃತವಾಗಿವೆ. ಮಂಗಳೂರು ಶಹರದಲ್ಲಿ ಸಿಟಿಬಸ್ಸುಗಳನ್ನೀಗ ಖಾಸಗಿ ಸಂಸ್ಥೆಗಳು ಯಶಸ್ವಿಯಾಗೇ ನಡೆಸುತ್ತಿವೆಯೆನ್ನಬೇಕು. ಇವರ ನಡುವೆ ಕೈಹಾಕಬೇಕೆಂಬ ಬಯಕೆ ಜನತೆ ವ್ಯಕ್ತಪಡಿಸಿದ್ದಿಲ್ಲ. ಸಾರಿಗೆ ವ್ಯವಸ್ಥೆಯನ್ನು ರಾಷ್ಟ್ರೀಕರಿಸುವುದನ್ನು ಮುಂದುವರಿಸುವುದು ಈ ಸರಕಾರದ ನೀತಿಯೆಂಬುದೀಗ ಸ್ಪಷ್ಟವಾಯ್ತು.

ರಾಜ್ಯ ಸಾರಿಗೆ ಮಂಡಲಿಯಲ್ಲಿ ಅವ್ಯವಹಾರ-ದುರ್ವ್ಯವಹಾರ ಭ್ರಷ್ಟಾಚಾರಗಳು ತುಂಬಿವೆ. ಈ ಬಗ್ಗೆ ಸಚಿವರೂ ನೌಕರರಿಗೆ ಗಂಭೀರ ಎಚ್ಚರಿಕೆ ನೀಡಿದ್ದಾರೆ. 'ಇದನ್ನು ಸಹಿಸಲಾಗದು; ನಿಮ್ಮ ಹೂರಣವೆಲ್ಲ ನನಗೆ ಗೊತ್ತಿದೆ ಎಂಬ ಬೆದರಿಕೆಯನ್ನೂ ಹಾಕಿದ್ದಾರೆ. ಆದರೆ, ಈ ಬೆದರಿಕೆ ಗದರಿಕೆಗಳಿಗೆಲ್ಲ ಸೊಪ್ಪು ಹಾಕದಷ್ಟು ಸಾರಿಗೆ ಮಂಡಳಿಯ ನೌಕರರು ತಿಂದು ಕೊಬ್ಬಿದ್ದಾರೆಯೆಂಬುದು ಅವರಿಗೂ ಗೊತ್ತಿರಬೇಕು. ಸಾರಿಗೆ ವ್ಯವಸ್ಥೆಯಲ್ಲಿನ ಅವ್ಯವಸ್ಥೆಗಳನ್ನು ಮನಗಂಡ ಹಿಂದಿನ ಸರಕಾರ ಅದನ್ನು ಸುಧಾರಿಸುವ ವರೆಗೆ ರಾಷ್ಟ್ರೀಕರಣ ನೀತಿಯನ್ನು ಮುಂದುವರಿಸದಿರಲು ನಿರ್ಧರಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಖಾಸಗಿ ಕ್ಷೇತ್ರವು ಸಾರಿಗೆ ಏರ್ಪಾಟನ್ನು ಅತ್ಯಂತ ಸಮರ್ಪಕವಾಗಿ ಮಾಡಿಕೊಂಡು ಬರುತ್ತಿದೆ. ಈ ನಡುವೆ ಸರಕಾರದ ನಡು ಪ್ರವೇಶ ಅನಗತ್ಯವೆನಿಸುತ್ತದೆ. ಈಗಾಗಲೇ ರಾಷ್ಟ್ರೀಕೃತವಾದ ದಾರಿಗಳಲ್ಲಿ ಜನತೆಗೆ ಅನುಕೂಲತೆಗಳನ್ನೂ ಸಾರಿಗೆ ಮಂಡಳಿಗೆ ಲಾಭವನ್ನೂ ಗಳಿಸಿಕೊಡುವಲ್ಲಿ ಹೆಚ್ಚಿನ ಮುತುವರ್ಜಿಯೀಗ ಅಗತ್ಯವೆನಿಸುತ್ತದೆ.

ಮಂತ್ರಿ ಸೇಠ್ ನೀಡಿದ ಮತ್ತೊಂದು ಭರವಸೆ ಪ್ರತಿ ಕುಟುಂಬದ ಒಬ್ಬನಿಗಾದರೂ ಉದ್ಯೋಗ ದೊರಕಿಸಿ ಕೊಡುವುದಕ್ಕೆ ಸಂಬಂಧಿಸಿದ್ದು. ಇದೀಗ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಸುಮಾರು ಎರಡು ಲಕ್ಷ ಮಂದಿ ತಮ್ಮ ಹೆಸರನ್ನೊಂದಾಯಿಸಿಕೊಂಡಿದ್ದಾರೆ. ಇವರಲ್ಲಿ ಸುಮಾರು ಒಂದೂಕಾಲು ಲಕ್ಷ ಮೆಟ್ರಿಕ್ಯುಲೇಶನ್‌ಗಿಂತ ಕಡಿಮೆ ಶಿಕ್ಷಣ ಹೊಂದಿದವರು. ಈ ಸಂಖ್ಯೆಯನ್ನು ನೋಡುವಾಗ ರಾಜ್ಯದ ನಿರುದ್ಯೋಗಿಗಳ ಒಟ್ಟು ಸಂಖ್ಯೆ ಹತ್ತು ಲಕ್ಷವನ್ನಾದರೂ ಮುಟ್ಟಬಹುದೆನಿಸುತ್ತದೆ.

ಕುಟುಂಬದ ಒಬ್ಬನಿಗಾದರೂ ಉದ್ಯೋಗ ಕೊಡಿಸುವ ಯೋಜನೆ ಸಮಂಜಸವಾದದ್ದು. ಇಲ್ಲಿ ಉದ್ಯೋಗ ಅಂದರೆ, ಸರಕಾರಿ ಉದ್ಯೋಗ ಮಾತ್ರವೇ ಇರಬೇಕು. ಆದರೆ ಒಂದೂಕಾಲು ಲಕ್ಷ ನಾನ್ ಮೆಟ್ರಿಕ್ಯುಲೇಟರನ್ನು ತುಂಬುವುದೆಲ್ಲಿ? ಅಥವಾ ಸರಕಾರ ಕೊಡಮಾಡಿದ ಉದ್ಯೋಗವು ನಿರುದ್ಯೋಗಿಗೆ ನಾಪಸಂದಾದರೆ ಹೇಗೆ?

●●

ತತ್ವ ನಿಷ್ಠೆ ಕಷ್ಟ ನಿಷ್ಠುರವಾದರೂ ಕಟ್ಟ ಕಡೆಗೆ ಇಷ್ಟ ಸಿದ್ಧಿ.

ಬಿದ್ದವ ಏಳಬಾರದೆಂದಿಲ್ಲ; ಗೆದ್ದವ ಬೀಳಬಾರದೆಂದಿಲ್ಲ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 157 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ **ಸಂಪರ್ಕ ಬೆಳೆಸಿರಿ.**

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, **ಬೆಂಗಳೂರು-1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

ಸ್ವತಂತ್ರ ಐತಿಹಾಸಿಕ ಕಾದಂಬರಿ

(ಕಳೆದ ಸಂಚಿಕೆಯಿಂದ)

ನಿರಾಭರಣೆಯಾಗಿ ಹೊರಡಲನುವಾದ ಮಗಳನ್ನು ನೋಡಿ ತಾಯಿ, "ಇದೇನೇ ಲೋಕಾ, ಬಿಕ್ಕೋಲೆ ಗೌರಮ್ಮನಂತೆ ಹೊರಟು ನಿಂತೆಯಲ್ಲೇ"

"ಹೋಗುತ್ತಿರುವುದು ದೇವ ದರ್ಶನಕ್ಕೆ. ದೇವರು ಮೆಚ್ಚುವುದು ನಮ್ಮ ರೂಪಲಾವಣ್ಯ, ಆಭರಣಗಳನ್ನೇ? ಅಥವಾ ಅವನಲ್ಲಿ ನಮಗಿರುವ ಭಕ್ತಿಯನ್ನೇ?"

"ನಾಳೆ ಬೆಳಗು ಹರಿದರೆ ಹಸೆಮಣೆ ಏರುವ ಹೆಣ್ಣು ನೀನು. ನೋಡಿದವರು ಏನನ್ನುತ್ತಾರೆ? ನಿನಗದರ ಗೊಡವೆಯೂ ಇಲ್ಲವಲ್ಲ. ವಿರಾಗಿಣಿಯಂತೆ ಮಾತನಾಡುವುದನ್ನು ಕಲಿತುಬಿಟ್ಟೆ. ಅಲ್ಲೊಬ್ಬರು ಸನ್ಯಾಸಿಗಳಿದ್ದಾರಂತೆ. ಹೇಳುವುದಕ್ಕೆ ಮರೆತೇ ಹೋಯಿತು".

"ಈ ದೇಶದಲ್ಲಿ ಸನ್ಯಾಸಿಗಳಿಗೇನು ಕೊರತೆ? ಹೆಜ್ಜೆಗೊಬ್ಬರು ಸಿಗುತ್ತಾರೆ. ನಿಜವಾದ ಸನ್ಯಾಸಿಗಳಲ್ಲ—ಆ ಸೋಗು ಹಾಕಿ ಹೊಟ್ಟೆ ಹೊರೆಯುವವರು".

"ಮಹಾ ವಿದ್ವಾಂಸರಂತೆ, ತ್ರಿಕಾಲ ಜ್ಞಾನಿಗಳಂತೆ, ಜ್ಯೋತಿಷ್ಯ ಬಲ್ಲರಂತೆ, ಶೀಘ್ರವಾಗಿ ದೀರ್ಘ ಖಾಯಿಲೆಗಳನ್ನು ಗುಣಪಡಿಸುತ್ತಾರಂತೆ. ಅವರನ್ನು ಒನ್ಮೆ ಕಂಡುಬರುವ. ನಿನ್ನ ಕೈ ತೋರಿಸಿದರಾದೀತು ಎಂದು ಗ್ರಹಿಸಿಕೊಂಡಿದ್ದೇನೆ".

"ನಿನ್ನೆ ನಾನು ಅವರ ದರ್ಶನಕ್ಕೆ ಹೋದೆ. ಅಷ್ಟ ಬಿದ್ದು ಕೈಯನ್ನು ಅವರ ಮುಂದು ಹಿಡಿದೆ. ಕ್ಷಣಕಾಲ ಮೌನದಿಂದಿದ್ದು. ಅನಂತರ ನನ್ನ ವಿಚಾರ ಹೇಳಿದರು—ಹೇಳಿದ್ದು ನೂರಕ್ಕೆ ನೂರು ಸತ್ಯ. ಎಲ್ಲವನ್ನೂ ನೋಡಿದವರಂತೆ ನುಡಿದರು".

ಪರಿವಾರಕ್ಕೆ ಸೇರಿದ ಹಿರಿಯಳೊಬ್ಬಳು ತನ್ನ ಅನುಭವವನ್ನು ವರ್ಣಿಸಿದಳು.

''ಈ ಕೈಯನ್ನು ಎಂದೋ ನೀಡಿಯಾಗಿದೆ. ಹಿಡಿಯಬೇಕಾದವರು ಹಿಡಿದು ಆದರಿಸಬೇಕು. ಉಳಿದವರು ನನ್ನೀ ಕೈಗಳನ್ನು ಸ್ಪರ್ಶಿಸಲಾರರು. ನಾನು ಖಂಡಿತ ಕೈ ತೋರಿಸುವುದಿಲ್ಲ''.

''ಏಕೇ ಛಲ, ಲೋಕಾ? ಊರ ಜನರ ಬಾಯಲ್ಲೆಲ್ಲ ಅವರ ಮಾತು. ಪುಣ್ಯ ಪುರುಷರಿರಬೇಕು; ಸಂದರ್ಶನದಿಂದ ಲಾಭವಾಗಬಹುದು''.

—ತಾಯಿ ಮಗಳಿಗೆ ಹೇಳಿದ ಸಾಂತ್ವನದ ಮಾತು.

ಶಿವ ಗುಡಿ ಇದ್ದುದು ರಾಜವಾಡೆಯಿಂದ ಒಂದು ಮೈಲಿಯ ಅಂತರದಲ್ಲಿ. ಗುಡಿ ಪುಟ್ಟ ಬೆಟ್ಟದ ಮೇಲೆ ನಿಂತಿತ್ತು. ಅಲ್ಲಿಗೆ ನಡೆದೇ ಹೋಗಬೇಕು. ಅಲ್ಲಿಗೆ ಹೋಗಲಿದ್ದುದು ಒಂದು ಕಡಿದಾದ ದಾರಿ. ರಾಜವಾಡೆಯಿಂದ ಬೆಟ್ಟದ ತುದಿವರೆಗೂ, ಕಿರು ದಾರಿಯ ಆಚೀಚೆ ಬದಿಗಳಲ್ಲಿ ನೀರುಣಿಸಿ ಬೆಳೆಸಿದ ಸಾಲು ಮರಗಳು. ಬೆಟ್ಟದ ಬದಿಗಳಲ್ಲಿ ವಿವಿಧ ಜಾತಿಯ ಹೂವಿನ ಗಿಡಗಳು; ಹೂವನ್ನು ಹೊತ್ತು ನಿಂತ ಸಂಪಿಗೆ, ಕೆಂಡ ಸಂಪಿಗೆ, ನಾಗಸಂಪಿಗೆ, ಪಾರಿಜಾತದ ಮರಗಳೂ ಅಲ್ಲಲ್ಲಿ ಎದ್ದು ನಿಂತಿದ್ದುವು.

ಶಿವಾಲಯ ಪುರಾತನ ಕಾಲದ್ದು. ಒಳಗಿದ್ದುದು ನಟರಾಜನ ಭವ್ಯ ಮೂರ್ತಿ. ಸೊಗಸಾಗಿ ಕಡೆದು ನಿರ್ಮಿಸಿದ ವಿಗ್ರಹ. ಕಣ್ಮನ ಸೆಳೆಯುವ ಕಲಾಕೃತಿಯೂ ಹೌದು. ಈ ದೇವಮಂದಿರದ ಸೇವಾಕಾರ್ಯ ನಡೆಯುತಿದ್ದುದು ಅರಮನೆಯ ಮೂಲಕ. ನಿತ್ಯ ವಿಧಿಗಳಿಗೂ ಅಗತ್ಯ ಬೀಳುವ ಪರಿಕರದ ಸರಬರಾಜು ಆಗುತಿದ್ದುದು ಅರಮನೆಯಿಂದಲೇ.

ಅದು ರಾಷ್ಟ್ರಕೂಟ ರಾಜಮನೆತನದ ದೇವರು. ಆ ದೈವದ ಅನುಗ್ರಹವಾಗದ ಹೊರತು ಅವರಾವ ಹೊಸ ಕಾರ್ಯದಲ್ಲೂ ಕೈಯಿಡುತ್ತಿರಲಿಲ್ಲ. ಆ ದೈವಕ್ಕೆ ಶರಣುಹೋದ ಮೇನಕಾ ದೇವಿ, ಮಗಳ ಹೆಸರಲ್ಲಿ ಹಣ್ಣು-ಕಾಯಿ ಮಾಡಿಸಿ, ಪ್ರಸಾದ ಪಡೆಯುವ ಶ್ರದ್ಧೆಯಿಂದ ದೇವಮಂದಿರಕ್ಕೆ ಹೊರಡಲು ಚಡಪಡಿಸಿದಳು.

ತಾಯಿ—ಮಗಳು, ಅಂತಃಪುರದ ಸ್ತ್ರೀಯರೊಂದಿಗೆ ದೇವರ ಗುಡಿಗೆ ನಡೆದೇ ಹೋದರು. ಅವರು ಗುಡಿ ಸೇರಿದಾಗ ಮಹಾ ಮಂಗಳಾರತಿ ನಡೆಯುತ್ತಿತ್ತು.

ಅವರು ಗುಡಿಗೊಂದು ಪ್ರದಕ್ಷಿಣೆ ಹಾಕಿ, ನಮ್ರತೆಯಿಂದ ಒಳಪ್ರವೇಶಿಸಿ, ಭಕ್ತಿಯಿಂದ ವಿಗ್ರಹಕ್ಕೆ ಕೈ ಮುಗಿದರು. ತಂದಿದ್ದ ಹೂ, ಹಣ್ಣು, ಫಲ—ತಾಂಬೂಲ, ಕರ್ಪೂರ ಗಂಧದ ಕಡ್ಡಿಗಳಿದ್ದ ಹರಿವಾಣವನ್ನು ಅರ್ಚಕರ ಕೈಗೊಪ್ಪಿಸಿದರು.

ದೇಗುಲದಲ್ಲಿ ವಿವಿಧ ರೀತಿಯ ಸೇವೆ ನಡೆಯುತ್ತಿತ್ತು.

ಪೂಜೆ ಮುಗಿಯಿತು. ಅರ್ಚಕರು ಎಲ್ಲರಿಗೂ ತೀರ್ಥ ಪ್ರಸಾದದ ವಿನಿಯೋಗ ಮಾಡಿದರು.

ಲೋಕಾಂಬಿಕೆ ಭಕ್ತಿಯಿಂದ ಮೂರ್ತಿಗೆ ಬಾಗಿ ನಮಸ್ಕರಿಸಿದಳು.

ಹಾಗೆ ನಮಸ್ಕರಿಸುವಾಗ, ಮೂರ್ತಿಯ ಹಿಂಭಾಗದಲ್ಲಿ, ಸನ್ಯಾಸಿಯೊಬ್ಬ ತನ್ನನ್ನೇ ನುಂಗುವಂತೆ ನೋಡಿದುದನ್ನು ಕಂಡಳು.

ಅಮ್ಮ ಹೇಳಿದ ಸನ್ಯಾಸಿಯೋ ಏನೋ? ಆ ಅನುಮಾನ ಅವಳಿಗೆ ಬಂತು. ಸನ್ಯಾಸಿಯ ಕುರಿತು ಉಳಿದವರು ಆಡಿದ ಮಾತುಗಳೂ ನೆನಪಿಗೆ ಬಂದುವು.

ಅವಳ ದೃಷ್ಟಿ ಎದ್ದೇಳುವ ಸಮಯ ಪುನಃ ಆ ಕಡೆಗೋಡಿತು. ಸನ್ಯಾಸಿ ಅಲ್ಲೇ ನಿಂತಿದ್ದು, ಅವಳನ್ನೇ ನೋಡುತಿದ್ದ.

ಅವರಿಬ್ಬರ ದೃಷ್ಟಿಗಳು ಸಂಧಿಸಿದುವು

ಅವಳು ತಲೆ ತಗ್ಗಿಸಿದಳು.

ಅನಂತರ ಒಬ್ಬೊಬ್ಬರಾಗಿ ಎಲ್ಲರೂ ಗುಡಿಯಿಂದ ಹೊರ ಬಂದರು. ಕೊನೆಯಲ್ಲಿ ಹೊರ ಬಿದ್ದವಳು ಲೋಕಾಂಬಿಕೆ. ಗುಡಿಯಿಂದ ಹೊರ ಬಂದವರು, ಹತ್ತಿರದಲ್ಲೇ ಹರಡಿಕೊಂಡು ನಿಂತಿದ್ದ ಆಲದ ಮರದಡಿಯಲ್ಲಿ ಕುಳಿತರು.

'ಕತ್ತಲಾಗುತ್ತ ಬಂತು. ಕುಳಿತು ವೇಳೆ ಕಳೆದರೆ ಮನೆ ಸೇರುವುದೆಂದು?

'ಮನೆ ಸೇರುವುದು ಇದ್ದೇ ಇದೆ. ಈ ಸ್ವಚ್ಛ ಹವೆಯಲ್ಲಿ ಹಾಯಾಗಿ ಕುಳಿತು ಒಂದಿಷ್ಟು ಹೊತ್ತು ಕಳೆಯುವ' ಇದು ಮತ್ತೊಬ್ಬಳಿಂದ ಬಂದ ಸಲಹೆ.

ಹೀಗೆ ಮಾತಿಗೆ ಮಾತು ಬೆಳೆಯುತ್ತಿದ್ದಂತೆಯೇ ಅವರಲ್ಲೊಬ್ಬಳು 'ಅಮ್ಮಾ, ಸನ್ಯಾಸಿಗಳು ಈ ಕಡೆ ಬರುವಂತಿದೆ' ಎಂದಳು.

ಅಷ್ಟರೊಳಗೆ ಸನ್ಯಾಸಿ ಅವರ ತೀರ ಸಮೀಪಕ್ಕೆ ಬಂದಿದ್ದರು. ಭಯ—ಭಕ್ತಿಯಿಂದ ಎಲ್ಲರೂ ಎದ್ದು ನಿಂತರು ಕುಳಿತೇ ಇರುವಂತೆ ಸನ್ಯಾಸಿಗಳು ಸಂಜ್ಞೆ ಮಾಡಿದರು. ಆ ಸನ್ಯಾಸಿಗಳು ಹೊಸಬರಲ್ಲ. ಲೋಕಾಂಬಿಕೆ ಗುಡಿಯಲ್ಲಿ ಕಂಡವರು.

ಅಲ್ಲಿ ಕಲೆತಿದ್ದ ಹೆಂಗಳೆಯರೆಲ್ಲ ಅವರಿಗೆ ಬಾಗಿ ನಮಿಸಿದರು.

ಅವರಿಂದ ಅನತಿ ದೂರದಲ್ಲಿದ್ದ ಒಂದು ಬಂಡೆಯ ಮೇಲೆ ಸನ್ಯಾಸಿಗಳು ಮಂಡಿಸಿದರು. ಆಗಲೂ ಸನ್ಯಾಸಿಗಳ ದೃಷ್ಟಿ ಲೋಕಾಂಬಿಕೆಯಲ್ಲಿ ಕೇಂದ್ರೀಕೃತವಾಗಿತ್ತು.

ಅದನ್ನು ಗ್ರಹಿಸಿದ ಲೋಕಾಂಬಿಕೆ ಅಲ್ಲಿಂದ ಹೊರಡಲನುವಾದಳು. ಆ ನೋಟವನ್ನು ಅವಳಿಂದ ಸಹಿಸುವುದಾಗಲಿಲ್ಲ.

'ಈಕೆ, ತಮ್ಮ ಕುಮಾರಿಯೇ ದೇವಿಯವರೇ? ತುಂಬ ನೊಂದಿರುವಂತಿದೆ'

ಸನ್ಯಾಸಿಗಳೇ ಮೇನಕಾ ದೇವಿಯನ್ನು ಪ್ರಶ್ನಿಸಿದರು.

ಅಲ್ಲಿದ್ದವರಿಗೆಲ್ಲ ಆಶ್ಚರ್ಯವಾಯಿತು. ಎಂದೂ ನೋಡದ ಸಾಮಾನ್ಯ ಉಡುಪಿನಲ್ಲಿದ್ದ ಲೋಕಾಂಬಿಕೆಯನ್ನು ಸನ್ಯಾಸಿಗಳು ರಾಜಕುಮಾರಿ ಎಂಬುದನ್ನು ಹೇಗೆ ಗುರುತಿಸಿದರು. ನಿಜಕ್ಕೂ ತ್ರಿಕಾಲ ಜ್ಞಾನಿಗಳೇ ಇರಬೇಕು.

ಸನ್ಯಾಸಿಗಳ ಮಾತು ಲೋಕಾಂಬಿಕೆಯನ್ನು ಚಕಿತಗೊಳಿಸಿತು.

ಸನ್ಯಾಸಿಗಳು ಸಾಮಾನ್ಯರಲ್ಲ ಎಂಬ ತೀರ್ಮಾನಕ್ಕೆ ಅವಳು ಬರಬೇಕಾಯಿತು.

'ಕುಮಾರಿ ಒಪ್ಪಿ ಕೊಂಡರೆ ಅವಳ ಕೈಯನ್ನಿಷ್ಟು ಪರೀಕ್ಷಿಸುವ ಎಂದಿದೆ'

ಸನ್ಯಾಸಿಗಳು ಈ ಮಾತಿನಿಂದ ಲೋಕಾಂಬಿಕೆಯ ಮುಖದಲ್ಲಾಗುವ ಬದಲಾವಣೆಯನ್ನು ಗಮನಿಸಲಾರಂಭಿಸಿದರು.

ಲೋಕಾ ಕೈ ತೋರಿಸಲು ಸಮ್ಮತಿಸಲಿಲ್ಲ. ತೋರಿಸಿ ಏನಾಗಬೇಕಾಗಿದೆ ಎಂಬ ಹಾರಿಕೆಯ ಉತ್ತರ ಕೊಟ್ಟಳು.

ಪೂಜ್ಯರು ತಾವಾಗಿಯೇ ಕೇಳಿದಾಗ ಒಲ್ಲೆ ಎನ್ನಬಾರದಮ್ಮ. ಅವರ ಅನುಗ್ರಹದಿಂದ ಎಲ್ಲ ಸರಿ ಹೋಗಬಹುದಮ್ಮ'

ಅಲ್ಲಿದ್ದ ಉಳಿದವರು ತಾಯಿ ಮೇನಕಾ ದೇವಿಯ ಮಾತನ್ನು ಸಮರ್ಥಿಸಿದರು.

ಬೇರೆ ಮಾರ್ಗವೇ ಉಳಿಯಲಿಲ್ಲ. ಲೋಕಾಂಬಿಕೆ ತನ್ನ ವಾಮ ಹಸ್ತವನ್ನು ತುಂಬು ಸಂಕೋಚದಿಂದ ಸನ್ಯಾಸಿಗಳ ಮುಂದು ಹಿಡಿದಳು.

ಅಂಗೈಯಲ್ಲಿ ಮೂಡಿ ನಿಂತ ಗೆರೆಗಳ ಅಭ್ಯಾಸಕ್ಕೆ ತೊಡಗಿದರು ಸನ್ಯಾಸಿಗಳು. ಸ್ವಲ್ಪ ಸಮಯದ ನಂತರ ದೃಷ್ಟಿಯನ್ನು ಮೇಲಕ್ಕೆತ್ತಿ, ಸುತ್ತೂ ತಿರುಗಿ ನೋಡಿದರು. ಹತ್ತಿರದಲ್ಲಾರೂ ಇರಲಿಲ್ಲ; ಬಂದಿದ್ದ ಸ್ತ್ರೀಯರನ್ನುಳಿದು.

ಮುಂದು ಕುಳಿತ ಸ್ತ್ರೀಯರನ್ನುದ್ದೇಶಿಸಿ ನೀವು ಸ್ವಲ್ಪ ದೂರ ಸರಿ

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 34

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೩೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಮಹಾರಾಷ್ಟ್ರ ಸರಕಾರ ಸಕಾಲಿಕ ಸಹಾಯಮಾಡಲಿಲ್ಲ

ಆಂಧ್ರ ಪ್ರದೇಶವು ತುಂಗಭದ್ರಾ ಜಲಾಶಯದಿಂದ ನೀರು ಕೇಳಿದಾಗ, ಕರ್ನಾಟಕದ ಸರಕಾರ ಹಿಂದುಮುಂದು ನೋಡದೆ ಇಲ್ಲವೆಂದಿತು. ಆಂಧ್ರ ಪ್ರದೇಶದ ಬೇಡಿಕೆ ಕೇಂದ್ರ ಸರಕಾರದ ಮೂಲಕ ಮಂಡಿತವಾಯ್ತು; ಡಾ| ಕೆ. ಎಲ್. ರಾಯರು ಮಧ್ಯಸ್ಥಿಕೆ ನಡೆಸಿದರು. ಆಗ ಸಚಿವ ಸಂಪುಟ ಮತ್ತೆ ಸಭೆ ಸೇರಿ, ತನ್ನ ಮೊದಲ ನಿರ್ಣಯವನ್ನು ಬದಲಿಸಿತು, ಆಂಧ್ರದ ಬೇಡಿಕೆಯ ಸಿಂಹಪಾಲನ್ನು ಕೊಟ್ಟುಬಿಡಲು ನಿರ್ಧರಿಸಿತು. ಈ ಪುನರ್ನಿರ್ಧಾರಕ್ಕೆ ಪ್ರೇರಕವಾದ ಕಾರಣವೆಂದರೆ, ಬರಿಯ ಮಾನವೀಯತೆ. ಕೇಂದ್ರದ ಒತ್ತಾಯವಲ್ಲ, ಕೈಗೊಂಬೆತನವಂತೂ ಅಲ್ಲವೇ ಅಲ್ಲ. ಈ ಮಾನವತಾದೃಷ್ಟಿ ಜಾಗ್ರತವಾಗಬೇಕಾದರೆ, ಆಂಧ್ರದ ಬೇಡಿಕೆ ಕೇಂದ್ರದ ಸಿಲಿಂಡರೊಳಗಿಂದ ಬರಬೇಕಾಯ್ತು—ಅಷ್ಟೆ ನೆರೆರಾಜ್ಯಗಳೊಡನೆ ಸಹಕರಿಸುವ ವಿಷಯದಲ್ಲಿ ಕರ್ನಾಟಕ ಹಿಂಜರಿದದ್ದು ಇಲ್ಲ. ಆದ್ದರಿಂದ ಆಂಧ್ರ ಪ್ರದೇಶದ ಬೆಳೆ ಒಣಗದಂತೆ ನೀರು ಬಿಟ್ಟದ್ದು ಆಕ್ಷೇಪಣೀಯವೇನೂ ಅಲ್ಲ. ಈ ಬಗ್ಗೆ ಎರಡು ಆಲೋಚನೆ ಮಾಡಿದುದೇ ಅಮಾನವೀಯ.

ಈಯೆಲ್ಲ ಘಟನೆಗಳು ನಾಲ್ಕಾರು ದಿನಗಳಲ್ಲೇ ಮುಗಿದುಹೋದುವು ಆದರೆ, ಬೆಳಗಾಂವಿ ಪ್ರದೇಶದಲ್ಲಿ ಬೆಳೆಗೆ ನೀರಿಲ್ಲ. ಜನಗಳಿಗೆ ಕುಡಿಯಲಿಲ್ಲವೆಂಬ ದುಃಸ್ಥಿತಿ ತಲೆದೋರಿದೆ. ಈ ಬಗ್ಗೆ ಕೊಯ್ನಾ ಜಲಾಶಯದಿಂದ ನೀರು ಬಿಡಬೇಕೆಂದು ರಾಜ್ಯಪಾಲ ಸುಖಾಡಿಯಾರು ಮಹಾರಾಷ್ಟ್ರ ಸರಕಾರದೊಂದಿಗೆ ಮಾತುಕತೆ ನಡೆಸಿದರು; ಮುಖ್ಯಮಂತ್ರಿ ಅರಸರೂ ಮಾತಾಡಿದರು; ಅಧಿಕಾರಿಗಳಲ್ಲೂ ವಿಚಾರ ವಿನಿಮಯ ನಡೆಯಿತು. ಇದಕ್ಕೆ ಮಹಾರಾಷ್ಟ್ರ ಸರಕಾರ ನಿಧಾನವಾಗಿ ಅತ್ಯಂತ ನಿಧಾನವಾಗಿ ತನ್ನ ಉತ್ತರವನ್ನು ಕಳಿಸಿತು. ಇದರಲ್ಲಿ ನೀರು ಕೊಡುವ ಬಗ್ಗೆ ಆಕ್ಷೇಪಣೆಯೇನೂ ಇಲ್ಲ. ಆದರೆ, ನೀರು ಕೊಡುವುದರಿಂದ ನಷ್ಟವಾಗುವ ವಿದ್ಯುತ್ತನ್ನು ರಾಜ್ಯ ತುಂಬಿ ಕೊಡಬೇಕು ಎಂಬುದೊಂದು ಷರತ್ತು. ಈ ಷರತ್ತು ಕರ್ನಾಟಕಕ್ಕೇ ಅಸ್ವೀಕಾರವಾಗಲಾರದು; ಆಗಲೂ ಬಾರದು. ನೀರು ಪ್ರಾಥಮಿಕ ಆವಶ್ಯಕತೆಗಳಲ್ಲಿ ಎರಡನೆಯದಾದುದರಿಂದ (ಮೊದಲನೆಯದು ಪ್ರಾಣವಾಯು) ಅದಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾಗಲೇಬೇಕು. ಸರಕಾರ ತಕ್ಷಣ ಮಹಾರಾಷ್ಟ್ರ ಸರಕಾರದ ಷರತ್ತಿನ ಬಗ್ಗೆ ಒಪ್ಪಿಗೆ ನೀಡಿಯೇ ನೀಡುತ್ತದೆ. ಷರತ್ತಿನ ಮೇಲಾದರೂ ನೀರು ಕೊಡಲೊಪ್ಪಿದ ಮುಖ್ಯ ಮಂತ್ರಿ ವಿ ಪಿ ನಾಯಕರಿಗೆ ಕನ್ನಡಿಗರು ಕೃತಜ್ಞರಾಗಲೇ ಬೇಕು. ಹಾಗಿದ್ದರೂ ಶ್ರೀ ನಾಯಕರು ತನ್ನ ಸರಕಾರದ ನಿರ್ಧಾರವನ್ನು ತಿಳಿಸಲು ತೆಗೆದುಕೊಂಡ ಕಾಲಾವಧಿ ಅತಿ ದೀರ್ಘವಾಯಿತೆನಿಸುತ್ತದೆ. ಇದೇಕೆ ಹೀಗೆ?

ಕರ್ನಾಟಕ ಸರಕಾರವು ನೆರೆರಾಜ್ಯಗಳಿಗೆ ನಿದ್ಯುತ್ತು ಸರಬರಾಜು ಮಾಡುತ್ತಿದೆ. ಸಾಮಾನ್ಯವಾಗಿ ಈ ಸರಬರಾಜು ಅಗ್ಗ ಬೆಲೆಯಲ್ಲಿ ನಡೆಯುತ್ತಿದೆ ಮಹಾರಾಷ್ಟ್ರ ಸರಕಾರವು ನೀರಿನ ಬದಲಿಗೆ ವಿದ್ಯುತನ್ನು ಬೇಡುವುದೂ ತಪ್ಪಲ್ಲ; ಆದರೆ, ನೀರಿನಂತಹ ವಸ್ತುವಿನೊಡನೆ ಈ ರೀತಿ ಉದ್ದ ಎಳೆದಾಟವಾಡುವುದು ಮಾನವೀಯತೆಯ ವರ್ತನೆಯಲ್ಲ. ಕರ್ನಾಟಕದಂತೆಯೇ ಮಹಾರಾಷ್ಟ್ರವೂ ಬೇಡಿಕೆ ಬಂದೊಡನೆಯೇ ವಿಚಾರಿಸಿ ನಿರ್ಣಯ ತಿಳಿಸುತ್ತಿದ್ದರೆ, ಈ ಹೊತ್ತಿಗೆ ಎಲ್ಲವೂ ಸರಿಯೋಗುತ್ತಿತ್ತು. ಆದರ ಉಪಕಾರ ಸಕಾಲಿಕವಾಗುತಿತ್ತು. ಮಾನವೀಯವಾಗುತ್ತಿತ್ತು. ಶ್ರೀ ನಾಯಕರ ತಡವಾದ ನಿರ್ಧಾರಕ್ಕೆ ಏನೇನೋ ನೆಪ ಹೇಳಬಹುದು; ಆದರೆ, ನೀರಿನ ಬಗ್ಗೆ ಈ ಯಾವ ನೆಪವೂ ಅಸಮರ್ಥನೀಯವೇ ಎಂದು ವಿಷಾದದಿಂದಲೇ ಹೇಳಬೇಕಾಗಿದೆ.

ನಾವು ಒಂದು ದೇಶದ ಜನರು; ಒಂದೇ ಪಕ್ಷದ ಸರಕಾರವಿರುವ ಎರಡು ರಾಜ್ಯಗಳ ನಡುವೆ ಕುಡಿಯುವ ನೀರಿನ ಬಗ್ಗೆ ಒಡಂಬಡಿಕೆಯಾಗಲು ತಿಂಗಳೊಪ್ಪತ್ತು ತಗಲುವುದಾದರೆ, ಅದಕ್ಕಿಂತ ದುರದೃಷ್ಟಕರ ವಿಷಯ ಮತ್ತಾವುದು? ಕರ್ನಾಟಕದಲ್ಲಿದ್ದರೆ ತಮಗೆ ನೀರೂ ದೊರೆಯದೆನ್ನುವ ಭಾವನೆಯನ್ನು ಬೆಳಗಾಂವಿ ಪ್ರದೇಶದ ಜನತೆಯಲ್ಲಿ ಮೂಡಿಸುವ ದುರುದ್ದೇಶವಿದ್ದೀತೆ? ಇದು ಕಲ್ಪನಾತೀತವೆನಿಸುತ್ತದೆ. ಹೀಗಿದ್ದರೆ ದೊಡ್ಡ ದೇಶದ ದೊಡ್ಡ ಜನರು ನಾವೆಂದು ಅನಿವಾರ್ಯವಾಗಿ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಕೇಂದ್ರ ಸರಕಾರವು ಆಂಧ್ರಕ್ಕೆ ನೀರು ಒದಗಿಸಿ ಕೊಟ್ಟಂತೆಯೇ ಕರ್ನಾಟಕಕ್ಕೂ ಒದಗಿಸಿ ಕೊಟ್ಟೀತು—ಎಂಬ ಅಂಜಿಕೆಯಿಂದಾಗಿಯೇ ಶ್ರೀ ನಾಯಕರು 'ಹಾವು ಸಾಯಬಾರದು, ಕೋಲು ಮುರಿಯಬಾರದು' ಎಂಬ ನೀತಿ ತಳೆದಿದ್ದಾರೆನಿಸುತ್ತದೆ. ಅವರ ಈ ವರ್ತನೆ ಖಂಡನೀಯವೇ. ರಾಜ್ಯ ರಾಜ್ಯಗಳ ನಡುವೆ ಸಕಾಲಿಕ ಸಹಾಯ ಕೊಡು—ಕೊಳ್ಳುವಷ್ಟೂ ಮಧುರ ಸಂಬಂಧವಿಲ್ಲದೇ ಹೋದರೆ ಅವುಗಳು ಒಂದೇ ದೇಶದಲ್ಲಿದ್ದರೇನು? ಒಂದೇ ಪಕ್ಷದ ಆಡಳಿತೆಯಲ್ಲಿದ್ದರೇನು? ದಾಯಾದಿ ಮತ್ಸರ ಇವುಗಳ ಮೇಲೆಯೂ ಛಾಯೆ ಮೂಡಿದರೆ ಅದರಿಂದ ದೇಶ ಒಳ್ಳೆಯದಾಗುವುದಿಲ್ಲ.

ಪ್ರಗತಿ ಶೀಲರು ಯಾರು?

ಭೂಸುಧಾರಣೆಯ ಶಾಸನವನ್ನು ರಾಜ್ಯ ವಿಧಾನ ಮಂಡಳದ ಮುಂದೆ ಮುಂದಿನ ಅಧಿವೇಶನದ ವೇಳೆ ಮಂಡಿಸುವುದು ಸರಕಾರದ ಉದ್ದೇಶ್ಯವೆಂಬುದೀಗ ಸ್ಪಷ್ಟವಾಗಿದೆ. 'ಉಳುವವನೇ ಹೊಲದೊಡೆಯ' ಎಂಬುದು ಆಗ ಚರಿತಾರ್ಥವಾಗಬಹುದು. ಅದುವರೆಗೆ ಒಕ್ಕಲೆಬ್ಬಿಸುವುದರ ವಿರುದ್ಧ ರಕ್ಷಣೆ ನೀಡುವ ಉದ್ದೇಶ ಸರಕಾರ ಹೊಂದಿ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಿತು. ಇದರಂತೆ ಆದಷ್ಟೇ ವರ್ಷಗಳ ಗೇಣಿ ಬಾಕಿಯಿದ್ದರೂ ಎರಡು ವರ್ಷಗಳ ಗೇಣಿಗೆ ಸಮನಾಗುವ ಹಣವನ್ನು ಕೊಟ್ಟರೆ, ಅಂತಹ ಒಕ್ಕಲನ್ನು ಎಬ್ಬಿಸಲಾಗದು ಸರಕಾರದ ಉದ್ದೇಶ ಸುಸ್ಪಷ್ಟ. ಒಕ್ಕಲು ಎರಡು ವರ್ಷಗಳ ಗೇಣಿಯನ್ನಾದರೂ ಸಂದಾಯ ಮಾಡಬೇಕು, ರಕ್ಷಣೆ ಪಡೆಯಬೇಕು. ಮುಂದೆ ಸಮಗ್ರ ಭೂಶಾಸನ ಬರುವ ವರೆಗೆ ಇದರಿಂದ ಒಕ್ಕಲುಗಳಿಗೆ ರಕ್ಷಣೆ ದೊರೆಯುತ್ತದೆ. ವಿಧಾನ ಸಭೆಯಲ್ಲಿ ಆಳುವ ಪಕ್ಷಕ್ಕೆ ಬಹುಮತವಿದ್ದು ಅದು ಮಂಜೂರಾತಿ ಪಡೆದರೂ ವಿಧಾನ ಪರಿಷತ್ತು ಮಸೂದೆಯನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳಲಿಲ್ಲ. 'ಶೀಘ್ರ ಪರತ್ತು ರಕ್ಷಣೆ' ಒಕ್ಕಲಿಗೆ ದೊರೆಯ ಬೇಕೆಂಬ ಸಂಸ್ಥಾ ಕಾಂಗ್ರೆಸ್ಸಿನ ತಿದ್ದುಪಡಿ ಅಲ್ಲಿ ಮಂಜೂರಾಯ್ತು. ತಿದ್ದುಪಡಿ ಸಹಿತ ಮಸೂದೆಯನ್ನು ಮಂಡಿಸಲು ಸರಕಾರ ಒಪ್ಪದ್ದರಿಂದ ಅದು ಅಲ್ಲಿಗೇ ನಿಂತು ಹೋಯ್ತು. ಇನ್ನು ಸುಗ್ರೀವಾಜ್ಞೆಯ ಸಹಾಯದಿಂದ ಸರಕಾರ ತನ್ನ ಮಸೂದೆಯ ಉದ್ದೇಶವನ್ನು ಸಧ್ಯಕ್ಕೆ ಈಡೇರಿಸಿಕೊಳ್ಳ ಬೇಕಷ್ಟೆ.

ಸಂಸ್ಥಾ ಕಾಂಗ್ರೆಸ್ಸು ಸೂಚಿಸಿದ ತಿದ್ದುಪಡಿ ಅತ್ಯಂತ ಪ್ರಗತಿಶೀಲವಾದದ್ದು. ಬೇಗನೇ ಭೂಸುಧಾರಣಾ ಸಮಗ್ರ ಶಾಸನವನ್ನು ತರುವಂತೆ ಆಗ್ರಹ ಪಡಿಸುವಂತದ್ದು.

(ಪತ್ತನೇ ಪುಟ ನೋಡಿರಿ)

ಕೃತಜ್ಞತಾ ಸಮರ್ಪಣೆ

ಇದೇ ತಾ. 23—4—72ರಂದು ಉಡುಪಿ ಗೀತಾಂಜಲಿ ಪಿಕ್ಚರ್ ಹೌಸಿನಲ್ಲಿ, ನನ್ನ ಪುತ್ರ ವ ಜಾರ್ಕಳ ದಿ| ಮಹಾಬಲ ಹೆಗ್ಡೆಯವರ ಮೊಮ್ಮಗ ವ ಪಾದೂರು ರಮೇಶ ಹೆಗ್ಡೆಯವರ ಅಳಿಯ ಚಿ. ಅಜಿತ ಕುಮಾರನ ವಿವಾಹವು ಹೇರೂರು ಮುದ್ದಣ ಶೆಟ್ಟಿ ಸೊಸೆ ವ ಕಟಪಾಡಿ ಕೋಟೆ ಬೀಡು ದಿ| ಕೃಷ್ಣಯ್ಯ ಶೆಟ್ಟಿ ಪುತ್ರಿ ಚಿ. ಸೌ. ಶಾರದಾಳೊಂದಿಗೂ, ನನ್ನ ಪುತ್ರಿ ವ ಜಾರ್ಕಳ ದಿ| ಮಹಾಬಲ ಹೆಗ್ಡೆಯವರ ಮೊಮ್ಮಗಳು ವ ಪಾದೂರು ರಮೇಶ ಹೆಗ್ಡೆಯವರ ಸೊಸೆ ಚಿ ಸೌ. ಕುಮಾರಿ ಶಾಲಿನಿಯ ವಿವಾಹವು ಹಾರಾಡಿ ಹೊಸಮನೆ ನಾರಾಯಣ ಶೆಟ್ಟಿ ಅಳಿಯ ವ ಹಾರಾಡಿ ದಾಸಪ್ಪ ಶೆಟ್ಟಿ ಮನೆ ಶೀನಪ್ಪ ಶೆಟ್ಟಿ ಪುತ್ರ ಚಿ. ಕೃಷ್ಣನೊಂದಿಗೂ ನೆರವೇರಿದ ಸಂದರ್ಭದಲ್ಲಿ ಇಷ್ಟ ಮಿತ್ರರೊಂದಿಗೆ ಚಿತ್ತೈಸಿ ವಧೂವರರನ್ನು ಆಶೀರ್ವದಿಸಿದವರಿಗೂ ಉಚಿತ ಉಡುಗೊರೆಗಳನ್ನಿತ್ತ ಬಂಧು ಭಗಿನಿಯರಿಗೂ ಬೇರೆ ಬೇರೆ ವಿಧಗಳಿಂದ ಸಹಕರಿಸಿದ ಸಕಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕೌಡೂರು, 23—4—72

ಕೆ. ಸುಂದರ ಹೆಗ್ಡೆ,
ಮಲಿಯಾಳಕೆರೆ.

ಗೇಹರಾಜ್ಯದಲ್ಲಿ—

ಎರಡು ನಿಮಿಷ ಮೌನ-ನಾಲ್ಕು ತಟಕು ಕಣ್ಣೀರು

'ಅಲ್ರಿ, ಇದು ಎಂಥದನೂಂತೆ....'

'ಏನೆ? ಯಾವುದು?'

'ಅಲ್ಲ ನೋಡಿ, ದಕ್ಷಿಣ ಆಫ್ರಿಕದಲ್ಲಿ ವರ್ಣೀಯರ ಮೇಲೆ ಮತ್ತೆ ಕಟುತರವಾದ ಗದಾಪ್ರಹಾರವಾಗುತ್ತಲಿದೆಯಂತೆ....'

'ಅಂದ್ರೆ ಏನೆ? ತುಸು ವಿವರಿಸಿ ಹೇಳೋಣ್ರಿ....'

'ಮತ್ತಿನ್ನೆಂಥದು? ದಕ್ಷಿಣ ಆಫ್ರಿಕೆಯ ವರ್ಣ ನೀತಿ ಜಗತ್ ಪ್ರಸಿದ್ಧ....'

'ಹೌದು....'

"ಈಗ ವರ್ಣೀಯರನ್ನು ಸಂಪೂರ್ಣ ದಮನ ಮಾಡಲು ಅಲ್ಲಿನ ಸರಕಾರ ಯೋಜನೆಯೊಂದನ್ನು ರೂಪಿಸುತ್ತಿದೆಯಂತೆ...."

"ಏನದು?"

'ನೋಡಿ, ಜಹನ್ಸಬರ್ಗದಲ್ಲಿ ಬಿಳಿಯರ ಸೇವೆ ಮಾಡಿಕೊಂಡಿರುವ ಸಾವಿರಾರು ಕರಿಯ ಕುಟುಂಬಗಳಿವೆ'

'ಇರಬಹುದು....'

'ಅವರೆಲ್ಲರನ್ನೂ ನೀಗ್ರೋಗಳ ಕಾಲನಿಗೆ ಟ್ರಾನ್ಸ್‌ಫರ್ ಮಾಡುತ್ತಾರಂತೆ....'

'ಹಾಗಂದರೆ?'

'ನೀಗ್ರೋ ವಸತಿಯ ಬಳಿಯಲ್ಲೇ ಈ ಕರಿಯ ಸಂಚಾರರಿಗೆ ವಸತಿಯನ್ನು ಕಟ್ಟಿಸಲಾಗುತ್ತಿದೆಯಂತೆ ಮುಂದಿನ ವೊದಲನೆ ತೇದಿಯಿಂದು ಅವರೆಲ್ಲರನ್ನೂ ಆ ಹೊಸ ವಸತಿಯಲ್ಲಿ ನೆಲೆಗೊಳಿಸಲಾಗುತ್ತಿದೆಯಂತೆ'

'ಹ್ಞೂಂ...ಇದರಿಂದೇನಾಯ್ತು? ನಮ್ಮಲ್ಲೂ ಇಲ್ಲವೇನು? ಹರಿಜನ-ಗಿರಿಜನರಿಗೆ ಪ್ರತ್ಯೇಕ ಶಾಲೆಗಳು, ಹಾಸ್ಟೆಲ್ಲುಗಳು....'

"ಅವೆಲ್ಲ ಹಿಂದಿನ ಕಾಲದವು...."

'ಶಾಲೆಗಳ ಬಗ್ಗೆ ಬೇಕಾದರೆ ಹಾಗನ್ನಿ. ಹಾಸ್ಟೆಲುಗಳು ಹಾಗಲ್ಲ ನೋಡು. ನಮ್ಮ ಸರಕಾರ ನೆರವೀಯುವುದು ಹರಿಜನ ಗಿರಿಜನರ ಹಾಸ್ಟೆಲ್ಲಿಗೆ ಮಾತ್ರ...."

'ನೋಡಿ, ಅದೆಲ್ಲ ಕ್ಷುಲ್ಲಕ...'

'ಕ್ಷುಲ್ಲಕನೇನು ಬಂತೆ? ಜಾತಿಭೇದ ನೀಗಿಸುವ ಹೆಗ್ಗುರಿ ಹೊತ್ತ ಸರಕಾರ ಅಂತಹ ಹಾಸ್ಟೆಲ್ಲುಗಳಲ್ಲಿ ಉಳಿಯ ಬಯಸುವ ಮುಂದುವರಿದ ಜನಾಂಗದವರಿಗೆ ಆಶ್ರಯ ಕೊಡುವುದಿಲ್ಲ. ಅಂದರೆ, ಹಿಂದುಳಿದವರನ್ನು ಹಿಂದುಳಿದವರನ್ನಾಗಿಸಿಯೇ ಇಡುವ ಉದ್ದೇಶ್ಯ...'

'ನೋಡಿ, ಅದು ಆಚೆಗಿಡಿ. ಈಗ ದಕ್ಷಿಣ ಆಫ್ರಿಕೆಯ....'

'ಆಯ್ತಮ್ಮ, ಹೇಳು....'

'ನೋಡಿ, ಪ್ರತ್ಯೇಕ ವಸತಿ ಮಾತ್ರವಾದರೆ ಇರಲೀಂತ ಬಿಡಬಹುದೂನ್ನಿ. ಇದು ಹಾಗೂ ಅಲ್ಲ. ಅಲ್ಲಿ ಅಮಾನುಷ ಮಾತ್ರವಲ್ಲ ಅಜೈವಿಕ ಕ್ರಮ ನಡೆಯುತ್ತದೆಯಂತೆ....'

'ಏನು?'

'ಮತ್ತೇನ್ರಿ, ಗಂಡ—ಹೆಂಡಿರನ್ನೂ ಬೇರ್ಪಡಿಸುತ್ತಾರಂತೆ....'

'ಅಯ್ಯೋ, ಇದೇತದ್ದು?'

'ಅದೇ ಅನ್ನೋದು. ಗಂಡು—ಹೆಣ್ಣಿನ ಆಕರ್ಷಣೆ ಜೀವ ಸಹಜ. ಈ ಸಹಜ ಪ್ರವೃತ್ತಿಯನ್ನೇ ಮುರಿದು ಬಿಡುವ ಹವಣಿಕೆ....'

'ಅಲ್ವೇ, ಈಗಾಗಲೇ ಹೆಂಡತಿ—ಗಂಡರಾದವರು....'

'ಅವರನ್ನೂ....'

'ಮಕ್ಕಳು—ಮರಿಗಳನ್ನು?'

'ಅದೇ ಈಗ ಸಮಸ್ಯೆ. ಲೈಂಗಿಕ ಮತ್ತು ಮಕ್ಕಳ ಸಮಸ್ಯೆಯೊಗ ಆಫ್ರಿಕನ್ ಬುಡಕಟ್ಟಿನವರನ್ನು ಭಾದಿಸ ತೊಡಗಿದೆಯಂತೆ'

'ಅಲ್ವೇ, ಈ ಆಫ್ರಿಕನ್ನರು ಎಷ್ಟೊಂದು ಅತ್ಯಾಚಾರ ಸಹಿಸಿಕೊಳ್ಳುತ್ತಾರೇಂತ.... ಸಹನಾಶಕ್ತಿಗೊಂದು ನೋಬಲ್ ಬಹುಮಾನವಿರುತ್ತಿದ್ದರೆ, ಅದು ಆಫ್ರಿಕನ್ನರಿಗೇ ದೊರೆಯ ಬೇಕಿತ್ತು....'

'ಹ್ಞೂಂ .... ಹಾಗೇನೇ ಮಾನವೀಯ ಮೌಲ್ಯಗಳನ್ನು ಕಳೆದು ಕೊಂಡವರಿಗೆ ಬಹುಮಾನವಿದ್ದರೆ, ಅದು ಅಮೇರಿಕೆಗೆ....'

'ಯಾಕೆ?'

'ಯಾಕೇಂತ ಏನು? ಅದು ದಕ್ಷಿಣ ಆಫ್ರಿಕದ್ದಿನ ಇತಿಹಾಸವನ್ನು ಒಪ್ಪಿ ಕೊಳ್ಳುವುದಿಲ್ಲ. ಮಾನವತೆಯನ್ನು ಗೌರವಿಸುವುದಿಲ್ಲ. ಅವರ ಮೇಲೆ ವಿಯತನಾಮುದಲ್ಲಿ ಮಾನವತೆಯನ್ನು ಗಾಳಿಗೆ ತೂರಿ ದಬ್ಬಾಳಿಕೆ ನಡೆಸುತ್ತಿದೆ.

'ಅಲ್ವೇ, ಇದನ್ನು ಪ್ರತಿಭಟಿಸಲು ದೆಹಲಿ ರಾಯಭಾರಿ ಕಛೇರಿಯ ಮುಂದೆ ಪ್ರದರ್ಶನವೂ ನಡೆಯಿತಲ್ಲಾ....'

'ಅದರಿಂದೇನು ಪ್ರಯೋಜನ? ಅಧ್ಯಕ್ಷ ನಿಕ್ಸನ್ ರಾಜ್ಯ ಸ್ವಾತಂತ್ರ್ಯಗಳ ಜನನಾ ಮತ್ತ ಆಕಾಂತಿಯನ್ನು ಹರಡುತ್ತಾರೆ, ಸ್ವಾತಂತ್ರ್ಯವನ್ನು ಅಪಹರಿಸುತ್ತಾರೆ ...'

'ಹ್ಞೂಂ.... ಆಮ್ಮು....'

'ಏನು?'

'ಅಲ್ವೇ, ಭಾರತ ಪಾಕಿಸ್ತಾನಗಳ ನಡುವೆ ಪ್ರತಿನಿಧಿ ಮಟ್ಟದ ಸಭೆ ನಡೆಯುವುದು ಗೊತ್ತಾಯ್ತು....'

'ಯಾವಾಗ? ಎಲ್ಲಿ?'

'ಮೊದಲ ಸುತ್ತು ಈಗರಂದು ರಾವಲ್ಪಿಂಡಿಯಲ್ಲಿ....'

'ಹ್ಞೂಂ....ಅಲ್ರಿ, ಸರ್ದಾರ ಸಿಂಗರಿಗಿನ್ನೊಂದು ...'

'ಸರ್ದಾರರಲ್ವೇ, ಈ ಭಾರಿ ಡಿ. ಪಿ. ಧರ್....'

'ಹಾಗಂದ್ರೆ....'

'ವಿದೇಶ ನೀತಿ ನಿರೂಪಣಾ ಸಮಿತಿಯ ಅಧ್ಯಕ್ಷರು....'

'ಓ, ಸೋವಿಯತ್ತಿಗೆ ಹೋಗಿ ಬಂದವರು....'

'ಹ್ಞೂಂ ಅವರು ಬಾಂಗ್ಲಾ ಸರಕಾರದೊಂದಿಗೆ ಮಾತುಕತೆ ನಡೆಸಿ ಬಂದರು. ಇನ್ನು ಪಾಕಿಸ್ತಾನದೊಂದಿಗೆ ಮಾತು....'

'ಹ್ಞೂಂ.... ಸರೀನ್ನಿ, ಇನ್ನಾದರೂ ಪಾಕು ದಿವಾಕು ಬಿಟ್ಟು ನಡೆದುಕೊಳ್ಳಲಿ....'

'ಕೊಳ್ಳಲಿ, ಯಾರು ಬೇಡಾಂತಾರೆ....'

'ಅಲ್ರಿ, ಬಾಂಗ್ಲಾ ದೇಶಕ್ಕೆ ಕಾಮನ್‌ವೆಲ್ತಿನ ಸದಸ್ಯತ್ವ ಸಿಕ್ಕಿತಂತಲ್ಲಾ?

'ಹ್ಞೂಂ....'

'ಅಲ್ಲ ಯಾಕಿಷ್ಟು ತಡವಾಯ್ತೂಂತ..'

'ತಡವೇನೇ ನಿಯಮಾನುಸಾರ ಎಲ್ಲ ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳ ಒಪ್ಪಿಗೆ ಬೇಕಿತ್ತು. ಅದು ಬರುವಾಗ ತಡವಾಯ್ತು...'

'ಅಲ್ರಿ, ಪಾಕಿಸ್ತಾನವೂ ಒಪ್ಪಿತೆ?'

"ಅಯ್ಯೋ, ಪಾಕಿಸ್ತಾನ ಕಾಮನ್‌ವೆಲ್ತಿನಿಂದ ಹೊರಬಂದಿದೆಯಲ್ಲಾ...."

'ಓ, ಹೌದೂಂದ್ರೆ....ಇನ್ನು ಬೇಕಾದರೆ, ಪಾಕಿಸ್ತಾನವೇ ಮರು ಪ್ರವೇಶ ಬಯಸಬೇಕು....'

'ಕೇಳಿದ್ಯೇನೆ?'

'ಏನು?'

'ಅಲ್ವೇ ಭಾರತರತ್ನವೊಂದು ಅಸ್ತಂಗತವಾಯ್ತು....'

"ಏನು? ಹಾಗಂದ್ರೆ?"

"ಮತ್ತೇನೂ ಇಲ್ಲ. ಭಾರತರತ್ನ ಮು. ವಿ. ಕಾಣೆಯವರು ದಿವಂಗತರಾದರು....'

'ಕಾಣೆ ಅಂದ್ರೆ...ತಿಳೀತು ಬಿಡಿ, ಭಾರಿ ದೊಡ್ಡ ಸಂಸ್ಕೃತ ವಿದ್ವಾಂಸರು...'

'ಅವರಿಗೆ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ದೊರೆತಿದೆಯಲ್ಲಾ....'

'ಹ್ಞೂಂ.... ಧರ್ಮಶಾಸ್ತ್ರದ ಇತಿಹಾಸಕ್ಕೆ....'

'ಅವರಿಗೆ ನೂರಕ್ಕೆ ಹತ್ತಿರ....'

'ಇಲ್ವೇ, ಬರಿಯ ಎಂಟು ಕಡಿಮೆ'.

'ಮತ್ತೆ....'

'ಮುಂತ್ತೆಂಥದು? ೧೯೪೭-೪೯ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದರು. ೧೯೫೩-೫೯ರ ಅವಧಿಯಲ್ಲಿ ರಾಜ್ಯಸಭಾ ಸದಸ್ಯರಾಗಿದ್ದರು.'

'ಆಯ್ತು....'

'ಪ್ಯಾರಿಸ್, ಇಸ್ತಾಂಬುಲ್ ಮತ್ತು ಕೇಂಬ್ರಿಜ್‌ಗಳಲ್ಲಿ ನಡೆದ ಪ್ರಾಚ್ಯ ಸಂಶೋಧನಾ ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.'

'ಹ್ಞೂಂ....ಒಟ್ಟಿನಲ್ಲಿ ದೊಡ್ಡ ವಿದ್ವಾಂಸ ಇನ್ನಿಲ್ಲವಾದರು....ಅದಕ್ಕೇ....'

'ಎರಡು ನಿಮಿಷ ಮೌನ ಪ್ರಾರ್ಥನೆ..'

'ಅದು ಸಾಲದು. ನಾಲ್ಕು ತಟಕು ಕಣ್ಣೀರು....'

'ಅಲ್ವೇ, ದಿ| ಅನಕೃರವರ ವಿಧವೆಗೆ ಕಣ್ಣು ತುಂಬಿ ಬಂತಂತೆ....'

'ಯಾಕೆ? ಯಾವಾಗ?'

"ಅನಕೃ ಜೀವಂತರಿರುವಾಗಲೇ ಅವರನ್ನು ಅಪ್ರೂರಿಯಿಂದ ಸತ್ಕರಿಸಲೆಂದು ಕೆಲವರು ಯೋಚಿಸಿದ್ದರಂತೆ. ಅದು ಈಡೇರದ್ದರಿಂದ ಸನ್ಮಾನ ಸಮಿತಿ ಸ್ಮೃತಿ ಸಂಪುಟವೊಂದನ್ನು ಪ್ರಕಟಿಸಿ ರೂ ೧೦ ಸಾವಿರವನ್ನು ಅವರಿಗೆ ಒಪ್ಪಿಸಿದಾಗ...."

'ಸರಿಯೇ ಅನ್ನಿ.'

'ಅವರ ಮಗಳೊಬ್ಬಳು ತಂದೆ ನೆನಪಿನ ಹಾಡು ಹಾಡತೊಡಗಿ ಕೊನೆಗೊಳಿಸಲಾರದೆ ಅತ್ತುಬಿಟ್ಟಳಂತೆ...."

'ಅಲ್ರಿ, ಅನಕೃ ನಿಜಕ್ಕೂ ಶ್ರೇಷ್ಠ ಕನ್ನಡ ಪುತ್ರ ಅಲ್ವೆ?'

'ಅದ್ರಲ್ಲೂ ಸಂದೇಹವೇ?'

'ಇಲ್ಲಾನ್ನಿ...'

'ಮತ್ತೆ....'

'ಮತ್ತೆ...ಹೀಗೆ ಬನ್ನಿ....'

'ಹ್ಞೂಂ....'

—ಗೋರಾ.

ಮುಸ್ಲಿಮ್ ಎಜ್ಯುಕೇಶನಲ್ ಸೊಸೈಟಿ

ಮುಸ್ಲಿಮ್ ಎಜ್ಯುಕೇಶನಲ್ ಸೊಸೈಟಿಯ ಅಖಿಲ ಭಾರತ ಸಂಘಟಕ ಶ್ರೀ ಎಸ್ ಕೆ ಅಬ್ದುಲ್ಲಾರವರು ಇತ್ತೀಚೆಗೆ ಮಂಗಳೂರಲ್ಲಿ ಜರಗಿದ ಪತ್ರಿಕಾ ಗೋಷ್ಠಿಯಲ್ಲಿ 1964ರಲ್ಲಿ ಕಲ್ಲಿಕೋಟೆಯಲ್ಲಿ ಪ್ರಾರಂಭವಾದ ಈ ಸಂಸ್ಥೆಯ ಸಾಧನೆಗಳನ್ನು ವಿವರಿಸಿದರು. ಬಡಜನರಿಗೆ ಪ್ರಯೋಜನಕಾರಿಯಾಗಿರುವ ಈ ಸಂಸ್ಥೆಗೆ ಹಾವು ಅಧಿಕ ಮೊತ್ತದಲ್ಲಿ ಧನ ಸಹಾಯಮಾಡಿ ಅವರ ಕಾರ್ಯಕ್ರಮಗಳಿಗೆ ಹೊಸರೂಪ ನೀಡಿರುವುದಾಗಿ ತಿಳಿಸಿ, ಅವರಂತೆ ಸ್ವತಂತ್ರವಾಗಿ ಜೀವನೋಪಾಯ ಕಂಡುಹಿಡಿದು ನಡೆಸ ಬಯಸುವವರಿಗೆ ಧನಸಹಾಯ ಮಾಡಲು ಸಂಘ ತಯಾರಿದೆ ಎಂದರು.

ಸೊಸೈಟಿಯ ಚಟುವಟಿಕೆಗಳನ್ನು ರಾಷ್ಟ್ರವ್ಯಾಪ್ತಿಯಂತ ವಿಸ್ತರಿಸಲು ಉದ್ದೇಶಿಸಿದ್ದು ಈ ಸಂಬಂಧ ರಚಿಸಲಾದ ಅಖಿಲ ಭಾರತ ಕಾರ್ಯಾಲಯವು ಮದರಾಸಿನಲ್ಲಿದೆಯೆಂದೂ ಮಂಗಳೂರು ಮತ್ತು ದ. ಕ. ಜಿಲ್ಲೆಯ ಜನತೆಗಾಗಿ ಮಂಗಳೂರಿನಲ್ಲಿ ಒಂದು ಶಾಖೆಯನ್ನು ತೆರೆಯಲು ಯೋಜಿಸಲಾಗಿದೆ ಎಂದೂ ತಿಳಿಸಿದರು.

HOTEL SATKAR

Boarding, Lodging & Restaurant

Behind Corporation Office.

9 Mission Road — Bangalore—27.

Phone No. — 1 [illegible] Grams: HOST SATKAR
2 [illegible]

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service

ಲಕ್ಷ್ಮೀಶ ಕವಿಯ ಒಂದು ಪದ್ಯ (ವಿವರಣೆ)

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿವಿಧ ಕಥೆಗಳನ್ನು ಆದರಿಸಿ, ವಿವಿಧ ರೀತಿಯಲ್ಲಿ ಬರೆದವರಿದ್ದಾರೆ. ಅವರಲ್ಲಿ ಭಾಮಿನೀ ಚಕ್ರದಲ್ಲಿ ಕುಮಾರವ್ಯಾಸ—ರಾಘವಾಂಕರನ್ನೂ, ವಾರ್ಧಕ ಷಟ್ಪದಿಯಲ್ಲಿ ಲಕ್ಷ್ಮೀಶನನ್ನೂ, ಸಾಂಗತ್ಯರೂಪದಲ್ಲಿ ರತ್ನಾಕರವರ್ಣಿಯನ್ನೂ ಹೆಸರಿಸುತ್ತಾರೆ, ಬಲ್ಲವರು.

ಸಂಸ್ಕೃತದಲ್ಲಿ ಜೈಮಿನಿ ಪ್ರಣೀತವಾದ, ಪಾಂಡವರ ಅಶ್ವಮೇಧದ ಕತೆಯ ಒಂದು ಪರ್ವ ಸಿಕ್ಕಿರುತ್ತದೆ. ಅದನ್ನು ಕನ್ನಡಿಸಿ ಬರೆದವನು, ಲಕ್ಷ್ಮೀಶ ಮಹಾಕವಿಯು. ಈತನು ಕಡೂರು ಜಿಲ್ಲೆಯ 'ದೇವನೂರು' ಎಂಬಲ್ಲಿ ಇದ್ದವನೆಂದು ಇವನು ಭಜಿಸಿದ ದೇವರ ಗುಡಿ, ಇವನ ಕುರಿತಾದ ಆಖ್ಯಾಯಿಕೆ ಹಾಗೂ ಇವನ ಇತರ ಕೀರ್ತನೆಗಳು, ಇತ್ಯಾದಿಗಳಿಂದ—ಬಹುಶಃ ಸರ್ವಸಮ್ಮತವಾಗಿದೆ. ಈತನ ಕನ್ನಡ ಜೈಮಿನಿ ಭಾರತದ ಎರಡು ಪ್ರತಿಗಳಲ್ಲಿ 'ಕರ್ಣಾಟ ಕವಿ ಚೈತ್ರ ವನಚೂತ'ನೆಂದು ಇರುವುದರಿಂದಾಗಿ, ಇದುವೇ ಇವನ ಸರಿಯಾದ ಬಿರುದಾಗಿರ ಬೇಕೆಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅದೊಮ್ಮೆ ಬರೆದಿದ್ದರು; ಅದನ್ನು ಶ್ರೀ ಪಾಂಡುರಂಗ ದೇಸಾಯಿಯವರು ಅನುಮೋದಿಸಿ ಹೇಳಿದ್ದರು; ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಅದನ್ನು ಉಲ್ಲೇಖಿಸಿದ್ದರು. (ಕನ್ನಡ ಜೈಮಿನಿ ಭಾರತದ ಪೀಠಿಕೆ—ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ 1956)

ಆದರೆ, ಈತನಿಗಿಂತ ಹಿಂದಿನ ಮತ್ತು ಮುಂದಿನ ಹಲವು ಕೃತಿಗಳಲ್ಲಿ ಇಂತಹ ಉಲ್ಲೇಖಗಳನ್ನು ಪರಿಶೀಲಿಸುವಾಗ, ಇದುವರೆಗೆ ಪ್ರಚುರಿತವಿರುವಂತೆ, 'ಕರ್ಣಾಟ ಕವಿ ಚೂತವನ ಚೈತ್ರ' ನೆಂದೇ ಸರಿಯಾದ ವಾಚಕವಾಗಿದೆಯೆಂದು ನಾನು ಬರೆದಿದ್ದೆನು. (ಪ್ರಬುದ್ಧ ಕರ್ಣಾಟಕ ಮತ್ತು 'ಸಾಹಿತ್ಯ ಹಾಗೂ ಸಂಶೋಧನೆ' ಯೆಂಬ ನನ್ನ ಸಂಕಲನದಲ್ಲಿ ನೋಡಿರಿ)

ಕವಿ ಲಕ್ಷ್ಮೀಶನು ಜೈಮಿನಿ ಬರೆದ ಸಂಸ್ಕೃತ ಗ್ರಂಥದ ಮಕ್ಕಿಮಕ್ಕಿ ಅನುವಾದಕನಲ್ಲ. ಕೆಲವೆಡೆ ಚುರುಕಾದ ವಿಷಯಾಂಶಗಳನ್ನು ಬೇರೆಡೆಯಿಂದ ತಂದು ಪೋಣಿಸಿದ್ದಾನೆ, ಕೆಲವೆಡೆ ಮೂಲವನ್ನು ವಾಚಕರು ಪರಿಕಿಸುವಂತೆ ಚುರುಕಾಗಿ ಸಾಗಿದ್ದಾನೆ. ಕನ್ನಡದಲ್ಲಿ ಪ್ರೌಢ ರೀತಿಯ ಗ್ರಂಥಗಳಲ್ಲಿ ಇವನ ಜೈಮಿನಿ ಭಾರತವೊಂದಾಗಿ ಪ್ರಸಿದ್ಧವಾಗಿದೆ.

ಇದೀಗ ಕನ್ನಡ ಜೈಮಿನಿ ಭಾರತದ ಒಂದು ಪದ್ಯವೆತ್ತಿ, ಅದರ ಶಬ್ದ ಅರ್ಥಗಳ ವಿಚಾರ ಬರೆಯಲಾಗಿದೆ; ಈ ಬಗೆಗೆ ಮೂಲ ಕೃತಿಯಲ್ಲಿ ಹೇಗಿದೆ, ಕನ್ನಡದಲ್ಲಿ ಹೇಗಿರಬೇಕೆಂದು ಪ್ರಸ್ತಾವಿಸಲಾಗಿದೆ.

ಅರ್ಜುನನು ಕುದುರೆಯೊಂದಿಗೆ ಸಾಗಿ, ಗೆಲ್ಲುತ್ತಾ ಮುನ್ನಡೆದಾಗ, ಅದೊಂದೆಡೆ ಆ ಕುದುರೆಯನ್ನು ಹಂಸಧ್ವಜನು ಕಟ್ಟಿಸಿದನು. ಹಂಸಧ್ವಜ ಅಸಾಮಾನ್ಯ ರಾಜನು. ಇವನ ಸೋದರ ವರ್ಗವೂ, ಪುತ್ರರ ಪರಿವಾರವೂ, ಯುದ್ಧ ಕೌಶಲ್ಯಾದಿಗಳ ವೈಖರಿಯೂ ವಂಶದ ಹಿನ್ನೆಲೆಯೂ ಹಿರಿದಾದುದು.

ಆ ರಣಕ್ಕೆಲ್ಲರೂ ಬರಲೆಂದು—ಬಾರದಿದ್ದರೆ—ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿ ಸುಡಿಸುವೆನೆಂದು—ಡಂಗುರ ಹೊಯಿಸಿದನು. ಅಂತೆಯೆ, ಸುಧನ್ವನು ರಣಕ್ಕೆ ಸಾಗಲು ಸಜ್ಜನಾಗಿ, ತಾಯಿ ತಂಗಿಯರನ್ನು ಕಂಡು ಬೀಳ್ಕೊಂಡು ಪತ್ನಿಯಲ್ಲಿಗೆ ಬಂದಾಗ, ಆಕೆ ತನ್ನನ್ನು ಕೂಡಿಯೇ ಮುಂದೆ ರಣಕ್ಕೆ ಸಾಗ ಬೇಕೆಂದು ವಿವಿಧ ರೀತಿಯಲ್ಲಿ ಬಿನ್ನವಿಸುತ್ತಾಳೆ. ಅದೊಂದು ಪದ್ಯವಿದು:

"ಸತಿಗೆ ಷೋಡಶದ ಋತು ಸಮಯ ಮೇಕಾದಶೀ ವ್ರತ ಮಲಂಘ್ಯ ಶ್ರಾದ್ಧಮಿನಿತೊಂದು ದಿನಮೆ ಸಂಗತಮಾದೊಡೆಂತು ಕರ್ತವ್ಯಮೆನೆ: ಪೈತೃಕದ ಶೇಷಾನ್ನ ಮಾಘ್ರಾಣಿಸಿ || ಕೃತಭೋಜ್ಯಮಾದಪುದು, ನಡುವಿರುಳ್ಗಳಿದಾವನಿತೆಯನೊಡಗೂಡ ಬಹುದದರಿಂದ, ಧರ್ಮಪದ್ಧತಿಯ ನೀಕ್ಷಿಸಲಿ ಪಳಸಿಂದು ಮೀರುವುದು ಮತವಲ್ಲೆಂದವಂ ತಿಳಿದನು ||"

"ಧರ್ಮಪತ್ನಿಯ — ಹದಿನಾರನೆಯ ದಿನದ ಋತುಕಾಲವೂ, ಏಕಾದಶೀ ವ್ರತವೂ, ಪಿತೃಗಳ ಅಲಂಘ್ಯ ಶ್ರಾದ್ಧವೂ ಒಂದೇ ದಿನಕ್ಕೆ ಬಂದರೇನು ಕರ್ತವ್ಯವೆನ್ನಲು; ಪಿತೃಶ್ರಾದ್ಧದ ಉಳಿದನ್ನದ ಆಘ್ರಾಣಿಕೆಯಿಂದ ಶೇಷಾನ್ನದ ಭೋಜನದ ಫಲವಾಗುತ್ತಿದೆ. ನಡುರಾತ್ರಿ ಗಳಿದ ಮೇಲೆ ಸತಿಯನೊಡಗೂಡಬಹುದೆಂದು ಇರುವುದು; ಆದರಿಂದ ಧರ್ಮ ಪದ್ಧತಿಯನ್ನು ನೋಡಲು, ಇದನ್ನು ಮೀರಿ ಸಾಗುವುದು ಮತವಲ್ಲೆಂದು ತಿಳಿದನು (ಸುಧನ್ವ)'' ಎಂದು ಈ ಪದ್ಯದ ಅರ್ಥ ಸಾಧಾರೀತಿಯಲ್ಲಿ ತಿಳಿಯಲಾಗುತ್ತದೆ. (ಇದರೊಂದಿಗೆ ಇಂದು ಕೃಷ್ಣ ದರ್ಶನವೆಂಬ ಪಾವಿತ್ರ್ಯದ ಹರಿದಿನವೊ, ತಂದೆಯಾಜ್ಞೆಯೆಂಬ ಶ್ರದ್ಧಾ ಭಕ್ತಿಯ ಕಾರ್ಯವಿದೆಯೆಂದೋ, ಆ ಕಾರ್ಯಗಳಂತೆ ಸತಿಯ ಸಂಗವೂ ಮೊದಲಾಗಿ ಈಗೆಂತು ಸಾಧ್ಯವೆಂಬ ವಿಶೇಷಾರ್ಥದ ಹೊಂದಿಕೆಯಲ್ಲಿ ಹೇಳಲಾಗುತ್ತದೆ). ಈ ಸಾಮಾನ್ಯಾರ್ಥವೇ ಶ್ರೀ ಕುಂಬಳೆ ಸುಂದರರಾವ್ ಕನ್ನಡದಲ್ಲಿ ಅರ್ಥ ಬರೆದ 'ಸುಧನ್ವ ಕಾಳಗ'ದ, (ಕುಂದಾಪುರದ ಶ್ರೀ ಡಿ.ವಿ. ಹೊಳ್ಳರಿಂದ ಪ್ರಕಟಿತ) ಪುಸ್ತಕದಲ್ಲಿದೆ. ಆದರೆ ಇಲ್ಲಿ "ಎಂತು **ಕರ್ತವ್ಯಮೆನೆ?**" ಎಂಬ ಪ್ರಶ್ನೆಯನ್ನೂ, ಆ ಬಗ್ಗೆ ಮತ್ತಿನ ಉತ್ತರವನ್ನೂ ಒಬ್ಬನೇ **ಹೇಳಿದಂತಿರುವುದು**—ಹೇಳುವುದು—ಸೂಕ್ತವೇ? ಈ ಮೇಲಿನ ಮೂರು ಘಟನೆಗಳ ಹೊಂದಾಣಿಕೆಯ ಪ್ರಶ್ನೆಯನ್ನು ಕೇಳಿದವನೊಬ್ಬ, ಅದಕ್ಕೆ ಉತ್ತರವನ್ನು ಹೇಳಿದವನೊಬ್ಬನೆಂದು ತಿಳಿಯಬಹುದೇ ಎಂಬ ಸಂದೇಹವಿದೆ. ಏಕೆಂದರೆ, ಕನ್ನಡದಲ್ಲಿ 'ಎನೆ'(ಎನ್ನಲು) ಎಂಬ ವಾಕ್ಯಾರ್ಥದ ಸಾಂಗತ್ಯದಿಂದಾಗಿ, ಹೀಗೆರಡು ವ್ಯಕ್ತಿಗಳೇ ಇಲ್ಲಿ ಅವಶ್ಯಕಗಳೋ? ಈ ಬಗೆಗೆ ಕನ್ನಡದ ಪ್ರತಿಯಲ್ಲಿ ಹೆಚ್ಚು ಅವಕಾಶ (ಚರ್ಚೆಗೆ) ಇರುವುದಿಲ್ಲ. ಹಾಗಾಗಿ, ಜೈಮಿನಿ ಬರೆದ ಮೂಲಕೃತಿಯನ್ನು ತುಸ ನಾವು ಪರಿಶೀಲಿಸಬೇಕೆಂದು ಬಯಸಿದರೆ ತಪ್ಪಾಗಬಾರದಲ್ಲವೇ? (ಸುಧನ್ವನೇ ಮೂರು ಬಗೆಯ ಸಮಸ್ಯೆಗಳನ್ನು ಹೇಳಿಕೊಂಡು, ಅವನೇ ಅವಕ್ಕೆ ಸಮರ್ಪಕವಾದ ಉತ್ತರ—ಪರಿಹಾರ—ಸೂಚಿಸಿದನೆಂಬುದು ವ್ಯಕ್ತಿ—ಪಾತ್ರ—ಗೌರವ ದೃಷ್ಟಿಯಲ್ಲಿ ಚೆನ್ನಾಗಿರಲಾರದೆಂದೂ ಕಾಣುತ್ತದೆ. ಸುಧನ್ವನೇ ಹಾಗೆ ಪ್ರಶ್ನೆ ಮತ್ತು ಉತ್ತರ

(ಎಂಟನೇ ಪುಟ ನೋಡಿರಿ)

ವಿಜಯ ಬ್ಯಾಂಕಿನ
ವರಮಾನ ಹಾಗೂ ವಿಮೆಯ
4 ಹೊಸ ಯೋಜನೆಗಳು.



1 ತ್ರಿಗುಣ ವಿಮಾ ಮಿಶ್ರಿತ ಠೇವಣಿ ಯೋಜನೆ
2 ದ್ವೈವಾರ್ಷಿಕ ವಿಮಾ ಹಾಗೂ ಠೇವಣಿ ಯೋಜನೆ
3 ವಿಮೆಗೆ ಒಳಪಟ್ಟ ಮಿಶ್ರಿತ ಠೇವಣಿ ಯೋಜನೆ
4 ಪ್ರೀಮಿಯಮ್ ಹೊಂದಿಕೊಂಡ ಠೇವಣಿ ಯೋಜನೆ

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿ
ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-1.
ಚೇರ್‌ಮನ್ : ಎಂ. ಸುಂದರ್‌ರಾಮ್ ಶೆಟ್ಟಿ
Bensons 2233 KAN

ಕೌರವರೇಕೆ ಸೋತರು?

ಕುರುಬಲದ ಅನೈಕ್ಯ

(ಹಿಂದಿನ ಸಂಚಿಕೆಯಿಂದ)

ಲೇಖಕರು— ಶ್ರೀ ಬಿ. ಕೃಷ್ಣಪ್ಪ, ಎಂ.ಎ.

ಪಾಂಡವರು ಸ್ವೇತನಿಗೆ ಸೇನಾನಾಯಕ ಪಟ್ಟವನ್ನು ಕಟ್ಟಿದರು. ಸಮಯೋಚಿತವೂ ಯೋಗ್ಯವೂ ಆದ ರೀತಿಯಲ್ಲಿ ದುರ್ಯೋಧನ ಭೀಷ್ಮರಿಗೆ ಪಟ್ಟವನ್ನು ಕಟ್ಟಿದ. ದ್ರೋಣ ಕೃಪಾದಿ ಸಕಲ ರಾಜಮಂಡಲವೂ ದುರ್ಯೋಧನನ ತೀರ್ಮಾನಕ್ಕೆ ಮೆಚ್ಚಿದರು. ಭೀಷ್ಮನ ಬಾಹುಬಲ ರಕ್ಷಣೆಯಲ್ಲಿ ಕುರುಬಲ ಕ್ಷೇಮವನ್ನು ಹೊಂದಿತು ಎಂದು ಸಮಾಧಾನಪಟ್ಟರು. ದುರ್ಯೋಧನನಿಗೆ ಪಾಂಡವರನ್ನು ಗೆದ್ದಷ್ಟು ಸಂತೋಷವಾಯಿತು. ಆದರೆ ಕೌರವನ ಈ ತೀರ್ಮಾನ ಕರ್ಣನಿಗೆ ಹಿಡಿಸಲಿಲ್ಲ. ಅವನು ಸಿಡಿದೆದ್ದ. ಚಿಕ್ಕಂದಿನಿಂದಲೂ ಭೀಷ್ಮ ಪಾಂಡವ ಪಕ್ಷಪಾತಿ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅಲ್ಲದೆ ಅವನು ಮುಪ್ಪಿನ ಮುದುಕ. ಅವನ ಹಣೆಯ ಮೇಲೆ ಜೋತುಬಿದ್ದಿರುವ ಚರ್ಮದ ಸುಕ್ಕನ್ನೇ ಎತ್ತಿಕಟ್ಟಿ ಕಿರೀಟವನ್ನಾಗಿ ಮಾಡಿದ್ದಾರಂತೆ! ಹೀಗೆ ಒಂದು ಕಡೆ ಮಾನಸಿಕ, ಮತ್ತೊಂದು ಕಡೆ ದೈಹಿಕ ದೌರ್ಬಲ್ಯವಿರುವ ಈ ಭೀಷ್ಮ ಕೌರವನಿಗಾಗಿ ಹೃತ್ಪೂರ್ವಕವಾಗಿ ಹೋರಾಡಬಲ್ಲನೆ? ಪಾಂಡವರನ್ನು ಜಯಿಸಬಲ್ಲನೆ? ತಾನಾದರೋ ಅರ್ಜುನನನ್ನು ನಾಶಮಾಡುತ್ತೇನೆ ಎಂದು ಪ್ರತಿಜ್ಞಾಬದ್ಧನಾಗಿದ್ದಾನೆ. ಪಾಂಡವರ ನಿಜವಾದ ಶತ್ರು. ಇನ್ನೂ ಯುವಕ. ಕ್ಷಾತ್ರ ತೇಜಸ್ಸು ತನ್ನಲ್ಲಿ ಉಕ್ಕಿ ಹರಿಯುತ್ತಿದೆ. ಶತ್ರುಗಳ ದಮನಕ್ಕಾಗಿ ಬಾಹುಗಳು ಕುಣಿಯುತ್ತಿವೆ. ತಾನು ಈ ಮುಪ್ಪಿನ ಭೀಷ್ಮನಿಗಿಂತಲೂ ವೀರ. ಕುರುಪಕ್ಷದಲ್ಲಿ ತನ್ನನ್ನು ಮೀರಿಸಬಲ್ಲ ವೀರನಿರುವನೆ? ದುರ್ಯೋಧನನ ಶತ್ರು ಮಡಿಯುವುದಾದರೆ ತನ್ನಿಂದ ಮಾತ್ರ ಸಾಧ್ಯ. ನೆರೆದ ರಾಜ ಸಮೂಹದಲ್ಲಿ ತಾನು, ತನ್ನಿಂದ ಮಾತ್ರ ಶತ್ರು ನಾಶವಾಗಬಲ್ಲದು ಎಂಬ 'ಅಹಂ' ಕರ್ಣನ ಪೂರ್ವಾಪರ ವಿವೇಚನೆಯನ್ನೇ ನುಂಗಿ ಹಾಕಿತು " ದುರ್ಯೋಧನ, ಈ ಭೀಷ್ಮರಿಗೆ ಸೇನಾಪಟ್ಟವನ್ನು ಕಟ್ಟಿ, ಅವಿವೇಕವನ್ನುಂಟುಮಾಡುತ್ತಿರುವೆ, ಶತ್ರುಗಳ ನಿಟ್ಟೆಲುವುಗಳನ್ನು ಮುರಿಯುವುದಾದರೆ, ನನಗೆ ಪಟ್ಟವನ್ನು ಕಟ್ಟು" ಎಂದು ಕರ್ಣ ಉಗ್ಘಡಿಸಿದನು. ನೆರೆದ ರಾಜಸಮೂಹ ಬಿಲ್ಲು ಬೆರಗಾಯಿತು, ದುರ್ಯೋಧನನಿಗೆ ಏನು ಹೇಳಲೂ ಮಾತು ಹೊರಡದಾಯಿತು ಭೀಷ್ಮರು ಮೌನವನ್ನು ಧರಿಸಿದರು. ಕರ್ಣನ ಉದ್ಧಟ ವರ್ತನೆಯನ್ನು ಕಂಡು ದ್ರೋಣರಿಗೆ ಸಹನೆ ಮೀರಿತು. ನೆರೆದ ರಾಜಸಭೆಯಲ್ಲಿ ಕುರುಕುಲ ಪಿತಾಮಹನಿಗೆ ಅಪಮಾನವೇ? ಭೀಷ್ಮರ ಮುಪ್ಪೂ ಸಿಂಹದ ಮುಪ್ಪೂ ಎರಡೂ ಒಂದೇ. ಎಲ್ಲಿಯೋ ಬಿದ್ದಾಡಿ ಬದುಕಿದ ಈ ಹೀನ ಕರ್ಣ, ದುರ್ಯೋಧನನ ಅನ್ನವನ್ನು ತಿಂದು ಸೊಕ್ಕಿ, ಹಿರಿಯರೂ ಕುಲವೃದ್ಧರೂ ಆದ ಭೀಷ್ಮರನ್ನು ಬೈಯ್ಯುವ ಮಟ್ಟಕ್ಕೆ ಬಂದನೆ? ಕರ್ಣ ಹೀನ ಕುಲಜ ಎಂಬ ಅಸಮಾಧಾನ ದ್ರೋಣರಿಗೆ ಮೊದಲಿನಿಂದಲೂ ಇತ್ತು. ಅವರು ತಮ್ಮ ಭಾವನೆಗಳನ್ನು ಹತ್ತಿಕ್ಕಿಕೊಳ್ಳದಾದರು. ಒಳ್ಳೆಯ ಜಾತಿಯಲ್ಲಿ ಹುಟ್ಟಿದ್ದರೆ ಒಳ್ಳೆಯ ಬುದ್ಧಿ ಇರುತ್ತಿತ್ತು, ಹೇಳಿಕೇಳಿ ಹೀನ ಕುಲಜ ನೀನು. "ನಿನ್ನ ಕುಲವನ್ನು ನಿನ್ನ ನಾಲಗೆ ಅರುಹಿತು" ಎಂದು ಕರ್ಣನ ಕುಲವನ್ನು ಎತ್ತಿ ಆಡಿಯೇ ಬಿಟ್ಟರು. ಜಾತಿಯ ಪ್ರಸ್ತಾಪ ಇಲ್ಲಿ ಅನಾವಶ್ಯಕವಾಗಿತ್ತು. ಆಹಾ, ದ್ರೋಣರು ತನ್ನ ಜಾತಿಯನ್ನು ಎತ್ತಿ ಆಡಿದರಲ್ಲಾ ಎಂದು ಕರ್ಣ ದ್ರೋಣರ ಮೇಲೆ ತಿರುಗಿ ಬಿದ್ದ. ದ್ರೋಣರು ಕರ್ಣನ ಜಾತಿಯನ್ನು ಎತ್ತಿ ಆಡುತ್ತಿರುವುದು ಇದೇನು ಮೊದಲ ಬಾರಿಯಲ್ಲ. ಹಿಂದೆ ಕೌರವ-ಪಾಂಡವರು ತಮ್ಮ ವಿದ್ಯೆಯನ್ನು ಪ್ರದರ್ಶನ ಮಾಡುವ ಕಾಲಕ್ಕೆ ಕರ್ಣ ಅರ್ಜುನನಿಗೆ ಸೆಣಸಿ ನಿಂತಿದ್ದ. ದ್ರೋಣರು ಈಗಿನಂತೆಯೇ ಕರ್ಣನ ಜಾತಿಯನ್ನು ಆಗಲೂ ಎತ್ತಿ ಮುಖಭಂಗ ಮಾಡಿದ್ದರು. ಕರ್ಣನ ಧೈರ್ಯವೆಲ್ಲಾ ಉಂದುಹೋಯಿತು. "ಕುಲವನ್ನು ಎತ್ತಿ ಏಕೆ ಆಡುತ್ತೀರಿ? ನಿಮ್ಮ ಕುಲಗಳು ಶತ್ರುಗಳನ್ನು ಪ್ರತಿಭಟಿಸಿ ನಾಶ ಮಾಡುತ್ತವೆ ಏನು? ಕುಲ ಕುಲವಲ್ಲ; ಛಲವೇ ಕುಲ; ಗುಣವೇ ಕುಲ; ಅಭಿಮಾನವೊಂದೇ ಕುಲ. ಕುಲದ ವಿಚಾರವನ್ನು ಎತ್ತಿ ಹೆಮ್ಮೆಪಡುತ್ತಿರುವ ನಿಮಗೆ ನಿಮ್ಮ ಕುಲಗಳೇ ಆ ಕುಲವನ್ನುಂಟುಮಾಡುತ್ತವೆ" ಎಂದು ದ್ರೋಣರನ್ನು ಮೂದಲಿಸಿದ. ವೀರನಿಗೆ ಕುಲದ ಪ್ರಶ್ನೆಯೇಕೆ ಎಂಬುದೇ ಕರ್ಣನ ವಾದ. ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟು ದ್ರೋಣರು ಏನನ್ನೋ ಮಾಡಲು ಹೋಗಿ ಏನೋ ಮಾಡಿದರು. ಈ ಹಗರಣ ಇಲ್ಲಿಗೇ ನಿಲ್ಲಲಿಲ್ಲ. ಭೀಷ್ಮರ ಮೇಲಿನ ಅಸಮಾಧಾನ, ದ್ರೋಣರ ಮೇಲಿನ ಕೋಪದಿಂದ, ಕರ್ಣ ದುರ್ಯೋಧನ ತನಗೆ ಮಾಡಿದ ಉಪಕಾರವನ್ನೂ ನೆನೆದುಕೊಳ್ಳದೆ, "ಈ ಭೀಷ್ಮರು ಪಾಂಡವರನ್ನು ಜಯಿಸಿದ್ದೇ ಆದರೆ, ನಾನು ಸನ್ಯಾಸಿಯಾಗಿ ತಪೋವನಕ್ಕೆ ತೆರಳುತ್ತೇನೆ. ಕುರುಭೂಮಿಯಲ್ಲಿ ಭೀಷ್ಮರು ಅಳಿದ ನಂತರವೇ ನಾನು ಶತ್ರುಗಳನ್ನು ಪ್ರತಿಭಟಿಸುವುದು. ಅಲ್ಲಿಯ ವರೆಗೂ ನಾನು ಬಿಲ್ಲನ್ನು ಹಿಡಿಯುವುದಿಲ್ಲ" ಎಂದು ಬಿಲ್ಲನ್ನು ಬಿಸಾಡಿದ. ಕರ್ಣನಿಗೆ ಸ್ವಪ್ರತಿಷ್ಠೆ ದೊಡ್ಡದಾಯಿತು. ಸ್ವಾಮಿಕಾರ್ಯ ಹಿರಿದಾಗಲಿಲ್ಲ. ಕರ್ಣನ ಸಿಡುಕು ಪ್ರತಿಜ್ಞೆಯನ್ನು ಕೇಳಿ ಭೀಷ್ಮರು ವಿಚಲಿತರಾಗಲಿಲ್ಲ. "ಕರ್ಣ, ನೀನು ಪರಾಕ್ರಮಿ. ನಿಜೇಶನ ನಚ್ಚು ನಿನ್ನಲ್ಲಿದೆ. ನಿನ್ನಷ್ಟು ನಾನು ಸಮರ್ಥನೇನಲ್ಲ. ಪಾಂಡವ ಪಕ್ಷದಲ್ಲಿ ನಿಂತು ಹೋರಾಡುತ್ತಿರುವವನು ಅರ್ಜುನ, ನೆನಪಿಟ್ಟುಕೋ. ನನ್ನ ಹಾಗೆಯೇ ನಿನಗೂ ಒಂದು ಸರದಿ ಬಂದೇ ಬರುತ್ತದೆ" ಎಂದು ಧ್ವನಿಪೂರ್ಣವಾಗಿ ಮಾತನಾಡಿ ಸುಮ್ಮನಾದರು. ಕರ್ಣ ಭೀಷ್ಮರ ಸೇನಾಪತಿ ಪಟ್ಟವನ್ನು ಒಪ್ಪಿಕೊಳ್ಳಲೇ ಇಲ್ಲ. ಎಂತಹ ದುರಂತ ಇದು? ಇನ್ನೂ ಯುದ್ಧ ಪ್ರಾರಂಭವಾಗಿಲ್ಲ; ಮಸೆದ ಕತ್ತಿಗಳು ತಾಕಲಾಡಿಲ್ಲ; ಮೂಲದಲ್ಲಿಯೇ ಇಷ್ಟು ಒಡಕು. ಭೀಷ್ಮರಿಗೆ ಮನಸ್ಸಿನಲ್ಲಿ ನೋವಾದರೂ ಬಾಯಿ ಬಿಟ್ಟು ಆಡಲಾರರು. ದ್ರೋಣ ಕೋಪ ತಾಪ ಅನ್ಯಾಯಗಳನ್ನು ತಡೆದುಕೊಳ್ಳಲಾರ. ಇವರನ್ನು ಕಂಡು ಕರ್ಣನಿಗೆ ಅಸಮಾಧಾನ, ಆಕ್ರೋಶ. ಮೇಲೆಯೇ ಬಿದ್ದು ಬಿಡುವಷ್ಟು ದುಡುಕು ಸ್ವಭಾವ. ಇವರ ಜಗಳದಲ್ಲಿ ದುರ್ಯೋಧನನನ್ನು ಕೇಳುವವರಾರು? ಅವರಿಗೆ ಸಮಾಧಾನ ಹೇಳಿ ತಡೆಯುವಷ್ಟು ಶಕ್ತಿ ದುರ್ಯೋಧನನಿಗೆ ಎಲ್ಲಿದೆ? ಅವನು ಕೇವಲ ಮೂಕ ಪ್ರೇಕ್ಷಕನಾದ. ಶಸ್ತ್ರ ಸಜ್ಜಿತರಾಗಿ ಶತ್ರುಗಳು ಎದುರಿಸಿ ನಿಂತಿದ್ದಾರೆ. ತಾವು ಹೇಗೆ ನಡೆದುಕೊಳ್ಳಬೇಕು ಎಂಬುದರ ಅರಿವೂ ಇವರಿಗೆ ಬೇಡವೇ? ನಮ್ಮಲ್ಲಿ ಏನೇ ಒಡಕುಗಳಿದ್ದರೂ ಮರೆಯೋಣ. ಶತ್ರು ಜಯವೊಂದೇ ನಮ್ಮ ಗುರಿ. ಈ ಭಿನ್ನಾಭಿಪ್ರಾಯವೇಕೆ? ಸಮಷ್ಟಿ ಉದ್ದೇಶಕ್ಕಾಗಿ ವ್ಯಷ್ಟಿಯನ್ನು ಮರೆಯೋಣ ಎಂಬ ಪ್ರಜ್ಞೆ ಅವರಲ್ಲಿ ಬಾರದೇ ಇರುವುದು ಅವಿವೇಕವೇ ಸರಿ.

ಶಸ್ತ್ರಾಸ್ತ್ರಗಳನ್ನು ತೊರೆದು ನಿರಾಯುಧನಾಗಿ ಯುದ್ಧ ಭೂಮಿಯಲ್ಲಿ ನಿಂತಿದ್ದ ದ್ರೋಣರನ್ನು ದೃಷ್ಟದ್ಯುಮ್ನ ಧರ್ಮರಾಯ ಎಷ್ಟೇ ಬೇಡವೆಂದರೂ ಕೇಳದೆ ಕತ್ತರಿಸಿ ಕೊಂದು ಹಾಕಿದ. ದ್ರೋಣ ದೃಷ್ಟದ್ಯುಮ್ನನ ತಂದೆ ದ್ರುಪದನನ್ನು ಕೊಂದಿದ್ದನಲ್ಲ; ಆ ಸೇಡನ್ನು ಅವನು ಹಾಗೆ ತೀರಿಸಿಕೊಂಡ. ತಂದೆಯ ಸಾವಿನಿಂದ ಅಶ್ವತ್ಥಾಮನ ಹೃದಯ ಬೆಂದು ಹೋಯಿತು. ಅವನಿಗೆ ತನ್ನ ತಂದೆಯನ್ನು ಕೊಂದ ಶತ್ರುಗಳನ್ನು ನಾಶ ಮಾಡುವ ರೊಚ್ಚು ಎದ್ದಿತು. ಕರ್ಣ, ಶಲ್ಯ, ಸೌಬಲ ಮೊದಲಾದವರನ್ನು ಕೂಡಿ ಕೊಂಡು, ತನ್ನನ್ನು ಸಮಾಧಾನ ಪಡಿಸಲು ಬಂದ ದುರ್ಯೋಧನನಿಗೆ "ಹಿಂದೆ ತನ್ನ ತಂದೆಯನ್ನು ಕೊಂದ ಮುಳಿಸಿಗಾಗಿ ಪರಶುರಾಮ 21 ಭಾರಿ ಭೂಪ್ರದೇಶವನ್ನು ಸುತ್ತಿ ರಾಜಕುಲವನ್ನೇ ನಾಶ ಮಾಡಿದ. ನನ್ನ ತಂದೆಯ ಸಾವಿಗಾಗಿ ಪಾಂಚಾಲ ರಾಜ ವಂಶವನ್ನು, ಉಳಿದ ರಾಜ ಕುಲವನ್ನು ಕೊಂದು ಹದ್ದು ಕಾಗೆಗಳಿಗೆ ಔತಣ ಮಾಡಿಸುತ್ತೇನೆ" ಎಂದು ಆರ್ಭಟಿಸಿದ. ತನ್ನ ಅಳಿಯನ ಮಾತುಗಳನ್ನು ಕೇಳಿ ಕೃಪನಿಗೆ ಸಂತೋಷವಾಯಿತು. 'ಕೌರವೇಶ್ವರ ನೀನು ಅಶ್ವತ್ಥಾಮನಿಗೆ ವೀರಪಟ್ಟವನ್ನು ಕಟ್ಟಿ, ಶತ್ರುಗಳನ್ನು ಅವನಿಗೆ ತೋರಿಬಿಡು' ಎಂದು ಸಲಹೆ ನೀಡಿದ. ದ್ರೋಣರ ನಂತರ ವೀರಪಟ್ಟವು ಕರ್ಣನಿಗೆ ಕಟ್ಟಬೇಕು ಎಂಬುದು ಆಗಲೇ ತೀರ್ಮಾನವಾಗಿತ್ತು. ಆದ್ದರಿಂದ ಏನೇ ಆಗಲಿ ವೀರಪಟ್ಟವು ಕರ್ಣನಿಗೇ ಕಟ್ಟಬೇಕಾದದ್ದು ಎಂದು ದುರ್ಯೋಧನ ಕೃಪನ ಸಲಹೆಯನ್ನು ತಳ್ಳಿ ಹಾಕಬೇಕಾಯಿತು. ಇದರಿಂದ ಅಶ್ವತ್ಥಾಮನಿಗೆ ತೀವ್ರ ನಿರಾಶೆಯಾಯಿತು. ದುರ್ಯೋಧನನ ತೀರ್ಮಾನ ಅವನ ಮುಖದ ಮೇಲೆ ತಣ್ಣೀರನ್ನು ಎರಚಿದಂತಾಯಿತು. ಶತ್ರುಗಳನ್ನು ಬಗ್ಗುಬಡಿಯುವ ಆಶೆ ಕ್ಷತವಿಕ್ಷತವಾಯಿತು. ತನ್ನ ಹಾದಿಯಲ್ಲಿ ಅಡ್ಡ ನಿಂತಿರುವ ಕರ್ಣನ ಮೇಲೆ ಮುಳಿಸು ಉಕ್ಕಿ ಬಂತು. ಪಾಂಡವರ ಮೇಲಿದ್ದ ಕೋಪ ಕರ್ಣ ದುರ್ಯೋಧನಾದಿಗಳ ಮೇಲೆ ತಿರುಗಿತು. 'ಇದಕ್ಕೇ ರಾಜರನ್ನು ಅವಿವೇಕಿಗಳೆಂದು ಕರೆಯುವುದು. ದುರ್ಯೋಧನ ನೀನು ಕರ್ಣನನ್ನು ನಂಬುತ್ತೀಯೇನು? ಯುದ್ಧ ಭೂಮಿಯಲ್ಲಿ ಭೀಷ್ಮರನ್ನೇ ಪ್ರತಿಭಟಿಸಿ ಗೆದ್ದ ಅರ್ಜುನನಿಗೆ ಎದುರಾಗಿ ಕರ್ಣ ಹೋರಾಡ ಬಲ್ಲನೇನು? ಅಥವಾ ಅವನಿಗೆ ಕಟ್ಟಿದ ಪಟ್ಟವೇನು ಹಾರಿಹೋಗಿ ಶತ್ರುಗಳನ್ನು ತಿಂದು ಬಿಡುವುದೆ?' ಎಂದು ಕೂಗಾಡಿದ. ಪಟ್ಟವನ್ನು ಕಟ್ಟುವ ಅಥವಾ ಬಿಡುವ ವಿಚಾರ ದುರ್ಯೋಧನನಿಗೆ ಸೇರಿದ್ದು, ಅದಕ್ಕೆ ಅವನು ಜವಾಬ್ದಾರ. ಹೀಗಿರುತ್ತ ತನ್ನನ್ನೇಕೆ ಬಯ್ಯಬೇಕು? ಅಶ್ವತ್ಥಾಮನ ಮಾತುಗಳನ್ನು ಕೇಳಿ ಕರ್ಣ ಕೆಂಡದಂತಾದ. ಅವನಿಗೂ ಸಿಟ್ಟು ತಡೆಯಲಾಗಲಿಲ್ಲ. 'ಎಷ್ಟೇ ಶೌರ್ಯ ಪರಾಕ್ರಮಗಳಿದ್ದರೂ ಬ್ರಾಹ್ಮಣರಿಗೆ ಯಾರು ಹೆದರುತ್ತಾ

ಸೇಫ್ ಡಿಪಾಜಿಟ್
ಲಾಕರ್
ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ
ಕೆನರಾ ಬ್ಯಾಂಕಿಂಗ್
ಕಾರ್ಪೊರೇಷನ್ ಲಿಮಿಟೆಡ್
ESTD. 1906
ರಥಬೀದಿ, ಮಂಗಳೂರು ಫೋನ್ ನಂ. 5057
ಕಂಕನಾಡಿ, ಮಂಗಳೂರು ಫೋನ್ ನಂ. 7312
ಪುತ್ತೂರು, ಫೋನ್ ನಂ. 164
mas/CBC/151 Kan.

ರೋ? ಒಳ್ಳೆ ಹಾವಿಗೆ ವಿಷವಿದ್ದರೂ ಅದು ಒಳ್ಳೆಯಾದೀತೇ ಹೊರತು ಕಾಳಿಯ ನಾಗನಾಗದು' 'ಅಶ್ವತ್ಥಾಮೋಹತಃ ಕುಂಜರ' ಎಂಬ ಮಾತನ್ನು ಕೇಳಿದ ಒಡನೆಯೇ ಆಯುಧವನ್ನು ಕೆಳಗೆ ಹಾಕಿ ಸತ್ತ. ನಿಮ್ಮ ಮಿತ್ರವರಿಗೆ ಇಂತಹ ಪರಾಕ್ರಮದ ಮಾತುಗಳನ್ನು ಹೇಳಿಕೊಳ್ಳಲು ಅದೆಷ್ಟು ಪ್ರೀತಿಯೊ' ಎಂದು ಕರ್ಣ ಅಶ್ವತ್ಥಾಮನ ಜೊತೆಗೆ ಸತ್ತ ದ್ರೋಣರನ್ನೂ ಹಂಗಿಸಿದ, ಬೈದವನು ತಾನು, ತನ್ನನ್ನು ಬೈಯ್ಯದೆ, ತ್ರಿಲೋಕ ವೀರನಾದ ತನ್ನ ತಂದೆಯ ಪರಾಕ್ರಮವನ್ನು ಎತ್ತಿ ಆಡಿದನಲ್ಲಾ, ಮೊದಲು ಇವನನ್ನು ಕೊಂದು ಅನಂತರ ಪಾಂಡವರನ್ನು ಕೊಲ್ಲುತ್ತೇನೆ ಎಂದು ಅಶ್ವತ್ಥಾಮ ಖಡ್ಗವನ್ನು ಹಿರಿದುಕೊಂಡು ಕರ್ಣನ ಮೇಲೆ ನುಗ್ಗಿದನು. ತಟ್ಟನೇ ಮಧ್ಯದಲ್ಲಿ ಪ್ರವೇಶಿಸಿ ಕೃಪ ಇಬ್ಬರನ್ನೂ ತಡೆದು ಆಗುತ್ತಿದ್ದ ಅನಾಹುತವನ್ನು ತಪ್ಪಿಸಬೇಕಾಯಿತು. ಇಲ್ಲದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೋ! ಕರ್ಣ ಅಶ್ವತ್ಥಾಮ ಸಾಮಾನ್ಯ ವೀರರೇನಲ್ಲ. ಅದ್ವಿತೀಯ ಸಾಹಸಿಗಳು. ಆದರೆ ಅವರು ಕಿತ್ತಾಡುತ್ತಿರುವುದು ನಾಯಿಗಳಿಗಿಂತಲೂ ಕಡೆ. ಸಮಯಾಸಮಯಗಳ ಪ್ರಜ್ಞೆಯೇ ಅವರಿಗೆ ಇದ್ದಂತಿಲ್ಲ. ಕೃಪನಿಗೆ ತಥ್ ಅನ್ನಿಸಿತು. "ಅಸದಳವಾಗಿದ್ದರೂ ನಮ್ಮ ಸೈನ್ಯವು ಹೀಗೆ ಒಬ್ಬೊಬ್ಬರಲ್ಲಿ ಸೆಣಸಾಡಿ ಹಾಳಾಯಿತೇ ಹೊರತು ದುರ್ಯೋಧನನನ್ನು ಪ್ರತಿಭಟಿಸಿ ನಿಲ್ಲುವಂತಹ ವೀರರಿದ್ದರೇ ಈ ಲೋಕದಲ್ಲಿ" ಎಂದು ಕೊಂಡ. ಅವನ ಮಾತುಗಳು ನೂರಕ್ಕೆ ನೂರೂ ಸತ್ಯ. ದುರ್ಯೋಧನ ಕರ್ಣ ಅಶ್ವತ್ಥಾಮರನ್ನು ಸಮಾಧಾನ ಪಡಿಸುತ್ತಾ "ನಿಮ್ಮ ನಿಮ್ಮಲ್ಲಿ ಕ್ರೋಧಗೊಳ್ಳಬೇಡಿ. ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಅರಿತು ಯುದ್ಧ ಮಾಡಿ" ಎಂದಷ್ಟೇ ಹೇಳಿದ. ಇದಕ್ಕಿಂತ ಹೆಚ್ಚಿಗೆ ಅವನು ಏನನ್ನೂ ಹೇಳಲಾರ. ಒಬ್ಬರಿಗೆ ಹೇಳಿದರೆ ಮತ್ತೊಬ್ಬರಿಗೆ ಸಿಟ್ಟು. ನಡೆದ ಪ್ರಸಂಗವನ್ನು ಕರ್ಣನೇನೋ ಸೇನಾನಾಯಕ ಪಟ್ಟದ ಉತ್ಸಾಹದಲ್ಲಿ ಮರೆತ. ಆದರೆ ಅಶ್ವತ್ಥಾಮ ದುರ್ಯೋಧನನ ಕರ್ಣ ಪಕ್ಷಪಾತವನ್ನು ಕೊನೆಯವರೆಗೂ ಮರೆಯಲಿಲ್ಲ. ಕರ್ಣ ಸತ್ತನಂತರ ಅವನನ್ನು ಬೈದು ದುರ್ಯೋಧನನ ಆಗ್ರಹಕ್ಕೆ ಗುರಿಯಾಗಿ ರಣಭೂಮಿಯನ್ನು ಬಿಟ್ಟು ಹೋದವನು ಪುನಃ ತಿರುಗಿ ಬಂದದ್ದು ದುರ್ಯೋಧನ ತೊಡೆಯೊಡೆದು ನರಳುತ್ತಾ ಬಿದ್ದಿರುವಾಗಲೇ!

ಭೀಷ್ಮರ ಹಾದಿಯನ್ನು ದ್ರೋಣರೂ ಹಿಡಿದರು. ದುರ್ಯೋಧನ ಕರ್ಣನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿದ. ಭೀಷ್ಮರಿಂದಲೂ ದ್ರೋಣರಿಂದಲೂ ನಾಶವಾಗದ ಶತ್ರು ಕರ್ಣನಿಂದ ನಾಶವಾಗ ಬಹುದು ಎಂಬುದು ಅವನ ಊಹೆ. ಕೊನೆಗೂ ಕರ್ಣ ಸೇನಾಧಿಪತಿಯಾದ. ದುರ್ಯೋಧನನಂತೂ ತನ್ನ ಕರ್ತವ್ಯವನ್ನು ಮಾಡಿ ಮುಗಿಸಿದ. ಉಳಿದದ್ದು ಕರ್ಣನ ಜವಾಬ್ದಾರಿ.

ಅರ್ಜುನನ ಮೇಲೆ ವ್ಯರ್ಥ ಬಾಣಗಳನ್ನು ಕರೆಯುತ್ತಿದ್ದ ಕರ್ಣನನ್ನು ಕಂಡು ಶಲ್ಯ "ಫಲವಿಲ್ಲದ ಬಾಣ ಪ್ರಯೋಗದಿಂದ ಏನು ಪ್ರಯೋಜನ. ದಿವ್ಯ ಶರವನ್ನು ಹೂಡಿ ಬೇಗ ಶತ್ರುವನ್ನು ಸಂಹರಿಸಬಾರದೆ?" ಎಂದನು.

ಶಲ್ಯ ಹೇಳಿದಂತೆ ಕರ್ಣ ದಿವ್ಯ ಶರದ ಬತ್ತಳಿಕೆಗೆ ಕೈ ಹಾಕಲಿಲ್ಲ. ರೌದ್ರ ಶರದ ಬತ್ತಳಿಕೆಗೆ ಕೈ ನೀಡಿದಾಗ, ಸರ್ಪಾಸ್ತ್ರ ಅವನ ಕೈಗೆ ಬಂದಿತು. ಸರ್ಪಾಸ್ತ್ರವನ್ನು ಹೂಡಿ ಕರ್ಣ ಅರ್ಜುನನ ಕುತ್ತಿಗೆಗೆ ಸರಿಯಾಗಿ ಗುರಿಯಿಟ್ಟು ನಿಂತ. ಇದು ಶಲ್ಯನಿಗೆ ಸರಿಬೀಳಲಿಲ್ಲ. ಕತ್ತಿಗೆ ಗುರಿಯಿಟ್ಟರೆ ಅಸ್ತ್ರ ವಿಫಲವಾಗುವ ಸಂಭವ ಉಂಟು. ಎದೆಯ ಪ್ರದೇಶಕ್ಕೆ ಗುರಿಯಿಟ್ಟು ಹೊಡೆದದ್ದೇ ಆದರೆ, ಸ್ವಲ್ಪ ಹೆಚ್ಚು ಕಡಮೆಯಾದರೂ ಶತ್ರು ನಾಶವಾಗುತ್ತಾನೆ. ಶಲ್ಯನ ಸಲಹೆ ಇದು. ಅವನು ಹೇಳುವ ಮಾತಿನಲ್ಲಿ ಸತ್ಯವಿದೆ. ತಾನು ಹಾಗೆ ಬಾಣ ಪ್ರಯೋಗ ಮಾಡಿದ್ದೇ ಆದರೆ ಅರ್ಜುನ ನಾಶವಾಗುವುದರಲ್ಲಿ ಅನುಮಾನವೇ ಇಲ್ಲ. ಇದು ಕರ್ಣನಿಗೆ ಗೊತ್ತಿದೆ. ಆದರೂ ಅವನು ಹಾಗೆ ಮಾಡಲಾರ. ಅದರಿಂದ ಪಾಂಡವ ವಂಶ ನಾಶವಾಗುವ ಸಂಭವ ಉಂಟು. ದಿವ್ಯಾಸ್ತ್ರವನ್ನು ಪ್ರಯೋಗ ಮಾಡುವುದಿಲ್ಲ ಎಂದು ಕುಂತಿಗೆ ಮಾತು ಕೊಟ್ಟಿದ್ದ ಕರ್ಣ. ಅದನ್ನೇ ಪ್ರಧಾನವಾಗಿ ಗಣಿಸಿ ಶಲ್ಯನ ಮಾತುಗಳನ್ನು ಲೆಕ್ಕಕ್ಕೇ ತಂದುಕೊಳ್ಳದೆ, ಬಾಣ ಪ್ರಯೋಗ ಮಾಡಿದ. ಕೃಷ್ಣನ ತಂತ್ರದಿಂದ ಅಸ್ತ್ರ ವಿಫಲವಾಯಿತು. ಶತ್ರುವನ್ನು ಹತಿಸಲಾಗದಿದ್ದುದಕ್ಕೆ ನೊಂದ ಸರ್ಪಾಸ್ತ್ರ ಪುನಃ ಕರ್ಣನ ಹತ್ತಿರ ಬಂದು "ಈ ಬಾರಿ ನನ್ನನ್ನು ತೊಟ್ಟು ಪ್ರಯೋಗ ಮಾಡು. ಅರ್ಜುನನನ್ನು ಸಂಹರಿಸುತ್ತೇನೆ" ಎಂದು ಕೇಳಿಕೊಂಡರೂ 'ನಿನ್ನ ಮರೆಯಲ್ಲಿ ಶತ್ರುವನ್ನು ಗೆಲ್ಲುವಷ್ಟು ದುರ್ಬಲನೇ ತಾನು? ಎಂದು ಕರ್ಣ ಅದನ್ನು ತಿರಸ್ಕರಿಸಿಬಿಟ್ಟ. ಇಷ್ಟು ಹೊತ್ತು ಇದನ್ನೆಲ್ಲಾ ನೋಡುತ್ತ ಸಹಿಸಿಕೊಂಡು ಕುಳಿತಿದ್ದ ಶಲ್ಯನಿಗೆ ಇನ್ನು ಅಲ್ಲಿ ತಾನು ಕುಳಿತಿರುವುದು ಅಪ್ರಯೋಜಕ ಎನ್ನಿಸಿತು. ಹಿಂದೆ ತಾನು ಕರ್ಣನ ಸಾರಥಿತನವನ್ನು ಒಪ್ಪಿಕೊಳ್ಳುವಾಗ ಒಂದು ಶರತ್ತನ್ನು ಹಾಕಿದ್ದ. "ಕೃಷ್ಣನು ಹೇಳಿದಂತೆ ಅರ್ಜುನ ಹೇಗೆ ನಡೆದು ಕೊಳ್ಳುತ್ತಾನೋ, ಕರ್ಣನೂ ತಾನು ಹೇಳಿದಂತೆ ನಡೆದುಕೊಳ್ಳಬೇಕು. ಒಂದು ಪಕ್ಷ ಕರ್ಣ ತನ್ನ ಮಾತಿನಂತೆ ನಡೆದು ಕೊಳ್ಳದೇ ಹೋದರೆ ತಾನು ಸಾರಥಿತನವನ್ನು ಬಿಟ್ಟು ರಥದಿಂದ ಇಳಿದು ಹೋಗುತ್ತೇನೆ" ಎಂದು. ಮೊದಲೇ ಹೀನ ಕುಲದವನಿಗೆ ರಥವನ್ನು ಎಸಗುವುದು ಅಪಮಾನ ಎಂದು ತಿಳಿದಿದ್ದ ಶಲ್ಯನಿಗೆ ಕರ್ಣ ಅವನ ಮಾತನ್ನು ಉಲ್ಲಂಘಿಸಿದಾಗ ರಥದಲ್ಲಿ ಇನ್ನು ಕುಳಿತು ಕೊಳ್ಳಲು ಕಾರಣವೇ ಉಳಿಯಲಿಲ್ಲ. "ಇಂತಹ ಒರಟನಿಗೆ, ಏಕಗ್ರಾಹಿಗೆ, ನಾನು ರಥವನ್ನು ನಡೆಸಲಾರೆ" ಎಂದು ಯುದ್ಧ ಮಧ್ಯದಲ್ಲಿ ವಾಘೆಯನ್ನು ಬಿಸಾಡಿ ಶಲ್ಯ ಹೊರಟೇ ಹೋದ. ಯುದ್ಧ ಮಧ್ಯದಲ್ಲಿ ತಾನು ಹೀಗೆ ಹೊರಟುಹೋಗುತ್ತಿರುವುದು ಸರಿಯೆ? ಇದರಿಂದ ದುರ್ಯೋಧನನಿಗೆ ಏನಾದೀತು ಎಂಬ ಯಾವ ಯೋಚನೆಯನ್ನೂ ಶಲ್ಯ ಮಾಡಲಿಲ್ಲ. ಬದಲಾಗಿ, ತಾನು ಕ್ಷತ್ರಿಯನಾಗಿದ್ದುಕೊಂಡು ಹೀನ ಕುಲಜ ಕರ್ಣನಿಗೆ ಸಾರಥಿಯಾಗಿದ್ದು ತಪ್ಪಿತಲ್ಲಾ ಎಂದು ಸಂತೋಷನಾಗಿರಬೇಕು! ಹೋಗಲಿ, ಕುರುಕುಲ ತಿಲಕನ ಅಪಸರದ ಆನೆ, ಕರ್ಣನಿಗಾದರೂ, ದುರ್ಯೋಧನನ ಒಳ್ಳೆಯದು ಏನು ಎಂಬುದನ್ನು ಯೋಚಿಸುವ ಗುಣವಿದೆಯೆ? ಶಲ್ಯನಿಗಿಂತಲೂ ತಾನು ಪರಾಕ್ರಮಿ. ಅವನನ್ನು ಏನು ಕೇಳುವುದು ಎಂಬ ತಾತ್ಸಾರ ಕರ್ಣನಿಗಿದ್ದರೆ. ಕರ್ಣನಿಗಿಂತಲೂ ತಾನು ಬುದ್ಧಿವಂತ, ಪರಾಕ್ರಮಿ. ತನ್ನ ಮಾತನ್ನು ಕೇಳಿದ್ದರೆ ಶತ್ರು ವಧೆಯಾಗುತ್ತಿತ್ತು ಎಂದು ಶಲ್ಯನ ನಂಬಿಕೆ. ಕೊನೆಗೆ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು!

ಈ ಘಟನಾವಳಿಗಳು ಭಾರತವನ್ನು ಓದುವ ಎಂಥವರ ಕಣ್ಣನ್ನಾದರೂ ಕುಕ್ಕುವಂತಿವೆ. ಭೀಷ್ಮ, ದ್ರೋಣ, ಕರ್ಣ ಶಲ್ಯ, ಅಶ್ವತ್ಥಾಮ ಎಂತಹ ವೀರರು! ಅವರು ಪರಸ್ಪರ ಕಿತ್ತಾಡಿದ್ದೇನು, ಹಂಗಿಸಿದ್ದೇನು! ಒಬ್ಬನಿಗೆ ಕಟ್ಟಿದ ಸೇನಾಪತಿ ಪಟ್ಟವನ್ನು ಮತ್ತೊಬ್ಬ ವಿರೋಧಿಸಿದ. ಮತ್ತೊಬ್ಬನಿಗಿಂತ ತಾನೇ ವೀರ ಎಂಬ 'ಅಹಂ' ಅವರಲ್ಲಿತ್ತು. ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡು ನಡೆದುಕೊಳ್ಳುವ ಸಮತೂಕ ಒಬ್ಬರಿಗೂ ಬರಲಿಲ್ಲ. ಅವರು ತಮ್ಮ ಗೋರಿಗಳನ್ನು ತಾವೇ ತೋಡಿಕೊಳ್ಳುವುದರ ಜೊತೆಗೆ ದುರ್ಯೋಧನನ ಗೋರಿಯನ್ನೂ ತೋಡಿದರು!

ಕುರುಬಲದ ವೀರರು ಅಸಮಾನ ಸಾಹಸಿಗಳಲ್ಲವೆ? ಹೋಗಲಿ, ಪರಸ್ಪರರು ಕಿತ್ತಾಟವನ್ನೇನೋ ಮಾಡಿದರು. ಏಕಾಂಗವಾಗಿ ಹೋರಾಡಿದರಲ್ಲ ಆಗಲಾದರೂ ಮನಃಪೂರ್ವಕವಾಗಿ ಹೋರಾಡಿದರೆ? ದುರ್ಯೋಧನನ ಅನ್ನದ ಋಣವನ್ನು ತಿಂದದ್ದರಿಂದ ಅವರ ದೇಹವೇನೋ ಕೌರವ ಪಕ್ಷದಲ್ಲಿತ್ತು. ಆದರೆ ಮನಸ್ಸೆಲ್ಲವೂ ಪಾಂಡವರ ಗೆಲುವಿಗಾಗಿ ಆಶಿಪಟ್ಟಿತು. ದೇಹ ಇಲ್ಲಿ, ಮನಸ್ಸು ಅಲ್ಲಿ. ಇದು ಒಂದು ರೀತಿಯ split personality. ಇಂಥವರು ಸಾಕ್ಷಾತ್ ಶಿವನಾಗಲಿ, ರುದ್ರನಾಗಿರಲಿ, ಶತ್ರುವನ್ನು ಗೆಲ್ಲಲಾರರು. ಪಾಂಡವರು ಧರ್ಮಮಾರ್ಗಿಗಳು, ಧರ್ಮ ಉಳಿಯಲು ಭೀಷ್ಮ ದ್ರೋಣಾದಿಗಳು ಹಾಗೆ ನಡೆದುಕೊಳ್ಳುವ ಅನಿವಾರ್ಯತೆ ಇತ್ತು ಎನ್ನಬಹುದು. ಒಟ್ಟಿನಲ್ಲಿ ಅವರು ಕುರುರಾಯನಿಗೆ ಅನ್ಯಾಯವನ್ನು ಮಾಡಿದರೆಂದೇ ಅರ್ಥವಲ್ಲವೆ? ಪಾಂಡವರು ಭೀಷ್ಮನ ಪ್ರೀತಿಯ ಮೊಮ್ಮಕ್ಕಳು ದ್ರೋಣನ ಪ್ರಿಯ ಶಿಷ್ಯರು; ಕರ್ಣನ ರಕ್ತವನ್ನು ಹಂಚಿಕೊಂಡು ಹುಟ್ಟಿದ ತಮ್ಮಂದಿರು; ಶಲ್ಯನ ಅಳಿಯಂದಿರು. ಹೀಗೆ ಒಂದಲ್ಲ ಒಂದು ವಿಧದಿಂದ ಸಂಬಂಧ ಅವರನ್ನು ಬಿಗಿಸಲ್ಪಟ್ಟಿತ್ತು. ಅದರಿಂದ ಮುಕ್ತರಾಗುವ ಬಗೆಯನ್ನೇ ಅವರು ಕಾಣಲಿಲ್ಲ! 'ತಾತ, ನೀನು ಹೀಗೆಯೇ ಯುದ್ಧವನ್ನು ಮುಂದುವರಿಸಿದರೆ, ಈ ರಾಜ್ಯದ ಆಶೆಯನ್ನು ಬಿಟ್ಟು ನಾವು ಪುನಃ ವಲ್ಕಲಧಾರಿಗಳಾಗಿ ವನವಾಸಕ್ಕೆ ಹೋಗುತ್ತೇವೆ" ಎಂದು ಧರ್ಮರಾಯ ಕಣ್ಣೀರು ಮಿಡಿದಾಗ ಭೀಷ್ಮನ ಕರುಳೇ ಕಿತ್ತು ಬಂದಂತಾಯಿತು. ತಾನೆ ಕೈಯಾರೆ ಬೆಳೆಸಿದ್ದ ಈ ಮಕ್ಕಳನ್ನು ಕೊಲ್ಲುವುದೆ? ಹಾವು ತನ್ನ ತತ್ತಿಯನ್ನು ತಾನೇ ತಿಂದಂತಾಗುವುದಲ್ಲವೆ? 'ನೀವು ಶಿಖಂಡಿಯನ್ನು ಮುಂದಿಟ್ಟುಕೊಂಡು ಯುದ್ಧ ಮಾಡಿದರೆ ನನ್ನನ್ನು ಸೋಲಿಸ ಬಹುದು" ಎಂದು ಸಮಾಧಾನ ಮಾಡಿ ಕಳುಹಿಸಿದ. ದ್ರೋಣನಿಗೆ ಎಷ್ಟೇ ಸಾಮರ್ಥ್ಯವಿದ್ದರೂ ಧರ್ಮರಾಯನನ್ನು ಹಿಡಿಯಲಿಲ್ಲ. ಅರ್ಜುನನಿಗೆ ಎದುರಾಗಿ ನಿಲ್ಲಲಿಲ್ಲ ಅಶ್ವತ್ಥಾಮೋ ಹತಃ ಕುಂಜರ ಎಂಬ ಧರ್ಮರಾಯನ ಮಾತನ್ನು ಕೇಳಿ ತನ್ನ ಮಗ ಚಿರಂಜೀವಿ ಎಂದು ತಿಳಿದರೂ ಹಿಡಿದ ಬಿಲ್ಲನ್ನು ಬಿಸಾಡಿದ. ಪುನಃ ಆಯುಧವನ್ನು ಹಿಡಿಯಲೇ ಇಲ್ಲ. ಪಾಂಡವರಿಗೆ ಅವನನ್ನು ನಿಗ್ರಹಿಸಲು ಅನುಕೂಲವಾಯಿತು. ಪಾಂಡವರ ಅಣ್ಣ ತಾನು ಎಂದು ತಿಳಿದಾಗ ಕರ್ಣನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಪುರಿಗಣೆಯನ್ನು ಹೂಡುವುದಿಲ್ಲ ಎಂದು ಕುಂತಿಗೆ ಮಾತುಕೊಟ್ಟ. ಕೊಲ್ಲುವ ಅವಕಾಶವಿದ್ದರೂ ಭೀಮನನ್ನು ಬಿಲ್ಲ ಕೊಪ್ಪಿನಲ್ಲಿ ಎಳೆದು ಬಿಟ್ಟ. ಧರ್ಮರಾಯನನ್ನು ರಥದಿಂದ ಕೆಳಗೆ ಉರುಳುವಂತೆ ಹೊಡೆದ. ಸರ್ಪಾಸ್ತ್ರವನ್ನು ಮರು ಪ್ರಯೋಗ ಮಾಡಲಿಲ್ಲ. ಅರ್ಜುನನಿಂದ ತಾನೇ ಹತನಾದ. ಶಲ್ಯ, ಭೀಮನ ಕೈಯ್ಯಲ್ಲಿ ಸಿಕ್ಕಾಗಲೂ ಅವನನ್ನು ಕೊಲ್ಲಲಾರದೆ ಮದಗಜದಂತೆ ಮುಂದಕ್ಕೇ ದಾಟಿಕೊಂಡು ಹೋದ. ಧರ್ಮರಾಯನನ್ನು ಕೆರಳಿಸಿ, ಅವನ ಆಕ್ರೋಶಕ್ಕೆ ಗುರಿಯಾಗಿ ತಾನೇ ಸಾವನ್ನಪ್ಪಿದ.

ಹೀಗೆ ಕುರುಬಲದ ವೀರರಲ್ಲಿ ಒಳಜಗಳಗಳು ಮಾತ್ರವಲ್ಲ ಅದಕ್ಕಿಂತಲೂ ಪಾಂಡವ ಪಕ್ಷಪಾತ ಪ್ರಬಲವಾಗಿತ್ತು. ಅವರು ತಮ್ಮ ಕಿತ್ತಾಟದಿಂದ, ಪಕ್ಷಪಾತದಿಂದ ಪಾಂಡವ ಬಲದ ಶಕ್ತಿಯನ್ನು ಹೆಚ್ಚಿಸಿದರು, ಅಜೇಯವನ್ನಾಗಿ ಮಾಡಿದರು. ಇಲ್ಲದೇ ಹೋಗಿದ್ದರೆ ಪಾಂಡವರು ಕೌರವರನ್ನು ಗೆಲ್ಲುತ್ತಿದ್ದರೆ, ಎಂಬುದು ಅನುಮಾನವೆ.

(ಗ್ರಂಥಋಣ – ಪಂಪಭಾರತ)

(ಮುಗಿಯಿತು)

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಲಕ್ಷ್ಮೀಶ ಕವಿಯ ಒಂದು ಪದ್ಯ

(ಐದನೇ ಪುಟದಿಂದ)

ಹೇಳುವಲ್ಲಿ, ಸ್ತ್ರೀಕಾತರನಾಗಿದ್ದನೆಂದು; ತದುದ್ದೇಶದಿಂದಲೆ ಪತ್ನೀ ಗೃಹಕ್ಕೆ ಬಂದನೆಂದು; ಆ ಮೊದಲ ವಾದಗಳೆಲ್ಲಾ ಕೇವಲ ಲೌಕಿಕರ ಸಲುವಾಗಿಯೆಂದು ಹೊಳೆಯುತ್ತದೆ. ಈ ಮೂರು ಪ್ರಶ್ನೆಗಳನ್ನು ಕೇಳಿದವರೊಬ್ಬರು, ಉತ್ತರಗಳನ್ನು ಹೇಳಿದವರು ಮತ್ತೆ ಮತ್ತೊಬ್ಬರೆಂದು ಊಹಿಸುವುದು ಸಾಧುವಾದೀತು):

“ಪ್ರಭಾವತೀ ಉವಾಚ|| ಷೋಡಶೋಯಂ ಚ ದಿವಸೋ ಮಮನಾ ವ್ಯವಸ್ಥಿತಃ| ಋತು ಭಂಗಾತ್ತು ಯತ್ಪಾಪಂ ತತ್ತ್ವಯೊಜ್ಞಾಯತೇ ಪ್ರಭೋ|| ಪಿತುಃ ಶ್ರಾದ್ಧೇ, ಷೋಡಶೇವೈ ದಿವಸೇ ಋತುಪೂರಿತೇ| ಏಕಾದಶಿ ವ್ರತಂ ತದ್ವತ್ ತ್ರಿತಯಂ ಸಂಗತಂ ಭವೇತ್ || ಕಿಂಕರ್ತವ್ಯಂ ಮಹಾಬುದ್ಧೇ ಸಂಶಯೋಽಸ್ಮಿನ್ ಮಹಾನ್ಪ್ರಭೋ| ಧರ್ಮಸೂಕ್ಷ್ಮೋಽತಿಗಹನಃ ಶಕ್ಯತೇ ಕೇನ ವರ್ತಿತುಂ||

ಸುಧನ್ವಾ ಉವಾಚ| ನಿರ್ಣೀತಂ ವಿದ್ಯತೇ ದೇವಿ ಋಷಿ ಭಿರ್ಧರ್ಮ ಸಂಕಟೇ| ಸಾಂವತ್ಸರಂತು ತಾತಸ್ಯ ಕರ್ತವ್ಯಂ ಭಾವ ಸಂಯುತಂ| ಅಥಾಪ್ಯಾಯೂನ್ನಂ ನಿಶಾಮಧ್ಯೇ ಕುರ್ವೀತ ವ್ರತ ಮುತ್ತಮಂ | ಪ್ರಿಯಾಯೈ ಋತುದಾನಂ ಹಿ ಪ್ರದೇಯಂ ಧೀಮತಾ ಗೃಹೇ||”

[ಧರ್ಮಶಾಸ್ತ್ರೇಷು ನಿರ್ಣೀತಂ ಪುರಾ ಧರ್ಮಾರ್ಥ ಕೋವಿದೈಃ| ಸಾಂವತ್ಸರಂತು ವೈ ಶ್ರಾದ್ಧಂ ಕರ್ತವ್ಯಂ ಪಿತೃಭಕ್ತಿ ತಃ|| ಏಕಾದಶೀ ವ್ರತಂ ಚಾಪಿ ಕೃಷ್ಣ ಭಕ್ತಿ ಸಮನ್ವಿತೈಃ| ಋತುದಾನಂ ಹಿ ಕರ್ತವ್ಯ ಮರ್ಧರಾತ್ರಾತ್ಪರಂ ಸರ್ವೈಃ|| ಏಷಏವ ಪರೋ ಧರ್ಮೋ ಗೃಹಸ್ಥಾನಾಂ ಮಹಾನನೇ| ಸುಧನ್ವನೋ ವಚಃ ಶ್ರುತ್ವಾ ವಾಕ್ಯಮಾಹ ಪ್ರಭಾವತೀ|| (ಈ ಮೂರು ಶ್ಲೋಕಗಳು ಗೋರಖಪುರದ ಗೀತಾ ಪ್ರೆಸ್ಸಿನ ಪ್ರತಿಯಲ್ಲಿ ಮಾತ್ರ ಹೆಚ್ಚಿದೆ)]

“ಪ್ರಭಾವತೀ ಉವಾಚ|| ಪಿತಾ ತವಾಹವೇ ಭಾತಿ, ವ್ರತ ಮಧ್ಯನ ವಿದ್ಯತೇ| ಋತುದಾನಂ ತತೋ ನಾಥ ದತ್ವಾ, ಯಾಹಿರಣೇ ಹರಿಂ||”

ಜೈಮಿನಿ ಸಂಸ್ಕೃತದಲ್ಲಿ ಬರೆದಂತೆ, ಮೊದಲು ಪ್ರಭಾವತಿ ಸುಧನ್ವನಿಗೆ ಧರ್ಮಸಂಕಟದ ಈ ಮೂರು (ಎರಡು) ಸಮಸ್ಯೆಯೊಡ್ಡಿದಾಗ; ಸುಧನ್ವನು ಅವಕ್ಕೆ ತಕ್ಕ ಪರಿಹಾರ ಕ್ರಮಗಳನ್ನು ಸೂಚಿಸಿದಾಗ ಪುನಃ ಪ್ರಭಾವತಿ ಆತನನ್ನು ಒತ್ತಾಯಿಸಿ, ಕೈಗಳಿಂದ ಕೊರಳಿಗೆ ಸುತ್ತಿ ಸೆಳೆದಳು.! ಆ ಕಾರಣ ಈ ಮೇಲೆ ಬರೆದ ಕನ್ನಡ ಪದ್ಯದಲ್ಲೂ “ಎಂತು ಕರ್ತವ್ಯ ಮನೆ” ಎಂಬಲ್ಲಿಯ ತನಕ ಪ್ರಭಾವತಿ ಪ್ರಶ್ನಿಸುವಳೆಂದು ತಿಳಿಯಬೇಕು. ಆ ಮೇಲಿನ ಮೂಬಗೆಯ ಉತ್ತರಗಳನ್ನು ಸುಧನ್ವನೇ ಹೇಳಿದಂತೆ ತಿಳಿಯುವುದು ಯುಕ್ತ! (ಆ ಮೇಲಿನೊಂದು ಪ್ರಭಾವತಿಯ ಶ್ಲೋಕ ಮಾತು ಸಂಸ್ಕೃತದಲ್ಲಿದ್ದರೂ ಕನ್ನಡದಲ್ಲಿ ಹೇಳಿಲ್ಲ!)

ಲಕ್ಷ್ಮೀಶನಲ್ಲಿ ಆ ಮೇಲಿನ ಕನ್ನಡ ಪದ್ಯವಿದು: “ತಾತನಾಜ್ಞೆಯನುಳಿದು ಕೃಷ್ಣದರ್ಶನಕ್ಕೈದ| ದೀ ತರಳೆಗಿಂದು ಋತುದಾನಮಂ ಮಾಡಿದೊಡೆ| ಪಾತಕಂ ತನಗಿಲ್ಲವೆಂದು ನಿಶ್ಚೈಸಿ ಬಳಿಕಾ ಸುಧನ್ವಂ ಮನದೊಳು|| ಭೀತಿಯಂ ತೊರೆದು ಕಾಂತೆಯ ತೊಡೆ ರಮಿಸಿದಂ||’ ಈ ಪದ್ಯವು ಮೂಲಕ್ಕಿಂತ ಹೆಚ್ಚಿನದಾಗಿದೆ; ಸುಧನ್ವನ ನಿರ್ಣಯವೆಂತೆಂದು ಕನ್ನಡ ಕವಿ ವಾಕ್ಯವಿದೆಂದು ನಾವರಿಯಬೇಕು!

ಕೊನೆ: ಕನ್ನಡದ ಕವಿಗಳು ಅನ್ಯೊಂದು ಮೂಲಾ ಕೃತಿಯನ್ನು ಆಧರಿಸಿ ಬರೆವಲ್ಲಿ, ಕೇವಲ ಛಾಯಾನುವಾದಿಗಳಾಗಿಲ್ಲ; ಕೆಲವೆಡೆ ಸಣ್ಣಿಸಿಯೋ, ಸ್ಥಲಾಂತರಿಸಿಯೋ, ಬೇರೆಡೆಯಿಂದ ತಂದೋ ವರ್ಣನ—ಕಥಾಗತಿಯನ್ನು ಬೆಡಗಿನಿಂದ ಮುನ್ನಡೆಯಿಸುತ್ತಾರೆ. ಅಲ್ಲಿ ಅರಿವಾಗಲು, ಓದುಗರು ಸಹೃದಯತೆಯಿಂದ ವಿಶಾಲ ಕೃತಿಯತ್ತ ತುಸ ಅವಶ್ಯವಾಗಿ ಗಮನಿಸಲು ನೆನಪಿಡಬೇಕಾಗುತ್ತದೆ. ಇಲ್ಲಾದರೆ, ಆಯಾ ಕೃತಿಯ ಚಾತುರ್ಯ ಹಾಗೂ ಸೋಪಪತ್ತಿಕ ವಿಚಾರ ನಿರ್ಧಾರ ಅರಿವಾಗದೆ, ‘ಯದ್ವಾತದ್ವಾ’ ಆಗಬಲ್ಲುದೆಂಬುದಕ್ಕೆ ಇದೊಂದು ಚಿಕ್ಕ ಉದಾಹರಣವಾಗಿದೆ. (ಜೈಮಿನಿ-ಲಕ್ಷ್ಮೀಶರ ಕೃತಿಗಳಲ್ಲಿ ಶ್ರೀ ರಾಮಾಶ್ವಮೇಧದ ಕತೆ ಹೇಗೆ ಬಂದಿದೆಯೆಂದು ಈ ಮೊದಲೊಮ್ಮೆ ಬೆಂಗಳೂರ ಪ್ರಬೋಧದಲ್ಲಿ ತುಸ ಬರೆದಿದ್ದೆನು) ಕನ್ನಡ ಕವಿಗಳು ಉಭಯ ಭೂಷಣಾವಹ ರೀತಿಯಲ್ಲಿ ಕೃತಿಗಳನ್ನು ಕೆಲವೊಮ್ಮೆ ಹೆಣೆಯಬಲ್ಲರೆಂದೂ, ಕೆಲವೊಮ್ಮೆ ತಮ್ಮದೇ ಆಶಯಕ್ಕೆ ತಕ್ಕಂತೆ ತಿರುಗಿಸಿ ಬರೆಯುವರೆಂದೂ ಹಲವಾರು ಇಂತಹ ಉದಾಹರಣಗಳಿಂದ ಹೇಳಬಹುದು!

—ಶ್ರೀ ಕೆ. ವೆಂಕಟರಾಯಾಚಾರ್ಯ,
ವಿದ್ವಾನ್, ಸುರತ್ಕಲ್ಲು

●●

ಗಡಿ ವಿವಾದದ ಬಗ್ಗೆ

ಪ್ರಧಾನಿ ದಿಟ್ಟ ನಿಲುವು ತಳೆಯಬೇಕು

ಮಹಾಜನ ವರದಿಯು ಸಂಸತ್ತಿನ ಮುಂದೆ ಬಂದು ಒಂದೂವರೆ ವರ್ಷಗಳು ಸಂದುವು. ಈ ನಡುವೆ ದೇಶದ ರಾಜ್ಯಕೀಯ ಎರಡು ಬಾರಿ ಬದಲಾಯಿಸಿತು. ಮುಂಡನೆಯ ವೇಳೆ ಆಳುವ ಪಕ್ಷಕ್ಕೆ ಸಂಸತ್ತಿನಲ್ಲಿ ಬಹುಮತವಿರಲಿಲ್ಲ. ಅದು ತನ್ನ ಸರಕಾರದ ಉಳಿವಿಗಾಗಿ ಯಾರು ಯಾರನ್ನೋ ಆಶ್ರಯಿಸಿಕೊಳ್ಳಬೇಕಿತ್ತು. ಪ್ರತ್ಯೇಕವಾದಿಗಳಾದ ದ್ರಾಮುಕ, ಜಾತೀಯವಾದಿಗಳಾದ ಮುಸ್ಲಿಂಲೀಗ್ ತೀವ್ರಗಾಮಿಗಳಾದ ಕಮ್ಯೂನಿಸ್ಟ್ ಪಕ್ಷೀಯರಲ್ಲದೆ ಇನ್ನೂ ಹಲವಾರು ಚಿಲ್ಲರೆ ವ್ಯಕ್ತಿಗಳು ಅದು ಸಮರ್ಥಕರಿದ್ದರು. ಆದರೆ ೧೯೭೧ರಲ್ಲಿ ನಡೆದ ಲೋಕಸಭಾ ಚುನಾವಣೆಗಳು ಆಳುವ ಪಕ್ಷದ ಕೈಗಳನ್ನು ಮಾತ್ರವಲ್ಲದೆ ಕಾಲುಗಳನ್ನೂ ಭದ್ರಪಡಿಸಿದುವು ತುಂಬಿ ತುಳುಕಾಡುವ ಬಹುಮತವನ್ನು ಅದು ಪಡೆಯಿತು; ವಿರೋಧಿ ಪಕ್ಷಗಳು ಮಟ್ಟಸವಾದುವು.

ಈ ತುಳುಕುವ ಬಹುಮತದ ಬಲದಿಂದ ಕೇಂದ್ರ ಸರಕಾರ ಸಂವಿಧಾನವನ್ನು ತಿದ್ದುಪಡಿ ಮಾಡಿತು; ರಾಜಮಹಾರಾಜರನ್ನು ರಂಕರನ್ನಾಗಿ ಮಾಡುವ ದಾರಿ ಗುಡಿಸಿಟ್ಟಿತು. ಆಳುವ ಪಕ್ಷದ ಅಭಿಪ್ರಾಯದಂತೆ ಪಾಕ್-ಭಾರತ ಸಮರದಲ್ಲಿ ಭಾರತವು ವಿಜಯ ಗೌರವ ಗಳಿಸಿದುದು ಸುಭದ್ರ ಕೇಂದ್ರ ಸರಕಾರದ ಕಾರಣದಿಂದ. ಬಾಂಗ್ಲಾ ದೇಶ ಉದಯವಾದದ್ದೂ ಅದರಿಂದಲೇ. ದೇಶವು ಸಮೃದ್ಧಿಯ ಪಥಗಮನ ಮಾಡುತ್ತಿರುವುದು, ಶ್ರೀಸಾಮಾನ್ಯನು ಉದ್ಧಾರ ಪರ್ವತಾರೋಹಣ ಮಾಡುತ್ತಿರುವುದು—ಅದು, ಇದು, ಎಲ್ಲವೂ—ಕೇಂದ್ರ ಭದ್ರವಾಗಿರುವುದರಿಂದಲೇ. ಆಳುವ ಪಕ್ಷ ಬಯಸಿದರೆ, ಮಹಾಜನ ವರದಿ ಮಾತ್ರವಲ್ಲ, ಯಾವುದೇ ಮಸೂದೆ ಧ್ವನಿಮತದಿಂದಲೇ ಮಂಜೂರಾಗುವುದು ಸಾಧ್ಯವಾಯ್ತು.

ಮಹಾಜನ ವರದಿಯು ಸಂಸತ್ತಿನ ಮುಂದೆ ಮಂಡಿಸಿದಾಗ ವರದಿಗೆ ಸಂಬಂಧಿಸಿದ ಮೂರು ರಾಜ್ಯಗಳ ಸರಕಾರಗಳೂ ಮೂರಾಬಟ್ಟೆಯಿದ್ದುವು. ಮಹಾರಾಷ್ಟ್ರದಲ್ಲಿ ಆಳುವ ಕಾಂಗ್ರೆಸ್ಸು ಆಡಳಿತ ಸೂತ್ರ ಹಿಡಿದಿತ್ತು. ಕೇರಳದಲ್ಲಿ ಅಚ್ಯುತ ಮೆನನ್ನರ ಸಿಪಿಐ ನಾಯಕತ್ವದ ಸರಕಾರವಿತ್ತು. ಆಳುವ ಕಾಂಗ್ರೆಸ್ಸು ಇದರಲ್ಲಿ ಭಾಗಿಯಾಗಿರಲಿಲ್ಲ. ಕರ್ನಾಟಕವು ಸಂಸ್ಥಾ ಕಾಂಗ್ರೆಸಿನ ಸರಕಾರವನ್ನೇ ಪಡೆದಿತ್ತು. ಕೇಂದ್ರ ಸರಕಾರದ ಅಧ್ವರ್ಯುಗಳಿಗೆ ಮೂರು ರಾಜ್ಯ ಸರಕಾರಗಳನ್ನು ಒಂದುಗೂಡಿಸುವುದು ಸಾಧ್ಯವಾಗಲಿಲ್ಲ.

ಆದುದರಿಂದಲೇ ಕೇಂದ್ರದೊಡನೆ ಹೊಂದಿಕೊಂಡು ಹೋಗುವ ರಾಜ್ಯ ಸರಕಾರಗಳನ್ನೇ ರಚಿಸಿರಿ ಎಂದು ಪ್ರಧಾನಿ ಇಂದಿರಾ ಗಾಂಧಿ ೧೯೭೨ರ ವಿಧಾನ ಸಭಾ ಚುನಾವಣಾ ವೇಳೆ ಜನತೆಗೆ ಕರೆ ನೀಡಿದರು. ಅದರ ಪರಿಣಾಮವಾಗಿ ಮಹಾರಾಷ್ಟ್ರದಲ್ಲಿ ಅವರದ್ದೇ ಸರಕಾರ ಬಲವಾಗಿ ಬೇರು ಬಿಟ್ಟಿತು. ಅಧಿಕೃತ ವಿರೋಧಿ ಪಕ್ಷವೂ ತಳವೂರಲಾಗನಂತೆ ಅಲ್ಲಿ ಆಳುವ ಕಾಂಗ್ರೆಸ್ಸು ದಿಗ್ವಿಜಯ ಗಳಿಸಿತು. ಕರ್ನಾಟಕದಲ್ಲಿ ಸಂಸ್ಥಾ ಕಾಂಗ್ರೆಸಿನ ಪಾಳೆಯ ಕುಸಿದು ಹೋಗಿ, ಇಲ್ಲಿಯೂ ಮುಕ್ಕಾಲಂಶ ಬಹುಮತವನ್ನು ಅದು ಗಳಿಸಿ ಅತ್ಯದ್ಭುತ ವಿಜಯ ಸಾಧಿಸಿತು. ಕೇರಳದಲ್ಲಿ ಸಿಪಿಐಯ ಅಚ್ಯುತಮೆನನ್ನರ ಸರಕಾರವೇ ಮತ್ತೆ ಅಧಿಕಾರಕ್ಕೆ ಬಂದರೂ ಅದರಲ್ಲಿ ಆಳುವ ಕಾಂಗ್ರೆಸ್ಸೂ ಸಹಭಾಗಿಯಾಗಿದೆ; ಅದು ಸಿಂಹಪಾಲನ್ನೂ ಗಳಿಸಿದೆ. ಸಿಪಿಐ ಕೇಂದ್ರದೊಡನೆ ಜಗಳ ಕಾಯುವುದಿಲ್ಲ, ಹೊಂದಿಕೊಂಡು ಹೋಗುತ್ತದೆ.

ಆದುದರಿಂದ ಮಹಾಜನ ವರದಿಯ ಬಗ್ಗೆ ಕೇಂದ್ರ ಸರಕಾರ ಯಾವುದೇ ನಿರ್ಧಾರವನ್ನು ಕೈಕೊಂಡರೆ, ಅದನ್ನು ವಿರೋಧಿಸುವ ಸರಕಾರಗಳೀಗ ಮೂರೂ ರಾಜ್ಯಗಳಲ್ಲಿಲ್ಲ. ವಿರೋಧಿ ಪಕ್ಷೀಯರ ವಿರೋಧದಲ್ಲಿ ಯಾವ ಬಲವೂ ಇರುವುದಿಲ್ಲ. ನಾಲ್ಕುದಿನ ನೆರೆ ಹರಿಯುತ್ತದೆ; ಮುಂದದು ಆರಿಹೋಗುತ್ತದೆ. ಆದರೂ ಮಹಾಜನ ವರದಿಯ ಬಗ್ಗೆ ಯಾವುದೇ ಮಾತುಗಳೀಗ ಕೇಂದ್ರದಲ್ಲಿ ಕೇಳಿಬರುತ್ತಿಲ್ಲ. ಕರ್ನಾಟಕ ರಾಜ್ಯ ವಿಧಾನ ಸಭೆಯು ಅದನ್ನು ಸರ್ವಾನುಮತದಿಂದ ಅನುಮೋದಿಸಿದ್ದರೂ ಮಹಾರಾಷ್ಟ್ರವು ಅಷ್ಟೇ ಪ್ರಬಲವಾಗಿ ಅದನ್ನು ತಿರಸ್ಕರಿಸಿದ್ದೂ ಸತ್ಯ. ಕೇರಳ ಸರಕಾರ ತಾನಾ ವರದಿಗೆ ಬಾಧ್ಯನಲ್ಲವೆಂದದ್ದೂ ಹೌದು. ಈ ಮೂರಾಬಟ್ಟೆಯೇ ಪ್ರಧಾನಿಯವರನ್ನು ಸಂಸತ್ತಿನ ಮುಂದೆ ವರದಿ ಮಂಡಿಸಲು ಪ್ರೇರೇಪಿಸಿತೆಂಬುದನ್ನು ಮರೆಯಬಾರದು.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಮಹಾಜನ ವರದಿಯ ಬಗ್ಗೆ ತೀರ್ಮಾನವನ್ನು ಹಿಂದೂಡುವುದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ಯಾರಿಗೂ ಹೆಚ್ಚು ಅನ್ಯಾಯವಾಗದಂತೆ ಸಮಸ್ಯೆಗೆ ಪರಿಹಾರ ವರಸಬೇಕೆಂದು ಪ್ರಧಾನಿ ಗಾಂಧಿಯ ಆಶಯವಂತೆ. ಆದರೆ, ಹೀಗೆ ಪರಿಹಾರವನ್ನು ಹಿಂದೊಡುತ್ತ ಹೋಗುವುದರಿಂದ ಗಡಿಪ್ರದೇಶದ ಜನತೆಯ ಜೀವನ ದುರ್ಭರವಾಗುತ್ತಿದೆಯೆಂಬುದನ್ನು ನಾಯಕರು ಮರೆಯಬಾರದು. ಬೆಳಗಾಂವಿಯಲ್ಲಿನ ಮರಾಠಿಗರನ್ನು ಒಲಿಸಿಕೊಳ್ಳಲು ಕರ್ನಾಟಕ ಸರಕಾರ ಆ ಪ್ರದೇಶಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಸುರಿಯುತ್ತಲೇ ಬಂದಿದೆ. ರಾಜ್ಯದ ಇತರ ಜಿಲ್ಲೆಗಳಿಗಿಂತ ಈ ವಲಯದಲ್ಲಿ ತೀವ್ರ ಪ್ರಗತಿಯಾಗಿದೆ. ಆದರೆ, ಮಹಾರಾಷ್ಟ್ರ ಸರಕಾರವು ಶೋಲಾಪುರ ವಲಯದಲ್ಲಿ ಇದಕ್ಕೆ ವಿಪರೀತವಾಗಿ ನಡೆದುಕೊಳ್ಳುತ್ತಿದೆ. 'ನೀವು ಕರ್ನಾಟಕಕ್ಕೆ ಹೋಗುವವರು; ನಿಮಗಾಗಿ ನಮ್ಮ ಸರಕಾರದ ಬೊಕ್ಕಸವೇಕೆ ಬರಿದು ಮಾಡಬೇಕು?' ಎಂಬ ವರ್ತನೆ ಅವರದ್ದು. ಕರ್ನಾಟಕವಲ್ಲಿ ಸೇರುವ ಇಚ್ಛೆ ವ್ಯಕ್ತಪಡಿಸಿದ ಕನ್ನಡಿಗರನ್ನು ಅಧಿಕಾರಿಗಳು ನಾನಾ ಪರಿಯಾಗಿ ಪೀಡಿಸಿದ ಘಟನೆಗಳೂ ಅಂದು ಬಂದಿದ್ದುವು.

ಕಾಸರಗೋಡಿನ ದೆಸೆಯಿವಕ್ಕೆಲ್ಲ ಮುಕುಟಪ್ರಾಯ. ಅಲ್ಲಿ ಕನ್ನಡದ ನೆಲವನ್ನು, ನುಡಿಯನ್ನು, ಜನವನ್ನು ಕೇರಳ ಸರಕಾರ ಹೇಗೆ ಕಾಣುತ್ತಿದೆಯೆಂಬುದಕ್ಕೆ ರಸ್ತೆಯಲ್ಲಿ ಒಂದೆರಡು ತಾಸುಗಳ ಪ್ರಯಾಣ ಮಾಡಿದರೆ ಸಾಕು; ನಿಮ್ಮ ಹೃದಯ ಕಿತ್ತು ಬರುತ್ತದೆ ಈ ಹದಿನೈದು ವರ್ಷಗಳಿಂದಲೂ ಇದೇ ದಾನವ ದೃಷ್ಟಿ ಗಡಿನಾಡ ಕನ್ನಡಿಗರ ಮೇಲೆ ಬಿದ್ದಿದೆ ಪಾಂಡವರು ಹನ್ನೆರಡು ವರ್ಷಗಳ ವನವಾಸ ಮಾಡಿದ್ದರಂತೆ, ರಾಮ ಲಕ್ಷ್ಮಣರು ಮತ್ತೆರಡು ವರ್ಷ ಹೆಚ್ಚು. ಈ ಕನ್ನಡಿಗರು ಇನ್ನೂ ಒಂದು ವರ್ಷ ಅಧಿಕ ಒಣವಾಸ ಮಾಡಿದರು. ತಪಶ್ಚರ್ಯ, ವೇದಾಭ್ಯಾಸ ಇತ್ಯಾದಿ ಕಠಿಣಾತಿಕಠಿಣ ಸಿದ್ಧಿಗಳು ಹನ್ನೆರಡು ವರ್ಷಗಳ ಸಾಧನೆಯಿಂದ ಸಾಧ್ಯವೆಂದು ಹೇಳಲಾಗುತ್ತಿದೆ; ಆದರೆ, ಗಡಿನಾಡ ಕನ್ನಡಿಗರು ಹದಿನೈದು ಮಳೆಗಾಲಗಳ ಕಠಿಣ ಸಾಧನೆಯಿಂದಲೂ ತಮ್ಮ ಇಷ್ಟಾರ್ಥ ಸಿದ್ಧಿಸಿಕೊಳ್ಳಲಾಗದೆ ಹೋದರು.

ಇವರ ಸಾಧನೆಯಲ್ಲಿ ಅನನ್ಯತೆಯಿಲ್ಲವೆನ್ನುವುದು ಅರ್ಥಶೂನ್ಯ. ಕೇಂದ್ರ ದೇವತೆಗಳಿಗೆ ಕಿವಿ ದೂರವಾಗಿರುವುದೇ ಸತ್ಯ. ಯಾರ ಮನವನ್ನೂ ನೋಯಿಸಬಾರದೆಂಬ ನೀತಿಯಲ್ಲಿ ಗಡಿನಾಡಿನ ಕನ್ನಡಿಗರ ಗೋಳಿನ ಬಾಳನ್ನು ಕೊನೆಗೊಳಿಸಲು ಅವರು ನಿರಾಕರಿಸುವುದು ಅಥವಾ ಮುಂದೂಡುವುದು ಅನ್ಯಾಯದ ಪರಮಾವಧಿ. ವಿವಾದವು ಯಾರಿಗೂ ನೋವಾಗದಂತೆ ತೀರ್ಮಾನವಾಗುವುದು ಸಾಧ್ಯವೇ ಇಲ್ಲವೆಂಬ ಗಟ್ಟಿ ತಲಪಿದೆ.

ಕರ್ನಾಟಕದ ಮುಖ್ಯ ಮಂತ್ರಿ ದೇವರಾಜ ಅರಸು ಅವರಿಗೆ ಪ್ರಧಾನಿ ಗಾಂಧಿಯಲ್ಲಿ ಅಪರಿಮಿತ ವಿಶ್ವಾಸ. ಇರಬೇಕಾದ್ದೇ; ಇರಲಿ. ಆದರೆ, ಈ ವಿಶ್ವಾಸಕ್ಕಾಗಿ ಕನ್ನಡಿಗರ ಹಿತವನ್ನು ಬಲಿಗೊಡಬಾರದು. ರಾಜ್ಯದ ೨೭ ಆಳುವ ಕಾಂಗ್ರೆಸ್ ಲೋಕ ಸಭಾ ಸದಸ್ಯರು ರಾಜ್ಯದ ಹಿತರಕ್ಷಣೆಯ ಬಗ್ಗೆ ಮೌನವಾಗಿದ್ದಾರೆ. ಚಂಡೀಗಡದ ಜಟಿಲ ಪ್ರಶ್ನೆಯನ್ನು ತೀರ್ಮಾನ ಮಾಡಿದ ಶ್ರೀಮತಿ ಗಾಂಧಿಯವರು ತನ್ನದೇ ತೀರ್ಮಾನವನ್ನಾದರೂ ಸರಿಯೇ, ಒಮ್ಮೆಗೆ ಹೊರ ಹಾಕಿದರೆ, ಗಡಿನಾಡಿನ ಅನಿಶ್ಚಿತತೆ ತೊಡೆದು ಹೋಗುತ್ತದೆ.

ಸಂಸತ್ತಿನಿಂದಾಗಲೀ ಅಥವಾ ಇನ್ನಾವುದರಿಂದಾಗಲೀ ಮಹಾಜನ ವರದಿಯ ಅಂಶಗಳು ಕಾರ್ಯಗತವಾಗುವ ದಿನಗಳು ಸಂದು ಹೋದುವು. ಆದುದರಿಂದ, ಗಡಿನಾಡಿನ ಅನಿಶ್ಚಿತತೆಯನ್ನು ದೂರ ಮಾಡುವುದಷ್ಟೇ ಇಂದುಳಿದಿರುವ ಕೆಲಸ. ಶ್ರೀಮತಿ ಇಂದಿರಾ ಗಾಂಧಿಯವರೀಗ ಇನ್ನೊಂದು ದಿಟ್ಟ ನಿಲುವನ್ನು ತಳೆದರೆ, ಗಡಿನಾಡಿನ ಕನ್ನಡಿಗರು ತಮ್ಮ ಭವಿಷ್ಯವನ್ನು ತಿಳಿದು ಅದಕ್ಕೆ ಹೊಂದಿ ಕೊಂಡು ಹೋಗಿ ಪುನರ್ಜನ್ಮ ಪಡೆಯುವುದು ಸಾಧ್ಯವಾದರೆ, ಅದಕ್ಕೆ ಅನುಕೂಲವಾಗುತ್ತದೆ. ಅಥವಾ ಕೊಳಚೆಯಲ್ಲೇ ನಾರುವುದರಲ್ಲೇ ತುಷ್ಟಿ ಹೊಂದುವುದಾದರೂ ಅನಿವಾರ್ಯವಾಗುತ್ತದೆ.

ಕೆ. ವಿ. ಶೆಣೈಯವರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ

ಮೈಸೂರು ಸರಕಾರದ ದೇವರಾಜ ಬಹದ್ದೂರ್ ಸಾಹಿತ್ಯ ಪಾರಿತೋಷಕ ಸ್ಪರ್ಧೆಯಲ್ಲಿ 1967–68ರ ಸಾಲಿನಲ್ಲಿ ಪ್ರಕಟವಾದ ಕನ್ನಡ ಪುಸ್ತಕಗಳ ಬಗ್ಗೆ ಶ್ರೀ ಕೆ. ವಿ. ಶೆಣೈ ಬರೆದ 'ವಿಚಿತ್ರ ವಿಶ್ವ' ಎಂಬ ಪುಸ್ತಕಕ್ಕೆ ಪ್ರಥಮ ಬಹುಮಾನ ದೊರೆತಿದೆ. ಶ್ರೀ ಶೆಣೈಯವರು ಮೈಸೂರು ವಿದ್ಯಾ ಇಲಾಖೆಯ ಜೋಂಟ್ ಡೈರೆಕ್ಟರರಾಗಿ ನಿವೃತ್ತರಾಗಿ ಈಗ ಮಣಿಪಾಲ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್‌ನಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿರುವರು.

ಲೋಕೋಪಯೋಗಿ ಸಚಿವರ ಸಂದರ್ಶನ

ರಾಜ್ಯದ ಸಾರ್ವಜನಿಕ ಕಾಮಗಾರಿ ಸಚಿವ ಶ್ರೀ ಎಚ್. ಎಂ. ಚನ್ನಬಸಪ್ಪ ಅವರು ತಾ. 18ರಂದು ಮಂಗಳೂರಿನಲ್ಲಿ ಗೊಬ್ಬರ ಕಾರ್ಖಾನೆಯ ನಿವೇಶನ, ಬಂದರ ಯೋಜನಾ ಪ್ರದೇಶ, ಪೋರ್ಟ್ ಟ್ರಸ್ಟ್ ಆಫೀಸು, ಸರಕಾರೀ ಕಚೇರಿಗಳು ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು.

ಶ್ರೀ ಬಸಪ್ಪನವರು ಜಿಲ್ಲಾಧಿಕಾರಿ ಶ್ರೀ ಎಸ್. ಎ. ಮುತ್ತಣ್ಣ, ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀ ಸಿ. ಎಸ್. ಚಲ್ಲಪ್ಪ, ಪಿ ಡಬ್ಲ್ಯು ಡಿ. ಸುಪರಿಟೆಂಡೆಂಟ್ ಇಂಜನೀಯರ್ ಶ್ರೀ ಎಂ. ತಿಮ್ಮಪ್ಪ ಶೆಟ್ಟಿ ಇವರುಗಳೊಂದಿಗೆ ಪಣಂಬೂರಿನ ಹತ್ತಿರ ನಿರ್ಮಾಣವಾಗುತ್ತಿರುವ ಮಂಗಳೂರು ಫರ್ಟಿಲೈಸರ್ ಫ್ಯಾಕ್ಟರಿಯ ಸ್ಥಳಕ್ಕೆ ಆಗಮಿಸಿದಾಗ ಯೋಜನೆಯ ಪ್ರಾಜೆಕ್ಟ್ ಇಂಜನಿಯರ್ ಶ್ರೀ ಜೆ. ಮಸ್ಕರೇಞಸ್, ರೆಸಿಡೆಂಟ್ ರೆಪ್ರೆಸೆಂಟೇಟಿವ್ ಹಾಗೂ ಸಿವಿಲ್ ಚೀಫ್ ಇಂಜನಿಯರ್ ಶ್ರೀ ಎಸ್. ಎಸ್. ಶಿವಸ್ವಾಮಿ, ಡೆಪ್ಯುಟಿ ಕನ್‌ಸ್ಟ್ರಕ್ಷನ್ ಇಂಜನೀಯರ್ ಶ್ರೀ ಸೀರಾಘವನ್‌ರವರು ಸಚಿವರನ್ನು ಇದಿರುಗೊಂಡರು. ಅವರು ಯೋಜನೆಯಲ್ಲಾಗುತ್ತಿರುವ ಪ್ರಗತಿ ಹಾಗೂ ವಿಳಂಬದ ಕಾರಣಗಳನ್ನು ತಿಳಿಸಿ ಸಚಿವರ ಸಹಕಾರ ಕೋರಿದರು. ಸಚಿವರು ತನ್ನಿಂದಾದ ಸಹಾಯ ಸಲ್ಲಿಸುವುದಾಗಿ ಆಶ್ವಾಸನೆ ನೀಡಿದರು.

ಅಲ್ಲಿಂದ ಸಚಿವರು ರೇವು ಪ್ರದೇಶದ ಪರಿಶೀಲನೆಗಾಗಿ ಬಂದರ ಪ್ರದೇಶಕ್ಕೆ ತೆರಳಿದರು. ಅಲ್ಲಿ ಮಂಗಳೂರು ಬಂದರ ಯೋಜನೆಯ ಮುಖ್ಯಾಧಿಕಾರಿ ಶ್ರೀ ಎಚ್ ಕೆ. ಪಂಡಿತಾರಾಧ್ಯರು ಸಚಿವರನ್ನು ಸ್ವಾಗತಿಸಿ ಯೋಜನೆಯಲ್ಲಾದ ಪ್ರಗತಿಯನ್ನು ವಿವರಿಸಿದರು. ಅಲ್ಲಿಂದ ಸಚಿವರು ವಕ್ಕೆ ನಿರ್ಮಾಣ, ಮನೋಲಿಕ್ ನಿರ್ಮಾಣ ಕಾರ್ಯಗಳನ್ನು ಕಂಡು ತೃಪ್ತಿ ವ್ಯಕ್ತಪಡಿಸಿ ಡ್ರೆಜರ್ ಇದ್ದಲ್ಲಿಗೆ ತೆರಳಿದರು. ಅಲ್ಲಿಂದ ಹಾರ್ಬರ್ ಪ್ರಾಜೆಕ್ಟ್ ಕಾಲನಿಗೆ ತೆರಳಿ ಮಾಡೆಲ್ ಹೌಸಿಗೆ ಹೋದರು. ಶ್ರೀಮತಿ ಎಡ್ವಿ ಸಲ್ಡಾನಾ ಮತ್ತು ನಗರ ಸಭೆಯ ಕಮಿಶನರ್ ಡಾ| ಕೆ. ರಂಗಪ್ಪನವರಿಂದ ಮಂಗಳೂರು ನೀರು ಪೂರೈಕೆ ಯೋಜನೆಯಲ್ಲಿನ ತೊಂದರೆಗಳನ್ನು ತಿಳಿದು ಅದನ್ನು ಪರಿಹರಿಸುವಲ್ಲಿ ತನ್ನ ಸಹಕಾರದ ಆಶ್ವಾಸನೆಯಿತ್ತರು.

ಅನಂತರ ಸಚಿವರು ಮಂಗಳೂರು ಪೋರ್ಟ್ ಟ್ರಸ್ಟ್ ಆಫೀಸಿಗೆ ತೆರಳಿದಾಗ ಅಲ್ಲಿ ಅವರನ್ನು ಟ್ರಸ್ಟಿನ ಅಧ್ಯಕ್ಷ ಶ್ರೀ ಎಸ್. ಎ ಮುತ್ತಣ್ಣ, ಪೋರ್ಟ್ ಆಫೀಸರ್ ಕ್ಯಾಪ್ಟನ್ ಫೆರ್ನಾಂಡಿಸ್, ಪೋರ್ಟ್ ಇಂಜನಿಯರ್ ಶ್ರೀ ಕೆ. ಎಸ್. ಸೆಟ್ಟಿ, ಡೆಪ್ಯುಟಿ ಟ್ರಾಫಿಕ್ ಮೆನೇಜರ್ ಶ್ರೀ ಮಹೇಶಚಂದ್ರ ಮೊದಲಾದವರು ಸ್ವಾಗತಿಸಿದರು. ಅಲ್ಲಿಂದ ಸಚಿವರು ಲಾಂಚಿನಲ್ಲಿ ಸಮುದ್ರ ವಿಹಾರ ಮುಗಿಸಿ ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪೊಲೀಸ್ ಅಧಿಕಾರಿಗಳ ಕಚೇರಿ, ಆರ್. ಟಿ. ಓ. ಆಫೀಸು, ಪಿ. ಡಬ್ಲ್ಯು ಡಿ. ಆಫೀಸು ಮೊದಲಾದುವನ್ನು ಸಂದರ್ಶಿಸಿದರು.

ಲೋಕ ಸೇವಾ ವೃಂದದ ಹೊಸ ಕಟ್ಟಡಕ್ಕೆ ಶಂಕು ಸ್ಥಾಪನೆ

ಆಳಿಕೆಯಲ್ಲಿ ಲೋಕ ಸೇವಾ ವೃಂದದ ಆಶ್ರಯದಲ್ಲಿ ನಡೆಯುತ್ತಿರುವ ಲೋಕ ಸೇವಾ ಹಾಯರ್ ಸೆಕೆಂಡರಿ ಶಾಲೆಯಲ್ಲಿ ತಾ. 18ರಂದು ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಸಂಯುಕ್ತ ಸಮಾರಂಭವೊಂದು ಜರಗಿ, ಶಾಲೆಯ ನಿಯೋಜಿತ ನೂತನ ಕಟ್ಟಡಕ್ಕೆ ರಾಜ್ಯದ ಶಿಕ್ಷಣ ಸಚಿವ ಶ್ರೀ ಎ ಆರ್. ಬದರಿನಾರಾಯಣರಿಂದ ಶಂಕು ಸ್ಥಾಪನೆಯೂ, ಮಂಗಳೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ನಿಜ್ಞಾನಂದ ಜೀಯವರಿಂದ ಬಾಪೂಜಿ ಬಾಲ ನಿಕೇತನದ ಶಿಲಾನ್ಯಾಸವೂ ಜರಗಿತು.

ಲೋಕ ಸೇವಾ ವೃಂದದ ಅಧ್ಯಕ್ಷ ಶ್ರೀ ವಿಡಿಯೂಲ ನಾರಾಯಣ ಭಟ್ಟರು ಆರಂಭದಲ್ಲಿ ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಸಿದರು. ಶ್ರೀ ಜಿ. ಎಸ್. ಮೂರ್ತಿಯವರು ಸಂದೇಶಗಳನ್ನೋದಿದರು. ಶ್ರೀ ಎಂ. ನಾರಾಯಣ ಭಟ್ಟರು ಸನ್ಮಾನ ಪತ್ರ ಓದಿ ಸಚಿವರಿಗೆ ಒಪ್ಪಿಸಿದರು. ಬಳಿಕ ಲೋಕ ಸೇವಾ ಹಾಯರ್ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಬಿ. ನಾರಾಯಣ ರಾಯರು ಸಚಿವರಿಗೆ ಮನವಿಯೊಂದನ್ನು ಸಮರ್ಪಿಸಿದರು

ಅನಂತರ ಶ್ರೀ ನಿಜ್ಞಾನಂದಜೀಯವರು ಬಾಪೂಜಿ ಬಾಲ ನಿಕೇತನದ ನಿಯೋಜಿತ ಕಟ್ಟಡದ ಶಂಕು ಸ್ಥಾಪನೆ ಮಾಡಿ ಉಪನ್ಯಾಸ ಮಾಡುತ್ತಾ ಈ ಸಂಸ್ಥೆಯು ಕೇವಲ ವಿದ್ಯಾ ಸಂಸ್ಥೆಯಾಗಿರದೆ ಧರ್ಮ, ಸಂಸ್ಕೃತಿ ಮತ್ತು ವಿದ್ಯೆಗಳ ಮಹಾಸಂಗಮವಾಗಿದೆಯೆಂದೂ, ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ಪಡೆಯುವಂತೆ ಶ್ರೀ ನಾರಾಯಣ ಭಟ್ಟರಿಗೆ ದೇವರು ಶಕ್ತಿ ಕೊಡಲೆಂದೂ ಹಾರೈಸಿದರು.

ಸಚಿವ ಶ್ರೀ ಎ ಆರ್. ಬದರಿನಾರಾಯಣರು ಹಾಯರ್ ಸೆಕೆಂಡರಿ ಶಾಲೆಯ ನೂತನ ಕಟ್ಟಡಕ್ಕೆ ಶಂಕು ಸ್ಥಾಪನೆ ಗೈದು ಲೋಕ ಸೇವಾ ವೃಂದದ ಬಹುಮುಖ ಚಟುವಟಿಕೆಗಳನ್ನು ಶ್ಲಾಘಿಸಿ ಸಂಸ್ಥೆಗೆ ತಮ್ಮಿಂದಾದ ಸಹಕಾರ ನೀಡುವ ಭರವಸೆಯಿತ್ತರು.

ಡಾ| ಟಿ. ಎಂ. ಎ. ಪೈಯವರು ಅಧ್ಯಕ್ಷ ಭಾಷಣ ಮಾಡುತ್ತಾ ಇಂದಿನ ವಾತಾವರಣದಲ್ಲಿರುವ ಅನೇಕ ಕುಂದು ಕೊರತೆಗಳನ್ನು ತಿಳಿಸಿದ್ದಲ್ಲದೆ ಮಕ್ಕಳ ಅಭಿವೃದ್ಧಿಯಲ್ಲಿ ಹೆತ್ತವರ ಜವಾಬ್ದಾರಿ ಮಹತ್ವದ್ದೆಂದು ಹೇಳಿದರು. ಉದ್ಯೋಗ ದೊರೆಯಲಿ ದೊರೆಯದಿರಲಿ ವಿದ್ಯೆಯೆಂಬ ಆಯುಧವನ್ನು ಎಲ್ಲರೂ ಹೊಂದಿರಬೇಕೆಂದು ಡಾ| ಪೈ ಸಲಹೆ ಇತ್ತರು. ಲೇಕ್ ಯುನಿವರ್ಸಿಟಿಯ ಯೋಜನೆಯನ್ನು ತಾವು ಬಿಟ್ಟಿರುವುದಾಗಿಯೂ ಈಗ ನಡೆಸಿಕೊಂಡು ಬರುತ್ತಿರುವ ಸಂಸ್ಥೆಗಳಿಗೆ ಸಹಕಾರ ಕೊಟ್ಟು ಅದನ್ನು ಆದರ್ಶ ಸಂಸ್ಥೆಯಾಗಿ ನಡೆಸಬೇಕೆಂದು ವಿದ್ಯಾ ಸಚಿವರನ್ನು ವಿನಂತಿಸಿದರು.

ಅಂತ್ಯದಲ್ಲಿ ಸೇವಾವೃಂದದ ಕಾರ್ಯದರ್ಶಿ ಶ್ರೀ ಯು. ಗಂಗಾಧರ ಭಟ್ಟರು ವಂದಿಸಿದರು.

ಡಾ| ಪ್ರಕಾಶಚಂದ್ರ ರೈ ನಿಧನ

ಮೂಡುಬೆಳ್ಳೆಯ ಡಾ| ಪ್ರಕಾಶಚಂದ್ರ ರೈಯವರು ತಾ 21 ರಂದು ಹೃದಯಾಘಾತದಿಂದ ನಿಧನರಾದರು. ಶ್ರೀಯುತರಿಗೆ ಸಾಯುವಾಗ 48 ವರುಷ ವಯಸ್ಸಾಗಿತ್ತು.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂ ಜಾಗರಾ ವಜ್ರಗಳಿಗೆ ಅಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

Kindly
Contribute generously
to the
NAVAYUGA
GOLDEN JUBILEE FUND 1972

ರಾಯಭಾರಿ ಪತ್ರ:

ಇಂದು ಸಾಕ್ರೆಟೀಸ್ ಜೀವಂತನಿರುತ್ತಿದ್ದರೆ?

ಕೆ. ಬಿ. ಕೀಟಿಂಗ್

ಗ್ರೀಸಿನ ಶ್ರೇಷ್ಠ ತತ್ವಜ್ಞಾನಿ ಸಾಕ್ರೆಟೀಸ್ ಸಂಪೂರ್ಣ ಪ್ರಶಾಂತತೆಯಿಂದ ಹೆಮ್ಲಾಕ್ ವಿಷದ ರಸವನ್ನು ಕುಡಿಯುವ ಮುನ್ನ ಮನುಷ್ಯ ಕುಲದ ಸ್ತ್ರೀ ವರ್ಗದ ಬಗೆಗೆ ಹೀಗೆಂದ: 'ಒಮ್ಮೆ ಗಂಡಸಿನೊಡನೆ ಸಮಾನ ಸ್ಥಾನ ದೊರೆತ ಬಳಿಕ, ಹೆಂಗಸು ಗಂಡಸಿಗಿಂತ ಮೇಲಿನ ಸ್ಥಾನ ಗಳಿಸುವಳು.'

ಸಾಕ್ರೆಟೀಸ್‌ಗೆ ಹರಿತ ನಾಲಗೆಯ ಹಾಗೂ ಕೋಪಿಷ್ಠ ಸ್ವಭಾವದ ಪತ್ನಿ ಇದ್ದಳೆಂಬ ಪ್ರತೀತಿಯಿದೆ. ಆದರೂ—ಅಥವಾ ಪ್ರಾಯಶಃ ಈ ಕಾರಣದಿಂದಾಗಿ—ಆತನಲ್ಲಿ ಸ್ತ್ರೀಯ ಶಕ್ತಿಯ ಬಗೆಗೆ ಗೌರವ ಭಾವನೆ ಉದ್ಭವವಾದಂತಿತ್ತು.

ಆದರೆ ಸಾಕ್ರೆಟೀಸ್ ಇಂದು ತನ್ನ ಸಮಾಧಿಯಿಂದ ಎದ್ದು ಬಂದರೆ, ಅಮೆರಿಕದ ಸೆನೆಟ್‌ನಲ್ಲಿ ನನ್ನ ಹಿಂದಿನ ಸಹೋದ್ಯೋಗಿಗಳು ಕೈಗೊಂಡ ಇತ್ತೀಚಿನ ಕ್ರಮವೊಂದು ಆತನನ್ನು ಬೆರಗುಗೊಳಿಸದಿರಲಾರದು. ಸಾಕ್ರೆಟೀಸ್ ಯಾವುದರ ವಿರುದ್ಧ ಎಚ್ಚರಿಕೆ ನೀಡಿದ್ದನೋ, ಆ ಕಾರ್ಯವನ್ನವರು ಮಾಡಿದರು.

ಒಬ್ಬ ಹೆಂಗಸು ಮತ್ತು 99 ಗಂಡಸರಿಂದ ಕೂಡಿರುವ ಸೆನೆಟ್ ಸ್ತ್ರೀ ಸ್ವಾತಂತ್ರ್ಯವಾದಿಗಳ ಭಯಂಕರ ದಾಳಿಗೆ ತಲೆಬಾಗಿ, ಶಾಸನದಿದಿರಲ್ಲಿ ಸ್ತ್ರೀಗೆ ಪುರುಷನೊಂದಿಗೆ ಸಮಾನ ಸ್ಥಾನ ನೀಡುವ ಸಂವಿಧಾನಿಕ ತಿದ್ದುಪಡಿಯೊಂದನ್ನು ಅಧಿಕ ಬಹುಮತದಿಂದ ಅಂಗೀಕರಿಸಿತು.

ಈ ಮತದಾನದಲ್ಲಿ ಹೆಚ್ಚು ಸ್ಪರ್ಧೆ ಇರಲಿಲ್ಲ. ಸ್ತ್ರೀಯರ ಹಕ್ಕುಗಳ ರಕ್ಷಕರು ತಾವೆಂದು ಹೇಳಿಕೊಂಡ ಎಂಟು ಸೆನೆಟರುಗಳು ಮಾತ್ರವೇ ವಿರೋಧಿಸುವ ಕೆಚ್ಚೆದೆಯನ್ನು ಪ್ರದರ್ಶಿಸಿದರು. ಸ್ತ್ರೀಯರನ್ನು ಪುರುಷರು ಶೋಷಿಸದಂತೆ ಅನೇಕ ವರ್ಷಗಳಿಂದ ಎಚ್ಚರಿಕೆಯಿಂದ ರೂಪಿಸಿದ ರಾಜ್ಯ ಶಾಸನ ಹಾಗೂ ಫೆಡರಲ್ ಶಾಸನಗಳನ್ನು ಈ ತಿದ್ದುಪಡಿ ನಿಷ್ಫಲಗೊಳಿಸುವುದೆಂದವರು ವಾದಿಸಿದರು. ಆದರೆ ಅವರ ವಾದ ಗೆಲ್ಲಲಿಲ್ಲ.

ಈ ತಿದ್ದುಪಡಿಯ ಮೇರೆಗೆ ಸ್ತ್ರೀಯರು ಕಡ್ಡಾಯ ಮಿಲಿಟರಿ ಸೇವೆಗೊಳಪಡುವರು. ಸ್ತ್ರೀಯರಿಗೆ ರಕ್ಷಣೆ ನೀಡುವ ಕಾರ್ಮಿಕ ಶಾಸನಗಳು ನಿರರ್ಥಕವಾಗುವುವು ಮತ್ತು ವಿವಾಹ ವಿಚ್ಛೇದಗೊಂಡ ಹೆಂಗಸರು ಅವರಿಗಿಂತ ಶ್ರೀಮಂತಿಕೆ ಕಡಮೆಯಿರುವ ತ್ಯಕ್ತ ಗಂಡಂದಿರಿಗೆ ಜೀವನಾಂಶ ಮತ್ತು ಮಕ್ಕಳ ಪೋಷಣೆಗೆ ಹಣ ಕೊಡಬೇಕಾಗುವುದು ಎಂದು ಅವರು ವಾದಿಸಿದರು. ಪ್ರತ್ಯೇಕ ಶೌಚ ಗೃಹ ಸೌಕರ್ಯಗಳಿಗೂ ಇತಿಶ್ರೀಯಾದೀತೇ ಎಂದೂ ಶಾಸಕರೊಬ್ಬರು ಉದ್ಗರಿಸಿದರು.

ಪುರಾತನ ಸೂಕ್ತಿಗಳನ್ನುದ್ಧರಿಸಿ ಈ ತಿದ್ದುಪಡಿಯನ್ನು—ಹಾಗೂ ಸ್ತ್ರೀ ಸ್ವಾತಂತ್ರ್ಯ ಸಂಸ್ಥೆಗಳ ಕ್ರೋಧವನ್ನು—ಎದುರಿಸುವ ಸಾಹಸಕ್ಕೆ ಯಾವ ಸೆನೆಟರೂ ಕೈಹಾಕಲಿಲ್ಲ. ಸಾಕ್ರೆಟೀಸ್‌ನ ಅನಂತರ ಕಾಲವೆಷ್ಟು ಬದಲಾಗಿದೆ ಎಂಬುದನ್ನಿದು ಸೂಚಿಸುವುದು. 'ಸ್ತ್ರೀಯರನ್ನು ನಂಬಬಾರದು' ಎಂಬುದು ಹೋಮರನ ಅಭಿಪ್ರಾಯವಾಗಿತ್ತು. "ಸ್ತ್ರೀಗೆ ಮೌನವೇ ಭೂಷಣ" ಎಂದು ಸೊಫೋಕ್ಲಿಸ್ ನುಡಿದ. ಅರಿಸ್ಟಾಟಲ್ ಪ್ರಥಮ ದರ್ಜೆಯ ಪುರುಷ ಶ್ರೇಷ್ಠತಾವಾದಿಯಾಗಿದ್ದ. 'ಹೆಂಗಸು ಎಂದರೆ ಕೀಳು ದರ್ಜೆಯ ಗಂಡಸೆಂದು ಹೇಳಬಹುದು" ಎಂದಾತ ತಿರಸ್ಕಾರದಿಂದ ನುಡಿದ.

18ನೆಯ ಶತಮಾನದಷ್ಟು ಈಚಿನವರಿಗೂ ಪ್ರಖ್ಯಾತ ಮಹಾಪುರುಷರು ಸ್ತ್ರೀ ಸಮಾನತೆಯ ವಿರುದ್ಧ ಎಚ್ಚರಿಕೆ ನೀಡಿದರು. ನಿಸರ್ಗವೇ ಸ್ತ್ರೀಯರಿಗೆ ಬಹಳ ಶಕ್ತಿಯನ್ನು ನೀಡಿದೆ, ಶಾಸನ ಮೂಲಕ ಅದನು ಇನ್ನಷ್ಟು ಹೆಚ್ಚಿಸುವ ಅವಶ್ಯವಿಲ್ಲ ಎಂದು ಸ್ಯಾಮ್ಯುಯಲ್ ಜಾನ್ಸನ್ ಹೇಳಿದ್ದ.

ಆದರೆ ಕಟ್ಟ ಕಡೆಗೆ ಜಪಾನೀ ಗಾದೆಯೊಂದರಲ್ಲಿ ವ್ಯಕ್ತವಾಗಿರುವ ಸತ್ಯಕ್ಕೆ ಮನ್ನಣೆ ದೊರೆಯಿತು. ಹೆಣ್ಣಿನ ನಾಲಗೆಯ ಉದ್ದ ಕೇವಲ ಮೂರಂಗುಲ. ಆದರೆ ಅದು ಆರು ಅಡಿ ಉದ್ದದ ಗಂಡನ್ನು ಕೊಂದುರುಳಿಸಲು ಸಮರ್ಥವಾಗಿದೆ ಎಂದು ಅನಾಮಧೇಯ ಲೇಖಕನೊಬ್ಬ ಬರೆದಿದ್ದ.

ಸೆನೆಟ್ ಈ ಸತ್ಯಾಂಶವನ್ನು ಮನಗಂಡಿತು. ವಿವೇಕ ಸಮ್ಮತ, ಆಧುನಿಕ ಗೊತ್ತುವಳಿಯೊಂದರ ಮೂಲಕ ಅಮೆರಿಕನ್ ಸ್ತ್ರೀಯರ ಹೆಚ್ಚುತ್ತಿರುವ ರಾಜಕೀಯ ಶಕ್ತಿಗೆ ಮಣಿಯಿತು. ಪ್ರತಿಯೊಂದು ವಿಚಾರಕ್ಕೂ ಅದಕ್ಕೆ ಸೂಕ್ತವಾದ ಕಾಲವಿದೆ. ಸ್ತ್ರೀಯರಿಗೆ ಶಾಸನಾತ್ಮಕ ಸಮಾನತೆಯ ಕಾಲ ಸನ್ನಿಹಿತವಾಗಿದೆ ಎಂದು ಆ ಗೊತ್ತುವಳಿ ಮಾನ್ಯ ಮಾಡಿತು.

ಆದರೂ ಈ ವಿದ್ಯಮಾನದ ಬಗೆಗೆ ಆಲೋಚಿಸುವಾಗ, ಸಮಾನತೆಯು ಮೇಲಿನ ಸ್ಥಾನಕ್ಕೆ ಕಾರಣವಾಗುವುದು ಎಂಬ ಸಾಕ್ರೆಟೀಸ್‌ನ ಹೇಳಿಕೆ ನನ್ನ ನೆನಪಿಗೆ ಬಂದೇ ಬರುತ್ತದೆ. ಮುಂದೆ ಅಮೆರಿಕದ ಸೆನೆಟಿನಲ್ಲಿ ಸ್ತ್ರೀಯರ ಪ್ರಾಬಲ್ಯ ಅಧಿಕವಾಗಿ, ಗಂಡಸರಿಗೆ ಸಮಾನತೆ ನೀಡಬೇಕೆಂಬ ಸಂವಿಧಾನಿಕ ತಿದ್ದುಪಡಿಯನ್ನು ಅವರು ಪರಿಶೀಲಿಸುವ ದಿನ ಬಂದೀತೋ ಏನೋ?

● ●

(ಮೂರನೇ ಪುಟದಿಂದ)

ಒಕ್ಕಲೆಬ್ಬಿಸುವುದರ ವಿರುದ್ಧ ರಕ್ಷಣೆ ನೀಡುವ ಉದ್ದೇಶ್ಯವಿದ್ದರೂ ಅದರಲ್ಲಿ ಗೇಣಿ ಪಾವತಿಯ ಷರತ್ತು ಸರಕಾರ ಹಾಕಿದ್ದರಿಂದ ಒಕ್ಕಲುಗಳಿಗಿಂತ ಭೂಮಾಲಿಕರಿಗೇ ಸಹಾಯ ಮಾಡುತ್ತದೆಯೆಂಬುದೊಂದು ಆರೋಪ. ಹಂತ ಹಂತವಾಗಿ ಭೂಮಾಲಿಕರಿಗೆ ಗೇಣಿ ವಸೂಲು ಮಾಡಿ ಕೊಡುವ ಕ್ರಮವೆಂಬ ದೂರು. ಇದು ಒಕ್ಕಲಿಗೆ ಅರ್ಥವಾಗುವುದಿಲ್ಲ. ತನ್ನ ಹಿತ ಸಾಧನೆ ಮಾಡುವ ಮಸೂದೆಗೆ ವಿರೋಧ ಪಕ್ಷಗಳು ಅಡ್ಡ ಬಂದುವೆಂದು ಮಾತ್ರ ಅವನಿಗೆ ಗೊತ್ತು. ಸರಕಾರ ಈ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಬಹುದು, ತನ್ನ ವಜ್ರಾಯುಧವನ್ನು ಬಳಸಬಹುದು. ಆದರೆ ಈ ಮಸೂದೆಯ ಬಗ್ಗೆ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷೀಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸಂಪೂರ್ಣ ತಳ್ಳಿ ಹಾಕುವಂತಿಲ್ಲ. ಆದುದರಿಂದ ಸರಕಾರ ಕ್ಷಿಪ್ರವಾಗಿ ಸಮಗ್ರ ಭೂ ಶಾಸನವನ್ನು ಜ್ಯಾರಿಗೆ ತರಬೇಕು; ಉಳುವವನಿಗೇ ಹೊಲದ ಪರಮಾಧಿಕಾರ ನೀಡಬೇಕು.

● ●

ಬಡೆಕ್ಕಿಲ ವೆಂಕಟರಮಣ ಭಟ್ಟರಿಗೆ ಸನ್ಮಾನ ಸಮಾರಂಭದ ಸಿದ್ಧತೆ

ಕಡಿಲದ ಶ್ರೀ ಬಡೆಕ್ಕಿಲ ಸಾಹುಕಾರ್ ವೆಂಕಟರಮಣ ಭಟ್ಟರನ್ನು ಸನ್ಮಾನಿಸುವ ಸಲುವಾಗಿ ಸನ್ಮಾನ ಸಮಿತಿಯೊಂದು ರಚಿತವಾಗಿದ್ದು, ಶ್ರೀಯವರನ್ನು ತಾ. 30–4–72ರಂದು ಕಡಿಲ ಏಡೆಡ್ ಹಾಯರ್ ಪ್ರೈಮರಿ ಶಾಲೆಯಲ್ಲಿ ಸನ್ಮಾನಿಸುವ ಸಿದ್ಧತೆಯು ನಡೆಯುತ್ತಿದೆ.

ಈ ಸನ್ಮಾನ ಸಮಾರಂಭದ ಅಧ್ಯಕ್ಷತೆಯನ್ನು ಮಂಗಳ ಗಂಗೋತ್ರಿ ಸ್ನಾತಕೋತ್ತರ ಕಾಲೇಜಿನ ಪ್ರಾಧ್ಯಾಪಕರೂ ನಿರ್ದೇಶಕರೂ ಆದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ವಹಿಸಲಿರುವರು. ಈ ಸಂದರ್ಭದಲ್ಲಿ ಸನ್ಮಾನ ಸಮಿತಿಯವರಿಂದ ಸಂಪಾದಿತವಾದ ಸನ್ಮಾನ ಗ್ರಂಥ 'ಕಾಣಿಕೆ'ಯನ್ನು ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನ ಕನ್ನಡ ರೀಡರ್ ಶ್ರೀ ತೆಕ್ಕುಂಜೆ ಗೋಪಾಲ ಕೃಷ್ಣ ಭಟ್ಟರು ಅನಾವರಣ ಮಾಡಲಿರುವರು. ಮುಖ್ಯ ಭಾಷಣಕಾರರಾಗಿ ಮಂಗಳೂರಿನ ಎಡ್ವಕೇಟ್ ಶ್ರೀ ಎಂ. ಮಹಾಬಲ ಭಟ್ಟರು ಆಗಮಿಸಲಿರುವರು.

ಕಟೀಲಿನಲ್ಲಿ ಅತಿಥಿಗೃಹ ಉದ್ಘಾಟನೆ

ಕಟೀಲಿನ ಶ್ರೀ ದುರ್ಗಾ ಪರಮೇಶ್ವರಿ ದರ್ಶನಕ್ಕಾಗಿ ಬರುವ ಭಕ್ತರ ಅನುಕೂಲಕ್ಕಾಗಿ ದೇವಳದವರು ಸುಮಾರು 82 ಸಾವಿರ ರೂ. ವೆಚ್ಚದಿಂದ ನಿರ್ಮಿಸಿದ 'ಶ್ರೀ ದುರ್ಗಾಪ್ರಸಾದ'ವನ್ನು ತಾ 13ರಂದು ದೇವಳದ ವರ್ಷಾವಧಿ ಉತ್ಸವದ ವೇಳೆ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು ಉದ್ಘಾಟಿಸಿದರು.

ಯುಗಪುರುಷ ಸಂಪಾದಕ ಶ್ರೀ ಕೊ. ಅ. ಉಡುಪರು ಸ್ವಾಗತಿಸಿದರು. ಶ್ರೀ ಪಿರ್ಯ ಲಕ್ಷ್ಮೀನಾರಾಯಣ ಆಳ್ವರು ಭಾಷಣಮಾಡಿ ತುಳು ಭಾಷೆ, ಅದರ ಸಾಹಿತ್ಯ ಹಾಗೂ ಈ ಭಾಷೆಯನ್ನಾಡುವ ಜನರ ಸಂಸ್ಕೃತಿಯನ್ನು ಉಲ್ಲೇಖಿಸಿದರು.

ಜಿಲ್ಲಾ ಖಾಸಗೀ ಶಾಲೆ ಆಡಳಿತೆದಾರ ಸಂಘದ ಸಭೆ

ದ. ಕ ಜಿಲ್ಲಾ ಖಾಸಗಿ ಶಾಲಾ ಆಡಳಿತದಾರರ ಸಂಘದ ಕಾರ್ಯಸಮಿತಿಯ ಸಭೆಯು ಇತ್ತೀಚೆಗೆ ಶ್ರೀ ಎ. ಜೆ ಅಲ್ಸೆಯವರ ಅಧ್ಯಕ್ಷತೆಯಲ್ಲಿ ಮಲ್ಪೆಯಲ್ಲಿ ಜರಗಿತು.

ಅನೇಕ ಸದಸ್ಯರು ಕೋಟ ಪಿರ್ಕಾದಲ್ಲಿ ಖಾಸಗಿ ಶಾಲೆಗಳಿಗೆ ಮೈಂಟೆನೆನ್ಸ್ ಗ್ರಾಂಟ್ ನೀಡಿಕೆಯಲ್ಲಿ ಶಾಲಾ ಇನ್‌ಸ್ಪೆಕ್ಟರರ ವಿಮುಖ ಧೋರಣೆಯಿಂದ ಉಂಟಾಗಿದ್ದ ಕಡಿತದ ಕುರಿತು ಆಕ್ಷೇಪ ಸೂಚಿಸಿ ಈ ಬಗ್ಗೆ ಡಿ. ಡಿ. ಪಿ. ಐ. ಯ ಬಳಿಗೆ ನಿಯೋಗವೊಂದನ್ನು ಕಳುಹಿಸಲು ನಿರ್ಧರಿಸಲಾಯಿತು

ಗ್ರಾಂಟ್ ಇನ್ ಎಯಿಡ್ ಕೋಡಿನ ವಿಚಾರದಲ್ಲಿ ಶಾಲಾ ಮೆನೆಜರರ ಸಂಘದ ಪರವಾಗಿ ನೀಡಿದ್ದ ಸೂಚನೆಗಳಲ್ಲಿ ಇತ್ಯರ್ಥವಾಗದಿರುವುದನ್ನು ಗಮನಕ್ಕೆ ತಂದು ಸಮಿತಿಯು ಇದಕ್ಕಾಗಿ ತನ್ನ ಪ್ರಯತ್ನ ಮುಂದುವರಿಸಬೇಕೆಂದೂ ಜಿಲ್ಲೆಯ ವಿದ್ಯಮಾನಗಳ ಪೂರ್ಣ ವಿಚಾರವನ್ನು ವಿದ್ಯಾಮಂತ್ರಿಗಳಿಗೆ ಮನವಿ ಮಾಡಲು ತಕ್ಕ ಅವಕಾಶ ಒದಗಿಸಬೇಕೆಂದೂ ಮುಂದಿನ ತಿಂಗಳು ಎರಡನೆಯ ವಾರದಲ್ಲಿ ಸಂಘದ ಮಹಾಸಭೆಯನ್ನು ಕರೆಯಬೇಕೆಂದೂ ನಿರ್ಣಯಿಸಲಾಯಿತು

ಶ್ರೀಗಳಾದ ಬನ್ನಾಡಿ ಸುಬ್ಬಣ್ಣ ಹೆಗ್ಡೆ, ಎ ರಾಮ ಅಲ್ಸೆಯವರು ಉಪಯುಕ್ತ ಸಲಹೆಗಳನ್ನಿತ್ತರು. ಜತೆ ಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸ ರಾಯರು ಧನ್ಯವಾದವಿತ್ತರು.

ಸಚಿವ ಶಂಕರ ಆಳ್ವರ ಜಿಲ್ಲಾ ಪ್ರವಾಸ

ರಾಜ್ಯದ ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರು ಮೇ ತಿಂಗಳ ತಾ. 2ರಿಂದ 8ರವರೆಗೆ ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ಮಾಡಲಿರುವರೆಂದು ತಿಳಿದು ಬಂದಿದೆ.

ಭಜನೆಯಿಂದ ತಪಸ್ಸಿನ ಫಲ

—ಪೇಜಾವರ ಶ್ರೀಗಳು

ಪುತ್ತೂರಿನ ಕಬಕದ ಶ್ರೀ ಮಹಾದೇವಿ ಭಜನಾ ಮಂಡಳಿಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಶ್ರೀ ಸೂರ್ಯನಾರಾಯಣ ರಾಯರು ಕಟ್ಟಿಸಿಕೊಟ್ಟ ಕೋಲ್ಪೆ ರಾಮಕೃಷ್ಣಯ್ಯ ಸ್ಮಾರಕ ನಾಟ್ಯವೇದಿಕೆಯನ್ನು ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಇತ್ತೀಚೆಗೆ ಉದ್ಘಾಟಿಸಿದರು. ಶ್ರೀ ಕೆ. ರಾಮ ಭಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಶಿವರಾಮ ಕಜೆಯವರು ಸ್ವಾಗತಿಸಿದರು ಶ್ರೀ ಶ್ಯಾಮ ಭಟ್ಟರು ವರದಿ ಸಲ್ಲಿಸಿದರು.

ಶ್ರೀ ಪಾದಂಗಳವರು ಉದ್ಘಾಟಿಸುತ್ತಾ ಭಜನೆಯಂಥ ಸರಳ ಹಾಗೂ ಪರಿಣಾಮಕಾರಿಯಾದ ವಿಧಾನದಿಂದ ದೇವರ ಅನುಗ್ರಹಕ್ಕೆ ಪಾತ್ರರಾಗಬಹುದು. ದೇವರಲ್ಲಿ ಭಕ್ತಿಯೆಂದರೆ ದೇವರ ಆದೇಶದಂತೆ ನಡೆಯುವುದಾಗಿದೆ ಸುಸಂಸ್ಕೃತ, ಸುಶೀಲ ಜೀವನ ನಡೆಸುವುದು ಪರಮಾತ್ಮನಿಗೆ ಪ್ರಿಯವಾಗಿದೆ. ಜಾತ್ಯಾತೀತ ಸಾಮೂಹಿಕತೆಯಲ್ಲಿ ವಾರಕ್ಕೊಮ್ಮೆಯಾದರೂ ದೇವಾಲಯಕ್ಕೆ ಅಥವ ಭಜನಾ ಮಂದಿರಕ್ಕೆ ಹೋಗುವುದರಿಂದ ನಮ್ಮ ನಡೆ ಶುದ್ಧಗೊಳ್ಳುವುದೆಂದರು.

ಶ್ರೀ ರಾಮ ಭಟ್ಟರು ಅಧ್ಯಕ್ಷ ಭಾಷಣ ಮಾಡಿ ವಂದಿಸಿದ ಬಳಿಕ ಶ್ರೀ ಶಿವರಾಮ ಕಜೆಯವರಿಂದ ನೃತ್ಯ ಹಾಗೂ ಮಿತ್ರವೃಂದದವರಿಂದ ನಾಟಕ ಪ್ರದರ್ಶನಗಳು ಜರಗಿದವು

ಕೃತಜ್ಞತೆಗಳು

ಸುಪತೋಭಾದ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ತಾ. 9ರಿಂದ 17ರವರೆಗೆ ವಿಜೃಂಭಣೆಯಿಂದ ಜರಗಿದ ಜಾತ್ರೆ ಉತ್ಸವ ರಥೋತ್ಸವಾದಿಗಳ ಕಾಲದಲ್ಲಿ ಸ್ವತಹ ಇದ್ದು ಉತ್ತಮ ಪೋಲೀಸ್ ಬಂದೋಬಸ್ತು ವ್ಯವಸ್ಥೆಯನ್ನು ಏರ್ಪಡಿಸಿದ ಪುತ್ತೂರು ಪೋಲೀಸ್ ಸ್ಟೇಶನ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಮಹಮ್ಮದ್ ಇಕ್ಬಲ್, ಶ್ರೀ ವಿ. ಪಿ. ನಾಯರ್, ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಯಚ್. ಡಿ. ಸೋಜಾ ಮತ್ತು ಪೋಲೀಸ್ ಶಿಬಂದಿ ವರ್ಗದವರಿಗೂ, ಜಾತ್ರೆ ವಿಶೇಷೋತ್ಸವಗಳಿಗೆ ಮತ್ತು ಬೆಡಿ ಪ್ರದರ್ಶನಗಳಿಗೆ ತನುಮನ ಧನಗಳಿಂದ ನೆರವಾದ ಸಾರ್ವಜನಿಕರಿಗೂ, ರಥೋತ್ಸವದ ದಿನ ವಿದ್ಯುತ್ ಒದಗಿಸಿ ಸಹಕರಿಸಿದ M. S. E. B. ಇಲಾಖೆಯವರಿಗೂ ಶ್ರೀ ಮಹಾಲಿಂಗೇಶ್ವರನು ಶ್ರೇಯಸ್ಸನ್ನು ಕರುಣಿಸಲಿ ಎಂದು ಪ್ರಾರ್ಥಿಸಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪುತ್ತೂರು
ತಾ. 22–4–72

ಡಿ. ಕೆ. ಹೆಬ್ಬಾರ್
ಮೆನೇಜಿಂಗ್ ಟ್ರಸ್ಟಿ

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

(ಎರಡನೇ ಪುಟದಿಂದ)

ಯಿರಿ. ಹೇಳಲೇ ಬೇಕಾದ ಮಾತಿದೆ. ಕುಮಾರಿಯ ಬಾಳಿನ ರಹಸ್ಯ ಅನ್ಯ ರಿಗೆ ತಿಳಿದು ಬರುವುದು ಸರಿಯಾಗಿ ಕಾಣುವುದಿಲ್ಲ. ಬೇರೆಯವರು ಹತ್ತಿರ ದಲ್ಲಿದ್ದರೆ ಹೇಳುವುದಕ್ಕೆ ದಾಕ್ಷಿಣ್ಯ. ಗೋಪ್ಯದ ಸಂಗತಿಗಳನ್ನು ಅನ್ಯರು ಕೇಳ ಬಾರದು. ಕೇಳಲೂ ಮುಜುಗರ'

ಹೆಣ್ಣು ಮಕ್ಕಳು ಚದುರಿದರು.

ಆ ಪ್ರದೇಶ ನಿರ್ಜನವಾಯಿತು.

'ಸರಿಯಾಗಿ ಬಿಡಿಸಿ, ಕೈಯನ್ನು ಬೆಳಕಿಗೆ ಹಿಡಿಯಿರಿ'

ಲೋಕಾಂಬಿಕೆ ಹಾಗೆ ಮಾಡಿದಳು.

ಸನ್ಯಾಸಿಗಳು ಅವಳು ಬಿಡಿಸಿ ಹಿಡಿದ ಕೈಯನ್ನು, ತಮ್ಮ ಕೈಗೆ ತೆಗೆದುಕೊಂಡು—ಅದರಲ್ಲಿ ಮೂಡಿದ್ದ ರೇಖೆಗಳನ್ನು ಪರೀಕ್ಷಿಸುವ ನೆಪದಲ್ಲಿ—ಮೃದುವಾಗಿ ಹಿಸುಕಿದರು.

ಲೋಕಾ ಕೈ ಕೊಸರಿಕೊಂಡು ಏಳಲನುವಾದಳು.

ಅವಳಿಗೆ ಸನ್ಯಾಸಿಯ ನಡತೆ ಸರಿ ಬರಲಿಲ್ಲ.

ಠಕ್ಕು ಸನ್ಯಾಸಿಯೆಂದು ಮನದಲ್ಲೇ ಲೆಕ್ಕ ಹಾಕಿದಳು.

ಜನ ಎಷ್ಟು ಸುಲಭವಾಗಿ ಇವನ ನಟನೆಗೆ ಬಲಿ ಬಿದ್ದರು ಎಂಬ ಭಾವನೆ ಅವಳಲ್ಲಿ ಹುಟ್ಟದಿರಲಿಲ್ಲ.

ಆಕೆ ಕೈಯ್ಯನ್ನು ಹಿಂದಕ್ಕೆಳೆದು ಕೊಂಡಾಗ, ಸನ್ಯಾಸಿಯ ಮೈಯನ್ನು ಮುಚ್ಚಿದ್ದ ಕಾವಿಯ ಶಾಲು ಕೆಳಜಾರಿತು. ಅದನ್ನು ಸರಿಪಡಿಸಿ ಕೊಳ್ಳಲು ಆತ ತನ್ನ ತೋಳನ್ನೆತ್ತಿದ

ಹಾಗೆ ತೋಳೆತ್ತಿದಾಗ, ತೋಳಿನಲ್ಲಿ ಮೂಡಿದ್ದ ಕತ್ತಿಯ ಗಾಯದ ಕಲೆಯೊಂದು ಅವಳ ಕಣ್ಣಿಗೆ ಬಿತ್ತು.

ಆ ಭಾಗವನ್ನೇ ಆಕೆ ಮತ್ತೊಮ್ಮೆ ನೋಡಿದಳು.

ಅವಳ ದೃಷ್ಟಿ ಅಲ್ಲೇ ನಟ್ಟು ಹೋಯಿತು

ಒಂದೊಂದಾಗಿ ನೆನಪಿನ ಅಲೆಗಳು ಅವಳ ಚಿತ್ತ ಭಿತ್ತಿಯಲ್ಲಿ ಮೂಡಿದುವು

ಅದೇ ತೋಳ ಭಾಗದಲ್ಲಿ, ಅಂತಹುದೇ ಗಾಯವಾಗಿ, ರಕ್ತ ಕೋಡಿ ಹರಿದುದನ್ನು ಅವಳು ನೋಡಿದ್ದಳು.

ಅದು ಬಹಳ ಹಿಂದಿನ ಮಾತು.

ಆಗ ಅವಳಿನ್ನೂ ಬಾಲಿಕೆ. ಆ ಗಾಯಕ್ಕೆ ಅವಳೇ ತನ್ನ ಕೈಯಾರ ತನ್ನ ಕಿರಿಗಿಯ ಚುಂಗನ್ನು ಹರಿದು ಕಟ್ಟಿದ್ದಳು.

ಆ ಸುಖದ ನೆನಪಿನಿಂದ ಆಕೆ ಉಲ್ಲಸಿತೆಯಾದಳು.

ಆದರೆ ಸನ್ಯಾಸಿ ಅವಳ ನಡತೆಯಿಂದ ಕುಪಿತನಾದಂತೆ ಕಂಡಿತು.

ಗಂಭೀರ ಸ್ವರದಲ್ಲಿ ಆತ 'ಹೀಗೆ ಮಾಡಿದರೆ ಭವಿಷ್ಯ ನುಡಿಯುವುದಾದರೂ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ.

'ನನ್ನ ಭವಿಷ್ಯ—' ಕೌತುಕದಿಂದ ಲೋಕಾಂಬಿಕೆ ಸನ್ಯಾಸಿಯನ್ನು ನೋಡಿದಳು.

ಮಾತಿನ ಧಾಟಿಯೂ ತನಗೆ ತೀರ ಪರಿಚಿತವಿರುವಂತನಿಸಿತು.

'ನಿಮ್ಮ ಕೈ ನೋಡಿದೆ. ಭವಿಷ್ಯ ಹೇಳಬೇಡವೇನು'

ಅವಳನ್ನು ಕೆಣಕುವಂತಿತ್ತು ಸನ್ಯಾಸಿಯ ಪ್ರಶ್ನೆ.

'ಯಾರಿಗೆ, ಯಾರ ಭವಿಷ್ಯವನ್ನು ತಿಳಿಸುತ್ತೀರಾ ಪೂಜ್ಯರೇ'

ಲೋಕಾಂಬಿಕೆ ವಿನಯವೇ ಸಾಕಾರಗೊಂಡಂತೆ ನಿಂತಿದ್ದಳು.

ಸೋಗಿನ ಸನ್ಯಾಸಿ ಎಂದು ಹೇಳಲು ಅವಳ ಎದೆ ತುಡಿಯಿತು. ಆದರೆ ನಾಲಿಗೆ ಏಳಲಿಲ್ಲ. ಕಾಲುಂಗುಟದಿಂದ ನೆಲ ಕೆರೆಯುತ್ತ ಅವಳು ನಿಂತಳು.

ಸನ್ಯಾಸಿ ಅವಳನ್ನು ಹತ್ತಿರಕ್ಕೆ ಎಳೆದುಕೊಂಡ.

ಆಕೆ ಪ್ರತಿಭಟಿಸಲಿಲ್ಲ.

ಆ ಅಪ್ಪುಗೆ ಅವಳಿಗೆ ಅಪ್ಯಾಯಮಾನವಾಗಿತ್ತು.

'ನಾನು ಬಯಸುವುದು ಈ ಭಾಗ್ಯವನ್ನೇ ಸ್ವಾಮಿ' ಎಂದಳು.

ಅಷ್ಟರಲ್ಲಿ ಚಂದಿರ ಮೂಡಿ ಮೇಲೆ ಬಂದಿದ್ದ.

'ನಿಮ್ಮ ಕಳ್ಳಾಟಿಕೆಗೆ ಸಾಕ್ಷಿಯಾಗಿ, ಅದೋ ಅಲ್ಲಿ ನೋಡಿ' ಎಂದು ಆಕೆ ಆಗಸದತ್ತ ಬೆರಳು ತೋರಿಸಿದಳು.

'ನಿನ್ನ ಮುಖಚಂದ್ರವಿರುವಾಗ, ಬಾನಿಗೇಕೆ ಕೈ ಚಾಚಲಿ'

ಅಷ್ಟರಲ್ಲಿ ಗುಜು ಗುಜು ಕೇಳಬರಲಾರಂಭಿಸಿತು. ಚದುರಿದ್ದ ಸ್ತ್ರೀ ಸಮೂಹ ಅವರ ಹತ್ತಿರ ಬರುವಂತೆ ಕಂಡಿತು ಮಾತುಗಳೂ ಕೇಳಿ ಬರಲಾರಂಭಿಸಿದುವು 'ಲೋಕಾ ಕತ್ತಲಾಯಿತು. ಉಳಿದುದನ್ನು ನಾಳೆ ಕೇಳುವಿಯಂತೆ. ತಡ ಮಾಡಿದರೆ ಅಣ್ಣ ಏನು ತಿಳಿದುಕೊಳ್ಳುತ್ತಾನೋ' ಹೀಗೆ ಹೇಳುತ್ತ ಮೇನಕಾ ದೇವಿ ಅವರನ್ನು ಸಮೀಪಿಸಿದಳು.

ತೇಲಿಬಂದ ಈ ಮೆಲ್ಲುಲಿಯಿಂದ ಅವರೀರ್ವರೂ ಬೆಚ್ಚಿಬಿದ್ದು, ದೂರ ಸರಿದು ನಿಂತರು.

"ಕುಮಾರೀ, ನಿನ್ನ ಭವಿಷ್ಯ ಉಜ್ವಲವಾಗಿದೆ".

ಸನ್ಯಾಸಿಗಳು ಮಾತಿನ ಧಾಟಿಯನ್ನೇ ತಿರುಗಿಸಿದರು.

'ಪೂಜ್ಯರೇ, ತಡವಾಯಿತು. ನಾಳೆ ಬರುತ್ತೇನೆ. ಅಪ್ಪಣೆಯಾಗಬೇಕು'.

ಅವಳೂ ಸಂದರ್ಭವನ್ನು ಬದಲಿಸಿದಳು.

ಅವಳ ಜೊತೆ ಉಳಿದವರೂ ಸನ್ಯಾಸಿಯ ಅಪ್ಪಣೆ ಪಡೆದು ರಾಜವಾಡೆಯ ಸೀಳುದಾರಿ ಹಿಡಿದರು. ಲೋಕಾಂಬಿಕೆಗೆ ಆ ಸ್ಥಳ ಬಿಡಲು ಮನಸ್ಸಾಗಲಿಲ್ಲ. ಅನ್ಯಮಾರ್ಗವಿಲ್ಲದೆ ಆಕೆ ತಾಯಿಯನ್ನು ಹಿಂಬಾಲಿಸಿದಳು. ಹೋಗುತ್ತಾ ಸನ್ಯಾಸಿಯನ್ನು ತಿರುಗಿ, ತಿರುಗಿ ಹೊರಳಿ ನೋಡಿದಳು.

ತನ್ನ ಕಣ್ಣುಗಳನ್ನು ಆ ಸ್ಥಳದಿಂದ ಕೀಳುವುದೂ ಅವಳಿಂದಾಗದೆ ಹೋಯಿತು— ಮೇನಕಾ ದಾರಿಯಲ್ಲಿ ಮಗಳನ್ನು ಹತ್ತಿರಕ್ಕೆಳೆದುಕೊಂಡು ಆತ್ಮೀಯತೆಯಿಂದ. 'ಸನ್ಯಾಸಿಗಳು ತುಂಬ ಒಳ್ಳೆಯವರೆಂದು ಕಾಣುತ್ತದೆ. ಅದೇನೋ ನಿನ್ನ ಭವಿಷ್ಯ ಉಜ್ವಲವಿದೆ ಎಂದಂತೆ ಕೇಳಿಸಿತು. ಸಂತೋಷದ ಸುದ್ದಿ ನನಗೆ ತಿಳಿಸುತ್ತೀಯಾ ಎಂದು ಕೇಳಿದಳು.

'ಎಲ್ಲರೂ ಹೇಳುವಂತೆ ನಾಲ್ಕು ಮಾತು ಹೇಳಿದರು. ನಂಬಲಾಗುತ್ತದೆಯೇ, ಅದನ್ನು'

'ಅಷ್ಟು ಹೊತ್ತು ಅವರ ಬಳಿ ಕುಳಿತಿದ್ದೆ; ನಾಲ್ಕು ಮಾತು ಎನ್ನುವಿಯಲ್ಲೇ? ಏನನ್ನೋ ಮುಚ್ಚಿಡುವಂತಿದೆ, ಲೋಕಾ! ಇಷ್ಟವಿಲ್ಲದಿದ್ದರೆ ಹೇಳಬೇಡ. ನಾಳೆ ತಿಳಿದೇ ತಿಳಿಯುತ್ತೆ'.

—ಮಾತೆ ಮಗಳನ್ನು ಕೆಣಕಿದಳು.

ಆದರೆ ಮಗಳು ಬಾಯಿ ಬಿಡಲಿಲ್ಲ. ಅವಳಿಗೆ ತಾಯಿಯ ಮಾತು ಕೇಳಿಸಲೂ ಇಲ್ಲ. ಅವಳು ಆಗ ಈ ಲೋಕದಲ್ಲಿಯೇ ಇರಲಿಲ್ಲ.

ಬೇಸರದಿಂದಿದ್ದ ಲೋಕಾಂಬಿಕೆ ಗುಡಿಯಿಂದ ಮರಳುವಾಗ ಹೂವಿನಂತಳರುವುದನ್ನು ಕಂಡು ಜೊತೆಯಲ್ಲಿದ್ದವರು ಒಳಗೊಳಗೇ ಆನಂದಿಸಿದರು.

೧೬

ಮರುದಿನ ಲೋಕಾಂಬಿಕೆಯೊಡನೆ ಗುಡಿಗೆ ಹೋಗುವ ಪ್ರಸ್ತಾಪವನ್ನು ಯಾರೂ ಮಾಡಲಿಲ್ಲ. ಅವಳೇ ಸಂಜೆಯ ಸುಮಾರಿಗೆ ಗುಡಿಗೆ ತೆರಳುವ ಸಿದ್ಧತೆ ನಡೆಸಿದಳು. ಒಳ್ಳೆಯ ಬಟ್ಟೆ ಬರೆ ತೊಟ್ಟುಕೊಂಡಳು. ಸಾಕಷ್ಟು ಶೃಂಗರಿಸಿಕೊಂಡಳು.

ಉಳಿಗದವರನ್ನು ಕರೆದು ದೇವತಾ ಪೂಜೆಗೆ ಬೇಕಾಗುವ ಸಾಮಾಗ್ರಿಗಳನ್ನು ಜೋಡಿಸಿಡಲು ಸೂಚನೆ ಕೊಟ್ಟಳು. ನಿನ್ನೆಯ ದಿನ ನಿರುತ್ಸಾಹಿಯಾಗಿದ್ದ ಅವಳು ಇಂದು ಗುಡಿಗೆ ಹೋಗಲು ಚಡಪಡಿಸುತ್ತಿದ್ದಳು. ಆ ಸಮಯವನ್ನು ಚಾತಕದಂತೆ ಕಾಯುತ್ತಿದ್ದಳು. ಎಂದು ಗುಡಿ ಸೇರಿಯೇನೋ ಎಂಬ ಔತ್ಸುಕ್ಯ ಅವಳ ಚಟುವಟಿಕೆಯಲ್ಲಿ ಕಂಡಿತು.

ನಿನ್ನೆ ಅವಳಿಗೆ ಗುಡಿ ಬೇಕಾಗಿರಲಿಲ್ಲ.

ಅವಳಿಗೆ ಅಲ್ಲಿಗೆ ಹೋಗುವ ಆಸೆ ಇರಲಿಲ್ಲ.

ಹೊರಡುವುದಕ್ಕೆ ಅವಳನ್ನು ಒತ್ತಾಯಿಸಿದ್ದರು.

ಇಂದೋ—ಅವಳಿಗೆ ಹೋಗುವ ಆತುರ.

ಉಳಿಕೆಯವರಿಗೆ ತುಂಬು ಅನಾದರ.

ಬೇಡ ಅಂದರೆ ಎಲ್ಲ ಕಾಲ ಬುಡದಲ್ಲಿ ಕಸವಾಗಿ ಬೀಳುತ್ತೆ

ಬೇಕೆಂದು ಹಂಬಲಿಸಿದಾಗ ಯಾವುದೂ ಕೈಗೆಟಕುವುದಿಲ್ಲ.

ಇದು ಸತ್ಯ.

ಅವಳಿಗೂ ಹಾಗನಿಸಿತು.

ಗುಡಿಗೆ ಹೋಗುವ ನಿರ್ಧಾರವನ್ನೇನೋ ಅವಳು ಮಾಡಿದಳು.

ನಿರ್ಧಾರ ಮಾಡಿಯಾಗಿದೆ. ಹೋಗದೆ ನಿರ್ವಾಹವಿಲ್ಲ. ಆದರೆ ಒಂಟಿಯಾಗಿ ಹೋಗುವಂತಿಲ್ಲ. ಅವರ ಜೊತೆಗೆ ಯಾರೂ ಬರುವ ಸೂಚನೆ ಕಾಣಲಿಲ್ಲ. ತಂದೆ ತೀರಿಕೊಂಡ ಮೊದಲುಗೊಂಡು ಲೋಕಾಂಬಿಕೆ ತಾಯಿಗೇ ಅಂಟಿಕೊಂಡವಳು. ಅವಳ ಎಲ್ಲ ಬೇಕು — ಬೇಡಗಳು ತಾಯಿಯ ಮುಖೇನ ನಡೆಯಬೇಕು.

ಇಂದೂ ಅವಳಿಗೆ ಆ ತಾಯಿಯೇ ಆಸರೆ.

ಆಕೆ ತಾಯಿಯನ್ನು ಕರೆಸಿದಳು.

'ಮದುವೆಗಿರುವುದು ಇನ್ನೆರಡೇ ದಿನ. ನೂರು ಜನ ಬಂದು ನೂರು ವಿಚಾರ ಕೇಳುತ್ತಿರುತ್ತಾರೆ. ಅವರನ್ನು ನೋಡಿಕೊಳ್ಳುವುದರಲ್ಲೇ ಸಾಕಾಗಿರುತ್ತೆ. ಹಗಲೆಲ್ಲ ನೀನು ಕರೆಸಿ ಕೊಂಡರೆ ಆ ಕೆಲಸ ಯಾರು ನೋಡಬೇಕೋ. ಬಂದ ನೆಂಟರ ಊಟೋಪಚಾರದ ವ್ಯವಸ್ಥೆ ಬೇರೆಯವರಿಗೆ ವಹಿಸಿದರೆ ನಮ್ಮ ತಲೆಗೇ ತರುತ್ತಾರೆ. ನಿನಗೇನು ಬೇಕು ಲೋಕಾ'

'ಏನೋ ಕೇಳುವುದಿತ್ತು. ಇಷ್ಟಕ್ಕೇ ಸಿಡಿಮಿಡಿಗೊಂಡರೆ ಏನೂ ಕೇಳುವುದಿಲ್ಲವಮ್ಮ' ಮಗಳು ಹೀಗೆ ಕಹಿಯಾಡಿದಾಗ, ತಾಯಿಯ ದೃಷ್ಟಿ ಮಗಳತ್ತ ಹರಿಯಿತು. ಅಲಂಕರಿಸಿಕೊಂಡ ಮಗಳನ್ನು ಕಂಡು ಅವಳಿಗೆ ನಗು ಬಂತು. ಅದನ್ನು ತೋರಿಸಿಕೊಳ್ಳದೆ 'ಏನೇ ಲೋಕಾ! ಲಗ್ನಕ್ಕೆ ಉಳಿದಿದೆ ಇನ್ನೆರಡು ದಿನ, ಮದುವೆ ಬೇಡ ಅಂದವಳು ಆಗಲೇ ಹೊರಟು ನಿಂತಂತಿದೆ'

(ಮುಂದುವರಿಯುವುದು)

NAVAYUGA 27-4-1972
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಕವಲು ದಾರಿ ಕೆಂಪು ದೀಪ

ಕರಾವಳಿಗೊಂದು ಗೊಬ್ಬರ ಕಾರಖಾನೆ

ಮಂಗಳೂರಿಗೊಂದು ಗೊಬ್ಬರದ ಕಾರಖಾನೆ ದೊರೆಯುವ ಮಾತು ಹಳೆಯದು. ಪಡುಗಡಲ ತೀರದಲ್ಲಿ ಎಲ್ಯುಮಿನಿಯಂ ಕಾರಖಾನೆಯೊಂದಾಗುವುದೆಂಬುದಕ್ಕೆ ಒಂದು ದಶಕಕ್ಕೂ ಹೆಚ್ಚಿನ ವಯಸ್ಸು.

ಆ ಎಲ್ಯೂಮಿನಿಯಂ ಕಾರಖಾನೆ ಮಂಗಳೂರು – ಕಾರವಾರಗಳ ನಡುವೆ ಹೊಯ್ದಾಡಿ ಕೊನೆಗೆ ದಕ್ಷಿಣದ ಕೇರಳಕ್ಕೆ ಇಳಿಯಿತೆಂದು ಹೇಳಲಾಯಿತು. ಆ ಕೇರಳದಲ್ಲೂ ಇದುವರೆಗೆ ಈ ಕಾರಖಾನೆ ಮೂರ್ತರೂಪಕ್ಕೆ ಬಂದಂತೆನಿಸುವುದಿಲ್ಲ.

ಎಲ್ಯುಮಿನಿಯಂ ಹೋಗಲಿ, ಗೊಬ್ಬರವಾದರೂ ಬಂತಲ್ಲ ಎಂದು ಅಂದು ಸಮಾಧಾನ ಪಟ್ಟರೆ, ಅದೂ ಆಗ ಬರಲಿಲ್ಲ.

ಈಗ ನಡೆಯುವುದು ನಾಲ್ಕನೆಯ ಪಂಚವಾರ್ಷಿಕ ಯೋಜನೆ. ಈ ಯೋಜನಾವಧಿಯಲ್ಲಿ ಈ ಕಾರಖಾನೆ ರೂಪುಗೊಳ್ಳುವುದೀಗ ಸ್ಪಷ್ಟವಾಗಿದೆ.

ಈ ಕಾರಖಾನೆಯ ಕನಸು ಕಾಣುತ್ತಿದ್ದ ಹಲವರು ಉದ್ಯಮಪ್ರಿಯರಲ್ಲಿ, ಹಲವರು ದೇಶ ಪ್ರಗತಿ ಪ್ರೇಮಿಗಳಲ್ಲಿ ಕೆಲವರು ಇಹಲೋಕ ನಿರ್ಗಮಿಸಿದರು. ಪ್ರಸಿದ್ಧ ಉದ್ಯಮಿ ವಿ. ಎಸ್. ಕುಡ್ವರೂ ಇಂಥವರಲ್ಲಿ ಒಬ್ಬರು.

ಇದೀಗ ಬ್ರಿಟಿಷ್ ಸಂಸ್ಥೆಯೊಂದರ ನೆರವಿನಿಂದ ರಾಸಾಯನಿಕ ಮತ್ತು ಗೊಬ್ಬರದ ಕಾರಖಾನೆ ಮಂಗಳೂರಿನ ಬಂದರು ಪ್ರದೇಶದ ಬಳಿಯಲ್ಲಿ ಸ್ಥಾಪನೆಗೊಳ್ಳುವುದು ನಿಶ್ಚಿತವಾಗಿದೆ. ಇನ್ನಾವ ಅನಿರೀಕ್ಷಿತ ಗಂಡಾಂತರಗಳು ಎದುರು ಬಾರದೆ ಹೋದರೆ, ನಿಯೋಜಿತ ಯೋಜನೆ ನಿಯೋಜಿಸಿದಂತೆ ರೂಪುಗೊಳ್ಳುವುದು

ಈ ಕಾರಖಾನೆಗೆ ತಗಲುವ ಬಂಡವಳ ವೆಚ್ಚ ರೂ. ೩.೬ಕೋಟಿ. ಇದರಲ್ಲಿ ಸೇಕಡಾ ೭೦ರಷ್ಟು ಹಣ ವಿದೇಶಿ ಬಿಡಿ ಭಾಗಗಳನ್ನು ಕೊಂಡು ಕೊಳ್ಳಲು ಬೇಕಾಗುವುದು.

ಕೇಂದ್ರ ಸರಕಾರ ೧೦೫ ಲಕ್ಷ ಬ್ರಿಟಿಷ್ ಪೌಂಡು ವಿದೇಶಿ ವಿನಿಮಯವನ್ನು ಈ ಕಾರ್ಖಾನೆಗೆಂದು ಬಿಡುಗಡೆ ಮಾಡಿದೆಯಾದ್ದರಿಂದ, ಲಂಡನ್ನಿನ ಬ್ರಿಟಿಷ್ ಸಂಸ್ಥೆಯೊಡನೆ ಒಡಂಬಡಿಕೆಯಾಗಿರುವುದರಿಂದ ಇನ್ನು ಗೊಬ್ಬರದ ಕಾರಖಾನೆ ಆರಂಭವಾಗಲು ತಡವಾಗಬಾರದು.

ಈಗಿನ ನಿರೀಕ್ಷೆಯಂತೆ ೧೯೭೪ರ ಹೊತ್ತಿಗೆ ಕಾರಖಾನೆಯ ನಿರ್ಮಾಣಕಾರ್ಯ ಪೂರ್ಣಗೊಂಡು, ಉತ್ಪಾದನೆಗೆ ಆರಂಭವಾಗುವುದೆಂದು ನಿರೀಕ್ಷೆ.

ಪಶ್ಚಿಮ ಸಮುದ್ರ ತೀರದಲ್ಲಿ ಇಂತಹ ಬೃಹತ್ ಕಾರಖಾನೆಯೊಂದು ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗುವುದು ಇದೇ ಮೊದಲು. ಈ ಕಾರಖಾನೆಯಿಂದಾಗಿ ರಾಜ್ಯದ ಮಹತ್ತಿಕೆಯು ಹೆಚ್ಚಿತು.

ದಕ್ಷಿಣದ ರಾಜ್ಯಗಳಿಗೆ ಬೇಕಾಗುವ ರಾಸಾಯನಿಕ ಮತ್ತು ಗೊಬ್ಬರಗಳನ್ನು ಪೂರೈಸಲು ಇದು ಸಮರ್ಥವಾಗ ಬಲ್ಲುದು.

ಹಲವು ನೂರಾದರೂ ಜನರಿಗೆ ಉದ್ಯೋಗ ದೊರಕಿಸಿ ಕೊಡಬಲ್ಲುದು. ಕನ್ನಡದ ಕರಾವಳಿಯಲ್ಲಿಯೂ ಉಳಿದೆಡೆಯಂತೆಯೇ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ.

ಪ್ರಗತಿಯೆಂದರೆ, ಬ್ಯಾಂಕುಗಳಲ್ಲಿ ಕೂಡಿಸಿಡುವ ಹಣದ ಮೊತ್ತವಲ್ಲ. ಹೆಂಡಿರು-ಮಕ್ಕಳ ಮೈಮೇಲಿರುವ ಬಂಗಾರದ ಒಡವೆ ವಸ್ತುಗಳಲ್ಲ.

ಪ್ರತಿಯೊಬ್ಬನಿಗೂ ದುಡಿದು ತಿನ್ನುವ ಅವಕಾಶ—ಪರರ ಹಂಗಿನಿಂದ ವಿಮುಕ್ತಿ-ಸ್ವತಂತ್ರ ಜೀವನೋಪಾಯ.

ಆದರಿಂದಲೇ ನಮ್ಮ ಸ್ವಾತಂತ್ರ್ಯಕ್ಕೊಂದು ಅರ್ಥ ಬರುತ್ತದೆ. ಆ ಅರ್ಥವನ್ನು ಸಾಧಿಸುವುದಕ್ಕೆಂದೇ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತವೆ.

ಮಂಗಳೂರಿನಲ್ಲಿ ಎಂದೋ ಆಗಿ ಇಷ್ಟರೊಳಗೇ ಉತ್ಪಾದನೆಗೆ ತೊಡಗ ಬೇಕಿದ್ದ ಗೊಬ್ಬರದ ಕಾರಖಾನೆ ಇಷ್ಟು ತಡವಾಗಿಯಾದರೂ ಮೂರ್ತರೂಪ ಹೊಂದುವ ಶುಭ ಗಳಿಗೆ ಬಂತಲ್ಲಾ ಎಂದು ಆನಂದಿಸಬೇಕು.

ಇದರ ಕಾರ್ಯ ನಿರ್ವಿಘ್ನವಾಗಿ ಮುಕ್ತಾಯಗೊಳ್ಳಬೇಕು-ಮತ್ತಾವ ಹಗರಣವೂ ಬಾರದಿರಬೇಕು—ಇದು ಕನ್ನಡಿಗರ ಸದಾಶಯ.

ಇದೇ ರೀತಿ ಬಂದರದ ಕಾರ್ಯವೂ ಹಾಸನ—ಮಂಗಳೂರು ರೇಲು ದಾರಿಯೂ ತಮ್ಮ ಇರುವೆ ನಡಿಗೆಯನ್ನು ಬಿಟ್ಟುಗೊಟ್ಟು ಮೊಲದ ವೇಗವನ್ನು ಪಡೆಯಬೇಕು.

●●

ನೀರ ನೀರೆ

ನೀರ ಕುಡಿವ ಬಯಕೆಯಿಂದ
ಗುಡಿಯನೊಂದು ಸೇರ್ದೆನು.
ಲಲನೆಯೋರ್ವಳಿರುವಳೆಂದು
ಮೆಲ್ಲನಿಣಿಕಿ ಕಂಡೆನು.
'ಎಲವೊ ಚೆಲುವೆ, ಹೊರಗೆ ಬಂದು
ನೀರನೆನಗೆ ಕೊಡುವೆಯಾ?'
ಎನಲು ನಾನು, ಅಂದವಳು
'ಯಾರು ನೀನು ಎನುವೆಯಾ?'
ನೀರ ಕುಡಿಯುತೆಂದೆ ನಾನು.
'ಹೆಸರು ಏನೇ ನಿನ್ನದು?'
ಓರ್ವಳೇಕೆ ಇರುವೆಯಿಲ್ಲಿ?
ಇದುವೆ ಮನೆಯು ಯಾರದು?
ಬಾಯಿ ನೀರ ಕುಡಿದರೂ
ಮನವು ಅವಳಲಿದ್ದಿತು.
ಬೊಗಸೆಯಲ್ಲಿ ಸುರಿದ ನೀರು
ಕೆಳಗೆ ಹರಿಯುತ್ತಿದ್ದಿತು!

ಕಣ್ಣು ಕಣ್ಣು ಕೂಡಲವಳ
ಪಾತ್ರೆ ಬರಿದೇ ಆಯಿತು.
ನೀರ ಮಧುವ ಹೀರಿ ಎನ್ನ
ತನುವು ತುಂಬಿ ಬಿಟ್ಟಿತು.

ದಾರಿಯಲ್ಲಿ ದೊರೆತ ನೀರು
ಒಡಲ ತಣಿಸಿ ಬಿಟ್ಟಿತು.
ಚೆಲುವ ನೀರೆ ದೊರೆತಳೆನಗೆ
ಎಂದು ಮನವು ಹಿಗ್ಗಿತು.

—ಅನಂತ, ಶಾಂತಿಸದನ.

(ಆಧಾರದಿಂದ)

ಮೋಡ—ಮಂಕು

ಮೋಡ ಮುಸುಕಿತ್ತು ಆಕಾಶದಲ್ಲಿ
ಮಂಕು ಕವಿದಿತ್ತು ಈ ಮನಸಿನಲ್ಲಿ

o o o

ಮೋಡ ತರುವದು ಮಳೆಯ
ಮಳೆಯು ತರುವದು ಬೆಳೆಯ
ಜೀವಿಗಳ ಜೀವನಕೆ
ಸುಖ ಶಾಂತಿ—ಮನ ಶಾಂತಿ

o o o

ಮಂಕು ಕವಿಯಲು ಮನಸಿನಲ್ಲಿ
ದಾರಿ ಕಾಣದು ಹಗಲಿನಲ್ಲಿ
ಕಣ್ಣಿದ್ದರೂ ಕುರುಡ
ಕಿವಿಯಿದ್ದರೂ ಕಿವುಡ
ಜೀವಿಯಾದರೂ ನಿರ್ಜೀವಿ.

o o o

ಜಗದ ಜೀವಿಗೆ ಊಟ
ಆ ಮಳೆಯ ಹನಿಯಿಂದ
ಜೀವ ಕೋಟಿಗೆ ಕಾಟ
ಈ ಮನಸಿನಿಂದ

o o o

ಸದ್ಭಾವನೆ, ಸಚ್ಚರಿತ್ರ
ಕಲಿಯಬೇಕು ಸೃಷ್ಟಿಯಿಂದ
ಮನಕೆ ಶಾಂತಿಯು ಲಭ್ಯ
ದಿವ್ಯ ಜ್ಞಾನ ದೃಷ್ಟಿಯಿಂದ.

o o o

ಹುರುಳಿಲ್ಲದ ಭಾವ
ತಿರುಳಿಲ್ಲದ ಜೀವ
ಹೇಗೆ ಕಾಯ್ವನೋ, ಆ ದೇವ
ಈ ಸೃಷ್ಟಿಯ. (ಪೃಥ್ವಿಯ)

—ಆನಂದಪುತ್ರ B. Sc.

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

❖ ❖ ❖

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2-00

❖ ❖ ❖

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ.ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—
ಹೋಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್
Please Visit ಫೋನ್: 77
HOTEL SHIVAPRASAD
High Class Boarding, Lodging & Restaurant
COONDAPUR, S. K.

ಅಮೃತಾಂಜನ
● ತಲೆ ನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೩೫

NAVAYUGA

4-5-1972

ಮತೀಯ ಸೌಹಾರ್ದತೆಗೆ

ಸಾಮಾಜಿಕ ಪ್ರಜ್ಞೆ ಬೆಳೆಯಬೇಕು

ಭಾರತಕ್ಕೆ ಬಡೆದ ಗರಗಳಲ್ಲಿ ಮತೀಯತೆಯು ದೊಡ್ಡದು. ಜಾತೀಯತೆಯೂ ಮತೀಯತೆಯ ಇನ್ನೊಂದು ರೂಪವಷ್ಟೇ. ಅನಾದಿ ಕಾಲದಿಂದ ದೇಶದಲ್ಲಿ ಜಾತಿ ವ್ಯವಸ್ಥೆಗಳು ನಡೆದುಬಂದುವು. ಇವುಗಳಲ್ಲಿ ಮೇಲು-ಕೀಳೆಂಬ ಭಾವನೆಯೆಂದಿಗೂ ಅಂದು ಉದ್ಭವಿಸಿದ್ದಿಲ್ಲ. ಜಾತೀಯ ಸೌಹಾರ್ದತೆಗೆ ಭಾರತವೊಂದು ಪರ್ಯಾಯ ನಾಮಧೇಯವಾಗಿತ್ತು. ಇತಿಹಾಸ ಕಾಲದಲ್ಲಿ ಇಲ್ಲಿಗೆ ಬಂದ ಆಕ್ರಮಣಕಾರರೂ ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ವಿಲೀನರಾಗಿ ಹೋದರು. ಮುಸಲ್ಮಾನರು ಮತಾಂತರಕ್ಕೆ ಹಲವಾರು ಪ್ರಯತ್ನ ಮಾಡಿದರೂ ಅವು ಪೂರ್ಣ ಯಶಗಳಿಸಲಿಲ್ಲ. ಪ್ರಾಯಃ ಈ ಕಾರಣಗಳಿಂದಾಗಿಯೇ ಹಿಂದೂ-ಮುಸಲ್ಮಾನರಲ್ಲಿ ಭೇದಭಾವ ಮೊಳೆತು ಬಂದಿರಬಹುದು. ಮುಂದೆ ಬಂದ ಕ್ರೈಸ್ತರೂ ಮತಾಂತರದ ಪ್ರಯತ್ನದಲ್ಲಿ ನಿರತರಾದರು. ಕ್ರೈಸ್ತಪಾದ್ರಿಗಳಿಗೆ ಸರಕಾರದ ಬೆಂಬಲವಿದ್ದರೂ ಅವರು ಸಫಲರಾಗಲಿಲ್ಲ. ಮತಾಂತರದ ಪ್ರಯತ್ನಗಳು ಮುಂದುವರಿಯುತ್ತ ಬಂದದ್ದರಿಂದ ದೇಶದಲ್ಲಿ ಮತೀಯ ಸೌಹಾರ್ದತೆ ಕಡಿಮೆಯಾಗುತ್ತ ಬಂತು. ಬ್ರಿಟಿಷರ ಆಳಿಕೆಯಲ್ಲಿ ಮತ-ಜಾತಿ-ಜಾತಿಯನ್ನು ಒಡೆದು ಆಳುವ ನೀತಿ ರೂಪುಗೊಂಡಿದ್ದರಿಂದ ಇವುಗಳ ಸೌಹಾರ್ದತೆಗೆ ಸಂಪೂರ್ಣ ಭಂಗ ಬಂದಿತು.

ಒಂದು ಮತದವರನ್ನು ಇನ್ನೊಂದು ಮತದವರ ಮೇಲೆ, ಒಂದು ಜಾತಿಯನ್ನು ಇನ್ನೊಂದು ಜಾತಿಯ ಮೇಲೆ ಎತ್ತಿ ಕಟ್ಟುವುದು ಬ್ರಿಟಿಷರ ವಿಭಜಿಸಿ ಆಳುವ ನೀತಿಯ ತಿರುಳು. ಇದು ಎಲ್ಲಿಯ ವರೆಗೆ ಮುಂದುವರಿಯಿತೆಂದರೆ ವ್ಯಾಸರಾಯಿ ಕರ್ಜನನು ಹಿಂದೂ–ಮುಸಲ್ಮಾನರನ್ನು ಪ್ರತ್ಯೇಕಿಸಲು ಬಂಗಾಳ ಪ್ರಾಂತವನ್ನೇ ವಿಭಜಿಸಿದನು. ಆಗ ಜಾತೀಯ ಭೂತದ ಭಾದೆ ಮಿತಿಮೀರಿರಲಿಲ್ಲವಾದ್ದರಿಂದ ಸಮಸ್ತ ಭಾರತೀಯರು ಒಂದಾಗಿ ಅದನ್ನು ವಿರೋಧಿಸಿದ್ದು, ಸರಕಾರ ತನ್ನ ನಿಲುಮೆಯನ್ನು ಬದಲಾಯಿಸಿದ್ದು, ಒಮ್ಮೆ ತುಂಡಾದ ಬಂಗಾಳ ಮತ್ತೆ ಒಂದಾದದ್ದು ಇತಿಹಾಸ ವೇದ್ಯವೇ. ಆದರೆ, ಬ್ರಿಟಿಷ ಆಳರಸರು ಬಿತ್ತಿದ ಮತೀಯತೆಯ ವಿಷಬೀಜ ಅಲ್ಲಿಗೇ ಸಾಯಲಿಲ್ಲ. ಮುಸ್ಲಿಂ ಲೀಗಿನ ಮಣ್ಣಿನಲ್ಲಿ ಅದು ಮೊಳೆತು ಸಸಿಯಾಗಿ ಮರವಾಗಿ ಬಿಟ್ಟು, ಕೊನೆಗೆ ಫಲ ನೀಡಲು ನಲುವತ್ತು ವರ್ಷಗಳು ಬೇಕಾದುವು. ಸ್ವಾತಂತ್ರ್ಯವು ಭಾರತ ವಿಭಜನೆಯೊಂದಿಗೇ ನಮಗೆ ದೊರೆಯಿತು; ಈ ವಿಭಜನೆಗೆ ಮತೀಯತೆಯೇ ಆಧಾರವಾಗಿತ್ತೆಂಬುದು ಗಮನಾರ್ಹ.

ಸ್ವಾತಂತ್ರ್ಯಾನಂತರವೂ ಈ ಮತೀಯತೆಯ ಭಾವನೆ ಅಳಿಯಲಿಲ್ಲ. ಹಿಂದೂ ರಾಜನ ಮುಸ್ಲಿಂ ಪ್ರಜೆಗಳ ಕಾಶ್ಮೀರ, ನೈಜಾಮನ ಹೈದರಾಬಾದುಗಳು ಮತೀಯತೆಯ ಆಧಾರದ ಮೇಲೆ ತನ್ನಲ್ಲಿ ಸಮಾವೇಶಗೊಳ್ಳಬೇಕೆಂದು ಪಾಕಿಸ್ತಾನ ಬಯಸಿತ್ತು. ಇದು ನಡೆಯದಿದ್ದುದು ಭಾರತೀಯ ನಾಯಕರ ಜಾಣಾಕ್ಷತೆಯಿಂದಾಗಿ, ಭಾರತದ ಜಾತ್ಯಾತೀತ ನೀತಿಯಿಂದಾಗಿ. ಆದರೂ ಪಾಕ್ ನಾಯಕರು ಭಾರತವನ್ನು ಟೀಕಿಸುವಾಗ ಈ ವಿಷಯವನ್ನು ತಪ್ಪಾಗಿ ವ್ಯಾಖ್ಯಾನಿಸುತ್ತಾರೆ; ಕಾಶ್ಮೀರದ ಪ್ರಶ್ನೆ ಇನ್ನೂ ಅನುತ್ತರಿತವೆಂಬುದೇ ಅವರ ವಕ್ರನೀತಿ. ಅದೇನಿದ್ದರೂ ಬ್ರಿಟಿಷರ ಕಾಲದಲ್ಲೂ ಅನಂತರವೂ ದೇಶದಲ್ಲಿ ಆಗಾಗ ಮತೀಯ ಗಲಭೆಗಳು ನಡೆಯುತ್ತಿದ್ದುವು ಎಂಬುದು ನಿರ್ವಿವಾದ. ಮತೀಯತೆಯೇ ಜಾತೀಯತೆಗೂ ಪ್ರೋತ್ಸಾಹಗೊಟ್ಟು ಜಾತೀಯ ಗೊಂದಲಗಳೂ ಅಲ್ಲಲ್ಲಿ ನಡೆದದ್ದುಂಟು.

ಭಾರತದಲ್ಲಿ ಜಾತೀಯತೆಯು ಶತಶತಮಾನಗಳಿಂದ ದೃಢವಾಗಿ ಬೇರು ಬಿಟ್ಟಿದೆ. ಇದನ್ನು ತೊಡೆದು ಹಾಕುವ ಹಲವಾರು ಪ್ರಯತ್ನಗಳು ಇತಿಹಾಸ ಕಾಲದಲ್ಲಿ ನಡೆದು ಬಂದರೂ ಅವು ಯಶಗಳಿಸಲಿಲ್ಲ. ಜಾತೀಯ ಸೌಹಾರ್ದವು ಮಾತ್ರ ನೆಲೆಗೊಂಡಿತ್ತೆಂಬುದನ್ನು ಯಾರೂ ಅಲ್ಲಗಳೆಯಲಾಗದು. ಜಾತ್ಯಾತೀತ ದೇಶದಲ್ಲಿ ಜಾತಿಯೆಂಬುದು ವ್ಯಷ್ಟಿಗತ ವಿಚಾರವಾಗಿ ಉಳಿಯಬೇಕೇ ಹೊರತು ಅದು ಸಮಷ್ಟಿಗತ ವಸ್ತುವಾಗಬಾರದು. ಮತೀಯತೆಯನ್ನಾಗಲೀ ಜಾತೀಯತೆಯನ್ನಾಗಲೀ ಸಂಪೂರ್ಣ ಕಿತ್ತು ಹಾಕುವುದು ಯಾರಿಂದಲೂ ಸಾಧ್ಯವಿಲ್ಲ. ಅವರವರು ಇಟ್ಟುಕೊಂಡ ನಂಬಿ ಬಂದ ವಿಶ್ವಾಸವನ್ನು ದಿನ ಬೆಳಗಾಗುವುದರೊಳಗೆ ಬದಲಾಯಿಸಲೂ ಸಾಧ್ಯವಿಲ್ಲ. ಆದರೆ ಮತೀಯತೆಯಿಂದ, ಜಾತೀಯತೆಯಿಂದ ಸಾಮಾಜಿಕ ಶಾಂತಿ ಕದಡದಂತೆ ನೋಡಿಕೊಳ್ಳುವುದೂ ಸೌಹಾರ್ದತೆ ಸ್ಥಾಪಿಸಲು ಅನುಕೂಲತೆಯೊದಗಿಸುವುದೂ ಸಾಧ್ಯವೆನಿಸುತ್ತದೆ.

ಸ್ವಾತಂತ್ರ್ಯಾನಂತರ ದೇಶದಲ್ಲಿ ರಾಜ್ಯಕೀಯ ಪಕ್ಷಗಳು ಪ್ರಬಲಗೊಂಡುವು. ಅವುಗಳ ನಾಯಕರು ಜನತೆಯನ್ನು ಆಳುವ ಶಿಕ್ಷಣ ನೀಡುವ, ಉದ್ಧಾರ ಮಾಡುವ ಪಂಥ ಕಟ್ಟಿದರು. ಜನ ಬೆಂಬಲ ಗಳಿಸಲು ನೂರಾರು ಮಾರ್ಗಗಳನ್ನು ಅನುಸರಿಸಿದರು. ಇವುಗಳಲ್ಲಿ ಜಾತೀಯತೆಯೂ ಒಂದು. ಶ್ರೀ ಜಗಜ್ಜೀವನ ರಾಮರು ಹರಿಜನರ ಪ್ರಶ್ನಾತೀತ ನಾಯಕರೆಂದು ಇಂದಿಗೂ ಕೇಂದ್ರ ಸಚಿವರಾಗಿದ್ದಾರೆ. ಅಬ್ದುಲ್ ಕಲಂ ಅಜಾದರು ಮುಸಲ್ಮಾನರೆಂದು ಕೇಂದ್ರದಲ್ಲಿ ಅತ್ಯುನ್ನತ ಸ್ಥಾನದಲ್ಲಿದ್ದರು. ಜಾಕೀರಹುಸೇನರು ರಾಷ್ಟ್ರಪತಿಯಾದದ್ದು ನಮ್ಮ ಜಾತ್ಯತೀತತೆಯನ್ನು ಲೋಕಕ್ಕೆ ಪ್ರದರ್ಶಿಸುವುದಕ್ಕಾಗಿ ಎನ್ನಲಾಯ್ತು. ಇದೀಗ ಫಕ್ರುದ್ದೀನರು ಇನ್ನೂ ಮಂತ್ರಿಯಾಗಿ ಮುಂದುವರಿಯುತ್ತಿರುವುದು ಜಾತೀಯತೆಯ ಕುರುಹಾಗಿಯೇ. ಇದೇ ರೋಗ ರಾಜ್ಯ ಸರಕಾರಗಳಿಗೂ ಅಂಟಿದೆ. ತಂತಮ್ಮ ಪಕ್ಷಗಳ ಹುದ್ದರಿಗಳನ್ನು ಆರಿಸುವಾಗ ತೊಡಗುವ ಈ ಜಾತೀಯ ಮನೋಭಾವ ಸಚಿವ ಸಂಪುಟ ನಿರ್ಮಿಸುವಾಗ, ಬೇರೆ ಬೇರೆ ಸಮಿತಿಗಳನ್ನು ರಚಿಸುವಾಗ ಮತ್ತೂ ಬೆಳೆಯುತ್ತದೆ. ಯಾವುದೇ ಸಾಮಾಜಿಕ ಸಂಘಸಂಸ್ಥೆಗಳ ಕಾರ್ಯಕಾರಿಣಿಯನ್ನು ಆರಿಸುವಾಗ ಅಲ್ಲಿಯೂ ಜಾತೀಯತೆ ತಲೆಯಿಣುಕುತ್ತದೆ. ಒಂದಿಷ್ಟು ಹಿಂದುಗಳು, ಇಷ್ಟು ಮುಸಲ್ಮಾನರು, ಇಷ್ಟು ಕ್ರೈಸ್ತರು—ಹೀಗೆ ಆರಿಸಿದರೇನೇ ತಮ್ಮದು ಜಾತ್ಯಾತೀತವಾಗುತ್ತದೆಂಬ ಕಲ್ಪನೆಯಲ್ಲಿ ಜಾತೀಯತೆಯನ್ನೇ ಪ್ರದರ್ಶಿಸುವ ಮೌಢ್ಯ ಕಾರ್ಯ ನಡೆಯುತ್ತದೆ. ಜಾತೀಯತೆಯನ್ನು ಸಾರ್ವಜನಿಕ ವೇದಿಕೆಯ ಮೇಲೆ ಖಂಡ ತುಂಡವಾಗಿ ಖಂಡಿಸುವವರೇ, ಜಾತೀಯತೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಪುರಸ್ಕರಿಸುತ್ತ ಬರುತ್ತಿದ್ದಾರೆ.

ಹೀಗೆ ಮತೀಯತೆ — ಜಾತೀಯತೆಗಳು ದೇಶದ ಪ್ರಗತಿಶೀಲ ಪಥ ಭ್ರಮಣಕ್ಕೆ ಅಡ್ಡವಾಗುತ್ತದೆಯೆಂಬುದು ನಿಸ್ಸಂದೇಹ. ಇದನ್ನು ತೊಡೆದು ಹಾಕುವುದಕ್ಕೆ ಪ್ರಯತ್ನ ನಡೆಯಬೇಕಾದದ್ದೂ ಸಹಜ. ಮತೀಯತೆಯನ್ನು ದಮನ ಮಾಡುವ ಬಗ್ಗೆ ಸರಕಾರವೊಂದು ಶಾಸನವನ್ನು ಅತ್ಯಂತ ಕ್ಷಿಪ್ರದಲ್ಲಿಯೇ ತರಲಿದೆಯೆಂದು ಕೇಳುತ್ತೇನೆ. ಈ ಶಾಸನ ರೂಪುಗೊಳ್ಳಬೇಕಾದದ್ದು ಅವಶ್ಯವೆಂದು ಒತ್ತಿ ಹೇಳುತ್ತೇವೆ. ಆದರೆ, ಜಾತೀಯತೆ ಮತೀಯತೆಗಳ ಆಧಾರದ ಮೇಲೆ ಯಾರಿಗೂ ಯಾವ ಬಗೆಯ ರಿಯಾಯತಿಯೂ ಸವಲತ್ತೂ ದೊರೆಯದಂತೆ ಈ ಶಾಸನ ಮಾಡಬೇಕಾಗುತ್ತದೆ. ಅಂತಹ ಸವಲತ್ತುಗಳು ದೊರೆಯುವುದಾದರೆ, ಮತೀಯತೆಯ ದೆವ್ವ ದೂರವಾಗುವುದಿಲ್ಲ. ಹಿಂದುಳಿದವರೆಂದು ಕರೆದುಕೊಳ್ಳಲು ತುದಿಗಾಲಲ್ಲಿ ನಿಂತಿರುವವರು ಅದೆಷ್ಟು ಮಂದಿಯಿಲ್ಲ?

ಆದರೆ, ಶಾಸನ ಮಾತ್ರದಿಂದ ಈ ಅವಾಂತರ ನಿಲ್ಲುತ್ತದೆಂದು ನಂಬಬಾರದು. ಅಸ್ಪೃಶ್ಯತಾ ನಿವಾರಣೆ — ಹರಿಜನೋದ್ಧಾರದ ಕಾರಣಗಳೇ ಇದಕ್ಕೆ ಜ್ವಲಂತ ನಿದರ್ಶನ. ಸ್ವಾತಂತ್ರ್ಯ ದೊರೆತ ಕಾಲು ಶತಮಾನಗಳಲ್ಲೂ (ಅದಕ್ಕೂ ಮೊದಲೇ ಈ ಧ್ಯೇಯಗಳು ರೂಪಿತವಾಗಿದ್ದುವು) ಅದನ್ನು ಸಾಧಿಸುವ ಮಾತು ದೂರವುಳಿಯಲಿ, ಪರಿಣಾಮಕಾರಿಯಾಗಿಸುವಲ್ಲಿಯೂ ನಾವು ಹಿಂದೆ ಬಿದ್ದಿದ್ದೇವೆ. ಹರಿಜನ ಗಿರಿಜನರಿಗಾಗಿ ಪ್ರತ್ಯೇಕ ವಸತಿ—ಶಾಲೆಗಳನ್ನು ನಡೆಸಿಕೊಂಡು ಬರುತ್ತೇವೆ. ಎಂಜಲೆಲೆಗ ಕೈಹಾಚುವ ಅವರ ಪ್ರವೃತ್ತಿಯನ್ನು ರಕ್ಷಿಸಿಕೊಂಡು ಬಂದಿದ್ದೇವೆ. ಸಾರ್ವಜನಿಕ ಸ್ಥಳಗಳಲ್ಲೂ ಅವರನ್ನು ದಲಿತ ವರ್ಗದ ಪ್ರಜೆಗಳಾಗಿಯೇ ನೋಡುತ್ತೇವೆ.

ಅಂದರೆ, ಸಾಮಾಜಿಕ ಪ್ರಜ್ಞೆ ನಮ್ಮಲ್ಲಿ ಮೂಡಿಸಲು ಸರಕಾರಗಳು ನಾಯಕರು ಸಂಪೂರ್ಣ ಅಶಕ್ತರಾಗಿದ್ದಾರೆಂದೇ ಅರ್ಥ. ಈ ಪ್ರಜ್ಞೆ ಮೂಡಬೇಕಾದರೆ, ಮೊದಲಿಗೆ ಕಾರ್ಯವಾಗ ಬೇಕಾದದ್ದು ಹರಿಜನರ ಮನೆಗಳಲ್ಲಿ, ಅವರ ನೀತಿ-ನಡಾವಳಿಗಳಲ್ಲಿ. ಕೊಳೆತ ಹಣ್ಣನ್ನು ದೂರವಿಡುವುದು ಅಂಗಡಿಗಾರನ ತಪ್ಪಲ್ಲ. ಆ ಮತೀಯತೆಯ ಬಗ್ಗೆಯೂ ಇದೇ ಮಾತು. ರಾಜ್ಯಕೀಯ ನಾಯಕರೇ ಸಮಾಜದ ಶಿಕ್ಷಕರು–ರಕ್ಷಕರು, ಭಕ್ಷಕರು. ಅವರು ಸಮಾಜದಲ್ಲಿ ಪ್ರಜ್ಞೆ ಬೆಳೆಯುವಂತೆ ಮತೀಯತೆಯಿಂದ ತಾವು ದೂರವಿದ್ದು ಉಳಿದವರಿಗೆ ಮಾರ್ಗದರ್ಶನ ನೀಡಬೇಕು. ಸಾಮಾಜಿಕ ಶಿಕ್ಷಣ ನೀಡಿ ಮತೀಯತೆಯಿಂದಾದ ಆಗುವ ಅನ್ಯಾಯ

(ಹನ್ನೆರಡನೇ ಪುಟ ನೋಡಿರಿ)

ಧಾರಾವಾಹಿ

ಸಮರ್ಪಣ

ಸ್ವತಂತ್ರ ಐತಿಹಾಸಿಕ ಕಾದಂಬರಿ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

'ನಿನಗೆ ಮದುವೆಯೊಂದು ಬಿಟ್ಟರೆ ಬೇರೇನೂ ತಲೆಯೊಳಗಿರುವಂತೆ ಕಾಣುವುದಿಲ್ಲ'

"ಮದುವೆಯೊಂದು ಮುಗಿಯಲಿ! ನಿನ್ನ ಜೊತೆ ಆ ಮೇಲೆ ಈ ಮಾತನ್ನು ಯಾರು ಎತ್ತುತ್ತಾರೆ"

ಆದಷ್ಟು ಬೇಗ ಇಲ್ಲಿಂದ ಸಾಗು ಹಾಕುವದರಲ್ಲಿದ್ದೀಯಾ? ನಾನೂ ನಿನಗೆ ಭಾರವಾದೆನೇ'

'ತರಾತುರಿ ಕೆಲಸವಿದೆ. ಕಾಡು ಹರಟೆಗೆ ಹೊತ್ತೆಲ್ಲಿದೆ? ಏನು ಕರೆದೆ'

'ಇಂದು ಗುಡಿಗೆ ಹೋಗ ಬೇಡವೇ'

'ನಿನ್ನೆ ನಿನ್ನ ಹೊರಡಿಸಲು ಕಾಲಿಗೊಂದು ಬೀಳುವುದು ಬಾಕಿ ಇತ್ತು. ಇಂದು ನೀನೇ ಹೊರಟು ನಿಂತಿದ್ದೀಯಾ. ಸನ್ಯಾಸಿಗಳೇನು ಮೋಡಿ ಮಾಡಿದರೋ'

ಬೇಡ ಎಂದು ಹೇಳಿದರೆ ಸಾಲದೇ. ಇಷ್ಟೆಲ್ಲ ರಂಪ—ರಾಮಾಯಣ ವೇಕೆ'

'ರಾಮಾಯಣವಲ್ಲ. ಇಲ್ಲಾಗುತ್ತಿರುವುದು ಮಹಾಭಾರತ. ನಿನಗಿಷ್ಟ ಬಂದರೆ ನೀನು ಹೋಗಿ ಬಾ. ಜೊತೆಗೆ ಯಾರನ್ನಾದರೂ ಕಳಿಸುತ್ತೇನೆ'

ತಾಯಿಯ ಆದೇಶದಂತೆ ಗೆಳತಿಯರ ಮೇಳವನ್ನು ಕೂಡಿಕೊಂಡು ಲೋಕಾಂಬಿಕೆ ಗುಡಿಗೆ ಹೊರಟಳು. ಅಲ್ಲಿ ಅವಳಿಂದ ಸೇವೆಯೂ ಸಂದಿತು. ಸನ್ಯಾಸಿಗಳ ದರ್ಶನ ಲಾಭವೂ ಆಯಿತು.

ಈ ಕ್ರಮವನ್ನು–ಗುಡಿಗೆ ಹೋಗಿ ಬರುವುದನ್ನು–ಆಕೆ ಮತ್ತೊಂದು ದಿನವೂ ನಡೆಸಿದಳು. ಆದರೆ ಆ ಮೂರನೆಯ ದಿನ ಮರಳಿ ಬರುವುದಕ್ಕೆ ವೇಳೆಯಾಯಿತು. ಗೋವಿಂದ ಅದನ್ನು ಆಕ್ಷೇಪಿಸಿದ.

ತಾಯಿ ಅವನನ್ನು ಸಮಾಧಾನಗೊಳಿಸಲು ಹೆಣಗಿದಳು.

ಆದರೂ ಆತ ಅತೃಪ್ತಿಯ ಹೊಗೆಯುಗುಳಿದ.

'ದೇವರ ದರ್ಶನ ಮಾಡಿಬರುವುದಕ್ಕೆ ನಾನು ಬೇಡವೆನ್ನುವುದಿಲ್ಲ. ಆದರೆ ಅಲ್ಲಾರೋ ಸನ್ಯಾಸಿಗಳಿದ್ದಾರಂತೆ. ಅವಳು ಅವರ ಜೊತೆ ತಾಸು ಗಟ್ಟಲೆ ಚರ್ಚಿಸುತ್ತ ಕುಳಿತಿರುತ್ತಾಳೆ, ಹಾಗಂದರು ನೋಡಿದವರು. ಕಂಡಕಂಡವರ ಕೂಡೆ ಚಕ್ಕಂದವನಾಡುತ್ತ ಹೊತ್ತು ಕಳೆಯುವುದು ಚಂದವಲ್ಲ. ಅದೂ ವಯಸ್ಸಿಗೆ ಬಂದ ಅವಿವಾಹಿತೆಯರು'.

"ಸಿಟ್ಟಿನ ಭರದಲ್ಲಿ ನೀನು ಹಿಂದುಮುಂದು ನೋಡದೆ ಆಡಿಬಿಡುತ್ತಿ. ಸನ್ಯಾಸಿಗಳು ಸಾಮಾನ್ಯರಲ್ಲ. ಅವರ ವಿಷಯದಲ್ಲಿ ಸಲ್ಲದ ಸಣ್ಣ ಮಾತು ಬರಬಾರದು'.

'ಸಣ್ಣ ಮಾತು ನಾನೆಲ್ಲಿ ಬಳಸಿದೆ? ನನಗೆ ಹೊಳೆದದ್ದು ಹೇಳಿದೆ'.

'ವಿರಕ್ತರ ಮೇಲೆ ಸಂಶಯದ ಕಾಕದೃಷ್ಟಿ ಇಡುವುದು ತಪ್ಪು. ಭಗವಂತ ತನಗಾದ ಅಪಚಾರವನ್ನು ನುಂಗಿಕೊಳ್ಳುತ್ತಾನೆ. ಆದರೆ ಭಾಗವತಾಪಚಾರವನ್ನು ಸಹಿಸುವುದಿಲ್ಲ. ಮಗೂ, ಸನ್ಯಾಸಿಗಳನ್ನು ಹಳಿಯಬಾರದು'.

'ಸೀತಾದೇವಿಯನ್ನು ಅಪಹರಿಸಲು ರಾವಣ ಬಂದಿದ್ದು ಸನ್ಯಾಸಿಯ ವೇಷದಲ್ಲಿ. ಸುಭದ್ರೆಯನ್ನು ಹಾರಿಸಿಕೊಂಡು ಹೋಗಲು ಅರ್ಜುನ ದ್ವಾರಕೆಗೆ ಬಂದಿದ್ದು ಸನ್ಯಾಸಿಯ ಸೋಗಿನಲ್ಲಿ. ಈ ಸನ್ಯಾಸಿಯೂ....'

'ಅಬದ್ಧ ಮಾತನಾಡುತ್ತೀಯಾ? ಹೀಗೆ ಅಬದ್ಧ ನುಡಿದೇ ಸೀತಾದೇವಿ ತೊಂದರೆಗೆ ಸಿಲುಕಿದ್ದು. ಲಕ್ಷ್ಮಣನಿಗೆ ಸಣ್ಣ ಮಾತು ಹೇಳಿದಳು. ಆತ ಸಹಿಸಿಕೊಂಡು ಸುಮ್ಮನಾದ. ಭಗವಂತ ಸಹಿಸಲಿಲ್ಲ. ಭಾಗವತಾಪಚಾರ ಮಾಡಿದ ಫಲ ಉಂಡಳು ನೀನೂ ಏನಾದರೂ ಹೇಳಿ....'

ನಡುವೆ ಗೋವಿಂದ ಬಾಯಿ ಹಾಕಿ 'ನಿನ್ನ ಪ್ರೀತಿಗೆ ಬಿಟ್ಟಿದ್ದೇನೆ' ಎಂದು ಅಲ್ಲಿಂದ ಕಾಲ್ತೆಗೆದ.

ಅವನಿಗೂ ಕೆಲಸ ಇತ್ತು—ಮರುದಿನವೇ ಮದುವೆಯ ಮುಹೂರ್ತ ಇದ್ದುದರಿಂದ ಮದುವೆಯ ದಿನ ಮಂಗಳ ಸ್ನಾನ ಮುಗಿಸಿ ಬಂದ ಮಗಳಿಗೆ ಮಧ್ಯಾಹ್ನ ಎರಡರ ಸುಮಾರಿಗೆ 'ಆದಷ್ಟು ಬೇಗ ಗುಡಿಗೆ ಹೋಗಿ ಹಣ್ಣು-ಕಾಯಿ ಮಾಡಿಸಿಕೊಂಡು ಬಾ. ಆದರೆ ನಿನ್ನೆಯಂತೆ ಇರಲು ಮಾಡಬೇಡ. ಮದುಮಗಳ ಶೃಂಗಾರಕ್ಕೆ ಬಹಳ ಹೊತ್ತು ಹಿಡಿಯುತ್ತೆ. ತಿಳಿಯಿತೇ?'

ಮಗಳು ಸಮ್ಮತಿ ಸೂಚಿಸಿದಳು.

'ಅಣ್ಣಾ ತಕರಾರು ತೆಗೆದ. ನಾನೇ ಅವನಿಗೆ ಭರವಸೆ ನೀಡಿದೆ. ಬೇಗೂ ಬಂದುಬಿಡು'.

ಅದಕ್ಕೂ ಲೋಕಾಂಬಿಕೆಯಿಂದ ಉತ್ತರ ಬರಲಿಲ್ಲ.

ಆಕೆ ಗೋಣು ಅಲ್ಲಾಡಿಸಿದಳು.

೧೭

ಮದುವೆಯ ಚಪ್ಪರ.

ಅತಿಥಿ, ಅಭ್ಯಾಗತರು ಕಿಕ್ಕಿರಿದು ನೆರೆದಿದ್ದರು.

ಸೂಜಿಯೂರುವುದಕ್ಕೂ ಸ್ಥಳ ಸಿಗದಷ್ಟು ಇಕ್ಕಟ್ಟು.

ವೈಭವದ ವಿವಾಹ ನೋಡಿ. ಕಣ್ಣು ತಣಿಸಿಕೊಳ್ಳುವ ಯೋಚನೆಯಿಂದ, ಆಮಂತ್ರಣವಿಲ್ಲದೆ ಬಂದವರಿಗೇನೂ ಕಡಿಮೆಯಿಲ್ಲ.

ಒಂದೆಡೆ ಮಂಗಲ ವಾದ್ಯಗಳು ಮೊಳಗುತಿದ್ದುವು. ಋತ್ವಿಜರ ಸುಸ್ಪಷ್ಟ ಮಂತ್ರೋಚ್ಚಾರ ಕೇಳಿಬರುತ್ತಿತ್ತು. ಇದರ ಮಧ್ಯೆ ಹೊಸತಾಗಿ ಬಂದವರನ್ನು ಸತ್ಕರಿಸಿ, ಕುಶಲ ಪ್ರಶ್ನೆಯಿಂದುಪಚರಿಸಿ, ಅವರ ಸ್ಥಾನಮಾನಕ್ಕೆನುಗುಣವಾದ ಸ್ಥಳದಲ್ಲಿ ತಂದು ಕೂಡಿಸುವವರ, ಒಂದು ಸಣ್ಣ ದಂಡಿನ ಓಡಾಟ; ಜೊತೆಗೆ ಅಪರೂಪಕ್ಕೆ ಭೆಟ್ಟಿಯಾದ ಬಂಧುಗಳ ಪರಸ್ಪರ ಸಂಭಾಷಣೆ.

ಕೆಲಸವಿರಲಿ, ಇಲ್ಲದಿರಲಿ, ಒಂದಲ್ಲ ಒಂದನ್ನು ಜ್ಞಾಪಿಸಿಕೊಂಡು, ಅತ್ತಿತ್ತ ಸುತ್ತಾಡುವ ಸ್ತ್ರೀ ಸಮೂಹ, ಎಲ್ಲಾ ಮದುವೆಯಲ್ಲಿರುವುದಿಷ್ಟೆ—ಗುಲ್ಲು, ಗದ್ದಲ, ಗಡಿಬಿಡಿ. ಪುರೋಹಿತರು ಗಳಿಗೆಯ ಬಟ್ಟಲನ್ನು ನೋಡಿದರು.

ಮುಹೂರ್ತ ಸನ್ನಿಹಿತವಾಯಿತು.

ಅಷ್ಟರೊಳಗಾಗಿ ಅಲಂಕರಿಸಿದ್ದ ವಿವಾಹ ಮಂಟಪಕ್ಕೆ ಚಾಳುಕ್ಯ ಕಕ್ಕರಸರನ್ನು ಕರೆತಂದು ಕೂರಿಸಿದ್ದರು. ವರಪೂಜೆ ಮುಗಿದಿತ್ತು.

ಸ್ವತಃ ಪುರೋಹಿತರೇ ಅಂತಃಪಟವನ್ನು ಕಟ್ಟಿದರು.

ಕುಳಿತಿದ್ದ ಕಕ್ಕರಸರನ್ನು ನಿಂತಿರುವಂತೆ ಹೇಳಿ, ಕೈಗೊಂದು ಮಲ್ಲಿಗೆಯ ದಂಡೆಯನ್ನು ಕೊಟ್ಟರು.

ಗೋವಿಂದ ಪುರೋಹಿತರ ಸೂಚನೆಯಂತೆ, ನೆರೆದಿದ್ದ ಸಮಸ್ತ ಜನಸ್ತೋಮಕ್ಕೆ ಕೈ ಮುಗಿದು, ಕನ್ಯಾದಾನಕ್ಕೆ ಅನುಮತಿ ಕೇಳಿದ.

'ಗುರುಹಿರಿಯರನ್ನು ಕೇಳಿಕೊಂಡು ಬನ್ನಿ'

ಗೋವಿಂದ ಆದೇಶದಂತೆ, ರಾಷ್ಟ್ರಕೂಟ ರಾಜವಂಶದ ಹಿರಿಯರನ್ನೂ, ಬಂಧುಗಳನ್ನೂ ಕೇಳಿ ಬಂದ. ಮೇನಕಾ ದೇವಿಯ ಪಾದ ಮುಟ್ಟಿ ನಮಸ್ಕರಿ 'ಅಮ್ಮಾ, ಕನ್ಯಾದಾನ ಮಾಡುತ್ತೇನೆ.'

ಮೇನಕಾ ದೇವಿ 'ಶುಭಮಸ್ತು' ಎಂದು ಹರಸಿದಳು.

ಸೇಡು ತೀರಿಸಿ ಕೊಂಡೆನಲ್ಲ ಎಂಬ ತೃಪ್ತಿ ಗೋವಿಂದನ ಮುಖದಲ್ಲಿ ಮಿನುಗುತ್ತಿತ್ತು. ಗೋವಿಂದ ಪುನಃ ಮಂಟಪಕ್ಕೆ ಬಂದ.

'ವಧುವನ್ನು ಹಂದರಕ್ಕೆ ಕರತನ್ನಿ'

ಹೀಗೆ ನುಡಿದು ಪುರೋಹಿತರು ಅಕ್ಷತೆ ಕಾಳು ಹಂಚಿಸಿದರು.

'ಬೇಗ ಕರೆತರಲಿ. ಮುಹೂರ್ತ ಸಮೀಪಿಸಿತು'

ಮಂಟಪದ ಬದಿಯಿಂದ ಯಾರೋ ಪುನಃ ಈ ಮಾತನ್ನು ಉಚ್ಚರಿಸಿದರು.

ಐದು ನಿಮಿಷ ಕಳೆಯಿತು.

ಏರು ಧ್ವನಿಯಲ್ಲಿ ಪುರೋಹಿತರೂ, ಬೇರೆ ಋತ್ವಿಜರೂ

'ಸುಲಗ್ನೇ ಸಾವಧಾನ! ಸುಮುಹೂರ್ತೇ ಸಾವಧಾನ!' ಎಂದು ಉದ್ಗರಿಸಿದರು.

ಮತ್ತೈದು ನಿಮಿಷ ದಾಟಿತು.

'ತಡ ಮಾಡಿದರೆ ಹೇಗೆ? ಕನ್ಯೆಯನ್ನು ಬೇಗ ಕರತನ್ನಿ'

ಗೋವಿಂದ ಗಂಟಲೊಡೆಯುವಂತೆ ಆರ್ಭಟಿಸಿದ.

ಆದರೂ ಯಾರೂ ವಧುವನ್ನು ವಿವಾಹ ವೇದಿಕೆಗೆ ಕರೆತರಲಿಲ್ಲ.

ಒಳಗಿನಿಂದ ಬಂದವರಲ್ಲಿ ಒಬ್ಬಿಬ್ಬರು ಕಣ್ಣು ಪಿಳಿ ಪಿಳಿ ಮಾಡಿಕೊಂಡು ನಿಂತರು.

ಒಬ್ಬರ ಕಿವಿಯಲ್ಲೊಬ್ಬರು ಏನೋ ಪಿಸುಗುಟ್ಟಿದರು.

ವಿಷಯ ಯಾರಿಗೂ ತಿಳಿಯದು.

ಗೋವಿಂದ ಪುನಃ ಮೊದಲಿನಂತೆ ಕೂಗಿಕೊಂಡ.

ಆದರೆ ವಧುವನ್ನಾರೂ ಕರೆತರುವಂತೆ ಕಾಣಲಿಲ್ಲ.

ಋತ್ವಿಜರ ಮಂತ್ರಘೋಷ ನಡೆಯುತ್ತಲೇ ಇತ್ತು.

ಗೋವಿಂದ ಸ್ಥೈರ್ಯ ಕಳೆದುಕೊಂಡ.

ಕೋಪೋದ್ದೀಪಿತನಾಗಿ ಆತ 'ವಧುವನ್ನಿಲ್ಲಿಗೆ ಎಳೆದು ತನ್ನಿ. ಬದುಕಿರಲಿ, ಸತ್ತಿರಲಿ ಈ ಮದುವೆ ಆಗಿಯೇ ತೀರಬೇಕು.'

ಯಾರೂ ಬರುವ ಲಕ್ಷಣ ಕಾಣಲಿಲ್ಲ.

ಗೋವಿಂದ ಕೆರಳಿ ನಿಂತ. ಚಪ್ಪರದಿಂದ ನೇರ ಅರಮನೆಯೊಳಕ್ಕೆ ನುಗ್ಗಿದ. ಅವನ ಕಣ್ಣುಗಳು ಬೆಂಕಿ ಕಾರುತಿದ್ದುವು. ಅದನ್ನು ನೋಡಿ ನಡುಗಿದ ಜನ ಪಕ್ಕಕ್ಕೆ ಸರಿದರು.

(ಹನ್ನೊಂದನೇ ಪುಟ ನೋಡಿರಿ)

ಯಾಂತ್ರಿಕ ಶಿಕ್ಷಣ ಪ್ರಣಾಳಿ ದೇಶದ ಆರೋಗ್ಯಕ್ಕೆ ಹಾನಿ

ರಾಜ್ಯ ಶಿಕ್ಷಣ ಸಚಿವ ಶ್ರೀ ಎ. ಆರ್. ಬದರೀನಾರಾಯಣರು ಶಿಕ್ಷಣದ ಬಗ್ಗೆ ಅತ್ಯಂತ ಕಾಳಜಿ ವಹಿಸುತ್ತಿರುವಂತೆ ತೋರುತ್ತದೆ. ಖಾಸಗಿ ಶಾಲೆ ಕಾಲೇಜುಗಳಲ್ಲಿ ನಡೆಯುತ್ತಿದೆಯೆನ್ನಲಾಗಿರುವ ಆರೋಪಗಳನ್ನು ತನಿಖೆ ನಡೆಸಲು ಏಕ ಸದಸ್ಯ ಆಯೋಗವನ್ನು ನೇಮಿಸಿದ್ದಾರೆ; ಶಿಕ್ಷಕರನ್ನು ಅನ್ಯಾಯವಾಗಿ ಕೆಲಸದಿಂದ ತೆಗೆಯುವುದರ ವಿರುದ್ಧ ಆಜ್ಞೆ ಹೊರಡಿಸಿದ್ದಾರೆ ಇನ್ನೇನು, ಶಾಲೆಗಳು ಮತ್ತೆ ಆರಂಭವಾಗಲಿವೆ; ಆ ವೇಳೆಗೆ ಸರಿಯಾಗಿ ಎಲ್ಲ ಪಠ್ಯಪುಸ್ತಕಗಳೂ ಎಲ್ಲೆಡೆಯೂ ದೊರೆಯುವಂತೆ ಮಾಡಿಯಾರೆಂದು ನಂಬುತ್ತೇವೆ. ಶಿಕ್ಷಣರಂಗದ ರಾಡಿಯನ್ನು ಕಿತ್ತು ದೂರವೊಗೆಯುವತ್ತ ಮಾನ್ಯ ಸಚಿವರು ಮನಸ್ಸು ಹರಿಸುವರೆಂದು ಆಶಿಸುತ್ತೇವೆ. ಆದರೆ, ಈ ಕೆಲಸ ಹೇಳುವಷ್ಟು ಸುಲಭವಲ್ಲವೆಂಬುದು ಅವರಿಗೂ ಗೊತ್ತು. ಖಾಸಗಿ ಸಂಸ್ಥೆಗಳ ಕುತಂತ್ರದ ಮುಂದೆ ಮಣಿಯೆವೆಂದು ಮುಖ್ಯಮಂತ್ರಿ ಅರಸರೂ ಶಿಕ್ಷಣ ಸಚಿವರೂ ಕೂಡಿಯೇ ಉಗ್ಗಡಿಸುತ್ತಾರೆ; ಆದರೆ, ಸರಕಾರಿ ಶಾಲೆಗಳಲ್ಲಿ ಅನ್ಯಾಯ ನಡೆಯುವುದಿಲ್ಲವೆಂದು ಅವರು ನಂಬಿ ಕುಳಿತರೆ, ರಾಡಿ ಸ್ವಚ್ಛವಾಗುವುದಿಲ್ಲ.

ದೇಶದ ಪ್ರಗತಿಯಲ್ಲಿ ತೊಡಗಿಸುವ ನೈಜ ಬಂಡವಳವೆಂದರೆ, ಶಿಕ್ಷಣವೆಂಬುದು ಸತ್ಯ. ನಾವು ನಮ್ಮ ಮಕ್ಕಳಿಗೆ ಯಾವ ರೀತಿಯಲ್ಲಿ ಶಿಕ್ಷಣ ನೀಡುತ್ತೇವೆಯೋ ಅದೇ ರೀತಿಯಲ್ಲಿ ದೇಶವನ್ನು ಮುಂದೊಯ್ಯುತ್ತೇವೆಯೆಂಬುದರಲ್ಲಿ ವಾಸ್ತವಿಕಾಂಶವಿದೆ. ಇದೀಗ ದೇಶವನ್ನು ಕಾಡುತ್ತಿರುವ ಸುಶಿಕ್ಷಿತರ ನಿರುದ್ಯೋಗಕ್ಕೆ ಮೂಲಕಾರಣವೆಂದರೆ, ನಾವಿನ್ನೂ ಗುಲಾಮಿ ಪದ್ಧತಿಯ ಶಿಕ್ಷಣ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಬಂದಿದ್ದೇವೆ. ವಿದ್ಯಾರ್ಥಿಯಲ್ಲಿ ಸ್ವಾವಲಂಬನೆ - ಆತ್ಮವಿಶ್ವಾಸ - ಕಾಯಕದ ಬಗೆಗೆ ಇಂದಿನ ಶಿಕ್ಷಣ ವಿಶ್ವಾಸ ಮೂಡಿಡಿಸುವುದೇ ಇಲ್ಲವೆಂಬುದನ್ನು ಎಲ್ಲರೂ ಬಲ್ಲರು. 'ಬಿಳಿ ಕೊರಳುಪಟ್ಟಿ'ಯ ಉದ್ಯೋಗವನ್ನೇ ನಮ್ಮ ಸುಶಿಕ್ಷಿತ ತರುಣ ತರುಣಿಯರು ಬಯಸುತ್ತಾರೆ. ವೈದ್ಯಕೀಯ ಅಥವಾ ತಾಂತ್ರಿಕ ಶಿಕ್ಷಣ ಹೊಂದಿದವರೂ, ಸಾಕಷ್ಟು ಸೌಲಭ್ಯಗಳೀಗ ದೊರೆಯುತ್ತಿವೆಯಾದರೂ, ಸರಕಾರಿ ನೌಕರಿಯನ್ನೇ ಮೆಚ್ಚುತ್ತಾರೆ. ಇದಕ್ಕೆ ಸರಕಾರಿ ನೌಕರಿಯಲ್ಲಿನ ಆಕರ್ಷಣೆಗಿಂತ ಆತ್ಮವಿಶ್ವಾಸದ ಅಭಾವವೇ ಕಾರಣವೆಂದು ಹೇಳಬೇಕು. ಹೆತ್ತವರಿಗೆ ಭಾರವಾಗಿಯಾದರೂ ಇರುವುದರಲ್ಲೇ ನಿರುದ್ಯೋಗಿಗಳು ಸುಖ ಪಡುವರಲ್ಲದೆ ಆತ್ಮವಿಶ್ವಾಸದಿಂದ ಸ್ವತಂತ್ರ ಜೀವನೋಪಾಯ ಕಲ್ಪಿಸಲು ಹಿಂಜರಿಯುತ್ತಾರೆ. ಶಾಲೆ ಕಾಲೇಜುಗಳಿಗೆ ಹೋಗುವುದು ಪದವಿಗಳಿಸುವುದು ನೌಕರಿ ಸಂಪಾದಿಸುವುದಕ್ಕೆ ಎಂಬ ಹಳೆಯ ನಂಬಿಕೆ ಸ್ವಾತಂತ್ರ್ಯ ಬಂದ ಇಪ್ಪತ್ತೈದು ವರ್ಷಗಳಲ್ಲೂ ಬದಲಾಗಿಲ್ಲ. ಇದಕ್ಕೆ ಕಾರಣ ಶಿಕ್ಷಣ ಕ್ಷೇತ್ರವೆಂಬುದು ಗಮ್ಯ ನಾರ್ಹ. "ಪದವೀಧರರು ಕಾಲೇಜುಗಳಿಂದ ಹೊರ ಬರುವ ಸಮಯಯಕ್ಕೆ ಅವರು ಜೀವನ ನಡೆಸಲು ಸಿದ್ಧರಾಗುವುದಿಲ್ಲ. ಹಾಗಾಗಿ ಅವರು ಹತಾಶರಾಗಿ ದಾರಿ ತಪ್ಪುವ ಸಂಭವವಿದೆ. ಇದು ಅವರ ತಪ್ಪಲ್ಲ; ಈ ಪರಿಸ್ಥಿತಿ ಹೋಗ ಬೇಕಾದರೆ, ಶಿಕ್ಷಣದಲ್ಲಿ ವೃತ್ತಿಗೆ ಪ್ರಾಶಸ್ತ್ಯ ದೊರೆಯಬೇಕು."— ಇದು ರಾಜ್ಯದ ಶಿಕ್ಷಣ ಸಚಿವರ ಅಭಿಪ್ರಾಯ. ವೃತ್ತಿ ಪ್ರಾಶಸ್ತ್ಯವಾದ ಶಿಕ್ಷಣ ವಿಶ್ವವಿದ್ಯಾಲಯ ಮಟ್ಟದಲ್ಲಿ ಮಾತ್ರ ದೊರೆಯಲಾರಂಭಿಸಿದರೆ ಸಾಲದು, ಅದು ಪ್ರಾಥಮಿಕ ಹಂತದಲ್ಲೇ ಆರಂಭವಾಗಬೇಕು. ಶಾರೀರಿಕ ಶ್ರಮಕ್ಕೂ ಶಿಕ್ಷಣದಲ್ಲಿ ಸಾಕಷ್ಟು ಅವಕಾಶವಿರಬೇಕು.

ಕೇಂದ್ರ ಶಿಕ್ಷಣ ಸಚಿವ ಶ್ರೀ ನೂರಲ್ ಹಸನ್ ಕೂಡ ಶಿಕ್ಷಣ ಪ್ರಣಾಳಿಯಲ್ಲಿ ಆಮೂಲ ಬದಲಾವಣೆಯಾಗ ಬೇಕೆನ್ನುತ್ತಾರೆ. ಇಂದು ಈ ರಂಗದಲ್ಲಿ ಏಳುತ್ತಿರುವ, ಹೊಗೆಯಾಡುತ್ತಿರುವ ಅಶಾಂತಿ—ಅತೃಪ್ತಿಗಳಿಗೆ ಅದರ ಅಪರಿಪೂರ್ಣತೆಯೇ ಕಾರಣವೆಂಬುದು ನಿರ್ವಿವಾದ. ಪಾಠ ಪಟ್ಟಿಯಲ್ಲಿ ಬೌದ್ಧಿಕ, ಮಾನಸಿಕ, ನೈತಿಕ ಶಿಕ್ಷಣಗಳಂತೆಯೇ ಶಾರೀರಿಕ ಶಿಕ್ಷಣಕ್ಕೂ ಪರ್ಯಾಪ್ತ ಅವಕಾಶವಿರಬೇಕು. ಇದು ಶರೀರದ ಬೆಳವಣಿಗೆಗೆ ಮಾತ್ರವಲ್ಲದೆ ಪರಿಶ್ರಮ ಪ್ರಿಯತೆಗೂ ಎಡೆಮಾಡಿ ಕೊಡಬೇಕು. ಸ್ವತಂತ್ರವಾಗಿ ಮೈ ಮುರಿದು ದುಡಿಯಬಲ್ಲೆನೆಂಬ ಆತ್ಮ ವಿಶ್ವಾಸ ವಿದ್ಯಾರ್ಥಿಯಲ್ಲಿ ಮೂಡಿಸುವಂತಾಗಬೇಕು ಕೃಷಿ ಪ್ರಧಾನವಾದ ನಮ್ಮ ದೇಶ ಯಾವ ಕಾಲಕ್ಕೇ ಆದರೂ ಕೃಷಿ ಪ್ರಧಾನವಾಗಿಯೇ ಮುಂದುವರಿಯಬೇಕು. ಇಲ್ಲಿ ಕೈಕಾಲು ಕೆಸರು ಮಾಡಿಕೊಳ್ಳುವವರು ಮಾಯವಾಗಿ 'ಬಿಳಿ ಕೊರಳಪಟ್ಟಿ'ಯವರೇ ತುಂಬಿ ಹೋಗುತ್ತಾರೆಂದು ಯಾರಾದರೂ ನಂಬಿದ್ದರೆ ಅದು ಶುದ್ಧಾಂಗ ಸುಳ್ಳು. ಆದ್ದರಿಂದ ಕೇಂದ್ರ—ರಾಜ್ಯಗಳು ಒಂದಾಗಿ ಶಿಕ್ಷಣ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವುದು ಅಗತ್ಯವಿದೆ. ಇಲ್ಲವಾದರೆ ಇಂದಿನ ಯಾಂತ್ರಿಕ ಶಿಕ್ಷಣವು ದೇಶದ ಆರೋಗ್ಯವನ್ನು ಸಂಪೂರ್ಣ ಕೆಡಿಸಿ ಬಿಡುತ್ತದೆ.

ಸದಸ್ಯಾಪಹರಣ

ಕಾಂಗ್ರೆಸ್ಸು ಇಬ್ಭಾಗವಾದಾಗ, ಕೆಲವು ರಾಜ್ಯಗಳಲ್ಲಿ ಎಮ್ಮೆಲ್ಲೆಗಳನ್ನು ಅಪಹರಿಸಿದ ಘಟನೆಗಳು ನಡೆದುವು. ಸಾಂಕ್ರಾಮಿಕ ಪಿಡುಗಿನಂತೆಯೇ ಈ ಅಪಹರಣದ ಪಿಡುಗೂ ಅಲ್ಲಲ್ಲಿ ವ್ಯಾಪಕವಾಗಿ ಹರಡಿದ್ದುಂಟು ಪಂಚಾಯತ್ ಬೋರ್ಡಿನಂತಹ ಸ್ಥಳೀಯ ಸಂಸ್ಥೆಗಳಿಗೂ ಈ ಅಪಹರಣದ ಪಿಡುಗು ಬಡೆಯುವುದೆಂದು ಯಾರೂ ನಿರೀಕ್ಷಿಸಿರಲಾರರು. ಆದರೆ ಕುಂದಾಪುರ ಪಂಚಾಯತ ಬೋರ್ಡಿನ ಇಬ್ಬರು ಸದಸ್ಯರನ್ನು (ಒಬ್ಬಾಕೆ ಮಹಿಳೆ) ಅಪಹರಿಸಿ ಒಂದು ಗುಂಪಿನ ಇಷ್ಟಾರ್ಥವನ್ನು ಸಾಧಿಸಿಕೊಳ್ಳುವ ಪ್ರಯತ್ನವೊಂದು ವರದಿಯಾಗಿದೆ. ಪಂಚಾಯತಿನ ಬಹು ಸಂಖ್ಯಾಕ ಸದಸ್ಯರು ವಿಶೇಷ ಸಭೆಯೊಂದನ್ನು ಕರೆಯುವ ಮನವಿ ಮಾಡಿದ್ದಂತೆ ಅಧ್ಯಕ್ಷರು ಕರೆದರಂತೆ. ಮನವಿದಾರರ ಬಹುಮತವನ್ನು ತಪ್ಪಿಸಲು ಅವರಲ್ಲಿ ಇಬ್ಬರನ್ನು ಅಪಹರಿಸಲಾಯಿತಂತೆ. ಸ್ವಂತ ತಿಳಿದ ಉಳಿದ ಮನವಿದಾರರು ಸಭಾಂಗಣವನ್ನೇ ಪ್ರವೇಶಿಸಲಿಲ್ಲವಂತೆ. ಕೋರಂ ಇಲ್ಲವಾದ್ದರಿಂದ ಸಭೆ ಮುಂದೂಡಲ್ಪಟ್ಟಿತಂತೆ. ಜತೆಗೆ ಘೇರಾವ್, ಲಾಠಿ ಛಾರ್ಜು— ಇತ್ಯಾದಿ ಅಪ್ರಿಯ ಘಟನೆಗಳೂ ನಡೆದುವಂತೆ. ಈ ಘಟನೆಯನ್ನು ನೋಡುವಾಗ, ಪಂಚಾಯತಿಯಲ್ಲಿ ಏನೇನೋ ಅನ್ಯಾಯ ನಡೆದಿರುವಂತೆ ಭಾಸವಾಗುತ್ತದೆ. ಘಟನೆಯ ಕೂಲಂಕಷ ವಿಚಾರಣೆ ನಡೆಯಬೇಕೆಂದೂ ತಪ್ಪಿತಸ್ಥರನ್ನು ದಂಡಿಸಬೇಕೆಂದೂ ಬಯಸುವುದು ತಪ್ಪಲ್ಲ. ಪಂಚಾಯತಿ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಗುರುತರ ಜವಾಬುದಾರಿಯನ್ನು ಕಡೆಗಣಿಸುವುದು ಸಾಧ್ಯವಿಲ್ಲ. ನ್ಯಾಯ ದಾನಕ್ಕೆ ರಾಜ್ಯಕೀಯವೆಂದಿಗೂ ಅಡ್ಡ ಬರಬಾರದು. ●

ವಿಜಯ ಬ್ಯಾಂಕಿನ ವಿಮೆ ಸೇರಿದ ಠೇವಣಿ ಯೋಜನೆ - I

ವಿಜಯ ಬ್ಯಾಂಕಿನ
ತ್ರಿಗುಣ ವಿಮಾ
ನಿಶ್ಚಿತ ಠೇವಣಿ ಯೋಜನೆ



ಈ ಠೇವಣಿಯು
ಬಡ್ಡಿ ಕೊಡುತ್ತದೆ
ಹಾಗೂ
ಆರು ವರ್ಷಗಳ ವಿಮೆ
ರಕ್ಷೆಯನ್ನು ಠೇವಣಿಯ
ಮೂರರಷ್ಟಾಗಿ
ಕೊಡುತ್ತದೆ

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿ

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-1.

ಚೇರ್‌ಮನ್: ಎಂ. ಸುಂದರ್‌ರಾಮ್ ಶೆಟ್ಟಿ

OBM: 2234/KN

ನಿಮ್ಮ ಉಳಿತಾಯವು ನಿಜವಾಗಿ
ಲಾಭದಾಯಕವಾಗಲು ವಿಜಯ ಬ್ಯಾಂಕು ಮಾರ್ಗದರ್ಶಿ

ಸ್ವಾತಂತ್ರ್ಯ ರಜತ ಜಯಂತಿ—

ಭ್ರಷ್ಟಾಚಾರ ನಿರ್ಮೂಲನದ ಪ್ರತಿಜ್ಞೆ

ದಶಂಬರ ತಿಂಗಳ ಶನಿವಾರವೊಂದು. ಸಂಜೆ ಆರೂವರೆ ತಾಸಿನ ಸಮಯ ಪ್ರಧಾನ ಮಂತ್ರಿ ಶ್ರೀಮತಿ ಗಾಂಧಿಯವರ 'ಡ್ರಾಯಿಂಗ್ ರೂಮಿ'ನಲ್ಲಿ ಪಂಜಾಬಿನ ಕವಯಿತ್ರಿ ಅಮೃತಾ ಪ್ರೀತಮ್, ಚಿತ್ರಕಾರ ರಾಮಕುಮಾರ, ಹಿಂದಿಯ ಯುವ ಲೇಖಕ ಕೈಲಾಶ್ ವಾಜಪೇಯಿ ಮತ್ತು ಮೋಹನ ರಾಕೇಶರಿದ್ದರು ಲೇಖಕ, ಕಲಾಕಾರರೊಂದಿಗೆ ಪ್ರಧಾನ ಮಂತ್ರಿಯವರ ಭೆಟ್ಟಿಯನ್ನು ಅವರ ಇಚ್ಛಾನುಸಾರ ಶ್ರೀ ಖಾಸಗಿ ಕಾರ್ಯದರ್ಶಿ ಉಷಾ ಭಗತ್ ಏರ್ಪಡಿಸಿದ್ದರು

ಗೊತ್ತಾದ ಸಮಯಕ್ಕೆ ಸರಿಯಾಗಿ ಪ್ರಧಾನಿಯವರು ಡ್ರಾಯಿಂಗ್ ರೂಮನ್ನು ಪ್ರವೇಶಿಸಿದರು. ಸೌಮ್ಯ ಮಂದಸ್ಮಿತದೊಡನೆ ಲೇಖಕ-ಕಲಾಕಾರರನ್ನು ಅಭಿನಂದಿಸಿದರು. ತನ್ನ ಲೇಖಕ-ಕಲಾವಿದರನ್ನು ಕಂಡು ಅವರಿಗೊಂದು ತರದ ಸಂತೋಷವೆನಿಸಿತು. 'ಈ ರೀತಿಯ ಸಂಜೆಗಳು ನನಗೆ ತುಂಬ ಶಿಕ್ಷಣ ನೀಡುತ್ತವೆ'—ಅವರು ಉದ್ಗರಿಸಿದರು.

ಈ ಹೊತ್ತಿಗೆ ಉಷಾ ಭಗತ್ ಮಾತುಕತೆಗೊಂದು ವೇದಿಕೆ ನಿರ್ಮಿಸುತ್ತ ಹೇಳಿದರು—'ನೋಡಿ, ಮುಂದಿನ ವರ್ಷ ದೇಶದ ಸ್ವಾತಂತ್ರ್ಯದ ರಜತ ಜಯಂತಿ. ನಾವು ಈ ಉತ್ಸವವನ್ನು ಹೇಗೆ ಆಚರಿಸಬೇಕು?'

ಕೂಡಲೇ ಕೈಲಾಶ್ ವಾಜಪೇಯಿ ಉತ್ತರಿಸಿದರು—'ಆ ದಿನ ನಾವೆಲ್ಲರೂ ವ್ರತದೀಕ್ಷರಾಗಬೇಕು; ಇದರಿಂದ ಸಾಕಷ್ಟು ಆಹಾರ ಧಾನ್ಯಗಳೂ ಉಳಿಯುತ್ತವೆ.

ಕೇಳಿದ ಪ್ರಧಾನಿಯವರೂ ನಕ್ಕುಬಿಟ್ಟರು ಇದೆಂತಹ ಸಲಹೆ? ಹೀಗೆ ಮಾಡಲು ಆಹಾರಾಭಾವವೇನೂ ಇಲ್ಲವಲ್ಲ? ಬಾಂಗ್ಲಾದೇಶದ ಸಮಸ್ಯೆಯೊಂದಿಲ್ಲನಾದರೆ, ನಾವು ಎಲ್ಲರಿಗೂ ಅನ್ನ ತಿನ್ನಿಸಬಲ್ಲ ಸ್ಥಿತಿಯಲ್ಲಿದ್ದೇವೆ'—ಅವರಂದರು.

'ಹೊರಗಿನವರ ನೆರವಿನಿಂದ ತಾನೆ?' ಮೋಹನ್ ರಾಕೇಶ್ ಕೇಳಿದರು. ಆಗ ಇಂದಿರಾಜಿ ಉತ್ತರಿಸಿದರು—'ನಾವೀಗ ಸಾಕಷ್ಟು ಆತ್ಮ ನಿರ್ಭರರಾಗಿದ್ದೇವೆ. ಬಾಹ್ಯ ಸಹಾಯದ ಪ್ರಮಾಣವು ಅತ್ಯಲ್ಪವಾಗಿದೆ.'

ಇದನ್ನು ಕೇಳಿದ ಕೈಲಾಶ್ ವಾಜಪೇಯಿ ತನ್ನ ಇನ್ನೊಂದು ಸಲಹೆಯನ್ನು ಮುಂದಿಟ್ಟರು—'ಆ ದಿನ ನಾವೆಲ್ಲ ಒಂದು ಪ್ರತಿಜ್ಞೆ ಮಾಡಬೇಕು—ಮುಂದಿನ ಹತ್ತು ವರ್ಷ ಮಕ್ಕಳನ್ನು ಹೆರುವುದಿಲ್ಲ ಎಂದು. ಇದರಿಂದಾಗಿ ಜನಸಂಖ್ಯೆ ನಿಯಂತ್ರಣವಾಗುತ್ತದೆ.'

ಪ್ರಧಾನಿಯವರು ಮತ್ತೊಮ್ಮೆ ನಕ್ಕರು. 'ಇದರಿಂದೇನಾಗುತ್ತದೆ? ಜನಸಂಖ್ಯೆ ನಿಯಂತ್ರಿತವಾಗುವುದು ಬಿಟ್ಟು ಎರಡು ತಲೆಮಾರುಗಳ ನಡುವೆ ದೊಡ್ಡ ಕಂದಕ ನಿರ್ಮಾಣವಾಗುತ್ತದೆ. ಜಪಾನಿನಲ್ಲಿ ಸಂತಾನ ನಿಯಂತ್ರಣ ಮಾಡಿ ಮಾಡಿ ಅಲ್ಲಿನ ಜನಸಂಖ್ಯೆ ಬಹಳಷ್ಟು ಇಳಿದು ಹೋಗಿದೆಯಲ್ಲಾ?'

ಇಲ್ಲಿಂದ ಮಾತುಕತೆ ಸ್ವಾತಂತ್ರ್ಯದ ರಜತೋತ್ಸವದಿಂದ ಸಿನೇಮಾ ರಂಗದ ದಾರಿ ಹಿಡಿಯಿತು. ಇಂದಿನ ಕೀಳು ಮಟ್ಟದ ಬೊಂಬಾಯಿ ಸಿನೆಮಾಗಳು ಮತ್ತವುಗಳ ಅಗ್ಗದ ಸಂಗೀತಗಳ ಬಗ್ಗೆ ಕಟು ವಿಮರ್ಶೆ ನಡೆಯಿತು. ಅದಕ್ಕೆ ಉತ್ತರ ರೂಪವಾಗಿ ಪ್ರಧಾನಿಯವರು ಅಂದರು—'ಈ ವಿಷಯದಲ್ಲಿ ನಿಮ್ಮ ದೃಷ್ಟಿಕೋಣ ಏಕಪಕ್ಷೀಯವಾಗಿದೆ. ಪ್ರತಿಯೊಂದು ಉದ್ಯಮದ ಆಧಾರಸ್ತಂಭ ಲಾಭ. ಹಾಗಿರುವಾಗ ಅಂತಹ ಸಿನೆಮಾ ನೋಡುವುದನ್ನು ಜನತೆ ನಿಲ್ಲಿಸುವ ವರೆಗೆ ಅವುಗಳಲ್ಲಿ ಸುಧಾರಣೆ ಹೇಗೆ ಆಗಬೇಕು? ಅನುಚಿತ ಒತ್ತಡವನ್ನು ನಾನು ಮೆಚ್ಚುವುದಿಲ್ಲ.'

ಕೆಲಹೊತ್ತು ಸಿನೆಮಾ ಮತ್ತು ನಾಟಕ ರಂಗಗಳ ಬಗ್ಗೆ ಮಾತುಕತೆ ನಡೆಯಿತು. ಮೋಹನ್ ರಾಕೇಶರು ತುಸು ಮೂರುದನಿಯಲ್ಲೇ ಹೇಳಿದರು—'ಇಲ್ಲಿ ನೋಡಿ, ರವೀಂದ್ರ ಮಂಟಪ, ಕಲ್ಯಾಣ ಮಂಟಪಗಳಾಗತೊಡಗಿವೆ.'

ಇಂದಿರಾಜಿಯವರು ಅದನ್ನು ವಿರೋಧಿಸುತ್ತ ನುಡಿದರು—"ಅದರಿಂದ ಹಾನಿಯೇನು? ಬಿಡುವಿನ ವೇಳೆ ಈ ರೀತಿಯ ಮಂಟಪಗಳನ್ನು ಬಾಡಿಗೆಯ ಮೇಲೆ ವಿವಾಹ ಸಮಾರಂಭಗಳಿಗೋ ಇನ್ನಿತರ ಕಾರ್ಯಕ್ರಮಗಳಿಗೋ ಕೊಟ್ಟರೆ ಆರ್ಥಿಕ ಲಾಭವೂ ಆಗುತ್ತದೆ. ಆದರೂ ಈ ಮಂಟಪಗಳ ಉಪಯೋಗ ಕಲಾದೃಷ್ಟಿಯಿಂದಾಗಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಒಂದು ವೇಳೆ ಈ ರೀತಿಯಾಗುತ್ತಿಲ್ಲವಾದರೆ ಅದಕ್ಕೆ ತಾವೂ ಹೊಣೆಗಾರರು."

ಇದಾದ ನಂತರ ಶ್ರೀಸಾಮಾನ್ಯನ ಪ್ರಾಮಾಣಿಕ ಪ್ರವೃತ್ತಿಯ ಬಗೆಗೆ ಮಾತು ಹರಿಯಿತು. ಪ್ರಧಾನ ಮಂತ್ರಿಯವರೊಂದು ಉದಾಹರಣೆ ನೀಡುತ್ತ ಹೇಳಿದರು....'ಒಮ್ಮೆ ನನ್ನ ಪತಿ ನನಗೆ ಬಹು ಮೂಲ್ಯವಾದ ಉಡುಗೊರೆ ನೀಡಿದ್ದರು. (ಅದೊಂದು ಶಾಲು). ಅದನ್ನು ಹೊದ್ದುಕೊಂಡು ನಾನು ಪ್ರಜಾರಾಜ್ಯ ದಿನದ ಸಮಾರಂಭದಲ್ಲಿ ಪಾಲುಗೊಳ್ಳಲು ತೆರಳಿದೆ. ಮರಳಿ ಬರುವಾಗ ಮರವಿನಿಂದ ಆ ಶಾಲು ಕುರ್ಚಿಯಲ್ಲೇ ಉಳಿದುಬಿಟ್ಟಿತು. ಅದೊಬ್ಬ ಬಡ ಮಜೂರನಿಗೆ ಸಿಕ್ಕಿತು. ಅವನು ಅದನ್ನು ಪೋಲೀಸರ ವಶಕ್ಕೆ ಕೊಡುತ್ತ ಹೇಳಿದ—'ಇದನ್ನು ಇಂದಿರಾಜಿಯವರಿಗೆ ಮುಟ್ಟಿಸಿರಿ.'

ಇದೇ ಹೊತ್ತಿಗೆ ಸರಿಯಾಗಿ ದೀಪ ಆರಿಹೋಯ್ತು. ಕೂಡಲೇ ಆಪತ್ಕಾಲದ ದೀಪದ ವ್ಯವಸ್ಥೆಯಾಯ್ತು. ಆಗ ರಾಕೇಶ ಮೋಹನ್ ಆಶ್ಚರ್ಯ ವ್ಯಕ್ತಪಡಿಸಿದರು. 'ದೀಪವೇ ಏಕೆ, ಕೆಲವೊಮ್ಮೆ ನಳ್ಳಿಗಳಲ್ಲಿ ನೀರು ಹರಿಯುವುದೂ ನಿಂತುಬಿಡುತ್ತದೆ.' ಪ್ರಧಾನಿಯವರೆಂದರು.

ಎರಡು-ಎರಡೂವರೆ ತಾಸುಗಳ ಮಾತುಕತೆಯ ನಂತರ ಹೊರಡುವ ಮಾತು ಬಂತು. ಪ್ರಧಾನಿಯವರ ಮುಖದಲ್ಲಿ ವಿಶಿಷ್ಟ ಸಂತೋಷದ ಸೆಲೆ ಹರಿಯಿತು. ಅವರು ಹೇಳಿದರು—'ನನಗೆ ಲೇಖಕರು, ಕಲಾಕಾರರನ್ನು ಭೆಟ್ಟಿಮಾಡಿದ್ದರಿಂದ ತುಂಬ ಸಂತೋಷವಾಯ್ತು. ನಾನು ಪ್ರಾದೇಶಿಕ ಪ್ರವಾಸಗಳನ್ನು ಕೈಗೊಳ್ಳುವಾಗ ಸಂಬಂಧಿತರೊಡನೆ ಇಲ್ಲವೆ ನನ್ನ ಪ್ರತಿನಿಧಿಗಳೊಡನೆ ಲೇಖಕರ-ಕಲಾವಿದರ ಗೋಷ್ಠಿಯೇರ್ಪಡಿಸಲು ಹೇಳುತ್ತೇನೆ. ಇದರಿಂದ ಅಲ್ಲಿನ ಲೇಖಕರು-ಕಲಾವಿದರಿಗೆ ವಿಸ್ಮಯವಾಗುತ್ತದೆ. ಹೊಸಗೊಂದು ಘಟನೆ ನೆನಪಿಗೆ ಬರುತ್ತದೆ—ಇದು ವಿದೇಶದಲ್ಲಿ ನಡೆದದ್ದು. ಒಂದು ದೇಶದ ಖ್ಯಾತ ಸಂಗೀತಗಾರನಿಗೆ, ಆಚಳಿತವು ಈ ರೀತಿಯ ಗೋಷ್ಠಿಯ ಕರೆ ನೀಡಿದಾಗ ತನ್ನನ್ನು ಬಂಧಿಸಲು ಸರಕಾರ ಬಯಸುತ್ತದೆ ಎಂದಾತ ಅನುಮಾನ ಪಟ್ಟುಕೊಂಡನಂತೆ.'

ಏಳುತ್ತಿರುವಂತೆ ಮಾತು ಮತ್ತೆ ಸ್ವಾತಂತ್ರ್ಯ ರಜತೋತ್ಸವದತ್ತ ತಿರುಗಿತು. ಮೋಹನ್ ರಾಕೇಶ್ ಉತ್ಸ್ಫೂರ್ತರಾಗಿ ಅಂದರು "ಈ ಸಂತೋಷದಲ್ಲಿ ಪಾನನಿಷೇಧ ಪ್ರತಿಬಂಧವನ್ನು ತೆಗೆದುಹಾಕಿರಿ."

ಇಂದಿರಾಜಿಯವರು ನಗುನಗುತ್ತಲೇ ಮಾತು ಹಾರಿಸುತ್ತಿರುವಾಗ ಅಮೃತಾಜಿ ನುಡಿದರು—'ಇಲ್ಲ, ಇಲ್ಲ, ಭ್ರಷ್ಟಾಚಾರವನ್ನು ಕಿತ್ತುಹಾಕಿರಿ!' ಅಮೃತಾಜಿಯ ಮಾತನ್ನು ಸಮರ್ಥಿಸುತ್ತ ಉಷಾ ಭಗತ್ ಗಡಸು ಧ್ವನಿಯಲ್ಲಿ ಅಂದರು—'ಹೌದು, ಇದಾದರೆ ನಿಜ. ಪ್ರತಿಯೊಬ್ಬನ ನಾಲಿಗೆಯೂ ಭ್ರಷ್ಟಾಚಾರದ ನಿರ್ಮೂಲನದ ಪ್ರತಿಜ್ಞೆ ಮಾಡಬೇಕು.'

(ಸಾಧಾರ) ●

ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ಸಭೆ

ಕಳೆದ ತಾ. 22ರಂದು ವಿಧಾನ ಸಭಾ ಸದಸ್ಯ ಶ್ರೀ ಜಯಪ್ರಕಾಶ ಶೆಟ್ಟಿ ಕೊಳ್ಕೆಬೈಲರ ಅಧ್ಯಕ್ಷತೆಯಲ್ಲಿ ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ಸಮಿತಿ ಸಭೆಯು ಜರಗಿತು. ಈ ಸಂದರ್ಭದಲ್ಲಿ ಶಾಸಕರಾಗಿ ಆಯ್ಕೆಯಾಗಿರುವ ಶ್ರೀ ಶೆಟ್ಟರನ್ನು ಅಭಿನಂದಿಸಲಾಯಿತು.

ಶ್ರೀ ಶೆಟ್ಟರು ನೂತನಾಡಿ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವುದಾಗಿ ಭರವಸೆಯಿತ್ತು ತಮ್ಮ ಪಕ್ಷವು ಸಮಾಜವಾದಿ ಧೋರಣೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಬದ್ಧವಾಗಿರುವುದಾಗಿ ತಿಳಿಸಿದರು.

ಗೇಣದಾರರ ರಕ್ಷಣಾ ಸಮಿತಿಯೊಂದನ್ನು ರಚಿಸಿ ಅವರ ಹಿತಾಸಕ್ತಿಗಳನ್ನು ನೋಡಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ಶ್ರೀಗಳಾದ ಉಮಾನಾಥ ಹೆಗ್ಡೆ ಪೆರ್ಡೂರು, ಶಿವರಾಮ ಶೆಟ್ಟಿ ಸಾಸ್ತಾನ, ನರಸಿಂಹ ಆರ್ಕಾಟ್ ಕೋಡಿ, ಬೈಕಾಡಿ ಸೀನಪ್ಪ ಶೆಟ್ಟಿ, ಆನಂದ ಪೂಜಾರಿ ಪುತ್ತೂರು, ಭುಜಂಗ ಪೂಜಾರಿ ಪೆರ್ಡೂರು, ಇಸ್ಮಾಯಿಲ್ ಸಾಹೇಬ್, ಮತ್ತು ಕೆ. ಸಿ. ಕುಂದರ್ ಮಣೂರು ಮೊದಲಾದವರನ್ನು ಮಂಡಲ ಕಾಂಗ್ರೆಸ್ ಸಮಿತಿಯ ಸದಸ್ಯರುಗಳನ್ನಾಗಿ ಆರಿಸಲಾಯಿತು

ಸೇಫ್ ಡಿಪಾಜಿಟ್ ಲಾಕರ್
ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ
ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್
ESTD. 1906
ರಥಬೀದಿ, ಮಂಗಳೂರು — ಫೋನ್ ನಂ. 5057
ಕಂಕನಾಡಿ, ಮಂಗಳೂರು — ಫೋನ್ ನಂ. 7312
ಪುತ್ತೂರು, ಫೋನ್ ನಂ. 164
maa/CBC/151 Kan.

HOTEL SATKAR
Boarding, Lodging & Restaurant
Behind Corporation Office,
9 Mission Road — Bangalore—27.
Phone No.— 1 72303
2 72304
Grams: HOST SATKAR
Vegetarian Cuisine
Attached Bath Rooms and Phones.
Running H and C water
Moderate Charges
Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-1.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-1.

ತಾ. 28—4—1972ರಂದು ಮಂಗಳೂರಿನಲ್ಲಿ ಜರಗಿದ ಪಾಲುದಾರರ 40ನೆ ವಾರ್ಷಿಕ ಮಹಾಸಭೆಯಲ್ಲಿ

ಶ್ರೀ ಮೂಲ್ಕಿ ಸುಂದರ್‌ರಾಮ್ ಶೆಟ್ಟಿ, ಚೇರ್‌ಮನ್, ಅವರ ಹೇಳಿಕೆ

ಸಹೋದರ-ಭಗಿನಿಯರೆ,

ಬ್ಯಾಂಕಿನ 40ನೆ ವಾರ್ಷಿಕ ಮಹಾಸಭೆಗೆ ನಿಮ್ಮೆಲ್ಲರನ್ನು ಸ್ವಾಗತಿಸಲು ನನಗೆ ಹೆಮ್ಮೆಯೆನಿಸುತ್ತಿದೆ. ಪರಿಶೀಲನೆಯಲ್ಲಿರುವ ಅವಧಿಯ ನಮ್ಮ ಸಾಧನೆ ಗಣನೀಯವಾದುದು; ಅದನ್ನು ನೀವು ನಿಮ್ಮ ಮುಂದಿರುವ ಅಂಕಿ-ಸಂಖ್ಯೆಗಳಿಂದ ನೋಡಬಹುದಾಗಿದೆ. 1971ರ ಬ್ಯಾಲೆನ್ಸ್ ಶೀಟ್ ಹಾಗೂ ಆಯವ್ಯಯ ತಖ್ತೆಯನ್ನು ನೀವಿಷ್ಟರಲ್ಲೆ ಓದಿರಬಹುದೆಂದು ನಾನು ಪರಿಗಣಿಸುತ್ತೇನೆ.

1971ರ ಆರ್ಥಿಕ ನೋಟ

ಕಳೆದ ವರ್ಷ ರಾಷ್ಟ್ರದ ರಾಜಕೀಯ ಕ್ಷೇತ್ರ ಪ್ರಾಮುಖ್ಯತೆ ಪಡೆದಿತ್ತು. ಮತ್ತು ಹಲವಾರು ಘಟನೆಗಳಿಂದ ತುಂಬಿತ್ತು. ಅವುಗಳಲ್ಲಿ ಕೆಲವು ಘಟನೆಗಳು ರಾಷ್ಟ್ರವನ್ನು ಚರಿತ್ರೆಯ ತುತ್ತತುದಿಗೇರಿಸಿದುವು. ವರ್ಷಾರಂಭದಲ್ಲಿ ಸಂಸತ್‌ಗೆ ನಡೆದ ಮಹಾಚುನಾವಣೆಯಲ್ಲಿ ಆಡಳಿತ ಗುಂಪು ಅದ್ಭುತ ಬಹುಮತ ಗಳಿಸಿ ಕೇಂದ್ರದಲ್ಲಿ ಭದ್ರ ಸರಕಾರ ಸ್ಥಾಪಿಸಿದುದು ನಮ್ಮ ರಾಜಕೀಯ ನೋಟದಲ್ಲಿ ಬಹುದೊಡ್ಡ ಘಟನೆ; ಆ ಕೂಡಲೆ, ಪೂರ್ವ ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಂದಾಗಿ ಆರಂಭವಾದ ನಿರಾಶ್ರಿತರ ಸಮಸ್ಯೆ ವರ್ಷಾಂತ್ಯದ ಹದಿನಾಲ್ಕು ದಿನಗಳ ಯುದ್ಧಕ್ಕೆ ಹೇತುವಾಯಿತು. ಪಾಕಿಸ್ತಾನದೊಡನೆ ನಡೆದ ಯುದ್ಧದಿಂದ ನಮ್ಮ ಆರ್ಥಿಕ ಸ್ಥಿತಿಯಲ್ಲಿ ಕೆಲವು ಸಣ್ಣ ಪುಟ್ಟ ಬಿರುಕುಗಳುಂಟಾದುವಾದರೂ ವಿಶ್ವದ ರಾಷ್ಟ್ರಗಳಲ್ಲಿ ನಾವು ಪ್ರತಿಷ್ಠೆಯ ಸ್ಥಾನ ಗಳಿಸಿಕೊಂಡದ್ದು ನಮ್ಮಲ್ಲಿ ಹೆಚ್ಚಿನ ನಂಬಿಕೆಯನ್ನು ಮತ್ತು ಸಂಭವನೀಯ ಸಮಸ್ಯೆಗಳನ್ನು ಎದುರಿಸುವ ಧೈರ್ಯವನ್ನು ಮೂಡಿಸಿತು. ಈ ಗಂಭೀರ ಪರಿಸ್ಥಿತಿಯ ಸಮಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸರಕಾರಕ್ಕೆ ದೃಢವಾದ ಬೆಂಬಲ ನೀಡಿರುವುದು ರಾಷ್ಟ್ರದ ಹಿರಿಮೆಯೆಂದು ಹೇಳಲೇಬೇಕಾಗುತ್ತದೆ.

ವಿಧ್ವಂಸಕಾರಿ ಸುಂಟರಗಾಳಿಯ ಸಹಿತ ವಿವಿಧ ರಾಜ್ಯಗಳಲ್ಲಿ ಮಹಾಪೂರ ಮತ್ತು ಅನಾವೃಷ್ಟಿಯಂತಹ ನೈಸರ್ಗಿಕ ಹಾನಿಗಳೂ ಸಂಭವಿಸಿದುವು. ಸರ್ವ ಸಾಮಾನ್ಯ ವಿಷಯಗಳಾದ ಹಣದುಬ್ಬರ, ಬೆಲೆಯೇರಿಕೆ, ಕಾರ್ಮಿಕ ಅಶಾಂತಿ ಮತ್ತು ನಿರುದ್ಯೋಗ ಸಮಸ್ಯೆಗಳು ಸ್ವಾಭಾವಿಕ ಪರಿಣಾಮವನ್ನುಂಟು ಮಾಡಿದ್ದವು. ನಮ್ಮ ಆರ್ಥಿಕ ಸ್ಥಿತಿಯ ಮೇಲೆ ಹೊರೆ ಎಷ್ಟು ಹೆಚ್ಚಾಯಿತೆಂದರೆ, ವರ್ಷದ ಮಧ್ಯ ಕಾಲದಲ್ಲಿ ಹೊಸ ತೆರಿಗೆಗಳನ್ನು ಹೇರಬೇಕಾಯ್ತು. ಡಾಲರ್ ಸಮಸ್ಯೆ ಮತ್ತು ಅದೇ ಕಾಲದಲ್ಲುಂಟಾದ ವಿನಿಮಯ ಮಾರು ಕಟ್ಟೆಯ ಬಿಕ್ಕಟ್ಟನ್ನು ಅಂತರರಾಷ್ಟ್ರೀಯ ಹಣಕಾಸು ಸ್ಥಿತಿಯ ಎಚ್ಚರಿಕೆಯ ಅರಿವಿನಿಂದ ನಮ್ಮ ಸರಕಾರ ವ್ಯವಹರಿಸಿತು. ರಫ್ತು ಸ್ಥಿತಿಯನ್ನು ಉಳಿಸಿಕೊಳ್ಳಲಾಯಿತು ಮತ್ತು ವರ್ಷಾವಧಿಯಲ್ಲಿ ವಿದೇಶ ವಿನಿಮಯದ ಮೀಸಲು ತೃಪ್ತಿದಾಯಕವಾಗಿತ್ತು. ವರ್ಷದಲ್ಲಿ ದಿನಗಳದಂತೆ ಕೈಗಾರಿಕಾ ಉತ್ಪಾದನೆಯಲ್ಲಾದ ಅತ್ಯಂತ ಹಿನ್ನಡೆಯಿಂದ ಆರ್ಥಿಕತೆಯಲ್ಲಿ ಜಡ ಬರ್ಬರ ಚಿಹ್ನೆಗಳು ಕಂಡು ಬಂದವು. ಆದರೆ ಈ ನ್ಯೂನತೆಯನ್ನು ಹೋಗಲಾಡಿಸಲೋ ಎಂಬಂತೆ ಆಹಾರ ಧಾನ್ಯಗಳ ಉತ್ಪಾದನೆಯನ್ನು ಕಾಪಾಡಿಕೊಳ್ಳಲಾಯಿತು.

ಶ್ರೀ ಮೂಲ್ಕಿ ಸುಂದರ್‌ರಾಮ್ ಶೆಟ್ಟಿ

ರಾಷ್ಟ್ರದ್ಯಂತ ಹಬ್ಬಿರುವ ಬೃಹತ್ ಬ್ಯಾಂಕುಗಳೊಡನೆ ತೀರಾ ಸ್ಪರ್ಧಾತ್ಮಕವಾಗಿಯೆಂದ ಕಾರ್ಯ ನಿರ್ವಹಿಸುತ್ತಿರುವ ಖಾಸಗೀ ರಂಗದ ಬ್ಯಾಂಕಾದ ನಮ್ಮ ಬ್ಯಾಂಕಿನ ಸಾಧನೆಯನ್ನು ಈ ಹಿನ್ನೆಲೆಯಲ್ಲಿ ನಾವು ಪರಿಶೀಲಿಸುತ್ತಿರುವೆವು.

ಬ್ಯಾಂಕಿಂಗ್ ಪದ್ಧತಿ

ಎಲ್ಲಾ ಬ್ಯಾಂಕುಗಳಿಗೆ 1971 ಏಕರೂಪದ ಬೆಳವಣಿಗೆಯ ಯಶಸ್ವಿನ ವರ್ಷವಾಗಿತ್ತು. ಭಾರತದಲ್ಲಿನ ಎಲ್ಲಾ ಬ್ಯಾಂಕುಗಳ ಒಟ್ಟು ಠೇವಣಿಯ ಸರಾಸರಿ ಹೆಚ್ಚಳವು 1970ರಲ್ಲಿ 16.4% ಇದ್ದುದು ಶೇ. 20.6ಕ್ಕೇರಿದೆ. ಕಳೆದ ವರ್ಷ ಬ್ಯಾಂಕ್ ಶಾಖೆಗಳು 11184ರಿಂದ 12965ಕ್ಕೇರಿದುವು. 1971ರಲ್ಲಿ ಪ್ರತಿ ತಿಂಗಳು ಸರಾಸರಿ 150 ಹೊಸ ಬ್ಯಾಂಕ್ ಕಚೇರಿಗಳು ತೆರೆಯಲ್ಪಟ್ಟವು. 1969 ಜೂನ್‌ನಲ್ಲಿ ಬ್ಯಾಂಕಿನ ಶಾಖೆಯಿಂದ ಸೇವೆ ಪಡೆಯುತ್ತಿದ್ದವರ ಸರಾಸರಿ ಸಂಖ್ಯೆಯು 69,000 ಇದ್ದುದು 1970ರ ಡಿಸೆಂಬರ್‌ನಲ್ಲಿ 52,000ವಾಗಿದ್ದು 1971ರ ಡಿಸೆಂಬರಿನಲ್ಲಿ 42,000ಕ್ಕಿಳಿಯಿತು. 1971ರ ಅಂತ್ಯದಲ್ಲಿ ರೂ. 6856 ಕೋಟಿ ಮೊತ್ತದ ಠೇವಣಿಯನ್ನು ಸಂಗ್ರಹಿಸಿ ಠೇವಣಿ ಸಂಗ್ರಹದ ಪ್ರಕ್ರಿಯೆಯನ್ನು ಅತ್ಯಂತ ಉತ್ಸಾಹದಿಂದ ಬ್ಯಾಂಕುಗಳು ಕೈಗೊಂಡಿರಿಸಿದವು. ಎಲ್ಲಾ ಬ್ಯಾಂಕುಗಳಿಂದ ಆದ್ಯತೆ ಪಡೆದ ವಿಭಾಗಗಳ ಸಾಲದ ಅವಶ್ಯಕತೆಗಳಿಗೆ ಸಹಕಾರ ಮುಂದುವರಿಯಿತು. ವರ್ಷಾಂತ್ಯದಲ್ಲಿ ಎಲ್ಲಾ ಬ್ಯಾಂಕುಗಳ ಒಟ್ಟು ಮುಂಗಡವು ರೂ. 4966 ಕೋಟಿಗಳಷ್ಟಾಯಿತು. 1970ರಲ್ಲಿ ಶೇ. 23.1ರಷ್ಟಿದ್ದ ಬ್ಯಾಂಕಿಂಗ್ ಸಾಲ ವಿಸ್ತರಣೆಯು 1971ರಲ್ಲಿ ಶೇ. 11.5 ಮಾತ್ರ ಇತ್ತು. 1970ರಲ್ಲಿ ಠೇವಣಿಗಳು ಸಾಲಕ್ಕಿಂತ ಹಿಂದೆ ಬಿದ್ದಿದ್ದರೂ 1971ರಲ್ಲಿ ಠೇವಣಿಗಳು ಸಾಲದಿಂದ ಹಿಂದೆ ಬೀಳಲಿಲ್ಲ. 1971ರಲ್ಲಿ ಸರಾಸರಿ ಸಾಲ ಠೇವಣಿ ಪ್ರಮಾಣವು ಶೇ. 77.4ರಷ್ಟು ಎತ್ತರಕ್ಕೆ ಏರಿತು. ಆದರೆ, ಸಾಲದ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ರಿಸರ್ವ್ ಬ್ಯಾಂಕಿನಿಂದ ತಂದ ಸಾಲ ಕಳೆದ ವರ್ಷಕ್ಕಿಂತ ಕಡಿಮೆಯಾಗಿತ್ತು.

1969ರಲ್ಲಿ ರಚಿತವಾದ ಬ್ಯಾಂಕಿಂಗ್ ಆಯೋಗದ ವರದಿಯನ್ನು ಸಂಸತ್ತಿಗೆ ಒಪ್ಪಿಸಲಾಗಿದೆ. ಆಯೋಗದ ಶಿಫಾರಸುಗಳನ್ನು ಎಷ್ಟರ ವರೆಗೆ ಸರಕಾರ ಸ್ವೀಕರಿಸುವುದು ಎಂಬುದನ್ನು ಹೊಂದಿಕೊಂಡು ರಾಷ್ಟ್ರದ ಬ್ಯಾಂಕಿಂಗ್ ಕ್ರಮ ಹಾಗೂ ಸಂಘಟನೆಯಲ್ಲಿ ಮುಂದಿನ ಬೆಳವಣಿಗೆಯನ್ನು ಕಾದು ನೋಡಬೇಕು.

ನಮ್ಮ ಬ್ಯಾಂಕ್

ತಾ. 31-12-1971ರಂದು ನಮ್ಮ ಬ್ಯಾಂಕಿನ ಠೇವಣಿಯು ರೂ. 43.64 ಕೋಟಿಗಳಿತ್ತು. ನಮ್ಮ ಠೇವಣಿಯಲ್ಲಿ ಹೆಚ್ಚಳವು ಶೇ. 58ರಷ್ಟಾಗಿದ್ದು ಎಲ್ಲ ಬ್ಯಾಂಕುಗಳ ಸರಾಸರಿ ಬೆಳವಣಿಗೆಯು ಶೇ. 20.6 ಮಾತ್ರವಾಗಿತ್ತು. ನಮಗೆ ಕ್ರಮವಾದ ಮೂರು ವರ್ಷಗಳು ದಾಖಲೆಯ ವರ್ಷಗಳು. ಈ ಪ್ರಗತಿಯ ವೇಗವನ್ನು ಕಾಪಾಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿತ್ತು. ಅದನ್ನು ಕಾಪಾಡಿಕೊಂಡಿರುವುದು ಒಂದು ಹೆಮ್ಮೆಯ ಸಾಧನೆ. ಹಿಂದಿನ ವಿಷಯಗಳನ್ನು ನಿಮ್ಮ ಗಮನಕ್ಕೆ ತರುವುದೇನೂ ಒಂದು ಸಣ್ಣ ಹೆಮ್ಮೆಯ ವಿಷಯವೇನಲ್ಲ. ಹತ್ತು ವರ್ಷಗಳ ಹಿಂದೆ 1961ರಲ್ಲಿ ನಮ್ಮ ಠೇವಣಿ ಕೇವಲ ರೂ. 1.44 ಕೋಟಿ ಮಾತ್ರವಾಗಿತ್ತು. 1962ರ ಮೇಯಲ್ಲಿ ನಿಮ್ಮ ಪ್ರಸಕ್ತ ಚೇರ್‌ಮನರು ಬ್ಯಾಂಕಿನ ಗೌರವ ಚೇರ್‌ಮನ್ ಆಗಿ ಅಧಿಕಾರ ವಹಿಸಿಕೊಂಡರು. ಏಳು ವರ್ಷಗಳ ನಂತರ ಮೇ 1969ರಲ್ಲಿ ಗೌರವ ಚೇರ್‌ಮನ್ ಅವರು ಪೂರ್ಣ ಸಮಯದ ಚೇರ್‌ಮನ್ ಹಾಗೂ ಬ್ಯಾಂಕಿನ ಪ್ರಧಾನ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ನೇಮಕವಾದಾಗ ಬ್ಯಾಂಕಿನ ಠೇವಣಿ ರೂ. 12 ಕೋಟಿಗಳಿಗಿಂತಲೂ ಕಡಿಮೆಯಾಗಿತ್ತು. ಕೇವಲ ಏಳು ತಿಂಗಳುಗಳ ನಂತರ 1969ರ ಡಿಸೆಂಬರ್‌ನಲ್ಲಿ ಅದು ರೂ. 18.71 ಕೋಟಿಗಳು ಅಂದರೆ, 1968ಕ್ಕಿಂತ ಶೇ. 42 ರಷ್ಟು ಹೆಚ್ಚಳವಾಗಿತ್ತು. 1970ರಲ್ಲಿ ಅದು ರೂ. 27.52 ಕೋಟಿಗಳಾಯ್ತು, ಅಂದರೆ 1969ಕ್ಕಿಂತ ಶೇ. 47ರಷ್ಟು ಹೆಚ್ಚಾಯ್ತು. 1971ರಲ್ಲಿ ಅದು 1971ಕ್ಕಿಂತ ಶೇ. 58 ಹೆಚ್ಚಾಗಿದ್ದು ರೂ. 43.64 ಕೋಟಿಗಳಷ್ಟಾಯಿತು — ಪ್ರಾಯಶಃ ಶೇಕಡಾ ಮಾನದಂತೆ ರಾಷ್ಟ್ರದ ಬ್ಯಾಂಕುಗಳಲ್ಲಿ ಅತ್ಯಂತ ಹೆಚ್ಚು. ನಾನು ಪುನರುಚ್ಚರಿಸುತ್ತೇನೆ, ನಮಗೆ ಇದೊಂದು ದಾಖಲೆಯಾಗಿತ್ತು. 1971ರಲ್ಲಿ ನಮ್ಮ ಮುಂಗಡಗಳು ಶೇ. 47ರಷ್ಟು ಹೆಚ್ಚಾಗಿ **ರೂ. 25.84 ಕೋಟಿಗಳಷ್ಟಾಯಿತು. ಅಲ್ಲದೆ 1971ರಲ್ಲಿ ಸರಾಸರಿ ಸಾಲ ಮತ್ತು** ಠೇವಣಿ ಪ್ರಮಾಣವು ಶೇ. 63.35 ಆಗಿತ್ತು. ಬ್ಯಾಲೆನ್ಸ್ ಶೀಟನಿಂದ ನೀವು ನೋಡಬಹುದಾದಂತೆ ನಮ್ಮ ಕಾರ್ಯ ಸಾಧನೆಯು ಉತ್ತೇಜನೀಯವಾಗಿದೆ. ನಮ್ಮ ಒಟ್ಟು ಗಳಿಕೆಯು ಸುಮಾರು ಶೇ. 53 ರಷ್ಟು ಹೆಚ್ಚಾಗಿದೆ ಮತ್ತು ನಮ್ಮ ನಿವ್ವಳ ಆದಾಯವು ಶೇ. 70ರಷ್ಟಾದುದರಿಂದ ನಮ್ಮ ಡಿವಿಡೆಂಡ್ ದರವನ್ನು ಶೇ. 12ಕ್ಕೆ ಏರಿಸಲು ಸಾಧ್ಯವಾಯಿತು.

1971ರಲ್ಲಿ ನಾವು 15 ಶಾಖೆಗಳನ್ನು ತೆರೆದು ವರ್ಷಾಂತ್ಯದಲ್ಲಿ ಶಾಖೆಗಳ ಸಂಖ್ಯೆಯನ್ನು 141ಕ್ಕೇರಿಸಿದೆವು ನಮ್ಮ ಶಾಖೆಗಳ ಶೇ.75ರಷ್ಟು ಹಳ್ಳಿ ಪ್ರದೇಶಗಳಲ್ಲಿ ಮತ್ತು ಸಣ್ಣ ಪಟ್ಟಣ ಪ್ರದೇಶಗಳಲ್ಲಿ ಮತ್ತು ಶೇ. 25ರಷ್ಟು ಶಾಖೆಗಳು ನಗರ ಹಾಗೂ ಮೆಟ್ರೊಪೊಲಿಟನ್ ಪ್ರದೇಶಗಳಲ್ಲಿವೆ. ಇಂದು ನಮಗೆ 150ಕ್ಕೂ ಹೆಚ್ಚು ಶಾಖೆಗಳಿವೆ. ಈ ವರ್ಷದ ನಮ್ಮ ಗುರಿ 200 ಶಾಖೆಗಳು. 1961ರಲ್ಲಿದ್ದ 23 ಶಾಖೆಗಳನ್ನು ಪರಿಗಣಿಸಿ ಈ ಹತ್ತು ವರ್ಷಗಳಲ್ಲಿ ನಮ್ಮ ಸಾಧನೆಯನ್ನು ಗಮನಿಸಬಹುದು.

ಪ್ರಸಕ್ತ ವರ್ಷ

ಶಾಖೆಗಳ ವಿಸ್ತರಣೆಯ ಮೂಲಕ ಇನ್ನಷ್ಟು ಠೇವಣಿ ಬೆಳೆಯುವ ಸಾಮರ್ಥ್ಯ ಇನ್ನೂ ಇದೆ. ಆದರೆ ಬ್ಯಾಂಕುಗಳಿಗೆ ನಿಧಾನವಾಗಿ ಮುಂದುವರಿಯಬೇಕಾಗಿದೆ, ಮತ್ತು ಶಾಖೆಗಳ ವಿಸ್ತರಣೆಯಲ್ಲಿ ಅವುಗಳ ಗುರಿಯಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕಾಗಿದೆ. ಒಂದು ಹಳ್ಳಿ ಅಥವಾ ಒಂದು ಪಟ್ಟಣ ನಿಜ

(ಎಂಟನೇ ಪುಟ ನೋಡಿರಿ)

ಸಾಕ್ಷರತೆಗೊಂದು ಸಾಧನ

ಉತ್ತಮ, ಅಗ್ಗ ಬೆಲೆಯ ಪುಸ್ತಕಗಳು

ಮಾನವ—ಪ್ರಾಣಿಗಳನ್ನು ಬೇರ್ಪಡಿಸುವ ಸಾಧನಗಳಲ್ಲಿ ಪುಸ್ತಕವೂ ಒಂದು. ಒಂದು ಪೀಳಿಗೆಯ ಬೌದ್ಧಿಕ ಸಾಧನೆಯನ್ನು ಮುಂದಿನ ಪೀಳಿಗೆಗಳಿಗೆ ಸಂರಕ್ಷಿಸಿ ಇಡುವ ಸಾಧನಗಳಲ್ಲಿ ಪುಸ್ತಕಗಳದ್ದೇ ಅಗ್ರಸ್ಥಾನ. ಮಾನವ ವಿಕಾಸದಲ್ಲಿ ಪುಸ್ತಕಗಳದ್ದೇ ಮಹತ್ವಪೂರ್ಣ ಪಾತ್ರ. ವಿಕಾಸ ಪರಂಪರೆಯೆಂಬ ಹೆಸರೂ ಪುಸ್ತಕಗಳಿಗೇನೇ ಸಲ್ಲಬೇಕು. ಇವುಗಳೇ ಸಾಕ್ಷರತೆಯ ಮಾಧ್ಯಮ, ನಿರಕ್ಷರತೆಯ ಮೇಲೆ ಬಿಡುವ ಬಾಣ. ಪುಸ್ತಕಗಳಿಗೆ ಫಲವತ್ತಾಗಿಲ್ಲದ ದೇಶವು ಜ್ಞಾನಾಭಿವರ್ಧನೆಯಲ್ಲಿ ಹಿಂದೇಟು ಹಾಕುತ್ತದೆ; ಅಜ್ಞಾನಾಂಧಕಾರದಲ್ಲಿ ಕೊಳೆತು ನಾರುತ್ತದೆ. ಅದು ನಿರಕ್ಷರತೆ ಮತ್ತು ಹಿಂದುಳಿಯುವಿಕೆಯ ಬೀಡಾಗಿ ಬದುಕಿ ಸಾಯುತ್ತದೆ.

ವಿಕಾಸದ ಮೊದಲ ಹಂತ ಸಾಕ್ಷರತೆ. ನಮ್ಮ ದೇಶದಲ್ಲಿನ ಸಾಕ್ಷರತೆ ಸ್ವಾತಂತ್ರ್ಯದ ಕಾಲು ಶತಮಾನದಲ್ಲೂ ಸೇ. ೩೦ರ ಗಡಿಯನ್ನು ದಾಟಿಲ್ಲ. ಅಂದರೆ, ನೂರಕ್ಕೆ ಎಪ್ಪತ್ತಕ್ಕೂ ಹೆಚ್ಚಿನವರು ನಿರಕ್ಷರ ಕುಕ್ಷಿಗಳು. ಈ ಬೃಹತ್ ದೇಶದ ಪ್ರಜೆಗಳಾದ ನಾವು ಸಮಾಜವಾದದ, ಪ್ರಗತಿ ಶೀಲತೆಯ, ವಿಕಾಸದ ದೀಕ್ಷೆ ತೊಟ್ಟಿದ್ದೇವೆಯೆಂದರೆ ಯಾರಾದರೂ ದಂಗು ಬಡಿಯಲೇ ಬೇಕು. ಪ್ರತ್ಯೇಕ ನಾಗರಿಕನೂ ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ಅದನ್ನು ನಿರ್ವಹಿಸುವುದು ಸಮಾಜವಾದದಲ್ಲಿ ಪ್ರಥಮಾವಶ್ಯಕತೆ. ಇದಕ್ಕೆ ಅಕ್ಷರ ಜ್ಞಾನ, ಪುಸ್ತಕಗಳ ಪ್ರಯೋಜನ ಅನಿವಾರ್ಯ. ಹಾಗಾದರೆ ನಮ್ಮ ಪ್ರಗತಿಶೀಲತೆ—ಸಮಾಜವಾದಗಳ ಕಾರ್ಯಾಚರಣೆ ಎಂದು ಸಾಧ್ಯ?

೧೯೭೨ನೆ ಇಸವಿಯನ್ನು 'ಅಂತಾರಾಷ್ಟ್ರೀಯ ಪುಸ್ತಕ ವರ್ಷ'ವೆಂದು ಆಚರಿಸಬೇಕೆಂದು ಯುನೆಸ್ಕೊ ನಿರ್ಧರಿಸಿದೆ. ಆದುದರಿಂದ ನಮ್ಮ ಪ್ರಗತಿಶೀಲತೆ—ಸಮಾಜವಾದಗಳ ಬಗ್ಗೆ ಮತ್ತು ಅವನ್ನು ಕಾರ್ಯಗತಗೊಳಿಸುವ ಬಗ್ಗೆ ಸರ್ವತೋಮುಖ ಕಾರ್ಯಕ್ರಮ ಕೈಕೊಳ್ಳಲು ಇದೀಗ ಅತ್ಯಂತ ಸುಸಮಯ. ಅಂಕೆ ಸಂಖ್ಯೆಗಳು ಭಾರತದ ಸಾಕ್ಷರತೆಯನ್ನು ಸೇ. ೩೦ಕ್ಕೆ ತಂದು ನಿಲ್ಲಿಸಿವೆ. ಆದರೆ, ದುರ್ದೈವದ ಸಂಗತಿಯೆಂದರೆ, ಅಕ್ಷರಸ್ಥರ ಸಂಖ್ಯೆ ಏರುತ್ತಿರುವಾಗಲೇ ನಿರಕ್ಷರರ ಸಂಖ್ಯೆ ಮತ್ತೂ ಹೆಚ್ಚುತ್ತಿದೆ. ೧೯೫೧ರ ಜನಗಣನೆಯ ವೇಳೆ ದೇಶದಲ್ಲಿ ೩೩ ಕೋಟಿ ನಿರಕ್ಷರರು ಇದ್ದರು. ಈ ಸಂಖ್ಯೆ ೧೯೭೧ರ ಜನಗಣನೆಯ ಸಮಯ ೩೮.೬ ಕೋಟಿಗೇರಿದೆ. ಸ್ವಾತಂತ್ರ್ಯಾನಂತರ ಸಾಕ್ಷರತೆಯ ಕಡೆಗೆ ತೀವ್ರ ಗಮನ ನೀಡುತ್ತಿರುವುದು ನಿಜವಾದರೂ ದೇಶದಲ್ಲಿ ನಿರಕ್ಷರರ ಸಂಖ್ಯೆ ಪ್ರತಿ ವರ್ಷ ೫೦ ಲಕ್ಷದಷ್ಟು ಏರುತ್ತ ಬರುವುದು ಉತ್ತಮ ಲಕ್ಷಣವಲ್ಲ.

ಮುದ್ರಿತ ಪುಸ್ತಕ ಮತ್ತು ಪತ್ರಿಕೆಗಳು ಸಾಕ್ಷರತೆಯ ಪ್ರಚಾರದಲ್ಲಿ ಪ್ರಭಾವಶಾಲಿ ಸಾಧನಗಳೆನಿಸ ಬಲ್ಲವು. ನಮ್ಮ ಜನರು ಬಡವರು; ಸರಕಾರಗಳು ಅಸಮರ್ಥ. ಇಂಥ ದೇಶದಲ್ಲಿ ಟೆಲಿವಿಜನ್ ಮೊದಲಾದ ಇತರ ಆಡಿಯೋ—ವಿಜುವಲ್ ಮಾಧ್ಯಮಗಳು ಸಾರ್ವತ್ರಿಕವಾಗುವುದು ಕನಸಿನ ಮಾಡಿಗೆ ಮಾತ್ರ. ಯುನೆಸ್ಕೊ ಅಂದಾಜು ಮಾಡಿದಂತೆ ನಮ್ಮ ದೇಶದಲ್ಲಿ ಪ್ರತಿ ವರ್ಷ ೧೩ ಸಾವಿರ ಪುಸ್ತಕಗಳ ಒಟ್ಟು ೧ಕೋಟಿ ೨೦ ಲಕ್ಷ ಪ್ರತಿಗಳು ಮುದ್ರಣಗೊಳ್ಳುತ್ತವೆ. ಅಂದರೆ, ಪ್ರತಿ ಹತ್ತು ಲಕ್ಷ ಜನರಿಗೆ ೨೩ ಪುಸ್ತಕಗಳು, ದೊರೆತಂತಾಯ್ತು. ಇಡಿಯ ಏಶಿಯಾ ಖಂಡವನ್ನು ತೆಗೆದು ಕೊಂಡರೆ, ಪ್ರತಿಹತ್ತು ಲಕ್ಷ ಜನರಿಗೆ ೩೨ ಪುಸ್ತಕಗಳು ದೊರೆಯುತ್ತವೆ. ಯುರೋಪಿನಲ್ಲಿ ಈ ಪುಸ್ತಕಗಳ ಸಂಖ್ಯೆ ೪೧೮. ಈ ನಿಟ್ಟಿನಲ್ಲಿ ನಾವೆಷ್ಟು ಹಿಂದೆ ಬಿದ್ದಿದ್ದೇವೆಂಬುದು ವೇದ್ಯವಾಗುವುದು.

ಚೀನಾ ದೇಶವನ್ನು ಬಿಟ್ಟರೆ ನಮ್ಮದೇ ಜಾಗತಿಕ ಜನ ಸಂಖ್ಯಾ ಬಾಹುಳ್ಯವುಳ್ಳ ರಾಷ್ಟ್ರ. ಜಗತ್ತಿನ ಜನ ಸಂಖ್ಯೆಯಲ್ಲಿ ಸುಮಾರು ೧೫ರಷ್ಟು ನಮ್ಮವರೇ. ಆದರೆ ನಮ್ಮಲ್ಲಿ ಅಚ್ಚಾಗುವ ಪುಸ್ತಕಗಳನ್ನು ಜಾಗತಿಕ ಸಂಖ್ಯೆಯೊಡನೆ ಹೋಲಿಸಿದರೆ ಅದು ಸೇ. ೩ ಮಾತ್ರ! ಅಂದರೇನು? ಇಲ್ಲಿನ ಜನರಿಗೆ ಓದಲು ಸಾಕಷ್ಟು ಪುಸ್ತಕಗಳಿಲ್ಲವೆಂದೇ ಅರ್ಥ. ಶಾಲೆ—ಕಾಲೇಜುಗಳಲ್ಲಿ ಓದುವ ಮಕ್ಕಳ ಉಪಯೋಗಕ್ಕೆ ಬರುವ ಪುಸ್ತಕಗಳ ಸಂಖ್ಯೆ ಮತ್ತಷ್ಟು ಪಾತಾಳದಲ್ಲೇ ಇದೆ.

ನಮ್ಮ ದೇಶದ ಒಂದು ದೃಶ್ಯವಿದು: ಆರ್ಥಿಕವಾಗಿ ಸಂಪನ್ನರಾಗಿರುವವರು ಶಾಲೆ—ಕಾಲೇಜುಗಳ ಮೆಟ್ಟಲೇರುತ್ತಾರೆ. ಇವರಿಗೆ ಪಠನ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಶಕ್ತಿಯಿರುತ್ತದೆ. ಆದರೆ, ಇಂಥವರ ಸಂಖ್ಯೆ ಅತ್ಯಲ್ಪ. ಪರಿಸ್ಥಿತಿಗಳ ಒತ್ತಡದಿಂದಾಗಿ ಆರಂಭದ ಮೆಟ್ಟಲಲ್ಲೇ ತಮ್ಮ ಅಧ್ಯಯನಕ್ಕೆ ತಿಲಾಂಜಲಿ ನೀಡುವವರ ಸೇನೆ ಭಾರೀ ದೊಡ್ಡದಿದೆ. ಶಿಕ್ಷಣ ಮತ್ತು ಅಧ್ಯಯನವು ಅತ್ಯಂತ ಖರ್ಚಿನದ್ದಾಗಿದೆ. ಮಧ್ಯಮ ವರ್ಗೀಯರಿಗೂ ಇದೊಂದು ಎಟುಕದ ದ್ರಾಕ್ಷೆಯಾಗುತ್ತಿದೆ. ಆದುದರಿಂದಾಗಿ ವಿದ್ಯಾಧ್ಯಯನದಲ್ಲಿ ತೊಡಗಿರಬೇಕಾದವರು ಅನ್ನ ದೇವರನ್ನೊಲಿಸಲು ತೊಡಗುತ್ತಾರೆ. ಹೀಗಾಗಿ ಸಾಕ್ಷರರು ಮತ್ತು ನಿರಕ್ಷರರ ನಡುವಣ ಕಂದಕ ಅಗಲವಾಗುತ್ತಲೇ ಹೋಗುತ್ತದೆ.

ದೇಶದ ಸರ್ವತೋಮುಖ ವಿಕಾಸದ ಬಗ್ಗೆ ಯೋಜನಾ ಮಗ್ನರಾದವರು ಪುಸ್ತಕಗಳ ಮಾಧ್ಯಮದಿಂದಲೇ ಜನತೆಯನ್ನು ಸುಶಿಕ್ಷಿತ ಗೊಳಿಸ ಬಹುದೆಂಬುದನ್ನೂ ಮರೆಯ ಬಾರದು. ಕ್ಯೂಬಾ ಇದಕ್ಕೊಂದು ಪ್ರತ್ಯಕ್ಷ ನಿದರ್ಶನ. ಫೀಡೆಲ್ ಕಾಸ್ಟ್ರೋ ಎರಡು ವರ್ಷಗಳ ಯೋಜನೆಯೊಂದನ್ನು ರೂಪಿಸಿದನು. ಸಮಸ್ತ ಕ್ಯೂಬಾ ವಾಸಿಗಳನ್ನು ಸುಶಿಕ್ಷಿತಗೊಳಿಸುವುದು ಈ ಯೋಜನೆಯ ಗುರಿ. ಇದಕ್ಕೆ ಯುನೆಸ್ಕೊ ಕೂಡ ನೆರವಿತ್ತಿತು. ಅತ್ಯಧಿಕ ಸಂಖ್ಯೆಯಲ್ಲಿ ಪುಸ್ತಕಗಳು ಪ್ರಕಟಿತವಾದುವು; ಅವು ನೀರಿನಂತೆ ವಿಪುಲ ಪ್ರಮಾಣದಲ್ಲಿ ಜನತೆಗೆ ದೊರೆಯ ತೊಡಗಿದುವು. ಭಾರತ ಮತ್ತು ಕ್ಯೂಬಾಗಳ ಜನಸಂಖ್ಯೆಯಲ್ಲಿ ಅಜಗಜಾಂತರವಿರುವುದರಿಂದ ಭಾರತದ ಮಟ್ಟಿಗೆ ಕ್ಯೂಬಾದ ಉದಾಹರಣೆ ಅಸಮಂಜಸವೆನ್ನಬಹುದು. ಆದರೂ ಪ್ರಶಾಸನೀಯ ಹಂತದಿಂದ ಬಹಳಷ್ಟು ಪ್ರಯತ್ನಗಳು ನಡೆದರೆ, ಈ ಮಾದರಿಯ ಯೋಜನೆಯು ಬಹಳಷ್ಟು ಯಶಗಳಿಸ ಬಲ್ಲುದು.

ಶ್ರೀ ಮಾಲ್ಕಮ್ ಆದಿಶೇಷಯ್ಯನವರು ಮದ್ರಾಸ್ ಇನ್ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್‌ನ ನಿರ್ದೇಶಕರು. ಇವರು ಯುನೆಸ್ಕೋವಿನ ನಿರ್ದೇಶಕರಾಗಿದ್ದವರು. ಶ್ರೀ ಆದಿಶೇಷಯ್ಯನವರು ತಮ್ಮೊಂದು ಭಾಷಣದಲ್ಲಿ ಎಂಟನೆ ದಶಕದೊಳಗೆ ಪೂರ್ಣಗೊಳ್ಳಬೇಕಾದ ಐದು ಗುರಿಗಳನ್ನು ಉಲ್ಲೇಖಿಸಿದ್ದಾರೆ. ಉತ್ಪಾದನೆ ಮತ್ತು ವಿತರಣೆಗೆ ಇಂದು ಸೇ. 0.1ರಷ್ಟು ವೆಚ್ಚವಾಗುತಿದ್ದು ಇದು ಈ ದಶಕದ ಅಂತ್ಯದೊಳಗೆ ಮೂರು ಪಟ್ಟು ಹೆಚ್ಚಬೇಕೆನ್ನುತ್ತಾರೆ ಅವರು. ಈ ಮೊತ್ತವು ೧೯೮೦ರ ಹೊತ್ತಿಗೆ ೧೫೦ ಕೋಟಿಯಾಗಬೇಕು. ಈಗ ಖರ್ಚಾಗುತ್ತಿರುವುದು ಕೇವಲ ೩೬ ಕೋಟಿ ರೂಪಾಯಿಗಳು.

'ಭಾರತ' ಸರಕಾರವು ಅಮೇರಿಕಾ, ಇಂಗ್ಲೆಂಡ್ ಮತ್ತು ರಶ್ಯಗಳ ಸಹಯೋಗದಿಂದ ಪ್ರಕಾಶಿಸಲಾಗುವ ಪುಸ್ತಕಗಳ ಉತ್ಪಾದನೆಯಲ್ಲಿ ಸುಮಾರು ೩೬ ಕೋಟಿ ರೂಪಾಯಿಗಳನ್ನು ವ್ಯಯಿಸುತ್ತಿದೆ; ೧೯೮೦ರಲ್ಲಿ ಮತ್ತೆ ಮೂರು ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಒಪ್ಪಿಕೊಂಡಿದೆ. ನೇಶನಲ್ ಬುಕ್ ಟ್ರಸ್ಟ್‌ನ ಮೂಲಕ ವಿಶ್ವವಿದ್ಯಾಲಯ ಮಟ್ಟದ ಇಂಗ್ಲಿಷ್ ಪುಸ್ತಕಗಳನ್ನು ವಿದೇಶೀ ನೆರವಿನಿಂದ ಪ್ರಕಟಿಸುವ ಯೋಜನೆಯೂ ಇದರಲ್ಲಿ ಸೇರಿದೆ.

ಪ್ರಕಾಶನ ವಿಭಾಗದ ಹಿಂದಿನ ನಿರ್ದೇಶಕ ಶ್ರೀ ಮೋಹನರಾವ್‌ರವರು ವಿಜ್ಞಾನ ಮತ್ತು ತಂತ್ರ ಪುಸ್ತಕಗಳಿಗೆ ಸಂಬಂಧಿಸಿದ ತನ್ನ ವರದಿಯೊಂದರಲ್ಲಿ ಹೀಗೆ ಸಲಹೆ ಮಾಡಿದ್ದರು—ಪಾಠ್ಯ ಪುಸ್ತಕಗಳ ರೂಪದಲ್ಲಿ ವಿದೇಶೀ ಪುಸ್ತಕಗಳನ್ನು ಅವಲಂಬಿಸುವುದನ್ನು ಕೊನೆಗೊಳಿಸಬೇಕು. ಭಾರತ ಮತ್ತು ವಿದೇಶೀ ಪುಸ್ತಕಗಳ ಅನುಪಾತವನ್ನು ೧೫ ವಿಶ್ವವಿದ್ಯಾಲಯಗಳ ಸ್ವೀಕೃತ ಪುಸ್ತಕ ಸೂಚಿಯಿಂದ ತಿಳಿಯುತ್ತದೆ. ಬಿ. ಎಸ್ಸಿ. ಪದವಿ ತರಗತಿಯ ಆರು ಪ್ರಮುಖ ವಿಜ್ಞಾನ ವಿಷಯಕ ಪಠ್ಯಪುಸ್ತಕಗಳ ಒಟ್ಟು ಸಂಖ್ಯೆ ೨೬೦. ಇವುಗಳಲ್ಲಿ ಬರಿಯ ೯೧ (ಅಂದರೆ ಸೇ. ೩೦) ಮಾತ್ರ ಭಾರತೀಯ ಪ್ರಕಾಶಿತ. ಎಂ. ಎಸ್ಸಿ.ಗೆ ಅದೇ ರೀತಿ ನಿಯತವಾದ ೩೮೬ ಪುಸ್ತಕಗಳಲ್ಲಿ ಸೇ. ೫ ಅಂದರೆ ಕೇವಲ ೨೨ ಪುಸ್ತಕಗಳು ಭಾರತದಲ್ಲಿ ಪ್ರಕಾಶಿತವಾದುವುಗಳು. ಇನ್ನು ಚಿಕಿತ್ಸಾ ವಿಜ್ಞಾನವನ್ನು ತೆಗೆದುಕೊಳ್ಳುವುದಾದರೆ, ೩೭೪ ಪುಸ್ತಕಗಳಲ್ಲಿ ೩೯, ಅಂದರೆ ಸೇಕಡಾ ೧೧, ಭಾರತೀಯ ಲೇಖಕರವು. ಇಂಜಿನಿಯರಿಂಗ್ ಪುಸ್ತಕಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಿಲ್ಲ. ೨೩೯ ಪುಸ್ತಕಗಳಲ್ಲಿ ಬರಿಯ ೧೪ (ಸೇಕಡಾ ೬) ಭಾರತೀಯರು!

ರಾಜ್ಯ ಸರಕಾರಗಳಲ್ಲಿ ಮೊತ್ತಮೊದಲಿಗೆ ಪಾಠ್ಯಪುಸ್ತಕ ಪ್ರಕಟಿಸಿದ ಶ್ರೇಯಸ್ಸು ಕೇರಳ ಸರಕಾರಕ್ಕೆ ಸಲ್ಲಬೇಕು. ಇದರಿಂದ ತುಂಬ ಲಾಭವೂ ಆಗಿದೆ. ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮತ್ತು ಬಿಹಾರಗಳನ್ನುಳಿದ ಕೆಲವು ರಾಜ್ಯ ಸರಕಾರಗಳು ಶಾಲಾಮಟ್ಟದ ಪಠ್ಯಪುಸ್ತಕಗಳ ಪ್ರಕಾಶನದಲ್ಲಿ ಸಂತೋಷದಾಯಕ ಕಾ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರ್ಯಮಾಡಿವೆ. ಉತ್ತಮ ಬೆಲೆಮಟ್ಟ ಇಳಿಯುತ್ತಿರುವುದರಿಂದ ರಾಷ್ಟ್ರೀಕೃತ ಉತ್ಪಾದನೆಯ ಉದ್ದೇಶ್ಯ ಅಸಫಲವಾಗುತ್ತಿದೆ.

ರಾಜ್ಯ ಮಟ್ಟದಲ್ಲಿ ಪುಸ್ತಕ ಪ್ರಕಾಶನವು ಲಾಭದಾಯಕವೆನಿಸಿರುವುದು ಅನುಭವಕ್ಕೆ ಬಂದಿದೆ. ಕೇರಳದಲ್ಲಿ ಪ್ರಕಾಶನ ವಿಭಾಗವು ಮಂತ್ರಾಲಯದ ಒಂದು ಭಾಗವಾಗಿದ್ದು ಲಾಭವು ಬೊಕ್ಕಸಕ್ಕೆ ಸೇರುತ್ತದೆ. ಬಿಹಾರ ಸರಕಾರವೂ ಐವತ್ತು ಕೋಟಿ ರೂಪಾಯಿಗಳ ಬಂಡವಾಳದಿಂದ ಶಾಲೆಗಳ ಪಾಠ್ಯಪುಸ್ತಕ ಪ್ರಕಾಶಿಸುವ ಸಂಸ್ಥೆಯೊಂದನ್ನು ಆರಂಭಿಸಿದೆ.

ಶಾಲೆಯ ಪಾಠ್ಯಪುಸ್ತಕಗಳ ಶ್ರೇಣಿ ಮತ್ತು ಅವುಗಳ ವಿಷಯ ಪುಸ್ತಕಗಳಲ್ಲಿ ಒಂದು ಸ್ತರವಿರುವುದು ಆವಶ್ಯಕ. ಎನ್. ಸಿ. ಇ. ಆರ್. ಟಿ. ಯೆಂಬ ಸಂಸ್ಥೆ ಇದನ್ನು ನೋಡಿಕೊಳ್ಳುತ್ತಿದೆ. ರಾಜ್ಯಸರಕಾರಗಳು ಸ್ವೀಕರಿಸಬಹುದಾದ ಮತ್ತು ಕಾರ್ಯರೂಪಕ್ಕೆ ತರಬಹುದಾದ ಪಾಠ್ಯ ಪುಸ್ತಕ ಮತ್ತು ಪಾಠ್ಯಕ್ರಮಗಳನ್ನು ತಯಾರಿಸುತ್ತಿದೆ.

ಜನರನ್ನು ಪುಸ್ತಕ ಪ್ರೇಮಿಗಳನ್ನಾಗಿ ಮಾಡುವುದು ಮತ್ತು ಸಾಮಾನ್ಯಾಭಿರುಚಿಯ ಪುಸ್ತಕಗಳನ್ನು ಅಲ್ಪ ಬೆಲೆಗೆ ದೊರೆಯುವಂತೆ ಪ್ರಕಟಿಸುವುದು ನೇಶನಲ್ ಬುಕ್ ಟ್ರಸ್ಟ್‌ನ ಮುಖ್ಯ ಉದ್ದೇಶ. ಆರಂಭದ ಹತ್ತು ವರ್ಷಗಳ ಕಾಲ ಅದರ ಪರಿಸ್ಥಿತಿ ಸಂತೋಷಜನಕವಿರಲಿಲ್ಲ. ಈಗಿನ ಐದು ವರ್ಷಗಳಿಂದ ಇದರ ಮೂಲಕ ಬಹಳಷ್ಟು ಕಾರ್ಯ ನಡೆಯುತ್ತಿದೆ. ವಿಶ್ವವಿದ್ಯಾಲಯ ಮಟ್ಟದ ಪಾಠ್ಯ ಪುಸ್ತಕ ಪ್ರಕಾಶನದ ಯೋಜನೆಯೂ ಇದರಿಂದ ಕಾರ್ಯರೂಪಕ್ಕೆ ಬರುತ್ತಿದೆ.

ಈ ರೀತಿಯ ಯೋಜನೆಯು ಸಫಲವಾಗಬೇಕಾದರೆ ಕಾಗದವು ಧಾರಾಳ ದೊರೆಯಬೇಕು. ಕಾಗದದ ಅಭಾವವು ತಲೆ ಹಾಕಿದರೆ, ಪುಸ್ತಕಗಳ ಅಭಾವವು ತನಗೆ ತಾನೇ ಬರುವುದು. ಎನ್. ಸಿ. ಈ. ಆರ್. ಟಿ. ಸಂಸ್ಥೆಯು ಅಲ್ಪ ಬೆಲೆಯ ಪುಸ್ತಕಗಳ ಪ್ರಕಟಣೆಯು ಅದಕ್ಕೆ ಯುನೆಸ್ಕೊ ಕಾಣಿಕೆಯಾಗಿ ಒದಗಿಸುವ ಕಾಗದವನ್ನೇ ಅವಲಂಬಿಸಿಕೊಂಡಿದೆ. ಯುನೆಸ್ಕೊದಿಂದ ಅದಕ್ಕೆ ಕಾಗದದ ಸಂಬರಾಯಿಯಾಗದೆ ಹೋದರೆ, ಅದರ ಯೋಜನೆಯಲ್ಲಿ ಬಾಧಕ ತಟ್ಟುವುದು. ಭಾರತದಲ್ಲಂತೂ ಕಾಗದದ ಅಭಾವ ಸದಾಕಾಲ ಇರುವಂಥದ್ದೇ. ಕಪ್ಪುಮಾರುಕಟ್ಟೆಯಲ್ಲಿ ಅದರ ಬೆಲೆ ದುಬಾರಿಯಾಗಿಯೇ ಇರುತ್ತದೆ.

ಸಾಕ್ಷರತೆಯ ಸಾಧನೆ ಎಲ್ಲರ ಸಮ್ಮಿಳಿತ ಪ್ರಯತ್ನದಿಂದ ಮಾತ್ರ ಸಾಧ್ಯ. ಪುಸ್ತಕಗಳ ಅಭಾವದ ಸಮಸ್ಯೆಯನ್ನು ನಾವು ಈ ದಶಕದೊಳಗೆ ನಿವಾರಿಸದೆ ಹೋದರೆ, ಮತ್ತೆ ಅದನ್ನು ದೂರ ಮಾಡುವುದು ನಿಜಕ್ಕೂ ಕಠಿಣ ಕಾರ್ಯ.

●●

READ &

ADVERTISE IN

NAVAYUGA Weekly

ರೈತನಿಗೊಂದು ವರದಾನ—

ಕೀಟಗಳಿಂದಲೇ ಕೀಟಗಳ ನಾಶ

ಹೊಲಗದ್ದೆಗಳಲ್ಲಿ ರಾಸಾಯನಿಕ ಕ್ರಿಮಿನಾಶಕಗಳನ್ನು ಬಳಸುವುದು ಕೆಲವೊಮ್ಮೆ ಮಿಚಾರಿಯ ಹಾನಿಕಾರಕ ಕೆಲಸವೆನಿಸಬಹುದು. ರಾಸಾಯನಿಕ ವಸ್ತುಗಳು ಪರಿಸರ ಮಾಲಿನ್ಯವನ್ನು ಹೆಚ್ಚಿಸುವುದೂ ಉಂಟು.

ಬೆಂಗಳೂರಿನ ಸಂಶೋಧನಾ ಸಂಸ್ಥೆಯೊಂದು ಈ ಸಮಸ್ಯೆಗೆ ಒಂದು ಪರಿಹಾರ ಹುಡುಕಿದೆ. ಕ್ರಿಮಿನಾಶಕಗಳನ್ನು ಬಳಸದೆಯೇ ಕೀಟಗಳ ಹಾವಳಿ ನಿವಾರಿಸಲು ಈ ಸಂಸ್ಥೆ ಪ್ರಯತ್ನಿಸುತ್ತಿದೆ.

ಈ ವಿಧಾನವನ್ನು 'ಜೀವಶಾಸ್ತ್ರಕ ಹತೋಟಿ' ಎಂದು ಕರೆಯುತ್ತಾರೆ. ಎಲೆ ತಿಂದು ಬದುಕುವ ಕಂಬಳಿಹುಳದ ಹಾವಳಿ ನಿವಾರಣೆಗೆ ಆ ಹುಳಗಳನ್ನು ತಿನ್ನುವ ಇರುವೆಗಳ ಗೂಡುಗಳನ್ನು ನಿಂಬೆ ಗಿಡಗಳ ಮೇಲೆ ಇರಿಸುವ ಪ್ರಾಚೀನ ಚೀನೀ ವಿಧಾನವನ್ನು ಈ ತಂತ್ರ ಹೋಲುತ್ತದೆ. ಮನೆಗಳಲ್ಲಿ ಇಲಿಗಳ ಹಾವಳಿ ತಡೆಗಟ್ಟಲು ಬೆಕ್ಕನ್ನು ಸಾಕುವುದು ಇಂಥ ಜೀವಶಾಸ್ತ್ರಕ ನಿಯಂತ್ರಣ್ವವಿಧಾನವೇ.

ಬೆಂಗಳೂರಿನ ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್ ಆಫ್ ಬಯಲಾಜಿಕಲ್ ಕಂಟ್ರೋಲ್ (ಸಿಐಬಿಸಿ) ಪ್ರಾಚೀನ ವಿಧಾನಗಳನ್ನು ವೈಜ್ಞಾನಿಕವಾಗಿ ಸುಧಾರಿಸಿ ಹೊಸ ತಂತ್ರಗಳನ್ನು ರೂಪಿಸಿ ಅವು ಭಾರತ ಮತ್ತು ಇತರ ದೇಶಗಳ ಕೃಷಿಕರಿಗೆ ಬಹು ಪ್ರಯೋಜನಕಾರಿಯಾಗುವಂತೆ ಮಾಡುತ್ತಿದೆ.

ಈ ಸಂಸ್ಥೆ ಹಲವು ಕೀಟಗಳನ್ನೂ ಕಳೆ ಹುಳಗಳನ್ನೂ ನಾಶಮಾಡುವಂಥ ಪರೋಪ ಜೀವಿಗಳನ್ನೂ ಕೀಟಭಕ್ಷಕಗಳನ್ನೂ ಸಂಗ್ರಹಿಸಿ ವೃದ್ಧಿಪಡಿಸುತ್ತದೆ. ಕಬ್ಬು, ಹತ್ತಿ, ಎಣ್ಣೆಬೀಜದಂತ ಬೆಳೆಗಳೇ ಅಲ್ಲದೆ ಸೇಬಿನ ಗಿಡಗಳಿಗೂ, ಹುಲ್ಲಿಗೂ ತಗಲುವ ಹುಳಹುಪ್ಪಟೆಗಳ ನಿವಾರಣೆಗಾಗಿ ಪರೋಪಜೀವಿಗಳನ್ನು ಯಶಸ್ವಿಯಾಗಿ ಬೆಳೆಸಿದೆ.

ಇದೀಗ ಸಂಸ್ಥೆಯು 'ಹೆಲಿಯೋಥಿಸ್ ಆರ್ಮಿಜೆರಾ' ಎಂಬ ಕೀಟದ ಬಗ್ಗೆ ಕಾರ್ಯಮಗ್ನವಾಗಿದೆ. ಇದು ತರಕಾರಿ, ಹತ್ತಿ ಮತ್ತು ಇತರ ಆರ್ಥಿಕ ಪ್ರಾಮುಖ್ಯದ ಬೆಳೆಗಳಿಗೆ ದೊಡ್ಡ ಪಿಡುಗಾಗಿದೆ.

ಈ ಕೀಟವನ್ನು ನಾಶ ಮಾಡಬಲ್ಲ ಹಲವು ಪರೋಪಜೀವಿಗಳು ಭಾರತದಲ್ಲಿವೆಯೆಂದು 'ಸಿಐಬಿಸಿ'-ಭಾರತ ಕೇಂದ್ರದ ಮುಖ್ಯ ಕೀಟಶಾಸ್ತ್ರಜ್ಞ ಡಾ| ವಿ. ಪಿ. ರಾವ್ ಹೇಳುತ್ತಾರೆ. ಅಮೇರಿಕದಲ್ಲಿ ಹತ್ತಿ ಬೆಳೆಗೆ ತಗಲುವ ಇಂಥ ಕೀಟವನ್ನು 'ಹೆಲಿಯೋಥಿಸ್ ಜೀ' ಎಂದು ಕರೆಯುವರು. ಭಾರತದಲ್ಲಿ ದೊರೆಯುವ ಪರೋಪಜೀವಿ ಈ 'ಜೀ' ಹುಳವನ್ನು ನಾಶಮಾಡಬಲ್ಲದೇ ಎಂದು ಪರೀಕ್ಷಿಸಿ ನೋಡುವಂತೆ ಅಮೇರಿಕದ ಕೃಷಿ ಇಲಾಖೆ ಇನ್‌ಸ್ಟಿಟ್ಯೂಟನ್ನು ಕೇಳಿತು. ಈ ಯೋಜನೆಗೆ ಪಿ. ಎಲ್. ೪೮೦ ನಿಧಿಗಳಿಂದ ೪ ಲಕ್ಷ ರೂ. ಸಹಾಯ ಧನವೂ ಸಂಸ್ಥೆಗೆ ದೊರೆಯಿತು.

ಈ ಸಂಶೋಧನೆಯನ್ನು ಎರಡು ಹಂತಗಳಲ್ಲಿ ನಡೆಸಲಾಯಿತೆಂದು ಸಹಾಯಕ ಕೀಟಶಾಸ್ತ್ರಜ್ಞ ಶ್ರೀ ಟಿ. ಎಂ. ಮಂಜುನಾಥ ಹೇಳಿದರು. ಮೊದಲು ದೇಶದಾದ್ಯಂತ 'ಹೆಲಿಯೊಥಿಸ್- ಆರ್ಮಿಜೆರಾ'ದ ಸರ್ವೇ ಪರಿಶೀಲನೆ ನಡೆಸಿ ಅದರ ಅನೇಕ ಶತ್ರು ಕೀಟಗಳನ್ನು ಗುರುತಿಸಲಾಯಿತು. ಎರಡನೇ ಹಂತದಲ್ಲಿ ಪ್ರಯೋಗ ಶಾಲೆಗಳಲ್ಲಿ ಈ ಶತ್ರು ಕೀಟಗಳನ್ನು ಬೆಳೆಸಿ ಅವುಗಳ ಜೀವರಚನೆ ಮೊದಲಾದವುಗಳ ಅಧ್ಯಯನ ಮಾಡಲಾಯಿತು.

ಉದಾಹರಣೆಗೆ 'ಗೊನಿಯೊಫ್ತಾಲ್ಮಸ್ ಹಲ್ಲಿ' ಎಂಬ ಪರೋಪ ಜೀವಿ ನೊಣವೊಂದನ್ನು ಎರಡು ಬಗೆಯಲ್ಲಿ ಬೆಳೆಸಲಾಯಿತು. ಬಹು ಸೂಕ್ಷ್ಮವಾದ ಮೊಟ್ಟೆಗಳನ್ನಿಡುವ ಕೀಟವಿದು. ಒಂದು ವಿಧದಲ್ಲಿ ಈ ನೊಣ ಸಹಜ ರೀತಿಯಲ್ಲಿ ಧಾನ್ಯದ ಸಸಿಗಳ ಮೇಲೆ ಮೊಟ್ಟೆಯಿಡಲು ಅವಕಾಶ ಮಾಡಲಾಯಿತು. ಆ ಮೇಲೆ ಹೆಲಿಯೊಥಿಸ್ ಮರಿಹುಳುಗಳನ್ನು ಈ ಸಸ್ಯಗಳಿಗೆ ಬಿಡಲಾಯಿತು. ಈ ಕೀಟವು ತನ್ನ ಆಹಾರದಲ್ಲಿ ಈ ಪರೋಪಜೀವಿ ಮೊಟ್ಟೆಗಳನ್ನೂ ಸೇವಿಸಿತು. ಎರಡನೆ ವಿಧಾನದಲ್ಲಿ ಸಂಭೋಗದ ನಂತರ ಹೆಣ್ಣು ನೊಣವನ್ನು ಕತ್ತರಿಸಿ ಅದರ ಗರ್ಭಕೋಶದಲ್ಲಿನ ಮೊಟ್ಟೆಗಳನ್ನು ಸಸ್ಯಕ್ಕೆ ಬಿಡಲಾಯಿತು. ಅವನ್ನು ಕೀಟವು ಸೇವಿಸಿತು. ಈ ಪರೋಪಜೀವಿ ಮೊಟ್ಟೆಗಳೂ, ಮರಿಹುಳುಗಳೂ ತಮ್ಮ ಅತಿಥೇಯ ಕಂಬಳಿಹುಳಗಳಿಗೇ ಕಂಟಕವಾಗಿ ಬೆಳೆಯುತ್ತವೆಂದು ತಿಳಿಯಿತು. ಪರೋಪಜೀವಿಗಳ ಸಂಖ್ಯೆ ಬೆಳೆದಂತೆ ಕೀಟವು ಸಾಯುವುದು.

ಪರೋಪಜೀವಿಗಳನ್ನು ಬಳಸುವುದರಿಂದ ಕೀಟಗಳು ನಿರ್ನಾಮವಾಗದಿದ್ದರೂ ಆರ್ಥಿಕ ಹಾನಿಯನ್ನು ತಡೆಗಟ್ಟುವಷ್ಟು ಮಟ್ಟಿಗಾದರೂ ಅವುಗಳ ಅಸ್ತಿತ್ವವನ್ನು ತಗ್ಗಿಸಬಹುದೆಂದು ಡಾ| ರಾವ್ ಹೇಳುತ್ತಾರೆ.

ಬಹುತೇಕ ಪರೋಪಜೀವಿಗಳು ನಿರ್ದಿಷ್ಟ ಲಕ್ಷಣವುಳ್ಳವಾಗಿದ್ದು ಅವನ್ನು ನಿರ್ದಿಷ್ಟ ಕೀಟಗಳ ವಿರುದ್ಧ ಮಾತ್ರ ಬಳಸಬಹುದೆಂದೂ, ಕೆಲವು ಪರೋಪಜೀವಿಗಳು ಕೀಟದ ಬೆಳವಣಿಗೆಯ ವಿವಿಧ ಹಂತಗಳಲ್ಲಿ - ಮೊಟ್ಟೆ, ಮರಿಹುಳ, ಪೊರೆಹುಳು ಮತ್ತು ವಯಸ್ಕ ಹಂತಗಳಲ್ಲಿ—ದಾಳಿ ಮಾಡುತ್ತವೆಂದೂ ಡಾ| ರಾವ್ ಹೇಳಿದರು.

ತಮ್ಮ ಇನ್‌ಸ್ಟಿಟ್ಯೂಟ್ ಕೃಷಿಕನ ಬೆಳೆಗಳಿಗೆ ಹಾನಿ ಮಾಡುವ ಕೀಟಗಳ ನಾಶಕ್ಕೆ ಆರ್ಥಿಕವಾಗಿಯೂ ಕಾರ್ಯಸಾಧ್ಯವಾದಂಥ ವಿಧಾನವೊಂದನ್ನು ಒದಗಿಸುವ ಭರವಸೆ ನೀಡುತ್ತದೆಂದು ಡಾ| ರಾವ್ ಭಾವಿಸಿದ್ದಾರೆ.

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರಿತ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಶ್ರೀ ಮೂಲ್ಕಿ ಸುಂದರ್‌ರಾಮ್ ಶೆಟ್ಟಿ, ಚೇರ್‌ಮನ್, ಅವರ ಹೇಳಿಕೆ

(ಐದನೇ ಪುಟದಿಂದ)

ವಾಗಿಯೂ ಸಮೃದ್ಧ ಕೇಂದ್ರವಾಗುವ ತನಕ ಬ್ಯಾಂಕುಗಳು ಅಂತಹ ಸ್ಥಳಗಳಿಗೆ ಮುನ್ನುಗ್ಗಬಾರದು. ಮಾನವ ಶಕ್ತಿ ಮತ್ತು ಇತರ ಮೂಲಗಳ ಪೋಲನ್ನು ಕಡಿಮೆಗೊಳಿಸಬೇಕು. ಅಷ್ಟಾದರೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮುಂದಿನ ಮೂರು ವರ್ಷಗಳಲ್ಲಿ 5000 ಶಾಖೆಗಳನ್ನು ತೆರೆಯುವ ಗುರಿ ಇರಿಸಿಕೊಂಡಿದೆ. ಇದರಂತೆ ಪ್ರತಿ ತಿಂಗಳಿಗೆ ಸ.ಮಾರು 140 ಶಾಖೆಗಳು ತೆರೆಯಬೇಕಾಗುವುದು. ಈ ಉದ್ದೇಶಿತ ಬೃಹತ್ ವಿಸ್ತರಣೆಯ ಸಮ್ಮುಖದಲ್ಲಿ ಎಷ್ಟರ ಮಟ್ಟಿಗೆ ಮುಂದಿನ ವರ್ಷಗಳಲ್ಲಿ ಖಾಸಗಿ ವಿಭಾಗದ ಒಂದು ಬ್ಯಾಂಕು ಬೆಳೆಯುವುದು ಎಂಬುವುದು ಊಹನೆಯ ಸಂಗತಿ. ಆದರೆ ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಿದ ಸಾಧನೆಯಿಂದ ನಾನು ಹಿಂದಿನಂತೆ ಆಶಾವಾದಿಯಾಗಿದ್ದೇನೆ ಒಳ್ಳೆಯದಕ್ಕಾಗಿ ನಾವೆಲ್ಲ ಹಾರೈಸುವ. 1971ರಲ್ಲಿ ವಿಸ್ತರಣೆ ಮಾತ್ರವಲ್ಲದೆ ಈ ಮೊದಲೆ ನಾವು ಸ್ಥಾಪನೆಯಾದ ಕೇಂದ್ರಗಳಲ್ಲಿ ನಮ್ಮ ಸ್ಥಿತಿಯು ಇನ್ನಷ್ಟು ಭದ್ರವೂ ಆಯಿತು.

ವರದಿ ವರ್ಷದಲ್ಲಿ ವಿದೇಶಿ ವಿನಿಮಯದಲ್ಲಿ ವ್ಯವಹರಿಸಲು ನಾವು ಲೈಸೆನ್ಸ್ ಪಡೆದೆವು. ಎಲ್ಲಾ ವಿದೇಶೀ ಕರೆನ್ಸಿಗಳಲ್ಲಿ ವ್ಯವಹರಿಸಲು ನಾವು ನಮ್ಮ ಬ್ಯಾಂಕಿನಲ್ಲಿ ವಿದೇಶಿ ವಿನಿಮಯ ವಿಭಾಗವನ್ನು ತೆರೆದಿರುವೆವು. ಕೆಲವು ವಿದೇಶಿ ಬ್ಯಾಂಕ್‌ಗಳೊಡನೆ ಸಂಪರ್ಕ ಸ್ಥಾಪಿಸಲು ನಿಮ್ಮ ಚೇರ್‌ಮನ್ 1971ರ ಆಕ್ಟೋಬರ್‌ನಲ್ಲಿ ವಿದೇಶಕ್ಕೆ ಹೋದರು. ಇತರ ರಾಷ್ಟ್ರಗಳಲ್ಲಿರುವ ಹೆಚ್ಚಿನ ಪ್ರಮುಖ ಬ್ಯಾಂಕ್‌ಗಳೊಡನೆ ಈಗ ಅಕೌಂಟ್ ಮತ್ತು ಏಜನ್ಸಿ ವ್ಯವಸ್ಥೆಯನ್ನು ಬ್ಯಾಂಕ್ ಹೊಂದಿದೆ. ಈಗ ನಮ್ಮ ಬ್ಯಾಂಕ್ 7 ಕೇಂದ್ರಗಳಲ್ಲಿ ವಿದೇಶಿ ವಿನಿಮಯ ವ್ಯವಹಾರ ನಡೆಸುತ್ತಿದೆ—ಬೆಂಗಳೂರು, ಮಂಗಳೂರು, ಮುಂಬಯಿ, ಮದ್ರಾಸು, ಕೊಚ್ಚಿ, ಡಿಲ್ಲಿ ಮತ್ತು ಹೈದರಾಬಾದ್. ಅವಶ್ಯವೆಂದು ಕಂಡಾಗ ಹೆಚ್ಚು ಕೇಂದ್ರಗಳನ್ನು ತೆರೆಯಲಾಗುವುದು.

ಶಿಬಂದಿ

1970ರ ಅಂತ್ಯದಲ್ಲಿ ಎಲ್ಲಾ ರೀತಿಯ ನೌಕರರು ಸೇರಿ ಒಟ್ಟು 1462 ನೌಕರರಿದ್ದರು. 1971ರ ಅಂತ್ಯದಲ್ಲಿ ಶೇ. 30ರಷ್ಟು ಹೆಚ್ಚಿ ಈ ಸಂಖ್ಯೆ 1896ಕ್ಕೇರಿತು. ವರ್ಷಾರಂಭದಲ್ಲಿ ಪ್ರತಿ ಕೋಟಿ ಠೇವಣಿಗೆ ನಮ್ಮ ನೌಕರ—ಠೇವಣಿ ಪ್ರಮಾಣವು 52 ಇದ್ದಿತ್ತು. 1971ರ ಅಂತ್ಯದಲ್ಲಿ ಅದು ಪ್ರತಿ ಕೋಟಿಗೆ 43ಕ್ಕಿಳಿಯಿತು. ನಮ್ಮ ಒಟ್ಟು ಆದಾಯ ಮತ್ತು ವೇತನ ಹಾಗೂ ಭತ್ತೆಗಳ ಪ್ರಮಾಣವು 1970ರಲ್ಲಿ ಶೇ. ಮೂವತ್ತಮೂರು ಪಾಯಿಂಟ್ ಒಂದು ಇದ್ದುದು 1971ರಲ್ಲಿ ಶೇ. 29ಕ್ಕಿಳಿಯಿತು.

ನಮ್ಮ ಬೆಳವಣಿಗೆ ತೀವ್ರಗತಿಯದ್ದು, ಮತ್ತು ನಮ್ಮ ನೌಕರರ ತರಬೇತಿಯ ಅಗತ್ಯವು ನಮ್ಮ ಗಮನ ಸೆಳೆದಿದೆ. ನಮ್ಮ ಸ್ವಂತ ತರಬೇತಿ ಕೇಂದ್ರಗಳಲ್ಲಿ ಅವರನ್ನು **ತರಬೇತಿ ಪಡಿಸುವುದರ ಜತೆಗೆ, ರಿಜರ್ವ್** ಬ್ಯಾಂಕ್ ಆಫ್ ಇಂಡಿಯಾ ಮತ್ತು ರಾಷ್ಟ್ರದಲ್ಲಿರುವ ಇತರ ತರಬೇತಿ ಸಂಸ್ಥೆಗಳು ನಡೆಸಿದ ಕೋರ್ಸುಗಳಿಗೆ ಕೆಲವು ಆಫೀಸರುಗಳನ್ನು ನಾವು ಕಳುಹಿಸಿದ್ದೇವೆ. ಫೈನಾನ್ಷಿಯಲ್ ಆಡ್ಮಿನಿಸ್ಟ್ರೇಶನಿನ ಶಾರ್ಟ್ ಕೋರ್ಸ್‌ಗಾಗಿ ನಮ್ಮ ಚೀಫ್ ಅಕೌಂಟೆಂಟ್ ಅವರು ಅಡ್ಮಿನಿಸ್ಟ್ರೇಟಿವ್ ಸ್ಟಾಫ್ ಕಾಲೇಜ್, ಹೈದರಾಬಾದಿಗೆ ತೆರಳಿದ್ದರು ಭಾರತೀಯ ಶಿಕ್ಷಣ ಸಮಿತಿ, ಹೊಸದಿಲ್ಲಿ ಇವರಿಂದ ನಡೆಸಲ್ಪಟ್ಟ ಫಾರ್ಮ್ ಕ್ರೆಡಿಟ್ ಮೆನೇಜ್‌ಮೆಂಟ್‌ನ ಕೋರ್ಸಿನಲ್ಲಿ ಭಾಗವಹಿಸಲು ನಮ್ಮ ಕೃಷಿ ಅಭಿವೃದ್ಧಿ ವಿಭಾಗದ ಒಬ್ಬ ಆಫೀಸರ್ ಅವರನ್ನು ಕಳುಹಿಸಿದ್ದೇವೆ. 23 ದಿನಗಳ ಕೋರ್ಸಿನಲ್ಲಿ ಥೈಲೆಂಡ್ ಫಿಲಿಪ್ಪೈನ್ಸ್, ಜಪಾನ್, ದಕ್ಷಿಣ ಕೊರಿಯಾ ಮತ್ತು ಹಾಂಗ್‌ಕಾಂಗ್‌ಗಳಿಗೆ 18 ದಿನಗಳ ಪ್ರವಾಸವೂ ಒಳಗೊಂಡಿತ್ತು. ನಮ್ಮ ಒಬ್ಬ ಸೀನಿಯರ್ ಮೆನೇಜರ್ ಅವರನ್ನು ಅಮೆರಿಕದಲ್ಲಿನ ಇಂಟರ್‌ನೇಶನಲ್ ಬ್ಯಾಂಕಿಂಗ್ ಸಮ್ಮರ್ ಸ್ಕೂಲಿಗೆ ಮತ್ತು ಇನ್ನೊಬ್ಬ ಆಫೀಸರ್ ಅವರನ್ನು ವಿದೇಶಿ ವಿನಿಮಯದಲ್ಲಿ ತರಬೇತಿ ಪಡೆಯಲು ಜರ್ಮನಿಗೆ ಕಳುಹಿಸಲು ಉದ್ದೇಶಿಸಿದ್ದೇವೆ. ಅವರಲ್ಲಿ ಹೆಚ್ಚಿನವರನ್ನು ಭಾರತದೊಳಗೆ ಮತ್ತು ಹೊರಗೆ ತರಬೇತಿಗೆ ಕಳುಹಿಸಲು ನಮ್ಮಲ್ಲಿ ಯೋಜನೆಗಳಿವೆ ರಾಷ್ಟ್ರೀಕರಿಸಲ್ಪಡದ ದಕ್ಷಿಣ ಭಾರತದ ಬ್ಯಾಂಕುಗಳಿಗಾಗಿ ಕೊಯಮತ್ತೂರಿನಲ್ಲಿ ಕಂಬ್ಯಾಂಕ್ಸ್ ಸ್ಟಾಫ್ ಟ್ರೈನಿಂಗ್ ಕಾಲೇಜ್ ಸ್ಥಾಪಿಸಲು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾರ್ಯಾರಂಭ ಮಾಡಿದೆ ನಿಮ್ಮ ಚೇರ್‌ಮನ್ ಅವರು ಕಂಬ್ಯಾಂಕ್ಸ್ ಸ್ಟಾಫ್ ಕಾಲೇಜಿನ ಗವರ್ನಿಂಗ್ ಬಾಡಿಗೆ ಪ್ರಥಮ ಚೇರ್‌ಮನ್ ಆಗಿ ಆಯ್ಕೆಯಾದುದನ್ನು ತಿಳಿಯಲು ನಿಮಗೆ ಕುತೂಹಲವಿರಬಹುದು

ಅಭಿವೃದ್ಧಿ ಹೊಂದುತ್ತಿರುವ ಸಂಸ್ಥೆಯೊಂದರಲ್ಲಿ ತಾಂತ್ರಿಕ ದಕ್ಷತೆಗೆ ಹೆಚ್ಚುತ್ತಿರುವ ಬೇಡಿಕೆಗಳಿಗೆ ಯಾವುದೇ ಮಟ್ಟದಲ್ಲಿ ಒಬ್ಬ ವ್ಯಕ್ತಿಯೇ ಹೆಗಲು ಕೊಡಬೇಕೆಂದು ಆಶಿಸಬಾರದು. ಆದುದರಿಂದ ಪ್ರಸಕ್ತ ಮೆನೇಜ್‌ಮೆಂಟ್ ನೀತಿಯನ್ನು ಪರಿಗಣಿಸಿ ಆಡಳಿತ ಸುಧಾರಣೆಯನ್ನು ಇನ್ನಷ್ಟು ಹೆಚ್ಚಿಸಬೇಕಾಗಿದೆ. ಬ್ಯಾಂಕಿಂಗ್ ರೀತಿ ಬದಲಾಗಿದೆ ನಾವು ಒಂದೆರಡು ವರ್ಷಗಳ ಹಿಂದೆ ಹೇಳಿದಂತೆ, ಸಾಮಾಜಿಕ ಹಾಗೂ ವೈಜ್ಞಾನಿಕ ಶಕ್ತಿಗಳ ಪ್ರಭಾವದಿಂದ ಜನ ಹಣ ಮತ್ತು ವಸ್ತುಗಳ ವ್ಯವಸ್ಥೆಯ ಹಳೆಯ ವಿಧಾನಗಳು ಬಳಕೆಯಿಂದ ಹೊರಗೆಸೆಯಲ್ಪಟ್ಟವೆ. ಬದಲಾಗುತ್ತಿರುವ ವಿಧಾನಗಳು ಮತ್ತು ಶರ್ತಗಳನ್ನು ಎದುರಿಸುವುದಕ್ಕಾಗಿ ವ್ಯವಸ್ಥೆ, ನೌಕರರು ಮತ್ತು ಕ್ರಮದಲ್ಲಿ ಪುನಶ್ಚೇತರ ಶಕ್ತಿಯನ್ನು ಬೇಂಕುಗಳಿಂದ ಆಪೇಕ್ಷಿಸಲಾಗುತ್ತದೆ.

ಹೊಸ ಪ್ರವೃತ್ತಿ ಮತ್ತು ಕೌಶಲ್ಯಗಳಿಂದಾಗಿ ಎಲ್ಲಾ ಮಟ್ಟದಲ್ಲೂ ಉದ್ಯಮ ಶೀಲತೆ ಮತ್ತು ಪ್ರಾವೀಣ್ಯತೆಯ ಅಗತ್ಯ ಹೆಚ್ಚಾಗಿದೆ. ನಾವೇ ನಮ್ಮ ಕಾರ್ಯ ನಿರ್ವಾಹಕ ವಿಭಾಗವನ್ನು ಬೆಳೆಯಿಸಬೇಕು. ಮೆನೆಜರರ ಮತ್ತು ಕಾರ್ಯ ನಿರ್ವಾಹಕರ ಹುದ್ದೆಗಳನ್ನು ಸ್ವೀಕರಿಸಲು ನಮ್ಮ ನೌಕರರನ್ನು ಸಿದ್ಧಗೊಳಿಸಲು ಮೆನೇಜ್‌ಮೆಂಟ್ ಅಭಿವೃದ್ಧಿ ವಿಭಾಗವನ್ನು ಆರಂಭಿಸಲು ನಾವು ಆಶಿಸಿದ್ದೇವೆ. ಹುದ್ದೆಗಳ ಭರ್ತಿಗೆ ಸದಾಸಿದ್ಧವಿರುವ ಉತ್ತಮ ತರಬೇತಿ ಹೊಂದಿದ ಜನರನ್ನು ತಯಾರಿಸುವುದೇ ಇದರ ಹಿಂದಿರುವ ಉದ್ದೇಶವಾಗಿದೆ. ಸರಿಯಾದ ಸ್ಥಳದಲ್ಲಿ ಸರಿಯಾದ ಸಮಯದಲ್ಲಿ ಸರಿಯಾದ ಜನರನ್ನು ಹೊಂದಬೇಕು. ನಮ್ಮಿಂದ ಸಿದ್ಧಗೊಳಿಸಲ್ಪಟ್ಟ ವ್ಯಕ್ತಿಗಳು ಸಂಸ್ಥೆಯ ಮೇಲೆ ಗೌರವವಿರುವ ಹಾಗೂ ಅಭಿವೃದ್ಧಿಯಲ್ಲಿ ನಿರಂತರ ಪಾತ್ರವಹಿಸುವ ಭಾವನೆ ಹೊಂದಿದವರಾಗಿರಬೇಕು ಶಿಬಂಧಿ ವರ್ಗದಲ್ಲಿ ನಮ್ಮ ಬ್ಯಾಂಕ್ ತರುಣ ಪೀಳಿಗೆಯವರದೇ ಪ್ರಾಶಸ್ತ್ಯವಿದ್ದು ಮೇಲ್ಮಟ್ಟದ ಆಡಳಿತದಲ್ಲಿ ಪಕ್ವ ಹಾಗೂ ಪ್ರಾಯಸ್ಥರ ಯೋಗ್ಯ ಸಮಾಗಮವಿದೆ. ಬೆಳೆಯುವುದು ನಮಗೊಂದು ಕೇವಲ ನೈಸರ್ಗಿಕ ಗುಣ ಮತ್ತು ನಾವು ಬೆಳೆಯಲೇ ಬೇಕು.

ನಮ್ಮ ಕೃತಜ್ಞತೆಗಳು

ನಮ್ಮ ಡೈರೆಕ್ಟರ ಮಂಡಳಿಯ ಗೌರವಾರ್ಹ ಸದಸ್ಯರಿಗೆ ಧನ್ಯವಾದಗಳನ್ನು ನಾನು ಸಲ್ಲಿಸುವೆನು. ಮಂಡಳಿಯ ನನ್ನ ಸಹೋದ್ಯೋಗಿಗಳು ನನಗೆ ನಿರಂತರ ಸಹಕಾರ ನೀಡಿದ್ದಾರೆ ಅತ್ಯಂತ ಕೃತಜ್ಞಪೂರ್ವಕವಾಗಿ ನಾನು ಅವರೆಲ್ಲರಿಗೂ ಮತ್ತು ನಿರಾತಂಕವಾಗಿ ಬೆಂಬಲ ನೀಡಿದ ಪ್ರಾದೇಶಿಕ ಸಲಹಾ ಸಮಿತಿಗಳ ಸದಸ್ಯರಿಗೆ ಕೂಡಾ ಕೃತಜ್ಞತೆ ಅರ್ಪಿಸುತ್ತೇನೆ.

ವರ್ಷವಿಡೀ ಶ್ರದ್ಧೆ ವಹಿಸಿ ಕೆಲಸ ಮಾಡಿದ ಆಡಳಿತ ಕಚೇರಿಯ ಕಾರ್ಯದರ್ಶಿ, ಇತರ ಕಾರ್ಯ ನಿರ್ವಾಹಕರು, ಆಫೀಸರುಗಳು ಮತ್ತು ನೌಕರರಿಗೆ ನನ್ನ ಧನ್ಯವಾದಗಳು ಸಲ್ಲಬೇಕಾಗಿದೆ. ಗ್ರೂಪ್ ಮೆನೇಜರ್‌ಗಳು ಬ್ರಾಂಚ್ ಮೇನೇಜರ್‌ಗಳು ಇತರ ಅಧಿಕಾರಿಗಳು ಮತ್ತು ನೌಕರರ ಅವಿಶ್ರಾಂತ ಶ್ರಮದಿಂದ ನಮ್ಮ ಠೇವಣಿಯ ಬೆಳವಣಿಗೆಗೆ ಆದ ಕೊಡುಗೆ ಮಹತ್ವದ್ದು. ಅವರ ತ್ಯಾಗಪೂರ್ಣ ಪ್ರಯತ್ನ ಹಾಗೂ ಉತ್ಸಾಹವನ್ನು ನಾನು ತುಂಬಾ ಮೆಚ್ಚಿದ್ದೇನೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಅಮೂಲ್ಯವಾದ ಸಹಾಯ, ಸಹಕಾರ ಹಾಗೂ ಸರ್ವಕಾಲಿಕ ತಿಳುವಳಿಕೆಗಾಗಿ ಬ್ಯಾಂಕಿನ ಗಿರಾಕಿಗಳಿಗೆ ಮತ್ತು ಹಿತೈಷಿಗಳಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಲು ನಾನು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ.

ನನ್ನಲ್ಲಿ ಮತ್ತು ಸಂಸ್ಥೆಯ ಆಡಳಿತ ಮಂಡಳಿಯ ನನ್ನ ಸಹೋದ್ಯೋಗಿಗಳಲ್ಲಿ ನಂಬಿಕೆ ಇರಿಸಿದ ನಮ್ಮ ಪಾಲುದಾರರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಎಲ್ಲರಿಗೂ ಧನ್ಯವಾದಗಳು.

ವಿ. ಸೂ: ಇದನ್ನು ವಾರ್ಷಿಕ ಮಹಾಸಭೆಯ ನಿರ್ಧಾರಗಳ ದಾಖಲೆಯೆಂದು ಪರಿಗಣಿಸಲಾಗದು.

ಉಡುಪಿಯಲ್ಲಿ ಅ. ಭಾ. ಕೈ ಮಗ್ಗ ಸಪ್ತಾಹದ ಜಿಲ್ಲಾ ಆಚರಣೆ

ಇದೇ ಕಳೆದ ತಾ. 24ರಂದು ಉಡುಪಿಯಲ್ಲಿ ಜರಗಿದ ಅ. ಭಾ. ಕೈ ಮಗ್ಗ ಸಪ್ತಾಹದ ಜಿಲ್ಲಾ ಆಚರಣೆಯನ್ನು ಶ್ರೀಮತಿ ಮನೋರಮಾ ಮಧ್ವರಾಜ್ ಎಂ. ಎಲ್. ಎ. ಅವರು ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು ಬ್ರಹ್ಮಾವರದ ಶ್ರೀ ಜಯಪ್ರಕಾಶ ಶೆಟ್ಟಿ ಕೊಳ್ಕೆಬೈಲ್ ಎಂ. ಎಲ್. ಎ. ಯವರು ಮುಖ್ಯ ಅತಿಥಿಗಳಾಗಿದ್ದರು. ಸಪ್ತಾಹ ಆಚರಣಾ ಸಮಿತಿಯ ಅಧ್ಯಕ್ಷ ಶ್ರೀ ಎ. ಜಿ. ಅಲ್ಸೆಯವರು ಆರಂಭದಲ್ಲಿ ಸ್ವಾಗತಿಸಿದರು.

ಶ್ರೀಮತಿ ಮಧ್ವರಾಜರು ಉದ್ಘಾಟಿಸುತ್ತಾ ಕೈ ಮಗ್ಗದವರು ಜನರ ಅಭಿರುಚಿಗೆ ತಕ್ಕಂಥ ನಯನಾಜೂಕಾಗಿರುವ ಮತ್ತು ಈ ಕಾಲಕ್ಕೆ ತಕ್ಕಂಥ ಬಟ್ಟೆಗಳನ್ನು ತಯಾರಿಸಿ ಜನಾಕರ್ಷಣೆ ಮಾಡಿಕೊಳ್ಳಬೇಕು ಕೈ ಮಗ್ಗ ಬಟ್ಟೆಗಳ ಉದ್ಯಮಿಗಳ ಸಂಕಷ್ಟಗಳನ್ನು ಬಗೆಹರಿಸ ಬೇಕಾದ್ದು ನಮ್ಮ ಕರ್ತವ್ಯವೆಂದೂ ಅಕ್ಕಸಾಲಿಗಳು ನಿರುದ್ಯೋಗಿಗಳಾದಾಗ ಅವರ ಮಕ್ಕಳಿಗೆ ನೆರವು ನೀಡಿದಂತೆ ಸರಕಾರವು ನೇಕಾರರ ಮಕ್ಕಳಿಗೂ ಆ ಸೌಲಭ್ಯ ಒದಗಿಸಬೇಕೆಂದರು ಅಲ್ಲದೆ ಅವರ ಪ್ರಗತಿಗಾಗಿ ತನ್ನಿಂದ ಸಾಧ್ಯವಾದಷ್ಟು ಸರಕಾರದ ನೆರವು ಒದಗಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಕೆ. ವಿಠ್ಠಲ ಸಟ್ಟರು ಕೈ ಮಗ್ಗ ಬಟ್ಟೆ ಉದ್ಯಮದ ಸ್ಥಿತಿ ಗತಿಗಳನ್ನು ವಿವರಿಸಿದರು. ಶ್ರೀ ಜಯಪ್ರಕಾಶ ಶೆಟ್ಟರು ಮಾತಾಡುತ್ತಾ ಶ್ರೀಸಾಮಾನ್ಯನ ನಿಜವಾದ ಸೇವೆ ಮಾಡಬೇಕಿದ್ದರೆ ಸಹಕಾರೀ ಸಂಸ್ಥೆಗಳ ಅವಶ್ಯಕತೆಯನ್ನು ವಿವರಿಸಿ ಇಂಥ ನೇಕಾರರ ಸಂಕಷ್ಟ, ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಜಿಲ್ಲೆಯ ಎಲ್ಲಾ ಎಂ. ಎಲ್. ಎ. ಗಳೂ ಒಂದಾಗಿ ಕಾರ್ಯವೆಸಗುವುದಾಗಿ ಭರವಸೆಯಿತ್ತರು.

ಸಭಿಕರ ಪರವಾಗಿ ಶ್ರೀ ಎಂ. ಕೇಶವ ಶೆಟ್ಟಿಗಾರರು ಮಾತಾಡಿದರು

ಶ್ರೀ ಎಂ. ಮಧ್ವರಾಜರು ಮಾತನಾಡುತ್ತಾ ಮದ್ರಾಸು ಆಧಿಪತ್ಯದಲ್ಲಿ ಕೈ ಮಗ್ಗ ಬಟ್ಟೆಗಳ ಉದ್ಯಮ ಬೆಳೆಯಿತು. ದೈನಂದಿನ ಜೀವನಕ್ಕೆ ಬೇಕಾದ ವೃತ್ತಿ ವೇತನ ಜನರಿಗೆ ದೊರೆಯುತ್ತಿದ್ದುದರಿಂದ ಇಂದು ಹಲವು ಗುಡಿಕೈಗಾರಿಕೆಗಳು ಮೂಲೆ ಪಾಲಾಗುತ್ತಿದ್ದು ಅವುಗಳಲ್ಲಿ ಕೈಮಗ್ಗ ಬಟ್ಟೆಯ ಉದ್ಯಮವೂ ಒಂದೆಂದರು. ಈ ಉದ್ಯಮದ ಪ್ರಗತಿಗಾಗಿ ತನ್ನಿಂದಾಗುವ ಎಲ್ಲಾ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಅಂತ್ಯದಲ್ಲಿ ಶ್ರೀ ಯು. ರಾಮರಾಯರು ಧನ್ಯವಾದ ಅರ್ಪಿಸಿದರು.

ನಿಮಗೆ ಬೇಕಾಗುವ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲ್ಲಿಟಿಯಲ್ಲಿ, ಸ್ಟಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ

ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಸರ್ವತ್ರ ವ್ಯವಹಾರಕ್ಕೆ ಬರಲಿವೆ—

ತೂಗುವ ಮನೆಗಳು

ಇತ್ತೀಚೆಗೆ ಯೆರಿವಾನಿನಲ್ಲಿ ನಡೆದ ವಾಸ್ತುಶಿಲ್ಪಿ ಸಮ್ಮೇಲನವೊಂದರಲ್ಲಿ ಅನೇಕ ಸುದೃಢವಾದ ಸಂಪೂರ್ಣ ಮಾಹಿತಿಯ ವರದಿಗಳನ್ನು ಓದಲಾಯ್ತು. ಅವುಗಳಲ್ಲಿ ಡಾ. ಗಿಯೋರ್ಗಿ ಬರೀಸೊವ್‌ಸ್ಕಿ ಅವರು ಮಂಡಿಸಿದ ವರದಿಯಂತೂ ಅತ್ಯಂತ ಆಕರ್ಷಕವಾಗಿತ್ತು. ಅದು ನಿಜವಾಗಿಯೂ ನನ್ನನ್ನು ಬೆರಗುಗೊಳಿಸಿತು.

ಹಿಂದೆ ೧೯೫೦ರಲ್ಲಿ ಅವರು ತಮ್ಮ 'ತೂಗುಮನೆ' ವಿನ್ಯಾಸಕ್ಕೆ ಸ್ವಾಮ್ಯಾಧಿಕಾರವನ್ನು (ಪೆಟೆಂಟ್) ಪಡೆದಿದ್ದರು. ಆ ಮೇಲೆ ಅವರು ಅದರ ಕುರಿತು ಅನೇಕ ಪುಸ್ತಕಗಳನ್ನೂ, ಲೇಖನಗಳನ್ನೂ ಬರೆದಿದ್ದು, ಅವುಗಳಿಗೆ ಓದುಗರಲ್ಲಿ ವ್ಯಾಪಕ ಪ್ರಚಾರವು ಲಭಿಸಿದೆ. ಈಗ ಅವರವರು ಕೇವಲ ವಿಚಾರ ಮಾತ್ರವಲ್ಲ; ಈಗಾಗಲೇ ಪ್ಯಾರಿಸ್, ಹ್ಯಾಂಬುರ್ಗ್, ರೊಟೆರ್‌ಡಾಮ್, ಅಂಟ್‌ವೆರ್ಪ್' ಪ್ರೋಕ್ಲಾ ನಗರಗಳಲ್ಲಿಯೂ, ಸಂ. ರಾ. ಅಮೆರಿಕದಲ್ಲಿಯೂ ವಸ್ತುತಃ ತೂಗುಮನೆಗಳನ್ನು ನಿರ್ಮಿಸಲಾಗಿದೆ.

ಅವರ ವೃತ್ತಿ ವಾಸ್ತುಶಿಲ್ಪವಲ್ಲ. ಅವರು ಕಲಾ ಸಂಸ್ಥೆಯಲ್ಲಿ ದುಡಿಯುವ ಕಲಾ ಪರಿಣತರು. ಇದರಿಂದ ಅವರಿಗಿಷ್ಟು ಸಂಕೋಚವಿಲ್ಲ. ಕಲೆ ಮತ್ತು ಕೈಗಾರಿಕೆ—ಇವುಗಳ ಮಧ್ಯೆ ಯಾವ ಸಂಬಂಧವೂ ಇಲ್ಲದೆ ಇದ್ದರೆ, ಅದರಿಂದ ಕೈಗಾರಿಕೆಗೇ ಅಹಿತವೆಂದು ಅವರು ಹೇಳುತ್ತಾರೆ.

ವಾಸ್ತು ಶಿಲ್ಪದ ರೂಪಗಳನ್ನು ಪರಿಶೀಲಿಸುತ್ತಿದ್ದಾಗಲೇ ಅವರಿಗೆ ತೂಗುಮನೆಯ ವಿಚಾರ ಹೊಳೆಯಿತು.

ತೂಗು ಮನೆಗಳು ಸುಖ ವಸತಿಯವೂ ಮಿತವ್ಯಯದ ಕಟ್ಟಡಗಳೂ ಆಗಿರುತ್ತವೆ ಯೆಂದು ರುಜುವಾತಾಗಿದೆ. ಅವು ಸೇಕಡಾ ೮—೧೦ರಷ್ಟು ಹೆಚ್ಚು ನೆಲಸ್ಥಳವನ್ನು ವಾಸಕ್ಕೆ ನೀಡುತ್ತವೆ. ಕಟ್ಟಡ ಕಟ್ಟುವ ಸಮಯವೂ ಸುಮಾರು ಮೂರರಲ್ಲೆರಡು ಪಾಲಿನಷ್ಟು ಕಡಿಮೆಯಾಗುತ್ತದೆ. ಅದನ್ನು ಕಟ್ಟುವುದಕ್ಕೆ ಬೇಕಾಗುವ ಕೆಲಸಗಾರರ ಸಂಖ್ಯೆಯೂ ಕಡಿಮೆಯೇ.

ಡಾ. ಬರೀಸೊವ್‌ಸ್ಕಿಯವರು ಈಗ ತೂಗು—ನಗರದ ಕನಸು ಕಾಣತೊಡಗಿದ್ದಾರೆ. ಇದು ಅಸಾಧ್ಯ ಕಲ್ಪನೆಯೆಂದು ಯಾರೋ ಸಮ್ಮೇಲನದಲ್ಲಿ ಹೇಳಿದೊಡನೆಯೇ ಅವರು ಹೀಗೆ ಉತ್ತರವಿತ್ತರು. ಹಿಂದೆ, ಗತ ಶತಮಾನದಲ್ಲಿ, ಮಾಸ್ಕೊ ಕೆಂಪು ಚೌಕದಲ್ಲಿ ಬೇರೆ ಬೇರೆ ಸರಕು ಮಾರಾಟದ ದೊಡ್ಡ ಮಳಿಗೆಯೊಂದನ್ನು ತೆರೆದಾಗ, ಮಕ್ಕಳು ಹಿರಿಯ ಮಹಿಳೆಯರು ಹಗುರವಾದ 'ಕಾನ್‌ಕ್ರೀಟ್' ಸೇತುವೆಗಳನ್ನು ಸ್ವತಃ ಬಳಸಲು ನಿರಾಕರಿಸಿದ್ದರು. ಆ ತೆಳ್ಳನೆಯ ಸೇತುವೆಗಳನ್ನು ನಂಬಲಾಗದೆಂದು' ಅವರು ಉದ್ಗರಿಸಿದ್ದರು. ನಂಬಿಕೆಗೆ ಅರ್ಹವಾದ ಸೇತುವೆಯನ್ನು ಮರ ಅಥವಾ ಕಲ್ಲಿನಿಂದಲೇ ನಿರ್ಮಿಸಬೇಕೆಂದು ಬಹ್ವಂಶದ ಜನರು ಆ ಕಾಲಕ್ಕೆ ಸೂಚಿಸಿದ್ದರು.

ಆದರೆ ಆಧುನಿಕ ವಸ್ತುಗಳು ಸುಭದ್ರವಾದ ಕಾನ್‌ಕ್ರೀಟ್‌ಗಿಂತಲೂ ಹೆಚ್ಚು ದೃಢತರವಾಗಿವೆ. ಉದಾಹರಣೆಗೆ ಹೇಳುವುದಾದರೆ, ಕಬ್ಬಿಣ, ನಿಕ್ಕಲ್ ಮತ್ತು ಇನ್ನಿತರ ಮೂಲಾಣುಗಳ ಮಿಶ್ರ ಲೋಹವು ಪ್ರತಿ ಘನ ಅಂಗುಲಕ್ಕೂ ೩೦೦,೦೦೦—೪೫೦,೦೦೦ ಪೌಂಡುಗಳಷ್ಟು ಸಾಮರ್ಥ್ಯವುಳ್ಳ ಉಕ್ಕನ್ನು ನೀಡುತ್ತದೆ. ಇಂತಹ ಉಕ್ಕಿನಿಂದ ತಯಾರಿಸಲಾದ ೧/೨೫ ಅಂಗುಲದಷ್ಟು ವ್ಯಾಸದ ನಾಲ್ಕು ತಂತಿಗಳು ಒಂದು ಮೋಟಾರು ಕಾರನ್ನು ಕೂಡ ಎತ್ತಬಲ್ಲವು. ಇಂದು ಬಳಕೆಯಲ್ಲಿರುವ ಮಿಶ್ರ ಲೋಹಗಳಿಗಿಂತಲೂ ನೂರು ಪಟ್ಟು ದೃಢತರವಾದ ಉಕ್ಕುಗಳನ್ನು ತಯಾರಿಸುವುದು ಸಾಧ್ಯವೆಂದು ತಜ್ಞರು ಹೇಳುತ್ತಾರೆ.

ಆದರೆ (ಡಾ. ಬರೀಸೊವ್‌ಸ್ಕಿಯವರ ಅಭಿಪ್ರಾಯದಲ್ಲಿ) ಗಡಸುತನಕ್ಕೆ (ರಿಜಿಡಿಟಿ) ಹೆಚ್ಚು ಮಹತ್ವವಿದೆಯೇ ಹೊರತು ಬಲಿಷ್ಠತೆಗಲ್ಲ. ವಸ್ತು ಎಷ್ಟೇ ಶಕ್ತಿಯುತವಾಗಿದ್ದರೂ, ರೂಢಿಯ ಪ್ರಕಾರ ನೇರವಾದ,ನೆಟ್ಟಗಿರುವ ತೊಲೆಗಳಿಂದ ಕಟ್ಟಡ ನಿರ್ಮಾಣ ಕಾರ್ಯವು ನಡೆಯುವಾಗ, ಅದು ತನ್ನಷ್ಟಕ್ಕೆ ಬಾಗುವ ಪ್ರವೃತ್ತಿ ಇದ್ದೇ ಇರುತ್ತದೆ. ಆಗ ಅದರ ಬಲವೂ ಕಡಮೆಯಾಗುತ್ತದೆ.

ಆದರೆ ಉಕ್ಕಿನ ತಂತಿಗಳ ಮೂಲಕ ಇಡೀ ಕಟ್ಟಡವು—ಮೋಟರು ಕಾರಿನಂತೆ, ತೂಗುವ ಸ್ಥಿತಿಯಲ್ಲಿದ್ದಾಗ, ಆಧಾರಗಳು ಚಾಚಿಕೊಳ್ಳುತ್ತವೆ ಮತ್ತು ಕುಸಿತದ ಯಾವ ಅಪಾಯವೂ ಇರದು.

ಯಾಥಿಯ ಸುಭದ್ರ 'ಕಾನ್‌ಕ್ರೀಟ್‌ನ' ನೆಲಗಳು ತಮ್ಮ ಸ್ವಂತ ತೂಕದ ಎರಡರಷ್ಟು ಭಾರವನ್ನು ತಡೆದುಕೊಳ್ಳಬಲ್ಲುವು ಆದರೆ ಚಾಚಲಾದ ತಂತಿಗಳ ವಿಷಯದಲ್ಲಿ ೩೦ ಪಟ್ಟು ಭಾರವೂ ಇರಬಹುದು.

ತೂಗು ಮನೆಗೆ ಅದೇ ಬುನಾದಿ. ಇದರ ಆಧಾರದ ಮೇಲೆ ಈಗ ಕಜಾಖಿಸ್ತಾನದ ಒಂದು ನಗರಕ್ಕಾಗಿ ಯೋಜನೆಗಳನ್ನು ಮಾಡಲಾಗುತ್ತಿದೆ.

ಸಪ್ತಮ—ಸ್ವರ್ಗದಲ್ಲಿ ವಾಸಿಸುವುದೇನೋ ಸರಿಯೇ ಆದರೆ ಆ ಕಾರ್ಯವನ್ನು ಸಾಧಿಸುವುದು ಹೇಗೆ?—ಎಂದು ಸಮ್ಮೇಲನದಲ್ಲಿ ಕೇಳಿದಾಗ, 'ಈಗಿನಂತೆಯೆ ಎತ್ತಿಗೆಯ ಯಂತ್ರದ ಬಳಕೆಯ ಮೂಲಕ!'ವೆಂದು ಬರೀಸೊವ್‌ಸ್ಕಿಯವರು ಉತ್ತರ ಕೊಟ್ಟರು.

ತೂಗು ಮನೆಯಿಂದ ಮುಂದಿನ ತರ್ಕಬದ್ಧವಾದ ಹೆಜ್ಜೆಯಾಗಿ ತೂಗು ನಗರ ಬರಲಿದೆ. ಹಗುರವಾದ ಅತ್ಯಂತ ಸುದೃಢವಾದ ಕಟ್ಟಡ ವಸ್ತುಗಳಿಂದ ಈ ಕಾರ್ಯವು ಸಾಧ್ಯವಾಗುತ್ತದೆ.

ತೂಗು ಮನೆಗೆ ಯಾವ ಆಧಾರಗಳೂ ಇರುವುದಿಲ್ಲ. ಎಂದರೆ, ಅದರ ಆಧಾರಗಳು ಮನೆಗಳ ಹೊರಗಡೆ ಇರುತ್ತವೆ. ಅವು ಭಾರೀ ತೂಗುದೀಪಗಳಂತೆ ನೇತಾಡುತ್ತವೆ.

ಇಡೀ ವಸತಿಯಲ್ಲಿ ಜನರು ಸ್ವತಂತ್ರವಾಗಿ ಓಡಾಡುವುದಕ್ಕೆ ಯಾವ ಬಗೆಯ ತೊಂದರೆಯೂ ಇರದು.

ಇಂತಹ ವಸತಿಗಳುಳ್ಳ ನಗರಕ್ಕೆ ಕಾರ್ಯತಃ ಬುನಾದಿಗಳ ಆವಶ್ಯಕತೆ ಇರದು. ಅದು ಸುತ್ತು ಮುತ್ತಲಿನ ವಾತಾವರಣವನ್ನೂ ಅದಗೆಡಿಸದು ಇದು ಇಂತಹ ನಗರದ ವಿಶೇಷ ಪ್ರಯೋಜನವಾಗಿರುತ್ತದೆ. ಈ ನಗರವು ಹುಲುಸಾದ ಹಸುರು ಬೆಳೆಯ ಕ್ಷೇತ್ರಗಳ ಮಧ್ಯೆ ಸರೋವರಗಳು, ವನಸಿರಿಯ ಪ್ರದೇಶಗಳು ಮುಂತಾದುವುಗಳ ಮೇಲೆ ಸರಳವಾಗಿ ತೂಗಾಡುತ್ತಿರುವುದು.

ಈಗಿನ ಲೆಕ್ಕಾಚಾರಗಳ ಪ್ರಕಾರ ಅರ್ಧ ಮೈಲಿ ಎತ್ತರದ ವರೆಗೆ ಆಧಾರಗಳನ್ನು ನಿರ್ಮಿಸುವುದು ತಾಂತ್ರಿಕವಾಗಿ ಸಾಧ್ಯವೆಂದು ಕಂಡು ಬಂದಿದೆಯೆಂದು ಬರೀಸೋವ್‌ಸ್ಕಿಯವರು ಹೇಳಿದ್ದಾರೆ. ಇನ್ನು ೫೦ ಅಥವಾ ೧೦೦ ವರ್ಷಗಳಲ್ಲಿ ತಜ್ಞರು ಇನ್ನೂ ಏನು ಹೇಳುವರೆಂಬುದನ್ನು ಯಾರು ಬಲ್ಲರು?

● ●

ವಿಶೇಷ ಲೇಖನ—

ಭಾರತದಲ್ಲಿ ವ್ಯಕ್ತಿ ವಯೋಮಾನದ ಏರಿಕೆ

ಭಾರತದಲ್ಲಿ ಈಗ ಜನಿಸುವ ಮಗು ಸುಮಾರು 52 ವರ್ಷಗಳ ಕಾಲ ಜೀವಿಸುವ ನಿರೀಕ್ಷೆಯಿದೆ. ಎರಡು ದಶಕಗಳ ಹಿಂದೆ ಭಾರತೀಯರ ವಯೋಮಾನ ಕೇವಲ 32 ವರ್ಷಗಳಷ್ಟಿತ್ತು. ಕಳೆದ ಎರಡು ದಶಕಗಳಲ್ಲಿ ಸುಧಾರಿಸಿದ ವೈದ್ಯಕೀಯ ಸೌಲಭ್ಯಗಳಿಂದಾಗಿ ಮರಣ ಪ್ರಮಾಣವೂ ಇಳಿದಿದೆ ದೇಶದ ಮರಣ ಪ್ರಮಾಣ ಇಪ್ಪತ್ತು ವರ್ಷಗಳ ಹಿಂದೆ ಪ್ರತಿ ಸಾವಿರಕ್ಕೆ 27.4ರಷ್ಟಿದ್ದು ಅದು ಈಗ ಸಾವಿರಕ್ಕೆ 14ಕ್ಕೆ ಇಳಿದಿದೆ. ಶಿಶುಗಳ ಮರಣ ಸಂಖ್ಯೆಯಲ್ಲಿ ಮಹತ್ವದ ಸುಧಾರಣೆ ಕಂಡು ಬಂದಿದೆ.

ಇಡೀ ಜಗತ್ತಿನಲ್ಲಿ ಎರಡನೇ ದೊಡ್ಡ ರಾಷ್ಟ್ರವಾದ ಭಾರತದಲ್ಲಿ ಸರ್ವರಿಗೆ ವೈದ್ಯಕೀಯ ಹಾಗೂ ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು ಸುಲಭದ ಮಾತಲ್ಲವಾದರೂ ಸಾಕಷ್ಟು ಪ್ರಮಾಣದಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರತಿ 10,000 ಮಂದಿಗೆ ಒಂದರಂತೆ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇಂತಹ ಆರೋಗ್ಯ ಕೇಂದ್ರಗಳಲ್ಲಿ ಒಬ್ಬ ಮಹಿಳೆಯೂ ಸೇರಿದಂತೆ ಇಬ್ಬರು ವೈದ್ಯಾಧಿಕಾರಿಗಳು ಹಾಗೂ ಅದಕ್ಕೆ ಅಗತ್ಯವಿದ್ದಷ್ಟು ಪ್ರಮಾಣದ ಇತರ ಸಿಬ್ಬಂದಿ ಇರುವರು. ಈಗಾಗಲೇ ದೇಶದಾದ್ಯಂತ ವ್ಯಾಪಿಸಿರುವಂತೆ 5,000 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 26,000 ಉಪ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ನೀರು ಪೂರೈಕೆ ಮತ್ತು ಚರಂಡಿ ಸೌಲಭ್ಯಗಳಿಂದಾಗಿ ಕಾಲರಾ ಇತ್ಯಾದಿ ಖಾಯಿಲೆಗಳನ್ನು ನಿರ್ಮೂಲನೆ ಮಾಡಲಾಗಿದೆ. ಮಲೇರಿಯಾ ಮತ್ತು ಸಿಡುಬು ನಿರ್ಮೂಲನೆಯಲ್ಲಿ ಹೆಚ್ಚಿನ ಸುಧಾರಣೆ ಕಂಡು ಬಂದಿದೆ. ಸುಧಾರಿಸಿದ ವೈದ್ಯಕೀಯ ವ್ಯವಸ್ಥೆಯಿಂದಾಗಿ ಕಳೆದ ಐದು ವರ್ಷಗಳಿಂದ ದೇಶ ಪ್ಲೇಗ್‌ನಿಂದ ಮುಕ್ತವಾಗಿದೆ.

● ●

ಕುಂದಾಪುರ ಮು. ಕೋರ್ಟಿನಲ್ಲಿ

O. S. 386/71

ವಾದಿ—ದಿ. ಕರ್ನಾಟಕ ಬೇಂಕ್ ಲಿಮಿಟೆಡ್

ಪ್ರತಿವಾದಿರು —ಸುಬ್ರಮಣ್ಯ ಬಾಯರಿ ಕೂಡಾ

ಕುಂದಾಪುರ ತಾಲ್ಲೂಕು ನಂಬ್ರ 11ನೇ ಉಳ್ಳೂರು ಗ್ರಾಮದಲ್ಲಿರುವ ಮಂಜುನಾಥ ಬಾಯರಿ ಮಗ ಸುಬ್ರಮಣ್ಯ ಬಾಯರಿ 1, ಕುಂದಾಪುರ ತಾಲ್ಲೂಕು ಕಿರಿ ಮಂಜೇಶ್ವರ ಗ್ರಾಮದಲ್ಲಿರುವ ಶಂಕರ ಹೆಬ್ಬಾರರ ಮಗ ಸುಬ್ರಮಣ್ಯ ಹೆಬ್ಬಾರ 1, ಕೂಡಾ 2 ಜನರಿಗೆ ಈ ಮೂಲ್ಕ ತಿಳಿಸಿದ್ದು,

ವಾದಿ ಬೇಂಕಿಗೆ ಪ್ರತಿವಾದಿರಿಂದ ಡಿ. ನೋಟು ಪ್ರಕಾರ ಬಹಾ ಋಣಗಳ ವ್ವಲು ಕುರಿತು ವಾದಿ ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಣ ದಾವೆ ತಾ. 8–6–72 ಕ್ಕೆ ನೋಟೀಸಿನ ಬಗ್ಗೆ ಇರುತ್ತದೆ. ಆ ದಿನ ನೀವು ಸ್ವತಹಾ ವ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಾಹರಣೆ ದಾಖಲು ಮಾಡಲಿಕ್ಕೆ ತಪ್ಪಿದಲ್ಲಿ ನಿಮ್ಮ ಉಜುರ್ ಶಿವ್ಾಯ ಮೇಲಣ ದಾವೆ ಕಾನೂನು ಪ್ರಕಾರ ತೀರ್ಮಾನವಾಗುತ್ತದೆಂಬ ಸಂಗತಿ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದೆ

(By order of the court)

A. N. Rao

Advocate for Plff.

Coondapur

28–4–72

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 157 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ–ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್.

(ಸ್ಥಾಪನೆ: 1921)

ರಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಉಡುಪಿ ರೋಟರಿ ಕ್ಲಬ್ಬಿನಲ್ಲಿ ರಾಜಶೇಖರ ಶೆಟ್ಟಿ

ಕಳೆದ ತಾ. 25ರಂದು ಉಡುಪಿಯ ರೋಟರಿ ಕ್ಲಬ್ಬಿನಲ್ಲಿ ಜರಗಿದ ಸಭೆಯಲ್ಲಿ ಪ್ರಚಲಿತ ರಾಜಕೀಯ ವಿದ್ಯಮಾನದ ಬಗ್ಗೆ ದೈನಿಕ 'ಇಂಡಿಯನ್ ಎಕ್ಸ್‌ಪ್ರೆಸ್'ನ ಸ್ಟಾಫ್ ವರದಿಗಾರ ಶ್ರೀ ವಿ. ಟಿ. ರಾಜಶೇಖರ ಶೆಟ್ಟರು ಮಾತಾಡುತ್ತಾ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಘೋಷಣೆಗಳೆಲ್ಲ ಪ್ರಗತಿ ಪರವಾದರೂ ನಿಷ್ಕ್ರಿಯ ಹಾಗೂ ಪ್ರತಿಗಾಮಿ ಮನೋವೃತ್ತಿಯ ಆಡಳಿತ ಯಂತ್ರದಿಂದಾಗಿ ಅವು ಆಚರಣೆಗೆ ಬರುವುದು ಅಸಾಧ್ಯ ಎಂದರು.

ಶ್ರೀ ಶ್ರೀಕೃಷ್ಣಯವರು ಮಂಡಿಸಿದ ಮುಂಗಡಪತ್ರವು ಹಿಂದಿನವುಗಳ ಪಡಿಯಚ್ಚೆಂದು ತಿಳಿಸಿದ ಶ್ರೀ ಶೆಟ್ಟರು ಹೊಸ ಸರಕಾರಗಳ ಅರ್ಥನೀತಿಯಲ್ಲಿ ಮೂಲಭೂತ ಬದಲಾವಣೆ ಆಗಿಲ್ಲವೆಂಬುದನ್ನು ಸಮರ್ಥಿಸುತ್ತಾ ಸಹಕಾರಿ ಕ್ಷೇತ್ರದಲ್ಲಿನ ವಿಚಾರವನ್ನು ಟೀಕಿಸಿದ ಅವರು ಆಡಳಿತ ಯಂತ್ರದ ಶಿಸ್ತನ್ನು ಹೆಚ್ಚಿಸದೆ ದೇಶದ ಪ್ರಗತಿ ಅಸಾಧ್ಯ ಎಂದರು.

ಶ್ರೀ ಟಿ. ರಮೇಶ ಪೈಯವರು ಮಾತಾಡಿ ನೌಕರರಿಗೆ 15 ವರ್ಷಗಳ ಕಡ್ಡಾಯ ಉದ್ಯೋಗಾವಧಿಯ ಸಲಹೆಯಿತ್ತಲ್ಲದೆ ಹಿರಿಯರ ಸೇವೆ ಇಲಾಖೆಗೆ ಆಗತ್ಯವೆಂದು ತೋರಿದರೆ 15 ವರ್ಷಗಳಿಗಿಂತ ಹೆಚ್ಚು ಮಾಡಬಹುದೆಂದೂ ಸಲಹೆಯಿತ್ತರು.

ಶ್ರೀ ಕು. ಶಿ. ಹರಿದಾಸ ಭಟ್ಟರು ತಮ್ಮ ಭಾಷಣದಲ್ಲಿ ದೇಶದ ನಾಯಕತ್ವ ನಡೆದು ಬಂದ ದಾರಿಯನ್ನು ವಿವೇಚಿಸಿದರು. ಡಾ| ಗುಂಡೂರಾವ್, ಶ್ರೀಪತಿ ಆಚಾರ್ಯ, ಡಾ| ಎ. ಕೃಷ್ಣ ರಾವ್ ಶ್ರೀ ಎಚ್. ಡಿ. ಎಸ್. ಪೈ ಮೊದಲಾದವರು ವಿಚಾರ ವಿನಿಮಯದಲ್ಲಿ ಭಾಗವಹಿಸಿದ್ದರು.

ಅಧ್ಯಕ್ಷತೆ ವಹಿಸಿದ್ದ ಡಾ| ಕೆ. ಮೋಹನದಾಸ ಪೈಯವರು ಶ್ರೀ ರಮೇಶ ಪೈಗಳ ಸಲಹೆಯನ್ನು ಅನುಮೋದಿಸಿದರು.

ಶ್ರೀ ಕೆ. ಎಂ. ಕಾರಂತರು ಅಂತ್ಯದಲ್ಲಿ ವಂದಿಸಿದರು.

ಭದ್ರಾವತಿಯ ಜನತೆಯಿಂದ ಮುಲ್ಲಾಡಿಯ ಅನಾಥ ಸೇವಾಶ್ರಮಕ್ಕೆ ಕಾರು ಸಮರ್ಪಣೆ

ಇದೇ ಕಳೆದ ತಾ. 24ರಂದು ಮುಲ್ಲಾಡಿ ಪಳ್ಳಿಯ ಅನಾಥ ಸೇವಾಶ್ರಮದ ಸಂಸ್ಥಾಪಕ ಅಧ್ಯಕ್ಷರಾಗಿ ಸುಮಾರು 30 ವರುಷಗಳಿಂದ ದುಡಿಯುತ್ತಿರುವ 80 ವರುಷ ವಯಸ್ಸಿನ ಶ್ರೀ ಶ್ರೀ ನಾಘವೇಂದ್ರ ಸ್ವಾಮಿಗಳಿಗೆ ಭದ್ರಾವತಿಯ ಜನತೆ ಸಂಗ್ರಹಿಸಿದ 24 ಸಾವಿರ ರೂ. ಗಳಲ್ಲಿ ಒಂದು ಅಂಬಾಸಿಡರ್ ಕಾರು ಕೊಂಡು ಅದನ್ನು ಸ್ವಾಮಿಗಳಿಗೆ ಅರ್ಪಿಸುವ ಸಮಾರಂಭವು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷ ಶ್ರೀ ಚಂದ್ರಪ್ಪ ಪಟೇಲರ ಅಧ್ಯಕ್ಷತೆಯಲ್ಲಿ ಭದ್ರಾವತಿಯ ನ್ಯೂಟೌನ್ ಶಾರದಾ ಮಂದಿರದಲ್ಲಿ ಜರಗಿತು. ಕಾರ್ಖಾನೆಯ ಆರ್ಥಿಕ ನಿಯಂತ್ರಣಾಧಿಕಾರಿ ಶ್ರೀ ಆರ್. ಕೆ. ಎ. ಸುಬ್ರಹ್ಮಣ್ಯಂರವರು ಜನತೆಯ ಪರವಾಗಿ ಸ್ವಾಮೀಜಿಯವರಿಗೆ ಸ್ವಿಚ್ ಕೀಯನ್ನು ಅರ್ಪಿಸಿದರು.

ಆರಂಭದಲ್ಲಿ ಕುಮಾರಿ ಸೀತಾರಿಂದ ದೇವತಾಸ್ತುತಿ. ವಿದ್ವಾನ್ ರಾಮಮೂರ್ತಿಯವರಿಂದ ಲಘು ಸಂಗೀತದ ನಂತರ ಶ್ರೀ ಜಿ. ಮಾಧವಾಚಾರ್ ಸ್ವಾಗತಿಸಿದರು.

ಶ್ರೀ ಕೆ. ಬಸಪ್ಪನವರು ವರದಿ ಒಪ್ಪಿಸಿದ ಬಳಿಕ ಆಶ್ರಮದ ಪರವಾಗಿ ಭದ್ರಾವತಿಯಲ್ಲಿ ಶಾಖೆಯೊಂದನ್ನೂ ಸೈನ್ಸ್ ವಿಭಾಗದ ಕಾಲೇಜನ್ನೂ ಹಾಗೂ ರಾಮಕೃಷ್ಣ ಗುರುಕುಲಾಶ್ರಮದ ಮಾದರಿಯಲ್ಲಿ ಶಿಶುವಿಹಾರದಿಂದ ಪ್ರೌಢ ಶಾಲೆ ವರೆಗಿನ ತರಗತಿಗಳನ್ನು ನಡೆಸುವ ಕೇಂದ್ರವೊಂದನ್ನು ತೆರೆಯಬೇಕೆಂದೂ ಒಂದು ಆಯುರ್ವೇದಾಸ್ಪತ್ರೆಯನ್ನು ತೆರೆಯಬೇಕೆಂದೂ ಪ್ರಾರ್ಥಿಸಿದರು.

ಆಶ್ರಮದ ವಿದ್ಯಾರ್ಥಿ ಶ್ರೀ ಪೂರ್ವಾಚಾರ್‌ರವರು ಯೋಗಾಸನಗಳನ್ನು ಪ್ರದರ್ಶಿಸಿದರು. ಶ್ರೀ ಸ್ವಾಮೀಜಿಯವರು ಸ್ವತಃ 'ಮಾಂಸ ಖಂಡಗಳ ನಿಯಂತ್ರಣ' ಪ್ರದರ್ಶನವಿತ್ತರು.

ಶ್ರೀ ಸ್ವಾಮಿಗಳು ಮಾತಾಡಿ, ನಾನೊಬ್ಬ ರಾಷ್ಟ್ರಸೇನೆಯಲ್ಲಿರುವ ನಮ್ಮ ಪೂಜಾರಿ, ನಿಮ್ಮೆಲ್ಲರ ಉದಾರತೆ ಕೊಡುಗೆಗಳೇ ಮುಲ್ಲಾಡಿಯಲ್ಲಿ ನಡೆಸಿರುವ ಕಾರ್ಯಕ್ಕೆ ಸಾಕ್ಷಿ. ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂಥ ವಿದ್ಯಾಭ್ಯಾಸ ದೊರಕಬೇಕು, ಎಂದು ಹೇಳಿ ಜನತೆಯ ಕೋರಿಕೆ ಪೂರೈಸಲು ತಾನು ಸಿದ್ಧನಿರುವುದಾಗಿಯೂ ಅದಕ್ಕೆ ಜನತೆಯ ಸಹಕಾರವೂ ಆಗತ್ಯ ಎಂದರು.

ಭದ್ರಾ ಎಜ್ಯುಕೇಶನ್ ಮತ್ತಿತರ ಸಂಘ ಸಂಸ್ಥೆಗಳು ಸ್ವಾಮಿಗಳಿಗೆ ಹೂ ಹಾರ ಅರ್ಪಿಸಿದರು.

ಶ್ರೀ ಎಸ್. ಮಲ್ಲಿಕಾರ್ಜುನಯ್ಯನವರು ವಂದಿಸಿದರು.

ಕುಮಟಾದಲ್ಲಿ ಕಾರ್ಪೊರೇಶನ್ ಬ್ಯಾಂಕ್ ಶಾಖೆ ಉದ್ಘಾಟನೆ

ಪ್ರಮುಖ ಶೆಡ್ಯೂಲ್ ಬ್ಯಾಂಕ್ ಆಗಿರುವ ಕೆನರಾ ಬೇಂಕಿಂಗ್ ಕಾರ್ಪೊರೇಶನಿನ ಉ. ಕ. ಜಿಲ್ಲೆಯ ಕುಮಟಾದಲ್ಲಿಯ ಶಾಖೆಯನ್ನು ತಾ. 21ರಂದು ಡಾ| ಬಿ. ಎಂ. ಪೈಯವರು ಶ್ರೀ ಆರ್. ಎಸ್. ಭಾಗ್ವತ್‌ರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಬ್ಯಾಂಕಿನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಕೆ. ಆರ್. ಕಾರಂತರು ಸ್ವಾಗತಿಸಿ ಬ್ಯಾಂಕ್ 104 ಶಾಖೆಗಳನ್ನು ಹೊಂದಿರುವುದಾಗಿ ತಿಳಿಸಿ ದಾಂಡೇಲಿ, ಭಟ್ಕಳ ಮತ್ತು ಶಿರಸಿಗಳಲ್ಲಿ ಇನ್ನೂ ಮೂರು ಶಾಖೆಗಳನ್ನು ತೆರೆಯಲಿರುವುದಾಗಿ ತಿಳಿಸಿದರು. ಬೇಂಕಿನ ಚೆಯರ್‌ಮೇನ್ ಶ್ರೀ ಎಂ. ಆರ್. ಕಾಮತರೂ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಶಾಖೆಯ ಮೆನೇಜರ್ ಶ್ರೀ ಕೆ. ರಾಧಾಕೃಷ್ಣ ಪೈಯವರು ವಂದಿಸಿದರು.

ಅಕಾಡೆಮಿ ಸ್ಥಾಪಕರ ದಿನಾಚರಣೆ

ತಾ. 30ರಂದು ಮಣಿಪಾಲದ ವ್ಯಾಲಿವ್ಯೂ ಇಂಟರ್ ನ್ಯಾಶನಲ್ ಹೋಟೇಲಿನಲ್ಲಿ ಅಕಾಡೆಮಿ ಸ್ಥಾಪಕರ ದಿನಾಚರಣೆ ಸಮಾರಂಭವು ಚೆಟ್ಟಿನಾಡಿನ ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಸ್ವಾಗತಿಸಿ ಅಧ್ಯಕ್ಷ ಶ್ರೀ ಚೆಟ್ಟಿಯಾರರ ಪರಿಚಯ ಮಾಡಿಸಿದರು ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಡಾ| ಸುನೀತಿಕುಮಾರ ಚಟರ್ಜಿಯವರ ಸಂದೇಶವನ್ನು ಓದಿದ ನಂತರ ಅಕಾಡೆಮಿಯ ವಿವಿಧ ಶೈಕ್ಷಣಿಕ ಸಂಸ್ಥೆಗಳ ಪರವಾಗಿ ಡಾ| ಟಿ. ಎಂ. ಎ. ಪೈಗಳಿಗೆ ಹೂ ಹಾರವನ್ನರ್ಪಿಸಲಾಯಿತು.

ಡಾ| ಎಂ. ಪಿ. ಪೈಗಳು ಡಾ| ಪೈಗಳಿಗೆ ಶ್ರೇಯಃ ಪ್ರಾರ್ಥನಾ ಭಾಷಣಮಾಡಿದರು. ಶ್ರೀ ಟಿ. ಎ. ಪೈಗಳು ಡಾ| ಪೈಗಳಿಗೆ ಶುಭಕೋರುವ ಭಾಷಣ ಮಾಡುತ್ತಾ ನಮಗಿರುವ ಸಂಪನ್ಮೂಲವನ್ನು ಯೋಗ್ಯರೀತಿಯಲ್ಲಿ ಮಿತವೆಚ್ಚದಲ್ಲಿ ಎಂಥ ಮಹತ್ವದ ಕಾರ್ಯವನ್ನೂ ಸಾಧಿಸಬಹುದೆನ್ನುವುದಕ್ಕೆ ಡಾ| ಪೈಗಳು ಕಟ್ಟಿರುವ ಸಂಸ್ಥೆಗಳು ನಿದರ್ಶನವೆಂದರು. ಮೆಡಿಕಲ್ ಕಾಲೇಜು ಸ್ಥಾಪಿಸುವಲ್ಲಿ ಡಾ| ಪೈಗಳು ಎದುರಿಸ ಬೇಕಾಗಿ ಬಂದ ಅನೇಕ ಕಷ್ಟಗಳನ್ನು ಅವರು ವಿವರಿಸಿ ಅವರ ಕಾರ್ಯಸಾಧನೆಯನ್ನು ಕೊಂಡಾಡಿದರು.

ಅಧ್ಯಕ್ಷ ಚೆಟ್ಟಿಯಾರರು ಭಾಷಣಕ್ಕೆ ಮೊದಲು ಡಾ| ಪೈಯವರ ದೇಹಗಾತ್ರದ ತೈಲ ಚಿತ್ರವನ್ನು ಅನಾವರಣಗೊಳಿಸಿದರು. ಅವರು ತಮ್ಮ ಭಾಷಣದಲ್ಲಿ ದ. ಕ. ಜಿಲ್ಲೆಯ ಜನ ಶ್ರೀಮಂತರಲ್ಲದಿದ್ದರೂ ನಮ್ಮ ದೇಶಕ್ಕೆ ಭೂಷಣಪ್ರಾಯರಾದ ಬುದ್ಧಿಸಂಪನ್ನ ಜನರನ್ನು ಹೊಂದಿರುವ ಶ್ರೀಮಂತ ಜಿಲ್ಲೆಯಾಗಿದೆ. ಶೈಕ್ಷಣಿಕವಾಗಿಯೂ ಬೌದ್ಧಿಕವಾಗಿಯೂ ದೇಶಕ್ಕೆ ಬಹು ದೊಡ್ಡ ಕಾಣಿಕೆಯನ್ನು ಈ ಜಿಲ್ಲೆ ಸಲ್ಲಿಸಿದೆ ಎಂದರು ಡಾ| ಪೈಗಳ ಅದ್ಭುತವಾದ ಸಾಧನೆಗಳ ಕುರಿತು ಮಾತಾಡಿ ಅವರು ನಿರ್ಮಿಸಿರುವ ಶೈಕ್ಷಣಿಕ ಸಂಸ್ಥೆಗಳು ಉತ್ತಮ ಗುಣಮಟ್ಟದ ವಿದ್ಯೆಯನ್ನು ನೀಡುತ್ತಲಿರುವುದರಿಂದಲೂ ಅವರ್ಣಿಪ್ರಾಯ ಸಂಸ್ಥೆಗಳಾಗಿರುವುದರಿಂದಲೂ ದೇಶ ವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಿಕೊಳ್ಳುವಂತಾಗಿದೆ ಎಂದರು. ಮೆಡಿಕಲ್ ಕಾಲೇಜಿನಲ್ಲಿ ವಸೂಲು ಮಾಡುತ್ತಿರುವ ಕ್ಯಾಪಿಟೇಶನ್ ಫೀಯ ವಿಷಯವನ್ನವರು ಸಮರ್ಥಿಸಿದರು

ಶ್ರೀ ಟಿ. ಎ. ಪೈಗಳು ಸಿಂಡಿಕೇಟ್ ಬ್ಯಾಂಕ್ ಮತ್ತು ಜೀವವಿಮಾ ಕಾರ್ಪೊರೇಶನಿನಲ್ಲಿ ಸಲ್ಲಿಸಿರುವ ಸೇವೆಯನ್ನವರು ಸ್ಮರಿಸಿ ಕೇಂದ್ರದಲ್ಲಿ ಸಚಿವರಾಗಿ ನಾಡಿಗೆ ಅತ್ಯಮೂಲ್ಯವಾದ ಸೇವೆ ದೊರಕುವಂತಾಗಲೆಂದು ಹಾರೈಸಿದರು. ಮಣಿಪಾಲದ ದಾರಿ ಅನುಕರಣಾರ್ಹವೆಂದು ನುಡಿದ ಅವರು ಡಾ| ಪೈಗಳಿಗೆ ದೀರ್ಘಾಯುಷ್ಯವನ್ನು ಕೋರಿದರು

ಡಾ| ಪೈಗಳು ತನ್ನ ಉತ್ತರದಲ್ಲಿ ಟ್ರಸ್ಟಿಗಳ, ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟುವಲ್ಲಿ ತನ್ನೊಡನೆ ಸಹಕರಿಸಿದವರಿಗೆಲ್ಲ ಕೃತಜ್ಞತೆಯನ್ನು ಸಲ್ಲಿಸಿದರು. ಯಾವ ಸಂಸ್ಥೆಗಳೇ ಆಗಲಿ ವ್ಯಕ್ತಿಯ ಪರಿಪೂರ್ಣತೆಗೆ ಅದು ನೆರವಾಗಬೇಕು; ದೇಶದಲ್ಲಿ ಹೊಸ ಚೈತನ್ಯವನ್ನು ತುಂಬುವಂತಾಗಬೇಕೆಂದರು. ವ್ಯಾಲಿವ್ಯೂ ಇಂಟರ್‌ನೇಶನಲ್ ಹೋಟೆಲಿನ ಕುರಿತು ಅವರು ಪ್ರಸ್ತಾಪಿಸಿದರು. ಸಂಸ್ಥೆಗಳು ಸಮಾಜಕ್ಕೆ ಉಪಯುಕ್ತವಾದ ಸೇವೆ ಸಲ್ಲಿಸುವಂತಾಗಬೇಕೆಂದು ಅವರು ಹೇಳಿದರು. ಶ್ರೀ ಪಿ. ಶ್ರೀಪತಿ ಆಚಾರ್ಯರು ಅಂತ್ಯದಲ್ಲಿ ಧನ್ಯವಾದ ಸಮರ್ಪಿಸಿದರು.

ಬಡೆಕ್ಕಿಲ ವೆಂಕಟರಮಣ ಭಟ್ಟರಿಗೆ ಸನ್ಮಾನ ಸಮಾರಂಭ

ಬಂಟ್ವಾಳ ತಾಲೂಕಿನ ಕೆದಿಲದ ಪ್ರಸಿದ್ಧ ಮನೆತನದ ಕೃಷಿ ವಾಣಿಜ್ಯ ಪ್ರವೀಣರೂ, ಸಮಾಜ ಸೇವಾಸಕ್ತರೂ, ಯಕ್ಷಗಾನ ಕಲಾ ನಿಪುಣರೂ, ಗಣ್ಯ ಕವಿಗಳೂ, 86 ವರುಷದ ವಯೋವೃದ್ಧರೂ ಆದ ಶ್ರೀ ವೆಂಕಟರಮಣ ಭಟ್ಟರನ್ನು ಸನ್ಮಾನಿಸುವ ಸಮಾರಂಭವು ತಾ. 30.4.72ರಂದು ಕೆದಿಲ ಐಡೆಡ್ ಹಾಯರ್ ಪ್ರೈಮರಿ ಶಾಲೆಯಲ್ಲಿ ಶಾಲಾ ಕಮಿಟಿ ಮತ್ತು ಸನ್ಮಾನ ಸಮಿತಿಯ ವತಿಯಿಂದ ಮಂಗಳ ಗಂಗೋತ್ರಿ ಸ್ನಾತಕೋತ್ತರ ಕಾಲೇಜಿನ ಪ್ರಾಧ್ಯಾಪಕ ನಿರ್ದೇಶಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ವೈಭವ ಪೂರ್ಣವಾಗಿ ನೆರವೇರಿತು. ವೈದಿಕ ಪ್ರಾರ್ಥನೆಯಾದ ಮೇಲೆ ವಿದ್ವಾನ್ ಎದುಕೆಳ ಶಂಭು ಭಟ್ಟರು ಸ್ವಾಗತ ಭಾಷಣ ಮಾಡುತ್ತಾ ತಮ್ಮ ಸೀಮೆಯ ಹಾಗೂ ಗ್ರಾಮದ ಹಿರಿಮೆಯನ್ನೂ ಶ್ರೀ ವೆಂಕಟ್ರಮಣ ಭಟ್ಟರ ಸ್ಥಾನ ಮಾನಗಳನ್ನೂ ವಿವರಿಸಿದರು.

ಸನ್ಮಾನ ಸಮಿತಿಯವರಿಂದ ಸಂಪಾದಿತವಾದ 'ಕಾಣಿಕೆ' ಎಂಬ ಸನ್ಮಾನ ಗ್ರಂಥವನ್ನು ಸೈಂಟ್ ಆಲೋಸಿಯಸ್ ಕಾಲೇಜಿನ ಕನ್ನಡ ರೀಡರ್ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಅನಾವರಣಗೊಳಿಸಿ ಶ್ರೀ ಬಡೆಕ್ಕಿಲರ ಪಾಂಡಿತ್ಯವನ್ನು ಕೊಂಡಾಡಿ 'ಕಾಣಿಕೆ'ಯ ಸೂಕ್ಷ್ಮ ಪರಿಚಯವನ್ನಿತ್ತರು.

ಎಡ್ವರ್ಡ್ ಮುಳಿಯ ಮಹಾಬಲ ಭಟ್, ಪ್ರಿನ್ಸಿಪಾಲ್ ಡಾ| ಗುರುರಾಜ ಭಟ್, ಗಂಡಿ ಚಂದ್ರಶೇಖರ ಐತಾಳ್, ವೆಂಕಪ್ಪ ಭಟ್, ದೇರಜೆ ಸೀತಾರಾಮಯ್ಯ ಮೊದಲಾದವರು ಸನ್ಮಾನಿತ ಭಟ್ಟರ ಸಾಹಿತ್ಯ ಪ್ರೌಢಿಮೆಯನ್ನು ಕೊಂಡಾಡಿದರು.

ಶಾಲಾಭಿವೃದ್ಧಿ ಕಮಿಟಿಯ ಸನ್ಮಾನ ಪತ್ರವನ್ನು ಅಧ್ಯಕ್ಷ ಕೈಂತಜೆ ಗೋಪಾಲಕೃಷ್ಣ ಭಟ್ಟರು ಓದಿ ಸಮರ್ಪಿಸಿದರು. ಅದರಲ್ಲಿ ಶ್ರೀ ಬಡೆಕ್ಕಿಲರ ಬಹುಕ್ಷೇತ್ರ ಪ್ರವೀಣತೆಗಳನ್ನು ವಿವರಿಸಲಾಗಿತ್ತು. ಕಾವ್ಯ ವಾಚನದ ಬಳಿಕ ಸನ್ಮಾನಿತ ಶ್ರೀ ಭಟ್ಟರು ಮರುನುಡಿಗಳನ್ನಾಡುತ್ತಾ, ತನ್ನ ಜೀವನದ ಅನುಭವಗಳನ್ನು ವಿವರಿಸಿ ಪ್ರಾಸಬದ್ಧವಾಗಿ ಕವಿತಾ ರಚನೆ ಮಾಡುವುದೇ ಉತ್ಕೃಷ್ಟವೆಂದೂ, ನವ್ಯಕಾವ್ಯದ ಸ್ವೇಚ್ಛಾ ಪ್ರವೃತ್ತಿಯನ್ನು ತಾನು ಮೆಚ್ಚುವುದಿಲ್ಲವೆಂದೂ ಹೇಳಿ ತನಗಿತ್ತ ಸನ್ಮಾನಕ್ಕಾಗಿ ಆಭಾರ ಸೂಚಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಮಾತಾಡುತ್ತಾ, ಸನ್ಮಾನಿತ ಶ್ರೀ ಭಟ್ಟರ ಹಿರಿಯ ಗುಣಗಳನ್ನೂ, ಪರಮಾದರ್ಶಗಳನ್ನೂ ಪ್ರಸ್ತಾಪಿಸಿ ಈ ಮೊದಲೇ ಶ್ರೀ ಭಟ್ಟರನ್ನು ಸನ್ಮಾನಿಸದಕ್ಕಾಗಿ ವಿಷಾದಿಸಿ ಇಂದಿನ ಸನ್ಮಾನದ ವಿಶಿಷ್ಟತೆಗಳನ್ನು ಕೊಂಡಾಡಿದರು. ಕೊನೆಯಲ್ಲಿ ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಹಾರ್ದಿಕ ಕೃತಜ್ಞತಾ ಸಮರ್ಪಣೆ

ನಮ್ಮ ಪುತ್ರಿ ಕುಮಾರಿ ವೀಣಾಳ ವಿವಾಹ ಸಮಾರಂಭವು ಶ್ರೀ ಕೆ. ತಿಮ್ಮಪ್ಪ ಶೆಟ್ಟರ ಪುತ್ರ ಡಾ| ಸದಾನಂದ ಶೆಟ್ಟರೊಂದಿಗೆ ತಾ. 26—4—72ರಂದು ಉಡುಪಿ ಗೀತಾಂಜಲಿ ಶಿಕ್ಷಾರ್ ಹೌಸಿನಲ್ಲಿ ಜರಗಿದ ಸಂದರ್ಭದಲ್ಲಿ ಇಷ್ಟ ಮಿತ್ರರೊಂದಿಗೆ ಸಮಾರಂಭಕ್ಕೆ ಸಮಾಗಮಿಸಿ ವಧೂವರರನ್ನು ಆಶೀರ್ವದಿಸಿದವರಿಗೂ, ಪಾರಿತೋಷಕಗಳನ್ನಿತ್ತ ಬಂಧು ಭಗಿನಿಯರಿಗೂ ವಿವಿಧ ರೀತಿಯಿಂದ ಸಹಕರಿಸಿದ ಸಕಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

ಅಂತೆಯೇ ಮರುದಿನ ರಾತ್ರಿ ನಮ್ಮ ನಿವಾಸದಲ್ಲಿ ಈ ವಿವಾಹ ಸಂಬಂಧ ಏರ್ಪಡಿಸಿದ್ದ ಭೋಜನ ಕೂಟಕ್ಕೆ ಚಿತ್ತೈಸಿದ ಸರ್ವರಿಗೂ ನಾವು ಆಭಾರಿಗಳು.

ಉಡುಪಿ, ಶ್ರೀಮತಿ ಮತ್ತು ಶ್ರೀ ಬೇಳಂಜೆ ಮೋನಪ್ಪ ಹೆಗ್ಡೆ

28–4–72

(ಎರಡನೇ ಪುಟದಿಂದ)

ಏನೋ ಅನಾಹುತ ಘಟಿಸಿದೆ ಎಂದು ಚಪ್ಪರಕ್ಕೆ ಧಾವಿಸಿ ಬಂದಳು ಮೇನಕಾ ದೇವಿ.

ತಾಯಿ ಮಗ ಪರಸ್ಪರ ಸಂಧಿಸಿದರು.

'ಏನಾಯಿತೋ?' ಆಕೆಯಿಂದ ಮುಂದೆ ಮಾತನಾಡುವುದಾಗಲಿಲ್ಲ.

'ಏನಾಯಿತು? ನಿನ್ನಿಂದ ನನ್ನ ಮಾನ ಹೋಯಿತು. ಸರ್ವ ನಾಶ ವಾಯಿತು.'

ಆತ ಗುಡುಗಿದ.

'ಏನೋ ಅದು? ನಿನ್ನ ಮಾತೇ ಅರ್ಥವಾಗಲೊಲ್ಲದು'

'ಅರ್ಥವಾಗುವುದಾದರೂ ಏನಿನ್ನು. ಇಲ್ಲೇ ಇರುವ ನಿನಗೆ ಆಗಿ ರುವ ಅನರ್ಥದ ಅರಿವೂ ಇಲ್ಲ. ಲೋಕಾಂಬಿಕಾ ಎಲ್ಲಿದ್ದಾಳೆ. ಎಲ್ಲಿ ಹೋದಳು. ಅದನ್ನಷ್ಟು ತಿಳಿಸಿ ಬಿಡು. ಶಪಥ ನ್ನುಗ್ಗಿಸಿ ಬಿಡುತ್ತೇನೆ. ಅವಳ ಹೆಣವಾದರೂ—'

'ಥೂ! ಪಾಪಿ! ನಿನ್ನ ಬಾಯಲ್ಲಿ ಒಳ್ಳೆಯ ಮಾತೂ ಬರಬಾರದೇ' ನಡುವೆ ಬಾಯಿ ಹಾಕಿದಳು ಮೇನಕಾ ದೇವಿ.

'ಒಳ್ಳೆಯ ಮಾತು—? ಇದಕ್ಕೆ ಏನು ಹೇಗಮ್ಮ; ನಿಂತ ನೆಲವೇ ನುಂಗಲು ನಿಂತಾಗ. ಅದೆಲ್ಲ ಈಗ ಬೇಡ. ಲೋಕಾ ಎಲ್ಲಿ ಅವಿತು ಕುಳಿತಿದ್ದಾಳೆ. ಆ ತಾಣವನ್ನು ತಿಳಿಸಿ ಬಿಡು. ಸತ್ಯ ಹೇಳದಿದ್ದರೆ ಯಾರೂ ಉಳಿಯುವುದಿಲ್ಲ. ನಾನೂ ಸಹ.

'ಎಂದಿನಂತೆ ಗುಡಿಗೆ ಹೋದಳು. ಆ ಮೇಲೆ ನಾನವಳನ್ನು ನೋಡಿಲ್ಲ. ನನ್ನ ಕೆಲಸವೇ ನನಗಿರುವಾಗ ನಾನೆಲ್ಲಿ ಅವಳನ್ನು ಕಾಯುತ್ತ ಕುಳ್ಳಿರಲಿ. ಆಗಲೇ ಬಂದಿರಬೇಕು ಎಂದು ಭಾವಿಸಿದ್ದೆ. ಅವಳಿಗೆ ಈ ಮದುವೆ ಬೇಕಿರಲಿಲ್ಲ. ಮದುಕಬೇಡ ಎಂದು ನಿನಗೆ ದುಂಬಾಲು ಬಿದ್ದೆ;ನೀನು ನಿನ್ನ ಹಟ ಬಿಡಲಿಲ್ಲ. ನನ್ನ ಕಂದಮ್ಮ ಎಲ್ಲಿ ಕೆರೆ–ಬಾವಿ ಕಂಡಳೋ'

'ಏನೂ ತಿಳಿಯದ ಮುಗ್ಧೆಯೇನು ಲೋಕಾ ಕೆರೆ ಹಳ್ಳ ಹುಡುಕುವುದಕ್ಕೆ? ನಮ್ಮನ್ನೇ ತಳ್ಳಿ ಆಳ ಅಳೆಯ ಬಲ್ಲ ಕಳ್ಳಿಯವಳು. ಗುಡಿಗೆ ಹೋಗುವುದಕ್ಕೆ ನಾನು ಆಕ್ಷೇಪಿಸಿದ್ದು ಇದಕ್ಕೇ. ನಾನು ಅಲ್ಲಿಗೆ ನಡೆಯುತ್ತೇನೆ'

ಕೈಯಲ್ಲಿದ್ದ ಖಡ್ಗವನ್ನು ಝಳಪಿಸುತ್ತ ಗೋವಿಂದ ಗುಡಿಯತ್ತ ಬೀಸುಗಾಲು ಹಾಕಿದ. ಸಶಸ್ತ್ರ ಸೈನ್ಯ ಪಡೆಯನ್ನು ಹಿಂಬಾಲಿಸುವಂತೆ ಆಜ್ಞಾಪಿಸಿ, ಆತುರವಾಗಿ ಹೋಗುತಿದ್ದ ಗೋವಿಂದನನ್ನು ಲೋಕಾಂಬಿಕೆಯ ಗೆಳತಿಯರು ಮಾರ್ಗ ಮಧ್ಯದಲ್ಲಿ ನಿಲ್ಲಿಸಿದರು.

ಅವರ ಮುಖ ಬಿಳಿಚಿಕೊಂಡಿತ್ತು. ಅವರು ದಿಗಿಲುಗೊಂಡಿದ್ದರು. ಕೆಲವರಂತೂ ಅಳುತ್ತಲಿದ್ದರು.

ಏದುತ್ತ ಅವರಲ್ಲೊಬ್ಬಳು 'ಸನ್ಯಾಸಿಗಳು ದೇವಿಯನ್ನು ಹಾರಿಸಿ ಕೊಂಡು ಹೋದರು.'

'ಆತ ಹಾರಿಸಿದ್ದೋ? ಅವಳೇ ಅವನೊಡನೆ ಓಡಿಹೋದಳೋ?'

ಗೋವಿಂದ ಹೀಗೆ ನುಡಿದು ಔಡುಗಚ್ಚಿದ.

'ನನ್ನ ಬಿಟ್ಟುಬಿಡಿ, ದಮ್ಮಯ್ಯ ಎಂದು ಕೈ ಕೊಸರಿಕೊಂಡಳು. ಆತ ಅವಳನ್ನು ಎತ್ತಿಕೊಂಡು ಹೋದ. ಗುಡಿಯಿಂದ ಅನತಿ ದೂರದಲ್ಲಿ ಮರದ ಬುಡದಲ್ಲಿ ಕಟ್ಟಿದ್ದ ಕುದುರೆಯನ್ನೇರಿದ. ಕುದುರೆ ಚಂಗನೆ ನೆಗೆಯಿತು. ಆಕೆ ಕಿರುಚಿಕೊಂಡಳು. ನಾವು ಹೆದರಿ ಇತ್ತ ಓಡಿಬಂದೆವು.'

'ಕುದುರೆ ಯಾವ ಕಡೆ ಓಡಿತು? ನಿಜ ಹೇಳಿ! ಇಲ್ಲವಾದರೆ ನಿಮ್ಮನ್ನು ಶೂಲಕ್ಕೇರಿಸುತ್ತೇನೆ.

ಆ ಲತಾಂಗಿಯರು ಅವನ ಗರ್ಜನೆಗೆ ಬಾಡಿ ಭೂಮಿಗಿಳಿದು ಹೋದರು.

ಸನ್ಯಾಸಿ ಲೋಕಾಂಬಿಕೆಯನ್ನು ಎತ್ತಿಕೊಂಡು ಹೋದ ದಿಕ್ಕನ್ನು ಅವರು ತೋರಿಸಿದರು. ಅಷ್ಟರಲ್ಲಿ ಸೈನ್ಯ ಬಂದು ಆವನನ್ನು ಸೇರಿ ಕೊಂಡಿತು. ಉತ್ತಮಾಶ್ವವೊಂದನ್ನೇರಿ ಉಳಿಕೆಯವರಿಗೆ ಅನುಸರಿಸಿ ಬರುವಂತೆ ಸೂಚನೆ ಕೊಟ್ಟು ಆತ ತಿಂಗಳ ಬೆಳಕಿನಲ್ಲಿ ಮುಂದಾದ. ಅವನ ಸ್ಮೃತಿಪಥದಿಂದ— ಬಂದ ಅಭ್ಯಾಗತರು, ನಡೆಸಿದ್ದ ಮದುವೆಯ ಸಿದ್ಧತೆ, ಮಂಟಪದಲ್ಲಿ ಕೂರಿಸಿ ಬಂದಿದ್ದ ಕಕ್ಕರಸ ಎಲ್ಲರೂ, ಎಲ್ಲವೂ ಮಾಯವಾಯಿತು. ಲೋಕಾಂಬಿಕೆ ಕೈಗೊಮ್ಮೆ ಸಿಕ್ಕಿದರೆ ಅವನಿಗೆ ಸಾಕಾಗಿತ್ತು.

ಸೈನ್ಯವನ್ನು ಹಿಂದುಳಿಸಿ ಆತ ಬಹಳ ಮುಂದು ಹೋದ. ಹಳ್ಳ-ತಿಟ್ಟುಗಳನ್ನು ಹತ್ತಿ ಇಳಿಯಿತು ಕುದುರೆ. ತೂರಿ ಬರುವ ಕೆಂಧೂಳು, ಕೇಳಿ ಬರುವ ಕುದುರೆಯ ಖುರಪುಟದ ಸದ್ದು, ಅವಿಷ್ಟೇ ಅವನಿಗೆ ಲೋಕಾಂಬಿಕೆಯನ್ನಪಹರಿಸಿದ ಆಗಂತುಕನನ್ನು ಅನುಸರಿಸಲು ನೆರವಾಯಿತು. ಆತ ಆ ಜಾಡು ಹಿಡಿದೇ ಕುದುರೆಯನ್ನೋಡಿಸಿದ.

ಬಹಳ ದೂರ ಆತ ಹೀಗೆ ಕ್ರಮಿಸಿದ. ದಣುವಾರಿಸಿಕೊಳ್ಳಲೆಂದು ಕುದುರೆಯನ್ನು ನಿಲ್ಲಿಸಿದ. ಬೆಂಬತ್ತಿ ಬರುವವರ ಸುಳಿವು ಕಾಣಿಸಲಿಲ್ಲ. ಆದರೆ ಮುಂದೆ ಹೋಗುತ್ತಿರುವವರು ತೀರ ಸನಿಹದಲ್ಲಿರುವಂತೆ ಕಂಡಿತು ನಿಂತರೆ ಕೆಲಸ ಕೆಡುವುದೆಂದು, ಖುರಪುಟದ ಸದ್ದು ಕೇಳಿಬಂದ ದಿಶೆಗೆ ಕುದುರೆಯನ್ನು ದೌಡಾಯಿಸಿದ.

ತುಸು ದೂರ ಹೋಗುವುದರಲ್ಲಿ, ಮುಂದೆ ಹೋಗುತ್ತಿದ್ದವರು ತಮ್ಮೊಳಗೆ ಆಡಿಕೊಳ್ಳುತಿದ್ದ ಮಾತು ಸ್ಪಷ್ಟವಾಗಿ ಕೇಳಿ ಬಂತು.

ಆವನಿಗಾವ ಅನುಮಾನವೂ ಉಳಿಯಲಿಲ್ಲ.

—ಅದು ಅರಿಕೇಸರಿ—ಲೋಕಾಂಬಿಕೆಯರೊಳಗೆ ನಡೆಯುತಿದ್ದ ಮಾತುಕತೆ. ಸ್ವರದ ಮೇಲಿಂದ ಅದು ಅವನಿಗೆ ನಿಚ್ಚಳವಾಯಿತು. ಸಿಕ್ಕಿದರಲ್ಲ ಎಂದು ಆತ ಆನಂದ ತುಂದಿಲನಾದ. ತನ್ನಿಂದ ಅವರನ್ನುಳಿಸಿಕೊಳ್ಳಲು ಯಮಧರ್ಮನಿಂದಲೂ ಸಾಧ್ಯವಿಲ್ಲವೆಂದು ಆತ ಮನದಲ್ಲೇ ಮುಂದಿಗೆಯುಂಡ.

'ಯಾರೋ ಬೆನ್ನಟ್ಟಿ ಬರುವಂತಿದೆ.'

'ಇನ್ನಾರು ಬರುತ್ತಾರೆ? ನಿನ್ನಣ್ಣನೇ ಬರುತ್ತಿರಬೇಕು'

'ನಾವಿರುವುದು ಇಬ್ಬರೇ. ಆತ ಒಂಟಿಯಾಗಿ ಬರುತ್ತಿಲ್ಲವಲ್ಲ. ಈಗೇನು ಮಾಡುವುದು'

'ಶಕ್ತಿ ಇದ್ದರೆ ಎದುರಿಸುವುದು. ಇಲ್ಲ ಶರಣಾಗುವುದು. ಉಳಿದಿರುವ ಉಪಾಯಗಳು ಎರಡೇ.'

'ಆದರೆ ಅಪಮಾನ ಸಹಿಸಿಕೊಂಡು ಬದುಕಿರುವುದು ಸಾಧ್ಯವೇ'

'ಕಾದಿ ಸಾಯುವುದು. ಅದಕ್ಕೇ ಸನ್ನದ್ಧರಾಗೋಣ'

'ಅವನ ಕೈಯಲ್ಲಿ ಸಾಯುವುದು? ಅದನ್ನೊಪ್ಪಲಾರೆ ನೀವೇ ಕೈಯಾರ ಕತ್ತರಿಸಿ ಹಾಕಿ. ಹಾಗೆ ಮಾಡುವುದರಿಂದ ನಿಮ್ಮ ಪ್ರಾಣವೂ ಉಳಿಯುವುದು. ನೀವೂ ಸುಲಭವಾಗಿ ತಪ್ಪಿಸಿಕೊಳ್ಳ ಬಹುದು'

'ದೇವೀ ನಿನ್ನನ್ನು ಬಿಟ್ಟು ನಾನಿರಲಾರೆ. ಬದುಕುವುದಿದ್ದರೆ ಇಬ್ಬರೂ ಬದುಕಬೇಕು. ಸಾಯುವುದಿದ್ದರೆ ಜೊತೆಯಲ್ಲೇ ಸಾಯುವ.'

'ಅದೇ ನಿಮ್ಮ ಮುಂದಿರುವುದು' ಗೋವಿಂದ ಮುನ್ನುಗ್ಗಿ ಇಬ್ಬರನ್ನೂ ಒಂದೇಟಿಗೆ ತುಂಡರಿಸಲು ಖಡ್ಗ ಬೀಸಿದ. ಅರಿಕೇಸರಿ ಅದನ್ನು ನಿರೀಕ್ಷಿಸಿದ್ದ. ಆತ ಒರೆಯಲ್ಲಿದ್ದ ಖಡ್ಗವನ್ನು ಹಿರಿದು ನಿಂತ ಖಡ್ಗ ಕೋಲ್ಮಿಂಚಿನಂತೆ ಮಿನುಗಿತು. ಬೀಸಿದ್ದ ಖಡ್ಗವನ್ನು ಮಾರ್ಗ ಮಧ್ಯದಲ್ಲಿ ಖಂಡಿಸಿ ಗೋವಿಂದನ ಮೇಲೆ ಏರಿ ಹೋದ. ಅವನ ಖಡ್ಗ ಹತಿಯಿಂದ ತಪ್ಪಿಸಿಕೊಳ್ಳಲು ಗೋವಿಂದ ಪುನಃ ಖಡ್ಗವೆತ್ತಿದ. ಎತ್ತಿದ ಕೈ ಸಮೇತ ಖಡ್ಗ ಮಾರುದ್ದ ಹೋಗಿ ಬಿತ್ತು. ಗೋವಿಂದ ಕುದುರೆಯಿಂದುರುಳಿದ. ಅವನ ದೇಹದಿಂದ ರುಧಿರ ಧಾರೆ ಹರಿಯಿತು.

ಅರಿಕೇಸರಿ ಕುಳಿತಿದ್ದ ಕುದುರೆಯಿಂದ ಜಿಗಿದ. ಗೋವಿಂದ ಬಿದ್ದ ತಾಣಕ್ಕೆ ತೆರಳಿದ. ತನ್ನ ಖಡ್ಗವನ್ನು ಆತನ ಕಂಠ ಪ್ರದೇಶದಲ್ಲಿ ಊರಿದ. ಗೋವಿಂದನ ಬಾಯಿಂದ ಮಾತು ಹೊರಡಲಿಲ್ಲ. ಆತ ಲಿವಿಲಿವಿ ಎಂದು ಉರುಳಾಡಿದ, ನರಳಾಡಿದ.

'ಪಾಪಿ! ಇಂದು ನಿನಗೆ ವಿಮೋಚನೆ' ಎಂದು ಅರಿಕೇಸರಿ ಖಡ್ಗವೆತ್ತಿದ. ಆ ಎತ್ತಿದ ತೋಳನ್ನು ಲೋಕಾಂಬಿಕೆ ಹಾರಿಬಂದು ಗಟ್ಟಿಯಾಗಿ ಹಿಡಿದುಕೊಂಡಳು. ಇಲ್ಲವಾದರೆ ಗೋವಿಂದನ ರುಂಡ ಮುಂಡದಿಂದ ಬೇರೆಯಾಗುತಿತ್ತು.

' ಇದೇನು ಲೋಕಾ? '

"ಅವನನ್ನು ಸಾಯಿಸಬೇಡಿ; ಬದುಕಿರಲಿ. ನನಗೆ ಆತ್ಮೀಯಳಾದ ಅತ್ತಿಗೆಯ ಮಾಂಗಲ್ಯ ಉಳಿಯಲಿ. ಅಮ್ಮನ ಹೊಟ್ಟೆ ತಣ್ಣಗಿರಲಿ. ಇವನು ಸತ್ತುದನ್ನು ಕೇಳಿದರೆ ಅವಳುಳಿಯುವುದೂ ಅಸಂಭವ. ಅವಳಿಗಾಗಿ ಇವನನ್ನುಳಿಸಿ. ಈಗಾಗಿರುವ ಪ್ರಾಯಶ್ಚಿತ್ತವೇ ಸಾಕು."

"ನಿನ್ನ ಮಾತು ಸತ್ಯ. ಬಿಟ್ಟುಬಿಟ್ಟೆ. ಆದರೂ—"

"ಏನು?"

"ಇದು ಹಾವಿಗೆ ಹಾಲೆರೆದಂತೆ."

"ವಿಷದ ಚೀಲ ಕಳಚಿಯಾಗಿದೆ."

"ಒಮ್ಮೆ ಕಳಚಿದರೂ ಅದು ಪುನಃ ತುಂಬಿಕೊಳ್ಳುತ್ತದೆ"

"ನಿಮ್ಮ ದಮ್ಮಯ್ಯ. ನಿಮ್ಮಲ್ಲಿ ಪ್ರಾಣಭಿಕ್ಷೆಯನ್ನು ಯಾಚಿಸುತ್ತೇನೆ."

'ಯಾಚನೆ—? ನನ್ನ ಅರ್ಧಾಂಗಿ ನನ್ನಲ್ಲಿ ಯಾಚಿಸುವುದೇ? ಬಾಯಿಂದ ಬೀಳುವುದೇ ತಡ. ಆಜ್ಞೆಯೆಂದು ನಡೆಸಿಕೊಡುತ್ತೇನೆ." ಹೀಗೆ ನುಡಿದು ಅರಿಕೇಸರಿ ಅವಳನ್ನು ಹತ್ತಿರಕ್ಕೆ ಎಳೆದುಕೊಂಡ

'ಇದೇನು ಸ್ವಾಮಿ ಚೆಲ್ಲಾಟ, ಯುದ್ಧ ಮಧ್ಯೆ?'

'ಆಕೆ ಹುಸಿ ಮುನಿಸನ್ನು ಪ್ರಕಟಿಸಿದಳು.

"ಇದು ಸ್ಫೂರ್ತಿ ದೇವಿಯನ್ನು ಆರಾಧಿಸುವ ಕ್ರಮ."

ಹೀಗೆ ನುಡಿದು ಆತ ಮೃದುವಾಗಿ ನಕ್ಕ.

ಲೋಕಾಂಬಿಕೆ ಬಿದ್ದಿದ್ದ ಅಣ್ಣನ ಬಳಿಗೆ ಬಂದಳು. ಉಟ್ಟ ಸೀರೆಯನ್ನೇ ಹರಿದು ಬಸಿಯುತ್ತಿದ್ದ ರಕ್ತವನ್ನು ಒರಸಿ, ಗಾಯಕ್ಕೆ ಸುತ್ತಿದಳು. ಅರಿಕೇಸರಿ ಅಲ್ಲಲ್ಲಿ ಅಲೆದು ತಂದ ವನಸ್ಪತಿ ರಸವನ್ನು ಗಾಯದ ಮೇಲೆ ಹಾಕಿದಳು. ಹಾಗೆ ಗೋವಿಂದನ ಶುಶ್ರೂಷೆಯಲ್ಲಿ ಅವರು ತಲ್ಲೀನರಾಗಿದ್ದಾಗ, ಕುದುರೆಗಳ ಖುರಪುಟದ ಸದ್ದು ಕೇಳಿಬಂತು.

ತಳುವಿದರೆ ಅಪಾಯ ಎಂದರಿತು ಅವರು ಕುದುರೆಯನ್ನೇರಿದರು.

(ಮುಂದುವರಿಯುವುದು)

ಸ ವಾರ್ ಪರ್ ೧

NAVAYUGA 4—5—1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಬೆಲೆ ಏರಿಕೆಗೆ ಬಾಸಿಂಗ

"ಸಹನಾ ವವತು ಸಹನೌ ಭುನಕ್ತು" ಎಂದರು ಮುನಿಗಳು ಚಿಲ್ಲರೆ ವ್ಯಾಪಾರಿಗಳಿಗೆ ಅವರೊಂದು ಮಾತು ಕೇಳಿಸಲಿಲ್ಲ. ನಾವು ಸಹಿಸಿಕೊಂಡು ಬಂದಿದ್ದೇವೆ. ಆದರೆ ಬರಬರುತ್ತಾ ರಾಯನ ಕುದುರೆಗೆ ಕತ್ತೆಯಾಣವೇ ಗಿಡ್ಡವಾಗುತ್ತಿರುವ ವಿಶ್ವ್ಯಾಸವಾದರೂ ಏಕೆ?

ನಮ್ಮ ಮೈಸೂರು ಎಂದೂ ಕಲ್ಕತ್ತೆಯಾಗಲಾರದು. ಗೋಡೌನುಗಳ ಬಾಗಿಲುಗಳನ್ನು ಬಂದೂಕನಲ್ಲಿ ಸುಟ್ಟು ಅಕ್ಕಿಯನ್ನು ಹೊರುವ ನಕ್ಸಲ್‌ಬಾರಿಗಳು ನಾವಲ್ಲ ಆದರೂ ರಾಜ್ಯದಲ್ಲಿ ಎಲ್ಲೆ ಹರಿದು ಬೆಳೆಯುತ್ತಿರುವ ಬೆಲೆಗಳ ಅಬ್ಬರವನ್ನು ಸ್ಥಿಮಿತಕ್ಕೆ ತರುವಲ್ಲಿ ಸರಕಾರ ನಿರ್ವಿಕಾರ ಚಿತ್ತದಿಂದ ಕುಳಿತಿದೆ. ಶ್ರೀಸಾಮಾನ್ಯ ಇಂದಿನ ಈ ಸುಗ್ಗಿಯ ದಿನದಲ್ಲಿ ಧಾನ್ಯಕ್ಕೆ ಅಗ್ಗದ ಕ್ರಯವೆಂದರೆ ಒಂದೂವರೆ ರೂಪಾಯಿ ತೆರಬೇಕಾಗಿದೆ.

ಯಾವ ಅಂಗಡಿಯಲ್ಲಿ ಕೇಳಿದರೂ ಧಾನ್ಯದ ಕೋಟಾ ಇಲ್ಲ. ಇದ್ದರೂ ವಿಪರೀತ ಕ್ರಯ. ಅಲ್ಲಿ ಇಲ್ಲಿ ರೈತ ಸಂಘದ ಸುಳಿಗಾಳಿ ಧನಿಗಳಿಗೆ ಗೇಣಿಯ ಗಂಟು ಕೊಡದೆ, ಅಕ್ಕಿಯನ್ನು ಮೂಕಾಸಿಗೆ ಮಾರಿ, ಹಣವನ್ನು ಲಾಯರ ಬಾಯಿಗೂ ಹಾಕಿ, ಸರ್ವಸ್ವವನ್ನೂ ಕಳೆದುಕೊಳ್ಳುವವರು ಒಂದೆಡೆಯಾದರೆ ಇರುವ ಅಕ್ಕಿಯನ್ನು ಸೊಸಾಯಿಟಿಗಳಿಗೆ ಹಾಕಿ, ಲೋನು ಮೂಲಕ ಸಾಲ ಪಡೆಯುವ ಸೌಲಭ್ಯ ಒಂದೆಡೆ. ಇದರಿಂದಾಗಿ ಅಕ್ಕಿಯೆಲ್ಲಾ ಗೋಡೌನು ಸೇರುತ್ತದೆ. ಅಂಗಡಿಗಳಲ್ಲಿ ಕೋಟಾವನ್ನು ಹೊರಗೆ ಹಾಕುವದಿಲ್ಲ.

ಇಂದು ಆಹಾರದ ಹಾಹಾಕಾರದಿಂದ, ಜಲಾಭಾವದ ಓಂಕಾರದಿಂದ ಕನ್ನಡ ಭಣಗುಡುತ್ತಿದೆ. ಅಂಥದ್ದರಲ್ಲಿ ಬೆಳೆಯುವ ರೈತನ ಬೆನ್ನೆಲುಬನ್ನೇ ಕಿತ್ತು ಬಾಂಗ್ಲಾ ಬಾಂಧವ್ಯಕ್ಕೆ ಊರುಗೋಲು ಹಾಕಿದ್ದಾರೆ. ಕಬ್ಬು, ಅಕ್ಕಿ ಮುಂತಾದ ವ್ಯವಸಾಯೋತ್ಪನ್ನಗಳು ಮೂರು ವರುಷ ಹಿಂದಿದ್ದುದಕ್ಕಿಂತ ಮೂರು ಪಾಲು ತಗ್ಗಿವೆ. ಅತಿವೃಷ್ಟಿ, ಅನಾವೃಷ್ಟಿಗಳ ಧೂಮಕೇತುಗಳೊಂದಿಗೆ ರೈತನು ಸಂಕಷ್ಟ ಭಾರದಿಂದ ಬೆಳೆಯಲ್ಲಿ ಹಿಮ್ಮೆಟ್ಟುತ್ತಿದ್ದಾನೆ ಒಂದು ಗದ್ದೆಯಲ್ಲಿ ಪೂರ್ಣರಾಗಿ ನಾಲ್ಕು ಕ್ವಿಂಟಾಲು ಬಂದಿರಬಹುದು. ಇನ್ನೊಂದೆಡೆ ಸೋಯಾಬೀನ್ಸ್ ಬಂದಿರ ಬಹುದು. ಆದರೆ ಇಂದಿಗೂ ಹಿಂದಿಗೂ ಆದಾಯ ಪಟ್ಟಿಯಲ್ಲಿ ಕೊರತಾವೆ ಏಕೆ ಕಾಣುತ್ತಿದೆ ಕಟ್ಟಿನ ಬೆಳೆಯಲ್ಲಿ ನಾವಿಂದು ಅಧೋಗತಿಗಿಳಿದಿದ್ದೇವೆ. ಸಕ್ಕರೆಯು ಗಗನಚುಂಬೀ ಕ್ರಮದೊಂದಿಗೆ ರೇಶನ್ ಬೇರೆ ಬಂದಿದೆ. ಇದೇ ಭಾರತದ ಸಕ್ಕರೆ ಭಾರತೀಯ ತೆರುವ ಒಂದು ಕಿಲೋಗ್ರಾಮ್ ಸಕ್ಕರೆಯು ಬೆಲೆಗೆ ಅಮೇರಿಕದಲ್ಲಿ ಮೂರು ಕಿಲೋ ಗ್ರಾಂ ದೊರಕುವಷ್ಟು ಕಮ್ಮಿಗೆ ನಾವು ಸರಬರಾಜು ಮಾಡುತ್ತಿದ್ದ ದಿನವಿತ್ತು. ಈಗ ತತ್ತಿಯ ಹಲವಾರು ಕೋಳಿ ಸಾಕಣಾ ಕೇಂದ್ರಗಳಿವೆ. ಆದರೂ ತತ್ತಿಗೆ ಬೆಲೆ ಹೆಚ್ಚು, ಮಾಂಸಕ್ಕೆ ಬೆಲೆ ವಿಪರೀತ. ಸರಕಾರ ನಿಗದಿ ಮಾಡಿರುವ ಕ್ರಯ ಸಾವಿರದಲ್ಲಿ ಎಂಬತ್ತು ಪಾಲಿನಂತೆ ಪ್ರತಿ ವರುಷವೂ ಏರತೊಡಗಿವೆ. ಉತ್ಪಾದನೆ ಕುಸಿದಿದೆ; ಬೆಲೆಗಳ ಭೀಕರತೆ ಬೆಳೆದಿದೆ.

—ಇದೆಲ್ಲ ಬೆಲೆಯೇರಿಕೆಯ ಅಹವಾಲಿಯಾದರೆ ಸಾಕೇ! ಇಂದಿನ ಸರಕಾರ ಬಟ್ಟೆಗೆ ಬೆಲೆ ಏರಿಸಲಿ; ಸಿಗರೇಟಿಗೆ ತುಟ್ಟಿ ಮಾಡಲಿ. ಆದರೆ ಬಡವನ ಹೊಟ್ಟೆಗೆ ಬಡಿಯುದು ಬೇಡ. ರೈತನು ಬೆಳೆಯಲು ಪ್ರೋತ್ಸಾಹ ಕೊಡಬೇಕು. ನಮ್ಮ ಬರಡು ಬಂಜರು ಗದ್ದೆಗಳಲ್ಲೂ ಹಸಿರುಡುಗೆಯ ಮಧ್ಯೆ ಹೊಂಗದಿರು ನಲಿಯಬೇಕು.

ಸಕ್ಕರೆಗೆ ಅಕ್ಕಿಗೆ ಬೆಲೆ ಏರಿದರೆ ಸೆಣಬು ಗೋಡಂಬಿ ಹಾಗೂ ಇತರ ತೈಲದ ಕಚ್ಚಾ ವಸ್ತುಗಳನ್ನು ಬೆಳೆಯುವ ರೈತರಿಗೆ ಅರ್ಧಕ್ಕರ್ಧ ಬೆಲೆ ಇಲ್ಲವಾಗಿದೆ. ನವೋದಿತ ಸರಕಾರ ಬೆಲೆಯೇರಿಕೆಯನ್ನು ಹತೋಟಿಗೆ ತರಲೇಬೇಕು. ಅದಕ್ಕಾಗಿ ಆಯೋಗವೊಂದನ್ನು ನಿರ್ಮಿಸಿದರೆ ಸೂಕ್ತ. ಇಂದು ಗೋಡೌನ್‌ನಲ್ಲಿ ಅಕ್ಕಿ ಇಟ್ಟು ಬಾಡಿಗೆ ಬಡ್ಡಿ ಸಹಿತ ಹಣ ತೆತ್ತವರೆಲ್ಲರೂ ಮಳೆಗಾಲದಲ್ಲಿ ಎಲ್ಲರೂ ಒಂದೇ ಸಾರಿಗೆ ಅಕ್ಕಿಯನ್ನು ಮಾರುಕಟ್ಟೆಗೆ ಹಾಕಿದಾಗ ಏರಿದ ಬೆಲೆ ಒಮ್ಮೆಲೇ ಹತಾತ್ತನೆ ತಗ್ಗಿದರೂ, ಈಗಾಗಲೇ ದುಬಾರಿ ಬೆಲೆಗೆ ಅಕ್ಕಿಗೆ ಕೊಂಡಿರುವ ಶ್ರೀ ಸಾಮಾನ್ಯನಲ್ಲಿ ಕೊಳ್ಳಲೂ ಚೈತನ್ಯವಿಲ್ಲದೆ ಅಕ್ಕಿ ಲೋನು ಮಾಡಿರುವ ಮಹನೀಯ ಪಾತಾಳಕ್ಕಿಳಿಯಬೇಕು.

ಭಾರತದಲ್ಲಿ ಆಹಾರ ಕಾರ್ಪೋರೇಷನ್ ಇದೆ ಅದು ಸಾಕಷ್ಟು ಕೆಲಸ ಮಾಡಿ ಸರಿಯಾಗಿ ಧಾನ್ಯ ವಿತರಣೆ ಮಾಡುತ್ತಿಲ್ಲವೆಂಬುದು ಶೋಚನೀಯ. ಜೋಳ, ಗೋಧಿ, ರಾಗಿ, ಸಜ್ಜೆ ಮುಂತಾದ ಧಾನ್ಯಗಳನ್ನು ಇದು ನ್ಯಾಯಬೆಲೆಗೆ ರೈತರಿಂದ ಕೊಂಡು, ಸ್ಥಿಮಿತದ ಬೆಲೆಯಲ್ಲಿ ಸಾಮಾನ್ಯರಿಗೆ ಹಂಚುವಂತೆ ಕೇಂದ್ರ ಸರಕಾರ ಕಡ್ಡಾಯ ಮಾಡಿದರೇನೇ ಕೊಳ್ಳುವವರಿಗೂ ಬೆಳೆಯುವವರಿಗೂ ಪ್ರೋತ್ಸಾಹ ಸಿಗುತ್ತದೆ.

ರಾಜ್ಯ ಸರಕಾರ ಆ—ಈ ದುರ್ಯೋಜನೆಗಳ ಬದಲು ಅಸಂಖ್ಯ ಸಂಖ್ಯೆಯಲ್ಲಿ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆದು, ಯೋಗ್ಯ ರೀತಿಯಲ್ಲಿ ಆಹಾರ ವಿತರಿಸಬೇಕು. ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಭೂ ಅಭಿವೃದ್ಧಿ ಯೋಜನಾ ಬ್ಯಾಂಕಿನಲ್ಲಿ ರೈತರಿಗೆ ಯಾವುದಕ್ಕೆ ಬೇಕಾದರೂ ಸಾಲ ಸಿಗುತ್ತದೆ. ಆದರೂ ಅವುಗಳ ಕಂತು ದೀರ್ಘವಾಗಿ ಷರತ್ತು ಇನ್ನೂ ಸರಳವಾಗಿ ರೈತನ ಕಾಮಧೇನುವಾಗಬೇಕು. ಕೆಲ ಬ್ಯಾಂಕುಗಳು ಸಾಲ ಕೊಡಲು, ಹೊರಗಿಂದ ಬರಲು ಬಹಳ ಬಾಕಿ ಇದೆ. ಇನ್ನೂ ಎಲ್ಲಿಂದ ಕೊಡಲೆಂದು ನಿರಾಕರಿಸುತ್ತಾರೆ. ಶ್ರೀಸಾಮಾನ್ಯ ಪಡೆದ ಸಾಲ ಎಲ್ಲಿಂದ ಹಿಂತಿರುಗಿಸಬೇಕು? ಆತ ಮಾರುವುದಕ್ಕೆ ಕ್ರಯವಿಲ್ಲ; ತರುವುದಕ್ಕೆ ದುಬಾರಿ ಬೆಲೆ.

ಬಡ ಜನರ ಪಕ್ಷಪಾತಿ ಕಾಂಗ್ರೆಸ್ ಸರಕಾರ ಇದನ್ನು ಗಮನಿಸಿ, ಧರ್ಮರಾಯ ಕಲಿಪುರುಷನನ್ನು ಎಳೆದು ಕಟ್ಟಿದಂತೆ ಆಹಾರದ ದುಬಾರಿ ಕ್ರಯವನ್ನು ಸ್ಥಿಮಿತಕ್ಕೆ ತಂದು, ರೈತನ ಬೆಳೆಗೆ ಸರಿಯಾದ ಪ್ರತಿಫಲ ದೊರಕುವಂತೆ ಶಕ್ತಿ ಮೀರಿ ಶ್ರಮಿಸಿದರೆ ಖಂಡಿತ ಚಿರಾಯುವಾಗುತ್ತದೆ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

●●

ಸಾಮಾಜಿಕ ಪ್ರಜ್ಞೆ ಬೆಳೆಯಬೇಕು

(ಒಂದನೇ ಪುಟದಿಂದ)

ಗಳನ್ನು ತಿಳಿಸಿ ಹೇಳಿಕೊಡಬೇಕು. ಇದು ನಾಲ್ಕಾರು ವರ್ಷಗಳಲ್ಲಿ ಸಾಧಿಸಲಾಗುವ ಕಾರ್ಯವೆನ್ನಲಾಗದು. ಅಂತರ್ಜಾತೀಯ ವಿವಾಹಗಳನ್ನು ಉತ್ತೇಜಿಸುವುದರಿಂದಲೂ ಸಾಧ್ಯವಾಗದು. ಅಂತರ್ಜಾತೀಯ ವಿವಾಹಗಳಲ್ಲಿ ಹೆಚ್ಚಿನವು ವಿರಸದಲ್ಲಿ ಪರ್ಯವಸಾನಗೊಂಡು ಹೊಸತೊಂದು ಸಮಸ್ಯೆಗೆ ನಾಂದಿಯಾಗುತ್ತಿರುವ ಸಮಯ ಪರಿಪಕ್ವವಾಗುತ್ತಿದೆ. ಅಂದರೆ, ನಮ್ಮ ಸಮಾಜ ಅಂತರ್ಜಾತೀಯ ವಿವಾಹವನ್ನು ಒಪ್ಪಿಕೊಳ್ಳಲು ಮುಂದೆ ಬಂದಿಲ್ಲ. ಇದಕ್ಕೆ ಜಾತಿ-ಜಾತಿಗಳ ಆಹಾರಾಭ್ಯಾಸ ನಡಾವಳಿಗಳಲ್ಲಿ ಬಹಳಷ್ಟು ಅಂತರವಿರುವುದೇ ಕಾರಣ. ಶಾಕಾಹಾರಿ—ಮಾಂಸಾಹಾರಿಗಳು ಒಂದೇ ಮನೆಯಲ್ಲಿ ಬಾಳುವುದು ದುಸ್ತರ.

ಮತೀಯತೆಯ ಅಥವಾ ಜಾತೀಯತೆಯ ದಮನವೆಂದರೆ, ಅದನ್ನು ನಾಮಾವಶೇಷ ಮಾಡುವುದೆಂದು ಅರ್ಥವಾಗದು. ಅವುಗಳಿಂದಾಗಿ ಸಾಮಾಜಿಕ ಸುರಕ್ಷಿತತೆ ಸೌಹಾರ್ದತೆ, ಶಾಂತತೆಗಳಿಗೆ ಭಂಗಬಾರದಂತೆ ತಡೆಯುವುದು ಅಗತ್ಯವಿದೆ. ಜಾತೀಯ ಸಂಘ—ಸಂಸ್ಥೆಗಳಿಗೆ ಬಹಿಷ್ಕಾರ ಹೇರುವುದರಿಂದ ಹೆಚ್ಚಿನ ಪ್ರಯೋಜನವಾಗದು. ಏಕೆಂದರೆ, ಆಗ ಅವು ಭೂಗತ ಚಟುವಟಿಕೆಗಳಲ್ಲಿ ತೊಡಗುವ ಭಯವಿದೆ—ಇದು ಅತ್ಯಂತ ಅಪಾಯಕಾರಿಯಾದದ್ದು. ಆದುದರಿಂದ, ಸರಕಾರವು ಮತೀಯ ಸೌಹಾರ್ದವನ್ನು ಹೆಚ್ಚಿಸಲು ಅನುಕೂಲವಾಗುವಂತೆ ಶಾಸನವನ್ನು ಮಾತ್ರವಲ್ಲದೆ ಸಾಮಾಜಿಕ ಶಿಕ್ಷಣವನ್ನೂ ನೀಡಿ, ಜನ ಜಾಗೃತಿಗೊಳಿಸಬೇಕು. ಮತ—ಅಥವಾ ಜಾತಿಯು ಸಮಾಜಕ್ಕೆ ಕಂಟಕವೆನಿಸದೆ ಅದರ ಸರ್ವತೋಮುಖ ಪ್ರಗತಿಗೆ ನೆರವಾಗುವಂತಹ ಸಮಾನತೆಯ, ಸಹೋದರತೆಯ ಮನೋಭಾವವನ್ನು ಜಾಗೃತಗೊಳಿಸುವಂತಾಗಬೇಕು. ನಾವು ಒಂದೇ ದೇಶ, ಸಮಾನತೆಯ ಮಕ್ಕಳೆಂಬ ಭಾವನೆ ಬೆಳೆಯಬೇಕು.

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

Edited, Printed & Published by K. M. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೩೩

NAVAYUGA

11-5-1972

ದುರಭ್ಯಾಸದಿಂದ ದೂರವಿರಿ—

ಪರರೊಡನೆ ಹೋಲಿಕೆ ಸಲ್ಲದು

'....ರವರ ಮಕ್ಕಳನ್ನು ನೋಡು, ಒಬ್ಬರಿಗಿಂತೊಬ್ಬರು ಕುಶಾಗ್ರಮತಿಗಳು, ವಿಧೇಯರು. ಪರಾಶ್ರಯವಿಲ್ಲದೇನೇ ಉನ್ನತಿ ಹೊಂದಿದವರು. ಮನೆ ಪಾಠವಿಲ್ಲ, ಹೇಳುವವರಿಲ್ಲ, ನಮ್ಮಂತಹ ಶ್ರೀಮಂತರ ಮಕ್ಕಳಿದ್ದಾರೆ, ಇವರಿಗೆ ಓದುವ ಬರೆಯುವ ಎಲ್ಲ ಬಗೆಯ ಸುಖ ಸಾಧನಗಳು ಇವೆ, ಹಣವಿದೆ. ಆದರೆ ಇವರು ಎಲ್ಲಿದ್ದಾರೋ ಅಲ್ಲಿಯೇ, ಹೇಗಿದ್ದಾರೋ ಹಾಗೆಯೇ ಕಲ್ಲಿನ ಗೊಂಬೆಗಳಂತಿದ್ದಾರೆ. ನಮ್ಮ ಭಾಗ್ಯದಲ್ಲಿ ಇಂತಹ ಕುಪುತ್ರರನ್ನೇ ವಿಧಿ ಬರೆದಿದೆ. ಇವರೇನು ತಮ್ಮ ಭವಿಷ್ಯ ರೂಪಿಸಬಲ್ಲರು? ನಮ್ಮನ್ನೇನು ಉದ್ಧರಿಸಲಾಪರು?' ತಂದೆ ನಿರಾಶೆ ತುಂಬಿದ ಸ್ವರದಲ್ಲಿ ಉದ್ಗರಿಸಿದರು. ತಾಯಿಗೂ ವೇದನೆಗಿಟ್ಟುಕೊಂಡಿತು. ತನ್ನ ಮಕ್ಕಳ ದುರುದುಂಡಿತನದಿಂದಾಕೆ ನೊಂದಿದ್ದಳು. ರೇಗಿದ ದನಿಯಿಂದ ಹೇಳಿದಳು—'ನೋಡಿ ನಮ್ಮ....ಳ ಮಗನನ್ನು. ಅವನು ವ್ಯಾಪಾರದಲ್ಲಿ ಎನು ಸುಧಾರಿಸಿ ಬಿಟ್ಟ! ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದರೂ ಶ್ರೀಮಂತನಾಗುತ್ತ ಬರುತ್ತಿದ್ದಾನೆ. ಎಷ್ಟು ಬುದ್ಧಿವಂತ! ಸ್ಕೂಟರ್ ಮೇಲೆ ತಿರುಗುತ್ತಾನೆ. ಅವನ ಮೇಲೆ ಲಕ್ಷ್ಮಿ ಒಲಿದಿದ್ದಾಳೆ. ನೋಡಿ ನಮ್ಮ ಯುವರಾಜರನ್ನು ಇವರ ಅಂಗಡಿಗೆ ಗಿರಾಕಿಗಳೇ ಬರುವುದಿಲ್ಲ. ಬೆಳಗ್ಗಿನಿಂದ ಸಂಜೆಯ ತನಕದ ವ್ಯಾಪಾರ ಬಾಡಿಗೆ ಕೊಡುವುದಕ್ಕೇ ಹಂಚರ."

ತಮ್ಮ ಮಕ್ಕಳನ್ನು ಬೇರೆಯವರ ಮಕ್ಕಳೊಡನೆ ತುಲನೆ ಮಾಡುವ ತಾಯ್ತಂದೆಯರನ್ನು ನೀವು ನೋಡಿರ ಬಹುದು. ಈ ತುಲನೆಯ ಪರಿಣಾಮ ದುಃಖ ಮತ್ತು ಅಸಂತುಷ್ಟಿ. ಈ ಬಗೆಯ ಹೋಲಿಕೆ ಅವರಿಗೆ ಯಾವುದೇ ರೀತಿಯ ಲಾಭ ತರುವುದಿಲ್ಲ. ಬದಲಾಗಿ ಅವರ ಉತ್ಪಾದಕ ಮತ್ತು ಸೃಜನಾತ್ಮಕ ಶಕ್ತಿಯನ್ನು ಕ್ಷೀಣಗೊಳಿಸುತ್ತದೆ. ಈ ಹೋಲಿಕೆಯಿಂದ ಆಗುವ ತೊಂದರೆಗಳು ನಾನಾ ರೂಪದವಾಗಿರುತ್ತವೆ.

ಶ್ರೀಮಂತರ ಸಂಪರ್ಕದಲ್ಲಿರುವ ಶ್ರೀಮಂತಿಕೆಯ ಕನಸು ಕಾಣುತ್ತಿರುವ ಬಡವನೊಬ್ಬನ ಹೆಂಡತಿ ಹೇಳುತ್ತಾಳೆ: 'ನನ್ನ ಮುರಿದ ಭಾಗ್ಯಕ್ಕೇನು ಹೇಳಬೇಕು? ನಾನು ದಿನವಿಡಿ ಮನೆಯ ಚಾಕರಿ ಮಾಡುತ್ತೇನೆ; ಮಕ್ಕಳು ಮರಿಗಳನ್ನು ನೋಡಿಕೊಳ್ಳುತ್ತೇನೆ. ಈ ಮನೆಯೊಡತಿ ಫ್ಯಾನಿನಡಿಯಲ್ಲಿ ಆರಾಮ ಕುರ್ಚಿಯಲ್ಲೊರಗಿ ನಮಗೆ ಆಜ್ಞೆ ಕೊಡುತ್ತಿರುತ್ತಾಳೆ. ಆಕೆಯುಂಡ ಬಟ್ಟಲನ್ನು ನಾವೇ ತೊಳೆದಿಡಬೇಕು."

ನೀವು ನಿಮ್ಮನ್ನು ನಿಮಗಿಂತ ಉನ್ನತ ಸ್ಥಿತಿಯಲ್ಲಿದ್ದವರೊಂದಿಗೆ ಹೋಲಿಸ ಹೊರಟರೆ ನೀವು ಸಣ್ಣವರಾಗುತ್ತೀರಿ; ಅಶಕ್ತರೆನಿಸುತ್ತೀರಿ; ಅಸಹಾಯಕರಾಗುತ್ತೀರಿ. ಮತ್ತು ದುಃಖವು ನಿಮ್ಮನ್ನು ಸತಾಯಿಸ ಬರುತ್ತದೆ. ನೀವು ನಿಮ್ಮ ಹೆಂಡತಿಯನ್ನು ಹೆಚ್ಚು ಓದಿದ ಹೆಚ್ಚು ಸುಂದರಿಯಾದ ಹೆಂಗಸಿಗೆ ಹೋಲಿಸ ಹೋದರೆ, ನಿಮ್ಮಾಕೆ ಅತ್ಯಂತ ಸಾಮಾನ್ಯಳೂ ಪತಿತಳೂ ಅನ್ನಿಸುತ್ತಾಳೆ. ಆಗ ನಿಮಗೆ ಅಸಂತುಷ್ಟಿ ಅಸಂತೋಷವೆನಿಸುತ್ತದೆ.....ನ ಹೆಂಡತಿ ಎಂ. ಎ. ಪಾಸು ಮಾಡಿದ್ದಾಳೆ. ಸಂಗೀತದಲ್ಲಿ ಪಾರಂಗತೆ, ಕ್ಲಬ್ಬು ಗೋಷ್ಠಿಗಳಲ್ಲಿ ಕೋಗಿಲೆಯಂತೆ ಕುಕಿಲಿಡುತ್ತಿರುತ್ತಾಳೆ. ಆದರೆ, ನಮ್ಮವಳೋ, ಬಿಡಿ, ಅಡುಗೆ ಮಾಡುವುದು, ವಸ್ತ್ರ ಒಗೆಯುವುದು ಮತ್ತು ಮನೆಯ ಇನ್ನಿತರ ಕೆಲಸಗಳಲ್ಲೇ ಮುಳುಗಿ ಹೋಗುತ್ತಾಳೆ. ಇಂತಹ ಹಳ್ಳಿ ಹುಡುಗಿಯನ್ನು ಕಟ್ಟಿಕೊಂಡು ಜೀವನ ಕೊಚ್ಚಿ ಹೋಯ್ತು. ಈ ಬಗೆಯ ತುಲನೆಯನ್ನು ನೀವು ಮನಸ್ಸಿನಲ್ಲೇ ಮಾಡಿ ಕೊಂಡರೆ ಮಾನಸಿಕವಾಗಿ ನೊಂದುಕೊಳ್ಳುತ್ತೀರಿ.

ತುಲನೆ ಮಾಡ ಹೊರಟರೆ ಉಂಟಾಗುವ ದುಃಖಕ್ಕೆ ಕೊನೆಯೆಂಬುದಿಲ್ಲ. ಒಬ್ಬ ವ್ಯಾಪಾರಿಯು ಮತ್ತೊಬ್ಬನ ವ್ಯಾಪಾರವನ್ನು ಶ್ರೇಷ್ಠನೆಂದು ಹೇಳುತ್ತಾನೆ. ಇಂಜಿನಿಯರ್ ಉದ್ಗರಿಸುತ್ತಾನೆ: 'ಈ ಕಾಲದಲ್ಲಿ ಡಾಕ್ಟರರುಗಳದ್ದೇ ಕೇವು.' ಅತ್ತ ಡಾಕ್ಟರನು ಹೇಳುತ್ತಾನೆ. 'ನಮ್ಮ ಬದುಕೆಲ್ಲ ಓಡಾಟದಲ್ಲೇ ಕಳೆಯಿತು. ಈ ರೋಗಿಗಳೊಡನೆ ತಲೆ ಹೊಡೆದುಕೊಂಡು ಸಾಕಾಯ್ತು. ಹಣವಾದರೂ ಕೊಡುತ್ತಾರೆಯೆ? ಇಂದು ನಾಳೆಯೆಂದು ನಾವು ಓಡಿಸುವವರೇ ಹೆಚ್ಚು. ನಮಗಿಂತ ಅಧ್ಯಾಪಕರು, ಪ್ರೊಫೆಸರರು ಎಷ್ಟು ಸುಖ ಜೀವಿಗಳು! ಪ್ರತಿವರ್ಷ ಎರಡೆರಡು ತಿಂಗಳ ರಜೆ ಬೇರೆ. ಮೂರು ತಾಸು ಮಕ್ಕಳ ಮುಂದೆ ಲೆಕ್ಚರ್ ಬಿಟ್ಟು ಮನೆದಾರಿ ಹಿಡಿದರು. ವಕೀಲರನ್ನು ನೋಡಿ, ಎತ್ತರೆತ್ತರವಾದ ಅಟ್ಟಾಳಿಕೆಯ ಮನೆ ಕಟ್ಟಿಸುತ್ತಾರೆ. ಅವರ ಮನೆಗಳಲ್ಲಿ ಲಕ್ಷ್ಮಿ ಕಾಲು ಮುರಿದು ಬಿದ್ದುಕೊಂಡಿದ್ದಾಳೆ. ಕೆಲಸವೆಂದರೆ ಅಪರದ್ದು.'

ವಕೀಲರು ಗೊಣಗುತ್ತಾರೆ. 'ಈ ವಕಾಲತ್ತಿಗೊಂದಿಷ್ಟು ಬೆಂಕಿ ಹಾಕಲಿ. ಯಾವಾಗ ನೋಡಿದರೂ 'ಕೇಸಿಗಳದ್ದೇ ಕಾಟ. ಕಳ್ಳರು, ದರೋಡೆಕೋರರು, ವಂಚಕರು, ಕೊಲೆಪಾತಕರು, ಬೀದಿ ಕಾಮಣ್ಣರು, ಜೇಬು ಕತ್ತರಿಸುವವರು, ಲುಚ್ಚರು—ಎಲ್ಲರಿಗೂ ಈ ಮನೆಯಲ್ಲಿ ಮುಕ್ತ ದ್ವಾರ. ಮೊಕದ್ದಮೆ ಗೆಲ್ಲುವ ಬಗ್ಗೆ ತಲೆ ಕೆರಡು ಮಾಡುವುದು, ಗ್ರಾಹಕರಿಗೆ ಉರು ಹೊಡೆಸುವುದು — ಇದೇ ಇಪ್ಪತ್ತನಾಲ್ಕು ಗಂಟೆಯ ಕೆಲಸ. ಪೋಲೀಸರು, ನ್ಯಾಯಾಲಯದ ಚಿಕ್ಕ ದೊಡ್ಡವರಿಗೆ ಸಲಾಮು ಹೊಡೆಯುವುದು ಇವರಲ್ಲೇ ತಲೆಗೂದಲು ಬೆಳ್ಳಗಾಯ್ತು. ಇದರಷ್ಟು ಹೇಸಿಗೆ ಉದ್ಯೋಗ ಬೇರೊಂದಿಲ್ಲ.'

ಈ ರೀತಿಯಾಗಿ ಒಂದಲ್ಲ ಒಂದು ದೃಷ್ಟಿಯಲ್ಲಿ ಒಂದಲ್ಲವೊಂದು ರೂಪದಲ್ಲಿ ನಮಗಿಂತ ದೊಡ್ಡವರೊಡನೆ ನಾವು ನಮ್ಮನ್ನು ಹೋಲಿಸಿಕೊಳ್ಳುತ್ತೇವೆ. ಅವರನ್ನು ಉತ್ತಮರೆಂದು ನಾವು ತಿಳಿಯುತ್ತೇವೆ. ಅವರ ಭಾಗ್ಯದ ಬಾಗಿಲು ತೆರೆದಿರುವುದನ್ನು ನೋಡುತ್ತೇವೆ; ನಮ್ಮದು ಮುಚ್ಚಿದೆಯೆಂದು ತಿಳಿಯುತ್ತೇವೆ.

ನಮಗಿಂತ ಉತ್ತಮ ಸ್ಥಿತಿಗತಿಯುಳ್ಳ ಮನುಷ್ಯನೇ ನಮ್ಮ ಉತ್ಸುಕತೆಯ ಕೇಂದ್ರ. ಅವನ ಜೀವನ ಮತ್ತು ವ್ಯವಸಾಯವು ಪ್ರಗತಿ ಸಾಧಕವೆಂದು ನಂಬುತ್ತೇವೆ. ನಮ್ಮ ವಿವಶತೆಗಾಗಿ ಮನದೊಳಗೇ ಕರುಬುತ್ತೇವೆ. ಈ ತುಲನೆಯಲ್ಲಿ ನಮ್ಮನ್ನು ನಾವೇ ಪತಿತರೆಂದು ಬಗೆದು ನಮ್ಮನ್ನು ನಾವೇ ಅಕರ್ಮಣ್ಯರೂ ದೀನರೂ ಹೀನರೂ ಎಂದು ನಂಬುತ್ತೇವೆ.

ಈ ರೀತಿ ತುಲನೆ ಮಾಡುವ ಭಾವನೆಯು ನಮ್ಮ ವ್ಯಕ್ತಿತ್ವದಲ್ಲಿ ಹೀನತ್ವದ ಭಾವನೆಯ ಮುಳ್ಳನ್ನು ನಾಟುತ್ತದೆ. ನಮ್ಮನ್ನು ಮುಂದರಿಯದಂತೆ ಹೆಳವರನ್ನಾಗಿ ಮಾಡುವ ವಿಕಾಸ ಮಾರ್ಗವನ್ನು ತಡೆ ಹಿಡಿಯುವ ಮತ್ತು ಕಾರ್ಯ ಕುಶಲತೆಯನ್ನು ನಷ್ಟಗೊಳಿಸುವ ತುಲನೆಯು ಅಹಿತಕಾರಕ. ನಮ್ಮ ಉತ್ಸಾಹ, ಕ್ರಿಯಾಶೀಲತೆ, ಪ್ರಗತಿ, ಉನ್ನತಿಗಳಿಸುವ ಇಚ್ಛೆಯನ್ನೇ ಮುರುಟಿಸುವ ಈ ತುಲನೆಯ ಹವ್ಯಾಸವನ್ನು ಬಿಟ್ಟುಬಿಡುವುದೇ ಶ್ರೇಯಸ್ಕರ. ಅದು ನಮ್ಮನ್ನು ಹತೋತ್ಸಾಹಿಯನ್ನಾಗಿಸುವ ಚಿಂತೆ. ಹೆಜ್ಜೆಹೆಜ್ಜೆಗೂ ನಮ್ಮನ್ನು ಪತಿತಗೊಳಿಸುವ ನಮ್ಮ ಶಕ್ತಿ ಸರ್ವಸ್ವವನ್ನು ಸೂರೆಗೊಳ್ಳುವ ದುಶ್ಚಟ.

ಆದುದರಿಂದ ಹೀನತ್ವದ ಭಾವನೆಯನ್ನು ಎಚ್ಚರಿಸುವ, ಉನ್ನತಿಪಥದಲ್ಲಿ ದಾರಿಗೆಡಿಸುವ ಹೋಲಿಕೆಯ ಚಟದಿಂದ ದೂರವಿರಿ. ನಿಮಗಿಂತ ಉನ್ನತ ದೆಸೆಯಲ್ಲಿರುವವರೊಡನೆ ನಿಮ್ಮನ್ನು ಹೋಲಿಸುತ್ತ ಹೋದರೆ, ನೀವು ಮೇಲೇರುವುದಿಲ್ಲ. ಇದ್ದಲ್ಲಿಯೆ ಇರುವುದೂ ಇಲ್ಲ; ಜಾರಿ ಉರುಳಿ ಹೋಗುತ್ತೀರಿ. ಜೀವನದಲ್ಲಿ ಏರುವ ದಾರಿಯಿಂದ ಉರುಳಿಹೋಗುತ್ತೀರಿ. ಆದುದರಿಂದ ದುಃಖಕ್ಕೆ ಗುರಿ ಮಾಡುವ ಪ್ರಗತಿ ವಿರೋಧಿಯಾದ ತುಲನೆಯಿಂದ ಹರದಾರಿ ದೂರವೋಡಿರಿ.

ಪ್ರಯತ್ನಶೀಲರಿಗೆ ಸಮಾಜದ ಬಾಗಿಲುಗಳು ಸದಾ ತೆರೆದಿರುತ್ತವೆ. ಪ್ರಯತ್ನಶೀಲ ಮನುಷ್ಯನಿಗೆ ನೂರಾರು ಸಾಧನಾಪಥಗಳಿರುತ್ತವೆ. ಇತರರನ್ನು ದೊಡ್ಡವರೆಂದು ತಿಳಿದುಕೊಳ್ಳುವಷ್ಟರಿಂದಲೇ ಏನೇನೂ ಸಾಧ್ಯವಾಗದು. ನಮ್ಮ ಪ್ರಯತ್ನಗಳನ್ನು ದೃಢವಾಗಿಸುತ್ತ ಹೋಗುವುದರಿಂದಲೇ ನಮ್ಮ ಉನ್ನತಿ ಸಾಧ್ಯ.

ಒಬ್ಬನೊಂದು ದೃಷ್ಟಿಯಲ್ಲಿ ಮುಂದುವರಿದವನಿರಬಹುದು. ಮತ್ತೊಬ್ಬನು ಇನ್ನೊಂದು ದೃಷ್ಟಿಯಿಂದಿರಬಹುದು. ಒಬ್ಬ ಶಾರೀರಿಕ ಶಕ್ತಿಸಂಪನ್ನತೆ, ಮತ್ತೊಬ್ಬನು ಮಾನಸಿಕ ಶಕ್ತಿಯಲ್ಲಿ ಶ್ರೀಮಂತನಿರಬಹುದು. ಆರ್ಥಿಕವಾಗಿ ಧನಿಕನಿರಬಹುದು. ನೈತಿಕವಾಗಿ ಉಚ್ಚಸ್ಥನಿರಬಹುದು. ಆಧ್ಯಾತ್ಮಿಕವಾಗಿ ಶ್ರೇಷ್ಠನಾಗಿರಬಹುದು. ವ್ಯವಸಾಯದಲ್ಲಿ ಪ್ರಗತಿಯನ್ನುಹೊಂದಿರಬಹುದು. ಒಬ್ಬೊಬ್ಬರ ಕ್ಷೇತ್ರ ಬೇರೆ ಬೇರೆ; ಸಾಧನಗಳು ಬೇರೆ ಬೇರೆ. ಆದರ್ಶವೂ ಬೇರೆಬೇರೆ.

ಹೋಲಿಸಿಕೊಳ್ಳುವ ಹೀನ ಪ್ರವೃತ್ತಿಯಿಂದ ದೂರವಿರಲು ಒಂದು ಅತ್ಯಮೂಲ್ಯ ಸ್ವರ್ಣಸೂತ್ರವಿದೆ.

ಪ್ರಾಯೇಣ ಸಾಮಾಗ್ರ್ಯವಿಧೌ ಗುಣಾನಾಂ
ಪರಾಙ್ಮುಖೀ ವಿಶ್ವಸೃಜಃ ಪ್ರವೃತ್ತಿಃ||

ಅಂದರೆ, ಸೃಷ್ಟಿಕರ್ತ ಭಗವಂತನ ಸ್ವ

(ಹನ್ನೆರಡನೇ ಪುಟ ನೋಡಿರಿ)

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

೧೮

'ಈ ಪಯಣಕ್ಕೆ ಕೊನೆ ಇಲ್ಲವೇನು?'

'ನಮ್ಮ ಪಯಣ ಹೀಗೆ ಅನಂತದ ವರೆಗೂ ನಡೆಯುತ್ತಿ ದೇವಿ.'

'ಕುದುರೆ ದಣಿದಿದೆ. ಪ್ರಯಾಣದಿಂದ ನಾನು ದಣಿದಿದ್ದೇನೆ. ವಿಶ್ರಾಂತಿಯೊಂದು ತಾಣ ಬೇಡವೇ?'

'ಮೇಲೆ ನೀಲಿಯ ಕೊಡೆ; ಕೆಳಗೆ ಹಸಿರ ಹಾಸುಗೆ. ಉಳಕೊಳ್ಳುವುದಕ್ಕೆ ಇನ್ನೇನು ಬೇಕು?'

'ಹೊಟ್ಟೆ ಚುರುಗುಡುತ್ತಿದೆ; ಕಣ್ಣು ಸೋಲುತ್ತಿದೆ. ನಿಸರ್ಗ ಒಡ್ಡುವ ಈ ಒಂದೊಂದು ವ್ಯಾಪಾರ—ಅದನ್ನು ಇದಿರಿಸಬೇಕು. ಬರಿಯ ಭಾವುಕತೆಯಿಂದ ಜೀವನ ವ್ಯಾಪಾರ ಹೇಗೆ ಸುಗಮವಾಗಬಲ್ಲದು? ನನ್ನ ಮೇಲೆ ನಿಮಗೆ ಕರುಣೆ ಇಲ್ಲದಿದ್ದರೂ ಚಿಂತೆಯಿಲ್ಲ. ಈ ಮೂಕ ಪ್ರಾಣಿಯ ಮೇಲೆಯಾದರೂ ನಿಮ್ಮ ಕನಿಕರವಿರಬೇಕಲ್ಲ? ಏರು-ತಗ್ಗುಗಳನ್ನು ಇಳಿದು ಹತ್ತಿ ಅದು ಈಗಲೇ ಸೋತಿದೆ. ಸರಿಯಾದ ಮೇವೂ ಇಲ್ಲ. ಅದರ ಗತಿ—'

'ಅದಕ್ಕೂ ನಮ್ಮ ಗತಿಯೇ.'

'ಅಂದರೆ?—'

'ಎಲ್ಲಾದರೂ ಸಾಯುವುದು.'

'ಈಗೇಕೆ ಈ ಅನಿಷ್ಟದ ಮಾತು?'

'ಅದು ಅನಿಷ್ಟ ಹೇಗಾದೀತು, ದೇವಿ? ನಮ್ಮ ಜನ ಬದುಕನ್ನು ಬಂಧನವೆಂದು ಕರೆದರು. ಸಂಸಾರ ಅಸಾರ ಎಂದು ಸಾರಿದರು. ಸಾವು ಅವರ ದೃಷ್ಟಿಯಲ್ಲಿ ಬಿಡುಗಡೆ; ವಿಮೋಚನೆ. ವಿಮೋಚನೆ ಅನಿಷ್ಟವಾಗಲಾರದು. ಇದು ನನ್ನ ಖಚಿತ ಅಭಿಪ್ರಾಯ.'

'ನಿಮ್ಮ ಅಭಿಪ್ರಾಯ ಏನೇ ಇರಲಿ, ಅದಕ್ಕೆ ನನ್ನ ಒಪ್ಪಿಗೆ ಇಲ್ಲ. ನಮ್ಮ ಪೂರ್ವಿಕರ ಕಲ್ಪನೆ ಸರಿಯೆಂದೂ ಕಾಣುವುದಿಲ್ಲ. ಬಾಳಿನ ಸಾರ್ಥಕತೆ ಚೆನ್ನಾಗಿ ಬದುಕುವುದರಲ್ಲಿದೆ.'

'ಚೆನ್ನಾಗಿ ಬದುಕುವುದು ಎಂದರೆ?'

'ಬಾಳಿನುದ್ದಕ್ಕೂ ದಯೆ-ದಮ-ದಾನ, ತಪ ಶೀಲಗಳನ್ನು ಬೆಳೆಸಿಕೊಂಡು ಆ ಬದುಕು ತೃಪ್ತಿಯನ್ನೂ, ಅನ್ಯರಿಗೆ ಸಂತೋಷವನ್ನೂ ಕೊಡುವಂತೆ ಮಾಡಲು ಪ್ರಯತ್ನಿಸುವುದು'

'ಈ ಆದರ್ಶ ಬಾಳಿನ ಕಲ್ಪನೆ ನಿನ್ನಲ್ಲಿ ಹೇಗೆ ಉದಯಿಸಿತು.'

'ಜೈನ ಸಾಹಿತ್ಯದ ಅಭ್ಯಾಸದಿಂದ. ಅರ್ಹಂತರ ಜೀವನ ಚರಿತೆಯ ಅವಲೋಕನದಿಂದ.'

'ಅರ್ಹಂತರಲ್ಲದಿದ್ದರೂ, ನಿಜ ಜೀವನದಲ್ಲಿ ಆ ಹಂತಕ್ಕೆ ಏರಿದ ಪುಣ್ಯಪುರುಷರ ದರ್ಶನಕ್ಕೆಂದೇ ಹೋಗುತಿದ್ದೇವೆ. ದಾರಿಯು ಬಹುಭಾಗ ಮುಗಿಯಿತು.'

'ಆ ಗುರುಗಳ ಸುದ್ದಿಯನ್ನೇ ನನ್ನ ಕೂಡೆ ಆಡಿರಲಿಲ್ಲ'

'ಅವರು ಅಪ್ಪಾಜಿಯ ಗುರುಗಳು. ಅಪ್ಪಾಜಿಯು ಜೊತೆ ಬಂದಾಗಲೆಲ್ಲ ನನಗೆ ಅವರ ದರ್ಶನ ಲಾಭ ದೊರೆಯುತ್ತಿತ್ತು. ನೀನೂ ನೋಡುವಿಯಂತೆ, ದೇವತಾ ಮನುಷ್ಯರು'

'ನನಗೆ ಮೊದಲೇ ಹೇಳಿದ್ದರೆ'

'ತಿಳಿಸಿಯಾಗ ಬೇಕಾದ್ದು ಏನಿದೆ ಇದರಲ್ಲಿ ದೇವಿ? ಮುಂದಾಗಿ ತಿಳಿಸುವುದರಿಂದ ಅನೇಕ ಸಂದರ್ಭಗಳಲ್ಲಿ ಹಾನಿಯೇ ಹೊರತು ಒಳಿತಿಲ್ಲ. ನಿನಗೀ ವಿಚಾರ ತಿಳಿದಿದ್ದರೆ ನಿನ್ನ ಮನಸ್ಸಿನಲ್ಲಿ ಇಲ್ಲಿಗೆ ಬರುವವರೆಗೂ ಹಲವಾರು ಯೋಚನೆಗಳು ಸುಳಿಯುತಿದ್ದುವು. ಅನಿರೀಕ್ಷಿತವಾಗಿ ದೊರಕುವ ಅನುಭವ, ನಿರೀಕ್ಷಿಸಿದುದಕ್ಕಿಂತ ಕ್ಷೇಮಕರ. ಅದರಿಂದಾಗುವ ಆನಂದ ಅಷ್ಟಿಷ್ಟಲ್ಲ'

'ನೀವು ಇಂದು ನನ್ನನ್ನು ಹೊಸ ಲೋಕಕ್ಕೆ ಕರೆದೊಯ್ಯುವಂತಿದೆ.'

'ನನ್ನ ಲೋಕಾ ಬಳಿಯೇ ಇರುವಾಗ ಹೊಸ ಲೋಕ ಬೇಕೇ ದೇವಿ?'

'ನೀವಿಷ್ಟು ರಸಿಕರೆಂಬುದು ನನಗೆ ತಿಳಿದಿರಲಿಲ್ಲ. ರಣಾಂಗಣದಲ್ಲಿ ವಿಹರಿಸುವ ನಿಮಗೆ ಭಾವಲೋಕದಲ್ಲೂ ವಿಹರಿಸ ಬರುತ್ತದೆಂಬುದು ನನಗೆ ತಿಳಿದುದು ಇಂದೇ'

'ಅಂತೂ ರಹಸ್ಯ ಸ್ಫೋಟವಾಯಿತಲ್ಲ'

'ಹೀಗೆ ಹರಟುತ್ತ ದಾರಿ ತುಳಿದರೆ ಊರು ಸೇರುವುದೆಂದು. ಅಪರಿಚಿತ ಸ್ಥಳ. ನನ್ನನ್ನಂತೂ ಭಯ ಆವರಿಸಿದೆ.'

'ರಣಭೂಮಿಯಲ್ಲಿ ಒಂಟಿಯಾಗಿ ಅಲೆಯುವ ಸಾಹಸಿ, ನಿನಗೂ ಭಯವೇ?'

'ನನ್ನದು ಕುರುಡು ಧೈರ್ಯ ಪ್ರಭು. ನಿರ್ಭಯತೆಯೇ ಬೇರೆ, ಅಂಜಿಕೆಯೇ ಬೇರೆ. ಅದರ ಉತ್ಪನ್ನಕ್ಕೆ ನಾಳೆಯ ಚಿಂತೆ ಇರಬಾರದು. ಸಾವನ್ನು ಮೆಟ್ಟಿ ನಿಲ್ಲಬೇಕು. ಅವೆಲ್ಲ ಈಗ ಬೇಡ. ನಾವೆಲ್ಲಿಗೆ ಬಂದೆವು, ಅದನ್ನಾದರೂ ತಿಳಿಸುವ ಕೃಪೆಯಾಗ ಬೇಕು'

'ಬಾನಂಚನ್ನು ಚುಂಬಿಸ ಬಯಸುವ ಈ ಮರಗಳು ಬನವಾಸಿ ಹತ್ತಿರದಲ್ಲಿದೆ ಎಂದು ಕೂಗಿ ಹೇಳುತ್ತಿವೆ. ಇದು ಫಲವತ್ತಾದ ಭೂಮಿ. ಪುಷ್ಕಳವಾಗಿ ಇಲ್ಲಿ ಮಳೆಯಾಗುತ್ತಿದೆ. ಹುಲುಸಾದ ಬೆಳೆ ಬೆಳೆಯುತ್ತದೆ. ಆದ್ದರಿಂದ ಇದು ಮಳೆನಾಡು. ಅಗೋ! ಅಲ್ಲೇ ಇದೆ—ಬಳ್ಳಿವರಿದು ಹರಿಯುವ ಹೊಳೆ ವರದೆ. ಅದರ ಅಂಚಿನಲ್ಲಿ ಕಾಣಬರುವ ದೇವಾಲಯ, ಮಧುಕೇಶ್ವರ ದೇವಸ್ಥಾನ. ಮನುಷ್ಯನಲ್ಲಿ ಸುಪ್ತವಾಗಿರುವ ಸೌಂದರ್ಯಪ್ರಜ್ಞೆ ಅಲ್ಲಿ ಮೂರ್ತಸ್ವರೂಪ ತಳೆದು ನಿಂತಿದೆ. ಇದು ಕಲೆಯ ನೆಲೆಯೂ ಹೌದು. ಮಂಗಲ ಧಾಮವೂ ಹೌದು.'

'ಈ ಸ್ಥಳ ದರ್ಶನಕ್ಕೆ ಎರಡು ಕಣ್ಣುಗಳು ಸಾಲವು ಪ್ರಭೂ'

'ಈ ಪುಣ್ಯ ಸ್ಥಳಕ್ಕೆ ಕರೆದು ತಂದೆನಲ್ಲ. ಹಾಗೆ ತಂದ ನನಗೇನು ಬಹುಮಾನ ಕೊಡುತ್ತೀಯಾ?'

'ಮೆಚ್ಚು ಬಹುಮಾನಗಳನ್ನು ಹಿರಿಯರಾದವರು ಕೊಡುವುದು ಸಂಪ್ರದಾಯ'

'ಉಪಕೃತರಾದವರು, ಒಂದೊಂದು ಬಾರಿ ಅವರ ನೆನಪಿಗೆಂದು ಕೃತಜ್ಞತಾ ಭಾವದಿಂದ ಉಡುಗರೆ ಕೊಡುವ ವಾಡಿಕೆಯುಂಟು'

'ಕೊಡುವುದಕ್ಕೆ ನನ್ನಲ್ಲಿ ಏನಾದರೂ ಉಳಿದಿರ ಬೇಕಲ್ಲ. ಕೊಡಬಹುದಾದ್ದನ್ನು ನಿಮಗೆಂದು ಆಗಲೇ ಮುಡಿಪಿಟ್ಟೆ, ನಾನು ಪರಾಧೀನೆ'

'ಕೊಡುವುದು ಬೇಡ. ಆ ಮನಸ್ಸಾದರೂ ಇದ್ದರೆ ಸಾಕು'

'ಏನು ಕೊಡ ಬಹುದು ಎಂಬುದನ್ನು ಆ ಮೇಲೆ ನಿರ್ಧರಿಸಿ ನೀಡಿದರಾಯಿತು. ಈಗಲೇ ಇಷ್ಟು ಆತುರ ಪಟ್ಟರೆ'

'ನೀನು ಜಿಪುಣೆ'

ಅಷ್ಟರಲ್ಲಿ ಅವರು ಹೊಳೆಯ ದಡ ತಲುಪಿದ್ದರು. ಇಬ್ಬರೂ ಕುದುರೆಯಿಂದಿಳಿದರು. ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ನದಿಗಿಳಿದರು.

'ಅಲ್ಲಿ ನೀರಿನ ಸೆಳೆತ ಅತಿಯಾಗಿದೆ. ಈ ಕಡೆಯಿಂದಿಳಿ'

'ಈ ಭಾಗದಲ್ಲಿ ನೀರು ಜಾಸ್ತಿ ಇರುವಂತಿದೆ. ಮೊಣಕಾಲಿನವರೆಗೂ ಬರುವಂತಿದೆ. ಬಟ್ಟೆ ಒದ್ದೆಯಾದರೆ'

'ಆ ದಡದಲ್ಲಿ ಬೇರೆ ಬದಲಾಯಿಸಿ ಕೊಂಡರಾಯಿತು'

'ಬಟ್ಟ ಬಯಲಲ್ಲಿ ಬಟ್ಟೆ ಬದಲಾಯಿಸುವುದೇ? ನನ್ನಿಂದಾಗದು'

'ಬೇಡವಾಗಿದ್ದರೆ ಒದ್ದೆ ಬಟ್ಟೆಯಲ್ಲಿಯೇ ಇರು. ಮೈಯಲ್ಲೇ ಒಣಗಲಿ'

'ಥಂಡಿಯಾಗಿ ಜ್ವರ ಬಂದರೆ —'

'ಭವರೋಗ ಹರ ಮಧುಕೇಶ್ವರನಿರುವಾಗ ಜ್ವರದ ಭಯವೇ. ನಿನಗಿಷ್ಟು ಹೆದರಿಕೆಯಾಗುವುದಿದ್ದರೆ ಎತ್ತಿ ಆಚೆಯ ಬದಿಯಲ್ಲಿಳಿಸುತ್ತೇನೆ'

'ಎತ್ತಿಕೊಳ್ಳಲು ನಾನೇನು ಕೈಗೂಸೆ. ನೀವು ಗಂಡಸರು, ನಿಮಗೆ ನಾಚುಗೆಯೇ ಇಲ್ಲ. ನನಗೆ ತುಂಬ ಸಂಕೋಚವಾಗುತ್ತೆ. ಅದಕ್ಕೊಪ್ಪಲಾರೆ'

'ಮಾತಿನಲ್ಲಿ ಹೊತ್ತು ಹೋಗಿ ಕತ್ತಲಾದರೆ, ಆ ಮೇಲೆ ದಾಟುವುದೂ ಪ್ರಯಾಸದ ಕೆಲಸ. ಬೇಗ ಆ ದಡ ಸೇರುವ'

'ಈ ವನಶ್ರೀಯನ್ನು ನೋಡುತ್ತ ನಿಂತರೆ ಹೊತ್ತಿನ ಅರಿವೇ ಬರುವುದಿಲ್ಲ'

'ಕೋಪಿಸಿ ಕೊಳ್ಳುವುದಿಲ್ಲವೆಂದಾದರೆ ನಿನ್ನಲ್ಲೊಂದು ಅರಿಕೆ. ಕೇಳಬಹುದೇ'

'ಅಗತ್ಯವಾಗಿ'

'ನೀನೂ ಜ್ವಾಲೆಯಂತೆ ಏನಾದರೂ ಪ್ರತಿಜ್ಞೆ ಮಾಡಿದಿಯಾ'

'ಯಾವ ಜ್ವಾಲೆ'

'ಬೆಂಕಿಯ ಜ್ವಾಲೆಯಲ್ಲ. ಭಾರತದ ಅಶ್ವಮೇಧಿಕ ಪರ್ವದಲ್ಲಿ ಬರುವ ಜ್ವಾಲೆ. ಅವಳ ಕತೆಯನ್ನು ನೀನು ಕೇಳಿರುವಿಯಾ ದೇವಿ.'

'ಗಂಗೆಯ ಸ್ಪರ್ಶದಿಂದ ಪಾಪ ಲೇಪಿಸ ಬಹುದೆಂದು ಶಂಕಿಸಿ ಜಲವನ್ನು ಮುಟ್ಟಲು ಹಿಂದು ಮುಂದು ನೋಡಿದವಳು'

'ಅವಳಂತೆ ನೀನೂ ವರದೆಯನ್ನು ಸ್ಪರ್ಶಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದರೆ—'

'ಹೂಂ! ಮಾಡಿದ್ದೇನೆ'

'ಮಾಡಿರುವುದಾದರೆ ಬೇರೆ ದಾರಿಯಿಲ್ಲ'

ಹೀಗೆಂದು ಅರಿಕೇಸರಿ—ಅವಳಿಗೆ ಯೋಚಿಸಲೂ ಅವಕಾಶ ಕೊಡದೆ ಅವಳನ್ನೆತ್ತಿಕೊಂಡ. ಅವನ ಹಿಡಿಕೆಯಲ್ಲಿದ್ದ ಅವಳು ನಾಚಿಕೆಯ ಮುದ್ದೆ

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 36

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಕ್ರಾಂತಿಕಾರಿ ನಿಲುವೆ
ಕೂಡಲೇ ಕಾರ್ಯಗತವಾಗಬೇಕು

ನುಡಿದಂತೆ ನಡೆವ ಭರವಸೆ ನೀಡಿ ಅಧಿಕಾರಕ್ಕೆ ಬಂದ ಆಳುವ ಕಾಂಗ್ರೆಸ್ಸು ತನ್ನ ಚುನಾವಣಾ ಪ್ರಣಾಳಿಕೆಯ ಮಹತ್ವಪೂರ್ಣ ಅಂಶಗಳನ್ನು ಕಾರ್ಯರೂಪಕ್ಕೆ ತರತೊಡಗಿದೆ. ಶ್ರೀ ದೇವರಾಜ ಅರಸು ಅವರ ನೇತೃತ್ವದಲ್ಲಿ ಪಕ್ಷವು ಪ್ರಗತಿಶೀಲ ನಿರ್ಣಯಗಳನ್ನು ಮಾಡಿದೆ. ಇವುಗಳಲ್ಲಿ ಹತ್ತು ಸ್ಟಾಂಡರ್ಡ್ ಎಕ್ರೆಗಳ ಗರಿಷ್ಠ ಮಿತಿಯ ಭೂ ಹಿಡುವಳಿಯೊಂದಾದರೆ, ಇನ್ನೊಂದು ಎರಡು ಲಕ್ಷ ರೂಪಾಯಿಗಳ ನಗರ ಆಸ್ತಿ ಮಿತಿ. ಇವೆರಡು ಪ್ರಾದೇಶಿಕ ಕಾಂಗ್ರೆಸ್ಸಿನ ನಿರ್ಧಾರಗಳು. ಪಕ್ಷದ ನಿರ್ಧಾರಗಳು ಸಲಹೆ ಅಥವಾ ದಿಕ್ಸೂಚಿಯ ರೂಪದಲ್ಲಿರುವಂಥವು. ಹಾಗಾಗಿ ಈ ಮಿತಿಯ ಸುತ್ತಮುತ್ತ ಶಾಸನ ನಿರ್ದೇಶಿಸ ಬಹುದು. ಹದಿನಾರು ವರ್ಷಗಳ ನನೆಗುದಿಗೆ ಬಿದ್ದ ರಾಜ್ಯದ ಆಂತರಿಕ ಪ್ರಶ್ನೆ ರಾಜ್ಯದ ಹೆಸರಿನ ಸಂಬಂಧದ್ದು. ಈಗ ಶ್ರೀ ಅರಸು ಸಚಿವ ಸಂಪುಟವು ರಾಜ್ಯದ ಹೆಸರನ್ನು ಬದಲಾಯಿಸಲು ಗೊತ್ತುಮಾಡಿದೆ. ಏನೆಂದು ಎಂಬುದಿನ್ನೂ ಗರ್ಭದಲ್ಲಿದ್ದರೂ ಪ್ರಸವವಾಗುವುದೀಗ ನಿಶ್ಚಿತವಾಗಿದೆ.

ಕೇಂದ್ರ ಭೂಸುಧಾರಣಾ ಆಯೋಗವು ೧೦ರಿಂದ ೧೮ ಸ್ಟಾಂಡರ್ಡ್ ಎಕ್ರೆಗಳಷ್ಟು ಭೂಮಿಯ ಗರಿಷ್ಠ ಮಿತಿಯಿರಬಹುದೆಂದು ಶಿಫಾರಸು ಮಾಡಿತ್ತು. ಈ ಶಿಫಾರಸಿನ ಆಧಾರದ ಮೇಲೆಯೇ ಅರಸು ೧೦ಎಕ್ರೆಗಳ ಮಿತಿಯನ್ನೇ ಹೇರ ಬಯಸಿದ್ದಾರೆ. ಈ ನಿಲುವೆಯ ಬಗ್ಗೆ ನಾವು ಆರು ವಾರಗಳ ಮೊದಲೇ ಸೂಚನೆ ನೀಡಿದ್ದೆವು. ಕುಟುಂಬಪೋಷಕರ ದೃಷ್ಟಿಯಲ್ಲಿ ಈ ಮಿತಿ ಕಡಿಮೆಯೆನಿಸುವುದಿಲ್ಲ. ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡುವ ನೀತಿಗೆ ಈ ಮಿತಿ ಯಥಾಯೋಗ್ಯವಾದದ್ದು. ಇಷ್ಟು ಜಮೀನನ್ನೇ ಸರಿಯಾಗಿ ಬೇಸಾಯಮಾಡುವುದು ಕಷ್ಟಸಾಧ್ಯವಾಗಿರುವಾಗ ಇದಕ್ಕಿಂತ ಹೆಚ್ಚಿನ ಭೂಮಿ ಬಯಸುವುದು ಸಾಧುವಾಗದು. ಗರಿಷ್ಠ ಮಿತಿಗಿಂತ ಹೆಚ್ಚಿನ ಭೂಮಿಯನ್ನು ಬಿಡಿಸಿಕೊಂಡು ಭೂರಹಿತರಿಗೆ ಹಂಚುವಾಗಲೂ ಸಣ್ಣಪುಟ್ಟ ಹಿಡುವಳಿದಾರರಿಗೆ ಪ್ರಥಮ ಪ್ರಾಶಸ್ತ್ಯ ನೀಡುವಂತಾಗಬೇಕು. ಸಮಗ್ರ ಭೂಸುಧಾರಣಾ ಶಾಸನ ಬರುವಾಗ, ಇತರ ಮೂಲಗಳಿಂದ 'ಪ್ರಮುಖ' ಆದಾಯ ಗಳಿಸುವವರಿಗೆ ಭೂಮಿ ಹೊಂದುವ ಅಧಿಕಾರ ನೀಡುವುದಿಲ್ಲವೆನ್ನಲಾಗಿದೆ. ಇಲ್ಲಿ 'ಪ್ರಮುಖ ಆದಾಯ' ಪದಕ್ಕೆ ವಿವರವಾದ ಪರಿಭಾಷೆ ಬೇಕೆನಿಸುತ್ತದೆ. ವ್ಯವಸಾಯವನ್ನು ಉಪಕಸುಬನ್ನಾಗಿಟ್ಟುಕೊಳ್ಳುವವರಿಗೆ ಭೂಮಿ ಹೊಂದುವ ಅಧಿಕಾರವಿಲ್ಲವೆಂಬುದಿದರ ಸಾರಾಂಶವಾದರೆ ಇದು ಸ್ವಾಗತಾರ್ಹವೇ. ಏಕೆಂದರೆ, ಅಂತಹ ಭೂಮಾಲಿಕರಿಂದ ಕೃಷಿ ಕ್ರಾಂತಿಯನ್ನು ನಾವು ನಿರೀಕ್ಷಿಸಬಾರದು. ಆದರೆ, ಉದ್ಯೋಗದಾದಾಯದಿಂದ ಕುಟುಂಬ ನಿರ್ವಹಣೆ ಅಸಾಧ್ಯವೆನಿಸಿದವರಿಗೆ ಭೂಮ್ಯಾದಾಯ ಇರುವಂತೆ ಭೂಮ್ಯಾದಾಯದಿಂದ ನಿರ್ವಹಣೆ ಅಸಂಭವವಾದವರಿಗೆ ಉದ್ಯೋಗ ಹೊಂದುವ ಅವಕಾಶವಿರಬೇಕೆನಿಸುತ್ತದೆ. ಈ ವೇಳೆಯಲ್ಲೇ ಭೂಮಿಯನ್ನು ಪಾಲು ಮಾಡಿಕೊಳ್ಳುವ ಅಧಿಕಾರದ ಬಗ್ಗೆಯೂ ವಿವೇಚನೆಯು ನಿರ್ಧಾರಕ್ಕೆ ಬರಬೇಕು. ಭೂಮಿಯನ್ನು ಸಣ್ಣ ಸಣ್ಣ ಹಿಡುವಳಿಯನ್ನಾಗಿ ಮಾಡುವುದರಿಂದ ಉತ್ಪಾದನೆ ಇಳಿಮುಖವಾಗುತ್ತದೆ; ಜತೆಗೆ ಕುಟುಂಬದ ಆದಾಯದಲ್ಲೂ ಕಡಿತವಾಗುತ್ತದೆ. ಒಬ್ಬ ತಂದೆಗೆ ಮೂರು ಮಕ್ಕಳಿದ್ದರೆ ಆವನು ಹೊಂದಿರಬಹುದಾದ ಆರು ಎಕ್ರೆ ಭೂಮಿಯನ್ನು ಹಂಚಿಕೊಳ್ಳುವ ಅಧಿಕಾರ ಮಕ್ಕಳಿಗೆ ಇರಬೇಕೆ? ಒಬ್ಬನು ಭೂಮಿಯಲ್ಲಿ ದುಡಿದು ಉಳಿದವರು ಬೇರೆಯೇ ಉದ್ಯೋಗವನ್ನು ಅನುಸರಿಸುವಂತಾಗಬಾರದೆ? ಯಾರಿಗೂ ಭೂಮಿ ಬೇಡವಾದರೆ, ಸರಕಾರಕ್ಕೆ ಅದು ಸೇರುವಂತಾದರೆ ಹೇಗೆ? ಸೂಕ್ತ ಪರಿಹಾರ ಪಡೆದು ಅದನ್ನು ಮಕ್ಕಳು ಹಂಚಿಕೊಳ್ಳಬಾರದೇಕೆ? ಇದರಿಂದ ಭೂಮ್ಯಾದಾಯವನ್ನೇ ಅವಲಂಬಿಸಿರುವವರ ಸಂಖ್ಯೆ ಗಣನೀಯವಾಗಿ ಇಳಿಯುತ್ತದೆ. ಜನತೆಯ ಒಲವು ಇತರ ಉದ್ಯೋಗ-ದಂಧೆಗಳತ್ತ ತಿರುಗುವುದು ಸಾಧ್ಯವಾಗುತ್ತದೆ.

ನಗರದ ಆಸ್ತಿಮಿತಿಯನ್ನು ಮಧ್ಯಪ್ರದೇಶವು ೪ ಲಕ್ಷ ರೂಪಾಯಿಗಳಿಗೆ ತಂದಿರಿಸಿತು. ಕರ್ನಾಟಕವು ಅದನ್ನು ಎರಡು ಲಕ್ಷಕ್ಕೆ ತರಬಯಸಿದೆ 'ನಗರ' ಪದದ ಪರಿಭಾಷೆಯೊಳಗೆ ಯಾವಯಾವ ಪ್ರದೇಶಗಳು ಬರುತ್ತವೆಂದು ಕಾದು ನೋಡಬೇಕಾಗಿದೆ. ಕಾರ್ಪೊರೇಶನ್ ಪ್ರದೇಶಗಳಂತೂ ಬಂದೇ ತೀರಬೇಕು. ಸಿಟಿ ಮುನಿಸಿಪಾಲಿಟಿ ಪ್ರದೇಶಗಳೂ ಬರಬಹುದು. ಬೆಂಗಳೂರಿನ ಒಂದೊಂದು ಮನೆ, ಹೋಟೆಲ್ಲು, ಸಿನಿಮಾ ಮಂದಿರಗಳು ಲಕ್ಷಾಂತರ ರೂಪಾಯಿ ಬೆಲೆಬಾಳುತ್ತವೆಂಬುದು ನಿಜ. ಹಾಗಿರುವಾಗ ಇವುಗಳ ವಿಭಜನೆ ಹೇಗೆ ಸಾಧ್ಯ? ಮುಖ್ಯಮಂತ್ರಿ ಅರಸು ಅವರು ಈ ಸಮಸ್ಯೆಗೂ ಸೂಕ್ತ ಪರಿಹಾರ ಅರಸುವಲ್ಲಿ ಸಫಲರಾಗಬೇಕು. ಚುನಾವಣಾ ಪ್ರಣಾಳಿಕೆ ಹೇಳುವುದಕ್ಕೆ ಮಾತ್ರವೆಂದು ದೃಢವಾಗಿ ನಂಬಿದವರಿಗೆ ಈ ನಿರ್ಧಾರಗಳು ಬವಳಿ ಬರಿಸಿವೆ. ಗರಿಷ್ಠ ಮಿತಿಯಲ್ಲಿ ಯಾವುದೇ ಧಾರ್ಮಿಕ ಸಂಸ್ಥೆಗಳಿಗೂ ಪ್ಲಾಂಟೇಶನ್ನುಗಳಿಗೂ ವಿನಾಯಿತಿ ನೀಡಲಾಗದೆಂಬ ವಿಷಯವಲ್ಲಿ ಪಕ್ಷದಲ್ಲೇ ಭಿನ್ನಮತಗಳಿವೆಯೆಂದು ವರದಿ. ಪಕ್ಷದೊಳಗೆ ಈ ಕ್ರಾಂತಿಕಾರಿ ನಿರ್ಧಾರಗಳನ್ನು ಯಾರೂ ವಿರೋಧಿಸದಿದ್ದರೂ ಅದನ್ನು ಹೃದಯಪೂರ್ವಕ ಒಪ್ಪಲಿಲ್ಲವೆಂಬುದು ಪತ್ರಿಕಾ ವರದಿ. ಶ್ರೀ ಅರಸು ಅವರು ನಿಜವಾಗಿಯೂ ಈ ಮಿತಿಯನ್ನು ಅನುಷ್ಠಾನಕ್ಕೆ ತರಬಯಸುವುದಾದರೆ, ಅದನ್ನು ಕೂಡಲೇ ಕಾರ್ಯಕೃತಗೊಳಿಸಬೇಕು; ಅವಶ್ಯ ಕಂಡರೆ ಆಂಧ್ರ ಸರಕಾರದಂತೆ ಸುಗ್ರೀವಾಜ್ಞೆಯನ್ನಾದರೂ ಹೊರಡಿಸಬೇಕು. ಹೆಚ್ಚಿನ ಆಸ್ತಿಯನ್ನು ಮಾರಿಬಿಡುವ, ಮೊದಲೇ ಆರಂಭವಾಗಿರುವ, ಚಾತುರ್ಯ ಇನ್ನು ತೀವ್ರವಾಗಿ ನಡೆಯಬಹುದು. ಮಧ್ಯಂತರಾವಧಿಯು ಬುದ್ಧಿವಂತರಿಗೆ ಸಹಾಯಕವೆನಿಸಬಹುದು.

ಅಕ್ರಮಗಳ ಸ್ಫೋಟನೆ

ಬೆಂಗಳೂರು ನಗರ ಜಿಲ್ಲೆಯ ಏಳನೆ ತರಗತಿಯ ಜಿಲ್ಲಾ ಮಟ್ಟದ ಪರೀಕ್ಷೆಯಲ್ಲಿ ನಾಪಾಸಾದ ನೂರಾರು ಮಂದಿ ವಿದ್ಯಾರ್ಥಿಗಳನ್ನು ಪಾಸು ಮಾಡಿದ ಲೆಕ್ಕಿಗರನ್ನು ಅವರ ಶಿಕ್ಷಕ ಹುದ್ದೆಯಿಂದ ಅಮಾನತುಗೊಳಿಸಲಾಗಿದೆಯೆಂದು ವರದಿ. ಅಮಾನತ್ತಿನ ಆಜ್ಞೆ ಇಷ್ಟರೊಳಗೆ ಕಾರ್ಯಗತವಾಗಿರಬಹುದು. ಅದಕ್ಕಿಂತ ಹೆಚ್ಚಾಗಿ 'ಹೀಗೂ ಆಗುತ್ತದೆ' ಎಂಬುದಕ್ಕೀಗ ಪುಷ್ಟಿ—ಪ್ರತ್ಯಕ್ಷ ಪುರಾವೆ ದೊರೆಯಿತು. ಈ ಲೆಕ್ಕಿಗರು ನಾಪಾಸದವರಿಂದ ಸಂಭಾವನೆ ಪಡೆದುಕೊಂಡೋ ಅಥವಾ ಪಕ್ಷಪಾತ ನಿಲುವೆಯನ್ನು ತೋರಿಸಿಯೋ ಅಥವಾ ನಿದ್ರೆ, ಆಲಸ್ಯ, ಮದ್ಯಗಳ ಪ್ರಭಾವದಿಂದಲೋ ಹೀಗೆ ಮಾಡಿರಬಹುದು. ಬೆಂಗಳೂರಿನಂತಹ ಮಹಾನಗರದಲ್ಲಿ ತಮಗೆ ದೊರೆಯುವ ಇನ್ನೂರು-ಇನ್ನೂರೈವತ್ತು ರೂಪಾಯಿಗಳ ವರಮಾನಗಳಲ್ಲಿ, ನಾನಾ ವೈಭವಗಳ ಆಕರ್ಷಣೆಯ ನಡುವೆ ಕುಟುಂಬ ಪೋಷಿಸುವುದು ದುಸ್ತರವಾದವರೆಷ್ಟು ಮಂದಿಯಿಲ್ಲ? ಮನೆ ಪಾಠಗಳಿಲ್ಲದೆ ಮನೆ ನಡೆಸಲಾಗದ ಶಿಕ್ಷಕರು ಈ ರೀತಿ ನಡೆದದ್ದು ಆಶ್ಚರ್ಯವಲ್ಲ. ಇಲ್ಲಿ ಗಮನಿಸಬೇಕಾದ ಎರಡಂಶಗಳಿವೆ—ಒಂದು ಶಿಕ್ಷಣ ಭಾಗದಲ್ಲಿ ಏನೇನು ಅಚಾತುರ್ಯ — ಅಕ್ರಮ ವ್ಯವಹಾರ ನಡೆಯುತ್ತದೆ ಎಂಬುದು ಶಿಕ್ಷಕರ ದಯನೀಯತೆ ಇನ್ನೊಂದು. ಸಮಾಜ ಶಿಲ್ಪಿಯೆಂಬವನಿಗೆ ಸರಕಾರ-ಜನತೆ ಗೌರವಯುತವಾಗಿ ಬದುಕುವ ಅವಕಾಶ ನೀಡಲು ಎಷ್ಟು ಹಿಂಜರಿಯುತ್ತದೆಯೋ ಅಷ್ಟು ರಾಡಿಯೇಳುತ್ತಲೇ ಹೋಗುತ್ತದೆ. ಈ ರಾಡಿ ಕಲಕುವ ಮೇಲಿನಂತಹ ಅಕ್ರಮಗಳು ಸ್ಫೋಟವಾಗುವುದು ಕೆಲವೊಮ್ಮೆ ಮಾತ್ರ. ಈ ಬಗೆಯ ದುರ್ವ್ಯವಹಾರಗಳು ನಿತ್ಯವೆಂಬಂತೆ ನಡೆಯುತ್ತಿಲ್ಲವೆ? ಇವುಗಳಲ್ಲಿ ಅಧಿಕಾರಿ-ಅನಧಿಕಾರಿಗಳೆಲ್ಲರೂ ಶಾಮೀಲಾಗಿಲ್ಲವೆ?

ಆಡಳಿತ ಮಂಡಳಿ ಮತ್ತು ಅಧ್ಯಾಪಕವೃಂದದವರ ಜಂಟಿ ಸಭೆ

ಶಿರ್ವ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕ ಮಂಡಳಿ ಮತ್ತು ಸಂಘದ ಆಡಳಿತದಲ್ಲಿರುವ ಎಲ್ಲ ವಿದ್ಯಾಸಂಸ್ಥೆಗಳ ಅಧ್ಯಾಪಕವೃಂದದವರ ಜಂಟಿ ಸಭೆಯು ತಾ. 29-4-72ರಂದು ಶ್ರೀ ಮೋಹನದಾಸ್ ಎನ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೂ ಹಾಯರ್ ಸೆಕೆಂಡರಿ ಶಾಲೆಯ ಪ್ರಧಾನ ಕಟ್ಟಡದ ಕೆಲಸವನ್ನೂ, ಇತರ ಶಾಲೆಗಳ ರಿಪೇರಿ ಮತ್ತಿತರ ಆವಶ್ಯಕತೆಗಳನ್ನು ಕೂಡಲೆ ಪೂರೈಸುವುದಾಗಿ ಕರೆಸ್ಪೊಂಡೆಂಟರಾದ ಶ್ರೀ ಕೆ. ಬಿ. ಶೆಟ್ರು ಆಶ್ವಾಸನೆ ಇತ್ತರು. ಬೆಂಗಳೂರಿನ ಶ್ರೀ ಎಸ್. ಗೋಪಾಲಕೃಷ್ಣ ಶೆಟ್ರೂ ಮಂಗಳೂರಿನ ಶ್ರೀ ಕೆ. ನ್ಯಾಕರೂ ಸ್ಥಳೀಯ ಸದಸ್ಯರೂ ಸಕಲ ಸಹಕಾರ ಸಹಾಯವನ್ನು ವ್ಯಕ್ತಪಡಿಸಿದರು. ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ರು ಧನ್ಯವಾದವಿತ್ತರು.

ಗರ್ಭಪಾತ ಶಾಸನ ಸುಧಾರಣೆ

ಕುಟುಂಬ ಯೋಜನೆಯ ದೃಷ್ಟಿಯಿಂದ ಗರ್ಭಪಾತವನ್ನು ಶಾಸನ ಬದ್ಧಗೊಳಿಸುವ ಬಗ್ಗೆ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಈಗೀಗ ವಾದವಿವಾದಗಳು ಏಳುತ್ತಿವೆ. ಕೆಲವು ರಾಷ್ಟ್ರಗಳಲ್ಲಿ ಗರ್ಭಪಾತವನ್ನು ಕುಟುಂಬ ಯೋಜನೆಯ ವಿಧಾನವನ್ನಾಗಿ ಬಳಸಲು ಶಾಸನ ಬದ್ಧಗೊಳಿಸಲಾಗಿದೆ. ಗರ್ಭಪಾತ ಎರಡು ವಿಧದಲ್ಲಿ ಆಗುತ್ತದೆ; ಇದರಲ್ಲಿ ಎರಡು ಬಗೆ - ಒಂದು ಸ್ವಾಭಾವಿಕ, ಎರಡು ಉದ್ದೇಶಪೂರ್ವಕ.

ಸಾಮಾನ್ಯವಾಗಿ ಗರ್ಭಿಣಿಯರು ದುರ್ಬಲಗೊಂಡಾಗ ಅಥವಾ ಭಯಗ್ರಸ್ತರಾದಾಗ ಸಂಭವಿಸುವ ಗರ್ಭಪಾತವನ್ನು ಸ್ವಾಭಾವಿಕ ಗರ್ಭಪಾತವೆನ್ನುವರು. ಉದ್ದೇಶ ಪೂರ್ವಕ ಗರ್ಭಪಾತವೆಂದರೆ ಬಲಾತ್ಕಾರದಿಂದ ಗರ್ಭಭಂಗ ಮಾಡುವ ವಿಧಾನ. ತಾಯಿ ಆರೋಗ್ಯದಲ್ಲಿ ವಿಪರೀತ ತೊಂದರೆಯಾದಾಗ, ಅವಿವಾಹಿತ ತರುಣಿಯರು ತಾಯಿಯರಾಗುವ ಸಂದರ್ಭಗಳಲ್ಲಿ ಈ ವಿಧಾನ ಬಳಸಲಾಗುವುದು. ದೇಶದಲ್ಲಿ ಈಗ ವರ್ಷಕ್ಕೆ ಸುಮಾರು ೬೫ ಲಕ್ಷ ಗರ್ಭಪಾತಗಳಾಗುತ್ತಿದ್ದು ಇದರಲ್ಲಿ ೪೦ ಲಕ್ಷ ಗರ್ಭಪಾತಗಳು ಶಾಸನವಿರುದ್ಧ ಗರ್ಭಸ್ರಾವಗಳಾಗಿವೆ ಎಂಬುದಾಗಿ ಸರ್ಕಾರಿ ಅಂಕಿ ಅಂಶಗಳು ತಿಳಿಸಿವೆ. ಜಗತ್ತಿನಾದ್ಯಂತ ವರ್ಷಕ್ಕೆ ಮೂರು ಕೋಟಿ ಗರ್ಭಪಾತಗಳಾಗುತ್ತಿವೆ ಎಂಬುದು ಅಧಿಕೃತ ಅಂಕಿ ಅಂಶಗಳ ವರದಿ.

ಗರ್ಭಪಾತವನ್ನು ಕಾನೂನುಬದ್ಧಗೊಳಿಸುವ ರಾಷ್ಟ್ರಗಳಲ್ಲಿ ಜನನ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ. ಜಪಾನ್, ಜೆಕೋಸ್ಲವಾಕಿಯಾ, ಪೋಲೆಂಡ್ ಮತ್ತು ಹಂಗೇರಿಗಳಲ್ಲಿ ಈ ವಿಧಾನವನ್ನು ಶಾಸನ ಸಮ್ಮತಗೊಳಿಸಿದ ಕೆಲವೇ ದಿನಗಳಲ್ಲಿ ಜನಸಂಖ್ಯೆ ಇಳಿಮುಖವಾಯಿತು. ಜಪಾನಿನಲ್ಲಿ ೧೯೪೯ರಲ್ಲಿ ಸಂತಾನಶಕ್ತಿ ಪಡೆದಿರುವ ಪ್ರತಿ ೧೦೦೦ ಮಹಿಳೆಯರಲ್ಲಿ ೧೧.೮ ಮಂದಿಯಲ್ಲಿ ಗರ್ಭಪಾತಗಳಾಗುತ್ತಿದ್ದು ಇದು ಗರ್ಭಪಾತ ಶಾಸನಬದ್ಧಗೊಂಡನಂತರ ಅಂದರೆ ೧೯೫೫ರಲ್ಲಿ ೫೦.೨ಕ್ಕೆ ಏರಿತು. ಇದೇ ರೀತಿ ಈಗ ಜನನ ಪ್ರಮಾಣ ಅತಿ ಕಡಿಮೆಯಿರುವ ದೇಶವಾದ ಹಂಗೇರಿಯಲ್ಲಿ ಗರ್ಭಪಾತ ಶಾಸನಬದ್ಧಗೊಂಡ ನಂತರ ಅಂದರೆ ಪ್ರತಿ ೧೦೦ ಜನನಗಳಿಗೆ ೧೩೯ ಗರ್ಭಪಾತಗಳು ನಡೆಯುತ್ತಿವೆ. ಬಲ್ಗೇರಿಯಾ, ಜೆಕೊಸ್ಲವಾಕಿಯಾ ಮತ್ತು ಪೋಲೆಂಡ್‌ಗಳಲ್ಲಿ ಈಗ ಪ್ರತಿ ೧೦೦ ಜನನಗಳಿಗೆ ಕ್ರಮವಾಗಿ ೫೮, ೫೪ ಮತ್ತು ೩೮ ರಂತೆ ಗರ್ಭಪಾತಗಳು ನಡೆಯುತ್ತಿವೆ.

ಪ್ರಾಚೀನದಿಂದಲೂ ಗರ್ಭಪಾತವನ್ನು ಮಹಿಳೆಯ ಜನನ ಶಕ್ತಿಯನ್ನು ನಿಯಂತ್ರಣಗೊಳಿಸುವ ವಿಧಾನವನ್ನಾಗಿ ಬಳಸಲಾಗುತ್ತಿದೆ. ಕಾಲಾನುಕ್ರಮದಲ್ಲಿ ಕೆಲವು ದೇಶಗಳು ಆಯಾ ದೇಶದ ಧಾರ್ಮಿಕ ಮತ್ತು ಸಾಂಪ್ರದಾಯಿಕ ಪರಿಸರಗಳ ಹಾಗೂ ಭಯದಿಂದ ಗರ್ಭಿಣಿಗೆ ಉಂಟಾಗುವ ಗರ್ಭತೊಂದರೆ ಇವುಗಳನ್ನು ವಿವೇಚಿಸಿ ಗರ್ಭಪಾತವನ್ನು ನಿಯಂತ್ರಿಸಿದವು.

ವೈದ್ಯಕೀಯ ರಂಗದಲ್ಲಿ ಕಂಡುಬಂದಿರುವ ಪ್ರಗತಿ ಹಾಗೂ ಧರ್ಮ ಮತ್ತು ಸಂಪ್ರದಾಯಗಳಲ್ಲಾಗಿರುವ ಮಾರ್ಪಾಟುಗಳನ್ನು ಗಮನಿಸಿ ಕೆಲವು ರಾಷ್ಟ್ರಗಳು ಗರ್ಭಪಾತವನ್ನು ಶಾಸನಸಮ್ಮತಗೊಳಿಸಿದವು. ಜಪಾನ್, ಚೀನಾ, ಸಿಂಗಪುರ, ಹಂಗೇರಿ, ಜೆಕೊಸ್ಲೊವಾಕಿಯಾ, ಪೋಲೆಂಡ್, ರುಮೇನಿಯಾ, ಯುಗೋಸ್ಲಾವಿಯಾ, ರಷ್ಯಾ, ಜರ್ಮನ್ ಗಣರಾಜ್ಯ, ಇಂಗ್ಲೆಂಡ್, ಸ್ವೀಡನ್, ಡೆನ್‌ಮಾರ್ಕ್, ಸ್ವಿಟ್ಜರ್‌ಲ್ಯಾಂಡ್, ಇಥಿಯೋಪಿಯಾ, ಕೇನ್ಯಾ, ಆಫ್ರಿಕಾ, ಕ್ಯೂಬಾ, ದಕ್ಷಿಣ ಅಮೆರಿಕಾ ಮತ್ತು ಉತ್ತರ ಅಮೆರಿಕಾದಲ್ಲಿ ಅನೇಕ ದೇಶಗಳಲ್ಲಿ ವೈದ್ಯಕೀಯ ಮತ್ತು ಗರ್ಭನಿರೋಧಕ ಕಾರಣಗಳಿಂದಾಗಿ ಗರ್ಭಪಾತಕ್ಕೆ ಶಾಸನ ಸಮ್ಮತಿಸಿದೆ. ಮಹಿಳೆಯರ ಆರೋಗ್ಯ ವಿಷಮಿಸುವುದು, ಬೇಡದ ಮಗುವಿನ ಜನನ ನಿಯಂತ್ರಣ ಈ ವಿಷಯಗಳಿಗಾಗಿ ಗರ್ಭಭಂಗ ವಿಧಾನದ ಬಗ್ಗೆ ಇತ್ತೀಚೆಗೆ ಕೇಂದ್ರದ ಅನುಮತಿ ವೈದ್ಯಕೀಯ ಗರ್ಭಪಾತ ಮಸೂದೆಯ ಮೂಲಕ ದೊರೆತಿದೆ. ಬಲಾತ್ಕಾರಕ್ಕೆ ಮಣಿದು ಗರ್ಭಿಣಿಯಾದ ತರುಣಿಯರಿಗೂ ಈ ಹೊಸ ಕ್ರಮ ಸಹಾಯಕವಾಗಿದೆ.

ಕುಟುಂಬ ಯೋಜನೆಯ ಉದ್ದೇಶಗಳಿಗಾಗಿ ಬಳಸುತ್ತಿರುವ ವಿಧಾನಗಳಲ್ಲಿ ಯಾವುದೊಂದು ವಿಧಾನವು ಪೂರ್ಣ ಪರಿಣಾಮಕಾರಿಯಲ್ಲವೆಂಬುದು ಕೆಲವೊಂದು ಸಂದರ್ಭಗಳಲ್ಲಿ ವ್ಯಕ್ತ ಪಟ್ಟಿದೆ. ಬೇಡದ ಶಿಶು ಗರ್ಭದಲ್ಲಿ ಮೂಡಿದಾಗ ದೇಹದಲ್ಲಿ ಅನಾರೋಗ್ಯ ಮನಸ್ಸಿಗೆ ಅಸಮಾಧಾನ ಉಂಟಾಗುವುದು ಸಹಜ. ಮನಸ್ಸಿಗೆ ಬೇಸರವುಂಟಾದಾಗ ಅದರಿಂದ ಗರ್ಭಿಣಿಯರಿಗೆ ಹೆಚ್ಚಿನ ತೊಂದರೆಯಾಗ ಬಹುದು. ಇದನ್ನು ತಡೆಯಲು ಹೊಸ ಕಾನೂನು ಗರ್ಭಪಾತಕ್ಕೆ ಅನುಮತಿ ನೀಡಿದೆ. ಸಮಾಜದ ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟ ಏರಿದಂತೆ ಕುಟುಂಬ ಯೋಜನೆಯ ಬಗ್ಗೆ ಜನತೆಯ ಒಲವೂ ಹೆಚ್ಚುವುದೆಂದು ಇತ್ತೀಚೆಗೆ ನಡೆಸಲಾದ ಅಧ್ಯಯನಗಳಿಂದ ವ್ಯಕ್ತ ಪಟ್ಟಿದೆ. ಕುಟುಂಬ ಯೋಜನೆಯ ವಿವಿಧ ವಿಧಾನಗಳು ಮತ್ತು ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪರಿಸರಗಳು ಒಂದನ್ನೊಂದು ಅವಲಂಬಿಸಿವೆ ಎಂಬುದು ನಿರ್ವಿವಾದವೆಂಬುದೂ ವ್ಯಕ್ತವಾಗಿದೆ. ಕುಟುಂಬ ಯೋಜನೆಯ ವಿಧಾನವನ್ನಾಗಿ ಗರ್ಭಪಾತವನ್ನು ನ್ಯಾಯಸಮ್ಮತ ಗೊಳಿಸಬೇಕೆ? ಎಂಬ ವಿಷಯವಾಗಿ ಇತ್ತೀಚೆಗೆ ಲಕ್ನೋ ಮತ್ತು ದೆಹಲಿ ನಗರಗಳಲ್ಲಿ ಅಧ್ಯಯನ ನಡೆಸಲಾಯಿತು. ಲಕ್ನೋದ ವಿವಿಧ ಕುಟುಂಬ ಕಲ್ಯಾಣ ಕೇಂದ್ರಗಳಿಗೆ ಭೇಟಿ ನೀಡಿದ ಸುಮಾರು ೫೦೦ ಮಂದಿಯನ್ನು ಸಂದರ್ಶಿಸಿ ಗರ್ಭಪಾತವನ್ನು ನ್ಯಾಯ ಸಮ್ಮತ ಗೊಳಿಸುವ ಬಗ್ಗೆ ಅವರ ಒಲವನ್ನು ಪರೀಕ್ಷಿಸಲಾಯಿತು. ಸಂದರ್ಶನ ನೀಡಿದವರಲ್ಲಿ ಶೇಕಡಾ ೬೧.೭ರಷ್ಟು ಮಂದಿ ತಮ್ಮ ಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸಿದರು. ದೆಹಲಿಯಲ್ಲೂ ಇಂತಹುದೇ ಒಂದು ಸಂದರ್ಶನ ನಡೆಸಲಾಯಿತು. ಅದರಲ್ಲಿ ಸಂದರ್ಶನ ನೀಡಿದವರಲ್ಲಿ ೫೩.೭ ಮಂದಿ ಈ ಬಗ್ಗೆ ತಮ್ಮ ಒಲವು ವ್ಯಕ್ತಪಡಿಸಿದ್ದಾರೆ. ಸಂದರ್ಶನ ನೀಡಿದವರಲ್ಲಿ ಹರಿಜನ ಗಿರಿಜನರು ಸೇರಿದಂತೆ ೩೮.೪ ಮಂದಿ ಹಿಂದೂಗಳಿದ್ದರು. ಅದರಲ್ಲಿ ಶೇಕಡಾ ೩೪.೮ ಮಂದಿ ಗರ್ಭಪಾತವನ್ನು ಕಾನೂನುಬದ್ಧಗೊಳಿಸಲು ಸಮ್ಮತಿಸಿದರು. ಸಂದರ್ಶನ ನೀಡಿದ ಮುಸ್ಲಿಂರಲ್ಲಿ ಹೆಚ್ಚು ಮಂದಿ ಉದ್ದೇಶ ಪೂರ್ವಕ ಗರ್ಭಪಾತದ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಸಿಕ್ಕರೂ ಅಷ್ಟೆ. ಸಂದರ್ಶನ ನೀಡಿದವರಲ್ಲಿ ಕ್ರಿಶ್ಚಿಯನ್ನರು ಅತಿ ಕಡಿಮೆಯಿದ್ದು ಅವರ ಬಗ್ಗೆ ವಿವರ ಅನಗತ್ಯ. ಗರ್ಭಪಾತವನ್ನು ಕುಟುಂಬ ಯೋಜನೆಯ ವಿಧಾನವನ್ನಾಗಿ ಅನುಸರಿಸುವ ಬಗ್ಗೆ ಸಮಾಜ, ಜಾತಿ, ಮತ, ಧರ್ಮಗಳು ತಮ್ಮದೇ ಆದ ಪ್ರಭಾವವನ್ನು ಬೀರುತ್ತವೆ ಎಂಬುದು ಇತ್ತೀಚೆಗೆ ನಡೆಸಿದ ಅಧ್ಯಯನಗಳಿಂದ ಸ್ಪಷ್ಟವಾಗಿದೆ.

ಕುಟುಂಬ ಯೋಜನೆಯನ್ನು ಪೂರ್ಣ ಯಶಸ್ವಿಗೊಳಿಸಲು ಯಾವ ಶಾಸ್ತ್ರೀಯ ಅಥವಾ ವೈದ್ಯಕೀಯ ವಿಧಾನಗಳಿಂದ ಸಾಧ್ಯವಿಲ್ಲ. ಜನತೆಗೆ ಶಿಕ್ಷಣ ಸೌಲಭ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬೇಕು. ಇದರಿಂದಾಗಿ ಕುಟುಂಬ ಯೋಜನೆ, ಹಾಗೂ ಅದರ ವಿಧಾನಗಳ ಬಗ್ಗೆ ವಿವೇಚನಾಶಕ್ತಿಯೂ ಜನತೆಯಲ್ಲಿ ಮೂಡಿ ಸ್ವಯಂ ಪ್ರೇರೇಪಿಸುವುವು.

ಕುಂದಾಪುರ 2nd Adl. ಮುನ್ಸಿಫ್ ಕೋರ್ಟಿನಲ್ಲಿ

R. R. C. 2204/71

ಅರ್ಜಿದಾರ. — ಕೃಷ್ಣದೇವಡು ಹೊಳ್ಳ

ಎದ್ರಿ — ಶೇಕ್ ಅದಂ ಸಾಹೇಬ,

ಉಡುಪಿ ತಾಲ್ಲೂಕು ಗುಂಡ್ಮಿ ಗ್ರಾಮದಲ್ಲಿರುವ ಅಮೀರ್ ಸಾಹೇಬರ ಮಗ ಆದಂ ಸಾಹೇಬಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರಗೆ ಎದ್ರಿಯಿಂದ ತಾ. 31-3-70ಕ್ಕೆ ಬರತಕ್ಕ ಗೇಣಿ ಬಾಕಿ ಬರಮಾಡಿ ಕೊಳ್ಳುವರೆ ಅರ್ಜಿದಾರನು ಎದ್ರಿಯ ಮೇಲೆ ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 2-6-1972ಕ್ಕೆ ತನಿಖೆಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿರುತ್ತದೆ.

By order of the Court

(Sd.) G. V. Aithal

Advocate for Petr

Date 1—5—1972, Coondapoor

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1972

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಕುಂದಾಪುರ 2nd Adl. ಮುನ್ಸಿಫ್ ಕೋರ್ಟಿನಲ್ಲಿ

R. R. C. 2168/1971

ಅರ್ಜಿದಾರ — ಸರ್ವೋತ್ತಮ ಭಟ್ಟ

ಎದ್ರಿ — ಶೀತಾರಾಮ ಹತ್ವಾರ

ನಾಗಮಂಗಲದ ಬಸ್‌ಸ್ಟೇಂಡ್ ಹೊಟೇಲ್ ಪ್ರೊಪ್ರೈಟರ್ ಶೇಷಗಿರಿ ಹತ್ವಾರರ ಮಗ ಶೀತಾರಾಮ ಹತ್ವಾರರಿಗೆ ಈ ಮೂಲ್ಕ ತಿಳಿಯ ಪಡಿಸುವುದೇನೆಂದರೆ,

ಎದ್ರಿಯಿಂದ ಅರ್ಜಿದಾರರಿಗೆ ತಾರೀಕು 31-3-70ಕ್ಕೆ ಬರತಕ್ಕ ಗೇಣಿ ಬಾಕಿ ಬರಮಾಡಿ ಕೊಳ್ಳುವರೆ ಅರ್ಜಿದಾರನು ಎದ್ರಿಯ ಮೇಲೆ ದಾಖ್ಲು ಮಾಡಿದ ಅರ್ಜಿಯು ತಾ. 27-5-1972ಕ್ಕೆ ತನಿಖೆಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯ ಪಡ್ಸಿಯದೆ.

N. S. Parameshwaraih

Advocate for Petr.

Date 1—6—72, Coondapoor

ಮನೆಯಿಂದಾದಲ್ಲಿ ಇರಲೇಬೇಕಾದ

ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ.ಕ.

ಅತ್ಯಪೂರ್ವ ಪುಸ್ತಕ ಸಂಗ್ರಹ—

ಓಲ್ಡ್ ಬುಕ್ ಸ್ಟಾಲ್‌ಗಳು

ಲೇಖಕರು ಮತ್ತು ವಿದ್ವಾಂಸರು ಹಳೆಯ ಪುಸ್ತಕಗಳಿಗೆ ತುಂಬ ಬೆಲೆ ಕೊಡುತ್ತಾರೆ. ಪ್ರಚಲಿತ ಮಾರುಕಟ್ಟೆಯಲ್ಲಿ ದೊರೆಯದಿರುವ ಪುಸ್ತಕಗಳನ್ನು ಕೆಲವರು ವ್ಯಾಪಾರಿಗಳು ಬೇರೆ ಬೇರೆ ವಿಧಾನಗಳಿಂದ ಸಂಗ್ರಹಿಸಿ ಅವುಗಳ ವ್ಯಾಪಾರ ಮಾಡುತ್ತಾರೆ. ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಸುಸಂಸ್ಕೃತ ದೇಶಗಳಲ್ಲಿ ಈ ಬಗೆಯ ವ್ಯಾಪಾರಕ್ಕೆ ಬಹಳ ಮಹತ್ವವಿದೆ. ಭಾರತವೂ ಈ ದೃಷ್ಟಿಯಲ್ಲಿ ಹಿಂದೆ ಬಿದ್ದಿದೆಯೆನ್ನುವಂತಿಲ್ಲ. ಕಲಕತ್ತೆ, ಬೊಂಬಾಯಿ, ಅಹಮ್ಮದಾಬಾದ, ಮದ್ರಾಸು, ಬೆಂಗಳೂರು ಮೊದಲಾದ ನಗರಗಳಲ್ಲಿ ಈ ರೀತಿಯ ಪುಸ್ತಕ ವಿಕ್ರೇತರು ಇದ್ದಾರೆ.

ಕಲಕತ್ತೆಯ ಇಬ್ಬರು ನವಯುವಕರು ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದ ಎರಡು ಪುಸ್ತಕಗಳಿಗಾಗಿ ಅಲೆದಾಡುತ್ತಿದ್ದರು. ಅವು ಸುಮಾರು ನೂರು ವರ್ಷಗಳ ಹಿಂದೆ ಪ್ರಕಟಿತವಾಗಿದ್ದುವು. ಈ ಯುವಕರ ಒಡೆತನಕ್ಕೆ ಸೇರಿದ ಹಳೆಯ ಪುಸ್ತಕಗಳ ಅಂಗಡಿಯೊಂದಿದೆ. ಇದರ ಹೆಸರು 'ಕಲಕತ್ತ ಓಲ್ಡ್ ಬುಕ್ ಸ್ಟಾಲ್'. ಇಲ್ಲಿ ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದ ಸುಮಾರು ಎರಡು ಸಾವಿರ ಅನುಪಲಬ್ಧ ಪುಸ್ತಕಗಳಿವೆ. ಇವುಗಳಲ್ಲಿ ಹೆಚ್ಚಿನವು ಪ್ಲಾಸೀ ಕದನ (೧೭೫೭)ಕ್ಕೆ ಮೊದಲೇ ಮುದ್ರಿತವಾದವುಗಳು.

ಕಲಕತ್ತ ನಗರದಲ್ಲಿ ಈ ರೀತಿ ಹಳೆಯ ಪುಸ್ತಕಗಳನ್ನು ಮಾರುವ ಸುಮಾರು ೫೦ ಅಂಗಡಿಗಳಿವೆ. ಕಲೆ ಮತ್ತು ವಿಜ್ಞಾನಗಳ ವಿವಿಧ ಶಾಖೆ—ಉಪಶಾಖೆಗಳಿಗೆ ಸಂಬಂಧಿಸಿದ ಅಲಭ್ಯ ಪುಸ್ತಕಗಳು ಇಲ್ಲಿ ದೊರೆಯುತ್ತವೆ. ಕಲಕತ್ತ ಓಲ್ಡ್ ಬುಕ್ ಸ್ಟಾಲ್ ಇವುಗಳಲ್ಲಿ ಅತ್ಯಂತ ಹಳೆಯದು. ಈ ಅಂಗಡಿ ನೋಡುವುದಕ್ಕೆ ಅತ್ಯಂತ ಸಾಧಾರಣವಾದದ್ದು. ತೆರೆದ ಕಪಾಟುಗಳು ದೂಳು—ಬಿಸಿಲು—ತೇವ ಎಲ್ಲವನ್ನೂ ಅರಗಿಸಿಕೊಂಡು ಬಣ್ಣ ಕಳೆದುಕೊಂಡಿದ್ದರೂ ಅನುಪಲಬ್ಧ ಜ್ಞಾನ ಸಂಪತ್ತನ್ನು ಕೂಡಿಕೊಂಡಿವೆ. ಈ ಅಂಗಡಿಯಲ್ಲಿ ಸಾಕಷ್ಟು ಸ್ಥಳಾವಕಾಶವೂ ಇಲ್ಲವಾದ್ದರಿಂದ ಪುಸ್ತಕಗಳನ್ನು ಒಪ್ಪವಾಗಿ ಓರಣವಾಗಿ ಇಡುವುದೂ ಅಸಾಧ್ಯ ಕೆಲಸವಾಗಿದೆ. ಆದರೂ ಅಂಗಡಿ ಯಜಮಾನರು ಪುಸ್ತಕಗಳ ಸಂರಕ್ಷಣೆಯ ಸಾಧ್ಯವಿದ್ದ ಎಲ್ಲ ಜಾಗ್ರತೆಯನ್ನೂ ನೋಡಿ ಕೊಳ್ಳುತ್ತಾರೆ. ಗೆದ್ದಲು ಹಿಡಿಯದಂತೆ ಆಗಾಗ್ಗೆ ಡಿಡಿಟಿಯನ್ನೂ ಸಿಂಪಡಿಸುತ್ತಾರೆ.

ಓಲ್ಡ್ ಬುಕ್ ಸ್ಟಾಲ್‌ನಲ್ಲಿ ದೊರೆಯುವ ಪುಸ್ತಕಗಳಲ್ಲಿ ಕೆಲ ರಾಷ್ಟ್ರೀಯ ಗ್ರಂಥ ಭಂಡಾರಗಳಲ್ಲಿ ದೊರೆಯದವೂ ಇವೆ. ಅಂತಹ ಮಹತ್ವಪೂರ್ಣ ಪುಸ್ತಕಗಳಲ್ಲಿ ಕೆಲವು ಇವು—ಬರ್ನಿಯರನ ಹಿಸ್ಟ್ರಿ ಆಫ್ ಗ್ರೇಟ್ ಮುಗಲ್ಸ್‌ನ ೧೬೭೦ರಲ್ಲಿ ಮುದ್ರಿತವಾದ ಸಂಸ್ಕರಣ ನಾಂಪೊಲಿಯನ್‌ನ ಹಿಸ್ಟ್ರಿ ಥಾಮಸ್ ಕಾಬ್ಲೀ ಬ್ರಾನ್‌ದ ೧೭೬೩ರಲ್ಲಿ ಪ್ಯಾರಿಸ್ಸಿನಲ್ಲಿ ಬೆಳಕು ಕಂಡ ಪ್ರತಿ. ೧೭೮೯ ರಲ್ಲಿ ಮುದ್ರಿತವಾದ ಮಾಸ್ಟರ್ ಎಂಬ್ರೋಕನ "ಆ್ಯನ್ ಅಕೌಂಟ್ ಆಫ್ ವಾರ್ ಇನ್ ಇಂಡಿಯಾ ಬಿಟ್ವೀನ್ ಇಂಗ್ಲೀಷ್ ಆ್ಯಂಡ್ ಫ್ರೆಂಚ್"

ಕೆಲವರು ಸಂಶೋಧನ ಪ್ರಿಯರಿರುತ್ತಾರೆ. ಇವರಲ್ಲಿ ದೇಶೀಯರೂ ವಿದೇಶಿಯರೂ ಸಮಾನರೇ. ಇಂಥವರಲ್ಲಿ ಹಲವರು ಪ್ರತಿ ವರ್ಷವೂ ಕಲಕತ್ತೆಗೆ ಸಂದರ್ಶನ ನೀಡುತ್ತಾರೆ. ಭಾರತೀಯ ಕಲೆ. ದರ್ಶನ ಸಂಸ್ಕೃತಿ ಮತ್ತು ಇತಿಹಾಸಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಅರಸುತ್ತಿರುತ್ತಾರೆ. ಇಂಥವರಲ್ಲಿಯೂ ಕೆಲವರು ೧೮೧೩ರಲ್ಲಿ ಅಚ್ಚಾದ ಜೇಮ್ಸ್ ಫಾರ್ಬ್ಸನ ಓರಿಯಂಟಲ್ ಮೆಮೊಯರ್ಸ್‌ನ ಒಂದೊಂದು ಖಂಡಕ್ಕೆ ನೂರು ನೂರು ರೂಪಾಯಿಗಳಷ್ಟು ಬೆಲೆ ತೆರಲು ಸಿದ್ಧರಿರುತ್ತಾರೆ. ೧೮೭೨ ರಲ್ಲಿ ಮುದ್ರಿತವಾದ ಡೇನಿಯಲ್‌ನ 'ಓರಿಯಂಟಲ್ ಸೀನರಿ'ಯ ಎಲ್ಲ ಖಂಡಗಳಿಗೆ ಆರುನೂರು ರೂಪಾಯಿಗಳ ವರೆಗೆ ಕೊಡಲು ಮುಂದೆ ಬರುತ್ತಾರೆ. ಓರ್ವ ಐರೋಪ್ಯ ಗ್ರಾಹಕನು ಕಲಕತ್ತಾ ಓಲ್ಡ್ ಬುಕ್ ಸ್ಟಾಲಿನಿಂದ ಗ್ರಿಫಿತ್‌ನ ಅಜಂತಾವನ್ನು ಆರು ನೂರು ರೂಪಾಯಿಗಳಿಗೆ ಕೊಂಡುಕೊಂಡನು.

ಪಶ್ಚಿಮ ಬಂಗಾಳದ ತಾತ್ಕಾಲಿಕ ವಾತಾವರಣವು ಪ್ರಾಚೀನ ಪುಸ್ತಕ ವ್ಯವಸಾಯಕ್ಕೆ ಬಹಳ ಪ್ರತಿಬಂಧಕವೆನಿಸಿದೆ. ಹಳೆಯ ಪುಸ್ತಕಗಳ ವ್ಯಾಪಾರಕ್ಕೆ ಇವು ಇಳಿಮುಖವಾಗುವುದಕ್ಕೆ ಇನ್ನೂ ಹಲವು ಕಾರಣಗಳಿವೆ. ಅಂತಾರಾಷ್ಟ್ರೀಯ ಮಾರುಕಟ್ಟೆ ಅತ್ಯಂತ ಆಕರ್ಷಕವಾಗುತ್ತಿದ್ದು ಇತ್ತೀಚಿಗೆ ಹಳೆಯ ಪುಸ್ತಕಗಳನ್ನು ಅರಸಿಕೊಂಡು ಬರುವ ಸಂಶೋಧಕರ ಸಂಖ್ಯೆ ಕಡಮೆಯಾಗಿದೆ. ಹಿಂದಿನ ಕಾಲದಲ್ಲಿ ಕಲಕತ್ತೆಯೊಂದೇ ಹಳೆಯ ಪುಸ್ತಕಗಳ ಮಾರುಕಟ್ಟೆಯೆಂಬ ಹೆಸರಿತ್ತು. ಆದರೆ ಇಂದು ಆ ಪರಿಸ್ಥಿತಿಯಿಲ್ಲ. ದೇಶದ ಬೇರೆ ಬೇರೆ ಮಹಾನಗರಗಳಲ್ಲಿ ಹಳೆಯ ಪುಸ್ತಕಗಳ ವ್ಯಾಪಾರವಿಂದು ಸರ್ವಸಾಮಾನ್ಯವಾಗಿದೆ. ಹಾಗಾಗಿ ಕಲಕತ್ತೆಯ ಮಾರುಕಟ್ಟೆ ಕುಸಿದಿದೆ.

ಹಿಂದೆ, ಭಾರತದಲ್ಲಿ ಇಂಗ್ಲಿಷರ ಸಂಖ್ಯೆ ಹೆಚ್ಚಿದ್ದಾಗ, ಹಳೆಯ ಮತ್ತು ದೊರಕದ ಪುಸ್ತಕಗಳ ವ್ಯವಸಾಯವು ಒಳ್ಳೆಯ ರೀತಿಯಲ್ಲಿತ್ತು. ಇಂಗ್ಲಿಷರು ಹಳೆಯದರಲ್ಲಿ ಹಳೆಯ ಪುಸ್ತಕಗಳನ್ನು ಸಂಗ್ರಹಿಸುವುದರಲ್ಲಿ ಅತ್ಯಂತ ಆಸಕ್ತರು. ಗುಪ್ತ ಮಾಳಿಗೆಯಿರುವುದು ಶ್ರೀಮಂತಿಕೆಯ ಲಕ್ಷಣವೆಂನು ಬಗೆಯುವಂತೆ ಯಾರೊಡನೆ ಹೆಚ್ಚು ಹೆಚ್ಚು ಹಳೆಯ ಪುಸ್ತಕಗಳ ಸಂಗ್ರಹವಿದೆಯೋ ಅವನು ಅಷ್ಟು ಮಟ್ಟಿಗೆ ಸಂಪನ್ನನೆಂದೂ ಸುಸಂಸ್ಕೃತ ಅಭಿರುಚಿಯುಳ್ಳವನೆಂದೂ ತಿಳಿಯಲ್ಪಡುತ್ತಾನೆ. ಇಂದಿಗೂ ಹಳೆಯ ಪುಸ್ತಕಗಳಿಗೆ ಗಿರಾಕಿಗಳಿದ್ದಾರೆ; ಆದರೆ ಅವರ ಸಂಖ್ಯೆ ಹಿಂದಿನ ಅನುಪಾತದಲ್ಲಿಲ್ಲ. ಹಾಗಾಗಿ ಹಳೆಯ ಪುಸ್ತಕದಂಗಡಿಗಳು ವಿಶ್ವವಿದ್ಯಾಲಯ ಅಥವಾ ಕಾಲೇಜುಗಳ ಗ್ರಂಥಪಾಲರುಗಳ ಮರ್ಜಿಯನ್ನೇ ಕಾದು ಕುಳಿತಿರಬೇಕಾಗಿದೆ.

ಹಳೆಯ ಪುಸ್ತಕಗಳ ವ್ಯವಸಾಯ ಸಾಕಷ್ಟು ಆಪಾಯಕಾರಿಯಾದದ್ದು. ಕಲಕತ್ತೆಯಲ್ಲಿನ ಎಲ್ಲ ಹಳೆಯ ಪುಸ್ತಕದಂಗಡಿಗಳಲ್ಲೂ ಯಥೇಚ್ಛವಾಗಿ ಪುಸ್ತಕಗಳ 'ಮೃತ ಬಂಡವಳ'ವಿದೆ. ಇವುಗಳ ಕ್ರಯ ವಿಕ್ರಯ ಬಹಳ ನಿಧಾನವಾಗಿ ನಡೆಯುತ್ತಿದೆ. ಕೇಳುವಾಗ ಅವಿಶ್ವಸನೀಯವಾದರೂ ಸತ್ಯ ಸಂಗತಿಯೊಂದಿದೆ—ಆ ಪುಸ್ತಕಾಲಯಗಳಲ್ಲಿ ಕಳೆದ ೪೦ ವರ್ಷಗಳಿಂದಲೂ ಮಾರಾಟವಾಗದೆ ಹೊಸ ಹೊಸ ರಕ್ಷಾಕವಚ ಹೊದ್ದುಕೊಳ್ಳುತ್ತಿರುವ ಕೆಲವೊಂದು ಪುಸ್ತಕಗಳಿವೆ. ಈ ಹಳೆಯ ಪುಸ್ತಗಳ ಪ್ರಕಾಶನವನ್ನು ಹೊಸತಾಗಿ ಯಾರಾದರೂ ಮಾಡಿದರೆಂದರೆ ಅವುಗಳ ವ್ಯಾಪಾರದ ಮಾಳಿಯೇ ಮುರಿದು ಹೋಗುತ್ತದೆ. ಕಲಕತ್ತಾ ಓಲ್ಡ್ ಬುಕ್ ಸ್ಟಾಲಿನ ಘಟನೆಯೊಂದನ್ನೇ ಇಲ್ಲಿ ಉದಾಹರಿಸಬಹುದು—ಅಲ್ಲಿ ಬಕಿಂಗಮ್‌ನ ಪ್ರಸಿದ್ಧ ಐತಿಹಾಸಿಕ ದಾಖಲೆ 'ಬೆಂಗಾಲ್ ಅಂಡರ್ ದಿ ಲೆಫ್ಟಿನೆಂಟ್ ಗವರ್ನರ್ಸ್'ನ ಎರಡು ಭಾಗಗಳಿದ್ದುವು. ಅವುಗಳ ಮಾರು ಬೆಲೆ ರೂ. ೮೦ ಇತ್ತು. ಇದೇ ವೇಳೆಗೆ ಆ ಪುಸ್ತಕದ ಅಗ್ಗ ಬೆಲೆಯ ಹೊಸ ಸಂಸ್ಕರಣ ಅಚ್ಚಾಯಿತು; ಹಳೆಯ ಪ್ರತಿಗಳು ಮಾರಿ ಹೋಗುವ ಪ್ರಮೇಯವೇ ದೂರವಾಯಿತು.

ಮೊದಲಿಗೆ ಕಲಕತ್ತೆಯ ಹಳೆಯ ಪುಸ್ತಕಗಳ ವ್ಯವಸಾಯವು ಮುಖ್ಯವಾಗಿ ಮುಸಲ್ಮಾನರ ಕೈಯಲ್ಲಿತ್ತು. ಆದರಿಂದು ಹಿಂದೂ—ಮುಸಲ್ಮಾನರಿಬ್ಬರೂ ಸಮಾನ ರೂಪದಲ್ಲಿ ಈ ವ್ಯವಸಾಯವನ್ನು ನಡೆಸುತ್ತಿದ್ದಾರೆ. ಈ ವ್ಯವಸಾಯವು ಮೊತ್ತಮೊದಲಿಗೆ ಮುಸಲ್ಮಾನರ ಕೈಯೊಳಗೆ ಹೇಗೆ ಹೋಯಿತೆಂಬುದೂ ಕುತೂಹಲಕಾರಕ ಇತಿಹಾಸ. ಇಂದಿಗೆ ಸುಮಾರು ನೂರು ವ

(ಎಂಟನೇ ಪುಟ ನೋಡಿ)

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. 1048/71 O. S. 297/69

Rev. Fr. P. W. Farion
—ಅರ್ಜಿದಾರ

ಮತ್ತು

ಮಾರ್ಸೆಲ್ ಪರ್‌ಟಾಡೋ — ಎದ್ರಿರು
ಎದ್ರಿ ಮಾರ್ಸೆಲ್ ಪರ್‌ಟಾಡೋ
S/o ಅಂತೋಣಿ ಪರ್‌ಟಾಡೊ
ಪುತ್ತೂರು ಕಸಬಾ ಗ್ರಾಮದಲ್ಲಿರುವವ.

ಮೇಲ್ಕಂಡ ಅಮಲ್ದಾರಿಯಲ್ಲಿ ಏಲಮು ಶರ್ತಗಳನ್ನು ನಿರ್ಣಯಿಸುವರೆ ತಾ. 24—5—72 ರಂದು ವ್ಯಾದೆ ಇರುತ್ತದೆ. ಆದುದರಿಂದ ನೀವು ಆ ದಿವಸ 11 ಗಂಟೆಗೆ ಸರಿಯಾಗಿ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿನ್ನಾಮಾಡಿ ಅರ್ಜಿಯನ್ನು ಮುಂದುವರಿಸಲಾದೀತು. ಎಂತ ಈ ಮೂಲಕ ನಿಮಗೆ ಕೋರ್ಟು ಹುಕ್ಕುಂ ಮೇರೆಗೆ ತಿಳಿಸಲಾಗಿದೆ.

Sd/ K. T. Bhat
Advocate for Petitioner.
Puttur, S.K. 28—4—1972

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸೋವಿಯತ್ ಜಿಜ್ಞಾಸೆ—

ಸಿನೆಮಾ ಕಲೆಯೆ, ಕೈಗಾರಿಕೆಯೆ?

ಚಲಚ್ಚಿತ್ರ ತಯಾರಿಕೆ, ಕಲೆಯೊ, ಕೈಗಾರಿಕೆಯೊ? ಉತ್ತರ ಅತ್ಯಂತ ಸರಳವಾಗಿದೆ. ಅದು ಎರಡೂ ಎನ್ನುತ್ತಾರೆ ಸೋವಿಯೆತ್ ಚಲಚ್ಚಿತ್ರ ಸಮಿತಿಯ ಉಪಾಧ್ಯಕ್ಷರಾದ ವ್ಲಾದಿಮಿರ್ ಬಾಸ್ಕಾಕೋವ್.

'ಇದರಲ್ಲಿ ಯಾವೊಂದನ್ನೂ ಅಲ್ಪವಾಗಿ ಕಾಣುವುದು ಕಲೆಗೆ ಅಥವಾ ಆರ್ಥಿಕತೆಗೆ ಧಕ್ಕೆಯನ್ನುಂಟು ಮಾಡುತ್ತದೆ' ಎಂದು ಅವರು ಹೇಳುತ್ತಾರೆ.

ಈ ಮಾತನ್ನು ಒಪ್ಪುತ್ತ ಸೋವಿಯೆತ್ ಕಲ್ಚರ್ ಪತ್ರಿಕೆಯು ತನ್ನ ಅಭಿಪ್ರಾಯವನ್ನು ಇನ್ನಿಷ್ಟು ತೀಕ್ಷ್ಣವಾಗಿ ಮುಂದಿಡುತ್ತದೆ.

'ನಮ್ಮ ಚಲಚ್ಚಿತ್ರ ತಯಾರಕರ ಮೇಲೆ ಉದ್ಯೋಗಪತಿಗಳ ಒತ್ತಡವೇನೂ ಇಲ್ಲ. ಅಂದರೆ ಚಲಚ್ಚಿತ್ರ ಉದ್ದಿಮೆಯು ಆರ್ಥಿಕ ಫಲಿತಾಂಶಗಳ ಬಗ್ಗೆ ಸಮಾಜವು ಉಪೇಕ್ಷಾ ಭಾವನೆಯಿಂದ ಇದೆಯೆಂದೇನರ್ಥವಲ್ಲ.

"ಇಡೀ ಅರ್ಥ ವ್ಯವಸ್ಥೆಯು ಒಳಗಾಗಿರುವ ಆರ್ಥಿಕ ಸೂತ್ರಗಳಿಗೂ ಚಲಚ್ಚಿತ್ರ ತಯಾರಿಕೆಯು ಒಳಪಟ್ಟಿರಬೇಕು."

ಬೇರೆ ಕೈಗಾರಿಕೆಗಳಂತೆಯೆ ಚಲಚ್ಚಿತ್ರ ಉದ್ದಿಮೆಯೂ ಆರ್ಥಿಕ ಸುಧಾರಣೆಯ ಪರಿಣಾಮಕ್ಕೆ ಒಳಗಾಗಿದೆ. ಹೆಚ್ಚು ನಾಜೂಕಾದ ವ್ಯವಸ್ಥಾಪನೆಯ ವಿಧಾನಗಳನ್ನೂ, ಶ್ರಮಿಕ ಸಂಘಟನೆಯನ್ನೂ ಪರೀಕ್ಷಿಸಲಾಗುತ್ತಿದೆ.

ಆದರೆ ಫಿಲ್ಮ್ ಸ್ಟುಡಿಯೊ ಎಂದರೆ ಸಾದರಕ್ಷೆ ಕಾರ್ಖಾನೆಯಲ್ಲ. ಅದರಂತೆಯೆ ಅದನ್ನು ನೋಡಲಿಕ್ಕಾಗುವುದಿಲ್ಲ. ಅಂತೆಯೆ ಚಲಚ್ಚಿತ್ರ ಉದ್ದಿಮೆಗೆ ಈ ಕ್ರಮಗಳನ್ನು ಅನ್ವಯಿಸುವಾಗ ಹೆಚ್ಚು ಜಾಗರೂಕತೆ ಅವಶ್ಯ.

ಆರ್ಥಿಕ ಸುಧಾರಣೆ ಜಾರಿಗೆ ಬಂದಂದಿನಿಂದ ಉತ್ತೇಜನ ವ್ಯವಸ್ಥೆಯೊಂದನ್ನು ಜಾರಿಗೆ ತರಲಾಗಿದೆ. ಅಂದರೆ ಎಲ್ಲಾ ಕಲಸಗಾರರೂ—ಸೃಷ್ಟ್ಯಾತ್ಮಕ ಮತ್ತು ತಾಂತ್ರಿಕ—ಆ ಒಂದು ಚಿತ್ರದ ಕಲಾತ್ಮಕ ಮಟ್ಟ ಮತ್ತು ಅದೇ ರೀತಿ ಗಲ್ಲಾ ಪೆಟ್ಟಿಗೆಗೆ ಅನುಗುಣವಾಗಿ ಸಂಬಳಗಳನ್ನು ಪಡೆಯುತ್ತಾರೆ.

ಪೂರ್ಣಗೊಂಡ ಒಂದು ಚಿತ್ರವು ಸಾರ್ವಜನಿಕರಿಗೆ ಪ್ರದರ್ಶಿತಗೊಳ್ಳುವುದಕ್ಕೆ ಮೊದಲು ಸ್ಟೂಡಿಯೋವಿನ ಕಲಾಮಂಡಲಿಗೆ ಮೌಲ್ಯ ನಿರ್ಣಯಕ್ಕಾಗಿ ತೋರಿಸಲ್ಪಡುತ್ತದೆ. ಸಂಬಂಧಿಸಿದ ಸ್ಟೂಡಿಯೋವಿನ ಸಿಬ್ಬಂದಿಯು ಈ ಮಂಡಲಿಯನ್ನು ಆರಿಸುತ್ತದೆ.

ಆ ಚಿತ್ರದ ಕಲಾತ್ಮಕತೆ ಹಾಗೂ ತಿರುಳುಗಳ ದೃಷ್ಟಿಯಿಂದ ಮಂಡಲಿಯು ಅದರ ಮೌಲ್ಯ ಮಾಪನವನ್ನು ಮಾಡುತ್ತದೆ. ತಯಾರಕ ತಂಡವು ಮಂಡಲಿಯು ನಿರ್ಣಯಿಸುವ ಪ್ರಮಾಣಗಳ ಪ್ರಕಾರ ಹಣವನ್ನು ಪಡೆಯುತ್ತದೆ.

ಇದರೊಂದಿಗೆ ಗಲ್ಲಾ ಪೆಟ್ಟಿಗೆಯು ಮಾಡಿದ ಲಾಭಗಳ ಪ್ರಕಾರವೂ ತಯಾರಕ ತಂಡವು ಬೋನಸ್ಸುಗಳನ್ನೂ ಪಡೆಯುತ್ತದೆ

ಕಲಾ ಮಂಡಲಿಯು, ಒಂದು ಚಿತ್ರ ಕಲಾತ್ಮಕವಾಗಿ ಬಡವಾಗಿದೆಯೆಂದು ತೀರ್ಮಾನಿಸಿದರೆ, ಗಲ್ಲಾ ಪೆಟ್ಟಿಗೆಯ ಬೋನಸ್ಸುಗಳನ್ನು ಅದಕ್ಕೆ ನೀಡಲಾಗುವುದಿಲ್ಲ. ಅಂದರೆ ಕೆಟ್ಟ ಚಿತ್ರಗಳನ್ನು ಆದರೆ ಹಣ ಸಂಪಾದಿಸಬಹುದಾದಂಥ ಚಿತ್ರಗಳಿಗೆ ಯಾವೊಂದು ಉತ್ತೇಜನವೂ ಇಲ್ಲ.

ಹಣಕಾಸು ಪಡೆಯುವ ಚಿತ್ರಗಳು ಬಹುತೇಕ ನಿರ್ಮಾಪಕರಿಗೆ ತಲೆ ನೋವನ್ನುಂಟು ಮಾಡುತ್ತವೆ. ಅದನ್ನು ನಿರ್ಲಕ್ಷಿಸುವಂತಿಲ್ಲ.

ಸ್ಟೇಟ್ ಬ್ಯಾಂಕಿನಿಂದ ಆತ ಸಾಲ ಪಡೆಯುತ್ತಾನೆ. ಸಾಮಾನ್ಯವಾಗಿ ೧೮ ತಿಂಗಳುಗಳ ಅವಧಿಗೆ ಇದನ್ನು ನೀಡಲಾಗುತ್ತದೆ.

ಚಲಚ್ಚಿತ್ರವು ಪ್ರದರ್ಶಿತಗೊಂಡಾಗ ಸಾಲವನ್ನು ಬಡ್ಡಿ ಸಹಿತ ಹಂಚಿಕೆಪಾರರ ಮೂಲಕ ಮರುಪಾವತಿ ಮಾಡಲಾಗುತ್ತದೆ

ನಿರ್ಮಾಪಕ, ನಿರ್ದೇಶಕ, ಹೀಗೆ ಚಲಚ್ಚಿತ್ರ ತಯಾರಿಕೆಗೆ ಸಂಬಂಧಪಟ್ಟ ಪ್ರತಿಯೊಬ್ಬರೂ ಅದು ಗಲ್ಲಾಪೆಟ್ಟಿಗೆ ದೃಷ್ಟಿಯಿಂದ ಯಶಸ್ವಿಯಾಗಬೇಕೆಂದು ಆಶಿಸುವುದು ಸಹಜವೆ ಆಗಿದೆ.

ಆದರೆ ಕೇವಲ ವ್ಯಾಪಾರಿ ದೃಷ್ಟಿಯಿಂದಲೇ ಸಿನೆಮ ತಯಾರಿಸುವಿಕೆ ಮಾತ್ರ ನಮಗೆ ಅನಂಗೀಕಾರ್ಹವಾಗದು.

ಸಿನೆಮ, ಎಂದರೆ ಜನರ ಶಿಕ್ಷಣಕ್ಕೊಂದು ಸಾಧನ. ಚಲಚ್ಚಿತ್ರ ಪ್ರೇಕ್ಷಕರ ವಿಕಾಸಕ್ಕೊಂದು ಅವಕಾಶ—ಎಂದೇ ನಾವು ಭಾವಿಸುತ್ತೇವೆ.

ವ್ಲಾದಿಮಿರ್ ಬಾಸ್ಕಾಕೋವ್ ಇನ್ನೂ ವಿವರಿಸುತ್ತಾರೆ: "ಕಳೆದ ಐದು ವರ್ಷಗಳಲ್ಲಿ ನಮ್ಮ ೪೦ ಫಿಲ್ಮ್ ಸ್ಟೂಡಿಯೊಗಳು ಒಟ್ಟು ಪೂರ್ಣ ಪ್ರಮಾಣದ—ಫೀಚರ್, ಡಾಕ್ಯುಮೆಂಟರಿ ಮತ್ತು ವೈಜ್ಞಾನಿಕ೮೦೦ ಚಿತ್ರಗಳನ್ನೂ ೫೫೦೦ ಪಾರ್ಟ್ ಫಿಲ್ಮ್‌ಗಳನ್ನೂ ತಯಾರಿಸಿವೆ

"ಇವುಗಳಲ್ಲಿ ಅನೇಕವುಗಳಿಗೆ ವ್ಯಾಪಾರಿ ಗುರಿ ಇಲ್ಲವೇ ಇಲ್ಲ. ಅವು ಶುದ್ಧಾಂಗವಾಗಿ ಉದ್ಬೋಧಕ ಚಿತ್ರಗಳೇ."

ಆರ್ಥಿಕವಾಗಿ ಇವುಗಳಲ್ಲಿ ಕೆಲವು ನಷ್ಟಕಾರಿಯಾಗಿರಬಹುದು. ಆದರೆ ಇಂಥ ಚಿತ್ರಗಳನ್ನು ತಯಾರಿಸಬಾರದೆನ್ನುವುದಕ್ಕೆ ಇದಂತೂ ವಾದವೇ ಅಲ್ಲ, ಆಗಬಾರದು.

"ಸರಕಾರ ಜನರ ಹಿತಗಳಿಗೇ ಆದ್ಯತೆಯನ್ನು ನೀಡುತ್ತದೆ. ಅವರು ವಾಣಿಜ್ಯ ಮೌಲ್ಯಗಳ ಮೇಲೆ ಅವಲಂಬಿಸಿರಬೇಕೆಂದು ಅದು ಅಪೇಕ್ಷಿಸುವುದಿಲ್ಲ.

ಹದಿನೈದೂ ಗಣರಾಜ್ಯಗಳು—ಗಾತ್ರ ಸಣ್ಣದಿರಲಿ, ದೊಡ್ಡದಿರಲಿ—ತಮ್ಮದೆ ಆದ ಫಿಲ್ಮ್ ಸ್ಟೂಡಿಯೊ ಹೊಂದಿವೆ.

ಇವುಗಳಲ್ಲಿ ಕೆಲವು ಭದ್ರವಾಗಿವೆ. ಇನ್ನು ಕೆಲವು ಇನ್ನೂ ಚಿಕ್ಕ ವಯಸ್ಸಿನವು. ಕಿರಿ ವಯಸ್ಸಿನ ಈ ಸ್ಟೂಡಿಯೋಗಳ ಯೋಗ್ಯತೆಯನ್ನು ಕೇವಲ ಲಾಭದ ದೃಷ್ಟಿಯಿಂದ ಅಳೆಯುವುದು ತಪ್ಪಾಗುತ್ತದೆ.

ಚಲಚ್ಚಿತ್ರ ಕೈಗಾರಿಕೆ ಮೇಲೆ ಆರ್ಥಿಕ ಸುಧಾರಣೆಯಿಂದಾಗಿರುವ ಪರಿಣಾಮಗಳ ಬಗ್ಗೆ ಒಂದೇ ಉತ್ತರವಿಲ್ಲ.

ಮೋಸ್ ಫಿಲ್ಮ್‌ನ ಎಂಟು ಸ್ಟೂಡಿಯೊಗಳಲ್ಲೊಂದರಲ್ಲಿ ದೃಷ್ಟಾಂತಕ್ಕೆ ಇಡೀ ಸಿಬ್ಬಂದಿಯು—ನಿರ್ದೇಶಕನಿಂದ ಹಿಡಿದು ದ್ವಾರಪಾಲಕನ ವರೆಗೆ—ಅವರು ಚಿತ್ರವು ಮಾಡಿದ ಲಾಭಗಳ ಪ್ರಮಾಣದ ಮೇಲೆ ಸಂಬಳವನ್ನು ಪಡೆಯುತ್ತದೆ.

ಈ ಪ್ರಾಯೋಗಿಕ ಸ್ಟೂಡಿಯೊವಿನ ಮುಖ್ಯಾಧಿಕಾರಿ ನಿರ್ದೇಶಕ ಗ್ರಿಗೊರಿ ಚುಖ್ರಾಯಿ ಅವರಾಗಿದ್ದಾರೆ.

ಚಿತ್ರದ ಯಶಸ್ಸಿನ ಮೇಲೆಯೆ ಇದು ಸಂಪೂರ್ಣವಾಗಿ ಅವಲಂಬಿಸಿಕೊಂಡಿದೆ. ಅಂದರೆ ಅದು ಅಗ್ಗದ ಚಿತ್ರಗಳನ್ನೇ ತಯಾರಿಸುತ್ತದೆ. ಬರೀ "ಗಲ್ಲಾಪೆಟ್ಟಿಗೆ"ಯನ್ನೇ ಒದಗಿಸುತ್ತದೆಯೆಂದೇನು ಅರ್ಥವಲ್ಲ.

ಬದಲು ಚುಖ್ರಾಯಿ ಮತ್ತು ಅವರ ಸಹನಿರ್ದೇಶಕರು ಇಂದಿನ ಗಂಭೀರವಾದ ಸಮಸ್ಯೆಗಳನ್ನೇ ಎತ್ತಿಕೊಳ್ಳುತ್ತಾರೆ.

ಉದ್ದಿಶ್ಯಪೂರ್ವಕವಾಗಿಯೆ ಅವರು ಸುಲಭ ಜನಪ್ರಿಯತೆಗೆ ಪ್ರಯತ್ನಿಸುತ್ತಿಲ್ಲ. ಏನಿದ್ದರೂ ಅವರ ಚಿತ್ರಗಳೂ ಕಲಾಮಂಡಲಿಯ "ಗುಣ ಪರೀಕ್ಷೆಯಲ್ಲಿ ತೇರ್ಗಡೆಯಾಗಲೇಬೇಕು.

ಈ ಸ್ಟೂಡಿಯೊ ಮತ್ತು ಬೇರೆ ಸ್ಟುಡಿಯೋಗಳ ನಡುವಣ ಒಂದೇ ಒಂದು ವ್ಯತ್ಯಾಸವೆಂದರೆ ಹಣಕಾಸು ವ್ಯವಸ್ಥೆಯದು. ಇದು ನೇರವಾಗಿಯೆ ಸಾರ್ವಜನಿಕ ಪ್ರತಿಕ್ರಿಯೆಯನ್ನು ಅವಲಂಬಿಸಿದೆ. ೧೯೬೬ರಲ್ಲಿ ಕಾರ್ಯವನ್ನು ಆರಂಭಿಸಿರುವ ಪ್ರಾಯೋಗಿಕ ಸ್ಟುಡಿಯೊ ಈ ವರೆಗೂ ಕೇವಲ ಏಳು ಚಿತ್ರಗಳನ್ನು ಮಾತ್ರ ತಯಾರಿಸಿದೆ. ಆದರೂ ಖಚಿತ ತೀರ್ಮಾನಗಳಿಗೆ ಇನ್ನೂ ಬರಲಾಗಿಲ್ಲ. ಅದನ್ನೆಲ್ಲ ಚರ್ಚಿಸಲಾಗುತ್ತಿದೆ, ಅಭ್ಯಾಸಿಸಲಾಗುತ್ತಿದೆ. ಈ ಮಧ್ಯೆ ಪ್ರಯೋಗವು ಮುಂದುವರಿದೇ ಇದೆ.

●●

In the Court of the Munsiff at Puttur, S. K.

O. S. 500/71

Dasappa Gowda —Plaintiff.
State & others —Defendants

Suit Notice and Injunction Notice

1. Iddinabba @ Unhi,
Bharath Timber Trading Company, Thumbya Saw Mills, Post Tumbya.

Please take notice that the above suit stands posted to 22-5-72 for your appearance and you are hereby driected to appear before the court on the said day at 11-00 A. M. in person or through an Advocate failing which the case will proceed in your absence.

(By order of Court)

U. P. SHIVARAM
Advocate for Plaintiff.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
157 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7¾% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

In the Court of the Munsiff at Puttur, S. K.

O. S. 38/72

P. Guddappa Gowda —Plaintiff
Kulusumbi & others—Defendants

Suit Notice To D3

3. Shabir Saheb,
S/o Kasim Saheb,
Pattadar of Kolthige village,
Puttur Taluk.

Please take notice that the above suit stands posted to 23-5-72 for your appearance and you are hereby directed to appear before the Court on the said day at 11-00 A. M. in person or through an Advocate failing which the case will be proceed in your absence.

(By order of Court)

U. P. SHIVARAM
Advocate for Plaintiff

ಅವರ ಓದಿಗೆ ರಾಕೆಟ್ ವೇಗ—

ಪುಸ್ತಕ ಸಾಗರ ಮಧ್ಯೆ ಲೆನಿನ್

ಕಾಮ್ರೇಡ್ ಲೆನಿನ್ನರ ವ್ಯಕ್ತಿತ್ವ ಮತ್ತು ಕೃತಿತ್ವಗಳ ಒಂದು ಮಹತ್ವಪೂರ್ಣ ಪಕ್ಷ ಪುಸ್ತಕಗಳ ವಿಷಯದಲ್ಲಿ ಅವರ ದೃಷ್ಟಿಕೋಣ ಅವರ ಸಹೋದರಿ ಮರಿಯೂ ಉಲ್ಯಿನಿಚ್ನಾಳೆನ್ನುವಂತೆ 'ಬ್ಲಾದಿಮಿರ್ ಇಲ್ಯಿಚನ ಸಂಪೂರ್ಣ ಜೀವನ ಒಬ್ಬಾತ ಜ್ಞಾನ ಪಿಪಾಸುವಿನದ್ದು". ಲೆನಿನ್ನರ ಸೋದರ ದೊಮಿತ್ರಿ ಇಲ್ಯಿಚನು ತನ್ನ ಸಂಸ್ಮೃತಿಗಳಲ್ಲಿ ಬರೆದಿದ್ದಾನೆ, '೧೪—೧೫ವರ್ಷಗಳ ಅಲ್ಪಾಯುವಿನಲ್ಲಿಯೇ ವೋಲೋದ್ಯಾ ಉಲ್ಯನೋವ್ ತುರ್ಗನೇವ್‌ನ ಕೃತಿಗಳನ್ನು ಅತ್ಯಂತ ಉತ್ಕಟತೆಯಿಂದ ಓದುತ್ತಿದ್ದರು" ತಮ್ಮ ಶಾಲಾ ಜೀವನದಲ್ಲಿಯೇ ಅವರು ಚರ್ನೇಶೆವ್‌ಸ್ಕಿಯ 'ವಾಟ್ ಈಜ್ ಟು ಬಿ ಡನ್?'ನ್ನು ಓದಿದ್ದರು. ಇದೇ ಕೃತಿಯಿಂದಾಗಿ ಲೆನಿನ್ನರ ಆಸಕ್ತಿ ಚರ್ನೇಶೆವ್ಸ್ಕಿಯ ರಚನೆಗಳತ್ತ ಹರಿಯಿತೆಂದು ದೊಮಿತ್ರಿ ಹೇಳುತ್ತಾನೆ. ಇದು ಮಹತ್ವಪೂರ್ಣ ತಥ್ಯ. ಅವರ ಹೆಂಡತಿ ನಾದೇಜ್ದಾ ಕ್ರುಪ್ಸ್ಕಾಯಳ ನೋಟ್ಸ್‌ಗಳನ್ನು ನೋಡುವಾಗ ಲೆನಿನ್ನರು ಚರ್ನೇಶೆವ್ಸ್ಕಿಯ ಗ್ರಂಥಗಳಿಂದ ಬಹಳಷ್ಟು ಆಕರ್ಷಿತರಾಗಿದ್ದಾರೆಂದು ತಿಳಿಯುವುದು.

ಲೆನಿನ್ನರ ಓದಿನ ಗತಿಯೂ ತೀವ್ರವಾಗಿತ್ತು. ಓ ಲೆಪೆಶಿಂಸ್ಕಾಯಾತನ್ನೊಂದು ನೆನಪನ್ನು ಹೀಗೆ ಬರೆಯುತ್ತಾರೆ—ಒಂದೊಮ್ಮೆ ಲೆನಿನ್ನರೊಂದು ದೊಡ್ಡ ದಪ್ಪಗಿನ ಪುಸ್ತಕವೋದುತ್ತಿದ್ದರು. ಕೆಲವು ನಿಮಿಷ ಕಳೆಯುತ್ತಲೇ ಅವರು ಪುಟ ಬದಲಿಸುತ್ತಿದ್ದುದನ್ನು ಕಂಡು ನನಗೆ ಅಚ್ಚರಿಯೊಗುತ್ತಿತ್ತು. ನಾನು ನಾಲ್ಕಾರು ಪಂಕ್ತಿಯನ್ನು ಓದುವಷ್ಟು ಹೊತ್ತಿನಲ್ಲಿ ಅವರು ಪುಟ ಮಗುಚಿ ಬಿಡುತ್ತಿದ್ದರು. ಅವರಿಗೆ ಒಂದು ಪುಟವೋದಲು ಎಷ್ಟು ಸಮಯ ಬೇಕೆಂಬುದನ್ನು ನಾನು ಅನುಮಾನಿಸುತ್ತಲೇ ಸೋತು ಹೋದೆ. ಆ ಪುಸ್ತಕ ವಿದೇಶೀ ಭಾಷೆಯೊಂದರಲ್ಲಿರುವುದನ್ನು ಕಂಡು ನನಗೆ ಮತ್ತಷ್ಟು ಆಶ್ಚರ್ಯವಾಯ್ತು.... ನನಗೆ ಸುಮ್ಮನಿರಲಾಗಲಿಲ್ಲ; ನಾನು ಕೇಳಿಯೇ ಬಿಟ್ಟೆ 'ಇಲ್ಯಿಚ, ನೀವು ಏನು ಮಾಡುತಿದ್ದೀರಿ?'

ಆಶ್ಚರ್ಯದಿಂದ ನನ್ನ ಕಡೆ ನೋಡುತ್ತ ಅವರು ಹೇಳಿದರು—ನಿನ್ನ ಪ್ರಶ್ನೆ ಅರ್ಥವಾಗಲಿಲ್ಲ. ನಾನು ಓದುತ್ತಲಿದ್ದೇನೆ....'

'ಆದರೆ, ಈ ಓದು ಎಂಥಹುದು? ನೀವು ಶಬ್ದ ಶಬ್ದವನ್ನೂ ಓದುತ್ತಿರುವಿರಾ ಅಥವಾ ಬರಿಯ ದೃಷ್ಟಿ ಹಾಯಿಸಿ ಬಿಡುತ್ತೀರಾ?'—ನಾನು ಕೇಳಿದೆ.

ಲೆನಿನ್ನರು ಉತ್ತರಿಸಿದರು—ಶಬ್ದ ಶಬ್ದವನ್ನೂ ಅದೂ ಬಹಳ ಗಂಭೀರವಾಗಿಯೇ?

ನಾನು ಮತ್ತೆ ಪ್ರಶ್ನಿಸಿದೆ—'ಲೆನಿನ್, ಇಷ್ಟೊಂದು ವೇಗವಾಗಿ ಯಾರಾದರೂ ಹೇಗೆ ಓದ ಬಲ್ಲರು?'

ನನ್ನ ಈ ಪ್ರಶ್ನೆ ಕೇಳಿ ಲೆನಿನ್ನರು ತುಸು ನಕ್ಕರು ಮತ್ತು ಉತ್ತರಿಸಿದರು—ನಿಮ್ಮ ಅಭಿಮತ ಸರಿಯಾದದ್ದೇ. ಆದರೆ ನಾನು ಮಾತ್ರ ಅತ್ಯಂತ ವೇಗವಾಗಿ ಓದುತ್ತೇನೆ. ನನಗೆ ಬಹಳಷ್ಟು ಓದಬೇಕಾಗಿರುವುದರಿಂದ ಬೇಗ ಬೇಗನೆ ಓದುವುದನ್ನು ಅಭ್ಯಾಸವನ್ನಾಗಿ ಮಾಡಿಕೊಂಡಿದ್ದೇನೆ. ಇಲ್ಲವಾದರೆ ಓದಬೇಕಾದುದನ್ನು ಓದುವುದು ಅಸಾಧ್ಯವಾಗುತ್ತದೆ.

ಲೆನಿನ್ನರ ಜೀವನ ಪ್ರಸಂಗಗಳಿಂದ ಪುಸ್ತಕಗಳ ವಿಷಯದಲ್ಲಿ ಅವರ ಅಭಿರುಚಿ ಮತ್ತು ಉತ್ಕಂಠತೆ ಬಹಳ ಆಳವಾದದ್ದೆಂದು ತಿಳಿಯುತ್ತದೆ. ಅವರು ಸಾಯಿಬೇರಿಯಾದಲ್ಲಿ ನೆಲಸಿದ್ದ ವೇಳೆ ತಮ್ಮೊಡನೆ ಬಹಳಷ್ಟು ಪುಸ್ತಕಗಳನ್ನಿಟ್ಟು ಕೊಂಡಿದ್ದರು. ತಮ್ಮ ಸ್ನೇಹಿತರು ಮತ್ತು ಸಂಬಂಧಿಕರಿಗೆ ಬರೆಯುವ ಪತ್ರಗಳಲ್ಲಿಯೂ ಅವರು ಪುಸ್ತಕಗಳ ಬಗ್ಗೆ ಚರ್ಚಿಸುತ್ತಿದ್ದರು. ಒಂದಲ್ಲೊಂದು ಪುಸ್ತಕ ಕಳಿಸುವಂತೆ ಅಥವಾ ಹುಡುಕುವಂತೆ ಕೇಳಿಕೊಳ್ಳುತ್ತಿದ್ದರು. ಬಿ. ಎ. ಕಾಪೆಸ್ಕಿಯೆಂಬವರಿಗೆ ಬರೆದೊಂದು ಪತ್ರದಲ್ಲಿ ರೇನೂನ್ ರೋಲಾನ್ ಬರೆದ ಒಂದು ಕರ ಪತ್ರವನ್ನು ಕಳಿಸುವಂತೆ ಬರೆದಿದ್ದರು. ಸೋಫಿಯಾ ರಾವಿಚ್‌ಗೆ ಬರೆದೊಂದು ಕಾಗದದಲ್ಲಿ—ನಾನು ನಾಳೊಂದು ಪುಸ್ತಕ ಕಳಿಸುತ್ತೇನೆ. ಅದರ ಬದಲಿಗೆ ದಯವಿಟ್ಟು ಗೋಗೋಲನ ಡೆಡ್ ಸೋಲ್ಸ್ ಅಥವಾ ಚರ್ನೆಶೇವಿಸ್ಕಿಯ ನಿಬಂಧ ಸಂಗ್ರಹವನ್ನು ಕಳಿಸಿಕೊಡು ಎಂದು ಬರೆದಿದ್ದರು.

ಲೆನಿನ್ನರ ಟಿಪ್ಪಣಿ ಮತ್ತು ನಿರ್ದೇಶಗಳಿಂದ ಹೊರಪಡುವ ಇನ್ನೊಂದು ಅಂಶವೆಂದರೆ, ಮನರಂಜಕ ಸಾಹಿತ್ಯದ ಮೇಲಿರುವಷ್ಟೇ ಅಭಿಮಾನ ಅವರಿಗೆ ವಿಜ್ಞಾನದ ವಿವಿಧ ಶಾಖೆಗಳ ಮೇಲೂ ಇತ್ತು ಎಂಬುದು. ಲೆನಿನ್ನರ ಅಧ್ಯಯನ ಶಾಲೆಯಲ್ಲಿ ಸಂದರ್ಭ ಗ್ರಂಥಗಳ ದೊಡ್ಡ ಸಂಗ್ರಹವೇ ಇತ್ತು. ಮಾತ್ರವಲ್ಲದೆ, ಜಗತ್ತಿನ ಪ್ರತಿಯೊಂದು ಪ್ರಮುಖ ಭಾಷೆಯ ಶಬ್ದಕೋಶ ಹಾಗೂ ದರ್ಶನ ಗ್ರಂಥಗಳು ಅವರ ಸಂಗ್ರಹದಲ್ಲಿದ್ದುವು. ಲೆನಿನ್ನರು ತಮ್ಮ ಮಿತ್ರರೊಂದಿಗೆ ಚರ್ಚಿಸುವಾಗ ಬರಬಹುದಾದ ಹೊಸ ಪುಸ್ತಕಗಳಿಗಾಗಿ ಅವರು ಹುಡುಕಾಡುತ್ತಿದ್ದರು; ಅವು ದೊರೆಯದೆ ಹೋದರೆ ತುಂಬ ಚಡಪಡಿಸುತಿದ್ದರು

ಕ್ರೆಮ್ಲಿನಿನಲ್ಲಿರುವ ಲೆನಿನ್ನರ ಖಾಸಗಿ ಪುಸ್ತಕಾಲಯದಲ್ಲಿ ಸುಮಾರು ೮೪,೦೦೦ ಕ್ಕೂ ಮಿಕ್ಕಿದ ಪುಸ್ತಕಗಳಿದ್ದ ಬಗೆಗೆ ದಾಖಲೆಯಿದೆ. ಇದರಿಂದ ಪುಸ್ತಕಗಳ ಬಗೆಗೆ ಲೆನಿನ್ನರ ದೃಷ್ಟಿಕೋಣವೇನೆಂಬುದನ್ನು ತಿಳಿದುಕೊಳ್ಳಬಹುದು.

ರಶ್ಯದ ಇನ್‌ಸ್ಟಿಟ್ಯೂಟ್ ಆಫ್ ಮಾರ್ಕ್ಸಿಸಮ್ ಲೆನಿನಿಸಂನ ಕೇಂದ್ರ ಸಂಗ್ರಹಾಲಯದಲ್ಲಿ ೯೦೦೦ಕ್ಕೂ ಹೆಚ್ಚು ಲೆನಿನ್ನರು ಸ್ವತಃ ಗುರುತಿಸಿದ ಟಿಪ್ಪಣಿಗಳುಳ್ಳ ಪುಸ್ತಕಗಳೂ ಪತ್ರಿಕೆಗಳೂ ಇವೆ. ಕ್ರೆಮ್ಲಿನ್‌ನ ಪುಸ್ತಕಗಳಲ್ಲಿಯೂ ಸುಮಾರು ೪೫೦ ಇಂತಹ ಪುಸ್ತಕಗಳಿವೆ. ಮಾರ್ಕ್ಸ್ ಮತ್ತು ಎಂಗೆಲ್ಸರ ಪುಸ್ತಕಗಳ ಪ್ರತ್ಯೇಕ ವಿಭಾಗವೊಂದು ಅವರ ಖಾಸಗಿ ಗ್ರಂಥಾಲಯದಲ್ಲಿದೆ. ಇದರಲ್ಲಿ ರಶ್ಯನ್ ಮತ್ತು ಇತರ ಭಾಷೆಗಳ ಸುಮಾರು ಇನ್ನೂರು ಗ್ರಂಥಗಳಿವೆ.

ಪುಸ್ತಕ ಮತ್ತು ಸಾಹಿತ್ಯದ ವಿಷಯದಲ್ಲಿ ಲೆನಿನ್ನರ ಅಭಿರುಚಿ ಆಜೀವನವಾಗಿತ್ತು. ಅವರ ಮೃತ್ಯುವನ್ನು ವರ್ಣಿಸುತ್ತಾ ಕ್ರುಪ್ಸಾಯಾ ಬರೆದಿದ್ದಾನೆ—ಸಾಯುವುದಕ್ಕೆ ಎರಡು ದಿನ ಮೊದಲು ಜೇಕ್‌ಲಂಡನ್‌ನ ಪುಸ್ತಕ ಲವ್ ಆಫ್ ಲೈಫ್ ಓದಿ ಹೇಳುವಂತೆ ನನಗೆ ಹೇಳಿದ್ದರು.

●●

ಅಮೆರಿಕೆಯಲ್ಲಿದ್ದರೂ—

ಈಕೆಗೆ ಸ್ವದೇಶದ ಬಗೆ ಕಾಳಜಿ

ಪತಿ, ಇಬ್ಬರು ಮಕ್ಕಳು, ಫಿಲಡೆಲ್ಫಿಯದಲ್ಲಿ ಜೀವನಕ್ಕೆ ಹೊಂದಾಣಿಕೆ—ಈ ಎಲ್ಲ ಗಮನದಲ್ಲಿದ್ದರೂ ಆ್ಯಲಿಸ್ ಸಾನಿ ಸಿವಿಲ್ ಎಂಜನಿಯರ್ ಆಗಿ ವೃತ್ತಿ ಪುನರಾರಂಭಿಸಲು ಯೋಜನೆ ಸಿದ್ಧಗೊಳಿಸಲು ಕಾಲಾವಕಾಶ ಮಾಡಿಕೊಳ್ಳುತ್ತಿದ್ದಾರೆ. ಕೇರಳದಲ್ಲಿ ಅವರು ಸ್ವಂತವಾಗಿ ಒಂದು ಎಂಜನಿಯರಿಂಗ್ ಸಲಹಾ ಕಚೇರಿ ಆರಂಭಿಸಲು ಉದ್ದೇಶಿಸಿದ್ದಾರೆ.

"ನನ್ನ ದೇಶಕ್ಕೆ ನನ್ನಿಂದ ಸ್ವಲ್ಪ ಪ್ರಯೋಜನವಾಗಬೇಕು ಎಂಬುದೇ ನನ್ನ ಗುರಿ" ಎಂದು ಆಕೆ ಸಂದರ್ಶನವೊಂದರಲ್ಲಿ ತಿಳಿಸಿದರು.

"ಈಗ ಕೇರಳದಲ್ಲಿ ಸಿವಿಲ್ ಎಂಜನಿಯರಿಂಗ್ ಸಲಹಾ ಸಂಸ್ಥೆಗಳಾವುವೂ ಇಲ್ಲ. ಸರ್ಕಾರದ ಲೋಕೋಪಯೋಗಿ ಇಲಾಕೆಯೊಂದಿದೆ. ಆದರೆ ಸಾರ್ವಜನಿಕರಿಗೆ ಇದರ ಸೇವೆ ಮಿತವಾದುದು. ಅಲ್ಲಿ ಎಂಜನಿಯರಿಂಗ್ ಸಲಹಾ ಕಚೇರಿಯೊಂದಿದ್ದರೆ ಕೇರಳದ ಜನರಿಗೆ ಬಹಳ ಪ್ರಯೋಜನವಾಗುವುದು" ಎಂದು ಅವರು ಹೇಳಿದರು.

೧೯೭೦ರ ನವೆಂಬರಿನಲ್ಲಿ ಶ್ರೀಮತಿ ಸಾನಿ ಬಾಸ್ಟನ್‌ನ 'ಹೇಲಿ ಅಂಡ್ ಆಲ್ಡ್ರಿಚ್' ಎಂಜನಿಯರಿಂಗ್ ಸಂಸ್ಥೆಯಲ್ಲಿ ನೌಕರಿ ತೊರೆದು ತಮ್ಮ ಕುಟುಂಬದವರನ್ನು ನೋಡಲು ಭಾರತಕ್ಕೆ ಭೇಟಿಯಿತ್ತಿದ್ದರು. ಅನಂತರ ತಮ್ಮ ಇಬ್ಬರು ಮಕ್ಕಳೊಡನೆ (ಮೂರೂವರೆ ವರ್ಷದ ಮಗಳು ಅನಿತಾ, ಎರಡು ವರ್ಷದ ಮಗ ಫ್ರಾನ್ಸಿಸ್) ಅವರು ಅಮೆರಿಕಕ್ಕೆ ಬಂದಿರುವರು.

ಅವರ ಪತಿ ಡಾ. ಬಿ. ಪಿ. ಸಾನಿ ಫಿಲಡೆಲ್ಫಿಯದ ಪ್ರತಿಷ್ಠಿತ ಸಂಸ್ಥೆ 'ಇನ್‌ಸ್ಟಿಟ್ಯೂಟ್ ಆಫ್ ಕ್ಯಾನ್ಸರ್ ರಿಸರ್ಚ್'ನಲ್ಲಿ ಒಂದು ಹುದ್ದೆ ಹೊಂದಿದ್ದಾರೆ. ಸಾನಿ ದಂಪತಿಗಳು ಫಿಲಡೆಲ್ಫಿಯದಲ್ಲಿ ಹೊಸ ಮನೆ ಪಡೆದಿದ್ದಾರೆ.

"ಇಲ್ಲಿನ ಜೀವನ ನನ್ನ ಪತಿಗೂ ಮಕ್ಕಳಿಗೂ ಬಹಳ ಇಷ್ಟವಾಗಿದೆ. ಅಮೆರಿಕದ ಜನ ಬಿಚ್ಚು ಮನದವರು, ಸ್ನೇಹಪರರು. ಮಕ್ಕಳು ಇಂಗ್ಲೀಷ್ ಭಾಷೆ ಕಲಿಯುತ್ತಿದ್ದಾರೆ" ಎಂದು ಶ್ರೀಮತಿ ಸಾನಿ ಹೇಳಿದರು.

ಇನ್ನು ಒಂದು ವರ್ಷದಲ್ಲಿ ಮಕ್ಕಳು ಶಾಲೆಗೆ ಹೋಗಲಾರಂಭಿಸಿದ ನಂತರ ಆ್ಯಲಿಸ್ ಸಾನಿ ಪುನಃ ಸಿವಿಲ್ ಎಂಜನಿಯರಿಂಗ್ ಉದ್ಯೋಗಕ್ಕೆ ಹೋಗಲಿದ್ದಾರೆ.

ಬೆಂಗಳೂರಿನಲ್ಲಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಫೌಂಡೇಷನ್ ಎಂಜನಿಯರಿಂಗ್‌ನಲ್ಲಿ ಮಾಸ್ಟರ್ ಪದವಿ ಪಡೆದಿರುವ ಶ್ರೀಮತಿ ಸಾನಿ ಅಮೇರಿಕನ್ ಸಂಸ್ಥೆಯೊಂದರಲ್ಲಿ ಮತ್ತೆ ಕೆಲಸಮಾಡಿ ಭಾರತದಲ್ಲಿ ತಾವು ಕಾರ್ಯತಃ ಬಳಸಬಹುದಾದಂಥ ಹೆಚ್ಚಿನ ಅನುಭವ ಪಡೆಯಲು ಬಯಸಿದ್ದಾರೆ.

ಕೇರಳದಲ್ಲಿನ ಉದ್ಯೋಗ ಪರಿಸ್ಥಿತಿ ಆಕೆಯ ಗಮನದಲ್ಲಿದೆ. "ಕೇರಳದಲ್ಲಿನ ಅನೇಕ ನಿರುದ್ಯೋಗಿ ಎಂಜನಿಯರುಗಳ ಪ್ರತಿಭೆ ಉಪಯೋಗಕ್ಕೆ ಬರಬೇಕೆಂದು ನನ್ನ ಇಚ್ಛೆ. ಹೆಚ್ಚಿನ ರಸ್ತೆಗಳು ನಿರ್ಮಾಣವಾಗಬೇಕು. ಈಗಿರುವ ರಸ್ತೆಗಳು ಸುಧಾರಿಸಬೇಕು. ಇವೆಲ್ಲದರಿಂದ ಆರ್ಥಿಕ ಸ್ಥಿತಿ ಸುಧಾರಿಸುವುದು. ಹಲವರು ಎಂಜನಿಯರುಗಳಿಗೆ ಉದ್ಯೋಗ ದೊರೆಯುವುದು. ಉದ್ಯೋಗಗಳನ್ನು ಕಲ್ಪಿಸ ಬೇಕೆಂದು ನನ್ನ ಆಸೆ"

'ಉದಾಹರಣೆಗೆ ಈಗಿನ ವಸ್ತುಗಳಿಗೆ ಬದಲಾಗಿ ಹಳ್ಳಿ ಗುಡಿಸಲುಗಳ ನಿರ್ಮಾಣಕ್ಕೆ ಕಾಂಕ್ರೀಟ್ ಬಳಕೆಗೆ ವಿನ್ಯಾಸಗಳನ್ನು ರೂಪಿಸುವುದರಲ್ಲಿ ಕೆಲವರು ಎಂಜನಿಯರುಗಳು ತೊಡಗಬಹುದು. ಇದರಿಂದ ಅವರಿಗೆ ಉದ್ಯೋಗ ದೊರೆಯುವುದರ ಜತೆಗೆ ಮಳೆಗಾಳಿ ಮೊದಲಾದವುಗಳಿಂದ ಗುಡಿಸಲು ವಾಸಿಗಳಿಗೆ ಹೆಚ್ಚಿನ ರಕ್ಷಣೆ ದೊರೆಯುವುದು' ಎಂದು ಆಕೆ ಹೇಳಿದರು.

"ಹೊಸ ಕಾರ್ಖಾನೆಗಳನ್ನು ಕಟ್ಟಲು ನಮ್ಮ ಎಂಜನಿಯರುಗಳ ಸೇವೆ ಉಪಯೋಗಿಸಿಕೊಂಡರೆ ಈ ಕಾರ್ಖಾನೆಗಳು ಕ್ಷೇತ್ರದಲ್ಲಿ

(ಒಂಬತ್ತನೇ ಪುಟ ನೋಡಿರಿ)

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=
ನ್ಯಾಶನಲ್ ಫೋಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res: 3272

ಬೇಳ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ದೊರಕಿದ ಮಹತ್ವಪೂರ್ಣವಾದ ಕ್ರಿ. ಶ. 8 ನೇ ಶತಮಾನದ

ತಾ ಮ್ರ ಶಾ ಸ ನ

ಮುನ್ನುಡಿ:

ಬೇಳ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಆಡಳಿತೆ ಮೊಕ್ತೇಸರರಾದ ಶ್ರೀ ಮಧ್ವರಾಯ ಭಟ್ಟರಿಂದ ಒಂದು ವಾರದ್ದಿಂದೀಚೆಗೆ ಒದಗಿಸಲ್ಪಟ್ಟ ಕ್ರಿ. ಶ. 8ನೇ ಶತಮಾನದ ತಾಮ್ರಶಾಸನವು ನಮ್ಮ ಜಿಲ್ಲೆಯ ಹಾಗೂ ಕರ್ನಾಟಕದ ಇತಿಹಾಸದಲ್ಲಿ ಬಹಳ ಮಹತ್ವಪೂರ್ಣವಾಗಿದೆ. ತುಳುನಾಡ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆಯುತ್ತದೆಂದು ಡಾ. ಗುರುರಾಜ ಭಟ್ಟರು (ಪ್ರಿನ್ಸಿಪಾಲ್ ಮಿಲಾಗ್ರೀಸ್ ಕೋಲೇಜ್ ಕಲ್ಯಾಣಪುರ) ಅಭಿಪ್ರಾಯ ಪಡುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಷ್ಟರ ತನಕ ಆಳುಪರಸರ ತಾಮ್ರ ಶಾಸನ ದೊರಕಿರಲಿಲ್ಲವೆಂದೂ ಇಷ್ಟರ ತನಕ ದೊರಕಿದ ಅಧಿಕೃತ ತಾಮ್ರ ಶಾಸನಗಳಲ್ಲಿ ಕ್ರಿ. ಶ. 14ನೇ ಶತಮಾನದ ತಾಮ್ರ ಶಾಸನವೇ ಅತಿ ಪ್ರಾಚೀನವಾದುದೆಂದೂ ಅವರು ಹೇಳಿ ಬೆಳ್ಮಣ್ಣಿನಲ್ಲಿ ಈಗ ದೊರೆತ ತಾಮ್ರ ಶಾಸನವು ಪ್ರಾಚೀನ ಆಳುವರಸರ ಕಾಲದ್ದಿದ್ದು ಕ್ರಿ. ಶ. 8ನೇ ಶತಕದ ಎಂದರೆ ಕ್ರಿ. ಶ. 778ರಿಂದ 790ರ ಅವಧಿಗೆ ಒಳಪಡುವ ತಾಮ್ರ ಶಾಸನವೆಂದೂ ಇದರ ರಾಜಕೀಯ ಸಾಮಾಜಿಕ ಹಾಗೂ ಧಾರ್ಮಿಕ ಇತಿಹಾಸದ ದೃಷ್ಟಿಯಿಂದ ವಿಶೇಷ ಮಹತ್ವವುಳ್ಳದ್ದೆಂದೂ ಡಾ. ಭಟ್ಟರು ಅಭಿಪ್ರಾಯ ಪಡುತ್ತಾರೆ.

ಈ ತಾಮ್ರ ಶಾಸನವು ಶ್ರೀ ಮಧ್ವರಾಯ ಭಟ್ಟರಿಗೆ ದೇವಾಲಯವನ್ನು ಜೀರ್ಣೋದ್ಧಾರ ಗೊಳಿಸುವಾಗ 1942ರಲ್ಲಿ ದೇವಾಲಯದ ಉತ್ತರ ಭಾಗದ ಪೆಳಿಯ ಅಡಿಯಲ್ಲಿ ಒಂದು ಕಲ್ಲಿನ ಪೆಟ್ಟಿಗೆಯಲ್ಲಿ ದೊರಕಿದ್ದೆಂದೂ ಅದನ್ನು ಜಾಗರೂಕರಾಗಿ ಕಾಪಾಡಿದ್ದೆಂದೂ ಅವರಿಂದ ತಿಳಿದು ಬಂದಿದೆ.

ಈ ತಾಮ್ರ ಶಾಸನವು 5 ತಗಡುಗಳಿಂದ ಕೂಡಿದ್ದು ಆಳುಪರ ಲಾಂಛನವಾದ ಎರಡು ಮೀನುಗಳನ್ನೊಳಗೊಂಡ ಮುದ್ರೆಯುಂಗುರದಿಂದ ಬಂಧಿತವಾಗಿದೆ. ಈ ಶಾಸನವು ಪುಸ್ತಕದ ರೂಪದಲ್ಲಿದ್ದು ಓದುವಿಕೆಯ ದೃಷ್ಟಿಯಿಂದ ಪರಿಶೀಲಿಸಿದಾಗ ಬಲದಿಂದ ಎಡಕ್ಕೆ ವ್ಯವಸ್ಥಿತವಾಗಿವೆ. ಬರಹವು ಮುದ್ದಾಗಿದ್ದು ಕ್ರಿ. ಶ. 3ನೇ ಶತಕದ ಕನ್ನಡ ಲಿಪಿಯನ್ನೊಳಗೊಂಡಿದೆ. ಖ' ಟ' ಇ' ಲ' ಮತ್ತು ಯ ಅಕ್ಷರಗಳು ಕ್ರಿ.ಶ. 5ನೇ ಶತಕದ ರೂಪವನ್ನೇ ಹೊಂದಿವೆ.

ಈ ತಾಮ್ರ ಶಾಸನದಲ್ಲಿ ಮೂರು ವಿಭಾಗಗಳಿವೆ. ಒಂದನೇ ವಿಭಾಗದಲ್ಲಿ ದಾನ ಕೊಟ್ಟ ತುಳು ನಾಡ ರಾಜನ ಹೆಸರು. ಎರಡನೇ ವಿಭಾಗದಲ್ಲಿ ದಾನ ಸ್ವೀಕಾರ ಮಾಡಿ ಅದನ್ನು ರಕ್ಷಿಸುವವರ ವಿವರ. ಮೂರನೇ ವಿಭಾಗದಲ್ಲಿ ಈ ದಾನಕ್ಕೆ ವಿಘ್ನ ತರುವವರಿಗಾಗಲೀ ನಾಶಮಾಡುವವರಿಗಾಗಲೀ ಆಗಬಹುದಾದ ಶಾಪವೂ ಈ ದಾನವನ್ನು ರಕ್ಷಿಸುವವರಿಗಾಗಬಹುದಾದ ಪುಣ್ಯವೂ ವಿವರವಾಗಿ ಕೊಡಲಾಗಿದೆ.

ತಾಮ್ರಶಾಸನದ ಅಭಿಪ್ರಾಯ:

ಬ್ರಹ್ಮನಿಂದ ರಕ್ಷಿಸಲ್ಪಟ್ಟ ಕುಲದಲ್ಲಿ ಅಭಿಮಾನವುಳ್ಳವನಾದ ಶ್ರೀ ಪ್ರುದಾಳುವರಸನ ರಾಜ್ಯದ ಒಂದು ಕ್ಷೇತ್ರದಲ್ಲಿ ಶ್ರೀನ್ವಪಾಳುವರಸನೂ ಶ್ರೀ ಎರ್ಡ್ಮಾಯಪ್ಪರಸನೂ ಇದ್ದು ಬ್ಯಾಳ್ಮಣ್ಣ ಸಭೆಗೆ ಸೂರ್ಯಗ್ರಹಣದಂದು ಶಿವಳ್ಳಿಯ ಮರ್ಯಾದೆ ಪರಿಹಾರವಾಗಿ ಧಾರೆಯನ್ನೆರೆದರು. ಈ ಕ್ಷೇತ್ರವು ಕರಿತಾಪುರದ ಮಾಣಿದೇವನ ಭದ್ರಳಿಕೆಯೊಳಗಿದ್ದು ಚೊಕ್ಕಾಡಿಯ ಭಟ್ಟರಿದ್ದು ಈ ಶಾಸನ ತಯಾರಿಸಲ್ಪಟ್ಟಿತು. ಈ ದಾನ ಶಾಸನವನ್ನು ಕಾಯುವ ಕಾಪಿನ ಬೊಯ್ಯವರ್ಮನೂ ಬೇಳದ ನನ್ದನೂ ಕೊಳುನ್ನೂರ ನನ್ದನೂ ಸಾನ್ತೋರಹೆಗ್ಗಡತಿಯೂ ಟರಪಣನೂ ಇನ್ನಿತರರೂ ಅನನ್ಯ ಪುಣ್ಯವನ್ನು ಹೊಂದುವರು. ಈ ದಾನಶಾಸನವನ್ನು ಅಳಿಯುವವರು ಅಥವ ವಕ್ರಗೊಳಿಸುವವರು ವಾರಣಾಸಿ ಮತ್ತು ಶಿವಳ್ಳಿಯನ್ನು ನಾಶಗೊಳಿಸಿದ ದೋಷಕ್ಕೂ ಇಪ್ಪತ್ತೊಂದು ನರಕಕ್ಕೂ ಸಹಸ್ರ ವರ್ಷ ಅಮೇಧ್ಯದಲ್ಲಿ ಹುಳುವಾಗಿಯೂ ಕ್ರಮಿಸುವ ಕಷ್ಟಕ್ಕೂ ಒಳಗಾಗುವರು. ಇದನ್ನು ರಕ್ಷಿಸುವವರಿಗೆ ಅಶ್ವಮೇದದ ಫಲವೊದಗುವದು. ಶಿವವಳ್ಳಿಯನ್ನು ವೃದ್ಧಿಸಿದ ಪುಣ್ಯ ಒದಗುವುದು ಮಾತ್ರವಲ್ಲದೆ ಈ ದಾನಶಾಸನದ ರಕ್ಷಣೆಯಲ್ಲಿ ಮೃತನಾದವನಿಗೆ ಇಂದ್ರಪದವಿಯು ಲಭ್ಯವಾಗುವುದು. ಈ ದಾನ ಶಾಸನದಿಂದ ಪಾಣ್ಡ್ಯಕುಲಗಳು ವೃದ್ಧಿಯಾಗುವುವು.

ಈ ಶಾಸನದಲ್ಲಿ ಬೆಳ್ಮಣ್ಣು ದೇವಿಗೆ ಮಹಾಮುನಿ ಸೇವಿತ ವಿಂಧ್ಯವಾಸಿನಿ ಎಂಬ ಉಲ್ಲೇಖವಿದೆ.

ಚಾರಿತ್ರಿಕ ವೈಶಿಷ್ಟ್ಯ:

ಈ ಶಾಸನದಲ್ಲಿ ಉಲ್ಲೇಖಗೊಂಡ ಆಳುವರಸನು ಕ್ರಿ. ಶ. 770ರಿಂದ ಕ್ರಿ.ಶ. 790ರ ವರೆಗೆ ಆಳಿಕೊಂಡಿದ್ದ ಆಳುಪರಸನಾಗಿರಬೇಕು. ಆಳುವರಸರು ಬಾದಾಮಿ ಚಾಳುಕ್ಯರ ಅಧೀನವಾಗಿದ್ದರೂ ಈ ಶಾಸನದಲ್ಲಿ ಚಳುಕ್ಯರಿಗೆ ಉಲ್ಲೇಖವಿಲ್ಲದಿರುವುದರಿಂದ ಆಳುವರಸರು ಎಲ್ಲ ವಿಷಯಗಳಲ್ಲೂ ಸ್ವತಂತ್ರರೇ ಇದ್ದಿರಬೇಕೆಂಬುದಾಗಿಯೂ ಅಥವ ಚಳುಕ್ಯರ ಮೇಲಧಿಕಾರವನ್ನು ತ್ಯಜಿಸಿದ್ದಿರಬೇಕೆಂಬುದಾಗಿಯೂ ಊಹಿಸಬಹುದು. ಶ್ರೀ ಎಪ್ಪಾಯಪ್ಪರಸನು ತಲಕಾಡಿನ ಗಂಗರಸನಾದ ಶ್ರೀ ಪುರುಷನ ಎರಡನೇ ಮಗನಿರಬೇಕು. ಗಂಗ ರಾಜರಿಗೂ ಆಳುಪರಸರಿಗೂ ರಕ್ತಸಂಬಂಧವಾಗಲೀ ರಾಜಕೀಯ ಒಪ್ಪಂದವಾಗಲೀ ಇದ್ದಿರಬಹುದು. ಈ ಶಾಸನದಲ್ಲಿ ಉಲ್ಲೇಖಿತವಾದ ಸ್ಥಳನಾಮಗಳು ಬ್ಯಾಳ್ಮಣ್ಣು (ಬೆಳ್ಮಣ್ಣು) ಕಾನ್ತಾವುರ (ಕಾಂತಾವರ) ಬೇಳು (ಬೋಳ) ಸಾನ್ತೂರು (ಸಾಂತೂರು) ಕೊಳುನೂರು (ಕೊಡಂದೂರು) ಕಾಪು, ಚೊಕಪಾಡಿ (ಚೊಕ್ಕಾಡಿ) ಶಿವವಳ್ಳಿ (ಶಿವಳ್ಳಿ)—ಇವೆಲ್ಲವೂ ಸ್ಥಳೀಯ ಆಡಳಿತೆಯ ದೃಷ್ಟಿಯಿಂದ ಪ್ರಾಮುಖ್ಯವುಳ್ಳವುಗಳು. ಹೆಸರುಗಳೆ ರೂಪಾಂತರ ಹೊಂದಿದೆ ಎಂಬುದು ವಿದಿತವಾಗುತ್ತದೆ. ತುಳುನಾಡಿನಲ್ಲಿ ಶಿವಳ್ಳಿಯ ಪಾವಿತ್ರ್ಯ ವಿದಿತವಾಗುತ್ತಿದೆ.

ಸಾಂತೂರು ಹೆಗ್ಗಡೆಯ ಹೆಸರಿರುವುದರಿಂದ ಅಳಿಯ ಸಂತಾನದ ಕುರುಹು ಈ ಕಾಲದಲ್ಲಿತ್ತೆಂದು ಊಹಿಸಲು ಸಾಧ್ಯವಿದೆ. ಚೊಕ್ಕಾಡಿಯ ಅಗ್ರಹಾರಕ್ಕೂ ಬೆಳ್ಮಣ್ಣಿಗೂ ಇಂದಿಗೂ ಸಂಬಂಧವಿರುವುದು ಗಮನಾರ್ಹವಾಗಿದೆ.

ಅತಿಮುಕ್ತೇ ವಿಂಧ್ಯವಾಸಿನಿ ಮಹಾಮುನಿ ಸೇವಿತೇ ಎಂಬುದಾಗಿ ಸ್ತುತಿ ಇರುವುದು ಬೆಳ್ಮಣ್ಣಿನ ಶ್ರೀ ದುರ್ಗಾಪರಮೇಶ್ವರಿ ದೇವರಿಗೆ (ಮಹಿಷಾಸುರಮರ್ದಿನಿ) ಕ್ರಿ ಶ 8ನೇ ಶತಕದಲ್ಲಿ ಈ ದೇವಾಲಯವಿತ್ತೆಂಬುದು ಅಧಿಕೃತವಾಗಿ ತಿಳಿಯಬಹುದು. ಇದರ ಕಾಲವನ್ನು ಇನ್ನೂ ಒಂದು ಶತಮಾನ ಹಿಂದಕ್ಕೊಯ್ಯಬಹುದು.

ಪಾಂಡ್ಯ ಕುಲಗಳಿಗೆ ಉಲ್ಲೇಖವಿರುವುದು ಬಹು ಗಮನೀಯ. ಕಾರಣ ಆಳುಪರು ಪಾಂಡ್ಯ ಕುಲಗಳಲ್ಲಿ ಒಂದಕ್ಕೆ ಸೇರಿದವರೆಂದು ತಿಳಿಯಬಹುದು. ಈ ತೀರ್ಮಾನಕ್ಕೆ ಕ್ರಿ ಶ 707ರ ಶಿಗ್ಗೋಮ್ ತಾಮ್ರಶಾಸನವು ಇದರ (ವಿವರ ಡಾ. ಜಿ. ಯಸ್. ಗಾಯ್ಯವರಿಂದ ಕೊಡಲ್ಪಟ್ಟಿದೆ) ಪುಷ್ಟೀಕರಿಸುತ್ತದೆ. ಆಳುಪರ ಲಾಂಛನವು ಎರಡು ಮೀನು ಎಂಬುದು ಸ್ಪಷ್ಟವಾಯಿತು.

ಬೆಳ್ಮಣ್ಣು ದುರ್ಗಾಪರಮೇಶ್ವರೀ ದೇವಾಲಯದ ಆಡಳಿತೆ ಮೊಕ್ತೇಸರರಾದ ಶ್ರೀ ಮಧ್ವರಾಯ ಭಟ್ಟರು ಈ ಶಾಸನವನ್ನು ಇತ್ತು ಪರಿಶೀಲಿಸಲು ಸಹಕರಿಸಿದ್ದಕ್ಕಾಗಿ ಡಾ. ಭಟ್ಟರು ಅವರಿಗೆ ಋಣಿಯಾಗಿದ್ದಾರೆಂದು ತಿಳಿಸಿದ್ದಾರೆ.

●●

ಓಲ್ಡ್ ಬುಕ್ ಸ್ಟಾಲ್‌ಗಳು

(ಐದನೇ ಪುಟದಿಂದ)

ರ್ಷಗಳಿಗೆ ಮೊದಲು ಕಲಕತ್ತೆಯಲ್ಲಿದ್ದ ಇಂಗ್ಲಿಷರಲ್ಲಿ ಹಳೆಯ ಪುಸ್ತಕಗಳು ಮತ್ತು ಹಳೆಯ ಸಂಬಾಬುಗಳು ಹೇರಳವಾಗಿದ್ದುವು. ಅವರ ಊಳಿಗದಲ್ಲಿ ಮುಸಲ್ಮಾನರಿರುತ್ತಿದ್ದರು. ಆದುದರಿಂದ ಇಂಗ್ಲಿಷರು ಹಿಂದುಸ್ತಾನವನ್ನು ಬಿಟ್ಟು ಮರಳ ತೊಡಗಿದಾಗ ಅವರ ಪುಸ್ತಕಗಳು ಊಳಿಗದ ಮುಸ್ಲಿಮರ ಕೈಸೇರಿದುವು. ಅವನ್ನವರು ಕಾಲೇಜು ರಸ್ತೆಯ ಕಾಲುದಾರಿಯಲ್ಲಿ ಸಂಗ್ರಹಿಸಿದರು. ಹೀಗೆ ಊಳಿಗದ ಮುಸಲ್ಮಾನರು ಕಲಕತ್ತೆಯಲ್ಲಿ ಹಳೆಯ ಪುಸ್ತಕಗಳ ವ್ಯಾಪಾರಕ್ಕೆ ಬುನಾದಿ ಹಾಕಿದರು. ಅಂದಿನಿಂದ ಈ ವ್ಯಾಪಾರ ನಾನಾ ತರದ ಏರುಪೇರುಗಳನ್ನೆದುರಿಸುತ್ತ ನಡೆದು ಬರುತ್ತಿದೆ.

ಕಲಕತ್ತೆಯಲ್ಲಿನ ಎಲ್ಲ ಬುದ್ಧಿ ಜೀವಿಗಳಲ್ಲಿ ಕಾಲೇಜ ರಸ್ತೆಯ ಹಳೆಯ ಪುಸ್ತಕಗಳ ಅಂಗಡಿಗಳನ್ನು ಅಡಿಮೇಲು ಮಾಡದವರೇ ಇಲ್ಲವೆನ್ನಬಹುದು. ಅಂತಾರಾಷ್ಟ್ರೀಯ ಖ್ಯಾತವಾದ 'ದೇವದಾಸ' 'ಚರಿತ್ರಹೀನ' ಮೊದಲಾದ ಕಾದಂಬರಿಗಳ ಲೇಖಕ ಶರತ್ ಬಾಬುರವರೂ ಹಳೆಯ ಪುಸ್ತಕಗಳಿಗಾಗಿ ಇವೇ ಅಂಗಡಿಗಳಿಗೆ ಮರೆ ಹೋಗುತ್ತಿದ್ದರು.

ಕಲಕತ್ತೆಯಂತೆಯೇ ಬೊಂಬಾಯಿ, ಅಹಮ್ಮದ ನಗರ, ದಿಲ್ಲಿ, ಮದ್ರಾಸಗಳಲ್ಲಿಯೂ ಹಳೆಯ ಪುಸ್ತಕಗಳ ವ್ಯಾಪಾರವಿದೆ. ಇತ್ತೀಚೆಗೆ ಇದು ಬೆಂಗಳೂರು ಮೊದಲಾದೆಡೆಗಳಿಗೂ ಹರಡಿದೆ. ಈ ಕಾಲುದಾರಿಯ ಅಂಗಡಿಗಳನ್ನು ಶ್ರೀಸಾಮಾನ್ಯರು ನಿರ್ಲಕ್ಷಿಸಬಹುದು. ಆದರೆ, ಲೇಖಕರು, ಪತ್ರಿಕಾಕರ್ತರು, ಸಂಶೋಧಕರು ಮೊದಲಾದವರು ಸಂದರ್ಶಿಸಿಯೇ ತೀರುತ್ತಾರೆ. ಅವರಿಗೆ ಈ ಅಂಗಡಿಗಳೆಂದರೆ ಪಂಚಪ್ರಾಣ. ದಿಲ್ಲಿಯ ಜುಮ್ಮಾ ಮಸೀದಿ ಮತ್ತು ಗುರುದ್ವಾರ ರಸ್ತೆಯ ಹಳೆಯ ಪುಸ್ತಕದಂಗಡಿಗಳೂ ಕಡಮೆ ಮಹತ್ವದ್ದಲ್ಲ.

●●

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging,
107 Police Road, City Market,
BANGALORE-2

Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ, ಮಂಗಳೂರು

P. & S. C. No. 29/1972

ರಕ್ಷ್ಮಾವತಿ ಅಮ್ಮ —ಅರ್ಜಿದಾರಳು

ಮತ್ತು

ಶೇಷಮ್ಮ ವಗೈರೆ —ರಿಸ್ಪೊಂಡೆಂಟ್ಸ್

ಮೃತಪಟ್ಟ ಗೋತೆ ನಾಗಪ್ಪಯ್ಯ ಭಟ್ಟ ಯಾನೆ ನಾಗಪ್ಪ ಭಟ್ಟ, ಮೊಸೂರು ಗ್ರಾಮ, ಕುಂದಾಪುರ ತಾಲೂಕು ಇವರಿಗೆ ಸಂಬಂಧಿಸಿ ಐವೇಜಿನ ಪೈಕಿ ಅರ್ಜಿದಾರಳು ತನ್ನ ಹೆಸರಿಗೆ ಬರತಕ್ಕ ಐವೇಜಿನ ಬಾಬ್ತು ತನ್ನ ಹೆಸರಲ್ಲಿ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿ ದಾಖಲು ಮಾಡಿದ್ದು ಅದಕ್ಕೇನಾದರೂ ಆಕ್ಷೇಪವಿದ್ದಲ್ಲಿ ತಾ. 9-6-1972ರಂದು ಬೆಳಿಗ್ಗೆ ಗಂ. 11ಕ್ಕೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪವಾದರು ಖುದ್ದಾಗಿ ತಿಳಿಸತಕ್ಕದ್ದು.

(Sd.)K. Rajaram Hedge
ಅರ್ಜಿದಾರಳ ಅಡ್ವೊಕೇಟ್

ಮಂಗಳೂರು, ತಾ. 29-4-1972

ಕಸರತ್ತಿನ ಫಲ—

ಅವರು ಉದ್ದಕ್ಕೆ ಬೆಳೆದರು

ನೀವು ಚಾಂಪಿಯನ್ ಹೈಜಂಪರ್ ಆಗಬೇಕೆಂದು ನಿರ್ಧರಿಸುವುದಕ್ಕೆ ಮೊದಲೇ ನೀವು ಎಷ್ಟೊಂದು ಎತ್ತರವಿದ್ದೀರೆಂದು ನೋಡಿಕೊಳ್ಳುವುದು ಮೇಲು. ಉದಾಹರಣೆಗೆ ನೀವು ಕೇವಲ ಐದಡಿ ಆರಂಗುಲ ಎದ್ದರೆ ಜಾಗತಿಕ ದಾಖಲೆ ಸ್ಥಾಪಿಸುವ ಯೋಗ ಬಹಳಷ್ಟು ದೂರ ಎಂದೇ ಇಟ್ಟುಕೊಳ್ಳಿ.

ಇಲ್ಲದೆ ಹೋದರೆ ರುಸ್ತುಮ್ ಅಹ್ಮೆತ್ರೋವ್‌ರಂತಾದರೂ ನೀವಿರಬೇಕಾಗುತ್ತದೆ.

ರುಸ್ತುಮ್ ನಿಜವಾಗಿ ತುಂಬಾ ಕುಳ್ಳ. ಅವನೇನೋ ಬಹಳಷ್ಟು ತರಬೇತು ಪಡೆದ, ಆದರೂ ಹದಿನೈದು ಹದಿನಾರರಲ್ಲಿ ನಾವು ಮೇಲೆ ಹೇಳಿದ ಕೇವಲ ಐದಡಿ ಆರಂಗುಲವನ್ನು ಮಾತ್ರವೆ ತಲಪಲು ಶಕ್ತನಾದ.

ಇದಕ್ಕೇನು ಪರಿಹಾರ? ರುಸ್ತುಮನಿಗೆ ಉತ್ತರವು ಸ್ಪಷ್ಟವೆ ಆಗಿತ್ತು. ಹೇಗಾದರೂ ಮಾಡಿ, ಎತ್ತರವಾಗಲೆ ಬೇಕು.

ಕಾಲುಗಳನ್ನು ನೀಳವಾಗಿಸುವಂಥ ನಿತ್ಯ ವ್ಯಾಯಾಮದ ಕಾರ್ಯಕ್ರಮವೊಂದನ್ನು ರಚಿಸಿಕೊಂಡ.

ಕಾಲುಗಳನ್ನು ಅಡ್ಡಡ್ಡವಾಗಿ, ಉದ್ದುದ್ದವಾಗಿ ಅಕ್ಕಪಕ್ಕಕ್ಕೆ ಕಿಸಿದು ಕೂತುಕೊಳ್ಳುವ ಕಸರತ್ತು ಮಾಡಿದ, ಯೋಗಾಭ್ಯಾಸ ನಡೆಸಿದ, ಅನೇಕ ರೀತಿಯ ಜೋತು ಬೀಳುವ ವ್ಯಾಯಾಮಗಳನ್ನು ಮಾಡಿದ.

ಬರಿಗಾಲಿನಿಂದ ಬಹು ದೂರದವರೆಗೆ ನಡೆದ. ಪಾದಗಳು ದೊಡ್ಡವಾಗಲೆಂದು ನಡಿಲು, ಅಡ್ಡಾದಿಡ್ಡಿ ಮೆಟ್ಟಿಲುಗಳನ್ನು ಮೆಟ್ಟಿದ. "ಅವು ಸದೃಢಗೊಳ್ಳಲೆಂದು" ಎಂಬುದಾಗಿ ಈಗ ಅವರು ಹೇಳುತ್ತಾರೆ.

ಜಿಗಿದೇ ಜಿಗಿದ, ಜಿಗಿದ, ಜಿಗಿದೇ ಜಿಗಿದ. ದಿನನಿತ್ಯ ೧೫೦ರಿಂದ ೨೦೦ ಜಿಗಿತಗಳು.

ಮತ್ತೆ ಉಚಿತ ಆಹಾರವೂ ಸರಿಯೆ. ದಿನವೊಂದಕ್ಕೆ ಐದು ಪಿಂಟು ಹಾಲು, ಒಂದು ಲೋಟ ಗಜ್ಜರಿ ಮತ್ತು ದ್ರಾಕ್ಷೆ ರಸ.

ಎಂದೂ ಧೂಮಪಾನ ಮಾಡಲಿಲ್ಲ. ಎಂದೂ ಕುಡಿಯಲಿಲ್ಲ. ಸರಿಯಾಗಿ ೧೧ ಗಂಟೆಗೆ ನಿದ್ರೆಹೋಗಿ ಬೆಳಗ್ಗೆ ಸರಿಯಾಗಿ ೭ ಗಂಟೆಗೇ ಎದ್ದ. ಬಹಳಷ್ಟು ಈಜಾಡಿದ.

ಆದರೆ ಇದೆಲ್ಲಕ್ಕಿಂತ ಮಹತ್ವದ ಸಂಗತಿ ಯೆಂದರೆ ಅವನ ದೃಢ ನಿರ್ಧಾರ, ಸಂಪೂರ್ಣ ಸಮರ್ಪಣೆ.

ಮತ್ತೆ—ಅವನು ಬೆಳೆದ.

ಕಸರತ್ತುಗಳ ಮೊದಲ ವರ್ಷದ ಕೊನೆಯಲ್ಲಿ ಮೂರು ಅಂಗುಲ ಹೆಚ್ಚು ಬೆಳೆದಿದ್ದ. ಎರಡನೆ ವರ್ಷದಲ್ಲಿ ಇನ್ನೂ ಮೂರು ಅಂಗುಲ, ಮೂರನೆ ವರ್ಷದಲ್ಲಿ ಇನ್ನೂ ಎರಡು ಅಂಗುಲ ಉದ್ದ ಬೆಳೆದಿದ್ದ.

ಜಿಗಿತದ ಬಗ್ಗೆ ಹೇಳಬೇಕಾದರೆ, ಸೋವಿಯತ್ ಒಕ್ಕೂಟದ ಕಳೆದ ಜನತಾ ಕ್ರೀಡೆಗಳಲ್ಲಿ ಏಳು ಅಡಿ ಮೂರು ಮುಕ್ಕಾಲು ಅಂಗುಲಗಳಿಂದ ಭಕ್ತರನ್ನು ದಿಗ್ಭ್ರಮೆಗೊಳಿಸಿದ.

ಇದೊಂದು ಅದ್ಭುತ ಕಥೆ ಅನ್ನುವಿರಾ? ಅದೂ ರುಸ್ತುಮ್‌ನೊಡನೆ ಮಾತನಾಡಿದಾಗ, ಹೈಜಂಪ್ ಒಂದೇ ಅವನ ಜೀವನದ ಗುರಿ ಅಲ್ಲವೆಂದು ತಿಳಿದಾಗ ಇನ್ನೆಷ್ಟು ದಿಗ್ಭ್ರಮೆಗೊಳ್ಳುವಿರಾ?

ಆತ ಸಂಗೀತ ಪಾಠಶಾಲೆಯಲ್ಲಿ ಓದುತ್ತಿದ್ದಾರೆ. ಮತ್ತೊಂದು ಶಾಲೆಯಲ್ಲಿ ವಾರಕ್ಕೆ ಎರಡು ಬಾರಿ ಗಣಿತ ಪಾಠಗಳನ್ನು ಮಾಡುತ್ತಾರೆ. ಮತ್ತೆ ಬಾಸ್ಕೆಟ್ ಬಾಲ್ ಆಡಲು ಪುರುಸೊತ್ತು ಮಾಡಿಕೊಳ್ಳುತ್ತಾರೆ.

ಸಾಲದೆ—"ನನಗೆ ಯಾವುದಕ್ಕೂ ಸಮಯವೇ ಇಲ್ಲವಾಗಿದೆ" ಎನ್ನುತ್ತಾರೆ ಸಾಕಷ್ಟು ವ್ಯಥೆಯಿಂದ.

ರುಸ್ತುಮ್ ಅಹ್ಮೆತ್ರೋವ್ ಈಗಷ್ಟೇ ಭೀಮ ಹೆಜ್ಜೆಯಲ್ಲಿದ್ದಾರೆಂದು ಮಾತ್ರ ನಾವು ಹೇಳುತ್ತೇವೆ. ಅವರ ದಾಖಲೆಯಲ್ಲಿ ಈಗ ಹೈಜಂಪಿಗೆ ಮಾತ್ರವೆ ಇದೆ.

ಅಂದರೆ ತಮ್ಮ ಸಂಪೂರ್ಣ ಲಕ್ಷ್ಯವನ್ನು ಅವರು ಆ ಬಾಸ್ಕೆಟ್‌ಬಾಲ್ ಆಟಗ

ಈಕೆಗೆ ಸ್ವದೇಶದ ಬಗ್ಗೆ ಕಾಳಜಿ

(ಏಳನೇ ಪುಟದಿಂದ)

ಬಳಕೆಗೂ ರಫ್ತು ಮಾಡುವುದಕ್ಕೂ ವಸ್ತುಗಳನ್ನು ಉತ್ಪಾದಿಸಬಹುದು. ಇದರಿಂದ ಎಲ್ಲರಿಗೂ ಪ್ರಯೋಜನವಾಗಿ ದೇಶದ ಆರ್ಥಿಕ ವ್ಯವಸ್ಥೆಗೂ ಸಹಾಯವಾಗುವುದು."

ಭಾರತದಲ್ಲಿ ಎಂಜಿನಿಯರುಗಳ ತರಪೇತು ಬದಲಾಯಿಸಬೇಕೆಂದು ಶ್ರೀಲಿಸ್ ಸಾನಿ ಹೇಳುತ್ತಾರೆ. 'ಭಾರತದಲ್ಲಿ ಎಂಜಿನಿಯರಿಂಗ್ ಶಾಲೆಗಳಲ್ಲಿ ವಾಸ್ತವವಾಗಿ ಎಂಜಿನಿಯರಿಂಗ್ ಕೆಲಸದಲ್ಲಿ ಉಪಯುಕ್ತವಲ್ಲದ ವಿಷಯಗಳನ್ನು ಬೋಧಿಸಲಾಗುತ್ತಿದೆ. ಕಾರ್ಯಾನ್ವಿತ ಸಿದ್ಧಾಂತವನ್ನೇನೋ ಸ್ವಲ್ಪ ಓದುತ್ತೇವೆ. ಆದರೆ ಕಾರ್ಯತಃ ಕ್ಷೇತ್ರಾನುಭವವಿರುವುದಿಲ್ಲ. ನಿರ್ಮಾಣ ಸಮಸ್ಯೆಗಳ ಪರಿಹಾರಕ್ಕೆ ಇದು ಅವಶ್ಯಕ. ಅಮೆರಿಕದ ಎಂಜಿನಿಯರಿಂಗ್ ಶಿಕ್ಷಣದಲ್ಲಿ ಈ ಕಾರ್ಯಾನುಭವವೂ ಸೇರಿರುತ್ತದೆ. ನಾನೇ ನೋಡುತ್ತಿರುವಂತೆ ಅಮೆರಿಕನ್ ಎಂಜಿನಿಯರುಗಳು ನಿರ್ಮಾಣ ಸಂಸ್ಥೆಗಳಲ್ಲಿ 'ಪಾರ್ಟ್ ಟೈಂ' ಕೆಲಸ ಮಾಡಿ ವಾಸ್ತವಿಕ ನಿರ್ಮಾಣ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅರಿವು ಪಡೆಯುತ್ತಾರೆ.

ಅಮೆರಿಕದಲ್ಲಿ ಪುರುಷರು ಮತ್ತು ಸ್ತ್ರೀಯರ ಉದ್ಯೋಗ ಪರಿಸ್ಥಿತಿ ಬದಲಾಗಬೇಕೆಂದು ಶ್ರೀಮತಿ ಸಾನಿ ಅಭಿಪ್ರಾಯ ಪಡುತ್ತಾರೆ.

"ಈ ಕ್ಷೇತ್ರದಲ್ಲಿ ಸಮಾನ ಕೆಲಸಕ್ಕೆ ಸ್ತ್ರೀಪುರುಷರಿಗೆ ಸಮಾನ ಸಂಬಳ ದೊರೆಯಲು ಅಮೆರಿಕನ್ ಮಹಿಳೆಯ ವಿಮೋಚನಾ ಚಳವಳಿ ಅಗತ್ಯವೆಂದು ನನಗನಿಸುತ್ತದೆ. ಮಹಿಳಾ ವಿಮೋಚನಾ ಚಳವಳಿಯ ಎಲ್ಲ ಬೇಡಿಕೆಗಳನ್ನೂ ನಾನು ಒಪ್ಪುವುದಿಲ್ಲ. ಆದರೆ ಸಮಾನ ಸಂಬಳದ ಬೇಡಿಕೆಗೆ ನನ್ನ ಸಮ್ಮತಿಯಿದೆ" ಎಂದು ಆಕೆ ಹೇಳಿದರು.

ಫಿಲಡೆಲ್ಫಿಯದಲ್ಲಿ ಕೊನೇ ಪಕ್ಷ ಮೂರು ವರ್ಷ ಕಾಲ ಇರಬಯಸುವುದಾಗಿ ಶ್ರೀಮತಿ ಸಾನಿ ಹೇಳಿದರು.

"ನಾವು ಹಿಂದಿರುಗಿದಾಗ ನಮ್ಮ ಅನುಭವಗಳನ್ನು ಭಾರತಕ್ಕೆ ಉಪಯುಕ್ತವೆನಿಸುವಂತೆ ಬಳಸಬಹುದೆಂದೂ ನಾನೂ ನನ್ನ ಪತಿಯೂ ಭಾವಿಸಿದ್ದೇವೆ. ನಮ್ಮ ಮಕ್ಕಳಿಗೂ ಅಮೆರಿಕದಲ್ಲಿನ ಜೀವನದ ಅನುಭವವಾಗಿರುತ್ತದೆ. ನಾವೆಲ್ಲರೂ ಪರಸ್ಪರ ಅರಿವು, ಗೌರವಗಳನ್ನಿಟ್ಟುಕೊಂಡಿರುತ್ತೇವೆ" ಎಂದು ಆಕೆ ನುಡಿದರು.

●●

ನಿಡ್ಲೆ ಸೇವಾ ಸಹಕಾರೀ ಬ್ಯಾಂಕ್ ಚಿನ್ನದ ಹಬ್ಬ

ಮಂಗಳೂರಿನಿಂದ 53 ಮೈಲು ದೂರದಲ್ಲಿರುವ ನಿಡ್ಲೆಯಲ್ಲಿ ನಿಡ್ಲೆ ಸೇವಾ ಸಹಕಾರಿ ಬ್ಯಾಂಕಿನ ಚಿನ್ನದ ಹಬ್ಬದ ಉದ್ಘಾಟನೆಯನ್ನು ತಾ. 2ರಂದು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಸಹಕಾರ ಸಚಿವ ಶ್ರೀ ಎ ಶಂಕರ ಆಳ್ವರು ನೆರವೇರಿಸಿದರು.

ಅತಿಥಿಗಳನ್ನು ವಾದ್ಯ ಘೋಷಗಳೊಡನೆ ಸಭಾಸ್ಥಾನಕ್ಕೆ ಸ್ವಾಗತಿಸಲಾಯಿತು. ಶ್ರೀ ಆಳ್ವರು ಸಹಕಾರಿ ಬ್ಯಾಂಕಿನ ವತಿಯಿಂದ ನಡೆಸಲ್ಪಡುವ ಅಂಗಡಿ ಗೋದಾಮುಗಳನ್ನು ಸಂದರ್ಶಿಸಿದರು. ಪ್ರಾರ್ಥನೆಯಾದ ಬಳಿಕ ಬ್ಯಾಂಕಿನ ಅಧ್ಯಕ್ಷ ಶ್ರೀ ಪಿ. ನಾರಾಯಣ ಹೆಬ್ಬಾರರು ಸ್ವಾಗತಿಸಿದರು. ಪಂಚಾಯತ್ ಅಧ್ಯಕ್ಷ ಶ್ರೀ ಎಂ. ರಾಮಕೃಷ್ಣಯ್ಯನವರು ಪಂಚಾಯತ್ ಪರವಾಗಿ ಸಚಿವರಿಗೆ ಮಾನಪತ್ರ ಅರ್ಪಿಸಿದರು. ಬ್ಯಾಂಕಿನ ಕಾರ್ಯದರ್ಶಿ ಶ್ರೀ ಸರ್ವಜ್ಞ ರಾವ್ ವರದಿ ಓದಿದರು. ಚಿನ್ನದ ಹಬ್ಬದ ಸಮಿತಿಯ ಶ್ರೀ ಅರವಿಂದ ಜೋಶಿಯವರು ಸಂದೇಶಗಳನ್ನೋದಿದರು. ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಟಿ. ನಾರಾಯಣ ನಾಯಕರು ಸುವರ್ಣೋತ್ಸವ ಸಂಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಬೆಳ್ತಂಗಡಿಯ ಶಾಸಕ ಶ್ರೀ ಸುಬ್ರಹ್ಮಣ್ಯ ಗೌಡರು ಸಮಾರಂಭದಲ್ಲಿ ಭಾಷಣ ಮಾಡಿದರು.

ಶ್ರೀ ಆಳ್ವರು ಮಾತಾಡುತ್ತಾ, ಚಿನ್ನದ ಹಬ್ಬದ ಸೌಭಾಗ್ಯವನ್ನು ಕಾಣುತ್ತಿರುವ ಸಂಸ್ಥೆಯ ಪ್ರಗತಿಗಾಗಿ ಸಂತೋಷ ವ್ಯಕ್ತಪಡಿಸಿದರು. ಬಡಜನರ ಮತ್ತು ಗ್ರಾಮಗಳ ಅಭಿವೃದ್ಧಿಗಾಗಿ ಮಾಡುತ್ತಿರುವ ಘೋಷಣೆಗಳು ಕಾರ್ಯರೂಪಕ್ಕೆ ಬರಬೇಕಾದರೆ ದೊಡ್ಡ ಪ್ರಮಾಣದ ಸಹಕಾರಾಂದೋಲನ ನಡೆಯಬೇಕು. ಜತೆಗೆ ಜನರ ದೃಷ್ಟಿಕೋನವೂ ಬದಲಾಗಬೇಕು, ಹರಿಜನ-ಗಿರಿಜನ ಮತ್ತು ಬಡಜನರ ಪರಿಸ್ಥಿತಿ ಸುಧಾರಿಸುವಲ್ಲಿ ಎಲ್ಲರೂ ತಂತಮ್ಮ ಜವಾಬ್ದಾರಿ ತಿಳಿದು ಈ ಚಳವಳದಲ್ಲಿ ಭಾಗವಹಿಸಿದರೆ ನಿರೀಕ್ಷಿಸಿದ ಸಮಾಜಾಭ್ಯುದಯ ಕಾರ್ಯ ಶೀಘ್ರದಲ್ಲೇ ಸಾಧ್ಯ ಎಂದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ಮಾತಾಡುತ್ತ ಸಹಕಾರಿ ಸಂಸ್ಥೆಗಳು ಜನರ ಏಳಿಗೆಗಾಗಿ ಇರುವುದೆಂದೂ ಅದರ ಸದಸ್ಯರು ತಮ್ಮ ಕರ್ತವ್ಯ ಸರಿಯಾಗಿ ನಡೆಸಿದರೆ ಅಭಿವೃದ್ಧಿ ಕಾರ್ಯ ಸುಗಮವಾಗುವುದು ಎಂದು ಹೇಳಿ ಬ್ಯಾಂಕಿನ ಪ್ರಗತಿಗಾಗಿ ಹರ್ಷ ಸೂಚಿಸಿದರು. ಧರ್ಮಸ್ಥಳ-ಸುಬ್ರಹ್ಮಣ್ಯ ರಸ್ತೆಯ ಬಗ್ಗೆ ಪ್ರಸ್ತಾಪಿಸಿದ ಅವರು ಈ ರಸ್ತೆ ಕುರಿತು ಶಾಸಕರು ಆಸಕ್ತಿ ವಹಿಸುವರೆಂದು ಹಾರೈಸಿದರು

ಶ್ರೀ ಎಂ. ರಾಮಕೃಷ್ಣಯ್ಯನವರು ಧನ್ಯವಾದಗಳನ್ನು ಅರ್ಪಿಸಿದರು.

ಕುಂದಾಪುರ 2nd Adl. ಮುನ್ಸಿಫ್ ಕೋರ್ಟಿನಲ್ಲಿ

R. R. C. 1310/1971

ಅರ್ಜಿದಾರಳು —ಸೂರು ಹೆಂಗ್ಸು

ಎದ್ರಿ —ಕೊರಗು ಹೆಗ್ಗಡ್ತಿ

ಕುಂದಾಪುರ ತಾಲ್ಲು ಮೊಳಹಳ್ಳಿ ಗ್ರಾಮದ ತೈಲಕೆರೆಯಲ್ಲಿರುವ ಮುತ್ತಕ್ಕ ಹೆಗ್ಗಡ್ತಿ ಮಗಳು ಕೊರಗು ಹೆಗ್ಗಡ್ತಿಗೆ ಈ ಮೂಲ್ಕ ತಿಳಿಯ ಪಡಿಸುವುದೇನೆಂಪರೆ,

ಸದ್ರಿ ವ್ಯವಹರಣೆಯಲ್ಲಿ ಎದ್ರಿಳಿಂದ ಅರ್ಜಿದಾರಳಿಗೆ ತಾ. 31-3-70ಕ್ಕೆ ಬರಬೇಕಾದ ಗೇಣಬಾಕಿ ಬರಮಾಡಿಕೊಳ್ಳುವರೆ ಅರ್ಜಿದಾರಳು ಎದ್ರಿಳ ಮೇಲೆ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 27-5-1972ಕ್ಕೆ ತನ್ನಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

By order of the Court

(Sd) G. V. Aithal

Advocate for Petr.

Date 1—5—72 Coondapoor.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ತ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಕಾಸರಗೋಡು ಕನ್ನಡಿಗರ ಸಮ್ಮೇಳನ

ಕಾಸರಗೋಡಿನ ಪಾರ್ತಿ ಸುಬ್ಬ ಮಂಟಪದಲ್ಲಿ ತಾ 6ರಂದು 2 ದಿನಗಳ ವರೆಗೆ ನಡೆದ ಕಾಸರಗೋಡು ಕನ್ನಡಿಗರ ಸಮ್ಮೇಳನವನ್ನು ಧರ್ಮಸ್ಥಳದ ಶ್ರೀ ವೀರೇಂದ್ರಹೆಗ್ಗಡೆಯವರು ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ. ಜವರೇಗೌಡರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಸಮ್ಮೇಳನ ಸಮಿತಿ ಅಧ್ಯಕ್ಷ ಶ್ರೀ ಬಂದಿಗೆ ಶ್ಯಾಮ ಭಟ್ಟರು ಆರಂಭದಲ್ಲಿ ಸ್ವಾಗತಿಸಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸುತ್ತಾ, ಚಂದ್ರಗಿರಿ ನದಿಯ ಉತ್ತರಭಾಗ ದಕ್ಷಿಣ ಕನ್ನಡದ ಭಾಗವಾಗಿದೆ ಎಂಬುದನ್ನು ಕೇರಳದ ಮುಖ್ಯಮಂತ್ರಿ ಶ್ರೀ ಅಚ್ಯುತ ಮೆನನ್‌ರವರೇ ಒಪ್ಪಿದ್ದು ಅವರ ನೇತೃತ್ವದಲ್ಲಿರುವ ಕೇರಳ ಸರಕಾರ ಹೆಚ್ಚು ವಿವೇಚನೆಯಿಂದ ನಡೆದುಕೊಳ್ಳಲಿ. ಕಾಸರಗೋಡಿನ ಬಿಡುಗಡೆಯ ಸಂತೋಷದ ಸಂಭ್ರಮದ ದಿನ ಬೇಗನೆ ಬರಲಿ. ಅದಕ್ಕೆ ಶ್ರೀ ಮಂಜುನಾಥೇಶ್ವರನ ಅನುಗ್ರಹವಿರಲಿ ಎಂದು ಪ್ರಾರ್ಥಿಸಿದರು

ಪ್ರೊ. ದೇ. ಜವರೇ ಗೌಡರು ತಮ್ಮ ಭಾಷಣದಲ್ಲಿ, ಬಾಂಗ್ಲಾ ನಿರ್ಮಿಸಿಕೊಟ್ಟ ಪ್ರಧಾನಿ ಮನಸ್ಸು ಮಾಡಿದರೆ ಕಾಸರಗೋಡಿನ ಕನ್ನಡಿಗರಿಗಾದ ಅನ್ಯಾಯದ ಪರಿಮಾರ್ಜನೆಗೆ ಆರೆಕ್ಷಣ ಸಾಕಾಗಿದ್ದು ಕಾಸರಗೋಡು ಕನ್ನಡ ನೆಲದೊಂದಿಗೆ ಸೇರುವ ಶುಭಯೋಗ ಬೇಗ ಬರಲಿ ಎಂದು ಹಾರೈಸಿ, ಕಾಸರಗೋಡಿನ ಸಮಸ್ಯೆ ಕಗ್ಗಂಟೇನೂ ಅಲ್ಲ, ನಮ್ಮ ನಾಯಕರಲ್ಲಿ ಅಭಾವವಾಗಿರುವ ಒಗ್ಗಟ್ಟು ಇದ್ದಿದ್ದರೆ ಈ ಸಮಸ್ಯೆ ಉಳಿಯುತ್ತಿರಲಿಲ್ಲ ಎಂದು ಸ್ಪಷ್ಟ ಪಡಿಸಿದರು. ಕಾಸರಗೋಡಿಗಾಗಿ ಹೊರಗಿಯೆ ಮಂಜೇಶ್ವರ ಗೋವಿಂದ ಪೈಗಳ ಆತ್ಮಾಹುತಿ ಆಯಿತು. ಹಿಂದೆ ಸ್ವತಂತ್ರಕ್ಕಾಗಿ ಮೊಳಗಿದ ಶ್ರೀ ಕಯ್ಯಾರರ ಕಂಠ ಈಗ ಇಲ್ಲಿ ಕನ್ನಡಕ್ಕಾಗಿ ಮೊಳಗುತ್ತಿದೆ. ಕಾಸರಗೋಡು ಕನ್ನಡ ನೆಲದೊಂದಿಗೆ ಸೇರುವ ಶುಭದಿನ ಬೇಗನೆ ಬರಲಿ, ಇಂತಹ ಕನ್ನಡ ಸಮ್ಮೇಳನಗಳು ಅದಕ್ಕೆ ಮಾಧ್ಯಮವಾಗಲಿ ಎಂದವರು ಹಾರೈಸಿದರು.

ಶ್ರೀ ವೈ. ಮಹಾಲಿಂಗ ಭಟ್ಟರ ಪ್ರಧಾನ ಸಂಪಾದಕತ್ವದಲ್ಲಿ ಮುದ್ರಣವಾದ ಸಂಸ್ಮರಣ ಸಂಚಿಕೆ 'ಪಯಸ್ವಿನಿ'ಯನ್ನು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣರು ಬಿಡುಗಡೆಗೊಳಿಸಿದರು

ಇದೇ ಸಂದರ್ಭದಲ್ಲಿ ಶ್ರೀ ಕೆ ಮಹಾಬಲ ಭಂಡಾರಿಯವರ "ದೇವರು ಮಾಡಿದ ಕೊಲೆ"ಎಂಬ ಕಾದಂಬರಿಯನ್ನು, ಶ್ರೀ ನವಕಾನ ಶಂಕರ ನಾರಾಯಣ ಭಟ್ಟರ 'ಸತ್ಯ ಮೇವ ಜಯತೇ ಮತ್ತು ಇತರ ಕತೆಗಳು' ಎಂಬ ಪುಸ್ತಕವನ್ನು ರಂ ಶ್ರೀ ಮುಗುಳಿಯವರು ಉದ್ಘಾಟಿಸಿದರು.

ಅಪರಾಹ್ನ ಶ್ರೀಮತಿ ಗೀತಾ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಜರಗಿದ ಮಹಿಳಾ ಸಮ್ಮೇಳನವನ್ನು ಶ್ರೀಮತಿ ಪದ್ಮಾ ಶೆಣೈ ಉದ್ಘಾಟಿಸಿದರು. ಶ್ರೀಮತಿ ಆನಂದಿ ಸದಾಶಿವ ರಾವ್, ಶ್ರೀಮತಿ ಕೆ. ಮಾಲಿನಿದೇವಿ ಮತ್ತು ಶ್ರೀಮತಿ ಬಿ. ಶ್ಯಾಮಲಾ ಕುಮಾರಿಯರು ವಿವಿಧ ವಿಷಯಗಳ ಕುರಿತು ಪ್ರಬಂಧ ಓದಿದರು.

ಸಂಜೆ ಪದ್ಮಶ್ರೀ ಡಾ। ಟಿ. ಎಂ ಎ. ಪೈಯವರ ಹಿರಿತನದಲ್ಲಿ ಸಾಹಿತ್ಯ, ಕಲೆ, ಶಿಕ್ಷಣ, ಯಕ್ಷಗಾನ ಮುಂತಾದ ಕ್ಷೇತ್ರಗಳಲ್ಲಿ ಕೀರ್ತಿ ಪಡೆದ ವಿದ್ವಾಂಸರನ್ನು, ಕಲಾವಿದರನ್ನು ಸನ್ಮಾನಿಸಲಾಯಿತು.

ಸಂಜೆ ಪ್ರೊ. ಎಸ್ ವಿ ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಕವಿಗೋಷ್ಠಿಯನ್ನು ಶ್ರೀ ವಿ ದಾಮೋದರ ಬಾಳಿಗರು ಉದ್ಘಾಟಿಸಿದ್ದರು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 48/1969

ವಾದಿರು —1. ರವೀಂದ್ರ ಕೊಡ್ಗಿ
2. ಲಕ್ಷ್ಮಿ ಅಮ್ಮ

ಪ್ರತಿವಾದಿ — ಮಂಜಮ್ಮ ಸೆಡ್ತಿ

ಕುಂದಾಪುರ ತಾಲ್ಲೂಕು ಅಮಾವಾಸೆ ಬೈಲು ಗ್ರಾಮದಲ್ಲಿರುವ ವಕ್ವಾಡಿ ಬೈಲುಮನೆ ಮುತ್ತಕ್ಕ ಸೆಡ್ತಿ ಮಗಳು ಮಂಜಮ್ಮ ಸೆಡ್ತಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಳಿಂದ ವಾದಿಂಗೆ ಬರತಕ್ಕ ಕಳೆದ ತಾ 28-2-1961ರ ಮೊದಲ್ಗೊಂಡು ತಾ 28-2-65ರ ವರೆಗಿನ ಮೂಲಗೇಣಿ ಬಾಕಿ ಬರ ಮಾಡಿಕೊಳ್ಳುವರೆ ವಾದಿರು ಪ್ರತಿವಾದಿಳ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು ತಾರೀಕು 10-6-72ಕ್ಕೆ ತಸ್ಕಿಗೆ ಇರುತ್ತದೆ ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿಯದೆ.

(Sd.) G. V. Aithal
Advocate for Plff.

Date 1-5-1972, Coondapoor

ಕಾಸರಗೋಡು ಸಾಹಿತ್ಯ ಸಮ್ಮೇಳನದಲ್ಲಿ ಡಾ| ಶಿವರಾಮ ಕಾರಂತ

ಕಾಸರಗೋಡು ಕನ್ನಡಿಗರ ಸಮ್ಮೇಳನದ ಅಂಗವಾಗಿ ತಾ. 6ರಂದು ಜರಗಿದ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಡಾ॥ ಶಿವರಾಮ ಕಾರಂತರು, ಡಾ। ಹಾ. ಮ. ನಾಯಕರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಕೆ ಎಸ್ ಸುಬ್ರಾಯ ಭಟ್ಟರು ಸ್ವಾಗತಿಸಿದರು

ಡಾ| ಕಾರಂತರು ಉದ್ಘಾಟಿಸುತ್ತಾ, ಕಾಸರಗೋಡಿನ ನೆನಪು ಕರ್ನಾಟಕ ಪ್ರಾಂತದ ಜನತೆಗೆ ನೋವನ್ನುಂಟು ಮಾಡುವ ವಿಷಯವೆಂದರು. ಗುಂಪಿನ ಪೈಪೋಟಿ ನಡೆಯುತ್ತಿರುವ ರಾಜಕೀಯ ಕ್ಷೇತ್ರದಲ್ಲಿ ಭಾಷಾ ವಿಚಾರ ಅಲ್ಪತ್ವಕ್ಕೆ ಗುರಿಯಾಗುತ್ತದೆಂದೂ ಇಂತಹ ಸಮಯದಲ್ಲಿ ನಿಮ್ಮ ತಾಳ್ಮೆ ನಿಮ್ಮನ್ನು ಕಾಪಾಡಬೇಕೆಂದೂ ಇದು ಬಹು ಸಂಖ್ಯಾಕರ ಸಜ್ಜನಿಕೆಯಲ್ಲವೆಂದೂ ಹೇಳಿದರು ಸಾಹಿತ್ಯದಲ್ಲಿ ಭಾವ ಸಾಹಿತ್ಯ ಎಷ್ಟು ಮುಖ್ಯವೋ ಜೀವನಕ್ಕೆ ಸಂಬಂಧಿಸಿದ ಜ್ಞಾನ ಸಾಹಿತ್ಯವೂ ಅಷ್ಟೇ ಮುಖ್ಯ ಎಂದವರು ಹೇಳಿದರು.

ಡಾ। ಹಾ ಮಾ. ನಾಯಕರು ಮಾತಾಡಿ ಕೇರಳೀಯರು ವಸ್ತುಸ್ಥಿತಿ ಅರಿತು ತಾವಾಗಿಯೆ ಕಾಸರಗೋಡನ್ನು ಕನ್ನಡಿಗರಿಗೊಪ್ಪಿಸುವ ಸೌಜನ್ಯ ತೋರಲೆಂದು ಹಾರೈಸಿದರು.

ಶ್ರೀ ಜಿ ಶಂಕರ ಭಟ್ 'ಕಥೆ ಕಾದಂಬರಿ'ಯ ಕುರಿತೂ, ಶ್ರೀ ಎಂ ಗಂಗಾಧರ ಭಟ್ 'ನಾಟಕ-ಪ್ರಬಂಧ ವಿಮರ್ಶೆ'ದ ಕುರಿತೂ, ಶ್ರೀ ಮಟ್ಟಿ ರಾಧಾಕೃಷ್ಣ ರಾಯರು 'ಕವಿ-ಕಾವ್ಯ'ದ ಕುರಿತೂ, ಶ್ರೀ ಕೆ. ಟಿ. ಶ್ರೀಧರ್ 'ಪತ್ರಿಕೋದ್ಯಮ' ಹಾಗೂ ಶ್ರೀ ಸಿ ರಾಘವನ್ ಅವರು 'ಪ್ರಚಲಿತ ಸಾಹಿತ್ಯ'ಗಳ ಕುರಿತೂ ಪ್ರಬಂಧ ಓದಿದರು.

ಶ್ರೀ ವೈ. ಮಹಾಲಿಂಗ ಭಟ್ ಅವರು ಧನ್ಯವಾದವಿತ್ತರು.

ಕಾಸರಗೋಡಿನಲ್ಲಿ ಕರ್ನಾಟಕ ಸಮ್ಮೇಳನ

ಕಾಸರಗೋಡು ಕನ್ನಡಿಗರ ಸಮ್ಮೇಳನದ 2ನೆಯ ದಿನವಾದ ತಾ. 7ರಂದು ಸಂಜೆ ಶ್ರೀ ಕೆ. ಎಸ್. ಎನ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದ ಕರ್ನಾಟಕ ಸಮ್ಮೇಳನವನ್ನು ದ. ಕ. ದ ಮಾಜಿ ಶಾಸಕ, ಶ್ರೀ ಬಿ. ಎಂ. ಇದಿನಬ್ಬನವರು ಉದ್ಘಾಟಿಸಿದರು

ಕಾಸರಗೋಡಿನ ಜನಪ್ರಿಯ ನಾಯಕ ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಯವರು ಮಂಡಿಸಿದ ನಿರ್ಣಯವನ್ನು ಎಲ್ಲ ಪಕ್ಷಗಳಿಗೆ ಸೇರಿದ ನಾಯಕರು ಒಕ್ಕೊರಲಿನಿಂದ ಅನುಮೋದಿಸಿ ಮಹಾಜನ ವರದಿ ಜಾರಿಯಾಗಬೇಕು ಹದಿನೈದು ವರುಷಗಳಿಂದ ಗುರಿಸಾಧನೆಗಾಗಿ ಶಾಂತಿಯಿಂದ ಕಾದದ್ದಾಯಿತು ಆಗತ್ಯವಾದರೆ ಈ ನೆಲದಲ್ಲಿ ರಕ್ತಕ್ರಾಂತಿಯಾದೀತು ಎಂದ ಅವರು ಪಕ್ಷಭೇದ, ಜಾತಿಭೇದ, ಭಾಷಾಭೇದ, ಮರೆತು ಕೇಂದ್ರ ಮತ್ತು ಮೈಸೂರು ಸರಕಾರಗಳನ್ನು ಒತ್ತಾಯಿಸಿ ಉದ್ದೇಶ ಸಾಧನೆಗಾಗಿ ರಕ್ತ ತರ್ಪಣಕ್ಕೂ ಸಿದ್ಧ ಎಂಬ ವೀರ ಘೋಷಣೆಯನ್ನು ಮಾಡಿದರು.

ದ, ಕ ದ ಶಾಸಕ ಶ್ರೀ ಬಿ ವಿ ಕಕ್ಕಿಲ್ಲಾಯ, ಕಾಸರಗೋಡಿನ ಮಾರ್ಕ್ಸಿಸ್ಟ್ ನಾಯಕ ಎಂ. ರಾಮಣ್ಣ ರೈ, ಜನಸಂಘದ ನಾಯಕ ಶ್ರೀ ಉಜ್ರೆ ಈಶ್ವರ ಭಟ್, ಮಲೆಯಾಳಿ ಬಾಂಧವ ಶ್ರೀ ಎನ್. ಲಕ್ಷ್ಮಣ, ಆಡಳಿತ ಕಾಂಗ್ರೆಸ್ ನಾಯಕ ಶ್ರೀ ಎ ರಾಮ ರೈ ಮೊದಲಾದವರು ಗೊತ್ತುವಳಿಗೆ ಬೆಂಬಲ ನೀಡಿದರು. ದ. ಕ. ಜಿಲ್ಲಾ ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷ ಶ್ರೀ ಯು. ಗಂಗಾರಾಮ ಮಲ್ಯ, ಮಾಜಿ ಶಾಸಕ ಶ್ರೀಯು ಪಿ ಕುಣಿಕುಳ್ಳಾಯ, ಕಾಸರಗೋಡಿನ ಹಿರಿಯ ಮುಂದಾಳು ಶ್ರೀ ಕೆ. ಪಿ. ಮಾಧವರಾಯ, ಶ್ರೀ ಕಯ್ಯಾರ ಕಿಂಞ್ಞಣ್ಣ ರೈ ಮೊದಲಾದವರೂ ಗೊತ್ತುವಳಿಯನ್ನು ಅನುಮೋದಿಸಿದರು.

ಶ್ರೀ ಕೆ ಎಸ್. ಎನ್. ಅಡಿಗರು ಸಮಸ್ಯೆಯನ್ನು ವಿವರಿಸಿ ಉದ್ದೇಶ ಸಾಧನೆಗಾಗಿ ಶಾಂತಿಯುತ ಹೋರಾಟ ಮುಂದುವರಿಸುವಂತೆ ಕರೆ ನೀಡಿದರು.

ಮೈಸೂರು ವಿ. ವಿ ನಿಲಯದ ಕುಲಪತಿ ಪ್ರೊ। ದೇ. ಜ ಗೌಡರು ಸಮಾರೋಪ ಭಾಷಣ ಮಾಡಿದರು.

ಆರಂಭದಲ್ಲಿ ಕ್ಯಾಪ್ಟನ್ ಕೆ. ಎ ಶೆಟ್ಟರು ಸ್ವಾಗತಿಸಿದ್ದರು. ಶ್ರೀ ಎಂ ಗಂಗಾಧರ ಭಟ್ಟರು ಸಮ್ಮೇಳನಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು.

ಶ್ರೀ ಜಿ. ಕೆ. ಮಲ್ಯರು ಧನ್ಯವಾದಗಳನ್ನರ್ಪಿಸಿದರು.

ಪೂರ್ವಾಹ್ನ ಶ್ರೀ ಎಂ. ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಅಧ್ಯಾಪಕರ ಸಮ್ಮೇಳನವನ್ನು ಮಂಜೇಶ್ವರದ ಶಾಸಕ ಹಾಗೂ ಕಮ್ಯೂನಿಸ್ಟ್ ನಾಯಕ ಶ್ರೀ ಎಂ ರಾಮಪ್ಪನವರು ಉದ್ಘಾಟಿಸಿದರು ಶ್ರೀಗಳಾದ ಎಸ್. ಎನ್. ನವಕಾನ, ಪಿ. ಸಿ. ಐತಾಳ, ಎಂ. ಕೇಶವ ಭಟ್, ಕೆ. ಟಿ. ಆಳ್ವ ಮೊದಲಾದವರು ಪ್ರಬಂಧಗಳನ್ನೋದಿದರು.

ಎಂ ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಪ್ರೊ। ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಯಕ್ಷಗಾನ ಸಮ್ಮೇಳನವನ್ನು ಎಡನೀರು ಮಠದ ಕೇಶವಾನಂದ ಭಾರತೀ ಸ್ವಾಮಿಗಳು ಉದ್ಘಾಟಿಸಿದರು. ಶ್ರೀಗಳಾದ ಶ್ರೀಶ ಗೋಪಾಲಕೃಷ್ಣ ಭಟ್ಟ, ಎಸ್. ಕೃಷ್ಣ ಭಟ್ಟ ಮತ್ತು ವೆಂಕಟರಾಜ ಪುಣಿಂಚತ್ತಾಯರು ಪ್ರಬಂಧಗಳನ್ನೋದಿದರು

ಕರ್ನಾಟಕ ಸಮ್ಮೇಳನದೊಂದಿಗೆ 2 ದಿನಗಳ ಸಮ್ಮೇಳನವು ಅಭೂತಪೂರ್ವ ರೀತಿಯಲ್ಲಿ ಯಶಸ್ವಿಯಾಗಿ ಕೊನೆಗೊಂಡಿತು ಎರಡೂ ದಿನ ರಾತ್ರಿ ಮನರಂಜನ ಕಾರ್ಯಕ್ರಮಗಳಿದ್ದುವು

ಉಡುಪಿಯಲ್ಲಿ ಸಹಕಾರಿ ಸಚಿವ ಶ್ರೀ ಶಂಕರ ಆಳ್ವರಿಗೆ ಸನ್ಮಾನ

ತಾ. 6ರಂದು ಉಡುಪಿಯ ಲಾ ಕಾಲೇಜಿನ ವಠಾರದಲ್ಲಿ ಉಡುಪಿ ತಾಲೂಕು ಸಹಕಾರಿ ಸಂಘಗಳವರು ಡಾ| ಟಿ. ಎಂ ಎ. ಪೈಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಸನ್ಮಾನ ಸಭೆಯಲ್ಲಿ ರಾಜ್ಯ ಸಹಕಾರಿ ಸಚಿವ ಶ್ರೀ ಎ. ಶಂಕರ ಆಳ್ವರನ್ನು ಸನ್ಮಾನಿಸಲಾಯಿತು ಶ್ರೀ ಟಿ ರಮೇಶ ಪೈಯವರು ಸ್ವಾಗತಿಸಿದರು. ಅತಿಥೇಯ ಸಮಿತಿಯ ಸಂಚಾಲಕ ಶ್ರೀ ಎ ಜೆ ಅಲ್ಸೆಯವರು ಸ್ಥಳೀಯ ಸಹಕಾರಿ ಸಂಘಗಳ ಪರವಾಗಿ ಸಚಿವರಿಗೆ ಮಾನಪತ್ರ ಅರ್ಪಿಸಿದರು. ಬೇರೆ ಬೇರೆ ಸಹಕಾರಿ ಸಂಘಗಳ ಪರವಾಗಿ ಸಚಿವರಿಗೆ ಹೂಹಾರ ಅರ್ಪಿಸಿ ಗೌರವಿಸಲಾಯಿತು.

ಶ್ರೀ ಆಳ್ವರು ಮಾತಾಡುತ್ತಾ ವಿದ್ಯಾವಂತರು ಸಹಕಾರಿ ರಂಗ ಪ್ರವೇಶಿಸಿ ಇತರ ರಂಗಗಳಂತೆ ಈ ಕ್ಷೇತ್ರದಲ್ಲೂ ಒಂದು ನವೀನ ಕ್ರಾಂತಿಯಾದರೆ ಶ್ರೀಸಾಮಾನ್ಯನ ಕಲ್ಯಾಣ ಶೀಘ್ರವೇ ಆಗದಿರದು ಎಂದು ಅಭಿಪ್ರಾಯಪಟ್ಟಿದ್ದಲ್ಲದೆ ಸಹಕಾರಿ ಸಂಘಗಳ ಪ್ರಗತಿಗೆ ಕೆಲವು ಸೂಚನೆಗಳನ್ನವರು ಸೂಚಿಸಿದರು.

ಡಾ| ಪೈಯವರು ಮಾತಾಡಿ ಸಹಕಾರಿ ತತ್ವವನ್ನು ಜೀವನದೊಂದು ಅಂಗವೆಂದರು 'ಸಹಕಾರಿ ಸಂಸ್ಥೆಗಳಲ್ಲಿನ ದೋಷಗಳನ್ನು ಎತ್ತಿಯೊಡದೆ ಅದರಲ್ಲಿರುವ ಗುಣಗಳನ್ನು ಮೆಚ್ಚಿ ಅವನ್ನು ಹೆಚ್ಚಿಸಲು ಗಮನ ಕೊಡಬೇಕೆಂದು ಕರೆಯಿತ್ತರು.

ಪಿ. ವಿ ಆಚಾರ್ಯರು ಕೊನೆಯಲ್ಲಿ ವಂದಿಸಿದರು

ಶಿರ್ವ ರೋಟರಿ ಕ್ಲಬ್ಬಿನಲ್ಲಿ ಚಾರ್ಟರ್ ದಿನಾಚರಣೆ

ಶಿರ್ವ, ಮೇ 6—ಸ್ಥಳೀಯ ರೋಟರಿ ಕ್ಲಬ್ಬಿನಲ್ಲಿ ತಾ 5-5-72ರಂದು ರೋ. ಪಿ ವಿಠಲ ಶೆಣೈಯವರ ಅಧ್ಯಕ್ಷತೆಯ ಚಾರ್ಟರ್ ದಿನಾಚರಣೆ ಆಚರಿಸಲ್ಪಟ್ಟಿತು.

ಉಡ್ಪಿ ರೋಟರಿ ಕ್ಲಬ್ಬಿನ ಅಧ್ಯಕ್ಷ ರೊ। ಡಾ। ಕೆ. ಮೋಹನ್‌ದಾಸ್ ಪೈಗಳು ಮುಖ್ಯ ಅತಿಥಿಗಳಾಗಿದ್ದು, ಹೊಸ ಸದಸ್ಯರನ್ನು ಸೇರಿಸಿಕೊಳ್ಳಾ ಸೂರರಂತೆ ಹಾಜರಿದ್ದ ಸದಸ್ಯರಿಗೆ ಬಹುಮಾನ ವಿತರಣೆ ಗೈದರು.

ಕಾರ್ಯದರ್ಶಿ ರೊ। ಡಾ। ಕೆ. ಆರ್. ವೆಂಕಟಕೃಷ್ಣರವರು ಪ್ರಕಟಣೆಗಳನ್ನೂ, ರೊ। ಕೆ. ವಾಸುದೇವ ಶೆಟ್ರು ಸಂದೇಶಗಳನ್ನೂ ಓದಿದರು. ರೊ। ಬಿ. ಶಂಭು ಶೆಟ್ರು ಧನ್ಯವಾದವಿತ್ತರು. ರೊ। ಸಿ. ಸುಬ್ಬಯ್ಯ ಹೆಗ್ಡೆ ಮತ್ತು ರೊ। ಡಾ। ಮೋಹನ್‌ದಾಸ್ ಹೆಗ್ಡೆಯವರು ಭೋಜನ ಕೂಟ ನೀಡಿದ್ದರು.

ಮಂಗಳೂರು ಜನತಾ ಬಜಾರ್ ಉದ್ಘಾಟನೆ

ಕಳೆದ ತಾ. 6ರಂದು ಮಂಗಳೂರು ಜನತಾ ಬಜಾರ್‌ನ ನೂತನ ಕಟ್ಟಡವನ್ನು ಶ್ರೀ ಬಿ. ನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ರಾಜ್ಯ ಸಹಕಾರಿ ಸಚಿವ ಶ್ರೀ ಎ. ಶಂಕರ ಆಳ್ವರು ಉದ್ಘಾಟಿಸಿದರು. ದ. ಕ. ಸೆಂಟ್ರಲ್ ಕೋಪರೇಟಿವ್ ಹೋಲ್‌ಸೇಲ್ ಸ್ಟೋರ್ಸಿನ ಅಧ್ಯಕ್ಷ ಶ್ರೀ ಎಸ್ ಸರ್ವೋತ್ತಮಯ್ಯನವರು ಸ್ವಾಗತಿಸಿದರು.

ಶ್ರೀ ಆಳ್ವರು ಉದ್ಘಾಟಿಸುತ್ತಾ, ರಾಜ್ಯದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮುಂದಿನ ಮೂರು ವರ್ಷಗಳಲ್ಲಿ ಸರಕಾರ ಒಟ್ಟು 33 ಕೋಟಿ ರೂ. ವಿನಿಯೋಗಿಸುವುದೆಂದೂ ಅವರಲ್ಲಿ 30 ಕೋಟಿ ರೂ ಗಳನ್ನು ಜಾಗತಿಕ ಬ್ಯಾಂಕ್‌ನಿಂದ ಪಡೆಯಲಾಗುವುದೆಂದೂ ತಿಳಿಸಿದರು. ಜನರ ಮನಸ್ಸನ್ನು ತೃಪ್ತಿ ಪಡಿಸುವುದಲ್ಲದೆ ಅವರಲ್ಲಿ ವಿಶ್ವಾಸ ಮೂಡಿಸುವುದೂ ಬಜಾರಿನ ನೌಕರರ ಕರ್ತವ್ಯವೆಂದು ತಿಳಿಸಿದ ಅವರು ಇಂಥ ಸಂಸ್ಥೆಗಳಿಗೆ ಸರಕಾರ ನೆರವು ಮತ್ತು ಸಾಲ ಒದಗಿಸುವುದೆಂದೂ ಆಶ್ವಾಸನೆ ನೀಡಿದರು. ಅಪ್ರಾಮಾಣಿಕತೆ ನಡೆಯುತ್ತಿದ್ದಲ್ಲಿ, ಹಣದ ದುರುಪಯೋಗವಾದಲ್ಲಿ ಮತ್ತು ಜನತೆಗೆ ತೊಂದರೆಯುಂಟಾದಲ್ಲಿ ಸರಕಾರ ಹಸ್ತಕ್ಷೇಪ ನಡೆಸುವುದೆಂದವರು ಎಚ್ಚರಿಸಿದರು.

ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಸರಕಾರ ಕಟಿಬದ್ಧವಾಗಿದೆಯೆಂದು ಇದಕ್ಕೆ ಸಹಕಾರಿ ರಂಗದ ಯಶಸ್ಸು ಆಗತ್ಯವೆಂದರು. ಸಮರ್ಪಕವಲ್ಲದ ಸಹಕಾರಿ ಸಂಸ್ಥೆಗಳನ್ನು ವಜಾಗೊಳಿಸಲಾದೀತು ಅಥವ ಇತರ ಸಂಸ್ಥೆಯೊಂದಿಗೆ ಅವನ್ನು ವಿಲಯನಗೊಳಿಸಲಾದೀತು ಎಂದವರು ತಿಳಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಶ್ರೀ ಮಣೇಲ್ ಶ್ರೀನಿವಾಸ ನಾಯಕರು ಧನ್ಯವಾದ ಸಲ್ಲಿಸಿದರು.

ಉಡುಪಿ ರೋಟರಿ ಕ್ಲಬ್‌ನಲ್ಲಿ ಶ್ರೀ ಟಿ. ಎ. ಪೈ

ತಾ. 2ರಂದು ಜರಗಿದ ಉಡುಪಿ ರೋಟರಿ ಕ್ಲಬ್‌ನ ಸಾಪ್ತಾಹಿಕ ಸಭೆಯಲ್ಲಿ ಮುಖ್ಯ ಅತಿಥಿ ಶ್ರೀ ಟಿ. ಎ. ಪೈಯವರನ್ನು ಅಧ್ಯಕ್ಷ ಡಾ। ಮೋಹನದಾಸ ಪೈ ಸ್ವಾಗತಿಸಿದ ಬಳಿಕ ಸಿಂಡಿಕೇಟ್ ಬೇಂಕಿನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಎಚ್. ಡಿ. ಎಸ್. ಪೈಯವರು ಮುಖ್ಯ ಅತಿಥಿಗಳ ಪರಿಚಯ ಮಾಡಿಸಿದರು.

ವಿಧಾನ ಸಭಾ ಸದಸ್ಯೆ ಶ್ರೀಮತಿ ಮನೋರಮಾ ಮಧ್ವರಾಜರು ರೋಟರಿ ಇನ್ಸೂರೆನ್ಸ್ ಸ್ಪರ್ಧೆಯಲ್ಲಿ ಜಯಗಳಿಸಿದವರಿಗೆ ಪ್ರಶಸ್ತಿ ಪತ್ರಗಳನ್ನಿತ್ತರು

ಶ್ರೀ ಟಿ ಎ. ಪೈಯವರು ಮಾತಾಡಿ ಜೀವವಿಮಾ ಕಾರ್ಪೊರೇಶನ ಉದ್ದೇಶವು ಎಷ್ಟು ಪಾಲಿಸಿಗಳನ್ನು ಮಾಡುವುದೆಂಬುದಾಗಿರದೆ ಸಾಧ್ಯವಾದಷ್ಟು ಹೆಚ್ಚು ವ್ಯಕ್ತಿಗಳನ್ನು ವಿಮೆ ಯೋಜನೆಗೆ ಒಳಪಡಿಸ ಬೇಕೆಂದು ತಿಳಿಸಿ ಗ್ರೂಪ್ ಇನ್ಸೂರೆನ್ಸ್, ಸ್ಕೀಮಿನ ಮಹತ್ವವನ್ನು ವಿವರಿಸಿದರು.

ರಾಷ್ಟ್ರೀಯ ಪ್ರಶಸ್ತಿ ಗಳಿಸಿದ 'ಉದಯವಾಣಿ' ಹಾಗು ಮಣಿಪಾಲ ಪವರ್ ಪ್ರೆಸ್‌ಗೆ ರೋಟರಿ ಕ್ಲಬ್‌ನ ಪರವಾಗಿ ಮುಖ್ಯ ಅತಿಥಿ ಶ್ರೀ ಟಿ. ಎ. ಪೈಯವರು ಉದಯವಾಣಿ ಸಂಪಾದಕ ಶ್ರೀ ಸತೀಶ್ ಪೈಯವರಿಗೆ ಪ್ರಶಸ್ತಿ ಪತ್ರ ಅರ್ಪಿಸಿದರು

ಶ್ರೀಮತಿ ನೀಲಂ ಪ್ರಸಾದರು ಅಂತ್ಯದಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

READ & ADVERTISE IN NAVAYUGA Weekly

(ಎರಡನೇ ಪುಟದಿಂದ)

ಯಾದಳು. ಅವಳಿಗೆ ತುಟಿಯುಲುಗಾಡಿಸಲೂ ಅವಕಾಶ ಕೊಡದೆ ಅವ ಳನ್ನು ಅರಿಕೇಸರಿ ಎತ್ತಿಕೊಂಡೇ ಹೊಳೆಯನ್ನು ದಾಟಿ ಆಚೆಯ ದಂಡೆಯ ಲ್ಲಿಳಿಸಿದ.

ಅವಳೊಂದು ನಿಟ್ಟುಸಿರು ಬಿಟ್ಟಳು.

'ಭಾರ ಹೊತ್ತವನು ನಾನು. ಉಸಿರ್ಗರೆದವಳು ನೀನು. ದೇವಿಗೆ ದಣಿವಾಯಿತೇನೋ'

'ನಿಮಗಿಷ್ಟೇ ತಿಳಿಯುವುದು'

"ಚಿತ್ತತರಂಗವನ್ನೂ ಬೇಧಿಸಿ ನೋಡಲು ನಾನೇನು ಅಂತರ್ಯಾಮಿಯೋ?"

'ನದಿಯ ಮಧ್ಯದಲ್ಲಿ ಹಾಗೇ ಹೊಳೆಯಲ್ಲಿ ತೇಲಿಸಿ ಬಿಟ್ಟದರೆ—' ನಿಮ್ಮ ಕೈಯಿಂದೊಮ್ಮೆ ಬದುಕಿ ಬಂದೆನಲ್ಲ ಎಂಬ ತೃಪ್ತಿಯ ಉಸಿರು'

'ನೀನೂ ಪರವಾಯಿಲ್ಲ. ನಿನ್ನ ಊಹೆ ಹೀಗೇ ಬೇರು ಬಿಡ ಬಲ್ಲುದು ಎಂಬುದರ ಅರಿವೇ ನನಗಿರಲಿಲ್ಲ'

ಹೀಗೆ ನುಡಿದು. ಆತ ಪುನಃ ನೀರಿಗಿಳಿದು, ಆಚೆಯ ದಡದಲ್ಲಿ ಗೂಟಕ್ಕೆ ಕಟ್ಟಿದ್ದ ಕುದುರೆಯನ್ನು ಈಚೆಯ ಅಂಚಿಗೆ ದಾಟಿಸಿದ.

ಅನಂತರ ಇಬ್ಬರೂ ಮರಳು ದಿಣ್ಣೆಯ ಮೇಲೆ ಹೆಜ್ಜೆ ಹಾಕಲಾರಂಭಿಸಿದರು. ಆತ ಅವಳ ತೀರ ಸಮೀಪದಲ್ಲಿ ನಡೆದು ಬರುತ್ತಿದ್ದ.

ಆಕೆ ಅವನಿಂದ ದೂರ ಸರಿದು ಆಗಸದತ್ತ ಬೆರಳು ತೋರಿ 'ಅಲ್ಲಿ ನೋಡಿ' ಎಂದಳು.

ಆಕಾಶ ಶುಭ್ರವಾಗಿತ್ತು. ತಾರಗೆಗಳು ಮಿನುಗುತ್ತಿದ್ದುವು.

ತಂಗದಿರ ಸುತ್ತೆಲ್ಲ ತಂಪೆರೆಯುತ್ತಿದ್ದ.

'ಅಲ್ಲೇನು? ನನ್ನ ಬಾಳಿನಲ್ಲೂ ಇಂದು ಚಂದ್ರೋದಯವಾಗಿದೆ'

ಎಂದು ದೂರ ಸರಿದ ಅವಳನ್ನು ಅರಿಕೇಸರಿ ಹತ್ತಿರಕ್ಕೆ ಎಳೆದುಕೊಂಡ.

೧೯

ದೇವಸ್ಥಾನದಿಂದ ಅನತಿ ದೂರದಲ್ಲಿ ಒಂದು ಎಲೆಮನೆ. ಅದನ್ನು ತಲುಪಲು ದೇಗುಲದ ಪಕ್ಕದಿಂದೊಂದು ಕಿರುದಾರಿ. ದಾರಿಯ ಆಚೀಚೆ ಬದಿಗಳಲ್ಲಿ ದಟ್ಟವಾದ ಕಾಡು; ಅವರು ಈ ದಾರಿಗುಂಟ ಎಲೆಮನೆಯತ್ತ ನಡೆದರು.

ಎಲೆಮನೆಯ ಮುಂಭಾಗದಲ್ಲಿ ವಿಶಾಲವಾದ ಅಂಗಳ, ಅಂಗಳದ ಅಂಚಿನಲ್ಲಿ ಕೈಯಾರೆ ಬೆಳೆಸಿದ ಹೂವಿನ ಗಿಡಗಳು. ಪಾರಿಜಾತ, ದುಂಡು ಮಲ್ಲಿಗೆಯ ಪರಿಮಳ ಸುತ್ತೆಲ್ಲ ಹರಡಿತ್ತು.

ಎಲೆಮನೆಯ ಮುಂಭಾಗದ ಜಗಲಿಯಲ್ಲಿ ಕಾಲುದೀಪ ಒಂದು ಉರಿಯುತಿತ್ತು. ಅವರಿಬ್ಬರೂ ಮನೆಯ ಜಗಲಿಯ ಮುಂದು ಬಂದು ನಿಂತರು.

ಅವರ ಕಾಲು ಸಪ್ಪಳಕ್ಕೆ ಅಂಜಿ ಪಕ್ಕದ ಕೊಟ್ಟಿಗೆಯಲ್ಲಿ ಕಟ್ಟಿದ ಆಕಳುಗಳು ಅಂಬಾ ಎಂದು ಕೂಗಿದುವು. ಅದನ್ನು ಆಲಿಸಿ, ಜಗಲಿಯಲ್ಲಿ ಕುಳಿತು, ದೀಪದ ಮಂದ ಪ್ರಕಾಶದಲ್ಲಿ ಅದಾವುದೋ ಗ್ರಂಥ ಅಭ್ಯಸಿಸುತಿದ್ದ ವ್ಯಕ್ತಿ ತಲೆಯನ್ನು ಹೊರಗೆ ಹಾಕಿದರು.

ಅವರ ಕಣ್ಣಿಗೆ ಬಿದ್ದುದು ಹೊರಬಾಗಿಲಲ್ಲಿ ನಿಂತಿದ್ದ ಜೋಡಿ.

ಅವರು ಕಣ್ಣನ್ನೊಮ್ಮೆ ಉಜ್ಜಿಕೊಂಡು 'ಕುಮಾರನೇನು?' ಎಂದು ಪ್ರಶ್ನಿಸಿದರು.

'ಹೌದು ಅಪ್ಪಾಜಿ.'

'ಇಬ್ಬರೂ ಮೆಟ್ಟಲೇರಿ ಜಗುಲಿಗೆ ಬಂದರು.

ಅರಿಕೇಸರಿ ಆ ಹಿರಿಯರ ಪಾದ ಮುಟ್ಟಿ ನಮಸ್ಕರಿಸಿದ.

ಲೋಕಾಂಬಿಕೆ ಅವನನ್ನು ಅನುಕರಿಸಿದಳು.

ಹಿರಿಯರು ಹರಸಿದರು.

ವಿಸ್ಮಿತೆಯಾದ ಲೋಕಾಂಬಿಕೆ ಆ ಹಿರಿಯರನ್ನೇ ನೋಡುತ್ತ ನಿಂತಳು.

ಮುಂದಿದ್ದ ಹಿರಿಯರ ಆಕೃತಿ ಭವ್ಯ.

ಅವಳಿಗೆ ಎಂದೋ ಎಲ್ಲೋ ನೋಡಿದ ನೆನಪು.

'ಗುರುತು ಸಿಗಲಿಲ್ಲವೇ ಲೋಕಾ? ಈ ವೇಷದಲ್ಲಿ ನಿನಗೆಂದೇನು ಯಾರಿಗೂ ನನ್ನ ಗುರುತು ಸಿಗಲಾರದು.'

ಆ ಹಿರಿಯರ ಈ ಮಾತಿನಿಂದ ಲೋಕಾಂಬಿಕೆ ಗೊಂದಲದಲ್ಲಿ ಬಿದ್ದಳು. ಅವಳ ದೃಷ್ಟಿ ಒಮ್ಮೆ ಅರಿಕೇಸರಿಯತ್ತ, ಮತ್ತೊಮ್ಮೆ ಸಮ್ಮುಖದಲ್ಲಿ ನಿಂತ ಭವ್ಯಾಕೃತಿಯತ್ತ ಹೊರಳಲಾರಂಭಿಸಿತು. ಅವರಿಬ್ಬರೊಳಗಿರುವ ಸಾದೃಶ್ಯತೆಯನ್ನು ಅವಳು ಗುರುತಿಸಿದಳು, ಮುಂದೆ ನಿಂತಿದ್ದವರು, ತನ್ನ ಸರ್ವಸ್ವವೂ ಆದ ಅರಿಕೇಸರಿಯ ತಂದೆ ಚಾಲುಕ್ಯ ನರಸಿಂಹನೇ ಎಂದು ತಿಳಿದುಕೊಳ್ಳಲು ಅವಳಿಗೆ ಹೆಚ್ಚು ಕಾಲ ಹಿಡಿಯಲಿಲ್ಲ. ಆದರೆ ಅವರಿಲ್ಲೇಕೆ?

ಅವರಿಗೆ ಸನ್ಯಾಸಿಗಳಿಗೊಪ್ಪುವ ವೇಷವೇಕೆ?

ಈ ಹುಲ್ಲು ಗುಡಿಸಲ ವಾಸವೇಕೆ?

ಇಳಿವಯಸ್ಸಿನಲ್ಲಿ ಕಂದಮೂಲಗಳನ್ನು ತಿಂದು ಹೊಟ್ಟೆ ಹೊರೆಯುವ ಪ್ರವೃತ್ತಿ ಏಕೆ? ಒಂದೂ ಅರ್ಥವಾಗದೆ, ನೆಲೆಯಿಲ್ಲದ ಸೀರಿಗಳಿದಂತಾದಳು. ಈ ಗುಂಗಿನಲ್ಲಿ ಮುಳುಗಿದ್ದ ಅವಳು ಸಾವರಿಸಿಕೊಳ್ಳಲು ಪ್ರಯತ್ನಿಸುತಿದ್ದಂತೆಯೇ ನರಸಿಂಹ—

'ನಾನಾರೆಂಬುದು ಈಗಲಾದರೂ ತಿಳಿಯಿತೇ, ಮಗಳೇ?' ಎಂದು ಪ್ರಶ್ನಿಸಿದ.

ಅವಳು ತಲೆಯಲ್ಲಾಡಿಸಿದಳು.

ಅದು ಅರ್ಥಪೂರ್ಣವಾಗಿತ್ತು.

ಅವಳ ತುಟಿ ಎರಡು ಮಾಡಿರಲಿಲ್ಲವಾದರೂ ಉತ್ತರ ಸ್ಪಷ್ಟವಾಗಿತ್ತು.

ಅದನ್ನು ಗ್ರಹಿಸಿ ನರಸಿಂಹ ನಾಯಕರು—'ಆಗಲೇ ಹೊತ್ತಾಗಿದೆ. ಹಿತ್ತಲ ಕಡೆ ಸ್ನಾನಗೃಹ ಇದೆ. ಹಾಯಾಗಿ ಸ್ನಾನ ಮಾಡಿ. ಅದರಿಂದ ಪ್ರಯಾಣದ ದಣಿವು ಆರೀತು. ಆಗಲೇ ಸಿದ್ಧಪಡಿಸಿದ ಅಡುಗೆ ಇದೆ. ನಿಮಗಿಬ್ಬರಿಗೆ ಸಾಕಾಗಬಹುದು. ನನ್ನದು ಆಗಲೇ ಆಗಿಹೋಯಿತು. ಮೊದಲು ಸ್ನಾನ. ಆ ಮೇಲೆ ಹೊಟ್ಟೆಗಿಷ್ಟು ಹಿಟ್ಟು ಬೀಳಲಿ. ಆ ಮೇಲೆ ಮುಂದಿನ ಮಾತು.'

ಅವರಿಬ್ಬರೂ ಒಳಮನೆಗೆ ಕಾಲಿಟ್ಟರು.

ಈ ಇಬ್ಬರು ಮಕ್ಕಳು ಅಪವೇಳೆಯಲ್ಲಿ ಇಲ್ಲಿಗೇಕೆ ಬಂದರು ಎಂಬ ಯೋಚನೆ ಅವನ ಬಗೆಯನ್ನು ಕದಡಿತು. ರಾಷ್ಟ್ರಕೂಟ ರಾಜಧಾನಿಯನ್ನುಳಿದು, ಬನವಾಸಿಗೆ ಬಂದ ಹೊಸತರಲ್ಲಿ ಅರಿಕೇಸರಿ ಅವನನ್ನು ಕಾಣಲು ಬಂದುದುಂಟು. ಹಾಗೆ ಬಂದವನು ಒಂದೆರಡು ದಿನ ಅಲ್ಲಿ ತಳವೂರಿದ್ದೂ ಉಂಟು. ಆಗ ಆತ ಒಂಟಿಯಾಗಿಯೇ ಬರುತ್ತಿದ್ದ. ಯಾಕೆ ಬಂದೆ ಎಂಬ ಯೋಚನೆಯೂ ಆಗ ಅವರ ಮನಸ್ಸಿಗುಂಟಾಗಲಿಲ್ಲ. ಇಂದು ಬಂದ ರೀತಿಗೂ ಅಂದು ಬಂದುದಕ್ಕೂ ಹೆಚ್ಚಿನ ಅಂತರವಿತ್ತು. ವಯಸ್ಸಿಗೆ ಬಂದ ರಾಜಕನ್ಯೆಯೊಬ್ಬಳು ಇಂದವನ ಜೊತೆಗಾಗಿ ಈ ವನಪ್ರದೇಶಕ್ಕೆ ಬಂದಿದ್ದಳು.

ದೂರದ ಸಂಬಂಧಿಯ ಮಗಳು. ಬಾಲ್ಯದಿಂದಲೂ ಒಡನಾಡಿ ಬೆಳೆದ ಸಲುಗೆ, ಅವರಿಬ್ಬರೇ ಬಂದುದಲ್ಲ ತಪ್ಪೇನಿದೆ? ಅವರೇ ತಿಳಿಸ ಬಹುದು. ನನಗೇಕೆ ಎಲ್ಲಿಲ್ಲದ ಉತ್ಸುಕತೆ. ಅವರ ವಿವೇಕ ಅವರಿಗೆ ಸಮಾಧಾನ ಹೇಳಿತಾದರೂ ಮನಸ್ಸಿನ ಉಮ್ಮಳ ಕಡಿಮೆಯಾಗಲಿಲ್ಲ.

'ಸರ್ವ ಸಂಬಂಧವನ್ನೂ ಹರಿದೊಗೆದ ತಮ್ಮಲ್ಲಿ ಮೂಡಿದ ಈ ಅನುರಕ್ತಿ ಅವರನ್ನು ವಿಚಾರದ ಸುಳಿಯಲ್ಲಿ ಕೆಡವಿತು. ನನಗೇಕೆ ಈ ವ್ಯಾಮೋಹ. ಅವರವರ ದಾರಿ ಅವರಿಗೆ. ನಾನೇಕೆ ಅಡ್ಡ ಬರಲಿ ಎಂದು ಸಮಾಧಾನ ತಂದು ಕೊಳ್ಳಲು ಹೆಣಗಿದರು. ವಿಷಯದ ನೆನಹಿನಿಂದ ಸಂಗದ ನೆನಹು, ಸಂಗದ ನೆನಹಿನಿಂದ ಕಾಮನೆಗಳು ಹುಟ್ಟುತ್ತವೆ ಎಂಬ ಗೀತೆಯ ಮಾತನ್ನು ಅವರು ಮನದಲ್ಲೇ ಉಚ್ಚರಿಸಿದರು.

ತಾಳೆ ಗರಿಯ ಗ್ರಂಥದ ಹಾಳೆ ಬಿಚ್ಚಿ, ತಮ್ಮ ದೃಷ್ಟಿಯನ್ನು ಅದರಲ್ಲಿ ಮೂಡಿದ ಅಕ್ಷರಗಳತ್ತ ಹಾಯಿಸಿದರು. ಅಭ್ಯಾಸ ಬಲದಿಂದ ಕಣ್ಣು ಅಕ್ಷರಗಳ ಮೇಲೆ ಓಡಿತಾದರೂ ಮನಸ್ಸು ಅಲ್ಲಿ ಕೇಂದ್ರೀಕೃತವಾಗಲಿಲ್ಲ.

ಅದು ಅಲ್ಲಿ ನಿಲ್ಲದೆ, ಅವರನ್ನು ಬಹಳ ಹಿಂದಕ್ಕೆಳೆಯಿತು.

ವರ್ಷಗಳ ಹಿಂದೆ, ಅರಿಕೇಸರಿಯ ಜನನಕ್ಕೂ ಮೊದಲು ಜಾನಕೀದೇವಿ, ಯುದ್ಧ ಕ್ಷೇತ್ರವನ್ನು ನೋಡುವ ಬಯಕೆಯನ್ನು ಪ್ರಕಟಿಸಿದಳು. ಮಾತ್ರವಲ್ಲ, ತೋರಿಸಿಯೇ ತೀರ ಬೇಕೆಂದು ಹಟ ಹಿಡಿದಳು. ತುಂಬು ತಾರುಣ್ಯದ ಭರದಲ್ಲಿದ್ದ ಅವರು, ಅವಳಿಗೆ ಸೋತು, ಗಂಡುಡೆಯಲ್ಲಿ ಹೊರಟು ನಿಂತ ಅವಳನ್ನು ಯುದ್ಧಭೂಮಿಗೆ ಕರೆದೊಯ್ದರು.

ಆಗ ಅವರಿಗೆ ಅನ್ಯರೇನೆಂದಾರು ಎಂಬುದು ಹೊಳೆದಿರಲಿಲ್ಲ.

ಹೊಳೆಯುವುದೇನು? ಆ ಕುರಿತು ಯೋಚಿಸಿಯೂ ಇರಲಿಲ್ಲ.

ಜಾನಕಿಯ ಬಾಯಿಂದ ಬಿದ್ದ ಮಾತನ್ನು ನಡೆಸಿಕೊಡಬೇಕೆಂಬ ಛಲ ಇತ್ತು.

ಅದಕ್ಕೆ ಕಾರಣ—?

ವಯಸ್ಸು

ಇದು ಅವರು ಅವರ ವಯಸ್ಸಿನಲ್ಲಿ ಮಾಡಿದ ಕೆಲಸ.

ಅದನ್ನೇ ಮೂರನೆಯವರು ಅವರ ವಯೋಧರ್ಮಕ್ಕನುಸರಿಸಿ ಮಾಡಲು ಹೊರಟು ನಿಂತಾಗ ವಿಮರ್ಶಿಸುವ ಚಪಲ.

ತಮ್ಮಲ್ಲುಂಟಾದ ಗೊಂದಲಕ್ಕೆ ಕಾರಣ—?

ಅದನ್ನೂ ಅವರ ಮನಸ್ಸು ಪರಾಮರ್ಶಿಸಿತು.

(ಮುಂದುವರಿಯುವುದು)

ಸ ವರ್ಣ ಪರ್ವ ೫

NAVAYUGA 11-5-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ

ಕಾಂಗ್ರೆಸ್ಸಿನಲ್ಲೊಂದು ಉತ್ಪಾತ

ಹೊಸ ಕಾಂಗ್ರೆಸ್ ಮೈಸೂರಲ್ಲಿ ಅಧಿಕಾರಾರೂಢವಾದ ಬಳಿಕ ಅದರ ಕಾರ್ಯಕಾರಿ ಚಟುವಟಿಕೆಗಳು ತ್ವರಿತ ಗತಿಯಿಂದ ಸಾಗುತ್ತಿದೆ. ಆದರೆ ಹುಟ್ಟುಗುಣ ಘಟ್ಟ ಹತ್ತಿದರೂ ಬಿಡಬಾರದೆನ್ನುವಂತೆ ಕಾಂಗ್ರೆಸಿನ ತೆಂಗಿನ ಕಾಯಿಯೊಳಗೆ ಒಡಕು ಒಳಗಿಂದೊಳಗೆ ಆರಂಭವಾಗಿದೆ. ಈ ಸಾರೆ ಶ್ರೀ ವೀರೇಂದ್ರ ಪಾಟೀಲರು ಎಲ್ಲರಿಗಿಂತ ಹೆಚ್ಚು ಓಟು ಪಡೆದು, ರಾಜ್ಯ ಸಭೆಗೆ ಆಯ್ಕೆಯಾಗಿರುವುದು ಈ ಸಂದೇಹವನ್ನು ಬಲಪಡಿಸುತ್ತದೆ. 216 ಸದಸ್ಯರ ಸಭೆಯಲ್ಲಿ ಸಂಸ್ಥಾ ಕಾಂಗ್ರೆಸಿಗೆ 24 ಸದಸ್ಯ ಬಲವಿತ್ತು. ಚುನಾವಣೆಯ ಮೊದಲು. ಅವರಲ್ಲೊಬ್ಬ ಇಂದಿರಾ ಕಾಂಗ್ರೆಸ್ ಸೇರಿದ್ದ. ಸಂಸ್ಥಾ ಕಾಂಗ್ರೆಸಿನ ಈ ಇಪ್ಪತ್ತನಾಲ್ಕು ಮಂದಿಯೂ ಸೇರಿದರೆ ವಿರೋಧ ಪಕ್ಷದಲ್ಲಿ ಒಟ್ಟು 51 ಜನರಿದ್ದರು. ವಿರೋಧಿ ಪಾಟೀಲರಿಗೆ 49 ಮತಗಳು ಬಂದಿರುವುದರಿಂದ ವಿರೋಧೀ ಪಕ್ಷಗಳ ಮತವೆಲ್ಲಾ ಅವರಿಗೇ ಬಿದ್ದಿರುವುದು ನಿರ್ವಿವಾದ. ವಿರೋಧೀ ಪಕ್ಷದ ಒಬ್ಬಾತ ಇಂದಿರಾ ಕಾಂಗ್ರೆಸಿಗೆ ಹೋದುದರಿಂದ ವಿರೋಧೀ ಪಕ್ಷದಲ್ಲಿದ್ದ ಜನ 50.

ಈ ಐವತ್ತರಲ್ಲಿ ಇಂದಿರಾ ಕಾಂಗ್ರೆಸಿಗೆ ಅನುವರ್ತಿಗಳಾದ ಮೂವರು ಸಿ. ಪಿ. ಐ. ಗಳಾದುದರಿಂದ ವಿರೋಧೀ ಪಕ್ಷದವರ ಸಂಖ್ಯೆ 47 ಆಯಿತು. ಅವರಲ್ಲಿ ಆರು ಜನ ಇಂದಿರಾ ಕಾಂಗ್ರೆಸ್ಸಿನಲ್ಲಿ ನೊಂದು ಸ್ಪರ್ಧೆಗೆ ನಿಂತಿದ್ದರೂ ಅದೇ ಕಾಂಗ್ರೆಸ್ಸಿಗೆ ಅವರ ಬೆಂಬಲವಿತ್ತು. ಇದರಿಂದಾದ 41 ವಿರೋಧಿ ಪಕ್ಷೀಯರಲ್ಲಿ ಮೂವರು ಇಂದಿರಾ ಕಾಂಗ್ರೆಸ್ ಬೆಂಬಲಿಗರಾದ ಸ್ವತಂತ್ರ ಸದಸ್ಯರು. ಉಳಿದ 38ರಲ್ಲಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮೂವರು ವೀರೇಂದ್ರ ಪಾಟೀಲರ ಬದ್ಧ ವೈರಿಗಳು. ಕೊನೆಯ 35 ಮತಗಳು ಅವರಿಗೆ ಬಂದಿರಬಹುದು. ಈ ಜನರಲ್ಲದೆ ಬಾಕಿ 14 ಮತಗಳು ಪಾಟೀಲರಿಗೆ ಎಲ್ಲಿಂದ ಬಂದುವು?

ವಿರೋಧೀ ಪಕ್ಷದ ಜನರಲ್ಲದೆ ಉಳಿದವರು ಆಡಳಿತ ಕಾಂಗ್ರೆಸಿನ ಅನುಯಾಯಿಗಳು. ದೇವರಾಜ ಅರಸರೇನೋ ಎದೆತಟ್ಟಿ, ತಮ್ಮ ಪಕ್ಷದ ಮತಗಳು ಪಾಟೀಲರಿಗೆ ಹೋಗಿಲ್ಲವೆಂದು ಹೇಳಿದರೂ, ಅವರ ಪಕ್ಷದಲ್ಲಿ ಒಡಕು ಹುಟ್ಟಿದೆಯೆಂಬುದು ನಿರ್ವಿವಾದ. ಟಿ. ಎ. ಪೈಯವರಿಗೆ ೪೫ ಓಟು ಬರುವ ನಿರೀಕ್ಷೆ ಇದ್ದರೂ ಅವರಿಗೆ ೪೭ ಓಟುಗಳು ಬಂದಿವೆ. ಆದುದರಿಂದ ವಿರೋಧೀ ಪಕ್ಷದ ಓಟುಗಳೆಲ್ಲವೂ ಪಾಟೀಲರಿಗೆ ಹೋಗದೆ ಕೆಲವು ಪೈಯವರಿಗೂ ಬಂದಿವೆ. ವಿಧಾನ ಸಭೆಯಲ್ಲಿ ಪಾಟೀಲರಿಗೆ ಎಷ್ಟೇ ಅಲ್ಪ ಬೆಂಬಲವಿದ್ದರೂ ಅವರು ಯಶಸ್ವೀ ವಿಜಯಿಯಾಗಿರುವುದು ನಮ್ಮ ರಾಜ್ಯದ ಬೆಳಕಿಂಡಿಯಲ್ಲಿ ತೂರಿಬಂದ ಬಾಲರವಿಯ ಆಶಾಕಿರಣಗಳೆನ್ನಲಾದೀತು.

“ಮಡೆಂಜಿ ಹೋದಲ್ಲಿ ಕಲಂಕ ತಪ್ಪದು” ಎಂದು ತುಳುವಿನಲ್ಲಿ ಗಾದೆಯೊಂದಿದೆ. ಆ ಹೆಸರಿನ ಜಲಚರ ನೀರಿನಲ್ಲಿದ್ದರೆ ನೀರೆಲ್ಲಾ ಕಲಕಿ ರಾಡಿಯಾಗುತ್ತದಂತೆ. ಅದೇ ರೀತಿ ಆಡಳಿತ ಕಾಂಗ್ರೆಸಿನ ಅನುಯಾಯಿಗಳೂ ಹೆಸರಿನ ಫಲಕ ಹಚ್ಚಿಕೊಳ್ಳುತ್ತಿದ್ದಾರೆ. ಆಡಳಿತ ಕಾಂಗ್ರೆಸ್ ಪವಿತ್ರ; ಅವರ ನೀತಿಗಳು ಅಕಲುಷಿತ. ಆದರೆ ಅದನ್ನು ಆಶ್ರಯಿಸಿದ ಧೂರ್ತ ಅನುಯಾಯಿಗಳಿಂದಾಗಿ ಅದೂ ಹಾಳಾಗಿ, ದೇಶವನ್ನೇ ವಿಪ್ಲವದ ಜ್ವಾಲಾಮುಖಿಗೆ ನೂಕುತ್ತಿದೆ. ತನ್ನತನ್ನಲ್ಲೇ ಜಗಳಾಡಿಕೊಂಡು ಬೃಹತ್ ಬಿರುಕೊಂದನ್ನು ನಿರ್ಮಿಸಿ, ಅದು ಹೊಸತೊಂದು ಧೂಮಕೇತು ಮೂಡಿಸಲಿದೆಯೆಂಬುದು ವೀರೇಂದ್ರ ಪಾಟೀಲರ ಅನಾಯಾಸ ರಾಜ್ಯಸಭಾ ಪ್ರವೇಶದಿಂದ ಗೊತ್ತಾಗುತ್ತದೆ.

ಹೊಸ ಕಾಂಗ್ರೆಸ್ ಒಳಕೆಗೆ ಇಳಿಸಲಿರುವ "ಅಪೋಲೋ ರಾಕೆಟ್"ಗಳಲ್ಲಿ ಭೂಸುಧಾರಣೆಯೂ ಒಂದು. ಅವುಗಳಲ್ಲಿ ಕೆಲವು ವಿಚಾರಗಳು ಉತ್ತಮವಿದ್ದರೂ ಹಲವು ರೀತಿಯ ತೊಂದರೆಗಳೂ ಇವೆ. ಕೆಲವು ಧನಿಗಳ ಜೀವನಕ್ಕೆ ಅವರ ಆಸ್ತಿಯೇ ಸರ್ವಸ್ವವಾಗಿದೆ. ಅಂಥವರಲ್ಲಿ ರೈತ ಸಂಘಗಳ ಹುಚ್ಚು ಆವೇಶಕ್ಕೆ ಬಲಿಯಾಗಿರುವ ಒಕ್ಕಲುಗಳು ಸ್ವಲ್ಪವೂ ಗೇಣಿ ಕೊಡದೆ ಬಾಹು ಯುದ್ಧಕ್ಕೇ ಇಳಿದಿದ್ದಾರೆ. ಇದೀಗ 1966ರ ಲಾಗಾಯತು ಗೇಣಿ ಬಾಕಿ ಇರುವವರು ಎರಡು ವರುಷದ ಗೇಣಿ ಕೊಟ್ಟರೆ ಒಕ್ಕಲೆಬ್ಬಿಸುವುದರ ವಿರುದ್ಧ ಕಾಯಿದೆ ರಕ್ಷಣೆಯನ್ನು ನೀಡಿ ಸಾರ ಹೊರಟಿತು. ನ್ಯಾಯ ಗೇಣಿಯ ವಿಧಾನದಿಂದ ಧನಿಗೆ ಗೇಣಿ ಸಲ್ಲಿಸುವ ನಿರ್ಧಾರವನ್ನು ನಾವು ಒಪ್ಪಬಹುದಾದರೂ ಇಂಥ ಬೃಹತ್ ನಷ್ಟವನ್ನು ಸರಕಾರ ಧನಿಯ ಮೇಲೇ ಹೇರಬಹುದೇ? ಧನಿಯ ಆಸ್ತಿ ಎಂದಾದರೂ ಒಕ್ಕಲಿನ ಸ್ವಂತಕ್ಕಾದೀತೆ?

ಸರಕಾರ ಧನಿಗೆ ಹೇರಳವಾಗಿ ಬೇರೆ ಉದ್ಯೋಗ ಉತ್ಪನ್ನವಿದೆಯೆಂದು ಪರಾಮರ್ಶಿಸಬೇಕು. ಅಂದ ಮಾತ್ರಕ್ಕೆ ಆ ಎರಡು ವರುಷ ಗೇಣಿಯನ್ನು ಕೊಡಿಸಬಹುದಲ್ಲದೆ ಅದೇ ಆಧಾರದಿಂದ ಜೀವಿಸುವ ಧನಿಗೆ ಈ ಬೃಹತ್ ನಷ್ಟವನ್ನು ಕೊಟ್ಟರೆ ಹೇಗಾದೀತು?

ಭೂ ಸುಧಾರಣೆ ಸುಧಾರಿಸಬೇಕು. ಅದರಲ್ಲಿ ಶ್ರೀಸಾಮಾನ್ಯನಿಗೂ ಅನೇಕ ಆಘಾತಗಳಿವೆ. ಕೃಷಿಯಿಲ್ಲದವರ ಜೊತೆಗೆ ಹೊಸ ಸೃಷ್ಟಿ ಕೊಂಡಲಿದ್ದಲ್ಲಿ ಮೂಲಿನ ಚಕಮಕಿ ಇದ್ದೇ ಇದೆ. ಮತ್ತೆ ಭೂ ಹಂಚಿಕೆಯ ವಿಚಾರದಲ್ಲಿ ನ್ಯಾಯವಿದೆ. ಕೋಟ್ಯಾಂತರ ರೂಪಾಯಿ ಅಕ್ರಮ ಹಣ ಶೇಖರಿಸಿಟ್ಟಿರುವ ಧನಿಕರಿಗೆ ಊರಿಡೀ ಸಾಮ್ರಾಜ್ಯಶಾಹಿಯೇ ಆಗಿದೆ. ಅಂಥವರ ಕೈಯಿಂದ ಭೂಮಿಯನ್ನು ಕಿತ್ತು ಬಡ ಶ್ರೀಸಾಮಾನ್ಯನಿಗೆ ಹಂಚಲೇ ಬೇಕು. ಅವರ ರಾಮರಾಜ್ಯ ಹರಾಮ ರಾಜ್ಯವಾಗುತ್ತಿದೆ.

ಹೊಸ ಕಾಂಗ್ರೆಸಿನ ಭವಿಷ್ಯದ ಕುರಿತು ಅನೇಕರಿಗೆ ಶಂಕೆಯಾಗಿದೆ. ವಿಧಾನ ಪರಿಷತ್ತಿನ ಸಭಾಪತಿ ಸ್ಥಾನಕ್ಕೆ ಸಂಸ್ಥಾ ಕಾಂಗ್ರೆಸಿನ ಗಾಂವಕರ್ ಆರಿಸಿ ಬಂದಿರುವುದರೊಂದಿಗೆ ಮುಂಬಯಿ ನಗರ ಪಾಲಿಕೆಗೆ ಸಂಸ್ಥಾ ಕಾಂಗ್ರೆಸಿನ ಮೇಯರ್ ದೊರಕಿರುವುದು ಆಡಳಿತ ಕಾಂಗ್ರೆಸಿಗೊಂದು ದೊಡ್ಡ ಬರಸಿಡಿಲಾಗಿದೆ. ದೇವರಾಜ ಅರಸರು ಕುಲುಮೆಯ ಕೆಂಡದಂತೆ ಬೂದಿಯೊಳಗೆ ಸುಡತೊಡಗಿದ್ದಾರೆ.

ತನ್ನ ಕಚ್ಚಾಟ ನಿಲ್ಲಿಸಿ, ಗೆದ್ದು ಬರುವ ಮುನ್ನ ಶ್ರೀ ಅರಸರು ಶ್ರೀಸಾಮಾನ್ಯರಿಗೆ ನೆಕ್ಕಿಸಿದ ಭರವಸೆಯ ಭಕ್ಕರಿಯನ್ನು ನೆನಪಿಗೆ ತಂದುಕೊಂಡು ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಗಮನಿಸಿ, ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಇದರ ಆಯುಕಟ್ಟುಗಳೆಲ್ಲ ಸಡಿಲವಾಗುತ್ತಿವೆ. ಇದನ್ನು ಬಿಗಿಗೊಳಿಸುವ ಕಾರ್ಯದಲ್ಲಿ ಅರಸರು ವಿಫಲರಾಗುವುದು ಅಸಂಭವ. ಆಡಳಿತ ಕಾಂಗ್ರೆಸಿನ ಆಡಳಿತದಲ್ಲಿ ನಂಬಿಗೆ ಬರಬೇಕು, ಸಾಮರ್ಥ್ಯ ಕಾಣಬೇಕು! ಇಲ್ಲವಾದರೆ ಈಗ ಹುಟ್ಟಿ ಕಿರುಬೆರಳಗಲದ ಬಿರುಕು ಮಹಾ ಪ್ರಪಾತವಾಗುತ್ತದೆ. ಕಾಂಗ್ರೆಸ್ ಒಡೆಯುತ್ತದೆ, ಸುಟ್ಟು ನಾಶವಾಗುತ್ತದೆ. ಭವಿಷ್ಯದಲ್ಲಿ ಎಂದೆಂದೂ ನೆನೆಯದಂಥ ಭೀಕರ ರುದ್ರಾಗ್ನಿಗೆ ಬೀಳುತ್ತದೆ. ಇದು ಭವಿಷ್ಯ, ಒಂದು ಉತ್ಪಾತದ ಸಂಕೇತ.

— ಶ್ರೀ ಪು. ರಾಮಕೃಷ್ಣ ಶಾಸ್ತ್ರಿ

●●

ಪರರೊಡನೆ ಹೋಲಿಕೆ ಸಲ್ಲದು

(ಒಂದನೇ ಪುಟದಿಂದ)

‘ಭಾವ ಮನುಷ್ಯರಲ್ಲಿ ಕಾಣುವ ಎಲ್ಲ ಗುಣಗಳು ಅಥವಾ ಎಲ್ಲ ವಿಶೇಷತೆಗಳನ್ನು ಒಂದೇ ಕಡೆಯಲ್ಲಿ ಕೂಡಿಸಿಡುವುದಕ್ಕೆ ವಿರುದ್ಧವಾಗಿದೆ. ಕೆಲವು ಒಂದೆಡೆ ಕೆಲವಿರುತ್ತವೆ; ವ್ಯಕ್ತ್ಯಂದೆಡೆ ಇನ್ನು ಕೆಲವಿರುತ್ತವೆ. ಪ್ರತಿಯೊಬ್ಬರ ಗುಣ, ಕರ್ಮ, ಸ್ವಭಾವ, ಅಭಿರುಚಿ, ಪ್ರವೃತ್ತಿ ಬೇರೆಬೇರೆಯೇ. ಎಲ್ಲ ಗುಣಗಳು ಒಂದೆಡೆಯಲ್ಲಿ ಎಂದಿಗೂ ಇರುವುದಿಲ್ಲ.

ಇದನ್ನು ಮನವರಿಕೆ ಮಾಡಿಕೊಂಡರೆ, ನೀವು ದುಃಖಿತರಾಗುವುದಿಲ್ಲ. ಒಂದೊಮ್ಮೆ ತುಲನೆ ಮಾಡಲೇಬೇಕೆನಿಸಿದರೆ ಅಸೂಯೆಯಿಂದಲ್ಲ, ಉನ್ನತಿಶೀಲರಾಗುವ ಸದುದ್ದೇಶದಿಂದ ಮಾಡಿರಿ. ಅದರಂತಾಗಲು ಪ್ರಯತ್ನಿಸಿರಿ.

ಒಬ್ಬ ವ್ಯಾಪಾರಿ ತನಗಿಂತ ದೊಡ್ಡ ವ್ಯಾಪಾರಿಯ ಗುಣ ಕಲಿತುಕೊಳ್ಳುವುದಕ್ಕಾಗಿ, ಒಬ್ಬ ವಿದ್ಯಾರ್ಥಿಯು ತನಗಿಂತ ಬುದ್ಧಿವಂತ ವಿದ್ಯಾರ್ಥಿಯಂತಾಗಲು, ಒಬ್ಬ ಕಲಾವಿದ ತನಗಿಂತ ನಿಪುಣನಾದವನಂತಾಗಲು, ಸದ್ವಿವೇಕದಿಂದ ತುಲನೆಗೆ ತೊಡಗಿದರೆ ಅದರಿಂದ ಲಾಭವಾಗುವುದು.

ಜೀವನದಲ್ಲಿ ಸರಿದಾರಿಯಲ್ಲಿ ನಡೆದಿಲ್ಲವೆಂತಲೇ ನಾವು ಅಳುತ್ತೇವೆ. ಪ್ರಯತ್ನದಿಂದ ನಾವು ಗಳಿಸಿದ್ದನ್ನು ಗುರುತಿಸುವುದು. ಅದನ್ನು ನಮ್ಮ ಅನುಕೂಲಕ್ಕೆ ಬಳಸಿಕೊಳ್ಳುವುದು ಅದರಿಂದ ಸಂತೃಪ್ತಿ ಗಳಿಸುವುದು, ಸುಖ ಗಳಿಸುವುದು — ಜೀವನದ ದಾರಿ.

‘ನಮಗೆ ದೊರೆತದ್ದು ಅಪೂರ್ಣ, ಪರರಿಗೆ ದೊರೆತದ್ದು ಸಂಪೂರ್ಣ’ ಈ ಮನೋಭಾವನೆ ಮೃಗಜಲ, ಜೀವನವನ್ನು ದಿಗ್ಭ್ರಾಂತಗೊಳಿಸುವುದು. ಏಕೆಂದರೆ ಜೀವನದ ಏಕಮಾತ್ರ ಸತ್ಯ ಅಪರಿಪೂರ್ಣತೆ.

‘ನಾನು, ನೀನು, ಅವನು ಎಲ್ಲರೂ ಅಪೂರ್ಣರೇ. ಈ ಅಪೂರ್ಣತೆಯ ಸದುಪಯೋಗ ಪಡೆದು ಕೊಳ್ಳುವುದೇ ಜೀವನದ ದೊಡ್ಡ ಕಲೆ. ನಿಮಗಿಂತ ಶ್ರೇಷ್ಠರು, ದೊಡ್ಡವರು, ಶ್ರೀಮಂತರೊಂದಿಗೆ ನಿಮ್ಮನ್ನು ತೂಗಿ ನೋಡಹೋಗಿ ಅಸೂಯೆಯಿಂದ, ಆತ್ಮಪ್ರತಿಷ್ಠೆಯಿಂದ ಆತ್ಮಗ್ಲಾನಿಯಿಂದ ಸುಟ್ಟುಕೊಳ್ಳಬೇಡಿರಿ, ಉನ್ನತರಾಗುವ, ಸದ್ಗೃಹಸ್ಥರಾಗುವ ಸ್ವಯಂ ತುಷ್ಟರಾಗುವ ಪ್ರಯತ್ನ ನಡೆಸಿರಿ.

●●

HOTEL SATKAR

Boarding, Lodging & Restaurant

Behind Corporation Office,

9 Vishnu Road — Bangalore — 27.

Phone No.— 1 72005 / 2 72004 Grams: HOST SATKAR

Vegetarian Cuisine

Attached Bath Rooms and Showers.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms! Roof garden

Quiet, Calm Atmosphere

Personalised Service.

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೩೭

NAVAYUGA

18-5-1972

ಕರ್ನಾಟಕದ ಬಗೆಗೆ

ವಿ-ಮೈ ರಾವಣ ಕಾಳಗ ಬೇಡ

ಮುಖ್ಯ ಮಂತ್ರಿ ದೇವರಾಜ ಅರಸು ಅವರು ದಿಟ್ಟ ನಿರ್ಧಾರಗಳನ್ನು ಕೈಗೊಳ್ಳುವುದರಲ್ಲಿ ನಿಸ್ಸೀಮರು. ರಾಜ್ಯದ ಹೆಸರನ್ನು ಬದಲಾಯಿಸುವ ಅವರ ನಿರ್ಧಾರ ಇದಕ್ಕೊಂದು ನಿದರ್ಶನ. ರಾಜ್ಯ ಪುನರ್ವಿಂಗಡಣೆಯಾದಾಗ, ಹಳೆಯ ಮೈಸೂರು ರಾಜ್ಯ ಮತ್ತು ಸುತ್ತಮುತ್ತಲಿನ ಕನ್ನಡ ಭಾಷಾ ಪ್ರದೇಶಗಳು ಒಂದಾಗಿ ಹೊಸರಾಜ್ಯವೊಂದರ ಉದಯವಾಯ್ತು. ಆಗ ಈ ಹೊಸ ರಾಜ್ಯಕ್ಕೆ ಕರ್ನಾಟಕವೆಂಬುದಾಗಿ ನಾಮಕರಣ ಮಾಡಲಿತ್ತು. ಹೊಸ ಪ್ರದೇಶಗಳ ವಿಲೀನೀಕರಣವನ್ನೇ ವಿರೋಧಿಸಿದವರು ಹದಿನಾರು ವರ್ಷಕ್ಕೆ ಮೊದಲಿಗೂ ಇದ್ದರು; ಇಂದಿಗೂ ಅಲ್ಲಲ್ಲಿ ಉಳಿದುಕೊಂಡಿದ್ದಾರೆ. ಆಗಿನ ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯನವರಿಗೆ ಧನ್ಯವಾದಗಳು— ಅವರು ವಿಲೀನೀಕರಣಕ್ಕೆ ಮೈಸೂರಿನ ಒಪ್ಪಿಗೆ ಪಡೆದು ಕೊಂಡರು. ಇದಕ್ಕಾಗಿ ಕನ್ನಡಿಗರು ಹೊಸ ರಾಜ್ಯವನ್ನೂ ಮೈಸೂರೆಂದೇ ಒಪ್ಪಿಕೊಳ್ಳಬೇಕಾಯ್ತು.

ರಾಜಶಾಹಿ ಮೈಸೂರಿನ ಜನತೆಗೆ ಮೈಸೂರೆಂಬ ಹೆಸರಿನ ಮೇಲೆ ಅತ್ಯಂತ ಮೋಹ. ಅಂದಿನಿಂದ ಇಂದಿನ ವರೆಗೂ ರಾಜ್ಯದ ಹೆಸರಿನ ಬಗೆಗೆ ಆಗಾಗ ಜಿಜ್ಞಾಸೆ ನಡೆದದ್ದುಂಟು. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಸಾಹಿತ್ಯ ಸಮ್ಮೇಳನಗಳೂ ರಾಜ್ಯದ ಹೆಸರನ್ನು ಕರ್ನಾಟಕವೆಂದು ಬದಲಿಸಲು ಸರಕಾರವನ್ನು ಕೇಳಿ ಕೊಳ್ಳುತ್ತಲೇ ಬಂದಿವೆ. ವಿಧಾನ ಮಂಡಳಗಳ ಅಧಿವೇಶನಗಳಲ್ಲೂ ಒಂದಲ್ಲವೊಂದು ರೀತಿಯಿಂದ ಹೆಸರಿನ ಬಗ್ಗೆ ಚರ್ಚೆ ನಡೆಯದಿಲ್ಲ. ದಿ| ಅಂದಾನಪ್ಪ ದೊಡ್ಡಮೇಟಿಯವರಿಗೆ ಕರ್ನಾಟಕವೇ ಉಸಿರಾಗಿತ್ತು.

ಈ ಹದಿನಾರು ವರ್ಷಗಳಲ್ಲಿ ಮೂವರು ಮುಖ್ಯ ಮಂತ್ರಿಗಳಾಗಿ ಈಗ ನಾಲ್ಕನೆಯವರು ಪೀಠಾರೋಹಣ ಮಾಡಿದ್ದಾರೆ. ಈ ಸಂಖ್ಯೆಯಲ್ಲಿ ಶ್ರೀ ಎಸ್. ಆರ್. ಕಂಠಿಯವರ ಹೆಸರು ಸೇರಿಲ್ಲ. ಅವರು ಕೆಲವು ತಿಂಗಳು ಮುಖ್ಯ ಮಂತ್ರಿಯಾಗಿದ್ದರೂ 'ರಾಮನ ಬರವನ್ನು ಕಾದಿದ್ದ ಭರತ'ರಾಗಿ ಉಳಿದಿದ್ದರು. ಈ ಅವಧಿಯಲ್ಲಿ ಬಹು ದೀರ್ಘಕಾಲ ಶ್ರೀ ನಿಜಲಿಂಗಪ್ಪನವರದ್ದು. ಸದ್ಯ ಪಾಂಡಿಚೇರಿಯ ಲೆಫ್ಟಿನೆಂಟ್ ಗವರ್ನರರಿರುವ ಶ್ರೀ ಬಿ. ಡಿ. ಜತ್ತಿಯವರೂ ರಾಜ್ಯ ಸಭಾ ಸದಸ್ಯರಾಗಿರುವ ಶ್ರೀ ವೀರೇಂದ್ರ ಪಾಟೀಲರೂ ಉಳಿದಿಬ್ಬರು. ಈ ಮೂವರೂ ಕರ್ನಾಟಕವೆಂಬ ಹೆಸರಿಗೆ ವಿರೋಧವಿದ್ದದ್ದಿಲ್ಲ. ಸತ್ಯ ಹೇಳುವುದಾದರೆ, ಅವರೆಲ್ಲರೂ ಅದರ ಪುರಸ್ಕರ್ತರೇ. ಅವರ ಪಕ್ಷವು ಮನಸ್ಸು ಮಾಡಿದ್ದರೆ, ರಾಜ್ಯದ ಹೆಸರು ಬದಲಾದದ್ದು ಹಳಸಿದ ಸುದ್ದಿಯಾಗಿ ಹೋಗುತಿತ್ತು. ಆದರೆ, ಯಾರೊಬ್ಬರ ಮನ ನೋಯಿಸದೆ, ಸರ್ವ ಸಮ್ಮತಿಯಿಂದ ಉದ್ದೇಶವೀಡೇರಿಸಿಕೊಳ್ಳುವ ಇರಾದೆಯಿಂದಾಗಿ ಅವರು ದಿಟ್ಟತನ ತೋರಿಸಲಿಲ್ಲ. ಒಂದೊಮ್ಮೆ ದಿಟ್ಟತನ ಪ್ರದರ್ಶಿಸಿದ್ದರೆ, ಪಕ್ಷ ಒಡೆಯ ಬಹುದೆಂಬ ಅಂಜಿಕೆ ಬೇರೆಯಿತ್ತು.

ಗುಂಪುಗಾರಿಕೆಗೆ ಹೆಸರಾದ ಕರ್ನಾಟಕದ ಕಾಂಗ್ರೆಸ್ಸು ಕೊನೆಗೂ ಒಡೆಯಿತು—ಇದು ಅಖಿಲ ಭಾರತ ಮಟ್ಟದ ಭೂಕಂಪದಲ್ಲೇ ಸಮಾವೇಶ ಹೊಂದಿತು. ಆಳುವವರಿಗಾಗದವರೆಲ್ಲ ಶ್ರೀಮತಿ ಗಾಂಧಿಯ ಹಿಂದೆ ನಿಂತರು. ಇಂದು ಅವರದ್ದೇ ಮೇಲುಗೈ. ಅವರದ್ದೇ ಆಳಿಕೆ. ಶ್ರೀ ಅರಸರ ನಾಯಕತ್ವದಲ್ಲಿ ಆಳುವ ಕಾಂಗ್ರೆಸ್ಸು ಸುಭದ್ರ ಸರಕಾರವನ್ನು ರಚಿಸಿದ್ದಲ್ಲದೆ, ರಾಜ್ಯದ ಜನತೆಯ ಮೇಲೆ ತನ್ನ ಇಂದ್ರಜಾಲವನ್ನೂ ಬೀಸುವಲ್ಲಿ ಸಮರ್ಥವಾಗಿದೆ. ಪ್ರಗತಿ ಶೀಲತೆ—ಸಮಾಜವಾದ—ಬಡತನ ನಿವಾರಣೆಯ ಗುರಿಯನ್ನು ತಾನೇ ಗುತ್ತಿಗೆಗೆ ಕೊಂಡ ಶ್ರೀ ಅರಸುರವರು ಹಲವು ಮಹತ್ವದ ನಿರ್ಧಾರಗಳನ್ನು ಮಾಡಿ ತಮ್ಮ ಎದೆಗಾರಿಕೆ ಪ್ರದರ್ಶಿಸಿದ್ದಾರೆ. ಅವರು ಮೊದಲಿಗೆ ಪಕ್ಷದ ಸರ್ವಾಧಿಕಾರವನ್ನು ತನ್ನ ಮುಷ್ಟಿಯಲ್ಲಿ ಅದುಮಿಕೊಂಡರು; ಎಲ್ಲರನ್ನೂ ಜಾಲದಲ್ಲಿ ಹಿಡಿದಿಟ್ಟರು. ಇನ್ನು ಯಾರಾದರೂ ಅವರ ನಿರ್ಣಯವನ್ನು ಒಪ್ಪದೆ ಹೋದರೆ, ಅವನು ಸಮಾಜವಾದಿಯಾಗುವುದಿಲ್ಲ; ಪ್ರಗತಿಶೀಲನಾಗುವುದಿಲ್ಲ. ಆಳುವ ಕಾಂಗ್ರೆಸ್ಸಿನ ಬ್ರಾಂಡು ಹಚ್ಚಿಕೊಂಡರೆ ಮಾತ್ರವೇ ಸಮಾಜವಾದಿ, ಪ್ರಗತಿಶೀಲನೆಂಬ ಮಾನಸಿಕ ಭ್ರಮೆ ಎಲ್ಲೆಲ್ಲೂ.

ಶ್ರೀ ಅರಸು ಚಾಣಕ್ಯರು, ಚಾಕಚಕ್ಯತೆಯುಳ್ಳವರು. ಅವರು ವಿಧಾನ ಸಭೆಗೆ ಸ್ಪರ್ಧಿಸದೇನೇ ಮುಖ್ಯಮಂತ್ರಿಯಾದವರು. ಬೇಡಿಕೆಗಳೆಲ್ಲವನ್ನೂ ತೊತ್ತಳದುಳಿದು ವಿಧಾನ ಪರಿಷತ್ತಿನಿಂದ ಯಾರೊಬ್ಬರನ್ನೂ ಸಚಿವರಾಗಿ ನೇಮಿಸದೆ ಹೋದರು. ಪ್ರಬಲ ವಿರೋಧಾಗ್ನಿ ಎದೆಯೊಳಗೆ ಹೊಗೆಯಾಡುತ್ತಿದ್ದರೂ ೧೦ ಸ್ಟಾಂಡರ್ಡ್ ಎಕ್ರೆಗಳನ್ನು ಗರಿಷ್ಠ ಭೂಹಿಡುವಳಿಯೆಂದೂ ಲಕ್ಷ ರೂಪಾಯಿಗಳು ನಗರವಾಸ್ತಿ ಮಿತಿಯೆಂದೂ ಪಕ್ಷವನ್ನು ಒಪ್ಪಿಸಿದರು. ಅದೇ ರೀತಿ ರಾಜ್ಯದ ಹೆಸರು ಬದಲಾಯಿಸುವುದರ ಬಗ್ಗೆ ನಿರ್ಧಾರಾತ್ಮಕವಾಗಿ ಮಾಡಿದರು.

ಅದುದರಿಂದಲೇ ಇಂದು ಮತ್ತೆ ರಾಜ್ಯದ ಹೆಸರಿನ ಬಗೆಗೆ ವಾದವಿವಾದ ಆರಂಭವಾಗಿದೆ. ಮೈಸೂರನ್ನು ಉಳಿಸಿಕೊಳ್ಳುವುದು ಮತ್ತರಾಂ ಸಾಧ್ಯವಿಲ್ಲವೆಂಬುದನ್ನು ಈ ವಾದಿಗಳು ಸೂಚಿಸುವುದು ಸಂತೋಷ. ಪ್ರಸಿದ್ಧ ಕವಿ ಶ್ರೀ ಡಿವಿಜಿಯವರು ಮೈಸೂರು—ಕರ್ನಾಟಕವೆರಡನ್ನೂ ಇಟ್ಟುಕೊಳ್ಳುವುದು ಸೂಕ್ತವೆಂದಿದ್ದಾರೆ. ಶ್ರೀ ಕುವೆಂಪುರವರ ಒಲವು ಕರ್ನಾಟಕದ ಮೇಲೆ. ಇನ್ನು ಕನ್ನಡ, ಕನ್ನಡನಾಡುಗಳ ಪ್ರತಿಪಾದಕರೂ ಇದ್ದಾರೆ. ಅವರ ಮೇಲೆ ಕರ್ನಾಟಕ-ಕರ್ಣಾಟಕಗಳ ವಿರಾವಣ-ಮೈರಾವಣ ಕಾಳಗ ಇನ್ನೊಮ್ಮೆ ಆರಂಭವಾಗಿದೆ. ಶ್ರೀಯವರ ಕಾಲದಲ್ಲಿ ಈ ಬಗ್ಗೆ ಸಾಕಷ್ಟು ಹೊಡೆದಾಟ ನಡೆದದ್ದು ಮರೆಯಿಸಿ ಹೋಗಿರಬೇಕು. ಅಂದಿನ ಚರ್ಚೆಯ ಸಾರವನ್ನು ಹೀರಿಯೋ 'ಸಂಯುಕ್ತ ಕರ್ನಾಟಕ' ತನ್ನ ಹೆಸರನ್ನು ಉಳಿಸಿಕೊಂಡಿತೆನ್ನಬಹುದೋ ಏನೋ!

ಹೆಸರಿನ ಸಂಬಂಧದ ಮಸೂದೆ ವಿಧಾನ ಮಂಡಳಗಳ ಮುಂದಿನ ಅಧಿವೇಶನದಲ್ಲಿ ಬರಬಹುದು. ಅಂದರೆ, ಇನ್ನೂ ಒಂದು ತಿಂಗಳ ಕಾಲಾವಕಾಶವಿದೆ. ಅದುವರೆಗೆ ಈ ಸಂಬಂಧ ಎಷ್ಟಾದರೂ ವಾದ ಮುಂದುವರಿಸಬಹುದು. ಆದರೆ, ಒಂದು ಮಾತು ನಿಜ, ಕರ್ನಾಟಕ-ಕರ್ಣಾಟಕಗಳೆರಡನ್ನೂ ಇಂಗ್ಲಿಷ್ ಭಾಷೆಯಲ್ಲಿ ಒಂದೇ ರೀತಿ ಬರೆಯುತ್ತಾರೆ. ಕನ್ನಡಿಗರ ನಾಲಗೆಗೆ ಕರ್ನಾಟಕ ಹಿಡಿಸಿದಷ್ಟು ಕರ್ಣಾಟಕ ಹಿಡಿಸುವುದಿಲ್ಲ. ಕನ್ನಡವೆಂಬುದನ್ನೇ ಕರ್ನಾಟ(ಕ)ದ ತದ್ಭವವೆನ್ನುವಷ್ಟು ಸಂಸ್ಕೃತ ಭಾಷಾಭಿಮಾನಿಗಳು ಇನ್ನೂ ಉಳಿದಿದ್ದು ಕರ್ಣಾಟಕದ ಪರವಾಗಿ ವರಸೆಗೆ ಬರುತ್ತಿದ್ದರೆ, ಕನ್ನಡಿಗರು ಅಂಧಕೂಪದಲ್ಲಿದ್ದಾರೆಂದೇ ಅರ್ಥ.

ಮುಖ್ಯ ಮಂತ್ರಿ ಅರಸು ಜನತೆಯ ಆಶೋತ್ತರಗಳನ್ನು ಅರಿತುಕೊಂಡು ಯೋಗ್ಯ ಹೆಸರನ್ನೇ ಆರಿಸಬೇಕು. ಕನ್ನಡ, ಕನ್ನಡನಾಡುಗಳಿಗಿಂತ ಕರ್ನಾಟಕವೇ ಸಮುಚಿತವಾದುದು — ಏಕೆಂದರೆ ಜನತೆಯ ನಾಲಗೆಯಲ್ಲಿ ಅದೆಂದೋ ನೆಲೆ ನಿಂತು ಬಿಟ್ಟಿದೆ. ಇದುವರೆಗೆ ಅನಧಿಕೃತವಾಗಿ ಬಳಸುತ್ತಿದ್ದ ಕರ್ನಾಟಕವೆಂಬ ಹೆಸರಿಗೆ ರಾಜಮನ್ನಣೆ ನೀಡಿದ ಕೀರ್ತಿ ಶ್ರೀ ಅರಸು ಅವರಿಗೆ ಸಲ್ಲಬೇಕು. ●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸರ್ವಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಆತ್ಮೋಪಮಾನ ದೃಷ್ಟಿಯ ಅಭಾವ.

ತಮ್ಮ ವಯಸ್ಸಿನಲ್ಲಿ ತಾವು ಮಾಡಿರುವುದನ್ನು, ಮಗ ಅರಿಕೇಸರಿ ಈಗ ಮಾಡಹೊರಟಿದ್ದಾನೆ.

ಅವನ ವಯಸ್ಸು ಅವನನ್ನು ಈ ಕೆಲಸಕ್ಕೆ ಪ್ರೇರೇಪಿಸಿತು.

ಅವನದಾದರೂ ಏನು ತಪ್ಪು?

ಸುಖದ ಸಂಸ್ಮರಣೆಯಿಂದ ಅವರ ಮುಖ ಅರಳಿತು.

ಅಷ್ಟರಲ್ಲಿ ಸ್ನಾನ ಮುಗಿಸಿ ಅರಿಕೇಸರಿ–ಲೋಕಾಂಬಿಕೆ, ಜಗಲಿಯಲ್ಲಿ ಬಂದು ಮಂಡಿಸಿದ್ದರು. ಯೋಚನೆಯಲ್ಲಿ ಕಳೆದ ಕಾಲದ ಅರಿವು ಅವರಿಗಾದುದು ಆಗಲೇ.

'ಕುಮಾರಾ, ನಿಮ್ಮಿಬ್ಬರ ಊಟ ಆಯಿತಾ?'

'ಅದರ ಚಿಂತೆಯೇ ನಮಗಿಲ್ಲ, ಅಪ್ಪಾಜಿ; ನಿಮ್ಮನ್ನು ಕಾಣಲೆಂದೇ ನಾವಿಲ್ಲಿಗೆ ಬಂದುದು. ಮೊದಲು ಆ ವಿಚಾರ. ಆನಂತರ ಊಟ.'

'ಬಂದ ವಿಚಾರ—? ಅದನ್ನು ಆಗಲೇ ಗ್ರಹಿಸಿದೆ. ಅದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಮೊದಲು ಊಟ ಮುಗಿಸಿ ಬನ್ನಿ. ಅನಂತರ ವಿಷಯದ ಚರ್ಚೆ. ನಿನ್ನದು ಹೇಗೂ ನಡೆಯುತ್ತೆ. ಆದರೆ ಅರಮನೆಯಲ್ಲಿ ಹೂವಿನಂತೆ ಬೆಳೆದ ಇವಳು ಇದನ್ನೆಲ್ಲಾ ಹೇಗೆ ಸಹಿಸುತ್ತಾಳೆ? ಅವಳ ಹೊಟ್ಟೆ ಚುರುಗುಟ್ಟುತ್ತಿರಬೇಕು. ಹೇಳಲು ದಾಕ್ಷಿಣ್ಯ. ನಿನ್ನ ದೆಸೆಯಿಂದ ಅವಳಿಗೂ ತೊಂದರೆ.'

ಮಾತು ನಿಲ್ಲಿಸಿ ಅವರು ಅವಳತ್ತ ನೋಡಿದರು.

ಲೋಕಾ ಈ ಮಾತಿನಿಂದ ಸಂಕೋಚಗೊಂಡಳು. ನಾಚುಗೆಯಿಂದ ಮುದುಡಿ ಹೋದಳು. ಮರುಮಾತಿಲ್ಲದೆ ಅವರಿಬ್ಬರು ಅಲ್ಲಿಂದ ಊಟದ ಮನೆಗೆ ನಡೆದರು.

ಊಟದ ಮನೆ ಸ್ವಚ್ಛವಾಗಿತ್ತು. ನೆಲಕ್ಕೆ ಕೆಮ್ಮಣ್ಣಿನ ಸಾರಣೆ. ಗೋಡೆಗೆ ಸುಣ್ಣ ಬಳಿದಿತ್ತು. ಅಲ್ಲಿದ್ದುದು ನಾಲ್ಕಾರು ಮಣ್ಣಿನ ಪಾತ್ರೆಗಳು. ಅದು ಅಡುಗೆಯ ಮನೆ ಮಾತ್ರವಲ್ಲ; ಅಡುಗೆ, ಊಟ—ಎರಡಕ್ಕೂ ಬಳಸುತಿದ್ದರು. ಶ್ರೀಮಂತಿಕೆಯ ಕುರುಹೇ ಅಲ್ಲಿ ಕಾಣಿಸಲಿಲ್ಲ. ಆದರೆ ಶುಭ್ರತೆಗೆ ಕೊರತೆ ಇರಲಿಲ್ಲ.

ಕೋಣೆಯ ಮೂಲೆಯಲ್ಲಿ ಒಪ್ಪವಾಗಿ ಮಡಚಿಟ್ಟ ಚಾಪೆಯ ಸುರುಳಿಯನ್ನು ಅರಿಕೇಸರಿ ಕೈಗೆತ್ತಿಕೊಂಡು, ಅದನ್ನು ಬಿಡಿಸಿ ನೆಲದ ಮೇಲೆ ಹಾಸಿದ. ಒಲೆಯ ಮೇಲೆ ಇಟ್ಟಿದ್ದ ಮಣ್ಣಿನ ಮಡಕೆಯನ್ನು ಚಾಪೆಯ ಮುಂದು ತಂದಿಟ್ಟ.

ಕೋಣೆಯ ಸೂರಿಗೆ ಸಿಕ್ಕಿಸಿದ್ದ ಬಾಳೆ ಎಲೆಯ ಸುರುಳಿಯಿಂದ ಎರಡನ್ನು ಎತ್ತಿಕೊಂಡು ಚಾಪೆಯ ಮುಂದು ಹಾಕಿದ. ಕೋಣೆಯ ಇನ್ನೊಂದು ಮೂಲೆಯಲ್ಲಿದ್ದ ಮಣ್ಣಿನ ಕುಂಭದಲ್ಲಿ ನೀರು ತುಂಬಿಟ್ಟಿದ್ದರು. ಅದರಿಂದಿಷ್ಟು ನೀರನ್ನು ಪುಟ್ಟ ಕುಡಿಕೆಗೆ ತುಂಬಿ ಕೊಂಡು ಎಲೆಗಳನ್ನು ತನ್ನ ಕೈಯಾರೆ ತೊಳೆದ.

ಇದಿರು—ಬದಿರು ಹಾಸಿದ್ದ ಎಲೆಗಳ ಮೇಲೆ ಮಡಿಕೆಯಲ್ಲಿದ್ದ ಅನ್ನ ಬಡಿಸಿದ. ಮಣ್ಣಿನ ಪುಟ್ಟ ಬಟ್ಟಲಲ್ಲಿ ಆರದಂತೆ ಮುಚ್ಚಿಟ್ಟ ಪಲ್ಯವನ್ನು ಎಲೆಗಳ ಮೇಲೆ ಹಾಕಿದ. ಎಲೆ ತುದಿಯಲ್ಲಿ ಉಪ್ಪು—ಉಪ್ಪಿನಕಾಯಿ.

ಲೋಕಾಂಬಿಕೆ ಅವಾಕ್ಕಾಗಿ ಇದನ್ನೆಲ್ಲಾ ನೋಡುತ್ತ ನಿಂತಿದ್ದಳು. ಆಕೆ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದವಳು. ಆಳು ಕಾಳುಗಳಿಂದ ಕೆಲಸ ಮಾಡಿಸಿಕೊಂಡವಳು. ಇವುಗಳ ರೂಢಿ ಇರಲಿಲ್ಲ. ಯಾವ ಅಳುಕೂ ಇಲ್ಲದೆ ನಿರಾಳವಾಗಿ ಅರಿಕೇಸರಿ ಮಾಡುತ್ತಿದ್ದ ಪ್ರತಿಯೊಂದು ಕೆಲಸವನ್ನೂ ಆಕೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ನಿಂತಳು.

ನಿಂತೇ ಇದ್ದ ಅವಳನ್ನು ಅರಿಕೇಸರಿ 'ರಾಣೀ ಸಾಹೇಬರು ಈ ಮೆಲ್ಹಾಸಿನ ಮೇಲೆ ಕುಳಿತು ಆರಾಮಾಗಿ ಭೋಜನ ಮಾಡಬೇಕು' ಎಂದು ನಾಟಕೀಯವಾಗಿ ಮಾತನಾಡಿಸಿ ಮುಂದಿದ್ದ ಎಲೆಯತ್ತ ಕೈತೋರಿಸಿದ.

ಆಕೆ ಎಲೆಯ ಮುಂದೆ ಕುಳಿತು, ಅನ್ನಕ್ಕೆ ಕೈಯಿಕ್ಕಿದಳು.

'ದಯವಿಟ್ಟು ಕ್ಷಮಿಸಿ, ಅವಸರದಲ್ಲಿ ತುಪ್ಪ ಬಡಿಸಲು ಮರೆತೇ ಹೋಯಿತು' ಎಂದು ಕುಳಿತಲ್ಲಿಂದೆದ್ದು, ಒಲೆಯ ಮೇಲಿನ ಹೊಗೆ ಹಲಗೆಯಲ್ಲಿಟ್ಟ ತುಪ್ಪದ ಭರಣಿಯಿಂದ ಎರಡು ಎಲೆಗಳಿಗೂ ತುಪ್ಪ ಬಡಿಸ ಹೊರಟ. ಆಕೆ ಬೇಡವೆಂದು ಕೈ ಮುಂದು ಮಾಡುವುದಕ್ಕೂ ಭರಣಿಯಲ್ಲಿನ ತುಪ್ಪ ಬೀಳುವುದಕ್ಕೂ ತಾಳಿಯಾಯಿತು. ಬಡಿಸಿದ ತುಪ್ಪ ಅವಳ ಕೈಗೆ ಬಿತ್ತು.

ಸ್ವತಂತ್ರ ಐತಿಹಾಸಿಕ ಕಾದಂಬರಿ

"ಅಭ್ಯಾಸ ಇಲ್ಲದವರು ಕೆಲಸ ಮಾಡ ಹೊರಟರೆ ಆಗುವುದು ಇದೇ"

—ಆಕೆ ಕೊರಳು ಕೊಂಕಿಸಿ ನುಡಿದ ಕೊಂಕು ಮಾತು—

'ತಿಳಿದವರು ಅದನ್ನು ಮೊದಲು ಮಾಡಿತೋರಿಸ ಬೇಕು—ಹಾಗೆ ಮಾಡದೆ ತಪ್ಪಿಗೆ ನಿಂತರೆ ನಾವಾದರೂ ಮುಂದಾಗ ಬೇಕಲ್ಲ'

'ಅದರಿಂದ ನಷ್ಟವೇ ಹೊರತು ಲಾಭವಿಲ್ಲ. ತುಪ್ಪ ಚೆಲ್ಲಿ ಹೋಯಿತು. ಇನ್ನು ಕೈಯ ಜಿಡ್ಡು ತೊಳೆಯಲು ಇನ್ನು ಖಂಡುಗ ಸೀಗೆ ಪುಡಿ ಬೇಕೆ ಬೇಕು'

'ಈ ಕಾಡಿನಲ್ಲಿ ಸೀಗೆಗೇನು ಬರಗಾಲವೇ? ಅದಕ್ಕಾಗಿ ಚಿಂತಿಸುವ ಅಗತ್ಯವಿಲ್ಲ.'

'ಆದರೂ ಆಗುವ ನಷ್ಟ.'

'ಆಗಲೇ ಶೆಟ್ಟರ ಲೆಕ್ಕಾಚಾರಕ್ಕೆ ಇಳಿದೆಯೊ'

'ಮಾಡುವ ಹೊತ್ತು ಬಂದಿದೆ. ಈಗಲ್ಲದೆ ಇನ್ನೆಂದು ಅವುಗಳ ಯೋಚನೆ ಮಾಡುವುದು.'

'ನಾಳಿನ ಯೋಚನೆಯನ್ನು ನಾಳೆಗೇ ಬಿಡುವುದು ಒಳ್ಳೆಯದಲ್ಲವೇ ದೇವಿ.'

'ನಿಮಗೆ ಗಂಡಸರಿಗೆ ಅದು ಬಹು ಸುಲಭ. ನಾವು ಹೆಣ್ಣು ಮಕ್ಕಳು ಹಾಗಿರಲು ಸಾಧ್ಯವೇ? ನಾಳೆ ಎನ್ನುವದರೊಳಗೆ ಮಕ್ಕಳು ಬೆಳೆದು ದೊಡ್ಡವರಾಗುತ್ತಾರೆ. ಅವರ ಶಿಕ್ಷಣ, ಮದುವೆ ಮುಂಜಿ, ಇವಕ್ಕೆ ನೀರಿನಂತೆ ಹಣ ಸುರಿಯಬೇಕು. ಈಗ ಕೂಡಿಟ್ಟರೆ ನಾಳಿನ ಖರ್ಚಿಗೆ ದೊರಕುತ್ತೆ.'

'ಆಗಲೇ ಸಂಸಾರದ ಹೊರೆಯನ್ನು ತಲೆಯಲ್ಲಿ ತುಂಬಿಕೊಂಡಂತೆ ಕಾಣುತ್ತದೆ.'

'ಎಂದಾದರೊಂದು ದಿನ ತುಂಬಿಕೊಳ್ಳ ಬೇಕಾದ ವಿಷಯ'

'ಅದಕ್ಕೇಕೆ ಇಷ್ಟು ಆತುರ?'

'ಆ ಜವಾಬ್ದಾರಿ ಹೇಳಿ ಕೇಳಿ ಬರುತ್ತದೆಯೇ? ಬರುವುದಕ್ಕೂ ಮೊದಲು ಅದಕ್ಕೆ ಅಣಿಯಾಗುವುದು ಒಳ್ಳೆಯದು'

'ಆ ಸ್ಥಾನ ಲಭಿಸೀತು. ಆ ಜಾಗಕ್ಕೆ ಹೋಗಲೇ ಬೇಕೆಂದು ತೀರ್ಮಾನಿಸಿದಂತೆ ಕಾಣುತ್ತದೆ.'

'ಹೋಗುವುದೇನು ಬಂತು? ಹುಟ್ಟಿನೊಡನೆ ಕಟ್ಟು ಬಿದ್ದ ಪ್ರಾಪ್ತ ಕರ್ಮ. ಹೆಣ್ಣಾಗಿ ಹುಟ್ಟಿಯೂ ಈ ಹೊಣೆಯರಿಯದಿರುವುದು ಹೇಗೆ?'

'ಇಷ್ಟು ತಿಳಿದ ಹೆಣ್ಣಿನ ಕೈ ಹಿಡಿಯುವವ ಪುಣ್ಯಶಾಲಿ'

'ಥೂ! ನಿಮ್ಮ.'

ಅವಳ ಮಾತು ಅರ್ಧಕ್ಕೇ ನಿಂತಿತು.

ಹೀಗೆ ಮಾತು ನಡೆಯುತ್ತಿತ್ತು. ಎಲೆಯಲ್ಲಿದ್ದ ಅನ್ನ ಖಾಲಿಯಾಗುತಿತ್ತು. ಅವಳ ಮುಂದಿದ್ದ ಎಲೆ ಖಾಲಿಯಾಗುತಿದ್ದುದನ್ನು ಗಮನಿಸಿ ಅರಿಕೇಸರಿ ಸೌಟಿನಲ್ಲಿ ಒಂದಿಷ್ಟು ಅನ್ನ ಬಡಿಸಿ, ತಾನೂ ಬಡಿಸಿಕೊಂಡ. ಅನಂತರ ಎರಡು ಎಲೆಗಳಿಗೂ ಕೆನೆ ಮೊಸರು ಸುರವಿದ. ಅದು ಅರಮನೆಯಲ್ಲುಣ್ಣುವ ಪಕ್ವಾನ್ನಕ್ಕಿಂತಲೂ ರುಚಿಯಾಗಿತ್ತು, ಹಿತವಾಗಿತ್ತು. ಇಬ್ಬರೂ ಊಟ ಮುಗಿಸಿ ಮೇಲೆದ್ದರು. ಆತ ಮೊಗೆಯಲ್ಲಿದ್ದ ನೀರಿನಲ್ಲಿ ಕೈ ಬಾಯಿ ತೊಳೆದುಕೊಂಡ.

ಆಕೆ ಬಾಗಿ ಎಂಜಲೆಲೆಯನ್ನು ಕೈಗೆತ್ತಿಕೊಂಡು, ಅಂಗಳದಂಚಿನ ಕೊಟ್ಟಿಗೆಯತ್ತ ಒಗೆದು ಕೈತೊಳೆದುಕೊಂಡಳು.

"ನಿಮಗೆ ಬಡಿಸ ಬರುತ್ತೆ; ಉಣ ಬರುತ್ತೆ; ಆದರೆ ಉಂಡ ಎಂಜಲೆಲೆಯನ್ನು ಎಸೆಗೆಸೆಯ ಬೇಕೆಂಬುದೇ ಹೊಳೆಯಲಿಲ್ಲ'ವೆಂದು ಮೂದಲಿಸಿದಳು.

ಮಾತಿನ ಹಿಂದೆ ಹುದುಗಿದ್ದ ನವುರಾದ ಹಾಸ್ಯವನ್ನು ಗುರುತಿಸಿ "ಈಗ ನಿನ್ನ ಸರದಿ" ಎಂದು ಅರಿಕೇಸರಿ ಸುಮ್ಮನಾದ.

ಊಟ ಮುಗಿಸಿ ಅವರಿಬ್ಬರು ಹೊರ ಬರುವುದನ್ನೇ ಚಾಳುಕ್ಯ ನರಸಿಂಹ ಕಾದು ಕುಳಿತಂತಿತ್ತು. ಅವರು ಹೊರ ಬರುವ ತನಕವೂ ಅವರ ದೃಷ್ಟಿ ಮುಂದಿದ್ದ ತಾಳೆಗರಿ ಗ್ರಂಥದ ಮೇಲಿತ್ತು. ಅವರು ಬಂದುದೇ ತಡ, ದೃಷ್ಟಿಯನ್ನಲ್ಲಿಂದ ತೆಗೆದರು. ಗ್ರಂಥವನ್ನು ಮುಚ್ಚಿಟ್ಟರು. 'ಈ ಸುಕುಮಾರಿಗೆ ಅಡುಗೆ ರುಚಿಸಿತೋ ಇಲ್ಲವೋ. ಮಲಗುವ ಮನೆಯಲ್ಲಿ ಮಾಗಿದ ರಸಬಾಳೆಯ ಹಣ್ಣಿದೆ. ತಂದು ಕೊಡು. ಅದನ್ನು ತಿಂದು ಹಾಲು ಕುಡಿದು ಹಾಯಾಗಿ ಮಲಗಿಕೊಳ್ಳಿ'

"ಅಡುಗೆ ತುಂಬ ರುಚಿಯಾಗಿತ್ತು, ನನಗಾವುದೂ ಬೇಕಾಗಿಲ್ಲ. ಹೊಟ್ಟೆ ತುಂಬ ಉಂಡೆ". ಹಿರಿಯರಾದವರಿಂದ ಈ ರೀತಿ ಉಪಚರಿಸಿಕೊಳ್ಳಲು ಇಷ್ಟವಿಲ್ಲದೆ ಲೋಕಾಂಬಿಕೆ ಮಾತು ತೇಲಿಸಿದಳು.

"ರುಚಿಯಾಗಿದ್ದುದು ಅಡುಗೆಯಲ್ಲ ಮಗಳೇ! ಹಸಿದ ಒಡಲಿಗೆ ಹಾಗೆ ಕಂಡಿರಬೇಕು. ಇಲ್ಲವಾದರೆ ಈ ಸೊಪ್ಪಿನ ಅಡುಗೆಯಲ್ಲೇನಿದೆ?"

ಈ ಮಾತನ್ನಾಡುವಾಗ ಅವರಿಗೂ ಹಿಂದಿನ ನೆನಪಾಗದೆ ಇರಲಿಲ್ಲ.

ತಮ್ಮ ತಾರುಣ್ಯದಲ್ಲಿ ಯುದ್ಧದ ದಿನಗಳಲ್ಲಿ ಅವರೂ ನಿಂತೇ ಉಂಡುದುಂಟು. ಹಾಯಾಗಿ ಉಣ್ಣಲೂ ಬಿಡುವಿಲ್ಲದ ಕಾಲವದು. ತಾಟಿಗೆ ಬಡಿಸಿದ ಗೊಡ್ಡು ಸಾರನ್ನೋ, ಅರ್ಧ ಬೆಂದ ಸೊಪ್ಪಿನ ಪಲ್ಯವನ್ನೋ, ಗಬಗಬನೆ

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 37

ಸಂಸ್ಥಾಪಕರು:
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ರಾಜ್ಯ ವಿಧಾನ ಮಂಡಲಗಳ ಜೂನ್ ತಿಂಗಳ ಅಧಿವೇಶನ

ಗೇಣಿ ಬಾಕಿಯಿರಿಸಿಕೊಂಡಿರುವ ಗೇಣಿದಾರರು ಎರಡು ವರ್ಷಗಳ ಬಾಕಿಯನ್ನು ಸಂದಾಯ ಮಾಡಿದರೆ ಅವರನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸುವ ಬಗ್ಗೆ ರಾಜ್ಯದಲ್ಲೀಗ ಸುಗ್ರೀವಾಜ್ಞೆ ಹೊರಟಿದೆ. ಈ ಸಂಬಂಧದ ಮಸೂದೆ ವಿಧಾನ ಸಭೆಯಲ್ಲಿ ಮಂಜೂರಾದರೂ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಯೊಂದು ಮಂಜೂರಾದುದನ್ನು, ತಿದ್ದುಪಡಿ ಸಮೇತ ಮಸೂದೆಯನ್ನು ಸರಕಾರ ಒಪ್ಪಿಕೊಳ್ಳದೆ ಇದ್ದುದನ್ನೂ ನೆನೆಸಿಕೊಳ್ಳಬಹುದು. ಶ್ರೀಮತಿ ಇಂದಿರಾ ಗಾಂಧಿಯವರು ರಾಜಧನ ರದ್ಧತಿಯ ಬಗ್ಗೆ ಅನುಸರಿಸಿದ ನೀತಿಯಂತೆಯೇ ಶ್ರೀ ದೇವರಾಜ ಅರಸರೂ ಸುಗ್ರೀವಾಜ್ಞೆಯ ಮೂಲಕ ತನ್ನ ಉದ್ದೇಶವನ್ನು ಈಡೇರಿಸಿಕೊಂಡರು. ಶ್ರೀ ಅರಸರು ಒಕ್ಕಲುಗಳಿಗೆ ರಕ್ಷಣೆ ಒದಗಿಸುವಲ್ಲಿ ಸಮಗ್ರ ಭೂಶಾಸನ ಜ್ಯಾರಿಗೆ ಬರುವ ವರೆಗೆ ಕಾಯಲಾರರೆಂದು ಅಂದೇ ನಂಬಲಾಗಿತ್ತು. ಆದರೆ, ಅವರು ತತ್‌ಕ್ಷಣ ತುರ್ತುಕ್ರಮ ಕೈಕೊಳ್ಳದಿರುವುದನ್ನು ಕಂಡು ತುಸು ಸಂದೇಹವೂ ಆಯ್ತು. ಸುಗ್ರೀವಾಜ್ಞೆ ಹೊರಡಿಸುವವರು ಇಷ್ಟು ದಿನ ತಳುವಿದ್ದೇಕೆಂಬುದು ನಿಜಕ್ಕೂ ಅರ್ಥಗರ್ಭಿತವಾಗಿದೆ. ಒಕ್ಕಲೆಬ್ಬಿಸುವುದಕ್ಕೆ ಭೂಮಾಲಿಕರಿಗೆ ನೀಡಿದ ಮಧ್ಯಾವಧಿಯೇ ಇದು ಎನ್ನುವಂತಾಗಿದೆ.

ವಿಧಾನ ಮಂಡಳಗಳ ಅಧಿವೇಶನ ಮುಂದಿನ ತಿಂಗಳು ಸೇರಲಿದೆ. ಈ ಅಧಿವೇಶನವು ರಾಜ್ಯದ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲೆಂದು ಹೇಳಬೇಕು. ಹಲವಾರು ಅತ್ಯವಶ್ಯವೆನಿಸಿದ, ಸಮಾಜವಾದಿ—ಪ್ರಗತಿಶೀಲವಾದ ಮಸೂದೆಗಳು ಈ ಅಧಿವೇಶನದ ಮುಂದೆ ಬರಲಿವೆ. ಇವುಗಳಲ್ಲಿ ಸಮಗ್ರ ಭೂಮಸೂದೆಯು ಒಂದು. ಆಳುವ ಕಾಂಗ್ರೆಸ್ಸಿನಲ್ಲೇ ಗರಿಷ್ಠ ಭೂಮಿತಿಯ ಸಂಬಂಧದಲ್ಲಿ ತೀವ್ರ ಭಿನ್ನಾಭಿಪ್ರಾಯ ಮೂಡಿ, ಮಿತಿ ಗೊತ್ತುಪಡಿಸಲು ಸಮಿತಿಯೊಂದನ್ನು ಏರ್ಪಡಿಸಬೇಕಾಯ್ತು. ರಾಜ್ಯದ ಆಳುವ ಕಾಂಗ್ರೆಸ್ಸಿನಲ್ಲೂ ೧೦ ಎಕ್ರೆಗಳ ಮಿತಿಗೆ ಸರ್ವ ಸಮ್ಮತಿ ದೊರೆತಿದೆಯಾದರೂ ಅದು ಹೃದಯದ ಒಪ್ಪಿಗೆಯಿಂದಲ್ಲ. ‘ಉಳುವವನೇ ಹೊಲದೊಡೆಯ’ನೆಂಬ ಧ್ಯೇಯ ವಾಕ್ಯವನ್ನು ಜ್ಯಾರಿಗೊಳಿಸಲು ದೃಢನಿಶ್ಚಯ ಮಾಡಿದ ಸರಕಾರ ಧನಿಗೂ-ರೈತನಿಗೂ ಯಾವ ಸಂಬಂಧವೂ ಇಲ್ಲದಂತೆ ಮಾಡಲು ಬದ್ಧಕಂಕಣವಾಗಿದೆ. ಇದನ್ನು ರಾಜ್ಯದ ಕಂದಾಯ ಸಚಿವರು ಸ್ಪಷ್ಟಪಡಿಸಿದ್ದಾರೆ. ಆದರೆ, ರೈತವರ್ಗಕ್ಕೆ ಸಂರಕ್ಷಣೆಯೊದಗಿಸುವಾಗ ಚಿಕ್ಕಸುಟ್ಟ ಹಿಡುವಳಿದಾರರಿಗೆ ಅನ್ಯಾಯವಾಗದಂತೆ ಎಚ್ಚರಿಕೆ ಅವಶ್ಯ. ಮುಖ್ಯಮಂತ್ರಿಯವರ ಉದ್ದೇಶಿಸಿದ ಇತರ ಮೂಲಗಳಿಂದ ಪ್ರಮುಖಾದಾಯ ಪಡೆಯುವವರನ್ನು ಭೂಮಿ ಹೊಂದುವ ಅಧಿಕಾರದಿಂದ ವಂಚಿತಗೊಳಿಸುವುದೂ ಕ್ರಾಂತಿಕಾರಿಯಾಗಿದೆ. ಆದರೆ, ‘ಪ್ರಮುಖಾದಾಯ’ದ ಬಗ್ಗೆ ವಿವರಣೆ ಏನು? ದೇಶದಲ್ಲಿ ಸೇ. ೯೦ರಷ್ಟು ಜನರು ಎರಡು ಹೊತ್ತು ಉಣ್ಣುವುದೂ ದುಸ್ತರವಾಗಿರುವಾಗ ಗಳಿಕೆಯನ್ನು ಹಂಚಿಕೊಳ್ಳಲು ಈ ನೀತಿ ಅನುಕೂಲವಾಗಬಹುದು. ಆದರೆ, ಇತರ ಮೂಲಗಳ ಆದಾಯಕ್ಕೂ ಮಿತಿ ಹೇರದೆ ಹೋದರೆ, ಇದರಿಂದ ಅನೇಕರಿಗೆ ಅನೇಕ ರೀತಿಯ ತೊಂದರೆಗಳಾಗುವುದು ಖಂಡಿತ. ನಗರಾಸ್ತಿಗಳ ಮಿತಿಯ ಸಂಬಂಧದಲ್ಲೂ ಇದೇ ಪ್ರಶ್ನೆ ಉದ್ಭವಿಸುತ್ತದೆ. ಇವೆಲ್ಲ ಕೂಲಂಕುಷ ಪರಿಶೀಲನೆ-ದೂರಾಲೋಚನೆಯ ಬಳಿಕವೇ ನಿರ್ಣಯಕ್ಕೆ ಬರಬೇಕಾದ ಅಂಶಗಳು. ಆದುದರಿಂದ ಸಮಾಜವಾದದ ಗುಂಗಿನಲ್ಲಿ ಏನೇನೋ ಮಾಡ ಹೋಗಿ ಪರಿಸ್ಥಿತಿಯನ್ನು ಸಂಪೂರ್ಣ ಕೆಡಿಸುವುದಕ್ಕೆ ಸರಕಾರ ಕೈಹಾಕಬಾರದು. ಸಮಾಜವಾದ–ಪ್ರಗತಿಶೀಲತೆಯ ಜಪಬಲದಿಂದಲೇ ಅಧಿಕಾರಕ್ಕೆ ಬಂದ ಆಳುವ ಪಕ್ಷ ಸಮಸ್ಯಾ ಪರಿಹಾರಕ್ಕೆ ಹೋಗಿ ಹೊಸ ಸಮಸ್ಯೆಗಳನ್ನು ಸೃಷ್ಟಿಮಾಡಬಾರದು. ಶ್ರೀ ದೇವರಾಜ ಅರಸರೂ ಅವರ ಸಹೋದ್ಯೋಗಿಗಳೂ ಈ ನಿಟ್ಟಿನಲ್ಲಿ ಸರಿಯಾದ ಹೆಜ್ಜೆಯಿಡುವರೆಂದು ನಂಬುತ್ತೇವೆ.

ಮುಂದಿನ ಅಧಿವೇಶನದಲ್ಲಿ ಪೂರ್ಣಪ್ರಮಾಣದ ಮುಂಗಡ ಪತ್ರವನ್ನು ಸರಕಾರ ಮಂಡಿಸುತ್ತದೆ. ರಾಜ್ಯದ ಆರ್ಥಿಕ ಸ್ಥಿತಿಗತಿಗಳು ಏನೇನೂ ಚೆನ್ನಾಗಿಲ್ಲವೆಂಬುದೂ ರಿಜರ್ವ್ ಬ್ಯಾಂಕಿನಿಂದ ಪಡೆದ ಓವರ್‌ಡ್ರಾಫ್ಟ್‌ನ ಮೊತ್ತವು ಬೆಳೆದಿದೆಯೆಂಬುದೂ ಎಲ್ಲರಿಗೂ ಗೊತ್ತು. ಅದರ ಮೇಲೆ ಪಂಚವಾರ್ಷಿಕ ಯೋಜನೆಯನ್ನೂ ಮುಂದುವರಿಸಬೇಕು. ನಿರುದ್ಯೋಗ ನಿವಾರಣೆಗಾಗಿ ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸಬೇಕು. ಕೊಠಾರಿ ಆಯೋಗದ ವರದಿಯಂತೆ ಶಿಕ್ಷಣಕ್ಕಾಗಿ ಹೆಚ್ಚಿನ ಹಣ ವಿನಿಯೋಗಿಸಬೇಕು; ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಿಗೆಲ್ಲ ಶಿಕ್ಷಣ ಸೌಲಭ್ಯವೊದಗಿಸಬೇಕು–ಏರುತ್ತಿರುವ ಜೀವನ ವೆಚ್ಚವನ್ನು ಭರಿಸಲು ತನ್ನ ನೌಕರರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಬೇಕು–ಹೀಗೆ ಒಂದಲ್ಲ ನೂರು ವೆಚ್ಚದ ಖಾತೆಗಳು ಬರಿದೋ ಬರಿದಾಗಿ ಬಾಯಿ ತೆರೆದು ಕೊಂಡಿವೆ. ಕೇಂದ್ರ ಸರಕಾರವು ಭರವಸೆ ನೀಡಿದಷ್ಟು ನೆರವನ್ನು ಕಳೆದ ವರ್ಷ ನೀಡಿದ್ದಿಲ್ಲ. ಪಾಕ್–ಭಾರತ ಸಮರದಿಂದಾಗಿ ಕೇಂದ್ರದ ಬೊಕ್ಕಸವೂ ತೂತಾಗಿದೆ. ಆದ್ದರಿಂದಲೇ ಅಲ್ಲಿಂದ ಹೆಚ್ಚು ಸಹಾಯ ನಿರೀಕ್ಷಿಸುವುದು ಸಾಧ್ಯವಾಗದು. ಹಾಗಾಗಿ ರಾಜ್ಯ ಸರಕಾರವು ಹೆಚ್ಚಿನ ಸಂಪನ್ಮೂಲಗಳನ್ನು ಹುಡುಕುವುದು ಅನಿವಾರ್ಯವೇ ಆಗಿದೆ. ಅರ್ಥಮಂತ್ರಿ ಶ್ರೀ ಘೋರ್ಪಡೆಯವರು ನವದೆಹಲಿಗೆ ಹೋಗಿ ಮಾತುಕತೆ ನಡೆಸಿ ಬಂದಿದ್ದಾರೆ. ಈ ಮಾತುಕತೆಗಳೇ ರಾಜ್ಯದ ಬಜೆಟ್ಟಿನ ರೂಪರೇಖೆಗಳಾಗುತ್ತವೆ ಎಂಬುದರಲ್ಲಿ ಸಂದೇಹಪಡಬೇಕಾಗಿಲ್ಲ. ‘ಗರೀಬೀ ಹಟಾವೋ’ ಎನ್ನುವ ಸರಕಾರ ಹೆಚ್ಚಿನ ತೆರಿಗೆಗಳನ್ನು ಹೊರಿಸದಿರುವುದು ಅಸಾಧ್ಯ. ತೆರಿಗೆಗಳನ್ನು ವಿರೋಧಿಸುವುದೂ ನಾಗರಿಕರಿಗೆ ಸಲ್ಲದ ಕಾರ್ಯ. ಆದರೂ ಬಡಜನರು-ಮಧ್ಯಮ ವರ್ಗದವರ ಇತಿ-ಮಿತಿಗಳನ್ನು ಸರಕಾರ ಅರಿತುಕೊಳ್ಳಬೇಕು. ಈಗಾಗಲೇ ಬಾಗಿ ಬೆಂಡಾದ ಬಡವರನ್ನು ಮತ್ತೂ ಹಿಂಡಿ ಹಿಪ್ಪೆ ಮಾಡಿ ಬಿಸುಡಬಾರದು.

ಆದುದರಿಂದ ವಿಧಾನ ಮಂಡಳಗಳ ಮುಂದಿನ ಅಧಿವೇಶನದ ಮೇಲೆ ರಾಜ್ಯದ ಭವಿಷ್ಯದ ಸ್ಪಷ್ಟ ಸೂಚನೆಗಳಿವೆ. ಆಳುವ ಪಕ್ಷವು ಮತದಾರರಿಗೆ ನೀಡಿರುವ ವಾಗ್ದಾನಗಳನ್ನು ಎಷ್ಟರ ಮಟ್ಟಿಗೆ ಈಡೇರಿಸಲು ಮುಂದೆ ಬರುತ್ತದೆಂಬುದು ಇಲ್ಲಿ ವ್ಯಕ್ತವಾಗುತ್ತದೆ. ನುಡಿದಂತೆ ನಡೆದ ಕೀರ್ತಿ ಪ್ರಧಾನಿ ಇಂದಿರಾ ಗಾಂಧಿಗೆ ಇದೆ. ಅದೇ ಶ್ರೀ ದೇವರಾಜ ಅರಸರಿಗೂ ಬರಬೇಕು. ಮತದಾರರು ಅವರ ಪಕ್ಷದಲ್ಲೂ ಅವರಲ್ಲೂ ಇಟ್ಟಿರುವ ಬೆಟ್ಟದಷ್ಟು ವಿಶ್ವಾಸವನ್ನು ಬಿರುಗಾಳಿಯಲ್ಲಿ ಹಾರಿಹೋಗುವಂತೆ ಮಾಡಬಾರದು.

ವಿಯತ್ನಾಮದಲ್ಲಿ ಸ್ಫೋಟ

ಉತ್ತರ ವಿಯತ್ನಾಮದ ಬಂದರುಗಳನ್ನು ದಿಗ್ಬಂಧನಗೊಳಿಸುವ ಆಜ್ಞೆ ನೀಡಿದ ಅಧ್ಯಕ್ಷ ನಿಕ್ಸನ್ ಮೂರೇ ದಿನಗಳಲ್ಲಿ ಆ ಆಜ್ಞೆಯನ್ನು ಹಿಂದೆಗೆದುಕೊಂಡರು. ಅಲ್ಲಿನ ಕಾಂಗ್ರೆಸ್ಸಿನಲ್ಲಿ ಅವರ ಈ ಕ್ರಮಕ್ಕೆ ಬೆಂಬಲ ದೊರೆಯದಿದ್ದದ್ದು ಇದಕ್ಕೆ ಕಾರಣವೆ? ಅಥವಾ ರಷ್ಯದ ಗಂಭೀರ ಬೆದರಿಕೆಯು ನಿಕ್ಸನ್ನರ ನಿಲುವನ್ನು ಬದಲಿಸಿತೆ? ಅದೇನೇ ಇರಲಿ ನಿಕ್ಸನ್ ಉಗ್ರಾತಿಉಗ್ರ ಕ್ರಮವನ್ನು ಬಿಟ್ಟುಕೊಟ್ಟರೆಂಬುದು ತುಸು ನೆಮ್ಮದಿಯ ವಿಷಯ. ಆದರೆ, ಅಮೆರಿಕೆಯು ತನ್ನ ವಿಯತ್ನಾಮ ನೀತಿಯನ್ನು ಆಮೂಲಾಗ್ರ ಪರಿವರ್ತಿಸಬೇಕಾಗಿದೆ. ಅಲ್ಲಿ ಯುದ್ಧವನ್ನು ಕೊನೆಗೊಳಿಸಿ, ತನ್ನ ಸೈನ್ಯವನ್ನು ಸಂಪೂರ್ಣ ಮರಳಿಪಡೆಯಬೇಕಾಗಿದೆ. ಉಭಯ ವಿಯತ್ನಾಮಗಳ ನಡುವೆ ಮಾತುಕತೆ ಮುಂದುವರಿಯಲು ಸೂಕ್ತ ವಾತಾವರಣ ನಿರ್ಮಿಸಲು ಇನ್ನಾದರೂ ದಾರಿ ಸುಗಮ ಮಾಡಬೇಕು. ಇದುವರೆಗೆ ವಿಯತ್ನಾಮದಲ್ಲಿ ಅಮೆರಿಕೆ ಮಾಡುತ್ತಿದ್ದ ಜನಾಂಗ ಹತ್ಯೆಗೊಂದು ಪೂರ್ಣ ವಿರಾಮ ಹಾಕಬೇಕು. ಈ ಪ್ರದೇಶದಲ್ಲಿ ಪ್ರಶ್ನೆ ಮುಂದುವರಿಯುತ್ತಲೇ ಬಂದಿರುವುದು ವಿಶ್ವಶಾಂತಿಗೆ ಮಾರಕವಾಗಿದೆ. ವಿಯತ್ನಾಮದಲ್ಲಿ ತನ್ನ ಶಕ್ತಿ ಪ್ರದರ್ಶನಕ್ಕೆ ನಿಕ್ಸನ್ ಮುಂದುವರಿದರೆ ಅವರು ಮುಂದಿನ ಅಧ್ಯಕ್ಷ ಚುನಾವಣೆಯಲ್ಲಿ ಯಶಗಳಿಸಿದರೂ ಗಳಿಸಬಹುದು. ಆದರೆ, ವಿಶ್ವಶಾಂತಿಗೆ ಕಂಟಕವನ್ನೇ ಒಡ್ಡುತ್ತಾರೆಂಬುದು ನಿಸ್ಸಂಶಯ.

ಸೀಹಕಾಜ್ಯಪಕ್ಷಿ—

ವೈಮುರಿತ ಕಲಿಸುವ ವಿಶ್ವವಿದ್ಯಾಲಯ

'ಅಲ್ರಿ....'

'ಏನಲ್ಲ?'

'ನೋಡಿ, ಅಮೇರಿಕದ ಅಧ್ಯಕ್ಷರು....'

'ಹೌದು, ನಿಕ್ಸನ್ನರು....'

'ಉತ್ತರ ವಿಯತನಾಮದ ವಿರುದ್ಧ ಕಠಿನಾತಿಕಠಿನ ಕ್ರಮ ತೆಗೆದುಕೊಂಡರಂತೆ..'

'ಅಂತೆ ಏನೆ? ತೆಗೆದುಕೊಂಡರೂನ್ನು. ಅಲ್ಲಿನ ಬಂದರುಗಳಿಗೆ ದಿಗ್ಬಂಧನ ಹೇರಿದರು....'

"ಅಲ್ರಿ, ದಿಗ್ಬಂಧನ ಅಂದರೇನೂಂತ?"

'ಮತ್ತಿನ್ನೇನು? ಬಂದರದಲ್ಲಿ ಯಾವ ರೀತಿಯಿಂದಲೂ ಬೇರೆಯವರು ನುಸುಳದಂತೆ ಬಲವತ್ತರವಾದ ಕಾವಲೂನ್ನು....'

'ಯಾಕೇಂತ?'

'ಯಾಕೆ ಅಂದರೆ? ಹೊರಗಣಿಂದ ಶಸ್ತ್ರಾಸ್ತ್ರಗಳ ಸರಬರಾಜು ಆಗದಂತೆ ನೋಡಿಕೊಳ್ಳುವುದಕ್ಕಾಗಿ....'

'ಅಲ್ಲಾರಿ, ಶಸ್ತ್ರಾಸ್ತ್ರಗಳನ್ನು ಬಂದರುಗಳ ಮೂಲಕವೇ ರವಾನಿಸ್ತಾರೇನು?'

'ಯಾಕೆ?'

"ಅಲ್ರಿ, ವಿಮಾನಗಳ ಮೂಲಕ ತರಿಸಿಕೊಳ್ಳ ಬಾರದೇನು?"

"ಅದು ಬೇರೆ ಕತೆ."

'ಏಕೆ?'

'ಅಲ್ವೆ, ವಿಮಾನ ನಿಲ್ದಾಣಗಳನ್ನು ಸಮುದ್ರದಲ್ಲಿಳಿದು ದಿಗ್ಬಂಧನಗೊಳಿಸಲಾದೀತೆ?'

'ಹ್ಞಾಂ. ಅಂದರೆ, ನಿಕ್ಸನ್ನರು ವಿಯತನಾಮವನ್ನು ಹಣ್ಣುಗಾಯಿ-ನೀರುಗಾಯಿ ಮಾಡುತ್ತಾರನ್ನಿ....'

'ಏನು ಮಾಡೋದೆ? ವಿಯತನಾಮದಿಂದ ಕಂಬಿ ಕೀಳುತ್ತೇವೆಂದು ಹೇಳು ಹೇಳುತ್ತಲೇ ಅವರು ಸಮರವನ್ನು ತೀವ್ರಗೊಳಿಸುತ್ತಲೇ ಬಂದರು. ಆದರೆ ನೋಡು, ಅಮೇರಿಕದ ಸೆನೇಟು ನಿಕ್ಸನ್ನರ ಕ್ರಮಕ್ಕೆ ಸಮ್ಮತಿ ಕೊಡಲಿಲ್ಲವಂತೆ....'

'ಸಮ್ಮತಿ ಕೊಡೋದೇನು ಬಂತು? ಸಮರ ತೀವ್ರವಾಗೋದು ಆಗಿ ಹೋಯ್ತು ತಾನೆ?'

'ಅದು ಸರೀನ್ನು. ಇದೇ ರೀತಿ ಇನ್ನೂ ನಾಲ್ಕು ದಿನ ಮುಂದುವರಿದರೆ ಲೋಕ ಸಮರ ಸನ್ನಿಹಿತವಾದಂತೆ '

'ಅಲ್ಲಾರಿ, ನಿಕ್ಸನ್ನರು ಚೀನಾದೊಡನೆ ಬಾಂಧವ್ಯ ಬೆಳಸೋಕೆ ಹೋದರು. ರಶ್ಯದೊಡನೆಯೂ ಸಂಬಂಧನಕ್ಕೆ ಹೊರಟಿದ್ದಾರಂತೆ. ಹಾಗಿರುವಾಗ ಅವರ ಈ ಕ್ರಮಕ್ಕೆ ಅರ್ಥವೇನೂಂತ?'

'ಅರ್ಥ ಸ್ವಯಂ ನಿಕ್ಸನ್ನರಿಗೆ ಗೊತ್ತಿದ್ದರೆ ತಾನೇ ಉಳಿದವರಿಗೆ ತಿಳಿಯೋದು?'

'ನಮ್ಮ ಭಾರತ ಸರಕಾರ ಏನು ಹೇಳುತ್ತೆ?'

'ಅದು ಹೇಳೋದೇನು? ವಿಯತನಾಮ ಸಮಸ್ಯೆ ಉದ್ಭವವಾದಂದಿನಿಂದಲೂ ಅವರದ್ದು ಒಂದೇ ನೀತಿ. ಅಮೇರಿಕೆಯ ನೀತಿಯನ್ನದು ಉಗ್ರ ಶಬ್ದಗಳಿಂದಲೇ ಖಂಡಿಸುತ್ತದೆ....'

'ಆದರೆ ಅದನ್ನು ಕೇಳೋರು ಯಾರು?'

'ಕೇಳೋ ಕಾಲಕ್ಕೆ ಕೇಳ್ತಾರೆ....'

'ನೋಡಿ, ನಮ್ಮ ರಾಜ್ಯಕ್ಕೆ ಇನ್ನೊಂದು ವಿಶ್ವ ವಿದ್ಯಾಲಯ ಬರುತ್ತಂತೆ.....'

'ಯಾಕೇಂದೆ?'

'ಅಲ್ರಿ, ಮೊನ್ನೆ ರಾಜ್ಯದ ಮೂರೂ ವಿಶ್ವ ವಿದ್ಯಾಲಯಗಳ ಉಪಕುಲಪತಿಗಳು ಸಭೆ ಸೇರಿದ್ದರಂತೆ. ಶಿಕ್ಷಣ ಮಂತ್ರಿ ಬಚರೇ ನಾರಾಯಣ ಮತ್ತು ಮುಖ್ಯ ಮಂತ್ರಿ ದೇವರಾಜ ಅರಸು ಅವರನ್ನು ಉದ್ದೇಶಿಸಿ ಮಾತನಾಡಿದರಂತೆ....'

'ಹ್ಞಾಂ....ಸರಕಾರದ ಹೊಸ ನೀತಿಯನ್ನು ವಿಶ್ವ ವಿದ್ಯಾಲಯ ಹಂತದಲ್ಲಿ ಕಾರ್ಯಕ್ಕೃತಗೊಳಿಸಲು ಸಹಕಾರ ಬೇಡಿರಬಹುದು....'

'ಹೌದ್ರಿ, ಪರಾವಲಂಬನವನ್ನು ನೀಗಿಸಿ ಸ್ವಾವಲಂಬಿ ಜೀವನ ಬದುಕಲು ನೆರವಾಗುವ ಶಿಕ್ಷಣವಿಂದು ನಮಗೆ ಬೇಕು.'

'ನಿಜಕ್ಕೂ. ಆದರೆ, ಇದು ಪುಸ್ತಕದ ಬದನೆಕಾಯಿಗಳಿಂದಾಗುವುದಿಲ್ಲ. ವೈಮುರಿತದಿಂದ ಮಾತ್ರ ಸಾಧ್ಯ....'

'ಅದು ಹೌದೂನ್ನಿ.'

'ಅಲ್ವೆ, ನಾಲ್ಕನೆಯ ವಿಶ್ವ ವಿದ್ಯಾಲಯದ ಕತೆ....'

'ಅದೆ? ನೋಡಿ, ಈಗ ಮೈಸೂರು ವಿಶ್ವ ವಿದ್ಯಾಲಯಕ್ಕೆ ೯೦ ಕಾಲೇಜುಗಳು ಸೇರ್ಪಡೆಯಾಗಿವೆಯಂತೆ. ಕರ್ನಾಟಕಕ್ಕೆ ನೂರು. ಬೆಂಗಳೂರಂತು ಪ್ರಾದೇಶಿಕ ತಾನೆ? ಇಷ್ಟು ಕಾಲೇಜುಗಳ ಸೇರ್ಪಡೆಯಿಂದಾಗಿ ಆಡಳಿತ ಜಟಿಲವಾಗುತ್ತಿದೆಯಂತೆ. ಆದ್ದರಿಂದ ನಾಲ್ಕನೆಯ ವಿಶ್ವ ವಿದ್ಯಾಲಯವೊಂದು ಸ್ಥಾಪಿತವಾಗುವ ಅಗತ್ಯವಿದೆಯಂತೆ....'

'ಅಲ್ವೆ, ಕರಾವಳಿ ಮತ್ತು ಮಲೆನಾಡ ಜಿಲ್ಲೆಗಳಿಗೊಂದು ವಿಶ್ವ ವಿದ್ಯಾಲಯ ಬೇಕೆಂದು ಮಣಿಪಾಲದ ಪದ್ಮಶ್ರೀ ಪೈಯವರು ಕೆಲವು ವರ್ಷ ಹಿಂದೆಯೇ ಅಭಿಪ್ರಾಯಪಟ್ಟಿದ್ದರು. ಲೇಕ್ ಯುನಿವರ್ಸಿಟಿಯ ಕನಸನ್ನೂ ಅವರು ಕಂಡಿದ್ದರು. ಆದರೆ ಆಗ ಇದನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಮಾತ್ರವಲ್ಲ, ಅಣಕಿಸಿದವರೂ ಇದ್ದರು....'

'ಅಲ್ರಿ, ಮಂಗಳೂರಿನಲ್ಲಿ ಮಂಗಳ ಗಂಗೋತ್ರಿ ಆರಂಭವಾದದ್ದೂ ಲೇಕ್ ವಿಶ್ವ ವಿದ್ಯಾಲಯದ ಕನಸನ್ನು ದೂರವೋಡಿಸಲೆಂದು ಹೇಳಲಾಯ್ತಲ್ಲಾ....'

'ಇರಬಹುದೂನ್ನು....'

'ನೋಡಿ, ಈಗ ಸಮಿತಿಯೊಂದು ನೇಮಕವಾಗಿದೆಯಂತೆ. ಅದು ಎಲ್ಲಿ ಯಾವ ಮಟ್ಟದಲ್ಲಿ ಹೊಸ ವಿಶ್ವವಿದ್ಯಾಲಯ ಆರಂಭವಾಗಬೇಕೆಂದು ವರದಿ ನೀಡಲಿದೆಯಂತೆ..'

'ವರದಿಯೇನೇ ಹೇಳಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕಾಲೇಜುಗಳ ಸಂಖ್ಯೆ, ಅವುಗಳ ವೈವಿಧ್ಯ, ಮಟ್ಟಗಳನ್ನು ಕಾಣುವಾಗ ಈ ಜಿಲ್ಲೆಯಲ್ಲೇ ಅದು ಸ್ಥಾಪನೆಯಾಗಬೇಕೆನಿಸುತ್ತದೆ....'

'ಆಗಲಿ, ಯಾರು ಬೇಡಾಂತಾರೆ?'

'ಬೇಡ ಅನ್ನೋದು ಯಾರು? ಜಿಲ್ಲೆಯ ಶಿಕ್ಷಣ ತಜ್ಞರು ಅಥವಾ ಜನರು ಖಂಡಿತಕ್ಕೂ ಹೇಳಲಿಕ್ಕಿಲ್ಲ.'

'ನೋಡೋಣ. ಸಮಿತಿ ಏನು ಹೇಳುತ್ತೇಂತ...'

'ಹ್ಞಾಂ, ಕಾಯಬೇಕು....'

'ಯಾವುದಕ್ಕೆ?'

'ಅಲ್ವೆ, ಕನಕದಾಸರು ಹಾಡಿದರು....'

'ಏನೂಂತ?'

'ತಾಳುವಿಕೆಗಿಂತನ್ಯ ತಪವು ಇಲ್ಲ....'

'ಹ್ಞಾಂ, ಆದರೂ ನೋಡಿ, ಈ ತಾಳಿಕೆಗೂ ಒಂದು ಮಿತಿಯಿಲ್ಲವೆ?'

"ಗಾದೆ ಮಾತೇ ಇದೆ—ತಾಳಿದವ ಬಾಳಿಯಾನು ಅಂತ...."

'ನೋಡಿ, ಹಳೆ ಔಷಧಿಗಳೆಲ್ಲ ಇಂದು ನಿಷ್ಪ್ರಭಾವಿಯಾಗಿವೆ ತಾನೆ? ಅಂತೇ ಹಳೆ ಗಾದೆಗಳೂ ತಮ್ಮ ಮೌಲ್ಯವನ್ನು ಕಳೆದುಕೊಂಡಿವೆ....'

'ಹ್ಞಾಂ....'

'ಏನು?'

'ಏನೂ ಇಲ್ಲ ಬಿಡು.'

"ಬಿಡ ಬೇಕೆ?"

'ಬೇಡ....'

"ಹೀಗೆ ಬನ್ನಿ...."

"ಹ್ಞಾಂ........"

—ಗೋರಾ.

●●

ಅತಿಕಾರಿಬೆಟ್ಟನಲ್ಲಿ ವಿಜಯಾ ಬೇಂಕ್ ಶಾಖಾ ಉದ್ಘಾಟನೆ

ರಾಜ್ಯದ ಲೋಕೋಪಯೋಗಿ ಸಚಿವ ಶ್ರೀ ಎಚ್. ಎಂ. ಚನ್ನಬಸಪ್ಪನವರು ವಿಜಯಾ ಬೇಂಕ್ ಲಿಮಿಟೆಡ್‌ನ 162ನೇ ಶಾಖೆಯನ್ನು ಮುಲ್ಕಿಯ ಸಮೀಪದ ಅತಿಕಾರಿಬೆಟ್ಟನಲ್ಲಿ ತಾ. 11ರಂದು ಉದ್ಘಾಟಿಸಿದರು. ಸಚಿವರನ್ನು ವಾದ್ಯಘೋಷಗಳೊಂದಿಗೆ ಸ್ವಾಗತಿಸಲಾಯಿತು. ಪ್ರಾರ್ಥನೆಯಾದ ಬಳಿಕ ಬೇಂಕಿನ ಚೆಯರ್‌ಮೇನ್ ಶ್ರೀ ಎಂ. ಸುಂದರರಾಮ ಶೆಟ್ಟರು ಸ್ವಾಗತಿಸುತ್ತಾ, 1931ರಲ್ಲಿ ಇದೇ ಜಿಲ್ಲೆಯಲ್ಲಿ ಆರಂಭಗೊಂಡ ಈ ಬ್ಯಾಂಕ್ ಬೆಳೆದು ಬಂದ ರೀತಿಯನ್ನು ವಿವರಿಸಿದರು. ತಮ್ಮ ಹುಟ್ಟೂರಾದ ಈ ಅತಿಕಾರಿಬೆಟ್ಟು ಕೇಂದ್ರದ ಸುತ್ತಲಿನ 89 ಹಳ್ಳಿಗಳಿಗೆ ಬೇಂಕಿಂಗ್ ಸೌಲಭ್ಯ ಒದಗಿಸಿ ಅವರಲ್ಲಿ ಉಳಿತಾಯದ ಅಭ್ಯಾಸ ಬೆಳೆಸಿ ಅವರೂ ಬೇಂಕಿಂಗ್ ವ್ಯವಹಾರದಲ್ಲಿ ಪಾಲ್ಗೊಳ್ಳುವಂತೆ ಅವಕಾಶ ಕಲ್ಪಿಸಲು ಈ ಶಾಖೆಯನ್ನು ತೆರೆಯಲಾಗುತ್ತಿದೆ ಎಂದರು.

ಸಚಿವರು ಉದ್ಘಾಟಿಸುತ್ತಾ, ಈ ಶಾಖೆಯನ್ನು ಉದ್ಘಾಟಿಸುವ ಅವಕಾಶ ತಮಗೆ ದೊರಕಿರುವುದು ಸಂತೋಷವೆಂದರು. ಈ ಪ್ರದೇಶದಲ್ಲಿ ಬೇಂಕ್ ಶಾಖೆಯೊಂದನ್ನು ತೆರೆದು ಇಲ್ಲಿಯ ಜನರ ಆರ್ಥಿಕ ಸಾಮಾಜಿಕ ಪ್ರಗತಿಗೆ ಅವಕಾಶ ಕಲ್ಪಿಸಿಕೊಟ್ಟ ಶ್ರೀ ಸುಂದರರಾಮ ಶೆಟ್ಟರು ಅಭಿನಂದನಾರ್ಹರು ಎಂದರು. ಶ್ರೀ ಶೆಟ್ಟರ ಅಧಿಕಾರಾವಧಿಯಲ್ಲಿ ಬ್ಯಾಂಕಿನ ಪ್ರಗತಿ ವಿದ್ಯುತ್ ವೇಗದಿಂದ ನಡೆದಿದೆ ಎಂದವರು ಹೇಳಿ ಮುಂದೆ ಇದು ಇತರ ದೊಡ್ಡ ಬೇಂಕ್‌ಗಳೊಂದಿಗೆ ಪೈಪೋಟಿ ನಡೆಸುವ ಶಕ್ತಿ ಹೊಂದಲಿ ಎಂದು ಹಾರೈಸಿದರು.

ಭೂ ಸುಧಾರಣೆಯನ್ನು ಯಶಸ್ವಿಯಾಗಿ ಕಾರ್ಯಗತ ಗೊಳಿಸಬೇಕಾಗಿದೆ ಎಂದ ಅವರು ಭೂ ಸುಧಾರಣೆಯಿಂದ ಪ್ರಯೋಜನವಾಗಬೇಕಾದರೆ 'ಲೇಂಡ್ ಯೂಸ್' ಪೋಲಿಸಿ ಮತ್ತು ಎಗ್ರಿಕಲ್ಚರಲ್ ಪ್ರೈಸ್ ಪೋಲಿಸಿಗಳಲ್ಲಿ ತೀವ್ರ ಬದಲಾವಣೆಯಾಗಬೇಕೆಂದು ಅಪೇಕ್ಷಿಸಿದರು. ಈ ವಿಜಯಾ ಬೇಂಕ್ ಶಾಖೆಯಿಂದ ಸಮೀಪದ ಎಲ್ಲಾ ಗ್ರಾಮಗಳ ಜನರಿಗೆ ಹೆಚ್ಚಿನ ಪ್ರಯೋಜನ, ಅನುಕೂಲತೆಗಳು ದೊರೆಯುವಂತಾಗಲೆಂದು ಹಾರೈಸಿದರು.

ಬ್ಯಾಂಕಿನ ಗ್ರೂಪ್ ಮೆನೇಜರ್ ಶ್ರೀ ಬಿ. ಎಲ್. ಎನ್. ಹೆಗ್ಡೆಯವರು ಕೊನೆಯಲ್ಲಿ ಧನ್ಯವಾದವಿತ್ತರು.

ಅಲ್ಲಿಂದ ಮಂಗಳೂರಿಗೆ ತೆರಳಿದ ಸಚಿವ ಶ್ರೀ ಚನ್ನಬಸಪ್ಪನವರ ಗೌರವಾರ್ಥವಾಗಿ ಮೋತಿಮಹಲ್‌ನಲ್ಲಿ ವಿಜಯಾ ಬೇಂಕ್‌ನ ಚೆಯರ್‌ಮೇನ್ ಶ್ರೀ ಎಂ. ಸುಂದರರಾಮ ಶೆಟ್ಟರು ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು.

●●

ತತ್ವ ನಿಷ್ಠೆ ಕಷ್ಟ ನಿಷ್ಠುರವಾದರೂ ಕಟ್ಟ ಕಡೆಗೆ ಇಷ್ಟ ಸಿದ್ಧಿ.

o o o

ದೊಡ್ಡವರಲ್ಲಿ ಅಲ್ಪತನ ಇಲ್ಲವೆಂದಿಲ್ಲ; ಬಡವರಲ್ಲಿ ದೊಡ್ಡಸ್ತಿಕೆ ಇಲ್ಲವೆಂದಿಲ್ಲ.

o o o

ಯಾವಾಗ ಸಂಧಿ ಸಾಧಿಸುವುದು ಉಚಿತವೆಂದು ತಿಳಿದು ಕೊಳ್ಳುವುದರ ಜೊತೆಗೆ ಯಾವಾಗ ಸಂಧಿ ದೊರೆತರೂ ಬಿಡುವುದು ಉಚಿತವೆಂದು ತಿಳಿದುಕೊಳ್ಳ ಬೇಕಾದ್ದು ಅವಶ್ಯ.

o o o

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ದಾಮೋದರಂ ಸಂಜೀವಯ್ಯ

ಆಳುವ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ದಾಮೋದರಂ ಸಂಜೀವಯ್ಯನವರು ನಿಧನರಾದರು. ತಾ. ೭ರಂದು ಅವರು ತಮ್ಮ ಕಾರ್ಯಾಲಯದ ಕರ್ತವ್ಯಗಳನ್ನು ನಿರ್ವಹಿಸಿದ್ದರೆಂಬುದರಿಂದ ಅವರದ್ದು ಅಕಾಲಿಕ ನಿಧನವೇ ಸರಿ.

ಸಂಜೀವಯ್ಯನವರು ಹುಟ್ಟಿದ್ದು ೧೯೨೧ರಲ್ಲಿ; ಫೆಬ್ರವರಿ ೧೪ರಂದು. ಮರಣದ ನಿಧನದ ವೇಳೆ ಅವರ ವಯಸ್ಸು ೫೧ ಪೂರ್ತಿ. ಮಧುಮೇಹ ಅವರನ್ನು ಪೀಡಿಸುತ್ತಿದ್ದ ವ್ಯಾಧಿ. ಮಾರ್ಚ್ ತಿಂಗಳ ಲೋಕಸಭಾ ಚುನಾವಣೆಯ ವೇಳೆ ಅವರು ಚುನಾವಣಾ ಪ್ರಚಾರಕ್ಕೆ ಇಳಿದಿರಲಿಲ್ಲ. ಪ್ರಧಾನಿ ಗಾಂಧಿಯವರೇ ಮಿಂಚಿನಂತೆ ತಿರುಗಾಡಿದ್ದರು. ಆ ವೇಳೆಯೇ ಶ್ರೀ ಸಂಜೀವಯ್ಯನವರ ಆರೋಗ್ಯದ ಬಗ್ಗೆ ಸಂದೇಹಿಸಲಾಗಿತ್ತು. ಶ್ರೀ ಸಂಜೀವಯ್ಯನವರು ಹರಿಜನ ನಾಯಕರು. ಉತ್ತರದಲ್ಲಿ ಶ್ರೀ ಜಗಜ್ಜೀವನರಾಮರಿದ್ದರೆ ದಕ್ಷಿಣದಲ್ಲಿ ಸಂಜೀವಯ್ಯ. ೧೯೫೦ರಲ್ಲಿ ಇವರು ಆಕಸ್ಮಿಕವಾಗಿಯೇ ರಾಜ್ಯಕೀಯಕ್ಕೆ ಧುಮುಕಿದರು. ಉದ್ಯೋಗವರಸಿಕೊಂಡು ಬಂದವರು ಶಾಸಕರಾದರು. ಸ್ವಾತಂತ್ರ್ಯ ಸಂಗ್ರಾಮದ ವೇಳೆ ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಹೋರಾಟಗಳಲ್ಲಿ ಭಾಗವಹಿಸಿದ್ದ ಹಿನ್ನೆಲೆಯಿದ್ದವರು ಅವರು.

೧೯೫೨ರಲ್ಲಿ ಮದ್ರಾಸದಲ್ಲಿ ರಾಜಾಜಿಯವರು ಸಚಿವ ಸಂಪುಟ ರಚಿಸಿದಾಗ ಕೆಲವಾರು ಮಂದಿ ಸಚಿವರಾದರು. ಪ್ರತಿಭೆಯನ್ನು ಗುರುತಿಸಿದ ರಾಜಾಜಿ ಸಂಜೀವಯ್ಯನವರನ್ನೂ ಆರಿಸಿಕೊಂಡರು, ಆಂಧ್ರ ರಾಜ್ಯವು ರೂಪುಗೊಂಡ ಬಳಿಕ, ಶ್ರೀಗಳಾದ ಟಿ. ಪ್ರಕಾಶಂ, ಬಿ. ಗೋಪಾಲ ರೆಡ್ಡಿ ಮತ್ತು ನೀಲಂ ಸಂಜೀವ ರೆಡ್ಡಿಯವರ ಸಚಿವ ಸಂಪುಟದಲ್ಲೂ ಶ್ರೀ ಸಂಜೀವಯ್ಯ ಸಚಿವರಾಗಿ ಮುಂದುವರಿದರು. ೧೯೬೦ರಲ್ಲಿ ಅವರೇ ಮುಖ್ಯಮಂತ್ರಿಯಾದರು.

೧೯೬೨ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಪೀಠ ಅವರನ್ನು ಆಹ್ವಾನಿಸಿತು. ಮುಂದೆ ಕೆಲ ಕಾಲ ಕೇಂದ್ರದ ಸಚಿವ ಸ್ಥಾನವೂ ಅವರಿಗೆ ಲಭ್ಯವಾಯಿತು. ೧೯೭೧ರಲ್ಲಿ ಅವರು ಆಳುವ ಕಾಂಗ್ರೆಸ್ ಅಧ್ಯಕ್ಷರಾದರು. ಮುಂದಿನ ತಿಂಗಳಲ್ಲಿ ಅವರು ತನ್ನ ಸ್ಥಾನವನ್ನು ತೆರವು ಮಾಡುವರೆಂದೂ ಅನಂತರ ಅಥವಾ ಅದಕ್ಕೆ ಮೊದಲೇ ಅವರಿಗೆ ಶ್ರೀಮತಿ ಗಾಂಧಿಯವರು ಸಚಿವ ಹುದ್ದೆ ನೀಡಲಿರುವರೆಂದೂ ಹೇಳಲಾಗಿತ್ತು.

ರಾಜ್ಯವೊಂದರ ಮುಖ್ಯಮಂತ್ರಿಯಾದ ಹರಿಜನರಲ್ಲಿ ಶ್ರೀ ಸಂಜೀವಯ್ಯ ಮೊತ್ತಮೊದಲಿಗರು. ಕಾಂಗ್ರೆಸ್ ಅಧ್ಯಕ್ಷ ಪೀಠವೇರಿದ ಹರಿಜನರಲ್ಲಿ ಇವರೇ ಮೊದಲಿಗರು. ಅಧಿಕಾರದಲ್ಲಿರುವಾಗಲೇ ಮೃತರಾದ ಕಾಂಗ್ರೆಸ್ ಅಧ್ಯಕ್ಷರು ಇವರೊಬ್ಬರೇ.

ಶ್ರೀ ಸಂಜೀವಯ್ಯನವರಿಗೆ ರಾಜ್ಯಕೀಯ ವಿರೋಧವಿಲ್ಲವೆನ್ನುವಂತಿಲ್ಲ. ಆಂಧ್ರದಲ್ಲಿ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಇವರ ಪ್ರಬಲ ಶತ್ರುಗಳು. ರೆಡ್ಡಿಯವರಲ್ಲವಾಗಿದ್ದರೆ, ಅವರು ಇನ್ನೂ ಏನೇನೋ ಆಗುತಿದ್ದರು. ಸಂಜೀವಯ್ಯನವರು ಕಾಂಗ್ರೆಸ್ ಅಧ್ಯಕ್ಷರಾದ ಬಳಿಕ ರೆಡ್ಡಿ ಬಹುಕಾಲ ಮುಖ್ಯಮಂತ್ರಿಯಾಗಿ ಮುಂದುವರಿಯಲಿಲ್ಲ.

ಸಂಜೀವಯ್ಯನವರು ದಿಟ್ಟತನದ ಮೂರ್ತಿ. ತನ್ನ ರಾಜಕೀಯ ಗುರುವೆನ್ನಬಹುದಾದ ನೀಲಂ ಸಂಜೀವ ರೆಡ್ಡಿಯವರು ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿದಾಗ, ಶ್ರೀ ಗಿರಿಯವರ ಪರವಾಗಿ ಮತ ನೀಡಿದವರಿವರು. ಕಾಂಗ್ರೆಸ್ ಮಹಾ ವಿಘಟನೆಯ ವೇಳೆ ಶ್ರೀಮತಿ ಗಾಂಧಿಯವರ ವ್ಯಕ್ತಿತ್ವ-ನೀತಿ-ನಿಲುವುಗಳಿಂದ ಆಕರ್ಷಿತರಾದ ಇವರ ಮೇಲೆ ಶ್ರೀಮತಿ ಗಾಂಧಿ ತುಂಬು ಭರವಸೆಯಿಟ್ಟಿದ್ದರು.

ಶ್ರೀ ಸಂಜೀವಯ್ಯನವರದ್ದು ನಿಷ್ಕಲ್ಮಶ ಜೀವನ. ಇದಕ್ಕೆ ಅವರ ಮಿತ ಪರಿವಾರವೊಂದು ವರ ಪ್ರಸಾದ. ಅವರ ಕುಟುಂಬವೆಂದರೆ. ವಯೋವೃದ್ಧೆಯಾದ ತಾಯಿ ಮಮತೆಯ ಮಡದಿ ಮತ್ತೊಬ್ಬಾಕೆ ದತ್ತಪುತ್ರಿ. ಉಳಿದವರಾರಾದರೂ ಇದ್ದರೆ ಅವರು ದೂರದ ಸಂಬಂಧಿಗಳು ಮಾತ್ರ. ಆದುದರಿಂದಲೇ ಅವರು ದೇಶದ ಕಾಳಜಿ ಹೊರುವುದು ಸಾಧ್ಯವಾಯ್ತು. ಸಂಜೀವಯ್ಯನವರು ಇಪ್ಪತ್ತೆರಡು ವರ್ಷಗಳ ರಾಜ್ಯಕೀಯ ಜೀವನವನ್ನು ಬಾಳಿ ಕೊನೆಯುಸಿರೆಳೆದರು. ಅವರ ಅಗಲಿಕೆಯಿಂದ ಆದರ್ಶ ಸಮರ್ಥ ನಾಯಕ ಉಜ್ವಲ ದೇಶಪ್ರೇಮಿಯೊಬ್ಬನನ್ನು ದೇಶ ಕಳೆದು ಕೊಂಡಿತೆಂಬುದು ನಿರ್ವಿವಾದ. ದಿವಂಗತರ ಗೌರವಯುತ ವ್ಯಕ್ತಿತ್ವದ ಮುಂದೆ 'ನವಯುಗ' ಅವನತ ಮಸ್ತಕವಾಗುತ್ತದೆ. ●

೧೯೭೧—

ಸಿಂಡಿಕೇಟ್ ಬ್ಯಾಂಕಿಗೆ

ಸರ್ವತೋಮುಖ ಪ್ರಗತಿ ವರ್ಷ

ಶಾಖೆಗಳಲ್ಲಿ ನಲವತ್ತಾರು, ಠೇವಣಿಗಳಲ್ಲಿ ಐವತ್ತೊಂದು ಕೋಟಿ; ಸಾಲಗಳಲ್ಲಿ ಮೂವತ್ತು ಕೋಟಿ – ಈ ಹೆಚ್ಚಳಗಳು ಸಿಂಡಿಕೇಟ್ ಬ್ಯಾಂಕಿನ ೧೯೭೧ನೆ ವರ್ಷದ ಮಹತ್ತಮ ಸಾಧನೆಗಳು. ವರ್ಷಾಂತ್ಯದಲ್ಲಿದ್ದ ಒಟ್ಟು ೫೦೭ ಶಾಖೆಗಳಲ್ಲಿ ಮಹಾನಗರಗಳಲ್ಲಿ ೭೭, ನಗರಗಳಲ್ಲಿ ೬೧, ಪಟ್ಟಣಗಳಲ್ಲಿ ೧೭೮ ಮತ್ತು ಹಳ್ಳಿಗಳಲ್ಲಿ ೧೯೨. ಇವುಗಳ ಪೈಕಿ ೨೧೦ ಸ್ಥಳಗಳಲ್ಲಿ ಸಿಂಡಿಕೇಟ್ ಬ್ಯಾಂಕೊಂದೇ ಬ್ಯಾಂಕಿಂಗ್ ಸೌಲಭ್ಯಗಳನ್ನೊದಗಿಸುವ ಹೆಗ್ಗಳಿಕೆ ಬೇರೆ. ಬ್ಯಾಂಕಿಗೆ ಒಪ್ಪಿಸಲಾದ ಲೀಡ್ ಜಿಲ್ಲೆಗಳಲ್ಲೇ ಅದರ ಸೇ.೫೦ರಷ್ಟು ಶಾಖೆಗಳಿರುವುದು ಅಭಿಮಾನದ ಸಂಗತಿ. ೧೯೭೨ರಲ್ಲಿ ಬ್ಯಾಂಕು ಇನ್ನೂ ಹಲವಾರು ಶಾಖೆಗಳನ್ನು ತೆರೆಯುವ ವಿಸ್ತೃತ ಯೋಜನೆಯೊಂದನ್ನು ರೂಪಿಸಿಕೊಂಡು, ಅದನ್ನು ಕಾರ್ಯರೂಪಕ್ಕೆ ತರುತ್ತಿದೆ. ಇದರಂತೆ ಜೋಧಪುರದಲ್ಲಿ ಶಾಖೆ ತೆರೆದು ರಾಜಸ್ಥಾನವನ್ನು ಬ್ಯಾಂಕು ಪ್ರವೇಶಿಸಿತು. ಲೀಡ್ ಬ್ಯಾಂಕ್ ಯೋಜನೆಯಂತೆ ಉತ್ತರ ಪ್ರದೇಶ ಮತ್ತು ಆಂಧ್ರ ಪ್ರದೇಶಗಳಲ್ಲೇ ತನ್ನ ಚಟುವಟಿಕೆಗಳನ್ನು ಕೇಂದ್ರೀಕರಿಸಿ ಉದಾರ ತಳಹದಿಯಲ್ಲಿ ಶಾಖೆಗಳನ್ನು ತೆರೆಯುವ ಕಾರ್ಯ ಈಗಾಗಲೇ ಆರಂಭವಾಗಿದೆ.

ಠೇವಣಿ ಹೆಚ್ಚಳ

ಬ್ಯಾಂಕು ೧೯೭೧ರಲ್ಲಿ ೫೧ ಕೋಟಿ ರೂಪಾಯಿಗಳ ಹೆಚ್ಚಿನ ಠೇವಣಿಯನ್ನು ಪಡೆದು ದಾಖಲೆ ನಿರ್ಮಿಸಿತು. ವರ್ಷಾಂತ್ಯದಲ್ಲಿನ ೨೧೯ ಕೋಟಿ ರೂಪಾಯಿಗಳ ಠೇವಣಿಯು ಹಿಂದಿನ ವರ್ಷಕ್ಕಿಂತ ಸೇ. ೩೦.೭ರಷ್ಟು ಹೆಚ್ಚು. ೧೯೬೮ರಲ್ಲಿದ್ದ ಠೇವಣಿಯನ್ನು (೧೦೨.೧೯ ಕೋಟಿ) ಹೋಲಿಸುವಾಗ ಮೂರೇ ವರ್ಷಗಳಲ್ಲಿ ಠೇವಣಿ ಇಮ್ಮಡಿಯಾಯಿತೆಂಬುದು ಬ್ಯಾಂಕಿನ ಸಾಧನೆಗೊಂದು ಉತ್ತಮ ನಿದರ್ಶನ.

ಜನಪ್ರಿಯ ಯೋಜನೆಗಳು

ಠೇವಣಿಯ ಹೆಚ್ಚಳವು ಜನಪ್ರಿಯತೆಯ ಕುರುಹು. ಜನಪ್ರಿಯತೆಗೆ ಬ್ಯಾಂಕಿನ ಹಲವು ಬಗೆಯ ಉಳಿತಾಯ ಯೋಜನೆಗಳೇ ಕಾರಣ. ವಿವಿಧ ವರ್ಗಗಳಿಗೆ ಅನುಕೂಲವಾದ ಹಲವಾರು ಉಳಿತಾಯ ಯೋಜನೆಗಳನ್ನು ಬ್ಯಾಂಕು ಹೊಸತಾಗಿ ಜ್ಯಾರಿಗೊಳಿಸಿದೆ. ಪಿಗ್ಮಿ–ಸೇವಿಂಗ್ಸ್ ಬ್ಯಾಂಕ್–ಕ್ಯುಮುಲೇಟಿವ್—ನಿರಖು ಠೇವಣಿಗಳಲ್ಲದೆ ಕ್ಯುಮುಲೇಟಿವ್ ಕಮ್–ಹೌಸಿಂಗ್ ಠೇವಣಿ, ವಿಮಾ ಸಂಯೋಜಿತ ಠೇವಣಿ, ಕೃಷಿಕ ರಕ್ಷಕ ಠೇವಣಿ, ಆದರ್ಶ ಠೇವಣಿ—ಮೊದಲಾದ ಹೊಸ ಬಗೆಯ ಹಲವು ಯೋಜನೆಗಳು ಬ್ಯಾಂಕಿನಲ್ಲಿವೆ. ಜನತೆಯ ಠೇವಣಿ ಎಷ್ಟೇ ದೊಡ್ಡದಿರಲಿ, ಎಷ್ಟೇ ಸಣ್ಣದಿರಲಿ, ಅದಕ್ಕೆ ತಕ್ಕ ಉಳಿತಾಯ ಯೋಜನೆ ಸಿಂಡಿಕೇಟ್ ಬ್ಯಾಂಕಿನಲ್ಲಿವೆ.

ಸಾಲಗಳು

೧೯೭೧ರ ಅಂತ್ಯದಲ್ಲಿ ಬ್ಯಾಂಕು ನೀಡಿದ ಸಾಲದ ಮೊತ್ತ ಒಟ್ಟು ರೂ. ೧೫೩.೦೭ ಕೋಟಿಗಳು. ಆದ್ಯತೆಯ ವಿಭಾಗಗಳಿಗೆ ನೀಡಿದ ಸಾಲದ ಮೊತ್ತ ೬೪.೬೪ ಕೋಟಿ ರೂಪಾಯಿಗಳು. ಇವುಗಳಲ್ಲಿ ಸಾರಿಗೆ, ಸಣ್ಣ ಪ್ರಮಾಣದ ಕೈಗಾರಿಕೆ, ಸಣ್ಣ ವ್ಯಾಪಾರ, ಕೃಷಿ, ವೃತ್ತಿಪರ ಮತ್ತು ಸ್ವಉದ್ಯೋಗ, ಶಿಕ್ಷಣ, ನಿರ್ಯಾತ ಮೊದಲಾದ ರಂಗಗಳು ಸೇರಿವೆ. ಸಣ್ಣ ಪ್ರಮಾಣದ ಕೈಗಾರಿಕೆ (೨೬.೯ ಕೋಟಿ) ಮತ್ತು ಕೃಷಿ (೧೯.೬೬ಕೋಟಿ)ಗಳು ಸಿಂಹಪಾಲನ್ನು ಪಡೆದಿವೆ. ದೇಶದ ಆರ್ಥಿಕ ರಂಗಕ್ಕೆ ಪುನಶ್ಚೇತನ ನೀಡಲು ಬ್ಯಾಂಕು ತೀವ್ರ ಗಮನಹರಿಸುತ್ತಿದೆ.

ಖಾತೆದಾರರು

೧೯೬೮ರಲ್ಲಿದ್ದ ಠೇವಣಿಯು ೭೧ರಲ್ಲಿ ಇಮ್ಮಡಿಗೊಂಡಂತೆಯೇ ಠೇವಣಿ ಖಾತೆದಾರರ ಸಂಖ್ಯೆ ಮತ್ತು ಸಾಲಗಾರರ ಸಂಖ್ಯೆಗಳೂ ಇಮ್ಮಡಿಯಾಗಿವೆಯೆಂಬುದು ಗಮನಾರ್ಹ. ಅಂದರೆ, ಬ್ಯಾಂಕು ಹೆಚ್ಚು ಹೆಚ್ಚಿನ ಜನರನ್ನು ಆಕರ್ಷಿಸಲು ಮತ್ತು ಅವರಲ್ಲಿ ಬ್ಯಾಂಕಿಂಗ್ ಹವ್ಯಾಸವನ್ನು ಕುದುರಿಸಲು ಶಕ್ತವಾಗಿದೆಯೆಂದೇ ಅರ್ಥ. ೭೧ರ ಅಂತ್ಯದಲ್ಲಿ ೩೨ ಲಕ್ಷ ಠೇವಣಿದಾರರಿದ್ದರು, ೪೬ ಲಕ್ಷ ಸಾಲಗಾರರಿದ್ದರು. ಬ್ಯಾಂಕು ನೀಡಿದ ಹೆಚ್ಚಿನ ಸಾಲಗಳು ರೂ. ಹತ್ತು ಸಾವಿರವನ್ನು ಮೀರದವುಗಳೇ. ಅಂದರೆ, ಅದಷ್ಟು ಹೆಚ್ಚು ಮಂದಿ ಅವಶ್ಯಕತಾವಂತರ

(ಎಂಟನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ರಾಜರಾಜ ಚೋಳ – ರಾಜಕೀಯ ಕೋಳ

ಚೋಳ ರಾಜರಲ್ಲಿ ಪ್ರಸಿದ್ಧಿಹೊಂದಿದ ಪ್ರಖ್ಯಾತ ರಾಜ ರಾಜರಾಜ. ಅವನನ್ನು ಅರುಳ್ಮೊಳ್ಳಿದೇವನೆಂದು ಕರೆಯುತ್ತಿದ್ದರು. ಅವನು ಸಿಂಹಾಸನವನ್ನೇರಬೇಕಾಗಿದ್ದ ಸಮಯದಲ್ಲಿ ಅವನ ಮಾವ ಅಡ್ಡ ಬಂದನು. ಮಾವನ ಹೆಸರೇನೋ ಉತ್ತಮನೆಂದು; ಅವನು ಮಾಡಿದ ಕೆಲಸ ಅಧರ್ಮವೇನಲ್ಲ. ಆದರೆ ಇದು ಅತ್ಯುತ್ತಮವೇ ಆಯಿತು ಅರುಳ್ಮೊಳ್ಳಿದೇವನಿಗೆ. ಅವಕಾಶವನ್ನು ಹಗರಣಕ್ಕೆ ಉಪಯೋಗಿಸಿಕೊಳ್ಳಲಿಲ್ಲ. ಅವನು ಪಟ್ಟಕ್ಕಾಗಿ ಕಾದದೆ, ಕಾದಿದ್ದು ಕಾಲಾಂತರದಲ್ಲಿ ಸಿಂಹಾಸನವನ್ನಲಂಕರಿಸಿದನು. ಅವನ ಪ್ರತಾಪದ ಅಧ್ಯಾಯ ಆರಂಭವಾಯಿತು. ಕೇವಲ ಭೋಗಾಪೇಕ್ಷಿ ರಾಜರಿಂದಾಗಿ ಅಳಿದುಳಿದಿದ್ದ ಚೋಳ ರಾಜ್ಯವನ್ನು ಅವನು ವಿಸ್ತರಿಸಿದನು. ಲಂಕೆಯನ್ನು ತನ್ನ ಅಂಕೆಗೆ ತಂದನು. ಆದುದರಿಂದಲೇ ಅವನನ್ನು ಚೋಳೇಂದ್ರಸಿಂಹ, ಶಿವಪಾದ ಶೇಖರ, ರಾಜೇಂದ್ರ ಸಿಂಹ, ಚೋಳ ಮಾರ್ತಾಂಡ, ರಾಜ ಮಾರ್ತಾಂಡ, ರವಿಕುಲ ಮಾಣಿಕ್ಯ, ರಾಜಾಶ್ರಯನೆಂದು ಕರೆಯಲಾಗುತ್ತಿತ್ತು. ಇವು ಹೊಗಳು ಭಟ್ಟರ ಸ್ತುತಿ ಮಾಲೆಗಳಾಗಿರಲಿಲ್ಲ. ನಿಜವಾದ ಅವನ ಪರಾಕ್ರಮದ ಸೂಚ್ಯಗಳಾಗಿವೆ.

ಅವನು ಪರಾಕ್ರಮಶಾಲಿಯಾಗಿದ್ದಂತೆ ಧರ್ಮನಿಷ್ಠನಾಗಿದ್ದನು. ಅವನು ತನ್ನ ಭುಜಬಲದಿಂದ ಸ್ಥಾಪಿಸಿದ ಚೋಳ ರಾಜ್ಯ ಇಂದಿಲ್ಲವಾದರೂ ಅವನ ಧರ್ಮ ರಾಜ್ಯ ಇಂದೂ ಅಚ್ಚಳಿಯದೆ ಉಳಿದಿದೆ. ಅವನು ತಂಜಾವೂರಿನಲ್ಲಿ ಕಟ್ಟಿಸಿರುವ ಬೃಹದೀಶ್ವರ ದೇವಾಲಯವು ವೈಶಿಷ್ಟ್ಯ ಹೊಂದಿರುತ್ತದೆ. ಆ ದೇವಾಲಯದ ಗೋಪುರದ ನೆರಳು ಆದೆಂದೂ ಭೂಮಿಯ ಮೇಲೆ ಬೀಳುವುದಿಲ್ಲ. ಹೆಸರೇ ಸೂಚಿಸುವಂತೆ ಇದು ಬೃಹತ್ ದೇವಸ್ಥಾನವಾಗಿತ್ತು. ಆ ಗೋಪುರ ಇಂದೂ ಇದೆ. ಅದು ರಾಜರಾಜನ ಹೆಸರನ್ನು ಜ್ಞಾಪಕಕ್ಕೆ ಬರಿಸುತ್ತದೆ. ಆದರೆ ರಾಜರಾಜನ ಕಾಲದಲ್ಲಿ ನಡೆಯುತ್ತಿದ್ದ ಪೂಜಾವಿಧಿಗಳು ಇಂದು ಅಲ್ಲಿ ಸಾಂಗವಾಗಿ ನಡೆಯುತ್ತಿಲ್ಲ. ಆ ದೇವಾಲಯವು ಇಂದು ಪ್ರಾಚ್ಯವಸ್ತುಸಂಗ್ರಹಾಲಯಕ್ಕೆ ಸೇರಿದ್ದಿದೆ. ಅಂದರೆ ದೇವಸ್ಥಾನವಾಗುಳಿಯದೆ ಪ್ರಾಚೀನ ವಸ್ತು ಅಂದರೆ ಪ್ರದರ್ಶನಕ್ಕೆ ಮಾತ್ರ ತಕ್ಕುದಾಗಿದೆ.

ಭೌತಿಕ ವಸ್ತುಗಳನ್ನು ಬಂಧನಕ್ಕೊಳಪಡಿಸ ಬಹುದಾದರೂ ಬೌದ್ಧಿಕ ಭಂಡಾರವನ್ನು ಬಂಧನಕ್ಕೊಳಪಡಿಸಲು ಸಾಧ್ಯ ಇರುವದಿಲ್ಲ. ಇದನ್ನು ರಾಜ ರಾಜ ಚೆನ್ನಾಗಿ ಅರಿತುಕೊಂಡಿದ್ದನು. ಕಾಲ ಗರ್ಭದಲ್ಲಿ ಹುದುಗಿ ಹೋಗುವ ಕಟ್ಟಡಗಳಿಂದಲೇ ಅವನು ತೃಪ್ತಿ ಹೊಂದಲಿಲ್ಲ. ಕಾಲ ಗರ್ಭದಲ್ಲಿ ಮರೆಯಾಗುತ್ತದೆಂದು ವರ್ತಮಾನವನ್ನು ಬದಿಗೆ ಸರಿಸಲು ಸಾಧ್ಯ ಇರುವದಿಲ್ಲ. ಅದೂ ಬೇಕು, ಇದೂ ಬೇಕು. ಆ ನ್ಯಾಯಕ್ಕನುಸಾರವಾಗಿ ಅವನು ಗುಡಿ ಗೋಪುರಗಳನ್ನು ಕಟ್ಟಿಸಿದಂತೆ ಜ್ಞಾನಾಭಿವೃದ್ಧಿಗೂ ಏರ್ಪಾಡು ಮಾಡಿದ್ದನು.

ಒಂದು ದಿನ ತಿರುವಾರೂರು ದೇವಸ್ಥಾನದಲ್ಲಿ ಭಕ್ತನೊಬ್ಬನು ಹಾಡುತ್ತಿದ್ದುದನ್ನು ಅವನು ಕೇಳಿದನು. ಇಂತಹ ಹಾಡುಗಳು ಉಳಿಯಲೇ ಬೇಕೆಂದು ಆತ ನಿಶ್ಚಯಿಸಿದ. ಆ ಹಾಡುಗಳನ್ನು ರಚಿಸಿದವರಾರೂ ಆಗ ಇರಲಿಲ್ಲ. ಅವರೆಲ್ಲರೂ ಶಿವೈಕ್ಯರಾಗಿದ್ದರು. ಹೇಗಾದರೂ ಆ ಹಾಡುಗಳನ್ನು ಕಂಡು ಹಿಡಿಯಲೇ ಬೇಕೆಂದು ಆತನು ಕಂಕಣಬದ್ಧನಾದನು. ಆ ಹಾಡಿನ ಹಾಳೆಗಳು ಚಿದಂಬರಮಿನ ದೇವಸ್ಥಾನದ ಕೋಣೆಯೊಂದರಲ್ಲಿವೆ. ಅದಕ್ಕೆ ಭದ್ರವಾಗಿ ಬೀಗ ಹಾಕಿಟ್ಟಿರುವರು. ಅದನ್ನು ತೆರೆಯ ಬೇಕಾದಲ್ಲಿ ಹಾಡುಗಳನ್ನು ರಚಿಸಿರುವ ನಾಯನ್ಮಾರೆಲ್ಲರೂ ಉಪಸ್ಥಿತರಿರಬೇಕೆಂಬುದನ್ನು ಅವನು ತಿಳಿದು ಕೊಂಡನು. ರಾಜರಾಜನು ಎದೆಗುಂದಲಿಲ್ಲ. ಅವನು ಭಕ್ತಾಗ್ರಣಿಯಾಗಿದ್ದನು. ನಾಯನ್ಮಾರರ ವಿಗ್ರಹಗಳನ್ನು ರಚಿಸಿ ಅವೆಲ್ಲವನ್ನೂ ಆ ಕೋಣೆಯ ಎದುರಿನಲ್ಲಿ ನಿಲ್ಲಿಸಿ ಬೀಗ ತೆರೆದನು. ಕೋಣೆಯೊಳಗೆ ತಾಳೆಯೋಲೆಗಳು ಇದ್ದುದರ ಸಾಕ್ಷ್ಯಗಳು ಉಳಿದಿದ್ದುವೇ ವಿನಃ ಹಾಡುಗಳು ಉಳಿದಿರುವಂತೆ ಕಂಡು ಬರಲಿಲ್ಲ. ಆ ತಾಳೆಯೋಲೆಗಳು ಹಾಳಾಗಿದ್ದುವು. ಅದರಿಂದಲೂ ಅವನು ಧೃತಿಗೆಡಲಿಲ್ಲ. ಆ ಹಾಳು ರಾಶಿಯನ್ನು ಹಾಳಾಗಿರಲು ಬಿಡದೆ ಪರಿಶ್ರಮವನ್ನು ಮುಂದುವರಿಸಿದನು. ಎಡೆಬಿಡದ ಪರಿಶ್ರಮದ ಫಲವಾಗಿ ಕೆಲವು ಹಾಡುಗಳು ಅವನಿಗೆ ದೊರೆತುವು. ಈಗಿನ ಕಾಲಕ್ಕೆ ಬೇಕಾದಷ್ಟು ಹಾಡುಗಳು ಉಳಿದಿವೆಯೆಂದಾತ ತಿಳಿದು ಕೊಂಡನು.

ತಮಿಳಿನಲ್ಲಿರುವ ಆ ಹಾಡುಗಳನ್ನು ಇಂದೂ ಕೇಳಿದಾಗ ನಮಗೆ ರಾಜರಾಜನ ಹೆಸರು ಜ್ಞಾಪಕಕ್ಕೆ ಬರುತ್ತದೆ. ಆಗ ಅವನ ಜೀವನ ಗುಲಾಬಿ ಹಾಸಿಗೆಯಾಗಿರಲಿಲ್ಲ. ಅರಸನೆಂದರೆ ಭೋಗದ ಅವತಾರವಲ್ಲವೆಂಬುದೂ ನೆನಪಿಗೆ ಬರುತ್ತದೆ. ಅವನು ತನ್ನ ಭುಜಬಲದಿಂದ ಸಾಮ್ರಾಜ್ಯವನ್ನು ವಿಸ್ತರಿಸಿದನು; ಧರ್ಮಾಭಿಮಾನದಿಂದ ಬೃಹದೀಶ್ವರ ಮಂದಿರವನ್ನು ನಿರ್ಮಿಸಿದನು, ಜ್ಞಾನ ಭಂಡಾರವನ್ನು ಬೆಳೆಸಲು ನಾಯನ್ಮಾರರ ಹಾಡುಗಳನ್ನು ಬೆಳಕಿಗೆ ತಂದನು.

ಇವೆಲ್ಲಕ್ಕೂ ಅವನು ಕಾರಣಪುರುಷನಾಗಿದ್ದರೂ ತಾನು ಹೆಸರೆಲೆಯ ಹಿಂದಿನ ಕಾಯಿಯಾಗುಳಿದಿದ್ದನು. ತಾನಾಗಿ ವಿಗ್ರಹಗಳನ್ನು ನಿರ್ಮಿಸಲಿಲ್ಲ, ತನ್ನ ಹೆಸರು ಹಾಡುವಂತೆ ಅದ್ಯಾವದಕ್ಕೂ ತನ್ನ ಹೆಸರನ್ನಿಡಲಿಲ್ಲ. ತನ್ನ ಕರ್ತವ್ಯವನ್ನು ಅವನು ಮಾಡಿದನು.

ಆದರೆ ಇಂದು ರಾಜಕೀಯೋದ್ಯಮಿಗಳು ಅವನ ಹೆಸರನ್ನು ಹೇಳಿ ತಮ್ಮ ಸ್ಥಾನ ಭದ್ರತೆಗಾಗಿ, ಪ್ರಸಿದ್ಧಿಗಾಗಿ ಪರದಾಡುತ್ತಿರುವುದನ್ನು ಕಾಣಬಹುದು. ತಮಿಳ್ನಾಡಿನ ಆಡಳಿತದಾರರಿಗೆ ದಿಢೀರನೆ ರಾಜ ರಾಜನ ಹೆಸರು ಜ್ಞಾಪಕಕ್ಕೆ ಬಂದಿದೆ. ರಾಜಾರಾಣಿ, ದೇವಾಲಯ, ಧರ್ಮಾಭಿಮಾನ... ಹಳಿಯುವವರೇ ರಾಜರಾಜನನ್ನು ಹಾಡಲಾರಂಭಿಸಿದ್ದಾರೆ!

ರಾಜರಾಜನು ಕಟ್ಟಿಸಿರುವ ಬೃಹದೀಶ್ವರ ದೇವಾಲಯದೊಳಗೆ ಅವನ ವಿಗ್ರಹವನ್ನಿಡ ಬೇಕೆಂದು ಕೆಲವರು ಮಾತನಾಡಲಾರಂಭಿಸಿದರು. ಅರಸರನ್ನು ನಿಂದಿಸಿ, ಕೇವಲ ಶ್ರೀಸಾಮಾನ್ಯನನ್ನು ಸ್ತುತಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿರುವ ಜನರು ರಾಜರಾಜನ ವಿಗ್ರಹಕ್ಕಾಗಿ ಮುಂದೆ ಬಂದಿದ್ದಾರೆ! ರಾಜರಾಜನ ಮೂರ್ತಿ ರಚಿಸಲು ಅವನ ವಿಗ್ರಹ ಅದೆಲ್ಲಾದರೂ ಇದೆ ಏನು? ಅಲ್ಲಿ ಇಲ್ಲಿ ಇರುವ ಕೆಲವು ವಿಗ್ರಹಗಳು ಅವನ ರೂಪಗಳೆಂದು ಹೇಳಲಾಗುತ್ತದೆ. ಆ ವಿಗ್ರಹಗಳು ಒಂದಕ್ಕೊಂದು ಹೋಲುವದಿಲ್ಲ. ಅವೆಲ್ಲವೂ ಅದೇ ಓರ್ವ ರಾಜರಾಜನ ರೂಪಗಳೆನ್ನಲು ಸಾಧ್ಯವಿಲ್ಲ. ಆದರೆ ಇವುಗಳಲ್ಲಿ ಅದ್ಯಾವದಾದರೊಂದು ಅವನ ಅಚ್ಚಿರಬಹುದು ಅದ್ಯಾವದು? ಅದನ್ನು ಕಂಡು ಹಿಡಿಯುವವರ್‍ಯಾರು? ಈ ಪರಿಶ್ರಮ ರಾಜಕೀಯೋದ್ಯಮಿಗಳಿಗೆ ಬೇಕಾಗಿಲ್ಲ. ಅವರಿಗೆ ಅಗ್ಗದ ಅಗ್ಗಳಿಕೆ ಸಾಕು. ಅವನ ರೂಪ ಹೀಗೆನ್ನಲು ಸಾಧ್ಯ ಇಲ್ಲದಿರುವವರು ಅವನ ವಿಗ್ರಹವನ್ನಿಡಬೇಕೆಂದು ಹಟಕ್ಕೊಳಗಾಗಿದ್ದಾರೆ!

ಎಲ್ಲೆಲ್ಲೂ ವಿಗ್ರಹಗಳನ್ನು ನಿಲ್ಲಿಸುವ ಕಾಲವಿದು. ಹಾಗಿರುವಾಗ ಪ್ರಸಿದ್ಧ ಅರಸ ರಾಜರಾಜನಿಗೆ ಸ್ಮಾರಕ ನಿರ್ಮಿಸುವದರಲ್ಲಿ ತಪ್ಪೇನಿಲ್ಲದಿರಬಹುದು. ಅದಕ್ಕೆ ತಕ್ಕ ಸ್ಥಳ ಯಾವದು? ಬೃಹದೀಶ್ವರ ದೇವಾಲಯದೊಳಗೆ ಇಲ್ಲದಿರುವ ಹೊಸ ಗೊಂಬೆಯನ್ನಿಡುವ ಹಕ್ಕು ನಮಗಿಲ್ಲದೆ? ಹಾಗೊಂದು ಸ್ಮಾರಕವನ್ನು ಅಲ್ಲಿ ನಿಲ್ಲಿಸುವದಿದ್ದಲ್ಲಿ ಅದು ರಾಜನ ವಿಗ್ರಹವಾಗಿರುವದಕ್ಕಿಂತ ಅದಕ್ಕಾಗಿ ಬೆವರು ಸುರಿಸುವ ಶ್ರಮಿಕನ ಸ್ಮಾರಕವೇ ಇರಬೇಕು. ಇದುವೇ ಕೂಲಿಗಾರರ ಸರಕಾರಕ್ಕೆ ಸೂಕ್ತವಿದೆ! ಹಾಗಿದ್ದೂ ರಾಜನ ಮೇಲೆ ವ್ಯಾಮೋಹವೇಕೆ?

ದೇವಾಲಯದೊಳಗೆ ರಾಜರಾಜನ ವಿಗ್ರಹ ಇದೆಯೆನ್ನಲಾಗುತ್ತಿದೆ! ಹಾಗಿದ್ದಲ್ಲಿ ಹೊಸ ವಿಗ್ರಹದ ಆವಶ್ಯಕತೆ ಏನು? ದ್ರಾವಿಡ ಮುನ್ನೇಟ್ರ ಕಳಗಮಿನ ಆಳ್ವಿಕೆ ಬಂದು ಐದು ವರ್ಷಗಳ ಮೇಲಾದರೂ ಸ್ಮಾರಕ ಸ್ಥಾಪನೆಯ ಕುರಿತು ಈ ಹಿಂದೆ ಆ ಪಕ್ಷದವರು ಯೋಚಿಸಿರಲಿಲ್ಲ. ಆಡಳಿತದ ಅಂಕುಶವನ್ನು ಅಂಗೈಯೊಳಗೆ ತೆಗೆದುಕೊಳ್ಳುವ ಮುಂಚೆ ಅದಕ್ಕಾಗಿ ಹೋರಾಟ ನಡೆಸಿರುವದೂ ಇಲ್ಲ. ಈಗ ಈ ಸಂದರ್ಭದಲ್ಲಿ ಸ್ಮಾರಕ ನಿರ್ಮಾಣದ ಆವಶ್ಯಕತೆಯಾದರೂ ಏನು?

ದ್ರಾವಿಡ ಮುನ್ನೇಟ್ರ ಕಳಗಮಿಗೆ ಆವಶ್ಯಕತೆ ಇದೆ ಅದು ಕೇಂದ್ರದ ಆಡಳಿತ ವಹಿಸಿಕೊಂಡಿರುವ ಪಕ್ಷದೊಂದಿಗೆ ಕೂಡಿಕೊಂಡು ಹೋಗುತ್ತಿದ್ದ ವರೆಗೆ ಈ ಮಾತನ್ನೆತ್ತಿರಲಿಲ್ಲ. ಈಗ ಕೇಂದ್ರದ ವಿರುದ್ಧ ರಾಜ್ಯದ ಜನರನ್ನು ಛೂಬಿಟ್ಟು ಭೋಗದಾಸನದಲ್ಲಿ ತಾನು ಸುಖವಾಗಿರಲು ಅದು ಈ ಆಟವನ್ನಾಡಿದಂತಿದೆ. ಬೃಹದೀಶ್ವರ ಮಂದಿರವು ಕೇಂದ್ರದ ವಶದಲ್ಲಿದೆ. ಕೇಂದ್ರದ ಬಳಿ ತಾನು ಅನುಮತಿ ಕೇಳಿದುದಾಗಿಯೂ, ಕೇಂದ್ರ ನಿರಾಕರಿಸಿರುವದಾಗಿಯೂ ದ್ರಾ. ಮು. ಕ ಡಂಗುರ ಸಾರಿತು. ತಮ್ಮ ರಾಜ್ಯಕ್ಕೆ ಸ್ವಾತಂತ್ರ್ಯ ಇರುತ್ತಿದ್ದಲ್ಲಿ ಕೇಂದ್ರದ ಕರುಣೆಗಾಗಿ ಕೈಮುಗಿದುಕೊಂಡಿರದೆ, ರಾಜರಾಜನ ವಿಗ್ರಹವನ್ನು ದೇವಸ್ಥಾನದೊಳಗಿಡುತ್ತಿತ್ತೆಂದು ಅದು ಪ್ರಚಾರ ನಡೆಸಿತು. ದೇವಸ್ಥಾನದೊಳಗೆನೇ ಅಲ್ಲ, ಪೂಜೆಗಾಗಿ ವಿಗ್ರಹ ಇಡುವಲ್ಲೇ ಈ ಮೂರ್ತಿಯನ್ನೂ ನಿಲ್ಲಿಸಲಾಗುತ್ತಿತ್ತೋ ಏನೋ!

ಈ ವಿಷಯ ಕೇಂದ್ರಕ್ಕೂ ತಮಿಳ್ನಾಡಿಗೂ ಪತ್ರ ವ್ಯವಹಾರ ನಡೆದಿತ್ತು. ಈ ವಿಷಯವನ್ನು ಕಲಾಚಾರ ಖಾತೆಯ ಮಂತ್ರಿ ನೂರುಲ್ ಹಸನ್‌ರವರು ಲೋಕಸಭೆಯಲ್ಲಿ ತಿಳಿಯ ಪಡಿಸಿದ್ದಾರೆ. ಪ್ರಾದೇಶಿಕ ಸ್ವರವನ್ನೆತ್ತುತ್ತಿರುವ ದ್ರಾ. ಮು. ಕ ಧುರೀಣರು ಈ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡಂತಿದೆ. ಇಲ್ಲದಿದ್ದಲ್ಲಿ ಕೇಂದ್ರ ಸೂಚಿಸಿದಂತೆ ಬೇರೆಡೆ ಉತ್ತಮ ಸ್ಥಳದಲ್ಲಿ ಯೋಗ್ಯರೀತಿಯಲ್ಲಿ ವಿಗ್ರಹವನ್ನಿಡಬಹುದಾಗಿತ್ತು. ದೇವಸ್ಥಾನದ ಹೊರಗೆ ಈ ವಿಗ್ರಹವನ್ನು ಅನಾವರಣಗೊಳಿಸಲಾಗಿದೆ. ಅದರ ಕೆಳಭಾಗದಲ್ಲಿ 'ಕೇಂದ್ರವು ಅನುಮತಿ

ಚಾರು ಚಯನ

ವಿಜಯನಗರದ ಬಗ್ಗೆ ಪುನರ್ವಿಚಾರ

ಮದುಕನ ಮದುವೆಗೆ ಮುನ್ನೂರು ವಿಘ್ನ. ಕನ್ನಡ ಜನತೆಯ ಹೃದಯವೇ ಭಗ್ನ.

ಹೊಸಪೇಟೆಯ ಬಳಿ ಸ್ಥಾಪಿತವಾಗಲಿರುವ ವಿಜಯನಗರ ಉಕ್ಕಿನ ಕಾರಖಾನೆ ಇನ್ನೂ ಸ್ಥಾಪಿತವಾಗಲಿರುವ ಕಾರಖಾನೆಯಾಗಿಯೇ ಉಳಿದಿದೆ.

ಕೇಂದ್ರ ಕೈಗಾರಿಕಾ ಸಚಿವ ಶ್ರೀ ಮೋಹನ ಕುಮಾರಮಂಗಳಂ ಹೇಳಿದಂತೆ ಈ ಕಾರಖಾನೆಯ ಸ್ಥಾಪನೆಯ ಸಂಬಂಧದಲ್ಲಿ ಪುನರಾಲೋಚನೆ ನಡೆಯಬಹುದಂತೆ.

ಹಾಗಿದ್ದರೂ ಅಷ್ಟೆ. ಆಂಧ್ರದ ವಿಶಾಖಪಟ್ಟಣದ ನಿಯೋಜಿತ ಕಾರಖಾನೆಯ ಗತಿಯೂ ಇದಕ್ಕಿಂತ ಬೇರೆಯಲ್ಲ ಎಂದು ಸಮಾಧಾನಪಡೋಣವೆ?

ಆದರೆ ಸೇಲಂ ಕಾರಖಾನೆಯ ಬಗ್ಗೆ ಪುನರ್ವಿಚಾರವಿಲ್ಲವೆಂದು ಅಸೂಯೆಪಡೋಣವೆ?

ಛೆ, ಸೇಲಂನದ್ದು ವಿಶೇಷ ಉಕ್ಕು ತಯಾರಿಸುವಂಥದ್ದು. ಅದನ್ನು ವಿಜಯನಗರ-ವಿಶಾಖಪಟ್ಟಣಗಳೊಂದಿಗೆ ಎಂದಿಗೂ ಹೋಲಿಸಬಾರದು.

ಏನು, ಸಂದೇಹವೆ? ಆಂಧ್ರ ಕರ್ನಾಟಕಗಳಲ್ಲಿ ಆಳುವ ಕಾಂಗ್ರೆಸ್ಸಿನ ಅಧಿಕಾರ ಇನ್ನು ಒಂದೆರಡು ಚುನಾವಣೆಗಳ ವರೆಗೆ ಅಬಾಧಿತವೆಂಬುದರಿಂದ ಈ ಪುನರ್ವಿಚಾರವೆ?

ತಮಿಳುನಾಡಿನಲ್ಲಿ ಅಧಿಕಾರ ಸೂತ್ರ ಹಿಡಿಯಲೆಂದೇ ಸೇಲಂ ಕಾರಖಾನೆ ಮುಂದುವರಿಯುತ್ತದೆಯೆನ್ನುತ್ತೀರಾ?

ಛೆ.... ಇದು ಅಪಲಾಪ, ಅಪಪ್ರಚಾರ.

ಈ ಪುನರ್ವಿಚಾರ ಮತ್ತೇಕೆ?

ವಿಶಾಖಪಟ್ಟಣ-ವಿಜಯನಗರಗಳ ಕಾರಖಾನೆಗಳಿಗೆ ಮಿತಿಮೀರಿದ ವೆಚ್ಚ ಬರುತ್ತದೆ. ಅಪಾರ ವಿದೇಶೀ ವಿನಿಮಯವೂ ಬೇಕಾಗುತ್ತದೆ.

ಇವಕ್ಕೆ ವೆಚ್ಚಮಾಡುವ ಬಂಡವಳವನ್ನು ಈಗಿರುವ ಕಾರಖಾನೆಗಳ ಬಿಡಾವಣೆಗೇನೇ ಬಳಸಿಕೊಂಡರೆ ಹೆಚ್ಚು ಲಾಭ ಬರುತ್ತದೆ—ಇದು ಮಾನ್ಯ ಸಚಿವರ ಅಭಿಪ್ರಾಯ.

ಹಾಗಾದರೆ ಉಕ್ಕಿನ ಕಾರಖಾನೆಗಳನ್ನು ನೀಡಿದ್ದೇಕೆ? ಪ್ರಧಾನಿಯವರು ನಿರ್ಧಾರಕ್ಕೆ ಬರುವಾಗ ಈಯೆಲ್ಲ ಅಂಶಗಳನ್ನು ಪರಿಶೀಲಿಸಲಿಲ್ಲವೆ?

ದೇಶದಲ್ಲಿ ಉಕ್ಕಿನ ಅಭಾವ ತೀವ್ರವಾಗಿಯೇ ಇದೆಯೆಂಬುದು ನಿಜ. ಉಕ್ಕಿನ ಬೇಡಿಕೆ ವರ್ಷಗಳು ಕಳೆದಂತೆ ಹೆಚ್ಚುತ್ತ ಹೋಗುತ್ತಿರುವುದೂ ನಿಜವೇ.

ದೇಶದ ಉತ್ತರ ಭಾಗದಲ್ಲಿ 'ಸಾಕಷ್ಟು' ಕಾರಖಾನೆಗಳಿರುವುದರಿಂದ ದಕ್ಷಿಣ ಭಾಗದಲ್ಲಿ ಒಂದು ಬೃಹತ್ ಉಕ್ಕಿನ ಕಾರಖಾನೆ ಸ್ಥಾಪಿಸುವ ವಿಚಾರ ಮುಂದೆ ಬಂತು.

ದಕ್ಷಿಣದ ಎಲ್ಲ ರಾಜ್ಯಗಳೂ ತಂತಮ್ಮ ರಾಜ್ಯಗಳೇ ಅದಕ್ಕೆ ತಕ್ಕವೆಂದು ಸಮರ್ಥಿಸತೊಡಗಿದುವು. ಪರಿಶೀಲನೆಗೊಂದು ಸಮಿತಿ ನೇಮಕ—ಅದರ ವರದಿಯ ಮುಖ್ಯಾಂಶ ಭಾರಿ ಗುಪ್ತ.

ಹಲವು ದಿನಗಳ ಕಾಲ ಸನೆಗುದಿ--ದಕ್ಷಿಣ ಭಾರತೀಯರಿಗೆ ಕೊಳ್ಳುಪಿ

ಕೊನೆಗೂ ಪ್ರಧಾನಿ ಗಾಂಧಿಯವರ ಪರ್ವತ ಪ್ರಸವ. ಆಂಧ್ರಕ್ಕೊಂದು, ಕರ್ನಾಟಕಕ್ಕೊಂದು, ತಮಿಳುನಾಡಿಗೆ ವಿಶೇಷ ಉಕ್ಕಿನದೊಂದು ಕಾರಖಾನೆ!

ಎಲ್ಲರಿಗೂ ಖುಶಿ. ಬೋಲೋ ಇಂದಿರಾ ಗಾಂಧೀ ಕೀ ಜೈ.

ಸೇಲಂನದು ವಿಶೇಷ ಉಕ್ಕಿನದು. ಅದಕ್ಕೆ ವಿಶೇಷ ಸ್ಥಾನ ಮಾನ-ಅಗ್ರ ಪ್ರಾಶಸ್ತ್ಯ.

ಉಳಿದವು ಸಾಮಾನ್ಯವಾದುವು. ಅದು ದರಿಂದಲೇ ನಿಧಾನ.

ಅಶುಭಸ್ಯ ಕಾಲಹರಣಂ—ಪರಿಣಾಮವೇ ಪುನರ್ವಿಚಾರ.

ಕೇಂದ್ರ ಸರಕಾರದ ನಿಲುವು ಸಂದೇಹಾಸ್ಪದ. ಮರು ವಿಚಾರದ ನಿಲುವೆಯಿಂದ ಕನ್ನಡಿಗರಿಗೆ ಸಂಪೂರ್ಣ ನಿರಾಶೆ.

ತಮಗೊಂದು ಉಕ್ಕಿನ ಕಾರಖಾನೆ ಬೇಕೆಂದು ಕನ್ನಡಿಗರು ಏನೆಲ್ಲ ಮಾಡಲಿಲ್ಲ? ಅವರ ಭಗೀರಥ ಪ್ರಯತ್ನ—ಸಾಹಸ ಅವರಿಗೆ ಮಾತ್ರ ಗೊತ್ತು.

ಭಗೀರಥನು ತಂದ ಗಂಗೆ ಹರನ ಜಟೆಯಲ್ಲಿ ಅಡಗಿ ಹೋದಳು.

ಆ ಗಂಗೆ ಮುಂದೆ ಯೇನಕೇನ ಪ್ರಕಾರೇಣ ಹರಿದಳು. ಈ ಗಂಗೆಯೇನು ಮಾಡುತ್ತಾಳೆ?

ರಾಜ್ಯದ ಕೈಗಾರಿಕಾ ಸಚಿವ ಶ್ರೀ ಕೃಷ್ಣ ಕೇಂದ್ರಕ್ಕೆ ಬರೆದಿದ್ದಾರೆ. ಮರು ವಿಚಾರದ ಪ್ರಶ್ನೆಯನ್ನು ತಳ್ಳಿ ಹಾಕಿದ್ದಾರೆ. ಕಡಿಮೆ ವೆಚ್ಚದಲ್ಲಿ ಬೇಗನೆ ಉತ್ಪಾದಿಸಲು ಕೆಲವು ಸಲಹೆಗಳನ್ನೂ ನೀಡಿದ್ದಾರೆ.

ಕೇಂದ್ರ ನಿಲುವಿನಿಂದ ರಾಜ್ಯದ ಜನತೆಗಾದ ನಿರಾಶೆಯನ್ನು ತೋಡಿಕೊಂಡಿದ್ದಾರೆ.

ಕೇಂದ್ರ ತಾನು ನೀಡಿದ ಭರವಸೆಗಳನ್ನು ಈ ರೀತಿ ಮರು ವಿಚಾರಕ್ಕೆ ಒಳಪಡಿಸುವುದಾದರೆ ಭರವಸೆಗಳಲ್ಲಿ ಭರವಸೆಯಿಡಬೇಕಾದ ಅಗತ್ಯವೇನಿದೆ?

ಇತ್ತೀಚೆಗಿನ ವರ್ಷಗಳಲ್ಲಿ ಕೇಂದ್ರ ಸರಕಾರದ ನೀತಿ ರಾಜ್ಯದ ಬಗೆಗೆ ಉತ್ತೇಜಕವಾಗಿಲ್ಲ.

ಮಹಾರಾಷ್ಟ್ರ—ಕರ್ನಾಟಕ ಗಡಿವಿವಾದದಲ್ಲಿ ರಾಜ್ಯಕ್ಕೆ ನ್ಯಾಯ ದೊರಕುವ ಭರವಸೆ—ಮಹಾಜನ ಆಯೋಗದ ವರದಿಯನ್ನು ಕಾರ್ಯಾಚರಣೆಗೊಳಿಸುವ ಭರವಸೆ.

ಮಹಾಜನ ವರದಿ ನಿಜಲಿಂಗಪ್ಪನವರ ಪಾಪದ ಕೂಸು ಎಂದು ಇಂದಿನ ಆಳುವ ಕಾಂಗ್ರೆಸ್ ಮಂತ್ರಿಗಳು ಅಂದರು.

ನಿಜ ಹೇಳುವುದಾದರೆ, ಇದು ಸುಳ್ಳು. ಪ್ರಧಾನಿ ಇಂದಿರಾ ಗಾಂಧಿ ಆಗಿನ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ವಿ. ಪಿ. ನಾಯಕರ ಪಾಪದ ಕೂಸು ಇದು.

ಮಹಾಜನ ಆಯೋಗದ ನೇಮಕವನ್ನು ನಿಜಲಿಂಗಪ್ಪನವರ ಮೇಲೆ ಬಲಾತ್ಕಾರವಾಗಿ ಹೇರಲಾಗಿತ್ತು--ಇದರ ಪಾಪ ಶ್ರೀಮತಿ ಗಾಂಧಿಯವರೇ ಹೊರಬೇಕು.

ರಾಜ್ಯಕ್ಕೆ ನೀಡುವುದಾಗಿ ಹೇಳಿದ ವಿಶೇಷ ಧನ ಸಹಾಯದ ಮೊತ್ತವನ್ನೂ ಕೇಂದ್ರ ಕಡಿಮೆ ಮಾಡಿತು. ಈ ಸಂಬಂಧದಲ್ಲಿ ಕೇಂದ್ರ ನಿಂದನೆಯ ಆರೋಪ ಹೊರಿಸಿ ಅಂದಿನ ರಾಜ್ಯಪಾಲರಿಗೆ ಛೀಮಾರಿಯನ್ನೂ ಹಾಕಿತು.

ಉಕ್ಕಿನ ಕಾರಖಾನೆಯ ಹಗರಣ ಮತ್ತೆ ಆರಂಭವಾಗಿದೆ. ಇಂದಿರಮ್ಮನಲ್ಲಿ ವಿಶ್ವಾಸವಿಡ ಬೇಕೆಂದರು ರಾಜ್ಯದ ಆಳುವ ಕಾಂಗ್ರೆಸ್ ನಾಯಕರು.

ಜನತೆ ಅಪಾರ ವಿಶ್ವಾಸವನ್ನೂ ಪ್ರದರ್ಶಿಸಿತು.

ಕೇಂದ್ರದೊಡನೆ ಹೊಂದಿಕೊಳ್ಳುವ ಸರಕಾರ ರಾಜ್ಯದಲ್ಲಿ ರಚಿಸಿರಿ ಎಂದು ಕರೆ ನೀಡಿದರು ಶ್ರೀಮತಿ ಗಾಂಧಿ

ಮತದಾರರು ಅಂತೆಯೇ ಮಾಡಿದರು.

ಹೊಂದಿಕೊಳ್ಳುವುದೆಂದರೆ ಹೇಗೆ?

ನಾವು ಕೇಂದ್ರದೊಡನೆ ಜಗಳ ಕಾಯುವುದಿಲ್ಲವೆಂದರು ದೇವರಾಜ ಅರಸರು.

ಕೇಂದ್ರ ಸಚಿವ ಕುಮಾರ ಮಂಗಲಂಗೆ ರಾಜ್ಯ ಸಚಿವ ಎಂ. ಎಸ್. ಕೃಷ್ಣ ಬರೆದ ಪತ್ರ–ಮರು ವಿಚಾರವನ್ನು ತಳ್ಳಿಗಳೆಯುವ ಪತ್ರ–ಜಗಳ ಕಾಯುವಂತಹುದಲ್ಲ. ರಾಜ್ಯಕ್ಕೆ ನ್ಯಾಯವೊದಗಿಸುವ ಪ್ರಯತ್ನ.

ರಾಜ್ಯ ಕೇಂದ್ರಗಳ ಸಂಬಂಧ ಹೆಂಡತಿ–ಗಂಡರ ಸಂಬಂಧ. ಅಲ್ಲಿ ಭಿನ್ನಮತವೂ ಸಾಹಿತ ಬಹುದು. ಜಗಳವೂ ಆಗಬಹುದು ಕ್ಷಿಣವೂ ತಲೆದೋರಬಹುದು ವಿಚ್ಛೇದನದ ಅಂಜಿಕೆಯೂ ಕೆಲವೊಮ್ಮೆ ಕಾಣಿಸಿಕೊಳ್ಳಬಹುದು.

ಹನ್ನೆರಡೂ ತಿಂಗಳು ಮೋಡ ಕವಿಯುವುದು ಅಸಾಧ್ಯ ತಾನೆ? ಮೋಡ ಕವಿಯುತ್ತದೆ. ಮಿಂಚು ಮಿಂಚುತ್ತದೆ; ಗುಡುಗು ಗುಡುಗುತ್ತದೆ. ಒನಕೆ ಧಾರೆ ಸುರಿಯುತ್ತದೆ. ಮತ್ತೆಲ್ಲ ಶಾಂತವಾಗುತ್ತದೆ.

ವಿಜಯನಗರ ಉಕ್ಕಿನ ಕಾರಖಾನೆಯ ಬಗೆಗೆ ಈಗಾಗಲೇ ಬೇಕಾದುವಕ್ಕಿಂತ ನೀರು ರುಪಾಲು ಮಾನಮೇಷ ನಡೆದಿದೆ.

ಇನ್ನೂ ಅದೇಕೆ ಮುಂದುವರಿಯಬೇಕು?

ಸಚಿವ ಕೃಷ್ಣ ರಾಜ್ಯದ ಸಮಸ್ತ ಜನತೆಯ ಆಶೋತ್ತರಗಳನ್ನೇ ಪ್ರತಿಬಿಂಬಿಸಿ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಅದನ್ನು ಕೇಂದ್ರ ಪುರಸ್ಕರಿಸಬೇಕು. ಹಗರಣ ಸಾಕು ಮಾಡಬೇಕು. ವಿಜಯನಗರ ಕಾರಖಾನೆಗೆ ಇನ್ನು ವಿಳಂಬವಾಗ ಬಾರದು.

●●

ನೀಡದ ಕಾರಣ ಇಲ್ಲಿ ಈ ವಿಗ್ರಹವನ್ನಿಡಲಾಗಿದೆ'ಯೆಂದು ಬರೆದಿಡಲಾಗಿದೆ ಕೇವಲ ವಿಗ್ರಹಕ್ಕಾಗಿ, ರಾಜರಾಜನಿಗಾಗಿ ಹಾತೊರೆಯುವವರು ಹೀಗೆ ಮಾಡುವದುಂಟೇ?

ವಿಗ್ರಹದ ಕುರಿತು ತಮಿಳ್ನಾಡಿನ ಪಾಕ್ಷಿಕ ಪತ್ರಿಕೆಯೊಂದು ವ್ಯಂಗ್ಯ ಚಿತ್ರ ಬರೆದು ರಾಜ ರಾಜನ ಹೆಸರು ಭಾರೀ ಎತ್ತರದಲ್ಲಿ ಚಿಕ್ಕ ಅಕ್ಷರಗಳಲ್ಲಿದೆ, ಆದರೆ ಅದನ್ನು ಅನಾವರಣಗೊಳಿಸಿದ್ದ ಮುಖ್ಯಮಂತ್ರಿ ಕರುಣಾನಿಧಿಯವರ ಹೆಸರು ಕಣ್ಣೆತ್ತರದಲ್ಲಿ ದೊಡ್ಡಕ್ಷರಗಳಲ್ಲಿ ಕೆತ್ತಲಾಗಿದೆಯೆಂಬುದನ್ನು ಸೂಚಿಸಿದೆ.

ಏನೇ ಇರಲಿ, ಪ್ರಖ್ಯಾತ ಚೋಳ ರಾಜ ರಾಜರಾಜನ ವಿಗ್ರಹವನ್ನು ನಿಲ್ಲಿಸಲಾಯಿತು. ಆ ರವಿಕುಲ ಮಾಣಿಕ್ಯ, ಚೋಳೇಂದ್ರ ಸಿಂಹ, ಯಾರು ಚೋಳರಾಜ್ಯದ ಖ್ಯಾತಿ ದಶ ದಿಶೆಗಳಿಗೆ ಹಬ್ಬಿಸಿದನೋ, ಆವನ ವಿಗ್ರಹವನ್ನು ಕಾಯಲು ಪೋಲೀಸರು ಇಪ್ಪತ್ತನಾಲ್ಕು ಘಂಟೆ ಕಾಲವೂ ಪಹರೆ ನಡೆಸುತ್ತಿದ್ದಾರೆ.

— ಶ್ರೀ ಶಿವಶಂಕರ

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಭಾರತೀಯರ ವೃದ್ಧ ಸೇವಾನುರಾಗ

ಅಮೆರಿಕದಲ್ಲಿ ಜೀವಿಸುತ್ತಿರುವ ಅತ್ಯಂತ ವಯೋವೃದ್ಧರಾದ ಚಾರ್ಲಿ ಸ್ಮಿತ್ ಅವರನ್ನು ಅವರ ೧೩೦ನೇ ಹುಟ್ಟಿದ ಹಬ್ಬದಂದು ವಿಶೇಷ ಸಮಾರಂಭವೊಂದರಲ್ಲಿ ಸನ್ಮಾನಿಸಲಾಯಿತು. ಅಧ್ಯಕ್ಷ ನಿಕ್ಸನ್ ಮತ್ತು ಇತರ ಗಣ್ಯರು ಸಂದೇಶಗಳನ್ನೂ, ಭಾರತದ ಜನರಪ್ಪು ಒಂದು ಉಡುಗೊರೆಯನ್ನೂ ಕಳುಹಿಸಿದ್ದರು.

ಫ್ಲಾರಿಡಾದ ಸಹನಿವಾಸಿಗಳೊಡನೆ 'ಚಾರ್ಲಿ' ಎಂದು ಜನಪ್ರಿಯವಾಗಿರುವ ಈ ವೃದ್ಧ ನೀಗ್ರೋ ವ್ಯಕ್ತಿಗೆ ಅಭಿನಂದನೆಗಳನ್ನು ಸಲ್ಲಿಸಲು ಮತ್ತು ಬಾರ್ಟೋದ ಮೇಯರ್ ಡಾ| ಪಾಲ್ ಕೌರಿ ಅವರು [illegible] ಪ್ರತಿಕೃತಿಯೊಂದನ್ನು ಅವರಿಗೆ ಅರ್ಪಿಸುವುದನ್ನು ವೀಕ್ಷಿಸಲು ಸಾವಿರಕ್ಕೂ ಹೆಚ್ಚು ಮಂದಿ ನೆರೆದಿದ್ದರು.

ವೃದ್ಧರ ಸಮಸ್ಯೆಗಳಿಗೆ ಗಮನ ನೀಡುವ ಸಮಾಜ ಕಲ್ಯಾಣ ಸಂಸ್ಥೆಯೊಂದಾದ ಆಗ್ರಾದ ವೃದ್ಧ ಜನ ಸನ್ಮಾನ ಸಮಿತಿಯು ಈ ನೆನಪಿನ ಉಡುಗೊರೆಯನ್ನು ಅಮೆರಿಕಕ್ಕೆ ಕಳುಹಿಸುತ್ತಿತ್ತು.

ಏಪ್ರಿಲ್ ೨೨ರಂದು ಸ್ಥಳೀಯ ಸಿವಿಕ್ ಸೆಂಟರಿನಲ್ಲಿ ನಡೆದ ವ್ಯಾಪಾರಿಗಳ ದ್ವಿತೀಯ ವಾರ್ಷಿಕ ಪೆರೇಡ್‌ನ ಕಡೆಯ ಕಾರ್ಯಕ್ರಮ ಈ ಜನ್ಮ ದಿನಾಚರಣೆ.

ಭಾರತದ ಉಡುಗೊರೆಯನ್ನು ಅರ್ಪಿಸುತ್ತ ಮೇಯರ್ ಕೌರಿ ಹೀಗೆಂದರು:

"ಭಾರತದಲ್ಲಿ ಅವರು ತಮ್ಮ ವೃದ್ಧ ವ್ಯಕ್ತಿಗಳನ್ನು ಗೌರವಿಸುತ್ತಾರೆ. ತಮ್ಮ ಅತ್ಯಂತ ಹಿರಿಯ ಪೌರರೊಬ್ಬರನ್ನು ಸನ್ಮಾನಿಸಲು ಅವರು ಸಮಾರಂಭವೊಂದನ್ನೇರ್ಪಡಿಸಿ ಆ ಸಂದರ್ಭದಲ್ಲಿ ೧೯ ಮಂದಿ ವಿದೇಶೀ ರಾಯಭಾರಿಗಳಿಗೆ ಅವರವರ ರಾಷ್ಟ್ರಗಳ ಅತ್ಯಂತ ಹಿರಿಯ ವ್ಯಕ್ತಿಗೆ ಅರ್ಪಿಸುವ ಸಲುವಾಗಿ ಇಂತಹ ಪ್ರತಿಕೃತಿಗಳನ್ನು ನೀಡಿದರು. ಇದನ್ನು ನಿಮಗೆ ಅರ್ಪಿಸಲು ಅಮೆರಿಕಕ್ಕೆ ಕಳುಹಿಸಲಾಗಿದೆ.

ಚಾರ್ಲೀಯವರು ಈ ಪ್ರತಿಕೃತಿಯನ್ನು ತಮ್ಮ ಮನೆಯಲ್ಲಿ 'ಷೋಕೇಸ್'ನಲ್ಲಿಡುವರು. ಇದು ಅವರು ತಮ್ಮ ಹಿತೈಷಿಗಳಿಂದ ಪಡೆದ ಅನೇಕ ಉಡುಗೊರೆಗಳಲ್ಲಿ ಅತ್ಯಂತ ಅಪೂರ್ವವಾದುದು.'

ಈ ಹುಟ್ಟಿದ ಹಬ್ಬದ ಸಮಾರಂಭವನ್ನು ಯೋಜಿಸಿದ, ಬಾರ್ಟೋದ ವೃತ್ತಪತ್ರಿಕೆ 'ಪೋಕ್ ಕೌಂಟಿ ಡೆಮೊಕ್ರಟ್'ನ ವ್ಯವಸ್ಥಾಪಕ ಸಂಪಾದಕ ಎಸ್. ಎಲ್. ಫ್ರಿಸ್ಬಿ—ಳ ಅವರು ಅಧ್ಯಕ್ಷ ನಿಕ್ಸನ್ನರ ತಂತಿ ಸಂದೇಶವನ್ನು ಓದಿದರು.

ಅಧ್ಯಕ್ಷರ ಸಂದೇಶ ಹೀಗಿದೆ:

'ನೀವು ಇಷ್ಟರಲ್ಲೇ ನಿಮ್ಮ ೧೩೦ನೇ ಜನ್ಮ ದಿನವನ್ನು ಆಚರಿಸುವಿರೆಂದು ಸೆನೆಟರ್ ಚಿಲಿಸ್ ಅವರಿಂದ ತಿಳಿದು ಶ್ರೀಮತಿ ನಿಕ್ಸನ್ ಹಾಗೂ ನನಗೆ ಹರ್ಷವಾಗಿದೆ. ನಾವಿಬ್ಬರೂ ನಿಮಗೆ ಅಭಿನಂದನೆಗಳನ್ನು ಕಳುಹಿಸುತ್ತಿದ್ದೇವೆ ಮತ್ತು ನಿಮಗೆ ಸದಾ ಶಾಂತಿ ಸುಖ ಮತ್ತು ಸಂತೃಪ್ತಿ ದೊರೆಯಲಿ ಎಂದು ಹಾರೈಸುತ್ತೇವೆ."

ಅಮೆರಿಕದ ಪ್ರತಿನಿಧಿ ಜೇಂಸ್ ಎ. ಹೇಲೀ ಅವರು ಕಳುಹಿಸಿದ ಅಭಿನಂದನಾ ಸಂದೇಶವನ್ನೂ ಓದಲಾಯಿತು.

ಫ್ಲಾರಿಡಾದ ಅಮೆರಿಕದ ಸೆನೆಟರ್ ಲಾಟನ್ ಚಿಲಿಸ್ ಅವರು ಏಪ್ರಿಲ್ ೨೨ರಂದು ಚಾರ್ಲೀಯವರ ಮನೆಗೆ ತೆರಳಿ ಶುಭಾಶಯಗಳನ್ನು ಸಲ್ಲಿಸಿದರು.

ಚಾರ್ಲೀಯವರು ತಮ್ಮ ಜನ್ಮ ದಿನವನ್ನು ಜುಲೈ ೪ರಂದು ಆಚರಿಸುತ್ತಾರಾದರೂ, ಸ್ಥಳೀಯ ಘಟನೆಯೊಂದಿಗೆ ಸೇರಿಕೊಳ್ಳುವಂತೆ ಈ ಸಮಾರಂಭವನ್ನು ವ್ಯವಸ್ಥೆಗೊಳಿಸಲಾಯಿತು.

ಚಾರ್ಲೀಯವರು ವ್ಯಾಪಾರಿಗಳ ಪೆರೇಡ್‌ನಲ್ಲಿ ಸಂದರ್ಶಕರನ್ನು ಸ್ವಾಗತಿಸಿದರು.

ಮತ್ತು ಬಾರ್ಟೋದ ಸರಸರಾಜುದಾರರೊಬ್ಬರು ತಮಗಾಗಿ ತಯಾರಿಸಿದ ಬರ್ತ್‌ಡೇ ಕೇಕನ್ನು ಅವರೊಡನೆ ಹಂಚಿಕೊಂಡರು. ಸಿವಿಕ್ ಸ್ವಿಮಿಂಗ್‌ಪೂಲ್‌ನ ಸುತ್ತ ಈ ಸಮಾರಂಭ ನಡೆಯಿತು. ಅತಿಥಿಗಳು ಅಲ್ಲಿಂದಲೇ ಮನರಂಜನಾ ಕಾರ್ಯಕ್ರಮವೊಂದನ್ನು ವೀಕ್ಷಿಸಿದರು.

ಈ ಜನ್ಮದಿನ ಸಮಾರಂಭವನ್ನು ಅನೇಕ ದಿನ ಪತ್ರಿಕೆಗಳು, ಸ್ಥಳೀಯ ಹಾಗೂ ರಾಷ್ಟ್ರೀಯ ಟೆಲಿವಿಷನ್, ಮತ್ತು ಅಮೆರಿಕದ ಎರಡು ದೊಡ್ಡ ವೈರ್ ಸರ್ವಿಸ್‌ಗಳಾದ ಅಸೋಸಿಯೇಟೆಡ್ ಪ್ರೆಸ್ ಮತ್ತು ಯುನೈಟೆಡ್ ಪ್ರೆಸ್ ಇಂಟರ್‌ನ್ಯಾಷನಲ್ ರಾಷ್ಟ್ರದಾದ್ಯಂತ ವರದಿ ಮಾಡಿದವು. ಚಾರ್ಲೀಯವರೊಡನೆ ಪೋಕ್ ಕೌಂಟಿ ಡೆಮೊಕ್ರಟ್‌ನ ಪ್ರಕಾಶಕ ಲಾಯಲ್ ಫ್ರಿಸ್ಬಿ ಅವರು ನಡೆಸಿದ ಸಂದರ್ಶನವೊಂದನ್ನು ಅರ್ಜೆಂಟೈನದ ರೇಡಿಯೋ ನಿಲಯವೊಂದು ರೆಕಾರ್ಡ್ ಮಾಡಿಕೊಂಡಿತು.

ಲೈಬೀರಿಯದಲ್ಲಿ ಜನಿಸಿದ ಸ್ಮಿತ್ ಅವರನ್ನು ಅವರ ೧೨ನೆಯ ವಯಸ್ಸಿನಲ್ಲಿ ಗುಲಾಮರ ವ್ಯಾಪಾರಿಗಳು ಅಪಹರಿಸಿ ಅಮೆರಿಕಕ್ಕೆ ಕರೆತಂದರು. ಅವರನ್ನು ಟೆಕ್ಸಾಸ್‌ನ ಗ್ಯಾವಲ್‌ಸ್ಟನ್‌ನ ರ್‍ಯಾಂಚರ್ ಚಾರ್ಲ್ಸ್ ಸ್ಮಿತ್ ಎಂಬುವವರಿಗೆ ಮಾರಲಾಯಿತು. ಆತ ಇವರ ಹುಟ್ಟಿದ ದಿನ ಜುಲೈ ೪ಎಂದು ಸೂಚಿಸಿದರು. ಚಾರ್ಲೀಯವರು ಈಗಲೂ ಈ ಟೆಕ್ಸನನ್ನು 'ಹಿರಿಯ ವ್ಯಕ್ತಿ ಸ್ಮಿತ್' ಎಂದು ಮತ್ತು "ನನ್ನ ಪ್ರೀತಿಯ ತಂದೆ" ಎಂದು ಉಲ್ಲೇಖಿಸುತ್ತಾರೆ.

೧೮೬೩ರಲ್ಲಿ ಅವರ ೨೧ನೆಯ ವಯಸ್ಸಿನಲ್ಲಿ ಅವರು, ಎಲ್ಲ ಗುಲಾಮರನ್ನೂ ವಿಮುಕ್ತಗೊಳಿಸಿದ ಅಬ್ರಹಾಂ ಲಿಂಕನರ ದಾಸ್ಯ ವಿಮೋಚನಾ ಘೋಷಣೆಯ ಬಗೆಗೆ ಚಾರ್ಲೀಗೆ ತಿಳಿಸಿದಾಗ ಇವರಿಗೆ ತಾನು ಸ್ವತಂತ್ರನೆಂಬುದು ಅರಿವಾಯಿತು. ಸ್ಮಿತ್ ಅವರ ನಿಧನದ ವರೆಗೆ ಚಾರ್ಲೀ ಆ ರ್‍ಯಾಂಚಿನಲ್ಲಿಯೇ 'ಕೌ ಬಾಯ್' ಆಗಿದ್ದರು.

ಇಂದು ಚಾರ್ಲೀಯವರು ಬಾರ್ಟೋನಲ್ಲಿ ಒಂದು ಚಿಕ್ಕ ಮನೆಯಲ್ಲಿ ಏಕಾಂಗಿಯಾಗಿ ಜೀವಿಸುತ್ತಿದ್ದಾರೆ.

ಅಬರ್ನ್‌ಡೇಲ್ ಸಿಟ್ರಸ್‌ಗೆ ಗ್ರೋವನ್ ಮಾಲಿಕರು, ೧೯೫೫ರಲ್ಲಿ ಫ್ಲಾರಿಡಾದ ಕಿತ್ತಳೆ ತೋಟವೊಂದರಲ್ಲಿ ಹಣ್ಣು ಕೀಳುತ್ತಿದ್ದ ಚಾರ್ಲಿಯನ್ನು ಆತನ ಸೋಷಿಯಲ್ ಸೆಕ್ಯೂರಿಟಿ ಕಾರ್ಡ್‌ನ ಎಲ್ಲಿಂದು ವಿಚಾರಿಸಿದರು. ಅಲ್ಲಿಯ ವರೆಗೆ ಈ ಹಿರಿಯ ನೀಗ್ರೋ ಹೆಚ್ಚು ಗಮನ ಸೆಳೆದಿರಲಿಲ್ಲ.

'ಸೋಷಿಯಲ್ ಸೆಕ್ಯೂರಿಟಿ' ಎಂಬ ಪದ ಚಾರ್ಲಿಗೆ ಹೊಸದಾಗಿತ್ತು. ಸಿಟ್ರಸ್ ತೋಟದ ಮಾಲಿಕ ಸೆಕ್ಯೂರಿಟಿ ಆಡಳಿತಕ್ಕೆ ಬರೆದ. ಈ ಬಗೆಗೆ ಅವರ ಹೆಸರನ್ನು ಪರಿಶೀಲಿಸುತ್ತಿದ್ದಾಗ, ಆತನು ತನ್ನ ವಯಸ್ಸು ೧೧೩ ಎಂದು ಹೇಳಿಕೊಂಡದ್ದು ಪತ್ತೆಯಾಯಿತು. ಸ್ವಲ್ಪ ಸಮಯದ ನಂತರ ಅವರನ್ನು ವೃದ್ಧಾಪ್ಯ ವಿಜ್ಞಾನದ ಆಸ್ಪತ್ರೆಯೊಂದಕ್ಕೆ ಕಳಿಸಲಾಯಿತು. ಅದು ಅವರ ವಯಸ್ಸನ್ನು ಖಚಿತಪಡಿಸಿತು.

ಚಾರ್ಲಿ ಈಗ ನಿವೃತ್ತರಾಗಿದ್ದಾರೆ. ಇತ್ತೀಚಿನ ವರೆಗೆ ಆತ ತನ್ನ ಮನೆಯಲ್ಲೇ ಒಂದು ಚಿಕ್ಕ 'ಸಾಫ್ಟ್ ಡ್ರಿಂಕ್ಸ್' ಸ್ಟಾಂಡ್ ಉದ್ಯಮ ನಡೆಸುತ್ತಿದ್ದರು. "ಸೋಡಾಗಳ ಬೆಲೆ ತುಂಬಾ ಏರಿದೆ, ನಾನದನ್ನು ಕೊಡಲಾರೆ" ಎಂದು ಅವರು ನುಡಿದರು.

●●

ಸಿಂಡಿಕೇಟ್ ಬ್ಯಾಂಕಿಗೆ ಸರ್ವತೋಮುಖ ಪ್ರಗತಿ ವರ್ಷ

(ಐದನೇ ಪುಟದಿಂದ)

ಗೆ ಸಾಲ ಸೌಲಭ್ಯಗಳನ್ನು ಒದಗಿಸುವುದೇ ಬ್ಯಾಂಕಿನ ನೀತಿ.

ಲೀಡ್ ಬ್ಯಾಂಕ್ ಸರ್ವೆ

ಬ್ಯಾಂಕಿಗೆ ದೇಶದ ೧೬ ಜಿಲ್ಲೆಗಳನ್ನು ಲೀಡ್ ಬ್ಯಾಂಕ್ ಯೋಜನೆಯಂತೆ ಒಪ್ಪಿಸಲಾಗಿದ್ದು, ಈ ವೇಳೆಗೆ ಇವುಗಳ ಪರಿವೀಕ್ಷಣೆ ಸಂಪೂರ್ಣ ಮುಗಿದಂತಾಗಿದೆ. ಈ ಸರ್ವೆಯ ಆಧಾರದ ಮೇಲೆ ಬ್ಯಾಂಕು ಸುವಿಸ್ತೃತ ಯೋಜನೆಗಳನ್ನು ರೂಪಿಸಿ ಅವನ್ನು ಹಂತ ಹಂತವಾಗಿ ಕಾರ್ಯಕೃತಗೊಳಿಸಲು ಕಟಿಬದ್ಧವಾಗಿದೆ. ಆಂಧ್ರಪ್ರದೇಶದ ಜಿಲ್ಲೆಗಳಲ್ಲಿ ಈ ವರ್ಷಾರಂಭದಲ್ಲೇ ಇದು ಕಾರ್ಯಗತವಾಗ ತೊಡಗಿದೆ.

ಒಟ್ಟಿನಲ್ಲಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿ ಸಾಧಿತವಾಗಿದೆ. ಕಸ್ಟೋಡಿಯನ್ ಶ್ರೀ ಕೆ. ಕೆ. ಪೈ, ಮತ್ತಿತರ ಅಧಿಕಾರಿ. ನೌಕರ ವರ್ಗದ ನಿಷ್ಠಾಪೂರ್ಣ ದಕ್ಷ ಸೇವೆಯ ಪರಿಣಾಮವಾಗಿ ಬ್ಯಾಂಕು ಅತ್ಯಂತ ಪ್ರಗತಿ ಹೊಂದುವುದು ಸಾಧ್ಯವಾಯಿತು. ಸಿಂಡಿಕೇಟ್ ಬ್ಯಾಂಕಿನ ಪ್ರಗತಿಗೆ 'ನವಯುಗ'ವು ಹೃತ್ಪೂರ್ವಕ ಅಭಿಮಾನ ಪಡುತ್ತದೆ; ಅದರ ಪ್ರಗತಿ ಇತೋಪ್ಯತಿಶಯವಾಗಲೆಂದು ಹಾರೈಸುತ್ತದೆ.

●

ಸೇಫ್ ಡಿಪಾಜಿಟ್ ಲಾಕರ್
ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ
ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್
ESTD. 1906
ರಥಬೀದಿ, ಮಂಗಳೂರು — ಫೋನ್ ನಂ. 5057
ಕಂಕನಾಡಿ, ಮಂಗಳೂರು — ಫೋನ್ ನಂ. 7312
ಪುತ್ತೂರು, ಫೋನ್ ನಂ. 164
mea/CBC/151 Kan.

ಬಸ್ರೂರು ಶಾರದಾ ಕಾಲೇಜು ಶಂಕು ಸ್ಥಾಪನೆ

ಬಸ್ರೂರಿನ ಶಾರದಾ ಕಾಲೇಜಿನ ಶಂಕು ಸ್ಥಾಪನೆಯನ್ನು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರು ತಾ. 7ರಂದು ನೆರವೇರಿಸಿ ಬಸ್ರೂರು ಹಿಂದೂ ಶಾಲಾ ಅಸೋಸಿಯೇಶನ್‌ನವರು ಮತ್ತು ಶ್ರೀ ಶಾರದಾ ಕಾಲೇಜು ಟ್ರಸ್ಟ್‌ನವರು ಪ್ರಾರಂಭಿಸಲಿರುವ ಕಾಲೇಜಿನ ಕಾರ್ಯಗಳು ಸುಗಮವಾಗಲೆಂದು ಹಾರೈಸಿದರು.

ಶ್ರೀ ಬಿ. ರಮಾನಾಥ ನಾಯಕರು ಆರಂಭದಲ್ಲಿ ಸ್ವಾಗತಗೀತೆ ಹಾಡಿದ ಬಳಿಕ ಭುವನೇಂದ್ರ ಬಾಲಕಾಶ್ರಮದವರು ಗೀತಾಪ್ರವಚನ ಮಾಡಿದರು. ಗಂಗೊಳ್ಳಿಯ ಶ್ರೀಮತಿ ಮಾಲತಿ ಮತ್ತು ಸಹೋದರಿಯರು ಬಸವಣ್ಣನವರ ವಚನ ಮತ್ತು ಭಾವಗೀತೆಗಳನ್ನು ಹಾಡಿದರು. ಕುಂದಾಪುರ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ವೀರರಾಜೇಂದ್ರ ಹೆಗ್ಗಡೆಯವರು ಸ್ವಾಗತಿಸಿದರು. ಶ್ರೀ ಕೆ. ಎಸ್. ಕಾಮತರು ಸಂದೇಶಗಳನ್ನೋದಿದರು. ಶ್ರೀ ವೆಂಕಟರಮಣ ಭಟ್ಟರು ವರದಿ ಓದಿದ ಬಳಿಕ, ಶ್ರೀ ಶಿವರಾಮ ಶೆಟ್ಟರು ಸಹಾಯಧನ ಸಂಗ್ರಹದ ವಿವರವಿತ್ತರು. ಡಾ| ಶಾಂತಾರಾಮ ಅವರು ವಂದಿಸಿದರು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ಶಿಕ್ಷಣದ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA Weekly

ಕನ್ನಡ ಚಿತ್ರಗಳಿಗೆ ಸಹಾಯ ಧನ ಮುಂದುವರಿಯಲಿ

ಕನ್ನಡ ಫಿಲಂ ಗಿಲ್ಡ್‌ನ ವಿನಂತಿ

ಕನ್ನಡ ಫಿಲಂ ಗಿಲ್ಡಿನ ಸಭೆಯೊಂದು ನೆನ್ನೆ ಲರಂದು ಬೆಂಗಳೂರಲ್ಲಿ ನಡೆದು ಈ ಕೆಳಗಿನ ಗೊತ್ತುವಳಿಗಳನ್ನು ಸ್ವೀಕರಿಸಿತು.

೧. ಭಾರತದಲ್ಲಿ ತಯಾರಾದ ಫಿಲಂಗಳಲ್ಲಿ ಬಂಗಾರದ ಪದಕ ಗಳಿಸುವಷ್ಟರ ಮಟ್ಟಿಗೆ ಕನ್ನಡ ಫಿಲಂ ಉದ್ಯಮವು ರಾಜ್ಯದಲ್ಲಿ ಬೆಳೆದಿರುವುದಲ್ಲದೆ ಅಖಿಲ ಭಾರತ ಮಟ್ಟದಲ್ಲಿ ಸರ್ವಶ್ರೇಷ್ಠ ದಿಗ್ದರ್ಶಕ ಪ್ರಶಸ್ತಿ ಪಡೆಯುವಷ್ಟು ಅದು ಅಭಿವೃದ್ಧಿ ಹೊಂದಿದೆಯೆಂದೂ ಗಿಲ್ಡ್ ಅಭಿಪ್ರಾಯ ಪಡುತ್ತದೆ. ಮೈಸೂರು ಸರಕಾರವು ಕನ್ನಡ ಚಿತ್ರೋದ್ಯಮಕ್ಕೆ ಸಹಾಯಧನದ ರೂಪದಲ್ಲಿ ನೆರವಿತ್ತ ಪರಿಂದಲೇ ಇದು ಸಾಧ್ಯವಾಯ್ತು. ಆದುದರಿಂದ ಗುಣಮಟ್ಟದ ಬಿಗಿತವಿಲ್ಲದೇನೇ ರಾಜ್ಯದಲ್ಲಿ ತಯಾರಾಗುವ ಎಲ್ಲ ಚಿತ್ರಗಳಿಗೂ ಸಹಾಯ ಧನ ನೀಡಬೇಕು.

೨. ಇತರ ರಾಜ್ಯಗಳ ರಾಜಧಾನಿಗಳಲ್ಲೂ ಕನ್ನಡ ಚಿತ್ರೋತ್ಸವಗಳನ್ನು ಸಂಘಟಿಸಿ ಕನ್ನಡ ಚಿತ್ರಗಳ ಮಾರುಕಟ್ಟೆಯನ್ನು ವಿಸ್ತರಿಸಬೇಕು.

೩. ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಮೈಸೂರು ರಾಜ್ಯ ಚಿತ್ರೋದ್ಯಮ ಅಭಿವೃದ್ಧಿ ಮಹಾ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿ ಫಿಲಂ ಸ್ಟುಡಿಯೋ, ನಿರ್ಮಾಪಕರು ಕಲಾವಿದರಿಗೆ ವಸತಿ ಸೌಲಭ್ಯಗಳನ್ನು ಕಟ್ಟುವ ನಿರ್ಧಾರ ಮಾಡಿದ್ದಕ್ಕೆ ಗಿಲ್ಡು ಸಂತೋಷಿಸುತ್ತದೆ. ಬೆಂಗಳೂರಿನ ದಟ್ಟಣೆಯ ಪ್ರದೇಶಗಳಲ್ಲಿ ಸೆಮಿಪರ್ಮನೆಂಟ್ ಚಿತ್ರ ಮಂದಿರಗಳನ್ನು ಕಟ್ಟಿಸಿ ಶೇಕಡಾವಾರು ತಳಹದಿಯಲ್ಲಿ ಕನ್ನಡ ಚಿತ್ರ ಪ್ರದರ್ಶನಕ್ಕೆ ಕೂಡಲೇ ಅವಕಾಶವೊದಗಿಸಿ ಕೊಡಬೇಕೆಂದು ಗಿಲ್ಡು ಮಹಾ ಮಂಡಳಿಯನ್ನು ಕೇಳಿಕೊಳ್ಳುತ್ತದೆ. ಶೇಕಡಾವಾರು ತಳಹದಿಯಲ್ಲಿ ತಮ್ಮ ಚಿತ್ರಗಳನ್ನು ಪ್ರದರ್ಶಿಸಲು ಚಿತ್ರ ಮಂದಿರ ದೊರೆಯದೆ ಹಲವಾರು ಕನ್ನಡ ಚಿತ್ರ ನಿರ್ಮಾಪಕರು ನಷ್ಟಕ್ಕೊಳಗಾಗಿದ್ದಾರೆ. ಮಂದಿರಗಳಿಗೆ ದೊಡ್ಡ ಮೊತ್ತದ ಬಾಡಿಗೆ ತೆತ್ತು ಚಿತ್ರ ಪ್ರದರ್ಶಿಸುವುದು ಅಸಾಧ್ಯವಾದುದರಿಂದ ತಯಾರಕರು ತಮ್ಮ ಕೈಯಿಂದಲೇ ಬಾಡಿಗೆ ತೆರಬೇಕಾಗುವ ಸಂದರ್ಭಗಳೇ ಇವೆ.

೪. ಪೂನಾದ ಮಾದರಿಯಲ್ಲಿ ಫಿಲಂ ತರಬೇತಿ ಸಂಸ್ಥೆಯೊಂದನ್ನು ಆರಂಭಿಸಿ ಕನ್ನಡ ಚಿತ್ರೋದ್ಯಮಕ್ಕೆ ಹೆಚ್ಚಿನ ತಂತ್ರಜ್ಞರನ್ನೂ ಕಲಾವಿದರನ್ನೂ ಒದಗಿಸ ಬೇಕೆಂದು ಸರಕಾರವನ್ನು ವಿನಂತಿಸುತ್ತದೆ.

೫. ಕಚ್ಚಾ ಫಿಲಂಗಳನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಸ್ಥಳೀಯ ಆಯಾತ—ನಿರ್ಯಾತಗಳ ಸಹಮುಖ್ಯ ಕಂಟ್ರೋಲರ್‌ರಿಗೆ ಪರವಾನಿಗೆ ನೀಡುವ ಅಧಿಕಾರ ಕೊಡಬೇಕೆಂದು ಕೇಂದ್ರ ಸರಕಾರವನ್ನು ರಾಜ್ಯ ಸರಕಾರವು ಕೇಳಿಕೊಳ್ಳಬೇಕು. ಫಿಲಂ ಯುನಿಟ್ ಕಾರ್ಯಸೌಧವು ಫಿಲಂ ಕೌಂಟರನ್ನು ತೆರೆದು ಕಚ್ಚಾ ಫಿಲಂಗಳನ್ನು ವಿತರಿಸಬಹುದು.

೬. ಕನ್ನಡ ಚಿತ್ರ ತಯಾರಕರು ತಮ್ಮ ಚಿತ್ರಗಳ ಸೆನ್ಸಾರಿಗಾಗಿ ಮದ್ರಾಸಕ್ಕೆ ಹೋಗುವುದನ್ನು ತಪ್ಪಿಸಲು ಬೆಂಗಳೂರಿನಲ್ಲಿಯೇ ಸೆನ್ಸಾರ್ ಬೋರ್ಡ್ ಕಾರ್ಯಸೌಧವೊಂದಾಗುವಂತೆ ರಾಜ್ಯ ಸರಕಾರವು ಕ್ರಮ ತೆಗೆದುಕೊಳ್ಳಬೇಕು.

೭. ರಾಜ್ಯವನ್ನು "ಕರ್ನಾಟಕ"ವೆಂದು ರಾಜ್ಯ ಸರಕಾರ ಹೆಸರಿಸಬೇಕು.

೮. ವೈಯಕ್ತಿಕ ತಯಾರಕರ ಅಭಿಪ್ರಾಯ ಪ್ರಕಟಣೆಯಲ್ಲಿ ಆತಂಕ ಒಡ್ಡುವುದರಿಂದ ಫಿಲ್ಮ್ ಕೌನ್ಸಿಲ್ ನೇಮಿಸುವ ಭಾರತ ಸರಕಾರದ ಯೋಚನೆಯನ್ನು ವಿರೋಧಿಸುತ್ತದೆ.

೯. ಚಿತ್ರೋದ್ಯಮಾಭಿವೃದ್ಧಿಗೆ ಸಂಬಂಧಿಸಿ ಸರಕಾರ ನೇಮಿಸುವ ಎಲ್ಲ ಸಮಿತಿ, ಮಂಡಳಿ ಆಯೋಗ ಮೊದಲಾದುವುಗಳಲ್ಲಿ ಕನ್ನಡ ಫಿಲಂ ಗಿಲ್ಡಿಗೆ ಪ್ರಾತಿನಿಧ್ಯ ನೀಡಬೇಕೆಂದು ರಾಜ್ಯ—ಕೇಂದ್ರ ಸರಕಾರಗಳನ್ನು ಪ್ರಾರ್ಥಿಸುತ್ತದೆ.

೧೦. ಗಿಲ್ಡಿನ ಅಧ್ಯಕ್ಷ ಶ್ರೀ ಕೆ. ಮೋಹನ ದೇವ ಆಳ್ವರ ನಾಯಕತ್ವದಲ್ಲಿ ಮುಖ್ಯ ಮಂತ್ರಿಯವರಲ್ಲಿಗೆ ನಿಯೋಗವೊಂದನ್ನು ಒಯ್ದು ಕನ್ನಡ ಚಿತ್ರೋದ್ಯಮದ ಅಭಿವೃದ್ಧಿಗೆ ಸಂಬಂಧಿಸಿ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಬೇಕು.

●●

ಕಾವೂರಿನಲ್ಲಿ ಶರಾವತಿ ವಿದ್ಯುತ್ ರಿಸೀವಿಂಗ್ ಸ್ಟೇಶನ್ ಉದ್ಘಾಟನೆ

ಮೈಸೂರು ಪವರ್ ಕೋರ್ಪೋರೇಶನ್‌ನವರು ಮಂಗಳೂರಿಗೆ ಸಮೀಪದ ಕಾವೂರಿನಲ್ಲಿ 175 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ 220 ಕಿಲೋವಾಟ್ ಶಕ್ತಿಯ ಶರಾವತಿ ವಿದ್ಯುತ್ ರಿಸೀವಿಂಗ್ ಸ್ಟೇಶನಿನ ಉದ್ಘಾಟನೆಯನ್ನು ತಾ. 10ರಂದು ಲೋಕೋಪಯೋಗಿ ಮತ್ತು ವಿದ್ಯುತ್ ಇಲಾಖೆಯ ಸಚಿವ ಶ್ರೀ ಎಚ್. ಎಂ. ಚನ್ನಬಸಪ್ಪನವರು ಶಾಸಕಿ ಶ್ರೀಮತಿ ಅಡ್ಡಿ ಸಲ್ದಾನಾರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಪವರ್ ಕಾರ್ಪೋರೇಶನಿನ ಚೆಯರ್‌ಮೇನ್ ಶ್ರೀ ಪಿ. ಆರ್. ನಾಯಕರು ಆರಂಭದಲ್ಲಿ ಸ್ವಾಗತಿಸಿದರು. ಶ್ರೀ ಎಂ. ಡಿ. ಕೃಷ್ಣಸ್ವಾಮಿಯವರು ಸಂದೇಶಗಳನ್ನೋದಿದರು. ಕೋರ್ಪೋರೇಶನಿನ ಇಂಜಿನಿಯರ್ ಇನ್ ಚೀಫ್ ಶ್ರೀ ಎಸ್. ಬಿಸ್ಸಪ್ಪನವರು ವರದಿ ಓದಿದರು.

ಸಚಿವ ಶ್ರೀ ಎಚ್. ಎಂ. ಚನ್ನಬಸಪ್ಪನವರು ಮಾತಾಡುತ್ತಾ, ಮೈಸೂರು ರಾಜ್ಯದ ವಿದ್ಯುತ್ ಉತ್ಪಾದನಾ ಕಾರ್ಯಗಳನ್ನು ವಿವರಿಸಿದರು. ದಕ್ಷತೆ ಮತ್ತು ಪ್ರಾಮಾಣಿಕತೆಗಳಿಂದ ಕೆಲಸ ಮಾಡುವವರಿಗೆ ಪುರಸ್ಕಾರ ನೀಡುವ ಕುರಿತು ಯೋಜಿಸಲಾಗುತ್ತಿದ್ದು ಅಂತೆಯೇ ಕೆಲಸ ಮಾಡದವರಿಗೆ ಶಿಕ್ಷೆ ವಿಧಿಸುವ ಕುರಿತೂ ಯೋಜಿಸಲಾಗುತ್ತಿದೆ ಎಂದರು. ತರುಣ ಎಂಜಿನಿಯರರು ತಮ್ಮ ದಕ್ಷತೆ ಮತ್ತು ಪ್ರತಿಭೆಗಳನ್ನು ಪ್ರದರ್ಶಿಸಿ ರಾಜ್ಯದ ಪ್ರಗತಿ ಸಾಧಿಸಲು ಮುಂದೆ ಬರಬೇಕೆಂದು ಅವರು ಕರೆಯಿತ್ತರು.

ಶ್ರೀಮತಿ ಎಡ್ಡಿ ಸಾಲ್ದಾನಾರು ಮಾತಾಡಿ ಈ ಯೋಜನೆಯಿಂದ ಜಿಲ್ಲೆಯು ಅಭ್ಯುದಯವಾಗಲೆಂದು ಹಾರೈಸಿದರು. ಪ್ರಾಜೆಕ್ಟ್ ಎಂಜಿನಿಯರ್ ಶ್ರೀ ಪಿ. ವಿ. ರಾಮಯ್ಯನವರು ಧನ್ಯವಾದಾರ್ಪಣೆ ಮಾಡಿದರು.

ಹಿರಿಯಡ್ಕದಲ್ಲಿ ಬಂಟರ ಯಾನೆ ನಾಡವರ ಸಂಘದ ಅಧಿವೇಶನ

ಬದಲಾಗುತ್ತಿರುವ ವಿದ್ಯಮಾನಗಳಿಗೆ ಹೊಂದಿಕೊಂಡು ಮುಂದುವರಿಯುವಂತೆ ಅಧ್ಯಕ್ಷ ಡಾ। ಎಂ. ವಿ. ಶೆಟ್ಟರ ಕರೆ

ಕಳೆದ ತಾ. 7ರಂದು ಹಿರಿಯಡ್ಕದ ಡಾ। ಕೆ. ಕೆ. ಹೆಗ್ಡೆ ಸಭಾಭವನದಲ್ಲಿ ಜರಗಿದ ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಅರುವತ್ತನಾಲ್ಕನೆಯ ವಾರ್ಷಿಕ ಮಹಾಧಿವೇಶನದ ಅಧ್ಯಕ್ಷತೆಯನ್ನು ಮಂಗಳೂರಿನ ಪ್ರಸಿದ್ಧ ಸರ್ಜನ್ ಡಾ। ಎಂ. ವೇಣುಗೋಪಾಲ ಶೆಟ್ಟರು ವಹಿಸಿದ್ದರು. ಪೂರ್ವಾಹ್ನ ಅಧ್ಯಕ್ಷರನ್ನು ಸಭಾ ಭವನದ ಮುಂಭಾಗದಲ್ಲಿ ಬಾಲಕಿಯರು ಆರತಿ ಬೆಳಗಿ ಸ್ವಾಗತಿಸಿದ ನಂತರ ಅವರನ್ನು ವಾದ್ಯ ಘೋಷಗಳೊಂದಿಗೆ ಸ್ಥಳೀಯ ವೀರಭದ್ರ ದೇವರ ದರ್ಶನ ಮಾಡಿಸಿ ಸಭಾಭವನಕ್ಕೆ ಕರೆದೊಯ್ಯಲಾಯಿತು.

ಸ್ಥಳೀಯ ಸ್ವಾಗತಸಮಿತಿಯ ಪರವಾಗಿ ಶ್ರೀ ನಾರಾಯಣ ಹೆಗ್ಡೆಯವರೂ, ಸಂಘದ ಪರವಾಗಿ ಅಧ್ಯಕ್ಷ ಶ್ರೀ ಸರ್ಯ ಲಕ್ಷ್ಮೀನಾರಾಯಣ ಆಳ್ವರೂ ಸ್ವಾಗತಿಸಿದರು.

ದಿವಂಗತರಾದ ಶ್ರೀ ಅತ್ತಾವರ ಆನಂದ ಶೆಟ್ಟಿ, ಕೆ. ಕೃಷ್ಣ ಶೆಟ್ಟಿ, ಡಾ। ಬಿ. ಪ್ರಕಾಶ ಚಂದ್ರ ರೈ ಮೊದಲಾದವರ ಬಗ್ಗೆ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಡಾ। ಕೆ. ಕೆ. ಹೆಗ್ಡೆ ಹಾಗೂ ಶ್ರೀ ಕಲ್ಯಾಡಿ ಎಂ. ಸುಬ್ಬಣ್ಣ ರೈಗಳ ಭಾವಚಿತ್ರಗಳ ಅನಾವರಣ ಮಾಡಿದ ಬಳಿಕ ಡಾ। ಕೆ. ಕೆ. ಹೆಗ್ಡೆ ಪದಕವನ್ನು ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಡಾ। ಎಂ. ವಿ. ಶೆಟ್ಟರಿಗೆ ಒಪ್ಪಿಸಲಾಯಿತು. ಅಲ್ಲದೆ ಸಂಘದ ಅಭಿವೃದ್ಧಿಗೆ ದುಡಿದ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರಿಗೆ ಸನ್ಮಾನಪತ್ರ ನೀಡಿ ಗೌರವಿಸಲಾಯಿತು.

ಜಿಲ್ಲೆಯ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳ ವರದಿಯನ್ನು ಬಡ ವಿದ್ಯಾರ್ಥಿ ನಿಧಿಯ ವರದಿಯನ್ನು ಓದಿದ ಬಳಿಕ ಸಂಘದ ವರದಿಯನ್ನು ಕಾರ್ಯದರ್ಶಿ ಶ್ರೀ. ಬಿ. ಮಿತ್ರದಾಸ ಹೆಗ್ಡೆಯವರೂ, ಲೆಕ್ಕಪತ್ರಗಳನ್ನು ಕೋಶಾಧಿಕಾರಿ ಶ್ರೀ ಬಿ. ಶ್ರೀನಾಥ ಹೆಗ್ಡೆಯವರೂ ಸಭೆಯ ಮುಂದೆ ಮಂಡಿಸಿದರು. ಶ್ರೀ ಸರ್ಯ ಲಕ್ಷ್ಮೀನಾರಾಯಣ ಆಳ್ವರು ಸಂಘವು ನಡೆದು ಬಂದ ದಾರಿ ಹಾಗೂ ತೋರಿದ ಪ್ರಗತಿಯನ್ನೂ, ಮುಂದಿನ ಕರ್ತವ್ಯಗಳನ್ನೂ ವಿವರಿಸಿದರು. ಸಮಾಜ ಹಾಗೂ ಸಂಘದ ಅಭಿವೃದ್ಧಿ ಬಗ್ಗೆ ಮತ್ತು ವರದಕ್ಷಿಣೆಯ ಪಿಡುಗು ತಡೆಯುವ ಬಗ್ಗೆ ಶ್ರೀ ವಿ. ಟಿ. ರಾಜಶೇಖರ ಶೆಟ್ಟಿ ಮೊದಲಾದವರು ಕೆಲವು ಸಲಹೆಗಳನ್ನಿತ್ತರು.

ಅಪರಾಹ್ನ ಜರಗಿದ ಮಹಾಧಿವೇಶನದಲ್ಲಿ ಅಧ್ಯಕ್ಷ ಡಾ। ಎಂ. ವಿ. ಶೆಟ್ಟರು ಮಾತನಾಡುತ್ತಾ, ತಮ್ಮನ್ನು ಅಧ್ಯಕ್ಷರನ್ನಾಗಿ ಆಮಂತ್ರಿಸಿದುದಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು. ಈ ಅಧಿವೇಶನವು ತಮ್ಮ ಹಿರಿಯ ವೈದ್ಯ ಡಾ। ಕೆ. ಕೆ. ಹೆಗ್ಡೆಯವರ ಹುಟ್ಟೂರಲ್ಲಿ ನಡೆಯುತ್ತಿರುವುದಕ್ಕೆ ತಮ್ಮ ಸಂತೋಷ ವ್ಯಕ್ತಪಡಿಸಿದರು. ಜಾತ್ಯತೀತ ರಾಷ್ಟ್ರದಲ್ಲಿ ಇಂತಹ ಸಂಘ ಸಂಸ್ಥೆಗಳ ಪಾತ್ರವನ್ನು ಅವರು ವಿವರಿಸಿ ಈ ಸಂಸ್ಥೆಗಳು ಇತರ ಜಾತಿಗಳೊಂದಿಗೆ ಸೌಹಾರ್ದ ಸಂಪರ್ಕವಿರಿಸಿಕೊಂಡು ಮುಂದುವರಿಯಬೇಕೆಂದು ಸಲಹೆಯಿತ್ತರು.

ಭೂ ಸುಧಾರಣೆಯ ವಿಚಾರದಲ್ಲಿ ಸರಕಾರೀ ವಲಯಗಳಿಂದ ಕೇಳಿ ಬರುತ್ತಿರುವ ಸುದ್ದಿಗಳಿಂದ ತಮ್ಮ ಜನರು ಭಯಭೀತರಾಗಿರುವುದನ್ನು ಅವರು ಪ್ರಸ್ತಾಪಿಸಿ ಇಂಥ ಬದಲಾವಣೆಗಳಿಗೆ ನಾವು ಹೆದರಿ ಪ್ರಯೋಜನವಿಲ್ಲವೆಂದೂ ಬದಲಾಗುತ್ತಿರುವ ವಿದ್ಯಮಾನಗಳಿಗೆ ಹೊಂದಿಕೊಂಡು ನಾವು ಮುಂದುವರಿಯಲು ಸಿದ್ಧರಾಗಬೇಕೆಂದೂ ಇನ್ನು ಮುಂದೆ ಕೃಷಿಯನ್ನೇ ನಂಬದೆ ವಾಣಿಜ್ಯ ಉದ್ದಿಮೆ ರಂಗ ಪ್ರವೇಶಕ್ಕೂ ಸಿದ್ಧರಾಗಿರಿ ಎಂದು ಕರೆ ನೀಡಿದರು. ಸಂಘವು ಇನ್ನಷ್ಟು ಅಭಿವೃದ್ಧಿಯಾಗಲೆಂದು ಅವರು ಹಾರೈಸಿದರು.

ಬಳಿಕ ಜರಗಿದ ಸನ್ಮಾನ ಕಾರ್ಯಕ್ರಮದಲ್ಲಿ ಉತ್ತಮ ಸಮಾಜಸೇವೆ ಸಲ್ಲಿಸಿದ ಕಾಪುವಿನ ಶ್ರೀಮತಿ ಶೀಲಾ ವಿ. ಶೆಟ್ಟಿ, ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಶ್ರೀ ಮಮ್ಮು ಶೆಟ್ಟಿ, ಸಾಹಿತ್ಯಕ್ಷೇತ್ರದ ಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ, ಯಕ್ಷಗಾನ ಕ್ಷೇತ್ರದ ಶ್ರೀ ಕೆ. ವಿಠಲ ಶೆಟ್ಟಿ, ಇವರುಗಳಿಗೆ ಶಾಲು, ಹಾರ ಹಾಗೂ ಸನ್ಮಾನ ಪತ್ರಗಳನ್ನಿತ್ತು ಸನ್ಮಾನಿಸಲಾಯಿತು. 'ರಕ್ತ ಸಾಪತ್ನ್ಯ'ವೆಂಬ ಯಕ್ಷಗಾನ ಕಾರ್ಯಕ್ರಮದ ಬಳಿಕ ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಬಿ. ಮಿತ್ರದಾಸ ಹೆಗ್ಡೆಯವರು ಧನ್ಯವಾದ ಅರ್ಪಿಸಿದರು.

ಸಂಘದ ಮುಂದಿನ ವರ್ಷದ ಆಡಳಿತ ಮಂಡಳಿಗೆ ಶ್ರೀ ಸರ್ಯ ಲಕ್ಷ್ಮೀನಾರಾಯಣ ಆಳ್ವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರನ್ನು ಉಪಾಧ್ಯಕ್ಷೆಯಾಗಿಯೂ, ಶ್ರೀ ಬಿ. ಶ್ರೀನಾಥ ಹೆಗ್ಡೆಯವರನ್ನು ಕಾರ್ಯದರ್ಶಿಯಾಗಿಯೂ, ಡಾ। ಎಂ. ವಿ. ಶೆಟ್ಟರನ್ನು ಕೋಶಾಧಿಕಾರಿಯಾಗಿಯೂ, ಶ್ರೀ ಬಿ. ಮಿತ್ರದಾಸ ಹೆಗ್ಡೆಯವರನ್ನು ಬಡವಿದ್ಯಾರ್ಥಿ ನಿಧಿಯ ಕಾರ್ಯದರ್ಶಿಯಾಗಿಯೂ ಮತ್ತು ಇನ್ನಿತರ 35 ಮಂದಿಯನ್ನು ಸದಸ್ಯರುಗಳನ್ನಾಗಿಯೂ ಆರಿಸಲಾಯಿತು.

ಈ ಸಮಾರಂಭದ ಬಳಿಕ ಹಿರಿಯಡ್ಕದಲ್ಲಿ ನಿರ್ಮಿಸಿದ 'ದಿ। ಡಾ। ಕೆ. ಕೆ. ಹೆಗ್ಡೆ ಮೆಮೋರಿಯಲ್ ಸ್ಟೇಜ್' ಎಂಬ ಬಯಲು ರಂಗಭೂಮಿಯನ್ನು ಡಾ। ಎಂ. ವಿ. ಶೆಟ್ಟರು ಉದ್ಘಾಟಿಸಿದರು.

●●

ನವಯುಗ

ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1972

1971ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ

ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

ಭುಟ್ಟೋರ ದ್ವಿಮುಖಿ ನೀತಿ

ಭಾರತದೊಂದಿಗೆ ಶಾಶ್ವತ ಶಾಂತಿ ಬೇಕು ಎಂದು ಪಾಕ್ ರಾಷ್ಟ್ರಪತಿ ಭುಟ್ಟೊ ಬಯಸಿದರು. ಈ ಬಯಕೆ ಕೃತಕವಲ್ಲ. ಹಾರ್ದಿಕವಾದದ್ದು ಎಂದು ಉಗ್ಗಡಿಸಿದರು.

ಭುಟ್ಟೊ ಮತ್ತು ತನ್ನ ಭೆಟ್ಟಿಗೆ ಮೊದಲು ಅಧಿಕಾರಿ ವಲಯದಲ್ಲಿ ಮಾತುಕತೆ ನಡೆಯುವುದು ಸೂಕ್ತವೆಂದು ಪ್ರಧಾನಿ ಗಾಂಧಿಯವರ ಅಭಿಪ್ರಾಯವನ್ನು ಅವರು ಒಪ್ಪಿದರು.

ಭಾರತದ ವಿದೇಶ ನೀತಿ ನಿರೂಪಣಾ ಸಮಿತಿಯ ಶ್ರೀ ಧರ್ ಪಾಕ್ ಅಧಿಕಾರಿಗಳೊಂದಿಗೆ, ಭುಟ್ಟೋ ಮಹಾಶಯರೊಂದಿಗೆ ಮಾತುಕತೆಯಾಡಿದರು.

ಶೃಂಗಸಭೆ ನಡೆಯಲು ಸೂಕ್ತ ವೇದಿಕೆ ನಿರ್ಮಿಸಲು ಪ್ರಯತ್ನಿಸಿದರು.

ಪಾಕಿಸ್ತಾನ-ಭಾರತ ಬಾಂಗ್ಲಾ ದೇಶಗಳಿಗೆ ಸಂಬಂಧಿಸಿದ ಹಿತಾಸಕ್ತಿಗಳ ಕುರಿತು ಮಾತಾಡುವಾಗ ಬಾಂಗ್ಲಾ ಪ್ರಧಾನಿಯೂ ಹಾಜರಿರಬಹುದೆಂದು ಭುಟ್ಟೋ ಒಪ್ಪಿದರು.

ಆದರೆ, ಪಾಕ್ ಬಾಂಗ್ಲಾಕ್ಕೆ ಮಾನ್ಯತೆ ನೀಡದ ವಿನಾ ತಾನು ಮಾತುಕತೆಯಲ್ಲಿ ಭಾಗ ವಹಿಸಲಾರೆನೆಂದರು ಮುಜಿಬುರ್ ರೆಹಮಾನ್.

ಇದೊಂದು ಸುರುಳಿ.

ಉಪಖಂಡದ ಶಾಂತಿಯಿಂದು ಭಾರತ. ಪಾಕ್‌ಗಳನ್ನು ಮಾತ್ರ ಅವಲಂಬಿಸಿಲ್ಲ. ನವೋದಿತ ಬಾಂಗ್ಲಾ ದೇಶವನ್ನೂ ಅವಲಂಬಿಸಿದೆ. ಮೂರೂ ದೇಶಗಳೂ ಶೃಂಗಸಭೆಯಲ್ಲಿ ಭಾಗವಹಿಸಿದರೆ ಮಾತ್ರ ಶಾಶ್ವತ ಶಾಂತಿ ಸಾಧ್ಯವಾದೀತು.

ಮುಜಿಬ್ ಇಲ್ಲವಾದರೆ ಗಾಂಧಿಯೂ ಇಲ್ಲ; ಮಾತುಕತೆಯೂ ಇಲ್ಲ.

ಮನ್ನಣೆ ನೀಡದೆ ಮುಜಿಬ್ ಇಲ್ಲ. ಅಂದರೆ ಭುಟ್ಟೋ ಬಯಸುವಂತೆ ಶೃಂಗಸಭೆ ಸೇರಬೇಕಾದರೆ ಅವರು ಬಾಂಗ್ಲಾ ದೇಶವನ್ನು ಮನ್ನಿಸಬೇಕು.

ಈ ಮಹತ್ತಮ ತ್ಯಾಗಕ್ಕೆ ಭುಟ್ಟೋ ಸಿದ್ಧರಾದಾರೆ? ಆದರೂ ಪಾಕಿಸ್ತಾನಿಗಳು ಅವರನ್ನು ಜೀವಸಹಿತ ಬಿಡುವರೆ?

ಶೃಂಗಸಭೆಯ ಬಗ್ಗೆ ಮಾತುಕತೆ ನಡೆದ ಬಳಿಕ ಗಡಿ ಉಲ್ಲಂಘನೆಯ ವರದಿ.

ಪಾಕ್ ಸೇನೆಯು ಭಾರತದ ವಶವಿದ್ದ ತನ್ನೆರಡು ಠಾಣೆಗಳನ್ನು ವಶಪಡಿಸಿಕೊಂಡಿತು.

ಇದರರ್ಥವೇನು? ಸಮರ ವಿರಾಮದ ಉಲ್ಲಂಘನೆ. ಅಂದರೆ ಪಾಕಿಸ್ತಾನದ ಶಾಂತಿಯ ಕಳಕಳಿಯನ್ನು ನಂಬುವುದು ಹೇಗೆ?

ಆದರೂ ಪ್ರಧಾನಿ ಗಾಂಧಿಯವರು ಶೃಂಗಸಭೆಯ ಸಂಬಂಧ ಅಧ್ಯಕ್ಷ ಭುಟ್ಟೋರಿಗೆ ಪತ್ರ ಬರೆದಿದ್ದಾರೆ. ಈ ಪತ್ರಕ್ಕೆ ತಕ್ಕ ಪ್ರತಿಕ್ರಿಯೆ ರಾವಲ್ಪಿಂಡಿಯಿಂದ ಬಂದೀತೇ?

ಶಾಂತಿ-ಸ್ನೇಹದ ಮಂತ್ರ ಜಪಿಸುತ್ತ ಬಂದೂಕಿನ ಬಲ ಪ್ರದರ್ಶಿಸುವ ತಂತ್ರ ಪಾಕಿಸ್ತಾನಕ್ಕೆ ಹೊಸತೇನಲ್ಲ. ಈ ಹಳೆಯ ತಂತ್ರ ಇಂದಿನ ಕಾಲಮಾನದಲ್ಲಿ ಅಪ್ರಯೋಜಕವೆಂಬುದನ್ನು ಭುಟ್ಟೋ ತಿಳಿದಿರಬೇಕು.

ಭಾರತಕ್ಕೆ ಉತ್ತಮ ನೆರೆಹೊರೆ ಬೇಕು. ನೆರೆಹೊರೆಯವರೊಡನೆ ಸ್ನೇಹಪೂರ್ಣ ವ್ಯವಹಾರ ಬೇಕು.

ಅದು ಪಾಕಿಸ್ತಾನವಿರಬಹುದು, ಬಾಂಗ್ಲಾ ವಿರಬಹುದು, ಚೀನವಿರಬಹುದು, ಬ್ರಹ್ಮವೂ ಇರಬಹುದು.

ಆದರೆ, ಈ ಸ್ನೇಹ ಹಾರ್ದಿಕವಾಗಿರಬೇಕು. ದ್ವಿಮುಖಿಯಾಗಿರಬಾರದು.

ಭುಟ್ಟೋರವರು ಇನ್ನಾದರೂ ಈ ತಥ್ಯವನ್ನು ಮನವರಿಕೆ ಮಾಡಿಕೊಂಡಾರೆ? ಬಾಂಗ್ಲಾ ದೇಶದ ಅಸ್ತಿತ್ವವನ್ನು ಒಪ್ಪಿಕೊಂಡು, ಅದನ್ನು ಮನ್ನಿಸಿ ಭಾರತ ಉಪಖಂಡದ ಶಾಂತಿಗೆ ತನ್ನ ಪಾಲಿನ ದೇಣಿಗೆ ಅರ್ಪಿಸಿ ತನ್ನನ್ನೂ ತನ್ನ ದೇಶವನ್ನೂ ರಕ್ಷಿಸಿಕೊಳ್ಳುವರೆ?

ಭವಿಷ್ಯದ ಗರ್ಭ ಇದನ್ನು ಉತ್ತರಿಸಬೇಕು.

●●

ಪಡುಬಿದ್ರೆ ನೀರು ಸರಬರಾಜು ಯೋಜನೆ ಉದ್ಘಾಟನೆ

ಪಡುಬಿದ್ರೆಯಲ್ಲಿ ಮೂರು ಲಕ್ಷ ಇಪ್ಪತ್ತು ಸಾವಿರ ವೆಚ್ಚದಲ್ಲಿ ಸಿದ್ಧಪಡಿಸಿದ ಗ್ರಾಮಾಂತರ ನೀರು ಸರಬರಾಯಿ ಯೋಜನೆಯನ್ನು ಕಾಪು ಕ್ಷೇತ್ರದ ಶಾಸಕ ಶ್ರೀ ಬಿ. ಭಾಸ್ಕರ ಶೆಟ್ಟರ ಅಧ್ಯಕ್ಷತೆಯಲ್ಲಿ ಮೈಸೂರು ಸರಕಾರದ ಲೋಕೋಪಯೋಗಿ ಸಚಿವ ಶ್ರೀ ಎಚ್. ಎಂ. ಚನ್ನಬಸಪ್ಪನವರು ಉದ್ಘಾಟಿಸಿದರು. ಪಡುಬಿದ್ರೆ ಪಂಚಾಯತ್ ಕಚೇರಿ ವಠಾರದಲ್ಲಿ ಜರಗಿದ ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಆಗಮಿಸಿದ್ದರು.

ಆರಂಭದಲ್ಲಿ ಶ್ರೀ ಕಾಳಪ್ಪ ಶೆಟ್ಟರು ಸ್ವಾಗತಿಸಿದರು. ಶ್ರೀ ಸೂರ್ಯನಾರಾಯಣ್, ಸುಪರಿಂಟೆಂಡಿಂಗ್ ಎಂಜಿನಿಯರ್, ಪಿ. ಎಚ್. ಇ. ಡಿವಿಜನ್, ಇವರು ಈ ಯೋಜನೆಯ ತಾಂತ್ರಿಕ ವರದಿಯನ್ನು ಒಪ್ಪಿಸಿದರು.

ಪಂಚಾಯತ್ ಸದಸ್ಯ ಶ್ರೀ ತೋಮಸ್ ಅಂದ್ರಾದೆಯವರು ಸಂದೇಶಗಳನ್ನೋದಿದರು. ಪಂಚಾಯತ್ ಅಧ್ಯಕ್ಷ ಶ್ರೀ ದೇವದಾಸ ಶೆಟ್ಟಿಯವರು ಮಾನಪತ್ರವನ್ನು ಓದಿ ಸಚಿವರಿಗೆ ಒಪ್ಪಿಸಿದರು.

ಶ್ರೀ ಎಂ. ಮಧ್ವರಾಜರು ಭಾಷಣ ಮಾಡಿ ಉಡುಪಿ ತಾಲೂಕಿನಲ್ಲಿ ನೀರಿನ ಅಭಾವವಿರುವ ಸ್ಥಳಗಳನ್ನು ವಿವರಿಸಿದರು.

ಸಚಿವರು ನೀರು ಯೋಜನೆಯನ್ನು ಉದ್ಘಾಟಿಸುತ್ತಾ, ಬಹಳ ಕಾಲದಿಂದ ಇಲ್ಲಿನ ಜನರನ್ನು ಬಾಧಿಸುತ್ತಿದ್ದ ನೀರಿನ ಕೊರತೆಯು ಎಲ್ಲರ ಶ್ರಮದಿಂದ ದೂರವಾದುದಕ್ಕೆ ತಮ್ಮ ಸಂತೋಷ ವ್ಯಕ್ತಪಡಿಸಿದರು. ದ. ಕ. ಜಿಲ್ಲೆಯನ್ನು ಜಾಗೃತ ಜನರ ಜಿಲ್ಲೆಯೆಂದ ಅವರು ಕಳೆದ 10-15 ವರ್ಷಗಳಲ್ಲಿ ಈ ಜಿಲ್ಲೆಯಲ್ಲಿ ಇತರ ಜಿಲ್ಲೆಗಳಿಗಿಂತ ಹೆಚ್ಚು ಅಭಿವೃದ್ಧಿಯಾಗಿದೆ ಎಂದರು. ಗ್ರಾಮೀಣ ಆವಶ್ಯಕತೆಗಳಿಗೆ ಅಧಿಕ ಗಮನವೀಯುವುದಾಗಿ ಅವರು ಭರವಸೆಯಿತ್ತರು.

ಶ್ರೀ ಭಾಸ್ಕರ ಶೆಟ್ಟರು ತಮ್ಮ ಭಾಷಣದಲ್ಲಿ ಕಾಮಗಾರಿಗಳನ್ನು ನಿರ್ಧರಿಸುವಾಗ ಈ ಜಿಲ್ಲೆಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಸರಕಾರವನ್ನು ವಿನಂತಿಸಿದರು.

ಅಂತ್ಯದಲ್ಲಿ ಅಬ್ದುಲ್ ರಜಾಕ್‌ರವರು ಧನ್ಯವಾದವಿತ್ತರು.

ಕೃತಜ್ಞತಾ ಸಮರ್ಪಣೆ

ತಾ. 14—5—72ರಂದು ಮಂಗಳೂರು ಪುರಭವನದಲ್ಲಿ ನಮ್ಮ ಪುತ್ರ ಚಿ| ಲಕ್ಷ್ಮೀನಾರಾಯಣನ ವಿವಾಹವು ಶ್ರೀ ಕೆ. ಪಿ. ರಘುರಾಮ ಶೆಟ್ಟರ ಪುತ್ರಿ ಚಿ| ಶೋಭಾಳೊಂದಿಗೆ ಮತ್ತು ನಮ್ಮ ಪುತ್ರಿ ಚಿ| ಸರೋಜಿನಿಯ ವಿವಾಹವು ಬೆಂಗಳೂರು ಎಡ್ವಕೇಟ್ ಶ್ರೀ ಬಿ ಬಿ. ಶೆಟ್ಟರ ಪುತ್ರ ಚಿ| ಪ್ರಕಾಶನೊಂದಿಗೆ ಜರಗಿದ ಸಂದರ್ಭದಲ್ಲಿ, ಸಮಾರಂಭಕ್ಕೆ ಚಿತ್ತೈಸಿ ವಧೂವರರನ್ನು ಆಶೀರ್ವದಿಸಿದವರಿಗೂ, ಉಡುಗೊರೆಗಳನ್ನಿತ್ತು ಹರಸಿದವರಿಗೂ, ಬೇರೆ ಬೇರೆ ರೀತಿಯಿಂದ ಸಹಕರಿಸಿದವರಿಗೂ ನಾವು ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಶ್ರೀಮತಿ ಮತ್ತು ಶ್ರೀ ವೈ. ಮಂಜಯ್ಯ ಶೆಟ್ಟಿ,
ಎಡ್ವಕೇಟ್, ಕುಂದಾಪುರ

ಆಕಾಶವಾಣಿ ಪ್ರಸಾರದ ವೈವಿಧ್ಯತೆ

ಆಕಾಶವಾಣಿ ಕೇಂದ್ರಗಳು ರಾಷ್ಟ್ರೀಯ ಜಾಲದ ಮೂಲಕ ದಿನಂಪ್ರತಿ 700 ಘಂಟೆಗಳ ಅವಧಿಯ ಪ್ರಸಾರ ಕೈಗೊಂಡಿವೆ. ಇದರಲ್ಲಿ 308 ಘಂಟೆಗಳ ಅವಧಿ ಸಂಗೀತ, 157 ಘಂಟೆಗಳ ಅವಧಿ ಸುದ್ದಿ ಪ್ರಸಾರ, 234 ಘಂಟೆಗಳ ಅವಧಿ ಭಾಷಣ, ಚರ್ಚೆ, ನಾಟಕ, ರೂಪಕ ಮತ್ತು ವಿಶೇಷ ತಂಡಗಳಿಗಾಗಿ ರೂಪಿಸಿದ ಕಾರ್ಯಕ್ರಮಗಳ ಪ್ರಸಾರ ಕೈಗೊಳ್ಳಲಾಗಿದೆ.

ದೇಶದಲ್ಲಿ 39 ಪ್ರಮುಖ ಆಕಾಶವಾಣಿ ಕೇಂದ್ರಗಳೂ, 29 ಉಪಕೇಂದ್ರಗಳೂ ಕಾರ್ಯ ನಿರತವಾಗಿವೆ. ಕಳೆದ ವರ್ಷ ಜೂನ್ 25ರಿಂದ ಲಡಕ್‌ನಲ್ಲಿರುವ ಲೇಹದಲ್ಲಿ ಮಧ್ಯಮ ತರಂಗದ ಪ್ರಸಾರಕದಿಂದ ಸಜ್ಜಾಗಿರುವ ಆಕಾಶವಾಣಿ ಕೇಂದ್ರ ಕಾರ್ಯಾರಂಭಮಾಡಿತು.

"ವಿವಿಧ ಭಾರತಿ"

35 ಆಕಾಶವಾಣಿ ಕೇಂದ್ರಗಳ ಮೂಲಕ ದಿನಂಪ್ರತಿ 360 ಘಂಟೆಗಳ ಅವಧಿಯ 'ವಿವಿಧ ಭಾರತಿ' ಕಾರ್ಯಕ್ರಮ ಪ್ರಸಾರವಾಗುತ್ತಿದೆ. ವಾಣಿಜ್ಯ ಪ್ರಸಾರ ಕಾರ್ಯಕ್ರಮ 18 ಕೇಂದ್ರಗಳಿಂದ ಪ್ರಸಾರವಾಗುತ್ತಿದೆ. ವಾಣಿಜ್ಯ ಪ್ರಸಾರವನ್ನು ಪಾಟ್ನ, ರಾಂಚಿ, ಭೂಪಾಲ–ಇಂದೂರು, ಜಯಪುರ–ಜೋಧಪುರ, ತಿರುವನಂತಪುರ-ಕಲ್ಲಿಕೋಟೆ, ಶ್ರೀನಗರ ಮತ್ತು ಕಟಕ್ ಕೇಂದ್ರಗಳಿಂದ ಆರಂಭಿಸುವ ಯೋಜನೆ ಪರಿಶೀಲನೆಯಲ್ಲಿದೆ.

ವಾಣಿಜ್ಯ ಪ್ರಸಾರ ಕಾರ್ಯಕ್ರಮ 1967ನೇ ಇಸವಿಯಲ್ಲಿ ಆರಂಭವಾದ ಕಾಲದಿಂದ 1971ನೇ ಇಸವಿ ಮಾರ್ಚಿ ಮಾಸದವರೆಗೆ 6. 27 ಕೋಟಿ ರೂಪಾಯಿಗಿಂತಲೂ ಹೆಚ್ಚು ವರಮಾನ ಬಂದಿದೆ.

ಆಕಾಶವಾಣಿಯ 27 ಕೇಂದ್ರಗಳಿಂದ ಶಾಲಾ ಕಾರ್ಯಕ್ರಮ ಪ್ರಾದೇಶಿಕ ಭಾಷೆಗಳಲ್ಲಿ ಪ್ರಸಾರವಾಗುತ್ತಿದೆ. ಆಕಾಶವಾಣಿಯೊಂದಿಗೆ ಶ್ರೋತೃ ಶಾಲೆಗಳಾಗಿ ನಮೂದಿತವಾಗಿರುವ 10,555ಕ್ಕಿಂತಲೂ ಹೆಚ್ಚು ಶಾಲೆಗಳಲ್ಲಿ ರೇಡಿಯೊಗಳಿವೆ. ಅಂದಮಾನ್ ದ್ವೀಪದ ದಕ್ಷಿಣ ವಲಯದ ಶಾಲೆಗಳ ವಿದ್ಯಾರ್ಥಿಗಳಿಗೆ ನೆರವಾಗಲು ಪೋರ್ಟ್ ಬ್ಲೇರ್‌ನಲ್ಲಿರುವ ಆಕಾಶವಾಣಿ ಕೇಂದ್ರದಿಂದ ಶಾಲಾ ಪ್ರಸಾರ ಆರಂಭಿಸುವ ಯೋಜನೆ ಪರಿಶೀಲನೆಯಲ್ಲಿದೆ.

ಸುದ್ದಿ ಪ್ರಸಾರ

ಆಕಾಶವಾಣಿಯು 31 ಭಾರತೀಯ ಹಾಗೂ ವಿದೇಶೀ ಭಾಷೆಗಳಲ್ಲಿ ದಿನಂಪ್ರತಿ 230 ಸಲ ಸುದ್ದಿ ಪ್ರಸಾರ ಮಾಡುತ್ತಿದೆ, ಇದರಲ್ಲಿ 18 ಭಾಷೆಗಳ 83 ಸುದ್ದಿ ಪ್ರಸಾರಗಳನ್ನು ದೆಹಲಿ ಕೇಂದ್ರ ಕೈಗೊಳ್ಳುತ್ತಿದೆ. ಕೇಂದ್ರಗಳಿಂದ 18 ಭಾಷೆಗಳು ಮತ್ತು 33 ಬುಡಕಟ್ಟು ಜನಾಂಗದ ಆಡು ಭಾಷೆಗಳಲ್ಲಿ 92 ಸಲ ಸುದ್ದಿ ಪ್ರಸಾರ ಮಾಡಲಾಗುತ್ತಿದೆ. ವಿದೇಶಿ ಶ್ರೋತೃಗಳಿಗಾಗಿ ವಿದೇಶಿ ಪ್ರಸಾರ ಕಾರ್ಯಕ್ರಮದಲ್ಲಿ 25 ಭಾಷೆಗಳಲ್ಲಿ 55 ಸಲ ಸುದ್ದಿ ಪ್ರಸಾರ ಕೈಗೊಳ್ಳಲಾಗಿದೆ.

ಆಕಾಶವಾಣಿಯು ದೇಶೀಯ ಕಾರ್ಯಕ್ರಮದಲ್ಲಿ 20 ಪ್ರಮುಖ ಭಾಷೆಗಳು 22 ಆಡು ಭಾಷೆಗಳು ಮತ್ತು 91 ಬುಡಕಟ್ಟು ಜನಾಂಗದ ಭಾಷೆಗಳಲ್ಲಿ ಪ್ರಸಾರ ನಡೆಸುತ್ತಿದೆ. ವಿದೇಶೀ ಸೇವಾ ವಿಭಾಗದಲ್ಲಿ 24 ಭಾಷೆಗಳಲ್ಲಿ ವಿಶ್ವದಾದ್ಯಂತ ಪ್ರಸಾರ ಕಾರ್ಯಕ್ರಮ ಕೈಗೊಳ್ಳಲಾಗಿದೆ.

●●

o o o

ಬಿದ್ದವ ಏಳಬಾರದೆಂದಿಲ್ಲ; ಗೆದ್ದವ ಬೀಳಬಾರದೆಂದಿಲ್ಲ.

o o o

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O·S 447/1967

ವಾದಿರು—ಮಂಜುನಾಥ ನಾಯ್ಕ ಕೂಡಾ
ಪ್ರತಿವಾದಿರು—ವೆಂಕಟೇಶ ನಾಯ್ಕ ಕೂಡಾ

4ನೇ ಪ್ರತಿವಾದಿ, ಗೋಪಾಲಕೃಷ್ಣ ನಾಯಕ್, ವೆಂಕಟೇಶ ನಾಯಕರ ಮಗ, ಕುಂದಾಪುರ ತಾಲ್ಲೂಕು ಕಾಲ್ತೋಡು ಗ್ರಾಮದಲ್ಲಿರುವವ. Post—ಕಾಲ್ತೋಡು.

ಸದ್ರಿ 4ನೇ ಪ್ರತಿವಾದಿಗೆ ತಿಳಿಯ ಪಡಿಸುವುದೇನೆಂದರೆ—.

ಮೇಲಿನ ಕ್ಲೈಮಿನ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಫೈನಲ್ ಡಿಕ್ರಿ ಕೊಡಬೇಕೆಂದು ವಾದಿರು ದಾಖಲು ಮಾಡಿದ ಫೈನಲ್ ಡಿಕ್ರಿ ಅರ್ಜಿಯು ತಾರೀಕು 30-5-1972ಕ್ಕೆ ತನಿಖೆಯಿರುತ್ತದೆ. ಆ ಅರ್ಜಿಗೆ ನಿಮ್ಮದೇನಾದರೂ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಹ್ಯಾಜೀರು ಮಾಡಿ ಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ

Y. Tejappa Shetty.
Advocate for Plffs.
Coondapoor, 12-6-1972.

(ಎರಡನೇ ಪುಟದಿಂದ)

ಗಂಟಲಲ್ಲಿಳಿಸಿಕೊಂಡು ಯುದ್ಧ ಭೂಮಿಗೆ ಓಡಿದ್ದುಂಟು. ಆಗ ಊಟಕ್ಕಿಂತಲೂ ಮುಖ್ಯವಿತ್ತು ಕಾರ್ಯಸಾಧನೆ. ಬಡಿಸಿದ್ದು ರುಚಿಯಾಗಿತ್ತೇ ಇಲ್ಲವೇ ಎಂದು ಪರಾಮರ್ಶಿಸಲು ಸಮಯವಿರದ ಸಂಧಿಯಲ್ಲಿ ನೀಡಿದ್ದೇ ಮೃಷ್ಟಾನ್ನ.

ಇದು ಅವರಿಗಾದ ಅನುಭವ-

ಈ ಅನುಭವ ಸಾರ ತೂಗಿ—ತೂಗಿ ಆಡಿದ ಅವರ ಮಾತಿನ ಹಿಂದಿತ್ತು.

ಅಷ್ಟರಲ್ಲಿ ಅವರ ಮುಂದು ಹಾಲು—ಹಣ್ಣು ಎರಡೂ ಇದ್ದವು,

ಅವರೂ ಮಕ್ಕಳೊಡನೆ ಒಂದು ಹಣ್ಣು ತಿಂದು, ಒಂದಿಷ್ಟು ಹಾಲು ಕುಡಿದರು.

ತಟ್ಟೆ ಖಾಲಿಯಾಯಿತು. ಬಟ್ಟಲು ಬರಿದಾಯಿತು.

'ನಾಳೆ ಮುಂಜಾನೆ ಮಾತನಾಡುವ. ನೀವಿಬ್ಬರೂ ಈಗ ಮಲಗಿಕೊಳ್ಳಿ' ಎಂದು ಅವರು ಒಳಮನೆಗೆ ನಡೆದರು.

ಅವರಿಬ್ಬರೇ ಜಗಲಿಯಲ್ಲುಳಿದರು.

ಸಾಕ್ಷಿಯಾಗಿ ನಿಂತಿತ್ತು ಅವರೀರ್ವರ ಮಧ್ಯದಲ್ಲಿ ಅಸ್ಪಷ್ಟ ಬೆಳಕನ್ನು ಚೆಲ್ಲುತಿದ್ದ ಕಾಲುದೀಪ.

ಆದರ ಮಂದ ಪ್ರಕಾಶದಲ್ಲಿ ಅವರಿಬ್ಬರ ಮುಖವೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ.

ಸುತ್ತೆಲ್ಲ ನೀರವ.

ಅದನ್ನು ಮುರಿಯಲು ಇಬ್ಬರಿಗೂ ತವಕ.

ಅವಶ್ಯಾಗಿ ಅವರಿಬ್ಬರೂ ಪ್ರಯತ್ನಿಸುತಿದ್ದುದನ್ನು ಅವರ ಮುಖ ಕೂಗಿ ಹೇಳುತಿತ್ತು. ಒಬ್ಬರನ್ನೊಬ್ಬರು ನೋಡುತ್ತ ಕುಳಿತರೇ ಹೊರತು ನುಡಿಸಲು ಶಕ್ತರಾಗಲಿಲ್ಲ.

ಯಾವುದೋ ಅಗೋಚರ ಶಕ್ತಿ ಅವರಿಬ್ಬರ ನಾಲಿಗೆಯನ್ನು ಅವುಕಿ ಹಿಡಿದಿರುವಂತೆ ಕಾಣುತ್ತಿತ್ತು.

ಕೊನೆಗೆ ಅರಿಕೇಸರಿಯೇ ಸುತ್ತೆಲ್ಲ ಹಬ್ಬಿದ ನೀರವತೆಯನ್ನು ಭೇದಿಸಲು ಶಕ್ತನಾದ.

ಪಕ್ಕದಲ್ಲೊಂದು ಮಲಗುವ ಮನೆಯಿದೆ. ಅಲ್ಲಿ ನೀನು ಕಾಲು ಚಾಚಿಕೋ. ನಿನಗಿದು ಅಪರಿಚಿತ ಸ್ಥಳ. ಆದ್ದರಿಂದ ಬೆಳಕಿನ ಅಗತ್ಯ ಇದೆ. ದೀಪದಲ್ಲಿರುವ ಎಣ್ಣೆ ಆರುವ ಮೊದಲು ಆ ಜಾಗವನ್ನಿಷ್ಟು ತೋರಿಸಿ ಬಿಡುತ್ತೇನೆ. ಹಾಯಾಗಿ ಮಲಗಿಕೊಂಡ ಮೇಲೆ ಜಗಲಿಯ ಆ ತುದಿಯಲ್ಲಿರುವ ಮೆತ್ತೆಯ ಮೇಲೆ ಮಲಗಿ ಕೊಳ್ಳುತ್ತೇನೆ ಹೀಗೆ ಬಾ' ಎಂದು ಅವಳುತ್ತರಕ್ಕೂ ಇದಿರು ನೋಡದೆ ಜಗುಲಿಯ ಇನ್ನೊಂದು ತುದಿಗೆ ಅವಳನ್ನು ಕರೆದೊಯ್ದು, ಅಲ್ಲಿ ಹಾಸಿಟ್ಟ ಹುಲ್ಲಿನ ಮೆತ್ತೆಯನ್ನು ತೋರಿಸಿ 'ದೇವಿಯವರು ಈ ಇರುಳನ್ನು ಇಲ್ಲಿ ಸುಖವಾಗಿ ಕಳೆಯಬಹುದು. ಹಾಸಿಕೊಳ್ಳಲು – ಹೊದ್ದುಕೊಳ್ಳಲು ತಂದಿದ್ದವುಗಳನ್ನೇ ಬಿಡಿಸಿಕೊಂಡರಾಯಿತು. ಬೇಕಾದರೆ ಈ ಬಿದಿರ ಬಾಗಿಲನ್ನು ಭದ್ರಪಡಿಸಿಕೊಳ್ಳಬಹುದು.'

ಲೋಕಾ ಅವನ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದಳು.

ಆಕೆ ಮಾತನಾಡಲಿಲ್ಲ.

ಅರಿಕೇಸರಿ ತಾನೇ ಗಂಟನ್ನು ಬಿಚ್ಚಿ ಚಾದರನ್ನು ಹುಲ್ಲು ಮೆತ್ತೆಯ ಮೇಲೆ ಹಾಸಿ—'ಲೋಕಾ, ನೀನಿನ್ನು ಮಲಗಿಕೋ' ಎಂದು ಅಲ್ಲಿಂದ ಕಾಲ್ತೆಗೆದ.

ಹೋಗುತ್ತಾ ಬಾಗಿಲನ್ನು ಓರೆ ಮಾಡಿಕೊಂಡ.

೨೦

ಅರಿಕೇಸರಿ ತಂದಿಟ್ಟ ಕಾಲುದೀಪದೊಡನೆ ಕೋಣೆಯಿಂದ ಹೊರಬಿದ್ದುದೇ ತಡ ಮೆತ್ತೆಯ ಮೇಲೆ ಮೈಚಾಚಿಕೊಂಡು ಕಣ್ಣುಮುಚ್ಚಿದಳು.

ನಿದ್ರೆ ಅವಳನ್ನೊಲಿಯಲಿಲ್ಲ.

ಹೊಸ ಪರಿಸರ, ಪ್ರಯಾಣದಿಂದ ಉಂಟಾದ ದಣಿವು, ಆಗಿದ್ದ ಅದ್ಭುತ ರಮ್ಯ ಅನುಭವಗಳ ತುಮುಲ ತಿಕ್ಕಾಟದಲ್ಲಿ—ನಿದ್ರೆ ಅವಳಿಂದ ದೂರ ಸರಿಯಿತು.

ನಿದ್ರೆ!

ಅದು ಬಾ ಎಂದು ಕರೆದರೆ ಬರುತ್ತದೆಯೇ? ಬೇಡವೆಂದರೆ ಸರಿದು ನಿಲ್ಲುತ್ತದೆಯೇ?

ಮನುಷ್ಯ ಪ್ರಯತ್ನಕ್ಕೆ ಮೀರಿ ನಿಂತುದು ನಿಸರ್ಗದ ಆಟ.

ಕಣ್ಣುಮುಚ್ಚಿ ಮಲಗಿದ್ದ ಲೋಕಾಂಬಿಕೆಯ ಮನೋಪಟಲದ ಮೇಲೆ ಅಂದಿನ ಅನೇಕ ಘಟನೆಗಳು ಮೂಡಿ ಮಾಯವಾದುವು.

ೲ ೲ ೲ

ಅವಳಿನ್ನೂ ಎಳೆಯವಳಿದ್ದಾಗ ರಾಷ್ಟ್ರಕೂಟ ರಾಜಧಾನಿಯಲ್ಲಿ ಚಾಳುಕ್ಯ ನರಸಿಂಹನನ್ನು ಅನೇಕ ಬಾರಿ ನೋಡಿದ್ದಳು. ಆಗಿನ ಅವರ ಜರ್ಬು, ಠೀವಿ, ಗಾಂಭೀರ್ಯ; ಗತ್ತಿನ ಮಾತುಗಾರಿಕೆ ಅವ್ಯಗಳೆಲ್ಲ ಇಲ್ಲಿ ಮಾಯವಾಗಿದ್ದುವು. ಆ ಸ್ಥಳದಲ್ಲಿ ಇಂದು ನಯ, ಮೃದುತ್ವ, ಅನುತಾಪ ತಳವೂರಿತ್ತು. ರಾಜನ ಪ್ರವೃತ್ತಿ ಪೂರ್ಣವಾಗಿ ಕ್ಷಯಿಸಿ, ಸಾತ್ವಿಕತೆ ಅಲ್ಲಿ ಮನೆ ಮಾಡಿತ್ತು.

ಈ ಹೃದಯ ಪರಿವರ್ತನೆ ಅಂತಾದುದಾಯಿತು?

ಈ ಹೃದಯ ಪರಿಪಾಕಕ್ಕೆ ಅವಳಿಗೆ ತಿಳಿದಂತೆ ಯಾವ ಹೆಚ್ಚಿನ ಘಟನೆಯೂ ಅವರ ಜೀವನದಲ್ಲಿ ನಡೆದುದು ಅವಳ ಸ್ಮೃತಿ ಪಥಕ್ಕೆ ಬರಲಿಲ್ಲ. ಯಾವ ಹೊರಗಿನ ಒತ್ತಡವೂ ಇಲ್ಲದೆ ಈ ಬದಲಾವಣೆ ಬಂದುದು ಹೇಗೆ?

ಬದಲಾವಣೆಗೆ ಪ್ರೇರಣೆಬೇಕು.

ಪ್ರೇರಣೆ ಎಂದರೆ ಹೊರಗಿನ ಒತ್ತಾಸೆ ಎಂದೇ ಅವಳು ಭಾವಿಸಿದ್ದಳು.

ಹೊರಗಿನ ನಿರ್ಬಂಧಕ್ಕೂ ಒಳಗಿನ ಒತ್ತಡಕ್ಕೂ ಇರುವ ಆಂತರಿಕ ಭೇದವನ್ನು ಅವಳು ಅರಿಯಳು. ಅದು ಅವಳ ಅನುಭವಕ್ಕೆ ನಿಲುಕದ ವಿಷಯ.

ಒಂದು ತಾತ್ಕಾಲಿಕ.

ಇನ್ನೊಂದು ಸಾತ್ವಿಕ, ಚಿರಂತನ.

ಮೆತ್ತೆಯ ಇನ್ನೊಂದು ಮಗ್ಗುಲಿಗೆ ಹೊರಳಿ ಗತದ ವಿಚಾರಗಳನ್ನು ತಲೆಯಿಂದ ಕೊಡಹಿಕೊಳ್ಳಲು ಅವಳು ಯತ್ನಿಸಿದಳು.

ಆದರೆ ಕೃತಕೃತ್ಯಳಾಗಲಿಲ್ಲ.

ಯೋಚನೆಗಳೇ ಹಾಗೆ—ಅಳಿದಷ್ಟು ಹಬ್ಬು ಬೆಳೆಯುತ್ತವೆ.

ಒಂದರಿಂದ ಒಂದಕ್ಕೆ ಅದು ಹಾರುತ್ತದೆ—ಹಾರಿದಾದ ಮರಕ್ಕೆ ಜಿಗಿಯುವ ಮಂಗನಂತೆ. ಪ್ರಾರಂಭಿಸಿದ್ದು ಎಲ್ಲಿಂದಲೋ ಇರಲಿ, ಅದು ಕವಲೊಡೆದು, ಇನ್ನೆಲ್ಲಿಗೋ ತಂದು ನಿಲ್ಲಿಸುತ್ತದೆ.

ಈ ಸಂಧಿಯಲ್ಲಿ ಅವಳಿಗೆ ತನ್ನ ಇರವು ನೆನಪಿಗೆ ಬಾರದೆ ಇರಲಿಲ್ಲ. ರಾಷ್ಟ್ರಕೂಟ ರಾಜಕನ್ಯೆಯೊಬ್ಬಳು ಹೀಗೆ ವಿವಾಹ ಮಂಟಪದಿಂದ ಯಾರೊಡನೆಯೋ ಓಡಿ ಬಂದ ಸಂಗತಿ ನೆನೆಸಿ ಆಶ್ಚರ್ಯವಾಗದೆ ಇರಲಿಲ್ಲ.

ತಾನು ಎಲ್ಲಿ ಇರಬೇಕಾಗಿತ್ತು?

ಈಗ ಎಲ್ಲಿ ಇದ್ದೇನೆ?

ರಾಣೀವಾಸ—ವನವಾಸ.

ಎಂತಹ ಅಂತರ.

ಎಷ್ಟು ಪಟ್ಟಿದ್ದರೆ ಹಾಯಾಗಿ ಅರಮನೆಯಲ್ಲಿರ ಬಹುದಿತ್ತು. ಕಾಲಿಗೊಬ್ಬರಂತೆ, ಕೈಗೊಬ್ಬರಂತೆ ದಾಸಿಯರಿರುತ್ತಿದ್ದರು ಉಪಚರಿಸಲು. ನಿದ್ದೆ ಬಾರದಿದ್ದುದನ್ನು ಕಂಡು ಕಾಲೊತ್ತಲು ತಾಮುಂದು, ನಾಮುಂದು ಎಂದು ಸೇವಕಿಯರು ಧಾವಿಸಿ ಬರುತ್ತಿದ್ದರು.

ರಾಜಪುತ್ರಿಗೆ ಏನೋ ಆಗಿದೆ ಎಂದು ಭ್ರಮಿಸಿ, ರಾಜ ವೈದ್ಯರಿಗೂ ಕರೆ ಹೋಗುತ್ತಿತ್ತು.

ಅದು ಬರಿಯ ಕಲ್ಪನೆ ಅಲ್ಲ. ವಾಸ್ತವವೂ ಇರುತ್ತಿತ್ತು.

ಈ ಚಿತ್ರವನ್ನು ನೆನಸಿ ಅವಳೊಮ್ಮೆ ಮೃದುವಾಗಿ ನಕ್ಕಳು.

ಹುಚ್ಚು ಕಲ್ಪನೆ.

ಆ ಸವಲತ್ತುಗಳನ್ನು ಹುಲ್ಲಿಗೆ ಸಮನೆಣಿಸಿ, ಈ ಕಾಡಿಗೆ ಓಡಿ ಬಂದಿದ್ದಳು. ಇಲ್ಲೇನಿದೆ? ಏನೂ ಇಲ್ಲ.

ಯಾವ ಆಕರ್ಷಣೆಯೂ ಇಲ್ಲ.

ಮಲಗಲು ಸಿಕ್ಕಿದ್ದು ಹುಲ್ಲ ಹಾಸಿಗೆ.

ತಿನ್ನಲು ದೊರೆತುದು—ಕಂದಮೂಲ, ಗಡ್ಡೆಗೆಣಸು, ಅಂಬಲಿ ಈ ಆಹಾರ ಅವಳ ಹಸಿವನ್ನು ತಣಿಸಿತ್ತು.

ಹುಲ್ಲ ಹಾಸಿಗೆ ನಿಜ. ಆದರೂ ಅದು ಹುಲ್ಲ ಹಾಸಿಗೆಯೆಂದು ಮನಸ್ಸಿಗೆ ಭಾಸವಾಗಲಿಲ್ಲ.

ಕಷ್ಟಕ್ಕೆ ಸಿಲುಕಿದವಳು ಎಂದು ಅನ್ಯರು ತಿಳಿದುಕೊಳ್ಳುವ ಪ್ರಸಂಗ.

ಈ ಕಷ್ಟಕೋಟಲೆ ಬೇಡವೆಂದು ಅದರಿಂದ ಸರಿದು ನಿಲ್ಲುವ ಸಂದರ್ಭ. ಆದರೂ ಅವಳು ಅದನ್ನೇ ಬಯಸಿದಳು.

ತನ್ನ ಮನಸ್ಸನ್ನು ಹೀಗೆ ತಿರುಗಿಸುವುದಕ್ಕೆ ಯಾವ ಶಕ್ತಿ ಬೋಧಿಸಿತು?

ಮೆಚ್ಚಿದ್ದನ್ನು, ಮನಸ್ಸು ಮಾಡಿದ ಅಣತಿಯನ್ನು ಅನುಸರಿಸಿದ ನಿಲುವು.

ಅವಳು ತನ್ನನ್ನೇ ಕೇಳಿಕೊಂಡಳು—

'ನೀನು ಅಸುಖಿಯೇ? ಇವುಗಳನ್ನು ಕಷ್ಟವೆಂದು ಪರಿಗಣಿಸಿದೆಯಾ? ಬನ್ನವನ್ನು ಬೇಕೆಂತಲೇ ಯಾಕೆ ಬರಿಸಿಕೊಂಡೆ?'

ಅವಳ ಮನಸ್ಸು ಕೂಗಿ ಹೇಳಿತು — 'ನೀನು ಅಸುಖಿಯಲ್ಲ.'

ಅವಳ ವಿಚಾರಸರಣಿಯಲ್ಲಿ ಕಡಿದುಹೋದ ಎಳೆ ಪುನಃ ಕೂಡಿಕೊಂಡಿತು.

ನರಸಿಂಹ ನಾಯಕರ ಹಿಂದಿನ-ಇಂದಿನ ನಿಲುವುಗಳಲ್ಲಿ ಅದ ಬದಲಾವಣೆಗೆ ಅವಳೀಗ ಕಾರಣ ಕಂಡುಕೊಂಡಳು.

(ಮುಂದುವರಿಯುವುದು)

ಸ

ವಾರ್

ಪುರ

೬

NAVAYUGA 18—5—1972

Registered with the Registrar
of News Papers for India
under No. R. N. 3646/'57

REGD. No. B. G. 176
LICENCE No. 33
Licensed to Post without Prepayment

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ

ರಾಷ್ಟ್ರೀಕರಣದ ಹುಚ್ಚು

ಸಾಧಿಸಿದರೆ ಸಬಳವೇನೋ ನುಂಗಬಹುದು. ಆದರೆ ಸಾಧಕನಾಗಲು ಪವಿತ್ರತೆ ಅತಿ ಅಗತ್ಯವೆಂದರು ಪರಮಹಂಸರು. ಅಂಥ ಸಾಧನೆ ನಮ್ಮ ಸರಕಾರದ ಮಂತ್ರಿಗಳಿಗೆ ಬಂದರೆ ಅದು ಮಹಾ ಪವಾಡವೇ ಸರಿ. ಇಲಿ ಹೋದಲ್ಲಿ ಕಾವಲು ನಿಂತು, ಹುಲಿ ಬರುವಲ್ಲಿ ಬಾಗಿಲು ತೆರೆದಿಡುವ ಧೀಮಂತರವರು. 'ನಸೆ ಕೊಟ್ಟ ನಾಯಿ ನೆಸಳೆ (ಗಡಿಗೆ) ನೆಕ್ಕಿದಂತೆ' ಎಂದು ಗಾದೆಯಿದೆ. ಸರಕಾರೀ ಹೆಬ್ಬುಲಿಗಳಿಗೆ ಹಣದ ರುಚಿ ಮೊದಲು ಹತ್ತಿದಾಗ ಪಾನ ನಿರೋಧವನ್ನು ಕಿತ್ತು ಹಾಕಿ, ಕೋಟ್ಯಾಂತರ ರೂಪಾಯಿ ಒಳಗೆ ಬಂದಾಗ, ಬೋನಿನಿಂದ ಹೊರಟ ಹಸಿದ ಅಜಗರ ತನಗೆ ಎಲ್ಲಿ ಬೇಟೆ ಸಿಕ್ಕೀತೆಂದು ಅಷ್ಟ ದಿಕ್ಕುಗಳಲ್ಲೂ ಅಗಲ ಕಣ್ಣುರುಳಿಸುವಂತೆ ಎಲ್ಲಿ ಹಣ ಸಿಗುತ್ತದೆಂಬ ಭೀಕರ ತೃಷಿತ ದೃಷ್ಟಿ ಬೀರಿ ಜನತೆಗೆ ದಕ್ಷ ಸೇವಾ ದೃಷ್ಟಿಯಿಂದ ಸಾರಿಗೆ ರಾಷ್ಟ್ರೀಕರಣ ಆಯಿತು; ಬ್ಯಾಂಕ್ ರಾಷ್ಟ್ರೀಕರಣ ನಡೆಯಿತು.

ಆದರೆ ಈ ರಾಷ್ಟ್ರೀಕರಣಗಳಿಂದ ಜನತೆಗೆ ಎಷ್ಟು ಉಪಕಾರ ಆಗಿದೆ, ರಾಷ್ಟ್ರೀಕರಣವಾಗುವ ಮೊದಲು ಅವುಗಳನ್ನು ನಡೆಸುತ್ತಿದ್ದ ಖಾಸಗೀ ಸಂಸ್ಥೆಗಳು ಒದಗಿಸುತ್ತಿದ್ದ ಸಹಾಯ—ಸೌಲಭ್ಯಗಳಿಂದಲೂ ಹೇರಳವಾದ ವ್ಯವಸ್ಥೆ ಈ ಗೂಡ್ದು ಸರಕಾರ ಪಾಲಿಸುತ್ತಿದೆಯೆ? ಎಂಬ ಪ್ರಶ್ನೆಗೆ ಉತ್ತರ ಬೇಕು.

ಈಚೆಗೆ ಸಾರಿಗೆ ಮಂತ್ರಿಗಳೂ ಆದ ಮೈಸೂರಿನ ಅಜೀಜ್ ಸೇಠ್‌ರವರು ಮಂಗಳೂರಿನ ಸಿಟಿಬಸ್ಸುಗಳನ್ನು ರಾಷ್ಟ್ರೀಕೃತಗೊಳಿಸುವುದಾಗಿ ಜನತೆಗೆ ಭರವಸೆಯಿತ್ತರಂತೆ. 'ಅಕ್ಕಿಗೆಷ್ಟು ಸೆಟ್ಟೀ ಅಂದರೇ ಉದ್ದು ಮೂರು ಪಾವು' ಅನ್ನುವ ಅಧಿಕ ಪ್ರಸಂಗವನ್ನು ಇವರೇಕೆ ಮೈಗೂಡಿಸಿಕೊಂಡರು?

ಈಗ ಮಂಗಳೂರಿನಲ್ಲಿ ಅನೇಕ ಖಾಸಗಿ ಸಂಸ್ಥೆಗಳು ಯೋಗ್ಯ ಮತ್ತು ಪ್ರಾಮಾಣಿಕ ರೀತಿಯಲ್ಲಿ ಸಹಕರಿಸುವ ಸಿಟಿಬಸ್ಸುಗಳನ್ನಿರಿಸಿ, ಜನತೆಗೆ ಮಹೋಪಕಾರ ಮಾಡುತ್ತಿವೆ. ಆದರೆ ರಾಜ್ಯಾದ್ಯಂತ ವ್ಯವಸ್ಥಿತವಾಗಿದ್ದ ಖಾಸಗಿ ಸಾರಿಗೆ ಬಸ್ಸುಗಳನ್ನು ತೆಗೆದುಹಾಕಿ, ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿ, ತನ್ನ ಗಂಡಬೇರುಂಡ ಕೆಂಪು ಬಸ್ಸನ್ನು ಓಡಿಸುತ್ತಿರುವ ಸರಕಾರ ಸಾಧಿಸಿದ ಘನತೆ ಏನು? ಶಿಸ್ತು, ಪ್ರಾಮಾಣಿಕತೆ ಮಾತ್ರ ಈ ಸಾರಿಗೆ ಇಲಾಖೆಯಲ್ಲಿಲ್ಲ. ಜನತೆ ಟಿಕೇಟು ತೆಗೆದುಕೊಳ್ಳದೆ ಪ್ರಯಾಣಿಸುವುದು ಅಪರಾಧ. ಕಂಡಕ್ಟರ್ ಹಣ ತೆಗೆದುಕೊಂಡು ಟಿಕೇಟ್ ಕೊಡದಿದ್ದರೂ ಜನತೆಯದೇ ಅಪರಾಧ. ಮಾರ್ಗ ಮಧ್ಯೆ ತನಿಖಾಧಿಕಾರಿಗಳು ಬಸ್ಸು ನಿಲ್ಲಿಸಿ, ಅವರಲ್ಲಿ ಟಿಕೇಟು ಇಲ್ಲದಿದ್ದರೆ ವಿಚಾರಣೆ ಕೂಡ, ಇಲ್ಲದೆ ಕಸ್ಟಡಿಗೆ ದಬ್ಬುವುದು ಕೂಡಾ ಒಂದು ಸೌಕರ್ಯ.

ಶಿಸ್ತು, ನಿಯಮ ತಪ್ಪಿದರೆ ಆಗುವ ಪರಿಣಾಮ ಇದೇ. ಸರಕಾರಿ ಬಸ್ಸುಗಳಿಗೆ ವೇಳೆಯ ಪರಿಮಿತಿ ಇಲ್ಲ. ಖಾಸಗಿ ಬಸ್ಸುಗಳ ಅಪಘಾತದಲ್ಲಿ ಸತ್ತವರಿಗೆ ವಿಮಾ ಸೌಲಭ್ಯಗಳಿದ್ದರೆ ಇದಕ್ಕೆ ಅದೂ ಇಲ್ಲ. ಕಂಡಕ್ಟರ್, ಡ್ರೈವರ್ ಟಿ. ಸಿ....ಎಲ್ಲರೂ ಪ್ರಯಾಣಿಕರ ತೊಗಲು ಸುಲಿಯುವ ಕಟುಕರು. ಭ್ರಷ್ಟಾಚಾರ, ಪ್ರಯಾಣಿಕರಿಗೆ ದಬ್ಬಾಳಿಕೆ, ಅನ್ಯಾಯ ಅದರಲ್ಲಿ ಹೇರಳವಾಗಿದೆ. ಬೇಲಿ ಹೊಲ ಮೇಯುತ್ತಿದ್ದರೂ ತಪ್ಪಿನ ಘೋರ ಶಿಕ್ಷೆ ಶ್ರೀಸಾಮಾನ್ಯನಿಗೆ.

ಇನ್ನೂ ಇನ್ನೂ ರಾಷ್ಟ್ರೀಕರಣದ ಹೊಡಕು ಶಿದು ಅಮಲೇರಿಸಿಕೊಳ್ಳುವುದಕ್ಕಿಂತ ಈ ಸರಕಾರ ಇರುವುದನ್ನೇ ನ್ಯೂನತೆಯಿಲ್ಲದೆ ಪರಿಪಾಲಿಸಿದರೆ ಒಳ್ಳೆಯದಿತ್ತು. ಸಾರಿಗೆ ಇಲಾಖೆಯಲ್ಲಿ ನಷ್ಟ ಬರಲು ಆಡಳಿತ ಅದಕ್ಷತೆಯೇ ಕಾರಣ ಹೊರತು ನಾವಲ್ಲ. ಹಿಂದೆ ಖಾಸಗಿ ಸಂಸ್ಥೆಗಳಿಗೆ ನಷ್ಟ ಬಂದಿತ್ತೆ? ಬಂದ ತಪ್ಪಿಗೆ ಸಾಮಾನ್ಯನನ್ನು ಹಿಂಸಿಸುವ ಬದಲು ಇಲಾಖೆಯನ್ನೇ ತಿದ್ದಲಿ. ಕಾಯಿದೆಗಳನ್ನು ಬಿಗಿಗೊಳಿಸಲಿ. ಬಡ ಸಾಮಾನ್ಯನನ್ನು ಮೋಸ, ವಂಚನೆಯ ಬಲೆಗೆ ನೂಕದಿರಲಿ.

ತನ್ನ ರಾಷ್ಟ್ರೀಕರಣದ ಹೇಯ ಹೊಲಸಿನಿಂದು ಇವರ ಮಂಗಳೂರಿನ ಮಾಂಗಲ್ಯಕ್ಕೆ ಮಾಲಿನ್ಯ ಹಚ್ಚುವುದು ಬೇಡ. ಇಲ್ಲಿಯ ಸಿಟಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಇವರಲ್ಲಿ ಯಾರೂ ಸೆರಗೊಡ್ಡಿ ಬೇಡಿಲ್ಲ. ಈಗ ಅಲ್ಲಿ ನಗರವಾಸಿಗಳಿಗೆ ಆ ಬಸ್ಸುಗಳಿಂದ ದಕ್ಷ ಸೇವೆ, ಪ್ರಾಮಾಣಿಕತೆ, ಅನುಕೂಲ ಪಯಣವೇ ಮೊದಲಾದ ಸೌಲಭ್ಯಗಳು ಕೆಲವು ದಶಕಗಳ ಲಾಗಾಯಿತಿನಿಂದ ದೊರಕುತ್ತಿವೆ. ಅಲ್ಲಿಗೂ ಈ ಸರಕಾರದ ಸುಂಟರಗಾಳಿಯ ಸುಳಿ ಬೇಡವೇ ಬೇಡ.

ಸರಕಾರ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿಯೂ ಸಾಧಿಸಿದ ಸಾಫಲ್ಯ ಅಷ್ಟರಲ್ಲೇ ಇದೆ. ಕೊಟ್ಟ ಸಾಲ ಬಂದಿಲ್ಲ; ಕೊಡುವ ಸಾಲ ಇನ್ನು ಇಲ್ಲವೆಂದಾದುದಷ್ಟೇ ಅಲ್ಲ – ಪ್ರತಿ ವರುಷವೂ ಅದರಲ್ಲಾದ ಕಳವು, ವಂಚನೆ ಮೋಸಗಳ ಮಾರುದ್ದ ಪಟ್ಟಿ ಮಾತ್ರ ಊರಗಲ—ಮಾರಗಲ ಹೊರಗೆ ಬರುತ್ತಿದೆ.

—ಆದುದರಿಂದ ಇನ್ನೂ ಇನ್ನೂ ರಾಷ್ಟ್ರೀಕರಣ ಸಾಮ್ರಾಜ್ಯ ವಿಸ್ತರಿಸುವ ಬದಲು ವಿವೇಕ ತಂದುಕೊಂಡು, ಸರಕಾರ ಬಾಳುವುದೊಳ್ಳಿತು. ಈಗ ಇರುವ ಸಾರಿಗೆಯ ಜಂಜಡಗಳನ್ನು ಪರಿಹರಿಸಿ, ಅದರ ಉಕ್ಕಿನ ಕಾಠಿಣ್ಯವನ್ನು ತೊಡೆದು, ತಿಳಿಯಾದ ಸವಿಯೂಟ ಕೆನೆಯನ್ನು ಜನತೆಗೊದಗಿಸಲಿ. ಭ್ರಷ್ಟಾಚಾರದ ಕಾಡಿನಲ್ಲಿ ಸೊಂಪಾಗಿ ಮೇದು ಮದ್ದಾನೆಗಳಾಗಿರುವ ಈ ನಿರಂಕುಶ ಪ್ರಭುಗಳ ಕಿವಿಗೆ ಕಠಿಣ ಕಾಯಿದೆಯ ಅಂಕುಶವೊಂದು ಅಗತ್ಯವಿದೆಯೆಂದು ಮರೆಯದಿರಲಿ. ಶ್ರೀ ಅಜೀಜ್ ಸೇಠ್‌ರ ಈ ರಾಷ್ಟ್ರೀಕರಣದ ಅನಗತ್ಯ ಎದೆಗಾರಿಕೆಯಿಂದ ಜನತೆಗೆ ಉಪದ್ರವೇ ಹೆಚ್ಚು ಹೊರತು ಉಪಕಾರ ಸ್ವಲ್ಪವೂ ಇಲ್ಲ. ಇದರಿಂದ ಲಂಚಪ್ರಿಯ ಅಧಿಕಾರಿಗಳಿಗೆ ಮೂರನೆಯ ಕೋಡೊಂದು ಮೂಡಿದ ಅನುಭವವಾಗುವುದರೊಂದಿಗೆ ಸಾಗಿಕಣ್ಣಿದ್ದ ಸೌಲಭ್ಯದ ತೆರೆ ಕತ್ತರಿಸಿ, ಕೊರಕಲಿಗೆ ತಳ್ಳಿದ ಪರಿಣಾಮವಾಗುತ್ತದೆ. ಈ ಸರಕಾರ – ರಾಷ್ಟ್ರೀಕರಣದ ಮರುಳನ್ನು ಸಾರ್ಥ ಹೊರತು ಬಿಡಲಿ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

● ●

'ಉದಯವಾಣಿ' ಸಂಪಾದಕರಿಗೆ ಸನ್ಮಾನ

ತಾ. 3ರಂದು ಲಯನ್ಸ್ ಕ್ಲಬ್‌ನಲ್ಲಿ ಕ್ಲಬಿನ ಉಪಾಧ್ಯಕ್ಷ ಡಾ| ಎಂ. ಆರ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಣಿಪಾಲದ ಉದಯವಾಣಿ ಪತ್ರಿಕೆಯು ರಾಷ್ಟ್ರ ಪ್ರಶಸ್ತಿ ಪಡೆದುದಕ್ಕೆ ಅದರ ಸಂಪಾದಕ ಶ್ರೀ ಟಿ. ಸತೀಶ್ ಪೈಯವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕ್ಲಬ್ಬಿನ ಸದಸ್ಯರನ್ನುದ್ದೇಶಿಸಿ ಮಾತಾಡುತ್ತಾ ಶ್ರೀ ಟಿ. ಎ. ಪೈಯವರು, ದೇಶದ ಸಮಸ್ಯೆ ಬಗೆಹರಿಸುವಲ್ಲಿ ಎಲ್ಲರೂ ಒಂದಾಗಿ ತ್ಯಾಗಪೂರ್ಣ ಪ್ರಯತ್ನ ಮಾಡಬೇಕೆಂದೂ, ಅಸಂಖ್ಯಾತ ನಿರುದ್ಯೋಗಿಗಳ ಸಂಕಷ್ಟಗಳ ಕುರಿತು ನಾವು ಚಿಂತಿಸಬೇಕಾಗಿದೆ ಎಂದರು. ಶ್ರೀ ಪೈಯವರು, ಮುಂದುವರಿದು ಭಾಷೆ ಮತ್ತು ಗಡಿ ರಿನ ಗೊಂದಲಗಳ ಕುರಿತು ಪ್ರಸ್ತಾಪಿಸಿದರು.

ಶ್ರೀ ಪೈಯವರು ಉದಯವಾಣಿಗೆ ರಾಷ್ಟ್ರ ಪ್ರಶಸ್ತಿ ದೊರಕಿದುದರ ಕುರಿತು ಮಾತಾಡುತ್ತಾ ಉದಯವಾಣಿಯ ಸಾಧನೆಯ ಬಗ್ಗೆ ಪ್ರಸ್ತಾಪಿಸಿ ಅದು ಮೇಲಿಂದ ಮೇಲೆ ಪ್ರಶಸ್ತಿ ಪಡೆಯುತ್ತಿರುವುದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು. ಈ ಕೀರ್ತಿಗೆ ಶ್ರೀಗಣೇಶ ಪೈಯವರ ತಾಂತ್ರಿಕ ಸಲಹೆ, ಪತ್ರಿಕೆಯ ಸಂಪಾದಕ ಶ್ರೀ ಸತೀಶ್ ಪೈ ಹಾಗೂ ಪತ್ರಿಕೆಯ ಇತರ ಸಿಬಂದಿ ವರ್ಗದವರು ಕಾರಣರೆಂದರು. ಪ್ರಯೋಗ ಪ್ರಯತ್ನಗಳಿಂದ ಯಶಸ್ಸು ಸಾಧ್ಯ ಎಂದು ಶ್ರೀ ಪೈಗಳು ಹೇಳಿದರು.

ಬಡವರ ಸಂಕಷ್ಟ ನಿವಾರಿಸುವಲ್ಲಿ ಲಯನ್ಸ್ ಕ್ಲಬ್‌ನಂಥ ಸೇವಾಸಂಸ್ಥೆಗಳು ವಿದಾಯಕ ಕಾರ್ಯಕ್ರಮಗಳ ಮೂಲಕ ತಮ್ಮ ಪಾಲಿನ ಸೇವೆ ಸಲ್ಲಿಸಲು ಮುಂದಾಗ ಬೇಕೆಂದರು.

ಅಂತ್ಯದಲ್ಲಿ ಲಯನ್ ಡಾ| ಎಂ. ಆರ್. ಹೆಗ್ಡೆಯವರು ಧನ್ಯವಾದ ಅರ್ಪಿಸಿದರು.

ಸರಕಾರಿ ಉದ್ದಿಮೆ ಸಮಿತಿಯ ಅಧ್ಯಕ್ಷರಾಗಿ ಭಾಸ್ಕರ ಶೆಟ್ಟಿ ಆಯ್ಕೆ

ಕಾಪು ಶಾಸಕ ಶ್ರೀ ಬಿ. ಭಾಸ್ಕರ ಶೆಟ್ಟರನ್ನು ಮೈಸೂರು ಸರಕಾರಿ ಉದ್ದಿಮೆಗಳ ಸಮಿತಿಯ ಅಧ್ಯಕ್ಷರನ್ನಾಗಿ ಇದೇ ಎಪ್ರಿಲ್ 24ರಂದು ರಾಜ್ಯ ಸರಕಾರವು ಆರಿಸಿರುವುದು.

ಈ ಸಮಿತಿಯ ಪರಿಮಿತಿಯಲ್ಲಿ ಸರಕಾರಿ ಉದ್ದಿಮೆಗಳು ಹಾಗೂ ಕಾರ್ಪೋರೇಶನ್ ಬೋರ್ಡ್ ಘಟಕಗಳು ಒಳಗೊಂಡಿದ್ದು ಸಮಿತಿಯ ಉದ್ಘಾಟನೆಯನ್ನು ರಾಜ್ಯ ವಿಧಾನ ಸಭಾ ಸ್ಪೀಕರ್ ಶ್ರೀಮತಿ ನಾಗರತ್ನಮ್ಮನವರು ಮೇ 3ರಂದು ವಿಧಾನ ಸೌಧದಲ್ಲಿ ನೆರವೇರಿಸಿದರು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

Edited, Printed & Published by K. M. Shetty at the Navayuga Press, Udipi, S. India.

ನವಯುಗ

ಸಂಪುಟ ೫೧
ಸಂಚಿಕೆ ೩೮

NAVAYUGA

25-5-1972

ಡಾ| ದಿಲ್ಲನ್ ಹೇಳುತ್ತಾರೆ

ಶಾಸಕರ ಹೊಣೆ ಮಿತಿಮೀರಿದೆ

೧೯೭೨ರ ರಾಜ್ಯ ವಿಧಾನ ಸಭೆಗಳಿಗೊಂದು ತನ್ನದೇ ಆದ ವೈಶಿಷ್ಟ್ಯ. ಹಳೆಯ ಹುಲಿಗಳ ಸಂಖ್ಯೆ ಇಲ್ಲಿ ಬಹಳ ಕಡಿಮೆ. ಹೊಸ ಮುಖಗಳು, ಹೊಸ ರಕ್ತಗಳು—ತರುಣ ಪೀಳಿಗೆಯ ಒಂದು ಅವಲೋಕನ ವಿಧಾನ ಸಭಾಧಿವೇಶನದಲ್ಲಿ.

ಈ ತರುಣ ಪೀಳಿಗೆಯಲ್ಲಿ ಮೊತ್ತಮೊದಲ ಬಾರಿಗೆ ಶಾಸಕರಾಗಿ ಬಂದವರೇ ಹೆಚ್ಚು. ಕೆಲವರು ಸ್ಥಳೀಯ ಸಂಸ್ಥೆಗಳ ಮೆಟ್ಟಲು ಹತ್ತಿರಬಹುದಾದರೂ ಹಲವರು ಶಾಸನ ವ್ಯವಸ್ಥೆಗೇ ಹೊಸಬರು.

ಹೊಸ ವಾತಾವರಣ, ಹೊಸ ಹುಮ್ಮಸ್ಸು. ಜನತೆಯ ಆಶೋತ್ತರಗಳನ್ನೆಲ್ಲ ಪೂರಯ್ಸುವ ಅಭಿವಚನ ನೀಡಿ ಗೆದ್ದು ಬಂದಿರುವ ಈ ತರುಣ ಪೀಳಿಗೆಗೆ ತಂತಮ್ಮ ಕ್ಷೇತ್ರಗಳ ಜನತೆಯ ಕಷ್ಟ ಕಾರ್ಪಣ್ಯಗಳನ್ನು ದುಃಖ ದುಮ್ಮಾನಗಳನ್ನು ಸಭೆಯ ಗಮನಕ್ಕೆ ತರುವ ಲವಲವಿಕೆ; ಅವನ್ನು ನಿವಾರಿಸುವ ತವಕ.

ಇದು ಸಹಜ; ಒಂದು ರೀತಿಯಿಂದ ಅನಿವಾರ್ಯ.

ಎಲ್ಲರೂ ಹಸೆ ಮಣೆಯಲ್ಲಿ ಕುಳಿತರೆ ಆರತಿ ಬೆಳಗಲು ಜನವೆಲ್ಲಿ?

ಆದ್ದರಿಂದ ಶಾಸಕರಿಗೆ ಸಭಾ ಕಾರ್ಯಕಲಾಪಗಳ ಅರಿವು ಇರಬೇಕು. ಇದರಿಂದ ವಿಧಾನ ಮಂಡಳಗಳ ಕಾರ್ಯ ಸುಗಮವಾಗುವುದು ಸಾಧ್ಯವಾಗುತ್ತದೆ; ಸಭೆಯ ಘನತೆ ಹೆಚ್ಚುತ್ತದೆ.

ಈ ದೃಷ್ಟಿಯಲ್ಲಿ ರಾಜ್ಯದ ಹೊಸ ಶಾಸಕರಿಗೆ ಸಭಾ ಕಾರ್ಯಕ್ರಮಗಳ ಪರಿಚಯ ಮಾಡಿಕೊಡುವ ಗೋಷ್ಠಿಯು ಸ್ವಾಗತಾರ್ಹ.

ಇಂದು ತರಬೇತಿಗೆ ಬೆಲೆ ಹೆಚ್ಚು. ಮೊದಲಿಗೆ ಶಿಕ್ಷಕರಿಗೆ ಮಾತ್ರ ತರಬೇತಿ ಅನಿವಾರ್ಯವೆಂಬ ಭಾವನೆ ಹೋಗಿ ಇದೀಗ ಎಲ್ಲೆಡೆಯೂ ತರಬೇತಿಯ ಮೌಲ್ಯ ಅಧಿಕ. ಗುಮಾಸ್ತೆ ಪೇದೆಗಳಿಗೂ ತರಬೇತಿಯ ಏರ್ಪಾಡಾಗಿರುವಾಗ ಶಾಸಕರಿಗೆ ಬೇಡವೆ?

ಪ್ರಜಾಸತ್ತೆಯನ್ನು ಉಳಿಸುವ ಅಥವಾ ಅಳಿಸುವ, ದೇಶವನ್ನು ರಕ್ಷಿಸುವ ಅಥವಾ ಭಕ್ಷಿಸುವ ಶಕ್ತಿವಂತರಾದ ಶಾಸಕರು ಹಲವಾರು ವಿಷಯಗಳಲ್ಲಿ ಜನತೆಗೆ ಮಾರ್ಗದರ್ಶಕರಲ್ಲವೆ?

ಕೋಮನ್‌ವೆಲ್ತ್ ಪಾರ್ಲಿಮೆಂಟರಿ **ಸಂಘದ ರಾಜ್ಯ ಶಾಖೆಯ ಆಶ್ರಯದಲ್ಲಿ** ಮೇಲೆ ಹೇಳಿದ ಗೋಷ್ಠಿ ನಡೆಯಿತು. ಇದನ್ನು ಉದ್ಘಾಟನೆ ಮಾಡಿದವರು ಲೋಕ ಸಭಾಪತಿ ಡಾ| ಜಿ. ಎಸ್. ದಿಲ್ಲನ್ ಅವರು.

ಡಾ| ದಿಲ್ಲನ್ ಶಾಸಕರಿಗೆ ಹತ್ತು ಹಲವು ಸಲಹೆಗಳನ್ನು ನೀಡಿದ್ದಾರೆ. ಇವು ಶಾಸಕರಿಗೆ ಮಾತ್ರವಲ್ಲ, ಸ್ಥಳೀಯ ಸಂಸ್ಥೆಗಳ ಸದಸ್ಯರಿಗೂ ಉಪಯುಕ್ತ. ಸಾರ್ವಜನಿಕ ಸಂಘ—ಸಂಸ್ಥೆಗಳ ಸದಸ್ಯರಿಗೂ ಲಾಭದಾಯಕ.

ಶಾಸನ ಸಭಾ ಕಾರ್ಯ ಕಲಾಪಗಳು ಅತ್ಯಂತ ಸೂಕ್ಷ್ಮ. ಅವನ್ನು ಒಂದೆರಡು ದಿನಗಳಲ್ಲಿ ಅಥವಾ ಒಂದೆರಡು ಅಧಿವೇಶನಗಳಲ್ಲಿ ತಿಳಿದು ಕೊಳ್ಳುವುದು ಸಾಧ್ಯವಿಲ್ಲ.

ಅಧಿವೇಶನದಲ್ಲಿ ಪೂರ್ಣಕಾಲ ಹಾಜರಿದ್ದು ಅದರ ವಿಧಿ—ವಿಧಾನಗಳನ್ನು ಆಸಕ್ತಿಯಿಂದ ಗಮನಿಸಿದರೆ ಮಾತ್ರ ಅವನ್ನು ಮನವರಿಕೆ ಮಾಡಿಕೊಳ್ಳ ಬಹುದು: ಶಾಸಕ ತನದ ಹೊಣೆಗಾರಿಕೆಯನ್ನು ನಿರ್ವಹಿಸ ಬಹುದು.

ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯ ಸಾಧನೆಗೆ ಪರಸ್ಪರ ಸಂಧಾನದ ಮೂಲಕ ನಿರ್ಧಾರ ಕೈಕೊಳ್ಳಬೇಕು. ಆದುದರಿಂದಲೇ ಸಂಸತ್ತು ಮತ್ತು ವಿಧಾನ ಮಂಡಳಗಳಿಗೆ ಪಾರ್ಲಿಮೆಂಟರಿ ಪ್ರಜಾಸತ್ತೆಯಲ್ಲಿ ಪ್ರಾಧಾನ್ಯ ಹೆಚ್ಚು. ಇವು ನಾವು ಸ್ವತಂತ್ರರೆಂಬುದನ್ನು ಮಾತ್ರ ಘೋಷಿಸುತ್ತವೆಂದು ತಿಳಿಯುವುದು ತಪ್ಪು; ಇವು ಪ್ರಜಾಸತ್ತೆಯನ್ನು ಜೀವನ ವಿಧಾನವೆಂದು ಒಪ್ಪಿರುವ ನಂಬಿಕೆಯ ಸಂಕೇತವಾಗಬೇಕು.

ಸಂಸತ್ತು—ವಿಧಾನ ಮಂಡಲಗಳು ಸುಗಮವಾಗಿ ಕಾರ್ಯ ನಿರ್ವಹಿಸಬೇಕಾದರೆ, ಸದಸ್ಯರು ಸಂಯಮದಿಂದ ಶಿಸ್ತಿನಿಂದ ವರ್ತಿಸುವುದು ಅತ್ಯವಶ್ಯ; ಸದಸ್ಯರು ವಿಪರೀತವಾಗಿ ವರ್ತಿಸಿದರೆ, ಪ್ರಜಾಸತ್ತೆಗೆ ಮುಳುವು ನಿಶ್ಚಿತ.

ಶಾಸಕರ ಹೊಣೆಗಾರಿಕೆ ಅಪಾರ. ಅವರು ತಮ್ಮ ವರ್ತನೆಯಿಂದ ದೇಶಕ್ಕೆ ಸದ್ವರ್ತನೆ ಪಾಠ ಕಲಿಸುತ್ತಾರೆ. ಅವರನ್ನು ಸಾರ್ವಜನಿಕರು ಗಮನಿಸುತ್ತಾರೆ, ಅನುಕರಿಸುತ್ತಾರೆ.

ಪಾರ್ಲಿಮೆಂಟರಿ ಕಾರ್ಯಕಲಾಪಗಳಿಗೆ ಪ್ರಜಾಸತ್ತೆಯಲ್ಲಿ ಪ್ರಚಾರ ಹೆಚ್ಚು; ಶಾಸಕರ ಅಶಿಸ್ತು, ಅಸಂಯಮ, ಅಶಿಷ್ಟ ವ್ಯವಹಾರ, ಅಸದ್ವರ್ತನಗಳ ಭೀಕರ ಪರಿಣಾಮ ಪ್ರಜಾವರ್ಗದ ಮೇಲಾಗಿಯೇ ಆಗುತ್ತದೆ.

ಶಾಸಕರು ಕ್ರಮಬದ್ಧವಾದ, ಘನತೆಗೆ ಸರಿಯಾದ ವಿಧಾನದಲ್ಲಿ ಚರ್ಚೆ ನಡೆಸಬೇಕು. ಒಳಗಡೆ ಅವ್ಯವಸ್ಥೆ-ಅಶಿಸ್ತುಗಳಿಗೆ ಕಾರಣರಾದರೆ, ಸದಸ್ಯರಿಗೆ ಗೌರವ ಲಭಿಸುವುದಿಲ್ಲ; ಅಂತಹವರ ಘನತೆ ಇಳಿಯುತ್ತದೆ.

ಕೆಲವೊಮ್ಮೆ ಸಭೆಯನ್ನು ಹದ್ದಿನಲ್ಲಿಟ್ಟುಕೊಳ್ಳುವುದು ಸಭಾಪತಿಗಳಿಗೇ ಕಷ್ಟಸಾಧ್ಯವಾಗುತ್ತದೆ. ಆಗ ಅಪ್ರಿಯ ನಿರ್ಧಾರಗಳನ್ನು ಸಭಾಪತಿಗಳು ಕೈಕೊಳ್ಳುವುದು ಅನಿವಾರ್ಯವಾಗುತ್ತದೆ. ಶಾಸಕರು ಸಂಯಮದಿಂದ ಸಭಾಪತಿ ಪೀಠದ ಮೇಲೆ ಗೌರವ ಭಾವನೆಯಿಂದ ವರ್ತಿಸಿದರೆ ಇಂತಹ ಪ್ರಮೇಯಗಳು ತಲೆದೋರುವುದೇ ಇಲ್ಲ. ಇದರಿಂದ ಸಂಸದೀಯ ಸತ್‌ಸಂಪ್ರದಾಯಗಳು ಬೆಳೆಯುವುದು ಸಾಧ್ಯವಾಗುತ್ತದೆ.

ಸದ್ಯ ಲೋಕಸಭೆಯಲ್ಲಿಯೂ ರಾಜ್ಯ ವಿಧಾನ ಸಭೆಯಲ್ಲಿಯೂ ಆಳುವ ಪಕ್ಷಕ್ಕೆ ನಿರಾತಂಕ ಬಹುಮತವಿದೆ. ಕೆಲವೆಡೆ ಅಧಿಕೃತ ವಿರೋಧಿ ಪಕ್ಷಗಳೆಂಬುವೇ ಇಲ್ಲ.

ಜನತೆಯು ವ್ಯಕ್ತಪಡಿಸಿರುವ ವಿಶ್ವಾಸಕ್ಕೆ ಪ್ರತಿಯಾಗಿ ಶಾಸನ ಸಭೆಗಳು ಅರ್ಥಪೂರ್ಣವಾಗಿ ಕಾರ್ಯ ನಿರ್ವಹಿಸಬೇಕು.

ಆಡಳಿತ ಪಕ್ಷಗಳಿಗೆ ಹೆಚ್ಚು ಬಹುಮತವಿರುವ ಸಭೆಗಳಲ್ಲಿ ತಮ್ಮ ಪಾತ್ರನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವಿರೋಧಿ ಪಕ್ಷಗಳಿಗೆ ಹೆಚ್ಚು ಅವಕಾಶ ನೀಡಬೇಕು.

ಸಂಸತ್ತು ಮತ್ತು ವಿಧಾನ ಮಂಡಲಗಳಲ್ಲಿ ಕೆಲವೊಮ್ಮೆ ಕೋರಂ ಕಾಯ್ದುಕೊಳ್ಳುವುದು ಕಷ್ಟವಾಗುತ್ತದೆ. ಇದಕ್ಕೆ ಹಲವಾರು ಕಾರಣಗಳು.

ಚರ್ಚೆಯ ಮೂಲಕ ತಾವು ಕಲಿಯತಕ್ಕ ಸಂಗತಿಗಳವೆಯೆಂಬುದನ್ನು ಶಾಸಕರು ತಿಳಿದುಕೊಳ್ಳಬೇಕು. ಈ ಭಾವನೆ ಉತ್ಪನ್ನವಾದರೆ, ಹೆಚ್ಚಿನ ಸದಸ್ಯರು ಸಭೆಗಳಲ್ಲಿ ಹಾಜರಾಗುತ್ತಾರೆ.

ಕೋರಂ ಕಾಪಾಡುವ ಕರ್ತವ್ಯ ಸರಕಾರಿ ಪಕ್ಷ, ವಿರೋಧಿ ಪಕ್ಷ ಅಥವಾ ತಂಡಗಳ ಹೊಣೆಗಾರಿಕೆ. ಕೋರಂ ಸೇಕಡಾ ಹತ್ತರಷ್ಟಾಗಿರುವಾಗ ಎಲ್ಲರಷ್ಟು ಸಹಕಾರದಿಂದ ಅದನ್ನು ಉಳಿಸಿಕೊಳ್ಳುವುದು ಸಾಧ್ಯ.

ಶಾಸಕರು ಕೋರಂ ಉಳಿಸಿಕೊಳ್ಳಲು ಅಶಕ್ತರಾದರೆ, ಅದರ ಪರಿಣಾಮ ಜನತೆಯ ಮೇಲಾಗುತ್ತದೆ. ತಾವು ಆರಿಸಿ ಕಳಿಸಿದ ಸದಸ್ಯರು ಶಾಸನ ಸಭೆಗಳಲ್ಲಿ ಯಾವಾಗಲೂ ಹಾಜರಾಗಿರಬೇಕೆಂದು ಅದು ಬಯಸುತ್ತದೆ. ಇದರಿಂದ ತಮ್ಮ ಸಮಸ್ಯೆಗಳ ಪರಿಹಾರ ಸಾಧ್ಯವಾಗುತ್ತವೆಂದು ಅದು ನಂಬುತ್ತದೆ.

ಉಪಾಹಾರದ ವೇಳೆ ಮತ್ತು ದೀರ್ಘಕಾಲ ಅಧಿವೇಶನ ನಡೆಯುವ ವೇಳೆ ಕೋರಂ ಪ್ರಶ್ನೆ ಎತ್ತಬಾರದೆಂದು ಪಕ್ಷಗಳ ಮಟ್ಟದಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಆದರೆ, ಇದಕ್ಕೆ ಸಂವಿಧಾನದ ಬಲವಿಲ್ಲ. ಆದ್ದರಿಂದ ಯಾರಾದರೂ ಈ ಪ್ರಶ್ನೆಯನ್ನೆತ್ತಿದರೆ, ಸಭಾಪತಿ ಉಚಿತ ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ.

ಸಭೆಯ ವ್ಯಾಪ್ತಿಗೆ ಒಳಪಡುವಷ್ಟು ಸಮೀಪದಲ್ಲೇ ನಡೆಯುವ ಸಭೆಗಳಲ್ಲಿ ಭಾಗವಹಿಸುವವರು ಕೆಲವರಿರಬಹುದು; ಗ್ರಂಥಾಲಯದಲ್ಲಿ ಕೆಲವರಿರಬಹುದು; ಮೊಗಸಾಲೆಯಲ್ಲಿ ಕೆಲವರಿರ ಬಹುದು.

ಇವರೆಲ್ಲರನ್ನೂ ಅವಶ್ಯಕತೆಯಲ್ಲಿ ಕೋರಂಗೆ ಕರೆದುಕೊಳ್ಳುವ ಪದ್ಧತಿಯಿದೆ.

ಅಧಿವೇಶನಗಳು ಬಹಳ ಸಮಯ ನಡೆಯುವುದುಂಟು. ಹಲವಾರು ಸಮಿತಿಗಳ ಸಭೆಗಳೂ ಇದೇ ವೇಳೆ ಜರಗುವುದುಂಟು. ಕೆಲವು ಸದಸ್ಯರು ತಮ್ಮ ಚರ್ಚೆಗೆ ಪೂರ್ವಸಿದ್ಧತೆ ಮಾಡಿ ಕೊಳ್ಳುತ್ತಿರುವುದುಂಟು. ಆ ವೇಳೆ ಕೋರಂ ಘಂಟೆ ಬಾರಿಸಿದರೆ ಅಂಥವರಿಗೆ ಎಷ್ಟು ಕಸಿವಿಸಿಯಾಗುವುದಿಲ್ಲ!

ಆಳುವ ಪಕ್ಷ—ವಿರೋಧಿ ಪಕ್ಷಗಳ ಪರಸ್ಪರ ಸಹಕಾರದಿಂದಲೇ ಇಂಥೆಲ್ಲ ಸಮಸ್ಯೆಗಳಿಗೆ ಪರಿಹಾರ ಸಾಧ್ಯ.

ಇಕ್ಕಡೆಯವರೂ ಜನತೆಯ ಪ್ರತಿನಿಧಿಗಳು ಜನತೆಯ ಕಾಳಜಿ ವಹಿಸಿಕೊಂಡೇ ಬಂದಿರುವವರು. ಪರಸ್ಪರ ತಿಳುವಳಿಕೆ ಮತ್ತು ಸೌಹಾರ್ದದಿಂದ ಶಾಸಕ ಸಭೆಗಳ ಗೌರವ—ಘನತೆಗಳನ್ನು ಎತ್ತಿ ಹಿಡಿಯುವುದು ಸಾಧ್ಯವಾಗುತ್ತದೆ.

ಸದಸ್ಯರಿಗೆ ಇರುವ ವಾಕ್ ಸ್ವಾತಂತ್ರ್ಯವನ್ನು ಮತ್ತವರಿಗಿರುವ ರಕ್ಷಣೆಯನ್ನು ದುರುಪಯೋಗ ಪಡಿಸಿಕೊಳ್ಳದೆ ಇರುವುದರಿಂದಲೇ ಬಹಳಷ್ಟು ಕಸಿವಿಸಿ ದೂರವಾಗುತ್ತದೆ.

●●

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ಬದಲಾವಣೆಗೆ ಕಾರಣ ಬಹಿರಂಗವಲ್ಲ.

ಅವರ ಹಿನ್ನೆಲೆ ಅಂತರಂಗ—ವ್ಯಕ್ತಿಯ ಮನೋಭೂಮಿಕೆ.

ಸ್ವಾತಂತ್ರ್ಯ—ಸುಖ—ತೃಪ್ತಿ—ಇವುಗಳೂ ಅಷ್ಟೆ.

ಇವು ಮನುಷ್ಯನ, ಬುದ್ಧಿ-ಮನಸ್ಸಿನ ವ್ಯಾಪಾರಗಳು.

ಈ ವ್ಯಾಪಾರಗಳನ್ನು ನಿಯಂತ್ರಿಸುವುದು ಎಂದರೆ ಸ್ವಾತಂತ್ರ್ಯ ಹರಣ, ಕೃತುಶಕ್ತಿಯ ಸಂಹರಣ.

ನಿವೇದನ ಅಲ್ಲ—ಸಂವೇದನ ಚಾಲನೆಗೆ ಪುಟಕೊಡುವುದು.

ಈ ವಿಚಾರದ ಹೊಳಹು ಅವಳನ್ನು ಪುಳಕಗೊಳಿಸಿತು.

ಅವಳಿಗೂ ತಿಳಿಯದಂತೆ ಅವಳನ್ನು ನಿದ್ರೆಯಾವರಿಸಿತು.

೦೦ ೦೦ ೦೦

ಬೆಳಕು ಹರಿಯುತ್ತಿದ್ದಂತೆಯೇ ಅರಿಕೇಸರಿ ಹಾಸುಗೆಯಿಂದೆದ್ದ. ಎದ್ದವನು ನೇರವಾಗಿ ವರದೆಯ ದಡಕ್ಕೆ ಹೋದ. ನದಿಯಲ್ಲಿಳಿದು ಮೈ ತೊಳೆದುಕೊಂಡ. ಒದ್ದೆ ಬಟ್ಟೆಯಲ್ಲಿಯೇ ಮಧುಕೇಶ್ವರ ಗುಡಿಗೆರಡು ಪ್ರದಕ್ಷಿಣೆ ಹಾಕಿದ. ಗುಡಿಯೊಳಗೆ ಪ್ರವೇಶಿಸಿ ದೇವರಿಗೆ ನಮ್ರತೆಯಿಂದ ಕೈಮುಗಿದ.

ಅಲ್ಲಿಂದ ನೇರವಾಗಿ ಎಲೆಮನೆಯತ್ತ, ಸುತ್ತಲಿನ ವನಶ್ರೀಯನ್ನು ನೋಡುತ್ತ ನಡೆದ. ಎಲೆಮನೆಯ ಮುಂಭಾಗದ ಅಂಗಳದಲ್ಲಿ ಕೆಲಸದಾಳು ಆಕಳೊಂದನ್ನು ಗೂಟಕ್ಕೆ ಬಿಗಿದು ಹಾಲು ಕರೆಯುತ್ತಿದ್ದಳು. ಆಕಳು ತನ್ನ ಹತ್ತಿರದಲ್ಲಿ ನಿಂತ ತನ್ನ ಕರುವನ್ನು ನಾಲಿಗೆಯಿಂದ ನೆಕ್ಕುತಿತ್ತು. ಕರು ಮೈಯೊಡ್ಡಿ ನಿಂತಿತ್ತು.

ಈ ಮಧ್ಯೆಯೂ ಅದು ಕಟ್ಟಿದ್ದ ಹಗ್ಗ ಹರಿದುಕೊಳ್ಳಲು ಯತ್ನಿಸುತಿತ್ತು. ತಾಯಿಯ ಕೆಚ್ಚಲೆಡೆಗೆ ಧಾವಿಸಲು ಯತ್ನಿಸುತಿತ್ತು.

ಆಕಳ ಕೆಚ್ಚಲಿಂದ ಧಾರೆಯಾಗಿ ಹರಿಯುವ ಹಾಲು, ಕೆಲಸದವಳ ಕೈಯಲ್ಲಿದ್ದ ಪಾತ್ರೆಗೆ ಬೀಳುತಿತ್ತು. ಆಗಲೇ ಆ ಪಾತ್ರೆ ತುಂಬುತ್ತ ಬಂದಿತ್ತು.

ಹೀಗೆ ಕರೆದು ತಂದ ಹಾಲನ್ನೇ ಎಲ್ಲರೂ ಕುಡಿಯುತಿದ್ದುದು.

—ಆಕಳ ಹಾಲು ನಿಜಕ್ಕೂ ಶಕ್ತಿಸಂವರ್ಧಕ.

ಆದರೆ ಆ ಹಾಲು ಸಿಗುವುದು?

ಕರುವನ್ನು ಉಪವಾಸ ಕೆಡವಿ, ತಾಯಿಯನ್ನು ಬಳಲಿಸಿ.

ದೇಹ ಪೋಷಣೆಗೆ ಪರಾವಲಂಬನೆ, ಪರವಂಚನೆ ಅನಿವಾರ್ಯವೇನೋ?

ಇದು ಅವನ ಮನಸ್ಸಿನಲ್ಲಿ ಮೂಡಿದ ಪ್ರತಿಕ್ರಿಯೆ.

ಆತ ನಿಧಾನವಾಗಿ ಜಗಲಿಯನ್ನೇರಿದ.

ಅಷ್ಟರಲ್ಲಿ ಬೆಳಕು ಹರಿದಿತ್ತು.

ಆದರೂ ಒಳಗಿದ್ದವರು ಎದ್ದ ಸುಳಿವು ಕಾಣಲಿಲ್ಲ.

ನರಸಿಂಹ ನಾಯಕರು ಅಷ್ಟು ಹೊತ್ತಿನ ತನಕ ಮಲಗಿರುತ್ತಿರಲಿಲ್ಲ. ಅವರು ಆಗಲೇ ಮನೆಯಿಂದ ಹೊರಬಿದ್ದಿರಬಹುದೆಂದು ತರ್ಕಿಸಿದ.

ಆದರೆ ಲೋಕಾಂಬಿಕೆ ಏಕೆ ಇನ್ನೂ ಎದ್ದಿಲ್ಲ?

ಆ ಪ್ರಶ್ನೆ ಅವನನ್ನು ಕಾಡದೆ ಬಿಡಲಿಲ್ಲ.

ಅವನ ದೃಷ್ಟಿ ಸಹಜವಾಗಿಯೇ ಪಕ್ಕದ ಕೋಣೆಯತ್ತ ಹರಿಯಿತು. ಆತ ಕುತೂಹಲದಿಂದ ಕೋಣೆಯೊಳಗೆ ಇಣಿಕಿದ. ಆಕೆ ಇನ್ನೂ ಮಲಗಿದ್ದಂತೆಯೇ ಕಂಡುಬಂತು. ಹಿಂದಿನ ಇರುಳು ಕೋಣೆಯಿಂದ ಕಾಲ್ದೆಗೆದಾಗ ಎಳೆದುಕೊಂಡಿದ್ದ ಬಿದಿರ ಬಾಗಿಲು ಯಥಾಸ್ಥಿತಿಯಲ್ಲಿತ್ತು. ಅದನ್ನಾರೂ ಸ್ಪರ್ಶಿಸಿದಂತೆ ಕಂಡುಬರಲಿಲ್ಲ. ಲೋಕಾಂಬಿಕೆ ತಾನು ಹೊರ ಬಂದ ಮೇಲೆ ಕದವಿಕ್ಕಿಕೊಳ್ಳದೆ ಹಾಗೆಯೇ ನಿದ್ರೆಹೋಗಿರಬೇಕೆಂದು ತರ್ಕಿಸಿದ.

ಸ್ತ್ರೀಯೊಬ್ಬಳು ಮಲಗಿದ್ದ ಕೋಣೆಯನ್ನು ಆ ರೀತಿ ಇಣಿಕಿ ನೋಡುವುದು ಶಿಷ್ಟಾಚಾರಕ್ಕೆ ವಿರುದ್ಧವೆಂದು ಅವನ ಒಳದನಿ ತಿಳಿಸಿತು.

ಆತ ಹಾಗೆಯೇ ಹಿಂದೆ ಸರಿದ.

ಹಾಗೆ ಸರಿಯುವಾಗ, ಲೋಕಾಂಬಿಕೆ ಮೆತ್ತೆಯ ಮೇಲೆ ಪವಡಿಸಿದ್ದ ಸ್ಪಷ್ಟ ಚಿತ್ರ ಅವನಿಗೆ ಕಾಣಿಸಿತು. ಆಕೆ ಹೊರ ಜಗತ್ತಿನ ಪರಿವೆ ಇಲ್ಲದೆ ಪವಡಿಸಿದ್ದಳು. ನಿದ್ದೆಯಲ್ಲಿ ತೊಟ್ಟ ಬಟ್ಟೆ ಅಸ್ತವ್ಯಸ್ತವಾಗಿತ್ತು. ಅವಳ ನೀಳವಾದ ಕೇಶರಾಶಿ ಎದೆಯ ಮೂಲಕ ಹಾದು ಬಂದು ಮೊಣಕಾಲನ್ನು ಮುದ್ದಿಸುತಿತ್ತು. ಮುಖದಲ್ಲಿ ಮುಗ್ಧತೆ ಬಿಂಬಿಸಿತ್ತು.

ಆತನಿಗೆ ಅಲ್ಲಿಂದ ತನ್ನ ಕಣ್ಣುಗಳನ್ನು ಕೀಳುವುದು ಸಾಧ್ಯವಾಗದೆ ಹೋಯಿತು. ಮಲಗಿದ್ದ ಮುಗ್ಧೆಯನ್ನು ನೋಡುತ್ತ ಆತ ಹಾಗೆಯೇ ನಿಂತ.

ಗೋಡೆಯಲ್ಲಿ ಕೊರೆದ ಬೆಳಕಿಂಡಿಯಿಂದ ಬೆಳಕು ತೂರಿಬಂದು ಅವಳ ಮುಖವನ್ನು ಮುದ್ದಿಸುತಿತ್ತು. ಮಂದಮಂದವಾಗಿ ಬೀಸುತಿದ್ದ ಗಾಳಿಗೆ ಅವಳ ಕರಿಯ ಕೂದಲು ತೇಲಿಬಂದು ಅವಳೊಡನೆ ಕಚಗುಳಿಯಾಡುತಿತ್ತು.

ತಾನೊಬ್ಬ ಚಿತ್ರಗಾರನಾಗಿದ್ದರೆ—?

ಹಾಯಾಗಿ ಮಲಗಿದ್ದ ಆ ಮುಗ್ಧೆಯ ಚಿತ್ರವನ್ನು ಬಿಡಿಸಬಹುದಿತ್ತು.

ಆದರೆ—

ಅದು ಬರಿಯ ಆಸೆ. ಅದನ್ನು ಆತ ಅರಗಿಸಿಕೊಳ್ಳುವಂತಿರಲಿಲ್ಲ. ಕುಂಚವನ್ನು ಬಳಸುವ ಕೌಶಲ್ಯ ಆತನ ಕೈಗಳಿಗೆ ಇರಲಿಲ್ಲ.

ಒಂದರ್ಧ ನಿಮಿಷ ಕಳೆದಿರಬಹುದು.

ಆಕೆ ಮೈಮುರಿದಳು.

ಇನ್ನೇನು, ಏಳುತ್ತಾಳೆ ಎಂದು ಗ್ರಹಿಸಿದ.

ಎದ್ದವಳ ದೃಷ್ಟಿಗೆ ಕದ್ದು ನೋಡುವ ತಾನು ಬಿದ್ದರೆ—?

ತನ್ನ ನಡತೆ ತನಗೇ ಸರಿಬೀಳದಿರುವಾಗ ಅವಳ ದೃಷ್ಟಿಯಲ್ಲಿ ಖಂಡಿತ ತಪ್ಪುಗಾರ.

ಆದರವಳು ಎಚ್ಚರಗೊಂಡಂತೆ ಕಾಣಲಿಲ್ಲ. ಮತ್ತೊಂದು ಮಗ್ಗುಲಿಗೆ ಹೊರಳಿದಳು. ಹಾಗೆ ಹೊರಳಿಕೊಂಡಾಗ ಎದೆಯ ಮೇಲೆ ಹರಡಿಕೊಂಡ ಹೆರಳು ಮೆತ್ತೆಯ ಮೇಲೆ ಉರುಳಿತು. ಹಾಗೆ ಅದು ಜಾರಿ ಬೀಳುವುದು ಸಹಜವೆನಿಸಿದರೂ, ಏನೋ ಭಾರವಾದ ವಸ್ತು ಉರುಳಿದಂತೆ ಅನಿಸಿತು. ಅಚ್ಚರಿಯಿಂದ ಆತ ತನ್ನ ದೃಷ್ಟಿಯನ್ನು ಅಲ್ಲೇ ಕೇಂದ್ರೀಕರಿಸಿದ.

ಹೆರಳು ತೆವಳಿಕೊಂಡು ಹೋಗುವಂತೆ ತೋರಿತು.

ಹೆರಳು ಗಾಳಿಗೆ ತೊನೆಯುವುದರಲ್ಲಿ ಅಸಹಜವಲ್ಲವಾದರೂ ಹೆರಳ ಸೂಡಿ, ತೆವಳಿಕೊಂಡು ಹೋಗಿ ಪುನಃ ಅವಳೆದೆಯನ್ನೇರುವುದು ವಿಚಿತ್ರವೆನಿಸಿತು.

ಅದು ಕಬರೀ ಬಂಧವಿರಲಾರದು. ಜೀವಂತ ಜಂತುವೇ ಎಂದು ತಿಳಿಯಲು ಕಾಲ ಹಿಡಿಯಲಿಲ್ಲ. ಆತ ಹಿಂದಕ್ಕೆ ಸರಿದು, ಮೇಲ್ಮಾಡಿಗೆ ತೂಗು ಹಾಕಿದ್ದ ಖಡ್ಗವನ್ನು ಕೈಗೆತ್ತಿಕೊಂಡ. ಸ್ವಲ್ಪವೂ ಸಪ್ಪಳಾಗದಂತೆ ಆಕೆ ಮಲಗಿದ್ದ ಹಾಸುಗೆಯ ಹತ್ತಿರಕ್ಕೆ ಹೋದ. ಅವಳ ಎದೆಯ ಮೇಲೆ ಹಾಯಾಗಿ ಪವಡಿಸಿದ್ದ ಕರಿ ನಾಗರದ ಬಾಲವನ್ನು ಹಿಡಿದು ರಭಸದಿಂದೆಳೆದ. ಎಳೆದು ಎಸೆದ ರಭಸಕ್ಕೆ ಆ ವಿಷಜಂತು ಅಷ್ಟು ದೂರ ಸಿಡಿದು ಬಿತ್ತು.

ನಾಗರ ಕೆರಳಿ ಹೆಡೆಯಾಡಿಸಿ, ಬುಸುಗುಟ್ಟಿತು. ಅರಿಕೇಸರಿ ಖಡ್ಗದಿಂದ ಅದನ್ನು ಎರಡು ಹೋಳುಗಳಾಗಿ ತುಂಡು ಮಾಡಿದ.

ಈ ಗದ್ದಲಕ್ಕೆ ಅವಳಿಗೆ ಎಚ್ಚರವಾಯಿತು.

ಅವಳಿಗೆ ಯಾವುದೂ ಅರ್ಥವಾಗಲಿಲ್ಲ.

ಅವಳು ಅವನನ್ನೊಮ್ಮೆ, ಬಿದ್ದಿದ್ದ ಹಾವನ್ನೊಮ್ಮೆ ನೋಡುತ್ತ ಹಾಸುಗೆಯ ಮೇಲೆ ಕುಳಿತಳು.

ಸತ್ತು ಬಿದ್ದ ಹಾವನ್ನು ಅರಿಕೇಸರಿ ಖಡ್ಗದ ಮೊನೆಯಿಂದ ತಿವಿದ. ಖಡ್ಗದ ಮೊನೆಗೆ ಹಾವಿನ ಜಡ ದೇಹ ಗಟ್ಟಿಯಾಗಿ ತಗುಲಿಕೊಂಡಿತು. ಅದೇ ಭಂಗಿಯಲ್ಲಿ ಆತ 'ದೇವೀ ನನ್ನನ್ನು ಕ್ಷಮಿಸು' ಎಂದು ಅವಳ ಉತ್ತರಕ್ಕೂ ಕಾಯದೆ ಅಲ್ಲಿಂದ ಕಾಲ್ದೆಗೆದ. ಮಿಂಚಿನ ವೇಗದಲ್ಲಿ ನಡೆದ ಘಟನೆಗಳಿಂದ ದಿಗ್ಭ್ರಾಂತಳಾದ ಲೋಕಾಂಬಿಕೆಗೆ ಯಥಾಸ್ಥಿತಿಗೆ ಬರಲು ಕೊಂಚ ಕಾಲ ಹಿಡಿಯಿತು.

ಆಕೆ ನಿಧಾನವಾಗಿ—ಉಟ್ಟ ಬಟ್ಟೆಯನ್ನು ಸರಿಪಡಿಸಿಕೊಂಡು—ಕೆದರಿದ ಕೇಶ ರಾಶಿಯನ್ನು ಉಗುರಿನಿಂದ ಕೊಳ್ಳುತ್ತ ಕೋಣೆಯಿಂದ ಹೊರ ಬಂದಳು.

ಅವಳ ಅರಸುವ ಕಣ್ಣುಗಳಿಗೆ ಅರಿಕೇಸರಿ ಎಲ್ಲಿಯೂ ಬೀಳಲಿಲ್ಲ.

ಜಗಲಿಯ ಒಂದು ಮಗ್ಗುಲಲ್ಲಿ ಆಕೆ ನರಸಿಂಹ ನಾಯಕರು ಧ್ಯಾನಮಗ್ನರಾಗಿ ಕುಳಿತಿರುವುದನ್ನು ಕಂಡಳು.

ಉದಾಸೀನ ಭಾವದಿಂದ ಆಕೆ ಅಂಗಳದತ್ತ ಮೋರೆ ಹಾಕಿದಳು.

ಅದನ್ನು ಗಮನಿಸಿದ ಅವರೇ ಅವಳನ್ನು ಸುಧಿಸಿದರು.

'ಹೊಸ ಜಾಗ ಚೆನ್ನಾಗಿ ನಿದ್ದೆ ಮಾಡಿದೆಯಾ?'

ಈ ಪ್ರಶ್ನೆಯಿಂದ ಅವಳು ಅಪ್ರತಿಭಳಾದಳು.

ಅವರಿಂದ ಈ ಪ್ರಶ್ನೆ ಬರಬಹುದೆಂದು ಅವಳು ನಿರೀಕ್ಷಿಸಿರಲಿಲ್ಲ.

ಜಗಲಿಯಲ್ಲೇ ಕುಳಿತಿದ್ದ ಅವರಿಗೆ ಅದ ವಿದ್ಯಮಾನಗಳ ಅರಿವು ಇರಬಹುದು ಎಂದು ಆಕೆ ಮೊದಲು ತರ್ಕಿಸಿದ್ದಳು.

ಅವರ ಪ್ರಶ್ನೆಯಿಂದ ಅವಳ ತರ್ಕ ತಲೆಕೆಳಗಾಯಿತು.

ಅವಳಿಗೆ ಸೂಕ್ತ ಉತ್ತರ ಹೊಳೆಯಲಿಲ್ಲ.

ಮೌನ ಅವಳ ರಕ್ಷೆಯಾಯಿತು.

ಅವರು ಪುನಃ ಅದೇ ಪ್ರಶ್ನೆ ಹಾಕಿದರು.

ಆಗ ಅವಳಿಂದ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಉತ್ತರಿಸಲೇ ಬೇಕಾಯಿತು.

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 38

ಸಂಸ್ಥಾಪಕರು:
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ನವದೆಹಲಿ ಸರಕಾರವು ಮರಾಠಿಗರಿಗೆ ವಿವೇಕ ಹೇಳಬೇಕು

ಕೆಲವು ಕಾಲ ಸುಪ್ತವಾಗಿದ್ದ ಕರ್ನಾಟಕ—ಮಹಾರಾಷ್ಟ್ರ ಗಡಿ ಪ್ರಶ್ನೆ ಮತ್ತೀಗ ಕೆದಕಿ ಬಂದಿದೆ. ೧೯೭೦ರ ಕೊನೆಯಲ್ಲಿ ಲೋಕಸಭಾ ವಿಸರ್ಜನೆಗೆ ನಾಲ್ಕು ದಿನ ಮೊದಲು ಪ್ರಧಾನ ಮಂತ್ರಿಯವರು ಈ ಸಂಬಂಧದ ಮಹಾಜನ ವರದಿಯನ್ನು ಸಂಸತ್ತಿನ ಮುಂದಿಟ್ಟು, ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಂಡರು. ಮಹಾಜನ ಆಯೋಗದ ನೇಮಕದ ಹಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ವಿ. ಪಿ. ನಾಯಕರ ಆಗ್ರಹ ಮತ್ತು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯ ಅನುಮೋದನೆಗಳೇ ಪ್ರೇರಕ ಶಕ್ತಿಯಾಗಿ ಉಳಿದಿತ್ತು. ಅವರಿಬ್ಬರು ಇಂದಿಗೂ ಅವರವರ ಸ್ಥಾನಗಳಲ್ಲಿ ಸುಭದ್ರವಾಗಿ ಉಳಿದುಕೊಂಡಿದ್ದಾರೆ. ಅಂದಿನ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಶ್ರೀ ನಿಜಲಿಂಗಪ್ಪನವರನ್ನು ಆಯೋಗದ ನೇಮಕಕ್ಕೆ ಸಮ್ಮತಿಸುವಂತೆ ಒಂದು ರೀತಿಯ ಒತ್ತಾಯವನ್ನೇ ಹೇರಲಾಗಿತ್ತು. ಕೇವಲ ಐದು ವರ್ಷಗಳಿಗೆ ಹಿಂದಿನ ಇತಿಹಾಸವನ್ನು ಬದಲಿಸುವ ಪ್ರಯತ್ನ ಅಲ್ಲಲ್ಲಿ ನಡೆಯಹತ್ತಿ ಮಹಾಜನ ವರದಿಯನ್ನು ಶ್ರೀ ನಿಜಲಿಂಗಪ್ಪನವರ ಪಾಪದ ಕೂಸೆಂದು ಸುಳ್ಳು ಹೇಳುವಷ್ಟು ಇಂದಿನ ರಾಜ್ಯಕೀಯ ನಾಯಕರು ಮುಂದುವರಿದಿದ್ದಾರೆ. ಗಡಿ ನಿರ್ಣಯ ಮಾಡುವಲ್ಲಿ ಲೋಕ ಸಭೆಯ ಸಾರ್ವಭೌಮ ಅಧಿಕಾರವನ್ನು ಅವರು ಎತ್ತಿ ಹಿಡಿಯುತ್ತಾರೆ.

ಸಂಸತ್ತಿನ ಪರಮಾಧಿಕಾರವನ್ನು ಯಾರೊಬ್ಬರೂ ಪ್ರಶ್ನಿಸುವುದಿಲ್ಲ. ಆದರೆ, ಅದು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವಾಗ, ಯಾವುದೇ ರಾಜ್ಯ ಸುಮ್ಮನಿರುವುದು ಸಾಧ್ಯವಿಲ್ಲ. ಮಹಾಜನ ಆಯೋಗವನ್ನು ನೇಮಿಸಿದ್ದು ಕರ್ನಾಟಕ ಸರಕಾರವಲ್ಲ, ಮಹಾರಾಷ್ಟ್ರ ಸರಕಾರವೂ ಅಲ್ಲ. ಮಹಾರಾಷ್ಟ್ರ ಸರಕಾರದ ಬಲವಂತದ ಮುಂದೆ ಮಣಿದ ಕೇಂದ್ರ ಸರಕಾರವು ಅದನ್ನು ಕನ್ನಡಿಗರ ಮೇಲೆ ಹೇರಿದ್ದು ಬೆಳಕಿನಷ್ಟು ಸ್ಪಷ್ಟ. ಅದೇ ಹೊತ್ತಿಗೆ ಈ ಆಯೋಗದ ವರದಿ ಅಂತಿಮವಾಗಬೇಕೆಂದೂ ಒಪ್ಪಿಕೊಳ್ಳಲಾಗಿತ್ತೆಂಬುದೂ ಸರ್ವಶ್ರುತ. ಆದರೆ, ಆಯೋಗದ ವರದಿಯು ಮಹಾರಾಷ್ಟ್ರೀಯರಿಗೆ ಅನುಕೂಲವಿಲ್ಲವೆಂದು ಆ ಸಂಬಂಧದಲ್ಲಿ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದಾಗಲೀ, ಮಂಡಿತವಾದ ವರದಿಯ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಲೋಕಸಭೆಗೆ ಅವಕಾಶ ನೀಡದಿರುವುದಾಗಲೀ ನಿಷ್ಪಕ್ಷಪಾತತೆಯಲ್ಲ. ವರದಿಯು ಸಂಸತ್ತಿನ ಮುಂದಿರುವಾಗ, ಮತ್ತೆ ಉಭಯ ರಾಜ್ಯಗಳ ನಡುವೆ ಗಡಿ ಪ್ರಶ್ನೆಯ ಬಗ್ಗೆ ಮಾತುಕತೆ ನಡೆಯಬೇಕೆನ್ನುವ ಪಿತೂರಿ ಯಾವ ಪುರುಷಾರ್ಥಕ್ಕೆ? ಆಯೋಗ ನೇಮಕಕ್ಕೆ ಮೊದಲು ಈ ಸಂಬಂಧದಲ್ಲಿ ಹಲವು ಸುತ್ತಿನ ಮಾತುಕತೆ ನಡೆದು ಯಾವುದೇ ಉಭಯ ಸಮ್ಮತ ನಿರ್ಣಯಕ್ಕೆ ಬರುವುದು ಸಾಧ್ಯವಾಗಲಿಲ್ಲ. ಅದಕ್ಕೆಂದೇ ಆಯೋಗ ನೇಮಕ. ಈಗ ಆಯೋಗದ ವರದಿಯನ್ನು ಮೂಲೆಗೆ ತಳ್ಳಿ ಮತ್ತೆ ಪ್ರಶ್ನೆಯನ್ನು ಹಿಂದಿದ್ದಲ್ಲಿಗೇ ಒಯ್ಯುವುದಾದರೆ, ಆಯೋಗ ನೇಮಿಸಿದ್ದಾದರೂ ಏಕೆ? ಯಾರ ಪ್ರೀತಿಗಾಗಿ? ನಾವು ಒಂದು ದೇಶದ ಜನ, ಬೆಳಗಾಂವಿ, ಮಹಾರಾಷ್ಟ್ರದಲ್ಲಿದ್ದರೇನು, ನಮ್ಮ ರಾಜ್ಯದಲ್ಲಿದ್ದರೇನು ಎನ್ನುವ ರಾಷ್ಟ್ರೀಯ ಭಾವನೆ ನಮಗೆ ಮಾತ್ರವೆ? ಮರಾಠಿಗರಿಗೆ ಬೇಡವೇನು? ತಾವೇ ಹೇಳಿ ನೇಮಿಸಿಕೊಂಡ ಆಯೋಗದ ವರದಿ ತಮ್ಮ ಮಹತ್ವಾಕಾಂಕ್ಷೆಗೆ ಪ್ರತಿಕೂಲವಾಗಿ ಹೊರಬಂದುದರಿಂದ ಅದನ್ನು ತಿಪ್ಪೆಗೆಸೆಯುವುದು ಪ್ರಜಾಸತ್ತೆಗೆ ಹೇಳಿಸಿದ್ದಲ್ಲ. ಇದನ್ನು ಕರ್ನಾಟಕ ಸರಕಾರ ಹೇಳುವುದನ್ನು ಬಿಟ್ಟು ಅದು ಎಲ್ಲಿದ್ದರೇನು ಎಂದು ವಸುಧೈವ ಕುಟುಂಬಕಂನ ಪಾಠ ಹೇಳಹೊರಟದ್ದು, ಕೇಂದ್ರ ಸರಕಾರದ ಸೂತ್ರದ ಗೊಂಬೆಗಳು ತಾವೆಂದು ಒಪ್ಪಿಕೊಂಡಂತಲ್ಲದೆ ಬೇರೆಯಲ್ಲ.

ಈ ಸಂಬಂಧದಲ್ಲಿ ಕೇಂದ್ರ ಸರಕಾರದ ಕರ್ತವ್ಯವೊಂದೇ ಒಂದು. ತಾನು ನೇಮಿಸಿದ್ದ ಆಯೋಗದ ವರದಿಯನ್ನೇ ಅಂತಿಮವೆಂದು ಸ್ವೀಕರಿಸುವುದು ಮತ್ತು ಮುಂದಿನ ಕ್ರಮಗಳನ್ನು ಕೈಗೊಳ್ಳುವುದು. ಇದಕ್ಕೆ ವ್ಯತಿರಿಕ್ತವಾಗಿ ಅದು ನಡೆದರೆ, ಆಯೋಗ ರಚನೆಯಲ್ಲಿ ಅದಕ್ಕೆ ವಿಶ್ವಾಸವಿಲ್ಲವೆಂದೇ ಅರ್ಥ. ಈ ವಿಶ್ವಾಸವಿಲ್ಲವೆಂದಾದರೆ, ಪ್ರಜಾಸತ್ತೆ ಬಾಳಿ ಬದುಕುವುದೇ ದುಸ್ತರವಾಗುತ್ತದೆ. ಜನತೆಯ ಕಣ್ಣಿಗೆ ಮಣ್ಣೆರಚುವುದೇ ಆಯೋಗ ರಚನೆಯ ಉದ್ದೇಶವೆಂದಾದರೆ, ಆಯೋಗ ನೇಮಕಗಳು, ಸಮಿತಿ ರಚನೆಗಳು—ಎಲ್ಲವೂ ಸಂಪೂರ್ಣ ನಾಟಕೀಯ, ಅನಾವಶ್ಯಕ. ಬೆಳಗಾಂವಿ ಮಹಾರಾಷ್ಟ್ರದಲ್ಲಿದ್ದರೇನು ಎಂದು ಸವಾಲು ಹಾಕುವವರಿಗೆ ಅದು ಕರ್ನಾಟಕದಲ್ಲಿಯೇ ಉಳಿದರೇನು ಎಂದು ಕೇಳಬೇಕಾಗುತ್ತದೆ. ಅಲ್ಲಿನ ಕೆಲವು ಗ್ರಾಮಗಳು ಇಲ್ಲಿಗೆ ಬರಬೇಕಾಗಿಲ್ಲ; ಇಲ್ಲಿನ ಕೆಲವು ಗ್ರಾಮಗಳು ಅಲ್ಲಿಗೆ ಹೋಗಬೇಕಾಗಿಯೂ ಇಲ್ಲ. ಯಥಾಸ್ಥಿತಿಯನ್ನೇ ಅಂತಿಮ ನಿರ್ಣಯವೆಂದು ಒಪ್ಪಿ, ಗಡಿತಂಟೆಯೆತ್ತಬಾರದೆಂದು ಮರಾಠಿಗರಿಗೇಕೆ ವಿವೇಕ ಹೇಳಬಾರದು? ಕರ್ನಾಟಕ ಈಗಾಗಲೇ ಹಲವು ಬಗೆಯ ಅನ್ಯಾಯಕ್ಕೊಳಗಾಗಿದೆ. ಈ ರಾಜ್ಯಕ್ಕೆ ಕೇಂದ್ರದಲ್ಲಿ ಸ್ವರವೇ ಇಲ್ಲ. ಇಲ್ಲಿಂದ ದಿಲ್ಲಿಗೆ ಹೋಗಿ ಮಂತ್ರಿಯಾದವರು ಇಲ್ಲಿ ಉಳಿದುಕೊಂಡು ಮಂತ್ರಿಯಾದವರು ತಮ್ಮ 'ಉದಾರ ಚರಿತೆ'ಯ ಪ್ರದರ್ಶನಕ್ಕೆ ಸೊಂಟಕಟ್ಟಿದ್ದಾರೆ. ಶಾಸಕರಾದವರು ಶ್ರೀಮತಿ ಗಾಂಧಿಯ ಮರ್ಜಿ ನೋಡಿ ಮಣೆ ತಿರುಗಿಸಹೊರಟಿದ್ದಾರೆ. ಈ ರೀತಿಯ ನೀತಿಯಿಂದ ರಾಜ್ಯದ ಹಿತ ಸಾಧನೆಯೆಂದಿಗೂ ಸಾಧ್ಯವಾಗುವುದಿಲ್ಲ. ಮಹಾಜನ ವರದಿಯನ್ನೇ ಗಡಿತಂಟೆಯ ಅಂತಿಮ 'ಪರಿಹಾರವೆಂದು ಕರ್ನಾಟಕ-ಮಹಾರಾಷ್ಟ್ರ ಮತ್ತು ಕೇಂದ್ರ ಸರಕಾರಗಳು ಒಪ್ಪುವುದು ಕರ್ನಾಟಕಕ್ಕೆ ಹಿತಕಾರಕ ಮಾತ್ರವಲ್ಲ, ದೇಶದಲ್ಲಿ ಪ್ರಜಾಸತ್ತೆ ಜೀವಂತವಾಗಿಡುವುದಕ್ಕೂ ಪರಿಪೋಷಕ. ಹಾಗಾಗಲಿಲ್ಲವೆಂದಾದರೆ, ಪ್ರಜೆಗಳಿಗೆ ಸರಕಾರದ ಕೃತಿಗಳಲ್ಲಿರುವ ವಿಶ್ವಾಸ ಹಾರಿಹೋಗುತ್ತದೆ.

ಸಾಮಾಜಿಕ ಶಿಕ್ಷಣ ಇಲ್ಲವೇ ಇಲ್ಲ!

ಬಾಗೇಪಲ್ಲಿಯ ಸಹಕಾರಿ ಮಾರಾಟಕಟ್ಟೆ ಸಂಘವೊಂದರಲ್ಲಿ ಅಮೋನಿಯಂ ಸಲ್ಫೇಟ್ ಗೊಬ್ಬರದ ಗೋಣಿಯ ನೇಪಥ್ಯದಿಂದ ೯೦ರಷ್ಟು ಹೊಯ್ಗೆ ಸೇರಿಸಿದ್ದ ಘಟನೆ ಬೆಳಕಿಗೆ ಬಂತು. ಈ ಗೋಣಿಗಳು ಸಂಘದ ಕೇಂದ್ರ ಗೋದಾಮಿನಿಂದ ಸರಬರಾಜು ಆಗಿದ್ದುವಂತೆ. ೧೫೦ ಮೂಟೆಗಳನ್ನು ಪರಿಶೀಲಿಸುವಾಗ ೧೫ರಲ್ಲಿ ಇಂತಹ, ದುರ್ಮಿಶ್ರಣವಾದುದು ಕಂಡು ಬಂತಂತೆ. ದಾವಣಗೆರೆ ನಗರದ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯ ನೌಕರರಿಬ್ಬರು ತಂತಿಯ ಮತ್ತು ವಿದ್ಯುತ್ತಿನ ತಾಮ್ರದ ಸರಿಗೆಗಳನ್ನು ಅಪಹರಿಸಿದರಂತೆ. ಈ ನೌಕರರು ಇದುವರೆಗೆ ೨೧ ಕಳವು ಪ್ರಕರಣಗಳಲ್ಲಿ ಭಾಗಿಗಳಾಗಿದ್ದಾರಂತೆ. ನಂದಿದುರ್ಗದಲ್ಲಿ ಅಂಚೆಪೆಟ್ಟಿಗೆಯೊಂದು ಕಾಣೆಯಾಗಿದೆಯಂತೆ. ಈ ಮೂರು ಘಟನೆಗಳಲ್ಲಿ ಮೊದಲನೆಯದು ದುರ್ಮಿಶ್ರಣ, ಎರಡನೆಯದು ಕಳವು, ಮೂರನೆಯದು ಪೀಡೆ. ಮೊದಲೆರಡರಲ್ಲಿ ವಂಚನೆಯ ಆರೋಪ ಬೇರೆ ಹೇರಬಹುದು. ಇದೇ ರೀತಿಯ ನೂರು ಘಟನೆಗಳು ನಡೆದು ಮೂರೂ ವರದಿಯಾಗುವುದಿಲ್ಲ. ಆದರೆ, ಇವು ನಮ್ಮ ಸಾಮಾಜಿಕ ಪ್ರಜ್ಞೆಗೆ ಕನ್ನಡಿ ಹಿಡಿಯುವುದಿಲ್ಲವೆ? ನೋಟುಗಳನ್ನು ದ್ವಿಗುಣಗೊಳಿಸುತ್ತೇವೆ ಎಂದು ಹೇಳುವವರಿಗೆ ತಮ್ಮಲ್ಲಿನ ನೋಟುಗಳನ್ನು ಕೊಟ್ಟು ಅವನ್ನು ಕಳೆದುಕೊಂಡ ಮೇಲೆ ಗೋಗರೆಯುವವರಿರುವಲ್ಲಿ ಇದೆಲ್ಲಾ ಸಾಮಾನ್ಯ ಸಂಗತಿಗಳೆಂದು ಸುಮ್ಮನಿರೋಣವೆ? ಸಕ್ಕರೆಗೆ ಬೆಲೆ—ಬೇಡಿಕೆಗಳು ಮಿತಿ ಮೀರಿರುವ ಈ ದಿನಗಳಲ್ಲಿ ನಾಣ್ಣುಡಿಯ ಮರಳಿನ ಬೆಲೆಯೇರಿದೆಯೆಂದು ಗೊಣಗುವವರಿದ್ದಾರೆ. ಇವೆಲ್ಲ ನಮ್ಮ ದುರ್ಬಲತೆಗಳ ಪ್ರತೀಕಗಳು. ನಾವು ಸಾಕ್ಷರತೆಗೆ ಪ್ರಾಧಾನ್ಯ ನೀಡಿ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತೇವೆ; ಆದರೆ ಸಾಮಾಜಿಕ ಶಿಕ್ಷಣವನ್ನು ಸಂಪೂರ್ಣ ಕಡೆಗಣಿಸಿದ್ದೇವೆ. ಹಿಂದೆ ಸಾಕ್ಷರತೆಯ ಶಿಕ್ಷಣದ ಸೌಲಭ್ಯಗಳು ಅತ್ಯಲ್ಪವಿರುವಾಗ ಸಾಮಾಜಿಕ ಶಿಕ್ಷಣ ಮನೆಮನೆಯಲ್ಲೂ ದೊರೆಯುತಿತ್ತು. ಆದರೆ, ಇಂದು ಆ ಸ್ಥಿತಿಯಿಲ್ಲ. ಇದೇ ರೀತಿಯಾಗಿ ನಮ್ಮ ಸಾಮಾಜಿಕ ನಡವಳಿಕೆ ಮುಂದುವರಿದರೆ, ಮನುಷ್ಯ—ಮನುಷ್ಯನನ್ನೇ ನುಂಗಿ ನೊಣೆಯುವ ಪ್ರವೃತ್ತಿ ತಾಂಡವವಾಡುತ್ತದೆ. ಸಚ್ಚರಿತ್ರೆ, ಸಚ್ಛೀಲಗಳನ್ನು ವನವಾಸಕ್ಕಟ್ಟಿ ಹಾಲು—ತುಪ್ಪ ತಿನ್ನುವ ಪ್ರವೃತ್ತಿ ಯಾರಲ್ಲಿಯೇ ಇರಲಿ ಅದು ದೇಶಕ್ಕೆ ನೆಮ್ಮದಿಯನ್ನು ತರುವುದಿಲ್ಲ. ಜನ ನಾಯಕರ ಗಮನ ಸಾಮಾಜಿಕ ಶಿಕ್ಷಣದತ್ತ ಹರಿಯ ಬೇಕಾದ ಅಗತ್ಯವಿಂದು ಮಿತಿಮೀರಿದೆ.

●●

ಗೇಹರಾಜ್ಯದಲ್ಲಿ

ಎಲ್ಲ ಶುಭವಾಗುತ್ತೆ

'ಕೇಳಿದ್ರ್ಯಾ?'

'ಏನ್ರು?'

"ನೋಡಿ, ಮಂಗಳೂರಿನ ಜನರಿಗೆ ಬೇಕಾದಷ್ಟು ಸಿಟಿ ಸರ್ವೀಸುಗಳ ರಾಷ್ಟ್ರೀಕರಣ ಫಲಗಳನ್ನು ನೀಡಲು ಮುಂದೆ ಬಂದಿದ್ದ ಸಾರಿಗೆ ಸಚಿವ ಅಜೀಜ್ ಸೇಠರು....'

'ತಪ್ಪು ಮಾಡಿದರೆಂತೀಯ?'

"ಅಯ್ಯೋ, ಅವರೆಲ್ಲ ಎಲ್ಲಿ ತಪ್ಪು ಮಾಡ್ತಾರೆ?"

'ಮತ್ತೆ....?'

'ಮತ್ತೇನೂ ಇಲ್ಲ. ಬೆಂಗಳೂರು ಶಹರದ ಸಾರಿಗೆ ವ್ಯವಸ್ಥೆಯನ್ನು ಖಾಸಗಿ ರಂಗಕ್ಕೆ ಒಪ್ಪಿಸುವ ಬಗ್ಗೆ ಪರಿಶೀಲಿಸುತಿದ್ದಾರಂತೆ....'

'ಯಾಕಂತೆ?'

"ಯಾಕೆ ಅಂದ್ರೇನು ಪ್ರತಿ ವರ್ಷ ಬಿ.ಟಿ. ಎಸ್ಸು ೪೦ ಲಕ್ಷ ರೂಪಾಯಿಗಳ ಲುಕ್ಸಾನು ಅನುಭವಿಸುತ್ತಿದೆಯಲ್ಲಾ...."

'ಅಂದ್ರೆ, ಬೆಂಗಳೂರಿಗಿಂತ ಮಂಗಳೂರಲ್ಲಿ ಲಾಭವಾಗುತ್ತದೇಂತಲೆ?'

'ಲಾಭವೆಲ್ಲಿ ಬಂದೀತು? ರಾಷ್ಟ್ರೀಕರಣದ ಬರಡೆಮ್ಮೆಗೆ ತಿನ್ನುವುದೊಂದೇ ಗೊತ್ತು, ಅದೆಲ್ಲಿ ಈನೀತು. ಹಯನಾದೀತು?'

'ಹಾಗಾದರೆ....'

'ಹಾಗಾದರೆ ಕೇಳಿ ಸರಕಾರ ಕೊಡುವ ಕಾರಣಗಳು ಇವು ಕೆಲವು. ಮೊದಲನೆಯದಾಗಿ ೪೦ ಲಕ್ಷ ರೂಪಾಯಿಗಳ ಆವರ್ತ ನಷ್ಟ....'

'ಸರಿ....'

'ಎರಡನೆಯದಾಗಿ ಆಗತ್ಯವಾದಷ್ಟು ಬಸ್ಸುಗಳು ಇಲ್ಲ....'

'ಹ್ಞೂಂ....'

'ಇರುವ ಬಸ್ಸುಗಳು ಹಳತಾಗಿವೆ....'

'ಆಯ್ತು....'

'ಹೊಸ ಬಸ್ಸುಗಳನ್ನು ಕೊಂಡುಕೊಳ್ಳಲು ಅವು ಸಿಗುವುದಿಲ್ಲ....'

'ಭಾರೀ ಚಲೋದಾಗಿವೆ ಕಣೇ ಈ ಕಾರಣಗಳು....'

'ಯಾಕೆ?'

"ಅಲ್ವೆ, ಒಂದೊಂದು ಬಸ್ಸು ಓಡಾಡಿಸುತಿದ್ದ ಖಾಸಗಿ ಬಸ್ಸು ಮಾಲಿಕರು ಈಗ ಡಜನ್ ಗಟ್ಟಲೆ ಬಸ್ಸುಗಳನ್ನು ಹೊಂದಿದ್ದಾರೆ....'

"ಇರಬಹುದು..."

"ಸರಕಾರಕ್ಕೆ ಮಾತ್ರ ನಷ್ಟವಾಗಬೇಕಾದರೆ, ಆದರ ಆಡಳಿತದಲ್ಲೇ ಏನಾದ್ರೂ ದೋಷವಿರಬೇಕು ..."

"ಇಲ್ಲಾಂತ ಯಾರಂತಾರೆ?"

'ಈ ಸೋರಿಕೆಯ ಭಿನಾವಣೆಯ, ಅನ್ಯಾಯದ ಲೋಪ ದೋಷಗಳನ್ನು ನಿವಾರಿಸಲು ಈ ಹೊಸ ಸರಕಾರಕ್ಕೂ ಧೈವಿಲ್ಲವೆಂದು ಇಷ್ಟು ಬೇಗನೇ ಮನವರಿಕೆಯಾದದ್ದು ದುರದೃಷ್ಟ....'

'ಯಾರದ್ದು?

'ಬಿಟಿಎಸ್‌ನ ಡ್ರೈವರು-ಕಂಡಕ್ಟರರದ್ದು; ಚೆಕ್ಕಿಂಗ್ ಅಧಿಕಾರಿಗಳದ್ದು....'

'ಹ್ಞೂಂ....ಇರಬಹುದೂನ್ನಿ....'

'ಸರಕಾರದ ರಾಷ್ಟ್ರೀಕರಣದ ನೀತಿ ಸಂಪೂರ್ಣ ವಿಫಲವಾಗಿದೆಯೆಂದದು ಒಪ್ಪಿಕೊಳ್ಳಲು ಮಾತ್ರ ಹಿಂಜರಿಯುತ್ತದೆ....'

'ಅಲ್ರಿ, ಏಕಸ್ವಾಮ್ಯ ಪಡೆದಲ್ಲಿಯೂ ಅದು ನಷ್ಟಪವಾಗುವುದೆಂದರೆ, ಅದು ರಿಪೇರಿಗೊಳ್ಳದಷ್ಟು ಕೆಟ್ಟು ಹೋಗಿದೆಯೆಂದೇ ಅರ್ಥತಾನೆ?'

'ಇದನ್ನದು ಒಪ್ಪಿಕೊಳ್ಳದೆ ಬೇರೆ ಬೇರೆ ಕಾರಣಗಳನ್ನು ಮುಂದು ಮಾಡುತ್ತದೆ....'

"ಅಳಿಯ ಅಲ್ಲ, ಮಗಳ ಗಂಡಾಂತ...."

'ಮತ್ತೆ ನೋಡು, ಖಾಸಗಿ ಬಸ್ಸುಗಳೊಡನೆ ಪೈಪೋಟಿ ನಡೆಸಲು ಸಾರಿಗೆ ಸಂಸ್ಥೆಗೆ ಅದೇಕೋ ಭಾರೀ ಅಂಜಿಕೆ....'

'ಅಲ್ವೆ ಮತ್ತೆ? ನೋಡಿ, ಸಾರಿಗೆ ರಾಷ್ಟ್ರೀಕರಣದ ಉದ್ದೇಶವೇನಿತ್ತು? ಆದಷ್ಟು ಕಡಿಮೆ ವೆಚ್ಚದಲ್ಲಿ ಆದಷ್ಟು ಹೆಚ್ಚು ಸೌಕರ್ಯಗಳನ್ನು ಒದಗಿಸುವುದು. ಆದಷ್ಟು ಹೆಚ್ಚು ಸಮರ್ಥವಾದ ಸಾರಿಗೆ ವ್ಯವಸ್ಥೆಯನ್ನು ಜನತೆಗೆ ಒದಗಿಸುವುದು....'

'ಈ ಉದ್ದೇಶಗಳಲ್ಲಿ ಯಾವುದೊಂದೂ ಈಡೇರಿಯೇ ಇಲ್ಲ ನೋಡು. ವೆಚ್ಚ ದುಬಾರಿ, ಸೌಕರ್ಯ ಕಳಪೆ, ಸಾಮರ್ಥ್ಯ ಆದನ್ನೇನು ಹೇಳುವುದು? ಅದಕ್ಕದೇ ತುಲ್ಯ..'

'ಅಂದ್ರೆ ರಾಷ್ಟ್ರೀಕರಣದ ನೀತಿಯಿಂದ ಯಾರಿಗೆ ಲಾಭ?'

'ಯಾರಿಗೆ ಅಂದರೇನ? ಸಾರಿಗೆ ಸಂಸ್ಥೆಗೂ ಜನತೆಗೂ ನಡುವಿರುವ ಸಾವಿರಾರು ಬಡವರ ಉದ್ಧಾರವಾಗಿಲ್ಲವೇನು?'

'ಅದು ಹೋಗಲಿ, ತನ್ನ ನೀತಿ ಅಸಫಲವೆಂದು ಪರೋಕ್ಷವಾಗಿಯಾದರೂ ಸರಕಾರ ಒಪ್ಪಿತಲ್ಲ, ಅದೇ ಸಂತೋಷ. ಇನ್ನಾದರೂ ಅದು ತನ್ನ ನೀತಿಗೆ ತಿಲಾಂಜಲಿ ನೀಡಿ, ಸಾರಿಗೆ ವ್ಯವಸ್ಥೆಯನ್ನು ಖಾಸಗಿ ರಂಗಕ್ಕೇ ಕೊಡಮಾಡಿ ಅದರ ಮೇಲೆ ಹೆಚ್ಚಿನ ಹತೋಟಿ ಇಟ್ಟುಕೊಳ್ಳುವುದು ಲೇಸು.'

'ಜನತೆಗೆ ಬೇಕಾದುದು ಮೂರು. ಕಡಿಮೆ ವೆಚ್ಚ. ಸುಖಕರ ಪ್ರಯಾಣ ಮತ್ತು ಸಮರ್ಥ ಸೇವೆ. ಇವನ್ನು ಖಾಸಗಿ ರಂಗ ನೀಡುತ್ತ ಬಂದ ಉದಾಹರಣೆಗಳುಂಟು. ಆಲ್ವೆ, ಬಿಟಿಎಸ್‌ನಂತಹ ಸರಕಾರಿ ಸಂಸ್ಥೆಗೇ ಕೊಳ್ಳಲು ಬಸ್ಸುಗಳಿಲ್ಲವೆಂದರೆ ಅದೆಂತಹ ಅಪಹಾಸ!'

'ಅಲ್ರಿ, ಬಸ್ಸು ಉತ್ಪಾದಕ ಕಾರಖಾನೆಗಳ ಗತಿಯೂ ಅಷ್ಟೇ ಅಂತೆ....'

'ಅದು ಬೇರೊಂದು ಪಾತಳಿ ಸರಕಾರಿ ಉದ್ಯಮಗಳು ಬಿಳಿಯಾನೆಯಾಗಿವೆ. ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿಗಳ ಬಂಡವಾಳದ ಮೇಲೆ ಸ್ಥಾಪಿತವಾದ ಇಪ್ಪತ್ತು ಸರಕಾರಿ ಉದ್ಯಮಗಳು ಸೇ. ೧ರಷ್ಟು ಲಾಭಗಳಿಸಿವೆಯಂತೆ!'

'ಅಲ್ರಿ, ಇವುಗಳಲ್ಲಿ ರೇಲು—ಅಂಚೆ ತಂತಿಗಳೂ ಸೇರಿವೆಯಲ್ಲಾ?'

'ಹ್ಞೂಂ..ಅವುಗಳ ದರವನ್ನು ಸರಕಾರ ಏರಿಸುತ್ತಲೇ ಬಂದಿದೆ ನೋಡು. ಹಾಗಿದ್ದರೂ ಲಾಭಾಂಶ ಅಗಣ್ಯವೆಂದರೆ ಈ ರಂಗದಲ್ಲೂ ಸರಕಾರ ವಿಫಲವಾಗಿದೆಯೆಂದೇ ಅರ್ಥ....'

"ಅಲ್ರಿ, ಸರಕಾರಿ ಕಛೇರಿಗಳಲ್ಲಿ ಸರಾಸರಿ ಎಷ್ಟು ಕೆಲಸ ನಡೆಯುತ್ತದೆ, ಅಷ್ಟು ಲಾಭ ಬರುತ್ತದೆ.'

'ಸರಕಾರಿ ವಲಯದ ಉದಾಸೀನತೆ, ನೌಕರರ ಅಕರ್ತವ್ಯತೆ, ಅದಕ್ಷತೆ, ಅನಾಸಕ್ತಿ ಇವುಗಳೆಲ್ಲ....'

'ಅದೇನೇ ಇರಲಿ, ಇದಕ್ಕೆ ತಕ್ಕ ಚಿಕಿತ್ಸೆ ಬೇಡವೆ?'

"ಉದ್ಯಮವನ್ನು ಲಾಭದಾಯಕವಾಗಿ ನಡೆಸ ಬಲ್ಲ ಖಾಸಗಿ ವ್ಯಕ್ತಿಗಳನ್ನೂ ಅಧಿಕಾರ ಸ್ಥಾನದಲ್ಲಿ ತಂದರೆ ಉದ್ಯಮದಲ್ಲಿ ಆಸಕ್ತಿಯನ್ನು ತೋರಿಸ ಬಲ್ಲ ಡೈರೆಕ್ಟರರನ್ನು ನೇಮಿಸಿದರೆ, ಅದಕ್ಷ ಸಿಬ್ಬಂದಿಗಳನ್ನು ನೇಮಿಸುವುದನ್ನೂ ಕರ್ತವ್ಯ ಪಲಾಯಿತ ನೌಕರರಿಗೆ ರಕ್ಷಣೆ ನೀಡುವುದನ್ನೂ ನಿಲ್ಲಿಸಿದರೆ ಆಶಾದಾಯಕ ಭವಿಷ್ಯ ಕಾಣಬಹುದೋ ಏನೊ....'

'ಅದೆಲ್ಲ ಎಲ್ಲಿ ಸಾಧ್ಯ ಹೇಳಿ? ಸರಕಾರದ ಕೆಲಸ ಸ್ವಾರ್ಥಪರವಾದ ಕೆಲಸ ಎಂಬುದು ಈ ತಲೆಮಾರಿನಲ್ಲಿ ರಕ್ತಗತವಾಗಿರುವಾಗ ಅದನ್ನು ತೊಡೆದುಹಾಕುವುದೆಂತು?'

'ಅದೂ ಸರೀನ್ನು. ಸರಗಾಲು ಕ್ವಾರ್ಟರುಗಳು, ನಿರುದ್ಯೋಗ ನಿವಾರಣಾ ಕೇಂದ್ರಗಳ ರೂಪಕ್ಕೆ ನಮ್ಮ ಸರಕಾರಿ ವಲಯಗಳು ಬಂದಿರುವಾಗ, ಕರ್ತವ್ಯದ ಮೇಲೆ ಸ್ವಾರ್ಥಪರತೆ ಮನೆಮಾಡಿರುವಾಗ ನಮಗೆ ರಾಷ್ಟ್ರೀಕರಣ ಫಲವಾಗಿ ಪರಿಣಮಿಸುವುದು ಎಂದೋ ಏನೋ....'

'ಅಷ್ಟು ನಿರಾಶೆ ಹೊಂದಿದರೆ ಹೇಗೆ?'

'ಅಲ್ವೆ, ಆಶೆಯ ಮಸುಕು ಕಿರಣವೂ ತೋರದಿರುವಾಗ ಮತ್ತೆ ಮಾಡುವುದಾದರೂ ಏನು?'

'ಅಲ್ರಿ ಕಾಶ್ಮೀರದಲ್ಲಿ ಭಾರತವು ತನಗೆ ಸಹಾಯ ಮಾಡುವುದಿಲ್ಲವೆಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ದೂರಿದ್ದಾರಂತಲ್ಲ?'

ಅಷ್ಟು ಮಾತ್ರವಲ್ಲ, ಭಾರತ ಕದನ ವಿರಾಮ ರೇಖೆಯನ್ನು ಉಲ್ಲಂಘಿಸಿದೆಯೆಂದೂ ಅವರು ಹೇಳಿದ್ದಾರೆ....'

'ಪಾಕಿಸ್ತಾನ ಸಮರ ವಿರಾಮವನ್ನು..'

'ಹಾಗಲ್ವೆ, ಅವರು ಹೇಳುವುದು ೧೯೪೯ರ ವಿರಾಮ ರೇಖೆಯನ್ನು....'

'ಆದರೂ....'

'ಆ ರೇಖೆ ಈಗೆಲ್ಲಿದೆ?'

'ಯಾಕೆ?'

'ಪಾಕಿಸ್ತಾನ ಆ ರೇಖೆಯನ್ನುಲ್ಲಂಘಿಸಿ ಆಕ್ರಮಣ ಮಾಡಿದ ಮೇಲೆ ಅದರ ಅಸ್ತಿತ್ವವಿಲ್ಲ. ಈಗಿರುವುದು ೧೯೭೧ರ ದಶಂಬರದಲ್ಲಿ ಭಾರತ ಘೋಷಿಸಿದ ಏಕಪಕ್ಷೀಯ ಸಮರ ವಿರಾಮ ರೇಖೆ....'

'ಹ್ಞಂ'

'ಈ ರೇಖೆಯ ಬಗ್ಗೆ ಯಾವ ಒಡಂಬಡಿಕೆಯೂ ಆಗಿಲ್ಲ. ಇದನ್ನು ರಕ್ಷಿಸುವ ಹೊಣೆಗಾರಿಕೆ ವಿಶ್ವಸಂಸ್ಥೆಗೆ ಒಪ್ಪಿಸಿದ್ದೂ ಇಲ್ಲ....'

'ಓ ಹಾಗೆ....ಮತ್ತೆ ಕಾಶ್ಮೀರದಲ್ಲಿರುವ ವಿಶ್ವಸಂಸ್ಥೆಯ ವೀಕ್ಷಕರು?'

(ಒಂಭತ್ತನೇ ಪುಟ ನೋಡಿರಿ)

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಟಾಜನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪ್ರೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

THE PRESS
for NEAT CLEAR ARTISTIC PRINTING
NAVAYUGA PRESS

Printers for—
NAVAYUGA Weekly

We undertake all kinds of Bookwork, jobwork, etc.

PROPRIETORS:
NAVAYUGA ENTERPRISE LTD.
Regd. Office: Palukote, UDIPI, S.K.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಪ್ರಚಲಿತ ಪ್ರಸಂಗ

ಗರಿಷ್ಠ ಮಿತಿ ಎಲ್ಲ ರಂಗಕ್ಕೂ ಬೇಕು

ಎಲ್ಲೆಲ್ಲೂ ಗಡಿಬಿಡಿ, ಸಡಗರ.

ಮದುವೆ, ಮುಂಜಿಗಳಲ್ಲವಲ್ಲ.

ಎಲ್ಲೆಲ್ಲೂ ಅಂದರೆ ಎಲ್ಲ ರಾಜ್ಯಗಳಲ್ಲೂ ಎಂದು ಅರ್ಥ.

ಆಳುವ ಕಾಂಗ್ರೆಸ್ಸು ಭೂಹಿಡುವಳಿಗೂ ನಗರಾಸ್ತಿಗೂ ಮಿತಿಯೊಂದನ್ನು ಹೇರುವ ಭರವಸೆ ಮತದಾರರಿಗೆ ನೀಡಿ ಗೆದ್ದು ಬಂದಿದೆ.

ಅಧಿಕಾರಕ್ಕೆ ಬಂದಾಗಲೇ ಈ ಎರಡು ಮಿತಿಗಳ ಬಗೆಗೆ ಎಲ್ಲೆಲ್ಲೂ ಜಿಜ್ಞಾಸೆ.

ಕೇಂದ್ರ ಸರಕಾರದ ಭೂಸುಧಾರಣಾ ಆಯೋಗವು ೧೦ರಿಂದ ೧೮ ಸ್ಟಾಂಡರ್ಡ್ ಎಕ್ರೆಗಳಷ್ಟು ಹಿಡುವಳಿ ಮಿತಿಗೆ ಸಲಹೆ ಮಾಡಿತು.

ವಿಶಾಲವಾದ ಭಾರತದ ಎಲ್ಲ ರಾಜ್ಯಗಳಲ್ಲೂ ಏಕ ರೀತಿಯ ಹಿಡುವಳಿ ಮಿತಿಹೊರಿಸುವುದು ಅಸಾಧ್ಯವೆಂದು ಹೆಚ್ಚಿನವರ ಅಭಿಮತ. ಭೌಗೋಳಿಕ ಸ್ಥಿತಿಗತಿ ಬೇರೆಬೇರೆಯಾಗಿರುವುದೇ ಇದಕ್ಕೆ ಮುಖ್ಯ ಕಾರಣ.

ಭೂ-ಆಸ್ತಿಸಂಬಂಧಿಸಿದ ಶಾಸನ ಮಾಡುವ ಅಧಿಕಾರ ರಾಜ್ಯಗಳದ್ದು. ಆದ್ದರಿಂದ ಅದು ತನ್ನ ವಿವೇಚನೆಯನ್ನೂ ವಿವೇಕವನ್ನೂ ಮೀರಿ ಬಿಡಬಾರದು—ಇದು ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರ ಅಭಿಪ್ರಾಯ.

ನಾಲ್ಕು ಲಕ್ಷ ರೂಪಾಯಿಗಳ ನಗರಾಸ್ತಿ ಮಿತಿ ಹೇರಿ ಈ ದಿಸೆಯಲ್ಲಿ ಮೊದಲ ಹೆಜ್ಜೆಯಿಟ್ಟದ್ದು ಮಧ್ಯಪ್ರದೇಶ. ಕೇಂದ್ರದ ಮಾಜಿ ಸಚಿವ ಸೇಥಿ ಅಲ್ಲಿನ ಮುಖ್ಯಮಂತ್ರಿ.

ಭೂ-ಆಸ್ತಿಯೆರಡರಲ್ಲೂ ದಿಟ್ಟ ಹೆಜ್ಜೆಯಿಡುವ ಎದೆಗಾರಿಕೆ ಕರ್ನಾಟಕದ್ದು. ಭೂಮಿಗೆ ಹತ್ತು ಎಕ್ರೆ, ನಗರಾಸ್ತಿಗೆ ಎರಡು ಲಕ್ಷ ರೂಪಾಯಿ - ಇದು ಪಕ್ಷದ ಸಲಹೆ.

ಮುಖ್ಯ ಸಚಿವ ಅರಸು ಈ ನಿಲುವಿಗೇ ಅಂಟಿ ಕುಳಿತಿದ್ದಾರೆ. ನಗರಾಸ್ತಿಮಿತಿಯ ಸಂಬಂಧದಲ್ಲಿ ತುಸು ಉದಾರರಾಗಬಹುದು. ಭೂಹಿಡುವಳಿಯ ವಿಷಯದಲ್ಲಂತೂ ಔದಾರ್ಯ ಸಾಧ್ಯವೇ ಇಲ್ಲ.

ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಎಕ್ರೆ ಜಮೀನು ಆಗ ಹೆಚ್ಚುವರಿಯಾಗಿ ಸಿಗುವುದು. ಇದನ್ನು ಭೂಹೀನರಿಗೆ ಹಂಚುವುದು ಸರಕಾರದ ಗುರಿ.

ಇಲ್ಲಿ ಸುಮಾರು ಮೂವತ್ತು ಲಕ್ಷ ಎಕರೆ ಜಮೀನಿನ ಹದಿನೈದು ಎಕ್ರೆಗಳ ಹಿಡುವಳಿಗಳಿವೆ. ಇವುಗಳಿಗೂ ೧೦ ಎಕ್ರೆಗಳ ಮಿತಿ ಹೇರುವಾಗ ತುಸು ಹೆಚ್ಚು ಜಮೀನು ವಿತರಣೆಗೆ ದೊರೆಯುವುದು.

ಹೆಚ್ಚುವರಿ ಭೂಮಿಯನ್ನು ಸರಕಾರ ಸ್ವಾಧೀನಪಡಿಸಿಕೊಂಡು ಮಾಲಿಕರಿಗೆ ಪರಿಹಾರ ನೀಡುವುದು. ಇದರಲ್ಲಿ ಒಂದಂಶ ನಗದಾಗಿ, ಉಳಿದಂಶ ಸಾಲಪತ್ರಗಳ ರೂಪದಲ್ಲಿರುವುದು.

ಂ ಂ ಂ

ಹೆಚ್ಚುವರಿ ಭೂಮಿ ಮತ್ತು ನಗರಾಸ್ತಿಗಳನ್ನು ಸರಕಾರ ವಶಪಡಿಸಿಕೊಳ್ಳುವುದೀಗ ಬೆಳಕಿನಷ್ಟು ಸುಸ್ಪಷ್ಟ.

ಹೀಗೆ ವಶಪಡಿಸಿಕೊಳ್ಳುವ ಭೂಮಿ-ಆಸ್ತಿಗಳಿಗೆ ಪರಿಹಾರ ನೀಡುವುದೂ ಸದ್ಯ ಸಂವಿಧಾನದಂತೆ ಅನಿವಾರ್ಯ.

ಸಾರ್ವಜನಿಕ ಉಪಯೋಗಕ್ಕೆಂದು ಸರಕಾರ ವಶಪಡಿಸಿಕೊಳ್ಳುವ 'ಆಸ್ತಿ'ಗೆ ಸರಕಾರ ನೀಡುವ ಪರಿಹಾರದ ಮೊತ್ತನನ್ನು ನ್ಯಾಯಾಲಯದಲ್ಲಿ ಪ್ರಶ್ನಿಸದಂತೆ ಸಂವಿಧಾನ ತಿದ್ದುಪಡಿಯಾಗಿದೆ.

ಗರಿಷ್ಠ ಮಿತಿಗಿಂತ ಹೆಚ್ಚಿರುವ ಜಮೀನು ಆಸ್ತಿಗಳನ್ನೂ ಸರಕಾರ ವಶಪಡಿಸಿಕೊಳ್ಳುವಾಗ, ಈ ಸಂಬಂಧದ ಶಾಸನಗಳನ್ನೇ ನ್ಯಾಯಾಲಯದಲ್ಲಿ ಪ್ರಶ್ನಿಸುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು.

ಆದುದರಿಂದ ಈ ಬಗ್ಗೆ ಸಂವಿಧಾನದಲ್ಲಿ ರಕ್ಷಣೆಯೊದಗುವಂತೆ ಸೂಕ್ತ ತಿದ್ದುಪಡಿ ಮಾಡುವುದರ ಕಡೆಗೆ ಕೇಂದ್ರ ಸರಕಾರ ತೀವ್ರವಾಗಿ ಪರ್ಯಾಲೋಚಿಸುತ್ತಿದೆ; ರಾಜ್ಯ ಸರಕಾರಗಳ ಸಲಹೆ ಕೇಳುತ್ತಿದೆ.

ಹೆಚ್ಚುವರಿ ಭೂಮಿ—ಆಸ್ತಿಗಳನ್ನು ಪರಿಹಾರ ನೀಡದೇನೇ ವಶಪಡಿಸಿಕೊಳ್ಳುವಷ್ಟು ಕ್ರಾಂತಿಕಾರಿ ನಿರ್ಧಾರವನ್ನೀಗ ತೆಗೆದುಕೊಳ್ಳದಿದ್ದರೂ ಅಂತಹ ದಿನ ಬಂದರೂ ಆಶ್ಚರ್ಯವಿಲ್ಲ. ಈಗ ಉದ್ದೇಶಿತವಾದ ಮಿತಿಯ ಪರಿಮಾಣ ಕ್ರಮೇಣ ಇಳಿದರೂ ವಿಸ್ಮಯವಿಲ್ಲ.

ಬರಿಯ ಆಸ್ತಿ—ಭೂಮಿಗಳ ಮೇಲೆ ಮಾತ್ರ ಮಿತಿ ಹೇರಿದರೆ ಸಾಕೆ? ತಮ್ಮ ಗಳಿಕೆಯನ್ನು ಇವುಗಳಲ್ಲಿ ಹೂಡಿದವರಿಗೊಂದು ಶಿಕ್ಷೆಯೆ?

ಆದಾಯದ ಮೇಲೆಯೂ ಮಿತಿ ಹೇರಬೇಕೆನಿಸುವುದಿಲ್ಲವೆ? ಕೂಡಿಡುವ ಹಣಕ್ಕೂ ಮಿತಿ ಬೇಡವೆ?

ಆದಾಯವನ್ನು ಅಡಗಿಸಿ ಕಪ್ಪು ಹಣ ಕೂಡಿಸುವವರು ಇದ್ದಾರೆ. ಅಂತಹರಿಗಾಗಿ ವೆಚ್ಚದ ಮೇಲೆ ಮಿತಿ ಬೇಕೆನಿಸುವುದಿಲ್ಲವೆ?

ಕಾನೂನಿಗೊಂದು ಗೀನೂನು ಸಂಶೋಧಿಸುವವರು ಶಾಸನಗಳೆಲ್ಲವನ್ನೂ ಗೀಸನಗಳಿಂದ ಮೆಟ್ಟಿ ನಿಲ್ಲುತ್ತಾರೆ. ಈ ಗೀಸನಗಳನ್ನೇ ಅಜೇಯವೆಂದು ನಂಬಿರುವವರನ್ನು ಶಾಸನ ಹಿಡಿಯಲು ಸಮರ್ಥವಾದರೆ, ಆಗ ಸುಲಲಿತ ಆಡಳಿತ ಸಾಧ್ಯವಾಗುತ್ತದೆ.

ಇಲ್ಲವಾದರೆ ಕಾನೂನು ಪುಸ್ತಕದ ಬದನೆಕಾಯಿಯಾಗಿ ಮಾತ್ರ ಉಳಿಯುತ್ತದೆ.

ಗರೀಬಿಯನ್ನು ತೊಲಗಿಸಲು ಇಲ್ಲವೇ ಅದನ್ನೇ ಹಂಚಿಕೊಳ್ಳಲು ಒಂದೊಂದು ನೀತಿಯೂ ಪ್ರತಿ ನಾಗರಿಕನಿಗೂ ಅನ್ವಯಿಸುವಂತಾಗಬೇಕು.

ಂ ಂ ಂ

ಭೂ—ಆಸ್ತಿಗಳಿಗೆ ಮಿತಿ ಹೇರುವಾಗ ಧಾರ್ಮಿಕ ಸಂಸ್ಥೆಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ, ತೋಟಗಳಿಗೆ, ಉಂಬಳಿ ದತ್ತಿಗಳಿಗೆ ವಿನಾಯತಿ ದೊರೆಯಬೇಕು—ಇದೊಂದು ಕಳಕಳಿಯ ವಿಜ್ಞಾಪನೆ ಅಂಥಾ ಹಿತಾಸಕ್ತಿಗಳದ್ದು.

ತಮ್ಮನ್ನು ಧರ್ಮ ಪೀಠಗಳೆಂದು ಕರೆದುಕೊಳ್ಳುವ ಹೆಚ್ಚಿನ ಪೀಠಗಳು ಧರ್ಮವೊಂದನ್ನು ಬಿಟ್ಟು ಉಳಿದೆಲ್ಲವುಗಳ ಪೀಠಗಳಾಗಿ ಬಿಟ್ಟಿವೆ.

ಒಂದು ಧರ್ಮ ಪೀಠವು ಕಳ್ಳನೋಟು ತಯಾರಿಕೆಯ ಮೊಕದ್ದಮೆಯೊಡನೆಯೂ ಸಂಬಂಧಿಸಿತ್ತೆಂಬ ಆರೋಪವಿತ್ತು.

ಧರ್ಮ ಪ್ರಚಾರ ಕಾರ್ಯದಲ್ಲಿ ನಿರತವಾದ ಪೀಠಗಳು ಬೆರಳೆಣಿಕೆಯಷ್ಟು. ಗರಿಷ್ಠ ಮಿತಿಯನ್ನು ಇವುಗಳಿಗೆ ಹೊರಿಸದೆ ಹೋದರೆ, ಹಂಚಲು ದೊರೆಯುವ ಭೂಮಿಯ ಪರಿಮಾಣ ನಿಜಕ್ಕೂ ಕಡಿಮೆಯಾಗುತ್ತದೆ.

ಶಿಕ್ಷಣ ಸಂಸ್ಥೆಗಳ ಹೆಸರಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಇತ್ತೀಚೆಗೆ ಬೆಳಕಿಗೆ ಬಂದಿವೆ. ಪವಿತ್ರ ಉದ್ದೇಶವಿಟ್ಟುಕೊಂಡು ಸನ್ಯಾಸಿಯ ಸೋಗು ಹಾಕಿಕೊಳ್ಳುವ ಕೆಲವು ಮೋಸಗಾರರು ಬಹಿರಂಗಕ್ಕೆ ಬಂದಿದ್ದಾರೆ.

ತೋಟಗಾರಿಕೆಯಿಂದ ಬರುವ ಆದಾಯವನ್ನು ಗಮನಿಸಿ ಗರಿಷ್ಠ ಮಿತಿ ಹೊರಿಸುವುದಾಗಿ ಮುಖ್ಯ ಸಚಿವ ಅರಸು ಹೇಳಿದ್ದಾರೆ.

ಎಲ್ಲ ಬಗೆಯ ಜಮೀನಿಗೂ ಆಸ್ತಿಗೂ ಮಿತಿ ಅನ್ವಯವಾಗಬೇಕು. ಅಲ್ಲಿ ಇಲ್ಲಿ ವಿನಾಯತಿ ನೀಡುತ್ತ ಹೋದರೆ ಅದರಿಂದ ಶಾಸನದ ಉದ್ದೇಶ ಎಂದೆಂದಿಗೂ ಈಡೇರುವುದಿಲ್ಲ.

ಎಲ್ಲೆಡೆಯೂ ನಿಯೋಜಿತ ಶಾಸನವನ್ನು ಅನುಷ್ಠಾನಿಸಿದರೆ ಬರಿಯ ಎಂಟು ಲಕ್ಷ ಜನರಿಗೆ ಮಾತ್ರ ಲಾಭವಾಗುವುದೆನ್ನುವಾಗ ವಿನಾಯತಿಯನ್ನು ಕೊಟ್ಟರೆ ಈ ಸಂಖ್ಯೆ ಗಣನೀಯವಾಗಿ ಇಳಿಯುತ್ತದೆ. ಆಗ ನಿಯೋಜಿತ ಗುರಿ ಮಾರು ದೂರವೋಡುತ್ತದೆ. ಭೋಗ ವಿಲಾಸಗಳ ಮೇಲೂ ಮಿತಿ ಹೇರಬೇಕು.

ಂ ಂ ಂ

ಒರಿಸ್ಸಾ ರಾಜ್ಯದಲ್ಲಿ ಆಳುವ ಕಾಂಗ್ರೆಸ್ಸಿನ ಸರಕಾರವಿಲ್ಲ.

ಉತ್ಕಲ ಕಾಂಗ್ರೆಸ್—ಸ್ವತಂತ್ರ ಪಕ್ಷಗಳ ಸಂಯುಕ್ತ ಸರಕಾರವಿದೆ. ಇದನ್ನು ಉರುಳಿಸಲು ಕೆಲವು ಪ್ರಯತ್ನಗಳು ನಡೆದು ಯಶಸ್ವಿಯಾದುವು.

ಅಲ್ಲಿ ವಿಶ್ವನಾಥದಾಸ್ ಮುಖ್ಯ ಮಂತ್ರಿ. ಅವರ ವಯಸ್ಸು ೮೦. ಪ್ರಾಯಃ ಇತ್ತೀಚೆಗಿನ ವರ್ಷಗಳಲ್ಲಿ ಇಷ್ಟು ಹಳಬರು ಮುಖ್ಯಮಂತ್ರಿಯಾದದ್ದೆಂಬುದಿಲ್ಲ, ಸದ್ಯ ಈ ವಯಸ್ಸಿನ ಮಂತ್ರಿಯೂ ಭಾರತದಲ್ಲಿಲ್ಲ.

(ಎಂಟನೇ ಪುಟ ನೋಡಿರಿ)

ಪುತ್ತೂರು IIIrd Adle. ಮುನ್ಸಿಫ್ ಕೋರ್ಟಿನಲ್ಲಿ

R. R. C. 848/71

ಪದ್ಮನಾಭ ಯಡಪ್ಪಾಡಿತ್ತಾಯ —ಅರ್ಜಿದಾರ

ಚೆನ್ನಮ್ಮ ಕೂಡಾ —ಎದ್ರಿಉ

ಎದ್ರಿರು

1. ಚೆನ್ನಮ್ಮ—ಅಮ್ಮು ಗೌಡರ ವಿಧವೆ

3. ಮಗ್ಗ ಗೌಡ, 4. ನಾಗಪ್ಪ ಗೌಡ, 5. ಗೌರಿ—ಅಮ್ಮು ಗೌಡರ ಮಕ್ಕಳು, ಗೋಳಿತೊಟ್ಟು ಗ್ರಾಮಸ್ಥರು.

ಸದ್ರಿ ಎದ್ರಿರಿಗೆ ಕೋರ್ಟು ಹುಕ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ,

70_71ಕ್ಕೆ ನಿಮ್ಮಿಂದ ಕೂಡಾ ಅರ್ಜಿದಾರನಿಗೆ ಬರಬೇಕಾದ ಗೇಣಿ ಬಾಕಿಗೆ ಮಾಡಿದ ಮೇಲಿನ ಅರ್ಜಿಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 1_6_72ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಸ್ತ್ಯಾ ಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

(Sd) M. Rammohan Rao
Advocate for Petitioner

Puttur, 15—5—72

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ವಾತಂತ್ರ್ಯವಲ್ಲ - ಸ್ವರಾಜ್ಯ

ತಮಿಳ್ನಾಡಿನ ಮುಖ್ಯಮಂತ್ರಿ ಡಾ| ಕರುಣಾನಿಧಿಯವರು ವಿಧಾನ ಪರಿಷತ್ತಿನಲ್ಲಿ ಮಾತನಾಡುತ್ತ ತಂಜಾವೂರಿನ ದೇವಸ್ಥಾನದಲ್ಲಿ ಅದನ್ನು ಕಟ್ಟಿಸಿದ ರಾಜನ ವಿಗ್ರಹ ಸ್ಥಾಪಿಸಲು ಕೇಂದ್ರ ಸರಕಾರ ಬಿಡದಿರುವುದನ್ನು ನೋಡುವಾಗ ತಮಿಳ್ನಾಡಿಗೆ ಸ್ವಾಯತ್ತಾಧಿಕಾರ ಇರುತ್ತಿದ್ದಲ್ಲಿ, ಕೇಂದ್ರ ಸರಕಾರದ ಕರುಣೆಗಾಗಿ ಕಾಯದೆ ತನ್ನಿಷ್ಟ ಬಂದಂತೆ ಮೂರ್ತಿಯನ್ನಿಟ್ಟು ಬಹುಮಾನಿಸುತ್ತಿದ್ದೆಂದರು. ಅನಂತರ ಪ್ರಾಚ್ಯವಸ್ತುವೆನಿಸಿರುವ ದೇವಾಲಯದ ಹೊರಾಂಗಣದಲ್ಲಿ ರಾಜರಾಜಚೋಳನ ವಿಗ್ರಹವನ್ನು ನಿಲ್ಲಿಸಿ ಅದರ ಕೆಳಗೆ ಸ್ವಾಯತ್ತಾಧಿಕಾರ ಇಲ್ಲದಿರುವ ಕಾರಣ, ರಾಜರಾಜಚೋಳ ಅಲ್ಲಿ ನಿಲ್ಲಬೇಕಾಗಿರುತ್ತದೆಂಬ ಅರ್ಥ ಬರುವ ರೀತಿಯಲ್ಲಿ ಬರೆದಿಡಲಾಗಿದೆ. ಇದನ್ನು ಮುಖ್ಯಮಂತ್ರಿ ಡಾ| ಕರುಣಾನಿಧಿಯವರೇ ಅನಾವರಣಗೊಳಿಸಿರುವರು

ಈ ಸ್ವರಾಜ್ಯವಾದರೂ ಏನಿದೆ? ಪರದೇಶ ಸಂಪರ್ಕ, ಸೇನೆ, ಹಣಕಾಸುಗಳಂತಹ ವಿಷಯಗಳು ಮಾತ್ರ ಕೇಂದ್ರದ ಕೈಯ್ಯಲ್ಲಿರಬೇಕು. ಇತರ ಅಧಿಕಾರ ರಾಜ್ಯಗಳಿಗಿರಬೇಕೆಂದು ಹೊಸದಿಲ್ಲಿಯಲ್ಲಿ ಕರುಣಾನಿಧಿಯವರು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗುತ್ತರವಾಗಿ ಹೇಳಿರುವರು ಸ್ವಾಯತ್ತಾಧಿಕಾರವೆಂದರೆ ಪ್ರತ್ಯೇಕತೆಯಲ್ಲವೆಂದು ಹಲವಾರು ಬಾರಿ ಅವರಂದಿರುವರಾದರೂ ಅವರ ಸ್ವಾಯತ್ತಾಧಿಕಾರದ ಅರ್ಥವಾದರೂ ಏನಿದೆ?

ಅವರ ಮಾತಿನಲ್ಲೇ ಸೂಚಿಸುವದಿದ್ದಲ್ಲಿ ಅವರ ಈ ಬೇಡಿಕೆ ಹೊಸತಿರುವದಿಲ್ಲ. ಅಂದರೆ ದ್ರಾವಿಡ ಕಳಗಂ ಮತ್ತು ಅದರಿಂದ ದ್ರಾವಿಡ ಮುನ್ನೇಟ್ರ ಕಳಗಂ ಹುಟ್ಟಿದ್ದೇ ಪ್ರತ್ಯೇಕ ತಮಿಳ್ನಾಡಿಗಾಗಿ. ತಮಿಳ್ನಾಡಿಗೂ ಇತರ ರಾಜ್ಯಗಳಿಗೂ ಸಾಮ್ಯತೆ ಇಲ್ಲ. ಹೋಲಿಕೆ ಇಲ್ಲ, ಸಂಬಂಧವಿಲ್ಲವೆಂದು ಅವರು ಹೇಳುತ್ತ ಬಂದಿದ್ದು, ದ್ರಾವಿಡ ಭಾಷೆಗಳಲ್ಲಿ ತಮಿಳೇ ಮೂಲ ಭಾಷೆ ಇದ್ದು, ಇತರ ಭಾಷೆಗಳು ಅದರಿಂದ ಬಂದಿರುವ ಕಾರಣ ದ್ರಾವಿಡ ನಾಡು ಪ್ರತ್ಯೇಕವಾಗಲೇಬೇಕು. ಕೊನೆಯ ಪಕ್ಷ ತಮಿಳ್ನಾಡಾದರೂ ಪ್ರತ್ಯೇಕವಾಗಬೇಕು. ಇಂತಹ ಪ್ರತ್ಯೇಕತೆಯ ವಿಷಯಗಳನ್ನು ಮುಂದಿಟ್ಟು ದ್ರಾ. ಮು. ಕಳಗಂ ರಾಜಕೀಯ ಕಣ್ಣುಮುಚ್ಚಾಲೆ ಆಟ ಆಡಿತು.

ಮದ್ರಾಸು ನಗರಸಭೆಯ ಅಧಿಕಾರ ತಮ್ಮ ಕೈಗೆ ಬಂದಲ್ಲಿ ಉದ್ಯೋಗ ತೆರಿಗೆಯನ್ನು ರದ್ದುಗೊಳಿಸುವುದಾಗಿ ದ್ರಾ. ಮು. ಕ. ಸಾರಿತು. ಇತರ ಪಕ್ಷಗಳ ಸಹಾಯದಿಂದ ಅದು ಮದರಾಸು ನಗರಸಭೆಯ ಅಧಿಕಾರವನ್ನು ವಹಿಸಿಕೊಂಡಿತು. ಆಗ, ನಗರಸಭೆ ತಮ್ಮ ಕೈಗೆ ಬಂದಿದೆಯಾದರೂ ರಾಜ್ಯವನ್ನಾಳುತ್ತಿರುವ ಕಾಂಗ್ರೆಸ್ ತಮಗೆ ಸಹಾಯ ಮಾಡದಿರುವ ಕಾರಣ, ವೃತ್ತಿ ತೆರಿಗೆ ರದ್ದತಿಯಾಗಲು ರಾಜ್ಯ ಸರಕಾರ ತಮ್ಮ ಕೈಗೆ ಬರಬೇಕೆಂದು ಅದು ಹೊಸ ರಾಗವನ್ನೆಳೆಯಿತು.

ಇದೇ ಸಮಯದಲ್ಲಿ ಕಾಂಗ್ರೆಸ್ಸಿನ ಮೇಲಿನ ದ್ವೇಷದಿಂದ ಚಕ್ರವರ್ತಿ ರಾಜಗೋಪಾಲಾಚಾರಿಯವರು ಕಾಂಗ್ರೆಸ್ಸಿನ ಕಾಲೆಳೆಯಲಿಕ್ಕಾಗಿ ದ್ರಾ. ಮು. ಕ. ದೊಂದಿಗೆ ಮೈತ್ರಿ ನಡೆಸಿದರು. ಅವರು ದ್ರಾವಿಡ ನಾಡಿನ ಬದಲು ದಕ್ಷಿಣ ಪ್ರದೇಶವೆಂಬ ಹೆಸರನ್ನುಚ್ಚರಿಸಿದರು. ದಕ್ಷಿಣ ಪ್ರದೇಶಕ್ಕೆ ಹೆಚ್ಚಿನ ಅಧಿಕಾರ ಬೇಕೆನ್ನುವ ಧಾಟಿಯಲ್ಲಿ ಅವರು ಪ್ರಚಾರ ನಡೆಸಿದರು. ಅಧಿಕಾರ ಅವ್ರಾರಿಗೋ, ಅಂತೂ. ಕಾಂಗ್ರೆಸ್ಸನ್ನು ಬೀಳಿಸುವದೇ ಅವರಿಗೆ ಬೇಕಾಗಿತ್ತು. ಹಾಗೇನೇ ಆಯಿತು.

ಮದ್ರಾಸು ನಗರಸಭೆಯ ಅಧಿಕಾರ ಸೂತ್ರ, ತಮಿಳ್ನಾಡು ಅಥವಾ ಮದ್ರಾಸು ರಾಜ್ಯದ ಅಧಿಕಾರದಂಕುಶ ತಮ್ಮ ಕೈಗೆ ಬಂದೊಡನೆ ಪ್ರತ್ಯೇಕತೆಯ ಸ್ವರಕ್ಕೆ ವಿಶೇಷ ಕಳೆಯೇರಿತು. ತಮಗೆ ದಿಲ್ಲಿ ಅಡ್ಡಬರುತ್ತಿರುವುದರಿಂದ ತಮಿಳ್ನಾಡು ಪ್ರತ್ಯೇಕವಾದಲ್ಲಿ ಮಾತ್ರ ಇಲ್ಲಿ ಹಾಲಿನ ಹೊಳೆ ಹರಿಯಲು ಸಾಧ್ಯವೆಂದು ಅದು ಹಾಡಲಾರಂಭಿಸಿತು. ಪುಣ್ಯವಶಾತ್ ಒಂದು ದುರ್ಘಟನೆ ಸಂಭವಿಸಿತು. ಚೈನಾ ಆಕ್ರಮಣ ನಡೆಸಿತು. ಪ್ರತ್ಯೇಕತೆಯ ಮಾತೆತ್ತಬಾರದೆಂದು ಕಾನೂನನ್ನು ಕೇಂದ್ರ ತಂದಿತು. ಪ್ರತ್ಯೇಕತೆಯ ಮಾತನ್ನು ತಾವೂ ಬಿಟ್ಟಿರುವದಾಗಿ ದ್ರಾ.ಮು.ಕ. ಘೋಷಿಸಿತು. ಆದರೆ ಇದು ದಂಡಕ್ಕೆ ಬೆದರಿ ಆಡಿದ ಮಾತೆಂಬುದನ್ನು ಅದರ ಅಧ್ವರ್ಯುಗಳೇ ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಒಡೆದುಹೋಯಿತು. ಇಂದಿರಾ ಕಾಂಗ್ರೆಸ್ಸಿಗೆ ದ್ರಾ. ಮು. ಕ. ದ ಬೆಂಬಲ ಬೇಕಾಗಿತ್ತು. ದ್ರಾ ಮು ಕಕ್ಕೂ ಸ್ವತಂತ್ರ ಪಾರ್ಟಿಯ ಸಂಗ-ಸಂಪರ್ಕ ಸಾಕಾಗಿತ್ತು. ಅದು ಇಂದಿರಾ ಕಾಂಗ್ರೆಸ್ಸಿಗೆ ಬೆಂಬಲವನ್ನಿತ್ತಿತು. ಆಗ ಮೆಲ್ಲನೆ ದ್ರಾ ಮು ಕವು ಪ್ರತ್ಯೇಕ ಪತಾಕೆಯ ಪರದಾಟಕ್ಕೆ ಪ್ರಾರಂಭಿಸಿತು. ಸೂಕ್ತ ಸಮಯ ಬಂದಿಲ್ಲವೆಂಬುದು ಅದಕ್ಕೆ ಗೊತ್ತಿದ್ದ ಕಾರಣ ಅದು ಮೌನ-ಮೋಷ ಎಣಿಸಿತು. ಅದನ್ನು ಖಂಡಿಸುವ ಎದೆಗಾರಿಕೆ ಇಂದಿರಾ ಕಾಂಗ್ರೆಸ್ಸಿಗೆ ಇಲ್ಲವಾಯಿತು. ಅದು ಪರಿಶೀಲನೆಯಲ್ಲಿದೆಂಬ ಹಾರಿಕೆಯ ಉತ್ತರವನ್ನೀಯುತ್ತ ಇಂದಿರಾ ಕಾಂಗ್ರೆಸ್ ಜಾರಿಕೊಳ್ಳಲು ನೋಡಿತು. ರಾಜ್ಯ ಶಾಸನ ತನ್ನ ಕೈಗೆ ಸಂಪೂರ್ಣವಾಗಿ ಬಂದುದೇ ತಡ, ಜನತೆ ಇನ್ನು ಬೆಲೆ ಏರಿಕೆಯ ಕುರಿತು ಹಾಹಾಕಾರವೆತ್ತುವ ಮೊದಲೇ ಅದರ ಗಮನವನ್ನು ಬೇರೆಡೆಗೆ ಸೆಳೆಯಲಿಕ್ಕಾಗಿ, ಈಗ ಸ್ವಾಯತ್ತಾಧಿಕಾರದ ಸ್ವರವನ್ನು ದ್ರಾ ಮು ಕ ಎತ್ತಿರುತ್ತದೆ. ಹಳ್ಳಿಯಿಂದ ದಿಳ್ಳಿಗೆ ಇವರೆಂತು ಕೂಗೆಬ್ಬಿಸಿದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಬಂಗ್ಲಾ ದೇಶದ ಉದಯವಾಯಿತು. ಅದಕ್ಕೆ ತಾನೇ ಕಾರಣವೆನ್ನುತ್ತಿದ್ದಾರೆ ಇಂದಿರಾ ಗಾಂಧಿಯವರು. ಅಸ್ಸಾಮಿನೊಡೆದು ಹಲವಾರು ಪ್ರತ್ಯೇಕ ರಾಜ್ಯಗಳನ್ನಾಗಿ ಅವರು ವಿಂಗಡಿಸಿದ್ದಾರೆ. ಅಂತಹ ಇಂದಿರಾ ಗಾಂಧಿಯವರು ತಮ್ಮ ಬೇಡಿಕೆಗೆ ಇಲ್ಲವೆನ್ನಲಾರರೆಂಬುದು ಕರುಣಾನಿಧಿಯವರ ಭಾವನೆ. ಅದನ್ನವರು ಸಾರ್ವಜನಿಕರ ಮುಂದೆ ಆಡಿಯೂ ತೋರಿಸಿದ್ದಾರೆ.

ದ್ರಾ. ಮು. ಕ.ದ ಅನುಸಾರಕರು ಅದರ ಅಧ್ಯಕ್ಷ ಕರುಣಾನಿಧಿಯವರನ್ನು ಮುಜಿಬುರ್ ರೆಹಮಾನ್‌ರೆಂದು ಹೇಳಿದರು. ಪ್ರತ್ಯೇಕ ತಮಿಳ್ನಾಡಿನ ಚಿತ್ರವನ್ನು ಬರೆದು ಅದರ ನಡುವೆ ಕರುಣಾನಿಧಿಯವರ ಚಿತ್ರವನ್ನಿಟ್ಟು ಎಲ್ಲೆಲ್ಲೂ ಪ್ರಚಾರ ಪತ್ರಿಕೆಗಳನ್ನು ಪ್ರಕಟಿಸಿದರು. ಅಷ್ಟರಲ್ಲಿ ಮೈತ್ರಿಯಿಂದ ಕಾಂಗ್ರೆಸ್ ಹೊರ ಹೋಯಿತು. ದ್ರಾ. ಮು. ಕ. ಈಗ ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗಿದೆ ಕಾಂಗ್ರೆಸ್ಸಿಗೆ ಕಾಲೂರಲು ಸ್ಥಳಸಿಗದಂತಾಗಲು ಜನತೆಯ ಗಮನವನ್ನು ತನ್ನೆಡೆಗೆ ಸೆಳೆಯುವುದಕ್ಕಾಗಿ ದ್ರಾ. ಮು. ಕ. ವು ಸ್ವಾಯತ್ತಾಧಿಕಾರದ ಸೊಲ್ಲನ್ನೆಲ್ಲೆಲ್ಲೂ ಆಡಲಾರಂಭಿಸಿತು. ಸ್ವರಾಜ್ಯವೆಂದರೆ ಸ್ವಾತಂತ್ರ್ಯವಲ್ಲ, ಸ್ವಾಯತ್ತಾಧಿಕಾರವೆಂದರೆ ಪ್ರತ್ಯೇಕತೆ ಅಲ್ಲ....ಅದೇನೇನೋ ಅಲ್ಲವೆನ್ನಲು ದ್ರಾ. ಮು.ಕ. ಪ್ರಾರಂಭಿಸಿತು. ಯಾವುದು ಹೌದು? ದ್ರಾ. ಮು. ಕ. ಅದಕ್ಕೂ ಉತ್ತರವನ್ನು ಸಿದ್ಧಪಡಿಸಿಟ್ಟುಕೊಂಡಿದೆ.

ಈ ಬೇಡಿಕೆ ಹೊಸತೇನೂ ಇರುವದಿಲ್ಲ. ಹೆಚ್ಚಿನ ಪಕ್ಷಗಳು ಈ ರಾಗವನ್ನು ಹಾಡಿವೆ. ಇದು ಮಾತ್ರ ಹೌದು. ದ್ರಾವಿಡ ನಾಡಿಗೆ ವಿರೋಧವಿದ್ದಾಗ ದಕ್ಷಿಣ ಪ್ರದೇಶವೆಂಬ ಹೆಸರನ್ನಿತ್ತು ಅದಕ್ಕೆ ರಾಜಾಜಿಯವರೂ ಅವರ ಸ್ವತಂತ್ರ ಪಾರ್ಟಿಯೂ ಪ್ರೋತ್ಸಾಹವನ್ನಿತ್ತಿತ್ತು. ಕಮ್ಯೂನಿಸ್ಟ್ ಪಾರ್ಟಿಗಳು ಕೂಡಾ ತಮ್ಮ ಪ್ರಚಾರ ಪ್ರಣಾಳಿಕೆಯಲ್ಲಿ ಇಂತಹ ಬೇಡಿಕೆಗಳನ್ನು ಮುಂದಿಟ್ಟಿದೆಯೆನ್ನುವುದನ್ನು ಡಾ| ಕರುಣಾನಿಧಿಯವರೂ ಕಂಡುಹಿಡಿದಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಗಳ ಕಣ್ಣೋಟದಲ್ಲಿ ಭಾರತ ಒಂದು ದೇಶವಲ್ಲ. ಪ್ರತ್ಯೇಕ ಭಾಷೆ ಇರುವ ತಮಿಳ್ನಾಡು ಒಂದು ದೇಶವಿದೆ. ಹಾಗಿರುವಾಗ ಸರಿಯಾದ ಸಮಯವೊದಗಿದಾಗ ಕಮ್ಯೂನಿಸ್ಟ್ ಪಾರ್ಟಿಗಳು ಪ್ರತ್ಯೇಕತೆಗೆ ಪ್ರೋತ್ಸಾಹ ನೀಡಿದಲ್ಲಿ ಆಶ್ಚರ್ಯವೇನೂ ಇಲ್ಲ.

ವಿಧಾನಸಭೆಯಲ್ಲಿ ಈ ವಿಷಯಗಳನ್ನು ಡಾ| ಕರುಣಾನಿಧಿಯವರು ಹೊರಗೆಡವಿದಾಗ ಅವರ ಮೈತ್ರಿಯಲ್ಲಿರುವ ಮುಸ್ಲಿಂ ಲೀಗಿನ ಸದಸ್ಯರೊಬ್ಬರು ಭಾಷಾವಾರು, ಕಾನು ರಾಜರು ಕೂಡಾ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಇರಬೇಕೆಂದು ಹೇಳಿದ್ದಾರೆಂದು ತಿಳಿಸಿ ದ್ರಾ. ಮು. ಕ. ದ. ಸಹಾಯಕ್ಕೆ ಬಂದಿದ್ದಾರೆ. ಭಾರತವನ್ನು ವಿಭಜಿಸಿರುವ ಮುಸ್ಲಿಂ ಲೀಗಿಗೆ ಭಾರತ ಎಷ್ಟು ಹೋಳಾದರೇನಂತೆ?

ಸರಕಾರ ಪ್ರಕಟಿಸುತ್ತಿರುವ 'ತಮಿಳು ಅರಸು' ಪತ್ರಿಕೆಯಲ್ಲಿ ದ್ರಾವಿಡ ಕಳಗದ ತಂದೆ ರಾಮಸ್ವಾಮಿ ನಾಯ್ಕರ್‌ರವರೊಂದು ಲೇಖನವನ್ನು ಬರೆದು ತಮಿಳ್ನಾಡು ಉಳಿಯಬೇಕಾದಲ್ಲಿ ರಾಕ್ಷಸೀ ದಿಲ್ಲಿಯ ಆಳ್ವಿಕೆಯಿಂದ ಪ್ರತ್ಯೇಕವಾಗಿರಬೇಕೆಂದು ಬರೆದಿರುವರು.

ದುರ್ದೈವವಶಾತ್ ಬೇರೆ ಕೆಲವು ರಾಜಕೀಯ ಮುಂದಾಳುಗಳು ದ್ರಾ. ಮು. ಕ. ದ ವಿಜಯವನ್ನು ಕಂಡು ತಾವೂ ಹಾಗೇನೇ ಮಾತಾಡಲಾರಂಭಿಸಿದ್ದಾರೆ. ವೀರೇಂದ್ರ ಪಾಟೀಲ್, ಬಿಜೂ ಪಾಟ್ನಾಯಕ್ ಮುಂತಾದವರು ಆ ಸಾಲಿಗೆ ಸೇರುತ್ತಾರೆ. ಸೋಷ್ಯಾಲಿಸ್ಟ್ ಪಾರ್ಟಿ ಸಹಾ ಕಳೆದ ಚುನಾವಣೆಯ ಸಮಯ ಈ ಧಾಟಿಯಲ್ಲೇ ರಾಗವನ್ನೆಳೆದಿದೆ.

ರಾಜಕೀಯ ಪಕ್ಷಗಳು ನಮ್ಮ ತಾತ್ಕಾಲಿಕ ವಿಜಯಸಾಧನೆಯಿಂದ ಪ್ರತ್ಯೇಕತೆಯ ಸ್ವರವೆನ್ನುತ್ತಿವೆ. ಮುಸ್ಲಿಮರಿಗೆ ಸ್ವಾಯತ್ತಾಧಿಕಾರ ಕೊಡುವವರು ತಮಿಳರಿಗೇತಕ್ಕೆ ಕೊಡಬಾರದು? ದಿಲ್ಲಿಯ ಶಾಸನ ಕಾಶ್ಮೀರಕ್ಕೆ ಅನ್ವಯಿಸುತ್ತದಿಲ್ಲವಾದಲ್ಲಿ ತಮಿಳ್ನಾಡಿಗೇತಕ್ಕೆ ಅನ್ವಯವಾಗಬೇಕು? ಗಂಭೀರವಾಗಿ ಯೋಚಿಸಬೇಕಾಗಿರುವ ಪ್ರಶ್ನೆಗಳಿವು.

ರಾಜಕೀಯವೆಂದರೆ ಇಂತಹ ಗತ್ತುಗಾರಿಕೆಗಳೇ ಇರಬಹುದು. ಪ್ರತ್ಯೇಕತೆಗಾಗಿ ಪರದಾಟ ನಡೆಸಿದರೂ ತಾವು ಸ್ವರಾಜ್ಯವನ್ನು ಮಾತ್ರ ಕೇಳಿರುವರಲ್ಲದೆ ಸ್ವಾತಂತ್ರ್ಯವನ್ನಲ್ಲವೆಂದು ಡಾ| ಕರುಣಾನಿಧಿ ಹೇಳುತ್ತ ಬಂದಿರುವರು. ಅವರ ಮನಸ್ಸಿನಲ್ಲೇನಿದೆ? ಯೋಚನಾ ಗರ್ಭದಲ್ಲೇನಡ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7 3/8 % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ "ಜೀವನ-ನಿಧಿ"ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಚಾರುಚಯನ

ವಾಸ್ತವಿಕತೆಗೆ ಇಳಿದು ಬರಬೇಕು

ಮಹಾರಾಷ್ಟ್ರ—ಕರ್ನಾಟಕಗಳ ಗಡಿ ವಿವಾದವನ್ನು ದೊಡ್ಡದು ಮಾಡ ಬಾರದು ಎಂದು ಮುಖ್ಯ ಸಚಿವ ದೇವರಾಜ ಅರಸರು ಮನವಿಮಾಡಿಕೊಂಡರು.

ಬೆಳಗಾಂವಿ ನಗರ ವಿಭಜನೆಯ ಸಂಬಂಧದಲ್ಲಿ ಉನ್ನತ ಮಟ್ಟದಲ್ಲಿ ರಹಸ್ಯ ಮಾತು ನಡೆದಿದೆಯೆಂಬ ಕಿಂವದಂತಿಯ ಹಿನ್ನೆಲೆಯಲ್ಲಿ ಹೊರಟಿದೆ ಈ ಮನವಿ.

ಈ ಸಮಸ್ಯೆಯ ಮೇಲೆ ತೀರ್ಪುಗೊಡುವವರು ಕನ್ನಡಿಗರೂ ಅಲ್ಲ, ಮಹಾರಾಷ್ಟ್ರೀಯರೂ ಅಲ್ಲ, ಲೋಕ ಸಭೆಯೆಂದು ಅವರು ಸ್ಪಷ್ಟ ಪಡಿಸಿ ಹಾದಿ—ಬೀದಿಗಳಲ್ಲಿ ಇದನ್ನು ಪರಿಹರಿಸುವುದು ಸಾಧ್ಯವಿಲ್ಲವೆಂದರು.

ಇದು ಶ್ರೀ ಕನ್ನಡಿಗರಿಗೆ ತಿಳಿಯದ ಸಂಗತಿಯಲ್ಲ. ಲೋಕಸಭೆಗೆ ಅಂತಹ ಅಧಿಕಾರವಿರುವುದರಿಂದ ಕನ್ನಡಿಗರ ಒಕ್ಕೊರಲಿನ ನಿರ್ಧಾರದ ಪ್ರಭಾವ ಅದರ ಮೇಲಾಗುವಂತೆ ಕನ್ನಡಿಗರ ಸರಕಾರ ಪ್ರಯತ್ನ ನಡೆಸಬೇಕೆಂದು ಕೇಳಿಕೊಳ್ಳುವುದು ತಪ್ಪೆ?

ನಮ್ಮ ಸರಕಾರಗಳಿಗೆ—ಅದರ ಸೂತ್ರಧಾರರಿಗೆ ಹಾದಿ—ಬೀದಿ ಗಲಭೆ ನಡೆದರೆ ಮಾತ್ರ ಎಚ್ಚರಾಗುವ ಪರಿಸ್ಥಿತಿಯಿತ್ತು. ರಾಜ್ಯ ಪುನರ್ಘಟನೆಯಾದದ್ದು, ಹಿಂದೀ ಭಾಷೆಯ ಹೇರಿಕೆಗೆ ತಡೆಯೊಡ್ಡಿದ್ದು....ಇತ್ಯಾದಿ ಇತ್ಯಾದಿ ಬೀದಿ—ಹಾದಿಗಳ ಗುಲ್ಲಿನಿಂದಲೇ ಅಲ್ಲವೆ?

ಆಂಧ್ರ ರಾಜ್ಯ ಕೊಡಿರೆಂದು ಕೇಳಿದಾಗ ಲೋಕ ಸಭೆಕೊಟ್ಟದ್ದಿಲ್ಲ. ಪೊಟ್ಟಿಲು ಶ್ರೀರಾಮುಲು ಬಲಿದಾನಗೊಂಡ ಮರುಗಳಿಗೆಯಲ್ಲೇ ಆಂಧ್ರ ರಾಜ್ಯ ಆಂಧ್ರೀಯರ ಕೈಗಿತು.

ಇದು ಮೊದಲ ಕತೆ. ಇಂದಿನದೂ ಇದಕ್ಕೆ ವ್ಯತಿರಿಕ್ತವೆಂದು ಹೇಳುವ ಎದೆಗಾರಿಕೆ ಯಾರಿಗಿದೆ?

ಸಮಸ್ಯೆಯನ್ನು ವಿಶಾಲ ದೃಷ್ಟಿಯಿಂದ ನೋಡಬೇಕು. ಕರ್ನಾಟಕ ಮತ್ತು ಮಹಾರಾಷ್ಟ್ರಗಳೆರಡೂ ಒಂದೇ ರಾಷ್ಟ್ರದಲ್ಲಿರುವುದರಿಂದ, ಈ ರಾಜ್ಯದ ಕೆಲವು ಗ್ರಾಮಗಳು ಆ ರಾಜ್ಯಕ್ಕೂ ಆ ರಾಜ್ಯದ ಕೆಲವು ಗ್ರಾಮಗಳು ಈ ರಾಜ್ಯಕ್ಕೂ ಹೋದರೆ, ಅದಕ್ಕಾಗಿ ಹೋರಾಟವೇಕೆ? ಒಂದೊಮ್ಮೆ ಈ ಬಗ್ಗೆ ಹೋರಾಟ ನಡೆದರೆ ಅದು ಮೂರ್ಖತನವೆಂಬುದು ಶ್ರೀ ಅರಸು ಅಭಿಪ್ರಾಯ.

ಇದು ವ್ಯಕ್ತಿಗತ ಅಭಿಪ್ರಾಯವೇ ಇರಬಹುದು. ಆದರೆ, ಶ್ರೀ ಅರಸುರವರ ವ್ಯಕ್ತಿಗತ ಅಭಿಪ್ರಾಯಕ್ಕೂ ರಾಜ್ಯ ಸರಕಾರದ ಸಾಮೂಹಿಕ ಅಭಿಪ್ರಾಯಕ್ಕೂ ಹೆಚ್ಚು ಭೇದವಿಲ್ಲ.

ಶ್ರೀ ಅರಸುರವರ ಅಭಿಪ್ರಾಯವನ್ನು ನಿರಾತಂಕವಾಗಿ ಒಪ್ಪಲೇ ಬೇಕು. ನಾವೆಲ್ಲರೂ ಭಾರತೀಯರು, ಒಂದೇ ರಾಷ್ಟ್ರದವರು. ಆದುದರಿಂದ ಗಲಾಟೆಕ್ಕೆ ಮೊದಲಿನ ವ್ಯವಸ್ಥೆಯೇ ಸರಿಯಿದ್ದಿರ ಬಹುದೆ? ಬೆಳಗಾಂವಿ — ಧಾರವಾಡ ಉತ್ತರ ಕನ್ನಡ, ಬಿಜಾಪುರಗಳನ್ನು ಇಂದಿನ ಮಹಾರಾಷ್ಟ್ರಕ್ಕೆ ವರ್ಗಾಯಿಸಿದರೆ ಬಳ್ಳಾರಿ,ರಾಯಚೂರು, ಬಿದರೆ. ಗುಲ್ಬರ್ಗ, ಕೋಲಾರಗಳನ್ನು ಆಂಧ್ರಕ್ಕೆ ದಾನ ಮಾಡಿದರೆ, ದಕ್ಷಿಣ ಕನ್ನಡ ಮತ್ತು ಕೊಡಗುಗಳನ್ನು ಕೇರಳಕ್ಕೆ ಕೊಟ್ಟು ಬಿಟ್ಟರೆ ಮೈಸೂರನ್ನು ತಮಿಳುನಾಡಿಗೆ ಕೊಡ ಮಾಡಿದರೆ ಮತ್ತೆ ಎಲ್ಲಿಯೂ ನಮ್ಮ ಕಾಲಕ್ಕೆ ಗಡಿ ವಿವಾದವೆಂಬುದೇ ಇರುವುದಿಲ್ಲ.

ಬೆಂಗಳೂರು ನಗರವನ್ನೂ ಪ್ರತ್ಯೇಕ ರಾಜ್ಯವೆಂದು ಮಾಡಿ ಅಲ್ಲಿರುವ ತಮಿಳರ ತೆಲುಗರ ಮತ್ತು ಆಂಗ್ಲೋಜನಗಳ ಹಿತವನ್ನು ಸಂರಕ್ಷಿಸ ಬಹುದು. ಈ ಭಾವನೆ ಮರಾಠಿಗರಿಗೆ ಮಾತ್ರ ಇಲ್ಲ.

ಪಂ| ನೆಹರು ರಾಜ್ಯ ಪುನರ್ಘಟನೆಯನ್ನು ಭಾಷೆಯ ತಳಹದಿಯಲ್ಲಿ ಮಾಡಿ ದೊಡ್ಡ ತಪ್ಪು ಮಾಡಿದರು.

ಜನತೆಯ ಭಾಷೆಯಲ್ಲಿ ಆಡಳಿತ ನಡೆಯ ಬೇಕು; ಇದಕ್ಕೆ ಒಂದು ಭಾಷೆಯನ್ನಾಡುವ ಜನರೆಲ್ಲ ಸಾಧ್ಯವಾದಷ್ಟು ಒಂದೇ ರಾಜ್ಯದಲ್ಲಿರುವಂತಾಗಬೇಕು. — ಇದು ಅಂದಿನ ಆಶಯವಿತ್ತು.

ಸ್ವತಂತ್ರ ದೊರಕಿ ಕಾಲು ಶತಮಾನ ಕಳೆಯಿತು. ರಾಜ್ಯೋದಯವಾಗಿ ಹದಿನಾರು ವರ್ಷ ಸಂದಿತು. ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಲು ಇಲ್ಲಿನ ಸರಕಾರಕ್ಕೆ ಸಾಧ್ಯವಾಗಲಿಲ್ಲ. ಕನ್ನಡಕ್ಕೆ ಸಲ್ಲಬೇಕಾದ ಸ್ಥಾನಮಾನವೇನೂ ಸಂದಿಲ್ಲ. ಕನ್ನಡದ ಮೇಲೆ ಅತ್ಯಾಚಾರ — ಅನಾಚಾರಗಳು ಮಾತ್ರ ಹೇರಳ ನಡೆಯುತ್ತಿವೆ. ಕನ್ನಡದ ಕೊಲೆಯಾಗುತ್ತಿದೆ. ಜೀವಂತ ಸಮಾಧಿಯಾಗುತ್ತಿದೆ.

ಶಿಕ್ಷಣ ಮಾಧ್ಯಮವನ್ನಾಗಿ ಕನ್ನಡವನ್ನು ಸ್ವೀಕರಿಸಲು ಕನ್ನಡಿಗರೇ ಹಿಂಜರಿಯುತ್ತಾರೆ. ಅವರಿಗೆ ಆಂಗ್ರೇಜಿಯೇ ಬೇಕು.

ಮತ್ತೆ ಕನ್ನಡ ರಾಜ್ಯವೇಕೆ? ಅನವಶ್ಯ ಸಮಸ್ಯೆಗಳೇಕೆ?

'ಹೆಸರಲ್ಲೇನಿದೆ.' ಎಂದು ಕೇಳಿದ್ದರು ಪಂ. ನೆಹರು. ಆದರೆ, ನಮ್ಮ ಅರಸರು ರಾಜ್ಯದ ಹೆಸರು ಬದಲಾಯಿಸಲ ಒಪ್ಪಿದ್ದಾರೆ. ಕರೆಯುವುದಕ್ಕೊಂದು ಹೆಸರು—ಅದಾವುದಾದರೇನು? ಈ ಪ್ರಶ್ನೆಯನ್ನೇ ಬ್ರಹ್ಮಾಂಡ ಮಾಡುತ್ತೀರಿ ಎಂದವರು ಕೇಳಲಿಲ್ಲ.

ರಾಜ್ಯದ ಹಿತ ನಿರ್ಲಕ್ಷಿಸುತಿದ್ದಾರೆಂದು ಶ್ರೀ ಅರಸು ಅವರ ಮೇಲೆ ಕೆಲವರ ಆರೋಪ. ಮುಚ್ಚುಮರೆಯೇಕೆ? ಹಿಂದೆ ಅಧಿಕಾರದಲ್ಲಿದ್ದು ಇಂದು ಅದರಿಂದ ವಂಚಿತರಾದ ಸಂಸ್ಥಾ ಕಾಂಗ್ರೆಸ್ಸಿಗರ ಆರೋಪ.

ಅದಕ್ಕೆ ಅರಸು ಉತ್ತರ— ನೀವು ಅಧಿಕಾರದಲ್ಲಿದ್ದಾಗ ರಾಜ್ಯಕ್ಕೆ ಏನು ಮಾಡಿದಿರಿ? — ಪಾಟಿ ಸವಾಲು.

ಅವರು ಏನೂ ಮಾಡಲಿಲ್ಲವೆಂದು ತಾನೇ ಈ ವಿಭಾಗದ ಭಾರತೀಯರು ಶ್ರೀ ಅರಸು ಅವರನ್ನು ಅಧಿಕಾರಕ್ಕೆ ತಂದದ್ದು?

ತನ್ನ ಮೇಲೆ ಬೆಟ್ಟದಷ್ಟು ವಿಶ್ವಾಸವಿಟ್ಟು ಮತ ನೀಡಿದವರಿಗೆ 'ಹಿಂದಿನವರು ಏನೂ ಮಾಡಿಲ್ಲ, ನಾನೂ ಮಾಡಲೊಲ್ಲೆ' ಎಂದು ಕಪಾಳಕ್ಕೆ ಹೊಡೆದರೆ ಮತದಾರರಿಗೆ ಮೋಕ್ಷವೆ?

ಇಂತಹ ಮಾತು ಶ್ರೀ ಅರಸು ಅವರ ಬಾಯಿಂದ ಬರಬಾರದಿತ್ತು.

ಅವರ ಮಾತುಗಳು ಗಡಿ ವಿವಾದದಲ್ಲಿ ಏನೋ ತದಿಗಿಣವಾಗ ಹತ್ತಿದೆಯೆಂಬುದನ್ನು ಸಮರ್ಥಿಸುತ್ತವೆ.

ಕೇಂದ್ರ ಗೃಹ ಮಂತ್ರಿ ಪಂತರು ಮಹಾಜನ ವರದಿಗೆ ಸೂಕ್ತ ಮಹತ್ವ ನೀಡುವ ಬಗ್ಗೆ ಆಶ್ವಾಸನೆಯೇನೋ ನೀಡಿದ್ದಾರೆ. ಯಾರಿಗೆ? ಸೂಕ್ತವಾಗುವಂತೆ ಅದು ಅಗೋಚರ.

ಕರ್ನಾಟಕ ಸರಕಾರದ ಮಂತ್ರಿಗಳು ಬದಲಾದ ಮಾತ್ರಕ್ಕೆ ಸರಕಾರದ ವಿಧಾನ ಸಭೆಯ ಒಮ್ಮತದ ನಿರ್ಧಾರ ಬದಲಾಗಬೇಕಾಗಿಲ್ಲ.

ಭಾಷಾವಾರು ರಾಜ್ಯ ನೀತಿಯನ್ನು ಒಪ್ಪಿಕೊಂಡ ಮೇಲೆ ಗಡಿ ವಿವಾದ ಇತ್ಯರ್ಥವಾಗುವಾಗ, ಗಡಿನಾಡಿನ ಕನ್ನಡಿಗರ ಮೇಲೆ ಮರಾಠಿ ಶಾಸನ ಹೊರಿಸುವುದು ಸಾಧುವಲ್ಲ. ಆದ್ದರಿಂದ ಆದರ್ಶದ, ತತ್ವೋಪದೇಶದ ಮಟ್ಟದಿಂದ ಶ್ರೀ ಅರಸು ವಾಸ್ತವಿಕ ನೆಲೆಗೆ ಇಳಿದು ಬರಬೇಕು.

ಇದು ಶ್ರೀ ಕನ್ನಡಿಗರ ಅಭಿಪ್ರಾಯ ಮಾತ್ರ ಅಲ್ಲ; ತಮಿಳ್ನಾಡಿನ ವಿಧಾನಸಭೆಯಲ್ಲಿ ಮಾತಾಡುತಿದ್ದ ಮುಖ್ಯಮಂತ್ರಿಯವರು ದ್ರಾವಿಡ

ಗಿದೆ? ಅದನ್ನವರು ಸ್ಪಷ್ಟಪಡಿಸಿದ್ದಾರೆ. ತಮಿಳ್ನಾಡಿನ ವಿಧಾನಸಭೆಯಲ್ಲಿ ಮಾತಾಡುತಿದ್ದ ಮುಖ್ಯಮಂತ್ರಿಯವರು ದ್ರಾಮುಕದ ಬೇಡಿಕೆಯನ್ನು ಪ್ರತ್ಯೇಕತೆಯೆಂದು ತೆಗೆದುಕೊಳ್ಳಬಾರದು. ಡಾ| ಕರುಣಾನಿಧಿ ಕವಿಗಳಿದ್ದಾರೆ. ಅವರ ಕವಿ ಭಾಷೆಯಲ್ಲಿ ಮಾತಾಡುತ್ತ ಆ ಬೇಡಿಕೆ—ಪ್ರತ್ಯೇಕತೆಯನ್ನು ಅವರು ಮದುವೆ ಪ್ರಸ್ತಾಪ—ಮಗು ಜನನದ ಅಪಾಯಕ್ಕೆ ಹೋಲಿಸಿದ್ದಾರೆ. ವಿವಾಹ ಪ್ರಸ್ತಾಪನೆಯ ವೇಳೆಯಲ್ಲಿ ಶಿಶು ಜನನದ ಅಪಾಯದ ಕುರಿತು ಯಾರೂ ಮಾತೆತ್ತುವುದಿಲ್ಲವೆಂಬುದು ನಿಜವಾದರೂ, ವಿವಾಹದ ಮೇಲೆ ಮಕ್ಕಳಾಗುತ್ತವೆಂಬುದು ಶ್ರೀಸಾಮಾನ್ಯನ ನಂಬಿಕೆ. ಅಪವಾದಾತ್ಮಕ ಘಟನೆಗಳನ್ನು ಬಿಟ್ಟಲ್ಲಿ ಇದು ನಿಜವೇ ಇದೆ. ಹಾಗಾದರೆ ಸ್ವಾಯತ್ತಾಧಿಕಾರದ ಬೇಡಿಕೆಯ ಹಿಂದೆ ಪ್ರತ್ಯೇಕತೆಯ ಚಿತ್ರವಡಗಿದೆಂಬುದೂ ಅಷ್ಟೇ ಸ್ಪಷ್ಟ. ಅದನ್ನು ಮರೆಮಾಚುವುದರಲ್ಲಿ ಪ್ರಯೋಜನವಿಲ್ಲ. ಅಳಿಯ ಅಲ್ಲ, ಮಗಳ ಗಂಡನೆಂದರೆ ಅರ್ಥ ಬೇರೆಯಾಗುತ್ತದೇನು?

ದ್ರಾಮುಕದ ಬೇಡಿಕೆ ಅದೇ ರೀತಿಯದ್ದಿದೆ.

—ಶ್ರೀ ಶಿವಶಂಕರ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms: Roof garden

Quiet, Calm Atmosphere

Personalised Service.

) ಅವಳು ಬಂದಿದ್ದಳು (

ಅವಳು ಅಪ್ಸರೆಯಂತೆ ಬಂದಿದ್ದಳು
ಹೊಳೆವ ಕಣ್ಣುಗಳೊಡನೆ ಬಂದಿದ್ದಳು !
ಅಂದವಾದುಗೆಯನ ಟ್ಟು. ಬೊಟ್ಟು
ಹಣೆಯೊಳಗಿಟ್ಟು
ಎನ್ನ ಹೃದಯದ ರಾಣಿ ಬಂದಿದ್ದಳು,
ಹೃದಯ ದೇಗುಲದಲ್ಲಿ ನಿಂದಿದ್ದಳು.
ಚಂದ್ರ ಏರುತ್ತಿರುವ ಬೆಳದಿಂಗಳಲ್ಲಿ ಮಿಂದು
ಮುದದಿಂದ ನನ್ನೆಡೆಗೆ ಬಂದಿದ್ದಳು
ಬಂದವಳೆ ಈ ಕವಿಯ ಕಂಡಿದ್ದಳು!
ಅತ್ತಿತ್ತ ಹುಡುಕಾಡಿ, ಕಣ್ಣ ಸನ್ನೆಯ
ಮಾಡಿ
ಬರಲೆನ್ನ ಹತ್ತಿರಕೆ ಕರೆದಿದ್ದಳು
ಮಧುವಾಗಿ ವಧುವಾಗಿ ಬಂದಿದ್ದಳು
ಎಲ್ಲವನು ನಾ ಕೇಳಿ ಅವಳೆಡೆಗೆ ಓಡುತಿರೆ
ಬಂದಿರಾ ಎಂದೆನ್ನ ಅಪ್ಪಿದವಳು
ಎನ್ನೊಲುಮೆ ಹೃದಯದಲಿ ನಿಂದಿದ್ದಳು.
ತಂಗಾಳಿಯು ತೇಲಿ ಜೀವವೆರಡೊಂದಾಗೆ
ಒಲವಸುಧೆ ಹರಿಸಲಿಕೆ ಬಂದಿದ್ದಳು
ಮುತ್ತುಗಳ ಮಾಲೆಯನು ತಂದಿದ್ದಳು.
ಎನ್ನೆದೆಯಲಿಳಿದು, ಎನ್ನಲೆಲ್ಲವ ಕಂಡು
'ಎನ್ನವಳೆ ನೀನೆ'ಂದು ಅಂದಿದ್ದಳು !
ಎಲ್ಲವೂ ಮುಗಿದೊಡನೆ ಶಶಿ ಮೆಲ್ಲ
ಇಳಿದೊಡನೆ
ನನ್ನೊಡನೆ ಇರಲೆಂದು ಬಂದಿದ್ದಳು,
ಹೃದಯ ದೇವತೆಯಾಗಿ ನಿಂದಿದ್ದಳು.

—ಅನಂತ, ಶಾಂತಸದನ.

ಗರಿಷ್ಠ ಮಿತಿ ಎಲ್ಲ ರಂಗಕ್ಕೂ ಬೇಕು

(ಐದನೇ ಪುಟದಿಂದ)

೧೯೭೦ರಲ್ಲಿ ಶ್ರೀ ದಾಸರ ಆಯ್ಕೆ ಅನಿವಾರ್ಯ ಕಾರಣಗಳಿಂದ ಅತ್ಯಗತ್ಯವಾಗಿತ್ತು. ಆಗಲೇ ಅವರು ಸ್ಪಷ್ಟ ಪಡಿಸಿದ್ದರು—ಒಂದು ವರ್ಷ ಶೇಗಾಣರೂ ದೂಢಿಯೇನು, ಅಷ್ಟೆ.

ಶ್ರೀ ದಾಸರ ಆರೋಗ್ಯವೂ ಚೆನ್ನಾಗಿಲ್ಲ. ಅವರೂ ಶೀಘ್ರ ನಿವೃತ್ತಿಯನ್ನೂ ಮಾಡಿಯಾರು. ಪ್ರಧಾನರಿಂದ ಸಂಯುಕ್ತರಂಗ ಹೊಸ ನಾಯಕನ ಬೇಟೆಗೆ ಹೊರಟಿವೆ.

ಶ್ರೀ ಬಿಜೂಪಟನಾಯಕರ ಹೆಸರೀಗ ಮೇಲೆ ಬಂದಿದೆ. ಕಾಂಗ್ರೆಸ್ ಮಹಾ ವಿಘಟನೆಯ ವೇಳೆ ಬಿಜೂ ಶ್ರೀಮತಿ ಗಾಂಧಿಯ ಅನುಯಾಯಿಯಾದರು. ಆದರೆ ಶ್ರೀಮತಿಯವರು ಬಿಜೂವಿಗಿಂತ ನಂದಿನಿ ಸತ್ಪತಿಯವರನ್ನೇ ತಬ್ಬಿಕೊಂಡರು. ಬಿಜೂವನ್ನು ತಮ್ಮ ಪಕ್ಷದಿಂದ ಉಚ್ಚಾಟನೆ ಮಾಡುವಷ್ಟರವರೆಗೂ ಪರಿಸ್ಥಿತಿ ಗಂಭೀರವಾಯ್ತು.

ಬಿಜೂ ಧೃತಿಗೆಡಲಿಲ್ಲ. ತನ್ನದೇ ಗುಂಪು ಕಟ್ಟಿದರು; ಉತ್ಕಲ ಕಾಂಗ್ರೆಸ್ ಎಂದದನ್ನು ಕರೆದರು. ಬಿಜೂ ಮೇಲೆ ಯಾರಿಗೆ ಎಂತಹ ಅಸಮಾಧಾನವಿರಲಿ, ಅವರ ಮಾತು ಇಂದಿಗೂ ಉತ್ಕಲದಲ್ಲಿ ನಡೆಯುತ್ತದೆ.

ಇಂದು, ಉತ್ಕಲದ ರಾಜ್ಯಕೀಯ ಬಿಜೂ ಮತ್ತು ಸತ್ಪತಿಯವರ ರಾಜ್ಯಕೀಯ.

ಬಿಜೂ ೧೯೬೧ರಲ್ಲಿ ಉತ್ಕಲದ ಮುಖ್ಯ ಸಚಿವರಾಗಿ ಸುಮಾರು ಎರಡು ವರ್ಷ ಅಧಿಕಾರದಲ್ಲಿದ್ದರು.

ಅದು ಭಾರತ ರತ್ನ ಜವಾಹರಲಾಲರ ಆಡಳಿತದ ಕೊನೆಯ ಘಟ್ಟ. ಹಲವು ಬಗೆಯ ಗಂಭೀರ ಆರೋಪಗಳ ಕಾರಣದಿಂದಾಗಿ ಬಿಜೂ ಪದವಿ ತ್ಯಜಿಸಿದರು.

ಇಂದಿಗೆ ಆರೋಪಗಳಿಂದ ಅವರಿಗೆ ಬಹುಮಟ್ಟಿನ ಮುಕ್ತಿ ದೊರೆತಿದೆ. ಅವರೇ ಮುಖ್ಯಮಂತ್ರಿಯಾಗ ಬೇಕೆಂದು ಬಹುಮತದ ಬೇಡಿಕೆಯನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಈ ತಿಂಗಳ ಕೊನೆಯೊಳಗೆ ಅಥವಾ ಮುಂದಿನ ತಿಂಗಳ ಆರಂಭಕ್ಕೆ ಬಿಜೂ ಎರಡನೆಯ ಬಾರಿಗೆ ಮುಖ್ಯಮಂತ್ರಿಯಾಗುತ್ತಾರೆ.

ಇದರಿಂದ ಒರಿಸ್ಸಾದ ನಾಗರಿಕರಿಗೆ ಸುಲಲಿತ ಆಡಳಿತೆ ದೊರೆಯುತ್ತದೆಯೆಂದು ನಿರೀಕ್ಷಿಸೋಣ.

ಜತೆಗೆ ಅದು ಶ್ರೀಮತಿ ಗಾಂಧಿ—ಸತ್ಪತಿಯವರ ಪ್ರಭಾವದಿಂದ ಒಡಿಸ್ಸಾ ಸಂಪೂರ್ಣ ದೂರವಾಗುವುದೆ?

● ●

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0–75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಸಾಂಸ್ಕೃತಿಕ ವೈಭವಕ್ಕೆ ದ. ಕ. ಜಿಲ್ಲೆ ಒಂದು ನಿಧಿ

—ದೇಜಗೌ

ತಾ. 16ರಂದು ಸಿರಿಯಾ ಗ್ರಾಮದ ಮೆಕ್ಕಿಕಟ್ಟೆ ನಂದೀಶ್ವರ ದೇವಾಲಯದ ಸಾರ್ವಜನಿಕ ಸಭೆಯಲ್ಲಿ ನಂದಿಕೇಶ್ವರ ದೇವಸ್ಥಾನದ 600 ವರ್ಷಗಳ ಹಿಂದಿನ ಮರದ ಗೊಂಬೆಗಳನ್ನು ಮೈಸೂರು ವಿ. ವಿ. ನಿಲಯದ ಜಾನಪದ ವಸ್ತು ಸಂಗ್ರಹಾಲಯಕ್ಕೆ ಸ್ವೀಕರಿಸುವ ಸಮಾರಂಭವು ಮಾಜಿ ಎಂ ಎಲ್. ಎ ಹಾಗೂ ದೇವಾಲಯದ ಜೀರ್ಣೋದ್ಧಾರ ಸಮಿತಿಯ ಮುಖ್ಯಸ್ಥ ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಮೈಸೂರು ವಿ ವಿ ನಿಲಯದ ಕುಲಪತಿ ಶ್ರೀ ದೇ. ಜವರೇ ಗೌಡರು ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಾ, ದೇಶದ ಸಂಸ್ಕೃತಿಯ ಸತ್ವ ಎಂಥದು— ವೈವಿಧ್ಯತೆ ಏನು ಎಂದು ತೋರಿಸುವುದಕ್ಕೆ, ಈ ಸುಂದರ ಹಾಗೂ ಕಲಾಪೂರ್ಣವಾಗಿರುವ ವಿಗ್ರಹಗಳು ಒಂದು ನಿದರ್ಶನವೆಂದೂ ದ. ಕ. ಜಿಲ್ಲೆ ಸಾಂಸ್ಕೃತಿಕ ವೈಭವಕ್ಕೆ ನಿಧಿಯಂತಿದೆ ಎಂದರು. ಅವರು ಮುಂದುವರಿದು 1967ರಲ್ಲಿ ಸ್ಥಾಪಿತವಾದ ಈ ಸಂಗ್ರಹಾಲಯಕ್ಕೆ ಶ್ರೀ ಕು. ಶಿ. ಹರಿದಾಸ ಭಟ್ಟರು ಬಹಳ ಉಪಕಾರ ಮಾಡಿರುತ್ತಾರೆ. ಡಾ| ಪಿ. ಗುರುರಾಜ ಭಟ್ಟರು ಏಕಾಂಗ ವೀರರಾಗಿ ಕಾರ್ಯ ಮಾಡುತ್ತಿದ್ದಾರೆ. ನಮ್ಮ ಕಲಾಪರಂಪರೆಯ ಕುರಿತು ನಮ್ಮ ವಿದ್ಯಾವಂತರಲ್ಲಿ ಆಸಕ್ತಿ ಹುಟ್ಟಿಸ ಬೇಕೆನ್ನುವುದು ನಮ್ಮ ಗುರಿಯಾಗಿದೆ. ದ ಕ. ಜಿಲ್ಲೆಯಲ್ಲಿ ಯಕ್ಷಗಾನ ಕಲೆ ಜೀವಂತವಾಗಿರುವಾಗಲೇ ಅದನ್ನು ಬೆಳೆಸಿಕೊಳ್ಳಬೇಕು, ಉಳಿಸಿಕೊಳ್ಳಬೇಕು ಎಂದರು. ಅವರು ವಿ. ವಿ. ನಿಲಯದ ಜಾನಪದ ವಸ್ತು ಸಂಗ್ರಹಾಲಯದ ಕುರಿತು ಆಶಾವಾದ ವ್ಯಕ್ತಪಡಿಸಿ ಇದು ಪ್ರಪಂಚದಲ್ಲಿಯೇ ದೊಡ್ಡ ವಸ್ತು ಸಂಗ್ರಹಾಲಯವಾಗಬಹುದೆಂದರು.

ಉದಾರವಾಗಿ ಮರದ ವಿಗ್ರಹಗಳನ್ನಿತ್ತ ಕೊಳ್ಕೆಬೈಲ್ ಕುಟುಂಬ ಹಾಗೂ ಗ್ರಾಮಸ್ಥರಿಗೆ ಅವರು ಕೃತಜ್ಞತೆಯನ್ನು ಸಲ್ಲಿಸಿದರು.

ಈ ಕಾರ್ಯಕ್ರಮದ ನಿಯೋಜಕ ಶ್ರೀ ಜಯಪ್ರಕಾಶ ಶೆಟ್ಟಿ ಕೊಳ್ಕೆಬೈಲ್, ಎಂ. ಎಲ್. ಎ. ಅವರು ಸ್ವಾಗತಿಸಿ ಈ ವಿಗ್ರಹಗಳನ್ನು ಮೈಸೂರು ವಿ. ವಿ. ನಿಲಯದ ಜಾನಪದ ವಸ್ತು ಸಂಗ್ರಹಾಲಯದಲ್ಲಿರಿಸುವ ಕುಲಪತಿಗಳ ಯೋಜನೆಯನ್ನು ಸ್ವಾಗತಿಸಿ ದ. ಕ. ಜಿಲ್ಲೆಗೊಂದು ವಿಶ್ವ ವಿದ್ಯಾನಿಲಯದ ಅವಶ್ಯಕತೆಯನ್ನು ತಿಳಿಸಿದರು.

ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಈ ಸಂದರ್ಭದಲ್ಲಿ ಮಾತನಾಡಿ ಕಳೆದ 6–7 ವರುಷಗಳಿಂದ ದುಡಿದು ಬಹಳ 'ಕಾಣಿಕೆ'ಗಳ ಈ ವಿಗ್ರಹಗಳನ್ನೂ ಒದಗಿಸಿದ ಕೀರ್ತಿ ಶ್ರೀ ಎಸ್. ಎಸ್. ಕೊಳ್ಕೆಬೈಲ್ ಅವರಿಗೆ ಸಲ್ಲಬೇಕೆಂದೂ, ಜಾನಪದ ಕಲೆಗೆ ಸಂಬಂಧಿಸಿದ ವಿಷಯಗಳ ಕುರಿತು ಕುಲಪತಿ ಶ್ರೀ ಜವರೇ ಗೌಡರು ನಡೆಸಿರುವ ಅನ್ವೇಷಣೆ ನಿರ್ಮಿಸಿರುವ ತನ್ನ ಸಂಗ್ರಹಾಲಯ ಬಹು ದೊಡ್ಡದೆಂದೂ ಅವರು ಕನ್ನಡದ ಬಗ್ಗೆ ನಡೆಸುತ್ತಿರುವ ಸೇವೆ ಪ್ರಶಂಸನೀಯವೆಂದೂ, ಪ್ರಾಚೀನ ಪರಂಪರೆಯನ್ನು ಉಳಿಸುವಲ್ಲಿ ಅವರು ಮಾಡಿರತಕ್ಕ ಕೆಲಸ ಮುಂದಿನ ಜನಾಂಗ ಸದಾ ನೆನಸುವಂಥಾದ್ದಾಗಿರುತ್ತದೆ ಎಂದರು.

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರು ದೈವಾರಾಧನೆ ಹಿಂದಿನಿಂದ ಜನಜೀವನದಲ್ಲಿ ಹೇಗೆ ಹಾಸು ಹೊಕ್ಕಾಗಿತ್ತು ಎನ್ನುವುದಕ್ಕೆ ಈ ಕ್ಷೇತ್ರದ ವಿಗ್ರಹಗಳು ಸಾಕ್ಷಿಯಾಗಿವೆ. ದ ಕ. ಜಿಲ್ಲೆಗೆ ವಿ. ವಿ. ನಿಲಯ ದೊರಕಿಸಿಕೊಡುವಲ್ಲಿ ಯೋಗ್ಯ ರೀತಿಯಲ್ಲಿ ವಿಮರ್ಶೆ ನಡೆದು ಮನ್ನಣೆ ದೊರಕಲೆಂದು ಆಶಿಸಿದರು.

ಅಧ್ಯಕ್ಷ ಶ್ರೀ ಎಸ್. ಎಸ್. ಕೊಳ್ಕೆಬೈಲರು ಮಾತಾಡಿ ಈ ವಿಗ್ರಹಗಳನ್ನು ಸಾರ್ಥಕವಾಗುವ ಸ್ಥಳಕ್ಕೆ ಒಯ್ಯುವುದರಿಂದ ನಮಗೆ ಸಂತೋಷವಾಗಿರುವುದೆಂದು ನುಡಿದು ಕೊಳ್ಕೆಬೈಲ್ ಕುಟುಂಬ ಹಾಗೂ ಗ್ರಾಮಸ್ಥರ ಲಿಖಿತ ಒಪ್ಪಿಗೆ ಪತ್ರವನ್ನು ಕುಲಪತಿಗಳಿಗೆ ಅರ್ಪಿಸಿದರು.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112
When at Bangalore
Stay at
HOTEL NATARAJA
Restaurant, Boarding & Lodging,
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಸುಂದರರಾಮ ಶೆಟ್ಟರ ವಿದೇಶ ಪ್ರಯಾಣ

ವಿಜಯಾ ಬ್ಯಾಂಕಿನ ಚೆಯರ್‌ಮೇನ್ ಶ್ರೀ ಮೂಲ್ಕಿ ಸುಂದರ್‌ರಾಮ ಶೆಟ್ಟಿಯವರು ತಾ. 17 ರಂದು ತಮ್ಮ ವಿದೇಶ ಸಂಚಾರಕ್ಕೆ ಹೊರಟರು.

ಸುಮಾರು 35 ದಿನಗಳ ತಮ್ಮ ಈ ವಿದೇಶ ಸಂಚಾರದ ಅವಧಿಯಲ್ಲಿ ಶ್ರೀ ಶೆಟ್ಟರು ಅಮೇರಿಕ, ಕೆನಡಾ, ಇಂಗ್ಲಂಡ್, ಫ್ರಾನ್ಸ್, ಸ್ವಿಟ್ಸರ್‌ಲೇಂಡ್, ಲೆಬನಾನ್ ಮೊದಲಾದ ದೇಶಗಳನ್ನು ಸಂದರ್ಶಿಸಲಿರುವರು.

ಕಳೆದ ವರುಷ ವಿಜಯಾ ಬ್ಯಾಂಕ್ ಆರಂಭಿಸಿದ ವಿದೇಶ ವಿನಿಮಯ ಶಾಖೆಗೆ ಸಂಬಂಧಿಸಿದ ವ್ಯವಹಾರಗಳ ಕುರಿತು ವಿದೇಶಗಳಲ್ಲಿ ಅಧ್ಯಯನ ನಡೆಸುವುದೇ ಈ ಸಂಚಾರದ ಮುಖ್ಯ ಉದ್ದೇಶವಾಗಿದೆ.

ಪ್ರಕೃತ ಮಂಗಳೂರು, ಬೆಂಗಳೂರು, ಮದ್ರಾಸು, ಬೊಂಬಾಯಿ, ದೆಹಲಿ, ಕೊಚ್ಚಿನ್, ಮತ್ತು ಹೈದರಾಬಾದ್ ನಗರಗಳಲ್ಲಿ ಬ್ಯಾಂಕಿನ ಈ ವ್ಯವಹಾರವನ್ನು ನಡೆಸಲಾಗುತ್ತಿದೆ.

ಸುಬ್ರಹ್ಮಣ್ಯದಲ್ಲಿ ಹೊಸ ಛತ್ರದ ಉದ್ಘಾಟನೆ

ರಾಜ್ಯದ ಕಂದಾಯ ಸಚಿವ ಶ್ರೀ ಹುಚ್ಚಮಾಸ್ತಿ ಗೌಡರು ಶ್ರೀ ಬಿ. ನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಶ್ರೀ ಕ್ಷೇತ್ರ ಸುಬ್ರಹ್ಮಣ್ಯದಲ್ಲಿ ಮೂರು ಲಕ್ಷ ರೂ. ವೆಚ್ಚದಲ್ಲಿ ಹೊಸತಾಗಿ ಕಟ್ಟಿಸಿದ "ಕುಮಾರ ಕೃಪಾ" ಛತ್ರವನ್ನು ತಾ. 15 ರಂದು ಉದ್ಘಾಟಿಸಿ ತಮ್ಮ ತೃಪ್ತಿ ಸೂಚಿಸಿ ಜೀವನದಲ್ಲಿ ಧರ್ಮದ ಹಿಡಿತವಿರಬೇಕಾದ ಅವಶ್ಯಕತೆಯನ್ನು ವಿವರವಾಗಿ ಪ್ರತಿಪಾದಿಸಿ ರಾಜ್ಯದ ಅರಸರಾಗಿದ್ದ ಶ್ರೀ ಜಯಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿಸಿಕೊಟ್ಟ ಹಳೆಯ ರಥದ ಪುನರ್ನಿರ್ಮಾಣ ಮಾಡುವಲ್ಲಿ ಸಹಾಯ ಮಾಡುವದಾಗಿ ಆಶ್ವಾಸನವಿತ್ತರು.

ದೇವಾಲಯದ ಮೆನೇಜಿಂಗ್ ಟ್ರಸ್ಟಿ ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಸ್ವಾಗತಿಸಿದರು. ಮೆನೇಜರ್ ಶ್ರೀ ಎಸ್. ರಾಮಕೃಷ್ಣ ಭಟ್ಟರು ಸಂದೇಶಗಳನ್ನೋದಿದರು. ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಕೆನ್ಯಾ ಸುಬ್ಬಯ್ಯ ಶೆಟ್ಟರು ಮನವಿ ಒಪ್ಪಿಸಿದರು.

ಕೊಡಗು ಜಿಲ್ಲಾಧಿಕಾರಿ ಶ್ರೀ ಟಿ. ಜೆ. ರಾಮಕೃಷ್ಣ ಅವರು ಮಾತಾಡಿದ ಬಳಿಕ ಶ್ರೀ ಬಿ ನಾರಾಯಣ ನಾಯಕರು ದೇವಸ್ಥಾನಕ್ಕೊಂದು ಭವ್ಯ ಗೋಪುರದ ಅವಶ್ಯಕತೆಯನ್ನು ತಿಳಿಸಿ ಅದರ ನಿರ್ಮಾಣಕ್ಕೆ ಸಚಿವರ ಸಹಕಾರ ಕೋರಿದರು.

ಶ್ರೀ ಜಿ. ಪುಟ್ಟುಸ್ವಾಮಿ ವಂದಿಸಿದರು.

ಮುಲ್ಕಿಯಲ್ಲಿ ಕಂದಾಯ ಸಚಿವರು

ತಾ. 13ರಂದು ಮುಲ್ಕಿಯಲ್ಲಿ ಸುರತ್ಕಲ್ ವಿಧಾನಸಭಾ ಕ್ಷೇತ್ರದ ಸದಸ್ಯ ಶ್ರೀ ಬಿ. ಸುಬ್ಬಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಸ್ಥಳೀಯ ಬ್ಲಾಕ್ ಕಾಂಗ್ರೆಸ್ ಮತ್ತು ಯುವಕ ಕಾಂಗ್ರೆಸ್ ಆಶ್ರಯದಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ರಾಜ್ಯದ ಕಂದಾಯ ಸಚಿವ ಶ್ರೀ ಹುಚ್ಚಮಾಸ್ತಿ ಗೌಡರು ಮಾತನಾಡಿದರು. ಮುಲ್ಕಿ ವಿಧಾನ ಸಭಾ ಕ್ಷೇತ್ರದ ಸದಸ್ಯ ಡಾ| ದಾಮೋದರರು ಸ್ವಾಗತಿಸಿ ಸಚಿವರಿಗೆ ಒಂದು ಮನವಿ ಒಪ್ಪಿಸಿದರು. ಮುಲ್ಕಿ ಫಿರ್ಕಾದ ರೈತ ಸಂಘದವರು ಇನ್ನೊಂದು ಮನವಿಯನ್ನು ಅರ್ಪಿಸಿದರು.

ಸಚಿವರು ಮಾತಾಡಿ ಭೂ ಸುಧಾರಣೆ ಜಾರಿಗೆ ತರಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಉತ್ಸುಕವಾಗಿದ್ದು ಈ ಕುರಿತು ಯಾವುದೇ ಭಿನ್ನಾಭಿಪ್ರಾಯ ಇಲ್ಲವೆಂದೂ ಇದೇ ಜುಲೈ ಅಂತ್ಯದೊಳಗೆ ಸಮಗ್ರ ಭೂ ಮಸೂದೆ ತರುವುದು ನಿಶ್ಚಯವೆಂದೂ ಸ್ಪಷ್ಟ ಪಡಿಸಿದರು. ಮನವಿಯ ಅಂಶಗಳನ್ನವರು ಪ್ರಸ್ತಾಪಿಸಿ ಕೃಷಿ ಕಾರ್ಮಿಕರ ಪ್ರಶ್ನೆಯನ್ನು ಸಹಾನುಭೂತಿಯಿಂದ ಅವರಿಗನುಕೂಲವಾಗುವಂತೆ ಪರಿಶೀಲಿಸಲಾಗುವುದು ಎಂದರು.

ಶ್ರೀ ಸುಬ್ಬಯ್ಯ ಶೆಟ್ಟರು ಭೂ ಸುಧಾರಣೆ ಅನುಷ್ಠಾನಕ್ಕೆ ಕರೆಯಿತ್ತರು. ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ನೂರ್ ಮುಹಮ್ಮದರು ಅಂತ್ಯದಲ್ಲಿ ಧನ್ಯವಾದವಿತ್ತರು.

ಸಚಿವರು ಇಲ್ಲಿಂದ ಮಂಗಳೂರಿಗೆ ತೆರಳಿದರು.

ಕಲಾಕೃತಿ ಕಳ್ಳರ ಮೇಲೆ ತನಿಖಾ ಸಂಸ್ಥೆಯ ಕಣ್ಣು

ಮುತ್ತು ರತ್ನಗಳಿಗಲ್ಲ, ಭಾರತದ ಪುರಾತನ ಕಲಾಕೃತಿಗಳಿಗೆ ಅಮೇರಿಕಾ ಜನತೆ ಮನಸೋತಿದ್ದಾರೆ. ಅಪಾರ ಹಣ ತೆತ್ತು ಈ ಕಲಾಕೃತಿಗಳನ್ನು ಕೊಳ್ಳಲು ಅವರು ಇಂದು ಸಿದ್ಧ. ಭಾರತೀಯ ಸಂಜಾತರಾದ ಅಮೇರಿಕಾ ನಾಗರೀಕ ನಾಸ್ಲಿ ಹೀರಾ ಮಾಣೆಕ್ ವಂಚಾಶ ೧೯೬೮ರಲ್ಲಿ ಪ್ರಥಮ ಬಾರಿಗೆ ಭಾರತೀಯ ಕಲಾಕೃತಿಯೊಂದನ್ನು ಅಮೇರಿಕಾಕ್ಕೆ ಕೊಂಡೊಯ್ದ. ಅದರಲ್ಲಿ ಅಡಗಿದ್ದ ಭವ್ಯ ಕಲಾಕೌಶಲ್ಯ ಅಮೇರಿಕನ್ನರನ್ನು ಆಕರ್ಷಿಸಿತು. ಭಾರತೀಯ ಪುರಾತನ ಕಲಾಕೃತಿಗಳ ಮೇಲಿನ ಮೋಹ ಏರಿತು. ಇದರಿಂದಾಗಿ ನಮ್ಮ ನಾಡಿನಲ್ಲಿ ಕೆಲವು ಸಮಸ್ಯೆಗಳೂ ತಲೆದೋರಿದವು.

ಭಾರತದ ಕಲಾಕೃತಿಗಳನ್ನು ಹಣದ ದುರಾಸೆಯಿಂದ ಕೆಲವು ನೀತಿಭ್ರಷ್ಟರು ವಿದೇಶಗಳಿಗೆ ಕಳ್ಳ ಸಾಗಣೆ ಮಾಡುವುದನ್ನು ಪ್ರಾರಂಭಿಸಿದರು. ಈ ಬಗ್ಗೆ ದೇಶ ವಿದೇಶಗಳಲ್ಲಿ ಇರುವ ಕಾನೂನಿನ ವಿರುದ್ಧ ಅವರು ವ್ಯಾಪಾರ ನಡೆಸಲು ತೊಡಗಿದ್ದಾರೆ.

ಪುರಾತನ ಕಲಾಕೃತಿಗಳು ಭಾರತದ ಭವ್ಯ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಹಿರಿಮೆಯ ಸಂಕೇತ. ದೇಶದ ಪೂರ್ವ ಕಲಾ ವೈಭವವನ್ನು ಎತ್ತಿ ಹಿಡಿಯುವ ಈ ಕಲಾಕೃತಿಗಳು ಅಮೂಲ್ಯವಾದವಾಗಿದ್ದು ಅದರ ಕಳ್ಳ ಸಾಗಣೆ ದೇಶಕ್ಕೆ ನಷ್ಟ ತರುವಂತಹದ್ದು. ಇದರಿಂದಾಗಿ ಕಲಾಕೃತಿಗಳ ಕಳ್ಳ ಸಾಗಣೆಯನ್ನು ತಡೆಯಲು ಕೇಂದ್ರ ತನಿಖಾ ಶಾಖೆ ತೀವ್ರ ಪ್ರಯತ್ನ ನಡೆಸಿತು. ಕಲಾಕೃತಿಗಳ ಕಳ್ಳ ಸಾಗಣೆಯಲ್ಲಿ ತೊಡಗಿದ್ದ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನು ಪತ್ತೆ ಹಚ್ಚುವ ಕಾರ್ಯದಲ್ಲೂ ತನ್ನ ಕಾರ್ಯ ಚಟುವಟಿಕೆಯನ್ನು ಆರಂಭಿಸಿತು. ೧೯೭೦ರಲ್ಲಿ ಪ್ರಥಮ ಬಾರಿಗೆ ತನಿಖಾ ಶಾಖೆ ಅಮೇರಿಕಾದಲ್ಲಿದ್ದ ಭಾರತದ "ಶಿವಪಾರ್ವತಿ"ಯರ ಪ್ರತಿಮೆಯನ್ನು ಕಂಡು ಹಿಡಿಯಿತು. ಐದೂವರೆ ಅಡಿ ಎತ್ತರದ ಈ ಪ್ರತಿಮೆ ಮೆಸರ್ಸ್ ಎವರೆಟ್ ಡಿ. ರಾಸಿಗಾದ ನ್ಯೂಯಾರ್ಕ್‌ನ ಮಳಿಗೆಯಲ್ಲಿ ಪ್ರದರ್ಶಿಸಲಾಗಿದ್ದು ಅದರ ಬೆಲೆ ೫೦,೦೦೦ ಡಾಲರ್‌ಗಳೆಂದು ಪ್ರಕಟಿಸಲಾಗಿತ್ತು. "ಶಿವಪಾರ್ವತಿ'ಯರ ಆ ಪ್ರತಿಮೆಯನ್ನು ನವದೆಹಲಿಯ ದೊಡ್ಡ ವಾಣಿಜ್ಯ ಸಂಸ್ಥೆಯೊದ ಮೆಸರ್ಸ್ ನಾರಂಗ್ಸ್ ಅವರು ಅಮೇರಿಕಾದ ಎವರೆಟ್ ಡಿ. ರಾಸಿಗಾ ಸಂಸ್ಥೆಗೆ ೧೫,೦೦೦ ಡಾಲರ್‌ಗಳಿಗೆ ಮಾರಿದ್ದರು. ತನಿಖೆಯ ನಂತರ "ಶಿವಪಾರ್ವತಿ"ಯರ ಪ್ರತಿಮೆಯ ಕಳ್ಳಸಾಗಣೆಯಲ್ಲಿ ತೊಡಗಿದ ಸಂಸ್ಥೆ ಮತ್ತು ವ್ಯಕ್ತಿಗಳ ಮೇಲೆ ಕಾನೂನು ಕ್ರಮ ನಡೆದಿದೆ. ಅಮೇರಿಕಾದಲ್ಲಿ ಕಂಡು ಹಿಡಿಯಲಾದ "ಶಿವಪಾರ್ವತಿ"ಯರ ಆ ಪ್ರತಿಮೆ ಮಧ್ಯಭಾರತಕ್ಕೆ ಸೇರಿದ್ದು, ೧೦ನೆಯ ಶತಮಾನದ್ದೆಂದು ಹೇಳಲಾಗಿದೆ.

ಹಿಮಾಚಲ ಪ್ರದೇಶದ ಚಂಬಾಕ್ಕೆ ಸೇರಿದ 'ವಿಷ್ಣು'ವಿನ ಪ್ರತಿಮೆಯೊಂದನ್ನು ಕಳೆದ ವರ್ಷ ಕಂಡುಹಿಡಿಯಲಾಯಿತು. ಮುಂಬೈ, ಕಲ್ಕತ್ತಾ ಮತ್ತು ದೆಹಲಿಯ ಪೋಲೀಸ್ ಇಲಾಖೆಗಳ ಸಹಕಾರದೊಂದಿಗೆ 'ವಿಷ್ಣು' ದೇವರ ವಿಗ್ರಹವನ್ನು ಮುಂಬೈನಲ್ಲಿ ಪತ್ತೆಹಚ್ಚಲಾಯಿತು.

ರಾಜಾಸ್ಥಾನದ ಭಾರತಪುರದ ಡೋಲ್‌ಪುರ ದೇವಾಲಯಕ್ಕೆ ಸೇರಿದ ಶ್ರೀರಾಮ ದೇವರ ವಿಗ್ರಹವೊಂದು ಕಳ್ಳಸಾಗಣೆಯ ಕಾರಣಕ್ಕಾಗಿಯೇ ನಾಪತ್ತೆಯಾಗಿತ್ತು. ಕಲಾಕೃತಿ ಚೋರರನ್ನು ಕೆಲವೇ ದಿನಗಳಲ್ಲಿಯೇ ಪತ್ತೆ ಮಾಡಲಾಯಿತು. ಎರಡೂವರೆ ಅಡಿ ಎತ್ತರದ ಹಾಗೂ ಎಂಟು ಲೋಹಗಳಿಂದ ಕೂಡಿದ ಈ ಕಲಾಕೃತಿ ಗಳ ಕಳುವಾದಾಗ ವಿವಿಧ ಕಲಾಕೃತಿ ವ್ಯಾಪಾರಿಗಳ ಮೇಲೆ ಕೇಂದ್ರ ತನಿಖಾ ಶಾಖೆಯವರು ಕಣ್ಣಿಟ್ಟರು. ಪ್ರತಿಮೆಯ ವ್ಯಾಪಾರದ ಸುಳಿವು ದೊರೆತ ತಕ್ಷಣದಲ್ಲಿಯೇ ಅದನ್ನು ವಶಪಡಿಸಿಕೊಳ್ಳಲಾಯಿತು.

ಇತ್ತೀಚೆಗೆ ಖಜುರಾಹೋದ ದೇವಾಲಯದಲ್ಲೂ "ಅಪ್ಸರಾ" ಭವ್ಯ ಕಲಾಕೃತಿಯೊಂದು ಕಳುವಾಯಿತು. ಈ ಸಂದರ್ಭದಲ್ಲಿಯೂ ಕೇಂದ್ರ—ತನಿಖಾ ಇಲಾಖೆಯ ನೆರವು ಪಡೆದು ಶೀಘ್ರದಲ್ಲಿ ಕಳ್ಳರನ್ನು ಹಿಡಿಯಲಾಯಿತು. "ಅಪ್ಸರಾ" ವಿದೇಶೀಯರ ಕೈ ಸೇರುವ ಮುನ್ನವೇ ಪತ್ತೆಯಾಯಿತು. "ಅಪ್ಸರಾ" ವಿಗ್ರಹವನ್ನು ವಿದೇಶಕ್ಕೆ ಕಳುಹಿಸುವ ಸಲುವಾಗಿ ಖಜುರಾಹೋ ಬಳಿಯ ನದಿಯ ತೀರದಲ್ಲಿ ನೀರೊಳಗೆ ಹೂತಿಟ್ಟಿದ್ದರು. ಅದನ್ನು ಕಂಡು ಹಿಡಿದು ವಿಗ್ರಹವನ್ನು ವಶಪಡಿಸಿಕೊಳ್ಳಲಾಯಿತು.

ಕೇಂದ್ರ ತನಿಖಾ ಶಾಖೆಯ ವಾರ್ತಾ ವಿಭಾಗ ಕಲಾ ಚೋರರ ಬಗ್ಗೆ ಸುದ್ದಿಯನ್ನು ಸಂಗ್ರಹಿಸುತ್ತಿದೆ. ಇದರ ಫಲವಾಗಿ ಪುರಾತನ ಕಲಾಕೃತಿಗಳ ಕಳ್ಳ ಸಾಗಣೆ ಇದೀಗ ಕಡಿಮೆಯಾಗುತ್ತಿದೆ. ●

ಎಲ್ಲ ಶುಭವಾಗುತ್ತೆ

(ನಾಲ್ಕನೇ ಪುಟದಿಂದ)

'ಅವರಿಗಲ್ಲೇನೂ ಕೆಲಸವಿಲ್ಲ. ಅವರನ್ನೇನು ಮಾಡಬೇಕೆಂಬುದು ವಿಶ್ವಸಂಸ್ಥೆಗೇ ಸೇರಿದ ವಿಷಯ....'

'ಈಗ ಸರಿಹೋಯ್ತು. ೧೯೪೮ರ ಸಮರ ವಿರಾಮ ರೇಖೆಗೆ ನಾವು ಬಾಧ್ಯರಲ್ಲ....'

'ಹ್ಞೂಂ....'

'ಅಂದರೆ ನಾವು ಆಜಾದ ಕಾಶ್ಮೀರವನ್ನು ಪಾಕ್ ಕಪಿಮುಷ್ಟಿಯಿಂದ ಬಿಡಿಸಲು ಸ್ವತಂತ್ರರು....'

'ಹ್ಞೂಂ....ಇದೆಲ್ಲಾ ಭುಟ್ಟೋ-ಗಾಂಧಿ ಭೆಟ್ಟಿಯ ವೇಳೆ ನಿರ್ಣಯವಾಗಬಹುದು.'

'ನೋಡಬೇಕು ಏನಾಗುತ್ತೋಂತ....'

'ಅಯ್ಯಮ್ಮ, ನೋಡು, ನೋಡು ತ್ತಿರು....ಎಲ್ಲಾ ಶುಭವಾಗುತ್ತೆ....'

'ಹ್ಞೂಂ....'

—ಗೋರಾ.

●●

ಸ್ವೀಕಾರ

ವ್ಯಕ್ತಿ–ಅಭಿವ್ಯಕ್ತಿ— ಪಂಡಿತ ಕೆ. ನರಸಿಂಹ ಶಾಸ್ತ್ರಿ, ಅರ್ಪಣಾ ಗ್ರಂಥ, ಸಂಪಾದಕರು– ಶ್ರೀ ಎಸ್. ವಿ. ಪರಮೇಶ್ವರ ಭಟ್ಟ, ಪ್ರಕಾಶಕರು– ಮಂಗಳ ಗಂಗೋತ್ರಿ ಪ್ರಕಾಶನ, ಸ್ನಾತಕೋತ್ತರ ಕೇಂದ್ರ, ಮಂಗಳೂರು. ಬೆಲೆ ಸಾದಾ ರೂ. 15; ಕೆಲಿಕೊ ರೂ. 20.

ಪಯಸ್ವಿನಿ— ಕಾಸರಗೋಡು ಕನ್ನಡಿಗರ ಸಮ್ಮೇಳನದ ಸ್ಮರಣ ಸಂಚಿಕೆ 1972, ಪ್ರಧಾನ ಸಂಪಾದಕ: ವೈ. ಮಹಾಲಿಂಗ ಭಟ್, ಬೆಲೆ ರೂ. 5.

ಕಾಣಿಕೆ— ಬಡೆಕ್ಕಿಲ ವೆಂಕಟರಮಣ ಭಟ್ಟರಿಗೆ ಅರ್ಪಣ ಗ್ರಂಥ. ಪ್ರಕಾಶಕರು: ಶಾಲಾಭಿವೃದ್ಧಿ ಕಮಿಟಿ, ಕೆದಿಲ ಹಿ. ಪ್ರಾ. ಶಾಲೆ, ಕೆದಿಲ; ಬೆಲೆ ರೂ 5.

ಸಂಗ್ರಹಿಸಲೇಬೇಕಾದ ಉತ್ತಮ ಪುಸ್ತಕಗಳು

ಇಂದಿನ ವಿಜ್ಞಾನ ಮತ್ತು ಮಾನವ	(ಯು. ಎಲ್. ಆಚಾರ್ಯ)	ರೂ.	1 = 50
ನಡುಹಗಲಿನ ಕತ್ತಲೆ	(ಕು. ಶಿ. ಹರಿದಾಸ ಭಟ್ಟ)	,,	2 = 50
ಶಿಕ್ಷಣದ ಧ್ಯೇಯಗಳು	(ಕೆ. ಬಿ. ರಾಮಕೃಷ್ಣರಾವ್ & ಯು. ಎಲ್. ಆಚಾರ್ಯ)	,,	2 = 25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಕು. ಶಿ. ಹರಿದಾಸ ಭಟ್ಟ)	,,	2 = 50
ಹಿರೋಶಿಮಾದಿಂದ ಜಿನೇವ	(ಯು. ರಾಘವೇಂದ್ರ ಆಚಾರ್ಯ)	,,	1 = 50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	,,	1 = 75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	,,	1 = 50
ಕಥಾ ಕೌಮುದಿ	(,,)	,,	1 = 50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್ಟನ್	(ಯು. ಎಲ್. ಆಚಾರ್ಯ)	,,	1 = 25
ಏಶಿಯಾದ ಸಂಪತ್ತು	(ಕು. ಶಿ. ಹರಿದಾಸ ಭಟ್ಟ)	,,	2 = 00
ಭಾವಾರ್ಚನೆ	(ನಚಿಕೇತ)	,,	1 = 25
ಅಮೆರಿಕದ ಆರು ಕಥೆಗಳು	(ಕು. ಶಿ. ಹರಿದಾಸ ಭಟ್ಟ)	,,	1 = 75
ಋಣಯಾತ್ರೆ	(ನಚಿಕೇತ)	,,	1 = 50
ಚಿತ್ರಾಂಗದೆ	(ಕೆ. ಕೆ. ಶೆಟ್ಟಿ)	,,	0 = 60
ರವೀಂದ್ರರ ಕಿರುಗತೆಗಳು	(ಹನುಮಂತರಾವ್ ಮಾಂಜ್ರೇಕರ್)	,,	0 = 90
ಹಸುರು ಹಂಸ	(ನಚಿಕೇತ)	,,	2 = 00
ಬಿರಿದ ಮುಗುಳು	(ಎಸ್. ಗೋಪಿಚಂದ ರಾವ್)	,,	1 = 50
ಭಾರತದ ವೀರಾಂಗನೆಯರು	(ಕೆ. ಎಸ್. ಭಟ್ ಶಿರಾಡಿಪಾಲ್)	,,	1 = 50
ಮೇರಿ ಕೊಟ್ಟ ಚೆಂಡೋಲೆ	(ಎಸ್. ಸದಾಶಿವ ರಾವ್)	,,	1 = 80

ಪ್ರತಿಗಳು ಸಿಗುವ ಸ್ಥಳಗಳು :

1. ನವಯುಗ ಪ್ರೆಸ್, ಉಡುಪಿ.

2. ನವಭಾರತ ಪುಸ್ತಕ ಭಂಡಾರ, ಉಡುಪಿ.

ನೂತನ ಭೌತಶಾಸ್ತ್ರ ಮತ್ತು ಗ್ರಂಥಾಲಯ ಕಟ್ಟಡದ ಉದ್ಘಾಟನೆ.

ಉಡುಪಿಯ ಎಂ. ಜಿ. ಎಂ. ಕಾಲೇಜಿನವರು ಸುಮಾರು ಆರು ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿಸಿದ ನೂತನ ಭೌತಶಾಸ್ತ್ರ ವಿಭಾಗ ಮತ್ತು ಗ್ರಂಥಾಲಯಗಳ ಕಟ್ಟಡವನ್ನು ರಾಜ್ಯದ ಶಿಕ್ಷಣ ಸಚಿವ ಶ್ರೀ ಬದರೀ ನಾರಾಯಣರು ಮೈಸೂರು ವಿ. ವಿ. ನಿಲಯದ ಕುಲಪತಿ ಪ್ರೊ। ದೇ. ಜವರೇ ಗೌಡರ ಅಧ್ಯಕ್ಷತೆಯಲ್ಲಿ ತಾ. 17ರಂದು ಉದ್ಘಾಟಿಸಿದರು.

ಕಾಲೇಜು ಟ್ರಸ್ಟಿನ ಅಧ್ಯಕ್ಷ ಶ್ರೀ ಟಿ. ಮೋಹನ ರಾಯರು ಸ್ವಾಗತಿಸಿ ಕಾಲೇಜು ಸ್ಥಾಪನೆಯಾದ 24 ವರುಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ವಿವರಿಸಿ ಅತಿಥಿಗಳ ಪರಿಚಯ ಮಾಡಿಸಿದರು.

ಸಚಿವರು ತನ್ನ ಉದ್ಘಾಟನಾ ಭಾಷಣದಲ್ಲಿ ಪ್ರತಿಯೊಂದು ವೃತ್ತಿಯನ್ನು ಗೌರವ ಭಾವದಿಂದ ನೋಡಬೇಕೆಂದು ಪ್ರತಿಪಾದಿಸಿ ಕಲಿತ ತರುಣರು ಸ್ವತಂತ್ರ ವೃತ್ತಿ ಕೈಗೊಳ್ಳಲು ಶಕ್ತರಾಗಿ ಉಳ್ಳವರಾಗಬೇಕೆಂದೂ ಅಂಥ ವಿದ್ಯೆಗಳನ್ನು ನಾವು ಅವರಿಗೆ ನೀಡಬೇಕೆಂದೂ ಹೇಳಿದರು. ಡಾ। ಪೈಯವರ ಟೆಕ್ ಯೂನಿವರ್ಸಿಟಿಯನ್ನು ಸ್ಥಾಪಿಸುವ ಯೋಜನೆಯ ಕುರಿತು ಅವರು ಪ್ರಸ್ತಾಪಿಸಿ ದೀರ್ಘ ಕಾಲದ ಈ ಪ್ರಶ್ನೆಯನ್ನು ಹೊಸ ದೃಷ್ಟಿಕೋನದಿಂದ ಬಗೆಹರಿಸಬೇಕೆಂದು ನುಡಿದು ಎಂ. ಜಿ. ಎಂ. ಕಾಲೇಜು ಉತ್ತಮ ಸಲಕರಣೆ, ಶ್ರೇಷ್ಠ ಮಟ್ಟದ ಅಧ್ಯಾಪಕರಿಂದ ಉನ್ನತ ಮಟ್ಟದ ವಿದ್ಯೆಯನ್ನು ನೀಡುತ್ತಿರುವುದಕ್ಕೆ ತನ್ನ ಮೆಚ್ಚಿಗೆ ವ್ಯಕ್ತಪಡಿಸಿದರು.

ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಕಾಲೇಜಿನ ಮಹತ್ವದ ಪ್ರಗತಿಯನ್ನು ವಿವರಿಸುವ 'ಪ್ರಗತಿಯ ಪಕ್ಷಿ ನೋಟ'ವನ್ನು ಓದಿ ಹೇಳಿದರು. ಡಾ। ವಿ. ಎಸ್. ಆಚಾರ್ಯರು ಸ್ವಸ್ತಿವಾಚನಗೈದರು. ಡಾ। ಕೆ. ಶಿವರಾಮ ಕಾರಂತರು ಈ ಸಂದರ್ಭದಲ್ಲಿ ಮಾತಾಡಿ ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಆಕರ್ಷಕವಾಗಿಸಲು ಎಷ್ಟರ ವರೆಗೆ ಅಧ್ಯಾಪಕನಿಗೆ ಸಾಧ್ಯವಾಗುವದಿಲ್ಲವೋ ಅಲ್ಲಿಯ ವರೆಗೆ ವಿದ್ಯೆಯಿಂದ ಪ್ರಯೋಜನ ದೊರಕಲಾರದು ಎಂದರು.

ದಿ। ಆರೂರು ಲಕ್ಷ್ಮೀನಾರಾಯಣ ರಾಯರ ಸ್ಮಾರಕಾರ್ಥವಾಗಿ ಅವರ ಮಕ್ಕಳು ಕಾಲೇಜಿಗೆ ಒಪ್ಪಿಸಿದ ಶ್ರೀ ಎ. ಎಲ್. ಎನ್. ರಾವ್. ಸ್ಟೇಡಿಯಮನ್ನು ಶ್ರೀ ಆರೂರು ಕೃಷ್ಣಮೂರ್ತಿ ರಾವ್ ಅವರಿಂದ ಶ್ರೀ ಟಿ. ರಮೇಶ ಪೈಗಳು ಸ್ವೀಕರಿಸಿದರು.

ಡಾ। ಟಿ. ಮೋಹನ ಪೈಗಳು ವಿ. ವಿ. ನಿಲಯದ ಕುರಿತು ಪ್ರಸ್ತಾಪಿಸಿ ಕೋಟಿಗಟ್ಟಲೆ ರೂಪಾಯಿ ಖರ್ಚುಮಾಡಿ ನಿರ್ಮಿಸಲಾಗುವ ವಿಶ್ವವಿದ್ಯಾನಿಲಯವನ್ನು ಅರ್ಹ ಸ್ಥಾನದಲ್ಲಿ ನಿರ್ಮಿಸಬೇಕೆಂದು ಹೇಳಿ ಸಂಸ್ಥೆಯ ಬೆಳವಣಿಗೆಗೆ ಸಹಕಾರ ನೀಡಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಪ್ರೊ। ದೇ. ಜ. ಗೌ. ಅವರು ಮಾತಾಡಿ ಎಂ. ಜಿ. ಎಂ. ಕಾಲೇಜು ವಿ. ವಿ. ನಿಲಯದ ಕೀರ್ತಿ ಸ್ತಂಭ ಎನ್ನಿಸಲು ಅರ್ಹವಾಗಿದೆ. ಕಾಲೇಜಿನಲ್ಲಿ ತೆರೆಯಲಾದ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಮ್ಯೂಸಿಯಮ್ ಮತ್ತು ಯಕ್ಷಗಾನ ತರಬೇತಿ ಕೇಂದ್ರದ ಕುರಿತು ತನ್ನ ಮೆಚ್ಚಿಕೆ ವ್ಯಕ್ತಪಡಿಸಿದರು. ವಿ. ವಿ. ನಿಲಯದ ಕುರಿತು ಅವರು ಪ್ರಸ್ತಾಪಿಸಿ ಗುಲ್ಬರ್ಗ ಮತ್ತು ಮಂಗಳೂರಲ್ಲಿ ಸ್ನಾತಕೋತ್ತರ ಕೇಂದ್ರ ಮಾಡಿ, ಜತೆಯಲ್ಲಿ ಮತ್ತೊಂದು ವಿ. ವಿ. ನಿಲಯ ಸ್ಥಾಪಿಸಬೇಕೆನ್ನುವ ಯೋಜನೆಯಿದ್ದು 3–4 ತಿಂಗಳಲ್ಲಿ ಈ ಕುರಿತು ಸಮಿತಿ ವರದಿ ಒಪ್ಪಿಸಲಿದೆ ಎಂದರು.

ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಧನ್ಯವಾದ ಸಮರ್ಪಿಸಿದರು.

ನಾಗ, ಬ್ರಹ್ಮ ಪ್ರತಿಷ್ಠೆ ಬ್ರಹ್ಮ ಕಲಶಾಭಿಷೇಕ

ವಾಸುಂಜೂರಿನ ಗಂಪ ಮನೆಯ ಬ್ರಹ್ಮಸ್ಥಾನದಲ್ಲಿ ಕೆಮ್ಮೂರು ಕೆಳಮನೆ ಸದಾಶಿವ ಜಿ. ಶೆಟ್ಟರ ವತಿಯಿಂದ ನಾಗ ಪ್ರತಿಷ್ಠೆ, ಬ್ರಹ್ಮ ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕವು ತಾ. 17ರಂದು ವಿಧಿವತ್ತಾಗಿ ವಿಜೃಂಭಣೆಯಿಂದ ನೆರವೇರಿತು.

ವೈಜ್ಞಾನಿಕ ವಿಸ್ಮಯಗಳು

ಮರುಭೂಮಿಯಲ್ಲಿ ರಸ್ತೆ ನಿರ್ಮಾಣ ಸಂಭವ

ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆ, ಹೊಸದಿಲ್ಲಿ ಇವರ ಒಂದು ಹೊಸ ಪ್ರಯೋಗದ ಆಧಾರದ ಮೇಲೆ ಮರುಭೂಮಿಯಲ್ಲಿ ಅಡಗಿರುವ ಚಿಕ್ಕಚಿಕ್ಕ ಕಲ್ಲುಗಳ ರಾಶಿಯನ್ನು ಕಂಡುಹಿಡಿಯಬಹುದು. ವಿಮಾನಗಳ ಮೂಲಕ ತೆಗೆದುಕೊಂಡ ಛಾಯಾಚಿತ್ರಗಳ ಆಧಾರದ ಮೇಲೆ, ಈ ಕಲ್ಲು ರಾಶಿಗಳ ಜಾಗವನ್ನು ಕಂಡುಹಿಡಿಯಬಹುದು. ಈ ಕಲ್ಲು ರಾಶಿಗಳಿರುವ ಸುತ್ತ ನಾಲ್ಕು ಕಡೆ ದೊಡ್ಡ ಮರಳು ರಾಶಿ ಕಾಣಬಹುದು. ಈ ಕಲ್ಲು ರಾಶಿ ಅದೇ ಜಾಗದಲ್ಲಿ ರಸ್ತೆಯ ನಿರ್ಮಾಣಕ್ಕೆ ಬಹಳ ಉಪಯೋಗಿಯಾಗುವುದು.

ಪಶ್ಚಿಮ ರಾಜಾಸ್ಥಾನದಲ್ಲಿ ಸುಮಾರು ಹದಿಮೂರು ಸಾವಿರ ಚದರ ಕಿಲೋಮೀಟರ್ ಜಾಗದಲ್ಲಿ ಸರ್ವೇ ಮಾಡಿದ ನಂತರ, ಈ ಪ್ರಯೋಗ ಸ್ಪಷ್ಟವಾಗಿದೆ.

ಈ ವಿಧಿಯ ಪ್ರಕಾರ ಈಗಾಗಲೇ ಹದಿಮೂರು ಭಂಡಾರಗಳನ್ನು ಕಂಡುಹಿಡಿಯಲಾಗಿದೆ.

ನೀರಿನ ಶುದ್ಧೀಕರಣ

ಕೇಂದ್ರ ಜಲ ಹಾಗೂ ಸ್ವಾಸ್ಥ್ಯ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆ, ನಾಗಪುರ—ಇವರು ಟ್ಯಾಂಜಾನೀಯದಲ್ಲಿ ನೀರಿನಲ್ಲಿರುವ ಫ್ಲೋರೈಡ್ ಅಂಶವನ್ನು ಕಮ್ಮಿ ಮಾಡಲು ಸರ್ವೆಯನ್ನು ನಡೆಸಿದರು. ಉತ್ತರ ಟ್ಯಾಂಜಾನಿಯದ 'ಆರುಷ' ಹೆಸರಿನ ಕ್ಷೇತ್ರದ ನೀರಿನಲ್ಲಿ ಫ್ಲೋರಾಯಿಡ್ ಪ್ರತಿ ಲೀಟರ್ ನೀರಿನಲ್ಲಿ ೩ರಿಂದ ೧೫ ಮಿ. ಗ್ರಾಂ ತನಕ ಇರುತ್ತದೆ. ಹಲ್ಲುಗಳನ್ನು ಕೆಡದಂತೆ ನೋಡಿಕೊಳ್ಳಲು ಫ್ಲೋರೈಡ್ ಅಂಶ ಒಳ್ಳೆಯದು. ಆದರೆ ಇದೇ ಫ್ಲೋರೈಡ್ ಒಂದು ಲೀಟರಿನಲ್ಲಿ ಒಂದು ಮಿಗ್ರಾಂಗಿಂತ ಹೆಚ್ಚಾದರೆ ಇದು ಹಾನಿಕರ. ಈ ಸಂಸ್ಥೆಯು ನಮ್ಮ ದೇಶದಲ್ಲಿ ೫೦೦೦ ದಿಂದ ೮೦೦೦ ಗ್ಯಾಲನ್ ಗಾತ್ರದ ಈಗಾಗಲೇ ಅನೇಕ ಭಟ್ಟಿಗಳನ್ನು ಸ್ಥಾಪಿಸಿದೆ. ಇದರಲ್ಲಿ ಡೀ-ಫ್ಲೋರೋನ್ ೨ ಎಂಬ ಹೆಸರಿನ ವಿಧಿಯನ್ನು ಪ್ರಯೋಗಿಸಲಾಗುತ್ತದೆ. ಟ್ಯಾಂಜಾನಿಯಾದಲ್ಲಿ ಇದೇ ಉದ್ದೇಶದಿಂದ ಡೀ-ಫ್ಲೋರಾಯಿನೇಶನ್ ಭಟ್ಟಿಗಳನ್ನು ನಿರ್ಮಿಸಲು ಭಾರತ ಸರಕಾರ ಮುಂದೆ ಕೋರಿಕೆಯನ್ನು ಮಂಡಿಸಲಾಗಿದೆ. ಈ ಭಟ್ಟಿಗಳು ಈ ಸಂಸ್ಥೆಯ ಮೂಲಕ ನಿರ್ಮಿಸಲ್ಪಡುವುವು.

ಚರ್ಮದ ಸುಕ್ಕಿನಿಂದ ರಕ್ಷಣೆ

ಶರೀರದಲ್ಲಿನ ಸುಕ್ಕು ಹಾಗೂ ಕಣ್ಣುಗಳ ಸುತ್ತಮುತ್ತಲಿನ ಸುಕ್ಕನ್ನು (ಕ್ರೋ-ಫೀಟ್) ತಡೆಗಟ್ಟಬಹುದಾದ ಒಂದು ಸಂಶೋಧನೆಯನ್ನು ನಡೆಸಲಾಗಿದೆ. ಸುಧ್ಯದಲ್ಲೇ ಇದರ ನಿವಾರಣೆಯಾಗಬಹುದು. ಪಶ್ಚಿಮ ಜರ್ಮನಿಯ ಪ್ರೊ| ಗುಸ್ತಾವ್ ಹಾಫ್ ಪ್ರಸಿದ್ಧ ಚರ್ಮತಜ್ಞರು ಹಾಗೂ ಇವರ ಇನ್ನಿಬ್ಬರು ಸಹಯೋಗಿಗಳು ಇದರ ಸಂಬಂಧವಾಗಿ ವಿಶೇಷ ಸಂಶೋಧನೆಯನ್ನು ನಡೆಸಿದ್ದಾರೆ.

ಇವರ ಸಂಶೋಧನೆಯ ಫಲಿತಾಂಶದ ಪ್ರಕಾರ ಚರ್ಮದ ಮೇಲೆ ಸುಕ್ಕುಗಳು ವಯಸ್ಸಾದಂತೆ ಸತತವಾಗಿ ನೀರಿನ ಅಂಶವು ಕಡಿಮೆಯಾಗುವುದರಿಂದ ಉಂಟಾಗುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ವೈಜ್ಞಾನಿಕರ ಅಭಿಪ್ರಾಯದ ಪ್ರಕಾರ ಚರ್ಮದ ಶಕ್ತಿಗೆ ಆಧಾರವಾದ ಒಂದು ವಸ್ತುವನ್ನು ಕಂಡುಹಿಡಿದಿದ್ದಾರೆ. ಈ ಪದಾರ್ಥವು ಚರ್ಮದ ಮುಖ್ಯ ಅವಯವವಾದ ಕೆರೋಟಿನ್‌ನಿಂದ ಪ್ರಾಪ್ತವಾಗುತ್ತದೆ.

ಬಹು ಪುರಾತನವಾದ ಶಿಲೆ

ಆಕ್ಸ್‌ಫರ್ಡ್ ಭೂಗರ್ಭ ಪ್ರಯೋಗಶಾಲೆಯ ವೈಜ್ಞಾನಿಕರು ನಡೆಸಿರುವ ಸಂಶೋಧನೆಯ ಪ್ರಕಾರ ಪಶ್ಚಿಮ ಗ್ರೀನ್‌ಲೆಂಡ್‌ನಲ್ಲಿ ಪ್ರಾಪ್ತವಾದ ಶಿಲೆಯು ವಿಶ್ವದ ಅತಿ ಪುರಾತನವಾದದ್ದೆಂದು ತಿಳಿದುಬಂದಿದೆ.

ಈ ಶಿಲೆಯು ಮುನ್ನೂರ ಅರವತ್ತೆಂಟು ಕೋಟಿ ವರ್ಷಗಳ ಪುರಾತನವಾದದ್ದೆಂದು ನಂಬಲಾಗಿದೆ. ಈ ಭೂಮಿಯ ವಯಸ್ಸು ನಾನ್ನೂರ ಐವತ್ತು ಕೋಟಿ ವರ್ಷಗಳೆಂದು ನಂಬಲಾಗಿದೆ.

ಅಪೊಲೋ ೧೫ರ ಯಾತ್ರಿಗಳು ಚಂದ್ರನಿಂದ ತಂದ ಶಿಲೆಯು ಮುನ್ನೂರ ಅರವತ್ತು ಕೋಟಿ ವರ್ಷಗಳಿಂದ ಹಿಡಿದು ಮುನ್ನೂರ ಎಪ್ಪತ್ತು ಕೋಟಿ ವರ್ಷಗಳಷ್ಟು ಹಳೆಯದಿರಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಗ್ರೀನ್‌ಲೆಂಡ್‌ನ ಶಿಲೆಯ ಪದರಗಳು ಚಂದ್ರನ ಶಿಲೆಯ ಪದರಗಳಿಂದ ಭಿನ್ನವಾಗಿವೆ. ಇದರ ಅಧ್ಯಯನದಿಂದ ನಮ್ಮ ಪೃಥ್ವಿಯ ಉತ್ಪತ್ತಿಯ ಬಗ್ಗೆ ಖಚಿತವಾಗಿ ತಿಳಿಯಲು ಸಹಕಾರಿಯಾಗುವುದು.

● ●

ಮಲ್ಪೆಯಲ್ಲಿ ಶ್ರೀ ಟಿ. ಎ. ಪೈಯವರಿಗೆ ಸತ್ಕಾರ

ಮಲ್ಪೆಯ ಫಿಶರೀಸ್ ಹೈಸ್ಕೂಲಿನಲ್ಲಿ ಐಳೂರು ಮೊಗವೀರ ಮಹಾ ಸಭೆ, ಮಲ್ಪೆ ಟೌನ್ ಪಂಚಾಯ್ತ್ ಹಾಗೂ ಮಲ್ಪೆಯ ಮಹಾಜನರ ಆಶ್ರಯದಲ್ಲಿ ರಾಜ್ಯಸಭೆಗೆ ಆಯ್ಕೆಗೊಂಡ ಪದ್ಮಭೂಷಣ ಶ್ರೀ ಟಿ ಎ ಪೈ ಅವರನ್ನೂ ಇದೇ ಸಂದರ್ಭದಲ್ಲಿ ಫಿಶರೀಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಎಸ್. ಅಮೀನರನ್ನೂ ಅವರ ಪತಿಯನ್ನೂ ಉಡುಪಿ ಮತದಾರ ಕ್ಷೇತ್ರದಿಂದ ರಾಜ್ಯ ವಿಧಾನ ಸಭೆಗೆ ಆಯ್ಕೆಯಾದ ಶ್ರೀಮತಿ ಮನೋರಮಾ ಮಧ್ವರಾಜರನ್ನೂ ಸತ್ಕರಿಸುವ ಮಹಾಸಭೆಯೊಂದು ಕಸ್ಟೋಡಿಯನ್ ಶ್ರೀ ಕೆ ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ತಾಲೂಕು ಬೋರ್ಡ್ ಹಾಗೂ ಮಲ್ಪೆ ಟೌನ್ ಪಂಚಾಯ್ತ್‌ಗಳ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಸ್ವಾಗತಿಸಿದರು ವಿವಿಧ ಸಂಘ ಸಂಸ್ಥೆಗಳಿಂದ ಮತ್ತು ಸಾರ್ವಜನಿಕರಿಂದ ಅತಿಥಿಗಳಿಗೆ ಹೂ ಹಾರ ಅರ್ಪಿಸಿದ ಬಳಿಕ ಸಭಿಕರ ಪರವಾಗಿ ಡಾ| ವಿ. ಕೆ. ಬಲ್ಲಾಳ್ ಮತ್ತು ಶ್ರೀ ಕೃಷ್ಣಪ್ಪ ಮಲ್ಪೆ ಅವರು ಮಾತಾಡಿದರು

ಶ್ರೀ ಟಿ. ಎ ಪೈಯವರು ಮಾತಾಡುತ್ತಾ, ನಮಗಿಂತ ಹೀನ ಸ್ಥಿತಿಯಲ್ಲಿರುವವರ ಸ್ಥಿತಿ ಸುಧಾರಿಸುವಲ್ಲಿ ಕಳಕಳಿ ವಹಿಸಿ, ಬಹುಜನ ಹಿತಕ್ಕಾಗಿ ನಮ್ಮ ಹಕ್ಕು-ಸೌಕರ್ಯಗಳಲ್ಲಿ ಕಿಂಚಿತ್ತನ್ನು ತ್ಯಾಗಮಾಡಬೇಕಾಗಿ ಬಂದರೂ ಸಿದ್ಧರಾಗಿ ಇಡಿಯ ಸಮಾಜವನ್ನು ಪುನರುದ್ಧರಿಸುವ ಕುರಿತು ನಮ್ಮ ಚಿಂತನ ಪದ್ಧತಿಯ ಆಮೂಲ ಮಾರ್ಪಾಟಾಗದೆ ಹೋದರೆ ನಾವು ಏನನ್ನೂ ಸಾಧಿಸಲಾರೆವೆಂದೂ ಈ ಹೊಸ ನಿಟ್ಟಿನಿಂದ ನಾಡು ಕಟ್ಟುವ ಹೊಸ ಕ್ರಾಂತಿ ಈ ಜಿಲ್ಲೆಯಲ್ಲೇ ಆರಂಭವಾಗಿ ದೇಶಕ್ಕೇ ಒಂದು ಆದರ್ಶ ತೋರಬೇಕೆಂದೂ ಹೇಳಿದರು ನಿರುದ್ಯೋಗಿಗಳ ಕುರಿತು ಅವರು ಪ್ರಸ್ತಾಪಿಸಿ ಇಂತಹ ಜನರ ಸಮಸ್ಯೆ ಬಗೆಹರಿಸುವಲ್ಲಿ ಆಸಕ್ತಿ ವಹಿಸಿದವರ ಅಧಿಕಾರ ಶಾಶ್ವತವಲ್ಲವೆಂದೂ ಅದಕ್ಕೆ ಬೆಲೆಯೂ ಇಲ್ಲವೆಂದು ಹೇಳಿದರು.

ಶ್ರೀ ಕೆ ಕೆ ಪೈಗಳು ಮಾತಾಡುತ್ತಾ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿರುವ ಈ ಕಾಲಕ್ಕೆ ಯಾವ ಕೆಲಸಕ್ಕೂ ತಯಾರಿರುವವರಿಗೆ ಹೆಚ್ಚು ಉತ್ತೇಜನವೀಯಬೇಕೆಂದರು

ಶ್ರೀಮತಿ ಸಾರಾ ಎಸ್. ಅಮೀನರು ಮಾತಾಡಿ ತನ್ನ ಪ್ರವಾಸೋದ್ದೇಶವನ್ನು ತಿಳಿಸಿದರು. ಶ್ರೀಮತಿ ಮಧ್ವರಾಜರು ಮಾತಾಡುತ್ತಾ ಶ್ರೀ ಟಿ. ಎ. ಪೈಗಳು ರಾಜಕೀಯದಲ್ಲಿ ತನ್ನ ಮಾರ್ಗದರ್ಶಕರೆಂದೂ ಹೇಳಿ ಅವರಿಂದ ಇನ್ನೂ ಹೆಚ್ಚಿನ ದೇಶಸೇವೆಯಾಗಲೆಂದರು.

ಅಂತ್ಯದಲ್ಲಿ ಶ್ರೀ ಎಂ. ಭಗವಾನ್‌ದಾಸರು ಧನ್ಯವಾದ ಅರ್ಪಿಸಿದರು.

ಉಡುಪಿಯಲ್ಲಿ ಪ್ರಾಥಮಿಕ ಶಿಕ್ಷಣ ಸಮ್ಮೇಳನ

ತಾ 17ರಂದು ಉಡುಪಿಯಲ್ಲಿ ಗೀತಾಂಜಲಿ ಚಿತ್ರ ಮಂದಿರದಲ್ಲಿ ಜರಗಿದ ದ. ಕ. ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಮ್ಮೇಳನವನ್ನು ರಾಜ್ಯದ ಶಿಕ್ಷಣ ಸಚಿವ ಶ್ರೀ ಬದರೀನಾರಾಯಣರ ಅಧ್ಯಕ್ಷತೆಯಲ್ಲಿ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು ಉದ್ಘಾಟಿಸಿದರು.

ಆರಂಭದಲ್ಲಿ ಶ್ರೀ ಎಂ. ಮಧ್ವರಾಜರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಭೋಜರಾಜ ಶೆಟ್ಟರು ಸಂದೇಶಗಳನ್ನೋದಿದರು. ಪೇಜಾವರ ಶ್ರೀಗಳವರು ಸಮ್ಮೇಳನವನ್ನು ಉದ್ಘಾಟಿಸಿ ಪ್ರಾಚೀನ ಕಾಲದಲ್ಲಿದ್ದಂತೆ 'ಶಿಕ್ಷಕರಿಗೆ ಉನ್ನತ ಗೌರವ ದೊರೆಯಬೇಕು' ಶ್ರೀ ಬದರೀನಾರಾಯಣರ ಅಧಿಕಾರಾವಧಿಯಲ್ಲಿ ಶಿಕ್ಷಣ ಕ್ಷೇತ್ರದ ಶುದ್ಧೀಕರಣವಾಗಲಿ ಎಂದು ಹಾರೈಸಿ ಶಿಕ್ಷಕರನ್ನು ಕಡೆಗಣಿಸುತ್ತಿರುವ ಇಂದಿನ ಪರಿಸ್ಥಿತಿ ಹೋಗಬೇಕೆಂದು ಕೋರಿದರು.

ಸಮಾರಂಭದ ಅಂಗವಾಗಿ ಪ್ರಕಟಿಸಿದ 'ಶಿಕ್ಷಕವಾಣಿ' ಎಂಬ ಸ್ಮರಣ ಸಂಚಿಕೆಯನ್ನು ಶ್ರೀ ಎ. ಜೆ. ಅಲ್ಸೆಯವರು ಬಿಡುಗಡೆ ಮಾಡಿದರು. ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟರು ಮತ್ತು ಶ್ರೀ ಶ್ರೀಧರ ಬಲ್ಲಾಳರು ಶಿಕ್ಷಣದ ಮಟ್ಟದ ಕುರಿತು ಮಾತಾಡಿದರು.

ಶ್ರೀ ಬದರಿನಾರಾಯಣರು ಮಾತಾಡುತ್ತಾ, ಶಿಕ್ಷಣಖಾತೆಯ ನಿರ್ವಹಣೆಯ ಹೊಣೆ ಗುರುತರವಾದ್ದದೆಂದೂ, ಶೈಕ್ಷಣಿಕ ಕ್ಷೇತ್ರದ ಸಮಸ್ಯೆಗಳನ್ನು ಸರಕಾರ ಮತ್ತು ಜನತೆ ಕೂಡಿಯೇ ಬಗೆಹರಿಸಬೇಕಾಗಿದೆ ಎಂದೂ ಹೇಳಿದರು. ಉಚಿತ ಶಿಕ್ಷಣ-ಶುಲ್ಕ ಸಹಿತ ಶಿಕ್ಷಣದ ಕುರಿತು ಅವರು ಮಾತಾಡಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅಪೇಕ್ಷೆಗೆ ಗಮನವನ್ನೀಯಬೇಕಾಗುತ್ತದೆ. ಖಾಸಗಿ ಕ್ಷೇತ್ರದಲ್ಲಿ ಒಳ್ಳೆಯ ರೀತಿಯಲ್ಲಿ ಸಂಸ್ಥೆಗಳನ್ನು ನಡೆಸುವವರಿಗೆ ನಾವು ಕೆಡುಕನ್ನು ಮಾಡುವುದಿಲ್ಲವೆಂದು ಭರವಸೆಯಿತ್ತರು ದ. ಕ. ಜಿಲ್ಲೆಯ ಶಾಲೆಗಳೂ ಅಧ್ಯಾಪಕರೂ ಉತ್ತಮ ಮಟ್ಟದ ಸೇವೆ ಸಲ್ಲಿಸುತ್ತಿರುವುದಕ್ಕೆ ಅವರು ತನ್ನ ಮೆಚ್ಚಿಗೆ ವ್ಯಕ್ತಪಡಿಸಿ ಸಮ್ಮೇಳನದಲ್ಲಿ ಮಂಡಿಸಲಾದ ಗೊತ್ತುವಳಿಗಳ ಕುರಿತು ಪ್ರಸ್ತಾಪಿಸಿದರು.

ಶ್ರೀ ಅಂಬಾತನಯ ಅವರು ವಂದಿಸಿದರು.

ಗೃಹ ಪ್ರವೇಶ ಸಮಾರಂಭ

ಕೊಡೆಂಗ್ರಪಾಡಿ-ಕೆಮ್ಮಣ್ಣುರು ಕೆಳಮನೆ ಸದಾಶಿವ ಜೆ ಶೆಟ್ಟರು ಕೆಮ್ಮಣ್ಣುರಲ್ಲಿ ನೂತನವಾಗಿ ಕಟ್ಟಿಸಿದ ಮನೆಯ ಗೃಹ ಪ್ರವೇಶ ಸಮಾರಂಭವು ತಾ 24ರಂದು ವಿಧಿವತ್ತಾಗಿ ನೆರವೇರಿತು ಮರುದಿನ ಅತಿಥಿ ಸತ್ಕಾರ ಕೂಟವೂ ರಾತ್ರಿ ಮನೆತನದ ಧರ್ಮ ದೇವತೆಗಳ ಕೋಲ ಸೇವೆಯೂ ಯಥಾಸಾಂಗವಾಗಿ ಜರಗಿತು.

ಚಂದಾದಾರರಲ್ಲಿ

ಬರುವ ವಾರ ನವಯುಗದ ಚಿನ್ನದ ಹಬ್ಬದ ಸಂಚಿಕೆಯು ಪ್ರಕಟವಾಗಲಿರುವುದರಿಂದ ವಾರ ಪತ್ರಿಕೆಯು ಹೊರಡುವುದಿಲ್ಲ ಚಂದಾದಾರರು ಗಮನಿಸಬೇಕಾಗಿ ವಿನಂತಿ.

ಮೆನೇಜರ್, **ನವಯುಗ**

ನವಯುಗ ಸುವರ್ಣಮಹೋತ್ಸವ ಸಮಿತಿ, ಉಡುಪಿ.

ಮಾನನೀಯರೇ, ತಾ. 20—5—1972

ಇದೇ ಮೇ ತಿಂಗಳ 28ನೆಯ ಆದಿತ್ಯವಾರ ಸಾಯಂ. 5 ಘಂಟೆಗೆ ಉಡುಪಿಯ ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನ ರವೀಂದ್ರ ಮಂಟಪದಲ್ಲಿ **'ನವಯುಗ'** ಸಾಪ್ತಾಹಿಕದ

ಚಿನ್ನದ ಹಬ್ಬವನ್ನು

ಮೈಸೂರು ವಿ. ವಿ. ನಿಲಯದ ಕುಲಪತಿ

ಪ್ರೊ. ದೇ. ಜವರೇಗೌಡ

ಅವರ ಅಧ್ಯಕ್ಷತೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿದ್ದೇವೆ.

ನವಯುಗದ ಸಂಸ್ಥಾಪಕ

ದಿ| ಶ್ರೀ ಎ. ಬಿ. ಶೆಟ್ಟಿ

ಇವರ ಭಾವಚಿತ್ರವನ್ನು

ಪದ್ಮಶ್ರೀ ಡಾ| ಟಿ. ಎಂ. ಎ. ಪೈ

ಅವರು ಅನಾವರಣ ಮಾಡುವರು.

ಸುವರ್ಣ ಸಂಪುಟವನ್ನು

ಪ್ರೊ. ಎಸ್. ವಿ ಪರಮೇಶ್ವರ ಭಟ್ಟರು

ಬಿಡುಗಡೆಗೊಳಿಸುವರು.

ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟ, ಶ್ರೀ ಕಯ್ಯಾರ ಕಿಞ್ಞಣ್ಣ ರೈ

ಇವರು ಸ್ವಸ್ತಿವಾಚನ ಮಾಡುವರು

ತಾವು ದಯವಿಟ್ಟು ಚಿತ್ತಯಿಸಬೇಕಾಗಿ ಸವಿನಯ ಪ್ರಾರ್ಥನೆ.

ಕೆ. ಹೊನ್ನಯ್ಯ ಶೆಟ್ಟಿ — ಸಂಚಾಲಕ-ಸಂಪಾದಕ

ಕು. ಶಿ. ಹರಿದಾಸ ಭಟ್ಟ, **ಎ. ಜೆ. ಅಲ್ಸೆ** — ಕಾರ್ಯದರ್ಶಿಗಳು

ಎಂ. ಮಧ್ವರಾಜ — ಅಧ್ಯಕ್ಷ

READ & ADVERTISE IN NAVAYUGA Weekly

(ಎರಡನೇ ಪುಟದಿಂದ)

'ಇರುಳು ಕಳೆದು ಹಗಲಾದುದೇ ತಿಳಿಯಲಿಲ್ಲ.'

'ತುಂಬ ಸಂತೋಷ. ನಿದ್ರೆಯೂ ಒಂದು ಸಮಾಧಿ ಸ್ಥಿತಿ ಇದ್ದಂತೆ. ಹೊಸ ಸ್ಥಳ ನಿನ್ನ ಮೈಗೆ ಒಗ್ಗಿ ಹೋದ ಯಾವ ಸೌಕರ್ಯವೂ ಇಲ್ಲ. ಆದ್ದರಿಂದ ಎಲ್ಲಿ ತೊಳಲಾಡಿದೆಯೋ ಎಂಬ ಆತಂಕ ನನ್ನನ್ನು ಕಾಡುತ್ತಿತ್ತು. ದೇಹ ಮನಸ್ಸುಗಳ ಬೆಳವಣಿಗೆಗೆ ನಿದ್ರೆ ತೀರ ಅಗತ್ಯ. ಅದಕ್ಕೂ ಇಲ್ಲಿ ಅಭಾವ ಬರಬಾರದಲ್ಲ.'

'ನೀವು ಅನುಮಾನ ಪಡುವುದೇ ಬೇಡ. ದೇಹದ ದಣಿವು ನಿದ್ದೆಯೊಡನೆ ಮಾಯವಾಯಿತು. ಅದರಿಂದ ಮನಸ್ಸೂ ಹಗುರಾಯಿತು.

'ನಿನ್ನ ಆಶ್ರಮಕ್ಕೆ ಬೇಕಾಗಿರುವುದು ಅದೇ ಮಗಳೇ. ಒಳಗೆ ಸ್ನಾನದ ಮನೆಯಲ್ಲಿ ನೀರು ಕಾದಿದೆ. ಮೊದಲು ಮಜ್ಜನ ಮುಗಿಸಿ ಬಾ. ಅನಂತರ ದೇವರ ದರ್ಶನ ಮಾಡಿ ಬನ್ನಿ. ಆ ಮೇಲೆ ಹಾಲು ಕುಡಿದು ಮಾತಾಡಬೇಕೆಂದಿರುವ ವಿಷಯವನ್ನು ಚರ್ಚಿಸಿ ಒಂದು ಇತ್ಯರ್ಥಕ್ಕೆ ಬರುವ. ನೀವು ಬರುವುದರಲ್ಲಿ ನಾನು ನನ್ನ ಪಾರಾಯಣದ ಕೆಲಸ ಮುಗಿಸಿ ಬರುತ್ತೇನೆ'

ಹಿಂದವರೇ ಮುಂದಿದ್ದ ಗ್ರಂಥದ ಮೇಲೆ ಕಣ್ಣೋಡಿಸಿದರು.

ಬೇರೆ ದಾರಿ ಕಾಣದೆ ಅವಳು ಸ್ನಾನದ ಮನೆಗೆ ನಡೆದಳು.

೨೨

'ಕುಮಾರರು ಬಂದಂತಿದೆ.'

ಹೀಗೆ ನುಡಿಯುತ್ತ ಅಪರಿಚಿತ ವ್ಯಕ್ತಿಯೊಂದು ಜಗಲಿಯನ್ನೇರಿತು ಸಹಜವಾಗಿಯೇ ನರಸಿಂಹ ನಾಯಕರ ದೃಷ್ಟಿ ಆ ವ್ಯಕ್ತಿಯ ಕಡೆಗೆ ತಿರುಗಿತು.

ಮೆಟ್ಟಲೇರಿ ಬಂದ ವ್ಯಕ್ತಿಯ ವಯಸ್ಸು ಮೂವತ್ತರ ಒಳ-ಹೊರಗೆ. ನೋಡುವುದಕ್ಕೆ ಸ್ಫುರದ್ರೂಪಿ. ಅಂಗಸಾಧನೆಯಿಂದ ಹದವರಿತು ಬೆಳೆದ—ಕಡೆದು ನಿಲ್ಲಿಸಿದಂತೆ ಕಾಣುವ ಅಂಗಾಂಗಗಳು. ಮೈ ಬಣ್ಣ 'ಕದಳೀ ಗರ್ಭ'ವನ್ನು ನಾಚಿಸುವಂತಿತ್ತು. ನಿಲುವು—ನಡಿಗೆ ಎರಡರಲ್ಲೂ ಸ್ಥಿರತೆ ಎದ್ದು ಕಾಣುತ್ತಿತ್ತು. ಸೊಂಟಕ್ಕೆ ಸುತ್ತಿದ್ದ ಕಚ್ಚೆ ಪಂಚೆ, ಹೆಗಲನ್ನಲಂಕರಿಸಿದ್ದ ಉತ್ತರೀಯ, ಇವುಗಳನ್ನುಳಿದು ಬೇರಾವ ವೇಷಭೂಷಣಗಳಿಲ್ಲ. ಉಟ್ಟ ಧೋತರ, ಹೊದ್ದುಕೊಂಡ ಸೆಲ್ಲೆ ಎರಡೂ ಶುಭ್ರವಾಗಿದ್ದುವು. ಅದು ಲಲಿತ ಸುಂದರ ವೇಷ.

ಅಪರಿಚಿತನನ್ನು ನಾಯಕರು ಆತ್ಮೀಯತೆಯಿಂದಲೇ ಬರಮಾಡಿಕೊಂಡರು.

'ನಾನು ನಿನ್ನ ಬರವನ್ನೇ ಕಾಯುತ್ತಿದ್ದೆ ಪದ್ಮಪ್ಪ. ನೀನು ಬಾರದಿರುತ್ತಿದ್ದರೆ, ನಾನೇ ಕುಮಾರ ಬಂದ ಸುದ್ದಿ ಮುಟ್ಟಿಸಿ ನಿನ್ನನ್ನಿಲ್ಲಿಗೆ ಕರೆಸಿಕೊಳ್ಳುತ್ತಿದ್ದೆ.'

'ಅಷ್ಟು ಆತುರದಿಂದ ಕರೆಸಿಕೊಳ್ಳಲು ಆಗಿರುವುದಾದರೂ ಏನು?

'ನನಗೆ ವಯಸ್ಸಾಯಿತು. ಅದರೊಡನೆ ಕಾಲವೂ ಬದಲಾಯಿತು. ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ನಡೆಯಲು ಹೊಸ ಪೀಳಿಗೆಯ ಮನೋಧರ್ಮವನ್ನು ತಿಳಿದುಕೊಳ್ಳುವುದು ಅಗತ್ಯವಾಗುತ್ತೆ. ಈ ದಿಶೆಯಲ್ಲಿ ನೀನು ನನ್ನ ಕೈವಾರಿ. ನಿನ್ನೊಡನೆಯೇ ಚರ್ಚಿಸುವ ವಿಷಯವಿತ್ತು. ಅದಲ್ಲದೆ ನೀನು ಧರ್ಮಸೂಕ್ಷ್ಮವನ್ನು ಬಲ್ಲವನು.'

'ನಿಮಗೆ ನನ್ನ ಸಲಹೆಯೇ?'

'ತಿಳುವಳಿಕೆ ಯಾರ ಸೊತ್ತೂ ಅಲ್ಲ. ಅದು ಯಾರ ತೊತ್ತೂ ಅಲ್ಲ. ಆಗಿರುವುದೂ ಸಾಧ್ಯವಿಲ್ಲ. ಹೀಗೆ ನುಡಿದು ನೀನೇಕೆ ನಿನ್ನನ್ನು ಹೀಗಳೆಯುವುದು?'

'ಇಲ್ಲದಿರುವ ಯೋಗ್ಯತೆಯನ್ನು ಇದೆ ಎಂದು ಹೇಳುವ ಒಣಜಂಬ ಪತನ ಹೇತು.'

'ತುಂಬಿದ ಕೊಡ ತುಳುಕುವುದಿಲ್ಲವಂತೆ. ನಿನ್ನ ಸೌಜನ್ಯ ನಿನ್ನಿಂದ ಈ ಮಾತು ಆಡಿಸಿತು ಪದ್ಮಪ್ಪ '

'ವಿಷಯವಾದರೂ ಏನು? ಅದನ್ನಾದರೂ ತಿಳಿದುಕೊಳ್ಳಬೇಡವೇ?'

ಅವರೊಳಗೆ ಈ ಮಾತು ನಡೆಯುತ್ತಿದ್ದಾಗ ಒಳಗೆ ಬಳೆಗಳ ಸದ್ದಾಯಿತು.

ಕಂಕಣದ ಕಿಂಕಿಣಿಯನ್ನು ಕೇಳಿದ ಪದ್ಮಪ್ಪ ಅಚ್ಚರಿ ತಾಳಿದ. ಹೆಂಗಸರ ಸುಳಿವನ್ನು ಆತ ಈ ಎಲೆಮನೆಯಲ್ಲಿ ಎಂದೂ ಕಂಡಿರಲಿಲ್ಲ. ಅಂತಹ ಮನೆಯಲ್ಲಿ ಬಳೆಗಳ ಝಣತ್ಕಾರ ಕೇಳಿ ಬಂದಾಗ ನಿಜವೆಂದು ನಂಬುವುದೂ ಕಷ್ಟವಿತ್ತು. ಬರಿಯ ಭ್ರಮೆಯಾಗಿರಬಾರದೇಕೆ? ಪದ್ಮಪ್ಪನಲ್ಲಾದ ಬದಲಾವಣೆಯನ್ನು ಗುರುತಿಸಿದ ನರಸಿಂಹ ನಾಯಕರು ಧ್ವನಿಯನ್ನು ತಗ್ಗಿಸಿದರು.

'ಕುಮಾರರ ಸುಳಿವೇ ಇಲ್ಲ. ಅವರನ್ನು ಕಂಡು ಮಾತನಾಡುವುದಿತ್ತು. ಒಳಗಿಲ್ಲವೇ?'

ಮಾತಿನ ಹೊಲಬನ್ನೇ ಬದಲಾಯಿಸಲು ಪದ್ಮಪ್ಪ ಪ್ರಯತ್ನಿಸುವಂತೆ ಕಂಡಿತು.

ಪದ್ಮಪ್ಪ ಕೈ ಬಿಡಲು ಯತ್ನಿಸಿದ ಎಳೆಯನ್ನೇ ನರಸಿಂಹ ನಾಯಕರು ಗಟ್ಟಿಯಾಗಿ ಹಿಡಿದುಕೊಂಡರು.

ಈಗ ಯಾವುದರ ಪ್ರಸ್ತಾಪವೂ ಬೇಡ. ಅತಿಥಿಗಳಿರುವಂತಿದೆ. ಮೊದಲು ಅವರ ಯೋಗ ಕ್ಷೇಮದ ವಿಚಾರ ನಡೆಯಲಿ ಸ್ವಾಮಿ'

ಪದ್ಮಪ್ಪ ಮಾತು ತೇಲಿಸಲು ಪ್ರಯತ್ನಿಸಿದ.

'ಈ ಆಶ್ರಮಕ್ಕೆ ಅತಿಥಿಗಳೆಲ್ಲಿಂದ ಬರಬೇಕು? ಸಂಸಾರಕ್ಕೆ ಸೇರಿದವರು ಸನ್ಯಾಸ ಸ್ವೀಕರಿಸಿದರೂ ಸರಿದು ನಿಲ್ಲುತ್ತಾರೆಯೇ?'

ಪದ್ಮಪ್ಪ ಯೋಚನೆಗೊಳಗಾದ.

ಅವನಿಗೆ ತಿಳಿದಂತೆ ನರಸಿಂಹ ನಾಯಕರಿಗೆ ಒಡಹುಟ್ಟಿದವರಿರಲಿಲ್ಲ. ಅರಿಕೇಸರಿಯನ್ನುಳಿದು ಬೇರೆ ಸಂತಾನ ಇರಲಿಲ್ಲ. ಹೇಳಿಕೊಳ್ಳುವ ಕುಟುಂಬಸ್ಥರಿರಲಿಲ್ಲ. ಬಂದವರು ಬಂಧುಗಳಲ್ಲದರೆ ಯಾರಿರಬಹುದು?

ಅಂತರ್ಮುಖಿಯಾದ ಅವನನ್ನು ನಾಯಕರೇ ಎಚ್ಚರಿಸಬೇಕಾಯಿತು.

ಈ ಸಂಧಿಯನ್ನು ಕಾಯುತ್ತಿದ್ದ ಲೋಕಾ, ಒಳಮನೆಯಿಂದ ಜಗುಲಿಗೆ ಬಂದು ಪಕ್ಕದ ಕೋಣೆಗೆ ಹಾದು ಹೋದಳು. ಕಾಲ ಸಪ್ಪಳ ಕೇಳಿ, ಅರಿಕೇಸರಿ ಒಳಮನೆಯಿಂದ ಬಂದನೆಂದು ಭ್ರಮಿಸಿ ಪದ್ಮಪ್ಪ ಆ ದಿಕ್ಕಿಗೆ ಮುಖ ತಿರುಗಿಸಿದ.

ಅವನ ದೃಷ್ಟಿಗೆ ಲೋಕಾ ಬಿದ್ದಳು.

ಅವಳೂ ಅವನನ್ನು ನೋಡಿದಳು.

ದೇವ ದುರ್ಲಭವಾದ ರೂಪರಾಶಿಯನ್ನು ಕಂಡು ಪದ್ಮಪ್ಪ ದಿಙ್ಮೂಢನಾದ.

ಆತ ನಾಯಕರತ್ತ ಮುಖ ತಿರುಗಿಸಿದ.

ಈಕೆ ಯಾರು—ಅದನ್ನು ಅರಿತು ಕೊಳ್ಳುವಂತಿತ್ತು. ಮುಖ ಭಂಗಿ.

ನಾಯಕರಿಗೆ ಅದರ ಅರಿವು ಆಗದೆ ಇರಲಿಲ್ಲ. ರಹಸ್ಯವನ್ನು ಬಚ್ಚಿಡುವ ಬಯಕೆ ಅವರಿಗೂ ಇದ್ದಂತೆ ಕಾಣಲಿಲ್ಲ.

'ಅವಳಾರೆಂದಲ್ಲವೇ ನೀನು ಕೇಳ ಬಯಸಿದ್ದು? ಈಕೆ ರಾಷ್ಟ್ರಕೂಟ ರಾಜಪುತ್ರಿ ಲೋಕಾಂಬಿಕೆ. ಕುಮಾರನ ಜೊತೆ ಈ ವನಾಂತರಕ್ಕೆ ಬಂದಿದ್ದಾಳೆ.

'ಅಷ್ಟು ಅಲಿಪ್ತತೆ ಏಕೆ ಪ್ರಭು? ಈ ಮನೆಯ ಸೊಸೆ ಎಂದು ಕರೆಯಬಾರದೆ?'

'ನೀನು ಹುಟ್ಟಿನಿಂದ ಕವಿ. ಭಾವಲೋಕದಲ್ಲಿ ವಿಹರಿಸುವವನು. ಕವಿಗಳಾದವರಿಗೆ ಕಲ್ಪನಾ ಶಕ್ತಿ ಹೆಚ್ಚೆಂದು ಕೇಳಿದ್ದೇನೆ ಬೆರಳು ತೋರಿಸಿದರೆ ಮುಂಗೈ ನುಂಗುವ ಜಾತಿಯವರು. ನುಡಿಯೊಂದರಿಂದ ನೂರು ಅರ್ಥ ಹಿಂಜಿ ಎಳೆಯುವ ಸಾಮರ್ಥ್ಯ ನಿನ್ನದು. ಹೇಳಬೇಕಾದ್ದನ್ನು ಸೂಚ್ಯವಾಗಿ ತಿಳಿಸಿ ಉಳಿಕೆಯುದನ್ನು ನಿನ್ನ ಪೂಹೆಗೆ ಬಿಟ್ಟು ಬಿಟ್ಟೆ.'

'ಕುಮಾರರು ಅವರ ಪ್ರೇಮ ಪ್ರಸಂಗದ ಪ್ರಸ್ತಾಪ ಮಾಡಿದ್ದರು. ಅದು ಸ್ಮರಣೆಗೆ ಬಂತು. ಈ ಲಾವಣ್ಯಮಯಿ ಕುಮಾರರನ್ನು ಆಕರ್ಷಿಸಿದ ಲೋಹಚುಂಬಕ ಎಂದು ತರ್ಕಿಸಿದೆ'

'ನಿನ್ನ ಅನುಮಾನ ಸರಿಯಾದ್ದೇ'

'ಕುಮಾರರು ಪುಣ್ಯ ಮಾಡಿರಬೇಕು. ಅವರ ಭಾಗ್ಯದ ಬಾಗಿಲೇ ತೆರೆಯುವಂತಿದೆ.'

'ಆಪತ್ತಿನ ಪರಂಪರೆಯನ್ನೆ ಆಹ್ವಾನಿಸಿದನೇನೋ'

ನರಸಿಂಹನಾಯಕರಿಂದ ಬಂದ ಸಾಶಂಕೆಯ ಮಾತು.

'ತಾವು ಎದೆಗುಂದುವ ಕಾರಣವೇ ಇಲ್ಲ.'

'ನೀನು ತಿಳಿಯೆ ಪದ್ಮಪ್ಪ ಅರಮನೆಯ ಹುಳುಕನ್ನ. ಬಾಳಿನ ಬಹು ಭಾಗವನ್ನು ಆ ವಿಷ ವರ್ತುಲದಲ್ಲಿ ಕಳೆದವನು ನಾನು—ಆ ಹೊಲಸು ಸಹಿಸಲು ಸಾಧ್ಯವಾಗದೆ ಇಲ್ಲಿಗೆ ಬಂದವನು. ಈ ಮೈಲಿಗೆ ಇಲ್ಲಿದ್ದರೂ ಅಂಟಿಕೊಳ್ಳುತ್ತಿದೆಯಲ್ಲ. ಅದಕ್ಕಾಗಿ ಯೋಚಿಸ ಬೇಕಾಗಿದೆ.'

'ಮೈಲಿಗೆ ಎಲ್ಲಿಂದ ಬಂತು? ಮಲ್ಲಿಗೆ ಬಳ್ಳಿಗೆ ಮಾವೇ ಆಶ್ರಯ.'

'ನನ್ನ ಮಾತಿನ ಧ್ವನಿಯನ್ನು ನೀನು ಗ್ರಹಿಸಲಿಲ್ಲ. ಕುಮಾರನಲ್ಲಿ ಅನುರಕ್ತಳಾಗಿ ಈ ರಾಜಪುತ್ರಿ ಇಲ್ಲಿಗೆ ಬಂದುದರಲ್ಲಿ ಆಶ್ಚರ್ಯವಿಲ್ಲ. ಅದಕ್ಕೆ ನನ್ನ ಆಕ್ಷೇಪವೂ ಇಲ್ಲ. ರಾಜಮನೆತನದಲ್ಲಿ ಬರುವುದರಿಂದ ಈ ಬಾಂಧವ್ಯವನ್ನು ಮೆಚ್ಚುವವರೇ. ಈಕೆಯನ್ನು ಸೊಸೆಯಾಗಿ ತಂದುಕೊಳ್ಳುವುದಕ್ಕೆ ನನ್ನ ಪೂರ್ಣ ಒಪ್ಪಿಗೆ ಇದೆ. ಅವರಿಬ್ಬರೂ ಸುಖವಾಗಿರಬೇಕು. ಹಿರಿಯನಾದ ನಾನು ಬಯಸುವುದಿಷ್ಟೆ! ಆದರೆ—'

'ಅರ್ಥಕ್ಕೇ ನಿಲ್ಲಿಸಿಬಿಟ್ಟಿರಲ್ಲ'

(ಮುಂದುವರಿಯುವುದು)

NAVAYUGA 25-5-1972
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಅಡಿಕೆಯ ಸಮಸ್ಯೆ

ಕೆಲವು ದಶಕಗಳಿಂದ ದಕ್ಷಿಣ ಕನ್ನಡ ಜಿಲ್ಲೆ ಅಡಿಕೆ ಬೆಳೆಗಾರರ ಒಂದು ಪುಟ್ಟ ಅಮೆರಿಕವೇ ಆಗಿತ್ತೆಂದರೆ ತಪ್ಪಾಗಲಾರದು. ಒಂದು ಕಾಲದಲ್ಲಿ ಅಕ್ಕಿಯ ಮುಡಿಗೆ ಮೂರು ರೂಪಾಯಿ ಬೆಲೆಯಿರುವಾಗ ಅಡಿಕೆಗೆ ಭಾರೀ ಕ್ರಯವೆಂದರೆ ಖಂಡಿಗೆ ಐವತ್ತು ರೂಪಾಯಿ ಕ್ರಯವಿತ್ತು. ಆಗ ಈ ಅಡಿಕೆ ಜನ ಜೀವನದಲ್ಲಿ ವಿಪ್ಲವ ತಂದಿರಲಿಲ್ಲ. ಅದು ಕೊಡುವ ಹಣ ಉಪ್ಪು ಮೆಣಸಿನ ಖರ್ಚಿಗೆ ಆಗುತ್ತಿತ್ತು. ಆದರೆ ಕಾಲ ಬೆಳೆದಂತೆ ಅಡಕೆ ಬಂದರಕ್ಕೆ ಬಂದಿತು. ಹಡಗಿನಲ್ಲಿ ಮುಂಬಯಿಗೆ ಹೋಗಿ ಅಲ್ಲಿಂದ ವಿದೇಶಗಳಿಗೂ ತೆರಳಲಾರಂಭಿಸಿದಾಗ ಕ್ರಮಶಃ ಅಡಿಕೆಯ ಕ್ರಯವೇರುತ್ತಾ ಹೋಗಿ ಮೂರು ಸಾವಿರದ ತನಕ ತಲುಪಿತು. ಆ ವೇಳೆಗೆ ಅಕ್ಕಿ, ಬೇಳೆಗಳಿಗೂ ಕ್ರಯ ಕಮ್ಮಿ ಇದ್ದು ಅಡಿಕೆಯ ನಿವ್ವಳ ಲಾಭ ಕೈಯಲ್ಲುಳಿದು. ಒಂದಿಬ್ಬರಿಗೆ ಸಾಲಕ್ಕೆ-ಬಡ್ಡಿಗೆ ಕೊಟ್ಟು ಪ್ರತಿಯೊಬ್ಬರೂ ಅರಮನೆ ಕಟ್ಟಿಕೊಂಡರು.

ಹೊನ್ನಿನ ಬೆಳೆ ಬರುವ ಗದ್ದೆಗಳು ಹೋದುವು, ಅಡಿಕೆಯ ಗಿಡಗಳು ತಲೆಯೆತ್ತಿದ್ದುವು. ಕಾಡು ಮೇಡು ಅಲೆದರೂ ಅಡಕೆಯ ತೋಟ, ಕೆರೆ, ಪಂಪುಸೆಟ್ಟು, ಅದಕ್ಕಾಗಿ ಹೇರಳ ಬ್ಯಾಂಕ್ ಸಾಲ. 75 ಮರದಲ್ಲೇ ಒಂದು ಖಂಡಿ ಅಡಕೆ ಬೆಳೆಯುವ ಫಲ. ಎರಡು ರೂಪಾಯಿ ಕೂಲಿಗೆ ಹೋಗುವ ಸಾಮಾನ್ಯನ ವೀಳೆಯದೆಲೆಯ ಹಿತ್ತಿಲಿನಲ್ಲಿಯೂ ಒಂದೆರಡು ಅಡಕೆ ಗಿಡ.

'ನಾನು ಇಷ್ಟು ಖಂಡಿ ಅಡಕೆ ತೆಗೆದೆ; ಇಷ್ಟಕ್ಕೆ ಮಾರಿದೆ. ನನ್ನ ಗೋಟಿನಲ್ಲಿ ಸಿಪ್ಪೆಯೇ ಇಲ್ಲ. ನನ್ನ ಅಡಕೆ ತೊಂಬತ್ತು ಎಳೂ ವರೆಗೇ ಎರಡು ಕಿಲೋ ಆಗುತ್ತದೆ. ನನ್ನದು ಕಪ್ಪು, ನನ್ನದು ಬಿಳಿ....' ಹೀಗೆ ಯಾವ ಸಭೆ ಸಮಾರಂಭಗಳಿಗೆ ಹೋದರೂ ಅಡಕೆಯದೇ ಸದ್ದು ಗದ್ದಲ ಜಂಭ. ಅಡಿಕೆಯ ದಾಸ್ತಾನಿನ ವಿವರ. ಆದರಿಂದ ಹಣ ಗಳಿಸಿದೆನೆಂಬ ಅಹಂಕಾರ.

ಆಗ ಆ ತೋಟಗಳಿಗೆ ಹೊಸ ಮಣ್ಣು ಹಾಕಿಸುವ ವೈಭವ, ಬಂದರಕ್ಕೆ ಹೋಗಿ ಆಡ್ವಾನ್ಸು ತರುವ ಠೀವಿ, ಒಬ್ಬನಿಗಿಂತ ಒಬ್ಬನು ಮೇಲೆಂಬ ಬಿನ್ನಾಣ, ಕಾರು, ಲಾರಿ, ಬಂಗಲೆ, ಟೆರಿಲಿನ್ ಬಟ್ಟೆ, ಎಲೆಕ್ಟ್ರಿಕ್ ದೀಪಗಳ ಜಹಾಗಿರಿ, ಹಣ ಪೋಲು ಮಾಡುವ ದರ್ಪ ಜನತೆಗಷ್ಟಿಷ್ಟು ಬೆಳೆಯಿತು. ಅದರೊಂದಿಗೇ ಹಿರಿಮೆ ಪ್ರಾಬಲ್ಯ, ಗಡಿ ತಕರಾರು, ಯುದ್ಧ, ಕೋರ್ಟಿಗೆ ಅಲೆತ. ಅಡಿಕೆಗೆ ಹೆಚ್ಚು ಬೆಲೆ ಬರಲು ಅದನ್ನು ಎಷ್ಟು ಬಿಸಿಲಿಗೆ ಒಣಗಿಸಬೇಕು. ಎಷ್ಟು ಬಿಳಿ ಆಗಬೇಕು, ಯಾವ ಗೊಬ್ಬರಗಳಿಗೆ ಹಾಕಬೇಕು ಎಂದೆಲ್ಲ ಸಂಶೋಧನೆ.

ಆಗ ತೋಟಕ್ಕೆ ತೆರಿಗೆಯ ವಿಪರೀತ ಹಾವಳಿಯೂ ಇರಲಿಲ್ಲ. ಅಡಿಕೆ ಬೆಳೆಯುವ ಉತ್ತರ ಕನ್ನಡ, ಶಿವಮೊಗ್ಗ ಮೊದಲಾದ ಜಿಲ್ಲೆಗಳಿಗಿಂತ ಹಣದ ಹೆಚ್ಚಿನ ಝಣ ಝಣ ನಮ್ಮ ಜಿಲ್ಲೆಯಲ್ಲಿತ್ತು. ಆಗ ಸರಕಾರ ಮುಂದೆ ಬಂದು ಅಡಿಕೆ ಬೋರ್ಡು ಸ್ಥಾಪಿಸಿ, ಒಂದು ನಿಖರ ಸಂಖ್ಯೆಯ ಕ್ರಯವನ್ನು ಕೊಡುವುದಾಗಿ ಹೇಳಿತು. ಆಗ ಅಡಿಕೆ ಬೆಳೆಗಾರರ ದೃಷ್ಟಿಯಲ್ಲಿ ಆ ಸಂಖ್ಯೆ ಅಲ್ಪ ಎನಿಸಿತು; ಈ ಮಾತಿಗೆ ಅವರು ಒಪ್ಪಲಿಲ್ಲ. ಸರಕಾರ ಅದನ್ನು ಕೈ ಬಿಟ್ಟಿತು.

1971 ನವಂಬರದ ತನಕ ಅಡಿಕೆಯ ಕ್ರಯದಲ್ಲಿ ಉಬ್ಬರವಿಳಿತೇ ಹೊರತು ಇಳಿತವಿರಲಿಲ್ಲ. ಪಾಕಿಸ್ತಾನ ಯುದ್ಧದ ವೇಳೆಗೆ ಬಾಂಬು ಬೀಳುವ ಭೀತಿಯಲ್ಲಿ ಮುಂಬಯಿಯ ಮಾರುಕಟ್ಟೆ ಕದ ಮುಚ್ಚಿತು. ಹಣ್ಣಡಿಕೆಯಾಗಲೀ ಸುಲಿದ ಅಡಕೆಯಾಗಲೀ ಆ ದಿನದಲ್ಲಿ ಅತ್ಯಂತ ಕಮ್ಮಿ ಬೆಲೆಗೂ ಬೇಡವೆನ್ನುವ ದಿನವಿತ್ತು. ತತ್ತರಗೊಂಡ ಜನತೆ ಯುದ್ಧ ಮುಗಿದ ಬಳಿಕವಾದರೂ ಅಡಿಕೆಗೆ ಏರುವ ಬೆಲೆಯನ್ನು ನಿರೀಕ್ಷಿಸಿತು. ಆದರೆ ಈಗ ಅಡಿಕೆಯ ಬೆಳೆ ನಮಗಷ್ಟೇ ಗುತ್ತಿಗೆಯಾಗಿರಲಿಲ್ಲ. ವಿಶ್ವದ ಅಸಂಖ್ಯ ರಾಷ್ಟ್ರಗಳು ಅಡಿಕೆಯನ್ನು ಬೆಳೆದು, ನಾನಾ ದೇಶಗಳಿಗೆ ಪೂರೈಸ ತೊಡಗಿದುದರಿಂದ ಭಾರತದ ಅಡಿಕೆ ತಲ್ಲಣಗೊಂಡಿತು.

ಇದರೊಂದಿಗೆ ಪ್ರಧಾನಿಯವರು ಸಿಂಗಾಪುರ್ ಹಾಗೂ ಬಂಗ್ಲಾದ ಅಡಿಕೆಯನ್ನು ಸ್ವಾಗತಿಸಿದರು. ಅಡಿಕೆ ಬೆಳೆಗಾರರಿಗೆ ಇದ್ದ ಬಿಟ್ಟ ಆಶೆಯ ತಂತಿಯೂ ಕಡಿಯಿತು. ಸಭೆ, ಚರ್ಚೆಗಳಾದುವು. ಪ್ರಧಾನಿಗೆ ನಿಯೋಗವೂ ಹೋಯಿತು. ಸಹಸ್ರಾರು ಜನರಿಗೆ ಭಾರತದಲ್ಲಿ ಅಡಿಕೆಯೇ ಅನ್ನ ಜನಕವಾಗಿದ್ದರೂ ಸರಕಾರ ಕಣ್ಣು ಮುಚ್ಚಿ ಕುಳಿತಿತು. ಭೂಸುಧಾರಣೆಯಿಂದಾಗಿ ಹಿಂದೆ ತೆರಿಗೆ ಬ್ಯಾಂಕುಗಳ ಸಾಲ, ಪಂಪು ಸೆಟ್ಟುಗಳ ವೆಚ್ಚ, ಕೂಲಿಯ ಸಮಸ್ಯೆ, ಗೊಬ್ಬರದ ಬೆಲೆ, ಭೂ ನಭೋ ನಂತರಾಳ ವ್ಯಾಪಿಯಾದ ಜಿನಸಿಗಳ ಬೆಲೆ? ಅಡಿಕೆ ಬೆಳೆಯುವವ ಈ ಲಕ್ಷಾಂತರ ಸಮಸ್ಯೆಗಳ ಮಧ್ಯೆ ಬಲೆಯಲ್ಲಿ ಸಿಲುಕಿದ ಹುಳವಾದ.

ಅಡಿಕೆ ಇಂದು ಯಾರಿಗೂ ಬೇಡ, ವ್ಯಾಪಾರಿಗಳ ಅಂಗಡಿಗಳೆದುರು ಗೋಣಿ ಚೀಲಗಳಲ್ಲಿ ತುಂಬಿ ಕೇಳುವವರಿಲ್ಲದೆ ರಾಶಿ ರಾಶಿಯಾಗಿ ಅದು ಬಿದ್ದಿದೆ. ಪೇಪರಿನ ಪೇಟೆ ಧಾರಣೆಯ ಕಾಲಮಿನಲ್ಲಿ ದಪ್ಪಕ್ಷರಗಳಲ್ಲಿ ಬರುತ್ತಿದೆ. 'ಅಡಿಕೆ ಮಾರಾಟ ಇಲ್ಲ.' ಅಡಿಕೆಯ ಬೆಲೆ ಖಂಡಿಗೆ 500ಕ್ಕಿಂತ ಹೆಚ್ಚು ಆಗುವುದಿಲ್ಲ ಎನ್ನುತ್ತಾರೆ ಕೆಲವರು. ಕನಿಷ್ಠ ಒಂದು ಸಾವಿರವಾದರೂ ಆಗದಿದ್ದರೆ ಹೇಗೆ ಬದುಕಲಿ? ಎನ್ನುತ್ತಾರೆ ಲಕ್ಷಾಂತರ ಮಂದಿ ಅಡಿಕೆ ತೋಟದ ಮಕ್ಕಳು ಅದನ್ನೇ ಜೀವಧಾರಕವೆಂದು ನಂಬಿದವರು ಚಿಂತೆಯ ಕಡಲಲ್ಲಿ ಬೇಯುತ್ತಿದ್ದಾರೆ.

ಪಾಣಾಜೆಯ ಶ್ರೀ ಗೋವಿಂದ ಭಟ್ಟರು ಅಡಿಕೆಯಿಂದ ಯಶಸ್ವಿಯಾಗಿ ನವೀನ ಕಾಫಿಯೊಂದನ್ನು ಸಂಶೋಧಿಸಿದ್ದಾರೆ. ಗೋದಾಮುಗಳಲ್ಲಿ ಹಿಮಾಲಯದೋಪಾದಿ ಅಡಿಕೆ ದಾಸ್ತಾನು ಮಾಡಿರುವ ಮಹಾಶಯರೆಲ್ಲರೂ ಆ ರಾಶಿಗೆ ಗೆದ್ದಲು ಹಿಡಿಯುವ ಮೊದಲು ಅದನ್ನು ಕಾಫಿ ಮಾಡಿ ಕುಡಿಯಲಿ. ಇಂದಿನ ಬೃಹತ್ ಸಮಸ್ಯೆಯನ್ನು, ನಿರಾಶೆಯ ಸುಳಿಯನ್ನು ಅವಲೋಕಿಸುವಾಗ ನಮಗೆ ಅನಿಸುವುದಿಷ್ಟು; ಆ ಅಡಿಕೆ ಮರಗಳನ್ನು ಕಡಿದು, ಮರಳಿ ಗದ್ದೆ ಮಾಡೋಣವೆಂದರೆ ಅದೂ ಸರಳವಲ್ಲ

ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

●●

ಕತೆ ಕಟ್ಟಿದೆ!

ಕತೆ ಕಟ್ಟಿದೆ, ನಾನು ಕತೆ ಕಟ್ಟಿದೆ
ಕಟ್ಟಲಾಗದ, ಮುಟ್ಟಲಾಗದ
ಕತೆ ಕಟ್ಟಿದೆ.!

ಕತ್ತಲಲ್ಲಿಯೆ, ಹಣತೆ ಉರಿಸುತ
ಹೃದಯದೊಂದಿಗೆ
ಕತೆ ಕಟ್ಟಿದೆ!

ಕಂಡವರ, ಕುಣಿವವರ
ನೊಂದವರ ಕತೆ ಕಟ್ಟಿದೆ.
ಕುಡಿದವರ ಕುಣಿಸುತ್ತ
ನಲಿವವರ ನಲಿಸುತ್ತ
ನಿದ್ದೆಯಿಂದೆಬ್ಬಿಸುವ ಕತೆ ಕಟ್ಟಿದೆ.

ಅಲ್ಲಲ್ಲಿ ಸುತ್ತಾಡಿ, ತಿಂದುಂಡು ತಿರುಗಾಡಿ
ಎಲ್ಲರೊಂದಿಗೆ ಬೆರೆತು
ಕತೆ ಕಟ್ಟಿದೆ!

ನೂರಾರು ಕತೆ ಕಟ್ಟಿ,
ಕತೆಯೊಂದಿಗೆ ಕಲೆತು
ನನ್ನದೇ ಹಲಕೆಲವು, ಕತೆ ಕಟ್ಟಿದೆ!
ಓದುವವರಿಲ್ಲದಿರೆ, ಮರುಮರುಗಿದೆ!

— ಅನಂತ, ಶಾಂತಿಸದನ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಮನೆಯಿಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ
ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ.ಕ.

Edited, Printed & Published by K. H. Shetty at the Navayuga Press, Udipi. S. India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾಯಕ
ಆಯುರ್ವೇದಾಶ್ರಮ
ಕಟಪಾಡಿ, ದ. ಕ.

ನವಯುಗ

ಮೇಲ್ತರಗತಿಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ
ಕಾರವಾರ

ಸಂಪುಟ ೫೧
ಸಂಚಿಕೆ ೪೦
NAVAYUGA
8-6-1972

ಪ್ರಚಲಿತ ಪ್ರಸಂಗ

ಆಳುವ ಕಾಂಗ್ರೆಸ್ಸಿನ ಶುದ್ಧೀಕರಣ

ಭಾರತರತ್ನ, ವಿಶ್ವನಾಯಕ ಪಂ. ನೆಹರು ನಮ್ಮನ್ನಗಲಿ ಎಂಟು ವರುಷಗಳು ದಾಟಿದುವು. ಯಮುನಾ ದಡದ ಶಾಂತಿವನ ಅವರ ಸಮಾಧಿ ಸ್ಥಳ. ಮಹಾನ್ ಪುರುಷರ ಸಮಾಧಿಗೂ ಒಂದು ಪೂಜನೀಯತೆ ಇದೆ. ಎಂತಲೇ ಶಾಂತಿವನ ರಾಜಘಾಟಿನಂತೆಯೇ ಪವಿತ್ರ ಪಾವನ.

ಈ ವರ್ಷ ನೆಹರು ಪುಣ್ಯತಿಥಿಯಂದು ಶಾಂತಿವನದಲ್ಲಿ ಕೆಲವೊಂದು ಐತಿಹಾಸಿಕ ದಾಖಲೆಗಳನ್ನು ಹೂಳಲಾಯಿತು. ಪಂ. ನೆಹರುರವರಿಗೆ ಇತಿಹಾಸದಲ್ಲಿ ಮತ್ತು ವಿಜ್ಞಾನದಲ್ಲಿ ಅತ್ಯಂತ ಆಸಕ್ತಿಯಿತ್ತು. ದೇಶದ ರಾಜ್ಯಕೀಯ ಮತ್ತು ಆರ್ಥಿಕರಂಗದ ಚಟುವಟಿಕೆಗಳಿಗೆ ಸಂಬಂಧಿಸಿದ ಕೆಲವು ದಾಖಲೆ ಪತ್ರಗಳು ಮತ್ತು ಕೆಲವು ವಸ್ತುಗಳು ಈ ಹೂಳಲಾದ ವಸ್ತುಗಳಲ್ಲಿ ಸೇರಿವೆ. ಅತ್ಯಂತ ಸುಭದ್ರವಾದ ವಾತಾವರಣದಲ್ಲಿ ಮಾಸದಂತೆ ಸುಮಾರು ಒಂದು ಸಾವಿರ ವರ್ಷಗಳಾದರೂ ಮಣ್ಣಿನಡಿಯಲ್ಲಿ ಸುರಕ್ಷಿತವಾಗಿರುವಂತೆ ಈ ಕೆಲಸ ನಡೆದಿದೆ. ಪಂ. ನೆಹರುರವರ ಇತಿಹಾಸ ನಿರ್ಮಿಸಿದ ಭಾಷಣಗಳು, ಬರಹಗಳು, ಸ್ವಾತಂತ್ರ್ಯ ಸಮರದಲ್ಲಿ ನೆಹರು ಪಾತ್ರ ಸಂಬಂಧದ ಚಲಚ್ಚಿತ್ರ ಸುರುಳಿಗಳು ಈ ಕೋಶದಲ್ಲಿ ಅಡಗಿರುವ ಇನ್ನು ಕೆಲವು ಒಡವೆಗಳು. ಅವರ ಮೃತ್ಯುಪತ್ರದ ಕೆಲವಂಶಗಳನ್ನೂ ತಾಮ್ರಪಟಲದಲ್ಲಿ ಕೆತ್ತಿಡಲಾಗಿದೆ.

ದಿ| ನೆಹರುರವರು ತನ್ನ ದೇಹದ ಬೂದಿಯ ಒಂದಂಶವನ್ನು ಗಂಗೆಯಲ್ಲಿ ಎರಚಲು ಮೃತ್ಯುಪತ್ರದಲ್ಲಿ ಬರೆದಿದ್ದರು. ಇದು ಗಂಗೆಯು ಪವಿತ್ರವೆಂಬುದರಿಂದಲ್ಲ, ಗಂಗೆಯಲ್ಲಿ ಭಸ್ಮ ವಿಸರ್ಜನೆ ಮಾಡುವುದು ಪುಣ್ಯಕಾರ್ಯವೆಂದೂ ಅಲ್ಲ. ನೆಹರುರವರಿಗೆ ಗಂಗೆಯಲ್ಲಿ ಪೂಜ್ಯ ಭಾವನೆ ಮೂಡಿದ್ದು ಅದು ಹಂಪಾದ ನಖದಿಂದ ಇಳಿದು ಬಂದಿದೆಯೆಂಬುದರಿಂದಾಗಲೀ ಅದು ತ್ರಿಪಥಗೆಯೆಂಬುದರಿಂದಾಗಲೀ ಅಲ್ಲವೇ ಅಲ್ಲ. ಗಂಗೆಯ ತಟದಲ್ಲೇ ಅವರ ಬಾಲ್ಯ ಕಳೆಯಿತು. ಗಂಗೆಯ 'ತರಂಗಗಳಿಂದ, ಗಂಗೆಯ ಸಾಂಗತ್ಯದಿಂದ ಅವರು ದಿವ್ಯ ಪ್ರೇರಣೆ ಪಡೆದಿದ್ದರು ಎಂಬುದರಿಂದ ಅದರ ಬಗ್ಗೆ ಅವರ ಪೂಜನೀಯತೆ; ಅದ್ದರಿಂದಲೇ ಅವರ ಭಸ್ಮಕ್ಕೆ ಗಂಗೆಯಲ್ಲೂ ಸ್ಥಾನ.

ಅದು ವ್ಯಕ್ತಿಗತ ಆಶಯ; ಯಾರೂ ಏನೂ ಹೇಳುವಂತಿಲ್ಲ. ಭೂತ-ಪಿಶಾಚಿ-ಸಮಾಧಿಗಳನ್ನು ಪೂಜಿಸುವುದು ಅಂಧ ವಿಶ್ವಾಸವೆಂದು ನಾವು ಹೇಳುತ್ತೇವೆ; ಆಡಂಬರವನ್ನು ಖಂಡಿಸುತ್ತೇವೆ ಸರಳತನ, ಮಿತವ್ಯಯಗಳ ಉಪದೇಶ ನೀಡುತ್ತೇವೆ. ದೇವಮಂದಿರಗಳಲ್ಲಿ ದೀಪ ಉರಿಸುವುದನ್ನೂ ವಿರೋಧಿಸುವವರು ನಮ್ಮಲ್ಲಿದ್ದಾರೆ. ನೆಹರೂ ಸಮಾಧಿಯ ಬಳಿ ದಾಖಲೆಗಳನ್ನು ಹೂತಿಡುವುದರ ಉದ್ದೇಶ್ಯವೇನು? ಈ ಕ್ರಮ ವೈಶಿಷ್ಟ್ಯಪೂರ್ಣವಿರಬಹುದು; ಅದೃಷ್ಟಪೂರ್ವವೂ ಇರಬಹುದು. ಈ ಕೃತಿಯಿಂದು ನೆಹರೂರವರಿಗೆ ತೃಪ್ತಿಯಾಗುತ್ತದೆಯೆ? ಅವರೇ ಇಲ್ಲವೆಂದ ಮೇಲೆ ತೃಪ್ತಿಯ ಮಾತೇಳಲಾರದು. ಇದರಿಂದ ಅವರ ಭಕ್ತರಾದ ನಮಗೆ ಆತ್ಮತೃಪ್ತಿಯಾಗುತ್ತದೆಂದು ಒಪ್ಪಿಕೊಳ್ಳೋಣ. ಪ್ರತಿಯೊಂದು ಮೂಢ ನಂಬಿಕೆಯೂ ಆತ್ಮತೃಪ್ತಿ ಪ್ರೇರಿತವೇ ಆಗಿವೆ? ಅಂದರೆ ಅನಾದಿಕಾಲದ 'ಶ್ರದ್ಧೆ'ಗಳನ್ನು 'ಅಂಧ'ವೆಂದು ಕರೆಯುವ ನಾವೇ— ನಮಗವು ರುಚಿಸುವುದಿಲ್ಲವೆಂಬುದರಿಂದ - ನಾವು ಮೆಚ್ಚುವ ಹೊಸ ಅಂಧತೆಯನ್ನು ಪಸರಿಸತೊಡಗಿಲ್ಲವೆಂದೆನಿಸುವುದಿಲ್ಲವೆ?

೦೦ ೦೦ ೦೦

ಎಂಟು ತಿಂಗಳುಗಳಿಗೆ ಮೊದಲು ಆಳುವ ಕಾಂಗ್ರೆಸ್ಸ ಅಗ್ರನಾಯಕರ ಇಚ್ಛೆಗೆ ವಿರುದ್ಧವಾಗಿ ಯುವ ತುರುಕ್ ಚಂದ್ರಶೇಖರ್ ಕೇಂದ್ರ ಚುನಾವಣಾ ಸಮಿತಿಗೆ ಚುನಾಯಿತರಾಗಿ ಬಂದರು; ಇದು ಪಕ್ಷದೊಳಗಿನ ಭಿನ್ನಾಭಿಪ್ರಾಯದ ಸಂಕೇತವೆಂದೂ ನಾಯಕತ್ವಕ್ಕೊಂದು ಸವಾಲೆಂದೂ ಹೇಳಲಾಯಿತು. ಇದನ್ನು ಆಗ ಪ್ರಧಾನಿ ಗಾಂಧಿ ಒಪ್ಪಿಕೊಳ್ಳದೆ ಚಂದ್ರಶೇಖರರ ಆಯ್ಕೆ ತಮಗೆ ಅಪ್ರಿಯವಾದುದೇನೂ ಅಲ್ಲವೆಂದು ವಿಷಯದ ಮೇಲೆ ಪರದೆ ಎಳೆದರು.

ಆದರೆ, ಇದೀಗ ಎರಡು ತಿಂಗಳುಗಳಿಂದ ಪಕ್ಷದೊಳಗೆ ಎರಡು ಗುಂಪುಗಳು ತಲೆ ಎತ್ತುತ್ತಿರುವುದು ಸ್ಪಷ್ಟವಾಗಿದೆ. ಅವುಗಳನ್ನು ತೀವ್ರವಾದಿಗಳು ಮತ್ತು ಮಂದವಾದಿಗಳೆಂದೇ ಈಗಲೂ ಕರೆಯಬಹುದು. ಭೂ ಹಿಡುವಳಿ ಮತ್ತು ನಗರಾಸ್ತಿಗಳ ಮೇಲೆ ಮಿತಿ ಹೇರುವ ಸಂಬಂಧದಲ್ಲಿ ಬೇಕೆಂಬಷ್ಟು ಕಗರಣ ನಡೆಯತೊಡಗಿದೆ. ಈ ಬಗ್ಗೆ ನಾನಾತರದ ಅಭಿಪ್ರಾಯಗಳು ಹೊರಬಿದ್ದಿವೆ. ಪ್ರಧಾನಿ ಇಂದಿರಾಗಾಂಧಿ ಇನ್ನೂ ತೆರೆಯ ಹಿಂದೆಯೇ ಉಳಿದುಕೊಂಡಿದ್ದಾರೆ.

ಪಕ್ಷದ ನೀತಿಯನ್ನು ಒಪ್ಪಿಕೊಳ್ಳದವರು ಒಮ್ಮೆಗೆ ಟೀಕೆ ಮಾಡಬಾರದೆಂದವರು ಹೇಳುತ್ತಾರೆ. ಭಿನ್ನಾಭಿಪ್ರಾಯಗಳನ್ನು ಉಚಿತ ವಾತಾವರಣಕ್ಕೆ ಅವಕಾಶ ನೀಡದಂತೆ ಸರಿಪಡಿಸಿಕೊಳ್ಳಬೇಕೆಂದು ಕರೆ ನೀಡುತ್ತಾರೆ. ಆಳುವ ಕಾಂಗ್ರೆಸ್ಸು ತನ್ನ ಚುನಾವಣಾ ಘೋಷಣೆ ಪತ್ರದಲ್ಲಿ ನಿರೂಪಿತವಾದ ಅಂಶಗಳಿಗೆ ಬದ್ಧವಾಗಿದೆಯೆನ್ನುವ ಅವರು ತಾವು ತೀವ್ರಗಾಮಿಗಳ ಹಿಂದಿರುವುದಾಗಿ ತೋರಿಸಿಕೊಳ್ಳಹೊರಟಿದ್ದಾರೆ. ಪಕ್ಷದ ನೀತಿಗಳನ್ನೊಪ್ಪದವರು ಪಕ್ಷತ್ಯಾಗ ಮಾಡಬಹುದೆಂದೂ ಅವರು ಗುಡು ಹಾಕಿದ್ದಾರೆ

ಅದೇನಿದ್ದರೂ ಪಕ್ಷದಲ್ಲಿನ ಬಿರುಕು ಅಗಲವಾಗುತ್ತಿದೆ. ಸಂಸದೀಯ ಪಕ್ಷದ ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣಾ ಫಲಿತಾಂಶಗಳು ಇದನ್ನು ಸಮರ್ಥಿಸುತ್ತದೆ. ಪಕ್ಷದ ಅಧಿಕೃತ ಅಭ್ಯರ್ಥಿಗಳು ಸುಮಾರು ಅರ್ಧಾಂಶದಷ್ಟು ಸೋತುಹೋದುದು ತೀವ್ರಗಾಮಿಗಳ ವಿಜಯವೆನ್ನಬಹುದಾದರೆ, ಶ್ರೀಮತಿ ಗಾಂಧಿಯವರು ತೀವ್ರಗಾಮಿಯೆನ್ನುವುದಾದರೆ, ನಾಯಕತ್ವ ಆಕೆಯ ಇಚ್ಛೆಯಂತೆ ನಡೆಯುವುದಿಲ್ಲವೆನ್ನಬೇಕು. ಶ್ರೀಮತಿ ಗಾಂಧಿಯವರ ಆಶಯದಂತೆ ನಾಯಕತ್ವವಿರುವುದಾದರೆ, ಅವರು ಮಂದಗಾಮಿಯೆಂದೇ ಹೇಳಬೇಕಾಗುತ್ತದೆ.

ದೊಡ್ಡದೊಡ್ಡ ಮಾತುಗಳನ್ನು ಹೇ

(ಹನ್ನೆರಡನೇ ಪುಟ ನೋಡಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$ % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

'ಮದುವೆ ಗಂಡು-ಹೆಣ್ಣುಗಳನ್ನು ಮಾತ್ರವಲ್ಲ, ಅವರೀರ್ವರ ಮನೆತನಗಳನ್ನೂ ಒಂದುಗೂಡಿಸಬೇಕು. ಅದರ ಬದಲು ಅದು ಹಗೆಯ ಹೊಗೆಯಾಡಿಸಿದರೆ? ತಂದೆಯ ಅಣ್ಣ ಗೋವಿಂದನ ಸ್ವಭಾವವನ್ನು ನೀನರಿಯೆ. ಅತ ದ್ವೇಷಿ. ಸುಲಭದಲ್ಲಿ ಯಾವುದನ್ನೂ ಮರೆಯಲಾರ. ಇದುವಾರಣ್ಣ ಇದಲ್ಲ ಒಂದು ರೀತಿಯಲ್ಲಿ ಹುಯ್ಲೆಬ್ಬಿಸಿ ರಾಷ್ಟ್ರಕೂಟ ಮನೆತನವನ್ನೆ ಹಾಳುಮಾಡಲು ಹೆಣಗುತ್ತಾನೆ. ಆ ಕಾಳಿಚ್ಚು ಚಾಳುಕ್ಯ ರಾಣಿಗಳೊಳ್ಗೆ ಹಬ್ಬಿಕೊಳ್ಳುತ್ತದೆ. ಕೆಲವರು ಒಂದು ಕಡೆ ನಿಂತರೆ, ಇನ್ನು ಕೆಲವರು ಬೇರೊಬ್ಬರ ಪರ ವಹಿಸುತ್ತಾರೆ. ಈ ಮದುವೆಯ ನಿಮಿತ್ತ ಚಾಳುಕ್ಯ-ರಾಷ್ಟ್ರಕೂಟ ಮನೆತನಗಳು ಇಬ್ಭಾಗವಾಗುವ ಸ್ಥಿತಿ ಬರುತ್ತದಲ್ಲಾ ಎಂಬ ಸಂಕಟ. ಈ ರಾಜವಂಶಗಳ ಬೆಳವಣಿಗೆಗೆ ಬೆವರು ಬಸಿದ ನನಗೆ ಅದು ನನ್ನ ಕಣ್ಣ ಮುಂದೆಯೇ ಕಮರಿಹೋಗುವುದು ಬೇಡವಾಗಿದೆ. ಈ ಮದುವೆ ನಡೆಯ ಬೇಕು. ಆದರೆ ಯಾವ ರೀತಿಯಿಂದಲೂ ಅದು ಸಾಮ್ರಾಜ್ಯದಲ್ಲಿ ಗೃಹಕಲಹದ ಬೇಗೆ ಹೊತ್ತಿಸಬಾರದು. ಇದನ್ನೆಂತು ಸಾಧಿಸುವುದು? ನನ್ನನ್ನು ಬಾಧಿಸುತ್ತಿರುವುದು ಈ ಚಿಂತೆ.'

'ಈ ಮದುವೆಯನ್ನು ಈ ನೆಪದಲ್ಲಿ ಮುಂದುಹಾಕಲು ಬರುತ್ತದೆಯೆ?'

'ಇದು ಆಗತ್ಯ ಆಗಬೇಕಾದ್ದು. ಮುನ್ನೂಕಲು ಬರುವುದಿಲ್ಲ ನಿಶ್ಚಯ. ಆದರೆ ಪರಿಣಾಮವನ್ನು ವಿವೇಚಿಸದಿರುವುದು ಹೇಗೆ? ಮದುವೆ ಸುಖ-ಸಂತೋಷಕ್ಕೆ. ಆ ಮೂಲಕ ಬಾಳಿನ ಹರಹು ಹೆಚ್ಚಬೇಕು—ಕುಮಾರನ ನಾಳಿನ ಜೀವನ ಬರಿಯ ಅಸಿಧಾರಾವ್ರತವಾದರೆ? ಯುದ್ಧ, ಕತ್ತಿಕಾಳಗದಲ್ಲಿ ಆಯುಷ್ಯ ವ್ಯಯಿಸುವಂತಾದರೆ?'

'ಅವರ ಹಣೆಯಲ್ಲಿ ಹಾಗೆ ಬರೆದಿದ್ದರೆ ತಪ್ಪಿಸಲಾಗುತ್ತದೆಯೆ? ಅವಶ್ಯವಾದ್ದನ್ನು ಅನುಭವಿಸಿಯೇ ತೀರಬೇಕು.'

'ಇರುಳು ಕಂಡ ಬಾವಿಯಲ್ಲಿ ಹಗಲುಬೀಳುವುದರಲ್ಲಿ ಯಾವ ಬುದ್ಧಿವಂತಿಕೆ ಇದೆ, ಪದ್ಮಪ್ಪ?'

"ಮದುವೆ ನೀವು ಮಾಡಬೇಕಾಗಿರುವ ಕರ್ತವ್ಯ. ಪ್ರಾಪ್ತ ವಯಸ್ಸಿಗೆ ಇಬ್ಬರೂ ಬಂದಿದ್ದಾರೆ. ಒಬ್ಬರನ್ನೊಬ್ಬರು ಒಪ್ಪಿಕೊಂಡಿದ್ದಾರೆ. ಅದನ್ನು ಮೊದಲು ನೆರವೇರಿಸಿ, ನಂತರದ್ದು ಅವರಿಗೆ ಕೂಡಿದ್ದು. ಕಷ್ಟ ಬರುತ್ತದೆ ಎಂದು ಅಂಜಿ ಹಿಂಜರಿಯುವುದೆ?"

'ಅವುಗಳನ್ನು ಧೈರ್ಯದಿಂದ ಎದುರಿಸಿ ಜಯಿಸಬೇಕು. ನಾನು ಸೂಚಿಸುವುದು ನಿವೃತ್ತಿಯನ್ನಲ್ಲ; ಪ್ರವೃತ್ತಿ ಮಾರ್ಗವನ್ನು.'

'ನೀನೂ ಕುಮಾರನ ದಾರಿಯನ್ನು ಸಮರ್ಥಿಸುವಂತಿದೆ.'

'ಸಮರ್ಥಿಸಲಿಲ್ಲ; ಸರಿಯೆಂದು ಕಂಡುದನ್ನು ತಿಳಿಸಿದೆ. ನಾಳೆ ಬರಲಿರುವ ಸಾವಿಗೆ ಹೆದರಿ ಇಂದೇ ಕೈಕಟ್ಟಿ ಕುಳಿತಿರುವುದು ಸಾಧ್ಯವೇ? ಹಾಗಿರುವುದು ಎಂದರೆ ಸಾಯುವುದಕ್ಕೂ ಮುನ್ನ ಸತ್ತುಹೋಗುವುದು.'

'ಅರ್ಹಂತನ ಆರಾಧಕನಾದ ನಿನ್ನ ಬಾಯಲ್ಲಿ ಈ ಮಾತು'.

ಚಕಿತರಾದ ನರಸಿಂಹ ನಾಯಕರು ಉದ್ಗರಿಸಿದರು—

ಪದ್ಮಪ್ಪ ಈ ಮಾತಿನಿಂದ ವಿಚಲಿತನಾಗಲಿಲ್ಲ. ಸಮಾಧಾನದಿಂದಲೇ ಉತ್ತರಿಸಿದ.

'ಜೈನ ಧರ್ಮವೇ ಏಕೆ, ಎಲ್ಲ ಧರ್ಮಗಳು ತಿಳಿಸುವುದು ಒಂದನ್ನೇ. ಆ ಧರ್ಮಸಾರವನ್ನು ಸರಿಯಾಗಿ ಅರಿತುಕೊಳ್ಳದೆ ಸ್ವಾರ್ಥಿಗಳಾದ ಜನ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು, ತಮಗೆ ಸರಿಹೋಗುವ ಅರ್ಥ ಕಲ್ಪಿಸಿಕೊಂಡು ಇಲ್ಲದ ರಾದ್ಧಾಂತ ಎಬ್ಬಿಸಿ ಬದುಕನ್ನೇ ಹಾಳು ಮಾಡುತಿದ್ದಾರೆ. ಅನುಭವ ಸಾರಸಂಗ್ರಹವೇ ಧರ್ಮ. ಅದನ್ನು ಮತ್ತಷ್ಟು ಎತ್ತರಕ್ಕೆ ಏರಲು ಸೋಪಾನವಾಗಿ ಮನುಷ್ಯ ಬಳಸಬೇಕು. ಅದರ ಬದಲು, ಹಿಂದಿನವರ ಅನುಭವದ ನೆರಳಿನಲ್ಲೇ—ಸ್ವಾನುಭವವನ್ನು ತಳ್ಳಿಕೊಟ್ಟು—ಬಾಳಲಾರಂಭಿಸಿದರೆ ಉನ್ಮುಖತೆ ಕನಸಿನ ಮಾತು. ಹೊಸ ನೀರು ಹರಿದು ಬಾರದಿದ್ದರೆ ಕಾಸಾರ ನಾರುವ ಹೊಂಡವೇ.'

'ಹಾಗಿದ್ದರೆ ನಿನ್ನ ದೃಷ್ಟಿಯಲ್ಲಿ ಧರ್ಮ ಎಂದರೆ?'

ಅವರು ಅರ್ಥಕ್ಕೇ ನಿಲ್ಲಿಸಿದರು.

'ಕೃತಕ ಗೋಡೆಗಳನ್ನು ಕಟ್ಟಿ ಗಾಳಿ ಬೆಳಕಿನ ಓಡಾಟಕ್ಕೂ ಅನುವು ಕೊಡದಂತೆ ನಿರ್ಬಂಧಿಸುವುದು ಎಂದಿಗೂ ಧರ್ಮವೆನಿಸದು, ಅದು ಬಿಡುಗಡೆಯಲ್ಲ; ಬಂಧನ.'

'ನಿನ್ನದು ವಿನೂತನ ದೃಷ್ಟಿ.'

'ಎಲ್ಲ ವಿಚಾರಗಳ ಹಣೆಬರಹವೂ ಹೀಗೇ ಸ್ವಾಮಿ. ಬಳಕೆಗೆ ಬರುವ ವರೆವಿಗೆ ಅವು ವಿನೂತನ. ಬಳಕೆಗೆ ಬಂತೋ, ಜನ ಅದಕ್ಕೆ ಒಪ್ಪಿಕೊಳ್ಳುತ್ತಾರೆ. ಹೊಸತೆಂಬ ಆಕ್ಷೇಪ ಬರುವುದು ಹೊಸತರಲ್ಲೇ.'

'ಬಾಹ್ಯವನ್ನು ಮರೆತು ನೀನು ಕಾವ್ಯಲೋಕದಲ್ಲಿ ವಿಹರಿಸುವಂತೆ ಕಾಣುತ್ತದೆ.'

'ಆಳವಾಗಿ ವಿವೇಚಿಸಿದಲ್ಲಿ ಕವಿಗಳು ದ್ರಷ್ಟಾರರು; ಲೋಕದ ಅನಧಿಕೃತ ಶಾಸಕರು.'

'ನಿರಂಕುಶ ಮತಿಗಳಾದ ಕವಿಗಳು ಹೇಗೆ ಶಾಸಕರಾದಾರೋ, ಪದ್ಮಪ್ಪ?'

ಅವರಿಬ್ಬರನ್ನು ಕೂಡಿಕೊಂಡ ಅರಿಕೇಸರಿ ಪ್ರತಿಸವಾಲು ಹಾಕಿದ.

'ನಿಮ್ಮನ್ನರಸಿ, ನನ್ನ ಕಣ್ಣುಗಳು ದಣಿದಿದ್ದುವು, ಕುಮಾರರು ಎತ್ತಣಿಂದುದಯಿಸಿದರೋ?'

'ಅಸ್ತಮಿಸಿದ್ದರೆ ತಾನೆ ಉದಯಿಸುವುದು?'

'ಹೇಳಿಕೇಳಿ ನೀವು ಚಂದ್ರವಂಶದವರು. ಯಾವ ಮೋಡ ಮುಸುಕಿನಲ್ಲಿ ನೀವು ಮರೆಯಾದಿರೋ ಎಂದು ತರ್ಕಿಸುತಿದ್ದೆ.'

ಸಮ ವಯಸ್ಕರ ಮಧ್ಯೆ ಮಾತಿನ ಧಾಟಿ ಹೊಸ ದಾರಿ ತುಳಿಯುತ್ತಿರುವಾಗ ತಾನಿರುವುದು ಸರಿಯಲ್ಲ, ಎದ್ದುಹೋಗುವುದೇ ವಿಹಿತ ಎಂದೆನಿಸಿತು ನರಸಿಂಹ ನಾಯಕರಿಗೆ.

'ಆಹ್ನಿಕದ ಹೊತ್ತು; ನಾನಿನ್ನು ಬರುತ್ತೇನೆ'ಂದು ಅವರು ಒಳಮನೆಗೆ ನಡೆದರು.

ಅವರು ಮರೆಯಾಗುವುದನ್ನೆ ಕಾಯುತ್ತಿದ್ದ ಅರಿಕೇಸರಿ, 'ನಿಮ್ಮ ಅಭ್ಯಾಸ ಈಗ ಹೇಗೆ ಸಾಗಿದೆ?"

'ಅಭ್ಯಾಸ! ಯಾವ ಅಭ್ಯಾಸ?'

ಏನೂ ಅರಿಯದವನಂತೆ ಪದ್ಮಪ್ಪ ಉತ್ತರಿಸಿದ—

'ಇನ್ನು ಯಾವ ಅಭ್ಯಾಸ, ನಿನ್ನ ಕಾವ್ಯಾಭ್ಯಾಸ.'

'ಅದಕ್ಕಾಗಲೇ ಪೂರ್ಣವಿರಾಮ ಹಾಕಿದ್ದೇನೆ.'

'ಹಾಗೆ ಮಾಡುವುದೆಂದರೆ ದೈವದತ್ತವಾಗಿ ಬಂದ ಪ್ರತಿಭೆಗೆ ದ್ರೋಹವೆಸಗಿದಂತೆ.'

'ಅನ್ಯ ಮಾರ್ಗವೇ ಉಳಿಯದಿದ್ದರೆ?'

'ಅಂತಹ ಪರಿಸ್ಥಿತಿ ಬಂದಿದ್ದರೆ ಅದನ್ನು ನನಗೆ ತಿಳಿಸಬಾರದಿತ್ತೇ?'

'ಹೇಳಿ ಬಂದಿದ್ದರೆ ತಿಳಿಸ ಬಹುದಿತ್ತು. ಯಾವ ಮುನ್ಸೂಚನೆಯೂ ಇಲ್ಲದೆ ಬಂದರೆ?'

'ವಿವರವನ್ನು ಕೇಳಬಹುದೇ'

'ಕೇಳಿ ಈಗ ಮಾಡುವುದೇನು? ಎಲ್ಲ ಮುಗಿದಿದೆ'

'ಅದಕ್ಕೆ ಪರಿಹಾರವೂ ಇಲ್ಲವೆ?'

'ಪರಿಹಾರ ಕೊಡುವವರೇ ಅದರ ಸೂತ್ರಧಾರರಾದರೆ'

'ನಿನ್ನ ಮಾತುಗಳು ಒಗಟನಂತಿವೆ. ಕನ್ನಡದ ಜನ ಧ್ವನಿಯುತವಾಗಿ ಮಾತನಾಡುವವರು ಎಂದು ನೀನೇ ಹಿಂದೊಮ್ಮೆ ಆಡಿದ್ದೆ. ನಿನ್ನ ಈ ಮಾತಿನ ಒಳ ದನಿಯನ್ನು ಬಿಡಿಸಿ ಹೇಳಬಾರದೇ'

'ಸದ್ಯ, ನಾನು ಕಂಠ ಹಿಡಿಯುವಂತಿಲ್ಲ. ತಾಳೆಯೋಲೆಯ ಮೇಲೆ ಕೈಯೋಡುವಂತೆಯೂ ಇಲ್ಲ. ಕತ್ತಿ ಹಿಡಿಯ ಬೇಕಾದ ಪ್ರಸಂಗ ಬಂದಿದೆ. ನೀವೂ—ನಿಮ್ಮ ಹಿರಿಯರೂ ಕಲಿಸಿದ ವಿದ್ಯೆ ಹೊಸಗೆಂದೇ ಮೀಸಲಿಡುವ ಪ್ರಸಂಗ ಕಾದಿದೆ. ನಿಮ್ಮಿಂದಲೇ ಅದು ಉದ್ಭವಿಸಿದ್ದು. ಒದಗಿ ಬಂದ ಪ್ರಸಂಗ ಮೊದಲು ತೊಲಗಲಿ. ಅನಂತರ ನಾನು ಹಾಯಾಗಿ ಕುಳಿತು ಬರೆಯುತ್ತೇನೆ. ನೀವು ಹಾಡುವಿರಂತೆ'

'ನನಗೆ ಹಾಡಲು ಬರುವುದಿಲ್ಲ.'

"ಕಂಕುಳಿಗೊಂದು ಕೂಸನ್ನು ಕೊಟ್ಟು, ಸ್ವಲ್ಪ ನೋಡಿ ಕೊಂಡಿರಿ, ಬೇಗ ಗುಡಿಗೆ ಹೋಗಿ ಬರುತ್ತೇನೆ ಎಂದು ಹೇಳುವ ರಾಣಿಯೊಬ್ಬಳು ಬರುತ್ತಾಳೆ. ಅವಳು ಜೋಗುಳ ಹಾಡಲು ಕಲಿಸುತ್ತಾಳೆ. ಆಗ ಹಾಡಲು ಬರದ ನಿಮ್ಮಿಂದ ಆ ಮಗು ಹಾಡು ಹೇಳಿಸುತ್ತದೆ.'

'ನೀನಿಷ್ಟು ರಸಿಕನಾದುದು ಎಂದೋ'

"ನಿಮ್ಮ ಸಹವಾಸ ದೋಷದಿಂದ. ಹಳಿಯಲ್ಲಿ ಜೇನಿದೆ ಎಂಬುದು ತಿಳಿದು ಬರುವುದು ಹಿಂಡಿದಾಗಲೇ. ರಸ ಪ್ರವಾಹಕ್ಕೆ ಒತ್ತಡ ಪ್ರೇರಣೆ"

ಕೋಣೆಯಲ್ಲಿ ಕುಳಿತು, ಈ ಮಾತುಕತೆಗಳನ್ನು ಕೇಳುತಿದ್ದ ಲೋಕಾಂಬಿಕೆ ಅಲ್ಲಿಯ ತನಕವೂ ಮೌನ ಧರಿಸಿದ್ದಳು. ಈ ಸಂಭಾಷಣೆಯನ್ನು ಕೇಳುತ್ತ ಸುಮ್ಮನಿರುವುದು ಅವಳಿಂದಾಗಲಿಲ್ಲ. ಮರೆಯಲ್ಲಿ ನಿಂತು ಎಲ್ಲವನ್ನೂ ಆಲಿಸುತಿದ್ದೇನೆ ಎಂದು ತಿಳಿಸಲು ಅವಳೊಂದು ನೆಟಿಕೆ ಮುರಿದಳು.

ಹಾಗೆ ಮಾಡುವಾಗ ಕೈ ಬಳೆಗಳು ಅಲುಗಿದುವು. ಕಂಕಣ ರವ ಹೊರಗಿದ್ದವರನ್ನು ಎಚ್ಚರಿಸಿತು.

'ಗುಡಿಯಿಂದ ಘಂಟಾರವ ಕೇಳಿ ಬರುತ್ತಿದೆ. ಪೂಜೆಯ ಸಮಯವಾಯಿತು. ಗರ್ಭಗೃಹದೊಳಗಿರುವ ದೇವಿ ಪ್ರೀತಳಾಗಿ ದರ್ಶನ ಭಾಗ್ಯ

(ಹನ್ನೊಂದನೇ ಪುಟ ನೋಡಿರಿ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 40

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ
ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಭುಟ್ಟೋ ವಿವೇಕೋದಯ ಉಪಖಂಡಕ್ಕೆ ನವ ಸೂರ್ಯೋದಯ

ಭಾರತ—ಪಾಕ್‌ಗಳ ನಡುವಣ ಶೃಂಗ ಸಭೆಗೆ ಜೂನ್ ೨೮ ನಿಶ್ಚಿತ ದಿನ. ದಿನ ಹತ್ತಿರ ಬರುತ್ತಿರುವಂತೆ ಇದು ನಡೆಯುತ್ತದೆಯೋ ಎಂದು ಭಯ ತಲೆದೋರುತ್ತಿದೆ. ಭುಟ್ಟೋರ ಅಭಿಪ್ರಾಯದಲ್ಲಿ ಶೇಕ ಮುಜಿಬುರ್ ರೆಹಮಾನರು ಮಾತುಕತೆಯಲ್ಲಿ ಭಾಗವಹಿಸಬೇಕು. ತನ್ನೊಡನೆ ಶೇಕ್ ಮುಜಿಬ್ ನಾಲ್ಕು ಮಾತಾಡಿದ ಬಳಿಕ ತಾನು ಬಾಂಗ್ಲಾಕ್ಕೆ ಮಾನ್ಯತೆ ನೀಡುವುದಾಗಿ ಅವರು ಹೇಳುತ್ತಾರೆ. ಆದರೆ, ಮುಜಿಬ್ ನಿಲುವು ಆದಿಯಿಂದಲೂ ಇದಕ್ಕೆ ಪ್ರತಿಕೂಲ—'ಮೊದಲು ಮನ್ನಣೆ, ಅನಂತರ ಭೇಟಿ' ಸಮರ ಕೈದಿಗಳ ವಿಚಾರಣೆಯನ್ನು ಎಂತಾದರೂ ನಿಲ್ಲಿಸಬೇಕೆಂಬುದು ಮಹಾಶಯ ಭುಟ್ಟೋರ ಹೃದಯದ ಇಚ್ಛೆ. ಈ ಸಂಬಂಧದಲ್ಲಿ ಅವರು ಮುಜಿಬ್‌ಗೆ ಕಳಕಳಿಯ ಪತ್ರವನ್ನೂ ಬರೆದರು. ಆದರೆ ಅಲ್ಲಿಂದ ನಿರಾಶಾದಾಯಕ ಉತ್ತರವನ್ನೇ ಪಡೆದರು. ಭಾರತದ ನಿಲುವೂ ಯಾದರೂ ಬಾಂಗ್ಲಾಕ್ಕೆ ವಿರುದ್ಧವಾಗಿಲ್ಲ. 'ತಮ್ಮ ಅಸ್ತಿತ್ವವನ್ನು ಮನ್ನಿಸದ ಭುಟ್ಟೋರವರೊಡನೆ ಬಾಂಗ್ಲಾ ಮಾತಾಡುವುದೇನು?' ಇದರಿಂದ ಮುಜಿಬ್—ಭುಟ್ಟೋ ಭೆಟ್ಟಿ ಮನ್ನಣೆಗೆ ಮೊದಲು ಅಸಂಭವ—ಮನ್ನಣೆಯೂ ನಿಕಟ ಭವಿಷ್ಯದಲ್ಲಿ ಅಸಂಭವ.

ನಾವು ಬಾಂಗ್ಲಾದೊಂದಿಗೆ ಹೇಗೆಯೋ ಹಾಗೆ ಪಾಕಿಸ್ತಾನದೊಂದಿಗೂ ಶಾಶ್ವತ ಗೆಳೆತನವನ್ನು ಬಯಸುತ್ತೇವೆ. ಇದಕ್ಕೆಂದೇ ನಾವು ಶೃಂಗ ಸಭೆಗೆ ಒಪ್ಪಿದ್ದೇವೆ. ಇದಕ್ಕೆ ಯಾವ ಪೂರ್ವ ಷರತ್ತುಗಳೂ ಇಲ್ಲವೆಂಬುದು ನಿಜ. ಆದರೆ, ನಾವು ಪಾಕಿಸ್ತಾನಿಗಳಿಂದ ಬಯಸುವ ಕೆಲವು ಸದ್ವರ್ತನೆಗಳಿವೆ: ನಮ್ಮೊಂದಿಗೆ ರಾಜ್ಯಕೀಯ — ಸೈನಿಕ ಸಂಘರ್ಷದ ಪ್ರವೃತ್ತಿಯನ್ನು ಅವರು ತ್ಯಜಿಸಬೇಕು; ಸ್ವತಂತ್ರ ಬಾಂಗ್ಲಾ ದೇಶಕ್ಕೆ ಮನ್ನಣೆ ನೀಡಬೇಕು. ಭಾರತದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಸುವುದಿಲ್ಲವೆಂಬ ಬಗ್ಗೆ ಸ್ಪಷ್ಟ ಆಶ್ವಾಸನೆ ನೀಡಬೇಕು; ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಕೆಲವು ನಾಗಾರು, ಮಿಜ್ಜರಿಗೆ ಸಹಾಯ ನೀಡುವುದನ್ನು ನಿಲ್ಲಿಸಬೇಕು, ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧ್ವಂಸಕ ಕೃತ್ಯ ನಡೆಸುವ ಪ್ರವೃತ್ತಿಗೆ ತಿಲಾಂಜಲಿ ನೀಡಬೇಕು —ಇವೆಲ್ಲವೂ ಸಾಧ್ಯವಾದರೆ ಮಾತ್ರ ಭಾರತ—ಪಾಕ್‌ಗಳ ನಡುವೆ ಶಾಶ್ವತ ಶಾಂತಿ ಸಾಧ್ಯವಾಗುತ್ತದೆ. ಈ ಅಂಶಗಳಿಗೆ ಅನುಕೂಲ ಪ್ರತಿಕ್ರಿಯೆಯನ್ನು ನಾವು ಭುಟ್ಟೋ ಮಹಾಶಯರಿಂದ ನಿರೀಕ್ಷಿಸಬಹುದೆ?—ಇದು ಸಂದೇಹಾಸ್ಪದ. ಪಾಕಿಸ್ತಾನವನ್ನು ದುರ್ಬಲಗೊಳಿಸುವ ಇರಾದೆ ನಮಗೆ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೂ ಇಲ್ಲ. ಆದರೆ ಇದನ್ನು ಪಾಕ್ ನಾಯಕರು ಇದುವರೆಗೂ ತಪ್ಪು ತಿಳಿದುಕೊಂಡಿದ್ದಾರೆ. ಭಾರತವು ತನ್ನಿಂದ ನಿರೀಕ್ಷಿಸುವ ಅಂಶಗಳಲ್ಲಿ ಒಂದೊಂದನ್ನೂ ಭುಟ್ಟೋ ಮಾನ್ಯ ಮಾಡುವುದಿರಲಿ, ಸಹಾನುಭೂತಿಯಿಂದ ನೋಡುವುದಕ್ಕೂ ಸಿದ್ಧರಿಲ್ಲ. ಭಾರತದ ವಿರುದ್ಧ ಸೈನಿಕ—ರಾಜ್ಯಕೀಯ ಸಂಘರ್ಷ—ಜಮ್ಮು—ಕಾಶ್ಮೀರದಲ್ಲಿ ವಿಧ್ವಂಸಕ ಪ್ರವೃತ್ತಿ, ವಿದ್ರೋಹಿ ನಾಗಾಗಳಿಗೆ ಪುರಸ್ಕಾರಗಳೇ ಅವರ ಭಾರತ ಪರ ನೀತಿಯಾಗಿ ಬಂದಿದೆ. ಬಾಂಗ್ಲಾಕ್ಕೆ ಮನ್ನಣೆ ನೀಡುವುದು ಅವರಿಗೆ ಸದ್ಯಕ್ಕೆ ಅಸಾಧ್ಯವೇ ಎಂದು ತೋರುತ್ತದೆ. ಕಾಶ್ಮೀರದ ಮೇಲಿನ ಅವರ ಸ್ವೇಚ್ಛ ಮೋಹವೇ ಎರಡೂ ದೇಶಗಳ ಸರ್ವ ಸಮಸ್ಯೆಗಳಿಗೆ ಮೂಲವೆಂಬುದನ್ನು ಗಮನಿಸುವುದಾದರೆ, ನಿಯೋಜಿತ ಶೃಂಗಸಭೆಯ ಫಲಶ್ರುತಿ ಶೂನ್ಯವೆಂದೇ ಹೇಳಬೇಕು.

ಉಪಖಂಡದ ಶಾಂತಿಗೆ, ಭದ್ರತೆಗೆ ಮತ್ತು ಅಭಿವೃದ್ಧಿಗೆ ಶೃಂಗಸಭೆ ಯಶಗಳಿಸುವುದು ಅಗತ್ಯ. ಅನಾದಿ ಕಾಲದಿಂದಲೂ ಇವಕ್ಕೆ ಮಾರಕವಾಗಿ ಪರಿಣಮಿಸಿದ ಪಾಕ್ ಕಾಕ ನೀತಿಯಲ್ಲಿ ಪರಿವರ್ತನೆಯಾಗುವುದಾದರೆ, ಇದೇ ಅದಕ್ಕೆ ಸುವರ್ಣ ಸಂದರ್ಭ. ತನ್ನ ಕುರುಡು ನೀತಿಯಿಂದಾಗಿ ಸಾಕಷ್ಟು ಜರ್ಜರವಾದ ಪಾಕಿಸ್ತಾನಕ್ಕೆ ಅದನ್ನು ಬದಲಾಯಿಸಿ, ಸ್ವದೇಶಾಭಿವೃದ್ಧಿಗೆ ಮಾರ್ಗ ಹಸನುಗೈಯುವ ನಿರ್ಧಾರ ಮಾಡಲು ಈ ಶೃಂಗಸಭೆ ಉಪಯುಕ್ತ. ಆದುದರಿಂದ ಶೃಂಗಸಭೆಯು ನಡೆದರೆ ಅಲ್ಲಿ ಭುಟ್ಟೋ ಸದಸದ್ವಿವೇಕದಿಂದ ವರ್ತಿಸಿದರೆ, ಸಭೆಯು ಸಫಲವಾಗುವುದು. ಉಪಖಂಡದ ಭವಿಷ್ಯ ಬರೆಯುವ ಲೆಕ್ಕಣಿಕೆ ಈಗ ಭುಟ್ಟೋರ ಕೈಗಳಲ್ಲಿದೆ. ಅವರದರಿಂದ ಅನರ್ಥವನ್ನು ಬರೆಯಲಾರರೆಂದೇ ಆಶಿಸೋಣ.

ಹಿತೈಷಿಗಳಲ್ಲಿ ನಮ್ರ ನಿವೇದನೆ

'ನವಯುಗ'ದ ಹೊನ್ನಹಬ್ಬವು ಮೇ ತಾ. ೨೮ರಂದು ಕುಲಪತಿ ಜವರೇ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಬಂಧದ ವಿವರಗಳನ್ನು ಇದೇ ಸಂಚಿಕೆಯ ಬೇರೆ ಪುಟಗಳಲ್ಲಿ ಕೊಡಲಾಗಿದೆ. ಹೊನ್ನ ಹಬ್ಬದ ಸಮಯದಲ್ಲಿ 'ನವಯುಗ'ದ ನವೀಕರಣದ ಯೋಜನೆಯನ್ನು ಕೈಕೊಳ್ಳಲು "ಹೊನ್ನ ಹಬ್ಬದ ನಿಧಿ"ಯೊಂದನ್ನು ಕೂಡಿಸಲು ಉದ್ದೇಶಿಸಲಾಗಿತ್ತು. ಈ ಸಂಬಂಧದಲ್ಲಿ ಸಾರ್ವಜನಿಕರ ಆರ್ಥಿಕ ಸಹಾಯವನ್ನೂ ನಿರೀಕ್ಷಿಸಲಾಗಿತ್ತು. ಹಲವಾರು ಅನಿವಾರ್ಯ ಕಾರಣಗಳಿಂದ ಹೊನ್ನ ಹಬ್ಬವನ್ನು ಅತ್ಯಂತ ಹ್ರಸ್ವಪೂರ್ವ ಕಾಲಾವಕಾಶದಲ್ಲಿ ಆಚರಿಸಬೇಕಾಗಿ ಬಂತು. ನಾವು ಈ ನಡುವೆಯೇ ಕೆಲವರನ್ನು ಭೆಟ್ಟಿ ಮಾಡಿದ್ದೆವು; ಅವರೆಲ್ಲರೂ ತಮ್ಮ ಸಹಾನುಭೂತಿಯೊಡನೆ ಮುಕ್ತ ಹಸ್ತದ ಸಹಾಯವನ್ನೂ ನೀಡಿ ಉಪಕರಿಸಿದ್ದಾರೆ. (ಅವರಿಗೆ ಅಭಿನಂದನೆಗಳು). ಆದರೆ ಹೆಚ್ಚಿನವರನ್ನು ನಮಗೆ ಭೆಟ್ಟಿಮಾಡುವುದು ಸಾಧ್ಯವಾಗದೆ ಹೋಯ್ತು. ಆದುದರಿಂದ, ನಿಧಿ ಕೂಡಿಸುವುದಕ್ಕಾಗಿ ಸಾರ್ವಜನಿಕರನ್ನು, ಮುಖ್ಯವಾಗಿ ನಮ್ಮ ಹಿತಾಕಾಂಕ್ಷಿಗಳನ್ನು ಭೆಟ್ಟಿ ಮಾಡಲು ಮುಂದೆ ಬರಲಿದ್ದೇವೆ. ಈ ಸಮಯದಲ್ಲಿ ತಾವೆಲ್ಲರೂ ತಮ್ಮ ಕೊಡುಗೈಯ ನೆರವು ನೀಡಿ, 'ನವಯುಗ'ವನ್ನು ಬಲಪಡಿಸಬೇಕೆಂದು ಕಳಕಳಿಯಿಂದ ಕೇಳುತ್ತೇವೆ.

ತಾವು ಈ ಐವತ್ತು ವರ್ಷಗಳ ಕಾಲದಲ್ಲಿ 'ನವಯುಗ'ದ ಬಗ್ಗೆ ಉದಾರ ನೀತಿ ತೋರಿದಂತೆಯೇ ನಿಮ್ಮದೇ ಆದ 'ನವಯುಗ'ವನ್ನು ಮುಂದೆಯೂ ಕೈ ನೀಡಿ ಆದರಿಸಿ ಆಧರಿಸುವಿರೆಂದು ದೃಢವಾಗಿ ನಂಬಿದ್ದೇವೆ.

● ●

ಮಣಿಪಾಲ ಜೂನಿಯರ್ ಚೇಂಬರ್ ಸಭೆಯಲ್ಲಿ ದೇ. ಜ. ಗೌ.

ಕಳೆದ ತಾ. 28ರಂದು ಮಣಿಪಾಲ ಜೂನಿಯರ್ ಚೇಂಬರ್ ಸಭೆಯೊಂದು ಜಿ. ವಿ. ರೇಗೋರ ಅಧ್ಯಕ್ಷತೆಯಲ್ಲಿ ಜರಗಿತು ಸಭೆಯನ್ನುದ್ದೇಶಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ| ದೇ. ಜವರೇ ಗೌಡರ ಪರಿಚಯವನ್ನು ಶ್ರೀ ಕೆ. ಎಂ. ಕಾಂತರು ಮಾಡಿದರು.

ಕುಲಪತಿಗಳು ಮಾತನಾಡುತ್ತಾ, ಸ್ವಾತಂತ್ರ್ಯದ ನಂತರ ಸ್ಥಾನಾಂತರಗೊಳ್ಳುವ ಕೆಲವೇ ಮಂದಿಯ ಅನುಕೂಲತೆಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಸಾಮಾನ್ಯ ಪಠ್ಯಕ್ರಮ ಆಗಬೇಕೆನ್ನುವುದರಲ್ಲಿ ಅರ್ಥವಿಲ್ಲ. ಎಲ್ಲಾ ವಿ. ವಿ. ನಿಲಯಗಳಿಗೂ ಒಂದೇ ಪಠ್ಯಕ್ರಮವಾದರೆ ಹೊಸ ವಿ. ವಿ. ನಿಲಯಗಳ ಸ್ಥಾಪನೆಯ ಅಗತ್ಯವೇನು? ಎಂದು ಪ್ರಶ್ನಿಸಿದರು, ಜ್ಞಾನ ಅಚಲವಾದ್ದಲ್ಲ, ಅದು ಚಿರಂತನ ಬದಲಾಗುತ್ತಿರುತ್ತದೆ ಪ್ರತಿ ಮೂರು ವರ್ಷಗಳಿಗೊಮ್ಮೆ ಪಠ್ಯಕ್ರಮ ಬದಲಾಗಬೇಕು ಎಂದರು. ನಗರಕ್ಕೂ ನಗರಕ್ಕೂ ಬಹಳ ವ್ಯತ್ಯಾಸ ನೀಡುವಿರಿ ಅವರು ಈಗ ನಮ್ಮಲ್ಲಿ ನೈತಿಕ ಆಚರಣೆ ಇದ್ದಂತಿಲ್ಲ. ಆದ್ದರಿಂದ ಈಗಿರುವ ತೊಂದರೆಗಳನ್ನು ನಿವಾರಿಸಲು ತರುಣರು ಮುಂದೆ ಬರಬೇಕೆಂದು ಕರೆಕೊಟ್ಟರು.

ಶ್ರೀ ರಂಗಸ್ವಾಮಿಯವರು ವಂದಿಸಿದರು.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!
ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫ್ಯಾಶನಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1
Tele: GOLDKING Estd: 1947 Phone: 3242 Res: 3272

ಉಜ್ವಲ ಪರಂಪರೆಯುಳ್ಳ ಜನತಾ ವಿಶ್ವವಿದ್ಯಾಲಯ

'ನವಯುಗ'ದ ಹೊನ್ನ ಹಬ್ಬ

೫೦ ವರ್ಷಗಳ ಸುದೀರ್ಘ ಕಾಲ ಸಾಹಸದಿಂದಲೇ ಬದುಕಿ ಉಳಿದು ಬಂದ ಕನ್ನಡ ಸಾಪ್ತಾಹಿಕ 'ನವಯುಗ'. ಇದು ಕನ್ನಡ ಪತ್ರಿಕಾ ಪ್ರಪಂಚಕ್ಕೇನೇ ಒಂದು ಕಲಶಪ್ರಾಯ.

'ನವಯುಗ'ದ ಹೊನ್ನಹಬ್ಬವನ್ನು ವಿಶಿಷ್ಟ ವಿಧಾನದಲ್ಲಿ ಆಚರಿಸಬೇಕು— ಇದು ಅದರ ಸಂಪಾದಕರ ಆಶಯವಿತ್ತು. ಗ್ರಂಗಾರಲ್ಲೇ ಈ ಬಗ್ಗೆ ರಚಿತವಾದ ಸಮಿತಿಯೊಂದು ಕಾರ್ಯತತ್ಪರವಾಗಿತ್ತು. ಹಲವು ಪ್ರತಿಕೂಲ ಕಾರಣಗಳಿಂದ ಆಚರಣೆ ಮುಂದುವರಿದು ಮೊನ್ನೆ ತಾ. ೨೮ರಂದು 'ನವಯುಗ'ದ ಚಿನ್ನದ ಹಬ್ಬ ನಡೆಯಿತು.

ಕಾರ್ಯಕ್ರಮವು ಅತ್ಯಂತ ಸರಳವಾಗಿತ್ತು. ನಡೆದ ಕಾರ್ಯಕಲಾಪಗಳು 'ನವಯುಗ'ದ ಸಂಸ್ಥಾಪಕ ದಿ| ಎ. ಬಿ. ಶೆಟ್ಟರ ಭಾವಚಿತ್ರ ಅನಾವರಣ. ಚಿನ್ನದ ಹಬ್ಬದ ಸ್ಮರಣ ಸಂಚಿಕೆಯ ಉದ್ಘಾಟನೆ ಮತ್ತು ನವಯುಗಕ್ಕೆ ಸ್ವಸ್ತಿವಾಚನ. ಮೊದಲನೆಯದನ್ನು ಪದ್ಮಶ್ರೀ ಡಾ| ಮಾಧವ ಪೈಯವರು ನೆರವೇರಿಸಿದರು. ಸಂಚಿಕೆಯ ಉದ್ಘಾಟನೆಯನ್ನು ಪ್ರೊ| ಎಸ್. ವಿ. ಪರಮೇಶ್ವರ ಭಟ್ಟರು ಮಾಡಿದರು. ಅಡ್ವೊಕೇಟ್ ಬಡಕ್ಕಿಲ ಕೃಷ್ಣ ಭಟ್ಟ ಮತ್ತು ಕವಿ ಕಯ್ಯಾರ ಕಿಞ್ಞಣ್ಣ ರೈಯವರು ಶುಭಕೋರಿದವರು. ಇದಕ್ಕೆಲ್ಲ ಸಾಕ್ಷಿಯಾಗಿ ನಿಂತವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ| ಡಿ. ಜವರೇಗೌಡರು.

ಸಭಾಭವನದ ಹೊರಗಡೆ 'ನವಯುಗ'ದ ಹಳೆಯ ಸಂಪುಟ ಮತ್ತು ಇತರ ಪ್ರಕಟಣೆಗಳ ಪ್ರದರ್ಶನವೊಂದು ಪ್ರತ್ಯೇಕ ಆಕರ್ಷಣೆ.

ಕು| ಶೋಭಾದೇವಿಯವರು ಪ್ರಾರ್ಥನೆ ಹಾಡಿದ ನಂತರ ಸುವರ್ಣೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು 'ನವಯುಗ' ಸಾಪ್ತಾಹಿಕವು ಸ್ವಾತಂತ್ರ್ಯಪೂರ್ವದಲ್ಲೂ ಸ್ವಾತಂತ್ರ್ಯೋತ್ತರದಲ್ಲೂ ತನ್ನ ವಿಶಿಷ್ಟ ಪರಂಪರೆಯನ್ನು ಬೆಳಗಿ ಬಂದಿದೆಯೆಂದು ಹೇಳಿ. ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಕನ್ನಡ ಸಾಪ್ತಾಹಿಕಗಳಲ್ಲಿ ಇದೇ ಮೊದಲನೆಯದೆಂದು ಸ್ವಾಗತಿಸಿದರು.

'ನವಯುಗ'ದ ಸಂಪಾದಕ-ಸಂಚಾಲಕ ಶ್ರೀ ಹೊನ್ನಯ್ಯ ಶೆಟ್ಟರು 'ನವಯುಗ'ವು ಬದುಕಿಬಂದ ಕಣ್ಣೀರಿನ ಕತೆಯನ್ನು ಸೂಕ್ಷ್ಮವಾಗಿ ತಿಳಿಸಿ, 'ನವಯುಗ'ದ ಬದುಕಿನಲ್ಲಿ ಅದರೊಡನೆ ಬಾಂಧವ್ಯ ಬೆಳೆಸಿದ ನೂರಾರು ಮಹಾಜೀವಗಳಿಗೆ ಅನನ್ಯ ಕೃತಜ್ಞತೆಗಳನ್ನು ಸಲ್ಲಿಸಿದರು.

ಸಮಿತಿಯ ಕಾರ್ಯದರ್ಶಿ ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ಟರು ಸಮಾರಂಭದ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಮತ್ತೊಬ್ಬ ಪ್ರಿನ್ಸಿಪಾಲ್ ಡಾ| ಪಿ. ಗುರುರಾಜ ಭಟ್ಟರು ಸಮಾರಂಭಕ್ಕೆ ಶುಭಕೋರಿ ಬಂದ ಹಲವು ಸಂದೇಶಗಳನ್ನು ಓದಿದರು.

ಪದ್ಮಶ್ರೀ ಪೈಯವರು ದಿ| ಎ. ಬಿ. ಶೆಟ್ಟರ ಭಾವಚಿತ್ರವನ್ನು ಅನಾವರಣ ಮಾಡುತ್ತ ಉತ್ತಮ ಕೆಲಸ ಮಾಡುವವರು ಉತ್ತಮ ಗುಣಗಳನ್ನು ಮೆಚ್ಚುತ್ತಾರೆಂದು ಹೇಳಿ, 'ನವಯುಗ'ದ ಹೊನ್ನಹಬ್ಬ ದಿ| ಶೆಟ್ಟರ ಆತ್ಮಕ್ಕೆ ತೃಪ್ತಿ ತಂದಿದೆಯೆಂದರು. "ದಿ| ಶೆಟ್ಟರು ತನ್ನ ಪ್ರತಿಭೆ. ಪ್ರಾಮಾಣಿಕತೆ ಮತ್ತು ಸಮತೂಕದ ಅಭಿಪ್ರಾಯಗಳಿಂದಾಗಿ ಗಣ್ಯರಾದ ಉದಾರವ್ಯಕ್ತಿ. ಅವರು ಸಂಸ್ಥಾಪಿಸಿದ 'ನವಯುಗ'ವನ್ನು ಶ್ರೀ ಹೊನ್ನಯ್ಯ ಶೆಟ್ಟರು ಅದೇ ತಳಹದಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ಹೊನ್ನಯ್ಯ ಶೆಟ್ಟರು ಪತ್ರಿಕೆಯನ್ನು ನಡೆಸಿ ಹಣಮಾಡಲಿಲ್ಲ; ಹಣ ಮಾಡುವ ರೀತಿಯಲ್ಲಿ ಅವರು ಪತ್ರಿಕೆಯನ್ನು ನಡೆಸಿಕೊಳ್ಳಲೂ ಇಲ್ಲ. ಆದುದರಿಂದಲೇ ಶ್ರೇಷ್ಠ ಪವಿತ್ರ ನೀತಿ-ಧೋರಣೆಗಳಿಂದ 'ನವಯುಗ' ಸಮಾಜದ ಬುದ್ಧಿಜೀವಿಗಳಲ್ಲಿ ಉನ್ನತ ಸ್ಥಾನ ಗಳಿಸಿದೆ" ಎಂದು ಹೇಳಿ, ಶ್ರೀ ಹೊನ್ನಯ್ಯ ಶೆಟ್ಟರ ಸಾಹಸವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

'ನವಯುಗ'ದ ಸುವರ್ಣೋತ್ಸವ ಸಂಚಿಕೆಯನ್ನು ಉದ್ಘಾಟಿಸಿದ ಪ್ರೊ| ಭಟ್ಟರು ಪತ್ರಿಕಾ ಧರ್ಮದ ವಿವಿಧ ದೃಷ್ಟಿಯ ಮೇಲೆ ಬೆಳಕು ಚೆಲ್ಲಿದರು. ಹಿಂದೆ ವಿದ್ಯಾಪ್ರಧಾನವಾಗಿತ್ತು, ಜನಬೋಧಕವಿತ್ತು ಸೇವಾದೀಕ್ಷಿತವಿತ್ತು-ಎಂದು ಹೇಳಿ; ಇಂದದು ವ್ಯಾಪಾರ ಪ್ರಧಾನವಾಗಿದೆ, ಜನರಂಜಕವಾಗಿದೆ. ಜೀವನೋಪಾಯ ದೀಕ್ಷಿತವಾಗಿದೆಯೆಂದು ಹೇಳಿ, ಇವೆರಡು ದೃಷ್ಟಿಗಳ ಸಮನ್ವಯ ಅಗತ್ಯವೆಂದರು. ಸಂಪಾದಕ ಮತ್ತು ಶಿಕ್ಷಕರಿಬ್ಬರೂ ಸತ್ಯಾಗ್ರಹಿಗಳೆಂದ ಅವರು ವಿಚಾರ ಪ್ರಚಾರದಲ್ಲಿವರ ಜವಾಬ್ದಾರಿ ಅತ್ಯಧಿಕವೆಂದರು 'ನವಯುಗ' ತನ್ನ ಉಜ್ವಲ ಪರಂಪರೆಯನ್ನು ಉಳಿಸಿಕೊಂಡು ಬಂದುದರ ಬಗ್ಗೆ ಅಭಿಮಾನಪಟ್ಟ ಪ್ರೊ| ಭಟ್ಟರು ವ್ಯವಹಾರವನ್ನು ಸಂಪೂರ್ಣ ಮರೆತುಬಿಡುವುದು ಸಾಧ್ಯವಾಗದೆಂದರು.

ಪತ್ರಿಕೆಗಳು ಹುಟ್ಟಿ ಸಾಯುವ ಈ ನಾಡಿನಲ್ಲಿ ಸುವರ್ಣೋತ್ಸವ ಕಂಡ ಪತ್ರಿಕೆಯಿರುವುದು ಕನ್ನಡಿಗರ ಭಾಗ್ಯವೆಂದ ಭದ್ರಾವತಿಯ ಎಡ್ವಕೇಟ್ ಶ್ರೀ ಬಡಕ್ಕಿಲ ಕೃಷ್ಣ ಭಟ್ಟರು ಸಾರ್ವಜನಿಕ ಆರೋಗ್ಯ ರಕ್ಷಣೆ ಪತ್ರಿಕೆಯ ಹೊಣೆಯೆಂದರು. ಪ್ರಜಾತಂತ್ರದ ಕುರಿತು ಅರ್ಭಟಿಸುವವರು ವಸ್ತುಸ್ಥಿತಿಯನ್ನು ತಿಳಿದುಕೊಂಡಿಲ್ಲ. ಇದರಿಂದಾಗಿ ಯಾರು ಯಾವುದು ಬಾಳಬೇಕೋ ಅವರೂ ಅದೂ ಬಾಳುತ್ತಿಲ್ಲ; ವಾರಪತ್ರಿಕೆಗಳು ಜನಾಭಿಪ್ರಾಯವನ್ನು ರೂಢಿಸಿಕೊಂಡು ಎಚ್ಚರಾಗಬೇಕು ಎಂದು ಹೇಳಿ ಐವತ್ತು ವರ್ಷಗಳ ನವಯುಗದ ಸಾಧನೆ-ಸಾಹಸಗಳನ್ನು ಮೆಚ್ಚಿ ಅವರು ಶುಭಕೋರಿದರು.

ಕವಿ ಕಯ್ಯಾರರು ಶುಭಾಶಂಸನೆಗೈಯುತ್ತ 'ನವಯುಗ'ದ ಮೂಲಕ ತಾನೂ ಇನ್ನು ಹಲವರೂ ಕವಿ—ಲೇಖಕರಾದುದನ್ನು ಸ್ಮರಿಸಿಕೊಂಡರು ಶ್ರೀ ಕೆ. ಕೆ. ಶೆಟ್ಟರ ತೀವ್ರ ಲೇಖನಿಯನ್ನು ನೆನಪಿಸಿಕೊಂಡ ಅವರು ರಾಷ್ಟ್ರೀಯ ಭಾವನೆಗೆ 'ನವಯುಗ' ಮತ್ತೊಂದು ಹೆಸರು ಎಂದರು. ಪತ್ರಿಕೆಯನ್ನು ನಡೆಸಲು ಶಕ್ತಿ—ಸಾಮರ್ಥ್ಯವುಳ್ಳವರು ಉತ್ತಮ ಪತ್ರಿಕಾ ವ್ಯವಸಾಯಕ್ಕೆ ತಿಲಾಂಜಲಿ ಕೊಟ್ಟಾಗ ಶ್ರೀ ಹೊನ್ನಯ್ಯ ಶೆಟ್ಟರು 'ನವಯುಗ'ವನ್ನು ಮುನ್ನಡೆಸಿಕೊಂಡು ಬರುವುದೇ ದೊಡ್ಡ ಕೆಲಸವೆಂದರು "ನವಯುಗ"ವು ಈ ಭಾಗದ ಕರ್ಣ ಪತ್ರಿಕೆಯಾಗಿ ರೂಪುಗೊಂಡು ಬಾಳುವ ಚಿನ್ನದ ಕನಸನ್ನು ಅವರು ಕಂಡರು.

ಪತ್ರಿಕೆಯೊಂದರ್ಥದ ಜನತಾ ವಿಶ್ವವಿದ್ಯಾಲಯ. ಯಾವ ಕಾರ್ಯವನ್ನು ವಿಶ್ವವಿದ್ಯಾಲಯಗಳು ಮಾಡಲಾರವೋ ಅವನ್ನು ಪತ್ರಿಕೆಗಳು ಮಾಡುತ್ತಿವೆ ಎಂದು ಕುಲಪತಿ ಜವರೇಗೌಡರು ಅಧ್ಯಕ್ಷ ಭಾಷಣದಲ್ಲಿ

(ಒಂಬತ್ತನೇ ಪುಟ ನೋಡಿರಿ)

ಪುತ್ತೂರು IInd Addl ಮುನ್ಸಿಫ್ ಕೋರ್ಟಿನಲ್ಲಿ

Ex. c. 107/1972 O. S. 213/1960

ದೇವರಾಜ ಬುಣ್ಣ — ಅರ್ಜಿದಾರ

ಅಂತಪ್ಪ ಪಾಂಡಿ ಕೂಡಾ — ಎದ್ರಿರು

1ನೇ ಎದ್ರಿ ಅಂತಪ್ಪ ಪಾಂಡಿ, ಸೊಗರಿಮನ ಮಗ, ಬೆಳ್ತಂಗಡಿ ತಾಲ್ಲೂ ಮೇಲಾಡಿ ಗ್ರಾಮದ ಮೇಲಾಡಿ ಮನೆಯಲ್ಲಿರುವವರಿಗೆ ಈ ಮೂಲ್ಕ ತಿಳಿಯ ಪಡಿಸುವುದೇನೆಂದ್ರೆ:

ನೀವು ಕೂಡಾ ಎರಡು ಜನರ ಮೇಲೆ, ಅರ್ಜಿದಾರನು ಪಡೆದ, ಮೇಲಿನ ಡಿಕ್ರಿಯಲ್ಲಿ ದಾಖ್ಲು ಮಾಡಿದ ಅಮಲ್ದಾರಿಯು ತಾ 22.6.1972 ಕ್ಕೆ ನಿಂಮ ಹಾಜರಿ ಬಗ್ಗೆ ಇಟ್ಟಿರುವ್ರದರಿಂದ, ನೀವು ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ, ನಿಂಮ ಆಕ್ಷೇಪಗಳನ್ನು ದಾಖ್ಲು ಮಾಡತಕ್ಕದ್ದೆಂತ ಈ ಮೂಲ್ಕ ತಿಳಿಸೋಣಾಗಿಯದೆ.

(ಕೋರ್ಟು ಹುಕ್ಕುಂ ಪ್ರಕಾರ)

P. A. Ariga
Advocate for Petitioner

Puttur, 28-5-1972

ನೀವು ಬಹುಕಾಲದಿಂದ ನಿರೀಕ್ಷಿಸಿಕೊಂಡಿದ್ದ

ನವಯುಗ ಚಿನ್ನದ ಹಬ್ಬದ ಸಂಪುಟ

ಇದೀಗ ಪ್ರಕಟವಾಗಿದೆ

ಈ ಸುವರ್ಣ ಸಂಪುಟದಲ್ಲಿ ಪ್ರೊ. ಎಚ್. ಸುಂದರರಾವ್, ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ. ನಾರಾಯಣರಾವ್ ಕಲ್ಲೆ ಡಾ. ಶಿವರಾಮ ಕಾರಂತ, ಕಯ್ಯಾರ ಕಿಞ್ಞಣ್ಣ ರೈ. ಸಂಜೀವ ಶೆಟ್ಟಿ, ಶ್ವರ, ಎಂ ರಾಮಚಂದ್ರ, ಎಚ್. ಶಿವರಾಮ ಶೆಟ್ಟಿ, ಗುಂಡ್ಮಿ ಚಂದ್ರಶೇಖರ ಐತಾಳ. ಅಮೃತ ಸೋಮೇಶ್ವರ. ಎಂ. ರಾಜಗೋಪಾಲಾಚಾರ್ಯ, ಸೇವನಮಿರಾಜ ಮಲ್ಲಿ. ಕೆ ಜಿ ಹೆಗಡೆ, ಯ. ನಾ. ಉಡುಪ, ಟಿ. ಕೇಶವ ಭಟ್, ಡಾ. ಸಾ ಶಿ ಮರುಳಯ್ಯ, ಅ. ಕೃಷ್ಣ ಭಟ್ಟ, 'ನವಗಿರಿನಂದ', ಕೆ. ಆರ್. ಹಂದೆ, ಶ್ರೀಮತಿ ಯಶೋದಾ ಎಸ್. ಜೆನ್ನಿ, ಎಂ ಮುಕುಂದ ಪ್ರಭು. ಎಚ್. ಕೆ. ಲಕ್ಕಪ್ಪ ಗೌಡ. ಮ ರಾಜೀವ. ಶ್ರೀಮತಿ ಸುಶೀಲಾ ಕೊಪ್ಪರ, ಗೌರೀಶ ಕಾಯ್ಕಿಣಿ, ಡಾ ಪಿ. ಗುರುರಾಜ ಭಟ್. ಬಡೆಕ್ಕಿಲ ಕೃಷ್ಣ ಭಟ್. ತೆಕ್ಕುಂಜ ಗೋಪಾಲಕೃಷ್ಣ ಭಟ್, ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್ ಮೊದಲಾದ ಪ್ರಸಿದ್ಧರನೇಕರ ವಿಚಾರ ಪ್ರಚೋದಕ ಲೇಖನ, ಕವನ, ಕತೆ. ವಿಮರ್ಶೆ ವಿವೇಚನೆ ಮೊದಲಾದ ವೈವಿಧ್ಯಪೂರ್ಣ ಬರಹಗಳಿವೆ. ನಕ್ಕು ನಗಿಸುವ ಹಲವಾರು ವ್ಯಂಗ್ಯ ಚಿತ್ರಗಳು!

ಪುಟಗಳು: 250ಕ್ಕೂ ಮಿಕ್ಕಿ — ಬೆಲೆ: ರೂ 3-00

ಅಂಚೆ ವೆಚ್ಚ ಸಹಿತ ರೂ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಟಪ್ಪಾಲು ಮೂಲಕ ಕಳುಹಿಸಬಹುದು.

ನವಯುಗ ಆಫೀಸು, ಉಡುಪಿ.

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. c 200/72 in O. S. 443/68

ಕೆ. ಅರ್ಶತ್ — ಡಿಕ್ರಿದಾರರು.

ಪಿ. ವೆಂಕಟೇಶ ಶೆಟ್ಟಿ ಕೂಡಾ — ಎದ್ರಿರು

2ನೇ ಎದ್ರಿ ಪುತ್ತೂರು ತಾಲೂಕು ಪುತ್ತೂರು ಕಸಬಾ ಗ್ರಾಮದ ದರ್ಬೆಯಲ್ಲಿರುವವ. ಅಮ್ಮು ಯಾನೆ ಕಾವೇರಿ ಹೆಂಗ್ಸಿನ ಮಗ ಪಿ ಗೋಪಾಲ ಶೆಟ್ಟಿ ಇವರೀಗೆ

ಮೇಲಿನ ಡಿಕ್ರಿ ಬಾಬ್ತು ಬಹ ಐವೇಜಿನ ಬಗ್ಗೆ ದಾಕಲು ಮಾಡಿದ ಅಮಲ್ದಾರಿ ಅರ್ಜಿಯು ಸ್ಥಿರಾಸ್ತಿ ಏಲಂ ಇಸ್ತಿಯಾರು ಶರ್ತ ನಿರ್ಣಯಿಸುವರೇ ನಿಮ್ಮ ಹಾಜರಾತಿ ಬಗ್ಗೆ ತಾರೀಕು 29-6-1972ಕ್ಕೆ ನ್ಯಾದೆಯಾಗಿರುತ್ತದೆ. ಆದಕಾರಣ ನೀವು ತಾರೀಕು 29-6-1972ರಲ್ಲು ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಹಾಜರಿ ಶಿವಾಯಿ ತೀರ್ಮಾನವಾದೀತು. ತಿಳಿದಿರಲಿ

(Sd) ಪಿ. ರಾಮಚಂದ್ರ ಭಟ್
ಡಿಕ್ರಿದಾರರ ಕಡೆ ಎಡ್ವಕೇಟ್

ಪುತ್ತೂರು 24-5-1972

ಪುತ್ತೂರು IInd Addl. ಮುನ್ಸಿಫ್ ಕೋರ್ಟಿನಲ್ಲಿ

Ex. c. 321/72 O. S. 357/71

ರಾಮಣ್ಣ ಗೌಡ — ಅರ್ಜಿದಾರ

ಶೀಲಾವತಿ. ಸುಬ್ಬಕ್ಕ ಹೆಂಗ್ಸಿನ ಮಗಳು, ಪುತ್ತೂರು ತಾಲೂಕು ನರಿಮೊಗ್ರು ಗ್ರಾಮದ ಅಜಿಲಡ್ಕ ಎಂಬಲ್ಲಿಯವಳು — ಎದ್ರಿ.

ಸದ್ರಿ ಎದ್ರಿಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ —

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಚರಸೊತ್ತುಗಳ ಏಲಂ ಬಗ್ಗೆ ಅರ್ಜಿ ಮಾಡಿದ್ದಾನೆ. ಆದ್ರಿಂದ ವಿಕ್ರಯದ ಇಸ್ತಿಹಾರಿನ ಶರ್ತುಗಳನ್ನು ನಿರ್ಣಯಿಸಲಿಕ್ಕೆ 1972ನೇ ಇಸವಿ ಜೂನ್ ತಿಂಗಳ 23ನೇ ತಾರೀಕು ನಿಶ್ಚೈಸೋಣಾಗಿಯದೆ ಎಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ

॥ ಕೋರ್ಟು ಹುಕ್ಕುಂ ಪ್ರಕಾರ ॥

P. A. ARIGA,
Advocate for petitioner.

Puttur, 30-5-1972

ಇದು ನಮಗೆ ಅಗತ್ಯ—

ಆಹಾರದಲ್ಲಿ ಬದಲಾವಣೆ

ಅಕ್ಕಿ ಎಲ್ಲರಿಗೂ ಬೇಕಾದ ಆಹಾರ ಧಾನ್ಯ. ನಮ್ಮೆಲ್ಲರ ಆಹಾರದಲ್ಲಿ ಅಕ್ಕಿಗೇ ಪ್ರಾಧಾನ್ಯವಿರುವುದೂ ನಿಜ.

ಆದರೆ ಹೆಚ್ಚಿನವರು ಹಾಲು, ಹಣ್ಣು ಹಂಪಲು, ಸೊಪ್ಪು, ಆಲೂಗೆಡ್ಡೆ, ಗೆಣಸು, ಮರಗೆಣಸು, ಮೊಟ್ಟೆ, ಮೀನು, ಮಾಂಸ ಮುಂತಾದ ಪೌಷ್ಟಿಕ ಆಹಾರ ಪದಾರ್ಥಗಳನ್ನು ತಿನ್ನಬೇಕಾದಷ್ಟು ಪ್ರಮಾಣದಲ್ಲಿ ತಿನ್ನುತ್ತಿಲ್ಲ. ಸತ್ವಯುಕ್ತವಾದ ಪೋಷಕಾಂಶಗಳುಳ್ಳ ಇನ್ನೆಷ್ಟೋ ಆಹಾರ ಪದಾರ್ಥಗಳಿವೆ. ಆದರೆ ಎಷ್ಟು ಜನ ಅವುಗಳ ಉಪಯೋಗ ಬಲ್ಲರು?

ಆಹಾರದ ಕೊರತೆ ಇಂದು ಎಲ್ಲರನ್ನೂ ಕಾಡುತ್ತಿದೆ. ಇಂತಹ ಸಮಯದಲ್ಲಿ ಅಕ್ಕಿ, ಗೋಧಿ ಮುಂತಾದ ಧವಸ ಧಾನ್ಯಗಳ ಉಪಯೋಗ ಕಡಿಮೆಮಾಡಿ, ಬದಲಿಗೆ ಬೇರೆ ಆಹಾರ ಪದಾರ್ಥಗಳನ್ನು ತಿನ್ನಲು ಕಲಿಯುವುದು ಅತ್ಯಂತ ಅಪೇಕ್ಷಣೀಯವಾಗಿದೆ. ಇದು ಆರ್ಥಿಕ ದೃಷ್ಟಿಯಿಂದ ಲಾಭದಾಯಕ. ಆರೋಗ್ಯ ದೃಷ್ಟಿಯಿಂದ ಉತ್ತಮ.

ಶಾಲಾ ಮಕ್ಕಳಿಗೆ ಆಹಾರ

ಜನರ ಆಹಾರ ಪದ್ಧತಿ ಎಳೆಯ ವಯಸ್ಸಿನಲ್ಲೇ ರೂಢಿಗೊಳ್ಳುವುದು ಸ್ವಾಭಾವಿಕ. ಆದ ಕಾರಣ ಸಣ್ಣ ಮಕ್ಕಳಿಗೆ ಹೊಸ ಬಗೆಯ ಆಹಾರ ಪದಾರ್ಥಗಳ ಅಭ್ಯಾಸ ಮಾಡಿಸುವುದು ಅಗತ್ಯ. ವಿದ್ಯಾರ್ಥಿಗಳಿಗೆ ಆಹಾರವನ್ನೊದಗಿಸುವುದು ಶಾಲೆಯ ಮುಖ್ಯ ಚಟುವಟಿಕೆಗಳಲ್ಲಿ ಒಂದಾಗಿರಬೇಕೆಂದು ಪ್ರಪಂಚದಾದ್ಯಂತ ಅಭಿಪ್ರಾಯ ಪಡಲಾಗುತ್ತಿದೆ. ದೇಶದಲ್ಲಿ ಕಡ್ಡಾಯ ಶಿಕ್ಷಣ ಕಾರ್ಯಕ್ರಮ ಯಶಸ್ವಿಯಾಗ ಬೇಕಿದ್ದರೆ ಶಾಲಾ ಉಪಾಹಾರ ಕಾರ್ಯಕ್ರಮ ವ್ಯಾಪಕವಾಗಿ ಹಬ್ಬಬೇಕು. ಹಸಿವ ಹೊಟ್ಟೆಗೆ ಪಾಠ ರುಚಿಸದು. ಶಾಲೆಗಳಲ್ಲಿ ಆಹಾರ ಒದಗಿಸುವುದರಿಂದ ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರವನ್ನು ಪೂರೈಸಿದಂತಾಗುವುದಲ್ಲದೆ ಶಿಕ್ಷಣದ ಮಟ್ಟವನ್ನೂ ಸುಧಾರಿಸಿದಂತಾಗುವುದು.

ಈ ಕಾರ್ಯಕ್ರಮದಿಂದ ಮಕ್ಕಳಿಗೆ ಹೊಸ ಬಗೆಯ ಆಹಾರ ಪದಾರ್ಥಗಳು ರೂಢಿಯಾಗಲು ಸಹಾಯವಾಗುತ್ತದೆ. ಎಲ್ಲರೂ ಒಟ್ಟಿಗೆ ಕೂತು ತಿನ್ನುವುದರಿಂದ ಮಕ್ಕಳು ಒಳ್ಳೆಯ ನಡವಳಿಕೆಯನ್ನು ಕಲಿಯುವಂತಾಗುತ್ತದೆ. ಶಾಲೆಯಲ್ಲಿ ಸ್ನೇಹವಾತಾವರಣ ನೆಲೆಗೊಳ್ಳುತ್ತದೆ. ಹೌದು. ಇದೀಗ ದೇಶದಾದ್ಯಂತ ಹೆಚ್ಚಿನ ಶಾಲೆಗಳಲ್ಲಿ ಮಧ್ಯಾಹ್ನ ಉಪಾಹಾರದ ಕಾರ್ಯಕ್ರಮ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಇವನ್ನು ವ್ಯವಸ್ಥೆಗೊಳಿಸುವವರ ಹೊಣೆ ದೊಡ್ಡದು. ಬೆಳೆಯುತ್ತಿರುವ ಮಕ್ಕಳಿಗೆ ಪೌಷ್ಟಿಕ ಆಹಾರವನ್ನೊದಗಿಸುವ ಜವಾಬ್ದಾರಿ ಸಣ್ಣದೇನಲ್ಲ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಆಹಾರ ಶಾಖೆಯು ನಾಲ್ಕು ಆಹಾರ ವಿಜ್ಞಾನ ಸಂಸ್ಥೆಗಳನ್ನು ಸ್ಥಾಪಿಸಿದೆ. ದೇಶದ ಹಲವೆಡೆಗಳಲ್ಲಿ ಆಹಾರ ವಿಜ್ಞಾನ ಶಾಲೆಗಳನ್ನು ಸ್ಥಾಪಿಸುವ ಯೋಜನೆಯೊಂದನ್ನು ಸದ್ಯ ಪರಿಶೀಲಿಸಲಾಗುತ್ತದೆ. ಈ ಶಾಲೆಗಳಲ್ಲಿ ಪೌಷ್ಟಿಕ ಅಡಿಗೆ ವಿಧಾನಗಳ ಕುರಿತು ತರಬೇತಿ ನೀಡಲಾಗುವುದು. ಇವು ಶಾಲಾ ಉಪಾಹಾರ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ನವೀನ ಅಡಿಗೆ ಕೇಂದ್ರಗಳಾಗಿಯೂ ಕೆಲಸ ಮಾಡುವುವು. ಕಡಿಮೆ ವೆಚ್ಚದಲ್ಲಿ ಪೌಷ್ಟಿಕ ಆಹಾರ ತಯಾರಿಸುವ ವಿಧಾನಗಳನ್ನು ಜನಪ್ರಿಯಗೊಳಿಸುವುದರಲ್ಲಿ ಈ ಕೇಂದ್ರಗಳು ಮಹತ್ವದ ಪಾತ್ರ ವಹಿಸುತ್ತವೆ.

ಹೊಸ ಬಗೆಯ ಪೌಷ್ಟಿಕ ಆಹಾರ

ಭಾರತ ಸರ್ಕಾರವು ಯೂನಿಸೆಫ್ ಮತ್ತು ವನಸ್ಪತಿ ಉದ್ಯಮಗಳ ಸಹಕಾರದಿಂದ, ಕೊಬ್ಬಿನಂಶ ಕಡಿಮೆ ಇರುವ ನೆಲಗಡಲೆ ಹಿಟ್ಟಿನ ತಯಾರಿಗೆ ಎರಡು ಪ್ರಾರಂಭಿಕ ಕಾರ್ಖಾನೆಗಳನ್ನು ಸ್ಥಾಪಿಸಿದೆ. ಪ್ರತಿಯೊಂದು ಕಾರ್ಖಾನೆಯೂ ವರ್ಷಕ್ಕೆ ೬೦೦೦ ಟನ್ ಹಿಟ್ಟನ್ನು ಉತ್ಪಾದಿಸುವುದು. ಇಲ್ಲಿ ತಯಾರಾದ ಹಿಟ್ಟಿನಿಂದ ಹಲವು ಬಗೆಯ ಹೊಸ ಆಹಾರ ಪದಾರ್ಥಗಳನ್ನು ತಯಾರಿಸಬಹುದು. ಮಿಸಿಫೋರ್ಟಿಫೈಡ್ ಆಹಾರ, ಪೌಷ್ಟಿಕಾಂಶವುಳ್ಳ ಬಿಸ್ಕೆಟ್, ಮರಗೆಣಸಿನ ಮ್ಯಾಕರೋನಿ ಇತ್ಯಾದಿಗಳಿಗೆ ನೆಲಗಡಲೆ ಹಿಟ್ಟನ್ನು ಉಪಯೋಗಿಸಲಾಗುತ್ತದೆ. ನಮ್ಮ ಆಹಾರದ ಜೊತೆಗೆ ನಿತ್ಯ ಒಂದೆರಡು ಔನ್ಸು ವಿವಿಧೋದ್ದೇಶ ಆಹಾರವನ್ನು ಸೇವಿಸುವುದರಿಂದ ದೇಹಕ್ಕೆ ಅಗತ್ಯವಿರುವಷ್ಟು ಸಸಾರಜನಕ, ಜೀವಾತು ಮತ್ತು ಖನಿಜಾಂಶಗಳು ದೊರೆಯುತ್ತವೆ. ಇತ್ತೀಚೆಗೆ ಜನಪ್ರಿಯವಾಗುತ್ತಿರುವ ಇನ್ನೊಂದು ಆಹಾರ ವಸ್ತು— ಪೌಷ್ಟಿಕ ಗೋಧಿಹಿಟ್ಟು. ನೆಲಗಡಲೆ ಹಿಟ್ಟಿನ ಮಿಶ್ರಣದಿಂದ ಇದನ್ನು ತಯಾರಿಸಲಾಗುತ್ತದೆ. ಸಸಾರಜನಕಯುಕ್ತವಾದ ಈ ಹಿಟ್ಟಿನಿಂದ ರುಚಿಕರವಾದ ಚಪಾತಿ, ಪೂರಿ ಇತ್ಯಾದಿಗಳನ್ನು ತಯಾರಿಸಬಹುದು.

ಪೌಷ್ಟಿಕ ಆಹಾರ ಪ್ರಚಾರ

ಪೌಷ್ಟಿಕ ಆಹಾರವನ್ನು ಜನಪ್ರಿಯಗೊಳಿಸಲಿಕ್ಕಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಸಮತೋಲನದ ಆಹಾರ ತಯಾರಿಸುವ ವಿಧಾನಗಳನ್ನು ಪ್ರಚುರಪಡಿಸಲಿಕ್ಕಾಗಿ ಆಹಾರ ಶಾಖೆಯು ಸಂಚಾರೀ ವಾಹನಗಳನ್ನು ಉಪಯೋಗಿಸುತ್ತಿದೆ. ಈ ವಾಹನಗಳು ಸಮಾಜಕಲ್ಯಾಣ ಸಂಸ್ಥೆಗಳ, ಕಾರ್ಖಾನೆಗಳ್ಳಿನ ಉಪಾಹಾರ ಗೃಹಗಳ, ವಿಸ್ತರಣ ತರಬೇತಿ ಕೇಂದ್ರಗಳ, ಕೃಷಿ ವಿಸ್ತರಣ ಬ್ಲಾಕುಗಳ ಹಾಗೂ ವಿಜ್ಞಾನಮಂದಿರಗಳ ಸಂಪರ್ಕ ಬೆಳೆಸಿಕೊಂಡು ಕೆಲಸ ಮಾಡುತ್ತಿವೆ.

ಆಹಾರ ಶಾಖೆಯು ಆಹಾರ ಪದಾರ್ಥಗಳ ಸಂರಕ್ಷಣೆಯ ಬಗ್ಗೆ ವಿಶೇಷ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿದೆ. ದೇಶದಾ

(ಎಂಟನೇ ಪುಟ ನೋಡಿರಿ)

ಸ್ವಂತ ಉದ್ಯೋಗಕ್ಕಾಗಿ ಕೆನರಾ ಬ್ಯಾಂಕು ನಿಮಗೆ ಸಹಾಯ ಮಾಡುವುದು

ಸ್ವಂತ ಉದ್ಯೋಗ ಮಾಡುವ ಆಕಾಂಕ್ಷೆ ಇರುವ ಅನುಭವಸ್ಥ ಮತ್ತು ಸಾಹಸಿಕ ಜನರಿಗೆ ಅಥವಾ ಚಾಲ್ತಿಯಲ್ಲಿರುವ ತಮ್ಮ ವ್ಯವಹಾರವನ್ನು ಅಭಿವೃದ್ಧಿಗೊಳಿಸ ಬೇಕೆಂಬ ಇಚ್ಛೆ ಇರುವವರಿಗೆ ಸಹಾಯ ಮಾಡುವ ಉತ್ತಮ ಪರಂಪರೆಯನ್ನು ಕೆನರಾ ಬ್ಯಾಂಕು ಹಲವಾರು ವರ್ಷಗಳಿಂದ ರೂಪಿಸಿಕೊಂಡು ಬಂದಿದೆ.

ವಿವರಗಳಿಗೆ ನಿಮಗೆ ಸಮೀಪದ ನಮ್ಮ ಶಾಖೆಯ ಸಂಪರ್ಕ ಬೆಳೆಸಿರಿ

ಕೆನರಾ ಬ್ಯಾಂಕ್

ಪ್ರಧಾನ ಕಚೇರಿ: ಬೆಂಗಳೂರು — 2

ಡಾ। ಕೊ. ವ್ಯಾ. ರಮೇಶ

ತುಳುವ-ಒಂದು ಐತಿಹಾಸಿಕ ವ್ಯಕ್ತಿಚಿತ್ರ

ಇಂದು ಮಾನವ ಜೀವನದ ಅನೇಕ ಕ್ಷೇತ್ರಗಳಲ್ಲಿ ತನ್ನ ನೆರೆ ಹೊರೆಯವರಿಗಿಂತಲೂ ಹೆಚ್ಚು ಬಿರುಸಾಗಿ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ತುಳುವನು ಉರುಳಿ ಹೋದ ಇಪ್ಪತ್ತೆಂಟು ಶತಮಾನಗಳಲ್ಲಿ ನಡೆದು ಬಂದಿರುವ ದಾರಿಗಳ ಸ್ಥೂಲ ಪರಿಚಯವನ್ನು ಡಾ। ರಮೇಶರು ಈ ಪುಟ್ಟ ಲೇಖನದಲ್ಲಿ ಮಾಡಿಕೊಟ್ಟಿದ್ದಾರೆ.

ಇಂದಿಗೆ ಸುಮಾರು ಇಪ್ಪತ್ತೆಂಟು ಶತಮಾನಗಳಷ್ಟು ಹಿಂದಿನ ಇತಿಹಾಸ ಪೂರ್ವಕಾಲದ ಮಾತು. ಅಂದಿನ ವರೆಗೆ ನಮ್ಮ ತುಳುನಾಡಿನ ಮಣ್ಣಿನ ಮೇಲೆ ಮಾನವನು ಕಾಲಿಟ್ಟಿರಲಿಲ್ಲ. ಆದರೆ ಆ ವೇಳೆಗೆ ಪರದೇಶಗಳಿಂದ ಹೊಸ ನೆಲೆಗಳನ್ನೂ ಹಚ್ಚ ಹಸುರು ಹುಲ್ಲುಗಾವಲುಗಳನ್ನೂ ಹುಡುಕುತ್ತ ವಲಸೆ ಬಂದು ದಾಳಿ ಮೇಲೆ ದಾಳಿ ನಡೆಸಲಾರಂಭಿಸಿದ ವಿವಿಧ ಜನಾಂಗಗಳ ಒತ್ತಡದಿಂದಾಗಿ ಉತ್ತರ ಭಾರತದ ದ್ರಾವಿಡ ಜನಾಂಗದವರೂ ದಕ್ಷಿಣವನ್ನು ಮರೆಹೊಕ್ಕರಾಗಿ, ದಕ್ಷಿಣದಿಂದ ನೆಲೆಕಿತ್ತ ದ್ರಾವಿಡರ ಹಲವು ಹಿಂಡುಗಳು ಹೊಸ ನೆಲೆಗಳ ಅನ್ವೇಷಣೆಗೆ ಹೊರಡುವುದು ಅನಿವಾರ್ಯವೇ ಆಯಿತು.

ಅಂದಿನ ಪಶ್ಚಿಮ ಘಟ್ಟವೂ ಕರಾವಳಿ ಪ್ರದೇಶವೂ ಇಂದಿಗಿಂತ ಹೆಚ್ಚು ದಟ್ಟವಾದ ಕಾಡುಗಳಿಂದ, ಕ್ರೂರ ಮೃಗಗಳಿಂದ ಕೂಡಿತ್ತು. ಇತಿಹಾಸ ಪೂರ್ವ ಕಲ್ಪಿದ ಶಿಲಾಯುಗಗಳ ಮಾನವನು ಆ ಕಾಡುಗಳನ್ನು ಹೊಕ್ಕು, ಘಟ್ಟ ಹತ್ತಿ ಇಳಿದು ಕರಾವಳಿಯನ್ನು ಪ್ರವೇಶಿಸ ಬಹುದಾದ ಸಾಧ್ಯತೆಗಳೇ ಇರಲಿಲ್ಲ. ಆದರೆ, ಕ್ರಿ. ಪೂ. ೯-೮ನೆಯ ಶತಮಾನಗಳ ದ್ರಾವಿಡನಾದರೆ, ಕೈಯಲ್ಲಿ ಕಬ್ಬಿಣದ ಕೊಡಲಿಯನ್ನೂ ಹಿಡಿದವನಾಗಿದ್ದ. ಆ ಕೊಡಲಿಯ ಸಹಾಯದಿಂದ ಗಿಡ ಮರಗಳನ್ನೂ ಕಡಿದು ದಾರಿ ಮಾಡಿ ಘಟ್ಟ ಹತ್ತಿ ಇಳಿದು ಕರಾವಳಿಯ ತುಳುನಾಡಿನಲ್ಲಿ ಮೊದಲ ಬಾರಿಗೆ ಮಾನವನು ಕಾಲಿಟ್ಟದ್ದು ಸುಮಾರು ಇಪ್ಪತ್ತೆಂಟು ಶತಮಾನಗಳ ಹಿಂದೆ ಎಂದು ಊಹಿಸಲು ಪುರಾತನ ಆಧಾರಗಳಿವೆ. ಕಬ್ಬಿಣದ ಕೊಡಲಿಯನ್ನೂ ಹಿಡಿದ ಆ ಆದಿ ಮಾನವನ ನೆನಪಿನಿಂದಲೇ ಆ ನಂತರ ಕಾಲದಲ್ಲಿ ಪಶ್ಚಿಮ ಕರಾವಳಿ ಪ್ರದೇಶಕ್ಕೆ 'ಪರಶುರಾಮ ಕ್ಷೇತ್ರ'ವೆಂಬ ಹೆಸರು ಹುಟ್ಟಿಕೊಂಡದ್ದು. ಅಂದು ಆ ಪರಶುರಾಮನು ಬಿತ್ತಿದ ಬೀಜವೇ ಶತಮಾನಗಳ ಏರುಪೇರುಗಳನ್ನೂ ಕಷ್ಟ ನಷ್ಟಗಳನ್ನೂ ಲೆಕ್ಕಿಸದೆ ಬೆಳೆದು ಇಂದು ತುಳುವನ ಬಹುಶಾಖಾ ಸಾಂಸ್ಕೃತಿಕ ವೃಕ್ಷವಾಗಿ ಹರಡಿ ನಿಂತಿದೆ.

ಆದಿ ಮಾನವನು ತುಳುನಾಡಿನಲ್ಲಿ ನೆಲೆನಿಂತಾಗಿನಿಂದೀಚೆಗಿನ ಕೆಲವು ಶತಮಾನಗಳ ವರೆಗಿನ ಅವನ ವ್ಯಕ್ತಿ ಚಿತ್ರ ಹಾಗೂ ಅವನ ಸಾಹಸ, ಸಾಧನೆಗಳು ಇತಿಹಾಸದ ಬೆಳಕಿನಿಂದಾಚೆಗಿನ ಅಜ್ಞಾನದ ಕತ್ತಲಿನಲ್ಲಿ ಮುಳುಗಿ ಹೋಗಿವೆ. ಕ್ರಿ. ಪೂ ೩ನೆಯ ಶತಮಾನದ ಅಶೋಕನ ಪ್ರಾಕೃತ ಶಾಸನಗಳಲ್ಲಿ ಅವನನ್ನು 'ಸತಿಯ ಪುತ್ರ'ನೆಂದು ಕರೆಯಲಾಗಿದೆ. ಈ ಹೆಸರು ಸಂಸ್ಕೃತದ 'ಸತ್ಯ ಪುತ್ರ'ದ ಭ್ರಷ್ಟರೂಪವಿರಬೇಕು. ಸಹ್ಯಾದ್ರಿಗೂ ಪಶ್ಚಿಮ ಸಮುದ್ರಕ್ಕೂ ನಡುವಣ ಕರಾವಳಿಯ ನಿವಾಸಿಯೆಂಬ ಕಾರಣದಿಂದ ಅವನಿಗೆ ಸಹ್ಯಪುತ್ರ ಅಥವಾ ಸತಿಯಪುತ್ರನೆಂಬ ಹೆಸರು ಹುಟ್ಟಿಕೊಂಡಿರಬೇಕು.

ನಮ್ಮ ತಾಯ್ನೆಲಕ್ಕೆ ತುಳುನಾಡೆಂಬ ಹೆಸರಿದ್ದುದರ ಪ್ರಾಚೀನತಮ ಉಲ್ಲೇಖ ದೊರೆಯುವುದು ಕ್ರಿಸ್ತ ಶತಕದ ಮೊದಲ ಮೂರು ಶತಮಾನಗಳಲ್ಲಿ ತಮಿಳು ನಾಡಿನಲ್ಲಿ ಪ್ರಚಲಿತವಾಗಿದ್ದ ಸಂಘಕಾಲದ ತಮಿಳು ಪದ್ಯಗಳಿಂದ. ಆ ಕಾಲದ ತುಳುನಾಡಿನ ಒಂದು ಜನಾಂಗದ ತುಳುವನಿಗೆ 'ಕೋಶರ್' ಎಂಬ ಹೆಸರಿತ್ತು. ತನ್ನ ಮೈಯನ್ನು ವಿವಿಧ ಸುವರ್ಣಾಭರಣಗಳಿಂದ ಅಲಂಕರಿಸಿಕೊಳ್ಳುತ್ತಿದ್ದ ಆ ತುಳುವನು ವೃತ್ತಿಯಿಂದ ಕ್ಷಾತ್ರ ಧರ್ಮದವನಿದ್ದು, ಹಲವು ಬಾರಿ ತಮಿಳು ನಾಡಿನ ಗಡಿ ಪ್ರಾಂತಗಳ ಅರಸುಗಳ ಮೇಲೆ ದಂಡೆತ್ತಿ ಹೋಗಿದ್ದನಲ್ಲದೆ, ಚೇರ, ಚೋಳ, ಪಾಂಡ್ಯರ ಸೈನ್ಯಗಳ ಮುಂದಾಳಾಗಿಯೂ ಸೇವೆಸಲ್ಲಿಸಿದ್ದನು. ಅವನು ಹೂಡಿದ ಯುದ್ಧಗಳ ಪರಿಣಾಮವಾಗಿ ಅವನ ಕೈವಶವಾದ ಅಪಾರ ಪರಸಂಪತ್ತುಗಳಿಂದ ತುಳುನಾಡು ಸಿರಿಬೀಡೆನಿಸಿ ಕೊಂಡಿತ್ತು. ರಣರಂಗಗಳಲ್ಲಿ ಅವನು ಬಳಸಿದ ಆನೆಗಳ, ರಥಗಳ ಮುಂದೆ ವೈರಿ ಸೈನ್ಯಗಳು ದಿಕ್ಕು ಪಾಲಾಗುತ್ತಿದ್ದವು.

ಹೀಗೆ ಯೋಧನಾಗಿ ಮೆರೆದ ತುಳುವನು ಕ್ರಿ. ಶ. ೪ನೆಯ ಶತಮಾನದ ಮಧ್ಯಭಾಗದಲ್ಲಿ ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಂಡು ಬನವಾಸಿಯ ಕದಂಬರ ಸಾಮಂತನಾಗ ಬೇಕಾಯಿತು. ಆದರೂ ಅದರ ಪರಿಣಾಮವಾಗಿ ತುಳುವನು ತನ್ನ ನಾಡಿನಲ್ಲಿ ಸ್ಥಾಪಿಸಿದ್ದ ಆಳುಪ ಮನೆತನದ ಪ್ರಭಾವವು ಹೊರನಾಡುಗಳಲ್ಲಿ ಇನ್ನಷ್ಟು ಹರಡಿತೇ ವಿನಹ ಕುಗ್ಗಲಿಲ್ಲ. ಕ್ರಿ. ಶ. ೭-೮ನೆಯ ಶತಮಾನಗಳಲ್ಲಿ ತುಳುವನು ವಾತಾಪಿಯ ಚಲುಕ್ಯರ ಮಿತ್ರನಾಗಿ ಬನವಾಸಿ ಮತ್ತು ಸಾಂತಳಿಗೆ ನಾಡುಗಳ ಒಡೆಯನಾಗಿಯೂ ಮೆರೆಯುವಂತಾಯಿತು.

ಚಲುಕ್ಯರ ಪತನವಾದ ಮೇಲೆ ಅಂದಿನ ರಾಜಕೀಯ ಪ್ರಭಾವಗಳಿಂದಾಗಿ ಅವನು ಸ್ವಲ್ಪ ಕಾಲ ತಮಿಳುನಾಡಿನ ಪಲ್ಲವರ ಹಾಗು ಆ ನಂತರ ಮಾನ್ಯಖೇಟದ ರಾಷ್ಟ್ರಕೂಟರ ಸಾಮಂತನಾಗಿ ಉಳಿಯಬೇಕಾಯಿತು. ಚಲುಕ್ಯರ ಮತ್ತು ಪಲ್ಲವರ ಸೈನ್ಯಗಳ ಮುಂದಾಳಾಗಿ ದೂರದ ಆಂಧ್ರ ಪ್ರದೇಶದಲ್ಲೂ ತನ್ನ ಶೌರ್ಯವನ್ನು ಮೆರೆಸಿದ್ದನು ಕ್ರಿ ಶ ೭-೮ನೆಯ ಶತಮಾನಗಳ ತುಳುವ.

ಕ್ರಿ ಶ ೮ನೆಯ ಶತಮಾನದ ಕೊನೆಯ ವೇಳೆಗೆ ರಾಷ್ಟ್ರಕೂಟರ ಕ್ರೋಧಕ್ಕೆ ಬಲಿಯಾದ ತುಳುವನು ತನ್ನ ಹೊರನಾಡ ಸ್ವಾಮ್ಯಗಳನ್ನೆಲ್ಲ ಕಳೆದುಕೊಂಡಾಗ ಅವನು ಪುನಃ ಕೇವಲ ತುಳುನಾಡಿನವನೇ ಆದನು. ಈ ಘಟನೆಯಿಂದ ತುಳುನಾಡಿನುದ್ದಕ್ಕೂ ಹರಡಿದ, ಆಳುಪ ಸಿಂಹಾಸನಕ್ಕೆ ಸಂಬಂಧಿಸಿದ ಅಂತರ್ಯುದ್ಧಗಳಲ್ಲಿ ಅಸುನೀಗಿದ ತುಳುವರ ಸಂಖ್ಯೆ ಎಷ್ಟೋ? ಹಾಗೆ ಮಡಿದ ಕೆಲ ಮುಖ್ಯ ಯೋಧರ ಸ್ಮರಣಾರ್ಥವಾಗಿ ಅಂದಿನ ತುಳುವನು ಬರೆದಿಟ್ಟುಹೋದ ವೀರಗಲ್ಲುಗಳು ಇಂದಿಗೂ ತುಳುನಾಡಿನ ಕೆಲವೆಡೆಗಳಲ್ಲಿ ಕಾಣಸಿಗುತ್ತವೆ

ಆದರೂ, ರಾಷ್ಟ್ರಕೂಟರ ಕೈಯಲ್ಲಿ ಅವನಿಗಾದ ಸೋಲಿನಿಂದ ಗಳಿಸಿಕೊಂಡ ರಾಜಕೀಯ ಸ್ವಾತಂತ್ರ್ಯವನ್ನು ತುಳುವನು, ಕೆಲವೊಂದು ಅನತಿದೀರ್ಘ ಸಂದರ್ಭಗಳನ್ನು ಬಿಟ್ಟರೆ, ಕ್ರಿ ಶ ೧೪ನೆಯ ಶತಮಾನದ ಮಧ್ಯಕಾಲದ ವರೆಗೂ ಯಶಸ್ವಿಯಾಗಿ ಉಳಿಸಿಕೊಂಡು ಬಂದಿದ್ದನು. ಒಂದು ದೃಷ್ಟಿಯಿಂದ ಹೇಳುವುದಾದರೆ, ತುಳುವನ ನಡೆನುಡಿ ಸಂಸ್ಕೃತಿಗಳಲ್ಲಿ ಇಂದು ಎದ್ದು ಕಾಣುವ ಪ್ರಾಂತೀಯ ವೈಶಿಷ್ಟ್ಯಗಳು ತಲೆದೋರಲಾರಂಭಿಸಿದ್ದು, ಕ್ರಿ ಶ ೯ನೆಯ ಶತಮಾನದಿಂದ. ಅಂದಿನಿಂದೀಚೆಗಿನ ಶತಮಾನಗಳಲ್ಲಿ ಅವನು ಬರೆದಿಟ್ಟು ಹೋದ ಶಾಸನಗಳ ಭಾಷೆ ಮತ್ತು ಪಾಠರಚನೆಗಳ ಅಧ್ಯಯನದಿಂದ, ಅವುಗಳಿಂದ ಮೂಡಿಬರುವ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿಯ ಅವನ ಜೀವನಚಿತ್ರದಿಂದ ಈ ಅಂಶವು ಸ್ಪಷ್ಟವಾಗಿಯೇ ತಿಳಿದುಬರುತ್ತದೆ.

ಆ ಆರು ಶತಮಾನಗಳ ರಾಜಕೀಯ ಸ್ವಾತಂತ್ರ್ಯದ ಕಾಲದಲ್ಲಿ ತುಳುವನು ತನ್ನ ಬುದ್ಧಿಶಕ್ತಿ, ಪರಿಸ್ಥಿತಿ ಪರಿಸರಗಳಿಗನುಗುಣವಾಗಿ, ಆಡಳಿತ, ವ್ಯಾಪಾರ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಹಲವು ರೀತಿಯ ಸಂಘಸಂಸ್ಥೆಗಳನ್ನೂ, ಕಟ್ಟುಕಟ್ಟಳೆಗಳನ್ನೂ ರೂಪಿಸಿಕೊಂಡನು. ಹೊರನಾಡಿನವರು ಅವನ ಮೇಲೆ ಬಿದ್ದು ದಾಳಿಮಾಡಿದ ಸಂದರ್ಭಗಳು ತೀರಾ ವಿರಳ. ಅವನೂ ಸಹ ಇತರರ ಗೋಜಿಗೆ ಹೋಗದೆ, ತನ್ನ ನಾಡಿನ, ತನ್ನವರ ಏಳಿಗೆಯತ್ತ ಮಾತ್ರ ತನ್ನ ಗಮನವನ್ನೂ, ದುಡಿಮೆಯನ್ನೂ ಹರಿಸಿದ್ದನು. ಆ ಶತಮಾನಗಳಲ್ಲಿ ತುಳುನಾಡಿನ ಹಲವೆಡೆಗಳಲ್ಲಿ ಅಸ್ತಿತ್ವಕ್ಕೆ ಬಂದ ಪಟ್ಟಣಗಳ, ನಗರಗಳ, ಅಸಂಖ್ಯಾತ ಗುಡಿಗೋಪುರಗಳ, ದೇಗುಲ ಬಸದಿಗಳ ವೈಭವಗಳನ್ನು ಸಾರುವ ಐತಿಹಾಸಿಕ ಅವಶೇಷಗಳು ಕೆಲವೆಡೆಗಳಲ್ಲಿ ಅಲ್ಪಸ್ವಲ್ಪವೋ ಇತರೆಡೆಗಳಲ್ಲಿ ಅದೃಷ್ಟವಶಾತ್ ಸಂಪೂರ್ಣವಾಗಿಯೋ ಇಂದಿಗೂ ಉಳಿದುಬಂದಿವೆ.

ಕ್ರಿ ಶ ೧೪ನೆಯ ಶತಮಾನದಲ್ಲಿ ಮೊದಲು ಹೊಯ್ಸಳರು ಅನಂತರ ವಿಜಯನಗರ ಸಾಮ್ರಾಜ್ಯದವರು ತುಳುನಾಡನ್ನು ಅಧೀನಪಡಿಸಿಕೊಂಡರು. ಅಂದು ಕಳೆದುಕೊಂಡ ರಾಜಕೀಯ ಸ್ವಾತಂತ್ರ್ಯವನ್ನು ತುಳುವನು ಪುನಃ ಗಳಿಸಿಕೊಳ್ಳಲಾರದೆ ಹೋದನು. ಆದರೂ, ಅವನ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಕ್ರಿ ಶ ೯-೧೪ನೆಯ ಶತಮಾನಗಳು ಪರಿಣಾಮಕಾರಿಯಾದವು. ಹೊಯ್ಸಳರ ಮತ್ತು ವಿಜಯನಗರದವರ ಕಾಲದಲ್ಲಿ ತುಳುವನು ಆ ಮೊದಲೇ ರೂಪಿಸಿಕೊಂಡಿದ್ದ ವಿಶಿಷ್ಟ ಕಟ್ಟುಕಟ್ಟಳೆಗಳನ್ನೂ, ಸಂಘಸಂಸ್ಥೆಗಳನ್ನೂ ಮತ್ತಷ್ಟು ಪುಷ್ಟೀಕರಿಸಿದನು. ಅವನ ಧಾರ್ಮಿಕ ಜೀವನದಲ್ಲಿ ಶೈವ ಧರ್ಮದ ಜೊತೆಗೆ ವೈಷ್ಣವ ಮತ್ತು ಜೈನ ಧರ್ಮಗಳ ಪ್ರಭಾವವೂ ಅದೃಷ್ಟ ಪೂರ್ವ ಪ್ರಮಾಣದಲ್ಲಿ ಬೆಳೆಯಿತು. ರಾಜಕೀಯ ಕ್ಷೇತ್ರಕ್ಕೆ ಬೇಡವಾಗಿದ್ದ ತನ್ನ ಕ್ರಿಯಾಶಕ್ತಿಯನ್ನು ಬಳಸಿ ಹಲವಾರು ಭವ್ಯ ದೇಗುಲ ಬಸದಿಗಳನ್ನು ನಿರ್ಮಿಸಿದ ನಷ್ಟೇ ಅಲ್ಲದೆ ಯಕ್ಷಗಾನವೇ ಮೊದಲಾದ ವಿಶಿಷ್ಟ ಕಲೆಗಳ ಸೃಷ್ಟಿ, ಬೆಳವಣಿಗೆಗಳಿಗಾಗಿ ತ್ರಿಕರಣ ಪೂರ್ವಕವಾಗಿ ದುಡಿದನು.

ಆರ್ಥಿಕ ಕ್ಷೇತ್ರದಲ್ಲಂತೂ ಆ ಕಾಲದ ತುಳುವನ ಜೀವನದಲ್ಲಿ ಗಣನೀಯ ಪ್ರಮಾಣದ ಬದಲಾವಣೆ-ಬೆಳವಣಿಗೆಗಳಾದವು. ವಿಜಯನಗರದವರ ಸರ್ವವ್ಯಾಪೀ ಪ್ರಭಾವದಿಂದಾಗಿ ತುಳುನಾಡಿನ ಬಂದರುಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಸಾಗುತ್ತಿದ್ದ ವಿದೇಶೀ ವ್ಯಾಪಾರವು ತುಳುವನನ್ನು ಹಿಂದೆಂದೂ ಆಗಿರದಷ್ಟು ಸಂಪದ್ಭರಿತನನ್ನಾಗಿ ಮಾಡಿತು. ಹಾಗೆ ತನ್ನ ಕೈಸೇರಿದ ಹೆಚ್ಚಿನ ಸಿರಿತನವನ್ನು ಅಂದಿನ ತುಳುವನು ನಾನಾ ಮುಖದ ಸ್ವೀಮುಂಗೊಂಡು ಉತ್ಸಾಹದಿಂದ ವೆಚ್ಚ ಮಾಡಿ ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಸಾರ್ಥಕ್ಯವನ್ನು ಕಂಡುಕೊಂಡನೆಂಬುದು ಅಂದಿನ ತುಳುನಾಡಿನ ಶಾಸನಗಳಿಂದ ಸ್ಪಷ್ಟವಾಗಿಯೇ ತಿಳಿದು ಬರುತ್ತದೆ.

ಹೊಯ್ಸಳರೂ, ವಿಜಯ ನಗರದವರೂ ಅನಂತರದ ಕೆಳದಿಯ ಅರಸುಗಳೂ ತುಳು

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27

Phone No.— 1 72303 2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕವಲು ದಾರಿ—ಕೆಂಪು ದೀಪ

ಮುಂಗಾರಿನ ತೀವ್ರ ಚಟುವಟಿಕೆಗಳು

ಜೂನ್ ತಿಂಗಳು ಬಂತು. ಒಂದೊಂದೇ ಪರೀಕ್ಷೆಯ ಫಲಿತಾಂಶಗಳು ಬರತೊಡಗಿದುವು.

ಹಿಸನ್ನೆ ತರಗತಿಯ ಜಿಲ್ಲಾ ಮಟ್ಟದ ಪರೀಕ್ಷೆಗಳ ಪರಿಣಾಮಗಳು ಎಂದೋ ಪ್ರಕಟವಾಗಿದ್ದರೂ ಪ್ರೌಢಶಾಲೆಗಳ ಬಾಗಿಲುಗಳು ತೆರೆಯುದು ಜೂನ್ ಮೊದಲ ದಿನದಂದು.

ಸರ್ವೇಸಾಮಾನ್ಯ ವಿದ್ಯಾರ್ಥಿ (ಮತ್ತವನ ಪಾಲಕರು) ಬಯಸಿದ ಪ್ರೌಢಶಾಲೆಯಲ್ಲೇ ಅವನಿಗೆ ಪ್ರವೇಶ ದೊರೆಯದು.

ಪ್ರೌಢಶಿಕ್ಷಣದ ವಿಸ್ತರಣೆ ಇದಕ್ಕೊಂದು ಕಾರಣವಾದರೆ, ಪ್ರೌಢಶಾಲೆಗಳ ವರ್ಗ ವಿಸ್ತರಣೆ ಪ್ರವೇಶ ಮಿತಿಯ ಮತ್ತು ವಿಸ್ತರಣೆಗಳೂ ಇನ್ನೊಂದು ಕಾರಣ.

೫೦ರಿಂದ ೬೦ ಮಕ್ಕಳನ್ನು ಒಂದೇ ಕೋಣೆಯಲ್ಲಿ ತುರುಕಿಸುವುದು ಇಂದಿನ ಪ್ರೌಢ ಶಿಕ್ಷಣ ನೀತಿ. ಶಾಲೆಗಳು ಆರಂಭವಾಗಿ ತಿಂಗಳೊಪ್ಪತ್ತು ಕಳೆದರೂ ಪಾಠಗಳ ಆರಂಭವಾಗದಿರುವುದು ಮತ್ತೊಂದು ಕೂಟನೀತಿ.

ಇದಕ್ಕೆ ಶಾಲೆಗಳ ಮುಖ್ಯೋಪಾಧ್ಯಾಯರೇ ಕಾರಣವೆಂದು ದೂರುವಂತಿಲ್ಲ. ಖಾಸಗಿ ಶಾಲೆಗಳ ಮಟ್ಟಿಗೆ ಮುಖ್ಯೋಪಾಧ್ಯಾಯರ ಮೇಲೆ ದೂರು ಹೇರಬಹುದು; ಆದರೆ ಈ ಬಗೆಯ ಆರೋಪ ಹೊರಬೇಕಾಗಿ ಬರುವ ಮುಖ್ಯೋಪಾಧ್ಯಾಯರ ಸಂಖ್ಯೆ ಅತಿ ವಿರಳ.

ಅಲ್ಲಿ ಬೇಕಷ್ಟು ಉಪಾಧ್ಯಾಯರ ನೇಮಕ ಮೊದಲೇ ಆಗಿರುತ್ತದೆ; ವರ್ಗಾವರ್ಗಿಯ ಗೊಂದಲವಿಲ್ಲ; ಆದ್ದರಿಂದ ಅಸ್ತವ್ಯಸ್ತತೆಗೆ ಅವಕಾಶ ಕಡಿಮೆ. ಇಲ್ಲವೇ ಇಲ್ಲವೆನ್ನಬಹುದು.

ಏನಾದರೂ ಅಸ್ತವ್ಯಸ್ತತೆ ತಲೆದೋರಿರುವುದಾದರೆ ಅದಕ್ಕೆ ಆಡಳಿತ ಮಂಡಳಿ ಮತ್ತು ಅದಕ್ಕಿಂತ ಹೆಚ್ಚು ಶಿಕ್ಷಣ ಇಲಾಖೆಯೇ ಹೊಣೆಗಾರ.

ಹೆಚ್ಚಿನ ವಿಭಾಗ ತೆರೆಯಲು ಅಧ್ಯಾಪಕರನ್ನು ನೇಮಿಸಿಕೊಳ್ಳಲು ವಿದ್ಯಾ ಇಲಾಖೆಯ ಪೂರ್ವಾನುಮತಿ ಬೇಕು.

ಇವೆಲ್ಲ ಶಾಲೆ ಆರಂಭವಾಗುವುದಕ್ಕೆ ಮೊದಲೇ ಆಗಬೇಕಾದ ಕೆಲಸಗಳು. ಆದರೆ, ಈ ಕಡೆಗೆ ಗಮನ ಹರಿಸುವ ಗೋಜು ಇಲಾಖೆಗಂತೂ ಇಲ್ಲವೇ ಇಲ್ಲ.

ಸರಕಾರಿ ಶಾಲೆಗಳ ಹಗರಣ ಇದಷ್ಟೇ ಮುಗಿದಿಲ್ಲ. ವರ್ಗಾವರ್ಗಿಯ ಬಗ್ಗೆ ಇಲಾಖೆ ತಲೆ ಹರಿಸುವುದೇ ಜೂನ್ ತಿಂಗಳಲ್ಲಿ. ಆಜ್ಞೆ ಹೊರಟ ಮೇಲೆ ಅದಕ್ಕೆ ತಿದ್ದುಪಡಿಗಳ ಮಾಲೆ ಬೇರೆ. ಎಲ್ಲಾ ಸರಿಹೋಯಿತು ಎನ್ನುವಾಗ ಸುಮಾರು ಎರಡು ತಿಂಗಳುಗಳೇ ಕಳೆದುಹೋಯಿತು ಎನ್ನುವ ಸ್ಥಿತಿ.

ಈ ಅವ್ಯವಸ್ಥೆಯಲ್ಲಿ ಮಕ್ಕಳ ಶಿಸ್ತು-ಶಿಕ್ಷಣ ಎಲ್ಲಿ ಉಳಿಯಬೇಕು? ಬೆಟ್ಟದ ಮೇಲಿದ್ದವನೂ ಜಾರಿ ತಪ್ಪಿಗೆ ಏಳುತ್ತಾನೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಬಂದ ಬಳಿಕ ಕಾಲೇಜುಗಳಲ್ಲಿ ನೂಕುನುಗ್ಗಲು. ಅಭ್ಯರ್ಥಿ ಬಯಸಿದ ಕಾಲೇಜದಲ್ಲಿ ಪ್ರವೇಶ ದೊರೆಯಬೇಕಾದರೆ ಅವನ ಹಿರಿಯರು ಪುಣ್ಯವಂತರಿರಬೇಕು. ಅಲ್ಲಿನ ಜಾಡೂ ಬೇರೆಯಲ್ಲ.

ಈ ಬಾರಿ ಇನ್ನೊಂದು ಪ್ರಶ್ನೆ ಬೇರೆಯಿದ್ದಿದೆ.

ಉನ್ನತ ಪ್ರೌಢ ಶಾಲೆಗಳಲ್ಲಿ ಕಳೆದ ವರ್ಷ ವಿಶ್ವ ವಿದ್ಯಾಲಯ ಪೂರ್ವ ಶಿಕ್ಷಣದ ಮೊದಲ ವರ್ಷದ ತರಗತಿ ತೆರೆಯಲಾಯಿತು. (ಕಾಲೇಜುಗಳಲ್ಲಿಯೂ ಇದೆ.)

ಈ ವರ್ಷ ಉನ್ನತ ಪ್ರೌಢಶಾಲೆಗಳಲ್ಲಿ ಹೆಚ್ಚಿನವಕ್ಕೆ ಎರಡನೆ ವರ್ಷದ ತರಗತಿಯನ್ನು ತೆರೆದು ಅವನ್ನು ಜೂನಿಯರ್ ಕಾಲೇಜಾಗಿ ಪರಿವರ್ತಿಸಲು ಪಿ. ಯು. ಸಿ. ಮಂಡಳಿ ಅನುಮತಿ ಕೊಡಲಿಲ್ಲ.

ಕಾರಣ ಸ್ಪಷ್ಟ—ಅಲ್ಲಿ ಎರಡನೆ ವರ್ಷದ ಶಿಕ್ಷಣ ನೀಡಲು ಸಾಕಷ್ಟು ಸೌಲಭ್ಯಗಳು ಇಲ್ಲ—ಪರಿಣಾಮ ಇಲ್ಲಿ ಉತ್ತಮ ಮಟ್ಟದ ಶಿಕ್ಷಣ ವಿದ್ಯಾರ್ಥಿಗಳಿಗೆ ದೊರೆಯುವುದು ಸಾಧ್ಯವಿಲ್ಲ.

ಕಟ್ಟಡ-ಆಸನ ವ್ಯವಸ್ಥೆ-ಪುಸ್ತಕ ಭಂಡಾರ-ಪ್ರಯೋಗ ಶಾಲೆ-ಕ್ರೀಡಾಂಗಣ-ಪರಿಣತ ಶಿಕ್ಷಕರು—ಇವೆಲ್ಲ ಅತ್ಯಂತಾವಶ್ಯಕ.

ಈಗ ಸರಕಾರಕ್ಕೆ-ಇಲಾಖೆಗೆ-ಪುಡಾರಿಗಳಿಗೆ ತಂತಿಯ ಮೂಲಕ ಬೇಡಿಕೆ ಸಂದಿದೆ-ಸಾರಾಂಶ-'ಅವಶ್ಯಕತೆಗಳಲ್ಲಿ' ಒಂದಾಗಲೀ ಎರಡಾಗಲೀ ಎಲ್ಲವೇ ಆಗಲಿ, ಇಲ್ಲವಾದರೂ ಚಿಂತಿಲ್ಲ, ನಮ್ಮ ಊರಿಗೆ ಜ್ಯೂನಿಯರ್ ಕಾಲೇಜು ಬೇಕೇ ಬೇಕು.

'ಶ್ರೀಸಾಮಾನ್ಯರ' ಒತ್ತಡಗಳಿಗೆ ಬಗ್ಗಿ ಕೆಲವೆಡೆಯಾದರೂ ರದ್ದಾದ ಉನ್ನತ ಪ್ರೌಢ ಶಾಲೆಗಳು ಜ್ಯೂನಿಯರ್ ಕಾಲೇಜುಗಳಾಗಿ ಮಾರ್ಪಡುವುದು ಅಸಂಭವವಲ್ಲ.

ಆವಶ್ಯಕ ಸೌಲಭ್ಯ—ಸೌಕರ್ಯವಿಲ್ಲದೆಡೆ ಶಿಕ್ಷಣದ ಮಟ್ಟವುಳಿಸುವುದು ಹೇಗೆ? ಶಿಕ್ಷಕರನ್ನು, ಆಡಳಿತವನ್ನು, ಕೊನೆಗೆ ಸರಕಾರವನ್ನು ಇದಕ್ಕೆ ತಲೆಗೊಡುವಂತೆ ಮಾಡುವುದು ಹೇಗೆ ಸಾಧ್ಯ?

ಗೋಡೆಯಿಲ್ಲದೆ ಚಿತ್ರ ಬರೆಯಲು ಮಾಯಾವಿಗಳು ಮಾತ್ರ ಶಕ್ತರು—ಅವರೂ ಯಾವಾಗಲೂ ಬರೆಯುವುದಿಲ್ಲ.

ಶಿಕ್ಷಣದ ಮಟ್ಟ ಇಳಿದಿದೆಯೆನ್ನುವವರು ಈಯೆಲ್ಲ ಸಂಗತಿಗಳನ್ನು ಮರೆತು ಬಿಡುತ್ತಾರೆ.

ಶಿಕ್ಷಣಾಲಯಗಳ ಸಂಖ್ಯೆ ಹೆಚ್ಚಬೇಕು. ಈ ಬೇಡಿಕೆ ರಾಜ್ಯಕ್ಕೆ ಇನ್ನೂ ಒಂದೆರಡು ವಿಶ್ವ ವಿದ್ಯಾಲಯಗಳು ಬೇಕು ಎಂಬ ವರೆಗೂ ಮುಂದುವರಿದಿವೆ.

ವಿಶ್ವವಿದ್ಯಾಲಯಗಳಲ್ಲಿ ಏಕರೂಪತೆ ಬೇಕು ಎಂದು ವಾದಿಸುವವರ 'ತಂಡ'ವೂ ಇದೆ.

ಒಂದು ವಿಶ್ವವಿದ್ಯಾಲಯದಿಂದ ಇನ್ನೊಂದಕ್ಕೆ ಹೋಗುವವರ ಸಂಖ್ಯೆ ಅಲ್ಪ. ಒಂದು ಕಾಲೇಜದಿಂದ ಇನ್ನೊಂದು ಕಾಲೇಜಿಗೆ ಹೋಗುವವರು ಇದಕ್ಕಿಂತ ಹೆಚ್ಚು.

ಎಲ್ಲ ಕಾಲೇಜುಗಳಲ್ಲೂ ಏಕರೂಪದ ಅಧ್ಯಯನ ವಿಭಾಗಗಳು ಬೇಕೆಂದು ಯಾರೂ ಹೇಳದೆ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಏಕರೂಪತೆ ಬೇಕೆಂದು ವಾದಿಸುವುದು ವಿಚಿತ್ರ.

ವಿಶ್ವ ವಿದ್ಯಾಲಯಗಳಲ್ಲಿ ಏಕರೂಪತೆಯೇ ಬೇಕೆಂದಾದರೆ ಪ್ರತ್ಯೇಕ ವಿಶ್ವವಿದ್ಯಾಲಯಗಳು ನಿಜಕ್ಕೂ ಅನಗತ್ಯ.

ಎಸ್. ಎಸ್. ಎಲ್. ಸಿ ಮಂಡಳಿಯಂತೆ ಪಿ. ಯು. ಸಿ. ಮಂಡಳಿಯಂತೆ ತಾಂತ್ರಿಕ ಶಿಕ್ಷಣ ಮಂಡಳಿಯಂತೆ ಪದವಿ ಮಂಡಳಿಯೊಂದನ್ನು ರೂಪಿಸಿದರೆ, ವಿಶ್ವವಿದ್ಯಾಲಯಗಳಿಗೆಲ್ಲ ಒಮ್ಮೆಗೇ ಬಾಗಿಲು ಹಾಕಬಹುದು.

ಅಷ್ಟು ಮುಂದುವರಿಯಲು ದಾಕ್ಷಿಣ್ಯವೆನಿಸುವುದಾದರೆ, ಹೊಸ ವಿಶ್ವವಿದ್ಯಾಲಯಗಳ ಬೇಡಿಕೆಗಾದರೂ ಪೂರ್ಣವಿರಾಮ ಹಾಕಬಹುದು.

ಒಂದೊಂದು ವಿಶ್ವವಿದ್ಯಾಲಯಕ್ಕೂ ತನ್ನತನವಿರಬೇಕು. ಆದರೆ, ಈ ತನ್ನತನದಲ್ಲೂ ಏಕತೆಯ ಭಾವ ಮನೆ ಮಾಡಿರಬೇಕು, ಅಷ್ಟೆ.

ಜೂನ್ ತಿಂಗಳು ಎಂಬುದರಿಂದ ಮಿಂಚು ಗುಡುಗು-ಗಾಳಿಗಳ ಬಲು ಸೋನೆಯ್ತು ನೆನಪಾಗುವುದು ಬಲು ಸಹಜ. ಮುಂಗಾರ ಮುನಿಸೆಲ್ಲವೂ ಜೂನ್-ಜುಲೈಗಳ ಜಾಯಮಾನ.

ನಮ್ಮ ಶಿಕ್ಷಣ ವ್ಯವಸ್ಥೆಯೂ ಇದೇ ವೇಳೆ ಹೆಚ್ಚಿನ ಚಟುವಟಿಕೆಗಳಿಂದ ಕೂಡಿರುತ್ತದೆ.

ನೆಲಕ್ಕೆ ನೀರಿದ್ದ ಹಾಗೆ ಜನಕ್ಕೆ ಶಿಕ್ಷಣ—ಜನಮನದ ಜ್ಞಾನದಾಹವನ್ನು ಇದು ದೂರ ಮಾಡುವುದರಿಂದ.

ಅನಾವೃಷ್ಟಿ, ಅಕಾಲವೃಷ್ಟಿ, ಅತಿವೃಷ್ಟಿ ಎಲ್ಲವೂ ಅಪಾಯಕಾರಿಯೇ.

ಇದೇ ಮಾತನ್ನು ಶಿಕ್ಷಣಕ್ಕೂ ಅನ್ವಯಿಸಿದರೆ ಹೊಂದಿಕೊಳ್ಳುತ್ತದೆಯೆ?

●●

ನಿಳು

ವನ ಸ್ಥಳೀಕ ರಾಜಕೀಯ ಸ್ವಾತಂತ್ರ್ಯಕ್ಕೆ ಹೆಚ್ಚಿನ ಧಕ್ಕೆಯುಂಟು ಮಾಡದಿದ್ದರೂ ತುಳುವನೇ ಸ್ವತಃ ರಾಜಕೀಯ ಕ್ಷೇತ್ರದಲ್ಲಿ ತನ್ನ ಆಸಕ್ತಿಯನ್ನು ಸಾಕಷ್ಟು ಕಳೆದುಕೊಂಡಿದ್ದನೆಂದು ಅಂದಿನ ಶಾಸನಗಳ ಆಧಾರದ ಮೇಲೆ ಊಹಿಸಬಹುದಾಗಿದೆ. ಕ್ರಿ. ಶ ೧೪ನೆಯ ಶತಮಾನದ ಕೊನೆಯ ತನಕ, ಸುಮಾರು ಒಂದು ಸಾವಿರ ವರ್ಷಗಳಷ್ಟು ದೀರ್ಘಕಾಲ, ಪ್ರಭಾವಶಾಲಿಯಾಗಿ ಮೆರೆದಿದ್ದ ತನ್ನದೇ ಆದ ಆಳುಪ ಅರಸುಮನೆತನವು ಹೊರಗಿನಿಂದ ಬಂದ ರಾಜಕೀಯ ಶಕ್ತಿಗಳಿಗೆ ತುತ್ತಾಗಿ ಮುಂದುವರೆಯಲಾರದೆ ಹೋದದ್ದೇ ಅವನ ಆ ಅನಾಸಕ್ತಿಗೆ ಮುಖ್ಯ ಕಾರಣವಿದ್ದಿರಬೇಕು. ಅಲ್ಲಿಯವರೆಗೆ ಉದಯಪುರ, ಬಾರಹಕನ್ಯಾಪುರ ಮಂಗಳಪುರಗಳಲ್ಲಿದ್ದ ತುಳುನಾಡಿನ ರಾಜಕೀಯ ಕೇಂದ್ರ ಸ್ಥಾನವು ನಂತರ ಕಾಲದಲ್ಲಿ ದ್ವಾರಸಮುದ್ರ, ವಿಜಯನಗರ, ಪೆನುಗೊಂಡ, ಇಕ್ಕೇರಿ ಮೊದಲಾದ ದೂರದ ರಾಜಧಾನಿಗಳಿಗೆ ಬದಲಾಯಿಸಿ, ಆಯಾ ಸಾಮ್ರಾಜ್ಯದ ಪ್ರತಿನಿಧಿಗಳು ಮಾತ್ರ ತುಳುನಾಡಿನ ರಾಜ್ಯಪಾಲರುಗಳಾಗಿದ್ದ ಕಾರಣ ಅಂದಿನ ತುಳುವನಿಗೆ ತನ್ನ ನಾಡಿನ ಆಡಳಿತ ವಿಧಾನವು ತನ್ನದಲ್ಲವೆಂಬ ಭಾವನೆ ಮೂಡಿಬಂದುದರಲ್ಲಿ ಅಚ್ಚರಿಯೇನೂ ಇಲ್ಲ.

ಆಂಗ್ಲ ಸಾಮ್ರಾಜ್ಯಶಾಹಿಗಳ ಒಡೆತನವು ಭಾರತದಲ್ಲಿ ಸ್ಥಾಪನೆಯಾದ ನಂತರ ಕಾಲದ ತುಳುವನ ವ್ಯಕ್ತಿಚಿತ್ರದ ಸ್ಥೂಲ ಪರಿಚಯವಂತೂ ಎಲ್ಲರಿಗೂ ಇದ್ದೇ ಇದೆ. ಬಣ್ಣ ಸ್ವಲ್ಪ ಮಟ್ಟಿಗೆ ಇಳಿದಿದೆಯೆಂಬುದನ್ನು ಬಿಟ್ಟರೆ ಅಂದಿನ ತುಳುವನ ವ್ಯಕ್ತಿಚಿತ್ರಕ್ಕೂ ಇಂದಿನ ತುಳುವನ ವ್ಯಕ್ತಿಚಿತ್ರಕ್ಕೂ ಹೆಚ್ಚಿನ ತಾರತಮ್ಯವಿಲ್ಲವೆಂದೇ ಹೇಳಬಹುದು. ಇಂದು ಮಾನವ ಜೀವನದ ಅನೇಕ ಕ್ಷೇತ್ರಗಳಲ್ಲಿ ತನ್ನ ನೆರೆಹೊರೆಯವರಿಗಿಂತಲೂ ಹೆಚ್ಚು ಬಿರುಸಾಗಿ ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ತುಳುವನು, ತುಳುನಾಡಿಗನು, ಉರುಳಿಹೋದ ಇಪ್ಪತ್ತೆಂಟು ಶತಮಾನಗಳಲ್ಲಿ ನಡೆದುಬಂದಿರುವ ದಾರಿಗಳ ಸ್ಥೂಲಪರಿಚಯವನ್ನು ಮಾತ್ರ ಈ ಲೇಖನದಲ್ಲಿ ಒದಗಿಸಿಕೊಡಲಾಗಿದೆ.

(ಚಿನ್ನದ ಹಬ್ಬದ ಸಂಚಿಕೆಗೆ ಬಂದುದು.)



ಪ್ರಾಚೀನ ಗಣಪತಿ ಶಿಲ್ಪ

ಭಾರತದಲ್ಲಿ ಶಿಲ್ಪ ಶೈಲಿಯಲ್ಲಿ ಗಣಪತಿಯ ನಿರ್ದೇಶನ ಸು. ಕ್ರಿ. ಶ. 5ನೇ ಶತಮಾನದಲ್ಲಾಗಿರಬಹುದೆಂಬುದಾಗಿ ಇತಿಹಾಸಕಾರರೂ ವಾಸ್ತುಶಾಸ್ತ್ರಜ್ಞರೂ ಅಭಿಪ್ರಾಯ ಪಡುತ್ತಾರೆ. ಕಾಲಕ್ರಮೇಣ ಈ ಶಿಲ್ಪದಲ್ಲಿ ಅನಂತವಾದ ವೈವಿಧ್ಯ ಕಂಡು ಬಂತು. ಪ್ರಾಚೀನ ಶಿಲ್ಪಗಳನ್ನು ಅವಲೋಕಿಸಿ ನೋಡಿದಾಗ ಅವುಗಳಲ್ಲಿ ಪ್ರಮಾಣ ಕಲ್ಪನೆ ಬಹಳ ಕಡಿಮೆ ಎಂದೂ ಸೌಂದರ್ಯದ ದೃಷ್ಟಿಯಿಂದ ಪರಿಶೀಲಿಸಿದಾಗ ಏನೇನೋ ಹಿತವಿಲ್ಲವೆಂದೂ ತಿಳಿದು ಬರುತ್ತದೆ. ಗಣಪತಿಯ ಪ್ರಾಚೀನ ಶಿಲ್ಪಗಳಲ್ಲಿ ಬಾಲ ಗಣಪತಿಯ ನಿರ್ದೇಶವಷ್ಟೊಳಗೊಂಡ ಶಿಲ್ಪವು ದ್ವಿಬಾಹುವಾಗಿರುವುದೆಂಬುದನ್ನು ತಿಳಿಯಬೇಕು. ಇಂತಹ ಶಿಲ್ಪಗಳು ಕರ್ನಾಟಕದಲ್ಲೇ ವಿರಳವೆಂಬುದನ್ನೂ ಮನವರಿಕೆ ಮಾಡಿಕೊಳ್ಳಬಹುದು. ಈ ತೆರನಾದ ಗಣಪತಿ ಶಿಲ್ಪಗಳಲ್ಲಿ ವಿಶಿಷ್ಟ ಪೂರ್ಣವಾದುದು ಇಡಗುಂಜಿಯ ಶ್ರೀ ಗಣೇಶ.

ಇಡಗುಂಜಿಯ ಈ ವಿಗ್ರಹವು ದ್ವಿಬಾಹುವಾಗಿದ್ದು ಮೋದಕ ಮತ್ತು ಪದ್ಮಗಳನ್ನು ಕೈಗಳಲ್ಲಿ ಧರಿಸಿಕೊಂಡು, ಬೋಳು ತಲೆಯ ವಿಕಾರ ರೂಪವನ್ನು ಹೊಂದಿದ ನಿಂತ ಬಿಂಬವಾಗಿದೆ. ಈ ವಿಗ್ರಹವನ್ನು ಕಾಲಮಾನಕ್ಕೆ ಸರಿಯಾಗಿ ಸು. ಕ್ರಿ. ಶ. 6—7ನೇ ಶತಮಾನಕ್ಕೆ ಅನ್ವಯಿಸ ಬಹುದು.

ಉತ್ತರ ಕನ್ನಡದಲ್ಲಿ ಈ ಪಂಕ್ತಿಗೆ ಸೇರಿದ ಇನ್ನಿತರ ಎರಡು ಮೂರ್ತಿಗಳನ್ನು ಇಲ್ಲಿ ನಮೂದಿಸ ಬೇಕಾಗಿದೆ 1) ಗೋಕರ್ಣದ ಶ್ರೀ ಗಣೇಶ ಮತ್ತು 2) ಉಪ್ಪಿನ ಪಟ್ಟಣದ ಶ್ರೀ ಗಣೇಶ. ಇವೆರಡೂ ವಿಗ್ರಹಗಳು ಸು. 6–7ನೇ ಶತಮಾನಕ್ಕೆನೇ ಅನ್ವಯಿಸುವುಗಳೆನ್ನುವುದರಲ್ಲಿ ಸಂದೇಹವಿರಲಾರದು. ಉಪ್ಪಿನ ಪಟ್ಟಣದ ದ್ವಿಬಾಹು ಗಣಪತಿಯು ಕುಳಿತ ಭಂಗಿಯಲ್ಲಿದೆ.

ದಕ್ಷಿಣ ಕನ್ನಡದಲ್ಲಿ ಕುಂದಾಪುರ ತಾಲೂಕಿನ ಕಿರುಮಂಜೇಶ್ವರ ಮತ್ತು ಗುಡ್ಡಟ್ಟುವೆಂಬಲ್ಲಿಯೂ ಕಾರ್ಕಳ ತಾಲೂಕಿನ ಕೆಲ್ಲಪುತ್ತಿಗೆ ಎಂಬಲ್ಲಿಯೂ ಉಡುಪಿ ತಾಲೂಕಿನ ನಾಲೂರು ಗ್ರಾಮದ ಮಾರಾಳಿ ಎಂಬಲ್ಲಿಯೂ ಕಂಡು ಬರುತ್ತದೆ. ಈ ನಾಲ್ಕು ವಿಗ್ರಹಗಳಲ್ಲಿ ಕಿರು ಮಂಜೇಶ್ವರದ ಬಿಂಬವು ನಿಂತ ಭಂಗಿಯಲ್ಲಿದ್ದು ಒಂದು ವಿಚಿತ್ರ ರೂಪದ ಮೂರ್ತಿಯಾಗಿದೆ. ಕೆಲ್ಲಪುತ್ತಿಗೆಯ ಮೂರ್ತಿ ಪದ್ಮಾಸನಸ್ಥವಾಗಿದೆ. ಮಾರಾಳಿ ವಿಗ್ರಹ 3" ಎತ್ತರವಿದ್ದು ಉತ್ಕುಟಿಕಾಸನದಲ್ಲಿದೆ. ಏನೇನೂ ಅಲಂಕಾರವಿಲ್ಲದ ಸ್ಥೂಲ ಶರೀರದ ಬಿಂಬ ಗುಡ್ಡಟ್ಟಿನ ಮೂರ್ತಿಯು 4' ಎತ್ತರವೂ ಬಲಮುರಿಯೂ ದ್ವಿಬಾಹುವೂ ಆಗಿದ್ದು ಗುಹಾಲಯದ ದೇವತೆಯಾಗಿದೆ. ಒಂದು ವಾರದ ಹಿಂದೆ ಕಾಸರಗೋಡು ತಾಲೂಕಿನ ಕುಂಬಳೆ ಸಮೀಪವಿರುವ ಅನಂತಪುರವೆಂಬಲ್ಲಿಗೆ ಹೋಗಿದ್ದಾಗ ಅಲ್ಲಿಯ ಅನಂತ ಪದ್ಮನಾಭ ದೇವಾಲಯದ ಉಪಸ್ಥಾನ ಮೂರ್ತಿಯನ್ನು ಕಂಡು ಬಹು ಸಂತೋಷವಾಯಿತು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಇಷ್ಟರ ತನಕ ಇದನ್ನು ಪ್ರಾಯಶಃ ಗಮನಿಸಿದವರೇ ಕಡಿಮೆ. ಇದು 6" ಎತ್ತರದ ದ್ವಿಬಾಹು ಬಲಮುರಿ ಗಣೇಶ. ಕಿರೀಟವಿಲ್ಲ. ಪ್ರಾಚೀನ ವಿಗ್ರಹ. ಸು. ಕ್ರಿ. ಶ. 7ನೇ ಶತಮಾನದ್ದಿರ ಬಹುದು. ಅಂತೆಯೇ ಹಟ್ಟಿಯಂಗಡಿಯ ಲೋಕನಾಥೇಶ್ವರ ದೇವಾಲಯದಲ್ಲಿ ಉಪಸ್ಥಾನ ಮೂರ್ತಿಯಾಗಿ ಒಂದು ಇದೇ ಕಾಲದ ಬಿಂಬದ ಉಬ್ಬು ಶಿಲ್ಪವಿದೆ.

ಗೋಕರ್ಣದಿಂದ ಕಾಸರಗೋಡಿನ ತನಕ ಪ್ರಾಚೀನ ಗಣಪತಿ ವಿಗ್ರಹಗಳಿರುವುದು ಬಹಳ ಗಮನೀಯವಾಗಿದೆ.

—ಡಾ| ಪಿ. ಗುರುರಾಜ ಭಟ್

● ●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಆಹಾರದಲ್ಲಿ ಬದಲಾವಣೆ

(ಐದನೇ ಪುಟದಿಂದ)

...ದ್ಯಂತ ಸಾಮುದಾಯಿಕ ಆಹಾರ ಸಂರಕ್ಷಣ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯು ಈಗ ಪರಿಶೀಲನೆಯಲ್ಲಿದೆ. ಹಣ್ಣು ಹಂಪಲುಗಳು ಮತ್ತು ತರಕಾರಿಗಳು ಹೇರಳವಾಗಿ ದೊರೆಯುವ ಕಾಲದಲ್ಲಿ ಅವುಗಳನ್ನು ಪಡೆದು ಡಬ್ಬಿಗಳಲ್ಲಿ ಸಂರಕ್ಷಿಸಿ ಇಟ್ಟರೆ ವರ್ಷದ ಇತರ ಸಮಯದಲ್ಲಿ ಇಷ್ಟ ಬಂದಂತೆ ಉಪಯೋಗಿಸಬಹುದು. ಆಹಾರ ಸಂರಕ್ಷಣ ಕೇಂದ್ರಗಳಲ್ಲಿ ಉಪ್ಪಿನಕಾಯಿ, ಚಟ್ನಿ, ಸಾಸ್ ಹಣ್ಣು ಹಂಪಲು ಮತ್ತು ತರಕಾರಿ ಇತ್ಯಾದಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಡಬ್ಬಿಗಳಲ್ಲಿ ಸಂರಕ್ಷಿಸಲಾಗುತ್ತದೆ. ಗೃಹಿಣಿಯರು ತಮ್ಮ ಮನೆಗಳಲ್ಲೇ ಆಹಾರ ಪದಾರ್ಥಗಳನ್ನು ಹೇಗೆ ತಯಾರಿಸಿ ಸಂಗ್ರಹಿಸಬಹುದೆಂಬ ಬಗ್ಗೆಯೂ ಈ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಪೌಷ್ಟಿಕ ಅಡಿಗೆ

ಯಾವುದೇ ಹೊಸ ಆಹಾರ ಜನಪ್ರಿಯವಾಗಬೇಕಾದರೆ ಅದು ರುಚಿಕರವಾಗಿರಬೇಕು. ನೋಡಲು ಚೆನ್ನಾಗಿರಬೇಕು.

ನಮ್ಮ ಆಹಾರ ಪದ್ಧತಿ ಯಾವಾಗಲೂ ಒಂದೇ ರೀತಿ ಇರುವುದಿಲ್ಲ. ಆಲೂಗೆಡ್ಡೆ, ಮರಗೆಣಸು, ಸಂಸ್ಕರಣಗೊಂಡ ಸಕ್ಕರೆ, ಹಾಲಿನ ಪುಡಿ, ಬಿಸ್ಕತ್ತು, ಬ್ರೆಡ್ ಮತ್ತು ಚಾ, ಕಾಫಿ ಇತ್ಯಾದಿಗಳ ಸಾರ್ವತ್ರಿಕ ಬಳಕೆ ಇದಕ್ಕೆ ಸಾಕ್ಷಿ.

ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡುವುದರಿಂದ ಆರ್ಥಿಕ ಲಾಭವಾಗುವುದು ಮಾತ್ರವಲ್ಲ ದವಸಧಾನ್ಯಗಳ ಕೊರತೆ ದೂರವಾಗಿ, ಪೌಷ್ಟಿಕ ಆಹಾರ ಸೇವನೆ ಹೆಚ್ಚಿ, ಆರೋಗ್ಯ ಲಾಭವೂ ಆಗುವುದು ಖಂಡಿತ.

● ●

ವಿಜಯ ಬ್ಯಾಂಕಿನ ವಿಮೆ ಸೇರಿದ ಠೇವಣಿ ಯೋಜನೆ-2

ವಿಜಯ ಬ್ಯಾಂಕಿನ
ಅನುಪಮ
ದ್ವೈವಾರ್ಷಿಕ ವಿಮಾ ಹಾಗೂ
ಠೇವಣಿ ಯೋಜನೆ



ಸಮೃದ್ಧ ಪ್ರತಿಫಲ
ಠೇವಣಿಯ ಇಮ್ಮಡಿ ಮೊತ್ತಕ್ಕೆ
ಎರಡು ವರ್ಷದ ವಿಮಾರಕ್ಷೆ

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿ
ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-1.
ಚೇರ್‌ಮನ್: ಎಂ. ಸುಂದರ್‌ರಾಮ್ ಶೆಟ್ಟಿ

OBM-2235 KAN

ನಿಮ್ಮ ಉಳಿತಾಯವು ನಿಜವಾಗಿ
ಲಾಭದಾಯಕವಾಗಲು ವಿಜಯ ಬ್ಯಾಂಕು ಮಾರ್ಗದರ್ಶಿ

ಗೇಹರಾಜ್ಯದಲ್ಲಿ

ತ್ಯಾಗಶೀಲತೆಗೊಂದು ರಜತಾವಕಾಶ

'ಅಲ್ರಿ, ತುಸು ಇಲ್ಲಿ ಕೇಳೀಂದ್ರೆ....'

'ಏನು?'

'ಮತ್ತಿನ್ನೇನು, ನೀರಿನ ವಿವಾದ ಪರಿಹಾರವಾಗುತ್ತಂತಲ್ಲಾ?'

'ಮಳೆ ಆರಂಭವಾದ್ಮೇಲೆ, ಕೆರೆ ಬಾವಿ ತುಂಬಿದ್ಮೇಲೆ, ನಳ್ಳಿ—ನಾಲೆಗಳಲ್ಲಿ ನೀರು ಹರಿಯಲಾರಂಭಿಸಿದ್ಮೇಲೆ ನೀರಿನ ವಿವಾದ ಎಲ್ಲಿ?'

'ಅಯ್ಯೋ, ನೀವೊಂದು....'

'ಅಲ್ವೆ, ನಾನು ಒಬ್ನೇ ತಾಯಿ ಹೊಟ್ಟೆಯಿಂದ ಬಂದಿರ್ದೋದು....'

'ಸುರುವಾಯ್ತು....'

'ಏನೆ?'

'ರಿಮಿ ಝಿಮಿ ಮಳೆ...'

'ಹ್ಞೂಂ....'

'ನೋಡಿ, ನಾನಂದದ್ದು ಕಾವೇರಿ ನೀರಿನ ವಿವಾದ....'

'ಓ, ಅದೆ?'

'ಹ್ಞೂನ್ನಿ.... ಅಲ್ಲ, ಸುಮಾರು ೧೦ ವರ್ಷಗಳಿಂದಲೂ ಅಶಾಂತಿಗೆ ಕಾರಣವಾದ ಈ ಬೃಹತ್ ಸಮಸ್ಯೆ ಆರೇ ತಿಂಗಳಲ್ಲಿ ಇತ್ಯರ್ಥವಾಗುತ್ತಂತೆ....'

'ಹಾಗೆಂತ ಕೇಂದ್ರ ನೀರಾವರಿ ಸಚಿವ ಡಾ| ಕೆ ಎಲ್. ರಾಯರ ಸಮಕ್ಷಮದಲ್ಲಿ ಕೇರಳ— ತಮಿಳುನಾಡು ಮತ್ತು ಕರ್ನಾಟಕದ ಮುಖ್ಯ ಮಂತ್ರಿಗಳು ಪ್ರತಿಜ್ಞೆ ಮಾಡಿದ್ದಾರಂತೆ.

'ಅದಿರಲಿ, ತಮಿಳುನಾಡು ಸರಕಾರ ನ್ಯಾಯಾಲಯದ ಮೆಟ್ಟಲನ್ನೂ ಹತ್ತಿತ್ತಲ್ಲಾ....ಹಲವು ಸುತ್ತಿನ ಮಾತುಕತೆ ನಡೆದು ನಿರರ್ಥಕವಾಗಿತ್ತಲ್ಲಾ....ಹಾಗಿರುವಾಗ ಈಗ ಮಾತುಕತೆಗಳಿಂದ ಕರ್ನಾಟಕಕ್ಕೆ ನ್ಯಾಯ ಹೇಗೆ ದೊರೆಯ ಬಹುದು?'

'ನೋಡಮ್ಮ, ನಾವೆಲ್ಲ-ತಮಿಳರಿರಲಿ, ಮಲೆಯಾಳಿಗಳಿರಲಿ, ಕನ್ನಡಿಗರಿರಲಿ, ದೊಡ್ಡದೊಂದು ದೇಶದ ಸಣ್ಣ ಜನರು....'

"ಹಾಗಂದರೆ?"

"ನಮ್ಮ ದೇಶ ಉದಾರ, ತ್ಯಾಗಶೀಲ, ಸಚ್ಚರಿತ್ರ....ಆದರೆ, ನಾವು ಅನುದಾರರು, ಸ್ವಾರ್ಥಪರರು...."

'ಹ್ಞೂಂ'

'ಈ ಸಣ್ಣ ಜನರೆಲ್ಲ ದೇಶದ ಗೌರವಕ್ಕೆ ತಕ್ಕಂತೆ ಉದಾರರಾಗಿ ತ್ಯಾಗಿಗಳಾಗಿ ನಡೆದುಕೊಂಡರೆ, ವಿವಾದವೆಲ್ಲವೂ ಆರೇಕೆ, ಮೂರೇ ತಿಂಗಳಲ್ಲಿ ಪರಿಹಾರ...'

'ಅದು ಹೇಗೆ?'

'ನೋಡು, ಕನ್ನಡ ತನ್ನ ಪರಂಪರೆಗೆ ಹೊಂದಿಕೊಂಡು ಅಲ್ಪತೃಪ್ತವಾಗಬೇಕು. ಪಾಲಿಗೆ ಬಂದುದು ಪಂಚಾಮೃತವೆನ್ನಬೇಕು. ಕೇರಳ ತನ್ನ ಚಂಚು ಪ್ರವೇಶವನ್ನು ನಿಲ್ಲಿಸಬೇಕು; ತಮಿಳುನಾಡು ನೀರದಾಹವನ್ನು ನೀಗಿಸಿಕೊಳ್ಳುವ ಆತುರ ತೋರೆಯಬೇಕು....'

'ಅಂದರೆ, ಕಾವೇರಿಯು ಪವಿತ್ರ ಜಲವನ್ನು ಯಾರೂ ಮುಟ್ಟಬಾರದು....'

"ಆಯ್ತೂನ್ನು...."

'ಮತ್ತೆ ಆ ನೀರು?'

'ನೀರೇನು ಸುಮ್ಮನುಳಿಯುತ್ತದೆಯೆ? ಹರಿಯುತ್ತದೆ....'

'ಮತ್ತೆ?'

'ಮತ್ತೇನು, ಆಕಾಶಾತ್ ಪತಿತಂತೋಯಂ ಕಾವೇರಿ ಮಾರ್ಗೇಣ ಸಾಗರಂ ಪ್ರತಿಗಚ್ಛಂತಿ....'

'ಅಲ್ರಿ, ನೀರೆಲ್ಲ ಸಮುದ್ರಕ್ಕೆ ಹರಿದು ಅಪವ್ಯಯವಾಗುವುದು ಯಾವ ನ್ಯಾಯ?'

'ಅದು ಸಮಾಧಾನವಿಲ್ಲವೆಂದಾದರೆ, ತನ್ನ ತ್ಯಾಗ ಶೀಲತೆಯನ್ನು ಪ್ರಮಾಣೀಕರಿಸಲು ಈ ಮೂರು ದಕ್ಷಿಣದ ರಾಜ್ಯಗಳಿಗೆ ರಜತಾವಕಾಶವೊದಗಿದೆ...'

'ಹಾಗಂದರೆ....'

'ಅಲ್ವೆ, ಈ ವರ್ಷ ನಮ್ಮ ಸ್ವಾತಂತ್ರ್ಯದ ರಜತೋತ್ಸವ....'

"ಹ್ಞೂಂ...."

'ಈ ರಜತೋತ್ಸವದ ಸವಿ ನೆನಪಿಗೆಂದು ಕಾವೇರಿ ನೀರನ್ನು ಧಾರೆಯೆರೆದು ಬಿಡುವುದು....'

"ಯಾರಿಗೆ?"

'ಅದಕ್ಕೆ ಸತ್ಪಾತ್ರರು ಅಂದರೆ ಡಾ| ಕೆ. ಎಲ್. ರಾಯರು....'

'ಅವರು?'

'ಅವರು ಕಾಲುವೆಗಳನ್ನು ಕೇಂದ್ರದ ಹಣದಿಂದ ತೋಡಿಸಿ ಆಂಧ್ರಕ್ಕೆ ನೀರು ಹರಿಯುವಂತೆ ಮಾಡಿದರೆ ಬಹುಕಾಲ ನೀರಾವರಿ ಮಂತ್ರಿಯಾಗಿ ಉಳಿದದ್ದು ಸಾರ್ಥಕ....'

'ಕಾವೇರಿ ನೀರೆಲ್ಲ ಆಂಧ್ರಕ್ಕೆ ಹೋಗಬೇಕು ಅಲ್ಲ?'

'ಹಾಗಲ್ವೆ, ಬರಿದೆ ಮೋಜು ಬಾರಿಸಿ ಕೊಂಡ್ರೆ ಕೈಗಂಟು ಮಾತ್ರ ನೀರಾವಾಗುತ್ತೆ....'

'ಅಲ್ರಿ, ಮೂವರು ಮುಖ್ಯ ಮಂತ್ರಿಗಳು ಒಂದಾಗಿ ಒಪ್ಪಿಕೊಂಡಿದ್ದಾರೆ. ಅಂದ ಮೇಲೆ ಏನಾದರೂ ಆಗಬಹುದು....'

'ಅದು ಹೇಗೆ? ಕಾವೇರಿ ನೀರಿನ ವಿವಾ

"ನವಯುಗ"ದ ಹೊನ್ನ ಹಬ್ಬ

(ನಾಲ್ಕನೇ ಪುಟದಿಂದ)

ಹೇಳಿದರು. ಕನ್ನಡಿಗರಲ್ಲಿ ಜ್ಞಾನದಾಹ ಬೆಳೆಯದಿರುವ ಬಗ್ಗೆ ತನ್ನ ಖೇದವನ್ನವರು ವ್ಯಕ್ತಪಡಿಸಿದರು. ಭಾಷೆಯನ್ನು ಸಜೀವಗೊಳಿಸುವಲ್ಲಿ ಸರ್ವಶಕ್ತರೆಂದರೆ ಪತ್ರಿಕಾಕರ್ತರೆಂದು ಅಭಿಪ್ರಾಯಿಸಿದ ಪ್ರೊ| ಗೌಡರು 'ನವಯುಗ'ವು ಕಳೆದ ೫೦ ವರ್ಷಗಳಲ್ಲಿ ಈ ಶಕ್ತಿಯನ್ನು ಅತ್ಯಂತ ಸಾಹಸದಿಂದ ಬೆಳೆಸಿಕೊಂಡು ಬಂದುದಕ್ಕೆ ಅದನ್ನೂ ಸಂಪಾದಕ ಹೊನ್ನಯ್ಯ ಶೆಟ್ಟರನ್ನೂ ಅಭಿನಂದಿಸಿ 'ನವಯುಗ' ಶತಮಾನೋತ್ಸವವನ್ನು ಆಚರಿಸುವಂತಾಗಲಿ, ಅದರಲ್ಲಿ ನಾವೆಲ್ಲರೂ ಭಾಗವಹಿಸುವಂತಾಗಲಿ ಎಂದರು. 'ನವಯುಗ'ದ ಸೇವೆಯನ್ನು ಕೊಂಡಾಡಿದ ಅವರು ಜನತೆಯ ಸಹಕಾರವನ್ನು ಬಯಸಿದರು.

ಸಮಿತಿಯ ಇನ್ನೊಬ್ಬ ಕಾರ್ಯದರ್ಶಿ ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದವರ್ಪಿಸಿದರು.

ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ರವೀಂದ್ರ ಮಂಟಪದಲ್ಲಿ ನಡೆದ ಈ ಚಿನ್ನದ ಹಬ್ಬ ಸಮಾರಂಭವು ಬುದ್ಧಿ ಜೀವಿಗಳ ಕೂಟವೆನಿಸುತ್ತಿತ್ತು. ಅತ್ಯಂತ ಸರಳವಾಗಿ ಬಾಹ್ಯಾಡಂಬರ ವಿದೂರವಾಗಿ ಇಂತಹ ಸಮಾರಂಭಗಳಲ್ಲೇ ವಿಶಿಷ್ಟ ಮಾದರಿಯನ್ನು ಹಾಕಿ ಕೊಟ್ಟಿತ್ತು. ಜಿಲ್ಲೆಯ ಹಲವೆಡೆಗಳಿಂದ 'ನವಯುಗ'ದ ಅಭಿಮಾನಿಗಳು ಆಗಮಿಸಿದ್ದು ಸಭೆಯು ಪ್ರಾತಿನಿಧಿಕವೆನಿಸುತಿತ್ತು.

●●

ಪ್ರಗತಿಯ ಹಕ್ಕಿನೋಟ

1971ರಲ್ಲಿ

ಸಿಂಡಿಕೇಟ್ ಬ್ಯಾಂಕಿನ ಸಾಧನೆ

ಪ್ರಗತಿಯ ದಾಖಲೆ	ಹೆಚ್ಚಳ	ಶೇಕಡಾ ಹೆಚ್ಚಳ
ಠೇವಣಿಗಳು ರೂ. 167.74 ಕೋಟಿಯಿಂದ ರೂ. 219.64 ಕೋಟಿಗೆ	ರೂ. 51.90 ಕೋಟಿ	30.9%
ಮುಂಗಡಗಳು ರೂ. 122.82 ಕೋಟಿಯಿಂದ ರೂ. 150.16ಕೋಟಿಗೆ	ರೂ. 27.34 ಕೋಟಿ	22.3%
ಠೇವಣಾತಿಗಳ ಸಂಖ್ಯೆ 18,44,134ರಿಂದ 22,07,958ಕ್ಕೆ	3.63 ಲಕ್ಷ	19.7%
ಮುಂಗಡ ಖಾತೆಗಳು 3,71,555ರಿಂದ 4,62,779ಕ್ಕೆ	ರೂ. 0.91 ಲಕ್ಷ	24.5%

ಜೀವನೋಪಯೋಗಿ ಕ್ಷೇತ್ರಗಳಿಗೆ ಆರ್ಥಿಕ ನೆರವು

	ಡಿಸೆಂಬರ 1970		ಡಿಸೆಂಬರ 1971	
	ಖಾತೆಗಳ ಸಂಖ್ಯೆ	ಮೊಬಲಗು	ಖಾತೆಗಳ ಸಂಖ್ಯೆ	ಮೊಬಲಗು
ವ್ಯವಸಾಯಕ್ಕೆ ...	98,627	ರೂ. 17.32ಕೋಟಿ	1,27,029	ರೂ. 19.76 ಕೋಟಿ
ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ...	9,354	ರೂ. 17.07ಕೋಟಿ	9,696	ರೂ. 17.91 ಕೋಟಿ
ವಾಹನ ಚಾಲಕರಿಗೆ (ಟ್ರಕ್, ಟೆಕ್ಸಿ, ರಿಕ್ಷಾಗಳಿಗೆ)...	3,437	ರೂ. 4.9[illegible]ಕೋಟಿ	3,837	ರೂ. 4.86 ಕೋಟಿ
ಚಿಲ್ಲರೆ ವ್ಯಾಪಾರಕ್ಕೆ ...	26,813	ರೂ. 7.15ಕೋಟಿ	23,378	ರೂ. 8.08 ಕೋಟಿ

ಬ್ಯಾಂಕ್ ಶಾಖೆಗಳ ವಿಸ್ತರಣೆ 31—12—71ರಲ್ಲಿ 507 ಶಾಖೆಗಳು

ಗ್ರಾಮ ವಲಯಗಳಲ್ಲಿ	ಪಟ್ಟಣ ಉಪನಗರಗಳಲ್ಲಿ	ನಗರಗಳಲ್ಲಿ	ಒಟ್ಟು
192	178	137	507

1971ರಲ್ಲಿ ನಾವು 46ಹೊಸ ಶಾಖೆಗಳನ್ನು ತೆರೆದೆವು

1970ರಲ್ಲಿ 186 ಊರುಗಳಲ್ಲಿ ನಮ್ಮ ಶಾಖೆಗಳು ಮಾತ್ರ ಇದ್ದುವು
1971ರಲ್ಲಿ 210 ಊರುಗಳಲ್ಲಿ ನಮ್ಮ ಶಾಖೆಗಳು ಮಾತ್ರ ಇದ್ದುವು

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಾರ್ಯಾಲಯ: ಮಣಿಪಾಲ   ಕಸ್ಟೋಡಿಯನ್: ಕೆ. ಕೆ. ಪೈ

ದೆವೀಗ ವಿವಾದವಾಗಿ ಉಳಿದಂತಿಲ್ಲ. ಪ್ರತಿಷ್ಠೆಯ ಪ್ರಶ್ನೆಯಾಗಿ ನಡೆದು ಬಂದಿದೆ....'

"ಅದು ಸರೀನ್ರಿ. ಕೆಲವು ಹಳ್ಳಿಗಳನ್ನು ಅತ್ತ ಇತ್ತ ಮಾಡಿ ಗಡಿ ವಿವಾದವನ್ನು ಕೊನೆಗೊಳಿಸಲು ಮುಂದೆ ಬಂದ ಕರ್ನಾಟಕ ತಮಿಳು ನಾಡಿನ ಮುಂದೆ ಬಗ್ಗದುಳಿದೀತೆ?"

"ನಮ್ಮ ಸರಕಾರ ಬಾಗುವುದು ತಮಿಳು ನಾಡಿನ ಮುಂದಲ್ಲ, ಪ್ರಧಾನಿ ಇಂದಿರಾ ಗಾಂಧಿಯವರ ಮುಂದೆ. ಶ್ರೀ ಅರಸೇ ಮುಖ್ಯ ಮಂತ್ರಿಯಾಗಬೇಕೆಂದು ಆಕೆ ಆದೇಶ ನೀಡಿದ್ದು ಇದಕ್ಕೇ....'

'ಯಾವುದಕ್ಕೆ? ಜನಗೆ ಬೇಕಾದಂತೆ....'

"ಹಾಗಲ್ಲವೆ. ಹಳೆಯದರಲ್ಲಿ ಉಳಿಯದಾದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವಲ್ಲಿ ಕೇಂದ್ರದೊಡನೆ ಸಂಪೂರ್ಣ ಹೊಂದಿಕೊಳ್ಳುವುದಕ್ಕಾಗಿ....'

'ಹೀಗಾದರೆ ರಾಜ್ಯದ ಗತಿ?'

'ನೋಡು, ಧರ್ಮಗಳಲ್ಲಿ ಗೃಹ, ಕುಲ, ಸಮಾಜ, ಲೋಕ. ವಿಶ್ವಗಳೆಂದು ಐದು ತೆರ....'

'ಆಯ್ತು....'

ಸದ್ಯ ಮೊದಲಿದದು ಅತ್ಯಂತ ಸಂಕುಚಿತವೆಂದು ನಮ್ಮ ಹೃದಯಕ್ಕೆ ಮನವರಿಕೆಯಾಗಿದೆ.'

'ಅದಕ್ಕೆಂದೇ ಆಳುವ ಕಾಂಗ್ರೆಸ್ಸಿನ ನೀತಿಯನ್ನು ಮೆಚ್ಚಿ ಅಪ್ಪಿಕೊಂಡಿದ್ದೇವೆ.'

'ಕೊನೆಯದೆರಡು ತೆಕ್ಕೆಗೆ ಸಿಗುವಷ್ಟು ನಾವು ಅಗಲವಾಗಿ ಬೆಳೆದಿಲ್ಲ...'

'ಸರೀನ್ರಿ, ಆದ್ದರಿಂದಲೆ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಲು ಸಿದ್ಧರಿಲ್ಲ.'

'ಆದ್ದರಿಂದ ನಮ್ಮದು ಮಧ್ಯಮ ನೀತಿ —ಸಮಾಜವಾದ—ಸಮಾಜ ಧರ್ಮ....'

'ಹ್ಞಾಂ....'

'ಆದ್ದರಿಂದ ಬೆಳಗಾಂವಿ ಕರ್ನಾಟಕದಲ್ಲಿದ್ದರೇನು, ಮಹಾರಾಷ್ಟ್ರಕ್ಕೆ ಹೋದರೇನು?

ಪುತ್ತೂರು IInd Addl. ಮುನ್ಸಿಫ್ ಕೋರ್ಟಿನಲ್ಲಿ

I. A. V. VI, ಮತ್ತು VII
in O.S. 25ˉ/1958.

ಮುಮನ್‌ಜಿ ಅತಿಕಾರಿ - - -ಅರ್ಜಿದಾರಳು
(1ನೇ ವಾದಿ)

ಶ್ರೀನಿವಾಸ ಪೈ ಕೂಡಾ - - - - - - ಎದ್ರಿರು

6ನೇ ಎದ್ರಿ ವೀರಪ್ಪ ಗೌಡ, ಕುಕ್ಕ ಗೌಡರ ಮಗ, 7ನೇ ಎದ್ರಿ ಧನು ಸೋಜ, ಮಮಿಂಗ, ಸೋಜರ ಮಗ, 17ನೇ ಎದ್ರಿ ಚೀಂಕ್ರ ಮೇರ ಮೇರ ಸೋಮನ ಮಗ–ಬೆಳ್ತಂಗಡಿ ತಾಲ್ಲೂಕು ನಡ ಗ್ರಾಮದ ಪುತ್ತ್ಯ ಎಂಬಲ್ಲಿರುವವರು.

ಸದ್ರಿ 6. 7 ಮತ್ತು 17ನೇ ಎದ್ರಿರೀಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ–

ಮೇಲಿನ ದಾವೆಯಲ್ಲಿ ಆದ ಪ್ರಿಲಿಮಿನರಿ ಡಿಕ್ರಿ ಜಜ್ಮೆಂಟು ದುರಸ್ತಿ ಬಗ್ಗೆ ಸದ್ರಿ ದಾವೆಯ ಕ್ಕೈಫೀತಿನಲ್ಲಿ ಸಪ್ಲಿಮೆಂಟಲ್ ಪ್ರತಿವಾದಿರನ್ನು ಸೇರಿಸುವ ಬಗ್ಗ್ಯೂ, ಮತ್ತು ಕೈಫೀತಿನಲ್ಲಿ ಮೃತರ ವಾರೀಸ್ದಾರರನ್ನು ಸೇರಿಸುವ ಬಗ್ಗ್ಯೂ ಅರ್ಜಿದಾರಳು ದಾಖ್ಲು ಮಾಡಿದ ಮೇಲಿನ ಅರ್ಜಿಗಳನ್ನು ತಾ. 23.6.1972ಕ್ಕೆ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿರುವುದ್ರಿಂದ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ನಿಂಮ ಆಕ್ಷೇಪಗಳನ್ನು ದಾಖ್ಲು ಮಾಡತಕ್ಕದ್ದೆಂತ ಈ ಮೂಲ್ಕ ನಿಮಗೆ ತಿಳಿಸೋಣಾಗಿಯದೆ.

॥ ಕೋರ್ಟು ಹುಕುಂ ಪ್ರಕಾರ ॥

P. A. ARIGA,
Advocate for petitioner.

Puttur, 30-5-1972.

ಮಿಲಾಗ್ರಿಸ್ ಕಾಲೇಜಿನಲ್ಲಿ ದೇ. ಜ. ಗೌ.

ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನಲ್ಲಿ ತಾ. ೨೯ರಂದು ಮೈಸೂರು ವಿ ವಿ ನಿಲಯದ ಕುಲಪತಿ ಪ್ರೊ| ದೇ ಜವರೇ ಗೌಡರು ಪ್ರಾಧ್ಯಾಪಕರ ಮತ್ತು ಆಡಳಿತ ಮಂಡಳಿಯ ಸಭೆಯನ್ನುದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ಪ್ರಿನ್ಸಿಪಾಲ್ ಡಾ| ಪಿ ಗುರುರಾಜ ಭಟ್ಟರು ಸ್ವಾಗತಿಸಿದರು ರೆ| ಫಾ| ಗೊನ್ಸಾಲೀಸರು ಕೃತಜ್ಞತಾಪೂರ್ವಕ ಮಾನಪತ್ರವನ್ನರ್ಪಿಸಿದರು.

ಶ್ರೀ ದೇ ಜ ಗೌ ಅವರು ಮಾತನಾಡುತ್ತಾ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕಾನೂನು, ಶಾಸನಗಳನ್ನು ಅವಲಂಬಿಸದೆ ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಕೆಯನ್ನು ಸಹಕಾರ ಪ್ರಾಮಾಣಿಕತೆಗಳಿಂದ ನಿರ್ವಹಿಸಿದರೆ ಸಮಸ್ಯೆ ತಾನಾಗಿ ಸರಳವಾಗುವುದು ಎಂದರು. ಪ ಕ ಜಿಲ್ಲೆಯಿಂದ ಒಳ್ಳೆಯ ಸಲಹೆಗಳು ಬರುತ್ತಿವೆಯೆಂದ ಅವರು ವಿ. ವಿ. ವ್ಯವಹಾರದಲ್ಲಿ ಕೇವಲ ಉಪಕುಲಪತಿ ಹಾಗೂ ರಿಜಿಸ್ಟ್ರಾರ್ ಮಾತ್ರ ಹೊಣೆಯಲ್ಲ, ಪ್ರಿನ್ಸಿಪಾಲರೂ ಅಧ್ಯಾಪಕರೂ ಕೂಡಾ ಮಹತ್ವ ಪಡೆಯುತ್ತಾರೆ. ಎಲ್ಲರೂ ಒಂದಾಗಿ ಕೆಲಸ ಮಾಡಿದರೆ ಮಾತ್ರ ಸಮಸ್ಯೆಗಳು ಬದಲಾಗಲು ಸಾಧ್ಯ ಎಂದರು. ಕೊನೆಯದಾಗಿ ಡಾ| ಗುರುರಾಜ ಭಟ್ಟರ ವಿಶ್ಲೇಷಣೆ ಮತ್ತು ಸಂಶೋಧನಾ ಕಾರ್ಯಕ್ಕೆ ಅವರು ತನ್ನ ಮೆಚ್ಚಿಗೆಯನ್ನೂ ವ್ಯಕ್ತಪಡಿಸಿದರು.

ತರುವಾಯ ಸಂಸ್ಥೆಯ ಪರವಾಗಿ ಪ್ರಾಕ್ತನ ಗೊಂಬೆಗಳೆರಡನ್ನು ಉಪಕುಲಪತಿಗಳ ನೇತೃತ್ವದಲ್ಲಿ ಮೈಸೂರು ವಿ. ವಿ. ನಿಲಯದಲ್ಲಿ ತೆರೆದಿರುವ ಜಾನಪದ ವಸ್ತು ಸಂಗ್ರಹಾಲಯಕ್ಕೆ ರೆ| ಫಾ| ಗೊನ್ಸಾಲೀಸರು ಒಪ್ಪಿಸಿದರು

ಅಂತ್ಯದಲ್ಲಿ ಡಾ| ಗುರುರಾಜ ಭಟ್ಟರು ಧನ್ಯವಾದಗಳನ್ನು ಸಮರ್ಪಿಸಿದರು.

ಭಾರತದಲ್ಲೇ ಉಳಿಯುತ್ತದೆ; ಕಾವೇರಿ ನೀರು ನಮಗೆ ದೊರೆಯದಿದ್ದರೇನು, ತಮಿಳರಿಗಿಲ್ಲವಾದರೇನು, ಆಂಧ್ರಪ್ರದೇಶೀಯರೂ ಭಾರತೀಯರೇ ತಾನೆ? '

'ಅಂದರೆ. ನೆಲ-ಜಲ ವಿವಾದ ಪರಿಹಾರವೇ ಶ್ರೀ ಅರಸರ ಆಡ್ಳಿತದ ಉದ್ದೇಶವೆ?'

'ನೋಡು. ಶ್ರೀ ಅರಸು ಹಿಂದಿನ ಕಾಂಗ್ರೆಸ್ಸಿನ ನೆಲ-ಜಲ ನೀತಿಯನ್ನು ಎಂದೂ ಒಪ್ಪಿದವರೇ ಅಲ್ಲ. ಆದ್ದರಿಂದ ಅವರು ಹೊಸ ನೀತಿಯನ್ನೇ ತಾಳುವುದು ಅಗತ್ಯವಿದೆ ಕೇಂದ್ರದೊಡನೆ ಜಗಳ ಕಾಯದಿರಬೇಕಾದರೆ, ಅದಕ್ಕೆ ವಿಧೇಯರಾಗಿರಬೇಕು ತಾನೆ?'

'ಅವರೆ ನೋಡಿ.'

'ಏನು?'

'ಕೇರಳದಲ್ಲಿ ಆಳುವ ಕಾಂಗ್ರೆಸ್ಸ್ ಸರಕಾರವಲ್ಲದ್ದರೂ ತಮಿಳುನಾಡಿನಲ್ಲಿಲ್ಲ. ಆದ್ದರಿಂದ ಶ್ರೀ ಕರುಣಾನಿಧಿಯವರು ಉಳಿದವರ ಮೇಲೆ ಕರುಣೆ ತೋರರು....'

'ತಮಿಳರಾದರೇನು? ಅವರು ತಮ್ಮನ್ನು ಬೇರೆಯೆಂದು ತಿಳಿದು ನಡೆದರೂ ನಾವು ಭಾರತೀಯರೆಂದೇ ಕರೆಯುತ್ತೇವೆ ತಾನೆ? ಕರ್ನಾಟಕ ಕರುಣಾನಿಧಿಯವರ ಮೇಲೆಯೇ ಅಪಾರ ಕರುಣೆ ತೋರಿದರಾಯ್ತಲ್ಲಾ?....'

'ಒಕ್ಕಟ್ಟಿನ, ಏಕ ರಾಷ್ಟ್ರೀಯತೆಯ ಪ್ರಯೋಜನ ಆಗ ಅವರಿಗೆ ಮನವರಿಕೆಯಾಗುತ್ತದೆ. ಒಬ್ಬ ಶೀಲೆಯ ತ್ಯಾಗದಿಂದ ಕ್ರೂರ ಅಶೋಕನ ಹೃದಯ ಬದಲಾದಂತೆ ಕರ್ನಾಟಕದ ಅಮರ ತ್ಯಾಗದಿಂದ ತಮಿಳರ ಹೃದಯದಲ್ಲಿ ಏಕರಾಷ್ಟ್ರೀಯತೆಯ ಭಾವೋದಯವಾದರೂ ಆಗಬಹುದು...'

"ಹ್ಞಾಂ, ಆಗಬಹುದೂನ್ನು...."

—ಗೋರಾ.

ಹರಿಜನ ಹುಡುಗರ ಹಾಸ್ಟೆಲ್ ಕಟ್ಟಡಕ್ಕೆ ಸಚಿವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರಿಂದ ಶಂಕು ಸ್ಥಾಪನೆ

ಬಂಟ್ವಾಳ ತಾಲೂಕಿನ ಬಿ. ಸಿ. ರೋಡ್ ಸಮೀಪ ಹರಿಜನ ಹುಡುಗರ ಹಾಸ್ಟೆಲ್ ಕಟ್ಟಡಕ್ಕೆ ತಾ. 2ರಂದು ಮೈಸೂರು ಸರಕಾರದ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಸಚಿವ ಶ್ರೀ ಎಂ ಮಲ್ಲಿಕಾರ್ಜುನ ಸ್ವಾಮಿಯವರು ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರ ಅಧ್ಯಕ್ಷತೆಯಲ್ಲಿ ಶಂಕು ಸ್ಥಾಪನೆ ಗೈದರು.

ಶ್ರೀ ಸದಾಶಿವ ಭಂಡಾರಿಯವರು ಸಚಿವರಿಗೆ ಹಾರ ಹಾಕಿ ಸ್ವಾಗಸಿದರು. ಶ್ರೀ ಕೆ. ಎಸ್. ಮಹಾಬಲ ಶೆಟ್ಟರು ಸ್ವಾಗತಿಸಿದರು ಶ್ರೀರಾಮ ಭಟ್ಟರು ಮನವಿಯೊಂದನ್ನು ಮಂತ್ರಿಗಳಿಗೆ ಒಪ್ಪಿಸಿದರು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿಯವರು ಮಾತನಾಡುತ್ತಾ, ಹರಿಜನರಿಗೆ, ಗಿರಿಜನರಿಗೆ ಕೊಡುತ್ತಿರುವ ಸೌಲಭ್ಯಗಳು ಹರಿಜನರಿಗೆ ನೇರವಾಗಿ ಸಿಗುವುದರ ಬದಲು ಸಮಾಜ ಸೇವೆಯ ಪೋಷಾಕು ಧರಿಸಿ ಸಮಾಜದ ಜನರನ್ನು ಶೋಷಣೆ ಮಾಡುವ ಮುಖಂಡರೆನಿಸಿಕೊಂಡವರಿಗೆ ಸೇರುತ್ತಿತ್ತು. ಬಡತನ, ಅಜ್ಞಾನವಿರುವ ದೇಶದಲ್ಲಿ ಸೌಲಭ್ಯಗಳು ಎಲ್ಲಾ ಜನರಿಗೆ ದೊರಕುವುದು ಕಷ್ಟವಾಗುತ್ತಿದೆ. ಈ ಪರಿಸ್ಥಿತಿ ಇನ್ನು ಮುಂದೆ ನಡೆಯದಂತೆ ಜಾಗ್ರತೆ ವಹಿಸಬೇಕಾಗಿದೆ. ಎಂದರು. ನಮ್ಮ ದೇಶದಲ್ಲಿ ನೈಸರ್ಗಿಕ ಸಂಪತ್ತು ಧಾರಾಳವಿದೆ. ಮಾನವ ಶಕ್ತಿಯೂ ಕಡಿಮೆಯಿಲ್ಲ. ಮಾನವ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ದೇಶದ ಸಂಪತ್ತನ್ನು ಹೆಚ್ಚಿಸಲು ಪ್ರಯತ್ನಿಸಬೇಕೆಂದು ವಿನಂತಿಸಿದರು. ಮನವಿಯಲ್ಲಿ ವಿವರಿಸಲಾದ ಎಲ್ಲಾ ಕೇಳಿಕೆಗಳ ಕುರಿತು ಸರಕಾರೀ ಮಟ್ಟದಲ್ಲಿ ಪರಿಶೀಲನೆ ನಡೆಸಿ ತಕ್ಕ ಪರಿಹಾರ ಒದಗಿಸಲು ಪ್ರಯತ್ನಿಸುವುದಾಗಿ ಭರವಸೆಯನ್ನಿತ್ತರು.

ಕೆಲವರು ಮಾತನಾಡಿ ಕೆಲವು ಸಮಸ್ಯೆಗಳನ್ನು ಸೂಚಿಸಿ ಅವುಗಳನ್ನು ಬಗೆಹರಿಸುವಲ್ಲಿ ಸಹಾಯ ಮಾಡಬೇಕೆಂದು ವಿನಂತಿಸಿದರು.

ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಪಿ. ವೆಂಕಟೇಶ ಪೈಯವರು ವಂದಿಸಿದರು.

ಸಾಂಸ್ಕೃತಿಕ ಸಂಘ ಕೂರಾಡಿ

ತಾ. 20_5_1972ರಲ್ಲಿ ಸಂಘದ ಅಧ್ಯಕ್ಷ ಶ್ರೀ ಬಿ. ಸೀತಾರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಸಂಘದ ಮಹಾಸಭೆ ಜರಗಿ ತಾತ್ಕಾಲಿಕವಾಗಿ ಆರಿಸಲಾದ ಕಾರ್ಯಕಾರಿ ಮಂಡಳಿಯನ್ನು 1972—73ನೇ ಸಾಲಿಗೆ ಖಾಯಂ ಆಗಿ ಅಂಗೀಕರಿಸಲಾಯಿತು

ಅಧ್ಯಕ್ಷ: ಸರ್ವಶ್ರೀ ಬಿ ಸೀತಾರಾಮ ಶೆಟ್ಟಿ, ಉಪಾಧ್ಯಕ್ಷ: ಕೆ ಯಮ್. ಸಂಜೀವ ಶೆಟ್ಟಿ, ಕಾರ್ಯದರ್ಶಿ: ಕೂರಾಡಿ ಸದಾಶಿವ ಕಲ್ಕೂರ, ಕೋಶಾಧಿಕಾರಿ: ಕೆ. ಕೃಷ್ಣಮೂರ್ತಿ ಉಪಾಧ್ಯಾಯ, ಉಪ ಕಾರ್ಯದರ್ಶಿಗಳು: ಕೆ. ಸೀತಾರಾಮ ಬ್ಯಾರಿ, ಯಸ್. ಭೋಜರಾಜ ಸೆಟ್ಟಿ, ಮತ್ತಿತರರು ಸದಸ್ಯರು.

ಸಾಂಸ್ಕೃತಿಕ ಸಂಘ ಕೂರಾಡಿ— ಇವರ ಆಶ್ರಯದಲ್ಲಿ ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಮೇ 22ರಂದು ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರಿಂದ ಧಾರ್ಮಿಕ ಪ್ರವಚನ ಕಾರ್ಯಕ್ರಮವು ನಡೆಯಿತು. ಶ್ರೀ ಬಿ. ಸೀತಾರಾಮ ಸೆಟ್ಟರು ಸ್ವಾಗತಿಸಿದರು. ಕೂರಾಡಿ ಸದಾಶಿವ ಕಲ್ಕೂರರು ಅತಿಥಿಗಳ ಪರಿಚಯ ಮಾಡಿದರು.

ಶ್ರೀ ಕೂರಾಡಿ ಸೀತಾರಾಮ ಅಡಿಗರೂ ಶ್ರೀ ಬನ್ನಂಜೆ ಗೋವಿಂದಾಚಾರ್ಯರೂ ಭಾಷಣಗೈದರು. ಶ್ರೀ ಸ್ವಾಮೀಜಿಯವರು ಪ್ರಚಲಿತ ಸಮಸ್ಯೆಗಳನ್ನು ವಿವರಿಸುತ್ತಾ ವಿಶ್ವಹಿಂದೂ ಧರ್ಮದ ಕುರಿತು ಪ್ರವಚನ ಮಾಡಿದರು.

ಶ್ರೀ ಕಲ್ಕೂರರು ಧನ್ಯವಾದಗಳನ್ನು ಅರ್ಪಿಸಿದರು.

ಪುತ್ತೂರು IInd Addl. ಮುನ್ಸಿಫ್ ಕೋರ್ಟಿನಲ್ಲಿ

Mis. Petition 5/1972.
O.S. 512/1970.

ಸಂಕಪ್ಪ ಗೌಡ ಕೂಡಾ-(ವಾದಿರು)
ಅರ್ಜಿದಾರರು

ನರಸಿಂಹ ಭಟ್ಟ ಕೂಡಾ-(ಪ್ರತಿವಾದಿರು)
ಎದ್ರಿರು

11th Respt. Narasimha Ballakraya, S/o Krishna Ballakraya, residing c/o Ramachandra Nellithaya Mithanadka, Balnad Village, Puttur Taluk. P. O. Balnad.

12th Respt. Yelianna Gowda, S/o Domma Gowda, residing in Muthunadu Village, P. O. Napoklu, (Coorg).

ಸದ್ರಿ ಎದ್ರಿರೀಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ—

ಮೇಲಿನ ದಾವೆಯಲ್ಲಿ ಆದ ಡಿಸ್‌ಮಿಸ್ ಹುಕುಂ ರದ್ದುಪಡಿಸಿ ಪುನಹಾ ತನಿಖೆಗೆ ತೆಗಿಯಬೇಕೆಂತ ಅರ್ಜಿದಾರರು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾ. 23.6.1972ಕ್ಕೆ ಇಟ್ಟಿರುವುದ್ರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ನಿಂಮ ಆಕ್ಷೇಪಗಳನ್ನು ದಾಖ್ಲು ಮಾಡತಕ್ಕದ್ದೆಂತ ಈ ಮೂಲ್ಕ ತಿಳಿಸೋಣಾಗಿಯದೆ.

॥ ಕೋರ್ಟು ಹುಕುಂ ಪ್ರಕಾರ ॥

P. A. ARIGA,
Advocate for petitioners.

Puttur, 29-5-1972.

ಸೇಫ್ ಡಿಪಾಜಿಟ್ ಲಾಕರ್

ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ

ಕೆನರಾ ಬ್ಯಾಂಕಿಂಗ್ ಕಾರ್ಪೋರೇಷನ್ ಲಿಮಿಟೆಡ್

ESTD. 1906

ರಥಬೀದಿ, ಮಂಗಳೂರು ಫೋನ್ ನಂ. 3057
ಕಂಕನಾಡಿ, ಮಂಗಳೂರು ಫೋನ್ ನಂ. 7312
ಪುತ್ತೂರು, ಫೋನ್ ನಂ. 164

mas/CBC/151 Kan.

(ಎರಡನೇ ಪುಟದಿಂದ)

ಅನುಗ್ರಹಿಸಲು ಕಾಯುತ್ತಿದ್ದಾಳೆ. ಹೋಗಿ ಬನ್ನಿ. ಸುಮುಹೂರ್ತೇ ಸಾವಧಾನ'

ಪದ್ಮಪ್ಪ ನಗುತ್ತಲೇ ಈ ಮಾತನ್ನಾಡಿದ.

ಆ ಮಾತು ನಗೆಯ ಅಲೆಯನ್ನೇ ಎಬ್ಬಿಸಿತು.

'ಲೋಕಾ! ಇಲ್ಲಿ ಬಾ'

ಅರಿಕೇಸರಿ ಹೊರ ಬರುವಂತೆ ಲೋಕಾಂಬಿಕೆಯನ್ನು ಪ್ರಾರ್ಥಿಸಿದ.

ಅವಳಿಗೂ ಅದೇ ಬೇಕಾಗಿತ್ತು.

'ಹೀಗೆ ಎಂದರೆ ಹೇಗೆ' ಎಂದು ಪ್ರಶ್ನಿಸುತ್ತ ಅವಳು ಒಳ ಕೋಣೆಯಿಂದ ಹೊರ ಜಗಲಿಗೆ ಬಂದಳು.

'ಇವರ ಮುಂದೆ ಆ ಮಾತು ಬೇಡ. ವರ್ಣಿಸಿ ನಮ್ಮ ಮುಖದಲ್ಲಿ ನೀರು ಬರಿಸುತ್ತಾರೆ. ಇವರೇ ಆ ನನ್ನ ಸ್ನೇಹಿತರು. ಅವರ ವಿಚಾರ ನಿನಗೆ ತಿಳಿಯದೆ ಇರುವುದು ಏನೂ ಇಲ್ಲ'

'ನಿಮ್ಮ ಸ್ನೇಹಿತರೆಂಬುದು ಆಗಲೇ ಹೊಳೆಯಿತು. ಆದರೆ ಕವಿಗಳಾದ ಇವರು ಕಲಿಗಳೆಂಬುದು ತಿಳಿದುದು ಈಗಲೇ. ಅವರ ದರ್ಶನ ಪ್ರಾಪ್ತಿ ಪುಣ್ಯ ಫಲ'

'ನಿಮ್ಮಿಬ್ಬರನ್ನೂ ಹೀಗೆ ನೋಡುವ ಪುಣ್ಯ ಈ ಕಣ್ಣುಗಳಿಗೆ ಲಭಿಸಿದ್ದು ಅದು ನಿಜಕ್ಕೂ ಪ್ರಸಾದ. ಅಜ್ಞಾನಿಯಾದ ನಾನು ಸುಜ್ಞನಾಗಿ ಬಾಳುವಂತೆ ಅನುಗ್ರಹಿಸಬೇಕು.'

'ನೀವು ಕವಿಗಳು. ಕೃತಿ ರಚನೆಯ ಕಾಲದಲ್ಲಿ ಈ ನೆಲದಲ್ಲೇ ನಡೆಯುವುದಿಲ್ಲ. ಸಾಮಾನ್ಯರಿಗೆ ಎಟುಕದ ಎತ್ತರಕ್ಕೆ ಏರುತ್ತೀರಿ. ನೀವು ಲೋಕೋತ್ತರ ವ್ಯಕ್ತಿಗಳು. ಅಂತಹ ವಿಭೂತಿಗಳಿಗೆ ಹರಸಲು ನಾವೆಷ್ಟರವರು? ಮಧುಕೇಶ್ವರ ಹರಸಿ ಗುರಿಗಾಣಿಸಬೇಕು.'

'ಕಲಾ ಸೃಷ್ಟಿಗೆ ಕೈ ಹಿಡಿದು ನಡೆಯಿಸುವ ಕೈಯೂ ಬೇಕು, ಕಲೋಪಾಸಕರೂ ಬೇಕು.'

'ನಾವಿಬ್ಬರೂ ಕೂಡಿಯೇ ಈ ಮಾತಿಗೆ ಮಂಗಳ ಹಾಡುತ್ತೇವೆ.'

'ಪ್ರಭು ಚಿತ್ತ'

'ಆಳು—ಅರಸೆಂಬ ಅಂತರದ ಮಾತು ಬೇಡ. ಸಲುಗೆ—ಆತ್ಮೀಯತೆಗಳೇ ನಮ್ಮೊಳಗೆ ಬೆಳೆದು ಬರಲಿ.'

ಹೀಗೆ ನುಡಿದು ಆತ್ಮೀಯತೆಯಿಂದ ಅರಿಕೇಸರಿ ಪದ್ಮಪ್ಪನನ್ನು ಆಲಂಗಿಸಿದ.

೨೨

ಅರಿಕೇಸರಿ—ಲೋಕಾಂಬಿಕೆ ಬನವಾಸಿಗೆ ಬಂದು ಮೂರು ದಿನಗಳು ಕಳೆದುವು. ಅವರಿಬ್ಬರಿಗೂ ಕಾಲ ಜಾರಿದುದು ತಿಳಿಯಲಿಲ್ಲ. ಹರಟೆ, ಚರ್ಚೆ, ಮಂತ್ರಾಲೋಚನೆ, ವಿಹಾರಗಳಲ್ಲಿ ಸಮಯ ಸವೆದುದು ಗೊತ್ತಾಗುವಂತೆಯೂ ಇರಲಿಲ್ಲ. ಇದರ ಜೊತೆಗೆ ಇಟ್ಟುಕೊಂಡ ಕೆಲವು ನಿಯತ ಕರ್ಮಗಳು.

ಬೆಳ್ಳಗೆ ಬೆಳಕು ಹರಿಯುವುದರೊಳಗೆ ನದಿಯಲ್ಲಿ ಸ್ನಾನ. ಅನಂತರ ಮಡಿಯುಟ್ಟುಕೊಂಡು ಮಧುಕೇಶ್ವರ ಗುಡಿಯ ಪ್ರದಕ್ಷಿಣೆ. ಅನಂತರ ದೇವರ ದರ್ಶನ, ವಿಶೇಷ ಪೂಜಾಕಾರ್ಯ, ಪ್ರಸಾದ ಸ್ವೀಕಾರ. ಇದಾದ ನಂತರ ನೆಟ್ಟಗೆ ಎಲೆಮನೆಗೆ ಬಂದು ಹಾಲುಹಣ್ಣಿನ ಸೇವನೆ. ಅಷ್ಟರಲ್ಲೇ ಪದ್ಮಪ್ಪ ಬಂದು ಅವರನ್ನು ಕೂಡಿಕೊಳ್ಳುತಿದ್ದ.

ಅವನ ಆಗಮನ ಹೊರಹೊರಡುವುದಕ್ಕೆ ಸೂಚನೆ ಇದ್ದಂತೆ. ಆತ ಬರುವುದೇ ತಡ, ಮೂವರೂ ಒಟ್ಟಾಗಿ ಕಾಡು-ಮೇಡುಗಳಲ್ಲಿ ಅಲೆಯುತಿದ್ದರು. ಆ ಪ್ರಾಂತದ ಬಹುಭಾಗವನ್ನು ಬಲ್ಲ ಪದ್ಮಪ್ಪ ಅವರ ಮಾರ್ಗದರ್ಶಿ. ಸುತ್ತಲ ವನಶ್ರೀಯನ್ನು ತೋರಿಸುವುದಲ್ಲದೆ, ಪ್ರೇಕ್ಷಣೀಯ ಸ್ಥಳಗಳಿಗೂ ಕರೆದೊಯ್ಯುತಿದ್ದ. ಆ ಒಂದೊಂದು ತಾಣದ ಸಂದರ್ಶನದಿಂದಲೂ ಲೋಕಾಂಬಿಕೆ ಪುಳಕಿತಳಾಗುತಿದ್ದಳು. ನಿಸರ್ಗ ನಿರ್ಮಿಸಿದ ಸೊಗಸಿನೊಡನೆ, ಅರಮನೆಯ ಕೃತಕ ವಾತಾವರಣವನ್ನು ಅವಳು ಅಳೆದು ನೋಡುತಿದ್ದಳು. ಅದು ಕೊಡುವ ಆನಂದ-ತೃಪ್ತಿ, ಸಮಾಧಾನಗಳನ್ನು ಯಾವ ಸುಖ-ಸಂಪತ್ತು, ಧನ-ದವಲತ್ತು ತಂದುಕೊಡಲಾರದು ಎಂಬ ನಿರ್ಧಾರಕ್ಕೆ ಅವಳು ಬಂದಳು.

ಹೊಳೆಯ ದಂಡೆಯಲ್ಲಿ ಬಂದು ಬೀಳುತಿದ್ದ ಮರಳ ರಾಶಿಯಲ್ಲಿ ಕುಳಿತು ಆಡುವುದೆಂದರೆ ಅವಳಿಗೆ ಎಲ್ಲಿಲ್ಲದ ಪ್ರೀತಿ. ವಿವಿಧ ಆಕಾರದ ವಿವಿಧ ಬಣ್ಣದ ಕಲ್ಲುಗಳನ್ನು ಆಯ್ದು ತಂದು ಒಂದೆಡೆ ರಾಶಿಹಾಕಿ, ಅವುಗಳನ್ನೇ ನೋಡುತ್ತ, ಅವುಗಳ ಮಾಟವಾದ ಆಕಾರಕ್ಕೋ, ಅವುಗಳಲ್ಲಿ ಮೂಡಿದ ವಿವಿಧ ಆಕೃತಿಗಳನ್ನು ಕಂಡೋ, ಮುಗ್ಧಳಾಗುತಿದ್ದಳು. ನಿಸರ್ಗದ ಚೆಲ್ಲಾಟವನ್ನು ಕಂಡು ಅಚ್ಚರಿ ತಾಳುತಿದ್ದಳು.

ಹಾಗೆ ಕುಳಿತು ಆಡುವ ಅವಳನ್ನು ಅಲ್ಲಿಯೇ ಬಿಟ್ಟು, ಪದ್ಮಪ್ಪ ಅರಿಕೇಸರಿ ನದಿಯ ದಂಡೆಗುಂಟ, ಮುಂದಿನ ಮಾರ್ಗದ ಸ್ಥೂಲಚಿತ್ರವನ್ನು ಚರ್ಚಿಸುತ್ತ ಯಾವುದರ ಪರಿವೆಯೂ ಇಲ್ಲದೆ ಸಾಗುತಿದ್ದರು.

ಅಂದೂ ಅವಳನ್ನು ಅವಳ ಸಂಗ್ರಹದೊಡನೆ ಸರಸವಾಡಲು ಬಿಟ್ಟು ಅವರು ಮುಂದಾದರು. ಅವಳು ತನ್ನ ಕೆಲಸದಲ್ಲಿ ತನ್ಮಯಳಾದಳು.

ಇದ್ದಕಿದ್ದಂತೆ ಅವಳಿಗೆ ಕುದುರೆಗಳ ಖುರಪುಟದ ಸದ್ದು ಕೇಳಿತು. ಸದ್ದು ಕೇಳಿ ಬಂದ ದಿಕ್ಕಿಗೆ ಆಕೆ ದೃಷ್ಟಿ ಹಾಯಿಸಿದಳು. ದೂರದಲ್ಲಿ, ಸದ್ದು ಕೇಳಿ ಬರುತ್ತಿದ್ದ ಸ್ಥಳದಿಂದ ಕೆಂಧೂಳು ಸಭಕ್ಕೆ ನೆಗೆಯುತ್ತಿತ್ತು. ಈ ವನಾಂತರದಲ್ಲಿಯೂ ಸೈನಿಕರ ಓಡಾಟವನ್ನು ಕಂಡು ಆಕೆ ದಿಗಿಲಾದಳು.

ಅಣ್ಣ ಗೋವಿಂದ ಕಳುಹಿಸಿದ ಕಟ್ಟಾಳುಗಳಿರ ಬಹುದೇ ಎಂಬ ಅನುಮಾನವೂ ಬಂತು. ಮುಂದೇನು ಮಾಡಬೇಕೆಂಬುದು ಅವಳಿಗೆ ಹೊಳೆಯಲಿಲ್ಲ. ಅರಿಕೇಸರಿ—ಪದ್ಮಪ್ಪರನ್ನು ಕೂಗುವ ಎಂದರೆ, ಅವರು ಹತ್ತಿರದಲ್ಲಿರುವಂತೆ ಕಾಣಲಿಲ್ಲ. ಎಲೆಮನೆಯನ್ನು ಸೇರುವ ಎಂದರೆ ಅದೂ ಹತ್ತಿರದಲ್ಲಿರಲಿಲ್ಲ.

ಬರುತ್ತಾ ಕುದುರೆಯನ್ನೇರಿ ಬರುತ್ತಿದ್ದಾರೆ ಎಂದು ಯೋಚಿಸುತ್ತಿರುವಂತೆಯೇ ಹತ್ತಾರು ಕುದುರೆಗಳು ನದಿಯ ಆಚೆಯ ಅಂಚನ್ನು ತಲುಪಿದ್ದು ಕಾಣಿಸಿತು.

ಮಳಲ ರಾಶಿಯಲ್ಲಿ ಓಡುವುದಂತೂ ಸಾಧ್ಯವಿರಲಿಲ್ಲ. ಕಾಲೇ ಹೂತು ಹೋಗುತ್ತಿತ್ತು. ದಿಙ್ಮೂಢೆಯಾಗಿ ಅವಳು ಕದಲದೆ ಆಚೆಯ ದಡವನ್ನು ನೋಡುತ್ತಿದ್ದಂತೆಯೇ ಬಿಚ್ಚುಗತ್ತಿಯ ಸವಾರರನ್ನು ಹೊತ್ತ ಕುದುರೆಗಳು ನದಿಗಿಳಿದುವು.

ಅವಳು ಥರ ಥರ ನಡುಗಿದಳು. ಚೀರಿಕೊಳ್ಳಬೇಕೆನಿಸಿತು. ಆದರೆ ಧ್ವನಿಯೇಳಲಿಲ್ಲ. ಬವಳಿ ಬಂದಂತಾಗಿ ಅವಳು ಮಳಲ ರಾಶಿಯಲ್ಲಿ ಕುಸಿಕೂತಳು.

ನಿದಾನವಾಗಿ ಹೊಳೆಯನ್ನು ದಾಟಿದ ಕುದುರೆಗಳು, ಮರಳದಿಣ್ಣೆಯನ್ನೇರಿದುವು. ನಿಶ್ಚೇಷ್ಟಿತಳಾಗಿ ಬಿದ್ದ ರಾಜಕುಮಾರಿಯನ್ನು ಸುತ್ತುವರಿದು ನಿಂತರು ಅವುಗಳಿಂದಿಳಿದ ರಾವುತರು.

ಯಾರಿಗೂ ಅವಳ ಸಮೀಪ ಸುಳಿಯುವ ಧೈರ್ಯವಾಗಲಿಲ್ಲ.

ಒಬ್ಬರ ಮುಖವನ್ನೊಬ್ಬರು ನೋಡುತ್ತ ತೆಪ್ಪಗೆ ನಿಂತರು—

ಅವರಲ್ಲಾರಿಗೂ ಮಾತನಾಡುವ ಧೈರ್ಯವೂ ಇದ್ದಂತೆ ಕಾಣಿಸಲಿಲ್ಲ.

ಬಿದ್ದಿದ್ದ ಲೋಕಾಂಬಿಕೆಯನ್ನೆಬ್ಬಿಸಿ, ಅವಳನ್ನು ನುಡಿಯಿಸುವ ಎದೆಗಾರಿಕೆಯೂ ಅವರಲ್ಲಾರಿಗೂ ಉಂಟಾಗಲಿಲ್ಲ.

ಹೂವರಳುವಂತೆ—ಅವಳು ಮೆಲ್ಲಗೆ ಕಣ್ಣು ಬಿಡಿಸಿದಳು.

ಸುತ್ತುಗಟ್ಟಿ ನಿಂತ ಸೈನಿಕರನ್ನು ಕಂಡು ಹಾಗೇ ಕಣ್ಣು ಮುಚ್ಚಿಕೊಂಡಳು.

ಉಡುಗಿ ಹೋದ ಧೈರ್ಯವನ್ನು ತಂದುಕೊಂಡು 'ಅಮ್ಮಾ' ಎಂದು ಕಿರುಚಿಕೊಂಡಳು.

೦೦ ೦೦ ೦೦

ಅವಳು ಎಚ್ಚೆತ್ತು ಸುತ್ತಲೂ ನೋಡಿದಳು.

ಆದರೆ ಬಿಚ್ಚುಗತ್ತಿಯ ಸವಾರರು ಕಣ್ಣಿಗೆ ಬೀಳಲಿಲ್ಲ.

ಹರಿವ ನೀರಿನ ಜುಳು ಜುಳು ನಿನಾದವೂ ಕೇಳಿ ಬರಲಿಲ್ಲ.

ಉರುಳಿ ಬಿದ್ದ ಮರಳ ರಾಶಿಯಲ್ಲಿ ತಾನು ಮಲಗಿರುವಂತೆ ಕಾಣಲಿಲ್ಲ.

ಆಕೆ ಹುಲ್ಲ ಮೆತ್ತೆಯ ಮೇಲೆ ಮಲಗಿದ್ದಳು.

ಪ್ರಜ್ಞೆ ತಪ್ಪಿ ಬಿದ್ದಾಗ ಕೇಳಿದ್ದ ಬಾನು ಅವಳಿಗೆ ನೆರಳಾಗಿತ್ತು. ಆದರ ಸ್ಥಾನದಲ್ಲಿ ಈಗ ನೆರಳು ಮಾಡು.

ಅವಳಿಗೆ ತಾಗಿಕೊಂಡೇ. ಅವಳನ್ನೇ ದಿಟ್ಟಿಸುತ್ತ ನಿಂತಿದ್ದರು ನರಸಿಂಹ ನಾಯಕರು. ತಾನು ಯಾವುದೋ ಹೊಸ ಸ್ಥಳದಲ್ಲಿರುವಂತೆ ಭಾಸವಾಯಿತು. ಆದರೂ ಪಕ್ಕದಲ್ಲಿ ನರಸಿಂಹ ನಾಯಕರಿರುವುದನ್ನು ಕಂಡು, ಸುರಕ್ಷಿತ ಸ್ಥಳದಲ್ಲಿರುವೆನೆಂದು ಸಮಾಧಾನ ತಂದುಕೊಂಡಳು.

'ಮಗಳೇ, ನೀನಿಷ್ಟು ಗಾಬರಿಗೊಂಡುದೇಕೆ?' ನಾಯಕರೇ ಅವಳನ್ನು ನುಡಿಸಿದರು.

ವೃದ್ಧರ ಮಾತು ಯಾರಲ್ಲಿಯೂ ಆತ್ಮ ವಿಶ್ವಾಸ ಹುಟ್ಟಿಸುವಂತಿತ್ತು. ಮಾತಿಗಿರುವ ಶಕ್ತಿಯ ಅರಿವು ಅವಳಿಗಾದುದು ಆಗಲೇ.

'ನಾನೀಗ ಎಲ್ಲಿದ್ದೇನೆ? ಅವರೆಲ್ಲ ಏನಾದರು?'

ಅವರೆಂದರೆ ಯಾರೆಂಬುದು ನಾಯಕರಿಗೆ ಥಟ್ಟನೆ ಹೊಳೆಯಲಿಲ್ಲ. ಅರಿಕೇಸರಿ-ಪದ್ಮಪ್ಪರನ್ನು ಅವಳು ಕೇಳುತ್ತಿರುವಳೆಂದು ಅವರು ಮೊದಲು ತಿಳಿದುಕೊಂಡು 'ನಿನ್ನ ಜೊತೆಯೇ ಬಂದರಲ್ಲ. ಇಲ್ಲಿಯೇ ಇದ್ದಾರೆ' ಎಂದು ಮಾರ್ನುಡಿದರು

'ಅವರನ್ನಲ್ಲ ನಾನು ವಿಚಾರಿಸಿದ್ದು—ನನ್ನನ್ನು ಸುತ್ತುವರಿದರಲ್ಲ, ಆ ಸೈನಿಕರು. ಅವರೆತ್ತ ಹೋದರು? ನೀವೆಲ್ಲಿಂದ ಬಂದಿರಿ?'

ಹೊಳೆಯ ದಂಡೆಯಲ್ಲಿ ನಡೆದುದನ್ನರಿಯದ ನಾಯಕರು ತಬ್ಬಿಬ್ಬಾದರು. ಆದರೂ ಅದನ್ನು ತೋರಗೊಡದೆ ಶಾಂತಚಿತ್ತದಿಂದ 'ಅವರೆಲ್ಲ ನಿನ್ನ ಜೊತೆಯೇ ಇಲ್ಲಿಗೆ ಬಂದರಲ್ಲ.'

ಅವರು ಯಾರು? ಇಲ್ಲಿಗೇಕೆ ಬಂದರು'

(ಮುಂದುವರಿಯುವುದು)

NAVAYUGA 8-6-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಅಯ್ಯೋ ಕನ್ನಡ

ಶ್ರೀ ದೇವರಾಜ ಅರಸ್‌ರವರ ನಾಯಕತ್ವದಲ್ಲಿ ರಾಜ್ಯದ ಸಚಿವ ಸಂಪುಟ ಇದೀಗ ಮೈಸೂರು ರಾಜ್ಯದ ಹೆಸರು ಬದಲಾಯಿಸುವ ದಳ್ಳುರಿಗೆ ಅಂಗೈಯೊಡ್ಡಿದೆ. ಈ ನವ ಮೈಸೂರು–ಹಿಂದಿನ ಒಡೆಯರ ಕಾಲದ ಶ್ರೀ ಮನ್ಮಹೀಶೂರ ಪುರ—ಮಹಾದೇವಿ ಚಾಮುಂಡೇಶ್ವರಿ ಮಹಿಷಾಸುರನನ್ನು ಕೊಂದ ಪ್ರಸಿದ್ಧ ರಾಜ್ಯದ ಹೆಸರಿಂದು ಸಚಿವರ ಬಾಯಲ್ಲಿ ಎಮಿಕೆ ಚೂರಿನಂತೆ ಅಲ್ಲಾಡತೊಡಗಿದೆಯಲ್ಲದೆ ಈ ವಿಚಾರ ಜನ ಸಾಮಾನ್ಯರ ಮನಸ್ಸನ್ನು ಕನ್ನಡಿಸಿದೆ. ರಾಜ್ಯದ ಎಲ್ಲೆಡೆಯೂ ಇದೇ ಗೊಂದಲವಾಗಿದೆ.

ರಾಜ್ಯದ ಈ ಹೆಸರನ್ನು ಚಾರಿತ್ರಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಕರ್ನಾಟಕವೆಂದು ಕರೆಯಲು ಹೇಳುತ್ತಾರೆ ಬೆಂಗಳೂರಿನವರು. ಮಹಾಜನ್ ವರದಿಯಂತೆ ಕೇಂದ್ರ ಸರ್ಕಾರವನ್ನು ಅನಂತರ ಒತ್ತಾಯಿಸಿ, ಬೆಳಗಾವಿಯ ಮಹಾರಾಷ್ಟ್ರ ಗಡಿ ವಿವಾದವನ್ನು ಪರಿಹರಿಸ ಬೇಕೆಂದು ಕಣ್ಣೀರ ಕಾಸರಗೋಡನ್ನು ಕರುಳಿಲ್ಲದ ಕೇರಳಿಗರಿಂದ ಬಿಡಿಸಿ, ವಿಶಾಲ ಕರ್ನಾಟಕ ಸ್ಥಾಪಿಸಬೇಕೆಂದು ಅವರ ಬೇಡಿಕೆ.

ಹೊಸ ಮೈಸೂರಿನವರು ರಾಜ್ಯಕ್ಕೆ ಕರ್ನಾಟಕ ಎಂಬ ನಾಮಧೇಯ ಬರಲೆನ್ನುತ್ತಾರೆ. ಹಳೆ ಮೈಸೂರಿನವರು "ಮೈಸೂರು" ಎನ್ನುವ ಹೆಸರನ್ನು ಕಳಚುವುದು ಕೂಡದೆನ್ನುತ್ತಾರೆ. ಕೆಲವು ಮಧ್ಯವರ್ತಿಗಳು ಅನ್ನುತ್ತಾರೆ: ಈ ಎರಡು ಹೆಸರುಗಳೂ ಬೇಡ, ಕನ್ನಡ ಕವಿಗಳು ಹೊಗಳಿದಂತೆ 'ಕನ್ನಡ ನಾಡು' ಉದಿಸಲೆನ್ನುತ್ತಾರೆ.

ಕೆಲವರು ಪುರಾಣೇತಿಹಾಸಗಳಲ್ಲಿ ನುರಿತವರು. ಪ್ರಾಚೀನ ಕಾಲದಿಂದಲೂ ಇರುವಂತೆ ಧಾರ್ಮಿಕ ದೃಷ್ಟಿಯಲ್ಲಿ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರೇ ಬರಲಿ, ಆದರೆ ಉಚ್ಚಾರ ಮಾತ್ರ, ಕರ್ನಾಟಕವೆಂದೇ ಆಗಲಿ ಎನ್ನುವರು ಇವರು.

ಈ ಜಿಜ್ಞಾಸೆ ಇಷ್ಟಕ್ಕೇ ಮುಗಿಯಲಿಲ್ಲ. ಕರ್ನಾಟಕ—ಮಹಾರಾಷ್ಟ್ರಗಡಿ ಸಮಸ್ಯೆ ಆರಂಭವಾದಾಗಿನಿಂದ ಎರಡು ಸರಕಾರಗಳು ಮುಗಿದು, ಈಗ ಮೂರನೆಯ ಸರಕಾರ ಅಸ್ತಿತ್ವದಲ್ಲಿದೆಯಾದರೂ ಕೇಂದ್ರ ಸರಕಾರ ಮಹಾಜನ ವರದಿಯನ್ನು ಮೂಲೆಗೊತ್ತಿದೆಯಲ್ಲದೆ ಅದನ್ನು ಗಮನಿಸಿದಂತೆ ಕಾಣುತ್ತಿಲ್ಲ. ವೀರೇಂದ್ರ ಪಾಟೀಲರ ಅಧಿಕಾರಾವಧಿಯಲ್ಲಿ ಅವರು ರಾಜ್ಯದ ಪುನರ್ನಾಮಕರಣದ ಸಲಹೆಯಿತ್ತಾಗ ಅದನ್ನು ವಿರೋಧಿಸಿದ ಸಚಿವರೆಲ್ಲರೂ ಈಗ ಹೊಸ ನಾಮಕರಣದ ವಾಲಗ ಬಾರಿಸತೊಡಗಿದ್ದಾರೆ. ಇದಾವ ತಂಟೆಯೂ ಬೇಡ. ಈ ಅಖಂಡ ಕನ್ನಡ ನಾಡನ್ನು ಒಡೆದು, ತಮಿಳುನಾಡು, ಮಹಾರಾಷ್ಟ್ರ ಮತ್ತು ಕೇರಳಗಳಿಗೆ ಹಂಚಿ ಬಿಡಲಿ, ಅಂದರೆ ತಕರಾರು ಮುಗಿಯುತ್ತದೆ. ಇಲ್ಲವೇ ಈ ವಿಶಾಲ ಕರ್ನಾಟಕ ಒಂದಾಗಿ ನಲಿಯಲಿ. ಈ ಸಮಸ್ಯೆಗಳ ಪರಿಹಾರದಿಂದ ಕೀರ್ತಿಶೇಷ ಆಲೂರು ವೆಂಕಟರಾಯರ ಆತ್ಮಕ್ಕೆ ಶಾಂತಿದೊರಕುತ್ತದೆಂದು ಸಲಹೆಯಿತ್ತವರು ನಿರಾಶವಾದಿಗಳೆನಿಸಿದರೂ ಮರುಳುಗಾಡಿನಲ್ಲಿ ನೀರು ಕಾಣುವ ಆಶಾವಾದಿಗಳು.

ತನ್ಮಧ್ಯೆ ರಾಜ್ಯಕ್ಕೆ 'ಕನ್ನಡ ಪ್ರದೇಶ' ವೆಂದು ಹೆಸರಿಡಲು ಸಲಹೆ ನೀಡಿದವರೂ ಇದ್ದಾರೆ. ಅಂತೂ ಇದರ ಇತ್ಯರ್ಥ ಮಾಡಲು ಸರಕಾರದಿಂದಾಗದೆ ಕನ್ನಡದ ಸಾಹಿತಿ ಸಮ್ರಾಟ್ ಶ್ರೀ ಡಿ.ವಿ.ಜಿ.ಯವರ ಬಳಿಗೆ ಈ ಪಂಚಾಯಿತಿಯನ್ನು ಒಯಿದಾಗ ಅವರು 'ಕನ್ನಡ ಮೈಸೂರು' ಅಥವಾ 'ಮೈಸೂರು ಕರ್ನಾಟಕ' ಎಂಬ ಹೆಸರುಗಳಲ್ಲಿ ಯಾವುದಾದರೂ ಒಂದನ್ನು ಇಡಬಹುದೆಂಬ ಸಲಹೆಯಿತ್ತರಂತೆ.

ಈ ಬಗ್ಗೆ ನೂರಾರು ಜನರು ಡಿ. ವಿ. ಗುಂಡಪ್ಪನವರನ್ನು ವಿರೋಧಿಸಿದ್ದಲ್ಲದೆ ಪತ್ರಿಕೆಗಳಲ್ಲಿ ವಾಚಾಮಗೋಚರವಾಗಿ ಬೈಗಳ ಸುರಿಮಳೆಯನ್ನೇ ಸುರಿಸಿದ್ದಾರೆ. ಆ ಹೆಸರು ಉಚ್ಚಾರಣೆಗೆ ಸಮರ್ಪಕವಾಯಿತೆಂದವರು ಕೆಲವರಾದರೆ ಈ ಸಲಹೆಯಿತ್ತ ಡಿ ವಿ ಜಿಯವರನ್ನು 'ನಾಡ ದ್ರೋಹಿ' 'ತಲೆ ತಿರುಕ' 'ಸ್ವಜಾತಿಯ ಅಕ್ಷರ ವ್ಯಭಿಚಾರಿಗಳಿಂದ ಮೇಧಾವಿಯೆನಿಸಿಕೊಂಡವ' ಮುಂತಾಗಿ ಹಳಿದು; ಪ್ರಾಥಮಿಕ ಶಾಲಾ ಮಕ್ಕಳಿಗಿಂತಲೂ ಕೆಳಮಟ್ಟದ ಸಲಹೆಯಿತ್ತವರೆಂದು ತೀರ್ಮಾನಿಸಿ, ಶೇ. ೮೦ ಕನ್ನಡಿಗರ ಇಚ್ಛೆಯಂತೆ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರಾಗಲೆಂದವರು ಹಲವರು ಈ ಹಿಂದೆ ಡಿ ವಿ ಜಿಯವರು ಇಂಥ ಸಣ್ಣ ಕೆಲಸಗಳನ್ನು ಮಾಡಿ ಕೆಲವರಿಂದ ಛೀಮಾರಿ ಹಾಕಿಸಿಕೊಂಡಿದ್ದಾರೆಂದೂ 'ಕನ್ನಡ ಮೈಸೂರು' ಎಂಬ ಹೆಸರು ಹಾಕಲು ಇದು ಹಿಂದೆ ತಮಿಳರ ಮೈಸೂರು ಆಗಿತ್ತೇನು ಎಂದವರು ಬೆಂಗಳೂರಿನ ಇಬ್ಬರು.

ಕನ್ನಡ ಬೆಳೆಯಬೇಕು ನಿಜ. ಕಳೆದ ವರ್ಷ ರಾಜ್ಯೋತ್ಸದಯದ ದಿನದಂದು ರಾಜ್ಯದ ಎಲ್ಲಾ ಸರಕಾರೀ ವ್ಯವಹಾರಗಳೂ ಕೂಡ ಕನ್ನಡ ಭಾಷೆಯಲ್ಲೇ ಆಗಬೇಕೆಂದು ಕನ್ನಡ ಸಂಘ ತೀರ್ಮಾನಿಸಿರುವುದೂ ಹೌದು. ಈಚೆಗೆ ಕಂದಾಯ ಖಾತಾ ಮಂತ್ರಿ ಹುಚ್ಚಮಾಸ್ತಿ ಗೌಡರು ಒಂದು ಭಾಷಣಕ್ಕೆ ಗೌರಿಬಿದನೂರಿಗೆ ಹೋಗಿದ್ದಾಗ ಇಂಗ್ಲಿಷಿನಲ್ಲಿ ಭಾಷಣ ಮಾಡತೊಡಗಿದ ಆ ಊರಿನ ಅಧಿಕಾರಿಗಳನ್ನು ಗದ್ದರಿಸಿ ಹೇಳಿದರಂತೆ— "ಕನ್ನಡದಲ್ಲೇ ಮಾತನಾಡಿ, ಈ ಜನರಿಗೂ ಅರ್ಥವಾಗುತ್ತದೆ. ಅವರು ಆಡುವ ಭಾಷೆಯಲ್ಲೇ ನಾವೂ ವ್ಯವಹಾರ ಮಾಡೋಣ."

ಕನ್ನಡ ಕಸ್ತೂರಿಯಲ್ತೆ ಎಂದವ ಮುದ್ದಣ. ಕನ್ನಡಕ್ಕೆ ಹೆಸರಿಡುವ ವಿಚಾರದಲ್ಲಿ ಈಗ ಕಸ್ತೂರಿಯ ಬಿದಲು ಕೆಸರು ಹತ್ತತೊಡಗಿದೆ. ಅಂತೂ ಇನ್ನೂ ಅದೊಂದು ಘಟ್ಟಕ್ಕೆ ತಲುಪಿಲ್ಲ. ಹಿಂದೆ ಟಿ ಎಂ ಶ್ರೀಯವರು 'ಸಂಯುಕ್ತ ಕರ್ನಾಟಕ'ವೆಂಬ ಹೆಸರನ್ನೇ ಸೂಚಿಸಿದ್ದಾರೆಂದು ಅಸ್ಪಷ್ಟ ನೆನಪು ಕವಿ ಕುವೆಂಪುರವರೂ ಕರ್ನಾಟಕವೆಂಬ ಹೆಸರೇ ಚೆನ್ನೆನ್ನುತ್ತಾರೆ ಕರ್ನಾಟಕವೆಂಬ ಹೆಸರೇ ಉತ್ತಮ. ಕರ್ನಾಟಕವೆಂಬುದು ಕರ್ಣಾಟಕದ ತಪ್ಪುವನೆನ್ನುತ್ತಾರೆ ಸಂಸ್ಕೃತಜ್ಞರು.

ಅಂತೂ ಶ್ರೀ ಅರಸರು ಆದಷ್ಟು ಬೇಗನೆ ಈ ವೃಥಾ ಚರ್ಚೆಯನ್ನು ನಿಲ್ಲಿಸಿ ಬಹು ಪಾಲು ಶ್ರೀಸಾಮಾನ್ಯರ ಇಚ್ಛೆಯಂತೆ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಚುನಾಯಿಸಿದರೇ ಲೇಸು.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

● ●

ಆಳುವ ಕಾಂಗ್ರೆಸ್ಸಿನ ಶುದ್ಧೀಕರಣ

(ಒಂದನೇ ಪುಟದಿಂದ)

ಉತ್ತ. ಪ್ರಗತಿಶೀಲತೆಯ ಮಂತ್ರ ಪಠಿಸುತ್ತ ಹಳೆಯ ಹೆಗ್ಗಣಗಳು ಆಳುವ ಕಾಂಗ್ರೆಸ್ಸಿನಲ್ಲಿ ತುಂಬಿಹೋಗಿ ವ-ರಿ ಇಲಿಗಳನ್ನು ತಿನ್ನುವ ಉದ್ಯಮಕ್ಕೆ ತೊಡಗಿವೆಯೆನ್ನಬಹುದೆ? ಮುಂದಿನ ಎರಡು ಮೂರು ತಿಂಗಳುಗಳೊಳಗೆ ಪಕ್ಷದ 'ಪ್ರಗತಿಶೀಲತೆ' 'ಬಡತನ ನಿವಾರಣೆ'ಗಳ ಹೂರಣ ಹೊರಬೀಳುವುದು ಅತ್ಯಂತಾವಶ್ಯಕವಾದುದರಿಂದ ಅದಕ್ಕೆ ಮೊದಲೇ ಪ್ರಧಾನಿ ಗಾಂಧಿಯವರು ಮತ್ತೊಮ್ಮೆ 'ಶುದ್ಧೀಕರಣ'ಕ್ಕೆ ತೊಡಗಬೇಕಾದೀತು. ಆಕೆ ತನ್ನ 'ವಾದ' ಯಾವುದೆಂಬುದನ್ನು ನಿರ್ಧರಿಸಲು ಈಗ ಕಾಲ ಪರಿಪಕ್ವವಾಗಿದೆ.

● ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. c. 543/1971 O. s. 99/50

ಗೌರಮ್ಮ ಅರ್ಜಿದಾರ

ಕಾವೇರಮ್ಮ ಕೂಡಾ ಎದ್ರಿರು

5 ಮತ್ತು 8ನೇ ಎದ್ರಿರು

5. ಶ್ರೀನಿವಾಸ ಜೋಗಿತ್ತಾಯ, ನರಸಿಂಹ ಜೋಗಿತ್ತಾಯರ ಮಗ, ಬೆಳ್ತಂಗಡಿ ತಾಲ್ಲೂಕು ಮಚ್ಚಿನ ಗ್ರಾಮ.

8. ಪದ್ಮಾವತಿ ಅಮ್ಮ, ಕೇಶವ ಪೊಜತ್ತಾಯರ ಪತ್ನಿ, ಕಾಸರಗೋಡು ತಾಲ್ಲೂಕು, ಆರಿಕ್ಕಾಡು ಗ್ರಾಮ —ಕೂಡಾ

2 ಜನರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲಿನ ಡಿಕ್ರಿಯ ಮೇಲೆ ಅರ್ಜಿದಾರಳು ಸದ್ರಿ ಮೇಲಿನ ಅಮ್ಮಲ್ಜಾರಿಯಲ್ಲಿ [illegible] ವ್ಯಕ್ತಿಯಾರ ಶರ್ತಗಳನ್ನು [illegible] ಬಗ್ಗೆ ಮತ್ತು ಅರ್ಜಿದಾರಳಿಗೆ ದರ್ಖಾಸ್ತಿಗೆ [illegible] ಕೊಡಬೇಕಾಗಿ ಸನ [illegible] ಅರ್ಜಿ ಕೂಡಾ ತಾ. 4-7-1972ಕ್ಕೆ ಇಟ್ಟಿರುವುದರಿಂದ ಅದ್ಕೆ ಆಕ್ಷೇಪಯಿದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ಮೂಲಕ ಹಾಜರಾಗಿ ಉತ್ತರಿಸಿಕೊಳ್ಳಲು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂದ ಈ ಮೂಲಕ ತಿಳಿಸೋಣವಾಗಿದೆ.

By Order of the Court

(Sd.) C. V. Shastry

Advocate for Petr.

ಪುತ್ತೂರು, ತಾ. 25-5-72.

Edited, Printed & Published by K. H. Shetty at the Navayuga Press, Udipi. S. India

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ

ವಿಶ್ವಾಸದ ಸಂಸ್ಥೆ:

ಸ್ವಾಸ್ಥ್ಯ
ಆಯುರ್ವೇದಾಶ್ರಮ

ಕಟಪಾಡಿ, ದ. ಕ.

ನವಯುಗ

ಮೇಲ್ತರಗತಿಯ
ಉಪಾಹಾರ
ಮಂದಿರ

ಉಡುಪಿ
ಶ್ರೀಕೃಷ್ಣ ವಿಲಾಸ

ಕಾರವಾರ

ಸಂಪುಟ ೫೧
ಸಂಚಿಕೆ ೪೧

NAVAYUGA

15–6–1972

ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು—

ಸೌಮ್ಯ ವಿಚಾರಕ್ರಾಂತಿಗೆ ನಾಂದಿ

ರಾಜ್ಯದ ಹೆಸರು ಬದಲಾಗಬೇಕು— ಇಂದು ಕನ್ನಡಿಗರ ಬಹುದಿನಗಳ ಬಯಕೆ. ರಾಜ್ಯೋದಯದೊಡನೆಯೇ ಹುಟ್ಟಿಕೊಂಡ ಅಂತರಂಗದಾಶೆ.

೧೯೫೬ರಿಂದ ೧೯೭೨ರ ವರೆಗೆ ಹಲವಾರು ಸರಕಾರಗಳು ಇಲ್ಲಿ ಅಸ್ತಿತ್ವದಲ್ಲಿದ್ದುವು. ಸರಕಾರದ ನೇತಾರ, ಮಂತ್ರಿ ಮಾಗಧರಿಗೆಲ್ಲ ಮೈಸೂರು ಎಂಬ ಹೆಸರು ಅವಲಕ್ಷಣವಾಗಿ ಕಂಡಿತ್ತು. ಅದನ್ನು ಬದಲಾಯಿಸಲೂ ಅವರು ಬಯಸಿದ್ದರು.

ಆದರೆ, ಈ ಬಗ್ಗೆ ನಡೆದ ಪ್ರಯತ್ನಗಳು ಯಶಗಳಿಸಲಿಲ್ಲ; ಪಕ್ಷ ಮುರಿದುಹೋಗುವುದೆಂಬ ಭೀತಿಯ ಮುಂದೆ ಯಾರದ್ದೂ ಏನೂ ನಡೆಯಲಿಲ್ಲ.

ಮಹಾಸಂಸ್ಥೆ ಕಾಂಗ್ರೆಸ್‌ನ ಎರಡು ಪ್ರಾದೇಶಿಕ ಶಾಖೆಗಳು ೧೯೫೬ರ ಹೊತ್ತಿಗಿದ್ದುವು. ಕರ್ನಾಟಕ ಪ್ರಾದೇಶಿಕ ಮತ್ತು ಮೈಸೂರು ಪ್ರಾದೇಶಿಕ. ಕನ್ನಡ ರಾಜ್ಯೋದಯವಾದಾಗ ಎರಡು ಪ್ರಾದೇಶಿಕತೆ ಅನಗತ್ಯ, ಅನಪೇಕ್ಷಣೀಯ ಕೂಡ.

ಆಗ ಕರ್ನಾಟಕವು ಮೈಸೂರಿನಲ್ಲಿ ಸೇರಿಹೋಯ್ತು. ರಾಜ್ಯದ ಮೈಸೂರೆಂಬ ನಾಮಧೇಯ ಕರ್ನಾಟಕ ಪ್ರಾ.ಕಾಂ. ಸಮಿತಿಯನ್ನು ನೊಣೆಯುವಲ್ಲಿ ನೆರವಾಯ್ತು.

ಶ್ರೀ ದೇವರಾಜ ಅರಸು ಮುಖ್ಯ ಮಂತ್ರಿಯಾದ ಮೇಲೆ, ಆಳುವ ಕಾಂಗ್ರೆಸು ಸಾಗರದಷ್ಟು ಬಹುಮತ ಪಡೆದ ಮೇಲೆ ರಾಜ್ಯದ ಹೆಸರು ಬದಲಾಯಿಸುವ ನಿರ್ಧಾರವಾಯ್ತು. ಎರಡು ತಿಂಗಳು ಮೊದಲು ಬದಲಾದ ಹೆಸರೇನೆಂದು ಸರಕಾರ ಹೇಳಲಿಲ್ಲ. ಜನತೆಯ ಬಾಯಿಂದಲೇ ಬರಲೆಂದು ಸುಮ್ಮನಿದ್ದಿತು.

ಅನೇಕ ಹೆಸರುಗಳು ಮುಂದೆ ಬಂದುವು. ಕನ್ನಡನಾಡು, ಕರ್ನಾಟಕ, ಕರ್ನಾಟಕ, ಕರ್ನಾಟಕ-ಮೈಸೂರು....

ಆದರೆ ಒಂದು ಸಂಗತಿ—ಮೈಸೂರೆಂಬುದೇ ಉಳಿಯಲೆಂದು ಯಾರೂ ಸಲಹೆ ಮಾಡಲಿಲ್ಲ !

ರಾಜ್ಯದ ಹೆಸರನ್ನು ಬದಲಾಯಿಸುವ ಯೋಚನೆಯನ್ನೇ ಖಡಾಖಂಡಿತವಾಗಿ ಖಂಡಿಸುತ್ತಿದ್ದ ಘಟಾನುಘಟಿಗಳು ನಾಲಗೆ ಮುರಿದುಕೊಂಡು ಕೂತರು.

ಇದಕ್ಕೆ ಕಾರಣವರಸುವುದು ಕಷ್ಟವಲ್ಲ. ದೇವರಾಜ ಅರಸರು ತಮ್ಮ ಪಕ್ಷದಲ್ಲಿ ನಿರಂಕುಶ ಪ್ರಭುತ್ವ ಜಮಾಯಿಸಿರುವುದು ಆಕಾಶದಷ್ಟು ಸ್ಪಷ್ಟ.

ಅವರ ಹಿಂದೆ ನಿಂತ ಮಾತ್ರಕ್ಕೆ ಪ್ರಗತಿಶೀಲ – ಸಮಾಜವಾದಿಯಾಗದೆ ಹೋದರೂ, ಅವರನ್ನು ಎದುರು ಹಾಕಿಕೊಂಡವರು ಪ್ರಗತಿ-ಸಮಾಜ ವಿರೋಧಿಗಳೆಂಬ ಭ್ರಮೆ ಆವರಿಸಿರುವುದನ್ನು ಅಲ್ಲಗಳೆಯಲಾಗದು. ಈ ಭ್ರಮೆ ಕಾಲ್ಪನಿಕವಿರಬಹುದು, ಮಾನಸಿಕವಿರಬಹುದು—ಆ ಮಾತ ಬೇರೆ.

ತುಂಬಿತುಳುಕುವ ಬಹುಮತ, ಅವರ ಮೇಲೆ ನಿರಂಕುಶತೆ— ಈ ಬದಲಾದ ಪರಿಸ್ಥಿತಿ ಕಾದ ಕಬ್ಬಿಣ. ಅರಸು ಈಗಲೇ ಅದನ್ನು ಹದಮಾಡುವುದು ನ್ಯಾಯ—ಏಕೆಂದರೆ; ಕೆಲವು ದಿನ ಕಳೆದ ಮೇಲೆ ಇದೇ ಪರಿಸ್ಥಿತಿ ಮುಂದುವರಿಯುವುದೆಂದು ಹೇಳಲಾಗದು.

ಶ್ರೀ ಅರಸು ಈ ದಿಸೆಯಲ್ಲಿ ಇಟ್ಟ ಹೆಜ್ಜೆಯು ವಜ್ರ ಸ್ವಾಗತಾರ್ಹವಾದುದು. ಆದರಿಂದಲೆ ಅವರ ವಿರೋಧ ಸ್ವರವೇಳಲಿಲ್ಲ.

ಈ ಹಿಂದೆ 'ಕರ್ನಾಟಕ'ವಾದಿಗಳಿಗೆ ಮೈಸೂರೆಂಬ ಹೆಸರು ಕರ್ಣ ಕಠೋರವಾಗಿತ್ತು; ಅಪ್ರಾಸ್ತವಾಗಿತ್ತು. ಅದರಲ್ಲಿ ಏಕತ್ವವಿತ್ತು. ಆದುದರಿಂದ ಸುಮಧುರ ಸುಪ್ರಾಸ್ಯ ಬೃಹತ್ತ್ವ ಸಂಪನ್ನ ನಾಮಧೇಯವೆಂದು ಕರ್ನಾಟಕವನ್ನು ಕರೆಯುತ್ತಿದ್ದರು.

ಈ ಖಂಡನೆ— ಮಂಡನೆಗಳಿಂದ ಕೆಲವರದ್ದಾದರೂ ಮನಸ್ಸು ನೊಂದಿತ್ತು, ಮೂಗು ಮುರಿದಿತ್ತು—ಎಂತಲೇ ಸಮುದ್ರವಂತೆ ಘೋರ್ಗರೆದು ಮೈಸೂರಿನ ರಕ್ಷಣೆಗೆ ಬದ್ಧಕಂಕಣರಾಗುತ್ತಿದ್ದರು.

ಒಹುಕಾಲ ಯಾರ್‍ಯಾರದೋ ಸಂಪುಟದಲ್ಲಿ ಮಂತ್ರಿಯಾಗಿ, ಕನ್ನಡಿಗರ ಮನಸ್ಸನ್ನರಿದಿದವರು ಅರಸು. ಅದಕ್ಕೆ ಮೊದಲು ಮೈಸೂರಿಗರ ನಡುವೆಯೇ ದಿನಗಳೆದು ಅವರ ಅಂತರ್ಯವನ್ನೂ ಸೂರೆಗೊಂಡವರು ಅರಸು.

ಅವರು ಮೈಸೂರು ವಾದಿಗಳ ನೆಚ್ಚನ್ನೂ ಕರ್ನಾಟಕ ವಾದಿಗಳ ಮೆಚ್ಚನ್ನೂ ಅರಿತುಕೊಂಡವರು. ತನ್ನ ಕೈಗಳಿಗೆ ಅಧಿಕಾರ ಬಂದೊಡನೆಯೇ ಕೆಚ್ಚನ್ನು ತೋರಿದರು.

ಇದರಲ್ಲಿ ಶೂನ್ಯತ್ವದ ಆರೋಪವಿಲ್ಲ, ಬ್ರಹತ್ತ್ವದ ಮೇಲ್ಮೆಯೂ ಇಲ್ಲ. ಜನತಾ ಜನಾರ್ಧನನ ಸೇವಾಭಾವವಿದೆ. ಇದು ಸೌಮ್ಯ ವಿಚಾರ ಕ್ರಾಂತಿಗೆ ನಾಂದಿ. ಅದುದರಿಂದಲೇ ರಾಜ್ಯದ ಹೆಸರು ಕರ್ನಾಟಕವೆಂದಾಗುವ ಶುಭ ದಿನಗಳು ಸಮೀಪಿಸುತ್ತಾ ಇವೆ. ಈ ಬಾರಿಯ ವಿಧಾನ ಸಭಾಧಿವೇಶನದಲ್ಲೇ ಈ ಸಂಬಂಧ ನಿರ್ಧಾರವಾಗುವ ನಿರೀಕ್ಷೆ ಇದೆ.

ಶ್ರೀ ದೇವರಾಜ ಅರಸರವರ ಗ್ರಹಗತಿ ಉತ್ತಮವಿದೆ.

ಆರಂಭದಿಂದಲೂ ನಾಯಕಮಣಿಗಳಿಕೆಯನ್ನು ವಿರೋಧಿಸುತ್ತ ಬಂದ ಅವರ ವ್ಯಕ್ತಿತ್ವ ಕಾಂಗ್ರೆಸ್ ವಿಭಜನಾ ನಂತರ ತನ್ನ ವಿಕಾಸಕ್ಕೆ ಅವಕಾಶ ಪಡೆಯಿತು. ಆಳುವ ಕಾಂಗ್ರೆಸ್‌ನ ಸೂತ್ರಧಾರತನಕ್ಕೊಬ್ಬ ಬೇಕೆನ್ನಿಸಿದಾಗ ಶ್ರೀ ಅರಸು ತನ್ನನ್ನೇ ಅದಕ್ಕೆ ಅರ್ಪಿಸಿಬಿಟ್ಟರು. ಹಿಂದಿನ ಸರಕಾರಗಳ ನೈಜ್ಯಾನು ಸಂಧಾನವೂ ಶ್ರೀಮತಿ ಗಾಂಧಿಯವರ ಎದೆಗಾರಿಕೆಯೂ ಅವರ ಕೈ ಹಿಡಿದೆಬ್ಬಿಸಿತು.

ಹಿಂದಿನ ಸರಕಾರಗಳು ಯಾವುದಕ್ಕೆ ಅಂಜಿ ಸುಮ್ಮನುಳಿದವೋ ಆ ಅಂಜಿಕೆಗಳಿಗೆ ಶ್ರೀ ಅರಸು ಜಗ್ಗುವುದಿಲ್ಲ. ಏಕೆಂದರೆ ಅವರಿಗೆ ವಿರೋಧವಾಗಿ ತುಟಿ ಬಿಚ್ಚಿದರೆ ಸಾಕು, ಅವರು ಪ್ರತಿಗಾಮಿಗಳಾಗುತ್ತಾರೆ.

ರಾಜ್ಯದ ಹೆಸರಿನ ಸಂಬಂಧದಲ್ಲಿ ದೃಢ ನಿಲುವು ತಾಳಿದಂತೆ ಆಡಳಿತ ಭಾಷೆಯ ವಿಷಯದಲ್ಲೂ ತಾಳಬೇಕು. ಜಿಲ್ಲಾ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯೆಂದು ಸರಕಾರವೀಗ ನಿರ್ಧರಿಸಿದೆ. ಇದು ಕ್ಷಿಪ್ರದಲ್ಲಿ ವಿಭಾಗ ಮಟ್ಟಕ್ಕೇರಿ ರಾಜ್ಯಮಟ್ಟವನ್ನು ಮುಟ್ಟಬೇಕು.

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮಾರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

'ತ್ರಿಪುರಾರಿಯೆಂಬುದು ನಿನಗೆ ತಿಳಿಯದೇ ಅವರು ನಿನ್ನ ಸೋದರ ಸಂಬಂಧಿ ರಾಷ್ಟ್ರಕೂಟ ಕೃಷ್ಣನ ಸೈನಿಕರಲ್ಲವೇ! ನಿನ್ನನ್ನು ಹುಡುಕುತ್ತ ಬಂದ ನಿನ್ನ ತಾಯಿಯನ್ನು ಬೆಂಗಾವಲಿಗೆ ಬಂದ ಭಟರು'

'ಅಪ್ಪ ಬಂದಿದ್ದಾರೆಯೇ?'

'ಅಪ್ಪ ಮಾತ್ರವಲ್ಲ ಸ್ವತಃ ಸಾಮ್ರಾಟರೇ ಬಂದಿದ್ದಾರೆ.'

'ಅವರೆಲ್ಲ ನನ್ನನ್ನು ಪುನಃ ರಾಜಧಾನಿಗೆ ಒಯ್ಯಲು ಬಂದಿರಬೇಕು. ಅವರೊಡನೆ ನನ್ನನ್ನು ಅಲ್ಲಿಗೆ ಕಳಿಸಬೇಡಿ ನನಗೆ ಅರಮನೆ ಬೇಡ. ನಾನಿಲ್ಲಿಯೇ ಇರುತ್ತೇನೆ.'

ಅವರು ನಿನ್ನನ್ನು ಕರೆದೊಯ್ಯಲು ಬಂದಂತೆ ಕಾಣಲಿಲ್ಲ. ಯಾರ ವಶನೀನಿರಬೇಕೋ ಅವರಿಗೆ ನಿನ್ನನ್ನು ವಿಧ್ಯುಕ್ತವಾಗಿ ಒಪ್ಪಿಸಲು ಬಂದಂತಿದೆ."

"ಅವರಿಗೆ ನಾನಿಲ್ಲಿರುವುದು ಹೇಗೆ ತಿಳಿಯಿತು?"

'ಹೊಗೆ ಕಂಡಲ್ಲಿ ಬೆಂಕಿ ಇರುವಂತೆ, ನಾನಿರುವಲ್ಲಿ ಕುಮಾರನಿರಬಹುದೆಂದು ಅವರು ತರ್ಕಿಸಿದ್ದಾರೆ.'

'ಅವರೆಲ್ಲಿ ತಂಗಿದ್ದಾರೆ?'

'ತಂಗುವುದಕ್ಕೆ ಇನ್ನೆಲ್ಲಿದೆ ತಾಣ? ಎಲ್ಲಾ ಇಲ್ಲಿಯೇ ಉಳಿದುಕೊಂಡಿದ್ದಾರೆ.'

'ಕುಮಾರನಿಗೆ ಈ ವಿಚಾರ ತಿಳಿದಿದೆಯಾ'

'ಜೊತೆಯಲ್ಲೇ ಬಂದನಲ್ಲ—'

ಮಾತು ನಡೆಯುತ್ತಿರುವಂತೆಯೇ, ರಾಷ್ಟ್ರಕೂಟ ಕೃಷ್ಣ, ಮೇನಕೆ ಕೋಣೆಯನ್ನು ಪ್ರವೇಶಿಸಿದರು. ಲೋಕಾಂಬಿಕೆ ಪುಟ್ಟ ಮಗುವಿನಂತೆ "ಅಮ್ಮಾ" ಎಂದು ಓಡಿ ಹೋಗಿ ತಾಯಿಯನ್ನು ತಬ್ಬಿಕೊಂಡಳು.

ಮಾತೃ ಹೃದಯ ಅಷ್ಟೇ ಮಮಕಾರದಿಂದ ಮಗಳ ಮೈದಡವಿತು. ಅವರೀರ್ವರು ಪರಸ್ಪರ ಸಂಧಿಸದೆ ವರ್ಷಗಳೇ ಸಂಧಿರಬೇಕು ಅನಿಸಿತು.

ಇಬ್ಬರೂ ಮಾತನಾಡಲಿಲ್ಲ.

ಅವರಿಗೆ ಮಾತೇ ಬರುವಂತೆ ಕಾಣಲಿಲ್ಲ.

ಮನಸ್ಸಿನಲ್ಲಿದ್ದುದನ್ನು ಕಣ್ಣುಗಳೇ ವ್ಯಕ್ತಪಡಿಸುತಿದ್ದುವು.

ಈ ಉದ್ವೇಗವಳಿದ ಮೇಲೆ ತಾನು ರಾಜಧಾನಿಯನ್ನು ಬಿಟ್ಟು ಬಂದ ಮೇಲೆ ಏನು ನಡೆಯಿತು ಎಂಬುದನ್ನು ತಿಳಿಯುವ ಕುತೂಹಲದಿಂದ ಮಗಳೇ ತಾಯಿಯನ್ನು ಕೇಳಿದಳು 'ಅಣ್ಣನ ಆರೋಗ್ಯ ಈಗ ಹೇಗಿದೆ? ಅತ್ತಿಗೆ ತುಂಬ ನೊಂದುಕೊಂಡರೋ'

'ಸುಧಾರಿಸಿದ್ದಾನೆ. ನಾನು ಮಾತ್ರ ನೋಡಲಿಲ್ಲ. ನೋಡುವುದಕ್ಕೆ ಅವಕಾಶವೂ ಸಿಗಲಿಲ್ಲ. ನನ್ನ ಕೈವಾಡದಿಂದಲೇ ಇದೆಲ್ಲ ನಡೆಯಿತು ಎಂಬುದು ಅವನ ಅನುಮಾನ. ಅವನ ಹೊಟ್ಟೆಯೊಳಗಿನ ಸಿಟ್ಟನ್ನೆಲ್ಲ ನನ್ನ ಮೇಲೆ ಕಾರಲಾರಂಭಿಸಿದ್ದಾನೆ. ಅವನ ಅನುಮತಿಯಿಲ್ಲದೆ ಅತ್ತಿಗೆ ಈಗ ನನ್ನನ್ನು ನೋಡುವಂತೆಯೇ ಇಲ್ಲ. ನನಗಂತೂ ಅವನಿರುವಲ್ಲಿಗೆ ಪ್ರವೇಶವಿಲ್ಲ. ಒಟ್ಟಿನಲ್ಲಿ ನನ್ನ ಅದೃಷ್ಟವೇ ಕೆಟ್ಟ. ಇವನ್ನೆಲ್ಲಾ ಅನುಭವಿಸಲೆಂದೇ ಹುಟ್ಟಿಬಂದಂತಿದೆ.'

ಹೀಗೆ ನುಡಿಯುವಾಗ ಅವಳ ಕಂಠ ರುದ್ಧವಾಯಿತು.

ತಾಯಿಯಾದ ಅವಳಿಗೆ ಮಗಳ ಮೇಲಿದ್ದ ಮೋಹ ಹೋಗಲಿಲ್ಲ. ಲೋಕಾಪವಾದಕ್ಕೆ ಹೆದರಿ, ಇದ್ದ ಒಬ್ಬ ಮಗನನ್ನು ಅವಳು ದುರುಳನೆಂದು ತಿಳಿದರೂ ಧಿಕ್ಕರಿಸುವಂತಿಲ್ಲ. ಈ ಇಕ್ಕಳಿಯಲ್ಲಿ ಸಿಲುಕಿ ನಲುಗಿತು ಅವಳ ಕೋಮಲ ಮನಸ್ಸು.

ಈ ವೇದನೆಯನ್ನು ಅವಳು ಒಳಗೇ ಅನುಭವಿಸುತಿದ್ದಳು.

ಅದರೆ ಯಾರ ಮುಂದೆ ತೋಡಿಕೊಳ್ಳುವುದು?

ಮನಬಿಚ್ಚಿ ಮಾತನಾಡುವುದಕ್ಕೆ ಅವಳಿಗೆ ಸಂಕೋಚ.

ಬಂಧುಗಳೇ ಆದರೂ ಅವರ ಮುಂದೆ ಆಡಿಕೊಳ್ಳಲು ನಾಚಿಕೆ. ಸಂಸಾರಕ್ಕೆ ಸಂಬಂಧಿಸಿದ್ದು, ಅನ್ಯರ ಮುಂದೆ ಹೇಳುವುದಾದರೂ ಹೇಗೆ?

ಈ ತುಮುಲ್ದಾಟವನ್ನು ಗಮನಿಸಿ ನರಸಿಂಹ ನಾಯಕರು ಕೋಣೆಯಿಂದ ಕಾಲ್ಕಿತ್ತರು.

ಅವರನ್ನು ಹಿಂಬಾಲಿಸಿದ ರಾಷ್ಟ್ರಕೂಟ ಕೃಷ್ಣ.

ತಾಯಿ-ಮಗಳು ಅದನ್ನೇ ಬಯಸಿದ್ದರು.

ಅವರು ಸರಿದುಹೋದ್ದರಿಂದ ಅವರಿಗೆ ಹಾಯೆನಿಸಿತು.

ಸ್ವತಂತ್ರ ಐತಿಹಾಸಿಕ ಕಾದಂಬರಿ

'ಗುಡಿಗೆ ಹೋಗುವಂತೆ ನೀನು ಒತ್ತಾಯಿಸಿದೆಯಲ್ಲ; ಆಗ ಇವರು ಅಲ್ಲಿ ಸನ್ಯಾಸಿ ವೇಷದಲ್ಲಿದ್ದುದು ತಿಳಿದಿತ್ತೆ ಅಥವಾ ನಿನ್ನ ಸೂಚನೆಯಂತೆ ಅವರಲ್ಲಿಗೆ ಬಂದರೆ?'

'ಅದರ ವಿವರ ನಿನಗಿನ್ನೂ ತಿಳಿದಿಲ್ಲವೇ'—ತಾಯಿ ಆಶ್ಚರ್ಯದಿಂದ ಕೇಳಿದಳು.

'ಹೇಳುವವರಿದ್ದರೆ ತಾನೆ ತಿಳಿಯುವುದು?'

'ನಿನ್ನ ರಾಜ ಇದನ್ನೆಲ್ಲ ನಿನಗೆ ತಿಳಿಸದೆ ಇರುತ್ತಾನೆಯೋ!'

'ಕೇಳಿ ತಿಳಿದುಕೊಳ್ಳುವ ಆಸೆಯಾಯಿತು ಆದರೆ ಇದಿರಿನಲ್ಲಿದ್ದಾಗ ಅದು ಮರೆತೇ ಹೋಗುತ್ತೆ.'

'ನನ್ನ ಬಾಯಿಂದಲೇ ತಿಳಿದುಕೊಳ್ಳುವ ಚಪಲವೇನೋ?'

'ಹೇಗೆ ಸಾಧ್ಯವಾಯಿತು ಎಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದಲ್ಲವೇ? ನಮ್ಮ ಹಿತಚಿಂತಕರು ಯಾರೆಂಬುದು ಹೊಳೆಯುತ್ತೆ.'

'ಇದು ಎಲ್ಲ ನಿನ್ನ ಅವರ ಕೆಲಸವೇ?'

ಲೋಕಾಂಬಿಕೆ ಅಚ್ಚರಿಯಿಂದ ತುಟಿಯ ಮೇಲೆ ಬೆರಳಿಟ್ಟಳು

ತನ್ನನ್ನು ಪಡೆಯುವುದಕ್ಕಾಗಿ ಅರಿಕೇಸರಿ ಮಾಡಿದ ಸಾಹಸದ ನೆನಪಿನಿಂದ ಸಂತಸವೂ ಆಯಿತು. ತನ್ನ ಮೇಲೆ ಆತನಿರಿಸಿದ ಪ್ರೀತಿಯನ್ನು ನೆನಸಿ, ಹಿಗ್ಗಿ ಹೂವಾದಳು.

'ಕತೆ ಕಟ್ಟಿ ಹೇಳುವುದಕ್ಕೆ ನಾನೇನು ಕವಯಿತ್ರಿಯೋ? ಇದು ವಿಷಯ ತಿಳಿಸಿದೆ.'

'ಅದು ಹೇಗೆ ನಡೆಯಿತು? ಅದನ್ನಾದರೂ ಬಿಡಿಸಿ ಹೇಳಮ್ಮ.'

'ನಿನ್ನವರಿಗೂ ಸಾಮ್ರಾಟರಿಗೂ ತುಂಬ ಸಲುಗೆ. ಅವರಿಗೆ ನಿನ್ನವರ ಮನೋಗತ ತಿಳಿದಿತ್ತು. ನಿನ್ನ ಮನದೊಲವು ಯಾವ ಕಡೆ ವಾಲಿದೆ ಅದನ್ನು ಸಾಮ್ರಾಟರು ತಿಳಿದಿದ್ದರು. ಈ ಮನೆತನಗಳ ಸಂಬಂಧವನ್ನು ಬೆಳೆಸಿ ತಮ್ಮ ಬುಡವನ್ನು ಭದ್ರಪಡಿಸಿಕೊಳ್ಳುವ ಆಸೆ, ಸಾಮ್ರಾಟರಿಗೆ. ಮದುವೆ ಮಾಡಿಸಿದಂತೆಯೂ ಆಯಿತು. ನಿಷ್ಠೆಯುಳ್ಳವರ ಪ್ರೀತಿ-ವಿಶ್ವಾಸಗಳನ್ನು ದೊರಕಿಸಿಕೊಂಡಂತೆಯೂ ಆಯಿತು. ಈ ಎರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅವರೇ ಆಗಬೇಕಾಗಿದ್ದ ಅನರ್ಥ ತಪ್ಪಿಸಲು ಸೂತ್ರಧಾರತ್ವ ವಹಿಸಿದರು. ಒಂದು ದಿನ ರಾಜವಾಡೆಗೆ ಬಂದು ವಿಷಯ ತಿಳಿಸಿದರು. ಎಲ್ಲ ವ್ಯವಸ್ಥೆಯನ್ನೂ ನಾನು ಮಾಡಿದ್ದೇನೆ. ಅವಳಿಗೂ ಧೈರ್ಯವಾಗಿರುವಂತೆ ತಿಳಿಸು. ಆದರೆ ವಿಚಾರ ನಿನ್ನೊಳಗೇ ಇರಲಿ ಎಂದು ಎಚ್ಚರಿಕೆಯ ಮಾತ ಹೇಳಿ ಹೊರಟುಹೋದರು.

'ಅಣ್ಣನಿಗೆ ಇದು ತಿಳಿಯದೇ ಉಳಿದುದು ಆಶ್ಚರ್ಯ'

'ಸಾಮ್ರಾಟರ ಆಗಮನ ಯಾವ ಅನುಮಾನಕ್ಕೂ ಎಡೆಮಾಡಿಕೊಡಲಿಲ್ಲ. ಅವರು ಬಂದುದರಲ್ಲಿ ಯಾರಿಗೂ ಯಾವ ಅಸಹಜತೆಯೂ ಕಾಣಲಿಲ್ಲ. ಬಾಲ್ಯದಲ್ಲಿ ಬಂದು ಹೋದ ಮನೆ. ಶುಭ ಸಮಾರಂಭಗಳಲ್ಲಿ ಹೀಗೆ ಬಂದು ಹೋಗುವ ಸಂಪ್ರದಾಯವೂ ಬೆಳೆದಿತ್ತು. ಅವರ ಭೇಟಿಯನ್ನು ಎಲ್ಲರೂ ಸಾಂಪ್ರದಾಯಿಕ ಎಂದು ಭಾವಿಸಿದರು'

'ಈ ರಹಸ್ಯ ಸ್ಫೋಟವಾಗದೆ ಉಳಿದುದು ಪುಣ್ಯವೆಂದು ಗ್ರಹಿಸಬೇಕು'

'ದೈವ ಸಂಕಲ್ಪ ಹೀಗಿತ್ತು ಎಂದು ನಾವು ತಿಳಿಯಬೇಕು. ಇದು ಮನುಷ್ಯ ಯತ್ನಕ್ಕೆ ಮೀರಿದ್ದು. ಇಲ್ಲವಾಗಿದ್ದರೆ, ಔತಣದ ಮನೆ ರಣಕೌತಣ ಕೊಡುವ ರಂಗಭೂಮಿಯಾಗುತ್ತೆ ಎಂದು ಯಾರು ಗ್ರಹಿಸಿದ್ದರು ಎಲ್ಲ ಅವನ ಆಟ. ಅವನು ಕುಣಿಸುವವನು. ನಾವು ಕುಣಿಯುವವರು'

'ನಿನ್ನ ಮಾತು ಕೇಳಿದರೆ ನೀನು ದೈವಕ್ಕೇ ಜೋತು ಬಿದ್ದಂತೆ ಕಾಣುತ್ತಿದೆ'

'ಎಲ್ಲರಂತೆ ನಾನೂ ದೈವಕ್ಕೆ ಶರಣಾಗಿದ್ದೇನೆ. ಈ ನಿಲುವನ್ನು ಹರಯದ ಹೊಸ್ತಿಲಲ್ಲಿ ನಿಂತಿರುವ ನೀನು ಒಪ್ಪಿಕೊಳ್ಳಲಾರೆ. ನಾನು ಈ ಮಾತು ಪದೇ ಪದೇ ಬರುವುದು ವಯಸ್ಸಿನಲ್ಲಿ. ವಯಸ್ಸಿನೊಡನೆ ನನ್ನತನವೂ ಅಳಿಯುತ್ತದೆ. ಈ ಮಾತಿನ ಹಿಂದಿರುವ ಅರ್ಥ ಈಗ ನಿನಗೆ ತಿಳಿಯಲಾರದು ಕಾಲಕ್ರಮದಲ್ಲಿ ತಿಳಿದೀತು. ತಿಳಿದೀತು ಎಂದು ಹೇಳುವುದಕ್ಕಿಂತಲೂ ಖಂಡಿತ ತಿಳಿಯುತ್ತೆ ಎಂದು ಹೇಳುವುದು ಮೇಲು. ಅದಿರಲಿ. ನಿನ್ನವರು ಮುಂದೇನು ಮಾಡುತ್ತಾರೆ ಎಂದು ವಿಚಾರಿಸಿದೆಯಾ'

ಲೋಕಾನುಭವವಿದ್ದ ಪ್ರೌಢೆಯಾದ ತಾಯಿ, ಮಗಳನ್ನು ನಾಳಿನ ಕುರಿತು ಪ್ರಸ್ತಾಪಿಸಿದಳು.

ಲೋಕಾಂಬಿಕೆಗೆ ಆ ನಾಳೆಯ ನೆನಪೇ ಇರಲಿಲ್ಲ. ಆ ಕುರಿತು ಅವಳು ಯೋಚಿಸಿಯೇ ಇರಲಿಲ್ಲ. ಪ್ರಶ್ನೆ ಅವಳನ್ನು ಪೇಚಿನಲ್ಲಿ ಕೆಡವಿತು.

'ನೀನೇ ಅವರನ್ನು ವಿಚಾರಿಸಮ್ಮ' ಎಂದು ಹಾರಿಕೆಯ ಉತ್ತರ ನೀಡಿದಳು. ಅವಳ ಮುಗ್ಧತೆಯನ್ನು ಕಂಡು ತಾಯಿ ಮನದಲ್ಲೇ ನಕ್ಕಳು.

'ಅದನ್ನು ತಿಳಿದುಕೊಳ್ಳ ಬೇಕಾದವಳು ನಾನಲ್ಲ, ನೀನು ಎಲ್ಲಿ ನೆಲಸುವುದು, ಏನು ಕೆಲಸ ಮಾಡುವುದು, ಅದನ್ನೆಲ್ಲ ಯೋಚಿಸ ಬೇಕಾದವಳು

(ಹನ್ನೊಂದನೇ ಪುಟ ನೋಡಿರಿ)

ವಿತ್ತ ಸಚಿವರು

ತೆರಿಗೆ ಹೇರದಿರಲು ಧೈರ್ಯಮಾಡಲಿ

ಶ್ರೀ ಸುಬ್ರಹ್ಮಣ್ಯಂ ರಾಜ್ಯ ನೀತಿ ಚಾಣಕ್ಯ ರಾಜಾಜಿಯವರು ಕಂಡರಿಸಿದ ಜನನಾಯಕ. ಕಾಮರಾಜರ ಪ್ರಬಲ ಪ್ರತಿಸ್ಪರ್ಧಿಯಾಗಿದ್ದೂ ಅವರೊಂದಿಗೆ ಸಮರಸದಿಂದಿದ್ದ ವ್ಯಕ್ತಿ. ಇವರು ಡಿಲ್ಲಿ ಕಾರಿಕೆಯ ಮೇಲೆ ರೊಚ್ಚಿಗೆದ್ದು ಕೇಂದ್ರ ಸಚಿವ ಪದಕ್ಕೆ ರಾಜೀನಾಮೆ ನೀಡಿ ಅಗ್ರಹ ಪ್ರಚಾರಗಳಿಸಲು ಪ್ರಯತ್ನಿಸಿದ್ದರೂ ಚುನಾವಣೆಯಲ್ಲಿ ಒಂದಲ್ಲ, ಎರಡು ಬಾರಿ ಸೋತರು. ಕಾಂಗ್ರೆಸ್ ವಿಘಟನಾನಂತರ ಆಳುವ ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರಾದರು. ಆಮೇಲೆ ಯೋಜನಾ ಸಚಿವರೂ ಆದರು; ಕೆಲವೇ ದಿನಗಳಲ್ಲಿ ಅವರು ಕೇಂದ್ರದಲ್ಲೇ ಅರ್ಥ-ಶಾಖೆಯ ಹೊರೆಯನ್ನು ಶ್ರೀ ಚವನರಿಂದ ಪಡೆದು ಹೊತ್ತುಕೊಳ್ಳಲಿರುವರೆಂದು ದಟ್ಟ ವರದಿಗಳು.

ರಾಜ್ಯಗಳು ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅಧಿಕ ಸಂಪನ್ಮೂಲಗಳನ್ನು ಆಂತರಿಕವಾಗಿಯೇ ಕ್ರೋಢೀಕರಿಸಬೇಕು; ಇದಕ್ಕಾಗಿ ಕೃಷಿ ತೆರಿಗೆಯ ಮೇಲೆ ತೆರಿಗೆ ಹೊರಿಸುವುದು ಮಾತ್ರವಲ್ಲ, ಉಳಿದವುಗಳ ಮೇಲೆಯೂ ತೆರಿಗೆ ಹೆಚ್ಚಿಸಲು ಧೈರ್ಯ ಮಾಡ ಬೇಕೆಂದು ಅವರು ರಾಜ್ಯ ಮುಖ್ಯ ಮಂತ್ರಿಯವರಿಗೆ ಉಪದೇಶ ನೀಡಿದ್ದಾರೆ

ಬಡತನ ನಿರ್ಮೂಲನವೇ ಐದನೆಯ ಯೋಜನೆಯ ಗುರಿ. ಜನತೆಯ ಕನಿಷ್ಟ ಆದಾಯವನ್ನು ಹೆಚ್ಚಿಸುವುದು, ಜೀವನಾವಶ್ಯಕ ವಸ್ತುಗಳನ್ನು ಒದಗಿಸುವುದು ಇವು ಯೋಜನೆಯಲ್ಲಿ ಅಡಕವಾದ ತತ್ತ್ವಗಳು.

ರಾಜ್ಯದ ಅರ್ಥ ಸಚಿವ ಶ್ರೀ ಘೋರ್ಪಡೆಯವರೂ ಶ್ರೀ ಸಿ. ಸು. ರವರ ಆದೇಶವನ್ನು ಶಿರಸಾ ವಹಿಸಲಿದ್ದಾರೆ. ಇಷ್ಟರಲ್ಲೇ ತಯಾರಾಗುತ್ತಿರುವ ರಾಜ್ಯದ ಮುಂಗಡ ಪತ್ರ ಹಲವು ಬಗೆಯ ಚಿಕ್ಕ-ದೊಡ್ಡ ತೆರಿಗೆಗಳನ್ನು ಹೊತ್ತು ತರುವುದು ನಿಶ್ಚಿತವೆನಿಸಿದೆ.

ದೇಶದ ಆಡಳಿತ ವ್ಯವಸ್ಥೆಗೆ, ಯೋಜನೆಗಳಿಗೆ ಹಣವೊದಗಿಸುವುದು ಜನತೆಯ ಕರ್ತವ್ಯವೇ. ತೆರಿಗೆ ತೆರುವುದು ಇದಕ್ಕೊಂದು ಮಾರ್ಗ. ಆದರೆ, ನಮ್ಮ ದೇಶದಲ್ಲಿನ ತೆರಿಗೆ ಪ್ರಮಾಣ ಎಂದೋ ಮುಗಿಲು ಮುಟ್ಟಿದೆ. ವರ್ಷ ವರ್ಷವೂ ಚಾರು-ಚೂರೆಂದು ತೆರಿಗೆ ಹಿಮಾಲಯದಂತೆ ಏರುತ್ತಲೇ ಇದೆ.

ಪತ್ರಿಕೆಗಳು-ಜನನಾಯಕರು-ವಿರೋಧ ಪಕ್ಷೀಯರು- ಸಾರ್ವಜನಿಕರು-ಈ ತೆರಿಗೆಗಳ ಹೆಚ್ಚಳವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಕೆಲವೊಮ್ಮೆ ಆಳುವ ಪಕ್ಷದ ಸದಸ್ಯರೇ ಪ್ರತಿಕೂಲ ಅಭಿಪ್ರಾಯ ವ್ಯಕ್ತಪಡಿಸಿದ ಉದಾಹರಣೆಗಳೂ ಇವೆ.

ಆದರೆ, ದುರ್ದೈವವೆಂದರೆ, ಅದು ನಾಟಕದಂತೆ ನಡೆದು ಹೋಗುತ್ತದೆ; ಬಹುಮತ-ಪಕ್ಷದ ಶಿಸ್ತುಗಳ ಬಲದಿಂದ ಸರಕಾರ ಬಯಸಿದಷ್ಟು ತೆರಿಗೆ ಹೇರುವ ಮಾರ್ಗ ನಿರಾತಂಕವಾಗುತ್ತದೆ.

ಇದು ನಡೆದು ಬಂದ ದಾರಿ, ನಡೆದು ಬರುತ್ತಿರುವ ದಾರಿ, ನಡೆದು ಬರುವ ದಾರಿ.

ಈ ದಾರಿಯಲ್ಲಿ ಕ್ರಾಂತಿಕಾರಿ ಬದಲಾವಣೆಯಾಗದೆ ತೆರಿಗೆ ಹೆಚ್ಚಳ ನಿಲ್ಲುವುದಿಲ್ಲ, ಬೆಲೆಯೇರಿಕೆ ತಡೆಯುವುದಿಲ್ಲ, ಶ್ರೀ ಸಾಮಾನ್ಯನ ತಲೆ ನೆಲದಿಂದ ಮೇಲೇರುವುದಿಲ್ಲ.

ತೆರಿಗೆಗಳನ್ನು ಹೆಚ್ಚಿಸುವುದು ಸರಕಾರದ ದೃಷ್ಟಿಯಲ್ಲಿ ಅನಿವಾರ್ಯ. ಆದರೆ, ಜನತೆ ಅವನ್ನು ತೆರುವ ಶಕ್ತಿ ಹೊಂದಿದೆಯೇ ಎಂದು ಪ್ರಶ್ನೆ. ತಾನು ಹೇರುವ ಅಲ್ಪ ಪ್ರಮಾಣದ ತೆರಿಗೆ ಬೆಲೆಯ ಮೇಲೆ ಪರಿಣಾಮ ಬೀರುವುದಿಲ್ಲವೆಂದು ಸರಕಾರ ಪ್ರಕಟಣೆ-ವಿವರಣೆ ನೀಡಬಹುದು; ಆದರೆ, ಯಾವುದೇ ರೂಪದ ತೆರಿಗೆ ಬಳಕೆದಾರನ ಮೇಲೆಯೇ ಬೀಳುವುದು ಅನುಭವದ ಮಾತು. ಆದ್ದರಿಂದ ಜನ ಬಯಸುವುದು-ತೆರಿಗೆಗಳನ್ನು ಹೆಚ್ಚಿಸಬೇಡಿ.

ಮತ್ತೆ ವೆಚ್ಚದ ಬಾಬಿಗೇನು ಗತಿ?

ಮಂತ್ರಿ ಮಾಗಧರು ತಮ್ಮ ವೆಚ್ಚವನ್ನು ಕಡಿಮೆ ಮಾಡಬೇಕು. ಮೊನ್ನೆ ಮೊನ್ನೆ ಸಚಿವರ ವೆಚ್ಚಕ್ಕೆ ಮಿತಿ ಹೇರುವುದು ಸಾಧ್ಯವಿಲ್ಲವೆಂದು ಲೋಕ ಸಭೆಯಲ್ಲಿ ಹೇಳಲಾಯ್ತು. ಸಾರ್ವಜನಿಕರ ಆಸ್ತಿಗಳಿಗೆ ಮಿತಿ ಹೇರಬಹುದಾದರೆ, ಪ್ರಗತಿಶೀಲ ಸಮಾಜವಾದಿ ಪ್ರಜಾರಾಜ್ಯದ ಮಂತ್ರಿಗಳ ವೆಚ್ಚ ಸಾರ್ವಜನಿಕ ಬೊಕ್ಕಸದ ದುರುಪಯೋಗಕ್ಕೆ ಮಿತಿಯೇಕೆ ಹೇರಬಾರದು?

ಕಾನೂನಿನ ಬಲದಿಂದ ಬೇಡವಿರಲಿ; ಶ್ರೀಸಾಮಾನ್ಯರ ಉದ್ಧಾರ ಕಾರ್ಯದಲ್ಲಿ ನಿರತರಾದ ಮಂತ್ರಿ ಮಾಗಧರು ಶ್ರೀ ಸಾಮಾನ್ಯನ ತೆರಿಗೆಯ ಹಣದ ಮಿತವ್ಯಯಕ್ಕೆ ಸ್ವೇಚ್ಛೆಯಿಂದೇಕೆ ಪ್ರಾಮಾಣಿಕವಾಗಿ ನಿಶ್ಚಯಿಸ ಬಾರದು?

ಶ್ರೀಸಾಮಾನ್ಯನ ದೈನಿಕ ತಲಾ ಆದಾಯ ಒಂದು ರೂಪಾಯಿಯೂ ಇಲ್ಲವೆಂದು ಗೋಗರೆಯುವ ಮಂತ್ರಿ — ಮಾಗಧರು ಶ್ರೀಸಾಮಾನ್ಯನು ನೀಡಿದ ತೆರಿಗೆಯ ಬಲದಿಂದಲೇ ಲಕ್ಷ ಲಕ್ಷ ಪೋಲು ಮಾಡುತ್ತಾರೆ.

ಇಂದು ನಮಗೆ ಬೇಕು—

ಆಡಳಿತ, ಮಿತವ್ಯಯ, ದಕ್ಷತೆ, ಪ್ರಾಮಾಣಿಕತೆ, ಸಭೆ-ಸಮಿತಿಗಳ ಬರ್ಖಾಸ್ತು ಉದ್ಘಾಟನೆ-ಶಿಲಾನ್ಯಾಸಗಳಿಗಾಗಿ ದೂರದೂರದ ಮಂತ್ರಿ-ಅಧಿಕಾರಿಗಳ ಪ್ರಯಾಣಗಳಿಗೆ ಬಹಿಷ್ಕಾರ; ಅಪವ್ಯಯ ಅನ್ಯಾಯಗಳ ಮುಟ್ಟುಗೋಲು.

ಈ ಬಯಕೆಯನ್ನು ಹತ್ತಾರು ವರ್ಷಗಳಿಂದಲೂ ಜನತೆ ವ್ಯಕ್ತ ಪಡಿಸುತ್ತಲೇ ಬಂದಿದೆ. ಆದರೆ ಅವರ ಉದ್ಧಾರದ ಹೆಸರಿನಲ್ಲೇ ಇದು ಜರ್ಜರಿತವಾಗಿದೆ.

ಈ ಬೆಲೆಯಿಲ್ಲದ ಕೂಗು ಬೆಲೆ ಪಡೆಯುವಂತಾದರೆ, ಹೇಗೆ?

ನಮ್ಮ ಸರಕಾರಗಳು ಹೆಚ್ಚಿನ ತೆರಿಗೆ ಹೊರಿಸುವುದಕ್ಕೆ ಧೈರ್ಯ ಮಾಡುವುದನ್ನು ಬಿಟ್ಟು ಬಿಡಬೇಕು.

ಒಂದು ವರ್ಷದ ಮಟ್ಟಿಗಾದರೂ ಹೊಸ ತೆರಿಗೆಯಿಲ್ಲದ ಹೆಚ್ಚಿನ ಕೊರತೆಯಿಲ್ಲದ ಮುಂಗಡ ಪತ್ರವನ್ನು ಮಂಡಿಸುವ ಧೈರ್ಯ ಮಾಡಬೇಕು (ಅದು ನಿರರ್ಥಕವಾದರೆ ಪೂರಕ ಬೇಡಿಕೆ ಇದೆ ತಾನೆ?)

ಇದು ಪ್ರಾಯೋಗಿಕವಾಗಿಯೇ ಇರಲಿ, ಪರಿಸ್ಥಿತಿ ಹೇಗೆ ನಿಲ್ಲುವುದೆಂದು ಅಧ್ಯಯನವಾದರೂ ಮಾಡಲೊಂದು ಅವಕಾಶ ಬೇಕು.

ಪ್ರಾಕೃತಿಕ-ರಾಜ್ಯಕೀಯ ಗೊಂದಲಗಳು ನಡೆಯಲಿಲ್ಲವೆಂದಾದರೆ, ದೇಶ ಮುಳುಗಿ ಹೋಗುವುದಿಲ್ಲ. ಹಾಸಿಗೆಯಿರುವಷ್ಟೇ ಕಾಲು ಚಾಚಿಕೊಂಡು ಯೋಜನೆಯನ್ನು ಮುಂದುವರಿಸಿದರೆ-ಕೇವಲ ಪರಿಶೀಲನಾರ್ಥವಾಗಿ-ಉತ್ತಮವಾಗ ಬಹುದೆಂಬ ನಿರೀಕ್ಷೆ. ಈ ಸಲಹೆ ಶಂಖದಿಂದ ಇಳಿದು ಬಂದಿಲ್ಲವಾದರೂ ಶ್ರೀಸಾಮಾನ್ಯ ಗಂಗೆಯಿಂದ ಇಳಿದು ಬಂದಿದೆಯೆಂಬುದನ್ನು ಮರೆಯಬಾರದು.

●●

—: ಪ್ಲ್ಯಾನು :—

ಬ್ರಹ್ಮನ ಸೃಷ್ಟಿಯ ಕಾಗದದಲ್ಲಿ
ನೀಲಿ ಬಣ್ಣ, ಬಿಳಿ ಗೆರೆಗಳು ಇಲ್ಲಿ
ಮನ ಬಂದಂತೆ ಎಳೆದನು ಅಲ್ಲಲ್ಲಿ
ಮುರಿದನು ಬೇಕುಬೇಕಾದಲ್ಲಿ
ಏನಾದರೂ ಅವನಿಗೇನು?
ಬಾಳಿನ ಎಂಜನೀರ್ ಬರೆದು ಪ್ಲ್ಯಾನು!

ಹೆಣ್ಣೂ ಗಂಡೂ ಜೋಡಿಜೋಡಿ
ಒಂದಕ್ಕೊಂದು ಕಾಡಿ ಬೇಡಿ
ಸ್ವಾರ್ಥದಿ ಸಗ್ಗ ಕಟ್ಟಲು ಏರಿ
ಏಣಿ ಮುರಿದು ಬಿದ್ದರು ಸೇರಿ—
ಮೂಳೆ ಮುರಿದರೂ ಅವನಿಗೇನು?
ಅವನೇ ತಾನೇ ಬರೆದ ಪ್ಲ್ಯಾನು!

ಚಂದದ ಜೋಡಿ ಹಕ್ಕಿ ಗೂಡು
ಸೊಬಗಿನ ಸುಂದರ ಹಸಿರಿನ ಕಾಡು
ಹಕ್ಕಿಯ ಮೇಲೆ ಬೆಕ್ಕಿನ ಕಣ್ಣು
ಬೆಕ್ಕಿನ ಮೇಲೆ ನಾಯಿಯ ಕಣ್ಣು
ಕೊಂದು ತಿಂದರೂ ಅವನಿಗೇನು?
ಬಲು ಬೇಜವಾಬ್ದಾರಿ ಬರೆದ ಪ್ಲ್ಯಾನು!

ನದಿಗಳು ಹರಿವವು ಪ್ರಾಣಕ್ಕೆಂದು
ಬೆಳೆಗಳು ಬೆಳೆವವು ಜೀವಕ್ಕೆಂದು
ಪ್ರವಾಹ ಹರಿಯಿತು—
ಬೆಳೆ ಹಾಳಾಯಿತು—
ಹಸಿವೇ ಇಲ್ಲದ ಅವನಿಗೇನು?
ಹಂಗರಿಯದ ಒಡೆಯ ಬರೆದ ಪ್ಲ್ಯಾನು!

ಬುದ್ಧಿಯ ಬೆಟ್ಟ ಜ್ಞಾನದ ಮಟ್ಟ
ಅಳೆದೂ ತೂಗಿ ಸುರಿದೇ ಬಿಟ್ಟ—
ಬುದ್ಧಿಯ ಬಲಕೆ—
ಜ್ಞಾನದ ಫಲಕೆ—
'ಸವಾಲು' ಎಂದರೂ ಅವನಿಗೇನು?
ಸೋತರೂ ಗೆದ್ದರೂ ಅವನದೇ ಪ್ಲ್ಯಾನು!

'ಶಕ್ತಿ'ಯ ಸಹನೆಗೂ ಮಿತಿಯೊಂದಿತ್ತು
ಸೃಷ್ಟಿಯ ಕರ್ತನ ಸೋಲ್ ಕಾದಿತ್ತು
ಒಂದೊಂದ್ ಪ್ಲ್ಯಾನೂ ಬುಡ
ಮೇಲಾಯ್ತು—
ಶಿವ-ಶಕ್ತಿಯ ಜಗಳಕೆ ನಾಂದಿಯು
ಆಯ್ತು—
ಆದಿ-ಅಂತ್ಯದ ಚಿಂತೆ ಅವನಿಗೇನು?
ಸಂತೆ ಚಿತ್ರದ ಸುಂದರ ಪ್ಲ್ಯಾನು!

—ಸುಶೀಲಾ ಕೊಪ್ಪರ.

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಭೂ–ನಗರಾಸ್ತಿ ಮಿತಿ ಬಗ್ಗೆ

ಮಾಡುವುದನ್ನು ಬೇಗ ಮಾಡಿರಿ

‘ಸಮಾಜವಾದ ಮತ್ತು ಬಡತನ ನಿರ್ಮೂಲನ’ದ ಗುರಿ ಹೊತ್ತ ಸರಕಾರ ಭೂಹಿಡುವಳಿಗೂ ನಗರಾಸ್ತಿಗಳಿಗೂ ಮಿತಿ ಹೇರಲು ಆತುರವಾಗಿದೆ. ಆದರೆ, ರಾಷ್ಟ್ರೀಯ ಸಮಿತಿಯ ವಾತಾವರಣವನ್ನು ಪರಿಶೀಲಿಸಿದರೆ ಈ ಮಿತಿ ಹೇರಲು ಅನುಕೂಲಾಭಿಪ್ರಾಯವಿಲ್ಲ. ೧೦ರಿಂದ ೬೦ ಸ್ಟಾಂಡರ್ಡ್ ಎಕ್ರೆಯನ್ನು ಗರಿಷ್ಠ ಭೂಮಿತಿಯೆಂದು ಸಾರಲು ಅಧ್ಯಯನ ಮಂಡಳಿ ಸಿಫಾರಸು ಮಾಡಿತ್ತು. ಆದರೆ, ಆಳುವ ಕಾಂಗ್ರೆಸ್‌ನ ಹಲವಾರು ಸದಸ್ಯರು ಇದರಿಂದ ತೀವ್ರ ದುಃಖಿತರಾದರು. ಭೂ ಶಾಸನ ಮಾಡುವ ಸಂಪೂರ್ಣ ಅಧಿಕಾರ ರಾಜ್ಯಸರಕಾರಗಳದ್ದೇ ಆದರೂ ಹೆಚ್ಚಿನ ರಾಜ್ಯ ಸರಕಾರಗಳು ಈ ಶಾಸನ ಮಾಡಲು ಹಿಂದು–ಮುಂದು ನೋಡುತ್ತಿರುವುದು ಸ್ಪಷ್ಟ ಗೋಚರ.

ಕರ್ನಾಟಕದ ಮುಖ್ಯಮಂತ್ರಿಯವರು ೧೦ ಎಕ್ರೆಗಳನ್ನೇ ಗರಿಷ್ಠ ಭೂ ಹಿಡುವಳಿಯೆಂದು ಹೇಳಿದರು. ಇದು ದೇಶದಲ್ಲೇ ಅತ್ಯಂತ ಕ್ರಾಂತಿಕಾರಿಯಾದ ನಿರ್ಣಯ. ಆದರೆ ಈಗ ಪರಿಸ್ಥಿತಿ ತಲೆಕೆಳಗಾಗುವ ಲಕ್ಷಣಗಳಿವೆ. ಭಾರತದಂತಹ ವಿಶಾಲ ರಾಷ್ಟ್ರದಲ್ಲಿ, ಹಲವು ಬಗೆಯ ಹವಾಮಾನ–ಭೂಪರಿಸ್ಥಿತಿಗಳಿರುವಲ್ಲಿ ಏಕ ರೂಪದ ಭೂಶಾಸನ ವ್ಯಾವಹಾರಿಕವಲ್ಲವೆಂಬುದು ನಿಜ; ನಮ್ಮ ರಾಜ್ಯ ವಿಭಜನೆಯೂ ಭೌಗೋಳಿಕ ಪರಿಸ್ಥಿತಿಗಳಿಗನುಸಾರವಾಗಿಲ್ಲದಿರುವುದರಿಂದ ರಾಜ್ಯಕೀಯ ಮಟ್ಟದಲ್ಲೂ ಒಂದೇ ರೀತಿಯ ಭೂಶಾಸನ ಸಲ್ಲದೆನ್ನುವವರೂ ಇದ್ದಾರೆ. ಭೂಹಿಡುವಳಿಯನ್ನು ಗೊತ್ತು ಮಾಡುವಾಗ ವಿಸ್ತಾರವನ್ನಷ್ಟೇ ಗಮನಿಸದೆ, ಅದರಿಂದ ಬರುವ ಉತ್ಪನ್ನವನ್ನು ಮುಖ್ಯವಾಗಿ ಪರಿಗಣಿಸಬೇಕು ಎಂಬ ವಾದವೂ ಇದೆ.

ಆದೇನಿದ್ದರೂ ಆಳುವ ಕಾಂಗ್ರೆಸ್ಸು ಹೆಚ್ಚಿನ ರಾಜ್ಯಗಳಲ್ಲಿ ಅಧಿಕಾರದಲ್ಲಿರುವುದರಿಂದ, ಅದರ ನಿರ್ಧಾರವೇ ಮಾನ್ಯವಾಗಬೇಕು. ಅದು ದೇಶವ್ಯಾಪಿಯಾಗಿ ಒಂದೇ ರೂಪದ ಭೂಶಾಸನ ಮಾಡಬೇಕೆಂದು ಸಿಫಾರಸು ಮಾಡಿದೆ. ಅಂದರೆ ರಾಜ್ಯದ ಮುಖ್ಯ ಮಂತ್ರಿಗಳು ತಮ್ಮ ಹೊಣೆಗಾರಿಕೆಯನ್ನು ಕೇಂದ್ರದ ತಲೆಯ ಮೇಲೆ ಹೊರಿಸಲು ಸಿದ್ಧರಾದರೆಂದೇ ಅರ್ಥ. ಶಾಸನದ ಬಗ್ಗೆ ಮೂಡುವ ಅಸಮಾಧಾನಕ್ಕೆ ಕೇಂದ್ರವನ್ನು ಬೊಟ್ಟು ಮಾಡುವುದರಿಂದ ತಮ್ಮ ರಕ್ಷಣೆಯಾದೀತೆಂದು ಅವರ ಕಲ್ಪನೆಯಿರಬಹುದು

ನಗರಾಸ್ತಿಗಳ ಮಿತಿಯು ರೂ. ಐದು ಲಕ್ಷಗಳಿರಬಹುದೆಂದು ಅಧ್ಯಯನ ಸಮಿತಿಯು ಸಿಫಾರಸು ಮಾಡಿದೆ. ಈಗಾಗಲೇ ಮಧ್ಯ ಪ್ರದೇಶ, ಮತ್ತು ಬಿಹಾರ ರಾಜ್ಯಗಳು ಮಿತಿಯನ್ನು ಹೇರಿವೆ. ಕರ್ನಾಟಕವು ಎರಡು ಲಕ್ಷಗಳೆಂದು ಅಂದಾಜು ಮಾಡುತ್ತಿದೆ. ಇವೆಲ್ಲ ಮೊತ್ತಗಳು ೫ ಲಕ್ಷಕ್ಕಿಂತ ಕಡಮೆಯಿವೆ. ಐವರಿಗಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ ಒಬ್ಬೊಬ್ಬನಿಗೆ ೫೦ ಸಾವಿರದಂತೆ ಗರಿಷ್ಠ ಆರು ಲಕ್ಷರೂಪಾಯಿಗಳ ಆಸ್ತಿ ಹೊಂದುವ ಅವಕಾಶವಿರಬೇಕೆಂದು ಅಧ್ಯಯನ ಸಮಿತಿಯ ಅಭಿಪ್ರಾಯ. ಅಂದರೆ, ಒಂದು ಕುಟುಂಬದಲ್ಲಿ ಒಂಭತ್ತಕ್ಕಿಂತ ಹೆಚ್ಚು ಸದಸ್ಯರು ಇರಲೇ ಬಾರದು ಎಂದು ಅರ್ಥ (?)

‘ನಗರ ಆಸ್ತಿ’ಯ ಮೌಲ್ಯ ಸ್ಥಿರವಲ್ಲ. ಅದು ಮಾರುಕಟ್ಟೆ ಧಾರಣೆಯಂತೆ ಏರು–ಇಳಿಗಳನ್ನು ಕಾಣುತ್ತದೆ. ಈ ಮಿತಿಯು ಶಾಸನ ಜ್ಯಾರಿಗೆ ಬರುವ ದಿನದ ಮಾರುಕಟ್ಟೆ ಬೆಲೆಯೆಂದಿಟ್ಟುಕೊಳ್ಳಬಹುದು. ಕೆಲವೇ ವ್ಯಕ್ತಿಗಳಲ್ಲಿ ನಗರಗಳ ಆಸ್ತಿಗಳು ಕೇಂದ್ರೀಕೃತವಾಗಿರುವುದನ್ನು ತಡೆಯಬೇಕು ಮತ್ತು ಹೆಚ್ಚಿನ ನಗರಾಸ್ತಿಗಳನ್ನು ಹೆಚ್ಚು ಸರಿಸಮವಾಗಿ ಹಂಚಬೇಕು. ಇದು ಮಿತಿ ಹೇರಿಕೆಯ ಹಿಂದಿರುವ ಸದುದ್ದೇಶ. ನಗರಾಸ್ತಿಗಳ ಬೆಲೆಯೂ ನಗರ ನಗರಕ್ಕೆ ಭಿನ್ನವಾಗಿದೆ; ಒಂದೇ ನಗರದ ಮೂಲೆ ಮೂಲೆಗೂ ಬೇರೆ ಬೇರೆಯಾಗಿದೆ. ಹಾಗಿರುವಾಗ, ಮೌಲ್ಯ ಮಾಪನದಲ್ಲಿ ಬಹಳಷ್ಟು ಎಚ್ಚರಿಕೆ ಅತ್ಯಗತ್ಯವೆನಿಸುತ್ತದೆ. ಈ ಸಂಬಂಧದಲ್ಲೂ ರಾಜ್ಯ ಸರಕಾರಗಳು ಪ್ರಜೆಗಳನ್ನು ಅಸಮಾಧಾನ ಗೊಳಿಸಲು ಮುಂದಾಗುವುದು ಸಂದೇಹಾಸ್ಪದ. ಈ ಮಿತಿ ಹೇರುವ ಹೊಣೆಯನ್ನೂ ಅವು ಕೇಂದ್ರದ ಮೇಲೆ ಹೊರಿಸಿ ತಾವು ನಿರ್ಲಿಪ್ತರೆಂದು ತೋರಿಸಿಕೊಳ್ಳಬಹುದು.

ಇಲ್ಲಿ ಎರಡು ವಿಷಯಗಳು ಪರ್ಯಾಲೋಚನೀಯ. ಮೊದಲನೆಯದಾಗಿ ಭೂಹಿಡುವಳಿ ನಗರಗಳಲ್ಲಿನ ಆಸ್ತಿ, ಆದಾಯ ಮೊದಲಾದುವುಗಳಿಗೆ ಮಿತಿ ಹೇರುವುದು ಅತ್ಯಂತ ಅನಿವಾರ್ಯವೆಂಬುದೊಂದು. ನಾನಾ ರೀತಿಯಿಂದ, ಮುಖ್ಯವಾಗಿ ಕಾಳಧನದ ಬಲದಿಂದ—ಆಸ್ತಿಗಳಿಕೆ ಸ್ವಾತಂತ್ರ್ಯೋತ್ತರ ಕಾಲದ ಮಹತ್ ಸಾಧನೆ. ಹಿಂದಿನದ್ದೂ ಕಾಳಧನದ ಮತ್ತೊಂದು ರೂಪದ ಗಳಿಕೆಯೆನ್ನಬಹುದು. ಇದರಿಂದ ಆಸ್ತಿಯ ಬೆಲೆ ಅನ್ಯಾಯವಾಗಿ ಏರಿದೆ. ಇದಕ್ಕೆ ಮಿತಿ ಹೇರುವುದರಿಂದ ಬೆಲೆಗಳು ಇಳಿಯಬಹುದು; ಮಿತಿ ಹೇರುವ ಸೂಚನೆಯಿಂದಲೇ ಧಾರಣೆಗಳ ಏರಿಕೆಗೆ ತಡೆ ಬಂದಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ. ಸಮಾಜವಾದಿ ದೇಶದಲ್ಲಿ ಆಸ್ತಿಯನ್ನು ಕೆಲವೇ ಮಂದಿ ಅನುಭವಿಸುವುದು ಸಲ್ಲದು. ದೇಶದ ಸುಖ ದುಃಖಗಳು ಸಮಸ್ತ ಪ್ರಜೆಗಳದ್ದು. ಅದ್ದರಿಂದ ಅದರಲ್ಲಿ ಎಲ್ಲರಿಗೂ ಪಾಲು ದೊರೆಯುವುದು ಅನಿವಾರ್ಯ. ಮಿತಿ ಹೇರಿಕೆಯ ಹಿಂದಿರುವ ಸದುದ್ದೇಶ ಸ್ವಾಗತಾರ್ಹವೇ.

ಈ ಮಿತಿ ಹೇರುವುದರಿಂದ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಧಕ್ಕೆ ತಟ್ಟುವುದು ಖಂಡಿತ. ಈ ಹಿತಾಸಕ್ತಿಗಳ ಬಲದಿಂದಲೇ ರಾಜ್ಯ ಸರಕಾರಗಳು ಉಳಿಯಬೇಕೆಂಬುದೂ ಸತ್ಯ. ಆದ್ದರಿಂದ ರಾಜ್ಯ ನಾಯಕರು ಇವರ ವಿರೋಧವನ್ನು ಕಟ್ಟಿಕೊಳ್ಳ ಬಯಸದೆ ತಮ್ಮ ಹೊಣೆಗಾರಿಕೆಯನ್ನು ಕೇಂದ್ರದ ಮೇಲೆ ಹೊರಿಸಿದರೆ, ಅದು ಕರ್ತವ್ಯಲೋಪವೇ. ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಳ್ಳಬೇಕೆಂದು ಕರೆ ನೀಡುವ ರಾಜ್ಯಕೀಯ ನೇತಾರರು ತಾವೇ ಅದಕ್ಕೆ ಹೊಂದಿಕೊಳ್ಳುವ ಕ್ಷಾತ್ರ ತೋರಿಸದಿರುವುದು ಭೀರುತನಕ್ಕಿಂತ ಬೇರೆಯಲ್ಲ. ‘ಅನ್ಯಾಯ ಮಾಡಬೇಡ, ಅನ್ಯಾಯವನ್ನು ಸಹಿಸಲೂ ಬೇಡ’ ಎಂದ ರಾಷ್ಟ್ರಪಿತನ ಉದ್ಗಾರ ನಮಗೆ ಮಾರ್ಗದರ್ಶಕವಾಗಬೇಕು.

ರಾಜ್ಯಗಳಿಗೆ ಹೆಚ್ಚು ಅಧಿಕಾರ ಬೇಕೆಂದು ಕೂಗಿಕೊಳ್ಳುವವರು ಕೆಲವರು ಇರುವ ಅಧಿಕಾರಗಳಲ್ಲಿ ಒಂದೊಂದಾಗಿ ಕೇಂದ್ರ

ಎಲ್ಲಾ ಸಮಸ್ಯೆಗಳಿಗೆ ಒಂದೇ ಉತ್ತರ
—ಸಿಂಡಿಕೇಟ್ ಬ್ಯಾಂಕಿನ ಉಳಿತಾಯ ಖಾತೆ

ದಿನಗೂಲಿಯವರಿರಲಿ, ಮಾಸಿಕ ವರಮಾನದವರಿರಲಿ, ಅನಿಯತ ಆದಾಯವಿರುವ ಮಂದಿಯಿರಲಿ—ಎಲ್ಲರ ಅನುಕೂಲತೆಗೂ ಹೊಂದಿರುವ ಹತ್ತು ಹಲವು ಉಳಿತಾಯ ಖಾತೆಗಳು, ಸರ್ಟಿಫಿಕೇಟುಗಳು ಸಿಂಡಿಕೇಟ್ ಬ್ಯಾಂಕಿನಲ್ಲಿ ಲಭ್ಯ.

ಅವಶ್ಯಕ ಸಂದರ್ಭದಲ್ಲಿ—ನಿಮ್ಮ ಉದ್ಯೋಗ, ವ್ಯವಹಾರ, ಗೃಹಕೃತ್ಯಕ್ಕೆ ಸಂಬಂಧಿಸಿದ ತೊಂದರೆಗಳಿದ್ದಾಗ—ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಬೆಳೆದು ಹಿಗ್ಗಿದ ನಿಮ್ಮ ಹಣ ನಿಮ್ಮ ಪಾಲಿಗೆ ಲಭ್ಯ.

ನಿಮ್ಮ ಸಮಸ್ಯೆಗಳು ಹತ್ತು ಹಲವಿದ್ದರೂ ಅವುಗಳಿಗೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಉತ್ತರವಿದೆ. ನಮ್ಮಲ್ಲೊಂದು ಉಳಿತಾಯ ಖಾತೆಯನ್ನು ತೆರೆದು ನಿಮ್ಮ ಮುಂದಿನ ಬಾಳಿಗೆ ರಕ್ಷೆಯನ್ನು ನೀಡಿರಿ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ ಮಣಿಪಾಲ (ಮೈಸೂರು ರಾಜ್ಯ)	ಶಾಖೆಗಳು 520ಕ್ಕೂ ಮಿಕ್ಕಿವೆ	ಕೆ. ಕೆ. ಪೈ ಕಸ್ಟೋಡಿಯನ್

ವಿತ್ತ ಸಚಿವರು

ತೆರಿಗೆ ಹೇರದಿರಲು ಧೈರ್ಯಮಾಡಲಿ

ಶ್ರೀ ಸುಬ್ರಹ್ಮಣ್ಯಂ ರಾಜ್ಯ ನೀತಿ ಚಾಣಕ್ಯ ರಾಜಾಜಿಯವರು ಕಂಡರಿಸಿದ ಜನನಾಯಕ. ಕಾಮರಾಜರ ಪ್ರಬಲ ಪ್ರತಿಸ್ಪರ್ಧಿಯಾಗಿದ್ದೂ ಅವರೊಂದಿಗೆ ಸಮರಸದಿಂದಿದ್ದ ವ್ಯಕ್ತಿ. ಅವರು ಹಿಂದಿ ಹೇರಿಕೆಯ ಮೇಲೆ ರೊಚ್ಚಿಗೆದ್ದು ಕೇಂದ್ರ ಸಚಿವ ಪದಕ್ಕೆ ರಾಜಿನಾಮೆ ನೀಡಿ ಅಗ್ಗದ ಪ್ರಚಾರಗಳಿಸಲು ಮುಂದಾಗಿದ್ದರೂ ಚುನಾವಣೆಯಲ್ಲಿ ಒಂದಲ್ಲ, ಎರಡು ಬಾರಿ ಸೋತರು. ಕಾಂಗ್ರೆಸ್ ವಿಭಜನಾನಂತರ ಆಳುವ ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರಾದರು. ಆಮೇಲೆ ಯೋಜನಾ ಸಚಿವರೂ ಆದರು; ಕೆಲವೇ ದಿನಗಳಲ್ಲಿ ಅವರು ಕೇಂದ್ರದಲ್ಲೇ ಅರ್ಥ-ಖಾತೆಯ ಹೊರೆಯನ್ನು ಶ್ರೀ ಚವನರಿಂದ ಪಡೆದು ಹೊತ್ತುಕೊಳ್ಳಲಿರುವರೆಂದು ದಟ್ಟ ವರದಿಗಳು.

ರಾಜ್ಯಗಳು ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅಧಿಕ ಸಂಪನ್ಮೂಲಗಳನ್ನು ಆಂತರಿಕವಾಗಿಯೇ ಕ್ರೋಢೀಕರಿಸಬೇಕು; ಇದಕ್ಕಾಗಿ ಕೃಷಿ ತೆರಿಗೆಯ ಮೇಲೆ ತೆರಿಗೆ ಹೇರಿಸುವುದು ಮಾತ್ರವಲ್ಲ, ಉಳಿದವುಗಳ ಮೇಲೆಯೂ ತೆರಿಗೆ ಹೆಚ್ಚಿಸಲು ಧೈರ್ಯ ಮಾಡಬೇಕೆಂದು ಅವರು ರಾಜ್ಯ ಮುಖ್ಯ ಮಂತ್ರಿಯವರಿಗೆ ಉಪದೇಶ ನೀಡಿದ್ದಾರೆ

ಬಡತನ ನಿರ್ಮೂಲನವೇ ಐದನೆಯ ಯೋಜನೆಯ ಗುರಿ. ಜನತೆಯ ಕನಿಷ್ಟ ಆದಾಯವನ್ನು ಹೆಚ್ಚಿಸುವುದು, ಜೀವನಾವಶ್ಯಕ ವಸ್ತುಗಳನ್ನು ಒದಗಿಸುವುದು ಇವು ಯೋಜನೆಯಲ್ಲಿ ಅಡಕವಾದ ತತ್ತ್ವಗಳು.

ರಾಜ್ಯದ ಅರ್ಥ ಸಚಿವ ಶ್ರೀ ಫೋರ್ಪಡೆಯವರೂ ಶ್ರೀ ಸಿ. ಸು. ರವರ ಆದೇಶವನ್ನು ಶಿರಸಾ ವಹಿಸಲಿದ್ದಾರೆ. ಇಷ್ಟರಲ್ಲೇ ತಯಾರಾಗುತ್ತಿರುವ ರಾಜ್ಯದ ಮುಂಗಡ ಪತ್ರ ಹಲವು ಬಗೆಯ ಚಿಕ್ಕ-ದೊಡ್ಡ ತೆರಿಗೆಗಳನ್ನು ಹೊತ್ತು ತರುವುದು ನಿಶ್ಚಿತವೆನಿಸಿದೆ.

ದೇಶದ ಆಡಳಿತ ವ್ಯವಸ್ಥೆಗೆ, ಯೋಜನೆಗಳಿಗೆ ಹಣವೊದಗಿಸುವುದು ಜನತೆಯ ಕರ್ತವ್ಯವೇ. ತೆರಿಗೆ ತೆರುವುದು ಇದಕ್ಕೊಂದು ಮಾರ್ಗ. ಆದರೆ, ನಮ್ಮ ದೇಶದಲ್ಲಿನ ತೆರಿಗೆ ಪ್ರಮಾಣ ಎಂದೋ ಮುಗಿಲು ಮುಟ್ಟಿದೆ. ವರ್ಷ ವರ್ಷವೂ ಚಾರು—ಚೂರಿಂದು ತೆರಿಗೆ ಹನುಮಂತನ ಬಾಲದಂತೆ ಏರುತ್ತಲೇ ಇದೆ.

ಪತ್ರಿಕೆಗಳು—ಜನನಾಯಕರು—ವಿರೋಧ ಪಕ್ಷೀಯರು— ಸಾರ್ವಜನಿಕರು—ಈ ತೆರಿಗೆಗಳ ಹೆಚ್ಚಳವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಕೆಲವೊಮ್ಮೆ ಆಳುವ ಪಕ್ಷದ ಸದಸ್ಯರೇ ಪ್ರತಿಕೂಲ ಅಭಿಪ್ರಾಯ ವ್ಯಕ್ತಪಡಿಸಿದ ಉದಾಹರಣೆಗಳೂ ಇವೆ.

ಆದರೆ, ದುರ್ದೈವವೆಂದರೆ, ಅದು ನಾಟಕದಂತೆ ನಡೆದು ಹೋಗುತ್ತದೆ; ಬಹುಮತ—ಪಕ್ಷದ ಶಿಸ್ತುಗಳ ಬಲದಿಂದ ಸರಕಾರ ಬಯಸಿದಷ್ಟು ತೆರಿಗೆ ಹೇರುವ ಮಾರ್ಗ ನಿರಾತಂಕವಾಗುತ್ತದೆ.

ಇದು ನಡೆದು ಬಂದ ದಾರಿ, ನಡೆದು ಬರುತ್ತಿರುವ ದಾರಿ, ನಡೆದು ಬರುವ ದಾರಿ.

ಈ ದಾರಿಯಲ್ಲಿ ಕ್ರಾಂತಿಕಾರಿ ಬದಲಾವಣೆಯಾಗದೆ ತೆರಿಗೆ ಹೆಚ್ಚಳ ನಿಲ್ಲುವುದಿಲ್ಲ, ಬೆಲೆಯೇರಿಕೆ ತಡೆಯುವುದಿಲ್ಲ, ಶ್ರೀ ಸಾಮಾನ್ಯನ ತಲೆ ನೆಲದಿಂದ ಮೇಲೇರುವುದಿಲ್ಲ.

ತೆರಿಗೆಗಳನ್ನು ಹೆಚ್ಚಿಸುವುದು ಸರಕಾರದ ದೃಷ್ಟಿಯಲ್ಲಿ ಅನಿವಾರ್ಯ. ಆದರೆ, ಜನತೆ ಅವನ್ನು ತೆರುವ ಶಕ್ತಿ ಹೊಂದಿದೆಯೇ ಎಂದು ಪ್ರಶ್ನೆ. ತಾನು ಹೇರುವ ಅಲ್ಪ ಪ್ರಮಾಣದ ತೆರಿಗೆ ಬೆಲೆಯ ಮೇಲೆ ಪರಿಣಾಮ ಬೀರುವುದಿಲ್ಲವೆಂದು ಸರಕಾರ ಪ್ರಕಟಣೆ–ವಿವರಣೆ ನೀಡಬಹುದು; ಆದರೆ, ಯಾವುದೇ ರೂಪದ ತೆರಿಗೆ ಬಳಕೆದಾರನ ಮೇಲೆಯೇ ಬೀಳುವುದು ಅನುಭವದ ಮಾತು. ಆದ್ದರಿಂದ ಜನ ಬಯಸುವುದು—ತೆರಿಗೆಗಳನ್ನು ಹೆಚ್ಚಿಸಬೇಡಿ.

ಮತ್ತೆ ವೆಚ್ಚದ ಬಾಬಿಗೇನು ಗತಿ?

ಮಂತ್ರಿ ಮಾಗಧರು ತಮ್ಮ ವೆಚ್ಚವನ್ನು ಕಡಿಮೆ ಮಾಡಬೇಕು. ಮೊನ್ನೆ ಮೊನ್ನೆ ಸಚಿವರ ವೆಚ್ಚಕ್ಕೆ ಮಿತಿ ಹೇರುವುದು ಸಾಧ್ಯವಿಲ್ಲವೆಂದು ಲೋಕ ಸಭೆಯಲ್ಲಿ ಹೇಳಲಾಯ್ತು. ಸಾರ್ವಜನಿಕರ ಆಸ್ತಿಗಳಿಗೆ ಮಿತಿ ಹೇರ ಬಹುದಾದರೆ, ಪ್ರಗತಿಶೀಲ ಸಮಾಜವಾದಿ ಪ್ರಜಾರಾಜ್ಯದ ಮಂತ್ರಿಗಳ ವೆಚ್ಚ ಸಾರ್ವಜನಿಕ ಬೊಕ್ಕಸದ ದುರುಪಯೋಗಕ್ಕೆ ಮಿತಿಯೇಕೆ ಹೇರಬಾರದು?

ಕಾನೂನಿನ ಬಲದಿಂದ ಬೇಡವಿರಲಿ; ಶ್ರೀಸಾಮಾನ್ಯರ ಉದ್ಧಾರ ಕಾರ್ಯದಲ್ಲಿ ನಿರತರಾದ ಮಂತ್ರಿ ಮಾಗಧರು ಶ್ರೀಸಾಮಾನ್ಯನ ತೆರಿಗೆಯ ಹಣದ ಪಾವಿತ್ರ್ಯಕ್ಕೆ ಸ್ವೇಚ್ಛೆಯಿಂದೇಕೆ ಪ್ರಾಮಾಣಿಕವಾಗಿ ನಿಶಯಿಸ ಬಾರದು?

ಶ್ರೀಸಾಮಾನ್ಯನ ದೈನಿಕ ಕೂಲಿ ಆದಾಯ ಒಂದು ರೂಪಾಯಿಯೂ ಇಲ್ಲವೆಂದು ಗೋಗರೆಯುವ ಮಂತ್ರಿ — ಮಾಗಧರು ಶ್ರೀಸಾಮಾನ್ಯನು ನೀಡಿದ ತೆರಿಗೆಯ ಬಲದಿಂದಲೇ ಲಕ್ಷ ಲಕ್ಷ ಪೋಲು ಮಾಡುತ್ತಾರೆ.

ಇಂದು ನಮಗೆ ಬೇಕು—

ಆಡಳಿತ, ಮಿತವ್ಯಯ, ದಕ್ಷತೆ, ಪ್ರಾಮಾಣಿಕತೆ, ಸಭೆ-ಸಮಿತಿಗಳ ಬಹಿಷ್ಕಾರ; ಉದ್ಘಾಟನೆ-ಶಿಲಾನ್ಯಾಸಗಳಿಗಾಗಿ ದೂರದೂರದ ಮಂತ್ರಿ-ಅಧಿಕಾರಿಗಳ ಪ್ರಯಾಣಗಳಿಗೆ ಬಹಿಷ್ಕಾರ; ಅನಪೇಕ್ಷಿತ ಸಮ್ಮಾನಗಳ ಮುಕ್ತಾಯ.

ಈ ಬಯಕೆಯನ್ನು ಹತ್ತಾರು ವರ್ಷಗಳಿಂದಲೂ ಜನತೆ ವ್ಯಕ್ತ ಪಡಿಸುತ್ತಲೇ ಬಂದಿದೆ. ಆದರೆ ಅವರ ಉದ್ಧಾರದ ಹೆಸರಿನಲ್ಲೇ ಇದು ಜರ್ಜರಿತವಾಗಿದೆ.

ಈ ಬೆಲೆಯಿಲ್ಲದ ಕೂಗು ಬೆಲೆ ಪಡೆಯುವಂತಾದರೆ, ಹೇಗೆ?

ನಮ್ಮ ಸರಕಾರಗಳು ಹೆಚ್ಚಿನ ತೆರಿಗೆ ಹೇರಿಸುವುದಕ್ಕೆ ಧೈರ್ಯ ಮಾಡುವುದನ್ನು ಬಿಟ್ಟು ಬಿಡಬೇಕು.

ಒಂದು ವರ್ಷದ ಮಟ್ಟಿಗಾದರೂ ಹೊಸ ತೆರಿಗೆಯಿಲ್ಲದ ಹೆಚ್ಚಿನ ಕೊರತೆಯಿಲ್ಲದ ಮುಂಗಡ ಪತ್ರವನ್ನು ಮಂಡಿಸುವ ಧೈರ್ಯ ಮಾಡಬೇಕು (ಅದು ನಿರರ್ಥಕವಾದರೆ ಪೂರಕ ಬೇಡಿಕೆ ಇದೆ ತಾನೆ?)

ಇದು ಪ್ರಾಯೋಗಿಕವಾಗಿಯೇ ಇರಲಿ, ಪರಿಸ್ಥಿತಿ ಹೇಗೆ ನಿಲ್ಲುವುದೆಂದು ಅಧ್ಯಯನವಾದರೂ ಮಾಡಲೊಂದು ಅವಕಾಶ ಬೇಕು.

ಪ್ರಾಕೃತಿಕ–ರಾಜ್ಯಕೀಯ ಗೊಂದಲಗಳು ನಡೆಯಲಿಲ್ಲವೆಂದಾದರೆ, ದೇಶ ಮುಳುಗಿ ಹೋಗುವುದಿಲ್ಲ. ಹಾಸಿಗೆಯಿರುವಷ್ಟೇ ಕಾಲು ಚಾಚಿಕೊಂಡು ಯೋಜನೆಯನ್ನು ಮುಂದುವರಿಸಿದರೆ—ಕೇವಲ ಪರಿಶೀಲನಾರ್ಥವಾಗಿ—ಉತ್ತಮವಾಗ ಬಹುದೆಂಬ ನಿರೀಕ್ಷೆ. ಈ ಸಲಹೆ ಶಂಖದಿಂದ ಇಳಿದು ಬರದಿದ್ದಾದರೂ ಶ್ರೀಸಾಮಾನ್ಯ ಗಂಗೆಯಿಂದ ಇಳಿದು ಬಂದಿದೆಯೆಂಬುದನ್ನು ಮರೆಯಬಾರದು.

● ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್.
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

— ಃ ಪ್ಲ್ಯಾನು ಃ —

ಬ್ರಹ್ಮನ ಸೃಷ್ಟಿಯ ಕಾಗದದಲ್ಲಿ
ಹಳದಿ ಬಣ್ಣ, ಚಳಿ ಗೆರೆಗಳು ಅಲ್ಲಿ
ಮನ ಬಂದಂತೆ ಎಳೆದನು ಅಲ್ಲಲ್ಲಿ
ಮುಗಿದನು ಬೇಕುಬೇಕಾದಲ್ಲಿ
ಏನಾದರೂ ಅವನಿಗೇನು?
ಬಾಳಿನ ಎಂಜಿನೀರ್ ಬರೆದ ಪ್ಲ್ಯಾನು!

ಹೆಣ್ಣು ಗಂಡೂ ಜೋಡಿಜೋಡಿ
ಒಂದಕ್ಕೊಂದು ಕಾಡಿ ಬೇಡಿ
ಸ್ವಾರ್ಥದಿ ಸಗ್ಗ ಕಟ್ಟಲು ಏರಿ
ಏಣಿ ಮುರಿದು ಬಿದ್ದರು ಸೇರಿ—
ಮೂಳೆ ಮುರಿದರೂ ಅವನಿಗೇನು?
ಅವನೇ ಕಾಣೇ ಬರೆದ ಪ್ಲ್ಯಾನು!

ಚಂದದ ಜೋಡಿ ಹಕ್ಕಿ ಗೂಡು
ಕೊಂಬೆಗಳ ನಡುವೆ ಹಸಿರ ಕಾಡು
ಹಕ್ಕಿಯ ಮೇಲೆ ಬೆಕ್ಕಿನ ಕಣ್ಣು
ಬೆಕ್ಕಿನ ಮೇಲೆ ನಾಯಿಯ ಕಣ್ಣು
ಕೊಂದು ತಿಂದರೂ ಅವನಿಗೇನು?
ಬಲು ಬೇಜವಾಬ್ದಾರಿ ಬರೆದ ಪ್ಲ್ಯಾನು!

ನದಿಗಳು ಹರಿವವು ಪ್ರಾಣಕ್ಕೆಂದು
ಬೆಳೆಗಳು ಬೆಳೆವವು ಜೀವಕ್ಕೆಂದು
ಪ್ರವಾಹ ಹರಿಯಿತು—
ಬೆಳೆ ನಾಶವಾಯಿತು—
ಹಸಿವೇ ಇಲ್ಲದ ಅವನಿಗೇನು?
ಹಂಗಿಲ್ಲದ ಒಡೆಯ ಬರೆದ ಪ್ಲ್ಯಾನು!

ಬುದ್ಧಿಯ ಬೆಟ್ಟ ಜ್ಞಾನದ ಮಟ್ಟ
ಅಳೆದೂ ತೂಗಿ ಸುರಿದೇ ಬಿಟ್ಟ—
ಬುದ್ಧಿಯ ಬಲಕೆ—
ಜ್ಞಾನದ ಥಳುಕೆ—
'ಪಿಶಾಚಿ' ಎಂದರೂ ಅವನಿಗೇನು?
ಗೆಲ್ಲುತ್ತರೂ ಗೆದ್ದರೂ [illegible] ಪ್ಲ್ಯಾನು!

"ಶಕ್ತಿ"ಯ ಸಹನೆಗೂ ಮಿತಿಯೊಂದಿತ್ತು
ಸೃಷ್ಟಿಯ ಕರ್ತನ ಕಂಟ್ರೋಲ್ ತಪ್ಪಿತ್ತು
ಒಂದೊಂದ್ ಪ್ಲ್ಯಾನೂ ಬುಡ
ಮೇಲಾಯ್ತು—
ಶಿವ-ಶಕ್ತಿಯ ಜಗಳಕೆ ನಾಂದಿಯು
ಆಯ್ತು—
ಆದಿ-ಅಂತ್ಯದ ಚಿಂತೆ ಅವನಿಗೇನು?
ಸಂತೆ. ಚಿತ್ರದ ಸುಂದರ ಪ್ಲ್ಯಾನು!

—ಸುಶೀಲಾ ಕೊಪ್ಪರ.

ಭೂ–ನಗರಾಸ್ತಿಮಿತಿ ಬಗ್ಗೆ

ಮಾಡುವುದನ್ನು ಬೇಗ ಮಾಡಿರಿ

'ಸಮಾಜವಾದ ಮತ್ತು ಬಡತನ ನಿರ್ಮೂಲನ'ದ ಗುರಿ ಹೊತ್ತ ಸರಕಾರ ಭೂಹಿಡುವಳಿಗೂ ನಗರಾಸ್ತಿಗಳಿಗೂ ಮಿತಿ ಹೇರಲು ಆತುರವಾಗಿದೆ. ಆದರೆ, ರಾಷ್ಟ್ರೀಯ ಮಟ್ಟದ ವಾತಾವರಣವನ್ನು ಪರಿಶೀಲಿಸಿದರೆ, ಈ ಮಿತಿ ಹೇರಲು ಅನುಕೂಲಾಭಿಪ್ರಾಯವಿಲ್ಲ. ೧೦ರಿಂದ ೧೮ ಸ್ಟ್ಯಾಂಡರ್ಡ್ ಎಕ್ರೆಯನ್ನು ಗರಿಷ್ಠ ಭೂಮಿತಿಯೆಂದು ಸಾರಲು ಅಧ್ಯಯನ ಮಂಡಳಿ ಸಿಫಾರಸು ಮಾಡಿತ್ತು. ಆದರೆ, ಆಳುವ ಕಾಂಗ್ರೆಸ್‌ನ ಹಲವಾರು ಸದಸ್ಯರು ಇದರಿಂದ ತೀವ್ರ ದುಃಖಿತರಾದರು. ಭೂ ಶಾಸನ ಮಾಡುವ ಸಂಪೂರ್ಣ ಅಧಿಕಾರ ರಾಜ್ಯಸರಕಾರಗಳದ್ದೇ ಆದರೂ ಹೆಚ್ಚಿನ ರಾಜ್ಯ ಸರಕಾರಗಳು ಈ ಶಾಸನ ಮಾಡಲು ಹಿಂದು–ಮುಂದು ನೋಡುತ್ತಿರುವುದು ಸ್ಪಷ್ಟ ಗೋಚರ.

ಕರ್ನಾಟಕದ ಮುಖ್ಯಮಂತ್ರಿಯವರು ೧೦ ಎಕ್ರೆಗಳನ್ನೇ ಗರಿಷ್ಠ ಭೂ ಹಿಡುವಳಿಯೆಂದು ಹೇಳಿದರು. ಇದು ದೇಶದಲ್ಲೇ ಅತ್ಯಂತ ಕ್ರಾಂತಿಕಾರಿಯಾದ ನಿರ್ಣಯ. ಆದರೆ ಈಗ ಪರಿಸ್ಥಿತಿ ತಲೆಕೆಳಗಾಗುವ ಲಕ್ಷಣಗಳಿವೆ. ಭಾರತದಂತಹ ವಿಶಾಲ ರಾಷ್ಟ್ರದಲ್ಲಿ, ಹಲವು ಬಗೆಯ ಹವಾಮಾನ–ಭೂಪರಿಸ್ಥಿತಿಗಳಿರುವಲ್ಲಿ ಏಕ ರೂಪದ ಭೂಶಾಸನ ವ್ಯಾವಹಾರಿಕವಲ್ಲವೆಂಬುದು ನಿಜ; ನಮ್ಮ ರಾಜ್ಯ ವಿಭಜನೆಯೂ ಭೌಗೋಳಿಕ ಪರಿಸ್ಥಿತಿಗಳಿಗನುಸಾರವಾಗಿಲ್ಲದಿರುವುದರಿಂದ ರಾಜ್ಯಕೀಯ ಮಟ್ಟದಲ್ಲೂ ಒಂದೇ ರೀತಿಯ ಭೂಶಾಸನ ಸಲ್ಲದೆನ್ನುವವರೂ ಇದ್ದಾರೆ. ಭೂಹಿಡುವಳಿಯನ್ನು ಗೊತ್ತು ಮಾಡುವಾಗ ವಿಸ್ತಾರವನ್ನಷ್ಟೇ ಗಮನಿಸದೆ, ಅದರಿಂದ ಬರುವ ಉತ್ಪನ್ನವನ್ನು ಮುಖ್ಯವಾಗಿ ಪರಿಗಣಿಸಬೇಕು ಎಂಬ ವಾದವೂ ಇದೆ.

ಅದೇನಿದ್ದರೂ ಆಳುವ ಕಾಂಗ್ರೆಸ್ಸು ಹೆಚ್ಚಿನ ರಾಜ್ಯಗಳಲ್ಲಿ ಅಧಿಕಾರದಲ್ಲಿರುವುದರಿಂದ, ಅದರ ನಿರ್ಧಾರವೇ ಮಾನ್ಯವಾಗಬೇಕು. ಅದು ದೇಶವ್ಯಾಪಿಯಾಗಿ ಒಂದೇ ರೂಪದ ಭೂಶಾಸನ ಮಾಡಬೇಕೆಂದು ಸಿಫಾರಸು ಮಾಡಿದೆ. ಅಂದರೆ ರಾಜ್ಯದ ಮುಖ್ಯ ಮಂತ್ರಿಗಳು ತಮ್ಮ ಹೊಣೆಗಾರಿಕೆಯನ್ನು ಕೇಂದ್ರದ ತಲೆಯ ಮೇಲೆ ಹೊರಿಸಲು ಸಿದ್ಧರಾದರೆಂದೇ ಅರ್ಥ. ಶಾಸನದ ಬಗ್ಗೆ ಮೂಡುವ ಅಸಮಾಧಾನಕ್ಕೆ ಕೇಂದ್ರವನ್ನು ಬೊಟ್ಟು ಮಾಡುವುದರಿಂದ ತಮ್ಮ ರಕ್ಷಣೆಯಾದೀತೆಂದು ಅವರ ಕಲ್ಪನೆಯಿರಬಹುದು.

ನಗರಾಸ್ತಿಗಳ ಮಿತಿಯು ರೂ. ಐದು ಲಕ್ಷಗಳಿರಬಹುದೆಂದು ಅಧ್ಯಯನ ಸಮಿತಿಯು ಸಿಫಾರಸು ಮಾಡಿದೆ. ಈಗಾಗಲೇ ಮಧ್ಯ ಪ್ರದೇಶ, ಮತ್ತು ಬಿಹಾರ ರಾಜ್ಯಗಳು ಮಿತಿಯನ್ನು ಹೇರಿವೆ. ಕರ್ನಾಟಕವು ಎರಡು ಲಕ್ಷಗಳೆಂದು ಅಂದಾಜು ಮಾಡುತ್ತಿದೆ. ಈಯೆಲ್ಲ ಮೊತ್ತಗಳು ೫ ಲಕ್ಷಕ್ಕಿಂತ ಕಡಮೆಯಿವೆ. ಐವರಿಗಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ ಒಬ್ಬೊಬ್ಬನಿಗೆ ೫೦ ಸಾವಿರದಂತೆ ಗರಿಷ್ಠ ಆರು ಲಕ್ಷರೂಪಾಯಿಗಳ ಆಸ್ತಿ ಹೊಂದುವ ಅವಕಾಶವಿರಬೇಕೆಂದು ಅಧ್ಯಯನ ಸಮಿತಿಯ ಅಭಿಪ್ರಾಯ. ಅಂದರೆ, ಒಂದು ಕುಟುಂಬದಲ್ಲಿ ಒಂಭತ್ತಕ್ಕಿಂತ ಹೆಚ್ಚು ಸದಸ್ಯರು ಇರಲೇ ಬಾರದು ಎಂದು ಅರ್ಥ (?)

'ನಗರ ಆಸ್ತಿ'ಯ ಮೌಲ್ಯ ಸ್ಥಿರವಲ್ಲ. ಅದು ಮಾರುಕಟ್ಟೆ ಧಾರಣೆಯಂತೆ ಏರು–ಇಳಿಗಳನ್ನು ಕಾಣುತ್ತದೆ. ಈ ಮಿತಿಯು ಶಾಸನ ಜಾರಿಗೆ ಬರುವ ದಿನದ ಮಾರುಕಟ್ಟೆ ಬೆಲೆಯೆಂದಿಟ್ಟುಕೊಳ್ಳಬಹುದು. ಕೆಲವೇ ವ್ಯಕ್ತಿಗಳಲ್ಲಿ ನಗರಗಳ ಆಸ್ತಿಗಳು ಕೇಂದ್ರೀಕೃತವಾಗಿರುವುದನ್ನು ತಡೆಯಬೇಕು ಮತ್ತು ಹೆಚ್ಚಿನ ನಗರಾಸ್ತಿಗಳನ್ನು ಹೆಚ್ಚು ಸರಿಸಮವಾಗಿ ಹಂಚಬೇಕು. ಇದು ಮಿತಿ ಹೇರಿಕೆಯ ಹಿಂದಿರುವ ಸದುದ್ದೇಶ. ನಗರಾಸ್ತಿಗಳ ಬೆಲೆಯೂ ನಗರ ನಗರಕ್ಕೆ ಭಿನ್ನವಾಗಿದೆ; ಒಂದೇ ನಗರದ ಮೂಲೆ ಮೂಲೆಗೂ ಬೇರೆ ಬೇರೆಯಾಗಿದೆ. ಹಾಗಿರುವಾಗ, ಮೌಲ್ಯ ಮಾಪನದಲ್ಲಿ ಬಹಳಷ್ಟು ಎಚ್ಚರಿಕೆ ಅತ್ಯಗತ್ಯವೆನಿಸುತ್ತದೆ. ಈ ಸಂಬಂಧವಲ್ಲೂ ರಾಜ್ಯ ಸರಕಾರಗಳು ಪ್ರಜೆಗಳನ್ನು ಅಸಮಾಧಾನಗೊಳಿಸಲು ಮುಂದಾಗುವುದು ಸಂದೇಹಾಸ್ಪದ. ಈ ಮಿತಿ ಹೇರುವ ಹೊಣೆಯನ್ನೂ ಅವು ಕೇಂದ್ರದ ಮೇಲೆ ಹೊರಿಸಿ ತಾವು ನಿರ್ಲಿಪ್ತರೆಂದು ತೋರಿಸಿಕೊಳ್ಳಬಹುದು.

ಇಲ್ಲಿ ಎರಡು ವಿಷಯಗಳು ಪರ್ಯಾಲೋಚನೀಯ. ಮೊದಲನೆಯದಾಗಿ ಭೂಹಿಡುವಳಿ ನಗರಗಳಲ್ಲಿನ ಆಸ್ತಿ, ಆದಾಯ ಮೊದಲಾದುವುಗಳಿಗೆ ಮಿತಿ ಹೇರುವುದು ಅತ್ಯಂತ ಅನಿವಾರ್ಯವೆಂಬುದೊಂದು. ನಾನಾ ರೀತಿಯಿಂದ, ಮುಖ್ಯವಾಗಿ ಕಾಳಧನದ ಬಲದಿಂದ—ಆಸ್ತಿಗಳಿಕೆ ಸ್ವಾತಂತ್ರ್ಯೋತ್ತರ ಕಾಲದ ಮಹತ್ ಸಾಧನೆ. ಹಿಂದಿನದ್ದೂ ಕಾಳಧನದ ಮತ್ತೊಂದು ರೂಪದ ಗಳಿಕೆಯೆನ್ನಬಹುದು. ಇದರಿಂದ ಆಸ್ತಿಯ ಬೆಲೆ ಅನ್ಯಾಯವಾಗಿ ಏರಿದೆ. ಇದಕ್ಕೆ ಮಿತಿ ಹೇರುವುದರಿಂದ ಬೆಲೆಗಳು ಇಳಿಯಬಹುದು; ಮಿತಿ ಹೇರುವ ಸೂಚನೆಯಿಂದಲೇ ಧಾರಣೆಗಳ ಏರಿಕೆಗೆ ತಡೆ ಬಂದಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ. ಸಮಾಜವಾದಿ ದೇಶದಲ್ಲಿ ಆಸ್ತಿಯನ್ನು ಕೆಲವೇ ಮಂದಿ ಅನುಭವಿಸುವುದು ಸಲ್ಲದು. ದೇಶದ ಸುಖ ದುಃಖಗಳು ಸಮಸ್ತ ಪ್ರಜೆಗಳದ್ದು. ಆದ್ದರಿಂದ ಅದರಲ್ಲಿ ಎಲ್ಲರಿಗೂ ಪಾಲು ದೊರೆಯುವುದು ಅನಿವಾರ್ಯ. ಮಿತಿ ಹೇರಿಕೆಯ ಹಿಂದಿರುವ ಸದುದ್ದೇಶ ಸ್ವಾಗತಾರ್ಹವೇ.

ಈ ಮಿತಿ ಹೇರುವುದರಿಂದ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಧಕ್ಕೆ ತಟ್ಟುವುದು ಖಂಡಿತ. ಈ ಹಿತಾಸಕ್ತಿಗಳ ಬಲದಿಂದಲೇ ರಾಜ್ಯ ಸರಕಾರಗಳು ಉಳಿಯಬೇಕೆಂಬುದೂ ಸತ್ಯ. ಆದ್ದರಿಂದ ರಾಜ್ಯ ನಾಯಕರು ಇವರ ವಿರೋಧವನ್ನು ಕಟ್ಟಿಕೊಳ್ಳ ಬಯಸದೆ ತಮ್ಮ ಹೊಣೆಗಾರಿಕೆಯನ್ನು ಕೇಂದ್ರದ ಮೇಲೆ ಹೊರಿಸಿದರೆ, ಅದು ಕರ್ತವ್ಯಲೋಪವೇ. ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಳ್ಳಬೇಕೆಂದು ಕರೆ ನೀಡುವ ರಾಜ್ಯಕೀಯ ನೇತಾರರು ತಾವೇ ಅದಕ್ಕೆ ಹೊಂದಿಕೊಳ್ಳುವ ಕೆಚ್ಚು ತೋರಿಸದಿರುವುದು ಹೀನತನಕ್ಕಿಂತ ಬೇರೆಯಲ್ಲ. 'ಅನ್ಯಾಯ ಮಾಡಬೇಡ, ಅನ್ಯಾಯವನ್ನು ಸಹಿಸಬೇಡ' ಹೇಳಿಕೆ ರಾಷ್ಟ್ರಹಿತದ ಉದ್ಧಾರ ಸೇವೆಗೆ ಮಾರ್ಗದರ್ಶನವಾಗಬೇಕು.

ರಾಜ್ಯಗಳಿಗೆ ಹೆಚ್ಚು ಅಧಿಕಾರ ಬೇಕೆಂದು ಕೂಗಿಕೊಳ್ಳುವವರು ಕೆಲವರು ಇರುವ ಅಧಿಕಾರಗಳನ್ನೇ ಒಂದೊಂದಾಗಿ ಕೇಂದ್ರ

ಎಲ್ಲಾ ಸಮಸ್ಯೆಗಳಿಗೆ ಒಂದೇ ಉತ್ತರ
—ಸಿಂಡಿಕೇಟ್ ಬ್ಯಾಂಕಿನ ಉಳಿತಾಯ ಖಾತೆ

ದಿನಗೂಲಿಯವರಿರಲಿ, ಮಾಸಿಕ ವರಮಾನದವರಿರಲಿ, ಅನಿಯತ ಆದಾಯವಿರುವ ಮಂದಿಯಿರಲಿ—ಎಲ್ಲರ ಅನುಕೂಲತೆಗೂ ಹೊಂದಿರುವ ಹತ್ತು ಹಲವು ಉಳಿತಾಯ ಖಾತೆಗಳು, ಸರ್ಟಿಫಿಕೇಟುಗಳು ಸಿಂಡಿಕೇಟ್ ಬ್ಯಾಂಕಿನಲ್ಲಿ ಲಭ್ಯ.

ಅವಶ್ಯಕ ಸಂದರ್ಭದಲ್ಲಿ—ನಿಮ್ಮ ಉದ್ಯೋಗ, ವ್ಯವಹಾರ, ಗೃಹಕೃತ್ಯಕ್ಕೆ ಸಂಬಂಧಿಸಿದ ತೊಂದರೆಗಳಿದ್ದಾಗ—ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಬೆಳೆದು ಹಿಗ್ಗಿದ ನಿಮ್ಮ ಹಣ ನಿಮ್ಮ ಸಹಾಯಕ್ಕೆ ಲಭ್ಯ.

ನಿಮ್ಮ ಸಮಸ್ಯೆಗಳು ಹತ್ತು ಹಲವಿದ್ದರೂ ಅವುಗಳಿಗೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಉತ್ತರವಿದೆ. ನಮ್ಮಲ್ಲೊಂದು ಉಳಿತಾಯ ಖಾತೆಯನ್ನು ತೆರೆದು ನಿಮ್ಮ ಮುಂದಿನ ಬಾಳಿಗೆ ರಕ್ಷೆಯನ್ನು ನೀಡಿರಿ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ	ಶಾಖೆಗಳು	ಕೆ. ಕೆ. ಪೈ
ಮಣಿಪಾಲ (ಮೈಸೂರು ರಾಜ್ಯ)	520ಕ್ಕೂ ಮಿಕ್ಕಿವೆ	ಕಸ್ಟೋಡಿಯನ್

ಪ್ರತ್ಯೇಕತೆ ಮರೆಯುತ್ತಿರುವ

ಹೊಸ ರಾಜ್ಯ ಮಿಝೋರಾಮು

ಒಡೆದು ಆಳುವದರಲ್ಲಿ ಪಳಗಿದ್ದ ಧೂರ್ತ ಬ್ರಿಟಿಷರು ಭಾರತವನ್ನು ಭಿನ್ನ ಭಿನ್ನ ಭಾಗಗಳನ್ನಾಗಿ ವಿಂಗಡಿಸಿದ್ದರು. ಗುಡ್ಡಗಾಡಿನ ಒಳಪ್ರದೇಶದಲ್ಲಿರುವ ಜನರಿಗೂ ಬಯಲು ಪ್ರದೇಶದ ಜನರಿಗೂ ಸಂಪರ್ಕ ಇಲ್ಲದಂತೆ ಮಾಡಲು ಅವರು ಬಹಳ ಪ್ರಯತ್ನಿಸಿದ್ದರು. ಕೆಲವು ಸ್ಥಳಗಳನ್ನಂತೂ ರಕ್ಷಣೆಗೊಳಗಾಗಿರುವ ಪ್ರದೇಶಗಳೆಂದು ಹೆಸರಿಟ್ಟು ಅಲ್ಲಿಗೆ ಬಯಲು ಪ್ರದೇಶದಿಂದ ಯಾರೂ ಹೋಗದಂತೆ ಅವರು ಎಚ್ಚರಿಕೆ ವಹಿಸಿಕೊಂಡಿದ್ದರು. ಗುಡ್ಡಗಾಡಿನ ಜನರು ಬೇರೆ ಜನಾಂಗಕ್ಕೆ ಸೇರಿದವರೆಂದು ಪ್ರಚಾರ ಮಾಡಲಾಯಿತು. ತಮ್ಮ ಕ್ರಿಸ್ತೀಯ ಮತಪ್ರಸಾರಕರ ಮೂಲಕ ಈ ಮುಗ್ಧ ಜನತೆಯನ್ನು ಕ್ರಿಸ್ತೀಯರನ್ನಾಗಿಸಲು ಅವರು ಭಾರಿ ತಂತ್ರವನ್ನು ಹೂಡಿದ್ದರು. ತಮ್ಮ ತಂತ್ರಕ್ಕೆ ಅವರು ಅಸ್ತ್ರವನ್ನು ಆರಿಸಿಕೊಂಡಿದ್ದರು. ಅದಕ್ಕೆ ಶಿಕ್ಷಣಯ ಭೂನೆಲೆಯೇ ಕಾರಣ. ಅಷ್ಟೇ ಅಲ್ಲ. ಈ ಗುಡ್ಡಗಾಡಿನ ಜನರನ್ನು ವಿಂಗಡಿಸಿ ಆಳಲು ಅವರು ಶ್ರಮವಹಿಸಿದರು. ಅದೇನು ಮಾಡಿದರೂ ಈ ನೆಲದಿಂದ ಕಾಲ್ತೆಗೆಯಲೇ ಬೇಕಾಗುತ್ತದೆಂಬುದನ್ನು ತಿಳಿದುಕೊಂಡ ಬ್ರಿಟಿಷರು ಈ ಜನರ ನಡುವೆ ವಿಭಜನೆಯ ಪ್ರತ್ಯೇಕತೆಯ ವಿಷ ಬೀಜವನ್ನು ಬಿತ್ತಿದರು. ಈ ಗುಡ್ಡಗಾಡಿನ ಜನರು ಭಾರತಕ್ಕೆ ಸೇರಿದವರಲ್ಲವೆಂದು ವಿಂಗಡಿಸಲು ಅವರು ಆಸಕ್ತಿ ವಹಿಸಿದರು. ಕ್ರಿಸ್ತೀಯ ಮತ ಪ್ರಸಾರಕರ ಬಲೆಗೆ ಬಿದ್ದಿರುವ ಜನರು ಅವರಂದಂತೆ ಆಡಿದರೂ, ಉಳಿದ ಜನರು ತಾವು ಹಿಂದುಗಳಲ್ಲವೆನ್ನಲು ಮುಂದಕ್ಕೆ ಬರಲಿಲ್ಲ. ಇದರಿಂದಾಗಿ ಗುಡ್ಡಗಾಡಿನ ಜನರನ್ನು ಪ್ರತ್ಯೇಕಿಸಲಿಕ್ಕಾಗದೆ, ಅವರೇ ಇಲ್ಲಿಂದ ಹೋಗ ಬೇಕಾದ ದಿನ ಬಂತು. ತಾವು ಹೋದ ಮೇಲೆ ಕೂಡಾ ಇವರು ಒಟ್ಟಾಗಿರಬಾರದೆಂದು, ಕ್ರಿಸ್ತೀಯ ಗುಡ್ಡಗಾಡಿನ ಜನರು ಬಂಡೇಳುವಂತೆ ಶಸ್ತ್ರ ಸರಬರಾಯಿ ಶಸ್ತ್ರ ಶಿಕ್ಷಣವನ್ನು ಕೊಟ್ಟಿದ್ದರು.

ಅವರನ್ನು ಬಯಲು ಪ್ರದೇಶದ ಜನರಿಂದ ಪ್ರತ್ಯೇಕವಾಗಿಡುವ ಸಲುವಾಗಿ ಅಲ್ಲಿಗೆ ಹೋಗದಂತೆ ಮಾಡಲು ರಸ್ತೆಗಳನ್ನೇ ಮಾಡಿರಲಿಲ್ಲ. ಗುಡ್ಡಗಾಡಿನ ಜನರಿಗೆ ಬ್ರಿಟಿಷರ ರಾಜಮಾರ್ಗದ ಆವಶ್ಯಕತೆ ಇಲ್ಲವಾದರೂ ಪಾಕಿಸ್ತಾನ ನಿರ್ಮಾಣದ ಕಾರಣ ಅವರು ಬೋನಿನಲ್ಲಿ ಸಿಕ್ಕಿಕೊಂಡಂತಾಯಿತು. ರಸ್ತೆ ನಿರ್ಮಾಣ ಕಾರ್ಯ ಸುಲಭ ಸಾಧ್ಯವೂ ಅಲ್ಲ. ಇಂದು ಈ ದಿಸೆಯಲ್ಲಿ ನಮ್ಮ ಸರ್ಕಾರ ದೃಷ್ಟಿಹರಿಸಿದೆಯಾದರೂ ಭೂನೆಲೆಯ ಕಾರಣ ಹಾಗೂ ಅಲ್ಲಿಯ ಕೆಲವು ಜನರಲ್ಲಿ ವಿದ್ವೇಷದ ಜ್ವಾಲೆ ಇರುವದರಿಂದ ಅದು ಬಹಳಷ್ಟು ಪ್ರಯಾಸದ ಕೆಲಸವಾಗಿದೆ.

ಈ ಗುಡ್ಡಗಾಡಿನ ಜನರು ಗುಂಪುಗುಂಪಾಗಿ ಜೀವಿಸುತ್ತಾರೆ. ತಮ್ಮ ಗುಂಪಿನ ನಾಯಕನ ಮೇಲೆ ಕೋಪ ಬಂದಲ್ಲಿ, ಹಾಗೂ ಇನ್ನಿತರ ಕಾರಣದಿಂದ ಒಂದು ಗುಂಪಿನಲ್ಲಿರುವವರು ಇನ್ನೊಂದು ಗುಂಪಿಗೆ ಹೋಗುವದುಂಟು. ಇವರಲ್ಲಿ ನಾಯಕನ ಸ್ಥಾನಮಾನವನ್ನು ಅವನ ಬಳಿ ಇರುವ ಜನಸಂಖ್ಯೆಯ ಮೇಲೆ ನಿರ್ಧರಿಸಲಾಗುತ್ತದೆ. ಹಾಗಿರುವುದರಿಂದ ಪ್ರತಿಯೊರ್ವ ನಾಯಕನೂ ತನ್ನ ಗುಂಪಿನಿಂದ ಯಾರೂ ಹೊರಹೋಗದಂತೆ ಜಾಗರೂಕತೆ ವಹಿಸುವದುಂಟು. ಇದು ಪಕ್ಷಾಂತರಕ್ಕೆ ಮೂಲವಿರಬಹುದು. ವ್ಯಕ್ತಿಗಳು ಗುಂಪು ಬದಲಾಯಿಸುತ್ತಾರೆಯೇ ವಿನಃ ಗುಂಪು ಒಂದೆಡೆಯಿಂದ ಇನ್ನೊಂದೆಡೆಗೆ ವಲಸೆಹೋಗುವದು ಬಹಳ ಕಮ್ಮಿ. ಒಮ್ಮೆ ಕೃಷಿಮಾಡಿದ ನೆಲವನ್ನು ಬಿಟ್ಟುಹೋಗಲು ಅವರು ಇಚ್ಛಿಸುವದಿಲ್ಲ. ಅದೂ ಅಲ್ಲದೆ ತಮ್ಮ ಹಿರಿಯರ ಸ್ಮಶಾನವನ್ನು ಬಿಟ್ಟುಕೊಡಲು ಇವರು ಸಿದ್ಧರಿರುವದಿಲ್ಲ. ಸ್ಮಶಾನಕ್ಕೆ ಇವರಲ್ಲಿ ವಿಶೇಷ ಗೌರವವಿದೆ.

ಈ ಅಭ್ಯಾಸ ಬ್ರಿಟಿಷರಿಗೂ ತಲೆನೋವಾಗಿತ್ತು. ಇವರಿರುವ ಪ್ರದೇಶಗಳಲ್ಲಿ ಬಿದಿರು ವಿಶೇಷವಾಗಿ ಬೆಳೆಯುತ್ತದೆ. ಬಿದಿರು ಸುಮಾರು ಐವತ್ತು ವರ್ಷಗಳಿಗೊಮ್ಮೆ ಹೂಬಿಡುತ್ತದೆ. ಹೂವಿನ ಪರಿಮಳಕ್ಕೆ ಎಲ್ಲಿಲ್ಲದ ಇಲಿಗಳು ಅಲ್ಲಿಗೆ ಬರುತ್ತವೆ. ಅವು ಇವರ ಬೆಳೆಗಳನ್ನು ನಾಶ ಮಾಡುತ್ತವೆ. ಅಂತಹ ಸಮಯದಲ್ಲೂ ಇವರು ವಲಸೆಹೋಗುತ್ತಿರಲಿಲ್ಲ.

ಇಂತಹ ಜನರನ್ನು ದುರುಪಯೋಗಪಡಿಸಿಕೊಳ್ಳಲು ಕೆಲವರು ಹುಟ್ಟುವದುಂಟು. ೧೯೫೯ ರಲ್ಲಿ ಅಲ್ಲಿ ಬರಗಾಲ ಬಂತು. ಸರಕಾರವು ಸಹಾಯವನ್ನು ಕಳುಹಿಸಿತು. ಅದಕ್ಕಾಗಿ ಮಿಝೋ ಬರಗಾಲ ಸಮಿತಿಯೊಂದನ್ನು ರಚಿಸಲಾಗಿತ್ತು. ಹಳ್ಳಿಮೂಲೆಗಳಲ್ಲೂ ಇದರ ಶಾಖೆಗಳಿದ್ದುವು. ಲಾಲ್‌ಡೆಂಗಾನೆಂಬ ಮಾಜಿ ಸೈನಿಕನೊಬ್ಬನು ಇದರ ನೇತೃತ್ವವನ್ನು ವಹಿಸಿಕೊಂಡನು. ಇವನು ಉತ್ತಮ ವಾಕ್ಪಟು; ಅಲ್ಲದೆ ಒಳ್ಳೆಯ ದೃಢಕಾಯನು. ಸೇನೆಯಲ್ಲಿ ಹವಾಲ್ದಾರನಾಗಿದ್ದನು. ಕ್ಷಾಮ ನಿವಾರಣಾ ಪ್ರಯತ್ನದಲ್ಲಿ ಪ್ರಖ್ಯಾತನಾದುದೇ ತಡ, ಇವನು ಒಂದು ರಾಜಕೀಯ ಪಕ್ಷವನ್ನೇ ಕಟ್ಟಿದನು. ಅದಕ್ಕೆ ಮಿಝೋ ರಾಷ್ಟ್ರೀಯ ಸಮಿತಿಯೆಂದು ಹೆಸರಿಟ್ಟನು. ಅದರಲ್ಲೂ ಹೆಸರು ಪ್ರಸಿದ್ಧಿ ಹೊಂದಿದುದೇ ತಡ, ಇವನು ಒಂದು ಸೇನೆ ಕಟ್ಟಲು ಸಿದ್ಧನಾದನು. ಸೇನೆಗೆ ಮಿಝೋ ರಾಷ್ಟ್ರೀಯ ಸೇನೆಯೆಂದು ನಾಮಕರಣ ಮಾಡಿದನು. ಇವನು ಆಗಾಗ ಅಂದಿನ ಪೂರ್ವಪಾಕಿಸ್ತಾನಕ್ಕೆ ಹೋಗಿ ಗುಪ್ತವಾಗಿ ಶಸ್ತ್ರಾಸ್ತ್ರಗಳನ್ನು ತರುತ್ತಿದ್ದನು. ಇವೆಲ್ಲವೂ ಹುಚ್ಚಾಟವೆಂದೂ, ಮಿಝೋ ಕ್ರಿಸ್ತೀಯರನ್ನು ಸುಲಭವಾಗಿ ಬುಟ್ಟಿಗೆ ಹಾಕಿಕೊಳ್ಳಬಹುದೆಂದು ಸರಕಾರ ಸುಮ್ಮನಿತ್ತು. ಸರ್ವಸಿದ್ಧತೆಗಳನ್ನು ನಡೆಸಿದ ಲಾಲ್‌ಡೆಂಗನು [illegible]ರಂದು ಐಜಾಲಿನಲ್ಲಿರುವ ಜಿಲ್ಲಾಧಿಕಾರಿಯ ಕಛೇರಿಯನ್ನು ಕೈವಶಪಡಿಸಿಕೊಂಡು ಅದರ ಮೇಲೆ ತನ್ನ ಧ್ವಜವನ್ನು ಹಾರಿಸಿದನು.

ಈ ವಿಷಯ ದಿಲ್ಲಿಗೆ ಸರಿಯಾಗಿ ತಿಳಿದು ಬಂದು, ಅದು ಕಣ್ತೆರೆಯಲು ಒಂದು ವರ್ಷಕಾಲ ಬೇಕಾಯಿತು. ಅದುವರೆಗೂ ತುಷ್ಟೀಕರಣದ ದಾರಿಯಲ್ಲೇ ದಿಲ್ಲಿ ಸಾಗಿತ್ತು. ಅಸ್ಸಾಂ ಅಸ್ತು ಅಂದಿತ್ತು. ಮೆಲ್ಲ ಮೆಲ್ಲನೆ ನಮ್ಮ ಸೇನೆ ಅಲ್ಲಿಗೆ ಹೋಯಿತು. ಲಾಲ್‌ಡೆಂಗಾನ ಅನುಯಾಯಿಗಳು ಅವನ್ನೆದುರಿಸಿದರು. ಆದರೂ ಸುಧಾರಣೆಯ ಹೆಸರಿನಲ್ಲಿ ಅವರನ್ನು ಅಲ್ಲಲ್ಲಿ ದೊಡ್ಡ ದೊಡ್ಡ ಗುಂಪುಗಳನ್ನಾಗಿ ಮಾಡಲು ಸೇನೆ ಪ್ರಯತ್ನಿಸಿತು. ದೊಡ್ಡ ಸಮೂಹವೃಂದ ಸೇರುವಾಗ ವಿದ್ಯುಚ್ಛಕ್ತಿ, ರಸ್ತೆ, ಶಾಲೆ ಮುಂತಾದ ವಿಷಯಗಳಿಗೆ ಅನುಕೂಲವಾಗುತ್ತದೆ. ಕಮ್ಮಿ ಬೆಲೆಯ ಅಂಗಡಿಗಳನ್ನು ಅಲ್ಲಲ್ಲಿ ತೆರೆಯಲಾಯಿತು. ಇತ್ತ ಪೂರ್ವ ಪಾಕಿಸ್ತಾನವು ಸ್ವತಂತ್ರವಾಯಿತು. ತನ್ನ ಬೇಳೆ ಬೇಯದಿರುವದನ್ನು ಕಂಡ ಲಾಲ್‌ಡೆಂಗಾ ತನ್ನ ಅನುಯಾಯಿಗಳೊಂದಿಗೆ ಬರ್ಮಾದ ಗುಡ್ಡಗಾಡಿನಲ್ಲಿ ಅವಿತುಕೊಂಡಿದ್ದಾನೆ. ಲಾಲ್‌ಡೆಂಗನು ಸ್ವತಂತ್ರ ಮಿಝೋಲ್ಯಾಂಡ್‌ನ್ನು ಕೇಳುತ್ತಿದ್ದ ಕಾರಣ ದಿಲ್ಲಿಯು ಮಿಝೋರಾಮನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಿತು. ಈಗ ಅದನ್ನು ಪ್ರತ್ಯೇಕ ರಾಜ್ಯವೆಂದು ಘೋಷಿಸಲಾಗಿದೆ. ಇದರ ವಿಸ್ತೀರ್ಣ ೬,೫೦೦ ಚದರ ಮೈಲು. ಇದು ಗುಡ್ಡಗಾಡು ಪ್ರದೇಶವಲ್ಲದೆ, ಇಲ್ಲಿಯ ಮಣ್ಣಿನಲ್ಲಿ ನೀರು ನಿಲ್ಲದ ಕಾರಣ ಬೇಸಾಯಕ್ಕೆ ಸಾಧ್ಯವಿರುವದಿಲ್ಲ. ಇಲ್ಲಿ ಲಿಂಬೆ, ಕಿತ್ತಳೆ, ಶುಂಠಿ, ಪಪ್ಪಾಯಿ ಮುಂತಾದವುಗಳನ್ನು ಬೆಳೆಸಲಾಗುತ್ತದೆ. ಗುಡಿ ಕೈಗಾರಿಕೆಗಳಿಗೆ ಏರ್ಪಾಡು ಮಾಡಿಕೊಡಲಾಗುತ್ತಿದೆ. ಹೀಗೆ ಕ್ರಮಶಃ ಅವರನ್ನು ಕೇಂದ್ರ ಬಿಂದುವಿನತ್ತ ಸೆಳೆದುಕೊಳ್ಳಲಾಗುತ್ತಿದೆ. ಇವರ ತಲೆಗೆ ಟೊಪ್ಪಿ ಇಡಲು ಕಾಂಗ್ರೆಸ್ಸ್ ಪ್ರಯತ್ನಿಸುತ್ತಿದೆಯಾದರೂ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಲ್ಲಿಯ ಮಿಝೋ ಸಮಿತಿಯೇ ಬಹುಮತವನ್ನು ಪಡೆದಿರುತ್ತದೆ.

(ಆಧಾರ: [illegible])

—ಶ್ರೀ ಶಿವಶಂಕರ.

●●

ಕ್ಕೆ ಬಿಟ್ಟುಕೊಡುವವರು ಮತ್ತೆ ಕೆಲವರು. ಇದು ಶೋಭನೀಯವಾಗದು. ಸಮಾಜವಾದದ ದೀಕ್ಷೆ ಹೊತ್ತವರು ತಮಗಿರುವ ಶಾಸನಾಧಿಕಾರವನ್ನು ಸಂಪೂರ್ಣ ಉಪಯೋಗಿಸಬೇಕು; ಸಮಾಜವಾದದ ಅನುಷ್ಠಾನಕ್ಕೆ ಕ್ಷಿಪ್ರ ಶಾಸನ ಮಾಡಬೇಕು. ಮೀನಮೇಷವೆಣಿಸುವಷ್ಟರಲ್ಲಿ ಪರಿಸ್ಥಿತಿಯೇ ಬದಲಾಗಿ ಹೋದೀತು. ಈ ಶಾಸನಗಳಿಂದ ಯಾರಿಗೂ ಯಾವ ರೀತಿಯ ವಿನಾಯತಿಯೂ ದೊರೆಯಬಾರದು.

●●

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 441/1971

ವಾದಿ—ನರಸಮ್ಮ ಶೆಡ್ತಿ

ಪ್ರತಿವಾದಿರು—1. ಪದ್ದಕ್ಕ ಶೆಡ್ತಿ, 2. ಹಿರಿಯಣ್ಣ ಸೆಟ್ಟಿ, 3 ಸಂಜೀವ ಸೆಟ್ಟಿ, 4. ಗುಲಾಬಿ ಸೆಡ್ತಿ, 5. ಗಿರಿಜ ಸೆಡ್ತಿ, 6. ದಾರಮ್ಮ ಸೆಡ್ತಿ.

ಉಡುಪಿ ತಾಲ್ಲೂಕು ಹೊಸಾಳ ಗ್ರಾಮದಲ್ಲಿರುವ ಪದ್ದಕ್ಕ ಸೆಡ್ತಿರ ಮಗ ಸದ್ರಿ ದಾವೆಯ 3ನೇ ಪ್ರತಿವಾದಿ ಸಂಜೀವ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ನೀವು ವಗೈರೆ ಪ್ರತಿವಾದಿರ ಮೇಲೆ, ವಾದಿಳು ದಾವಾ A ಸೆಡ್ಯೂಲ್ ಆಸ್ತಿಗಳ ರಿಡೆಂಶನ್ (redemption)ಮತ್ತು ಸ್ವಾಧೀನತೆ ವಗೈರೆ ನಿವೃತ್ತಿಗಳನ್ನು ಕೇಳಿ ದಾಖಲ್ಲು ಮಾಡಿದ ಮೇಲಿನ ದಾವಾ ಮೇಲ್ಕಾಣಿಸಿದ ಕೋರ್ಟಿನಲ್ಲಿ ತಾರೀಕು 5–7–1972ನೇ ದಿನ ಬೆಳಿಗ್ಗೆ 11 ಗಂಟೆಗೆ ತನ್ನಿಗೆಯಿಡೋಣವಾಗಿದೆ ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸೋಣಾಗಿದೆ.

B. S. Shetty
B. A; B. L.
Vakil for Plaintiff

Coondapoor, 4-6-72

ಕುಂದಾಪುರ II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 2399/1971

ಶಿವ ಜಟ್ಟಿ—ಅರ್ಜಿದಾರ

ದೇವಡಿಗ ಕುಷ್ಟ ನಹಾ – ಎದುರು

ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಸುವುದೇನೆಂದ್ರೆ —

1. ದೇವಡಿಗ ಕುಷ್ಟ – ಮೂಸ್ತಿ ಹೆಂಗ್ಸಿನ ತಮ್ಮ, 2. ಸುಬ್ಬಿ ಹೆಂಗ್ಸು, 3. ಗುರುವಮ್ಮ — ಮುರ್ಲಿ ಹೆಂಗ್ಸಿನ ಮಕ್ಕಳು

ಕಂಬದ ಕೋಣೆ ಗ್ರಾಮದಲ್ಲಿರುವವರು

ಅರ್ಜಿದಾರನಿಗೆ ಎದ್ರಿರಿಂದ ತಾ. 31-9-70 (ಸೌಮ್ಯ)ಕ್ಕೆ ಬರತಕ್ಕ ಗೇಣಿ ಲೆಕ್ಕಾಚಾರ 303–12 ಮತ್ತು ಬಡ್ಡಿ ಕೂಡಾ ಬರಮಾಡಿಕೊಳ್ಳುವರೆ ಅರ್ಜಿದಾರರು ಎದ್ರಿರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಲು ಮಾಡಿದ ರೆಂಟ್ ಅರ್ಜಿಯು ತಾ. 30–6–72ಕ್ಕೆ ಅಖೈರ ತನ್ನಿಗೆಯಿಡೋಣಾಗಿಯದೆ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವಸ ಸ್ವತಹಾ ವ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ತಿಳಿಯಪಡ್ಸಿದೆ.

M. M. Hebbar
Advocate for Petitioner

Kundapur, Date 8—6—72

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಯಾಂಗಲೋರ್ ನವ್ಯರೀತಿಯ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಜನವಾಣಿ—

ಉಡುಪಿಯ ಒಳಮಾರ್ಗಗಳಲ್ಲಿ ದೀಪವುರಿಯುವುದಿಲ್ಲ

ಎಂ.ಎಸ್.ಇ.ಬಿ. ರಾಜ್ಯಕ್ಕೆಲ್ಲ ವಿದ್ಯುತ್ ಸರಬರಾಜು ಮಾಡುವ ಮಂಡಳಿ. ಇದೀಗ ಮಳೆಗಾಲ ಆರಂಭವಾಯ್ತು. ಅಂದಿನಿಂದ ವಿದ್ಯುತ್ತಿನ ಕಣ್ಣುಮುಚ್ಚಾಲೆಯಾಟ ಪ್ರೇಕ್ಷಣೀಯವೇ. ಮನೆದೀಪವಿದ್ದರೆ ಬೀದಿದೀಪವಿಲ್ಲ. ಬೀದಿ ದೀಪವಿದ್ದರೆ ಮನೆದೀಪವಿಲ್ಲ. ಭಾನುವಾರ ಆರಾಮವಾಗಿ ಪೇಟೆಯಿಂದ ರೇಡಿಯೋ ಕೇಳೋಣವೆಂದರೆ ಅದೂ ಸರಬರಾಯಿಗೆ ಏನಾದರೂ ನೆಪದಲ್ಲಿ ಶ್ರೋತ್ರಾದಲ್ಲಿ ಸರ್ವಸಾಮಾನ್ಯ ಭಾನುವಾರಸರಬರಾಯಿಗೆ. ಶ್ರೋತ್ರಾ ಆಗಲಿಲ್ಲವೆಂದರೆ ದೇವರು ಬಳಕೆದಾರನ ಮೇಲೆ ಪ್ರಸನ್ನನಾಗಿದ್ದಾನೆಂದೇ ಅರ್ಥ.

ಉಡುಪಿ ನಗರದ ಒಳರಸ್ತೆಗಳಲ್ಲಿ ತಿರುಗಾಡುವ ಯೋಗವಿದ್ದವರಿಗೆ ಇತ್ತೀಚಿನ ಕೆಲದಿನಗಳಿಂದ ಗ್ರಹಚಾರ. ಇಲ್ಲಿ ದೀಪದ ಕಂಬಗಳೇನೋ ಇವೆ; ಬಲ್ಬುಗಳೂ ಇವೆ; ದೀಪ ಮಾತ್ರವಿಲ್ಲ. ಇದು ಒಂದೆರಡು ಒಳಬೀದಿಗಳ ಕತೆಯಲ್ಲ. ಉದಾಹರಣೆಗೆ ಬೀಡಿನಗುಡ್ಡೆ-ಅಲೆವೂರು ರಸ್ತೆಯೊಂದು. ಇತ್ತೀಚೆಗೆ ದಾರಿಹೋಕರೊಬ್ಬರು ಅಲ್ಲಿ ಕನ್ನಡಿಹಾವನ್ನು ಕಂಡರಂತೆ. ಕೈಯಲ್ಲಿ ಟಾರ್ಚು ಇದ್ದುದರಿಂದ ಅದನ್ನು ಮೆಟ್ಟಲಿಲ್ಲವಂತೆ. ಕುಂಜಿಬೆಟ್ಟು-ಗುಂಡಿಬೈಲು ವಾರ್ಡುಗಳ ಒಳದಾರಿಗಳ ಹಣೆಬರಹವೂ ಇದಕ್ಕಿಂತ ಬೇರೆಯಲ್ಲ. ಇದೇ ಉಳಿದೆಡೆಯೂ ಇರಬಹುದು.

ಬೀದಿ ದೀಪಗಳು ಸರಿಯಾಗಿ ಉರಿಯುತ್ತವೆಯೋ ಇಲ್ಲವೋ ಎಂದು ನೋಡಿಕೊಳ್ಳುವ ಜವಾಬ್ದಾರಿ ಯಾರದ್ದು? ಪ್ರಾಯಃ ನಗರಸಭೆಯದ್ದಿರಬೇಕು. ಅದು ತನ್ನ ಹೊಣೆಗಾರಿಕೆಯನ್ನು ವಿದ್ಯುನ್ಮಂಡಳಿಗೆ ಒಪ್ಪಿಸಿಬಿಟ್ಟಿದೆಯೆ? ಆದರೆ ನಗರಸಭೆಯಾಗಲೀ ವಿದ್ಯುನ್ಮಂಡಳಿಯಾಗಲೀ ಈ ಕಡೆಗೆ ಗಮನ ಹರಿಸಿದ್ದಿಲ್ಲ. ಏಕೆಂದರೆ, ಈ ಅಂಧಂತಮಸ್ಸಿಗೆ ಹಲವು ದಿನಗಳು ಸಂದುವು.

ಬೀದಿ ದೀಪಗಳನ್ನು ನಮ್ಮ ನಗರಸಭೆ ಅತ್ಯಂತ ಉದಾರವಾಗಿ ಹಾಕಿಸುತ್ತದೆ. ಪ್ರತಿಷ್ಠಿತರ ಮನೆ ಜಗಲಿಯ ಕಂಬಕ್ಕೂ ದೀಪ ಬರುತ್ತಿದೆ. ಸ್ವಾಗತಾರ್ಹವೇ. ಆದರೆ ಜನತೆಯ ಉಪಯೋಗಕ್ಕಾಗಿ ಹಾಕಿಸಿದ ದೀಪಗಳು ಉರಿಯುತ್ತವೆಯೋ ಇಲ್ಲವೋ ನೋಡುವವರಾರು? ಮುಖ್ಯ ಮಾರ್ಗದ ಟ್ಯೂಬ್‌ಲೈಟುಗಳೇ ಉರಿಯದ ಉದಾಹರಣೆಗಳುಂಟು. ಎಂ.ಜಿ.ಎಂ. ಕಾಲೇಜಿನೆದುರು ಬಸ್ ನಿಲ್ದಾಣದ ಬಳಿಯ ಟ್ಯೂಬ್ ಉರಿಯದೆ ಎರಡು ವಾರವಾಯ್ತು.

ಪುರಪಿತೃಗಳು ರಾಜ್ಯ—ದೇಶಪಿತೃಗಳ ದಾರಿಯನ್ನು ತುಳಿಯತೊಡಗಿದ್ದಾರೆಯೆ? ನಗರದ ಒಳದಾರಿಗಳಲ್ಲಿ ಕಾಲ್ನಡೆಯಿಂದ ಅಮಾವಾಸ್ಯೆಯ ರಾತ್ರಿ ನಡೆದು ನೋಡಿದರೆ ವಸ್ತುಸ್ಥಿತಿ ವೇದ್ಯವಾಗುತ್ತದೆ.

ಈ ದುಸ್ಥಿತಿ ತಪ್ಪಬೇಕು. ಹಾಕಿಸಿದ ದೀಪಗಳೆಲ್ಲವೂ ರಾತ್ರಿಹೊತ್ತು ಉರಿದು, ಅವರ ಲಾಭ ಪಾದಚಾರಿಗಳಿಗೆ ದೊರೆಯುವಂತಾಗಬೇಕು. ಈ ಬಗ್ಗೆ ಸೂಕ್ತ ವ್ಯವಸ್ಥೆಯಿಲ್ಲವಾದರೆ, ಹೊಸ ವ್ಯವಸ್ಥೆಯನ್ನಾದರೂ ಮಾಡಬೇಕು. ವ್ಯವಸ್ಥೆಯಿದ್ದಿದ್ದರೆ, ಅವ್ಯವಸ್ಥೆಯನ್ನಾದರೂ ದೂರ ಮಾಡಬೇಕು.

ದೀಪಗಳು ಮುಖ್ಯ ರಸ್ತೆಗಳಿಗಿಂತ ಒಳದಾರಿಗಳಲ್ಲಿ ಹೆಚ್ಚು ಉಪಕಾರಿ—ಅವಶ್ಯಕವಲ್ಲವೆ?

—ಮೋಹನ

●●

ಪುತ್ತೂರು ಟೌನ್ ಬ್ಯಾಂಕ್ ಸಂಭ್ರಮದ ವಜ್ರೋತ್ಸವ

ತಾ. 6ರಂದು ಪುತ್ತೂರು ಕೋಪರೇಟಿವ್ ಟೌನ್ ಬ್ಯಾಂಕಿನ ವಜ್ರ ಮಹೋತ್ಸವವು ಕನ್ನಡದ ಖ್ಯಾತ ಸಾಹಿತಿ ಡಾ। ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನೆರವೇರಿದಾಗ ರಾಜ್ಯದ ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ರಾಮಮೋಹನ ರಾಯರು ಬ್ಯಾಂಕು ಸಾಗಿ ಬಂದ ದಾರಿಯ ಪರಿಚಯ ಮಾಡಿಸಿದರು. ಬ್ಯಾಂಕಿನ ಆಡಳಿತ ಮಂಡಳಿಯವರು ವಜ್ರೋತ್ಸವದ ಸ್ಮಾರಕವಾಗಿ 5000 ರೂಪಾಯಿಗಳನ್ನು ಮೀಸಲಾಗಿರಿಸಿ ಅದರ ಬಡ್ಡಿಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ವಜ್ರೋತ್ಸವ ಸ್ಮಾರಕ ವಿದ್ಯಾರ್ಥಿ ವೇತನ ನೀಡಲು ನಿರ್ಧರಿಸಿರುವುದನ್ನು ಅವರು ತಿಳಿಸಿದರು.

ಸಚಿವ ಶ್ರೀ ಆಳ್ವರು ಬ್ಯಾಂಕು ಕಟ್ಟಿಸಿದ ನೂತನ ಗೋದಾಮನ್ನು ಉದ್ಘಾಟಿಸಿ ಬ್ಯಾಂಕಿನ ಪ್ರಗತಿಗೆ ಮೆಚ್ಚುಗೆ ಸೂಚಿಸಿದರು.

ದ. ಕ. ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ಬ್ಯಾಂಕಿನ ಸರ್ವತೋಮುಖ ಏಳಿಗೆಗೆ ಕಾರಣರಾದ ಶ್ರೀ ಬೈಂದೂರು ಪ್ರಭಾಕರ ರಾಯರ ತೈಲಚಿತ್ರವನ್ನು ಅನಾವರಣಗೊಳಿಸಿದರು.

ಜಿಲ್ಲಾ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಅಧ್ಯಕ್ಷ ಶ್ರೀ ವಾರಣಾಸಿ ಸುಬ್ರಾಯ ಭಟ್ಟರು ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿ ಬ್ಯಾಂಕಿನ ಪ್ರಗತಿಗೆ ಮೆಚ್ಚುಗೆ ಸೂಚಿಸಿದರು.

ಡಾ। ಕಾರಂತರು ಮಾತಾಡಿ ಪುತ್ತೂರಿನ ಜನತೆಗೆ 60 ವರುಷಗಳಿಂದ ಉತ್ತಮ ಸೇವೆ ಸಲ್ಲಿಸಿ ವಜ್ರ ಮಹೋತ್ಸವವಾಚರಿಸುತ್ತಿರುವ ಬ್ಯಾಂಕಿನ ಏಳಿಗೆಗಾಗಿ ದುಡಿದವರ ಸೇವೆಯನ್ನು ಸ್ಮರಿಸಿ ಸಂಸ್ಥೆಗೆ ಶ್ರೇಯಸ್ಸನ್ನು ಹಾರೈಸಿದರು.

ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಎಚ್. ಸೀತಾರಾಮ ಭಟ್ಟರು ಅಂತ್ಯದಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

ಶ್ರೀ ಬಿ. ಮಂಜುನಾಥ ಪೈಯವರ ಷಷ್ಟ್ಯಬ್ದಿ ಸಮಾರಂಭ

ಭಾರತ ಬೀಡಿ ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ನ ಶ್ರೀ ಬಿ. ಮಂಜುನಾಥ ಪೈಯವರ ಷಷ್ಟ್ಯಬ್ದಿ ಸಮಾರಂಭವು ಮಂಗಳೂರಿನ ಕದ್ರಿ ರೋಡ್‌ನಲ್ಲಿರುವ ಅವರ ನಿವಾಸದಲ್ಲಿ ತಾ. 5ರಂದು ವಿವಿಧ ಧಾರ್ಮಿಕ ಕಾರ್ಯಗಳೊಡನೆ, ಮಾರ್ಕಂಡೇಯ ಹವನ ಪೂರ್ವಕ ವಿಜೃಂಭಣೆಯಿಂದ ಜರಗಿತು. ಕಾಶೀ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಮಚ್ಚರಣರು ಸನ್ನಿಹಿತರಾಗಿ ಯಾಗಾಂತ್ಯದಲ್ಲಿ ಅನುಗ್ರಹ ಪ್ರವಚನಗೈದು ಹರಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರೂ ಸಮಾರಂಭಕ್ಕೆ ಆಗಮಿಸಿ ಶ್ರೀ ಕ್ಷೇತ್ರದ ಪ್ರಸಾದವನ್ನಿತ್ತು ಶ್ರೀ ಪೈಯವರಿಗೆ ಶುಭ ಕೋರಿದರು. ಪೂರ್ಣಾಹುತಿಯ ವೇಳೆ ವೇದಮೂರ್ತಿ ಪದ್ಮನಾಭ ಭಟ್ಟರು ಮಾರ್ಕಂಡೇಯ ಹವನದ ಮಹತ್ವವನ್ನು ವಿವರಿಸಿದರು.

ಕಾಶೀ ಮಠದ ಶ್ರೀಮಚ್ಚರಣರವರು ಅನುಗ್ರಹ ಭಾಷಣ ಮಾಡಿದ ನಂತರ ಶ್ರೀ ಮಂಜುನಾಥ ಪೈ ದಂಪತಿಗಳು ಶ್ರೀಪಾದರಿಗೆ ಪಾದಪೂಜೆ ಗೈದರು. ಸಂಸ್ಥೆಯ ಸಿಬಂದಿಯವರು ತಮ್ಮ ಪ್ರೀತಿಯ ಕಾಣಿಕೆಯಾಗಿ ಬೆಳ್ಳಿಯ ಶ್ರೀ ವೆಂಕಟರಮಣ ಪ್ರತೀಕವನ್ನು ಶ್ರೀ ಶ್ರೀಗಳವರ ದಿವ್ಯ ಹಸ್ತದ ಮೂಲಕ ಶ್ರೀ ಪೈಯವರಿಗೆ ಒಪ್ಪಿಸಿದರು. ಋತ್ವಿಜರಿಗೆ ಸಂಭಾವನೆ, ನೌಕರರಿಗೆ ಉಡುಗೊರೆಗಳನ್ನೀಯಲಾಯಿತು. ಮರುದಿನ ಬಡ ಬಗ್ಗರಿಗೆ ಅಕ್ಕಿ ವಿತರಣೆ ನಡೆಯಿತು.

ಕೊಡವೂರಲ್ಲಿ ಗಿರಾಕಿ ಸೇವಾ ಕೇಂದ್ರ ಉದ್ಘಾಟನೆ.

ತಾ. 5ರಂದು ಉಡುಪಿಯ ಕೊಡವೂರು ಸೇವಾ ಸಹಕಾರಿ ಬ್ಯಾಂಕಿನ ಆಶ್ರಯದಲ್ಲಿ ದ. ಕ. ಜಿಲ್ಲಾ ಸರಕಾರೀ ಕೃಷಿ ಸಹಕಾರಿ ಅಭಿವೃದ್ಧಿ ಸಂಘದ ಗಿರಾಕಿ ಸೇವಾ ಕೇಂದ್ರವನ್ನು ರಾಜ್ಯದ ಸಹಕಾರಿ ಸಚಿವ ಶ್ರೀ ಎ. ಶಂಕರ ಆಳ್ವರು ಉಡುಪಿ ವಿಧಾನ ಸಭಾ ಕ್ಷೇತ್ರದ ಸದಸ್ಯೆ ಶ್ರೀಮತಿ ಮನೋರಮಾ ಮಧ್ವರಾಜರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಉಡುಪಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಮಧ್ವರಾಜರು ಸ್ವಾಗತಿಸಿದರು. ಬ್ಯಾಂಕಿನ ಅಧ್ಯಕ್ಷ ಶ್ರೀ ಟಿ. ಶಂಭು ಶೆಟ್ಟರು ವರದಿ ಒಪ್ಪಿಸಿದರು.

ಸಚಿವ ಶ್ರೀ ಆಳ್ವರು ಗಿರಾಕಿ ಸೇವಾಕೇಂದ್ರವನ್ನು ಉದ್ಘಾಟಿಸುತ್ತ ಸಮಾಜವಾದಿ ಸಮಾಜ ರಚನೆಯಲ್ಲಿ ಸಹಕಾರೀ ಸಂಸ್ಥೆಗಳ ಪಾತ್ರವನ್ನು ವಿವರಿಸಿದರು. ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ಚಿಕ್ಕ ರೈತರ, ಕೃಷಿ ಕಾರ್ಮಿಕರ ಯೋಜನೆಯನ್ವಯ 'ಸೇವಾ ಸಹಕಾರಿ ಬ್ಯಾಂಕು ಒದಗಿಸುವ ಕೃಷಿ ಕಾರ್ಮಿಕರ 'ಪ್ರಥಮ' ಸಾಲವನ್ನು ವಿತರಣೆ ಮಾಡಿದರು.

ಸರಕಾರದ ಪರವಾಗಿ ಶ್ರೀ ನಾರಾಯಣ ರಾಯರು ಮಾತಾಡಿದ ಬಳಿಕ ಚಿಕ್ಕ ರೈತ—ಕೃಷಿ ಕಾರ್ಮಿಕ ಯೋಜನೆಯ ಪ್ರಾಜೆಕ್ಟ್ ಆಫೀಸರ್ ಶ್ರೀ ಕೆ. ಪಿ. ಜಗನ್ನಾಥ ರಾಯರು ಯೋಜನೆಯ ವಿವರಗಳನ್ನು ನೀಡಿದರು.

ಶ್ರೀಮತಿ ಮಧ್ವರಾಜರು ಮಾತನಾಡಿ ಸಚಿವ ಶ್ರೀ ಆಳ್ವರ ಸೇವೆಯನ್ನು ಶ್ಲಾಘಿಸಿದರು. ಶ್ರೀ ಬಿ. ನಾರಾಯಣ ನಾಯಕರನ್ನು ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥಾ ಮತಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಸದಸ್ಯರೆಲ್ಲ [illegible] ಆರಿಸಿ ಕಳಿಸುವರೆಂದು ಹಾರೈಸಿದರು.

ದ. ಕ. ಸಹಕಾರಿ ಸರಕಾರಿ ನೌಕರರ ಸಹಕಾರ ಸಂಘದ ಸುವರ್ಣ ಮಹೋತ್ಸವ

ದ. ಕ. ಸಹಕಾರಿ ಸರಕಾರಿ ನೌಕರರ ಸಹಕಾರೀ ಸಂಘದ ಸುವರ್ಣ ಮಹೋತ್ಸವದ ಸಮಾರಂಭವನ್ನು ತಾ. 4ರಂದು ಮಂಗಳೂರಿನ ಪುರಭವನದಲ್ಲಿ ಶಾಸಕ ಶ್ರೀ ಬಿ. ಸುಬ್ಬಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ರಾಜ್ಯದ ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರು ಉದ್ಘಾಟಿಸಿದರು.

ಪ್ರಾರಂಭದಲ್ಲಿ ಸುವರ್ಣ ಮಹೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ಸ್ವಾಗತಿಸಿ ಸಂಸ್ಥೆಗೆ ಶುಭವನ್ನು ಹಾರೈಸಿದರು. ಸಂಸ್ಥೆಯ ಅಧ್ಯಕ್ಷ ಶ್ರೀ ಜಿ. ವಸಂತ ಅವರು ಸುವರ್ಣ ಮಹೋತ್ಸವದ ವರದಿ ಓದಿದರು. ಶ್ರೀ ಅಬುಸಾಲಿಯವರು ಸಂದೇಶ ವಾಚನ ಮಾಡಿದರು. ಮಂಗಳೂರು ನಗರ ಸಭಾಪತಿ ಶ್ರೀ ವಾಮನ ಕೊಡಿಯಾಲ್‌ಬೈಲ್‌ರವರು ಸಂಸ್ಮರಣ ಸಂಚಿಕೆ ಸ್ನೇಹಿತವನ್ನು ಬಿಡುಗಡೆ ಮಾಡಿದರು.

ಸಂಘದ ಅಭಿವೃದ್ಧಿಗಾಗಿ ಉತ್ತಮ ಸೇವೆಸಲ್ಲಿಸಿದ ಶ್ರೀ ಎಂ. ಪಿ. ಕಿಣಿಯವರಿಗೆ ಸುವರ್ಣ ಪದಕವನ್ನೂ, ಜನಪ್ರಿಯ ತುಳುನಾಟಕ ರಚಯಿತರಾದ ಡಾ। ಸಂಜೀವ ದಂಡಕೇರಿಯವರಿಗೆ ಪ್ರಶಸ್ತಿಯನ್ನೂ ಸಚಿವರು ನೀಡಿದರು.

ಅಧ್ಯಕ್ಷರ ಭಾಷಣದ ಬಳಿಕ ಕಾರ್ಯದರ್ಶಿ ಶ್ರೀ ಆರ್. ಎಸ್. ಶೆಟ್ಟರು ವಂದಿಸಿದರು. ಸಮಾರಂಭದ ಅಂಗವಾಗಿ ವಿವಿಧ ಕಾರ್ಯಕ್ರಮಗಳಿದ್ದುವು. ಮಧ್ಯಾಹ್ನ ಮೋತಿ ಮಹಲ್‌ನಲ್ಲಿ ಭೋಜನಕೂಟವಿತ್ತು.

HOTEL SATKAR

Boarding, Lodging & Restaurant
behind Corporation Office,
9 Mission Road — Bangalore—27

Phone No.— 1 72303 / 2 72304 Grams: HOST SATKAR

Vegetarian Cuisine

Attached Bath Rooms and Phones.
Running H and C water

Moderate Charges

Railway Station, Laundry, Post office and Entertainment Area Nearby.
Large airy Rooms; Roof garden
Quiet, Calm Atmosphere
Personalised Service.

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕೊಲಿಟಿಯಲ್ಲಿ, ಸ್ಯಾಜನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಪ್ರತ್ಯೇಕತೆ ಮರೆಯುತ್ತಿರುವ

ಹೊಸ ರಾಜ್ಯ ಮಿಝೋರಾಮ

ಒಡೆದು ಆಳುವವದರಲ್ಲಿ ಪಳಗಿದ್ದ ಧೂರ್ತ ಬ್ರಿಟಿಷರು ಭಾರತವನ್ನು ಭಿನ್ನ ಭಿನ್ನ ಭಾಗಗಳನ್ನಾಗಿ ವಿಂಗಡಿಸಿದ್ದರು. ಗುಡ್ಡಗಾಡಿನ ಬಳಪ್ರದೇಶದಲ್ಲಿರುವ ಜನರಿಗೂ ಬಯಲು ಪ್ರದೇಶದ ಜನರಿಗೂ ಸಂಪರ್ಕವಿಲ್ಲದಂತೆ ಮಾಡಲು ಅವರು ಬಹಳ ಪ್ರಯತ್ನಿಸಿದ್ದರು. ಕೆಲವು ಸ್ಥಳಗಳನ್ನಂತೂ ರಕ್ಷಣೆಗೊಳಗಾಗಿರುವ ಪ್ರದೇಶಗಳೆಂದು ಹೆಸರಿಟ್ಟು ಅಲ್ಲಿಗೆ ಬಯಲು ಪ್ರದೇಶದಿಂದ ಯಾರೂ ಹೋಗದಂತೆ ಅವರು ಎಚ್ಚರಿಕೆ ವಹಿಸಿಕೊಂಡಿದ್ದರು. ಗುಡ್ಡಗಾಡಿನ ಜನರು ಬೇರೆ ಜನಾಂಗಕ್ಕೆ ಸೇರಿದವರೆಂದು ಪ್ರಚಾರ ಮಾಡಲಾಯಿತು. ತಮ್ಮ ಕ್ರಿಸ್ತೀಯ ಮತಪ್ರಸಾರಕರ ಮೂಲಕ ಈ ಮುಗ್ಧ ಜನತೆಯನ್ನು ಕ್ರಿಸ್ತೀಯರನ್ನಾಗಿಸಲು ಅವರು ಭಾರಿ ತಂತ್ರವನ್ನು ಹೂಡಿದ್ದರು. ತಮ್ಮ ತಂತ್ರಕ್ಕೆ ಅವರು ಅಸ್ಸಾಮನ್ನು ಆರಿಸಿಕೊಂಡಿದ್ದರು. ಅದಕ್ಕೆ ಅಲ್ಲಿಯ ಭೂಸನ್ನಿವೇಶವೇ ಕಾರಣ. ಅಷ್ಟೇ ಅಲ್ಲ, ಈ ಗುಡ್ಡಗಾಡಿನ ಜನರನ್ನು ವಿಂಗಡಿಸಿ ಆಳಲು ಅವರು ಶ್ರಮವಹಿಸಿದರು. ಅದೇನು ಮಾಡಿದರೂ ಈ ನೆಲದಿಂದ ಕಾಲ್ತೆಗೆಯಲೇ ಬೇಕಾಗುತ್ತದೆಂಬುದನ್ನು ತಿಳಿದುಕೊಂಡ ಬ್ರಿಟಿಷರು ಈ ಜನರ ನಡುವೆ ವಿಭಜನೆಯ ಪ್ರತ್ಯೇಕತೆಯ ವಿಷ ಬೀಜವನ್ನು ಬಿತ್ತಿದರು. ಈ ಗುಡ್ಡಗಾಡಿನ ಜನರು ಭಾರತಕ್ಕೆ ಸೇರಿದವರಲ್ಲವೆಂದು ವಿಂಗಡಿಸಲು ಅವರು ಆಸಕ್ತಿ ವಹಿಸಿದರು. ಕ್ರಿಸ್ತೀಯ ಮತ ಪ್ರಸಾರಕರ ಬಲೆಗೆ ಬಿದ್ದಿರುವ ಜನರು ಅವರಂದಂತೆ ಆಡಿದರೂ, ಉಳಿದ ಜನರು ತಾವು ಹಿಂದುಗಳಲ್ಲವೆನ್ನಲು ಮುಂದಕ್ಕೆ ಬರಲಿಲ್ಲ. ಇದರಿಂದಾಗಿ ಗುಡ್ಡಗಾಡಿನ ಜನರನ್ನು ಪ್ರತ್ಯೇಕಿಸಲಿಕ್ಕಾಗದೆ, ಅವರೇ ಇಲ್ಲಿಂದ ಹೋಗ ಬೇಕಾದ ದಿನ ಬಂತು. ತಾವು ಹೋದ ಮೇಲೆ ಕೂಡಾ ಇವರು ಒಟ್ಟಾಗಿರಬಾರದೆಂದು, ಕ್ರಿಸ್ತೀಯ ಗುಡ್ಡಗಾಡಿನ ಜನರು ಬಂಡೇಳುವಂತೆ ಶಸ್ತ್ರ ಸರಬರಾಯಿ ಶಸ್ತ್ರ ಶಿಕ್ಷಣವನ್ನು ಕೊಟ್ಟಿದ್ದರು.

ಅವರನ್ನು ಬಯಲು ಪ್ರದೇಶದ ಜನರಿಂದ ಪ್ರತ್ಯೇಕವಾಗಿಡುವ ಸಲುವಾಗಿ ಅಲ್ಲಿಗೆ ಹೋಗದಂತೆ ಮಾಡಲು ರಸ್ತೆಗಳನ್ನೇ ಮಾಡಿರಲಿಲ್ಲ. ಗುಡ್ಡಗಾಡಿನ ಜನರಿಗೆ ಬ್ರಿಟಿಷರ ರಾಜಮಾರ್ಗದ ಆವಶ್ಯಕತೆ ಇಲ್ಲವಾದರೂ ಪಾಕಿಸ್ತಾನ ನಿರ್ಮಾಣದ ಕಾರಣ ಅವರು ಬೋನಿನಲ್ಲಿ ಸಿಕ್ಕಿಕೊಂಡಂತಾಯಿತು. ರಸ್ತೆ ನಿರ್ಮಾಣ ಕಾರ್ಯ ಸುಲಭ ಸಾಧ್ಯವೂ ಅಲ್ಲ. ಇಂದು ಈ ದಿಸೆಯಲ್ಲಿ ನಮ್ಮ ಸರ್ಕಾರ ದೃಷ್ಟಿಹರಿಸಿದೆಯಾದರೂ ಭೂನೆಲೆಯ ಕಾರಣ ಹಾಗೂ ಅಲ್ಲಿಯ ಕೆಲವು ಜನರಲ್ಲಿ ವಿದ್ವೇಷದ ಜ್ವಾಲೆ ಇರುವದರಿಂದ ಅದು ಬಹಳಷ್ಟು ಪ್ರಯಾಸದ ಕೆಲಸವಾಗಿದೆ.

ಈ ಗುಡ್ಡಗಾಡಿನ ಜನರು ಗುಂಪುಗುಂಪಾಗಿ ಜೀವಿಸುತ್ತಾರೆ. ತಮ್ಮ ಗುಂಪಿನ ನಾಯಕನ ಮೇಲೆ ಕೋಪ ಬಂದಲ್ಲಿ, ಹಾಗೂ ಇನ್ನಿತರ ಕಾರಣದಿಂದ ಒಂದು ಗುಂಪಿನಲ್ಲಿರುವವರು ಇನ್ನೊಂದು ಗುಂಪಿಗೆ ಹೋಗುವದುಂಟು. ಇವರಲ್ಲಿ ನಾಯಕನ ಸ್ಥಾನಮಾನವನ್ನು ಅವನ ಬಳಿ ಇರುವ ಜನಸಂಖ್ಯೆಯ ಮೇಲೆ ನಿರ್ಧರಿಸಲಾಗುತ್ತದೆ. ಹಾಗಿರುವುದರಿಂದ ಪ್ರತಿಯೊರ್ವ ನಾಯಕನು ತನ್ನ ಗುಂಪಿನಿಂದ ಯಾರೂ ಹೊರಹೋಗದಂತೆ ಜಾಗರೂಕತೆ ವಹಿಸುವದುಂಟು. ಇದು ಪಕ್ಷಾಂತರಕ್ಕೆ ಮೂಲವಿರಬಹುದು.

ವ್ಯಕ್ತಿಗಳು ಗುಂಪು ಬದಲಾಯಿಸುತ್ತಾರೆಯೇ ವಿನಃ ಗುಂಪು ಒಂದೆಡೆಯಿಂದ ಇನ್ನೊಂದೆಡೆಗೆ ವಲಸೆಹೋಗುವದು ಬಹಳ ಕಡಿಮೆ. ಒಮ್ಮೆ ಕೃಷಿಮಾಡಿದ ನೆಲವನ್ನು ಬಿಟ್ಟುಹೋಗಲು ಅವರು ಇಚ್ಛಿಸದುವದಿಲ್ಲ. ಅದೂ ಅಲ್ಲದೆ ತಮ್ಮ ಹಿರಿಯರ ಸ್ಮಶಾನವನ್ನು ಬಿಟ್ಟುಕೊಡಲು ಅವರು ಸಿದ್ಧರಿರುವದಿಲ್ಲ. ಸ್ಮಶಾನಕ್ಕೆ ಅವರಲ್ಲಿ ವಿಶೇಷ ಗೌರವವಿದೆ.

ಈ ಅಭ್ಯಾಸ ಬ್ರಿಟಿಷರಿಗೂ ತಲೆನೋವಾಗಿತ್ತು. ಅವರಿರುವ ಪ್ರದೇಶಗಳಲ್ಲಿ ಬಿದಿರು ವಿಶೇಷವಾಗಿ ಬೆಳೆಯುತ್ತದೆ. ಬಿದಿರು ಸುಮಾರು ಐವತ್ತು ವರ್ಷಗಳಿಗೊಮ್ಮೆ ಹೂಬಿಡುತ್ತದೆ. ಹೂವಿನ ಪರಿಮಳಕ್ಕೆ ಎಲ್ಲಿಲ್ಲದ ಇಲಿಗಳು ಅಲ್ಲಿಗೆ ಬರುತ್ತವೆ. ಅವು ಅವರ ಬೆಳೆಗಳನ್ನು ನಾಶ ಮಾಡುತ್ತವೆ. ಅಂತಹ ಸಮಯದಲ್ಲೂ ಅವರು ವಲಸೆಹೋಗುತ್ತಿರಲಿಲ್ಲ.

ಇಂತಹ ಜನರನ್ನು ದುರುಪಯೋಗಪಡಿಸಿಕೊಳ್ಳಲು ಕೆಲವರು ಹುಟ್ಟುವದುಂಟು. ೧೯೫೯ರಲ್ಲಿ ಅಲ್ಲಿ ಬರಗಾಲ ಬಂತು. ಸರಕಾರವು ಸಹಾಯವನ್ನು ಕಳುಹಿಸಿತು. ಅದಕ್ಕಾಗಿ ಮಿಝೊ ಬರಗಾಲ ಸಮಿತಿಯೊಂದನ್ನು ರಚಿಸಲಾಗಿತ್ತು. ಹಳ್ಳಿಮೂಲೆಗಳಲ್ಲೂ ಅದರ ಶಾಖೆಗಳಿದ್ದುವು. ಲಾಲ್‌ಡೆಂಗಾನೆಂಬ ಮಾಜಿ ಸೈನಿಕನೊಬ್ಬನು ಅದರ ನೇತೃತ್ವವನ್ನು ವಹಿಸಿಕೊಂಡನು. ಅವನು ಉತ್ತಮ ವಾಕ್ಪಟು; ಅಲ್ಲದೆ ಒಳ್ಳೆಯ ವ್ಯವಹಾರಿಯನು. ಸೇನೆಯಲ್ಲಿ ಹವಾಲ್ದಾರನಾಗಿದ್ದನು. ಕ್ಷಾಮ ನಿವಾರಣಾ ಪ್ರಯತ್ನದಲ್ಲಿ ಪ್ರಖ್ಯಾತನಾದುದೇ ತಡ, ಅವನು ಒಂದು ರಾಜಕೀಯ ಪಕ್ಷವನ್ನೇ ಕಟ್ಟಿದನು. ಅದಕ್ಕೆ ಮಿಝೋ ರಾಷ್ಟ್ರೀಯ ಸಮಿತಿಯೆಂದು ಹೆಸರಿಟ್ಟನು. ಅದರಲ್ಲೂ ಹೆಸರು ಪ್ರಸಿದ್ಧಿ ಹೊಂದಿದುದೇ ತಡ, ಅವನು ಒಂದು ಸೇನೆ ಕಟ್ಟಲು ಸಿದ್ಧನಾದನು. ಸೇನೆಗೆ ಮಿಝೋ ರಾಷ್ಟ್ರೀಯ ಸೇನೆಯೆಂದು ನಾಮಕರಣ ಮಾಡಿದನು. ಅವನು ಆಗಾಗ ಅಂದಿನ ಪೂರ್ವಪಾಕಿಸ್ತಾನಕ್ಕೆ ಹೋಗಿ ಗುಪ್ತವಾಗಿ ಶಸ್ತ್ರಾಸ್ತ್ರಗಳನ್ನು ತರುತ್ತಿದ್ದನು. ಇವೆಲ್ಲವೂ ಹುಚ್ಚಾಟವೆಂದೂ, ಮಿಝೋ ಕ್ರಿಸ್ತೀಯರನ್ನು ಸುಲಭವಾಗಿ ಬುಟ್ಟಿಗೆ ಹಾಕಿಕೊಳ್ಳಬಹುದೆಂದು ಸರಕಾರ ಸುಮ್ಮನಿತ್ತು. ಸರ್ವಸಿದ್ಧತೆಗಳನ್ನು ನಡೆಸಿದ ಲಾಲ್‌ಡೆಂಗನು ೧೯-೨-೧೯೬೬ರಂದು ಐಜಾಲಿನಲ್ಲಿರುವ ಜಿಲ್ಲಾಧಿಕಾರಿಯ ಕಛೇರಿಯನ್ನು ಕೈವಶಪಡಿಸಿಕೊಂಡು ಅದರ ಮೇಲೆ ತನ್ನ ಧ್ವಜವನ್ನು ಹಾರಿಸಿದನು.

ಈ ವಿಷಯ ದಿಲ್ಲಿಗೆ ಸರಿಯಾಗಿ ತಿಳಿದು ಬಂದು, ಅದು ಕಣ್ತೆರೆಯಲು ಒಂದು ವರ್ಷ ಕಾಲ ಬೇಕಾಯಿತು. ಅಲ್ಲಿಯವರೆಗೂ ತುಷ್ಟೀಕರಣದ ದಾರಿಯಲ್ಲೇ ದಿಲ್ಲಿ ಸಾಗಿತ್ತು. ಅಸ್ಸಾಂ ತಸ್ತು ಅಂದಿತ್ತು. ಮೆಲ್ಲ ಮೆಲ್ಲನೆ ನಮ್ಮ ಸೇನೆ ಅಲ್ಲಿಗೆ ಹೋಯಿತು. ಲಾಲ್‌ಡೆಂಗಾನ ಅನುಯಾಯಿಗಳು ಅದನ್ನೆದುರಿಸಿದರು. ಆದರೂ ಭೂಸ್ವರೂಪಣೆಯ ಹೆಸರಿನಲ್ಲಿ ಅವರನ್ನು ಅಲ್ಲಲ್ಲಿ ದೊಡ್ಡ ದೊಡ್ಡ ಗುಂಪುಗಳನ್ನಾಗಿ ಮಾಡಲು ಸೇನೆ ಪ್ರಯತ್ನಿಸಿತು. ದೊಡ್ಡ ಸಮೂಹವೊಂದು ಸೇರಿದಾಗ ವಿದ್ಯುಚ್ಛಕ್ತಿ, ಶಿಕ್ಷಣ, ಶಾಲೆ ಮುಂತಾದ ವಿಷಯಗಳಿಗೆ ಅನುಕೂಲವಾಗುತ್ತದೆ. ಕಮ್ಮಿ ಬೆಲೆಯ ಅಂಗಡಿಗಳನ್ನು ಅಲ್ಲಲ್ಲಿ ತೆರೆಯಲಾಯಿತು. ಇತ್ತ ಪೂರ್ವ ಪಾಕಿಸ್ತಾನವು ಸ್ವತಂತ್ರವಾಯಿತು. ತನ್ನ ಬೇಳೆ ಬೇಯದಿರುವದನ್ನು ಕಂಡ ಲಾಲ್‌ಡೆಂಗಾ ತನ್ನ ಅನುಯಾಯಿಗಳೊಂದಿಗೆ ಬರ್ಮಾದ ಗುಡ್ಡಗಾಡಿನಲ್ಲಿ ಅವಿತುಕೊಂಡಿರಬಹುದು. ಲಾಲ್‌ಡೆಂಗನು ಸ್ವತಂತ್ರ ಮಿಝೋರಾಂ ರಾಜ್ಯವನ್ನು ಕೇಳುತ್ತಿದ್ದ ಕಾರಣ ಕೇಂದ್ರವು ಮಿಝೋರಾಮನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಿತು. ಈಗ ಅದನ್ನು ಪ್ರತ್ಯೇಕ ರಾಜ್ಯವೆಂದು ಘೋಷಿಸಲಾಗಿದೆ. ಇದರ ವಿಸ್ತೀರ್ಣ ೮,೫೦೦ ಚದರ ಮೈಲು. ಇದು ಗುಡ್ಡಗಾಡು ಪ್ರದೇಶವಲ್ಲದೆ, ಇಲ್ಲಿಯ ಮಣ್ಣಿನಲ್ಲಿ ನೀರು ನಿಲ್ಲದ ಕಾರಣ ಬೇಸಾಯಕ್ಕೆ ಸಾಧ್ಯವಿರುವದಿಲ್ಲ. ಇಲ್ಲಿ ಲಿಂಬೆ, ಕಿತ್ತಳೆ, ಶುಂಠಿ, ಪಪ್ಪಾಯಿ ಮುಂತಾದವುಗಳನ್ನು ಬೆಳೆಸಲಾಗುತ್ತದೆ. ಗುಡಿ ಕೈಗಾರಿಕೆಗಳಿಗೆ ಏರ್ಪಾಡು ಮಾಡಿಕೊಡಲಾಗುತ್ತಿದೆ. ಹೀಗೆ ಕ್ರಮಶಃ ಅವರನ್ನು ಕೇಂದ್ರ ಬಿಂದುವಿನತ್ತ ಸೆಳೆದುಕೊಳ್ಳಲಾಗುತ್ತಿದೆ. ಇವರ ತಲೆಗೆ ಟೊಪ್ಪಿ ಇಡಲು ಕಾಂಗ್ರೆಸ್ಸ್ ಪ್ರಯತ್ನಿಸುತ್ತಿದೆಯಾದರೂ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಲ್ಲಿಯ ಮಿಝೋ ಸಮಿತಿಯೇ ಬಹುಮತವನ್ನು ಪಡೆದಿರುತ್ತದೆ.

(ಆಧಾರ: ಪಾಂಚಜನ್ಯ ಸಾಪ್ತಾಹಿಕದ ಲೇಖನ)

—ಶ್ರೀ ಶಿವಶಂಕರ.

●●

ಕ್ಕೆ ಬಿಟ್ಟು ಕೊಡುವವರು ಮತ್ತೆ ಕೆಲವರು. ಇದು ಶೋಭನೀಯವಾಗದು. ಸಮಾಜವಾದದ ದೀಕ್ಷೆ ಹೊತ್ತವರು ತಮಗಿರುವ ಶಾಸನಾಧಿಕಾರವನ್ನು ಸಂಪೂರ್ಣ ಉಪಯೋಗಿಸಬೇಕು; ಸಮಾಜವಾದದ ಅನುಷ್ಠಾನಕ್ಕೆ ಕ್ಷಿಪ್ರ ಶಾಸನ ಮಾಡಬೇಕು. ಮೀನಮೇಷವೆಣಿಸುವಷ್ಟರಲ್ಲಿ ಪರಿಸ್ಥಿತಿಯೇ ಬದಲಾಗಿ ಹೋದೀತು. ಈ ಶಾಸನಗಳಿಂದ ಯಾರಿಗೂ ಯಾವ ರೀತಿಯ ಅನ್ಯಾಯತೆಯೂ ದೊರೆಯಬಾರದು.

●●

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 441/1971

ವಾದಿ—ನರಸಮ್ಮ ಶೆಡ್ತಿ

ಪ್ರತಿವಾದಿರು—1. ಪದ್ದಕ್ಕ ಶೆಡ್ತಿ, 2. ಹಿರಿಯಣ್ಣ ಸೆಟ್ಟಿ, 3 ಸಂಜೀವ ಸೆಟ್ಟಿ, 4. ಗುಲಾಬಿ ಸೆಡ್ತಿ, 5. ಗಿರಿಜ ಸೆಡ್ತಿ, 6. ದಾರಮ್ಮ ಸೆಡ್ತಿ.

ಉಡುಪಿ ತಾಲ್ಲೂ ಹೊಸಾಳ ಗ್ರಾಮದಲ್ಲಿರುವ ಪದ್ದಕ್ಕ ಸೆಡ್ತಿರ ಮಗ ಸದ್ರಿ ದಾವೆಯ 3ನೇ ಪ್ರತಿವಾದಿ ಸಂಜೀವ ಸೆಟ್ರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ –

ನೀವು ವಗ್ಯೆರೆ ಪ್ರತಿವಾದಿರ ಮೇಲೆ, ವಾದಿಳು ದಾವಾ A ಸೆಡ್ಯೂಲ್ ಆಸ್ತಿಗಳ ರಿಡೆಂಶನ್ (redemption)ಮತ್ತು ಸ್ವಾಧೀನತೆ ವಗ್ಯೆರೆ ನಿವೃತ್ತಿಗಳನ್ನು ಕೇಳಿ ದಾಖಲ್ಲು ಮಾಡಿದ ಮೇಲಿನ ದಾವಾ ಮೇಲ್ಕಾಣಿಸಿದ ಕೋರ್ಟಿನಲ್ಲಿ ತಾರೀಖು 5–7–1972ನೇ ದಿನ ಬೆಳಿಗ್ಗೆ 11 ಗಂಟೆಗೆ ತನ್ಕಿಗೆಯಿಡೋಣವಾಗಿದೆ ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸೋಣಾಗಿದೆ.

B. S. Shetty
B. A; B. L.
Vakil for Plaintiff
Coondapoor, 4-6-72

ಕುಂದಾಪುರ II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 2399/1971

ಶಿವ ಬಿಸ್ಟ—ಅರ್ಜಿದಾರ

ದೇವಡಿಗ ಕುಪ್ಪ ಸಹಾ - ಎದ್ರಿರು

ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಸುವುದೇನೆಂದ್ರೆ —

1. ದೇವಡಿಗ ಕುಪ್ಪ— ಮೃತ ಹೆಂಗ್ಸಿನ ತಮ್ಮ, 2. ಸುಬ್ಬಿ ಹೆಂಗ್ಸು, 3. ಗುರುವಮ್ಮ — ಮರ್ತ ಹೆಂಗ್ಸಿನ ಮಕ್ಕಳು

ಕಂಬದ ಕೋಣೆ ಗ್ರಾಮದಲ್ಲಿರುವವರು

ಅರ್ಜಿದಾರನಿಗೆ ಎದ್ರಿರಿಂದ ತಾ. 31.3.70 (ಸೌಮ್ಯ)ಕ್ಕೆ ಬರತಕ್ಕ ಗೇಣಿ ಲೆಕ್ಕಾಚಾರ 303–12 ಮತ್ತು ಬಡ್ಡಿ ಕೂಡಾ ಬಸೂಲುಮಾಡಿಕೊಳ್ಳುವರೆ ಅರ್ಜಿದಾರರು ಎದ್ರಿರ ಮೇಲೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲ್ಲು ಮಾಡಿದ ರೆಂಟ್ ಅರ್ಜಿಯು ತಾ. 30–6–72ಕ್ಕೆ ಆಖೈರ ತನ್ಕಿಗೆ ಯಿಡೋಣಾಗಿಯದೆ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಸ್ವತಹಾ ವ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ತಿಳಿಯಪಡಿಸಿದೆ.

M. M. Hebbar
Advocate for Petitioner
Kundapur, Date 8—6—72

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂ ಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಜನವಾಣಿ—

ಉಡುಪಿಯ ಒಳಮಾರ್ಗಗಳಲ್ಲಿ ದೀಪವುರಿಯುವುದಿಲ್ಲ

ಎಂ.ಎಸ್.ಇ.ಬಿ. ರಾಜ್ಯಕ್ಕೆಲ್ಲ ವಿದ್ಯುತ್ ಸರಬರಾಜು ಮಾಡುವ ಮಂಡಳಿ. ಇತ್ತೀಗ ಮಳೆಗಾಲ ಆರಂಭವಾಯ್ತು. ಅಂದರೆ, ವಿದ್ಯುತ್ತಿನ ಕಣ್ಣುಮುಚ್ಚಾಲೆಯಾಟ ಪ್ರೇಕ್ಷಣೀಯವೇ. ಮನೆದೀಪವಿದ್ದರೆ ಬೀದಿದೀಪವಿಲ್ಲ. ಬೀದಿ ದೀಪವಿದ್ದರೆ ಮನೆದೀಪವಿಲ್ಲ. ಭಾನುವಾರ ಆರಾಮವಾಗಿ ಸುಖದಿ ಕುಳಿತು ರೇಡಿಯೋ ಕೇಳೋಣವೆಂದರೆ ಆದು ಸರಬರಾಯಿಗೆ ಏನಾದರೂ ನೆಪದಲ್ಲಿ ಮೋತಾದಲ್ಲಿ ಸರ್ವೇಸಾಮಾನ್ಯ ಘಾನುವಾರಿಸರಬರಾಯಿಗೆ ಮೋತಾ ಆಗಲಿಲ್ಲವೆಂದರೆ ದೇವರು ಬಳಕೆದಾರನ ಮೇಲೆ ಪ್ರಸನ್ನನಾಗಿದ್ದಾನೆಂದೇ ಅರ್ಥ.

ಉಡುಪಿ ನಗರದ ಒಳರಸ್ತೆಗಳಲ್ಲಿ ತಿರುಗಾಡುವ ಯೋಗವಿದ್ದವರಿಗೆ ಈಗ್ಗೆ ಕೆಲದಿನಗಳಿಂದ ಗ್ರಹಚಾರ. ಇಲ್ಲಿ ದೀಪದ ಕಂಬಗಳೇನೋ ಇವೆ; ಬಲ್ಬುಗಳೂ ಇವೆ; ದೀಪ ಮಾತ್ರವಿಲ್ಲ. ಇದು ಒಂದೆರಡು ಒಳಬೀದಿಗಳ ಕತೆಯಲ್ಲ! ಉದಾಹರಣೆಗೆ ಬೀಡಿನಗುಡ್ಡೆ-ಅಲೆವೂರು ರಸ್ತೆಯೊಂದು ಇತ್ತೀಚೆಗೆ ದಾರಿಹೋಕರೊಬ್ಬರು ಅಲ್ಲಿ ಕನ್ನಡಿಹಾವನ್ನು ಕಂಡರಂತೆ. ಕೈಯಲ್ಲಿ ಟಾರ್ಚು ಇದ್ದುದರಿಂದ ಅದನ್ನು ಮೆಟ್ಟಲಿಲ್ಲವಂತೆ. ಕುಂಜಿಬೆಟ್ಟು - ಗುಂಡಿಬೈಲು ವಾರ್ಡುಗಳ ಒಳದಾರಿಗಳ ಹಣೆಬರಹವೂ ಇದಕ್ಕಿಂತ ಬೇರೆಯಲ್ಲ. ಇದೇ ಉಳಿದೆಡೆಯೂ ಇರಬಹುದು.

ಬೀದಿ ದೀಪಗಳು ಸರಿಯಾಗಿ ಉರಿಯುತ್ತವೆಯೋ ಇಲ್ಲವೇ ಎಂದು ನೋಡಿಕೊಳ್ಳುವ ಜವಾಬುದಾರಿ ಯಾರದ್ದು? ಪ್ರಾಯಃ ನಗರಸಭೆಯದ್ದಿರಬೇಕು. ಅದು ತನ್ನ ಹೊಣೆಗಾರಿಕೆಯನ್ನು ವಿದ್ಯುನ್ಮಂಡಳಿಗೆ ಒಪ್ಪಿಸಿಬಿಟ್ಟಿದೆಯೆ? ಆದರೆ ನಗರಸಭೆಯಾಗಲೀ ವಿದ್ಯುನ್ಮಂಡಳಿಯಾಗಲೀ ಈ ಕಡೆಗೆ ಗಮನ ಹರಿಸಿದ್ದಿಲ್ಲ. ಏಕೆಂದರೆ, ಈ ಅಂಧಂತಮಸ್ಸಿಗೆ ಹಲವು ದಿನಗಳು ನಡೆದುವು.

ಬೀದಿ ದೀಪಗಳನ್ನು ನಮ್ಮ ನಗರಸಭೆ ಅತ್ಯಂತ ಉದಾರವಾಗಿ ಹಾಕಿಸುತ್ತದೆ. ಪ್ರತಿಷ್ಠಿತರ ಮನೆ ಜಗಲಿಯ ಕಂಬಕ್ಕೂ ದೀಪ ಬರುತ್ತಿದೆ. ಸ್ವಾಗತಾರ್ಹವೇ. ಆದರೆ ಜನತೆಯ ಉಪಯೋಗಕ್ಕಾಗಿ ಹಾಕಿಸಿದ ದೀಪಗಳು ಉರಿಯುತ್ತವೆಯೋ ಇಲ್ಲವೇ ನೋಡುವವರಾರು? ಮುಖ್ಯ ಮಾರ್ಗದ ಟ್ಯೂಬ್‌ಲೈಟುಗಳೇ ಉರಿಯದ ಉದಾಹರಣೆಗಳುಂಟು. ಎಂ.ಜಿ.ಎಂ. ಕಾಲೇಜಿನೆದುರು ಬಸ್ ನಿಲ್ದಾಣದ ಬಳಿಯ ಟ್ಯೂಬ್ ಉರಿಯದೆ ಎರಡು ವಾರವಾಯ್ತು.

ಪುರಪಿತೃಗಳು ರಾಜ್ಯ—ದೇಶಪಿತೃಗಳ ದಾರಿಯನ್ನು ತುಳಿಯತೊಡಗಿದ್ದಾರೆಯೆ? ನಗರದ ಒಳದಾರಿಗಳಲ್ಲಿ ಕಾಲ್ನಡೆಯಿಂದ ಅಮಾವಾಸ್ಯೆಯ ರಾತ್ರಿ ನಡೆದು ನೋಡಿದರೆ ವಸ್ತುಸ್ಥಿತಿ ವೇದ್ಯವಾಗುತ್ತದೆ.

ಈ ದುಸ್ಥಿತಿ ತಪ್ಪಬೇಕು. ಹಾಕಿಸಿದ ದೀಪಗಳೆಲ್ಲವೂ ರಾತ್ರಿಹೊತ್ತು ಉರಿದು, ಅದರ ಲಾಭ ಪಾದಚಾರಿಗಳಿಗೆ ದೊರೆಯುವಂತಾಗಬೇಕು. ಈ ಬಗ್ಗೆ ಸೂಕ್ತ ವ್ಯವಸ್ಥೆಯಿಲ್ಲವಾದರೆ, ಹೊಸ ವ್ಯವಸ್ಥೆಯನ್ನಾದರೂ ಮಾಡಬೇಕು. ವ್ಯವಸ್ಥೆಯಿದ್ದಿದ್ದರೆ, ಅವ್ಯವಸ್ಥೆಯನ್ನಾದರೂ ದೂರ ಮಾಡಬೇಕು.

ದೀಪಗಳು ಮುಖ್ಯ ರಸ್ತೆಗಳಿಗಿಂತ ಒಳದಾರಿಗಳಲ್ಲಿ ಹೆಚ್ಚು ಉಪಕಾರಿ—ಅವಶ್ಯಕವಲ್ಲವೆ?

—ಮೋಹನ.

●●

ಪುತ್ತೂರು ಟೌನ್ ಬ್ಯಾಂಕ್ ಸಂಭ್ರಮದ ವಜ್ರೋತ್ಸವ

ತಾ. 6ರಂದು ಪುತ್ತೂರು ಕೋಪರೇಟಿವ್ ಟೌನ್ ಬ್ಯಾಂಕಿನ ವಜ್ರ ಮಹೋತ್ಸವವು ಕನ್ನಡದ ಖ್ಯಾತ ಸಾಹಿತಿ ಡಾ। ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನೆರವೇರಿದಾಗ ರಾಜ್ಯದ ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ ರಾಮಮೋಹನ ರಾಯರು ಬ್ಯಾಂಕು ಸಾಗಿ ಬಂದ ದಾರಿಯ ಪರಿಚಯ ಮಾಡಿಸಿದರು. ಬ್ಯಾಂಕಿನ ಆಡಳಿತ ಮಂಡಳಿಯವರು ವಜ್ರೋತ್ಸವದ ಸ್ಮಾರಕವಾಗಿ 5000 ರೂಪಾಯಿಗಳನ್ನು ಮೀಸಲಾಗಿರಿಸಿ ಅದರ ಬಡ್ಡಿಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ವಜ್ರೋತ್ಸವ ಸ್ಮಾರಕ ವಿದ್ಯಾರ್ಥಿ ವೇತನ ನೀಡಲು ನಿರ್ಧರಿಸಿರುವುದನ್ನು ಅವರು ತಿಳಿಸಿದರು.

ಸಚಿವ ಶ್ರೀ ಆಳ್ವರು ಬ್ಯಾಂಕು ಕಟ್ಟಿಸಿದ ನೂತನ ಗೋದಾಮನ್ನು ಉದ್ಘಾಟಿಸಿ ಬ್ಯಾಂಕಿನ ಪ್ರಗತಿಗೆ ಮೆಚ್ಚಿಗೆ ಸೂಚಿಸಿದರು.

ದ. ಕ. ಜಿಲ್ಲಾ ಕೇಂದ್ರ ಸಹಕಾರೀ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ಬ್ಯಾಂಕಿನ ಸರ್ವತೋಮುಖ ಏಳಿಗೆಗೆ ಕಾರಣರಾದ ಶ್ರೀ ಬೈಂದೂರು ಪ್ರಭಾಕರ ರಾಯರ ತೈಲಚಿತ್ರವನ್ನು ಅನಾವರಣಗೊಳಿಸಿದರು.

ಜಿಲ್ಲಾ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಅಧ್ಯಕ್ಷ ಶ್ರೀ ವಾರಣಾಸಿ ಸುಬ್ರಾಯ ಭಟ್ಟರು ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿ ಬ್ಯಾಂಕಿನ ಪ್ರಗತಿಗೆ ಮೆಚ್ಚುಗೆ ಸೂಚಿಸಿದರು.

ಡಾ। ಕಾರಂತರು ಮಾತಾಡಿ ಪುತ್ತೂರಿನ ಜನತೆಗೆ 60 ವರುಷಗಳಿಂದ ಉತ್ತಮ ಸೇವೆ ಸಲ್ಲಿಸಿ ವಜ್ರ ಮಹೋತ್ಸವವಾಚರಿಸುತ್ತಿರುವ ಬ್ಯಾಂಕಿನ ಏಳಿಗೆಗಾಗಿ ದುಡಿದವರ ಸೇವೆಯನ್ನು ಸ್ಮರಿಸಿ ಸಂಸ್ಥೆಗೆ ಶ್ರೇಯಸ್ಸನ್ನು ಹಾರೈಸಿದರು.

ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಎಚ್. ಸೀತಾರಾಮ ಭಟ್ಟರು ಅಂತ್ಯದಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

ಶ್ರೀ ಬಿ. ಮಂಜುನಾಥ ಪೈಯವರ ಷಷ್ಟ್ಯಬ್ದಿ ಸಮಾರಂಭ

ಭಾರತ ಬೀಡಿ ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ನ ಶ್ರೀ ಬಿ ಮಂಜುನಾಥ ಪೈಯವರ ಷಷ್ಟ್ಯಬ್ದಿ ಸಮಾರಂಭವು ಮಂಗಳೂರಿನ ಕದ್ರಿ ರೋಡ್‌ನಲ್ಲಿರುವ ಅವರ ನಿವಾಸದಲ್ಲಿ ತಾ. 5ರಂದು ವಿವಿಧ ಧಾರ್ಮಿಕ ಕಾರ್ಯಗಳೊಡನೆ, ಮಾರ್ಕಂಡೇಯ ಹವನ ಪೂರ್ವಕ ವಿಜೃಂಭಣೆಯಿಂದ ಜರಗಿತು. ಕಾಶೀ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಮುಚ್ಚರಣರು ಸನ್ನಿಹಿತರಾಗಿ ಯೂಗಾಂತ್ಯದಲ್ಲಿ ಅನುಗ್ರಹ ಪ್ರವಚನಗೈದು ಹರಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರೂ ಸಮಾರಂಭಕ್ಕೆ ಆಗಮಿಸಿ ಶ್ರೀ ಕ್ಷೇತ್ರದ ಪ್ರಸಾದವನ್ನಿತ್ತು ಶ್ರೀ ಪೈಯವರಿಗೆ ಶುಭ ಕೋರಿದರು. ಪೂರ್ಣಾಹುತಿಯ ವೇಳೆ ವೇದಮೂರ್ತಿ ಪದ್ಮನಾಭ ಭಟ್ಟರು ಮಾರ್ಕಂಡೇಯ ಹವನದ ಮಹತ್ವವನ್ನು ವಿವರಿಸಿದರು

ಕಾಶೀ ಮಠದ ಶ್ರೀಮುಚ್ಚರಣರವರು ಅನುಗ್ರಹ ಭಾಷಣ ಮಾಡಿದ ನಂತರ ಶ್ರೀ ಮಂಜುನಾಥ ಪೈ ದಂಪತಿಗಳು ಶ್ರೀಪಾದರಿಗೆ ಪಾದಪೂಜೆಗೈದರು. ಸಂಸ್ಥೆಯ ಸಿಬ್ಬಂದಿಯವರು ತಮ್ಮ ಪ್ರೀತಿಯ ಕಾಣಿಕೆಯಾಗಿ ಬೆಳ್ಳಿಯ ಶ್ರೀ ವೆಂಕಟರಮಣ ಪ್ರತೀಕವನ್ನು ಶ್ರೀ ಶ್ರೀಗಳವರ ದಿವ್ಯ ಹಸ್ತದ ಮೂಲಕ ಶ್ರೀ ಪೈಯವರಿಗೆ ಒಪ್ಪಿಸಿದರು. ಋತ್ವಿಜರಿಗೆ ಸಂಭಾವನೆ, ನೌಕರರಿಗೆ ಉಡುಗೊರೆಗಳನ್ನೀಯಲಾಯಿತು. ಮರುದಿನ ಬಡ ಬಗ್ಗರಿಗೆ ಅಕ್ಕಿ ವಿತರಣೆ ನಡೆಯಿತು.

ಕೊಡವೂರಲ್ಲಿ ಗಿರಾಕಿ ಸೇವಾ ಕೇಂದ್ರ ಉದ್ಘಾಟನೆ.

ತಾ. 5ರಂದು ಉಡುಪಿಯ ಕೊಡವೂರು ಸೇವಾ ಸಹಕಾರಿ ಬ್ಯಾಂಕಿನ ಆಶ್ರಯದಲ್ಲಿ ದ. ಕ. ಜಿಲ್ಲಾ ಸರಕಾರೀ ಕೃಷಿ ಸಹಕಾರಿ ಅಭಿವೃದ್ಧಿ ಸಂಘದ ಗಿರಾಕಿ ಸೇವಾ ಕೇಂದ್ರವನ್ನು ರಾಜ್ಯದ ಸಹಕಾರಿ ಸಚಿವ ಶ್ರೀ ಎ ಶಂಕರ ಆಳ್ವರು ಉಡುಪಿ ವಿಧಾನ ಸಭಾ ಕ್ಷೇತ್ರದ ಸದಸ್ಯೆ ಶ್ರೀಮತಿ ಮನೋರಮಾ ಮಧ್ವರಾಜರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಉಡುಪಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಮಧ್ವರಾಜರು ಸ್ವಾಗತಿಸಿದರು. ಬ್ಯಾಂಕಿನ ಅಧ್ಯಕ್ಷ ಶ್ರೀ ಟಿ ಶಂಭು ಶೆಟ್ಟರು ವರದಿ ಒಪ್ಪಿಸಿದರು.

ಸಚಿವ ಶ್ರೀ ಆಳ್ವರು ಗಿರಾಕಿ ಸೇವಾಕೇಂದ್ರವನ್ನು ಉದ್ಘಾಟಿಸುತ್ತ ಸಮಾಜವಾದಿ ಸಮಾಜ ರಚನೆಯಲ್ಲಿ ಸಹಕಾರೀ ಸಂಸ್ಥೆಗಳ ಪಾತ್ರವನ್ನು ವಿವರಿಸಿದರು ದ. ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಬಿ ನಾರಾಯಣ ನಾಯಕರು ಚಿಕ್ಕ ರೈತರ, ಕೃಷಿ ಕಾರ್ಮಿಕರ ಯೋಜನೆಯನ್ವಯ ಸೇವಾ ಸಹಕಾರಿ ಬ್ಯಾಂಕು ಒದಗಿಸುವ ಕೃಷಿ ಕಾರ್ಮಿಕರ ಪ್ರಥಮ ಸಾಲವನ್ನು ವಿತರಣೆ ಮಾಡಿದರು.

ಸಭಿಕರ ಪರವಾಗಿ ಶ್ರೀ ನಾರಾಯಣ ರಾಯರು ಮಾತಾಡಿದ ಸ್ಥಳೀಕ ಚಿಕ್ಕ ರೈತ—ಕೃಷಿ ಕಾರ್ಮಿಕ ಯೋಜನೆಯ ಪ್ರಾಜೆಕ್ಟ್ ಆಫೀಸರ್ ಶ್ರೀ ಕೆ. ಪಿ. ಜಗನ್ನಾಥ ರಾಯರು ಯೋಜನೆಯ ವಿವರಗಳನ್ನು ನೀಡಿದರು.

ಶ್ರೀಮತಿ ಮಧ್ವರಾಜರು ಮಾತನಾಡಿ ಸಚಿವ ಶ್ರೀ ಆಳ್ವರ ನೀತಿಯನ್ನು ಶ್ಲಾಘಿಸಿದರು. ಶ್ರೀ ಬಿ. ನಾರಾಯಣ ನಾಯಕರನ್ನು ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥಾ ಮತದಾರ ಕ್ಷೇತ್ರದಿಂದ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಸದಸ್ಯರೆಲ್ಲ ಮತನೀಡಿ ಬಹುಮತದಿಂದ ಆರಿಸಿ ಕಳಿಸುವರೆಂದು ಹಾರೈಸಿದರು.

ದ. ಕ. ಸಹಕಾರಿ ಸರಕಾರಿ ನೌಕರರ ಸಹಕಾರಿ ಸಂಘದ ಸುವರ್ಣ ಮಹೋತ್ಸವ

ದ. ಕ ಸಹಕಾರಿ ಸರಕಾರಿ ನೌಕರರ ಸಹಕಾರೀ ಸಂಘದ ಸುವರ್ಣ ಮಹೋತ್ಸವದ ಸಮಾರಂಭವನ್ನು ತಾ. 4ರಂದು ಮಂಗಳೂರಿನ ಪುರಭವನದಲ್ಲಿ ಶಾಸಕ ಶ್ರೀ ಬಿ ಸುಬ್ಬಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ರಾಜ್ಯದ ಸಹಕಾರ ಸಚಿವ ಶ್ರೀ ಎ. ಶಂಕರ ಆಳ್ವರು ಉದ್ಘಾಟಿಸಿದರು

ಪ್ರಾರಂಭದಲ್ಲಿ ಸುವರ್ಣ ಮಹೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಬಿ. ನಾರಾಯಣ ನಾಯಕರು ಸ್ವಾಗತಿಸಿ ಸಂಸ್ಥೆಗೆ ಶುಭವನ್ನು ಹಾರಯಿಸಿದರು. ಸಂಸ್ಥೆಯ ಅಧ್ಯಕ್ಷ ಶ್ರೀ ಜಿ. ವಸಂತ ಆವರು ಸುವರ್ಣ ಮಹೋತ್ಸವದ ವರದಿ ಓದಿದರು. ಶ್ರೀ ಅಬುಸಾಲಿಯವರು ಸಂದೇಶ ವಾಚನ ಮಾಡಿದರು. ಮಂಗಳೂರು ನಗರ ಸಭಾಪತಿ ಶ್ರೀ ವಾಮನ ಕೊಡಿಯಾಲ್‌ಬೈಲ್‌ರವರು ಸಂಸ್ಮರಣ ಸಂಚಿಕೆ ಸ್ನೇಹಿತವನ್ನು ಬಿಡುಗಡೆ ಮಾಡಿದರು.

ಸಂಘದ ಅಭಿವೃದ್ಧಿಗಾಗಿ ಉತ್ತಮ ಸೇವೆಸಲ್ಲಿಸಿದ ಶ್ರೀ ಎಂ. ಪಿ. ಕಿಣಿಯವರಿಗೆ ಸುವರ್ಣ ಪದಕವನ್ನೂ, ಜನಪ್ರಿಯ ತುಳುನಾಟಕ ರಚಯಿತರಾದ ಡಾ। ಸಂಜೀವ ದಂಡಕೇರಿಯವರಿಗೆ ಪ್ರಶಸ್ತಿಯನ್ನೂ ಸಚಿವರು ನೀಡಿದರು.

ಅಧ್ಯಕ್ಷರ ಭಾಷಣದ ಬಳಿಕ ಕಾರ್ಯದರ್ಶಿ ಶ್ರೀ ಆರ್. ಎಸ್. ಶೆಟ್ಟರು ವಂದಿಸಿದರು ಸಮಾರಂಭದ ಅಂಗವಾಗಿ ವಿವಿಧ ಕಾರ್ಯಕ್ರಮಗಳಿದ್ದುವು ಮಧ್ಯಾಹ್ನ ಜ್ಯೋತಿ ಮಹಲ್‌ನಲ್ಲಿ ಭೋಜನಕೂಟವಿತ್ತು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27

Phone No.— 1 72303 / 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms: Roof garden

Quiet, Calm Atmosphere

Personalised Service.

ನಿಮಗೆ ಬೇಕಾಗಿರುವ

ಸುಲಕ್ಷಣವಾದ, ನೀಲಿಪ್ರಕಾಶದ್ದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೋಲಿಟಿಯಲ್ಲಿ, ಸ್ಟೈಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ

ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ್ ತೂಕದಲ್ಲಿ

ಮುಂದಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್

ರಥಬೀದಿ—ಉಡುಪಿ, ದ. ಕ.

(ಎರಡನೇ ಪುಟದಿಂದ)

ಸ ರ್ವ ರ್ಷ ೧೧

ನೀನು. ಅದು ನಿನ್ನ ಸಂಸಾರಕ್ಕೆ ಸಂಬಂಧಿಸಿದ್ದು, ನೀನೇ ತೀರ್ಮಾನಿಸಿ ಕೊಳ್ಳ ಬೇಕಾದ ವಿಷಯ'

'ಮನೆ—? ಇದು ಮನೆಯಲ್ಲವೇನಮ್ಮ? ಯಾವುದಕ್ಕೆ ಇಲ್ಲಿ ಕೊರತೆ?'

'ಇದು ಹೇಳಿ—ಕೇಳಿ ಆಶ್ರಮ. ಇಲ್ಲೆಷ್ಟು ದಿನ ಇರುವುದಕ್ಕೆ ಬರುತ್ತೆ. ನಾಲ್ಕು ದಿನ ನಡೆಯ ಬಹುದು. ಜೀವನೋಪಾಯಕ್ಕೆ ಏನು ಮಾಡುತ್ತೀರಿ?'

ಬದುಕು ನಡೆಯುವುದಕ್ಕೆ ಆದಾಯ ತರುವ ಕಸುಬೊಂದು ಬೇಕೆಂಬುದರ ಅವಳಿಗಾಗ ಹೊಳೆಯಿತು. ಜನ ಅಧೀರರಾಗುವುದು ಈ ನಾಳೆ ಪ್ರಶ್ನೆ ನೆನೆಸಿಯೇ.

ನಾಳೆ ಎಂಬುದೇ ಇಲ್ಲದಿದ್ದರೆ ಎಷ್ಟು ಚೆನ್ನ ಎಂದವಳಿಗೆ ಅನಿಸದಿರಲಿಲ್ಲ.

ನಾಳೆ ಎಂಬುದೇ ಕಂಗಳ. ನೆಲೆ ಸಿಗದ ಆಳ.

ಆ ಆಳಕ್ಕೆ ತಾನೂ ಇಳಿಯುತ್ತಿರುವಂತೆ ಅವಳಿಗನಿಸಿತು. ಆದರೂ ಅಪೇಕ್ಷವಳು ಅಂಜಿದಂತೆ ಕಾಣಲಿಲ್ಲ. ಗಂಭೀರ ಸ್ವರದಲ್ಲಿ ತಾಯಿಯ ಆತಂಕ ಪ್ರಶ್ನೆ ಅವಳೇ ಪರಿಹರಿಸಿದಳು.

'ಪುನಃ ರಾಷ್ಟ್ರಕೂಟರಲ್ಲಿ ಅಧಿಕಾರಕ್ಕೆ ಅಂಟಿಕೊಳ್ಳುವುದರಲ್ಲಿ ಅವರಿಗೆ ಇಷ್ಟವಿಲ್ಲ. ಅವರ ಮನಸ್ಸು ಅದರಿಂದ ವಿಮುಖವಾಗಿದೆ. ಅವರಿಗೆ ಪೂರ್ವಿಕರು ಇದ್ದು ಆಳಿದ ನೆಲವನ್ನು ಸೇರುವ ಆಸೆ ಬಲವಾಗಿದೆ. ಸಾಧ್ಯವಾದರೆ ಒಡೆದು ಹೋದ ಚಾಳುಕ್ಯ ಸಾಮ್ರಾಜ್ಯವನ್ನು ಒಟ್ಟುಗೂಡಿಸುವ ಕಾಂಕ್ಷೆಯಾಗಿದೆ. ಅವರು ಅದರ ಕನಸನ್ನೇ ಕಟ್ಟಿಕೊಂಡಂತಿದೆ.'

'ಈ ವಿವರಗಳೆನ್ನೇ ನಾನು ತಿಳಿಯ ಬಯಸಿದ್ದು. ಏನೂ ಅರಿಯದವಳಂತೆ ನಟಿಸಿದೆಯಲ್ಲ. ಇಷ್ಟು ತಿಳಿಯದಿದ್ದರೆ ಅವನೆಲ್ಲಿ ನಿನ್ನ ಬುಟ್ಟಿಯಲ್ಲಿ ಬೀಳುತಿದ್ದ. ಈ ವ್ಯವಹಾರಕ್ಕೆ ಧರ್ಮದ ಮುದ್ರೆಯೊತ್ತಲೆಂದೇ ನಾನಿಲ್ಲಿಗೆ ಬಂದುದು'

'ಅಂದರೆ—'

'ಅಷ್ಟೂ ತಿಳಿಯುವುದಿಲ್ಲವೇ ಪೆದ್ದಿ.'

ಅವಳು ಸುಮ್ಮನಿದ್ದಳು.

ತಾಯಿ ಮುಂದುವರಿಸಿದರು 'ನಿಮ್ಮಿಬ್ಬರ ಮದುವೆಯ ಶಾಸ್ತ್ರ ನೆರವೇರಿಸುವುದಕ್ಕೆ. ವಯಸ್ಸಿನಿಂದಲೂ, ಸಂಬಂಧದಿಂದಲೂ ಅಣ್ಣನ ಸ್ಥಾನದಲ್ಲಿರುವ ಸಾಮ್ರಾಟರು ಕನ್ಯಾದಾನದ ಶಾಸ್ತ್ರ ನೆರವೇರಿಸುತ್ತಾರೆ. ಮಧುಕೇಶ್ವರನ ಸನ್ನಿಧಿಯಲ್ಲಿ ಈ ಮಂಗಳ ಕಾರ್ಯ ನಾಳೆಯೇ ನಡೆಯಬೇಕು. ನಿಮ್ಮಿಬ್ಬರ ವಿವಾಹಕ್ಕೆ ಅವನೇ ಸಾಕ್ಷಿ. ನಾಳಿನ ನಿಮ್ಮ ಜೀವನಕ್ಕೂ ಅವನೇ ನಿಮಗೆ ರಕ್ಷೆ'

'ನಾನು ಹುಟ್ಟುವುದಕ್ಕೂ ಮೊದಲು ಈ ಶಾಸ್ತ್ರ ಮುಗಿಸಿದ್ದಿರಿ. ಧಾರೆ ಎರೆಸಿ ಕೊಳ್ಳುವವರು ಕೇಳಿದ್ದರು; ಕನ್ಯಾದಾತೃಗಳಾದ ನೀವು ಸಮ್ಮತಿಸಿದ್ದಿರಿ. ಬಾಕಿಯಾಗಿ ನಿಂತಿರುವುದು ಏನಿದೆ'

'ಓ! ಆ ಮಾತೇ' ಎಂದು ಮೇನಕಾ ದೇವಿ, ಆ ಹಿಂದಿನ ಸಂದರ್ಭವನ್ನು ನೆನಸಿ ನಕ್ಕಳು.

೨೪

ಅರಿಕೇಸರಿ—ಲೋಕಾಂಬಿಕೆಯರ ವಿವಾಹವನ್ನು ಮಧುಕೇಶ್ವರನ ಸನ್ನಿಧಿಯಲ್ಲಿ ಸಂಭ್ರಮದಿಂದ ಮುಗಿಸಿದ ಮರುದಿನ ರಾಷ್ಟ್ರಕೂಟ ಕೃಷ್ಣ ಪರಿವಾರ, ಪರಿಜನ ಸಮೇತ ರಾಜಧಾನಿಯತ್ತ ಪಯಣ ಬೆಳೆಸಿದ. ಬನವಾಸಿಯ ಜನ ಅವನನ್ನು ಹಾರ್ದಿಕವಾಗಿ ಬೀಳ್ಕೊಟ್ಟರು.

ಅವರು ಹೊರಟು ಹೋದ ಮೂರು ದಿನಗಳ ನಂತರ ತಂದೆಯ ಅನುಮತಿ ಪಡೆದು ಅರಿಕೇಸರಿ ಪತ್ನೀ ಸಮೇತ, ಹಿರಿಯರಿಂದ ಪರಂಪರೆ ವಿಡಿದು ಬಂದ, ಸ್ವಂತ ರಾಜಧಾನಿ ಪೋದನಕ್ಕೆ ಹೊರಟು ನಿಂತ; ಮೊದಲೇ ನಿರ್ಧರಿಸಿಕೊಂಡಂತೆ ಪದ್ಮಪ್ಪ ಅವರ ಜೊತೆಯಾದ. ಅವನೇ ತರಬೇತು ಮಾಡಿದ ಬಿಲ್ಲಾಳುಗಳ ಪುಟ್ಟ ತುಕುಡಿಯೊಂದು ಅವರ ರಕ್ಷೆಗೆ ಅವರನ್ನು ಹಿಂಬಾಲಿಸಿತು.

ನರಸಿಂಹ ನಾಯಕರು ಅವರನ್ನು ಹಾರ್ದಿಕವಾಗಿ ಹರಸಿ ಕಳಿಸಿದರು.

ಬೀಳ್ಕೊಡುತ್ತಾ ಪದ್ಮಪ್ಪನನ್ನು ಹತ್ತಿರಕ್ಕೆ ಕರೆದು 'ಕುಮಾರನ ಯೋಗಕ್ಷೇಮ ನಿನಗೆ ಬಿಟ್ಟಿದ್ದು. ಅವನನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗಿ, ಲೋಕ ಕಲ್ಯಾಣದ ಕೆಲಸವನ್ನು ಸಾಧಿಸು. ನಿನ್ನಲ್ಲಿ ನನಗೆ ಅಪಾರವಾದ ವಿಶ್ವಾಸ.'

ಹಾಗೆ ನುಡಿಯುವಾಗ ಅವರ ಕಂಠ ಗದ್ಗದಿಸಿತು.

'ತಮ್ಮ ಆಜ್ಞೆಯಂತೆ ನಡೆಯುತ್ತೇನೆ. ಕುಮಾರರ ಕೂದಲು ಕೊಂಕದಂತೆ ನೋಡಿಕೊಳ್ಳುವುದು ನನ್ನ ಹೊಣೆ. ಕಲಿತ ಕತ್ತಿವರಸೆ ಅವರ ದೇಹ ರಕ್ಷಣೆಗೆ. ಸತತವಾಗಿ ನಡೆಸಿದ ಕಾವ್ಯಾಭ್ಯಾಸ ಹೃದಯ ಶ್ರೀಮಂತಿಕೆಗೆ. ಎರಡನ್ನೂ ಸಮನಾಗಿ ಬಳಸಿ, ಬಾಳನ್ನು ಸಾರ್ಥಕಗೊಳಿಸುತ್ತೇನೆ. ನಿಮ್ಮ ಅನುಗ್ರಹವಿದ್ದರೆ ಸಾಕು' ಹೀಗೆ ನುಡಿದು ಪದ್ಮಪ್ಪ ನಾಯಕರ ಪಾದಗಳಿಗೆ ನಮಸ್ಕರಿಸಿದ. ಬಗ್ಗಿದ ಅವನನ್ನು ಹಿಡಿದೆತ್ತಿ ನಾಯಕರು ಹಿಗ್ಗಿನಿಂದ ಅಪ್ಪಿಕೊಂಡರು.

ಹೀಗೆ ಬನವಾಸಿಯನ್ನು ಬಿಟ್ಟ ಅರಿಕೇಸರಿಯ ಪರಿವಾರ ಏಡು ದಿನಗಳ ನಂತರ, ಹಿರಿಯರ ನೆಲದಲ್ಲಿ ಕಾಲಿಟ್ಟಿತು. ಅವನ ಆಗಮನದ ವಾರ್ತೆಯಿಂದ ನಾಡಿಗೆ ನಾಡೇ ನಲಿದಾಡಿತು. ಮಾಂಡಲಿಕರಾದ ನರಸಿಂಹ ನಾಯಕರು ಜಾನಕಿಯ ಕೈ ಹಿಡಿದ ಮೊದಲುಗೊಂಡು —ಹುಟ್ಟೂರನ್ನು ಮರೆತಿರಲಿಲ್ಲವಾದರೂ — ಅಲ್ಲಿ ವಾಸಿಸಲೇ ಇಲ್ಲ. ರಾಷ್ಟ್ರಕೂಟ ರಾಜಧಾನಿಯಲ್ಲೇ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರು. ಅವರ ಸೆರಗಿಗೆ ಬಿದ್ದ ದಂಡನಾಯಕತ್ವ ಅಮಾತ್ಯ ಪದವಿಗಳ ಹೊರೆಯನ್ನು ನಿರ್ವಹಿಸುವುದಕ್ಕೆ ಅವರು ರಾಜಧಾನಿಯಲ್ಲಿರುವುದೂ ಅಗತ್ಯವಾಯಿತು. ಅನಂತರ ರಾಜನೆತನದಲ್ಲಿ ಮೂಡಿದ ಅಂತಃಕಲಹದಿಂದ ಅವರು ರಾಜಧಾನಿಯನ್ನು ತ್ಯಜಿಸಲಾಗಲಿಲ್ಲ. ಆದರೂ ನಾಯಕರ ಪ್ರಜೆಗಳಿಗೆ ಅವರಲ್ಲಿ ಅಪಾರವಾದ ಗೌರವಾದರಗಳಿದ್ದುವು. ರಾಷ್ಟ್ರಕೂಟರ ಪಂಕ್ತಿ ಇದ್ದು ಅವರು ಸಾಧಿಸಿದ ಕೆಲಸ ಕಾರ್ಯಗಳನ್ನೂ, ತೋರಿಸಿದ ಶೌರ್ಯಸಾಹಸಗಳನ್ನೂ, ಪ್ರದರ್ಶಿಸಿದ ಮುತ್ಸದ್ದಿತನವನ್ನೂ ಅವರು ಕಿವಿಯಿಂದ ಕೇಳಿದರು.

ಅದರಿಂದ ನಾಯಕರ ಮೇಲಿನ ಅವರ ಅಭಿಮಾನ ಹೆಚ್ಚಿತು.

ಅಂತಹ ನಾಯಕರ ಮಗ, ಅಪಳಿತ ಸೂತ್ರ ವಹಿಸಿಕೊಳ್ಳಲು ತನ್ನಲ್ಲಿಗೆ ಬರುವುದನ್ನರಿತು, ಆನಂದಿತರಾಗಿ, ಅದ್ದೂರಿಯಿಂದ ಸ್ವಾಗತಿಸಲು ಸಿದ್ಧರಾದರು. ಅವರು ನೀಡಿದ ಅಭೂತಪೂರ್ವ ಸ್ವಾಗತದಿಂದ ಅರಿಕೇಸರಿ ಅಚ್ಚರಿಗೊಂಡರೂ. ಈ ಪ್ರಕಟಿತ ವಿಶ್ವಾಸವನ್ನು, ತನ್ನ ಅಧಿಕಾರದ ಅಂಕೆಯೊಳಗಿನ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಬಳಸಬೇಕೆಂದು ಸಂಕಲ್ಪಿಸಿದ.

ಹೊಸ ವಿಚಾರಕ್ಕೆ ಜನತೆಯ ಸಹಕಾರ ದೊರಕಿದಾಗಲೇ ಪುರೋಭಿವೃದ್ಧಿ ಸಾಧ್ಯವೆಂಬುದನ್ನು ಆತ ಮನಗಂಡಿದ್ದ.

ಅವನ ಅದೃಷ್ಟಕ್ಕೆ ಸರಿಯಾಗಿ ಆತ ನೆಲೆಯೂರಿದ ಕೆಲವೇ ದಿನಗಳಲ್ಲಿ ಸಾಮ್ರಾಟ ಕೃಷ್ಣನಿಂದ ತರಾತುರಿಯ ಸಂದೇಶವೂ ಸಿಕ್ಕಿತು. ರಕ್ಷಣೆಯ ವ್ಯವಸ್ಥೆಯನ್ನು ಭದ್ರಪಡಿಸಿಕೊಳ್ಳಲು ಅಗತ್ಯವೆನಿಸುವ ಸುಸಜ್ಜಿತ ಸೈನ್ಯವನ್ನೂ ಆತ ಕಳುಹಿಸಿದ್ದ. ಆ ಸೈನ್ಯದ ಖರ್ಚೆಂದೂ, ಕೋಟೆ ಕೊತ್ತಲಗಳ ದುರಸ್ತಿಗೆಂದೂ, ಅಭಿವೃದ್ಧಿ ಕಾರ್ಯಗಳ ವಿನಿಯೋಗಕ್ಕೆಂದೂ ರಾಜಭಂಡಾರದಿಂದ ದ್ರವ್ಯಸಹಾಯವನ್ನೂ ಕಳುಹಿಸಿದ್ದ. ಅಗತ್ಯ ಕಂಡಲ್ಲಿ ಈ ನೆರವನ್ನು ಸಂಕೋಚವಿಲ್ಲದೆ ಸ್ವೀಕರಿಸುವಂತೆಯೂ ಸೂಚಿಸಿದ್ದ.

ಹೊರಗಿನಿಂದ ನುಗ್ಗಿ ಬರುವವರನ್ನು ತಡೆಯುವುದಕ್ಕೆ ಸೈನ್ಯಬೇಕು. ಆಂತರಿಕ ಕ್ಷೋಭೆಗೆ ಔಷಧಿ—ನೆಮ್ಮದಿಯ ಬದುಕು—ಈ ಎರಡು ರಹಸ್ಯಗಳನ್ನು ಅರಿಕೇಸರಿ ಬಲ್ಲವನಾಗಿದ್ದ. ಆತ ಜನತೆಯ ಬದುಕನ್ನು ಸುಧಾರಿಸಲು ಅಗತ್ಯಬೇಕಾದ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದ. ಆದರೆ ರಕ್ಷಣಾ ವ್ಯವಸ್ಥೆಯನ್ನು ಕಡೆಗಣಿಸಲಿಲ್ಲ.

ಪದ್ಮಪ್ಪ ಈ ಗುರಿ ಸಾಧನೆಯಲ್ಲಿ ಅವನಿಗೆ ಭುಜವಾಗಿ ನಿಂತ. ಆತ ಅರಿಕೇಸರಿಯ ಸಂಧಿವಿಗ್ರಹಿಯಾಗಿ ಹೊಸ ಹೊಸ ಕೆಲಸ ಕಾರ್ಯಗಳ ಉಸ್ತುವಾರಿ ನೋಡಿದ. ಅವರ ಸತತ ಪ್ರಯತ್ನದಿಂದ, ನಾಡಿಗೆ ನಾಡು ಅಭಿವೃದ್ಧಿಯ ದಾರಿಗುಂಟ ಹೆಜ್ಜೆ ಹಾಕಿತು. ಶಾಂತಿ–ಸ್ವಾಸ್ಥ್ಯ ನೆಲೆನಿಂತಿತು.

೦ ೦ ೦ ೦

ಹೀಗೆ ಆರು ವರ್ಷಗಳು ಕಳೆದುವು.

ಅರಿಕೇಸರಿಯ ಮನಸ್ಸಿನಲ್ಲಿ ತೃಪ್ತಿ ಸಮಾಧಾನಗಳು ಮೂಡಿದುವು. ಶತ್ರು ಭೀತಿ ತೊಲಗಿತು. ಕ್ಷಾಮ–ಡಾಮರದ ಅಬ್ಬರ ಇಳಿಯಿತು. ಅವನ ಮನಸ್ಸು ನೆಲದಂತೆ ಹಸಿರಾಯಿತು.

ಅಂತಹ ಒಂದು ದಿನ ಆತ ರಾಜೋದ್ಯಾನದಲ್ಲಿ ಕುಳಿತು, ತಾಳೆವಾಲೆಯ ಗ್ರಂಥವನ್ನು ಓದುವುದರಲ್ಲಿ ನಿಮಗ್ನನಾಗಿದ್ದ. ಪುಟ್ಟ ಮಗುವೊಂದು ಅವನಿದ್ದಲ್ಲಿಗೆ ನಡೆದು ಬಂದು ಅವನುಟ್ಟಿದ್ದ ಧೋತರವನ್ನು ಜಗ್ಗಿತು.

ದೃಷ್ಟಿ ತನ್ನತ್ತ ಹೊರಳುವಂತೆ ಮಾಡಲು ಅದು ಯತ್ನಿಸುತ್ತಿತ್ತು;

ಒಂದು ಸಲ; ಎರಡು ಸಲ ಮೂರು ಸಲ—ಹೀಗೆ ಮೂರು ಬಾರಿ ಜಗ್ಗಿದರೂ ಅರಿಕೇಸರಿಯ ದೃಷ್ಟಿ ಮಗುವಿನತ್ತ ಬೀಳಲಿಲ್ಲ. ಅವಲೋಕಿಸುತ್ತಿದ್ದ ಗ್ರಂಥದಿಂದ ಕದಲಲಿಲ್ಲ. ಮಗುವಿಗೆ ಬೇಸರ ಬಂತು.

ತನಗೆ ತೋರಿದ ಅನಾದರಣೆಯಿಂದ ಕೋಪ ಬಂತು.

ಗ್ರಂಥದ ಹಾಳೆಗಳನ್ನು ಅರಿಕೇಸರಿಯ ಕೈಯಿಂದ ಕಿತ್ತುಕೊಳ್ಳಲು ಪ್ರಯತ್ನಿಸಿತು.

ಆಗಲೇ ಅವನಿಗೆ ಎಚ್ಚರ.

(ಮುಂದುವರಿಯುವುದು)

ಘನಶ್ಯಾಮ -

NAVAYUGA 15-6-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಸತ್ತಿನಲ್ಲಿ—

ಬಡವನಿಗೆಷ್ಟು ಮೋಸ

ಒಂದಾನೊಂದು ಕಾಲದಲ್ಲಿ ಈ ನಮ್ಮ ದಿವ್ಯ ಭಾರತ ಚರಿತ್ರೆಯ ಪುಟಗಳಲ್ಲಿ ಬರೆದಿಡಲು ಯೋಗ್ಯವಾದ ಉಜ್ವಲ ಪರಂಪರೆ ನಿರ್ಮಿಸಿತ್ತು. ವಿವೇಕಾನಂದ, ಪರಮಹಂಸರಂತಹ ಸಂತರ ಛಲ, ಶಿವಾಜಿಯಂತಹ ಧೀರರ ಬಲ, ಶ್ರೀರಾಮನಂತಹ ಆದರ್ಶ ಶೀಲ, ಸತ್ಯ ಹರಿಶ್ಚಂದ್ರನಂತಹ ಪ್ರಾಮಾಣಿಕರ ಭೀಮ ಬಲ ಭಾರತಕ್ಕಿತ್ತು. ಪ್ರಕೃತಿ ವನಸಿರಿಯ ಮಧ್ಯೆ, ನಗು–ನಲಿವುಗಳ ಹೊಲದಲ್ಲಿ ದಾನ–ಧರ್ಮ–ಪ್ರಾಮಾಣಿಕತೆಗಳು ಕಾವಲು ನಡೆಸಿದ್ದುವು.

ಆದರೆ ಇದು ಅಂದಿನ ಭಾರತವಲ್ಲ. ಗಾಂಧೀಜಿ, ತಿಲಕ, ಪಟೇಲರಂತಹ ಹುತಾತ್ಮರ ನೆನಪಿಂದು ನಮಗಿಲ್ಲ. ಕಳವು, ಮೋಸ, ವಂಚನೆ, ಕೊಲೆ, ಅಪ್ರಾಮಾಣಿಕತೆ, ಧೂರ್ತತೆ, ನಿರ್ದಯತೆ–ಭಾರತದಲ್ಲಿ ರುದ್ರ ನಾಟ್ಯವಾಡುತ್ತಿದೆ.

ಅಳತೆ ಮತ್ತು ತೂಕಗಳ ಕಾನೂನು ಪರಿಷ್ಕರಣ ಸಂಸ್ಥೆಯಾಗಿರುವ ವೈತ್ರೀ ಸಮಿತಿ 1972 ಮೇ ಇಪ್ಪತ್ತನೆಯ ದಿನಾಂಕ ಸರಕಾರಕ್ಕೆ ಸಲ್ಲಿಸಿದ ವರದಿಯನ್ನು ಗಮನಿಸುವಾಗ ಈ ತೀರ್ಮಾನಕ್ಕೆ ನಾವು ಬರುವುದು ಅನಿವಾರ್ಯವಾಯಿತು. ಅಪ್ರಾಮಾಣಿಕ ವರ್ತಕರು, ದಿನ ಬಳಕೆಯ ವಸ್ತುಗಳ ಮಾರಾಟಗಾರ ವ್ಯಾಪಾರಿಗಳು ವರ್ಷವೂ ಮುಗ್ಧ ಬಳಕೆದಾರರು ಮತ್ತು ರೈತರನ್ನು ವಂಚಿಸಿ, ರಾಷ್ಟ್ರದಲ್ಲಿ ಪಡೆಯುವ ಹಣ ಸಾವಿರದ ಐದು ನೂರು ಕೋಟಿ! ತೂಕ ಹಾಗೂ ಅಳತೆಗಳನ್ನು ಉಪಯೋಗಿಸಿ ಸಾಗುವ ಸಾರ್ವತ್ರಿಕ ಇಲ್ಲವೇ ಚಿಲ್ಲರೆ ವ್ಯಾಪಾರದ ಅಂದಾಜು ಹದಿನಾರು ಸಹಸ್ರ ಕೋಟಿ ರೂಪಾಯಿ.

ವ್ಯವಹಾರ ವ್ಯಾಪಾರಾದಿಗಳಲ್ಲಿ ಲಾಭಕೋರ ವರ್ತಕರಿಂದ ಶ್ರೀಸಾಮಾನ್ಯನಿಗೆ ಶೇಕಡ ಒಂಬತ್ತರಷ್ಟು ಮೋಸವಾಗುತ್ತಿದೆ. ಅಳತೆ ಹಾಗೂ ತೂಕಗಳಿಂದ ಭಾರತೀಯ ಬಳಕೆದಾರರಿಗೆ ವರುಷದಲ್ಲಿ ನೂರಾ ಅರುವತ್ತು ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಇದರಂತೆ ವರುಷದಲ್ಲಿ ಪ್ರತೀ ಹದಿನಾಲ್ಕು ಸಾವಿರ ಕೋಟಿ ರೂಪಾಯಿ ಪ್ರಮಾಣದ ಆಹಾರ ಧಾನ್ಯಾದಿಗಳನ್ನು ಬೆಳೆಯುವ ವ್ಯವಸಾಯಗಾರನಿಗೆ ವರುಷದಲ್ಲಿ ಆಗುವ ನಷ್ಟ ರೂಪಾಯಿ ನೂರ ನಲುವತ್ತು ಕೋಟಿ.

ಭಾರತದಲ್ಲಿ ನಡೆಯುವ ವ್ಯವಹಾರವನ್ನು ಗಮನಿಸಿದರೆ ಅದಕ್ಕಿಂತ ಅವ್ಯವಹಾರವೇ ಭೂತಾಕಾರದಲ್ಲಿ ಬೆಳೆದಿದೆ. ಇಂಥ ವಂಚನೆಗಳಿಂದ ಭಾರೀ ನಷ್ಟವನ್ನು ಹಾಕಿಕೊಳ್ಳುತ್ತಿರುವ ಶ್ರೀಸಾಮಾನ್ಯ ಸ್ವಾತಂತ್ರ್ಯನಂತರದ ದೇಶದಲ್ಲಿ ಹಿರಿಯ ಪ್ರಮಾಣದಲ್ಲಿ ವರ್ತಕರಿಂದ ವಂಚಿಸಿಕೊಳ್ಳುತ್ತಿರುವುದು ನಿರ್ವಿವಾದ.

ಬೆಲೆಗಳ ಏರಿಳಿತಗಳಲ್ಲೂ ಲಾಭಕೋರೀ ವರ್ತಕರ ಕೈವಾಡವಿರುವುದು ಗಮನಾರ್ಹ. ಶ್ರೀಸಾಮಾನ್ಯ ಮಳೆ ಬಿಸಿಲೆನ್ನದೆ ಹೊಲದಲ್ಲಿ ಮೈಮುರಿದು ದುಡಿಯುತ್ತಾನೆ. ಬ್ಯಾಂಕ್ ಸಾಲದಿಂದ ಗೊಬ್ಬರ ತಂದು ಹಾಕುತ್ತಾನೆ. ಪ್ರಾಣಿಗಳಿಂದ ಕೀಟಗಳಿಂದ ಬೆಳೆಯನ್ನು ರಕ್ಷಿಸುವುದಷ್ಟೇ ಅಲ್ಲ, ಮಳೆಗಾಲದಲ್ಲಿ ದುಬಾರಿ ಬೆಲೆಗೆ ತಂದ ಆಹಾರವನ್ನು ಅರೆಹೊಟ್ಟೆ ಉಣ್ಣಬೇಕಾಗುತ್ತದೆ. ಬೆಳೆ ಕಟಾವಿಗೆ ಸಿದ್ಧವಾಯಿತೆನ್ನುವಾಗ ಬೆಲೆ ಆಕಾಶದಿಂದ ಪಾತಾಳಕ್ಕಿಳಿಯುತ್ತದೆ. ಮಳೆಗಾಲದಲ್ಲಿ ಮಾಡಿದ ಸಾಲವನ್ನು ತೀರಿಸಬೇಕಾದರೆ ರೈತ ಬೆಳೆಯನ್ನು ಮಾರಾಟ ಮಾಡಲೇ ಬೇಕು. ಆಗ ಅವನ ಬೆಳೆಯೆಲ್ಲಾ ಅರ್ಧಂಬರ್ಧ ಹಣಕ್ಕೆ ಹೋಗುತ್ತದೆ. ಮತ್ತೆ ಉಣ್ಣಲು ಸಾಲವೇ ಮಾಡಬೇಕಾಗುವುದು. ರೈತನದೆಲ್ಲ ಮುಗಿಯಿತೋ ಸರಿ, ಆತ ಮಾರಾಟ ಮಾಡಿದ ಧಾನ್ಯಕ್ಕೆ ಏಕ್‌ದಂ ಕ್ರಯ ಏರುತ್ತದೆ. ಕೊಳ್ಳಲು ಅವನಲ್ಲಿ ಹಣವಿಲ್ಲ. ಮಾರಾಟ ಮಾಡಲು ಧಾನ್ಯವಿಲ್ಲ.

ಇದು ವ್ಯಾಪಾರೀ ರಂಗದ ರಿವಾಜು. ಸರಕಾರ ಲೆವಿ ಪದ್ಧತಿಯಲ್ಲಿ ಧಾನ್ಯಗಳನ್ನು ಕೊಳ್ಳುವುದು ನಿಜ. ಆದರೆ ವ್ಯಾಪಾರಿಗಳು ಬೇಕಾದಂತೆ ಏರಿಳಿಸುವ ಬೆಲೆಗೆ ಕಡಿವಾಣ ಹಾಕುವುದಿಲ್ಲ. ತಾನು ಕೊಂಡಷ್ಟೇ ಕಮ್ಮಿ ಮೊತ್ತಕ್ಕೆ ರೈತನಿಗೆ ಮಳೆಗಾಲದಲ್ಲಿ ಕೊಡುವುದಿಲ್ಲ. ಅಂತೂ ಪಾಪಿ ಹೋದಲ್ಲಿ ಮೊಳಕಾಲು ನೀರೇ.

ಇದರೊಂದಿಗೆ ಬೆಳೆಯುತ್ತಿರುವ ಮತ್ತೊಂದು ಪಿಡುಗೆಂದರೆ ಈ ಕಲಬೆರಕೆ. ರೈತ ಕೊಳ್ಳುವ ಪ್ರತಿ ಸಾಮಗ್ರಿಯಲ್ಲೂ ಬೆರಕೆಯೇ. ಚಿಮಿಣಿ ಎಣ್ಣೆಗೆ ನೀರು, ಅಕ್ಕಿಗೆ ಕಲ್ಲು, ಹಾಲಿಗೆ ನಲ್ಲಿ ನೀರು.... ಹೀಗೆ ಪ್ರತಿಯೊಂದರಲ್ಲೂ ಮೂಲ ಸಾಮಗ್ರಿಗಿಂತ ಬೆರಕೆ ಜಾಸ್ತಿ. ಆರೋಗ್ಯ ಹಾಳು ಮಾಡುವ ವಿಷಯುಕ್ತ ವಸ್ತುಗಳು. ಇವನ್ನು ತಿಂದ ಮಕ್ಕಳು ಸದೃಢರಾಗಿ ಮುಂದಿನ ಜನಾಂಗವಾಗಬಲ್ಲರೆ? ಶತ್ರುಗಳನ್ನಟ್ಟುವ ಮಾತು ಬಾಯಿ ಪಟಾಸು ಆಗಲಾರದೆ?

ಶ್ರೀಸಾಮಾನ್ಯನಿಗೆ ಹತ್ತು ಹಲವು ಭರವಸೆಗಳ ಬಾಸುಂಡಿ ತಿನ್ನಿಸಿರುವ ಭವ್ಯ ಸರಕಾರ ಈ ವರ್ತಕರ ಮೋಸ, ವಂಚನೆ, ಕಲಬೆರಕೆಗಳತ್ತ ಗಮನ ಹರಿಸಿ ಅದನ್ನು ತಡೆಗಟ್ಟಿದರೇನೇ ದೇಶದ ಬೆನ್ನೆಲುಬು ಉಳಿಯುತ್ತದೆ. ಇಲ್ಲವಾದರೆ ಅಂಕದ ಪರದೆ ಎತ್ತುವ ಮೊದಲೇ ನಾಟಕ ಮುಗಿಯುತ್ತದೆ. ಶ್ರೀಸಾಮಾನ್ಯ ಮಣ್ಣಿನಲ್ಲಿ ಮಣ್ಣಾಗುತ್ತಾನೆ. ಕ್ರೂರ ವಿಷದ ವ್ಯಾಪಾರಿಯೆಂಬ ಜೇಡ ಬೀಸಿದ ಬಲೆಯಲ್ಲಿ ಸಿಲುಕಿ ಒದ್ದಾಡುವ ನೊಣವಾಗುತ್ತಾನೆ.

ತೂಕ ಮತ್ತು ಅಳತೆಗಳಿಗೆ ಸಂಬಂಧಿಸಿದಂತೆ ಇರುವ ಕಾಯಿದೆಯನ್ನು ಅನುಸರಿಸಲಾಗದ ಕಾರಣ ಸುಲಭವಾಗಿ ಶೇಕಡ ಐದರಷ್ಟು ನಷ್ಟವಾಗುತ್ತಿವೆಯೆಂದು ವೈತ್ರೀ ವರದಿ ಸ್ಪಷ್ಟಪಡಿಸಿದೆ ಮತ್ತು ಈ ಕುರಿತು ನಿಯಮಗಳನ್ನು ಮುರಿಯುವವರಿಗೆ ಅತ್ಯುಗ್ರ ಶಿಕ್ಷೆಯನ್ನು ವಿಧಿಸಲು ಸಲಹೆಯಿತ್ತಿದೆ. ರಾಜ್ಯ ಸರಕಾರಗಳು ಈ ಉದ್ದೇಶಕ್ಕೆ ಅಂಗೀಕರಿಸಬೇಕಾದ ಮಸೂದೆಯ ಮಾದರಿ ಪ್ರತಿಯೊಂದನ್ನು ಅದು ತಯಾರಿಸಿದೆ.

ಜನತೆಗೆ ಆಗುತ್ತಿರುವ ಈ ಭಾರೀ ನಷ್ಟವನ್ನು ಹತ್ತಿಕ್ಕಬೇಕು. ತಗಣೆಗಳಂತೆ ರಕ್ತ ಹೀರಿ ಬೆಳೆಯುತ್ತಿರುವ ಲಾಭಕೋರ ಧೂರ್ತ ವರ್ತಕರಿಗೆ ಚಾಣಕ್ಯ ತನ್ನ ಅರ್ಥಶಾಸ್ತ್ರದ ವೈದೇಹಕ ರಕ್ಷಣ ಪ್ರಕರಣದಲ್ಲಿ ಭೀಕರ ದಂಡನೆಯನ್ನೇ ವಿಧಿಸಿದ್ದಾನೆ.

ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

●●

ಸೌಮ್ಯ ವಿಚಾರಕ್ರಾಂತಿಗೆ ನಾಂದಿ

(ಒಂದನೇ ಪುಟದಿಂದ)

ಅಧಿಕಾರಿಗಳು ಇಂಗ್ಲಿಷಿನಲ್ಲಿ ಆಲೋಚಿಸಿ ಕನ್ನಡದಲ್ಲಿ ಬರೆಯುವುದನ್ನು ಬಿಟ್ಟು ಕನ್ನಡದಲ್ಲೇ ಆಲೋಚಿಸ ಹತ್ತಿದರೆ ಆಗ ಆಡಳಿತ ಭಾಷೆ ತಾನಾಗಿಯೇ ಕನ್ನಡವಾಗುವುದು.

ಆದುದರಿಂದ ಕನ್ನಡ ಭಾಷೆಯನ್ನು ಅಧಿಕಾರಿಗಳಿಗೆ ಕಲಿಸುವುದಕ್ಕೆ ಮೊದಲು ಅವರಿಗೆ ಕನ್ನಡದಲ್ಲಿ ಆಲೋಚಿಸುವುದನು ಕಲಿಸಬೇಕು.

ರಾಜ್ಯದ 'ಬದಲಾಗುವ ಹೆಸರು' ಈ ದಿಸೆಯಲ್ಲಿ ಪ್ರೇರಕ ಶಕ್ತಿಯಾಗಿ ನಿಲ್ಲಬಹುದು; ನಿಲ್ಲಬೇಕು.

●●

ಅದಮಾರು: ಶ್ರೀಪಾದರಿಂದ ನೂತನ ವಟುವಿಗೆ ಆಶ್ರಮ ದೀಕ್ಷೆ.

ಪರ್ಯಾಯ ಶ್ರೀ ಅದಮಾರು ಮಠಾಧೀಶರಾದ ಶ್ರೀ ವಿಬುಧೇಶ ತೀರ್ಥ ಶ್ರೀಪಾದರು ತಾ. 2ರಂದು ರಾಘವೇಂದ್ರ ಎಂಬ ವಟುವಿಗೆ ಸನ್ಯಾಸದೀಕ್ಷೆಯಿತ್ತು ವಿಶ್ವಪ್ರಿಯ ತೀರ್ಥ ಎಂಬ ನಾಮಾಂಕಿತದಿಂದ ತಮ್ಮ ಉತ್ತರಾಧಿಕಾರಿಯಾಗಿ ನಿಯಮಿಸಿದರು. ಮುಂಜಾನೆ ವಿರಜಾ ಹೋಮ ಪೂರ್ವಕ ಸನ್ಯಾಸದ ಪೂರ್ವಭಾವೀ ವಿಧಿಗಳನ್ನೆಲ್ಲ ಸಾಂಗವಾಗಿ ನೆರವೇರಿಸಿ ಮಧ್ವ ಸರೋವರದಲ್ಲಿ ಸರ್ವಸ್ವ ತ್ಯಾಗ ಪ್ರತಿಜ್ಞಾಪೂರ್ವಕ ಕೊಪೆಯ ಕೇಶೋಲ್ಲುಂಠನದೊಡನೆ ದಂಡಧಾರಣ ಮಾಡಿಸಲಾಯಿತು. ಮಧ್ಯಾಹ್ನ ಗಂ. 11–30ಕ್ಕೆ ಸರಿಯಾಗಿ ಶುಭ ಮುಹೂರ್ತದಲ್ಲಿ ಪರ್ಯಾಯ ಶ್ರೀಪಾದರು ಶ್ರೀಕೃಷ್ಣ ಮಠದ ಮಧ್ವ ಸಿಂಹಾಸನದಲ್ಲಿ ಕುಳಿತು ನೂತನ ಯತಿಗಳಿಗೆ ಪ್ರಣವ ಮಂತ್ರದ ರಹಸ್ಯೋಪದೇಶ ಮಾಡಿದರು. ಅನಂತರ ವೇದ ಘೋಷಗಳೊಡನೆ ಹೊಸ ಯತಿಗಳಿಗೆ ಶ್ರೀ ಮಠದ ವೇದಾಂತ ಸಿಂಹಾಸನಕ್ಕೆ ಪಟ್ಟಾಭಿಷೇಕ ನಡೆದು ಶ್ರೀಪಾದರು ಮಂತ್ರಪೂತವಾದ ತೀರ್ಥ ಜಲವನ್ನು ಶಂಖದಲ್ಲಿ ತುಂಬಿ ಕಿರಿಯ ಯತಿಗಳ ಶಿರಸ್ಸಿಗೆ ಅಭಿಷೇಕ ಗೈದು ವಿಶ್ವಪ್ರಿಯ ತೀರ್ಥ ಎಂದು ನಾಮಕರಣ ಮಾಡಿದರು. ಸಮಾರಂಭದ ಅಂಗವಾಗಿ ಶ್ರೀಪಾದರು ಪಂಡಿತರಿಗೆಲ್ಲ ಸಂಭಾವನೆಯನ್ನಿತ್ತರು. ಮಧ್ಯಾಹ್ನ ವಿಶೇಷ ಅನ್ನ ಸಂತರ್ಪಣೆ ನಡೆಯಿತು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ನೋವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit — ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0–75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
ನವಯುಗ ಪ್ರೆಸ್) ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾರಾಯಣೀಕೆ
ಆಯುರ್ವೇದಾಶ್ರಮ
ಕಟಪಾಡಿ, ದ. ಕ.

ನವಯುಗ

ಮೇಲ್ದರಗತಿಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ್
ಕಾರವಾರ

ಸಂಪುಟ ೫೧
ಸಂಚಿಕೆ ೪೨
NAVAYUGA
22-6-1972

ಸತ್ಪತಿ ಪೌರೋಹಿತ್ಯದಲ್ಲಿ

ಗಾಂಧಿ ಇಷ್ಟಾರ್ಥಸಿದ್ಧಿಯಾಗ

ಒಂದುವಾರದ ನಾಟಕೋತ್ಸವ ಸಮಾಪ್ತಗೊಂಡು ಒರಿಸ್ಸಾದಲ್ಲಿ ಆಳುವ ಕಾಂಗ್ರೆಸ್ಸು ಸರಕಾರವನ್ನು ಕಟ್ಟಿತು. ಶ್ರೀಮತಿ ನಂದಿನಿ ಸತ್ಪತಿಯವರು ಅಲ್ಲಿನ ಮುಖ್ಯಮಂತ್ರಿಯಾಗಿ ದೆಹಲಿಯಿಂದ ಭುವನೇಶ್ವರಕ್ಕೆ ಬಂದರು.

ಕಾಂಗ್ರೆಸ್ ವಿಘಟನೆಯ ನಂತರ ಅಲ್ಲಿನ ಸ್ವತಂತ್ರ ಪಕ್ಷದ ನೇತೃತ್ವದಲ್ಲಿದ್ದ ಶ್ರೀ ಸಿಂಗದೇವರ ಸಚಿವ ಸಂಪುಟವನ್ನು ಉರುಳಿಸುವ ಅನೇಕ ಪ್ರಯತ್ನಗಳು ನಡೆದುವು. ಅಂದಿನ ಆಳುವ ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಗಜ್ಜೀವನ ರಾಮರು ಈ ಸಂಬಂಧದಲ್ಲಿ ನಾನಾರೀತಿಯ ತದಿಗಿಣವಾಡಿದರು. ಆದರೆ ಅವರಿಗೆ ಅಲ್ಪ ಯಶಸ್ಸೂ ಸಿಗಲಿಲ್ಲ. ೧೯೭೧ರಲ್ಲಿ ಲೋಕ ಸಭೆಗೆ ಚುನಾವಣೆ ನಡೆದಾಗ, ವಿಧಾನ ಸಭೆಯನ್ನೂ ವಿಸರ್ಜಿಸಿ ಡೋಲಾಯಮಾನ ದೆಸೆಯನ್ನು ನೀಗಿಕೊಳ್ಳಲು ಶ್ರೀ ಸಿಂಗದೇವ್ ಬಯಸಿದರು.

ವಿಧಾನ ಸಭೆ ವಿಸರ್ಜನೆಯಾಯ್ತು. ಮರು ಚುನಾವಣೆಯಲ್ಲಿ ಆಳುವ ಕಾಂಗ್ರೆಸ್ಸು ಬಹುಮತ ಗಳಿಸಲಿಲ್ಲ. ಬಿಜೂಪಟ್ನಾಯಕರ ಉತ್ಕಲ ಕಾಂಗ್ರೆಸ್ಸು ಆಳುವ ಕಾಂಗ್ರೆಸ್ಸಿನೊಡನೆ ಸಹಕರಿಸಲೊಪ್ಪಲಿಲ್ಲ. ಅದು ಸ್ವತಂತ್ರ ಪಕ್ಷದೊಡನೆ ಸಂಬಂಧ ಬೆಳೆಸಿದ್ದರಿಂದ ಬಿಸ್ವನಾಥದಾಸರ ನಾಯಕತ್ವದಲ್ಲಿ ಮತ್ತೆ ಸಂಯುಕ್ತರಂಗೀಯ ಸರಕಾರವೇ ರೂಪುಗೊಂಡಿತು.

ಹದಿನೈದು ತಿಂಗಳುಗಳ ಕಾಲ ನಿರಾತಂಕವಾಗಿ ನಡೆದು ಬಂದ ಈ ಸರಕಾರದಲ್ಲಿ ಬಿರುಕು ಮೂಡಿದ್ದೇಕೆ? ಇಡಿಯ ಭಾರತದಲ್ಲಿ ಆಳುವ ಕಾಂಗ್ರೆಸ್ಸಿನ 'ಶಾಮೀಲಿಲ್ಲದ ರಾಜ್ಯ' ಸರಕಾರವೆಂದರೆ ಭುವನೇಶ್ವರ ಮತ್ತು ಮದರಾಸುಗಳದ್ದು ಮಾತ್ರ. ಮದರಾಸಿನ ದ್ರಾ. ಮು. ಕ.ದ ರೋಮರೋಮವೂ ಭದ್ರವಾಗಿರುವುದು ಮಾತ್ರವಲ್ಲ ಸಿಸುರವರ ಮಾತೃರಾಜ್ಯದಲ್ಲಿ ಆಳುವ ಕಾಂಗ್ರೆಸ್ಸಿನ ತೇಜಸ್ಸೂ ಕಳಾಹೀನ. ಆದ್ದರಿಂದ ಸಾಕಷ್ಟು ಬಲವಾಗಿರುವ ಉತ್ಕಲದಲ್ಲಿ ತಮ್ಮ ಸರ್ವಬಲವನ್ನೂ ಏಕೀಕರಿಸಿ ಹಗ್ಗವೆಳೆದರು, ವಿರೋಧಿ ಪಕ್ಷದ ಹಗ್ಗ ತುಂಡರಿಯಿತು, ಕೆಲವರು ಇತ್ತ ಮಗ್ಗರಿಸಿ ಬಿದ್ದರು; ಬಿದ್ದವರನ್ನಿವರು ಎತ್ತಿ ಹಿಡಿದರು, ಉಪಚರಿಸಿದರು. ದೇವ ದಾನವರ ಕತೆ ಹೇಳಿದರು. ಸರಿ, ಇದುವರೆಗೆ ದಾನವರಾಗಿದ್ದವರೆಲ್ಲ ಅಮೃತ ಸೇವಿಸಿ ದೇವರಾಗ ಬಯಸಿದರು, ಇವರೂ ಅವರನ್ನು ದೇವರೆಂದರು. ಒರಿಸ್ಸಾದ ೧೪೦ ಶಾಸಕರಲ್ಲಿ ೧೦೮ ಶಾಸಕರು ಆಳುವ ಕಾಂಗ್ರೆಸ್ಸಿಗೆ ಪ್ರಬಲ ಬೆಂಬಲ ನೀಡಿದರು. ಇವರ ಬಲ ಒಂದಿದ್ದದ್ದು ಎರಡಾಗಿ ಹೋಯ್ತು.

ಕಳೆದ ವರ್ಷ ಒರಿಸ್ಸಾದಲ್ಲಿ ಆಳುವ ಕಾಂಗ್ರೆಸ್ಸು ಬಹುಮತ ಗಳಿಸುತ್ತಿದ್ದರೆ ಅಥವಾ ಸರಕಾರ ರಚಿಸುತ್ತಿದ್ದರೆ ನಂದಿನಿ ಸತ್ಪತಿಯವರೇ ಮುಖ್ಯ ಮಂತ್ರಿಯಾಗಲಿದ್ದರು. ಅವರ ಜಾತಕದಲ್ಲಿ ಆ ಕಾಲಕ್ಕೆ ದುಷ್ಟ ಗ್ರಹಗಳ ಪ್ರಭಾವವಿತ್ತೆಂಬುದನ್ನು (ಮೊದಲು ಕಮ್ಯುನಿಷ್ಟರಾಗಿ ದೇವ—ದೇವತೆ ಗ್ರಹ—ತಾರಾಬಲ ಮೊದಲಾದುವುಗಳಲ್ಲಿ ವಿಶ್ವಾಸ ಕಳೆದುಕೊಂಡರೂ ಈಗ ಆಳುವ ಕಾಂಗ್ರೆಸ್ಸಾದುದರಿಂದ ಜ್ಯೋತಿಷ್ಯದಲ್ಲಿ ವಿಶ್ವಾಸ ಗರಿದ ನಂಬುಗೆ ಮೂಡಿರ ಬಹುದು) ಈಗಲಂತೂ ಅವರು ಒಪ್ಪಿಕೊಳ್ಳಲೇ ಬೇಕು. ಈಗ ಗ್ರಹಗಳೆಲ್ಲ ಶುಭರಾಶಿ ಸೇರಿದರೆಂದೇ ಅನಿರೀಕ್ಷಿತವಾಗಿ ಈ ಘಟನೆ ನಡೆಯಿತೆನ್ನಬೇಕು.

ಶ್ರೀಮತಿ ನಂದಿನಿ ಸತ್ಪತಿಯವರು ಶ್ರೀಮತಿ ಗಾಂಧಿಯವರ ಪ್ರಬಲ ಸಮರ್ಥಕಿ. ತನಗೆ ಅತ್ಯಂತ ಹತ್ತಿರವಿರುವವರನ್ನೇ ರಾಜ್ಯ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿ ಕೇಂದ್ರ ರಾಜ್ಯಗಳಲ್ಲಿ ಮಿತಿ ಮೀರಿದ ಸಹಕಾರ ಬೆಳೆಸಿ ದೇಶವನ್ನು ಮಿತಿಮೀರಿದ ಪ್ರಗತಿಯತ್ತ ಒಯ್ಯುವ ಗಾಂಧಿ ಇರಾದೆ ಹೆಚ್ಚಿನ ರಾಜ್ಯಗಳಿಗೆ ಸರಿ ಬರಲಿಲ್ಲ. ಬಂಗಾಳಕ್ಕೆ ರೇ, ಮಧ್ಯಪ್ರದೇಶಕ್ಕೆ ಸೇಥಿ. ಒರಿಸ್ಸಕ್ಕೆ ಸತ್ಪತಿಯೇನೋ ಬಂದರು. ಮೂವರಿಂದಲೇ ಏನಾದೀತು? ಇವರನ್ನು ಇನ್ನಾರು ಅನುಸರಿಸಲಿರುವರೆಂದು ಮುಂದೆ ಹೇಳಬೇಕಷ್ಟೆ.

ಒರಿಸ್ಸಾದ ಬಿಸ್ವನಾಥದಾಸರ ಸರಕಾರ ಏಕಾಏಕಿಯಾಗಿ ಉರುಳಿ ಬಿತ್ತೆ? ಇದನ್ನು ಉರುಳಿಸುವ ಪ್ರಯತ್ನ ಆಳುವ ಕಾಂಗ್ರೆಸ್ಸು ಮಾಡಿತೆ? ಅಥವಾ ಬಿಜೂ ಪಟ್ನಾಯಕರೇ ಇದಕ್ಕೆ ಹೊಣೆಗಾರರೆ?—ಇಲ್ಲವೇ ಕೆಲವು ಶಾಸಕರೆ? ಇದು ಯಕ್ಷ ಪ್ರಶ್ನೆ.

ಬಿಸ್ವನಾಥದಾಸರು ತಮ್ಮ ವೃದ್ಧಾಪ್ಯದ ಕಾರಣದಿಂದ ರಾಜಿನಾಮೆ ನೀಡಲಿದ್ದಾರೆ; ಅವರ ಸ್ಥಾನಕ್ಕೆ ಬಿಜೂ ಆಯ್ಕೆಯಾಗಲಿದ್ದಾರೆಂಬ ವಾರ್ತೆಯೊಂದು ಒಂದು ತಿಂಗಳಿಗೆ ಮೊದಲು ಹರಡಿತ್ತು. ಬಿಜೂ ಚಾರಿತ್ರಹೀನ ವ್ಯಕ್ತಿತ್ವದವರು; ಅವರು ಹಲವರ ಬೆಂಬಲ ಗಳಿಸಿಕೊಂಡಿರುವುದು ನಿಜವಾದರೂ ಈ ಶಾಸಕರಿಗೆ ಬಿಜೂ ನಾಯಕರಾಗುವುದು ಬೇಡವಾಗಿರ ಬಹುದು. ಅದರಿಂದ ಉತ್ಕಲ ಕಾಂಗ್ರೆಸ್ ಶಾಸಕರು ಬಿಜೂ ವಿರುದ್ಧವಾಗಿ ಬಂಡೆದ್ದು ಸಂಯುಕ್ತರಂಗವನ್ನು ತ್ಯಜಿಸಿರುವ ಸಂಭವವೂ ಇದೆ. ಇದನ್ನು ತಿಳಿದ ಆಳುವ ಕಾಂಗ್ರೆಸ್ಸು ಬಿರುಕು ವಿಸ್ತರಿಸಿಕೊಳ್ಳುವ ಪ್ರಯತ್ನ ನಡೆಸಿರುವ ಸಾಧ್ಯತೆಗಳಿವೆ. ಸ್ವಾರ್ಥ ಸಾಧಿಸಿ ಸ್ವತಂತ್ರರೂ ಈ ಪಕ್ಷವತ್ತ ಹೊರಳಿದರು. ಉತ್ಕಲ ಕಾಂಗ್ರೆಸ್ಸು ಆಳುವ ಕಾಂಗ್ರೆಸ್ಸಿನಲ್ಲಿ ವಿಲೀನಗೊಳ್ಳುವ ನಿರ್ಧಾರದೊಡನೆ ೧೦೮ ಶಾಸಕರು ಒಂದು ಪಕ್ಷದಲ್ಲಿ ನಿಂತು ಇನ್ನೊಂದನ್ನು ನಿಸ್ತೇಜಗೊಳಿಸಿದರು.

ಶ್ರೀಮತಿ ಸತ್ಪತಿಯವರು ಪ್ರಶ್ನಾತೀತ ಸರಕಾರದ ನಾಯಿಕೆಯಾಗಿ ಸೂತ್ರಧಾರಿಣಿಯೆನಿಸಿ ಆಡಳಿತೆ ನಡೆಸುತ್ತಾರೆ. ಆರು ಏಳು ವರ್ಷಗಳಿಂದ... ಆರು ಪತ್ತಮೂರು ತಿಂಗಳುಗಳಿಂದ ಒರಿಸ್ಸಾದ ಜನತೆ ಸ್ವತಂತ್ರ ಪಕ್ಷದ ನೇತೃತ್ವದ "ಪ್ರತಿಗಾಮಿ" ನೀತಿಯಿಂದ ಪ್ರಗತಿಪಥ ವಂಚಿತವಾಗಿತ್ತು. ಶ್ರೀಮತಿ ಸತ್ಪತಿಯವರಿಗೆ ಪ್ರಗತಿ ಪಥಭ್ರಮಣ ಅತ್ಯಂತ ತ್ರಾಸದಾಯಕವೆನಿಸುವುದು ಸ್ವಾಭಾವಿಕ. ಅದ್ದರಿಂದ ಒರಿಸ್ಸಾದ ಪ್ರಜಾ ಶಾಸನ ಪ್ರಣಾಳಿಕೆಯನ್ನೇ ತಲೆಕೆಳಗು ಮಾಡುವುದು ಅವರಿಗೆ ಅನಿವಾರ್ಯವೆನಿಸಿದರೂ ಆಶ್ಚರ್ಯವಿಲ್ಲ. ಪ್ರಗತಿ ವಿರೋಧಿ ಶಾಸನಗಳ ಸ್ಥಾನದಲ್ಲಿ ಕ್ರಾಂತಿಕಾರಿ ಶಾಸನಗಳನ್ನು ತರುವುದು ಅವರ ಮೊದಲ ಕರ್ತವ್ಯ. ಉಳಿದೆಡೆಯಂತೆಯೇ ಮೂರರಲ್ಲೆರಡಂಶ ಬಹುಮತದಿಂದ ಅವರು ಗಾಂಧಿ ಇಷ್ಟಾರ್ಥಸಿದ್ಧಿಯಾಗದ ಪುರೋಹಿತೆಯಾಗಿ ಅದನ್ನು ನಿರ್ವಿಘ್ನವಾಗಿ ನೆರವೇರಿಸಬಲ್ಲರು.

ಇದು ಶಾಸನದ ಪ್ರಶ್ನೆಯಾಯ್ತು. ಆದರೆ, ಪಕ್ಷದ ಪ್ರಶ್ನೆಗೆ ಇಷ್ಟು ಸುಲಭವಾಗಿ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$ % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಆತ ಗ್ರಂಥವನ್ನು ಮುಚ್ಚಿಟ್ಟು, ಮಗುವನ್ನೆತ್ತಿ ತೊಡೆಯ ಮೇಲೆ ಕೂರಿಸಿಕೊಂಡು ಅದನ್ನು ಮುದ್ದಾಡಿದ.

ಸ್ವಲ್ಪ ಹೊತ್ತು ಮೌನದಲ್ಲಿ ಸರಿಯಿತು.

ಅದು ತಪ್ಪನ್ನೇ ಬಯಸಿ ಅಲ್ಲಿಗೆ ಬಂದಿತ್ತು.

ಮಗುವನ್ನು ಇನ್ನಷ್ಟು ರಮಿಸುವ ಉದ್ದೇಶದಿಂದ ಅರಿಕೇಸರಿ—

'ನೀನು ಹಾಲು ಕುಡಿದೆಯಾ? ನಿನ್ನ ಸ್ನಾನ ಆಯಿತಾ? ಅಮ್ಮ ಎಲ್ಲಿ?' ಎಂದು ಪ್ರಶ್ನಿಸಿದ.

ಮಗು ಪ್ರತ್ಯುತ್ತರ ಕೊಡಲಿಲ್ಲ.

ಉದ್ಯಾನದ ಅಂಚಿನತ್ತ ಬೆಟ್ಟು ತೋರಿಸಿ 'ಅಮ್ಮ ಅಲ್ಲಿ' ಎಂದಿತು.

ಉದ್ಯಾನದ ಅಂಚಿನಲ್ಲಿ ಬೆಳೆದು ನಿಂತ ಪಾರಿಜಾತ ಗಿಡದಿಂದ ಹೂವನ್ನಾಯ್ದು ಕೊಳ್ಳುತ್ತ ನಿಂತಿದ್ದಳು ಲೋಕಾಂಬಿಕೆ. ಅರಿಕೇಸರಿ ಅವಳನ್ನೊಮ್ಮೆ ಅಡಿಯಿಂದ ಮುಡಿಯವರೆಗೂ ನೋಡಿದ.

ಅದನ್ನು ನೋಡುತಿದ್ದ ಮಗು 'ದಿಟ್ಟಿ ಆದೀತು ಅಪ್ಪಾಜೀ'

'ಯಾರು ಹೇಳಿದರೋ?'

'ಅಮ್ಮ ಹೇಳಿದ್ದು'

'ಆ ಅಮ್ಮನನ್ನು ಇಲ್ಲಿ ಬರುವಂತೆ ಹೇಳು'

'ಅಮ್ಮಂಗೆ ಇಲ್ಲಿಗೆ ಬರೋಕೆ ನಾಚಿಕೆ'

'ಅಮ್ಮಂಗೇಕೋ ನಾಚಿಕೆ?'

'ಅಮ್ಮ ಹೆಂಗ್ಸು'

'ಅಮ್ಮ ಹೆಂಗ್ಸು ಎಂತ ಯಾರು ಹೇಳಿದ್ದು?'

'ಅಮ್ಮ ಸೀರೆ ಉಡುತ್ತಾಳೆ. ಸೀರೆ ಉಟ್ಟವರು ಹೆಂಗ್ಸರಲ್ಲೇನು ಅಪ್ಪಾಜಿ?'

'ಈ ಪಾಠ ಯಾರು ಕಲಿಸಿದರೋ?'

'ಮೇಷ್ಟ್ರು. ಅಮ್ಮ ಹೆಂಗ್ಸು, ಅಪ್ಪ ಗಂಡ್ಸು. ಹೆಂಗ್ಸು ಸೀರೆ ಉಡುತ್ತಾರೆ. ಗಂಡ್ಸು ಧೋತ್ರ ಉಡುತ್ತಾರೆ. ತುಂಬಾ ಚೆನ್ನಾಗಿ ಹೇಳ್ತಾರೆ ಅಪ್ಪಾಜಿ'

'ಯಾರೋ ಚೆನ್ನಾಗಿ ಹೇಳುವುದು?'

'ಮೇಷ್ಟ್ರು ಚೆನ್ನಾಗಿ ಪಾಠ ಹೇಳ್ತಾರೆ.'

'ಇಂದೇಕೆ ಮೇಷ್ಟ್ರ ಹತ್ತಿರ ಹೋಗಲಿಲ್ಲ?'

'ಇಂದು ರಜಾ ಅಪ್ಪಾಜಿ. ಮೇಷ್ಟ್ರ ಮನೆಗೆ ಅವರ ತಾತ ಬರುತ್ತಾರಂತೆ. ಅದಕ್ಕೆ ನಮಗೆ ಪಾಠ ಇಲ್ಲ. ಅಪ್ಪಾಜಿ ಹತ್ತಿರ ಆಡ್ಕೊಂಡಿರು ಎಂದರು'

'ನಿನಗೆ ಏನು ಆಟ ಬರುತ್ತೋ?'

'ನಂಗೆ ಕುದುರೆ ಸವಾರಿ ಹೇಳ್ಕೊಡುತ್ತೀಯಾ ಅಪ್ಪಾಜಿ'

'ಅದು ಒಂದು ಆಟವೇನೋ ಪುಟ್ಟ.'

'ನಾನು ಅದನ್ನು ಕಲಿಯಬೇಕಂತೆ. ನಾಳೆ ಯುದ್ಧ ಮಾಡಬೇಕಂತೆ. ಹಾಗೆ ಮೇಷ್ಟ್ರು ಹೇಳಿದರು. ನೀನು ಕಲ್ಸಿತ್ತೀಯಾ ಅಪ್ಪಾಜಿ'

'ಅಮ್ಮಂಗೆ ಹೇಳು. ಅವಳು ಹೇಳಿ ಕೊಡುತ್ತಾಳೆ'

ಮಾತು ಕೇಳಿ ಮಗು ನಕ್ಕಿತು.

'ಯಾಕೆ ನಕ್ಕಿದ್ದೋ?'

'ಹೆಂಗ್ಸರು ಸವಾರಿ ಮಾಡುತ್ತಾರೋ ಅಪ್ಪಾಜಿ, ನಿನಗೇನೂ ಗೊತ್ತಿಲ್ಲ. ನೀನು ಸುಳ್ಳು ಹೇಳ್ತೀಯಾ? ಅಲ್ವೇನಮ್ಮ'

ತನ್ನ ಮಾತಿನ ಸಮರ್ಥನೆಗೆ ಮಗು ತಾಯಿಯ ಸಹಾಯ ಕೇಳಿತು.

'ಅಮ್ಮಂಗೆ ಕುದುರೆ ಸವಾರಿ ಬರುತ್ತೆ, ನಿನಗೆ ತಿಳಿಯದು. ಅಮ್ಮನನ್ನೇ ಕೇಳು. ಬರಿಯ ಕುದುರೆ ಸವಾರಿಯೊಂದೇ? ಈಗ್ಯೆ ಆರು ವರ್ಷಗಳಿಂದ ನನ್ನ ಮೇಲೆಯೇ ತನ್ನ ಸವಾರಿ ನಡೆಸುತ್ತಿದ್ದಾಳೆ'

ಮಗುವಿಗೆ ಆ ಮಾತಿನ ಅರ್ಥವಾಗಲಿಲ್ಲ.

ಸುಳ್ಳು ಹೇಳ ಬಾರದು ಎಂಬುದನ್ನು ಅದು ತಿಳಿದಿತ್ತು. ಆದ್ದರಿಂದ ಅಮ್ಮಂಗೂ ಕುದುರೆ ಸವಾರಿ ಬರುತ್ತದೆಂದು ಭಾವಿಸಿ 'ಅಮ್ಮಾ! ನೀನೇ ಹೇಳಿ ಕೊಡು' ಎಂದು ಅಂಗಲಾಚಿತು.

'ನನಗೆ ಕುದುರೆ ಸವಾರಿ ಹೇಳಿ ಕೊಟ್ಟವರು ನಿಮ್ಮ ಅಪ್ಪಾಜಿ. ಅವರೇ ನಿನಗೂ ಕಲಿಸಲೋ ಮರಿ'

'ಈಗಲೇ ಹೇಳಿ ಕೊಡಿ ಅಪ್ಪಾಜಿ' ಮಗು ದುಂಬಾಲು ಬಿದ್ದಿತು—

'ಏನನ್ನೋ?'

'ಸವಾರಿಯನ್ನು'

'ಆಗಲೇ ಪ್ರಾರಂಭಿಸಿದ್ದೀಯಲ್ಲೋ'

ಮಾತಿನ ಹಿಂದಿದ್ದ ಧ್ವನಿಯನ್ನು ಮಗುವಿನಿಂದ ಗುರುತಿಸುವುದಾಗಲಿಲ್ಲ.

ಆದರೆ ಅದನ್ನು ಗ್ರಹಿಸಿದ ಲೋಕಾಂಬಿಕೆ 'ಹೀಗೆ ಸವಾರಿ ನಡೆಸಿದರೇ ನೀವು ಗಂಡಸರು ದಾರಿಗೆ ಬರುವುದು' ಎಂದು ಪತಿಯನ್ನು ಛೂಬಲಿಸಿದಳು.

'ನೀನು ಸಾಲದೆಂದು, ಮಗನನ್ನು ಛೂ ಬಿಟ್ಟೆಯಾ ಲೋಕಾ?'

'ನಿಮ್ಮನ್ನು ಸರಿದಾರಿಗೆ ತರಲು ತಾಯಂದಿರು ಬಳಸುವ ಸಾಧನ ಮಕ್ಕಳು. ಇನ್ನು ಮುಂದೆ ನಾನೂ ಅದನ್ನು ಬಳಸಬೇಕಾಗಿದೆ.'

'ಬಳಸುವುದೇನು ಬಂತು? ಆಗಲೇ ತಯಾರಿ ನಡಿಸಿದ್ದೀಯಪ?'

'ಅದಕ್ಕೊಂದು ತಯಾರಿಯೂ ಬೇಕೆ? ಅವನನ್ನೇ ಕೇಳಬಾರದೆ ಕೇಳಿ.'

'ಏನೋ ಪುಟ್ಟ, ಅದು?'

'ಆ ಗಿಡದಲ್ಲಿ ಹೂವ ಹೇಗೆ ಬಂತು ಅಪ್ಪಾಜಿ?'

'ಗಿಡ ಬೆಳೆದು ದೊಡ್ಡದಾದರೆ ಅದರಲ್ಲಿ ಹೂವ ಬಿಡುತ್ತದೆ'

'ಅಮ್ಮ ಅಷ್ಟು ಬೆಳೆದಿದ್ದಾಳೆ, ಅವಳ ತಲೆಯಲ್ಲೇಕೆ ಹೂವ ಬಿಡುವುದಿಲ್ಲ.'

'ಇದೆಯಲ್ಲೋ. ಅಮ್ಮನ ತಲೆಯಲ್ಲೂ ಹೂವ?'

'ಅದು ಗಿಡದಿಂದ ಕೊಯಿದು ಮುಡಿದುಕೊಂಡದ್ದು. ನೀನು ಸುಳ್ಳು ಹೇಳುತ್ತೀಯಾ?'

ಸತ್ಯ-ಸುಳ್ಳಿನ ಕುರಿತು ಮಗುವಿನ ಚಿತ್ತಭಿತ್ತಿಯಲ್ಲಿ ಮೂಡಿದ ಸ್ಪಷ್ಟ ಕಲ್ಪನೆಯಿಂದ ಅರಿಕೇಸರಿ ಆನಾಕ್ಕಾದ. ಮಗುವಿನಲ್ಲಿ ಮೂಡಿದ ಕುತೂಹಲವನ್ನು ತಣಿಸಲು ತನ್ನಿಂದಾಗದೆ ಹೋಯಿತಲ್ಲಾ ಎಂದು ಒಳಗೊಳಗೇ ವ್ಯಥಿತನಾದ.

'ಆ ಹೂವಿಗೆ ಬಣ್ಣ ಎಲ್ಲಿಂದ ಬಂತು ಅಪ್ಪಾಜಿ? ಯಾರು ಬಳಿದರು?'

'ಅದು ಆ ಹೂವಿನ ಬಣ್ಣ'

ಅದಕ್ಕಿಂತ ಹೆಚ್ಚನ್ನು ಹೇಳಲು ಅವನು ಶಕ್ತನಾಗಲಿಲ್ಲ. ಮಗುವಿಗೆ ಅರ್ಥವಾಗುವ ರೀತಿಯಲ್ಲಿ ಅದನ್ನು ತಿಳಿಹೇಳುವುದು ಆತನಿಂದಾಗದೆ ಹೋಯಿತು. ಆದರೆ ಅವನ ಉತ್ತರದಿಂದ ಬಾಲಕನಿಗೆ ತೃಪ್ತಿಯಾಗಲಿಲ್ಲ.

'ಗಿಡ ಹಸಿರಾಗಿದೆ. ಅದರಲ್ಲಿ ಈ ಕೆಂಪು ಹೂವ ಹೇಗೆ ಹುಟ್ಟಿತು?'

ಅರಿಕೇಸರಿಯಿಂದ ಪ್ರಶ್ನೆಯನ್ನುತ್ತರಿಸುವುದಾಗದೆ ಹೋಯಿತು. ಆತ ಲೋಕಾಂಬಿಕೆಯತ್ತ ಹೊರಳಿದ.

ತನ್ನ ಸಹಾಯಕ್ಕೆ ಬರುವಂತೆ ಆಕೆಯನ್ನು ಯಾಚಿಸುವಂತಿತ್ತು, ಆ ನೋಟ.

ತಾಯಿ ತಂದೆ ಇಬ್ಬರೂ ಮಾತನಾಡದಿರುವುದನ್ನು ನೋಡಿ ಮಗುವಿನ ಕುತೂಹಲ ಮತ್ತಷ್ಟು ಕೆರಳಿತು. ಅದು ತಂದೆಯ ತೊಡೆಯನ್ನಲುಗಿಸಿ, 'ಅಪ್ಪಾಜಿ, ನೀನು ಪೆದ್ದ. ನಿನಗೆ ಏನೂ ಗೊತ್ತಿಲ್ಲ. ನಾನೇ ಹೇಳಿ ಬಿಡಲೋ?'

'ಹೂಂ! ನೀನೇ ಹೇಳಪ್ಪ'

'ನೀನು ಸೋತೆ ಎಂದು ಹೇಳು.'

'ಹೇಳದಿದ್ದರೆ?'

'ನಾನು ಹೇಳುವುದಿಲ್ಲ.'

— ಮಗು ನಿರ್ಧಾರದಿಂದ ನುಡಿಯಿತು.

'ಆಯಿತು, ನಾನು ಸೋತೆ.'

'ಊಹೂಂ! ಮೂರು ಸಲ ಹೇಳಬೇಕು, ಕಿವಿ ಹಿಡಿದುಕೊಂಡು ಮೂರು ಸಲ ಸೋತೆ ಅನ್ನು.'

ಮಗುವಿನ ಛಲಕ್ಕೆ ಅರಿಕೇಸರಿ ಮಣಿದು, ಅದು ಹೇಳಿದಂತೆಯೇ ಮಾಡಿದ.

ಮಗು ಅವನನ್ನೊಮ್ಮೆ ನೋಡಿ ಕೇಕೆ ಹಾಕಿ 'ಅಮ್ಮನ ಹೊಟ್ಟೆಯಿಂದ ನಾನು ಬಂದ ಹಾಗೆ.'

'ಅಂದರೆ—'

'ಅಮ್ಮ ಹೆಂಗಸು; ನಾನು ಗಂಡಸು; ಹೆಂಗಸಿನ ಹೊಟ್ಟೆಯಲ್ಲಿ ಗಂಡು ಹುಟ್ಟಿದ ಹಾಗೆ, ಹಸಿರು ಗಿಡದಲ್ಲಿ ಕೆಂಪು ಹೂವ ಹುಟ್ಟುವುದು.'

'ನೀನು ತುಂಬ ಜಾಣ' ಎಂದು ಮಗುವನ್ನೆತ್ತಿ ಮುದ್ದಾಡಿದ ಅರಿಕೇಸರಿ.

ಲೋಕವನ್ನೇ ಜಯಿಸಿದ ಹೆಮ್ಮೆ ಮಗುವಿನ ಕಂಗಳಲ್ಲಿ ಮಿಂಚುತಿತ್ತು — ತಂದೆಗೂ ತಿಳಿಯದ ಸಂಗತಿ ತನಗೆ ತಿಳಿದಿತ್ತು.

'ಅಪ್ಪಾಜೀ'

'ಏನೋ ಪುಟ್ಟ?'

'ಒಂದು ಮಾತು ಕೇಳಲಾ?'

(ಹನ್ನೊಂದನೇ ಪುಟ ನೋಡಿರಿ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ನವಯುಗ
ಸಂಪಾದಕೀಯ

ಉಚ್ಚ ಶಿಕ್ಷಣ ಸಂಸ್ಥೆಗಳು ಪೋಷಕರಿಂದ ಪೋಷಿತವಾಗಲಿ

ರಾಜ್ಯ ಸಭಾ ಸದಸ್ಯ ಶ್ರೀ ಟಿ. ಎ. ಪೈಯವರು ತಾನು ಅಧಿಕಾರದಲ್ಲಿರುತ್ತಿದ್ದರೆ ಖಾಸಗಿ ಕಾಲೇಜುಗಳಿಗೆ ಸರಕಾರ ನೀಡುತ್ತಿರುವ ಸಹಾಯ ಧನವನ್ನು ನಿಲ್ಲಿಸುತ್ತಿದ್ದೆ ಎಂದು ಖಂಡ ತುಂಡ ಶಬ್ದ ಪುಂಜದಲ್ಲಿ ಹೇಳಿರುವುದರ ನೈಜ ಕಾರಣಗಳನ್ನು ಪ್ರತಿಯೊಬ್ಬರೂ ಪರಿಶೀಲಿಸಬೇಕು. ಸ್ವಂತ ಕಾಲೇಜಿನ ಸ್ಥಾಪನೆ ಮತ್ತು ಬೆಳವಣಿಗೆಗಾಗಿ ಶ್ರೀ ಪೈಯವರು ಅಹರ್ನಿಶಿ ದುಡಿದಿದ್ದರೋ ಅದೇ ಕಾಲೇಜಿನ ಸಮಾರಂಭವೊಂದರಲ್ಲಿ ಈ ರೀತಿ ಹೇಳಬೇಕಾದರೆ, ಅವರ ಮಾತು ಅರ್ಥಪೂರ್ಣವಿರಬೇಕು. ತನ್ನ ಅಭಿಪ್ರಾಯಕ್ಕೆ ಅವರು ಹಲವು ಕಾರಣಗಳನ್ನು ಕೊಡುತ್ತಾರೆ. ಅವುಗಳಲ್ಲಿ ಒಂದೆರಡು ಅತ್ಯಂತ ಗಮನೀಯ. ಕಾಲೇಜು ಶಿಕ್ಷಣ ನೀಡುವುದು ಸರಕಾರದ ಹೊಣೆಯಲ್ಲ. ಕೇವಲ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮತ್ತು ನಿಃಶುಲ್ಕವಾಗಿ ಕೊಡುವುದು ಸರಕಾರದ ಸ್ವೀಕೃತ ಕರ್ತವ್ಯ. ಸರಕಾರ ಈ ನಿಟ್ಟಿನಲ್ಲಿ ಬಹಳಷ್ಟು ಶ್ರಮಿಸುತ್ತಲೂ ಇದೆ. ಆದರೆ, ಆರರಿಂದ ಹನ್ನೊಂದು ವರ್ಷ ಪ್ರಾಯದೊಳಗಿನ ಮಕ್ಕಳೆಲ್ಲರ ಹೆಸರನ್ನು ಶಾಲೆಯ ಹಾಜರಿ ಪುಸ್ತಕದಲ್ಲಿ ಬರೆಸಲು ಸರಕಾರ ಇನ್ನೂ ಶಕ್ತವಾಗಿಲ್ಲ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಶಿಕ್ಷಣ ಸೌಕರ್ಯಗಳು ವಿಪುಲವಾಗಿ ವಿಸ್ತರಣೆಗೊಂಡಿರುವುದು ನಿಜವಾದರೂ ದೇಶದಲ್ಲಿ ಸಾಕ್ಷರತೆ ಕೇವಲ ೨೯ ಪ್ರತಿಶತವೆಂದರೆ, ಈ ಕ್ಷೇತ್ರದಲ್ಲಿ ನಾವು ಮಾಡಬೇಕಾದದ್ದು ಗೌರಿಶಂಕರದಷ್ಟಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಶಿಕ್ಷಣ ಇಲಾಖೆಯು ಪ್ರತಿವರ್ಷ ನೂರಾರು ಕೋಟಿ ರೂಪಾಯಿಗಳನ್ನು ನೀರಿನಂತೆ ವ್ಯಯಿಸುತ್ತದೆ; ಇದರ ಸಿಂಹಪಾಲು ಪ್ರಾಥಮಿಕ ಶಿಕ್ಷಣಕ್ಕೆ ಸಲ್ಲಬೇಕಾಗಿದ್ದರೂ ವಸ್ತುಸ್ಥಿತಿ ತದ್ವಿರುದ್ಧವಿದೆ. ಆದುದರಿಂದಲೇ ದೇಶದ ಪ್ರಾಥಮಿಕ ಶಾಲೆಗಳೂ ಪ್ರಾಥಮಿಕ ಶಿಕ್ಷಕ ವಿದ್ಯಾರ್ಥಿಗಳೂ ಪ್ರಾಥಮಿಕ ಶಿಕ್ಷಣವೂ ದಿನಂಪ್ರತಿ ಗೋಳಿಡುತ್ತಿವೆ. ಇದನ್ನು ತಪ್ಪಿಸಬೇಕಾದರೆ ಪ್ರಾಥಮಿಕ ಶಿಕ್ಷಣವನ್ನು ಆಕಾಶದಷ್ಟು ಶುಚಿಯಾಗಿ, ವಿಸ್ತಾರವಾಗಿ ಮಾಡಬೇಕಾದರೆ, ಈ ಬಾಬಿಗೆ ಹೆಚ್ಚು ಹೆಚ್ಚು ಹಣ ಪೂರೈಸಬೇಕು. ಪ್ರಾಥಮಿಕ ಶಿಕ್ಷಣವನ್ನೇ ಸಾರ್ವತ್ರಿಕವಾಗಿ ನಿಃಶುಲ್ಕವಾಗಿ ಮಾಡಲು ಅಶಕ್ತರಾಗಿರುವಾಗ ಕಾಲೇಜು ಶಿಕ್ಷಣವನ್ನು ಉಚಿತವಾಗಿ ಕೊಡುತ್ತೇವೆ. ಅದನ್ನು ಸಾರ್ವತ್ರಿಕವಾಗಿ ಮಾಡುತ್ತೇವೆ ಎಂಬ ಆಶ್ವಾಸನೆ ನೀಡುವುದು ಅಕಾಲಿಕ, ಅನಪೇಕ್ಷಣೀಯ. ಅಯೋಗ್ಯರೂ ಅನರ್ಹರೂ ಕಾಲೇಜುಗಳಲ್ಲಿ ಸೇರಿಕೊಂಡು ಅಪವ್ಯಯವನ್ನು ಮಾತ್ರ ಸಾಧಿಸಿಯಾರು? ದೇಶದಲ್ಲಿ ಸಮಾನತೆಯ ಮಂತ್ರ ಜಪಿಸುತ್ತಿರುವಾಗ ಶಿಕ್ಷಿತರೆಂದು ಹೇಳಿಕೊಳ್ಳುವ ಬಿಳಿಯ ಕೊರಳು ಪಟ್ಟಿ ವರ್ಗವು ತಮ್ಮನ್ನು ಅಸಮಾನರೆಂದು ತಿಳಿದು ವರ್ತಿಸುತ್ತಿದೆ. ಈ ಗುಂಪು ದಿನೇ ದಿನೇ ಬೆಳೆಯುತ್ತಿದೆ; ನಿರುದ್ಯೋಗ ಸಮಸ್ಯೆ ಉಲ್ಬಣವಾಗುತ್ತದೆ. ನಿರುದ್ಯೋಗಿ ಪದವೀಧರರು ಸರಕಾರಕ್ಕೊಂದು ತಲೆಶೂಲೆ.

ಈ ಪರಿಸ್ಥಿತಿ ತಪ್ಪಬೇಕಾದರೆ, ಕಾಲೇಜು ಶಿಕ್ಷಣವನ್ನು ಮಿತಿಗೊಳಿಸುವುದೇ ಸೂಕ್ತ ಉಪಾಯ. ಅದರ ವಿಸ್ತರಣೆಯ ಕಾರ್ಯ ನಿಧಾನವಾಗಿ ಸಾಗಬೇಕು. ಇದಕ್ಕೆ ಸರಕಾರದ ಯಾವುದೇ ನೆರವು ದೊರೆಯಬಾರದು. ಪ್ರೌಢಶಾಲೆ—ಕಾಲೇಜುಗಳಿಗೆ ಮೊದಲಿನ ನಾಲ್ಕಾರು ವರ್ಷಗಳ ವರೆಗೆ ಮಾತ್ರ ಸಹಾಯಧನವಿಲ್ಲವೆಂಬ ನಿಯಮ ಹೋಗಿ ಎಂದೆಂದಿಗೂ ಇಲ್ಲವೆಂದಾಗಬೇಕು. ಇದ್ದರೂ ಅದು ನಾಮಮಾತ್ರಕ್ಕಾಗಿರಬೇಕು. ಸಾರ್ವಜನಿಕ ಸಹಾಯದಿಂದಲೇ ಶಿಕ್ಷಣ ಸಂಸ್ಥೆ ಕಟ್ಟಬೇಕು. ಆದರೆ ಈ ಸಹಾಯ ಸ್ವಯಂಪ್ರೇರಿತವಾಗಿ, ಅಥವಾ ಬೇಡಿದಾಗ ದೊರೆಯುವುದಿಲ್ಲವೆಂದೂ ಶ್ರೀ ಪೈಯವರು ತನ್ನ ಅನುಭವವನ್ನು ಹೇಳಿದ್ದಾರೆ. ಅನಿವಾರ್ಯತೆ ಕಾಣಿಸಿಕೊಂಡಾಗ ಮಾತ್ರ ಹಸ್ತಮುಕ್ತವಾಗುವುದು ನಮ್ಮ ದೇಶದ ಜಾಯಮಾನ. ಸಾವಿರಗಟ್ಟಲೆ ಕೊಟ್ಟು ವೃತ್ತಿಪರ ಕಾಲೇಜುಗಳಲ್ಲಿ ಸೀಟು ಪಡೆಯಬೇಕಾಗುತ್ತದೆಂದು ದೂರುವ ರಾಜ್ಯಕೀಯ ಪುಢಾರಿಗಳು ಈ ಸತ್ಯವನ್ನು ಮರೆತು ಬಿಡುತ್ತಾರೆ. ವೃತ್ತಿ ಶಿಕ್ಷಣ, ಉಚ್ಚ ಶಿಕ್ಷಣ, ಪ್ರೌಢ ಶಿಕ್ಷಣವು ಆಯಾ ಮಕ್ಕಳ ಹೆತ್ತವರ ಹೊಣೆಗಾರಿಕೆ. ಇದಕ್ಕೆ ತಗಲುವ ವೆಚ್ಚವನ್ನು ಅದನ್ನು ಪಡೆಯ ಬಯಸುವವರೇ ಭರಿಸಬೇಕು. ಒಬ್ಬ ವೈದ್ಯಕೀಯ ಪದವೀಧರನನ್ನು ತಯಾರಿಸಲು ನೂರಾರು ಮಕ್ಕಳನ್ನು ಪ್ರಾಥಮಿಕ ಶಿಕ್ಷಣದಿಂದ ವಂಚಿತಗೊಳಿಸುತ್ತ ಹೋದರೆ, ಸಾಕ್ಷರತೆ ಹೆಚ್ಚುವುದು ಹೇಗೆ?

ಶ್ರೀ ಪೈಯವರ ಮಾತುಗಳನ್ನು ಸರಕಾರ, ಕ್ಯಾಪಿಟೇಶನ್—ಡೊನೇಶನ್ ವಿರೋಧಿಗಳು, ಉಚ್ಚ ಶಿಕ್ಷಣ ಪಡೆಯ ಬಯಸುವ ಮಕ್ಕಳು—ಅವರ ಹೆತ್ತವರು ಎಲ್ಲರೂ ಗಾಢವಾಗಿ ಅಧ್ಯಯನ ಮಾಡಬೇಕು. ಸಮಾಜವಾದವೆಂದರೆ ಕೆಲವರನ್ನು ಮೇಲೆತ್ತಲು ಹಲವರನ್ನು ಬಲಿಗೊಡುವುದಲ್ಲ. ಆದುದರಿಂದ ಸರಕಾರವು ಇನ್ನು ಮುಂದೆ ಸ್ಥಾಪನೆಯಾಗುವ ಯಾವ ಕಾಲೇಜು—ಪ್ರೌಢ ಶಾಲೆಗಳಿಗೂ ನೆರವು ನೀಡಬಾರದು; ದಾನವನ್ನು ತೆರೆಯಬಾರದು. ಶಿಕ್ಷಣ ಇಲಾಖೆಗೆ ಮೀಸಲಿಡುವ ಹಣ ಪ್ರಾಥಮಿಕ ಶಿಕ್ಷಣಕ್ಕೇನೇ ವಿನಿಯೋಗ ಮಾಡಿ ಪ್ರಜೆಗಳೆಲ್ಲರನ್ನೂ ಸಾಕ್ಷರಗೊಳಿಸುವತ್ತ ಲಕ್ಷ್ಯ ಕೇಂದ್ರೀಕರಿಸಬೇಕು. ಈ ಗುರಿ ಸಿದ್ಧಿಸಿದ ಬಳಿಕ ಪ್ರೌಢ ಶಿಕ್ಷಣವನ್ನೂ ಸಾರ್ವತ್ರಿಕ ಮಾಡುವತ್ತ ಮನಸ್ಸು ಹರಿಸಬಹುದು. ಆ ಕಾಲ ಪ್ರಾಯಃ ಈ ತಲೆಮಾರಿನಲ್ಲಿ ಬರಲಾರದೆಂದೇ ಅನಿಸುತ್ತದೆ. ಮತ್ತೆ ಉಚಿತ ಪದವಿ ಶಿಕ್ಷಣದ ಮಾತು ಶತಮಾನ ದೂರದ್ದೇ ಅಲ್ಲವೇ?

ಸಿಮ್ಲಾದಲ್ಲಿ ಶೃಂಗಸಭೆ

ಭಾರತದ ಪ್ರಧಾನಿ ಇಂದಿರಾ ಗಾಂಧಿ ಮತ್ತು ಪಾಕ್ ರಾಷ್ಟ್ರಪತಿ ಭುಟ್ಟೋರವರ ನಡುವೆ ಇದೇ ೨೮ರಂದು ನಡೆಯಲೆಂದು ನಿಯೋಜಿತವಾದ ಶೃಂಗ ಸಭೆ ಸಿಮ್ಲಾದಲ್ಲಿ ಸೇರುತ್ತದೆ. ಭಾರತ ಪಾಕ್‌ಗಳ ನಡುವೆ ಸೌಹಾರ್ದ ಸಂಪರ್ಕವೇರ್ಪಡಿಸಿ ಇರಬಹುದಾದ ಸಮಸ್ಯೆಗಳೆಲ್ಲವನ್ನೂ ಶಾಂತ ವಿಧಾನಗಳಿಂದ ಪರಿಹರಿಸಿಕೊಳ್ಳಲು ಸೂಕ್ತ ವೇದಿಕೆ ಈ ಸಮ್ಮೇಳನವೆನ್ನೋಣ. ಪಾಕ್ ರಾಷ್ಟ್ರಪತಿಗಳಿಗೆ ಭಾರತ ಸ್ನೇಹದ ಬಗ್ಗೆ ಎಷ್ಟು ಕಾಳಜಿಯಿದೆಯೆಂಬುದನ್ನು ಹೊಂದಿಕೊಂಡು ಮಾತುಕತೆಗಳು ಯಶಸ್ವಿಯೋ ಅಯಶಸ್ವಿಯೋ ಆಗುತ್ತವೆ. ಶ್ರೀ ಭುಟ್ಟೋ ಅರಬ ಮತ್ತು ಕೆಲವು ಆಫ್ರಿಕನ್ ದೇಶಗಳನ್ನು ಸಂಚರಿಸಿ ಅಲ್ಪಸ್ವ ಅನುಕಂಪ ಗಳಿಸಿಕೊಂಡಿರುವುದು ನಿಜವಾದರೂ ಅವರು ನಿರೀಕ್ಷಿಸಿದ್ದ ಪ್ರಯೋಜನ ಅಲಭ್ಯವಾಯ್ತೆಂಬುದೂ ಸತ್ಯ. ಪ್ರಧಾನಿ ಗಾಂಧಿಯವರೂ ಯುರೋಪಿನ ಕೆಲವು ದೇಶಗಳಲ್ಲಿ ಭಾರತ ನಿಲುವೆಯನ್ನು ಸ್ಪಷ್ಟ ಪಡಿಸಿದರು. ತನ್ನ ನೆರೆಹೊರೆಯಲ್ಲಿ ದುರ್ಬಲ ರಾಷ್ಟ್ರವಿರುವುದು ಭಾರತದ ಹಿತದೃಷ್ಟಿಯಲ್ಲಿ ಒಳ್ಳೆಯದಲ್ಲ. ಆದುದರಿಂದ ಬಾಂಗ್ಲಾ ಮಾತ್ರವಲ್ಲ ಪಾಕಿಸ್ತಾನವೂ ಮಜಬೂತು ರಾಷ್ಟ್ರವಾಗಬೇಕು. ಪಾಕಿಸ್ತಾನದ ಜನಸಮಾದದ್ದು ಜಾತೀಯತೆಯ ತಳಪಾಯದಲ್ಲ; ಅದನ್ನು ಮುರಿದು ಹಾಕಿ ಬಾಂಗ್ಲಾದೇಶ ಉದಯವಾಗಿದೆ. ಈ ವಸ್ತುಸ್ಥಿತಿಯನ್ನು ಪ್ರಧಾನಿ ಗಾಂಧಿಯವರು ಸ್ಪಷ್ಟಪಡಿಸಿದ್ದಾರೆ.

ಅಷ್ಟು ಮಾತ್ರವಲ್ಲದೆ ಭಾರತ—ಪಾಕಿಸ್ತಾನಗಳ ನಡುವೆ 'ಸಮರವಿಲ್ಲ' ಒಡಂಬಡಿಕೆಯನ್ನವರು ಬಯಸುತ್ತಾರೆ. ಈ ಕೊಡುಗೆಯನ್ನು ಹತ್ತು ವರ್ಷಗಳಿಗೆ ಮೊದಲು ದಿ| ಜವಾಹರಲಾಲರೂ ನೀಡಿದ್ದರು. ಆದರೆ, ಪಾಕ್ ನಾಯಕರಿಗೆ ರುಚಿಸಲಿಲ್ಲ. ಭಾರತದ ಅವಿಭಾಜ್ಯ ಅಂಗವೆನಿಸಿದ ಕಾಶ್ಮೀರವನ್ನು ಕಬಳಿಸಲು ಯುದ್ಧವೊಂದೇ ಸಾಧನವೆಂದವರು ಬಗೆದರು; ಯುದ್ಧ ಮಾಡಿಯೂ ಮಾಡಿದರು; ಆದರೆ ತಾವು ಅಜೇಯರೆಂಬ ಅವರ ಅಚಲ ವಿಶ್ವಾಸ ಬಿಸಿಲಲ್ಲಿ ಬೆಣ್ಣೆ ಕರಗಿದಂತಾಯ್ತು. ಪಾಕ್ ನಾಯಕರಿಗೆ ವಿವೇಕೋದಯವಾಯಿತೆಂದಾದರೆ ಈಗಲಾದರೂ 'ಸಮರವಿಲ್ಲ' ಒಡಂಬಡಿಕೆಗೆ ಮುಂದೆ ಬರಬಹುದು. ಶ್ರೀ ಭುಟ್ಟೋ ಶಾಶ್ವತ ಶಾಂತಿಯನ್ನು, ಶಾಶ್ವತ ಸ್ನೇಹವನ್ನು ಬಯಸುವುದೇ ಆದರೆ ಈ ಒಡಂಬಡಿಕೆಗೆ ಮುಂದೆ ಬರುತ್ತಾರೆ; ಇಲ್ಲವಾದರೆ ಅವರ ವರ್ತನೆ ದುರಂತ ನಾಟಕದ ಇನ್ನೊಂದು ಅಂಕವಾಗುತ್ತದೆ.

ಅರುವತ್ತನೆಯ ವಸಂತದಲ್ಲಿ ಪರಿಶ್ರಮ—ಸಾಹಸಗಳ ಸಾಕಾರಮೂರ್ತಿ

ಶ್ರೀ ಬಿ. ಮಂಜುನಾಥ ಪೈ

ಒಂದು ಸಂಸ್ಥೆ ಅಥವಾ ಉದ್ದಿಮೆ ಬೆಳೆಯಲು ಹಲವರ ಸಹಕಾರ ಬೇಕು ನಿಜ. ಆದರೆ, ಈ ಸಹಕಾರವು ಒಬ್ಬ ವ್ಯಕ್ತಿಯನ್ನು ಕೇಂದ್ರ ಬಿಂದುವಾಗಿಸಿಕೊಂಡು ಸುತ್ತುವರಿಯುತ್ತದೆ. ಇಂದು ಭಾರತದ ಬೃಹತ್ ಬೀಡಿ ಉದ್ದಿಮೆಯ ಸಂಸ್ಥೆಯಾದ "ದಿ ಭಾರತ ಬೀಡಿ ವರ್ಕ್ಸ್" ಕೂಡ ಇದಕ್ಕೆ ಹೊರತಲ್ಲ. ಈ ಸಂಸ್ಥೆಯ ಹಿಂದೆ-ಮುಂದೆ ಇರುವ ಶಕ್ತಿ ಸ್ವರೂಪದ ವ್ಯಕ್ತಿ ಅರುವತ್ತರ ಹರೆಯ ಮುಟ್ಟಿದ ಶ್ರೀ ಬಿ. ಮಂಜುನಾಥ ಪೈ. ಶ್ರೀ ಪೈಯವರ ಬೆವರು-ರಕ್ತಗಳೇ. ಘನೀಭೂತವಾಗಿ ಇಂದು ಈ ಭಾರತ ಸ್ವರೂಪವನ್ನು ಪಡೆದಿದೆಯೆಂದರೆ ಅತಿಶಯವಲ್ಲ.

೧೯೧೩ರಲ್ಲಿ ಕಾರ್ಕಳ ತಾಲೂಕಿನ ದುರ್ಗಗ್ರಾಮದ ಬಂಟೆವಡ್ಡದಲ್ಲಿ ಜನಿಸಿದ ಶ್ರೀ ಪೈಯವರು ಧರ್ಮಸ್ಥಳದ ಅಧಿದೇವತೆ ಮಂಜುನಾಥನ ಅನುಗ್ರಹದಿಂದ ಆರೋಗ್ಯ ಲಾಭವನ್ನು ಪಡೆದರು. (ಅವರ ಷಷ್ಟ್ಯಬ್ದಿಯಲ್ಲೂ ಶ್ರೀಕ್ಷೇತ್ರದ ಧರ್ಮಾಧಿಕಾರಿಯವರು ಉಪಸ್ಥಿತರಿದ್ದು ಮಂಜುನಾಥನ ಪ್ರಸಾದವನ್ನಿತ್ತರು.) ಜೀವನೋಪಾಯಕ್ಕಾಗಿ ಹಲವಾರು ಬಗೆಯಾಗಿ ಹೋರಾಡಿದ ಶ್ರೀ ಪೈ ತಮ್ಮ ೧೮ನೆ ವಯಸ್ಸಿನಲ್ಲಿ ಬೀಡಿ ಉದ್ಯಮಕ್ಕೆ ಕೈ ಹಾಕಿದರು. ಬೀಡಿ ಕಟ್ಟುವುದು, ಅವನ್ನು ವಿತರಿಸುವುದೂ ಎರಡೂ ಅವರದ್ದೆ ಕೆಲಸವಾಗಿತ್ತು. ಹಗಲಿಗೆ ಸೈಕಲ್ ಸವಾರಿ—ರಾತ್ರೆ ಬೀಡಿ ತಯಾರಿ—ಹೀಗೆ ಅಹರ್ನಿಶಿ ಬೆವರು ಸುರಿಸಿದ ಸಾಹಸಿ ಶ್ರೀ ಪೈಯವರ ಪರಿಶ್ರಮ ವ್ಯರ್ಥವಾಗಲಿಲ್ಲ.

ಹೀಗೆ ಅವರು ಮೂವತ್ತು ರೂಪಾಯಿಗಳ ಬಂಡವಳದಲ್ಲಿ ಆರಂಭಿಸಿದ ಭಾರತ ಬೀಡಿ ವರ್ಕ್ಸ್ ಇಂದು ಹಿಮಾಲಯದಷ್ಟು ಬೆಳೆದು ನಿಂತಿದೆ. ಮೂವತ್ತು ಸಾವಿರಕ್ಕೂ ಹೆಚ್ಚಿನ ನೌಕರರಿಗೆ ಉದ್ಯೋಗ ಒದಗಿಸಿ ಕೊಟ್ಟಿದೆ. ಕರ್ನಾಟಕ-ತಮಿಳುನಾಡು-ಕೇರಳ-ಮಹಾರಾಷ್ಟ್ರ-ಗುಜರಾತ ಮೊದಲಾದ ರಾಜ್ಯಗಳಲ್ಲಿ ಕೋಟ್ಯಂತರ ಬೀಡಿಗಳನ್ನು ವಿತರಣೆ ಮಾಡುತ್ತದೆ.

ಶ್ರೀ ಮಂಜುನಾಥ ಪೈಯವರು ಸ್ವಪರಿಶ್ರಮದಿಂದಲೇ ಗೌರಿಶಂಕರ ಮುಟ್ಟಿದ ಬಂಗಾರದ ಮನುಷ್ಯರು. ಮಾನವ ಸಹಜವಾದ ಏರಿಳಿತಗಳೆಲ್ಲವನ್ನೂ ಅನುಭವಿಸಿಕೊಂಡು ಬಂದವರು. ಇತರರ ನೋವನ್ನು ಅರಿಯಬಲ್ಲವರು. ಅವರ ಸ್ವಭಾವ ಉದಾರ; ಅವರ ಪ್ರವೃತ್ತಿ ಸರಳ. ಒಪ್ಪವಾದ ಸಂಸಾರ; ಓರಣವಾದ ಬದುಕು.

ಅವರಿಂದ ಉಪಕೃತರಾಗದವರು ವಿರಳ. ಶಾಲಾ ಶಿಕ್ಷಣದಿಂದ ವಂಚಿತರಾದ ಶ್ರೀ ಪೈಯವರಿಗೆ ಶಿಕ್ಷಣದ ಮೇಲೆ ಮಿತಿಮೀರಿದ ಆಸಕ್ತಿ. ದೀನದಲಿತರ ಮೇಲೆ ಅನುರಕ್ತಿ. ಅವರ ದೈನಂದಿನ ವ್ಯವಹಾರದಲ್ಲಿ ಇದು ಅಭಿವ್ಯಕ್ತ. ಅವರ ಮಕ್ಕಳಲ್ಲೂ ಇಂತಹದೇ ಗುಣ ಸುವ್ಯಕ್ತ.

ಇದೇ ತಿಂಗಳ ಐದರಂದು ವಿದ್ಯುಕ್ತವಾಗಿ ಶ್ರೀ ಪೈಯವರು ತಮ್ಮ ಷಷ್ಟ್ಯಬ್ಧವನ್ನು ಆಚರಿಸಿದರು. ಈ ಸಮಾರಂಭವು ಶ್ರೀ ಕಾಶೀ ಮಠಾಧೀಶರ ಸಾನ್ನಿಧ್ಯದಲ್ಲಿ ಧಾರ್ಮಿಕ ವಿಧಿವಿಧಾನಗಳಿಂದ ಯಶಸ್ವಿಯಾಗಿ ನಡೆಯಿತು. ಬಡಬಗ್ಗರಿಗೆ ಅಕ್ಕಿ ವಿತರಣೆಯೂ ಸಮಾರಂಭದ ಒಂದಂಗವಾಗಿತ್ತು.

ಕೆಲವರು ಭಾಗ್ಯವಂತರಾಗಿ ಹುಟ್ಟಿ ಭಾಗ್ಯವಂತರಾಗಿಯೇ ಉಳಿದು ಉರುಳಿ ಹೋಗುತ್ತಾರೆ. ಇನ್ನು ಕೆಲವರು ಭಾಗ್ಯವಂತರಾಗಿ ಜನಿಸಿದರೂ ಭಾಗ್ಯವಂಚಿತರಾಗುತ್ತಾರೆ. ಶ್ರೀ ಮಂಜುನಾಥ ಪೈಯವರು ಈ ಎರಡೂ ವರ್ಗಗಳಿಗೆ ಸೇರಿದವ

(ಹತ್ತನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ಸಬ್ಸಿಡಿ ಪಡೆವ ಹೋಟೆಲ್‌ಗಳು

"ಹೌದೇ ಕೇರಳ ಪ್ರಾದೇಶಿಕ ಆಳುವ ಕಾಂಗ್ರೆಸ್ ಸಮಿತಿಯು ಹರಿಜನೋದ್ಧಾರದ ಹೊಸ ಯೋಜನೆಯೊಂದನ್ನು ರೂಪಿಸಿದೆಯಂತೆ"

'ಏನು?'

'ಅಲ್ವೆ, ಇದುವರೆಗೆ ಹೋಟೆಲು ಉದ್ಯಮದಲ್ಲಿ ಬ್ರಾಹ್ಮಣರು ಅದರಲ್ಲೂ ಉಡುಪಿ ಬ್ರಾಹ್ಮಣರು, ಅಗ್ರ ಮಾನ್ಯರಾಗಿದ್ದರಲ್ಲಾ....'

'ಹ್ನೂಂ....'

'ಇನ್ನು ಮುಂದೆ ಅವರಿಗೆ ಹರಿಜನರು ಪ್ರಬಲ ಪ್ರತಿಸ್ಪರ್ಧಿಗಳಾಗಲಿದ್ದಾರೆ....'

'ಅಂದರೆ?'

'ಆಳುವ ಕಾಂಗ್ರೆಸ್ಸು ಹರಿಜನ ಹೋಟೆಲುಗಳನ್ನು ಪ್ರೋತ್ಸಾಹಿಸಲು ಮುಂದೆ ಬಂದಿದೆ...'

'ಯಾವ ರೀತಿಯಲ್ಲಿ?'

"ಹರಿಜನರನ್ನು ಹೋಟೆಲು ತೆರೆಯಲು ಉತ್ತೇಜಿಸುವುದು; ಅಂತಹ ಹೋಟೇಲುಗಳಲ್ಲಿ ಹೆಚ್ಚು ಹೆಚ್ಚಾಗಿ ಕಾಫಿ ಕುಡಿಯಬೇಕೆಂದು ತನ್ನ ಸವರ್ಣೀಯ ಸದಸ್ಯರಿಗೆ ಸಮನ್ ಹೊರಡಿಸುವುದು...."

'ಅಲ್ರಿ, ಇದೆಲ್ಲಾ ಯಾಕೇಂತ?'

"ಮತ್ಯಾಕೆ ಕಣೆ, ಹರಿಜನೋದ್ಧಾರ–ಅಸ್ಪೃಶ್ಯತಾ ನಿವಾರಣೆಗಾಗಿ...."

'ಅಲ್ರಿ, ಕಾಫಿ—ತಿಂಡಿಗಳ ಗುಣಮಟ್ಟ ಮನಸ್ಸಿಗೆ ಹೊಂದಿಕೊಂಡಿರುವಂತಹವು. ಮೆಚ್ಚಿದವನಿಗೆ ಮಸಣವೂ ಕೈಲಾಸವಾಗುತ್ತದೆ ನಿಜ. ಆದರೆ ಮೆಚ್ಚದವನಿಗೆ?'

'ನೋಡು, ಸಮಾಜವಾದದ ಈ ಕಾಲದಲ್ಲಿ 'ಮೆಚ್ಚುಗೆ'ಯೆಂಬುದನ್ನೂ ಸಮಾಜೀಕರಣಗೊಳಿಸ ಬೇಕಾಗುತ್ತದೆ.'

'ಹೇಗೆ?'

'ಈ ಸಮಾಜೀಕರಣ ಶಾಂತ ವಿಧಾನಗಳಿಂದ 'ಸಾಮಾಜಿಕ ನಿಯಂತ್ರಣ'ವನ್ನು ಬ್ಯಾಂಕುಗಳಿಗೆ ಹೇರಿದಂತೆ—ಸಾಧಿಸುವ ಪ್ರಯತ್ನವಿದು.'

'ಏನಪ್ಪ?'

"ಮತ್ತಿನ್ನೇನು? ಹರಿಜನ ಹೋಟಲ್ಲುಗಳಲ್ಲಿ ಹೆಚ್ಚು ಹೆಚ್ಚಾಗಿ ಕುಡಿಯಬೇಕೂಂತ ವಿನಂತಿ ಹೊರಡಿಸುವುದು...."

"ಇದಕ್ಕೆ ಪ್ರೋತ್ಸಾಹಕರ ಉತ್ತೇಜನ ದೊರೆಯದೆ ಹೋದರೆ?"

'ಸ್ವಪಕ್ಷೀಯರಿಗೆ ಸಮನ್, ವಿಪಕ್ಷೀಯರ ಮೇಲೆ ಸೇಡು....'

'ಅಂತಸ್ಸಾಕ್ಷಿ ಜಾಗ್ರತವಾದರೆ?'

'ಆಗ?'

"ಹ್ನೂಂ...."

'ಹೋಟೆಲು ಲೈಸನ್ಸ್ ನೀಡಿಕೆಯ ಕ್ರಮಕ್ಕೇ ತಿದ್ದುಪಡಿ ತರುವುದು....'

'ಏನೂಂತ?'

"ಮತ್ತಿನ್ನೇನು? ಸೇ. ಇಂತಿಷ್ಟು ಲೈಸನ್ಸುಗಳನ್ನು ಹರಿಜನರಿಗೇ ಮೀಸಲಿಡುವುದೂಂತ...."

'ಅಲ್ರಿ. ಹೋಟೇಲು ತೆರೆದರೂ ಗಿರಾಕಿಗಳು ಬಾರದುಳಿದರೆ?'

'ಸೇ. ಇಂತಿಷ್ಟು ಬಾರಿ ಹರಿಜನ ಹೋಟೆಲಲ್ಲಿಯೇ ಕುಡಿಯ ಬೇಕೆಂದು ವಿಧಿಸಿ, ತಪ್ಪಿದವರಿಗೆ ದಂಡನೆ ನೀಡುವುದು....'

'ಅಲ್ರಿ, ಯಾರು ಎಷ್ಟು ಸಲ ಕುಡಿಯುತ್ತಾರೆಂದು ಲೆಕ್ಕಾಚಾರ ಯಾರು ಇಡೋದು?'

'ಹಾಗಾದರೆ, ಅದಕ್ಕೊಂದೇ ಉಪಾಯ'

'ಏನು?'

'ಇನ್ನು ಮುಂದೆ ಹರಿಜನರಿಗಲ್ಲದೆ ಮತ್ತಾರಿಗೂ ಹೋಟೆಲ್ ಲೈಸೆನ್ಸ್ ನೀಡಕೂಡದೆಂದು ಶಾಸನವನ್ನೇ ಮಾಡುವುದು....'

'ಇದು ಸಂವಿಧಾನದತ್ತ ಮೂಲಭೂತ ಹಕ್ಕುಗಳಿಗೆ ವಿರೋಧಿಯಾಗದೆ?'

'ಸಂವಿಧಾನವೇನು ಬಂತೆ? ಅದಕ್ಕೊಂದು ತಿದ್ದುಪಡಿ ಮಾಡಿದರಾಯ್ತು; ಹರಿಜನರ ಹೆಸರಲ್ಲಿ....'

'ಹ್ನೂಂ....ಅಂದರೆ "ಬ್ರಾಹ್ಮಣರ ಹೋಟೇಲು" ಎಂಬಲ್ಲಿ "ಹರಿಜನ ಹೋಟೇಲು" ಎಂದು ಬೋರ್ಡು ಬಿದ್ದೀತು....'

'ಅಲ್ವೆ, ಒಬ್ಬೊಬ್ಬ ಹರಿಜನನ ಹೆಸರಲ್ಲಿ ಒಂದೊಂದು ಲೈಸೆನ್ಸ್ ನೀಡಿದರೆ ಅವನಾದರೂ ಉದ್ಧಾರವಾದನಲ್ಲಾ?'

'ಓ, ಆದರೆ, ಅಸ್ಪೃಶ್ಯತಾ ಮನೋಭಾವ?'

'ನೋಡಮ್ಮ, ದುಡ್ಡಿನ ಮುಂದೆ ಅಸ್ಪೃಶ್ಯತೆಯೇನು ಮಾಡೀತು?'

'ಆದರೂ ನೋಡಿ, ಹರಿಜನರಿಗೆ ನೆಲ, ನೇಗಿಲು ಕೊಟ್ಟು ಅವರನ್ನು ಉದ್ಧಾರ ಮಾಡಿದರು; ಇನ್ನು ಹೋಟೇಲು ಮಾಲೀಕರನ್ನಾಗಿಸಿ ಉದ್ಧರಿಸುವುದು ಬಾಕಿಯಿದೆ. ಅಲ್ರಿ ಪ್ರಧಾನಿ ಗಾಂಧಿಯೇ ಉಡುಪಿ ಬ್ರಾಹ್ಮಣರ ಅಡುಗೆ ರುಚಿ ಕೇಳಿ ಬಾಯಲ್ಲಿ ನೀರು ಸುರಿಸಿರುವಾಗ. ಈ ಹರಿಜನರ ಹೋಟಲನ್ನು ಯಾರು ಕೇಳುತ್ತಾರೆ?'

'ಅಂದರೆ ನೀನನ್ನೋದು ಹರಿಜನರಿಗೆ ಖಾದ್ಯ ತಯಾರಿಯಲ್ಲಿ ಅನುಭವವಿಲ್ಲವೆಂದು ತಾನೆ? ಅವರಿಗೆ ಅಡುಗೆ ವಿಷಯದಲ್ಲಿ ಮೊದಲಿಗೆ ಪದವಿ ಶಿಕ್ಷಣ ಕೊಡಬೇಕು.'

'ಅವರಿಗೆ ಉದ್ಯಮದಲ್ಲೂ ಅನುಭವವಿಲ್ಲ....'

'ಅದಕ್ಕೂ ಒಂದು ತರಬೇತಿ ನೀಡಬಹುದು....'

'ಇಷ್ಟಾದರೂ ಹರಿಜನ ಹೋಟೆಲುಗಳು ನಷ್ಟದಲ್ಲಿ ನಡೆದರೆ?'

'ಅದಕ್ಯಾಕೆ ಚಿಂತೆ? ಸಬ್ಸಿಡಿ ನೀಡಿದರೆ ಸರಿ.'

'ಅಲ್ರಿ, ಅದಕ್ಕಿಂತ ಇನ್ನೊಂದು ಕೆಲಸ ಮಾಡೋದೇ ಒಳ್ಳೆಯದು....'

'ಏನು?'

'ಬ್ರಾಹ್ಮಣರ ಹೋಟೇಲುಗಳೆಲ್ಲವನ್ನೂ ರಾಷ್ಟ್ರೀಕರಿಸುವುದು....'

'ಹ್ನೂಂ—'

'ಅವುಗಳಿಗೆ ಇನ್ನು ಮುಂದೆ ತಿಂಡಿ ತಯಾರಿ, ತಿಂಡಿ ವಿತರಣೆಗಳಿಗೆ ಹರಿಜನರನ್ನೇ ನೇಮಿಸಿಕೊಳ್ಳುವುದು.'

'ಆಗ ಹರಿಜನ ಹೋಟೆಲು ಹೇಗಾದೀತು?'

'ಯಾಕೆ ಬೋರ್ಡಿಲ್ಲವೆಂದೆ?'

'ಹ್ನೂಂ....'

'ಅಲ್ಲಿ ತಿಂದವರು ಮಾತ್ರ ಸತ್ಯವನ್ನು ಅನುಭವಿಸುತ್ತಾರೆ.'

'ಅಲ್ವೆ, ಅದಕ್ಕಿಂತ ಬೇರೊಂದು ಮಾಡಬಹುದು....'

'ಏನು?'

'ರಾಜ್ಯದಲ್ಲಿ ತಯಾರಾಗುವ ಕನ್ನಡ ಚಿತ್ರಗಳಿಗೆ ಸಬ್ಸಿಡಿ ನೀಡುವಂತೆ ರಾಜ್ಯದ ಹರಿಜನ ಹೋಟೆಲ್ಲುಗಳಿಗೆ ಸಬ್ಸಿಡಿ ನೀಡಬೇಕು; ಮುಫತ್ತಾಗಿ ತಿಂಡಿ–ತೀರ್ಥ ಲಭ್ಯಮಾನವಾಗುವುದಾದರೆ ಸವರ್ಣೀಯರೂ ಈ ಅವರ್ಣೀಯರ ಹೋಟಲ್ಲುಗಳಲ್ಲಿ ಬಂದು ಕಾಫಿ ಕುಡಿಯಲೂ ಬಹುದು....'

'ಆದರೂ ನೋಡಿ, ನಮ್ಮೆಲ್ಲ ಭೇದ ಭಾವಕ್ಕೆ ನಂನಮ್ಮ ಆಹಾರಾಭ್ಯಾಸವೇ ಕಾರಣವೆನಿಸುತ್ತದೆ....'

'ಹ್ನೂಂ....'

'ಈ ಆಹಾರಾಭ್ಯಾಸದಲ್ಲಿ ಸಮಾನತೆ ಮೂಡುವ ವರೆಗೆ ಸಮಾಜದಲ್ಲೂ ಸಮಾನತಾ ಸ್ಥಾಪನೆ ಸಾಧ್ಯವಾಗದು....'

'ಅದೂ ಸರೀನ್ನು. ಶಾಕಾಹಾರಿಗಳು, ಮಾಂಸಾಹಾರಿಗಳನ್ನು ತಮ್ಮಲ್ಲಿ ಸೇರಿಸಲು ಹಿಂಜರಿಯುತ್ತಾರೆ....'

'ಅಷ್ಟೇ ಏಕೆ? ಶಾಕಾಹಾರಿ ಮಾಂಸಾಹಾರಿಗಳಲ್ಲೂ ಎಷ್ಟು ಒಳಭೇದಗಳಿಲ್ಲ?'

'ಇವೇನ್ನು....'

"ಆದ್ದರಿಂದ ಹರಿಜನೋದ್ಧಾರ ಅಸ್ಪೃಶ್ಯತಾ ನಿವಾರಣೆಗಳ ಬಗೆಗೆ ಮಾತಾಡುವವರು ಅವರ ಆಹಾರಾಭ್ಯಾಸ —ಶೌಚಾಚಾರಾದಿಗಳಿಗೆ ಪ್ರಥಮ ಗಮನ ಹರಿಸಬೇಕಾಗಿದೆ....'

'ಆದರೆ ನೋಡು, ಇದೆಲ್ಲ ನಿರ್ಣಯಗಳಿಂದ ಸಾಧ್ಯವಿಲ್ಲ....'

'ಹೌದು....'

'ಆದರೆ ನೋಡು, ನಾವು ನಿರ್ಣಯಗಳಿಂದಲೇ ಸರ್ವಾರ್ಥ ಸಿದ್ಧಿಯೆಂದು ನಂಬಿ ಕುಳಿತಿದ್ದೇವಲ್ಲಾ?'

'ಹ್ನೂಂ ಅಧಿಕಾರಾರೂಢರು ನಿರ್ಣಯ ಮಾಡುತ್ತಾರೆ; ಸರಕಾರ ಧರ್ಮಛತ್ರ ತೆರೆಯುತ್ತದೆ. ಉಂಡವರು ಉಂಡರು; ಉಣ್ಣದವರು ಉಪವಾಸವುಳಿದರು...'

"ಆದ್ದರಿಂದ ಅಸ್ಪೃಶ್ಯತಾ ನಿವಾರಣೆ ಹರಿಜನರ ಗುಡಿಸಲಿಂದ ಮೊದಲಾಗಬೇಕು."

"ಅಲ್ವೆ ಚುನಾವಣೆಯ ವೇಳೆಯೊಂದನ್ನು ಬಿಟ್ಟರೆ ಅದರತ್ತ ಇಣುಕುವವರೇ ಇಲ್ಲವಾಗಿರುವಾಗ...."

'ಆದ್ದರಿಂದಲೇ ನೋಡಿ, ಮಹಾತ್ಮರು ಎಲ್ಲಿ ಬಿಟ್ಟು ಹೋದರೋ ಅಲ್ಲೇ ಉಳಿದಿದೆ. ಅದನ್ನು ಮುಂದರಿಸುವ ಪ್ರಾಮಾಣಿಕ ಪ್ರಯತ್ನ ಎಲ್ಲೂ ನಡೆಯಲಿಲ್ಲ....'

'ಹ್ನೂಂ.... ಇನ್ನು ನಾವೇ ಸೊಂಟಕಟ್ಟೋದು....'

'ಅಲ್ರಿ, ನಮ್ಮ ಉದ್ಧಾರವನ್ನೇ ಮಾಡಿಕೊಳ್ಳಲಾರದ ನಾವು ಬೇರೆಯವರನ್ನೇನು ಉದ್ಧರಿಸ ಬಲ್ಲೆವು?'

'ಅದು ಸರೀನ್ನು. ಚಾರಿಟಿ ಬಿಗಿನ್ಸ್ ಅಟ್ ಹೋಮೆನ್ನುತ್ತಾರಲ್ಲಾ....'

'ಹ್ನೂ....'

"ಏನು?"

'ಏನೂನ್ನೋದು? ಇನ್ನೂ ಮಳೆಗಾಲ ಆರಂಭವಾಗಿಲ್ಲ; ಮೈಯೆಲ್ಲ ಸುಡುತ್ತಿದೆ.'

'ಸುಡುವ ಮೈಗೆ ಗಂಧ ಲೇಪನವೊಂದೇ ಸದ್ಯ ದಾರಿ....'

'ಹೌದೂನ್ನಿ. ಅದನ್ನೂ ಕಡೆಯ ಬೇಕಲ್ಲಾ...'

'ಸೋಮಾರಿಗಳು!'

—ಗೋರಾ

●●



ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಪತ್ರಿಕೆ ಸಾರ್ವಜನಿಕ ಶಾಸನ ಸಂಸ್ಥೆ

("ನವಯುಗ"ದ ಸುವರ್ಣೋತ್ಸವದಲ್ಲಿ ಮೈಸೂರು ವಿ. ವಿ. ನಿಲಯದ ಕುಲಪತಿ ಪ್ರೊ| ಡಿ. ಜವರೇ ಗೌಡರು ಮಾಡಿದ ಭಾಷಣ)

ನವಯುಗದ ಸಂಸ್ಥಾಪಕರಾದ ದಿ| ಶ್ರೀ ಎ. ಬಿ. ಶೆಟ್ಟರ ಬಹುಮುಖ ಪ್ರತಿಭೆಯ ಪ್ರತೀಕವಾಗಿ, ಅವರ ಕೀರ್ತಿಯ ಪತಾಕೆಯಂತೆ ವಟವೃಕ್ಷದೋಪಾದಿಯಲ್ಲಿ ಬೆಳೆಯುತ್ತಿರುವ ವಿಜಯಾ ಬ್ಯಾಂಕ್ ಹಾಗೂ ಬಂಟರ ಸಮಾಜಗಳು ಸಮಾಜೋನ್ನತಿ ಕಾರ್ಯದಲ್ಲಿ ನೆರವಾಗುತ್ತ ಪ್ರಜ್ವಲಿಸುತ್ತಿವೆ. ಅವರು ಸಮಾಜ ಸುಧಾರಕರಾಗಿ, ಪತ್ರಿಕಾಕರ್ತರಾಗಿ, ವಿದ್ಯಾಸಂಸ್ಥೆಗಳ ಸಂಸ್ಥಾಪಕರಾಗಿ, ದಕ್ಷ ಸಚಿವರಾಗಿ ಇಡೀ ಜಿಲ್ಲೆಯ ಪುರೋಭಿವೃದ್ಧಿಗೆ ಕಾರಣರಾಗಿದ್ದಾರೆ. ೧೯೨೧ರಲ್ಲಿ ಅವರು ಸ್ಥಾಪಿಸಿದ ಈ ಸಾಪ್ತಾಹಿಕೆಯ ಸುವರ್ಣ ಮಹೋತ್ಸವ ಇಡೀ ಕನ್ನಡನಾಡಿನ ಪತ್ರಿಕಾ ಪ್ರಪಂಚದಲ್ಲಿ ಅಪಾರ ಸಂತೋಷವುಂಟುಮಾಡುತ್ತದೆಂದು ನಂಬಿದ್ದೇನೆ. ಪ್ರಪಂಚದ ಯಾವ ಮೂಲೆಯೊಡನೆಯಾದರೂ ಐದಾರು ಮಿನಿಟುಗಳಲ್ಲಿ ಸಂಪರ್ಕ ಬೆಳೆಸಬಹುದಾದಂಥ ರೀತಿಯಲ್ಲಿ ತಾಂತ್ರಿಕ ವಿಜ್ಞಾನ ಬೆಳೆದಿರುವಾಗ, ಶಿಕ್ಷಣ ಕ್ಷೇತ್ರ ವಿಸ್ತಾರಗೊಂಡು ಸಾಕ್ಷರತೆ ದೊಡ್ಡ ಕೊಂಪೆಗಳಲ್ಲೆಲ್ಲ ಹರಡಿ ಲೋಕ ವ್ಯವಹಾರ ಜ್ಞಾನ ಹಾಗೂ ವ್ಯಾಸಂಗ ಅನಿವಾರ್ಯವಾಗಿರುವ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಜಾರೀಕರಣಗೊಂಡು ಜನತಾ ಸಂಪರ್ಕ ಹಾಗೂ ಶಿಕ್ಷಣ ಅತ್ಯಗತ್ಯವಾಗಿರುವ ಸಂದರ್ಭದಲ್ಲಿ ಪತ್ರಿಕೆಗಳ ಪ್ರಾರಂಭ ಕಷ್ಟಕರವಾಗುವುದಿಲ್ಲ. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ, ವಿದೇಶೀಯ ಆಳರಸರು ವಾಕ್ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಗಳನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಸಮಯದಲ್ಲಿ, ನಿರಕ್ಷರತೆ ತಾಂಡವವಾಡುತ್ತಿದ್ದ ವಿಷಮ ಸನ್ನಿವೇಶದಲ್ಲಿ ಜನಜಾಗೃತಿಗೆಂದು ಹಿಂದುಳಿದವರ ಶ್ರೇಯಸ್ಸಾಧನೆಗೆಂದು ಈ ಪತ್ರಿಕೆ ಸ್ಥಾಪನೆಗೊಂಡದ್ದು ಸ್ಥಾಪಕರ ದೂರದರ್ಶಿತ್ವಕ್ಕೂ, ಸಾಹಸಕ್ಕೂ, ಮಹತ್ವಾಕಾಂಕ್ಷೆಗೂ ಸಾಕ್ಷಿಯಾಗಿದೆ. ವರ್ತಮಾನದಲ್ಲಿ ನಿಂತುಕೊಂಡು ಭೂತಕಾಲದ ಪರಿಸ್ಥಿತಿಯನ್ನು ಊಹಿಸಿಕೊಳ್ಳುವಾಗ ಆ ಸ್ಥಾಪನೆ ಮಹತ್ತರವಾದ ಘಟನೆಯೆಂದೇ ಹೇಳಬೇಕಾಗುತ್ತದೆ. ಸ್ವಾತಂತ್ರ್ಯ ಸಮರದ ಕಾಲದಲ್ಲಿ ಜನತೆಯನ್ನೆಚ್ಚರಿಸಿ, ಸಮಾಜೋದ್ಧಾರ ಹಾಗೂ ರಾಷ್ಟ್ರ ಸಂಘಟನೆಯ ಕಾಲದಲ್ಲಿ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಿ, ಪ್ರಸಕ್ತ ಯುಗದ ಆಶೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತ, ಭವಿಷ್ಯಕ್ಕೊಂದು ಮೂಲಾಧಾರವಾಗಿ ಇದು ಹೆಮ್ಮೆಯಿಂದ ಚಿನ್ನದ ಹಬ್ಬವನ್ನು ಮಾಡಿಸಿಕೊಳ್ಳುತ್ತಿದೆ. ಇದು ಇಂದು ಇಡೀ ಕನ್ನಡಿಗರ ಶಿಶುವಾಗಿದೆ, ಸೊತ್ತಾಗಿದೆ. ತನ್ನ ಶ್ರೇಯೋಭಿವೃದ್ಧಿಗಾಗಿಯೇ ತಂದೆ ಮಗನನ್ನು ಪಡೆಯುವಂತೆ ಇದು ಜನತೆಯ ಶ್ರೇಯಸ್ಸನ್ನು ಸಾಧಿಸಬೇಕಾಗಿದೆ, ಜನತೆಗೆ ರಕ್ಷೆಯಾಗಬೇಕಾಗಿದೆ; ಸಮಗ್ರ ಜನಜೀವನವನ್ನು ತಿದ್ದಬೇಕಾಗಿದೆ.

ಸುಮಾರು ಹದಿನೈದು ವರ್ಷ ಇದನ್ನು ಲಾಲಿಸಿ ಪಾಲಿಸಿದ ನಂತರ ಅನ್ಯ ಜವಾಬ್ದಾರಿಯನ್ನು ಹೊರಬೇಕಾದ ಕಾರಣದಿಂದ ಈ ಪತ್ರಿಕಾ ಶಿಶುವಿನ ಯೋಗಕ್ಷೇಮವನ್ನು ಶ್ರೀ ಹೊನ್ನಯ್ಯ ಶೆಟ್ಟರಿಗೆ ಶ್ರೀ ಎ. ಬಿ. ಶೆಟ್ಟರು ವಹಿಸಿಕೊಟ್ಟರು. ಶ್ರೀ ಹೊನ್ನಯ್ಯ ಶೆಟ್ಟರು ವೃತ್ತಿಯಿಂದ ಉಪಾಧ್ಯಾಯರು, ಪ್ರವೃತ್ತಿಯಿಂದ ಸಾಹಿತಿಗಳು. ಈ ಎರಡೂ ಉದ್ಯೋಗಗಳು ಶ್ರೀಮಂತಿಕೆಯ ದ್ಯೋತಕಗಳಲ್ಲ. ಶಿಕ್ಷಣ ವೃತ್ತಿಗೆ ತರಬೇತಿ ಪಡೆಯುವಾಗ ಲೆ ಪಂಜೆ ಹಾಗೂ ಉಳ್ಳಾಲ ಮಂಗೇಶರಾಯರ ಮತ್ತು ಎಂ. ಎನ್. ಕಾಮತರ ಸ್ನೇಹ ಸಂಪರ್ಕ ದೊರೆತದ್ದು ಅವರ ಪುಣ್ಯವೆಂದೇ ಹೇಳಬೇಕು. ಶೈಕ್ಷಣಿಕ ವಿಚಾರಗಳ ಮಂಥನಕ್ಕೆಂದು 'ಬಾಲಚಂದ್ರ'ವನ್ನೂ, ಸಾಹಿತ್ಯ ಸಂಸ್ಕೃತಿಗಳ ಪ್ರಚಾರಕ್ಕೆಂದು 'ಅಂತರಂಗ' ಮತ್ತು 'ಪ್ರಕಾಶಿನಿ'ಗಳನ್ನೂ ಶ್ರೀ ಶೆಟ್ಟರು ನಡೆಸಿದ್ದುಂಟು. 'ಅಂತರಂಗ' ವಾರಿಕೆಯಾದರೆ 'ಬಾಲಚಂದ್ರ' ಮತ್ತು 'ಪ್ರಕಾಶಿನಿ'ಗಳು ಮಾಸಿಕೆಗಳು. ಇಷ್ಟೆಲ್ಲ ಕಠಿನ ಕಾರ್ಯ ಈ ದುರ್ಬಲ ದೇಹಿಯಿಂದ ಸಾಧ್ಯವಾಯಿತೆ ಎಂದು ಕಂಡವರು ಸೋಜಿಗಪಡದಿರಲಾರರು. ಅವರ ನಿರಾಡಂಬರ ಜೀವನ, ಸತತ ಕ್ರಿಯಾಶೀಲತೆ, ಪ್ರಾಮಾಣಿಕತೆ ಛಲಸಮೃದ್ಧವಾದ ಸಾಹಸ, ಸತ್ಯನಿಷ್ಠೆ, ಎಲ್ಲಕ್ಕಿಂತ ಮೇಲಾಗಿ ತ್ಯಾಗಮನೋಭಾವ ಅವರ ಬಹುಮುಖವಾದ ಸಿದ್ಧಿಗಳಿಗೆ ಕಾರಣವಾಗಿವೆ.

'ಮನೆಕಟ್ಟಿ ನೋಡು, ಮದುವೆ ಮಾಡಿ ನೋಡು' ಎಂಬ ಗಾದೆ ಈಗಂತು ಸವಕಲಾಗಿದೆ, ಅಪ್ರಯೋಜಕವಾಗಿದೆ. 'ಚುನಾವಣೆಗೆ ನಿಂತು ನೋಡು, ಪತ್ರಿಕೆಯನ್ನು ನಡೆಸಿ ನೋಡು' ಎಂಬ ಗಾದೆ ಈ ಕಾಲಕ್ಕೆ ಸರಿಹೊಂದುವುದಾಗಿದೆ. ಧನ ಸಂಗ್ರಹ ಲೇಖನ ಸಂಗ್ರಹ ರೂಪರೇಷೆ ಚೌಕಟ್ಟುಗಳ ರೂಪಣ ಮುದ್ರಣ ಮೇಲಾಗಿ ಗ್ರಾಹಕ ಸಂಪಾದನೆ, ಇಷ್ಟೇ ಅಲ್ಲ, ಇನ್ನೂ ಎಷ್ಟೆಷ್ಟೋ ಕಾರ್ಯವಿವರಗಳು ಸಂಪಾದಕನ ತಲೆಯನ್ನು ತಿನ್ನುತ್ತವೆ. ಜತೆಗೆ ಕಾರ್ಮಿಕರ ಮುಷ್ಕರ, ಕಾಗದದ ಅಭಾವ, ವೃತ್ತಿ ಸ್ಪರ್ಧೆ ಮೊದಲಾದ ಜಟಿಲ ಸಮಸ್ಯೆಗಳನ್ನೂ ಎದುರಿಸ ಬೇಕಾಗಿದೆ. ಈಗಂತು ಪತ್ರಿಕೆ ನಡೆಸುವುದು ಒಬ್ಬನಿಂದ ಸಾಧ್ಯವಿಲ್ಲ. ಅದಕ್ಕೆ ಸಂಬಂಧಿಸಿದಂತೆ ಖಾತೆಗಳು ದಿನೇ ದಿನೇ ವಿಸ್ತಾರವಾಗುತ್ತಿವೆ, ಕ್ಲಿಷ್ಟವಾಗುತ್ತಿವೆ. ಒಂದೊಂದು ಖಾತೆಗೂ ಪರಿಣತಿಯುಳ್ಳ ಜನ ಬೇಕಾಗುತ್ತದೆ ಈ ವೃತ್ತಿ ಇಷ್ಟು ಜಟಿಲವಾಗುತ್ತಿರುವಾಗ ಸಾಕಷ್ಟು ಜಾಹಿರಾತುಗಳಿಲ್ಲದೆ, ಜನತೆಯ ಸಹಾನುಭೂತಿಯಿಲ್ಲದೆ ದಾರಿಬಿಟ್ಟು ಹೋಗುವ ಸಂಭವವುಂಟು. ಹಿತ ದೃಷ್ಟಿಯನ್ನು ಬೆಳೆಸಿಕೊಳ್ಳುವ ಜರೂರೊದಗಿದರೆ ಆಶ್ಚರ್ಯವಿಲ್ಲ; ಆಗ ವೃತ್ತಿಯ ಪವಿತ್ರ ಧ್ಯೇಯೋದ್ದೇಶಗಳು ನೀತಿ ನಿಯಮಗಳು ಮಣ್ಣುಪಾಲಾಗುತ್ತವೆ. ಆಗ ಸಮಾಜದ ಆರೋಗ್ಯವನ್ನು ಕಾಪಾಡಬೇಕಾದ ಪತ್ರಿಕೆಗಳು ಉಪದ್ರವಕಾರಿಯಾಗುತ್ತವೆ, ಅಪಾಯಕಾರಿಯಾಗುತ್ತವೆ. ಎಷ್ಟೇ ಕಷ್ಟಕ್ಲೇಶಗಳೊದಗಿದರೂ, ಪತ್ರಿಕೆ ಸಪ್ಪೆಯಾಯಿತೆಂದು ಜನ ಟೀಕಿಸುವಂತಾದರೂ, ಶ್ರೀ ಶೆಟ್ಟರು ಸತ್ಯನಿಷ್ಠೆ ಪ್ರಾಮಾಣಿಕತೆಗಳಿಂದ ವಿಚಲಿತರಾಗಲಿಲ್ಲ. ಸಮತೂಕದ ಧೋರಣೆ ಧ್ಯೇಯಗಳಿಗೆ ತಿಲಾಂಜಲಿಯ ನೀಡಲಿಲ್ಲ. ಸುಳ್ಳಾದರೂ ಸರಿಯೆ, ಹೊಲಸಾದರೂ ಸರಿಯೆ ಅವರಿವರನ್ನು ಬಯ್ದು ದುಡ್ಡು ಸಂಪಾದಿಸ ಬಹುದಿತ್ತು. ಆದರೆ ಅವರೆಂದೂ ಹೇಸಿಕೆತನದ ಕೀಳುಮಟ್ಟಕ್ಕಿಳಿಯಲಿಲ್ಲ; ಬಡತನ ಬಂದರೂ ಧರ್ಮಚ್ಯುತರಾಗಲಿಲ್ಲ.

ಆಧುನಿಕ ಯುಗದಲ್ಲಿ ರೇಡಿಯೋ ಟೆಲಿವಿಷನ್ ಮೊದಲಾದ ತಾಂತ್ರಿಕ ಸಾಧನಗಳು ಶೀಘ್ರ ವರ್ತಮಾನ ವಾಹಕಗಳಾಗಿರುವಾಗ ಪ್ರಬಲ ಪ್ರಸಾರ ಮಾಧ್ಯಮಗಳಾಗಿರುವಾಗ ವರ್ತಮಾನ ಪತ್ರಿಕೆಗಳ ಅಗತ್ಯತೆ ಇಳಿಮುಖವಾಗುತ್ತದೆಂಬ ಊಹೆಗೆ ಕಾರಣವಿಲ್ಲ.

ಮೇಲ್ಕಾಣಿಸಿದ ಸಂಪರ್ಕ ಸಾಧನಗಳು ಜನತೆಯ ಬೇಕು ಬಯಕೆಗಳನ್ನೆಲ್ಲ ಸಂಪೂರ್ಣವಾಗಿ ಪೂರೈಸಲಾರವು; ಪ್ರಜಾಪ್ರಭುತ್ವದ ಬೇಡಿಕೆಗಳನ್ನೆಲ್ಲ ಈಡೇರಿಸಲಾರವು. ಕಾಲಕ್ರಮೇಣ ಪತ್ರಿಕೆಗಳು ಕೇವಲ ಸುದ್ದಿವಾಹಿನಿಗಳಾಗಿರದೆ ಜ್ಞಾನವಾಹಿನಿಗಳೂ ಆಗಬೇಕಾಗಿದೆ. ಸಾಕ್ಷರತೆ ವ್ಯಾಪಕವಾಗಿ ಬೆಳೆದಂತೆಲ್ಲ ಅವುಗಳ ಬೇಡಿಕೆ ಹೆಚ್ಚುವುದಲ್ಲದೆ ಅವುಗಳ ಉಪಯುಕ್ತತೆ ಬಹುಮುಖವಾಗಿ ವೈವಿಧ್ಯಮಯವಾಗಿ ವಿಸ್ತೃತವಾಗಬೇಕಾಗುತ್ತದೆ. ಅಷ್ಟೇ ಅಲ್ಲ, ದಿನ ಪತ್ರಿಕೆಗಳ ಜತೆಗೆ ವಾರಿಕೆ, ಪಾಕ್ಷಿಕೆ, ಮಾಸಿಕೆಗಳು ಹೆಚ್ಚಿ ಜನತೆಯ ರುಚಿ ವೈವಿಧ್ಯ ಜ್ಞಾನ ದಾಹಗಳ ಜತೆಗೆ ಅವರ ಆಶೋತ್ತರಗಳನ್ನು ನೆರವೇರಿಸಬೇಕಾಗಿದೆ ಸಮಾಜದ ಬಹುಮುಖವಾದ ಅಗತ್ಯಗಳು ಪತ್ರಿಕೆಗಳಿಂದ ಪೂರೈಕೆಯಾಗಬೇಕೇ ಹೊರತು ರೇಡಿಯೋದಿಂದ ಸಾಧ್ಯವಿಲ್ಲ.

ನಾನು ಪತ್ರಿಕೆಗಳನ್ನು ಜನತಾ ವಿಶ್ವವಿದ್ಯಾನಿಲಯಗಳೆಂದು ಹಿಂದೆ ಕರೆದದ್ದುಂಟು. ಭೂಮಿಯ ಮೇಲೆ ಹುಟ್ಟಿದ ಮಕ್ಕಳೆಲ್ಲ ವಿಶ್ವ ವಿದ್ಯಾನಿಲಯ ಪ್ರವೇಶಿಸಲು ಸಾಕಷ್ಟು ಸೌಲಭ್ಯ ಹೊಂದಿರಲಾರರು. ಕೇವಲ ಕೆಲವು ಆಯ್ಕೆಯ ಮಂದಿ ಮಾತ್ರ ಅದರ ಮೆಟ್ಟಲೇರುವ ಅವಕಾಶವುಳ್ಳವರಾಗಿರುತ್ತಾರೆ. ಆದರೆ ಸಾಮಾನ್ಯನಿಗೂ ಎಟುಕಬಹುದಾದ ಜ್ಞಾನನಿಧಿಯೆಂದರೆ ಪತ್ರಿಕೆ. ಅದೊಂದು ಅಂಗೈ ಮೇಲಣ ವಿಶ್ವವಿದ್ಯಾನಿಲಯ. ಚಲನ ವಿಶ್ವವಿದ್ಯಾನಿಲಯ. ಆದ್ದರಿಂದ ವಿಶ್ವವಿದ್ಯಾನಿಲಯ ಮಾಡಬೇಕಾದ ಕೆಲಸವನ್ನೆಲ್ಲ ಪತ್ರಿಕೆ ಮಾಡಬೇಕಾಗಿದೆ. ಅದು ಆಧುನಿಕ ಮಾನವನ ಜ್ಞಾನದಾಹವನ್ನು ಆರಿಸಬೇಕಲ್ಲದೆ ಅವನ ಜೀವನವನ್ನು ರೂಪಿಸುವಂಥ ಸಂಸ್ಕೃತಿಯನ್ನು ಬೆಳೆಸಬೇಕಾಗಿದೆ. ಅಂದಮೇಲೆ ಅದು ವಿದ್ಯಾಗಾರವಾಗಬೇಕು, ತರಬೇತಿ ಸಾಧನವಾಗಬೇಕು, ಸಂಸ್ಕೃತಿ ವಹನ ಸಾಧನವಾಗಬೇಕು. ಜತೆಗೆ ಜನಜೀವನದ ಪ್ರತಿಬಿಂಬವಾಗಬೇಕು

ತಾಂತ್ರಿಕ ವಿಜ್ಞಾನದ ಬೆಳವಣಿಗೆಯಿಂ

(ಎಂಟನೇ ಪುಟ ನೋಡಿರಿ)

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27

Phone No. - 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಪುತ್ತೂರು IInd Addl Munsiff ಕೋರ್ಟಿನಲ್ಲಿ

Ex. c. 257/72. (O. S. 157/58)

ಶ್ರೀ ರಾಜರಾಜೇಶ್ವರಿ ಅಮ್ಮನವರ ಭಂಡಾರ— ಅರ್ಜಿದಾರ

ಮೊಯಿದಿನ ಕುಂಞ ಕೂಡಾ— ಎದ್ರಿರು

ಎದ್ರಿರು

(1) ಮೊಯಿದಿನ ಕುಂಞ ಬ್ಯಾರಿ–ಪಳ್ಳಿ ಬ್ಯಾರಿ ಮಗ–ಪುತ್ತೂರು ಕಸಬಾ. (3) ಆಸಮ್ಮ–ಮೊಯಿದಿನ ಕುಂಞಯ ಹೆಂಡತಿ–ಕಲ್ಲಾಕ, Puttur

(4) ಅಸ್ಸಮ್ಮ—ಮಮ್ಮದೆ ಬ್ಯಾರಿ ಹೆಂಡತಿ, ಪರ್ಲಡ್ಕ–ಪುತ್ತೂರು.

ಸದ್ರಿ 1, 3, 4ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಈ ಕೋರ್ಟು R. E. P. 573/66ರಲ್ಲಿರುವ ಹಣದ ಪೈಕಿ ರೂ. 200/-ನ್ನು ಜಪ್ತು ಪಡ್ಸಿ ಮೇಲಿನ ಅಮಲ್ದಾರಿಯಲ್ಲಿ ಕೊಡ್ಸಿಬೇಕಾಗಿ ಅ ಅರ್ಜಿದಾರ ಮಾಡಿದ ಅಮಲ್ದಾರಿಯನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 26–6–72ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಬೆಳಿಗ್ಗೆ 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರ್ಹಾಜರಾಗಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao

Advocate for Petitioner

Puttur, 14-6-72

ಕೆಲವು ರಾಷ್ಟ್ರೀಯ ಸಮಸ್ಯೆಗಳು

ನಮ್ಮ ದೇಶದಲ್ಲಿ ನೈಸರ್ಗಿಕ ಸಂಪತ್ತು ವಿಪುಲವಾಗಿದೆ ನಿಜ. ಆದರೆ ಒಂದು ದೇಶದ ಅಭಿವೃದ್ಧಿ ಆ ದೇಶದ ನೈಸರ್ಗಿಕ ಸಂಪತ್ತನ್ನು ಮಾತ್ರ ಹೊಂದಿಕೊಂಡಿಲ್ಲ. ಬಹೂ ಅಂಶ ಕೈಗಾರಿಕೆಗಳ ಮೇಲೆ ಅವಲಂಬಿಸಿಕೊಂಡಿದೆ. ನಮ್ಮಲ್ಲಿ ಕೈಗಾರಿಕೆಗಳು ಇಂದು ಭರದಿಂದ ಅಭಿವೃದ್ಧಿ ಹೊಂದುತ್ತಿದ್ದರೂ, ಆರ್ಥಿಕ ರಂಗದಲ್ಲಿ ನಮ್ಮ ದೇಶ ಅಷ್ಟು ಪ್ರಗತಿ ಹೊಂದಿಲ್ಲ. ಅಂದರೆ ಕೈಗಾರಿಕಾ ವಲಯದಲ್ಲಿ ಕಾರ್ಮಿಕರ ಅಸಹಕಾರ ಮುಷ್ಕರ, ಅಶಿಸ್ತು ಇವೂ ಬೆಳೆಯುತ್ತಿರುವುದರಿಂದ ನಮ್ಮಲ್ಲಿ ತೀವ್ರ ಅಭಿವೃದ್ಧಿ ಅಸಾಧ್ಯವಾಗಿದೆ. ಹೀಗಾಗಿ ಒಂದು ದೇಶ ನೈಸರ್ಗಿಕ ಸಂಪತ್ತಿನಿಂದ ಶ್ರೀಮಂತವಾಗಿದ್ದರೂ, ಕೈಗಾರಿಕೆಗಳ ವಿಶಾಲ ವಲಯಗಳನ್ನು ಸ್ಥಾಪಿಸಿಕೊಂಡಿದ್ದರೂ, ಅವುಗಳನ್ನು ಯೋಗ್ಯವಾಗಿ ನಡೆಸಿಕೊಂಡು ಹೋಗುವ ವಿಧಾನವನ್ನು ಕಲಿಯುವವರೆಗೆ ತೀವ್ರ ಪ್ರಗತಿ ಸಾಧ್ಯವಿಲ್ಲ.

ಎಲ್ಲರೂ ನೀತಿವಂತರಾಗುವವರೆಗೆ ಯಾರೂ ಪೂರ್ಣ ನೀತಿವಂತರಲ್ಲ. ಕೈಗಾರಿಕೆಗಳ ಕುಂಠಿತಕ್ಕೆ ಕೇವಲ ಕಾರ್ಮಿಕರೇ ಕಾರಣ ಎನ್ನುವುದೂ ತಪ್ಪು. ಆಡಳಿತ ವರ್ಗದಲ್ಲಿಯೂ, ಕೈಗಾರಿಕಾ ಉತ್ಪನ್ನಗಳನ್ನು ಉಪಯೋಗಿಸಿಯೂ ಮೊಂಡು ಮಾತನಾಡುವ ಜನರಲ್ಲಿಯೂ ದೋಷಗಳಿವೆ. ಒಟ್ಟಿನಲ್ಲಿ ಎಲ್ಲರೂ ನೀತಿವಂತರೂ, ಧ್ಯೇಯ ಹೊಂದಿದವರೂ ಆಗಬೇಕು. ಕೇವಲ ಕಾರ್ಮಿಕರು ಮಾತ್ರ ನೀತಿವಂತರಾದರೆ ಸಾಲದು. ಮುಖ್ಯವಾಗಿ ಕಾರ್ಮಿಕ ಸಂಘಗಳು ಯಂತ್ರಗಳ ಮೇಲ್ವಿಚಾರಣೆಯನ್ನು, ಕ್ರಮಬದ್ಧವಾದ ಶಿಸ್ತನ್ನು, ಉತ್ಪಾದನೆಯ ಗುರಿಯನ್ನು, ಕಾರ್ಮಿಕರ ಚಿಂತನೆಯನ್ನು ಸರಿಯಾಗಿ ಗಮನಿಸಿ ಕಾರ್ಯೋನ್ಮುಖರಾಗಬೇಕು. ಆಡಳಿತ ವರ್ಗ ಉತ್ಪಾದನೆಗೆ ಅನುಗುಣವಾಗಿ ಕಾರ್ಮಿಕರ ವೇತನವನ್ನು ನಿಗದಿ ಮಾಡಬೇಕು. ಕಾರ್ಮಿಕರು ತಮ್ಮ ಬಿಗಿ ಮುಷ್ಟಿಯ ಮನೋಭಾವ ಮತ್ತು ಜಗಳಗಂಟಿತನದ ಮನಸ್ಸನ್ನು ಮೂಲೆಗೊತ್ತಿಸಿ, ಪೂರ್ಣ ಮನಸ್ಸಿನಿಂದ ಸಾಮಾಜಿಕ ಹೊಣೆಯನ್ನು ನಿರ್ವಹಿಸಿ ದುಡಿಯಬೇಕು. ಆಗ ಮಾತ್ರ ಆಡಳಿತ ವರ್ಗ ಮತ್ತು ಕಾರ್ಮಿಕ ವರ್ಗಗಳ ಮನೋಭಾವಗಳು ಒಂದಕ್ಕೊಂದು ಸರಿಸಾಟಿಯಾಗಿ ತೀವ್ರ ಪ್ರಗತಿ ಸುಲಭ ಸಾಧ್ಯವಾಗಿ, ನಮ್ಮ ದೇಶ ಕೈಗಾರಿಕೆಗಳಲ್ಲಿ ಇತರ ದೇಶಗಳೊಡನೆ ಪೈಪೋಟಿ ನಡೆಸುವಂತಾಗುತ್ತದೆ.

o o o

ನದಿಗಳು ಬಹಳ ಪ್ರಾಚೀನ ಕಾಲದಿಂದಲೂ ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿವೆ. ಹಲವು ರೀತಿಗಳಲ್ಲಿ ನದಿಗಳು ಮಾನವ ಜೀವನದ ಅವಶ್ಯಕತೆಗಳನ್ನು ಪೂರೈಸಿದ್ದು, ವಿಜ್ಞಾನದ ಪ್ರಭಾವದಿಂದ ಇನ್ನೂ ಹೆಚ್ಚಿನ ಉಪಯೋಗಗಳನ್ನು ನೀಡಿವೆ. ಆದರೆ ಇಂಥಹ ಉಪಕಾರಿ ನದಿಗಳಿಂದಲೂ ಕೆಲವು ಸಮಸ್ಯೆಗಳು ನಮ್ಮಲ್ಲಿ ಉತ್ಪನ್ನವಾಗಿರುವುದು ವಿಷಾದಕರ. ಹಲವು ಮನೋಭಾವಗಳ ಸಂಘರ್ಷದಿಂದ ಗಡಿನೀರಿನ ವಿವಾದ, ನದಿಜಾಲಕಟ್ಟಿನ (River grid) ಪ್ರಸ್ತಾಪ ಮೊದಲಾದ ಜೀವಂತ ಸಮಸ್ಯೆಗಳು ನಮ್ಮಲ್ಲಿ ಎಷ್ಟೋ ಸಲ ತಲೆಯೆತ್ತಿದ್ದುಂಟು.

ಮೇಲಿನದು ಒಂದು ರೀತಿಯದಾದರೆ, ನೈಸರ್ಗಿಕ ಕ್ರಿಯೆಗಳಿಂದಲೂ ಕೆಲವು ಸಮಸ್ಯೆಗಳು ಉತ್ಪನ್ನವಾಗುತ್ತವೆ. ಉದಾಹರಣೆಗಾಗಿ ನಮ್ಮ ದೇಶದ ನದಿಗಳ ಆಳ ಹಲವು ಕಾರಣಗಳಿಂದ ಕಮ್ಮಿಯಾಗುತ್ತಿದೆ. ಮೊದಲನೆಯ ಮತ್ತು ಮುಖ್ಯ ಕಾರಣವೆಂದರೆ ಅರಣ್ಯಗಳನ್ನು ಒಂದೇ ಸಮನೆ ಕಡಿದು, ಅವುಗಳ ವಿಸ್ತಾರವನ್ನು ಕಡಿಮೆ ಮಾಡುವುದಾಗಿದೆ. ಇದರಿಂದಾಗಿ ಮರಗಳಿಂದಾಗುವ ನೀರಿನ ಶೋಷಣ ಕ್ರಿಯೆಯನ್ನು ಮತ್ತು ಅವುಗಳ ಧಾರಣ ಶಕ್ತಿಯನ್ನು ತಡೆಹಿಡಿದಂತಾಗುತ್ತದೆ. ಮಳೆ ಸುರಿದಾಗ ಗುಡ್ಡಗಳ ಸುತ್ತಲಿನ ಬದಿಗಳು, ಎತ್ತರ ಪ್ರದೇಶಗಳು ಕುಸಿದು ಹೋಗಿ ಮಿಲಿಯಗಟ್ಟಲೆ ಟನ್ನುಗಳಷ್ಟು ಕಲ್ಲು ಮಣ್ಣುಗಳು ನದಿಕ್ಷೇತ್ರವನ್ನು ಸೇರುತ್ತವೆ. ಇದರಿಂದಾಗಿ ನದಿಗಳ ತಳ ಮಟ್ಟವು ಏರುತ್ತಾ ಹೋಗಿ, ನದಿಯ ಮೇಲ್ಭಾಗದಲ್ಲಿ ಹೆಚ್ಚಾಗಿ ಶೇಖರಣೆ ಹೊಂದಿದ ನೀರು ಪ್ರವಾಹದ ರೂಪದಲ್ಲಿ ರಭಸದಿಂದ ಹರಿದು, ಸುತ್ತಲಿನ ಗದ್ದೆ, ಹಳಿ, ಊರುಗಳನ್ನು ಮುಳುಗಿಸಿ ಲಕ್ಷಗಟ್ಟಲೆ ಜನರಿಗೆ ವಿಪರೀತ ಹಾನಿಯನ್ನುಂಟು ಮಾಡುತ್ತದೆ. ದೊಡ್ಡ ದೊಡ್ಡ ನೆರೆ ಬಂದಾಗ ಮಿಲಿಯಗಟ್ಟಲೆ ರೂಪಾಯಿಗಳ ಮೌಲ್ಯದ ಆಸ್ತಿ ಪಾಸ್ತಿಗಳು ನೀರು ಪಾಲಾದ ಘಟನೆಗಳು ಅನೇಕ ಇವೆ. ಮೇಲೇರಿದ ನೀರನ್ನು ಹತೋಟಿಗೆ ತರಲು ಅನೇಕ ವಿಧಾನಗಳನ್ನು ಇಂದು ಬಳಸುತ್ತಿದ್ದರೂ, ಅವು ಪೂರ್ಣ ಫಲಕಾರಿಯಾಗಿಲ್ಲ ಎನ್ನಬಹುದು. ಪ್ರತಿ ವರ್ಷ ನೆರೆ ಹಾವಳಿ ಇದ್ದೇ ಇರುವುದರಿಂದ, ಈ ಸಮಸ್ಯೆಗಳ ಕುರಿತು ಇನ್ನೂ ಹೆಚ್ಚಿನ ಯೋಚನೆ ಅಗತ್ಯವೆಂದು ಕಾಣುತ್ತದೆ.

o o o

ಪಟ್ಟಣಗಳು ಇಂದು ಭರದಿಂದ ಬೆಳೆಯುತ್ತಿವೆಯಲ್ಲದೆ, ಪಟ್ಟಣ ವಲಯಗಳಲ್ಲಿನ ಸಮಸ್ಯೆಗಳು ಸಾವಿರಾರು. ಕಾರ್ಖಾನೆಗಳು, ಮುಗಿಲು ಮುಟ್ಟುವ ಕಟ್ಟಡಗಳು ಲೆಕ್ಕವಿಲ್ಲದಷ್ಟಿವೆ. ಆದರೆ ಈ ರೀತಿಯ ನಿರಂತರ ಅಭಿವೃದ್ಧಿ ಕೆಲವು ವಿಷಯಗಳಲ್ಲಿ ಯೋಗ್ಯವಾಗಿ ಕಾಣುವುದಿಲ್ಲ. ಹೆಚ್ಚಿನ ಪಟ್ಟಣಗಳಲ್ಲಿ ನೀರಿನ ಅಭಾವ ತೀವ್ರವಾಗಿದೆ. ಯೋಗ್ಯ ವಾಸಸ್ಥಾನವಾಗಲೀ, ಕೊಳಚಿ ನೀರು ಹೋಗಲು ಸೂಕ್ತ ವ್ಯವಸ್ಥೆಯಾಗಲಿ ಪಟ್ಟಣಗಳ ಹೆಚ್ಚಿನ ಕಡೆಗಳಲ್ಲಿ ಕಾಣಲು ಸಿಕ್ಕುವುದು ಕಷ್ಟವೆಂದೇ ಹೇಳಬೇಕು. ವಾಹನಗಳಿಂದ ಮತ್ತು ಫೆಕ್ಟರಿಗಳಿಂದಾಗಿ ಹವೆ ಕೆಟ್ಟಿದ್ದು, ಅನಾರೋಗ್ಯಕ್ಕೆ ಕಾರಣವಾಗಿರುವ ವಾತಾವರಣಗಳೇ ಹೆಚ್ಚು. ಸಾವಿರಾರು ಜನರು ಇಂಥಹ ಅಯೋಗ್ಯ ವಾತಾವರಣಗಳಲ್ಲಿ ನಿರ್ಮಿತವಾಗಿರುವ ಹೋಟೆಲುಗಳಲ್ಲಿ ಆಹಾರ ಸೇವಿಸಲೇ ಬೇಕಾಗುತ್ತದೆ.

ಹಾಗಾದರೆ ಇವುಗಳನ್ನು ನಿವಾರಿಸುವ ಉಪಾಯ ಯಾವುದು?–ಎಂಬ ಪ್ರಶ್ನೆ ಉತ್ಪನ್ನವಾಗುತ್ತದೆ. ಆದರೆ ಸರಿಯಾಗಿ ವಿವೇಚಿಸಿದರೆ, ಈ ರೀತಿಯ ಸಮಸ್ಯೆಗಳಿಗೆ ಸಮಂಜಸವಾದ ಉಪಾಯಗಳು ಸಿಕ್ಕುವುದಿಲ್ಲವೆಂಬುದು ಖಚಿತವಾಗುತ್ತದೆ. ಪಟ್ಟಣಗಳು ಒಂದು ಲಕ್ಷದೊಳಗಿನ ಜನಸಂಖ್ಯೆಯನ್ನು ಮಾತ್ರ ಒಳಗೊಂಡಿರಬೇಕು– ಎಂಬುದು ಹೆಚ್ಚಿನವರು ಸೂಚಿಸುವ ಸಲಹೆ. ಹಾಗಾದರೆ ಉಳಿದವರು ಎಲ್ಲಿಗೆ ಹೋಗಬೇಕು?—ಎಂಬ ನ್ಯಾಯ ಪ್ರಶ್ನೆ ಸಹಜವಾಗಿ ಏಳುತ್ತದೆ. ಹೀಗಾಗಿ, ಇನ್ನು ಎಷ್ಟು ದೂ ಯಾವ ಉಪಾಯಗಳನ್ನು ತಂದರೂ, ಈ ಸಮಸ್ಯೆಗಳು ಮಾತ್ರ ಉಪಾಯಗಳನ್ನು ಮೀರಿ ಅಪಾಯಕಾರಿಯೇ ಇರುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಅಂತೂ ನಿರಾಶಾವಾದಿಗಳಾಗದೆ ಜೀವನ ಹೋರಾಟದಲ್ಲಿ ಮುಂದುವರಿಯುತ್ತ ಇದ್ದರೆ, ಯೋಗ್ಯ ಅದೃಷ್ಟ ಕೂಡಿ ಬಂದರೆ, ಎಲ್ಲವೂ ವ್ಯವಸ್ಥಿತಗೊಳ್ಳುವ ದಿನಗಳು ಬರಲೂ ಬಹುದು.

ಮೇಲಿನವು ನಗರ ಜನಜೀವನದಲ್ಲಿನ ವಿವಿಧ ಸಮಸ್ಯೆಗಳಾದರೆ ಇನ್ನೂ ಅನೇಕ ರೀತಿಯ ಸಮಸ್ಯೆಗಳಿವೆ. ಪ್ರವಾಸಿಗಳ ಸೌಲಭ್ಯಕ್ಕಾಗಿ, ಪ್ರವಾಸಕ್ಕೆ ಯೋಗ್ಯವಾದ ನಗರಗಳಲ್ಲಿ ಅನೇಕ ವೈಭವದ ಹೋಟೇಲುಗಳು ನಿರ್ಮಿತವಾಗಿವೆ. ಪ್ರವಾಸಿಗಳಿಗೆ ಯೋಗ್ಯ ಸೌಲಭ್ಯಗಳನ್ನಿತ್ತು ಅವರಿಗೆ ಉತ್ತೇಜನ ನೀಡುವುದು ಇವುಗಳ ಉದ್ದೇಶ. ಆದರೆ ನಿಜವಾದ ಪ್ರವಾಸಿಗಳಿಗಿಂತ ಪ್ರವಾಸಿಗಳೆಂದು ಹೇಳಿಕೊಂಡು ಬರುವ ಕಳ್ಳವ್ಯಾಪಾರಿಗಳೇ ಹೆಚ್ಚು. ಪ್ರವಾಸ ಅವರ ಧ್ಯೇಯವಾಗಿರದೆ ಔಷಧಗಳು, ಚಿನ್ನಾಭರಣಗಳು, ವೈಭವದ ಭೋಗವಸ್ತುಗಳು ಮತ್ತು ಇನ್ನಿತರ ಸರಕುಗಳ ಮೂಲಕ ಬ್ಲೇಕ್ ಮಾರ್ಕೆಟ್ ವೃತ್ತಿಗೆ ಉತ್ತೇಜನ ಕೊಡುವುದೇ ಅವರ ಉದ್ದೇಶವಾಗಿರುತ್ತದೆ. ಕೆಲವರು ಮಂದಿರದಿಂದ ಕಲಾ ಸಂಪತ್ತನ್ನು, ಸ್ಮಾರಕ ಚಿಹ್ನೆಗಳನ್ನು ಅಪಹರಿಸಲೂ ಪ್ರವಾಸಕ್ಕಾಗಿ ಬರುವುದುಂಟು. ಇಂಥ ವೃತ್ತಿಗಳೂ, ಅದಕ್ಕೆ ಸಂಬಂಧಪಟ್ಟವರೂ ದೇಶದ ಜೀವಂತ ಸಮಸ್ಯೆಗಳಲ್ಲದೆ ಮತ್ತೇನು? ಗೂಢಾಚಾರಿಗಳೂ ಪ್ರವಾಸಿಗಳಾಗಿ ಬಂದರೆ, ಈ ಸಮಸ್ಯೆಗಳು ಪೂರ್ಣವಾಗಿಯಲ್ಲವಾದರೂ ಸ್ವಲ್ಪ ಕಡಿಮೆಯಾಗಬಹುದೆಂದು ಕಾಣುತ್ತದೆ.

o o o

ಮನುಷ್ಯನ ಜೀವನದಲ್ಲಿನ ಅಗತ್ಯತೆಗಳು ನೂರಾರು. ಪ್ರತಿಯೊಬ್ಬರಿಗೂ ಅವು ಸುಲಭ ರೀತಿಯಲ್ಲಿ ಸಿಗಬಲ್ಲವಾದರೆ ಜೀವನ ಸುಗಮವಾಗುತ್ತದೆ. ಆದರೆ ಇಂದು ಹಲವು ಕಾರಣಗಳಿಂದ ಸಾಮಾನ್ಯ ಮನುಷ್ಯರಿಗೆ ಜೀವನದಲ್ಲಿನ ಅವಶ್ಯಕತೆಗಳ ಪೂರೈಕೆಯಾಗದೇ ಅವರು ಅತೃಪ್ತರಾಗಿದ್ದಾರೆ. ವಿಟಾಮಿನ್‌ಗಳಿರುವ ಸತ್ವಭರಿತ ಆಹಾರವನ್ನು ಸೇವಿಸಬೇಕೆಂದು ಜನರಿಗೆ ವೈದ್ಯರು ಹೇಳುತ್ತಾರೆ. ಸತ್ವಭರಿತ ಆಹಾರವನ್ನು ಬಡವರು, ಸಾಮಾನ್ಯ ಜನರು ದೊರಕಿಸಿಕೊಳ್ಳುವುದು ಕಷ್ಟ. ಕೊನೆಗೆ ಹಣ್ಣುಹಂಪಲುಗಳನ್ನಾದರೂ ತಿನ್ನಲಿ ಎಂದು ಸಲಹೆ ಸೂಚಿಸುತ್ತಾರೆ. ಆದರೆ ಇಂದು ಹಣ್ಣುಗಳನ್ನಾದರೂ ಬಡವರಿಗೆ ತೆಗೆದುಕೊಳ್ಳಲು ಸಾಧ್ಯವೇ? ಬಾಳೆಹಣ್ಣು ಮಾವಿನಹಣ್ಣುಗಳು ಬಡವರ ಆಹಾರವೆಂದು ಹಿಂದೆ ಪರಿಗಣಿಸಲ್ಪಟ್ಟಿತ್ತು. ಆದರೆ ಇಂದು ಈ ಎರಡೂ ಹಣ್ಣುಗಳು ಮಧ್ಯಮ ವರ್ಗದ ಜನರಿಗೂ ಕೈಗೆ ನಿಲುಕುವುದಿಲ್ಲ. ಹಣ್ಣುಗಳಿಗೆ ಈ ರೀತಿಯ ಬೆಲೆ ಏರುವುದು ನಮ್ಮಲ್ಲಿ ಹಣ್ಣುಗಳ ಅಭಾವದಿಂದಲೇ? ಖಂಡಿತ ಅಲ್ಲ; ನಮ್ಮ

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ದೇಶದಲ್ಲಿ ವಿದೇಶ ವಿನಿಮಯ ಹೆಚ್ಚಿದೆ. ಅನೇಕ ಸರಕುಗಳನ್ನು ಪರದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಹಣ್ಣುಗಳನ್ನೂ ವಿದೇಶಗಳಿಗೆ ಭಾರೀ ಪ್ರಮಾಣದಲ್ಲಿ ರಫ್ತುಮಾಡಲಾಗುತ್ತಿದೆ. ಪ್ರೋಟೀನು, ಕಾರ್ಬೋಹೈಡ್ರೇಟ್, ವಿಟಾಮಿನ್ ಇವುಗಳಿಂದ ಕೂಡಿದ ಸಮತೂಕದ ಆಹಾರವನ್ನು ಬಡವರೂ ಸೇವಿಸಬೇಕಾದರೆ ಅದು ಅವರಿಗೆ ಹಣ್ಣು ಕೊಡುವುದರಿಂದಲೇ ಸಾಧ್ಯ. ವಿಶೇಷವಾದ ಶಕ್ತಿಯಿಂದ ಹಣ್ಣುಗಳ ಧಾರಣೆ ಹೆಚ್ಚಿ, ಜನರಿಗೆ ಸಿಗಲಾರದವಾಗಿವೆ. ಇದೇ ರೀತಿ ಇಂದು ಎಲ್ಲ ವಿಧದ ರೋಗಗಳಿಗೆ ಔಷಧಗಳನ್ನು ಕಂಡು ಹಿಡಿದಿದ್ದಾದರೂ ಜನಸಾಮಾನ್ಯರಿಗೆ ಅವುಗಳ ಉಪಯೋಗ ಕಷ್ಟಸಾಧ್ಯವಾಗಿದೆ.

ಸಮಾಜ ಶಾಸ್ತ್ರಜ್ಞರು, ರಾಜನೀತಿಜ್ಞರು ಎಷ್ಟೇ ಗಮನಕೊಟ್ಟು ಹೊಸ ಪ್ರಯೋಗಗಳನ್ನು ಮಾಡಿ, ಅವುಗಳನ್ನು ಸಮಾಜ ಜೀವನದಲ್ಲಿ ಜಾರಿಗೆ ತಂದರೂ, ಜನರ ಅಶುದ್ಧ ಮನೋಭಾವ ಶುದ್ಧವಾಗುವ ವರೆಗೆ ಪ್ರಗತಿ ಸಾಧ್ಯವಿಲ್ಲವೆಂದೆನಿಸುತ್ತದೆ. ಜೂಜಾಡುವುದು, ಪಾನಸೇವನೆ ಇವೆಲ್ಲ ನಿಯಂತ್ರಿಸಲ್ಪಡಬೇಕು. ಇವುಗಳಿಂದಲೂ ಸರಕಾರಕ್ಕೆ ಆದಾಯ ರೂಪದಲ್ಲಿ ಉತ್ಪತ್ತಿ ದೊರಕುವುದಿಲ್ಲವೇ? — ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಆದಾಯ ರೂಪವಾಗಿ ಬರುವ ಉತ್ಪತ್ತಿ ಮೇಲಿನವುಗಳಿಂದ ಉಂಟಾಗುವ ಪರಿಣಾಮಗಳನ್ನು ಹತೋಟಿಯಲ್ಲಿಟ್ಟು ಕೊಳ್ಳಲು ನೇಮಿಸಲಾದ ರಕ್ಷಣಾ ಶಿಬಂಧಿಗಳಿಗೆ ಮತ್ತು ಅದಕ್ಕೆ ಸಂಬಂಧ ಪಟ್ಟ ಇಲಾಖೆಗಳಿಗೆ ಖರ್ಚುಮಾಡಲಾಗುವುದಿಲ್ಲವೇ?

ಂ ಂ ಂ

ನಮ್ಮಲ್ಲಿ ಮುಖ್ಯವಾಗಿ ವ್ಯಕ್ತಿಪೂಜೆ ಮತ್ತು ಅಸಮತೆ ಮಾಯವಾಗಬೇಕು. ನಾವು ನಮ್ಮ ಹಳ್ಳಿಗರನ್ನು ಹಿಂದುಳಿದವರು ಎಂದು ಕರೆಯುತ್ತೇವೆ. ಹಳ್ಳಿಗರು ಎಂದ ತಕ್ಷಣವೇ ಅವರು ಹಿಂದುಳಿದವರು ಎಂಬುದು ನಮ್ಮ ಮನಸ್ಸಿಗೆ ಪಕ್ಕನೇ ಬರುತ್ತದೆ. ಆದರೆ ನಮ್ಮ ಈ ತಪ್ಪು ಮನೋಭಾವದಿಂದಾಗಿ, ಹಳ್ಳಿಗರಲ್ಲಿ ಕೆಲವರಲ್ಲಿಯಾದರೂ ಹುದುಗಿರುವ ಉತ್ತಮ ಗುಣಗಳನ್ನು, ಜಾಣ್ಮೆಯನ್ನು ಗುರುತಿಸಲು ನಮಗೆ ಸಾಧ್ಯವಾಗುವುದಿಲ್ಲ. ಅವುಗಳನ್ನು ಅವರಿಗೆ ಹೊರ ಪ್ರಪಂಚಕ್ಕೆ ತೋರಿಸಲು ಸೂಕ್ತ ಸಂದರ್ಭ ಸಿಕ್ಕುವುದೂ ಇಲ್ಲ; ನಾವು ಹಳ್ಳಿಗರನ್ನು ಹಿಂದುಳಿದವರು, ಬಡವರು ಎಂದು ಕರೆಯುತ್ತಿದ್ದರೆ ಅವರನ್ನು ಬಡತನದಿಂದ ಮುಕ್ತರನ್ನಾಗಿ ಮಾಡಿದಂತಾಗುವುದೂ ಇಲ್ಲ; ದೇಶದ ಉತ್ತಮ ಪ್ರಜೆಗಳನ್ನಾಗಿ ಪರಿವರ್ತಿಸಿದಂತಾಗುವುದೂ ಇಲ್ಲ. ಅದರ ಬದಲು ಅವರನ್ನು ಇನ್ನೂ ಸ್ವಾರ್ಥಿಗಳನ್ನಾಗಿ, ಅತೃಪ್ತರಾಗಿ ಮಾಡಿದಂತಾಗುತ್ತದೆ.

ಸಮಸ್ಯೆಗಳ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಆದರೆ ಒಂದೊಂದು ಸಮಸ್ಯೆಯನ್ನು ಪರಿಹರಿಸಲು ಅನೇಕ ವರ್ಷಗಳಷ್ಟು ಕಾಲಾವಕಾಶ ಬೇಕು. ಅದಕ್ಕೋಸ್ಕರ ಸಮಾಜ ಶಾಸ್ತ್ರಜ್ಞರ ನೆರವು ಬೇಕು. ಅಸಂಖ್ಯಾತ ಜನರ ಪರಿಶ್ರಮ, ತಾಳ್ಮೆ, ಶುದ್ಧ ಮನೋಭಾವಗಳು ಪೂರಕವಾಗಿ ಒದಗಿಬರಬೇಕು. ಸಮಾಜವನ್ನು ಕಾಡುತ್ತಿರುವ ಅನೇಕ ಜೀವಂತ ಸಮಸ್ಯೆಗಳ ನಿವಾರಣೆಗಾಗಿ ಪ್ರತಿಯೊಬ್ಬನೂ ತನ್ನಿಂದಾದಷ್ಟು ದುಡಿಯಬೇಕು. ಲಯಬದ್ಧವಾದ ದುಡಿತ ಎಲ್ಲರ ಕರ್ತವ್ಯವಾಗಬೇಕು. ಎಲ್ಲರ ಬಾಳು ಹಸನಾಗಬೇಕು–ಎಂಬ ಗುರಿ ನಮ್ಮದಾಗಬೇಕು.

(ಸಂಗ್ರಹ)

— ಶ್ರೀ ಬಿ. ವಿ. ನಾಯಕ್

●●

ಹೊಲಗಳಿಗೆ ನೀರು, ಮನೆಗಳಿಗೆ ಬೆಳಕು

ಗಂಗೆಯನ್ನು ಭೂಮಿಗಿಳಿಸಲು ಭಗೀರಥ ಎಷ್ಟೋ ವರ್ಷ ತಪಸ್ಸು ಮಾಡಬೇಕಾಯಿತಂತೆ. ಆಕೆ ಇಳಿದು ಬಂದಾಗ ಆ ಉಬ್ಬರ ತಡೆಯಲು ಶಿವನೇ ಸಟೆದು ನಿಲ್ಲಬೇಕಾಯಿತಂತೆ. ಇದು ಪುರಾಣದ ಕತೆ.

ಇಂದು ಈ ಕತೆಗೆ ಹೊಸ ರೂಪ ಬಂದಿದೆ. ಸ್ವಾತಂತ್ರ್ಯಾನಂತರ ನಮ್ಮ ದೇಶದ ನೀರಾವರಿ ಕ್ಷೇತ್ರದಲ್ಲಾದ ಪ್ರಗತಿ ಭಗೀರಥನ ಸಾಹಸಕ್ಕಿಂತ ಹೆಚ್ಚಿನದು.

ನಿಜ. ಮೈಸೂರು ರಾಜ್ಯವೊಂದರಲ್ಲೇ ಸುಮಾರು ಹತ್ತು ಲಕ್ಷ ಎಕರೆ ಜಮೀನಿಗೆ ಈಗಾಗಲೇ ನೀರಾವರಿ ಸೌಕರ್ಯ ದೊರಕಿದೆ. ವಿದ್ಯುತ್ ಪೂರೈಕೆ ೧೦೩ ಕೋಟಿ ಕಿ. ವಾ.ಗಳಿಂದ ೩೧೭ಕೋಟಿ ಕಿ. ವಾ. ಗಳಷ್ಟು ಹೆಚ್ಚಾಗಿದೆ.

ಮೈಸೂರಿನ ನೀರಾವರಿ ಮತ್ತು ವಿದ್ಯುತ್ ಯೋಜನೆಗಳು ಜನತೆಯ ಆರ್ಥಿಕ ಅಭಿವೃದ್ಧಿಗೆ ನವಚೈತನ್ಯ ನೀಡಿವೆ. ಬರಡಾಗಿದ್ದ ಹೊಲಗಳಲ್ಲೀಗ ನೀರು ಹರಿಯುತ್ತಿದೆ. ರಾತ್ರಿಯಾದೊಡನೆ ಕತ್ತಲಲ್ಲಿ ಮುಳುಗಿ ಹೋಗುತ್ತಿದ್ದ ದೂರದೂರದ ಹಳ್ಳಿಗಳಲ್ಲಿ ವಿದ್ಯುತ್ ಬೆಳಕು ಬೆಳಗುತ್ತಿದೆ. ಹಲವಾರು ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಈ ಯೋಜನೆಗಳು ಪುಟಕೊಟ್ಟಿವೆ.

ರಾಜ್ಯದ ಕೆಲವು ಪ್ರಮುಖ ನೀರಾವರಿ ಮತ್ತು ವಿದ್ಯುತ್ ಯೋಜನೆಗಳ ಸ್ಥೂಲ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ಘಟಪ್ರಭಾ

ಸುಮಾರು ಇಪ್ಪತ್ತಮೂರು ವರ್ಷ ಹಿಂದೆ ಆರಂಭವಾದ ಘಟಪ್ರಭಾ ಯೋಜನೆಯ ಪ್ರಥಮ ಹಂತದ ಕಾರ್ಯ ಆಗಲೇ ಮುಗಿದಿದ್ದು, ದ್ವಿತೀಯ ಹಂತ ಐದನೇ ಯೋಜನಾವಧಿಯಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಘಟಪ್ರಭಾ ಯೋಜನೆ ಎರಡು ನಿರ್ಮಾಣ ಕಾರ್ಯಗಳ ಸಂಗಮ. ಬೆಳಗಾವಿ ಜಿಲ್ಲೆಯ ಧೂಪದಾಳದ ಬಳಿ ನದಿಗೊಂದು ಒಡ್ಡು ಮತ್ತು ಅದರಿಂದ ಸುಮಾರು ೧೯ ಕಿ. ಮೀ. ದೂರದಲ್ಲಿ ಹಿಡಕಲ್ ಹಳ್ಳಿಯಲ್ಲಿ ಒಂದು ಅಣೆಕಟ್ಟು—ಇವೇ ಆ ಎರಡು ಕೆಲಸಗಳು.

ಧೂಪದಾಳ ಒಡ್ಡಿನ ಉದ್ದ ೨೦೮೪ ಮೀಟರು. ಎತ್ತರ ೯.೯ ಮೀಟರು. ಹಿಡಕಲ್ ಅಣೆಕಟ್ಟಿನ ಉದ್ದ ೯೮೫೧ ಮೀಟರು. ಎತ್ತರ ೫೦ ಮೀಟರು. ಇದರಲ್ಲಿ ಉಪಯೋಗವಾಗುವ ಉಕ್ಕಿನ ಪ್ರಮಾಣ ೫೩೮೪ ಟನ್‌ಗಳು.

ಘಟಪ್ರಭಾ ಯೋಜನೆಯ ಪ್ರಥಮ ಹಂತದಿಂದಾಗಿ ೭೦೪೬ ಹೆಕ್ಟೇರ್ ಜಮೀನಿಗೆ ನೀರಾವರಿ ಲಭ್ಯ. ದ್ವಿತೀಯ ಹಂತದಲ್ಲಿ ೪೬೫೪ ಹೆಕ್ಟೇರ್ ಜಮೀನಿಗೆ ನೀರಿನ ಸೌಕರ್ಯ. ಎರಡೂ ಹಂತಗಳ ಒಟ್ಟು ವೆಚ್ಚ ೫೫.೪ ಕೋಟಿ ರೂಪಾಯಿ.

ತುಂಗಭದ್ರಾ

ಹೊಸಪೇಟೆಯಿಂದ ಸುಮಾರು ಐದು ಕಿ. ಮೀ. ದೂರದಲ್ಲಿರುವ ಮಲ್ಲಾಪುರ ಗ್ರಾಮದಲ್ಲಿ ತುಂಗಭದ್ರಾ ನದಿಗೆ ಕಟ್ಟಿರುವ ಈ ಅಣೆಕಟ್ಟಿನ ಉದ್ದ ೨೪೪೧ ಮೀಟರು, ಎತ್ತರ ೪೯.೩೯. ಮೀಟರು.

ತುಂಗಭದ್ರಾ ಬಲ ಭಾಗದ ಕಾಲುವೆಯ ಉದ್ದ ಸುಮಾರು ೩೫೦ ಕಿ. ಮೀ. ಇದರಿಂದ ೩೭,೬೪೪ ಹೆಕ್ಟೇರ್ ಜಮೀನಿಗೆ ನೀರು ದೊರೆಯುತ್ತಿದೆ. ಎಡಭಾಗದ ಕಾಲುವೆ ಸುಮಾರು ೨೨೭ಮೀಟರ್ ಉದ್ದವಾಗಿದ್ದು, ೩,೩೩,೭೭೬ ಹೆಕ್ಟೇರ್ ಜಮೀನಿಗೆ ನೀರನ್ನೊದಗಿಸುತ್ತಿದೆ. ಮೇಲ್ಮಟ್ಟದ ಕಾಲುವೆಯ ಉದ್ದ ೧೯೬ ಕಿ. ಮೀ. ನೀರಾವರಿ ಲಭ್ಯತೆ–೮೦೯೬೦ ಹೆಕ್ಟೇರ್.

ತುಂಗಭದ್ರಾ ಯೋಜನೆ ಆರಂಭವಾದುದು ೧೯೪೫ರಲ್ಲಿ ಬಲಭಾಗದ ಕಾಲುವೆ ೧೯೫೫ರಲ್ಲೂ ಎಡಭಾಗದಕಾಲುವೆ ೧೯೬೩ರಲ್ಲೂ ಪೂರ್ತಿಗೊಂಡವು. ಮೇಲ್ಮಟ್ಟದ ಕಾಲುವೆಯ ಪ್ರಥಮ ಹಾಗೂ ದ್ವಿತೀಯ ಹಂತಗಳು ನಾಲ್ಕನೇ ಯೋಜನಾವಧಿಯಲ್ಲಿ ಮುಗಿಯುವ ನಿರೀಕ್ಷೆ ಇದೆ.

ಈ ಯೋಜನೆಗೆ ಸಂಬಂಧ ಪಟ್ಟಂತೆ ೭೨೦೦೦ ಕಿ. ವಾ. ವಿದ್ಯುತ್ ಉತ್ಪಾದನಾ ಕೇಂದ್ರವು ೧೯೬೪ರಲ್ಲಿ ಪೂರ್ಣಗೊಂಡಿತ್ತು. ಉಳಿದ ಕೆಲಸಗಳು ೧೯೬೬ರಲ್ಲಿ ಮುಕ್ತಾಯಗೊಂಡವು. ನೀರಾವರಿ ಮತ್ತು ವಿದ್ಯುತ್ ಉತ್ಪಾದನೆಗೆ ಸೇರಿದಂತೆ ಎಲ್ಲಾ ಕೆಲಸಗಳಿಗೆ ಒಟ್ಟು ವೆಚ್ಚ ಸುಮಾರು ೧೦೫.೮ಕೋಟಿ ರೂಪಾಯಿ.

ಭದ್ರಾ

ಭದ್ರಾವತಿ ರೈಲು ನಿಲ್ದಾಣದಿಂದ ಸುಮಾರು ೨೩ ಕಿ. ಮೀ. ದೂರದಲ್ಲಿರುವ ಲಕ್ಕವಳ್ಳಿ ಗ್ರಾಮದ ಸಮೀಪ ಭದ್ರಾ ನದಿಗೆ ಕಟ್ಟಲಾಗಿರುವ ಅಣೆಕಟ್ಟಿನಿಂದಾಗಿ ಸುಮಾರು ೯೯೦೧೫ ಹೆಕ್ಟೇರ್ ಜಮೀನಿಗೆ ನೀರಾವರಿದೊರೆಯುವುದೆಂದು ಅಂದಾಜು ಮಾಡಲಾಗಿದೆ. ಸುಮಾರು ೩೫ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಈ ಅಣೆಕಟ್ಟು ೧೯೪೭ರಲ್ಲಿ ಆರಂಭವಾಗಿದ್ದು ನಾಲ್ಕನೇ ಯೋಜನಾವಧಿಯಲ್ಲಿ ಪೂರ್ತಿಯಾಗುವ ನಿರೀಕ್ಷೆಯಿದೆ.

ಭದ್ರಾ ಅಣೆಕಟ್ಟಿನ ಉದ್ದ ೪೪೭.೫ ಮೀಟರು; ಎತ್ತರ ೭೧.೬ ಮೀಟರು. ಪ್ರಧಾನ ಕಾಲುವೆಯ ಉದ್ದ ೧೭೬.೭೨ ಮೀಟರು.

ಕಬಿನಿ

ಹೆಗ್ಗಡದೇವನಕೋಟೆ ತಾಲೂಕಿನ ಬಿದರಹಳ್ಳಿಯಲ್ಲಿ ಕಬಿನಿ ನದಿಗೆ ಅಡ್ಡವಾಗಿ ಅಣೆಕಟ್ಟನ್ನು ನಿರ್ಮಿಸುವ ಕೆಲಸ ೧೯೫೯ರಲ್ಲಿ ಆರಂಭವಾಯಿತು. ಸುಮಾರು ೫೦,೯೯೨ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಕರ್ಯ ಒದಗಿಸುವ ಸಾಮರ್ಥ್ಯವುಳ್ಳ ಈ ಅಣೆಕಟ್ಟಿನ ನಿರ್ಮಾಣ ಐದನೇ ಯೋಜನೆಯ ಅವಧಿಯಲ್ಲಿ ಮುಕ್ತಾಯಗೊಳ್ಳಲಿದೆ. ಒಟ್ಟು ವೆಚ್ಚ ೨೪.೮ ಕೋಟಿ ರೂಪಾಯಿ.

ಅಣೆಕಟ್ಟಿನ ಉದ್ದ ೨೭೦೯ ಮೀಟರು; ಎತ್ತರ ೫೯.೪೫ ಮೀಟರು. ಪ್ರಧಾನ ಕಾಲುವೆಯ ಉದ್ದ ೬೧.೪೩ ಮೀಟರು.

ಮಲಪ್ರಭಾ

ಬೆಳಗಾವಿ ಜಿಲ್ಲೆಯ ಮನೋಲಿ ತಾಲೂಕಿನ ನವಿಲುಕೊಳ್ಳದಲ್ಲಿ ೧೯೬೫ರಿಂದ ಅಣೆಕಟ್ಟು ನಿರ್ಮಾಣ ಸತತವಾಗಿ ನಡೆಯುತ್ತಿದೆ. ಮಲಪ್ರಭಾ ನದಿಗೆ ಕಟ್ಟುತ್ತಿರುವ ಈ ಅಣೆಕಟ್ಟಿನಿಂದಾಗಿ ಸುಮಾರು ೧,೫೧,೯೮೦ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಕರ್ಯ ದೊರೆಯಲಿದೆ. ಒಟ್ಟು ವೆಚ್ಚ ೬೭.೬೫ ಕೋಟಿ ರೂಪಾಯಿ. ಐದನೇ ಯೋಜನಾವಧಿಯಲ್ಲಿ ಕೆಲಸ ಪೂರ್ತಿಯಾಗುವ ನಿರೀಕ್ಷೆಯಿದೆ.

ಅಣೆಕಟ್ಟಿನ ಉದ್ದ ೧೫೩.೬ ಮೀಟರು. ಎತ್ತರ ೪೩.೩ ಮೀಟರು. ಪ್ರಧಾನ ಕಾಲುವೆಯ ಉದ್ದ ೧೯೬.೯ ಮೀಟರು.

ಕೃಷ್ಣಾ ಮೇಲ್ದಂಡೆ ಯೋಜನೆ

ಬಿಜಾಪುರ ಜಿಲ್ಲೆಯ ಅಲಮಟ್ಟಿ ಮತ್ತು ಸಿದ್ಧಾಪುರಗಳಲ್ಲಿ ಕೃಷ್ಣಾನದಿಗೆ ಎರಡು ಅ

ಸೇಫ್ ಡಿಪಾಜಿಟ್ ಲಾಕರ್

ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ

ESTD. 1906

ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್

ರಥಬೀದಿ, ಮಂಗಳೂರು ಫೋನ್ ನಂ. 3057
ಕಂಕನಾಡಿ, ಮಂಗಳೂರು ಫೋನ್ ನಂ. 7312
ಪುತ್ತೂರು, ಫೋನ್ ನಂ. 161

maa/CBC/151 Kan.

ಣೆಕಟ್ಟುಗಳ ನಿರ್ಮಾಣವೇ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಥಮ ಹಂತದ ಹಂದರ ಎನ್ನಬಹುದು. ನಿರ್ಮಾಣಕಾರ್ಯ ೧೯೬೪ರಲ್ಲಿ ಆರಂಭವಾಗಿದ್ದು, ಐದನೇ ಯೋಜನಾವಧಿಯಲ್ಲಿ ಮುಗಿಯುವ ಅಂದಾಜು ಇದೆ.

ಸುತ್ತ ಮುತ್ತಲಿನ ೨,೪೨,೮೨೦ ಹೆಕ್ಟೇರ್ ಜಮೀನಿಗೆ ನೀರಾವರಿ ಒದಗಿಸುವ ಈ ಯೋಜನೆಯ ಒಟ್ಟು ವೆಚ್ಚ ಸುಮಾರು ೭೫ ಕೋಟಿ ರೂಪಾಯಿ.

ಆಲಮಟ್ಟಿ ಅಣೆಕಟ್ಟಿನ ಉದ್ದ ೧೮೩೧ ಮೀಟರು. ಎತ್ತರ ೩೪.೭೬ ಮೀಟರು. ಪ್ರಧಾನ ಕಾಲುವೆಯ ಉದ್ದ ೧೭೦.೫೮ ಮೀಟರು ಸಿದ್ಧಾಪುರ ಅಣೆಕಟ್ಟಿನ ಉದ್ದ ೩೯೨೧ ಮೀಟರು. ಎತ್ತರ ೨೩.೭೬ ಮೀಟರು. ಪ್ರಧಾನ ಕಾಲುವೆಯ ಉದ್ದ ೨೨೨ ಮೀಟರು.

ವಿದ್ಯುತ್ ಯೋಜನೆಗಳು

ಸ್ವಾತಂತ್ರ್ಯಾನಂತರ ಸ್ಥಾಪನೆಗೊಂಡ ರಾಜ್ಯದ ವಿದ್ಯುತ್ ಯೋಜನೆಗಳಲ್ಲಿ ಅಗ್ರಸ್ಥಾನ ಶರಾವತಿ ಯೋಜನೆಗೆ ಸಲ್ಲುತ್ತದೆ.

ಸುಮಾರು ಹದಿನಾರು ವರ್ಷಗಳ ಹಿಂದೆ (೧೯೫೬ರಲ್ಲಿ) ಆರಂಭವಾದ ಕೆಲಸದ ಪ್ರಥಮ ಹಾಗೂ ದ್ವಿತೀಯ ಹಂತಗಳು ಈಗಾಗಲೇ ಮುಗಿದಿದ್ದು, ತೃತೀಯ ಹಂತ ನಾಲ್ಕನೇ ಯೋಜನಾಂತ್ಯದೊಳಗೆ ಮುಕ್ತಾಯವಾಗಲಿದೆ.

ಶರಾವತಿ ಯೋಜನೆಯಲ್ಲಿ ಎರಡು ಅಣೆಕಟ್ಟುಗಳ ನಿರ್ಮಾಣ ಕಾರ್ಯ ಸೇರಿದೆ. ಪ್ರಧಾನ ಅಣೆಕಟ್ಟು ಲಿಂಗನಮಕ್ಕಿಯಲ್ಲೂ, ಸಣ್ಣ ಅಣೆಕಟ್ಟು ತಲಕಳಲೆಯಲ್ಲೂ ಇದೆ

ಯೋಜನೆಯ ಪ್ರಥಮ ಹಂತದಿಂದ ೧೭೮,೨೦೦ ಕಿ. ವಾ., ದ್ವಿತೀಯ ಹಂತದಿಂದ ೫೩೪,೬೦೦ ಕಿ. ವಾ; ಹಾಗೂ ತೃತೀಯ ಹಂತದಿಂದ ೧೭೮,೨೦೦ ಕಿ. ವಾ. ವಿದ್ಯುತ್ ಉತ್ಪಾದನೆ.

ಲಿಂಗನಮಕ್ಕಿ ಅಣೆಕಟ್ಟಿನ ಉದ್ದ ೨೬೫೦ ಮೀಟರು. ಎತ್ತರ ೬೧.೨೮ ಮೀಟರು, ತಲಕಳಲೆ ಅಣೆಕಟ್ಟಿನ ಉದ್ದ ೪೮೪.೮ ಮೀಟರು. ಎತ್ತರ ೬೨.೫ ಮೀಟರು.

ಕಾಳಿ ನದಿ ಯೋಜನೆ

ನಾಲ್ಕು ವರ್ಷ ಹಿಂದೆ ಬೊಮ್ಮನಹಳ್ಳಿಯ ಬಳಿ ಕಾಳಿ ನದಿಗೆ ಅಣೆಕಟ್ಟು ನಿರ್ಮಿಸುವ ಕಾರ್ಯ ಆರಂಭವಾಯಿತು. ಜೊತೆಗೆ ಕಾಳಿ ನದಿಯ ನೀರನ್ನು ನಾಗಝರಿ ವಿದ್ಯುತ್ ಕೇಂದ್ರಕ್ಕೆ ನೀರ್ಗಾಲುವೆಯ ಮೂಲಕ ಹರಿಸುವ ಕೆಲಸವೂ ಮೊದಲಾಯಿತು. ಈ ಕಾರ್ಯ ಐದನೇ ಯೋಜನಾವಧಿಯಲ್ಲಿ ಪೂರ್ತಿಗೊಳ್ಳುವ ನಿರೀಕ್ಷೆಯಿದೆ.

ತಲಾ ೧೫೦ ಮೆಗಾವಾಟ್ ಉತ್ಪಾದನ ಸಾಮರ್ಥ್ಯವುಳ್ಳ ಮೂರು ಘಟಕಗಳ ನಿರ್ಮಾಣ ಈ ಯೋಜನೆಯ ವೈಶಿಷ್ಟ್ಯ. ಒಟ್ಟು ವೆಚ್ಚ ೪೫.೨೫ ಕೋಟಿ ರೂಪಾಯಿ.

ರಾಜ್ಯದ ದೊಡ್ಡ ಹಾಗೂ ಮಧ್ಯಮ ಪ್ರಮಾಣದ ನೀರಾವರಿ ಮತ್ತು ವಿದ್ಯುತ್ ಯೋಜನೆಗಳಲ್ಲಿ ಸುಮಾರು ೩೦೦ ಕೋಟಿ ರೂಪಾಯಿಗಳು ೧೯೬೮—೭೩ರ ವರೆಗೆ ವೆಚ್ಚವಾಗಿವೆ.

●●

ಪತ್ರಿಕೆ ಸಾರ್ವಜನಿಕ ಶಾಸನ ಸಂಸ್ಥೆ

(ಐದನೇ ಪುಟದಿಂದ)

ದಾಗಿ ವಿಶ್ವವೆಲ್ಲ ಒಂದು ಕುಟುಂಬದಂತಾಗಿದೆ. ಅಮೆರಿಕೆಯ ಯಾವುದೊ ಕುಗ್ರಾಮದಲ್ಲಿ ನಡೆಯ ಬಹುದಾದ ಘಟನೆ ಭಾರತದ ಕೊಂಪೆಯೊಂದರ ಬಡ ರೈತನ ಮೇಲೆ ಅನಿಷ್ಟ ಪ್ರತಿಕ್ರಿಯೆಯನ್ನುಂಟು ಮಾಡಬಹುದು. ಆದ್ದರಿಂದ ಮಾನವನಾಗಿ ಬಾಳಬೇಕೆನ್ನುವ ಪ್ರತಿಯೊಬ್ಬ ವ್ಯಕ್ತಿಗೂ ಲೋಕ ವ್ಯವಹಾರ ಜ್ಞಾನ ಅಷ್ಟಿಷ್ಟು ಅತ್ಯಗತ್ಯ. ಇದರ ಜತೆಗೆ ಪತ್ರಿಕೆಗಳು ಸುಸಂಸ್ಕೃತ ಜೀವನ ಬಯಸಬಹುದಾದ ಬೌದ್ಧಿಕ ಸಾಮಗ್ರಿಯನ್ನೊದಗಿಸಬೇಕಾಗುತ್ತದೆ. ವೈಜ್ಞಾನಿಕ ಮತ್ತು ಸಾಮಾಜಿಕ ವಿಷಯಗಳ ಜತೆಗೆ ಸೃಜನಾತ್ಮಕ ಸಾಹಿತ್ಯವನ್ನೊದಗಿಸಬೇಕಾಗುತ್ತದೆ. ಅಂದರೆ ಪತ್ರಿಕೆಯ ವ್ಯಾಪ್ತಿಗೊಳಗಾಗದ ವಸ್ತುವೇ ಇಲ್ಲವೆನ್ನಬಹುದು. ಈ ಕಾರಣದಿಂದ ವಾರಿಕೆ, ಮಾಸಿಕೆ, ಪಾಕ್ಷಿಕೆಗಳ ಬಳಗ ಬೆಳೆಯಬೇಕಾಗುತ್ತದೆ.

ಆಧುನಿಕ ಯುಗದಲ್ಲಿ ಪತ್ರಿಕೆ ಮಹತ್ವಪೂರ್ಣವಾದ ಹಾಗೂ ಎಣೆಯಿಲ್ಲದ ವಿಚಾರವೇದಿಕೆಯಾಗಿದೆ. ಪಾಮರನಿಂದ ಪಂಡಿತನ ತನಕ, ಜವಾನನಿಂದ ಹಿಡಿದು ಪ್ರಧಾನಿಯ ತನಕ ಕಾರ್ಮಿಕನಿಂದ ಮಾಲೀಕನ ತನಕ ಎಲ್ಲರೂ ಯಾವ ಸ್ಥಾನದಲ್ಲಿಯೇ ಇರಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ ಪತ್ರಿಕೆಗಳ ಮೂಲಕ ಬಹಿರಂಗಪಡಿಸಬಹುದು. ಯಾವ ಸಾರ್ವಜನಿಕ ಸಭೆಗೂ ಇದರಷ್ಟು ವ್ಯಾಪ್ತಿಯಿಲ್ಲ. ಶಾಸನ ಸಭೆಗಂತು ಕೇವಲ ಕೆಲವರಿಗೆ ಮಾತ್ರ ಅವಕಾಶ. ಪತ್ರಿಕೆ ಸಾರ್ವಜನಿಕ ಶಾಸನ ಸಂಸ್ಥೆ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಈ ಸಂಸ್ಥೆಯ ಸ್ವಯಂಪ್ರೇರಿತ ಸದಸ್ಯ. ಹತ್ತಾರು ಜನರ ಅಭಿಪ್ರಾಯಗಳೇ ಶಾಸನದ ಸ್ಥಾನಮಾನವನ್ನು ಪಡೆಯಬಹುದು. ಒಟ್ಟಿನಲ್ಲಿ ಇದರಂಥ ಸಮರ್ಥ ಜನತಾ ಸಂಪರ್ಕ ಮಾಧ್ಯಮ ಮತ್ತೊಂದಿಲ್ಲ.

ಒಂದು ಪತ್ರಿಕೆಯ ಮೇಲ್ಮೆ ಅಥವಾ ಅದರ ಉಪಯುಕ್ತತೆ ಸಂಪಾದಕನನ್ನವಲಂಬಿಸಿರುತ್ತದೆ. ಅವನು ಸರ್ವಸಮತಾ ದೃಷ್ಟಿಯುಳ್ಳ, ಗುರುವಿನಂತಿರಬೇಕು, ಲೋಕ ಕಾರುಣ್ಯವುಳ್ಳ ನಾಡೋಜನಾಗಿರಬೇಕು, ಜ್ಞಾನಾನುಭವ ಸಂಪನ್ನನಾದ ಧೀಮಂತನಾಗಿರಬೇಕು, ಸಹಾನುಭೂತಿ ಅನುಕಂಪೆಯುಳ್ಳ ಲೋಕ ಹಿತೈಷಿಯಾಗಬೇಕು; ಅವನದು ತುಂಬ ಎತ್ತರದ ವ್ಯಕ್ತಿತ್ವವಾಗಿರಬೇಕು. ಅವನು ತನ್ನ ಸಿದ್ಧಾಂತಗಳನ್ನು ಮಂಡಿಸುವುದಕ್ಕಿಂತ ಇತರರ ಮತಾಭಿವ್ಯಕ್ತಿಗೆ ಅವಕಾಶ ಕಲ್ಪಿಸಬೇಕು; ಅವನು ಬರೆಯುವ ಸಂಪಾದಕೀಯ 'ಜನ ಮನಸ್ಸಿನ ಪ್ರತಿಬಿಂಬದಂತಿರಬೇಕು. ಸತ್ಯ ಸಂಶೋಧನೆ ವಿಚಾರ ಪ್ರಚಾರ ಮತ್ತು ಸಮಾಜ ಕ್ಷೇಮ ಅವನ ಗುರಿಯಾಗಿರಬೇಕು. ಅವನಲ್ಲಿ ಅಲ್ಪತ್ವ ಎಂದೂ ಪ್ರವೇಶಿಸಬಾರದು. ಸ್ವಾರ್ಥೋದ್ದೇಶಪೂರಿತವಾದ, ಸಮಾಜಕಂಟಕವಾದ ಅಪಪ್ರಚಾರ ಎಂದಿಗೂ ಸಲ್ಲದು. ಉದಾರಭಾವನೆಯಿಲ್ಲದ, ನ್ಯಾಯಪರವಾದ ಧೋರಣೆಯಿಲ್ಲದ, ಕುತ್ಸಿತವೇ ಸಹಜಗುಣವಾಗುಳ್ಳ ಪತ್ರಿಕೆ ಸಮಾಜಕ್ಕೆ ಶನಿಯಾಗುತ್ತದೆ. ಪವಿತ್ರ ಧ್ಯೇಯವುಳ್ಳ ಪತ್ರಿಕೆ ಅದ್ಭುತ ಶಕ್ತಿಯಾಗುತ್ತದೆ, ಸಮಾಜಕ್ಕೆ ರಕ್ಷೆಯಾಗುತ್ತದೆ, ಲೋಕಕಲ್ಯಾಣವನ್ನು ಸಾಧಿಸುತ್ತದೆ. ಪ್ರಾಯಶಃ ಯಾವ ರಾಜಕೀಯ ಶಕ್ತಿಯೂ ಸಾಧಿಸಲಾರದ ಮಹತ್ಸಿದ್ಧಿ ಪತ್ರಿಕೆಯಿಂದ ಸಾಧ್ಯವಾಗುತ್ತದೆ.

ಕೆಲವು ಕಾಲಗಳಿಂದ ನವಯುಗವನ್ನು ನೋಡುತ್ತಿದ್ದೇನೆ. ಮನೋವಿಕಾರ ಜನ್ಯವಲ್ಲದ, ಪೂರ್ವಗ್ರಹ ಮುಕ್ತವಾದ, ದ್ವೇಷತ್ವೇಷ ಶೂನ್ಯವಾದ, ಸಸಿನವೂ, ಸತ್ಯವೂ ಆದ ಸಂಪಾದಕೀಯ ಲೇಖನಗಳನ್ನು ಓದಿ ಹರ್ಷಿಸಿದ್ದೇನೆ. ಅದರಲ್ಲಿ ಧಾರಾವಾಹಿಯಾಗಿ ಬರುವ ಕಾದಂಬರಿಗಳನ್ನೂ, ಕತೆಗಳನ್ನೂ, ಕವಿತೆಗಳನ್ನೂ, ವಿಚಾರ ಪೂರ್ಣ ಲೇಖನಗಳನ್ನೂ ಓದಿ ಬೌದ್ಧಿಕ ಹಾಗೂ ಮಾನಸಿಕ ತೃಪ್ತಿಯನ್ನನುಭವಿಸಿದ್ದೇನೆ ಅವರು ಆಗಾಗ್ಗೆ ಪ್ರಕಟಿಸುತ್ತಿರುವ ವಿಶೇಷಾಂಕಗಳಂತೂ ಗ್ರಾಹಕರಿಗೆ ಹಬ್ಬ. ಈ ಪತ್ರಿಕೆ ಹರಿದಾಸ ಭಟ್ಟರಂಥ ರೈ ಅವರಂಥ ಅನೇಕ ಕವಿಗಳನ್ನೂ, ಲೇಖಕರನ್ನೂ ಸೃಷ್ಟಿಸಿ ಕೀರ್ತಿಭಾಜನವಾಗಿದೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಜನತೆಯಲ್ಲಿ ಸ್ವಾತಂತ್ರ್ಯ ಪ್ರಜ್ಞೆ ಹಾಗೂ ರಾಷ್ಟ್ರ ಪ್ರಜ್ಞೆಗಳನ್ನೂ ಮೂಡಿಸಿ, ಸಮಾಜೋದ್ಧರಣ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದುಂಟು. ಒಟ್ಟಿನಲ್ಲಿ ನವಯುಗದ ಹಿರಿಮೆಗೆ ಶೆಟ್ಟರೂ, ಶೆಟ್ಟರ ವ್ಯಕ್ತಿತ್ವ ಮಹಿಮೆಗೆ ನವಯುಗವೂ ಕಾರಣವಾಗಿ, ವ್ಯಕ್ತಿ ಶಕ್ತಿಯಾಗಿ, ಶಕ್ತಿ ವ್ಯಕ್ತಿಯಾಗಿ ಎರಡರ ಬಾಳೂ ಒಂದಾಗಿ ಬೆರೆದು, ಬೆಳೆದು, ಕನ್ನಡನಾಡಿನಲ್ಲೆಲ್ಲ ತಮ್ಮ ಜೀವನದ ಪರಿಮಳವನ್ನು ಬೀರಿವೆ. ಶ್ರೀ ಶೆಟ್ಟರು ಬಹು ಶ್ರಮದಿಂದ ಈ ಪತ್ರಿಕೆಯನ್ನು ನಡಿಸಿಕೊಂಡು ಬರುತ್ತಿದ್ದಾರೆ. ಸರಕಾರ ಸಮೂಹಗಳ ಉದಾರ ನೆರವಿಲ್ಲದೆ ಅದು ಪೋರವಾಗಿ ಹೃಷ್ಟಪುಷ್ಟವಾಗಿ ಬೆಳೆಯಲಾರದು. ಪತ್ರಿಕೆಗಳ ಪೋಷಣೆ ಸಮಾಜದ ಕರ್ತವ್ಯವೆಂತೊ ಸರಕಾರದ ಕರ್ತವ್ಯವೂ ಅಹುದು. ಪಕ್ಷೇತರ ಸರಕಾರ ಮಾಡಬೇಕಾದ, ಅನೇಕ ಕಾರಣಗಳಿಂದ ಮಾಡಲಾಗದ ಕರ್ತವ್ಯವನ್ನು ಪತ್ರಿಕೆ ಮಾಡಬೇಕಾಗುತ್ತದೆ. ನವಭಾರತದಲ್ಲಿ, ಅಷ್ಟರಲ್ಲಿಯೂ ಸ್ವಾತಂತ್ರ್ಯ ರಜತೋತ್ಸವ ವರ್ಷದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸುವ ಪತ್ರಿಕೆಗಳೇ ವಿರಳ. ಇಂಥವುಗಳಿಗೆ ಸರ್ಕಾರ ಮುಕ್ತಹಸ್ತದಿಂದ ನೆರವೀಯುವುದು ಔಚಿತ್ಯ. ಎನಿತು ಅರಿಷ್ಟಗಳೊದಗಿದರೂ ಈ ಪತ್ರಿಕೆ ಎಂದಿನಂತೆ ಹೊಸಹೊಸ ಸಾಹಿತಿಗಳನ್ನು ಸೃಷ್ಟಿಸುತ್ತ, ಭಾಷೆಯನ್ನು ಪುಷ್ಟಗೊಳಿಸುತ್ತ, ಜನತಾ ಜನಾರ್ದನನ ಸೇವೆಯನ್ನು ಅವಿಚ್ಛಿನ್ನವಾಗಿ ಮಾಡಲಿ. ಅಂಥ ಸೇವೆಯನ್ನು ಮಾಡುವ ಸಲುವಾಗಿ ಶ್ರೀ ಶೆಟ್ಟರು ಬಹುಕಾಲ ಆರೋಗ್ಯವಂತರಾಗಿ ಬಾಳಲಿ, ಯಾರಿರಲಿ, ಇಲ್ಲದಿರಲಿ ಇದರ ಶತಮಾನೋತ್ಸವ ಇಲ್ಲಿಯೇ ವಿಜೃಂಭಣೆಯಿಂದ ನಡೆಯಲಿ. ಈ ನವಯುಗ ಎಂದೆಂದಿಗೂ ನವಯುಗವಾಗಿ ಯಾವಾಗಲೂ ನಾಡಿಗೆ ನವಚೈತನ್ಯವನ್ನೊದಗಿಸುವಂತಾಗಲಿ ಎಂದು ಹಾರೈಸಿ ಎಲ್ಲ ಕನ್ನಡಿಗರ ಪರವಾಗಿ ಸಂಪಾದಕರಿಗೆ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

●●

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1947 Phone: 3242 Res: 3272

ಪುತ್ತೂರು IIrd Addl. Munsiff ಕೋರ್ಟಿನಲ್ಲಿ

R. R. C. 566/71

ಪಾರ್ಲ ಅಬ್ದುಲ್ ಬ್ಯಾರಿ—ಅರ್ಜಿದಾರ

ಮುತ್ತಪ್ಪ ಗೌಡ ಸಹಾ—ಎದ್ರಿರು

4ನೇ ಎದ್ರಿ—ಉಮ್ಮಕ್ಕೆ - ಪೊನ್ನಕ್ಕೆ ಮಗಳು, ಪಾರ್ಲ- ಕೊಕ್ಕಿಗೆ ಗ್ರಾಮ.

ಸದ್ರಿ 4ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರನು ನಿಮ್ಮ ಮೇಲೆ ಕೂಡಾ 69—70ನೇ ವರ್ಷದ ಗೇಣಿ ಬಾಕಿಗೆ ಮಾಡಿದ ಮೇಲಿನ ಅರ್ಜಿಯು ನಿಮ್ಮ ನೋಟೀಸಿನ ಬಗ್ಗೆ ತಾರೀಕು 4-7-73ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಬೆಳಗ್ಗೆ 11 ಗಂಟೆಗೆ ಬಂದು ಉಪಸ್ಥಿತರಿರತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರಿ ಮಾಡಿ ಯುಕ್ತ ತೀರ್ಮಾನಿಸಲಾಗುವುದು.

Sd/ M. Rammohan Rao
Advocate for Petitioner

Puttur, 9—6—73

ಚಂದಾ ಹಣ ಬಾಕಿ ಇರುವವರು ದಯಮಾಡಿ ಕಳಿಸಿಕೊಡುವಂತೆ ವಿನಂತಿ

ಸುತ್ತಮುತ್ತ—

ಕೆಚ್ಚೆದೆಯ ನಡೆ, ಎಂಟೆದೆಯ ನುಡಿ

ಮುಖ್ಯಮಂತ್ರಿ ದೇವರಾಜ ಅರಸು ವಿಧಾನ ಸಭೆಗೆ ಆರಿಸಿಬರಲು ಅನೇಕ ಶಾಸಕರು ತಮ್ಮ ಸ್ಥಾನ ತೆರವು ಮಾಡಲು ಮುಂದೆ ಬಂದಿದ್ದರೂ ಅರಸು ತನ್ನ ಕ್ಷೇತ್ರವಾದ ಹುಣಸೂರನ್ನೇ ಆರಿಸಿಕೊಂಡರು. ಜೂನ್ನ ಹತ್ತರ ಉಪಚುನಾವಣೆಯಲ್ಲಿ ಅರಸು ಶ್ರೀ ಜೋತಿ ಇವರು ಉಮೇದ್ವಾರರು ರಂಗದಲ್ಲಿದ್ದರು. ಸುಮಾರು ೭೫ ಸಾವಿರ ಮತದಾರರಲ್ಲಿ ಸುಮಾರು ೪೫ ಸಾವಿರ ಮತ ಚಲಾಯಿಸಿದರು. ಇಷ್ಟು ಮತಗಳಲ್ಲಿ ೩೦ ಸಾವಿರ ಮತಗಳನ್ನು ಅರಸರೊಬ್ಬರೇ ಪಡೆದರು. ಉಳಿದವರು ತಮ್ಮ ಇಡುಗಂಟನ್ನೂ ಕಳೆದುಕೊಂಡರು.

ಶ್ರೀ ಅರಸರ ವಿಜಯ ಅನಿರೀಕ್ಷಿತವೇನೂ ಅಲ್ಲ. ಆಳುವ ಕಾಂಗ್ರೆಸ್‌ನ ಜಯಭೇರಿಯ ಸದ್ದಿನ್ನೂ ಮತದಾರರಲ್ಲಿ ಪ್ರತಿಧ್ವನಿಸುತ್ತಲೇ ಇದೆ. ಅರಸು, ಅವರ ವಾಗ್ಝರಿಯೂ ನಿರಂತರ ಪ್ರವಹಿಸುತ್ತಿದೆ. ಅವರು ದೊಡ್ಡದೊಡ್ಡ ಮಾತುಗಳನ್ನೇ ಆಡುತ್ತಿದ್ದಾರೆ. ಭೂಮಿತಿ–ನಗರಾಸ್ತಿ ಮಿತಿಗಳ ಬಗ್ಗೆ ತೀವ್ರಾಸಕ್ತಿ ತೋರಿಸುತಿದ್ದಾರೆ. ಆದ್ದರಿಂದ ಶ್ರೀಸಾಮಾನ್ಯರು ಶ್ರೀ ಅರಸರಿಗಲ್ಲದೆ ಮತ್ತಾರಿಗೆ ಮತ ಹಾಕಬೇಕು? ಜೂನ್ ತಿಂಗಳ ಅಧಿವೇಶನದಲ್ಲೇ ಭೂಸುಧಾರಣಾ ಮಸೂದೆ ಮಂಡನೆಯಾಗಲಿದ್ದು ಉಳುವವನ ಕೈಗೆ ಸ್ವರ್ಗವೇ ಸಿಗಲಿರುವುದರಿಂದ ಅವರೆಲ್ಲರೂ ಅರಸರನ್ನೇ ಬೆಂಬಲಿಸಿದರು.

ಶ್ರೀ ಅರಸರೇನೋ ನೇರವಾದ ಜನ. ಅವರು ನುಡಿದಂತೆ ನಡೆವ ಪ್ರತಿಜ್ಞೆ ತೊಟ್ಟವರು. ಆದರೆ, ಅವರು ಆರಿಸಿಕೊಂಡ ಸಚಿವರು ಕೆಲವೊಮ್ಮೆ ತುಟಿ ಮೀರಿದ ಮಾತಾಡತೊಡಗಿದ್ದಾರೆ. ಇಂತಹ ಮಂತ್ರಿಗಳಲ್ಲಿ ಪೌರಾಡಳಿತ ಸಚಿವ ಶ್ರೀ ಬಸವಲಿಂಗಪ್ಪನವರೂ ಒಬ್ಬರು. ಶರಣಬಸವ ದೇವಾಲಯ, ಯೆಲ್ಲಮ್ಮನ ದೇವಾಲಯ, ಮಂಜುನಾಥನ ದೇವಾಲಯ ಮೊದಲಾದ ಹನ್ನೆರಡು ದೇವಾಲಯಗಳ ಆಡಳಿತೆಯನ್ನು ಸರಕಾರವೇ ವಹಿಸಿಕೊಳ್ಳುವುದೆಂದು ಅವರು ಕೆಲವು ದಿನಗಳಿಗೆ ಮೊದಲು ಆಡಿ ದೊಡ್ಡ ಗೊಂದಲವನ್ನೇ ಎಬ್ಬಿಸಿದರು. ಗುಲ್ಬರ್ಗದಲ್ಲಿ ಸರಕಾರದ ನಿಲುಮೆಯನ್ನು ಪ್ರತಿಭಟಿಸಲು ಪ್ರದರ್ಶನಗಳೂ ನಡೆದುವು.

ಶ್ರೀ ದೇವರಾಜರು ಜನತೆಯ ಮನಸ್ಸಿನಲ್ಲಿ ಮೂಡಿದ್ದ ಭಾವನೆಯನ್ನು ತಿಳಿಗೊಳಿಸಿದರು. ದೇವಾಲಯಗಳ ರಾಷ್ಟ್ರೀಕರಣದ ಯೋಚನೆ ಸರಕಾರ ಮಾಡಿದ್ದೇ ಇಲ್ಲವೆಂದವರು ಸ್ಪಷ್ಟಪಡಿಸಿದರು. ದೇವಾಲಯಗಳ ಉತ್ಪನ್ನವನ್ನು ಸಮುಚಿತ ವಿಧಾನಗಳಿಗೆ ಬಳಸಲು ಅನುಕೂಲವಾಗುವಂತಹ ವ್ಯವಸ್ಥೆ ಮಾಡುವ ಬಗ್ಗೆ ಸರಕಾರ ಆಸಕ್ತವಾಗಿದೆಯೆಂದವರು ಹೇಳಿದರು. ಅತ್ಯಧಿಕ ಆದಾಯವಿರುವ ದೇವಾಲಯಗಳ ಸಂಪತ್ತು ದುರುಪಯೋಗವಾಗದಂತೆ ನೋಡಿಕೊಳ್ಳುವುದಷ್ಟೇ ಈ ಆಸಕ್ತಿಯ ಹಿಂದಿರುವ ಆಶಯವೆಂದವರು ನುಡಿದರು.

ಹಾಗಾದರೆ, ಪೌರಾಡಳಿತ ಸಚಿವರು ಸುಳ್ಳು ಹೇಳಿದರೆ? ಅವರು ಆ ಬಗೆಯ ಹೇಳಿಕೆ ಏಕೆ ನೀಡಿದರು? ಅದರಲ್ಲೂ ಮಾನ್ಯ ಸಚಿವರು ಆರಿಸಿದ ಹನ್ನೆರಡು ದೇವಾಲಯಗಳೂ ಹಿಂದೂ ಮತೀಯರದ್ದು. ಇತರ ಮತಗಳಿಗೆ ಸೇರಿದ ಹಲವು ದೊಡ್ಡ ದೇವಾಲಯಗಳಿವೆ, ಅವುಗಳಿಗೂ ಧಾರಾಳ ಉತ್ಪನ್ನವಿದೆ. ಅಲ್ಲಿ ಆದಾಯದ ದುರುಪಯೋಗವಾಗುವುದಿಲ್ಲವೆಂದು ಹೇಳುವುದಕ್ಕಾಗದು. ದೇವಾಲಯಗಳು ಮತೀಯ ಸಂಸ್ಥೆಗಳು. ಜಾತ್ಯತೀತ ನೀತಿಯ ಸರಕಾರವು ಒಂದು ಜಾತಿಯ ದೇವಾಲಯಗಳ ಮೇಲೆ ಗದಾಪ್ರಹಾರ ಮಾಡಬಾರದು. ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕೆನ್ನುವವರು ಬಹುಸಂಖ್ಯಾಕರ ಮತೀಯ ಸ್ವಾತಂತ್ರ್ಯಕ್ಕೆ ಭಂಗ ತರುವಂತಹ ಯಾವುದೇ ಕೆಲಸ ಮಾಡಬಾರದು.

ಧಾರ್ಮಿಕ ಸಂಸ್ಥೆಗಳು ಸಮಾಜದ ಬೆಳವಣಿಗೆಗೆ ಸಹಕಾರಿಯಾಗಬೇಕು; ಮಾರಕವೆನಿಸಬಾರದು. ಅಧಿಕಾರ ಸ್ಥಾನದಲ್ಲಿರುವವರು ಜಾತಿ.ಧರ್ಮ.ಮತೀಯ ಸಂಸ್ಥೆಗಳ ಬಗೆಗೆ ಕುರುಡಾಗಿ ಸಣ್ಣಸಣ್ಣ ಮಾತುಗಳನ್ನು ಆಡಬಾರದು. ಶ್ರೀ ಅರಸು ತಾನು ಯೋಗ್ಯರನ್ನು ಸಹಕಾರಿಯಾಗಿ ಆರಿಸಿಕೊಂಡಿಲ್ಲವಾದರೆ ಅಂತಹ ಅಯೋಗ್ಯರನ್ನು ಮನೆಗೆ ಕಳುಹಿಸಲು ಹಿಂದೆಮುಂದೆ ನೋಡಬಾರದು.

o o o

ವಿಧಾನ ಪರಿಷತ್ತಿನ ದ್ವಿವಾರ್ಷಿಕ ಚುನಾವಣೆಗಳ ಬಗೆಗೆ ಪ್ರಚಾರ ಮಾಡುತ್ತ ಪ್ರಾದೇಶಿಕ ಆಳುವ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಎಚ್. ಕೆ ರಂಗನಾಥರೂ ತನ್ನ ಸ್ಥಾನಮಾನಗಳಿಗೆ ಸಲ್ಲದ ಮಾತೊಂದನ್ನು ಹೇಳಿದರು. ಈ ಬಾರಿ ವಿಧಾನ ಪರಿಷತ್ತಿನಲ್ಲಿ ಅವರ ಕಾಂಗ್ರೆಸ್‌ಗೆ ಬಹುಮತ ದೊರೆಯದೆ ಹೋದರೆ, ಪರಿಷತ್ತನ್ನೇ ರದ್ದುಗೊಳಿಸ ಬೇಕಾಗುವುದಂತೆ!

ಸದ್ಯ ವಿಧಾನ ಪರಿಷತ್ತಿನಲ್ಲಿ ಆಳುವ ಕಾಂಗ್ರೆಸ್‌ಗೆ ಬಹುಮತವಿಲ್ಲ. ಅದರ ಅಧ್ಯಕ್ಷಸ್ಥಾನ ಖಾಲಿಯಾದ ಒಂದು ವರುಷದ ನಂತರ ಬಲಾತ್ಕಾರದಿಂದೆಂಬಂತೆ ಚುನಾವಣೆ ನಡೆಯಿತು. ಸಂಸ್ಥಾ ಕಾಂಗ್ರೆಸ್‌ನ ಶ್ರೀ ಗಾಂವ್‌ಕರ್ ಬಹುಮತದಿಂದ ಗೆದ್ದು ಬಂದರು. ಇದು ಆಳುವ ಕಾಂಗ್ರೆಸ್‌ಗೆ ಪಥ್ಯವಾಗುವುದು ಸಾಧ್ಯವಿಲ್ಲ. ಅದಕ್ಕಂದೇ ಅದು ಜೂನ್ ತಿಂಗಳಾಂತ್ಯದವರೆಗೆ ಅಧ್ಯಕ್ಷ ಚುನಾವಣೆಯನ್ನು ಮುಂದುವರಿಸ ಬಯಸಿತ್ತು.

ಚುನಾವಣೆಗಳಲ್ಲಿ ತಮ್ಮ ಅಭ್ಯರ್ಥಿಗೆ ಮತಯಾಚಿಸುವುದು ಸಹಜವೇ. ಶ್ರೀ ರಂಗನಾಥರೂ ಅದೇ ಕೆಲಸವನ್ನು ಮಾಡಿದ್ದರೆ ಯಾರ ಆಕ್ಷೇಪಣೆಯೂ ಇಲ್ಲ. ವಿಧಾನ ಸಭೆ–ಸ್ಥಳೀಯ ಸಂಸ್ಥೆಗಳಲ್ಲೂ ಆಳುವ ಕಾಂಗ್ರೆಸ್‌ನ ಬಹುಮತ ಸ್ಪಷ್ಟವಾಗೇ ಇರುವುದರಿಂದ ಅದು ಪರಿಷತ್ತಿನಲ್ಲಿ ಬಹುಮತ ಗಳಿಸದೆ ಹೋದರೇನೇ ಆಶ್ಚರ್ಯ. ತಮ್ಮ ಜಯಭೇರಿಯ ಗುಂಗಿನಲ್ಲಿ ಶ್ರೀ ರಂಗನಾಥರು ಆಡಬಾರದ್ದನ್ನು ಆಡಿದರೆನಿಸುತ್ತದೆ.

ವಿಧಾನ ಪರಿಷತ್ತಿನಲ್ಲಿ ಅವರ ಕಾಂಗ್ರೆಸ್ಸು ಬಹುಮತ ಗಳಿಸದೆ ಹೋದರೆ, ಅದರ ಸೇಡಿಗೆ ಮೇಲ್ಮನೆಯನ್ನೇ ರದ್ದು ಮಾಡುವ ಅವರ ಯೋಚನೆ ಅವರ ತಲೆಯಲ್ಲಷ್ಟೇ ಮೂಡಿದ್ದರೆ ಚಿಂತೆಯಿಲ್ಲ. ಅವರಿಗೆ ವಿಧಾನ ಸಭೆಯಲ್ಲಿ ತುಂಬು ಬಹುಮತವಿದೆ. ಸಂಸತ್ತಿನಲ್ಲೂ ಬಹುಮತವಿದ್ದು ಇಲ್ಲಿಂದ ಮಸೂದೆ ಅಲ್ಲೂ ಸಲ್ಲುವುದು ಅಸಂಶಯ. ಈಗಲೇ ಅಲಂಕಾರ ಪ್ರಾಯವಾದ ಮೇಲ್ಮನೆ ಕೆಲವು ರಾಜ್ಯಗಳಲ್ಲಿ ರದ್ದಾಗಿರುವುದನ್ನು ನೆನೆದರೆ, ಶ್ರೀ ರಂಗನಾಥರ ಮಾತು ಅವರ ಹೃದಯಕ್ಕೇ ಕನ್ನಡಿ ಹಿಡಿಯುತ್ತದೆನ್ನ ಬಹುದಲ್ಲವೆ? ಆದರೂ ಯಾರೋ ಮಾಡಬೇಕಾದ ಕೆಲಸವನ್ನು ತಾನು ಮಾಡುತ್ತೇನೆಂದು ಹೇಳುವ ಶ್ರೀ ರಂಗನಾಥರ ನಾಲಗೆ ಬೆದರಿಸಿ ಮತಪಡೆಯಲೆಳಸಿದಂತಿದೆಯೆ?

o o o

ಕರ್ನಾಟಕದಲ್ಲಿ ಸಮಾಜವಾದಕ್ಕೆ ಪರ್ಯಾಯ ನಾಮವೆನಿಸಿದ ಶಾಂತವೇರಿ ಗೋಪಾಲ ಗೌಡರ ನಿಧನದ ವಾರ್ತೆ ಅವರ ಪಕ್ಷಕ್ಕೆ ಮಾತ್ರವಲ್ಲ, ಸಮಾಜವಾದಿಗಳೆಲ್ಲರಿಗೂ ವಜ್ರಾಘಾತ. ಇನ್ನೂ ಐವತ್ತರ ಗಡಿಯನ್ನು ಮುಟ್ಟದ ಈ ತರುಣ ತನ್ನ ಮೂವತ್ತು ವರ್ಷಗಳನ್ನು ಹೋರಾಟದಲ್ಲೇ ಕಳೆದಿದ್ದಾರೆ. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಿಂದ ಇವರು ರಾಜ್ಯಕೀಯ ಪ್ರವೇಶಿಸಿ ಅಂದಿನಿಂದ ಇಂದಿನವರೆಗೂ ನೂರು ಬಗೆಯ ಏರಿಳಿತಗಳಲ್ಲಿ ಹಾಸುಹೊಕ್ಕಾಗಿ ನಡೆದು ಬಂದು ಎಲ್ಲರನ್ನೂ ಅಗಲಿದರು.

ಶ್ರೀ ಶಾಂತವೇರಿ ಗೋಪಾಲ ಗೌಡರ ಮನ ಮೆಚ್ಚಿದ ನಾಯಕ ರಾಮಮನೋಹರ ಲೋಹಿಯಾ. ಈ ಮಹೋನ್ನತ ನಾಯಕನ ಹೆಸರನ್ನೇ ಗೌಡರು ತಮ್ಮ ಮಗನಿಗಿಟ್ಟಿದ್ದಾರೆ. ಈತನಿಗೀಗ ಬರಿಯ ಮೂರು ವರ್ಷ ವಯಸ್ಸು, ತಡವಾಗಿ ವಿವಾಹವಾದ ಶ್ರೀ ಗೌಡರ ಹಿರಿಯ ಮಗಳಿಗೆ ನಾಲ್ಕು ವರ್ಷ ಮಾತ್ರ. ಗೌಡರು ರಾಜ್ಯಕೀಯವನ್ನೇ ನೆಮ್ಮಿ ಹಿಡಿದವರಾದರೂ ಅವರಿಗೆ ನವ್ಯ ಸಾಹಿತ್ಯ, ಸಿನಿಮಾ, ನಾಟಕಗಳಲ್ಲೂ ಆಸಕ್ತಿ. ಕನ್ನಡದ ಕಟ್ಟಾ ಅಭಿಮಾನಿಗಳಾದ ಇವರಿಗೆ ಕನ್ನಡ ಇಂಗ್ಲಿಷ್‌ಗಳೆರಡರಲ್ಲೂ ಪ್ರಕಾಂಡ ಪ್ರಭುತ್ವ. ಅವರದು ಕೆಚ್ಚೆದೆಯ ನಡೆ, ಎಂಟೆದೆಯ ನುಡಿ.

೧೯೫೨ರ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಶ್ರೀ ಬದರೀನಾರಾಯಣ (ಈಗಿನ ವಿದ್ಯಾ ಸಚಿವ)ರನ್ನೂ ಸೋಲಿಸಿದ ಧೀಮಂತ ವ್ಯಕ್ತಿ. ೫೭ರಲ್ಲಿ ಸೋತರೂ ೬೨-೭೨ರಲ್ಲಿ ಮತ್ತೆ ಗೆದ್ದರು. ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಪಕ್ಷಕ್ಕೊಂದು ಸ್ಥಾನ–ಮಾನ ಸಂಪಾದಿಸಿ ಕೊಟ್ಟವರು ಅವರೇ. ಉತ್ತಮ ವಾಗ್ಮಿಯಾದ ಇವರು ಆಳವಾದ ಅಧ್ಯಯನ ಪ್ರಿಯರು.

ಶ್ರೀ ಗೌಡರ ನಿಧನಕ್ಕೆ ಅವರ ರಾಜ್ಯಕೀಯ ಶತ್ರುಗಳೂ ಕರುಬುತ್ತಾರೆ. ಅವರೊಬ್ಬ ವ್ಯಕ್ತಿಯಾಗಿರಲಿಲ್ಲ, ಶಕ್ತಿಯಾಗಿದ್ದರೆಂಬುದನ್ನು ಎಲ್ಲರೂ ಬಲ್ಲರು. ಅವರ ವಿಧವೆ—ಪುಟ್ಟ ಮಕ್ಕಳ ಮತ್ತು ಕುಟುಂಬದ ಶೋಕದಲ್ಲಿ ಎಲ್ಲ ಸಮಾಜವಾದಿಗಳೂ ಪಾಲುಗೊಳ್ಳುತ್ತಾರೆ. ●

ಬಾರ್ಕೂರಲ್ಲಿ ಶ್ರೀ ಪಿ. ಎನ್. ಭೋಜರಾಯರಿಗೆ ಬೀಳ್ಕೊಡುವ ಸಮಾರಂಭ

ಇಪ್ಪತ್ತೈದು ವರ್ಷಗಳಿಗೂ ಮಿಕ್ಕಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ಇದೀಗ ನಿವೃತ್ತಿ ಹೊಂದುತ್ತಿರುವ ಬಾರ್ಕೂರಿನ ನ್ಯಾಶನಲ್ ಹಾಯರ್ ಸೆಕೆಂಡರಿ ಶಾಲೆಯ ಸ್ಥಾಪಕ ಮುಖ್ಯೋಪಾಧ್ಯಾಯ ಶ್ರೀ ಪಿ. ಎನ್. ಭೋಜರಾಯರನ್ನು ಸಾರ್ವಜನಿಕವಾಗಿ ಬೀಳ್ಕೊಡುವ ಸಮಾರಂಭವು ತಾ. ೯ರಂದು ಅದೇ ಶಾಲೆಯ ಮಹಾರದಲ್ಲಿ ಮೈಸೂರು ವಿದ್ಯಾ ಇಲಾಖೆಯ ನಿವೃತ್ತ ಜೊಯಿಂಟ್ ಡೈರೆಕ್ಟರ್ ಶ್ರೀ ಕೆ. ಶಿವರಾ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಅತಿಥಿಯಾಗಿ ಉಡುಪಿ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಆಗಮಿಸಿದ್ದರು.

ಶ್ರೀ ಕೆ. ರಾಮಚಂದ್ರ ಕಾಮತರು ಸ್ವಾಗತಿಸಿದರು. ಶ್ರೀ ಬಿ ಗಣಪಯ್ಯ ಅಡಿಗರು ಸಂದೇಶಗಳನ್ನೋದಿದರು. ಶ್ರೀ ಪೇತ್ರನ ಲಕ್ಷ್ಮೀನಾರಾಯಣ ರಾವ್, ಕೆ. ಮಂಜುನಾಥ ಉಡುಪ, ಎಚ್ ಮಹಾಬಲ ಶೆಟ್ಟಿ, ಕೃಷ್ಣಮೂರ್ತಿ ಮೊದಲಾದವರು ಶ್ರೀ ಭೋಜರಾಯರಿಗೆ ಶುಭ ಕೋರಿ ಮಾತಾಡಿದರು. ಶ್ರೀ ರಮೇಶ ಅಡಿಗರು, ಸನ್ಮಾನ ಸಮಿತಿಯ ಪರವಾಗಿ ಮಾನಪತ್ರ ಹಾಗೂ ನಿಧಿಯನ್ನು ಅರ್ಪಿಸಿದರು.

ದ. ಕ ಜಿಲ್ಲೆಯ ಶಿಕ್ಷಣ ರಂಗದಲ್ಲಿ ಸ್ಥಾಪಿಸಿದ ತನ್ನದೇ ಆದ ವೈಶಿಷ್ಟ್ಯವನ್ನು ಶ್ರೀ ಕು. ಶಿ. ಯವರು ನಿವರಿಸಿದರು.

ಶ್ರೀ ಭೋಜರಾಯರು ಸನ್ಮಾನಕ್ಕೆ ಉತ್ತರಿಸುತ್ತಾ ದೇಶದ ಸಂಸ್ಕೃತಿಗೆ ಅನುಗುಣವಾದ ಶಿಕ್ಷಣ ಪದ್ಧತಿ ನಮ್ಮಲ್ಲಿಲ್ಲವೆಂದರು. ಅಲ್ಲದೆ ವಿದ್ಯಾರ್ಥಿಯ ಸ್ವಾವಲಂಬನೆಯ ಮಾರ್ಗಹಿಡಿಯಲನುಕೂಲವಾಗುವಂತೆ 'ಟರ್ಮಿನಲ್ ಕೋರ್ಸ್'ಗಳನ್ನು ಆರಂಭಿಸಬೇಕೆಂದೂ, ಶಿಕ್ಷಣ ಮಾಧ್ಯಮ ಕನ್ನಡವೇ ಆಗಬೇಕೆಂದೂ ಹೇಳಿದರು.

ಅಧ್ಯಕ್ಷ ಶ್ರೀ ಶೆಣ್ಯೆಯವರು ವಿದ್ಯಾಸಂಸ್ಥೆಗಳ ಬೆಳವಣಿಗೆಯಲ್ಲಿ ಹಳೆವಿದ್ಯಾರ್ಥಿಗಳೂ ಮಹತ್ತರ ಪಾತ್ರ ವಹಿಸಬಹುದೆಂದರು.

ಶ್ರೀ ಬಿ. ಸೀತಾರಾಮ ಶೆಟ್ಟರು ವಂದಿಸಿದರು.

ಸಚಿವ ಡಿ. ಕೆ. ನ್ಯಾಕರಿಗೆ ಕುಂದಾಪುರ ವಕೀಲರ ಸಂಘದ ಸತ್ಕಾರ ಕೂಟ

ಕುಂದಾಪುರ ವಕೀಲರ ಸಂಘದವರು ತಾ. 12ರಂದು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ರಾಜ್ಯ ಕಾಯಿದೆ ಸಚಿವ ಶ್ರೀ ಡಿ. ಕೆ. ನ್ಯಾಕರು ಭಾಗವಹಿಸಿದ್ದರು. ಕುಂದಾಪುರ ವಕೀಲ ಸಂಘದ ಅಧ್ಯಕ್ಷ ಶ್ರೀ ಎಸ್ ಎಸ್. ಪರಮೇಶ್ವರಯ್ಯನವರು ಆರಂಭದಲ್ಲಿ ಸಚಿವರನ್ನು ನ್ಯಾಯಾಲಯಕ್ಕೆ ಬರಮಾಡಿಕೊಂಡು ಎಡಿಶನಲ್ ನ್ಯಾಯಾಲಯಕ್ಕೆ ಹೊಸ ಕಟ್ಟೋಣ ಒದಗಿಸುವಂತೆ ಆಗ್ರಹಿಸಿದರು.

ಸತ್ಕಾರ ಸಮಾರಂಭದ ಆದಿಯಲ್ಲಿ ಸಂಘದ ಅಧ್ಯಕ್ಷ ಶ್ರೀ ಪರಮೇಶ್ವರಯ್ಯನವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎ. ಬಾಲಕೃಷ್ಣ ಶೆಟ್ಟರು ವಕೀಲರ ಪರವಾಗಿ ಮನವಿ ಅರ್ಪಿಸಿದರು. ಎಡ್ವೊಕೇಟ್ ಶ್ರೀ ಜಿ. ರಾಮಕೃಷ್ಣರಾಯರು ಕುಂದಾಪುರ ವಕೀಲರ ಸಂಘದ ಸದಸ್ಯರ ಪರಿಚಯ ಮಾಡಿಸಿದರು.

ಸಚಿವರು 'ಪ್ರಾಮಾಣಿಕ ನ್ಯಾಯವಾದಿಗಳು ನಿಸ್ಪೃಹ ನ್ಯಾಯಾಧಿಪತಿಗಳ ಪ್ರಾಮಾಣಿಕ ಕರ್ತವ್ಯ ಪಾಲನೆಯಿಂದ ಕೋರ್ಟುಗಳು ನ್ಯಾಯ ದೇಗುಲಗಳಾಗಬೇಕೆಂದು' ಹಾರೈಸಿದರು ಮನವಿಯಲ್ಲಿ ಸೂಚಿಸಿದ ಬೇಡಿಕೆಗಳನ್ನು ಕ್ರಮೇಣ ಈಡೇರಿಸಲಾಗುವುದೆಂದು ಅವರು ಭರವಸೆ ನೀಡಿದರು. ಎಡ್ವಕೇಟ್ ಶ್ರೀ ಎ. ಎಸ್. ಎನ್. ಹೆಬ್ಬಾರರು ವಂದಿಸಿದರು.

o o o

ಹರ ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ ಚಿನ್ನದಂತೆ, ಅರೆದು ನೋಡುವ ಚಂದನದಂತೆ.

—ರಾಮನಾಥ

o o o

ಕವಲುದಾರಿ—ಕೆಂಪುದೀಪ

ಆಕಾಶವಾಣಿ ಮತ್ತು ಅಸ್ಪೃಶ್ಯತೆ

ಆಕಾಶವಾಣಿಯು ಕೇಂದ್ರ ಸರಕಾರದ ನೇರ ಆಡಳಿತದಲ್ಲಿದೆ. ಇದನ್ನು ಸ್ವಾಯತ್ತ ಸಂಸ್ಥೆಯೊಂದರ ಅಧೀನದಲ್ಲಿಡಬೇಕೆಂದು ಪತ್ರಿಕೆಗಳಿಂದಲೂ ಒಂದು ಬಗೆಯ ಜನ ಅಭಿಪ್ರಾಯ ಹೊಮ್ಮುತ್ತ ಬಂದದ್ದಾರೆ.

ಈ ಅಭಿಪ್ರಾಯವನ್ನು ಸರಕಾರ ತಳ್ಳಿಹಾಕುತ್ತ ಬಂದಿದೆ. ಮುಂದೆಯೂ ಬಹುಕಾಲ ತಳ್ಳಿಹಾಕುವ ಸಾಧ್ಯತೆಯನ್ನು ತಳ್ಳಿಹಾಕುವುದು ಸಾಧ್ಯವಿಲ್ಲ.

ಒಂದು ಆಡಳಿತದ ಸೂತ್ರ ಹಿಡಿದವರು ಆಡಳಿತಾಧಿಕಾರ ವಂಚಿತರಾದಾಗ "ಈ ಜನರಿಂದ' 'ಈ ಬಗೆಯ ಬೇಡಿಕೆ' ಬಳಬಹುದು.

ಆಗ 'ಆ ಜನರು' 'ಆ ಬೇಡಿಕೆಯನ್ನು' ತಳ್ಳಿಹಾಕಲೂ ಬಹುದು.

ನಮ್ಮ ಆಕಾಶವಾಣಿಯ ಮೇಲೆ ನಾನಾತರದ ಆರೋಪಗಳು. ನಡೆವರೆಡಹದೆ ಕುಳಿತರೆಡಹುವರೆ?

ಮಾತಾಡುವವರು ತೊದಲದೆ ನಡೆವವರು ಮುಗ್ಗರಿಸದೆ ತಿಂಬವರು ಅಜೀರ್ಣಗೊಳ್ಳದೆ ಇರಲು ಹೇಗೆ ಸಾಧ್ಯ?

ಆದ್ದರಿಂದಲೇ ಆಕಾಶವಾಣಿಯು ತನ್ನ ಮೇಲಿನ ಆರೋಪಗಳನ್ನೆಲ್ಲ ಆಕಾಶಭಾಷಿತವೆಂದು ತಿಳಿದು ತುಂಬು ಸಮಾಧಾನದಿಂದಿದೆ.

ಕರ್ನಾಟಕದಲ್ಲಿ ಎರಡು ಆಕಾಶವಾಣಿ ಕೇಂದ್ರಗಳು ಮತ್ತೆರಡು ಮರಿಕೇಂದ್ರಗಳು. ಈ ಯೋಜನಾವಧಿಯಲ್ಲಲ್ಲವಾದರೂ ಮುಂದಿನ ಯೋಜನಾವಧಿಗಳಲ್ಲಿ ಮತ್ತೆರಡು ಮರಿ ಕೇಂದ್ರಗಳು ಆಗಲೇ ಬೇಕು. ಆಗಲಿ, ಯಾರು ಬೇಡಾಂತಾರೆ?

ಬೇಡಾಂತಂದರೂ ಆಕಾಶವಾಣಿಯ ಪ್ರಗತಿಶೀಲ ವರದಿಗೆ ಇವುಗಳ ಆರಂಭ ಅನಿವಾರ್ಯವಾದ್ದರಿಂದ ಆಗಲೇ ಬೇಕು.

ಕರ್ನಾಟಕ ಕರಾವಳಿಯು ಒಂದು ತುಂಡು ತುಳುವ. (ಮತ್ತೊಂದು ಕೊಂಕಣ?)

ತುಳು ಭಾಷೆಯಾಡುವವರು ಕೆಲವು ಲಕ್ಷಜನ. ಇವರು ತಮ್ಮ ಬುದ್ಧಿವಂತಿಕೆಯ ಪರಿಣಾಮವಾಗಿಯೋ ಹುಟ್ಟಿ ದೂರದಲ್ಲಿ ಬೆಲೆಯಿಲ್ಲದವರಾಗಿಯೋ ಅಥವಾ ಮತ್ತಾವುದೇ ವ್ಯಾವಹಾರಿಕ ಕಾರಣಗಳಿಂದಾಗಿಯೋ ದೇಶವ್ಯಾಪಿಗಳು.

ಇವರ ಉಪಯೋಗಕ್ಕಾಗಿ ಮೆಚ್ಚುಗೆಗಾಗಿ–ತುಳು ಕಾರ್ಯಕ್ರಮವನ್ನು ಕನಿಷ್ಠ ಪಕ್ಷ ರಾಜ್ಯದ ಆಕಾಶವಾಣಿ ನಿಲಯಗಳಾದರೂ ಆರಂಭಿಸಬೇಕೆಂಬ (ನ್ಯಾಯವಾದ) ಬೇಡಿಕೆಗೆ ಹಲವು ಮಳೆಗಾಲ ಕಳೆಯಿತು.

ಆಕಾಶವಾಣಿಯ ಸಲಹಾ ಸಮಿತಿಯಲ್ಲಿ ತುಳುಪರರು ಪ್ರಾಯಃ ಯಾರೂ ಇಲ್ಲವಾದ್ದರಿಂದ ತುಳುವರ ಬೇಡಿಕೆಗಿನ್ನೂ ಬೆಲೆ ಬಂದಿಲ್ಲ. ಅವರ ತುಳು ಇನ್ನೂ ಕಾಡುಮಲ್ಲಿಗೆಯಾಗಿದೆ. ಅದರ ಕಂಪು ಆಕಾಶವಾಣಿಯ ಮೂಗಿಗೆ ಬಡೆಯಲಿಲ್ಲ.

ಆದರೆ, ತುಳುವರ ಕೋಡಿಗೆ ಗರಿಮೂಡುವ ಘಟನೆಯೊಂದು ನಡೆಯಿತು.

ರೇಡಿಯೋ ಸಿಲೋನ್ ತುಳುಚಿತ್ರ ಗೀತೆಗಳಿಗೆ ಮನ್ನಣೆ ನೀಡಿದೆ.

ಇತ್ತೀಚೆಗೆ ತಾನೇ ಚಿತ್ರರಂಗಕ್ಕೆ ತುಳು ಪ್ರವೇಶಿಸಿದ್ದರಿಂದ ಪ್ರತ್ಯೇಕ ತುಳು ಚಿತ್ರಗೀತೆಗಳ ಕಾರ್ಯಕ್ರಮಕ್ಕೆ ಮುಂದಾಗದೆ ಕನ್ನಡ ಕಾರ್ಯಕ್ರಮದಲ್ಲೇ ಇದನ್ನೂ ಅಳವಡಿಸಿಕೊಂಡಿದೆಯಂತೆ.

ಅಷ್ಟಾದರೂ ಸರಿಯೇ. ತುಳು ಚಿತ್ರಗೀತೆಗಳಿಗೆ (ಅವು ಕನ್ನಡ–ಹಿಂದಿ ಚಿತ್ರಗೀತೆಗಳ ಅನುಕರಣವೇ ಆಗಿರಲಿ. ತುಳು ಹೌದು ತಾನೆ?) ತನ್ನ ಪ್ರಸಾರದಲ್ಲಿ ಸ್ಥಾನಮಾನ ನೀಡಿದ ಸಿಲೋನ್ ರೇಡಿಯೋವಿಗೆ ತುಳುವರು ನಿಜಕ್ಕೂ ಕೃತಜ್ಞರು.

ವಿದೇಶೀ ರೇಡಿಯೋದಲ್ಲಿ ಸ್ಥಾನ ಪಡೆಯುವ ಯೋಗ್ಯತೆ ಪಡೆದ ತುಳು ಚಿತ್ರಗೀತೆಗಳಿಗೆ ಸ್ವದೇಶದ ಆಕಾಶವಾಣಿಯ ಅನುಗ್ರಹ ಆಗದಿರುವುದು ನಿಜಕ್ಕೂ ಅಸಮಾಧಾನದ ಸಂಗತಿ.

ರೇಡಿಯೋ ಸಿಲೋನ್ ತುಳು ಗೀತೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ತುಳುವರಲ್ಲಿ ಭಾಷಾಭಿಮಾನವನ್ನು ಉದ್ರೇಕಿಸಿದೆಯೆಂದಾದರೆ ಅದು ಭಾರತದ ಆಂತರಿಕ ಶಾಂತಿಗೆ ದಕ್ಕೆ ತಂದಂತಾಗದೆ?

ಸಿಲೋನ್ ರೇಡಿಯೋನದ್ದು ವ್ಯಾಪಾರ ಪ್ರಧಾನ ವ್ಯವಹಾರ. ನಮ್ಮ ಆಕಾಶವಾಣಿ ಅಷ್ಟು ಕೀಳುಮಟ್ಟಕ್ಕಿಳಿಯಬಾರದು. ಶ್ರೀಮದ್ಗಾಂಭೀರ್ಯವೇ ಆಕಾಶವಾಣಿಯ ಹೆಚ್ಚುಗಾರಿಕೆ.

ಆದುದರಿಂದಲೇ ಶ್ರೋತೃಗಳ ಆರೋಪ ಟೀಕೆಗಳು ಅದರ ಕಿವಿಗಳಿಗೆ ಹೃದಯಕ್ಕೆ ಮುಟ್ಟುವುದೇ ಇಲ್ಲ. ಈ ಮಟ್ಟಿಗೆ ಅದು ಕುಂಭಕರ್ಣನಿಗೂ ಮೇಲಿನದು.

ಅವನು ಆರು ತಿಂಗಳು ಮಾತ್ರ ನಿದ್ರಿಸುತಿದ್ದ. ಇದು ಹನ್ನೆರಡೂ ತಿಂಗಳು.

ಯಾರಿಗೂ ಬೇಡವಾದ ಕಾರ್ಯಕ್ರಮಗಳನ್ನು ಯಾರೊಬ್ಬರೂ ಕೇಳದಂತೆ ಅಳವಡಿಸಿಕೊಳ್ಳುವುದು ಆಕಾಶವಾಣಿಯ ವೈಶಿಷ್ಟ್ಯ.

ಅದರಲ್ಲೂ ಕನ್ನಡ ವಿಭಾಗ ಕನ್ನಡ, ಕನ್ನಡ ನಾಡಿಗೆ, ಕನ್ನಡಿಗರಿಗೆ ಬಿಟ್ಟು ಉಳಿದವಕ್ಕೆಲ್ಲ ಅಗ್ರ ಪಂಕ್ತಿಯಲ್ಲಿ ಎಲೆ ಹಾಕುತ್ತದೆ.

ಕನ್ನಡ ನಾಡಿನ ಒಂದು ಭಾಗವಾದ ತುಳು ನಾಡವರ ಕೇಳಿಕೆಯಂತೆ ತುಳು ಕಾರ್ಯಕ್ರಮಗಳಿಗೆ ಅವಕಾಶ ನೀಡಿದರೆ, ಭಾರತದ ಏಕತೆಗೆ ಕಲ್ಲು ಬಿದ್ದೀತೆಂಬ ಭಯವೇ?

ಅದಕ್ಕೆಂದೇ ಸ್ವಾರಸ್ಯಕರ ಕಾರ್ಯಕ್ರಮಗಳೇನಾದರೂ ಅನಿವಾರ್ಯವಾದರೆ ಅವನ್ನು ಇಂಗ್ಲಿಷಿನಲ್ಲೋ ಹಿಂದಿಯಲ್ಲೋ ರೂಪಿಸಿ ಬಿಡುತ್ತದೆ.

ಕನ್ನಡದಲ್ಲಿ ಹೆಚ್ಚಾಗಿ ನೀರಸ ಕಾರ್ಯಕ್ರಮಗಳನ್ನೇ ಪ್ರಚಾರ ಪಡಿಸಿ ಕನ್ನಡ ಆಕಾಶವಾಣಿಗೆ ಒಗ್ಗುವ ಭಾಷೆಯದಲ್ಲವೆಂದು ಸಿದ್ಧಪಡಿಸುತ್ತದೆ.

ಆಡಳಿತ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷೇ ಮುಂದುವರಿಯಬೇಕೆನ್ನುವ ತ್ರಿಕಾಲಜ್ಞಾನಿ ಕನ್ನಡಿಗರು ಕನ್ನಡ ಕಾರ್ಯಕ್ರಮಗಳಿಗಾಗಿ ಪರದಾಡುವುದು ತಪ್ಪಲ್ಲವೆ?

ಕನ್ನಡವೇ ಬೇಡವೆಂದು ಇಂಗ್ಲೀಷ್ ನೇಣು ಬಿಗಿದುಕೊಳ್ಳುವವರಿಗೆ ತುಳುವಿನ ಮೇಲೇಕೆ ಅಭಿಮಾನ?

ಇದು ನಮ್ಮ ಆಕಾಶವಾಣಿ ಸಂಪಾದಕರಿಗೆ ಗೊತ್ತು, ಚೆನ್ನಾಗಿ ಗೊತ್ತು. ಆದ್ದರಿಂದಲೇ ಅವರಿಗೆ ತುಳುವೂ ಬೇಡ ಕನ್ನಡವೂ ಅನಗತ್ಯ.

ಭಾರತದ ಐಕ್ಯ ಸಾಧನೆ ತುಳುವಿನಿಂದ ಸಾಧ್ಯವಿಲ್ಲ. ಕನ್ನಡದಿಂದ ಅಸಾಧ್ಯ.

ಅದು ಏಕರಾಷ್ಟ್ರವಾಗಿ ಉಳಿದು ಬಂದದ್ದು ಇಂಗ್ಲಿಷಿನ ಬಲದಿಂದ. ಅದರ ಬಲ ತಪ್ಪಿದರೆ ಉಳಿಯುವುದು ಹಿಂದಿಯಿಂದ.

ಹಿಂದಿ ಗೀತೆಗಳನ್ನೂ ಹಾಡುವ ರಾಜ್ಯದ ಆಕಾಶವಾಣಿ ನಿಲಯಗಳು ತುಳುವನ್ನು ತಾಗಿಸಿ ಅಸ್ಪೃಶ್ಯವೆನಿಸಬಾರದು.

ಅಸ್ಪೃಶ್ಯತೆಯ ದೂರೀಕರಣದ ಹೆಸರಿನಲ್ಲಿ ಅಸ್ಪೃಶ್ಯತೆಯನ್ನು ಹೆಚ್ಚಿಸುವ ಈ ಯುಗಕ್ಕೆ ತಕ್ಕಂತೆ ಆಕಾಶವಾಣಿ ಯುಗವಾಣಿಯಾಗಿದೆಯೆಂದರೇನಂತೆ?

● ●

(ಮೂರನೇ ಪುಟದಿಂದ)

ರಲ್ಲ. ಅವರು ಶ್ರೀಮಾನ್ ಭಾರತೀಯನಾಗಿಯೇ ಹುಟ್ಟಿದರು. ಶ್ರೀಮಾನ್ ಭಾರತೀಯನಂತೆಯೇ ರಾತ್ರಿ–ಹಗಲೊಂದು ಮಾಡಿ ಬೆವರು ಸುರಿಸಿದರು. ಕೈ ಕೆಸರು ಮಾಡಿಕೊಂಡು ಈಗ ಮೊಸರು ಸವಿಯುತ್ತಾರೆಂಬುದು ನಿಜ; ಆದರೆ, ತಾನು ಸವಿಯುವ ಮೊಸರನ್ನು ಎಲ್ಲರಿಗೂ ಹಂಚಿಯೇ ತಿನ್ನುತ್ತಾರೆಂಬುದು ಸ್ಮರಣಾರ್ಹ.

ಶ್ರೀ ಪೈಯವರು ನೂರು ಕಾಲ ಬೆಳಗಿ ಬಾಳಲಿ; ಸ್ವಪರಿಶ್ರಮಗಳಿಗೆ ಪ್ರೇರಕ ಶಕ್ತಿಯಾಗಿ ಉಳಿದು ಬರಲಿ.

● ●

ಬಿ. ನಾರಾಯಣ ನಾಯಕರ ವಿಜಯ

ಮೈಸೂರು ವಿಧಾನ ಪರಿಷತ್‌ಗೆ ದಕ್ಷಿಣ ಕನ್ನಡ ಜಿಲ್ಲಾ ಸ್ಥಳೀಯ ಸಂಸ್ಥಾ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಬಂಟ್ವಾಳ ನಾರಾಯಣ ನಾಯಕರು ತನ್ನ ಸಮೀಪದ ಪ್ರತಿಸ್ಪರ್ಧಿಯಿಂದ 125 ಅಧಿಕ ಮತಗಳಿಸಿ ಆರಿಸಿ ಬಂದಿರುವರು.

ಈ ಮತದಾರ ಕ್ಷೇತ್ರದಿಂದ ಜನಸಂಘದ ಬೆಂಬಲ ಪಡೆದು ಪಕ್ಷಾತೀತ ನೆಲೆಯಲ್ಲಿ ಡಾ॥ ಬಿ. ಬಾಲಕೃಷ್ಣ ಶೆಟ್ಟಿ, ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಶ್ರೀ ಪ್ರಭಾಕರ ರೈಯವರೂ ಸ್ಪರ್ಧಿಸಿದ್ದರು.

ಹೆಬ್ರಿ ಜೂನಿಯರ್ ಕಾಲೇಜ್ ಉದ್ಘಾಟನೆ

ಹೆಬ್ರಿಯ ಸರಕಾರಿ ಜೂನಿಯರ್ ಕಾಲೇಜಿನ ಉದ್ಘಾಟನಾ ಸಮಾರಂಭವು ತಾ. 14ರಂದು ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಬೇಳಂಜೆ ವಿಠಲ ಹೆಗ್ಗಡೆಯವರು ಸ್ವಾಗತಿಸಿ ಕಾಲೇಜಿಗೆ ಮಂಜೂರಾತಿ ದೊರೆಯುವಂತೆ ಪ್ರಯತ್ನಿಸಿದ ಶಾಸಕರೇ ಮೊದಲಾದವರ ಸಹಕಾರ–ಪ್ರಯತ್ನಗಳನ್ನು ಕೊಂಡಾಡಿದರು.

ಶಾಸಕರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ದೀಪ ಬೆಳಗಿಸುವುದರ ಮೂಲಕ ಕಾಲೇಜನ್ನು ಉದ್ಘಾಟಿಸಿ ಈ ಬಗ್ಗೆ ಭಗೀರಥ ಪ್ರಯತ್ನ ಮಾಡಿದ ಸೂತ್ರಧಾರಿ ಶ್ರೀ ಬೇಳಂಜೆ ವಿಠಲ ಹೆಗ್ಗಡೆಯವರೆಂದು ಹೇಳಿ ಈ ಕಾಲೇಜಿನಿಂದ ಮಲೆನಾಡ ಜನತೆಯ ಆಶೆ ನೆರವೇರಿದಂತಾಯಿತೆಂದರು.

ಅಧ್ಯಕ್ಷ ಶ್ರೀ ಅಡ್ಯಂತಾಯರು ಮಾತನಾಡುತ್ತಾ, ಈ ಕಾಲೇಜಿನಿಂದ ಮಲೆನಾಡಿನ ಅವಶ್ಯಕತೆಯೊಂದು ಪೂರೈಸಿತೆಂದೂ ಇದಕ್ಕೆ ಈ ಕ್ಷೇತ್ರದ ಅಭಿವೃದ್ಧಿಗಾಗಿ ಸದಾ ದುಡಿಯುತ್ತಿರುವ ಶ್ರೀ ವಿಠಲ ಹೆಗ್ಗಡೆಯವರ ಪ್ರಯತ್ನವೇ ಕಾರಣವೆಂದೂ ಈ ಕಾಲೇಜಿನಿಂದ ಸ್ಥಳೀಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಮಕ್ಕಳು ಪ್ರಯೋಜನ ಹೊಂದಿ, ಕ್ಷೇತ್ರವು ಸಕಲ ಪ್ರಗತಿಯಾಗಲೆಂದು ಹಾರೈಸಿದರು.

ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ಎಸ್. ರಷ್ಮಾಬಾಯಿಯವರು ಈ ಕಾಲೇಜಿಗೆ ಮಂಜೂರಾತಿ ದೊರೆಯುವಂತೆ ಸೂತ್ರಧಾರಿತ್ವ ವಹಿಸಿದ ಶ್ರೀ ವಿಠಲ ಹೆಗ್ಗಡೆಯವರ ಪ್ರಯತ್ನದ ಹಿನ್ನೆಲೆಯನ್ನು ವಿವರಿಸಿ ಧನ್ಯವಾದವರ್ಪಿಸಿದರು.

ಎಂ ಜಿ ಎಂ ಕಾಲೇಜಿನಲ್ಲಿ ರ್‍ಯಾಂಕ್ ವಿಜೇತರಿಗೆ ಸನ್ಮಾನ

ತಾ. 17ರಂದು ಎಂ ಜಿ ಎಂ ಕಾಲೇಜಿನಲ್ಲಿ ಅಲ್ಲಿನ ಪ್ರಾಧ್ಯಾಪಕರು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳನ್ನೂ ಅವರ ಪಾಲಕರನ್ನೂ ಸನ್ಮಾನಿಸಲು ಸಭೆಯೊಂದನ್ನು ಏರ್ಪಡಿಸಿದ್ದರು.

ಪ್ರಿನ್ಸಿಪಾಲ್ ಪ್ರೊ॥ ಕು. ಶಿ. ಹರಿದಾಸ ಭಟ್ಟರು ಆರಂಭದಲ್ಲಿ ಸ್ವಾಗತ ಭಾಷಣಮಾಡಿ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳ ಪರಿಚಯ ಮಾಡಿಕೊಟ್ಟರು.

ರಾಜ್ಯಸಭಾ ಸದಸ್ಯ ಶ್ರೀ ಟಿ ಎ ಪೈಯವರು ಮಾತಾಡುತ್ತಾ, ಶಿಕ್ಷಣದ ಹಿಸ್ಸಾಸಕ್ತಿಯ ಬಡವರ ಆರ್ಥಿಕ ಸತ್ವ ಹೀರುತ್ತಿದ್ದು ಇಷ್ಟರಿಂದ ಬೆಳೆಯುತ್ತಲಿರುವ ಒಂದು ವಿಶ್ವಮಾನವನ್ನು ಸ್ವಾತಂತ್ರ್ಯಾನಂತರ ನಾವಿಂದು 'ಶಾಶ್ವತ'ವೆಂದೂ ಶಿಕ್ಷಣದಿಂದ ಸಮಾನತೆಯು ಬರಲು ಕಸನ್ನಾಗಿ ತಲೆದೋರಿ ಬಡಜನರ ಹೆಸರು ಹೇಳಿಕೊಂಡು ಶ್ರೀಮಂತ ಜನ ತಮ್ಮ ಅನುಮಾನಗಳನ್ನು ಉಳಿಸಿಕೊಂಡು ವಿಶಿಷ್ಟವಾದ ಹಕ್ಕು ಸ್ಥಾಪನೆ ಮಾಡುವ ಒಂದು ಜಾತಿ ಬೆಳೆಯುತ್ತಿದೆಯೆಂದೂ ಅಭಿಪ್ರಾಯಪಟ್ಟರು. ಕಾಲೇಜಿನ ಆರ್ಥಿಕ ಸ್ಥಿತಿಗತಿ, ಅವಶ್ಯಕತೆಗಳೆಲ್ಲ ಸಾರ್ವಜನಿಕರಿಗೆ ಸಂಬಂಧಿಸಿದುದೆಂದು ತಿಳಿಸಿದ ಅವರು ಕಾಲೇಜನ್ನು ಬೆಳೆಸಲು ಸಾಲಮಾಡಿ ಇಂದು ಬಿಕ್ಕಟ್ಟಿಗೆ ಒಳಗಾಗಿರುವ ಪರಿಸ್ಥಿತಿಯನ್ನವರು ಪ್ರಸ್ತಾಪಿಸಿದರು. ಅರ್ಹ ಬಡ ವಿದ್ಯಾರ್ಥಿಗಳಿಗೆ ಅನೇಕ ವಿಧದಿಂದ ಸಹಾಯ ಸಲ್ಲಿಸುತ್ತಿರುವ ಟಿ ಎ ಪೈಯವರು ಈ ಕಾಲೇಜಿಗೆ ಪ್ರವೇಶ ಬಯಸುವ ಅರ್ಹ ಬಡ ವಿದ್ಯಾರ್ಥಿಗಳಿಗಾಗಿ ಸಂಸತ್ತಿನಲ್ಲಿ ತನಗೆ ದೊರಕುವ ಎರಡು ತಿಂಗಳ ವೇತನವಾದ ಒಂದು ಸಾವಿರ ರೂಪಾಯಿಯನ್ನು ಪ್ರಿನ್ಸಿಪಾಲರ ವಶ ಒಪ್ಪಿಸಿದರು.

ಡಾ॥ ಟಿ ಮಾಧವ ಪೈಗಳು ವಿದ್ಯಾರ್ಥಿಗಳಿಗೆ ಆಶೀರ್ವದಿಸಿ, ಎಕಾಡೆಮಿಯು ಜವಾಬ್ದಾರಿ ಹೆಚ್ಚಾದುದರಿಂದ ಇನ್ನು ಮುಂದೆ ಈ ಕಾಲೇಜಿಗೆ ಯಾವ ನೆರವೂ ನೀಡುವ ಸ್ಥಿತಿಯಲ್ಲಿ ಇಲ್ಲವೆಂದು ತಿಳಿಸಿ ಇದರ ಜವಾಬ್ದಾರಿಯನ್ನು ಸಾರ್ವಜನಿಕರೇ ನೋಡಿಕೊಳ್ಳಬೇಕಾದ್ದು ಅಗತ್ಯವೆಂದರು.

ಡಾ॥ ಸದಾಶಿವ ಭಟ್ ಮತ್ತು ನರಸಿಂಹ ಹರಿ ಭಟ್ಟರು ಪಾಲಕರ ಪರವಾಗಿ ಮಾತಾಡಿದರು. ಪ್ರೊ॥ ಯು. ಎಲ್. ಆಚಾರ್ಯರು ಪ್ರಾಧ್ಯಾಪಕರ ಪರವಾಗಿ ವಿದ್ಯಾರ್ಥಿಗಳನ್ನು ಹರಸಿದರು.

ಪ್ರೊ॥ ಶ್ರೀಶ ಬಲ್ಲಾಳರು ವಂದಿಸಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 168/71.

ಯೂವಮ್ಮ ಹೆಗ್ಗಡ್ತಿ... ವಾದಿ

ಮತ್ತು

ಕಾವೇರಿ ಹೆಗ್ಗಡ್ತಿ ಮತ್ತು ಇತರರು–ಪ್ರತಿವಾದಿಗಳು

ಮೇಲಿನ ವ್ಯಾಜ್ಯದ 54ನೇ ಪ್ರತಿವಾದಿ ವಿಠ್ಠಲ ಹೆಗ್ಡೆ S/o ಸೋಮಕ್ಕ ಹೆಗ್ಗಡ್ತಿ C/o Vasanthi Vilas, Gokhalo Road, Nanpada Post, Thana Dt., Maharastra. ಇವರಿಗೆ ಕೋರ್ಟು ಹುಕುಂ ಮೇರೆಗೆ ತಿಳಿಯಪಡಿಸುವುದೇನೆಂದರೆ,

ನಿಮ್ಮ ಮೇಲೆ ವಾದಿಯು ದಾಖಲು ಮಾಡಿದಂತಹ ಪಾಲಿನ ವ್ಯಾಜ್ಯವು ನಿಮ್ಮ ಹಾಜರಾತಿ ಬಗ್ಗೆ ತಾರೀಕು 6—7—1972ರಂದು ಸ್ಥಾಪಿಯಾಗಿದೆ. ನೀವು ಸದ್ರಿ ತಾರೀಕಿನಂದು ಸ್ವತಃ ಯಾ ವಕೀಲ ದ್ವಾರವಾಗಲಿ ಕೋರ್ಟು ಮುಂದೆ ಹಾಜರಾಗಿ ಉಜ್ರಾಪರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಷ್ಟ್ ಮಾಡಿ ವ್ಯಾಜ್ಯ ಮುಂದುವರಿಸಲಾದೀತು, ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

Advocate for Plaintiff

ಬೆಳ್ತಂಗಡಿ, 29—5—72

(ಎರಡನೇ ಪುಟದಿಂದ)

'ಕೇಳಿಬಿಡು. ಆದರೆ ಅಲ್ಲಿಗೇ ಮುಗಿಯಿತೋ ನಿನ್ನ ಪ್ರಶ್ನೆ?'

'ಅಮ್ಮ ಕಿತ್ತ ಪಾರಿಜಾತ ಹೂವಿಗೆ ಪರಿಮಳ ಎಲ್ಲಿಂದ ಬಂತು?'

'ಅದು ಹೂವಿನಲ್ಲಿರಬೇಕಾದ್ದು.'

'ಈ ಗುಲಾಬಿ ಹೂವ ಇದೆಯಲ್ಲಾ, ಅದಕ್ಕೆ ಪರಿಮಳವೇ ಇಲ್ಲ.'

'ಎಲ್ಲ ಹೂವುಗಳೂ ಪರಿಮಳ ಬೀರುವುದಿಲ್ಲ.'

ಕುಮಾರ ಮಾತನ್ನು ಅರ್ಧಕ್ಕೇ ನಿಲ್ಲಿಸಿದ.

ಕಾಪಿನ ಭಟನೊಬ್ಬ ಅಭಿವಾದನ ಮಾಡಿ ಅರಿಕೇಸರಿ ಮುಂದು ನಿಂತಿದ್ದ.

ರಾಜದಂಪತಿಗಳು ಕುಮಾರನೊಡನೆ ಸರಸದಿಂದಿರುವುದನ್ನು ಕಂಡು—ಹೇಳಬಂದುದನ್ನೇ ಮರೆತು—ಅನತಿ ದೂರದಲ್ಲಿ ಅವರನ್ನೇ ನೋಡುತ್ತ ನಿಂತ.

'ಏನು ಸಮಾಚಾರ?—ಅರಿಕೇಸರಿಯೇ ಪ್ರಶ್ನಿಸಬೇಕಾಯಿತು.

'ಬಾದಾಮಿಯಿಂದ ವಿಜಯಾದಿತ್ಯ ಪ್ರಭುಗಳು ದಯಮಾಡಿಸಿದ್ದಾರೆ. ಅವರು ತಮ್ಮ ಸಮಯ ಕಾಯುತಿದ್ದಾರೆ. ಒಳಗೆ ಕರೆತರಲಾ ಪ್ರಭು?'

'ವಿಜಯಾದಿತ್ಯ ಪ್ರಭುಗಳೇ?'

'ಹೂಂ ಪ್ರಭು.'

'ಅವರೆಲ್ಲಿದ್ದಾರೆ?'

'ಹೊರಗೆ ಹಜಾರದಲ್ಲಿ ತಮಗಾಗಿ ಕಾಯುತ್ತಿದ್ದಾರೆ.'

'ಅವರನ್ನು ಅಲ್ಲೇಕೆ ಕೂರಿಸಿದೆ. ಕರೆತರಬಾರದಿತ್ತೇ? ಇರಲಿ, ಬಿಡು. ನಾನೇ ಬರುತ್ತೇನೆ' ಎಂದು ಅರಿಕೇಸರಿ ಆತುರಾತುರವಾಗಿ ಉದ್ಯಾನದಿಂದ ಹೊರಟುಹೋದ.

೨೫

ಅರಿಕೇಸರಿ ನೇರವಾಗಿ ಉದ್ಯಾನದಿಂದ ಓಲಗ ಶಾಲೆಗೆ ಬಂದ. ಆತ ಬರುವುದಕ್ಕೂ ಮೊದಲು ವಿಜಯಾದಿತ್ಯ ಓಲಗ ಶಾಲೆಯ ಭದ್ರಾಸನವೊಂದರಲ್ಲಿ ಮಂಡಿಸಿದ್ದ. ವಿನಮ್ರತೆಯಿಂದ ವಿಜಯಾದಿತ್ಯನಿಗೆ ಕೈಮುಗಿದು ಅರಿಕೇಸರಿ 'ಮಗುವಿನೊಡನೆ ಆಡುತಿದ್ದೆ. ತಾವು ಬಂದುದು ತಿಳಿಯಲಿಲ್ಲ. ಹಿರಿಯರಾದ ತಾವು ಆದ ಅಪಚಾರವನ್ನು ಮರೆಯಬೇಕು.' ಎಂದು ಕ್ಷಮೆ ಯಾಚಿಸಿ "ಮಹಾ ಮಾಂಡಳಿಕರು ಇಲ್ಲಿಯ ತನಕವೂ ಬರಬೇಕಾಗಿರಲಿಲ್ಲ. ಕರೆ ಕಳುಹಿದ್ದರೆ ನಾನೇ ಬರುತ್ತಿದ್ದೆ" ಎಂದು ಮಾತು ಮುಂದುವರಿಸಿದ.

'ಈಗ ನಾವು ಆ ಮಹಾ ಮಾಂಡಳಿಕ ಪದವಿಯಿಂದ ವಿವಂಚಿತರು. ನಿನಗೆ ತಿಳಿಯದು ಅರಿಕೇಸರಿ. ಆಗ ಬಾರದ್ದು ಆಗಿ ಹೋಯಿತು. ನಿನ್ನೆಯ ದಿನ—ಒಂದು ಆಕಸ್ಮಿಕದಂತೆ—ನಮ್ಮ ರಾಜ್ಯ, ಕೋಶ,ಸೈನ್ಯ ಎಲ್ಲ ನಮ್ಮ ಕೈ ಬಿಟ್ಟು ಹೋಯಿತು. ನಾವು ಈಗ ದೇಸಿಗರು. ಬಾಹು ಬಲದಿಂದ ಬಾದಾಮಿಯನ್ನು ಉಳಿಸಿಕೊಳ್ಳಲು ಶಕ್ತರಾಗದೆ ಹೋದ ವಿಗತ ಬಲರು.'

'ಅಂದರೆ–?'

ಆ ಮಾತಿನ ಸತ್ಯತೆಯನ್ನೇ ಅರಿಕೇಸರಿ ಶಂಕಿಸುವಂತಿತ್ತು.

'ಅಂದರೆ—? ನೀನೂ ಈ ಮಾತನ್ನು ನಂಬಲಾರೆಯಾ? ಹಾಳು ಪ್ರಾರಬ್ಧ! ಏನು ಮಾಡಲಿ? ಹೇಳಿದರೂ ನಂಬದಂತಹ ಸ್ಥಿತಿ ನಮಗೊದಗಬೇಕೇ? ಈಗ ಹೇಳಿಯೂ ಪ್ರಯೋಜನವಿಲ್ಲ. ಕಣ್ಣಿನಿಂದ ಕಾಣದ ಜನ ಇದನ್ನು ನಾಳೆಯೂ ನಂಬಲಾರರು. ಆದರೂ ಇದು ಆಗಿದ್ದು ನಿಜ.'

"ಏನಾಯಿತು—?'

'ಮೊನ್ನೆಯ ಅಪರಾತ್ರಿಯಲ್ಲಿ ಬಾದಾಮಿ ಶತ್ರುವಶವಾಯಿತು.'

ಬಾದಾಮಿಯ ಚಾಳುಕ್ಯರಿಗೆ, ಅರಿಕೇಸರಿಗೆ ತಿಳಿದಂತೆ ಯಾರೂ ಶತ್ರುಗಳಿರಲಿಲ್ಲ. ಏಕಾ–ಏಕಿ ಹುಟ್ಟಿಕೊಂಡ ಶತ್ರುಗಳಾದರೂ ಯಾರು? ಅವನಿಗೆ ಏನೊಂದೂ ಅರ್ಥವಾಗಲಿಲ್ಲ. ಆತ ವಿಜಯಾದಿತ್ಯರನ್ನೇ ನೋಡುತ್ತ ನಿಂತ.

'ಬಾದಾಮಿಯ ಕೋಟೆಯನ್ನು, ಮೊನ್ನೆಯ ಮಧ್ಯರಾತ್ರಿಯ ನಂತರ ಮೂರು ಕಡೆಯಿಂದ ಶತ್ರು ಸೈನ್ಯ ಆಕ್ರಮಿಸಿತು. ಶತ್ರುಗಳೋ? ದೂರದವರಲ್ಲ. ನಮ್ಮವರೇ ಆದ ಚಾಳುಕ್ಯರು. ಅನಿರೀಕ್ಷಿತವಾಗಿ ಅವರು ನುಗ್ಗಿದುದರಿಂದ ಅವರನ್ನೆದುರಿಸುವುದೂ ಕಷ್ಟವಾಯಿತು. ಯುದ್ಧಕ್ಕೆ ಸಿದ್ಧರಾಗಿರದಿದ್ದ ನಾವು ಯುದ್ಧ ಮಾಡಬೇಕಾದ ಪ್ರಸಂಗ ಬಂತು. ಅವರು ಸಂಖ್ಯೆಯಲ್ಲಿಯೂ ಹೆಚ್ಚಿಗೆ ಇದ್ದರು. ಅವರ ಕೈ ಮೇಲಾಯಿತು. ನಾವು ಹಿಂದಕ್ಕೆ ಸರಿದೆವು. ಹೆಂಗಸರ ಪ್ರಾಣ ರಕ್ಷಣೆಯೂ ಒಂದು ಸಮಸ್ಯೆಯಾಯಿತು. ಅರಮನೆಯೊಳಗಿನ ಗುಪ್ತ ದಾರಿಯ ಮೂಲಕ ಬನಶಂಕರಿಗೆ ಬಂದೆವು. ಹೆಂಗಸರು ಮಕ್ಕಳನ್ನು ಅಲ್ಲಿಂದ ಸುರಕ್ಷಿತ ಸ್ಥಳಕ್ಕೆ ರವಾನಿಸಿ, ಇಲ್ಲಿಗೆ ಬೆಂಗಾವಲಿನವರೊಡನೆ ಆಶ್ರಯ ಬೇಡಿ ಬಂದಿದ್ದೇವೆ.'

'ಆಶ್ರಯ—? ನಿಮ್ಮದೇ ಆದ ಈ ಅರಮನೆಯಲ್ಲಿ ನೀವು ಆಶ್ರಯ ಕೇಳುವುದು? ಹಿರಿಯರಾದ ನೀವು ಹೇಗೆ ನಡೆಯೆನ್ನುವಿರೋ ಹಾಗೆ ನಡೆದುಕೊಳ್ಳುತ್ತೇನೆ. ನಾನೇನು ನಿಮಗೆ ದೂರದವನೇ?'

'ದೂರ–ಹತ್ತಿರ ಎಂಬುದು ಹೆಚ್ಚಾಗಿ ಮನಸ್ಸನ್ನೇ ಅವಲಂಬಿಸಿರುತ್ತದೆ. ದೂರದವರು ಎನಿಸಿದರೆ ಬಂಧುತ್ವ ದೂರವಾಗುತ್ತದೆ. ಹತ್ತಿರದ್ದು ಎಂದು ಭಾವಿಸಿದರೆ ಬಂಧುತ್ವ ಸ್ಥಿರವಾಗಿ ಉಳಿಯುತ್ತದೆ.'

'ಹೀಗೆ ಒಮ್ಮೆಲೇ ಮುಗಿದು ಬೀಳುವುದಕ್ಕೆ ಕಾರಣ?'

'ಯುದ್ಧ ಮಾಡುವುದಕ್ಕೆ ಕಾರಣವೂ ಬೇಕೇ? ರಾಜ್ಯದಾಹ; ಅದನ್ನು ಭದ್ರಗೊಳಿಸಿಕೊಳ್ಳುವ ಬಯಕೆ.'

'ಅಭೇದ್ಯವಾದ ಬಾದಾಮಿಯ ಕೋಟೆಯನ್ನು ಕೈಗತ ಮಾಡಿಕೊಳ್ಳಲು ಸಾಹಸಿಗಳೇ ಹಣಕ್ಕಿಳಿದಿರಬೇಕು. ಇದು ಸಾಮಾನ್ಯರಿಂದ ಆಗುವ ಕೆಲಸವೇ ಇಲ್ಲ.'

'ನಮ್ಮ ಜ್ಞಾತಿ ಕಕ್ಕರಸ, ಅವನ ಬೆಂಬಲದಿಂದ ಪ್ರವರ್ಧಮಾನಕ್ಕೆ ಚಾಳುಕ್ಯ ಶಾಖೆಯವನೆಂದು ಕರೆದುಕೊಳ್ಳುವ ಬಪ್ಪುವ, ಇವರಿಗೆ ಬೆಂಬಲವಾಗಿ ನಿನ್ನ ಭಾವಮೈದುನ—ಇವರೇ ಈ ಕಾಳಗದ ಕಲಿಗಳು ಆ ಬಪ್ಪುವನನ್ನು ನೀನು ನೋಡಿದ್ದೀಯಾ?'

'ನೋಡಿಲ್ಲ; ಅವನ ಪರಾಕ್ರಮದ ಜನ ಆಡುವ ಮಾತುಗಳನ್ನು ಕೇಳಿದ್ದೇನೆ.'

'ಅಪ್ರತಿಮ ಪರಾಕ್ರಮಿಯೆಂಬುದರಲ್ಲಿ ಅನುಮಾನವೇ ಇಲ್ಲ. ಅವನೇ ಈಗ ಬಾದಾಮಿಯಲ್ಲಿ ಸೈನ್ಯ ಸಮೇತ ಠಳಾಯಿಸಿದ್ದಾನೆ. ಅವನಿಂದ ಬಾದಾಮಿಯನ್ನು ಹೊಡೆಯುವುದೇ ಒಂದು ಸಮಸ್ಯೆ.'

ಬಪ್ಪುವನ ಪ್ರಶಂಸೆಯಿಂದ ಅರಿಕೇಸರಿಯ ಬಾಹುಗಳು ಸ್ಫುರಣಗೊಂಡುವು. ಮೈನವಿರು ನಿಮಿರಿತು.

ತನ್ನ ಮುಂದು ನಿಂತು ಕಾದುವ ಯೋಧರೇ ಇಲ್ಲವೆಂದು ಆತ ಎಣಿಸಿದ್ದ ಅಂತಹ ತನ್ನ ಸಮ್ಮುಖದಲ್ಲಿ ಅನ್ಯರ ಬಣ್ಣನೆ.

ಅವನ ಅಭಿಮಾನಕ್ಕೆ ಬರೆ ಎಳೆದಂತಾಯಿತು.

ಅದು ಅವನಿಗೆ ಸಹ್ಯವಾಗಲಿಲ್ಲ.

ಆತ ನಖಶಿಖಾಂತ ಉರಿಯಲಾರಂಭಿಸಿದ.

'ಅವನ ಸೊಕ್ಕನ್ನಿಳಿಸುವ'

'ಅಷ್ಟು ಸುಲಭವಲ್ಲ. ಆ ಕುರಿತು ವಿಚಾರ ವಿನಿಮಯ ಮಾಡಲೆಂದೇ ನಾವು ಬಂದುದು'

'ಶತ್ರುವನ್ನು ಬಲಿಯ ಬಿಡುವುದು ರಾಜನೀತಿಯಲ್ಲ. ಗೆದ್ದೆವೆಂಬ ಅಹಂಕಾರದಿಂದ ಅವರೀಗ ಮೈಮರೆತಿರುತ್ತಾರೆ. ದುರ್ಬಲರಾದ ನೀವು ಪ್ರತಿಭಟಿಸಲಾರಿರಿ. ನಿಮಗೆ ನೆರವೂ ಸಿಗಲಾರದು. ಹೀಗೆ ಅವರು ಭಾವಿಸಿಕೊಂಡಿರುವಾಗಲೇ ನುಗ್ಗುವುದು ಒಳ್ಳೆಯದು'

'ನಿನ್ನ ತರ್ಕವನ್ನು ಸರಿ ಎಂದು ಒಪ್ಪಿಕೊಂಡರೂ, ಈಗ ಬಾದಾಮಿಯ ಕಾವಲಿಗೆ ನಿಂತ ಸೈನ್ಯ ಅಪರಿಮಿತವಾದ್ದು. ಕಕ್ಕರಸ ಇನ್ನೂ ಅಲ್ಲಿಯೇ ಇದ್ದಾನೆ. ನಿನ್ನ ಭಾವ ಮೈದುನನ ಸೇನಾಪತಿ ಅಲ್ಲಿ ಬೀಡು ಬಿಟ್ಟಿದ್ದಾನೆ. ಅವರನ್ನೆಲ್ಲ ಒಟ್ಟಿಗೆ ಮಣಿಸಲು ನಮ್ಮಲ್ಲಿ ಸಜ್ಜಾದ ಸೈನ್ಯ ಬೇಕಲ್ಲ. ಆ ಸೈನ್ಯಕ್ಕೆ ಆಹಾರ ಸರಬರಾಜಿನ ವ್ಯವಸ್ಥೆಯಾಗಬೇಕು. ಯೋಚಿಸಿ ಕಾರ್ಯ ಪ್ರವೃತ್ತರಾಗುವುದು ಒಳ್ಳೆಯದು'

'ಯುದ್ಧ ಎಂದರೆ ಇವೆಲ್ಲ ಇರಬೇಕಾದವುಗಳು. ಈಗಲೇ ಅಭಿಯೋಗ ನಡೆಸುವುದರಿಂದ ಆಗುವ ಲಾಭವನ್ನು ನೀವು ಎಣಿಸುವುದಿಲ್ಲ. ಅವರೆಷ್ಟೇ ಬಲಿಷ್ಠರಿರಲಿ, ಬಾದಾಮಿ ಅವರಿಗೆ ಅಪರಿಚಿತ ಸ್ಥಳ. ಬಾದಾಮಿಯನ್ನು ನೀವು ದೀರ್ಘಕಾಲ ಆಳಿದವರು. ನಿಮಗೆ ನಿಷ್ಠೆಯಿಂದ ನಡೆದುಕೊಂಡ ಪ್ರಜೆಗಳಿದ್ದಾರೆ. ಅವರು ಅಂತರಂಗದಿಂದ ನಿಮಗೆ ಅನುಕೂಲರೇ. ಅವರ ಸಹಾನುಭೂತಿಯೂ ನಿಮ್ಮ ಮೇಲೆಯೇ. ಈಗಿರುವ ಸ್ವಾಮಿನಿಷ್ಠೆ ನಾಳೆ ಉಳಿದೇ ಉಳಿಯುತ್ತೆ ಎಂದು ಹೇಳಲಾಗುವುದಿಲ್ಲ. ಹೊಸಬರ ದಕ್ಷತೆ, ಕಾರ್ಯ ತತ್ಪರತೆ ಆ ಜನರನ್ನಾಕರ್ಷಿಸಿದರೆ, ಈಗ ನಿಮ್ಮಂತಿರುವ ಜನ, ಆಗ ಅವರಂತೆ ಆಗುತ್ತಾರೆ. ಆಗ ಸಮಸ್ಯೆ ದ್ವಿಗುಣಿತವಾಗುತ್ತೆ'

'ನಾವು ಆಶ್ರಯ ಬೇಡಿ ಬಂದವರು. ಕೈಲಾಗದ ಹೇಡಿಯಂತೆ ಯುದ್ಧಭೂಮಿಯಿಂದ ಕಾಲ್ತೆಗೆದು ಬಂದವರು. ನಮ್ಮಲ್ಲಿ ಯಾವ ಬಲವೂ ಇಲ್ಲ. ನಿನ್ನ ನಿರ್ಧಾರಕ್ಕೆ ಬಿಟ್ಟಿದ್ದೇನೆ. ನಮಗಿಲ್ಲಿಗೆ ಬರುವ ಆಲೋಚನೆಯೂ ಇರಲಿಲ್ಲ. ಸಾಮ್ರಾಟರ ಬಂಧುವಾದ ನೀನು, ಮನಸ್ಸು ಮಾಡಿದರೆ ನಮ್ಮ ಪ್ರಾಣ–ಮಾನಗಳೆರಡನ್ನೂ ರಕ್ಷಿಸಬಲ್ಲೆ ಎಂದು ಅಂತರಾತ್ಮ ಕೂಗಿ ಹೇಳಿತು. ನಿನ್ನ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳುವುದಷ್ಟೇ ನಮಗೀಗ ಉಳಿದಿರುವುದು.'

'ಆಗಲೇ ಮಾತು ಕೊಟ್ಟಾಯಿತು. ಇನ್ನು ಅದರಂತೆ ನಡೆಯುವುದಷ್ಟೇ. ಮತ್ತು ಅದು ತಪ್ಪಿ ಹೋಗುವುದೇ ಇಲ್ಲ. ಬಾದಾಮಿಯಲ್ಲಿ ನಿಮ್ಮನ್ನು ಕುಳ್ಳಿರಿಸುವವರೆಗೂ ನನ್ನ ಕತ್ತಿಗೆ ವಿರಾಮವಿಲ್ಲ — ಬನಶಂಕರಿಯಾಣೆ.'

(ಮುಂದುವರಿಯುವುದು)

ಸ ಪರ್ ಪರ್ ೬

NAVAYUGA 22—6—1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಚಾರುಚಯನ–

ಸಂವಿಧಾನ ಪಟ ಚೆಂಡಾಗಬಾರದು

ಸ್ವಾತಂತ್ರ್ಯದ ರಜತೋತ್ಸವದ ವರ್ಷವಿದು.

ನಾನಾರೀತಿಯಾಗಿ ವೈಭವೋಪೇತವಾಗಿ ಈ ಉತ್ಸವವನ್ನು ಆಚರಿಸಲು ಈಗಾಗಲೇ ಯೋಜನೆಗಳು ಸಿದ್ಧ. ತಳುವಲು ಸಮಯಾವಕಾಶವೆಲ್ಲಿ?

ಇನ್ನು ಮೂರು ವರ್ಷಗಳಲ್ಲೇ ಪ್ರಜಾರಾಜ್ಯದ ರಜತೋತ್ಸವ ಬರಲಿದೆ. ಪಂಚವಾರ್ಷಿಕ ಯೋಜನೆಗಳ ರಜತೋತ್ಸವ.... ಇ. ಇ. ಒಂದೊಂದೇ ಉತ್ಸವಗಳು ನಮ್ಮ ಮುಂದಿವೆ

ಪ್ರಜಾರಾಜ್ಯದ ಆಧಾರ ಶಿಲೆ ಸಂವಿಧಾನ. ನಮ್ಮ ಪ್ರಜಾರಾಜ್ಯದ ಸಂವಿಧಾನ ಆಟದ ಮೈದಾನದ ಕಾಲ್ಚೆಂಡು

ಇಪ್ಪತ್ತೇ ವರ್ಷಗಳಲ್ಲಿ ಇಪ್ಪತ್ತೈದರಷ್ಟು ತಿದ್ದುಪಡಿಯನ್ನು ಕಂಡ ಹೆಗ್ಗಳಿಕೆಯದಕ್ಕೆ.

ಇತ್ತೀಚೆಗೆ ಸಂವಿಧಾನದ ಮೇಲೆ ಸಾಮೂಹಿಕ ಅತೃಪ್ತಿ ಬೇರೆ

ಅದು ಪ್ರಗತಿವಿರೋಧಿಯೆಂಬುದು ಮಹತ್ವಪೂರ್ಣ ಆರೋಪ.

ಕಾಲಾನುಗುಣಕ್ಕೆ ಹೊಂದಿಕೊಳ್ಳದ ಸಂವಿಧಾನ ನಿರುಪಯೋಗಿಯೆಂಬುದು ಗಂಭೀರವಾದ ಆರೋಪ.

ಜನತೆಗಾಗಿ ಸಂವಿಧಾನವಿರಬೇಕೇ ಹೊರತು ಸಂವಿಧಾನಕ್ಕಾಗಿಯೇ ಜನತೆಯಿರಬಾರದು. ಆದುದರಿಂದ ಜನತೆಯ ಅಭಿಪ್ರಾಯಕ್ಕನುಸಾರವಾಗಿ ಸಂವಿಧಾನ ತಿದ್ದುಪಡಿಯಾಗಬೇಕಾದದ್ದು ಅನಿವಾರ್ಯ.

ಆದರೆ ಜನಾಭಿಪ್ರಾಯವು ಕೆಲವೇ ಮಂದಿಯ ಅಭಿಪ್ರಾಯವಾಗಬಾರದು. ಪಕ್ಷದ ಆದೇಶದ ಮೇಲೆ ಮತದಾನ ಮಾಡುವವರ ಅಭಿಪ್ರಾಯ ಆ ಪಕ್ಷದ ಅಭಿಪ್ರಾಯವಾಗಬಹುದು; ಜನಾಭಿಪ್ರಾಯವಾಗಲಾರದು. ಬಹುಮತದ ಬಲದಿಂದ ಒಂದು ಪಕ್ಷವು ತನ್ನ ಇಷ್ಟಾರ್ಥವನ್ನು ಬೇಕೆಂಬಾಗ ಸಾಧಿಸಿಕೊಳ್ಳಬಹುದು.

ಸಂವಿಧಾನ ಸಮಿತಿಯ ಸದಸ್ಯರಾಗಿದ್ದ ಶ್ರೀ ಕೆ. ಸಂತಾನಂ ಈ ಸಂಬಂಧದಲ್ಲಿ ತನ್ನ ಅಭಿಪ್ರಾಯವನ್ನು ನಿರೂಪಿಸಿದ್ದಾರೆ.

ಒಮ್ಮೆ ರೂಪಿತವಾದ ಸಂವಿಧಾನ ಇಪ್ಪತ್ತೈದು ವರ್ಷಗಳ ಕಾಲಾವಧಿ ಜ್ಯಾರಿಯಲ್ಲಿರಬೇಕು.

ಆಮೇಲೆ ರಾಷ್ಟ್ರೀಯ ಚರ್ಚೆ ನಡೆಸಿ ಅದರ ಆಧಾರದ ಮೇಲೆ ಅದನ್ನು ಉತ್ತಮಪಡಿಸಬೇಕು.

ಸಂವಿಧಾನದ ಲೋಪದೋಷಗಳನ್ನು, ವ್ಯಾವಹಾರಿಕ ಅಡೆತಡೆಗಳನ್ನು ತಿಳಿದು ಅವುಗಳ ಪರಿಹಾರಕ್ಕೆ ಅಧ್ಯಯನಾತ್ಮಕ ಪರಿಹಾರ ಸೂಚಿಸಲೆಂದೊಂದು ಸಮಿತಿಯಿರಬೇಕು.

ಒಮ್ಮೆ ಆಯ್ಕೆಗೊಂಡ ಸರಕಾರವು ಐದು ವರ್ಷಗಳ ಕಾಲ ಆಡಳಿತ ನಡೆಸುವಂತೆ ಒಂದು ಬಾರಿ ರೂಪಿತವಾದ ಸಂವಿಧಾನ ರಜತೋತ್ಸವವನ್ನು ಕಾಣುವಾಗ ಪರಿಶೀಲನೆಗೆ ಗುರಿಯಾಗಬೇಕೆಂಬುದು ಸಾಧು ಅಭಿಪ್ರಾಯ.

ಜನಾಭಿಪ್ರಾಯ ಶೀಘ್ರಗತಿಯಲ್ಲಿ ಬದಲಾಗುತ್ತದೆಂದೂ ಅದನ್ನು ಕಾಲು ಶತಮಾನಗಳ ಕಾಲ ತಡೆ ಹಿಡಿಯುವುದು ಸಾಧ್ಯವಿಲ್ಲವೆಂದೂ ಕೆಲವರು ಹೇಳಬಹುದು.

ಆದರೆ, ಸಂವಿಧಾನದ ಗುಣಾವಗುಣಗಳೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳಬೇಕಾದರೆ ಇಷ್ಟು ಕಾಲಾವಧಿ ಅಗತ್ಯವೆನ್ನಲೂಬಹುದು.

ಈ ಅವಧಿಯ ಪೂರ್ವಾರ್ಧ ವ್ಯವಹರಣೆಗೂ ಉತ್ತರಾರ್ಧ ಜನಾಭಿಪ್ರಾಯ ತಿಳಿದುಕೊಳ್ಳುವುದಕ್ಕೂ ಉಪಯೋಗವಾಗಬಹುದು.

ಈ ಅವಧಿಯು ಅತ್ಯಂತ ಸುದೀರ್ಘವೆಂದೇ ಖಚಿತಾಭಿಪ್ರಾಯವಾದರೆ, ಅವಧಿಯನ್ನು ಹದಿನೈದು ವರ್ಷಗಳಷ್ಟು ಇಳಿಸಬಹುದು.

ಎಂದು ಬೇಕೋ ಅಂದು ಹೇಗೆ ಬೇಕೋ ಹಾಗೆ ಸಂವಿಧಾನವನ್ನು ಚದುರಂಗದ ದಾಳದಂತೆ ಬಳಸುವುದು ಸಾಧುವಾದ ಕಾರ್ಯವಲ್ಲ.

ಗೃಹಾಂತರ ಪರಿಸ್ಥಿತಿಯಲ್ಲಿ ಸಂವಿಧಾನವನ್ನೇ ಅಮಾನತ್ತು ಮಾಡುವ ವಿಶೇಷಾಧಿಕಾರ ರಾಷ್ಟ್ರಪತಿಗಿರುವಾಗ, ದೇಶ ಹಾಳಾಗಿ ಹೋಗುವ ಪ್ರಮೇಯವೇ ಬರುವುದಿಲ್ಲ.

ಸ್ವಾತಂತ್ರ್ಯ ಮತ್ತು ಪ್ರಜಾರಾಜ್ಯದ ರಜತೋತ್ಸವಗಳ ಮಧ್ಯಾವಧಿಯಲ್ಲಿ ಶ್ರೀ ಸಂತಾನಂ ನೀಡಿದ ಸಲಹೆ ಚಿಂತನಾರ್ಹ. ಬುದ್ಧಿಜೀವಿಗಳು ನಿಜಕ್ಕೂ ಗಮನಿಸಿ ವಿಚಾರ ವಿಮರ್ಶೆ ಮಾಡಬೇಕಾದ ನೂರು ಹೊನ್ನುಗಳ ಸಲಹೆಯಿದು.

● ●

ಗಾಂಧಿ ಇಷ್ಟಾರ್ಥಸಿದ್ಧಿಯೋಗ

(ಒಂದನೇ ಪುಟದಿಂದ)

ಉತ್ತರ ಸಿಗುವುದಿಲ್ಲ. ಪಕ್ಷವಿರೋಧಿ ಚಟುವಟಿಕೆಗಳಿಗಾಗಿ ಪಕ್ಷಚ್ಯುತರಾದ ಬಿಜೂ ಪಟ್ನಾಯಕರನ್ನು ಏನು ಮಾಡಬೇಕು? ಉತ್ಕಲ ಕಾಂಗ್ರೆಸ್ಸು ತನ್ನಲ್ಲಿ ವಿಲೀನಗೊಳ್ಳುವುದನ್ನು ಆಳುವ ಕಾಂಗ್ರೆಸಿಗರು ಒಪ್ಪುವುದಿಲ್ಲ. ಆದರೆ, ಅದರ ಶಾಸಕರೆಲ್ಲರೂ ತಮ್ಮ ಪಕ್ಷವನ್ನು ಸೇರಿಕೊಳ್ಳಬಹುದೆನ್ನುತ್ತಾರೆ. ಅಂದರೆ, ಆಳುವ ಕಾಂಗ್ರೆಸಿಗೆ ಬರಿಯ ಶಾಸಕರ ಬಲಬೇಕು. ಉಳಿದವರ ಯೋಗ್ಯತೆ ಅಯೋಗ್ಯತೆಗಳನ್ನು ಪರಿಗಣಿಸಿ ಸೇರ್ಪಡೆಯಾಗಬೇಕು. ಉತ್ಕಲ ಕಾಂಗ್ರೆಸ್ಸು ತನಗೆ ತಾನೇ ಸಾಯಬೇಕು.

ಇಲ್ಲಿ ಇನ್ನೊಂದು ಪ್ರಶ್ನೆಯೂ ಇದೆ. ಬಿಜೂರವರ ತಪ್ಪನ್ನು ಮನ್ನಿಸಿ ಅವರಿಗೆ ಸ್ವಾಗತ ಕೋರಲು ಆಳುವ ಕಾಂಗ್ರೆಸ್ಸು ಸಿದ್ಧವಿದೆಯೆ? ಅಂತಹ ಕ್ಷಮೆಯನ್ನು ಬಿಜೂ ಸ್ವೀಕರಿಸುತ್ತಾರೆಯೆ? ಉತ್ಕಲದಲ್ಲಿ ಸಾಕಷ್ಟು ಜನ-ಧನ ಬೆಂಬಲ ಗಳಿಸಿದ ಬಿಜೂ ಈಗ ದಯನೀಯ ಸ್ಥಿತಿಗೆ ಇಳಿದಿದ್ದಾರೆ. ಅವರು ಯಜ್ಞ ಪಶುವಾಗಿ ನತ್ಪತಿಯವರ ಮುಂದೆ ತಲೆಬಾಗಿದ್ದಾರೆ. ಈ ಸೋಲಿನಿಂದ ಅವರು ಚೇತರಿಸಿಕೊಳ್ಳುವುದು ಸಧ್ಯಕ್ಕಂತೂ ಸಾಧ್ಯವಿಲ್ಲ. ರಾಜ್ಯಕೀಯದಿಂದಲೇ ಅವರು ನಿಷ್ಕ್ರಮಿಸಿದರೂ ಆಶ್ಚರ್ಯವಿಲ್ಲ.

ಬಿಜೂ ಇಷ್ಟು ಬೇಗ ಸೋಲೊಪ್ಪಿ ಮರೆಯಾಗುವರೆ? ತನ್ನ ಪಕ್ಷದ ಈ ಅಂಧಾದುಂಧಿ ವರ್ತನೆಗೆ ಅವರೇ ಪ್ರೇರಕರೆ? ಅವರ ಮನಸ್ಸಿನಲ್ಲೇನಿದೆ?—ಈ ಮುಂತಾದ ಪ್ರಶ್ನೆಗಳಿಗೆ ಅವರೊಬ್ಬರೇ ಉತ್ತರಿಸಬಲ್ಲರು. ಅದೇನಿದ್ದರೂ ಒರಿಸ್ಸಾ ರಾಜ್ಯವೂ ಇಂದಿರಾ ಗಾಂಧಿಯ ಬುಟ್ಟಿಗೆ ಬಿತ್ತು; ಅದನ್ನು ಅಪಹರಿಸಲು ಸಧ್ಯಕ್ಕಂತೂ ಯಾರಿಗೂ ಸಾಧ್ಯವಿಲ್ಲವೆಂಬುದಂತೂ ಸತ್ಯ.

ವಿದೇಶ ಯಾತ್ರೆಗೆ ಹೊರಟು ನಿಂತ ಶ್ರೀಮತಿ ಗಾಂಧಿಯವರಿಗೆ ಒರಿಸ್ಸಾ ಈ ಕಾಣಿಕೆ ನೀಡಿತು. ●

ಅಹಿಂಸೆಯ ಪರಮಾರ್ಥ

ಆತ್ಯಂತಿಕ ಅಹಿಂಸೆ ಅವ್ಯವಹಾರ್ಯವೇ ಸರಿ. ಯಾರನ್ನೂ ಎಷ್ಟು ಮಾತ್ರಕ್ಕೂ ಹಿಂಸೆ ಮಾಡದೆ ಬದುಕುವದೇ ಸಾಧ್ಯವಿಲ್ಲ.

ಇಲಿ ಸಣ್ಣ ಹುಳ ಹುಪ್ಪಡಿ ತಿಂದು ಬದುಕುತ್ತದೆ. ಇಲಿಯನ್ನು ಮುಂಗುಸಿ ತಿನ್ನುತ್ತದೆ. ಮುಂಗುಸಿಯನ್ನು ಬೆಕ್ಕು ಹಿಡಿಯುತ್ತದೆ. ಬೆಕ್ಕನ್ನು ನಾಯಿ ಬಡೆದು ಕೊಲ್ಲುತ್ತದೆ. ನಾಯಿಯನ್ನು ಚಿರತೆ, ಚಿರತೆಯನ್ನು ಹುಲಿ ಅದನ್ನು ಮತ್ತೊಂದು ಹೀಗೆ ಪ್ರಾಣಿಗಳಲ್ಲಿ ಒಂದನ್ನೊಂದು ಕೊಂದು ತಿಂದು ಅವು ಬದುಕುತ್ತವೆ. ಇವನ್ನೆಲ್ಲ ಕೊಂದು ಬದುಕಿದ್ದಾನೆ ಮಾನವ ಆ ಹಿಂಸ್ರ ಪ್ರಾಣಿಗಳನ್ನು ಕೊಂದು ನಿವಾರಿಸಿದ್ದರಿಂದಲೇ ಇಂದು ನಾವು ನೀವು ಈ ಕಾಲವನ್ನು ಕಾಣುವ ಈಗ ಬಾಳುವ ಸಂದರ್ಭ ಪ್ರಸಂಗ ಬಂದಿದೆ ●

ಸಾವಿನ ಮೇಲಿನ ನಿರಂತರ ದಿಗ್ವಿಜಯವೇ ಜೀವನ
ಮ|ಗಾಂಧಿ

o o o

ಭೂಮಿ ನಿನ್ನದಲ್ಲ, ಕ್ಷೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಅದು ಜಗಕ್ಕಿಕ್ಕಿದ ವಿಧಿ; ನಿನ್ನೊಡನೆ ಎಂಬುದು ಜ್ಞಾನರತ್ನ.

o o o

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ
ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2—00

●

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

●

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲಿ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2—00

ವಿ. ಪೊ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press. Udipi. S. India

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ

ವಿಶ್ವಾಸದ ಸಂಸ್ಥೆ:

ಶಾರದಾ
ಆಯುರ್ವೇದಾಶ್ರಮ
ಕಟಪಾಡಿ ದ. ಕ.

ನವಯುಗ

ನೇತ್ರರಂಜಕಿಯ
ಉಪಾಹಾರ
ಮಂದಿರ

ಉಡುಪಿ
ಶ್ರೀಕೃಷ್ಣ ವಿಲಾಸ
ಕಾರವಾರ

ಸಂಪುಟ [illegible]
ಸಂಚಿಕೆ [illegible]

NAVAYUGA

29–6–1972

ಅಲೀಘಡ ವಿದ್ಯಮಾನ—

ಪ್ರತ್ಯೇಕತೆಗೊಂದು ವ್ಯರ್ಥ ಪ್ರಯತ್ನ

ಅಲೀಘಡ ವಿಶ್ವವಿದ್ಯಾಲಯದ ಸ್ಥಾಪನೆಯ ಹಿಂದೆ ಅದಾವ ಉನ್ನತ ಗುರಿ–ಧ್ಯೇಯಗಳೇ ಇರಲಿ, ಅದು ಜಾತೀಯ ಸ್ವರೂಪವನ್ನು ಪಡೆದಿತ್ತು ಎಂಬುದು ನೂರಕ್ಕೆ ನೂರರಷ್ಟು ಸತ್ಯ. ವಿಶ್ವವಿದ್ಯಾಲಯದ ಪರಿಸರದಲ್ಲೂ ಉತ್ತರ ಪ್ರದೇಶದಲ್ಲೂ ನಡೆದ ಹಲವಾರು ಜಾತೀಯ ಗಲಭೆಗಳಿಗೆ ಈ ವಿಶ್ವವಿದ್ಯಾಲಯ ಕೇಂದ್ರ ಬಿಂದುವಾಗಿತ್ತೆಂಬುದನ್ನು ಹುರುಳಿಲ್ಲದ ಮಾತೆಂದು ತಳ್ಳಿಹಾಕುವುದು ಸಾಧ್ಯವಿಲ್ಲ. ಆದುದರಿಂದಲೇ ವಿಶ್ವವಿದ್ಯಾಲಯದ ಮತೀಯ ರೂಪವನ್ನು ತೊಡೆದುಹಾಕಿ ವಿಶಾಲ ತಳಹದಿಯ ಮೇಲೆ ರಾಷ್ಟ್ರೀಯ ಮಹತ್ವದ ವಿಶ್ವವಿದ್ಯಾಲಯವನ್ನಾಗಿ ಅದನ್ನು ರೂಪಿಸುವ ಮಸೂದೆಯೊಂದು ಸಂಸತ್ತಿನಲ್ಲಿ ಸ್ವೀಕೃತವಾಗಿ ರಾಷ್ಟ್ರಪತಿಯವರ ಅಂಕಿತವನ್ನೂ ಪಡೆದು ಶಾಸನವಾಯಿತು.

ಆದರೆ, ಈ ಶಾಸನವು ಕೆಲವೇ ಮಂದಿ ಮುಸ್ಲಿಮರಿಗೆ ಸರಿಬರಲಿಲ್ಲ. ಅವರು ಈ ಶಾಸನವನ್ನು ವಿರೋಧಿಸುವ ಧೈರ್ಯವನ್ನು ತೋರಿದ್ದಾರೆ. ಉತ್ತರ ಪ್ರದೇಶದ ಹಲವೆಡೆ ವಿರೋಧಿ ಚಳುವಳಿ ನಡೆದು ಗೋಳಿಬಾರು ನಡೆಸುವುದು ಅನಿವಾರ್ಯವಾಯಿತು. ಈ ಚಳುವಳಿಯು ಜಾತೀಯ ಸ್ವರೂಪವನ್ನು ಪಡೆಯತೊಡಗಿದ್ದರಿಂದ ಪುಂಡರನ್ನು ಅಣಗಿಸಲು ಕಂಡಲ್ಲಿ ಗುಂಡಿಡುವ ಆಜ್ಞೆಯನ್ನೇ ನೀಡಬೇಕಾಗಿ ಬಂತು. ಇದು ದುರ್ದೈವವಾದರೂ ಗಲಭೆಯನ್ನು ಹತೋಟಿಗೆ ತರಲು ಅನ್ಯ ಮಾರ್ಗವಿಲ್ಲವೆಂಬುದರಿಂದ ಸಮರ್ಥನೀಯವೇ ಹೌದು.

ದೇಶದ ರಾಜ್ಯಕೀಯ ಪಕ್ಷಗಳಲ್ಲಿ ಮುಸ್ಲಿಂಲೀಗು ಒಂದು, ಭಾರತೀಯ ಜನಸಂಘವಿನ್ನೊಂದು. ಜನಸಂಘವನ್ನು ಅತಿರೇಕ ಹಿಂದೂವಾದಿ ಜಾತೀಯಪಕ್ಷವೆಂದು ದಿ| ಜವಹರಲಾಲ ನೆಹರುರವರ ಕಾಲದಿಂದಲೂ ಕರೆಯಲಾಗುತ್ತಿದೆ. ಅದಕ್ಕೆ ಅಂಟಿದ ಜಾತೀಯತೆಯ ಹಣೆಪಟ್ಟಿಯಿನ್ನೂ ಕಳಚಿಹೋಗಿಲ್ಲ. ಪ್ರಧಾನಿ ಗಾಂಧಿ ಮತ್ತವರ ಆಳುವ ಕಾಂಗ್ರೆಸ್ಸಿಗರು ಈ ಪಟ್ಟಿಯನ್ನೇ ಪುನಃ ಹಚ್ಚುತ್ತಲೇ ಬಂದಿದ್ದಾರೆ. ಆದರೆ, ಹೆಸರಲ್ಲೇ 'ಮುಸ್ಲಿಂ' ಎಂದು ಜಾತೀಯ ಭಾವನೆಯನ್ನು ಪ್ರದರ್ಶಿಸುವ ಲೀಗು ಜಾತೀಯವೆಂದು ಅವರು ಹೇಳುವುದಿಲ್ಲ; ಅಷ್ಟು ಮಾತ್ರವಲ್ಲ, ಗತ ಚುನಾವಣೆಯ ವೇಳೆ ಅದು ಜಾತೀಯವಲ್ಲವೆಂದು ಪ್ರಧಾನಿಯವರೇ ಪ್ರಶಸ್ತಿ ನೀಡಿದ್ದುಂಟು. ಕೇರಳದ ಸಂಯುಕ್ತರಂಗ ಸರಕಾರದಲ್ಲಿ ಆಳುವ ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗುಗಳು ಒಂದಾಗಿ ಸೇರಿಕೊಂಡುದನ್ನು ಮರೆಯಲಾದೀತೆ?

ಮುಸ್ಲಿಂಲೀಗು ಅಲ್ಪಸಂಖ್ಯಾಕರ ಹಕ್ಕುಗಳ ರಕ್ಷಣೆಗೆಂದು ಚಳುವಳಿ ಹೂಡುವ ವಿಚಾರವನ್ನು ಪರ್ಯಾಲೋಚಿಸುತ್ತಿದೆಯೆಂದು ಅದರ ಅಧ್ಯಕ್ಷ ಸೈಯದ್ ಅಬ್ದುರ್ ರೆಹಮಾನ್ ಮತ್ತು ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಸುಲೈಮಾನ್ ಈಗ ಬಹಿರಂಗಪಡಿಸಿದ್ದಾರೆ. ಅವರು ಹೂಡುವ ಚಳುವಳಿ ದೇಶವ್ಯಾಪಿಯಾಗಲೂ ಬಹುದಂತೆ; ಕೇರಳ ಸರಕಾರಕ್ಕೆ ಆಪತ್ತು ತಂದೊಡ್ಡಿದರೂ ಒಡ್ಡೀತಂತೆ. 'ನಮ್ಮನ್ನು ನಿರ್ದಾಕ್ಷಿಣ್ಯವಾಗಿ ಕೈ ಬಿಡಲಾಗಿದೆ' ಎಂಬ ಭಾವನೆ ಮುಸ್ಲಿಂಲೀಗಿಗರಲ್ಲಿ ಮೂಡಿದೆಯಂತೆ. 'ಮಂತ್ರಿಮಂಡಳದ ಉಳಿವಿಗಾಗಿ ನಾವು ಎಲ್ಲವನ್ನೂ ಬಾಯ್ಮುಚ್ಚಿ ಸಹಿಸಿಕೊಳ್ಳಲಾರೆವು' ಎಂದು ಅವರು ಸ್ಪಷ್ಟಗೊಳಿಸಿದ್ದಾರೆ. ಅಲ್ಪಸಂಖ್ಯಾಕ ಕೋಮಿನವರ ಹಿತರಕ್ಷಣೆಗಾಗಿ ಉಚಿತ ಕ್ರಮವನ್ನವರು ಕೈಕೊಳ್ಳಲಿದ್ದಾರಂತೆ.

ಕೆಲವು ಮುಸ್ಲಿಂ ಸಂಸ್ಥೆಗಳು ಅಲೀಘಡ ವಿಶ್ವವಿದ್ಯಾಲಯ ಮಸೂದೆಯನ್ನು ಪ್ರತಿಭಟಿಸಿ ಅವರ ಪ್ರತ್ಯೇಕತೆಯನ್ನೂ ಜಾತೀಯ ಸ್ವರೂಪವನ್ನೂ ಉಳಿಸಿಕೊಳ್ಳಲು ಚಳುವಳಿ ಹೂಡಿದವು; ಇನ್ನು ಅಲ್ಪ ಸಂಖ್ಯಾಕರ ಹೆಸರಿನಲ್ಲಿ ಮುಸ್ಲಿಂಲೀಗೂ ಈ ಚಳುವಳಿಯಲ್ಲಿ ಸೇರಿದರೆ, ಅದಕ್ಕೆ ಸಂಪೂರ್ಣ ರಾಜಕೀಯ ಸ್ವರೂಪ ಬರುತ್ತದೆ. ಭಾರತ-ಪಾಕ್ ಶೃಂಗಸಭೆಯ ಹಿನ್ನೆಲೆಯಲ್ಲಿ ಈ ಜಾತೀಯ ವಿದ್ಯಮಾನಗಳು ಪಾಕ್ ರಾಷ್ಟ್ರಪತಿ ಭುಟ್ಟೋರಿಗೆ ಮೆಚ್ಚುಗೆಯಾದಾವು. ಅವರ ಪರೋಕ್ಷ ಸಹಾನುಭೂತಿಯೂ ಈ ಜಾತೀಯವಾದಿಗಳಿಗಿದ್ದೀತೆಂಬ ಸಂದೇಹಕ್ಕೆ ಆಸ್ಪದವಿದೆ.

ಕೆಲವು ಸಮಯಕ್ಕೆ ಮೊದಲು ಶ್ರೀರಂಗಪಟ್ಟಣದಲ್ಲಿ ರಾಜ್ಯ ಮುಸ್ಲಿಮರ ಸಮ್ಮೇಳನವೊಂದು ನಡೆಯಿತು. ಮೈಸೂರಿನ ಹುಲಿ ಟಿಪ್ಪೂ ಸುಲ್ತಾನರ ವಂಶಜರೊಬ್ಬರು ಇದರಲ್ಲಿ ಭಾಗವಹಿಸಿದ್ದರು. ಆ ಸಮ್ಮೇಳನದಲ್ಲಿ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವ ಹಲವು ಗೊತ್ತುವಳಿಗಳು ಮಂಜೂರಾದುವು. ಈಗ ಅಲಿಘಡದ ಶಾಸನ ಸಂಬಂಧದಲ್ಲಿನ ಪ್ರತಿಕ್ರಿಯೆಯೂ ತಮ್ಮ ಪ್ರತ್ಯೇಕತೆಯನ್ನೂ ಜಾತೀಯತೆಯನ್ನೂ ಸಂರಕ್ಷಿಸಿಕೊಳ್ಳುವ ಮುಸ್ಲಿಮರ ವ್ಯರ್ಥ ಪ್ರಯತ್ನವೆಂದೇ ಹೇಳಬೇಕು.

ಭಾರತದಲ್ಲಿ ನೆಲಸಿರುವ ಹಿಂದ್ವೇತರರ ಭಾರತೀಕರಣವಾಗಬೇಕು ಎಂಬ ಭಾರತೀಯ ಜನಸಂಘ ಕರೆ ನೀಡಿದಾಗ, ಇದನ್ನು ಮೊತ್ತ ಮೊದಲಿಗೆ ವಿರೋಧಿಸಿದವರು ಮುಸ್ಲಿಮರು. ಅವರ ಸಮರ್ಥನೆಗೆ ನಿಂತವರು ಆಳುವ ಕಾಂಗ್ರೆಸ್ಸಿಗರು. ತಮ್ಮ ನಿಷ್ಠೆ ಭಾರತದಲ್ಲೇ ಇದೆಯೆಂದೂ ಈ ಕರೆ ಜಾತೀಯ ಸೌಹಾರ್ದವನ್ನು ಕೆಣಕುತ್ತದೆಯೆಂದೂ ಮುಸ್ಲಿಮರು ಉದ್ಗರಿಸ ಹೊರಟರು. ತಾವು ಅಲ್ಪ ಸಂಖ್ಯಾಕರೆಂದು ಹೇಳಿಕೊಳ್ಳುವ ಮುಸ್ಲಿಮರಲ್ಲಿ ಕೆಲವರಾದರೂ ಪ್ರಗತಿಶೀಲ ರಾಷ್ಟ್ರೀಯ ಮನೋವೃತ್ತಿಯವರಿದ್ದಾರೆಂಬುದು ಸತ್ಯ. ಆದರೆ ಈ ಭಾವನೆಯನ್ನು ಹೆಚ್ಚಿನವರು ಬೆಳೆಸಿಕೊಳ್ಳಲಿಲ್ಲ; ಬೆಳೆಸಿಕೊಳ್ಳುವ ಹವ್ಯಾಸಕ್ಕೂ ಇಳಿಯಲಿಲ್ಲವೆಂದು ಖೇದದಿಂದಲೇ ಹೇಳಬೇಕಾಗುತ್ತದೆ.

ತಾವು ಅಲ್ಪ ಸಂಖ್ಯಾಕರೆಂದು ಬಹುಸಂಖ್ಯಾಕರ ಮೇಲೆ ಸವಾರಿ ಮಾಡುವ ಮನೋಧರ್ಮ ಎಂದಿಗೂ ಸಲ್ಲದು. ಬದಲಾಗುತ್ತಿರುವ ವಾತಾವರಣಕ್ಕೆ ಹೊಂದಿಕೊಳ್ಳದೆ ಹೋದರೆ ದೇಶ ಪ್ರಗತಿ ಹೊಂದುವುದು ಸಾಧ್ಯವಿಲ್ಲ. ಒಂದು ದೇಶದ ಶಾಸನ ವ್ಯವಸ್ಥೆ ಸರ್ವರಿಗೂ ಸಮಾನ ರೂಪವಾಗಿರಬೇಕಾದದ್ದು ಅಪೇಕ್ಷಿತ. ಜಾತೀಯತೆ ಮತೀಯತೆಗಳು ದೇಶದ ಪ್ರಗತಿಗೆ ಮಾರಕ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ–ಸಿದ್ಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್ ಬೆಂಗಳೂರು_1.

[illegible] ಶೆಟ್ಟಿ,
[illegible]

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

'ನೀನಿಷ್ಟು ಆತುರದ ತೀರ್ಮಾನಕ್ಕೆ ಬಂದರೆ ಹೇಗೆ?'

'ಆತುರ ಎಲ್ಲಿಂದ ಬಂತು? ಯೋಚಿಸುತ್ತ ಕುಳಿತರೆ ಕಾಲ ಕಳೆದುದು ತಿಳಿಯುವುದಿಲ್ಲ. ಅದರಿಂದಾಗುವ ಲಾಭ, ಸಮಯದ ವ್ಯಯ. ಆತ್ಮ ಪ್ರೇರೇಪಿಸಿದ್ದನ್ನು ಮಾಡಿ ಮುಗಿಸಬೇಕು. ಮೀನ-ಮೇಷ ಎಣಿಸುತ್ತ ಕುಳಿತವರು ಕುಳಿತಲ್ಲಿಯೇ ಇರುತ್ತಾರೆ. ಅವರನ್ನು ಒಂದಡಿ ಮುಂದಿಡಲೂ ಬಿಡಬಾರದು.'

'ಏನೋ ಅಪ್ಪ! ಅದು ನಿನಗೆ ಬಿಟ್ಟದ್ದು. ನನಗಂತೂ ದಿಕ್ಕೇ ತೋಚುವುದಿಲ್ಲ; ಮನಸ್ಸನ್ನು ಮಂಕು ಕವಿದಿದೆ. ನಾನು ನಿನ್ನಿಂದ ಯಾವುದನ್ನೋ ಸಾಧಿಸಿಕೊಳ್ಳುವ ಎಂಬ ಆತುರದಿಂದ ಇಲ್ಲಿಗೆ ಬಂದೆ. ಇಲ್ಲಾದುದೇ ಬೇರೊಂದು.'

'ನಿಮ್ಮ ಬಗೆಯಲ್ಲಿದ್ದುದನ್ನು ಬಿಡಿಸಿ ಹೇಳಿದರೆ ಅದರ ಸಾಧ್ಯಾಸಾಧ್ಯತೆಯನ್ನು ತೂಗಿ ನೋಡುವ.'

'ನಾವು ಚಾಳುಕ್ಯರು ಪ್ರಕೃತ ರಾಷ್ಟ್ರಕೂಟರ ಮಾಂಡಳಿಕರು. ನೀನು ಎರಡೆರಡು ದೃಷ್ಟಿಯಿಂದ ಸಾಮ್ರಾಟರಿಗೆ ತೀರ ಬೇಕಾದವನು. ನಮಗೆಲ್ಲಾರಿಗೂ ಸಾಮ್ರಾಟರ ಮೇಲೆ ಪ್ರಭಾವ ಬೀರುವ ಯೋಗ್ಯತೆಯಿಲ್ಲ. ಅವರ ನೇತೃತ್ವದಲ್ಲಿ ಸಂಧಿಗೆ ನಿನ್ನ ದೌತ್ಯದ ಮೂಲಕ ಅವಕಾಶ ಮಾಡಿಕೊಳ್ಳಲು ಸಾಧ್ಯವಾದೀತೇ ಎಂದು ಕೇಳಲು ಬಂದೆ.'

'ನಾನು ಸಂಧಿಗೆ ವಿರೋಧಿಯಲ್ಲ; ಸಂಧಿ ಕುದುರಿದರೆ ಉಭಯತರಿಗೂ ಕ್ಷೇಮ; ಅನುಮಾನವಿಲ್ಲ. ಆದರಿಂದ ನಾವು ನೋವಿನ ಉಪಾಧಿಯೂ ತೊಲಗುತ್ತದೆ.'

'ಸಂಧಿಯ ಮಾತನ್ನು ಅವರೇ ಮುರಿದರೆ ಸಾಮ್ರಾಟರ ಸಹಾನುಭೂತಿಯೂ, ಜನತೆಯ ಬೆಂಬಲವೂ ನಮಗೆ ಹೆಚ್ಚಿನ ಪ್ರಮಾಣದಲ್ಲಿ ದೊರಕಬಹುದು ಎಂಬುದು ನಮ್ಮ ತರ್ಕ.'

'ಸರಿಯಾದ ಆಲೋಚನೆಯೇ.'

'ಅದನ್ನು ನೀನೇ ವಹಿಸಬೇಕು.'

'ಹಾಗಿದ್ದರೆ ಅದನ್ನೇ ಮೊದಲು ಪ್ರಯತ್ನಿಸುವ.'

'ನಾವಿನ್ನು ಬರುತ್ತೇವೆ. ನಿನ್ನ ಉಪಕಾರವನ್ನು ನಾವು ಮರೆಯುವುದಿಲ್ಲ.'

'ಒಂದು ಇತ್ಯರ್ಥಕ್ಕೆ ಬರುವ ತನಕ ನೀವಿಲ್ಲಿಯೇ ಇದ್ದು ಬಿಡಿ. ಇದೂ ನಿಮ್ಮ ಮನೆಯೇ ತಾನೇ.'

'ಅದರಿಂದ ನಿನಗೆ ತೊಂದರೆ'

'ಆ ತೊಂದರೆಗೆ ನಾನು ಹೆದರುವುದಿಲ್ಲ. ನೀರಿಗಿಳಿದಾಯಿತು, ಛಳಿಗಂಜಿದರೆ ಹೇಗೆ?'

'ನಮ್ಮ ನೆಪದಲ್ಲಿ ನೀನೂ ಶತ್ರುಗಳನ್ನು ಕಟ್ಟಿಕೊಂಡಂತಾಯಿತಲ್ಲ.'

'ರಾಜಕೀಯ ಜೀವನದಲ್ಲಿ ಅದು ಅನಿವಾರ್ಯ. ನೀವಿಲ್ಲಿ ಸಂಕೋಚವಿಲ್ಲದೆ ಇದ್ದು ಬಿಡಿ. ನಾನು ನಾಳೆಯೇ ಸಾಮ್ರಾಟರ ಭೆಟ್ಟಿಗೆ ಹೊರಡುತ್ತೇನೆ. ಬರುವ ತನಕ ಶತ್ರುಗಳ ಚಲನ—ವಲನದತ್ತ ಗಮನವಿರಲಿ.

೨೬

ಯಾವ ಮುನ್ಸೂಚನೆಯನ್ನೂ ಕೊಡದೆ ಅರಿಕೇಸರಿ ರಾಜಧಾನಿಯಲ್ಲಿ ಪ್ರತ್ಯಕ್ಷನಾದ. ಲೋಕಾಂಬಿಕಾ ಪ್ರಕರಣದ ನಂತರ ಆತ ರಾಜಧಾನಿಗೆ ಬಂದಿರಲಿಲ್ಲ. ಅವನ ಆಗಮನ ಔತ್ಸುಕ್ಯವನ್ನು ಹುಟ್ಟಿಸಿತು. ಸಾಮ್ರಾಟ ಕೃಷ್ಣ ಅರಿಕೇಸರಿಯನ್ನು ಆತ್ಮೀಯತೆಯಿಂದಲೇ ಬರಮಾಡಿಕೊಂಡು ಕುಶಲ ವಿಚಾರಿಸಿದ. ವಹಿಸಿಕೊಂಡು ಬಂದ ರಾಯಭಾರವನ್ನು ಅರಿಕೇಸರಿ ಅವನಲ್ಲಿ ಸೂಕ್ಷ್ಮವಾಗಿ ವಿವರಿಸಿದ.

ಅವನ ಮಾತಿಗೆ ಪ್ರತಿ ಹೇಳುವ ಮನಸ್ಸು ಸಾಮ್ರಾಟರಿಗೆ ಬರಲಿಲ್ಲ. ಆದರೂ ತನ್ನ ಮನಸ್ಸಿನಲ್ಲಿ ಒಡಮೂಡಿದ ಶಂಕೆಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸಿದ.

'ರಾಜಿಗೆ ಅವರೊಪ್ಪದಿದ್ದರೆ?—'

'ಸಂಧಾನ ಮುರಿದರೆ—ಸಂಗ್ರಾಮ. ಅದಕ್ಕೂ ನಾವು ಸಿದ್ಧ.'

'ನೀವು ಸಿದ್ಧರಿರಬಹುದು; ಆದರೆ ಯಾರಿಗಾಗಿ ನೀವು ಈ ಕಾರ್ಯದಲ್ಲಿ ಉದ್ಯುಕ್ತರಾಗುತ್ತೀರೋ ಅವರೊಂದು ಕೆಸರು ಕಂಬ. ಮದುವೆಯಾಗಲಿರುವ ಗಂಡೇ ಹಸೆಮಣೆಗೆ ಬರಲು ಅಂಜಿದರೆ?—'

'ಆ ಕಂಬ ಅಲ್ಲಾಡುವಂತೆ ಕಾಣಲಿಲ್ಲ.'

'ನೀವಿಲ್ಲಿಯೇ ಎಡವಿದ್ದು. ವಿಜಯಾದಿತ್ಯರಿಗೆ ನೀವು ಜ್ಞಾತಿಗಳೆಂಬುದು ನಿಜ. ಅನ್ಯ ಶಾಖೆಯವರು ನಿಮಗಿಂತಲೂ ಹತ್ತಿರದವರು. ಅದನ್ನೇ ಮರೆತಿರಿ.'

"ಆ ಹತ್ತಿರದವನೇ ಈಗ ಕತ್ತಿ ಹಿರಿದವನು."

'ಅದು ನಿಶ್ಚಯ. ಆದರೆ ವಿಜಯಾದಿತ್ಯರು ದೃಢಚಿತ್ತರಲ್ಲ. ಅವರದು ಹೆಂಗರುಳು. ರಾಜಧರ್ಮವನ್ನು ಪಾಲಿಸುವ ಧೃತಿ ಅವರಿಗಿಲ್ಲ. ಕಷ್ಟದ ಪ್ರಸಂಗ ಈಗ ಬಂದಿದೆ. ಮನಸ್ಸು ಕಠಿಣವಾಗಿದೆ. ಆದರೆ ನಾಳೆ ಅದು ಕರಗಬಹುದು. ಇಂದು ಕಚ್ಚಾಡಿದ ಜನ ನಾಳೆ ಒಂದಾಗಬಹುದು. ಆಗ ನೀವು ಸಂಪಾದಿಸುವುದು ಒಣ ನಿಷ್ಠುರವನ್ನೇ.'

'ಬಾದಾಮಿಯ ಸಿಂಹಾಸನದಲ್ಲಿ ಅವರನ್ನು ಪುನಃ ಕೂರಿಸುವುದಾಗಿ ನಾನು ಕೊಟ್ಟ ಭಾಷೆ? ಅದನ್ನು ನುಂಗಿಕೊಳ್ಳಬೇಕಾಗುತ್ತದೆಯೋ?'

'ನಿಮ್ಮ ಛಲ; ಬಲ ಪರಾಕ್ರಮವನ್ನು ನೀವು ಮೆರೆಸಬಹುದು. ಅದರ ಲಾಭವನ್ನು ಕೊನೆಯ ತನಕ ಉಳಿಸಿಕೊಳ್ಳಲಾರದ ಅಧೀರ ಮನಸ್ಸು ವಿಜಯಾದಿತ್ಯರದು. ನೀವೇ ರಾಜ್ಯಭಾರ ನಡೆಸಿ, ಆಗುತ್ತಿರುವ ನರಮೇಧವನ್ನು ನಿಲ್ಲಿಸಿ, ಎಂದು ವಾಲ್ಮೀಕಾದಿಗಳನ್ನೇ ಪೆಟ್ಟಿ ಹೋಗುವ ಧೀರು ಸ್ವಭಾವ ಅವರದು. ಆಗ ನೀವು ಉಗುಳುವಂತೆಯೂ ಇಲ್ಲ; ನುಂಗುವಂತೆಯೂ ಇಲ್ಲ!'

'ಆದರೆ ಈಗ ನಾನೇನೂ ಮಾಡಲು ಬರುವಂತಿಲ್ಲ. ಜುಟ್ಟಿಗೆ ಕಟ್ಟಿಕೊಂಡಾಗಿದೆ—ಗಯನನ್ನು ಅರ್ಜುನನ ಬತ್ತಳಿಕೆಗೆ ನೂಕಿಕೊಂಡಂತೆ— ಹೇಳಿದಂತೆ ನಡೆಯುವುದೊಂದೇ ಈಗ ನನ್ನ ಮುಂದಿರುವ ಮಾರ್ಗ; ದೈವ ನಡೆಸಿದಂತೆ ನಡೆಯುವುದು. ಅಂತಹ ಪರಿಸ್ಥಿತಿ ಒದಗಿ ಬಂದರೆ ನಿಮ್ಮ ನೆರವಿನ ಭರವಸೆ ಇಟ್ಟುಕೊಳ್ಳಬಹುದೇ?'

'ನೀವಿದ್ದಲ್ಲಿ ನಾವು ಇದ್ದೇ ಇರುತ್ತೇವೆ. ಅದರಲ್ಲಿ ಅನುಮಾನವೇ ಬೇಡ. ನಾವು ದೂರ ಇರುವಂತೆ ಕಂಡರೂ, ಅಂತರಂಗದಿಂದ ನಿಮಗೆ ಅನುಕೂಲರೇ, ಸಾಮ್ರಾಜ್ಯಕ್ಕೆ ನೀವೂ, ನಿಮ್ಮ ಹಿರಿಯರೂ ಸಲ್ಲಿಸಿದ ಸೇವೆಯನ್ನು ನಾವು ಅಷ್ಟು ಸುಲಭವಾಗಿ ಮರೆಯುವುದು ಸಾಧ್ಯವೇ?'

'ಅದನ್ನು ಪಡೆಯುವ ಉದ್ದಿಶ್ಯದಿಂದಲೇ ನಾನಿಲ್ಲಿಗೆ ಬಂದುದು. ನಾನಿನ್ನು ಬರುತ್ತೇನೆ, ಅಪ್ಪಣೆಯಾದರೆ.'

'ಲೋಕಾಂಬಿಕೆ-ಚಿರಂಜೀವರು ಹೇಗಿದ್ದಾರೆ? ಬನವಾಸಿಗೆ ಈಚೆಗೆ ಹೋಗಿದ್ದೀರಾ? ತೀರ್ಥರೂಪರು ಹೇಗಿರುವರು? ಅವರನ್ನೆಲ್ಲಾ ನಾವು ವಿಚಾರಿಸಿದೆವೆಂದು ತಿಳಿಸಿ.'

'ಅಪ್ಪಾಜಿ ಆರೋಗ್ಯದಿಂದಿದ್ದಾರೆ. ಈಚೆಗೆ ನನ್ನಿಂದ ಅಲ್ಲಿಗೆ ಹೋಗುವುದಾಗಲಿಲ್ಲ. ಹಚ್ಚಿಕೊಂಡ ಈ ಕೆಲಸವನ್ನು ಒಂದು ನೆಲೆಗೆ ನಿಲ್ಲಿಸಿ, ಅವರನ್ನೊಮ್ಮೆ ನೋಡಿ ಬರಬೇಕೆಂದಿದೆ.'

'ಅದನ್ನು ಮೊದಲು ಮಾಡಿ.'

'ಖಂಡಿತ.'

ಹೀಗೆ ನುಡಿದು ಅರಿಕೇಸರಿ ಆತುರ, ಆತುರನಾಗಿ ಅಲ್ಲಿಂದ ಹೊರಟು ಹೋದ.

೦ ೦ ೦ ೦

ಅರಿಕೇಸರಿಯನ್ನು ಕಳುಹಿಸಿಕೊಟ್ಟ ಸಾಮ್ರಾಟರು ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಸಾಮಂತರಾದ ಕಕ್ಕರಸ, ಬಪ್ಪುವ, ವಿಜಯಾದಿತ್ಯರಿಗೆ, ಬಂದು ಕಾಣುವಂತೆ ಓಲೆಗಳನ್ನು ಕಳುಹಿಸಿದರು. ಅರಿಕೇಸರಿಗೂ ಆ ಆಹ್ವಾನ ಹೋಯಿತು.

ಸಾಮ್ರಾಟರ ಈ ಆಹ್ವಾನವನ್ನು ಯಾರೂ ಧಿಕ್ಕರಿಸಲಿಲ್ಲ.

ಓಲೆಯಲ್ಲಿ ಏನನ್ನೂ ಸ್ಪಷ್ಟವಾಗಿ ಬರೆಯದಿದ್ದರೂ ಅದು ಚಾಳುಕ್ಯ ಶಾಖಾಂತರಗಳೊಳಗೆ ಮೂಡಿದ ಜಿಜ್ಞಾಸೆಯನ್ನು ಬಗೆಹರಿಸುವುದಕ್ಕೆಂಬುದು ಸುಸ್ಪಷ್ಟವಿತ್ತು. ಬಲಾತ್ಕಾರದಿಂದ ಕಬಳಿಸಿಕೊಂಡ ಬಾದಾಮಿಯನ್ನು ಭದ್ರಪಡಿಸಿಕೊಳ್ಳುವ ದೃಷ್ಟಿಯಿಂದ ಈ ಮಾತುಕತೆಗೆ ಹೋಗುವುದು ವಿಹಿತವೆಂದು ಕಕ್ಕರಸಾದಿಗಳು ತೀರ್ಮಾನಿಸಿದರು.

ಈ ನೆಪದಲ್ಲಿ ಒಂದಿಷ್ಟು ಸಮಯವನ್ನು, ಬರಲಿರುವ ವಿಪತ್ತನ್ನು ಮುಂದೂಡಲು ಬಳಸಬಹುದು ಎಂಬುದು ಅವರ ನಿಲುವು. ಈ ಕಾಲವನ್ನು ತಮ್ಮ ಬಲ ಸಂವರ್ಧನೆಗೂ ಸಹಾಯಕರನ್ನು ಕೂಡಿಸಿಕೊಳ್ಳಲೂ, ತಿರುಗಿಸಬಹುದೆಂದು ಅವರು ಯೋಚಿಸಿದರು. ಅವರಿಗೂ ಅದೇ ಬೇಕಾಗಿತ್ತು.

ಸಾಮ್ರಾಟರ ಸಂಧಿಯ ಪ್ರಯತ್ನ, ಅಯಾಚಿತವಾಗಿ ಬಂದ ಅವಕಾಶ ಎಂದು ಅವರು ತರ್ಕಿಸಿದರು. ಸಂಧಾನಕ್ಕಾಗಿ ರಾಷ್ಟ್ರಕೂಟ ರಾಜಧಾನಿಗೆ ಹೊರಡಲಣಿಯಾದರು.

ಕಕ್ಕರಸ, ಬಪ್ಪುವರು ತಮ್ಮ ತಮ್ಮ ಸಲಹೆಗಾರರೊಂದಿಗೆ, ಬೆಂಬಲಕ್ಕೆ ನಿಂತ ಬೆಂಬಲಿಗರೊಂದಿಗೆ ಓಲಗವನ್ನು ಪ್ರವೇಶಿಸಿದರು. ವಿಜಯಾದಿತ್ಯನನ್ನು ಮುಂದು ಮಾಡಿಕೊಂಡು ಅರಿಕೇಸರಿಯೂ ಆಸ್ಥಾನ ಸೇರಿದ.

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ವಾರಪತ್ರಿಕೆ

ಉಡುಪಿ, ದ. ಕ.

NAVAYUGA

(Published every Thursday)

UDIPI, S. K.

ಸಂಪುಟ 51
ಸಂಚಿಕೆ 43

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦—೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಉದ್ಯೋಗ ಪ್ರಧಾನ ಶಿಕ್ಷಣ ನಮಗಿರುವ ಶ್ರೀರಕ್ಷೆ

ಕೇಂದ್ರದ ಹಣಕಾಸಿನ ಸಚಿವ ಶ್ರೀ ಬಿ. ಚೆವ್ಹಾಣರು ನಿರುದ್ಯೋಗ ಸಮಸ್ಯೆಯತ್ತ ದೃಷ್ಟಿಹರಿಸಿ ಅದರ ಭೈತ್ರ್ಯಾಕಾರವನ್ನು ಪ್ರದರ್ಶಿಸಿದರು. ದೇಶದಲ್ಲಿ ಇಂದಿರುವ ಸುಮಾರು ಐವತ್ತು ಲಕ್ಷ ನಿರುದ್ಯೋಗಿಗಳಲ್ಲಿ ಸೇ. ಐವತ್ತರಷ್ಟು ಸುಶಿಕ್ಷಿತರೆಂದು ಅವರ ಲೆಕ್ಕಾಚಾರ. ಈ ಅಂಕೆ ಸಂಖ್ಯೆಗಳು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ಉದ್ಯೋಗಾಪೇಕ್ಷಿಗಳ ಸಂಖ್ಯೆಯ ಮೇಲೆ ಆಧರಿಸಿದ್ದು. ನೈಜ ಅಂಕೆ ಸಂಖ್ಯೆಗಳು ಇದಕ್ಕಿಂತ ಹೆಚ್ಚಿರುವುದು ಸಾಧ್ಯ. ದೇಶದ ಜನಸಂಖ್ಯೆಯೊಡನೆ ಹೋಲಿಸುವಾಗ ಪ್ರತಿ ನೂರು ಪ್ರಜೆಗಳಲ್ಲಿ ಒಬ್ಬ ನಿರುದ್ಯೋಗಿಯೆಂದೂ ಇನ್ನೂರರಲ್ಲಿ ಒಬ್ಬ ಸುಶಿಕ್ಷಿತ ನಿರುದ್ಯೋಗಿಯೆಂದು ಹೇಳಬಹುದು. ಸಮಾಜಕ್ಕೆ ಸುಶಿಕ್ಷಿತ ನಿರುದ್ಯೋಗಿಗಳಿಂದ ಯಾವ ಸಮಯದಲ್ಲಾದರೂ ಅಪಾಯ ತಟ್ಟುವುದು ಸಾಧ್ಯವಾದ್ದರಿಂದ ಇದು ಗಂಭೀರ ಪ್ರಶ್ನೆಯೆಂಬುದು ನಿರ್ವಿವಾದ.

ಸುಶಿಕ್ಷಿತರಲ್ಲಿ ಕಂಡು ಬರುವ ನಿರುದ್ಯೋಗಕ್ಕೆ ಇರುವ ಒಂದೇ ಒಂದು ಕಾರಣವೆಂದರೆ, ಅವರು ಪಡೆದ ಶಿಕ್ಷಣಕ್ಕೂ ಉದ್ಯೋಗಕ್ಕೂ ಯಾವ ಸಂಬಂಧವೂ ಇಲ್ಲದಿರುವುದು. ಬರಿಯ ಓದು–ಬರಹಗಳನ್ನು ಮಾತ್ರ ಗಳಿಸಿಕೊಂಡಿರುವ ಇವರ ಇತಿಹಾಸ–ಅರ್ಥಶಾಸ್ತ್ರ–ವಿಜ್ಞಾನ ಮೊದಲಾದುವುಗಳ ಜ್ಞಾನ ಭಂಡಾರ ಅವರಿಗೆ ಉದ್ಯೋಗ ಒದಗಿಸಿಕೊಡುವುದಿಲ್ಲ. ಕೂತುಕೊಂಡು ಮಾಡಿಯುವ ಉದ್ಯೋಗಗಳು ಅತ್ಯಂತ ಸೀಮಿತವಿರುವುದರಿಂದ ಇಂದಿನ ಶಿಕ್ಷಣ ಪದ್ಧತಿ ಅತ್ಯಂತ ಅಯಶಸ್ವಿಗೊಂಡಿದೆ. ಸಮಯಾನುಕೂಲಕ್ಕೆ ಹೊಂದಿಕೊಳ್ಳುವ ಶಿಕ್ಷಣವಿಂದು ನಮ್ಮಲ್ಲಿ ಲಭ್ಯವಾಗನವಿಲ್ಲ. ಶಿಕ್ಷಣ ಪದ್ಧತಿಯ ಅಸಫಲತೆಯನ್ನು ನಮ್ಮ ತರುಣ ಪೀಳಿಗೆ ಕಂಡುಕೊಂಡಿದೆ; ಆದುದರಿಂದ ಉದ್ಯೋಗಕ್ಕಾಗಿ ಪರಮುಖಾಪೇಕ್ಷಿಯಾಗಿದೆ. ತಾವು ಸುಶಿಕ್ಷಿತರಾಗುವುದು ಉದ್ಯೋಗ ಸಂಪಾದನೆಗೆಂಬ ಮನೋಭಾವ—ಆ ಉದ್ಯೋಗ ಕೂತುಂಬುವುದೆಂಬ ಭ್ರಮೆ ಬ್ರಿಟಿಷರು ಬಿತ್ತಿದ ವಿಷಬೀಜ. ನಾವು ಇಂದಿಗೂ ಅದನ್ನೇ ಬಿತ್ತುತ್ತಲಿದ್ದೇವೆ; ಪರಿಪೋಷಿಸುತ್ತ ಬರುತಿದ್ದೇವೆ. ನಮ್ಮ ಶಿಕ್ಷಣ ವ್ಯವಸ್ಥೆ ಪುಸ್ತಕ ಪ್ರಧಾನವಾದುದು; ಉದ್ಯೋಗದ ಗಂಧಗಾಳಿಯೂ ಅದಕ್ಕಿಲ್ಲ. ಇದನ್ನು ಅಧಿಕಾರದಲ್ಲಿದ್ದವರೂ ಇಲ್ಲದವರೂ ಅನೇಕ ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ; ಹಲವಾರು ಬಾರಿ ಸಾತ್ಯ ಪಟ್ಟಿಯಲ್ಲಿ ಬದಲಾವಣೆಗಳನ್ನು ಮಾಡಿದರೂ ಶಿಕ್ಷಣವನ್ನು ಉದ್ಯೋಗದತ್ತ ಸಾಗಿಸುವ ನೀತಿಯನ್ನೂ ಸರಕಾರ ಮಾಡಿದ್ದೆಂಬುದಿಲ್ಲ. ಸ್ವತಂತ್ರ ಉದ್ಯೋಗಾಪೇಕ್ಷಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಆರ್ಥಿಕ ಸಹಾಯ ದೊರೆಯುತ್ತಾದರೂ ಉದ್ಯೋಗವನ್ನೇ ಅರಿಯದವರಿಗೆ ಅದರಿಂದೇನೂ ಪ್ರಯೋಜನವಿಲ್ಲ. ಕೆಲವಾರು ತಾಂತ್ರಿಕ–ವೃತ್ತಿಪರ ಶಿಕ್ಷಿತರಿಗೆ ಮಾತ್ರ ಇದು ಲಾಭಪ್ರದವಾಗಬಹುದು. ಆದರೆ, ನಮ್ಮ ಸುಶಿಕ್ಷಿತ ನಿರುದ್ಯೋಗಿಗಳಲ್ಲಿ ಅಧಿಕಾಂಶ ಈ ಬಗೆಗೆ ಸೇರಿದವರಲ್ಲ. ಬರಿಯ ಕಾರಕೂನರಾಗುವಷ್ಟರ ಮಟ್ಟಿಗೆ ಶಿಕ್ಷಣ ಹೊಂದಿದವರು.

ಈ ಪರಿಸ್ಥಿತಿ ಹೋಗದೆ ನಮ್ಮ ಉದ್ಯೋಗ ಸಮಸ್ಯೆ ಶಾಂತವಾಗುವುದಿಲ್ಲ. ಸರಕಾರವೋ ಖಾಸಗಿ ವಲಯವೋ ನಾಲ್ಕಾರು ಬೃಹತ್ ಉದ್ಯಮ ಕೈಕೊಂಡ ಮಾತ್ರಕ್ಕೆ ನಿರುದ್ಯೋಗ ದೂರವಾಗುವುದಿಲ್ಲ. ಈ ಪ್ರಶ್ನೆಗೆ ಉತ್ತರ ಮನೆ ಮನೆಯಲ್ಲೂ ಆರಸಲ್ಪಡಬೇಕು; ಶಾಲೆ ಕಾಲೇಜುಗಳಲ್ಲಿ ಉದ್ಯೋಗದ ಬಗ್ಗೆ ಸೂಕ್ತ ಪ್ರಜ್ಞೆ ಹುಟ್ಟಿಸಿ ಬೆಳೆಸಬೇಕು. ವಿದೇಶಗಳಲ್ಲಿ ಹತ್ತು ವರ್ಷದ ಮಗುವೂ ತಾನು ಮುಂದೇನಾಗಬೇಕೆಂಬುದನ್ನು ಆ ಹೊತ್ತಿಗಾಗಲೇ ನಿರ್ಣಯಿಸಿರುತ್ತದೆ. ತನ್ನ ಜೀವನದ ಉದ್ದೇಶವನ್ನು ಮುಟ್ಟಲದು ತಕ್ಕ ತರಬೇತಿಯನ್ನೂ ಶಿಕ್ಷಣವನ್ನೂ ಪಡೆಯುತ್ತದೆ. ಈ ಗುರಿ ನಿರ್ಧರಿಸುವಾಗ ತನ್ನ ಯೋಗ್ಯತೆಯನ್ನೂ ಆಸಕ್ತಿಯನ್ನೂ ಅದು ಪರಿಗಣಿಸುತ್ತದೆ. ಆದರೆ, ನಮ್ಮ ದೇಶದಲ್ಲಿ ಈ ವಾತಾವರಣ ಕೊನೆಯ ಗಳಿಗೆಗೂ ಇಲ್ಲ. ನಮ್ಮ ಮಕ್ಕಳ ಶಿಕ್ಷಣ ವಿಳಂಬನೀಯ ಪ್ರತೀಕ. ಎಲ್ಲಾದರೂ ಉದ್ಯೋಗ ದೊರೆತೊಡನೆ ನಮ್ಮವರ ಶಿಕ್ಷಣಕ್ಕೆ ಪೂರ್ಣ ವಿರಾಮ. ಪದವೀಧರರನ್ನೇ ತೆಗೆದುಕೊಂಡರೂ ಗಾಳಿ ಬಂದತ್ತ ತೂರಿಕೊಳ್ಳುವ ಪ್ರವೃತ್ತಿಯೇ ಹೆಚ್ಚು. ನೌಕರಿಯಾದರೂ ಯಾವ ನೌಕರಿಯೆಂಬುದರ ಬಗ್ಗೆ ನಿಲುವು ದೃಢವಿಲ್ಲ. ಇದಕ್ಕೆ ಹಲವು ಕಾರಣಗಳಿವೆಯೆಂಬುದು ನಿಜ ಬಯಸಿದ್ದು ಸಿಗುವುದು ನಮ್ಮ ದೇಶದಲ್ಲಿ ಅಸಾಧ್ಯ; ಆದ್ದರಿಂದಲೇ ಯಾವುದಾಯಿತೋ ಅದಕ್ಕೇ ಅಂಟಿಕೊಳ್ಳುವ ಪ್ರವೃತ್ತಿ. ಆದರೆ, ನೌಕರಿಗಳ ಅವಕಾಶ ಸೀಮಿತವಿರುವುದರಿಂದ ಸ್ವತಂತ್ರ ಉದ್ಯೋಗದ ವಾಸನೆ—ಆಸಕ್ತಿಯಿಲ್ಲವಾದುದರಿಂದ ನಿರುದ್ಯೋಗದ ಪ್ರಶ್ನೆ. ಭಾರತದಂತಹ ವಿಶಾಲ ದೇಶದಲ್ಲಿ ಜನಸಂಖ್ಯಾ ಬಾಹುಳ್ಯವಿರುವುದಾದರೂ ಉದ್ಯೋಗಗಳಿಗೆ ಅಭಾವವಿರುವುದಿಲ್ಲ; ಆದರೆ, ಹೆಚ್ಚಿನವರು ಬಯಸುವ ಬಿಳಿಕಾಲರಿನ ಉದ್ಯೋಗಾವಕಾಶಗಳಿಗೆ ಕೊರತೆಯಿದೆ. ಇದು ತಪ್ಪದೆ ದೇಶವೂ ಉದ್ಧಾರವಾಗುವುದಿಲ್ಲ. ನಮ್ಮ ಮಕ್ಕಳಿಗೆ ಅಕ್ಷರ ಪ್ರಧಾನ ಶಿಕ್ಷಣದ ಬದಲು ಉದ್ಯೋಗ ಪ್ರಧಾನ ಶಿಕ್ಷಣ ಕೊಡುವತ್ತ ಅಧಿಕಾರಿಗಳ ದೃಷ್ಟಿ ಎಷ್ಟು ಬೇಗ ಹರಿಯುತ್ತದೋ ಅಷ್ಟು ಬೇಗ ನಾವು ಮೋಕ್ಷ ಪಡೆಯುತ್ತೇವೆ.

ನಿರುತ್ಸಾಹ ಫಲಿತಾಂಶ

ರಾಜ್ಯ ವಿಧಾನಪರಿಷತ್ತಿಗೆ ನಡೆದ ದ್ವಿವಾರ್ಷಿಕ ಚುನಾವಣೆಗಳ ಫಲಿತಾಂಶ ಆಳುವ ಕಾಂಗ್ರೆಸ್ಸು ಬಯಸಿದಂತೆ ಹೊರಬರಲಿಲ್ಲ. ಅದಕ್ಕೆ ಪರಿಷತ್ತಿನಲ್ಲಿ ಬಹುಮತ ದೊರೆಯಲಿಲ್ಲ. ನೂರು ನಾಮಕರಣಗೊಳ್ಳಲಿರುವ ಸ್ಥಾನಗಳು ಆಳುವ ಕಾಂಗ್ರೆಸ್ಸಿಗೇ ಬೆಂಬಲವಿತ್ತರೂ ಅರುವತ್ತಮೂರರಲ್ಲಿ ಇಪ್ಪತ್ತೈದು ಮಾತ್ರ ಅದಕ್ಕೆ ದೊರೆತಂತಾಗುತ್ತದೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಸಂಸ್ಥಾ ಕಾಂಗ್ರೆಸ್ ಮತ್ತು ಶಿಕ್ಷಿತರ ಕ್ಷೇತ್ರದಿಂದ ಜನಸಂಘ—ಅಥವಾ ಅವರ ಬೆಂಬಲಿಗರು ಆಯ್ಕೆಗೊಂಡಿರುವುದು ಗಣನೀಯ. ಪರಿಸೀಮಿತ ಮತದಾರರು—ಪಟ್ಟಭದ್ರ ಹಿತಾಸಕ್ತಿಗಳು—ತುಂಬಿರುವ ಈ ಕ್ಷೇತ್ರಗಳ ಚುನಾವಣೆಗೆ ಮಹತ್ವವಿಲ್ಲವೆನ್ನಬಹುದು; ಜತೆಗೆ ಬರಿಯ ಅಲಂಕಾರಪ್ರಾಯವಾದ ಪರಿಷತ್ತಿನಲ್ಲಿ ಬಹುಮತ ಬಾರದಿದ್ದರೇನೆಂದು ಉದರ ವೈರಾಗ್ಯ ತಾಳಬಹುದು. ಆದರೆ, ಆಳುವ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ರಂಗನಾಥರು ಬಹುಮತ ಬಾರದಿದ್ದರೆ ವಿಧಾನಪರಿಷತ್ತನ್ನು ರದ್ದುಗೊಳಿಸಬೇಕಾದೀತೆಂದ ಹಿನ್ನೆಲೆಯಲ್ಲಿ ಸರಕಾರ ಮುಂದಿನ ಎರಡು ವರ್ಷ ಪರಿಷತ್ತಿನೊಡನೆ ಹೇಗೆ ಏಗಿಕೊಳ್ಳುತ್ತದೆಂಬುದು ಗಮನಾರ್ಹ. ಏಕೆಂದರೆ, ಎರಡು ವರ್ಷಗಳಲ್ಲಿ ಆಳುವ ಕಾಂಗ್ರೆಸ್ಸು ಅಲ್ಲಿಯೂ ಬಹುಮತ ಪಡೆಯುವುದು ಸಾಧ್ಯ.

●●

ಬ್ರಹ್ಮಾವರದಲ್ಲಿ ಶುಭಾ ಕ್ಲಿನಿಕ್ ಉದ್ಘಾಟನೆ

ಕಳೆದ ತಾ. 22ರಂದು ಬ್ರಹ್ಮಾವರದಲ್ಲಿ ಡಾ| ಕೆ. ಸುಬ್ಬಣ್ಣ ಹಂದೆಯವರ 'ಶುಭಾ ಕ್ಲಿನಿಕ್'ನ ಉದ್ಘಾಟನೆಯನ್ನು ಉಡುಪಿ ಸರಕಾರಿ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ| ವೈ. ಎನ್. ಶೆಟ್ಟರು ರೆ| ಫಾ| ಕೆ. ಕೆ. ಕುರಿಯಾಕೋಸರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಮಣಿಪಾಲ ಶಿಕ್ಷಣ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಆರ್. ಹಂದೆಯವರು ಆರಂಭದಲ್ಲಿ ಸ್ವಾಗತಿಸಿದರು. ಶ್ರೀಗಳಾದ ಬಿ. ವಿ. ಮಾಧವ ರಾಯ, ಗೋಕುಲದಾಸ ಪೈ, ಪಿ. ಕೆ. ವಿಠಲ ರಾವ ಮತ್ತು ಬೈಕಾಡಿ ವೆಂಕಟಕೃಷ್ಣರಾಯರು ಮಾತಾಡಿ ಯಶಸ್ಸು ಕೋರಿದರು.

ಅಧ್ಯಕ್ಷರು ಡಾ| ಹಂದೆಯವರ ನಿರ್ಧಾರವನ್ನು ಪ್ರಶಂಸಿಸಿ ಚಿಕಿತ್ಸಾಲಯದ ಸರ್ವತೋಮುಖ ಪ್ರಗತಿಯನ್ನು ಹಾರೈಸಿದರು.

ರ್‍ಯಾಂಕು ವಿಜೇತರಿಗೆ ಅಭಿನಂದನೆ

ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಈ ಬಾರಿ ಮೈಸೂರಿನ ಪಿ. ಪಿ.ಯು ಬಿ.ಕಾಂ. ಪರೀಕ್ಷೆಯಲ್ಲಿ ರ್‍ಯಾಂಕು ಗಳಿಸಿದವರನ್ನು ಸನ್ಮಾನಿಸುವ ಸಮಾರಂಭವೊಂದು ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ದಾಮೋದರ ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘದ ಅಧ್ಯಕ್ಷ ಶ್ರೀ ಸತ್ಯೇಂದ್ರ ಭಟ್ಟರು ಸ್ವಾಗತಿಸಿ ರ್‍ಯಾಂಕು ವಿಜೇತರನ್ನು ಅಭಿನಂದಿಸಿದರು. ಪ್ರೊ| ಸಿ. ಮುರಲೀಧರ ಮೆನನ್ ಮತ್ತು ಶ್ರೀ ಆರ್. ಕೃಷ್ಣದಾಸ ಶೆಣೈಯವರು ಅಭಿನಂದನ ಭಾಷಣ ಮಾಡಿದರು.

ರ್‍ಯಾಂಕು ಗಳಿಸಿದ ಶ್ರೀ ಶಿವರಾಮ ಶೆಟ್ಟಿ, ಶ್ರೀ ರಘುವೀರ ನಾಯಕ್ ಮತ್ತು ಶ್ರೀ ಶ್ರೀನಿವಾಸ ಪೈಗಳು ಮಾತಾಡಿ ತಮ್ಮ ಯಶಸ್ಸಿಗೆ ಸ್ವಂತ ಪ್ರಯತ್ನವಲ್ಲದೆ ಪ್ರಾಧ್ಯಾಪಕರ ನೆರವು ಹಾಗೂ ಕಾಲೇಜಿನ ವಾತಾವರಣ ಸಹಕಾರಿಯಾದುವು ಎಂದು ಹೇಳಿ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು.

ಪ್ರೊ| ಕಿಣಿಯವರು ಮಾತಾಡಿ ರ್‍ಯಾಂಕು ವಿಜೇತರಿಗೆ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹರಸಿದರು. ಕಾರ್ಯದರ್ಶಿ ಶ್ರೀ ಕೆ. ವೆಂಕಟೇಶ ಪ್ರಭುರವರು ಅಂತ್ಯದಲ್ಲಿ ವಂದನೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಸಂಘದ ಪರವಾಗಿ ಕಾಲೇಜಿಗೊಂದು "ಉಪನ್ಯಾಸಕ ಪೀಠ"ವನ್ನು ಉಡುಗೊರೆ ಮಾಡಿದರು.

ಗೋಹರಾಜ್ಯದಲ್ಲಿ–

ಸಮಾಜವಾದಿ ಮುಂಗಡ ಪತ್ರ

'ಕೊನೆಗೂ ಬಂತಲ್ಲ?'

'ಏನು?'

'ಮತ್ತಿನ್ನೇನು?' ಸಮಾಜವಾದಿ ಬಜೆಟ್ಟು....'

'ಅಂದರೆ?'

'ಅಲ್ರೀ, ಆಳುವ ಕಾಂಗ್ರೆಸ್ಸಿನ ಮೊತ್ತ ಮೊದಲ ಸಮಾಗ್ರ ಮುಂಗಡ ಪತ್ರ?'

'ಓ. ರಾಜ್ಯದ ಮುಂಗಡ ಪತ್ರ?'

'ಮತ್ತೇನು? ಮಾರ್ಚ್ ತಿಂಗಳಲ್ಲಿನ ೩೫ ಕೋಟಿ ರೂಪಾಯಿಗಳ ಕೊರತೆಯನ್ನು ಕೇವಲ ಆರು ಕೋಟಿಗಿಳಿಸಲಾಗಿದೆಯಲ್ಲ?'

'ಅಷ್ಟು ಮಾತ್ರವಲ್ಲವೇ, ಕೆಲವೊಂದು ಹೊಸ ತೆರಿಗೆಗಳನ್ನೂ ಹೇರಿ ಕೊರತೆಯನ್ನು ಬಹಳಷ್ಟು ತುಂಬಿಸಿಯೂ ಕೊಂಡಿದ್ದಾರೆ....'

'ಅದು ಸರೀನ್ನು. ಆದರೆ ತೆರಿಗೆ ಏರಿಸಿದ್ದು ಯಾರಿಗೆ?'

'ರೈತರು ಉಪಯೋಗಿಸುವ ನೀರಿಗೆ, ಯಾತ್ರಾರ್ಥಿಗಳು ಪಯಣಿಸುವ ಬಸ್ಸುಗಳಿಗೆ, ಶ್ರೀಸಾಮಾನ್ಯರು ಬಳಸುವ ರೇಡಿಯೋ ಇತ್ಯಾದಿಗಳಿಗೆ....'

'ಅಂದರೆ, ಇದು ಮಧ್ಯಮ ಮತ್ತು ನಿಮ್ಮ ವರ್ಗದ ಜನರಿಗೇ ಹೊರೆಯೆನ್ನುತ್ತೀಯಾ?'

'ಅಲ್ಲದೆ ಮತ್ತಿನ್ನೇನಂತೆ? ನೀರಾವರಿ ಸೌಲಭ್ಯ ಹೊಂದಿದ ರೈತರು ನೀರಿಗಾಗಿ ತೆರಿಗೆ ಹೆಚ್ಚು ತೆರಬೇಕಾಗುವಾಗ, ಉತ್ಪಾದನಾ ವೆಚ್ಚ ಏರುತ್ತದೆ. ಆ ಕಾರಣದಿಂದ ಆಹಾರ ವಸ್ತುಗಳ ಬೆಲೆಯೂ ಏರುವುದು;ಜೀವನ ವೆಚ್ಚ ಹೆಚ್ಚುವುದು....'

'ಅದು ಸರೀನ್ನು....'

'ಮತ್ತೆ ನೋಡಿ. ಶ್ರೀಮಂತರೆಲ್ಲ ಕಾರುಗಳಲ್ಲೇ ತಿರುಗಾಡುವವರು. ಟೂರಿಸ್ಟ್ ಬಸ್ಸುಗಳನ್ನು ಹೆಚ್ಚಾಗಿ ಬಳಸುವವರು ಮಧ್ಯಮ ಮತ್ತು ನಿಮ್ನ ವರ್ಗದವರು. ಇವರ ತಲೆಯ ಮೇಲೇ ಏರಿದ ತೆರಿಗೆ ಬೀಳುವುದು ನಿಶ್ಚಯ....'

'ಅದು ಹೌದು....'

'ಆ ಮೇಲೆ ರೇಡಿಯೋದ ಕತೆ. ಶ್ರೀಮಂತರಿಗೆಲ್ಲ ಇದು ಅವುಟ್ ಆಫ್ ಫ್ಯಾಶನ್. ಆದ್ದರಿಂದ ಇದರ ತೆರಿಗೆಯೂ ಮಧ್ಯಮ ವರ್ಗದವರಿಗೇ ಮೀಸಲು. ಆಹಾರಧಾನ್ಯೇತರ ವಸ್ತುಗಳ ಮೇಲೆಯೂ ತೆರಿಗೆಯೇರಿರುವುದರಿಂದ ಶ್ರೀಸಾಮಾನ್ಯನೇ ತೆರಿಗೆಗಳ ಹೆಚ್ಚಿನ ಭಾಗವನ್ನು ತುಂಬಿಸಬೇಕಾಗುವುದು ಅನಿವಾರ್ಯ....'

'ಅದು ಸರೀನ್ನು. ಮತ್ತು ನ್ಯಾಯವೂ ಹೌದು....'

'ಯಾಕೆ?'

'ನೋಡು; ರಾಜ್ಯದಲ್ಲಿನ ಬಹುಸಂಖ್ಯಾಕರು ಮಧ್ಯಮ ಮತ್ತು ನಿಮ್ನ ವರ್ಗದವರು. ಅವರ ಮೇಲೆ ಶ್ರೀಮಂತರ ಮೇಲೆ ತೆರಿಗೆ ಹಾಕುವ ಅಧಿಕಾರವೂ ರಾಜ್ಯ ಸರಕಾರದ ಕೈಯಲ್ಲೇನಿದೆ?'

'ಹ್ಞೂ....ಅಂತೂ ಈ ಬಜೆಟ್ಟೂ ಹಿಂದಿನವುಗಳಲ್ಲೇ ನಿಲ್ಲುವಂತದ್ದು....'

'ಬಜೆಟ್ಟು ಎಲ್ಲಿಯೇ ನಿಲ್ಲಲಿ, ಅದರಲ್ಲಿ ಸ್ವಾಗತಾರ್ಹ ವಿಷಯಗಳೂ ಇವೆ ತಾನೆ?'

'ಹ್ಞೂಂ. ಖರಿಯ ಒಂದು ಮಾತ್ರ....'

'ಏನದು?'

'ಕಾಳಿ ನದಿಯೋಜನೆಗೆ ತಗಲುವ ಎಲ್ಲ ವೆಚ್ಚವನ್ನೂ ಕೇಂದ್ರ ಸರಕಾರವೇ ಕೊಡುತ್ತದೆಯೆನ್ನುವುದು'

'ಅಲ್ಲವೇ ಮತ್ತೆ? ಜಲ ವಿದ್ಯುತ್ ಕಾರ್ಪರೇಶನ್ ಹಣಕಾಸಿಗಾಗಿ ತಡಪಡಿಸುತ್ತಿರುವಾಗ ಇದು ಸಂತೋಷದ ಸಂಗತಿಯಲ್ಲವೇನು?'

'ನಿಜಕ್ಕೂ....ಆದರೆ ನೋಡಿ, ಕಾರ್ಪರೇಶನ್‌ನ ಅಗತ್ಯ ಇನ್ನು ಉಳಿದಂತಿಲ್ಲ.'

'ಯಾಕೆ?'

'ಸರಕಾರವೇ ಹಣವೊದಗಿಸುವಾಗ ಅದರ ಅಸ್ತಿತ್ವವೇಕೆ?'

"ಅಲ್ಲವೆ, ಕೆಲಸ ನಡೆಸ ಬೇಕಲ್ಲಾ? ಹಣ ಕೂಡಿಸುವ ಘನತರ ಹೊಣೆಗಾರಿಕೆ ಅದರ ತಲೆಯಿಂದ ತಪ್ಪಿತು. ಇನ್ನದು ಕಾರ್ಯ ಸಾಧನೆಯಲ್ಲೇ ತನ್ನ ಮನಸ್ಸನ್ನು ಏಕಾಗ್ರಗೊಳಿಸ ಬಹುದು....'

'ಅದು ಸರೀನ್ರಿ. ಆದರೂ ಈ ಕಾರ್ಪರೇಶನ್ನು ಹಿಂದಿನ ಸರಕಾರದ ಮಗುವಾದ ರಿಂದ ಅದರ ಪ್ರಾಣಕ್ಕೆ ಕುತ್ತವಡರಿದರೂ ಅಡರ ಬಹುದು.'

'ಹ್ಞೂ. ಮತ್ತೆ ನೋಡು, ಸರಕಾರಿ ನೌಕರ ಮತ್ತು ಪೆನ್‌ಶನ್‌ದಾರರ ತುಟ್ಟಿ ಭತ್ತೆಯನ್ನು ಏರಿಸಿದ್ದು....'

'ಹೌದ್ರಿ, ಇದೊಂದು ಹೌದು. ಅದರಲ್ಲಿ ಹೊಸ ತಿರುವನ್ನು ವಿತ್ತ ಮಂತ್ರಿ ಘೋಷಣೆ ಮಾಡಿದ್ದಾರೆ. ಮೂಲ ವೇತನಗಳ ಸ್ಟೇಜಿನಲ್ಲಿ ತುಟ್ಟಿ ಭತ್ತೆಗಳ ನಡುವಣ ಅಂತರವನ್ನು ಇಳಿಸಿದ್ದಾರೆ....'

'ಅದಕ್ಕೆಂದೇ ನೋಡು ರೂ. ೨೦೯ರ ವರೆಗಿನವರಿಗೆ ಮಾತ್ರ ಭತ್ತೆ ಏರಿಸಿದ್ದಾರೆ....'

'ಅಂದರೆ, ಕಡಮೆ ವೇತನ ಪಡೆಯುವವರಿಗೆ ಭತ್ತೆ ಹೆಚ್ಚಿಸಿದ್ದಾರೆ....'

'ಹಿಂದಿನ ಬಾರಿಯೆಲ್ಲ ಎಲ್ಲರಿಗೂ ಏರಿಸಿ ಬಿಡುತ್ತಿದ್ದರು. ಮೂಲವೇತನ ಹೆಚ್ಚಾದಂತೆ ಭತ್ತೆಯೂ ಹೆಚ್ಚು. ಇದರಿಂದ ಕಡಿಮೆ ವೇತನದವರಿಗೆ ಕಡಿಮೆಯೇ. ಈ ಪದ್ಧತಿಗೊಂದು ಮುಟ್ಟುಗೋಲು ಹಾಕಿದ್ದು ನಿಜಕ್ಕೂ ಕ್ರಾಂತಿಕಾರಿಯಲ್ಲವೇನು?'

'ಖಂಡಿತಕ್ಕೂ. ಇನ್ನು ಇದೇ ರೀತಿಯಲ್ಲಿ ವೇತನ ಶ್ರೇಣಿಗಳ ನಡುವಣ ಅಂತರವನ್ನೂ ಇಳಿಸಬೇಕು. ಆಗ ಸಮಾಜವಾದದತ್ತ ದಿಟ್ಟ ಹೆಜ್ಜೆ ಇಡುವಂತಾಗುತ್ತದೆ....'

'ಹ್ಞೂಂ....ಆದರೆ, ಇದೆಲ್ಲ ಎಲ್ಲಿ ಸಾಧ್ಯ? ಸಮಾನ ಅರ್ಹತೆ – ಸಮಾನ – ಉದ್ಯೋಗ ಸಮಾನ–ವೇತನವೆಂಬ ನೀತಿಯನ್ನು ನ್ಯಾಯವಾಗಿ ಸರಕಾರ ಒಪ್ಪಿಕೊಂಡಂದು ಇದು ಸಾಧ್ಯವಾಗುತ್ತದೆ; ಆದರೆ, ತೋರಿಕೆಗೆ ಮಾತ್ರ ಸರಕಾರ ಇದನ್ನು ಒಪ್ಪಿಕೊಂಡಂತೆ ಮಾಡಿ,ಈ ಮೂಲ ತತ್ವವನ್ನು ತೊತ್ತಳದುಳಿಯುತ್ತದೆ.'

'ನೋಡಿ, ಅದು ಇದುವರೆಗಿನ ನೀತಿ. ಇನ್ನು ಮುಂದೆ ಹಾಗಾಗದು. ಸಮಾಜವಾದವನ್ನು ವ್ಯವಹಾರಕ್ಕೆ ತರುವ ದೀಕ್ಷೆ ಹೊತ್ತ ಸರಕಾರ ಈ ನಿಟ್ಟಿನಲ್ಲೂ ದಿಟ್ಟ ಹೆಜ್ಜೆಯಿಡಬಹುದು....'

'ಅಂತೂ ಈ ಬಜೆಟ್ಟಿಗೆ ಸಮಾಜವಾದದ ವಾಸನೆ ಬಡಿದಿದೆಯೆಂದು ಒಪ್ಪಿಕೊಳ್ಳುತ್ತಿ ತಾನೆ?'

'ಅಲ್ರಿ, ತೆರಿಗೆ ನೀತಿಯಲ್ಲಿ ಸಮಾಜವಾದವನ್ನು ನೆಮ್ಮದಿಯೆಂದು ಹೇಳುವಂತಿಲ್ಲ. ತೆರಿಗೆ ಹೇರುವುದಕ್ಕೆ ಬಜೆಟ್ಟು ಇರುವುದೆಂದು ಈ ಸಮಾಜವಾದದ ಕೈವಾರಿಗಳೂ ನಂಬಿದಂತಿದೆ....'

'ಮತ್ತೆ ನೋಡು, ಮಾಜಿ ವಿತ್ತ ಸಚಿವ ಶ್ರೀ ಹೆಗ್ಗಡೆ ಹೇಳುತ್ತಾರೆ ಬಜೆಟ್ಟಿನಲ್ಲಿ ಮುಚ್ಚಿಟ್ಟ ಅಂಶಗಳು ಬಹಳವಿವೆ. ಒಟ್ಟು ಕೊರತೆ ಮೂವತ್ತು ಕೋಟಿ ರೂಪಾಯಿಗಳಾಗಬಹುದು....'

'ಇದ್ದರೂ ಇರಬಹುದೂನ್ರಿ. ಅಂದರೆ ಮುಂದಿನ ಬಜೆಟ್ಟಿನಲ್ಲಿ ಭಾರಿ ತೆರಿಗೆ ಹೇರಲು ತಕ್ಕ ಪೂರ್ವ ತಯಾರಿಯೂ ಇರಬಹುದು....'

ಹ್ಞೂಂ .... ಸಮಾಜವಾದಿ ಬಜೆಟ್ಟಿನ ಮಾದರಿ ನೋಡಿಯಾಯ್ತಲ್ಲ?'

'ಎಲ್ಲೀರಿ? ಇದು ಆರಂಭ ಮಾತ್ರ. ಮುಂದಿನ ಬಜೆಟ್ಟುಗಳೇ ನಿಜವಾದ ಸಮಾಜವಾದಿಗಳು. ಏನಂತೀರಿ?'

'ಏನನ್ನೋದೆ? ಸದ್ಯ ಸುಮ್ಮನುಳಿಯುವುದೇ ನೆಮ್ಮದಿ....'

'ಯಾಕೆ?'

'ಮತ್ತಿನ್ನೇನೆ? ಯಾವುದೇ ನಿರ್ಧಾರಕ್ಕೆ ಗಡಿಬಿಡಿಯಿಂದ ಬರಬಾರದು. ಇನ್ನೂ ನಾಲ್ಕುದಿನ ಕಳೆಯಲಿ ಬಜೆಟ್ಟಿನ ಪ್ರಭಾವ ಮಾರುಕಟ್ಟೆಯ ಮೇಲೆ ಹೇಗೆ ಬೀಳುತ್ತೇಂತ....'

'ಹ್ಞೂಂ....'

'ಹ್ಞಾಂ....'

—ಗೋರಾ

○ ○ ○

ಯಾವ ಜನಾಂಗವು ತನ್ನ ಹಿಂದಿನ ಚರಿತ್ರೆ ಮತ್ತು ಸಾಹಿತ್ಯದ ಬಗ್ಗೆ ಹೆಮ್ಮೆ ಪಡುವುದಿಲ್ಲವೊ ಅದು ತನ್ನ ರಾಷ್ಟ್ರೀಯತೆ ಎಂಬ ಪ್ರಧಾನ ಗುಣಕವನ್ನು ಕಳೆದುಕೊಳ್ಳುವುದು.

○ ○ ○

ರ್‍ಯಾಂಕ್ ವಿಜೇತೆ

ಶ್ರೀ ಕೆ. ಅಜಿತ ಪ್ರಸಾದ ರೈ

ಶ್ರೀಯುತರು 1972ನೇ ಏಪ್ರಿಲ್‌ನಲ್ಲಿ ಜರಗಿದ ಫೈನಲ್ ಎಲ್‌ಎಲ್. ಬಿ, ಪರೀಕ್ಷೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ರ್‍ಯಾಂಕು ಗಳಿಸಿದ್ದಾರೆ. ಕಳೆದ ವರುಷ ಜರಗಿದ II ಎಲ್‌ಎಲ್. ಬಿ., ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕು ಪಡೆದಿದ್ದರು. ಉಡುಪಿ ಲಾ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಶ್ರೀಯುತರು ಕ್ರಿಕೆಟ್, ಟೇಬಲ್ ಟೆನ್ನಿಸ್, ಷಟ್ಲ್ ಬ್ಯಾಡ್‌ಮಿಂಟನ್ ಮೊದಲಾದ ಆಟ — ಸ್ಪರ್ಧೆಗಳಲ್ಲಿಯೂ ವಿಶೇಷ ಆಸಕ್ತಿಯುಳ್ಳವರಾಗಿ ಹಲವಾರು ಪಾರಿತೋಷಕಗಳನ್ನು ಪಡೆದವರಾಗಿರುತ್ತಾರೆ. ಶ್ರೀ ರೈಯವರು ಉಡುಪಿ ಪ್ರಿನ್ಸಿಪಾಲ್ ಸಿವಿಲ್ ಜಡ್ಜ್ ಶ್ರೀ ಬಿ. ವಿಶ್ವನಾಥ ರೈಗಳ ಪುತ್ರ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2—00

●

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

●

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಪೀ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಬ್ಯಾಂಕ್ ರಾಷ್ಟ್ರೀಕರಣಾನಂತರ—

ಸಣ್ಣ ಬೇಸಾಯಗಾರನಿಗೆ ದೊಡ್ಡ ಬ್ಯಾಂಕುಗಳ ನೆರವು

ದೇಶದ ಹದಿನಾಲ್ಕು ದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಸರ್ಕಾರಿ ಕ್ಷೇತ್ರದ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಕಾರ್ಯನೀತಿಯಲ್ಲಿ ಹೆಚ್ಚಿನ ಸುಧಾರಣೆ ಕಂಡುಬಂದಿದೆ. ಗ್ರಾಮಾಂತರ ಜನತೆಗೆ ಬ್ಯಾಂಕುಗಳ ಪೂರ್ಣ ಸೌಲಭ್ಯಗಳು ಇದೀಗ ಲಭ್ಯವಾಗಿವೆ. ಸಣ್ಣ ಬೇಸಾಯಗಾರನಿಗೆ ದೊಡ್ಡ ಬ್ಯಾಂಕುಗಳಿಂದ ಹಣಕಾಸಿನ ನೆರವು ದೊರೆಯುತ್ತಿದೆ.

ಮೂರು ವರ್ಷಗಳ ಹಿಂದೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಗುಂಪಿನ ಬ್ಯಾಂಕುಗಳನ್ನು ಬಿಟ್ಟರೆ ದೇಶದಲ್ಲಿದ್ದ ಬ್ಯಾಂಕುಗಳೆಲ್ಲಾ ಖಾಸಗಿ ಕ್ಷೇತ್ರದ್ದು. ಅವುಗಳ ಮುಖ್ಯ ಗುರಿ ಲಾಭ ಸಂಪಾದನೆಯಾಗಿದ್ದು ಖಾಸಗಿ ವ್ಯಕ್ತಿಗಳ ಹಿತಾಸಕ್ತಿಗಳಿಗಾಗಿ ವ್ಯವಹಾರ ನಡೆಸುತ್ತಿದ್ದವು. ಭಾರಿ ಬ್ಯಾಂಕುಗಳ ರಾಷ್ಟ್ರೀಕರಣವಾದ ನಂತರ ಅಂದರೆ ೧೯೬೯ರ ಜುಲೈ ತಿಂಗಳಿಂದೀಚೆಗೆ ಭಾರತೀಯ ಬ್ಯಾಂಕುಗಳ ಕಾರ್ಯನೀತಿ ಹಾಗೂ ವ್ಯವಹಾರದ ಚಿತ್ರ ಪೂರ್ಣವಾಗಿ ಬದಲಾಗಿದೆ. ಅವುಗಳೀಗ ಸರ್ಕಾರದ ಪೂರ್ಣ ಹತೋಟಿಗೆ ಒಳಪಟ್ಟಿವೆ. ಕಾಲಕ್ಕೆ ತಕ್ಕಂತೆ ಕಾರ್ಯನೀತಿಯಲ್ಲೂ ಮಾರ್ಪಾಟುಗಳಾಗಿವೆ ಶ್ರೀಸಾಮಾನ್ಯನ ಏಳಿಗೆಗೆ ಶ್ರಮಿಸಲು ಕಾರ್ಯನೀತಿಗಳನ್ನು ಬದಲಾಯಿಸಿವೆ. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಎಲ್ಲಾ ಕ್ಷೇತ್ರಗಳಿಗೆ ನೆರವು ನೀಡುವುದು ಈಗಿನ ಬ್ಯಾಂಕುಗಳ ಗುರಿಯಾಗಿದ್ದು ಆ ದಿಶೆಯಲ್ಲಿ ಅವು ಕಾರ್ಯೋನ್ಮುಖವಾಗಿವೆ. ಬೇಸಾಯ, ಕೈಗಾರಿಕೆ, ಕೈಕೌಶಲ್ಯ ವಸ್ತುಗಳ ಕೈಗಾರಿಕೆ, ರಸ್ತೆಸಾರಿಗೆ, ಚಿಲ್ಲರೆ ವ್ಯಾಪಾರ ಇತ್ಯಾದಿ ಎಲ್ಲಾ ಕ್ಷೇತ್ರಗಳಿಗೆ ಏಕರೀತಿಯ ಆದ್ಯತೆ ನೀಡುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಮುಖ್ಯವಾಗಿ ಬ್ಯಾಂಕುಗಳಿಲ್ಲದಿದ್ದ ಪ್ರದೇಶಗಳಲ್ಲಿ ದೊಡ್ಡ ಬ್ಯಾಂಕುಗಳು ತಮ್ಮ ಶಾಖೆಗಳನ್ನು ತೆರೆಯುತ್ತಿವೆ.

ಬ್ಯಾಂಕುಗಳ ವಿಸ್ತರಣೆ

೧೯೬೯ರ ಜುಲೈ ತಿಂಗಳಿಂದೀಚೆಗೆ ದೇಶದಾದ್ಯಂತ ೪,೦೪೭ ಹೊಸ ಬ್ಯಾಂಕು ಶಾಖೆಗಳನ್ನು ತೆರೆಯಲಾಗಿವೆ. ಇವುಗಳಲ್ಲಿ ೨೬೫೫ ಶಾಖೆಗಳು ಗ್ರಾಮಾಂತರ ಶಾಖೆಗಳಾಗಿವೆ. ಹೊಸ ಶಾಖೆಗಳೂ ಸೇರಿದಂತೆ ದೇಶದಲ್ಲಿ ಈಗಿರುವ ಬ್ಯಾಂಕ್ ಶಾಖೆಗಳ ಸಂಖ್ಯೆ ೧೦,೭೦೦. ಸರ್ಕಾರಿ ಕ್ಷೇತ್ರದ ಬ್ಯಾಂಕುಗಳ ಠೇವಣಿ ೧೯೬೯ರ ಜುಲೈನಲ್ಲಿ ೩,೦೮೫ ಕೋಟಿ ರೂ.ಗಳಿದ್ದುದು ೧೯೭೧ರ ಡಿಸೆಂಬರ್ ವೇಳೆಗೆ ೫,೭೪೩ ಕೋಟಿ ರೂ.ಗಳಿಗೆ ಏರಿದೆ.

ಹಿಂದೆ ಸಾಲವನ್ನು ತೆಗೆದುಕೊಳ್ಳುವ ವ್ಯಕ್ತಿ ಸಾಲ ಕೊಡುವ ವ್ಯಕ್ತಿಗೆ ಭೂಮಿಯನ್ನೋ ಅಥವಾ ಬೆಲೆಬಾಳುವ ವಸ್ತುವನ್ನೋ ಒತ್ತೆಯಾಗಿಡಬೇಕಾಗಿತ್ತು. ಸಾಲದ ಮೊಬಲಗಿನ ಮೇಲೆ ಅನೇಕ ಸಂದರ್ಭಗಳಲ್ಲಿ ಶೇಕಡಾ ೧೦೦ರಷ್ಟು ಬಡ್ಡಿಯನ್ನು ಹಾಕುತಿದ್ದರು. ಇದರಿಂದಾಗಿ ಸಣ್ಣ ಬೇಸಾಯಗಾರರು ಬಡ್ಡಿ ಮೊಬಲಗನ್ನೋ ಅಥವಾ ಪೂರ್ತಿ ಹಣವನ್ನೋ ವಾಪಾಸು ಮಾಡಲು ಸಾಧ್ಯವಿಲ್ಲದ ಕಾರಣ ತಮ್ಮ ಆಸ್ತಿಯನ್ನೇ ಕಳೆದುಕೊಂಡಿದ್ದಾರೆ. ಇಂತಹ ನಿದರ್ಶನಗಳಿಗೆ ಭಾರತದಲ್ಲಿ ಕೊರತೆಯಿಲ್ಲ. ಈ ಸಮಸ್ಯೆಯ ನಿವಾರಣೆಗಾಗಿ ಮಹಾರಾಷ್ಟ್ರ, ಗುಜರಾತು ಮತ್ತು ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಲಾಯಿತಾದರೂ ಅವು ಪೂರ್ಣ ಫಲಕಾರಿಯಾಗಲಿಲ್ಲ.

ಹೊಸ ಯೋಜನೆ

ರಾಷ್ಟ್ರೀಕೃತ ಬ್ಯಾಂಕುಗಳ ಹೊಸ ಕಾರ್ಯಯೋಜನೆಯಿಂದಾಗಿ ಈ ಸಮಸ್ಯೆ ಪರಿಹಾರವಾಗಿದೆ. ಈಗ ಉದ್ದೇಶಗಳನ್ನು ಪರಿಶೀಲಿಸಿ ಸಾಲವನ್ನು ನೀಡಲಾಗುತ್ತಿದೆ. ಉತ್ಪಾದನಾ ಪ್ರಧಾನ ಯೋಜನೆಗಳಿಗೆ ಸಾಲವನ್ನು ಸಲೀಸಾಗಿ ಮಂಜೂರು ಮಾಡಲಾಗುವುದು. ಸಾಲದ ಮೊಬಲಗಿನ ಮೇಲೆ ಶೇಕಡಾ ೯ರಿಂದ ೧೧ರಷ್ಟು ಮಾತ್ರ ಬಡ್ಡಿಯನ್ನು ಹಾಕಲಾಗುವುದು. ಸಣ್ಣ ಬೇಸಾಯಗಾರರಿಗೆ ಹಾಗೂ ಕೈಗಾರಿಕೋದ್ಯಮಿಗಳಿಗೆ ಈ ಹೊಸ ವಿಧಾನದಿಂದ ಹೆಚ್ಚಿನ ನೆರವು ದೊರೆತಂತಾಗಿದೆ ಪಶು ಸಂಗೋಪನೆ, ಹೈನಿನ ಕೈಗಾರಿಕೆ, ಕೋಳಿ ಸಾಕಣೆ, ಕುರಿ ಸಾಕಣೆ, ಮತ್ಸ್ಯೋದ್ಯಮ, ಉದ್ಯೋಗ ಪ್ರಧಾನ ಗ್ರಾಮಾಂತರ ಕೈಗಾರಿಕೆಗಳು, ಇತ್ಯಾದಿಗಳಿಗೂ ಬ್ಯಾಂಕುಗಳಿಂದ ಸಾಲ ದೊರೆಯುವುವು. ಈ ಹೊಸ ಕಾರ್ಯ ಯೋಜನೆಯಲ್ಲಿ ಈಗಾಗಲೇ ಒಂಭತ್ತು ಲಕ್ಷ ಮಂದಿ ನೆರವು ಪಡೆದಿದ್ದಾರೆ. ಇಷ್ಟೇ ಅಲ್ಲ ರಾಷ್ಟ್ರೀಕೃತ ಬ್ಯಾಂಕು ಇತರ ವಿವಿಧ ಉದ್ದೇಶಗಳಿಗೂ ಸಾಲದ ನೆರವು ನೀಡುತ್ತದೆ.

ಅಲ್ಪಾವಧಿ ಸಾಲ

ಬೇಸಾಯ ಅಭಿವೃದ್ಧಿಗೆ ಅಲ್ಪಾವಧಿ ಸಾಲವನ್ನು ಈಗಿನ ಬ್ಯಾಂಕುಗಳು ನೀಡುತ್ತಿವೆ. ಇದನ್ನು ಫಸಲು ಸಾಲವೆಂದು ಕರೆಯುವರು. ಈ ಯೋಜನೆಯಲ್ಲಿ ಬಿತ್ತನೆಬೀಜ, ರಾಸಾಯನಿಕ ಗೊಬ್ಬರ, ಕೀಟನಾಶಕ, ಬೇಸಾಯಕ್ಕೆ ಅಗತ್ಯವಾದ ಸಲಕರಣೆ ಇತ್ಯಾದಿಗಳನ್ನು ಕೊಳ್ಳಲು ಸಾಲ ದೊರೆಯುತ್ತದೆ. ಸಾಲದ ಮೊಬಲಗು ಕಡಿಮೆಯಿದ್ದರೆ ಆಧಾರ ಅನಗತ್ಯ. ಸಾಲದ ಮೊಬಲಗು ಹೆಚ್ಚಿದ್ದರೆ ಭೂಮಿಯನ್ನೋ ಅಥವಾ ಇತರ ಬೆಲೆಬಾಳುವ ವಸ್ತುವನ್ನೋ ಆಧಾರ ಮಾಡಬೇಕಾಗುವುದು. ಇಂತಹ ಸಾಲವನ್ನು ಒಂದು ವರ್ಷದಲ್ಲಿ ವಾಪಸ್ಸು ಮಾಡಬೇಕಾಗುವುದು.

ಮಧ್ಯಾವಧಿ ಸಾಲ

ಈಗ ಬ್ಯಾಂಕುಗಳು ಸಾಗುವಳಿ ಜಮೀನಿನ ಶಾಶ್ವತ ಅಭಿವೃದ್ಧಿಗಾಗಿ ನೀರಾವರಿ ಸಾಲಸೌಲಭ್ಯಗಳನ್ನು ಒದಗಿಸುವುವು. ಟ್ರಾಕ್ಟರ್‌ಗಳನ್ನು ಕೊಳ್ಳುವುದು. ಪಂಪ್‌ಸೆಟ್‌ಗಳನ್ನು ಅಳವಡಿಸುವುದು ಇತ್ಯಾದಿಗಳಿಗಾಗಿ ಮಧ್ಯಾವಧಿಯ ಸಾಲವನ್ನು ನೀಡುತ್ತಿವೆ. ಇದರ ಅವಧಿ ೩ರಿಂದ ೭ವರ್ಷಗಳಷ್ಟಿದ್ದು ಬಡ್ಡಿ ದರ ಶೇಕಡಾ ೯ರಿಂದ ೧೧ರಷ್ಟಿರುವುದು.

ಪಶುಸಂಗೋಪನೆಗೆ ಸಾಲ

ಬೇಸಾಯಗಾರರು ತಮ್ಮ ಪ್ರಧಾನ ವೃತ್ತಿಯಿಂದ ಬರುವ ಆದಾಯವನ್ನು ಹೆಚ್ಚಿಸುವ ಸಲುವಾಗಿ ಕೈಗೊಳ್ಳುವ ಪಶುಸಂಗೋಪನೆ, ಹಂದಿ ಸಾಕಣೆ, ಮತ್ಸ್ಯೋದ್ಯಮ, ಕುರಿಸಾಕಣೆ, ಕಂಬಳಿ ತಯಾರಿಕೆ ಇತ್ಯಾದಿ ಬೇಸಾಯವನ್ನು ಆಧರಿಸಿದ ವೃತ್ತಿಗಳಿಗೆ ನೆರವು ನೀಡುತ್ತವೆ. ಇಂತಹ ವಿವಿಧ ಯೋಜನೆಗಳಿಗೆ ತಗಲುವ ಒಟ್ಟು ವೆಚ್ಚದ ನಾಲ್ಕರಲ್ಲಿ ಒಂದು ಭಾಗವನ್ನು ತಾವೇ ಭರಿಸುವುದಾದರೆ ಇನ್ನುಳಿದ ಮೂರು ಭಾಗದಷ್ಟು ಹಣವನ್ನು ಬ್ಯಾಂಕುಗಳು ನೀಡುವುವು. ಗರಿಷ್ಠ ಐದು ವರ್ಷಗಳಲ್ಲಿ ಸಾಲದ ಹಣವನ್ನು ಮರುಪಾವತಿ ಮಾಡಬೇಕಾಗುವುದು. ಬಡ್ಡಿ ದರ ಶೇಕಡಾ ೯ರಿಂದ ೧೧ರಷ್ಟಿರುವುದು.

ತಾಂತ್ರಿಕ ಪದವೀಧರರಿಗೆ ಸಾಲ

ಕೆಲವು ಸರ್ಕಾರಿ ಬ್ಯಾಂಕುಗಳು ತಾಂತ್ರಿಕ ಮತ್ತು ಬೇಸಾಯ ಪದವೀಧರರಿಗೆ ನೆರವು ನೀಡುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಬೇಸಾಯ ಪ್ರಧಾನ ಕೈಗಾರಿಕೆಗಳನ್ನು ಹಾಗೂ ಸಲಕರಣೆಗಳನ್ನು ದುರಸ್ತಿ ಮಾಡುವ ಕೈಗಾರಿಕೆಗಳವರಿಗೆ ಆದ್ಯತೆ ನೀಡಲಾಗುವುದು. ಇಂಜಿನಿಯರಿಂಗ್ ಪದವೀಧರರಿಗೆ ಒಟ್ಟು ವೆಚ್ಚದಲ್ಲಿ ಶೇಕಡಾ ೭೫ರಿಂದ ೮೫ರಷ್ಟು ಹಣ ಬ್ಯಾಂಕುಗಳಿಂದ ದೊರೆಯುವುದು. ಕೊಟ್ಟ ಸಾಲದ ಭದ್ರತೆಗಾಗಿ ೧೯೭೧ರ ಏಪ್ರಿಲ್ ೧ರಿಂದ ಖಾತರಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಭಾರತದ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಈ ಯೋಜನೆಯನ್ನು ಜನಪ್ರಿಯಗೊಳಿಸುತ್ತಿದೆ.

ಬ್ಯಾಂಕುಗಳಲ್ಲಿರುವ ಹಣ ಸಾರ್ವಜನಿಕರದು. ತೆಗೆದುಕೊಂಡ ಸಾಲವನ್ನು ಸಕಾಲದಲ್ಲಿ ಪಾವತಿ ಮಾಡಿದರೆ ಬ್ಯಾಂಕುಗಳ ಸೌಲಭ್ಯ ಎಲ್ಲರಿಗೂ ಲಭ್ಯವಾಗುವುದು. ಹೆಚ್ಚಿನ ಹಣವನ್ನು ಬ್ಯಾಂಕುಗಳಲ್ಲಿ ಕೂಡಿಟ್ಟರೆ ಲಾಭವಷ್ಟೇ ಅಲ್ಲ ಅದು ಸದ್ವಿನಿಯೋಗವಾಗುವುದು.

● ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. c. 446/72 O.S. 2/71

ಥೋಮಸ್ —ಅರ್ಜಿದಾರ

Vs.

ಜೋಸೆಫ್, ಮುಂಡಕ್ಕೈಲ್ ಕುರಿಯನ್‌ರ ಮಗ, ಬೆಳ್ತಂಗಡಿ ತಾಲ್ಲೂಕು ಪತ್ಯಡ್ಕ ಗ್ರಾಮದ ನಾವಳ. — —ಎದ್ರಿ

ಇವರೀಗೆ ಕೋರ್ಟಿನ ಮೂಲಕ ಪ್ರಕಾರ ತಿಳಿಸುವುದೇನೆಂದರೆ,

ಮೇಲ್ಕಂಡ ಅಮಲ್ಜಾರಿಯಲ್ಲಿ ವಾಕ್ಲಾದ ಸ್ಥಿರಾಸ್ತಿ ಯೇಲಂ ಇಷ್ತಿಹಾರಿನ ಶರತಗಳನ್ನು ನಿರ್ಣಯಿಸುವ ಬಗ್ಗೆ ಮೇಲಿನ ಅಮಲ್ಜಾರಿಯು ತಾ. 11-7-1972ಕ್ಕೆ ಇಟ್ಟಿರುವುದರಿಂದ ಅದ್ಕೆ ಆಕ್ಷೇಪ ಇದ್ರೆ ಸದ್ರಿ ದಿನ ಮೇಲ್ಕಂಡ ಕೋರ್ಟಿನ ಮುಂದೆ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(Sd.) C. V. Shastry
Advocate for Petitioner

ಪುತ್ತೂರು, ತಾ. 19-6-72

ಸವಾಲೆದುರಿಸುವ ಭಗೀರಥರು

ದಾಕ್ಷಿಣಾತ್ಯರು ಆರಂಭಶೂರರೆಂಬ ಮಾತು ಹಳೆಯದು; ಆದರೆ, ಇದು ಇಂದಿಗೂ ಅವರಿಗೆ ಅನ್ವಯಿಸುತ್ತಲೇ ಬಂದಿದೆ. ದಕ್ಷಿಣದ ರಾಜ್ಯಗಳಲ್ಲಿ ವಿಶ್ವಮಾನ್ಯವಾದ ತಮಿಳುನಾಡು ಸರಕಾರ ಕಾವೇರಿ ನದಿ ನೀರಿನ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಶರಣುಹೋದದ್ದು, ಮತ್ತೀಗ ಮುಕದ್ದಮೆಯನ್ನು ಹಿಂದೆ ತೆಗೆದುಕೊಂಡದ್ದು ನಿನ್ನೆ ಮೊನ್ನೆಯ ವಿಚಾರ. ನಮ್ಮ ಕರ್ನಾಟಕವೂ ಇದಕ್ಕೆ ಹಿಂದೆ ಬೀಳಲು ಸಿದ್ಧವಿಲ್ಲ. ಆದುದರಿಂದಲೇ ಭೂಮಿತಿ ಮತ್ತು ನಗರಾಸ್ತಿಯ ಸಂಬಂಧದಲ್ಲಿ ತೀವ್ರ ಗೊಣಗಾಟ ಕೇಳಿಬರುತ್ತಿದೆ.

ಗರಿಷ್ಠ ಭೂಮಿತಿಯು ೧೦ರಿಂದ ೧೫ ಸ್ಟೇಂಡರ್ಡ್ ಎಕ್ರೆಗಳಷ್ಟಿರಬಹುದೆಂದು ಕೇಂದ್ರ ಭೂಸುಧಾರಣಾ ಆಯೋಗ ಶಿಫಾರಸು ಮಾಡಿದ್ದಾಗ, ರಾಜ್ಯದ ಮುಖ್ಯಮಂತ್ರಿ-ಆಳುವ ಕಾಂಗ್ರೆಸ್ ಅಧ್ಯಕ್ಷ ದೇವರಾಜ ಅರಸರು ರಾಜ್ಯಕ್ಕೆ ಹತ್ತು ಎಕರೆಯ ಮಿತಿ ಇರಬೇಕೆಂದು ವ್ಯಕ್ತಿಗತ ಅಭಿಪ್ರಾಯ ಹೊರಡಿಸಿದರು. ನಗರಾಸ್ತಿ ಮಿತಿಯು ಎರಡು ಲಕ್ಷ ರೂಪಾಯಿಗಳೆಂದು ಅವರ ನಿಲುಮೆ. ಅಂದು ಆಳುವ ಕಾಂಗ್ರೆಸ್ ಸಮಿತಿಯು ಈ ಮಿತಿಯ ಬಗ್ಗೆ ಭಿನ್ನಮತ ತಳೆಯಲಿಲ್ಲ. ಇದು ಮಂಜೂರಾಯ್ತು. ಗರಿಷ್ಠ ಮಿತಿಯನ್ನು ಕನಿಷ್ಠಗೊಳಿಸಿ ತಮ್ಮದು ಕ್ರಾಂತಿಕಾರಿ ನಿಲುಮೆಯೆಂದು ಡಂಗುರ ಸಾರಿಯೂ ಆಯ್ತು; ಪತ್ರಿಕೆಗಳಲ್ಲಿ ಆರಂಭ ಪ್ರಚಾರವೂ ಲಭ್ಯವಾಯ್ತು.

ಆದರೆ, ಈ ನಡುವೆ ಅಪಸ್ವರವೆದ್ದಿದೆ. ಪಕ್ಷದ ನೀತಿಯನ್ನು ಸರಕಾರ ಕಾರ್ಯರೂಪಕ್ಕೆ ತರಲು ಬದ್ಧವೇನೋ ನಿಜ, ಆದರೆ, ಅದರ ನಿಲುಮೆಯನ್ನು ಶಾಸಕ ಪಕ್ಷವು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳಬೇಕಾಗಿಲ್ಲ. ಪಕ್ಷ-ಶಾಸಕರ ನಡುವಣ ಅಂತರ ಬಹಳಷ್ಟಿದೆಯೆಂಬುದನ್ನು ಪ್ರಧಾನಿ ಇಂದಿರಾ ಗಾಂಧಿಯವರೇ ಶಾಸಕರ ಅಂತರಾತ್ಮವನ್ನು ಬಡಿದೆಬ್ಬಿಸಿ ತೋರಿಸಿಕೊಟ್ಟಿದ್ದಾರೆ. ಪಕ್ಷದ ನಿಲುಮೆಯು ಶಾಸಕರಿಗೆ ಅನ್ವಯವಾಗಲೇಬೇಕೆಂದಿಲ್ಲ.

ಕರ್ನಾಟಕದ ಶಾಸಕರಲ್ಲೂ ಈ ಗರಿಷ್ಠ ಮಿತಿಯ ಬಗ್ಗೆ ಅಂತರಾತ್ಮ ಜಾಗ್ರತವಾಗತೊಡಗಿದೆ. ಗರಿಷ್ಠ ಭೂಮಿತಿಯನ್ನು ೧೮ ಸ್ಟೇಂಡರ್ಡ್ ಎಕ್ರೆಗಳಿಗೆ ಮಿತಿಗೊಳಿಸುವ ಬಗ್ಗೆ ತೆರೆಯ ಮರೆಯಲ್ಲಿ ಬಹಳ ಪ್ರಯತ್ನ ನಡೆಯತೊಡಗಿದೆ. ಈಗಾಗಲೇ ಶಾಸನ ಸಭೆಗಳ ಅಧಿವೇಶನವಾರಂಭವಾಗಿರುವುದರಿಂದ, ಈ ಅಧಿವೇಶನದಲ್ಲೇ ಭೂಸುಧಾರಣೆ ತನ್ನ ವಿಶ್ವರೂಪದೊಡನೆ ಪ್ರತ್ಯಕ್ಷವಾಗಲಿರುವುದರಿಂದ, ಈ ಸಂಬಂಧದ ಚಟುವಟಿಕೆಗಳು ತೀವ್ರವಾಗುವುದು ಅತ್ಯಂತ ಸಹಜ. ಇದೇ ವೇಳೆ ನಗರಾಸ್ತಿ ಮಿತಿಯನ್ನೂ ಕೇಂದ್ರ ಸಮಿತಿ ಸೂಚಿಸಿದ ೫ ಲಕ್ಷ ರೂಪಾಯಿಗಳಿಗೇರಿಸುವ ಯೋಚನೆಗೂ ಚಾಲನೆ ಮೂಡಬಹುದು.

ಒಂದು ವೇಳೆ ಈ ತಂತ್ರ ಯಶಸ್ವಿಯಾದರೆ, ಸರಕಾರದ ಪ್ರಗತಿ ಶೀಲತೆಗೊಂದು ಏಟು ಬೀಳುತ್ತದೆ. ಆಳುವ ಕಾಂಗ್ರೆಸ್ಸು ಜನತೆಗೆ ನೀಡಿದ್ದ ಭರವಸೆಗಳು ಮತ್ತೆ ಬತ್ತಳಿಕೆ ಸೇರಿ ಮುಂದಿನ ಚುನಾವಣಾ ಘೋಷಣೆಯನ್ನು ಎದುರು ನೋಡುತ್ತವೆ. ಆದರೆ, ಮತದಾರರು ಅತ್ಯಂತ ನಿರಾಶರಾಗುತ್ತಾರೆ. ಆಳುವ ಕಾಂಗ್ರೆಸ್ಸಿನಲ್ಲೂ ಬಿಕ್ಕಟ್ಟು ಅನಿವಾರ್ಯವಾಗುತ್ತದೆ. ಈ ಸುದಿನ ನಡೆಯದಿರಲಿ; ನೋಡುತ್ತೇವೆ ಎಂದು ಹೇಳಿದ್ದನ್ನು ಶ್ರೀ ಅರಸರು ಕಾರ್ಯರೂಪಕ್ಕೆ ತರುವಲ್ಲಿ ಭಗೀರಥರಾಗಲಿ.

೦ ೦ ೦

ಭಾರತ—ಪಾಕಿಸ್ತಾನಗಳ ಶೃಂಗ ಸಭೆ ನಡೆಯಲಿದೆಯೆನ್ನುವಾಗ, ಅದರ ಮೇಲೆ ಪ್ರಭಾವ ಬೀರ ಬಹುದಾದ ಕೆಲವು ಘಟನೆಗಳು ನಡೆಯತೊಡಗಿವೆ. ಆಲಿಘರ ವಿಶ್ವವಿದ್ಯಾಲಯದ ಶಾಸನ ಪ್ರತಿರೋಧ ಚಳುವಳಿ ಜಾತೀಯ ಗಲಭೆಗಳ ರೂಪ ತಳೆದುದೊಂದು. ಕಾಶ್ಮೀರದ ಹಳೆಯ ನಾಯಕ ಶೇಕ್ ಅಬ್ದುಲ್ಲಾರ ಮೇಲೆ ಹೇರಿದ ಕಾಶ್ಮೀರ ಪ್ರವೇಶ ನಿರ್ಬಂಧವನ್ನು ಭಾರತ ಸರಕಾರ ಹಿಂದೆಗೆದು ಕೊಂಡದ್ದು ಮತ್ತೊಂದು.

ಶೇಕ್ ಅಬ್ದುಲ್ಲಾರೀಗ ಕಾಶ್ಮೀರಕ್ಕೆ ಹೋದರು. ಅವರು ಕಾಶ್ಮೀರ ಪ್ರವೇಶಕ್ಕೆ ಮೊದಲೂ ಅನಂತರವೂ ಹೊರಡಿಸಿದ ಅಭಿಪ್ರಾಯಗಳು ಅವರ ಹಳೆಯ ನಿಲುಮೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂಬುದಕ್ಕೆ ಉದಾಹರಣೆಯಾಗಿದೆ. ಅವರು ಬಾಂಗ್ಲಾ ದೇಶೋದಯದಿಂದ ಪಾಠ ಕಲಿತಿದ್ದಾರೆ. ಆದುದರಿಂದಲೇ ಅವರು ಹೇಳಿದರು —'ನಾಳೆ ಪಾಕಿಸ್ತಾನ ಅಳಿಸಿ ಹೋದರೂ ಹೋಗ ಬಹುದು. ಭಾರತ—ಪಾಕಿಸ್ತಾನಗಳು ಕಾಶ್ಮೀರದ ಬಗೆಗೆ ತಮ್ಮದೇ ನಿಲುಮೆ ಹೊಂದಿರಬಹುದು. ಕಾಶ್ಮೀರದ ಜನತೆಗೆ ಸ್ವಾಯತ್ತತೆಯನ್ನು ನೀಡುವ ಪ್ರಶ್ನೆ ಹಿಂದೆಯೂ ಇತ್ತು; ಈಗಲೂ ಇದೆ.

ಶ್ರೀ ಶೇಕರು ಇನ್ನೂ ಸ್ವತಂತ್ರ ಕಾಶ್ಮೀರದ ಕನಸು ಕಾಣುತ್ತಿದ್ದಾರೆಂಬುದು ಅವರ ಉದ್ಗಾರದಿಂದ ವ್ಯಕ್ತವಾಗುತ್ತದೆ. ಶ್ರೀಮತಿ ಗಾಂಧಿಯವರನ್ನು ಧೀರ ಮಹಿಳೆಯೆಂದೂ ಏನಾದರೂ ಮಾಡಬೇಕೆಂದು ಅಕೆಗೆ ತೋರಿದರೆ ಮಾಡಲು ಪ್ರಯತ್ನಿಸುತ್ತಾರೆಂದೂ ಅವರು ಅಭಿಪ್ರಾಯಿಸಿದ್ದಾರೆ. ಅಂದರೆ, ಶ್ರೀಮತಿ ಗಾಂಧಿಯವರು ಕಾಶ್ಮೀರದ ಜನತೆಗೆ ಸ್ವಾಯತ್ತತೆಯನ್ನು ನೀಡುವುದಕ್ಕೆ ಒಪ್ಪಿದರೆ, ಅದು ಈಡೇರುತ್ತದೆಯೆಂದವರ ದೃಢ ವಿಶ್ವಾಸ. ಆದರೆ ಇದೆಂದಾದರೂ ಸಾಧ್ಯವಿಲ್ಲ.

ಶೇಕ್ ಇನ್ನೂ ಮುಂದುವರಿದು ಅಂದಿದ್ದಾರೆ—ಕಾಶ್ಮೀರವನ್ನು ಅಲ್ಲಿನ ಜನತೆಯ ಸ್ನೇಹ ಸೌಹಾರ್ದತೆಯಿಂದ ಉಳಿಸಿಕೊಳ್ಳಬೇಕಲ್ಲದೆ ಬಲಾತ್ಕಾರದಿಂದಲ್ಲ; ನಿಜವಾದ ವಿಲೀನತೆಯೆಂದರೆ ಹೃದಯದ ವಿಲೀನತೆ—ಇದು ಸತ್ಯ. ೧೯೫೨ರಿಂದಲೂ ಕಾಶ್ಮೀರಿಗಳು ಐದು ಚುನಾವಣೆಗಳ ಮೂಲಕ ತಮಗೆ ಬೇಕಾದ ಸರಕಾರವನ್ನು ರಚಿಸಿ ಕೊಂಡಿದ್ದಾರೆ; ಭಾರತದೊಡನಾದ ವಿಲೀನತೆಯನ್ನು ತ್ರಿಕರಣ ಪೂರ್ವಕವಾಗಿ ಒಪ್ಪಿ ಅಪ್ಪಿಕೊಂಡಿದ್ದಾರೆ. ಪಾಕಿಸ್ತಾನವು ನಕ್ಷೆಯಿಂದಲೇ ಅಳಿಸಿ ಹೋಗುವ ಸಾಧ್ಯತೆಯನ್ನು ಒಪ್ಪಿಕೊಂಡವರಲ್ಲಿ ಮೊತ್ತ ಮೊದಲಿಗರಾದ ಶೇಕರು ಕಾಶ್ಮೀರಿಗಳ ಈ ಸ್ವಯಂ ನಿರ್ಧಾರವನ್ನು ಏಕೆ ಒಪ್ಪುತ್ತಿಲ್ಲ?

ಶೇಕ್ ಅಬ್ದುಲ್ಲರದ್ದು ಅಸಂಬದ್ಧ ಪ್ರಲಾಪ. ಅವರು ತಮ್ಮ ನೀತಿಯನ್ನೂ ನಿಲುಮೆಯನ್ನೂ ಪುನರ್ವಿಮರ್ಶಿಸಿ ಯೋಗ್ಯರಂತೆ ವರ್ತಿಸಿದರೆ ಅವರಿಗೂ ಅವರ ಬೆರಳೆಣಿಕೆಯ ಬೆಂಬಲಿಗರಿಗೂ ಶ್ರೇಯಸ್ಸು. ಅದು ಬಿಟ್ಟು ಅವರು ತಮ್ಮ ಹಳೆಯ ಕುರುಡು ಕಾಂಚಾಣದಿಂದಲೇ ಉಣ್ಣ ಬಲ್ಲೆನೆಂದರೆ, ಅವರದ್ದು ದಯನೀಯ ದೆಸೆಯಾಗುತ್ತದೆ.

ಪಾಕ್ ರಾಷ್ಟ್ರಪತಿ ಭುಟ್ಟೊ ಮತ್ತೆ ಕಾಶ್ಮೀರಿಗಳಿಗೆ ಸ್ವಯಂ ನಿರ್ಣಯದ ಅಧಿಕಾರದ ಬಗ್ಗೆ ಪ್ರತಿಪಾದಿಸ ಹೊರಟಿದ್ದಾರೆ. ಅವರ ಸ್ವಯಂ ನಿರ್ಣಯದ ಅಧಿಕಾರದಲ್ಲಿ ಸ್ವಾಯತ್ತತೆಯ ಪ್ರಶ್ನೆಯೇ ಬರುವುದಿಲ್ಲ. ಶೃಂಗ ಸಭೆಯಲ್ಲಿ ಅವರು ಕಾಶ್ಮೀರದ ಪ್ರಶ್ನೆಯನ್ನೂ ಎತ್ತುವ ಪ್ರಯತ್ನ ನಡೆಸಬಹುದು. ಆದರೆ, ಈ ಸಂಬಂಧದಲ್ಲಿ ಭಾರತದ ನಿಲುಮೆ ವಿಶ್ವ ವಿದಿತವಿದೆ. ಭಾರತವು ಪಾಕಿಸ್ತಾನದೊಡನೆ ಶಾಶ್ವತ ಶಾಂತಿಯನ್ನು ಬಯಸುವುದಾದರೂ ಅದಕ್ಕಾಗಿ ತನ್ನ ನಿಲುವು—ನೀತಿಯನ್ನೇ ಬಾಡ ಮೇಲು ಮಾಡಲಾರದು.

ಪಾಕ್ ಸಮರ ಕೈದಿಗಳನ್ನು ವಿಚಾರಣೆಗಾಗಿ ಬಾಂಗ್ಲಾ ದೇಶದ ಸರಕಾರಕ್ಕೆ ಭಾರತ ಸರಕಾರ ಒಪ್ಪಿಸುವುದಾದರೆ, ಭುಟ್ಟೋರಿಗೆ ದಿಕ್ಕೇ ತಪ್ಪುತ್ತದೆ. ಆಗ ಶೃಂಗ ಸಭೆ ನಡೆಯದೆ ಹೋದರೂ ಆಶ್ಚರ್ಯವಿಲ್ಲ. ಭುಟ್ಟೋರವರು ಮಿಲಿಟರಿ ವೆಚ್ಚವನ್ನು ಹೆಚ್ಚಿಸಿರುವುದು, ಅವರ ಶಾಂತಿಯ ಅಭಿಲಾಷೆಗೆ ಸವಾಲಾಗುತ್ತದೆ. ಭುಟ್ಟೋರವರು ಮಾತುಕತೆಗಳ ಹೆಸರಲ್ಲಿ ಸಮರ ಸಿದ್ಧತೆಗೆ ಕಾಲಾವಕಾಶ ಪಡೆಯುವ ಇರಾದೆ ಹೊಂದಿರುವುದಾದರೆ, ಅವರದ್ದು ಬರಿದೆ ತಿಳಿಗೇಡಿತನವಾಗುತ್ತದೆ.

ಅಗಲಿದಳು ನನ್ನವಳು-?

—೦೦೦೦—

ಅಗಲಿದಳು ನನ್ನವಳು ತಾ ಽಽ
ಮುತ್ತೈದೆಯಾಗಿ
ತಾ ಽಽ ಹೋದಳು; ಮಾಡಿದಳು
ನನ್ನ ಬೈರಾಗಿ !

ಪ್ರಥಮ ಪ್ರಸವದಲಿ ತಾ ಽಽ
ಹೆತ್ತಳು ಹೆಣ್ಣು
ಹಿಂದೆ ಬಿದ್ದಳು ಆಗಲೇ
ಕೂಡಿದಳು ಮಣ್ಣು !

ನಿರ್ಮಲೆಯಾಗಿ ಬಾಳಿದಳು ಆ
ನನ್ನ ನರ್ಮದೆ
ಚೊಕ್ಕ ಚಿನ್ನ ಶಿವ ಬಿಡಲಿಲ್ಲ
ಅವ ಒಯ್ದ ತನ್ನೆಡೆ !

ಕುಂಕುಮದ ಹಣೆಯಿಂದ
ಶಿವ ಸನ್ನಿಧಿಗೆ ಹೋದವಳು
ಅರ್ಧಾಂಗಿ ತಾನಾಗಿ; ಬಾಳಿಗೆ [ಬೆಳಕಾಗಿ
ಅಗಲಿದಳು ನನ್ನವಳು !

ಅಯ್ಯೋ ಇಂತಾಯ್ತಲ್ಲ ನನ್ನ
ಈ ಹಾಳು ಬಾಳು
ಏನು ಮಾಡಲಿ? ಯಾರಿಗ್ಹೇಳಲಿ
ಈ ನನ್ನ ಗೋಳು !

—ಬಾಲಚಂದ್ರ ಎಸ್. ಬಡಿಗೇರ.

● ●

ಅನ್ಯಾಯದ ಪರಿಮಾರ್ಜನೆಗೆ ಯುದ್ಧವು ಸರಿಯಾದ ಉಪಾಯವಲ್ಲ. ಹಾನಿಯನ್ನು ತಪ್ಪಿಸುವ ಬದಲು ಯುದ್ಧವು ಹಾನಿಯನ್ನು ಶತಗುಣಿತಗೊಳಿಸುವುದು.

—ಥಾಮಸ್ ಜೆಫರಸನ್

ಒಂದು ಜನಾಂಗದ ಸಾಹಿತ್ಯವು ಅದರ ರಾಷ್ಟ್ರೀಯತೆಯ ತಿಳಿವಿನಿಂದ ಸ್ಫುರಿಸಬೇಕು, ಆತ್ಮ ಗೌರವವಿಲ್ಲದೆ ರಾಷ್ಟ್ರೀಯ ಜ್ಞಾನ ಸಾಧ್ಯವಿಲ್ಲ; ಆತ್ಮ ಗೌರವ ಸ್ವಾತಂತ್ರ್ಯದಿಂದಲೇ ಸಾಧ್ಯ.

—ಮಿಸೆಸ್ ಸ್ಟೋವ್

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಸಮಗ್ರ ಭೂಶಾಸನದ ಬಗ್ಗೆ

ಶಾಸಕರಿಗೊಂದು ಕಿವಿಮಾತು

ಭೂಸಾಗುವಳಿದಾರನಿಗೇ ಭೂಸ್ವಾಮಿತ್ವ, ಸ್ವಂತ ಸ್ವಾಧೀನತೆ,ಮತ್ತು ಜಮೀನು ಮಾಲಕತ್ವಕ್ಕೆ ಮಿತಿ, ನ್ಯಾಯ ಗೇಣಿಯ ನಿರ್ಣಯ ಮತ್ತಿತರ ಸುಧಾರಣೆಗಳಿಗೆ ದೇಶದ್ರೋಹನೆ ಭೂಹಿಡುವಳಿದಾರರೂ ಹೊಂದಿಕೊಳ್ಳಲು ಸಿದ್ಧರಾಗಿದ್ದಾರೆ. ಆದರೆ, ಹಿಡುವಳಿದಾರರನ್ನು ಅನಗತ್ಯ ದಂಡನೆಗೆ ಗುರಿಪಡಿಸದೆ ಇಂತಹ ಸುಧಾರಣೆಗಳನ್ನು ಜ್ಯಾರಿಗೊಳಿಸುವುದು ಸಾಧ್ಯ. ಹಿಡುವಳಿದಾರರು ವಿಧೇಯ ಪ್ರಜೆಗಳು; ಅವರ ಉದ್ಯೋಗಕ್ಕೆ ಬೇರಾವ ಕಸಬು ಯಾ ವೃತ್ತಿಯಿಂದ ಕಡಮೆ ಗೌರವವಿಲ್ಲ. ಸರಕಾರದ ಪಕ್ಷಭೇದದ ದಂಡನೆಗೆ ಗುರಿಯಾಗಲು ಈ ವರ್ಗದಾರರಲ್ಲಿ ಬಹು ಸಂಖ್ಯಾಕರು ಯಾವುದೇ ಅಕೃತ್ಯ ಮಾಡಿರುವುದಿಲ್ಲ. ಸಮಾಜದ ಎಲ್ಲ ವರ್ಗದಲ್ಲಿಯೂ ಇರಬಹುದಾದ ಕೆಲವು ನೀತಿ ಬಾಹಿರತನವು ಈ ವರ್ಗದಲ್ಲೂ ಕೆಲವೆಡೆ ಗೋಚರವಾಗಿರ ಬಹುದು. ಅಂದ ಮಾತ್ರಕ್ಕೆ ಭೂಮಾಲಿಕರೆಲ್ಲರೂ ಭಂಡರೆಂದು ಗ್ರಹಿಸುವುದು ಸರಿಯಾದುದಲ್ಲ. ಆದುದರಿಂದ ಈ ದೃಷ್ಟಿಯಿಂದ ಕೆಲವು ಸೂಚನೆಗಳನ್ನು ಇಲ್ಲಿ ಕೊಡಲಾಗಿದೆ.

೧. ನ್ಯಾಯ ಗೇಣಿ

ಗೇಣಿದಾರನು ಭೂಮಿಯ ಉತ್ಪತ್ತಿಯಿಂದಲೇ ಗೇಣಿಕೊಡುತ್ತಾನೆ. ಆದುದರಿಂದಲೇ ಗೇಣಿಯು ಅನಾದಿ ಕಾಲದಿಂದಲೂ ಭೂ ಉತ್ಪತ್ತಿಯ ಒಂದು ಭಾಗ. ಒಟ್ಟು ಉತ್ಪತ್ತಿಯನ್ನು ಭೂ ಸ್ವಾಮಿ ಮತ್ತು ಗೇಣಿದಾರರ ನಡುವೆ ಹೇಗೆ ಹಂಚಬೇಕೆಂಬುದೇ ನ್ಯಾಯ ಗೇಣಿಯ ಪ್ರಶ್ನೆ. ರಾಜ್ಯ ಪುನರ್ಘಟನೆಗೆ ಮೊದಲು ನಮ್ಮ ಜಿಲ್ಲೆಯಲ್ಲಿ ಮದ್ರಾಸು ನ್ಯಾಯಗೇಣಿ ಸಂದಾಯ ಕಾನೂನಿನಂತೆ ಉತ್ಪತ್ತಿಯ ಸೇ. ೪೦ರಷ್ಟು ನ್ಯಾಯಗೇಣಿಯಾಗಿತ್ತು. ಈ ಪ್ರಮಾಣವು ಮೈಸೂರು ಭೂಸುಧಾರಣಾ ಶಾಸನದಂತೆ ಸೇ. ೨೦ಕ್ಕೆ ಇಳಿಯಿತು.

ಸದ್ಯ ಉತ್ಪತ್ತಿಯ ನಿರ್ಣಯ ಕಷ್ಟಕರವೆಂಬ ಕಾರಣವನ್ನು ಮುಂದೆ ಮಾಡಿ, ತೀರ್ವೆಯ ಆಧಾರದಿಂದ ನ್ಯಾಯಗೇಣಿ ನಿರ್ಣಯಿಸುವ ಪ್ರಯತ್ನ ನಡೆಯುತ್ತಿದೆ. ನಮ್ಮ ಜಿಲ್ಲೆಯಲ್ಲಿ ತೀರ್ವೆಗೂ ಉತ್ಪತ್ತಿಗೂ ಯಾವ ಸಂಬಂಧವೂ ಇಲ್ಲ. ಆದುದರಿಂದ ಈ ಪ್ರಯತ್ನ ಅರ್ಥಶೂನ್ಯವಾದದ್ದು. ಇಲ್ಲಿ ೧೯೭೨ರಲ್ಲಿ ಮದ್ರಾಸು ಸರಕಾರವು ತಾ. ೨೫-೮-೧೯೭೨ರ ಸಂಖ್ಯೆ ೭೩೭೭ರ ಅಧಿಸೂಚನೆಯಲ್ಲಿ ಎಲ್ಲ ವರ್ಗದ ಭೂಮಿಯ ಉತ್ಪತ್ತಿಯನ್ನು ನಿರ್ಣಯ ಮಾಡಿದೆ. ಈಗಿನ ಉತ್ಪತ್ತಿಯು ನಾನಾಕಾರಣಗಳಿಂದ ಹೆಚ್ಚಿದೆ. ಆದರೂ ಆ ಅಧಿಸೂಚನೆಯ ಆಧಾರದಲ್ಲೇ ಒಟ್ಟು ಉತ್ಪತ್ತಿಯನ್ನು ನಿರ್ಣಯ ಮಾಡಬೇಕು. ಈ ಜಿಲ್ಲೆಯಲ್ಲಿ ೧೯೦೩ರಲ್ಲಿ ಕಂದಾಯ ನಿರ್ಣಯವಾದಾಗ, ಅಕ್ಕಿಯ ಬೆಲೆಯು ಮುಡಿಗೆ ರೂ. ೩ಕ್ಕಿಂತಲೂ ಕಡಿಮೆಯಿತ್ತು. ಇತರ ಕೃಷಿ ಉತ್ಪತ್ತಿಗಳ ಧಾರಣೆಯೂ ಕಡಿಮೆಯಿತ್ತು. ಈಗ ದೊರೆತಿರುವ ವದಂತಿಗಳಂತೆ ನ್ಯಾಯಗೇಣಿಯನ್ನು ಭೂಕಂದಾಯದ ೧೦ ಪಾಲಷ್ಟು ಎಂದು ತೀರ್ಮಾನ ಮಾಡಿದರೆ, ಇದು ಭೂಮಾಲಿಕರೆಲ್ಲರಿಗೂ ಚೇತರಿಸಿಕೊಳ್ಳಲಾಗದ ಏಟಾಗುವುದು. ಭೂ ಹಿಡುವಳಿದಾರರಲ್ಲಿ ಸೇ. ೮೦ರಷ್ಟು ಸಣ್ಣ ಹಿಡುವಳಿದಾರರು. ಇವರೆಲ್ಲರೂ ತಮ್ಮ ಒಕ್ಕಲುಗಳಿಂದಲೂ ಬಡವರಾಗಿ ದಿನ ದೂಡುತಿದ್ದಾರೆ. ಹಾಗಿರುವಾಗ ನ್ಯಾಯಗೇಣಿಯನ್ನು ಇನ್ನೂ ಕಡಿಮೆ ಮಾಡುವುದರಿಂದ ಅಥವಾ ಕಂದಾಯದ ಮೊತ್ತದ ಆಧಾರದಿಂದ ನಿರ್ಧರಿಸುವುದರಿಂದ ಬಹು ಸಂಖ್ಯಾಕ ಹಿಡುವಳಿದಾರರು ಬೀದಿ ಪಾಲಾಗಬೇಕಾಗುತ್ತದೆ.

೨. ಭೂಮಿಗೆ ಪರಿಹಾರ

ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಹಿಡುವಳಿದಾರರಿಗೆ ಭೂವರಮಾನವೇ ಜೀವನಾಧಾರ. ಭೂಮಿಯನ್ನು ಸರಕಾರ ವಶಪಡಿಸಿಕೊಳ್ಳುವಾಗ ಅವರನ್ನು ಜೀವನಾಧಾರದಿಂದಲೇ ಬೇರ್ಪಡಿಸಿದಂತಾಗುತ್ತದೆ. ಆದುದರಿಂದ ಅವರು ತಮ್ಮ ಜೀವನವನ್ನು ಇತರ ಸಮರ್ಪಕ ಕಸುಬಿನಿಂದ ನಿರ್ವಹಿಸುವ ಬಗ್ಗೆ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಬೇಕು. ಇದನ್ನು ಏಕ ಗಂಟಿನಲ್ಲಿ ಕೊಡುವುದೂ ಸಾಮಾಜಿಕ ನ್ಯಾಯ. ಪರಮಾವಧಿ ಮಿತಿಯೊಳಗಿರುವ ಭೂಮಿಯನ್ನು ಯಾವುದೇ ಸಂದರ್ಭದಲ್ಲಿ ಸರಕಾರ ವಶಪಡಿಸಿಕೊಂಡಾಗ ಅದಕ್ಕೆ ಮಾರುಕಟ್ಟೆ ಧಾರಣೆಯ ಪರಿಹಾರ ನೀಡುವುದು ಅತ್ಯಗತ್ಯವಾಗಿದೆ.

೩. ಪರಮಾವಧಿ ಮಿತಿ

ಇದು ವರೆಗೆ ಜ್ಯಾರಿಯಲ್ಲಿರುವ ಶಾಸನದಂತೆ ಐದು ಸದಸ್ಯರ ಕುಟುಂಬವೊಂದು ೨೭ ಸ್ಟ್ಯಾಂಡರ್ಡ್ ಎಕ್ರೆಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಬಹುದು. ಮುಂದೆ ಭೂಮಿ ಹೊಂದುವ ಕುಟುಂಬ ೧೮ ಎಕ್ರೆ ಹೊಂದಿರಬಹುದು. ಈ ನಿರ್ಬಂಧದಿಂದ ಉತ್ತಮ ನಿರ್ವಹಣೆಯ ವ್ಯವಸಾಯ ಭೂಮಿ, ಫಲದ ತೋಪು, ಪ್ರತ್ಯೇಕ ಹುಲ್ಲುಗಾವಲು, ಹಸುರು ಎಲೆ ಗೊಬ್ಬರಕ್ಕೆ ಉಪಯೋಗಿಸುವ ಪುಂಜ ಮೊದಲಾದುವು ವಿನಾಯಿತಿ ಹೊಂದಿವೆ. ಈಗ ಪರಮಾವಧಿ ಮಿತಿಯನ್ನು ಕಡಿಮೆಗೊಳಿಸಿ, ವಿನಾಯಿತಿಯನ್ನು ಹಿಂದೆಗೆದುಕೊಳ್ಳುವ ಪ್ರಯತ್ನ ನಡೆಯುತ್ತಿದೆ.

೧೮ ಸ್ಟ್ಯಾಂಡರ್ಡ್ ಎಕ್ರೆಗಳನ್ನು ಸಾಗುವಳಿ ಮಾಡುವಾಗ ವಾರ್ಷಿಕ ರೂ. ೬,೦೦೦ದಿಂದ ೧೩,೦೦೦ದಷ್ಟು ನಿವ್ವಳ ಉತ್ಪತ್ತಿಯಾಗಬಹುದು. ಕುಟುಂಬದ ಮೇಲಿನ ಆದಾಯವನ್ನು ಕಡಿಮೆ ಮಾಡಬಹುದೇ ಎಂಬ ಪ್ರಶ್ನೆಗಿಂತ ಗರಿಷ್ಟಮಿತಿಯನ್ನು ಕಡಿಮೆಗೊಳಿಸುವ ಪ್ರಶ್ನೆ ಬೇರೆಯಲ್ಲ. ಈ ಉತ್ಪತ್ತಿಯಿಂದ ಗೌರವಾನ್ವಿತವಾಗಿ ಬದುಕುವುದು ಸಾಧ್ಯವೆ? ಸ್ವತಂತ್ರ ಉದ್ಯೋಗಸ್ಥರೂ ಕೆಲವು ಸರಕಾರಿ ನೌಕರರೂ ವಾರ್ಷಿಕ ರೂ. ೫೦ ಸಾವಿರಕ್ಕೂ ಮಿಕ್ಕಿದ ಆದಾಯ ಪಡೆಯುತ್ತಿರುವಾಗ, ಭೂಹಿಡುವಳಿಯ ಮಿತಿ ಇಳಿಸುವುದೆಂದರೆ, ರೈತರ ಜೀವನವನ್ನು ದುರ್ಭರಗೊಳಿಸುವುದೆಂದೇ ಅರ್ಥ. ಆದುದರಿಂದ ೧೮ ಸ್ಟ್ಯಾಂಡರ್ಡ್ ಎಕ್ರೆಗಳಿಗೇ ಗರಿಷ್ಠ ಮಿತಿ ಉಳಿಸಿಕೊಳ್ಳುವುದು ಅಪೇಕ್ಷಣೀಯವಾಗಿದೆ. ಈಗ ಜ್ಯಾರಿಯಲ್ಲಿರುವ ವಿನಾಯತಿಗಳಲ್ಲಿ ಹುಲ್ಲುಗಾವಲು ಮತ್ತು ಎಲೆಗೊಬ್ಬರ ತಯಾರಿಕೆಯ ಪುಂಜಕ್ಕೂ ವಿನಾಯಿತಿ ದೊರೆಯಲೇ ಬೇಕು.

೪. ಭೂಮಿ ಮರಳಿ ಪಡೆಯುವುದು

ಭೂಮಿಯನ್ನು ತಿರುಗಿ ಪಡೆಯುವ ಸವಲತ್ತು ಮುಂದುವರಿಯಬೇಕು. ಬರಿಯ ಸಣ್ಣ ಹಿಡುವಳಿದಾರರಿಗೆ ಪ್ರಯೋಜನವಾಗುವಂತೆ ಇಲ್ಲಿ ಮಾನವೀಯ ದೃಷ್ಟಿ ಅಗತ್ಯ.

೫. ಕುಟುಂಬ

ಕುಟುಂಬ ವ್ಯಕ್ತಿಯ ಖಾಸಗಿ ಸಾಮಾಜಿಕ ಕಾನೂನಿನ ಅವಿಭಕ್ತ ಕುಟುಂಬದ ವಿವರಣೆಗೆ ಅನುಗುಣವಾಗಿರಬೇಕು; ಕಲ್ಪಿತ ವಿವರಣೆಯ ಕುಟುಂಬವಾಗಿರ ಬಾರದು.

೬. ಒಡೆತನ ನಿಷೇಧ.

ಅನೇಕರು ತಮ್ಮ ಹುದ್ದೆ ಕಸುಬುಗಳಲ್ಲಿ ದುಡಿದು ಬೇಕಷ್ಟು ಗಳಿಸಲು ಅಶಕ್ತರು. ಅಂಥವರಿಗೆ ಪೂರ್ವಜರಿಂದಲೋ, ತಮ್ಮ ಗಳಿಕೆಯ ಬಲದಿಂದಲೋ ಆಸ್ತಿಯಿರಬಹುದು. ಮಧ್ಯಮ ವರ್ಗದವರಲ್ಲಿ ಹೆಚ್ಚಿನವರು ಈ ಬಗೆಯವರು. ಇವಕ್ಕೆ ಕಾನೂನಿನಲ್ಲಿ ಅವಕಾಶ ಕೊಡದೆ ಹೋದರೆ, ಅವರು ಕಷ್ಟಕ್ಕೆ ಗುರಿಯಾಗುತ್ತಾರೆ. ಕೆಲವು ಕಾಳಸಂತೆಖೋರರು ಮತ್ತು ತೆರಿಗೆಗಳ್ಳರು ತಮ್ಮ ಗುಪ್ತ ಉದ್ದೇಶಕ್ಕಾಗಿ ಭೂಮಿಯಲ್ಲಿ ಹಣ ತೊಡಗಿಸುವರೆಂಬುದರಿಂದ ಎಲ್ಲರ ಜೀವನವನ್ನೂ ಕಣ್ಣೀರ ಕತೆಮಾಡುವುದು ಅನುಚಿತ. ಈ ಪರಿಸ್ಥಿತಿಯನ್ನು ಇತರ ವಿಧಾನಗಳಿಂದ ಎದುರಿಸಬೇಕು. ಉದ್ಯೋಗ-ಕಸುಬುಗಳು ತಾತ್ಕಾಲಿಕ— ಅನಿಶ್ಚಿತ. ಭೂಮಿಯೊಂದೇ ಸ್ಥಿರ; ನಿಶ್ಚಿತ. ಅಶಕ್ತತೆ, ಕಾಯಿಲೆ, ಮುಪ್ಪು, ನಿವೃತ್ತಿ ಈ ಮೊದಲಾದ ಅವಧಿಯಲ್ಲಿ ಭೂಮಿಯೇ ಊರುಗೋಲು.

ಸಮಗ್ರ ಭೂಸುಧಾರಣೆಯನ್ನು ಜ್ಯಾರಿಗೆ ತರುವಾಗ ಈ ಸತ್ಯಸಂಗತಿಗಳನ್ನು ಎಂದಿಗೂ ಅಲಕ್ಷ್ಯಿಸಬಾರದು.

(ಋಣ: 'ಕೃಷಿಕರ ಸಂಘಟನೆ'ಯಲ್ಲಿ ಶ್ರೀ ಎನ್. ಮೋಹನದಾಸ ಅಡ್ಯಂತಾಯರ ಲೇಖನ.)

●●

ಡಾ| ಚಾರುಬಾಲರ ಅನುಭವ—

'ಸೂರ್ಯನು ಹುಟ್ಟುವ ದೇಶ'

"ನಾನು ಜಪಾನನ್ನು ನೋಡಬೇಕೆಂದು ಬಹಳ ಕಾಲದಿಂದ ಆಸೆಪಡುತ್ತಿದ್ದೆನು. ಉತ್ತರ ಜಪಾನಿನ ಫಾರ್ಮಸ್ಯೂಟಿಕಲ್ ಇನ್‌ಸ್ಟಿಟ್ಯೂಟ್ ಸೆಂಡೈಯಲ್ಲಿರುವ ಪ್ರೊ. ಟಿ. ಕಾಮೆಟಾನಿ ನನಗೆ ಡಾಕ್ಟರೇಟ್ ನಂತರದ ವ್ಯಾಸಂಗಕ್ಕೆ ಟೊಹಕು ವಿಶ್ವ ವಿದ್ಯಾನಿಲಯ ವಿಭಾಗದಿಂದ ಫೆಲೋಶಿಪ್‌ನ್ನು ಕೊಟ್ಟು, ನನಗೆ ಜಪಾನಿನಲ್ಲಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಟ್ಟರು. ನನಗೆ ಜಪಾನಿನ ಭಾಷೆಯಾಗಲಿ, ಜಪಾನಿನ ಜನಜೀವನವಾಗಲಿ ತಿಳಿದಿರಲಿಲ್ಲ.

ಎಪ್ರಿಲ್ 1970ರಲ್ಲಿ ನಾನು ಜಪಾನಿನ ಸೆಂಡೈ ವಿಮಾನ ನಿಲ್ದಾಣದಲ್ಲಿ ಇಳಿದಾಗ ಪ್ರೊ| ಕಾಮೆಟಾನಿಯವರೇ ನನ್ನನ್ನು ಸ್ವಾಗತಿಸಿದರು. ಪ್ರೊ. ಕಾಮೆಟಾನಿ ಮತ್ತು ಅವರ ಶ್ರೀಮತಿಯವರ ತಮ್ಮ ಕುಟುಂಬದವಳಂತೆಯೇ ನನಗೂ ಅವರೊಡನೆ ಇರಲು ಅವಕಾಶ ಕೊಟ್ಟು ನನ್ನನ್ನು ಅವರ ಅತಿಥಿಯನ್ನಾಗಿ ನೋಡಿಕೊಂಡರು.

ಜಪಾನ್ ಅನೇಕ ದ್ವೀಪಗಳಿಂದ ಕೂಡಿದ ರಾಜ್ಯ. ಅವೆಲ್ಲಿ ನಾಲ್ಕು ದ್ವೀಪಗಳು ಬಹಳ ಮುಖ್ಯವಾದುವು. ಜಪಾನಿನಲ್ಲಿರುವ 250 ಬೆಟ್ಟಗಳಲ್ಲಿ ಫ್ಯೂಜಿ 3776 ಮೀಟರುಗಳ ಎತ್ತರವಾದ ಪರ್ವತ. ಅನೇಕ ಜ್ವಾಲಾಮುಖಿಗಳೂ, ಬಿಸಿನೀರಿನ ಬುಗ್ಗೆಗಳೂ ಆ ದ್ವೀಪದಲ್ಲಿವೆ. ಅನೇಕ ಸರೋವರಗಳಿಂದಲೂ, ನದಿಗಳಿಂದಲೂ ಕೂಡಿ ಫಲಪುಷ್ಪಭರಿತವಾದ ನಗರಗಳಿಂದ ವರ್ಷದ ಎಲ್ಲಾ ಕಾಲಗಳಲ್ಲಿಯೂ ನೋಡಲು ರಮಣೀಯವಾಗಿರುತ್ತದೆ.

ಜಪಾನಿನ ಎಲ್ಲಾ ಮನೆಗಳಲ್ಲಿಯೂ ಜೊಂಡಿನ ಚಾಪೆಗಳಿರುತ್ತವೆ. ತಳ್ಳುವ ಬಾಗಿಲುಗಳಿಂದಲೂ ದೊಡ್ಡ ದೊಡ್ಡ ಕಿಟಕಿಗಳಿಂದಲೂ ಕೂಡಿ ಮನೆಯ ಹೊರಭಾಗದಲ್ಲಿಯೇ ಪಾದರಕ್ಷೆಗಳನ್ನು ಇಡಲು ಸ್ಥಾನ, ಕೂಲವೂ ಇದ್ದು ಅತಿಥಿಗಳು ಉಪಯೋಗಿಸಲು ಗೃಹಪಾದರಕ್ಷೆಯೂ ಅಲ್ಲಿಯೇ ಇರುತ್ತವೆ. ಮನೆಯು ತೋಟದೊಳಗೆ ಇದ್ದ ಹಾಗೆ ಇರುತ್ತದೆ.

ಜಪಾನಿನಲ್ಲಿ ಹೊಸ ವರ್ಷದ ದಿನ ವಿಶೇಷ ಉತ್ಸಾಹವಾಗಿರುತ್ತದೆ. ಮನೆಯ ಬಾಗಿಲಿನಲ್ಲಿ ದೇವದಾರು ವೃಕ್ಷವನ್ನು ಹಾಕಿ ಪ್ರತಿ ಮರದ ಹಿಂದೆಯೂ ಮೂರು ಬಿದಿರಿನ ಬಂಬುಗಳನ್ನು ಹೊಂದಿಸಿರುತ್ತಾರೆ. ಗೇಟಿನ ಮೇಲೆ ಟ್ಯಾಬೂ ಎಂಬ ಹೂವನ್ನು ಕಟ್ಟಿ ಅದಕ್ಕೆ ಹುಲ್ಲಿನ ಕಟ್ಟುಗಳು,ಬಿಳಿಯ ಕಾಗದ ಚೂರುಗಳು, ಫರ್ನ್ ಎಲೆಗಳು, ಕಿತ್ತಳೆ ಹಣ್ಣು ಮತ್ತು ಒಂದು ಸಮುದ್ರದ ಏಡಿಯನ್ನೂ ಸಹ ತೋರಣದಂತೆ ಕಟ್ಟುತ್ತಾರೆ. ದೇವದಾರು ವೃಕ್ಷವು ಉತ್ಸಾಹ ಜೀವನಕ್ಕೂ, ಬಂಬುಗಳು ಕರ್ತವ್ಯನಿಷ್ಠತೆ ಮತ್ತು ಪ್ರಾಮಾಣಿಕತೆಗೂ, ಫರ್ನ್‌ಗಳು ಅದೃಷ್ಟಕ್ಕೂ, ಬಗ್ಗಿದ ಕೊಂಡಿಯ ಏಡಿಯು ಪೂರ್ಣ ಆಯುಷ್ಯಕ್ಕೂ ಚಿಹ್ನೆಗಳಾಗಿವೆ ಎಂದು ಅವರ ನಂಬಿಕೆ. ಕುಟುಂಬಗಳು ಹೊಸ ವರ್ಷದ ದಿನ ದೇವಾಲಯಗಳಿಗೆ ಹೋಗುತ್ತಾರೆ. ಮೂರನೆಯ ದಿನದಿಂದ ಸಾಮಾನ್ಯ ಜೀವನ ಕಾರ್ಯ ಅಥವಾ ಉದ್ಯೋಗಗಳಲ್ಲಿ ತೊಡಗುತ್ತಾರೆ.

ಟೊಹಕು ವಿಶ್ವ ವಿದ್ಯಾನಿಲಯವು ಜಪಾನಿನಲ್ಲಿರುವ ಏಳು ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿದೆ.ಇದು ಮರಗಳ ಮತ್ತು ತೋಟದ ಮಧ್ಯೆ ಇದ್ದು ಅದನ್ನು 'ಸಿಲ್ವ್ಯಾನ್ ನಗರ' ಎನ್ನುತ್ತಾರೆ. ಬೆಟ್ಟದ ಮೇಲ್ಭಾಗದಲ್ಲಿ 'ಆದೊಬೊಜೊ' ಎಂಬ ಅರಮನೆಯಿದೆ.

ಪ್ರೊ| ಕಾಮೆಟಾನಿಯವರ ಪ್ರಯೋಗಶಾಲೆಗೆ ಸೇರಿದ ವಿದೇಶೀ ವಿದ್ಯಾರ್ಥಿಗಳಲ್ಲಿ ನಾನೇ ಮೊದಲನೆಯವಳು. ಆ ಪ್ರಯೋಗಶಾಲೆಯು ವಿಶೇಷವಾದ ಸಾಧನಗಳಿಗೆ ಹೆಸರಾದುದು. ಆ ವಿಶ್ವವಿದ್ಯಾನಿಲಯದ ಕಾರ್ಯಗಳು ಪ್ರಾತಃಕಾಲ 8 ಘಂಟೆಗೆ ಪ್ರಾರಂಭವಾಗಿ ರಾತ್ರಿ 8 ಘಂಟೆಯ ವರೆಗೂ

(ಒಂಭತ್ತನೇ ಪುಟ ನೋಡಿರಿ)

ಮಳೆ ಬಂತು - ಮದುವೆ ಮುಗಿಯಿತು

ಮಳೆ ಬಂತು, ಮದುವೆಯ ಕಾಲ ಮುಗಿಯಿತು. ಎಲ್ಲದಕ್ಕೂ ಒಂದು ಕಾಲವೆಂದಿದೆ. ಇಲ್ಲದಿದ್ದಲ್ಲಿ ಜನಜೀವನ ವ್ಯವಸ್ಥೆ ಅಸ್ತವ್ಯಸ್ತೆಯಾಗಿ ಹೋಗಬಹುದು. ಮದುವೆ ಆಗುವದು ಇದ್ಯಾರಿಗೋ. ಮಾಡುವವರು ಯಾರೋ, ಮಾಡಿಸಿಕೊಳ್ಳುವವರು ಯಾರೋ. ಆದರೆ ಕಷ್ಟಪಡುವವರು ಅನೇಕರು. ಹೆಣ್ಣು ಹೆತ್ತವರಿಗೆ ಹಣ ಕೂಡಿಸುವ ಕಷ್ಟ. ಸಾವಿರ ಐದ್ವತ್ತು ಸಹಸ್ರ ರೂಪಾಯಿ ವರದಕ್ಷಿಣೆಯೆಂದು ಕೇಳಲಾಗುತ್ತದೆ. ಇದನ್ನು ಕೂಡಿಸುವ ಕಷ್ಟ ಹೆಣ್ಣು ಹೆತ್ತವರಿಗಾದರೆ, ಅದನ್ನು ಎಣಿಸುವ ಕಷ್ಟ ಗಂಡು ಹೆತ್ತವರಿಗೆ. ಚೆಕ್ಕಿನ ರೂಪದಲ್ಲಿಯಾಗಿದ್ದರೆ ಕಷ್ಟ ಗಂಡಿಗೆ. ಚೆಕ್ಕು ಕೊಟ್ಟಲ್ಲಿ ಬೇಂಕಿನಲ್ಲಿ ಹಣವಿದೆಯೋ ಇಲ್ಲವೋ, ಚಕ್ಕರ್ ಗತಿ. ಇವೆಲ್ಲಾ ಕೊಡಲು ಸಾಧ್ಯ ಉಳ್ಳವರಿಗೆ,ತೆಗೆದುಕೊಳ್ಳುವ ಸಾಮರ್ಥ್ಯ ಇರುವವರಿಗೆ, ಅದಿಲ್ಲದಿರುವವರು ದೂರದ ಆಕಾಶದತ್ತ ನೋಡುತ್ತಿರಬೇಕು. ಉಳಿದವರಿಗೆ ಇಂದು ಯಾರ ಮದುವೆಗೆ ಹೋಗುವದೆನ್ನುವ ಸಮಸ್ಯೆ. ಹೇಗೆ ಹೋಗುವದೆನ್ನುವ ಪ್ರಶ್ನೆ; ಇದು ಅವರಿಗೆ ಮಾತ್ರವಲ್ಲ, ಉಳಿದವರಿಗೂ. ಬಸ್ಸುಗಳನ್ನು ಮದುವೆಗಾಗಿ ಕಾದಿರಿಸಿರುವ ಕಾರಣ ಸಾಧಾರಣ ಓಡಾಟ ಇಲ್ಲದಿರುವದರಿಂದ ಪ್ರಯಾಣಿಕರು ಪಟ್ಟ ಪರಿಶ್ರಮಕ್ಕೆ ಪರಿಮಿತಿ ಇಲ್ಲ.

ಇದೆಲ್ಲಾ ಏತಕ್ಕೆ? ಮದುವೆಗಾಗಿ. ಮದುವೆಯೆಂದರೆ ಕಾನೂನುಬದ್ಧ ವ್ಯಭಿಚಾರವೆಂದಿರುವರು ಸಂಪ್ರದಾಯ ವಿರೋಧಿ ಸುಭದ್ರಾ ಜೋಷಿಯವರು. ಇವರು ಇಂದಿರಾಜಿಯವರ ಇಷ್ಟಮಿತ್ರೆ, ಲೋಕಸಭಾ ಸದಸ್ಯೆ, ಕಮ್ಯೂನಿಸ್ಟ್ ಮುಖಂಡರ ಹೆಂಡತಿ....ಮದುವೆ ಒಂದು ಸಂಪ್ರದಾಯವಿದೆ. ಸಂಪ್ರದಾಯ ವಿರೋಧಿ ತಾನೆಂದು ಸುಭದ್ರಾ ಜೋಷಿಯವರು ಸಾರುತ್ತಿದ್ದಾರೆ. ಅಲ್ಲಲ್ಲಿ (ಹೆಚ್ಚಾಗಿ ಇಂದಿರಾಜಿಯವರ ಮೂಗಿನಡಿ ಡಿಲ್ಲಿಯಲ್ಲಿ) ಸಭೆಗಳ ನ್ನೇರ್ಪಡಿಸಿ ಹಿಂದುಗಳನ್ನು ಅವರು ಅವಹೇಳನೆ ಮಾಡುತ್ತಿರುವರು. ಅವೆಲ್ಲಾ ಏನೇ ಇರಲಿ. ಅವರ ದೃಷ್ಟಿಯಲ್ಲಿ ವ್ಯಭಿಚಾರಕ್ಕೂ ಮದುವೆಗೂ ಅಷ್ಟೇನೂ ವ್ಯತ್ಯಾಸ ಇರುವದಿಲ್ಲ. ಎಲ್ಲರ ಅನುಭವ ಒಂದೇ ರೀತಿಯಾಗಿರಲು ಸಾಧ್ಯವೇ ಇರುವದಿಲ್ಲ. ಅವರ ಅನುಭವದ ಈ ವ್ಯಭಿಚಾರಕ್ಕಾಗಿ ಇಷ್ಟೆಲ್ಲಾ ತರಾತುರಿ, ಏನೋ-ಏನೋ ಎಲ್ಲಾ ನಡೆಯುತ್ತಿ ದೆ! ಹೆಣ್ಣು ಹೆತ್ತವರು ಗಂಡು ಹೆತ್ತವರೆದುರಿಂದು ನಡೆದುಕೊಳ್ಳುವ ರೀತಿ ಕರುಣಾಜನಕವಿದೆ.

ಆ ರೀತಿ ಅವರಾಡಲು ಕಾರಣವಿದೆ. ಅವರೊಲವು ಕಮ್ಯೂನಿಸಮಿನತ್ತ. ಭಾರತದಲ್ಲಿ ಕಮ್ಯೂನಿಸಮಿಗೆ ಅಡ್ಡವಾಗಿರುವದು ಇಲ್ಲಿಯ ಹಿಂದೂ ಧರ್ಮ. ಅದನ್ನು ಹೀಗಳೆದು, ಧರ್ಮಾಭಿಮಾನವನ್ನು ನಾಶ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಅವರಿಗೆ ರಷ್ಯಾದಿಂದ ಪ್ರೋತ್ಸಾಹ ಸಿಗುತ್ತಿದೆ. ರಷ್ಯಾದಲ್ಲಿ ಕಮ್ಯೂನಿಸಂ ಹಬ್ಬಿರುತ್ತದೆ, ಇಲ್ಲೂ ಹಬ್ಬಿಸಬೇಕೆನ್ನುವದು ಅವರ ಅಭಿಲಾಷೆ. ಕಮ್ಯೂನಿಸಮಿನ ಕಣ್ಣಿಗೆ ಮತ ಅಫೀಮು ಇದೆ. ಅದನ್ನು ನಾಶ ಮಾಡಲು ಅವರು ಪ್ರಯತ್ನಿಸುತ್ತಿದ್ದಾರೆ. ಮದುವೆ ಮತ ಸಂಪ್ರದಾಯಕ್ಕೆ ಸಂಬಂಧಪಟ್ಟಿದೆ. ಮದುವೆ ಒಂದು ರೀತಿಯ ವ್ಯಭಿಚಾರ ಅನ್ನುವದನ್ನು ಕಂಡುಕೊಂಡಿದ್ದಾರೆ ಸುಭದ್ರಾ ಜೋಷಿ. ಮದುವೆ ಇಲ್ಲದೇನೇ ಗಂಡು—ಹೆಣ್ಣು ಒಂದಾಗಿ ಜೀವಿಸಿದಲ್ಲಿ ಅದಕ್ಕೆ ಯಾವ ಹೆಸರಿಡುವರು ಜೋಷಿಯವರು? ಸ್ವೀಡನ್ ಬಹಳ ಮುಂದುವರಿದ ಹಾಗೂ ಆರ್ಥಿಕ ಸುಭದ್ರತೆಯುಳ್ಳ ರಾಷ್ಟ್ರವಿದೆ. ಅಲ್ಲಿಂದು ಮದುವೆಯ ಸಂಪ್ರದಾಯಕ್ಕೆ ಶರಣಾಗದೆ ಒಲಿದವರು ಒಂದಾಗಿ ಬಾಳುತ್ತಿದ್ದಾರೆ. ಐದು ಶಿಶುಗಳಲ್ಲಿ ಒಂದು ಇಂತಹವರಿಂದಲೇ ಜನ್ಮ ಪಡೆಯುತ್ತಿದೆ ಅಲ್ಲಿಂದು ಪ್ರಣಯಿಗಳಿಗೆ ಮದುವೆಯ ಪರದಾಟವಿಲ್ಲ. ಮದುವೆಯ ಕಾಲವೆಂದು ಇತರರಿಗೂ ಕಷ್ಟವಿಲ್ಲ. ಸುಭದ್ರಾ ಜೋಷಿಯವರ ಗಮನ ಇತ್ತ ಅದ್ಯಾಕೆ ಹರಿದಿಲ್ಲವೋ? ಅವರು ಲೋಕಸಭಾ ಸದಸ್ಯೆ, ಅಲ್ಲದೆ. ಇಂದಿರಾಜಿಯವರ ಬಲಗೈಯ ಹಾಗಿದ್ದಾರೆ. ಇಲ್ಲೇಕೆ ಅದನ್ನು ಕಡ್ಡಾಯವಾಗುವಂತೆ ಕಾನೂನು ತರಬಾರದು? ಅದರೊಟ್ಟಿಗೆ ಇನ್ನೊಂದು ವಿಷಯವನ್ನು ಸೇರಿಸಿಕೊಳ್ಳಬಹುದು. ಕೆಲವು ಕ್ರಿಸ್ತೀಯ ದೇಶಗಳಲ್ಲಿ ಒಂದು ವರ್ಷದ ಮಟ್ಟಿಗೆ ಒಲಿದ ನರ–ನಾರಿಯರು ಒಟ್ಟಾಗಿರ ಬಹುದು; ಮದುವೆಯ ಗೋಜಿಗೆ ಹೋಗಬೇಕಾಗಿಲ್ಲ; ಆದರೆ ಮಕ್ಕಳಾಗದಂತೆ ಜಾಗ್ರತೆಯಿಂದಿರಬೇಕು. ಇದಕ್ಕೆ ಮತೀಯ ಅಂಗೀಕಾರವಿದೆ. ಒಂದು ವರ್ಷದ ನಂತರ ಅವರಿಬ್ಬರು ಒಪ್ಪಿಕೊಂಡಲ್ಲಿ ಮದುವೆ ಆಗಬಹುದು. ಇಲ್ಲವಾದಲ್ಲಿ ಬೇರೆ ಹೋಗಬಹುದು.

ಜೋಷಿಯವರು ಇವೆರಡನ್ನು ಒಟ್ಟಿಗೆ ಸೇರಿಸಿ ಮದುವೆ ಅನ್ನುವದಕ್ಕೆ ತಡೆಹಾಕಿ ಒಲಿದ ನರ–ನಾರಿಯರು ಕೂಡಿ ಬಾಳಬೇಕು, ಐದು ವರ್ಷಗಳ ತನಕ ಮಕ್ಕಳಾಗದಂತೆ ನೋಡಿಕೊಳ್ಳಬೇಕು, ನಂತರ ಅರಿತುಕೊಂಡು ಅಕ್ಷತೆಗೊಂಡೆನ್ನುವದನ್ನು ಕಾನೂನನ್ನಾಗಿ ತರಲು ಪ್ರಯತ್ನಿಸಿ ಸುಧಾರಣೆ ಮಾಡಬಹುದು.

ಭಾರತದ ಮಣ್ಣಿನಲ್ಲಿ ಇದು ನಡೆದೀತೇ? ಮೆಚ್ಚಿದ ಮಹನೀಯರೂ ಮಹಿಳೆಯರೂ ಮದುವೆ ಆಗುವದು ಕಂಡುಬರುತ್ತಿದೆಯಾದರೂ ಹೆಚ್ಚಿನ ಮದುವೆಯಲ್ಲಿ ಹಿರಿಯರ ಪಾತ್ರವೇ ಹಿರಿದಾಗಿರುತ್ತದೆ ಅವರು ಆಗಬಹುದೆನ್ನಬೇಕು. ಅದೆಷ್ಟು 'ಪ್ರಗತಿ' ನಡೆದಿದೆಯಾದರೂ ಹೆಣ್ಣು (ಉದ್ಯೋಗದಲ್ಲಿದ್ದರೂ) ಹಿರಿಯರ ಜವಾಬ್ದಾರಿಯ ಹಿಡಿತದಿಂದ ಹೊರಗೆ ಬಂದಿರುವದಿಲ್ಲ. ಅವಳಿಗೆ ಅನುರೂಪನಾದ ವರನನ್ನು ಅರಿಸುವ ಹೊಣೆ ಹೆಣ್ಣಿನ ಹೆತ್ತವರ ಮೇಲೆಯೇ ಇದೆ.

ಸದ್ಯಕ್ಕಂತೂ ಮಳೆ ಬಂತು, ಮದುವೆಯ ಕಾಲ ಮುಗಿಯಿತು. ಇನ್ನು ಅವರವರ ಕೆಲಸ ಅವರವರಿಗೆ. ಸುಭದ್ರಾ ಜೋಷಿಯವರು ಕಾನೂನಿಗಾಗಿ ಪರಿಶ್ರಮಿಸಲಿ. ಹೆಣ್ಣು ಹೆತ್ತವರು ಗಂಡಿನ ಬೇಟೆಗಾಗಿ ನೋಡುತ್ತಿರಲಿ. ಗಂಡು ಹೆತ್ತವರು ಹಣ ಮೂಟೆ ಹುಡುಕುತ್ತಿರಲಿ – ಮುಂದಿನ ಮದುವೆಯ ಕಾಲದ ವರೆಗೆ.

— ಶ್ರೀ ಶಿವಶಂಕರ

●●

ಬ್ಲಾಕ್ ಕಾಂಗ್ರೆಸಿನ ಸನ್ಮಾನ ಸಭೆ

ತಾ. 17ರಂದು ಉಡುಪಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ರಾಜ್ಯಸಭಾ ಸದಸ್ಯ ಶ್ರೀ ಟಿ. ಎ. ಪೈ, ಲೋಕಸಭಾ ಸದಸ್ಯ ಶ್ರೀ ರಂಗನಾಥ ಶೆಣೈ ಹಾಗೂ ಉಡುಪಿ ಎಂ. ಎಲ್. ಎ. ಶ್ರೀಮತಿ ಮನೋರಮಾ ಮಧ್ವರಾಜ್ ಅವರನ್ನು ಸನ್ಮಾನಿಸುವ ಸಮಾರಂಭವು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಕಮಲಾಕ್ಷ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಶ್ರೀ ಪೈಯವರು ಮಾತಾಡಿ ದ. ಕ ಜಿಲ್ಲೆ ವಿದ್ಯಾ ಕ್ಷೇತ್ರದಲ್ಲಿ ಮತ್ತು ಬ್ಯಾಂಕಿಂಗ್ ಉದ್ದಿಮೆಯಲ್ಲಿ ಪ್ರಗತಿ ಸಾಧಿಸಿದ್ದು ಕೈಗಾರಿಕಾ ರಂಗದಲ್ಲಿ ಪ್ರಗತಿ ಹೊಂದಿಲ್ಲವೆಂದೂ ಇದಕ್ಕೆ ಸಂಘಟಿತ ಪ್ರಯತ್ನ ಅಗತ್ಯವೆಂದೂ, ಈ ಕಾರ್ಯ ಕಾಂಗ್ರೆಸ್ಸಿನಿಂದ ಸಾಧ್ಯವಾಗಬಹುದೆಂದರು. ಇಂದು ನಮ್ಮಲ್ಲಿ ರಾಜಕೀಯ ನಾಯಕತ್ವಕ್ಕೆ ಹೆಚ್ಚು ಬೆಲೆ ಕೊಡುತ್ತಿರುವುದನ್ನವರು ಖಂಡಿಸಿದರು ನಮಗೆ ದೊರೆತ ಅಧಿಕಾರ ಇತರ ಜನರಿಗೆ ಉಪಕಾರ ಮಾಡಲು ದೊರೆತ ಅವಕಾಶ ಎಂದು ತಿಳಿಯಬೇಕೆಂದರು. 'ಗರೀಬಿ ಹಟಾವೋ'ವನ್ನು ಸ್ವದೇಶಿ ಸ್ಲೋಗನ್ ಎಂದು ಕರೆದು ಜನರು ಮೊದಲು ವಿದ್ಯಾವಂತರೂ, ಆರೋಗ್ಯವಂತರೂ ಆಗಬೇಕಾಗಿದೆಯೆಂದೂ ಅನಂತರ ಆರ್ಥಿಕ ಸುಧಾರಣೆ ಸುಲಭ ಸಾಧ್ಯವೆಂದೂ ಹೇಳಿದರು.

ಲೋಕಸಭಾ ಸದಸ್ಯ ಶ್ರೀ ಪಿ. ರಂಗನಾಥ ಶೆಣೈಯವರು ಮಾತಾಡುತ್ತ ಸ್ವಕ್ಷೇತ್ರದ ಅಭಿವೃದ್ಧಿಗಾಗಿ ಶ್ರೀ ಪೈಯವರ ಜತೆಗೂಡಿ ದುಡಿಯುವುದಾಗಿ ತಿಳಿಸಿದರು.

ಶ್ರೀಮತಿ ಮಧ್ವರಾಜರು ತಮ್ಮ ಭಾಷಣದಲ್ಲಿ ಮಲ್ಪೆ ಮೀನುಗಾರಿಕೆ ಬಂದರಿನ ಪ್ರಗತಿ ಬಗ್ಗೆ ಪ್ರಯತ್ನಿಸುವಂತೆ ಎಂ. ಪಿ. ಗಳನ್ನು ಒತ್ತಾಯಿಸಿದರು. ಭೂಸುಧಾರಣೆ ಮುಂತಾದ ಜನಹಿತ ಕಾರ್ಯಗಳನ್ನು ಜಾರಿಗೆ ತರುವಲ್ಲಿ ನಾವು ಯಾವುದೇ ಸ್ವಾರ್ಥದ ಹಿತವನ್ನು ಗಮನಿಸದೆ ಯಾವ ತ್ಯಾಗಕ್ಕೂ ಮುಂದೆ ಬರುವುದಾಗಿ ಘೋಷಿಸಿದರು.

ಶ್ರೀಗಳಾದ ಮಧ್ವರಾಜ್, ಶಾಸನ ಸಭಾ ಸದಸ್ಯ ಗೋಪಾಲ ಕೃಷ್ಣ ಕೊಡ್ಗಿ, ಅಚ್ಚುತರು ಸಿ, ಪ್ರೋ. ತ್ತಮ ಕಿಣಿ ಮೊದಲಾದವರು ಅಭಿನಂದನಾ ಭಾಷಣ ಮಾಡಿದರು.

ಅಧ್ಯಕ್ಷ ಶ್ರೀ ಕಮಲಾಕ್ಷ ಶೆಣೈಯವರು ಮಾತನಾಡಿ ಕಳೆದಿಪ್ಪತ್ತೈದು ವರ್ಷಗಳಲ್ಲಿ ಈ ಕ್ಷೇತ್ರಕ್ಕಾದ ಅನ್ಯಾಯವನ್ನು ವಿವರಿಸಿ ಈಗ ನಮ್ಮವರೇ ಆದ ಪ್ರತಿನಿಧಿಗಳನ್ನು ಕಳುಹಿಸಿದ್ದೇವೆಂದೂ ಜಿಲ್ಲೆಯ ಪ್ರಗತಿಗಾಗಿ ನಾವು ಈಗ ಹೆಚ್ಚು ದುಡಿಯಬೇಕೆಂದೂ ಹೇಳಿದರು.

ಆರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಕನ್ವೀನರ್ ಶ್ರೀ ಯೋಗೀಶ್ವರ ಹೊಳ್ಳರು ಸ್ವಾಗತಿಸಿದ್ದರು. ಅಂತ್ಯದಲ್ಲಿ ಶ್ರೀ ಮಟ್ಟಿ ರಾಮಚಂದ್ರ ರಾವ್ ಅವರು ಧನ್ಯವಾದವಿತ್ತರು.

ಉಜಿರೆ ಕಾಲೇಜಿಗೆ ಡಾ| ಕೊಠಾರಿ ಸಂದರ್ಶನ

ತಾ. 10ರಂದು ಯು. ಜಿ. ಸಿ. ಅಧ್ಯಕ್ಷ ಡಾ| ಡಿ. ಎಸ್. ಕೊಠಾರಿಯವರು ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿಗೆ ಸಂದರ್ಶನವಿತ್ತಾಗ ಪ್ರಿನ್ಸಿಪಾಲ್ ಶ್ರೀ ಎಸ್. ಪ್ರಭಾಕರ್ ಮತ್ತು ಆಡಳಿತ ಮಂಡಳಿಯ ಪರವಾಗಿ ಶ್ರೀ ವೀರೇಂದ್ರ ಹೆಗ್ಗಡೆ, ಶ್ರೀ ಬಿ. ಎಸ್. ಭಟ್, ಶ್ರೀ ಆರ್. ಎಸ್ ಭಿಡೆ, ಕೆ. ಚಿದಾನಂದ ಮೊದಲಾದವರು ಸ್ವಾಗತಿಸಿದರು.

ಡಾ| ಕೊಠಾರಿಯವರು ಕಾಲೇಜಿನ ವಿವಿಧ ಭಾಗಗಳಿಗೆ ಸಂದರ್ಶನವಿತ್ತು ತೃಪ್ತಿಗೊಂಡು ಶ್ರೀ ಹೆಗ್ಗಡೆಯವರು ಉತ್ತಮವಾದ ಕಾಲೇಜೊಂದನ್ನು ಕಟ್ಟಿಸಿ ಆದರ್ಶ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವುದಕ್ಕಾಗಿ ಅವರನ್ನು ಅಭಿನಂದಿಸಿದರು

ಅದೇ ದಿನ ಸಂಜೆ ಕರ್ನಾಟಕ ವಿ. ವಿ. ನಿಲಯದ ಉಪಕುಲಪತಿ ಡಾ| ಆಡ್ಕೆ ಮತ್ತು ಕರ್ನಾಟಕ ಬೇಂಕಿನ ಅಧ್ಯಕ್ಷ ಶ್ರೀ ಸೂರ್ಯನಾರಾಯಣ ಅಡಿಗರು ಕಾಲೇಜಿಗೆ ಭೇಟಿ ನೀಡಿ ಕಾಲೇಜು ಅತ್ಯಲ್ಪ ಅವಧಿಯಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿದರು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

READ & ADVERTISE IN NAVAYUGA Weekly

ಕವಲುದಾರಿ— ಕೆಂಪುದೀಪ

ಬಾಯುಪಚಾರದ ಬಂಡವಳ

ಭಾರತ ಸುಂದರಿಯಾಗಿ ಆಯ್ಕೆಗೊಂಡ ರೂಪಾ ಸತ್ಯನ್ ಇದೆಲ್ಲ ಕೇವಲ ಅದೃಷ್ಟವೆಂದು ತನ್ನ ಪ್ರತಿಕ್ರಿಯ ವ್ಯಕ್ತಪಡಿಸಿದರಂತೆ.

— ಪರೀಕ್ಷೆಯಲ್ಲಿ ರ‍್ಯಾಂಕು ಗಿಟ್ಟಿಸಿದವರೂ ಈ ಪ್ರತಿಕ್ರಿಯೆಯನ್ನು ಪುನರುಚ್ಚರಿಸಿದರಂತೆ.

— ತಾವು ಬಯಸಿದ ಶಾಲೆ-ಕಾಲೇಜುಗಳಲ್ಲಿ ಪ್ರವೇಶ ಪಡೆದ ಶಿಕ್ಷಣಾರ್ಥಿಗಳೂ ಇದೇ ಬಗೆಯ ಅಭಿಪ್ರಾಯ ಹೊರಡಿಸಿದರಂತೆ.

— ನಾಲ್ಕು ವರ್ಷಗಳಿಂದ ಉದ್ಯೋಗದ ಬೇಟೆಯಾಡುತಿದ್ದ ಸ್ನಾತಕನೊಬ್ಬನಿಗೆ ಬಿ. ಎಡ್. ತರಬೇತಿಗಾದರೂ ಸೀಟು ದೊರೆತಾಗ, ಅವನೂ ಅದೃಷ್ಟವೆಂದುದ್ಗರಿಸಿದನಂತೆ.

ಪಂಡಿತ ನೆಹರುರವರಿಗೆ ಅದೃಷ್ಟದಲ್ಲಿ ನಂಬಿಕೆಯೇನೋ ಇತ್ತು. ಆದರೆ, ಅವರ ಅಭಿಪ್ರಾಯದಂತೆ ಈ ಅದೃಷ್ಟವನ್ನು ಕಾಣದ ಕೈ ಬರೆಯುವುದಿಲ್ಲ. ನಂನಮ್ಮ ಅದೃಷ್ಟವನ್ನು ನಂನಮ್ಮ ಕೈಗಳಿಂದ ನಾವು ನಾವೇ ಬರೆಯುತ್ತೇವೆ.

— ಪಂ. ನೆಹರೂರವರಂತೆ ಮೇಲೆ ಹೇಳಿದ ನಾಲ್ಕಾರು ವ್ಯಕ್ತಿವರ್ಗದವರೂ ನಮ್ಮ ಅದೃಷ್ಟವನ್ನು ನಾವೇ ಬರೆದಿದ್ದೇವೆಂದು ಹೇಳಲು ಸಿದ್ಧರಿದ್ದಾರೆಯೆ?

— ಇಲ್ಲ, ಖಂಡಿತಕ್ಕೂ ಇಲ್ಲ. ಒಂದೊಮ್ಮೆ ಅವರು ಹಾಗಂದರೆ, ಅದು ಹಸಿಸುಳ್ಳು. ನಮ್ಮ ಜನತೆ ಸುಳ್ಳು ಹೇಳುವುದರಲ್ಲಿ, ಅಪ್ರಾಮಾಣಿಕತೆಯಲ್ಲಿ ನಿಸ್ಸೀಮರೆನ್ನೋಣವೆ?

ನಾನು ಉತ್ತಮವಾಗೇ ಮಾಡಿದ್ದೆ. ಆದರೂ ಪರೀಕ್ಷೆ ಪಾಸಾಗಲಿಲ್ಲ.

ನನ್ನ ಇಂಟರ್‌ವ್ಯೂ ಒಳ್ಳೇದಾಗಿತ್ತು. ನೌಕರಿ ಮಾತ್ರ ಸಿಗಲಿಲ್ಲ.

ನನ್ನನ್ನು ವಿಶ್ವ ಸುಂದರಿಗಿಂತಲೂ ಹೆಚ್ಚಾಗಿ ಅಲಂಕರಿಸಿದ್ದೆ ಆದರೂ... ಸುಂದರಿಯಾಗಲಿಲ್ಲ.

ಈ ಮೊದಲಾದುವುಗಳಲ್ಲಿ ಪ್ರಾಮಾಣಿಕತೆಯಡಗಿಲ್ಲವೆ?'

ಪ್ರಾಮಾಣಿಕತೆ ಅವರಲ್ಲೂ ಇದೆ; ಇದರಲ್ಲೂ ಇದೆ. ಆದರೆ, ನಮ್ಮ ದೇಶದಲ್ಲಿ (ವಿಶ್ವದಲ್ಲೂ) ಪ್ರಾಮಾಣಿಕತೆ ನಡೆಯದ ನಾಣ್ಯವಾಗಿದೆ.

ನೋಡುವ ದೃಷ್ಟಿ ನಾನಾಕಾರಣಗಳಿಂದ ವಕ್ರವಾಗುತ್ತದೆಂಬುದು ಪ್ರಾಮಾಣಿಕ ಅಭಿಪ್ರಾಯ.

ಇದಕ್ಕನುಸರಿಸಿಯೇ ಅದೃಷ್ಟ ಬರೆಯಲ್ಪಡುತ್ತದೆ.

ಮೆಚ್ಚಿದವನಿಗೆ ಮಸಣವೂ ಮುದ್ದು ಎಂಬ ಮಾತು ಸುಮ್ಮನೆ ಹುಟ್ಟಿಕೊಂಡಿಲ್ಲ.

ಪೂರ್ವಗ್ರಹ ಪೀಡಿತರಾದ, ಅಪ್ರಾಮಾಣಿಕರಾದ ಅರಸಿಗರಾದ ಪರೀಕ್ಷಕರು ಅದೆಷ್ಟು ಉತ್ತೀರ್ಣಾರ್ಥಿಗಳ ಗೋಣು ಕೊಯ್ದಿಲ್ಲ?

ಪರೀಕ್ಷೆಯಲ್ಲಿ ಎಲ್ಲರೂ ಪಾಸಾಗಲಾಗದು. ಸ್ಪರ್ಧೆಯಲ್ಲಿ ಎಲ್ಲರೂ ಗೆಲ್ಲಲಾಗದು.

ಯಾರಾದರೇನಂತೆ?— ಈ ನೀತಿಯಿಂದಾಗಿ ಭವಿಷ್ಯ ಲೇಖನ ಕಾರ್ಯವನ್ನು ಅದೃಷ್ಟ ಮಾಡುತ್ತದೆ.

'ಆದರೆ, ಇದು ಮಾನವತೆಯ ಕಾರ್ಯವಲ್ಲ.

ಮಾನವ ಚೇತನ ಶಕ್ತಿ. ಆತನಲ್ಲಿ ಸೌಂದರ್ಯ ದೃಷ್ಟಿಯಿದೆ. ಅದು ವ್ಯಕ್ತಿ ವ್ಯಕ್ತಿಗೆ ಬದಲಾಗುತ್ತದೆ. ನಿಮಿಷ ನಿಮಿಷಕ್ಕೂ ಪರಿವರ್ತನೆಯಾಗುತ್ತದೆ.

ಇದೇ ಅದೃಷ್ಟದ ಕೈವಾಡ.

'ಬಹುಮತ' ವೆನ್ನುವುದು ಅದೃಷ್ಟದ ಮತ್ತೊಂದು ಸ್ವರೂಪ.

ರೂಪಾ ಸತ್ಯನ್ ತನ್ನ ಅದೃಷ್ಟ ಖುಲಾಯಿಸಿದ ಬಗೆಗೆ ಸಂತೋಷಗೊಂಡರು.

— ಇದನ್ನು ಅದೃಷ್ಟವೆಂದು ಕರೆದವರು ನಿಜಕ್ಕೂ ಇದು ಅದೃಷ್ಟವೆಂದು ತಿಳಿದಿದ್ದಾರೆಯೆ?

— ಅಥವಾ ತನ್ನ ಸೌಂದರ್ಯದ ಬಗೆಗೆ ದುರಭಿಮಾನ ಪಟ್ಟಿದ್ದಾರೆಯೆ?

— ಇದು ಎಲ್ಲರಿಗೂ ಅನ್ವಯಿಸುವ ಪ್ರಶ್ನೆ.

— ಬಾಯುಪಚಾರದ ಮಾತು ಪರೀಕ್ಷಕ ಪರೀಕ್ಷಾರ್ಥಿಗಳಿಗೆ ಹೊಸತಲ್ಲ.

— ಸತ್ಯ ಹೇಳುವುದಾದರೆ, ಈ ಯೆರಡೂ ವರ್ಗದ ಮೂಲ ಭಂಡವಾಳವೇ ಬರಿಯ ಬಾಯುಪಚಾರ.

— ಇದರಿಂದಲೇ ಕಾಗದದ ಹುಲಿಗಳು ಗರ್ಜಿಸುತ್ತವೆ; ದನಗಳನ್ನು ಹೆದರಿಸುವ ನಾಟಕ ನಡೆಯುತ್ತದೆ.

●●

ಸೂರ್ಯನು ಹುಟ್ಟುವ ದೇಶ

(ಏಳನೇ ಪುಟದಿಂದ)

ಪ್ರಯೋಗಶಾಲೆಗಳಲ್ಲಿ ಕಾರ್ಯವು ನಡೆಯುತ್ತಿರುತ್ತವೆ. ಜಪಾನಿನ ವಿದ್ಯಾರ್ಥಿಗಳು ವಿಜ್ಞಾನ ಪುಸ್ತಕಗಳನ್ನು ಇಂಗ್ಲಿಷ್ ಮತ್ತು ಜಪಾನಿಗೆ ತರ್ಜುಮೆ ಮಾಡಿದ ಪುಸ್ತಕಗಳಿಂದ ಓದುತ್ತಾರೆ. ಜಪಾನ್ ಭಾಷೆಯಲ್ಲಿಯೇ ಪಾಠ ಪ್ರವಚನಗಳು ನಡೆಯುತ್ತವೆ ತಮಗೆ ಬೇಕಾದಾಗ ವಿದೇಶೀ ಭಾಷೆಗಳ ಭಾಷಾಂತರವನ್ನು ಧ್ವನಿಮುದ್ರಣಗಳ ಮೂಲಕ ತಿಳಿದುಕೊಳ್ಳುತ್ತಾರೆ.

ಜಪಾನ್‌ನ ಈ ವಿಶ್ವವಿದ್ಯಾನಿಲಯದ ಸ್ನಾತಕ ವಿದ್ಯಾಭ್ಯಾಸ ಕಾಲವು ನಾಲ್ಕು ವರ್ಷಗಳು. ಕೊನೆಯ ವರ್ಷದಲ್ಲಿ ಮುಖ್ಯವಾದ ಯಾವುದಾದರೂ ಪಠ್ಯದಲ್ಲಿ ಪ್ರಾವೀಣ್ಯತೆ ಪಡೆಯುತ್ತಾರೆ. ಮಾಸ್ಟರ್ ಪದವಿಗೆ ಎರಡು ವರ್ಷಕಾಲ ಓದಬೇಕು. ಡಾಕ್ಟರೇಟ್ ಪದವಿ ಪಡೆಯಲು ಐದು ವರ್ಷದ ವಿದ್ಯಾಭ್ಯಾಸ ಮಾಡಬೇಕು. ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರವಚನ, ಬರವಣಿಗೆ ಪರೀಕ್ಷೆಗಳನ್ನು ಆಗಾಗ ಮಾಡಿ ಅವರ ವ್ಯಾಸಂಗ ಮುಗಿದ ಮೇಲೆ ಅವರ ಭಾಷಣಗಳನ್ನು ಕೇಳಿ ಪರೀಕ್ಷಕ ಮಂಡಳಿಯು ಪದವಿಯನ್ನು ಕೊಡಲು ಶಿಫಾರಾಸು ಮಾಡುತ್ತದೆ.

ನಾನು ಭಾರತದಲ್ಲಿ ಸಂಚಾರ ಮಾಡಿದ್ದಕ್ಕಿಂತಲೂ ಹೆಚ್ಚಾಗಿ ಜಪಾನಿನಲ್ಲಿ ಪ್ರವಾಸ ಮಾಡಿದೆ. ಜಪಾನಿನ ಪ್ರಜೆಗಳು ಇಂದಿರಾ ಗಾಂಧಿ, ಪಂಡಿತ್ ರವಿಶಂಕರ್, ಹಿಮಾಲಯ ಪರ್ವತಗಳು, ತಾಜಮಹಲ್ ಮತ್ತು ಯೋಗ ಇವುಗಳಲ್ಲಿ ಹೆಚ್ಚಾಗಿ ಆಸಕ್ತಿ ವಹಿಸುತ್ತಾರೆ."

●●

ಉಡುಪಿ ಸರಕಾರಿ ಜ್ಯೂನಿಯರ್ ಕಾಲೇಜು ಉದ್ಘಾಟನೆ

ಉಡುಪಿಯ ಸರಕಾರಿ ಜ್ಯೂನಿಯರ್ ಕಾಲೇಜನ್ನು ತಾ 19ರಂದು ದ ಕ ಜಿಲ್ಲಾ ವಿದ್ಯಾಧಿಕಾರಿಣಿ ಶ್ರೀಮತಿ ರುಕ್ಮಿಣಿಯಮ್ಮನವರ ಅಧ್ಯಕ್ಷತೆಯಲ್ಲಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಉದ್ಘಾಟಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಆಚಾರ್ಯರು ಆರಂಭದಲ್ಲಿ ಸ್ವಾಗತಿಸಿದರು.

ಶ್ರೀ ಮಧ್ವರಾಜರು ಉದ್ಘಾಟಿಸುತ್ತಾ ಇಲ್ಲಿಯ ಕಟ್ಟಡಗಳ ನಾದುರಸ್ತಿಯನ್ನು ಪ್ರಸ್ತಾಪಿಸಿ ಅದರ ಜೀರ್ಣೋದ್ಧಾರವಾಗಬೇಕಾದುದು ಅಗತ್ಯ ಎಂದರು.

ಸಂಸತ್ ಸದಸ್ಯ ಶ್ರೀ ಪಿ. ರಂಗನಾಥ ಶೆಣೈಯವರು ಜ್ಯೂನಿಯರ್ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ಕಟ್ಟುನಿಟ್ಟಿನಿಂದ ಹೊರತುಪಡಿಸಿ, ಸರಕಾರವೇ ಅವುಗಳನ್ನು ಬೆಳೆಸುವ ಜವಾಬ್ದಾರಿಯನ್ನು ಹೊರುವುದು ಒಳ್ಳೆಯದೆಂದು ಸೂಚಿಸಿದರು.

ನಗರಸಭಾಪತಿ ಡಾ। ವಿ ಎಸ್. ಆಚಾರ್ಯರು ನೂತನ ಕಾಲೇಜಿಗೆ ಶುಭ ಹಾರೈಸಿದರು.

ಶಾಸಕಿ ಶ್ರೀಮತಿ ಮಧ್ವರಾಜರು ಮಾತಾಡಿ ಸ್ಥಳೀಯ ಉದ್ದಿಮೆದಾರರು ಇಲ್ಲಿ ಕೈಗಾರಿಕೆಗಳನ್ನು ತೊಡಗಲು ಮುಂದೆ ಬಂದು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ರುಕ್ಮಿಣಿಯಮ್ಮನವರು ತಮ್ಮ ಭಾಷಣದಲ್ಲಿ ಅಧ್ಯಾಪಕರು ಪ್ರಾಮಾಣಿಕರಾಗಿ ದುಡಿದರೆ ಶಿಕ್ಷಣಮಟ್ಟವನ್ನು ಮೇಲೆತ್ತುವುದು ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ವಿದ್ಯಾರ್ಥಿಗಳು ತಾವು ಕಲಿಯುವಾಗ ಜ್ಞಾನಾರ್ಜನೆಯ ಒಂದೇ ಗುರಿಯನ್ನಿಟ್ಟುಕೊಂಡು ಮುಂದೆ ಬರಬೇಕೆಂದು ಕರೆಯಿತ್ತರು.

ಶ್ರೀ ನಾರಾಯಣ ಆಚಾರ್ಯರು ಕೊನೆಯಲ್ಲಿ ವಂದಿಸಿದರು.

ಶ್ರೀ ಎಚ್. ಡಿ. ಎಸ್. ಪೈಯವರಿಗೆ ಅಭಿನಂದನೆ

ಸಿಂಡಿಕೇಟ್ ಬ್ಯಾಂಕಿನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಎಚ್. ಡಿ. ಎಸ್. ಪೈಗಳನ್ನು ಅವರ 47ನೇ ಜನ್ಮದಿನದಂದು ಅಭಿನಂದಿಸಲು ಮತ್ತು ಅವರು ಬೇರೆ ವಿಭಾಗಕ್ಕೆ ಹೊಸ ಜವಾಬ್ದಾರಿಯನ್ನು ವಹಿಸಲು ವರ್ಗವಾದ ಪ್ರಯುಕ್ತ ವಿದಾಯವನ್ನು ಕೋರಲು ಇತ್ತೀಚೆಗೆ ಮಣಿಪಾಲದ ಪ್ರಧಾನ ಕಚೇರಿಯಲ್ಲಿ ಸಭೆಯೊಂದು ಸೇರಿತ್ತು. ಶ್ರೀ ರಘುರಾಮ ನಾಯಕರು ಆರಂಭದಲ್ಲಿ ಸ್ವಾಗತಿಸಿದರು.

ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು ಈ ಸಂದರ್ಭದಲ್ಲಿ ಮಾತಾಡುತ್ತಾ ಬ್ಯಾಂಕಿಂಗ್ ಮತ್ತಿತರ ಹಿರಿಯ ಉದ್ಯಮಗಳಲ್ಲಿ ಪ್ರತಿಭಾವಂತರ ಅಭಾವ ಇರುವುದೆಂದೂ ದಕ್ಷ ಮತ್ತು ಪ್ರತಿಭಾವಂತರಾದ ಆಡಳಿತಗಾರರ ಆವಶ್ಯಕತೆ ಇದೆಯೆಂದೂ ಹೇಳಿದರು.

ಬ್ಯಾಂಕಿನ ಹಿರಿಯ ಅಧಿಕಾರಿ ಶ್ರೀ ಎಚ್. ಎನ್. ರಾವ್ ಮತ್ತು ಶ್ರೀ ಕು. ಶಿ. ಹರಿದಾಸ ಭಟ್ಟರು ಸಂದರ್ಭೋಚಿತವಾಗಿ ಮಾತಾಡಿದರು.

ಶ್ರೀ ಎಚ್. ಡಿ. ಎಸ್. ಪೈಯವರು ತಾನು ಬ್ಯಾಂಕಿನಲ್ಲಿ ಕಳೆದ 30ವರುಷಗಳನ್ನು ಜ್ಞಾಪಿಸಿ ತನ್ನ ಯಶಸ್ಸಿಗೆ ಕಾರಣರಾದ ಡಾ| ಟಿ. ಎಂ. ಎ. ಪೈಗಳಿಗೆ ಕೃತಜ್ಞತೆ ಸಲ್ಲಿಸಿದರು

ಹೊಸದಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಯ ಹುದ್ದೆಯನ್ನು ಸ್ವೀಕರಿಸುವ ಶ್ರೀ ಕೆ. ಕೆ. ಹಳದೀಪುರಕರ್ ತನಗೆ ಒದಗಿಸಿದ ಸದವಕಾಶವನ್ನು ಎಲ್ಲರ ನೆರವಿನಿಂದ ಯೋಗ್ಯ ರೀತಿಯಲ್ಲಿ ಉಪಯೋಗಿಸುವುದಾಗಿ ಭರವಸೆಯಿತ್ತರು.

ಡಾ| ಟಿ. ಎಂ. ಎ. ಪೈಯವರು ಶ್ರೀ ಎಚ್. ಡಿ. ಎಸ್. ಪೈಯವರನ್ನು ಆಶೀರ್ವದಿಸಿದರು. ಅಂತ್ಯದಲ್ಲಿ ಶ್ರೀ ಶ್ರೀಧರ ಕಾಮತರು ವಂದಿಸಿದರು.

ಪಣಂಬೂರಿನ ಕೇಂದ್ರೀಯ ವಿದ್ಯಾಲಯ ಕಟ್ಟಡದ ಉದ್ಘಾಟನೆ

ತಾ. 23ರಂದು ಕೇಂದ್ರ ಸರಕಾರದ ನೌಕೋದ್ಯಮ, ಸಾರಿಗೆ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ರಾಜಬಹಾದುರ್‌ರವರು ಸುಮಾರು 7. 13 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಪಣಂಬೂರಿನ ಕೇಂದ್ರೀಯ ವಿದ್ಯಾಲಯದ ನೂತನ ಕಟ್ಟಡದ ಉದ್ಘಾಟನೆಯನ್ನು ಲೋಕಸಭಾ ಸದಸ್ಯ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಶಾಲೆಯ ಆಡಳಿತ ಸಮಿತಿಯ ಅಧ್ಯಕ್ಷ ಶ್ರೀ ಎಚ್. ಕೆ. ಪಂಡಿತಾರಾಧ್ಯರು ಪ್ರಾರಂಭದಲ್ಲಿ ಸ್ವಾಗತಿಸಿ ವಿದ್ಯಾಲಯದ ಪ್ರಗತಿಯನ್ನು ವಿವರಿಸಿದರು.

ಸಚಿವರು ಕಟ್ಟಡವನ್ನು ಉದ್ಘಾಟಿಸಿ ಶಾಲೆಯ ಪ್ರಗತಿಯನ್ನು ಪ್ರಶಂಸಿಸಿ ಸಂಸ್ಥೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದರು. ಮಂಗಳೂರು ಬಂದರು ಯೋಜನೆಯುಬ್ಬಾದ ಪ್ರಗತಿಗೆ ಅವರು ತಮ್ಮ ಮೆಚ್ಚುಗೆ ಸೂಚಿಸಿದರು. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸ, ಪರಿಚಯವನ್ನು ತನ್ನ ಯುವಜನಾಂಗ ಮಾಡಿಕೊಳ್ಳುವುದು ಅತ್ಯವಶ್ಯವೆಂದು ಸಲಹೆಮಾಡಿದ್ದರು.

ಶ್ರೀ ಪಿ. ರಂಗನಾಥ ಶೆಣೈಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಾಲೆಯ ನೂತನ ಕಟ್ಟಡವನ್ನು ಉತ್ತಮ ರೀತಿಯಲ್ಲಿ ರಚಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು. ಮಂಗಳೂರಿನಿಂದ ಮುಂಬೈಗೆ ಹಡಗು ಸಾರಿಗೆ ಅವಶ್ಯವೆಂದೂ, ಮಂಗಳೂರು ವಿಮಾನ ನಿಲ್ದಾಣ ವಿಸ್ತರಣೆ ಅವಶ್ಯವೆಂದೂ, ಮಂಗಳೂರು ಬಂದರವನ್ನು 51 ಅಡಿ ಆಳವಾಗಿ ಮಾರ್ಪಡಿಸುವಂತೆ ಆಸಕ್ತಿ ವಹಿಸಬೇಕೆಂದೂ, ಕೇಳಿಕೊಂಡರು.

ವಿದ್ಯಾಲಯದ ಪ್ರಿನ್ಸಿಪಾಲ್ ಶ್ರೀ ಬಿ. ಎಂ. ವೆಂಕಟರಾಮಯ್ಯನವರು ಧನ್ಯವಾದ ಅರ್ಪಿಸಿದರು.

ಸತ್ಕಾರ ಕೂಟಕ್ಕೆ ಸನ್ನಾಹ

ಸುರತ್ಕಲ್ಲಿನಲ್ಲಿ ಐವತ್ತು ವರ್ಷದ ಹಿಂದೆ ಸದ್ಬೋಧ ಗ್ರಂಥಮಾಲೆಯನ್ನು ಪ್ರಾರಂಭಿಸಿ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿ ಸಾಹಿತ್ಯ ಸೇವೆಯನ್ನು ಮಾಡಿ ಎಳೆಯರಿಗೆ ಪ್ರೋತ್ಸಾಹಕರಾಗಿರುವ ಶ್ರೀ ಸುರತ್ಕಲ್ಲು ರಂಗಪ್ಪಯ್ಯ ಹೆಬ್ಬಾರರಿಗೆ ಸತ್ಕಾರ ಕೂಟವನ್ನು ಏರ್ಪಡಿಸಲು ಯೋಚಿಸಿದೆ. ಆ ಬಗೆಗೆ ಸಂಬಂಧಪಟ್ಟವರ ಹಾಗೂ ಸಹಾನುಭೂತಿವುಳ್ಳವರಲ್ಲಿ ವಿಚಾರ ವಿನಿಮಯಕ್ಕೆ ತೊಡಗಿದೆಯೆಂದು ಶ್ರೀ ಕೆ. ವೆಂಕಟರಾಯಾಚಾರ್ಯರು ತಿಳಿಸುತ್ತಾರೆ.

ಪುಸ್ತಕ ಬಿಡುಗಡೆ

ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರ 'ನಮನ'ವೆಂಬ ಪ್ರಬಂಧ ಸಂಕಲನದ ಬಿಡುಗಡೆಯು ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರಿಂದ ಮಂಗಳೂರು ತಾಲೂಕು ಬೋರ್ಡು ಸದಸ್ಯ ಶ್ರೀ ಎ. ಶ್ರೀಧರ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 21-6-72ರಂದು ಕಿನ್ನಿಗೋಳಿಯಲ್ಲಿ ಯುಗಪುರುಷ ಕಾರ್ಯಾಲಯದಲ್ಲಿ ಬಿಡುಗಡೆ ಮಾಡಲ್ಪಟ್ಟಿದೆ.

o o o

ಕಾಲೋಚಿತಕ್ಕೆ ತಕ್ಕುದಿದು ತೃಣವೇ ಪರ್ವತವಲ್ಲವೆ?

o o o

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ನಶೀಬ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ವಿಚಿತ್ರ.... ಆದರೂ ಸತ್ಯ

["ನ್ಯೂ ಟ್ರ್ಯಾನ್ಸ್" ಪತ್ರಿಕೆಯಿಂದ]

ಕೊದಲಿಗೂ ಒಂದು ತೆರಿಗೆ

ಫಿಲಿಪ್ಪೈನ್ಸ್ ದ್ವೀಪದ ಮಲಯ್‌ಬಲಯ್ ಪಟ್ಟಣದ ನಗರಸಭೆಯು ಎಪ್ರಿಲ್ ದಿನಾಂಕ 27ರಂದು ಉದ್ದ—ಕೊದಲಿನ ಗಂಡಸರ ಮೇಲೆ ವರ್ಷಕ್ಕೆ 5 'ಪೆಸೋ'ಗಳಷ್ಟು (0.78 ಅಮೆರಿಕನ್ ಡಾಲರಿಗೆ ಸಮ) ತೆರಿಗೆಯನ್ನು ವಿಧಿಸಿದೆ. ಈ ತೆರಿಗೆಯನ್ನು ಸಲ್ಲಿಸದೆ ಇರುವವರಿಗೆ ಎರಡು ದಿನ ಸೆರೆಮನೆವಾಸ ಮತ್ತು 10 ಪೆಸೋ ಜುಲ್ಮಾನೆ ವಿಧಿಸಲಾಗುತ್ತದೆ

ೲ ೦ ೦

"ಕಲಾ ಪ್ರೇಮಿಗಳು"

1971ರಲ್ಲಿ ಫ್ರಾನ್ಸ್ ದೇಶದ ಕಳ್ಳರು 3.010 ಅಮೂಲ್ಯ ವರ್ಣಚಿತ್ರಗಳನ್ನೂ, ರೇಖಾ ಚಿತ್ರಗಳನ್ನೂ ಕದ್ದರು. ಇದು ಹಿಂದಿನ ವರ್ಷದಲ್ಲಾದ ಕಳವಿಗಿಂತಲೂ 1,420 ಚಿತ್ರಗಳಷ್ಟು ಹೆಚ್ಚು. ಇತರ ಕಲಾವಸ್ತುಗಳಲ್ಲಿಯೂ ಅವರ ಆಸಕ್ತಿಯೇನೂ ಕಡಿಮೆಯಾಗಿರಲಿಲ್ಲ. ಆರೇ ತಿಂಗಳುಗಳಲ್ಲಿ ಅವರು 858 ಶಿಲ್ಪಾಕೃತಿಗಳನ್ನೂ ಮತ್ತು ಸೂಕ್ಷ್ಮಚಿತ್ರಗಳನ್ನೂ, 34 ನೇಯ್ಗೆ ತೆರೆ ಚಿತ್ರಗಳನ್ನೂ, 112 ಇಗರ್ಜಿ ಮೂರ್ತಿಗಳನ್ನೂ ಕದ್ದರು. ಈ ಚೋರ ಮಹಾಶಯರು 36 ವಸ್ತುಸಂಗ್ರಹಾಲಯಗಳಲ್ಲೂ, 217 ಇಗರ್ಜಿಗಳಲ್ಲೂ, 102 ಕೋಟೆಗಳಲ್ಲೂ ಕಳವು ಮಾಡಿದರೆಂದು ಪೋಲಿಸ್ ಅಂಕಿ–ಅಂಶ ಧಾಖಲೆಗಳಿಂದ ವ್ಯಕ್ತವಾಗುತ್ತದೆ ಅಮೂಲ್ಯ ಕಲಾವಸ್ತುಗಳ ಕಡೆಗೆ ಕಳ್ಳರು ಹೆಚ್ಚು ಹೆಚ್ಚಾಗಿ ಆಕರ್ಷಿತರಾಗುತ್ತಿರುವುದು ತಮಗೊಂದು ತಲೆನೋವಾಗಿದೆಯೆಂದೂ, ಕರ್ತವ್ಯ ನಿಭಾಯಿಸುವುದು ಕಷ್ಟವಾಗಿದೆಯೆಂದೂ ಪೋಲೀಸರು ಅಲ್ಲಿ ಹೇಳುತ್ತಿದ್ದಾರೆ.

೦ ೦ ೦

ಸೆರೆಮನೆಯೇ ಸ್ವರ್ಗ

ಲಾ ರೋಚೆ–ಸುರ್–ಯೋನ್ ಪಟ್ಟಣದ ಸೆರೆಮನೆಯಲ್ಲಿದ್ದ ಗೈ ರೋಜರ್ ಎಂಬಾತನಿಗೆ ಬಿಡುಗಡೆಯ ಸುದ್ದಿಯನ್ನು ಅಧಿಕಾರಿಗಳು ತಿಳಿಸಿದಾಗ, ಅಲ್ಲಿಂದ ಹೊರಡಲು ಆತನು ನಿರಾಕರಿಸಿದನು. ಹೊರ ಜಗತ್ತಿನಲ್ಲಿ ನಿರುದ್ಯೋಗ, ಅಭದ್ರತೆ ಮತ್ತು ತೆರಿಗೆಗಳ ಹೊರತು ಬೇರೇನೂ ಇಲ್ಲವೆಂದು ಆತನ ಅಭಿಪ್ರಾಯ. ಬಲಾತ್ಕಾರವಾಗಿ ಆತನನ್ನು ಸೆರೆಮನೆಯಿಂದ ಹೊರದೂಡಿ, ರೈಲ್ವೇ ನಿಲ್ದಾಣದ ವರೆಗೂ ತಲುಪಿಸಿ ಬರಬೇಕಾಯಿತು. ರೈಲು ಹತ್ತಿದ ರೋಜರ್ ತನ್ನನ್ನು ಅಲ್ಲಿಗೆ ಕರೆತಂದ ಕಾವಲು ಭಟರಿಗೆ ವಿದಾಯ ಹೇಳುತ್ತ "ಬೇಗ ನಿಮ್ಮನ್ನು ಕಾಣುವೆನು" ಎಂದು ಆಶ್ವಾಸನೆ ನೀಡಿದನು.

೦ ೦ ೦

ಇದು ಹಳೆಯ ಆಟವೇ

ಇಲ್ಲಿ ನೊಯಿಸ್ ವಿಶ್ವವಿದ್ಯಾಲಯದ ಪುರಾವಸ್ತು ಶಾಸ್ತ್ರಜ್ಞರು 4000 ವರ್ಷಗಳಷ್ಟು ಪುರಾತನ ಕಾಲದ ಸುಮೇರಿಯನ್ ಜೇಡಿ—ತಟ್ಟೆಯ ಚಿತ್ರದ ರಹಸ್ಯವನ್ನು ಕಂಡು ಹಿಡಿದಿದ್ದಾರೆ. ವ್ಯಾಪಾರಿಯೊಬ್ಬಾತನ ತೆರಿಗೆಯ ಪ್ರಕಟಣೆಯಲ್ಲಿ ತಪ್ಪು—ತಿದ್ದುಪಡಿಗಳಿದ್ದುವೆಂದು ಅವರು ಹೇಳುತ್ತಾರೆ. ಆತನು ನಿಜವಾದ ವರಮಾನವನ್ನು ತಿಳಿಸಬೇಕೆಂದು ಆಡಳಿತದವರು ಈ ವ್ಯಾಪಾರಿಯ ಮೇಲೆ ಒತ್ತಡ ತಂದಿದ್ದರೆಂಬುದನ್ನು ಇದು ತೋರಿಸುತ್ತದೆಯೆಂದು ಪುರಾವಸ್ತು ಶಾಸ್ತ್ರಜ್ಞರು ಹೇಳುತ್ತಾರೆ.

೦ ೦ ೦

ಜೀವಚ್ಛವ

ವೆನಿಸ್ ನಗರದ ಕೌಂಟ್ ಬೀನೊ ಸಿಕೋಗ್ನ ಎಂಬಾತನು ಕೋಟ್ಯಾಧೀಶನೆಂದು ಹೆಸರಾಗಿದ್ದು, ದಿವಾಳಿಯಾದನು. ಬಂಧನವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಆತನು ಬ್ರೆಜಿಲ್ ದೇಶಕ್ಕೆ ಓಡಿಹೋಗಿ, ಅಲ್ಲಿ ತನ್ನ ಸುಖಲೋಲುಪ ಜೀವನವನ್ನು ಪುನರಾರಂಭಿಸಿದನು. ಆತನನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದು ಇಟಲಿಯ ಸರಕಾರದ ಬೇಡಿಕೆಯು ಬ್ರೆಜಿಲ್ಲಿಗೆ ಬಂದಿತು. ಪುನಃ ಈ ಕೌಂಟ್ ಕಣ್ಮರೆಯಾದನು. ಸ್ವಲ್ಪ ಸಮಯದ ತರುವಾಯ ವಿಷಾನಿಲಕ್ಕೆ ಬಲಿಯಾದ ವ್ಯಕ್ತಿಯೊಬ್ಬನ ಶವವು ರಿಯೊ ಡಿಜೆನೈರೊ ಪ್ರಾಸಾದವೊಂದರಲ್ಲಿ ಸಿಕ್ಕಿತು. ತಲೆಯು ಇಂಧನಾನಿಲದ ಒಲೆಯಲ್ಲಿ ಸಿಕ್ಕಿಕೊಂಡಿದ್ದು ಸಂಪೂರ್ಣವಾಗಿ ವಿರೂಪಗೊಂಡಿತ್ತು. ಕೌಂಟನ ಸಂಬಂಧಿಕರು ಈ ದೇಹವು ಬೀನೊ ಸಿಕೋಗ್ನನದೇ ಎಂದು ಸಾಕ್ಷ್ಯವಿತ್ತು, ತಮ್ಮ ಪರಿವಾರದ ನೆಲಮಾಳಿಗೆಯ ಸ್ಮಶಾನದಲ್ಲಿ ಹೂಳಲು ಅದನ್ನು ಇಟಲಿಗೆ ರವಾನಿಸಿದರು. ಆದರೆ ಪೋಲೀಸರಿಗೆ ಆ ವೇಳೆಗಾಗಲೇ ಸುದ್ದಿ ಬಂದಿತ್ತು. ಸತ್ತವನು ಸಿಕೋಗ್ನ ಅಲ್ಲವೆಂದೂ, ಆ ಮೃತ ಶರೀರವನ್ನು ಪ್ರಾಯಶಃ ಆತ ಕೊಂದಿದ್ದನೆಂದೂ ಅವರಿಗೆ ತಿಳಿಯಿತು. ಈಗ ಇಟಲಿಯ ನ್ಯಾಯಾಂಗ ಶಾಖೆಯವರು "ಜೀವಚ್ಛವ"ದ ಬಂಧನಕ್ಕಾಗಿ ಹೊಸ ಆಜ್ಞಾಪತ್ರವನ್ನು ಹೊರಡಿಸಿದ್ದಾರೆ.

೦ ೦ ೦

ಶಾಂತಿ ನಿದ್ರೆ

ಅಲ್‌ಸ್ಟರಿನಲ್ಲಿ ಬ್ರಿಟಿಷ್ ಸೈನಿಕರು ಇನ್ನು ಶಾಂತಿಯಿಂದ ನಿದ್ರಿಸಬಹುದು. ಅವರಿಗಾಗಿ ಗುಂಡು ತೂರದ ತಗಡಿನ ಮಂಚಗಳಿಗಾಗಿ ಬ್ರಿಟಿಷ್ ಸರಕಾರವು ಈಗ ಬೇಡಿಕೆ ನೀಡಿದೆ. ಈ ಪ್ರಾಯೋಜನೆಗೆ 'ಅತಿಶಯ ಧೈರ್ಯಶಾಲಿ ಕಾರ್ಯಾಚರಣೆ' (ಆಪರೇಷನ್ ಆಯರ್ನ್‌ಸೈಡ್) ಎಂದು ಹೆಸರಿಡಲಾಗಿದೆ. 17ನೆಯ ಶತಮಾನದಲ್ಲಿ ಐರ್ಲೆಂಡಿನ ವಿಮೋಚನೆಯ ಚಳುವಳಿಯ ಮೇಲೆ ನಿರ್ಣಯಪೂರ್ವಕವಾದ ದಮನ ಚರ್ಯೆಗಳನ್ನು ನಡೆಸಿದ ಕಾಮ್‌ವೆಲ್ 'ಆಯರ್ನ್‌ಸೈಡ್' ಅಶ್ವಾರೋಹಿ ದಳದ ನೆನಪಿನಿಂದಲೇ ಪ್ರಾಯಶಃ ಈ ಹೆಸರಿಗಾಗಿ ಸ್ಫೂರ್ತಿ ದೊರೆತಿದೆ.

೦ ೦ ೦

ಮೀನು ಹಿಡಿಯುವುದಕ್ಕಿಂತ ಸುಮ್ಮನಿರುವುದೇ "ಕಾರು"ಮಾಲೀಕರಿಗೆ ಹಿತಕರ

ಆಸ್ಟ್ರೇಲಿಯದ ನಾಗರಿಕನೊಬ್ಬಾತನು ಮೀನು ಹಿಡಿಯಲು ತನ್ನ ಸ್ವಂತ ಕಾರಿನಲ್ಲಿಯೇ ಪ್ರಯಾಣ ಬೆಳೆಸುವುದಾದರೆ ಆತನಿಗೆ ಯಾವ ಯಾವ ದಾಖಲೆ ಪತ್ರಗಳು ಬೇಕಾಗುತ್ತವೆ? ಸಿಡ್ನಿ ನಗರದ ಪರಿಸರ ನಿವಾಸಿ ಜಾನ್ ಫೆಲ್‌ಸ್ಟರ್ ಅವರು ತಿಳಿಸಿರುವ ಪ್ರಕಾರ, ಆತನಿಗೆ ಉಭಯತಃ ತನ್ನ ಕಾರಿಗೂ ಮತ್ತು ದೋಣಿಗೂ ಕೂಡ ದಾಖಲು ಕಾರ್ಡುಗಳು, ವಿಮೆ 'ಪಾಲಿಸಿ' ಪತ್ರಗಳು, ವಾಹನ ಚಲಾಯಿಸುವುದಕ್ಕಾಗಿ ಅನುಮತಿ ಪತ್ರಗಳು ಬೇಕಾಗುತ್ತವೆ. ಇದಲ್ಲದೆ ಮೀನು ಹಿಡಿಯುವುದಕ್ಕೆ ಸ್ವತಃ ಆತನಿಗೊಂದು ಅನುಮತಿ ಪತ್ರವೂ, ಮೀನು ರಕ್ಷಣೆ ಪ್ರದೇಶವನ್ನು ಪ್ರವೇಶಿಸುವುದಕ್ಕೊಂದು ವಿಶೇಷ ಅನುಮತಿ ಪತ್ರವೂ, ಮತ್ತು ಕಡೆಯದಾಗಿ, ತನ್ನ ಮನೆಯನ್ನು ಅಥವಾ ವಸತಿ ವಿಭಾಗವನ್ನು ಬೆಂಕಿ ಅಥವಾ ದರೋಡೆಯ ವಿರುದ್ಧವಾಗಿ ಆತನು ವಿಮೆ ಮಾಡಿರುವ ಬಗ್ಗೆ ಆಯಾ ವಿಮಾ ಕಂಪೆನಿಗಳು ನೀಡಿರುವ ರಸೀದಿಗಳೂ ಸಹ ಆತನ ಬಳಿಯಲ್ಲಿ ಇರಬೇಕಾಗುತ್ತದೆ.

●●

ಮಾನವ ಪರಿಸರ : ಇಂದಿರಾವಾಣಿ

*ಸರ್ವ ಸೃಷ್ಟಿಯನ್ನೂ, ಸಹಜೀವಿಗಳನ್ನೂ ಸ್ನೇಹದ ದೃಷ್ಟಿಯಿಂದ ನೋಡಲಾಗದಿದ್ದವರನ್ನು ನಿಜವಾಗಿಯೂ ಮಾನವೀಯ ಹಾಗೂ ನಾಗರಿಕ ವ್ಯಕ್ತಿಗಳೆಂದು ಕರೆಯಲು ಸಾಧ್ಯವಾಗುವುದಿಲ್ಲ.

*ಭಾರತದಾದ್ಯಂತ ಕಾಣಸಿಗುವ ಶಿಲಾ ಶಾಸನಗಳು 22 ಶತಮಾನಗಳ ಹಿಂದಿದ್ದ ಅಶೋಕ ಚಕ್ರವರ್ತಿಯ ಆಡಳಿತದ ಸಾಕ್ಷಿಯಾಗಿವೆ ಪ್ರಜಾ ರಕ್ಷಣೆ ಮಾಡಿ, ಪ್ರಾಣಿ ಹಾಗೂ ವನ್ಯ ಸಂಪತ್ತನ್ನು ಕಾಪಾಡಿ, ದುಷ್ಟರನ್ನು ಶಿಕ್ಷಿಸುವುದು ದೊರೆಯ ಕರ್ತವ್ಯವೆಂದು ಅಶೋಕ ಚಕ್ರವರ್ತಿ ನುಡಿದಿದ್ದನು. ಬಹುಶಃ ಇತೀಚಿನವರೆಗೆ ಏಕೈಕ ಒಬ್ಬನೇ ಪ್ರಾಣಿಗಳನ್ನು ಮಾನವನ ಆಹಾರಕ್ಕಾಗಿ ಕೊಲ್ಲುವುದನ್ನು ನಿಷೇಧಿಸಿದ ಸ್ವಾಮೀ ಚಕ್ರವರ್ತಿಯಾಗಿದ್ದನು.

* ದೇಶಗಳ ಪ್ರಗತಿಯೊಂದಿಗೆ ಪ್ರಕೃತಿ ಸಂಪತ್ತಿನ ವಿನಾಶ ಸೇರಿರುವುದು ಅತ್ಯಂತ ವಿಷಾದನೀಯ.

* ಮಾನವನು ದಾರಿದ್ರ್ಯದಲ್ಲಿ ರೋಗರುಜಿನಗಳು ಹಾಗೂ ಪೋಷಕ ಆಹಾರದ ಅಭಾವದಿಂದ, ಯುದ್ಧದಲ್ಲಿ ದೌರ್ಬಲ್ಯದಿಂದ, ಸಂಪತ್ತಿನಲ್ಲಿ ಪರಿಸರ ಮಾಲಿನ್ಯದಿಂದ ಹೆದರಿದ್ದಾನೆ.

* ಭಾರತದ ಮಿತ್ರರೂ, ಬ್ರಿಟಿಷ್ ಲೇಖಕರೂ ಆದ ಎಡ್ವರ್ಡ್ ಥಾಂಸನ್ ಒಮ್ಮೆ ಗಾಂಧೀಜಿಯೊಂದಿಗೆ ಮಾತನಾಡುತ್ತಾ ಪ್ರಗತಿಯಲ್ಲಿ ವನ್ಯಪ್ರಾಣಿ ಸಂಪತ್ತು ನಾಶವಾಗುತ್ತಿರುವ ಬಗ್ಗೆ ವಿಷಾದಿಸಿದರು. ಆಗ ಮಹಾತ್ಮರು "ವನ್ಯಪ್ರಾಣಿ ಸಂಪತ್ತು ಅರಣ್ಯಗಳಲ್ಲಿ ಕಡಿಮೆಯಾಗಿ, ನಗರಗಳಲ್ಲಿ ಹೆಚ್ಚುತ್ತಿದೆ" ಎಂದು ನುಡಿದರು.

*ಪ್ರಗತಿ ಸಾಧಿಸಿರುವ ದೇಶಗಳು ಇತರ ದೇಶಗಳ ಮತ್ತು ಜನಾಂಗಗಳ ಮೇಲೆ ಪ್ರಭುತ್ವ ಸ್ಥಾಪಿಸಿ, ಸ್ವದೇಶೀಯರು ಮತ್ತು ನೈಸರ್ಗಿಕ ಸಂಪತ್ತನ್ನು ಶೋಷಿಸಿ ಇಂದಿನ ಸಮೃದ್ಧಿಯನ್ನು ಸಾಧಿಸಿವೆ.

*ನಾವು ಸುತ್ತಲಿನ ಪರಿಸರವನ್ನು ಮತ್ತಷ್ಟು ಕೆಡಿಸಲು ಆಶಿಸುವುದಿಲ್ಲ. ನಾವು ಒಂದು ಘಳಿಗೆಯೂ ಜನಕೋಟಿಯ ದಾರಿದ್ರ್ಯವನ್ನು ಮರೆಯಲಾಗುವುದಿಲ್ಲ. ದಾರಿದ್ರ್ಯ ಮತ್ತು ಕೊರತೆ ಮಲಿನ ಕಾರಿಗಳಲ್ಲವೇ?

*ಹಳ್ಳಿಗರ ಮತ್ತು ಕೊಂಪೆ ನಿವಾಸಿಗಳ ಜೀವನ ಮೂಲದಲ್ಲೇ ಕುಲ ಕೆಟ್ಟಿರುವುದರಿಂದ ನದಿ, ಸಮುದ್ರ ಮತ್ತು ಗಾಳಿಯನ್ನು ಶುದ್ಧೀ ಮಾಡುವುದರ ಬಗ್ಗೆ ನಾವು ಹೇಗೆ ಮಾತನಾಡಲು ಸಾಧ್ಯ?

*ದಾರಿದ್ರ್ಯ ಪರಿಸ್ಥಿತಿಯಲ್ಲಿ ಪರಿಸರವನ್ನು ಸುಧಾರಿಸಲಾಗುವುದಿಲ್ಲ. ವಿಜ್ಞಾನ ತಂತ್ರಜ್ಞಾನಗಳ ಬಳಕೆಯಿಲ್ಲದೆ ದಾರಿದ್ರ್ಯವನ್ನು ನಿರ್ಮೂಲನ ಮಾಡಲಾಗುವುದಿಲ್ಲ.

*ನಾವು ಕಾಲು ಶತಮಾನದಿಂದ ಆರನೇ ಒಂದು ಪಾಲಿನ ಮಾನವ ಕೋಟಿಗೆ ಒಂದೆರಡು ಪೀಳಿಗೆಗಳ ಅವಧಿಯಲ್ಲಿ ಜೀವನದ ಮೂಲಭೂತ ಅಗತ್ಯಗಳನ್ನೊದಗಿಸಲು ಪ್ರಯತ್ನಿಸುತ್ತಿದ್ದೇವೆ ಇದು ಮಾನವ ಇತಿಹಾಸದಲ್ಲೇ ಸಾಟಿಯಿಲ್ಲದುತ್ಕೃಷ್ಟ ಘಟನೆ.

* ಜಗತ್ತಿನ ಮೂಲಭೂತ ಘರ್ಷಣೆ ಇರುವದು ಮಾರಕ್ಷಣೆ. ಅಭಿವೃದ್ಧಿಗಳಲ್ಲ; ದಕ್ಷತೆಯ ಕೊರತೆಯಲ್ಲಿ ಪರಿಸರ, ಜಲಸಂಪತ್ತು ಹಾಗೂ ಭೂಮಿಯನ್ನು ನಿರ್ದಾಕ್ಷಿಣ್ಯವಾಗಿ ಶೋಷಿಸಲಾಗುತ್ತಿದೆ.

* ಪರಿಸರ ಮಾಲಿನ್ಯ ತಾಂತ್ರಿಕ ಸಮಸ್ಯೆಯಲ್ಲ. ಇದರ ದೋಷ ವಿಜ್ಞಾನ, ತಂತ್ರ ಶಾಸ್ತ್ರಗಳಲ್ಲಿಲ್ಲ. ಭವಿಷ್ಯತ್ತಿನ ಮುನ್ನೋಟವನ್ನು ಹಾಗೂ ಇತರರ ಹಕ್ಕನ್ನು ಕಡೆಗಣಿಸುವ ಸಮಕಾಲೀನ ಜಗತ್ತಿನ ಮೌಲ್ಯಗಳಲ್ಲಿ ದೋಷ ಅಡಗಿದೆ.

*ಜನತೆಯ ಪ್ರಾಚೀನ ಪರಂಪರೆಯನ್ನು ಕಿತ್ತೊಗೆಯದೆ, ನಿಸರ್ಗ ಸೌಂದರ್ಯವನ್ನು ನಾಶಮಾಡದೆ, ನಮ್ಮ ಜೀವನಕ್ಕೆ ಅತ್ಯಗತ್ಯವಾದ ಪ್ರಫುಲ್ಲತೆ, ಪವಿತ್ರತೆಗಳನ್ನು ಕಡೆಗಣಿಸದೆ ಉನ್ನತ ಜೀವನ ಮಟ್ಟವನ್ನು ಸಾಧಿಸಬೇಕಾಗಿದೆ

*ಪರಿಸರ ಮಾಲಿನ್ಯದ ವಿರುದ್ಧ ಮಾಡುತ್ತಿರುವ ಹೋರಾಟವನ್ನು ಕೇವಲ ವಾಣಿಜ್ಯವಾಗಿ ಪರಿವರ್ತಿಸುವುದು ಅಣಕವಾಗುತ್ತದೆ. ಏಕೆಂದರೆ ಈ ಕ್ರಮದಿಂದ ಕೆಲವು ಸಂಸ್ಥೆಗಳು ಮತ್ತು ದೇಶಗಳು ಇತರರ ಹೆಸರಿನಲ್ಲಿ ಲಾಭಗಳಿಸುತ್ತವೆ.

*ಬೃಹತ್ ಮಾನವ ಸಮೂಹಗಳ ಜೀವನ ವಿಧಾನವನ್ನು ಬದಲಿಸುವುದು ಸುಲಭವಾದುದಲ್ಲ. ಜೀವನ ವಿಧಾನವನ್ನು ಸರ್ಕಾರಿ ಕ್ರಮ ಮತ್ತು ಬಲಾತ್ಕಾರದಿಂದ ಸಾಧಿಸಲಾಗುವುದಿಲ್ಲ. ಉತ್ತಮ ಜೀವನ ವಿಧಾನದಲ್ಲಿ ಭಾಗವಹಿಸುವಂತೆ ಜನತೆಯ ಮನವೊಲಿಸುವುದೊಂದೇ ಏಕೈಕ ಮಾರ್ಗವಾಗಿದೆ.

*ಆಧುನಿಕ ಮಾನವನು ಪ್ರಕೃತಿ ಮತ್ತು ಜೀವಪ್ರಪಂಚದೊಂದಿಗೆ ನಿಕಟ ಸಂಪರ್ಕ ಬೆಳೆಸಿಕೊಳ್ಳಬೇಕಾಗಿದೆ ಅನೇಕ ಶತಮಾನಗಳ ಹಿಂದೆ ಪ್ರಾಚೀನ ಭಾರತೀಯರು ಮಾಡಿದಂತೆ ಜೀವ ವಿಕಾಸ ಶಕ್ತಿಗೆ ಮನ್ನಣೆ ನೀಡುವುದನ್ನು ಕಲಿಯಬೇಕಾಗಿದೆ

(ಭಾರತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಸ್ಟಾಕ್ ಹೋಂನಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆದ ಮಾನವ ಪರಿಸರ ಸಮ್ಮೇಳನದಲ್ಲಿ ಮಾಡಿದ ಭಾಷಣದಿಂದ ಆಯ್ದ ಆಣಿಮುತ್ತುಗಳು)

ಸಮರ್ಪಣ

(ಎರಡನೇ ಪುಟದಿಂದ)

ಹಳೆಯ ಸೇಡನ್ನು ತೀರಿಸಿಕೊಳ್ಳುವ ಅಭಿಲಾಷೆಯಿಂದ ಗೋವಿಂದನೂ ಅಲ್ಲಿಗೆ ಬಂದ. ಸಾಮ್ರಾಜ್ಯದ ಪ್ರತಿಷ್ಠಿತ ಹಿತೈಷಿಗಳು ಆಮಂತ್ರಣದ ಮೇಲೆ ಅಲ್ಲಿ ಸೇರಿದ್ದರು.

ಸಮಕಾಲೀನ ಮುತ್ಸದ್ದಿಗಳೂ, ರಣ ಭಯಂಕರರೂ ಅಲ್ಲಿ ಉಪಸ್ಥಿತರಿದ್ದರು.

ಆದರಿಂದ ಅಂದಿನ ಸಭೆಗೆ ಅಪೂರ್ವ ಶೋಭೆ ಬಂದಿತ್ತು.)

ಅದನ್ನು ಪ್ರತ್ಯಕ್ಷ ನೋಡುವ ಅಭಿಲಾಷೆಯಿಂದ, ಅಲ್ಲಿ ನಡೆಯುವುದನ್ನು ತಿಳಿದುಕೊಳ್ಳುವ ಕುತೂಹಲದಿಂದ ಊರಿಗೆ ಊರೇ ಸಹಸ್ರ ಸಂಖ್ಯೆಯಲ್ಲಿ ನೆರೆದಿತ್ತು.

ಸಭೆಯ ಉಸ್ತುವಾರಿಯನ್ನು ಅರಮನೆಯ ಸಮವಸ್ತ್ರಧಾರಿಗಳಾದ ಬಿಚ್ಚುಗತ್ತಿಯ ಸಿಪಾಯಿಗಳು ನೋಡಿಕೊಳ್ಳುತಿದ್ದರು.

ಎಲ್ಲೆಲ್ಲೂ ಮೌನ.

ನಿಶ್ಶಬ್ದ!

'ರಾಷ್ಟ್ರಕೂಟ ಸಾಮ್ರಾಟ ಶ್ರೀಕೃಷ್ಣ ಭೂಪಾಲ, ಬಹುಪರಾಕು.'

ಹೀಗೆ ಬಿರುದಾವಲಿಗಳನ್ನು ಹೇಳುತ್ತ ಸ್ತುತಿ ಪಾಠಕರು ಸಭಾಂಗಣವನ್ನು ಪ್ರವೇಶಿಸಿದರು.

ಅವರ ಹಿಂದೆ, ಧೀರ, ಗಂಭೀರ ಹೆಜ್ಜೆ ಹಾಕುತ್ತ ಸಾಮ್ರಾಟರು ನಡೆದು ಬಂದರು. ಅತ್ಯಂತ ಗೌರವದಿಂದ ಸಭೆಗೆ ಸಭೆಯೇ ಎದ್ದು ನಿಂತು ಅವರಿಗೆ ಸ್ವಾಗತ ಬಯಸಿತು. ನಿಧಾನವಾಗಿ ನಡೆದು ಬಂದು, ಸಭೆಗೊಮ್ಮೆ ವಂದಿಸಿ ಸಾಮ್ರಾಟರು ಸಿಂಹಾಸನದಲ್ಲಿ ಮಂಡಿಸಿದರು.

ವಂದನೆ–ಪ್ರತಿ ವಂದನೆಗಳು ನಡೆದುವು–

ಅನಂತರ ಸೇರಿದ್ದ ಪ್ರತಿಷ್ಠಿತರ ಕುಶಲವನ್ನು ಆತ ವಿಚಾರಿಸಿದ.

ಸಂಪ್ರದಾಯದ ಮಾತು ಮುಗಿಯಲು ಸಭೆ ಸ್ತಬ್ಧವಾಯಿತು–

ಆ ಮೌನವನ್ನು ಮುರಿಯುವುದು ಹೇಗೆಂಬುದು ಯಾರಿಗೂ ತಿಳಿಯಲಿಲ್ಲ. ಒಬ್ಬರ ಮುಖವನ್ನೊಬ್ಬರು ನೋಡುತ್ತ ಕುಳಿತರು.

ಯಾರಿಗೂ ಎದ್ದು ನಿಂತು ಮಾತನಾಡುವ ಧೈರ್ಯ ಬರಲಿಲ್ಲ.

ಕರೆಸಿದ ಉದ್ದಿಶ್ಯ ಎಲ್ಲರಿಗೂ ತಿಳಿದಿತ್ತು. ಆದರೂ ಏನೂ ತಿಳಿಯದವರಂತೆ –ಪ್ರಭುಗಳ ಬಾಯಿಂದ ಕರೆಯ ವಿವರಣೆ ಬರಲಿ–ಎಂದು ಸುಮ್ಮನಿದ್ದರು.

ಪ್ರಭುಗಳ ಅಂತರಂಗವನ್ನು ಇಣಿಕಿ ನೋಡಲು ಅದರಿಂದ ಅವಕಾಶ.

ವಿಧಿಯಿಲ್ಲದೆ ಪ್ರಭುಗಳೇ ಮಾತಿಗಾರಂಭಿಸಿದರು.

"ಸಾಮಂತ ಮನ್ನೆಯರಿಗೆ ನಾವು ಬರಮಾಡಿಕೊಂಡ ಉದ್ದೇಶ ತಿಳಿದಿರಬೇಕು. ಅದನ್ನು ವಿವರಿಸುವುದು ಅಪ್ರಕೃತ. ಧರ್ಮಸ್ಥಾಪನೆಗಾಗಿ ನಮ್ಮ ಹಿರಿಯರು, ನಿಮ್ಮ ಹಿರಿಯರ ನೆರವಿನಿಂದ ಕಟ್ಟಿದ ಸಾಮ್ರಾಜ್ಯ ಅಸ್ಥಿರವಾಗಲು ಆರಂಭಿಸಿದೆ ಎಂಬುದು ನಮ್ಮ ಅನುಮಾನ. ನೀವು ಚಾಳುಕ್ಯರು ನಿಮ್ಮೊಳಗೇ ಕಚ್ಚಾಡಲು ಪ್ರಾರಂಭಿಸಿದ್ದೀರಿ ಎಂಬ ವದಂತಿಗಳು ನಮ್ಮ ತನಕವೂ ಬಂದಿವೆ. ನಿಮ್ಮೊಳಜಗಳದಿಂದ ನಿಮ್ಮ ಶಕ್ತಿಯ ಹ್ರಾಸ ಮಾತ್ರವಲ್ಲ. ಸಾಮ್ರಾಜ್ಯ ಶಕ್ತಿಯ ಹ್ರಾಸವೂ ಆಗುತ್ತಿದೆ ಎಂಬುದು ನಮ್ಮ ಊಹೆ. ಸಾಮ್ರಾಜ್ಯದ ನೆಮ್ಮದಿಗೆ, ಅದರ ಅಂಗಗಳಾದ ನೀವೂ ಹೊಂದಿಕೊಂಡಿರುವುದು ಅನಿವಾರ್ಯ. ನಾಲ್ಕು ಕವಲುಗಳಾಗಿ ಒಡೆದ ಚಾಳುಕ್ಯ ಶಾಖೆಗಳನ್ನು ನಾವು ಸಾಮ್ರಾಜ್ಯದ ನಾಲ್ಕು ಆಧಾರ ಸ್ತಂಭಗಳೆಂದೇ ಇದು ತನಕ ತಿಳಿದಿದ್ದೆವು. ಆದರೆ ಈಗ ನೀವೇ ಸಾಮಾನ್ಯ ದಾಯಾದಿಯರಂತೆ ಕತ್ತಿ ಹಿಡಿದು ಕಾದಲು ಪ್ರಾರಂಭಿಸಿದ್ದೀರಿ. ಸಾಧ್ಯವಿದ್ದರೆ ಆ ವಿವಾದವನ್ನು ಬಗೆಹರಿಸಲು ಇಲ್ಲಿಗೆ ಬರಮಾಡಿ ಕೊಂಡಿದ್ದೇವೆ'

'ಪ್ರಭುಗಳೇ ಒಂದು ದೊಡ್ಡ ಮನಸ್ಸು ಮಾಡಿ ದಾರಿ ತೋರಿಸಬೇಕು'

ವಿಜಯಾದಿತ್ಯ ವಿನಮ್ರನಾಗಿ ನುಡಿದ.

'ಒಡಮೂಡಿದ ಒಡಕಿನ ಕಾರಣವನ್ನು ತಿಳಿಯದೆ ಪರಿಹಾರ ಸೂಚಿಸುವುದು ಸುಲಭದ ಕೆಲಸವಲ್ಲ, ವಿಜಯಾದಿತ್ಯರೇ?'

'ಪ್ರಭುಗಳ ಅಭಿಮತ ಸರಿಯೆಂದು ನನಗನಿಸುತ್ತದೆ.'

ತನ್ನ ಕಡೆಗೇ ವಾಲಿದರೆಂದು ಭ್ರಮಿಸಿ, ಪ್ರಭುಗಳ ಮಾತನ್ನು ಕಕ್ಕರಸ ಪುಷ್ಟೀಕರಿಸಿದ.

'ಪ್ರಭುಗಳು ಮೊದಲು ಇತ್ತಂಡಗಳ ಅಹವಾಲನ್ನು ಲಾಲಿಸಬೇಕು. ಅನಂತರ ಅದರ ನಿವಾರಣೆಯ ಮಾರ್ಗವನ್ನು ತಿಳಿಸಬೇಕು.'—ಬಪ್ಪುವ ಎದ್ದು ನಿಂತು ಬಿನ್ನೈಸಿದ.

'ನಿಮಗೆಲ್ಲ ಇದು ಸರಿಯೆಂದು ಕಂಡರೆ ಮೂಲಕ್ಕೇ ಕೈಯಿಕ್ಕುವ. ಆದರೆ ತಳಕ್ಕಿಳಿಯುವುದರಿಂದ ಒಮ್ಮೊಮ್ಮೆ ರಾಡಿ ಮೈಗಂಟಿಕೊಳ್ಳುವುದೂ ಉಂಟು. ಅದಕ್ಕೆ ಅವಕಾಶ ಕೊಡಬಾರದು.'

'ತೊಳೆಯುವುದಕ್ಕೆ ಹೊರಟಿರುವುದು ಅಂಟಿಕೊಂಡ ಹೊಲಸನ್ನು, ಹೊಲಸು ಸಿಡಿಯಲೇ ಬಾರದು ಎಂಬ ನಿರ್ಬಂಧ ಸಲ್ಲದು. ಒಳಗಿರುವ ಕೀವು ಸೋರಿಹೋದರೆ ಉಭಯತರಿಗೂ ಒಳ್ಳೆಯದು. ಅದಕ್ಕೂ ಅವಕಾಶವಿರಬೇಕು'—ಕಕ್ಕರಸ ನಿವೇದಿಸಿಕೊಂಡ.

'ಈ ಅವಕಾಶದಿಂದ, ಮಂತ್ರಕ್ಕಿಂತ ಉಗುಳೇ ಹೆಚ್ಚಾಗಿ, ಒಳಜಗಳ ಉಲ್ಬಣಿಸಿದರೆ?'—ವಿಜಯಾದಿತ್ಯ ಆಶಂಕ ವ್ಯಕ್ತಪಡಿಸಿದ.

'ಸತ್ಯಾಸತ್ಯದ ಪರಾಮರ್ಶೆ ನಡೆಸುವವರು ಪ್ರಭುಗಳು. ಕೇಳುವುದನ್ನು ಕೇಳಿಯಾದ ಮೇಲೆ ತಾನೇ ತೀರ್ಮಾನ? ಪ್ರಭುಗಳ ಸಮಕ್ಷಮ ಎಲ್ಲ ಇತ್ಯರ್ಥವಾಗಲಿ. ವಿಚಾರಣೆಯನ್ನು ಸೀಮಿತಗೊಳಿಸುವುದಕ್ಕೆ ನಾನು ವಿರೋಧಿ. ನೆಪ ಹೇಳಿ ನುಣುಚಿಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ.'

ವಿಜಯಾದಿತ್ಯನ ಆಕ್ಷೇಪವನ್ನು ಅರ್ಧದಲ್ಲೇ ಚಿವುಟಿಹಾಕಿದ ಬಪ್ಪುವ. ತೇಲಿಸಿ ಮಾತು ಮುಗಿಸುವ ಪ್ರವೃತ್ತಿಯೇ ಅವನು ಸ್ವೀಕರಿಸಿ ನಿಲುವಿನಲ್ಲಿರಲಿಲ್ಲ.

'ನಿಮಗೆ ತೋಚಿದ್ದನ್ನು ನೀವು ನಿವೇದಿಸಿಕೊಳ್ಳಿ. ಅದನ್ನು ನಾವು ತಡೆಯುವುದಿಲ್ಲ. ಆದರೆ ನಿಮ್ಮ ನಿಮ್ಮೊಳಗೆ ಮಾತು, ಪ್ರತಿಮಾತು ಬೇಡ. ಅದರಿಂದ ವಿರಸ ಹುಟ್ಟಿಕೊಳ್ಳುತ್ತದೆ. ನಾವು ಅದಕ್ಕೆ ಆಸ್ಪದ ಕೊಡುವುದಿಲ್ಲ. ಮಾತಿಗೆ ಮಾತು ಬೆಳೆಸುವುದರಿಂದ ಹೊತ್ತು ಹೋಗುತ್ತದೆ; ವಿಷಯ ಮರೆಯುತ್ತದೆ. ಸಾಕಷ್ಟು ಕಾಲಹರಣವಾಗಿದೆ; ಇನ್ನೂ ವಿಷಯ ಪ್ರವೇಶ ಮಾಡಿಲ್ಲ'

'ಪ್ರಭುಗಳು ಅನುಮತಿ ಕೊಟ್ಟರೆ ವಿವಾದಾಂಶವನ್ನೇ ಚರ್ಚಿಸುವ'

ಹೊಲಬು ತಪ್ಪಿ ಹರಿಯುತಿದ್ದ ಮಾತಿನ ಹೊನಲನ್ನು ಸರಿದಾರಿಗೆ ತರುವ ಉದ್ದಿಶ್ಯದಿಂದ ಅರಿಕೇಸರಿ ಉದ್ಗರಿಸಿದ.

'ನಿನಗಿದು ತನಕ ಅಡ್ಡಿಯಾಗಿ ನಿಂತವರು ಯಾರು?'

ಅರಿಕೇಸರಿಯನ್ನು ನುಂಗಿಬಿಡುವವನಂತೆ—ಅವನನ್ನೇ ಕೆಕ್ಕರಿಸಿ ನೋಡುತ್ತ ಕಕ್ಕರಸ ನುಡಿದ.

'ನಿಮ್ಮ ಅಡ್ಡಿ ಆತಂಕಕ್ಕೆ ಹೆದರಿ ನಾನು ತೆಪ್ಪಗೆ ಕುಳಿತಿಲ್ಲ. ಪ್ರಭುಗಳ ಅನುಮತಿಗಾಗಿ ಕಾಯುತಿದ್ದೆ.'

'ನಾವು ಕರೆಸಿದ್ದು ಸಂಧಾನಕ್ಕೆ. ನೀವು ಸಂಗ್ರಾಮಕ್ಕೇ ಅಣಿಯಾಗುವಂತಿದೆ.'

ಅವರಿಬ್ಬರ ಮಾತಿನ ಮಧ್ಯೆ ಪ್ರವೇಶಿಸಿ, ಸಾಮ್ರಾಟರು ತಾಳ್ಮೆಯಿಂದ ನುಡಿದರು. ಉದ್ವಿಗ್ನಗೊಂಡ ಜನರ ಮನಸ್ಸು ಉಪಶಮನಗೊಳ್ಳಲಿ ಎಂದು. ಅನಂತರ ಅವರೇ ಮಾತನ್ನು ಮುಂದುವರಿಸಿದರು. 'ವಿಜಯಾದಿತ್ಯರನ್ನು ಸಿಂಹಾಸನದಿಂದ ತಳ್ಳಿ, ಬಾದಾಮಿಯನ್ನು ಕೈವಶ ಮಾಡಿಕೊಂಡಿರಲ್ಲ. ಏನು ಕಾರಣ? ನಿಮ್ಮಿಂದ ಅದನ್ನು ನಾವು ತಿಳಿಯ ಬಯಸುತ್ತೇವೆ, ಬಪ್ಪರಸರೇ.'

'ಅಗತ್ಯವಾಗಿ'

'ಅದಕ್ಕಿದ್ದ ಅವಶ್ಯಕತೆ?'

'ಆಡಳಿತದಲ್ಲಿ ಶಿಥಿಲತೆ ಕಂಡುಬಂತು. ಜನಹಿತದ ಕಡೆ ಆಳರಸರ ನಿರ್ಲಕ್ಷ್ಯ ಅಧಿಕವಾಯಿತು. ಅದರಿಂದ ಪ್ರಜೆಗಳಲ್ಲಿ ಭಯಭೀತಿ ಹೆಚ್ಚಿತು. ಶತ್ರುಗಳ ಧಾಳಿಗೆ ದುರಾಡಳಿತ ದಾರಿ ಮಾಡಿಕೊಟ್ಟಿತು. ಬಾದಾಮಿ ಚಾಳುಕ್ಯರಿಗೆ ಸೇರಿದ್ದು. ಅದು ನಮ್ಮ ಕಣ್ಣ ಮುಂದೆಯೇ ಮಣ್ಣುಪಾಲಾಗುವುದನ್ನು ನೋಡಲಾಗಲಿಲ್ಲ. ಅದಕ್ಕಾಗಿ ವಶಪಡಿಸಿಕೊಂಡೆವು.'

ಕಕ್ಕರಸ ಖಂಡತುಂಡವಾಗಿ ಮಾತಾಡಿದ.

'ಬಾದಾಮಿಯನ್ನು ಆಳಿದವರು ನಿಮ್ಮವರೇ. ಅದು ಚಾಳುಕ್ಯರದೆ. ಅದನ್ನು ರಕ್ಷಿಸಬೇಕಾದ್ದು ಧರ್ಮವೇ.'

'ಆ ರಕ್ಷಣೆಯ ಕೆಲಸಕ್ಕೆ ನಾವು ಕೈ ಹಾಕಿದೆವು. ಅದರಲ್ಲಿ ನಮ್ಮ ತಪ್ಪಾದರೂ ಏನಿದೆ?'

ಬಪ್ಪುವ ನಡುವೆ ಬಾಯಿ ಹಾಕಿ, ತಮ್ಮ ನಡತೆಯನ್ನು ಸಮರ್ಥಿಸಿಕೊಂಡ.

'ಮಧ್ಯೆ ಪ್ರವೇಶಿಸ ಬೇಡಿ ಬಪ್ಪರಸರೇ. ನಾವು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಬಾದಾಮಿಯನ್ನುಳಿಸಲು ಹೋದ ನೀವು ವಿಜಯಾದಿತ್ಯರನ್ನೇಕೆ ಪಟ್ಟದಿಂದ ತಳ್ಳಿದಿರಿ? ಬಾದಾಮಿಯ ಆಡಳಿತ ಅಭದ್ರವೆನಿಸಿದರೆ, ಅದನ್ನು ಸರಿಗೊಳಿಸಿ, ವಿಜಯಾದಿತ್ಯರನ್ನು ಅಲ್ಲೇ ಉಳಿಸಿಕೊಳ್ಳಬೇಕಾಗಿತ್ತು.'

'ಅವರು ಮುಂದುವರಿಯುವುದಕ್ಕೆ ಜನ ಒಪ್ಪಬೇಕಲ್ಲ." ಕಕ್ಕರಸನ ಕೊಂಕು ಮಾತು.

'ಜನರೇ ಅವರನ್ನು ಬೇಡವೆಂದರೋ ಅಥವಾ ನೀವೇ ದೇಶಾಂತರ ಓಡಿಸಿದಿರೋ?'

'ನಾವು ಅವರನ್ನೆಲ್ಲಿ ಓಡಿಸಿದೆವು. ಬದುಕಿದರೆ ಬೇಡಿ ತಿಂದೇನು ಎಂದು ಅವರೇ ತಲೆಮರೆಸಿಕೊಂಡು ಕಂಡೆಡೆ ಅಲೆದರು. ನಾವೇನು ಮಾಡುವುದಕ್ಕೆ ಆಗುತ್ತೆ?'

'ಹಿರಿಯರಾದ ಅವರನ್ನು ಎಲ್ಲಿದ್ದರೂ ಹುಡುಕಿ ತಂದು ಸಿಂಹಾಸನದಲ್ಲಿ ಕೂರಿಸುವ ಪ್ರಯತ್ನ ನಿಮ್ಮಿಂದ ನಡೆಯಿತೇ?'

ಪ್ರಭುಗಳ ಪ್ರಶ್ನೆ ಮಸೆದಲಗಿನಂತೆ ಹರಿತವಾಗಿತ್ತು.

(ಮುಂದುವರಿಯುವುದು)

ಹಸ್ನೋಂಡು

NAVAYUGA 29—6—1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪ್ರತ್ಯೇಕತೆಗೊಂದು ವ್ಯರ್ಥ ಪ್ರಯತ್ನ

(ಒಂದನೇ ಪುಟದಿಂದ)

ಕನ್ನೆನಿಸಬಾರದು. ಬಾಧಕವೆನಿಸಲೂ ಬಾರದು. ಸಂವಿಧಾನವು ಅಲ್ಪ ಸಂಖ್ಯಾಕರಿಗೆ ನೀಡಿರುವ ಅಧಿಕಾರವು ಬಹು ಸಂಖ್ಯಾಕರ ಮೇಲೆ ಮೆಟ್ಟಿ ನಿಲ್ಲುವುದಕ್ಕಲ್ಲ. ತಂತಮ್ಮ ಉತ್ಕರ್ಷವನ್ನು ಸಾಧಿಸಿ ಒಟ್ಟಿನಲ್ಲಿ ದೇಶದ ಉತ್ಕರ್ಷಕ್ಕೆ ಸಹಾಯಕವಾಗಬೇಕೆಂಬ ಸದುದ್ದೇಶ ಪ್ರೇರಿತವಾದುದು.

ಕೆಲವು ಮಂದಿ ಮುಸ್ಲಿಮರ, ಮುಸ್ಲಿಂ ಸಂಸ್ಥೆಗಳ ಜಾತೀಯ ಮನೋವೃತ್ತಿ ಅವರ ನಿಷ್ಠೆಯನ್ನೇ ಪ್ರಶ್ನಿಸುತ್ತದೆ. ಇಂದು ಇವರು ನಿರ್ಧಾರಾತ್ಮಕವಾಗಿ ಪರಿಶೀಲಿಸಬೇಕಾದ ವಿಷಯವೊಂದಿದೆ–ಅವರು ತಮ್ಮ ಪ್ರತ್ಯೇಕತೆಯನ್ನೇ ಉಳಿಸಿ ಸಂರಕ್ಷಿಸಿ 'ಮುಸ್ಲಿಮ' ರಾಗಿಯೇ ಉಳಿಯಲು ಬಯಸುತ್ತಾರೆಯೆ? ಅಥವಾ ಎಲ್ಲರೊಡನೆ ಕೂಡಿಕೊಂಡು ಭಾರತೀಯರಾಗಿ ಭಾರತೀಯತೆಯನ್ನು ಸಚೇತಗೊಳಿಸುವುದಕ್ಕಾಗಿ ಕಟಿಬದ್ಧರಾಗುತ್ತಾರೆಯೆ?

ವಿವೇಕಿಗಳಾದ ಮುಸ್ಲಿಮ ಬಂಧುಗಳು ಈ ಅಂಥ ಜಾತೀಯತೆಯ ಪ್ರತ್ಯೇಕವಾದಿಗಳಲ್ಲಿ ವಿವೇಕೋದಯ ಮೂಡಬೇಕು. ಇಲ್ಲವಾದರೆ, ಜಾತೀಯತೆಯ ಬೀಜ ನಿರ್ನಾಮವಾಗುವುದಿಲ್ಲ; ಅದು ಬೂದಿ ಮುಚ್ಚಿದ ಕೆಂಡವಾಗಿ ಉಳಿದುಕೊಳ್ಳುತ್ತದೆ; ಕನಗನುಕೂಲ ಪರಿಸ್ಥಿತಿ ತಲೆದೋರಿದಾಗ ನೊಳೆತು ಹೆಮ್ಮರವಾಗುತ್ತದೆ. ಇದು ಭಾರತದಂತಹ ಜಾತ್ಯಾತೀತ ರಾಷ್ಟ್ರಕ್ಕೆ ಕುಠಾರಪ್ರಾಯವಾಗುತ್ತದೆ. ಆಳುವ ಸರಕಾರ ಇದಕ್ಕೆಂದೂ ಅವಕಾಶ ಕೊಡಬಾರದು; ಕೊಡಲಾರದು.

● ●

ನೋಟೀಸು

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. G. No. 168/72

ಡಾ। ಸೀತಾರಾಮ ಆಚಾರ್ ಮುತ್ತು ಇತರರು — ಅರ್ಜಿದಾರರು

ಮತ್ತು

ರಾಮಚಂದ್ರ ಭಟ್ ಮತ್ತು ಕೃಷ್ಣ ಭಟ್ — ಎದ್ರಿರು

2ನೇ ಎದ್ರಿ ಕೃಷ್ಣ ಭಟ್ಟರಿಗೆ—

ಬೆಳ್ತಂಗಡಿ ತಾಲೂಕು, ಕೊಲಾಡಿ ಗ್ರಾಮದ ಕುಯೂರಡಿ ನಾರಾಯಣ ಭಟ್ಟರ ಮಗ,

ಈ ಮೇಲೆ ಹೇಳಿರುವ ಅರ್ಜಿಯಲ್ಲಿ ಅರ್ಜಿದಾರರು ಮೈಸೂರು ಲೇಂಡ್ ರಿಫೋರ್ಮ್ಸ್ ಏಕ್ಟ್‌ನ ಸೆಕ್ಷನ್ 8, 9, & 42ರ ಪ್ರಕಾರ ಗೇಣಿಬಾಕಿಗೆ ನಿಮ್ಮಿಬ್ಬರ ಮೇಲೆ ಅರ್ಜಿಮಾಡಿರುವುದರಿಂದ ನಿಮ್ಮ ಹಾಜರಾತಿಗಾಗಿಟ್ಟ ಇದೇ ಬರುವ ಜುಲೈ ತಾ. 17ರಂದು ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಿನಿಂದಾಗಲೀ, ವಕೀಲರ ಮುಖಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು ಶಿಖ್ಖಾ ಮಾಡಿ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾಗುವುದು ಎಂತ ಕೋರ್ಟ ಹುಕುಂ ಪ್ರಕಾರ ತಿಳಿಸೋಣವಾಗಿದೆ.

ಕುಕ್ಕಜೆ ರಾಮಕೃಷ್ಣ ಭಟ್
B. Sc., B. L.
(ಎಡ್ವಕೇಟ್ ಅರ್ಜಿದಾರರ ಕಡೆ)

ಬೆಳ್ತಂಗಡಿ, 20—6—72

ವಿಶ್ವ ಭಾಷೆಗಳು

ವಿಶ್ವ ಭಾಷೆಗಳೆಷ್ಟು? ತಜ್ಞರು ಹೇಳುವಂತೆ 2796 ಭಾಷೆಗಳೂ 3 ಸಾವಿರ ಉಪ ಭಾಷೆಗಳೂ, ಲ್ಯಾಟಿನ್, ಹಿಟ್ಟಿಟ, ಪುರಾತನ ಗ್ರೀಕ್, ಅಮ್ಮಿರಿಯೂಕ್ ಮುಂತಾದ ಮೃತ ಭಾಷೆಗಳೂ ಸೇರಿವೆ. ಆದರೆ ಜಗತ್ತಿನ ಪ್ರಾಮುಖ್ಯ ಭಾಷೆಗಳು ಹದಿಮೂರು ಮಾತ್ರ. ಸುಮಾರು 65 ರಾಷ್ಟ್ರಗಳ ರಾಜ್ಯ ಭಾಷೆಗಳಾದ ಈ ದೊಡ್ಡ ಭಾಷೆಗಳನ್ನು 50 ದಶಲಕ್ಷಕ್ಕೂ ಹೆಚ್ಚು ಮಂದಿ ಸಂಭಾಷಿಸುತ್ತಾರೆ. ವಿಶ್ವದ ಮೂರನೇ ಎರಡು ಪಾಲು — ಅಂದರೆ 3,500,000,000 ಮಂದಿ ಈ ಭಾಷೆಗಳನ್ನು ಬಲ್ಲರು.

ಆ 13 ಭಾಷೆಗಳಲ್ಲಿ ಚೀನಿ 700 ದಶಲಕ್ಷ, ಇಂಗ್ಲೀಷ್ 250 ದಶಲಕ್ಷ. ಅರಾಬಿಕ್ 70 ದಶಲಕ್ಷ, ಜರ್ಮನ್ 100 ದಶಲಕ್ಷ, ಹಿಂದಿ ಹಾಗೂ ಉರ್ದು 280 ದಶಲಕ್ಷ, ಇಂಡೋನೇಷಿಯನ್ 80 ದಶಲಕ್ಷ, ಫ್ರೆಂಚ್ 80 ದಶಲಕ್ಷ, ಸ್ಪಾನಿಷ್ 150 ದಶಲಕ್ಷ, ಜಪಾನಿ 100 ದಶಲಕ್ಷ, ಬಂಗಾಲಿ 60 ದಶಲಕ್ಷ, ರಷ್ಯನ್ 130 ದಶಲಕ್ಷ, ಇಟಾಲಿಯನ್ 60 ದಶಲಕ್ಷ, ಪೋರ್ಚುಗೀಸ್ 80ದಶಲಕ್ಷ, ಮಂದಿಯ ಆಡುಮಾತಾಗಿದೆ. ವಿಶ್ವದ ನಾಲ್ವರಲ್ಲಿ ಒಬ್ಬನು ಚೀನೀ ಮಾತನಾಡುತ್ತಾನೆ. ಅನಂತರದ ಸ್ಥಾನ ಹಿಂದಿಗೆ. ಈ ಭಾಷೆಗಳು ಹಲವು ಪ್ರಮುಖ ರಾಷ್ಟ್ರಗಳ ಕಲೆ, ವ್ಯಾಪಾರ ಮತ್ತು ರಾಜತಂತ್ರಗಳೊಂದಿಗೆ ಸಾಮಾಜಿಕ ಅಭಿವೃದ್ಧಿಗೆ ಸಹಕಾರಿಯಾಗಿವೆ.

ಆದರೆ, ವರ್ತಮಾನ ದಿನ ಪತ್ರಿಕೆಗಳು ಹೆಚ್ಚು ಪ್ರಕಟವಾಗುವುದು ಇಂಗ್ಲೀಷಿನಲ್ಲಿ ಈ ಭಾಷೆಯಲ್ಲಿ 2430 ದಶಲಕ್ಷ ಪತ್ರಿಕೆಗಳಿದ್ದರೆ ಅತಿ ಕಮ್ಮಿಯೆಂದರೆ ಇಟಲಿಯಲ್ಲಿ 130 ದಶಲಕ್ಷ ಪತ್ರಿಕೆಗಳೂ, ಸ್ಪೇನಿನಲ್ಲಿ 1000ದಶಲಕ್ಷ, ಭಾರತೀಯ ಭಾಷೆಗಳಲ್ಲಿ 500 ದಶಲಕ್ಷ ಜರ್ಮನಿಯಲ್ಲಿ 670 ದಶಲಕ್ಷ, ರಷ್ಯದಲ್ಲಿ 250 ದಶಲಕ್ಷ, ಡಚ್‌ನಲ್ಲಿ 140 ದಶಲಕ್ಷ, ಚೀನದಲ್ಲಿ 550 ದಶಲಕ್ಷ, ಜಪಾನಿನಲ್ಲಿ 160 ದಶಲಕ್ಷ. ಫ್ರೆಂಚ್‌ನಲ್ಲಿ 270 ದಶಲಕ್ಷ ಪ್ರಕಟವಾಗುತ್ತದೆ. ಇದರ ಪ್ರಸಾರ ಇಂಗ್ಲೀಷಿನಲ್ಲಿ 98 ದಶಲಕ್ಷ, ಇಟಲಿಯಲ್ಲಿ 5–7 ದಶಲಕ್ಷ, ಸ್ಪೇನಿನಲ್ಲಿ 11 ದಶಲಕ್ಷ, ಭಾರತೀಯ ಭಾಷೆಗಳಲ್ಲಿ 3.5 ದಶಲಕ್ಷ, ಜರ್ಮನಿಯಲ್ಲಿ 20 ದಶಲಕ್ಷ, ರಷ್ಯದಲ್ಲಿ 30 ದಶಲಕ್ಷ, ಡಚ್‌ನಲ್ಲಿ 4.5 ದಶಲಕ್ಷ, ಚೀನದಲ್ಲಿ 7.3 ದಶಲಕ್ಷ, ಜಪಾನಿನಲ್ಲಿ 36 ದಶಲಕ್ಷ, ಫ್ರೆಂಚ್‌ನಲ್ಲಿ 14 ದಶಲಕ್ಷ ಪ್ರಸಾರವಿದೆ. ಪೋರ್ಚುಗೀಸ್‌ನ 260 ದಶಲಕ್ಷ, ಪತ್ರಿಕೆಗಳ ಪ್ರಸಾರ 3.5 ದಶಲಕ್ಷ.

ಪುಸ್ತಕಗಳನ್ನು ಹೆಚ್ಚು ಪ್ರಕಟಿಸುವ ರಷ್ಯನ್ ಭಾಷೆಯಲ್ಲಿ ತಾಂತ್ರಿಕ ಮತ್ತು ವಿಜ್ಞಾನದ ಅಸಂಖ್ಯ ಗ್ರಂಥಗಳು ಪ್ರಕಟವಾಗುತ್ತವೆ. ತಾಂತ್ರಿಕ ಗ್ರಂಥಗಳು ಅಲ್ಲಿ 28 ಸಾವಿರ ದಶಲಕ್ಷ, ಜರ್ಮನಿಯಲ್ಲಿ 6200 (ದಶಲಕ್ಷಗಳಲ್ಲಿ) ಜಪಾನಿ 4 ಸಾವಿರ, ಸ್ಪಾನಿಷ್ 1800, ಇಟಾಲಿಯನ್ 2300, ಇಂಗ್ಲೀಷ್ 9,200, ಫ್ರೆಂಚ್ 2,200 ಗ್ರಂಥಗಳು ಅಚ್ಚಾಗುತ್ತವೆ. ಇತರ ಪ್ರಕಟಿತ ಗ್ರಂಥಗಳು 1956ರಿಂದ 1959ರ ವರೆಗಿನ ಅಂಕಿ ಸಂಖ್ಯೆಗಳಂತೆ ಇಂಗ್ಲಿಷ್‌ನಲ್ಲಿ 42ಸಾವಿರ (ದಶಲಕ್ಷ), ರುಮೇನಿಯನ್ 5.600 ಇಟಾಲಿಯನ್ 13 ಸಾವಿರ, ರಷ್ಯನ್ 58,100 ಫ್ರೆಂಚ್ 16 ಸಾವಿರ, ಜಪಾನಿ 25 ಸಾವಿರ, ಸ್ಪಾನಿಷ್ 15ಸಾವಿರ, ಪೋರ್ಚ್‌ಗೀಸ್ 8 ಸಾವಿರ, ಸ್ವೀಡಿಷ್ 6ಸಾವಿರ ಗ್ರಂಥಗಳೂ ಉಳಿದ ಭಾಷೆಗಳಲ್ಲಿ 30,670 ಗ್ರಂಥಗಳೂ ಅಚ್ಚಾಗುತ್ತವೆ. ಪ್ರತಿ ವರುಷ ಜಗತ್ತಿನಲ್ಲಿ ಅನುವಾದ ಮಾಡುವ 30 ಸಹಸ್ರ ದಶಲಕ್ಷ ಗ್ರಂಥಗಳ ಪೈಕಿ ಮೂರನೆಯ ಒಂದು ಪಾಲು ಇಂಗ್ಲೀಷಿನಿಂದಲೂ 0.1 ಜರ್ಮನ್‌ನಿಂದಲೂ, 0.15 ರಶಿಯದಿಂದಲೂ 0.13 ಫ್ರೆಂಚ್ ಭಾಷೆಯಿಂದಲೂ ಭಾಷಾಂತರ ಮಾಡಲ್ಪಡುತ್ತಿದೆ. ವಿಶ್ವದಲ್ಲಿರುವ ಉತ್ಕೃಷ್ಟ ಗ್ರಂಥಗಳು ಶೇ. 1.5ರಷ್ಟು ಮಾತ್ರ ಭಾಷಾಂತರ ಮಾತ್ರ ಪೂರ್ಣವೆಯಾಗುತ್ತವೆಂದಿದ್ದಾರೆ, ತಜ್ಞರು.

ತಾಯ್ನಾಡಿನಿಂದ ಬಹು ದೂರಕ್ಕೆ ಪ್ರಸಾರವಾದ ಪ್ರಥಮ ಭಾಷೆಯಾದ ಸ್ಪಾನಿಷನ್ನು ದಕ್ಷಿಣ ಅಮೇರಿಕದ 20 ದೇಶಗಳಿಗೆ ಹರಡಿದವ ಕೊಲಂಬಸ್. ಇಂಗ್ಲೀಷ್ 15 ರಾಷ್ಟ್ರಗಳಲ್ಲಿ ಹೆಚ್ಚು ಪ್ರಸಾರವಿರುವ ಭಾಷೆ. ಅರಾಬಿಕ್ 13 ರಾಷ್ಟ್ರಗಳಲ್ಲಿ, ಫ್ರೆಂಚ್ 9ರಲ್ಲಿ ಜರ್ಮನಿ 3ರಲ್ಲೂ ಪ್ರಸಾರವಿದೆ. ಆದರೆ ವಿಜ್ಞಾನದ ಅಭಿವೃದ್ಧಿಗೆ; ನಾಡ ಮುನ್ನಡೆಗೆ ಅವಶ್ಯವೆನ್ನುವ ರಶಿಯನ್ ಭಾಷೆ ಕಲಿಯುವುದರಲ್ಲಿ ಮಾತ್ರವಿದೆ. ಅಸಂಖ್ಯ ಉಪಭಾಷೆಗಳಿರುವ ಚೀನೀ ಭಾಷೆ ಬರ್ಮಾ, ಥೈಲ್ಯಾಂಡ್, ಇಂಡೋನೇಷ್ಯಾ, ಸಿಂಗಾಪುರಗಳಲ್ಲಿ ಒಂದು ಕೋಟಿ ಮಂದಿಗೆ ಆಡು ಮಾತಾಗಿದೆ.

10 ಲಕ್ಷಕ್ಕಿಂತ ಹೆಚ್ಚು ಜನರು ಮಾತನಾಡುವ ಭಾಷೆ ಇನ್ನೂರಕ್ಕಿಂತಲೂ ಕಮ್ಮಿ. ಅಮೇರಿಕದ ಆದಿವಾಸಿಗಳಲ್ಲಿ ಸಾವಿರ ಭಾಷೆಗಳೂ, ಆಫ್ರಿಕದ ಆದಿವಾಸಿಗಳಲ್ಲಿ 500, ಏಶಿಯಾ ಮತ್ತು ಶಾಂತಸಾಗರ ದ್ವೀಪಗಳಲ್ಲಿ 500 ಭಾಷೆಗಳೂ ಬಳಕೆಯಲ್ಲಿವೆ.

1950ರ ಗಣತಿಯಂತೆ ಇಂಗ್ಲೀಷ್ ಮಾತನಾಡುವವರು ಬ್ರಿಟನಲ್ಲಿ 5 ಕೋಟಿ, ಅಮೇರಿಕದಲ್ಲಿ 16–17 ಕೋಟಿ ಕೆನಡಾದಲ್ಲಿ 1.50 ಕೋಟಿ, ನ್ಯೂಝಿಲ್ಯಾಂಡ್ ಮತ್ತು ಆಸ್ಟ್ರೇಲಿಯದಲ್ಲಿ 1 ಕೋಟಿ, ಆಫ್ರಿಕಾದಲ್ಲಿ 30 ಲಕ್ಷ ಮಂದಿ ಇದ್ದಾರೆ.

ಬ್ರೆಜಿಲ್‌ನಲ್ಲಿ 5 ಕೋಟಿ ಮಂದಿ ಸ್ಪಾನಿಷ್ ಭಾಷೆ ಮಾತನಾಡುತ್ತಿದ್ದರು. ಭಾರತ ಪಾಕಿಸ್ತಾನಗಳಲ್ಲಿ ಉರ್ದು ಹಾಗೂ ಹಿಂದಿ ಮಾತನಾಡುವವರು 16ಕೋಟಿ, ಬಂಗಾಲಿ ಭಾಷಾಪ್ರಿಯರು 6 ಕೋಟಿ ಇದ್ದರು. ಜಗತ್ತಿನಲ್ಲಿ 60 ಕೋಟಿಗಿಂತಲೂ ಹೆಚ್ಚು ಮಂದಿ 1955ರಲ್ಲಿ ಇಂಗ್ಲೀಷ್ ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದರು. ಉತ್ತರ ಆಫ್ರಿಕಾ, ಸಿರಿಯಾ, ಈಜಿಪ್ಟ್, ಲೆಬನಾನ್, ಇರಾಕ್, ಯೆಮನ್, ಜೋರ್ಡಾನ್, ಸೌದಿ ಅರೇಬಿಯಗಳ 35 ಕೋಟಿ ಮುಸ್ಲಿಮರಿಗೆ ಅರಬಿ ಮಾತೃಭಾಷೆಯಾಗಿತ್ತು. ಇಷ್ಟೆಲ್ಲ ಭಾಷೆಗಳು ಪ್ರಚಲಿತವಾಗಿದ್ದರೂ ಭಾಷಾ ಸಮಸ್ಯೆಯನ್ನು ಅಧ್ಯಯನ ಮಾಡಿರುವ ತಜ್ಞರು ಪ್ರತಿಯೊಂದು ರಾಷ್ಟ್ರಗಳವರೂ ಅವಶ್ಯವಾಗಿ ರಶಿಯನ್ ಭಾಷೆಯನ್ನು ಕಲಿಯಬೇಕೆಂದು ಸಲಹೆನೀಡಿದ್ದಾರೆ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3212

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. No. 22/70

ನಾಗರತ್ನ ಕೂಡ— ವಾದಿರು

ಮತ್ತು

ಶಂಕರನಾರಾಯಣ ಹೊಳ್ಳ ಕೂಡಾ —ಪ್ರತಿವಾದಿರು

ನೋಟೀಸು

ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಮಣಿಪಾಲದಲ್ಲಿರುವ [illegible] ಸುರೊನ್ನಾಳ್ ಮಗಳು 20ನೇ ಪ್ರತಿವಾದಿ ಅಲ್ಲಿ ನೋಟೊನ್ನಾ [illegible] ಇವರಿಗೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಾಣಿಸಿದ ಹುಕ್ಕಿಜ್ಜವು ನಿಮ್ಮ ಹಾಜರಾತಿ ಬಗ್ಗೆ ತಾ. 4-7-72ಕ್ಕೆ ಇಟ್ಟಿರುತ್ತದೆ. ಅಂದಿನ ಬೆಳಗ್ಗೆ 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಸ್ವತಹ–ಯಾ–ವಕೀಲರ ಮುಖಾಂತರ ಹಾಜರಾಗಿ ವ್ಯವಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವನ್ನು ತೀರ್ಮಾನಿಸಲಾಗುವುದು.

ಕೋರ್ಟು ಹುಕ್ಕುಂ ಮೇರೆಗೆ

P. N. Krishnamoorthy Rao
ವಾದಿಯ ಕಡೆ ಎಡ್ವಕೇಟ್

ಉಡುಪಿ, ತಾ. 19—6—72

Edited, Printed & Published by K. L. Shetty at the Navayuga Press, Udipi. In India

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾಯಕ
ಆಯುರ್ವೇದಾಶ್ರಮ
ಕಟಪಾಡಿ. ದ. ಕ.

ನವಯುಗ

ಸೋಲ್ತುರಗತಿಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ
ಕಾರ್ಕಳ

ಸಂಪುಟ ೩೧
ಸಂಚಿಕೆ ೪೪

NAVAYUGA

6-7-1972

ಅನಿಶ್ಚಿತತೆಯ ಸುಳಿಯಲ್ಲಿ

ಸರಕಾರದ ಮಂತ್ರಿಮಾಗಧರು

ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಿಯಾದ ನಂತರ ಅವರ ಮಂತ್ರಿಗಳಿಗೆ ಯಾವ ಭದ್ರತೆಯೂ ಇಲ್ಲವೆಂಬುದು ಅವರ ಸಂಪುಟದ ಸದಸ್ಯರೆಲ್ಲರಿಗೂ ಅನುಭವಕ್ಕೆ ಬಂದ ಸಂಗತಿ. ಶ್ರೀ ಮುರಾರ್ಜಿ ಭಾಯಿಯನ್ನು ಹಿಂದು ಮುಂದು ನೋಡದೆ 'ಮನೆಗೆ ಅಪ್ಪಣೆ ಕೊಟ್ಟು' ಹೋರಾಟಕ್ಕೆ ಇಳಿದು, ವಿಜಯಶ್ರೀಯನ್ನು ಅಪ್ಪಿಕೊಂಡ ಮೇಲೆ ಅವರ ಬಗ್ಗೆ ಎಲ್ಲರಿಗೂ ಸಂದೇಹವೇ. ಆದುದರಿಂದಲೇ ಸಂಸತ್ತಿನ ಅಧಿವೇಶನಗಳು ಆರಂಭವಾಗುವುದಕ್ಕೆ ಮೊದಲು ಕೊನೆಗೊಂಡೊಡನೆ ಶ್ರೀಮತಿಯವರು ಸಚಿವ ಸಂಪುಟವನ್ನು ಪುನರ್ಘಟಿಸುವರೆಂಬ ಮಾತು ದೇಶ ವ್ಯಾಪ್ತವಾಗುತ್ತ ಬಂದಿದೆ. ಆದರೆ, ಈ ಭವಿಷ್ಯ ಒಂದು ವರ್ಷದಿಂದ ಸುಳ್ಳಾಗುತ್ತಲಿದೆ.

ಈ ಬಾರಿಯೂ ಸಚಿವ ಸಂಪುಟದ ಪುನರ್ಘಟನೆಯ ಮಾತು ಬಹಳವಾಗಿ ಕೇಳಿ ಬಂತು. ಇದು ಊಹನೆಯಂತೆ ನಡೆದೇ ಹೋಗುತಿದ್ದರೆ ದೊಡ್ಡ ಬಿರುಗಾಳಿಯೇ ಬೀಸಿ ಹೋಗುತ್ತಿತ್ತು. ಆದರೆ ಅದು ಸಂಭವಿಸಲಿಲ್ಲ. ಶ್ರೀಮತಿ ಗಾಂಧಿಯವರು ತನ್ನ ಸಂಪುಟದ ಹಿರಿಯ (ತನಗಿಂತ?) ಸದಸ್ಯರಿಗೇ ಅರ್ಧಚಂದ್ರ ಪ್ರಯೋಗ ಮಾಡಲು ಹಲವು ದಿನಗಳಿಂದಲೂ ಯೋಚಿಸ ತೊಡಗಿದ್ದಾರೆಂಬುದು ನಿಜ. ಆದರೆ, ಅವರಿಗೆ ಈ ನಿಟ್ಟಿನಲ್ಲಿ ಹಲವು ಅಡೆತಡೆಗಳಿವೆಯೆಂಬುದೂ ಅಷ್ಟೇ ಸತ್ಯ.

ಶ್ರೀಮತಿಯವರು ಮೆಚ್ಚಿದವರ ಪಟ್ಟಿಯಲ್ಲಿ ಜಗಜ್ಜೀವನರಾಮ ಮತ್ತು ಯಶವಂತ ರಾವ್ ಬಲವಂತ ರಾವ್ ಚವಣರು ರಾಮ ಲಕ್ಷ್ಮಣರಿದ್ದಂತೆ. ಇವರಿಬ್ಬರೂ ತನ್ನ ಪ್ರಬಲ ಪ್ರತಿಸ್ಪರ್ಧಿಗಳೆಂಬುದು ಅವರ ಮನೋಭಾವ. ಶ್ರೀ ಚವನರು ರಾಷ್ಟ್ರಪತಿ ಚುನಾವಣೆಯ ವೇಳೆ ತನ್ನ ಆತ್ಮಸಾಕ್ಷಿ ಪಕ್ಷವನ್ನು ಪ್ರತಿಭಟಿಸಿ ಮಾಡಿದ ಅಪರಾಧವನ್ನವರೆಂದೂ ಮನ್ನಿಸಲಾರರು. ಆದುದರಿಂದಲೇ ಶ್ರೀ ಚವನರ ಸ್ಥಾನ—ಮಾನಗಳನ್ನು ಹಂತ ಹಂತವಾಗಿ ಇಳಿಸುತ್ತ ಬಂದರು. ಆದರೂ ತನ್ನ ಉಜ್ವಲ ಭವಿಷ್ಯದಲ್ಲಿ ಅಚಲ ವಿಶ್ವಾಸ ಹೊಂದಿರುವ ಶ್ರೀ ಚವನರು ತನಗಾಗುತ್ತಿರುವ ಅಪಮಾನವೆಲ್ಲವನ್ನೂ ನುಂಗಿಕೊಂಡು ಮಂತ್ರಿಯಾಗಿ ಮುಂದುವರಿದಿದ್ದಾರೆ. ಚವನರನ್ನು ಮನೆಗೆ ಕಳಿಸಲು ಶ್ರೀಮತಿ ಇಂದಿರಾ ಗಾಂಧಿ ಚಿಂತಿಸುವುದಿಲ್ಲ; ಆದರೆ, ಅದರಿಂದಾಗ ಬಹುದಾದ ರಾಜ್ಯಕೀಯಕ್ಕೆ ಮಾತ್ರ ಅವರು ಹೆದರುತ್ತಾರೆ. ಅವರಿಗೆದುರು ನಾಯಕರನ್ನು ಎತ್ತಿ ಕಟ್ಟಿದರೂ ಚವನರನ್ನು ಸಂಪೂರ್ಣ ನಿಸ್ತೇಜ ಗೊಳಿಸಲು ಅವರು ಇನ್ನೂ ಅಶಕ್ತರಾಗಿದ್ದಾರೆ. ಆದುದರಿಂದ ಚವನರ ಕೈಯಿಂದ ಎಲ್ಲ ಅಧಿಕಾರವನ್ನೂ ಕಸಿದುಕೊಂಡು, ಅವರನ್ನು ನಾಮ ಮಾತ್ರಕ್ಕೆ ಉಳಿಸಿಕೊಳ್ಳುವ ಯೋಚನೆ ಅವರದು. ಇದಕ್ಕೇ ಶಿವಾಜಿ ವಂಶಜರ ಪ್ರತಿಕ್ರಿಯೆಯೇನು ಬಂದೀತೆಂದು ನೋಡಲವರು ದಾಳ ಉರುಳಿಸುತಿದ್ದಾರೆ.

ಶ್ರೀ ಜಗಜ್ಜೀವನ ರಾಮರು ಹಿಂದುಳಿದ ಹರಿಜನರಲ್ಲಿ ವಾಗಿರುತಿದ್ದರೆ, ಅವರೆಂದೋ ಮಣ್ಣಿನಲ್ಲಿ ಸೇರಿ ಹೋಗುತ್ತಿದ್ದರು. ಸುಶಿಕ್ಷಿತ ಹರಿಜನನೆಂಬುದರಿಂದವರು ಹರಿಜನನಾಯಕರಾದರು, ಹರಿಜನನಾಯಕರೆಂಬುದರಿಂದ ಮಂತ್ರಿಯಾದರು. ಅದೇ ಕಾರಣದಿಂದ ಅದೇ ಸ್ಥಾನದಲ್ಲಿ ಮುಂದುವರಿಯುತ್ತಿದ್ದಾರೆ. ಶ್ರೀ ಜಗಜ್ಜೀವನ ರಾಮರನ್ನು ಪ್ರತ್ಯಕ್ಷ ರಾಜ್ಯಕಾರಣದಿಂದ ದೂರವಿರಿಸುವ ಒಂದಲ್ಲ ಹಲವು ಕ್ರಮಗಳನ್ನು ಶ್ರೀಮತಿ ಗಾಂಧಿಯವರು ಕೈಕೊಂಡರು; ಆದರೆ, ಶ್ರೀರಾಮರು ಅದರ ಮುಂದೆ ಜಪ್ಪೆನ್ನಲಿಲ್ಲ.

ಶ್ರೀ ರಾಮರನ್ನು ತನ್ನ ಕಾಂಗ್ರೆಸ್‌ನ ಅಧ್ಯಕ್ಷರನ್ನಾಗಿ ಮಾಡಿ ನೋಡಿದರು ಶ್ರೀಮತಿ ಗಾಂಧಿ. ಮಂತ್ರಿ ಪದವನ್ನೂ ಅಧ್ಯಕ್ಷಗಿರಿಯನ್ನೂ ಎರಡನ್ನೂ ಸರಿಯಾಗಿ ನೋಡಿಕೊಳ್ಳುವ ಸಾಮರ್ಥ್ಯ ತನ್ನಲ್ಲಿದೆಯೆಂದು ಶ್ರೀ ರಾಮರ್ ಸಾಬೀತಿಯಿಂದಲೇ ಹೇಳಿದರು. ಒಬ್ಬನಿಗೆ ಒಂದೇ ಹುದ್ದೆ ಎಂಬ ನಿಯಮ, ಅಸಾಧಾರಣ ಪರಿಸ್ಥಿತಿಯಲ್ಲಿ ಅನುಕರಣೀಯವಲ್ಲವೆಂದರು ಅವರು; ಶ್ರೀಮತಿ ಗಾಂಧಿಯವರು ಅವರ ಮುಂದೆ ತಲೆಬಾಗಲಿಲ್ಲ. ಅಧಿಕ ಪ್ರಾಮುಖ್ಯವಾದ ಸಂರಕ್ಷಣಾ ವಿಭಾಗವನ್ನೇ ರಾಮರ ಹೆಗಲ ಮೇಲೆ ಹೊರಿಸಿದರು. ಮುಂದೆ, ಎರಡನ್ನೂ ಹೊರುವ ಶಕ್ತಿ ರಾಮರಲ್ಲಿದೆಯೆಂದು ಅವರೇ ಒಪ್ಪಿಕೊಂಡರು. ಕೆಲ ಸಮಯಾನಂತರ, ಶ್ರೀಮತಿಯವರೇ ಅಧ್ಯಕ್ಷ ಪದವನ್ನು ಮರಳಿ ಪಡೆದು ಅವರನ್ನು ಮಂತ್ರಿಯಾಗಿಯೇ ಉಳಿಸಿಕೊಂಡರು.

ಶ್ರೀ ರಾಮರಿಗೆದುರಾಗಿ ಆಂಧ್ರದ ಶ್ರೀ ಸಂಜೀವಯ್ಯನವರನ್ನು ಎತ್ತಿಕಟ್ಟುವ ಪ್ರಯತ್ನವನ್ನು ಶ್ರೀಮತಿ ಗಾಂಧಿ ಮಾಡಿದರು. ಇದರಲ್ಲಿ ಅವರು ಸಫಲರಾಗುತ್ತಿದ್ದರೋ ಏನೋ. ಆದರೆ, ಶ್ರೀರಾಮರ ಗ್ರಹಗತಿ ನೆಟ್ಟಗಿರುವುದರಿಂದಲೇ ಶ್ರೀ ಸಂಜೀವಯ್ಯನವರು ಅಕಾಲದಲ್ಲೇ ಇಹಲೋಕ ತ್ಯಜಿಸಿದರು. ಶ್ರೀ ರಾಮರಿಗೆದುರಾಗಿ ಮತ್ತೊಬ್ಬ ಸಮರ್ಥ ವಿಶ್ವಾಸಪಾತ್ರನನ್ನು ಶ್ರೀಮತಿ ಗಾಂಧಿ ಇನ್ನು ಅರಸಬೇಕಷ್ಟೆ. ಅವರು ಅದುವರೆಗೂ ಸುಮ್ಮನುಳಿಯಲು ಸಿದ್ಧರಿಲ್ಲ.

ಶ್ರೀ ಜಗಜ್ಜೀವನ ರಾಮರದ್ದು ಮಹತ್ವಾಕಾಂಕ್ಷೆಯ ವ್ಯಕ್ತಿತ್ವ. ಅಧಿಕಾರಕ್ಕೆ ಅಂಟಿಕೊಳ್ಳುವ ಜಾಯಮಾನ. ಸಣ್ಣಪುಟ್ಟ ಅಧಿಕಾರದಿಂದ ಅವರು ತೃಪ್ತರಾಗುವವರಲ್ಲ. ಪ್ರಧಾನಿ ಜವಾಹರಲಾಲರ ಉತ್ತರಾಧಿಕಾರಿಯಾಗಲು ತುದಿಗಾಲಲ್ಲಿ ನಿಂತವರು. ಅಂದು ತನಗೆ ದಕ್ಕದ ಪ್ರಧಾನಿ ಪಟ್ಟ ಶ್ರೀಮತಿ ಗಾಂಧಿಯವರಿರುವ ವರೆಗೆ ತನಗೆ ಎಟಕದ ದ್ರಾಕ್ಷೆಯೆಂಬುವವರಿಗೆ ಮನವರಿಕೆಯಾಗಿದೆ. ತಾನು ಪ್ರತ್ಯಕ್ಷ ರಾಜ್ಯಕೀಯದಿಂದ ನಿವೃತ್ತರಾಗುವುದಾದರೆ, ಸರ್ವೋಚ್ಚ ಹುದ್ದೆ ರಾಷ್ಟ್ರಪತಿ ಸ್ಥಾನ ದೊರೆಯುವುದಾದರೆ ಮಾತ್ರವೆಂಬ ನಿಲುವು ಅವರದ್ದಿದ್ದರೂ ಇರಬಹುದು.

ನವದೆಹಲಿಯಲ್ಲೊಂದು ಸುದ್ದಿ ಹರಡಿತು. ರಾಷ್ಟ್ರಪತಿ ಗಿರಿಯವರನ್ನು ಅಧಿಕಾರ ತ್ಯಜಿಸಲು ವಿನಂತಿಸಲಾಯ್ತು; ಆಗ ಅವರು ತಮ್ಮ ಸುಪುತ್ರ ಶ್ರೀ ಶಂಕರಗಿರಿಗೆ ಕೇಂದ್ರದಲ್ಲಿ ಸಚಿವಸ್ಥಾನ ನೀಡುವುದಾದರೆ ತಾನು ಸಿದ್ಧವೆಂದು ಉತ್ತರಿಸಿದರು.

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್. ಬೆಂಗಳೂರು-1.

ಎಮ್. ಸುಂದರ್‌ರಾವ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

'ರಾಜ್ಯ ಬೇಡ, ಕೋಶ ಬೇಡ, ಎಂದು ತಲೆ ತಪ್ಪಿಸಿಕೊಂಡು ತಿರುಗುತ್ತಿರುವವರನ್ನು ಕಾಲುಹಿಡಿದು ಕರೆದು ತಂದು, ಅಧಿಕಾರದಲ್ಲಿ ಕುಳ್ಳಿರಿಸಿ, ಅನ್ಯರಿಂದ ನಾವೇಕೆ ಅನಿಸಿಕೊಳ್ಳಬೇಕು?'

'ಅಂದರೆ ವಿಜಯಾದಿತ್ಯರನ್ನು ಪುನಃ ಗದ್ದುಗೆಗೇರಿಸುವುದು ನಿಮಗೆ ಬೇಕಿರಲಿಲ್ಲ.'

'ರಾಜ್ಯ ಅವರ ಕೈಬಿಟ್ಟಿತು. ಅವರೂ ಅದನ್ನು ಕೈಬಿಟ್ಟರು. ನಾಶ ಮಾಡಬಲ್ಲೆವು, ಹಿರಿಯರು ಕಟ್ಟಿದ್ದು, ನಮ್ಮ ಕೈಯಲ್ಲಾದರೂ ಇರಲಿ ಎಂದು ಆಕ್ರಮಿಸಿಕೊಂಡಿದ್ದನ್ನು ಅಂಕೆಯೊಳಗಿಟ್ಟುಕೊಂಡೆವು.'

'ಇದು ನ್ಯಾಯವೇ? ಧರ್ಮವೇ? ಅದನ್ನೇ ನಾವು ಕೇಳುತ್ತಿರುವುದು.'

'ಸೊತ್ತು ಒಬ್ಬರ ಕೈಯಿಂದೊಬ್ಬರಿಗೆ ಹೋಗುವುದು ನಿಯಮ.'

'ಅನ್ಯರದ್ದೆಂದು ಗೊತ್ತಿದ್ದರೂ, ಅದನ್ನವರಿಗೊಪ್ಪಿಸದೆ ತಮ್ಮಲ್ಲಿಯೇ ಇಟ್ಟುಕೊಳ್ಳುವುದನ್ನು ಬೇರೆ ಹೆಸರಿನಿಂದ ಕರೆಯಬೇಕಾಗುತ್ತೆ.'

ಪ್ರಭುಗಳ ಮಾತು ಕಹಿ ಗುಳಿಗೆಯಂತಿತ್ತು. ಯಾರೂ ಸುಲಭವಾಗಿ ನುಂಗಿಕೊಳ್ಳುವಂತಿರಲಿಲ್ಲ.

'ನಮ್ಮ ಮಾತಿನ ಅರ್ಥವಿಷ್ಟೆ. ಬಾದಾಮಿ ವಿಜಯಾದಿತ್ಯರ ಶಾಖೆಗೆ ಸೇರಿದ್ದು. ನೀವು ಅದನ್ನು ಅವರಿಗೇ ವಹಿಸಿ ಕೊಡಬೇಕಿತ್ತು. ಅಲ್ಲಿಯೇ ಬಪ್ಪರಸ ನೀವು ಎಡವಿದ್ದು.'

'ಹಲ—ಕೆಲವು ವರ್ಷಗಳಿಂದ ಬಾದಾಮಿ ಅವರ ಶಾಖೆಗೆ ಸೇರಿತ್ತು. ಅದಕ್ಕಿಂತಲೂ ಹಿಂದೆ ಅದನ್ನಾಳುತ್ತಿದ್ದವರು ಬೇರೊಂದು ಬಣದವರು. ನಮ್ಮ ಹಿರಿಯರು ಬಾದಾಮಿಯನ್ನು ಅವರಿಂದ ಕಿತ್ತುಕೊಂಡರು. ಈಗ ನಾವು, ನಾಳೆ ಇನ್ನಾರೋ ಅಲ್ಲಿ ತಮ್ಮ ಪಾದ ಊರಬಹುದು—ಎಲ್ಲ ರಾಜ್ಯ—ಸಾಮ್ರಾಜ್ಯಗಳ ಕತೆಯೂ ಹೀಗೆಯೇ! ಭೂಮಿದೇವಿ ಬಾಹು ಬಲಕ್ಕೆ ಬಾಗಿ ನಡೆಯುತ್ತಾಳೆ. ಆಕೆಗೆ ಅನೇಕ ಗಂಡಂದಿರು.'

'ಅಂದರೆ'

'ಬಿಡಿಸಿ ಹೇಳಲೆ?'

'ನಿಮ್ಮ ಬಾಯಿಂದಲೇ ಅದು ಬರಲಿ'

'ಔದ್ಧತ್ಯ ಎಂದು ಪರಿಗಣಿಸಬಾರದು.'

ಬಪ್ಪರಸ ವಿನಯದಿಂದ ಕೈಮುಗಿದು "ರಾಜದಂಡ ಹಿಡಿಯುವವರಲ್ಲಿ ರಾಜಸ ಗುಣ ಅಷ್ಟೋ—ಇಷ್ಟೋ ಇರಬೇಕು. ದಂಡ ಕಮಂಡಲು ಹಿಡಿಯುವವರಿಗೆ ಅದು ಎಂದೂ ಸಲ್ಲದ ಕೆಲಸ. ಸಿಕ್ಕಿದರೂ ಅವರಿಗೆ ದಕ್ಕದು.'

'ವಿಜಯಾದಿತ್ಯರು ಆ ಜಾಗವನ್ನು ಅಲಂಕರಿಸಲು ಅನರ್ಹರು ಎಂಬುದು ನಿಮ್ಮ ತೀರ್ಮಾನವೋ?'

'ನಾನು ಹಾಗೆ ಹೇಳಲಿಲ್ಲ. ಯಾರಲ್ಲಿ ಹೊರುವ ಸಾಮರ್ಥ್ಯವಿದೆಯೋ ಅವರ ಹೆಗಲ ಮೇಲೆ ಹೊರೆ ಬಿದ್ದಿದೆ.'

'ವಿಜಯಾದಿತ್ಯರನ್ನು ಇಟ್ಟುಕೊಂಡೇ, ಆ ಹೊಣೆ ಹೊತ್ತುಕೊಳ್ಳಬಹುದಿತ್ತು.'

'ರಾಜಕಾರ್ಯವನ್ನು ಮೂರನೆಯವರ ಮುಖಾಂತರ ನಿರ್ವಹಿಸುವುದು ಕಷ್ಟ ಸಾಧ್ಯ. ಪ್ರಭುಗಳಿಗೂ ಅದರ ಅನುಭವವಿರಬೇಕು.'

'ನಮ್ಮ ಅನುಭವ ತದ್ವಿರುದ್ಧವಾದುದು'

'ಅಪ್ಪಣೆಯಾಗಬೇಕು'

'ನಮ್ಮ ಅನೇಕ ರಾಜಕಾರ್ಯಗಳನ್ನು ಮೂರನೇಯವರ ಮುಖೇನ ಮಾಡಿಸಿದ್ದೇವೆ.'

'ಆಲೋಚನೆ ಹೇಳುವವರು ನಾವು—ನಮ್ಮ ಆಲೋಚನೆಯನ್ನು ಅರ್ಥಮಾಡಿಕೊಂಡು, ಅವಕ್ಕೆ ರೂಪುಕೊಡುವ ಧೃತಿ, ಕರ್ತೃತ್ವ ಶಕ್ತಿ, ಆ ಅನ್ಯರಲ್ಲಿ ಇಲ್ಲದಿದ್ದರೆ ಏನನ್ನೂ ಸಾಧಿಸಲು ಬರುವುದಿಲ್ಲ. ಆಲೋಚನೆಗಳೆಲ್ಲ ಆಕಾಶ ಕುಸುಮಗಳಾಗಿ ಉಳಿಯುತ್ತವೆ.'

'ನಮ್ಮದೂ ನಿಮ್ಮದೂ ಪ್ರಾಮಾಣಿಕ ಮತಭೇಧ. ಅದು ಹಾಗಿರಲಿ. ವಿಜಯಾದಿತ್ಯರಿಗೇ ಬಾದಾಮಿಯನ್ನು ಬಿಟ್ಟುಕೊಡುವುದಕ್ಕೆ ನೀವೇನು ಹೇಳುತ್ತೀರಿ?'

ಬಳಸು ಮಾತನ್ನು ತಳ್ಳಿಹಾಕಿ ಪ್ರಭುಗಳು ಮೂಲಕ್ಕೇ ಬಂದರು—

'ಬಾಹುಬಲದಿಂದ ನಾವು ಬಾದಾಮಿಯನ್ನು ಸ್ವಾಧೀನ ಮಾಡಿಕೊಂಡಿದ್ದೇವೆ. ತಾವು ಅಪ್ಪಣೆ ಮಾಡಿದಿರಿ ಎಂದು ಅದನ್ನವರಿಗೆ ಧಾರೆ ಎರೆಯಲು ಬರುತ್ತದೆಯೇ? ಯಾಚನೆ ಧರ್ಮಬಾಹಿರವಾದ್ದು; ಭೂಮಿಯನ್ನು ಯಾರಾದರೂ ಬೇಡಿ ಪಡೆಯುತ್ತಾರೆಯೇ?'

'ಭಗವಂತನೇ ಭೂಮಿಯನ್ನು ದಾನವಾಗಿ ಬೇಡಿರುವಾಗ ಉಳಿಕೆಯವರ ಮಾತೇಕೆ?'

'ಭೂಮಿಯನ್ನೇನೋ ಭಗವಂತ ಯಾಚಿಸಿದ ನಿಶ್ಚಯ. ಆದರೆ ಬಲಿಯಲ್ಲಿ ಭಿಕ್ಷೆ ಎತ್ತುವ ಕಾಲಕ್ಕೆ ದೇವರಾಗಿ ಬರಲಿಲ್ಲ; ಬ್ರಾಹ್ಮಣನಾಗಿ ಬಂದ. ಧರ್ಮ ಸೂಕ್ಷ್ಮ ತಿಳಿದ ದೇವರು ಯಾಚನೆಯ ಸಮಯದಲ್ಲಿ, ಯಾಚಕನ ವೇಷದಲ್ಲಿ ಬಲಿಯ ಮುಂದು ನಿಂತರು. ಕ್ಷಾತ್ರಧರ್ಮವನ್ನು ಇಲ್ಲಿಯ ವರೆಗೂ ಇಳಿಯಬಿಡುವುದು ನನ್ನ ದೃಷ್ಟಿಯಿಂದ ಅಪರಾಧ.'

'ಈ ನಿಲುವಿನ ನಿಮ್ಮೊಳಗೆ ಸಂಧಿ ಕುದುರದು.'

'ಹೇಗಾದರೂ ಬಗೆಹರಿಸಿ ಎಂದು ನಾವು ನಿಮ್ಮಲ್ಲಿ ಅತ್ತೂ—ಕರೆದು ಕರೆಸಿಕೊಂಡವರಲ್ಲ. ಪ್ರಭುಗಳ ಇಚ್ಛೆಯಾಯಿತು. ಬಂದೆವು—ಇದ್ದ ವಿಷಯ ಅರಿಕೆ ಮಾಡಿಕೊಂಡೆವು. ಅಪ್ಪಣೆಯಾದರೆ ಹೊರಡುತ್ತೇವೆ.'

'ಈ ಸಂಗರದಿಂದ ಚಾಳುಕ್ಯ ಕುಲ ಕ್ಷಯವಾಗುತ್ತದೆ. ಬಂಧು ಸಂಹನನ ನಡೆಯುತ್ತದೆ. ಇದರಿಂದ ಉಭಯ ಪಕ್ಷಕ್ಕೂ ಕ್ಷೇಮವಿಲ್ಲ. ದುಡುಕ ಬೇಡಿ; ಆಳವಾಗಿ ಆಲೋಚಿಸಿ ಬಪ್ಪರಸರೇ! ಯುದ್ಧ ವಿಧಾನಗಳು ದಿನದಿನಕ್ಕೂ ಬದಲಾಯಿಸಬಹುದು. ಆದರೂ ಯುದ್ಧ ಮಂತ್ರಿದೆ ಸಾವು ನೋವು—ಅದನ್ನು ತಪ್ಪಿಸಲು ಸಾಧ್ಯವಿಲ್ಲ.'

'ಸಾಧ್ಯವಿಲ್ಲವೆಂದು ಯಾರು ಹೇಳಿದರು?'

'ಅನುಭವದ ಬಲದಿಂದ ಹೇಳುತ್ತಿದ್ದೇವೆ. ನಾವು ಯುದ್ಧ ಮಾಡಿದ್ದೇವೆ. ನಾವು ಕಂಡಿದ್ದೇವೆ. ಪ್ರತ್ಯಕ್ಷಾನುಭವದಿಂದ ಯುದ್ಧ ಎಂದರೆ ನೆತ್ತರಿನ ಹೊಳೆ, ಹೆಣದ ರಾಶಿ ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ಈ ಅನುಭವ ನಿಮಗೂ ಆಗಿರಬೇಕು. ಯುದ್ಧವನ್ನೇ ತಪ್ಪಿಸಿ, ಈ ದುರ್ಮರಣವನ್ನು ತಪ್ಪಿಸುವುದು ಸಾಧ್ಯವಿಲ್ಲವೇ ಎಂಬುದು ನಮ್ಮ ಬಗೆಯನ್ನು ಕದಕಿದ ಪ್ರಶ್ನೆ. ಅದಕ್ಕಾಗಿ ರಾಜಿಯಿಂದ ವಿವಾದ ಪರಿಹರಿಸಿ ಕೊಳ್ಳಿ ಎಂದು ಸಲಹೆ ಮಾಡುತ್ತಿರುವುದು.'

'ಪರಸ್ಪರರ ನಿಲುವಿನಲ್ಲಿ ಧ್ರುವಗಳಂತರವಿರುವಾಗ ಹೊಂದಿಕೊಳ್ಳುವುದಾದರೂ ಹೇಗೆ?

'ಹತ್ತಿರ—ಹತ್ತಿರಕ್ಕೆ ಬರಲು ಪ್ರಯತ್ನಿಸಬೇಕು. ಭಿನ್ನತೆಯನ್ನು ಬೆಳೆಸಲು ಪ್ರಯತ್ನಿಸದೆ ಅವುಗಳನ್ನು ಕಡಿಮೆ ಮಾಡಿಕೊಳ್ಳಲು ಬುದ್ಧಿಪೂರ್ವಕ ಪ್ರಯತ್ನ ನಡೆಸಬೇಕು. ಬಾಂಧವ್ಯದ ಬೆಸುಗೆ ಇರುವಾಗ ಅದು ಇನ್ನಷ್ಟು ಸುಲಭ ಸಾಧ್ಯ.'

'ಸಮೀಪಕ್ಕೆ ಹೋಗಲು ಯತ್ನಿಸಿದಾಗ ಅದು ನಮ್ಮಿಂದ ದೂರವಾಗುತ್ತಲೇ ಹೋಗುತ್ತಿದೆ ಮೃಗ ಮರೀಚಿಕೆಯಂತೆ.'

"ಒಳ್ಳೆದ ಮನಸ್ಸಿಗೆ ಹಾಗೆ ಕಾಣುವುದು ಸಹಜ. ವಿಜಯಾದಿತ್ಯರನ್ನು ಪುರಸ್ಕರಿಸಲು ನೀವು ಸಿದ್ಧರಿಲ್ಲ. ನಿಮಗೆ ಕೈಗೆ ಬಂದುದನ್ನು ಅಂಕಿತದಲ್ಲಿಟ್ಟುಕೊಳ್ಳುವ ಚಪಲ. ನೀವು ತೋಳಬಲ ಪ್ರದರ್ಶನಕ್ಕೆ ಬಂದಂತಿದೆ. ಹೇಳುವುದನ್ನು ಹೇಳಿದ್ದೇವೆ. ಇನ್ನು ನಿಮಗೆ ಬಿಟ್ಟದ್ದು"

"ಗೆದ್ದ ರಾಜ್ಯವನ್ನು ಹಾಗೆಯೇ ಬಿಟ್ಟು ಬಿಡಿ ಎನ್ನುವುದು ಯಾವ ನ್ಯಾಯ ಪ್ರಭು."

'ಬಿಡುವ ಪ್ರಶ್ನೆ ಇಲ್ಲಿ ಬಂತು. ನಿಮ್ಮಲ್ಲಿ ಹಿರಿಯರಾದವರನ್ನು ಕೂರಿಸಿಕೊಂಡು ರಾಜ್ಯಭಾರ ನಡೆಸಿ ಎಂದು ಸೂಚಿಸಿದೆ. ಇದನ್ನೊಪ್ಪಿಕೊಂಡು ನಡೆದರೆ ಚರಿತ್ರೆಯ ಸುಮುಹೂರ್ತದ ದಿನವನ್ನು ನಾಳಿನ ಲಾಭಕ್ಕಾಗಿ ತಿರುಗಿಸಿದಂತಾಗುತ್ತದೆ. ಇಲ್ಲವಾದಲ್ಲಿ ಪ್ರಾಪ್ತವಾದ ಅವಕಾಶವನ್ನು ತಳ್ಳಿದಂತಾಗುತ್ತದೆ. ಶಾಂತಿ, ಸುಭಿಕ್ಷೆಗೆ ಆಗ ಸಂಚಕಾರ ಬರುತ್ತದೆ.'

'ಅವುಗಳು ನೆಲೆಯೂರುವುದು ಆಳುವವರನ್ನು ಅವಲಂಬಿಸಿದೆ. ಅಧಿಕಾರ ದುರ್ಬಲರ ಕೈಯಲ್ಲಿದ್ದರೆ ಅಂತರಿಕ ಕ್ಷೋಭೆಗೆ ಅವಕಾಶ ದೊರಕುತ್ತದೆ, ಅನ್ಯರ ಧಾಳಿಗೂ ಎಡೆಯಾಗುತ್ತದೆ. ಬಾದಾಮಿಯ ಆಸೆಯನ್ನು ವಿಜಯಾದಿತ್ಯರು ತೊರೆದು ಬಿಡಲಿ. ಆಗ ಎಲ್ಲ ಸರಿ ಹೋಗುತ್ತದೆ.'

'ತೊರೆದು ಬಿಡಲಿ ಎಂದು ಹೇಳುವುದಕ್ಕೆ ನೀನು ಯಾರು? ನಾನು ದಿಂದ ಪ್ರಯತ್ನಿಸಿ ವಿಫಲನಾದೆ. ಉಳಿದಿರುವುದು ಹೋರಾಟವೊಂದೇ. ಒಂದು ಬಾರಿ ನೋಡಿಯೇ ಬಿಡುತ್ತೇವೆ. ಏನು ಅನಾಹುತ ಆಗುತ್ತದೋ ಅದು ಆಗಿಹೋಗಲಿ.'

ಇದುವರೆಗೆ ಸುಮ್ಮನಿದ್ದ ವಿಜಯಾದಿತ್ಯ ಸಂಭಾಷಣೆಗೆ ಹೊಸ ಜೀವಕಳೆ ತುಂಬಿಸಿದ.

'ಗಂಡಸರಿಗೊಪ್ಪು ಮಾತು.'

ವಿಜಯಾದಿತ್ಯನನ್ನು ಕೆರಳಿಸಲೆಂದು ಕಕ್ಕರಸ ವ್ಯಂಗ್ಯ ನುಡಿದ—

'ಮೋಸದಿಂದ ರಾಜ್ಯ ಗಿಟ್ಟಿಸಿಕೊಂಡು ಹೀಗೆ ಪ್ರಭು ಸನ್ನಿಧಿಯಲ್ಲಿ ಅಪಹಾಸ್ಯ ಮಾಡುತ್ತೀರಾ? ಅಪಮಾನ ಮಾಡುತ್ತೀರಾ? ಸಾಧ್ಯವಿದ್ದರೆ ಇದರ ಸೇಡು ತೀರಿಸಿಕೊಳ್ಳದೆ ಬಿಡೆ.'

ಎಲ್ಲೋ ಅವಿತಿದ್ದ ವಿಜಯಾದಿತ್ಯನ ಕ್ಷಾತ್ರ ಹೊರಹೊಮ್ಮಲು

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 44

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ
ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ 0—30

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

[illegible]

ಸಿಮ್ಲಾ ಸಮ್ಮೇಳನ
ಶಾಂತಿ—ಸೌಹಾರ್ದಗಳಿಗೆ ಸಮಾಧಾನ

ಹಲವು ದಿನಗಳ ನಿರೀಕ್ಷೆಯ ಬಳಿಕ ಪಾಕ್ ರಾಷ್ಟ್ರಪತಿ ಜುಲ್ಫಿಕರ್ ಅಲಿ ಭುಟ್ಟೋ ಮತ್ತು ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಂಪಿನ ನಗರ ಸಿಮ್ಲಾದಲ್ಲಿ ಶೃಂಗಸಭೆ ಸೇರಿದರು. ಭಾರತದ ಉಪಖಂಡದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುವುದು ಭಾರತ-ಪಾಕಿಸ್ತಾನಗಳ ನಡುವಣ ಸಮಸ್ಯೆಗಳೆಲ್ಲವನ್ನೂ ಶಾಂತ ವಿಧಾನಗಳಿಂದ ಪರಿಹರಿಸಿ ಸ್ನೇಹವನ್ನು ಬಲಪಡಿಸಿ, ಎರಡೂ ದೇಶಗಳನ್ನು ಸಮೃದ್ಧವಾಗಿಸಲು ಹೆಜ್ಜೆಯಿಡುವುದು—ಇವೇ ಮೊದಲಾದ ಘನೋದ್ದೇಶಗಳನ್ನು ಹೊತ್ತ ಸಭೆ ಎಷ್ಟು ಮಟ್ಟಿಗೆ ಯಶಗಳಿಸಿತೆಂಬುದು ನಿರೀಕ್ಷೆಗೆ ನಿಲುಕದ ವಿಷಯ. ಉಪಖಂಡದಲ್ಲಿ ಬಾಂಗ್ಲಾ ದೇಶವೂ ಉದಯಗೊಂಡದ್ದು, ಮತ್ತು ಅದರ ಕಾರಣದಿಂದಾಗಿಯೇ ಈ ಶೃಂಗಸಭೆ ನಡೆಯಲು ಪ್ರೇರೇಪಿಸಿದ್ದನ್ನು ಮರೆಯಲು ಸಾಧ್ಯವಿಲ್ಲ. ಭಾರತದೊಡನೆ ಮಾತುಕತೆಗೆ ಸಿದ್ಧವೆಂದೂ ಇದು ತನ್ನ ಹೃದಯದಾಳದ ಬಯಕೆಯೆಂದೂ ಉಗ್ಗಡಿಸಿದ್ದ ಭುಟ್ಟೋ ಶೃಂಗಸಭೆ ಸಮೀಪಿಸುತಿದ್ದಂತೆ ತನ್ನ ಮಾಮೂಲಿ ಭಾರತನಿಂದಾಕಾರ್ಯಕ್ರಮವನ್ನು ಮತ್ತೆ ಮುಂದುವರಿಸುತ್ತ ಬಂದುದು ಅವಜ್ಞೆಯ ವಿಷಯವಾಗದು. ಆದರೂ ಅವರು ಸಭೆಯಲ್ಲಿ ಭಾಗವಹಿಸಿದರು. ಯಾವುದೇ ಮಹತ್ವಪೂರ್ಣ ನಿರ್ಣಯಕ್ಕೆ ಬರುವುದು ಸಾಧ್ಯವಾಗದೆ ಇದ್ದರೂ ಮಾತುಕತೆಗಳನ್ನು ಮುರಿಯುವಷ್ಟು ದಾಷ್ಟ್ಯವನ್ನವರು ಸದ್ಯ ತೋರಿಸಲಿಲ್ಲ; ಇದು ಸಮಾಧಾನದ ಸಂಗತಿ.

ಭಾರತ—ಪಾಕಿಸ್ತಾನಗಳ ಸ್ವಾತಂತ್ರ್ಯದ ರಜತೋತ್ಸವದೊಡನೆಯೇ ಇವುಗಳ ನಡುವಣ ವಿರಸದ ಬೆಳ್ಳಿಹಬ್ಬವೂ ನಡೆಯುತ್ತಿದೆ. ದ್ವಿರಾಷ್ಟ್ರ ನೀತಿಯ ಶಿಶುವಾಗಿ ಜಾತೀಯತೆಯ ಪಾಪದ ಕೂಸಾಗಿ ಹುಟ್ಟಿಕೊಂಡ ಪಾಕಿಸ್ತಾನವಿನ್ನೂ ಸಂಕುಚಿತ ಭಾವನೆಯನ್ನು ಬಿಟ್ಟುಕೊಡುವಷ್ಟು ಮುಂದಾಗಿಲ್ಲ ಮಾತ್ರವಲ್ಲ, ಸಂಕುಚಿತತೆಯನ್ನೆ ಬೆಳೆಸಿಕೊಂಡು ಬರುತ್ತಿರುವುದು ಸರ್ವಶ್ರುತ. ಪ್ರಧಾನಿ ನೆಹರು ಮತ್ತು ಪಾಕ್ ಪ್ರಧಾನಿಯಾಗಿದ್ದ ಲಿಯಾಖತ್ ಅಲಿಖಾನರೊಡನೆ ಒಂದು ಒಡಂಬಡಿಕೆ ನಡೆಯಿತು; ಆದರೆ, ಅದನ್ನು ತಿಪ್ಪೆಗೆ ಪಾಕಿಸ್ತಾನವೆಸೆಯಿತು. ಆ ನಂತರ ಪ್ರಧಾನಿ ಶಾಸ್ತ್ರಿ ಮತ್ತು ಪಾಕ್ ಸೈನಿಕಾಡಳಿತೆಯ ರಾಷ್ಟ್ರಪತಿ ಅಯ್ಯೂಬಖಾನರ ನಡುವೆ ತಾಷ್ಕೆಂಟಿನಲ್ಲಿ ವಿಶ್ವಪ್ರಸಿದ್ಧ ಒಪ್ಪಂದವಾಯ್ತು. ಅದನ್ನು ನೆರೆನೀರಿನಲ್ಲಿ ಹುಣಿಸೆಹಣ್ಣು ತೊಳೆದಂತೆ ತೇಲಿಸಿಬಿಟ್ಟರು. ಭುಟ್ಟೋ ಈಗ ಆರಂಭವಾದ ಸಿಮ್ಲಾ ಸಭೆಯ ಪರಿಣಾಮವೂ ಪ್ರಗತಿಶೀಲವಾಗುತ್ತದೆಂಬ ಬಗ್ಗೆ ವಿಶ್ವಾಸ ಸಾಲದಾಗಿದೆ. ಪಾಕಿಸ್ತಾನವು ಯುದ್ಧದ ಭೀಕರ ಪರಿಣಾಮಗಳನ್ನು ಅನುಭವಿಸಿ ತನ್ನ ಹಾಗೂ ತನ್ನ ಸ್ನೇಹಿತರ ಅಜೇಯವೆಂದು ನಂಬಿ ಬಂದಿದ್ದ ಸೈನಿಕ ಶಕ್ತಿಯ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದ, ಏನಾದರೂ ಪ್ರಗತಿ ಕಂಡುಬರಬೇಕಷ್ಟೆ. ಕಾಶ್ಮೀರ, ಬಾಂಗ್ಲಾ, ಸಮರ ಕೈದಿಗಳು—ಮೊದಲಾದ ಮಹತ್ವಪೂರ್ಣ ವಿಷಯಗಳ ಬಗೆಗೇ ಉಭಯ ದೇಶಗಳ ನಡುವೆ ಆಕಾಶಪಾತಾಳಗಳಷ್ಟು ಭಿನ್ನಮತವಿರುವಾಗ, ಇವುಗಳಲ್ಲಿ ಮೂಡಬಹುದಾದ ಸಹಮತವೇ ಶಾಂತಿಯುತ ಸಹಬಾಳ್ವೆಗೆ ಪ್ರೇರಕ ಶಕ್ತಿಯಾಗಿರುವಾಗ, ಮುಂದಿನ ಸಭೆಗಳ ಸಾಧನೆ ಸಂಶಯಾತ್ಮಕವೆನಿಸುತ್ತದೆ.

ಭಾರತದೊಡನೆ ಸಮರ ನಿಷೇಧ ಒಡಂಬಡಿಕೆಯನ್ನು ಮಾಡಿಕೊಳ್ಳಲು ಪಾಕಿಸ್ತಾನವು ಮುಂದೆ ಬಂದರೆ, ಇದು ಮುಂದಿನ ಮಾತುಕತೆಗಳಿಗೆ ತಕ್ಕ ಉತ್ತೇಜನ ನೀಡುವುದು ಸಾಧ್ಯ. ಆದರೆ, ರಾಷ್ಟ್ರಪತಿ ಭುಟ್ಟೋ ತನ್ನ ಪೂರ್ವಜರ ಸಂಪ್ರದಾಯದಂತೆ ಭಾರತ ಈ ಮಹತ್ವಪೂರ್ಣವಾದ ಕೊಡುಗೆಯನ್ನು ತಿರಸ್ಕರಿಸುತ್ತಲೇ ಬಂದಿದ್ದಾರೆ. ಆದರೆ, ಅವರು ಯುದ್ಧ ಹೂಡುವ ತನ್ನ 'ಅಧಿಕಾರವನ್ನು' ಬಿಟ್ಟು ಕೊಡಲು ಸಿದ್ಧರಿಲ್ಲವೆಂದೇ ಅರ್ಥ ತಾನೆ? ಪ್ರತಿ ಐದು ವರ್ಷಗಳಿಗೊಂದು ಬಾರಿ ಭಾರತದ ಮೇಲೆ ಪಾಕಿಸ್ತಾನ ಆಕ್ರಮಣ ಮಾಡಿರುವ ಇತಿಹಾಸವಿರುವುದಾದರೂ ಈ ಆರೋಪವನ್ನವರು ಭಾರತದ ಮೇಲೆಯೇ ಇನ್ನೂ ಇನ್ನೂ ಹೊರಿಸುತ್ತಿರುವುದು ಅತ್ಯಂತ ಸೋಜಿಗದ ಸಂಗತಿಯಲ್ಲದೆ ಮತ್ತಿನ್ನೇನು? ತಾಷ್ಕೆಂಟ್ ಒಡಂಬಡಿಕೆಯನ್ನು ಗಾಳಿಗೆ ತೂರಿ ಬಿಟ್ಟ ಪಾಕ್ ರಾಜ್ಯಕಾರಣಿಗಳು ಬದಲಾದ ರಾಜ್ಯಕೀಯದಿಂದಲೂ ಪಾಠ ಕಲಿಯದೆ ಹೋದರೆ ಕರಿಯ ಕಂಬಳಿಗೆ ಉಳಿದ ಬಣ್ಣ ಹತ್ತುವುದಿಲ್ಲವೆಂದೇ ಹೇಳಬೇಕು. ಭುಟ್ಟೋ ಮಹಾಶಯರು ಪ್ರತೀಕಾರ—ಭಾವಾವೇಶದ ಮನೋಭಾವನೆಗಳಿಗೆ ತಿಲಾಂಜಲಿ ನೀಡಿ ವಾಸ್ತವಿಕತೆಯನ್ನು ಗಮನಿಸುವರೆಂದೂ ತನ್ನ ವರ್ತನೆಗಳನ್ನು ಇನ್ನಾದರೂ ತಿದ್ದಿ ಶಾಂತಿ ಸಾಧನೆಗೆ ಸಹಕಾರ ನೀಡುವರೆಂದೂ ಹಾರೈಸೋಣ.

ಕೃಷಿಕರ ದುರವಸ್ಥೆ

ಸಾಗರದಿಂದ ದುರಂತ ವಾರ್ತೆಯೊಂದು ವರದಿಯಾಗಿದೆ. ದೊಡ್ಡ ಸಂಸಾರದ ಹೊರೆ ಹೊತ್ತಿರುವ ಅಡಿಕೆ ಬೆಳೆಗಾರರೊಬ್ಬರು ಋಣಭಾದೆ ತಾಳಲಾರದೆ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡರಂತೆ. ಇನ್ನೂ ಸೋಜಿಗವೆಂದರೆ, ಈ ವ್ಯಕ್ತಿಗೆ 'ಕೃಷಿ ಪಂಡಿತ' ನೆಂದು ರಾಜ್ಯ ಸರಕಾರ ಪ್ರಶಸ್ತಿ ನೀಡಿ ಗೌರವಿಸಿತ್ತಂತೆ ಮತ್ತು ಮಾಡಿದ ಸಾಲವಾದರೂ ಕೃಷಿಯ ಉದ್ದೇಶಕ್ಕಾಗಿಯೇ ಎಂಬುದು. ಕಾರಣಸ್ಪಷ್ಟ. ಅಡಿಕೆಯ ಧಾರಣೆ ಈ ವರ್ಷ ರಸಾತಳಕ್ಕೆ ಇಳಿದು ಹೋದುದರಿಂದಲೇ ಈ ದುರಂತ ಸಂಭವಿಸಿತ್ತು. ಈ ವ್ಯಕ್ತಿಗಿದ್ದ ತೋಟವಾದರೂ ಒಂಜೆಕರೆಗಿಂತ ತುಸು ಹೆಚ್ಚು ಅಷ್ಟೇ. ಇನ್ನು ರಾಜ್ಯ ಸರಕಾರವು ಈ ದುರಂತದ ಬಗ್ಗೆ ವಿಚಾರಣೆ ನಡೆಸಬಹುದು, ದಿವಂಗತರ ಕುಟುಂಬಕ್ಕೆ ಒಂದಿಷ್ಟು ಪರಿಹಾರವನ್ನೂ ಕೊಡಬಹುದು. ಆದರೆ, ಇಷ್ಟರಿಂದಲೇ ನಾವು ತೃಪ್ತಿಪಟ್ಟುಕೊಳ್ಳುವುದು ಸಾಧ್ಯವೇ? ಕೃಷಿಯನ್ನು ಉದ್ಯಮವೆಂದು ಪರಿಗಣಿಸಬೇಕೆಂಬ ಮಾತು ಸರ್ವತ್ರವಿದೆ. ಈಗಿನ ಪ್ರಗತಿಶೀಲ ಸರಕಾರವು ಕೃಷಿಯನ್ನೇ ಮುಖ್ಯ ಕಸುಬನ್ನಾಗಿ ದುಡಿಯುವುದಕ್ಕೆ ಹಲವು ತರದ ಕಾಯಿದೆಗಳನ್ನೂ ತಯಾರಿಸಲು ಮುಂದೆ ಬಂದಿದೆ. ಇತರ ಮೂಲಗಳಿಂದ ಆದಾಯ ಪಡೆಯುವವರು ಭೂಮಿಹೊಂದಿರಬಾರದು; ಆದಾಯ ತೆರಿಗೆ ತುಂಬುವವನಿಗೆ ಭೂಮಿಯ ಒಡೆತನವಿಲ್ಲ. ಇತ್ಯಾದಿ ಇತ್ಯಾದಿ. ಆದರೆ, ಈಗ ದುರಂತಕ್ಕೀಡಾದ ಸಣ್ಣ ರೈತರ ಸಮಸ್ಯೆಗಳ ಬಗೆಗೆ ಯಾವ ರೀತಿಯ ಪರಿಹಾರ ಸಾಧನವೊದಗಿಸಿವೆ? ಕುಟುಂಬ ಪೋಷಣೆಯು ಧಾರಣೆವಾಸಿಯ ಇಳಿತಾಯದಿಂದ ದುರ್ಭರವಾಗಿರುವಾಗಲೇ ಕಂದಾಯ ಬಾಕಿಯ ತಗಾದೆಯೂ ಅವರನ್ನು ಕಾಡತೊಡಗಿದಂತೆ. ಅಡಿಕೆ ಬೆಳೆಗಾರರು ಒಂದೆರಡು ತಿಂಗಳುಗಳಿಂದಲೂ ತಮ್ಮ ಗೋಳನ್ನು ಹೊಯ್ದುಕೊಂಡೇ ಇರುವಾಗ ಶಾಸಕರೂ ಸರಕಾರವೂ ಯಾವ ಕ್ರಮವನ್ನು ಕೈಕೊಂಡರು? ಸಣ್ಣ ಮತ್ತು ಮಧ್ಯಮ ವರ್ಗದ ಜನ ಜೀವನವೇ ದುರ್ಭರವಾಗುತ್ತಿರುವುದನ್ನು ಕಂಡೂಕಂಡೂ ಕಣ್ಣುಮುಚ್ಚಿ ಕೈಕಟ್ಟಿ ಕೂತಿರುವುದು ಶೋಭನೀಯವೆನಿಸುವುದಿಲ್ಲ. ಈ ಕೃಷಿಪಂಡಿತನ ಆತ್ಮ ಬಲಿದಾನ ಸರಕಾರದ ಕಣ್ಣು ತೆರೆಸಲಿ.

ಹಾರ್ದಿಕ ಕೃತಜ್ಞತಾ ಸಮರ್ಪಣೆ

ನಮ್ಮ ಪುತ್ರ ಚಿ| ಚಿತ್ತರಂಜನನ ವಿವಾಹ ಸಮಾರಂಭವು ಶ್ರೀಮತಿ ಮತ್ತು ಶ್ರೀ ಕೆ. ರಾಮಕೃಷ್ಣ ಶೆಟ್ಟರ ಪುತ್ರಿ ಕುಮಾರಿ ಬೀನಾಳೊಂದಿಗೆ ಇದೇ ಜುಲೈ 3ರಂದು ಮಂಗಳೂರಿನ ಡಾನ್‌ಬಾಸ್ಕೊ ಹಾಲಿನಲ್ಲಿ ನೆರವೇರಿದ ಸಂದರ್ಭದಲ್ಲಿ ಸಮಾರಂಭದಲ್ಲಿ ಭಾಗವಹಿಸಿಯೂ, ಶುಭ ಸಂದೇಶಗಳನ್ನು ಕಳುಹಿಸಿಯೂ ವಧೂವರರನ್ನು ಆಶೀರ್ವದಿಸಿದಂತವರಿಗೂ, ಉಚಿತ ಉಡುಗೊರೆಗಳನ್ನಿತ್ತು ಹರಸಿದಂತವರಿಗೂ, ಸಕಲ ರೀತಿಯಲ್ಲಿ ಸಹಕಾರ ನೀಡಿದಂತವರಿಗೂ ಪ್ರತ್ಯ ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ಅಸಾಧ್ಯವಾದ ಪ್ರಯುಕ್ತ ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಶ್ರೀಮತಿ ಮತ್ತು ಶ್ರೀ ಎಸ್. ಶಾಮ ಶೆಟ್ಟಿ
(ಎಲ್. ಐ. ಸಿ. ಯ ನಿವೃತ್ತ ವಿಭಾಗಾಧಿಕಾರಿ)

ಶ್ಯಾಮಸುಂದರ ಸದನ,
ಕೊರಂಗ್ರಪಾಡಿ ಪೋಸ್ಟ್,
ಉಡುಪಿ.

[illegible]

ಜಿಲ್ಲೆಯ ರಾಜಕೀಯ ಸಂತ್ರಸ್ತರ ಸಮ್ಮೇಳನ

ತಾ. 25–6–72ರಂದು ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಸಂತ್ರಸ್ತರ ಸಮ್ಮೇಳನವು ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರ ಸ್ಮಾರಕ ಭವನದಲ್ಲಿ ಲೋಕಸಭಾ ಸದಸ್ಯ, ಶ್ರೀ ಕೆ.ಕೆ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಸುಮಾರು 100 ಕ್ಕೂ ಮಿಕ್ಕಿ ರಾಜಕೀಯ ಸಂತ್ರಸ್ತರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಪ್ರಥಮವಾಗಿ, ಸಂಘದ ಸಂಚಾಲಕರಾದ ಶ್ರೀ ಎಚ್.ಕೆ. ತಿಂಗಳಾಯರು ಸಭೆ ಕರೆದ ಉದ್ದೇಶ ಹಾಗೂ, ಸಂಘವು ಈ ತನಕ ಮಾಡಿರುವ ಕಾರ್ಯಗಳು, ಅಲ್ಲದೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ರಾಜಕೀಯ ಸಂತ್ರಸ್ತರು ಪಡೆಯುವರೆ ಇರುವ ಅಡೆತಡೆಗಳ ಕುರಿತು ಸವಿವರವಾಗಿ ಸಭೆಗೆ ವಿವರಿಸಿ ತಿಳಿಸಿದರು. ಅಧ್ಯಕ್ಷ ಸ್ಥಾನದಿಂದ ಶ್ರೀ ಕೆ. ಕೆ. ಶೆಟ್ಟಿಯವರು ಯುಕ್ತ ಸಲಹೆಗಳನ್ನಿತ್ತು, ರಾಜಕೀಯ ಸಂತ್ರಸ್ತರಿಗೆ ಈಗ ಸಿಗುವ ಸೌಲಭ್ಯಗಳನ್ನು ದೊರಕಿಸಿ ಕೊಡಬೇಕಾದರೆ, ಪ್ರಾಂತೀಯ ಹಾಗೂ ಕೇಂದ್ರ ಸರಕಾರದ ಅಧಿಕಾರಿಗಳೊಡನೆ ವಿಚಾರ ವಿನಿಮಯ ನಡೆಸಿದ ರೀತಿ ಹಾಗೂ ಇನ್ನು ಮುಂದೆಯೂ ತನ್ನ ಸಂಪೂರ್ಣ ಸಹಕಾರ ಹಾಗೂ ತನ್ನಿಂದಾದಷ್ಟು ಪ್ರಯತ್ನಪಟ್ಟು ಸ್ವಾತಂತ್ರ್ಯವೀರರಿಗೆ ಯೋಗ್ಯ ಸವಲತ್ತು ಮತ್ತು ಮನ್ನಣೆ ದೊರೆಯುವಂತೆ ದುಡಿಯುವೆನೆಂದು ಆಶ್ವಾಸನೆಯನ್ನು ಇತ್ತ ಮೇಲೆ ಈ ಕೆಳಗಿನ ಠರಾವುಗಳನ್ನು ಅಂಗೀಕರಿಸಲಾಯಿತು.

1) ದಕ್ಷಿಣ ಕನ್ನಡ ಜಿಲ್ಲೆಯ ಧೀರ ಯೋಧರೂ, ಮುಂಬಯಿಯಲ್ಲಿಯೂ, ಜಿಲ್ಲೆಯಲ್ಲಿಯೂ ಹಲವು ರಾಷ್ಟ್ರೀಯ ಆಂದೋಲನಗಳಲ್ಲಿ ಸಾಹಸದಿಂದ ಹೋರಾಡಿ ಅಮೂಲ್ಯ ತ್ಯಾಗವಾಡಿದ ಶ್ರೀ ದಾಮೋದರ ಬಂಗೇರರ ಶೋಚನೀಯ ನಿಧನಕ್ಕಾಗಿ ಈ ಸಭೆಯಲ್ಲಿ ಹೃತ್ಪೂರ್ವಕ ದುಃಖ ಸೂಚಿಸಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತದೆ. ಹಾಗೂ ಜಿಲ್ಲೆಯ ರಾಜಕೀಯ ಸಂತ್ರಸ್ತರಾದ ಸರ್ವಶ್ರೀಗಳಾದ ಸೀತಾರಾಮ ಕೊಗ್ಗನ್ಯಾಕ, ಕುಕ್ಕುಂದೂರು ಪದ್ಮನಾಭ ಕಿಣಿ, ಎಂ. ಸಿ ಫೆರ್ನಾಂಡಿಸ್, ಶಿವರಾಮಚಂದ್ರ ಬಂಗೇರ, ಅಶೋಕನಗರ, ಮಂಗಳೂರು, ಕಿನ್ನಿಮೂಲ್ಕಿ ದೇವರಾಯ ಕಾಮತ್, ಮುದ್ರಾಡಿ ಭೋಜರಾಜ ಶೆಟ್ಟಿ ಮತ್ತು ಕೆ.ಪಿ. ಪುಂಡಲೀಕ ಪ್ರಭು, ಉರ್ವ, ಅವರ ನಿಧನಕ್ಕೂ ದುಃಖ ಸೂಚಿಸಿ ಅವರ ಕುಟುಂಬದೊಡನೆ ಸಹಾನುಭೂತಿ ಸೂಚಿಸಲಾಯ್ತು.

2) ದಕ್ಷಿಣ ಕನ್ನಡ ಜಿಲ್ಲಾ ರಾಜಕೀಯ ಸಂತ್ರಸ್ತರ ಸಂಘವನ್ನು ಸರಕಾರವು ಮಾನ್ಯತೆ ನೀಡಬೇಕಾಗಿಯೂ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಸ್ವರಾಜ್ಯ ಹೋರಾಟಗಾರರ ಹೆಸರು, ವಿಳಾಸ, ಇತ್ಯಾದಿಗಳನ್ನು ಸದ್ರಿ ಸಂಘವು ಕೊಡುವ ಯಾದಿಯನ್ನೂ ಇತ್ಯಾದಿಗಳ ವಿಷಯದಲ್ಲಿ ಸರಕಾರವು ಅಂಗೀಕರಿಸಬೇಕಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

3. ಈಗಿನ ನಿಯಮದಂತೆ ಕನಿಷ್ಟ 6 ತಿಂಗಳ ಮಟ್ಟಿಗಾದರೂ ಸೆರೆಮನೆ ವಾಸ ಅನುಭವಿಸಿದವರಿಗೆ ಮಾತ್ರ ಗೌರವಧನ ಸಿಗುತ್ತದೆ. ಸೆರೆಮನೆವಾಸ ಎಂಬುದು ಆಯಾಯ ಪ್ರದೇಶಗಳ ನ್ಯಾಯಾಧೀಶರುಗಳ ಇಚ್ಛೆಯಂತೆ ಆಗಿತ್ತೇ ಹೊರತು, ನಿಜವಾದ ಹೋರಾಟ ಅಥವಾ ಸಕ್ರಿಯ ಕಾರ್ಯಕ್ಕನುಗುಣವಾಗಿರಲಿಲ್ಲ. ಹೀಗಾಗಿ ನಿಜವಾಗಿಯೂ ಹೋರಾಟ ನಡೆಸಿದ ಪ್ರತ್ಯಕ್ಷವಾಗಿ ಬೇರೆ ಬೇರೆ ಸ್ವಾತಂತ್ರ್ಯ ಆಂದೋಲನಗಳಲ್ಲಿ ಭಾಗವಹಿಸಿ ಹಲವು ರೀತಿಯ ಕಷ್ಟನಷ್ಟಕ್ಕೊಳಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿರುವ ಸ್ವಾತಂತ್ರ್ಯ ವೀರರೆಲ್ಲರಿಗೂ, ಅವರು ಈ ಸಂಘದ ಅಧಿಕೃತ ಶಿಫಾರಸನ್ನು ಪಡೆದಲ್ಲಿ ಸರಕಾರದ ಸವಲತ್ತುಗಳನ್ನೆಲ್ಲಾ ಕೊಡುವಂತೆ ಏರ್ಪಾಡಾಗಬೇಕಾಗಿ ಈ ಸಭೆ ಸರಕಾರವನ್ನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ. ಆ ಬಗ್ಗೆ ಈಗಿನ ನಿಯಮಗಳಲ್ಲಿ ಬದಲಾವಣೆ ಮಾಡಿ 6 ತಿಂಗಳ ಕಾರಾಗ್ರಹವೆಂಬ ನಿಯಮಕ್ಕೇನೇ ಕಟುಬೀಳದೆ ಸಂದರ್ಭಾನುಸಾರ ಸ್ವಾತಂತ್ರ್ಯ ಆಂದೋಳನಗಳಲ್ಲಿ ಬೇರೆಬೇರೆ ರೀತಿಯಲ್ಲಿ ಪ್ರತ್ಯಕ್ಷ ಭಾಗವಹಿಸಿ ತ್ಯಾಗ ಮತ್ತು ಸೇವೆ ಸಲ್ಲಿಸಿರುವ ಸ್ವಾತಂತ್ರ್ಯ ವೀರರೆಲ್ಲರಿಗೂ ಸರಕಾರವು ಕೊಡುವ ಸವಲತ್ತುಗಳನ್ನು ಅನ್ವಯಿಸಬೇಕಾಗಿ ಈ ಸಭೆಯು ಸರಕಾರವನ್ನು ಒತ್ತಾಯಿಸುತ್ತದೆ.

1. ಉಪ್ಪಿನ ಸತ್ಯಾಗ್ರಹವೇ ಮೊದಲಾದ ಕಾಯಿದೆ ಭಂಗಗಳಲ್ಲಿ ಹಲವು ಸಾರಿ ಭಯಂಕರ ಲಾಠಿ ಹೊಡೆತಕ್ಕೊಳಗಾಗಿ ತಿಂಗಳುಗಟ್ಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿದವರು.

2. ವೈಯುಕ್ತಿಕ ಸತ್ಯಾಗ್ರಹದಲ್ಲಿ ರಾಷ್ಟ್ರೀಯ ಪ್ರತಿಜ್ಞೆಗೆ ಸಹಿ ಹಾಕಿ ದಸ್ತಗಿರಿಯೂಗದೆ ದೇಶದಲ್ಲೆಲ್ಲ ಯುದ್ಧ ವಿರೋಧಿ ಘೋಷಣೆಯನ್ನು ಮಾಡಿ ಪ್ರಚಾರ ಮಾಡಿದವರು.

3. ಬಂಧಿಸಲ್ಪಟ್ಟರೂ ತಿಂಗಳು ಗಟ್ಲೆ ರಿಮಾಂಡಿನಲ್ಲಿಯೇ ಕೊಳೆಯುತ್ತಿದ್ದು ಶಿಕ್ಷೆಯೂಗದೇ ಕೆಲ ಸಮಯದ ನಂತರ ಬಿಡುಗಡೆಯೂದವರು.

4. 1942ನೇ ಚಳವಳದಲ್ಲಿ ಕಾಂಗ್ರೆಸಿನ ವರಿಷ್ಟ ನಾಯಕರ ಆದೇಶದ ಮೇರೆಗೆ ದಸ್ತಗಿರಿಗೆ ಸಿಗದೆ ಭೂಗತರಾಗಿದ್ದು ಚಳವಳವನ್ನು ನಡೆಸಲು ನೆರವಾದವರು.

5. ಡಿಫೆನ್ಸ್ ಒಫ್ ಇಂಡಿಯಾ ಶಾಸನದ ಮೇರೆಗೆ (ಡೆಟೆನ್ಯು) ಸರಕಾರದ ಬಂಧನಕ್ಕೊಳಗಾಗಿ ದೀರ್ಘ ಸಮಯ ಸೆರೆಮನೆಯಲ್ಲಿದ್ದು ಬಿಡುಗಡೆಯೂದವರು. ಸೆರೆಮನೆ ಅನುಭವಿಸಿರುವ ರಾಜಕೀಯ ಸಂತ್ರಸ್ತರಿಗೆ ಈಗ ಜೈಲುಗಳಲ್ಲಿ ಸರ್ಟಿಫಿಕೇಟು ದೊರೆಯದೆ ರಿಕಾರ್ಡುಗಳೇ ಇಲ್ಲದಿರುವದರಿಂದ ಅಂಥವರಿಗೆ ಈ ಸಂಘದ ವತಿಯಿಂದ ಕೊಡುವ ಸರ್ಟಿಫಿಕೇಟನ್ನೇ ಸರಕಾರವು ಮಾನ್ಯ ಮಾಡಬೇಕೆಂದು ಈ ಸಭೆಯು ಕೇಳುತ್ತದೆ.

6. ರಾಜಕೀಯ ಸಂತ್ರಸ್ತರ ಮಕ್ಕಳಿಗೆ ವಿದ್ಯಾ ಸಂಬಂಧವಾಗಿ ಕೊಡುವ ಎಲ್ಲಾ ಸವಲತ್ತುಗಳಿಗೆ, ಭೂಮಿ ಮತ್ತು ಗೌರವ ಧನ ಕೊಡುವ ಶರ್ತಗಳನ್ನು ಅನ್ವಯಿಸದೆ ಅವರು ರಾಜಕೀಯ ಸಂತ್ರಸ್ತರೆಂದು, ರಾಜಕೀಯ ಸಂತ್ರಸ್ತರ ಜಿಲ್ಲಾ ಸಂಘದ ಕಾರ್ಯದರ್ಶಿಯಿಂದ ಸರ್ಟಿಫಿಕೇಟು ಪಡೆದ ಕೂಡಲೇ ಕೊಡುವಂತೆ ಸರಕಾರವು ಸ್ಪಷ್ಟ ಆಜ್ಞೆ ಹೊರಡಿಸಬೇಕಾಗಿಯೂ ಅವರಿಗೆ ಒಮ್ಮೆ ಕೊಟ್ಟ ಸವಲತ್ತುಗಳನ್ನು ಪ್ರತಿವರ್ಷ ಅದನ್ನು ನವೀಕರಿಸುವ ಶರ್ತವಿಲ್ಲದೆ ಕೊಡುವಂತಾಗ ಬೇಕೆಂದು ಈ ಸಭೆಯು ಸರಕಾರವನ್ನು ಒತ್ತಾಯಿಸುತ್ತದೆ.

7 ಸರಕಾರವು ವಿಶೇಷ ಇಲಾಖೆಗಳಲ್ಲಿ ಉದ್ಯೋಗ ತರಬೇತಿಗಾಗಿ ಪ್ರಕಟಣಾ ಪತ್ರಗಳಲ್ಲಿ ಪರಿಶಿಷ್ಟ ಜಾತಿ, ಶೆಡ್ಯೂಲ್ ಕ್ಲಾಸ್, ಚಿನ್ನದ ಕೆಲಸಗಾರರ ಮಕ್ಕಳು, ನಿವೃತ್ತ ಸೈನಿಕರ ಮಕ್ಕಳಿಗಾಗಿ ಕೆಲವು ಸ್ಥಾನಗಳನ್ನು ಕಾಯ್ದಿರಿಸುತ್ತಾರೆ. ಇದೇ ರೀತಿ ರಾಜಕೀಯ ಸಂತ್ರಸ್ತರ ಮಕ್ಕಳಿಗೂ ಶೇಕಡಾ ಕೆಲವಂಶ ಸ್ಥಾನಗಳನ್ನು ಕಾದಿಟ್ಟಿರಿಸುವಂತೆ ವ್ಯವಸ್ಥೆ ಮಾಡಬೇಕಾಗಿ ಈ ಸಭೆಯು ಸರಕಾರವನ್ನು ಒತ್ತಾಯಿಸುತ್ತದೆ.

8. ದಕ್ಷಿಣ ಕನ್ನಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ ಹಾಗೂ ರಾಜಕೀಯ ಹೋರಾಟಗಾರರ ಯಾದಿಯನ್ನು ಆದಷ್ಟು ಬೇಗನೆ ತಯಾರಿಸಿ ಅದನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಸಂಘವು ಪ್ರಕಟಿಸಬೇಕಾಗಿ ನಿರ್ಣಯಿಸಲಾಯಿತು.

9. ಇದೇ ಬರುವ ಆಗೋಸ್ತು 15ರಂದು ಜಿಲ್ಲೆಯ ರಾಜಕೀಯ ಸಂತ್ರಸ್ತರ ದೊಡ್ಡ ಸಮ್ಮೇಳನವನ್ನು ದಿವಂಗತ ಕಾರ್ನಾಡು ಸದಾಶಿವರಾಯರ ಸ್ಮಾರಕ ಭವನದಲ್ಲಿ ಜರಗಿಸತಕ್ಕದ್ದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಈ ತನಕ ಸಂಘದ ಚಟುವಟಿಕೆಗಳು ತಾತ್ಕಾಲಿಕ ಸಮಿತಿಯಿಂದ ನಡಿಯುತ್ತಿದ್ದುದರಿಂದ ಇಂದು ಈ ಕೆಳಗಿನ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

1) ಅಧ್ಯಕ್ಷ—ಶ್ರೀ ಕೆ. ಕೆ. ಶೆಟ್ಟಿ (ಲೋಕಸಭಾ ಸದಸ್ಯ); 2) ಉಪಾಧ್ಯಕ್ಷ—ಶ್ರೀ ಎಂ. ಡಿ. ಅಧಿಕಾರಿ, ವಾರಂಗ; 3) ಪ್ರಧಾನ ಕಾರ್ಯದರ್ಶಿ ಹಾಗೂ ಕೋಶಾಧಿಕಾರಿ—ಶ್ರೀ ಎಚ್. ಕೆ. ತಿಂಗಳಾಯ;

(ಒಂಭತ್ತನೇ ಪುಟ ನೋಡಿರಿ)

ಪುತ್ತೂರು II Addl. ಮುನ್ಸಿಫ್ ಕೋರ್ಟಿನಲ್ಲಿ

Ex. Case No. 1058/71 in O. S. 444/68

ಬೋದ ಗೌಡ —ಅರ್ಜಿದಾರ

VS

ಅಪ್ಪಯ ಗೌಡ ಕೂಡಾ —ಎದ್ರಿರು

2ನೇ ಎದ್ರಿ, ಬೆಳಿಯಪ್ಪ ಯಾನೆ ಬಾಬು ಗೌಡ, ಅಪ್ಪಯ ಗೌಡರ ಮಗ, ಬಂದಾರು ಗ್ರಾಮದ ಮುಚ್ಚಿಲಚೆ ಎಂಬಲ್ಲಿ. ಬೆಳ್ತಂಗಡಿ ತಾಲೂಕು, ಪೋಸ್ಟು: ಬಂದಾರು, ದ. ಕ. – ಇವರಿಗೆ–

ಮೇಲಿನ ದಾವೆಯಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ 1972ನೇ ಇಸವಿ ಜುಲೈ ತಿಂಗಳು 11ನೇ ತಾರೀಕು ನಿಶ್ಚೈಸೋಣಾಗಿದೆಯೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

(By order of the Court)

(Sd.) D. N. Bhat

Advocate for Petitioner

ಪುತ್ತೂರು, ದ. ಕ.

ತಾ. 19–6–72

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 Grams: HOST SATKAR
2 72304

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನೋಟೀಸು

ಪುತ್ತೂರು Prl. ಮುನ್ಸಿಫ್ ಕೋರ್ಟಿನಲ್ಲಿ

I A V in O. S. 357/1970

ಹುಕ್ರಪ್ಪ ಗೌಡ —(ವಾದಿ) ಅರ್ಜಿದಾರ

ಕೃಷ್ಣಪ್ಪ ಗೌಡ ಕೂಡ— (ಪ್ರತಿವಾದಿರು) ಎದ್ರಿರು

3ನೇ ಪ್ರತಿವಾದಿ ಸಂಜೀವ ಗೌಡ, ಲಿಂಗಪ್ಪ ಗೌಡರ ಮಗ, ಸುಳ್ಯ ತಾಲೂಕು ಕಳಂಜ ಗ್ರಾಮದಲ್ಲಿರುವವ, P. O. ಕಳಂಜ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಯು 1ನೇ ಪ್ರತಿವಾದಿಯ ಮೇಲೆ ಪಡೆದ, ಪ್ರಿಲಿಮಿನರಿ ಡಿಕ್ರಿ ವಿಧಿ ಮೇರೆಗೆ 1ನೇ ಪ್ರತಿವಾದಿಗೆ ಸಲ್ಲತಕ್ಕ ಡಿಕ್ರಿಯ ಸಂಪೂರ್ಣ ಐವಜನ್ನು ಕೋರ್ಟಿಗೆ ಡಿಪೋಜಿಟು ಮಾಡಿ, ಪ್ರಿಲಿಮಿನರಿ ಡಿಕ್ರಿಗೆ ಅನುಸಾರವಾಗಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾ. 27–7–1972ಕ್ಕೆ ನಿಂಮ ಹಾಜ್ರಾತಿ ಬಗ್ಗೆ ಇಟ್ಟಿರುವುದರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ನಿಂಮ ಆಕ್ಷೇಪಗಳನ್ನು ದಾಖ್ಲು ಮಾಡ ತಕ್ಕದ್ದು. ತಪ್ಪಿದ್ರೆ ಸದ್ರಿ ವಿಷಯದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

P. A. Ariga

Advocate for Petitioner

Puttur, 19—6—1972

ಕವಲುದಾರಿ–ಕೆಂಪುದೀಪ

ಒಂದು ಹುತ್ತ–ನೂರಿಪ್ಪತ್ತೈದು ಸರ್ಪ

ನಾಯ್ಕನ ಕಟ್ಟೆಯಿಂದ ವರದಿಯೊಂದು ಬಂದಿದೆ—ಒಂದೇ ಹುತ್ತದಲ್ಲಿ ನೂರ ಇಪ್ಪತ್ತೈದು ನಾಗರಹಾವುಗಳಿದ್ದವು ಎಂದು.

ಇದು ಅಪರೂಪ-ಅಥವಾ ಅಸಂಭವವೆಂಬುದರಿಂದ ಪತ್ರಿಕೆಗಳಲ್ಲಿ ಪ್ರಾಮುಖ್ಯತೆಯೊಡನೆ ಪ್ರಕಟವಾಗಿದೆಯೆಂದು ತಿಳಿಯಲು ಅಡ್ಡಿ ಆತಂಕಗಳಿಲ್ಲ.

ಆ ಹುತ್ತವು ಹೊಲವೊಂದರಲ್ಲಿತ್ತೆಂದೂ ಅದನ್ನು ಅಗೆದಾಗ ಒಂದೊಂದೆ ಹಾವುಗಳು ಹೊರಬಂದುವೆಂದೂ ಹೇಳಲಾಗಿದೆ.

ಆ ಹೊಲಕ್ಕೆ ನೀರು ಹಾಯಿಸಲೆಂದು ತೋಡಲಿದ್ದ ಕಾಲುವೆಗೆ ಆ ಹುತ್ತ ಅಡ್ಡವಾಯಿತೆಂದೂ ಆದ್ದರಿಂದ ಅದನ್ನು ಅಗೆಯಲಾಯಿತೆಂದೂ ವರದಿ ಹೇಳುತ್ತದೆ.

ಒಂದರ ಹಿಂದೆ ಒಂದೆಂಬಂತೆ ಒಟ್ಟು ನೂರ ಇಪ್ಪತ್ತೈದು ಹಾವುಗಳು ತಾವಾಗಿಯೇ ಸರಸರನೆ ಹೊರಟುಬಂದುದು ಅವುಗಳ ಧರ್ಮಬುದ್ಧಿಗೊಂದುದಾಹರಣೆ.

ಒಂದೂವರೆ ಅಡಿಯಿಂದ ನಾಲ್ಕೂವರೆ ಅಡಿಗಳಷ್ಟು ಉದ್ದವಾಗಿದ್ದ, ಒಂದೇ ಜಾತಿಗೆ ಸೇರಿದ್ದ ಈ ಹಾವುಗಳು ಒಂದೇ ಕುಟುಂಬದ ಸದಸ್ಯರಿರಬೇಕೆಂಬುದರಲ್ಲಿ ಅನುಮಾನವಿಲ್ಲ.

ಹಾವುಗಳು ತಮ್ಮ ಮನೆಹಾಳರ ಮೇಲೆ ಯಾವುದೇ ಪ್ರತೀಕಾರ ತೋರ್ಪಡಿಸಿದ ಬಗ್ಗೆ ವರದಿಗಳು ಮೌನವಾಗಿವೆ.

ಹೊಸಹಳ್ಳಿ (ಬೆಂಗಳೂರು) ಬಡಾವಣೆಯಲ್ಲಿ ಪೌರಾಡಳಿತ ಸಚಿವರು ಮುದ್ದಾಂ ನಿಂತು ಅನಧಿಕೃತ ಗುಡಿಸಲುಗಳನ್ನು ಕೆಡವಿಸಿದರು.

ತಮ್ಮ ಗುಡಿಸಲುಗಳು ಅನಧಿಕೃತವಿದ್ದರೂ ಗುಡಿಸಲುದಾರರು ಪ್ರತಿಭಟಿಸಿದರು; ಪ್ರದರ್ಶನ ಮಾಡಿದರು. ಅವರಿಂದ ಮತ್ತೇನು ಮಾಡಲು ಸಾಧ್ಯ?

ನಾಗರಹಾವುಗಳು ಅನಧಿಕೃತವಾಗಿಯೇ ಆ ಹುತ್ತವನ್ನು ಕಟ್ಟಿಕೊಂಡಿವೆಯೆನ್ನುವುದು ಸಾಧ್ಯವಿಲ್ಲ. ಏಕೆಂದರೆ ಹಾವುಗಳು ಹುತ್ತ ಕಟ್ಟುವ ಪರಿಶ್ರಮ ವಹಿಸುವುದಿಲ್ಲ. ಗೆದ್ದಲುಗಳು ಕಟ್ಟಿದ ಮನೆಯನ್ನು ನುಗ್ಗಿ ಅವನ್ನು ನಿರ್ನಾಮ ಮಾಡಿ ಮನೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತವೆಂದು ಪ್ರತೀತಿ.

ಆದರೆ, ಮನೆಯನ್ನು ಯಾರೇ ಕಟ್ಟಿರಲಿ, ಅದರಲ್ಲಿ ಯಾರೇ ನೆಲಸಿರಲಿ ಅದಕ್ಕೆ ಅಧಿಕೃತ ಪರವಾನಿಗೆ ಅಗತ್ಯ.

ಆ ಗುಡಿಸಲುಗಳಿಗೆ ನಗರ ಕಾರ್ಪೊರೇಶನ್ ಪರವಾನಿಗೆ ನೀಡಲಿಲ್ಲ; ಆ ಹುತ್ತಕ್ಕೆ ನಗರ ಸಭೆಯೋ ಪಂಚಾಯತಿಯೋ ಪರವಾನಿಗೆ ನೀಡಿದ್ದಿಲ್ಲ. ಆದ್ದರಿಂದ ಹೊಡೆದುರುಳಿಸಿದ್ದು ಕಾಯದೆಬದ್ಧ.

ಗುಡಿಸಲಲೊಳಗಿನವರು ಸೌಮ್ಯವಾದಿಗಳಿರಬೇಕು; ಉಗ್ರ ಪ್ರತಿಕ್ರಿಯೆ ತೋರಿಸಲಿಲ್ಲ.

ನಾಗರಹಾವುಗಳು ಸ್ವ ಭಾ ವ ತಃ ಉ ಗ್ರ ಪಂ ಥೀ ಯ ರು. ಯಾವ ಕಾರಣವೂ ಇಲ್ಲದೆ ಅವು ತಮ್ಮ ಶಕ್ತಿ ಪ್ರದರ್ಶನವನ್ನು ಮಾಡುವಾಗ, ಈ ಮನೆಹಾಳರನ್ನು ಕಡಿಯದೆ ಬಿಟ್ಟದ್ದು ಆಶ್ಚರ್ಯದ ಸಂಗತಿ.

ತಾವು ವಂಶ ಪಾರಂಪರ್ಯ ಅನುಭವಿಸಿಕೊಂಡು ಬಂದ ಮನೆಯನ್ನು ಹೊಡೆದುರುಳಿಸುವಾಗ, ತಮ್ಮ ಸಂಖ್ಯಾಬಲ–ಶಕ್ತಿಸಾಮರ್ಥ್ಯಗಳ ಮೇಲೆ ಅತೀವ ವಿಶ್ವಾಸಹೊಂದಿರ ಬಹುದಾದ ಈ ಹಾವುಗಳು ಹದಿನೆಂಟು ಅಕ್ಷೋಹಿಣಿ ಕೌರವರಂತೆ ಹಾರೆ ಗುದ್ದಲಿಗಳಡಿ ಬಿದ್ದು ವಿಲಿ ವಿಲಿ ಒದ್ದಾಡಿ ಪ್ರಾಣಬಿಟ್ಟದ್ದು ವಿಲಕ್ಷಣವೇ.

ನೂರ ಇಪ್ಪತ್ತೈದು ಹಾವುಗಳು ಒಬ್ಬನಿಗಾದರೂ ನಂತದಂತನದ ರುಚಿ ತೋರಿಸಲಿಲ್ಲವೆಂದ ಮೇಲೆ ನೂರ ಇಪ್ಪತ್ತೈದು ಹಾವುಗಳು ಹೆದರಿ ಬುಸುಗುಟ್ಟಿ ಬೆರಳೆಣಿಕೆಯ ಹುಲುಮಾನವರನ್ನು ಬೆದರಿಸಿ ತಮ್ಮ ಜೀವನ ರಕ್ಷಣೆ ಮಾಡಿಕೊಳ್ಳಲಿಲ್ಲವೆಂದ ಮೇಲೆ ಅವು ಪಾಕ್ ಸಿಪಾಹಿಗಳ ಜಾತಿಗೆ ಸೇರಿದ ಹಾವುಗಳೇ ಏಕಿರಬಾರದೆಂಬ ಸಂದೇಹ ಬರುತ್ತದೆ.

ನಾಗರನ ಹೆಸರೆತ್ತಿದಾಗಲೇ ಹೆದರಿ ರೋಮ ನಿಮಿರಿಸಿ ಓಡುವವರೇ ಅಧಿಕ ಸಂಖ್ಯಾಕರಿರುವಾಗ, ಆ ಹಳ್ಳಿಗರ ಧೈರ್ಯಸಾಹಸಗಳಿಗೆ ಚಕ್ರ ಕೊಡುವ ಅವಕಾಶವಿಲ್ಲದ್ದರಿಂದ ಭೂಷಣ–ವಿಭೂಷಣಗಳಿಂದಾದರೂ ಅಲಂಕರಿಸ ಬೇಕಾದದ್ದು ಸಹಜ.

ಖಾಂಡವ ವನದಲ್ಲಿ ಅರ್ಜುನ ನೂರ ಇಪ್ಪತ್ತೈದು ಮಾತ್ರವಲ್ಲ, ಅದರ ನೂರ ಇಪ್ಪತ್ತೈದು ಸಾವಿರ ಪಟ್ಟಾದರೂ ಸರ್ಪಗಳನ್ನು ಅಗ್ನಿಗೆ ಆಹುತಿ ಮಾಡಿದ ಕತೆಯಿದೆ.

ಅದೇ ಅರ್ಜುನನ ಮೊಮ್ಮಗ ಪರೀಕ್ಷಿತನ ಮಗ ಜನಮೇಜಯ ಮಹಾರಾಜನು ಸರ್ಪ ಜಾತಿಯ ಮೇಲೆ ಸೇಡು ತೀರಿಸಲು, ಅವುಗಳನ್ನು ಸಮೂಲ ನಾಶಗೈಯುವ ಯಾಗ ಆರಂಭಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಅರ್ಜುನನನ್ನು ಅಸ್ತ್ರವಾಗಿ, ಜ್ವಾಲೆಯಾಗಿ, ಮತ್ತೆ ಬಭ್ರುವಾಹನನ ಬತ್ತಳಿಕೆಯ ಸರ್ಪಾಸ್ತ್ರವಾಗಿ ಸೇಡು ತೀರಿಸಿಕೊಂಡ ಸರ್ಪಮತ್ಸರ ಅಪರಿಚಿತವಲ್ಲ. ಜನಮೇಜಯನನ್ನು ಕುಷ್ಠ ರೋಗವಾಗಿ ಅದು ಕಾಡಿತಂತೆ.

ಆ ಹುತ್ತದಲ್ಲಿ ನೂರ ಇಪ್ಪತ್ತೈದೇ ಸರ್ಪಗಳಿದ್ದುವೆಂದು ಬಡ ಶಾಲೆಯ ಮೇಸ್ಟರು ಖಾನೇಷುಮಾರಿ ಬರೆದಿಡಲಿಲ್ಲ. ಆದ್ದರಿಂದ ಹೆಚ್ಚು ಇದ್ದು ಅವುಗಳಲ್ಲಿ ಒಂದಾದರೂ

(ಎಂಟನೇ ಪುಟ ನೋಡಿರಿ)

ಕೆನರಾ
ಬ್ಯಾಂಕಿಂಗ್
ಕಾರ್ಪೊರೇಷನ್
ಲಿಮಿಟೆಡ್

ESTD. 1906

ನಮಗೆ ಮುದ್ದಾದ
ಪುಟ್ಟ ಹೆಸರೊಂದಿದೆ.

ನಮ್ಮ ಗ್ರಾಹಕರೂ,
ಪೋಷಕರೂ ನಮ್ಮನ್ನು ಅಕ್ಕರೆಯಿಂದ
'ಕಾರ್ಪೊರೇಷನ್ ಬ್ಯಾಂಕ್'
ಎಂದು ಕರೆಯುತ್ತಿರುತ್ತಾರೆ.

ಆದುದರಿಂದ ನಾವು ನಮ್ಮ ಹೆಸರನ್ನು
'ಕಾರ್ಪೊರೇಷನ್ ಬ್ಯಾಂಕ್'
ಎಂದು ಬದಲಾಯಿಸಿದ್ದೇವೆ.

ಕಾರ್ಪೊರೇಷನ್ ಬ್ಯಾಂಕ್
ಲಿಮಿಟೆಡ್

ESTD. 1906

ರಿಜಿಸ್ಟರ್ಡ್ ಆಫೀಸು: ಉಡುಪಿ　　ಆಡಳಿತ ಆಫೀಸು: ಮಂಗಳೂರು

— ಸ್ನೇಹ ವಿಶ್ವಾಸ ನಮ್ಮ ಪರಂಪರೆ

ಅಕ್ಕಸಾಲಿಗ ಚುಚ್ಚಿದರೆ ನೋವಾಗುವದಿಲ್ಲ

ಅಕ್ಕಸಾಲಿಗ ಕಿವಿಚುಚ್ಚಿದರೆ ನೋವಾಗುವುದಿಲ್ಲವೆನ್ನುವ ಮಾತು ಪ್ರತೀತಿಯಲ್ಲಿದೆ. ಇತರರಂತೆ ಅಕ್ಕಸಾಲಿಗ ಕಿವಿಚುಚ್ಚದಿರುವದೇ ಅದಕ್ಕೆ ಕಾರಣ ಇರಬಹುದು. ಕಿವಿಚುಚ್ಚುವವರ ಸಂಖ್ಯೆ ಗಣನೀಯವಿರುವದರಿಂದ ಈ ಮಾತು ಬಂದಿರಲಿಕ್ಕಿಲ್ಲ. ಕಿವಿಚುಚ್ಚುವವರ ಮಾತಿಗೆ ಕಿವಿ ಕೊಡುವವರು ಬಹಳ ಮಂದಿ. ಈ ಚುಚ್ಚುವವರಿಗೆ ಅದ್ಯಾವ ಉಪಕರಣ,—ಸಲಕರಣೆ ಆಯುಧ ಆದೇನೂ ಅಗತ್ಯ ಇರುವದಿಲ್ಲ. ಕೇವಲ ತಮ್ಮ ನಾಲಗೆಯ ನೆರವಿನಿಂದ ಕೆಲಸವೆಲ್ಲವನ್ನೂ ಮುಗಿಸಿ ಬಿಡುತ್ತಾರೆ. ತನ್ನ ಕಿವಿಗೆ ಚಿನ್ನ ಬಂದಿಲ್ಲ, ತನ್ನ ಕಿವಿಮಾತ್ರ ಹಿತ್ತಾಳೆಯಾಗಿಬಿಟ್ಟಿತೆಂದು ಚುಚ್ಚಿಸಿಕೊಂಡವನಿಗೆ ಗೊತ್ತಾಗುವಾಗ ಕಾಲ ಮೀರಿ ಹೋಗುತ್ತದೆ. ಅಲ್ಲದೆ ಆ ನೋವು ಕ್ಷಣಿಕ ಇರುವದಿಲ್ಲ, ಬಹಳ ಸಮಯ ಇದ್ದೇ ಇರುತ್ತದೆ. ಆದರೆ ಅಕ್ಕಸಾಲಿಗರ ವಿಷಯ ಹಾಗಲ್ಲ. ಅದನ್ನರಿತುಕೊಂಡೋ, ಏನೋ, ಅವರಿಗಾಗದವರು ಇಪ್ಪತ್ತನಾಲ್ಕು ಕೆರೆಟ್ಟಿನ ಆಭರಣಗಳನ್ನು ಮಾಡಕೂಡದೆಂದು ಆಜ್ಞಾಪಿಸಿ, ಕರಟಿ ಕೊಡಲು ಮುಂದಾದರು. ಆಜ್ಞೆ ಹಾಗೆ ಇದೆಯಾದರೂ ಅದನ್ನು ತಂದವರು ಮೂಲೆ ಪಾಲಾಗಿರುವರೇ ವಿನಃ ಅಕ್ಕಸಾಲಿಗರು ಮೂಲೆ ಪಾಲಾಗಿಲ್ಲ. ಅದುವೇ ಅವರ ವೈಶಿಷ್ಟ್ಯ. ಅವರು ಕಿವಿ ಚುಚ್ಚುವಾಗ ನೋವಾಗದಿರುವ ಕಾರಣವೋ, ಏನೋ ಇಂದೂ ಮಾತು ಬಳಕೆಯಲ್ಲಿದೆ. ಚಿನ್ನಾಭರಣಗಳು ಕಮ್ಮಿಯಾಗುತ್ತಿವೆಯಾದರೂ ಮಾತು ಉಳಿದುಕೊಂಡಿದೆ. ಆ ದೃಷ್ಟಿಯಿಂದ ನೋಡುವಾಗ ಇದು ಕಿವಿಚುಚ್ಚುವ ಮಾತಲ್ಲ, ಅವನವನ ಕೆಲಸ ಅವನವನೇ ಮಾಡಬೇಕು, ಅದುವೇ ಚಂದವೆನ್ನುವ ಅರ್ಥ ಬರುತ್ತದೆ.

ಇದು ರಾಜಕೀಯಕ್ಕೂ ಅನ್ವಯವಾಗುತ್ತದೆ. ಹೊಸತಾಗಿ ಚುನಾಯಿತವಾದ ಕಾಂಗ್ರೆಸ್ ಸಂಸದೀಯ ಪಕ್ಷದ ಮೊದಲ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದ, ಆದರ ಧ್ರುವತಾರೆ ಇಂದಿರಾಜಿಯವರು, ಮುಸ್ಲಿಮರು ರಾಷ್ಟ್ರೀಯ ಪ್ರವಾಹದಲ್ಲಿ ಒಂದಾಗದೆ ಮುಂದುವರಿಯುವದು ಅಸಾಧ್ಯವೆಂದು ಸ್ಪಷ್ಟವಾಗಿ ಸೂಚಿಸಿದ್ದಾರೆ. ಇದೇ ಮಾತನ್ನು ಹಿಂದೆಯೂ ಹಲವರು ಹೇಳಿರುವರು. ದ್ವಿರಾಷ್ಟ್ರ, ತ್ರಿರಾಷ್ಟ್ರ ಮಾತು ಸರಿಯಲ್ಲ. ಈ ದೇಶದಲ್ಲಿರುವದು ಒಂದೇ ಒಂದು ರಾಷ್ಟ್ರ. ಇಲ್ಲಿ ಪ್ರತ್ಯೇಕತೆಗೆ ಸ್ಥಳವಿಲ್ಲ. ಎಲ್ಲರೂ ಭಾರತೀಯರು —ಭಾರತಾಂಬೆಯ ಮುದ್ದುಗುವರ-ಮುದ್ದುಗುವರಿಯರು....ಇದನ್ನು ಪ್ರತಿಪಾದಿಸಲು ಪ್ರೊ| ಬಲರಾಜ ಮಧೋಕರು 'ಇಂಡಿಯನೈಸೇಶನ್'ಎಂಬ ಕೃತಿಯಲ್ಲಿ ಬರೆದುದೇ ತಡ, ಮಾತಿನ ಗುಡುಗುಗಳೇ ಕೇಳಿಬಂದುವು. ಇಲ್ಲಿರುವವರೆಲ್ಲರನ್ನೂ ಹಿಂದುಗಳನ್ನಾಗಿಸುವದೇ ಮಧೋಕರ ಮಹತ್ವಾಕಾಂಕ್ಷೆಯೆಂದು ಪ್ರಚಾರ ಮಾಡಲಾಯಿತು. ಕೆಲವು ಮುಸ್ಲಿಮರ ಉರ್ದು ಪತ್ರಿಕೆಗಳು ಅವರ ತಲೆಯನ್ನೇ ಕೇಳಿದುವು. ಇದಕ್ಕೆ ಅವರು ಪ್ರಾಧ್ಯಾಪಕರಾಗಿರುವುದು ಕಾರಣವಲ್ಲ; ಅವರು ಭಾರತೀಯ ಜನಸಂಘದ ಮಹಾನಾಯಕರಾಗಿರುವುದೇ ಕಾರಣವಿದೆ. ಹಾಗಾಗಿ ಅವರು ಆ ಮಾತನ್ನಾಡಿದಾಗ, ಚುಚ್ಚಿದಾಗ, ರಾಜಕೀಯೋದ್ಯಮಿಗಳ ಕಿವಿಗೆ ನೋವಾಯಿತು. ಅವರು ಬೊಬ್ಬೆ ಹೊಡೆದರು.

ಆದರೆ ಈಗ? ಈ ಮಾತನ್ನಾಡಿದವರು ಪಾಕಿಸ್ತಾನವನ್ನು ಹಣ್ಣಾಗಿಸಿರುವ ಇಂದಿರಾ ಗಾಂಧಿಯವರು. ಎಲ್ಲರಿಗೂ ಅನ್ವಯವಾಗುವ ಕಾನೂನನ್ನು ತರಲು ಆಗಿನ ಕಾನೂನು ಸಚಿವ ಗೋವಿಂದ ಮೆನನರು ಎದ್ದು ನಿಂತಾಗ, ಮುಸ್ಲಿಮರ ಮೇಲೆ ಕಾನೂನು ತರಲು ಈ ಸಂಸತ್ತಿಗೆ ಅಧಿಕಾರವಿಲ್ಲವೆಂದು ಮುಸ್ಲಿಂ ಲೀಗಿನ ಸದಸ್ಯ ಸುಲೇಮಾನ್ ಸ್ವರವೆತ್ತಿದಾಗ ಶೀರ್ಷಾಸದ ಮಾನ ತೀರಿಹೋಯಿತು. ಅದು ಮೂಲೆಪಾಲಾಯಿತು. ಇತ್ತೀಚೆಗೆ ಒಂದು ಜಮಾಯತಿನ ಸಭೆ ದಿಲ್ಲಿಯಲ್ಲಿ ಸೇರಿದ್ದಾಗ ಅದನ್ನು ಹೊಗಳಿ ಇಂದಿರಾಜಿಯವರು ಶುಭಾಶಯವನ್ನು ಕಳುಹಿಸಿದ್ದರೂ ಭಾರತದ ಸಂಸತ್ತನ್ನು ಹೀನಾಯವಾಗಿ ಮಾತ್ರವಲ್ಲ ಬೆದರಿಸುವ ಸ್ವರದಲ್ಲಿ ಅದರ ಅಧ್ಯಕ್ಷರು ಆರ್ಭಟಿಸಿದ್ದರು. ಇವರಿಗೆ ಇಂದಿರಾಜಿಯವರ ಇಂಗಿತದರಿವಿಲ್ಲ. ಇವರನ್ನೂ ಹೆದರಿಸಬಹುದು, ಮತಪತ್ರದ ಮೂಲಂಗಿಯನ್ನು ತೋರಿಸಿ ಮುನ್ನಡೆಯಬಹುದೆಂದು ಇವರು ಮುಂದಿಗೆ ಹೊಲ್ಲುತ್ತಿದ್ದಾರೆ. ತನಗೆದುರಾದವರು ಬಾಳಿ ಬದುಕಿಲ್ಲವೆಂದು ಶ್ರೀಮತೀಜಿಯವರು ಸ್ಪಷ್ಟವಾಗಿ ಸಾರಿದ್ದಾರೆ; ಹಾಗಿರುವಾಗ ಮುಸ್ಲಿಂ ಮತೀಯ ಸಂಸ್ಥೆಗಳು ದುಡುಕಿ ದೀಪಕ್ಕೆರಗಿದ ಹಾತೆಗಳಾಗಿವೆ. ಇತರ ಮತೀಯ ಸಂಸ್ಥೆಗಳಿಗೂ ಇದೊಂದು ಎಚ್ಚರಿಕೆ, ಅಲ್ಲದೆ, ಸರಿಯಾದ ಪಾಠವಿದೆ. ಜಾತೀಯತೆಗೆ, ಮತೀಯತೆಗೆ, ಇಲ್ಲಿ ಜಾಗವಿಲ್ಲ; ಮಣೆ ಇಲ್ಲ. ತನ್ನ ಅಧಿಕಾರ ಭದ್ರತೆಗಾಗಿ ಡಾ| ಇಂದಿರಾಜಿಯವರು ಸತ್ತ ಲೀಗಿಗೆ ಉಸಿರಿತ್ತು, ಪುನರ್ಜನ್ಮ ಕೊಟ್ಟಿದ್ದರು. ಈಗ ಅವರ ಸ್ಥಾನ ಭದ್ರವಾಗಿದೆ. ಇನ್ನು ಅವರು ಭಾರತದತ್ತ ನೋಡಬೇಕಾಗಿದೆ; ಭಾರತೀಯರೆಲ್ಲರನ್ನು ಕಾಣಬೇಕಾಗಿದೆ.

ಇಂದಿರಾಜಿಯವರು ಹುಟ್ಟಿ ಬೆಳೆದಿರುವದು ತ್ರಿವೇಣಿ ಸಂಗಮದಲ್ಲಿ. ಅಲ್ಲಿ ಕಪ್ಪು, ಬಿಳಿ, ಬಣ್ಣಬಣ್ಣದ ನೀರು ಒಂದುಗೂಡಿ ಬಣ್ಣ ಮರೆತು ಒಂದುಗೂಡಿ ಮುಂದರಿಯುತ್ತದೆ. ಯಾವ ನದಿಯ ನೀರು ಯಾವದೆಂದು ಪ್ರತ್ಯೇಕಿಸಲು ಸಾಧ್ಯವೇ ಇರುವದಿಲ್ಲ. ಅದೆಷ್ಟು ನದಿಗಳು ಬಂದು ಸೇರಿದರೂ ಕೆಲವೆಡೆ ಕೊಳಕು ನೀರು ಕೂಡಾ ಕೂಡಿದರೂ ಗಂಗಾನದಿಯು, ಗಂಗಾಮಾತೆ ಪುಣ್ಯ ಜಲವೆಂದೇ ಅದನ್ನು ಪರಿಗಣಿಸಲಾಗುತ್ತದೆ. ಇದನ್ನವರು ಬಾಲ್ಯದಿಂದಲೂ ಕಂಡಿರುವರಾದರೂ ಬೆಳೆಸಿದ ನರ್ಸ್‌ಗಳ, ತಾರುಣ್ಯದ ಸಮಯದಲ್ಲುಂಟಾಗಿರುವ ಇಂಗ್ಲೇಂಡಿನ ಪ್ರಭಾವ ಹಾಗೂ ರಾಜಕೀಯ ಗಂಧಗಾಳಿಯಿಂದಾಗಿ ಇದುವರೆಗೆ ಅತ್ತಿತ್ತ ದೃಷ್ಟಿ ಹಾಯಿಸಿರಬಹುದು. ಇವೆಲ್ಲವೂ ಕ್ಷಣಿಕ–ಒಂದು ಸ್ಥಿರತೆಗೆ ಬರುವ ತನಕ ಮಾತ್ರ. ಮುಳುಗುವಾತ ಸಿಕ್ಕಿದ ಹುಲ್ಲಿನ ಕಡ್ಡಿಯ ಆಸೆಗಾಗಿ ಕೈನೀಡುವಂತೆ. ಈಗ ಹೆಚ್ಚಿನ ರಾಜ್ಯಗಳೂ ಕೇಂದ್ರವೂ ಅವರ ಕರಗತವಾಗಿವೆ, ಮಾತ್ರವಲ್ಲ, ಅಲ್ಲೆಲ್ಲೆಲ್ಲೂ ಅವರನ್ನು ಎದುರಿಸುವ ಗಂಡೆದೆ ಉಳ್ಳವರಾರೂ ಇರುವದಿಲ್ಲ. ಇನ್ನು ಅವರು ಧೈರ್ಯವಾಗಿ ಮುನ್ನಡೆಯ ಬಹುದು. ಪ್ರತ್ಯೇಕತೆಯ ಕಾಂಗ್ರೆಸ್ಸಿನ ಧೋರಣೆಯಿಂದಾಗಿ ಪಾಕಿಸ್ಥಾನ ಉಂಟಾಗಿರುತ್ತದೆ. ಅದಕ್ಕೆ ಕಾರಣವಾಗಿರುವವರಲ್ಲಿ ಹೆಚ್ಚಿನವರಿಂದು ಪ್ರತ್ಯೇಕವಾಗಿದ್ದಾರಲ್ಲದೆ ಉಳಿದವರನ್ನು ಕಾಂಗ್ರೆಸ್ಸಿನಿಂದ ಓಡಿಸಿ ನವಶಕ್ತಿಯ ಕಾಂಗ್ರೆಸ್ಸನ್ನು ಇಂದಿರಾಜೀ ಕಟ್ಟಿದ್ದಾರೆ. ಇಲ್ಲಿ ಪ್ರತ್ಯೇಕತೆಗೆ ಎಡೆ ಇರಲಾರದು.

ಇನ್ನು ಮುಂದೆ ಆಲಿಘರ ಅಥವಾ ಅದಿನ್ನಾವದೇ ಸರಕಾರದಿಂದ ಆರ್ಥಿಕ ಸಹಾಯ ಪಡೆಯುತ್ತಿರುವ ಸಂಸ್ಥೆಯನ್ನು 'ಅಲ್ಪ ಸಂಖ್ಯಾಕರ ಸಂಸ್ಥೆ'ಯೆಂದು ಸಾರಲು ಸರಕಾರ ಸಿದ್ಧವಿಲ್ಲವೆಂದು ಇಂದಿರಾಜಿಯವರು ಸ್ಪಷ್ಟವಾಗಿ ತನ್ನ ಪಕ್ಷದವರಿಗೆ ಸೂಚಿಸಿದ್ದಾರೆ. ಸರಕಾರದ ಬೊಕ್ಕಸ ತುಂಬಿಸುವವರು ಯಾವದೋ ಒಂದು ಕೋಮಿನವರು ಮಾತ್ರವಲ್ಲ. ಒಂದು ಕೋಮಿನ, ಜಾತಿಯ, ಮತದ ಗುಡಿ ಮಠ ದೇವಾಲಯಗಳಿಂದ ಹಣವನ್ನು ತಂದು ಪ್ರತ್ಯೇಕತೆಯ ಪ್ರಚಾರ ನಡೆಸುವ ಸಂಸ್ಥೆಯನ್ನು ಬೆಳೆಸುವದು ಯಾವ ದೃಷ್ಟಿಯಿಂದಲೂ ನ್ಯಾಯವಿರುವದಿಲ್ಲ. ಆಲಿಘರ ವಿಶ್ವವಿದ್ಯಾಲಯದಲ್ಲಿ ತಯಾರಾದವರಲ್ಲಿ ಹೆಚ್ಚಿನವರು ಒಡನೆ ಪಾಕಿಸ್ಥಾನಕ್ಕೆ ಪರಾರಿಯಾಗುತ್ತಾರೆ, ಇಲ್ಲವೇ, ಅವರ ಕೈಕೂಲಿಗಳಾಗಿ ಇಲ್ಲಿ ರಾಷ್ಟ್ರದ್ರೋಹಿಗಳಾಗಿ ಕುಕೃತ್ಯಗಳಲ್ಲಿ ಮಗ್ನರಾಗಿರುತ್ತಾರೆ. ಇದನ್ನು ಕಂಡು ಇಂದಿರಾಜಿಯವರಿಗೆ ಸಾಕಾಗಿದೆ. ಪಾಕಿಸ್ಥಾನದ ಮೂಗಿಗೆ ದಾರ ಹಾಕಬೇಕಾದಲ್ಲಿ ಆಲಿಘರ ವಿಶ್ವವಿದ್ಯಾಲಯವನ್ನು ಹದ್ದಿನಲ್ಲಿಟ್ಟುಕೊಳ್ಳಬೇಕೆಂಬ ಸತ್ಯಾಂಶವನ್ನು ಅವರು ಮನಗಂಡಿದ್ದಾರೆ. ಈಗ ಅದರಂತೆ ಮಾಡಿಯೂ ಮಾಡಿದ್ದಾರೆ.

ತನ್ನನ್ನು ಕಡಿಯಲು ಬಂದಿರುವ ವಿಷಸರ್ಪದ ಹಲ್ಲನ್ನು ತೆಗೆಯಲಿಕ್ಕಾಗಿ ಮಾತ್ರ ಈ ಕಾರ್ಯಕ್ಕವರು ಮುಂದಾಗಿರುವದಿಲ್ಲ; ಇಷ್ಟರ ವರೆಗೆ ನಡೆಯುತ್ತಬಂದಿರುವ ಇಸ್ಲಾಮೀಭಾವಿಯಿಂದ ಹೊರಬರಲು ನವ ಯುವಕ ಯುವತಿಯರು ಚಡಪಡಿಸುತ್ತಿದ್ದಾರೆ; ಅವರು ಮುಸ್ಲಿಂಲೀಗಿಗೆ ಸೇರುವ ಬದಲು ಕಾಂಗ್ರೆಸ್ಸ್, ಭಾರತೀಯ ಜನಸಂಘ ಮುಂತಾದ ರಾಜಕೀಯ ಪಕ್ಷಗಳಿಗೆ ಸೇರುತ್ತಿದ್ದಾರೆ. ಇಂತಹ ಸ್ವತಂತ್ರ ಮನೋವೃತ್ತಿಯುಳ್ಳ ಪೀಳಿಗೆಯನ್ನು ಸಿದ್ಧಗೊಳಿಸಬೇಕಾದಲ್ಲಿ ಅವರಿಗೆ ಸರಿಯಾದ ವಿದ್ಯಾಭ್ಯಾಸ ಸಿಗಬೇಕು. ಪ್ರತ್ಯೇಕತೆಯ ವಿಷಪ್ರಚಾರಕ್ಕವರು ಬಲಿಯಾಗಬಾರದು, ಖಾಜಿ ಮೌಲ್ವಿ ಹಾಗೂ ಇತರ ಜಾತೀಯವಾದಿಗಳ ಮಾತಿಗವರು ಮೋಸಹೋಗಬಾರದು. ....ಇದಕ್ಕೆ ಪ್ರತ್ಯೇಕತೆಯ ಮೊಳೆಯೂಡಿಸುವ ಆಲಿಘರದಂತಹ ವಿಶ್ವವಿದ್ಯಾಲಯಗಳು ವಿಶಾಲವಾಗಬೇಕು, ಸರಕಾರದ ಆಜ್ಞೆ ಅಲ್ಲಿ ಪರಿಪಾಲಿಸಲ್ಪಡಬೇಕು.

ಇದಕ್ಕಾಗಿ ಸಂಸತ್ ಇಂದಿರಾಜಿಯವರಿಗೆ ವಿಶೇಷ ಅಧಿಕಾರವನ್ನಿತ್ತಿದೆ. ಇದನ್ನವರು ರಾಜಕೀಯ ದಾಳವನ್ನಾಗಿ ಉಪಯೋಗಿಸಿಕೊಳ್ಳಲಾರರು; ರಾಷ್ಟ್ರಹಿತಕ್ಕಾಗಿ ನವಯುಗಕ್ಕಾಗಿ ಉಪಯೋಗಿಸಿಕೊಳ್ಳುವರು. ಮುಸ್ಲಿಂಲೀಗಿನ ಮುನಿಸನ್ನು ಪರಿಗಣಿಸದೆ ಬಂಗ್ಲಾವನ್ನು ಬಿಡಿಸಿದಂತೆ ಇಲ್ಲಿಯ ಮಹಮ್ಮದೀಯರನ್ನು ಜಾತೀಯತೆಯ ಜಗಲಿಯಿಂದ ಹೊರಗೆ ತರಬೇಕಾಗಿದೆ. ಇದು ಸುಲಭದ ಕಾರ್ಯವಲ್ಲ. ಬ್ರಿಟಿಷರು ಕಾಂಗ್ರೆಸ್ಸನ್ನು ಆರಂಭಿಸಿದ ರೀತಿಯೇ ಹಾಗಿದೆ. ಪ್ರತ್ಯೇಕತೆಯ ಪಾಠ ಅಲ್ಲೇ ಹೇಳಿಕೊಡಲಾಗಿದೆ. ಆದರೆ ಆ ಕಾಂಗ್ರೆಸ್ಸು ಇಂದಿಲ್ಲವೆನ್ನುವದೂ ನಿಜಾಂಶವಿದೆ. ಆ ಅಂಜುಬುರುಕ ಕಾಂಗ್ರೆಸ್ಸು ಇಂದಿಲ್ಲ. ಪ್ರತ್ಯೇಕತೆಯನ್ನು ಪರಿಪಾಲಿಸುತ್ತಿದ್ದ ಬ್ರಿಟಿಷ್ ನಿರ್ಮಿತ ಕಾಂಗ್ರೆಸ್ಸು ಇಂದಿಲ್ಲ. ಇಂದಿರುವದು ಇಂದಿರಾಜಿಯವರ ಇಷ್ಟ, ಇಚ್ಛೆ ಆರಾಧೆಗನುಸಾರವಾಗಿ ನಡೆಯುವ ಕಾಂಗ್ರೆಸ್ಸು. ಅದನ್ನು ನಡೆಸುತ್ತಿರುವವರು ಭಾರತರತ್ನ ಡಾ| ಇಂದಿರಾ ಗಾಂಧಿ. ಅವರೇ ಅದರ ಅನಭಿಷಿಕ್ತ ಮಹಾರಾಣಿಯೆಂದರೂ ತಪ್ಪಾಗಲಿಕ್ಕಿಲ್ಲವೆನ್ನುತ್ತಿದೆ.

ಚೌರುಚಿಯುನ

ಸಾರ್ವಜನಿಕ ಬೊಕ್ಕಸ ಸೋರಿಹೋಯಿತು

ಲೋಕೋಪಯೋಗಿ ಶಾಖೆಗೆ ಇಂಗ್ಲಿಷ್ ಭಾಷೆಯಲ್ಲಿ ಪಿ. ಡಬ್ಲ್ಯು. ಡಿ. ಎಂಬುದು ಸಂಕ್ಷಿಪ್ತ ರೂಪ. ಇದನ್ನು ನಿಜವಾಗಿ ಓದಬೇಕಾದದ್ದು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟೆಂದು. ಆದರೆ ಸಾಧಿಸುತ್ತಿರುವ ಕಾರ್ಯವೈಖರಿಯನ್ನು ಗಮನಿಸುವಾಗ ಅದು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟೆಂಬುದು ಮನವರಿಕೆಯಾಗುತ್ತದೆ.

ಲೋಕೋಪಯೋಗಿ ವಿಭಾಗ ಲೋಕೋಪಯೋಗದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ. ಆದರೆ, ಇದು ಸಾರ್ವಜನಿಕ ಕ್ಷೇತ್ರವಾದ್ದುದರಿಂದ ಇಲ್ಲಿ ಎಷ್ಟು ವಂಚನೆ ನಡೆಯುವುದು ಸಾಧ್ಯವೋ ಅದಕ್ಕಿಂತಲೂ ಹೆಚ್ಚು ಮೋಸ ನಡೆಯುತ್ತದೆ. ಈ ಮೋಸದ ಪರಿಣಾಮ ಅಧಿಕಾರಿ—ಕೆಲಸಗಾರ —ಕಂಟ್ರಾಕ್ಟುದಾರರ ಮಟ್ಟಿಗೇ ಸೀಮಿತವಿದ್ದರೆ ಯಾರ ಗಂಟೂ ಮುಳುಗುವುದಿಲ್ಲ. ಆದರೆ ಲೋಕದ ಮೇಲೆಯೇ ದುಷ್ಪರಿಣಾಮ ಬೀರುವುದರಿಂದ ಸಾರ್ವಜನಿಕರು ಎಚ್ಚರರಾಗುವುದು ಅಗತ್ಯವಿದೆ.

ಸ್ವಾತಂತ್ರ್ಯೋತ್ತರ ಯುಗದಲ್ಲಿ ಹುಟ್ಟಿ ಬೆಳೆದು ಕೊಬ್ಬಿದ ವರ್ಗವೊಂದು ಕಂಟ್ರಾಕ್ಟುದಾರರದ್ದು. ಲೋಕೋಪಯೋಗಿ ವಿಭಾಗದ ನಾಲ್ಕಾರು ಚಿಕ್ಕ ಪುಟ್ಟ ಕಂಟ್ರಾಕ್ಟು ದೊರೆತು, ಅದು ಮುಗಿಯುವ ಹೊತ್ತಿಗೆ ಕಂಟ್ರಾಕ್ಟುದಾರ ನೆಲದ ಮೇಲಿರುವುದಿಲ್ಲ. ಅಧಿಕಾರಿಗಳನ್ನು ಅಕ್ರಮವಾಗಿ ಒಲಿಸಿಕೊಂಡು ಸಂಪಲ್ಲಕ್ಷ್ಮಿಯನ್ನು ವಶೀಕರಿಸುತ್ತಾನೆ. ನಮ್ಮ ಅಭಿವೃದ್ಧಿ ಯೋಜನೆಗಳ ಗಾತ್ರ—ಪ್ರಮಾಣ ಏರುತ್ತಹೋದಂತೆ ಕಂಟ್ರಾಕ್ಟುದಾರರ ಡೊಳ್ಳೂ ಹೆಚ್ಚಿತು; ಅಧಿಕಾರಿಗಳ ದೆಸೆಯೂ ಖುಲಾಯಿಸಿತು.

ಕನ್ನಂಬಾಡಿ ಕಟ್ಟೆ ವಿಶ್ವೇಶ್ವರಯ್ಯನವರ ಜೀವಂತ ಸ್ಮಾರಕ. ಸಾಕಷ್ಟು ತಾಂತ್ರಿಕ ಸೌಲಭ್ಯಗಳಿಲ್ಲದಾಗ ಕಟ್ಟಿದ ಕಟ್ಟೆಯದು. ಅದು ಅಂದಿನಂತೆಯೇ ಇಂದೂ ತನ್ನ ಗೌರವ ಘನತೆಗಳನ್ನು ಉಳಿಸಿಕೊಂಡು ಬಂದಿದೆ. ಆದರೆ ಮೊನ್ನೆ ಮೊನ್ನೆ ನಿರ್ಮಾಣವಾದ ಇನ್ನೂ ಪೂರ್ಣಗೊಳ್ಳದ ಶರಾವತಿ ಯೋಜನೆಯಲ್ಲಿ ಈಗಾಗಲೇ ಹುಳುಕುಗಳು ಗೋಚರವಾದುದಕ್ಕೆ ಯಾರು ಹೊಣೆಗಾರರು? ಸದ್ಯ ಕಂಡು ಬಂದ ಸುರಂಗದ ಬಿರುಕಿನಿಂದ ನಾಲ್ಕಾರು ಕೋಟಿ ರೂಪಾಯಿಗಳು ವ್ಯರ್ಥವಾಗುವವೆಂದು ಹೇಳಲಾಗುತ್ತಿದೆ.

ಇಲ್ಲಿ ಹಣದ ಮೊತ್ತದ ಪ್ರಶ್ನೆ ಏಳುವುದಿಲ್ಲ. ಶರಾವತಿಯಂತಹ ಒಂದು ಯೋಜನೆ ಹತ್ತಾರು ತಲೆಮಾರುಗಳ ಜನಕ ಉಳಿಯ ಬೇಕಾದದ್ದು. ರಾಜ್ಯದ ಜನಜೀವನಕ್ಕೆ ಪ್ರಾಣಶಕ್ತಿ ನೀಡ ಬೇಕಾದದ್ದು. ಈ ಬಗೆಯ ಲೋಕೋಪಯೋಗಿ ಯೋಜನೆಗಳಲ್ಲೇ ಸಿಂಹಪಾಲು ಕೆಲವೇ ಮಂದಿಯ ಜೇಬು ಸೇರುವುದಾದರೆ, ಸಾರ್ವಜನಿಕ ಬೊಕ್ಕಸದ ದುರುಪಯೋಗ ಹೇಗಾಗುತ್ತಿದೆಯೆಂದು ಬೇರೆ ಹೇಳ ಬೇಕಾಗಿಲ್ಲ. ಇದು ಒಂದು ದೊಡ್ಡ ದುಃಖದಾಯಕ ಘಟನೆ. ಲೋಕೋಪಯೋಗಿ ವಿಭಾಗದ ಅಧಿಕಾರಿಗಳೂ ನೌಕರರೂ ಕಂಟ್ರಾಕ್ಟುದಾರರೂ ಹೇಗೆ ಸ್ವರ್ಗಸುಖ ಪಡೆಯಲು ಸಮರ್ಥರಾದರೆಂಬುದಕ್ಕೆ ಶರಾವತಿಯೊಂದು ನಿದರ್ಶನ.

ಶರಾವತಿಯ ಕರ್ಮಕಾಂಡ ಲೋಕೋಪಯೋಗಿ ಯೋಜನೆಗಳ ಮುಖಕ್ಕೆ ಕನ್ನಡಿ ಹಿಡಿಯುತ್ತದೆ. ಇದರ ಬಗ್ಗೆ ಸೂಕ್ತಕಾಲದಲ್ಲಿ ಸೂಕ್ತಕ್ರಮ ಕೈಕೊಳ್ಳುವುದಾಗಿ ಸಚಿವರು ಭರವಸೆ ನೀಡಿದ್ದಾರೆ. ತಪ್ಪಿತಸ್ಥರನ್ನು ಅವರು ಯಾರೇ ಇರಲಿ, ದಂಡಿಸಲು ಹಿಂದು ಮುಂದು ನೋಡುವುದಿಲ್ಲವೆಂದು ಅವರು ಗುಡುಗಿದ್ದಾರೆ. ಸಂತೋಷವೇ ಆದರೆ, ಶರಾವತಿಯ ಸಮಗ್ರ ಕಾರ್ಯಕ್ರಮದ ಕೂಲಂಕಷ ಪರಿಶೀಲನೆಯಾಗಬೇಕು. ಕಂಡು ಬರುವ ಲೋಪ ದೋಷಗಳಲ್ಲಿ ಯಾರು ಯಾರ ಪಾಲೆಷ್ಟು ಎಂಬುದು ಮೊದಲಿಗೆ ಹೊರಪಡಬೇಕು. ಬರಿಯ ನ್ಯಾಯಾಂಗ ವಿಚಾರಣೆಯಷ್ಟರಿಂದ ಏನೂ ಸಾಧಿತವಾಗುವುದಿಲ್ಲ.

ಈ ಬಗೆಯ ಕರ್ತವ್ಯ ವಿಮುಖತೆಗೆ ಏನು ಕಾರಣವೆಂಬುದನ್ನು ಸರಕಾರವೂ ಪ್ರಜೆಗಳೂ ವಿವೇಚಿಸಬೇಕು. ಅನರ್ಹರೂ ಅಯೋಗ್ಯರೂ ಅಪ್ರಾಮಾಣಿಕರೂ ಅಚರಿತ್ರರೂ ಆದವರು ಅಧಿಕಾರ ಸ್ಥಾನದಲ್ಲಿರುವುದರಿಂದಲೇ ಇದೆಲ್ಲ ಸಾಧ್ಯವಾಗುತ್ತದೆ. ಇದು ವಿಶ್ವೇಶ್ವರಯ್ಯನವರ ಕಾಲದಿಂದಲೂ ಇದ್ದದ್ದೇ. ಮೈಸೂರಿನ ದಿವಾನಗಿರಿಯನ್ನು ಅವರು ಬಿಟ್ಟು ಬಿಡಬೇಕಾಗಿ ಬಂದ ದುರ್ಘಟನೆಗಳನ್ನು ನಾವು ಮರೆಯುವುದು ಸಾಧ್ಯವಿಲ್ಲ. ಸರಕಾರವು ಯೋಗ್ಯತೆ, ಅರ್ಹತೆ ಚರಿತ್ರೆಗಳನ್ನು ಕಡೆಗಣಿಸಿ ನಾನಾ ಕಾರಣಗಳನ್ನು ಮುಂದಿಟ್ಟು ಅಸಂಗತರನ್ನೇ ನೌಕರಿಗೆ ನೇಮಿಸಿಕೊಳ್ಳುವುದರಿಂದ ಸರಕಾರ ಬೊಕ್ಕಸ ಸೋರಿ ಹೋಗಲು ಕಾರಣವಾಗುತ್ತದೆ. ಸರಕಾರದ ಕೆಲಸವೆಂದರೆ ಯಾರ ಕೆಲಸವೂ ಅಲ್ಲ; ಅದೊಂದು ಧರ್ಮಛತ್ರವೆನ್ನುವ ಭಾವನೆ ಮನೆ ಮಾಡಿರುವುದರಿಂದಲೇ ಈಯೆಲ್ಲ ಅನರ್ಥಗಳು ನಡೆಯುತ್ತವೆ.

ಪ್ರಾಮಾಣಿಕತೆ, ಯೋಗ್ಯತೆಗೆ, ಸಚ್ಚರಿತ್ರಕ್ಕೆ ಕವಡಿಯ ಬೆಲೆಯನ್ನೂ ನೀಡದವರು ಯೋಜನೆ — ಅಭಿವೃದ್ಧಿ ಕಾರ್ಯಗಳ ಹೆಸರಲ್ಲಿ ಅನ್ಯಾಯ ಸಾಧಿಸುತ್ತಾರೆ. ಎರಡೂವರೆ ಕೋಟಿ ಕನ್ನಡಿಗರು ತೆರುವ ತೆರಿಗೆಯ ಹಣದಿಂದ ಕೆಲವು ನೂರು ಜನ

(ಒಂಭತ್ತನೇ ಪುಟ ನೋಡಿರಿ)

ಇಂದಿರಾಜಿ ಇಂದು ಸುಸ್ಪಷ್ಟ ಸೂಚಿಸಿದ್ದಾರೆ. ಪ್ರತ್ಯೇಕತೆಯ ಪ್ರಚಾರ ನಡೆಸುತ್ತಿರುವ ಸಂಸ್ಥೆಗೆ ಇನ್ನು ಮೇಲೆ ಸರಕಾರದ ಸಹಕಾರ ಸಿಗಲಾರದು. ಇದುವರೆಗೆ ಅಲ್ಪಸಂಖ್ಯಾಕರೆಂದು ಬಹಳಷ್ಟು ನೆರವಿನಿಂದ ಸಾಕಲ್ಪಟ್ಟವರು ಇನ್ನು ಮುಂದೆ ಪ್ರತ್ಯೇಕವಾಗುಳಿಯುವಂತಿಲ್ಲ. ಅವರು ಮುಖ್ಯ ಪ್ರವಾಹದಲ್ಲಿ ರಾಷ್ಟ್ರೀಯ ಪ್ರವಾಹದಲ್ಲಿ ಒಂದಾಗಲೇ ಬೇಕು ವಿನಃ ಮಿನಿ ರಾಷ್ಟ್ರೀಯರಾಗಿರಲು ಸಾಧ್ಯವೇ ಇಲ್ಲ. ಇದು ಹಿಂದೂ ರಾಷ್ಟ್ರ, ಭಾರತೀಯ ರಾಷ್ಟ್ರ, ಇಂಡಿಯನ್ ನೇಶನ್....ಒಂದು ರಾಷ್ಟ್ರ. ಅಕ್ಕಸಾಲಿಗನ ಹಾಗೆ ನಯವಾಗಿ ಎಂದು ಇಂದಿರಾಜಿ ಹೇಳಿದ್ದಾರೆ. ಅದಕ್ಕಾರೂ ಎದುರಾಡುವಂತಿಲ್ಲ. ಅದಕ್ಕೇನೇ ಅನ್ನುವದು ಅಕ್ಕಸಾಲಿಗ ಕಿವಿ ಚುಚ್ಚಿದಲ್ಲಿ ನೋವಾಗುವದಿಲ್ಲವೆಂದು.

—ಶ್ರೀ ಶಿವಶಂಕರ.

ವಿಜಯ ಬ್ಯಾಂಕಿನ ವಿಮೆ ಸೇರಿದ ಠೇವಣಿ ಯೋಜನೆ-3

ವಿಜಯ ಬ್ಯಾಂಕಿನ
ಅಪೂರ್ವ
ವಿಮೆಗೆ ಒಳಪಟ್ಟ ನಿಶ್ಚಿತ
ಠೇವಣಿ ಯೋಜನೆ

ಠೇವಣಿಯು ಸುಭದ್ರವಾಗಿರುತ್ತದೆ,
ಬಡ್ಡಿಗಳಿಸುತ್ತದೆ
ಹಾಗೂ
ಪರಿವರ್ತನೀಯ ಆಜೀವ
ವಿಮೆಯನ್ನು ನೀಡುತ್ತದೆ

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿ
ವಿಜಯ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-1.
ಚೇರ್‌ಮನ್: ಎಂ. ಸುಂದರ್‌ರಾಮ್ ಶೆಟ್ಟಿ

ನಿಮ್ಮ ಉಳಿತಾಯವು ನಿಜವಾಗಿ
ಲಾಭದಾಯಕವಾಗಲು ವಿಜಯ ಬ್ಯಾಂಕು ಮಾರ್ಗದರ್ಶಿ

OBM-2238 KAN

ಒಂದು ಹುತ್ತ
ನೂರಿಪ್ಪತ್ತೈದು ಸರ್ಪ

(ಐದನೇ ಪುಟದಿಂದ)

ತಲೆಕ್ತಷ್ಟಿಸಿ ಮನೆ ಹಾಳರ ಮೇಲೆ ಪ್ರತೀಕಾರ ತೋರಿಸಲು ಶಕ್ತಿ ಸಂಚಯಿಸುತ್ತಿರಲಾರದೆಂದೇನು ವಿಶ್ವಾಸ?

ತಮ್ಮ ಜನಾಂಗ ಹತ್ಯೆಗೆಯ್ದ ಆ ಮಾನವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮೊದಲಿಗೆ ಮೌನ ಪ್ರದರ್ಶನ. ಅದಕ್ಕೆ ಜಗ್ಗದಿದ್ದರೆ ಹಿಂಸಾತ್ಮಕ ಪ್ರತಿಕ್ರಿಯೆ. ಸರ್ಪಗಳ ಮಹಾಸಭೆ ಇಷ್ಟರಲ್ಲೆ ಗುಪ್ತವಾಗಿ ಸೇರಿ ನಿರ್ಧರಿಸಿರಬಹುದು.

ಸರ್ವಜ್ಞ –ಹಾಡಿದ್ದ ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪವೆಂದು.

ಮತ್ತಾರೋ ದಾಸರು ಹಾಡಿದ್ದರು–ಎಲುಬಿಲ್ಲದ ನಾಲಗೆಯೆಂದು.

ಇನ್ನೊಬ್ಬ ಕವಿ ಹೇಳಿದ್ದ– ನಾಲಗೆಯೆಂಬ ಸರ್ಪ ಸ್ವರ್ಗ ಪಾತಾಳವೊಂದು ಮಾಡಿ ಅಡಗಿ ಕೊಳ್ಳುತ್ತೆ, ಪರಿಣಾಮ ಕಪಾಲಮೋಕ್ಷವಾಗುತ್ತೆ.

ಇಂತಹ ನೂರು ಮಾತುಗಳಲ್ಲೂ ನೂರು ತುಂಡು ಸತ್ಯವಿಲ್ಲವೆ?

ಒಡಲೆಂಬ ಹುತ್ತದಲ್ಲಿ ತೋರಿಕೆಗೆ ನಾಲಗೆಯೆಂಬ ಒಂದೇ ಸರ್ಪವಿದ್ದರೂ ವಾಸ್ತವಿಕವಾಗಿ ನೂರಾ ಇಪ್ಪತ್ತೈದಕ್ಕಿಂತಲೂ ಹೆಚ್ಚಿಲ್ಲವೆ?

ಮಾನವ ಸಮಾಜದ ಉನ್ನತಿಯಲ್ಲಿ ಪ್ರಗತಿಯಲ್ಲಿ ಇವು ಬಾಧಕವಾಗುವುದಿಲ್ಲವೆ?

ಹಾವು ಕಡಿದರೂ ಹಾವೇ; ಕಡಿಯದಿದ್ದರೂ ಹಾವೆ.

ಕಡಿಯುವ ಹಾವಿನ ಅಪಾಯ ಪೂರ್ವ ಸೂಚಿತವಾಗಿರುವುದರಿಂದ ಮೊದಲೇ ಎಚ್ಚರಿಕೆಯಿಂದಿರುತ್ತೇವೆ. ಕಡಿಯದ ಹಾವೂ ಒಮ್ಮೊಮ್ಮೆ ಕಡಿಯುವುದುಂಟು. ಆಗ ಹೆದರಿ ಸಾಯುವುದೂ ಉಂಟು.

ನಾಯ್ಕನಕಟ್ಟೆಯ ಹಳ್ಳಿಗರು ಹುತ್ತವನ್ನು ಅಗೆದು ಹಾವುಗಳನ್ನು ಕೊಂದರು ನಿಜ

ಎಲ್ಲೆಡೆಯ ಜನರು ಒಡಲೆಂಬ ಹುತ್ತವನ್ನು ಪರಿಶೋಧಿಸಿ ಅದರಲ್ಲಿನ ಸರ್ಪಗಳನ್ನು ನಿರ್ನಾಮ ಮಾಡುವುದು ಅಗತ್ಯ.

ಈ ಸಂಬಂಧದಲ್ಲಿ ಆಂದೋಲನವೊಂದು ಆರಂಭವಾಗಬೇಕು.

ಬಾಹ್ಯ ನೈರ್ಮಲ್ಯದಂತೆಯೇ ಆಂತರಿಕ ನೈರ್ಮಲ್ಯ ಅತ್ಯಗತ್ಯ. ಬೆಂಗಳೂರಲ್ಲಿ ರಾಷ್ಟ್ರಪತಿ ಗಿರಿ ನಗರ ನೈರ್ಮಲ್ಯಾಂದೋಲನವಾರಂಭಿಸಿದರು.

ಮಾನಸ ನೈರ್ಮಲ್ಯಾಂದೋಲನವನ್ನು ರಾಜ್ಯಕೀಯ ಪುರುಷರು ಆರಂಭಿಸಿ ಸಾಧಿಸಬೇಕು. ಏಕೆಂದರೆ, ಅವರಿಗೇ ಇದು ಎಲ್ಲರಿಗಿಂತ ಹೆಚ್ಚು ಅನಿವಾರ್ಯ.

●●

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು–4

ಹಲವು ವೈಶಿಷ್ಟ್ಯಗಳ ತವರು
ಪಾಂಡಿಚೆರಿ

ಪಾಂಡಿಚೆರಿ ಹಲವು ಕಾರಣಗಳಿಂದಾಗಿ ಹೆಸರುವಾಸಿ. ಇಂದು ಈ ಕೇಂದ್ರಾಡಳಿತ ಪ್ರದೇಶದಲ್ಲಿ ಗ್ರಾಮಾಂತರ ಅಭಿವೃದ್ಧಿಗೆ ವಿಶೇಷ ಗಮನ. ಆದರ್ಶ ಗ್ರಾಮ ಯೋಜನೆ, ಗ್ರಾಮಾಂತರ ವಿದ್ಯುದೀಕರಣ ಹಾಗೂ ಸುಧಾರಿಸಿದ ನೀರಾವರಿ ಸೌಲಭ್ಯಗಳ ಮೂಲಕ ಗ್ರಾಮಾಂತರ ಅಭಿವೃದ್ಧಿ ಸಾಧಿಸುವುದೇ ಪಾಂಡಿಚೆರಿಯ ಗುರಿ. ನೂರಕ್ಕೆ ನೂರರಷ್ಟು ವಿದ್ಯುದೀಕರಣವನ್ನು ಸಾಧಿಸಿರುವ ರಾಜ್ಯಗಳಲ್ಲಿ ಪಾಂಡಿಚೆರಿಗೆ ಮೂರನೆಯ ಸ್ಥಾನ. ಇದೇನೂ ಸಾಮಾನ್ಯ ಸಾಧನೆಯಲ್ಲ. ಈ ಪ್ರದೇಶದಲ್ಲಿನ ಜನರ ತಲಾ ವಿದ್ಯುಚ್ಛಕ್ತಿ ಬಳಕೆಯ ಸರಾಸರಿ ಪ್ರಮಾಣ ೧೭೮ ಯುನಿಟ್‌ಗಳು. ಇಡೀ ದೇಶದಲ್ಲಿ ಈ ಸರಾಸರಿ ಪ್ರಮಾಣ ತಲಾ ೬೮ ಯುನಿಟ್‌ಗಳು. ಪಾಂಡಿಚೆರಿಯಲ್ಲಿ ಎಲ್ಲಾ ಕೇಂದ್ರಾಡಳಿತ ಪ್ರದೇಶಗಳಲ್ಲಿರುವುದಕ್ಕಿಂತ ಹೆಚ್ಚು ಪಂಪ್ ಸೆಟ್‌ಗಳಿವೆ. ವಿದ್ಯುಚ್ಛಕ್ತಿಯಲ್ಲಿ ನೂರಕ್ಕೆ ೩೦ರಷ್ಟನ್ನು ಬೇಸಾಯಕ್ಕೆ ಉಪಯೋಗಿಸಲಾಗುತ್ತಿದೆ. ಈ ಒಂದು ವಿಷಯದಲ್ಲಿ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ ಪಾಂಡಿಚೆರಿಗೆ ಎರಡನೆಯ ಸ್ಥಾನ. ೧೦೫ ಹರಿಜನ ಕಾಲನಿಗಳ ಪೈಕಿ ಎಲ್ಲವೂ ಈಗ ವಿದ್ಯುಚ್ಛಕ್ತಿಯನ್ನು ಪಡೆದಿರುವುದು ವಿದ್ಯುದೀಕರಣದ ಆಸಕ್ತಿಯ ಅಂಶ.

ಪಾಂಡಿಚೆರಿಯ ವಿಸ್ತೀರ್ಣ ೪೭೩ ಚದುರ ಕಿಲೋಮೀಟರುಗಳು. ಬೇಸಾಯ ಪ್ರಧಾನ ಉದ್ಯೋಗ. ಕೈಗಾರಿಕಾ ಕ್ಷೇತ್ರದಲ್ಲಿ ಈ ಪ್ರದೇಶ ಈಗಲೂ ಹಿಂದುಳಿದಿದೆ. ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ ದರ ೧೨ ಪೈಸೆಗಳು ನೆರೆಯ ರಾಜ್ಯಗಳಲ್ಲಿರುವುದಕ್ಕಿಂತ ಬಹಳ ಕಡಿಮೆ. ಇಷ್ಟೆಲ್ಲಾ ಸೌಕರ್ಯವಿದ್ದಾಗಲೂ ಈ ಸಣ್ಣ ಕೇಂದ್ರಾಡಳಿತ ಪ್ರದೇಶಕ್ಕೆ ಕೈಗಾರಿಕೆಗಳನ್ನು ಆಕರ್ಷಿಸಲು ಸಾಧ್ಯವಾಗಿಲ್ಲ. ಕೈಗಾರಿಕೋದ್ಯಮಗಳಿಗೆ ಈಗಾಗಲೇ ನೀಡಲಾಗುತ್ತಿರುವ ಪ್ರೋತ್ಸಾಹವನ್ನು ಇನ್ನಷ್ಟು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.

ಪ್ರಾದೇಶಿಕ ಅಭಿವೃದ್ಧಿ ಯೋಜನೆಯಲ್ಲಿ ಕೃಷಿಗೆ ಪ್ರಾಧಾನ್ಯ. ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೆರಿ ಆಹಾರಧಾನ್ಯಗಳ ಮಟ್ಟಿಗೆ ಸಂಪೂರ್ಣ ಸ್ವಾವಲಂಬಿ, ಮಾತ್ರವಲ್ಲ, ಹೆಚ್ಚುವರಿ ಧಾನ್ಯ ಬೆಳೆಯುವ ಖ್ಯಾತಿ ಅದರದು.

ಪಾಂಡಿಚೆರಿ ಈಗ ಮರೆತು ಹೋಗಿರುವ ವೇದಪುರಿಯ ಬುನಾದಿಯ ಮೇಲೆ ಬೆಳೆದಿದೆ. ಭಾರತದ ಭವ್ಯವಾದ ಸಂಸ್ಕೃತಿ ಪರಂಪರೆ ಹಾಗೂ ಆಧುನಿಕ ವಿಶ್ವದ ಸ್ವಾತಂತ್ರ್ಯ ಸ್ಫೂರ್ತಿಯ ನಡುವೆ ಸಂಪರ್ಕ ಕಲ್ಪಿಸಿದೆ.

ಪಾಂಡಿಚೆರಿಯಲ್ಲಿರುವ ಶ್ರೀ ಅರವಿಂದರ ಆಶ್ರಮಕ್ಕೆ ವಿಶ್ವದ ಎಲ್ಲಾ ಕಡೆಗಳಿಂದಲೂ ಜನ ಬರುತ್ತಾರೆ. ಈ ಆಶ್ರಮ ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳನ್ನು ನೀಡುತ್ತಿದೆಯಲ್ಲದೇ, ಪ್ರವಾಸಿಗರ ಆಕರ್ಷಣೀಯ ಕೇಂದ್ರವಾಗಿದೆ. ವಿಶಾಲವಾದ ಬಿಳಿಯ ಮರಳಿನ ಕಡಲ ದಂಡೆ, ತಾಳೆಯ ಮರಗಳ ಸಾಲುಗಳು, ಪ್ರವಾಸಿಕರಿಗೆ ರಮಣೀಯವಾಗಿ ಕಂಡುಬರುತ್ತವೆ.

ಪಾಂಡಿಚೆರಿಯಿಂದ ಎಂಟು ಕಿಲೋಮೀಟರು ದೂರವಿರುವ ಕಾಳಾಪೇಟೆ ಕಡಲ ದಂಡೆಯನ್ನು, ಅಭಿವೃದ್ಧಿಗೊಳಿಸುವ ಕಾರ್ಯಯೋಜನೆ ಈಗ ಪರಿಶೀಲನೆಯಲ್ಲಿದೆ. ಈ ಯೋಜನೆಯನ್ವಯ ನೂರು ಮಂದಿ ಪ್ರವಾಸಿಗರಿಗೆ ವಸತಿ ಸೌಕರ್ಯವಿರುವ ಮೊಟೆಲ್ ನಿರ್ಮಿಸಲಾಗುವುದು. ಇದಕ್ಕಾಗಿ ರಾಜ್ಯ ಸರಕಾರ ಅರುವತ್ತು ಎಕ್ರೆ ಭೂಮಿಯನ್ನು ಕಾದಿಟ್ಟಿದೆ.

ಪಾಂಡಿಚೆರಿ ಶಿಕ್ಷಣ ಕ್ಷೇತ್ರದಲ್ಲೂ ಬಹಳಷ್ಟು ಪ್ರಗತಿ ಸಾಧಿಸಿದೆ. ಇಂದು ಪಾಂಡಿಚೆರಿಯ ಎಲ್ಲಾ ಗ್ರಾಮಗಳಲ್ಲೂ ಪ್ರಾಥಮಿಕ ಶಾಲೆಗಳಿವೆ. ಪ್ರತಿಯೊಂದು ಗ್ರಾಮದಿಂದ ಐದು ಕಿಲೋಮೀಟರು ದೂರದಲ್ಲಿ ಹೈಸ್ಕೂಲ್ ಇದೆ. ಈ ಕೇಂದ್ರಾಡಳಿತ ಪ್ರದೇಶದಲ್ಲಿ ಸಾಕ್ಷರತೆಯ ಪ್ರಮಾಣ ನೂರಕ್ಕೆ ೬೮; ಕೇರಳ ಮತ್ತು ದೆಹಲಿಗಳನ್ನು ಬಿಟ್ಟರೆ ಸಾಕ್ಷರತೆಯಲ್ಲಿ ಪಾಂಡಿಚೆರಿಗೆ ಮೂರನೆಯ ಸ್ಥಾನ, ಆದರೂ ಇಲ್ಲಿ ಸ್ಥಾನಿಕ ಪತ್ರಿಕೆಗಳಿಲ್ಲ! ಮದ್ರಾಸಿನಿಂದ ಪತ್ರಿಕೆಗಳು ಬರಬೇಕು. ಸರ್ವತೋಮುಖ ಪ್ರಗತಿ ಸಾಧಿಸಿದ ಪಾಂಡಿಚೆರಿಯ ಭವಿಷ್ಯ ಅತ್ಯಂತ ಉಜ್ವಲ.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 42/1972

ದೇಜಮ್ಮ ಹೆಂಗ್ಸು—ಅರ್ಜಿದಾರಳು
ಬೀಪಾತುಮ್ಮ ಕೂಡಾ—ಎದ್ರಿರು

ಬೆಳ್ತಂಗಡಿ ತಾಲ್ಲೂಕು ತಣ್ಣೀರುಪಂತ ಗ್ರಾಮದ ಹಾಮದೆ ಬ್ಯಾರಿಯ ಮಕ್ಕಳು ಆದಂ ಬ್ಯಾರಿ ಮತ್ತು ಇಸ್ಮಾಯಿಲ್ ಬ್ಯಾರಿ ಕೂಡಾ ಎರಡು ಜನರಿಗೆ—

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ಅರ್ಜಿದಾರಳು 1970–71ನೇ ವರ್ಷದ ಗೇಣಿ ಬಾಕಿಯ ವಸೂಲಿ ಬಗ್ಗೆ ಎದ್ರಿರ ಮೇಲೆ ದಾಖಲು ಮಾಡಿದ ಮೇಲ್ಕಾಣಿಸಿದ ಅರ್ಜಿಯು 4 ಮತ್ತು 5 ನೇ ಎದ್ರಿಯರಾದ ನಿಮ್ಮ ಹಾಜರಾತಿಯ ಬಗ್ಗೆ ಇರುವುದರಿಂದ ನೀವು ಸ್ವತಹ ಯಾ ವಕೀಲರ ಮೂಲಕ ಮೇಲ್ಕಾಣಿಸಿದ ಕೋರ್ಟಿನಲ್ಲಿ 1—8—1972ಕ್ಕೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ಆ ದಿವಸ ನಿಮ್ಮನ್ನು ಶಿಪ್ಪಾ ಮಾಡಿ ಕೋರ್ಟಿನವರಿಗೆ ಯುಕ್ತಕಂಡಂತೆ ಮೇಲ್ಕಾಣಿಸಿದ ಅರ್ಜಿಯನ್ನು ತೀರ್ಮಾನ ಮಾಡಲಾದೀತು.

(By Order of Court)

Pulu. Narayana Bhat
ಅರ್ಜಿದಾರಳ ಕಡೆ ಎಡ್ವಕೇಟ್

ಬೆಳ್ತಂಗಡಿ, 22—6—1972

ನೋಟೀಸು

ಪುತ್ತೂರು IInd Addl. ಮುನ್ಸಿಫ್ ಕೋರ್ಟಿನಲ್ಲಿ

Ex. C. 304/72

N. S. ವೆಂಕಟ್ರಾವ್—ಅರ್ಜಿದಾರ
ಕೆ. ಶಂಕರ ರಾವ್, ಶಿವರಾಯರ ಮಗ, ಕ್ಯಾದಿಗೆ ದೇವಸ್ಯ ಮೂಡೂರು ಗ್ರಾಮ—ಎದ್ರಿ

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ—

ನಿಮ್ಮನ್ನು ಸಿವಿಲ್ ಜೈಲಿಗೆ ರವಾನಿಸ ಬೇಕೆಂತ ವಗೈರೆ ಮಾಡಿದ ಈ ಅಮಲ್ದಾರಿಯಲ್ಲಿ ನಿಮ್ಮ ನೋಟೀಸಿನ ಬಗ್ಗೆ ತಾರೀಕು 11–7–72 ಕ್ಕೆ ಇಟ್ಟಿರುತ್ತವೆ. ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಪ್ಪಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/-M. Rammohan Rao
Advocate for Petitioner

Puttur, 28—6—72

ಸಾರ್ವಜನಿಕ ಬೊಕ್ಕಸ ಸೋರಿ ಹೋಯಿತು

(ಏಳನೇ ಪುಟದಿಂದ)

ರು ಐಶೋ ಆರಾಮವಾಗಿ ಬದುಕುತ್ತಾರೆ. ಉಳಿದವರಿಗೂ ಮಾದರಿ ಹಾಕಿ ಕೊಡುತ್ತಾರೆ; ಸಮಾಜವನ್ನು ಕೆಡಿಸಿಬಿಡುತ್ತಾರೆ.

o o o

'ಕುಟುಂಬದಲ್ಲೊಬ್ಬನಿಗೆ ಸರಕಾರಿ ಉದ್ಯೋಗ'ವೆಂಬ ತತ್ವವನ್ನು ಏನ್ನು ರಾಜ್ಯ ಸರಕಾರ ತಾತ್ವಿಕವಾಗಿ ಒಪ್ಪಿದೆ. ಇದರ ಹಿನ್ನೆಲೆಯು; ಕಾರಣ ಎಲ್ಲ ಕುಟುಂಬಗಳಿಗೂ ನಿಯಮಿತ ಆದಾಯ ಬರುವಂತೆ ಮಾಡುವುದು ಒಂದಾದರೆ, ಹಣವಿದ್ದವರು ಸರಕಾರಿ ನೌಕರಿಗೆ ಬಾರದಂತೆ ತಡೆದು ಅವರು ಚಿಕ್ಕ ದೊಡ್ಡ ಉದ್ಯಮಗಳಲ್ಲಿ ತೊಡಗುವಂತೆ ಪ್ರೇರೇಪಿಸುವುದು ಇನ್ನೊಂದು. ಹೊರ ನೋಟಕ್ಕೆ ಇವೇನೋ ಆಕರ್ಷಕ. ಆದರೆ, ಸರಕಾರಿ ನೌಕರಿಯನ್ನು ಹಣವುಳ್ಳವರು ಬಯಸುವುದುಂಟೆ? ಇದ್ದರೂ ಯಾವ ಪ್ರಮಾಣದಲ್ಲಿ?

ನೌಕರಿಯೆಂದೊಡನೆ ಅದಕ್ಕೊಂದು ಕನಿಷ್ಟ ವಿದ್ಯಾರ್ಹತೆಯಿದೆ. ಅಂತಹ ವಿದ್ಯಾರ್ಹತೆಯನ್ನು ಹೊಂದಿದವರು ಎಲ್ಲಾ ಕುಟುಂಬಗಳಲ್ಲೂ ಇರಲೇಬೇಕೆಂಬ ನಿಯಮವಿಲ್ಲ. ನೌಕರಿಗೆ ಅರ್ಜಿ ಹಾಕುವವನು ತನ್ನ ಕುಟುಂಬದಲ್ಲಿ ಮತ್ತಾರಿಗೆ ಸರಕಾರಿ ಉದ್ಯೋಗವಿದೆಯೆಂಬುದನ್ನು ಬಹಿರಂಗಪಡಿಸಬೇಕಾಗಿಲ್ಲ. ಒಂದು ಕುಟುಂಬದ ಒಬ್ಬ ಸರಕಾರಿನೌಕರ ನೌಕರಿಯೊಂದಿಗೇ ಕುಟುಂಬವನ್ನೂ ಬಿಟ್ಟು ಬಿಟ್ಟರೆ ಆ ಕುಟುಂಬದ ಕಣ್ಣೀರ ಕತೆ ಕೊನೆಗೊಳ್ಳುವುದಿಲ್ಲ. ಇವೆಲ್ಲ ಒಂದಲ್ಲ ನೂರು ಪ್ರಶ್ನೆಗಳು.

ಸರಕಾರಿ ವಲಯಕ್ಕಿಂತ ಖಾಸಗಿ ಕ್ಷೇತ್ರದಲ್ಲಿ ನೌಕರಿಯ ಅವಕಾಶ ಹೆಚ್ಚು. ಬ್ಯಾಂಕುಗಳಲ್ಲಿ ಇಂದಿಗೂ ಒಂದೇ ಕುಟುಂಬದ ನಾಲ್ಕಾರು ಮಕ್ಕಳು ಉದ್ಯೋಗ ಮಾಡಿಕೊಂಡಿರುವುದುಂಟು. ಸದ್ಯಕ್ಕೆ ಉದ್ಯೋಗ ನೀಡುವ ಅಧಿಕಾರ ಹಿಂದಿನಂತೆಯೇ ಒಬ್ಬ ವ್ಯಕ್ತಿಯ ಕೈಯಲ್ಲೇ ಕೇಂದ್ರೀಕೃತವಾಗಿರುವುದರಿಂದ ಇದೇ ಪರಿಸ್ಥಿತಿ ಇನ್ನೂ ಬಹು ಕಾಲ ಮುಂದುವರಿಯುವುದು ಸಾಧ್ಯವಿದೆ. ಎಲ್ಲ ವಲಯಗಳ ಮೇಲೆಯೂ ಕುಟುಂಬಕ್ಕೊಬ್ಬನಿಗೆ ಉದ್ಯೋಗವೆಂಬ ಹತೋಟಿ ತರುವುದು ಸಾಧ್ಯವಾದೀತೆ?

ಆದರೆ, ನಾವು ಯೋಗ್ಯತೆಗೆ ಬೆಲೆಕೊಡಬೇಕೆನ್ನುತ್ತೇವೆ; ಜತೆಗೆ ಕುಟುಂಬದ ಮಾತನ್ನೂ ಆಡುತ್ತೇವೆ. ಸಮಾಜದ ದುರ್ಬಲಾಂಗಗಳನ್ನು ಎತ್ತುವುದಕ್ಕಾಗಿ ಯೋಗ್ಯತೆಯನ್ನು ಕಡೆಗಣಿಸಬೇಕಾಗುತ್ತದೆ. ಸಮರ್ಥರನ್ನೂ ಯೋಗ್ಯರನ್ನೂ ಸರಕಾರಿ ನೌಕರಿಗೆ ಆಕರ್ಷಿಸಬೇಕೆಂದು ಬೇರೆ ಹೇಳುತ್ತೇವೆ. ಇದೆಲ್ಲವನ್ನೂ ನಾವು ಒಪ್ಪಿಕೊಳ್ಳುವುದಾದರೆ, ಪೂರ್ವಾಪರ ವಿರೋಧವೆನಿಸುತ್ತದೆ.

ನಾವು ನಮ್ಮ 'ಬೇಕು'ಗಳನ್ನು ಮೊದಲು ಗೊತ್ತುಮಾಡಬೇಕು; ಆ ಮೇಲೆ 'ಬೇಡ'ಗಳ ಬಗ್ಗೆ ಚಿಂತಿಸುವುದನ್ನು ಬಿಟ್ಟುಬಿಡಬೇಕು. ಪ್ರತಿ ಕುಟುಂಬಕ್ಕೂ ಉದ್ಯೋಗ ನೀಡಬೇಕು; ಯೋಗ್ಯತೆ-ಪ್ರಾಮಾಣಿಕತೆಗಳೂ ಬೇಕು ಅಂದರೆ ಆಗಲಾರದು. ಎರಡು ದೋಣಿಯಲ್ಲಿ ಎರಡು ಕಾಲಿಟ್ಟು ಬಹುದೂರ ಸುಗಮ ಪ್ರಯಾಣ ಸಾಧ್ಯವಿಲ್ಲ. ಆಕರ್ಷಕ ಘೋಷಣೆ ಮಾಡುವ ಬುದ್ಧಿವಂತರು ಇದನ್ನು ಮರೆತರೂ ಬುದ್ಧಿಜೀವಿಗಳು ಮರೆಯುವುದಿಲ್ಲ.

●●

ಜಿಲ್ಲೆಯ ರಾಜಕೀಯ ಸಂತ್ರಸ್ತರ ಸಮ್ಮೇಳನ

(ನಾಲ್ಕನೇ ಪುಟದಿಂದ)

4) ಜತೆ ಕಾರ್ಯದರ್ಶಿ—ಶ್ರೀ ಪಿ. ಎನ್. ತಲಚೇರಿಕರ್;

ಸದಸ್ಯರುಗಳು : 1) ಶ್ರೀ ಬಿ. ಪದ್ಮನಾಭ ಶೆಣೈ, ಮಂಗಳೂರು; 2) ಶ್ರೀ ರಘುವೀರ ಕೋಡಿಯಾಲ್, ಮಂಗಳೂರು; 3) ಡಾಕ್ಟರ್ ಸಂಜೀವನಾಥ; 4) ಶ್ರೀ ಎನ್. ಉಪೇಂದ್ರ ನಾಯ್ಕ, ಪಾಣೆಮಂಗಳೂರು.

5) ಶ್ರೀ ಪಿ. ಮಾಧವ ಪಡಿಯಾರ್, ಪಾಣೆಮಂಗಳೂರು 6) ಶ್ರೀ ಎನ್. ಕೇಶವ ಕುಡ್ವ ಪಾಣೆಮಂಗಳೂರು 7) ಡಾಕ್ಟರ್ ಪಿ. ಬಾಲಪ್ಪ 8) ಶ್ರೀ ಹಾಲಾಡಿ ಮಹಾಬಲ ಶೆಟ್ಟಿ 9) ಶ್ರೀ ನಗರ್, ವೇಣುಗೋಪಾಲ ನಾಯಕ್. 10) ಶ್ರೀ ಕೊಳ್ಕೆಬೈಲು ಮಹಾಬಲ ಶೆಟ್ಟಿ 11) ಶ್ರೀ ಕೆ. ಬಾಬಣ್ಣ ಹೆಗ್ಡೆ 12) ಶ್ರೀ ವಾಸುದೇವ ಪ್ರಭು 13) ಶ್ರೀ ಸೀತಾರಾಮ ನಾಯಕ್ ಉಡುಪಿ 14) ಶ್ರೀ ರಾಮ ಪುರಾಣಿಕ, ಉಡುಪಿ 15) ಶ್ರೀ ಸೋಮನಾಥ ಗೋಖಲೆ ದುರ್ಗ. 16) ಡಾಕ್ಟರ್ ಕೆ.ಜಿ. ಕಾಮತ್, ಕಾರ್ಕಳ 17) ಶ್ರೀ ನರಸಿಂಗರಾವ್ ಅಂಕೋಲಿಕರ್ 18) ಶ್ರೀ ಕೆ. ರಾಮ ಕುಡ್ವ, ಪುತ್ತೂರು 19) ಶ್ರೀ ಅಗರಾ ಲಕ್ಕಪ್ಪ ರೈ 20) ಶ್ರೀ ಕುಳಾಲು ಅಣ್ಣಪ್ಪ ಭಂಡಾರಿ 21) ಶ್ರೀ ವೇದವ್ಯಾಸ ಭಟ್ಟ, ಬೆಳ್ತಂಗಡಿ 22) ಶ್ರೀ ಶ್ರೀಧರ ನಾಯಕ್, ಉಪ್ಪಿನಂಗಡಿ. 23) ಶ್ರೀಮತಿ ರಮಾಬಾಯಿ ಯಾನೆ ತಾರಾಬಾಯಿ ಮತ್ತು 24) ಶ್ರೀಮತಿ ಸುನಂದಾ ಬಾಯಿ.

ಹೆಚ್ಚಿನ ಸದಸ್ಯರನ್ನು ಸೇರಿಸುವ ಅಧಿಕಾರ ಈ ಸಮಿತಿಗೆ ವಹಿಸಿ ಕೊಡಲಾಯಿತು.

ಮುಖ್ಯ ಅತಿಥಿಯಾಗಿ ಬಂದಂತಹ ಶ್ರೀ ಎಂ. ಡಿ. ಅಧಿಕಾರಿಯವರು ತಮ್ಮ ಭಾಷಣದಲ್ಲಿ ಹಿಂದಿನ ಆಂದೋಲನ ಸಮಯದ ಕಹಿ ನೆನಪುಗಳನ್ನು ಸಭೆಯ ಮುಂದೆ ವಿವರಿಸಿ ಸಂದರ್ಭೋಚಿತ ಸಲಹೆಗಳನ್ನಿತ್ತುದಲ್ಲದೆ ಸರಕಾರವು ರಾಜಕೀಯ ಸಂತ್ರಸ್ತರ ಕುರಿತು ತನ್ನ ನೀತಿಯನ್ನು ಬದಲಾಯಿಸಿ ಅವರನ್ನು ಗೌರವ ಪೂರಕವಾಗಿ ಕಂಡು ಅವರಿಗೆ ದೊರಕುವ ಸವಲತ್ತುಗಳು ನೇರವಾಗಿ ದೊರೆಯುವಂತಾಗಲು ಕೆಳಮಟ್ಟದ ಅಧಿಕಾರಿಗಳು ನೆರವಾಗುವಂತೆ ಆದೇಶ ನೀಡಬೇಕಾಗಿ ಸಲಹೆ ಕೊಟ್ಟರು. ಮತ್ತು ಇತರ ಹಲವು ರಾಜಕೀಯ ಸಂತ್ರಸ್ತರು ತಾವು ಸವಲತ್ತು ಪಡೆಯಲು ಹೋದಾಗ ಸರಕಾರಿ ನೌಕರರಿಂದ ಉಂಟಾಗುವ ತೊಂದರೆಗಳನ್ನು ಸಭೆಯ ಗಮನಕ್ಕೆ ತಂದರು.

ಜತೆ ಕಾರ್ಯದರ್ಶಿ ಶ್ರೀ ಪಿ. ಎನ್. ತಲಚೇರಿಕರ್‌ರವರು ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ, ಇಂತಹ ವಾತಾವರಣದಲ್ಲಿ ಹೆಚ್ಚಿನ ಮಂದಿ ಸಮ್ಮೇಳನದಲ್ಲಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವೀ ರೀತಿಯಲ್ಲಿ ನಡೆಸಿ ಕೊಟ್ಟ ಎಲ್ಲಾ ರಾಜಕೀಯ ಸಂತ್ರಸ್ತರಿಗೂ ಧನ್ಯವಾದವನ್ನರ್ಪಿಸಿದರು.

ಪ್ರಧಾನ ಕಾರ್ಯದರ್ಶಿ
ದಕ್ಷಿಣ ಕನ್ನಡ ರಾಜಕೀಯ ಸಂತ್ರಸ್ತರ ಸಂಘ
ಮಂಗಳೂರು

●●

ಶ್ರೀ ಕೆ. ವಿ. ಪೈಯವರಿಗೆ ವಿದಾಯ

ಎಲ್. ಐ. ಸಿ. ಯಲ್ಲಿ ಅಸಿಸ್ಟೆಂಟ್ ಡಿವಿಜನಲ್ ಮೆನೇಜರರಾಗಿದ್ದು ನಿವೃತ್ತರಾಗಲಿರುವ ಶ್ರೀ ಕೆ. ವಿ. ಪೈಯವರನ್ನು ಬೀಳ್ಕೊಡುವ ಮತ್ತು ಅವರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುವ ಶ್ರೀ ಟಿ. ಪಿ. ಎನ್. ನಂಬಿಯಾರರನ್ನು ಸ್ವಾಗತಿಸುವ ಸಮಾರಂಭವೊಂದು ತಾ. 26ರಂದು ಉಡುಪಿ ಇನ್ಸೂರೆನ್ಸ್ ಏಜಂಟರರ ಸಂಘದ ವತಿಯಿಂದ ಸ್ಥಳೀಯ ಅಪ್ಸರಾ ಹೋಟೇಲಿನಲ್ಲಿ ಡಿವಿಜನಲ್ ಮೆನೇಜರ್ ಶ್ರೀ ವಿ. ಕೆ. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘದ ಅಧ್ಯಕ್ಷ ಶ್ರೀ ಎ. ಜೆ. ಅಲ್ಸೆಯವರು ಆರಂಭದಲ್ಲಿ ಸ್ವಾಗತಿಸಿದರು. ಶ್ರೀ ಬಿ. ಶ್ಯಾಮರಾಯ ಶೆಟ್ಟರು ಹಾಗೂ ಶ್ರೀ ಟಿ. ಸಂಜೀವ ಪೈಗಳು ಮುಖ್ಯ ಅತಿಥಿಗಳ ಗುಣಗಾನ ಮಾಡಿ ಅವರ ನಿವೃತ್ತ ಜೀವನ ಸುಖಮಯವಾಗಲೆಂದು ಹಾರೈಸಿದರು.

ಶ್ರೀ ಪೈಗಳು ತಮಗಿತ್ತ ಸತ್ಕಾರಕ್ಕೆ ಕೃತಜ್ಞತೆ ಸೂಚಿಸಿ ತಾನು ನಿವೃತ್ತನಾದರೂ ಇನ್ಸೂರೆನ್ಸ್ ಏಜಂಟನಾಗಿ ಇನ್ನುಳಿದ ದಿನಗಳಲ್ಲಿ ದುಡಿಯುತ್ತ ಸಮಾಜಸೇವೆ ಮಾಡುವ ತನ್ನ ನಿರ್ಧಾರವನ್ನು ತಿಳಿಸಿದರು.

ಶ್ರೀ ನಂಬಿಯಾರರು ಮಾತನಾಡುತ್ತ ದೇಶದ ಇತರ ಕಡೆಗಳಿಗಿಂತ ಉಡುಪಿಯ ಏಜಂಟರು ಹೆಚ್ಚು ವ್ಯವಹಾರ ಮಾಡುತ್ತಿರುವುದಕ್ಕೆ ಅವರಲ್ಲಿರುವ ಸೇವಾಭಾವವೇ ಕಾರಣವೆಂದರು.

ಮುಖ್ಯ ಅತಿಥಿಗಳಾಗಿ ಸಂಘದ ಪರವಾಗಿ ಸಾಂಕೇತಿಕ ಉಡುಗೊರೆಯನ್ನು ಅರ್ಪಿಸಿದ ಶ್ರೀ ಶ್ರೀನಿವಾಸನ್ನರು ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡುತ್ತಾ ಎಲ್. ಐ. ಸಿ. ಸಾಧಿಸಿರುವ ಪ್ರಗತಿಗೆ ಕಾರಣರಾದ ಶ್ರೀ ಕೆ. ಎ. ಪೈಗಳನ್ನು ಸ್ಮರಿಸಿದರು.

ಅಂತ್ಯದಲ್ಲಿ ಶ್ರೀಯುತ ಶಾಂತಿ ಡಿ. ಶೆಣೈ ಧನ್ಯವಾದಗಳನ್ನರ್ಪಿಸಿದರು.

ಹ್ಯೂಸ್ಟನಿನಲ್ಲಿ ಡಾ| ಅಡಪ್ಪ

ಮಂಗಳೂರಿನ ಡಾ| ಎಂ. ದೇವದಾಸ ಅಡಪ್ಪ ಅವರು ಜೂನ್ 15ರಂದು ಅಮೇರಿಕದ ಟೆಕ್ಸಾಸ್ ಸಂಸ್ಥಾನದ ಹ್ಯೂಸ್ಟನ್ ನಗರದಲ್ಲಿ ನಡೆದ ರಾಷ್ಟ್ರಾಂತರೀಯ ರೋಟರಿ ಸಮ್ಮೇಳನದಲ್ಲಿ ರೋಟರಿ ಜಿಲ್ಲೆ 316ರ ಗವರ್ನರ್ ಆಗಿ ಆಯ್ಕೆಯಾದರು.

149 ರಾಷ್ಟ್ರಗಳ ರೋಟರಿ ಪ್ರತಿನಿಧಿಗಳು ಸೇರಿದ ಈ ಸಂದರ್ಭದಲ್ಲಿ 1972–73ರ ಅವಧಿಗೆ 930 ಮಂದಿ ರೋಟರಿ ಜಿಲ್ಲಾ ಗವರ್ನರರು ಆಯ್ಕೆಯಾಗಿದ್ದು ಅವರಲ್ಲಿ ಡಾ| ಅಡಪ್ಪ ಒಬ್ಬರು.

57 ಕ್ಲಬ್ಬುಗಳ ವ್ಯಾಪ್ತಿಯಿರುವ ರೋಟರಿ ಜಿಲ್ಲೆ 316ರ ನೂತನ ಗವರ್ನರ್ ಡಾ| ಅಡಪ್ಪ ಅವರು ಮಂಗಳೂರಿನ ಪ್ರಸಿದ್ಧ ವೈದ್ಯರಾಗಿದ್ದು ಅಡಪ್ಪ ಮೆಮೋರಿಯಲ್ ನರ್ಸಿಂಗ್ ಹೋಂ ಎಂಬ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಂಗಳೂರು ರೋಟರಿ ಕ್ಲಬ್ಬಿನ ಪೂರ್ವಾಧ್ಯಕ್ಷ ಡಾ| ಅಡಪ್ಪರು 1954ರಲ್ಲಿ ರೋಟರಿ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದಿದ್ದರು.

ಸಂದರ್ಶಿಸಿರಿ — ಸಂತೃಪ್ತರಾಗಿರಿ
ಬ್ಲೂ ಜಾಗರಾ ವಜ್ರಗಳಿಗೆ ಅಪ್ರತಿಮ ಕುಸುರಿನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೋಟೋ ಹೌಸ್ PHONE: 3431
ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res: 3272

ನೋಟೀಸು

ಪುತ್ತೂರು IIIrd Addl. ಮುನ್ಸಿಫ್ ಕೋರ್ಟಿನಲ್ಲಿ

R. R. C. No. 58/1972

ಅನಂತ ರಾವ್ ... Applicant
ಜನಾರ್ಧನ ಕೂಡಾ ... Opponents

2nd opponent Nagesha, son of Yellu alias Parameshwara, residing in Sheshappa Compound, Gorigudde Valausion: Mangalore-2; Kankanady

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ಮೈಸೂರು ಲ್ಯಾಂಡ್ ರಿಫೋರ್ಮ್ಸ್ ಆಕ್ಟಿನ ಸೆಕ್ಷನ್ 47 (2) ಮತ್ತು ಲ್ಯಾಂಡ್‌ರಿಫೋರ್ಮ್ಸ್ ರೂಲ್ಸಿನ ರೂಲ್ 16ರ ಪ್ರಕಾರ ಗೇಣಿ ವಸೂಲಿ ಬಗ್ಗೆ ಸದ್ರಿ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದ್ರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು 1972ನೇ ಇಸವಿ ಜುಲ್ಯ ತಿಂಗಳ 22ನೇ ತಾರೀಕು 11 ಘಂಟೆಗೆ ಈ ಟ್ರಿಬ್ಯುನಲಿನಲ್ಲಿ ಖುದ್ದಿನಿಂದಾಗಲೀ ವಕೀಲರ ದ್ವಾರಾ ಆಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ತಪ್ಪಿದ್ರೆ ಸದ್ರಿ ವಿಷಯ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

P. A. Ariga
Advocate for Applicant

Puttur, 19—6—1972

ನೋಟೀಸು

ಪುತ್ತೂರು IIIrd Addl ಮುನ್ಸಿಫ್ ಕೋರ್ಟಿನಲ್ಲಿ

R. R. C. 60/72

ಅಬ್ದುಲ್ ಬ್ಯಾರಿ— ಅರ್ಜಿದಾರ
ಮುತ್ತಪ್ಪ ಗೌಡ ಕೂಡಾ— ಎದ್ರಿರು
4ನೇ ಎದ್ರಿ. ಉಮ್ಮಕ್ಕ—ಪೊನ್ನಕ್ಕ ಮಗಳು
ಪಾರ್ಲ—ಕೊಳ್ತಿಗೆ ಗ್ರಾಮ.

ಸದ್ರಿ 4ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

70–71ನೇ ವರ್ಷದ ಗೇಣಿ ಕೇಳಿ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ನಂಬ್ರ ತಾ. 11–7–72ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯಿ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

Sd/-M. Rammohan Rao
Advocate for Petitioner

ತಾ. 15—6—72

ಸಿಂಡಿಕೇಟ್ ಬ್ಯಾಂಕಿನ ನೂತನ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ. ಕೆ. ಪಳದೀಪುರ್‌ಕರ್

ಸಿಂಡಿಕೇಟ್ ಬ್ಯಾಂಕಿನ ನೂತನ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿರುವ ಶ್ರೀ ಕೆ. ಕೆ. ಪಳದೀಪುರ್‌ಕರ್ ಅವರು ಉತ್ತರ ಕನ್ನಡ ಜಿಲ್ಲೆಯ ಖ್ಯಾತ ವಕೀಲರಾಗಿದ್ದ ಹಾಗೂ ಸಿಂಡಿಕೇಟ್ ಬ್ಯಾಂಕಿನಲ್ಲಿ ಬಹುಕಾಲ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಶ್ರೀ ಕೆ.ಆರ್. ಪಳದೀಪುರ್‌ಕರ್ ಇವರ ಸುಪುತ್ರರು. ಶ್ರೀಯುತರು ಬಿ. ಎಸ್‌ಸಿ. ಮತ್ತು ಎಲ್. ಎಲ್. ಬಿ. ಪದವೀಧರರಾಗಿರುವರು.

1958ರಲ್ಲಿ ಸಿಂಡಿಕೇಟ್ ಬ್ಯಾಂಕಿಗೆ ಸೇರಿದ ಶ್ರೀ ಪಳದೀಪುರ್‌ಕರ್‌ರವರು ಬ್ಯಾಂಕಿನ ಸಾರ್ವಜನಿಕ ಸಂಪರ್ಕ ವಿಭಾಗದಲ್ಲಿ ಆಫೀಸರರಾಗಿ ಕಾರ್ಯ ನಿರ್ವಹಿಸಿದರು. ಆಗ ಬ್ಯಾಂಕಿನ ಉನ್ನತ ಅಧಿಕಾರಿಗಳಾಗಿದ್ದ ಶ್ರೀ ಟಿ. ಎ. ಪೈ ಮತ್ತು ಶ್ರೀ ಕೆ. ಕೆ. ಪೈ ಇವರೊಡನೆ ನಿಕಟ ವಲಯದಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ದೊರೆತದ್ದರಿಂದ ಬ್ಯಾಂಕ್ ಆಡಳಿತ ನಿರ್ವಹಣೆ ವಿಧಾನವನ್ನು ಪ್ರತ್ಯಕ್ಷವಾಗಿ ಕಲಿಯಲು ಸಾಧ್ಯವಾಯಿತು. ಮೂರು ವರ್ಷಕಾಲ ಈ ವಿಭಾಗದಲ್ಲಿ ದುಡಿದ ಬಳಿಕ ಸ್ವಲ್ಪ ಸಮಯ ಉಡುಪಿಯ ಶಾಖೆಯೊಂದರಲ್ಲಿ ತರಬೇತಿ ಪಡೆದು ಮಣಿಪಾಲ ಬ್ಯಾಂಕಿನ ಪ್ರಧಾನ ಕಚೇರಿಯ ಅಡ್ವಾನ್ಸ್ ವಿಭಾಗದ ಮುಖ್ಯಾಧಿಕಾರಿಗಳಾಗಿ ನೇಮಕಗೊಂಡರು.

ಕಳೆದ ವರ್ಷ ಹೈದರಾಬಾದಿನ ಎಡ್ಮಿನಿಸ್ಟ್ರೇಟಿವ್ ಸ್ಟಾಫ್ ಕಾಲೇಜಿನಲ್ಲಿ ಮೂರು ತಿಂಗಳ ಅವಧಿಯ ಉನ್ನತ ಅಧಿಕಾರಿಗಳ ತರಬೇತಿ ಪಡೆದು ತಮ್ಮ ಶಿಕ್ಷಣ ಮತ್ತು ಅನುಭವಕ್ಕೆ ಹೊಸ ಮಿರುಗನ್ನು ಪಡೆದಿರುವ ಶ್ರೀ ಪಳದೀಪುರ್‌ಕರ್‌ರವರು ಬ್ಯಾಂಕಿನ ಅನೇಕ ವಿಭಾಗಗಳ ಕಾರ್ಯ ನಿರ್ವಹಣೆಯಲ್ಲಿ ದಕ್ಷತೆಯನ್ನೂ ಉತ್ಸಾಹವನ್ನೂ ತೋರಿಸಿರುವರು.

ಉಡುಪಿ ಯಕ್ಷಗಾನ ತರಬೇತಿ ಕೇಂದ್ರದ ದ್ವಿತೀಯ ವಾರ್ಷಿಕೋತ್ಸವ

ಕೇರಳದ ಕಲಾಮಂಡಲ ಕಾರ್ಯದರ್ಶಿ ಶ್ರೀ ವಿ. ಟಿ. ಇಂದುಚೂಡನ್ ಅವರು ತಾ. 30ರಂದು ಉಡುಪಿ ಯಕ್ಷಗಾನ ತರಬೇತಿ ಕೇಂದ್ರದ ದ್ವಿತೀಯ ವಾರ್ಷಿಕೋತ್ಸವವನ್ನು ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸುತ್ತ ಯಕ್ಷಗಾನವು ಭಾರತದ ಶ್ರೇಷ್ಠತಮ ಕಲೆಗಳಲ್ಲೊಂದಾಗಿದೆ ಎಂದರು.

ಆರಂಭದಲ್ಲಿ ಕೇಂದ್ರದ ನಿರ್ದೇಶಕ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಡಾ। ಶಿವರಾಮ ಕಾರಂತರು ಮಾತಾಡಿ ಕೇಂದ್ರವು ಒಂದು ಸಫಲ ಸಂಸ್ಥೆಯಾಗಿ ಬಹುಕಾಲ ಬಾಳಲಿ ಎಂದು ಹಾರೈಸಿ ಸಂಸ್ಥೆಗೆ ಶುಭಕೋರಿದರು.

ಮೈಸೂರು ಸಂಗೀತ ನಾಟಕ ಅಕಾಡಮಿಯ ಕಾರ್ಯದರ್ಶಿ ಶ್ರೀ ಎಂ. ಎಸ್. ನಟರಾಜನ್ ಅವರು ಕಲೆಯ ಅಂತಃಸತ್ವದ ಕಡೆಗೆ ಹೆಚ್ಚು ಗಮನವನ್ನೀಯಬೇಕೆಂದು ಹೇಳಿ ಮೈಸೂರು ರಾಜ್ಯ ಎಕಡೆಮಿ ಹತ್ತು ಜನರ ತರಬೇತಿಗಾಗಿ 9 ಸಾವಿರ ನೀಡಿವೆಯೆಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಪೈಯವರು ದ್ವಿತೀಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅನೇಕ ಜನರು ಭಾಗವಹಿಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಯಕ್ಷಗಾನವನ್ನು ವಿದೇಶಕ್ಕೆ ಕಳುಹಿಸಿ ಕೊಡುವ ಪ್ರಯತ್ನ ನಡೆದಿದೆ ಎಂದು ತಿಳಿಸಿದರು.

ಪ್ರಸಿದ್ಧ ನೃತ್ಯಗಾತಿ ಶ್ರೀಮತಿ ಮಾಯಾರಾವ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕೇಂದ್ರದ ಗುರು ಶ್ರೀ ವೀರಭದ್ರ ನಾಯಕರು ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಸಮಾರಂಭದ ಅಂಗವಾಗಿ ರಾತ್ರಿ ಎಂ. ಜಿ. ಎಂ. ಕಾಲೇಜಿನ ರವೀಂದ್ರ ಮಂಟಪದಲ್ಲಿ 'ತಾಮ್ರಧ್ವಜ ಕಾಳಗ' ಯಕ್ಷಗಾನ ಆಟವು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು.

ಕಟಪಾಡಿಯಲ್ಲಿ ಜೂ. ಕಾಲೇಜ್ ಉದ್ಘಾಟನೆ.

ಇದೇ ಕಳೆದ ತಾ. 2?ರಂದು ಕಟಪಾಡಿ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ವೆಂಕಟ್ರಮಣ ಜೂ. ಕಾಲೇಜಿನ ಉದ್ಘಾಟನೆಯನ್ನು ಸಾಂಸದಿಕ ಶ್ರೀ ಪಿ. ರಂಗನಾಥ ಶೆಣೈಯವರು ಶಾಸಕ ಶ್ರೀ ಬಿ. ಭಾಸ್ಕರ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಸಂಘದ ಅಧ್ಯಕ್ಷ ಶ್ರೀ ಕೆ. ವಾಸುದೇವ ಕಿಣಿಯವರು ಸ್ವಾಗತಿಸಿದರು. ಶಾಲಾ ಕರೆಸ್ಪೋಂಡೆಂಟ್ ಶ್ರೀ ಕೆ. ರಾಮದಾಸ ಶೆಣೈಯವರು ವರದಿಯನ್ನೋದಿದರು. ಜೂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀಮತಿ ವಿನತಾ ರಾವ್ ಅವರು ಸಮಾರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು.

ಶ್ರೀ ಪಿ. ರಂಗನಾಥ ಶೆಣೈಯವರು ಉದ್ಘಾಟಿಸುತ್ತಾ ಕಟಪಾಡಿಯಲ್ಲಿ ಜೂ. ಕಾಲೇಜು ಆರಂಭವಾಗುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಮಣಿಪಾಲ ಕಾಲೇಜ್ ಆಫ್ ಎಜ್ಯುಕೇಷನ್ನಿನ ಪ್ರಿನ್ಸಿಪಾಲ್ ಪ್ರೊ। ಕೆ. ಆರ್. ಹಂದೆಯವರು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದರು.

ಮುಖ್ಯ ಅತಿಥಿ ಶ್ರೀಮತಿ ಬಿ. ವಿ. ರುಕ್ಮಿಣಿಯಮ್ಮನವರು ಮಾತಾಡಿ ಈ ಸಂಸ್ಥೆ ಉತ್ತಮ ಮಟ್ಟದ ವಿದ್ಯೆ ನೀಡಲೆಂದು ಕೋರಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಭಾಸ್ಕರ ಕಿಣಿಯವರು ಕೊನೆಯಲ್ಲಿ ವಂದಿಸಿದರು.

ಗೊಂಬೆಯಾಟ ಪ್ರದರ್ಶನ

ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಸಂಘದ ಸಹಾಯಾರ್ಥ ಕಳೆದ ತಾ. 25ರಂದು ಏರ್ಪಡಿಸಲಾದ ಗೊಂಬೆಯಾಟ ಪ್ರದರ್ಶನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಡಾ। ನಾರಾಯಣ ರಾವ್‌ರವರು ಮಾತಾಡುತ್ತಾ, ಜನರಿಗೆ ಕನ್ನಡ ಅಭಿಮಾನದ ಜತೆಯಲ್ಲಿ ಕನ್ನಡಿಗರ ಸಂಸ್ಕೃತಿಯ ಬಗೆಗೂ ಆಸ್ಥೆಯಿರಲಿ. ಯಕ್ಷಗಾನ ಗೊಂಬೆಯಾಟವನ್ನು ಕನ್ನಡಿಗರು ಉಳಿಸಿಕೊಳ್ಳಬೇಕು. ಈ ದಿಶೆಯಲ್ಲಿ ಉಡುಪಿ ನಾಗರಿಕರ ಸಮಿತಿಯೊಂದು ಮಾಡಿದ ಕಾರ್ಯ ಶ್ಲಾಘನೀಯ ಎಂದು ತಿಳಿಸಿ ಸಂಗ್ರಹವಾದ ರೂ. ?,100ನ್ನು ಸಮಿತಿಯ ಪರವಾಗಿ ಸಂಘಕ್ಕೆ ಕೊಟ್ಟರು.

ಸಮಿತಿಯ ಅಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಡಾ। ಬಿ. ಬಿ. ಶೆಟ್ಟರು ರಾಷ್ಟ್ರ ಪ್ರಶಸ್ತಿ ವಿಜೇತ ದಿ। ಉಪ್ಪಿನಕುದುರು 'ದೇವಣ್ಣ' ಕಾಮತರಿಂದ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯನ್ನು ಅಭಿವೃದ್ಧಿಗೊಳಿಸುವ ಆವಶ್ಯಕತೆಯನ್ನು ತಿಳಿಸಿ ಕಲಾವಿದರ ಪರಿಚಯ ಮಾಡಿಕೊಟ್ಟರು.

ಶ್ರೀ ಎ. ಜಿ. ಅಲ್ಸೆಯವರು ಕೊನೆಯಲ್ಲಿ ವಂದಿಸಿದರು.

ಅ. ಕ. ಕನ್ನಡಾಭಿಮಾನಿಗಳ ಸಮ್ಮೇಳನದಲ್ಲಿ ಕವಿ ಕಯ್ಯಾರರ ಕಹಳೆ

ದಾವಣಗೆರೆಯಲ್ಲಿ ಇತ್ತೀಚೆಗೆ ಜರಗಿದ ಅಖಿಲ ಕರ್ನಾಟಕ ಕನ್ನಡಾಭಿಮಾನಿಗಳ ಸಮ್ಮೇಳನದ ಬಹಿರಂಗಾಧಿವೇಶನಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಕಾಸರಗೋಡಿನ ಕನ್ನಡ ಹೋರಾಟಗಾರ ಕವಿ ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ಮಾತನಾಡುತ್ತಾ ಕಾಸರಗೋಡು ಕನ್ನಡನಾಡಿಗೆ ಸೇರಿದರೆ ಪ್ರತಿವರ್ಷ ಕಾಸರಗೋಡಿನಿಂದ ಕರ್ನಾಟಕಕ್ಕೆ ಹತ್ತಾರು ಕೋಟಿ ರೂ. ಗಳ ಲಾಭ ಖಚಿತವೆಂದೂ ಕನ್ನಡನಾಡಿಗೆ ಸೇರಬೇಕೆಂದು ಕಾಸರಗೋಡಿನ ಜನತೆ ಕಳೆದ 16 ವರುಷಗಳಿಂದ ತಪಸ್ಸನ್ನಾಚರಿಸುತ್ತಿದ್ದಾರೆಂದೂ ತಿಳಿಸಿದರು. ಕಾಸರಗೋಡಿನ ಕನ್ನಡ ಪ್ರದೇಶಗಳನ್ನು ಕನ್ನಡನಾಡಿಗೆ ಸೇರಿಸಬೇಕೆಂಬ ಅಭಿಪ್ರಾಯವನ್ನು ಕೇರಳದ ಮಾಜಿ ಮುಖ್ಯಮಂತ್ರಿ ಮಾರ್ಕ್ಸಿಸ್ಟ್ ನಾಯಕ ಶ್ರೀ ನಂಬೂದರಿಪಾಡ್ ಅವರು ಮತ್ತು ಇನ್ನೋರ್ವ ಮಾರ್ಕ್ಸಿಸ್ಟ್ ನಾಯಕ ಶ್ರೀ ಎ. ಕೆ. ಗೋಪಾಲನ್ ಇವರೂ ಪ್ರತಿಪಾದಿಸಿದ್ದಾರೆಂದು ತಿಳಿಸಿ ಕಾಸರಗೋಡು ಕನ್ನಡಿಗರ ಕನ್ನಡದ ಕಳಕಳಿಯ ಬಗ್ಗೆ ಪ್ರಸ್ತಾಪಿಸಿದರು. ಅಲ್ಲದೆ ಕಾಸರಗೋಡು ಜನತೆಯ ಕನ್ನಡದ ಹಂಬಲ ಈಡೇರಿಕೆಗೆ ನೆರವಾಗಲು ಪ್ರಧಾನಿಯವರಿಗೆ ಮನವಿ ಮಾಡಿದರು.

ಬೆಳಗಾವಿಯ ಅಣ್ಣಾ ಗುರೂಜಿ, ಅರವಿಂದ ಜೋಷಿ, ಶಾಸಕ ಬಂಗಾರಪ್ಪ, ಕೆ. ಜಿ. ಮಹೇಶ್ವರಪ್ಪ ಮೊದಲಾದವರು ಈ ಸಂದರ್ಭದಲ್ಲಿ ಮಾತಾಡಿ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಸಲು ಕನ್ನಡವನ್ನು ಎಲ್ಲ ಹಂತದಲ್ಲಿ ಆಡಳಿತ, ಶಿಕ್ಷಣ ಭಾಷೆಯಾಗಿಸಲು ಒತ್ತಾಯ ಮಾಡಿದರು.

ಗಂಗೊಳ್ಳಿ ಎಸ್. ವಿ. ಜೂ. ಕಾಲೇಜ್ ಉದ್ಘಾಟನೆ

ಗಂಗೊಳ್ಳಿಯ ಎಸ್. ವಿ. ಜೂ. ಕಾಲೇಜಿನ ಉದ್ಘಾಟನೆಯನ್ನು ಇದೇ ಕಳೆದ ತಾ. 28ರಂದು ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್ಟರು ಶ್ರೀ ಎಚ್. ಭಾಸ್ಕರ ಕಾಮತರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಜೂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಮಾಧವಾಚಾರ್ಯರು ಸ್ವಾಗತಿಸಿದ ಬಳಿಕ ವೈಸ್ ಪ್ರಿನ್ಸಿಪಾಲ್ ಶ್ರೀ ಎಸ್. ಎಲ್. ಕರಣಿಕರು ಡಾ। ಗುರುರಾಜ ಭಟ್ಟರ ಪರಿಚಯ ಮಾಡಿಸಿದರು.

ಡಾ। ಭಟ್ಟರು ದೀಪ ಬೆಳಗಿಸುವುದರ ಮೂಲಕ ಕಾಲೇಜನ್ನು ಉದ್ಘಾಟಿಸುತ್ತ ಕಾಲೇಜಿನ ಪ್ರಾಧ್ಯಾಪಕರೂ, ವಿದ್ಯಾರ್ಥಿಗಳೂ, ಆಡಳಿತ ಮಂಡಳಿಯವರೂ, ಹೆತ್ತವರೂ ಕಾಲೇಜಿನ ಏಳಿಗೆಗಾಗಿ ವಹಿಸಬೇಕಾದ ಪಾತ್ರವನ್ನು ವಿವರಿಸಿದರು. ಶ್ರೀ ಕೆ. ವೆಂಕಟ್ರಾಯ ಶೆಣೈಯವರು ಹೊಸ ಕಾಲೇಜಿನ ಶ್ರೇಯಸ್ಸನ್ನು ಹಾರೈಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಲೇಜಿನ ಶ್ರೇಯಸ್ಸಿಗಾಗಿ ಎಲ್ಲರ ಸಹಕಾರವನ್ನಪೇಕ್ಷಿಸಿದರಲ್ಲದೆ ಕಾಲೇಜು ಪರಿಪೂರ್ಣವಾಗಲು ಇನ್ನು 2 ಲಕ್ಷ ರೂ.ಗಳ ಅವಶ್ಯಕತೆಯಿದೆಯೆಂಬ ಅಂಶವನ್ನು ಜನತೆಯ ಗಮನಕ್ಕೆ ತಂದರು.

ಕಾಲೇಜಿನ ಕರೆಸ್ಪೋಂಡೆಂಟ್ ಶ್ರೀ ಬೈಲೂರು ರಾಮರಾಯ ಶೆಣೈಯವರು ಕೊನೆಯಲ್ಲಿ ವಂದಿಸಿದರು.

ಸರ್ವರಿಗೂ ವಸತಿ ಸೌಲಭ್ಯ

ದೇಶದಲ್ಲಿ ಸಾಮಾಜಿಕ ವಸತಿ ಯೋಜನೆಯಲ್ಲಿ ಕಳೆದ ವರ್ಷದವರೆಗೆ ಸುಮಾರು 4. 13 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ.

ಕೇಂದ್ರ ಸರ್ಕಾರದ ಕಾಮಗಾರಿ ಮತ್ತು ವಸತಿ ಮಂತ್ರಿ ಶಾಹೆಯವರು ಸಾಮಾಜಿಕ ವಸತಿ ಯೋಜನೆಯಂತಹ ಒಂಭತ್ತು ವಿವಿಧ ವಸತಿ ಯೋಜನೆಗಳನ್ನು ಪ್ರಾರಂಭಿಸಿದ್ದು ಇವು ದೇಶದಾದ್ಯಂತ ಕಾರ್ಯಾಚರಣೆಯಲ್ಲಿವೆ.

ಕಾಮಗಾರಿ ಮತ್ತು ವಸತಿ ಶಾಖೆಯ ವಿವಿಧ ಯೋಜನೆಯು ಸಮಾಜದ ದುರ್ಬಲ ವರ್ಗದವರು ತಮಗಾಗಿ ಮನೆ ನಿರ್ಮಾಣ ಮಾಡುವುದಕ್ಕಾಗಿ ಹಣಕಾಸಿನ ನೆರವು ನೀಡುವುವು. ಕೊಳಚೆ ನಿರ್ಮೂಲನೆ, ಭೂಸ್ವಾಧೀನ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ನೆರವು ನೀಡುವುವು.

ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಲ್ಲಿ ಕೊಳಚೆ ಪ್ರದೇಶಗಳ ಜನತೆಗೆ ಮರು ವಸತಿ ಒದಗಿಸುವುದಕ್ಕಾಗಿ 1971 ರ ವರೆಗೆ 83,240 ಮನೆಗಳನ್ನು ನಿರ್ಮಿಸಲಾಗಿದೆ.

ಭೂ ಸ್ವಾಧೀನ ಮತ್ತು ಅಭಿವೃದ್ಧಿ ಯೋಜನೆಯಲ್ಲಿ 9,800 ಹೆಕ್ಟೇರಗಳಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು 5,680 ಹೆಕ್ಟೇರಗಳಷ್ಟು ಭೂಮಿಯನ್ನು ವಸತಿ ನಿರ್ಮಾಣ ಉದ್ದೇಶಕ್ಕಾಗಿ ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ.

●●

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2-00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿವ್ಯವಹ ಪತ್ರಸಂಕಲನ

ಬೆಲೆ ರೂ. 1-50.

ಪು: ಸ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿ.ಪಿ. ಖರ್ಚು ಹೆಚ್ಚು ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ.ಕ.

ಕೃತಜ್ಞತಾ ಸಮರ್ಪಣೆ

ನಮ್ಮ ಪುತ್ರಿ **ಚಿ। ಸೌ। ಶಕುಂತಳೆ** ಇವಳ ವಿವಾಹ ಸಮಾರಂಭವು ಶ್ರೀ ಪಾತೂರು ತಿಮ್ಮಪ್ಪ ಭಂಡಾರಿ ಅವರ ಪುತ್ರ **ಚಿ। ಅಮರನಾಥ** ಇವರೊಂದಿಗೆ 29-6-72ರಂದು ಮಂಗಳೂರು ಜ್ಯೋತಿ ಟಾಕೀಸಿನಲ್ಲಿ ಜರಗಿದ ಸಂದರ್ಭದಲ್ಲಿ ಸಮಾರಂಭದಲ್ಲಿ ಭಾಗವಹಿಸಿ ವಧೂವರರನ್ನು ಆಶೀರ್ವದಿಸಿದವರಿಗೂ ಶುಭಸಂದೇಶಗಳನ್ನು ಕಳುಹಿಸಿಕೊಟ್ಟು ಹರಸಿದವರಿಗೂ ಸಕಲ ರೀತಿಯಲ್ಲಿ ಸಹಕಾರವಿತ್ತವರಿಗೂ ನಾವು ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇವೆ.

ಶ್ರೀಮತಿ ಮತ್ತು ಶ್ರೀ ಎಂ. ಎಸ್. ರಾಮನ್

(Prop: Vasantha Vihar & Raman's Cafe
Jt. Mg. Partner, Canara Finance
Corporation, Bangalore.)

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರು ಬೇಕಾಗಿದ್ದಾರೆ. ಸಂಬಳ ಯೋಗ್ಯತಾನುಸಾರ

ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಉತ್ತಮ ಗುಣ ನಡತೆಯುಳ್ಳ ಕನಿಷ್ಟ ಎಂಟನೆ ತರಗತಿವರೆಗೆ ಓದಿದ ಉತ್ಸಾಹೀ ಅಭ್ಯರ್ಥಿಗಳು ಬೇಕಾಗಿದ್ದಾರೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ಚಂದಾ ಹಣ ಬಾಕಿ ಇರುವವರು ದಯಮಾಡಿ ಕಳಿಸಿಕೊಡುವಂತೆ ವಿನಂತಿ

(ಹಿಂದಿನ ಪುಟದಿಂದ)

ಪ್ರಯತ್ನಿಸುವಂತೆ ಕಂಡಿತು.

'ಈ ರಣವೀಳ್ಯವನ್ನು ನಾವು ಸ್ವೀಕರಿಸುತ್ತೇನೆ.'

'ನಾನೂ ಬದುಕಲೆಂದು ತೀರ್ಮಾನಿಸುತ್ತಿಲ್ಲಾರೆ. ಬೇಡವಾಗಿದ್ದ ಯುದ್ಧಕ್ಕೆ ನೀವೇ ನನ್ನನ್ನು ದೂಡಿದಿರಿ; ಕುಲನಾಶಕ್ಕೆ ನಾಂದಿ ಹಾಡಿದಿರಿ. ಅವನಿಚ್ಛೆ ಇದ್ದಂತಾಗಲಿ. ಉಳಿದಿರುವ ಮಾರ್ಗವೊಂದೇ.'

'ಅದೇ ರಾಜಮಾರ್ಗ.'

'ಅದು ವಾಮಮಾರ್ಗವೋ, ಶ್ರೇಷ್ಠಮಾರ್ಗವೋ, ಅದರ ಪೃಥಕ್ಕರಣೆ ಈಗ ಬೇಡ ಕಕ್ಕರಸ. ಅದೆಲ್ಲ ನಿರ್ಧರಿಸುವುದು ಕಾಲ, ಚರಿತ್ರೆ.'

'ನಾವು ಆ ಚರಿತ್ರೆಯ ಒಂದು ಅಂಗ. ವ್ಯಕ್ತಿ ಪ್ರಭಾವ ಲೋಕ ಚರಿತೆಯ ಕೀಲು.'

'ನಮ್ಮ ಇಂದಿನ ಚರ್ಯೆಯಿಂದ ಲೋಕಚರಿತೆಯ ಕೀಲು ಕಳಚಿದೆ, ಮುಂದುವರಿಯುವ ಬದಲು ಅದು ಒಪ್ಪ ಕಾಲು ಇದ್ದಲ್ಲಿಯೇ ಉಳಿಯುತ್ತದೆ. ಲೋಕಚರಿತೆಗೆ ಚಾಲನ ಸಿಗುವುದು ವ್ಯಕ್ತಿಚಾರಿತ್ರ್ಯದಿಂದ.'

'ಸರಿಯಾದ್ದನ್ನೇ ಹೇಳಿದಿರಿ, ವಿಜಯಾದಿತ್ಯರೇ.'

'ಪ್ರಭು ಚಿತ್ತ. ಅವರೂ ಈ ಮಾತಿನ ಮೌಲ್ಯಮಾಪನ ಇಂದಲ್ಲ, ನಾಳೆಯಾಗಬೇಕು. ನಮ್ಮ ದೃಷ್ಟಿಕೋನದಿಂದ ನಿನ್ನೆಯನ್ನು ನಾವು ಅಳೆದಂತೆ, ವರ್ತಮಾನವನ್ನು ಭವಿಷ್ಯತ್ತು ಅಳೆಯಬೇಕು. ವರ್ತಮಾನವನ್ನು ನೋಡುವ ನಮ್ಮ ದೃಷ್ಟಿ ದೋಷಯುತ. ಅದಕ್ಕೆ ಕಾಲದ ಎಲ್ಲೆಯನ್ನು ಮೀರಿ ನಿಲ್ಲುವ ಯೋಗ್ಯತೆ ಇಲ್ಲ.'

"ನಿಮ್ಮ ಮಾತಿನ ಹಿಂದೆ ಬಹು ದೊಡ್ಡ ತಥ್ಯ ಹುದುಗಿದೆ ವಿಜಯಾದಿತ್ಯರೇ. ನಿಮ್ಮಿಂದ ಸಾಮ್ರಾಜ್ಯದ ಕೀರ್ತಿ ಹೆಚ್ಚುತ್ತದೆ."

ಸಾಮ್ರಾಟರು ತಮ್ಮ ಮೆಚ್ಚಿಗೆ ಸೂಚಿಸಿದರು.

ಅದರಿಂದ ಕಕ್ಕರಸ, ಬಪ್ಪರಸರ ಮಚ್ಚರದ ಕಿಚ್ಚು ಹೆಚ್ಚಿತು.

—ಅದನ್ನು ತನ್ನಲ್ಲಿಟ್ಟುಕೊಳ್ಳಲಾರದೆ ಕಕ್ಕರಸ ಕೇಳಿಯೇ ಬಿಟ್ಟ.

"ಈ ಮಾತಿನಿಂದ ನಾಳಿನ ಯುದ್ಧದಲ್ಲಿ ಪ್ರಭುಗಳು ವಿಜಯಾದಿತ್ಯರ ಪರ ವಹಿಸುವುದಿಲ್ಲವೆಂದು ನಂಬುವುದಾದರೂ ಹೇಗೆ?'

ಈ ಚುಚ್ಚು ಮಾತಿನಿಂದ ಪ್ರಭುಗಳು ಸಖಿಶಿಷಾಂತ ಉರಿದರು. ಆದರೂ ಅದನ್ನು ತೋರಗೊಡದೆ 'ನೀವು ನಮ್ಮ ಸಾಮಂತರು. ನೀವೆಲ್ಲರೂ ನಮಗೆ ಸರಿಸಮ. ಪಕ್ಷವಹಿಸುವ ಪ್ರಶ್ನೆಯೇ ಏಳುವುದಿಲ್ಲ. ನಿಮ್ಮ ಒಳ ಜಗಳದಲ್ಲಿ ನಾವು ಅಲಿಪ್ತರು'

'ಅವಿಧೇಯತೆ ಎಂದು ಭಾವಿಸಬಾರದು. ಒಂದು ಮಾತು ಕೇಳಬಹುದೇ'

ಅನುಮಾನಿಸುತ್ತಲೇ ಪ್ರಶ್ನಿಸಿದ ಕಕ್ಕರಸ.

'ಕೇಳಿ! ಅದಕ್ಕೇನು?'

"ಭಾರತದ ಕೃಷ್ಣ, ಇತ್ತಂಡದವರೂ ಬೇಕಾದವರೆಂದು ಯುದ್ಧ ಮಾಡಲಿಲ್ಲ. ಸುದರ್ಶನ ಹಿಡಿಯಲಿಲ್ಲ. ಆದರೆ ಭಾವನ ಬಂಡಿಯ ಬೋವನಾದ. ಹೊರಗೆ ಕಾಣಿಸಿಕೊಳ್ಳದೆ, ಅಂತರಂಗದಿಂದ ಪಾಂಡವರ ಪಕ್ಷ ವಹಿಸಿದ. ಹಾಗೆ ನೀವೇನಾದರೂ ಭಾವನ ಬೆಂಬಲಕ್ಕೆ ನಿಲ್ಲುವುದಿಲ್ಲವಷ್ಟೆ."

"ನಿಮ್ಮ—ನಿಮ್ಮೊಳಗಿನ ಕಿತ್ತಾಟದಲ್ಲಿ ನಾವು ಪ್ರವೇಶಿಸುವುದಿಲ್ಲ. ಆದರೆ—"

"ಪ್ರಭುಗಳು ಏನೋ ಷರತ್ತು ಹಾಕುವಂತಿದೆ."

"ಅಹುದು. ರಾಷ್ಟ್ರಕೂಟ ಸೈನ್ಯವನ್ನು ನಿಮ್ಮಲ್ಲಿ ಯಾರಾದರೂ ಬಳಸಿದರೆ, ಆಗ ನಾವು ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ಪ್ರವೇಶಿಸಬೇಕಾದೀತು. ಅಲ್ಲಿಯ ತನಕ ನಾವು ಕೈ ಎತ್ತುವುದಿಲ್ಲ." ಕಡ್ಡಿ ಮುರಿದಂತೆ ನುಡಿದು, ರಾಷ್ಟ್ರಕೂಟ ಕೃಷ್ಣ ಸಿಂಹಾಸನದಿಂದ ಇಳಿದು ಹೊರಡಲನುವಾದ.

ಸಭೆಗೆ ಸಭೆ ಎದ್ದು ನಿಂತು ಪರಾಕು ಹೇಳಿತು.

ತಾವು ಗೆದ್ದೆವು ಗುರಿ ಸಾಧಿಸಿದೆವು ಎಂದು ಮೀಸೆಯನ್ನು ಹುರಿಗೊಳಿಸುತ್ತ ಕಕ್ಕರಸಾದಿಗಳು ಅಲ್ಲಿಂದ ಕಾಲ್ತೆಗೆದರು.

೨೭

'ಪ್ರಭುಗಳು ಈ ಕಲಹದಲ್ಲಿ ಅಲಿಪ್ತರಾದ್ದು ನಮ್ಮ ಭಾಗ್ಯ.'

'ಬರಿಯ ಭಾಗ್ಯ ಮಾತ್ರವಲ್ಲ. ನಾವು ಯುದ್ಧವನ್ನು ಗೆದ್ದಂತೆಯೇ.'

'ಜಯಾಪಜಯಗಳು ನಮ್ಮ ಅಧೀನವೇ? ಇಷ್ಟು ಧೈರ್ಯದಿಂದಿರಬಾರದು.'

"ಹೀಗೆ ಹೇಳುವುದರಲ್ಲಿ ಧೈರ್ಯವೇನು ಬಂತು? ಅಂಗೈ ಹುಣ್ಣನ್ನು ಕಾಣಲು ಕನ್ನಡಿ ಹಿಡಿಯಬೇಕೆ ಕಕ್ಕರಸರೇ?"

"ನಿಮ್ಮ ಮಾತಿನ ಹೊಳಹು ನನಗೆ ಸಿಗುವುದಿಲ್ಲ. ಎಚ್ಚರ ವಹಿಸಿ ನಡೆಯುವ ಕಾಲದಲ್ಲಿ ಅಳುಕೇ ಇಲ್ಲದ ಅತಿ ವಿಶ್ವಾಸ ಸಲ್ಲ."

"ಉಭಯತರ ಬಲಾ—ಬಲಗಳನ್ನು ನಾನು ತೂಗಿದ್ದೇನೆ. ವಿಜಯಾದಿತ್ಯರ ಕಡೆ ಹೇಳುವ ಸೈನ್ಯವಿಲ್ಲ. ನಾಲದ್ದಕ್ಕೆ ಇರುವ ಸೈನ್ಯವನ್ನು ಸಾಕುವ ಯೋಗ್ಯತೆಯಿಲ್ಲ. ಅವರ ಬೆಂಬಲಕ್ಕೆ ನಿಲ್ಲುವ ಅರಿಕೇಸರಿಯ ಸೈನ್ಯಕ್ಕೆ ತರಬೇತಿ ಸಾಲದು. ಅದು ಹೊಸತಾಗಿ ರೂಪಿತವಾದ್ದು. ಹೋರುವ ಹುಮ್ಮಸ್ಸಿದ್ದರೂ ಯುದ್ಧಾನುಭವ ಇಲ್ಲದ್ದು. ಅಲ್ಲದೆ ಅವರಿಬ್ಬರ ಸೈನ್ಯಕ್ಕೂ ಪರಿಮಿತಿ ಇದೆ. ನಮ್ಮದೋ ಅಪರಿಮಿತವಾದ್ದು. ಹಳೆಯ ಹಗೆತನವನ್ನು ತೀರಿಸಿಕೊಳ್ಳಲು ಗೋವಿಂದ ಹಲ್ಲು ಕಡಿಯುತಿದ್ದಾನೆ. ಅವನ ನೆರವು ಕೂಡಿ ಬರುತ್ತದೆ. ಸಾಮ್ರಾಟರು ಮಾತಿಗೆ ಕಟ್ಟು ಬಿದ್ದು, ಅರಿಕೇಸರಿಯ ಬೆಂಬಲಕ್ಕೆ ಬರಲಾರರು."

'ಒಂದು ವೇಳೆ ಬಂದರೆ—' ಕಕ್ಕರಸ ಶಂಕೆಯನ್ನು ಸೂಚಿಸಿದ.

'ಬಂದರೆ—? ಬರುವುದಕ್ಕೂ ಮೊದಲು ಅರಿಕೇಸರಿಯ ಕತೆಯನ್ನು ಮುಗಿಸಿ ಬಿಡಬೇಕು. ಆಗ ಸಾಮ್ರಾಟರು ಬಂದಾದರೂ ಮಾಡುವುದೇನು?'

"ಗೋವಿಂದರಾಜರನ್ನು ಕಂಡು ಹೋಗುವುದೇ ಒಳಿತು."

"ಅದು ಅನುಮಾನಕ್ಕೆ ದಾರಿಯಾಗುತ್ತದೆ. ಸಭೆಯಲ್ಲಿದ್ದ ಅವರನ್ನು ನೀವು ಸರಿಯಾಗಿ ಗಮನಿಸಿದಂತೆ ಕಾಣುವುದಿಲ್ಲ. ನೀವು ಅವರ ಮುಖವನ್ನು ನೋಡಿದ್ದರೆ ಈ ಮಾತು ಹೇಳುತ್ತಲೇ ಅವರ ಹೊಟ್ಟೆಯಲ್ಲಿ ಹುದುಗಿದ್ದ ಸಿಟ್ಟು, ಪುಟಿದೇಳುತ್ತಿತ್ತು. ಯುದ್ಧವೇ ಬಲಿಯುವುದು ಅವರಿಗೂ ಬೇಕಾಗಿತ್ತು. ನೀವು ಕೇಳುವುದೇ ಬೇಡ ಕೇಳದೆಯೇ ನಿಮ್ಮ ಪರ ನಿಲ್ಲುತ್ತಾರೆ. ಆದರೆ ಅಲ್ಲಾಡುತ್ತಿರುವ ಕಂಬಗಳನ್ನು ಕಂಡು ಅವುಗಳನ್ನು ಗಟ್ಟಿಯಾಗಿ ನಮ್ಮ ಹಿಂದೆ ನಿಲ್ಲುವಂತೆ ಮಾಡಬೇಕು. ಒಬ್ಬೊಬ್ಬರನ್ನೂ ಕಂಡು ಬರಬೇಕು. ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ ಈ ಕೆಲಸ ಮುಗಿಸಿ, ಶತ್ರುಗಳಿಗೆ ಸ್ವಲ್ಪವೂ ಕಾಲಾವಕಾಶ ಕೊಡದೆ, ಅವರ ಮೇಲೆ ಬೀಳಬೇಕು.'

'ಹಾಗಿದ್ದರೆ ನಾನೀಗ ಏನು ಮಾಡಬೇಕು? ಅದನ್ನಿಷ್ಟು ಹೇಳಿ ಬಿಡಿ.'

'ಯಾರಿಗೆ ಯಾರು ಆಜ್ಞೆ ಮಾಡುವುದು? ನೀವು ವಯಸ್ಸಿನಲ್ಲಿ ಹಿರಿಯರು. ಅಲ್ಲದೆ ನಿಮ್ಮದು ಹಿರಿಯ ನಾಡು. ಹೀಗಿದ್ದು ನಿಮಗೆ ನನ್ನಿಂದ ಆದೇಶವೇ? ನೀವು ಹೇಳಿದ್ದನ್ನು ನಾನು ಮಾಡಿಮುಗಿಸಬೇಕಾದವ'.

'ಈ ಸೇವ್ಯ-ಸೇವಕ ಸಂಬಂಧವೇ ಬೇಡ ಬಪ್ಪರಸರೇ. ಅದು ಸ್ನೇಹಕ್ಕೆ ಅಡ್ಡಗೋಡೆ ಇಟ್ಟ ಹಾಗೆ. ನನ್ನಿಂದಾಗಬೇಕಾದ್ದನ್ನು ನಾನು ನಿರ್ವಹಿಸುತ್ತೇನೆ.'

'ನೀವು ಇಲ್ಲಿಂದ ನೇರವಾಗಿ ನಿಮ್ಮ ಬಂಧುಗಳಿದ್ದಲ್ಲಿಗೆ ಹೋಗಿ. ಅವರು ಸೈನ್ಯ ಸಮೇತ ಬಾದಾಮಿಗೆ ತಕ್ಷಣ ಬರಲಿ. ಬರುತ್ತಾ ತಮ್ಮ ಕಡೆಯವರನ್ನೂ ಕೂಡಿಕೊಂಡು ಬರುವಂತೆ ತಿಳಿಸಿ. ನಾನು ಈ ದಿಕ್ಕಿನಿಂದ ಬಾದಾಮಿಗೆ ತೆರಳುತ್ತೇನೆ. ಹೋಗುತ್ತಾ ಮಾರ್ಗಮಧ್ಯದಲ್ಲಿ ಸಿಗುವ ಎಲ್ಲ ಭಿಮಾನಿಗಳನ್ನೂ ಭೆಟ್ಟಿಯಾಗುತ್ತೇನೆ.'

'ಹಾಗಿದ್ದರೆ ನಾನಿನ್ನು ಬರಲೇ? '

ಪ್ರತ್ಯುತ್ತರವನ್ನೂ ಕಾಯದೆ ಕಕ್ಕರಸ ಕುದುರೆ ಹತ್ತಿದ.

ಅವನು ಕಣ್ಮರೆಯಾಗುವುದನ್ನೇ ನೋಡುತ್ತ ನಿಂತಿದ್ದ ಬಪ್ಪರಸ, ತನ್ನ ಕುದುರೆಯನ್ನು ಬೇರೊಂದು ದಿಕ್ಕಿಗೆ ತಿರುಗಿಸಿದ.

ಸ್ವಾಮಿಯ ಕಾರ್ಯಗೌರವದ ಅರಿವುಳ್ಳ ಕುದುರೆ ಚಂಗನೆ ನೆಗೆಯಿತು.

o o o o

'ಅರಮನೆಯಲ್ಲಿ ನಾವು ನೆನಸಿದಂತೆ ಯಾವುದೂ ಆಗಲಿಲ್ಲ. ಎಲ್ಲ ತಲೆಕೆಳಗಾಯಿತು. ಈ ಸಂಗ್ರಾಮ ನಮಗೆ ಬೇಕಿರಲಿಲ್ಲ. ಪ್ರಭುಗಳ ಮಾತಿಗೆ ಬೆಲೆ ಬರಬಹುದು. ಯುದ್ಧ ಬೇಡವೆಂದು ಅವರು ಬಾದಾಮಿಯನ್ನು ಸುಲಭವಾಗಿ ಬಿಟ್ಟುಕೊಡಬಹುದು ಎಂದು ಗ್ರಹಿಸಿದ್ದೆ. ಸಾಮ್ರಾಟರ ಭಯವೂ ಅವರಿಗಿರುವಂತೆ ಕಾಣಲಿಲ್ಲ. ನಮ್ಮ ನೆಪದಲ್ಲಿ ನಿನಗೂ ತೊಂದರೆಯಾಯ್ತು.'

'ಇದರಲ್ಲಿ ತೊಂದರೆ ಏನು ಬಂತು ಅಣ್ಣಾಜಿ. ಸತ್ಯದ ಸಾಧನೆಗೂ ಪ್ರಯತ್ನಿಸದಿರುವುದೆಂತು? ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಸ್ವಭಾವ ನನ್ನದಲ್ಲ. ನಾನೂ ಇರಲಿಲ್ಲವೆಂದಾಗಿದ್ದರೆ ಸತ್ಯದ ಗೋರಿಯೇ ಇಂದು ನಡೆಯುತಿತ್ತು. ತಮ್ಮ ಪರ ವಾದಿಸುವವರಿಲ್ಲದೆ.'

"ಸಾಮ್ರಾಟರು ಕೊನೆಯಲ್ಲಿ ಬೆಕ್ಕಿನ ತಲೆಯ ಮೇಲೆಯೇ ದೀಪವಿಟ್ಟು ಕುಳಿತರಲ್ಲ. ಅದರಿಂದ ನಾನು ವ್ಯಥಿತನಾದೆ. ನಮಗಾಗಿಯಲ್ಲದಿದ್ದರೂ ನಿನಗಾಗಿಯಾದರೂ ಸಾಮ್ರಾಟರು ನಮ್ಮ ಪರ ನಿಲ್ಲುವರೆಂದು ತಿಳಿದಿದ್ದೆ. ಅವರ ಬೆಂಬಲವಿಲ್ಲದೆ ನಾವು ಸಮರದಲ್ಲಿ ಜಯಗಳಿಸುವುದೆಂತು? ಅದೇ ಈಗ ನಮ್ಮನ್ನು ಬಾಧಿಸುತ್ತಿರುವುದು."

(ಮುಂದುವರಿಯುವುದು)

ಧನ್ಯೋಸ್ಮಿ

NAVAYUGA 6—7—1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಭ್ರಷ್ಟಾಚಾರೀ ಹಠಾವೋ

ವಿದ್ಯಾವಿಹೀನನಾದವನು ಪಶುವಿಗಿಂತ ಅಧಮನೆಂಬ ಮಾತಿದೆ. ನಿಷ್ಠೆಯುಳ್ಳವನು ತುಂಬಿದ, ಕೊಡವೂ ತೂಗದು. ಪ್ರಾಚೀನ ಪರಂಪರೆಯಲ್ಲಿ ನಾವು ವಿದ್ಯಾಲಯಗಳಿಗೆ ಮೊದಲ ಪ್ರಾಶಸ್ತ್ಯವನ್ನಿತ್ತಿದ್ದೆವು. ನಾಲಂದಾ, ತಕ್ಷಶಿಲೆ ಮುಂತಾದ ವಿಶ್ವ ವಿದ್ಯಾನಿಲಯಗಳು ನಮ್ಮಲ್ಲಿದ್ದಂತೆ ಆರುಣಿ, ಉಪಮನ್ಯುಗಳಂಥ ಜಾಣ ವಿದ್ಯಾರ್ಥಿಗಳು, ಗಾಲವ, ದ್ರೋಣ, ವಿಶ್ವಾಮಿತ್ರರಂತಹ ಪೂಜನೀಯ ಗುರುಗಳು ನಮ್ಮವರೇ ಆಗಿದ್ದರು. ವಿದ್ಯೆ ಪವಿತ್ರವಾಗಿತ್ತು; ಪೂಜನೀಯವಾಗಿತ್ತು. ರಹಸ್ಯವೂ ಆಗಿದ್ದಿತು.

ಆದರೆ ಇಂದು ವಿದ್ಯೆಯ ಕೊಡಕ್ಕೆ ಹೊಲಸು ಕಲಂಕ ತಗುಲಿದೆ. ಹೊಟ್ಟೆ ತುಂಬಾ ಉಣ್ಣುವುದೆಂತೆಂದು ಸಮಸ್ಯೆಯಾಗಿರುವ ಶ್ರೀಸಾಮಾನ್ಯ ಈ ದುಬಾರಿ ವೆಚ್ಚದಲ್ಲಿ ಕಲಿಯುವುದಂತೂ ದೂರವೇ ಉಳಿಯಿತು. ವಿದ್ಯಾರ್ಥಿಗಳಿಗಾಗಿ ಸರಕಾರ ತಲಾ ವ್ಯಯಿಸುವ ಖರ್ಚು ಇಪ್ಪತ್ತು ರುಪಾಯಿಗಿಂತಲೂ ಕಮ್ಮಿಯಿದ್ದರೂ ಅಂಗಿ ಬಟ್ಟೆಗಳ ವೆಚ್ಚ, ಹಾಸ್ಟೆಲ್ ಫೀಜು, ಪುಸ್ತಕಗಳ ಬೆಲೆ ಇವುಗಳನ್ನು ಭರಿಸಲಾರದೆ ಎಷ್ಟೋ ಮಂದಿ ಅರ್ಧ ವಿದ್ಯಾಭ್ಯಾಸದಲ್ಲೇ ಅದಕ್ಕೆ ಎಳ್ಳು ನೀರು ಬಿಟ್ಟವರಿದ್ದಾರೆ.

ಬಡತನದಿಂದ ಅನುಭವ ಬರುತ್ತದೆ ಸರಿ. ಆದರೆ ಭಾರತದಲ್ಲಿ ಬಡವನಾಗಿ ಪಡುವ ಬನ್ನಬವಣೆ ಜನ್ಮಜನ್ಮಾಂತರಕ್ಕೂ ಬೇಡ. ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸಿಗುತ್ತದೆ. ಆದರೆ ಎಷ್ಟು ಮಂದಿ ಅಧಿಕಾರಿಗಳ ಕೈಕಾಲು ಬೀಳಬೇಕು. ಕೆಲವೊಮ್ಮೆ ಲಂಚದ ಬಿಸಿ ತೋರಿಸದೆ ನಮ್ಮ ಪರ ವಾದಿಸುವವರಿರುವದಿಲ್ಲ. ಕಷ್ಟಪಟ್ಟು ಕಲಿತವನಿಗೆ ಸರಿಯಾದ ನೌಕರಿಯಿಲ್ಲ. ಅನೇಕ ಮಂದಿ ಭಾರತೀಯ ಪದವೀಧರ ಯುವಕರಲ್ಲಿ ಕೆಲವು ಮಂದಿ ನೌಕರಿಯಿಲ್ಲದೆ ಅಲೆಯುತ್ತಿದ್ದರೆ ಉಳಿದವರಿಗೆ ಉಂಛವೃತ್ತಿಯೇ ಬದುಕಾಗಿದೆ.

ಆದರೆ ಈ ವರುಷದ ಸಮಸ್ಯೆ ಹಾಗಲ್ಲ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲೆಲ್ಲ ಹೌಸ್‌ಫುಲ್. ಬೆಂಗಳೂರಿನಂತಹ ಮಹಾನಗರಗಳ ತಾಯಿತಂದೆಗಳಿಗೆ ಇದೊಂದು ತಲೆನೋವಾಗಿದೆ. ಎಳನೆಯ ತರಗತಿ ಹಾಗೂ ಎಸ್.ಎಸ್.ಎಲ್.ಸಿ.ಯ ವಿದ್ಯಾರ್ಥಿಗಳು ಶಾಲೆಗಳಲ್ಲಿ ಪ್ರವೇಶ ದೊರಕದ ಕಾರಣ ವಿದ್ಯಾಭ್ಯಾಸವನ್ನು ನಿಲ್ಲಿಸಲೇಬೇಕು. ದೂರದ ಊರಿಗೆ ಹೋಗೋಣವೆಂದರೆ ಅಲ್ಲೂ 'ನನ್ನಿಂದ ಮುಂಚೆ ಬಂದೆಯೋ ರಾಗಿ ಅಂಬಲಿ' ಅಂದಂತಾಗುತ್ತದೆ. ಅಥವಾ ಅಲ್ಲಿ ಸರಿಯಾದ ಅನುಕೂಲಗಳಿರುವುದಿಲ್ಲ. ಮನೆಯಲ್ಲೇ ಓದಿ ಪರೀಕ್ಷೆಗೆ ಕೂಡಬಹುದಾದರೆ ಮಾರ್ಗದರ್ಶಿಗಳಿಲ್ಲದೆ ಅಭ್ಯಾಸ ಮುಂದುವರೆಯದು.

ಈ ಹೌಸ್‌ಫುಲ್‌ನ ಅವಾಂತರ ರಾಜ್ಯದಾದ್ಯಂತವೇಕೆ, ದೇಶವಿಡೀ ವ್ಯಾಪಿಸಿದೆ. ಶ್ರೀಮಂತರ ಮಕ್ಕಳಿಗೆ ಅಲ್ಲಿಶಿಕ್ಷಣ ಪ್ರವೇಶ ದೊರಕುತ್ತದೆ. ಶಾಲೆಯ ಫಂಡಿಗೆ 'ಡೊನೇಷನ್' ರೂಪದಲ್ಲಿ ಕೆಲವು ನೂರು ರೂಪಾಯಿಗಳನ್ನು ಕೊಟ್ಟು ಶಾಲೆಯ ಮುಖ್ಯೋಪಾಧ್ಯಾಯರೇ ಮೊದಲಾದ ಅಧಿಕಾರಿಗಳಿಗೆ ಕೈಬೆಚ್ಚಗೆ ಆಗುವಂತೆ ಲಂಚಗಿಂಚ ತಿನ್ನಿಸಬೇಕು. ಅಂದರೆ ಪ್ರವೇಶ ನಿಶ್ಚಿತ. ಖಾಸಗಿ ಶಾಲೆಗಳಿಗಿಂತ ಸರಕಾರಿ ಶಾಲಾಕಾಲೇಜುಗಳಲ್ಲೇ ಲಂಚಾವತಾರ ಹೆಚ್ಚು. ಹೀಗೆ ಕೊಡುವವರಿಲ್ಲವೆ? ಇದ್ದಾರೆ. ಅವರ ಮಕ್ಕಳಿಗೆ ವಿದ್ಯೆ ಬೇಕು. ಇದನ್ನು ಶ್ರೀಸಾಮಾನ್ಯ ತೆರಬಲ್ಲನೇ? ಅವನಿಗೆ ವಿದ್ಯೆಯಿಲ್ಲ. ದುಡಿಯಲು ಶಕ್ತಿ ಇಲ್ಲ. ದೇಶದಲ್ಲೇ ಗೌರವವಿಲ್ಲ.

ಖಾಸಗಿ ಶಾಲೆಗಳಲ್ಲಿ ಕೂಡ ಹರಿಜನ ವಿದ್ಯಾರ್ಥಿಗಳಿಗೆ ಕಡ್ಡಾಯ ಪ್ರವೇಶ ಸಿಗಬೇಕು. ಕೈತುಂಬ ಹಣ ಕೊಟ್ಟರೆ ಮಾತ್ರ ಅವರಿಗೆ ಪ್ರವೇಶವೆನ್ನುವವರಿದ್ದಾರೆ. ಕೆಲವರು ಮಾತ್ರ ಸೀಟೇ ಇಲ್ಲ ಎನ್ನುತ್ತಾರೆ. ಇದರಿಂದ ತಗಾದೆ ಅವಕಾಶ ಇಲ್ಲ ತಾನೇ. ರೀತಿ ಮಾತ್ರ ಬಾಡಿಗೆದಾರರು ಬಾಡಿಗೆಗೆ ಮನೆಕೊಟ್ಟಂತೆ.

ವಿದ್ಯಾಲಯಗಳಿರುವಲ್ಲಿ ಹೆಜ್ಜೆ ಹೆಜ್ಜೆಗೂ ಭ್ರಷ್ಟಾಚಾರವೇ. ಇದರಲ್ಲಿ ನೌಕರಿ ಸಿಗಲೂ ಲಂಚ; ಶ್ರೀಮಂತ ದಡ್ಡ ವಿದ್ಯಾರ್ಥಿಯೊಬ್ಬ ತೆರುವ ಲಂಚದಿಂದ ಫೇಲಾದವ ಪಾಸಾಗಬಹುದು. ಒಬ್ಬನಿಗಾಗಿಯೇ ಪುನರ್ ಪರೀಕ್ಷೆ ನಡೆಯಬಹುದು, ಮನೆಯಲ್ಲೇ ಉತ್ತರ ಪತ್ರಿಕೆಗಳನ್ನು ಬರೆದುಕೊಂಡು ಬರಬಹುದು, ಇನ್ನೊಬ್ಬನ ಉತ್ತರ ಪತ್ರಿಕೆಯೇ ಕಾಣೆಯಾಗಬಹುದು. ಹೌಸ್‌ಫುಲ್ ಎನಿಸಿದಲ್ಲೂ ಸೀಟು ಸಿಗಬಹುದು, ನಿರಕ್ಷರ ಕುಕ್ಷಿಯೊಬ್ಬನಿಗೆ ಡಿಗ್ರಿ ಕೂಡ ಸಿಗಬಹುದು.

ಇವೆಲ್ಲದಕ್ಕೂ ಬೇಕಾದುದು ಕೇವಲ ಲಂಚ. ಅದೊಂದರಿಂದ ಇಂಥ ಅವ್ಯವಹಾರವೂ ಜರಗುತ್ತದೆ. ಸರಕಾರೀ ಶಾಲಾ ಕಾಲೇಜುಗಳಲ್ಲಿ ಶ್ರೀಸಾಮಾನ್ಯ ಕಾಣುತ್ತಿರುವ ಲಂಚ ಮತ್ತು ಅಕ್ರಮ, ಅವ್ಯವಹಾರಗಳು ಒಂದೆರಡಲ್ಲ; ಲಕ್ಷೋಪಲಕ್ಷ. ಇಂಥ ಸರಕಾರಿ ವಿದ್ಯಾಲಯಗಳ ಅಪಾದನೆಗಳ ವಿಚಾರಣೆಯ ಕುರಿತು ನಮ್ಮ ರಾಜ್ಯ ಸರಕಾರ 11—4—1972ರಂದು ಏಕ ಸದಸ್ಯ ಆಯೋಗವೊಂದನ್ನು '14, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು—20'ನಲ್ಲಿ ಕಾರ್ಯಾರಂಭಿಸಿದೆ. ಈ ವಿಚಾರಣಾ ಆಯೋಗಕ್ಕೆ ಶ್ರೀ ಕೆ. ನಾರಾಯಣ ಸ್ವಾಮಿಯವರು ಮುಖಂಡರು.

ಶಾಲಾ ಕಾಲೇಜುಗಳ ಅಂತಹ ಲಂಚಗುಳಿತನ ಮತ್ತು ಅಕ್ರಮಗಳ ಬಗೆಗೆ ವಿವರಗಳನ್ನು ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ತೊಡೆದು ಹಾಕಲು ಸಲಹೆಗಳನ್ನು 5—7—1972ರೊಳಗಾಗಿ ಟಪ್ಪಾಲು ಮೂಲಕ ಈ ಕಚೇರಿಯ ವಿಳಾಸಕ್ಕೆ ಕಳುಹಿಸಿ ಕೊಟ್ಟರೆ ಭ್ರಷ್ಟಾಚಾರ ನಿರ್ಮೂಲನಕ್ಕೆ ಸಹಕಾರಿಯಾಗುವುದೆನ್ನಲಾಗಿದೆ.

ಇಂಥ ಒಂದು ವಿದ್ಯಾಲಯಗಳ ಭ್ರಷ್ಟಾಚಾರ ಸಮೂಲ ನಾಶವಾಗಬೇಕಾಗಿರುವುದು ಅವಶ್ಯವೇ. ವಿದ್ಯೆಗಿರುವ ಸ್ಥಾನವನ್ನರಿಯದೆ ಲಂಚ ಸ್ವೀಕಾರವೊಂದನ್ನೇ ಗುರುತರ ಹೊಣೆಯಾಗಿ ಆರಿಸಿಕೊಂಡಿರುವ ಅಕ್ಷರ ವ್ಯಭಿಚಾರಿ ಅಧಿಕಾರಿಗಳಿಂದ ಪಾವನಮೂರ್ತಿ ವಿದ್ಯಾಧಿದೇವತೆಯನ್ನು ಸರಕಾರ ಮುಕ್ತಗೊಳಿಸುವುದು ಸ್ತುತ್ಯಾರ್ಹ. ವಿದ್ಯೆಯೆಂಬುದು ಶ್ರೀಸಾಮಾನ್ಯನ ಅಳವಿಗೆ ಸಿಲುಕುವ ಅಮೃತವಾಗಲಿ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

●●

ಸರಕಾರದ ಮಂತ್ರಿಮಾಗಧರು

(ಒಂದನೇ ಪುಟದಿಂದ)

ಈ ವರದಿ ಕುಚೋದ್ಯದ್ದೆಂದೂ ನಿರಾಧಾರವೆಂದೂ ಅಧಿಕೃತ ಪ್ರಕಟಣೆಗಳು ಸಾರಿದುವು. ಆದರೆ, ಶ್ರೀ ಗಿರಿಯವರ ಬೇಡಿಕೆ ಪರಿಶೀಲನಾರ್ಹವಾದುದರಿಂದ ಕೇಂದ್ರ ಸಚಿವ ಸಂಪುಟದ ಪುನರ್ಘಟನೆ ಮುಂದೂಡಲ್ಪಟ್ಟಿತೆಂದು (ಅನಧಿಕೃತ) ವರದಿಗಳು ಉದ್ಗರಿಸಿದುವು. ಶ್ರೀಮತಿ ಗಾಂಧಿಯವರಿಗೆ ಶ್ರೀ ಗಿರಿಯವರನ್ನು ಇಳಿಸಿ ಶ್ರೀ ಜಗಜ್ಜೀವನರಾಮರನ್ನು ರಾಷ್ಟ್ರಪತಿ ಮಾಡಬೇಕೆಂದಿದ್ದರೆ, ಶ್ರೀ ಶಂಕರಗಿರಿಯವರಿಗೆ ಸಚಿವ ಸ್ಥಾನ ನೀಡುವುದಷ್ಟರಿಂದಲೇ ಇದು ಸಾಧ್ಯವಾಗುತ್ತಿದ್ದರೆ, ಅದಕ್ಕೆ ಹಿಂದು ಮುಂದು ನೋಡುತ್ತಿರಲಿಲ್ಲ. ಶ್ರೀ ಗಿರಿಯವರು ಇನ್ನೂ ಹಲವು ಬೇಡಿಕೆಗಳನ್ನು ಮಂಡಿಸಿರಬಹುದು. ಏಕೆಂದರೆ, ಶ್ರೀ ಗಿರಿಯವರು ಬೊಕ್ಕಸಕ್ಕೆ ದೊಡ್ಡ ರೀತಿಯ ಹೊರೆಯಾಗಿರುವುದರಿಂದ ರಾಷ್ಟ್ರಪತಿಯೆಂಬುದು ಸರ್ವಸಿದ್ಧ. ಇಷ್ಟೊಂದು ಸುಖ-ವಿಲಾಸವನ್ನು ಬರಿಯ ಅಂಬಲಿಗಾಗಿ ತ್ಯಜಿಸುವುದು ಸಾಮಾನ್ಯ ವಿಷಯವಲ್ಲ. ಶ್ರೀ ಗಿರಿಯವರು ರಾಷ್ಟ್ರಪತಿಯಾದ ಸನ್ನಿವೇಶವನ್ನು ಪರಿಗಣಿಸುವಾಗ ಅವರು ಇಷ್ಟು ಸಲೀಸಾಗಿ ಪದತ್ಯಾಗ ಮಾಡಬಹುದೆಂದು ಊಹಿಸುವುದೂ ಕಷ್ಟಸಾಧ್ಯ.

ಅದೇನಿದ್ದರೂ ಕೇಂದ್ರ ಸಚಿವ ಸಂಪುಟದಲ್ಲಿ ಇಬ್ಬರು ಗಂಡಸರಿದ್ದಾರೆ; ಒಬ್ಬಾಕೆ ಎಲ್ಲರನ್ನೂ ಅಂಗೈಯ ನೆಲ್ಲಿಕಾಯಂತೆ ಕುಣಿಸಬಲ್ಲ ಪ್ರಧಾನಿ ಶ್ರೀಮತಿ ಗಾಂಧಿ. ಮತ್ತೊಬ್ಬ ನೂರಾರು ಆಕ್ರಮಣಗಳಿಂದಲೂ ಸ್ವರಕ್ಷಣೆ ಸಾಧಿಸಿಕೊಂಡು ಬಂದಿರುವ ಸಂರಕ್ಷಣಾ ಮಂತ್ರಿ ಶ್ರೀ ಜಗಜ್ಜೀವನರಾಮ್.

ಪಂ| ನೆಹರು ಕಾಲದಿಂದಲೂ ಅವರ ಮೇಲಿರುವ ವಕ್ರದೃಷ್ಟಿಯಿಂದ ಅವರ ಕೂದಲು ಕೊಂಕಿಸುವುದೂ ಸಾಧ್ಯವಾಗಲಿಲ್ಲ. ಆದುದರಿಂದಲೇ ಅವರು ನಿಜಕ್ಕೂ ಗಂಡುಗಂಡಸು.

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾಗಿ ಎರಡೂ ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೇಕ್ಷಕರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 492/1972 OS 184/68

B. ಸಂಜೀವ ರೈ —ಅರ್ಜಿದಾರ

ಉಂಮಕ್ಕೆ ಹೆಂಗ್ಸು, ಕೊರಪ್ಪೊಳು ಮಗಳು, ಪಡುವನ್ನೂರು ಗ್ರಾಮ —ಎದ್ರಿ

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ಮೇಲ್ಕಂಡ ಡಿಕ್ರಿ ಮೇಲೆ ಅರ್ಜಿದಾರನು ನಿಂಮ ಮೇಲೆ ಮಾಡಿದ ಮೇಲಿನ ಅಮಲ್ಜಾರಿಯು ತಾ 19—7—1972ಕ್ಕೆ ಇಟ್ಟಿರುವುದರಿಂದ ಅದ್ಕೆ ಆಕ್ಷೇಪಣೆಗಳಿದ್ರೆ ಸದ್ರಿ ದಿನ್ಸ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಹ ಯಾ ವಕೀಲರ ದ್ವಾರಾ ಹಾಜರಾಗಿ ಉದಜರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿದೆ.

(Sd.) B. Ishwara Bhat
Advocate for Petitioner

ಪುತ್ತೂರು,
ತಾ. 24—6—72

Edited, Printed & Published by K. M. Shetty at the Navayuga Press, Udipi, in India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾಯಕ
ಆಯುರ್ವೇದಾಶ್ರಮ
ಕಟಪಾಡಿ, ದ. ಕ.

ನವಯುಗ

ಸಂಪುಟ ೫೧
ಸಂಚಿಕೆ ೨೫

NAVAYUGA

13-7-1972

ಮೇಲ್ತರಗತಿಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ
ಕಾರವಾರ

ಸಿಮ್ಲಾ ಸಮ್ಮೇಳನ—

ಶತ್ರುವಿನತ್ತ ಚಾಚಿದ ಮಿತ್ರಹಸ್ತ

ಇಡಿಯ ಜಗತ್ತು ನಿರೀಕ್ಷಿಸಿಕೊಂಡಿದ್ದ ಸಿಮ್ಲಾ ಶೃಂಗ ಸಭೆಯ ಫಲವೀಗ ಹೊರಬಿತ್ತು. ಇದು ಉತ್ಸಾಹದಾಯಕವೆನ್ನುವಂತಿಲ್ಲವಾದರೂ ನಿರುತ್ಸಾಹದಾಯಕವಾದದ್ದಂತೂ ಅಲ್ಲವೇ ಅಲ್ಲ. ಸಭೆಗೆ ಕೆಲವು ದಿನಗಳಿಗೆ ಮೊದಲು ರಾಷ್ಟ್ರಪತಿ ಭುಟ್ಟೊ ಹೊರಪಡಿಸಿದ ಅಭಿಪ್ರಾಯಗಳನ್ನು ಗಮನಿಸಿದಾಗ, ಇಷ್ಟು ಉತ್ತೇಜಕ ಒಡಂಬಡಿಕೆ ಸಾಧ್ಯವಾಗುವುದೆಂದು ನಂಬುವುದೇ ಅಸಾಧ್ಯವಾಗಿತ್ತು. ರಾಷ್ಟ್ರಪತಿ ಭುಟ್ಟೊರವರು ಮುಳ್ಳಿನ ಮಂಚದಲ್ಲಿ ಪವಡಿಸಿಯೇ ಅಧಿಕಾರ ನಡೆಸುತಿದ್ದಾರೆಂಬುದಕ್ಕೆ ಇಲ್ಲೊಂದು ನಿದರ್ಶನ ದೊರೆಯಿತು.

ಪಾಕಿಸ್ತಾನಿ ನಾಯಕರು ತಮ್ಮ ಜನತೆಯನ್ನು ಇಪ್ಪತ್ತೈದು ವರ್ಷಗಳ ಕಾಲ ತಪ್ಪುದಾರಿಯಲ್ಲಿ ಕರೆದೊಯ್ದ ಮಹಾಪರಾಧವನ್ನು (ಈ ನಾಯಕರಲ್ಲಿ ಭುಟ್ಟೊ ಕೂಡ ಸೇರಿದ್ದಾರೆ.) ಭುಟ್ಟೊ ರಾತ್ರೆ ಹಗಲಾಗುವುದರೊಳಗೆ ನೇರ ದಾರಿಗೆ ತಿರುಗಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಅಸಾಧ್ಯವಾದ ಮಾತು. ಅವರ ಈ ಕಷ್ಟವನ್ನು ಧರ್ಮಸಂಕಟವನ್ನು ಚೆನ್ನಾಗಿ ಅರ್ಥಮಾಡಿಕೊಂಡ ದೇಶವೆಂದರೆ ಭಾರತ ಮಾತ್ರ. ಅದು ಹಿಂದಿನಿಂದಲೂ ಮಿಲಿಟರಿ ವೆಚ್ಚದ ಅತಿರೇಕತೆಯನ್ನು ಖಂಡಿಸುತ್ತಲೇ ಬಂದಿದೆ. ಪಂಚಶೀಲ ತತ್ವಗಳ ಮೇಲೆಯೇ ಶಾಂತಿ—ಸೌಹಾರ್ದಗಳ ಗೋಡೆಯ ಮೇಲೆ ವಿದೇಶ ನೀತಿಯನ್ನು ನಿರೂಪಿಸಿದೆ. ಆದರೆ, ಪಾಕ್ ನಾಯಕರು ತಮ್ಮ ಜನತೆಯಲ್ಲಿ ಭಾರತ ದ್ವೇಷ ಬೀಜವನ್ನು ಬಿತ್ತಿ ಬೆಳೆಸಿಕೊಂಡು ಬಂದರು; ಇದಕ್ಕೆ ಕಾಶ್ಮೀರದ ನೇಗಿಲನ್ನೂ ಬಳಸಿದರು. ಜಾತೀಯತೆಯ ಗೊಬ್ಬರವನ್ನೂ ಹಾಕಿ ಪರಿಪೋಷಿಸಿಕೊಂಡು ಬಂದರು.

ತಾವು ಇಟ್ಟ ಹೆಜ್ಜೆ ತಪ್ಪೆಂಬುದು ಮನವರಿಕೆಯಾಗುವಾಗ ಪಾಕಿಸ್ತಾನ ದಿವಾಳಿ ಹೋಯ್ತು. ತಾನು ಆದರಿಸಿದ್ದ ದ್ವಿರಾಷ್ಟ್ರವಾದ ನೇಣು ಮುರಿದು ಬಿತ್ತು; ಪಾಕಿಸ್ತಾನದ ಜೀವನಾಡಿಯಾಗಿದ್ದ ಬಾಂಗ್ಲಾ ಸ್ವತಂತ್ರವಾಯ್ತು; ಪಾಕಿಸ್ತಾನದಲ್ಲಿ ಸಾಮಾಜಿಕ ಕ್ಷೋಭೆಗೆ ಏನೇನು ಬೇಕೋ ಅವೆಲ್ಲ ನಿರಾತಂಕವಾಗಿ ನಡೆದುವು. ಭಾರತದ ಪ್ರಥಮ ದ್ವೇಷಿಯೆಂದು ಹೆಸರಾಗಿದ್ದ ಭುಟ್ಟೊ ರಾಷ್ಟ್ರಪತಿಯಾಗಿ ಪ್ರತಿಜ್ಞೆಗೆಯ್ಯುವಾಗ, ಅವರು ಗಾಯಗೊಂಡ ಹುಲಿಯಾಗಿದ್ದರು. ಅವರ ಜಂಘಾಬಲವೆಲ್ಲವೂ ಉಡುಗಿ ಹೋಗಿ ಅಸಹಾಯಕ ಪರಿಸ್ಥಿತಿಯಲ್ಲಿ ಉರುಳಿದಾಗ, ಯುದ್ಧ ಮಾಡುವ ಚೈತನ್ಯವೇ ಹಾರಿಹೋದಾಗ ಅವರು ದುಂಬಾಲು ಬೀಳದೆ ಮತ್ತೇನೂ ಮಾಡುವ ಹಾಗಿರಲಿಲ್ಲ.

ಒಬ್ಬ ಭುಟ್ಟೊ ವಸ್ತುಸ್ಥಿತಿಯನ್ನು ಅನಿವಾರ್ಯ ಪ್ರಸಂಗಗಳಿಂದ ಒಪ್ಪಿಕೊಂಡ ಮಾತ್ರಕ್ಕೆ ಸತ್ಫಲ ಸಾಧಿತವಾಗದು. ಅವರು ತನ್ನ ಪ್ರಜೆಗಳಿಗೆ ಸತ್ಯವನ್ನು ಮನಗಾಣಿಸಿಕೊಡಬೇಕು. ಇದುವರೆಗೂ ಅಸತ್ಯವನ್ನೇ ಸತ್ಯವೆಂದು ಪ್ರಚಾರ ಮಾಡುತ್ತ, ಜನತೆಯನ್ನು ವಂಚಿಸುತ್ತ ಬಂದವರು ತಟ್ಟನೆ 'ಅದು ಸತ್ಯವಲ್ಲ; ಇದು ಸತ್ಯ'ವೆಂದು ಹೇಳಲು ಎದೆಗಾರಿಕೆ ಬೇಕು. ಅಂತಹ ಎದೆಗಾರಿಕೆ ಭುಟ್ಟೊರಲ್ಲಿದೆಯೆಂದು ನಂಬಿದರೂ ಅವರ ಮಾತನ್ನು ನಂಬುವಷ್ಟು ವಿವೇಕ-ಸಾಮಯಿಕ ಪ್ರಜ್ಞೆ—ಪಾಕ್ ಜನತೆಯಲ್ಲಿದ್ದೀತೆ? ಆದುದರಿಂದಲೇ ಭುಟ್ಟೋ ಹೇಳುತ್ತ ಬಂದರು—ನಿಂತ ಪೆಟ್ಟಿಗೆ ನಮ್ಮ ವಿವಾದ ಪರಿಹಾರಗೊಳ್ಳುವುದಿಲ್ಲ; ಹಂತಹಂತವಾಗಿ ಸಮಸ್ಯೆಗಳನ್ನು ಬಿಡಿಸಬೇಕು.

ಇದು ಒಂದು ವರ್ಗದ ಭಾರತೀಯರಿಗೆ ಸಮಾಧಾನವಿಲ್ಲ. ಭಾರತವು ವಿಜಯಿ ರಾಷ್ಟ್ರವೆಂಬುದು ನಿಜವಾದರೂ, ಈ ಸಂದರ್ಭದಲ್ಲಿ ಭಾರತವೇನು ಹೇಳಿದರೂ ಪಾಕಿಸ್ತಾನ ತಲೆಬಾಗಬಹುದಾದರೂ ವಿಜಯೋನ್ಮಾದದಿಂದ ಕೊಬ್ಬಿ ಪಾಕನ್ನು ರಸಾತಳಕ್ಕೆ ತಳ್ಳುವುದು ನಿಜಕ್ಕೂ ಸಲ್ಲದ ಮಾತು. ಸದ್ಯ ಭಾರತ-ಪಾಕಿಸ್ತಾನಗಳ ನಡುವಾದ ಸಿಮ್ಲಾ ಒಡಂಬಡಿಕೆ ಪಾಕಿಸ್ತಾನದ ಮಾನರಕ್ಷಣೆಗೆ ನಡೆದ ಮಾನವಿಕ ಪ್ರಯತ್ನ—ಸತ್ಸ್ನೇಹ ದೃಷ್ಟಿಯಿಂದ ಕೂಡಿದೆ.

ಭಾರತ–ಪಾಕಿಸ್ತಾನಗಳೆರಡೂ ತಮ್ಮೊಳಗಿನ ಸಂಬಂಧ ಕೆಡಲು ಕಾರಣವಾದ ಸಂಘರ್ಷಗಳನ್ನು ಕೊನೆಗೊಳಿಸಲು ನಿರ್ಧರಿಸಿದುವು. ಸಾಮರಸ್ಯ ಸ್ಥಾಪನೆಗೆ ಆದ್ಯತೆ ನೀಡಿದುವು. ತಮ್ಮ ಸಂಪನ್ಮೂಲಗಳನ್ನೂ ಶಕ್ತಿಯನ್ನೂ ತಂತಮ್ಮ ಪ್ರಜಾಹಿತಕ್ಕೆ ವಿನಿಯೋಗಿಸಲು ಒಪ್ಪಿಕೊಂಡವು—ಅಂದರೆ, ಸೈನಿಕ ವೆಚ್ಚವನ್ನು ಇಳಿಸುವ, ಆಕ್ರಮಣ ನೀತಿಯನ್ನು ತ್ಯಜಿಸುವ ಸಂಕೇತವಿದು.

ಉಭಯ ದೇಶಗಳ ಭಿನ್ನಾಭಿಪ್ರಾಯಗಳೆಲ್ಲವನ್ನೂ ದ್ವಿಪಕ್ಷೀಯ ಮಾತುಕತೆಗಳಿಂದ ಶಾಂತ ವಿಧಾನಗಳಿಂದ ಪರಿಹರಿಸಲು ನಿರ್ಧರಿಸಿದುವು—ಅಂದರೆ ಮೂರನೆಯವರ ಮಧ್ಯಸ್ಥಿಕೆಗಾಗಲೀ ಯುದ್ಧಕ್ಕಾಗಲೀ ಅವಕಾಶ ನೀಡಲಾರೆವೆಂದು ಪ್ರತಿಜ್ಞೆಗೆಯ್ದುವು. ಸಮರ ನಿಷೇಧ ಒಡಂಬಡಿಕೆಗಿಂತಲೂ ಇದೊಂದು ಮುಂದಿನಹೆಜ್ಜೆ.

ಕಳೆದ ೨೫ ವರ್ಷಗಳಲ್ಲಿ ಎರಡೂ ದೇಶಗಳ ನಡುವಣ ಸಂಬಂಧ ಕೆಡಿಸಿದ ಸಂಘರ್ಷದ ಬಗ್ಗೆ ಶಾಂತಿಯುತ ವಿಧಾನಗಳಿಂದ ಪರಿಹಾರವರಸಲು ಒಪ್ಪಿದವು. ಕಾಶ್ಮೀರದ ಬಗೆಗೆ ತನಗಿರುವ ಅಭಿಪ್ರಾಯವನ್ನು ಪಾಕಿಸ್ತಾನ ಬದಲಾಯಿಸಲಿಲ್ಲವಾದರೂ ಇತ್ಯರ್ಥಕ್ಕಾಗಿ ಆಕ್ರಮಣ ಸಮರ ಮಾಡುವ ಇರಾದೆಯನ್ನು ಬಿಟ್ಟುಕೊಟ್ಟದ್ದು ಕಡಿಮೆ ಮಹತ್ವದ್ದಲ್ಲ.

ಜಮ್ಮೂ ಕಾಶ್ಮೀರವೊಂದನ್ನುಳಿದು ಉಳಿದೆಡೆ ಭಾರತ—ಪಾಕ್ ಸೇನೆಗಳು ತಮ್ಮ ಅಂತಾರಾಷ್ಟ್ರೀಯ ಗಡಿಗೆ ಹಿಂದೆ ಸರಿಯುವಂತೆ ಒಪ್ಪಂದವಾಯ್ತು. ಜಮ್ಮೂ ಕಾಶ್ಮೀರದಲ್ಲಿ ಮಾತ್ರ ೧೯೭೧ರ ದಶಂಬರ ೧೭ರ ನಿಯಂತ್ರಣ ರೇಖೆಯನ್ನು ಮನ್ನಿಸಬೇಕು. ಇದನ್ನು ಬದಲಾಯಿಸುವ ಯಾವುದೇ ಕ್ರಮಗಳನ್ನು ಏಕಪಕ್ಷೀಯವಾಗಿ ನಡೆಯಬಾರದು—ಸಮರ ವಿರಾಮದ ಉಲ್ಲಂಘನೆ ನಡೆಯಬಾರದೆಂಬ ಸೂಚನೆಯಿಲ್ಲಿದೆ.

ಸಂಬಂಧ ಸುಧಾರಣೆಯ ಮೊದಲ ಹಂತವಾಗಿ ಸ್ಥಗಿತಗೊಂಡಿದ್ದ ಅಂಚೆ–ತಂತಿ ಸಂಪರ್ಕ, ವಾಯುಯಾನ, ಪ್ರಯಾಣ ಸೌಲಭ್ಯ ಮೊದಲಾದುವು ಆರಂಭವಾಗುವುವು. ಪರಸ್ಪರ ದ್ವೇಷ ಹೆಚ್ಚಿಸುವ ಯಾವುದೇ ಚಟುವಟಿಕೆಗಳಿಗೆ ಮುಟ್ಟುಗೋಲು ಬೀಳುವುದು. ರಾಷ್ಟ್ರೀಯ ಐಕ್ಯ, ಸಾರ್ವಭೌಮ ಅಧಿಕಾರ ಮತ್ತು ರಾಜ್ಯಕೀಯ ಸ್ವಾತಂತ್ರ್ಯದ ಬಗೆಗೆ ವಿಶ್ವಸಂಸ್ಥೆಯ ಸನ್ನದಿನನ್ವಯ ಉಭಯ ದೇಶಗಳು ಗೌರವ ನೀಡುತ್ತವೆ.

ಪಾಕಿಸ್ತಾನವು ಕಾಲುಶತಮಾನಗಳಿಂದಲೂ ಭಾರತದ ಮೇಲೆ ದ್ವೇಷ ಕಾರುತ್ತಲೇ ಬಂದಿದೆ; ಆಕ್ರಮಣ—ಸಮರ ನಡೆಸುತ್ತಲೇ ಬಂದಿದೆ; ಸಮಸ್ಯೆಗಳನ್ನು ಹೆಚ್ಚಿಸುತ್ತಲೇ ಬಂದಿದೆ; ಭಾರತದ ಮೇಲೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಆರ್ಥಿಕ ಒತ್ತಡವನ್ನು ಹೇರುತ್ತಲೇ ಬಂದಿದೆ. ಆದುದರಿಂದ ಈ ಸಮಯದಲ್ಲಿ ಅದರ ಗೋಣು ಮುರಿದು ಬಿಡಬೇಕೆಂಬುದು ಕೆಲವರ ವಿಚಾರವಿರಬಹುದು. ಬಾಂಗ್ಲಾ ಸಮಸ್ಯೆಯನ್ನೆದುರಿಸುವಾಗ ಭಾರತಕ್ಕೆ ಕೋಟ್ಯಂತರ ರೂಪಾಯಿಗಳು ವೆಚ್ಚವಾದುವು; ವಿಮಾನಾಪಹರಣದ ನಷ್ಟ, ನಿರಾಶ್ರಿತರ ಭರಣ-ಪಾಲನ, ಪಾಕ್ ಆಕ್ರಮಿಸಿರುವ ಕಾಶ್ಮೀರ ಭೂಭಾಗ, ವಿಭಜನಾಪೂರ್ವದ ಸಾಲ ಇತ್ಯಾದಿ ಇತ್ಯಾದಿಗಳ ಯಾದಿಗೆ ತುದಿ ಬುಡವಿಲ್ಲ. ಇವೆಲ್ಲವನ್ನೂ ಪಾಕಿಸ್ತಾನ ನಮಗೆ ತುಂಬಿಸಿ ಕೊಡಬೇಕಾದರೆ, ಪಾಕಿಸ್ತಾನವನ್ನೇ ಮಾರಿಬಿಡಬೇಕಾದೀತು. ಬಾಂಗ್ಲಾ ಸ್ವತಂತ್ರವಾದನಂತರ ಪಾಕ್ ಆರ್ಥಿಕತೆ ಸಂಪೂರ್ಣ ದಿವಾಳಿಯೆದ್ದಿದೆಯೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ವಿಜಯೋನ್ಮಾದದಲ್ಲಿ ಮಿತ್ರನಾಗುವೆನೆಂದು ಬಂದ ಶತ್ರುವನ್ನು ಅಂಧಃಪತನಕ್ಕೆ ದೂಡುವುದು ಮಾನವೀಯತೆಯೂ ಅಲ್ಲ. ಉತ್ತಮ ನೆರೆಹೊರೆ ಬಯಸುವ ವಿಧಾನವೂ ಅಲ್ಲ.

ಸದ್ಯ ಸಿಮ್ಲಾದಲ್ಲಿ ಒಡಂಬಡಿಕೆ ಸಾಧ್ಯವಾಯಿತೆಂದು ಸಂತೋಷ ಪಡಬೇಕು. ತನ್ನ ಮೂಲಭೂತ ನೀತಿಯಲ್ಲಿ ಯಾವುದೇ ಪರಿವರ್ತನೆ ಮಾಡದೆ ಮುಳುಗುತ್ತಿದ್ದ ಸಹೋದರ ರಾಷ್ಟ್ರವನ್ನು ಕೈ ಹಿಡಿದೆತ್ತುವ ಪ್ರಯತ್ನವನ್ನು ಭಾರತ ಮಾಡಿದೆ. ಇನ್ನೂ ಕೈಕೊಡಹಿ ಸಮುದ್ರದಲ್ಲೇ ಮುಳುಗುತ್ತೇನೆಂದು ಪಾಕಿಸ್ತಾನ ಹೇಳುವುದಾದರೆ ಯಾರೂ ಏನೂ ಮಾಡಲು ಸಾಧ್ಯವಿಲ್ಲ.

ರಾಷ್ಟ್ರಪತಿ ಭುಟ್ಟೊ ಇನ್ನಾದರೂ ಋಜುಮಾರ್ಗದಲ್ಲಿ ನಡೆಯಬೇಕು; ತನ್ನ ಪ್ರಜಾಜನರಿಗೆ ಬೆಳಕು ತೋರಬೇಕು. ಸಿಮ್ಲಾ ಶೃಂಗಸಭೆಯಲ್ಲಿ ಭಾರತ ಬಗ್ಗೆ ತೋರಿದ ಸಹಾನುಭೂತಿ—ಅನುಕಂಪಗಳು ಅವರಿಗೆ ಈ ದೆಸೆಯಲ್ಲಿ ಉತ್ತೇಜಕವಾಗಬೇಕು; ಹೊಸ ನಾಯಕನ ನೇತೃತ್ವದಲ್ಲಿ ಪಾಕಿಸ್ತಾನಿ ಪ್ರಜೆಗಳು ಯಶಗಳಿಸಬೇಕು.

ಧಾರಾವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

'ಅವರು ಸಹಾಯ ಮಾಡಿದರೆ ನಮಗೆ ಜಯ, ಇಲ್ಲದಿದ್ದರೆ ಇಲ್ಲ ಎಂಬ ನಿಮ್ಮ ತೀರ್ಮಾನವೇ ದೋಷಯುತ. ಜಯಾಪಜಯಗಳು ನಮ್ಮ ಕೈಯಲ್ಲಿಲ್ಲ. ಪ್ರಾಪ್ತ ಕರ್ಮವನ್ನು ಮನಸ್ಸಿಟ್ಟು ಮಾಡುವುದೇ ನಮಗುಳಿ ದಿರುವ ದಾರಿ. ಇಬ್ಬರೂ ಗೆಲ್ಲುವ ಮಾತಿಲ್ಲವಷ್ಟೆ. ಒಂದು ಪಕ್ಷವಂತು ಸೋಲಲೇ ಬೇಕಲ್ಲವೆ. ಅದು ನಾವಾದರೂ ಆಗ ಬಹುದು; ಅವರಾದರೂ ಆಗ ಬಹುದು; ಆ ಕುರಿತು ಚಿಂತಿಸುವುದು ಸರಿಯಲ್ಲ. ಪಾಂಡವ ಕೌರವ ರೊಳಗೆ ನಡೆದ ಯುದ್ಧದಲ್ಲಿ ಕೌರವನ ಕಡೆಗಿದ್ದವರು ಕಡಿಮೆಯೇ! ಆಗಿನ ಬಲಿಷ್ಠರೆಲ್ಲ ಅವನ ಹಿಂದೆಯೇ ಇದ್ದರು. ಆದರೂ ಅವನು ಸೋಲನ್ನನುಭ ವಿಸಿದ. ದೈವ ಅವನನ್ನೊಲಿಯಲಿಲ್ಲ. ಯುದ್ಧ—ಅದೂ ಒಂದು ಜೂಜು.'

"ಅದನ್ನರಿತು ಅದನ್ನೇ ಆಹ್ವಾನಿಸಿದೆವಲ್ಲ'

"ಆಹ್ವಾನಿಸಿದವರು ನಾವಲ್ಲ. ಅದೀಗ ನಮ್ಮ ಮೇಲೆ ಹೇರಲ್ಪಟ್ಟಿದೆ. ಬೇಡವೆಂದಾಗಿದ್ದರೆ ಈಗಲೂ ಅದರಿಂದ ಸರಿಯಬಹುದು"

'ಈಗ ಸರಿದರೆ ಹೇಡಿಗಳು ಎಂದು ಆಡಿಕೊಳ್ಳುತ್ತಾರೆ."

"ಆ ಅಪಮಾನವನ್ನು ಸಹಿಸಲೂ ಸಿದ್ಧರಿಲ್ಲ. ಹಾಗೆ ಯುದ್ಧಕ್ಕೂ ಸನ್ನದ್ಧರಿಲ್ಲ. ಹೀಗೆಂದರೆ ಹೇಗೆ? ನೀವೊಂದು ನಿರ್ಧಾರಕ್ಕೆ ಬನ್ನಿ. ಅವರ ಯಾಜಮಾನ್ಯಕ್ಕೆ ತಲೆಬಾಗಿ ತಲೆಯುಳಿಸಿಕೊಳ್ಳುವುದೆ, ಅಥವಾ ಅವ ರನ್ನೇ ತುಳಿಯುವುದೇ? ಇವೆರಡರಲ್ಲಿ ಒಂದನ್ನು ನಾವು ಆಯ್ಕೆ ಮಾಡಲೇ ಬೇಕು."

"ಅದು ಮುಗಿದ ಕತೆ"

'ಮುಗಿದು ಹೋದುದನ್ನು ಮತ್ತೆ ನೆನಪಿಗೆ ತಂದುಕೊಳ್ಳುವುದೇಕೆ?'

"ಪ್ರಯತ್ನಪಟ್ಟರೂ ಮಮಕಾರ ನನ್ನಿಂದ ದೂರ ಸರಿಯುತ್ತಿಲ್ಲ."

'ಆ ನನ್ನತನವನ್ನೇ ಕಳೆದುಕೊಳ್ಳಿ."

"ಸುಲಭದ ಮಾತೇ? ದೊಡ್ಡವರೆನಿಸಿದವರೇ ಜಾರಿ ಬಿದ್ದಿರುವಾಗ"

"ದೊಡ್ಡಸ್ತಿಕೆ ಇರುವುದು ಜಾರಿ ಬೀಳದಿರುವುದರಲ್ಲಿಲ್ಲ ಬಿದ್ದರೂ ಎದ್ದೇಳುವ ಸಾಹಸ ಮಾಡುವುದರಲ್ಲಿ.'

'ನಿನ್ನ ಮನೋಧರ್ಮವೇ ವಿಚಿತ್ರವಪ್ಪ.'

'ಇದು ಮನೋಧರ್ಮವಲ್ಲ; ಜೀವನಧರ್ಮ. ಬದುಕನ್ನು ಹೀಗೆ ನೋಡಲು ಕಲಿತರೆ ಯಾವ ಜಂಜಡವೂ ಅಂಟುವುದಿಲ್ಲ. ಬದುಕಿಗಿಂತ ಧರ್ಮ ವಿಭಿನ್ನವಾದಾಗ ಉಂಟಾಗುವುದು ಬರಿಯ ಗೊಂದಲ. ಆಗ ಅದು ಧರ್ಮವಲ್ಲ—ಕಂದಾಚಾರ.

'ಈ ಸಿದ್ಧಾಂತಗಳೆಲ್ಲ ನನ್ನ ಬಗೆಗೆ ಮೀರಿದವು. ಅವುಗಳನ್ನರಗಿಸಿ ಕೊಳ್ಳಲಾರೆನಪ್ಪ.'

'ಈಗ ನೀವು ದಾರಿಗೆ ಬಂದಿರಿ, ಅಣ್ಣಾಜಿ. ಈ ದಾರಿಗುಂಟ ನಡೆ ದರೆ ಗುರಿ ಮುಟ್ಟುವುದೂ ಕಷ್ಟಸಾಧ್ಯವಲ್ಲ.'

'ದಾರಿ ಕಾಣದೆ ಪರದಾಡುವವನು ನಾನು. ನನ್ನ ಪರದಾಟದಲ್ಲಿ ನಿನ ಗೊಂದು ದಾರಿ ಕಂಡಿತು ಎಂಬ ಮಾತು ಸಂತಸದ್ದಾದರೂ ಸೋಜಿಗದ್ದು.'

'ಸೋಜಿಗವೆಲ್ಲಿ ಬಂತು ಇದರಲ್ಲಿ? ನಿಮ್ಮ ಮಾತಿನಲ್ಲಿ ನಾನು ಸರ ಳತೆಯನ್ನು ಕಂಡೆ. ನನಗೆ ಬೇಕಾಗಿದ್ದುದೂ ಅದೇ ಆಗಿತ್ತು. ನೀವು ಇಲ್ಲಸಲ್ಲದ ವ್ಯಾಖ್ಯಾನ ಮಾಡುವುದರಿಂದ ವಿಚಾರಶಕ್ತಿ ಗಲಿಬಿಲಿಗೊಳ್ಳುತ್ತದೆ; ಹು ಮ್ಮಸ ಇಳಿಯುತ್ತದೆ. ನೀವು ಪಟ ಬಿಟ್ಟು ಕುಳಿತರೆ ನಿಮ್ಮ ಭಾರ ಹೊ ರುವ ಶಕ್ತಿ ಹೆಗಲಿಗೆ ಬೀಳುತ್ತದೆ. ಇಲ್ಲವೋ—ಋಜು ದಾರದಿಂದ ಆಳ ವಾದ ಮಡುವಿನಲ್ಲಿ ಮುಳುಗುತ್ತಿರಲು, ಅವನನ್ನುಳಿಯಹೋಗಿ ನೀರು ಪಾಲಾಗುವವನ ಸ್ಥಿತಿ ನನ್ನದು.'

ಅರಿಕೇಸರಿಯ ಮಾತು ಹರಿತವಾಗಿತ್ತು.

ಇಷ್ಟು ಹರಿತವಾಗಿ ಆಡಬಾರದಿತ್ತು ಎಂದು ಅವನಿಗೆ ಅನಿಸಿತು. ಆದರೆ ಈ ಅನಿಸುವಿಕೆ ಮೂಡುವ ಮೊದಲೇ ಮಾತು ಬಾಯಿಂದ ಬಂದಿತು.

ಆ ಮಾತನ್ನಾತ ಉಪಸಂಹರಿಸಿಕೊಳ್ಳಲು ಸಿದ್ಧನಿದ್ದ.

ಹಾಗೆ ಮಾಡಲು ಅದೇನು ಬಿಟ್ಟ ಬಾಣವೇ?

ಆತ ನಿರೀಕ್ಷಿಸಿದ್ದಕ್ಕಿಂತ ಬೇರೆಯಾದ ಪರಿಣಾಮ ಅದರಿಂದಾಯಿತು.

ಉದ್ದೇಶ ರಹಿತವಾಗಿ ಆಡಿದ ಮಾತು ಉದ್ದೇಶ ಸಾಧನೆಗೆ ಸಹಾ ಯಕವಾಯಿತು. ಅರಿಕೇಸರಿ ಆಡಿದ್ದು ಚುಚ್ಚು ಮಾತು.

ಅಪ್ರಿಯವಾದ ಸತ್ಯ, ಅದು ಅನ್ಯರನ್ನು ನೋಯಿಸುವಂತಿತ್ತು.

ಕಠಿಣವಾದ ಮಾತಿನಿಂದ ವಿಜಯಾದಿತ್ಯನ ಮನಸ್ಸು ಕಠಿಣ ವಾಯಿತು.

'ಇನ್ನು ಮುಂದೆ ನಾನು ನೀನು ಹೇಳಿದಂತೆ. ಈ ಯುದ್ಧ ಮುಗಿ ಯುವ ತನಕ ಬರಿಯ ಬೊಂಬು. ಬೊಂಬನ್ನು ನೀನು ಹೇಗೆ ಬೇಕಾದರೂ ತಿಲಿಸಿಕೊಂಡು ಹೋಗಬಹುದು.'

'ಮಾತಿನ ಭರದಲ್ಲಿ ಏನೋ ಆಡಿಬಿಟ್ಟೆ; ಕ್ಷಮಿಸಬಿಡಿ.'

'ಕ್ಷಮಿಸುವುದಕ್ಕೆ ನಾನು ಯಾರು? ಎಲ್ಲವನ್ನೂ ಅವನ ಉಡಿ ಯಲ್ಲಿ ಹಾಕು.'

'ಬದುಕಿನಲ್ಲಿ ಈ ಸಮರ್ಪಣ ಭಾವ ಬರಬೇಕು. ಆಗ ಫಲಾಫಲ ಗಳನ್ನು ಅವನಿಗೆ ಬಿಟ್ಟುಬಿಡುವ ಮನೋಧೈರ್ಯ ಮೂಡಿ, ಕರ್ತವ್ಯಪಾಲನೆ ಯಷ್ಟೇ ನಿಚ್ಚಳವಾಗಿ ಒಡಮೂಡುತ್ತದೆ.'

ಅರಿಕೇಸರಿ ಹೀಗೆ ನುಡಿದು ಮಾತಿಗೆ ಪೂರ್ಣವಿರಾಮ ಹಾಕಿದ.

ಅನಂತರ ಅವರಿಬ್ಬರು ಬಹಳ ಹೊತ್ತು ತಮ್ಮೊಳಗೆ ಮಾತಾಡುತ್ತ ಕೆಲಸದ ವಿವರವನ್ನು ಚರ್ಚಿಸಿದರು. ಈ ಯುದ್ಧದಲ್ಲಿ ಬಲಿಷ್ಠಕ್ಕೆ ನಿಲ್ಲುವ ಭರವಸೆ ಇರುವ ಬಂಟರನ್ನೆಲ್ಲ ಆಹ್ವಾನಿಸಿ ಸೇನೆಗೆ ಸೇರಿಸಿಕೊಳ್ಳಲು ನಿಶ್ಚಯಿಸಿದರು. ಶತ್ರುಬಲಕ್ಕೆ ಸರಿತೂಗುವ ಸೈನ್ಯ ಜಮಾವಣೆಯ ದಾರಿ ಯನ್ನು ಲೆಕ್ಕಹಾಕಿದರು.

ಯಾವ ರೀತಿ ಗುಣಿಸಿದರೂ ಶತ್ರುಗಳ ಸೈನಿಕ ಸಂಖ್ಯೆಯಲ್ಲಿ ಮೇಲಾಗುವಂತೆ ಕಂಡಿತು. ಈ ಕೊರತೆಯನ್ನು ಭರ್ತಿಮಾಡುವುದು ಯೋಗ್ಯತೆಗೆ ಮೀರಿದ ಮಾತೆಂಬ ತೀರ್ಮಾನಕ್ಕೆ ಬಂದರು.

ಉಳಿದುದೊಂದೇ ದಾರಿ.

ಸಂಖ್ಯೆಯನ್ನು ಹೆಚ್ಚಿಸುವುದಾಗದಿದ್ದರೂ ಇರುವ ಸೈನ್ಯದ ಸತ್ವ ವನ್ನು ದ್ವಿಗುಣಗೊಳಿಸುವುದು ಅವರ ಕೈಯಲ್ಲಿತ್ತು.

ಅದನ್ನು ಖಂಡಿತ ಮಾಡಬೇಕು.

ಮಾಡದಿದ್ದರೆ ಉಳಿಗಾಲವಿಲ್ಲ.

ಉಳಿಗಾಲವಿಲ್ಲ—ನಿಶ್ಚಯ.

ಆದರೆ ಈ ಕೆಲಸವನ್ನು ನಿಭಾಯಿಸುವವರು ಯಾರು?

ಪದ್ಮಪ್ಪನೇ ಸರಿಯಾದ ವ್ಯಕ್ತಿಯೆಂದು ಅವರು ತೀರ್ಮಾನಿಸಿದರು.

ತೀರ್ಮಾನಿಸಿದರು ಮಾತ್ರವಲ್ಲ—ಅವನನ್ನೇ ನಿಯೋಜಿಸಿದರು.

ಸೈನ್ಯ ತರಬೇತಿಯ ಕೆಲಸ ಪದ್ಮಪ್ಪನ ಮೇಲ್ವಿಚಾರಣೆಯಲ್ಲಿ ಪ್ರಾರಂಭವಾಯಿತು. ಇತ್ತಕಡೆಯವರೂ ಅಮಿತೋತ್ಸಾಹದಿಂದ ಯುದ್ಧದ ಸಿದ್ಧತೆ ನಡೆಸಿದರು. ಯುದ್ಧವೆಂದರೆ ಸಾವು; ನರಳಾಟ. ಅದರಲ್ಲಿ ಸಾವು ಯಾರಿಗೆ ಎಂಬುದನ್ನು ಪೂರ್ವಭಾವಿಯಾಗಿ ತಿಳಿಯುವುದು ಸಾಧ್ಯವಿಲ್ಲವಾ ದರೂ ಅದರಲ್ಲಿ ಪಾಲ್ಗೊಂಡವರೆಲ್ಲ ಸಾವಿಗೆ ಸಿದ್ಧವಾಗಿರಬೇಕು.

ಅದು ಸಾವನ್ನೂ ಮೆಟ್ಟಿ ನಿಲ್ಲುವ ಪ್ರವೃತ್ತಿ.

ಅವರಿಗೆ ಜೀವಕ್ಕಿಂತಲೂ ಮಾನ ಮುಖ್ಯ.

o o o o

ಉಭಯ ಪಕ್ಷಗಳೂ ಯುದ್ಧ ಘೋಷಿಸಿದುವು.

ಕಟ್ಟಿಕೊಂಡ ಸೈನ್ಯವನ್ನು ಮಾರಿಯ ಬಾಯಿಗೆ ದೂಡಿದರು.

ಸೈನ್ಯ ಕೂಡಿಸುವುದು ಸುಲಭ ಸುಮ್ಮನೆ ಸಾಕುವುದು ತೀರ ಕಷ್ಟದ ಕೆಲಸ. ಅವರೆ ತಮ್ಮ ಶಕ್ತಿ; ಪರಾಕ್ರಮಗಳನ್ನು ಮೆರೆಸುವ ಆತುರ ಸೈನಿಕ ರಿಗೆ—ಈ ನರಮೇಧಕ್ಕೆ ಬಲಿಯಾಗಲಿರುವ ಯಾಗದ ಪಶುಗಳೆಂಬ ಅರಿವು ಅವರಿಗಿಲ್ಲ.

ಚತುರಂಗ ಬಲವನ್ನು ಇತ್ತಕಡೆಯ ಸೈನ್ಯಾಧಿಪರು—ಚದುರಂಗದ ಕಾಯಿಗಳಂತೆ ಯುದ್ಧಭೂಮಿಯಲ್ಲಿ ಬೇಕಾದಂತೆ ತಿರುಗಿಸಿ ಶತ್ರುವನ್ನು ಮಣಿಸಲು ಆಯಕಟ್ಟಿನ ಸ್ಥಳದಲ್ಲಿ ಕೆಡವಿ ಕೊಲ್ಲಲು ಹವಣಿಸಿದರು.

ವಿಜಯಾದಿತ್ಯ, ಅರಿಕೇಸರಿ, ಪದ್ಮಪ್ಪ ಒಂದು ಕಡೆ.

ಬಪ್ಪರಸ, ಕಕ್ಕರಸ, ಗೋವಿಂದ ಇನ್ನೊಂದು ಕಡೆ.

ಉಭಯ ಪಕ್ಷದ ಮೂವರು ನಾಯಕರ ಹಿಂದೂ ಬಲಾಢ್ಯವಾದ ಇದಿರು ನಿಂತವರನ್ನು ಕಡಿದು ಕೆಡಹುವ ಕಡುಹಿನ ಸೇನಾವಾಹಿನಿ. ಯುದ್ಧದ ಅಮಲೇರಿದ ಸೈನಿಕರು ಕೆನ್ನೀರ ಹೊಳೆ ಹರಿಸಲು, ಹೆಣದ ರಾಶಿ ಯೊಟ್ಟಲು ಸಿದ್ಧರಾಗಿ ಕಣಕ್ಕಿಳಿದರು.

ಐದು ದಿನಗಳ ಭೀಕರ ಕದನ ನಡೆಯಿತು.

ಹಲವರ ರುಂಡಗಳುರುಳಿದುವು.

ಕೆಲವರ ಕೈಕಾಲುಗಳು ಕತ್ತರಿಸಲ್ಪಟ್ಟುವು.

ಇನ್ನಿತರ ಮೂಳೆಗಳು ನುಜ್ಜುಗುಜ್ಜಾದುವು.

ಸತ್ತವರಿಗಾಗಿ ಹತ್ತಿ ಹೊಂದಿದವರ ಚೀರಾಟ ಒಂದೆಡೆ. [illegible] ವಿಕಲರಾದವರ ನರಳಾಟ ಇನ್ನೊಂದೆಡೆ.

ಈ ಐದು ದಿನಗಳಲ್ಲಿ ಕಾಣ ಬಂದುದು ಬರ್ಬರತೆ, ದಾರುಣತೆ.

ಅರಿಕೇಸರಿ ಪದ್ಮಪ್ಪರು ಶತ್ರು ಸೈನ್ಯದಲ್ಲಿ ಕೋಲಾಹಲವೆಬ್ಬಿಸಿದರು. ಅವರಿಬ್ಬರು ಆಹುತಿ ತೆಗೆದುಕೊಂಡ ಸೈನಿಕರ ಸಂಖ್ಯೆ ಅಗಣಿತ. ಅವರು ಸುಳಿದಲ್ಲಿ, ಕತ್ತಿ ಝಳಪಿಸಿದಲ್ಲಿ ಬಪ್ಪರಸಾದಿಗಳಿಗೆ ಸುಳಿಯಲೂ ಅವಕಾಶ ಸಿಗಲಿಲ್ಲ. ವಿಧಿಯಿಲ್ಲದೆ ಅವರು ಹಿಮ್ಮೆಟ್ಟಿದರು.

(ಹನ್ನೊಂದನೇ ಪುಟ ನೋಡಿರಿ)

ಸ್ವತಂತ್ರ ಐತಿಹಾಸಿಕ ಕಾದಂಬರಿ

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 45

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦—೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಹಿಂದುಳಿಯುವಿಕೆಯಳೆಯಲು ಆರ್ಥಿಕ ಮಾನದಂಡಬೇಕು

ಭಾರತ ವಿಶಾಲಕಾಯ ಬಹುಕಾಲ ಶೋಷಿತ ದೇಶ. ಇಲ್ಲಿಯ ಕೆಲವು ವರ್ಗಗಳು ಸಮಾಜದ ಉಳಿದ ವರ್ಗಗಳಿಗಿಂತ ಹಲವು ರೀತಿಯಲ್ಲಿ ಹಿಂದುಳಿದುವು; ಇಂದಿಗೂ ಹಿಂದೆಯೇ ಉಳಿದಿವೆ. ನಮ್ಮ ಸಂವಿಧಾನದಲ್ಲಿ ಈ ರೀತಿಯಾಗಿ ಹಿಂದುಳಿದವರನ್ನು ವಿಶೇಷ ಸೌಲಭ್ಯಗಳನ್ನು ನೀಡಿ, ಅವರೂ ಸಮಾಜದ ಉಳಿದ ವರ್ಗಗಳವರಿಗೆ ಸರಿಸಮವಾಗಿ ಬದುಕುವಂತೆ ಮುಂದೆ ತರಲು ಅವಕಾಶ ಕಲ್ಪಿತವಾಯ್ತು. ಈ ಹಿಂದುಳಿದ ವರ್ಗಗಳಾವುವೆಂದು ನಿರ್ಧರಿಸಲು ರಾಜ್ಯ ಸರಕಾರಗಳಿಗೆ ಅಧಿಕಾರವಿದೆ. ನಮ್ಮ ರಾಜ್ಯದಲ್ಲಿ ಈ ವರ್ಗವನ್ನು ನಿರ್ಧರಿಸಲು ಜಾತಿಯನ್ನೇ ಆಧಾರವಾಗಿಟ್ಟುಕೊಳ್ಳಲಾಗಿದೆ. ಹರಿಜನರು, ಗುಡ್ಡಗಾಡು ಜನಾಂಗ, ಅಸ್ಪೃಶ್ಯರೇ ಮುಖ್ಯವಾಗಿರುವ ಈ ಜಾತಿಗಳವರು ಹಲವು ವರ್ಷಗಳಿಂದಲೂ ಸಾರ್ವಜನಿಕ ಬೊಕ್ಕಸದಿಂದ ಧಾರಾಳ ಪ್ರಯೋಜನ ಪಡೆಯುತ್ತಲೇ ಬಂದಿದ್ದಾರೆ. ಆದರೆ, ಜಾತೀಯತೆಯನ್ನು ಖಂಡಿಸುವ, ಜಾತಿಯನ್ನು ಶಾಪವೆಂದು ತೆಗಳುವ ನಾಯಕಮಣಿಗಳು ಜಾತೀಯ ನೆಲೆಯಲ್ಲೇ ಹಿಂದುಳಿಯುವಿಕೆಯನ್ನು ಗೊತ್ತುಮಾಡಿದರು.

ಕೆಲ ವರ್ಷಗಳಿಗೆ ಮೊದಲು ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಮಗಳನ್ನು ರೂಪಿಸುವುದಕ್ಕಾಗಿ ಹಿಂದುಳಿದ ವರ್ಗಗಳನ್ನು ಗೊತ್ತುಪಡಿಸಲು ಸಮಿತಿಯೊಂದು ನಮ್ಮ ರಾಜ್ಯದಲ್ಲಿ ನೇಮಕವಾಗಿತ್ತು. ಈ ಸಮಿತಿಯು ಹಿಂದುಳಿದವರು ಬಹಳ ಹಿಂದುಳಿದವರು ಎಂದು ಮುಂತಾಗಿ ಹೇಳುತ್ತ ರಾಜ್ಯದ ಬಹು ಸಂಖ್ಯಾಕ ಪ್ರಜೆಗಳೆಲ್ಲರನ್ನೂ ಹಿಂದುಳಿದವರ ಪಟ್ಟಿಯಲ್ಲಿ ಸೇರಿಸಿತು. ಇದರ ಮೇಲೆ ಹಲವು ಜಾತಿಗಳು ತಮ್ಮನ್ನು ಹಿಂದುಳಿದವರೆಂದು ಘೋಷಿಸಲು ಪ್ರಯತ್ನಿಸಿದ್ದೂ ಇದೆ. ಹಿಂದುಳಿಯುವಿಕೆಗೆ ಹುಟ್ಟು ಅಥವಾ ಜಾತಿ ಯಾವುದೇ ರೀತಿಯಿಂದ ಕಾರಣವಾಗಬಾರದೆಂಬ ಧ್ವನಿ ಹಿಂದಿನಿಂದಲೂ ಕೇಳಿಬರುತ್ತಿತ್ತು. ಪತ್ರಿಕೆಗಳೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದುವು. ಆದರೆ, 'ಹಿಂದುಳಿದವರನ್ನು ಗೊತ್ತುಪಡಿಸುವ ಜಾತೀಯ-ಮಾನದಂಡವನ್ನು' ತ್ಯಜಿಸಿ ಮತ್ತೊಂದು ಮಾನದಂಡ ಹಿಡಿಯಲು ಯಾವ ಸರಕಾರವೂ ಎದೆಗಾರಿಕೆ ತೋರಲಿಲ್ಲ. ಶ್ರೀ ದೇವರಾಜ ಅರಸು ಅವರು ಹಲವು ವಿಷಯಗಳಲ್ಲಿ ಎದೆಗಾರಿಕೆ ತೋರಿಸಿದಂತೆ ಈ ವಿಷಯದಲ್ಲೂ ಎಂಟೆದೆ ತೋರಿಸಿ, ಸಮಿತಿಯೊಂದನ್ನು ನೇಮಿಸ ಹೊರಟಿದ್ದು ನಿಜಕ್ಕೂ ಸ್ವಾಗತಾರ್ಹ.

ನಾವು ಇಪ್ಪತ್ತೈದು ವರ್ಷಗಳಿಂದಲೂ ಕೆಲವು 'ಜಾತಿ'ಗಳನ್ನು ಮೇಲೆತ್ತಲು ಪ್ರಯತ್ನಿಸಿದ್ದೇವೆ; ಆದರೆ, ಒಟ್ಟಿನಲ್ಲಿ ಇದರ ಫಲ ಏನೇನೂ ಇಲ್ಲವೆಂದೇ ಹೇಳಬೇಕು. ವಿಧಾನಸಭೆಗಳ ಒಳಗೂ ಹೊರಗೂ ಹಿಂದುಳಿದವರ ಉದ್ಧಾರವಾಗಿಲ್ಲವೆಂಬ ತಿರುಬೊಬ್ಬೆ ಬೇರೆ ಕೇಳಿಬರುತ್ತದೆ. ಈ ಸಂವಿಧಾನದತ್ತ ಅಧಿಕಾರ ತಮಗೆ ಇನ್ನೂ ಬಹುಕಾಲ ಮುಂದುವರಿಯಬೇಕೆಂದು ಅವರ ವಾದ ಬೇರೆಯಿದೆ. ಅಂದರೆ, ಇದುವರೆಗೆ ಏನೂ ಆಗಿಲ್ಲವೆ? ಆದುದರ ಪ್ರಭಾವ ಆ ವರ್ಗದ ಮೇಲೇಕೆ ಬಿದ್ದಿಲ್ಲ? ಇದಕ್ಕೆ ಕಾರಣ ಸ್ಪಷ್ಟ. ಹಿಂದುಳಿದ ವರ್ಗಗಳಲ್ಲೂ ಕೆಲವು ಆಸಕ್ತ ಹಿತಾಸಕ್ತಿಗಳಿವೆ. ಅವು ತಾವೇ ಸರಕಾರ ನೀಡುವ ಎಲ್ಲ ಸೌಲಭ್ಯಗಳನ್ನೂ ನುಂಗಿ ಬೆಳೆದು ಹೆಮ್ಮರವಾಗುತ್ತಿವೆ. ಅವು ತಮ್ಮ ಜಾತಿಯ ಸಾಮೂಹಿಕ ಉದ್ಧಾರಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ನಡೆಸುತ್ತಿಲ್ಲ. ಹಿಂದುಳಿದಿರುವುದರಿಂದಲೇ ತಮ್ಮ ಜೀವನ ಸುಖಮಯವಾಗಿ ಮುಂದುವರಿಯುವುದೆಂದು ನಂಬಿರುವ ಈ ಶಕ್ತಿಗಳು ತಮ್ಮ ಜಾತಿಯಲ್ಲೇ ಪಾಳೆಯಗಾರರಂತೆ ಬೆಳೆದು ನಿಂತಿವೆ. ಈ ಪರಿಸ್ಥಿತಿಯೇ ಮುಂದುವರಿದರೆ ಆದರಿಂದ ಹಿಂದುಳಿದವರು ಸಾಮಾಜಿಕವಾಗಿ ತಲೆಯೆತ್ತುವುದು ಸಾಧ್ಯವಿಲ್ಲ.

ಜಾತಿಯು ಆಚಾರ-ಸಂಪ್ರದಾಯಗಳ ನೆಲೆಗಟ್ಟಿನ ಮೇಲೆ ನಿಂತದ್ದು. ಬದಲಾಗುತ್ತಿರುವ ನೈತಿಕ-ಸಾಮಾಜಿಕ ಕ್ರಾಂತಿಯ ವೇಳೆ ಜಾತಿ ಪದ್ಧತಿ ಬಲಹೀನವಾಗ ಹತ್ತಿದೆ. ಹಿಂದುಳಿಯುವಿಕೆಯನ್ನು ಜಾತೀಯ ನೆಲೆಯಲ್ಲಿ ನಿರ್ಧರಿಸಿ ನಾವು ಇದುವರೆಗೆ ಬಹಳಷ್ಟು ತಪ್ಪು ಮಾಡಿದ್ದೇವೆ; 'ಆ ವರ್ಗ'ವನ್ನು ತಪ್ಪುದಾರಿಗೆಳೆದಿದ್ದೇವೆ; ಅರ್ಥ—ಶಿಕ್ಷಣಗಳಿಗೆ ಪ್ರಾಧಾನ್ಯವಿರುವ ಇಂದಿನ ಸಮಾಜದಲ್ಲಿ 'ಜಾತಿ' ನಡೆಯದ ನಾಣ್ಯವಾಗಬೇಕು. ಅದನ್ನು ಚಲಾವಣೆಯಿಂದ ಹಿಂದೆ ಪಡೆದುಕೊಳ್ಳಬೇಕು. ಮತ-ಜಾತಿಗಳು ವ್ಯಕ್ತಿನಿಷ್ಠವಾದುವು; ಗುಣಕರ್ಮಗಳ ಆಧಾರದ ಮೇಲೆ ನಡೆದುಬಂದವು. ಇಂದು ಆಯಾ ಮತ-ಜಾತಿಗಳಿಗೆ ನಿರ್ಧಾರಿತವಾದ ಕರ್ಮ ಮಾಡುವವರು ವಿರಳರು. ಅಂದರೆ, ಅರ್ಥ—ಶಿಕ್ಷಣ ಸಾಮಾಜಿಕ ಸ್ಥಾನಮಾನಗಳು ಎಲ್ಲರ ಸೊತ್ತುಗಳು. ಆದುದರಿಂದ ಹಿಂದುಳಿದವರನ್ನು ಗೊತ್ತುಪಡಿಸಲು ಜಾತಿಯು ಯಾವ ಪರಿಸ್ಥಿತಿಯಲ್ಲೂ ಕಾರಣವಾಗಬಾರದು. ಒಂದು ಕುಟುಂಬದ ಆರ್ಥಿಕ ಸ್ಥಿತಿಯೇ ಅದು ಹಿಂದುಳಿದುದೋ ಮುಂದುವರಿದುದೋ ಎಂದು ಗೊತ್ತುಪಡಿಸಬೇಕು. ಆರ್ಥಿಕಾನುಕೂಲತೆಯಿರುವ ಹೆತ್ತವರು ತಮ್ಮ ಮಕ್ಕಳ ಶಿಕ್ಷಣಕ್ಕೆ ತಡೆಯೊಡ್ಡುತ್ತಾರೆಂದು ನಂಬಲಾಗದು.

ಈಗ ರಾಜ್ಯ ಸರಕಾರ ನೇಮಿಸುವ ಸಮಿತಿಯು ಕೇವಲ ಆರ್ಥಿಕ ಮಾನದಂಡವನ್ನೇ ಆಧಾರವಾಗಿಟ್ಟುಕೊಂಡು ಹಿಂದುಳಿದ ವರ್ಗವನ್ನು ಗೊತ್ತು ಮಾಡುವಂತೆ ಶಿಫಾರಸು ಮಾಡಬೇಕು; ಸರಕಾರ ಅದನ್ನು ಒಪ್ಪಿಕೊಳ್ಳಬೇಕು. ಹುತ್ತದೊಳಗಿನ ಸುತ್ತವಾಗಿ ಬೆಳೆದು ಬಂದ ನಮ್ಮ ತಪ್ಪುದಾರಿಯನ್ನು ಬಿಟ್ಟು ಬಿಡದೆ ಹೋದರೆ, ಜಾತೀಯವಾಗಿ ಹಿಂದುಳಿದವರು ಎಂದೂ ಮುಂದೆ ಬರುವುದಿಲ್ಲ; ಮುಂದುವರಿದವರ ತಲೆ ಅನೇಕಾಲದಿಗಿದ್ರು ಜಜ್ಜಿ ಹೋಗುತ್ತದೆ.

ಜೂನಿನಲ್ಲಿನ ಜೂಜು

ರಾಜ್ಯ ಶಿಕ್ಷಣ ವ್ಯವಸ್ಥೆಯ ಪುನರ್ಘಟನೆಯಿಂದಾಗಿ ಎರಡು ವರ್ಷದ ಪಿ.ಯು.ಸಿ. ತರಗತಿಗಳು ಆರಂಭವಾಗಿವೆ. ಪಿ.ಯು.ಸಿ.ಯ ಎರಡೂ ವರ್ಷಗಳ ಶಿಕ್ಷಣ ಸೌಲಭ್ಯವಿರುವ ಸಂಸ್ಥೆಗಳನ್ನು ಜೂನಿಯರ್ ಕಾಲೇಜು ಎಂದು ಕರೆಯಲಾಯ್ತು. ಈ ಸಂಬಂಧದಲ್ಲಿ ನಿಯುಕ್ತವಾಗಿದ್ದ ಸಮಿತಿ ಏನು ಶಿಫಾರಸು ಮಾಡಿತೋ, ಸರಕಾರ ಏನನ್ನು ಕಾರ್ಯರೂಪಕ್ಕೆ ತಂದಿತೋ, ಕೇಳಿದವರಿಗೆಲ್ಲಾ ಜೂನಿಯರ್ ಕಾಲೇಜು ನೀಡಲಾಯ್ತು. ಇನ್ನೂ ಕೇಳುವವರಿಗೆಲ್ಲ ದಾನವಾಡಿ ಬಿಡಬಹುದು. ಕೆಲವು ಹಿತಾಸಕ್ತಿಗಳಿಂದ ಕೂಡಿರುವ ಸರಕಾರ ಕಟ್ಟುನಿಟ್ಟಾಗಿ ಇನ್ಕಾರ ಮಾಡುವುದು ಸಾಧ್ಯವಿಲ್ಲ. ಇನ್ನೂ ನಾಲ್ಕಾರು ವರ್ಷ ಕಳೆಯುವುದರೊಳಗೆ ಕೆಲವು ಮಳೆಗಾಲಕ್ಕೆ ಮೊದಲು ಪ್ರೌಢ ಶಾ

(ಹತ್ತನೇ ಪುಟ ನೋಡಿರಿ)

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

I. A. I O. S. 204/1971

ವಾದಿರು......ನ್ಯೂಸರ ಬೇಬಿ — ಕೂಡಾ
ಪ್ರತಿವಾದಿರು...ಅಬ್ಬಕ್ಕ ಶೆಡ್ತಿ — ಕೂಡಾ

2ನೇ ಪ್ರತಿವಾದಿ ಶ್ರಿಂಗಾರಿ ಸೆಡ್ತಿ, ಅಬ್ಬಕ್ಕ ಸೆಡ್ತಿರ ಮಗಳು, ಕುಂದಾಪುರ ತಾಲ್ಲೂ ಪಡುವರಿ ಗ್ರಾಮದ ಜೊಗೂರಲ್ಲಿರುವವರು.

ಸದ್ರಿ ಪ್ರತಿವಾದಿಳಿಗೆ ತಿಳಿಸುವುದೇನೆಂದ್ರೆ,

ಈ ವಾಸೆಯ ತೀರ್ಮಾನದ ವರೆಗೆ ಪ್ರತಿವಾದಿಗಾಗಲಿ ಅವರ ಕಡೆಯ ಜನರಾಗಲೀ ದಾವಾ A ಶೆಡ್ಯೂಲು ಸ್ಥಳದಲ್ಲಿ ಪ್ರವೇಶಿಸದಂತೆಯೂ ದಾವಾ B ಶೆಡ್ಯೂಲು ಮರದ ಫಲಗಳನ್ನು ತೆಗೆಯದಂತೆಯೂ ಟೆಂಪರರಿ ಯಿಂಜಂಕ್ಷನ್ ಹುಕುಂ ಕೊಡಿಸ ಬೇಕಾಗಿ ವಾದಿರು ದಾಕಲು ಮಾಡಿದ ಮೇಲಿನ I. A. Iರ ತನ್ಖಿಯು ತಾ. 19-7-72ಕ್ಕೆ ಯಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಆದಿನ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

By Order of the Court
Y. Tejappa Shetty
Advocate for Plffs.
Coondapoor, 6—7—72

ನೋಟೀಸು

ಪುತ್ತೂರು IInd Addl ಮುನ್ಸಿಫ್ ಕೋರ್ಟಿನಲ್ಲಿ

R. R. C. 88/72

S. ಈಶ್ವರ ಭಟ್ಟ—ಅರ್ಜಿದಾರ
ಕೈಜಮ್ಮ ಕೂಡಾ—ಎದ್ರಿರು

6ನೇ ಎದ್ರಿ ಸಾಲುಮ್ಮ—ಪೊಡಿಯ ಭೂಸೆನ್ಯಾದಿನ ಬ್ಯಾರಿ ಮಗಳು, ಅತ್ತೂರು ಕಿನ್ನಿಮಜಲು ಬಜತ್ತೂರು ಗ್ರಾಮ.

ಸದ್ರಿ 6ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡ್ಸುವುದೇನೆಂದ್ರೆ—

70-71ಕ್ಕೆ ನಿಮ್ಮ ಮೇಲೆ ಕೂಡಾ ಮಾಡಿದ ಗೇಣಿ ಅರ್ಜಿ ತಾ: 20-7-72ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/-M. Rammohan Rao
Advocate for Petitioner
Puttur, 6—7—72

ಗೇಹರಾಜ್ಯದಲ್ಲಿ

ವಿಶ್ವಾಮಿತ್ರನ ಆಧುನಿಕ ವಂಶಜರು

'ಏ,....'

'ಏನು?'

"ಅಲ್ಲಾ, ಒಂದು ಆಶ್ಚರ್ಯದ ಸಂಗತಿ ಕೇಳಿವ್ಯಾಂತ?"

"ಎಂತದ್ದು?"

'ಮತ್ತೇನೂ ಇಲ್ಲ ಬಿಡು, ಮೊನ್ನೆ ಬೆಂಗಳೂರು ಜಿಲ್ಲೆಯ ಏಳನೇ ತರಗತಿಯ ಪರೀಕ್ಷೆ ಫಲಿತಾಂಶ ಪ್ರಕಟಣೆಯ ಸಂಬಂಧ ಭಾರೀ ಹಗರಣವಾಯ್ತಲ್ಲಾ....'

"ಅಂದ್ರೆ, ನಪಾಸಾದ ಸುಮಾರು ಎಂಟು ನೂರು ವಿದ್ಯಾರ್ಥಿಗಳನ್ನು ಪಾಸು ಮಾಡಿದರೂಂತ....'

'ಹ್ಞೂಂ. ಅದೇ.'

'ಈ ಅವ್ಯವಸ್ಥೆಗೆ ಕಾರಣರಾದವರ ಮೇಲೆ ಕ್ರಮಕೈಕೊಳ್ಳುವುದಾಗಿ ಶಿಕ್ಷಣ ಸಚಿವರೂ ಗುಡುಗುತ್ತಿದ್ದರಲ್ಲಾ....'

'ಅವರ ಗುಡುಗು ಅತ್ತಿರಲಿ; ಕ್ರಮಗಳು ನಡೆಯುತ್ತಿರಲಿ. ಆದರೆ, ಒಮ್ಮೆ ಪಾಸಾಗಿ ಮತ್ತೆ ನಪಾಸಾದ ವಿದ್ಯಾರ್ಥಿಗಳ ಗೋಳು ಅವಮಾನವೀಯವಲ್ಲವೇನು?'

"ಹ್ಞೂಂ.... ಅಕ್ರಮವಾಗಿ ಪಾಸಾದವರು...."

"ಅಲ್ವೆ, ಹಾಗೆಂದು ಪ್ರಕಟವಾಗಿಲ್ಲ ನೋಡು, ಪಾಪ, ಸ್ವರ್ಗಕ್ಕೆ ವಿಶ್ವಾಮಿತ್ರ ತ್ರಿಶಂಕುವನ್ನು ಕಳಿಸಿದ. ಆದರೆ, ಆತನನ್ನು ಕೆಳಕ್ಕೆ ದಬ್ಬಿದರು....'

"ಅದೇ ತ್ರಿಶಂಕು ಸ್ವರ್ಗವಾಯ್ತು"

'ಇದು ಪುರಾಣ ಕಾಲದ ವಿಶ್ವಾಮಿತ್ರನ ಕಾರುಬಾರು. ಆತನ ತಪ-ಜಪ ಸಿದ್ಧಿ ಯಾವ ಲೆಕ್ಕಕ್ಕೆ? ಪಾಪ, ತ್ರಿಶಂಕು ಅದೂ ಇಲ್ಲವೆಂದು ಗೋಗರೆಯ ಬೇಕಾಯ್ತು...'

'ಹ್ಞೂಂ....'

'ನೋಡು, ನಮ್ಮ ಈ ಕಾಲದ ವಿಶ್ವಾಮಿತ್ರರು ನಿಜಕ್ಕೂ ಅತಿ ಜ್ಞಾನಿಗಳು. ಅವರೇನು ಮಾಡಿದರು?'

'ಏನು ಮಾಡಿದರು?'

"ವಿದ್ಯಾರ್ಥಿಗಳೂ ಅವರ ಪಾಲಕರಿಂದಲೂ ಗಲಭೆ ಮಾಡಿಸಿದರು-ಸಾಮ್ಯವಾಗಿಯೇ ಅನ್ನು. ಸಾರ್ವಜನಿಕರಿಂದ ಸಹಾನುತಾಪ ಪಡೆಯುವಂತೆ ಮಾಡಿದರು."

'ಅದು ಸರೀನ್ನಿ. ಮೊದಲೇ ಫೇಲಾಗಿದ್ದರೆ ಆ ಕತೆ ಬೇರೆ. ಹೀಗೆಲ್ಲಾ...."

"ಅಂತಹ ನಪಾಸಾಗಿದ್ದು ಪಾಸಾದ ಮತ್ತು ನಪಾಸಾದವರಿಗೆಲ್ಲ ಮತ್ತೊಂದು ಪರೀಕ್ಷೆ ಮಾಡಿದರು...."

'ಹ್ಞೂಂ....'

'ಆ ಮರು ಪರೀಕ್ಷೆಯಲ್ಲಿ ಎಲ್ಲರನ್ನೂ ಪಾಸು ಮಾಡಿದರು....'

'ತಪ್ಪೇನಿದೆ?'

'ತಪ್ಪು ಇಲ್ಲ ಕಣೇ. ಒಂದೇ ಒಂದು ವಾರದಲ್ಲಿ ಪರೀಕ್ಷೆಯ ಬಗೆಗೆ ಅಧಿಸೂಚನೆ, ಪ್ರಶ್ನಪತ್ರ, ಪರೀಕ್ಷೆ ಎಲ್ಲವೂ ಮಿಂಚಿನಂತೆ ನಡೆದು ಪರಿಣಾಮವೂ ಪ್ರಕಟವಾಯ್ತು.'

"ಅಲ್ರಿ, ವಿದ್ಯಾರ್ಥಿಗಳು ಕಟ್ಟು ಮಸ್ತಾಗಿ ಅಧ್ಯಯನ ಮಾಡಿರಬಹುದು...."

"ವರ್ಷವಿಡೀ ಪಾಠ ಹೇಳಿಸಿಕೊಂಡು, ಮನೆ ಪಾಠ ಬೇರೆ ಪಡೆದುಕೊಂಡೂ ಪಾಸಾಗುವುದು ಸಾಧ್ಯವಾಗದ ಇವರು ಬೆರಳೆಣಿಕೆಯ ದಿನಗಳ "ಅಧ್ಯಯನ"ದ ಬಲದಿಂದ ಉತ್ತೀರ್ಣರಾಗಬೇಕಾದರೆ ಅವರಿಗೆ ಬೃಹಸ್ಪತಿಯು ಒಲಿದಿರಲೇ ಬೇಕು...."

"ಅಲ್ರಿ, ಯಾಕಿರಬಾರದು?'

"ಇರಬಹುದೂನ್ನು...."

"ಏನು?"

'ನೀನಂದಂತೆಯೂ ಇರಬಹುದು. ಪರೀಕ್ಷೆ-ಪಾಸು-ಫೈಲು-ಮಾರ್ಕುಗಳು-ಎಲ್ಲವೂ ಒಂದು ಫ್ಯಾಶನ್ನು—ಇದು ನಕಲಿಯಾಗದೆ ಮತ್ತೇನಾದೀತು?'

"ಅಲ್ರಿ, ದೊಡ್ಡ ದೊಡ್ಡ ವಿಶ್ವ ವಿದ್ಯಾಲಯಗಳಲ್ಲಿಯೇ ಪರೀಕ್ಷೆಗಳು ಕಪಟ ನಾಟಕ ಪ್ರದರ್ಶನವಾಗುತ್ತಿರುವಾಗ, ಈ ಏಳನೆ ತರಗತಿಯದ್ದೇನು ಮಹಾ"

'ನೋಡಮ್ಮ, ವಿಶ್ವಾಮಿತ್ರ ಅದೆಷ್ಟೋ ವರ್ಷ ತಪಸ್ಸಿದ್ಧಿಗಾಗಿ ಪ್ರಯತ್ನಿಸಿದರೂ ಅವನದ್ದು ಕೊನೆಯವರೆಗೂ ಅರ್ಧಂಬರ್ಧವಾಗಿಯೇ ಉಳಿಯಿತು. ಆದರೆ, ನಮ್ಮ ಆಧುನಿಕ ವಿಶ್ವಾಮಿತ್ರರು ಅಲ್ಪಾವಧಿಯಲ್ಲೇ ಇಕ್ಷ್ವಾಕು ಕುಲದವರನ್ನು ಪ್ರೌಢಶಾಲೆಯ ಮೆಟ್ಟಲು ಹತ್ತಿಸಿಯೇ ಬಿಟ್ಟರು ನೋಡು....'

"ಅದೂ ಅವರನ್ನು ಬೃಹಸ್ಪತಿ ಸಮಾನ ಜ್ಞಾನ-ವಿಜ್ಞಾನ ಸಂಪನ್ನರನ್ನಾಗಿಸಿ......'

'ಹ್ಞೂಂ'

'ಅಲ್ರಿ, ಮತ್ತೆನೋಡಿ.......'

'ಏನು?'

'ಅಧ್ಯಕ್ಷ ನಿಕ್ಸನ್ನರು ಮತ್ತೆ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುತ್ತಾರಂತೆ.... '

'ಇದ್ರಲ್ಲೇನು ವಿಶೇಷವೇ? ಅವ್ರು ವಿಯೆಟ್ನಾಮದಲ್ಲಿ ಮತ್ತೆ ಭೀಕರ ಧಾಳಿಗೆ ಆರಂಭ ಮಾಡಿದ್ದೇ ಇದಕ್ಕಾಗಿಯಲ್ಲ?'

'ಅವರ ಚುನಾವಣಾ ಪ್ರಚಾರದಲ್ಲಿ ಪ್ರತ್ಯಕ್ಷ ತೊಡಗಲೆಂದು ಭಾರತದಲ್ಲಿನ ರಾಯಭಾರಿ 'ಕೀಟಿಂಗ್' ರಾಜಿನಾಮೆ ಕೊಟ್ಟರಂತೆ....'

'ಕೊಡಲಿ ಬಿಡು, ಕೀಟಿಂಗ್ ಹೋದರೇನು, ಮತ್ತೊಬ್ಬ ಕೀಟಿಂಗ್ ಬರುತ್ತಾನೆ....'

'ಅಂದ್ರೆ, ಯಾರು ಬಂದರೂ ನಮಗೆ ಒಂದೇ ಅಂತೀರಾ?'

'ಅಲ್ವೆ, ನಮ್ಮ—ನಿಕ್ಸನ್ನರ ಸಂಬಂಧ

(ಒಂಭತ್ತನೇ ಪುಟ ನೋಡಿರಿ)

ಪುತ್ತೂರು ಸೆಕೆಂಡ್ ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Ex. Case No. 72/1972
O. S. 535/1967

ಯನ್. ರಾಮಚಂದ್ರ —ವಾದಿ—ಡಿಕ್ರಿದಾರ
ಮತ್ತು
ಯನ್. ಯಮ್. ಬಾಲಕೃಷ್ಣ ಕೂಡಾ
ಎದ್ರಿಯರು—ಪ್ರತಿವಾದಿರು

1ನೇ ಎದ್ರಿ ಯನ್. ಯಮ್. ಬಾಲಕೃಷ್ಣ, ನಿಡ್ಯಮಲೆ ಮುದ್ದಪ್ಪನವರ ಮಗ—ಸುಳ್ಯ ತಾಲೂಕು ಐವರ್ನಾಡು ಗ್ರಾಮ, ಇವರಿಗೆ

ಸದ್ರಿ ವಾದಿಯು ನಿಮ್ಮ ಬಾಬ್ತು ಸ್ಥಿರ ಆಸ್ತಿ ಏಲಂ ಬಗ್ಗೆ ಅಪೇಕ್ಷಿಸಿ ಇಸ್ತಿಹಾರು ದಾಖಲು ಮಾಡಿ ವಿಕ್ರಯದ ಇಸ್ತಿಹಾರಿನ ಷರತಗಳನ್ನು ನಿರ್ಣಯಿಸಲಿಕ್ಕೆ ತಾ. 27-7-72ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ತಾ. 27-7-1972ನೇ ದಿವಸ ಹಗಲು 11 ಘಂಟೆಗೆ ಸ್ವತಹ ವ ವಕೀಲರ ಮೂಲಕ ಸದ್ರಿ ಕೋರ್ಟಿನಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದೆಂತ ಕೋರ್ಟು ಹುಕುಂ ಮೂಲಕ ತಿಳಿಸೋಣಾಗಿಯದೆ.

(Sd) ಯನ್. ರಾಮಚಂದ್ರ ಭಟ್
ವಾದಿ ಪರ ಎಡ್ವಕೇಟ್

ಪುತ್ತೂರು, 6-7-1972

ನಿಮ್ಮ ಸಮಸ್ಯೆಗೆ ನಮ್ಮ ಉತ್ತರ

ನೀವು ಯಾವ ಪ್ರಮಾಣದ ಉದ್ದಿಮೆಯನ್ನೂ, ಕೈಗಾರಿಕೆಯನ್ನೂ, ವ್ಯವಸಾಯವನ್ನೂ ತೊಡಗಿರಲಿ; ಸ್ವಂತ ನೆಲೆಯಲ್ಲಿ ಯಾವ ತೆರನ ವ್ಯಾಪಾರ ವಹಿವಾಟನ್ನೂ ನಡೆಸುತ್ತಿರಲಿ; ಆರ್ಥಿಕವಾಗಿ ನೀವು ಎದುರಿಸುತ್ತಿರುವ ಯಾವ ತೊಡಕುಗಳಿಗೂ ನಿಮಗೆ ಸಮರ್ಪಕ ಉತ್ತರ ದೊರೆಯುವ ಒಂದೇ ಸ್ಥಳ: ಸಿಂಡಿಕೇಟ್ ಬ್ಯಾಂಕು

ದೇಶದ 9 ರಾಜ್ಯಗಳಲ್ಲೂ ದ್ವಿಪಾಂತರ ಪ್ರದೇಶಗಳನ್ನೊಳಗೊಂಡ 5 ಕೇಂದ್ರಾಡಳಿತ ಪ್ರದೇಶಗಳಲ್ಲೂ ಚಾಚಿರುವ 520 ಕ್ಕೂ ಮಿಕ್ಕಿದ ಶಾಖೆಗಳಲ್ಲಿರುವ ನಮ್ಮ ದಕ್ಷ, ಸ್ನೇಹಶೀಲ ಮೆನೇಜರ್ ಮತ್ತು ಸಿಬ್ಬಂದಿಗಳು ನಿಮ್ಮ ಉದ್ದಿಮೆಯ ಇಲ್ಲವೆ ಸ್ವಂತದ ಯಾವ ಆರ್ಥಿಕ ಸಮಸ್ಯೆಗೂ ತಕ್ಕ ಪರಿಹಾರವನ್ನು ಒದಗಿಸಿ ಕೊಡುವರು.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ:
ಮಣಿಪಾಲ

ಕೆ. ಕೆ. ಪೈ
ಕಸ್ಟೋಡಿಯನ್

ಉದ್ಯೋಗ—ದಂಧೆಗಳಲ್ಲಿ

ಪ್ರಗತಿಮಾರಕ—ಮುಷ್ಕರ—ಲಾಕೌಟ್

— ಶ್ರೀ ಎಂ. ಎಸ್. ಕೃಷ್ಣನ್,
ಮೈಸೂರು ವಿಧಾನಸಭಾ ಸದಸ್ಯರು.

ಭಾರತ ಹೊಸದಾಗಿ ಬೆಳೆಯುತ್ತಿರುವ ದೇಶ. ನಮ್ಮ ದೇಶ ಮುಂದರಿಯಬೇಕಾದಲ್ಲಿ ದೇಶದ ಮುಂದಿರುವ ನಿರುದ್ಯೋಗ, ಬಡತನ, ಹಿಂಸೆ, ಹಸಿವು ಹೋಗಬೇಕಾದರೆ ಕೈಗಾರಿಕಾ ರಂಗ ದೊಡ್ಡ ಪ್ರಮಾಣದಲ್ಲಿ ಬೆಳೆಯ ಬೇಕಾಗಿದೆ. ಇನ್ನೂ ಹೆಚ್ಚು ಕಾರ್ಖಾನೆಗಳು ಸ್ಥಾಪನೆಯಾದರೆ, ಇನ್ನೂ ಸಾವಿರಾರು ಜನ ನಿರುದ್ಯೋಗಿಗಳಿಗೆ ಕೆಲಸ ದೊರೆಯುತ್ತದೆ. ದೇಶದ ಆರ್ಥಿಕ ತಳಹದಿಯನ್ನು ಭದ್ರವಾದ ಅಡಿಪಾಯದ ಮೇಲೆ ಕಟ್ಟಬೇಕಾದರೆ ಕೈಗಾರಿಕಾಭಿವೃದ್ಧಿ ಅತಿಮುಖ್ಯ. ಈ ಹಿನ್ನೆಲೆಯಲ್ಲೀಗ ನಾವು ಮಾಲಿಕವರ್ಗದ ಹಾಗೂ ಕಾರ್ಮಿಕರ ಪಾತ್ರಗಳನ್ನು ವಿಮರ್ಶಿಸಬೇಕಾಗಿದೆ. ಲಾಕೌಟ್ ಮತ್ತು ಮುಷ್ಕರಗಳಿಂದ ದೇಶದ ಪ್ರಗತಿ ಕುಂಠಿತವಾಗುತ್ತದೆಯೇ ಎಂಬುದನ್ನು ಗಂಭೀರವಾಗಿ ಆಲೋಚಿಸಬೇಕಾಗುತ್ತದೆ.

ಮುಷ್ಕರ, ಲಾಕೌಟ್ ಎಂದರೇನು?

ಮುಷ್ಕರ ಮತ್ತು ಲಾಕೌಟ್ ಎಂದರೇನು ಎಂಬುದನ್ನು ತಿಳಿಯಬೇಕಾಗಿದೆ. ಮುಷ್ಕರ ಮತ್ತು ಲಾಕೌಟ್‌ಗಳನ್ನು ಏಕರೀತಿಯಾಗಿ ಕಾಣಲು ಸಾಧ್ಯವೆ, ಹಾಗೆ ಕಾಣುವುದು ನ್ಯಾಯವೇ ಎಂಬುದನ್ನು ವಿಮರ್ಶಿಸಬೇಕಾಗಿದೆ. ಕಾರ್ಮಿಕ ತಾನು ಕೆಲಸ ಮಾಡುವುದಿಲ್ಲವೆಂದು ನಿರಾಕರಿಸುವುದನ್ನು ಮುಷ್ಕರವೆನ್ನುತ್ತಾರೆ. ಮಾಲಿಕ ಕಾರ್ಖಾನೆಯನ್ನು ಮುಚ್ಚಿ ಕೆಲಸಗಾರರನ್ನು ಹೊರಗಟ್ಟಿದಲ್ಲಿ ಲಾಕೌಟ್ ಎಂದು ಕರೆಯುತ್ತಾರೆ. ಮುಷ್ಕರ ಮತ್ತು ಲಾಕೌಟ್‌ಗಳನ್ನು ಒಂದೇ ಸಮನಾಗಿ ಪರಿಗಣಿಸುವುದು ವಾಸ್ತವಾಂಶಗಳಿಗೆ ವಿರೋಧವಾಗುತ್ತದೆ. ತನ್ನ ನ್ಯಾಯವಾದ ಕೇಳಿಕೆಗಳನ್ನು ಪಡೆಯಲು ಕಾರ್ಮಿಕ ಮೊದಲು ಮಾತುಕತೆ ನಡೆಸಬೇಕಾಗುತ್ತಿರುತ್ತಾನೆ. ಮಾಲಿಕರು ಇದನ್ನು ಮನಗಾಣದಿದ್ದಲ್ಲಿ ಬೇರೆ ಯಾವ ಮಾರ್ಗವೂ ಇಲ್ಲದೆ ಕಾರ್ಮಿಕರು ತಮ್ಮ ಮುಷ್ಕರದ ಹಕ್ಕನ್ನು ಚಲಾಯಿಸುತ್ತಾರೆ. ಆದರೆ ಲಾಕೌಟ್ ಕಾರ್ಖಾನೆಯನ್ನು ಮುಚ್ಚಿ ಕಾರ್ಮಿಕರ ಕೇಳಿಕೆಗಳನ್ನಾಗಲೀ ಅಥವಾ ಹಕ್ಕುಗಳನ್ನಾಗಲೀ ಮೊಟಕು ಮಾಡುವ ಅಥವಾ ನಿರಾಕರಿಸುವ ಉದ್ದೇಶದಿಂದ ಕೂಡಿರುತ್ತದೆ. ಲಾಕೌಟಾಗಲೀ ಮುಷ್ಕರವಾಗಲೀ ಹೆಚ್ಚು ಕಷ್ಟ ಕಾರ್ಪಣ್ಯಗಳಿಗೆ ತುತ್ತಾಗಿರಬೇಕಾಗಿರುವುದು ಕಾರ್ಮಿಕನೇ ವಿನಹ ಮಾಲಿಕನಲ್ಲ. ಆದ್ದರಿಂದಲೇ ಲಾಕೌಟ್ ಮತ್ತು ಮುಷ್ಕರವನ್ನು ಏಕರೀತಿಯಲ್ಲಿ ಇವೆರಡೂ ಒಂದೇ ಎಂಬ ರೀತಿಯಲ್ಲಿ ಕಾಣುವುದು ತರವಲ್ಲ ಎಂಬುದು ನನ್ನ ಅಭಿಪ್ರಾಯ.

ಮುಷ್ಕರ ಮತ್ತು ಲಾಕೌಟ್‌ಗಳಿಂದ ಅತಿ ವೇಗವಾಗಿ ಮುನ್ನಡೆದಿರುವ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಯ ಮೇಲೆ ಆಗಿರುವ ಪರಿಣಾಮಗಳೇನು? ಮುಷ್ಕರಗಳಿಂದ ಆರ್ಥಿಕ ಬೆಳವಣಿಗೆಗೆ ತೀರಾ ಪೆಟ್ಟಾಗುತ್ತದೆ ಎಂಬ ಅಭಿಪ್ರಾಯ ಸರ್ವೇಸಾಧಾರಣವಾಗಿ ಇರುವ ನಂಬಿಕೆ. ಆದರೆ ಅತಿದೊಡ್ಡ ಬಂಡವಾಳ ಶಾಹಿ ರಾಷ್ಟ್ರಗಳಾದ ಇಂಗ್ಲೆಂಡ್, ಅಮೆರಿಕ ಜಪಾನ್, ಮತ್ತು ಪಶ್ಚಿಮ ಜರ್ಮನಿಗಳ ಚರಿತ್ರೆಗಳನ್ನು ಓದಿದಲ್ಲಿ, ಮುಷ್ಕರಗಳಿಂದಲೇ ಪ್ರಗತಿಗೆ ಕುಂಠಿತವಾಗಿದೆ ಎಂಬ ಖಚಿತವಾದ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ. ಉದಾಹರಣೆಗೆ ಜಪಾನ್ ದೇಶವನ್ನು ತೆಗದು ಕೊಳ್ಳೋಣ. 1955—1965ರ ಅವಧಿಯಲ್ಲಿ ಜಪಾನಿನ ಕಾರ್ಮಿಕ ವರ್ಗ ಅವರ ಪ್ರಮುಖ ಸಂಸ್ಥೆಯಾದ "ಸೋಹ್ಯೋ"ದ ನೇತೃತ್ವದಲ್ಲಿ ಕೂಲಿ ಹೆಚ್ಚಳ ಬೆಲೆ ಏರಿಕೆಗೆ ತಡೆಗಟ್ಟುವಿಕೆ ಮುಂತಾದುವುಗಳಿಗಾಗಿ ಭಾರಿ ಮುಷ್ಕರಗಳನ್ನು ನಡೆಸಬೇಕಾಗಿ ಬಂದಿತು. ಆದರೆ ಅದೇ ಅವಧಿಯಲ್ಲಿ ಸಂಬಳಗಳ ಹೆಚ್ಚಳ ಶೇಕಡ 112. 7ರಷ್ಟು ಹೆಚ್ಚಾಯಿತು. ಉತ್ಪಾದನೆ ಶೇಕಡ 129.5ರಷ್ಟು ಜಾಸ್ತಿಯಾಯಿತು. ಇನ್ನೊಂದು ಅಂಶವನ್ನು ನೋಡೋಣ ಉತ್ಪಾದನೆಯ ಹೆಚ್ಚಳ ಅಥವಾ ಕಡಿತ ಇವು ಪ್ರಗತಿ ಅಥವಾ ಹಿಂಜರಿತದ ಸಂಕೇತವಾಗುತ್ತವೆ.

1953ರ ಆಗಸ್ಟ್‌ನಿಂದ 1957ರ ಜುಲೈವರೆಗೆ, ಜಪಾನಿನಲ್ಲಿ ವಾರ್ಷಿಕ ಉದ್ಯೋಗದ ಹೆಚ್ಚಳ ಶೇಕಡ 8.9 ಆಗಿದ್ದರೆ, ವಾರ್ಷಿಕ ಉತ್ಪಾದನೆ ಶೇಕಡ 20.7ರಷ್ಟು ಹೆಚ್ಚಿತು. 1958 ಜೂನ್ ಹಾಗೂ 1962ರ ಜನವರಿಯ ಅವಧಿಯಲ್ಲಿ ವಾರ್ಷಿಕ ಉದ್ಯೋಗ ಶೇಕಡ 12.7ರಷ್ಟು ಹೆಚ್ಚಿತು. ಆದರೆ ವಾರ್ಷಿಕ ಉತ್ಪಾದನೆ ಅದೇ ಅವಧಿಯಲ್ಲಿ ಶೇಕಡ 23ಕ್ಕೆ ಹೆಚ್ಚಿತು. 1962ರ ಡಿಸೆಂಬರ್—1964ರ ಅಕ್ಟೋಬರ್ ಅವಧಿಯಲ್ಲಿ ವಾರ್ಷಿಕ ಉದ್ಯೋಗ ಶೇಕಡ 3.4ರಷ್ಟು ಮತ್ತು ಉತ್ಪಾದನೆ ಶೇಕಡ 19.4ರಷ್ಟು ಹೆಚ್ಚಾಯಿತು. ಈ ಅವಧಿಗಳಲ್ಲಿ ಜಪಾನಿನ ಕಾರ್ಮಿಕವರ್ಗ ಅನೇಕ ಮುಷ್ಕರಗಳನ್ನು ನಡೆಸಿದೆ. ಮಾಲಿಕವರ್ಗ ಕಾರ್ಖಾನೆಗಳನ್ನು ಲಾಕೌಟ್ ಮಾಡಿದೆ. ಆದರೂ ಸಹ ಜಪಾನ್ ದೇಶ ವೇಗದಿಂದ ಮುಂದುವರಿಯುತ್ತಿದೆ. ಮುಷ್ಕರಗಳಿಂದ ಜಪಾನಿನ ಪ್ರಗತಿ ತೀವ್ರ ಕುಂಠಿತವಾಗಿದೆ ಎಂಬ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ.

ಕಾರ್ಮಿಕ-ಮಾಲಿಕ ಬಾಂಧವ್ಯ

ನಮ್ಮ ದೇಶದ ಕೈಗಾರಿಕಾ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸೋಣ. ನಮ್ಮ ದೇಶ ಕೈಗಾರಿಕೆಯಲ್ಲಾಗಲೀ ಕೃಷಿಯಲ್ಲಾಗಲೀ ಇನ್ನೂ ಬಹಳ ಹಿಂದುಳಿದಿದೆ. ಪಾಶ್ಚಿಮಾತ್ಯ ಬಂಡವಾಳಶಾಹಿ ರಾಷ್ಟ್ರಗಳಾಗಲಿ ಸಮತಾವಾದಿ ರಾಷ್ಟ್ರಗಳಾಗಲೀ ನಮಗಿಂತ ಅತ್ಯಧಿಕವಾದ ಮುಂದುವರಿದಿವೆ. ಅನೇಕ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಈ ಸಮಸ್ಯೆಯನ್ನು ಬಗೆಹರಿಸಲು ಕೈಗಾರಿಕಾ ರಂಗದಲ್ಲಿ ಉತ್ಪಾದನೆ ಅಡ್ಡಿ ಆತಂಕಗಳಿಲ್ಲದೆ ಮುಂದುವರಿಯಬೇಕೆಂಬುದೇನೋ ನಿಜ. ಹೆಚ್ಚುಹೆಚ್ಚು ಕೈಗಾರಿಕೆಗಳು ಎಲ್ಲೆಡೆಗಳಲ್ಲಿಯೂ ಸ್ಥಾಪನೆಯಾಗಬೇಕೆಂಬುದೂ ನಿಜ. ಇವೆಲ್ಲವೂ ಕಾರ್ಯರೂಪಕ್ಕೆ ಬರಬೇಕಾದಲ್ಲಿ ಕೈಗಾರಿಕಾ ಸಂಬಂಧಗಳು, ಅಂದರೆ ಕಾರ್ಮಿಕ-ಮಾಲಿಕರ ಮಧ್ಯೆ ಇರುವ ಸಂಬಂಧಗಳು ಸಮಾಧಾನಕರವಾಗಿರಬೇಕು. ಆದರೆ ಇಂದಿನ ಕಾನೂನುಗಳು ಮತ್ತು ಸರ್ಕಾರದ ಯಂತ್ರ ಇವುಗಳಿಂದ ಸಮಾಧಾನಕರವಾದ ಅಥವಾ ಪ್ರಗತಿದಾಯಕವಾದ ಕೈಗಾರಿಕಾ ಸಂಬಂಧಗಳಿವೆ ಎಂದು ಹೇಳಲು ಕಷ್ಟ. ಕೈಗಾರಿಕಾ ಸಂಬಂಧಗಳು ಹಿತಕರವಾಗಿಲ್ಲದಿದ್ದರೂ ಸಹ ದೇಶದ ಬಂಡವಾಳಗಾರರು ಕಳೆದ 25 ವರ್ಷಗಳಲ್ಲಿ ಹಿರಿ ಬಂಡವಾಳಗಾರರಾಗಿ ಗುತ್ತೇದಾರಿ ಬಂಡವಾಳಗಾರರಾಗಿ ಮಾರ್ಪಾಡಾಗಿದ್ದಾರೆ. ಮಹಲಾನೋಬಿಸ್ ಆಯೋಗದ ವರದಿಯಂತೆ 75 ಮನೆತನಗಳು ತನ್ನ ಆರ್ಥಿಕ, ಸಾಮಾಜಿಕ, ರಾಜಕೀಯ ಹಿಡಿತಗಳನ್ನು ನಮ್ಮ ದೇಶದಲ್ಲಿ ಇನ್ನೂ ಹೆಚ್ಚಿಸಿಕೊಂಡಿದೆ.

ಒಂದೆಡೆ ಗುತ್ತೇದಾರಿ ಬಂಡವಾಳಗಾರರು ತಮ್ಮ ಗುತ್ತೇದಾರಿಯನ್ನು ಬೆಳೆಸುತಿದ್ದಾರೆ. ಕಾರ್ಮಿಕರ ದುಡಿತದ ಫಲವಾಗಿ ಉತ್ಪಾದನೆ ಮತ್ತು ಲಾಭಗಳು ಜಾಸ್ತಿಯಾಗಿವೆ. ಇನ್ನೊಂದೆಡೆ ಬೆಲೆಗಳೂ ಸಹ ಗಗನಕ್ಕೇರುತ್ತಿವೆ. ಆದ್ದರಿಂದಲೇ ದೇಶದ ಕಾರ್ಮಿಕವರ್ಗ ತನ್ನ ಜೀವನ ಮಟ್ಟವನ್ನು ಉಳಿಸಿಕೊಳ್ಳುವುದಕ್ಕಾಗಿ ಅನೇಕ ಹೋರಾಟಗಳನ್ನೂ ಮುಷ್ಕರಗಳನ್ನೂ ನಡೆಸಬೇಕಾಯಿತು.

ಪ್ರಗತಿಪರ ಧೋರಣೆಯ ಅಗತ್ಯ

ಮುಷ್ಕರಗಳು ಮತ್ತು ಲಾಕೌಟುಗಳಿಗೆ ಕಾರಣಗಳಾದರೂ ಯಾವುದು? ಸಕಾರಣಗಳಿವೆಯೇ ಅಥವಾ ವಿನಾಕಾರಣ ಮುಷ್ಕರಗಳು ನಡೆಯುತ್ತದೆಯೇ? "ಕಾರ್ಮಿಕರು ಎಂದೂ ಅಸಂತೃಪ್ತರು. ಅವರಿಗೆ ಎಷ್ಟು ಕೊಟ್ಟರೂ ಸಾಲದು, ಅವರು ಬೇಕೆಂತಲೇ ಮುಷ್ಕರಗಳನ್ನು ನಡೆಸುತ್ತಾರೆ" ಎಂಬ ಅಭಿಪ್ರಾಯ ಆಳುವ ವರ್ಗದಲ್ಲಿದೆ. ಈ ಅಭಿಪ್ರಾಯ ವಾಸ್ತವಾಂಶಕ್ಕೂ, ಚರಿತ್ರೆಗೂ ತೀರಾ ವ್ಯತಿರಿಕ್ತವಾಗಿದೆ. ಕೈಗಾರಿಕಾ ಯುಗದ ಅತಿ ಮುಖ್ಯ, ಅವಿಭಾಜ್ಯ ಭಾಗವೆಂದು ಟ್ರೇಡ್ ಯೂನಿಯನ್ ಚಳುವಳಿಯನ್ನೂ, ಕಾರ್ಮಿಕ ವರ್ಗವನ್ನೂ ಪರಿಗಣಿಸದಿರುವುದೇ ಇಂದಿನ ಪರಿಸ್ಥಿತಿಗೆ ಮುಖ್ಯ ಕಾರಣವಾಗಿದೆ. ಕೈಗಾರಿಕಾ ಯೋಜನೆಯಲ್ಲಾಗಲೀ ಆರ್ಥಿಕ ಯೋಜನೆಯಲ್ಲಾಗಲೀ ಪ್ರಗತಿಪರವಾದ ಕಾರ್ಮಿಕ ಧೋರಣೆ ಎಂಬುದನ್ನೇ ಮರೆಯಲಾಗಿದೆ.

ಶಾಸನಗಳ ಬದಲಾವಣೆ ಅಗತ್ಯ.

ನಮ್ಮ ಕೈಗಾರಿಕಾ ಸಂಬಂಧದ ಕಟ್ಟಡ ಬ್ರಿಟಿಷರ ಕಾಲದಿಂದಿರುವ ಕೈಗಾರಿಕಾ ವಿವಾದ ಶಾಸನ ಮತ್ತು ಇಂಡಿಯನ್ ಟ್ರೇಡ್ ಯೂನಿಯನ್ ಶಾಸನಗಳ ಮೇಲೆ ಬಹು ಅಂಶ ಹೊಂದಿಕೊಂಡಿದೆ. ಬದಲಾವಣೆಗಳಾಗಿದ್ದರೂ ಸಹ ಅತ್ಯಲ್ಪವೇ. ಹೀಗಿರುವಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆ ಪ್ರಶ್ನೆ ಹೇಗೆತಾನೇ ಬಗೆಹರಿದೀತು. ಒಂದು ಕೈಗಾರಿಕೆಯಲ್ಲಿ ಒಂದೇ ಸಂಘವಿದ್ದರೆ ಒಳಿತೆಂದು ರಾಷ್ಟ್ರಾಧ್ಯಕ್ಷರಿಂದ ಎಲ್ಲರೂ ಹೇಳುತ್ತಿದ್ದಾರೆ. ಈ ತತ್ವವನ್ನು ಒಪ್ಪಿಕೊಳ್ಳತಕ್ಕಂತಹುದೇ. ಆದರೆ 25 ವರ್ಷಗಳಿಂದ ಸ್ವಾತಂತ್ರ್ಯ ಸುಖವನ್ನು ಸವಿಯುತ್ತಿದ್ದರೂ ಸಹ ಬ್ರಿಟಿಷ್ ಕಾಲದ ಕಾನೂನನ್ನು ಬದಲಾಯಿಸಲಾಗಲಿಲ್ಲ ಎಂದು ಹೇಳಿದರೆ ತಪ್ಪಾದೀತೆ? ಇಂಡಿಯನ್ ಟ್ರೇಡ್ ಯೂನಿಯನ್ ಶಾಸನದಲ್ಲಿ ಮೂಲಭೂತ ತಿದ್ದುಪಡಿಗಳನ್ನು ತರದಿದ್ದಲ್ಲಿ ಒಂದು ಕೈಗಾರಿಕೆಯಲ್ಲಿ ಒಂದೇ ಸಂಘವಿರಬೇಕೆಂಬ ತತ್ವವನ್ನು ಕಾನೂನಿನಲ್ಲಿ ಅಳವಡಿಸಿಕೊಳ್ಳದಿದ್ದಲ್ಲಿ ಗುಂಪುಗಾರಿಕೆಯನ್ನು, ಅನೇಕ ಕಾರ್ಮಿಕ ಸಂಘಗಳನ್ನು ಉತ್ಪತ್ತಿ ಮಾಡುವ ಪ್ರವೃತ್ತಿಯನ್ನು ಹೇಗೆ ತಡೆಯಲು ಸಾಧ್ಯ? ಕೈಗಾರಿಕಾ ಶಾಂತಿಯನ್ನು ಕಾಪಾಡಲು ತಾನೆ ಹೇಗೆ ಸಾಧ್ಯ?

ಕೈಗಾರಿಕೆ ಸಂಬಂಧಗಳು ಸುಗಮವಾಗಬೇಕಾದಲ್ಲಿ, ಮೂರನೆಯವರ ಕೈವಾಡವಿರಕೂಡದೆಂದು ಹೇಳಲಾಗುತ್ತಿದೆ, ಅಂದರೆ ಎಲ್ಲ ವಿವಾದಗಳನ್ನೂ ಕಾರ್ಮಿಕರು

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಪುತ್ತಿಗೆ ಶ್ರೀ ಸೋಮನಾಥೇಶ್ವರ ದೇವಾಲಯ

ಲೇಖಕರು: ಡಾ|| ಪಿ. ಗುರುರಾಜ ಭಟ್ಟ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತಿಗೆಯೊಂದು ಮಧ್ಯಕಾಲೀನ ರಾಜಕೀಯ ಕೇಂದ್ರ. ಇಲ್ಲಿ ಆಳಿಕೊಂಡಿದ್ದ ಅರಸೊತ್ತಿಗೆಯ ಹೆಸರು ಚವುಟರಸರು. ಪುತ್ತಿಗೆಯು ಈ ಅರಸರಿಂದಾಗಿ "ಚೌಟ್ರಪುತ್ತಿಗೆ" ಎಂಬ ಹೆಸರನ್ನು ಪಡೆಯಿತು. ಈ ಸ್ಥಳವು ಇತಿಹಾಸ ಪ್ರಸಿದ್ಧ ಮೂಡಬಿದರೆಯಿಂದ ಮೂರು ಮೈಲು ಪಶ್ಚಿಮಕ್ಕಿದೆ. ಇಲ್ಲಿದ್ದ ಚವುಟರಮನೆಯು ಈಗ ಸಂಪೂರ್ಣವಾಗಿ ನಾಶವಾಗಿ ಹೋಗಿದೆ. ಈ ಅರಸೊತ್ತಿಗೆಯ ಉತ್ತರಾಧಿಕಾರಿಗಳು ಮೂಡಬಿದರೆಯಲ್ಲಿದ್ದಾರೆ. ಕ್ರಿ. ಶ. 17ನೇ ಶತಮಾನದ ಅವರ ಅರಮನೆಯ ಅವಶೇಷಗಳು ಮೂಡಬಿದರೆಯಲ್ಲಿ ಇಂದಿಗೂ ಇವೆ. ಚವುಟರಸರು ಸು. ಕ್ರಿ ಶ 14ನೇ ಶತಮಾನದಿಂದ ಹತ್ತೊಂಭತ್ತನೆಯ ಶತಮಾನದ ವರೆಗೆ ಅಧಿಕಾರದಲ್ಲಿದ್ದರು.

ಪುತ್ತಿಗೆಯಲ್ಲಿ ಈಗ ಉಳಿದಿರುವ ಮುಖ್ಯವಾದ ಚಾರಿತ್ರಿಕ ಅವಶೇಷವೆಂದರೆ ಶ್ರೀ ಸೋಮನಾಥೇಶ್ವರ ದೇವಾಲಯ. ಇದರ ಹಿನ್ನೆಲೆ ಮತ್ತು ಭವ್ಯತೆ ಬಹಳ ದೊಡ್ಡದು. ಒಂದು ದೃಷ್ಟಿಯಿಂದ ವಿವೇಚಿಸಿದಾಗ ಈ ದೇವಾಲಯವು ದಕ್ಷಿಣ ಕನ್ನಡದ ಹಿರಿಯ ದೇವಾಲಯಗಳಲ್ಲಿ ಒಂದೆನ್ನಬಹುದು. ಈ ದೇವಾಲಯದ ಸ್ಥಾಪನೆಯ ಬಗ್ಗೆ ದಂತ ಕತೆಗಳೇ ಬಳಕೆಯಲ್ಲಿವೆ ವಿನಾ ದಾಖಲೆಗಳು ಕಂಡು ಬರುವುದಿಲ್ಲ. ಇಲ್ಲಿರುವ ಬಿಂಬಗಳು ಹಾಗೂ ವಾಸ್ತು ಲಕ್ಷಣಗಳ ನ್ನಾಧರಿಸಿ ಇದು ಸು. ಕ್ರಿ. ಶ. 11ನೇ ಶತಮಾನದಲ್ಲಿ ಸ್ಥಾಪಿತವಾಯಿತೆನ್ನಬಹುದು.

ದೇಗುಲದ ರಚನೆ

ಸುಂದರವಾದ ಪ್ರಕೃತಿಯ ನೆಲೆಯಲ್ಲಿ ಈ ದೇಗುಲವಿದೆ. ಹೊರಗಣ ಪ್ರಾಕಾರವನ್ನು ಸಹಿತ ಎರಡು ಎಕ್ರೆ ವಿಸ್ತೀರ್ಣದಲ್ಲಿ ಈ ದೇವ ಮಂದಿರವಿದೆ. ವಿಶಾಲವಾದ ಹೊರಾಂಗಣವು ಸಂದರ್ಶಕರ ಮನಸ್ಸನ್ನಾಕರ್ಷಿಸುವ ರೀತಿಯಲ್ಲಿದೆ. ಸುಮಾರು ಎರಡು ಆಳು ಎತ್ತರಕ್ಕೆ ಮುರಕಲ್ಲಿನಿಂದ ನಿರ್ಮಿತವಾದ ಪ್ರಾಕಾರವಿದೆ. ಈಗ ಇದು ಶಿಥಿಲಗೊಂಡಿದೆ. ಒಳಗಣ ಅಂಗಣವು ಅಗಲಕಿರಿದಾಗಿದ್ದು ಸುತ್ತಲೂ ಪೌಳಿಯಿಂದ ಕೂಡಿದೆ. ಹಿಂದಕ್ಕೆ ಈ ಪೌಳಿಯು ಅಗ್ನಿಬಾಧೆಗೆ ಒಳಗಾಗಿತ್ತೆಂದು ತಿಳಿಯಲಾಗಿದೆ.

ಚತುರಸ್ರವಾದ ಗರ್ಭಗೃಹ ಅದರ ಸುತ್ತಲೂ ಕತ್ತಲೆ ಪ್ರದಕ್ಷಿಣ ಪಥ ಅದನ್ನಾವರಿಸಿ ಮರದ ಝಲ್ಲರಿ. ಗರ್ಭಗೃಹದೆದುರು ತೀರ್ಥ ಮಂಟಪ. ಉತ್ತರ ಪಾರ್ಶ್ವದಲ್ಲಿ ಮಹಿಷ ಮರ್ದಿನಿಯ ಗುಡಿ. ದಕ್ಷಿಣ ಪಾರ್ಶ್ವದಲ್ಲಿ ಗಣೇಶನ ಗುಡಿ. ಈ ಎರಡೂ ಗುಡಿಗಳು ಪೌಳಿಯ ಭಾಗಗಳಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ ಈ ದೇವಾಲಯದ ರಚನೆ ಜಿಲ್ಲೆಯ ಇನ್ನಿತರ ದೇವಗೃಹಗಳಂತೆಯೇ ಎನ್ನಬಹುದು. ಇದರ ಜೀರ್ಣೋದ್ಧಾರ ಕೆಲಸ ನಡೆಯುತ್ತಾ ಇದೆ.

ದೇವಾಲಯದಲ್ಲಿರುವ ಬಿಂಬಗಳ ವೈಶಿಷ್ಟ್ಯ

ಶ್ರೀ ಸೋಮನಾಥೇಶ್ವರ ದೇವಾಲಯದಲ್ಲಿರುವ ನಾಲ್ಕು ಬಿಂಬಗಳ ವೈಶಿಷ್ಟ್ಯವನ್ನು ತಿಳಿಯಪಡಿಸುವುದು ಆಗತ್ಯ—ಲಕ್ಷ್ಮೀನರಸಿಂಹ, ಶಿವಶಕ್ತಿ, ಸದಾಶಿವ ಮತ್ತು ಮಹಿಷಾಸುರಮರ್ದಿನಿ.

ಲಕ್ಷ್ಮೀನರಸಿಂಹ ಮತ್ತು ಶಿವಶಕ್ತಿ ಬಿಂಬಗಳು ಪಂಚಲೋಹದ್ದಾಗಿವೆ. ಗಾತ್ರದಲ್ಲಿ ಚಿಕ್ಕದಾದರೂ ಪ್ರತಿಮಾ ಲಕ್ಷಣಗಳನ್ನವಲಂಬಿಸಿ ಹೇಳುವುದಾದರೆ ಇವು ಕ್ರಿ.ಶ. 11ನೇ ಶತಕಕ್ಕೆ ಸೇರಿದವೆನ್ನಬಹುದು. ಶಿವಶಕ್ತಿಯ ಬಿಂಬವು ಪದ್ಮಾಸನದಲ್ಲಿದ್ದು ಅದರ ಆಯುಧಗಳ ಧಾರಣಕ್ರಮ ಪ್ರಾಚೀನವಾಗಿದೆ. ದೇವಾಲಯದ ಬಲಿದೇವತಾಬಿಂಬ 9"ಎತ್ತರದ ಪಂಚಲೋಹದ ವಿಗ್ರಹ. ಇದು ಜಟಾ ಮುಕುಟ ಧಾರಿಯಾಗಿದ್ದು ಪಲ್ಲವ-ಚೋಳ ಶೈಲಿಯಲ್ಲಿರುವ ಸುಂದರ ಮೂರ್ತಿ.

ಉಪಸ್ಥಾನ ದೇವತೆ ಮಹಿಷಾಸುರ ಮರ್ದಿನಿ. ಇದು 20" ಎತ್ತರದ ಶಿಲಾವಿಗ್ರಹ. ಶೈಲಿಯಲ್ಲಿ ಹೊಯ್ಸಳ-ವಿಜಯನಗರ ಶೈಲಿಯ ರೂಪಾಂತರವನ್ನು ನಿರ್ದೇಶಿಸುತ್ತದೆ. ಈ ಮೂರ್ತಿಯಲ್ಲಿ ಒಂದು ವಿಶೇಷತೆ ಇದೆ. ಇದು ಷಟ್ಬಾಹು. 'ಓಂ'ಕಾರ ಸ್ವರೂಪಿಯಾದ ಮಹಿಷಾಸುರ ಮರ್ದಿನಿ. ಮುಖವನ್ನು ಬಲದಿಕ್ಕಿಗೆ ತಿರುಗಿಸಿ, ಮಹಿಷನ ಕತ್ತಿನಿಂದ ಹೊರಬಂದ ಅಸುರನನ್ನು ನಾಶಪಡಿಸುವ ದೃಶ್ಯ ಚಮತ್ಕಾರದ್ದಾಗಿದೆ. ತ್ರಿಶೂಲ, ಗುರಾಣಿ, ಡಮರು, ಖಡ್ಗ ಮತ್ತು ಘಂಟಾ ಆಯುಧಗಳಾಗಿವೆ. ಷಟ್ಬಾಹು ಮಹಿಷಮರ್ದಿನಿ ಬಿಂಬಗಳು ಸಂಖ್ಯೆಯಲ್ಲಿ ಅಧಿಕವಿರಲಾರವು. ಪಂಚಲೋಹದ ಗಣೇಶ ಬಿಂಬವು ಶಂಖ, ಚಕ್ರ, ಮೋದಕ ಮತ್ತು ದಂತಧಾರಿಯಾಗಿದೆ. ಇದೂ ಕ್ರಿ. ಶ. 12ನೇ ಶತಕಕ್ಕಿಂತ ಅರ್ವಾಚೀನವಾಗಲಾರದು. ಶಿವಲಿಂಗವು ರುದ್ರಾಕ್ಷ ಶಿಲೆಯಿಂದ ನಿರ್ಮಾಣವಾಗಿದೆ. ಅಪೂರ್ಣವಾದ ನಂದಿಯ ವಿಗ್ರಹವು ದೇವಾಲಯದ ಸ್ಥಾಪನೆಯ ಕಾಲದ್ದೆನ್ನಬಹುದು.

ಈ ದೇಗುಲದಲ್ಲಿ 'ಬ್ರಹ್ಮಮಂಡಲ'ವೆಂಬ ಹೆಸರಿನ ಬೃಹದಾಕಾರದ ಮರದ ರಥದ ಅವಶೇಷವಿದೆ. ಇದರಲ್ಲಿ ಹಲವಾರು ರೀತಿಯ ಕೆತ್ತನೆ ಕೆಲಸವಿದ್ದು ಅಡಿಭಾಗದಲ್ಲಿ ಶಾಸನ ನಿರ್ದೇಶವಿದೆ. ಇದನ್ನು ಈಗಿರುವ ರೂಪದಲ್ಲಿ ರಕ್ಷಿಸಿ ವಸ್ತುಪ್ರದರ್ಶನಾಲಯದಲ್ಲಿರಿಸಿದರೂ ಜನಾಕರ್ಷಣೀಯವಾಗಬಹುದು.

ಚೌಟರಸರು ಜೈನ ಮತಾವಲಂಬಿಗಳಾಗಿದ್ದರೂ ಅವರ ರಾಜ್ಯಾಧಿದೇವತೆ ಶ್ರೀ ಸೋಮನಾಥೇಶ್ವರ.

●●

ಕುಂದಾಪುರ II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 4506/1971

ಅರ್ಜಿದಾರ: —ವಿಶ್ವೇಶ್ವರ ಅಡಿಗ

ಎದ್ರಿರು: —ಮಂಜುನಾಥ ಶೇಟ್ ಕೂಡಾ

ಕುಂದಾಪುರ ತಾಲೂಕು ಉಪ್ಪುಂದ ಗ್ರಾಮದ, ಸುಬ್ರಾಯ ಶೇಟರ ಮಕ್ಕಳು, ಮಂಜುನಾಥ ಶೇಟ್ 1, ಶ್ರೀನಿವಾಸ ಶೇಟ್ 2, ಅಣ್ಣಯ್ಯ ಶೇಟ್ 3, ಮತ್ತು ಗೋಪಾಲ ಶೇಟ್ 4 ಕೂಡಾ 4 ಜನರಿಗೆ ತಿಳಿಯಪಡಿಸಿದ್ದು.

ಅರ್ಜಿದಾರನಿಗೆ ಎದ್ರಿರಿಂದ ಕಳೆದ ತಾರೀಕು 31–3–1970ಕ್ಕೆ ಬಹಾ ಗೇಣಿ ಬರಮಾಡಿ ಕೊಳ್ಳುವರೆ ಅರ್ಜಿದಾರನು ಮೇಲಿನ ಅರ್ಜಿ ದಾಖ್ಲು ಮಾಡಿರುತ್ತಾನೆ. ಆ ಕುರಿತು ನಿಮಗೆ ಆಕ್ಷೇಪಣೆಗಳಿದ್ದರೆ ಮೇಲಿನ ಕೋರ್ಟು ಮುಂದೆ ತಾ. 4–8–72ರಂದು ಹಗಲು ಗಂಟೆ 11ಕ್ಕೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕೋರ್ಟು ಹುಕುಂ ಪ್ರಕಾರ

(Sd-) G. V. Aithal

Advocate for Applicant

ಕುಂದಾಪುರ, 5–7–72

Phone: 526 **NAVAYUGA** P. B. No. 22

ILLUSTRATED KANNADA WEEKLY,

UDIPI-1, S. K.

This August, we celebrate 25 years of our independent existence—the Silver Jubilee—and the special, we propose to bring forth, shall take note of:

1) The Silver Jubilee of Independence.

2) The achievements of Independent India in the various spheres of life, and coupled with these, we add our sweet memories of the Golden Jubilee Celebrations of your **Navayuga**, during May, 1972.

All these are bound to make the Independence Issue a useful brochure encompassing all shades of views, opinions and ideals of our people.

As such, this is going to be a very good medium to publicise your ware and we assure, you that it is going to reach the farthest nook and corners of the State.

Please do contribute your mite in encouraging this venture of ours, and you find the Advertisemet Tariff below. More we add to this may, we feel, be superfluous to our generous contributors and advertiser-benefactors.

Kindly send in your advertisement material on or before August 5th 1972.

ADVERTISEMENT RATES

Full Page	... Rs. 200/-	Back Cover Page	...Rs. 500/-
Half Page	... Rs. 125/-	Inside 1st Cover Page	Rs. 400/-
Quarter Page	... Rs. 65/-	Inside 2nd Cover Page	Rs. 300/-

MECHANICAL DATA

Paper Size ... 15" × 10" Size of type page...13" × 8"

(37 . 5 Cm. × 25 Cm.) (32 . 5 Cm. × 20 Cm.)

Date of Publication: 15—8—1972

ಕೃಷಿಕರಂಗ—

ಬತ್ತದ ಬೆಳೆಗೆ ತಗಲುವ ಕೀಟಗಳ ನಿಯಂತ್ರಣ

ಬತ್ತದ ಬೆಳೆಯನ್ನು ಬಾಧಿಸುವ ಪ್ರಮುಖ ಕೀಟವೊಂದಾದ ಕಾಂಡ ಕೊರೆಯುವ ಹುಳದ ನಿವಾರಣೆಗೆ ಸುಧಾರಿತ ತಂತ್ರಗಳನ್ನು ಅಭಿವೃದ್ಧಿಗೊಳಿಸಲು ಕಟಕ್‌ನಲ್ಲಿರುವ ಕೇಂದ್ರ ಬತ್ತದ ಸಂಶೋಧನ ಸಂಸ್ಥೆ ಒಂದು ಸಂಶೋಧನ ಪ್ರಾಜೆಕ್ಟನ್ನು ಪ್ರಾರಂಭಿಸಿದೆ.

ಇನ್‌ಸ್ಟಿಟ್ಯೂಟಿನ ಪ್ರಮುಖ ಕೀಟ ಶಾಸ್ತ್ರಜ್ಞರಾದ ಶ್ರೀ ಪಿ. ಇಸ್ರೇಲ್ ಅವರ ನೇತೃತ್ವದಲ್ಲಿ ವಿಜ್ಞಾನಿಗಳ ತಂಡವೊಂದು ಕೈಗೊಳ್ಳಲಿರುವ ಈ ಮೂರು ವರ್ಷಗಳ ಪ್ರಾಜೆಕ್ಟಿಗೆ ಅಮೆರಿಕ ಸರಕಾರವು 332,000 ರೂ.ಗಳ ಒಂದು ಗ್ರಾಂಟನ್ನು ನೀಡಿದೆ ಎಂದು ರಾಯಭಾರಿ ಕೆನೆತ್ ಬಿ. ಕೀಟಿಂಗ್ ಅವರು ಇಂದು ಪ್ರಕಟಿಸಿದ್ದಾರೆ.

"ಈ ವಿಜ್ಞಾನಿಗಳು ಸಂಗ್ರಹಿಸಲಿರುವ ಮಾಹಿತಿಯು ಬತ್ತದ ಕೀಟಗಳ ನಿವಾರಣೆ ಉತ್ತಮ ವಿಧಾನವನ್ನು ಕಂಡುಹಿಡಿಯಲು ನೆರವಾಗುವುದೆಂದು ನಿರೀಕ್ಷಿಸಲಾಗಿದೆ" ಎಂದು ರಾಯಭಾರಿ ಹೇಳಿದರು. "ಬೆಳೆಯ ನಷ್ಟವನ್ನು ಕಡಿಮೆ ಮಾಡಲು ಮತ್ತು ಭಾರತದಲ್ಲಷ್ಟೇ ಅಲ್ಲದೆ ಇತರ ರಾಷ್ಟ್ರಗಳಲ್ಲೂ ಅಕ್ಕಿ ಉತ್ಪಾದನೆಯನ್ನು ಹೆಚ್ಚಿಸಲು ಈ ಪ್ರಾಜೆಕ್ಟ್ ಹಾದಿ ಮಾಡಬಲ್ಲುದು" ಎಂದರು ಅವರು.

ಅಮೆರಿಕದ ಕೃಷಿ ಇಲಾಖೆಯ ಕೃಷಿ ಸಂಶೋಧನ ಸಂಸ್ಥೆಯ ಡಾ| ಕಾರ್ಲೋಸ್ ಇಗ್ನೋಫೋ ಅವರು ಈ ಸಂಶೋಧನೆಯಲ್ಲಿ ಸಹಕರಿಸಿರುವರು.

ಕಾಂಡ ಕೊರೆಯುವ ಹುಳವು ಬತ್ತದ ಗಿಡದ ಕಾಂಡವನ್ನು ಪ್ರವೇಶಿಸಿ ಅದರ ಜೀವರಸವನ್ನು ಹೀರಿ ಜೀವಿಸುವುದು. ಹೀಗೆ ಹಾನಿಗೊಳಗಾದ ಕಾಂಡವು ಬತ್ತದ ಇಳುವರಿ ನೀಡುವುದಿಲ್ಲ. ಈ ಹುಳಗಳ ಕಾಟ ವಿಸ್ತೃತವಾಗಿ ಹರಡಿದಾಗ ಉಂಟಾಗುವ ಹಾನಿ ಅಪಾರ.

ಕಾಂಡ ಕೊರೆಯುವ ಹುಳುಗಳನ್ನು ನಿಯಂತ್ರಿಸುವ ಒಂದು ವಿಧಾನ ಕೀಟನಾಶಕಗಳ ಬಳಕೆ. ಕ್ರಿಮಿವಿಷಗಳ ಇಂಥ ಬಳಕೆ ದುಬಾರಿಯಾದುದು. ಅಷ್ಟೇ ಅಲ್ಲದೆ ಆ

ಕವಲುದಾರಿ—ಕೆಂಪುದೀಪ

ನೂರಕ್ಕೆ ನೂರು ಪಾಸಾದರೆ ತಪ್ಪೆ?

ದೇವರು ಎಂದರೆ ಭಯಭಕ್ತಿಯಿದ್ದ ಕಾಲವೊಂದಿತ್ತು. ಗುರು–ಹಿರಿಯರೆಂದರೂ ಅದೇ ಭಾವವಿದ್ದ ಸಮಯವೊಂದಿತ್ತು.

ಆದರೆ, ವಿಜ್ಞಾನವು ಬೆಳೆದಂತೆ 'ವಿಜ್ಞಾನಿ'ಗಳಿಗೆ ಇತರರ ವರ್ತನೆ—ಹಬ್ಬಹರಿದಿನಗಳೆಲ್ಲವೂ ಅಂಧವಿಶ್ವಾಸ, ಗೊಡ್ಡು ಸಂಪ್ರದಾಯವೆಂಬ ಜ್ಞಾನೋದಯವಾಯಿತು.

ಕಾಲಕ್ರಮೇಣ ಹಿರಿಯರನ್ನು ಗೌರವಿಸುವುದೂ ತಿಳಿಯುವುದೂ ಅಂಧ ವಿಶ್ವಾಸ ಮತ್ತು ಗೊಡ್ಡು ಸಂಪ್ರದಾಯವೆನಿಸತೊಡಗಿತು.

ಪರೀಕ್ಷೆಯೆಂದರೆ ಅವ್ಯಕ್ತ ಭಯ ಮೂಡುತ್ತಿದ್ದ ಸಮಯವೊಂದಿತ್ತು. ಪ್ರಾಥಮಿಕ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ ನಿದ್ರಾಹಾರ ತ್ಯಜಿಸಿ ಎಳ್ಳೆಣ್ಣೆಯ ಮಂದ ಬೆಳಕಿನಲ್ಲಿ ಓದುತ್ತಿದ್ದನೆಂದರೆ, ಇಂದು ವಿದ್ಯಾರ್ಥಿಗಳೆಲ್ಲರೂ ಗೊಳ್ಳನೆ ನಕ್ಕಾರು.

ಹಳೆಯ ಗಣಿತ ಪುಸ್ತಕಗಳಲ್ಲಿ ಕಂಡು ಬರುವ ಎರಡೂವರೆ ರೂಪಾಯಿಯ ವಸ್ತುವಿಯಕ್ಕಿ, ಆರು ರೂಪಾಯಿಯ ಧನ ಹದಿನೈದು ರೂಪಾಯಿಗಳ ಕೋಣಗಳ ಜೋಡು ....ಇ ಇ. ಗಳು ಗೊಂಬೆಯಂಗಡಿಯಲ್ಲಿ ದೊರೆಯುತ್ತಿದ್ದುವೇ ಎಂದು ಕೇಳುವಷ್ಟು ಮುಂದಾಗದಿದ್ದರೆ, ದೊಡ್ಡ ಪುಣ್ಯ.

ಅವರ ಮಟ್ಟಿಗೆ ಇದೆಲ್ಲ ಸುಳ್ಳಿನ ಕಂತೆ. ಅಸಂಬದ್ಧ ಪ್ರಲಾಪ—ಕಾಡುಹರಟೆ.

ಇಂದು ಕಾಲ ಬದಲಾಗಿದೆ.

ದೇವರೆಂಬುದು ಜನತೆಯನ್ನು ವಂಚಿಸಲು, ಬುದ್ಧಿಜೀವಿಗಳ ಬುದ್ಧಿ ಕೆಡಿಸಲು ಕಲ್ಪಿಸುವ ವಿಭ್ರಮೆ.

ತಾಯ್ತಂದೆಗಳೆಂದರೆ, ತಮ್ಮ ಸ್ವಾರ್ಥಕ್ಕಾಗಿ, ಸುಖಕ್ಕಾಗಿ ಒಂದಾದ ಗಂಡು—ಹೆಣ್ಣುಗಳು.

ಪರೀಕ್ಷೆಯೆಂದರೆ ಪಾಸು—ನಾಪಾಸು ಮಾಡುವ ಒಂದು ಕಪಟ ನಾಟಕ—ನೌಕರಿ ಕೊಡಲು, ಕಾಲೇಜುಗಳಲ್ಲಿ ಸೀಟು ಅನುಗ್ರಹಿಸಲು ಬಯಸುವ ಇಂಟರ್‌ವ್ಯೂನಂತೆ.

ಹಗಲೆಂತೋ ಹಗಲೇ, ವಿದ್ಯುತ್ತಿನ ಬಲದಿಂದ ರಾತ್ರಿಯೂ ಹಗಲಾಗಿದೆ ಈ ದಿನಗಳಲ್ಲಿ.

ಪರೀಕ್ಷೆಯೆಂಬುದೊಂದು ನಾಟಕವೆಂದು ಅದರ ಅ ಆ ಇ ತಿಳಿದವರಿಗೆಲ್ಲ ಗೊತ್ತು. ಶಾಲೆಗಳಲ್ಲಿ ಇಪ್ಪತ್ತು ಗುಣ ಪಡೆಯದವನು ಸರಕಾರಿ ಪರೀಕ್ಷೆಗಳಲ್ಲಿ ಎಪ್ಪತ್ತು ಗಿಟ್ಟಿಸಿಕೊಳ್ಳುತ್ತಾನೆ. ಎಪ್ಪತ್ತರವನು ಇಪ್ಪತ್ತಕ್ಕೂ ತತ್ವಾರವಾಗಿ ಗೋತಾ ಹೊಡೆಯುತ್ತಾನೆ.

ಆದ್ದರಿಂದ ಪರೀಕ್ಷೆಗಳಿಗೇನೇ ಮುಟ್ಟುಗೋಲು ಹಾಕುವ ಮಾತು ಒಂದೆಡೆ ನಡೆಯುತ್ತಿದ್ದು, ಅದು ಕೆಲವೆಡೆಯಾದರೂ ಕಾರ್ಯರೂಪಕ್ಕೆ ಬರುತ್ತಲಿದೆಯೆನ್ನುವಾಗ, ವಿದ್ಯಾರ್ಥಿಗಳ ಅನುತ್ತೀರ್ಣತೆಯು ರಾಷ್ಟ್ರೀಯ ನಷ್ಟವೆಂದು ಬೊಬ್ಬಿಟ್ಟು ಎಲ್ಲರನ್ನೂ ಉತ್ತೀರ್ಣ ಮಾಡುವ ಬಗ್ಗೆ ಅವ್ಯಕ್ತ ಚಳುವಳಿ ನಡೆಯುತ್ತಿರುವಾಗ,

ಉತ್ತಮ ಫಲಿತಾಂಶ ನೀಡುವ ವಿಶ್ವವಿದ್ಯಾಲಯಗಳನ್ನು ಟೀಕಿಸುವುದು ಪರಿಪಾಟವಾಗಿದೆ.

ಉಸ್‌ಕೀ ಛಾಯಿಕಾ ಶಾಧಿಕೋ ವೈ ಜಾಯಾ ಎಂದು ಹಿಂದಿ ಬರೆವವನು,

ಅಧ್ಯಾಪಕನು ವಿಧ್ಯಾರ್ಥಿಯನ್ನು ಅತೀಯಾಗಿ ಹೋಗಲಿದನು ಎಂದು ಕನ್ನಡ ಬರೆವವನು.

Diyar Sir ಎಂದು ಸಂಬೋಧಿಸಿ ಇಂಗ್ಲಿಷ್ ಬರೆವವನು....

ಭಾಷಾ ಪದವೀಧರರಾಗದೇ ಇದ್ದರೇನೇ ಆಶ್ಚರ್ಯ.

ಮುಂಬಯಿ ವಿಶ್ವ ವಿದ್ಯಾಲಯದ ಸುಮಾರು ೧೦೦೦ ಬಿ. ಎಡ್ ಅಭ್ಯರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾದರಂತೆ. ಇವರಲ್ಲಿ ಥರ್ಡ್ ಕ್ಲಾಸಲ್ಲಿ ಬಂದವರು ಯಾರೂ ಇಲ್ಲವಂತೆ.

ಹಾಗೆಯೇ ಬಿ. ಎ., ಎಂ. ಎ. ಇತ್ಯಾದಿ ಪದವಿಗಳೂ ಡಾಕ್ಟರೇಟ್ ಗೌರವಗಳು ಅತ್ಯಂತ ಅಗ್ಗವಾಗಿವೆಯೆಂದು ಕರುಬುವವರಿದ್ದಾರೆ.

ಹೀಗೆ ಕರುಬುವವರು ಒಂದು ಕಾಲದಲ್ಲಿ ಬಿ. ಎ., ಎಂ. ಎ. ಆದವರೇ.

ನಮ್ಮ ದೇಶದಲ್ಲಿ ಎಲ್ಲ ವಿದ್ಯಾರ್ಥಿಗಳೂ ಪಾಸಾಗಬೇಕು ಅಂದರೆ, ಪರೀಕ್ಷಾ ಮಂಡಳಿ ಮತ್ತು ವಿಶ್ವ ವಿದ್ಯಾಲಯಗಳು ಪರೀಕ್ಷೆಗೆ ಕೂಡವರೆಲ್ಲರನ್ನೂ ಪಾಸು ಮಾಡಬೇಕು.

ತಾವು ನೀಡುವ ಪ್ರಶಸ್ತಿ ಪದವಿಗಳಿಗೆ ಚಿಕ್ಕಾಸಿನ ಬೆಲೆಯಿಲ್ಲವೆಂದು ಖಾತ್ರಿಯಾಗಿ ತಿಳಿದುಕೊಂಡಿರುವುದರಿಂದಲೇ ಅವು ಉದಾರವಾಗಿ ವರ್ತಿಸತೊಡಗಿದೆಯೆನ್ನೋಣವೆ?

ಮೂವತ್ತೈದು ಮಾರ್ಕು ಪಡೆದು ಪದವೀಧರನಾದವನು ನೂರರಲ್ಲೊಂದರಷ್ಟು ಉಂಡರೆ ಬದುಕುವುದು ಸಾಧ್ಯವಿಲ್ಲ. ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಮಾರ್ಕು ಪಡೆಯಬೇಕು; ನೂರಕ್ಕೆ ನೂರರಷ್ಟು ಉತ್ತೀರ್ಣರಾಗಬೇಕು.

ಆಗ ನಮ್ಮ ಶಿಕ್ಷಣ ನೂರಕ್ಕೆ ನೂರರಷ್ಟು ಯಶಸ್ವಿಯಾಗುತ್ತದೆ.

ಈ ದಿಸೆಯಲ್ಲಿ ಕೆಲವಾದರೂ ಪರೀಕ್ಷಾ ಮಂಡಳಿಗಳು ಮುಂದಡಿಯಿಡುತ್ತಿರುವುದನ್ನು ಪ್ರಶಂಸಿಸದೆ ಟೀಕಿಸುವುದು ಸಮಾಜ ದ್ರೋಹವಾಗದು.

ಎಲ್ಲರಿಗೂ ಉಣ್ಣುವ, ತಿನ್ನುವ ಅಧಿಕಾರವಿರುವಾಗ, ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಧಿಕಾರವಿಲ್ಲವೆಂದರಾಗುತ್ತದೆಯೆ? ಭೂಹೀನರಿಗೆ ಭೂಮಿ. ಗೃಹಹೀನರಿಗೆ ಗೃಹ, ನೌಕರಿಹೀನರಿಗೆ ನೌಕರಿ ಕೊಡುವಂತೆಯೇ ಪದವಿಯಿಲ್ಲದವರಿಗೆ ಪದವಿ ನೀಡುವ ವ್ರತ ಸಾಮಯಿಕವಾದದ್ದಲ್ಲವೆಂದರೆ, ಅವರು ಪ್ರತಿಗಾಮಿಗಳೆನ್ನಬೇಕಾದೀತು.

ಎಲ್ಲವನ್ನೂ ದುಡ್ಡಿನಿಂದಲೇ ಅಳೆಯುವ ಈ ಕಾಲದಲ್ಲಿ ವಿದ್ಯಾರ್ಥಿಯ ಯೋಗ್ಯತೆಯನ್ನೂ ದುಡ್ಡಿನಿಂದಲೇ ಅಳೆಯುತ್ತಾರೆಂಬ ಆರೋಪ ಬೇರೆಯಿದೆ.

ಅದೇನೇ ಇರಲಿ, ಪರೀಕ್ಷೆಯಿರುವುದು ಪಾಸು ಮಾಡುವುದಕ್ಕೇ ಹೊರತು ನಾಪಾಸು ಮಾಡುವುದಕ್ಕಲ್ಲವೆಂಬುದನ್ನು ಸಂಪ್ರದಾಯವಾದಿಗಳು ಮರೆತುಬಿಡುತ್ತಾರೆ.

●●

ದನ್ನು ಮತ್ತೆ ಮತ್ತೆ ಬಳಸಬೇಕಾಗುವುದು. ಜತೆಗೆ ಪರಿಸರ ಸಂಬಂಧವಾದ ಅಪಾಯಗಳೂ ಇರುವುವು.

ಶ್ರೀ ಇಸ್ರೇಲ್ ಮತ್ತು ಅವರ ಸಂಗಡಿಗರು ದೀರ್ಘಕಾಲ ಉಳಿಯುವಂಥ, ಮಿತವ್ಯಯವಾದ ಮತ್ತು ವಾತಾವರಣವನ್ನು ಕಲುಷಿತಗೊಳಿಸದಂಥ ಒಂದು ಪರ್ಯಾಯ ವಿಧಾನವನ್ನು ಕಂಡುಹಿಡಿಯಲೆತ್ನಿಸುವರು. ಇದಕ್ಕೆ ಕಾಂಡ ಕೊರೆಯುವ ಹುಳುವಿಗೆ ಮಾರಕವಾದ ವ್ಯಾಧಿಯನ್ನುಂಟುಮಾಡುವ ಬ್ಯಾಕ್ಟೀರಿಯಾ ಅಥವಾ ಬೂಷ್ಟನ್ನು ಗುರುತಿಸುವುದು ಅಗತ್ಯ. ಅದನ್ನು ಕಂಡುಹಿಡಿದನಂತರ ಈ ನೈಸರ್ಗಿಕ ಸಸ್ಯಕೀಟ ವಿನಾಶಕಗಳನ್ನು ಸಾಮೂಹಿಕವಾಗಿ ಬಳಸಿ ಬತ್ತದ ಗದ್ದೆಗಳಲ್ಲಿ ಬಿಡಲಾಗುವುದು. ಈ ವಿಧಾನದ ಮೂಲಕ ಹುಳಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಮಾರ್ಗವನ್ನು ರೂಪಿಸಬಹುದೆಂದು ವಿಜ್ಞಾನಿಗಳು ನಿರೀಕ್ಷಿಸಿದ್ದಾರೆ.

ಇಂಥದೇ ಒಂದು ಕ್ಷೇತ್ರದಲ್ಲಿ ಅಮೆರಿಕದ ಸಹಾಯದೊಡನೆ ಕೈಗೊಳ್ಳಲಾದ ಮುಂಚಿನ ಸಂಶೋಧನೆಯೊಂದರಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಈ ಪ್ರಾಜೆಕ್ಟಿನಲ್ಲಿ ಬಳಸಿಕೊಳ್ಳಲಾಗುವುದು.

●●

ಹಾವು

'ಹಾವು'—
ಈ ಹಾವಿನ ಕಾವು
ಎಲ್ಲೆಲ್ಲೂ, ಎಲ್ಲರಲ್ಲೂ ಇದೆ—ಅದು
ಎಲ್ಲರನೂ ತಿಣುಕುತ್ತಿದೆ ಅಷ್ಟೆ—

ಕೆಲವೊಮ್ಮೆ ಕಚ್ಚುತ್ತದೆ
ಹೆದೆಯಾಡಿಸಿ 'ಭುಸ್' ಎನ್ನುತ್ತದೆ
ಕಚ್ಚಿದವರನು ರೊಚ್ಚಿಗೇಳಿಸುತ್ತದೆ
ಕಚ್ಚಬೇಕಾದವರನು ಕಚ್ಚಿ
ತಲೆ ತಿರುಗಿಸುತ್ತದೆ!

ಈ ಹಾವು—
ಮಿತವಾಗಿ ಕಚ್ಚಿದರೆ ಹಿತ!
ಸಾಲದು ಹಿತವೆಂದು ಹಾರೈಸಿ
ಹೊತ್ತು ಮೆರೆಸಿದರೆ
ಕಚ್ಚಿ, ವಿಷ ಏರಿಸಿ, ಕಾರಿಸುವುದು!

ವಿಷ ಹೆಚ್ಚಾದಾಗ,
ಒಂದಿಷ್ಟು ಚೇಷ್ಟೆ ಮಾಡಿಸುತ್ತದೆ;
ಸ್ಥಿರತೆಯೊಡನೆ ಸೆಣಸಾಡಿಸುತ್ತದೆ;
ಸೋತು, ಬಳಲಿ, ಕೆಳಗೆ ಬೀಳಿಸುತ್ತದೆ!

ಈ ಹಾವಿಂದ ಕಚ್ಚಿಸಿಕೊಂಡು
ನಿರಾಶೆಯ ನೇಣು ಹಾಕಿಕೊಂಡವರೆಷ್ಟು!
ಮನೆ, ಮಠ, ಮಾನ ಕಳೆದುಕೊಂಡವರೆಷ್ಟು!
ಹಳ್ಳಕ್ಕಿಳಿದು ನರಳಿದವರೆಷ್ಟು!

ಅದರ ಹಲ್ಲು ಕಿತ್ತೆಸೆದು, ಮುದುರಿ ಮಲಗಿಸಲು
ಪಣ ತೊಟ್ಟವರೆಷ್ಟು!
ಈ ಹಾವನ್ನಾಡಿಸುವ ಹಾವಾಡಿಗನಾಗಲು
ಪ್ರಯತ್ನ ಪಟ್ಟವರೆಷ್ಟು!
ಅದರೂ ಸೋತು ಸಾಧಿಸಿದೇನು?

ಕಚ್ಚುವುದು ಹಾವಿನ ಧರ್ಮ,
ಕಚ್ಚಿಸಿ ಕೊಳ್ಳುವುದು ನಮ್ಮ ಧರ್ಮ,
ಆದರೂ ಕಚ್ಚುತ್ತದೆಂದು ದುಡುಕದೆ,
ಮಿತವಾಗಿ ಕಚ್ಚಿಸಿ, ಹಿತಪಟ್ಟು
ನಾವ್ ಬೆಳಕು ಕಾಣಬೇಕು!

— ಶ್ರೀ ಬಿ. ವಿ. ನಾಯಕ್

●●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕುಂದಾಪುರ II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 4505/1971

ಅರ್ಜಿದಾರಳು: —ಲಕ್ಷ್ಮಿ ಅಮ್ಮ

ಎದ್ರಿಳು: —ರಾಮಿ ಹೆಂಗ್ಸು

ಕುಂದಾಪುರ ತಾಲೂಕು ಅಸೋಡು ಗ್ರಾಮದ ನೇರ್ಲಕಟ್ಟೆ ಕೃಷ್ಣ ಹೆಂಗ್ಸಿನ ಮಗಳು, ರಾಮಿ ಹೆಂಗ್ಸು, ಇವಳಿಗೆ ತಿಳಿಯಪಡಿಸಿದ್ದು.

ಅರ್ಜಿದಾರಳಿಗೆ ಎದ್ರಿಳಿಂದ ಕಳೆದ ತಾ. 31–3–1970ಕ್ಕೆ ಬಹಾ ಗೇಣಿ ಬರಮಾಡಿಕೊಳ್ಳುವರೆ ಅರ್ಜಿದಾರಳು ಮೇಲಿನ ಅರ್ಜಿ ದಾಖಲು ಮಾಡಿದ್ದು ಸದ್ರಿ ಅರ್ಜಿಯಲ್ಲಿ ನಿಮ್ಮ ಹಾಜರಾತಿ ಬಗ್ಗೆ ಮೇಲಿನ ಕೋರ್ಟಿನಲ್ಲಿ ತಾ. 24–7–1972ಕ್ಕೆ ಇರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಹಗಲು ಗಂಟೆ 11ಕ್ಕೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕೋರ್ಟು ಹುಕುಂ ಪ್ರಕಾರ

(Sd.) G. V. Aithal
Advocate for Applicant

ಕುಂದಾಪುರ, 4–7–72

ಶ್ರೀಸಾಮಾನ್ಯನ ಸಂಸತ್ತಿನಲ್ಲಿ—

ಕಾಯಿದೆಗೊಂದು ಚಾಲಂಗೋಚಿ

ದೇಶದಾದ್ಯಂತ ಭೂ ಸುಧಾರಣಾ ಕಾಯಿದೆ ಬಳಕೆಗೆ ಬಂದ ಬಳಿಕ ಉಳುವವನೇ ಹೊಲದೊಡೆಯನಾಗುವುದರೊಂದಿಗೆ ಜಮೀನುದಾರರ ಸ್ವಾಧೀನತಾ ಜಮೀನಿಗೆ ಒಂದು ಪರಿಮಿತಿಯೂ ಬಂದಿದೆ. ಆದರೆ ನಮ್ಮ ಜಿಲ್ಲೆಯ ಬಹುತೇಕ ಮಂದಿಯ ಅಭಿಪ್ರಾಯದಂತೆ ಈ ಸುಧಾರಣೆಯಿಂದ ಶ್ರೀಸಾಮಾನ್ಯನಿಗೆ [illegible] ಬರುವುದಲ್ಲದೆ ಉಪಯೋಗವಿಲ್ಲ. ಇದರಿಂದ ರಾಜ್ಯದಾದ್ಯಂತ ಭೂ ಹಿಡುವಳಿದಾರ ವರ್ಗವು ಕುಲಕಸುಬಾದ ಬೇಸಾಯದಿಂದ ಪದಚ್ಯುತರಾಗಬೇಕಾಗುತ್ತದೆ.

ರಾಜ್ಯದ ಭೂ ವರ್ಗದಾರರಲ್ಲಿ ಶೇಕಡ ಎಂಬತ್ತು ಪಾಲು ಸಣ್ಣ ಹಿಡುವಳಿದಾರರು; ಉಳಿದವರ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಿಸಿದ್ದರೂ ಇವರ ಆದಾಯ ಸಣ್ಣ ಪುಟ್ಟದ್ದು. ಅಂಥವರ ವಕ್ಕಲುಗಳು ಕೆಲವು ಧೂರ್ತ ಸಂಘ ಸಂಸ್ಥೆಗಳಿಂದ ಪ್ರೇರಿತರಾಗಿ, ನ್ಯಾಯಾಲಯದ ಕಾಯಿದೆಯೆಂಬುದು ಬೀದಿಯ ಬೆಲೆವೆಣ್ಣಿನಂತೆ ಕೈಗೆಟಕುವುದೆಂದು ಭಾವಿಸಿ, ಧನಿಗಳಿಗೆ ಗೇಣಿ ಕೊಡದ ಕಾರಣ ಹಿಡುವಳಿದಾರರು ಬೀದಿ ಬಿಕಾರಿಗಳಾಗಿದ್ದಾರೆ. ಆರ್ಥಿಕ ಸ್ಥಿತಿಯಲ್ಲಿ ಸುಧಾರಿಸಿರುವ ಧನಿಗಳು ನ್ಯಾಯಮಾರ್ಗವನ್ನು ಬಿಟ್ಟು, ವಿಪರೀತ ಗೇಣಿ ಹೇರಿ, ದಬ್ಬಾಳಿಕೆಯಿಂದ ಗೇಣಿ ವಸೂಲು ಮಾಡುವುದೂ ಇದೆ. ವಕ್ಕಲು ಕಷ್ಟಪಟ್ಟು ಬೆಳೆದ ಬೆಳೆ ಇನ್ನೇನು ಕೊಯ್ಲಿಗೆ ಬಂತೆನ್ನುವಾಗ ಅಕ್ರಮ ರೀತಿಯಲ್ಲಿ ರಾತ್ರಾ ರಾತ್ರಿ ಕೊಯಿಸಿದವರೂ, ಇಂಜೆಕ್ಷನ್ ದಾವಾದಲ್ಲಿ ಬೆಳೆ ಕಟಾವು ಮಾಡಿಸಿದವರೂ ಇದ್ದಾರೆ.

ಈ ಹಿಂದೆ ಮದರಾಸು ಸರಕಾರ ಕನ್ನಡ ಜಿಲ್ಲೆಯಲ್ಲಿ ಬಳಕೆಗೆ ತಂದಿದ್ದ ನ್ಯಾಯಗೇಣಿ ಉತ್ಪನ್ನದ ಶೇಕಡ ನಲವತ್ತರಷ್ಟಿದ್ದರೆ ಈಗಿನ ಸರಕಾರದ ಗೇಣಿ ನಿರ್ಧಾರ ಶೇಕಡ ಇಪ್ಪತ್ತಕ್ಕೇ ಬಂದಿತು. ಅದರಲ್ಲೂ ಉತ್ಪನ್ನದ ಮೇಲಿನ ನಿರ್ಧಾರ ತೊರೆದು, ಭೂ ಕಂದಾಯದ ಹತ್ತು ಪಟ್ಟು ಮೊತ್ತವೇ ಗೇಣಿಯೆಂದು ತೀರ್ಮಾನಿಸಲಿದ್ದಾರಂತೆ. ಇದರಿಂದ ಕಂತು ಮಾತ್ರ ಜೀವವಿರುವ ಹಿಡುವಳಿದಾರರು ನಿರ್ನಾಮವಾಗುತ್ತಾರೆ. ಹದಿನೈದು ವರುಷದ ಗೇಣಿಯನ್ನು ಒಮ್ಮೆಲೇ ತುಂಬಿದರೆ ಧನಿಯು ಜಮೀನನ್ನು ಒಕ್ಕಲಿಗನಿಗೇ ಬರೆದು ಕೊಡಬೇಕೆಂಬ ಕಾಯಿದೆಯೂ ಊಹೆನೆಯೂ ಇದೆ. ಕಂದಾಯದ ಮೇಲೆ ಗೇಣಿ ನಿರ್ಧರಿಸುವದಕ್ಕಿಂತ ಒಟ್ಟು ಉತ್ಪನ್ನದ ಶೇಕಡ ಮೂವತ್ತು ಅಥವಾ ಮೂವತ್ತೈದು ಪಾಲು ಗೇಣಿ ವಿಧಿಸಿದರೆ ಕೆಲವರಾದರೂ ಧನಿಗಳು ಬದುಕಿಕೊಳ್ಳಬಹುದು.

ರೈತನ ಗೇಣಿ ಬಾಕಿ 1966ರ ಲಾಗಾಯತಿನಿಂದ ಬಾಕಿ ಇದ್ದರೂ ಎರಡೇ ವರುಷದ ಗೇಣಿಕೊಟ್ಟರೆ ಆವನ ಒಕ್ಕಲೆಬ್ಬಿಸುವುದರ ವಿರುದ್ಧ ಸರಕಾರ ರಕ್ಷಣೆ ಸಾರಿತು. ಈ ಶತಮಾನದ ಆದಿಕಾಲದಲ್ಲಿ ಇಂಥ ಸಂದರ್ಭವಿದ್ದರೆ ಭಯವಿರಲಿಲ್ಲ. ಆದರೆ ಇಂದು ಆಹಾರ ಧಾನ್ಯದ, ಕೃಷಿ ಬಳಕೆಯ ವಸ್ತುಗಳ ಕ್ರಯ ದಿಗಂತಕ್ಕೇರಿರುವಾಗ ಇಂಥ ಇಬ್ಬಗೆಯ ತೀರ್ಮಾನದಿಂದ ಶೇಕಡ 45 ವರ್ಗದಾರರು ಅಧೋಗತಿಗಿಳಿಯುತ್ತಾರೆ.

ಸರಕಾರವೂ ಭೂಮಿಯನ್ನು ಕೃಷಿಗಾರರಿಂದ ಬೇರ್ಪಡಿಸಿ ನಿರಾಶ್ರಿತರಿಗೆ ಹಂಚುವಲ್ಲಿ ಈ ಭೂಮಾಲೀಕರಿಗೆ ನ್ಯಾಯವಾದ ಮಾರುಕಟ್ಟೆ ಧಾರಣೆ ಒಂದೇ ಗಂಟಿನಲ್ಲಿ ದೊರಕುವುದು ಅವಶ್ಯ. ಈ ರೀತಿ ನ್ಯಾಯ ಬೆಲೆ ದೊರಕದಿದ್ದರೆ ಅನೇಕ ಪ್ರಾಚೀನ ಮನೆತನದ ಹಿಡುವಳಿದಾರರಿಗೆ ತುಂಬಲಾರದ ನಷ್ಟವಾಗುವುದು.

ಈ ಕಾಯಿದೆಗಿಂತ ಮುನ್ನ ಕುಟುಂಬದ ಐದು ಸದಸ್ಯರ ಪಾಲಿಗೆ ಇರಬೇಕಾದ ಇಪ್ಪತ್ತೇಳು ಸ್ಟ್ಯಾಂಡರ್ಡ್ ಎಕರೆಯ ಬದಲು ಸರಕಾರ ಹದಿನೆಂಟು ಎಕರೆಯೆಂದು ವಿಧಿಸಿದೆ. ಅದರಲ್ಲೂ ಸೊಪ್ಪು, ಕಟ್ಟಿಗೆಗಳಿಗೆ ಅವಶ್ಯವಿರುವ ಪುಂಜ ಸ್ಥಳವನ್ನು ವಿರಹಿತಪಡಿಸಿದೆ. ಈ ಭೂ ಸಾಗುವಳಿಯನ್ನು ಸಾಮಾನ್ಯ ಕ್ರಮದಲ್ಲಿ ಮಾಡಿದರೆ ಸರಾಸರಿ ಎಕರೆಗೆ ಐದುನೂರು ರೂಪಾಯಿಯಂತೆ ಐನ್ ಉತ್ಪನ್ನ 7 ಸಾವಿರ ರೂಪಾಯಿ ಬಂದೀತು. ಆ ಕುಟುಂಬದ ಐವರಿಗಾದರೂ ಊಟ, ಕಾಫಿ, ಬಟ್ಟೆ ಇತ್ಯಾದಿಯೆಂದು ದಿನಕ್ಕೆ ತಲಾ ನಾಲ್ಕು ರೂಪಾಯಿಯಂತೆ ತಿಂಗಳಿಗೆ 640 ರೂಪಾಯಿ ಬೇಕು. ಈ ಲೆಕ್ಕದಲ್ಲಿ ಸುಮಾರು ಏಳುನೂರು ರೂಪಾಯಿಗಳಷ್ಟು ಆದಾಯ ಕಮ್ಮಿ ಇರುವಾಗ ಸರಕಾರದ ಈ ಜಮೀನು ಪರಿಮಿತಿ ಪ್ರತಿಯೊಬ್ಬನಿಗೂ ಒಂದೇ ರೀತಿ ತರವಲ್ಲ. ಅಂತೂ ಸರಿಯಾದ ಪುಂಜ ಸ್ಥಳ ಮೊದಲಾದ ಪ್ರತ್ಯೇಕ ಸೌಕರ್ಯ-ಸೌಲಭ್ಯಗಳ ಪರಿಮಿತಿ ಇದ್ದರೆ ಹದಿನೆಂಟು ಎಕರೆಯ ಮಿತಿ ಸರಿಯಾಗಬಹುದು. ಇಂಥ ವರ್ಗದ ವಿನಾಯಿತಿ ಈಗ ಮೂವತ್ತೆಕರೆಯಷ್ಟಿದ್ದರೂ ನಾಲ್ಕೈದು ಹೆಕ್ಟೇರ್ ಸ್ಥಳವನ್ನು ಕಾಡು ಕರೆಯೆಂದು ಸೊಪ್ಪುಕಟ್ಟಿಗೆಗಳಿಗಾಗಿ ಬಿಡುವುದಗತ್ಯ.

ಸಣ್ಣ ಹಿಡುವಳಿದಾರರು ಬರಿ 'ಸಣ್ಣ'ವರಾಗಿರುವುದರಿಂದ ಅವರಿಗೆ ಸ್ವಂತ ಸಾಗುವಳಿಗೆ ಜಮೀನನ್ನು ಹಿಂತಿರುಗಿ ಪಡೆಯುವ ಸೌಲಭ್ಯವನ್ನು ಕಾಯಿದೆಯಿಂದ ತೆಗೆದು ಹಾಕಬಾರದು. ಜಮೀನನ್ನು ಹೊಂದಿದ ರೈತರಿಗೆ ಆ ಭೂಮಿಯನ್ನು ಮಾರಾಟ ಮಾಡುವ ಹಕ್ಕಿಲ್ಲವೆನ್ನಲಾಗಿದೆ. ಸಾಲಕ್ಕಾಗಿ ಆತ ಸರಕಾರಿ ಸಂಘಗಳಿಂದ ಹಣ ಪಡೆಯಬಹುದು. ಆದರೆ, ಮಳೆ ಬೆಳೆಗಳ ಪ್ರತಿಕೂಲದಿಂದಾಗಿ (ಬೆಳೆ ಬಾರದಿದ್ದರೂ) ಹಣ ಕೊಡದುದರಿಂದ ಸಂಘಗಳು ಅವನ ಮೇಲೆ ದಾವಾ ಮಾಡಿ, ಸೇಕಡಾ ಹದಿನೆರಡೂವರೆ ರೂಪಾಯಿ ಬಡ್ಡಿಯೊಂದಿಗೆ ಆ ವೆಚ್ಚ ಈ ಖರ್ಚಿಗಾಗಿ ಅವನ ಜಮೀನನ್ನೇ ಹರಾಜು ಹಾಕಿದರೆ ಏನು ಸಾಧಿಸಿದಂತಾಯಿತು?

ಕಾಯಿದೆಗೂ ಒಂದು ಎಕ್ಸ್‌ರೇ ಕಣ್ಣು ಬೇಕು. ಯಾರು ಸಣ್ಣವ, ಯಾರು ದೊಡ್ಡವನೆಂದು ಅಳೆಯುವ ಅಳತೆಗೋಲೂ ಅಗತ್ಯ. ಬಂಡವಳ ಶಾಹಿಗೆ, ಲಾಭಕೋರರ ಪಾಲಿಗೆ ಕೂರಂಬಿನಂತೆ ಇರಿಯುವ ಈ ಕಾಯಿದೆ ಬಡವನ ಪಾಲಿಗೆ ಹೂ ಬಾಣವಾಗಲಿ. ಭೂಮಿಯು ಅನುಭವವೆಂದರೆ ಅದೊಂದು ನಿಷ್ಕರ್ಷ ಆದಾಯ ಬರುವ ಕಸಬು. ಅದಕ್ಕೆ ಸರಕಾರ ಕಲ್ಲು ಹಾಕುವ ಬದಲು ಎಡರು ತೊಡರು ಪರಿಹರಿಸಿದರೇ ಚೆನ್ನ.

— ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

●●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಪ್ರಗತಿಮಾರಕ ಮುಷ್ಕರ-ಲಾಕೌಟ್

(ಐದನೇ ಪುಟದಿಂದ)

ಮತ್ತು ಮಾಲೀಕರು ನೇರವಾಗಿ ಇತ್ಯರ್ಥ ಮಾಡಿಕೊಳ್ಳಬೇಕೆಂದರ್ಥ. ಕಾರ್ಮಿಕ ಸಂಘಟನಾ ಶಕ್ತಿಯ ಬೆಳವಣಿಗೆಗೆ ಅಡ್ಡಿ ಆತಂಕಗಳಿರಕೂಡದೆಂದರ್ಥ. ಆದರೆ ಈ ದಿಸೆಯಲ್ಲಿ ಕಾನೂನುಗಳನ್ನು ಮಾಡಲಾಗುತ್ತಿದೆಯೇ? 25 ವರ್ಷಗಳಾದರೂ ಸಹ ಸಂಘಟನೆಯನ್ನು ಮುರಿಯಲು ಯತ್ನಗಳಾಗುತ್ತಿಲ್ಲವೇ? ಕಾರ್ಮಿಕರಿಗೆ ಬೇಕಾದ ರಾಷ್ಟ್ರೀಯ ಕನಿಷ್ಟ ವೇತನ ಶಾಸನವನ್ನಾದರೂ ಜಾರಿಗೆ ತರಲಿಲ್ಲವೇಕೆ?

ಮುಷ್ಕರಕ್ಕೆ ರಜಾ ಕೊಡಿ

ಕಾರ್ಮಿಕ ನಾಯಕರನ್ನು, ಸಂಘಗಳಿಗಾಗಿ ದುಡಿಯುವವರನ್ನು ವಿನಾಕಾರಣ ವಜಾಮಾಡುವುದೂ ಮುಷ್ಕರಕ್ಕೆ ಕಾರಣವಾಗಿದೆ. ಇದರ ಬಗ್ಗೆಯೂ ಸಹ ಕಾರ್ಮಿಕರ ಅಥವಾ ಮಧ್ಯಮ ವರ್ಗದವರ ಸಂಘಟನಾ ಹಕ್ಕಿಗೆ ಚ್ಯುತಿ ಬರದಂತೆ ಕಾನೂನುಗಳನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲವೇಕೆ?

ಈ ಎಲ್ಲ ಅಂಶಗಳನ್ನು ಮನಗಂಡು ಮುಷ್ಕರದಿಂದ ದೇಶದ ಪ್ರಗತಿಗೆ ಅಡ್ಡಿಯಾಗುತ್ತದೆ ಎಂಬ ಅಭಿಪ್ರಾಯವನ್ನಿಟ್ಟುಕೊಳ್ಳುವ ಬದಲು, ಮುಷ್ಕರಗಳೇ ನಡೆಯದಂತೆ ಸಮಾಜ ರಚನೆಯಾಗಬೇಕಾಗಿದೆ. ಸಮತಾವಾದಿ ಸಮಾಜದಲ್ಲಿ ಮಾತ್ರ ಇದು ಸಾಧ್ಯ. ಅಲ್ಲಿಯವರೆವಿಗೆ, ಬಂಡವಾಳ ಶಾಹಿ ಚೌಕಟ್ಟಿನಲ್ಲೂ ಸಹ ಮುಷ್ಕರಗಳು ಕಡಿಮೆಯಾಗುವಂತೆ ಸರ್ಕಾರವು ಕಾರ್ಮಿಕರ ಬಗ್ಗೆ ತನ್ನ ಧೋರಣೆಯನ್ನು ಬದಲಾಯಿಸಿ ಹೊಸರೀತಿಯಲ್ಲಿ ಕೈಗಾರಿಕಾ ಸಂಬಂಧವನ್ನು ಬೆಳೆಸಬೇಕು. ಕಾರ್ಮಿಕರು, ಕೆಳಗಿನ ಮಟ್ಟದಿಂದ ಮೇಲಿನವರೆಗೂ ಆಡಳಿತದಲ್ಲಿ ಭಾಗವಹಿಸುವಂತೆ ಅವಕಾಶ ಮಾಡಿಕೊಡಬೇಕು. ಸಂಘದ ಮಾನ್ಯತೆಯು ರಹಸ್ಯ ಮತದಾನದ ಆಧಾರದ ಮೇಲೆ ನಿರ್ಧಾರವಾಗುವಂತೆ ಶಾಸನ ಮಾಡಬೇಕು. ಅವೆಲ್ಲವನ್ನೂ ಮಾಡಿದಲ್ಲಿ ಕಾರ್ಮಿಕರ ಪೂರ್ಣ ಸಹಕಾರ ದೊರೆತು ದೇಶ ವೇಗದಿಂದ ಪ್ರಗತಿ ಸಾಧಿಸುವುದು ಸಾಧ್ಯ. ಇವುಗಳು ಇನ್ನೂ ಅಸ್ಪಷ್ಟವಾಗಿರುವಾಗ, "ಮುಷ್ಕರಕ್ಕೆ ರಜಾ ಕೊಡಿ" ಎಂಬ ಘೋಷಣೆಯನ್ನು ಎಂತಹ ಮೇಧಾವಿ ಅಥವಾ ರಾಷ್ಟ್ರನಾಯಕ ಮಾಡಿದರೂ ಸಹ ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.

(ಬೆಂಗಳೂರು ಆಕಾಶವಾಣಿಯ ಸೌಜನ್ಯ)

●●

ಅಮೃತಾಂಜನ
● ತಲೆ ನೋವು ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಚಾರುಚರಿಯನ

ಸೀಮಾವಿವಾದ ಪ್ರಾಯಪ್ರಬುದ್ಧವಾಗುತ್ತಿದೆ

ಕರ್ನಾಟಕ – ಮಹಾರಾಷ್ಟ್ರಗಳ ನಡುವಣ ಸೀಮಾವಿವಾದವು ನಾನಾಘಟ್ಟಗಳನ್ನು ತಲುಪಿ ಎತ್ತರದಿಂದ ಮತ್ತೆ ತಿಪ್ಪೆಗೆ ಇಳಿದಿದೆ. ಎರಡೂ ಪಕ್ಷಗಳಿಗೂ ಆದಷ್ಟು ಕಡಿಮೆ ಮನನೋಯಿಸಿ ಸಮಸ್ಯೆಯನ್ನು ಬಿಡಿಸುವುದು ಪ್ರಧಾನಿ ಉರುಸ್ ಗೃಹಮಂತ್ರಿ ಶ್ರೀಮತಿ ಗಾಂಧಿಯವರ ಆಶಯ.

ಯಾರೊಬ್ಬರ ಮನಸ್ಸೂ ನೋಯದಂತೆ ವಿವಾದ ಪರಿಹಾರ ಅಸಾಧ್ಯವೆಂಬ ಘಟ್ಟವನ್ನು ಈಗ ತಲುಪಿದ್ದರಿಂದಲೇ ಅವರು ಈ ನಿಲುವು ತಳೆದಿದ್ದಾರೆ. ಈಗ ಮತ್ತೆ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳು ಸಭೆಸೇರಿ ವಿವಾದ ಪರಿಹರಿಸಿಕೊಳ್ಳಬೇಕೆಂದು ಅವರು ಸಲಹೆ ನೀಡಿದ್ದಾರೆ.

ಬೆಳಗಾಂವಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಭಿಪ್ರಾಯದಂತೆ ಈ ಸುತ್ತಿನ ಮಾತುಕತೆಗಳು ಸದ್ಯದಲ್ಲೇ ಆರಂಭವಾಗಲಿವೆ.

ಕರ್ನಾಟಕದ ಮುಖ್ಯಮಂತ್ರಿಗಳೂ ಸಚಿವರೂ 'ಮಹಾಜನ ವರದಿ'ಯ ಕಾರ್ಯಾಚರಣೆಗೆ ಪ್ರಯತ್ನಿಸುವುದಾಗಿ ಭರವಸೆ ನೀಡುತ್ತಾರೆ. ಮಹಾರಾಷ್ಟ್ರದವರು ಆ ವರದಿಯನ್ನು ಕಾರ್ಯಗತವಾಗದಂತೆ ತಡೆಯುವ ಬಗ್ಗೆ ಪ್ರಯತ್ನಿಸುವ ವಿಶ್ವಾಸ ಹೊಂದಿದ್ದಾರೆ.

ಆರಂಭದಿಂದಲೂ ಇಂತಹ ಭಿನ್ನಾಭಿಪ್ರಾಯವಿದ್ದುದರಿಂದಲೆ ಮಹಾಜನ ವರದಿ ಬರುವಂತಾದುದು.

ಗಡಿಯ ಅತ್ತಿತ್ತವಿರುವ ಗ್ರಾಮಗಳ ಬಗೆಗೆ ಯಾರಿಗೂ ಹೆಚ್ಚಿನ ಕಾಳಜಿಯಿಲ್ಲ. ಇರುವ ದೃಷ್ಟಿಯೆಲ್ಲ ಬೆಳಗಾಂವಿ ನಗರದ ಮೇಲೆ.

ಬೆಳಗಾಂವಿ ಕರ್ನಾಟಕದಲ್ಲೇ ಉಳಿಯಬೇಕೆಂದು ಕನ್ನಡಿಗರು; ತಮಗೆ ಬರಬೇಕೆಂದು ಮರಾಠಿಗರ ವರಸೆ

ಬೆಳಗಾಂವಿ ವಿಭಜನೆಯ ಮಾತು ಕೇಂದ್ರದಿಂದ ಪ್ರಸ್ತಾಪವಾದದ್ದುಂಟು. ಅದಕ್ಕೆ ಕನ್ನಡಿಗರು ತೀವ್ರ ವಿರೋಧ ವ್ಯಕ್ತಪಡಿಸಿದ್ದುಂಟು.

ಈಗ, ಬೆಳಗಾಂವಿ ನಗರವನ್ನು ಒಡೆಯಬಾರದೆಂಬ ವಾದ ಮತ್ತೆ ಎದ್ದಿದೆ. ಈ ಸಂಬಂಧ ಮಹಾರಾಷ್ಟ್ರ ವಿಧಾನ ಸಭೆಯೆದುರು ಧರಣಿ ನಡೆಯುತ್ತಿದೆ.

ಇದನ್ನು ಸಂಘಟಿಸಿದವರು ಕರ್ನಾಟಕ ವಿಧಾನ ಸಭೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ಪ್ರತಿನಿಧಿಸುವ ಶ್ರೀ ಪ್ರಭಾಕರ ಪವಶೆ.

ಬೆಳಗಾಂವಿಯ ಸ್ಥಳೀಯ ಸಂಸ್ಥೆಗಳ ಸುಮಾರು ೧೪೦ ಪ್ರತಿನಿಧಿಗಳು ಬೆಳಗಾಂವಿ ವಿಭಜನೆಯನ್ನು ಪ್ರತಿಭಟಿಸಿ ಧರಣಿ ನಡೆಸಿದ್ದಾರೆ—ಮುಂಬೈಯಲ್ಲಿ.

ಬೆಳಗಾಂವಿ ವಿಭಜನೆಯನ್ನು ಒಪ್ಪದೆ ಇವರು ಬೆಳಗಾಂವಿಯು ಕರ್ನಾಟಕದಲ್ಲಿ ಉಳಿಯುವುದನ್ನೂ ಬಯಸುವುದಿಲ್ಲ.

ಅಂದರೆ, ಬೆಳಗಾಂವಿ ಮಹಾರಾಷ್ಟ್ರಕ್ಕೆ ಸೇರಬೇಕೆಂಬುದು ಇವರ ವಾದ.

ಇಷ್ಟೇ ಆದರೆ ಚಿಂತೆ ಇಲ್ಲ; ಸೀಮಾ ವಿವಾದವನ್ನು ಇತ್ಯರ್ಥ ಮಾಡುವ ಅಧಿಕಾರ ಸಂಸತ್ತಿನದು; ಆದರ ಮುಂದೆ ಮಹಾಜನ ವರದಿ ಇದೆ.

ಆದರೆ, ಬೆಳಗಾಂವಿಯ ಜನತೆಯನ್ನು ಕೇಳದೆ ಯಾವ ನಿರ್ಣಯವೂ ಆಗಬಾರದು ಎಂಬ ಅವರ ನಿಲುವು ಅಪಾಯಕ್ಕೆ ನಾಂದಿಯಾದೀತು.

ಒಂದೊಂದು ಗ್ರಾಮದ,ಕೇರಿಯ ಜನಾಭಿಪ್ರಾಯವನ್ನು ರೂಪಿಸಿ ಸಮಸ್ಯೆಗಳನ್ನು ತೀರ್ಮಾನ ಮಾಡುವ ಘಟ್ಟಕ್ಕೆ ತಾವು ಇಳಿದರೆ ಅದು ಏಕತೆಗೆ ಮಾರಕ ಮಾತ್ರವಲ್ಲ, ಸಮಸ್ಯೆಯ ತೀರ್ಮಾನಕ್ಕೂ ಬಾಧಕ.

ಉಗುರಿನಿಂದ ಕಿತ್ತುಹಾಕಬಹುದಾದ ಸಮಸ್ಯೆಯನ್ನು ಹದಿನಾರು ವರ್ಷ ಕಾಲ ಉಳಿಸಿಕೊಂಡು ಬಂದಿದ್ದ ಕೇಂದ್ರ ಸರಕಾರದ ಈ ನೀತಿ ಯಾರಿಗೂ ಶೋಭನೀಯವಲ್ಲ.

ವಿವಾದವು ಉಭಯ ಸಮ್ಮತಿಯಿಂದ ಪರಿಹೃತವಾಗುವುದಿಲ್ಲ ಎಂಬುದರಿಂದಲೇ ಮಹಾಜನ ವರದಿಯು ಜನಿಸಿದ್ದು.

ವರದಿ ಬಂದ ಮೇಲೆ, ಅದು ಸಂಸತ್ತಿನ ಮುಂದೆ ಮಂಡಿತವಾದ ಮೇಲೆ, ಉಭಯ ಪಕ್ಷಗಳ ನಿಲುವಿನಲ್ಲಿ ಮಹತ್ವಪೂರ್ಣ ಬದಲಾವಣೆಯಾದದ್ದಿಲ್ಲ.

ಹಾಗಿರುವಾಗ, ಮತ್ತೆ ವರದಿಯನ್ನು ಅನುಮಾನಾಸ್ಪದವಾಗಿಯೇ ಇರಿಸುವುದರಿಂದ ಯಾವ ಲಾಭವೂ ಆಗುವುದಿಲ್ಲ. ವಿರೋಧಿಸಕ್ಕೆ ಮತ್ತಷ್ಟು ಕಾಲಾವಕಾಶ ಮಾತ್ರ ದೊರೆಯುತ್ತದೆ.

ಉಭಯ ಮುಖ್ಯಮಂತ್ರಿಗಳು ಮಾತುಕತೆಯಾಡುವುದಾದರೆ, ಅವರ ನಿಲುವುಗಳಲ್ಲೇನು ಬದಲಾಗಿದೆಯೆಂಬುದನ್ನು ಮೊದಲಿಗೆ ಬಹಿರಂಗಪಡಿಸಬೇಕು.

ಬೆಳಗಾಂವಿ ಸಂಬಂಧದ ತಮ್ಮ ಬೇಡಿಕೆಯನ್ನು ಯಾರಾದರೊಬ್ಬರು ಬಿಟ್ಟುಕೊಟ್ಟರೆ, ಮಹಾಜನ ವರದಿಯ ಬಗ್ಗೆ ಕೂಡಲೇ ತೀರ್ಮಾನವಾಗುತ್ತದೆ. ಆದರೆ, ಇದು ಸಾಧ್ಯವೆ? ಸಾಧ್ಯವಾದರೂ ಕರ್ನಾಟಕದ ಮಟ್ಟಿಗೆ ಅನ್ಯಾಯ. ವಿವಾದ ಪ್ರಾಯಪ್ರಬುದ್ಧವಾಗುವದಕ್ಕೆ ಮೊದಲೇ ಅದರ ಇತ್ಯರ್ಥವಾಗಬೇಕು.

●●

ಗೇಹರಾಜ್ಯದಲ್ಲಿ...

(ನಾಲ್ಕನೇ ಪುಟದಿಂದ)

ಬಿಗಡಾಯಿಸಿದೆ. ಪ್ರಾಯಃ ಅದು ಕೆಲ ಕಾಲ ಸುಧಾರಿಸುವುದು ಅಸಾಧ್ಯ....'

'ಯಾಕೆ?'

'ನಿಕ್ಸನ್ನರ ನೀತಿಯನ್ನು ನಾವು ಒಪ್ಪುವುದಿಲ್ಲ. ಬಾಂಗ್ಲಾ ದೇಶದ ಉದಯದ ಹೊತ್ತಿಗೆ, ವಿಯತನಾಮು ಸಮರದ ಸಂಬಂಧದಲ್ಲಿ ನಮಗೂ ಅವರಿಗೂ ಅಜಗಜಾಂತರ....'

'ಅಲ್ರಿ, ವಿಯತನಾಮದ ಶಾಂತಿ ಮಾತುಕತೆಗಳಿಗೆ ಅವರು ಸಿದ್ಧರಂತೆ....'

'ಇಂತಹ ನೂರು ಮಾತುಕತೆಗಳು ನಡೆದಿವೆಯೆನ್ನು. ಪೆಟ್ಟಿನ್ನ ಮೇ ತಿಂಗಳಲ್ಲಿ ಅಮೇರಿಕೆಯೇ ಮಾತುಕತೆಗಳಿಂದ ಹಿಂದೆ ಸರಿದು ಕೋಲಾಹಲ ಮಾಡಿತು.'

'ಅಲ್ರಿ, ಶಾಂತಿಯ ಬಗ್ಗೆ ಉತ್ತರ ವಿಯತ್‌ನಾಮಕ್ಕೆ ಸಾಕಷ್ಟು ಕಾಳಜಿಯಿಲ್ಲವೆಂದದು ಹೊರಬಂತು....'

'ಆಯ್ತು, ಒಪ್ಪಿಕೊಳ್ಳೋಣ. ಆದರೆ, ಈಗ ಅದು ಅಂತಹ ಕಾಳಜಿ ತೋರಿಸುತ್ತದೆಂದು ಏನು ಪ್ರಮಾಣ? ನಿಕ್ಸನ್ನರ ಧಾಳಿಯನ್ನದು ಎಂಟೆದೆಯಿಂದ ಎದುರಿಸಿಯೇ ಬಂದಿದೆ....'

'ಅಂದರೆ, ನಿಕ್ಸನ್ನರ ಕ್ರಮಗಳಲ್ಲಿ ಏಕಪಕ್ಷೀಯ....'

'ಅಲ್ಲವಾದರೆ ಮತ್ತಿನ್ನೇನು? ಇಂಡೋಚೀನಾದಲ್ಲಿ ಕದನ ವಿರಾಮವಾಗಬೇಕು. ಅಮೇರಿಕನ್ ಕದನ ಕೈದಿಗಳನ್ನು ಉ. ವಿಯತ್‌ನಾಮು ಬಿಟ್ಟುಕೊಡಬೇಕು—ಇದು ನಿಕ್ಸನ್ನರ ಷರತ್ತು. ಅದರೆ, ಇದಕ್ಕೆ ಉ. ವಿಯತನಾಮು ಒಪ್ಪಿದಂತೆ ನಟಿಸಲೂ ಇಲ್ಲ....'

'ಅಲ್ರಿ, ನಿಕ್ಸನ್ನರ ಬಾಂಬುದಾಳಿ ಸ್ವಿಸ್ ಸಮೀಪವನ್ನು ವಿಶ್ವ ನಾಗರಿಕ ವಲಯಕ್ಕೂ ಹರಡಿದೆಯಂತೆ....'

"ಶಕ್ತಿಮದ ಪೀಡಿತರಿಗೆ ಯಾವ ವಲಯವಾದರೇನಂತೆ?"

'ಅಲ್ರಿ, ಸ್ವೀಡನು ಲೋಕ ಸಮರದ ವೇಳೆ ಅಮೆರಿಕ ತನ್ನ ಕೈಕೊಂಡು ಜಪಾನದ ತಲೆ ಬಗ್ಗಿಸಿದಂತೆ, ಹನಾಯ್‌ನ ಬಾಗಿಸುತ್ತೇವೆಂದು ನಂಬಿದ್ದಾರೋ ಏನೋ.......'

"ಹಾಗಾಗದೆಂದು ಅವರಿಗೂ ಗೊತ್ತು. ಆದಕ್ಕೆಂದೇ ಏಕಪಕ್ಷೀಯ ಮಾತು—ವಿರಸ.'

"ವಿಯತನಾಮು ಮತ್ತೊಂದು ತ್ರಿಶಂಕು........'

"ಹ್ಞಾಂ.... ಆಧುನಿಕ ವಿಶ್ವಾಮಿತ್ರರು ಈ ತ್ರಿಶಂಕುವನ್ನೂ ಸ್ವರ್ಗಕ್ಕೆ ಅಟ್ಟಲು ಸಮರ್ಥರಾದರೆ, ಲೋಕ ಕಲ್ಯಾಣವಾಗುತ್ತದೆ...'

'ನಿಜಕ್ಕೂ...'

'ಹಾದೆ ?'

"ಹ್ಞಾಂ"

—ಗೋರಾ

●●

ನೋಟೀಸು

ಪುತ್ತೂರು IInd Addl ಮುನ್ಸಿಫ್ ಕೋರ್ಟಿನಲ್ಲಿ

Ex. C. 167/72 (O. S. 372/67)

ಚೆರ್ಡಪ್ಪ ಶೈ ಕೂಡಾ—ಅರ್ಜಿದಾರರು

ಲಕ್ಷ್ಮೀನಾರಾಯಣ ರಾವ್ ಸಹಾ—ಎದ್ರಿರು

1. ಲಕ್ಷ್ಮೀನಾರಾಯಣ ರಾವ್, 2. ದಿನೇಶ, 3. ಶಿವರಾಮ, 4. ಮಹಾಲಕ್ಷ್ಮಿ, 5 ವಿಶಾಲಾಕ್ಷಿ, 6 ರಮೇಶ, 7. ಗಾಯತ್ರಿ, 8. ಹೆಸರು ಹಾಕದ ಮಗು,—ಮ್ಯೂನರರು ಗಾರ್ಡಿಯನ್ ತಾಯಿ 9ನೇ ಎದ್ರಿ 1ರಿಂದ 8ನೇಯವರು ರಾಮಕೃಷ್ಣರಾಯರ ಮಕ್ಕಳು.

9. ಗಂಗಮ್ಮ, ರಾಮಕೃಷ್ಣರಾಯರ ವಿಧವೆ. ಎಲ್ಲರೂ ಬಯಂಬ— ಕೆಬರ ಗ್ರಾಮ —

—ಎದ್ರಿರು

ಸದ್ರಿ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಯ ಪಡಿಸುವುದೇನೆಂದರೆ,

ನಿಮಗೆ Section 50; Rule 16; 22 ನೋಟೀಸು ಕೊಟ್ಟು ಮೃತ್ರ ಮೃತ ರಾಮಕೃಷ್ಣ ರಾಯರ ಬಾಬ್ತು ನಿಮ್ಮ ಹತ್ತಿರ ಇರುವ ಚರ ಸೊತ್ತುಗಳನ್ನು ಜಪ್ತು ಮಾಡಿ ಯೇಲಂ ಪಡ್ಸ ಬೇಕಾಗಿ ಮಾಡಿದ ಈ ಅನುಲ್ಲಾರಿಯಲ್ಲಿ ನಿಮ್ಮ ನೋಟೀಸುಗಳ ಬಗ್ಗೆ ತಾರೀಕು 26.7.72 ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao

Advocate for Petitioners

Puttur, 6—7—72

ನೋಟೀಸು

ಪುತ್ತೂರು IIIrd Addl Munsiff ಕೋರ್ಟಿನಲ್ಲಿ

R. R. C. 156/72

ಸುಶೀಲಮ್ಮ..................ಅರ್ಜಿದಾರ

ಅಮ್ಮಿಯಾನ ಜಲಜಾಕ್ಷಿ ಕೂಡಾ...ಎದ್ರಿರು

ಎದ್ರಿರು 2. ಕಮಲಾ—ಶಾಂತಪ್ಪ ಸಸಲ್ಯರ ಹೆಂಡತಿ—ಉಜಿರೆ ಗ್ರಾಮ.

3. ಗಣಪತಿ—ಶಿಟ್ಟಣ್ಣ ಮಾಸ್ತರರ ಮಗ, Madras Hotel Cannaught Circus, New Delhi

ಸದ್ರಿ 2, 3ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,

70—71ನೇ ವರ್ಷಕ್ಕೆ ಅರ್ಜಿದಾರಳು ಗೇಣಿ ಕೇಳಿ ನಿಮ್ಮ ಕೂಡ ಕೂಡಾ ಮಾಡಿದ್ದ ಮೇಲಿನ ಅರ್ಜಿ ತಾ. 4—8—72ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao

Advocate for Petitioner

Puttur, 6—7—72

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ, ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

(ಮೂರನೇ ಪುಟದಿಂದ)

ಲೆಗಳ ಆಣಬೆಗಳೆದ್ದಂತೆಯೇ ಆಗ ಜೂನಿಯರ್ ಕಾಲೇಜುಗಳ ಬೆಳೆ ಹೆಚ್ಚುವುದು ಸುತರಾಂ ಸಾಧ್ಯ.

ಈ ಜೂನಿಯರ್ ಕಾಲೇಜುಗಳನ್ನು 'ಜೂಟು' ಎಂದು ಕರೆದರು ಕೆಲವರು. 'ಜೂ' (ಮೃಗಾಲಯ)ವೆಂದರು ಇನ್ನು ಕೆಲವರು. ಮೂರು ವರ್ಷಗಳವರೆಗೆ ಸರಕಾರದ ಧನಸಹಾಯವಿಲ್ಲವೆಂಬ ನಿಯಮದಿಂದಾಗಿ ಮೊದಲನೆಯ ಹೆಸರು ಸಾರ್ಥಕವಾಗುತ್ತದೆ. ಬೋಧನೋಪಕರಣಗಳು—ಅಧ್ಯಾಪಕರ ಸಂಬಂಧದಲ್ಲಿನ ನಿಯಮಗಳು ಒಂದೊಂದಾಗಿ ಸಡಿಲಾಗುತ್ತ ಬರುವಾಗ ಎರಡನೆಯದೇ ಅನ್ವರ್ಥಕವಾಗುತ್ತದೆ. ಈ ಜೂಗಳಲ್ಲಿ ನಡೆಯುತ್ತಿರುವ ಜೂಜು ಸಮಾಜಕ್ಕೆ-ಮುಖ್ಯವಾಗಿ ಶಿಕ್ಷಣರಂಗಕ್ಕೆ ಆರೋಗ್ಯದಾಯಕವಾಗುತ್ತದೆಂದು ನಂಬಲು ಯಾವ ಕಾರಣವೂ ಇಲ್ಲ. ವಿದ್ಯಾರ್ಥಿಗೆ ತನ್ನ ಮನೆಗೆ ತುಸು ಕಡಿಮೆ ದೂರದಲ್ಲಿ ಪಿ.ಯು.ಸಿ. ತರಗತಿಗೆ ಹೋಗುವ ಅವಕಾಶವೊಂದು ದೊರೆಯಿತೆಂಬ ಅಲ್ಪ ಸಮಾಧಾನ ಬಿಟ್ಟರೆ, ಜೂನಿಯರ್ ಕಾಲೇಜುಗಳನ್ನು ದಾನಮಾಡಿದ ವಿಧಾನ ತೃಪ್ತಿಕರವಿಲ್ಲ. ಮೂರು ವರ್ಷಗಳವರೆಗೆ ತಲೆ-ಕಾಲು ಹೊಡೆಯಲು ಇವು ವಿದ್ಯಾರ್ಥಿಗಳನ್ನೂ ಅವರ ಹೆತ್ತವರನ್ನೂ ಸುಲಿಯದೆ ಹೋದರೆ ಬದುಕುವುದಿಲ್ಲ. ಇದರಿಂದ ಯಾರಿಗೆ ಏನು ಲಾಭ?

● ●

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 481/71 in C. C. 199/65

State of Mysore—
Petitioner

Ramakrishna Barithaya
—Respondent

ಬೆಳ್ತಂಗಡಿ ತಾಲೂಕು ಉಜ್ರೆ ಗ್ರಾಮದ ಉಜ್ರೆಯಲ್ಲಿರುವ ಲಕ್ಷ್ಮೀನಾರಾಯಣ ಬಾರಿತ್ತಾಯರ ಮಗ, ರಾಮಕೃಷ್ಣ ಬಾರಿತ್ತಾಯ, ಪೋಸ್ಟು ಉಜ್ರೆ. ದ. ಕ. ಇವರಿಗೆ—

ಮೇಲ್ಕಾಣಿಸಿದ ಅಮಲ್ದಾರಿಯಲ್ಲಿ ನಿಮ್ಮ ಹಕ್ಕಿನ ಆಸ್ತಿಯ ಏಲಂ ಬಗ್ಗೆ ಏಲಂ ಇಸ್ತಿಹಾರಿನ ಶರ್ತ ನಿರ್ಣಯಿಸುವ ಬಗ್ಗೆ ಮೇಲ್ಕಾಣಿಸಿದ ಅಮಲ್ದಾರಿಯು ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ತಾ. 8-8-1972ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇರುತ್ತದೆ. ನೀವು ತಾ. 8-8-72 ಕ್ಕೆ ಬೆಳಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮೂಲಕ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(By Order of Court)

Pulu. Narayana Bhat
Advocate for Petitioner

ಬೆಳ್ತಂಗಡಿ, 6—7—1972

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 480/71 in C. C. 200/65

State of Mysore—
Petitioner

Ramakrishna Barithaya
—Respondent

ಬೆಳ್ತಂಗಡಿ ತಾಲೂಕು ಉಜ್ರೆ, ಗ್ರಾಮದ ಉಜ್ರೆಯಲ್ಲಿರುವ ಲಕ್ಷ್ಮೀನಾರಾಯಣ ಬಾರಿತ್ತಾಯರ ಮಗ, ರಾಮಕೃಷ್ಣ ಬಾರಿತ್ತಾಯ, ಪೋಸ್ಟು ಉಜ್ರೆ. ದ ಕ. ಇವರಿಗೆ—

ಮೇಲ್ಕಾಣಿಸಿದ ಅಮಲ್ದಾರಿಯಲ್ಲಿ ನಿಮ್ಮ ಹಕ್ಕಿನ ಆಸ್ತಿಯ ಏಲಂ ಬಗ್ಗೆ ಏಲಂ ಇಸ್ತಿಹಾರಿನ ಶರ್ತ ನಿರ್ಣಯಿಸುವ ಬಗ್ಗೆ ಮೇಲ್ಕಾಣಿಸಿದ ಅಮಲ್ದಾರಿಯು ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ತಾ. 8-8-1972ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇರುತ್ತದೆ. ನೀವು ತಾ. 8-8-1972ಕ್ಕೆ ಬೆಳಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮೂಲಕ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(By Order of Court)

Pulu. Nayarana Bhat
Advocate for Petitioner

ಬೆಳ್ತಂಗಡಿ, 6-7-72

ತಿಳಿದಿರಬೇಕಾದ ಸಂಗತಿ

ಜಗತ್ತಿನ ಅಧ್ಯಕ್ಷರುಗಳು

1) ಭಾರತ—ವಿ. ವಿ. ಗಿರಿ
2) ಅಮೇರಿಕಾ—ನಿಕ್ಸನ್
3) ಬಂಗ್ಲಾ—ಅಬು ಸೈಯದ್ ಚೌಧುರಿ
4) ಪಶ್ಚಿಮ ಪಾಕಿಸ್ತಾನ—ಜುಲ್ಫಿಕರ್ ಅಲಿ ಭುಟ್ಟೋ
5) ಈಜಿಪ್ಟ್—ಅನ್ವರ್ ಸಾದತ್
6) ಇಂಡೋನೇಷ್ಯ—ಸುಹಾರ್ತೊ
7) ಫಿಲಿಪೈನ್ಸ್—ಫರ್ಡಿನಾಂಡ್ ಮಾರ್ಕೋಸ್
8) ಚೀನಾ—ಮಾವೋತ್ಸೆತುಂಗ್
9) ಇಟಲಿ—ಲಿಯೋನ್
10) ಲಿಬಿಯಾ—ಮುವಾಮ್ಮಾರ್ ಗದ್ದಾಫಿ
11) ರಷ್ಯ—ಪೊಡ್ಗೋರ್ನಿ
12) ತೈವಾನ್—ಚಿಯಾಂಗ್‌ಕೈಶೇಕ್
13) ಕಾಂಬೋಡಿಯಾ—ಲಾನ್‌ಲಾಲ್
14) ದಕ್ಷಿಣ ವಿಯೆಟ್ನಾಂ—ನ್ಗುಯೆನ್ ವಾನ್ ಥಿ
15) ಟರ್ಕಿ—ಸೆವ್ದತ್ ಸುನಾಯ್
16) ಜೆಕೋಸ್ಲಾವಿಯಾ—ಲುಡ್ವಿಗ್ ಸ್ವೊಬೋದ್
17) ಮಾರಿಟಾನ್—ಮೊಕ್ತಾರ್ ಒಲ್ದ್ ದಾದಾ
18) ಜಾಂಬಿಯಾ—ಕೆನೆತ್ ಕೌಂಡಾ

ಸಂಗ್ರಾಹಕ—

ಶ್ರೀ ಐ. ಎಚ್. ಶಾಂತಾರಾಮ ಶೆಟ್ಟಿ

● ●

ದೇಶದಲ್ಲಿ 488 ಉದ್ಯೋಗ ವಿನಿಮಯ ಕೇಂದ್ರಗಳು

* ದೇಶದಲ್ಲಿ ಈಗ 488 ಉದ್ಯೋಗ ವಿನಿಮಯ ಕೇಂದ್ರಗಳಿವೆ.

* ಈ ಪೈಕಿ 51, ವಿಶ್ವವಿದ್ಯಾನಿಲಯಗಳ ಉದ್ಯೋಗ ಮಾಹಿತಿ ಹಾಗೂ ಮಾರ್ಗದರ್ಶನ ಕೇಂದ್ರಗಳು. 15 ವೃತ್ತಿ ಹಾಗೂ ಕಾರ್ಯನಿರ್ವಾಹಕರ ಉದ್ಯೋಗ ವಿನಿಮಯ ಕೇಂದ್ರಗಳು ಹಾಗೂ ಏಳು, ಗಣಿಗಳ ಉದ್ಯೋಗ ವಿನಿಮಯ ಕಚೇರಿಗಳು.

* ಪ್ರಾಜೆಕ್ಟ್‌ಗಳಿರುವ ಸ್ಥಳದಲ್ಲಿ ಉದ್ಯೋಗ ಮಾಹಿತಿ ನೀಡುವುದಕ್ಕಾಗಿ 10 ಉದ್ಯೋಗ ವಿನಿಮಯ ಕೇಂದ್ರಗಳಿವೆ.

*ಅಂಗವಿಕಲರಿಗಾಗಿ ಹತ್ತು ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

* ಪ್ಲಾಂಟೇಶನ್ ಕಾರ್ಮಿಕರಿಗಾಗಿಯೇ ಒಂದು ವಿಶೇಷ ಉದ್ಯೋಗ ವಿನಿಮಯ ಕೇಂದ್ರವಿದೆ.

* ಇವು ಅಲ್ಲದೆ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳಲ್ಲಿ ಉದ್ಯೋಗದ ಬಗ್ಗೆ ಮಾಹಿತಿ ನೀಡುವ 199 ಕೇಂದ್ರಗಳಿವೆ.

'ಕನ್ನಡ ಸಾಹಿತ್ಯ ಸಂಘ'ದ ಉದ್ಘಾಟನೆ

ಇದೇ ಕಳೆದ ತಾ 2ರಂದು ಮಂಗಳೂರಿನ ಸಂತ ಜೋಸೆಫರ ಸೆಮಿನರಿಯಲ್ಲಿ ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು 'ಕನ್ನಡ ಸಾಹಿತ್ಯ ಸಂಘ'ವನ್ನು ಉದ್ಘಾಟಿಸಿದರು ಮಂಗಳೂರಿನ ಬಿಷಪರು ಪ್ರಧಾನ ಅತಿಥಿಯಾಗಿ ಭಾಗವಹಿಸಿದ್ದರು.

ಶ್ರೀ ಹೆಗ್ಗಡೆಯವರು ಉದ್ಘಾಟಿಸುತ್ತಾ, ಆಧುನಿಕ ಮಾನವನಿಗೆ ಧರ್ಮ ಅಪ್ರಸಕ್ತವಲ್ಲ. ಮಾನವ ಜೀವನಕ್ಕೆ ಸಂವಿಧಾನ ಇದ್ದಂತೆ ಅದು ಅವನಿಗೆ ದಾರಿ ತೋರಿಸುತ್ತದೆ. ಮಾನವನ ನೈತಿಕ ನಡವಳಿಕೆಯ ಸೂತ್ರವಾಗಿ ಅದು ವರ್ತಿಸುತ್ತದೆ, ಎಂದರು.

ಪ್ರಚಲಿತ ವರ್ಷಕ್ಕೆ ಕನ್ನಡ ಸಾಹಿತ್ಯ ಸಂಘದ ನಿರ್ದೇಶಕರಾಗಿ ಸ್ವಾಮಿ ವಾಲ್ಟರ್ ಫೆರ್ನಾಂಡೀಸ್, ಕಾರ್ಯದರ್ಶಿಯಾಗಿ ವೆಲೆರಿಯನ್ ಕ್ಯಾಸ್ತಲಿನೊ, ಕನ್ನಡ ಪ್ರಾಧ್ಯಾಪಕರಾಗಿ ವಿದ್ವಾನ್ ಶ್ರೀ ಕೆ. ಎಸ್. ಪದ್ಮನಾಭಾಚಾರ್ಯರು ನೇಮಕ ಗೊಂಡಿರುವರು.

ಸಮಾರಂಭದ ಅಂಗವಾಗಿ ದಿವ್ಯ ಬಲಿಪೂಜೆಯನ್ನು ಭಾರತೀಯ ರೀತಿಯಲ್ಲಿ ಬಹು ಆಕರ್ಷಕ ಹಾಗೂ ಭಾವನಾಮಯವಾಗಿ ಏರ್ಪಡಿಸಲಾಗಿತ್ತು.

ಹಿಂದೂ ಜೂ. ಕಾಲೇಜಿಗೆ ಅನುಮತಿ

ಶಿರ್ವ ಹಿಂದೂ ಹಾಯರ್ ಸೆಕೆಂಡರಿ ಶಾಲೆಯನ್ನು ಜ್ಯೂನಿಯರ್ ಕಾಲೇಜಾಗಿ ಪರಿವರ್ತಿಸಲು ಪಿ. ಯು. ಸಿ. ಬೋರ್ಡಿನ ಅನುಮತಿ ದೊರಕಿರುವುದೆಂದು ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಸೇಫ್ ಡಿಪಾಜಿಟ್ ಲಾಕರ್

ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ

ESTD. 1906

ಕಾರ್ಪೊರೇಷನ್ ಬ್ಯಾಂಕ್ ಲಿಮಿಟೆಡ್

ಭೂತಪೂರ್ವ
(ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್)

ರಥಬೀದಿ, ಮಂಗಳೂರು — ಫೋನ್ ನಂ. 6057
ಕಂಕನಾಡಿ, ಮಂಗಳೂರು — ಫೋನ್ ನಂ. 7312
ಪುತ್ತೂರು, ಫೋನ್ ನಂ. 164

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. 9/1968; Ex. C. 98/1970

ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮ್ಯಾನೇಜರು— ಅರ್ಜಿದಾರರು

ಮತ್ತು

ಮಧ್ವ ಗೋವಿಂದರಾವ್ ಕೂಡಾ— ಎದ್ರಿರು

ಇವರೊಳಗೆ

ಎದ್ರಿರು—

(10) ರಾಂಭಟ್ಟ ಶೆಟ್ಟಿ-ಜನ್ನಿ ಶೆಟ್ಟಿಯ ಮಗಳು—ಕಾರ್ಕಳ ತಾಲೂಕು ಇಟ್ಟೆ ಗ್ರಾಮದ ಬಾಳಿಕೆಗುತ್ತು.

(14) ಟೋನಿ ಮೊಂತೇರೋ-ಜುವಾಂ ಮೆಂತೋಸ್‌ರ ಮಗ—ಕಾರ್ಕಳ ತಾಲ್ಲು ಬೆಳ್ಮಣ್ಣು ಗ್ರಾಮದ ಪಾಲ್ಡಿ.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ ಅಮಲ್ದಾರಿಯಲ್ಲಿ ಡಿಕ್ರಿ ಹೋಲ್ಡರರು ದಾಖಲು ಮಾಡಿದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವರೆ ತಾರೀಕು 31-7-1972ಕ್ಕೆ ಯಿಟ್ಟಿದೆ. ಆಕ್ಷೇಪಣೆಯೇನಾದರೂ ಇದ್ದರೆ ಆ ದಿವ್ಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು.

By Order

K. Balachandra Rao
Advocate for Petitioners

Udipi, 10—7—1972

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

O. S. 2/1965; Ex. C. 45/1971

ಕಮಲ ಬಾಯಿ ಕೂಡಾ— ಅರ್ಜಿದಾರಳು

ಮತ್ತು

ಲಕ್ಷ್ಮೀನಾರಾಯಣ ರಾವ್ ಕೂಡಾ
—ಎದ್ರಿರು

ಯಿವರೊಳಗೆ

ಎದ್ರಿರು—

(6) ಜಾನಕಿ ಅಮ್ಮ—ರಾಮಕೃಷ್ಣ ರಾಯರ ಮಗಳು, ಉಡ್ಪಿ ತಾಲೂಕು ಪಾದೆಬೆಟ್ಟು ಗ್ರಾಮದಲ್ಲಿರುವವಳು.

(8) ಸರಸ್ವತಿ ಅಮ್ಮ— ಉಡ್ಪಿ ತಾಲ್ಲು ಉಳಿಯಾರಗೋಳಿ ಗ್ರಾಮದಲ್ಲಿರುವವಳು.

ಸದರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ ಡಿಕ್ರಿ ಯ ಪ್ರಕಾರ ಬರತಕ್ಕ ನಿವೃತ್ತಿಗಳನ್ನು ಬಸೂಲುಮಾಡಿಕೊಳ್ಳುವರೆ ನೀವು ಪಗೈರೆರ ಮೇಲೆ ಮಾಡಿದ ಅಮಲ್ದಾರಿಯು ತಾರೀಕು 5-8-1972ಕ್ಕೆ ಯಿಟ್ಟಿದೆ. ಉಜ್ರಾಪ್ಪೇನು ವಂಥಾದ್ದಿದ್ದರೆ ಆ ದಿವ್ಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕೋರ್ಟಿನ ಹುಕುಂ ಪ್ರಕಾರ

K. Balachandra Rao
Advocate for Decree Holder

Udipi, Dated 10-7-1972

(ಎರಡನೇ ಪುಟದಿಂದ)

ಅವರು ಹಿಂದೆ ಸರಿಯುವುದನ್ನು ಕಂಡು, ತನ್ನ ಚೂಣಿಯನ್ನು ಹುರಿದುಂಬಿಸಿ ಅರಿಕೇಸರಿ ಅವರ ಮೇಲೆರಗಿದ.

ಬಪ್ಪರಸನಿಗೆ ಇದಿರು ನಿಂತು ಕಾದುವುದಿರಲಿ, ತನ್ನ ಸೈನ್ಯವನ್ನು ಸುರಕ್ಷಿತ ಸ್ಥಳಕ್ಕೆ ಒಯ್ಯುವುದೂ ಪ್ರಯಾಸವೆನಿಸಿತು.

ಹೇಗೆ ಪಲಾಯನ ಬೆಳೆಸುವುದೆಂಬುದನ್ನು ಯೋಚಿಸುತ್ತ ಮುಹೂರ್ತಕಾಲ ಆತ ಅಲ್ಲಾಡದೆ ತನ್ನ ಕುದುರೆಯ ಮೇಲೆ ಕುಳಿತ.

ಯೋಚನಾ ನಿಮಗ್ನನಾಗಿದ್ದ ಆವನಿಗೆ, ಸುತ್ತು ನಡೆಯುತ್ತಿದ್ದ ಘಟನೆಗಳ ಪರಿವೆಯಿರಲಿಲ್ಲ.

ಅನ್ಯ ಮನಸ್ಕನಾಗಿದ್ದ ಅವನತ್ತ ಅರಿಕೇಸರಿ ತನ್ನಶ್ವವನ್ನು ಜಗ್ಗಿದ. ಕ್ಷಣಾರ್ಧದಲ್ಲಿ ಅವರಿಬ್ಬರೂ ಮುಖಾಮುಖಿಯಾದರು.

ಬಪ್ಪರಸನ ಚಿತ್ತ ಪ್ರವೃತ್ತಿಯ ಹೊಲಬು ಅರಿಕೇಸರಿಗೆ ಸಿಗಲಿಲ್ಲ.

ಅರೆ ನಿಮಿಷವನ್ನೂ ಹಾಳು ಮಾಡದೆ ಆತ ಕೈಯಲ್ಲಿನ ಖಡ್ಗವನ್ನು ಬೀಸಿದ ಇದಾವುದನ್ನೂ ನಿರೀಕ್ಷಿಸದೆ ಕುದುರೆಯ ಮೇಲೆ ಕುಳಿತಿದ್ದ ಬಪ್ಪರಸನ ರುಂಡ, ಮುಂಡದಿಂದ ಬೇರೆಯಾಗಿ ಭೂಮಿಗೆ ಬಿತ್ತು.

ಅವನು ಧರೆಗುರುಳಿದ್ದೇ ತಡ, ಅವನ ತುಕುಡಿ ದಿಕ್ಕಾಪಾಲಾಯಿತು. ವಿಜಯೋನ್ಮಾದದ ಭರದಲ್ಲಿ ಅರಿಕೇಸರಿಯ ಸೈನ್ಯ ಮುನ್ನುಗ್ಗಿ ಬಾದಾಮಿಯ ಕೋಟೆಯನ್ನು ಕೈವಶ ಮಾಡಿಕೊಂಡಿತು. ಬಪ್ಪರಸನ ಸಾವಿನಿಂದ ಹತಾಶನಾದ ಕಕ್ಕರನ ಸೋಲನ್ನೊಪ್ಪಿಕೊಂಡು, ಕಾಲಿಗೆ ಬುದ್ಧಿ ಹೇಳಿದ.

೨೮

'ಮಾತಿನಂತೆ ನಡೆದುಕೊಂಡೆ. ಶತ್ರು ಸಂಹಾರವಾಯಿತು. ನಿಮ್ಮ ಅಧಿಕಾರ ಸ್ಥಿರವಾಯಿತು. ಅಗತ್ಯ ಬಿದ್ದರೆ ಹೇಳಿ ಕಳುಹಿಸಿ. ನಾನಿನ್ನು ಬರುತ್ತೇನೆ ಆಜ್ಞಾಜ.'

ಹೊರಟು ನಿಂತ ಅರಿಕೇಸರಿ ವಿಜಯಾದಿತ್ಯರ ಅನುಮತಿ ಬೇಡಿದ.

'ನಿನ್ನಿಂದ ಇಷ್ಟೂ ನೆರವೇರಿತು. ಅದನ್ನಾಡುವುದಕ್ಕೆ ಒಂದು ಬಾಯಿ ಸಾಲದು. ನೀನು ಪಟ್ಟ ಶ್ರಮ ವಹಿಸಿಕೊಂಡ ತೊಂದರೆ, ಅದನ್ನು ನಾವೂ ನಮ್ಮ ಪೀಳಿಗೆಯವರೂ ಸ್ಮರಣೆಯಲ್ಲಿಟ್ಟುಕೊಳ್ಳಬೇಕು. ನಿನಗೆ ನಾವು ಕೃತಜ್ಞರು.'

'ನಾನು ವಚನ ಕೊಟ್ಟೆ. ವಚನ ಪಾಲನೆಗೆ ಹೆಣಗಿದೆ. ಮಾಡಿದ್ದು ಅಷ್ಟರಲ್ಲಿ ಇದೆ. ನನ್ನ ಪಾಲಿನ ಕೆಲಸ ಮಾಡಿ ಮುಗಿಸಿದೆ. ಅದಕ್ಕೆ ಅನ್ಯರ ಶಿಫಾರಸು ಅನಗತ್ಯ.'

'ನಿರಪೇಕ್ಷ ಭಾವದಿಂದ ನೀನು ಮಾಡಿದ್ದನ್ನು ನೆನಸಿ ಕೊಳ್ಳದೆ ಹೋದರೆ ನಮ್ಮ ಭಾಗಕ್ಕೆ ಯಾವ ನರಕ ಕಾದಿದೆಯೋ?'

'ಈಗ ಈ ಮಾತು ಬೇಡ. ಛಿನ್ನವಾದ ನಾಡನ್ನು ಪುನಃ ಕಟ್ಟುವ ಕೆಲಸ ಮಾಡಬೇಕು. ಆಗ ಮಾಡಿದ ಶ್ರಮ ಸಾರ್ಥಕವಾಗುತ್ತದೆ. ಈ ದಿಶೆಯಲ್ಲಿ ನಿಮ್ಮ ದೃಷ್ಟಿ ಹರಿಯಿಸಿ.'

'ಯುದ್ಧ ಮಾಡಬೇಕಾಗಿ ಬಂತು, ಮಾಡಿದ್ದೇವೆ. ಗೆಲ್ಲಲೇ ಬೇಕಾಗಿತ್ತು, ಗೆದ್ದಾಯಿತು. ಈಗ ನನಗಾವುದರಲ್ಲೂ ಆಸಕ್ತಿ ಉಳಿದಿಲ್ಲ. ಗೆದ್ದು ಕೊಟ್ಟವ ನೀನು ಅದನ್ನು ಕಟ್ಟುವ ಭಾರವೂ ನಿನ್ನದೇ.'

'ಅಲ್ಲಿದ್ದುಕೊಂಡು ನಾನಿದನ್ನು ಸಾಧಿಸಲಾರೆ. ಇಲ್ಲಿ ಉಳಿಯಲು ನನಗೆ ಇಷ್ಟವಿಲ್ಲ. ಜನ ಆಡಿಕೊಳ್ಳಲು ಎಡೆಯಾಗುತ್ತದೆ. ನನ್ನ ಸ್ವಾರ್ಥ ಸಾಧನೆಗೆ ನಿಮ್ಮನ್ನು ದಾಳವಾಗಿ ಬಳಸಿದೆ ಎಂಬ ಸಣ್ಣ ಮಾತು ಕೇಳಬೇಕಾದೀತು.'

'ಹೇಳಬೇಕಾದ ನಾನೇ ಇರು ಎನ್ನುವಾಗ ಆ ಮಾತು ಏಳುವುದೇ ಇಲ್ಲ.'

'ನೀವು ಹೇಳದಿರಬಹುದು. ನಿಮ್ಮ ಜನ? ಅವರ ಗಂಟಲನ್ನೊತ್ತಿ ಹಿಡಿಯುವ ಅಧಿಕಾರ ನಮಗಿಲ್ಲವಷ್ಟೆ.'

'ನನ್ನ ಜನ—? ಹಾಗೆ ಹೇಳಿಸಿ ಕೊಳ್ಳುವವರು ಒಬ್ಬರೂ ಬದುಕಿ ಉಳಿಯಲಿಲ್ಲ. ಈ ಯುದ್ಧದ ನೆಪದಲ್ಲಿ ಎಲ್ಲರೂ ಸ್ವರ್ಗ ಸೇರಿದರು. ಇನ್ನು ಕರೆದರೂ ಬರುವಂತಿಲ್ಲ.'

'ಅವರ ಪಾಪ ಅವರನ್ನು ನುಂಗಿತು.'

'ಅವರು ಮಾಡಿದ ಪಾಪಕ್ಕೆ ಅವರು ಹೋದರೆಂಬುದು ನಿಜ. ಆದರೆ ನಾವು ಗೈದ ಪಾಪಕ್ಕೆ ನಾವೆಲ್ಲಿಗೆ ಹೋಗಲಿದೆಯೋ? ಆ ಚಿಂತೆ ನನ್ನನ್ನು ಕೊರೆಯುತ್ತಿದೆ.'

'ನಾವೇನು ಮಾಡಬಾರದ್ದು ಮಾಡಿರುವುದು?'

'ಅದನ್ನು ಕಾಲ ನಿರ್ಧರಿಸಬೇಕು. ನನಗೆ ತಿಳಿದಂತೆ ಬಂಧು ಸಂಹನನ ಮಾಡಿದ್ದೇನೆ. ಸರ್ವತ್ರ ಜನ ನಮ್ಮ ಕೃತ್ಯದಿಂದ ನೊಂದಿದ್ದಾರೆ. ನೊಂದು ಶಪಿಸಿದ್ದಾರೆ. ಅದು ನಮ್ಮನ್ನು ತಟ್ಟೀತು.'

ಸ ವಾ೯ ಪ೯ ೧

'ಸೋತವರು ಹಲ್ಲು ಕಡಿಯುತ್ತಾರೆ. ಜೀರ್ಣೇಂದ್ರಿಯಾಗದಾಗ ಹಿಡಿಶಾಪ ಕೊಡುತ್ತಾರೆ. ಅದಕ್ಕಂಜಿದರೆ ಹೇಗೆ? ಇದನ್ನು ಮೊದಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದೆ. ಆಗ ಒಪ್ಪಿಕೊಂಡಿದ್ದರೆ ಈ ಹನನವನ್ನು ತಪ್ಪಿಸಬಹುದಿತ್ತು. ತುಟಿ ಮೀರಿದ್ದಕ್ಕೆ ಈಗ ಅತ್ತು ಫಲವಿಲ್ಲ.'

ನೀನಲ್ಲದಿದ್ದರೆ ನಾನಿದನ್ನು ಮಾಡಲು ಮನ ತೆರುತ್ತಿರಲಿಲ್ಲ.'

'ನನ್ನ ತಲೆಯ ಮೇಲೆಯೇ ಗೂಬೆ ಕೂರಿಸಲು ಹೊರಟಿರಲ್ಲ. ನೀವೇ ಹೀಗೆ ಹೇಳಹೊರಟಲ್ಲಿ ಅನ್ಯರು ಆಡುವುದರಲ್ಲಿ ಆಶ್ಚರ್ಯವೇನಿದೆ? ಇನ್ನು ನಿಮ್ಮ ಮಾತಿಗೆ ಪ್ರತಿಹೇಳಲಾರದೆ, ಇಲ್ಲೇ ನೆಲಸಿದರೆ ತಲೆ ಎತ್ತು ವಂತೆಯೇ ಇಲ್ಲ.'

'ತಾಳ್ಮೆಯಿಂದ ಹೇಳುವುದನ್ನಾದರೂ ಕೇಳು. ಅನಂತರ ಬೇಕಾದ ತೀರ್ಮಾನ ತೆಗೆದುಕೊಳ್ಳುವಿಯಂತೆ.'

'ನೀವು ಹೇಳುವುದೂ ಬೇಡ. ನಾನು ಕೇಳುವುದೂ ಬೇಡ.'

ಹೀಗೆ ನುಡಿದು ಅರಿಕೇಸರಿ ಹೊರಡಲನುವಾದ.

ಅವನ ಕೈಹಿಡಿದು ಹತ್ತಿರಕ್ಕೆಳೆದುಕೊಂಡು ವಿಜಯಾದಿತ್ಯ—

'ನೀನು ನೊಂದಿರುವಿ. ನನಗಾಗಿ ಸರ್ವಾರ್ಪಣ ಮಾಡಿದೆ. ನನ್ನ ಮಾತು ನಿನ್ನನ್ನು ಶಲ್ಯದಂತೆ ಚುಚ್ಚಿರಬೇಕು. ನಿನಗೆ ನನ್ನ ಮಾತಿನ ಹಿನ್ನೆಲೆಯರಿತಿದ್ದರೆ ಈ ರೀತಿ ಉದ್ರಿಕ್ತನಾಗುತ್ತಿರಲಿಲ್ಲ.'

'ಫಲೇಚ್ಛೆಯಿಂದು ಕಪಾಳಕ್ಕೆರಡೇಟು ಬಿಗಿದಿದ್ದರೂ ನನಗಿಷ್ಟು ಸಂಕಟವಾಗುತ್ತಿರಲಿಲ್ಲ. ಇಷ್ಟು ಮಾಡಿ ಈ ಮಾತು ಕೇಳುವಂತಾಯಿತೇ ಎಂಬ ದುಃಖದಿಂದ ನಾನು ದಗ್ಧನಾಗಿದ್ದೇನೆ.'

'ನನ್ನದೋ ಮರುಭೂಮಿ. ಆಶೋತ್ತರಗಳು ನಶಿಸಿಹೋಗಿವೆ. ರಾಜ್ಯ ಪ್ರಾಪ್ತಿಗಾಗಿ ನಡೆಸಿದ ಘೋರಣ ಹೋಮದಿಂದ ಮನಸ್ಸು ಕಲಕಿದೆ. ಪಾಪಕ್ಷಾಲನೆಯ ದಾರಿಯನ್ನು ಹುಡುಕುತಿದ್ದೇನೆ. ಭೋಗ ಭಾಗ್ಯ ತೃಣ ಸಮಾನವೆನಿಸಿದೆ. ರಾಜ್ಯವನ್ನು ಆಳುವ, ಬೆಳೆಸುವ ಬಯಕೆ ಬಯಲಾಗಿದೆ. ಈಗ ಈ ಹೃದಯ ತುಡಿಯುತ್ತಿರುವುದು ಶಾಂತಿಗಾಗಿ—ಅದರೆ ರುದ್ರ ಭೂಮಿಯ ಶಾಂತಿಯನ್ನಲ್ಲ. ಅದಕ್ಕಾಗಿಯೇ ಸೂಚಿಸಿದ್ದು, ಬಾಹುಬಲದಿಂದ ಪಡೆದುದನ್ನು ನೀನು ಅನುಭವಿಸು ಎಂದು. ಈ ರಾಜ್ಯ, ಕೋಶ ಇನ್ನು ಮುಂದೆ ನನ್ನದಲ್ಲ, ನಿನ್ನದು. ಪರರನ್ನು ಅರಗಿಸಿಕೊಳ್ಳುವ ಶಕ್ತಿ ನನಗಿಲ್ಲ. ಅದು ಬೇಕಾಗಿಯೂ ಇಲ್ಲ.'

ಈ ಮಾತು ಕೇಳಿ ಅರಿಕೇಸರಿ ದಿಗ್ಭ್ರಾಂತನಾದ.

ಈ ಮಾತುಗಳನ್ನು ಆಡಿದವರು ನಿಜಕ್ಕೂ ವಿಜಯಾದಿತ್ಯರೇ?

ಅವನಿಗೆ ತನ್ನ ಕಿವಿಗಳನ್ನೇ ನಂಬುವುದು ಕಷ್ಟವಾಯಿತು.

ಬೆಚ್ಚಿ ಬಿದ್ದು ಆತ 'ಇದೇನು ರಾಗ ಬರುವಾಗ ತಂತಿ ಕಡಿಯಿತು ಎನ್ನುವ ನುಡಿ'

'ನಾನು ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಅದನ್ನು ಬದಲಾಯಿಸುವ ಮಾತೇ ಈಗ ಏಳುವುದಿಲ್ಲ. ಚಾಳುಕ್ಯ ಸಾಮ್ರಾಜ್ಯ, ಸಾಮ್ರಾಜ್ಯದ ಪ್ರಜೆಗಳ ಯೋಗಕ್ಷೇಮ ನಿನಗೆ ಕೊಡಿದ್ದು. ಶುಭ ಮುಹೂರ್ತ ಗೊತ್ತು ಪಡಿಸಿದ್ದೇನೆ. ಅಂದು ಪರಂಪರಾಗತವಾಗಿ ಬಂದ ಕಿರೀಟವನ್ನು ನಿನ್ನ ಶಿರದಲ್ಲಿಟ್ಟು, ಹೊರೆ ಇಳಿಸಿಕೊಳ್ಳುವ ವ್ಯವಸ್ಥೆ ಮಾಡಿದ್ದೇನೆ. ನಿನ್ನ ನ್ನೊಪ್ಪಿಸುವುದೊಂದು ಬಾಕಿಯುಳಿದಿದೆ'

'ದಯವಿಟ್ಟು ಕ್ಷಮಿಸಬೇಕು. ನಿಮ್ಮ ಕೈಯಿಂದ ಕಿತ್ತುಕೊಂಡುದನ್ನು ನಿಮಗೆ ಕೊಡಿಸುವುದು ನನಗೆ ಮುಖ್ಯವಿತ್ತು. ಅದನ್ನು ದೈವ ನನ್ನಿಂದ ಮಾಡಿಸಿತು. ನಿಮಗೊಪ್ಪಿಸಿದ್ದನ್ನು, ನಿಮ್ಮಿಂದ ಅಪಹರಿಸಲು, ನೀವು ಒಪ್ಪಿದರೂ ನನ್ನ ಮನಸ್ಸು ಒಡಂಬಡದು. ಅದು ಧರ್ಮ ಸಮ್ಮತವೂ ಅಲ್ಲ.'

'ಅಪಹರಿಸುವ ಪ್ರಶ್ನೆಯೇ ಹುಟ್ಟುವುದಿಲ್ಲ. ನಾನೇ ತಿಲಾಂಜಲಿ ಕೊಡಲು ಸಿದ್ಧವಿರುವಾಗ, ನಿನಗಲ್ಲದೆ ಇನ್ನಾರಿಗೆ ಅದನ್ನು ಧಾರೆಯೆರೆಯಲಿ? ನನ್ನದೆನ್ನುವುದಕ್ಕೆ ನೀನೇ ಈಗ ಉತ್ತರಾಧಿಕಾರಿ. ನನ್ನ ಪಶ್ಚಾತ್ ನಿನಗೇ ದಕ್ಕಬೇಕಾದುದನ್ನು ಇಂದೇ ಕೊಟ್ಟರೆ ಯಾರು ಆಕ್ಷೇಪಿಸುವವರು! ನೀನು ಸಮ್ಮತಿಸದಿದ್ದರೆ ನಾನಿಂದೇ ಯಾತ್ರೆ ಹೊರಡುತ್ತೇನೆ. ಆಗ ನನ್ನ ನಿರ್ಗಮನದಿಂದ ತೆರವಾದ ಸಿಂಹಾಸನಕ್ಕೆ ನೀನು ಬರಬೇಕಾಗುತ್ತದೆ. ಅದಕ್ಕಿಂತ ಇದು ಚೆನ್ನ ಎಂಬುದು ನನ್ನ ತಿಳುವಳಿಕೆ'

ಮಹಿಷಸ್ಸಿಲ್ಲದ ಮನಸ್ಸಿನಿಂದ ಅರಿಕೇಸರಿ ವಿಜಯಾದಿತ್ಯನ ಆಗ್ರಹಕ್ಕೆ ತಲೆಬಾಗಿದ.

ಅಂದೇ ಅರಮನೆಯ ಕಾರುಭಾರಿಗಳನ್ನು ಬರಮಾಡಿಕೊಂಡು ವಿಜಯಾದಿತ್ಯ ಮೂರ್ಧಾಭಿಷೇಚನೆಯ ಸಿದ್ಧತೆಯನ್ನು ಅದ್ದೂರಿಯಿಂದ ನಡೆಸಲು ಆದೇಶ ನೀಡಿದ.

(ಮುಂದುವರಿಯುವುದು)

ಇನ್ನೊಂದು

NAVAYUGA 13-7-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಇದನ್ನು ನೀವು ತಿಳಿಯಿರಿ—
ಭಯಂಕರ ಮಾರಕಾಸ್ತ್ರ: ಸಿಗರೇಟ್

ವಿಶ್ವ ಆರೋಗ್ಯ ಸಂಸ್ಥೆಯು ಇತ್ತೀಚೆಗೆ ನಡೆಸಿದ "ನಿಮ್ಮ ಹೃದಯದಿಂದ ನಿಮ್ಮ ಆರೋಗ್ಯ" ಎಂಬ ಪ್ರಚಾರ ಚಳುವಳಿಯಿಂದ ಧೂಮಪಾನವು ಹೃದಯಾಘಾತ, ಶ್ವಾಸಕೋಶದ ಕ್ಯಾನ್ಸರ್, ಶ್ವಾಸನಾಳದ ಊತ ಮುಂತಾದ ರೋಗಗಳಿಗೆ ಕಾರಣವೆಂಬುದು ನಿಸ್ಸಂಶಯವಾಗಿ ಗೊತ್ತಾಗಿದೆ.

ಧೂಮಪಾನದಿಂದ ಹೃದಯದ ಬಡಿತ ಹೆಚ್ಚಾಗಿ, ರಕ್ತದ ಒತ್ತಡ ಏರಿ, ಚರ್ಮದ ರಕ್ತನಾಳಗಳು ಸಂಕುಚಿತಗೊಳ್ಳುತ್ತವೆಂಬುದು ವೈಜ್ಞಾನಿಕ ಅಧ್ಯಯನದಿಂದ ಗೊತ್ತಾಗಿದೆ. ಕೈ ಮತ್ತು ಕಾಲಿನ ಬೆರಳುಗಳಲ್ಲಿರುವ ರಕ್ತನಾಳಗಳು ವಿಶೇಷತಃ ಸಂಕುಚಿತಗೊಳ್ಳುತ್ತವೆ. ಧೂಮಪಾನಿಗಳೆಲ್ಲರೂ ಅವರು ಸೇದುವ ಸಿಗರೇಟಿನ ಪ್ರಮಾಣಕ್ಕನುಗುಣವಾಗಿ ರಕ್ತ—ನಾಳಗಳ ರೋಗಕ್ಕೆ ತುತ್ತಾಗುತ್ತಾರೆ. ಹೆಚ್ಚು ಧೂಮಪಾನ ಮಾಡುವವರು ಇತರರಿಗಿಂತ ಹೆಚ್ಚು ಪ್ರಮಾಣದಲ್ಲಿ ಹೃದಯಾಘಾತದಿಂದ ಮರಣ ಹೊಂದುತ್ತಾರೆ.

ಅತಿ ಹೆಚ್ಚಾಗಿ ಧೂಮಪಾನಾಸಕ್ತರು ಇತರರಿಗಿಂತ ಮೂರು ಪಟ್ಟು ಹೆಚ್ಚು ಪ್ರಮಾಣದಲ್ಲಿ ಹೃದಯಾಘಾತದಿಂದ ಸಾಯುತ್ತಾರೆಂಬ ಅಂಶ ಆರೆಂಟು ವರ್ಷಗಳ ಅವಧಿಯಲ್ಲಿ ಸಹಸ್ರಾರು ಧೂಮಪಾನಿಗಳ ಬಗ್ಗೆ ಕೈಗೊಂಡ ಅಧ್ಯಯನದಿಂದ ಗೋಚರವಾಗಿದೆ.

ಧೂಮಪಾನ ತಡೆಗಟ್ಟಲು ಅನೇಕ ಕ್ರಮಗಳು

ಧೂಮಪಾನ ತಡೆಗಟ್ಟಲು ಕಳೆದ ನಾಲ್ಕು ಶತಮಾನಗಳಿಂದ ಅನೇಕ ಶಿಕ್ಷಾ ಕ್ರಮಗಳನ್ನು ಕೈಗೊಂಡಿದ್ದರೂ ಧೂಮಪಾನದ ದುರಭ್ಯಾಸ ಕಡಿಮೆಯಾಗಲಿಲ್ಲ. 17ನೇ ಶತಮಾನದಲ್ಲಿ ಕ್ರೈಸ್ತ ಜಗದ್ಗುರುಗಳು ಧೂಮಪಾನಿಗಳನ್ನು ಗಲ್ಲಿಗೇರಿಸುವುದಾಗಿ ಬೆದರಿಸಿದರು. ಚೀನೀಯರು 1638ರಲ್ಲಿ ಹೊಗೆಸೊಪ್ಪಿನ ಕಳ್ಳ ವ್ಯಾಪಾರ ಮಾಡುವವರ ಶಿರಚ್ಛೇದನ ಮಾಡುವುದಾಗಿ ಆಜ್ಞೆ ಹೊರಡಿಸಿದರು. ಈ ಸಮಯದಲ್ಲಿ ಯುರೋಪಿನ ವೈದ್ಯರು ಮನುಷ್ಯನ ಆರೋಗ್ಯದ ಮೇಲೆ ಹೊಗೆಸೊಪ್ಪಿನ ದುಷ್ಪರಿಣಾಮದ ಕುರಿತು ಸಂಶೋಧನೆ ನಡೆಸಿದರು. ಈ ಶತಮಾನದ ಆರಂಭದಲ್ಲಿ ಅಮೆರಿಕಾದ 12 ರಾಜ್ಯಗಳು ಸಿಗರೇಟಿನ ವಿರುದ್ಧ ನಿಷೇಧಾಜ್ಞೆ ಹೊರಡಿಸಿದುವು. ಆದರೆ, ಕ್ರಮೇಣ ಈ ಆಜ್ಞೆಯನ್ನು ವಾಪಸು ಪಡೆಯಬೇಕಾಯಿತು.

ಧೂಮಪಾನಿಗಳಿಗೆ ಹೊಗೆಸೊಪ್ಪಿನ ಸೇವನೆಯಿಂದಾಗುವ ಅನಾರೋಗ್ಯದ ಬಗ್ಗೆ ಎಚ್ಚರಿಕೆ ನೀಡಿದರೂ, ಪ್ರತಿಬಂಧಕ ಶಾಸನ ಜಾರಿಗೆ ತಂದರೂ ಏನೊಂದೂ ಪರಿಣಾಮವಾಗದಿರುವುದು ಶೋಚನೀಯ.

ಇತ್ತೀಚೆಗೆ ಅನೇಕ ದೇಶಗಳಲ್ಲಿ ಸಿಗರೇಟ್ ಸೇವನೆ ವಿರೋಧವಾಗಿ ಶಾಸನ ಮಾಡಿ ರೇಡಿಯೊ ಹಾಗೂ ಟೆಲಿವಿಷನ್ ಮೂಲಕ ಸಿಗರೇಟ್ ಜಾಹೀರಾತುಗಳನ್ನು ರದ್ದು ಮಾಡಿ, ಸಿಗರೇಟ್ ಪ್ಯಾಕ್‌ಗಳ ಮೇಲೆ "ಧೂಮಪಾನದಿಂದ ಆರೋಗ್ಯಕ್ಕೆ ಹಾನಿ" ಎಂಬ ಎಚ್ಚರಿಕೆಯನ್ನು ಮುದ್ರಿಸಲಾಗಿದೆ. ಬ್ರಿಟನ್‌ನಲ್ಲಿ ವಾಣಿಜ್ಯ ಟೆಲಿವಿಷನ್ ಪ್ರಸಾರದಲ್ಲಿ ಸಿಗರೇಟ್ ಜಾಹಿರಾತನ್ನು ನಿಲ್ಲಿಸಲಾಗಿದೆ. ಇಟಲಿಯಲ್ಲಿ ಸಿಗರೇಟ್ ಜಾಹಿರಾತನ್ನು ನಿಲ್ಲಿಸಲಾಗಿದೆ. ನಾರ್ವೆಯಲ್ಲೂ ಇದೇ ಕ್ರಮ ಕೈಗೊಳ್ಳಲಾಗಿದೆ. ಅಮೆರಿಕಾ ಮತ್ತು ಕೆನಡಾದ ಟೆಲಿವಿಷನ್ ಜಾಹಿರಾತಿನಲ್ಲಿ ವಾದ—ಪ್ರತಿವಾದ ಮಂಡನೆಗೆ ಅವಕಾಶ ಕಲ್ಪಿಸಲಾಗಿದೆ. ಈ ರೀತಿ ಉಪಯುಕ್ತ ಮಾಹಿತಿ ಸಂಗ್ರಹಿಸಲಾಗಿದೆ.

ಅತ್ಯಲ್ಪ ಪ್ರಗತಿ

ವಿಶ್ವ ಮಟ್ಟದಲ್ಲಿ ಧೂಮಪಾನ ನಿಷೇಧದ ಪ್ರಗತಿ ಅತ್ಯಲ್ಪವಾಗಿದೆ. ಇಂದು ಬ್ರಿಟನ್‌ನಲ್ಲಿ ಲಕ್ಷಾಂತರ ಜನರು ಧೂಮಪಾನ ಕೈಬಿಟ್ಟಿದ್ದಾರೆ. ಇದೀಗ ಅಮೆರಿಕಾದಲ್ಲಿ ಸಿಗರೇಟ್ ಸೇವನೆ ಇಳಿಮುಖವಾಗುತ್ತಿದೆ. ಆದರೂ ಮರಣ ಪ್ರಮಾಣ ಮತ್ತು ವ್ಯಾಧಿಗ್ರಸ್ತರ ಸಂಖ್ಯೆಯಲ್ಲಿ ಏನೊಂದೂ ಬದಲಾವಣೆಯಾಗಿಲ್ಲ.

ಸಿಗರೇಟ್ ಸೇವನೆ ನಿಲ್ಲಿಸುವುದರಿಂದ ಹಳೆಯ ಹಾಗೂ ಹೊಸ ಧೂಮಪಾನಿಗೆ ಶೀಘ್ರ ಪರಿಹಾರ ದೊರಕುತ್ತದೆ. ಕೆಮ್ಮು ಮತ್ತು ಶ್ವಾಸನಾಳದ ಊತ ಕಡಿಮೆಯಾಗುತ್ತದೆ. ಮಧ್ಯವಯಸ್ಸಿನವರು ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದ ಹಠಾತ್ತಾಗಿ ಮರಣ ಹೊಂದುವ ಸಂಖ್ಯೆ ಕಡಿಮೆಯಾಗುತ್ತದೆ.

ಅರ್ಧಪಾಲು ಧೂಮಪಾನಿಗಳು ಕೆಲವು ಸನ್ನಿವೇಶಗಳಲ್ಲಿ ಅಭ್ಯಾಸ ಬಲದಿಂದ ಸಿಗರೇಟ್ ಸೇದುವರೇ ಹೊರತು ಅದರ ವ್ಯಾಮೋಹದಿಂದಲ್ಲ ಎಂಬ ಅಂಶ ಬ್ರಿಟನ್ನಿನಲ್ಲಿ ಮಾಡಿದ ಅಧ್ಯಯನದಿಂದ ಗೋಚರವಾಗಿದೆ. ಇಂತಹ ಧೂಮಪಾನಿಗಳು ಜನ ಸಮೂಹದ ರೀತಿ ನೀತಿಗಳಿಗೆ ಹೊಂದಿಕೊಳ್ಳಲು ಸಿಗರೇಟ್ ಸೇದುತ್ತಾರೆ. ಧೂಮಪಾನದ ದುಶ್ಚಟಕ್ಕೆ ಅತಿಯಾಗಿ ಬಲಿಯಾಗದಿರುವವರಿಗೆ ಧೂಮಪಾನದ ಅಹಿತಕರ ಪರಿಣಾಮದ ಬಗ್ಗೆ ತಿಳುವಳಿಕೆ ನೀಡಿದರೆ ಅವರು ಅಭ್ಯಾಸವನ್ನು ನಿಲ್ಲಿಸ ಬಹುದು. ಈ ಅಭ್ಯಾಸ ಕೈ ಬಿಡುವಾಗ ತಾತ್ಕಾಲಿಕವಾಗಿ ತೊಂದರೆಯಿರುವುದರಿಂದ ಅದನ್ನೆದುರಿಸಲು ಅರ್ಧಪಾಲು ಜನ ಹೆದರುತ್ತಾರೆ. ಇನ್ನು ಅರ್ಧಪಾಲು ಧೂಮಪಾನಿಗಳು ಚಟವನ್ನು ಕೈಬಿಡಲು ಪ್ರಯತ್ನಿಸಿ ಸೋತಿದ್ದಾರೆ.

ಧೂಮಪಾನ ಕೈಬಿಡಲು ಕರೆ

ಆರೋಗ್ಯ ದೃಷ್ಟಿಯಿಂದ ಧೂಮಪಾನ ಕೈಬಿಡುವುದು ಒಳ್ಳೆಯದೆಂಬ ಸಂದೇಶವನ್ನು ಮನಗಾಣಿಸಿದರೆ, ಅದರಿಂದಾಗುವ ಹಣದ ವೆಚ್ಚದ ಮಿತವ್ಯಯವನ್ನು ತೋರಿಸಿದರೆ ಅದ್ಭುತ ಪರಿಣಾಮವಾಗುತ್ತದೆ. ದಿನಕ್ಕೆ 20 ಸಿಗರೇಟು ಸೇವಿಸುವುದರ ವೆಚ್ಚದಲ್ಲಿ ಕುಟುಂಬದ ಸದಸ್ಯರಿಗೆ ಉತ್ತಮ ಆಹಾರ ನೀಡಬಹುದು.

ಸಿಗರೇಟ್ ಸೇವನೆಯ ಚಟ ಕೈಬಿಡಬೇಕೆಂಬ ಮಾತಿನ ಸತ್ಯವನ್ನು ವಿಶ್ವದಾದ್ಯಂತ ಮನಗಂಡಿಲ್ಲ. ವಿಶ್ವದಾದ್ಯಂತ ವರ್ಷಕ್ಕೆ 45 ಲಕ್ಷಟನ್ ಹೊಗೆಸೊಪ್ಪು ಬೆಳೆಯಲಾಗುತ್ತಿದೆ. ಭಾರತದಲ್ಲಿ ಈ ಉತ್ಪಾದನೆಯ ಪ್ರಮಾಣ ಎಂದರೆ 3.5 ಲಕ್ಷಟನ್ ಹೊಗೆಸೊಪ್ಪನ್ನು ವರ್ಷಂಪ್ರತಿ ಬೆಳೆಯಲಾಗುತ್ತಿದೆ. ಭಾರತ ವರ್ಷಕ್ಕೆ 35ಕೋಟಿ ರೂಪಾಯಿ ಬೆಲೆಯ ಹೊಗೆಸೊಪ್ಪನ್ನು ರಫ್ತು ಮಾಡುತ್ತಿದೆ. ಹೊಗೆಸೊಪ್ಪಿನಿಂದ ಸರ್ಕಾರಕ್ಕೆ ಹೆಚ್ಚಿನ ವರಮಾನವಿರುವಾಗ ಧೂಮಪಾನದ ವಿರುದ್ಧ ನೀಡುವ ಎಚ್ಚರಿಕೆ ನಿಷ್ಫಲವಾಗುತ್ತದೆ.

ಸಿಗರೇಟಿನ ಮುಂದಿನ ತುದಿಯ ಧೂಮಪಾನ ಕೆಡಕು ಮಾಡದು. ಏಕೆಂದರೆ ಫಿಲ್ಟರಿನಲ್ಲಿ ಟಾರ್ ಮತ್ತು ನಿಕೋಟಿನ್ ಹೀರಿಹೋಗುತ್ತವೆ. ಎರಡನೇ ಹಂತದಲ್ಲಿ ನಿಕೋಟಿನ್ ಮತ್ತಿತರ ರಾಸಾಯನಿಕಗಳು ಶ್ವಾಸಕೋಶದ ಸೂಕ್ಷ್ಮ ನಳಿಕೆಯಲ್ಲಿ ಸೇರಿ ಉರಿಯುವಂತೆ ಮಾಡುತ್ತವೆ. ತೈಲ ರೂಪದ ಟಾರ್ ಶ್ವಾಸ ನಳಿಕೆಯಲ್ಲಿ ಕೆಸರಿನಂತೆ ಸಂಗ್ರಹವಾಗುತ್ತದೆ. ಗಟ್ಟಿ ಕಫ ಹುಟ್ಟುತ್ತದೆ. ಟಾರ್ ಮತ್ತು ಕಫದ ಮಿಶ್ರಣವು ಶ್ವಾಸಕೋಶದೊಳಗೆ ಹೋಗಿ ಕೊಳೆಯಲಾರಂಭಿಸುತ್ತದೆ.

ಕೊನೆಯ ಹಂತದಲ್ಲಿ ಟಾರ್ ದ್ರವವು ಶ್ವಾಸಕೋಶದಲ್ಲಿ ಸಂಗ್ರಹಗೊಂಡು ಹೆಚ್ಚಿನ ಕಫವನ್ನು ಉತ್ಪತ್ತಿ ಮಾಡುತ್ತವೆ. ಆದ್ದರಿಂದ ಸಿಗರೇಟಿನ ಮೊದಲ ಭಾಗ ಸೇವಿಸಿ ಉಳಿದುದನ್ನು ಬಿಸಾಡಿದರೆ ಅಪಾಯ ಕಡಿಮೆಯಾಗುತ್ತದೆ.

● ●

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ
ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2--00

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ : ರೂ. 1--50

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಪಿ. ವಿ. ಸಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮೂಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

G. and W.C. 2/1972.

ಪಾಂಡುರಂಗ ಶೆಣ್ಯಾ .... ಅರ್ಜಿದಾರ,

ವಿ ರು ದ್ಧ

1 M. ಸೀತಾರಾಮ ಪ್ರಭು
2 ಅಕ್ಕು ಬಾಯಿ
3 ಗೋಪಾಲಕೃಷ್ಣ ರಾವ್
4 ದೇವದಾಸ್ ರಾವ್
} ಎದುರಿದಾರರು.

ಯವರೊಳಗೆ

ಪ್ರ ಕ ಟ ಣೆ.

ಕಾರ್ಕಳ ತಾಲೂಕು ಇನ್ನಂಜೆ ಗ್ರಾಮದ ಆಸ್ತಿಗೆ ನೀಲಕಂಠ ಪ್ರಭುಗಳು ತನ್ನ ಆಸ್ತಿಗಳನ್ನು ವ್ಯಾಸರ ಕಮಲಾಕ್ಷಿಗೆ ಹಕ್ಕು ಸ್ಥಾಪಿಸಿ 8, 4ನೇ ಎದುರಿದಾರರನ್ನು ಪ್ರೊಪರ್ಟಿ ಗಾರ್ಡಿಯನ್ ಆಗಿ ಮಾಡಿದ ಬಾಬಿನಲ್ಲಿ ಅವರ ಗಾರ್ಡಿಯನ್‌ಶಿಪ್ ರದ್ದುಪಡಿಸಿ ಅರ್ಜಿದಾರನನ್ನೂ 2ನೇ ಎದುರಿಳನ್ನೂ ಪ್ರೊಪರ್ಟಿ ಗಾರ್ಡಿಯನ್ ಆಗಿ ನೇಮಿಸಬೇಕಾಗಿ ಕೊಟ್ಟ ಅರ್ಜಿಯು ತಾ: 29-7-1972ಕ್ಕೆ ಇಟ್ಟಿರುವದರಿಂದಾ ಆಕ್ಷೇಪ ಹೇಳತಕ್ಕವರು ಆ ದಿವಸ 11 ಗಂಟೆಗೆ ಯಿಾ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಏಕಪಕ್ಷವಾಗಿ ಅರ್ಜಿ ತೀರ್ಮಾನಿಸಲ್ಪಡುವುದು

(ಕೋರ್ಟಿನ ಹುಕುಂ ಪ್ರಕಾರ)

B. Yogishwara Holla
Advocate for Petitioner.

ಉಡುಪಿ; 4-7-1972.

Edited, Printed & Published by K. H. Shetty at the Navayuga Press, Udipi, S. India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ

ವಿಶ್ವಾಸದ ಸಂಸ್ಥೆ:

ನಾಯಕ
ಆಯುರ್ವೇದಾಶ್ರಮ

ಕಟಪಾಡಿ, ದ. ಕ.

ನವಯುಗ

ಮೇಲ್ತರಗತಿಯ
ಉಪಾಹಾರ
ಮಂದಿರ

ಉಡುಪಿ
ಶ್ರೀಕೃಷ್ಣ ವಿಲಾಸ

ಕಾರವಾರ

ಸಂಪುಟ ೩೧
ಸಂಚಿಕೆ ೪೬

NAVAYUGA

20-7-1972

ಭೂಮಿತಿಗೆ—

ವ್ಯಕ್ತಿಯೇ ಘಟಕವಾಗಬೇಕು

ಹಲವು ಬಗೆಯಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದ್ದ ಕರ್ನಾಟಕದ ಭೂಮಿತಿಯ ಪ್ರಶ್ನೆಗೆ ರಾಜ್ಯ ಸಚಿವ ಸಂಪುಟ ನಿರ್ಧಾರದ ಉತ್ತರ ಹುಡುಕಿದೆ. ಬಹುಕಾಲದಿಂದಲೂ "ಸ್ಟಾಂಡರ್ಡ್" ಎಕ್ರೆ ಎಂಬ ಕಲ್ಪಿತ ಮಾನದಂಡದಿಂದ ಈ ಮಿತಿಯನ್ನು ಗೊತ್ತುಮಾಡಲು ನಿರ್ಧರಿಸಲಾಗಿತ್ತಾದರೂ ಈಗ "ಸ್ಟಾಂಡರ್ಡ್" ಪದವನ್ನು ಕೈಬಿಡಲಾಗಿದೆ. ಇದರಿಂದ ಹಿಡುವಳಿದಾರರಿಗೆ ಲಾಭವಾದೀತೇ?

ಹೊಸ ನಿರ್ಧಾರದಂತೆ ವರ್ಷವಿಡಿ ನೀರು ದೊರೆಯುವ, ಎರಡು ಬೆಳೆ ಬೆಳೆಯುವ ತರಿಭೂಮಿ ಹಿಡುವಳಿಯೊಂದರ ೧೦ ಎಕ್ರೆ; ಒಂದು ಬೆಳೆಗೆ ನೀರು ದೊರೆಯುವ ಭೂಮಿಯಾದರೆ ೧೫ರಿಂದ ೧೮ಎಕ್ರೆ; ಮಳೆ ನೀರನ್ನೇ ಅವಲಂಬಿಸಿರುವ ಭೂಮಿಯಾದರೆ ಇದು ೨೫ ಎಕ್ರೆ. ಖುಷ್ಕಿ ಭೂಮಿಯ ಮಿತಿ ೫೪ರಿಂದ ೫೪ ಎಕ್ರೆಗಳ ವರೆಗೆ, ಆಯಾ ಪ್ರದೇಶದಲ್ಲಿ ಬೀಳುವ ಮಳೆಯನ್ನು ಅವಲಂಬಿಸಿಕೊಂಡು. ರಾಜ್ಯ ಸಚಿವ ಸಂಪುಟದ ಈ ನಿರ್ಧಾರವೂ ಕ್ರಾಂತಿಕಾರಕವಾದದ್ದೇ. ಭೂಮಿತಿಯನ್ನು ಈ ರೀತಿಯ ಮಾನದಲ್ಲಿ ವಿಧಿಸುವ ವಿಚಾರಧಾರೆ ಹೊಸತು.

ಇತರ ಮೂಲಗಳಿಂದ ವಾರ್ಷಿಕ ರೂ. ೧೨ಸಾವಿರ ಆದಾಯವಿರುವವರಿಗೆ ಭೂಹಿಡುವಳಿ ಹೊಂದುವ ಅಧಿಕಾರವಿಲ್ಲ. ಬೇಸಾಯಗಾರನೆಂದರೆ ತನ್ನ ಹಿಡುವಳಿಯಿಂದ ಹತ್ತು ಮೈಲು ಪರಿಸರದೊಳಗಿರುವವನೆಂದು ಅರ್ಥ. ಪ್ಲಾಂಟೇಶನ್‌ಗಳಿಗೆ ಈ ಅರ್ಥವಿವರಣೆಗಳು ಅನ್ವಯಿಸುವುದಿಲ್ಲ.

ಈ ಮೇಲಿನ ಅಂಶಗಳ ಆಧಾರದಲ್ಲಿ ರಾಜ್ಯದ ಸಮಗ್ರ ಭೂ ಮಸೂದೆ ರೂಪುಗೊಳ್ಳುವುದು. ೧೯೭೨ರ ಅಂತ್ಯದೊಳಗೇನೇ ಈ ಮಸೂದೆಯನ್ನು ಶಾಸನವನ್ನಾಗಿ ಮಾಡಬೇಕೆಂಬುದು ಸಚಿವ ಸಂಪುಟದ ಮನೀಷೆ. ರಾಜ್ಯದ ಶಾಸಕರಲ್ಲಿ ಹಲವರು ೧೦ ಸ್ಟಾಂಡರ್ಡ್ ಎಕ್ರೆಗಳ ಮಿತಿಯನ್ನು ಏರಿಸಲು ಪ್ರಯತ್ನಿಸುತಿದ್ದರೆಂಬುದನ್ನು ಗಮನಕ್ಕೆ ತಂದುಕೊಂಡಾಗ, ರಾಜ್ಯ ಸಚಿವ ಸಂಪುಟದ ನಿರ್ಧಾರದ ಬಗ್ಗೆ ಶಾಸಕರ (ಆ. ಕಾಂಗ್ರೆಸ್) ಪ್ರತಿಕ್ರಿಯೆ ಯೇನು ಎಂಬುದು ಗಮನಾರ್ಹ.

ಈ ನಡುವೆ ಇನ್ನೊಂದು ಮಾತು ಕೇಳಿಬಂದಿದೆ, ಭೂಮಿತಿ-ನಗರಾಸ್ತಿ ಮಿತಿಗಳ ಸದ್ಯದ ನಿಯೋಜಿತ ಮಸೂದೆಗಳಿಗೆಲ್ಲ 'ಕುಟುಂಬ'ವೇ ಆಧಾರ. ಕುಟುಂಬ ಎಂದರೆ, ಗಂಡ-ಹೆಂಡತಿ ಮತ್ತು ಅವರ ಮೂವರು ಪ್ರಾಯಸ್ಥ ಮತ್ತು/ಅಥವಾ ಅಪ್ರಾಯಸ್ಥ ಮಕ್ಕಳು. (ಹಿಂದೂ ಸಂಪ್ರದಾಯದಂತೆ ಮಕ್ಕಳಿಗೆ ಪ್ರಾಯ ಬಂದೊಡನೆಯೇ ಪೈತೃಕ ಆಸ್ತಿಯಲ್ಲಿ ಪಾಲು ಪಡೆಯಲು ಅವರು ಹಕ್ಕುದಾರರು. ಆದರೆ ಕ್ರೈಸ್ತ-ಮುಸ್ಲಿಂಗಳಲ್ಲಿ ಮಕ್ಕಳಿಗೆ ತಾಯ್ತಂದೆಯರ ಆಸ್ತಿಯ ಮೇಲೆ ಅಧಿಕಾರಬರಬೇಕಾದರೆ, ಅವರು ಸಾಯಬೇಕು.)ಇಲ್ಲಿ ಒಂದು ಸಮಸ್ಯೆಯಿದೆ. ಕುಟುಂಬವನ್ನು ಒಂದು ಘಟಕವನ್ನಾಗಿ ಮಾಡುವುದರಿಂದ ಹೆಂಗಸಿನ ಸ್ವಾತಂತ್ರ್ಯಕ್ಕೆ ಧಕ್ಕೆ ತಟ್ಟುತ್ತದೆಯೆಂಬುದು.

ಉದಾಹರಣೆಗೆ ಸದ್ಯ ಒಂದು ಕುಟುಂಬದಲ್ಲಿ ಗಂಡ-ಹೆಂಡತಿ-ಮಕ್ಕಳು ಎಲ್ಲರೂ ಭೂಮಿಯನ್ನು ಹೊಂದುವ ಅಧಿಕಾರವುಳ್ಳವರು. ಅವರೆಲ್ಲರೂ ಅವಿಭಕ್ತ ಕುಟುಂಬದಲ್ಲಿಯೇ ಉಳಿದುಕೊಂಡಿದ್ದಾರೆ. ಅವರಿಗೆ ಭೂಮಿತಿಯನ್ನು ಹೇರುವಾಗ ಯಾರ ವಶದಲ್ಲಿರುವ ಭೂಮಿಯನ್ನು ಬಿಟ್ಟುಕೊಡಬೇಕು? ಮುಖ್ಯವಾಗಿ ಹೆಂಡತಿ—ಮತ್ತು ಹೆಣ್ಣುಮಕ್ಕಳ ಆರ್ಥಿಕ ಸ್ವಾತಂತ್ರ್ಯಕ್ಕೆ ಇದರಿಂದ ಧಕ್ಕೆ ಬರುವುದಿಲ್ಲವೆ? ಆದುದರಿಂದ ಭೂಮಿತಿ ವಿಧಿಸುವಾಗ ಕುಟುಂಬವನ್ನು ಒಂದು ಘಟಕವಾಗಿ ಇಟ್ಟುಕೊಳ್ಳುವುದರ ಬದಲು ವ್ಯಕ್ತಿಯನ್ನೇ ಒಂದು ಘಟಕವಾಗಿ ಇಟ್ಟುಕೊಳ್ಳಬೇಕು—ಇದು ಮಹಿಳೆಯರ ಆತಂಕ.

ಇದರಲ್ಲಿ ಸತ್ಯಾಂಶವಿಲ್ಲದಿಲ್ಲ; ಇದ್ದೇ ಇವೆ. ತುಸು ಹೆಚ್ಚು ಸತ್ಯಾಂಶವೂ ಇದೆ. ಇದನ್ನು ಒಪ್ಪಿಕೊಳ್ಳುದಾದರೆ, ಭೂಮಿತಿಯ ಸಂಬಂಧದಲ್ಲಿ ಇದುವರೆಗಿನ ಹೆಜ್ಜೆಗಳೆಲ್ಲ ವ್ಯರ್ಥವಾಗುತ್ತವೆ. ಗಂಡಿನಷ್ಟೇ ಅಧಿಕಾರವನ್ನು ಹೆಂಡತಿಗೆ, ಮಗನಷ್ಟೇ ಅಧಿಕಾರವನ್ನು ಮಗಳಿಗೆ ನೀಡುವ ಸ್ತ್ರೀ ಸ್ವಾತಂತ್ರ್ಯ'ವನ್ನು ಅಪಹರಿಸಿ ಅವರನ್ನು ಮತ್ತೆ ಪುರುಷರ ಕೈಗೊಂಬೆಯನ್ನಾಗಿ ಮಾಡಲು ಹವಣಿಸುವುದೆಂದರೆ, ಮುಂದಿಟ್ಟ ಅಡಿಯನ್ನು ಹಿಂದಿಟ್ಟಂತೆಯೇ ಸರಿ—ಇದು ಸತ್ಯಕ್ಕೆ ದೂರವೆಂದು ತಳ್ಳಿ ಹಾಕುವಂತಿಲ್ಲ. ಆಗ, ಒಮ್ಮುಖವಾಗಿದ್ದ ಎಲ್ಲ ಹಿಡುವಳಿಗಳೂ ಪಂಚಮುಖವಾಗುವುದು ತಪ್ಪುವುದಿಲ್ಲ.

೦ ೦ ೦

ತಮಿಳುನಾಡಿನಲ್ಲಿ ರೈತರ ಪ್ರದರ್ಶನ ದ್ರಾಮುಕ ಸರಕಾರದ ನಿರೀಕ್ಷೆಯನ್ನು ಮೀರಿ ಯಶಸ್ವಿ ಪಡೆದದ್ದರಿಂದಲೇ ಅದು ಹಲವೆಡೆ ಗೋಳಿಬಾರು ನಡೆಸಿತು. ಪರಿಣಾಮ ಸ್ವಯಂ ವೇದ್ಯ—ಸಾವು—ನೋವುಗಳು. ತಮ್ಮ ಬೇಡಿಕೆಗಳು ಈಡೇರದೆ ಹೋದರೆ, ಅಸಹಕಾರ ಚಳುವಳಿಯನ್ನು ಆರಂಭಿಸುವುದಾಗಿ ರೈತರು ಸರಕಾರಕ್ಕೆ ಎಚ್ಚರಿಕೆ ಬೇರೆ ಕೊಟ್ಟಿದ್ದಾರೆ.

ತಾನು ನಡೆಸಿದ ಗೋಳಿಬಾರಿನ ಬಗೆಗೆ ಜಿಲ್ಲಾಧೀಶರು ನ್ಯಾಯಾಂಗ ತನಿಖೆ ನಡೆಸಬೇಕೆಂದು ಸರಕಾರ ಆದೇಶ ನೀಡಿದರೂ ಇದನ್ನು ರೈತರು ಸಂಪೂರ್ಣ ಬಹಿಷ್ಕರಿಸಿದ್ದಾರೆ. ಅವರಿಗೆ ಸರ್ವೋಚ್ಚ ನ್ಯಾಯಾಲಯದ ಅಥವಾ ಹೊರ ರಾಜ್ಯಗಳ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ವಿಚಾರಣೆಯಾಗಬೇಕಂತೆ.

ಸರಕಾರ ರೈತರ ಚಳುವಳಿಗೆ ರಾಜ್ಯಕೀಯ ಬಣ್ಣ ಬಳೆಯಲು ಪ್ರಯತ್ನ ನಡೆಸುತ್ತಿದೆ. ತನ್ನ ವಿರೋಧಿ ಪಕ್ಷಗಳೇ ನಡೆದ ಅನಾಹುತಗಳಿಗೆ ಕಾರಣವೆಂದು ಸಿದ್ಧಮಾಡಹೊರಟಿದೆ. ಆದರ ಈ ವರ್ತನೆಯಲ್ಲಿ ಅಸಹಜವಾದದ್ದೇನೂ ಇಲ್ಲ. ರೈತರ ಚಳುವಳಿಯಲ್ಲಿ ರಾಜ್ಯಕೀಯ ಶಕ್ತಿಗಳ ಕೈವಾಡವೇನೂ ಇಲ್ಲವೆಂಬುದನ್ನು ನಂಬಲಾಗುವುದಿಲ್ಲ. ಆದರೂ ರೈತರೆಲ್ಲರೂ ಒಂದಾಗಿ ಸರಕಾರದ ವಿರುದ್ಧ ನಿಂತಿದ್ದಾರೆನ್ನುವಾಗ ತಪ್ಪು ಸರಕಾರದ್ದೇ ಎಂದು ಹೇಳಬೇಕಾಗುತ್ತದೆ. ರೈತರಿಗೆ ಸಮಾಜದ ಬೆಂಬಲವೂ ಸಹಾನುಭೂತಿಯೂ ಸಾಕಷ್ಟು ಲಭಿಸಿದೆಯೆಂಬುದು ನಿರ್ವಿವಾದ.

ಕೇರಳದಲ್ಲಿ ಶ್ರೀ ನಂಬೂದರಿ ಪಾದರ (ಮೊದಲ) ಸರಕಾರ ಅಧಿಕಾರದಲ್ಲಿದ್ದಾಗ, ಅವರ ವಿರುದ್ಧ ಮನ್ನತ್ ಪದ್ಮನಾಭನ್ ಬೃಹತ್ ಪ್ರಮಾಣದ ಚಳುವಳಿಯಾರಂಭಿಸಿದ್ದರು—ಪರಿಣಾಮವಾಗಿ ರಾಷ್ಟ್ರಪತಿಗಳು (ಸರಕಾರವನ್ನು ಮನೆಗೆ ಕಳಿಸಿ) ಅಧಿಕಾರವನ್ನು ತಾವು ಹೊತ್ತುಕೊಂಡರು. ಸದ್ಯಕ್ಕೆ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{8}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ಧಾರಾವಾಹಿ

ಸಮಾರ್ಪಣ

ಸ್ವತಂತ್ರ ಐತಿಹಾಸಿಕ ಕಾದಂಬರಿ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

೨೯

ಈ ಶೀವರ್ಣಾನ ಪಡೆದುಕೊಂಡು ವಾರ ಕಳೆದಿರಲಿಲ್ಲ.

ಅರಮನೆಯಲ್ಲಿ ಎಲ್ಲಿಲ್ಲದ ಸಂಭ್ರಮ.

ಜನತೆಯಲ್ಲಿ ಅಮಿತೋತ್ಸಾಹ.

ಅರಿಕೇಸರಿಯ ಪಟ್ಟಾಭಿಷೇಕದ ಸಿದ್ಧತೆ ಅತ್ಯುತ್ಸಾಹದಿಂದ ನಡೆಯಲಾರಂಭಿಸಿತು. ವಿಜಯಾದಿತ್ಯರೇ ಅದರ ಉಸ್ತುವಾರಿಗೆ ನಿಂತರು.

ಅರಿಕೇಸರಿ ಈ ಸಂಭ್ರಮದ ಸಿದ್ಧತೆಯನ್ನು ಅನಾಸಕ್ತಿಯಿಂದಲೇ ಕಂಡ. ಅವನಿಗೆ ಅದರ ಪರಿವೆಯೇ ಇದ್ದಂತೆ ಕಾಣಲಿಲ್ಲ.

ಆತ ಭಾಗ್ಯ ಬಂತೆಂದು ಹಿಗ್ಗದೆ, ನಿತ್ಯ ಕರ್ಮದಲ್ಲಿ ನಿರತನಾದ.

ಅಂತಹ ಒಂದು ದಿನ—

ತೂಗುಯ್ಯಾಲೆಯಲ್ಲಿ ಕುಳಿತು ಏನನ್ನೋ ಓದುತಿದ್ದ.

ಅವನ ತೊಡೆಯ ಮೇಲೆ ಆಪಸ್ನೇ ಹಾಲೂಡಿಸಿ ಬೆಳೆಸಿದ ಬೆಕ್ಕು ಪವಡಿಸಿತ್ತು. ಅದರ ನುಣುಪಾದ ಮೈಮೇಲೆ ಅವನ ಕೈಯಾಡುತಿತ್ತು. ಅವನ ಬೆರಳುಗಳು ಅದರ ಬೆನ್ನನ್ನು ಮೃದುವಾಗಿ ನೀವುತಿದ್ದವು.

ಯಾರೋ ಹೊರಗೆ ಸುಳಿದಂತೆನಿಸಿತು.

ಆತ ಕಣ್ಣುಗಳನ್ನು ಆ ದಿಕ್ಕಿಗೆ ಓಡಿಸಿದ.

ಅದು ಆ ದಿಕ್ಕಿಗೆ ತಿರುಗಿದ್ದೇ ತಡ, ಅದನ್ನೇ ಕಾಯುತಿದ್ದ ಬಿಚ್ಚುಗತ್ತಿಯ ಸೈನಿಕ ಬಾಗಿ ನಮಸ್ಕರಿಸಿ, "ಸೇನಾಧಿಪತಿಗಳು ಈ ಕಡೆ ಬರುತ್ತಿದ್ದಾರೆ. ಅವರ ಜೊತೆಯಲ್ಲಿ ಕುಮಾರರೂ ಬರುವಂತಿದೆ."

"ಒಳಕ್ಕೆ ಬಿಡು."

"ಅಪ್ಪಣೆ ಪ್ರಭು."

ಹೇಗೆ ಬಂದಿದ್ದನೋ ಹಾಗೇ ಅವನು ಹೊರಟುಹೋದ.

ಅವನು ಸರಿಯುತ್ತಿದ್ದಂತೆಯೇ ಪದ್ಮಪ್ಪ ಹಜಾರವನ್ನು ಪ್ರವೇಶಿಸಿದ. ಅವನ ಕೈ ಹಿಡಿದುಕೊಂಡು ನಡೆದುಬಂದ ಯುವರಾಜ.

"ಬಹಳ ದಿನಗಳಾಯಿತು ಈ ಕಡೆ ದಯಮಾಡಿಸದೆ. ಇಂದು ಬಾರದಿದ್ದರೆ ನಾನೇ ಹೇಳಿಕಳುಹಿಸುವ ಎಂದಿದ್ದೆ. ಸೇನಾಪತಿಗಳಿಗೆ ಅರಮನೆಯ ದಾರಿಯೂ ಮರೆತು ಹೋಯಿತೇನೋ?"

'ಹಾಗೇನೂ ಇಲ್ಲ, ಈ ಕುಮಾರನಿಂದ ತಪ್ಪಿಸಿ ಕೊಳ್ಳುವುದೇ ನನಗೊಂದು ಸಮಸ್ಯೆಯಾಗಿದೆ. ಈತ ನನಗೆ ಗಟ್ಟಿಯಾಗಿ ಅಂಟಿ ಕೊಂಡಿದ್ದಾನೆ. ಅವನು ನನಗೆ ಬಿಡುವೇ ಕೊಡುವುದಿಲ್ಲ.'

"ಏಕೆ ನಿಂತೇ ಇದ್ದೀರಿ. ಕುಳಿತುಕೊಳ್ಳಿ' ಎಂದು ಅರಿಕೇಸರಿ ಉಚಿತಾಸನ ಒಂದರತ್ತ ಬೆಟ್ಟು ತೋರಿಸಿದ."

"ಅವರಿಗೆ ನೀನಷ್ಟು ತೊಂದರೆ ಕೊಡುತ್ತೀಯಾ?"

ಇದು ಅವನು ಅನಂತರ ಕುಮಾರನಿಗೆ ಹಾಕಿದ ಪ್ರಶ್ನೆ.

ಉತ್ತರಿಸಲೂ ಅವಕಾಶ ಕೊಡದೆ ಪದ್ಮಪ್ಪನೇ 'ಅವನೆಲ್ಲಿ ನನಗೆ ತೊಂದರೆ ಕೊಟ್ಟ. ಅವನಿರುವಾಗ ನನಗೆ ಹೊತ್ತು ಹೋಗಿದ್ದೇ ತಿಳಿಯುವು ದಿಲ್ಲ. ಅವನು ಬರಲಿಲ್ಲವೆಂದಾದರೆ ಬಾಳು ಬರಿದೋ ಎನ್ನುವಂತಾಗುತ್ತದೆ."

'ಮನೆ—ಮನಗಳನ್ನು ತುಂಬುವವರು ಮಕ್ಕಳು. ಅವರಿಲ್ಲಿ ಬದುಕು ಬಿಕೋ ಎನ್ನಿಸುತ್ತದೆ.'

"ಈ ಮಗು ಇತರರಂತಲ್ಲ. ಅದರ ಆಟ — ಪಾಠ, ಆಮೋದ—ಪ್ರಮೋದ ಎಲ್ಲ ವಿಚಿತ್ರ."

"ಇಷ್ಟು ದಿನ ನನ್ನನ್ನು ಹೊಗಳಿ ಅಟ್ಟಕ್ಕೇರಿಸಿದಿರಿ. ಈಗಿವನ ಸ್ತುತಿಗೆ ಪ್ರಾರಂಭಿಸಿದಿರೋ, ಇದು ಕವಿಗಳಿಗೆ ಅಂಟಿಕೊಂಡ ಚಾಳಿ. ಹೊಗಳಲು ಯಾರಾದರೂ ಸಿಗುತ್ತಿರಬೇಕು.'

"ಸ್ತುತಿಪಾಠಕರ ಸಂಖ್ಯೆ ಕಡಿಮೆಯಾಯಿತೆಂದು ಪ್ರಭುಗಳಿಗೆ ಅಸೂಯೆ ಏನೋ?'

'ಅಪಾರ್ಥ ಕಲ್ಪಿಸ ಬೇಡಿ ಸೇನಾಪತಿಗಳೇ'

"ನನ್ನ ಜಾಯಮಾನಕ್ಕೆ ಬಂದಿಲ್ಲ.'

'ನಮ್ಮ ಮಕ್ಕಳನ್ನು ನಾವು ಹೊಗಳಲು ಪ್ರಾರಂಭಿಸಿದರೆ ಉಳಿಕೆಯವರಿಂದ ಹೊಗಳಿಸಿ ಕೊಳ್ಳುವ ಅವಕಾಶ ಹೋಗುತ್ತದೆ. ತೆಗಳಲು ಪ್ರಾರಂಭಿಸಿದಿರೋ, ಆ ಮಕ್ಕಳು ಅಗ್ಗವಾಗಿ ಅನ್ಯರಿಂದಲೂ ತೆಗಳಿಸಿ ಕೊಳ್ಳುತ್ತಾರೆ. ಹಿರಿಯರಾದವರಿಗೆ ತಮ್ಮಲ್ಲಿ ಅಭಿಮಾನವಿದೆ ಎಂಬುದು ತಿಳಿದು ಬಂದರೆ ಆ ಮಕ್ಕಳು ದುರಭಿಮಾನಿಗಳಾಗಿ ಹಾಳಾಗುತ್ತಾರೆ. ಅದು ಕಾರಣ ಅವರ ಮುಂದೆ, ಅವರ ಸ್ತುತಿ— ನಿಂದೆಗಳೆರಡೂ ಬೇಡ. ಅದಿರಲಿ ಏನು ಬಂದಿರಿ?'

"ಬರುವ ಅನ್ನಿಸಿತು ಬಂದೆ, ಬರಬಾರದೇನು?"

'ಬಂದುದಕ್ಕಲ್ಲ ನಾನು ಅಂದುದು. ಅನ್ಯಥಾ ಭಾವಿಸ ಬೇಡಿ. ನೀವು ಬರಬೇಕಾದವರು. ಸದಾ ಬರಲೇ ಬೇಕಾದವರು. ಬರುವವರು ಬರದಿದ್ದರೆ ಮನಸ್ಸು ಮುದುಡಿ ಕೊಳ್ಳುತ್ತದೆ. ನೀವು ಸೇನಾಪತಿಗಳು; ಕಾರ್ಯ ಗೌರವದ ಹೊರೆ ಹೊತ್ತುಕೊಂಡೇ ಬರುವವರು. ಏನಾದರೂ ಅವಸರದ ಕೆಲಸ ವಿರಬಹುದೆಂದೂಹಿಸಿ; ಅದನ್ನಿಷ್ಟು ಮುಗಿಸಿ ಬಿಡುವ ಎಂದು ಈ ಮಾತನ್ನಾಡಿದೆ.'

'ಅಂತಹ ತಲೆಹೋಗುವ ಕೆಲಸ ಏನೂ ಇದ್ದಂತೆ ಕಾಣುವುದಿಲ್ಲ'

'ನೀವು ಆರಾಮವಾಗಿರುವುದನ್ನೇ ನಾವು ಕಾಯುತ್ತಿರುವುದು'

'ಅಪ್ಪಾಜಿ'

ಮಾತಿನಲ್ಲಿ ಮಗ್ನರಾಗಿದ್ದ ಅವರನ್ನು ತನ್ನಡೆಗೆ ಸೆಳೆದುಕೊಳ್ಳಲು ಮಗು ನಡುವೆ ಬಾಯಿ ಹಾಕಿತು.

'ಏನಪ್ಪಾ?'

'ಇವರು ತುಂಬ ಒಳ್ಳೆಯವರು'

'ಏಕೋ?'

'ಕತ್ತಿ ಬೀಸುವುದು ಹೇಳಿಕೊಟ್ಟರು. ನಾನೂ ಯುದ್ಧ ಮಾಡಬೇಕಂತೆ'

'ಈಗಲೇ ನಿನ್ನ ತರಬೇತಿಗೆ ಹೊರಟರೋ?'

'ರಾಜರಾದವರೆಲ್ಲ ಯುದ್ಧ ಮಾಡಬೇಕಂತೆ; ಹೌದೇ ಅಪ್ಪಾಜಿ?'

'ನಾವು ರಾಜರೇ ಅಲ್ಲವಲ್ಲೊ'

'ನೀನು ಸುಳ್ಳುಹೇಳುತ್ತೀಯಾ? ನೀನು ರಾಜನ ಮಗ, ನಾಳೆ ರಾಜ ಆಗುವವ. ಅದಕ್ಕೆ ಈ ವಿದ್ಯೆ ಕಲಿಯಬೇಕೆಂದು ಇವರೇ ಹೇಳಿದರು'

'ಎಂತಹ ವಿದ್ಯೆಯೋ? ಯುದ್ಧ ವಿದ್ಯೆ ಕೊಲ್ಲುವ ವಿದ್ಯೆ'

'ನೀನು ರಾಜನಾದ್ದು ಎಲ್ಲರನ್ನೂ ಕೊಂದೇ ಅಪ್ಪಾಜಿ? ರಾಜರಾಗಲು ಕೊಲ್ಲಬೇಕೇ?'

'ಈ ನಿನ್ನ ಪ್ರಶ್ನೆಗೆ ಈ ಗುರುಗಳೇ ಉತ್ತರ ಹೇಳುತ್ತಾರೆ'

'ಅವರು ಆಗಲೇ ನನಗೆ ತಿಳಿಸಿದ್ದಾರೆ'

'ಏನೆಂದು?'

'ಇನ್ನೊಂದು ವಾರದಲ್ಲಿ ಅಪ್ಪಾಜಿ ಕಿರೀಟಧಾರಣೆ ಮಾಡುತ್ತಾರೆ. ಅಂದಿನಿಂದ ನೀನು ಯುವರಾಜ. ಯುವರಾಜ ಆದಮೇಲೆ ನೀನು ಹೀಗೇ ಮಾತನಾಡಬೇಕು, ಹಾಗೇ ಇರಬೇಕು. ಹೀಗೆಲ್ಲಾ ಹೇಳಿದರು, ಅಲ್ಲವೇ ಸೇನಾಪತಿಗಳೇ?'

"ಸೇನಾಪತಿಗಳು ಇವನಿಗೂ ಈ ಗೀಳು ಹಿಡಿಸಿದ್ದಂತೆ ಕಾಣುತ್ತದೆ."

"ಅದು ರಕ್ತಗತವಾಗಿ ಬಂದದ್ದು. ಅದನ್ನು ರೂಪಿಸುವುದಕ್ಕೇ ನಾನು ಪ್ರಯತ್ನಿಸುತಿದ್ದೇನೆ. ನಾನಿನ್ನು ಬರುತ್ತೇನೆ. ಕುಮಾರ! ನೀನು ಅಪ್ಪಾಜಿಯ ಜೊತೆ ಇರು."

"ಆಗಲಿ, ನಾಳೆ ಬರುತ್ತೇನೆ; ಆಗ ಅಭಿಮನ್ಯುವಿನ ಕತೆ ಹೇಳಬೇಕು."

"ನಾಳೆ ತಾನೇ?" ಎಂದು ಪದ್ಮಪ್ಪ ಹೊರಡಲನುವಾದ.

"ಸ್ವಲ್ಪ ಕುಳಿತಿರಿ, ಸೇನಾಪತಿಗಳೇ. ಉಪಹಾರ ಸ್ವೀಕರಿಸಿ ಹೋಗುವಿರಂತೆ."

"ಪ್ರಭು ಚಿತ್ತ."

ಹೊರಗೆ ನಿಂತಿದ್ದ ಸಹರೆಯವನನ್ನು ಕರೆದು. ಉಪಹಾರ ತರುವಂತೆ ಅವನಿಗೆ ಅರಿಕೇಸರಿ ಆಜ್ಞೆ ಮಾಡಿದ.

ಹೆಣ್ಣುಮಗಳೊಬ್ಬಳು ಹಾಲುಹಣ್ಣು ತಂದಿಟ್ಟಳು.

ಬಟ್ಟಲೊಂದನ್ನು ಪದ್ಮಪ್ಪನತ್ತ ಸರಿಸಿ ಅರಿಕೇಸರಿ ಹಾಲಿನ ಲೋಟವೊಂದನ್ನು ಕೈಗೆತ್ತಿಕೊಂಡ. ಎತ್ತಿಕೊಂಡ ಬಟ್ಟಲನ್ನು ತುಟಿಯ ವರೆಗೂ ತೆಗೆದುಕೊಂಡು, ಇನ್ನೇನು, ಕುಡಿಯುವುದರಲ್ಲಿದ್ದ.

ಪದ್ಮಪ್ಪ ಅವನನ್ನು ತಡೆದು, ಬಟ್ಟಲನ್ನು ಕೈಗೆ ತೆಗೆದುಕೊಂಡ. ಹಾಗೆ ಕಿತ್ತುಕೊಳ್ಳುವಾಗ ಬಟ್ಟಲಲ್ಲಿದ್ದ ಹಾಲು ಚೆಲ್ಲಿತು.

"ಪ್ರಭುಗಳು ಮನ್ನಿಸಬೇಕು."

ಗರಹೊಡೆದವನಂತೆ—ಯಾವುದೂ ಅರ್ಥವಾಗದೆ ಅರಿಕೇಸರಿ ಅವನನ್ನೇ ನೋಡುತ್ತ ಕುಳಿತ.

"ಪ್ರಭುಗಳಾದವರು ಏನು ಕೊಟ್ಟರೂ ಪರೀಕ್ಷಿಸಿ ಸೇವಿಸಬೇಕು. ಎಚ್ಚರ ತಪ್ಪಿದರೆ ಜೀವಕ್ಕೇ ಅಪಾಯ. ಪರೀಕ್ಷಿಸದೆ ಲೋಟದಲ್ಲಿದ್ದ ಹಾಲನ್ನು ಸೇವಿಸಹೊರಟಿರಿ. ಮುಂದೂ ಹಾಗೆ ಮಾಡಬಾರದೆಂದು ಲೋಟವನ್ನು ಕೈಯಿಂದುರುಳಿಸಿದೆ. ಏನೂ ತಿಳಿದುಕೊಳ್ಳಬೇಡಿ."

"ಅಪಾರ್ಥ ಗ್ರಹಿಸಲು ಅವಕಾಶವೇ ಇಲ್ಲ. ನೀವು ಸರಿಯಾದ್ದನ್ನೇ ಮಾಡಿದಿರಿ. ಆದರೆ ಸದಾಕಾಲ ಹೀಗೆ ಮುಂಜಾಗ್ರತೆ ವಹಿಸಿ ವರ್ತಿಸುವುದು

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 46

ಸಂಸ್ಥಾಪಕರು:
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ
ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೨೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಸಮಾನ ಶಿಕ್ಷಣಾವಕಾಶ ಪ್ರಜಾಪ್ರಭುತ್ವಕ್ಕೆ ಭೂಷಣ

ಇತ್ತೀಚೆಗೆ ವಿಧಾನ ಸಭೆಯಲ್ಲೊಂದು ಮಾತು ಕೇಳಿಬಂತು — ರಾಜ್ಯದ ಕೃಷಿ ವಿಶ್ವವಿದ್ಯಾಲಯದಲ್ಲಿ ರೈತರ ಮಕ್ಕಳಿಗೆ ಯೋಗ್ಯವಾದ ಪ್ರಮಾಣದಲ್ಲಿ ಅಧ್ಯಯನ ಮಾಡುವ ಅವಕಾಶವನ್ನು ಒದಗಿಸಬೇಕೆಂಬುದು ಹಲವು ಶಾಸಕರ ಅಭಿಪ್ರಾಯ. ಈಗ ಪ್ರವೇಶ ನೀಡಲು ಇರುವ ನಿಯಮಾವಳಿಯಲ್ಲಿ ಅರ್ಹತೆಗೆ ಪ್ರಾಶಸ್ತ್ಯವಿದೆ. ಈ ಅರ್ಹತೆಯು ಕೃಷಿವಿಷಯದಲ್ಲಿಯಲ್ಲ,' ಯಾವುದೋ ಒಂದು ಕನಿಷ್ಠ ವಿದ್ಯಾರ್ಹತೆಯ ಪರೀಕ್ಷೆಯಲ್ಲಿ' ಪಡೆದ ಗುಣಗಳ ಮೇಲೆ ಈ ಅರ್ಹತೆ ಬರಬಹುದು; ಬಾರದೆ ಹೋಗಬಹುದು. ಶಾಸಕರ ಅಭಿಪ್ರಾಯದಲ್ಲಿ ರೈತರ ಮಕ್ಕಳಿಗೆ ಕೃಷಿ ವಿಷಯದಲ್ಲಿ ಆಸಕ್ತಿ, ಅಭಿರುಚಿ ಅಥವಾ ಸಾಮಾನ್ಯ ಜ್ಞಾನ ಹೆಚ್ಚಿದೆ. ಕೃಷಿಕೇತರರ ಮಕ್ಕಳಿಗೆ ಇಂತಹ ಪ್ರಜ್ಞೆಯಿಲ್ಲ; ಇದ್ದರೂ ಅದು ಗೌಣ. ಈ ವಾದವನ್ನು ನಾವು ಒಪ್ಪುವುದು ಎಲ್ಲ ಸಂದರ್ಭಗಳಲ್ಲಿಯೂ ತಪ್ಪಾಗುತ್ತದೆ. ಆಸಕ್ತಿ—ಅಭಿರುಚಿಗಳು ಪೈತೃಕವಾಗಿರುವುದು ಅಸಾಧ್ಯವಲ್ಲವಾದರೂ ಪೂರ್ಣ ಸಾಧ್ಯವಾಗಲಾರದು. ಸಂಸರ್ಗ ಮತ್ತು ವ್ಯಕ್ತಿತ್ವಗಳೂ ಇದನ್ನು ಹುಟ್ಟಿಸುತ್ತವೆ, ಬೆಳಸುತ್ತವೆಯೆಂಬುದನ್ನು ನಾವು ಮರೆಯಲಾಗದು.

ಪ್ರತಿಭೆ ಆರ್ಜಿತ ಸಂಪತ್ತಿಯೆಂಬುದು ಅದು ಪೈತೃಕಸಂಪತ್ತಿಯೆಂಬುದಕ್ಕಿಂತ ಸತ್ಯಕ್ಕೆ ಹೆಚ್ಚು ಹತ್ತಿರವಾಗುತ್ತದೆ. ಹಿಂದೆ ಬ್ರಿಟಿಷ್ ಆಳರಸರ ಆಡಳಿತೆಯಲ್ಲಿ ಸರಕಾರಿ ನೌಕರಿಗೆ ಆಯ್ಕೆ ನಡೆಯುವಾಗ ನೌಕರರ ಮಕ್ಕಳಿಗೆ ಅಗ್ರಪ್ರಾಶಸ್ತ್ಯ ನೀಡುತಿದ್ದ ಪದ್ಧತಿಯಿತ್ತು. ನಮ್ಮ ಶಾಸಕರು ಈಗ ವ್ಯಕ್ತಪಡಿಸಿದ ಅಭಿಪ್ರಾಯಕ್ಕೂ ಬ್ರಿಟಿಷ್ ಆಡಳಿತಗಾರರ ಅಭಿಪ್ರಾಯಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ರೈತರ ಮಕ್ಕಳಿಗೆ ಕೃಷಿ ವಿದ್ಯಾಲಯದಲ್ಲಿ ಪ್ರಾಶಸ್ತ್ಯ ಬಯಸುವ ಕಾರಣದ ಆಧಾರದಲ್ಲೇ ವೈದ್ಯರ ಮಕ್ಕಳಿಗೆ ಮೆಡಿಕಲ್ ಕಾಲೇಜುಗಳಲ್ಲಿ, ಇಂಜಿನಿಯರರ ಮಕ್ಕಳಿಗೆ ಇಂಜಿನಿಯರಿಂಗ್ ಕಾಲೇಜಿನಲ್ಲಿ, ಶಿಕ್ಷಕರ ಮಕ್ಕಳಿಗೆ ಶಿಕ್ಷಣ ಕಾಲೇಜಿನಲ್ಲಿ, ವಕೀಲರ ಮಕ್ಕಳಿಗೆ ಲಾ ಕಾಲೇಜಿನಲ್ಲಿ ಅಗ್ರಪಂಕ್ತಿ ಸಲ್ಲಬೇಕೆಂದು ಹೇಳುವುದು ಅಸಾಧುವಲ್ಲ. ಇದೇ ಇನ್ನೂ ಮುಂದುವರಿದು ಶಾಸಕರ ಮಕ್ಕಳಿಗೇನೇ ಶಾಸಕತನವು ದೊರೆಯಬೇಕೆನ್ನುವ ಮಟ್ಟಿಗೂ ಮುಂದುವರಿಯಬಹುದು. ಗುಣ-ಕರ್ಮಗಳ ಆಧಾರದಲ್ಲಿ ತಲೆದೋರಿದ ಜಾತಿ ಪದ್ಧತಿಯನ್ನು ಕಟುವಾಗಿ ಟೀಕಿಸುವವರೂ ಅದನ್ನು ಪ್ರಗತಿ ವಿರೋಧಿಯೆಂದೂ ಸಮಾಜವಾದ ಕಂಟಕವೆಂದೂ ಉಗ್ಗಡಿಸುವ ಧೀರ ಶಾಸಕರೂ 'ಸರ್ವರಿಗೂ ಸಮಾನಾವಕಾಶ'ವೆಂಬ ಗುರಿಯನ್ನು ತಿಪ್ಪೆಯಲ್ಲಿ ಹೂತಿಟ್ಟು ಹೊಸರೀತಿಯ ವರ್ಗ ಭೇದವನ್ನು ಸಂಸ್ಥಾಪಿಸ ಹೊರಡುವುದು ಖಂಡನಾರ್ಹವೇ ಸರಿ. ವಕೀಲರ ಮಕ್ಕಳು ವಕೀಲರೇ ಆಗುವುದಾದರೆ, ಬ್ರಾಹ್ಮಣನ ಮಗ ಬ್ರಾಹ್ಮಣನಾಗಿಯೇ ಉಳಿದು ಬಂದದ್ದು ಅಪರಾಧವೆಂದು ತಿಳಿಯುವುದು ತಪ್ಪಾಗುತ್ತದೆ. ಯಾರು ಯಾರಿಗೆ ಏನು ಏನು ಕಲಿಯಬೇಕೆಂಬ ಆಸೆಯಿದೆಯೋ ಆ ಆಸೆಯನ್ನು ಪೂರ್ಣಗೊಳಿಸಲೊಂದು ಅವಕಾಶ ಸ್ವತಂತ್ರ ದೇಶದಲ್ಲಿ ಅಗತ್ಯ. ಕುಟುಂಬವೊಂದಕ್ಕೆ ಒಂದು ಉದ್ಯೋಗ ಕೊಡಿಸುವ ಸರಕಾರ ಆ ಕುಟುಂಬವು ಹಿಂದಿನಿಂದಲೇ ಮಾಡಿಕೊಂಡು ಬಂದಿರುವ ಕೆಲಸವನ್ನು ಕೊಡಿಸುವುದು ಸಾಧ್ಯವೂ ಇಲ್ಲ; ಅನಪೇಕ್ಷಣೀಯ ಕೂಡ. ವಿದ್ಯಾರ್ಥಿಯ ವೈಯಕ್ತಿಕ ಒಲವನ್ನು ಆಧಾರವಾಗಿಟ್ಟುಕೊಂಡು ಶಿಕ್ಷಣ ನೀಡಬೇಕಲ್ಲದೆ ಅವರ ಹಿರಿಯರು ಏನಾಗಿದ್ದರು ಎಂಬುದರ ಆಧಾರದಲ್ಲಲ್ಲ. ರಕ್ತ—ಸಹವಾಸ—ಪರಿಸರ ಗುಣಗಳು ಒಲವಿನ ಮೇಲೆ ಪ್ರಭಾವ ಬೀರಬಲ್ಲವು; ಅವುಗಳ ಬಲದಿಂದಲೇ ಒಬ್ಬನ ಒಲವು ಪೂರ್ಣ ವಿಕಸಿತವಾಗಬಲ್ಲುದು; ಆದರೆ ರೈತನ ಮಗನಿಗೆ ಕೃಷಿಯಲ್ಲಿ, ವೈದ್ಯನ ಮಗನಿಗೆ ವೈದ್ಯಕೀಯದಲ್ಲಿ, ಶಾಸಕನ ಮಗನಿಗೆ ರಾಜಕೀಯದಲ್ಲಿ ಆಸಕ್ತಿ ಮೂಡುತ್ತಿದೆಯೆಂಬುದೇನೂ ಶಿಲಾಕ್ಷರವಲ್ಲ. ಖಾಸಗೀ ಶಿಕ್ಷಣಾಲಯಗಳಲ್ಲಿ ಯೋಗ್ಯ ಬಡ ವಿದ್ಯಾರ್ಥಿಗೆ ಪ್ರವೇಶಾವಕಾಶ ದೊರೆಯದಿರುವ ಬಗ್ಗೆ—ಅವು ವಸೂಲುಮಾಡುವ ಕ್ಯಾಪಿಟೇಶನ್ ಫೀಯ ಬಗ್ಗೆ—ಕಳವಳ ವ್ಯಕ್ತಪಡಿಸುವವರು ಅದೇ 'ಅರ್ಹತೆ'ಯ ಮೇಲೆ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಬಯಸುವ ಕೃಷಿಕೇತರರ ಮಕ್ಕಳ ಪ್ರವೇಶಕ್ಕೆ ಆತಂಕ ತಂದೊಡ್ಡ ಬಯಸುವುದು ವಿಚಿತ್ರವಾಗಿದೆ.

ಈ ಸಂಬಂಧದಲ್ಲಿ ಸರಕಾರ ಪ್ರವೇಶಾವಕಾಶವನ್ನು ಬರಿಯ ಅರ್ಹತೆಯ ಆಧಾರದ ಮೇಲೆ ಮುಕ್ತವಾಗಿರಿಸಬೇಕು. ಅರ್ಹತೆಯನ್ನು ಅಳೆಯುವುದಕ್ಕೆ ಬಳಸುವ ಮಾನದಂಡದಲ್ಲಿ ಮಾತ್ರ ತುಸು ಸುಧಾರಣೆ ಮಾಡಬಹುದಾಗಿದೆ. ವೈದ್ಯಕೀಯ ಅಧ್ಯಯನ ಮಾಡುವವರು ಜೀವಶಾಸ್ತ್ರವನ್ನೂ ಇಂಜಿನಿಯರಿಂಗ್ ಕಲಿಯ ಬಯಸುವವರು ಗಣಿತವನ್ನೂ ಕಲಿಯಲೇಬೇಕೆಂಬ ನಿಯಮವಿದೆ. ಅಭ್ಯರ್ಥಿಯು ಈ ವಿಷಯಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಪ್ರವೇಶ ದೊರೆಯುತ್ತದೆ. ಅದೇ ರೀತಿಯಲ್ಲಿ ತಮ್ಮ ಜೀವನದ ಗುರಿಯನ್ನು ನಿರ್ಧರಿಸಲು ವೃತ್ತಿ ಪೂರ್ವಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೊಂದು ಅವಕಾಶ ನೀಡಬೇಕು. ಆ ಬಳಿಕ ತಮ್ಮ ಲಕ್ಷ್ಯವನ್ನು ಮುಟ್ಟುವಂತಹ ಶಿಕ್ಷಣ ಪಡೆಯುವಂತಾಗಬೇಕು. ಇದಕ್ಕೆ ವಿದ್ಯಾರ್ಥಿಯ ಒಲವು—ಬಲಗಳು ಮಾತ್ರ ಮಾನದಂಡವಾಗಬೇಕಲ್ಲದೆ ಮತ್ತಾವುದೂ ಅಲ್ಲ. ಪ್ರತಿ ನಾಗರಿಕನಿಗೂ ಸಮಾನಾವಕಾಶದ ಭರವಸೆಯನ್ನು ನೀಡಿ, ಅದನ್ನು ಹಿಂದಿನ ಕೈಯಿಂದ ಕಿತ್ತುಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಶೋಭನೀಯವಲ್ಲ. ಪ್ರಜಾಪ್ರಭುಗಳಿಗೆ, ಸಮಾಜವಾದದ ಕೈವಾರಿಗಳಿಗೆ, ಸಮಾನತೆಯ ಘೋಷಕರಿಗೆ ಈ ಸತ್ಯ ಹೊಳೆಯದೆ ಹೋದದ್ದು ತೀರ ಸೋಜಿಗ!

ಸಿಂಡಿಕೇಟಿನ ಸಾಧನೆ, ಸ್ವಾಗತಾರ್ಹ ಮೆಚ್ಚಬೇಕು

ಬ್ಯಾಂಕ್ ರಾಷ್ಟ್ರೀಕರಣದ ಪೂರ್ವ ಸಂಧ್ಯೆಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು ಪತ್ರಕರ್ತರನ್ನು ಬರಮಾಡಿಸಿಕೊಂಡು, ತನ್ನ ಬ್ಯಾಂಕು ಸಾಧಿಸಿದ ಪ್ರಗತಿಯನ್ನು ಪ್ರಾಮಾಣಿಕವಾಗಿ ವಿವರಿಸಿದರು. (ಇದರ ಸಂಕ್ಷಿಪ್ತ ಸಾರಾಂಶವನ್ನು ಈ ಸಂಚಿಕೆಯ ಬೇರೆ ಪುಟದಲ್ಲಿ ಕೊಟ್ಟಿದ್ದೇವೆ) ಶ್ರೀ ಕೆ. ಕೆ. ಪೈಯವರಿಗಾಗಲೀ, ಸಿಂಡಿಕೇಟ್ ಬ್ಯಾಂಕಿಗಾಗಲೀ "ಪ್ರಗತಿ"ಯೆಂಬುದು ಹೊಸ ಪದವಲ್ಲ. ಹೊಸ ಪ್ರಯೋಗವಲ್ಲ. ಸಿಂಡಿಕೇಟ್ ಬ್ಯಾಂಕು ಆರಂಭದಿಂದಲೇ ಗ್ರಾಮೀಣ ಪ್ರದೇಶಗಳಿಂದ ಆಕರ್ಷಿತವಾಗಿತ್ತು. ಇಂದಿಗೂ ಅದು ತನ್ನ ಶಾಖೆಗಳನ್ನು ಇಂತಹ ಹಳ್ಳಿಗಳಲ್ಲೇ ಹೆಚ್ಚು ಹೆಚ್ಚಾಗಿ ತೆರೆದು, ಬ್ಯಾಂಕಿಂಗ್ ಸೌಲಭ್ಯ ಮಂಚಿತರ ಸೇವೆಗೆ ಸಿದ್ಧವಾಗಿದೆ. ಐದು ಎಕ್ರೆಗಳಿಗಿಂತ ಕಡಿಮೆ ಭೂಮಿ ಹೊಂದಿದ ಸುಮಾರು ೧ಲಕ್ಷ ೧೫ ಸಾವಿರ ಚಿಕ್ಕ ರೈತರಿಗೆ ಆರ್ಥಿಕ ಸೌಲಭ್ಯಗಳನ್ನು ಬ್ಯಾಂಕು ನೀಡಿರುವುದು ರಾಷ್ಟ್ರೀಕರಣದ ಯಶಸ್ವಿ ಸಾಧನೆಯೆಂದೇ ಹೇಳಬೇಕು. ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದವರಿಗೆ ಬ್ಯಾಂಕಿಂಗ್ ಸೌಲಭ್ಯ ಸಿಗುವಂತೆ ಮಾಡುವ ಘನೋದ್ದೇಶದಲ್ಲಿ ಸಿಂಡಿಕೇಟ್ ಮಹತ್ವಪೂರ್ಣ ಸಾಧನೆಗಳಿಸಿದೆಯೆಂಬುದು ನಿರ್ವಿವಾದ. ಸುಮಾರು ೪ ಸಾವಿರ ಮಂದಿಗೆ ವಾಹನಗಳನ್ನು ಕೊಳ್ಳಲು, ೨೫ಸಾವಿರ ಮಂದಿಗೆ ಚಿಕ್ಕ ವ್ಯಾಪಾರವಾರಂಭಿಸಲು, ೧೬ ಸಾವಿರ ಮಂದಿಗೆ ಸ್ವತಂತ್ರ ಉದ್ಯೋಗದಲ್ಲಿ ತೊಡಗಲು ಬ್ಯಾಂಕು ಆರ್ಥಿಕ ಸಹಾಯ ನೀಡಿದೆ. ಅಂದರೆ, ಚಿಕ್ಕವ—ದೊಡ್ಡವ, ಬಡವ—ಬಲ್ಲಿದನೆಂಬ ಭೇದಭಾವನೆಯಿಲ್ಲದೆ ಆವಶ್ಯಕತೆಯೆಲ್ಲಿದೆಯೋ ಅಲ್ಲಿ ಸಹಾಯ ನೀಡಲು ಬ್ಯಾಂಕು ತುದಿಗಾಲಲ್ಲಿ ನಿಂತಿದೆಯೆಂದು ಧೈರ್ಯವಾಗಿ ಹೇಳಬಹುದು. ರಾಷ್ಟ್ರೀಕರಣದ ಉದ್ದೇಶ್ಯಗಳನ್ನು ಯಶಗೊಳಿಸಲು ಬದ್ಧಕಂಕಣರಾದ ಶ್ರೀ ಪೈಯವರನ್ನೂ ಅವರ ಬ್ಯಾಂಕಿನ ನೌಕರ ವರ್ಗವನ್ನೂ ಈ ಸಂದರ್ಭದಲ್ಲಿ ಅಭಿನಂದಿಸುವುದು ಎಂದರೆ, ಒಳ್ಳೆಯ ಕೆಲಸ ಮಾಡುವವರ ಬಗ್ಗೆ ಹೃದಯಾಂತರಾಳದ ಮೆಚ್ಚುಗೆ ವ್ಯಕ್ತಪಡಿಸಿ, ಮುಂದೆ ಸಾಗುವಂತೆ ಬೆನ್ನುತಟ್ಟುವುದಲ್ಲದೆ ಬೇರೆಯಲ್ಲ.

●●

ಜಿಲ್ಲಾ ಯುವಕ ಕರ್ನಾಟಕ ಸಂಘ (ರಿ) ಭದ್ರಾವತಿ

ಇದರ ಆಶ್ರಯದಲ್ಲಿ ಉದಯೋನ್ಮುಖ ಬರಹಗಾರರ ಕಥಾ ಸ್ಪರ್ಧೆಯನ್ನು ರಾಜ್ಯ ಮಟ್ಟದಲ್ಲಿ ಏರ್ಪಡಿಸಲಾಗಿದೆ. ಕಥೆಯು ವಿಜ್ಞಾನ, ಸಾಮಾಜಿಕ, ಜಾನಪದ, ಐತಿಹಾಸಿಕ ಆಧಾರಗಳ ಮೇಲೆ ಬರೆಯಲ್ಪಟ್ಟು ಎಂಟು ಪುಟಗಳಿಗೆ ಮೀರಿರಬಾರದು. ಬಹುಮಾನಿತ ಕಥೆಗಳಿಗೆ ಕ್ರಮವಾಗಿ ನೂರು, ಐವತ್ತು, ಮತ್ತು ಇಪ್ಪತ್ತೈದು ರೂ.ಗಳನ್ನು ಬಹುಮಾನವಾಗಿ ಕೊಡಲಾಗುವುದು. ಕತೆಗಳನ್ನು 15-8-72ರೊಳಗೆ 2ರೂ. ಶುಲ್ಕದೊಂದಿಗೆ ಕಳುಹಿಸಿಕೊಡತಕ್ಕದ್ದು. ಹೆಚ್ಚಿನ ವಿವರಗಳನ್ನು ತಿಳಿಯತಕ್ಕ ಹಾಗೂ ಕತೆಗಳನ್ನು ಕಳುಹಿಸತಕ್ಕ ವಿಳಾಸ: ಜಿ. ಎಂ. ರಾಮಚಂದ್ರ, ಕಾರ್ಯದರ್ಶಿ, ಜಿಲ್ಲಾ ಯುವಕ ಕರ್ನಾಟಕ ಸಂಘ, ಭದ್ರಾವತಿ

ಮುಂದು

ಗೇಹರಾಜ್ಯದಲ್ಲಿ

ಪುಸ್ತಕಾರ್ಪಣಾ ಸಂಪ್ರದಾಯ

"ಏ, ಕೇಳಿದ್ಯೇನೆ?"

'ಏನು?'

'ಇನ್ನು ಮುಂದೆ ಸಭೆ—ಸಮಾರಂಭಗಳಲ್ಲಿ ಭಾಗವಹಿಸುವವರಿಗೆ ತುಸು ತಾಪತ್ರಯ....'

'ಯಾಕೆ? ಭಾಷಣಭೈರವರಿಗೇನು ಅಭಾವ ತಲೆದೋರಿತೇನು'

'ಅಂಥದ್ದೇನಿಲ್ಲಾನ್ನು. ಆದರೂ....'

'ಏನು ಹೇಳಿಬಿಡಿ....'

'ಅಲ್ವೆ ಇದುವರೆಗೊಂದು ಹೂಮಾಲೆಯಾದರೂ ದೊರೆಯುತ್ತಿತ್ತು.....'

'ಇನ್ನು ಮುಂದೇನು? ಹೂಮಾಲೆಗೆ ಅಭಾವವೆ?'

'ಅಭಾವವೆಲ್ಲಿಂದ ಬಂದೀತು?'

"ಮತ್ತೆ?"

"ಸಭೆಗಳಲ್ಲಿ ಅತಿಥಿಗಳಿಗೆ ಹೂಹಾರ ಹಾಕಬಾರದೆಂದು ಸಾರ್ವಜನಿಕ ವಿನಂತಿ ಹೊರಟಿದೆ..."

'ಯಾರಿಂದ?'

'ಮತ್ತಾರಿಂದ? ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ....'

'ಅವರಿಗೇನಾಯ್ತು? ಹೂವಾಡಿಗರು ಕಷ್ಟ ಕೊಯ್ದರೇನು?'

'ಛೆ ಛೆ, ಇಲ್ಲಿ ಇತರರನ್ನು ಕೀಳು ಮಾಡುವ ಇರಾದೆಯಿಲ್ಲ....'

'ಮತ್ತೆ?'

'ಕನ್ನಡ ಪುಸ್ತಕಗಳನ್ನು ಜನಪ್ರಿಯ ಮಾಡಲೆಂದು ಈ ಯೋಜನೆಯಂತೆ'

'ಅಲ್ರಿ; ಹೂಮಾಲೆ ಹಾಕದೆ ಹೋದರೆ ಪುಸ್ತಕಗಳು ಹೇಗೆ ಜನಪ್ರಿಯವಾಗುತ್ತವೆ? ಇದಾವ ಬಾದರಾಯಣ?'

'ಹಾಗಲ್ಲಮ್ಮ, ಇನ್ನುಮುಂದೆ ಹೂಹಾರದ ಬದಲಿಗೆ ಒಂದು ಒಳ್ಳೆಯ ಕನ್ನಡ ಪುಸ್ತಕವನ್ನು ಕೊಡಲಾಗುವುದಂತೆ ..'

'ಅಂದರೆ ಹಾರದ ಬದಲಿಗೆ ತುರಾಯಿ ಕೊಡುತ್ತಾರೆ ಅನ್ನಿ...."

'ಹ್ಞಾಂ, ಹಾಗೇ ಅಂದುಕೋ....'

"ಆದರೆ ನೋಡಿ, ಪುಸ್ತಕ ಅಂದ ಮೇಲೆ ರೂಪಾಯಿ ರೂಪಾಯಿ ಸುರಿಯ ಬೇಕಾಗುತ್ತೆ, ಪಾಪ, ಸಭಾಯೋಜಕರಿಗೆ ದುಬಾರಿ ವೆಚ್ಚ....'

'ಅವರಿಗೇನು? ಅತಿಥಿಗಳ ಸಂಖ್ಯೆಯನ್ನೇ ಕಡಿಮೆ ಮಾಡಿದರೆ ಸರಿ.... ಪ್ರೈಮರಿ ಶಾಲಾ ಹೆಡ್‌ಮಾಸ್ತರ್ ಇದ್ದ ಹಾಗೆ....'

'ಹಾಗೆಂದರೆ?'

'ಅಲ್ವೆ,ಪ್ರೈಮರಿ ಶಾಲಾ ಹೆಡ್‌ಮಾಸ್ತರ್ ಅಂದರೆ ಸವ್ಯಸಾಚಿ ...'

'ತುಸು ವಿವರವಾಗಿ....'

'ನೋಡಮ್ಮ, ಅವರು ಶಾಲೆಯ ಹೆಡ್‌ಮಾಸ್ಟರೂ ಹೌದು, ಮಾಸ್ತರೂ ಹೌದು, ಗುಮಾಸ್ತೆಯೂ ಹೌದು, ಪೇದೆಯೂ ಹೌದು, ಸ್ವೀಪರ್ರೂ ವಾಚ್‌ಮನೂ ಹೌದು..'

"ಇರ್ಲಿ. ಅದಕ್ಕೂ ಇದಕ್ಕೂ ಏನು ಸಂಬಂಧಾಂತ...."

"ಸಂಬಂಧ ಇದ್ದೇ ಇದೆ. ಹಾಗೇನೇ ಸಭಾ ಯೋಜಕರು ಯಾರಾದರೊಬ್ಬರನ್ನೇ ಮುಖ್ಯ ಅತಿಥಿಯಾಗಿ ಆಹ್ವಾನಿಸುವುದು. ಅವರ ಅಮೃತಹಸ್ತದಿಂದಲೇ ಅಮೃತ ಜಿಹ್ವೆಯಿಂದಲೇ ಉದ್ಘಾಟನೆ, ಭಾವಚಿತ್ರ ಅನಾವರಣ, ಪ್ರಶಸ್ತಿವಾಚನ, ಬಹುಮಾನ ವಿತರಣ, ಅಧ್ಯಕ್ಷ ಭಾಷಣ....ಇನ್ನೂ ಏನೇನು ಬೇಕೋ ಅವೆಲ್ಲವನ್ನೂ ಮಾಡಿಸಿದರಾಯ್ತು."

"ಅದು ಸರೀನ್ನಿ. ಆದ್ರೂ ಅದಕ್ಕೂ ನೂರು ವಿಘ್ನ ಪರಂಪರೆ,...."

"ಯಾಕೆ?"

"ಅಲ್ರಿ, ಇದುವರೆಗೆ ತಮಗೊಂದು ಹೂಮಾಲೆಯಾದ್ರೂ ಲಭಿಸೀತೆಂಬ ಆಶೆಯಿಂದ ಅನುಮತಿ ನೀಡುತ್ತಿದ್ದ ಶ್ರೀಮಂತಿಯರು ಅಷ್ಟು ಇನ್ನು ಮುಂದೆ ಸಲೀಸಾಗಿ...."

"ಅಲ್ವೆ, ಹಾರಾರ್ಪಣೆ ಮಾಡಲೇಬೇಕೆಂದೇನು ನಿಯಮವು?"

"ನಿಯಮವೇಕೆ ಬೇಕೂಂತೀನೆ? ಬ್ರಿಟನ್ನಿನ ಸಂವಿಧಾನವೇ ಸಂಪ್ರದಾಯದ ಮೇಲೆ ನಿಂತಿರುವಾಗ ಹಾರಾರ್ಪಣೆಗೆ ಆಧಾರ ಸಾಲದೇನು?"

"ಅಲ್ವೆ, ಅದು ಸಾಕೊನ್ನು. ಆದ್ರೆ, ಸಂಪ್ರದಾಯವನ್ನು ಮುರಿದು, ಕ್ರಾಂತಿಕಾರಿ ಪರಿವರ್ತನೆ ಸಾಧಿಸುವುದು ಮತ್ತು ಈ ಪರಿವರ್ತನೆಗೆ ಮಹಿಳಾಮಣಿಗಳ ಪೂರ್ಣ ಸಹಕಾರ ಬಯಸುವುದು ತಪ್ಪಾಗದಲ್ಲಾ?'

"ಈಗೇನೋ ಹಾರಾರ್ಪಣೆಯ ಕಾರ್ಯಕ್ರಮದ ಬದಲು 'ಪುಸ್ತಕಾರ್ಪಣೆ'ಯ ಕಾರ್ಯಕ್ರಮವನ್ನು ಪ್ರತಿಕ್ಷೇಪಿಸಬಹುದೂನ್ನಿ. ಆದರೆ ಸ್ವಲ್ಪ ಸಮಯ ಕಳೆಯುತ್ತಲೇ ಇದೇ ಒಂದು ಸಂಪ್ರದಾಯವಾಗಿ ಬಿಡುತ್ತಲ್ಲಾ?"

"ಅದಕ್ಯಾಕೆ ಚಿಂತಿಸ್ತೀಯಾ? ನದಿಯಲ್ಲಿ ನೀರು ಹರಿಯುತ್ತಿರುವಂತೆ ಸಂಪ್ರದಾಯವೂ ಹರಿಯುತ್ತಿರಬೇಕು, ಬಂದು ಕೊಳೆತು ನಾರುತ್ತಿರುವುದಕ್ಕೆ ಆರಂಭಿಸಿದೊಡನೆಯೇ ಹೊಸತೊಂದು ಬರಬೇಕು."

'ಆಯ್ತು, ಹಾರಾರ್ಪಣೆಯ ಬದಲು ಪುಸ್ತಕಾರ್ಪಣೆಯೂಯ್ತು, ಆಮೇಲೆ?'

'ನೋಡಮ್ಮ, ಇದು ಅಂತಾರಾಷ್ಟ್ರೀಯ ಪುಸ್ತಕ ವರ್ಷ. ಅದರ ಮೇಲೆ ಕನ್ನಡ ಪುಸ್ತಕಗಳ ಪ್ರಚಾರ ಯೋಜನೆ ಬೇರೆ. ಹಾಗಾಗಿ ಮುಂದಿನ ಒಂದು ವರ್ಷ ಈ ಹೊಸ ಸಂಪ್ರದಾಯ ಆರಂಭಿಸೋಣಾಂತ....'

'ಆರಂಭಿಸಿ, ಯಾರು ಬೇಡಾಂತಾರೆ? ಆದರೆ, ಇದನ್ನು ಅನುಕರಿಸುವವರು ಯಾರೂಂತ?'

"ಸಾರ್ವಜನಿಕ ಸಮಾರಂಭಗಳ ವ್ಯವಸ್ಥಾಪಕರು, ಶಾಲಾ—ಕಾಲೇಜುಗಳ ಮುಖ್ಯಸ್ಥರು.

'ಅಲ್ರಿ, ಮದುವೆಯಲ್ಲಿ ಹಾರ ಬದಲಾಯಿಸುವುದರ ಬದಲು ಪುಸ್ತಕ ಬದಲಾಯಿಸಿದರೇನಂತೆ?'

"ಬರೋಬರಿ, ಬರೋಬರಿ. ತಮ್ಮ ತಮಗೆ ಬಂದಿರುವ ಪ್ರೇಮ-ಪ್ರಣಯ ಪತ್ರಗಳ ಪುಸ್ತಕವನ್ನೇ ಹಸ್ತಾಂತರಿಸಿದರೆ ಸರಿಯಾಗುತ್ತೆ..."

"ಆದರೆ ನೋಡಿ, ನನಗೊಂದು ಸಂದೇಹ ...'

'ಏನು?'

'ಅಲ್ಲ, ಅಧ್ಯಕ್ಷರಾಗಿ, ಉದ್ಘಾಟಕರಾಗಿ, ಉಪನ್ಯಾಸಕರಾಗಿ, ಮತ್ತಾವುದೇ ಕರ್ತವ್ಯಧಾರಿಗಳಾಗಿ ಬರುವವರು ಭ್ರಷ್ಟಾಚಾರಕ್ಕೆ ಇಳಿಯಲಾರರೆ?'

"ಹೇಗೆ?"

'ನೀವು ಸಭೆಯಲ್ಲಿ ಕನ್ನಡ ಪುಸ್ತಕಗಳನ್ನೇ ಕೊಡಿ. ಮನೆಗೆ ಮರಳುವಾಗ ನಾಲ್ಕು ಚೆಂಡು ಮಲ್ಲಿಗೆ ಚೆಂಡು ಮಾತ್ರ ಕಟ್ಟಿಕೊಡಬೇಕೂಂತ ಕಗ್ಗದ ಹೇಳಿದರೆ..'

'ಅದೂ ಸರೀನ್ನಿ....'

'ಏನು?'

'ಅಲ್ವೆ, ಪ್ರೀತಿಯ ಸರುಹಾಗಿ ಹೂಮಾಲೆಯನ್ನೇ ಸುತ್ತಿದೇ ಸ್ವಾಭ್ಯ...'

"ಯಾಕೆ?"

'ನೋಡು ಸಭೆ ಸಮಾರಂಭಗಳ ಕಾರ್ಯಕ್ರಮಧಾರಿಗಳಿಗೆ ಆ ವೇದಿಕೆಯ ಮೇಲಿರುವ ವರೆಗೆ ಮಾತ್ರ ಗೌರವಾದರ. ಹಾಗಿರುವಾಗ ಮಲ್ಲಿಗೆ ಕಂಪು ಅವರಿಗೆ ಲಾಯಕ್ಕು. ಪುಸ್ತಕ ಹಾಗಲ್ಲ ನೋಡು ಅದರ ಕಂಪು ಸದಾ ಇದ್ದೇ ಇರುತ್ತದೆ.'

"ಅಲ್ರಿ, ಇನಿವ್ರ ಹಾಕಿಸಿಕೊಂಡ ಹಾರವನ್ನು ಏಲಂ ಹಾಕುವಂತೆ ತಮಗೆ ಬಂದ ಪುಸ್ತಕವನ್ನೂ ಏಲಂ ಹಾಕಬಹುದಲ್ಲಾ?'

'ಹಾಕದೇ ಏನು? ಅದಾಗದೆ ಹೋದರೆ ಪುಸ್ತಕದಂಗಡಿಯವನಿಗೇನೇ ವಾಪಾಸು ಕೊಟ್ಟರೆ, ಅವನು ವಟ್ಟ ಮುರಿದು ಹಣವನ್ನೂ ಕೊಟ್ಟಾನು....'

'ನೋಡಿ, ನಿಮಗೊಂದು ಮಾತು ಹೇಳ್ತೀನೆ; ಕೇಳ್ತೀರಾ'

'ಏನು?'

'ಕೇಳ್ತೀರಾ ಹೇಳಿ....'

'ಏನೂಂತ ಹೇಳು ...'

'ಆಯ್ತು ಕೇಳಿ....'

"ಹ್ಞಾಂ...."

'ನೋಡಿ, ನಿಮ್ಮನ್ನು ಯಾರಾದರೂ ಸಭೆ—ಸಮಾರಂಭಗಳಿಗೆ ಕರೆದರೆ ಪುಸ್ತಕವನ್ನೇ ಕೊಡಬೇಕೂಂತ ಕರಾರು ಹಾಕಿಬಿಡಿ. ಮಲ್ಲಿಗೆ ಮಾಲೆಗೆ ಹೊರ ಗಿರಾಕಿಯೆಲ್ಲಿ?'

'ಹ್ಞಾಂ .... ಅದರಲ್ಲು ಗೋಕರ್ಣ ಭಟ್ರು ಕಾರುಬಾರಿಗೆ 'ತೊಡಗಿದೆಯಲ್ಲಾ?'

'ನೋಡಿ, ಲೋಕ ನಿಂತಿರುವುದೇ ಅದರ ಮೇಲೆ...ಯಾವ ವಸ್ತುವನ್ನೂ ಅನಾವಶ್ಯಕವಾಗಿ ಬಳಸಬಾರದು...'

'ಹೂವನ್ನೂ?'

'ಹೂವಾದರೇನಂತೆ? ಒಮ್ಮೆ ಕೊರಳಿಗೆ ಹಾಕಿದ ಮೇಲೆ ಅದರ ಭವಿಷ್ಯ ಕೆಟ್ಟುಹೋಯ್ತು. ಪುಸ್ತಕವಾದರೆ ಹಾಗಲ್ಲ.'

"ಆಯ್ತಮ್ಮ, ಆಯ್ತು. ಲಾಭವಾಗುವ ಮಾತು ಹೇಳಿದರೆ ಯಾಕೆ, ಒಲ್ಲೇಂತಾರೆ?'

'ಹ್ಞೂ...'

—ಗೋರಾ

●●

ನೋಟೀಸು

ಕುಂದಾಪುರ

ಮುನ್ಸಿಫ್ ಕೋರ್ಟಿನಲ್ಲಿ

Ex. C. No. 235/1971

S. C. No. 363/1962

N. ಚಂದಯ್ಯ ಹೆಗಡೆ —ಅರ್ಜಿದಾರ

1. ಪದ್ದಕ್ಕೆ ಸೆಟ್ಟಿ
2. ಮಹಾಬಲ ಸೆಟ್ಟಿ

} ಎದ್ರಿದು

ಸದ್ರಿ ಅಮಲಜಾರಿ ಅರ್ಜಿಯ 1ನೇ ಎದ್ರಿಉ ಪದ್ದಕ್ಕೆ ಸೆಟ್ತಿ, ಪುಟ್ಟಂಮ ಸೆಟ್ತಿ ರ ಮಗಳು, 2ನೇ ಎದ್ರಿ ಮಹಾಬಲ ಸೆಟ್ಟಿ—1ನೇ ಎದ್ರಿಳ ಗಂಡ, ಉಡುಪಿ ತಾಲ್ಕು ಪಂಡಾಪು ಗ್ರಾಮದಲ್ಲಿರುವವರು,

ಅರ್ಜಿದಾರ N. ಚಂದಯ್ಯ ಹೆಗಡೆಯು ಎದ್ರಿರಿಂದ ನಿಂಮ ಮೇಲೆ ಪಡೆದ ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ ಪಡೆದ ಮೇಲ್ಕಾಣಿಸ ಡಿಕ್ರಿಯ ಮೇಲೆ ನಡೆಸಿದ ಸದ್ರಿ ಅಮಲ್ಜಾರಿಯಲ್ಲಿ ಕೇಳಿದ ಅಸಲು ಬಡ್ಡಿ ಕೂಡಾ ರುಪ್ಯಾ 352–00, ನಂತ್ರದ ಬಡ್ಡಿ ಕೂಡಾ ವಗೈರೆ ಬಗ್ಗೆ ನಿಂಮ ಮೇಲೆ ಮಾಡಿದ ಅಮಲಜಾರಿಯಲ್ಲಿ ಸೇಲ್ ನೋಟೀಸು ತನ್ನಿಯ ತಾರೀಕು 19-8-1973 ಕ್ಕೆ ತನ್ನಿಗೆ ಯಿಡೋಣಾಗಿಯದೆ. ಈ ಕುರಿತು ನಿಂಮ ಆಕ್ಷೇಪ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಅಮಲಜಾರಿಯನ್ನು ಏಕಪಕ್ಷದಲ್ಲಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

A. Rajeeva Shetty
ಅರ್ಜಿದಾರ ಕಡೆ ಎಡ್ವೋಕೇಟ್

ತಾರೀಖು, 11–7–1972 ಕುಂದಾಪುರ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

READ & ADVERTISE IN NAVAYUGA Weekly

ರೈತರಿಗೊಂದು ಕರೆ–

ನೀರನ್ನು ಮಿತವಾಗಿ ಬಳಸಿರಿ

ರೈತನಿಗೆ ನೀರೇ ಬಂಡವಾಳ. ಅದನ್ನು ಆತ ಮಿತವಾಗಿ ಬಳಸಬೇಕು. ಆದರೆ ವಿವಿಧ ಬೆಳೆಗಳು ಹಾಗೂ ಹೊಸ ಧಾನ್ಯ ತಳಿಗಳು ಸಮರ್ಪಕವಾದ ಸಕಾಲಿಕ ನೀರಾವರಿಯನ್ನು ಬಹುವಾಗಿ ಅವಲಂಬಿಸುತ್ತವೆ. ಈ ವಿಷಯ ಅರ್ಥ ಮಾಡಿಕೊಳ್ಳಲು ರೈತರು ಕೆಲವೊಮ್ಮೆ ಹಿಂದೇಟು ಹಾಕುತ್ತಾರೆ ಎಂದು ಕೃಷಿ ತಜ್ಞರೊಬ್ಬರು ಅಭಿಪ್ರಾಯಪಡುತ್ತಾರೆ.

"ನೀರನ್ನು ಪರಿಣಾಮಕಾರಿಯಾಗಿ ಬಳಸುವ ಮೂಲಕ ರೈತ ತನ್ನ ಜಮೀನಿನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಬಲ್ಲ" ಎನ್ನುತ್ತಾರೆ ಆಂಧ್ರಪ್ರದೇಶ ಸರ್ಕಾರದ ಕೃಷಿ ಇಲಾಖೆಯ ಜಾಯಿಂಟ್ ಡೈರೆಕ್ಟರ್ ಶ್ರೀ ಎಲ್. ವೆಂಕಟರತ್ನಂ.

"ಭಾರತದಲ್ಲಿ ವ್ಯವಸ್ಥಾಪನೆಯ ನ್ಯೂನತೆಯಿಂದಾಗಿ ನೀರು ಅಪಾರವಾಗಿ ಪೋಲಾಗುತ್ತಿದೆ" ಎಂದು ಶ್ರೀ ವೆಂಕಟರತ್ನ ಅಭಿಪ್ರಾಯಪಡುತ್ತಾರೆ. ನೀರು ಪೋಲಾಗುವುದನ್ನು ತಪ್ಪಿಸಲು ಅಮೇರಿಕದಲ್ಲಿರುವಂತೆ ನೀರಿಗೆ 'ಬೆಲೆ' ನಿಗದಿ ಮಾಡಬೇಕು ಎಂದು ಅವರು ಸಲಹೆ ಮಾಡುತ್ತಾರೆ. "ಇದು ರೈತನಿಗೆ ನೀರು ಹಣದಷ್ಟೇ ಅಮೂಲ್ಯವಾದುದು ಎಂಬುದನ್ನರಿಯಲು ಸಹಾಯಕವಾಗುತ್ತದೆ, ಆಗ ಆತ ನೀರನ್ನು ಈಗಿನಂತೆ ಮನಸೋ ಇಚ್ಛೆ ಪೋಲು ಮಾಡುವುದಿಲ್ಲ."

ಆಂಧ್ರ ಪ್ರದೇಶದಲ್ಲಿ ಪ್ರಾಜೆಕ್ಟ್‌ಗಳು ಮತ್ತು ಮಲ್ಟಿಪಲ್ ಕ್ರಾಪಿಂಗ್‌ನ ಅಧಿಕಾರಿಯೂ ಆಗಿರುವ ಶ್ರೀ ವೆಂಕಟರತ್ನಂ ಅವರು 1970ರ ಮೇಯಲ್ಲಿ ಕೃಷಿ ತಂತ್ರಜ್ಞರ ತಂಡವೊಂದರೊಡನೆ ಅಮೇರಿಕಕ್ಕೆ ಭೇಟಿ ನೀಡಿದರು. ಯು ಎಸ್ ಎ ಐ ಡಿ ವ್ಯವಸ್ಥೆಗೊಳಿಸಿದ ಈ ಅಧ್ಯಯನ ಪ್ರವಾಸವು ಪೋಚಂಪಾಡ್ ಮಲ್ಟಿಪಲ್ ಕ್ರಾಪಿಂಗ್ ಪ್ರಾಜೆಕ್ಟ್‌ನ ಅಭಿವೃದ್ಧಿಗೆ ಸಂಬಂಧಿಸಿದುದಾಗಿತ್ತು.

ಹೈದರಾಬಾದಿಗೆ 125 ಮೈಲಿಗಳ ದೂರದಲ್ಲಿ ಗೋದಾವರಿ ನದೀ ನಡದಲ್ಲಿರುವ ಪೋಚಂಪಾಡ್ ಪ್ರಾಜೆಕ್ಟ್ 6.5 ಲಕ್ಷ ಎಕರೆಗಳನ್ನೊಳಗೊಂಡಿದೆ. ತೆಲಂಗಾಣದ ಹಿಂದುಳಿದ ಪ್ರದೇಶಗಳಲ್ಲಿ ಆಹಾರೋತ್ಪಾದಿಸುವುದು ಅದರ ಗುರಿಯಾಗಿದೆ.

ಅಮೆರಿಕದಲ್ಲಿದ್ದ ಅವಧಿಯಲ್ಲಿ ಶ್ರೀ ವೆಂಕಟರತ್ನಂ ಮತ್ತು ಅವರ ಸಂಗಡಿಗರು ನೆಬ್ರಾಸ್ಕಾ, ನ್ಯೂ ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯಾ ರಾಜ್ಯಗಳಲ್ಲಿನ ಇದೇ ರೀತಿಯ ಪ್ರಾಜೆಕ್ಟ್‌ಗಳನ್ನು ವೀಕ್ಷಿಸಿದರು. ಈ ಪ್ರಾಜೆಕ್ಟ್‌ಗಳ ಕೆಲವು ವಿಶಿಷ್ಟ ಅಂಶಗಳನ್ನು ಪೋಚಂಪಾಡ್‌ನಲ್ಲಿ ಅನ್ವಯಗೊಳಿಸುವ ಸಲುವಾಗಿ ಅಧ್ಯಯನ ಮಾಡಿದರು. ನೀರಿನ ವ್ಯವಸ್ಥಾಪನೆ, ಮಣ್ಣಿನ ವಿಜ್ಞಾನ ಮತ್ತು ಡ್ರೈನಿಂಗ್ ತಂತ್ರಗಳು ಈ ಪೈಕಿ ಕೆಲವು. ಅಮೆರಿಕದಲ್ಲಿ ನೀರಿನ ವ್ಯವಸ್ಥಾಪನೆಯು ಅತ್ಯಂತ ಪರಿಷ್ಕಾರವಾದುದು ಎಂದು ವೆಂಕಟರತ್ನಂ ಹೇಳುತ್ತಾರೆ. ನೀರನ್ನು ರೈತರ ಅಗತ್ಯಗಳಿಗನುಸಾರವಾಗಿ ಮಾತ್ರ ಸರಬರಾಜು ಮಾಡಲಾಗುವುದು. ಇದು ಅಮೆರಿಕನ್ ರೈತನಲ್ಲಿ ನೀರಿನ ಉತ್ಕೃಷ್ಟ ಹಾಗೂ ಮಿತವ್ಯಯದ ಬಳಕೆಯ ಅಗತ್ಯದ ಬಗೆಗೆ ಅರಿವನ್ನು ಮೂಡಿಸಲು ನೆರವಾಗುತ್ತದೆ.

ಅಮೆರಿಕದ ರೈತರು ಯಾವ ರೀತಿ ಕೃತಕ ಕೊಳಗಳಲ್ಲಿ ನೀರನ್ನು ಶೇಖರಿಸಿಡುವರು ಎಂಬುದನ್ನೂ ಅವರು ಗಮನಿಸಿದರು. "ಇದು ಒಂದು ಹಳೆಯ ತತ್ವ, ಭಾರತದಲ್ಲಿ ಈಗ ಮರೆತುಬಿಟ್ಟಿರುವ ಅಮೂಲ್ಯ ತಂತ್ರ" ಎಂದರು ಅವರು.

ಈ ಕೊಳಗಳು ಅತ್ಯುತ್ತಮವಾದ ಮತ್ಸ್ಯ ಕ್ಷೇತ್ರಗಳಾಗಿಯೂ ಪ್ರಯೋಜನಕ್ಕೆ ಬರುತ್ತವೆ, ಮತ್ತು ರೈತರಿಗೆ ಹೆಚ್ಚಿನ ಆದಾಯವನ್ನು ತರುತ್ತವೆ ಎಂದು ಶ್ರೀ ವೆಂಕಟರತ್ನಂ ಸೂಚಿಸಿದರು.

ಭಾರತದಲ್ಲಿ ನೀರಾವರಿ ಮತ್ತು ಒಳಚರಂಡಿ ವ್ಯವಸ್ಥೆಗಳನ್ನು ಪುನರ್‌ನಿರ್ದೇಶಿಸುವುದು ಅಗತ್ಯ ಎಂದು ಈ ಕೃಷಿ ತಜ್ಞ ಹೇಳುತ್ತಾರೆ. ಇದಕ್ಕೆ ವಿಸ್ತೃತ ರೈತ ಶಿಕ್ಷಣ ಅಗತ್ಯ. "ಪ್ರಸ್ತುತ ನಮ್ಮ ಪ್ರಯತ್ನಗಳು ಸಾಗರದಲ್ಲಿ ಒಂದು ಹನಿ ಇದ್ದಂತೆ ಮಾತ್ರ" ಎಂದರು ಅವರು.

ರೈತನಿಗೆ ನೀರಿನ ವ್ಯವಸ್ಥಾಪನೆಯ ಪ್ರಾಮುಖ್ಯವನ್ನು ಒತ್ತಿ ಹೇಳಲು ಭಾರತ ಸರ್ಕಾರವು ಒಂದು ವಿಶೇಷ ಶಿಕ್ಷಣ ತಂಡವನ್ನು ಸ್ಥಾಪಿಸಿದೆ. ಇದರ ಸಹಕಾರದೊಡನೆ ಆಂಧ್ರ ಪ್ರದೇಶದ ಕೃಷಿ ಇಲಾಖೆಯು ಕೃಷಿ ಕಾರ್ಯಗಳಲ್ಲಿ ಪರಿಣಾಮಕಾರಿ ನೀರಿನ ಬಳಕೆ ನಿರ್ವಹಿಸುವ ಪ್ರಮುಖ ಪಾತ್ರದ ಬಗೆಗೆ ರೈತರಿಗೆ ತಿಳಿವಳಿಕೆ ನೀಡಲು ಒಂದು ಯೋಜನೆಯನ್ನು ಆರಂಭಿಸಿದೆ.

ಈ ಕಾರ್ಯಕ್ರಮವು ರೈತನಿಗೆ ಮಣ್ಣಿನ ಲಕ್ಷಣಗಳು, ಜಮೀನಿನ ವಿನ್ಯಾಸ, ಆಳವಾಗಿ ಉಳುವುದು ಮತ್ತು ನೀರನ್ನು ಮಣ್ಣಿನಡಿ ಶೇಖರಿಸಿಡುವ ತಂತ್ರಗಳ ಬಗೆಗೆ ತಿಳಿವಳಿಕೆ ಪಡೆಯಲು ನೆರವಾಗುವುದು ಹೀಗೆ ಶೇಖರಿಸಿಟ್ಟ ನೀರು ಹರಿಯೋಗಿ ಹೋಗದಂತೆ ರಕ್ಷಿಸಲ್ಪಡುವುದು.

ಜಮೀನಿಗೆ ನೀರಾವರಿ ಒದಗಿಸುವುದು ಹೇಗೆ ಮತ್ತು ಬೆಳೆ, ಕಾಲ ಮತ್ತು ಬೆಳವಣಿಗೆಯ ಹಂತವನ್ನನುಸರಿಸಿ ನೀರನ್ನು ಇಂಗಿಸುವುದು ಹೇಗೆ ಎಂಬುದನ್ನು ರೈತರಿಗೆ ವಿವರಿಸುವುದು ಈ ಪ್ರಾತ್ಯಕ್ಷಿಕೆ ಕಾರ್ಯಕ್ರಮದ ಬಹು ಮುಖ್ಯ ಅಂಶ" ಎಂದರು ಅವರು.

ಕೆಲವು ಬೆಳೆಗಳಿಗೆ ನಿರ್ದಿಷ್ಟ ಬೆಳವಣಿಗೆಯ ಹಂತಗಳಲ್ಲಿ ನೀರು ಅಗತ್ಯವಿಲ್ಲವಾದುದರಿಂದ ನೀರನ್ನು ಇಂಗಿಸುವ ಕ್ರಮವು ನೀರಾವರಿಯಷ್ಟೇ ಮುಖ್ಯವಾದುದು ಎಂದು ಈ ಆಂಧ್ರ ಪ್ರದೇಶದ ಅಧಿಕಾರಿ ಹೇಳಿದರು. "ಎರಡು ಕಾರ್ಯ ನಿರ್ವಹಣೆಗಳೂ ಪರಸ್ಪರ ಸಮೂನಾರ್ಥಕವಾದವು" ಎಂದು ಅವರು ಹೇಳುತ್ತಾರೆ.

ಅವರ ಪ್ರಕಾರ, ನೀರು ಒಂದೇ ಎಡೆ ನಿಲ್ಲುವುದಕ್ಕೆ ಬದಲು ಒಂದು ಜಮೀನಿನಿಂದ ಇನ್ನೊಂದಕ್ಕೆ ಹರಿಯುತ್ತಿದ್ದರೆ ನೀರು ಪೋಲಾಗುವ ಸಂಭವವಿರುವುದಿಲ್ಲ. 'ಅನೇಕ ರೈತರಿಗೆ ಈ ವಿಷಯ ತಿಳಿದಿಲ್ಲ' ಎನ್ನುತ್ತಾರೆ ಅವರು.

ಹೇಗೇ ಇರಲಿ, ಒಂದು ದಶಕದೊಳಗಾಗಿ "ಆಹಾರ ಕ್ಷೇತ್ರದಲ್ಲಾಗಿರುವಂತೆಯೇ ನೀರಾವರಿಯಲ್ಲೂ ಸಹ ಸ್ಥಿತ್ಯಂತರವಾಗುವುದು' ಎಂದು ಅವರು ಭವಿಷ್ಯ ನುಡಿಯುತ್ತಾರೆ. ಆದರೆ ಇದಕ್ಕೆ ರೈತ ಹಾಗೂ ಸಂಶೋಧಕ ಕಾರ್ಯಕರ್ತರ ನಡುವಣ ಅಂತರ ಕಡಿಮೆಯಾಗಬೇಕು ಎಂದು ಅವರು ಎಚ್ಚರಿಸುತ್ತಾರೆ.

ಇದುವರೆಗೆ ಈ ಇಬ್ಬರ ನಡುವಣ ಸಹಕಾರ ಪ್ರೋತ್ಸಾಹಕರವಾಗಿದೆ. ಇದು ಈ ದಿಶೆಯಲ್ಲಿ ಭವಿಷ್ಯವನ್ನು ಸೂಚಿಸುತ್ತದೆ ಎಂದು ಅವರ ನಂಬಿಕೆ. ●

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಮಾನ್ಯರೆ,

'ನವಯುಗ'ದ ಹೊನ್ನಹಬ್ಬದ ಅವಸರದಲ್ಲಿ (1972) ನಮ್ಮ **ಸ್ವಾತಂತ್ರ್ಯದ ರಜತೋತ್ಸವವನ್ನೂ** ಆಚರಿಸುವ ಶುಭ ಸಂದರ್ಭ ಈ ಆಗಸ್ಟ್ 1972. ಈ ಮಹೋತ್ಸವದ ವೇಳೆ ಎಂದಿಗಿಂತಲೂ ಮಿಗಿಲಾದ ಪೂರ್ಣತೆ, ಸೌಂದರ್ಯಗಳಿಂದ ರಾಜಿಸಲಿರುವ **ವಿಶೇಷ ಸಂಚಿಕೆಯನ್ನು** 'ನವಯುಗ'ವು ಪ್ರಕಟಿಸಲಿದೆ ಎಂಬುದನ್ನು ತಮ್ಮ ಮುಂದಿಡಲು ಸಂತೋಷವಾಗುತ್ತದೆ.

ಸ್ವಾತಂತ್ರ್ಯ ಪೂರ್ವದ ಕನಸುಗಳು, ಕನಸು ನನಸಾದ ಬಗೆ, ಸ್ವಾತಂತ್ರ್ಯಾ ನಂತರದಲ್ಲಿ ನಮ್ಮ ಅಪೂರ್ವ ಸಾಧನೆಗಳು ಹಾಗೂ ನಮ್ಮ ನಿತ್ಯ ಜೀವನದಲ್ಲಿನ ಸುಧಾರಣೆಗಳನ್ನು ಕುರಿತ ಹಲವಾರು ಲೇಖನಗಳು ಈ ಸಂಚಿಕೆಯಲ್ಲಿ ಬರಲಿವೆ. ಈ ತನಕವೂ ಇಂತಹ ವಿಶೇಷಾಂಕಗಳ ಯಶಸ್ಸಿನಲ್ಲಿ ಪಾಲುದಾರರು ನಮ್ಮ ನೆಚ್ಚಿನ ಬರಹಗಾರರ ವರ್ಗ ಮತ್ತು ಜಾಹೀರಾತುಗಳನ್ನಿತ್ತು ಸಹಕರಿಸಿದ ಸಂಘ-ಸಂಸ್ಥೆಗಳು. ಹಿಂದಿನಂತೆಯೇ ಈ ಬಾರಿಯೂ ಇವರುಗಳೆಲ್ಲ ಸಹಕಾರವನ್ನೀಯುವರೆಂಬ ತುಂಬು ಭರವಸೆಯಿಂದ ಅವರನ್ನು ಪ್ರಾರ್ಥಿಸುತ್ತಲಿದ್ದೇವೆ. ಈ ಜನಪ್ರಿಯ ಪ್ರಮುಖ ಪತ್ರಿಕೆಯು ಅಸಂಖ್ಯ ಜನರ ಕೈ ಸೇರುತ್ತ ತಮ್ಮ ಉದ್ದಿಮೆ, ವ್ಯವಹಾರಗಳ ನೈಜ ದರ್ಶನವನ್ನು ಎಲ್ಲರಿಗೂ ಒದಗಿಸುವುದು. ಆ ಪ್ರಯುಕ್ತ ದಯವಿಟ್ಟು ಆದಷ್ಟು ತ್ವರಿತವಾಗಿ ತಮ್ಮ ಜಾಹೀರಾತನ್ನು ಕಳುಹಿಸಿ ಸಹಕರಿಸಿರಿ. ಜಾಹೀರಾತುಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ.

ಜಾಹೀರಾತುಗಳ ದರಗಳು

ಪೂರ್ತಿ ಪುಟ...	ರೂ 200/-	ಹಿಂಬದಿಯ ರಕ್ಷಾಪತ್ರ	...ರೂ.500/-
ಅರ್ಧ ಪುಟ...	ರೂ. 125/-	ಮುಂಗಡೆಯ ರಕ್ಷಾಪತ್ರದ ಒಳಪುಟ	ರೂ.400/-
ಕಾಲು ಪುಟ...	ರೂ. 65/-	ಹಿಂಬದಿಯ ರಕ್ಷಾಪತ್ರದ ಒಳಪುಟ	ರೂ.300/-

ಆಕಾರದ ವಿವರ

ಪುಟದ ಸೈಜ 15" × 10" (37.5 ಸೆ. ಮೀ × 25 ಸೆ. ಮೀ.)

ಅಚ್ಚಿನ ಜಾಗ 13" × 8" (32.5 ಸೆ. ಮೀ × 20. ಮೀ)

ಪ್ರಕಟಣೆಯ ತಾರೀಖು: 15—8—1972.

ಶ್ರೀ ಕೆ. ಕೆ. ಶೆಟ್ಟಿ ಎಂ. ಪಿ., ಅವರ ಪುಸ್ತಕಗಳು

ಕುಶಲವ	(ನಾಟಕ)	0–50
ಸಂಶಯ ಪಿಶಾಚಿ	,,	0–75
ವ್ಯಭಿಚಾರಿಣಿ ಯಾರು	,,	1–00
ದೇಶಭಕ್ತ	,,	1–25
ಪ್ರೇಮ ವಿಜಯ	,,	1–00
ಚಿತ್ರಾಂಗದೆ	,,	0–60
ಹೆಂಡ್ತಿ ಗಂಡನಾದರೆ	(ಪ್ರಹಸನ)	0–25
ಪುರುಷವಧು	,,	0–25
ಮುಂದಿನ ದೇವರು	(ಪ್ರಬಂಧ)	0–25
ಸನ್ಯಾಸಿಯ ಸೋಗಿನಲ್ಲಿ	(ಕಥೆ)	0–75

ವಿ. ಪಿ. ಮಾಡುವುದಿಲ್ಲ; ಪುಸ್ತಕದ ಬೆಲೆಯೊಂದಿಗೆ 0–50 ಪೈಸೆ ಹೆಚ್ಚಿಗೆ ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

I. A. I
in R. R. C. 105/72

ಡಿ. ಕೆ. ಸಂಜೀವಯ್ಯ — ಅರ್ಜಿದಾರ

—VS—

ಮುತ್ತ ಗೌಡ — ಎದ್ರಿ

ಸುಬ್ಬಯ್ಯ ಗೌಡ, ಮುತ್ತಗೌಡರ ಮಗ, ಸುಳ್ಯ ತಾಲ್ಲೂಕು ಸುಳ್ಯ ಕಸಬಾ ಗ್ರಾಮದ ದುಗ್ಗಲಡ್ಕ. P. O. ಸೋಣಂಗೇರಿ, ದ. ಕ. ಇವರಿಗೆ—

ಮೇಲಿನ ಗೇಣಿ ಅರ್ಜಿಯಲ್ಲಿ ಇತ್ತೀಚೆಗೆ ಮೃತಪಟ್ಟ ಮುತ್ತ ಗೌಡರ ನ್ಯಾಯಾನುಸಾರವಾದ ಪ್ರತಿನಿಧಿ ನೀವೇ ಎಂದು ಆತನಿಗೆ ಬದಲಾಗಿ ನೀವೇ ಪ್ರತಿವಾದಿಯಾಗ ಬೇಕೆಂದು ಸದ್ರಿ ಅರ್ಜಿದಾರರು ಅರ್ಜಿ ಕೊಟ್ಟಿರುವುದರಿಂದ ಆ ಬಗ್ಗೆ ನಿಮಗೇನಾದರೂ ಆಕ್ಷೇಪಣೆಗಳಿದ್ದಲ್ಲಿ ತಾ. 29–7–72ರಂದು ಬೆಳಿಗ್ಗೆ 11ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉದ್ಧರಿಸಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

ಎ. ಪಿ. ಗೌರೀಶಂಕರ
ಅರ್ಜಿದಾರನ ಕಡೆ ಎಡ್ವಕೇಟ್

ಪುತ್ತೂರು, ದ. ಕ. 10–7–1972

ಕಾಶ್ಮೀರಿ ಸಾಹಿತ್ಯ ದರ್ಶನ

ಲೇಖಕರು: ಶ್ರೀ ಎಸ್. ಆರ್. ಮಳಗಿ

ನಿಸರ್ಗ ಸೌಂದರ್ಯಕ್ಕೆ ಸುಪ್ರಸಿದ್ಧವೆನಿಸಿರುವ ಕಾಶ್ಮೀರವು ಭಾರತಖಂಡದ ಇತಿಹಾಸದಲ್ಲಿ ಬೌದ್ಧಿಕ ಮತ್ತು ದಾರ್ಶನಿಕ ಕ್ಷೇತ್ರಗಳಲ್ಲೂ ಅಸಾಧಾರಣ ಸಿದ್ಧಿಗಳನ್ನು ಪ್ರದರ್ಶಿಸಿದ ನಾಡಾಗಿದೆ. ಅತ್ಯಂತ ಪುರಾತನಕಾಲದ ಹೊತ್ತು ವೇದ ಋಕ್ಕುಗಳ ರಚನೆ ಕಾಶ್ಮೀರದಲ್ಲೇ ಆದ್ದೆಂಬುದಕ್ಕೆ ಆಧಾರಗಳಿವೆಯೆಂದು ವಿದ್ವಾಂಸರ ಮತ. ಅಲ್ಲದೆ, ಸುಮಾರು ೩೦೦೦ ವರುಷಗಳ ಹಿಂದೆ ಬೌದ್ಧ ಮತ ತತ್ವಗಳ ಹಾಗೂ ಸಾಧನೆಗಳ ಕೇಂದ್ರವೂ ಇದೇ ಆಗಿತ್ತು. ಬಳಿಕ ಹಿಂದೂ ಧರ್ಮದ ಪುನರುಜ್ಜೀವನವಾದಾಗ, ಕಾಶ್ಮೀರಿ ಶೈವ ಸಿದ್ಧಾಂತ ಅಥವಾ ಪ್ರತ್ಯಭಿಜ್ಞಾನದರ್ಶನವು ಭಾರತೀಯ ತತ್ವಜ್ಞಾನ ಭಂಡಾರಕ್ಕೆ ಕಾಶ್ಮೀರದ ವಿಶಿಷ್ಟ ಕೊಡುಗೆಯಾಗಿದೆ. ತರುವಾಯ ಪ್ರವೇಶಿಸಿದ ಸೂಫಿ ತತ್ವಜ್ಞಾನದಿಂದಾಗಿ ಕಾಶ್ಮೀರದ ವರ್ಣರಂಜಿತ ತತ್ವದರ್ಶನಗಳ ಚರಿತ್ರೆ ಇನ್ನಷ್ಟು ವೈವಿಧ್ಯಮಯವೆನಿಸಿತು. ಈ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆದ ಕಾಶ್ಮೀರದ ಸಂಸ್ಕೃತ ಸಾಹಿತ್ಯ ವಾಙ್ಮಯ ವಿಶೇಷವಾಗಿ ಕಾವ್ಯಮೀಮಾಂಸಾ ಗ್ರಂಥಗಳು ಮತ್ತು ತತ್ವದರ್ಶನ ಗ್ರಂಥಗಳು ಸ್ವಾಭಾವಿಕವಾಗಿಯೇ ಉತ್ತಮ ಪ್ರತಿಭೆಯ ನಿದರ್ಶನವಾದವು. ಬಿಲ್ಹಣ ಕವಿಯ ಉಕ್ತಿಯಂತೆ ಕಾಶ್ಮೀರ ಪುರವಾಸಿನಿಯಾದ ಶಾರದೆ ಕಾಶ್ಮೀರದಲ್ಲಿ ಪ್ರತ್ಯಕ್ಷವಾಗಿ ವಾಸಿಸುತ್ತಿರುವಳೆಂಬ ನಂಬುಗೆ ಇಂದಿಗೂ ಜನಜನಿತವಾಗಿಯೇ ಇದೆ.

ಹೀಗೆ ಸಹಸ್ರಾರು ವರುಷಗಳ ಸಂಸ್ಕೃತ ಸಾಹಿತ್ಯ ಪರಂಪರೆಯುಳ್ಳ ಕಾಶ್ಮೀರದಲ್ಲಿ ಜನವಾಣಿಯಾಗಿರುವ ಕಾಶ್ಮೀರಿ ಭಾಷೆಯ ಸಾಹಿತ್ಯಕ್ಕೂ ಸ್ವಾಭಾವಿಕವಾಗಿ ಒಂದು ಚರಿತ್ರೆಯಿದೆ. ಕಾಶ್ಮೀರದ ಸಾಮಾನ್ಯ ಜನ ಬಳಕೆಯ ತಾಯ್ನುಡಿಯಾಗಿರುವ ಕಾಶ್ಮೀರಿ ಭಾಷೆ ಹಿಂದೆಂದೂ ರಾಜರ ಆಸ್ಥಾನ ಭಾಷೆಯಾಗಿರಲೇ ಇಲ್ಲ. ಪ್ರಾಚೀನ ಕಾಲದಲ್ಲಿ ಸಂಸ್ಕೃತ ಮತ್ತು ಅನಂತರದಲ್ಲಿ ಪಾರ್ಸಿ ಭಾಷೆ—ಇವುಗಳಿಗೇ ಆ ಗಣ್ಯಸ್ಥಾನವಿತ್ತು. ಈಗ ಪಾರ್ಸಿಭಾಷೆಯೊಂದಿಗೆ ಉರ್ದುವಿನ ಪ್ರಭಾವವೂ ಕಾಶ್ಮೀರಿಯ ಮೇಲೆ ಹೆಚ್ಚಿದೆ.

ಭಾಷೆಯ ಪ್ರಾಚೀನತೆ

ಕಾಶ್ಮೀರಿ ಭಾಷೆ "ಡಾರ್ಡಿಕ್" ಭಾಷಾ ಗುಂಪಿಗೆ ಸೇರಿದ್ದೆಂದು ಡಾ. ಗ್ರಿಯರ್ಸನ್ ಹೇಳಿದ್ದರೆ, ಇನ್ನಿತರ ಭಾಷಾ ವಿಜ್ಞಾನಿಗಳು ಇದು ಇಂಡೋ ಆರ್ಯನ್ ಪರಿವಾರದ್ದೇ ಎನ್ನುತ್ತಾರೆ. ಇದೇನಿದ್ದರೂ ಹಿಂದಿನಿಂದಲೂ ಕಾಶ್ಮೀರಿಗಳ ಪ್ರಾದೇಶಿಕ ಭಾಷೆಯಾದ ಕಾಶ್ಮೀರಿಯ ಮೇಲೆ ಸಂಸ್ಕೃತದ ಪ್ರಭಾವವು ಬಹು ಪ್ರಾಚೀನ ಕಾಲದಿಂದಲೇ ಇದ್ದುದು ಸ್ಪಷ್ಟವಿದೆ ಕಾಶ್ಮೀರಿಗಳಲ್ಲಿ ಪಂಡಿತ ವರ್ಗದವರು ಸಂಸ್ಕೃತ ಪಾರ್ಸಿ ಭಾಷೆಗಳನ್ನು ಸಾಹಿತ್ಯ ಭಾಷೆಯಾಗಿ ಬಳಸಿದ್ದರೂ ಜನಸಾಮಾನ್ಯರ ತಿಳಿವಳಿಕೆಗಾಗಿ ಕಾಶ್ಮೀರಿಯನ್ನೂ ತಮ್ಮದೇ ಆದ ಶಾರದಾ ಲಿಪಿಯನ್ನೂ ಸಾಹಿತ್ಯ ರಚನೆಗಾಗಿ ಸ್ವೀಕರಿಸಿದ್ದರು. ಆದರೆ ಆಧುನಿಕ ಕಾಶ್ಮೀರಿಯರು ಇಂದು ತಮ್ಮ ಶಾರದಾ ಲಿಪಿಯನ್ನು ಬಿಟ್ಟುಕೊಟ್ಟು ಪಾರ್ಸಿ—ಅರಬ್ಬೀ ಲಿಪಿಯನ್ನು ಬಳಸ ತೊಡಗಿದ್ದಾರಂತೆ.

ಕಾಶ್ಮೀರವು ಆಗಾಗ ನಡೆದ ಪರಕೀಯರ ದಾಳಿಗಳಿಂದಾಗಿ ಎಷ್ಟೋ ಕಾಶ್ಮೀರಿ ಸಾಹಿತ್ಯವನ್ನು ಕಳೆದುಕೊಂಡಿದೆ. ಈ ಕಾರಣದಿಂದ ಕಾಶ್ಮೀರಿ ಸಾಹಿತ್ಯ ಪ್ರವಾಹವು ಅಲ್ಲಲ್ಲಿ ಹರಿಗಡಿದಂತೆ ಭಾಸವಾಗುತ್ತಿದೆ.

೯ನೆಯ ಶತಕದಿಂದೀಚೆಗೆ ಮುಹಮ್ಮದೀಯರ ದಾಳಿಗಳ ಪರಿಣಾಮವಾಗಿ ಅರಬ್ಬಿ—ಪಾರ್ಸಿ ಭಾಷೆಗಳ ವರ್ಚಸ್ಸಿನಿಂದ ಹೊಸ ಕಾಶ್ಮೀರಿ ಭಾಷೆಯೇ ಉದಯ ಹೊಂದಿತೆಂದು ಬಲ್ಲವರ ಅಭಿಪ್ರಾಯ; ಗ್ರಂಥಸ್ಥ ಕಾಶ್ಮೀರಿ ಭಾಷೆಯ ಪ್ರಾಚೀನತೆ ಸುಮಾರು ೧೦೦೦ ವರ್ಷಗಳಾಚೆಗೆ ಹೋಗುವುದೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ.

ಮೊದಲ ಪದ್ಯಕೃತಿ

೧೩ನೆಯ ಶತಕದ ಶಿತಿಕಂಠನೆಂಬ ಕವಿಯ "ಮಹಾಯಾನ ಪ್ರಕಾಶ"ವೆಂಬ ಶೈವ ಗ್ರಂಥವೇ ಕಾಶ್ಮೀರಿಯ ಮೊಟ್ಟ ಮೊದಲ ಪದ್ಯಕೃತಿ. ತಾಂತ್ರಿಕ ಮಾರ್ಗದಲ್ಲಿ ಪರಮಾರ್ಥ ಸಾಧನೆ ಹೇಗೆ ಸಾಧ್ಯವೆಂಬುದನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶ ಈ ಕವಿಯದಾಗಿದೆ. ಈ ಕಾಲದಲ್ಲಿ ಶೈವದರ್ಶನ ಮತ್ತು ಸೂಫಿ ತತ್ವಗಳ ನಡುವೆ ತಿಕ್ಕಾಟವುಂಟಾಗಿ ಕೊನೆಗೊಮ್ಮೆ ಇವೆರಡರ ನಡುವೆ ಸಾಮರಸ್ಯ ಘಟಿಸಿತೆಂದು ತಿಳಿದುಬರುತ್ತದೆ. ಈ ಸಾಮರಸ್ಯದ ಹೊಸಅಭಿವ್ಯಕ್ತಿ ೧೪ನೆಯ ಶತಕದ ಲಾಲ್‌ಡೇಡ್ ಎಂಬ ಕವಯಿತ್ರಿಯ ವಚನಗಳಲ್ಲೂ ಆಕೆಯ ಸಮಕಾಲೀನನಾಗಿದ್ದ ನಂದಋಷಿ ಎಂದೂ ಹೆಸರಾಗಿದ್ದ ಷೇಕ ನೂರುದ್ದೀನನ ನೀತಿಪದ್ಯಗಳಲ್ಲೂ ಎದ್ದು ಕಾಣುತ್ತದೆ. ಲಾಲ್‌ಡೇಡಳು ತನ್ನ ವಚನಗಳಲ್ಲಿ ವಿಶ್ವವ್ಯಾಪೀ ಪರಮಾತ್ಮ ತತ್ವದ ಅರಿವನ್ನೂ, ಅನುಭಾವ ಸುಖವನ್ನೂ ಭಕ್ತಿಹೀನ ತೀರ್ಥಯಾತ್ರೆಗಳ ಜಂಜಡವಿಲ್ಲದೆ ಮನೆಯಲ್ಲಿಯೇ ಪಡೆಯುವುದು ಸಾಧ್ಯವೆಂದು ಸಾರಿದ್ದಾಳೆ. ಆಕೆಯ ವಚನಗಳು ಆಧ್ಯಾತ್ಮಿಕ ಭಾವಗೀತೆಗಳೇ ಆಗಿವೆ. ನಂದಋಷಿಯು ಲೌಕಿಕ ಹಾಗೂ ಆಧ್ಯಾತ್ಮಿಕ ವಿಚಾರಗಳ ಸಮತೋಲನವನ್ನು ದ್ವಿಪದಿ ಛಂದಸ್ಸಿನಲ್ಲಿ ಪ್ರದರ್ಶಿಸಿದ್ದಾನೆ. ಪರ್ಷಿಯ ದೇಶದಿಂದ ಬಂದಿದ್ದ ಈ ಕವಿಯ ನೀತಿ ಪದ್ಯಗಳಲ್ಲಿ ಸ್ವಾಭಾವಿಕವಾಗಿ ಅರಬ್ಬಿ ಪಾರ್ಸಿ ಪ್ರಭಾವವು ಎದ್ದು ಕಾಣುವಂತಿದೆ. ಈ ಇಬ್ಬರು ಸಾಧುಗಳ ಕಾವ್ಯದೃಷ್ಟಿ ಕನ್ನಡದ ವಚನಕಾರರ ಹರಿದಾಸರ ಹಾಗೂ ಸರ್ವಜ್ಞ ಕವಿಯ ಆಧ್ಯಾತ್ಮಿಕ ದೃಷ್ಟಿಯನ್ನೂ ಲೌಕಿಕ ವಿಚಾರಧಾರೆಯನ್ನೂ ಹೋಲುವಂತಿದೆ. ಹಿಂದೂ ಇಸ್ಲಾಂ ಧರ್ಮದ ತತ್ವಗಳೆರಡರಲ್ಲೂ ಸಮಾನತೆಯನ್ನು ಕಾಣುವ ಜಾತ್ಯಾತೀತ ಭ್ರಾತೃಭಾವವನ್ನು ಬೋಧಿಸುವ, ಪರಮ ತತ್ವದ ಬಗೆಗೆ ನಿರ್ಭರ ಭಕ್ತಿ ಭಾವವುಳ್ಳ ಇವರ ಕೃತಿಗಳು ಅನಂತರ ಬಂದ ಕಬೀರದಾಸನಂತಹ ಅನುಭಾವೀ ಕವಿಗಳ ಉದಯಕ್ಕೆ ಪ್ರೇರಕ ಶಕ್ತಿಗಳಾದುವೆಂದು ಬಲ್ಲವರ ಮತ.

ಲಾಲಡೇಡಳ ತರುವಾಯ ಸುಮಾರು ಒಂದು ನೂರು ವರುಷಗಳ ವರೆಗೆ ಯಾವ ಕೃತಿಗಳೂ ಉಪಲಬ್ಧವಿಲ್ಲ. ೧೫ನೆಯ ಶತಕದಲ್ಲಿ ಆಗಿಹೋದ ಸುಲ್ತಾನ್ ಜೈನ್ ಉಲಾಬ್‌ದೀನ್ ದೊರೆಯ ಆಸ್ಥಾನಕವಿಗಳಿಂದ ಫಿರ್ದೂಸಿಯ ಷಹನಾಮೆ ಕಾವ್ಯದ ಕಾಶ್ಮೀರಿ ಅನುವಾದ, 'ಬಾಣಾಸುರ ವಧೆ' ಎಂಬ ಪೌರಾಣಿಕ ಮಹಾಕಾವ್ಯ, 'ಜೈನ ಚರಿತೆ' ಎಂಬ ಜಿನನ ಚರಿತ್ರೆ, 'ಜೈನವಿಲಾಸ' ಎಂಬ ನಾಟಕ ರಚಿತವಾದವು. ಈ ಆಶ್ರಯದಾತ ಸುಲ್ತಾನನ ತರುವಾಯ ಉಂಟಾದ ಅರಾಜಕತೆಯಿಂದ ಎಲ್ಲಾ ಕೃತಿಗಳು ನಾಶವಾದವಂತೆ.

ಇಲ್ಲಿಂದ ಮುಂದೆ ಕೆಲಕಾಲಾನಂತರ ೧೬ನೆಯ ಶತಕದಲ್ಲಿ ಹಾಬಾಖತೂನ್ ಎಂಬ ಕವಯಿತ್ರಿಯಿಂದ 'ಲಲ್' ಎಂಬ ಪ್ರೇಮ ಗೀತೆಗಳ ಆರಂಭವನ್ನು ಕಾಣುತ್ತೇವೆ. ಹಿಂದೆ ೧೪ನೆಯ ಶತಕದಲ್ಲಿ ಲಾಲಡೇಡಳಿಂದ ಆರಂಭವಾಗಿದ್ದ ವಚನಗಳು ಪರಮಾತ್ಮನನ್ನು ಕುರಿತ ಒಂದು ವಿಧದ ಪ್ರೇಮ ಗೀತೆಗಳೇ ಆಗಿದ್ದವು. ಹಾಬಾಖತೂನಳ ಜೀವನಕಥೆ ಸ್ವಾರಸ್ಯಕರವಾಗಿದೆ ಆಕೆ ಅಶಿಕ್ಷಿತ ರೈತನೊಬ್ಬನನ್ನು ಮದುವೆಯಾಗಿ ನೀರಸಜೀವನವನ್ನು ಹೇಗೋ ನೂಕಿಕೊಂಡು ಬಂದಿದ್ದಳು. ಅನಂತರದಲ್ಲಿ ಬೇಟೆಗಾಗಿ ಬಂದಿದ್ದ ಯುಸೂಫ್ ಷಹಬಕ್ ಎಂಬ ರಾಜಪುತ್ರನ ಪ್ರೇಮಕ್ಕೆಪಾತ್ರಳಾಗಿ ಅತನ ರಾಣಿಯಾಗುವ ಭಾಗ್ಯ ಪಡೆದಳು. ಆಕೆಯ ಮೊದಲ ಹೆಸರು ಜೂನಿ ಎಂಬುದು ಹೋಗಿ ಹಬಾಖತೂನ್ ಎಂದು ಪ್ರಸಿದ್ಧಳಾಗಿದ್ದ ಆಕೆ ತನ್ನ ಪತಿಗೆ ಆಡಳಿತದಲ್ಲಿ ನೆರವು ನೀಡಬಲ್ಲ ಸಚಿವೆಯಾಗಿದ್ದಳಂತೆ. ಆ ಮೇಲೆ ನಡೆದ ಅಕ್ಬರನ ದಾಳಿಯಲ್ಲಿ ಸೆರೆಸಿಕ್ಕ ಪತಿಯಿಂದ ಅಗಲಿದ್ದ ಈ ಕವಯಿತ್ರಿ ವಿಪ್ರಲಂಭ ಶೃಂಗಾರ ಗೀತೆಗಳನ್ನು ರಚಿಸಿದಳು. ಅವೇ 'ಲಲ್' ಎಂಬ ಪ್ರೇಮಗೀತೆಗಳ ಉಗಮಕ್ಕೆ ಕಾರಣವಾದವು. ೧೮ನೆಯ ಶತಕದಲ್ಲಿ ಆಗಿಹೋದ ಅರಣೀಮಾಲ್ ಎಂಬ ಪಂಡಿತೆಯ ಪ್ರೇಮಗೀತೆಗಳು ಇವೇ ಮಾದರಿಯವು. ಅವು ನಾದಮಾಧುರ್ಯ ಚಿತ್ರಮಯತೆಗಳಿಂದ ವಿಶಿಷ್ಟವೆನಿಸಿವೆ ಈಕೆಯ ಪ್ರೇಮ ಗೀತೆಗಳು ಬಲು ರಮ್ಯ. ಕಾಶ್ಮೀರಿ ಕಾವ್ಯಭಾಂಡಾರಕ್ಕೆ ಇವು ಅಮೂಲ್ಯ ಕಾಣಿಕೆಗಳಾಗಿವೆ. ಈ ಪ್ರೇಮ ಗೀತೆಗಳೇ ಮುಂದೆ ಬಂದ ಭಕ್ತಿಗೀತೆಗಳಿಗೆ ದಾರಿ ಮಾಡಿಕೊಟ್ಟವಂತೆ ಇದರ ಪರಿಣಾಮವಾಗಿ ಕಾಶ್ಮೀರಿ ಸಾಹಿತ್ಯದಲ್ಲಿ 'ಲೀಲ್' ಮತ್ತು 'ನಾಟ್' ಎಂಬೆರಡು ಹೊಸ ಪಂಥಗಳು ಹುಟ್ಟಿವೆ. ಕೃಷ್ಣರಜದಾನ್ ಮತ್ತು ಸಾಜೀಂ ಎಂಬವರು ಭಕ್ತಿಯ ಹಾಡುಗಳಲ್ಲಿ ಈ ಮಾದರಿಗಳನ್ನು ಸೃಷ್ಟಿಸಿದ್ದಾರೆ. ಆಧ್ಯಾತ್ಮಿಕ ರಹಸ್ಯಗೀತೆಗಳು ಈ ಕಾಲದಲ್ಲಿ ಹುಟ್ಟಿ, ಅವು ಮಾಸ್ತರಜೀ ಎಂದು ಹೆಸರಾಗಿದ್ದ ಜಿಂದಾಕೌಲ್ ಎಂಬ ಕವಿಯ ವಿಶಾಲ ಮಾನವತಾದೃಷ್ಟಿಯ ಕಾವ್ಯದಲ್ಲಿ ಪರಿಪಕ್ವತೆಯನ್ನು ಪಡೆದಿವೆ.

೧೭ನೆಯ ಶತಕದಲ್ಲಿ ಆಡಳಿತ ಭಾಷೆಯಾಗಿದ್ದ ಪಾರ್ಸಿ ಭಾಷೆಯ ವರ್ಚಸ್ಸು ಕಾಶ್ಮೀರಿ ಭಾಷೆ ಮತ್ತು ಛಂದಸ್ಸುಗಳ ಮೇಲೆ ವಿಶೇಷವಾಯ್ತು. ಈ ಕಾರಣದಿಂದ ಪಾರ್ಸಿ ಕಥಾವಸ್ತುಗಳೂ ಛಂದೋರೂಪಗಳೂ ಕಾಶ್ಮೀರಿಯಲ್ಲಿ ಪ್ರವೇಶಪಡೆದವು.

ಆಧುನಿಕ ಕಾಶ್ಮೀರಿ ಸಾಹಿತ್ಯ

ಆಧುನಿಕ ಕಾಶ್ಮೀರಿ ಸಾಹಿತ್ಯ ಆರಂಭವಾದುದು ೧೮೧೯ರಿಂದ ಎಂದರೆ ಸಿಖ್ಖರು ಕಾಶ್ಮೀರವನ್ನು ಆಕ್ರಮಿಸಿಕೊಂಡಾಗಿನಿಂದ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯೋದಯವು ಸುಮಾರು ಇದೇ ಕಾಲವಲ್ಲಾದುದನ್ನು ಇಲ್ಲಿ ನೆನೆಯಬಹುದಾಗಿದೆ. ೧೯ನೆಯ ಶತಕದ ಕೊನೆಯವರೆಗೆ ಆಗಿಹೋದವರಲ್ಲಿ ಪ್ರಸಿದ್ಧರಾದವರೆಂದರೆ ಪ್ರಕಾಶರಾಮ್, ಮುಹಮ್ಮದ್ ಗಾಮಿ, ಮಕಬಲ್ ಷಹ, ಪರಮಾನಂದ, ವಲಿಯುಲ್ಲಾ, ಸಫಿಯುದ್ದೀನ್ ಮುಂತಾದವರು. ಪ್ರಕಾಶರಾಮನ 'ರಾಮಾವತಾರಲೀಲಾ' ಎಂಬುದು ಪ್ರಥಮ ಕಾಶ್ಮೀರಿ ರಾಮಾಯಣ. ಮುಹಮ್ಮದ ಗಾಮಿಯ ಪಾರ್ಸಿ ಕಥಾವಸ್ತುವುಳ್ಳ ಕೆಲವು ಶೃಂಗಾರ ಕಾವ್ಯಗಳೂ ಅನೇಕ ಗಜಲಗಳೂ ಜನ ಮೆಚ್ಚಿಕೆಪಡೆದಿವೆ. ವಲಿಯುಲ್ಲಾ ಮತ್ತು ಜರೀಫ ಸೇರಿ "ಹಿಮತ" ಎಂಬ ಗೀತಕಥೆಯನ್ನು ರಚಿಸಿದ್ದಾರೆ. ಮಕಬಲ ಷಹನು ವ್ಯಂಗ್ಯಕಾವ್ಯ ರಚನೆಯಲ್ಲಿ ಹೆಸರು ಪಡೆದ ಕವಿ. ಗಜಲ ರಚನೆಯಲ್ಲಿ ರಸಲ್ ಮೀರ್ ಕವಿ ವಸ್ತು ಮತ್ತು ರಸಸೃಷ್ಟಿಯಲ್ಲಿ ಮಹಮ್ಮದಗಾಮಿಯನ್ನೂ ಮೀರಿಸಿದವ ಎಂದು ಹೇಳುತ್ತಾರೆ. ಹಿಂದೆ ಉಲ್ಲೇಖಿಸಿದ ಲೀಲಾ ಗೀತೆಗಳ ಆರಂಭವಾದುದು ಪ್ರಕಾಶರಾಮನಿಂದ. ಮಾತೃಪ್ರೇಮ, ಭಕ್ತಿ, ಕರುಣರಸ ಪ್ರತಿಪಾದನೆಗಳಲ್ಲಿ

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು—1

Tele: GOLDKING Estd: 1947 Phone: 3242 Res: 3272

ಏಕನಂದನಕವಿ ಲೋಕಪ್ರಿಯನಾಗಿದ್ದಾನೆ. ಪ್ರಕಾಶರಾಮ ಮತ್ತು ಅನಂತರ ಬಂದ ವಾಹಬ್ ಪರೆ ಇವರು ಕಾಶ್ಮೀರಿ ಕಾವ್ಯದಲ್ಲಿ ಯುದ್ಧ ಮತ್ತು ಅದರ ಭೀಕರ ಪರಿಣಾಮಗಳನ್ನು ಮೊದಲ ಸಲ ಚಿತ್ರಿಸಿದ್ದು ಕಂಡುಬರುತ್ತಿದೆಯಂತೆ. ವಾಹಬಪರೆ ಫಿರ್ದೂಸಿಯ 'ಷಹನಾಮೆ'ಯನ್ನು ಕಾಶ್ಮೀರಿಗೆ ಪರಿವರ್ತಿಸಿದ್ದಾನೆ. ಇದೇ ಕಾಲದಲ್ಲಿ ಜಾನಪದ ಧಾಟಿಯ 'ರೋಷಗೀತೆ' ಎಂಬ ಪ್ರಕಾರವೂ ತಲೆಯೆತ್ತಿತ್ತು. ಇವು ಒಂದುರೀತಿಯ ಲುಣಿತದ ಹಾಡುಗಳು. ಇವುಗಳಲ್ಲಿ ಪಳಗಿದ ಕೈಯ್ಯೊಡನೆ ಮಹಮ್ಮದ ಗಾಮೀ ಮತ್ತು ಮುಕಬುಲ್‌ಷಹ. ಈ ಕಾಲದ ಇನ್ನೊಂದು ವಿಶೇಷವೆಂದರೆ ಆಗಿನ ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿ–ದುರಾಡಳಿತಗಳ ಪರಿಣಾಮವಾಗಿ ವಿಡಂಬನಾತ್ಮಕ 'ಲಾರಿಸಷ' ಎಂಬ ವ್ಯಂಗ್ಯ ಗೀತೆಗಳು ಉದಿಸಿದವು.

ಲೀಲಾಸಂಧದಲ್ಲಿ ಪರಮಾನಂದನು ಅತ್ಯುಚ್ಚ ಶ್ರೇಣಿಯ ಕವಿ. ಈತನ ಕೃಷ್ಣ ಭಕ್ತಿಯ ಗೀತೆಗಳು ಪ್ರಪಂಚದ ಸತ್ಯತೆಯನ್ನು ಜೀವನಾನಂದವನ್ನು ಬೋಧಿಸುತ್ತಿವೆ. ಸನ್ಯಾಸಬೇಕಿಲ್ಲ, ತ್ಯಾಗಕ್ಕಿಂತ ಭೋಗವೇ ಲೇಸು ಎಂದು ಈತ ಸಾರಿದ್ದಾನೆ. ಕಾಶ್ಮೀರಿಯ'ತ್ರಿಕ' ಸಿದ್ಧಾಂತದ ಹೋಲಿಕೆ ಇಲ್ಲಿದೆ ಎಂದು ತಿಳಿದವರ ಅಭಿಪ್ರಾಯ. ಪರಮಾನಂದನ "ರಾಧಾ ಸ್ವಯಂವರ" 'ಸುದಾಮ ಚರಿತೆ' 'ಶಿವಲಗನ'ಗಳು ಕಥನ ಕಾವ್ಯಗಳು. ಭಕ್ತಿಪರವಶತೆ ಮತ್ತು ಆಧ್ಯಾತ್ಮಿಕಗಳ ಸಮ್ಮಿಲನ ಇಲ್ಲಿದೆ. ಭಾಷೆ ತುಸು ಕಠಿಣವಂತೆ. ಕನ್ನಡದ ಕನಕದಾಸನಿಗೆ ಈತನನ್ನು ಹೋಲಿಸಬಹುದಾಗಿದೆ.

ಸಾಹಿತ್ಯದ ಮೈಲಿಗಲ್ಲುಗಳು

ಕಾಶ್ಮೀರಿ ಸಾಹಿತ್ಯದಲ್ಲಿ ಗದ್ಯ ಶೀರ ಕಡಿಮೆ. ಪಂಗೀಗನೇ ಎಂಬಾತನು ಕೆಲವು ಪ್ರೇಮ ಕಥೆ–ದಂಗೆಕೋರರ ಕಥೆಗಳನ್ನು ರಚಿಸಿದ್ದಾನೆ. ಇದೇ ಕಾಲದಲ್ಲಿ ಬೈಬಲ್ ಮತ್ತು ಕೊರಾನ್‌ಗಳ ಪರಿವರ್ತನೆಗಳೂ 'ಕಾಶ್ಮೀರಿ ಶಬ್ದಾಮೃತ' ಎಂಬ ವ್ಯಾಕರಣ ಗ್ರಂಥವೂ, ಕಾಶ್ಮೀರಿ ಗಾದೆಗಳ ಸಂಗ್ರಹವೊಂದೂ ರಚಿತವಾಗಿದೆ.

೨೦ನೇ ಶತಮಾನದ ಎರಡನೇ ದಶಕದಲ್ಲಿ ಗುಲಾಮ ಅಹಮ್ಮದ ಮಹಜೂರ ಬರುವ ವರೆಗೆ ಕಾಶ್ಮೀರಿ ಸಾಹಿತ್ಯದಲ್ಲಿ ಹೇಳಿಕೊಳ್ಳುವಂಥದೇನೂ ಸೃಷ್ಟಿಯಾಗಿಲ್ಲ. ಈ ಅಂಶದಲ್ಲೂ ಆಧುನಿಕ ಕಾಶ್ಮೀರಿ ಸಾಹಿತ್ಯವು ಆಧುನಿಕ ಕನ್ನಡ ಸಾಹಿತ್ಯವನ್ನು ಹೋಲುತ್ತದೆ. ಮಹಜೂರ ಕವಿ ಆಧುನಿಕ ಕಾಶ್ಮೀರಿ ಕಾವ್ಯಕ್ಕೆ ನೂತನ ಚೈತನ್ಯ ನೀಡಿದ ದೇಶ ಭಕ್ತಿ ಸ್ವಜನ ಪ್ರೇಮಗಳಿಂದ ಕೂಡಿದ ಹೊಸ ದೃಷ್ಟಿ ಈತನಲ್ಲಿದೆ. ಅದೊಂದು ಕ್ರಾಂತಿಕಾರಕ ದೃಷ್ಟಿ. ಶ್ರೀಮಂತರ ದಬ್ಬಾಳಿಕೆಯಿಂದ ಬಡವರ ಬಿಡುಗಡೆಗಾಗಿ ಹಾತೊರೆಯುವ ತೀವ್ರ ಧ್ವನಿ ಇವನ ಕಾವ್ಯದಲ್ಲಿದೆ.ಪ್ರಾಚೀನ ಕವಿ ಸಮಯ—ಸಂಕೇತಗಳಿಗೆ ಹೊಸ ಅರ್ಥ ಕೊಡುವ ಸಾಮರ್ಥ್ಯ ಈತನ ವೈಶಿಷ್ಟ್ಯ. ಅಲಿಫ್ ರಚಿಸಿದ "ಮುಗಲ್ ಕಾರವಾನ್‌ಸಾನ್" (ನಮ್ಮ ಸ್ವಾತಂತ್ರ್ಯದ ಅಪ್ರತಿಹತ ಮೆರವಣಿಗೆ) ಎಂಬುದು ಜಾಗೃತ ಕೃತಿ. ಶ್ರಮಜೀವಿಗಳನ್ನು ಕುರಿತು ಬರೆದ ಆನಿ ಎಂಬ ಕವಿಯ ಕೃತಿಗಳು, ಮಾಸ್ತರಜೀ ಅವರ ಸಾಮರಸ್ಯಯುಕ್ತ ಭಾವೀ ದಿವ್ಯಜೀವನದ ಕನಸುಗಾರಿಕೆಯ ಕೃತಿಗಳು ಇವು ಇಂದಿನ ಕಾಶ್ಮೀರಿ ಸಾಹಿತ್ಯ ಪ್ರಗತಿಯ ಮೈಲುಗಲ್ಲುಗಳು.

ಆಧುನಿಕ ಕಾಲದ ಪ್ರಮುಖ ಕವಿ ನಾದೀಂ ತಾಯ್ನಾಡಿನ ಪ್ರೀತಿ, ಸಾಮಾಜಿಕ್ಕವಿಷಮತೆಯ ವಿರುದ್ಧ ಬಂಡಾಯ–ಇವು ಈತನ ಕಾವ್ಯವಸ್ತು. ಜಾನಪದ ಮಟ್ಟುಗಳ ಹೊಸ ಛಂದೋಲಯಗಳು ಇವನ ಕಾವ್ಯದ ಇನ್ನೊಂದು ಲಕ್ಷಣ. ನಮ್ಮ ಬೇಂದ್ರೆಯವರನ್ನು ನಾದೀಂ ಹೆಚ್ಚಾಗಿ ಹೋಲುವಂತಿದೆ. ರೋಷನ್, ರಹಿ, ಪ್ರೇಮಿ ಎಂಬ ಉತ್ಸಾಹಿ ಕವಿಗಳು ನಾದೀಂ ಕೆಪಿ ಸ ಪರಿವಾರ. ಕಾಶ್ಮೀರದ ನಿಸರ್ಗ ಸೌಂದರ್ಯದ ವರ್ಣನೆ ರೋಷನ್ ಕವಯಿತ್ರಿಯ ಕಾವ್ಯಲಕ್ಷಣ. ಪ್ರೇಮಿಯ ರೈತನ ಬಾಳಿನ ಚಿತ್ರಣ ಅಪೂರ್ವ. "ಹರುದ್" ಎಂಬ ಸುದ್ದಿಯ ಹಾಡು ಮೋಹಕ ಛಂದೋವಿಲಾಸದಿಂದ ಕೂಡಿದೆ.

ಮಹಜೂರ್ ಮತ್ತು ಅರೆಫ್ ಇವರು ಸಾಮಾಜಿಕ ಟೀಕೆಯಲ್ಲಿ ಬರುವ ಭ್ರಷ್ಟಾಚಾರದ ಖಂಡನೆ ಅತಿ ತೀಕ್ಷ್ಣ. ನಿಸರ್ಗದ ಚಿತ್ರಣದಲ್ಲಿ ಆಶಾಪೂರ್ಣ ನವಸಂದೇಶವನ್ನು ಸಾರುವ ರಹಿಯ ಕಾಲಚಾತುರ್ಯ ಮೆಚ್ಚುವಂಥದ್ದು. ಆಜಾದನು ಮಹಜೂರ್ ಕವಿಯನ್ನು ಅನುಸರಿಸುತ್ತಿದ್ದರೂ ಅವನ ಕಾವ್ಯಗಳು ಭಾವಪೂರ್ಣ ದೇಶಭಕ್ತಿಯ ಉತ್ಕಟತೆಗೆ ಹೆಸರಾಗಿದೆ. ಈ ಎಲ್ಲ ಆಧುನಿಕ ಕವಿಗಳ ಗುರಿ ತಮ್ಮ ನಾಡಿನ ಶಾಂತಿ-ಸ್ವಾಸ್ಥ್ಯಗಳ ಸ್ಥಾಪನೆಯೇ ಆಗಿದೆ.

ನಾಟಕ ರಚನೆ

ಈ ಶತಮಾನದ ಆದಿಯಲ್ಲಿ ನಾಟಕ ರಚನೆಯು ಕೆಲಮಟ್ಟಿಗೆ ನಡೆಯಿತು. ನಂದಲಾಲ್ ಕಾಲಿಕೌಲನ 'ನತರ್‌ಕಹಮತ್' ಸತ್ಯ ಸಿಕಸ್ಟದಂತಹ ಭಾಷಾಂತರ ನಾಟಕಗಳಲ್ಲದೆ ಅನೇಕ ಸಾಮಾಜಿಕ ಸತ್ವಂತ್ರ ನಾಟಕಗಳ ಸೃಷ್ಟಿಯಾಗಿದೆ. ೧೯೪೭ರ ಈಚೆಗೆ ನಿಜವಾದ ಸತ್ವಯುಕ್ತ ನಾಟಕಗಳು ಹುಟ್ಟಿವೆ. ರಾಜಕೀಯ ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಏಕಾಂಕಗಳೂ ದೊಡ್ಡ ನಾಟಕಗಳೂ, ಗೀತಾ ರೂಪಕಗಳೂ ಹೊರ ಬಂದಿವೆ. ನಾದೀಮನು ಒಂದು ಹಳೆಯ ಜಾನಪದ ಕತೆಯನ್ನು ಒಂದು ಹಾಡುಗಬ್ಬಕ್ಕೆ ತಿರುಗಿಸಿದ್ದಾನೆ. ಸೃಷ್ಟಿ ಶಕ್ತಿ ಮೃತ್ಯು ಶಕ್ತಿಯೊಡನೆ ಹೋರಾಡಿ ಕೊನೆಗೆ ಗೆಲ್ಲುವುದನ್ನು ಸೂಚಿಸಿ ಕಾಶ್ಮೀರದ ಮುಕ್ತಿಯನ್ನು ಸಂಕೇತಿಸಿದ್ದಾನೆ. ನಾದೀಂ ಮತ್ತು ರೋಹನ್ ಸೇರಿ ಬರೆದ 'ಹೇಮಲ ನಗ್ರೆ' ಎಂಬುದು ಜಾನಪದ ಕತೆಯನ್ನಾಧರಿಸಿ ರಚಿಸಿದ ಗೀತಾ ರೂಪಕ ಪಶು ಸಮಾನ ನೀಚನನ್ನು ಮಾನವತೆಗೇರಿಸುವ ಧ್ಯೇಯವನ್ನು ಇದು ನಿರೂಪಿಸುತ್ತಿದೆ. ಈ ರೀತಿಯ ಸಾಂಕೇತಿಕ ರೂಪಕಗಳು ಕನ್ನಡದಲ್ಲಿ ಇದೀಗ ಪ್ರಚಲಿತವಾಗಿರುವ ಗಿರೀಶ್ ಕಾರ್ನಾಡರ ನಾಟಕಗಳನ್ನು ನೆನಪಿಗೆ ತರುತ್ತವೆ.

(ಬೆಂಗಳೂರು ಆಕಾಶವಾಣಿ ಕೃಪೆಯಿಂದ)

ಪ್ರಶಾಂತಚಂದ್ರ ಮಹಾಲನೊಬಿಸ್

ಜೂನ್ ೨೮ರ ಸಾಯಂಕಾಲದ, ೨೯ರ ಬೆಳಿಗ್ಗಿನ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಒಂದು ಸಮಾಚಾರವು, ನಂತರ ನಡೆಯಲಿದ್ದ ಸಿಮ್ಲಾ ಶೃಂಗ ಸಮ್ಮೇಳನದ ಕಾರಣದಿಂದಲೋ, ಸಂಬಂಧಪಟ್ಟ ವ್ಯಕ್ತಿ ರಾಜಕೀಯದಿಂದ ದೂರವಿದ್ದುದರಿಂದಲೋ ಏನೋ, ಅಷ್ಟೊಂದು ಗಮನ ಸೆಳೆಯುವ ರೀತಿಯಲ್ಲಿ ಅಚ್ಚಾಗಿರಲಿಲ್ಲ. ಜೂನ್ ಇಪ್ಪತ್ತೆಂಟರಂದು ಮಧ್ಯಾಹ್ನ ಪ್ರಾ| ಪ್ರಶಾಂತಚಂದ್ರ ಮಹಾಲನೊಬಿಸ್ ಬ್ರಹ್ಮಸಾಯುಜ್ಯವನ್ನು ಪಡೆದರೆಂಬುದೇ ಆ ಸುದ್ದಿ. ಅವರು ಯಾರು?

'ಅವರೊಬ್ಬ ಮಹಾನ್ ವಿಜ್ಞಾನಿ'ಯೆಂದು ದುಃಖ ವ್ಯಕ್ತಪಡಿಸುತ್ತ ಪ್ರಧಾನಿ ಇಂದಿರಾ ಗಾಂಧಿಯವರು ಹೇಳಿರುವರು. ಅದೆಷ್ಟೋ ವಿಜ್ಞಾನಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಈ ಕಾಲದಲ್ಲಿ ಪ್ರಶಾಂತಚಂದ್ರರನ್ನೇತಕ್ಕೆ ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು? ಅಂಕ ವಿಜ್ಞಾನದಲ್ಲಿ ಅವರು ನಮ್ಮ ದೇಶದ ಗೌರವ ಧ್ವಜವನ್ನು ಮೇಲಕ್ಕೆತ್ತಿದ್ದಾರೆ. ಹಾಗಿರುವದರಿಂದ ಅವರ ವಿಷಯ ಸ್ವಲ್ಪವಾದರೂ ತಿಳಿದುಕೊಳ್ಳುವುದು ಅಗತ್ಯವೇ ಇದೆ.

ಅವರ ಜನನಕ್ಕೂ ಸಾವಿನ ದಿನಕ್ಕೂ ಒಂದು ರೀತಿಯ ಸಂಬಂಧವಿದೆ. ಅವರು ಹುಟ್ಟಿದ್ದು ೧೮೯೩, ಜೂನ್ ೨೯ರಂದು; ಕಾಲವಾದದ್ದು ೧೯೭೨, ಜೂನ್ ಇಪ್ಪತ್ತೆಂಟರಂದು. ಅಂದರೆ ಅವರದ್ದು ತುಂಬು ಜೀವನ. ಅವರ ವಿದ್ಯಾಭ್ಯಾಸ ನಡೆದದ್ದು ಕಲ್ಕತ್ತದಲ್ಲಿ. ಅಲ್ಲಿ ಪದವೀಧರ ಆದ ಮೇಲೆ ಇಂಗ್ಲೆಂಡಿಗೆ ಹೋಗಿ ಗಣಿತ ಮತ್ತು ಭೌತಿಕ ಶಾಸ್ತ್ರದಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದರು. ಅಲ್ಲಿ ಅವರ ಅತಿ ಹತ್ತಿರದ ಸ್ನೇಹಿತರಾಗಿದ್ದದ್ದು ಜವಾಹರಲಾಲ ನೆಹ್ರೂ ಮತ್ತು ಪ್ರೊ| ಕೇಂಡೆಶ್. ಅಲ್ಲಿಂದ ಹಿಂತಿರುಗಿ ಬಂದು ಭಾರತದ ವಿದ್ಯಾ ವಿಭಾಗದಲ್ಲಿ ಕೆಲಸಕ್ಕೆ ಸೇರಿದರು. ಕಲ್ಕತ್ತದ ಪ್ರೆಸಿಡೆನ್ಸಿ ವಿದ್ಯಾಲಯದಲ್ಲಿ ಅವರನ್ನು ಭೌತಿಕ ಶಾಸ್ತ್ರದ ಪ್ರಾಧ್ಯಾಪಕರಾಗಿ ಉದ್ಯೋಗದಲ್ಲಿ ಕಾಲಿಟ್ಟರು. ಅದೇ ವಿದ್ಯಾಲಯದಲ್ಲಿ ಅವರು ಪದವಿ ಪಡೆದಿದ್ದರೆಂಬುದು ಗಣನೀಯ ಅಂಶವಿದೆ. ಅದೇ ವಿದ್ಯಾಲಯದಲ್ಲಿ ಅವರು ಮುಖ್ಯ ಪ್ರಾಧ್ಯಾಪಕರಾಗಿ (ಪ್ರಿನ್ಸಿಪಾಲರಾಗಿ) ೧೯೪೮ರ ವರೆಗೆ ದುಡಿದಿರುವರು.

ಖರ್ಚಿಗೆ ಸಂಬಳ ತೆರುವ ವಿದ್ಯಾಲಯವಿದೆ, ಜೀವನವಿರುವದು ಭೋಗಕ್ಕಾಗಿ ಎಂದು ಅವರೆಂದೂ ಭಾವಿಸಿರಲಿಲ್ಲ. ಅವರ ವೈಶಿಷ್ಟ್ಯವನ್ನು ಕಂಡುಕೊಂಡವರು ಅಮರ ಕವಿ ರವೀಂದ್ರನಾಥ ಠಾಗೋರರವರು. ತಮ್ಮ ವಿಶ್ವಭಾರತಿ ವಿದ್ಯಾಲಯಕ್ಕೆ ಅವರ ನೆರವನ್ನು ಅಪೇಕ್ಷಿಸಿದರು. ಪ್ರಶಾಂತಚಂದ್ರರು ಶಾಂತವಾಗಿ ಅದೆ ಕ್ಕೊಪ್ಪಿ, ರವೀಂದ್ರನಾಥರ ಬೆನ್ನೆಲುಬಾಗಿ ಬಂದರು. ಅವರು ಪ್ರೆಸಿಡೆನ್ಸಿ ವಿದ್ಯಾಲಯದ ಹೊಣೆಯ ಹೊರೆಯನ್ನು ಬಿಸಾಡಿ ಅವರಲ್ಲಿಗೆ ಧಾವಿಸಿರಲಿಲ್ಲ. ವಿದ್ಯಾಲಯದ ಸಮಯದ ನಂತರದ ಸಮಯವನ್ನು ಅವರು ವಿಶ್ವಭಾರತಿಗಾಗಿ ಧಾರೆ ಎರೆದರು.

೧೯೨೩ರಲ್ಲಿ ಅವರು ಮದುವೆ ಮಾಡಿಕೊಂಡು ಬಾಳಗೆಳತಿಯೊಂದಿಗೆ ದಕ್ಷಿಣ ಭಾರತ ಪ್ರವಾಸಕ್ಕೆ ಬಂದಿದ್ದರು. ಆಗ ಅವರು ಕೆ.ಸಿ.ಎಸ್. ಮೆನನರ (ಮಾಜಿ ರಾಯಬಾರಿ) ಅತಿಥಿಯಾಗಿ ತಂಗಿದ್ದರು. ಆಗಲೇ ಅವರು ರವೀಂದ್ರನಾಥ ಠಾಗೋರರ ಕಾರ್ಯದರ್ಶಿಯಾಗಿದ್ದರು. ರವೀಂದ್ರರೊಂದಿಗೆ ಇವರೂ ಅನ್ಯಾನ್ಯ ಪರದೇಶಗಳಿಗೆ ಹೋಗಿರುವರು.

೧೯೩೧ರಲ್ಲಿ ಅವರು ಭಾರತೀಯ ಅಂಕ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಿದರು. ಆಗ ಆರ್ಥಿಕ ಅಮಾತ್ಯರಾಗಿದ್ದ ಜೇಮ್ಸ್ ಗ್ರಿಗ್ಗರು ಅವರಿಗೆ ೨,೫೦೦ ರೂಪಾಯಿಗಳನ್ನು ಕೊಟ್ಟಿದ್ದರು. ಆ ಒಂದು ಚಿಕ್ಕ ಮೊತ್ತದಿಂದ ಅವರೊಂದು ದೊಡ್ಡ ಸಂಸ್ಥೆಯನ್ನು ಸ್ಥಾಪಿಸಿ, ಜಗತ್ತಿನ ಗಮನವನ್ನು ಅತ್ತ ಸೆಳೆದರು. ಅದೊಂದು ಸಂಶೋಧನಾ ಕೇಂದ್ರವಾಗಿ ಬೆಳಗುತ್ತಿದ್ದು, ಅವರ ಕೊನೆಯುಸಿರಿನವರೆಗೂ ಅವರದರ ಮಾರ್ಗದರ್ಶಕರಾಗಿದ್ದರು. ಅವರನ್ನು ಇಂಗ್ಲೆಂಡ್, ಝೆಕೊಸ್ಲೊವೇಕಿಯಾ ರಷ್ಯಾ ಮುಂತಾದ ದೇಶಗಳು ಗೌರವದಿಂದ ಕಂಡಿವೆ; ಅನೇಕ ಬಿರುದುಗಳನ್ನು ಕೊಟ್ಟಿವೆ. ಅವರು ಅನ್ಯರಾಷ್ಟ್ರಗಳಿಗೆ ಹೋದಾಗ ಅಲ್ಲಿರುತ್ತಿದ್ದ ಭಾರತೀಯ ವಿಜ್ಞಾನಿಗಳನ್ನೇ ಕಂಡು, ಅವರು ಭಾರತಕ್ಕೆ ಹಿಂತಿರುಗಿ ಬರುವಂತೆ ಪ್ರೋತ್ಸಾಹಿಸುತ್ತಿದ್ದರು.

ಅವರು ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾಗಲೇ ಸಂಯುಕ್ತ ರಾಷ್ಟ್ರ ಸಂಘದ ಅಂಕ ವಿಜ್ಞಾನ ಸಮಿತಿಯಲ್ಲಿ (೧೯೪೭) ಸದಸ್ಯರಾಗಿದ್ದರು. ಮುಂದಕ್ಕೆ ೧೯೫೪ರಿಂದ ನಾಲ್ಕು ವರ್ಷಗಳ ಕಾಲ ಅದರ ಅಧ್ಯಕ್ಷರಾಗಿಯೂ ಹೊಣೆ ಹೊತ್ತಿದ್ದರು.

ಜವಾಹರಲಾಲ ನೆಹ್ರೂಜಿಯವರೂ ಪ್ರಶಾಂತಚಂದ್ರರೂ ಇಂಗ್ಲೆಂಡಿನಲ್ಲಿ ಇ

(ಒಂಭತ್ತನೇ ಪುಟ ನೋಡಿರಿ)

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,
ಉತ್ತಮ ವಜ್ರಗಳು
ಕೊಲಿಟಿಯಲ್ಲಿ, ಸ್ಟಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂಟಾ ಕೆರೆಟ ತೂಕದಲ್ಲಿ
ಮುಂದಾಗಿ ನಮ್ಮಿಂದ ಪಡೆಯಬಹುದು.
ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಕವಲುದಾರಿ—ಕೆಂಪುದೀಪ

ಪ್ರಜಾರಾಜ್ಯದಲ್ಲಿ ಭ್ರಷ್ಟಾಚಾರ

ಮಾತುಮಾತಿಗೆ ಸ್ವತಂತ್ರ ಸರಕಾರವನ್ನು ನಿಂದಿಸಿ, ಟೀಕಿಸುವುದನ್ನೇ ಪ್ರವೃತ್ತಿ ಮಾಡಿಕೊಂಡಿರುವವರು ಹಲವರು; ಇವರ ಜತೆಗೆ ಇಂಗ್ರೇಜಿ ಸರಕಾರವನ್ನು ಹೊಗಳುವವರು ಇನ್ನು ಕೆಲವರು.

'ಅಧಿಕಾರವೆಂದರೆ ಅವರದ್ದು. ಏನು ಗಂಡು ಸರಕಾರ ಅಂತೀರಾ? ಅಲ್ಲಾಬಲ್ಲಾ ತುಟಿಬಿಚ್ಚಿದರೆ ಡಂ.... ಏನು ಕ್ರಮ ಏನು ಶಿಸ್ತು ಎಷ್ಟು ಕಟ್ಟುನಿಟ್ಟು!'

'ಇಂದು ನೋಡಿ, ಸರಕಾರವೆಂದರೆ ಅಧಿಕಾರ. ಅಧಿಕಾರವೆಂದರೆ ಲಂಚ—ರುಷುವತ್ತು. ಇಪ್ಪತ್ತೈದು ಕೊಟ್ಟಿರೋ, ನಿಮ್ಮ ಪೇಪರ್‌ಕಡೆಗೆ ದೃಷ್ಟಿ ಬಿತ್ತು. ಮತ್ತೆ ಇಪ್ಪತ್ತೈದಕ್ಕೆ ದಸ್ಕತು ಬಿತ್ತು. ಇನ್ನು ಇಪ್ಪತ್ತೈದಕ್ಕೆ ಅಂಚೆ ಗುಮ್ಮಸ್ತನ ಟ್ರೇಗೆ ಸರಿಯಿತು. ಮುಗದೊಂದು ಹತ್ತಕ್ಕೆ ನಿಮ್ಮ ಕೈಗೇ ಬಂದೀತು.........'

ಆದರೆ, ಇಂದು ಈ ಪರಿಸ್ಥಿತಿ ಬದಲಾಯ್ತು. ಬ್ರಿಟಿಷ್ ಮಂತ್ರಿಗಳಿಗೂ ಭಾರತದ ಮಂತ್ರಿ ಮಾಗಧರ ಗಾಳಿ ಬೀಸತೊಡಗಿದೆಯಂತೆ.

ಅಲ್ಲಿನ ಗೃಹಮಂತ್ರಿ ರೆಜಿನಾಲ್ಡ್ ಮಾಡ್ಲಿಂಗರ ಮೇಲೆ ಲಂಚ ಸ್ವೀಕಾರದ ಆರೋಪವನ್ನು ಒಬ್ಬ ವ್ಯಾಪಾರಿ ಹೊರಿಸಿದ್ದಾನೆ. ಮಾತ್ರವಲ್ಲ, ಅದರ ಮೇಲೆ ಭ್ರಷ್ಟಾಚಾರದ ದೂರೂ ಇದೆ.

ಈ ವ್ಯಾಪಾರಿಯು ಹೇರಿದ ಆರೋಪಗಳು ಅತ್ಯಂತ ಉಗ್ರವಾದವುಗಳು. ಪ್ರಜಾಸತ್ತೆಯಲ್ಲಿ ಭ್ರಷ್ಟಾಚಾರವೆಂಬುದು ಸಾಂಕ್ರಾಮಿಕ ಜಾಡ್ಯ.

ಆದರೆ, ಪ್ರಜಾಸತ್ತೆಗಳಿಗೆ ರಾಜ್ಞಿಯಾಗಿರುವ ಬ್ರಿಟನಿನಲ್ಲಿ ಭ್ರಷ್ಟಾಚಾರದ ಆರೋಪ ಇಷ್ಟೊಂದು ಉಗ್ರವಾಗಿರುವುದು ಇದೇ ಮೊದಲು.

ಬ್ರಿಟನ್ನಿನ ಎಡ್ವರ್ಡ್‌ಹೀತ್ರರ ಸಚಿವಸಂಪುಟ ಮೊದಲೇ ಆರ್ಥಿಕ ಬವಣೆಯಿಂದ ವಿಪಣ್ಣವಾಗಿದೆ. ಈಗ ಈ ಆರೋಪದ ಕಾರಣದಿಂದ ಕಳವಳಕಾರಿಯೆನಿಸುವಷ್ಟು ತತ್ತರಿಸಿದೆ.

ಗೃಹ ಮಂತ್ರಿಗಳ ಮೇಲಿನ ಆರೋಪವು ದಿವಾಳಿತನಕ್ಕೆ ಸಂಬಂಧಿಸಿದ ನ್ಯಾಯಾಲಯವೊಂದರಲ್ಲಿ ವ್ಯಾಪಾರಿಯೋರ್ವರು ಮಾಡಿದ್ದರಿಂದ ಇದರ ಪ್ರಭಾವ ಹೆಚ್ಚು.

ಸಾರ್ವಜನಿಕ ಜೀವನದಲ್ಲಿ ಹಣಕಾಸಿನ ಭ್ರಷ್ಟಾಚಾರದ ತನಿಖೆಯನ್ನು ಮಾಡಲು ನ್ಯಾಯ ಸಮಿತಿಯೊಂದನ್ನು ಏರ್ಪಡಿಸಲು ಬ್ರಿಟಿಷ್ ಸರಕಾರ ಬಯಸುತ್ತಿದೆಯಂತೆ.

ಕರ್ನಾಟಕದ ಲೋಕೋಪಯೋಗಿ ಸಚಿವರು ಶರಾವತಿ ಸಂಬಂಧದಲ್ಲಿ ತುಂಬ ಮಾತಾಡತೊಡಗಿದ್ದಾರೆ. ಶ್ರೀ ಚೆನ್ನಬಸಪ್ಪನವರು ಹಿಂದಿನ, ಇಂದಿನ ಎರಡೂ ಕಾಂಗ್ರೆಸ್ ಸರಕಾರಗಳಲ್ಲಿ ಪಾಲುಧಾರಿಗಳಾಗಿದ್ದುದರಿಂದ ಅವರ ಮಾತಿಗೆ ನಿಜಕ್ಕೂ ಭಾರ ಹೆಚ್ಚು.

ಅವರ ಮಾತಿನ ಧಾಟಿಯ ಅರ್ಥವೊಂದೇ—ಹಿಂದೆ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲರು ಪೂರ್ತ ಭ್ರಷ್ಟಾಚಾರಿಗಳಾಗಿದ್ದಾರೆ.

ಈಗ ಈ ಇಬ್ಬರೂ ಮಾಜಿ ಮುಖ್ಯಮಂತ್ರಿಗಳು ನ್ಯಾಯವಿಚಾರಣೆಗೆ ಮುಂದೆ ಬಂದಿದ್ದಾರೆ. ಆದರೆ, ಹೇಳಿದವರೇ ಹಿಂದೆ ಸರಿಯತೊಡಗಿದ್ದಾರೆ.

ಮುಖ್ಯಮಂತ್ರಿ ಅರಸು ಸ್ಥಳವನ್ನು ಮುದ್ದಾಂ ಪರಿಶೀಲಿಸಿದ ಬಳಿಕವೇ ನಿರ್ಧಾರವೆಂದು ಹೇಳಲಾಗುತ್ತದೆ.

ಸರಿಯೇ. ಅದುವರೆಗಾದರೂ ಉಳಿದವರು ಬಾಯ್ಮುಚ್ಚಿಕೊಳ್ಳಬಹುದಲ್ಲಾ?

ನಮ್ಮ ಸಚಿವರಿಗೆ ಮೌನದ ಪಾಠವಾಗಿರದಿರಬೇಕು. ಮೌನದ ಮಹತ್ವವನ್ನವರು ಅರಿತಿರಲು ಸನ್ಯಾಸಿಗಳಾಗಿದ್ದಾರೇನು?

ಶತ ಹತ್ತೇನ ಪಂಡಿತಃ ಎಂಬುದೊಂದು ಹಳೆಯ ಗಾದೆ. ಕೈಲಾಗದವರು ನಾಲಗೆಯಿಂದಾದರೂ ಸೂರ್ವರ ತೇಜೋವಧೆ ಮಾಡುವುದು ಸಾಧ್ಯವಾದರೆ ಅವರು ರಾಜ್ಯಕೀಯ ಪುಢಾರಿಗಿರಲೇ ಬೇಕಾದ ಕನಿಷ್ಠಾರ್ಹತೆ ಪಡೆಯುತ್ತಾರೆ.

ಶರಾವತಿಯ ಕರ್ಮಕಾಂಡಕ್ಕೆ ಯಾರನ್ನೂ ಬಲಿಗೊಡುವ ದುರುದ್ದೇಶವಿಲ್ಲವೆಂದು ವಿವರಣೆ ನೀಡಲಾಗುತ್ತಿದೆ.

ಈ ತುಪಾಕಿಯನ್ನು ವೀರೇಂದ್ರ ಪಾಟೀಲರನ್ನೇ ಗುರಿಯಾಗಿಟ್ಟು ತಿರುಗಿಸುವ ಪ್ರಯತ್ನ ನಡೆಯುತ್ತಿರುವಂತೆ ಭಾಸವಾಗುತ್ತದೆ.

ನೀರಿದ್ದಲ್ಲಿ ಕೆಸರೆಂದರು ಹಿಂದಿನವರು. ಪ್ರಜಾಸತ್ತೆಯಲ್ಲಿ ಭ್ರಷ್ಟಾಚಾರವೂ ಅನಿವಾರ್ಯವೊ ಏನೋ.

ಬ್ರಿಟನ್ನಿನ ಶುದ್ಧ ಪ್ರಜಾರಾಜ್ಯ ಜಲದಲ್ಲಿಯೂ ಭ್ರಷ್ಟಾಸುರನ ರಾಡಿಯೇಳತೊಡಗಿರುವಾಗ, ನಮ್ಮದೇನು ಮಹಾ ಎಂದು ಸಮಾಧಾನ ತಾಳಬಹುದಲ್ಲವೇ?

ನೂರು ಹುಳುಕುಗಳಿದ್ದರೂ ಪ್ರಜಾರಾಜ್ಯವೇ ಸರ್ವೋತ್ತಮ ಪ್ರಶಾಸನ ಪದ್ಧತಿ.

ಸಮುದ್ರದಲ್ಲಿ ಮುಳುಗುವವನು ಮಿಸಿಗಂಜಿದಡೆಂತು?

ಮಿನಿಗೆ ಹೆದರುವವನು ರೀಗಿಳಿಯಲೇ ಬಾರದು. ●

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸರಕಾರಿ ಕಚೇರಿಗಳಲ್ಲಿ

ಫಾರಂಗಳ ತುಂಬುಕೊರತೆ

ಕೆಲವು ದಿನಗಳಿಗೆ ಮೊದಲು ಮಿತ್ರರೊಬ್ಬರು ಸಿಕ್ಕಿದರು. ತಾಲೂಕು ಟ್ರೆಜರಿಗೆ ಸಂದಾಯ ಮಾಡುವ ಸಲುವಾಗಿ ಉಡುಪಿಗೆ ಬಂದಿದ್ದರಂತೆ, ಅವರು ತಮ್ಮ ಅನುಭವವನ್ನೂ ಸರಕಾರಿ ಕಚೇರಿಗಳ ಸೋಮಾರಿತನವನ್ನೂ ಬಣ್ಣಿಸಿ ಹೇಳಿದರು.

ಖಜಾನೆಗೆ ಹಣಪಾವತಿ ಮಾಡಲು ಟ್ರೆಜರಿಗೆ ಹೋಗಿ ಚಲನ್ ಫಾರಂಗಳನ್ನು ಬೇಡಿದರು. ಫಾರಂ ಇಲ್ಲವೆಂದು ಸಂಬಂಧಿಸಿದ ಗುಮಾಸ್ತೆಯೊಬ್ಬ ಉತ್ತರಿಸಿದ. ಖಜಾನೆಗೆ ಹಣ ಪಾವತಿ ಮಾಡಬೇಕಲ್ಲಾ, ಚಲನ್ ಫಾರಂ ಇಲ್ಲದೆ ಹೇಗೆ ಇದು ಸಾಧ್ಯ ಎಂದು ಇವರು ಪ್ರಶ್ನಿಸಿದರು. ಫಾರಂ ಅನ್ನು ಟೈಪು ಮಾಡಿಸಿ ಎಂದು ಗುಮಾಸ್ತೆಯ ಉತ್ತರ ಬಂತು.

ಸರಿ, ಟೈಪು ಮಾಡಿಸ ಬೇಕಾದರೂ ಸ್ಪೆಸಿಮನ್ ಕಾಪಿ ಬೇಕಲ್ಲಾ, ಕೊಡಿ ನೋಡೋಣ ಎಂದು ಮತ್ತೆ ಬೇಡಿದರು ಇವರು. ಆಗ ಗುಮಾಸ್ತೆ ಅತ್ತಿತ್ತ ನೋಡಿ...ಇವರೆಲ್ಲಿ ದೊರೆಯುತ್ತದೆ. ಅಲ್ಲಿಗೆ ಹೋಗಿ ತನ್ನಿ ಎಂದರು. ಟ್ರೆಜರಿ ವ್ಯವಹಾರಕ್ಕೆ ತೀರ ಹೊಸಬರಾಗಿದ್ದ ನನ್ನ ಮಿತ್ರರು ಮರು ಪ್ರಶ್ನಿಸಿದರು.....ಇವರು ಎಲ್ಲಿದ್ದಾರೆ? ಗುಮಾಸ್ತೆ ನಿರಾತಂಕನಾಗಿಯೇ ಉತ್ತರಿಸಿದ...ರಸ್ತೆಯಲ್ಲಿ...ರ ಎದುರು.

ಮಿತ್ರರು...ರಲ್ಲಿಗೆ ಹೋದರು....ಪೈಸೆ ತೆತ್ತು ಟೈಪು ಮಾಡಿದ ಚಾಲನ್ ಫಾರ್ಮ್ ತಂದು ತುಂಬಿಸಿದರು. ಸಂಬಂಧಿಸಿದ ಗುಮಾಸ್ತೆಗೆ ಸಾಂಜೂರಿಗೆ ಬಗ್ಗೆ ಕೊಟ್ಟರು. ಆಗ ಟ್ರಿಪ್ಲಿಕೇಟ್ ಬೇಕೆಂದು ಆ ಗುಮಾಸ್ತೆ ಡ್ರಾಯರಿನೊಳಗಿಂತ 'ಚಲನ್' ಒಂದನ್ನು ಹರಿದುಕೊಟ್ಟ—ಅಚ್ಚಾದ್ದು. ಅದನ್ನು ತುಂಬಿ ಮಿತ್ರರು ತಮ್ಮ ಕೆಲಸ ಪೂರೈಸಿದರು.

ಸರಕಾರಿ ಖಜಾನೆಗೆ ಸಲ್ಲಿಸಲು ಚಲನ್ ಫಾರಂಗಳೇ ಖಜಾನೆಯಲ್ಲಿಲ್ಲವೆಂಬುದು ನಾಚಿಗೆಗೇಡು. ಸರಕಾರ ಪ್ರಜೆಗಾಗಿ ಫಾರಂ ಪೂರೈಸುತ್ತಿಲ್ಲವೋ ಅಥವಾ ಜಾಬ್ ಟೈಪಿಂಗ್ ವರ್ಕ್ಸನವರಿಗೂ ಸಂಬಂಧಿಸಿದ ಗುಮಾಸ್ತೆಗೂ ಒಳಕ್ಕೊಳೆಟ್ಟು ಇದೆಯೋ ಎಂಬುದು ಯಕ್ಷಪ್ರಶ್ನೆ. ಟೈಪು ಮಾಡಿದ ಅಥವಾ ಕೈಯಲ್ಲಿ ಬರೆದ ಫಾರಂಗಳು ನಡೆಯುತ್ತವೆಯೆಂದಾದಲ್ಲಿ ಅವನ್ನು ಅಚ್ಚು ಹಾಕ ಬೇಕಾದದ್ದು ಅನಗತ್ಯ. ಚಲನ್ ಫಾರಂ ಪೂರೈಸುವ ಕಂಟ್ರಾಕ್ಟನ್ನು ಖಾಸಗಿ ವಲಯಕ್ಕೆನೇ ನೀಡಿದರೆ ಅದರಿಂದ ಸರಕಾರಕ್ಕೆ ಲಾಭವಾದರೂ ಆದೀತು.

ಈ ವಿಷಯದಲ್ಲಿ ಸರಕಾರದ ಉನ್ನತ ವಲಯದಲ್ಲಿ ತಪಾಸಣೆ ಅವಶ್ಯವೆನಿಸುತ್ತದೆ. ಅವಶ್ಯವಾದ ಫಾರಂಗಳು ದೊರೆಯದೆ ಹೋದರೆ ಸಾರ್ವಜನಿಕ ವ್ಯವಹಾರ ಹೇಗೆ ನಡೆಯಬೇಕು.?

ಫಾರಂಗಳ ಅಭಾವ—ಶೋಷಣೆಯೆಂಬುದು ಸರಕಾರಿ ಕಛೇರಿಗಳಲ್ಲಿ ದಿನ ನಿತ್ಯದ ಸಂಗತಿ. ಸರಕಾರಿ ನೌಕರರು ತಾವು ದೊರೆಗಳೆಂದು ತಿಳಿದು ನಡೆಯುತ್ತಿರುವುದೇ ಈ ಸುಲಿಗೆಗೆ ಕಾರಣವೆಂಬುದು ನಿಸ್ಸಂಶಯ. ಈ ಪರಿಸ್ಥಿತಿ ತಪ್ಪದೆ ನೌಕರ ಶಾಹಿಯ ಕಪಿ ಮುಷ್ಟಿಯಿಂದ ಬಿಡುಗಡೆ ಅಸಾಧ್ಯ.

— ಮೋಹನ.

●●

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 428/72 S. C. 110/1971

ಮೋನಪ್ಪ ಗೌಡ. —ಅರ್ಜಿದಾರ

ಡೊಂಬ ಗೌಡ — ಎದ್ರಿ

ಡೊಂಬ ಗೌಡ, ಬೊಗ್ರ ಗೌಡರ ಮಗ, ಬೆಳ್ತಂಗಡಿ ತಾಲ್ಲೂಕು ಬಂದಾರು ಗ್ರಾಮದ ಕೈಲ್ಲೊಟ್ಟು ಎಂಬಲ್ಲಿರುವವರು. ಪೋಷ್ಟು: ಆಡೂರು ಪೆರಾಲ್, ದ. ಕ. ಇವರಿಗೆ—

ಅರ್ಜಿದಾರರು ನಿಮ್ಮನ್ನು ಸ್ತಿಹಿದಿ ವಾರಂಟಿನಲ್ಲಿ ಹಿಡಿತರಿಸಿ ಸಿವಿಲ್ ಜೈಲಿಗೆ ರವಾನಿಸಬೇಕೆಂದು ದಾಖಲು ಮಾಡಿದ ಮೇಲ್ಕಾಣಿಸಿದ ಅನುಭಾರಿಯು 3-8-1972ಕ್ಕೆ ನಿಮ್ಮ ಆಕ್ಷೇಪಣೆಗಳನ್ನು ದಾಖಲು ಮಾಡುವರೆ ಇರುತ್ತದೆ. ನೀವು 3-8-1972ಕ್ಕೆ ಬೆಳಿಗ್ಗೆ 11ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸ್ವತಹ ಹಾಜರಾಗಿ ಉದುರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(ಕೋರ್ಟಿನ ಹುಕುಂ ಪ್ರಕಾರ)

Pulu Narayana Bhat

Advocate for Petitioner

ಪುತ್ತೂರು, ದ. ಕ, 10-7-1972

ಪ್ರಶಾಂತಚಂದ್ರ ಮಹಾಲನೋಬಿಸ್

(ಹಿಳನೇ ಪುಟದಿಂದ)

ಡ್ಡಾಗಲೇ ಸ್ನೇಹಿತರಾಗಿದ್ದ ಕಾರಣ, ಸ್ವಾತಂತ್ರ್ಯ ಸಿಕ್ಕಿದೊಡನೆ ಜವಾಹರಲಾಲರು ಪ್ರಧಾನಿಯಾದ ಮೇಲೆ ಪ್ರಶಾಂತಚಂದ್ರರ ಜ್ಞಾನದ ಉಪಯೋಗವನ್ನು ಅವರು ಪಡೆದುಕೊಳ್ಳಲು ಪ್ರಯತ್ನಿಸಿದರು. ಪ್ರಶಾಂತಚಂದ್ರರು ನಿಷ್ಠುರವಾದಿ, ಕಂಡದನ್ನು ಕಂಡಂತೆ ಹೇಳುವವರಿದ್ದ ಕಾರಣ ರಾಜಕೀಯೋದ್ಯಮಿಗಳಿಗೆ ಡೋಂಗಿ ಅಂಕೆ-ಸಂಖ್ಯೆಯನ್ನು ಅವರು ಕೊಡುತ್ತಿರಲಿಲ್ಲ. ಹಾಗಿಲ್ಲವಾದಲ್ಲಿ ಅವರು ಮಂತ್ರಿಪದವಿಯನ್ನು ಅಲಂಕರಿಸಬಹುದಾಗಿತ್ತು. ಅವರನ್ನು ೧೯೪೯ರಲ್ಲಿ ಭಾರತ ಸರಕಾರದ ಅಂಕ ವಿಜ್ಞಾನ ಸಲಹಾಗಾರರನ್ನಾಗಿ ನೇಮಿಸಲಾಯಿತು. ೧೯೫೫ರಲ್ಲಿ ಅವರನ್ನು ಯೋಜನಾಸಮಿತಿಯ ಸದಸ್ಯರನ್ನಾಗಿ ಆರಿಸಿಕೊಳ್ಳಲಾಯ್ತು. ಅವರು ೧೯೬೭ರ ವರೆಗೆ ಯೋಜನಾ ಸಮಿತಿಯ ಸದಸ್ಯರಾಗಿದ್ದರು. ೧೯೬೮ರಲ್ಲಿ ಅವರಿಗೆ ಪದ್ಮವಿಭೂಷಣ ಬಿರುದನ್ನಿತ್ತು ಭಾರತ ಸರಕಾರ ಗೌರವಿಸಿತು.

ಅವರು ಬೆಂಗಳೂರಿನಲ್ಲಿ ಡೊಕ್ಯುಮೆಂಟೇಶನ್ ರಿಸರ್ಚ್ ಏಂಡ್ ಟ್ರೈನಿಂಗ್ ಸೆಂಟರನ್ನು ೧೯೬೨ರಲ್ಲಿ ಸ್ಥಾಪಿಸಿದರು.

ಅಂಕವಿಜ್ಞಾನ ಅಂಗಣದಲ್ಲಿ ಓಡಾಡುತ್ತಿದ್ದ ಎಂಭತ್ತು ವರ್ಷ ವಯಸ್ಸಿನ ಪ್ರಶಾಂತಚಂದ್ರರನ್ನು ಅನಾರೋಗ್ಯದ ನಿಮಿತ್ತ ಕಲ್ಕತ್ತದ ಶುಶ್ರೂಷಾಲಯದಲ್ಲಿ ಮೇ ೨೪ರಂದು ಸೇರಿಸಲಾಗಿತ್ತು; ಜೂನ್ ಏಳರಂದು ಶಸ್ತ್ರ ಚಿಕಿತ್ಸೆ ನಡೆಯಿತು. ಆದರೂ ಜೂನ್ ಇಪ್ಪತ್ತೆಂಟರಂದು ಮಧ್ಯಾಹ್ನ ಅವರು ಬ್ರಹ್ಮೈಕ್ಯರಾದರು. ಸಮಾಚಾರ ಹಬ್ಬಿದೊಡನೆ ಅವರ ವೈಶಿಷ್ಟ್ಯವನ್ನರಿತ್ತಿದ್ದವರು ಶುಶ್ರೂಷಾಲಯಕ್ಕೆ ಧಾವಿಸಿದರು. ಅವರ ಪಾರ್ಥಿವ ಶರೀರವನ್ನು ಅವರ ಮುದ್ದಿನ ಸಂಸ್ಥೆಯಲ್ಲಿ ತಂದಿಟ್ಟು, ಎಲ್ಲರೂ ಕೊನೆಯ ದರ್ಶನ ಪಡೆಯುವಂತೆ ಏರ್ಪಾಡು ಮಾಡಲಾಗಿತ್ತು. ಮರುದಿನ ಸಾಯಂಕಾಲ ಬ್ರಹ್ಮಸಮಾಜದ ಪದ್ಧತಿಯಂತೆ ಅವರ ಶವಸಂಸ್ಕಾರವನ್ನು ಮಾಡಲಾಯಿತು.

[ಸಂಗ್ರಹ]

— ಶ್ರೀ ಶಿವಶಂಕರ

●●

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 437/1971

ವಾದಿಳು — ಸುಶೀಲ ಸೆಡ್ತಿ, ಪಾರ್ವತಿ ಸೆಡ್ತೀರ ಮಗಳು, ಕುಂದಾಪುರ ತಾಲ್ಲೂಕು, ಸೂಡಾಡಿ ಗ್ರಾಮದ್ದು ಪಳಗಿನ ಮನೆ.

ಪ್ರತಿವಾದಿರು — ಗುಡ್ಡೆ ಮಂಜಯ್ಯ ಶೆಟ್ಟಿ ಕೂಡಾ-ಯಿವರೊಳಗೆ, 42, 57, 58, 60 ಮತ್ತು 61ನೇ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ —

42ನೇ ಪ್ರತಿವಾದಿ ನಾಗಯ್ಯ ಸೆಟ್ಟಿ, ಶೀಲಮ್ಮ-ಶೆಡ್ತಿರ ಮಗ. 57ನೇ ಪ್ರತಿವಾದಿ, ನಾರಾಯಣ ಶೆಟ್ಟಿ, ಸೂರಮ್ಮ ಶೆಡ್ತೀರ ಮಗ. 58ನೇ ಪ್ರತಿವಾದಿ, ಅಕ್ಕಯ್ಯ ಸೆಡ್ತಿ, ಮುತ್ತಕ್ಕೆ ಸೆಡ್ತೀರ ಮಗಳು.

60. ಶೀನಪ್ಪ ಸಟ್ಟಿ, } ಮುತ್ತಕ್ಕೆ ಸೆಡ್ತೀರ
61. ಜಗನ್ನಾಥ ಸಟ್ಟಿ, } ಮಕ್ಕಳು.

ಕುಂದಾಪುರ ತಾಲ್ಲೂಕು ನಂಬ್ರ ಒಂದನೇ ಶಿರೂರು ಗ್ರಾಮದ ಅರ್ಕಕ್ಕಿಯಲ್ಲಿರುವವರು.

ಸದ್ರಿ ವಾದಿಳು ಹಿಸೆ ಬಗ್ಗೆ ದಾಕ್ಲು ಮಾಡಿದ ಸದ್ರಿ ದಾವೆ ತಾರೀಕು 3-8-1972ಕ್ಕೆ ತಸ್ಕಿಗೆಯಿಟ್ಟಿರುತ್ತದೆ. ಆ ಕುರಿತು ನಿಂಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸಿದ ಕೋರ್ಟು ಮುಂದೆ ಹಾಜ್ರಾಗಿ ತಿಳಿಸ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

(ಕೋರ್ಟು ಹುಕ್ಕುಂ ಪ್ರಕಾರ)

A. Balakrishna Shetty
Advocate for Plaintiffs

ಮೊಕ್ಕಾಂ, ಕುಂದಾಪುರ,
ತಾರೀಕು 14-7-1972

ಮಂಗಳೂರಲ್ಲಿ 'ಬಂಗಾರದ ಮನುಷ್ಯ' ಕನ್ನಡಚಿತ್ರದ ಶತದಿನೋತ್ಸವ

ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ರಾಜಕಮಲ್ ಆರ್ಟ್ಸ್ ಅರ್ಪಿಸಿದ ಶ್ರೀನಿಧಿ ಪ್ರೊಡಕ್ಷನ್ಸ್‌ರವರ 'ಬಂಗಾರದ ಮನುಷ್ಯ' ಕನ್ನಡ ವರ್ಣಚಿತ್ರದ ನೂರನೇ ದಿನದ ಪ್ರದರ್ಶನದ ಅಂಗವಾಗಿ ಮೋತಿ ಮಹಾಲ್‌ನಲ್ಲಿ ಪ್ರೊ| ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಕಲಾವಿದರುಗಳಾದ ರಾಜಕುಮಾರ, ಭಾರತಿ, ಮತ್ತು ಬಿ. ವಿ. ರಾಧಾ ಮೊದಲಾದವರನ್ನು ಸತ್ಕರಿಸುವ ಸಮಾರಂಭವು ತಾ. ೮ರಂದು ಜರಗಿತು.

ಆರಂಭದಲ್ಲಿ ಶ್ರೀ ಬಿ. ವಿ. ಬಾಳಿಗಾರಿಂದ ಪ್ರಾರ್ಥನೆಯಾದ ಬಳಿಕ ಜ್ಯೋತಿ ಟಾಕೀಸಿನ ಆಡಳಿತ ಮಂಡಳಿಯ ಚೆಯರ್‌ಮೇನ್ ಶ್ರೀ ಗಜಾನನ ರಾವ್ ಪಂಡಿತರು ಸ್ವಾಗತಿಸಿದರು.

ಕೆ. ಸಿ. ಎನ್. ಮೂವೀಸ್ ಸಂಸ್ಥೆಯ ಶ್ರೀ ಕೆ. ದಾಸಪ್ಪರಿಂದ ಸಂದೇಶವಾಚನ ನಡೆಯಿತು. ಶ್ರೀನಿಧಿ ಪ್ರೊಡಕ್ಷನ್, ಬೆಂಗಳೂರು ಇವರ ಮೂಲಕ ಶ್ರೀ ಕೆ. ವಿ. ಗೋಪಾಲ್‌ರವರು 'ಬಂಗಾರದ ಮನುಷ್ಯ' ಚಿತ್ರದ ಕಲಾವಿದ. ತಾಂತ್ರಿಕ ತಂಡದವರ ಪರಿಚಯ ಮಾಡಿಸಿದರು. ಕೆ. ಸಿ. ಎನ್. ಮೂವೀಸ್‌ನ ಶ್ರೀ ಕೆ. ಎಸ್. ಚಂದ್ರಶೇಖರ್‌ರವರು ಅತಿಥಿಗಳಿಗೆ ಹಾರಾರ್ಪಣೆಗೈದು ಗೌರವಿಸಿದರು. ಅಲ್ಲದೆ ಟಾಕೀಸಿನ ಸಿಬ್ಬಂದಿ ವರ್ಗದವರಿಗೆ ಒಂದು ತಿಂಗಳ ವೇತನವನ್ನು ಬೋನಸ್ಸಾ ವಿತರಣೆ ಗೈದರು.

ಟಾಕೀಸಿನ ಮೆನೇಜರ್ ಶ್ರೀ ಎಂ ಸೀತಾರಾಮ ಶೆಟ್ಟರು ಕೆ. ಸಿ. ಎನ್. ಮೂವೀಸ್‌ನ ಶ್ರೀ ಕೆ. ಸಿ. ನರಸಿಂಹ ಮೂರ್ತಿಯವರು ಟಾಕೀಸ್‌ಗೆ ಕೊಟ್ಟ ಶೀಲ್ಡನ್ನು ಸ್ವೀಕರಿಸಿದರು.

'ಬಂಗಾರದ ಮನುಷ್ಯ' ಚಿತ್ರದ ನಾಯಕ ರಾಜಕುಮಾರರು ಮಾತಾಡಿ ತನ್ನನ್ನು ಸ್ವಾಗತಿಸಿದ ಕಲಾಭಿಮಾನಿಗಳಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸಿದರು.

ಚಿತ್ರದ ಕಥಾನಸ್ತು ಒದಗಿಸಿದ ಶ್ರೀ ಟಿ. ಕೆ. ರಾಮರಾವ್ ಅವರು ಮಾತಾಡಿ ಶ್ರೀ ರಾಜಕುಮಾರರ ಅಭಿನಯ ಕೌಶಲ್ಯವನ್ನು ಕೊಂಡಾಡಿ ಚಿತ್ರದ ಯಶಸ್ಸಿಗೆ ಕಾರಣರಾದ ನಿರ್ದೇಶಕ ಶ್ರೀ ಸಿದ್ಧಲಿಂಗಯ್ಯನವರನ್ನು ಅಭಿನಂದಿಸಿದರು. ಸಂಭಾಷಣೆ ರಚಿಸಿದ ಹುಣಸೂರು ಕೃಷ್ಣಮೂರ್ತಿಯವರು ಮಾತಾಡಿದ ಬಳಿಕ ಅಧ್ಯಕ್ಷರು ಮಾತಾಡಿ 'ಬಂಗಾರದ ಮನುಷ್ಯ' ಚಿತ್ರವನ್ನು ವಿಮರ್ಶಿಸಿ, ತಾನು ನೋಡಿ ಮೆಚ್ಚಿಕೊಂಡ ಒಳ್ಳೆಯ ಕನ್ನಡಚಿತ್ರ ಇದಾಗಿದೆ ಎಂದರು.

ಅಂತ್ಯದಲ್ಲಿ ಶ್ರೀ ಬಿ. ನಾರಾಯಣರಾವ್‌ರವರು ಧನ್ಯವಾದಗಳನ್ನು ಸಲ್ಲಿಸಿದರು.

ಪ್ರಮುಖ ಕೈಗಾರಿಕೋದ್ಯಮಿ ಶ್ರೀ ಎಂ. ದೇಜು ನ್ಯಾಕರ ನಿಧನ

ಬೆಂಗಳೂರಿನ ಪ್ರಮುಖ ಕೈಗಾರಿಕೋದ್ಯಮಿಯಾದ ಶ್ರೀಯುತ ಎಂ. ದೇಜು ನಾಯ್ಕರು ತಾ. 6-7-72ರಂದು ತನ್ನ 70ನೇ ವಯಸ್ಸಿನಲ್ಲಿ ರಾಜಾಜಿನಗರದ ತನ್ನ ಸ್ವಂತ ನಿವಾಸದಲ್ಲಿ ಸ್ವರ್ಗಸ್ಥರಾದರು.

ಶ್ರೀ ನ್ಯಾಕರು ಶಿಕ್ಷಣ ಮುಗಿದ ಬಳಿಕ ಕೇಂದ್ರ ಸರಕಾರದ ತಾಂತ್ರಿಕ ಶಿಕ್ಷಣ ತರಬೇತಿಯ ಜಂಟಿ ನಿರ್ದೇಶಕರಾಗಿ ಮದ್ರಾಸಿನಲ್ಲಿ ಕೆಲಸಕ್ಕೆ ಸೇರಿದರು. ನಂತರ ಮಹಾರಾಷ್ಟ್ರ ಸರಕಾರದ ಸೇವೆಯಲ್ಲಿ ಕೆಲಕಾಲ ಮುಂಬಯಿಯಲ್ಲಿದ್ದು, ನಿವೃತ್ತಿಯ ನಂತರ ಎರಡು ವರ್ಷ ಕಾಲ ಮೈಸೂರು ಸರಕಾರದ ತಾಂತ್ರಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ಶ್ರೀಯುತರು ಅಂತರ್ವಲಯದ ಉತ್ತಮ ಕ್ರೀಡಾಪಟುಗಳಾಗಿದ್ದರು.

ದಿವಂಗತರು ಪಿಜಾರು ಮುಂಡಬೆಟ್ಟು ಗುಣಪಾಲ ನಾಯ್ಕರ ಸಹೋದರರು. ಅವರು ಓರ್ವ ಪುತ್ರ ಮತ್ತು ಪತ್ನಿ ಹಾಗೂ ಅನಂತ ಅಭಿಮಾನಿಗಳನ್ನು ಅಗಲಿರುವರು.

ಮುಂಬಯಿಯಲ್ಲಿ ಧರ್ಮಸ್ಥಳ ಮೇಳ

ಇದೇ ಕಳೆದ ತಾ. ೨ರಂದು ಮುಂಬಯಿಯ ಕೋಟೆಯ ಸುಂದರ ಭಾಯಿ ಹಾಲಿನಲ್ಲಿ ಮಾರ್ಕಟ್ಟೆ ಮಹಾಲಿಂಗೇಶ್ವರ ಭಕ್ತ ಮಂಡಳಿಯ ಸಹಾಯಾರ್ಥ ಶ್ರೀ ಧರ್ಮಸ್ಥಳ ಮೇಳದವರಿಂದ 'ಗುರುದಕ್ಷಿಣೆ' ಎಂಬ ಯಕ್ಷಗಾನವು ಅಭಿನಯಿಸಲ್ಪಟ್ಟಿತು.

ಕಥಾಮಧ್ಯದಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭಾ ಸಮಾರಂಭದಲ್ಲಿ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಆರಂಭದಲ್ಲಿ ಸ್ವಾಗತಿಸಿ ಶ್ರೀ ಹೆಗ್ಗಡೆಯವರು ಕಾರ್ಯಕ್ರಮಕ್ಕೆ ಬಂದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಶ್ರೀ ಹೆಗ್ಗಡೆಯವರು ಮಾತಾಡಿ ಮುಂಬಯಿಯ ಕಲಾಭಿಮಾನಿಗಳು ಪೂರ್ತಿ ಧರ್ಮಸ್ಥಳ ಮೇಳದ ಪ್ರದರ್ಶನವನ್ನು ನೋಡಬೇಕೆಂದು ಇಚ್ಛಿಸಿದ್ದರಿಂದ ಈ ರೀತಿ ತನ್ನ ಮಂಡಳಿಯನ್ನು ಕಳುಹಿಸಿದ್ದಾಗಿದೆ ಎಂದರು. ಅಲ್ಲದೆ ಬರುವ ೨೩ನೇ ತಾರೀಕಿನಂದು ಮುಂಬಯಿಯ ಕನ್ನಡೇತರರಿಗೋಸ್ಕರ ವಿಶೇಷ ಕಾರ್ಯಕ್ರಮ ಮತ್ತು ಪತ್ರಿಕಾ ಪರಿಷತ್ತು ವ್ಯವಸ್ಥೆಗೊಳಿಸುವುದಾಗಿ ತಿಳಿಸಿದರು. ಇದೇ ದಿನಗಳಲ್ಲಿ ಧರ್ಮಸ್ಥಳದಲ್ಲಿ ಯಕ್ಷಗಾನ ಕಾಲೇಜೊಂದರ ಉದ್ಘಾಟನೆಯಾಗುವುದೆಂಬ ಸಂತೋಷದ ಸುದ್ದಿಯನ್ನೂ ಅವರು ತಿಳಿಸಿದರು. ಈ ಕಾಲೇಜಿಗೆ ಕನ್ನಡಿಗರ ಮತ್ತು ಸರಕಾರದ ಬೆಂಬಲವನ್ನು ಅವರು ಹಾರೈಸಿದರು.

ಈ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದ ಮುಂಬಯಿಯ ಗೀತಾಂಬಿಕಾ ಮಂಡಳಿಯ ಅಧ್ಯಕ್ಷ ಎಸ್. ಡಿ. ಕಾಂಚನ್‌ರು ಶ್ರೀ ಹೆಗ್ಗಡೆಯವರಿಗೆ 'ಹಾರಾರ್ಪಣೆ' ಗೈದರು. ಶ್ರೀ ಕೃಷ್ಣಾನಂದ ಮಯ್ಯರು ಕೊನೆಯಲ್ಲಿ ವಂದಿಸಿದರು.

ಹೆಣ್ಮಕ್ಕಳಿಗೆ ಗೃಹ ವಿಜ್ಞಾನ ಅವಶ್ಯವೆಂದು ಶ್ರೀಮತಿ ಕುಶಿ

ತಾ. ೮ರಂದು ಗಿರಿಬಲದ ಬಾಲಿಕಾ ಪ್ರೌಢ ಶಾಲೆ ಮಾಧ್ಯಮಿಕ ಶಾಲೆಯ ಗೃಹ ವಿಜ್ಞಾನ ಕಟ್ಟಡದ ಉದ್ಘಾಟನೆಯನ್ನು ಸಿ. ವಿ. ಎಸ್. ಶಾಲಾ ಆಡಳಿತ ಮಂಡಳಿಯ ಮಾಲೀಕ ಶ್ರೀ ಮಧುಸೂದನ ಡಿ. ಕುಶೆಯವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಸರೋಜಿನೀ ಎಂ. ಕುಶೆಯವರು ನೆರವೇರಿಸುತ್ತ ಪ್ರೌಢಶಾಲೆಗಳಲ್ಲಿ ಹೆಣ್ಮಕ್ಕಳು ಗೃಹ ವಿಜ್ಞಾನ ಕಲಿಯುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟರು.

ಶಾಲೆಯ ಕರೆಸ್ಪಾಂಡೆಂಟ್ ಶ್ರೀ ಸೂರಪಟ್ಟೆ ನಾರಾಯಣ ಭಟ್ಟರು ಸ್ವಾಗತಿಸಿದ ಬಳಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಪ್ರಮೀಳಾ ಶೆಣೈಯವರು ಕಟ್ಟಡದ ಬಗೆಗಿನ ವರದಿ ಓದಿದರು. ಶ್ರೀ ಮಧುಸೂದನ ಡಿ. ಕುಶೆಯವರು ಮಾತಾಡಿ ಗೃಹ ವಿಜ್ಞಾನದ ಜತೆಗೆ ಆಧುನಿಕ ವಿಷಯಗಳನ್ನು ಕಲಿಸಬೇಕೆಂದು ಸೂಚಿಸಿದರು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ಶ್ರೀ ಉರಿಮಜಲು ಶಿವರಾಮಯ್ಯನವರು ಅಂತ್ಯದಲ್ಲಿ ವಂದಿಸಿದರು.

ಬಸ್ರೂರಿನಲ್ಲಿ ಜೂ. ಕಾಲೇಜು ಉದ್ಘಾಟನೆ

ಕಳೆದ ತಾ. ೩ರಂದು ಬೈಂದೂರಿನ ಕುಟುಂಬ ಮತ್ತು ಶಿಶು ಕಲ್ಯಾಣ ಕೇಂದ್ರದ ಅಧ್ಯಕ್ಷೆ ಶ್ರೀಮತಿ ಶಾರದಾ ಅಭ್ಯಂಕರಾಯರು ಕುಂದಾಪುರ ತಾ. ಅ. ಮಂಡಳಿಯ ಅಧ್ಯಕ್ಷ ಶ್ರೀ ಬಿ. ವೀರರಾಜೇಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಬಸ್ರೂರು ಶ್ರೀ ಶಾರದಾ ಜೂ. ಕಾಲೇಜಿನ ಉದ್ಘಾಟನೆಯನ್ನು ನೆರವೇರಿಸಿದರು.

ಬಸ್ರೂರು ಪಂಚಾಯತಿನ ಸಭಾಪತಿ ಶ್ರೀ ಬಿ. ಅಪ್ಪಣ್ಣ ಹೆಗ್ಡೆಯವರು ಸ್ವಾಗತಿಸಿದರು. ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಬಿ. ಶಂಕರರಾಯರು ಕಾಲೇಜು ಇದುವರೆಗೆ ಸಾಧಿಸಿದ ಮಹತ್ಕಾರ್ಯಗಳನ್ನು ವಿವರಪಡಿಸಿದರು.

ಶ್ರೀಮತಿ ಅಭ್ಯಂಕರಾಯರು ಶಿಕ್ಷಣದ ಬಗ್ಗೆ ಮಾತಾಡಿ ವಿದ್ಯಾರ್ಥಿ-ಶಿಕ್ಷಕ-ರಕ್ಷಕ ಸಂಬಂಧವನ್ನು ಚೆನ್ನಾಗಿ ಪ್ರತಿಪಾದಿಸಿದರು.

ಶ್ರೀ ಹೆಗ್ಡೆಯವರು ಕಾಲೇಜಿನ ನಿಧಿ ಸಂಗ್ರಹಕ್ಕಾಗಿ ದುಡಿಯುತ್ತಿರುವ ಶ್ರೀ ಎಚ್. ಬಿ. ಕಾಮತ್ ಹಾಗೂ ಅವರ ಸಹೋದರ ಎಚ್. ಎಸ್. ಕಾಮತರ ಸಹಕಾರವನ್ನು ಶ್ಲಾಘಿಸಿದರು.

ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಸ್ ಶಿವರಾಮ ಶೆಟ್ಟರು ವಿವಿಧ ರೀತಿಯಲ್ಲಿ ಸಹಕಾರವಿತ್ತ ಸರ್ವರಿಗೂ ತನ್ನ ಕೃತಜ್ಞತೆಗಳನ್ನು ಸಲ್ಲಿಸಿದರು.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ರಾಷ್ಟ್ರೀಕರಣದ ಮೂರು ವರ್ಷಗಳು—

ಸಿಂಡಿಕೇಟ್ ಬ್ಯಾಂಕಿನ ಅಪೂರ್ವ ಯಶಸ್ಸು

ಜುಲ್ಯೈ ೧೯ನೆಯ ದಿನಾಂಕ ದೇಶದ ಹದಿನಾಲ್ಕು ದೊಡ್ಡ ಬ್ಯಾಂಕುಗಳು ರಾಷ್ಟ್ರೀಕರಣಗೊಂಡ ಮಹತ್ವದ ದಿನ. ದೇಶದ ಆರ್ಥಿಕ—ಸಾಮಾಜಿಕ ಪ್ರಗತಿಗೊಂದು ಹೊಸ ತಿರುವು ನೀಡುವಂಥ ರಾಷ್ಟ್ರೀಕರಣದ ಹಿಂದೆ ಹೊಸ ಗುರಿಯ ಘೋಷಣೆ.

ಹೀಗೆ ರಾಷ್ಟ್ರೀಕೃತಗೊಂಡ ಬ್ಯಾಂಕುಗಳಲ್ಲಿ ಸಿಂಡಿಕೇಟ್ ಬ್ಯಾಂಕ್ ಒಂದು. ಬ್ಯಾಂಕ್ ರಾಷ್ಟ್ರೀಕರಣದ ಮೂರನೆಯ ವಾರ್ಷಿಕೋತ್ಸವದ ಪೂರ್ವ ಸಂಜೆ ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು ತನ್ನ ಬ್ಯಾಂಕು ರಾಷ್ಟ್ರೀಕರಣದ ಮೂಲ ಗುರಿಯನ್ನು ಹೇಗೆ ಸಾಧಿಸುತ್ತಿದೆಯೆಂದು ಪತ್ರಿಕಾಗೋಷ್ಠಿಯೊಂದನ್ನು ಕರೆದು ವಿವರಿಸಿದರು.

ಸಿಂಡಿಕೇಟ್ ಬ್ಯಾಂಕಿಗೆ ಆರ್ಥಿಕ ಪುನಾರಚನೆಯಾಗಲೀ, ಸಾಮಾಜಿಕ ಪ್ರಗತಿಯಾಗಲೀ ಹೊಸ ಸಂಗತಿಗಳೇ ಅಲ್ಲ. ಆದುದರಿಂದಲೇ ರಾಷ್ಟ್ರೀಕರಣದ ಮೂರು ವರ್ಷಗಳಲ್ಲಿಯೇ ಅದು ಉದ್ದೇಶ ಪೂರ್ತಿಯಲ್ಲಿ ಉಲ್ಲೇಖಾರ್ಹ ಸಿದ್ಧಿ ಪಡೆದಿದೆ.

ದೇಶದ ೧೭ ಜಿಲ್ಲೆಗಳಿಗೆ ಸಿಂಡಿಕೇಟ್ ಲೀಡ್ ಬ್ಯಾಂಕು. ಈ ಜಿಲ್ಲೆಗಳಲ್ಲಿ ಮಾತ್ರ ಜಿಲ್ಲೆ ದಕ್ಷಿಣ ಕನ್ನಡವೂ ಇದೆ, ಕೇಂದ್ರೀಯ ಪ್ರದೇಶವಾದ ಸಾಗರ ಮಧ್ಯದ, ಅತ್ಯಂತ ಹಿಂದುಳಿದ ಲಕ್ಷದೀವಿ ಮಿನಿಕಾಯ್ ಮತ್ತು ಅಮಿನ್ ದೀವಿಗಳೂ ಇವೆ; ಉತ್ತರದ ಹರ್ಯಾಣ—ಉತ್ತರ ಪ್ರದೇಶಗಳ ಕೆಲವು ಜಿಲ್ಲೆಗಳೂ ಇವೆ. ಈ ಜಿಲ್ಲೆಗಳಲ್ಲಿ ಜನಸಂಖ್ಯೆ; ಉದ್ಯೋಗ, ನೈಸರ್ಗಿಕ ಸಂಪತ್ತು, ಆರ್ಥಿಕ ಆವಶ್ಯಕತೆ, ಉದ್ಯಮಗಳ ಸ್ಥಾಪನೆ—ಮೊದಲಾದುವುಗಳನ್ನು ಅಧ್ಯಯನ ಮಾಡಿ ತನ್ನ ಶಾಖೆಗಳನ್ನು ತೆರೆದು ಜನಸೇವೆಗೆ ಆರ್ಥಿಕ ಪುನಶ್ಚೇತನಕ್ಕೆ ಬ್ಯಾಂಕ್ ನಾಂದಿ ಹಾಡಿದೆ.

ಮೂರು ವರ್ಷಗಳಲ್ಲಿ ೨೨೫ ಶಾಖೆಗಳನ್ನು ತೆರೆದ ಸಿಂಡಿಕೇಟ್ ಬ್ಯಾಂಕು ಈ ವರ್ಷಾಂತ್ಯದೊಳಗೆ ಒಟ್ಟು ೬೦೦ ಶಾಖೆಗಳನ್ನೂ ಮುನ್ನೂರು ಕೋಟಿ ರೂಪಾಯಿಗಳ ಠೇವಣಿಯನ್ನೂ ಹೊಂದುವ ಗುರಿಯಿಟ್ಟು ಯಶಗಳಿಸುವ ವಿಶ್ವಾಸ ಹೊಂದಿದೆ.

ಕೃಷಿ, ಚಿಕ್ಕ ಪುಟ್ಟ ಉದ್ಯಮ, ಲಾರಿ, ಬಸ್ಸು, ಯಾಂತ್ರಿಕ ದೋಣಿ, ಆಟೋರಿಕ್ಷ, ಸ್ಕೂಟರ್—ಮೊದಲಾದುವುಗಳಿಗೆ, ಚಿಲ್ಲರೆ ವ್ಯಾಪಾರಿಗಳಿಗೆ, ಸ್ವತಂತ್ರ ಉದ್ಯೋಗವಾರಂಭಿಸುವವರಿಗೆ—ಹೀಗೆ ಸಮಾಜದ ಅತ್ಯಂತ 'ಚಿಕ್ಕವ'ನಿಂದ ತೊಡಗಿ ಅತ್ಯಂತ "ದೊಡ್ಡವ"ನವರೆಗೂ ಆರ್ಥಿಕ ನೆರವು ಬ್ಯಾಂಕಿನಿಂದ ಲಭಿಸಿದೆ. ಹೆಚ್ಚಾಗಿ ಬ್ಯಾಂಕು ಕಡೆಗಣಿಸಲ್ಪಟ್ಟ, ಆರ್ಥಿಕ ದುರ್ದೆಸೆಯಿಂದ ಪ್ರಗತಿ ಹೊಂದಲಾರದವರ ಕಡೆಗೆ ಗಮನ ಹರಿಸಿದೆ. ರಾಷ್ಟ್ರೀಕರಣದ ಗುರಿಯನ್ನು ಸಾಧಿಸಲು ಬದ್ಧಕಂಕಣವಾಗಿದೆ.

ಶ್ರೀ ಪೈಯವರು ಈ ಸಂಬಂಧದ ಅಂಕೆಸಂಖ್ಯೆಗಳನ್ನು ನೀಡಿ ಬ್ಯಾಂಕಿನ ಹೆಮ್ಮೆಯ ಸಾಧನೆಯನ್ನು ವಿಷದೀಕರಿಸಿದರು. ತಾ. ೧೯ರಿಂದ ಒಂದು ವಾರ "ರಾಷ್ಟ್ರೀಕರಣ ವಾರ"ವನ್ನು ಬ್ಯಾಂಕು ಆಚರಿಸಿ, ಸಮಾಜಕ್ಕೆ ಬ್ಯಾಂಕು ರಾಷ್ಟ್ರೀಕರಣದಿಂದಾದ ಲಾಭ—ಪ್ರಯೋಜನಗಳನ್ನು ತಿಳಿಸಿಹೇಳಿ ಜನಜನದ ಸಂಬಂಧ ಬೆಳೆಸುವ ವ್ಯವಸ್ಥೆಯನ್ನು ತನ್ನ ಎಲ್ಲ ಶಾಖೆಗಳೂ ಮಾಡುತ್ತವೆಯೆಂದರು.

ಕೊನೆಗೆ ಶ್ರೀ ಪೈಯವರು ಹೇಳಿದ ಮಾತು—ಒಂದು ಮುಖ್ಯವಾದ ಮಾತು ಇದು—

ರಾಷ್ಟ್ರೀಕರಣದ ಉದ್ದೇಶ ಯಶಸ್ವಿಯಾಗಬೇಕಾದರೆ, ಉನ್ನತ ಸ್ಥಾನದಲ್ಲಿರುವವರು ದುಡಿದರೆ ಮಾತ್ರ ಸಾಲದು. ಪ್ರತಿ ನೌಕರನಲ್ಲಿಯೂ ರಾಷ್ಟ್ರೀಯ ಮನೋಭಾವ, ರಾಷ್ಟ್ರೀಕರಣದ ಉದ್ದೇಶ್ಯಗಳಲ್ಲಿ ಆಸಕ್ತಿಯಿರಬೇಕು. ಎಲ್ಲರೂ ಪ್ರಾಮಾಣಿಕವಾಗಿ ದುಡಿಯಬೇಕು—ಇದು ನೌಕರ ವರ್ಗಕ್ಕೆ ಮಾಡಿದ ಕಳಕಳಿಯ ಪ್ರಾರ್ಥನೆ.

ಪಡೆದುಕೊಂಡ ಸಾಲವನ್ನು ಕ್ಲಪ್ತಕಾಲಕ್ಕೆ ಮರಳಿ ಪಾವತಿ ಮಾಡುವುದು ತನ್ನ ಕರ್ತವ್ಯವೆಂಬ ಭಾವನೆಯನ್ನು ಸಾಲಗಾರನೂ ಮರೆಯಬಾರದು.

-ಇದು ಉತ್ತಮ ಬ್ಯಾಂಕಿಂಗ್ ಅಭ್ಯಾಸದ ಕೊಂಡಿ.

ಶ್ರೀ ಪೈಯವರ ಅಭಿಪ್ರಾಯ ಅಕ್ಷರ ರೂಪಾಯಿಗಳ ಬೆಲೆ ಬರುವಂಥದ್ದು. ರಾಷ್ಟ್ರೀಕರಣದ ಉದ್ದೇಶ್ಯ ಸಫಲವಾಗಬೇಕಾದರೆ ಇವೆರಡೂ ಅನಿವಾರ್ಯ ಸಂಗತಿಗಳೇ.

●●

ಕುಂದಾಪುರ II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 4961/71

ಸೂರಮ್ಮ ಶೆಡ್ತಿ —ಅರ್ಜಿದಾರಳು

ಕರಿಯಣ್ಣ ಶೆಟ್ಟಿ ಸಹಾ —ಎದ್ರಿರು

ಅರ್ಜಿದಾರಳ ಕಡೆಯಿಂದ ಜ್ಯಾಹೀರು ಮಾಡಿಕೊಳ್ಳುವದೇನೆಂದ್ರೆ—

2. ತೇಜಪ್ಪ ಶೆಟ್ಟಿ } ದುಕ್ಕಣ್ಣಿ ಶೆಡ್ತಿ
5. ಸಾದಮ್ಮ ಶೆಡ್ತಿ } ಮಕ್ಕಳು

ಉಡ್ಪಿ ತಾಲ್ಲೂಕು ಶಿರಿಯೂರ ಗ್ರಾಮ.

ಅರ್ಜಿದಾರಳು, 31-3-1971ಕ್ಕೆ ಬರತಕ್ಕ ಗೇಣಿ ಬಾಕಿ ಬಡ್ಡಿ ಕೂಡಾ ರೂ. 1136.00 ಬರಮಾಡಿಕೊಳ್ಳುವರೆ ಮಾಡಿದ ಅರ್ಜಿಯು ತಾ. 12-8-72ಕ್ಕೆ ಆಖೈರಿ ತನ್ಸಿಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜ್ಯಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರಳ ಕಡೆಯಿಂದ ಈ ಮೂಲ್ಕ ತಿಳಿಯಪಡಿಸಿದೆ.

M. M. Hebbar
Advocate for Petr.

Kundapur,
Date 14-7-72

ನವಯುಗದ 52ನೇ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 51ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿಂದ 52ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್.

ಧರ್ಮಸ್ಥಳದಲ್ಲಿ ಯಕ್ಷಗಾನ ತರಬೇತಿ ಶಿಬಿರ ಉದ್ಘಾಟನೆ

ಧರ್ಮಸ್ಥಳದ ಲಲಿತಕಲಾಕೇಂದ್ರದ ಆಶ್ರಯದಲ್ಲಿ ನಡೆಯುವ ಯಕ್ಷಗಾನ ತರಬೇತಿ ಕೇಂದ್ರದ ಉದ್ಘಾಟನೆಯನ್ನು ತಾ. 14ರಂದು ಸಭಾಧ್ಯಕ್ಷತೆ ವಹಿಸಿದ್ದ ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು. ಸನ್ಮಾನ ಅತಿಥಿಗಳನ್ನು ಶ್ರೀ ವೀರೇಂದ್ರ ಹೆಗ್ಗಡೆಯವರ ನಿವಾಸದಿಂದ ಸಮಾರಂಭ ಜರಗಿದ ವಸಂತ ಮಹಲಿಗೆ ವಾದ್ಯ ವೈಭವದೊಂದಿಗೆ ಕರೆದೊಯ್ಯಲಾಯಿತು.

ಆರಂಭದಲ್ಲಿ ಪ್ರಾರ್ಥನೆಯ ನಂತರ ಶ್ರೀ ಹೆಗ್ಗಡೆಯವರು ಸ್ವಾಗತಿಸಿ ಲಲಿತ ಕಲೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರೂಪುಗೊಂಡ ಲಲಿತ ಕಲಾ ಕೇಂದ್ರವು ಜಿಲ್ಲೆಯ ಪ್ರಾಚೀನ ಕಲೆಯಾದ ಯಕ್ಷಗಾನದ ಶಾಸ್ತ್ರೀಯ ಶಿಕ್ಷಣ ನೀಡುವುದಕ್ಕಾಗಿ ಈ ಶಿಬಿರ ತೆರೆಯಲಾಗಿದೆಯೆಂದೂ ಇಲ್ಲಿ ಸಂಗೀತ, ನೃತ್ಯ, ಭರತನಾಟ್ಯ ಮೊದಲಾದವುಗಳನ್ನು ಕಲಿಸುವ ಉದ್ದೇಶವು ಇದೆಯೆಂದೂ ಹೇಳಿದರು. ಇಲ್ಲಿ ಕಲಾವಿದರು ತಮ್ಮ ಅನುಭವ ಸಂಪತ್ತನ್ನು ಧಾರೆಯೆರೆದು ಕಲೆಯಲ್ಲಿ ಹೊಸರಂಗನ್ನು ಮೆರೆಸಬಹುದು ಎಂದು ಹೇಳಿ ಈ ಶಿಬಿರಕ್ಕೆ ಕ್ಷೇತ್ರದ ಸ್ವಾಮಿಯ ಹಾಗೂ ಧರ್ಮ ದೇವತೆಗಳ ಕೃಪಾರಕ್ಷೆಯಿರಲಿ ಎಂದು ಪ್ರಾರ್ಥಿಸಿದರು.

ಶ್ರೀ ರಘುಚಂದ್ರ ಶೆಟ್ಟರು ಸಂದೇಶಗಳನ್ನೋದಿದರು. ಕನ್ನಡದ ಖ್ಯಾತ ಸಾಹಿತಿ ಕಯ್ಯಾರ ಕಿಞ್ಞಣ್ಣ ರೈಯವರು ಮಾತಾಡಿ ಯಕ್ಷಗಾನದ ಮಹತ್ವವನ್ನು ವಿವರಿಸಿದರು. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಮತ್ತು ಎಡ್ವಕೇಟ್ ಶ್ರೀ ಬಾಲಕೃಷ್ಣ ರಾಯರು ಮಾತಾಡಿ ಶ್ರೀ ಹೆಗ್ಗಡೆಯವರ ಉಪಕ್ರಮಕ್ಕೆ ಸಂತೋಷ ಸೂಚಿಸಿದರು. ಯಕ್ಷಗಾನ ಕಲಾವಿದ ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು ಬಡಗು–ತೆಂಕು ತಿಟ್ಟುಗಳ ವಿವರ ನೀಡಿದರು. ಪರಮಹಂಸ ಭಾಸ್ಕರಂ ಶೇಷಾಚಾರ್ಯರು ತರಬೇತಿ ಕೇಂದ್ರದ ಶಿಕ್ಷಕ ಶ್ರೀ ಪದ್ರೆ ಚಂದು ಅವರಿಗೆ ಹೂ ಹಾರ ಹಾಕಿ ಆಶೀರ್ವದಿಸಿದರು.

ಪ್ರೊ। ಎಸ್ವಿಪಿಯವರು ಅಧ್ಯಕ್ಷ ಭಾಷಣಮಾಡುತ್ತಾ ಕಲಾಭ್ಯಾಸಕ್ಕೆ ಗೋಷ್ಠಿ–ಸಮ್ಮೇಳನ ವಿಚಾರ ಮಂಥನಗಳೂ ಶಾಸ್ತ್ರೀಯ ಅಧ್ಯಯನವೂ ಅಗತ್ಯ. ಯಕ್ಷಗಾನ ಕಲೆ ದಕ್ಷಿಣ ಕನ್ನಡದ ರೂಪಕ ರಾಜ ಅದೊಂದು ಸಮಷ್ಟಿ ಕಲೆ, ದೈವ ಭಕ್ತಿ— ಸಂಸ್ಕೃತಿ ಪ್ರೇಮ ಹುಟ್ಟಿಸುವ ಕಲೆ, ಅದು ಚಿರಂತನವಾಗಿ ಉಳಿಯುವ ಬೆಳೆಯುವ ಕಲೆ. ಪಂಡಿತರನ್ನೂ ಪಾಮರರನ್ನೂ ಕವಿಗಳನ್ನೂ ವಿಮರ್ಶಕರನ್ನೂ ಆಕರ್ಷಿಸಿದ ಕಲೆ ಎಂದರು. ಅಲ್ಲದೆ ಬಡಗು—ತೆಂಕು ತಿಟ್ಟುಗಳ ನಡುವೆ ಭೇದ ಭಾವನೆಯ ಗೊಂದಲ ಬೇಕಿಲ್ಲ. ಎರಡನ್ನೂ ಸಮನ್ವಯಿಸಬಹುದು ಎಂದು ಅವರು ಅಭಿಪ್ರಾಯ ಪಟ್ಟು ಈ ಕೇಂದ್ರ ಆದರ್ಶ ಕೇಂದ್ರವಾಗಲೆಂದು ಹಾರೈಸಿದರು.

ಅಂತ್ಯದಲ್ಲಿ ಶ್ರೀ ರಘುಚಂದ್ರ ಶೆಟ್ಟರು ವಂದಿಸಿದ ಬಳಿಕ ಪ್ರಮುಖ ಕಲಾವಿದರ ಕೂಡುವಿಕೆಯಿಂದ ನರಕಾಸುರ ವಧೆ, ಬಲರಾಮ ಗರ್ವಭಂಗ ಮೊದಲಾದ ಕಥಾಭಾಗಗಳನ್ನು ಯಶಸ್ವಿಯಾಗಿ ಪ್ರಯೋಗಿಸಲಾಯಿತು.

ಶ್ರೀಮತಿ ವಾಣಿ ಸನ್ಮಾನ ಸಮಿತಿ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎರಡು ದಶಕಗಳಿಂದಲೂ ಹೆಚ್ಚು ಕಾಲದಿಂದ ದುಡಿದು ಖ್ಯಾತಿ ಪಡೆದ ಶ್ರೀಮತಿ ವಾಣಿ (ಬಿ. ಎನ್. ಸುಬ್ಬಮ್ಮ) ಇವರನ್ನು ಸಾರ್ವಜನಿಕ ಸಭೆಯಲ್ಲಿ ಇದೇ ಬರುವ ಆಗಸ್ಟ್‌ನಲ್ಲಿ ಮೈಸೂರಲ್ಲಿ ಸನ್ಮಾನಿಸುವ ಯೋಜನೆಯೊಂದನ್ನು ಹಾಕಲಾಗಿದೆಯೆಂದೂ ಕನ್ನಡಿಗರೆಲ್ಲರೂ ಉದಾರ ಮನಸ್ಸಿನಿಂದ ಧನಸಹಾಯವನ್ನು ಶ್ರೀ ಹಾ. ರಾ. ಶ್ರೀ. ಖಜಾಂಚಿ, F3 -19ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು–4, ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕೆಂದೂ, ಕಾರ್ಯದರ್ಶಿ ಶ್ರೀ ಎನ್. ನಾರಾಯಣ ಬಲ್ಲಾಳರು ತಿಳಿಸಿರುತ್ತಾರೆ.

ಸಾದರ ಸ್ವೀಕಾರ

ಸ್ವಾಮಿ ವಿವೇಕಾನಂದ;

ಬೆಲೆ: 0.30 ಪೈಸೆ.

ಸಚಿತ್ರ ಸುಲಭ ಅಂಕ ಲಿಪಿ;

ಬೆಲೆ: 0.35 ಪೈಸೆ.

ಸಚಿತ್ರ ಹಿತೋಪದೇಶ;

ಬೆಲೆ: 0.30 ಪೈಸೆ.

Junior Essays (for VIII & IX Stds) ಬೆಲೆ: ರೂ. 1.50

ಮೇಲಿನ ಎಲ್ಲ ಪುಸ್ತಕಗಳು ರಾಷ್ಟ್ರೀಯ ಬುಕ್ ಡಿಪೊ, ಧಾರವಾಡ—1 ಇವರ ಪ್ರಕಟಣೆಗಳು. ಮೊದಲಿನ ಮೂರು ಪುಸ್ತಕಗಳು ತ್ರಿವರ್ಣ ಚಿತ್ರಗಳಿಂದ ಕೂಡಿದ್ದು ಚಿಕ್ಕ ಮಕ್ಕಳಿಗೆ ಆಕರ್ಷಕವಾಗಿವೆ. ಕೊನೆಯದು 8ನೇ ಮತ್ತು 9ನೇ ತರಗತಿಗಳಿಗಾಗಿ ಶ್ರೀ ರಾಮರಾವ್ ಬ. ಗಜೇಂದ್ರಗಢ ಅವರಿಂದ ಇಂಗ್ಲಿಷಿನಲ್ಲಿ ಬರೆಯಲ್ಪಟ್ಟ ವಿವಿಧ ಪ್ರಬಂಧಗಳು.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 17/1972 I. A. VI

ಮುಂಜಕ್ಕೆ —ವಾದಿ

ಮೋಣಯ್ಯ ಗೌಡ ಕೂಡಾ—ಪ್ರತಿವಾದಿರು

D 17–ಪೂವಪ್ಪ ಗೌಡ, ಬೋರ ಗೌಡರ ಮಗ, ಬೆಳ್ತಂಗಡಿ ತಾಲ್ಲೂಕು ಬಂದಾರು ಗ್ರಾಮದಲ್ಲಿ—ಇವರಿಗೆ ಕೋರ್ಟು ಹುಕ್ಕುಂ ಪ್ರಕಾರ ತಿಳಿಸುವುದೇನೆಂದರೆ,

ಮೇಲ್ಕಂಡ ವ್ಯವಹರಣೆಯಲ್ಲಿ ವಾದಿಯು ದಾಖ್ಲು ಮಾಡಿದ ಮೇಲಿನ ಅರ್ಜಿಯ ಪ್ರಕಾರ ಮೈನರರಾದ ನಿಂಮ ಮಕ್ಕಳು 19 ಕರಿಯಪ್ಪ, 20 ಸಂಜೀವ, 21 ಭಾಸ್ಕರ– ಯಿವರ ಬಗ್ಗೆ ನಿಂಮನ್ನು ಗಾರ್ಡಿಯಾನ್ ಆಗಿ ಮೊಕ್ರರು ಮಾಡಬೇಕೆಂದೂ, ಅದ್ಕೆ ನೀವು ಸಂಮತಿಸುವುದಿಲ್ಲವಾದ್ರೆ ಯೋಗ್ಯರಾದ ಬೇರೊಬ್ಬರನ್ನು ಗಾರ್ಡಿಯಾನ್ ಆಗಿ ಸದ್ರಿ ಮೈನರ 19, 20 21ನೇ ಪ್ರತಿವಾದಿರೀಗೆ ಮೊಕ್ರರು ಮಾಡಬೇಕೆಂದೂ ಸಹ ಮಾಡಿದ ಮೇಲ್ಕಂಡ ಅರ್ಜಿಯುವ ವಾಜ ಸಹ ತಾ. 10-8-1972ಕ್ಕೆ ಇಟ್ಟಿರುವುದರಿಂದ ಸದ್ರಿ ದಿವ್ಸ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಪಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

(Sd) B. Ishwara Bhat
Advocate for Plff.

ಬೆಳ್ತಂಗಡಿ, ತಾ. 12-7-72

(ಎರಡನೇ ಪುಟದಿಂದ)

ಸಾಧ್ಯವೇ? ಕಂಡವರನ್ನೆಲ್ಲ ಸಂಶಯದಿಂದ ಕಾಣುವುದು ಸಜ್ಜನಿಕೆಯೇ? ನನಗೆ ಈ ದೊರೆತನವೂ ಬೇಡ; ಬಂಧನವೂ ಬೇಡ."

"ಬಂಧನದ ಬೇಡಿಯನ್ನು ತೊಡಿಸಿಕೊಂಡು ಈಗ ಬೇಡವೆಂದರೆ ಹೇಗೆ?'

'ಹೆಂಡತಿ – ಮಕ್ಕಳು, ಬಂಧುಬಾಂಧವರು, ಎಲ್ಲರನ್ನೂ ಆಗ ಶತ್ರು ಭಾವದಿಂದಲೇ ಕಾಣಬೇಕು.'

"ಅವರು ಅಹಿತರಾಗಬಾರದೆಂದಿಲ್ಲ"

"ಆಗ ಜೀವನಯಾತ್ರೆ ಒಂದು ಯಮಯಾತನೆ'

'ಅರಸನಾದವನು ಈ ಯಾತನೆಯನ್ನು ಇತರರಿಗಾಗಿ ಅನುಭವಿಸ ಬೇಕು. ಸ್ವರಕ್ಷಣೆಗೆ ಕಂಟಕ ನೂರು ದಿಕ್ಕಿನಿಂದ, ನೂರು ಮಂದಿಯಿಂದ.'

'ಈ ಸುಪ್ಪತ್ತಿಗೆಯಲ್ಲಿ ನನ್ನನ್ನು ಕೂರಿಸಿ, ನೀವದರ ಚಂದ ನೋಡುವಂತೆ ಕಾಣುತ್ತಿದೆ.'

ಅವರಿಬ್ಬರೂ ಮಾತಿನಲ್ಲಿ ಮಗ್ನರಾಗಿದ್ದರು.

ಚೆಲ್ಲಿ ಹೋದ ಹಾಲನ್ನು ನೆಕ್ಕಲೆಂದು, ಅದು ತನಕ ತೆಪ್ಪಗೆ ತೊಡೆ ಮೇಲೆ ಮಲಗಿದ್ದ ಬೆಕ್ಕು ಚಂಗನೆ ನೆಗೆಯಿತು.

ಅವರಿಬ್ಬರೂ ಅದನ್ನು ಗಮನಿಸಲಿಲ್ಲ–ಮಾತಿನ ಭರದಲ್ಲಿ.

ತೊಡೆಯಿಂದ ಹಾರಿದ ಬೆಕ್ಕು ಚೆಲ್ಲಿದ ಹಾಲನ್ನೆಲ್ಲಾ ನೆಕ್ಕಿತು.

ಹಾಲು ಕುಡಿದ ಬೆಕ್ಕು ಕೊಂಚ ಕಾಲ ನರಳಿತು. ಅನಂತರ ಒಂದು ಕಡೆ ಹೊರಳಿತು.

ಅದರ ನರಳಾಟ ಅವರನ್ನು ಎಚ್ಚರಿಸಿತು.

ತದೇಕ ದೃಷ್ಟಿಯಿಂದ ಅವರಿಬ್ಬರೂ ಅದನ್ನೇ ನೋಡುತ್ತ ಕುಳಿತಿದ್ದರು.

ಬೆಕ್ಕು ವಿಲಿವಿಲಿ ಒದ್ದಾಡುವುದನ್ನು ನೋಡಿದ ಕುಮಾರ, ಅದರ ಶರೀರ ಸಮೀಪಕ್ಕೆ ಹೋಗಿ, ಅನುಕಂಪದಿಂದ ಮೈದಡವಲು ಪ್ರಯತ್ನಿಸಿದ.

ಅರಿಕೇಸರಿ ಅವನನ್ನು ಹತ್ತಿರಕ್ಕೆ ಎಳೆದುಕೊಂಡು 'ಅದರ ಕತೆ ಮುಗಿಯಿತು' ಎಂದು ಉಸುರ್ಗರೆದ.

"ಸಾಯುವಾಗ ಎಲ್ಲರೂ ಹೀಗೇ ನರಳುತ್ತಾರೆಯೇ ಅಪ್ಪಾಜಿ?"

'ಹೂಂ!'

'ಸಾಯುವುದಕ್ಕೆ ಏನಾಯಿತು?'

'ಆಯುಷ್ಯ ಮುಗಿಯಿತು.'

'ಆಯುಷ್ಯ ಮುಗಿಯದೆ ಯಾರೂ ಸಾಯೋದಿಲ್ಲವೇ?'

'ಹ್ಞೂಂ'

'ಆಯುಷ್ಯ ಯಾರು ಕೊಡುತ್ತಾರೆ ಅಪ್ಪಾಜಿ?'

'ದೇವರು'

"ಅವನೇಕೆ ಎಲ್ಲರಿಗೂ ಒಂದೇ ರೀತಿ ಆಯುಷ್ಯ ಕೊಡುವುದಿಲ್ಲ?"

"ಅದು ಅವನಿಗೆ ಬಿಟ್ಟಿದ್ದು. ಕೆಲವರಿಗೆ ಕೊಡುತ್ತಾನೆ. ಕೆಲವರಿಗೆ ಕೊಡುವುದಿಲ್ಲ.'

'ದೇವರು ತುಂಬಾ ಕೆಟ್ಟವರು ಅಪ್ಪಾಜಿ'

"ಹ್ಞೂಂ"

ಮಗುವಿಗೆ ಈ ಉತ್ತರಗಳಿಂದ ಬೇಸರವಾಯಿತು.

"ನೀನು ಏನೂ ಮಾತೇ ಆಡುವುದಿಲ್ಲ. ನಿನಗೆ ಕೋಪ ಬಂದಿದೆ. ನಾನು ಅಮ್ಮನ ಹತ್ತಿರ ಹೋಗುತ್ತೇನೆ" ಎಂದು ಅಲ್ಲಿಂದ ಹೊರಟಿತು.

ಪಹರೆಯವನಿಗೆ ಅರಿಕೇಸರಿ ಸಂಜ್ಞೆ ಮಾಡಿದ. ಆತ ಬಂದು ಮಗುವನ್ನೆತ್ತಿಕೊಂಡ.

"ಆಗಲಿದ್ದ ಅನಾಹುತದ ಅರಿವಾಯಿತೇ ಪ್ರಭುಗಳಿಗೆ. ಒಂದು ಮೂಕ ಪ್ರಾಣಿಯ ಜೀವವೇನೋ ಹೋಯಿತು. ಅದೇ ಆ ಹಾಲು ನಿಮ್ಮ ಹೊಟ್ಟೆಯನ್ನು ಸೇರಿದ್ದರೆ—? ಈ ರಾಜ್ಯ ಅನಾಥವಾಗುತ್ತಿತ್ತು. ಅರಮನೆಯ ಒಂದೊಂದು ಕಂಬವನ್ನೂ ಅನುಮಾನದಿಂದ ಕಾಣ ಬೇಕಾಗಿ ಬರುತಿತ್ತು. ಅದು ಇಂದು ತಪ್ಪಿತು."

"ನಿಮ್ಮ ಉದ್ವೇಶರಹಿತ ನಡತೆಯಿಂದ ನನ್ನ ಜೀವ ಉಳಿಯಿತು ಸೇನಾಪತಿಗಳೇ"

'ನಿಮ್ಮ ಜೀವ ರಕ್ಷಣೆ ಪ್ರಜೆಗಳಾದ ನಮ್ಮ ಕರ್ತವ್ಯ. ಬಹಿರಂಗ ಶತ್ರುಗಳನ್ನು ಬಲಿ ಹಾಕಲು ಬಾಹುಬಲ ಸಾಕು. ಹಿತ ಶತ್ರುಗಳ ಶೋಧಕ್ಕೆ ಬೇಕಾಗಿರುವುದು ಬುದ್ಧಿ ಬಲ. ಅದಕ್ಕಾಗಿಯೇ ಎಚ್ಚರದಿಂದಿರಬೇಕೆಂದು ಸೂಚಿಸಿದ್ದು."

"ನಿಮ್ಮ ಪ್ರಸಂಗಾವಧಾನತೆ ಬಹು ದೊಡ್ಡದು."

'ಪ್ರಸಂಗಾವಧಾನತೆಯಲ್ಲ. ಸೇನಾಪತಿಗಳ ಮೊದಲು ಕೆಲಸ'

"ಈಗ ಈ ವಿಷವಿಕ್ಕಿದ ಕೈಯ ಶೋಧ ನಡೆಯ ಬೇಕಲ್ಲ'

'ಇದರ ಶೋಧಕ್ಕೆ ಯಾವ ಪ್ರಯತ್ನವೂ ನಡೆಯ ಬೇಕಾಗಿಲ್ಲ.'

"ಹಾಗೆಂದರೆ—? ಬಿಡಿಸಿ ಹೇಳಬಾರದೇ?"

'ಅರಮನೆಯ ಊಳಿಗದವರ ಮೇಲೆಲ್ಲ ನಾನು ಕಣ್ಣಿಟ್ಟಿದ್ದೇನೆ. ಅವರ ಹೆಸರು, ಪತ್ತೆ, ಪೂರ್ವಚರಿತ್ರೆಯನ್ನು ಸಂಗ್ರಹಿಸಿದ್ದೇನೆ. ಮುಖ ಪರಿಚಯವೂ ಇದೆ. ಈಗ ಹಾಲು ತಂದು ಕೊಟ್ಟು ಹೋದಳಲ್ಲ. ಅದು ಹೊಸ ಮುಖ ಅವಳನ್ನಿದುವರೆಗೂ ನಾನು ಅರಮನೆಯಲ್ಲಿ ಕಂಡುದಿಲ್ಲ. ಅವಳು ಯಾರು? ಎಲ್ಲಿಂದ ಬಂದಳು, ಎಂದು ಕೆಲಸಕ್ಕೆ ಸೇರಿದಳು? ಇಷ್ಟನ್ನು ತಿಳಿದರೆ ಕೆಲಸ ಮುಗಿಯಿತು'

'ಆಕೆ ಯಾರಿರ ಬಹುದು?'

'ಅದು ಅವಳಿಂದಲೇ ಬಯಲಾಗಬೇಕು. ಆಕೆ ಇಲ್ಲಿಗೆ ಖಂಡಿತ ಹೊಸಬಳು. ಅವಳೇ ಈ ಕೆಲಸ ಮಾಡಿದವಳು'

'ಅವಳಿಗೆ ನಾನೇನು ಅಪಚಾರವೆಸಗಿದೆ?'

'ಅವಳ ಬಾಯಿಯಿಂದ ಬರಬೇಕು. ಶತ್ರುಗಳು ತಮ್ಮ ಕಾರ್ಯಸಾಧನೆಗಾಗಿ ಅವಳನ್ನು ಬಳಸಿರಬಹುದು'

"ಹೊಸಬಳು ಹಾಲುತಂದು ಕೊಟ್ಟಳೆಂದು ನೀವು ಆ ರೀತಿ ಮಾಡಿದಿರಾ?"

'ನಾನು ಅವಳು ಬರುತ್ತಿರುವುದನ್ನು ಕಂಡೆ. ಹೊಸ ಮುಖವಾದ್ದರಿಂದ ಶಂಕೆ ಉತ್ಪನ್ನವಾಯಿತು. ಆದ್ದರಿಂದ ನಿಮ್ಮನ್ನು ತಡೆದೆ. ಆದರೆ ನೀವು ಮಾತ್ರ, ಯಾರು ಏನು ತಂದು ಕೊಟ್ಟರೂ, ಪರೀಕ್ಷಿಸದೆ ಸೇವಿಸಬಾರದು. ನೆನಪಿರಲಿ'

"ಅವಳನ್ನೇನು ಮಾಡುವುದು?"

'ವಿಚಾರಣೆ ನಡೆಸಿ ಶಿಕ್ಷೆ ವಿಧಿಸುವುದು ಪ್ರಭುಗಳಿಗೆ ಸೇರಿದ್ದು. ಆರೋಪಿಯನ್ನು ಬಂಧಿಸಿ ಸಮ್ಮುಖದಲ್ಲಿ ನಿಲ್ಲಿಸುವುದು ನನ್ನ ಕೆಲಸ'

'ನನ್ನ ಕೊಲೆಗೆ ಯತ್ನಿಸಿದ ಅವಳನ್ನು ನಾನೇ ವಿಚಾರಿಸುವುದು ಸರಿಯೇ?'

"ಪ್ರಭುಗಳು ದೈವಾಂಶರು. ಒಳದನಿ ಏನು ಹೇಳುತ್ತದೋ ಅದರಂತೆ ನಡೆದುಕೊಳ್ಳಿ"

'ಆದರೂ....' ಅರಿಕೇಸರಿಯು ಏನೋ ಹೇಳಲು ಹೊರಟ

"ನಾನಿನ್ನು ಬರುತ್ತೇನೆ. ನೀವಿಷ್ಟು ವಿಶ್ರಮಿಸಿಕೊಳ್ಳಿ. ಆ ಕುರಿತು ಯೋಚಿಸಲೂ ಬೇಡಿ"

ಇಷ್ಟು ಹೇಳಿ ಪದ್ಮಪ್ಪ ಪ್ರಭುಗಳ ಅಪ್ಪಣೆ ಪಡೆದು ಅಲ್ಲಿಂದ ಹೊರಟು ಹೋದ.

೩೦

ಈ ಘಟನೆ ನಡೆದ ಎರಡು ವಾರಗಳ ಮೇಲೆ ಅರಿಕೇಸರಿ ತನ್ನ ಸಮ್ಮುಖಕ್ಕೆ ಅಪಾದಿತಳನ್ನು ಕರೆಸಿಕೊಂಡ.

ಅವಳ ಎರಡು ಬದಿಗಳಲ್ಲಿ ಕತ್ತಿ ಹಿಡಿದು ನಿಂತ ಪಹರೆಯವರು—

ಯಾವ ಅಳುಕೂ ಇಲ್ಲದೆ ಆಕೆ ಅವನ ಮುಂದು ಬಂದು ನಿಂತಳು.

ವಯಸ್ಸು ಅರುವತ್ತರ ಆಸುಪಾಸು.

ನಿಲುವು ಗಂಭೀರ.

ವಯಸ್ಸಿನಲ್ಲಿ ಸ್ಫುರದ್ರೂಪಿ ಇದ್ದಂತೆ ಕಾಣುವ ಮಾಟವಾದ ಮೈ.

ತಿದ್ದಿ ತೀಡಿದ ಗೊಂಬೆಯ ಅಂಗಾಂಗಗಳು.

ವಯಸ್ಸಿನೊಡನೆ ಬೆನ್ನು ಬಾಗಿರಲಿಲ್ಲ. ಮೈಯ ಚರ್ಮ ಸುಕ್ಕುಗಟ್ಟಿರಲಿಲ್ಲ. ಕಷ್ಟ ಕಾರ್ಪಣ್ಯವನ್ನು ಕಾಣದ ಮುಖಮುದ್ರೆ.

ಅಪೂರ್ವವಾದ ಚಾಚಕಳೆ.

ಅರಿಕೇಸರಿ ಅವಳನ್ನೊಮ್ಮೆ ಅಪಾದಮಸ್ತಕ ನೋಡಿದ.

ಅಲುಗಿನಂತೆ ತೀಕ್ಷ್ಣವಾದ ಅವನ ದೃಷ್ಟಿಯಿಂದ ಅವಳು ವಿಚಲಿತಳಾಗಲಿಲ್ಲ. ಆಕೆ ಪ್ರಶಾಂತಳಾಗಿದ್ದಳು. ಆಕೆಯ ಹೃದಯ ಪಶ್ಚಾತ್ತಾಪದಿಂದ ದಗ್ಧವಾದಂತೆಯೂ ಕಾಣಲಿಲ್ಲ.

ಅವಳ ಮುಖದಲ್ಲೊಂದು ಕಿರು ನಗು ಮಿನುಗಿತು.

ಅವಳನ್ನು ಹಿಂದೆಲ್ಲೋ ಕಂಡಂತೆ ಅತನಿಗೆ ಭಾಸವಾಯಿತು.

ಆದರೆ ಎಲ್ಲಿ ಎಂಬುದು ಸ್ಮರಣೆಗೆ ಬರಲಿಲ್ಲ.

ನೆನಪು ಎಷ್ಟು ಹಿಂದಕ್ಕೆ ಹೋಗಬಲ್ಲುದೋ ಅಷ್ಟೂ ಹಿಂದಕ್ಕೆ ಸರಿಯಿತು.

ಆದರೆ ಎಲ್ಲಿ ನೋಡಿದ್ದು?

ಅರಿಕೇಸರಿ ತಲೆ ಕೊಡಹಿಕೊಂಡ.

ಸಂಚಯದ ಮುಖ: ನೋಡಿದ ನೆನಪು. ಎಲ್ಲಿ?, ಯಾವ ಸಂದರ್ಭದಲ್ಲಿ ಈ ಮುಖದ ವೀಕ್ಷಣೆ?

ನೆನಪು ಅವನ ಸಹಾಯಕ್ಕೆ ಬರಲಿಲ್ಲ.

ಈ ಮುಖವನ್ನೇ ಹೋಲುವ ಇನ್ನಾವುದೋ ಮುಖವನ್ನೇ ನೋಡಿದ್ದು. ಅದನ್ನೇ ಇದು ಎಂದು ಭ್ರಮಿಸಿದ್ದೇ?

ನೋಡಿದ್ದ ಮುಖದೊಡನಿರುವ ಸಾದೃಶತೆ ತನ್ನನ್ನು ವಂಚಿಸಿತೇ'

ಇವಳು ಯಾರು?

ನಿಗೂಢ ರಹಸ್ಯ!

ಅರಿಕೇಸರಿಗೆ ಅದನ್ನು ಬಿಡಿಸುವ ಇಚ್ಛೆಯಾಯಿತು.

(ಮುಂದುವರಿಯುವುದು)

ಸ

ಪ್ತ

ಪ

ರ್ಣಿ

NAVAYUGA 20—7—1972
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಪಾರೆಂಕಿಯ ಮಹಿಷ ಮರ್ದಿನಿ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಧರ್ಮಸ್ಥಳಕ್ಕೆ ಹೋಗುವ ದಾರಿಯಲ್ಲಿ ಬೆಳ್ತಂಗಡಿಯಿಂದ ಸುಮಾರು ಎಂಟು ಮೈಲಿ ಈಚೆಗೆ ಮೊಡೆಂತ್ಯಾರ್ ಎಂಬ ಸಣ್ಣ ಪೇಟೆ ಸಿಕ್ಕುತ್ತದೆ. ಅಲ್ಲಿಂದ ಹರಿದು ಬರುವ ಪಂಚಾಯತ್ ರಸ್ತೆಯೊಂದು ಒಂದು ಮೈಲು ದೂರದಲ್ಲಿರುವ ಪವಿತ್ರ ಕ್ಷೇತ್ರವಾಗಿರುವ ಪಾರೆಂಕಿಗೆ ನಮ್ಮನ್ನು ತಲುಪಿಸುತ್ತದೆ. ಮೂಡು ದಿಕ್ಕಿಗೆ ತಲೆಯೆತ್ತಿ ನಿಂತಿರುವ ಅಶ್ವಮುಖ ಪರ್ವತದ ಕೋಟೆ. ಸುತ್ತಲೂ ದಟ್ಟ ಕಾನನ, ಧುಮ್ಮಿಕ್ಕಿ ಹರಿಯುವ ಝರಿಗಳ ಮಧ್ಯೆ ಹಸಿರುಡುಗೆ ಧರಿಸಿದ ಸಸ್ಯಶ್ಯಾಮಲೆ. ಇಂತಹ ನಿಸರ್ಗ ರಮಣೀಯ ಕ್ಷೇತ್ರದಲ್ಲಿ ಭಕ್ತ ರಕ್ಷಕಿ, ಶಿಷ್ಟ ಪರಿಪಾಲಕಿಯಾಗಿ ಮೈವೆತ್ತಿದ್ದಾಳೆ ಮಹಾತಾಯಿ ಮಹಿಷಮರ್ದಿನೀ ದೇವಿ.

ಪುರಾತನದಲ್ಲಿ ಈ ಊರು ಕೆದಿಲ ಎನಿಸಿತ್ತು. ಅನಂತರ ಪಾರಂತಿ. ಮತ್ತೆ ಪಾರೆಂಕಿ ಆಯಿತೆನ್ನುತ್ತಾರೆ ಊರವರು. ಇಲ್ಲಿ ಇದ್ದುದು ಕಲ್ಕುಡನ ಭೂತಸ್ಥಾನ ಮಾತ್ರ. ಈ ಕ್ಷೇತ್ರಕ್ಕೆ ಒಮ್ಮೆ ಮತಸ್ಥಾಪಕ ಶ್ರೀ ಮಧ್ವಾಚಾರ್ಯರು ಆಗಮಿಸಿದರು. ಊರ ಹಿರಿಯರು ಅವರೊಂದಿಗೆ ಭಿಕ್ಷೆ ಸ್ವೀಕರಿಸಲು ಪ್ರಾರ್ಥಿಸಿದರು. ಆದರೆ, ದೇವಾಲಯವಿಲ್ಲದ ಊರಿನಲ್ಲಿ ಆಚಾರ್ಯರು ಭಿಕ್ಷೆ ಪರಿಗ್ರಹಿಸಲು ಒಪ್ಪಲಿಲ್ಲ. ಇದರಿಂದ ಎಲ್ಲರಿಗೂ ಬಹಳ ದುಃಖವಾಯಿತು. ಆಗ ಮಧ್ವಾಚಾರ್ಯರು ಜ್ಞಾನದೃಷ್ಟಿ ಬೀರಿ, ಗತೇತಿಹಾಸಗಳ ಕಡೆ ಗಮನ ಹರಿಸಿದರು.

ಇದು ಅಂಥ ದುರದೃಷ್ಟ ಸ್ಥಳವಾಗಿರಲಿಲ್ಲ. ಹಿಂದೆ ಮಧ್ವಾಚಾರ್ಯರು ಅಂಡನೇಯ ಅವತಾರ ತಾಳಿದಾಗಲೂ, ಭೀಮನಾಗಿ ಜನ್ಮವೆತ್ತಿದಾಗಲೂ ದ್ರೌಪದಿಯೊಂದಿಗೆ ಇಲ್ಲಿಗೆ ಬಂದಿದ್ದರು. ಇಲ್ಲಿ ಮಹಾದೇವಿ ವಾಸಿಸುತ್ತಿದ್ದಾಳೆಂದೂ ಅವರಿಗೆ ಹೊಳೆಯಿತು. ಆ ತಕ್ಷಣ ಅವರು ಒಂದು ದೇವಾಲಯ ಕಟ್ಟಲು ಊರವರಿಗೆ ಆಣತಿಯಿತ್ತರು.

ಊರವರು ದೇವಾಲಯ ಕಟ್ಟಲು ಒಂದು ಕಡೆ ಸ್ಥಳ ಹಾಕಿದರು. ಆದರೆ ಮರುದಿನ ಬಂದು ನೋಡುವಾಗ ಆ ಸ್ಥಳಕ್ಕಿಂತ ಅನತಿ ದೂರದಲ್ಲಿ ಒಂದೆಡೆ ಹುಲಿ ಮತ್ತು ದನ ಒಟ್ಟಾಗಿ ಸ್ನೇಹಭಾವದಿಂದ ಮಲಗಿರುವುದನ್ನು ಕಂಡರು. ದೇವಾಲಯ ಕಟ್ಟಲು ಅದೇ ಪ್ರಶಸ್ತ ತಾಣವೆಂದು ಅವರು ಭಾವಿಸಿ, ತಾವು ಮೊದಲು ನಿರ್ಧರಿಸಿದ ಸ್ಥಳವನ್ನು ತೊರೆದು, ಹುಲಿ ಹಾಗೂ ದನ ಮಲಗಿದ ಸ್ಥಳದಲ್ಲಿ ದೇವಾಲಯ ಕಟ್ಟಿದರು. ಲೋಕಕಂಟಕ ಮಹಿಷಾಸುರನನ್ನು ತನ್ನ ಪಾದದಿಂದ ಮೆಟ್ಟಿ, ಸೀಳಿ, ಭಕ್ತರಿಗೆ ಅಭಯ ನೀಡುವ ಮುದ್ರೆಯ ದೇವಿ ಮಹಿಷಮರ್ದಿನಿಯ ಶಿಲಾ ವಿಗ್ರಹವನ್ನು ಆಚಾರ್ಯರೇ ಪ್ರತಿಷ್ಠಾಪಿಸಿದರು.

ಇಲ್ಲಿರುವ ಮಹಿಷಮರ್ದಿನಿಯ ವಿಗ್ರಹವನ್ನು ಚಾಲುಕ್ಯ ಶಿಲ್ಪವೆಂದೂ, ಕಾಲ ಸುಮಾರು ೧೧-೧೨ನೆಯ ಶತಮಾನ ಇರಬಹುದೆಂದೂ ತಜ್ಞರ ಅಂದಾಜು.

ಆದರೆ ಕೆಲವು ದಶಕಗಳಿಂದ ದೇವಿಗೆ ಪೂಜೆಯೇ ನಿಂತುಹೋಗಿತ್ತು. 1967 ರಲ್ಲಿ ಊರಿನ ಹತ್ತು ಸಮಸ್ತರೂ ಊರ–ಪರವೂರವರ ವಂತಿಗೆಯ ನೆರವಿಗೆ ದೇವಾಲಯ, ಗರ್ಭಗೃಹ, ಪ್ರಾಕಾರ ಇತ್ಯಾದಿಗಳನ್ನು ಜೀರ್ಣೋದ್ಧಾರಗೊಳಿಸಿ, ಭವ್ಯವಾಗಿ ಬ್ರಹ್ಮಕುಂಭಾಭಿಷೇಕ ಮೊದಲಾದುವುಗಳನ್ನು ನೆರವೇರಿಸಿದರು. ಅಂದಿನಿಂದ ದೇವಿಯ ದರ್ಶನಕ್ಕೆ ಹೇರಳ ಭಕ್ತರೂ ಬರುತ್ತಿದ್ದಾರೆ. ಸೌಮಾಂಗಲ್ಯ ಭಾಗ್ಯಾದಿಗಳಿಗಾಗಿ ದೇವಿಯ ಕ್ಷೇತ್ರದಲ್ಲಿ ಮದುವೆ ಮೊದಲಾದ ಮಂಗಳ ಕಾರ್ಯಗಳೂ ನಡೆಯುತ್ತಿವೆ.

ವರುಷದಲ್ಲಿ ಎರಡು-ಮೂರು ಸಾರಿ ರಂಗಪೂಜೆ ಮತ್ತು ದೇವಿಯ ವೈಭವದ ಜಾತ್ರೆ ಮಕರ ಮಾಸದಲ್ಲಿ ಅರ್ಥಾತ್ ಜನವರಿ ಅಂತ್ಯ ಇಲ್ಲವೇ ಫೆಬ್ರವರಿ ಆರಂಭದಲ್ಲಿ ನಡೆಯುತ್ತದೆ. ಆಗ ದೂರದೂರಿನ ಭಕ್ತರೂ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಉತ್ಸವಕ್ಕೆ ಮುನ್ನ, ದೇವಾಲಯದಿಂದ ಒಂದು ಮೈಲು ದೂರದಲ್ಲಿ ಒಂದು ಮಾರಿಗುಡಿ ಇದೆ. ಆ ಗುಡಿಯ ಪಕ್ಕದಲ್ಲಿರುವ ಕೊಡಂಗೆತ್ತಾಯ ಗುಡ್ಡದಲ್ಲಿರುವ ಕೊಡಂಗೆತ್ತಾಯ ಭೂತಕ್ಕೆ ಮೊದಲು ಆರಾಧಿಸಿ; ದೇವಾಲಯಕ್ಕೆ ಈ ಭೂತದ ಭಂಡಾರ ಬಂದು, ನೇಮವಾದ ಬಳಿಕ ಉತ್ಸವಾರಂಭ. ದೇವಳದ ಮುಂಭಾಗದಲ್ಲಿರುವ ಗುಳಿಗ ದೈವಕ್ಕೂ ಈಗಲೇ ನೇಮ.

ಹಿಂದೆ ದೇವಾಲಯದ ಗರ್ಭಗುಡಿಯ ಜೀರ್ಣೋದ್ಧಾರ ನಡೆದಿದ್ದಾಗ ಗರ್ಭಗೃಹದ ಗೋಡೆಯಲ್ಲಿ ಕರಿಶಿಲೆಯ ಅರ್ಧ ಅಡಿಯಷ್ಟು ಎತ್ತರವಿರುವ ಗಣಪತಿ ವಿಗ್ರಹವೊಂದು ಉದ್ಭವಿಸಿದುದು ಕಂಡುಬಂತು. ಮಹಾಕಾರಣಿಕದ ದೈವವೆಂದು ಹೆಸರಾಗಿರುವ ಈ ಗಣೇಶನ ಭಕ್ತರ ಸಂಖ್ಯೆಯಂತೂ ಅಪಾರ.

ಈಗಂತೂ ದೇವಿಯ ಭಕ್ತರ ಸಂಖ್ಯೆ ಅಸಂಖ್ಯ. ಭಕ್ತರ ಕಾಣಿಕೆಯಿಂದಲೇ ದೇವಿಯ ನಿತ್ಯ ನೈಮಿತ್ತಿಕ ಕಾರ್ಯಗಳಿಗೆ ಅಗತ್ಯವಿರುವ ಹೊಲಗದ್ದೆಗಳನ್ನು ಕೊಳ್ಳಲಾಗಿದೆ. ಸುಂದರವಾದ ದೇವಿಯ ದೇವಾಲಯವನ್ನು ದೇವಾಲಯದ ಆಡಳಿತ ವರ್ಗದವರಲ್ಲಿ ಒಬ್ಬರು ಮತ್ತು ಜಿಲ್ಲೆಯ ಪ್ರಸಿದ್ಧ ಕಲಾವಿದರಲ್ಲಿ ಒಬ್ಬರಾದ ಶ್ರೀ ದೇಷದಾಸ ಸುಬ್ಬರಾಯ ಅಂಬರ್ಡತ್ತಾಯರು ಬಗೆಬಗೆಯ ವರ್ಣಚಿತ್ರಗಳಿಂದ ಅಲಂಕರಿಸಿದ್ದಾರೆ. ಆಗಾಗ ದೇವಾಲಯದಲ್ಲಿ ಹರಿಕತೆ, ಯಕ್ಷಗಾನ–ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರುಗುತ್ತವೆ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

(ಒಂದನೇ ಪುಟದಿಂದ)

ತಮಿಳು ನಾಡೊಂದರಲ್ಲಿ ಆಳುವ ಕಾಂಗ್ರೆಸ್ ಸರಕಾರವಿಲ್ಲವಾದುದರಿಂದ, ದ್ರಾವಿಡ ಕ ಸರಕಾರವನ್ನು ಉರುಳಿಸಲು ಅದು ಪ್ರಯತ್ನಿಸುತ್ತಿದೆಯೆಂದು ಹೇಳಲಾಗುತ್ತದೆ. ದ್ರಾಮುಕವನ್ನು ಯೇನ ಕೇನ ಪ್ರಕಾರೇಣ ಮನೆಗಟ್ಟಬೇಕೆಂದು ಅದರ ವಿರೋಧಿಗಳೆಲ್ಲರೂ ಒಂದಾಗಿ ತೆರೆಯ ಮರೆಯಲ್ಲಿ ದ್ವೈತರಿಗೆ ಪ್ರೋತ್ಸಾಹ ನೀಡಿದರೂ ತಪ್ಪಲ್ಲ.

ಆದರೆ, ದ್ರಾಮುಕ ಸರಕಾರ ರೈತರ ಬೇಡಿಕೆಗಳನ್ನು ಕಿವುಡನಂತೆ ಕೇಳದೆ ಹೋದರೆ, ಅದು ಉಳಿದವರ ತಪ್ಪಾಗುವುದಿಲ್ಲ; ಅದರದ್ದೇ ಘನಾಪರಾಧವಾಗುತ್ತದೆ. ಜನತೆಯ ಹಿತವನ್ನು ಗುರಿಯಾಗಿಟ್ಟು ಕೊಂಡ ಸರಕಾರ ಜನತೆಯ ಬಯಕೆಯನ್ನು ಬಲಿಗೊಡುವುದು ತರವಲ್ಲ. ●

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರು ಬೇಕಾಗಿದ್ದಾರೆ. ಸಂಬಳ ಯೋಗ್ಯತಾನುಸಾರ

ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಉತ್ತಮ ಗುಣ ನಡತೆಯುಳ್ಳ ಕನಿಷ್ಠ ಎಂಟನೆ ತರಗತಿವರೆಗೆ ಓದಿದ ಉತ್ಸಾಹೀ ಅಭ್ಯರ್ಥಿಗಳು ಬೇಕಾಗಿದ್ದಾರೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

I. A. 7 in I. A. 4 in O. S. 125/66

Between:

ಗುಲಾಬಿ ಮತ್ತು ಇತರರು —ಅರ್ಜಿದಾರರು

ಮತ್ತು

ಚೆನ್ನಮ್ಮ ಪೂಜಾರಿ ಮತ್ತು ಇತರರು—ಎದುರು

ನೋಟೀಸು

ಬೆಳ್ತಂಗಡಿ ತಾಲೂಕು ಕರಿಮಣೇಲು ಗ್ರಾಮದ ಉಜಿರುದಡ್ಡು ಎಂಬಲ್ಲಿ ವಾಸವಾಗಿರುವ ಸೇಸಪ್ಪ ಪೂಜಾರಿಯವರ ಮಗ ಮುಡಿಲ ಪೂಜಾರಿಯವರೀಗೆ ಕೋರ್ಟಿನ ಹುಕುಂ ಪ್ರಕಾರ ತಿಳಿಯಪಡಿಸುವುದೇನೆಂದರೆ:—

ಮೇಲಿನ ಅರ್ಜಿಯಲ್ಲಿ ಮೃತ 13ನೇ ಎದ್ರಿ ಸೇಸಪ್ಪ ಪೂಜಾರಿಯ ವಾರೀಸುದಾರರಾಗಿ ನಿಮ್ಮನ್ನು ಸೇರಿಸುವರೇ ಮತ್ತು ಮೇಲಿನ ಅರ್ಜಿಯ 16ನೇ ಪ್ರತಿವಾದಿ ವೆಂಕಪ್ಪನಿಗೆ ನಿಮ್ಮನ್ನು ಗಾರ್ಡಿಯನರಾಗಿ ನೇಮಿಸುವರೇ ಅರ್ಜಿದಾರರು ಸಲ್ಲಿಸಿರುವ ಅರ್ಜಿ ತಾರೀಕು 1—8—1973ರಂದು ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿನ ನೀವು ಬೆಳಿಗ್ಗೆ 11ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಅರ್ಜಿಗಳನ್ನು ತೀರ್ಮಾನಿಸಲಾದೀತು. ತಿಳಿದಿರಲಿ.

ಬಿ. ಕೆ. ಸೂರ್ಯನಾರಾಯಣ ರಾವ್

Advocate for Petitioners

ಬೆಳ್ತಂಗಡಿ, 30—6—1972

IN THE COURT OF THE MUNSIF OF UDIPI SOUTH KANARA

S. C. No. 98/1971

Between:

Vasanthi Bai —Plaintiff

And

Sheshi Shettigarthi & others —Defendants

Notice is given in the above suit to (1) the 5th defendant Vasu Shettigara and (2) the 7th defendant Jagannatha Shettigara Both sons of Nagappa Shettigara, c/o Canara Madicals Matunga-Bombay—18 that the above suit will be called for your appearence in the above court at 11 a. m. on 29—7—1972. You may state your objections if any on that day before the said court.

By order of the court

P. N. KRISHNAMOORTHY RAO, B. A., LL. B.,

Advocate for the Plaintiff

Place: Udipi, S. K.

Date, 1—7—1972

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

Edited, Printed & Published by K. M. Shetty at the Navayuga Press. Udipi. S. India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ

ವಿಶ್ವಾಸದ ಸಂಸ್ಥೆ:

ನಾಯಕ
ಆಯುರ್ವೇದಾಶ್ರಮ
ಕಟಪಾಡಿ, ದ. ಕ.

ನವಯುಗ

ಸಂಪುಟ ೫೧
ಸಂಚಿಕೆ ೪೭

NAVAYUGA

27-7-1972

ಮೇಲ್ತರಗತಿಯ
ಉಪಾಹಾರ
ಮಂದಿರ

ಉಡುಪಿ
ಶ್ರೀಕೃಷ್ಣ ವಿಲಾಸ
ಕಾರ್ಕಳ

ವಿಶೇಷ ಭತ್ತೆಯ ಬೇಡಿಕೆ—

ಸಮಾಜವಾದದ ನಿಜರೂಪವೇ?

ಮೊನ್ನೆ ಮೊನ್ನೆ ಸಮಾಚಾರ ಪತ್ರಿಕೆಗಳಲ್ಲಿ ಸುದ್ದಿಯೊಂದು ಪ್ರಕಟವಾಯಿತು. ಈ ಸುದ್ದಿಯ ಸೃಷ್ಟಿಕರ್ತರು ಬಂಡವಾಳವಾದಿಗಳಾಗಿದ್ದರೆ, ಅಥವಾ ಪ್ರತಿಗಾಮಿಗಳಾಗಿರುತ್ತಿದ್ದರೆ ಪ್ರಗತಿ ವಿರೋಧಿಗಳಾದರೂ ಆಗಿರುತ್ತಿದ್ದರೆ, ಇದು ಸುದ್ದಿಯೆನಿಸುತ್ತಲೇ ಇರಲಿಲ್ಲ. ಆದರೆ, ಇದನ್ನು ಹುಟ್ಟಿಸಿದರೂ ಬೆಳೆಸಿದರೂ ಸಮಾಜವಾದವನ್ನು ಗುತ್ತಿಗೆ ಹಿಡಿದವರು, ಪ್ರಗತಿಶೀಲತೆಯ ಜಪಮಾಡುತ್ತಿರುವವರು, ಶ್ರೀಮಂತರನ್ನು ಹಿಂಡಿ ಬಡವರ ಉದ್ಧಾರದ ಹರಕೆ ಹೊತ್ತವರು—ರಾಜ್ಯದ ಆಳುವ ಕಾಂಗ್ರೆಸ್ಸಿನ ಜನಸೇವಾಕಾಂಕ್ಷಿ ಶಾಸಕರು.

ನಮ್ಮ ರಾಜ್ಯದ ಆಳುವ ಕಾಂಗ್ರೆಸ್ ಸರಕಾರ ಕ್ರಾಂತಿಕಾರಿಯೆನಿಸುವ ಹಲವು ನಿರ್ಣಯಗಳನ್ನು ಮಾಡಲು, ಆ ಬಗ್ಗೆ ಶಾಸನ ತಯಾರಿಸಲು ಮುಂದೆ ಬಂದಿದೆ, ಸಮಾಜವಾದ, ಪ್ರಗತಿಶೀಲತೆ, ಬಡತನ ನಿರ್ಮೂಲನ—ಹೀಗೆ ಉತ್ತಮೋತ್ತಮ ಪದಗಳು ನಾಲಗೆ ತುದಿಯಲ್ಲಿ ನರ್ತಿಸುತ್ತಲಿವೆ. ಅವರ ಮಹಾನಾಯಿಕೆ ಶ್ರೀಮತಿ ಇಂದಿರಾ ಗಾಂಧಿಯವರ ಸಮಾಜವಾದವೂ ಶ್ರೀ ದೇವರಾಜ ಅರಸು ಅವರ ಸಮಾಜವಾದದ ಮುಂದೆ ತಲೆಬಾಗಬೇಕು, ಲಜ್ಜೆಪಟ್ಟುಕೊಳ್ಳಬೇಕು.

ಇದಕ್ಕೆ ಒಂದೆರಡು ಕಾರಣಗಳನ್ನು ಇಲ್ಲಿ ಸ್ಪಷ್ಟಪಡಿಸಬಹುದು—ಇಂದಿರಾ ಸರಕಾರ ಭೂಮಿತಿಯು ೧೦ರಿಂದ ೧೮ ಎಕ್ರೆಗಳಷ್ಟಿರಬಹುದೆಂದರೆ, ಅರಸು ಸರಕಾರ ಅದು ೧೦ ಎಕ್ರೆಗಳಷ್ಟೇ ಇರಬೇಕೆಂದು ನಿರ್ಧರಿಸಿತು. ಮಾಸಿಕ ಒಂದು ಸಾವಿರ ರೂಪಾಯಿಗಳ ವರಮಾನವಿರುವವರಿಂದ ಭೂಮಿ ಹೊಂದುವ ಅಧಿಕಾರವನ್ನು ಕಿತ್ತುಕೊಳ್ಳಲು ಸಿದ್ಧವಾಯಿತು. ನಗರ ಆಸ್ತಿಮಿತಿಯು ರೂ. ಐದು ಲಕ್ಷವೆಂದು ಕೇಂದ್ರ ಸಮಿತಿ ಹೇಳಿದರೆ ರಾಜ್ಯ ಸಂಪುಟ ಅದು ಎರಡು ಲಕ್ಷವೇ ಸಾಕೆಂದು ಹೇಳುವ ಮಟ್ಟಕ್ಕೆ ಬಂತು. ಮನೆ ನಿವೇಶನಗಳ ಹಂಚುವಿಕೆ, ಆರ್ಥಿಕತೆಯ ಆಧಾರದ ಮೇಲೆ ಹಿಂದುಳಿದಿರುವಿಕೆಯ ನಿರ್ಧಾರ—ಮೊದಲಾದುವೂ ಕಡಿಮೆ ಮಹತ್ವ[illegible]. ಇವೆಲ್ಲವನ್ನೂ ಇವೇ ಮಾದರಿಯ ಇನ್ನೂ ಹಲವು ನೀತಿಗಳನ್ನೂ ಶ್ರೀ ದೇವರಾಜ ಅರಸರು ಕಾರ್ಯಗತಗೊಳಿಸುವ ದಾಟಿಯನ್ನು ಮಾತ್ರ ಇನ್ನೂ ಕಾಣಬೇಕಷ್ಟೆ.

ಜನತೆ ಶ್ರೀ ಅರಸರ ಕ್ರಾಂತಿಕಾರಿ ನೀತಿಯ ಮುಂದೆ ತಲೆದೂಗಿದ್ದರೆ, ಅವರ ಇನ್ನೊಂದು ನಿರ್ಧಾರ ತಲೆಗೇ ಹೊಡೆಯುವಂತಿದೆ. ಸಮಾಜವಾದದ ಅನುಷ್ಠಾನದಲ್ಲಿ ಅವರಿಗಿರುವ ಕಾಳಜಿಯನ್ನೇ ಅದು ಪ್ರಶ್ನಿಸುತ್ತದೆ. ಈ ಸುದ್ದಿ ದೊಡ್ಡದಲ್ಲವಾದರೂ ಶ್ರೀಸಾಮಾನ್ಯನ ಎದೆ ಒಡೆಯುವಂತದ್ದು.

ಶ್ರೀ ಅರಸರ ನೇತೃತ್ವದಲ್ಲೇ ಸೇರಿದ ಅವರ ಪಕ್ಷದ ಕಾರ್ಯಕಾರಿ ಸಮಿತಿ ರಾಜ್ಯದ ಶಾಸಕರಿಗೆ ಮಾಸಿಕ ರೂ. [illegible]ರ ವಿಶೇಷ ಭತ್ತೆ ನೀಡಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಿತು ಸರಕಾರ ಬೇರೆಯಲ್ಲ, ಅರಸು ಬೇರೆಯಲ್ಲ, ಪಕ್ಷ ಬೇರೆಯಲ್ಲವಾದ್ದರಿಂದ ಅರಸು ಒಂದು ಹೆಜ್ಜೆ ಮುಂದಿಟ್ಟರೆ. ಇದು ಸ್ವೀಕೃತವಾಗುವುದಕ್ಕೆ ಏನೇನೂ ತಡವಾಗುವುದಿಲ್ಲ.

ಈಗ ಶಾಸಕರಿಗೆ ಸಂಬಳ-ಭತ್ತೆಯೆಂದು ತಿಂಗಳಿಗೆ ನಾಲ್ಕುನೂರು ರೂಪಾಯಿಗಳು ದೊರೆಯುತ್ತವೆ. ಇದು ಕಡಿಮೆಯೆಂದು ಹೊರಕಣ್ಣಿಗೆ ಗೋಚರವಾಗಬಹುದು. ಆದರೆ, ಅವರಿಗಿರುವ ಇತರ ಆರ್ಥಿಕ ಸೌಲಭ್ಯಗಳನ್ನು ಗಮನಿಸಿದರೆ ಇದು ಕಡಿಮೆಯೆಂದು ಯಾರೂ ಹೇಳಲಾರರು. ಪ್ರಯಾಣ ಸೌಕರ್ಯ, ಬೆಂಗಳೂರಿನಲ್ಲಿ ವಸತಿ ಸೌಕರ್ಯ; ಅಧಿವೇಶನ ದಿನಗಳ ಭತ್ತೆ ಮೊದಲಾದುವೆಲ್ಲವನ್ನೂ ಲೆಕ್ಕಹಾಕಿದರೆ. ಜನತಾ ಪ್ರತಿನಿಧಿಗಳು ಜನತಾ ಪ್ರಭುಗಳಂತೆ ವೈಭವದ ಬದುಕು ಬಾಳುತ್ತಿದ್ದಾರೆಂದೇ ಹೇಳಬೇಕು.

ಈಗ ಸೂಚಿತವಾಗಿರುವ ವಿಶೇಷ ಭತ್ತೆಗೆ ಅವರು ನೀಡಿದ ಕಾರಣ—ಅಂಚೆ, ಟೆಲಿಫೋನ್, ಟೈಪಿಂಗ್ ಮುಂತಾದುವುಗಳ ಖರ್ಚು ಹೆಚ್ಚಾಗಿದೆ ಎಂಬುದು. ಅಂದರೆ ಬೆಲೆಯೇರಿಕೆಯ ಜಳ ಈಗ ಸಮಾಜವಾದಿ ಶಾಸಕರಿಗೂ ತಗಲಿತೆಂದು ಸಂತೋಷಪಡಬೇಕಲ್ಲವೇ? ಈ ಏರಿಕೆಗೆ ಕಾರಣ ಸರಕಾರಗಳೇ ಅಲ್ಲದೆ ಶ್ರೀಸಾಮಾನ್ಯನಲ್ಲವೆಂದು ಹೇಳಬೇಡವೆ? ಜೀವನ ವೆಚ್ಚಕ್ಕನುಸಾರವಾದ ವೇತನ ತನ್ನ ನೌಕರರಿಗೆ ನೀಡುವುದು ಸದ್ಯಕ್ಕೆ ಸಾಧ್ಯವಿಲ್ಲವೆಂದ ಸರಕಾರ ನೂರು ಬಗೆಯ ಸಂಭಾವನೆ, ಅನುಕೂಲತೆ, ರಿಯಾಯತಿ ವೇತನಾದಿಗಳನ್ನು ಪಡೆಯುವ ಶಾಸಕರಿಗೆ ವಿಶೇಷ ಭತ್ತೆ ನೀಡುವುದು ಹಾಸ್ಯಾಸ್ಪದವಾಗದೆ?

ಶಾಸಕತನದ ಗೌರವವುಳಿಸಿಕೊಂಡು, ಈಗ ದೊರೆಯುವ ವೇತನ–ಸೌಲಭ್ಯಗಳಿಂದ ಬಾಳುವುದು ತುಸು ದುಸ್ತರವೆನಿಸೀತು. ಆದರೆ, ಇದೇ ದುಸ್ತರತೆ ಕೆಲವೇ ಬೆರಳೆಣಿಕೆಯ ಶ್ರೀಮಂತರನ್ನುಳಿದು ಸಮಸ್ತ ಭಾರತೀಯರನ್ನೂ ಕಾಡುತ್ತಿದೆಯೆಂಬುದು ಸತ್ಯ. ದಿನವೊಂದರ ಐವತ್ತು ಪೈಸೆಯನ್ನೂ ಸಂಪಾದಿಸಲಾಗದೆ ಬೀದಿ ಭಿಕಾರಿಯಾಗಿ ಪ್ರಾಣಿಗಿಂತ ಕೀಳಾದ ಜೀವನ ಬದುಕುತ್ತಿರುವ ಪ್ರಜೆಗಳು ತುಂಬಿದ ದೇಶದಲ್ಲಿ ಇತರರು ಹೆಚ್ಚಿನ ವೇತನ—ಭತ್ತೆ ಬೇಡಿದರೆ ಆ ನರ ಹುಳುಗಳ ಕಡೆಗೆ ಬೊಟ್ಟು ಮಾಡಿ ಅವರಿಗಿಂತ ನೀವು ಮೇಲೆಂದು ಸಮಾಧಾನ ಹೇಳುವವರು ಶಾಸಕರಿಗೆ ವಿಶೇಷ ಭತ್ತೆ ಬೇಕೆಂದು ಕೇಳುವುದು ಸಮಾಜವಾದದ ನಿಜರೂಪವಾದರೆ, ಅಂತಹ ಸಮಾಜವಾದದಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಪ್ರತಿಶಾಸಕನಿಗೆ ಮಾಸಿಕ ರೂ. 200ರಂತೆ ಸುಮಾರು ಮುನ್ನೂರು ಶಾಸಕರಿಗೆ ವರ್ಷವೊಂದರ ಸುಮಾರು ಏಳು ಲಕ್ಷ ರೂಪಾಯಿ ಹೆಚ್ಚಿನ ವೆಚ್ಚ ಬರಬಹುದು. ಕೋಟಿ ಕೋಟಿ ಹಣವನ್ನು ನೀರಿಗೆ ಸುರಿಯುತ್ತಿರುವಾಗ ಈ ಏಳು ಲಕ್ಷದ ಪ್ರಶ್ನೆ ಕ್ಷುಲ್ಲಕವೆನಿಸಬಹುದು. ಆದರೆ, ಹಣದ ದೃಷ್ಟಿಯಿಂದ ಇದು ಮುಖ್ಯವಲ್ಲವಾದರೂ ನೀತಿಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು.

ಸಮಾಜವಾದವನ್ನು ಕಟ್ಟು ಮಸ್ತಾಗಿ ಜ್ಯಾರಿಗೆ ತರುತ್ತೇವೆ ಬಡತನವನ್ನು ನಿರ್ಮೂಲನ ಗೊಳಿಸುತ್ತೇವೆ, ಕ್ರಾಂತಿಕಾರಿ ಬದಲಾವಣೆಗಳಿಂದ ಪ್ರಗತಿ ಸಾಧಿಸುತ್ತೇವೆ. ನಿಮ್ಮನ್ನು ನರಕದಿಂದ ಸ್ವರ್ಗಕ್ಕೆ ಎತ್ತುತ್ತೇವೆ—ಎಂದು ನೂರು ಭರವಸೆ ನೀಡಿ ಗೆದ್ದು ಬಂದ ಆಳುವ ಕಾಂಗ್ರೆಸ್ಸು—ಅವೆಲ್ಲವನ್ನೂ ಬದಿಗೆ ಸರಿಸಿ – ಶಾಸಕರಿಗೆ ವಿಶೇಷ ಭತ್ತೆ ನೀಡಲು ಉದ್ಯಮಿಸಿದ್ದು ಯಾರ ದುರ್ದೈವವೋ? ಸಮಾಜವಾದದಲ್ಲಿ ನಂಬಿಕೆಯಿರುವ ಶಾಸಕರು ಈ ಭತ್ತೆಗೆ ಕೈಚಾಚದೆ ಸಮಾಜವಾದಿಗಳ[illegible], ಜನಸೇವೆಗೆ ಮುಂದಾಗಬೇಕು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ $7\frac{3}{4}$% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೆಯರ್‌ಮೆನ್.

ವಾಹಿ

ಸಮರ್ಪಣ

ಲೇಖಕರು: ಶ್ರೀ ಬಡೆಕಿಲ ಕೃಷ್ಣ ಭಟ್, ಭದ್ರಾವತಿ

(ಕಳೆದ ಸಂಚಿಕೆಯಿಂದ)

ಸ್ವತಂತ್ರ ಐತಿಹಾಸಿಕ ಕಾದಂಬರಿ

'ತಾಯಿ! ನೀನು ಯಾರು?'

'ಅದನ್ನು ಕಟ್ಟಿಕೊಂಡು ನಿಮಗೇನಾಗ ಬೇಕಾಗಿದೆ'

'ತಿಳಿದುಕೊಳ್ಳ ಬೇಕಾದ್ದು ಪ್ರಭು ಧರ್ಮ. ಆರೋಪಿಯ ಇತಿವೃತ್ತ, ಮಾನಸಿಕ ಹಿನ್ನೆಲೆ, ಇವುಗಳನ್ನು ವಿಮರ್ಶಿಸಿಯೇ ಆರೋಪಿಗೆ ಕೊಡಬೇಕಾದ ಶಿಕ್ಷೆಯನ್ನು ನಿರ್ಧರಿಸುವುದು'

'ಅನು ನ್ಯಾಯಸ್ಥಾನವಲ್ಲ. ಮುಖ ನೋಡಿ ಮಣೆ ಹಾಕುವ ಕೆಲಸ'

ಅವಳ ಮಾತಿನಿಂದ ಅರಿಕೇಸರಿ ಅಪ್ರತಿಭನಾದ. ಆರೋಪಿ ಸಾಮಾನ್ಯ ಸ್ತ್ರೀಯಲ್ಲ ಎಂದು ತೀರ್ಮಾನಿಸಿದ.

ಆರೋಪಿಯ ಒಂದೊಂದು ಮಾತಿನಲ್ಲೂ ನಿರ್ಭೀತತೆ ಒಡೆದು ಕಾಣುತ್ತಿತ್ತು.

'ತಪ್ಪುಗಳನ್ನು ಎಲ್ಲರೂ ಮಾಡುತ್ತಾರೆ. ಆ ತಪ್ಪುಗಳ ಹಿಂದೆ ಗುರುತರವಾದ ಕಾರಣಗಳಿರುತ್ತವೆ. ಕೆಲವು ಸದುದ್ದೇಶದಿಂದ ಕೂಡಿದ್ದು; ಹಲವು ದುರುದ್ದೇಶದಿಂದ ಪ್ರೇರಿತವಾದ್ದು. ಕೆಲವಂತೂ ಆಕಸ್ಮಿಕ. ಶಿಕ್ಷೆಯ ಕಾಠಿಣ್ಯ ಆರೋಪಿಯ ಮನೋಭೂಮಿಕೆಗನುಗುಣವಾಗಿರ ಬೇಕು. ಕೆಲವರನ್ನು ಒಳ್ಳೆಯ ದಾರಿಗೆ ತರಲು ಒಂದು ಮಾತು ಸಾಕು—ಇನ್ನು ಕೆಲವರನ್ನು ಹದ್ದಿಗೆ ತರಲು ಬಾರುಕೋಲೇ ಬೇಕಾಗುತ್ತದೆ'

'ರಾಜರಾದವರು ಈ ತಾರತಮ್ಯ ಮಾಡ ಹೊರಡಬಾರದು-ತಪ್ಪಿತಸ್ಥರನ್ನು ದಂಡಿಸುವುದಷ್ಟು ಅವರ ಕೆಲಸ. ಅದನ್ನೇ ಅವರು ಕಲಿಯಬೇಕು. ಅವರು ಹಾಗೆ ಮಾಡದೆ ಹೋದರೆ ಕ್ಷಾತ್ರೋಲ್ಲಂಘನೆ ಮಾಡಿದ ಪಾಪಕ್ಕೆ ಗುರಿಯಾಗುತ್ತಾರೆ. ಜನರ ಅಂತಃಪ್ರವೃತ್ತಿಯನ್ನು ಬದಲಾಯಿಸುವುದು ಅರ್ಹಂತನ ಅನುಯಾಯಿಗಳಿಗೆ ಸೇರಿದ್ದು. ಆ ಕೆಲಸವನ್ನು ಅವರಿಗೇ ಬಿಡುವುದೊಳಿತು. ನೀವು ನಿಮ್ಮ ಕೆಲಸವನ್ನು ನಿಶ್ಚಿಂತೆಯಿಂದ ನಡೆಸಿರಿ. ನಾನು ಕೊಲೆಗೆಳಸಿದವಳು, ವಧಾರ್ಹಳು.'

'ಆದರೆ ಸ್ತ್ರೀವಧೆ ನಿಷಿದ್ಧ'

'ಅವಳನ್ನು ನರಳಿಸಿ, ನರಳಿಸಿ ಸಾಯಿಸುವುದಕ್ಕಿಂತ ಹೆಚ್ಚಿನ ಪಾಪ ವಧೆಯಿಂದ ಬರಲಾರದು. ಅಲ್ಲದೆ, ಪ್ರಭುಗಳು ಧರೆಯ ದೇವರು; ಅವರು ಪಾಪದೂರರು.'

ಅವಳ ಮಾತುಗಳಲ್ಲಿ ದೈನ್ಯತೆಯು ಲವಲೇಶವೂ ಇರಲಿಲ್ಲ.

ಸ್ಪಷ್ಟವಾದ, ನೇರವಾದ—ಇನ್ನೊಮ್ಮೆ ಕೇಳಬೇಕೆನಿಸುವ ಮಾತುಗಳು—ಉಚ್ಚಾರ ಸ್ವಚ್ಛ—ಆಗತ್ಯ ಕಂಡಲ್ಲಿ ಸಹಜ ಏರಿಳಿತ.

ಪರಿಚಾರಿಕೆಯದಲ್ಲ, ಮನೆತನದ ಹೆಣ್ಣುಮಗಳ ಠಾಕುಠೀಕು.

'ನಿನ್ನ ಮಾತುಗಳಿಂದ ನೀನು ತುಂಬ ನೊಂದಿರುವಂತಿದೆ. ನೀನ್ಯಾರು? ನಿನಗೇಕೆ ನನ್ನ ಮೇಲೆ ಕೋಪ? ನಾನು ಮಾಡಿದ ಅಪಚಾರವೇನು? ಈ ಹೊಲೆಗೆಲಸವನ್ನೇಕೆ ಮಾಡಿದೆ?'

'ಅದನ್ನು ಹೇಳಿದ್ದರಿಂದ ಆಗುವ ಲಾಭ ಅಷ್ಟರಲ್ಲೇ ಇದೆ. ಹೇಗೋ ಎಂತೋ ಎಲ್ಲ ನಡೆದುಹೋಯಿತು. ಆ ಗೋಳಿನ ಕತೆಯನ್ನು ಕೇಳಿ ಯಾರಿಗೇನು ಪ್ರಯೋಜನ? ಇಂದೋ ನಾಳೆಯೋ ಮಣ್ಣು ಕಾಣಬೇಕು ಈ ದೇಹ. ಈ ದೇಹದಳಿವಿನೊಡನೆ ಎಲ್ಲ ಅಳಿಯುತ್ತದೆ. ನನ್ನ ಕತೆ ನನ್ನಲ್ಲಿಯೇ ಇರಲಿ. ಯಾರಿಗೂ ತಿಳಿಯದಿರಲಿ.'

ಅವಳೊಂದು ನಿಡುಸುಯ್ಲನ್ನು ಸುಯ್ದಳು.

ನಟನೆಯೋ ಇರಬೇಕೆಂದು ಅರಿಕೇಸರಿ ತರ್ಕಿಸಿದ.

ಸಹಾನುಭೂತಿ ಪಡೆಯಲೆಂದು ಹೀಗೇಕೆ ನಟಿಸಬಾರದು?

—ಅಂತಹ ಆರೋಪಿಗಳಿಗೂ ಕೊರತೆಯಿಲ್ಲ.

ಆದರೆ ಆಕೆಯ ಕಣ್ಣುಗಳಲ್ಲಿ ಅದರ ಚಿಹ್ನೆಯೂ ಆತನಿಗೆ ಕಾಣಸಿಗ[illegible] ಅವನ ಮುಖದಲ್ಲಾಗುತಿದ್ದ ಬದಲಾವಣೆಯನ್ನು ಗಮನಿಸಿ, ಅವ ಮಾತು ಮುಂದುವರಿಸಿದಳು.

'ಪ್ರಭುಗಳಿಗೆ ಅನುಮಾನ ಬಂತೆಂದು ಕಾಣುತ್ತಿದೆ. ನನ್ನದು [illegible]ಟಕತೆಯಲ್ಲ. ನಟಿಸಲು ನಾನು ನಾಟಕದವಳೂ ಅಲ್ಲ. ಗುಟ್ಟನ್ನು [illegible]ಳಲಾರೆ. ಹೇಳುವ ಮನಸ್ಸೂ ಇಲ್ಲ. ಆದರೆ ಹೊಟ್ಟೆಯೊಳಗಿಟ್ಟು[illegible]ಳ್ಳಲಾರೆ. ನನ್ನ ವ್ಯಥೆ ನನ್ನನ್ನು ತಿನ್ನುತ್ತಿದೆ. ಇದಕ್ಕೆಲ್ಲ ಕೊನೆ[illegible]ದು? ಅದನ್ನೀಗ ನಾನು ಯೋಚಿಸುತಿದ್ದೇನೆ.'

'ಸತ್ಯ ನುಡಿದುಬಿಡು. ನಿನ್ನನ್ನು ಮನ್ನಿಸುತ್ತೇನೆ.'

ಅರಿಕೇಸರಿ—ಇತರ ಆರೋಪಿಗಳಿಗೆ ತಿಳಿಸುವಂತೆ—ಅಮಿಷ ಒಡ್ಡಿದ.

ಅಣಕಿಸುವ ಧ್ವನಿಯಲ್ಲಿ ಆಕೆ 'ಮನ್ನಿಸುತ್ತೀರಾ? ಮನ್ನಿಸುವವನೊಬ್ಬನೆವನೆಂಬುದನ್ನೂ ನೀವು ಮರೆತಿರುವಂತಿದೆ. ಅವನು ಮನ್ನಿಸಬೇಕು.'

'ಅವನೇ ನಮ್ಮ ನಾಲಿಗೆಯಲ್ಲಿ ನಿಂತು ಈ ಮಾತನ್ನಾಡಿಸುತ್ತಾನೆ'

"ಒಪ್ಪಿಕೊಳ್ಳಲೇ ಬೇಕಾದ ಮಾತು. ಈ ಕತೆ ಕೇಳಿ ದುಃಖವಾದರೆ—"

'ಅದನ್ನು ಭರಿಸುವ ಶಕ್ತಿಯನ್ನು ಅವನೇ ಕರುಣಿಸುತ್ತಾನೆ'

ಆಕೆ ಸಂದೇಹಿಸಿದಳು.

ಅರಿಕೇಸರಿ ಒತ್ತಾಯಿಸಿದ.

'ನೀವು ಕೇಳಿದಿರೆಂದು ನಾನಿದನ್ನು ಬಹಿರಂಗ ಪಡಿಸುತ್ತಿಲ್ಲ. ಆತ್ಮಶಾಂತಿ ಲಭಿಸುತ್ತದೋ ಎಂಬ ಆಸೆಯಿಂದ ನುಡಿಯುತಿದ್ದೇನೆ'

'ಉದ್ದೇಶ ಏನೇ ಇರಲಿ, ಕೇಳುವ ಬಯಕೆಯಾಗಿದೆ.'

ಆಕೆ ಗಂಭೀರ ಸ್ವರದಲ್ಲಿ ಹೇಳ ತೊಡಗಿದಳು.

"ನನ್ನ ಹೆಸರು ಪದ್ಮಿನಿ"

—ಸ್ವಪ್ನದಲ್ಲಿ ಕೇಳಿದಂತಿತ್ತು ಆ ಹೆಸರಷ್ಟು.

'ನಾನು ರಾಷ್ಟ್ರಕೂಟ ರಾಜಕನ್ಯೆ. ನಿಮ್ಮ ತಾಯಿಗೆ ಮರೆಯಲ್ಲಿ ತಂಗಿಯಾಗಬೇಕು. ನಿಮ್ಮ ತಾಯಿಯು ತೀರ ಸಮೀಪದ, ದಾಯಾದಿಯ ಮಗಳು'

'ಅವಳು ಎಳವೆಯಲ್ಲಿ ಇದ್ದಕ್ಕಿದ್ದಂತೆ ಅದೃಶ್ಯಳಾದಳು ಎಂದು ಕೇಳಿದ್ದೇವೆ'

'ಅದೃಶ್ಯಳಾದುದು ನಿಜ. ಆಗದೆ ಇನ್ನೇನು ಮಾಡಬೇಕಿತ್ತು. ಅಪಮಾನದ ಹೊರೆ ಹೊತ್ತು ಬದುಕುವುದಕ್ಕಿಂತ ಸಾಯುವುದೇ ಸುಖವೆಂದು ನಾನು ತೀರ್ಮಾನಿಸಿದೆ. ಆದರೆ ನಿರೀಕ್ಷಿಸಿದ ಸಾವು ಇನ್ನೂ ಬರಲೊಲ್ಲದು'

"ಅಂದರೆ?"

'ನಾನು ಪ್ರಾಪ್ತ ವಯಸ್ಕಳಾಗಲು ನಮ್ಮ ದೊಡ್ಡಪ್ಪಂದಿರು—ರಾಷ್ಟ್ರಕೂಟ ಇಂದ್ರ ನನ್ನನ್ನು ಚಾಳುಕ್ಯ ಮನೆತನದವರೊಬ್ಬರಿಗೆ ಧಾರೆ ಎರೆದು ಕೊಡುವ ಹಂಚಿಕೆಯಲ್ಲಿದ್ದರು. ನಾನು ಆ ರಾಜಕುಮಾರನನ್ನು ಮನಸಾ ಮೆಚ್ಚಿದ್ದೆ. ಅವರೇ ನನ್ನ ಪತಿ ಎಂದು ತಿಳಿದು ವರ್ತಿಸಿದೆ. ಆದರೆ ನಾವು ಸತಿ—ಪತಿಗಳಾಗಲೇ ಇಲ್ಲ. ಕಂಕಣ ಬಲವೇ ಇಲ್ಲದಾಗ ಯಾರೇನು ಮಾಡುತ್ತಾರೆ?'

"ಈ ಮದುವೆ ಏಕೆ ಮುರಿಯಿತು?"

"ಯಾರು ಮುರಿದರೋ ಅವರನ್ನೇ ಕೇಳಬೇಕು"

"ನೀವು ಮನಸಾ ವರಿಸಿದವರು ಇನ್ನೂ ಬದುಕಿದ್ದಾರೆಯೋ ತಾಯಿ?"

'ಅದರ ವಿವರ ನನಗೆ ತಿಳಿಯದು—ಬನವಾಸಿಯಲ್ಲಿದ್ದಾರೆ ಎಂದು ಜನ ಆಡಿಕೊಳ್ಳುತ್ತಾರೆ'

'ಚಾಳುಕ್ಯ ರಾಜಮನೆತನಕ್ಕೆ ಸೇರಿದವರಲ್ಲಿ ಬನವಾಸಿಯನ್ನು ಸೇರಿದವರು ನಮ್ಮ ತೀರ್ಥರೂಪರೇ. ಸ್ವತಃ ತಂಗಿಯನ್ನೇ ಧಾರೆ ಎರೆದು ಕೊಟ್ಟ ರಾಷ್ಟ್ರಕೂಟ ಸಾಮ್ರಾಟರು —ನಮ್ಮ ಮಾವಂದಿರು, ನಮ್ಮ ತಾಯಿಯ ಲಗ್ನದ ಪಶ್ಚಾತ್ ಇನ್ನೊಂದು ಮದುವೆ ಮಾಡಿಸುವ ಹಂಚಿಕೆಯಲ್ಲಿದ್ದುದು ನಮಗೆ ತಿಳಿಯದು—ಅಪ್ಪಾಜಿಯವರು ನಮ್ಮೊಡನೆ ಇದರ ಪ್ರಸ್ತಾಪವನ್ನೂ ಮಾಡಿಲ್ಲ'

'ಅವಿವಾಹಿತ ಹೆಣ್ಣೊಬ್ಬಳನ್ನು ಅಪಮಾನಿಸಿದೆ ಎಂದು ಹೇಳಲು ನಾಚಿಕೊಂಡಿರಬೇಕು. ನಮ್ಮಲ್ಲಿ ಇತಿವೃತ್ತವನ್ನು ಹೇಳುವಾಗ ಆ ಅಧ್ಯಾಯವನ್ನು ಬೇಕೆಂತಲೇ ಮರೆಮಾಚಿರಬೇಕು'

"ಅಪ್ಪಾಜಿಗೆ ಅನ್ಯತ ಆಡಿಯೇ ತಿಳಿಯದು"

"ಅವರು ಸುಳ್ಳಾಡದಿರಬಹುದು. ಸುಳ್ಳಾಡುವ ಸ್ವಭಾವವೂ ಅವರದಲ್ಲ. ಆಡದೇ ಇರುವುದಕ್ಕೂ, ಸುಳ್ಳಾಡುವುದಕ್ಕೂ ಇರುವ ಅಂತರ ಬಹು ದೊಡ್ಡದು ಪ್ರಭು. ನಾನಾಡುವ ಈ ಕಠೋರ ಸತ್ಯವನ್ನು, ಅವರಿನ್ನೂ ಜೀವಂತವಿದ್ದರೆ, ಅವರನ್ನೇ ಕೇಳಿ ತಿಳಿದುಕೊಳ್ಳಿ. ನನ್ನ ಲಗ್ನದ ಮಾತು ಹೀಗೆ ಪ್ರಾರಂಭಿಸಿತು—ನಿಮಗೆ ಜನ್ಮಕೊಟ್ಟ ನಿಮ್ಮ ತಾಯಿ ಕಾಲವಾದಳು. ಅವಳ ಅಕಾಲ ಮರಣ ನಿಮ್ಮ ತೀರ್ಥರೂಪರ ಮೇಲೆ ಭಾರೀ ಪರಿಣಾಮ ಉಂಟುಮಾಡಿತು—ಆಗವರು ರಾಷ್ಟ್ರಕೂಟರ ಸೇನಾಪತಿಗಳೂ, ಅಮಾತ್ಯರೂ—ನಿಮ್ಮ ತಾಯಿಯ ಲಗ್ನದೊಡನೆ ಬೆಳೆದ ರಕ್ತ ಸಂಬಂಧ, ಅವಳ ಸಾವಿನೊಡನೆ ಕ್ಷಯಿಸಲಾಗದು, ಎಂದು ಯೋಚಿಸಿ, ನನ್ನ ದೊಡ್ಡಪ್ಪಂದಿರು ನಿಮ್ಮ ತಂದೆಯನ್ನು ಮದುವೆಯಾಗುವಂತೆ ನನಗೆ ಸೂಚಿಸಿದರು. ನಿಮ್ಮ ತಂದೆಯಂತಹ ಗಂಡು ಸಿಕ್ಕರೆ ಯಾವ ಹೆಣ್ಣು ಒಪ್ಪದಿರುತ್ತಾಳೆ. ನಾನು ಒಪ್ಪಿ ನಿಮ್ಮ ಮನೆಯನ್ನು—ನಿಮ್ಮ ತಂದೆಗೂ ತಿಳಿಯದಂತೆ—ಸೇರಿದೆ. ಸಂಸಾರದಿಂದ ವಿಮುಖವಾದ ನಿಮ್ಮ ತಂದೆಯ ಮನಸ್ಸನ್ನು ನನ್ನೆಡೆಗೆ ಎಳೆದು ಕೊಳ್ಳಲು ಯತ್ನಿಸಿ ವಿಫಲಳಾದೆ. ಅಂದಿನ ರಾತ್ರಿ ಇದೇ ಕೆನ್ನೆಗಳಿಗೆ ಅವರಿಂದ ಹೊಡೆಸಿಕೊಂಡೆ. ಅಪಮಾನಿತಳಾದ ನನಗೆ ಮೋರೆ ತೋರಿಸಲು ನಾಚಿಕೆಯಾಯಿತು. ಯಾರಿಗೂ ತಿಳಿಸದೆ, ಅದೇ ರಾತ್ರಿ ಅಲ್ಲಿಂದ ಪಲಾಯನ ಬೆಳೆಸಿದೆ. ಗೊತ್ತು—ಗುರಿ ಕಾಣದೆ ಅಲೆದೆ. ಈ ಅಲೆಮಾರಿ ಬದುಕು ನಡೆಸುತಿದ್ದ ಒಂದು ದಿನ...'

(ಹನ್ನೊಂದನೇ ಪುಟ ನೋಡಿರಿ)

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ 51
ಸಂಚಿಕೆ 47

ಸಂಸ್ಥಾಪಕರು:
ಡಾ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು
ಸರಕಾರಗಳಲ್ಲಿ
ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೩೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ತಮಿಳುನಾಡಿನಲ್ಲಿ ಬರೀ ಗುಲ್ಲು, ನಿಷ್ಪ್ರಯೋಜಕ — ನಿಷ್ಪಗೇಡು

‘ಬಿಸಿಯೊಗದೆ ಬೆಣ್ಣೆ ಕರಗದು’ ಎಂಬ ಗಾದೆ ಪ್ರಜಾಪ್ರಭುತ್ವಕ್ಕೆ ಸರಿಯಾಗಿ ಒಪ್ಪುತ್ತದೆಯೆಂದು ತೋರುತ್ತದೆ. ಮುಷ್ಕರ, ಚಳುವಳಿ, ಪ್ರದರ್ಶನ ಮೊದಲಾದುವುಗಳು ಆರಂಭವಾಗುವ ಮತ್ತು ಕೊನೆಗೊಳ್ಳುವ ವಿಧಾನಗಳನ್ನು ನೋಡುವಾಗ ಈ ಮಾತು ನೂರಕ್ಕೆ ನೂರರಷ್ಟು ಸತ್ಯವೆನಿಸುತ್ತದೆ. ತಮಿಳುನಾಡಿನ ರೈತರ ಚಳುವಳಿಯೂ ಈ ಮಾತನ್ನು ಮತ್ತೊಮ್ಮೆ ಸತ್ಯವೆಂದು ತೋರಿಸಿದೆಯೆಂದರೆ ಅದು ಅತ್ಯುಕ್ತಿಯಲ್ಲ. ಬೇಸಾಯದ ಉದ್ದೇಶಗಳಿಗಾಗಿ ಬಳಸುವ ವಿದ್ಯುತ್ತಿನ ಸರಬರಾಜು ದರವನ್ನು ತಮಿಳುನಾಡು ಸರಕಾರವು ಏರಿಸಿದಾಗ, ಬೇಸಾಯಗಾರರೆಲ್ಲರೂ ಒಂದಾಗಿ ಪ್ರತಿಭಟಿಸಿದರು; ಹನ್ನೆರಡು ಬೇಡಿಕೆಗಳನ್ನು ಮುಂದಿಟ್ಟರು. ಇವುಗಳಲ್ಲಿ ವಿದ್ಯುತ್ತಿನ ಬೆಲೆಯೇರಿಸಬಾರದೆಂಬುದೇ ಪ್ರಧಾನ ಅಂಶ. ಈ ಚಳುವಳಿಯಲ್ಲಿ ಎರಡೂ ಕಾಂಗ್ರೆಸ್ಸುಗಳೂ ಸೇರಿದಂತೆ ಏಡಿಎಂಕೆ ಮತ್ತು ಕಳಗಂನ ಒಂದೆರಡು ಅಂಗ ಪಕ್ಷಗಳೂ ಕೂಡಿದಂತೆ ಎಲ್ಲ ರಾಜ್ಯಕೀಯ ಪಕ್ಷಗಳೂ ಪಾಲ್ಗೊಂಡು ಪರಿಸ್ಥಿತಿ ಭೀಕರವಾದದ್ದು, ವಿತ್ತ ಜೀವಿತಗಳಿಗೆ ಹಾನಿತಟ್ಟಿದ್ದು, ಸರಕಾರಕ್ಕೆ ಚಳುವಳಿದಾರರು ಎಚ್ಚರಿಕೆ ನೀಡಿದ್ದು ಮತ್ತೀಗ ಉಭಯ ಪಕ್ಷಗಳ ನಡುವೆ ರಾಜಿಯಾದದ್ದು ಸರ್ವಶ್ರುತ.

ದ್ರಾವುಕ ಸರಕಾರ ತನ್ನ ಕತ್ತಿಗೆ ಬಂದಿದ್ದ ಅಪಾಯದಿಂದ ಒಮ್ಮೆಗೆ ಪಾರಾಯ್ತು. ಈ ಚಳುವಳಿಯನ್ನು ಮುಖ್ಯಮಂತ್ರಿ ಕರುಣಾನಿಧಿಯವರು ‘ತಮ್ಮ ಸರಕಾರವನ್ನುರುಳಿಸುವ ಕೇಂದ್ರದ ಒಳಸಂಚು’ ಎಂದು ಕರೆದರು. ಪರಿಸ್ಥಿತಿಯ ಪರಿಶೀಲನೆಗೆ ಆಳುವ ಕಾಂಗ್ರೆಸ್ ನಿಯೋಗವೊಂದು ಬರಲಿದೆಯೆಂದಾಗ, ಅಲಿಘರ ವಿಶ್ವವಿದ್ಯಾಲಯದ ಮರುತಗಳ ಅಧ್ಯಯನಕ್ಕೆ ತಾವೂ ಒಂದು ನಿಯೋಗ ಕಳಿಸುವುದಾಗಿ ಅವರು ಬೆದರಿಕೆ ಹಾಕಿದರು. ಕೇಂದ್ರ ರಾಜ್ಯಗಳ ಸಂಬಂಧ ಮತ್ತೊಮ್ಮೆ ಬಿಗಡಾಯಿಸ ಬಹುದೆಂಬ ಭೀತಿಯೂ ತಲೆದೋರಿತು. ಕೇರಳ ಮತ್ತು ಬಂಗಾಳಗಳಲ್ಲಿ ಕಮ್ಯುನಿಸ್ಟ ಪ್ರಾಬಲ್ಯವಿದ್ದಾಗ, ಇಂತಹುದೇ ವಿರಸ ತಲೆದೋರಿದ್ದನ್ನು ನೆನಪಿಸಬಹುದು ಆದರೆ, ಅದೇನು ಅನಿಸಿತೋ, ತಮಿಳುನಾಡು ಸರಕಾರ ಬೇಸಾಯಗಾರರ ಪ್ರತಿನಿಧಿಗಳೊಡನೆ ಒಡಂಬಡಿಕೆ ಮಾಡಿಕೊಂಡು ಮುತ್ಸದ್ಧಿತನವನ್ನು ತೋರಿತು. ಬರಬಹುದಾಗಿದ್ದ ಗಂಡಾಂತರವನ್ನು ನಡುವೆಯೇ ತಡೆದು ತನ್ನ ತಾನು ಸಂರಕ್ಷಿಸಿಕೊಂಡಿತು.

ಶ್ರೀ ಕರುಣಾನಿಧಿಯವರ ಜಾಣ್ಮೆಯನ್ನೂ ಮುತ್ಸದ್ಧಿತನವನ್ನೂ ಮೆಚ್ಚಬೇಕು. ಆದರೆ, ಅವರು ಇದೇ ನಿಲುವನ್ನು ಆರಂಭದಲ್ಲೇ ತಳೆದಿದ್ದರೆ, ಅನಪೇಕ್ಷಣೀಯವಾದ ದುರ್ಘಟನೆಗಳಿಗೆ ಮನಸ್ತಾಪಗಳಿಗೆ ಅವಕಾಶವಿರುತ್ತಿರಲಿಲ್ಲವೆನಿಸುತ್ತದೆ. ರೈತರು ಈ ಅವಕಾಶವನ್ನು ಎತ್ತಿಕೊಂಡು ತಮ್ಮ ಹನ್ನೆರಡು ಬೇಡಿಕೆಗಳನ್ನು ಮುಂದಿಟ್ಟರು. ಆಗ ಸರಕಾರ ಇವುಗಳನ್ನು ಗಮನಿಸಲಿಲ್ಲ ಮಾತ್ರವಲ್ಲ, ಅವಕ್ಕೆ ಕಿವಿಗೊಡಲೂ ಇಲ್ಲ. ರಾಜ್ಯದಲ್ಲಿ ತನ್ನದೇ ಏಕಚಕ್ರಾಧಿಪತ್ಯವಿದೆಯೆಂದು ದೃಢವಾಗಿ ನಂಬಿದ್ದ ಶ್ರೀ ಕರುಣಾನಿಧಿಯವರಿಗೆ ಕೆಲವೇ ದಿನಗಳಲ್ಲಿ ಬೆಪ್ಪು ತಾಗಿತು. ಅವರು ಹನ್ನೊಂದು ಬೇಡಿಕೆಗಳನ್ನು ಸ್ವೀಕರಿಸಲು ಮುಂದಾದರು. ಬೇಸಾಯಕ್ಕೆಂದು ಉಪಯೋಗಿಸುವ ವಿದ್ಯುತ್ತಿಗೆ ನೂರು ಯುನಿಟ್ಟುಗಳ ತನಕ ಪ್ರತಿ ಯುನಿಟ್ಟಿಗೆ ೧೨ ಪೈಸೆಯಂತೆಯೂ ಮುಂದಿನ ಪ್ರತಿ ಯುನಿಟ್ಟಿಗೆ ೧೧ ಪೈಸೆಯಂತೆಯೂ ದರ ನಿಗದಿ ಮಾಡಲು ಒಪ್ಪಿದರು. ಶ್ರೀ ಕರುಣಾನಿಧಿಯವರು ಕೊನೆಗೆ ತೋರಿದ ವಿವೇಚನೆಯನ್ನು ಮೊದಲಲ್ಲೇ ತೋರಿಸುತಿದ್ದರೆ, ಅಹಿತಕರ ಘಟನೆಗಳು ನಡೆಯುತ್ತಿರಲಿಲ್ಲವೆನ್ನುವುದು ನಿರ್ವಿವಾದ. ಇದೇ ಕತೆ ಸರ್ವೇಸಾಮಾನ್ಯವಾಗಿ ಎಲ್ಲ ಪ್ರಜಾಸತ್ತಾತ್ಮಕ ಸರಕಾರಗಳದ್ದೆಂದೇ ಹೇಳಬೇಕು. ಚಳುವಳಿಯು ಎಷ್ಟು ಆಳದಲ್ಲಿದೆಯೆಂಬುದನ್ನು ಅಳೆಯುವ ಉದ್ದೇಶದಿಂದ ಅದನ್ನು ನಡೆಯಗೊಡುವುದು, ಬಹಳ ಆಳದವರೆಗೆ ಬೇರು ಬಿಟ್ಟದೆಯೆಂದು ಮನವರಿಕೆಯಾದಾಗ ಅವುಗಳ ಮುಂದೆ ತಲೆಬಾಗುವುದು, ಇಲ್ಲವಾದರೆ ದಮನ ಕಾರ್ಯ ಸುಲಭವಾನೆ? ಜನಾಭಿಪ್ರಾಯ ರೂಪುಗೊಳ್ಳುವ ಏಕಮಾತ್ರ ವೇದಿಕೆ ಚಳುವಳಿಯಾಗಿರುವವರೆಗೆ ಈ ಅಹಿತಕರ ಘಟನೆಗಳು ಅನಿವಾರ್ಯವೋ ಏನೋ? ಬಹುಜನ ಹಿತವಾಗುವಂತೆ ಆಡಳಿತ ನಡೆಯ ಬೇಕಾದದ್ದು ಅಗತ್ಯ. ಜನಮತವನ್ನು ಅರಿತುಕೊಳ್ಳುವುದು ಶಾಸಕರ ಕರ್ತವ್ಯ. ಆದರೆ, ಕೆಲವು ಹಿತಾಸಕ್ತಿಗಳ ನಡುವಿದ್ದು ಪೂರ್ವಾಗ್ರಹ ಪೀಡಿತರಾದ ಶಾಸಕರು ಜನಮನವನ್ನೇನು ಪ್ರತಿನಿಧಿಸಿಯಾರು? ತಮಿಳುನಾಡಿನ ರೈತ ಚಳುವಳಿ ಇದನ್ನೇ ಸಿದ್ಧಮಾಡುವುದಿಲ್ಲವೇನು? ಸದ್ಯ ಕೇರಳದಲ್ಲಿ ಖಾಸಗಿ ಕಾಲೇಜುಗಳ ಮೇಲೆ ಬಿದ್ದಿರುವ ವಕ್ರದೃಷ್ಟಿ, ಕರ್ನಾಟಕದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳ ಮೇಲಿನ ಆರೋಪ ಪ್ರತ್ಯಾರೋಪ, ಗದರಿಕೆ-ಬೆದರಿಕೆಗಳು ಇವೇ ಮಾದರಿಯವೆನ್ನಬಾರದೇಕೆ? ಸರಕಾರದ ಸೂತ್ರ ಹಿಡಿದವರು ನಿರ್ವಂಚಕರಿರಬೇಕು, ನಿಷ್ಪಕ್ಷಪಾತರಿರಬೇಕು. ಬಹುಜನಾಭಿಪ್ರಾಯ ಮನ್ನಿಸುವ ಅರಿತು, ಸಾಮ್ಯ ವಿಧಾನಗಳಿಂದ ತುಂಬು ವಿವೇಚನೆಯಿಂದ ಕಾರ್ಯ ಸಾಧಿಸಬೇಕು. ‘ಬರೀ ಗುಲ್ಲು ನಿಷ್ಪಗೇಡು’ ಎಂಬ ತೆ ನಿಮ್ಮ ಸುಮ್ಮನೆಗೊಂದಲಗಳಿಗೆ ಅವಕಾಶ ಕಲ್ಪಿಸುವುದರಿಂದ ಬೇರೆ ಕಟ್ಟುವುದು ಸಾಧ್ಯವಾಗುವುದಿಲ್ಲ ಬದಲಿಗೆ ಕಟ್ಟಿದ ದೇಶ ಒಡೆದು ಹೋಗುವ ಸಂಭವಗಳೇ ಅಧಿಕವಿವೆ.

ಗಂಧದ ಮನುಷ್ಯ ಪದ್ಮಭೂಷಣ ಪೈ

ಶ್ರೀ ಟಿ. ಎ. ಪೈಯವರು ರಾಜ್ಯಸಭಾ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಆದೇಶ ಪ್ರಧಾನಿ ಇಂದಿರಾಗಾಂಧಿ ನೀಡಿದಾಗ, ಅವರು ಜೀವವಿಮಾ ಕಾರ್ಪೊರೇಶನ್ನಿನ ಅಧ್ಯಕ್ಷಪದಕ್ಕೆ ರಾಜಿನಾಮೆ ನೀಡಿದರು. ಶ್ರೀ ಪೈಯವರನ್ನು ತಿಳಿದವರಿಗೆ ಆಗಲೆ ಅವರಿಗೆ ಮಂತ್ರಿಪದ ಕಾದಿದೆಂದು ತಿಳಿದಿತ್ತು. ರಾಜ್ಯಸಭಾ ಸದಸ್ಯನಾದ ಮೇಲೆ, ಅವರಿಗೆ ಮಂತ್ರಿಪದ ದೊರೆಯಲು ಕೆಲಕಾಲ ತಗಲಿದ್ದರೆ, ಇದಕ್ಕೆ ಅವರು ಕಾರಣರಲ್ಲ. ಶ್ರೀಮತಿ ಗಾಂಧಿಯವರು ತನ್ನ ಸಂಪುಟವನ್ನು ಪುನರ್ಘಟಿಸಲು ನಾನಾ ಕಾರಣಗಳಿಂದ ತಡಮಾಡಿದ್ದೇ ಕಾರಣ. ಈಗ ಶ್ರೀ ಪೈಯವರಿಗೆ ಕ್ಯಾಬಿನೆಟ್ ದರ್ಜೆಯೂ ರೈಲ್ವೇ ವಿಭಾಗವೂ ದೊರೆತಿವೆ. ಅವರ ಇಪ್ಪತ್ತು ವರ್ಷಗಳ ರಾಜ್ಯಕೀಯ ಸೇವೆಗೆ ಪುರಸ್ಕಾರ ಲಭಿಸಿದೆ. ಅವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಮೊತ್ತಮೊದಲ ಕೇಂದ್ರ ಸಚಿವರೆಂಬುದು ಅವರಿಗೂ ಜಿಲ್ಲೆಗೂ ಒಂದು ಹೆಮ್ಮೆ. ಧೈರ್ಯ, ಸಾಹಸ, ನಿರ್ವಂಚನೆ, ಸೇವೆ, ನಿಷ್ಪಕ್ಷಪಾತತೆ, ಉದಾರಾಂತಃಕರಣ, ಕರುಣೆ ಮೊದಲಾದ ಹತ್ತಾರು ಸದ್ಗುಣಗಳಾಗರರಾಗಿರುವ ಶ್ರೀ ಪೈಯವರಿಗೆ ಅಧಿಕಾರ ಜನತಾ ಜನಾರ್ದನನ ಸೇವೆಗೆಂದು ದೊರೆತ ಮತ್ತೊಂದು ಹೊಸ ಅವಕಾಶ.

ಶ್ರೀ ಪೈಯವರು ತನ್ನ [illegible] ವಯಸ್ಸಿನಲ್ಲೇ ಸಿಂಡಿಕೇಟ್ ಬ್ಯಾಂಕಿನ ಹೊಣೆಗಾರಿಕೆಯ ಹುದ್ದೆಯನ್ನು ವಹಿಸಿಕೊಂಡವರು. [illegible]ರಿಂದ [illegible]ರ ವರೆಗೆ ಅದೇ ಬ್ಯಾಂಕಿನ ಉನ್ನತ ಹುದ್ದೆಯಲ್ಲಿದ್ದು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆಂದು ಅಹರ್ನಿಶಿ ದುಡಿದ ಧೀಮಂತರು. ಆ ಬಳಿಕ ಪ್ರಧಾನಿ ಗಾಂಧಿಯ ಕರೆಯಂತೆ ಜೀವವಿಮಾ ಕಾರ್ಪೊರೇಶನಿನ ಅಧ್ಯಕ್ಷರಾದರು. ಸರಕಾರೇತರ ವಲಯದಿಂದ ನೇಮಿತರಾದ ಮೊತ್ತಮೊದಲ ಅಧ್ಯಕ್ಷರಾಗಿ ಅವರ ಕ್ರಾಂತಿಕಾರಿ ಬೆಳವಣಿಗೆಗೆ ಕಾರಣ ಪುರುಷರಾದರು. [illegible]ರಲ್ಲೇ ರಾಜಕೀಯಕ್ಕೆ ಇಳಿದ ಶ್ರೀ ಪೈ ಐದು ವರ್ಷಗಳ ಕಾಲ ಶಾಸಕರಾಗಿಯೂ ಜನಸೇವೆ ಮಾಡಿದರು. [illegible]ರಲ್ಲಿ ಆಹಾರ ಕಾರ್ಪೊರೇಶನ್ನಿನ ಅಧ್ಯಕ್ಷರಾದರು. [illegible]ರಲ್ಲಿ ಲೋಕ ಸಭೆಗೆ ಸ್ಪರ್ಧಿಸುವ ಇರಾದೆಯಿದ್ದರೂ ಅದು ಈಡೇರದೆ ಹೋಯ್ತು. [illegible]ರಲ್ಲಿ ಮತ್ತೆ ಲೋಕಸಭೆಗೆ ಸ್ಪರ್ಧಿಸುವರೆಂಬ ವದಂತಿ ಹರಡಿದ್ದರೂ ಅದು ಪುಷ್ಟಿಗೊಳ್ಳಲಿಲ್ಲ. ಶ್ರೀ ಪೈಯವರು ಒಂದೊಮ್ಮೆ [illegible]ರಲ್ಲೇ ಎಂ ಪಿ ಆಗಿಬಿಡುತ್ತಿದ್ದರೆ, ಪ್ರಾಯಃ ಜೀವವಿಮಾ ಕಾರ್ಪೊರೇಶನ್‌ಗೆ ಕಾಯಕಲ್ಪ ಚಿಕಿತ್ಸೆಕರೊಬ್ಬರು ದೊರೆಯುತ್ತಿರಲಿಲ್ಲ. “ಪದ್ಮಭೂಷಣ” ಪದವಿಗೆ ಇವರಂಥ ಯೋಗ್ಯ ವ್ಯಕ್ತಿಯೂ ಅಲಭ್ಯವಾಗುತ್ತಿತ್ತೋ ಏನೋ!

(ಹತ್ತನೇ ಪುಟ ನೋಡಿರಿ)

ಗೇಹರಾಜ್ಯದಲ್ಲಿ

ರಥಿಕರು ಸಾರಥಿಯಾದರೇನು?

'ನೋಡಿ, ತುಸು ಇಲ್ಲಿ....'

'ಏನು?....ಓ, ಭಾರಿ ತಮಾಷೆಯಿದೆ..'

'ಅಲ್ರಿ, ಪ್ಲಾಸ್ಟಿಕ್ ತಜ್ಞರು ಔಷಧಿ ಚೀಟಿ ಬರೆದು ಕೊಡುವುದೆಂದರೆ....'

"ಅಯ್ಯೋ, ಅದ್ರಲ್ಲೇನು ಬಂತಿ?"

"ಏನೂ ಇಲ್ಲ ಅಂತೀರಾ?"

'ಏನೂ ಇಲ್ಲ....'

'ಯಾಕೆ?'

"ಯಾವ ಕೆಲಸವನ್ನೂ ಮಾಡದ ತಜ್ಞ ಕೆಲಸಗಾರರ ಮೇಲ್ವಿಚಾರಕನೆಂದು ಕುರ್ಚಿಯಲ್ಲಿ ಕುಳಿತು ಸಂಬಳ ತಿನ್ನುತ್ತಾನೆ. ಅಲ್ವೆ, ಆಡಳಿತೆ ನೋಡುವುದಕ್ಕೆ ಆಡಳಿತೆ ತಜ್ಞನೇ ಆಗ ಬೇಕಲ್ಲದೆ ವೈದ್ಯಕೀಯದಲ್ಲೋ, ಶಿಕ್ಷಣದಲ್ಲೋ ಮತ್ತಾವುದರಲ್ಲೋ ತಜ್ಞನಾಗಿಯೇ ಏಕಿರಬೇಕು?'

'ಅಲ್ರಿ, ಈಗ ಆಂಧ್ರ ಸರಕಾರ ಆ ತಜ್ಞ ಸರ್ಜನ್ನರಿಗೆ ತೆರುವ ಸಂಬಳ ವ್ಯರ್ಥವಲ್ಲವೇನು?'

'ಅದು ಹೇಗೆ? ಅವರು ಕೆಲಸ ಮಾಡುವುದಿಲ್ಲವೆ?'

'ಮಾಡುತ್ತಾರೆ, ಆದರೆ, ಅವರ ಅರ್ಹತೆಗೆ ತಕ್ಕ ಕೆಲಸ ತೆಗೆದುಕೊಳ್ಳುತ್ತಿಲ್ಲ. ಚೀಟಿ ಬರೆದು ಕೊಡಲು ಸಾಮಾನ್ಯ ವೈದ್ಯನೂ ಸಾಕು....'

"ಅಲ್ಲವೆ, ತಜ್ಞರು ಬರೆದ ಚೀಟಿ ಪರಿಣಾಮಕಾರಿಯಾಗಿರುತ್ತೆ...."

'ಆದರೂ....'

'ಮತ್ತೆ ಅವರಿಂದ ಯಾವ ಕೆಲಸ ತೆಗೆದುಕೊಳ್ಳಬಹುದು? ಅವರಿಗೆ ಕೊಡುವುದಕ್ಕೆ ಸರ್ಜರಿ ಕೆಲಸವಿಲ್ಲವೆಂದ ಮೇಲೆ....'

'ಅಲ್ರಿ, ಮಹಾರಥಿಕನನ್ನು ಸಾರಥಿ ಮಾಡಿದಂತಾಯ್ತು....'

'ನೋಡಮ್ಮ, ಒಂದ್ರೀತಿಯಿಂದ ಸಾರಥಿ ಮಹಾರಥಿಯಾಗಿರುವುದೇ ವಿಜಯಕ್ಕೆ ಮೂಲವಾಗಬಹುದು.'

'ಯಾಕೆ?'

'ತಜ್ಞರು ಯಾವಾಗಲೂ ಜಾರಿ ಬೀಳುವುದಿಲ್ಲ; ಬಿದ್ದರೂ ಅದನ್ನು ಸಮರ್ಥಿಸುವುದರಲ್ಲೂ ಅವರು ತಜ್ಞರಿರುತ್ತಾರೆ....'

'ಆಯ್ತು.....'

'ನೋಡು, ಒಂದು ಶಾಲೆಯಿದೆ. ಕಸ ಗುಡಿಸುವುದಕ್ಕೆಂದೇ ಒಬ್ಬ ನೌಕರನಿರುತ್ತಾನೇನ್ನು. ಆದರೆ ಅವನು ಬೇಜವಾಬುದಾರ. ಕೆಲಸ ಸಮರ್ಪಕವಾಗುವುದಿಲ್ಲ. ಜವಾಬ್ದಾರಿಯುಳ್ಳ ಅಧ್ಯಾಪಕರೇ ಕಸಗುಡಿಸಿದರೆ, ಕೆಲಸ ಎಷ್ಟು ಚೆನ್ನಾಗಿ ನಡೆಯುತ್ತದೆ! ಅದರ ಮೇಲೆ ಆ ತಜ್ಞರಿಗೆ ಕೊಡಲು ಕೆಲಸವೇ ಇಲ್ಲವೆಂದ ಮೇಲೆ ಗುಮಾಸ್ತನ ಕೆಲಸವನ್ನಾದರೂ ಮಾಡಿಸಿದ್ದು ಉಚಿತ ತಾನೆ?'

'ಅಷ್ಟೆಪ್ಪ, ಉದ್ಘಾಟನೆಗೆಂದು ಸಾವಿರಾರು ರೂಪಾಯಿಗಳ ವೆಚ್ಚ ಮಾಡಿ ಮಂತ್ರಿಮಾಗಧರು ಊರೂರು ತಿರುಗುವಾಗ, ಇದೇನೂ ದೊಡ್ಡ ಸಂಗತಿಯುಲ್ಲಾನ್ನಿ....ಇನ್ನೂ ತುಸು ಕಾಲ ಕಳೆಯಿತೆಂದರೆ, ಆಸ್ಪತ್ರೆ ಗುಮಾಸ್ತನಾಗಬೇಕಾದರೆ ವೈದ್ಯಕೀಯ ಪದವಿಯೇ ಕನಿಷ್ಠ ವಿದ್ಯಾರ್ಹತೆಯಾದರೂ ಆದೀತು....'

'ಆದೀತು, ಆದೀತು....'

"ಏನಾದೀತು?'

'ಕಾಶ್ಮೀರದ ಸಮರವಿರಾಮ ರೇಖೆಯನ್ನು ಸಡಿಲಿಸಿ, ಮುಕ್ತ ಸಹಕಾರಕ್ಕೆ ಅನುಮತಿ ನೀಡಿದರೆ ಕಾಶ್ಮೀರ ಸಮಸ್ಯೆ ಪರಿಹಾರವಾದೀತು....'

'ಇದು....?'

'ಸ್ವತಂತ್ರ ಪಕ್ಷದ ಅಧ್ಯಕ್ಷ ಪಿಲೂ ಮೋದಿಯವರ ಸಲಹೆ. ಪಾಕ್ ಅಧ್ಯಕ್ಷ ಭುಟ್ಟೊ ಕೂಡ ಇದಕ್ಕೆ ಒಪ್ಪಿದ್ದಾರಂತೆ....'

'ಅವ್ರೆಲ್ಲಿ ಭೆಟ್ಟಿಯಾದರು?'

'ಅಲ್ವೆ, ಸಿಮ್ಲಾದಲ್ಲಿ ತನ್ನ ಹಳೆಯ ಮಿತ್ರನನ್ನು ಮೋದಿ ಅನಧಿಕೃತವಾಗಿ ಕಂಡ್ರಲ್ಲಾ....'

"ಹ್ಞಾಂ"

'ಇದು ಪಾಕಿಸ್ತಾನಕ್ಕೆ ಸ್ವೀಕೃತವಿರುವುದಾದರೆ ಭಾರತ ತಿರಸ್ಕರಿಸುವುದು ಸರಿಯಲ್ಲವೆನ್ನುತ್ತಾರೆ ಮೋದಿ. ಎರಡೂ ದೇಶಗಳ ನಡುವೆ ಶಾಶ್ವತ ಶಾಂತಿ—ಸ್ನೇಹಗಳು ಸ್ಥಾಪನೆಯಾಗಲು ಇವು ತೆರಬೇಕಾದ ಅಲ್ಪ ಬೆಲೆಯದು....'

'ಅದು ಸರಿ. ಆದರೆ, ಇದಕ್ಕೆ ನಾವು ಒಪ್ಪಿದರೆ ನಮ್ಮ ಕಾಶ್ಮೀರ ನೀತಿಯೇ ಬುಡಮೇಲಾಗುತ್ತಲ್ಲಾ..."

"ಇಲ್ಲಿ ನೈತಿಕ ನಿರ್ಧಾರ ಸಲ್ಲದು, ರಾಜ್ಯಕೀಯ ನಿರ್ಧಾರ ಬೇಕು...."

"ಆದರೂ ಅದು ಹೇಗೆ ಸಾಧ್ಯವಾಗುತ್ತದೆ? ನೋಡಿ, ಈಜಿಪ್ತದಿಂದ ರಶ್ಯದ ಮಿಲಿಟರಿ ತಜ್ಞರನ್ನು ಮರಳಿ ಕರೆದುಕೊಳ್ಳಬೇಕೆಂದು ಅಧ್ಯಕ್ಷ ಸಾದತ್ ಆಜ್ಞೆ ನೀಡಿದರಂತೆ"...

"ಹ್ಞಾಂ....ತನಗೆ ಸಮರ ಹೂಡಲು ಸಾಕಷ್ಟು ಮಿಲಿಟರಿ ನೆರವು ನೀಡಲು ರಷ್ಯ ನಿರಾಕರಿಸಿದಾಗ ಅವರು ಈ ನಿರ್ಣಯಕ್ಕೆ ಬಂದರು...'

"ಅದು ಸರೀನ್ನಿ. ಮಿಲಿಟರಿಯಿಲ್ಲದೆ ಮಿಲಿಟರಿ ತಜ್ಞರಿಂದೇನು ಪ್ರಯೋಜನ? ಆದರೆ, ಇದರ ಪರಿಣಾಮವೇನಾದೀತು?"

"ಯುದ್ಧದ ಮೋಡಗಳು ತುಸು ಚದರಿದಂತಾಯ್ತು. ಆದರೆ ಮೇಲೆ ರಶ್ಯದ ಮಿಲಿಟರಿ ತಜ್ಞರು ಐಗುಪ್ತದಿಂದ ಕಾಲ್ತೆಗೆದರೆ, ಪಶ್ಚಿಮ ಏಷ್ಯದ ಬಿಕ್ಕಟ್ಟಿನ ಪರಿಹಾರಕ್ಕೆ ತಾನು ಪ್ರಯತ್ನಿಸುವುದಾಗಿ ಅಮೆರಿಕೆ ಹೇಳಿದೆ....'

'ಅಂದರೆ, ಸಾದತ್ ಈಗ ರಶ್ಯದ ಮಿತ್ರತ್ವವನ್ನು ತ್ಯಜಿಸಿ ಅಮೆರಿಕೆಯತ್ತ ಕೊರಳು ಚಾಚಿದೆಯೆಂದಂತಾಯ್ತು...'

'ಒಂದು ರೀತಿಯಿಂದ ಹಾಗೆಯೇ. ಆದರೆ, ಇಸ್ರೇಲಿನ ಪರವಾಗಿಯೇ ನಿಂತಿರುವ ಅಮೆರಿಕೆಯಿಂದ ಐಗುಪ್ತಕ್ಕೇನು ಲಾಭವಾದೀತೆಂದು ಕಾದು ನೋಡಬೇಕಷ್ಟೆ....'

"ಅಮೆರಿಕೆಯ ಅಧ್ಯಕ್ಷ ನಿಕ್ಸನ್ನರಿಗೆ ನೋಬಲ್ ಶಾಂತಿ ಪಾರಿತೋಷಕ ದೊರೆಯಬೇಕೆಂದು ಪ್ರಯತ್ನ ನಡೆಯುತ್ತಿದೆಯಂತೆ...."

"ಅಲ್ಲವೇ ಮತ್ತೆ, ಚೀನಾ-ರಷ್ಯಾಗಳ ಸಂಚಾರಮಾಡಿ ಶಾಂತಿಗಾಗಿ ಅವರು ಪ್ರಯತ್ನಿಸಲಿಲ್ಲವೆ? ಮಾರಕಾಸ್ತ್ರಗಳಿಗೊಂದು ಪರಿಮಿತಿ ಹಾಕಲಿಲ್ಲವೆ? ವ್ಯಾಪಾರ ಸಂಬಂಧ ಹೆಚ್ಚಿಸಲಿಲ್ಲವೆ?"

"ಇರಬಹುದು. ಆದರೆ, ವಿಯತನಾಮದಲ್ಲಿ ಜನಾಂಗ ಹತ್ಯೆಯಲ್ಲಿ ತೊಡಗಿದ ಅವರಿಗೆ ಶಾಂತಿ ಪಾರಿತೋಷಕ ಸಿಗುವುದೆಂದರೆ?"

"ಮತ್ತಾರಿಗೆ? ನಿನಗೆ ನನಗೆ ಸಿಗಬೇಕೇನು?"

"ಹಾಗಲ್ಲರಿ, ಈ ವರ್ಷದ ಪುರಸ್ಕಾರ ನಿಜವಾಗಿ ಪ್ರಧಾನಿ ಗಾಂಧಿಗೆ ಸಿಗಬೇಕು. ಬಾಂಗ್ಲಾ–ಪಾಕ್–ಭಾರತಗಳ ನಡುವೆ.."

"ಛೀ, ಇದೆಲ್ಲ ಒಂದು ಸಂಕುಚಿತ ಭೂಭಾಗದ ಪ್ರಶ್ನೆ. ಅದರ ಮೇಲೆ ಆಕೆ ಮಾಡಿದ್ದು ಶಾಂತಿಯ ಸಾಧನೆಯೆಂಬುದಕ್ಕೆ ಪುರಾವೆಯೇನು?"

"ಮತ್ತೆ ನಿಕ್ಸನ್ ವಿಯತನಾಮದಲ್ಲಿ ಕೈಕೊಂಡ ದಾಳಿ, ಸಾಮೂಹಿಕ ಕೊಲೆಗಳು ಶಾಂತಿ ಸಾಧನೆಗಳೆ?"

"ನೋಡಮ್ಮ, ಇದೆಲ್ಲ ದೊಡ್ಡ ಜನರ ವ್ಯವಹಾರಗಳು. ನಮ್ಮಂಥವರು ಅದರಲ್ಲೆಲ್ಲ ಕೈ ಹಾಕುವುದು ಅದರ ಬಗ್ಗೆ ಅಷ್ಟು ಲಘುವಾಗಿ ಮಾತಾಡುವುದು ತರವಲ್ಲ..."

"ಆಯ್ತು, ಬಾಯ್ಮುಚ್ಚಿದೆ...."

"ಓಹೋಹೋ ...ಏನು ಆಂಜನೇಯ ಮುಸುಡು ! ನೋಡೋಣ...."

"ಶ್ಶ್ಯಾ...." —ಗೋರಾ.

● ●

ದ. ಕ. ಜಿಲ್ಲಾ ಯುವ (ಸಂ) ಕಾಂಗ್ರೆಸ್ ಸಭೆ

ರಾಜ್ಯಸಭಾ ಸದಸ್ಯ ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ಯುವಕ (ಸಂ) ಕಾಂಗ್ರೆಸ್ ಸಭೆಯೊಂದು ಜರಗಿತು.

ಡಾ| ಆಳ್ವರು ನಮ್ಮ ದೇಶದ ಶಕ್ತಿ ಉಳಿಯಬೇಕಾದರೆ ಜನತಾ ಪ್ರತಿನಿಧಿಗಳು ಹಳ್ಳಿಗಳಿಂದ ಆರಿಸಿಬರಬೇಕೆಂದರು. ತಾಲೂಕು ಯುವಕ ಕಾಂಗ್ರೆಸಿನ ಸಂಚಾಲಕ ಶ್ರೀ ಈಶ್ವರ ಉಳ್ಳಾಲ್‌ರವರು ಈಗಿನ ಬೆಲ್ಟ್ ಏರಿಯಾದಲ್ಲಿ ರೇಶನಿಂಗ್ ಪದ್ಧತಿ ಜಾರಿ ಮಾಡಬೇಕು, ಇಲ್ಲವಾದರೆ ಬೆಲ್ಟ್ ಏರಿಯಾ ರದ್ದುಗೊಳಿಸಬೇಕೆಂದರು.

ಜಿಲ್ಲಾ ಕನ್ವೀನರ್ ಶ್ರೀ ಎಂ. ಸಂಜೀವರವರು ಮಾತಾಡಿದ ಬಳಿಕ ನಗರ ಸಂಚಾಲಕ ಶ್ರೀ ಪ್ರೇಂಕುಮಾರ್ ಅವರು ವಂದಿಸಿದರು.

In the Court of the IInd Addl. Munsiff at Puttur S. K.

O. S. 138/72

K. R. Balakrishna —Plaintiff

K. R. Mahalinga & others- —Defendants

Suit Notice to D 2.

1. A. Ramanna Gowda, Sampaje village, Sullia Taluk. Post SAMPAJE, S. K.

Please take notice that the above Suit stands posted to 31-7-72 for your appearance and you are hereby directed to appear before the Court on the said day at 11-00 A. M. in person or through an advocate failing which the case will be proceed in your absence.

(By order of Court)

U. P. Shivarama
B. A., B. L.,
Adv. for Plaintiff

Phone: 526 **NAVAYUGA** P. B. No. 22

ILLUSTRATED KANNADA WEEKLY,
UDIPI-1, S. K.

This August, we celebrate 25 years of our independent existence – the Silver Jubilee – and the special, we propose to bring forth, shall take note of:

1) The Silver Jubilee of Independence.

2) The achievements of Independent India in the various spheres of life, and coupled with these, we add our sweet memories of the Golden Jubilee Celebrations of your Navayuga, during May, 1972.

All these are bound to make the Independence Issue a useful brochure encompassing all shades of views, opinions and ideals of our people.

As such, this is going to be a very good medium to publicise your ware and we assure, you that it is going to reach the farthest nook and corners of the State.

Please do contribute your mite in encouraging this venture of ours, and you find the Advertisement Tariff below. More we add to this may we feel, be superfluous to our generous contributors and advertiser-benefactors.

Kindly send in your advertisement material on or before August 5th 1972.

ADVERTISEMENT RATES

Full Page	... Rs. 200/-	Back Cover Page	...Rs. 500/-
Half Page	... Rs. 125/-	Inside 1st Cover Page	Rs. 400/-
Quarter Page	... Rs. 65/-	Inside 2nd Cover Page	Rs. 300/-

MECHANICAL DATA

Paper Size ... 15" × 10" (37 . 5 Cm. × 25 Cm.)   Size of type page...13" × 8" (32 . 5 Cm. × 20 Cm.)

Date of Publication: 15—8—1972

ಕವಲುದಾರಿ–ಕೆಂಪುದೀಪ

ಕ್ರಾಂತಿಕಾರಿ ಪಠ್ಯ ಪುಸ್ತಕಕರ್ತರು

ರಾಷ್ಟ್ರೀಕೃತ ಪಠ್ಯಪುಸ್ತಕಗಳಲ್ಲಿನ ಹುಳುಕುಗಳನ್ನು ಎತ್ತಿ ತೋರಿಸುವುದೊಂದು ಫ್ಯಾಷನ್.

ಹಾಗೆ ನೋಡಿದರೆ, ಪುಸ್ತಕಗಳೆಂದೇನು, ಪ್ರತಿಯೊಂದೂ 'ರಾಷ್ಟ್ರೀಯ' ವಸ್ತುವಿನ ಮೇಲೆ ಮುಕ್ತಕಂಠದಿಂದ ಟೀಕಿಸುವ ಅಧಿಕಾರ ಪ್ರತಿ ರಾಷ್ಟ್ರೀಯನಿಗೂ ಇದೆ.

ಮೂರು ವರ್ಷಗಳಿಗೆ ಹಿಂದೆ ದಕ್ಷತೆ–ಸೇವೆಗೆ ಪರ್ಯಾಯನಾಮವಾಗಿದ್ದ ಬ್ಯಾಂಕುಗಳು ರಾಷ್ಟ್ರೀಕರಣಗೊಂಡ ಮರುದಿನವೇ ಟೀಕಾಸ್ತ್ರಗಳಿಗೆ ಗುರಿಯಾಗಿಲ್ಲವೇನು?

ಆಡಿಟ್ ವರದಿಗಳು ರಾಷ್ಟ್ರೀಕೃತ ಉದ್ಯಮಾದಿಗಳ ಮೇಲೆ ಉಗ್ರ ಟೀಕೆ ಮಾಡುವುದಿಲ್ಲವೇನು?

ಹಾಗೆಂದು ಹೇಳುವುದಾದರೆ, ಟೀಕೆ ಎಲ್ಲವುಗಳಿಗೂ ಅನ್ವಯಿಸುತ್ತವೆ. ಹತ್ತು ಮಕ್ಕಳ ತಾಯಿ ಹಾದಿಯಲ್ಲಿ ಬಿದ್ದು ಸಾಯಿಯೆನ್ನುವಂತೆ "ರಾಷ್ಟ್ರೀಕೃತ ಸೊತ್ತು"ಗಳ ಪಾಡು ನಾಯಿಪಾಡಾಗಿದೆ, ಎಲ್ಲರೂ ಕಲ್ಲೆಸೆಯುವವರೇ.

ಸಮಾಜ ವಿಜ್ಞಾನದ ಪುಸ್ತಕವೊಂದರಲ್ಲಿ ಖಟಮಂಡು ಟಿಬೇಟಿನ ರಾಜಧಾನಿಯೆಂದು ಬರೆಯಲಾಗಿದೆಯಂತೆ.

ಇದು ಕನ್ನಡ ಭಾಷೆಯಲ್ಲಿರುವುದರಿಂದ ನೇಪಾಳಕ್ಕಾಗಲೀ ಕೆಂಪು ಚೀನಕ್ಕಾಗಲಿ ತಿಳಿಯುವುದಿಲ್ಲವೆಂದು ಸಮಾಧಾನಪಡುವಂತಿಲ್ಲ.

ನೇಪಾಳದ ಕತೆ ಹಾಗಿರಲಿ, ಕೆಂಪುಚೀನೀಯರ ಹಸ್ತಕರು ಕರ್ನಾಟಕದಲ್ಲೂ ಕೆಲವರಾದರೂ ಇದ್ದಾರೆನ್ನುವುದು ಸತ್ಯವಿದೂರವಲ್ಲದ್ದರಿಂದ ಅವರು ಈ "ಸಂಶೋಧನೆಯ ಫಲ"ವನ್ನು ತಮ್ಮ "ಪ್ರಭು"ಗಳಿಗೆ ಮನಂಬುಗಿಸುವುದಿಲ್ಲವೆಂದೇನೂ ಗ್ಯಾರಂಟಿಯಿಲ್ಲ.

ಆಗ, ಟಿಬೇಟನ್ನು ಲಾಮಾಗಳಿಂದ ವಿಮೋಚನೆಗೊಳಿಸಿದ ಚೀನಾ ಅವರ ರಾಜಧಾನಿಯಾದ ಖಟಮಂಡುವಿನ್ನೂ ನೇಪಾಳದ ಆಕ್ರಮಣಕ್ಕೆ ಗುರಿಯಾಗಿರುವುದನ್ನು ಕಂಡೂ ಕಂಡೂ ಸುಮ್ಮನಿರುವುದು ಹೇಗೆ ಸಾಧ್ಯವಾದೀತು?

'ಆದಕ್ಕೆಂದೇ ಈ "ಹೊಸ ಸಂಶೋಧಕ"ನನ್ನು ಪೀಕಿಂಗಿಗೆ ಕರೆಸಿ ಪಂಜರದ ಪಕ್ಷಿಯಂತೆ ಆವನನ್ನು ಗೌರವಿಸಲೂ ಬಹುದು.

ಕೆಲವರ್ಷಗಳಿಗೆ ಹಿಂದೆ ಒಂದು ಅಪಠಿತ ಪುಸ್ತಕವಲ್ಲಿ ಗಂಡನನ್ನು ವಶೀಕರಿಸುವ ವಿಧಾನವನ್ನು ವಿವರಿಸುವ ಕೆಲವು ಮಾತುಗಳ ಬಗೆಗೆ ವಿವಾದವೆದ್ದಿತು.

ಆ ಮಾತುಗಳಿಗಿಂತ ಈ ಸಂಶೋಧನೆಗಳೇ ಹೀನವೆನ್ನೋಣವೆ?

ರಾಷ್ಟ್ರೀಕೃತ ಪಠ್ಯಪುಸ್ತಕಗಳು ಆಯ್ಕೆಯಾದ ವಿದ್ವಾಂಸರಿಂದಲೇ ಬರೆಯಲ್ಪಡುತ್ತವೆಯೋ ಅಥವಾ ಅವರ ಹೆಸರಿನಲ್ಲಿ ಅವರು ಮಕ್ಕಳು—ಮರಿಗಳು ಶ್ರೀಮತಿಯವರು ಬರೆಯುತ್ತಾರೆಯೋ ಎಂದು ಸಂದೇಹ ನಿಮಗೆ ಬರಬಹುದು.

ಬರಬೇಕಾದದ್ದೇ. ಸಚಿವ ಸಂಪುಟ ತಯಾರಿಸಿದ ಭಾಷಣ ರಾಜ್ಯಪಾಲರ ಭಾಷಣವಾಗುದಿಲ್ಲವೆ. ಹಾಗೆ ರಾಣಿಸಾಹೇಬರೋ ಯುವರಾಜ—ಯುವರಾಣಿ ಸಾಹೇಬರೋ ಬರೆದರೂ, ಅದು ರಾಜಾಸಾಹೇಬರದ್ದೇ ಆಗಬಾರದೆಂದರೇನು?

ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ.

ಈ ಪುಸ್ತಕಗಳು ಚಲಾವಣೆಗೆ ಬಂದು ಒಂದೆರಡು ವರ್ಷಗಳಾದರೂ ಇದುವರೆಗೂ ಈ ಸಂಶೋಧನೆಗಳು ಬಹಿರಂಗವೇಕಾಗಲಿಲ್ಲವೆಂಬ ಸಂದೇಹ ಮತ್ತೊಂದು.

ಶಿಕ್ಷಕರು ಪಠ್ಯಪುಸ್ತಕಗಳನ್ನು ನೋಡದೆ ಪಾಠಪಟ್ಟಿಯನ್ನು ನೋಡಿ ಪಾಠ ಮಾಡಿಯಾರು; ಆದರೆ ಊರು ಹೊಡೆಯುವ ವಿದ್ಯಾರ್ಥಿಗಳು ಪಠ್ಯಪುಸ್ತಕವನ್ನೇ ಬಾಯಿಪಾಠ ಕಲಿತಾರು.

ಆದರೂ ಸಮಾಧಾನ. ಐ ಎ ಎಸ್ ಅಭ್ಯರ್ಥಿಗಳಂತೆ ಅಮೋಜನ್ನನ್ನು ಆಮೆಗಳ ಜನಕನೆಂದೋ ಉರಾಲನ್ನು ಸಿನಿಮಾ ನಟಿಯೆಂದೋ ಕಲಿತಿಲ್ಲ ತಾನೆ?

ಖಟಮಂಡು ರಾಜಧಾನಿಯಂತೂ ಹೌದು, ಅದು ಟಿಬೇಟಿನದ್ದಾದರೇನು, ನೇಪಾಳದ್ದಾದರೇನು? ಫಿಫ್ಟೀಪರ್ಸೆಂಟ್ ಕರೆಕ್ಟ್ ಆದೆ. ಆದ್ದರಿಂದ ಅಷ್ಟು ಮಾರ್ಕು ನಿರ್ವಂಚನೆಯಿಂದ ಹಾಕಿದಲ್ಲಿ ಸೆಕೆಂಡ್ ಕ್ಲಾಸ್ ಪಾಸು ತಾನೆ?

ಇದೇ ಮಾದರಿ ಆಂಧ್ರದ ಪುಸ್ತಕಗಳಲ್ಲೂ ಇದೆಯಂತೆ.

ಬ್ಯಾಂಕೊಂದರಿಂದ ಆರರ ಸಲೆಯಲ್ಲಿ ಸಾಲಪಡೆದು ಅದನ್ನು ಹೆಚ್ಚು ಬಡ್ಡಿಗೆ ಕೊಡುವ ಪಾಠವನ್ನು ಗಣಿತ ಕಲಿಸುತ್ತದಂತೆ.

ಸೇಕಡಾ ಆರರ ಸಲಿಯಲ್ಲಿ ಸಾಲನೀಡುವ ಬ್ಯಾಂಕಿನ ಹೆಸರಾದರೂ ಹೇಳುತ್ತಿದ್ದರೆ ಸಾಲೇಚ್ಛುಗಳೆಲ್ಲರೂ ಅಲ್ಲಿ ಘೇರಾಯಿಸಿ ಬಿಡುತಿದ್ದರೋ ಏನೋ! ಪಾಪ, ಸದ್ಯ ಬ್ಯಾಂಕು ಬದುಕಿಕೊಂಡಿತು.

ಹಾಲಿಗೆ ನೀರು ಬೆರೆಸಿ ಮಾರುವ ಮತ್ತೊಂದು ನೀತಿಪಾಠ ಅದೇ ಗಣಿತ ಪುಸ್ತಕದಲ್ಲಿದೆಯಂತೆ.

ಯಾರಾದರೂ ಏನನ್ನಾದರೂ ಕಲಿಸಬಹುದಾದ ಈ ಕಾಲದಲ್ಲಿ ಗಣಿತಾಧ್ಯಾಪಕರು ನೀತಿ ಪಾಠ ಮಾಡಬೇಕಾದಾಗ ಇಂತಹ ಆದರ್ಶ ಲೆಕ್ಕಗಳನ್ನು ಮಾಡಿಸಲೆಂದು ಅವಕಾಶ ನೀಡಿ ಗ್ರಂಥಕರ್ತರು ಉಪಕಾರ ಮಾಡಿದ್ದಾರೆಂದು ತೃಪ್ತಿ ಪಡುವುದನ್ನು ಬಿಟ್ಟು ಈ ರೀತಿ ಹಗರಣ ಮಾಡುವುದು ಸುತರಾಂ ಅನ್ಯಾಯವಾಗದೆ?

ಅಷ್ಟು ಮಾತ್ರವಲ್ಲದೆ ಈ ಸಂಗತಿಗಳನ್ನು ಟೀಕಿಸುವವರು ವಾಸ್ತವಿಕತೆಗಿಂತ ಆದರ್ಶದತ್ತ ಒಲಿದಿದ್ದಾರೆನ್ನ ಬೇಕಾಗುತ್ತದೆ. ಶ್ರೀಮತಿ ಗಾಂಧಿಯವರು ವಾಸ್ತವಿಕವಾದವನ್ನು ಎತ್ತಿ ಹಿಡಿದಂತೆ ಈ ಗ್ರಂಥಕರ್ತರೂ ಅದನ್ನು ಪುರಸ್ಕರಿಸಿದರೆ ಟೀಕಿಸುವುದು ತಪ್ಪಾದೀತು.

ಚೀನಾದ ಕಣ್ಣು ದಿಲ್ಲಿಯ ಮೇಲಿರುವಾಗ ಅದು ಖಟಮಂಡುವನ್ನು ದಾಟಿಯೇ ಬರಬೇಕು ತಾನೆ?

ಡೈರಿ ಹಾಲಲ್ಲೂ ನೀರಿನ ಪ್ರಮಾಣ ಅಧಿಕವಿರುವುದನ್ನು ಅಲ್ಲಗಳೆಯುವುದು ಹೇಗೆ ಸಾಧ್ಯ?

ಆದ್ದರಿಂದ, ಇದು ತನಕದ ಪಠ್ಯಪುಸ್ತಕ ರಚಕರಿಗೆ ಬಡಿದಿದ್ದ ಆದರ್ಶವಾದದ ಭೂತವನ್ನು ದೂರದಬ್ಬಿ, ತಳ್ಳಿ ಯಥಾರ್ಥವಾದದತ್ತ ಮೊದಲ ಹೆಜ್ಜೆಯಿಟ್ಟ ಈ ಕ್ರಾಂತಿಕಾರಿ ಲೇಖಕ ಬಳಗವನ್ನು ಅಭಿನಂದಿಸಬೇಕು.

ಇವರು ಇದೇ ರೀತಿ ಮುಂದಿನ ಪೀಳಿಗೆಗೆ ಜ್ಞಾನ—ವಿಜ್ಞಾನ ಬೋಧಿಸಿ ವಸುಧೈವ ಕುಟುಂಬಕವೆನ್ನುವ ಉದಾರ ಚರಿತರನ್ನಾಗಿ ರೂಪಿಸಲು ಇನ್ನೂ ಇನ್ನೂ ಪ್ರಯತ್ನಿಸಿ ಯಶಗಳಿಸ ಬೇಡವೇ?

••

ಏಕಲಿಪಿ—ಏಕಭಾಷೆ

ಪ್ರತ್ಯೇಕತೆಯ ಕಳೆಗೇಕೆ ಗೊಬ್ಬರ?

ಮೈಸೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಪ್ರೊ| ನಾಗಪ್ಪ ತನ್ನ ಜೀವನವನ್ನು ಹಿಂದಿಗಾಗಿ ಮೀಸಲಿಟ್ಟವರೆಂದರೆ ತಪ್ಪಾಗುತ್ತದೆ. ಅವರು ಕನ್ನಡ–ಹಿಂದಿ ಎರಡನ್ನೂ ಏಕಸಮವಾಗಿ ಅಪ್ಪಿಕೊಂಡವರು. ಅವರೀಗ ತಮ್ಮ ಉದ್ಯೋಗದಿಂದ ನಿವೃತ್ತರಾದರೂ ತಮ್ಮ ಸೇವೆಯನ್ನು ನಿಲ್ಲಿಸಲಿಲ್ಲ. ಅವರನ್ನು ಸನ್ಮಾನಿಸುವ ಸಭೆಯೊಂದು ಮೈಸೂರಿನಲ್ಲಿ ರಾಜ್ಯಪಾಲ ಮೋಹನಲಾಲ ಸುಖಾಡಿಯಾರ ಹಿರಿತನದಲ್ಲಿ ಸೇರಿತು.

ಈ ಸಭೆಯಲ್ಲಿ ರಾಜ್ಯಪಾಲರು ಮೂರು ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಿದರು. ದೇಶದಲ್ಲಿನ ಎಲ್ಲ ರಾಜ್ಯ(ಭಾಷೆ)ಗಳಿಗೂ ಹೊಂದಿಕೊಳ್ಳುವ ಒಂದೇ ಲಿಪಿಯನ್ನು ನಾವು ಕಂಡು ಕೊಳ್ಳಬೇಕೆಂಬುದೊಂದು. ಸೋವಿಯತ್ ದೇಶದಲ್ಲಿನ ಅರವತ್ತಕ್ಕೂ ಮಿಕ್ಕಿದ ಭಾಷೆಗಳಿಗೆಲ್ಲ ರೋಮನ್ ಲಿಪಿಯನ್ನು ಅಂಗೀಕರಿಸಲಾದ ಉದಾಹರಣೆ ನಮ್ಮ ಮುಂದಿದೆ. ಭಾಷೆ-ಲಿಪಿಗಳನ್ನು ಕಲಿಯಲು ವ್ಯಯವಾಗುತ್ತಿರುವ ಸಮಯವನ್ನು ಗಣನೆಗೆ ತೆಗೆದುಕೊಂಡರೆ, ಏಕಲಿಪಿಯ ಅಗತ್ಯ ಎದ್ದು ಕಾಣುತ್ತದೆ. ಪ್ರೊ| ಸುಜ್ಞ ರಾಮಪ್ಪನವರ ಕನ್ನಡ–ತೆಲುಗುಗಳಿಗೆ ಸಮಾನ ಲಿಪಿಯಿರಬೇಕೆಂಬ ವಾದವೇ ಸಾಕಷ್ಟು ವಾದ-ವಿವಾದಗಳಿಗೆ ಕಾರಣವಾಗಿರುವಾಗ, ದೇಶಕ್ಕೊಂದು ಲಿಪಿಯ ವಾದ ಈ ಸನ್ನಿವೇಶದಲ್ಲಿ ಪುರಸ್ಕೃತವಾಗುವುದು ಕಷ್ಟಸಾಧ್ಯ.

ದೇಶಕ್ಕೊಂದು ಸಂಪರ್ಕ ಭಾಷೆಬೇಕೆಂಬ ಅವರ ಎರಡನೆಯ ಅಭಿಪ್ರಾಯ ಅತ್ಯಂತ ಹಳೆಯದು. ಈ ಸಂಪರ್ಕ ಭಾಷೆ ಇಂಗ್ಲಿಷ್ ಆಗಿರಬೇಕೇ ಹಿಂದೀ ಆಗಿರಬೇಕೇ ಎಂಬ ಗೊಂದಲದಲ್ಲಿ ಹಿಂದಿಯೊಡನೆ ಇಂಗ್ಲಿಷೂ ಸಂಪರ್ಕ ಭಾಷೆಯಾಗಿ ಮುಂದುವರಿದು ಬಂದಿದೆ. ನಾನಾ ಕಾರಣಗಳಿಂದ ಈ ಸ್ಥಾನದಲ್ಲಿ ಯಾವುದಾದರೊಂದನ್ನೇ ಉಳಿಸಿಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ.

ರಾಷ್ಟ್ರಾದ್ಯಂತ ಹಿಂದಿ ಭಾಷೆಯ ಪ್ರಚಾರವಾಗಬೇಕೆಂಬ ಅಹಿಂದೀ ಪ್ರದೇಶದ ಜನರ ಮನಸ್ಸನ್ನು ಒಲಿಸಿಕೊಂಡು ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬಹುದು ಎಂಬ ಅವರ ವಿಚಾರದಲ್ಲೂ ಹೊಸತೇನೂ ಇರುವುದಿಲ್ಲ. ಉತ್ತರದವರು ದ

(ಎಂಟನೇ ಪುಟ ನೋಡಿರಿ)

ಅರವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಖಾಸಗಿ ಮೆಡಿಕಲ್ ಕಾಲೇಜುಗಳು

ಸರಕಾರಿ ನಿಲುಮೆಯ ಉದ್ದೇಶವೇನು?

ನಮ್ಮ ರಾಜ್ಯದಲ್ಲಿನ ಖಾಸಗಿ ಮೆಡಿಕಲ್ ಕಾಲೇಜುಗಳ ಮೇಲೆ ಸರಕಾರದ ವಕ್ರದೃಷ್ಟಿ ಹಲವು ವರ್ಷಗಳಿಂದಲೂ ಇದೆ. ಇಂದಿನ ಪರಿಸ್ಥಿತಿ ಅಂದು ಇರುತ್ತಿದ್ದರೆ; ಪ್ರಾಯಃ ಈ ಕಾಲೇಜುಗಳು ರೂಪುಗೊಳ್ಳುತ್ತಿರಲಿಲ್ಲವೇನೋ. ಅಂದು ಮತ್ತು ಇಂದುಗಳ ನಡುವೆ ಆಕಾಶ-ಪಾತಾಳಗಳ ಅಂತರವಿದೆ. ಅಂದು ಮೆಡಿಕಲ್ ಕಾಲೇಜುಗಳು ನಮಗೆ ಬೇಕಾಗಿದ್ದವು; ಪ್ರಾಯಃ ಇಂದು ಅವು ಬೇಡವಾಗಿವೆಯೋ?

ಈ ಖಾಸಗಿ ಕಾಲೇಜುಗಳ ಮೇಲೆ ಇರುವ ಆರೋಪವೆಂದರೆ ಅವು ವಿಪರೀತವಾದ ಕ್ಯಾಪಿಟೇಶನ್ ಫೀ ವಸೂಲುಮಾಡುತ್ತಿವೆಯೆಂಬುದು. ಸರಕಾರ ಹಲವು ವರ್ಷಗಳಿಂದಲೂ ತನ್ನ ಚುಂಚನ್ನು ಈ ಕಾಲೇಜುಗಳೊಳಗೆ ಪ್ರವೇಶಿಸುತ್ತ ಇಂದು ಸಂಪೂರ್ಣ ಅಧಿಕಾರ ತನಗೆ ಬೇಕು ಎಂಬ ಧಾಟಿಯಲ್ಲಿ ಮಾತನಾಡುತ್ತಿದೆ.

ಖಾಸಗಿ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿಯಲ್ಲಿ ಏಳು ಜನ ಸದಸ್ಯರಿರಬೇಕು; ಇವರಲ್ಲಿ ನಾಲ್ವರು ಸರಕಾರದ ಪ್ರತಿನಿಧಿಯಿರಬೇಕು. ಮಂಡಳಿಯ ಅಧ್ಯಕ್ಷತೆ ಸರಕಾರ ನೇಮಿಸಿದ ಸದಸ್ಯನಿಗೆ ದೊರೆಯಬೇಕು; ಇರುವ ಸೀಟುಗಳಲ್ಲಿ ಸೇಕಡಾ ಐವತ್ತರಷ್ಟನ್ನು ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೇ ಮೀಸಲಿಡಬೇಕು; ಇವರಿಂದ ಐದುಸಾವಿರಕ್ಕೆ ಮಿಕ್ಕಿದ ಕ್ಯಾಪಿಟೇಶನ್ ಫೀ ವಸೂಲು ಮಾಡಬಾರದು. ಸೇಕಡಾ ಹತ್ತರಷ್ಟು ಸೀಟುಗಳನ್ನು ಪರಿಶಿಷ್ಟ ವರ್ಗದ ಹಾಗೂ ಗುಡ್ಡಗಾಡು ಜನಾಂಗಗಳಿಗೆ ಉಚಿತವಾಗಿ ಒದಗಿಸಬೇಕು —ಇದು ಸರಕಾರ ಹೇರಿದ ನಿರ್ಬಂಧ.

ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಸರಕಾರದಿಂದ ಆಸ್ಪತ್ರೆಯ ಸೌಲಭ್ಯವೊಂದನ್ನು ಬಿಟ್ಟರೆ ದೊರೆಯುವ ಆರ್ಥಿಕ ನೆರವು ಇಲ್ಲವೆಂದೇ ಹೇಳಬೇಕು. ಮಣಿಪಾಲದ ಕಾಲೇಜಿಗೆ ಸರಕಾರದಿಂದ ಒಂದು ಪೈಸೆಯಷ್ಟೂ ನೆರವು ದೊರೆಯುವುದಿಲ್ಲವೆಂದು ತಿಳಿದುಬರುತ್ತದೆ. ಅತ್ಯಧಿಕ ವೆಚ್ಚದಾಯಕವಾದ ವೈದ್ಯಕೀಯ ಕಾಲೇಜುಗಳನ್ನು ಲೋಪದೋಷಗಳಿಗೆ ಆಸ್ಪದ ನೀಡದಂತೆ ನಡೆಸಲು ಸರಕಾರವೇ ಅಸಮರ್ಥವಾಗಿರುವಾಗ ಸಮರ್ಪಕವಾಗಿ ನಡೆಯುತ್ತಿರುವ ಮೆಡಿಕಲ್ ಕಾಲೇಜುಗಳ ಮೇಲೆ ಸರಕಾರದ ವಕ್ರದೃಷ್ಟಿಯೇಕೆ?

ರಾಜ್ಯಸರಕಾರವು ಹೇರಬಯಸಿದ್ದ ಹಲ ನಿಬಂಧನೆಗಳಿಗೆ ಕಾಲೇಜುಗಳ ಆಡಳಿತ ವರ್ಗ ಸಮ್ಮತಿಸಿದೆ. ಆದರೆ, ಹಣದ ಮೇಲೆಯೂ ಆಡಳಿತದ ಮೇಲೆಯೂ ನಿರ್ಬಂಧ ಹೇರಿ ಖಾಸಗಿ ಆಡಳಿತೆಯನ್ನು ನಿಷ್ಕ್ರಿಯಗೊಳಿಸುವ ಸರಕಾರದ ಆಕಾಂಕ್ಷೆ ಖಂಡನೀಯವಾದದ್ದು. ಇದುವರೆಗೆ ಕಾಲೇಜುಗಳನ್ನು ಕಟ್ಟಿ ಬೆಳೆಸಲು ಪ್ರಾಣ ಪಣವಿಟ್ಟು ದುಡಿದ ಖಾಸಗಿ ವ್ಯಕ್ತಿಗಳನ್ನು ಓಡಿಸಿ, ಅವು ಗಳಿಸುವ ಕೀರ್ತಿಯಲ್ಲಿ ಸರಕಾರ ಪಾಲುಗೊಳ್ಳ ಬಯಸಿದಂತಿದೆ. ಆಗಲಾದರೂ ಸರಕಾರ ಕೊರತೆಯನ್ನು ತುಂಬಿಕೊಡಲು ಸಹಾಯಧನ ನೀಡುವ ಭರವಸೆಯಿಲ್ಲದಾಗ, ಕಾಲೇಜಿನ ವೆಚ್ಚದ ಬಾಯನ್ನು ಎಲ್ಲಿಂದ ಕೂಡಿಸಬೇಕು?

ಖಾಸಗಿ ಮೆಡಿಕಲ್ ಕಾಲೇಜುಗಳು ವಿದ್ಯಾರ್ಥಿಗಳಿಂದಲೋ ಅವರ ಹೆತ್ತವರಿಂದಲೋ ಸಹಾಯಧನ ವಸೂಲು ಮಾಡುವ ಪರಿಪಾಠ ಹಳೆಯದು. ಸತ್ಯ ಹೇಳುವುದಾದರೆ, ಈ ಕಾಲೇಜುಗಳು ಸ್ಥಾಪನೆಗೊಂಡದ್ದೇ ಹಣ ತೆರಬಲ್ಲವರಿಗೆ ವೈದ್ಯಕೀಯ ಕಲಿಸಲು. ದುಡ್ಡಿಲ್ಲದವರಿಗೆ ಸರಕಾರ ನಡೆಸುವ ಮೆಡಿಕಲ್ ಕಾಲೇಜುಗಳಿಲ್ಲವೆ? ಈ ಕಾಲಮಾನಕ್ಕನುಸಾರವಾಗಿ ತಮಗೆ ಅನುಮತಿ ನೀಡಿದ ಸರಕಾರಕ್ಕೆ, ಮಾನ್ಯತೆ ನೀಡಿದ ವಿಶ್ವವಿದ್ಯಾಲಯಕ್ಕೆ ಕೆಲವು ಸ್ಥಾನ ತುಂಬಿಸುವ ಅಧಿಕಾರ ಒಪ್ಪಿಸಿವೆ. ರಾಜ್ಯದ, ಪರಿಶಿಷ್ಟವರ್ಗ—ಜಾತಿಗಳ ಅಭ್ಯರ್ಥಿಗಳಿಗೇ ಅವು ಪ್ರಾಶಸ್ತ್ಯ ನೀಡಲು ಯಾರ ಆತಂಕವೂ ಇಲ್ಲ.

ಎಳ್ಳೊಂದನ್ನು ನೀಡಿ ಇಡಿಯ ಎಳ್ಳುಂಡೆಯನ್ನೇ ನುಂಗುವ ಸರಕಾರದ ಇರಾದೆ ಖಾಸಗೀ ವಲಯವನ್ನು ಸಂದೇಹಕ್ಕೆ ಗುರಿಮಾಡಿದೆ. ಬೀಜಬಿತ್ತಿ, ಗಿಡವನ್ನು ಸಾಕಿ ಫಲನೀಡಲು ಸಿದ್ಧವಾಗುವಾಗ ಅದರಲ್ಲಿ ಪಾಲು ಬೇಡುವ ಸರಕಾರದ ನೀತಿಯಿಂದ ಆಘಾತವಾಗುವುದು ಸಹಜ. ಖಾಸಗಿ ಆಡಳಿತ ತನ್ನೆಲ್ಲ ಅಧಿಕಾರವನ್ನೂ ಸರಕಾರಕ್ಕೆ ಒಪ್ಪಿಸಿಕೊಟ್ಟು ಕೈಕಟ್ಟಿ ಕುಳಿತಿರುವುದಾದರೂ ಯಾವ ಭೂಷಣಕ್ಕೆ? ಒಂದೋ ಸರಕಾರ ಇವನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳಬೇಕು; ಅಥವಾ ತಾನು ಮಾಡುತ್ತಿರುವ ಅಲ್ಪ ಸಹಾಯಕ್ಕೆ ಯಥಾಯೋಗ್ಯ ಪ್ರತಿಫಲ ಪಡೆದು ತೃಪ್ತವಾಗಬೇಕು.

ಪರರಾಜ್ಯದ, ವಿದೇಶದ ವಿದ್ಯಾರ್ಥಿಗಳು ನಮ್ಮ ರಾಜ್ಯಕ್ಕೆ ಬಂದು ಅಧ್ಯಯನ ಮಾಡುವೆಂದರೆ ಸಣ್ಣ ವಿಷಯವಲ್ಲ; ಅವರು ಇಲ್ಲಿ ಸುರಿಯುವ ಹಣದ ಮೊತ್ತವೂ ಅಲ್ಪವಲ್ಲ, ಮುಖ್ಯವಾಗಿ ಅಷ್ಟು ಖರ್ಚು ಮಾಡಬಲ್ಲವರೇ ಬರುವುದರಿಂದ, ಅವರೇನೂ ತಪ್ಪು ತಿಳಿದುಕೊಳ್ಳುವ ಪ್ರಮೇಯವೂ ಇಲ್ಲ.

ಸರಕಾರ ಒಂದು ಕೆಲಸ ಮಾಡಬಹುದು. ಈ ಕಾಲೇಜುಗಳು ಅಕ್ರಮ ನಡೆಸದಂತೆ ತಾವು ಪಡೆದ ಕ್ಯಾಪಿಟೇಶನ್ ಫೀ ಮತ್ತಿತರ ಹಣಕಾಸಿಗೆ ಸಂಬಂಧಿಸಿದಂತೆ ಸಮರ್ಪಕವಾದ ಲೆಕ್ಕಪತ್ರಗಳನ್ನಿಡುವಂತೆ ವಿಧಿಸ ಬಹುದು. ಆದರೆ ಸರಕಾರದಿಂದ ಪೈಸೆಯಷ್ಟೂ ಸಹಾಯ ಪಡೆಯದಿರುವವರ ಲೆಕ್ಕಪತ್ರಗಳು ಸರಕಾರಕ್ಕಾದರೂ ಏಕೆ?

ಸರಕಾರದ ವಕ್ರದೃಷ್ಟಿಗೆ ಶೈಕ್ಷಣಿಕ ಕಾರಣಗಳಿಗಿಂತ ರಾಜ್ಯಕೀಯ ಕಾರಣಗಳೇ ಪ್ರೇರಕವಾಗಿದೆಯೆಂಬುದು ನಿಸ್ಸಂಶಯ. ಸರಕಾರಿ ಕಾಲೇಜುಗಳಿಗಿಂತ ಉತ್ತಮವಾಗಿ ನಡೆದು ಬರುತ್ತಿರುವ ಖಾಸಗಿ ಕಾಲೇಜುಗಳನ್ನು ಪೂರ್ವಗ್ರಹ ದೃಷ್ಟಿಯಿಂದ ನೋಡುವುದನ್ನು ಸರಕಾರ ಬಿಟ್ಟು ಬಿಡಬೇಕು. ಕಾಲಮಾನಕ್ಕೆ ಹೊಂದಿ ಕೊಳ್ಳಲು ಇವುಗಳ ಆಡಳಿತ ವರ್ಗಗಳು ಎಂದೂ ಹಿಂಜರಿದಿಲ್ಲ. ಸರಕಾರದ ನೀತಿಯನ್ನು ತಮ್ಮ ಶಕ್ತಿಗನುಸಾರವಾಗಿ ಅನುಷ್ಠಾನಿಸಲು ಇವು ಸದಾ ಸಿದ್ಧವಾಗಿವೆ. ಆದರೆ, ನಿಷ್ಕ್ರಿಯತೆಗೆ ಅವು ಸಿದ್ಧವಾಗಬೇಕೆಂದು ಬಯಸುವುದು ಅವಾಸ್ತವವಾಗುತ್ತದೆ.

●●

ನಕ್ಷಲೀಯರ ದಮನ

ಪ್ರಜಾಸತ್ತಾತ್ಮಕ ಕ್ರಾಂತಿಗೆ ನಾಂದಿ

ಕ್ರಾಂತಿಯ ಉದ್ದೇಶ ಕಮ್ಯುನಿಸ್ಟರದ್ದು. ಇವರಲ್ಲೂ ಸೌಮ್ಯದಲ್ಲಿ ತೀವ್ರಕ್ರಾಂತಿ—ತೀವ್ರಕ್ರಾಂತಿಕಾರರು ಹುಟ್ಟಿಕೊಂಡು ಬಲ-ಎಡ ಪಂಗಡಗಳು ಜನ್ಮತಳೆದವು. ಬಲಪಂಥೀಯರು ಈಗ ಆಳುವ ಕಾಂಗ್ರೆಸ್ಸಿನೊಡನೆ ಸಂಪೂರ್ಣ ಸಹಕಾರ ಹೊಂದಿದ್ದಾರೆ; ಸದ್ಯ ತಮ್ಮ ಪ್ರತ್ಯೇಕ ಅಸ್ತಿತ್ವವನ್ನುಳಿಸಿಕೊಂಡಿರುವುದು ನಿಜವಾದರೂ ಒಂದು ದಿನ ಅವರಲ್ಲಿಯೇ ಸೇರಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಎಡ ಪಂಥೀಯರಿಂದಲೂ ತೀವ್ರವಾದಿಗಳೆನಿಸಿದ ಪಂಗಡವೊಂದು ಸುಮಾರು ನಾಲ್ಕು ವರ್ಷಗಳಿಗೆ ಮೊದಲು ಸಿಡಿದು ಬೇರೆಯಾಯಿತು. ಈ ತಂಡ ಭಾರತದಲ್ಲಿ ಕ್ರಾಂತಿ ನಡೆಸುವ ಉಗ್ರ ಸ್ವಪ್ನ ಕಾಣುತ್ತಿತ್ತು. ಈ ಕ್ರಾಂತಿಯು ಸಾಂಸದಿಕ ಪ್ರಜಾಸತ್ತೆಯಿಂದ ಸಾಧ್ಯವಿಲ್ಲವೆಂದು ಅದು ನಂಬಿತು. ಬಂಗಾಳದಲ್ಲಿ ಮೊದಲು ಹುಟ್ಟಿಕೊಂಡ ಈ ತಂಡ ನಕ್ಸಲಿನ "ನಕ್ಸಲಬಾರಿ" ಯಲ್ಲಿ ತನ್ನ ಚಟುವಟಿಕೆಗಳನ್ನು ಮೊತ್ತ ಮೊದಲಿಗೆ ಆರಂಭಿಸಿದ್ದರಿಂದ ಅವರಿಗೆ ನಕ್ಷಲೀಯರೆಂಬ ನಾಮಕರಣವಾಯಿತು. ಅವರ ಚಟುವಟಿಕೆಗಳು 'ನಕ್ಷಲೀಯ ಚಟುವಟಿಕೆ'ಗಳೆಂಬ ಹೆಸರು ಪಡೆದವು.

ಈ ನಕ್ಷಲೀಯ ತಂಡದ ಅಗ್ರಮಾನ್ಯ ನಾಯಕತ್ರಯರು ಶ್ರೀಗಳಾದ ಕಾನು ಸನ್ಯಾಲ್, ಅಶೀಮ್ ಚೌಧರಿ ಮತ್ತು ಶ್ರೀ ಚಾರು ಮುಜುಮದಾರರು. ಇವರ ಹಿಂದೆ ಕೆಲವು ಅನುಯಾಯಿಗಳಿದ್ದರೆಂಬುದೂ ಇವರ ಚಟುವಟಿಕೆಗಳು ಆಂಧ್ರ ಪ್ರದೇಶ ಮತ್ತು ಕೇರಳ ರಾಜ್ಯಗಳಿಗೂ ಹರಡಿತೆಂಬುದೂ ನಿಜ. ಹಿಂಸಾಚಾರ ಪ್ರಧಾನವಾದ ಇವರ ಚಟುವಟಿಕೆಗಳು ಮೂರು ರಾಜ್ಯಗಳಲ್ಲಿ ವಿತ್ತಜೀವಿತಗಳಿಗೆ ಅಪಾರ ಹಾನಿಯನ್ನುಂಟು ಮಾಡಿದವೆಂಬುದೂ ಸತ್ಯಕ್ಕೆ ದೂರವಲ್ಲ.

ಆದರೆ, ತಂಡದ ಹಿಂಸಾಚಾರಕ್ಕೆ, ಅದರ ನಿರೀಕ್ಷೆಯಷ್ಟು ಜನ ಬೆಂಬಲ ದೊರೆಯಲಿಲ್ಲ. ವಿವಿಧ ರಾಜ್ಯ ಸರಕಾರಗಳು ಈ ತಂಡವನ್ನು ನಾಮಾವಶೇಷ ಮಾಡಲು ಬಿಗುವಾದ ಕ್ರಮ ಕೈಕೊಂಡುದರಿಂದಲೂ ಭಾರತೀಯರಿಗೆ ಹಿಂಸಾತ್ಮಕ ಕ್ರಾಂತಿಯಲ್ಲಿ ನಂಬುಗೆಯಿಲ್ಲವಾದುದರಿಂದಲೂ ಇವರಿಗೆ ಯಶಸ್ಸು ಸಿಗಲಿಲ್ಲ. ಈರ್ವರು ನಾಯಕರು ಕಾನು ಸನ್ಯಾಲ್ ಮತ್ತು ಅಶೀಮ್ ಚೌಧರಿಯವರು ಕಳೆದ ವರ್ಷ ಸೆರೆ ಸಿಕ್ಕಿದ್ದರು. ಅದರ ಮೇಲೆ ನಕ್ಷಲೀಯರಿಗೆ ಸರಿಯಾದ ಉತ್ತೇಜನ, ಮಾರ್ಗದರ್ಶನ ನೀಡುವವರ ಕೊರತೆಯಿತ್ತು. ಆದರೂ ಮೂರನೆಯ ನಾಯಕ ಮುಜುಮದಾರರು ಭೂಗತರಾಗಿಯೇ ಕ್ರಾಂತಿ ಸಾಧನೆಯ ಪ್ರಯತ್ನ ನಡೆಸುತಿದ್ದರು. ಇದೀಗ ಅವರೂ ಸೆರೆ ಸಿಕ್ಕಿರುವುದರಿಂದ ನಕ್ಷಲೀಯರಿಗೆ ಹೃದಯಾಘಾತವಾಯಿತೆಂದೇ ಹೇಳಬಹುದು.

ಹತ್ತಿಯಂತಹ ಕೋಮಲ ವಸ್ತುವಾದರೂ ಒತ್ತಡಕ್ಕೀಡಾಗುವಾಗ ಕಠೋರವಾಗುತ್ತದೆ. ಶೋಷಣೆಯಿಂದ ನೊಂದ ಮನಸ್ಸು ಅದೇರೀತಿಯಾಗುತ್ತದೆ. ದೇಶದಲ್ಲಿ ಕಮ್ಯೂನಿಜಂ ಮನೋವೃತ್ತಿ ಬೆಳೆದಿರುವುದಾದರೆ, ಅದಕ್ಕೆ ಬಂಡವಳಿಕರ, ಭೂಮಾಲಿಕರ, ಅಧಿಕಾರಿ ಮೊದಲಾದವರ ಶೋಷಣ ಪ್ರವೃತ್ತಿಯೇ ಕಾರಣ. ಸೌಮ್ಯ ಕ್ರಾಂತಿ ವಿಫಲವಾದಲ್ಲಿ ತೀವ್ರಕ್ರಾಂತಿ ಅನಿವಾರ್ಯವೆನಿಸುತ್ತದೆ.

ಇದೀಗ ತೀವ್ರ ಸ್ವರೂಪದ ಭೂಮಿಧಾರಣೆಯೋ ಮೊದಲಾದ ಶೋಷಣ ವಿರೋಧಿ

ಸೇಫ್ ಡಿಪಾಜಿಟ್ ಲಾಕರ್

ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ

ESTD. 1906

ಕಾರ್ಪೊರೇಷನ್ ಬ್ಯಾಂಕ್ ಲಿಮಿಟೆಡ್

— ಭೂತಪೂರ್ವ —
(ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್)

ರಥಬೀದಿ, ಮಂಗಳೂರು — ಫೋನ್ ನಂ. 6057
ಕಂಕನಾಡಿ, ಮಂಗಳೂರು — ಫೋನ್ ನಂ. 7312
ಪುತ್ತೂರು, ಫೋನ್ ನಂ. 164

ಕೇರಳದ ಖಾಸಗಿ ಕಾಲೇಜುಗಳು –

ಸರಕಾರವನ್ನು ಉರುಳಿಸಲಾರವು

ಕೇರಳ ಸರಕಾರ ಈಗೊಂದು ದೊಡ್ಡ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ. ರಾಜ್ಯದ ಖಾಸಗಿ ಕಾಲೇಜುಗಳು ಅದಕ್ಕೆ ದೊಡ್ಡ ತಲೆಶೂಲೆಯಾಗಿದೆ. ತನ್ನ ಆದೇಶವನ್ನು ಧಿಕ್ಕರಿಸುತ್ತಿರುವ ಈ ಕಾಲೇಜುಗಳ ಮೇಲೆ ಯಾವ ಕ್ರಮ ಕೈಗೊಳ್ಳಬೇಕು?

ರಾಜ್ಯದಲ್ಲಿ ವಿದ್ಯಾಭ್ಯಾಸವನ್ನು ರಾಷ್ಟ್ರೀಕರಿಸುವ ಪ್ರಶ್ನೆಯಿಲ್ಲವೆಂದೂ ಖಾಸಗಿ ಕಾಲೇಜುಗಳ ಪ್ರಶ್ನೆಯಲ್ಲಿ 'ಅಲ್ಪ ಸಂಖ್ಯಾತ'ರ ಪ್ರಶ್ನೆ ಉದ್ಭವಿಸುವುದಿಲ್ಲವೆಂದೂ ರಾಜ್ಯದ ಕಂದಾಯ ಸಚಿವ ಶ್ರೀ ಬೇಬಿ ಜಾನ್ ಹೇಳಿದ್ದಾರೆ. ಖಾಸಗಿ ಕಾಲೇಜುಗಳ ಸಂಬಂಧದಲ್ಲಿ ಸರಕಾರದ ನಿರ್ಧಾರ ಅಚಲವಾದುದೆಂದೂ, ಅದು ಅದರಿಂದ ಹಿಂದೆ ಸರಿಯುವುದಿಲ್ಲವೆಂದೂ ಗೃಹಸಚಿವ ಶ್ರೀ ಕೆ. ಕರುಣಾಕರನ್ ನುಡಿದಿದ್ದಾರೆ. ಶ್ರೀ ಕರುಣಾಕರನ್ ಇನ್ನೂ ಒಂದು ಹೆಜ್ಜೆ ಮುಂದು ವರಿದು "ಸರಕಾರವು ಉರುಳಿದರೂ ಸರಿಯೇ, ನಾವು ಮಣಿಯಲಾರೆವು" ಎಂದು ದಿಟ್ಟತನದ ಮಾತಾಡಿದ್ದಾರೆ.

ಇಲ್ಲಿ ಸರಕಾರವು ಉರುಳುವ ಮಾತು ಬಂದಾಗ ನಮ್ಮ ಗಮನ ಗತಕಾಲದತ್ತ ಹಿಂದೆ ಹೋಗುತ್ತದೆ. ಆದಾಗ ಕೇರಳದಲ್ಲಿ ನಂಬೂದರಿಪಾದರ ಕಮ್ಯೂನಿಸ್ಟ್ ಸರಕಾರ ಅಧಿಕಾರದಲ್ಲಿತ್ತು. ಅದನ್ನು ಯಾವುದೇ ಪ್ರಕಾರದಿಂದ ಉರುಳಿಸಲು ಇತರ ರಾಜ್ಯಕೀಯ ಪಕ್ಷಗಳಿಗೆ ಸಾಧ್ಯವಾಗಲಿಲ್ಲ. ಕಾರಣಾಂತರಗಳಿಂದ ವಿದ್ಯಾಸಂಸ್ಥೆಗಳ ಒಡೆಯರು ಸರಕಾರದ ವಿರುದ್ಧ ಬಂಡೆದ್ದರು. ಆಗ ವಿವಿಧ ರಾಜಕೀಯ ಪಕ್ಷಗಳೂ ವಿಮೋಚನಾ ಸಮರದಲ್ಲಿ ತೊಡಗಿದುವು. ಕೇಂದ್ರ ಸರಕಾರ ನಡುವೆ ಕೈ ಹಾಕುವುದು ಅನಿವಾರ್ಯವಾಯ್ತು. ನ್ಯಾಯ ಮತ್ತು ಶಾಂತಿ ಪಾಲನೆಗೆ ರಾಜ್ಯ ಸರಕಾರ ತಪ್ಪಿದೆಯೆಂಬ ಕಾರಣದ ಮೇಲೆ ರಾಷ್ಟ್ರಪತಿಗಳು ಸರಕಾರವನ್ನು ವಜಾಮಾಡಿ, ಅಧಿಕಾರವನ್ನು ತಾನು ಹೊತ್ತುಕೊಂಡರು.

ಆ ವೇಳೆಗೆ ಇಂದು ಪ್ರಧಾನಿಯಾಗಿರುವ ಶ್ರೀಮತಿ ಇಂದಿರಾಗಾಂಧಿಯವರು ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು. ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳ ಒಡೆಯರು, ಮುಖ್ಯವಾಗಿ ಕ್ರಿಶ್ಚಿಯನ್ ಮತ್ತು ನಾಯರ್ ಸಂಸ್ಥೆಗಳವರು ಕಮ್ಯುನಿಜಂ ವಿರೋಧಿಯಾಗಿ ಕಾಂಗ್ರೆಸ್ ಪರವಾಗಿದ್ದರು.

ಆದರೆ, ಅಂದಿನ ರಾಜ್ಯಕೀಯ ಪರಿಸ್ಥಿತಿಯಿಂದುಳಿದಿಲ್ಲ. ಖಾಸಗಿ ಕಾಲೇಜುಗಳ ಮೇಲೆ ಹತೋಟಿ ಹಚ್ಚಿರುವ ಕ್ರೈಸ್ತರು–ಪಾದ್ರಿಗಳು, ನನ್‌ಗಳೂ ಸೇರಿದಂತೆ—ಪ್ರದರ್ಶನ–ಮೆರವಣಿಗೆಗಳು ನಡೆಯುತ್ತಿವೆಯಾದರೂ ಕೇರಳದ ಸರಕಾರವನ್ನು ಉರುಳಿಸುವ ಗುರಿಯಿಂದ ಇವು ಸಂಘಟಿತವಾದುವಲ್ಲ. ದೇಶದಲ್ಲಿ ಬೆಳೆದು ನಿಂತ ಆಳುವ ಕಾಂಗ್ರೆಸ್ಸೂ ಸೇರಿಕೊಂಡ ಸಂಯುಕ್ತ ರಂಗದ ಸರಕಾರವಲ್ಲಿರುವುದರಿಂದ ಆ ಸರಕಾರವನ್ನು ಉರುಳಿಸಲು ಕೇಂದ್ರವೂ ಒಪ್ಪುವುದಿಲ್ಲ. ಉಳಿದ ರಾಜ್ಯಕೀಯ ಪಕ್ಷಗಳು ಸಂಪೂರ್ಣ ನಿಸ್ತೇಜವಾಗಿರುವುದರಿಂದ ಈ ಚಳುವಳಿಗೆ ರಾಜ್ಯಕೀಯ ಬಣ್ಣವೂ ಗಾಢವಾಗಿ ಅಂಟಿಕೊಳ್ಳಲಾಗದು.

ಆದುದರಿಂದ ಖಾಸಗಿ ಕಾಲೇಜುಗಳ ಒಡೆಯರು ಹೂಡಿದ ಪ್ರದರ್ಶನದಿಂದ, ಮುಂದೆ ಕೈಕೊಳ್ಳುವ ಕ್ರಮಗಳಿಂದ ಕೇರಳದ ಸರಕಾರ ಉರುಳುವ ಮಾತು ಹರದಾರಿ ದೂರದ್ದು. ಅಲ್ಪ ಸಂಖ್ಯಾಕರ ಪ್ರಶ್ನೆಯೊಂದನ್ನು ಬಿಟ್ಟರೆ, ಅದು ಏಳುವುದಿಲ್ಲವೆಂಬ ವಾದ ಬೇರೆ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಭಂಗವಾಗುವುದೆಂಬುದೊಂದು ಆತಂಕ ಮಾತ್ರವಿದೆ. ಇದನ್ನೂ ದೂರ ಮಾಡಲು ವಿದ್ಯಾರ್ಥಿಗಳೇ ಪ್ರತಿ ಜಿಲ್ಲೆಯಲ್ಲೂ 'ಜನತಾ ಕಾಲೇಜುಗಳನ್ನು ಸ್ಥಾಪಿಸಲು ಮುಂದೆ ಬಂದಿದ್ದು ಅವರ ಪ್ರಯತ್ನ ಯಶಗಳಿಸಿದರೆ, ಈ ಆತಂಕವೂ ಬಹು ಮಟ್ಟಿಗೆ ದೂರವಾಗುವುದು. ಆಗ ಕಾಲೇಜುಗಳೊಡೆಯರಿಗೆ ಏನು ಲಾಭ ಬಂದೀತು?

ವಿದ್ಯಾಭ್ಯಾಸಕ್ಕೆ ಅಡ್ಡಿಯಾಗದಂತೆ ಕಾಲೇಜುಗಳನ್ನು ತೆರೆದು, ತಮ್ಮ ಸಮಸ್ಯೆಗಳನ್ನು ಮಾತುಕತೆಗಳ ಮೂಲಕ ಪರಿಹರಿಸುವುದು ಆಡಳಿತ ವರ್ಗಕ್ಕೆ ಒಪ್ಪುವ ಮಾತು.

●●

ಶಾಸನಗಳ ಮೇಲೆ ಶಾಸಕರ ಆಸಕ್ತಿ ಕೆರಳಿದೆ. ಸಮಾಜವಾದದ ಅನುಷ್ಠಾನ ಪ್ರಜಾಸತ್ತಾತ್ಮಕ ವಿಧಾನಗಳಿಂದಲೇ ಸಾಧ್ಯವಿದೆಯೆಂದು ಸಾಧಿಸುವ ಅಪೇಕ್ಷೆ ತೀವ್ರವಾಗಿದೆ. ನಕ್ಷಲೀಯರೂ ತಮ್ಮ ನಾಯಕರು ಬಂಧಿತರಾದುದರಿಂದ ಸೂಕ್ತ ಮಾರ್ಗದರ್ಶನ ಪಡೆಯದೆ ತತ್ತರಿಸ ತೊಡಗಿದ್ದಾರೆ. ಚೆಲ್ಲಾಪಿಲ್ಲಿಯಾದ ಇವರು ಮತ್ತೆ ಒಂದಾಗದಂತೆ ನೋಡಿಕೊಳ್ಳುವುದೂ ಪ್ರಜಾಸತ್ತಾತ್ಮಕ ವಿಧಾನದಲ್ಲೇ ಸಾಮಾಜಿಕ, ಆರ್ಥಿಕ ಕ್ರಾಂತಿ ಸಾಧಿಸುವುದೂ ಇದೀಗ ಸರಕಾರದಲ್ಲಿ ನಿಲುವೆಯಾಗಬೇಕು. ಇದರ ಆದು ಅಸಫಲವಾದರೆ, ನಕ್ಷಲೀಯರನ್ನೂ ಮೀರಬಲ್ಲ ಅಪಾಯಕಾರಿ ಚಳುವಳಿ ಆರಂಭವಾಗುವುದು ಅಸಂಭವವಲ್ಲ. ಹಸಿದ ಹೊಟ್ಟೆಗೆ ಮೊದಲಿಗೆ ಹಿಟ್ಟು ಬೀಳಬೇಕು; ಉಪದೇಶವಲ್ಲ, ಗುಂಡೂ ಅಲ್ಲ.

●●

ಸರ್ವಾಧಿಕಾರವನ್ನು ಸಹಿಸಲಾರೆವು

ಒಳರಾಜ್ಯಕೀಯದಿಂದ ತಮಿಳ್ನಾಡು ತತ್ತರಿಸುತ್ತಿರುವಾಗ, ಅದರ ದುರ್ಲಾಭ ಪಡೆಯುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟರು ಕಾಂಗ್ರೆಸು ಮಧುರೈಯಲ್ಲಿ ಕೂಡಿತು. ಅಲ್ಲಿ ಏಕಪಕ್ಷೀಯ ಸರ್ವಾಧಿಕಾರವನ್ನು ಎದುರಿಸುವಂತೆ ಪ್ರಜಾಪ್ರಭುತ್ವವಾದಿ ಎಡ ಪಕ್ಷಗಳಿಗೆ ಕರೆಕೊಡಲಾಯಿತು.

ಕರೆ ಕೊಟ್ಟವರಾರು? ಮಾರ್ಕ್ಸ್‌ವಾದಿ ಕಮ್ಯೂನಿಸ್ಟರು. ಕಮ್ಯೂನಿಸ್ಟ್ ಪಾರ್ಟಿಯು ಎರಡು ಮುಖವಾಡವನ್ನು ಧರಿಸಿತು—ಒಂದು ರಷ್ಯಾದ ಮುಖವಾಡವಾದಲ್ಲಿ; ಇನ್ನೊಂದು ಚೈನಾದ್ದು. ರಷ್ಯಾದ ಮುಖವಾಡ ಧರಿಸಿದವರು ಬಲ ಕಮ್ಯೂನಿಸ್ಟರು ಅಥವಾ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾಕ್ಕೆ ಸೇರಿದವರು. ಚೈನಾದ ಮುಖವಾಡ ಧರಿಸಿದವರು ಎಡ ಕಮ್ಯೂನಿಸ್ಟರು ಅಥವಾ ಕಮ್ಯೂನಿಸ್ಟ್ ಪಾರ್ಟಿ ಆಫ್ ಮಾರ್ಕ್ಸ್‌ಗೆ ಸೇರಿದವರು. ಮಾರ್ಕ್ಸ್‌ವಾದಿಗಳು ಮಾವೋನಿಗೆ ಜಯಕಾರ ಹಾಕಿದವರು. ಅವನ ದಾರಿಯೇ ಸರಿಯೆಂದವರು. ಇವೆರಡು ಸಾಲದುದಕ್ಕೆ ನಕ್ಷಲ್‌ವಾದಿಗಳು ತಲೆ ಎತ್ತಿದ ನಂತರ, ಮಾರ್ಕ್ಸಿಸ್ಟ್ ವಾದಿಗಳು ತಾವು ಚೈನಿಜರಾಗಳಲ್ಲವೆಂದು ಹೇಳಿಕೊಳ್ಳಲಾರಂಭಿಸಿದರು.

ಮಾರ್ಕ್ಸ್‌ವಾದಿಗಳು ಯಾವ ಬಣಕ್ಕೆ ಸೇರಿದವರೇ ಇರಲಿ, ಅವರು ಕಮ್ಯೂನಿಷ್ಟರೇ ಇದ್ದಾರೆ. ಕಮ್ಯೂನಿಷ್ಟ್ ರಾಷ್ಟ್ರಗಳಲ್ಲಿ ಎಲ್ಲೂ ಕಮ್ಯೂನಿಷ್ಟ್ ಪಕ್ಷವಲ್ಲದೆ ಬೇರಾವ ಪಕ್ಷವೂ ಇರುವುದಿಲ್ಲ. ಅಲ್ಲಿ ಪಕ್ಷ ಪ್ರಾರಂಭಿಸುವ ಪ್ರಸ್ತಾಪ ಹಾಗಿರಲಿ, ಪಾರ್ಟಿಯ ಅಭ್ಯರ್ಥಿಗೆ ಮತದಾನ ಮಾಡದಿದ್ದರೆ, ಅವನು ಆಪತ್ತನ್ನು ಆಹ್ವಾನಿಸಿಕೊಂಡಂತೆಯೇ ಸರಿ. ಯಾವ ಕಮ್ಯೂನಿಷ್ಟ್ ದೇಶವೂ ಇದಕ್ಕೆ ಅಪವಾದವಾಗಿರುವದಿಲ್ಲ. ಹಾಗಿರುವಾಗ ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ಸಿನ ಆಡಳಿತವನ್ನು ಏಕ ಪಕ್ಷೀಯ ಸರ್ವಾಧಿಕಾರವೆನ್ನುತ್ತಿದೆ! ಇಲ್ಲಿ ಕಾಂಗ್ರೆಸ್ಸಿನ ದಬ್ಬಾಳಿಕೆ ನಡೆಯುತ್ತಿದೆಯೆನ್ನುವದು ನಿಜವಾದರೂ ಅದನ್ನು ಟೀಕಿಸುವ ಹಕ್ಕಾದರೂ ಜನತೆಗಿದೆ. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಹಾಗೇನಾದರೂ ಆದರೆ ಮುಗಿಯಿತು.

ಶ್ರದ್ಧೇಯ ಗಿರಿಯವರು ರಾಷ್ಟ್ರಾಧ್ಯಕ್ಷರ ಚುನಾವಣೆಗೆ ನಿಂತಾಗ ಮಾರ್ಕ್ಸ್‌ವಾದಿ ಕಮ್ಯೂನಿಸ್ಟರು ಇಂದಿರಾಗಾಂಧಿಯವರೊಡನೆ ಸೇರಿಕೊಂಡದ್ದು ಮಾತ್ರವಲ್ಲ, ಅನಂತರವೂ, ಸಂಸದಿನಲ್ಲಿ ಹಲವಾರು ಬಾರಿ ಇಂದಿರಾ ಗಾಂಧಿಯವರನ್ನು ಪ್ರಗತಿಶೀಲರೆಂದು ಪ್ರಶಂಸಿಸಿದ್ದಾರೆ. ಈಗ ಅವರಿಗೆ ಇಂದಿರಾ ಸರಕಾರ ಸಹನೀಯ ಇರುವುದಿಲ್ಲ.

ಇವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವಾದಿ ಎಡ ಪಕ್ಷಗಳಾದರೂ ಯಾವುವು? ಹಳೆಯ ಅಂಗಿಯನ್ನು ಬಿಸಾಡಿ ಹೊಸ ಅಂಗಿಯನ್ನು ಧರಿಸುವಂತೆ ಅವರು ಮೈತ್ರಿ ನಡೆಸಿಕೊಳ್ಳುತಿದ್ದಾರೆ. ಕಮ್ಯೂನಿಸ್ಟರೆಂತೂ ಪ್ರಜಾಪ್ರಭುತ್ವವಾದಿಗಳಾಗಿರಲು ಸಾಧ್ಯವೇ ಇರುವದಿಲ್ಲ. ಜನತೆಯನ್ನು ಮರುಳು ಮಾಡಲು ಈ ಶಬ್ದಗುಚ್ಛವನ್ನುಪಯೋಗಿಸಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟರು ಜಾಣಾಕ್ಷತನದಿಂದ. ಬಂಗಾಲದಲ್ಲಿ ಅವರನ್ನು ಇಂದಿರಾಜೀ ಅಧಿಕಾರ ಗದ್ದುಗೆಯಿಂದ ಕೆಳಗಿಳಿಸಿರುವುದೇ ಅವರ ಮೇಲೆ ಕೆಂಡಕಾರಲು ಕಾರಣವಿದೆ. ಇದನ್ನರಿತಿರುವ ಜನತೆ ಕಮ್ಯೂನಿಸ್ಟರ ಕುತಂತ್ರಕ್ಕೆ ಬಲಿಯಾಗಲಾರರು.

ಅದರ ಸಮ್ಮೇಳನದ ಸಮಯ ವೇದಿಕೆಯಲ್ಲಿದ್ದದ್ದು ಲೆನಿನ್–ಸ್ಟೆಲಿನರ ಚಿತ್ರಗಳು. ಇವರು ಪ್ರಜಾಪ್ರಭುತ್ವವಾದಿಗಳೇನು? ಸರ್ವಾಧಿಕಾರಿಗಳ ಆರಾಧಕರು ಇಂದಿರಾಜಿಯವರ ಆಳ್ವಿಕೆಯನ್ನು ಸರ್ವಾಧಿಕಾರವೆಂದು ಅಪಹಾಸ್ಯ ಮಾಡುತ್ತಿದ್ದಾರೆ! ಕಮ್ಯೂನಿಸ್ಟರ ಸರ್ವಾಧಿಕಾರವನ್ನು ಜನತೆ ಸಹಿಸದು.

—ಶ್ರೀ ಶಿವಶಂಕರ

ಶಾಸಕರಾದ ನಾರಾಯಣ ನಾಯಕ್, ಸುಬ್ರಹ್ಮಣ್ಯ ಗೌಡರಿಗೆ ಸನ್ಮಾನ

ಬೆಳ್ತಂಗಡಿಯ ಸನ್ಮಾನ ಸಮಿತಿಯ ಆಶ್ರಯದಲ್ಲಿ ಸಮಾಜ ಮಂದಿರದಲ್ಲಿ ಸ್ಥಳೀಯ ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ಸದಸ್ಯರಾಗಿ ಆರಿಸಿ ಬಂದ ಶ್ರೀ ಕೆ. ಸುಬ್ರಹ್ಮಣ್ಯ ಗೌಡ, ಸ್ಥಳೀಯ ಸಂಸ್ಥೆಗಳ ಮತದಾರ ಕ್ಷೇತ್ರದಿಂದ ಮೈಸೂರು ವಿಧಾನ ಪರಿಷತ್ತಿಗೆ ಚುನಾಯಿತರಾದ ಶ್ರೀ ಬಿ. ನಾರಾಯಣನಾಯಕ್ ಇವರಿಬ್ಬರನ್ನು ತಾ 15ರಂದು ಮಾಜಿ ಶಾಸಕ ಶ್ರೀ ಎಸ್. ಧರ್ಮಸಾಮ್ರಾಜ್ಯರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು.

ಆರಂಭದಲ್ಲಿ ಸಮಿತಿಯ ಪರವಾಗಿ ಶ್ರೀ ಬಿ. ಎನ್. ಬಿಡೆಯವರು ಸ್ವಾಗತಿಸಿದರು. ಪ್ರೊ| ಪ್ರಭಾಕರ್, ಶ್ರೀ ಬಿ. ನರಸಿಂಹ ಭಟ್, ಶ್ರೀ ಬಾಲಕೃಷ್ಣ ಅತಳ್ಳೆ ಮತ್ತು ವಿಜಯ ಕುಮಾರ್ ಮೊದಲಾದವರು ಸಂದರ್ಭೋಚಿತ ಮಾತಾಡಿ ಶಾಸಕರನ್ನು ಅಭಿನಂದಿಸಿದರು.

ಶಾಸಕ ಶ್ರೀ ಬಿ. ಸುಬ್ರಹ್ಮಣ್ಯ ಗೌಡರು ಸನ್ಮಾನಕ್ಕೆ ಉತ್ತರವೀಯುತ್ತಾ, ತಾಲೂಕಿನ ಆವಶ್ಯಕತೆಗಳನ್ನು ಪೂರೈಸುವಲ್ಲಿ ಶ್ರಮವಹಿಸುವುದಾಗಿ ಭರವಸೆಯಿತ್ತರು.

ಶ್ರೀ ಬಿ. ನಾರಾಯಣ ನಾಯಕರು ಮಾತಾಡಿ ಸಹಕಾರ ಕ್ಷೇತ್ರ ಮುಖ್ಯವೆಂದೂ ತಾನು ಅದಕ್ಕೇ ಹೆಚ್ಚಿನ ಪ್ರಾಮುಖ್ಯತೆ ಕೊಡುವುದಾಗಿಯೂ ತಿಳಿಸಿದರು.

ಶ್ರೀ ಧರ್ಮಸಾಮ್ರಾಜ್ಯರು ಮಾತಾಡಿ ಈ ಕ್ಷೇತ್ರದ ಅಭಿವೃದ್ಧಿ ಸಾಧನೆಯಲ್ಲಿ ಶಾಸಕರಿಬ್ಬರಿಗೂ ಜನತೆ ಬೆಂಬಲ ನೀಡಬೇಕೆಂದರು

ಶ್ರೀ ಕೆ. ಸುಬ್ರಹ್ಮಣ್ಯ ಗೌಡರು ಈ ಸಂದರ್ಭದಲ್ಲಿ ಬಂಟ್ವಾಳ, ಬೆಳ್ತಂಗಡಿ ನಡುವೆ ಏರ್ಪಡಿಸಿದ ಎರಡನೇ ಟ್ರಂಕ್ ಲೈನ್‌ನ ಉದ್ಘಾಟನೆಯನ್ನು ಮಂಗಳೂರಿನ ಕೇಂದ್ರ ಸಹಕಾರ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಎನ್. ವೆಂಕಪ್ಪ ರೈಯವರೊಂದಿಗೆ ಮಾತಾಡುವುದರ ಮೂಲಕ ನೆರವೇರಿಸಿದರು. ಶ್ರೀ ಕೆ ಬಿ. ರವಿರಾಜ ಬಲ್ಲಾಳರು ವಂದಿಸಿದರು.

ಸಂದರ್ಶಿಸಿರಿ! — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

–ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ–

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗಿವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1

Tele: GOLDKING Estd: 1947 Phone: 3242 Res: 3272

ಶ್ರೀಸಾಮಾನ್ಯನ ಸಂಸತ್ತಿನಲ್ಲಿ—

ಒಂದು ನಿರ್ಧಾರ

ನಾವು ಕತ್ತಲೆಯಿಂದ ಬೆಳಕಿನತ್ತ ಹೋಗಬೇಕೆಂದು ಬಯಸುವುದು ಹೇಗೋ ಹಾಗೆಯೇ ಅನಿಶ್ಚಿಯತೆಯಿಂದ ನಿಶ್ಚಯತೆಯ ಗುರಿ ತಲುಪುವುದು ದೇಶದ ಸುಭದ್ರತೆಗೊಂದು ಕೋಟೆ. ಇಂದಿನ ಕೃಷಿ ಪ್ರಪಂಚದ ಸ್ಥಿತಿ ಪ್ರಕೃತಿ ಬದ್ಧತೆಯ ದಳ್ಳುರಿಗೆ ಸಿಲುಕಿದ್ದಾಗಿ ವ್ಯವಸಾಯವನ್ನೇ ಕುಲ ಕಸುಬಾಗಿ ಆರಿಸಿರುವ ಸಣ್ಣ ರೈತರು ಭೂಮಿತಿಯ ಉಲ್ಲಂಘನೆಯಾಘಾತಕ್ಕೆ ಸಿಲುಕಿರುವುದರೊಂದಿಗೆ ಅವರ ಶ್ರಮಕ್ಕೆ, ಬೆಳೆಗೆ ಸರಿಯಾದ ಪ್ರತಿಫಲಿತ ಸಿಗದೆ ಬದುಕು ಅತಿ ದುರ್ಭರವೆನಿಸಿದೆ.

ಸರಕಾರ ಮಾಡಬೇಕಾದ ಪ್ರಾಮುಖ್ಯ ಕ್ರಮವೆಂದರೆ ರಾಜ್ಯದ ಯಾವುದೇ ಬೆಳೆಗೂ ಒಂದು ನಿರ್ದಿಷ್ಟ ಮಾರುಕಟ್ಟೆಯನ್ನು ಸ್ಥಾಪಿಸುವುದು. ಬೆಲೆ ಕಡಿವಾಣ ಮೀರಿ ಹೋಗ ಬಾರದು. ಒಂದಕ್ಕೆ ಗಗನಾರೋಹಣ ಮತ್ತೊಂದಕ್ಕೆ ಪಾತಾಳಾವರೋಹಣವೂ ಆಗ ಕೂಡದು. ಪ್ರಸ್ತುತ ಸಮಸ್ಯೆಯಲ್ಲಿ ಅಡಿಕೆಯನ್ನೇ ಎತ್ತಿಕೊಂಡರೂ ಅಡಿಕೆಗೆ ಸಂಪೂರ್ಣ ಧಾರಣೆ ಕುಸಿಯಲು ಕಾರಣ, ಬಂಗ್ಲಾ–ಸಿಂಹಳಗಳ ಅಡಿಕೆಯ ಆಮದೇ, ದಳ್ಳಾಳಿಗಳೇ, ಅಲ್ಲವೇ ಬಾಂಬಿನ ಭಯವೇ ಅಥವಾ ಕೇ. ೨೦ ಅಡಿಕೆ ವ್ಯವಸಾಯ ಹೆಚ್ಚಾಗಿರುವುದೇ ಎಂಬುದು ಯಾವುದೇ ಸಂಶೋಧಕನ ಅರಿವಿಗೂ ಬಂದಿಲ್ಲ. ಆದರೆ ಅಡಿಕೆಯ ಆದಾಯವನ್ನೇ ನಿರೀಕ್ಷಿಸಿ, ಸಾವಿರಾರು ಎಕರೆ ವಿಸ್ತಾರದಲ್ಲಿ ಅಡಿಕೆ ತೋಟ ಹಾಕಿ, ಅದರ ಹುಟ್ಟುವಳಿಯನ್ನು ಮುಂತಾದ ಆಗಭೋಗಗಳಿಗಾಗಿ ಅಸಂಖ್ಯ ಹಣ ಸಾಲ ಎತ್ತಿದವರಿದ್ದಾರೆ. ಗಗನಕ್ಕೇರಿದ ಧಾರಣೆಗಳ ಸಾಮ್ರಾಜ್ಯದಲ್ಲಿ ಇವರು ದಿನಕ್ಕೆ ಒಂದು ಸೇರು ಅಕ್ಕಿ ತಂದು ಕುಟುಂಬ ಪೋಷಣೆ ಮಾಡಬಲ್ಲರೇ? ಈ ಸಾಲಕ್ಕೆ ಎದುರುತ್ತರ ಹೇಳಬಲ್ಲರೆ? ಇಲ್ಲ, ಯಾವುದೂ ಬೇಡವೆಂದು ವಿಷ ತಿಂದು ಸಾಯಬೇಕೋ ಎಂಬುದನ್ನು ಸರ್ಕಾರ ಹೇಳಲಿ.

ಇದೀಗ ಸಿಂಹಳದಿಂದ ಕೊಬ್ಬರಿ ಆಮದಿಗೆ ಸರಕಾರ ಲೈಸನ್ಸ್ ಕೊಟ್ಟಿದೆ. ರಾಜ್ಯದಾದ್ಯಂತ ತೆಂಗಿನಕಾಯಿ ಬೆಲೆ ಏಕ್‌ದಂ ಇಳಿದೇಹೋಯಿತು. ಇದರಿಂದ ಕಳವಳಕ್ಕೀಡಾದ ತಿಪಟೂರಿನ ರೈತರು ಆ ನಷ್ಟದ ಪರಿಹಾರವೀಯಲು ಸರಕಾರವನ್ನು ಬೇಡಿದ್ದಾರೆ. ಯಾರು ಕೇಳುತ್ತಾರೆ ಶ್ರೀಸಾಮಾನ್ಯನ ಗೋಳನ್ನು? ಇದೇನೋ ಸ್ವತಂತ್ರ ಭಾರತ. "ಮನೆ ಪೂರ್ಣ ನಿನ್ನದು, ತಂಬಿಗೆ ಮಾತ್ರ ಮುಟ್ಟಬೇಡ" ಎನ್ನುವ ನೀತಿ. ಅರಕಲಗೂಡು ಪ್ರದೇಶದಲ್ಲಿ ಅನಾವೃಷ್ಟಿ. ಸಾವಿರಾರು ರೂಪಾಯಿ ಮೌಲ್ಯದ ಪೈರೆಲ್ಲಾ ಭಸ್ಮವಾಗಿ ಹೋಗಿದೆ. ಚಿಕ್ಕಮಗಳೂರಿನಲ್ಲಿ ಅತಿವೃಷ್ಟಿ. ಆಲೂಗಡ್ಡೆಯ ಬೀಜವೆಲ್ಲಾ ಕೊಳೆತು ಹೋಗಿದೆ. "ನಾನು! ನನ್ನದು! ಸಕಲವನ್ನೂ ನಾನು ಸೃಷ್ಟಿಮಾಡಬಲ್ಲೆ!" ಎಂಬ ಮಾನವನ ದುರಹಂಕಾರದ ಸೊಕ್ಕಡಗಿಸಲೋ ಎನ್ನುವಂತೆ ಈ ಪ್ರಕೃತಿಯ ಚೆಲ್ಲಾಟ. ಜೊತೆಗೆ ಅಡಳಿತವರಿಯದ ಸರಕಾರ ತಂದ ಪ್ರಾಣಸಂಕಟ.

ಸರಕಾರ ಕಣ್ಣು ತೆರೆಯಬೇಕು. ಮಧ್ಯಮ ವರ್ಗದ ಬದುಕಿನ [illegible] ಸೋತು ಬಿದ್ದಿರುವ ರೈತನ ಬೆಳೆಗೆ ಸರಿಯಾದ ಪ್ರತಿಫಲ ದೊರಕುವಂಥ ಶಾಸನಬದ್ಧ ಆಣತಿಯನ್ನು ಸರಕಾರ ಶಿರಸಾ ವಹಿಸಿ ನಿರ್ವಹಿಸಬೇಕು. ಒಬ್ಬ ರೈತ ನವಣೆ ಬೆಳೆಯುತ್ತಾನೆ. ಆದರೆ ಅವನಿಗೆ ಉಣ್ಣಲು ಅಕ್ಕಿ ಬೇಕು. ನವಣೆಗೆ ಮೂರು ಕಾಸು, ಅಕ್ಕಿಗೆ ಹತ್ತು ಕಾಸಾದರೆ ಅವರ ಜೀವನ ಹೇಗೆ ಸಾಗಬೇಕು? ಯಾವುದೇ ವಸ್ತುವಿನ ಧಾರಣೆಗೂ ಮಿತಿಯೆಂಬುದು ಕನಿಷ್ಠ ಇಲ್ಲವೇ ಗರಿಷ್ಠವಾಗಿರುವುದವಶ್ಯ.

ಬೆಲೆಗಳಲ್ಲಿ ಏರಿಳಿತವಿಲ್ಲದೆ, ರೈತನ ಜೀವನ ಸರಳವಾಗಿ ಸಾಗುವಂತೆ ಅನುಕೂಲ ಕಲ್ಪಿಸಲು ಒಂದು ಕಾರ್ಪೊರೇಷನಿನ ರಚನೆ ಅವಶ್ಯವಿದೆ. ಬೆಲೆಗಳು ರೈತನ ಶ್ರಮ ಫಲಿತಕ್ಕೆ ಸರಿಯಾಗಿ ಇಲ್ಲ. ಅಮೇಲೆ ಭೂಕಂದಾಯ, ಕೊಳ್ಳುವ ಪ್ರತಿ ಸಾಬೂನು, ಬಟ್ಟೆಯಿಂದಾರಂಭಿಸಿ ಎಲ್ಲದಕ್ಕೂ ಹೆಚ್ಚುವರಿ ಸುಂಕ ಎಲ್ಲಾ ಕೊಟ್ಟು ಅವನ ಕೈಲಿ ಹತ್ತುವುದು ಶಂಖ. ರಿಸರ್ವ್ ಬ್ಯಾಂಕಿನಿಂದ ಶೇಕಡ ನಾಲ್ಕರ ಬಡ್ಡಿ ದರದಲ್ಲಿ ಇತರ ಬ್ಯಾಂಕುಗಳು, ಸಹಕಾರಿ ಸಂಘಗಳು ಹಣ ಪಡೆದು, ಸಣ್ಣ ರೈತರ ಉದ್ಧಾರಕ್ಕಾಗಿ ಒಂಬತ್ತೂವರೆ ಬಡ್ಡಿಗೆ ಹಣ ಕೊಡುತ್ತವೆ. ಸಕಾಲಕ್ಕೆ ಮರುಪಾವತಿಯಾಗದ ಸಾಲಗಳಿಗೆ ಮತ್ತೂ ಮೂರು ರೂಪಾಯಿ ದರ ಏರುವುದರೊಂದಿಗೆ ಆಗಾಗ್ಗೆ ಬಾಕಿ ತಗಾದೆಗೆ ಕಳುಹಿಸಲ್ಪಡುವ ನೋಟೀಸುಗಳಿಗೆ ಐದು ರೂಪಾಯಿ ಕೊಡಬೇಕಾಗುತ್ತದೆ.

ರೈತರಿಂದ ಕಸಿಯುವುದಕ್ಕೂ ಒಂದು ನ್ಯಾಯ ಬೇಕು. ಅವನು ಬಡಪಾಯಿ, ತನ್ನಲ್ಲಿದ್ದುದನ್ನೆಲ್ಲ ಕೊಡುತ್ತಾನೆ. ಅವನ ಬೆಳೆಗೆ, ಶ್ರಮ ಫಲಿತಕ್ಕೆ ಶಾಶ್ವತವಾದ ತಳಪಾಯದೊಂದಿಗೆ ನೇರ ದಾರಿಯೊಂದನ್ನು ಕಲ್ಪಿಸಿ ಕೊಟ್ಟಿದ್ದರೆ ಸರಿ, ಇದೊಂದೇನೂ ಇಲ್ಲದೆ ಅವನನ್ನು ಅಧಃಪಾತಾಳಕ್ಕೆ ತುಳಿದು, ಮಾರುಕಟ್ಟೆಯೇ ಇಲ್ಲದಂತೆ ಮಾಡಿದರೆ ಈ ಬೆಳೆಗಾರರು ನ್ಯಾಯವಾಗಿ ಯಾವ ದಾರಿ ಆರಿಸಬೇಕು? ಸರಕಾರ ಇಂಥ ಸವತಿ ನೀತಿಯ ಪರಂಪರಾಗತ ಹಿರಿಮೆಯನ್ನು ತ್ಯಜಿಸದೆ ಮುಂದುವರಿಸಿಕೊಂಡು ಬಂದರೆ ಲಕ್ಷಾಂತರ ಮಂದಿ ನಿಷ್ಪಾಪಿ ರೈತರ ಬಲಿದಾನ ಅನಿವಾರ್ಯವಾದೀತು ಅವರ ಅನಿರ್ಧರ ಬದುಕು ನಿರ್ಧಾರದ ಚರಮ ಸೀಮೆ ತಲುಪಲೇ ಬೇಕು.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

(ಐದನೇ ಪುಟದಿಂದ)

[illegible]ಣದ ಭಾಷೆಗಳನ್ನು ಕಲಿಯ ಬೇಕೆಂಬುದೂ ಹಳೆಯ ವಿಚಾರವೇ.

ಭಾರತದ ಭಾಷೆಗಳಿಗೆಲ್ಲ ಒಂದೇ ಲಿಪಿಯನ್ನು ಬಳಸುವುದಾದರೆ, ಅದು ದೇವನಾಗರಿ ಲಿಪಿ. ಒಂದೇ ಸಂಪರ್ಕ ಭಾಷೆಯಾಗಬೇಕಾದರೆ, ಅದು ಹಿಂದಿ, ರಾಷ್ಟ್ರ ಭಾಷೆಯಾಗಬೇಕಾದರೆ ಅದು ಹಿಂದಿ. ಆದರೆ, ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳದೆ ತೇಲಿಸಿ ತೇಲಿಸಿ ಹೇಳುವುದು ಇಂದಿನ ರಾಜ್ಯಕಾರಣದ ನೀತಿ. ಹಾವು ಸಾಯಬಾರದು–ಕೋಲು ಮುರಿಯ ಬಾರದು ಎಂಬುದರಿಂದಲೇ ನಾವು ಈ ದಿಸೆಯಲ್ಲಿ ಇದುವರೆಗೆ ಏನನ್ನೂ ಸಾಧಿಸಿಲ್ಲ. ಬರಿಯ ಮಾತಿನಲ್ಲೇ ಮಂಟಪ ಅಲಂಕರಿಸ ಹೊರಟಿದ್ದೇವೆ. ಈ ನೀತಿಯಲ್ಲೇ ನಾವು ಮುಂದುವರಿಯುವುದಾದರೆ, ಸದ್ಯಕ್ಕೆ, ಏಕಲಿಪಿ, ಏಕಭಾಷೆಯ ವಿಚಾರಗಳನ್ನು ಮುಚ್ಚಿಟ್ಟುಕೊಳ್ಳುವುದೇ ಉತ್ತಮ. ಏಕೆಂದರೆ, ಆ ವಿಚಾರ ಬೆಳೆಯಲು ಅನುಕೂಲ ವಾತಾವರಣ ಈಗ ದೇಶದಲ್ಲಿಲ್ಲ. ಪ್ರತ್ಯೇಕತೆ, ಸ್ವಾಯತ್ತತೆಯ ಕಳೆಗಳಿಗೇ ಗೊಬ್ಬರ ಚೆಲ್ಲಿದಂತಾಗಬಾರದು.

ತಿಳಿದಿರ ಬೇಕಾದ ಸಂಗತಿ

ಜಗತ್ತಿನ ಪ್ರಧಾನಿಗಳು

1) ಭಾರತ — ಶ್ರೀಮತಿ ಇಂದಿರಾ ಪ್ರಿಯದರ್ಶಿನಿ ಗಾಂಧಿ
2) ಬ್ರಿಟನ್ — ಎಡ್ವರ್ಡ್ ಹೀತ್
3) ರಷ್ಯ — ಕೊಸಿಗಿನ್
4) ಜಪಾನ್ — ಕಕುಯಿತನಕ
5) ಮಾರಿಷಸ್ — ರಾಂ ಗುಲಾಮ್
6) ಫ್ರಾನ್ಸ್ — ಪಿಯರ್ ಮೆಸ್ಮರ್
7) ಆಸ್ಟ್ರೇಲಿಯಾ — ವಿಲಿಯಂ ಮ್ಯಾಕ್ ಮೋಹನ್
8) ಸಿಂಹಳ — ಶ್ರೀಮತಿ ಸಿರಿಮಾವೊ ಭಂಡಾರ ನಾಯ್ಕೆ
9) ಮಾಲವಿ — ಕಮುಜು ಬಾಂಡಾ
10) ಜೋರ್ಡಾನ್ — ಹಾಸ್ಪಿಟೆಲ್
11) ಅಫ್‌ಘಾನಿಸ್ತಾನ್ — ಅಬ್ದುಲ್ ಜಾಹೀರ್
12) ನೇಪಾಳ — ಕೀರ್ತಿನಿಧಿ ಬಿಸ್ತಾ
13) ಮಾಲ್ಟಾ — ಡೊಮಿನಿಕ್ ಮಿಂಟಾಫ್
14) ಕೆನಡಾ — ಪಿಯರಿ ಟ್ರುಡೊ
15) ಟರ್ಕಿ — ನಿಹಾತ್ ಎರಿಮ್
16) ಇಸ್ರೇಲ್ — ಶ್ರೀಮತಿ ಗೋಲ್ಡಾ ಮೀರಾ
17) ಕ್ಯೂಬಾ — ಫಿಡೆಲ್ ಕ್ಯಾಸ್ಟ್ರೊ
18) ಜೆಕೋಸ್ಲಾವಾಕಿಯಾ — ಲುಬೊಮಿರ್ ಸ್ಟ್ರೊಗಾಲ್
19) ಹಂಗೇರಿ — ಜಿನೋಪಾಕ್
20) ಪೋಲೆಂಡ್ — ಜರೋಸ್ ವೈಸ್

ಸಂಗ್ರಾಹಕ:

ಐ. ಎಚ್. ಶಾಂತಾರಾಮ ಶೆಟ್ಟಿ

–ಬ್ರಹ್ಮಾವರ

ಬೇಕಾಗಿದ್ದಾರೆ

ಅನುಭವಸ್ಥ ಕಂಪೋಸಿಟರು ಬೇಕಾಗಿದ್ದಾರೆ. ಸಂಬಳ ಯೋಗ್ಯತಾನುಸಾರ

ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಉತ್ತಮ ಗುಣ ನಡತೆಯುಳ್ಳ ಕನಿಷ್ಠ ಎಂಟನೆ ತರಗತಿವರೆಗೆ ಓದಿದ ಉತ್ಸಾಹೀ ಅಭ್ಯರ್ಥಿಗಳು ಬೇಕಾಗಿದ್ದಾರೆ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ. ಕ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303, 2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು

● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು–4

ಸರಕಾರಿ ಆಸ್ಪತ್ರೆಗಳಲ್ಲಿ

ಶಿಸ್ತಿನ ಮುದ್ದೆ - ದೇವಮಾನವರು

ಕರ್ನಾಟಕದ ಆರೋಗ್ಯ ಸಚಿವರು ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿರುವ ಆಸ್ಪತ್ರೆಗಳೆಲ್ಲವನ್ನೂ ಸರಕಾರದ ವಶಕ್ಕೆ ತೆಗೆದುಕೊಳ್ಳುವ ಘೋಷಣೆ ಮಾಡಿ, ಜನರ ಆರೋಗ್ಯ ವರ್ಧನೆಗೆಂದೊಂದು ಹೊಸ ಇಂಜೆಕ್ಷನ್ನು ತರಿಸಿಕೊಂಡರು. ಆದರೆ, ಅದರ ಪ್ರಯೋಜನ ಶ್ರೀಸಾಮಾನ್ಯನಿಗೆ ಹೇಗೆ ಆಗುತ್ತದೆಯೆಂಬುದನ್ನು ಶ್ರೀ ಸಿದ್ಧವೀರಪ್ಪನವರೇ ಹೇಳಬೇಕು.

ಮಾನ್ಯ ಆರೋಗ್ಯ ಸಚಿವ ಶ್ರೀ ಸಿದ್ಧವೀರಪ್ಪನವರು ಇತ್ತೀಚೆಗೆ ಮೈಸೂರು ವೈದ್ಯಕೀಯ ಸಂಘಕ್ಕೆ ಭೆಟ್ಟಿ ನೀಡಿದರು. ಅಲ್ಲಿ ಭಾಷಣ ಮಾಡಲಿಲ್ಲ; ಬದಲಿಗೆ ವಿಚಾರವಿನಿಮಯ–ಚರ್ಚೆಗಳನ್ನು ನಡೆಸಿದರು. ಆಗ ಒಂದು ಹೊಸ ಸಂಗತಿ ಬೆಳಕಿಗೆ ಬಂತು--ರಾಜ್ಯ ಸರಕಾರದ ಆಸ್ಪತ್ರೆಗಳಲ್ಲಿರುವ ವೈದ್ಯರೆಲ್ಲರೂ ದೇವತಾಂಶ ಸಂಭೂತರು, ಅವರಲ್ಲಿ ಅಸುರತೆ ತಿಲಮಾತ್ರವೂ ಇಲ್ಲ. ಕರ್ತವ್ಯ ಪಾಲನೆ, ಸೇವಾತತ್ಪರತೆ, ಸದ್ಗುಣಶಾಲೀನತೆ ಮೊದಲಾದ 'ಅಮರ ಗುಣ'ಗಳಿಗೆ ಅವರೇ ಏಕೈಕ ಭಂಡಾರ. ಆದರೆ, ಅವರಿಗೆಲ್ಲ ಕಪ್ಪು ಬರೆಯೆಳೆಯುವ ಒಂದು ಪಂಗಡ ಅವರ ಸುತ್ತಲೂ ಇದೆ. ಇವರಲ್ಲಿ ಸ್ಪೆಶಲ್ ವಾರ್ಡಿನಲ್ಲಿರುವ ರೋಗಿಗಳದ್ದು ಒಂದು ತಂಡ. ಆಸ್ಪತ್ರೆಯ ಆಯಾ, ವಾರ್ಡ್ ಬಾಯ್ ಮೊದಲಾದ ಕೆಳವರ್ಗದ ನೌಕರರದ್ದು ಇನ್ನೊಂದು ತಂಡ.

ಮೊದಲ ತಂಡವು ಆಸ್ಪತ್ರೆಯಲ್ಲಿ ಇಲ್ಲಸಲ್ಲದ ತಕರಾರುಗಳನ್ನು ಕೀಟಲೆಗಳನ್ನೂ ನಿರ್ಮಿಸುತ್ತದೆ. ಎರಡನೆ ತಂಡವು ತನ್ನ ಅಶಿಸ್ತಿನಿಂದ ದೇವತಾ ಸ್ವರೂಪಿಗಳಾದ ವೈದ್ಯರಿಗೆ ಅಪಕೀರ್ತಿ ತರುತ್ತದೆ.

ಇದರಲ್ಲಿ ಮೊದಲನೆಯದಕ್ಕೆ ಅವರೇ ಪರಿಹಾರ ಸೂಚಿಸಿದ್ದಾರೆ–ಸ್ಪೆಶಲ್ ವಾರ್ಡುಗಳನ್ನೇ ರದ್ದುಮಾಡಿ, ಎರಡನೆಯದಕ್ಕೆ ಹೇಗೆ ಪರಿಹಾರ ಸಲಹೆ ಮಾಡಬಹುದು.ಆ ತಂಡವನ್ನೇ ಕಿತ್ತುಹಾಕಿ. ಆಗ? ಸರಕಾರಿ ಆಸ್ಪತ್ರೆಗಳಲ್ಲಿ ದೇವಮಾನವರು ಜನರಲ್ ವಾರ್ಡಿನ ರೋಗಿಗಳಿಗೆ ಪ್ರಾಣದಾನ ಮಾಡುವಂತಾಗುತ್ತದೆ. ಅವರಿಗೂ ಅವರ ಹೊಟ್ಟೆಹೊರೆಯುವ ರಾಜ್ಯಸರಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ.

ಇದನ್ನು ಓದುವವರು ಬಾಯೊಳಗೆ ಮುಸಿ ಮುಸಿ ನಗಬಹುದು. ಹೊಸ ಸಂಶೋಧನೆ ಮತ್ತು ಸಲಹೆಗಳನ್ನು ತಿಳಿದು ಆಶ್ಚರ್ಯ ಪಡಬಹುದು. ಆದರೆ, ಸುಶಿಕ್ಷಿತರಾದ ಅನುಭವಿ ವೈದ್ಯರು ಸುಳ್ಳಾಡುವುದುಂಟೆ? ಮಾನ್ಯ ಸಚಿವರು ಪ್ರಯೋಗಾರ್ಥವಾಗಿ ದೊಡ್ಡ ಆಸ್ಪತ್ರೆಯೊಂದರಲ್ಲಿ ಈ ಸಲಹೆಗಳನ್ನು ಜ್ಯಾರಿಗೆ ತಂದು ನೋಡಬಹುದು. ತಾವೇ ರೋಗಿಯಾಗಿ ಮಲಗಿವರೆ ಉತ್ತಮ. ಇದು ಯಶಗಳಿಸಿದ್ದರೆ, ಸಂಶೋಧಕರಿಗೆ ಸಿಜಕ್ಕೂ 'ಭಾರತರತ್ನ' ಉಪಾಧಿಗೆ ಸಿಫಾರಸು ಮಾಡಬೇಕು.

ಒಂದು ಕ್ರಮದಿಂದ ನೂರಾರು ಕೋಟಿ ರೂಪಾಯಿ ಉಳಿತಾಯವಾಗುದಾದರೆ, ಅಂತಹ ಸಲಹೆಯನ್ನು ಏಕೆ ಕಾರ್ಯರೂಪಕ್ಕೆ ತರಬಾರದು? ಆದರೆ, ತಮ್ಮ ಅಡಿ ಕೆಲಸಮಾಡುತ್ತಿರುವ ಆಯಾ–ವಾರ್ಡ್ ಬಾಯ್‌ಗಳಿಂಗ ಶಿಸ್ತಿನಿಂದ ದುಡಿಸಿಕೊಳ್ಳಲಾಗದ ವೈದ್ಯರು ತಾವುಮಾತ್ರ ಶಿಸ್ತಿನ ಮುದ್ದೆಗಳೆಂದು ಹೇಳಿಕೊಳ್ಳುವುದು ಯಾರಲ್ಲೂ ವಿಶ್ವಾಸ ಮೂಡಿಸುವುದಿಲ್ಲ.

●●

ಮಿತ ಕುಟುಂಬ ಯೋಜನೆಗೆ

ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಸಾದರ ಸ್ವೀಕಾರ

'ದೇವರು ಮಾಡಿದ ಕೊಲೆ'

(ಕಾದಂಬರಿ)

ಬರೆದವರು: ಕೆ. ಮಹಾಬಲ ಭಂಡಾರಿ
ಪುಟಗಳು: 194, ಬೆಲೆ: ರೂ. 4.00

'ಸತ್ಯಮೇವ ಜಯತೆ' ಮತ್ತು ಇತರ ಕಥೆಗಳು.

ಬರೆದವರು: ನವಕಾನ ಶಂಕರನಾರಾಯಣ ಭಟ್, ಪುಟಗಳು: 42, ಬೆಲೆ: 0–65 ಪೈಸೆ.

'ಎಲ್ಲವೂ ವಿಧಿವಶ'

ಬರೆದವರು: ಸಿರಿಬಾಗಿಲು ವೆಂಕಪ್ಪಯ್ಯ
ಪುಟಗಳು: 98, ಬೆಲೆ: ರೂ. 1–50.

'ಪುಟಾಣಿ ಚಾವಡಿ'

(ಮಕ್ಕಳ ಕಥೆಗಳು)

ಬರೆದವರು: ಜಿ. ಮಲ್ಲಾರಿ ಭಟ್ಟ,
ಪುಟಗಳು: 18 ಬೆಲೆ: 0–60ಪೈಸೆ.

'ಜ್ಞಾನ ವಿಕಾಸ'

(ಮಕ್ಕಳ ಸಚಿತ್ರ ಕಥೆಗಳು)

ಬರೆದವರು: ಜಿ. ಮಲ್ಲಾರಿ ಭಟ್ಟ
ಪುಟಗಳು: 64, ಬೆಲೆ: ರೂ. 1–25.

ಮೇಲಿನ ಎಲ್ಲ ಪುಸ್ತಕಗಳ ಪ್ರಕಾಶಕರು 'ಗೀತಾ ಪ್ರಕಾಶನ' ಶ್ರೀರಾಮಪೇಟೆ, ಕಾಸರಗೋಡು.

ಯಕ್ಷಗಾನ ಅಭಿನಯ ಮತ್ತು ವೇಷ ಭೂಷಣ ಗೋಷ್ಠಿ

(1971 ಅಕ್ಟೋಬರ 27ರಿಂದ 31ರ ವರೆಗೆ ಡಾ। ಕೋಟ ಶಿವರಾಮ ಕಾರಂತರ ನಿರ್ದೇಶನದಲ್ಲಿ ಉಡುಪಿ ಯಕ್ಷಗಾನ ಕೇಂದ್ರ ನಡೆಸಿದ ವಿಚಾರ ಗೋಷ್ಠಿಯ ವರದಿ)
ವರದಿ ಲೇಖಕರು: ಮಕ್ಕಾಡಿ ಶ್ರೀನಿವಾಸ ಭಟ್ಟ.
ಪ್ರಕಾಶಕರು: ಯಕ್ಷಗಾನ ಕೇಂದ್ರ, ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ-2.

ವೇದಗಳನ್ನು ಬರೆದವರು ಯಾರು ? ಅಥವ ವೇದವು ಈಶ್ವರೀಯ ಜ್ಞಾನವೇ ?

ಲೇಖಕರು: ದಿ। ಬಿ. ಟಿ. ಶೆಟ್ಟಿ, ಮುಂಬಯಿ.
ಪುಟಗಳು: 38, ಬೆಲೆ: ರೂ. 1.25.
ಪ್ರಕಾಶಕರು: ಸಪ್ತರ್ಷಿ ಪ್ರಚಾರ ಗ್ರಂಥ ಮಾಲೆ, ಮಂಗಳೂರು.

'ಕಲಾದರ್ಶನ'

(ನಾಸಿಕದ ಜೂನ್ ಸಂಚಿಕೆ)
ಸಂಪಾದಕರು: ವಿ. ಬಿ. ಹೊಸಮನೆ,
ವಾರ್ಷಿಕ ಚಂದಾ: ರೂ. 6.00.
ಪ್ರಕಾಶಕರು: ಭಾರದ್ವಾಜ ಪ್ರಕಾಶನ, ಕೆಬಿರ್, ಮಂಗಳೂರು-2.

ಬಂಟರ ಯಾನೆ ನಾಡವರ ಸಂಘ, ಮುಂಬಯಿ, ಇದರ 44ನೆಯ ವಾರ್ಷಿಕ ವರದಿ

1927ರಲ್ಲಿ ಸ್ಥಾಪಿಸಲ್ಪಟ್ಟು ಅನಂತರ ರಿಜಿಸ್ಟ್ರ ಮಾಡಲ್ಪಟ್ಟ ಈ ಸಂಘವು ಕರ್ನಾಟಕ ಫರ್ಸ್ಟ ಗ್ರೇಡ್ ರಾತ್ರಿ ಹೈಸ್ಕೂಲನ್ನು ನಡೆಸಿಕೊಂಡು ಬರುತ್ತಿರುವುದಲ್ಲದೆ ಜಾತಿ ಬಾಂಧವರ ಉನ್ನತಿಗಾಗಿ ವಿವಿಧ ರೀತಿಯಲ್ಲಿ ದುಡಿಯುತ್ತಿದೆ.

Manipal Record

ಅಕಾಡೆಮಿ ಮತ್ತು ಅದರ ಸಂಸ್ಥೆಗಳ ಸಚಿತ್ರ ಅನುಬಂಧ.

(ಜನವರಿ 3, 1972ರ ಸಂಚಿಕೆ)

ಸಂಪಾದಕರು ಕೆ. ಎಂ. ಕಾರಂತ್,
ಪ್ರಕಾಶಕರು: ಟಿ. ರಮೇಶ ಯು. ಪೈ.

ಬ್ಯಾಂಕ್ ರಾಷ್ಟ್ರೀಕರಣದ ತೃತೀಯ ವಾರ್ಷಿಕೋತ್ಸವ

ಸಿಂಡಿಕೇಟ್ ಬ್ಯಾಂಕು ಬ್ಯಾಂಕ್ ರಾಷ್ಟ್ರೀಕರಣದ ತೃತೀಯ ವಾರ್ಷಿಕೋತ್ಸವವನ್ನು ತಾ. 19ರಂದು ಮಣಿಪಾಲದ ತನ್ನ ಪ್ರಧಾನ ಕಚೇರಿಯಲ್ಲಿ ವಿಜೃಂಭಣೆಯಿಂದ ಉತ್ಸಾಹ ಪೂರ್ವಕ ಆಚರಿಸಿತು. ಕಚೇರಿಯನ್ನು ದೀಪಾಲಂಕಾರಗಳಿಂದ ಸಿಂಗರಿಸಲಾಗಿತ್ತು.

ಆರಂಭದಲ್ಲಿ ಬ್ಯಾಂಕಿನ ಜ। ಮೆನೇಜರ್ ಶ್ರೀ ಎಚ್. ಎನ್. ಪೈಯವರು ಸ್ವಾಗತಿಸಿ ಸಮಾರಂಭಕ್ಕೆ ಶುಭಕೋರಲು ಬಂದ ಅತಿಥಿಗಳ ಪರಿಚಯ ಮಾಡಿಸಿದರು.

ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರು ಸಮಾರಂಭದ ಅಂಗವಾಗಿ ಹೊಸದಾಗಿ ನೀಡಿರುವ ಕಮ್ಯುಲೇಟಿವ್ ಕಮ್ ಸಿಕ್‌ನೆಸ್ ಬೆನಿಫಿಟ್ ಯೋಜನೆ'ಯನ್ನು ಉದ್ಘಾಟಿಸುತ್ತಾ, ಬ್ಯಾಂಕ್ ರಾಷ್ಟ್ರೀಕರಣವಾದ ಈ ಮೂರು ವರ್ಷಗಳಲ್ಲಿ ಜನಸಾಮಾನ್ಯರಲ್ಲಿ ಉಳಿತಾಯ ಸ್ಫೂರ್ತಿ ತುಂಬಿದ ಕೀರ್ತಿ ಸಿಂಡಿಕೇಟ್ ಬ್ಯಾಂಕಿಗೆ ಸಲ್ಲುತ್ತದೆ ಎಂದರು. ರಾಷ್ಟ್ರೀಕರಣದ ಯಶಸ್ಸಿಗೆ ಡಾ। ಮಾಧವ ಪೈಗಳ ಮಾರ್ಗದರ್ಶನ, ಟಿ. ಎ. ಪೈಗಳ ದೂರದರ್ಶಿತ್ವ, ತರಬೇತಿ ಹೊಂದಿದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗಗಳ ಪರಿಶ್ರಮ ಪೂರ್ಣ ಪ್ರಾಮಾಣಿಕ ಸೇವೆ ಕಾರಣವೆಂದ ಶ್ರೀ ಪೈಗಳು ರಾಷ್ಟ್ರೀಕರಣ ಯಶಸ್ವಿಯಾಗಬೇಕಾದರೆ ಸಂಸ್ಥೆಯಲ್ಲಿರತಕ್ಕವರಿಗೆ ಸಂಸ್ಥೆಯ ಮೇಲೆ ಶ್ರದ್ಧೆ, ಸೇವೆಯಲ್ಲಿ ಆಸಕ್ತಿ ಇರುವುದು ಅಗತ್ಯವೆಂದೂ, ಅಂತೆಯೇ ಬ್ಯಾಂಕಿನಿಂದ ಹಣ ಪಡೆಯುವ ಗ್ರಾಹಕ ವರ್ಗ ಸಹ ಯದಲ್ಲಿ ಮರುಪಾವತಿ ಮಾಡಬೇಕೆಂದೂ, ಇಂತಹ ಸಮನ್ವಯಿತ ಪ್ರಯತ್ನವಿದ್ದರೆ ಮಾತ್ರ ರಾಷ್ಟ್ರೀಕರಣದ ಮೂಲೋದ್ದೇಶ ಸಾರ್ಥಕವಾಗುತ್ತದೆಂದೂ ಹೇಳಿದರು.

ಚೀಫ್ ಎಕೌಂಟೆಂಟ್ ಶ್ರೀ ಎಚ್. ಎನ್. ರಾಯರು ಬ್ಯಾಂಕು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯನ್ನು ವಿವರಿಸಿ 'ಕ್ಯುಮುಲೇಟಿವ್ ಕಮ್ ಸಿಕ್‌ನೆಸ್ ಬೆನಿಫಿಟ್ ಸ್ಕೀಮ್'ನ ಕುರಿತು ವಿವೇಚಿಸಿದರು.

ಡಾ। ವಿ. ಎಸ್. ಆಚಾರ್ಯರು ಮಾತಾಡಿ ದೇಶದ ಆರ್ಥಿಕ ಪ್ರಗತಿಗೆ ಸಿಂಡಿಕೇಟಿನ ಕಾಣಿಕೆ ಮೂಲಕಾರಣವೆಂದರು.

ಶ್ರೀ ಮಧುಸೂದನ ದಿ. ಶುಬೆಯವರು ಮಾತಾಡಿ ಬ್ಯಾಂಕಿನ ಸೌಲಭ್ಯ ಹಲವೇ ವ್ಯಕ್ತಿಗಳಿಗೆ ಮೀಸಲಾಗಿಡುವುದರಿಂದ ರಾಷ್ಟ್ರೀಕರಣದ ಉದ್ದೇಶ ಸಾಧಿಸಿದಂತಾಗಲಿಲ್ಲವೆಂದೂ ಜನಸಾಮಾನ್ಯರಿಗೆ ನೆರವು ನೀಡಿ ಅವರ ಕಲ್ಯಾಣ ಸಾಧಿಸುವುದೇ ರಾಷ್ಟ್ರೀಕರಣದ ಉದ್ದೇಶವೆಂದೂ ಈ ಉದ್ದೇಶವನ್ನು ಸಿಂಡಿಕೇಟ್ ಬ್ಯಾಂಕು ಸಾರ್ಥಕವಾದ ರೀತಿಯಲ್ಲಿ ನಡೆಸಿಕೊಟ್ಟಿದೆ, ಎಂದರು.

ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರು ಮಾತಾಡಿ ಎಡವಿ ಬೀಳತಕ್ಕವರ ಊರುಗೋಲು ಬ್ಯಾಂಕು ಎಂದು ಹೇಳಿ ದಕ್ಷತೆ ಮತ್ತು ಸೇವೆಗೆ ಹೆಸರಾಗಿರುವ ಸಿಂಡಿಕೇಟ್ ಬ್ಯಾಂಕ್ ಸೇವಾ ಭಾವದ ಜನರಿಂದ ಭಾವೈಕ್ಯವನ್ನು ಸ್ಥಾಪಿಸಿದೆ. ದೇಶದ ಐಕ್ಯವನ್ನು ಕಾಪಾಡಿದೆ, ಎಂದರು.

ಡಾ। ಎಲ್. ಪಿ. ಸೋನ್ಸ್‌ರವರು ಮಾತಾಡಿ ಕೃಷಿಯ ವಿಷಯದಲ್ಲಿ ರೈತರಿಗೆ ತರಬೇತಿ ನೀಡಿ ಸಿಂಡಿಕೇಟ್ ಬ್ಯಾಂಕು ಆರ್ಥಿಕ ನೆರವಿನ ಸಮುಪಯೋಗವಾಗುವಂತೆ ಮಾಡಿದೆ, ಎಂದರು.

ಬ್ಯಾಂಕಿನ ಎಲ್ಲ ಶಾಖೆಗಳಲ್ಲೂ ತಾ. 19ರಿಂದ ಒಂದು ವಾರದ ವರೆಗೆ ಈ ಸಮಾರಂಭದ ಅಂಗವಾದ ಕಾರ್ಯಕ್ರಮಗಳು ಜರಗುತ್ತವೆ.

ಜಿಲ್ಲಾ ಸಂ. ಕಾಂ. ಅಧ್ಯಕ್ಷರಾಗಿ ಡಾ। ಬಾಳಪ್ಪ ಶೆಟ್ಟರು

(ಡಾ. ಕೆ. ಬಾಳಪ್ಪ ಶೆಟ್ಟರು)

ತಾ. 16ರಂದು ರಾಜ್ಯಸಭಾ ಸದಸ್ಯ ಡಾ। ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಡಾ। ಕೆ. ಬಾಳಪ್ಪ ಶೆಟ್ಟರನ್ನು ದ. ಕ. ಜಿಲ್ಲಾ ಸಂ. ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು.

ಶ್ರೀ ಮಣೇಲ್ ಶ್ರೀನಿವಾಸ ನಾಯಕ್, ಶ್ರೀ ಕುಶಲ ಹೆಗ್ಡೆ, ಜಿಲ್ಲಾ ಯುವಕ ಕಾಂಗ್ರೆಸ್‌ನ ಸಂಚಾಲಕ ಶ್ರೀ ಯು. ಸಂಜೀವ, ಯಂ. ಎ. ಖಾದರ್, ವಿಧಾನ ಪರಿಷತ್ ಸದಸ್ಯ ಶ್ರೀ ಕೆ. ಜತ್ತಪ್ಪ ರೈ, ಕಾಂ. ಸೇವಾದಳದ ಪ್ರದೇಶ ಸಂಚಾಲಕ ಶ್ರೀ ಪಿ. ಭೋಜರಾಜ ಹೆಗ್ಡೆ ಮೊದಲಾದವರು ಅಧ್ಯಕ್ಷರನ್ನು ಅಭಿನಂದಿಸುತ್ತಾ ತಮ್ಮ ಸಹಕಾರದ ಭರವಸೆಯನ್ನಿತ್ತರು. ಮಾಜಿ ಅಧ್ಯಕ್ಷ ಶ್ರೀ ಬಿ ಗಂಗಾಧರದಾಸರು ತಮ್ಮ ಅಧಿಕಾರಾವಧಿಯಲ್ಲಿ ಸಹಕರಿಸಿದವರನ್ನು ಸ್ಮರಿಸಿ ಹೊಸ ಅಧ್ಯಕ್ಷರನ್ನು ಅಭಿನಂದಿಸಿದರು.

ಡಾ। ಆಳ್ವರು ಮಾತಾಡಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಶೀಘ್ರದಲ್ಲಿಯೇ ಜರಗಲಿದ್ದು ಅದಕ್ಕೆ ಸಿದ್ಧತೆಗಳನ್ನು ನಡೆಸಬೇಕೆಂದು ಸಲಹೆಯಿತ್ತರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಕೆ. ಮಾಮಪ್ಪರು ಧನ್ಯವಾದ ಸಲ್ಲಿಸಿದರು.

ಶಿರ್ವ ರೋಟರಿ ಕ್ಲಬ್ಬಿನ ಪದಗ್ರಹಣ ಸಮಾರಂಭ

ಶಿರ್ವ ರೋಟರಿ ಕ್ಲಬ್ಬಿನ ನೂತನ ಕಾರ್ಯಕಾರಿ ಮಂಡಳಿಯ ಪದಗ್ರಹಣ ಸಮಾರಂಭವು ಇತ್ತೀಚೆಗೆ ರೆ। ಫಾ। ನಿಕ್ಸನ್ ಸಲ್ಡಾನ್ಹರವರ ಅಧ್ಯಕ್ಷತೆಯಲ್ಲಿ ಜರಗಿತು. ಸೆನಾಸಿನ ವೆ। ರೆ। ಫಾ। ಹೆನ್ರಿ ಕ್ಯಾಸ್ತಲಿನೊ ರವರು ಪ್ರಧಾನ ಅತಿಥಿಗಳಾಗಿದ್ದರು.

ಡಾ। ಕೆ ಎಲ್. ವೆಂಕಟಕೃಷ್ಣರವರು ವರದಿ ವಾಚನವನ್ನೂ, ಡಾ। ಮೋಹನದಾಸ್ ಹೆಗ್ಡೆಯವರು ಸಂದೇಶವಾಚನವನ್ನೂ ಮಾಡಿದರು.

ಈ ಸಂದರ್ಭದಲ್ಲಿ ಸ್ಥಳೀಯ ಹಾಯರ್ ಸೆಕೆಂಡರಿ ಶಾಲೆಗಳಲ್ಲಿ ಪಿ. ಯು. ಸಿ. ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನೂತನ ಅಧ್ಯಕ್ಷ ಪಿ ಸಿ ಶೆಟ್ಟಿ ಶಿರ್ವ ರವರ ಕಾಲೋಚಿತ ಭಾಷಣಾನಂತರ ಕಾರ್ಯದರ್ಶಿ ಕೆ. ವಾಸುದೇವ ಶೆಟ್ಟಿ ಧನ್ಯವಾದವಿತ್ತರು.

READ &
ADVERTISE IN
NAVAYUGA Weekly

ವಿಜ್ಞಾನ–

ದಕ್ಷಿಣ ಭಾರತಕ್ಕೆ ಒಂದು ಕೊಡುಗೆ

ಹಾರ್ವರ್ಡ್ ವಿಶ್ವ ವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸುತ್ತಿದ್ದ ಇಬ್ಬರು ಅಮೆರಿಕನ್ ವಿಜ್ಞಾನಿಗಳು 1946ರಲ್ಲಿ ಒಂದು ಅಣು ಸಂಶೋಧನ ಸಾಧನವನ್ನು ಕಂಡು ಹಿಡಿದರು. ಅದನ್ನು ಅವರು ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರಿಸೋನೇಟರ್ ಎಂದು ಕರೆದರು. ಅನಂತರ ಕಳೆದ 26 ವರ್ಷಗಳಿಂದ ಈ ಸಾಧನ ಅಣು ಸಂಶೋಧನ ವಿಜ್ಞಾನಿಗಳು ವಿಶ್ಲೇಷಕ ರಸಾಯನ ಶಾಸ್ತ್ರಜ್ಞರು ಮತ್ತು ಭೂವಿಜ್ಞಾನಿಗಳಿಗೆ ಮುಖ್ಯ ಉಪಕರಣವಾಗಿದೆ.

ಇತ್ತೀಚೆಗೆ ಈ ಸಾಧನ ದಕ್ಷಿಣ ಭಾರತಕ್ಕೆ ಬಂದಿತು. ಮಧುರೆಯ ಅಮೆರಿಕನ್ ಕಾಲೇಜಿನ ಭೌತಶಾಸ್ತ್ರದ ಲೆಕ್ಚರರ್ ಒಬ್ಬರು ಈ ಸಾಧನವನ್ನು ನಿರ್ಮಿಸಿದರು.

ತಾವು ನಿರ್ಮಿಸಿರುವ ಯಂತ್ರವು ರಸಾಯನ ಶಾಸ್ತ್ರಜ್ಞರಿಗೆ ದ್ರವ್ಯ ರಾಶಿಯ ರಚನೆಯನ್ನು ವಿಶ್ಲೇಷಿಸಲು ಸಹಾಯಕವಾಗುವುದು ಮತ್ತು ಭೂವೈಜ್ಞಾನಿಕ ಸರ್ವೆ ಕಾರ್ಯದಲ್ಲಿ ಉಪಯುಕ್ತ ಸಾಧನವಾಗುವುದು ಎಂದು ಅಮೆರಿಕನ್ ಕಾಲೇಜಿನ ಲೆಕ್ಚರರ್ ಶ್ರೀ ಪೀಟರ್ ಜಯ ಪಾಂಡ್ಯನ್ ಅವರು ನಂಬಿದ್ದಾರೆ.

1969ರಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದಾಗ ತಮಗೆ ಈ ರಿಸೋನೇಟರ್‌ನಲ್ಲಿ ಆಸಕ್ತಿ ಹುಟ್ಟಿತು ಎಂದು ಈ ಯುವಕ ವಿಜ್ಞಾನಿ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿದರು. ಅವರು ಓಹಾಯೋ ವಿಶ್ವವಿದ್ಯಾನಿಲಯದಲ್ಲಿ ಪ್ರೌಢ ಭೌತಶಾಸ್ತ್ರದಲ್ಲಿ ಬ್ಯಾಚಲರ್ ಡಿಗ್ರಿಗಾಗಿ ಅಧ್ಯಯನ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಅಮೆರಿಕನ್ ಭೌತ ಶಾಸ್ತ್ರಜ್ಞರ ಸಹವಾಸವು ತಮಗೆ ನ್ಯೂಕ್ಲಿಯರ ಮ್ಯಾಗ್ನೆಟಿಕ್ ರಿಸೋನೇಟರನ್ನು ರಚಿಸಲು ಸ್ಫೂರ್ತಿ ನೀಡಿತು ಎಂದು ಅವರು ಹೇಳುತ್ತಾರೆ.

ಓಹಾಯೋ ವಿಶ್ವವಿದ್ಯಾನಿಲಯದಲ್ಲಿ ಡಾ| ಬ್ರಾನ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳ ಒಂದು ತಂಡದವರು ಯಂತ್ರವೊಂದನ್ನು ನಿರ್ಮಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಆ ಅನುಭವದ ಪ್ರಯೋಜನವನ್ನು ಪಡೆದುಕೊಂಡು ಶ್ರೀ ಜಯಪಾಂಡ್ಯನ್ ತಮ್ಮ ಮಾಸ್ಟರ್ಸ್ ಡಿಗ್ರಿಗೆ ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರಿಸೋನೇಟರ್ ಬಗೆಗೆ ಪ್ರಬಂಧವನ್ನು ಸಿದ್ಧಪಡಿಸಿದರು.

ಈ ಭಾರತೀಯ ವಿಜ್ಞಾನಿ ಅಮೆರಿಕನ್ ಕಾಲೇಜಿನ ತಮ್ಮ ಇಬ್ಬರು ವಿದ್ಯಾರ್ಥಿಗಳ ಸಹಾಯದೊಡನೆ ಈ ರಾಷ್ಟ್ರದ ಪ್ರಥಮ ರಿಸೊನೇಟರನ್ನು ನಿರ್ಮಿಸಿದರು. "ನನ್ನ ಈ ಕಾರ್ಯದಲ್ಲಿ ಓಹಾಯೋ ಸಂಶೋಧನೆಯಲ್ಲಿ ಗಳಿಸಿದ ಅನುಭವವು ಅಮೂಲ್ಯ ರೀತಿಯಲ್ಲಿ ನೆರವಾಯಿತು." ಎಂದು ಅವರು ನುಡಿದರು.

'ಇದಕ್ಕೆ ಅಗತ್ಯವಾದ ಸಲಕರಣೆಗಳೆಲ್ಲ ಸ್ಥಳೀಯವಾಗಿಯೇ ದೊರೆಯುದರಿಂದ' ಈ ಸಾಧನಕ್ಕೆ ಕೇವಲ 300 ರೂ.ಗಳ ವೆಚ್ಚ ತಗಲುವುದು ಎಂದು ಶ್ರೀ ಜಯಪಾಂಡ್ಯನ್ ಹೇಳಿದರು. ಅವರೀಗ ಅದರ ವಿನ್ಯಾಸವನ್ನು ಉತ್ತಮ ಪಡಿಸಲು ಪ್ರಯತ್ನಿಸುತ್ತಿದ್ದಾರೆ. 'ಇದೊಂದು ಉತ್ತಮ ಶಿಕ್ಷಣ ಸಾಧನ, ಮತ್ತು ಇದು ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಪ್ರಾತ್ಯಕ್ಷಿಕೆ ಉಪಕರಣವಾಗುವುದು' ಎಂದು ಅವರು ಹೇಳುತ್ತಾರೆ.

ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರಿಸೋನೇಟರ್ ಒಂದು ವಿದ್ಯುತ್ ಆಯಸ್ಕಾಂತ, ಒಂದು ರೇಡಿಯೋ ಫ್ರೀಕ್ವೆನ್ಸಿ ಆಸಿಲೇಟರ್ ಮತ್ತು ಒಂದು ಆಂಪ್ಲಿಫೈಯರ್ ಇವುಗಳಿಂದ ಕೂಡಿರುವುದು. ಜಯಪಾಂಡ್ಯನ್ ಅವರ ಪ್ರಕಾರ ಈ ಉಪಕರಣ "ಅನೇಕರು ಭಾವಿಸಿರುವಷ್ಟು ತೊಡಕಾದುದಲ್ಲ."

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ವಿಜ್ಞಾನಿಗಳೂ ಇಂಥದೇ ಒಂದು ಪ್ರಾಜೆಕ್ಟ್ ಬಗೆಗೆ ಸಂಶೋಧನೆ ನಡೆಸುತ್ತಿದ್ದಾರೆ ಎಂದು ಮಧುರೆಯ ಭೌತವಿಜ್ಞಾನಿ ಹೇಳಿದರು.

ಅಮೆರಿಕನ್ ಕಾಲೇಜಿನ ವಿಜ್ಞಾನ ವಿದ್ಯಾರ್ಥಿಗಳು, ತಮ್ಮ ಕಾಲೇಜಿನ ಪ್ರಯೋಗಶಾಲೆಯಲ್ಲಿ ಈ ಸಾಧನವನ್ನು ಸ್ಥಾಪಿಸಲು ಸಾಧ್ಯಗೊಳಿಸಿದುದಕ್ಕಾಗಿ ಶ್ರೀ ಜಯಪಾಂಡ್ಯನ್ ಅವರಿಗೆ ಆಭಾರಿಯಾಗಿದ್ದಾರೆ. ಪ್ರಾಕ್ಟಿಕಲ್ ಫಿಸಿಕ್ಸ್‌ನಲ್ಲಿ ಕಂಪ್ಯೂಟರ್‌ಗಾಗಿ ಲೆಕ್ಕಾಚಾರ ಮಾಡಲು ಇದು "ಪರಿಣಾಮಕಾರೀ ಸಾಧನ"ವಾಗಿ ಕಾರ್ಯ ನಿರ್ವಹಿಸುವುದು ಎಂದು ವಿದ್ಯಾರ್ಥಿಗಳು ಹೇಳುತ್ತಾರೆ.

ಟ್ರಾನ್ಸಿಸ್ಟರ್ ಸಜ್ಜಿತ ಟಿ. ವಿ. ಸೆಟ್‌ಗಳು

ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವಿದ್ಯುಚ್ಛಕ್ತಿ ಉಪಕರಣಗಳ ವಿಭಾಗದವರು ಟ್ರಾನ್ಸಿಸ್ಟರ್ ಸಜ್ಜಿತ ಟೆಲಿವಿಜನ್ ಸೆಟ್‌ಗಳನ್ನು ಅಭಿವೃದ್ಧಿ ಪಡಿಸಿದ್ದಾರೆ.

ಅಣುಶಕ್ತಿ ಮಂಡಲಿಯ ನಿಯಂತ್ರಣಕ್ಕೆ ಒಳಪಟ್ಟಿರುವ ಭಾರತದ ವಿದ್ಯುಚ್ಛಕ್ತಿ ಉಪಕರಣಗಳ ಕಾರ್ಪೋರೇಷನ್ ತಾನು ಮೊದಲು ಉತ್ಪಾದಿಸಿರುವ ಟ್ರಾನ್ಸಿಸ್ಟರ್ ಸಜ್ಜಿತ ಟೆಲಿವಿಷನ್ ಸೆಟ್‌ಗಳಲ್ಲಿ ಕೆಲವನ್ನು ಈಗಾಗಲೇ ಪ್ರಯೋಗಾರ್ಥವಾಗಿ ಬಳಕೆಗೆ ತಂದಿದೆ.

ಪಿಲಾನಿಯಲ್ಲಿರುವ ಕೇಂದ್ರ ವಿದ್ಯುಚ್ಛಕ್ತಿ ಉಪಕರಣಗಳ ಎಂಜನೀಯರಿಂಗ್ ಸಂಸ್ಥೆ ಮತ್ತು ಇತರ ತಯಾರಕರು ಟ್ರಾನ್ಸಿಸ್ಟರ್ ಸಜ್ಜಿತ ಟೆಲಿವಿಷನ್ ಉಪಕರಣಗಳ ತಯಾರಿಕೆಯಲ್ಲಿ ತೊಡಗಿದ್ದಾರೆ.

ಸಂಪೂರ್ಣವಾಗಿ ದೇಶದಲ್ಲೇ ಅಭಿವೃದ್ಧಿ ಪಡಿಸಲಾದ ಟ್ರಾನ್ಸಿಸ್ಟರ್ ಸಜ್ಜಿತ ರೇಡಿಯೋ ಸೆಟ್‌ಗಳು ಈ ವರ್ಷಾಂತ್ಯದ ಹೊತ್ತಿಗೆ ಗ್ರಾಹಕರಿಗೆ ಸಿಗುವ ನಿರೀಕ್ಷೆಯಿದೆ.

ಕುಂದಾಪುರ ರೋಟರಿ ಕ್ಲಬ್ ಡಾ| ಶಿವರಾಮ ಕಾರಂತರಿಗೆ ಗೌರವ ಸದಸ್ಯತ್ವ

ಕಳೆದ ತಾ. 16ರಂದು ಕುಂದಾಪುರದ ರೋಟರಿ ನರ್ಸರಿ ಶಾಲಾ ಪ್ರಾಂಗಣದಲ್ಲಿ ಜರಗಿದ ಸಮಾರಂಭದಲ್ಲಿ ಡಾ. ಕೆ. ಶಿವರಾಮ ಕಾರಂತರು ಕ್ಲಬ್ಬಿನ ಗೌರವ ಸದಸ್ಯತ್ವ ಸ್ವೀಕರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶ ಶ್ರೀ ಕೋ. ಚೆನ್ನಬಸಪ್ಪನವರು ರೋಟರಿ ನರ್ಸರಿ ಶಾಲೆಗೆ ಧನ ಸಹಾಯ ನೀಡಿದ ವ್ಯಕ್ತಿಗಳ ಭಾವಚಿತ್ರಗಳನ್ನು ಅನಾವರಣ ಮಾಡಿದರು.

ಕ್ಲಬ್ ಅಧ್ಯಕ್ಷ ಡಾ. ಬಿ. ಭುಜಂಗ ಹೆಗ್ಡೆಯವರು ಶ್ರೀ ವಿ. ಕೆ. ಶೆಟ್ಟರಿಗೆ ಅಧಿಕಾರ ವಹಿಸಿ ಕೊಟ್ಟು ಅಭಿನಂದಿಸಿದರು. ನೂತನ ಅಧ್ಯಕ್ಷ ಶ್ರೀ ವಿ. ಕೆ. ಶೆಟ್ಟರು ರೋಟರಿ ಉದ್ದೇಶಿಸಿರುವ 50,000 ರೂ. ವೆಚ್ಚದ 'ಕ್ಷಯ ರೋಗಿಗಳ ಚಿಕಿತ್ಸಾಲಯ' ನಿರ್ಮಾಣ ಪೂರ್ತಿಗೊಳಿಸುವ ಆಶಯ ವ್ಯಕ್ತಪಡಿಸಿದರು.

ಕ್ಲಬ್ಬಿನ ಪರವಾಗಿ ನೂತನ ಕಾರ್ಯದರ್ಶಿ ಶ್ರೀ ಎ. ಎಸ್. ಎನ್. ಹೆಬ್ಬಾರರು ಡಾ| ಕಾರಂತರಿಗೆ ಸನ್ಮಾನಪತ್ರ ಅರ್ಪಿಸಿದ ಬಳಿಕ ನೂತನ ಅಧ್ಯಕ್ಷ ಶ್ರೀ ವಿ. ಕೆ. ಶೆಟ್ಟರು ರೋಟರಿ ಲಾಂಛನ ತೊಡಿಸುವ ಮೂಲಕ ಡಾ| ಕಾರಂತರಿಗೆ ಗೌರವ ಸದಸ್ಯತ್ವ ನೀಡಿದರು.

ಡಾ| ಕಾರಂತರು ಮಾತಾಡುತ್ತಾ 'ಸಮಾಜಸೇವೆ' ಕರ್ತವ್ಯವೆಂಬ ಭಾವನೆ ಬೆಳೆಯಬೇಕೆಂದು ಹೇಳಿ ಮನೋರಂಜನೆ, ಕ್ರೀಡೆ, ಕಲೆಗಳಲ್ಲಿ ಜನರು ಜೀವನ ... ಸುಂದರವಾಗಿ ನಡೆಸುವಂತೆ ... ಹೇಳಿದರು. ಅವರು ರೋಟರಿ ವತಿಯಿಂದ ನಡೆಸಲಾದ ಜೀವವಿಮಾ ಪ್ರಚಾರ ... ಪ್ರಶಸ್ತಿಗಳನ್ನಿತ್ತರು.

ಉಡುಪಿ ಜೀವವಿಮಾ ಅಭಿವೃದ್ಧಿ ಅಧಿಕಾರಿ ಶ್ರೀ ಕೃ. ಕೆ. ಶ್ರೀನಿವಾಸನ್‌ರು ಮಾತಾಡಿದ ಬಳಿಕ ಶ್ರೀ ಕೆ. ಚನ್ನಬಸಪ್ಪನವರು ... ಡಾ| ಕಾರಂತರ ... ಜನರ ಕಲ್ಯಾಣಕ್ಕಾಗಿ ... ಮಾತಿಗಳನ್ನು ... ಶ್ರೀ ಕೊಗ್ಗ ಕಾಮತರು 'ನರಕಾಸುರ ವಧೆ' ... ಪ್ರದರ್ಶಿಸಿದರು.

ಪುತ್ತೂರು ಜೂ. ಕಾಲೇಜಿನ ಉದ್ಘಾಟನೆ

ಪುತ್ತೂರು ಜೂ. ಕಾಲೇಜಿನ ಉದ್ಘಾಟನೆಯನ್ನು ಡಾ| ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಎಸ್. ಎನ್. ಅಡಿಗರು ನೆರವೇರಿಸಿದರು. ಆರಂಭದಲ್ಲಿ ತಾ. ಅ. ಮಂಡಳಿಯ ಹಾಗೂ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಸಂಕಪ್ಪ ರೈಗಳು ಸ್ವಾಗತಿಸಿದ ಬಳಿಕ ಪ್ರಿನ್ಸಿಪಾಲ್ ಶ್ರೀ ಎಂ. ಅಣ್ಣಪ್ಪನವರು ಸಂಸ್ಥೆ ಸಾಧಿಸಿರುವ ಪ್ರಗತಿಯನ್ನು ವಿವರಿಸಿ ಸ್ಥಳೀಯ ಜನತೆಯ ಸಹಕಾರವನ್ನು ಸ್ಮರಿಸಿದರು.

ಶ್ರೀ ಕೆ. ಎಸ್. ಎನ್. ಅಡಿಗರು ಉದ್ಘಾಟಿಸುತ್ತಾ ಶೈಕ್ಷಣಿಕ ಕ್ಷೇತ್ರದಲ್ಲಿ ಪದೇ ಪದೇ ತಾತ್ಕಾಲಿಕ ಗುರಿಯ ಬದಲಾವಣೆಗಳು ನಡೆಯುತ್ತಿರುವುದಕ್ಕೆ ಬೇಸರ ಸೂಚಿಸಿ, ಮುಂದೆ, ಇಲ್ಲಿ ವಿದ್ಯಾಭ್ಯಾಸ ಪಡೆದವರಾದರೂ ಶಿಕ್ಷಣದ ಘನತೆ, ಗೌರವ ಮತ್ತು ಉಪಯುಕ್ತತೆಗಳ ಕಡೆಗೆ ಗಮನಹರಿಸುವಂತಾಗಲಿ ಎಂದು ಹಾರೈಸಿದರು.

ಟೌನ್ ಪಂಚಾಯತ್ ಅಧ್ಯಕ್ಷ ಶ್ರೀ ಬೈಂದೂರು ಪ್ರಭಾಕರರಾಯರು ಸಂಸ್ಥೆಗೆ ಉತ್ತರೋತ್ತರ ಶ್ರೇಯಸ್ಸು ಕೋರಿದರು.

ಡಾ| ಕಾರಂತರು ಮಾತಾಡುತ್ತಾ, ಸರಿಯಾದ ವ್ಯವಸ್ಥೆಗಳಿಲ್ಲದೆ ಜೂ. ಕಾಲೇಜುಗಳಿಗೆ ಅನುಮತಿ ನೀಡುತ್ತಿದ್ದರೆ ವಿದ್ಯಾದಾನ ಮಾಡಿದಂತಾಯಿತೇ? ಸರಕಾರದ ವ್ಯವಸ್ಥೆಯಲ್ಲಿ ಖಾಸಗೀ ಕಾಲೇಜುಗಳನ್ನು ನಡೆಸುವುದು, ಕ್ಯಾಪಿಟೇಶನ್ ಶುಲ್ಕ ವಿಧಿಸುವುದು ಅರ್ಥರಹಿತವಾಗಿದೆ. ಹಾಗಿದ್ದರೆ ವಿದ್ಯಾದಾನದ ಹೊಣೆ ಯಾರದು? ಸರಕಾರದ್ದೆ? ಜನರದ್ದೆ? ಎಂದು ಪ್ರಶ್ನಿಸಿ ಸಂಸ್ಥೆಯು ಮೇಲಿನ ಸವಲತ್ತುಗಳನ್ನು ಅನುವದಿಸಿಕೊಂಡಂತೆ ಕೆಳಗಿನ ತರಗತಿಗಳನ್ನು ಕಳೆದುಕೊಂಡದ್ದನ್ನು ಆಕ್ಷೇಪಿಸಿದರು.

ಶ್ರೀ ಟಿ. ಕೃಷ್ಣಯ್ಯನವರು ವಂದನೆಯಲ್ಲಿ ವಹಿಸಿದರು.

o o o

ನಾಡಿನ ಕೀರ್ತಿಗೆ ಒಕ್ಕಲಿಯ ಪತ್ರಿಕೆಗಳು ಸಹಕಾರಿ. ಅವನ್ನು ಪ್ರೋತ್ಸಾಹಿಸಿ ನಾಡು ಪ್ರಗತಿಯನ್ನು ಪಡೆಯಬಹುದು.

o o o

ಎಲ್ಲಿಗಾದರೂ ಹೋಗಿ ಅಧಿಕಾರದ ಹಿಂದೆ ಜಗತ್ತಿನಲ್ಲಿ ಎಷ್ಟೋ ಕುಶಲರು ಮೂಲೆ ಗುಂಪಾಗಿದ್ದಾರೆ.

o o o

(ಮೂರನೇ ಪುಟದಿಂದ)

ಶ್ರೀ ಪೈಯವರು ಈಗ ರೈಲ್ವೆ ಮಂತ್ರಿಯಾಗಿದ್ದಾರೆ. ಪ್ರಾಯಃ ರೈಲ್ವೆ ಮಂತ್ರಿಯಾದ ಕನ್ನಡಿಗರಲ್ಲಿ ಇವರು ಮೂರನೆಯವರು. ದಕ್ಷಿಣ ಕನ್ನಡ-ಕರ್ನಾಟಕಗಳಲ್ಲಿ ಇವರ ಕಾಲದಲ್ಲಿ ಹೆಚ್ಚಿನ ರೈಲುದಾರಿ ನಿರ್ಮಾಣವಾಗಲಿ ಎಂದು ಹಾರೈಸುವುದು ಸಂಕುಚಿತ ಮನೋವೃತ್ತಿಯಾಗಲಾರದು. ಅದರೆ, ಇದುವರೆಗೂ ಕಡೆಗಣಿಸಲ್ಪಟ್ಟ ಕ್ಷೇತ್ರಗಳಲ್ಲಿ ಹೊಸ ರೇಲ್ವೆ ಸ್ಥಾಪನೆಯಾಗಲಿ, ಆರಂಭವಾದ ರೈಲ್ವೆಗಳು ಶೀಘ್ರವಾಗಿ ಮುಕ್ತಾಯಗೊಳ್ಳಲಿ, ನಾನಾ ಲೋಪದೋಷಗಳ ಮನೆಮಾತಾಗಿ ಉಳಿದು ಬಂದಿರುವ ನಮ್ಮ ರೈಲ್ವೆಗಳು ದಕ್ಷತೆ-ಸಕ್ಷತೆಗೆ ಪ್ರಾಯಸೂಚಕವಾಗಲಿ ಎಂದು ಪ್ರಾರ್ಥನಾ ರೂಪವಾಗಿ ಆಶಿಸುವುದರಲ್ಲಿ ತಪ್ಪೇನೂ ಇಲ್ಲ.

'ನವಯುಗ'ದ ಹಿತೈಷಿಭಿಮಾನಿಗಳ ಅಗ್ರಪಂಕ್ತಿಯಲ್ಲಿರುವ ಶ್ರೀ ಪೈಯವರಿಗೆ ಹೊಸ ಅಧಿಕಾರ ಅವರ ಸೇವಾಧರ್ಮದ ಕಂಪು ಬೀರಲು ಉತ್ತಮ ಅವಕಾಶವೊದಗಿಸಲಿ, ಗಂಧದ ಮನುಷ್ಯನಾದ ಶ್ರೀ ಪೈ ಭಾರತಕ್ಕೂ ವಿಶಾಲ ವಿಶ್ವಕ್ಕೂ ಕಂಪು ಬೀರುವಂತೆ ಭಗವಂತನು ಅನುಗ್ರಹಿಸಲಿ ಎಂಬುದು 'ನವಯುಗ'ದ ಹೃದಯದಾಳದ ಹೆಬ್ಬಯಕೆ.

●●

ನವಯುಗದ 52ನೇ ಹೊಸ ವರ್ಷ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 51ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿಂದ 52ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯವಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್.

(ಎರಡನೇ ಪುಟದಿಂದ)

ಆಕೆ ಮಾತು ನಿಲ್ಲಿಸಿದಳು.

ಸಭೆಯಲ್ಲಿ ಕುಳಿತು ಕೇಳುತಿದ್ದ ಜನ, ಕುತೂಹಲದಿಂದ ಆವಳತ್ತ ನೋಡಿದರು.

'ರಾಜಧಾನಿಯಲ್ಲಿ ನನಗಾಗಿ ಶೋಧ ನಡೆಯಿತು. ಅವರ ಕೈಗೆ ನಾನು ಸಿಕ್ಕಲಿಲ್ಲ. ನಾನು ಸತ್ತಿರಬೇಕೆಂದು ಅವರು ಸುಮ್ಮನಾದರು. ಕೊನೆಗೆ ಮರೆತರು. ಪ್ರೀತಿ—ವಿಶ್ವಾಸ ಎನ್ನುವುದು ಕಣ್ಣು ಮುಂದಿರುವಾಗಲೇ. ಒಂದು ದಿನ ಹೀಗೆ ಕಾಡಿನಲ್ಲಿ ಅಲೆಯುತಿದ್ದಾಗ ಬೇಟೆಯಾಡಲೆಂದು ಬಂದ ಚಾಳುಕ್ಯ ಮಾಂಡಳಿಕರೊಬ್ಬರ ಕಣ್ಣಿಗೆ ಬಿದ್ದೆ. ಅವರಿಗೆ ಆಗ ತುಂಬು ತಾರುಣ್ಯ. ಅವರು ಬಲವಂತ ಮಾಡಿ ನನ್ನನ್ನು ತಮ್ಮ ವಾಡೆಗೆ ಒಯ್ದು, ಅಲ್ಲೊಂದು ಗೃಹದಲ್ಲಿ ಬಂಧನದಲ್ಲಿಟ್ಟರು.'

ಆಕೆ ತುಸು ನಿಲ್ಲಿಸಿ

'ಒಂದು ರಾತ್ರಿ ಆ ರಾಜಕುಮಾರರು, ನನ್ನ ಮನಸ್ಸಿಗೆ ವಿರೋಧವಾಗಿ ನನ್ನ ಮೈಮೇಲೆ ತಮ್ಮ ಸ್ವಾಮಿತ್ವ ಸ್ಥಾಪಿಸಿದರು. ಅಕ್ರಮವಾಗಿ ಭೋಗಿಸಿದರು. ಆ ಕ್ರೀಡೆಯ ಫಲದಿಂದ ನಾನು ಫಲವತಿಯಾದೆ.

ಅನಂತರ ನಾನು ಅನುಭವಿಸಿದ್ದು ಅಜ್ಞಾತವಾಸ. ಆದ ದುರಂತಕ್ಕೆ ಅನಂತರ ಆ ರಾಜಕುಮಾರರು ಪರಿತಪಿಸಿದರು. ಆದರೆ ಆಗಿ ಹೋದ ಅನರ್ಥವನ್ನು ತಪ್ಪಿಸಲಾರಿಂದ ಆಗುತ್ತದೆ? ಬೇರೆ ದಾರಿ ಕಾಣದೆ ಮಾನಸಿಕವಾಗಿ ಕೊರಗಿದೆವು. ಕೊನೆಗೊಂದು ದಿನ ಹೊಟ್ಟೆಯೊಳಗಿದ್ದ ಕೂಸು ಈ ಲೋಕಕ್ಕೆ ಬಂತು. ಲೋಕದ ಕಣ್ಣಾಗಿ ಬೆಳೆಯಿತು.

ಅಂದಿನಿಂದ ಆ ಮಗುವಿನ ಲಾಲನೆ—ಪಾಲನೆ ನನ್ನ ಬದುಕಾಯಿತು. ಅದರ ಪಾಲನೆ—ಪೋಷಣೆ, ವಿದ್ಯೆ—ಬುದ್ಧಿಗಳ ಹೊಣೆ ನನ್ನ ಪಾಲಿಗೆ ಬಂತು. ಆ ಮಗುವಿನ ಅಶನ—ವಸನಗಳ ಹೊರೆಯನ್ನು ಅದರ ಜನ್ಮದಾತರು ನಿರ್ವಹಿಸಿದರು. ಯಾವುದಕ್ಕೂ ಕೊರತೆಯಾಗಲಿಲ್ಲ. ಆ ಮಗು ಅವರ ಅಂಕೆಯಲ್ಲಿ, ಬಿಂಕದಿಂದ ಬೆಳೆಯಿತು.

ಅದೂ ಬಹಳ ಕಾಲ ನಡೆಯಲಿಲ್ಲ. ಅವರು ವಿಧಿವಶರಾದರು, ನನ್ನ ಕಂದ ತಬ್ಬಲಿಯಾಯಿತು.

'ಚಾಳುಕ್ಯ ರಾಜಕುಮಾರರೆಂದಿರಿ. ಆ ನಮ್ಮ ಜ್ಞಾತಿಗಳ ಹೆಸರನ್ನಿಷ್ಟು ತಿಳಿಸಿದರೆ'

'ಅವರ ಹೆಸರೂ ಹೇಳಬೇಕೇ?'

'ಆತಂಕ ಇಲ್ಲದಿದ್ದರೆ.'

'ಆತಂಕ ಎಲ್ಲಿ ಬಂತು? ಹಾಗೆ ಹೆಸರು ಹಿಡಿದು ಕರೆಯದಿರಲು, ಅವರೇನು, ನನ್ನ ಪತಿಗಳೇ? ಅವರು ನನ್ನ ಕಂದನ ತಂದೆ. ನಮ್ಮಿಬ್ಬರಿಗೂ ಅನ್ನ ಬಟ್ಟೆ ಕೊಟ್ಟು ನಮ್ಮನ್ನು ಪೋಷಿಸಿದವರು, ಒಂದು ದಿನ ಬಲಾತ್ಕಾರವಾಗಿ ಈ ಮೈಯ ಸುಖವನ್ನು ಅನುಭವಿಸಿದವರು, ಈ ಮನಸ್ಸಿನ ಯಜಮಾನರಾಗುತ್ತಾರೆಯೇ? ನಾನು ಮನಸಾ ಮಾಡಿಕೊಂಡ ಪತಿ ಇರುವಾಗ ಅನ್ಯರು ನನಗೆ ಪರಪುರುಷರು. ಆದರೆ—'

'ಆದರೆ ಏನು?'

'ಅವರ ಹೆಸರನ್ನುಚ್ಚರಿಸಲೂ ಮನಸ್ಸಿಗೆ ಹೇಸಿಕೆಯಾಗುತ್ತದೆ. ಅವರ ನಾಮಸ್ಮರಣೆಯಿಂದ ಪೂರ್ವಸ್ಮರಣೆ ಬಂದು ಸರ್ವಾಂಗ ದಹಿಸುತ್ತದೆ.'

'ಹಾಗಿದ್ದರೆ ಹೇಳಬೇಡ.'

'ಹೇಳದಿದ್ದರೆ ಕೆಡುಕಿಲ್ಲ. ಆದರೆ ಬಹಿರಂಗಪಡಿಸುವುದರಿಂದ ನನಗೂ ನನ್ನ ಕಂದನಿಗೂ ಮಾನಬರುತ್ತದೆ. ಇನ್ನಿಲ್ಲದ ಆ ಮಗನ ಹುಟ್ಟಿನ ಕುರಿತು ಜನರಾಡುವ ಸಣ್ಣ ಮಾತಾದರೂ ನಿಲ್ಲಬಹುದು. ಅದಕ್ಕಾಗಿ ಹೇಳಿಬಿಡುತ್ತೇನೆ. ಅವರ ಹೆಸರು ಅಮ್ಮರಸ.'

ಸಭೆ ಈ ಮಾತು ಕೇಳಿ ಬೆಚ್ಚಿಬಿದ್ದಿತು.

ಅರಿಕೇಸರಿಗೆ ಅಮ್ಮರಸರು ಅತಿ ಸಮೀಪದ ದಾಯಾದಿಗಳು.

'ನೀನು ನಮ್ಮವಳೇ ಆದಿಯಲ್ಲ ತಾಯಿ.'

'ಹೂಂ! ನಿಮ್ಮವಳು. ಅಲ್ಲ ಎಂದರೆ ನಡೆದೀತೆ? ಆದರೆ, ಒಪ್ಪಿಕೊಳ್ಳುವವರು ಬೇಕಲ್ಲ. ನನ್ನ ಶೀಲಹರಣದ ಮೊದಲ್ಗೊಂಡು, ನನ್ನ ಕುಲ ನನಗೆ ವ್ಯಾಕುಲವನ್ನುಂಟುಮಾಡಿದೆ. ನಾನು ಹುಟ್ಟಿದ್ದರ ಸಾರ್ಥಕತೆಯನ್ನು ನಿಚ್ಚಳವಾಗಿ ಬರೆದಿಟ್ಟ ಆ ನನ್ನ ಕಂದ ಅವನೂ ಹೊರಟು ಹೋದ ಮೇಲೆ, ಈ ಭೂಮಿಯ ಮೇಲಿನ ಬಾಂಧವ್ಯ ಕಟ್ಟಿಕೊಂಡು ಆಗ ಬೇಕಾದ್ದು ಏನಿದೆ? ನನ್ನದು ಮುಗಿದ ಕತೆ'

'ನಿನ್ನ ಚಿರಂಜೀವಿಗೆ ಏನಾಯಿತು?'

'ಅವನು ಮೈಮರೆತು ನಿಂತಾಗ ಅವನ ಅಸುವನ್ನೇ ಹೀರಿದ ನೀವೇ ಅವನಿಗೆ ಏನಾಯಿತು ಎಂದು ಕೇಳಿದರೆ'

'ನಾನೇ ಅವನನ್ನು ಕೊಂದೆನೇ?'

ಚಕಿತನಾಗಿ ಅರಿಕೇಸರಿ ಈ ಮಾತನ್ನಾಡಿದ.

ಸರ್ವಾರ್ಪಣ

'ಅದರ ಬಗ್ಗೆ ಇನ್ನೂ ಅನುಮಾನವೇ? ನಿಮ್ಮ ಕೈಯಾಕೆ ಕೊಂದಿರಲ್ಲ. ಈ ಕೈಗಳಲ್ಲಿ ಎತ್ತಿ ಆಡಿಸಿದ್ದೆ ನಿಮ್ಮನ್ನು. ನೀವೇ ನನ್ನ ತೋಳುಗಳನ್ನು ಕತ್ತರಿಸಿದಿರಿ. ಅದು ದೈವದ ದುರ್ವಿಪಾಕ'

'ಯುದ್ಧದಲ್ಲಿ ಮಲೆತು ನಿಂತ ಶತ್ರುಗಳನ್ನು ಸಹಸ್ರ ಸಂಖ್ಯೆಯಲ್ಲಿ ಕೊಂದಿದ್ದೇನೆ. ಅದರಲ್ಲಿ ನಿನ್ನ ಮಗನೂ ಸೇರಿರಬಹುದು. ಉದ್ದೇಶಪೂರ್ವಕ ನಾನು ಯಾರನ್ನೂ ವಧಿಸಿಲ್ಲ'

'ನನ್ನ ಮಗ, ನಿಮ್ಮ ಕೈಯಲ್ಲಿ ಹಾಗೆ ಸಾಯಲು ಪರದೇಶಿಯೇನು? ಅದು ಸಿಡಿಲ ಮೊಗ್ಗು; ಸಿಂಹದ ಮರಿ. ಎಂದೂ ಸಾಮಾನ್ಯರಂತೆ ಬಾಳಲಿಲ್ಲ. ನೀವು ಅವನನ್ನು ಮೋಸದಿಂದ ಕೊಂದಿರಿ, ನನ್ನ ಹೊಟ್ಟೆ ಉರಿಸಿದಿರಿ. ವಂಚನೆಗೆ ಪ್ರತಿವಂಚನೆ ಮಾಡ ಹೊರಟೆ, ದೈವ ಕಣ್ಣು ತೆರೆಯಲಿಲ್ಲ. ನೀವು ಬದುಕಿದಿರಿ'

ಅತ್ಯಂತ ಅಭಿಮಾನದಿಂದ ಹೇಳಿಕೊಳ್ಳುವ ಆವಳ ಮಗ ಯಾರಿರಬಹುದು. ಎಲ್ಲರಿಗೂ ಅದನ್ನರಿತುಕೊಳ್ಳುವ ಕುತೂಹಲ.

ಚಾಳುಕ್ಯ ಶಾಖೆಗೆ ಸೇರಿದ ಹಲವರ ಹೆಸರು ನೆನಪಿಗೆ ಬಂದಿತಾದರೂ, ಅವಾವುದೂ, ಅವಳ ಕತೆಯೊಡನೆ ಹೊಂದಿಕೊಳ್ಳಲಿಲ್ಲ.

ಈ ಬ್ರಹ್ಮಗಂಟನ್ನು ಆವಳಲ್ಲದೆ ಬೇರಾರೂ ಬಿಡಿಸುವಂತಿರಲಿಲ್ಲ.

ಕೇಳುವ ಧೈರ್ಯ ಯಾರಿಗೂ ಉಳಿಯಲಿಲ್ಲ.

ಆವಳೇ ಹೇಳಬೇಕು—

ಇಂಗಿತಜ್ಞೆಯಾದ ಆಕೆ ಅದನ್ನು ಗ್ರಹಿಸಿ "ನಿಮಗೆ ನನ್ನಿಂದ ತಿಳಿಸಿಕೊಳ್ಳಬೇಕಾದ ಇನ್ನೊಂದು ಸಂಗತಿ ಉಳಿದಿದೆ. ಅದೊಂದನ್ನು ತಿಳಿದು ಪ್ರಭುಗಳು ಕೊಡುವ ಶಿಕ್ಷೆಗೆ ತಲೆಬಾಗುತ್ತೇನೆ. ನಿಮ್ಮ ಪರಿಚಯದ ಬಪ್ಪರಸ ನನ್ನ ಕರುಳಿನ ತುಣುಕು.'

ಬಪ್ಪರಸ.

ಅವರು ಚಾಳುಕ್ಯರು.

ಅವರ ತಂದೆ ಅಪ್ರತಿಮ ವೀರರಾದ ಅಮ್ಮರಸರು.

ತಾಯಿ—ರಾಷ್ಟ್ರಕೂಟ ರಾಜಕನ್ಯೆ.

ಬಪ್ಪರಸರನ್ನು ಸಭೆ ಸ್ಮೃತಿಪಟಲಕ್ಕೆ ತಂದುಕೊಂಡಿತು.

ಪದ್ಮಿನಿ — ಬಪ್ಪರಸ.

ತಾಯಿ ಮಕ್ಕಳಲ್ಲಿ ಎಂತಹ ಹೋಲಿಕೆ.

ತಂದೆಯ ವೀರ್ಯ, ತಾಯಿಯ ಚಿರ ಕೌಮಾರ್ಯ, ಎರಡನ್ನೂ ಬಪ್ಪರಸರು ಬಳುವಳಿಯಾಗಿ ಪಡೆದಿದ್ದರು.

ಈ ಹೋಲಿಕೆಯೇ ಆರಂಭದಲ್ಲಿ ಅರಿಕೇಸರಿಯನ್ನು ವಿಮಂಚಿಸಿದ್ದು.

ಸಭೆ ಶಾಂತವಾಯಿತು.

ಅರಿಕೇಸರಿ ಎದ್ದು ನಿಂತ.

ನಿಧಾನವಾಗಿ ಮೆಟ್ಟಿಲುಗಳನ್ನಿಳಿದು ಬಂದು ಆವಳನ್ನು ಸಮೀಪಿಸಿದ.

ಪಹರೆಯವರು ಸರಿದು ನಿಂತರು.

ಆತ ಪಹರೆಯವನ ಕೈಯಲ್ಲಿದ್ದ ಕತ್ತಿಯನ್ನು ಕಸಿದುಕೊಂಡ.

ಆಕೆಯ ಮುಂದು ಆ ಕತ್ತಿಯನ್ನು ಹಿಡಿದು 'ಅಮ್ಮಾ ನೀವು ವೀರರಮಣಿ, ಮಾತ್ರವಲ್ಲ. ವೀರ ಜನನಿ. ನಿಮ್ಮ ನೋವಿಗೆ ನಾನು ಕಾರಣನಿದ್ದರೆ ಈ ಖಡ್ಗದಿಂದ ನನ್ನ ಶಿರಸ್ಸನ್ನು ಛೇದಿಸಿರಿ. ನಾನು ಸಾವಿಗೆ ಅಂಜುವುದಿಲ್ಲ. ನನ್ನ ಸಾವಿನಿಂದ ನಿಮ್ಮ ಕಂಬನಿ ಬತ್ತುವುದಾದರೆ ಈ ಸರ್ವಾರ್ಪಣಕ್ಕೆ ನಾನು ಸಿದ್ಧ' ಎಂದು ಕತ್ತನ್ನು ಬಗ್ಗಿಸಿದ.

ಅವನ ತಲೆ ಅವಳ ಪದಮೂಲದಲ್ಲಿತ್ತು.

ಕೈಗಿತ್ತ ಖಡ್ಗ ಪದ್ಮಿನಿಯ ಕೈಯಿಂದುರುಳಿತು.

'ಆಕೆ ಬಾಗಿ ಅರಿಕೇಸರಿಯನ್ನು — ಹೂವೆತ್ತುವಂತೆ —ಬಾಹುಯುಗ್ಮಗಳಲ್ಲಿ ಬಾಚಿಕೊಂಡಳು.

ಕಂಬನಿ ಧಾರೆ ಧಾರೆಯಾಗಿ ಅವಳ ಕಣ್ಣುಗಳಿಂದ ಹರಿಯುತ್ತಿತ್ತು.

ಸುತ್ತೆಲ್ಲ—ಕಣ್ಣೀರ ಕಡಲು.

ಆಕೆ ಸಾವರಿಸಿಕೊಂಡು "ತಾಯಿಯಾದವ ನನಗೆ ದೇಶವನ್ನೇ ತಬ್ಬಲಿಮಾಡೆಂದು ಹೇಳುವೆಯಾ? ನಿನ್ನದು ಸಾವನ್ನೂ ಗೆಲ್ಲುವ ಸ್ಥಿರ ಸಂಕಲ್ಪ. ಹೃದಯ ಮಂಥನ ಕಾಲದಲ್ಲಿ ಹಾಲಾಹಲ ಹುಟ್ಟುತ್ತದೆ; ಹಾಲಾಹಲವೂ ಹರಿಯುತ್ತದೆ. ಈಗ ನನ್ನಲ್ಲಿರುವುದು ಬರಿಯ ಅಮೃತ. ಅದನ್ನೇ ನಿನಗಿಂದು ಬಡಿಸಿದ್ದೇನೆ. ನೀನು ಚಿರಂಜೀವಿಯಾಗು"

'ದೇವಿಯ ಅನುಗ್ರಹ'

ತಥಾಸ್ತು ಎಂದಿತು ಅಲ್ಲಿ ಕಲೆತ ಜನ.

ಸಮಾಪ್ತಿ

ನಿರೀಕ್ಷಿಸಿರಿ

ಧಾರಾವಾಹಿಯಾಗಿ ಪ್ರಕಟವಾದ ಈ 'ಸರ್ವಾರ್ಪಣ' ಕಾದಂಬರಿಯು ನಮ್ಮ ವಾಚಕರನೇಕರ ಅಪೇಕ್ಷೆ ಮೇರೆಗೆ ಸದ್ಯವೇ ಪುಸ್ತಕ ರೂಪದಲ್ಲಿ ಪ್ರಕಟವಾಗಲಿರುವುದು. 200 ಪುಟಗಳಿಗೂ ಮಿಕ್ಕುವ ಈ ಪುಸ್ತಕದ ಬೆಲೆ ಮುಂದಾಗಿ ಹಣ ಕಳಿಸುವವರಿಗೆ ರೂ. 4/– ಪ್ರಕಟವಾದ ಬೆಲೆ ರೂ. 5/– ಟಪ್ಪಾಲು ಖರ್ಚು ರೂ. 1/–

NAVAYUGA 27-7-1972

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 83
Licensed to Post without Prepayment

ಮೈಸೂರು ರಾಜ್ಯದಲ್ಲಿ ಕುಟುಂಬ ಯೋಜನೆ

ಸಿದ್ಧಿ ಸಾಧನೆಯ ವಿಮರ್ಶೆ

ರಾಜ್ಯದಾದ್ಯಂತ ಇದೇ ಜುಲೈ 1ರಿಂದ ತೀವ್ರತಮ ಕುಟುಂಬ ಯೋಜನಾ ಚಳುವಳಿ ಆರಂಭವಾಗಿದೆ. ಪ್ರಸ್ತುತ ಲೇಖನದಲ್ಲಿ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಯೋಜನಾ ಇಲಾಖೆಯ ಡೈರೆಕ್ಟರ್ ಶ್ರೀ ಬಿ. ವಿ. ಪುಟ್ಟರಾಜ ಅರಸ್ ಅವರು ಕುಟುಂಬ ಯೋಜನಾ ಕ್ಷೇತ್ರದಲ್ಲಿ ರಾಜ್ಯವು ಸಾಧಿಸಿರುವ ಪ್ರಗತಿಯ ಪರಿಚಯ ಮಾಡಿಕೊಟ್ಟಿದ್ದಾರೆ.

ಎರಡು ಅತಿ ಮುಖ್ಯವಾದ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ, ಪ್ರಾಶಸ್ತ್ಯದ ದೃಷ್ಟಿಯಿಂದ ಕುಟುಂಬ ಯೋಜನೆಗೇ ಅಗ್ರ ಪೂಜೆ ಸಲ್ಲುತ್ತದೆ. ರಾಜ್ಯವು ಈ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಿರಂತರ ಪ್ರಗತಿ ಸಾಧಿಸುತ್ತಿದೆ. ಕುಟುಂಬ ಯೋಜನಾ ಕಾರ್ಯಕ್ರಮಗಳ ಅನುಷ್ಠಾನದತ್ತ ರಾಜ್ಯದ ಆರೋಗ್ಯ ಮತ್ತು ಕುಟುಂಬ ಯೋಜನಾ ಇಲಾಖೆ ಸಂಪೂರ್ಣ ಗಮನವನ್ನು ಕೇಂದ್ರೀಕರಿಸಿದ್ದು ಈ ದಿಸೆಯಲ್ಲಿ ಗಮನಾರ್ಹ ಪ್ರಗತಿ ಸಾಧ್ಯವಾಗಿದೆ.

ಕುಟುಂಬ ಯೋಜನಾ ಕಾರ್ಯಕ್ರಮದ ಮೇರೆಗೆ ಕಳೆದ ವರ್ಷ 71,095 ಸಂತಾನಶಕ್ತಿಹರಣ ಶಸ್ತ್ರಕ್ರಿಯೆಗಳನ್ನು, 30,400, ವಂಕಿ ಅಳವಡಿಸುವ ಕಾರ್ಯವನ್ನು 96,810 ಸಾಂಪ್ರದಾಯಿಕ ಗರ್ಭನಿರೋಧ ಸಾಧನಗಳ ಹಂಚಿಕೆಯ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ವಾಸ್ತವವಾಗಿ ಆ ವರ್ಷ 56,728 ಮಂದಿಗೆ ಸಂತಾನಶಕ್ತಿಹರಣ ಶಸ್ತ್ರಕ್ರಿಯೆಗಳನ್ನು ಮಾಡಲಾಯಿತಲ್ಲದೇ, 11,779 ಮಂದಿ ಸ್ತ್ರೀಯರಿಗೆ ವಂಕಿ ಅಳವಡಿಸಲಾಯಿತು. ಅಲ್ಲದೇ 45460 ಸಾಂಪ್ರದಾಯಿಕ ಗರ್ಭನಿರೋಧ ಸಾಧನಗಳನ್ನು ಹಂಚಲಾಯಿತು.

ಕೆಲವು ವಾರಗಳ ಹಿಂದೆ ದೆಹಲಿಯಲ್ಲಿ ಕುಟುಂಬಯೋಜನಾ ಕಾರ್ಯಕ್ರಮದ ಸಮಗ್ರ ಪ್ರಗತಿಯನ್ನು ವಿಮರ್ಶಿಸಲಾಯಿತು. ಈ ಕಾರ್ಯಕ್ರಮಕ್ಕೆ ಇನ್ನಷ್ಟು ಸ್ಫೂರ್ತಿ ನೀಡಲು ಹಾಗೂ ಈ ದಿಶೆಯಲ್ಲಿ ದೃಢಸಂಕಲ್ಪದಿಂದ ಕಾರ್ಯನಿರತವಾಗಲು ಅನುಸರಿಸಬೇಕಾದ ಮಾರ್ಗೋಪಾಯಗಳು ಚರ್ಚೆಗೆ ಬಂದವು. ಈ ನಿರ್ಧಾರದ ಮೇರೆಗೆ ರಾಜ್ಯವು ನಾಲ್ಕನೆಯ ಯೋಜನೆಯ ಶೇಷ ಅವಧಿಯಲ್ಲಿ ಈ ಗುರಿಸಾಧನೆಗಾಗಿ ಕುಟುಂಬಯೋಜನಾ ತೀವ್ರತಮ ಚಳುವಳಿಯನ್ನು ಆರಂಭಿಸಿದೆ. ಅಲ್ಪಾವಧಿಯಲ್ಲಿ ಪರಮಾವಧಿ ಫಲಶ್ರುತಿ ಪಡೆಯಲು ಹೊಸ ಅಧ್ಯಾಯವೊಂದನ್ನು ಆರಂಭಿಸಲಾಗಿದೆ. ಈ ಚಳುವಳಿಯ ಯಶಸ್ಸಿಗೆ ದೃಢಸಂಕಲ್ಪದಿಂದ ಯತ್ನಿಸಲಾಗುತ್ತಿದೆ.

ಹಿಂದಿನ ಸಾಧನೆಯ ಅವಲೋಕನ

ಹಿಂದಿನ ಸಾಧನೆಯ ಬಗ್ಗೆ ಅವಲೋಕಿಸಿದಾಗ, 1971-72ರ ವರೆಗೂ ಸಾಧನೆಯ ಗತಿ ಮಂದವಾಗಿದ್ದಿತೆಂದು ಹೇಳಬಹುದು. 4,80,000 ಸಂತಾನಶಕ್ತಿಹರಣ ಶಸ್ತ್ರಕ್ರಿಯೆಗಳನ್ನು ಮಾಡಲಾಯಿತು, 2,60,000 ವಂಕಿಗಳನ್ನು ಅಳವಡಿಸಲಾಯಿತು ಹಾಗೂ 2,50,000 ಸಾಂಪ್ರದಾಯಿಕ ಗರ್ಭನಿರೋಧಕ ಸಾಧನಗಳ ವಿತರಣೆ ಮಾಡಲಾಯಿತು. ಇಂತಹ ಒಂದು ಹಿನ್ನೆಲೆಯಲ್ಲಿ ಜನಸಂಖ್ಯೆ ಪ್ರತಿ ವರ್ಷ ಶೇಕಡ 2.4ರಷ್ಟು ಹೆಚ್ಚುತ್ತ ನಡೆದಿರುವುದರಿಂದ, ಜನನ ನಿಯಂತ್ರಣಕ್ಕಾಗಿ ಸಾಧಿಸಬೇಕಾಗಿರುವ ಕಾರ್ಯ ಬಹಳ ಮಹತ್ತರವಾಗಿ ಪರಿಣಮಿಸಿದೆ. ಈ ಸವಾಲನ್ನು ಎದುರಿಸಲು ಹೊಸ ತಂತ್ರವನ್ನು ರೂಪಿಸಲಾಗಿದ್ದು ಅದನ್ನು ಇಲ್ಲಿ ಕೊಡಲಾಗಿದೆ:—

*ಜಿಲ್ಲೆಯ ಕುಟುಂಬಯೋಜನಾ ಗುರಿಯಲ್ಲಿ ಅರ್ಧದಷ್ಟನ್ನು ಪ್ರಸ್ತುತ ವರ್ಷದ ಯಾವದೇ ಒಂದು ತಿಂಗಳಲ್ಲಿ ಏರ್ಪಡಿಸಲಾಗುವ ಸಾಮೂಹಿಕ ಆಂದೋಳನಗಳ ಕಾಲದಲ್ಲಿ ಸಾಧಿಸಬೇಕು. ಇನ್ನುಳಿದ ಅರ್ಧದಷ್ಟು ಗುರಿಯನ್ನು, ಕೆಳಗೆ ವಿವರಿಸಿದ ಕ್ರಮಗಳನ್ನು ಕೈಗೊಳ್ಳುವ ಮೂಲಕ ತಲುಪಬೇಕು.

* ಜಿಲ್ಲಾ ಕೇಂದ್ರದ ಎಲ್ಲಾ ಆಸ್ಪತ್ರೆಗಳಲ್ಲಿ ಇಡೀ ವರ್ಷವೂ ವಾರದಲ್ಲಿ ಐದು ದಿನ, ಪ್ರತಿನಿತ್ಯ, ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡಬೇಕು, ವಂಕಿ ಅಳವಡಿಸಬೇಕು.

* ಕುಟುಂಬಯೋಜನಾ ಸೌಕರ್ಯವುಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಸಣ್ಣ ಶಿಬಿರಗಳನ್ನು ಏರ್ಪಡಿಸಬೇಕು.

* ಪ್ರತಿಯೊಂದು ಗ್ರಾಮಪಂಚಾಯತಿ—ಬ್ಲಾಕ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಅವು ವರ್ಷದಲ್ಲಿ ಸಾಧಿಸಬೇಕಾದ ಗುರಿಯನ್ನು ನಿಗದಿ ಮಾಡಬೇಕು.

* ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಕಾರ್ಮಿಕರು ಸಕ್ರಿಯವಾಗಿ ಭಾಗವಹಿಸುವಂತೆ ಬೃಹತ್ ಕೈಗಾರಿಕಾ ಮಾಲೀಕರ ಸಹಕಾರ ಪಡೆಯಬೇಕು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜನತೆ ಕುಟುಂಬಯೋಜನೆಯನ್ನು ಅನುಸರಿಸುವಂತೆ ಅವರ ಮನವೊಲಿಸಲು ತೀವ್ರತಮ ಆಂದೋಳನಗಳನ್ನು ಆರಂಭಿಸಬೇಕು. ಈ ಎಲ್ಲಾ ಕಾರ್ಯಕ್ರಮಗಳ ಮೂಲಕ ವರ್ಷದ ಸಾಧನೆಯ ಶೇಷ ಗುರಿಯನ್ನು ಮುಟ್ಟಬೇಕು.

ಕುಟುಂಬಯೋಜನಾ ಕಾರ್ಯಕ್ರಮ ಜನತಾ ಕಾರ್ಯಕ್ರಮ. ಅದರ ಯಶಸ್ಸಿಗಾಗಿ ಸರ್ವರ ಪ್ರಾಮಾಣಿಕ ಸಹಕಾರ ಅಗತ್ಯ. ಜನತೆ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಭವ್ಯ ಭಾರತದ, ಸುಖೀ ಸಮಾಜದ ಶಿಲ್ಪಿಯಾಗಬೇಕು.

ಸದ್ಗುಣ

ಗುಣ ನೋಡಿ ಮನಂಜಿಸು
ಮಾದರಿಗೆ ಆರಿಯಾಗು,
ಗುಣವಂತನಾಗು!
ಧನವಂತನಾಗಲು ||೧||

ನಗೆ ಮೊಗದಿ ಮಾತನಾಡು
ಅನ್ಯರಾ ಸ್ಥಿತಿ ನೋಡು
ನಗಿಸವರ ನಲಿದಾಡು
ಜೀವಂತನಾಗು!
ಗುಣವಂತನಾಗಲು ||೨||

ಜಾತಿಯೆನಬೇಡ
ನೀತಿ ಬಿಡಬೇಡ
ಗುಣ ನೋಡು ವ್ಯಕ್ತಿಯಾ
ಹಣ ನೋಡಬೇಡ!
ನರನಾಗುವದು ಮುಖ್ಯ
ಗುಣವಿಲ್ಲಿ ಬೇಕು.
ಹೀಗಿರುವ ಬಾಳ್ವೆ
ಕಿರಿದಾದರೂ ಸಾಕು ||೩||

ಹಣಬೇಡ, ಗುಣಬೇಕು
ಮನೆ ಬೇಡ, ಮನ ಬೇಕು
ಸದ್ಗುಣಕೆ ಅನ್ಯರಾ ಮನ
ಕರಗುವದು ಸತ್ಯ
ದುರ್ಗುಣದಿ ನಮ್ಮರವು
ಆಗುವದು ಮಿಥ್ಯ ||೪||

ಕಿರಿದಾದರೂ ಬಾಳ್ವೆ
ಹಿರಿದಾಗುವದು ಆಗ!
ಸದ್ಗುಣವು ರಕ್ತದಲಿ
ಸ್ಥಿರವಾಗಿ ನಿಂತಾಗ ||೫||

—ಶ್ರೀ ಮ. ಗೋ. ಹೆಗಡೆ
(ಆನಂದ ಪುತ್ರ)

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ, ಮಂಗಳೂರು.

R. A. No. 1/1970

ಗಿರಿಜ ಹೆಗ್ಗಡ್ತಿ ಮತ್ತು ಇತರರು —ಅಪೀಲಾಂಟರು

ಮತ್ತು

ರಾಜೀವಿ ಹೆಗ್ಗಡ್ತಿ ಮತ್ತು ಪಗ್ಯರರು —ರೆಸ್ಪಾಂಡೆಂಟರು

ನೋಟೀಸು

To,

17th ರೆಸ್ಪಾಂಡೆಂಟರಿಗೆ

ಶ್ರೀಮತಿ ಶಾರದಾ ಹೆಗ್ಗಡ್ತಿ, ಅನಂತ ಶೆಟ್ಟಿಯವರ ಮಗಳು, ಉಡುಪಿ ತಾಲೂಕು, ಕೊರಂಗ್ರಪಾಡಿ ಗ್ರಾಮದ ದೊಡ್ಡಮನೆಯಲ್ಲಿರುವವರು. ಇವರಿಗೆ ತಿಳಿಸುವುದೇನೆಂದರೆ—

ಮೇಲ್ಕಾಣಿಸಿದ ರೆಸ್ಪಾಂಡೆಂಟರಾದ ನಿಮ್ಮ ಮೇಲೆ ಅಪೀಲಾಂಟರು ಉಡುಪಿ ಸಿವಿಲ್ ಕೋರ್ಟಿನ R. I. A. No. 62/1964 in O. S. No. 100/1961ರ ತಾ. 18-9-1969ರ ಡಿಕ್ರಿ ಮೇಲೆ ಅಪೀಲು ಮಾಡಿರುತ್ತಾರೆ. ನೀವು ತಾರೀಕು 26-8-1972ಕ್ಕೆ 11ಗಂಟೆಗೆ ಖುದ್ದಾಗಲೀ ಯಾ ವಕೀಲರ ಮುಖಾಂತರ ಸದ್ರಿ ಕೋರ್ಟಿನಲ್ಲಿ ಹಾಜರಾಗದಿದ್ದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಅಪೀಲು ತೀರ್ಮಾನಿಸಲಾಗುವುದು.

(By order of the court)

(Sd.) ಕೆ. ರಾಜಾರಾಮ ಹೆಗ್ಡೆ

ಅಪೀಲಾಂಟರ ಕಡೆ ಎಡ್ವೋಕೇಟ್

ಮಂಗಳೂರು, 17-7-72

ಪುತ್ತೂರು IIIrd Addl. ಮುನ್ಸಿಫ್ ಕೋರ್ಟಿನಲ್ಲಿ

R. R. C. 99/72

ಪುಟ್ಟ ಗೌಡ —ಅರ್ಜಿದಾರ

ತುಂಗು ಹೆಂಗ್ಸು ಸಹಾ —ಎದ್ರಿಗಳು

2ನೇ ಎದ್ರಿ—ಶೇಕಪ್ಪ ಪೂಜಾರಿ—ಕರಿಯ ಪೂಜಾರಿ ಮಗ, ಅಲಂಕಾರು ಗ್ರಾಮ

ಸದ್ರಿ 2ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

ಅರ್ಜಿದಾರನು ನಿಮ್ಮ ಮೇಲೆ ಕೊಡಾ 70-71ನೇ ವರ್ಷಕ್ಕೆ ಮಾವಿದ ಗೇಣ ನಂಬ್ರ ತಾ. 2-8-72ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವಸ ಬೆಳಿಗ್ಗೆ 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾ ಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for Petitioner

Puttur, 17-7-1972

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರನಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೋಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೋಟೆಲ್

Please Visit **ಫೋನ್: 77**

HOTEL SHIVAPRASAD

High Class Boarding, Lodging & Restaurant

COONDAPUR, S. K.

Edited, Printed & Published by K. M. Shetty at the Navayuga Press, Udipi, S. India.